ಕನ್ನಡ ಅಧ್ಯಯನ ಸಂಸ್ಥೆ ಪ್ರಕಟಣೆ—೪೭೭
ಸಾರ್ವತ್ರಿಕ ಮಾಲೆ–೪೧

ಪ್ರಧಾನ ಸಂಪಾದಕ
ಡಾ. ಎಚ್. ತಿಪ್ಪೇರುದ್ರಸ್ವಾಮಿ

ಕನ್ನಡ ಚಿತ್ರಕಾವ್ಯ

ಕನ್ನಡ ಚಿತ್ರಕಾವ್ಯ

(ಸ್ವರೂಪ, ಇತಿಹಾಸ, ವಿಮರ್ಶೆ)

ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರೀ

ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು ವಿಶ್ವವಿದ್ಯಾನಿಲಯ
೧೯೮೭

KANNADA CITRAKĀVYA (Svarūpa, Itihāsa, Vimarśe): Citrakāvya in Kannada Literature (Nature, History and Criticism) by Dr. T. V. Venkatachala Sastry, Professor of Kannada, Institute of Kannada Studies, Manasagangotri, University of Mysore, Mysore-570 006; Published by the Institute of Kannada Studies, Manasagangotri, University of Mysore, Mysore-570 006; First edition : January 1987; pp. xii + 540; Price Rs. : 100-00

PL 4652
.V3960
1987

ಪ್ರಥಮ ಮುದ್ರಣ : ೧೯೮೭
© ಹಕ್ಕುಗಳನ್ನು ಕಾದಿರಿಸಿದೆ.

The UNIVERSITY OF CHICAGO LIBRARY

PL 480

ಬೆಲೆ : ಒಂದು ನೂರು ರೂಪಾಯಿಗಳು

ಮಾರಾಟ : ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-೫೭೦ ೦೦೬

ಮುದ್ರಕರು : ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ, ಮೈಸೂರು-೫೭೦ ೦೦೬

ವರ್ಣಮಯ ಚಿತ್ರಕಾವ್ಯಪ್ರಪಂಚದ ಭೇದೋಪಭೇದಗಳ
ರಚನೆ ಪಾಲನೆ ಪೋಷಣೆಗಳಲ್ಲಿ ಸಂತೋಷಿಸಿದ
ಸಂಸ್ಕೃತ ಕನ್ನಡ ವಿದ್ವತ್ಕವಿಪರಂಪರೆಗೆ
ಈ ಕೃತಿ ಅಭಿಮಾನಪೂರ್ವಕವಾಗಿ ಸಮರ್ಪಿತವಾಗಿದೆ.

ಮುನ್ನುಡಿ

ಕನ್ನಡ ಭಾಷೆ, ಸಂಸ್ಕೃತಿ, ಸಾಹಿತ್ಯ, ಧರ್ಮ, ಇತಿಹಾಸ ಮೊದಲಾದ ಕ್ಷೇತ್ರಗಳಲ್ಲಿ ಆಗಬೇಕಾಗಿರುವ ಕಾರ್ಯ ತುಂಬ ಅಗಾಧವಾಗಿದೆ ಎಂಬುದು ಸ್ಪಷ್ಟವಾಗಿಯೇ ಇದೆ. ಕನ್ನಡ ಅಧ್ಯಯನ ಸಂಸ್ಥೆಯಲ್ಲಿ, ಕರ್ನಾಟಕದ ಇತರ ವಿಶ್ವವಿದ್ಯಾನಿಲಯಗಳಲ್ಲಿ, ಕರ್ನಾಟಕದ ಆದ್ಯಂತ ಹಾಗೂ ಕರ್ನಾಟಕದ ಹೊರಗೂ ಇರುವ ಅನೇಕ ವಿದ್ವಾಂಸರು ಮತ್ತು ಸಂಶೋಧಕರು ಈ ಹಲವು ಹತ್ತು ಕ್ಷೇತ್ರಗಳಲ್ಲಿ ಶ್ರದ್ಧೆ ಮತ್ತು ಆಸಕ್ತಿಗಳಿಂದ ದುಡಿಯುತ್ತಿರುವುದು ಅಭಿಮಾನದ ಹಾಗೂ ಸಂತೋಷದ ವಿಷಯ. ಸಂಶೋಧನಾಸಕ್ತಿಯಿಂದ, ವಿದ್ವತ್ ಪ್ರೀತಿಯಿಂದ, ಭಾಷೆ–ಸಾಹಿತ್ಯ–ಸಂಸ್ಕೃತಿಗಳ ಬಗೆಗಿನ ಅಭಿಮಾನದಿಂದ ನಡೆಯುತ್ತಿರುವ ಈ ಬಗೆಯ ಕಾರ್ಯಗಳು ನಾಡಿನ ಬಹುಜನರ ಗಮನವನ್ನು ಸೆಳೆಯುತ್ತಿರುವುದೂ ಶುಭಸೂಚನೆ. ಇಂಥ ಕೆಲಸಗಳಿಗೆ ಕನ್ನಡ ಅಧ್ಯಯನ ಸಂಸ್ಥೆ ಎಂದಿನಿಂದಲೂ ಚಾಲನೆಯನ್ನು ಕೊಡುತ್ತಲೇ ಬಂದಿದೆ. ವ್ಯವಸ್ಥಿತವಾಗಿ, ಸಮಗ್ರವಾಗಿ ಹಾಗೂ ಆದಷ್ಟು ಪರಿಷ್ಕಾರವಾಗಿ ಈ ಕಾರ್ಯಗಳನ್ನು ನಡೆಸಿಕೊಂಡು ಬರುವ ಧ್ಯೇಯವನ್ನು ಸಂಸ್ಥೆ ಇರಿಸಿಕೊಂಡಿದೆ. ಅಧ್ಯಯನ ಸಂಸ್ಥೆಯ 'ಸಾರ್ವತ್ರಿಕ ಮಾಲೆ'ಯ ಇಂಥ ಹಲವು ಪ್ರಕಟಣೆಗಳು ಈ ದಿಕ್ಕಿನಲ್ಲಿ ಹಲವು ಮೈಲಿಗಲ್ಲುಗಳನ್ನು ಸ್ಥಾಪಿಸಿವೆ ಎಂಬುದು ನಮಗೆ ಸಮಾಧಾನದ ಸಂಗತಿಯಾಗಿದೆ.

ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರೀ ಅವರ 'ಕನ್ನಡ ಚಿತ್ರಕಾವ್ಯ' ಈ ಮಾಲೆಯಲ್ಲಿನ ಇನ್ನೊಂದು ಮಹತ್ವದ ಪ್ರಕಟಣೆಯಾಗಿದೆ. ಸಂಸ್ಕೃತದಲ್ಲಿನ ಹಾಗೂ ಅದನ್ನು ಅನುಸರಿಸಿಕೊಂಡು ಬಂದಿರುವ ಹಲವು ಭಾರತೀಯ ಭಾಷೆಗಳಲ್ಲಿನ ನಮ್ಮ ಪ್ರಾಚೀನ ಕಾವ್ಯಪರಂಪರೆಯಲ್ಲಿ 'ಚಿತ್ರಕಾವ್ಯ' ವಿಶಿಷ್ಟ ಚರ್ಚೆಯ ಹಾಗೂ ಅಭ್ಯಾಸದ ವಿಷಯವಾಗಿತ್ತು. ಈಗಲೂ ಕೆಲವೊಂದು ಭಾರತೀಯ ಭಾಷೆಗಳಲ್ಲಿ ಕ್ವಚಿತ್ತಾಗಿಯಾದರೂ ಇದು ನಡೆದು ಬರುತ್ತಿದೆ. ಕಾವ್ಯಮೀಮಾಂಸೆಯ—ಅದರಲ್ಲೂ ಅಲಂಕಾರಶಾಸ್ತ್ರದ—ಅಂಗವಾಗಿ ಪ್ರಾಸಂಗಿಕವಾಗಿ ಚಿತ್ರಕಾವ್ಯದ ಕೆಲವು ಬಗೆಗಳನ್ನು ಉಲ್ಲೇಖಿಸಲಾಗುತ್ತದೆ. ಇದಲ್ಲದೆ ಈ ಕಾವ್ಯಪ್ರಕಾರದ ಇತಿಹಾಸ, ಸ್ವರೂಪ ಮತ್ತು ಹಿನ್ನೆಲೆಗಳನ್ನು ವಿಶ್ಲೇಷಿಸುವ, ವಿವೇಚಿಸುವ ಹಾಗೂ ಅದರ ನೆಲೆಬೆಲೆಗಳನ್ನು ಗೊತ್ತುಪಡಿಸುವ ಕೆಲವು ಪ್ರಯತ್ನಗಳು ಈಚಿನ ದಿನಗಳಲ್ಲಿ ಕೆಲವು ಭಾಷೆಗಳಲ್ಲಿ ನಡೆದಿವೆ ಎಂಬುದು ನಿಜ. ಆದರೆ, ಈ ವಿಷಯಕ್ಕೆ ಸಂಬಂಧಿಸಿದಂತೆ, ಕನ್ನಡದ ಮಟ್ಟಿಗೆ ಇಷ್ಟು ಶಾಸ್ತ್ರೀಯವೂ, ವ್ಯಾಪಕವೂ, ಸಮಗ್ರವೂ ಆದ ವಿವೇಚನೆ ನಡೆಯುತ್ತಿರುವುದು ನನಗೆ ತಿಳಿದಂತೆ ಇದೇ ಮೊದಲು. ಹಲವಾರು ವರ್ಷಗಳ ತಮ್ಮ ಅಧ್ಯಯನ, ಚಿಂತನ ಮತ್ತು ಸಂಶೋಧನೆಯ ಫಲವನ್ನು ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರಿಗಳು ಈ ರೂಪದಲ್ಲಿ ನಮಗೆ ಒದಗಿಸಿಕೊಟ್ಟಿದ್ದಾರೆ. ಕನ್ನಡ ವಿದ್ವದ್–ಲೋಕಕ್ಕೆ ಇದೊಂದು ಮಹತ್ವದ ಕೊಡುಗೆ ಎಂದು ನಾನು ನಂಬಿದ್ದೇನೆ. ಇಂಥ ಸವಾಲಿನ ಸ್ವರೂಪದ ಕಾರ್ಯವನ್ನು ಅರ್ಥಪೂರ್ಣ ರೀತಿಯಲ್ಲಿ ಹಾಗೂ ಸಾಕಷ್ಟು ಯಶಸ್ವಿಯಾಗಿ ನಿರ್ವಹಿಸಿರುವ ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರಿಗಳನ್ನು ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ತಾಂತ್ರಿಕವಾಗಿ ತುಂಬ ಜಟಿಲವಾದ ಈ ಗ್ರಂಥವನ್ನು ಅಚ್ಚಿಸುವಲ್ಲಿ ತೋರಿರುವ ಆಸಕ್ತಿ ಮತ್ತು ಕಾರ್ಯತತ್ಪರತೆಗಾಗಿ ವಿಶ್ವವಿದ್ಯಾನಿಲಯ ಮುದ್ರಣಾಲಯದ ಅಧಿಕಾರಿಗಳಿಗೆ ಮತ್ತು ಸಿಬ್ಬಂದಿವರ್ಗದವರಿಗೆ ವಂದನೆಗಳನ್ನು ಸಲ್ಲಿಸಬಯಸುತ್ತೇನೆ. ಕರಡುಪರಿಶೀಲನೆಯ ಜವಾಬ್ದಾರಿಯನ್ನೂ ತಾವೇ ವಹಿಸಿಕೊಂಡು ನಮ್ಮ ಕಾರ್ಯವನ್ನು ಹಗುರಗೊಳಿಸಿದ್ದಕ್ಕಾಗಿಯೂ ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರಿಗಳಿಗೆ ನಮ್ಮ ವಂದನೆಗಳು ಸಲ್ಲುತ್ತವೆ.

ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು–೫೭೦ ೦೦೬

ಎಚ್. ತಿಪ್ಪೇರುದ್ರಸ್ವಾಮಿ
ಪ್ರಧಾನ ಸಂಪಾದಕ

ಅರಿಕೆ

ಭಾರತೀಯ ಕಾವ್ಯಮೀಮಾಂಸೆಯ ಕ್ಷೇತ್ರದಲ್ಲಿ ಚಿತ್ರಕಾವ್ಯ ಒಂದು ಕಾವ್ಯಪ್ರಕಾರವಾಗಿ ವಿಮರ್ಶೆಗೆ ವಿಷಯವಾಗಿರುವುದು ಕಂಡುಬರುತ್ತದೆ. ವಿಸ್ತಾರವಾಗಿಯೋ ಸಂಕ್ಷೇಪವಾಗಿಯೋ ಪ್ರಾಚೀನ ಸಂಸ್ಕೃತ ಆಲಂಕಾರಿಕರು ಅಂತಹ ವಿಮರ್ಶೆಯನ್ನು ಕೈಕೊಂಡಿದ್ದಾರೆ. ಈಚಿನ ಕಾಲದಲ್ಲಿ ಸಹ, ಈ ಕಾವ್ಯಪ್ರಕಾರವನ್ನು ಕುರಿತು ಸಾಂಪ್ರದಾಯಿಕವಾದ ಹಾಗೂ ಆಧುನಿಕವಾದ ದೃಷ್ಟಿಕೋನಗಳಿಂದ ಸ್ವಲ್ಪಮಟ್ಟಿಗೆ ವಿಚಾರ ವಿಮರ್ಶೆಗಳು ನಡೆದಿವೆ. ಆದರೆ ಇವನ್ನು ಸರ್ವಾಂಗೀಣವೂ ತಲಸ್ಪರ್ಶಿಯೂ ಆದ ಪ್ರಯತ್ನಗಳೆಂದು ಹೇಳಲಾಗದು. ಸಂಸ್ಕೃತ ಚಿತ್ರಕಾವ್ಯದ ಎಲ್ಲ ಪ್ರಕ್ರಿಯೆಗಳನ್ನೂ ಪ್ರಭೇದಗಳನ್ನೂ ಸಮೀಚೀನವಾಗಿ ಅರ್ಥಯಿಸುವ ಹಾಗೂ ವ್ಯಾಖ್ಯಾನಿಸುವ ಸಾಂಪ್ರದಾಯಿಕವಾದ ಪ್ರಯತ್ನಗಳೇ ಇನ್ನೂ ಆಗಬೇಕಾದ ಮಟ್ಟಿಗೆ ಆಗಿಲ್ಲ. ಈ ಪದ್ಧತಿಗೆ ಅಂಟಿರುವ ಅಪಪ್ರಥೆ ತೊಲಗಿದಲ್ಲದೆ ಇದು ಸಾಧ್ಯವಾಗದು. ಅಲ್ಲದೆ ಮಾದರಿಗಳೆಲ್ಲ ಸಮಗ್ರವಾಗಿ ಕ್ರೋಡೀಕೃತಗೊಂಡು ತುಲನಾತ್ಮಕ ಪರಿಶೀಲನೆಯಿಂದ ಲಕ್ಷಣವಿವೇಚನೆಯಾಗುವ ಅಗತ್ಯವೂ ಇದೆ. ಜೈನಸಾಹಿತ್ಯದ ಮಟ್ಟಿಗೆ ಸ್ವಲ್ಪ ಕೆಲಸ ನಡೆದಿದ್ದರೂ, ಜೈನೇತರಭಾಗದ ಅಧ್ಯಯನ ಅಲಕ್ಷಿತವೆಂಬಂತಿದೆ. ಆಧುನಿಕ ಕಾವ್ಯತತ್ತ್ವಗಳ ಹಿನ್ನೆಲೆಯಲ್ಲಿ ನಡೆದಿರುವ ಸಕೃತ್ತಾದ ವಿಮರ್ಶೆ ಇನ್ನೂ ಗಾಢವಾದ ಮಂಥನದ ವಿಷಯವಾಗಿಲ್ಲ. ದೇಶಭಾಷೆಗಳಲ್ಲಿ ಹಿಂದಿ, ತಮಿಳು, ತೆಲುಗು ಭಾಷೆಗಳಲ್ಲಿ, ಆಯಾ ಭಾಷೆಗಳ ಚಿತ್ರಕಾವ್ಯದ ಬಗೆಗೆ ತಕ್ಕಮಟ್ಟಿಗೆ ವ್ಯಾಪಕವಾದ ಅಧ್ಯಯನ ನಡೆದಿರುವ ಹಾಗೆ ತಿಳಿದುಬರುತ್ತದೆ. ಕನ್ನಡದ ಮಟ್ಟಿಗೆ ಇಲ್ಲಿಯ ಪ್ರಯತ್ನವೇ ಬಹುಶಃ ಮೊದಲನೆಯದು. ಇಂತಹ ಒಂದು ಅಧ್ಯಯನವನ್ನು ಕೈಕೊಳ್ಳಬೇಕೆಂಬ ಅಪೇಕ್ಷೆ ಪ್ರಾಚೀನ ಕನ್ನಡ ಕಾವ್ಯಾಲಂಕಾರ ಗ್ರಂಥಗಳ ಹಾಗೂ ಒಂದೆರಡು ಶಾಸ್ತ್ರಗ್ರಂಥಗಳ ಅಭ್ಯಾಸಕ್ಕೆ ನಾನು ತೊಡಗಿದಾಗಲೇ, ಹಲವಾರು ವರ್ಷಗಳ ಹಿಂದೆಯೇ, ನನ್ನ ಮನಸ್ಸನ್ನು ಆಳವಾಗಿ ಹೊಕ್ಕಿತು. ಆದರೆ ಅದು ಗುರಿಮುಟ್ಟುವುದು ಸಾಧ್ಯವಾದುದು, ಒಂದೆರಡು ದಶಕಗಳ ತರುವಾಯದಲ್ಲಿ ಈಗಷ್ಟೇ. ಹಾಗೆ ಸಾಧ್ಯವಾದುದು ನನಗೆ ತುಂಬ ಸಂತೋಷವನ್ನು ಕೊಟ್ಟಿದೆ.

ಕನ್ನಡ ಚಿತ್ರಕಾವ್ಯದ ಸ್ವರೂಪ, ಇತಿಹಾಸ ಮತ್ತು ವಿಮರ್ಶೆಗಳನ್ನು ಸಂಸ್ಕೃತದ ಚಿತ್ರಕಾವ್ಯಪದ್ಧತಿಯ ಹಿನ್ನೆಲೆಯಲ್ಲಿ ನಿರೂಪಿಸುವ ಈ ನನ್ನ ನಮ್ರಪ್ರಯತ್ನದ ಬಗೆಗೆ ಇಲ್ಲಿ ನಾನೇ ಏನಾದರೂ ಹೇಳಿಕೊಳ್ಳುವುದು ಅನುಚಿತವಾಗುತ್ತದೆ. ಆದರೆ ಒಂದೆರಡು ಮಾತು ಹೇಳಬೇಕು. ಸುಮಾರು ಎರಡು–ಮೂರು ವರ್ಷಗಳ ಕಾಲ ಅಧ್ಯಯನ, ಎರಡು ವರ್ಷಗಳ ಕಾಲ ಗ್ರಂಥರಚನೆ, ಹೀಗೆ ಸಮಯ ಸಂದಿದೆ. ಅಚ್ಚಿಗೆ ಸುಮಾರು ಎರಡೂವರೆ ವರ್ಷಗಳೇ ಹಿಡಿದಿವೆ. ಅಭ್ಯಾಸದ ಅವಧಿಯಲ್ಲಿ, ಬರವಣಿಗೆಯ ಸಂದರ್ಭದಲ್ಲಿ, ನಾನು ಮಾಡಿಕೊಂಡಿದ್ದ ಟಿಪ್ಪಣಿಗಳು ಕಣ್ಮರೆಯಾಗಿ ಇಲ್ಲವೆ ಅಸ್ತವ್ಯಸ್ತವಾಗಿ, ಅವಶ್ಯವಾದಾಗ ಕೈಗೆ ದೊರಕದೆ ಹೋಗಿರುವುದುಂಟು; ಆಯಾ ಭಾಗದ ಮುದ್ರಣ ಮುಗಿದ ಮೇಲೆ ಕಣ್ಣಿಗೆ ಬಿದ್ದಿರುವುದುಂಟು. ಉಪಯುಕ್ತವಾದ ಗ್ರಂಥಗಳೂ ಲೇಖನಗಳೂ ಅನಂತರದಲ್ಲಿ ದೊರೆತು ಬಳಸಿಕೊಳ್ಳಲು ಸಾಧ್ಯವಾಗದಂತೆ ಆಗಿ, ಪೇಚಾಡಿದ ಪ್ರಸಂಗಗಳೂ ಇವೆ. ಇದು ನನಗೆ ವಿಷಾದವುಂಟುಮಾಡಿದೆ. ಇನ್ನು ಚಿತ್ರಕಾವ್ಯದ ಅಭ್ಯಾಸದಲ್ಲಿ ವಿಶಿಷ್ಟವಾದ ಮಾದರಿಗಳ ಸ್ವರೂಪ ತಿಳಿಯುವುದು ಒಂದು ಕಷ್ಟವಾದರೆ, ಪಾಠ ಮತ್ತು ಅರ್ಥಕ್ಲೇಶಗಳು ಬಗೆಹರಿಯುವುದು ಇನ್ನೊಂದು ಕಷ್ಟ. ಈ ಕಷ್ಟಗಳನ್ನು ನಾನು ಇಷ್ಟದಿಂದಲೇ ಭರಿಸಿದ್ದೇನೆ. ಆಗಿಂದಾಗ್ಗೆ ಸಮಸ್ಯೆಗಳ ಪರಿಹಾರಕ್ಕೆ ಆಧಾರಸಾಮಗ್ರಿಗೆ ಹುಡುಕಾಡಿದ್ದೇನೆ, ವಿದ್ವಾಂಸರಲ್ಲಿ ಚರ್ಚಿಸಿದ್ದೇನೆ, ಸ್ವತಃ ಚಿಂತಿಸಿದ್ದೇನೆ. ಬಗೆಹರಿಯದ ಸಮಸ್ಯೆಗಳನ್ನು ಮೇಲಿಂದ ಮೇಲೆ ಮೆಲುಕು ಹಾಕುತ್ತ, ಪರಿಹಾರ ಕಂಡುಕೊಳ್ಳಲು ಶ್ರಮಪಟ್ಟಿದ್ದೇನೆ. ಫಲ ದೊರೆತಾಗ ದಿಗ್ವಿಜಯ ಸಾಧಿಸಿದಂತೆ ಹೆಮ್ಮೆ ಪಟ್ಟಿದ್ದೇನೆ. ಇಷ್ಟಾಗಿ, ಇನ್ನೂ ಸಮಸ್ಯೆಗಳು ಉಳಿದಿವೆ; ನನ್ನ ಪರಿಹಾರಗಳು ಇತರರಿಗೆ ತೃಪ್ತಿಕರವಾಗಿ ತೋರದಿರುವ ಸಂದರ್ಭಗಳೂ ಇರಬಹುದು. ಇವನ್ನು ವಿದ್ವಾಂಸರು ಪುನರ್ವಿಮರ್ಶೆಗೆ ಎತ್ತಿಕೊಳ್ಳಬೇಕೆಂದು ಅವರನ್ನು ಪ್ರಾರ್ಥಿಸುತ್ತೇನೆ. ಜೊತೆಗೆ ಪ್ರಹೇಳಿಕಾದಿ ಚಿತ್ರಕಾವ್ಯ ಗ್ರಂಥಗಳು, ಹಸ್ತಪ್ರತಿರೂಪದಲ್ಲಿರುವಂತಹವು

ಹಾಗೂ ಕಂಠಸ್ಥವಾಗಿರುವಂತಹವು, ವ್ಯವಸ್ಥಿತವಾಗಿ ಸಂಕಲನಗೊಂಡು, ಸಂಪಾದಿತವಾಗಿ ಪ್ರಕಟವಾಗಲೆಂದು ಹಾರೈಸುತ್ತೇನೆ. ಇಷ್ಟು ಹೇಳಿ, ಈ ಕೃತಿಯನ್ನು ಸಾಹಿತ್ಯಪ್ರೇಮಿಗಳ ಕೈಗೆ ಸಂತೋಷದಿಂದ ಒಪ್ಪಿಸುತ್ತೇನೆ.

ಈ ಸಾಹಿತ್ಯ ಕಾರ್ಯದಲ್ಲಿ ನನಗೆ ನೆರವಾದವರ ಉಪಕಾರಸ್ಮರಣೆ ನನಗೆ ಸಂತೋಷದ ಕರ್ತವ್ಯವಾಗಿದೆ: ಈ ಗ್ರಂಥ ರಚನೆಯ ಕಾರ್ಯದಲ್ಲಿ ನನ್ನನ್ನು ಪ್ರೋತ್ಸಾಹಿಸಿ, ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಮೂಲಕ ಇದು ಪ್ರಕಟಗೊಳ್ಳುವಂತೆ ಹಾಗೂ ವಿಶ್ವವಿದ್ಯಾನಿಲಯದ ಮುದ್ರಣಾಲಯದಲ್ಲಿ ಮುದ್ರಣಗೊಳ್ಳುವಂತೆ ಉದಾರವಾದ ಏರ್ಪಾಟುಗಳನ್ನು ಮಾಡಿಕೊಟ್ಟವರು ಸಂಸ್ಥೆಯ ಅಂದಿನ ನಿರ್ದೇಶಕರಾಗಿದ್ದ ಡಾ. ಹಾ. ಮಾ. ನಾಯಕರು. ಅನಂತರದಲ್ಲಿ ಪ್ರಕಟನೆಯ ಪ್ರಗತಿಯನ್ನು ಮೇಲಿಂದ ಮೇಲೆ ವಿಚಾರಿಸಿಕೊಂಡು ನನ್ನಲ್ಲಿ ಉತ್ಸಾಹ ತುಂಬಿದವರು ಸಂಸ್ಥೆಯ ಈಗಿನ ನಿರ್ದೇಶಕರಾಗಿರುವ ಡಾ. ಎಚ್. ತಿಪ್ಪೇರುದ್ರಸ್ವಾಮಿಯವರು. ಪ್ರಕಟನೆಯ ಪ್ರತಿಯೊಂದು ಘಟ್ಟದಲ್ಲಿಯೂ ಅತ್ಯವಶ್ಯವಾಗಿ ಆಗಬೇಕಾಗಿದ್ದ ಕಾರ್ಯಗಳಲ್ಲಿ ಸಲಹೆ ಸಹಕಾರಗಳನ್ನು ನೀಡಿದವರು ಪ್ರಧಾನ್ ಗುರುದತ್ತ ಅವರು.

ನನ್ನ ಎರಡು ವರ್ಷಗಳ ಗ್ರಂಥರಚನೆಯ ಅವಧಿಯಲ್ಲಿ ಉದ್ದಕ್ಕೆ, ಪ್ರಮುಖ ಸಂಸ್ಕೃತ ಕಾವ್ಯಾಲಂಕಾರ ಗ್ರಂಥಗಳಲ್ಲಿಯ ಸಂಬಂಧಿತ ಭಾಗಗಳನ್ನು ನನಗಾಗಿ ಓದಿ, ಅರ್ಥೈಸಿ ಅನನ್ಯವಾಗಿ ನೆರವು ನೀಡಿದವರು ಎಂದರೆ ವಿದ್ವಾನ್ ಎನ್. ಎಸ್. ಕೃಷ್ಣಮಾಚಾರ್ಯರು. ಅವರ ನಿಷ್ಕೃಷ್ಟಭಾಷಾಜ್ಞಾನಮೂಲವಾದ ಪಾಂಡಿತ್ಯದ ಪ್ರಯೋಜನ ನನಗೆ ದೊರೆತಿದೆ. ಗತಿ, ಆಕಾರ ಮತ್ತು ಬಂಧಚಿತ್ರಗಳಲ್ಲಿ ಹೆಚ್ಚಿನವನ್ನು, ನನ್ನ ಅಪೇಕ್ಷೆ ಸಲಹೆಯ ಮೇರೆಗೆ, ಮೊದಲು ಚಿತ್ರರೂಪವಾಗಿ ನಿರೂಪಿಸಿದವರು ಡಾ. ಕೆ. ಜಿ. ನಾರಾಯಣ ಪ್ರಸಾದರು. ಇವುಗಳ ವಿಮರ್ಶೆಯಲ್ಲಿಯೂ ಅವರ ಸಹಾಯ ನನಗೆ ದೊರೆತಿದೆ. ಹೀಗೆ ನಿರೂಪಿಸಿದ 'ಚಿತ್ರ'ಗಳನ್ನು ಮುದ್ರಣಕ್ಕೆ ಬರುವ ಹಾಗೆ ಚಿತ್ರಕಲಾಕೋವಿದರಾದ ವಿದ್ವಾನ್ ಎಚ್. ಶಂಕರ ಗಣಪತಿ ಫಾಟಕ್ ಅವರ ಮಾರ್ಗದರ್ಶನದಲ್ಲಿ ಸಪ್ರಮಾಣವಾಗಿ, ಕಲಾತ್ಮಕವಾಗಿ ರೇಖಿಸಿದವರು ಬಿ. ವಾಸುದೇವ ರಾವ್ ಅವರು. ಈ ಇಬ್ಬರ ಸಹಾಯವೂ ಮಿಗಿಲಾದುದೇ ಆಗಿದೆ. ಗ್ರಂಥಾಂತ್ಯದ ಅಕಾರಾದಿ ಸೂಚಿಗಳ ಸಿದ್ಧತೆಯಲ್ಲಿ ಬಹುವಾಗಿ ಶ್ರಮವಹಿಸಿ ನನಗೆ ಸಹಕಾರ ನೀಡಿದವರು ಡಾ. ಕೆ. ಅನಂತರಾಮು ಅವರು.

ಡಾ. ಆರ್. ಎಸ್. ಶಿವಗಣೇಶ ಮೂರ್ತಿ, ವಿದ್ವಾನ್ ಎಚ್. ವಿ. ನಾಗರಾಜರಾವ್, ವಿದ್ವಾನ್ ಎನ್. ರಂಗನಾಥ ಶರ್ಮಾ ಈ ಮಹನೀಯರು ಅಲ್ಲಲ್ಲಿ ಸಂಸ್ಕೃತ ಉಲ್ಲೇಖಗಳ ಅರ್ಥನಿರ್ಣಯದಲ್ಲಿ ನನಗೆ ನೆರವಾಗಿದ್ದಾರೆ. ಆರ್. ವಿ. ಕುಲಕರ್ಣಿ, ಡಾ. ಕೆ. ಕೃಷ್ಣಮೂರ್ತಿ, ಡಾ. ಆರ್. ಶೇಷಶಾಸ್ತ್ರಿ, ಡಾ. ಆರ್. ವಿ. ಎಸ್. ಸುಂದರಂ, ಜಿ. ಜಿ. ಮಂಜುನಾಥನ್, ವಿದ್ವಾನ್ ಟಿ. ವಿ. ಸತ್ಯನಾರಾಯಣ, ಡಾ. ಎನ್. ಎಸ್. ತಾರಾನಾಥ, ಎಸ್. ಶಿವಣ್ಣ, ಬಿ. ರಾಜಶೇಖರಪ್ಪ ಇವರು ಆಗಾಗ ಉಪಯುಕ್ತ ಆಕರಗ್ರಂಥಗಳನ್ನೂ ಚಿತ್ರಕಾವ್ಯದ ಮಾದರಿಗಳನ್ನೂ ನನ್ನ ಗಮನಕ್ಕೆ ತಂದಿದ್ದಾರೆ. ಡಾ. ಕೆ. ಕೃಷ್ಣಮೂರ್ತಿಗಳ ಅನುವಾದಿತ ಕಾವ್ಯಾಲಂಕಾರಗ್ರಂಥಗಳ ಪ್ರಯೋಜನವನ್ನು ನಾನು ಬಹುವಾಗಿ ಪಡೆದಿದ್ದೇನೆ. ಡಾ. ಸಿ. ಪಿ. ಕೃಷ್ಣಕುಮಾರ್, ಡಾ. ಕೆ. ವಿ. ರಮೇಶ್, ಡಾ. ಮಾಧವ ಎನ್. ಕಟ್ಟಿ, ಡಾ. ಬಿ. ಆರ್. ಗೋಪಾಲ್, ಎನ್. ಬಸವಾರಾಧ್ಯ, ಬಿ. ಎಸ್. ಸಣ್ಣಯ್ಯ, ಪಿ. ಮರಿಬಸವಾರಾಧ್ಯ, ಎಚ್. ಎಂ. ನಾಗರಾಜರಾವ್, ಎನ್. ಎಸ್. ಶಾರದಾಪ್ರಸಾದ್, ರಾಮೇಗೌಡ, ಕೆ. ಮೊಹಮ್ಮದ್ ಷರೀಫ್, ಎಂ. ವಿ. ವರದರಾಜನ್, ಎನ್. ಕುಮುದ, ಕೆ. ಎಸ್. ಚಂದ್ರಮತಿ, ಎಚ್. ಜಿ. ಶ್ರೀಧರ, ಇವರೂ ಬೇರೆ ಬೇರೆ ರೀತಿಗಳಲ್ಲಿ ನನಗೆ ಸಹಕಾರ ನೀಡಿದ್ದಾರೆ. ಮುಖಪುಟದ ಭಾವಚಿತ್ರ ಅರ್ಕೇಶ್ ಅವರದು. ಕರ್ನಾಟಕ ಸರ್ಕಾರದ ಪುರಾತತ್ವ ಇಲಾಖೆಯ ಮಾನ್ಯ ನಿರ್ದೇಶಕರು, ಡಾ. ಅ. ಸುಂದರ ಅವರು ಶಿವಮೊಗ್ಗ ಜಿಲ್ಲೆಯ ಬಂದಳಿಕೆ ಗ್ರಾಮದ ಶಾಸನಗಳ ಚಿತ್ರಬಂಧಗಳ ಭಾವಚಿತ್ರಗಳನ್ನು ಬಳಸಿಕೊಳ್ಳಲು ನನಗೆ ಒದಗಿಸಿದರಾದರೂ, ಅವನ್ನು ನಾನು ಬಳಸಿಕೊಳ್ಳಲು ಸಾಧ್ಯವಾಗದೆ ಇದೆ. ಇದಕ್ಕಾಗಿ ನನಗೆ ವಿಷಾದವೆನಿಸಿದೆ.

ಈ ದೊಡ್ಡಗ್ರಂಥದ ಕ್ಲಿಷ್ಟಕರವಾದ ಮುದ್ರಣಕಾರ್ಯ ಮೈಸೂರು ವಿಶ್ವವಿದ್ಯಾನಿಲಯದ ಮುದ್ರಣಾಲಯದಲ್ಲಿಯೇ ಆದುದು ನನಗೆ ಹೆಮ್ಮೆಯ ವಿಷಯವಾಗಿದೆ. ನೋಡಿದವರು ಮೆಚ್ಚುವಂತೆ ಸುಂದರವಾಗಿ ಅಚ್ಚು

ಮಾಡಿಸಿಕೊಟ್ಟಿರುವುದೇ ಅಲ್ಲದೆ, ಸಾಧ್ಯವಾದಷ್ಟು ಅಲ್ಪಾವಧಿಯಲ್ಲಿ ಅಚ್ಚು ಪೂರೈಸುವಂತೆ ಏರ್ಪಾಡುಗಳನ್ನು ಮಾಡಿ ಸಹಕಾರ ನೀಡಿದವರು ಎಂದರೆ, ಮುದ್ರಣಾಲಯದ ಕಾರ್ಯಭಾರಿ ನಿರ್ದೇಶಕರಾಗಿರುವ ವಿ.ಎಸ್. ಶ್ರೀನಿವಾಸ ಮೂರ್ತಿಯವರು ಮತ್ತು ಬೇರೆಬೇರೆ ವಿಭಾಗಗಳ ಅವರ ಸಿಬ್ಬಂದಿ ವರ್ಗದವರು. ಕರಡಚ್ಚುಗಳನ್ನು ಓದುವುದರಲ್ಲಿ ನನ್ನೊಂದಿಗೆ ವಿಶೇಷವಾಗಿ ಸಹಕರಿಸಿದವರೆಂದರೆ, ನನ್ನ ಮಕ್ಕಳು, ಚಿರಂಜೀವಿಗಳಾದ ವತ್ಸಲಾ, ಚಿತ್ಕಲಾ, ಹರಿಪ್ರಿಯಾ ಮತ್ತು ವಿದ್ಯಾಶಂಕರ ಇವರು.

ಹೀಗೆ ನನಗೆ ಹೃತ್ಪೂರ್ವಕವಾಗಿ ನೆರವು ನೀಡಿ ನನ್ನನ್ನು ಕೃತಕಾರ್ಯನನ್ನಾಗಿ ಮಾಡಿದ ಹಿರಿಯರಿಗೂ ಮಿತ್ರರಿಗೂ ನನ್ನ ಕೃತಜ್ಞತೆಯ ವಂದನೆಗಳು; ಕಿರಿಯರಿಗೆಲ್ಲ ಶುಭಾಶಂಸನಗಳು.

ಟಿ. ವಿ. ವೆಂಕಟಾಚಲ ಶಾಸ್ತ್ರೀ

ಪರಿವಿಡಿ

೧. ಪೀಠಿಕೆ ೧-೨೦

ಚಿತ್ರಕಾವ್ಯ ಲಕ್ಷಣ ೧–೭; ಸಂಸ್ಕೃತ ಕಾವ್ಯಾಲಂಕಾರ, ಸಾಹಿತ್ಯಗ್ರಂಥಗಳಲ್ಲಿ ಚಿತ್ರಕಾವ್ಯ ೭–೯; ಕನ್ನಡ ಕಾವ್ಯಾಲಂಕಾರಗ್ರಂಥಗಳಲ್ಲಿ ಚಿತ್ರಕಾವ್ಯ ೯–೧೧; ಕನ್ನಡ ಚಿತ್ರಕಾವ್ಯದ ಇತಿಹಾಸ ೧೧–೧೯.

೨. ಅನುಪ್ರಾಸ, ಯಮಕ ೨೧-೯೦

ಅನುಪ್ರಾಸ: ಲಕ್ಷಣ, ಪ್ರಭೇದಗಳು ಮತ್ತು ಲಕ್ಷ್ಯಗಳು ೨೩–೨೯; ಯಮಕ: ಲಕ್ಷಣ, ಪ್ರಭೇದಗಳು ಮತ್ತು ಲಕ್ಷ್ಯಗಳು ೨೯–೫೪; 'ಕವಿರಾಜಮಾರ್ಗ' 'ಕಾವ್ಯಾವಲೋಕನ'ಗಳಲ್ಲಿ ಯಮಕವಿಚಾರ ೫೪–೬೫; ಅನ್ಯ ಅಲಂಕಾರಗ್ರಂಥಗಳಲ್ಲಿ ಯಮಕ ವಿಚಾರ ೬೫–೭೬; ಕನ್ನಡ ಸಾಹಿತ್ಯದಲ್ಲಿ ಕೆಲವು ಯಮಕಲಕ್ಷ್ಯಗಳು ೭೬–೮೯; ಯಮಕಸಂಘಟನೆಯ ಸ್ವರೂಪ ೮೯.

೩. ವರ್ಣಚಿತ್ರ ೯೧-೧೫೦

ವ್ಯಂಜನ ವರ್ಣಚಿತ್ರಗಳು ೯೩–೧೦೦; 'ಕವಿರಾಜಮಾರ್ಗ' ಕಾವ್ಯಾವಲೋಕನಾದಿಗಳಲ್ಲಿ ವ್ಯಂಜನ ಚಿತ್ರಗಳು ೧೦೦–೦೪; ಕನ್ನಡ ಸಾಹಿತ್ಯದಲ್ಲಿ ವ್ಯಂಜನಚಿತ್ರಗಳ ಕೆಲವು ಲಕ್ಷ್ಯಗಳು ೧೦೪–೦೭; ಅಸಂಯೋಗಾದಿ ವ್ಯಂಜನಚಿತ್ರಗಳು ೧೦೭–೧೪; ಸ್ಥಾನಚಿತ್ರಗಳು ೧೧೪–೨೦; 'ಕವಿರಾಜಮಾರ್ಗ' ಕಾವ್ಯಾವಲೋಕನಾದಿಗಳಲ್ಲಿ ಸ್ಥಾನಚಿತ್ರಗಳು ೧೨೦–೨೨; ಕನ್ನಡ ಸಾಹಿತ್ಯದಲ್ಲಿ ಕೆಲವು ಸ್ಥಾನಚಿತ್ರಗಳ ನಿದರ್ಶನಗಳು ೧೨೨–೩೩; ಸ್ವರಚಿತ್ರಗಳು ೧೩೩–೩೬; 'ಕವಿರಾಜಮಾರ್ಗ' ಕಾವ್ಯಾವಲೋಕನಾದಿಗಳಲ್ಲಿ ಸ್ವರಚಿತ್ರಗಳು ೧೩೬; ಕನ್ನಡ ಸಾಹಿತ್ಯದಲ್ಲಿ ಸ್ವರಚಿತ್ರಗಳ ಕೆಲವು ನಿದರ್ಶನಗಳು ೧೩೬–೪೨; ಗುಣಿತಾಕ್ಷರಿಗಳು (ಗುಣಿತಚಿತ್ರಗಳು) ೧೪೨–೪೯.

೪. ಶ್ಲೇಷಚಿತ್ರ, ಗರ್ಭಕವಿತ್ವ ೧೫೧-೧೯೦

ಶ್ಲೇಷಕಾವ್ಯಗಳು: ದ್ವಿಸಂಧಾನ ತ್ರಿಸಂಧಾನ ಕಾವ್ಯಗಳು ಇತ್ಯಾದಿ ೧೫೩–೫೬; ಕನ್ನಡದಲ್ಲಿ ಸಂಧಾನ ಕಾವ್ಯಗಳು ೧೫೭–೬೧; ಅನೇಕಾರ್ಥವಾಚಿ ೧೬೧–೬೩; ಭಾಷಾಚಿತ್ರಗಳು ೧೬೩–೬೭; ಸಂಜ್ಞಾರ್ಥಾದಿ ಶ್ಲೇಷೆ ೧೬೭–೭೫; ಗರ್ಭಕವಿತ್ವ ೧೭೬–೭೯; ಕನ್ನಡದಲ್ಲಿ ಗರ್ಭಕವಿತ್ವದ ಕೆಲವು ನಿದರ್ಶನಗಳು ೧೭೯–೮೯.

೫. ಗೂಢಚಿತ್ರ ೧೯೧-೨೧೮

ಸಂಸ್ಕೃತ ಅಲಂಕಾರಗ್ರಂಥಗಳಲ್ಲಿ ಗೂಢಚಿತ್ರಗಳು ೧೯೩–೯೬; ಸಂಸ್ಕೃತ ಸಾಹಿತ್ಯದಲ್ಲಿ ಗೂಢಚಿತ್ರಗಳ ಕೆಲವು ನಿದರ್ಶನಗಳು ೧೯೬–೨೦೦; 'ಕವಿರಾಜಮಾರ್ಗ' 'ಕಾವ್ಯಾವಲೋಕನ'ಗಳ ಗೂಢ(ಗುಪ್ತ)ಗಳು ೨೦೦–೦೩; ಕನ್ನಡ ಸಾಹಿತ್ಯದಲ್ಲಿ ಗೂಢಚಿತ್ರಗಳ ಕೆಲವು ನಿದರ್ಶನಗಳು ೨೦೩–೦೯; ವಿಭಕ್ತಿ ಪರಿಣಾಮ ೨೦೯–೧೧; ಪದವಾಕ್ಯಾದಿ ಗೂಢಚಿತ್ರಗಳು ೨೧೧–೧೭.

೬. ಪ್ರಹೇಳಿಕೆ ೨೧೯-೩೪೬

ಚದುರ್, ಜಾಣ್, ಬೆಡಂಗು (= ಬೆಡಗು), ಪದಿರ್, ಮುಂಡಿಗೆ ೨೨೧–೨೬; ಪ್ರಹೇಳಿಕೆಯ ಸ್ವರೂಪ ೨೨೬–೩೦; ಕನ್ನಡ ಪ್ರಹೇಳಿಕೆ: ಒಗಂಟು (= ಒಗಟು) ೨೩೦-೩೩; ಪ್ರಹೇಳಿಕೆಯ ಲಕ್ಷಣ, ಪ್ರಭೇದಗಳು ೨೩೩–೪೪; ಸಂಸ್ಕೃತದಲ್ಲಿ ಪ್ರಹೇಳಿಕೆಯ ಕೆಲವು ನಿದರ್ಶನಗಳು ೨೪೪–೪೬; 'ಕವಿರಾಜಮಾರ್ಗ' ಕಾವ್ಯಾವ

ಲೋಕನಾದಿಗಳ ಪ್ರಹೇಳಿಕೆಗಳು ೨೪೬–೫೯; ಕನ್ನಡದ ಇತರ ಅಲಂಕಾರಗ್ರಂಥಗಳಲ್ಲಿ ಪ್ರಹೇಳಿಕೆಗಳು ೨೫೯–೬೦; ಕನ್ನಡ ಸಾಹಿತ್ಯದಲ್ಲಿ ಪ್ರಹೇಳಿಕೆಗಳು ೨೬೧–೭೦; ಬೆಡಗಿನ ವಚನಗಳು ೨೭೦–೭೫; ಮುಂಡಿಗೆಯ ಕೀರ್ತನೆಗಳು ೨೭೫–೭೭; ಸರ್ವಜ್ಞನ ತ್ರಿಪದಿಗಳ ಒಗಟುಗಳು ೨೭೭–೮೩; ಸಂಖ್ಯಾತ ೨೮೩–೯೦; ಪಾರಿಹಾರಿಕಿ ಅಥವಾ ಯೋಗಮಾಲೆ ೨೯೦–೩೧೦; ನುಸುಳ್, ನಾಮಾಂತರಿತ ೩೧೦–೧೨; ಸ್ವತಂತ್ರ ರಚನೆಗಳು ಹಾಗೂ ಸಂಕಲನಗಳು ೩೧೨–೨೨; ಪ್ರಶ್ನಗಳು ೩೨೨–೨೪; ಪ್ರಶ್ನದ ಕೆಲವು ಸಂಸ್ಕೃತ ಲಕ್ಷ್ಯಗಳು ೩೨೪–೨೭; ಕನ್ನಡ ಅಲಂಕಾರಗ್ರಂಥಗಳಲ್ಲಿ ಪ್ರಶ್ನಗಳು ೩೨೭–೩೦; ಕನ್ನಡ ಸಾಹಿತ್ಯದಲ್ಲಿ ಪ್ರಶ್ನೋತ್ತರದ ನಿದರ್ಶನಗಳು ೩೩೦–೩೪; ಪ್ರಶ್ನೋತ್ತರಗಳು ೩೩೪–೩೬; ಸಮಸ್ಯೆಗಳು ೩೩೬–೪೪; ಸಾಮಾನ್ಯ ಉಭಯಚಿತ್ರಗಳು ೩೪೪.

೭. ಗತಿಚಿತ್ರ ೩೪೭-೩೯೨

ಗತಿಚಿತ್ರಗಳು : ಲಕ್ಷಣ, ಪ್ರಭೇದಗಳು ೩೪೯–೫೬; ಸಂಸ್ಕೃತ ಅಲಂಕಾರಗ್ರಂಥಗಳಲ್ಲಿ ಗತಿಚಿತ್ರಗಳು ೩೫೬–೬೬; ಗತಿಚಿತ್ರಗಳ ಕೆಲವು ಸಂಸ್ಕೃತ ನಿದರ್ಶನಗಳು ೩೬೭–೭೪; 'ಕವಿರಾಜಮಾರ್ಗ' 'ಕಾವ್ಯಾವಲೋಕನ' ಗಳಲ್ಲಿ ಗತಿಚಿತ್ರಗಳು ೩೭೪–೮೩; ಕನ್ನಡ ಸಾಹಿತ್ಯದಲ್ಲಿ ಗತಿಚಿತ್ರಗಳ ಕೆಲವು ನಿದರ್ಶನಗಳು ೩೮೩–೯೦.

೮. ಬಂಧಚಿತ್ರ ೩೯೩-೪೮೮

ಆಕಾರ ಮತ್ತು ಬಂಧಚಿತ್ರಗಳ ಸಾಮಾನ್ಯ ಸ್ವರೂಪ ೩೯೫–೯೯; ಸಂಸ್ಕೃತ ಅಲಂಕಾರಾದಿ ಗ್ರಂಥಗಳಲ್ಲಿ ಆಕಾರ ಬಂಧಚಿತ್ರಗಳು ೩೯೯–೪೦೩; ಸಂಸ್ಕೃತ ಸಾಹಿತ್ಯದಲ್ಲಿ ಆಕಾರ ಮತ್ತು ಬಂಧಚಿತ್ರಗಳು ೪೦೩–೦೯; ಕನ್ನಡದಲ್ಲಿ ಬಂಧಚಿತ್ರಗಳು ೪೦೯-೧೦; ಪ್ರಭೇದಗಳ ವಿಭಜನೆ ೪೧೦–೧೧; ಅಲಂಕಾರ, ಮಂಗಲಚಿಹ್ನೆ ಮತ್ತು ಲಾಂಛನಗಳು ೪೧೧–೨೫; ಆಯುಧಗಳು ೪೨೫–೫೮; ವಾದ್ಯಗಳು ೪೫೮–೬೭; ಸಸ್ಯವರ್ಗ ೪೬೭–೭೮; ಸ್ಥಲ ಸನ್ನಿವೇಶಗಳ ವಾಸ್ತು ೪೭೮–೭೯; ಸಂಕೀರ್ಣ ೪೮೦–೮೬.

೯. ಒಟ್ಟುನೋಟ ೪೮೯-೫೦೦

ಅನುಬಂಧಗಳು ೫೦೧-೫೪೦

೧/ಆಧಾರಸಾಹಿತ್ಯ ಸಂಗ್ರಹ ಸೂಚಿ ೫೦೩–೧೧; ೨/ಸಂಸ್ಕೃತ ಸೂತ್ರಪದ್ಯಗಳ ಮತ್ತು ಲಕ್ಷ್ಯಪದ್ಯಗಳ ಆಕಾರಾದಿ ೫೧೧–೧೭; ೩/ಕನ್ನಡ ಸೂತ್ರಪದ್ಯಗಳ ಮತ್ತು ಲಕ್ಷ್ಯಪದ್ಯಗಳ ಅಕಾರಾದಿ ೫೧೭–೨೫; ೪/ವ್ಯಕ್ತಿನಾಮ ಸೂಚಿ ೫೨೫–೨೯; ೫/ಕೃತಿನಾಮ ಸೂಚಿ ೫೩೦–೩೪; ೬/ವಿಶಿಷ್ಟಪದ ಸೂಚಿ ೫೩೪–೩೯; ೭/ಗ್ರಂಥೋಪಯುಕ್ತ ಸಂಕ್ಷಿಪ್ತ ಸೂಚಿ ೫೩೯–೪೦.

೧

ಪೀಠಿಕೆ

೧

ಚಿತ್ರಕಾವ್ಯ ಲಕ್ಷಣ

ಚಿತ್ರಕಾವ್ಯ ಎಂಬುದು ಒಂದು ಕಾವ್ಯಪದ್ಧತಿ. ಇಲ್ಲಿ ಕಾವ್ಯವನ್ನು ವಿಶೇಷಿಸಿರುವ 'ಚಿತ್ರ' ಎಂಬ ಶಬ್ದದ ಅರ್ಥವೇನು? ಈ ಪ್ರಶ್ನೆಗೆ ದೊರೆಯುವ ಉತ್ತರ, ಆ ಶಬ್ದದ ಹಲವು ಅರ್ಥಗಳಲ್ಲಿ ಯಾವುದನ್ನು ಗ್ರಹಿಸಬೇಕು ಎಂಬುದನ್ನು ಚಿಂತಿಸಿ, ಗ್ರಹಿಸುವುದರಲ್ಲಿದೆ. ಅಂತಹ ಅರ್ಥಗಳಲ್ಲಿ 'ಪ್ರತೀಕ', 'ವಿಸ್ಮಯಜನಕ' ಎಂಬವು ಗಮನಿಸಬೇಕಾದವು. ಕಾವ್ಯದ ಒಂದು ಪ್ರತೀಕ, ಅನುಕರಣೆ, ಚಿತ್ರಪಟದ ಸಾದೃಶ್ಯವುಳ್ಳ ರಚನೆ ಎಂಬುದಾಗಿ ತಿಳಿಯುವಂತೆ 'ಏಕಾವಲಿ', 'ಸರಸ್ವತೀಕಂಠಾಭರಣ'ಗಳಲ್ಲಿ ಸೂಚನೆಗಳು ದೊರೆಯುತ್ತವೆ (೭–೫ವೃ, ೧–೧೧೮ವೃ). ನಿಜಕಾವ್ಯದಿಂದ ದೊರೆಯುವ 'ಆನಂದ' ಇಲ್ಲಿ ದೊರೆಯುವುದಿಲ್ಲ, 'ವಿಸ್ಮಯ' ಉಂಟಾಗುತ್ತದೆಯೆನ್ನುವುದು ಹೆಚ್ಚು ಪ್ರಚಲಿತವಾದ ಅರ್ಥ. ''ವಿಸ್ಮಯಕೃತ್ ವೃತ್ತಾದಿವಶಾತ್'' ('ಧ್ವನ್ಯಾಲೋಕ', ಪು. ೧೦೭), ''ಕೌತುಕವಿಶೇಷಕಾರಿ ಚಿತ್ರಮ್'' ('ಅಲಂಕಾರ ಶೇಖರ', ಪು. ೨೭), ''ಆಶ್ಚರ್ಯಕವಿತ್ವಾತ್ ಚಿತ್ರಮ್'' ('ಏಕಾವಲಿ', ೭–೫ವೃ), ''ಚಿತ್ರಮಾಶ್ಚರ್ಯಂ ತತ್ಕಾರಿ ಚ ಚಿತ್ರಮ್'' ('ಸರಸ್ವತೀಕಂಠಾಭರಣ'ದ ರತ್ನದರ್ಪಣ ವ್ಯಾಖ್ಯೆ ೧–೧೧೮) ಇಂತಹ ಸೂಚನೆಗಳಿಂದ ಅದು ವಿಶದವಾಗುತ್ತದೆ. ಆಧುನಿಕರೂ ಈ ಅರ್ಥವನ್ನೇ ಸಾಮಾನ್ಯವಾಗಿ ಪುರಸ್ಕರಿಸುತ್ತಾರೆ.

ಒಂದು ಕಾವ್ಯ ಚಿತ್ರಕಾವ್ಯವೆಂಬುದಾಗಿ ಅಂಗೀಕೃತವಾಗಬೇಕಾದರೆ, ಅದಕ್ಕೆ ಕೆಲವು ಮಾನದಂಡಗಳಿವೆ. ಅವು ಯಾವುವು ಎಂದರೆ : (i) ಒಂದು ಉದ್ದೇಶವನ್ನು ಲಕ್ಷ್ಯದಲ್ಲಿಟ್ಟುಕೊಂಡು, ಅದಕ್ಕೆ ಹೊಂದುವಂತೆ ಗೊತ್ತಾದ ಛಂದಸ್ಸುಗಳನ್ನು ಆಯ್ದುಕೊಂಡು ಅವನ್ನು ಚಮತ್ಕಾರಜನಕವಾಗುವ ಹಾಗೆ ವಿಶಿಷ್ಟ ರೀತಿಯಲ್ಲಿ ಬಳಸುವುದು. (ii) ವಿಶಿಷ್ಟ ರೀತಿಯಲ್ಲಿ ಅಕ್ಷರಗಳನ್ನು ಇಲ್ಲವೆ ಅಂತಹ ಅಕ್ಷರಗಳನ್ನುಳ್ಳ ಶಬ್ದಗಳನ್ನು ಸಂಯೋಜಿಸಿ ಪದ್ಯಗಳನ್ನು ರಚಿಸುವುದು; ರಚಿಸಿದ ಪದ್ಯಗಳ ಮೂಲಕ ಗೊತ್ತಾದ ವಸ್ತು ಅಥವಾ ಮಾದರಿಗಳನ್ನು ಹೋಲುವ 'ಪದ್ಯಚಿತ್ರ'ಗಳನ್ನು ಎಂದರೆ ಆಕಾರಗಳನ್ನೂ ಬಂಧಗಳನ್ನೂ ರೂಪಿಸುವುದು. (iii) ಶಬ್ದ ಅಥವಾ ಅರ್ಥಗಳಲ್ಲಿ ಉದ್ದೇಶಪೂರ್ವಕವಾಗಿ ಚಮತ್ಕಾರ ಹುಟ್ಟಿಸುವ ಪದ್ಯಗಳನ್ನು ರಚಿಸಿ ವಿಸ್ಮಯ ನಿಗೂಢತೆಗಳಿಗೆ ಅವಕಾಶಮಾಡುವುದು.

ಈ ಸಂಗತಿಗಳನ್ನು ಗಮನಿಸಿ ಶಬ್ದ, ಅರ್ಥ ಹಾಗೂ ಶಬ್ದಾರ್ಥಗಳನ್ನು ಅಲಂಕರಿಸುವ, ಹಾಗೆ ಅಲಂಕರಿಸುವುದರಿಂದ ಶಬ್ದಚಿತ್ರ, ಅರ್ಥಚಿತ್ರ, ಹಾಗೂ ಉಭಯಚಿತ್ರಗಳೆಂಬುದಾಗಿ ವಿಭಜಿತವಾಗುವ ಈ ಕಾವ್ಯಪದ್ಧತಿಯನ್ನು ಆಧುನಿಕರು ವಿಮರ್ಶಿಸಿದ್ದಾರೆ.[1] ಕಾವ್ಯದ ಜೀವಾಳವಾದ ವ್ಯಂಜನಾಶಕ್ತಿಯಿಲ್ಲದ ಮುಖ್ಯಕಾರಣದಿಂದಾಗಿ ಅದಕ್ಕೆ ಕಾವ್ಯಪ್ರಪಂಚದಲ್ಲಿ ಮಾನ್ಯತೆ ಸಲ್ಲದಿರುವುದೇ ಸಾಮಾನ್ಯವಾದ ಸಂಗತಿ. ಪ್ರಾಚೀನರೂ ಆಧುನಿಕರೂ ಈ ವಿಷಯದಲ್ಲಿ ಬಹುಶಃ ಏಕಾಭಿಪ್ರಾಯವುಳ್ಳವರು.

ಕಾವ್ಯದಲ್ಲಿ ''ವ್ಯಂಗ್ಯದ ಸ್ಪರ್ಶವೇ ಇಲ್ಲದ ಕಾವ್ಯಪ್ರಕಾರವಿರುವುದುಂಟೆ ? ವಸ್ತುವ್ಯಂಗ್ಯವಾಗಲಿ ಅಲಂಕಾರವ್ಯಂಗ್ಯವಾಗಲಿ ಇಲ್ಲದಿದ್ದರೂ ಯಾವುದಾದರೂ ಒಂದು ರಸದ ಸ್ಪರ್ಶ ಉಕ್ತಿಯಲ್ಲಿ ಇದ್ದೇ ಇರಬೇಕಲ್ಲವೆ! ಏಕೆಂದರೆ ರಸವು ಚಿತ್ತವೃತ್ತಿವಿಶೇಷ. ಒಂದಲ್ಲ ಒಂದು ಚಿತ್ತವೃತ್ತಿಯನ್ನು ಉಂಟುಮಾಡದಂಥ ವಸ್ತುವಿಶೇಷ ಜಗತ್ತಿನಲ್ಲಿ ಯಾವುದಿದೆ ?'' ಇದು ಸಹಜವಾಗಿ ಏಳಬಹುದಾದ ಆಕ್ಷೇಪಣೆ. ಇದಕ್ಕೆ ಪ್ರಾಚೀನನಾದ ಆನಂದವರ್ಧನನು ''ರಸಭಾವಾದಿ ವಿಷಯ ವಿವಕ್ಷಾವಿರಹೇ ಸತಿ । ಅಲಂಕಾರನಿಬದ್ಧೋ ಯಃ ಸ ಚಿತ್ರವಿಷಯೋ ಮತಃ'' ಎಂಬುದಾಗಿ ಉತ್ತರ ಹೇಳಿದ್ದಾನೆ (೩, ಪು. ೪೯೭). ಇದರ ಅಭಿಪ್ರಾಯವೆಂದರೆ : ''ರಸಾದಿಗಳು ಗೋಚರವಾಗದ ಕಾವ್ಯಪ್ರಕಾರವಿಲ್ಲ, ನಿಜ. ಆದರೆ ಎಲ್ಲಿ ರಸಭಾವಾದಿಗಳನ್ನು ನಿರೂಪಿಸುವ

ಉದ್ದೇಶವೇ ಇಲ್ಲದೆ ಶಬ್ದಾಲಂಕಾರವನ್ನಾಗಲಿ, ಅರ್ಥಾಲಂಕಾರವನ್ನಾಗಲಿ ಕವಿ ರಚಿಸುತ್ತಾನೋ, ಅಲ್ಲಿ ಅವನ ವಿವಕ್ಷೆಯ ದೃಷ್ಟಿಯಿಂದ ಅರ್ಥವು ರಸಾದಿ ಶೂನ್ಯವಾಗಿದೆಯೆಂದು ಹೇಳುತ್ತೇವೆ. ಏಕೆಂದರೆ, ಕಾವ್ಯದಲ್ಲಿ ಶಬ್ದಗಳ ಅರ್ಥವು ವಿವಕ್ಷೆಯನ್ನು ಅವಲಂಬಿಸುತ್ತದೆ. ಕವಿಗೆ ಉದ್ದೇಶವಿಲ್ಲದಿದ್ದರೂ, ವಾಚ್ಯದ ಸಾಮರ್ಥ್ಯದ ಮೂಲಕ ಅಂಥ ಕಡೆಗಳಲ್ಲಿ ರಸಾದಿಗಳ ಪ್ರತೀತಿಯುಂಟಾದರೆ, ಅದು ದುರ್ಬಲವಾಗಿಯೇ ಇರುವುದರಿಂದ ನೀರಸವೇ ಸರಿ. 'ಚಿತ್ರ' ಎಂಬ ವಿಭಾಗಕ್ಕೆ ಇಂಥ ಕಾವ್ಯಗಳು ಸೇರುತ್ತವೆ.''[2] ಹೀಗೆ ಈ ವಿಭಾಗವನ್ನು ಕುರಿತು ತನ್ನ ಅಭಿಪ್ರಾಯವನ್ನು ವ್ಯಕ್ತಮಾಡಿರುವುದನ್ನು ಗಮನಿಸಿದರೆ, ಆತನಿಗೆ ಇದರಲ್ಲಿ ಸಹಾನುಭೂತಿಯಿರಲಿಲ್ಲವೆಂದು ಹೇಳಬೇಕಾಗುತ್ತದೆ. ''ನಿರಂಕುಶವಾಣಿಯುಳ್ಳ ಕವಿಗಳು ರಸಾದಿತತ್ಪರತೆಯನ್ನು ಹೊಂದದೆಯೆ ಕಾವ್ಯ ರಚನೆಗೆ ಹೊರಡುವುದನ್ನು ಕಂಡು ಈ ಚಿತ್ರವೆಂಬ ಪ್ರಭೇದವನ್ನು ಕಲ್ಪಿಸಬೇಕಾಯಿತು....ಪರಿಪಾಕಶಾಲಿಗಳಾದ ಕವಿಗಳು ರಸಾದಿ ದೃಷ್ಟಿಯಿಲ್ಲದೆ ಕಾವ್ಯರಚನೆ ಮಾಡಲು ತೊಡಗುವುದೇ ಚೆನ್ನಲ್ಲ.'' ಇದು ಅವನ ದೃಢವಾದ ನಿಲವು (ಧ್ವನ್ಯಾಲೋಕ, ಪು. ೨೨೧).[3]

ಮಮ್ಮಟನಾದರೋ 'ಚಿತ್ರ' ಶಬ್ದಕ್ಕೆ ಗುಣವೆಂದೂ ಅಲಂಕಾರಗಳೆಂದೂ ಹೇಳಿರುವುದರಿಂದ (''ಚಿತ್ರಮಿತಿ ಗುಣಾಲಂಕಾರಯುಕ್ತಂ'', 'ಕಾವ್ಯಪ್ರಕಾಶ', ೧–೫ ವೃ), ಸ್ವಲ್ಪ ವ್ಯಾಪಕವಾದ ಆಶಯವಿಟ್ಟು ಈ ಕಾವ್ಯ ಪದ್ಧತಿಯನ್ನು ಅವನು ಕುರಿತಿರುವಂತಿದೆ. ''ವ್ಯಂಗ್ಯವೇ ಇಲ್ಲದ ಕಾವ್ಯ ಶಬ್ದಚಿತ್ರ ಇಲ್ಲವೆ ಅರ್ಥಚಿತ್ರ, ಅದು ಅಧಮಕಾವ್ಯ'' ಎಂಬುದಾಗಿ ಮೊದಲು ಅವನು ಲಕ್ಷಣಿಸಿದರೂ ''ವ್ಯಂಗ್ಯವಿಲ್ಲದ ಎಂದರೆ ಸ್ಫುಟವಾದ ವ್ಯಂಗ್ಯಾರ್ಥವಿಲ್ಲದ ಎಂದು ಅಭಿಪ್ರಾಯ'' ಎಂಬುದಾಗಿ ಅನಂತರದಲ್ಲಿ ಹೇಳಿರುವುದನ್ನು ಗಮನಿಸಬೇಕು. 'ಅಸ್ಫುಟವಾಗಿ ಶಕ್ಯ' ಎಂದು ಇದರಿಂದ ಇಂಗಿತವಾಗುತ್ತದೆ. ಅಪ್ಪಯ್ಯ ದೀಕ್ಷಿತ ''ವ್ಯಂಗ್ಯರಹಿತವಾಗಿದ್ದರೂ ಯಾವುದು ರಮ್ಯವೋ ಅದು ಚಿತ್ರ'' ಎಂಬುದಾಗಿ (''ಯದವ್ಯಂಗ್ಯಮಪಿ ಚಾರು ತಚ್ಚಿತ್ರಂ'', 'ಚಿತ್ರಮೀಮಾಂಸಾ', ಪು. ೪) ಹೇಳಿರುವುದರಲ್ಲಿ, 'ರಮ್ಯ'ವೆಂಬ ಮಾತು ಬಳಸಿರುವುದು ಸ್ವಾರಸ್ಯಕರವಾಗಿದೆ.

ಅಂತೂ ಒಲ್ಲದ ಮನಸ್ಸಿನಿಂದ ಹೇಗೋ ಚಿತ್ರಕಾವ್ಯ ಪದ್ಧತಿಯನ್ನು ಪ್ರಾಚೀನ ಆಲಂಕಾರಿಕರೂ ಅಲಂಕಾರಗ್ರಂಥಗಳ ವ್ಯಾಖ್ಯಾನಕಾರರೂ ಒಪ್ಪಿಕೊಂಡು ಬಂದಿರುವುದಂತೂ ಕಾಣುತ್ತದೆ. ರುದ್ರಟನ 'ಕಾವ್ಯಾಲಂಕಾರ'ದ ವ್ಯಾಖ್ಯಾನಕಾರನಾದ ನಮಿಸಾಧು ''ಯಮಕ ಶ್ಲೇಷ ಚಿತ್ರಗಳು ಸರಸವಾದ ಒಂದು ಕಾವ್ಯದಲ್ಲಿ ಬರುವುದಾದರೆ ರಸಚರ್ವಣಕ್ಕೆ ಅಡ್ಡಿಯುಂಟುಮಾಡುತ್ತವೆ, ಅವು; ಅದರಲ್ಲಿಯೂ ಶೃಂಗಾರ ಕರುಣಗಳಲ್ಲಿ ಎನ್ನಬಹುದು. ಇವು ಕವಿಯ ಶಕ್ತಿಯನ್ನು ತೋರಿಸುವುವೇ ಹೊರತು ರಸವಂತಿಕೆಯನ್ನಲ್ಲ. ದೇವತಾಸ್ತುತಿಯಲ್ಲಿ, ಖಂಡಕಾವ್ಯದಲ್ಲಿ, ರಣವರ್ಣನೆಯಲ್ಲಿ ಬೇಕಾದರೆ ಇವು ಬರಬಹುದು'' ಎಂದು ತೃತೀಯಾಧ್ಯಾಯದ ಕೊನೆಯ ಪದ್ಯವನ್ನು ಕುರಿತು ವ್ಯಾಖ್ಯಾನಿಸುವಾಗ ತಿಳಿಸಿದ್ದಾನೆ (೩–೫೯). ಕರ್ಣಪೂರನ ಉಕ್ತಿ: ''ಚಿತ್ರವೆಂಬುದು ನೀರಸವೇ, ಆದರೆ ಭಗವದ್ವಿಷಯವಾಗಿದ್ದರೆ, ಆಗ ಕಬ್ಬಿನ ಗೆಣ್ಣನ್ನು ಅಗಿದ ಹಾಗೆ, ಸ್ವಲ್ಪ ರಸಕ್ಕೆ ಅವಕಾಶವೇನೋ ಉಂಟು'' (ಚಿತ್ರಂ ನೀರಸ ಮೇವಾಹುಃ ಭಗವದ್ವಿಷಯಂ ಯದಿ। ತದಾ ಕಿಂಚಿಚ್ಚ ರಸವದ್ಯಥೇಕ್ಷೋಃ ಪರ್ವಚರ್ವಣಮ್, 'ಅಲಂಕಾರ ಶೇಖರ', ಕಾ. ೨೨೪). ವಿದ್ಯಾಧರನೇನೋ ''ಯಮಕ, ಚಿತ್ರಗಳಲ್ಲಿ ಪ್ರಾಯಃ ರಸಪುಷ್ಟಿ ತೋರುವುದಿಲ್ಲ'' ಎಂದೇ ('ಏಕಾವಲಿ', ೭–೫) ನಿರ್ಣಯಿಸಿದ್ದಾನೆ. ವಿಶ್ವನಾಥನು ಈ ಕಾವ್ಯ ಪದ್ಧತಿಯನ್ನು ವಿಸ್ತಾರವಾಗಿ ಕುರಿತಿದ್ದರೂ ''ಕಾವ್ಯದೊಳಗೆ ಗಂಟಿನಂತೆ ಕಠಿನವೆನಿಸಿ ನೀರಸವಾದ ಪ್ರಯುಕ್ತ ಇಲ್ಲಿ ಅದನ್ನು ವಿಸ್ತರಿಸಿಲ್ಲ'' (''ಕಾವ್ಯಾಂತರ್ಗಡುಭೂತತಯಾ ತು ನೇಹ ಪ್ರಪಂಚ್ಯತೇ'') ಎಂದು ಅಸಮ್ಮತಿ ಸೂಚಿಸಿರುವುದು ಸೋಜಿಗವುಂಟುಮಾಡುತ್ತದೆ. ಕೆಲವರಾದರೂ ದೇವತಾಸ್ತುತಿ, ಖಂಡಕಾವ್ಯಗಳಲ್ಲಿ 'ಚಿತ್ರ' ಇರಬಹುದೆಂದಿರುವುದು ಬಾಣ ಮಯೂರಾದಿಗಳ ಸ್ತುತಿಗಳು ಶತಕಗಳಲ್ಲಿ, ಘಟಕರ್ಪರಾದಿ ಖಂಡಕಾವ್ಯಗಳಲ್ಲಿ ಅದು ಗಳಿಸಿದ ಜನಪ್ರಿಯತೆಯ ಕಾರಣವಾಗಿಯೇ ಎಂದು ತೋರುತ್ತದೆ.

ಚಿತ್ರಕಾವ್ಯದ ಪ್ರಥೆ ಬೆಳೆದು ಬಲಗೊಳ್ಳಲು 'ಚಿತ್ರ' ಒಂದು ಅಲಂಕಾರವಾಗಿ ಮೊದಲು ಕಲ್ಪಿತವಾದುದೇ ಕಾರಣವಿರಬೇಕು ಎಂದು ಕೆಲವರು ವಿದ್ವಾಂಸರ ಗ್ರಹಿಕೆ. ರುಯ್ಯಕ, ಜಯದೇವ, ವಿಶ್ವನಾಥ, ಭಾನುದತ್ತ,

ಕೇಶವಮಿಶ್ರ, ವಿದ್ಯಾನಾಥ ಈ ಕೆಲವರು 'ಚಿತ್ರ'ವನ್ನು ಶಬ್ದಾಲಂಕಾರಗಳಲ್ಲಿ ಸೇರಿಸಿದ್ದಾರೆ. ವಿಶ್ವನಾಥನ ಹೊರತು ಗಣ್ಯ ಲಾಕ್ಷಣಿಕರು ಯಾರೂ ಹೀಗೆ ಮಾಡಿಲ್ಲ. ವಿದ್ಯಾಧರ ವಿದ್ಯಾನಾಥರು ಚಿತ್ರವನ್ನು ಅಲಂಕಾರವಾಗಿ ಮಾತ್ರವಲ್ಲದೆ ಕಾವ್ಯವಿಭಾಗವಾಗಿಯೂ ಪರಿಗಣಿಸಿದ್ದಾರೆ. ಆನಂದವರ್ಧನ ಅಪ್ಪಯ್ಯದೀಕ್ಷಿತರು ಒಂದು ಕಾವ್ಯ ವಿಭಾಗವಾಗಿ ಮಾತ್ರ ಗ್ರಹಿಸಿದ್ದಾರೆ. ದಂಡಿ ಭಾಮಹರ, ಉದ್ಭಟನ ಕೃತಿಗಳಲ್ಲಿ ಶಬ್ದಾಲಂಕಾರದ ವಿವೇಚನೆ ಯಿದ್ದರೂ 'ಚಿತ್ರ' ಎಂಬ ಮಾತು ಬಂದಿಲ್ಲ; ರುದ್ರಟನಲ್ಲಿಯೂ ಅಷ್ಟೆ. ರುದ್ರಟ ಗ್ರಂಥದ ವ್ಯಾಖ್ಯಾತೃ ನಮಿ ಸಾಧು ಅಲಂಕಾರವಾಗಿ ಗ್ರಹಿಸಿ, ಅದರ ಸ್ವರೂಪದ ವಿಷಯದಲ್ಲಿ ತನ್ನ ಆಲೋಚನೆಗಳನ್ನು ಪ್ರಕಟಿಸಿದ್ದಾನೆ. ಕುಂತಕನಿಗೆ ಚಿತ್ರದ ಅರಿವಿದ್ದರೂ ಇದ್ದಿರಬಹುದು. ಆದರೆ ಅವನ ಲಕ್ಷ್ಯ 'ವಕ್ರೋಕ್ತಿ' ಎಂಬ ಪರಿಭಾಷೆಯ ಕಡೆಗೆ. ಭೋಜನು ಕಾವ್ಯವಿಭಾಗವಾಗಿ 'ಚಿತ್ರ'ವನ್ನು ಗ್ರಹಿಸಿರುವುದಲ್ಲದೆ, ಅದರ ಪ್ರಕಾರಗಳನ್ನು ಸವಿಸ್ತರವಾಗಿ ನಿರೂಪಿಸಿದವರಲ್ಲಿ ಅಗ್ರಗಣ್ಯನಾಗಿದ್ದಾನೆ. ಅದನ್ನು ಒಂದು ಅಲಂಕಾರವಾಗಿ ಒಪ್ಪಿ ಅವನು ನಿರೂಪಿಸುತ್ತಿರುವಂತಿದೆ. ಹೇಮಚಂದ್ರನು ಕಾವ್ಯದಲ್ಲಿ ಅವ್ಯಂಗ್ಯರೀತಿಯದು, ಕಡೆಯ ದರ್ಜೆಯದು ಎಂಬುದಾಗಿ ಗ್ರಹಿಸಿದರೂ, ಅಲ್ಲಿ 'ಚಿತ್ರ' ಶಬ್ದವನ್ನು ಬಳಸದೆ, ಶಬ್ದಾಲಂಕಾರಗಳ ನಿರೂಪಣೆಯಲ್ಲಿ ಬಳಸಿದ್ದಾನೆ. 'ಚಿತ್ರ' ಒಂದು ಶಬ್ದಾಲಂಕಾರದ ಪ್ರಕಾರವಾಗಿ ಸ್ವಲ್ಪ ಸಂಕುಚಿತವಾದ ಅರ್ಥದಲ್ಲಿ ಬಳಕೆಯಾಗುವುದಾದರೆ, 'ಚಿತ್ರಕಾವ್ಯ' ಇನ್ನೂ ವ್ಯಾಪಕವಾಗಿ ಶಬ್ದ ಮತ್ತು ಅರ್ಥಾಲಂಕಾರಗಳೆರಡರ ವೈಚಿತ್ರ್ಯಗಳನ್ನೂ ಒಳಕೊಳ್ಳುತ್ತದೆ.[4]

ದಂಡಿ ಭಾಮಹ ವಾಮನರಂತಹವರೂ ರುದ್ರಟ ಭೋಜರಂತಹವರೂ ಚಿತ್ರಕಾವ್ಯದ ಪದ್ಧತಿಗೆ ತಮ್ಮ ಒಪ್ಪಿಗೆಯನ್ನು ಕೊಟ್ಟು ಯಥೋಚಿತವ್ಯಾಪ್ತಿಯಲ್ಲಿ ಅದರ ಸ್ವರೂಪವನ್ನೂ ಪ್ರಕಾರಗಳನ್ನೂ ನಿರೂಪಿಸಿದ್ದು ಕಾರಣವಾಗಿ, ಅನಂತರದ ಆಲಂಕಾರಿಕರು ಅವಕ್ಕೆ ತಕ್ಕ ಸ್ಥಾನವನ್ನೂ ಮರ್ಯಾದೆಯನ್ನೂ ನೀಡಲು ಉತ್ತೇಜನ ಸಿಕ್ಕಂತಾಯಿತು. ಕಾಳಿದಾಸನ ಅನಂತರದ ಕವಿಗಳಿಂದ ಅವಕ್ಕೆ ಸಿಕ್ಕಿದ ಪ್ರೋತ್ಸಾಹವೂ ಅವರನ್ನು ಚುರುಕುಗೊಳಿಸಿತು. ಮೊದಲು ಪದ್ಯಕಾವ್ಯಗಳಲ್ಲಿ ಅಲ್ಲೊಂದು ಇಲ್ಲೊಂದು ಸರ್ಗದಲ್ಲಿ ಚಮತ್ಕಾರಕವಿತೆಗೆ ದೊರೆಯುತ್ತಿದ್ದ ಸ್ಥಾನ ಚಂಪುಗಳಲ್ಲಿ, ನಾಟಕಗಳಲ್ಲಿಯೂ ದೊರೆಯುವಂತಾಗಿ, ಸಣ್ಣ ಪ್ರಮಾಣದ ರಚನೆಗಳಲ್ಲಿಯಂತೂ ಸಮಗ್ರವಾಗಿ ಚಿತ್ರಕಾವ್ಯದ ವೈಖರಿಯೇ ಎದ್ದು ತೋರುವ ಘಟ್ಟವೂ ಹುಟ್ಟಿಕೊಂಡಿತು. ''೧೨ನೆಯ ಶತಮಾನದಿಂದ ೧೯ನೆಯ ಶತಮಾನದವರೆಗೂ ಸಂಸ್ಕೃತ ಪಂಡಿತ ಮಂಡಲಿಗಳಲ್ಲಿ ಅಗ್ರಪೀಠದ ಮರ್ಯಾದೆ ದೊರೆಯುತ್ತಿದ್ದುದು ಚಿತ್ರಕವಿಚತುರನಿಗೆ ಹೊರತು ಸರಸಕವಿಗಲ್ಲ''[5]—ಎನ್ನುವ ಸ್ಥಿತಿ ಪ್ರಾಪ್ತವಾದ ಮೇಲಂತೂ, ಹೇಮಚಂದ್ರ ಅಜಿತಸೇನ ಮುಂತಾದ ಲಾಕ್ಷಣಿಕರು ಚಿತ್ರಕಾವ್ಯದ ನಿರೂಪಣೆಯನ್ನು ಸಹ ವಿಸ್ತಾರಗೊಳಿಸಿದರು. ಭಾಮಹನಂತಹ ಪ್ರಾಚೀನನು ಈ ಸಂಗತಿಗೆ ಕೊಟ್ಟ ಸ್ಥಾನವನ್ನೂ ಅಜಿತಸೇನನಂತಹ ಈಚೆಯವನು ಕೊಟ್ಟ ಸ್ಥಾನವನ್ನೂ ಹೋಲಿಸಿ ನೋಡಿದರೆ, ಈ ಪದ್ಧತಿಗೆ ಬರುಬರುತ್ತ ಪ್ರಾಶಸ್ತ್ಯ ಹೇಗೆ ಹೆಚ್ಚುತ್ತ ಹೋಯಿತೆಂಬುದು ವಿದಿತವಾಗುತ್ತದೆ. ಇದಕ್ಕೆ ತಕ್ಕಂತೆ ಪ್ರಕಾರಗಳು ಹೆಚ್ಚಿ, ಕವಲುಗಳು ಹುಟ್ಟಿಕೊಂಡುವು. ಪರಿಭಾಷೆಗಳು ಸೂಕ್ಷ್ಮಗೊಂಡು, ಆಗಾಗ ಅನಾವಶ್ಯಕವಾದ ನಾಮಾಂತರಗಳು ಕಾಣಿಸಿಕೊಂಡು ಗೊಂದಲವೂ ತಲೆದೋರಿತು. ಯಮಕ ಹಾಗೂ ಪ್ರಹೇಳಿಕೆಗಳನ್ನು ಗಮನಿಸಿದಾಗ ಇದು ವಿದಿತವಾಗದಿರದು. ಕೆಲವರು, ಭೋಜನಂತಹವರು ಕವಿಗಳ ಇಷ್ಟಾನಿಷ್ಟಗಳು ಏನೇ ಇರಲಿ, ತಾವು ಅತ್ಯುತ್ಸಾಹದಿಂದ ಭೇದಾಂತರಗಳನ್ನು ಕಲ್ಪಿಸಿ ಚಿತ್ರಕಾವ್ಯದ ಪರಿಧಿಯನ್ನು ಅಚ್ಚರಿಹುಟ್ಟುವಂತೆ ವಿಸ್ತರಿಸಿದರು.

'ಚಿತ್ರ'ದ ಲಕ್ಷಣವನ್ನು ಕುರಿತಾಗ ಸಂಸ್ಕೃತ ಲಾಕ್ಷಣಿಕರು ಅವನ್ನು ಆಕೃತಿಗಳಲ್ಲಿ ಅಡಗಿಸಿ ಇಲ್ಲವೆ ಅಳವಡಿಸಿ ತೋರಿಸುವ ಅಕ್ಷರಸಮುದಾಯದ ಕವಿತ್ವಪದ್ಧತಿ ಎಂಬುದನ್ನು ಹೇಳಲು ಮರೆಯುವುದಿಲ್ಲ. ''ಭಂಗ್ಯಂತರಕೃತ ತತ್ಕ್ರಮ ವರ್ಣನಿಮಿತ್ತಾನಿ ವಸ್ತುರೂಪಾಣಿ। ಸಾಂಕಾನಿ ವಿಚಿತ್ರಾಣಿ ಚ ರಚ್ಯಂತೇ ಯತ್ರ ತಚ್ಚಿತ್ರಮ್'' (ರುದ್ರಟ, 'ಕಾವ್ಯಾಲಂಕಾರ', ೫-೧) ''ತಚ್ಚಿತ್ರಂ ಯತ್ರ ವರ್ಣಾನಾಂ ಖಡ್ಗಾದ್ಯಾಕೃತಿ ಹೇತುತಾ'' (ಮಮ್ಮಟ, 'ಕಾವ್ಯಪ್ರಕಾಶ', ೯-೮), ''ವರ್ಣಾನಾಂ ಖಡ್ಗಾದ್ಯಾಕೃತಿಹೇತುತ್ವೇ ಚಿತ್ರಮ್'' (ರುಯ್ಯಕ, 'ಅಲಂಕಾರ ಸರ್ವಸ್ವ', ಪು. ೩೩), ''ಲಿಪ್ಯಕ್ಷರಾಣಾಂ ವಿನ್ಯಾಸೇ ಖಡ್ಗ ಪದ್ಮಾದಿ ರೂಪತಾ। ಯಸ್ಮಿನ್ನಾ

ಲೋಕ್ಯತೇ ಚಿತ್ರಾ, ತಚ್ಚಿತ್ರಮಿತಿ ಗೀಯತೇ'' (ನರೇಂದ್ರಪ್ರಭ ಸೂರಿ, 'ಅಲಂಕಾರಮಹೋದಧಿ', ೭–೨೧), ''ಕಾವ್ಯವಿತ್ಪ್ರವರ್ಯೈಶ್ಚಿತ್ರಂ ಖಡ್ಗಬಂಧಾದಿ ಲಕ್ಷ್ಯತೇ'' (ಅಪ್ಪಯ ದೀಕ್ಷಿತ, 'ಚಂದ್ರಾಲೋಕ', ೫-೧೦), ''ವರ್ಣಾ, ನಾಮಥ ಪದ್ಮಾದ್ಯಾಕೃತಿಹೇತುತ್ವಮುಚ್ಯತೇ ಚಿತ್ರಮ್'' (ವಿದ್ಯಾಧರ, 'ಏಕಾವಲಿ', ೭–೫), ''ಪದ್ಮಾದ್ಯಾಕಾರಹೇತುತ್ವೇ ವರ್ಣಾನಾಂ ಚಿತ್ರಮುಚ್ಯತೇ'' (ವಿದ್ಯಾನಾಥ, 'ಪ್ರತಾಪರುದ್ರೀಯ', ಪು. ೩೪೫), ''ಪದ್ಮಾದ್ಯಾಕಾರ ಹೇತುತ್ವೇ ವರ್ಣಾನಾಂ ಚಿತ್ರಮುಚ್ಯತೇ'' (ವಿಶ್ವನಾಥ, 'ಸಾಹಿತ್ಯದರ್ಪಣ', ೧೦–೧೩), ''ಪದ್ಮಾದಿ ಲಿಪಿವರ್ಣವಚ್ಚಿತ್ರಂ ಚ ಚಿತ್ರಮ್'' (ಶೋಭಾಕರ ಮಿತ್ರ, 'ಅಲಂಕಾರ ರತ್ನಾಕರ', ಸೂ. ೬), ''ಪದ್ಮಾದ್ಯಾಕಾರಹೇತುತ್ವೇ ವರ್ಣಾನಾಂ ಚಿತ್ರಮುಚ್ಯತೇ'' ('ಅಲಂಕಾರಮಣಿದರ್ಪಣ' ೫; 'ಶಿವತತ್ತ್ವರತ್ನಾಕರ' ೭–೧೪), ''ಖಡ್ಗಬಂಧಾದಯಶ್ಚಿತ್ರಾ ಗತಪ್ರತ್ಯಾಗತಾದಯಃ'' ('ಕಾವ್ಯವಿಲಾಸ', ೨–೫೯)–ಇವು ಕೆಲವು 'ಚಿತ್ರ'ಲಕ್ಷಣ ಸೂತ್ರಗಳಾಗಿವೆ. ಇವುಗಳಲ್ಲಿ ಹೊಸತನ ವಿಶೇಷವಾಗಿಲ್ಲವೆನ್ನುವುದು ವಿದಿತವೇ.

ಚಿತ್ರ ಪ್ರಕಾರಗಳನ್ನು ಕುರಿತ ಹಾಗೆ ಆಲಂಕಾರಿಕ ಕೆಲವು ನಿರೂಪಣೆಗಳು ಹೀಗಿವೆ: ''ವರ್ಣಸ್ಥಾನ ಸ್ವರಾಕಾರಗತಿಬಂಧಾನ್ಪ್ರತೀಹಯಃ । ನಿಯಮಸ್ತದ್ಬುಧೈಃ ಷೋಢಾ ಚಿತ್ರಮಿತ್ಯಭಿಧೀಯತೇ ॥'' (ಭೋಜ, ಸರಸ್ವತೀಕಂಠಾಭರಣ', ೨–೧೦೯), ''ಸ್ವರಸ್ಥಾನವರ್ಣಗತಿಬಂಧಾಕಾರನಿಯಮಃ ಚಿತ್ರಮ್'' (ಭೋಜ, 'ಶೃಂಗಾರಪ್ರಕಾಶ', ಪು. ೩೮೭), ''ಸ್ವರವ್ಯಂಜನಸ್ಥಾನಗತ್ಯಾಕಾರನಿಯಮಚ್ಯುತಗೂಢಾದಿ ಚಿತ್ರಮ್'' (ಹೇಮಚಂದ್ರ, 'ಕಾವ್ಯಾನುಶಾಸನ', ೫–೪), ''ಚಿತ್ರಂ ಆಕಾರಗತಿಸ್ವರವ್ಯಂಜನಭೇದಾತ್ ಚತುರ್ವಿಧಂ ಭವತಿ'' ('ವಾಗ್ಭಟಾಲಂಕಾರ', ೪–೭), ''ಆಕಾರ ಗತಿಸ್ವರವ್ಯಂಜನಸ್ಥಾನನಿಯಮಚ್ಯುತಗುಪ್ತಾದಿ ಭೇದೈರನೇಕಧಾ ಚಿತ್ರಮ್'' (ವಾಗ್ಭಟ, 'ಕಾವ್ಯಾನುಶಾಸನ', ೪–೪೬). ಈ ನಿರೂಪಣೆಗಳಲ್ಲಿಯೂ ಏಕಾಭಿಪ್ರಾಯವೇ ಎದ್ದು ಕಾಣುತ್ತದೆ. ಪ್ರಹೇಳಿಕಾದಿಗಳೂ ಸೇರಿದಂತೆ ಇವುಗಳಲ್ಲಿಯ ಅಂತರ್ಭೇದಗಳಿಂದ ಚಿತ್ರಕಾವ್ಯಪ್ರಪಂಚ ಎಷ್ಟು ವಿಸ್ತಾರವಾದುದು ಎನ್ನುವುದನ್ನು ತಿಳಿಯಬೇಕಾದರೆ, ಅಗ್ನಿಪುರಾಣದಲ್ಲಿ ''ಪ್ರತಿಲೋಮಾನುಲೋಮ್ಯಂ ಚ ಶಾಬ್ದೇನಾರ್ಥೇನ ಜಾಯತೇ....'' (ಅ. ೩೪೩.೩೫–೬೫) ಎಂಬ ವಿವರಣೆಯನ್ನೂ, ರುದ್ರಟನ ಕಾವ್ಯಾಲಂಕಾರದ ''ತಚ್ಚಕ್ರಖಡ್ಗಮುಸಲೈರ್ಬಾಣಾಸನಶಕ್ತಿಶೂಲಹಲೈ....'' ಎಂಬುದಾಗಿ ಆರಂಭವಾಗುವ ನಿರೂಪಣೆಯನ್ನೂ (೫.೨–೪), ಅಜಿತಸೇನನ 'ಅಲಂಕಾರ ಚಿಂತಾಮಣಿ' ಯ ''ಉಭೇ ವ್ಯಸ್ತ ಸಮಸ್ತೇ ಚ ದ್ವಿರ್ವ್ಯಸ್ತ ದ್ವಿಃಸಮಸ್ತಕೇ....'' ಎಂದು ಆರಂಭವಾಗುವ ನಿರೂಪಣೆಯನ್ನೂ (೨.೩–೧೦), ತೆಲುಗು 'ಅಪ್ಪಕವೀಯ'ದ ''ಅನುಲೋಮಮು ವಿಲೋಮಮು ನಿರೋಷ್ಠ್ಯಮುನು....'' ಎಂಬ ವಿವರಣೆಯನ್ನೂ (೪–೩೭೪) ಅಂತಹ ಇತರ ನಿರೂಪಣೆಗಳನ್ನೂ ನೋಡಬಹುದಾಗಿದೆ.

ಇವೆಲ್ಲ ಸಂಪ್ರದಾಯಾನುವರ್ತಿಯಾದ ನಿರೂಪಣೆಗಳಲ್ಲಿ, ಸ್ವತಂತ್ರ ಆಲೋಚನೆಯ ಹೊಳಹುಗಳನ್ನು ಆನಂದವರ್ಧನ, ಮಮ್ಮಟ ಮುಂತಾದವರ ಗ್ರಂಥಗಳಲ್ಲಿ ಗಮನಿಸಬಹುದು. ಮಮ್ಮಟನ ನಿರೂಪಣೆಯನ್ನು ಅವಲಂಬಿಸಿ, ಶಬ್ದಚಿತ್ರ ಮತ್ತು ಅರ್ಥಚಿತ್ರಗಳನ್ನು ಉದಾರವೂ ವ್ಯಾಪಕವೂ ಆದ ಆಶಯಗಳೊಂದಿಗೆ ವಿವೇಚಿಸಿ ಚಿತ್ರಕಾವ್ಯ ಪದ್ಧತಿಗೆ ಹೆಚ್ಚಿನ ಗೌರವವನ್ನು ತರುವುದಕ್ಕೆ ಪ್ರಯತ್ನವನ್ನು ಕಲಾನಾಥ ಝಾ ಎಂಬ ವಿದ್ವಾಂಸರು ಈಚೆಗೆ ನಡೆಸಿರುವುದುಂಟು. ಪ್ರಾಚೀನ ಲಾಕ್ಷಣಿಕರಾದ ಭರತಾದ್ಯರ ಗ್ರಂಥಗಳಲ್ಲಿಯೂ 'ವಿಷ್ಣುಧರ್ಮೋತ್ತರ ಪುರಾಣ'ದಂತಹ ಲಕ್ಷಣೇತರ ಗ್ರಂಥಗಳಲ್ಲಿಯೂ ಉಕ್ತವಾಗಿರುವ ಚಿತ್ರಸೂಕ್ತಗಳನ್ನು ವಿಮರ್ಶಿಸಿದರೆ, 'ರಸಚಿತ್ರ', 'ಭಾವಚಿತ್ರ' ಎಂಬಂತಹ ಶಬ್ದಗಳನ್ನು ಲಕ್ಷಿಸಿದರೆ, ಚಿತ್ರಕಲ್ಪನೆ, ಪ್ರತೀಕನಿರ್ಮಾಣಗಳು ಕಾವ್ಯ ರಚನೆಗೆ ಪ್ರಭಾವ ಬೀರಿರುವುದು ಸಾಧ್ಯವೆಂಬುದು ಅವರ ತರ್ಕ. ಅರ್ಥಚಿತ್ರಗಳು ಪಾಶ್ಚಾತ್ಯ ಸಾಹಿತ್ಯದ 'ಇಮೇಜ್ ಪೊಯೆಟ್ರಿ'ಗೆ ಹತ್ತಿರ ಬರುವುದಲ್ಲದೆ, ಒಟ್ಟಾಗಿ ಚಿತ್ರಕಾವ್ಯ ಪ್ರಕಾರವನ್ನು ಉನ್ನತ ಸ್ತರದಲ್ಲಿರಿಸುವುದೂ ಸಾಧ್ಯವೆಂಬುದು ಅವರ ವಿಚಾರ.[6] ಕಾವ್ಯವಿಮರ್ಶೆಯ ಮೂಲತತ್ತ್ವಗಳನ್ನು ಕುರಿತು ಚಿಂತಿಸುವವರು ಆಲೋಚಿಸಬೇಕಾದ ವಿಷಯವಿದು.

ಪ್ರಸ್ತುತ, ಭಾರತೀಯ ಅಲಂಕಾರ ಶಾಸ್ತ್ರಜ್ಞರ ಸಾಂಪ್ರದಾಯಿಕದೃಷ್ಟಿಗೆ ಅನುಸಾರವಾಗಿ ಇಲ್ಲಿ ಚಿತ್ರ

ಕಾವ್ಯವನ್ನು ಶಬ್ದಾಲಂಕಾರ ವಿಭಾಗದ ಹಾಗೂ ಗೌಣ ಕಾವ್ಯಪದ್ಧತಿಯ ಒಂದು ಶಾಖೆಯಾಗಿ ಗ್ರಹಿಸಿ, ಅದರ ಸ್ವರೂಪ, ಪ್ರಭೇದಗಳನ್ನು ವಿವೇಚಿಸಿದೆ; ಆ ಹಿನ್ನೆಲೆಯಲ್ಲಿ, ಕನ್ನಡ ಸಾಹಿತ್ಯದಲ್ಲಿ ಚಿತ್ರಕಾವ್ಯದ ಉಗಮ ವಿಕಾಸಗಳನ್ನು ಸವಿಸ್ತಾರವಾಗಿ ನಿರೂಪಿಸುವ ಪ್ರಯತ್ನವನ್ನು ಮಾಡಿದೆ.

೨

ಸಂಸ್ಕೃತ ಕಾವ್ಯಾಲಂಕಾರ, ಸಾಹಿತ್ಯಗ್ರಂಥಗಳಲ್ಲಿ ಚಿತ್ರಕಾವ್ಯ

ಸಂಸ್ಕೃತ ಆಲಂಕಾರಿಕರಲ್ಲಿ ಭೋಜದೇವನು ವರ್ಣ (ವ್ಯಂಜನ), ಸ್ಥಾನ, ಸ್ವರ, ಆಕಾರ, ಗತಿ ಮತ್ತು ಬಂಧಗಳೆಂಬುದಾಗಿ ೬ ವಿಧದ ಚಿತ್ರಕಾವ್ಯಪ್ರಕಾರಗಳನ್ನು ವಿಂಗಡಿಸಿ, ವಿಷಯವಿವೇಚನೆ ಮಾಡಿದ್ದಾನೆ. ಮಮ್ಮಟನು ಖಡ್ಗಾದಿ ಆಕೃತಿಗಳನ್ನಷ್ಟೇ ಚಿತ್ರಗಳಾಗಿ ಭಾವಿಸಿದ್ದಾನೆ. ಹೇಮಚಂದ್ರನ ಪ್ರಕಾರ ಅನುಪ್ರಾಸ ಯಮಕ, ಚಿತ್ರ, ಶ್ಲೇಷ, ವಕ್ರೋಕ್ತಿ, ಪುನರುಕ್ತಾಭಾಸಗಳಲ್ಲಿ, 'ಚಿತ್ರ' ಆಕೃತಿಗಳನ್ನು ಕುರಿತ ಪ್ರತ್ಯೇಕ ವಿಭಾಗ ವಾಗಿದೆ (ಸೂ.೧೦೮–೧೧೨).

ರಾಜಶೇಖರನು ತನ್ನ 'ಕಾವ್ಯಮೀಮಾಂಸೆ'ಯ 'ಕವಿರಹಸ್ಯ'ವೆಂಬ ಅಧಿಕರಣದಲ್ಲಿ ಅಲಂಕಾರಶಾಸ್ತ್ರದ ಒಂದೊಂದು ವಿಭಾಗಕ್ಕೂ ಒಬ್ಬೊಬ್ಬ ಆಚಾರ್ಯನ ಹೆಸರನ್ನು ಹೇಳುತ್ತ "....ಆನುಪ್ರಾಸಿಕಂ ಪ್ರಚೇತಾಯನಃ ಯಮಕಾನಿ ಚಿತ್ರಂ ಚಿತ್ರಾಂಗದಃ ಶಬ್ದಶ್ಲೇಷಂ ಶೇಷಃ" ಎಂಬುದಾಗಿ ಹೇಳಿದ್ದಾನೆ. ಅಲ್ಲಿಗೆ ಅನುಪ್ರಾಸ, ಯಮಕ–ಚಿತ್ರಬಂಧಗಳು, ಶಬ್ದಶ್ಲೇಷಗಳಿಗೆ ಕ್ರಮವಾಗಿ ಪ್ರಚೇತಾಯನ, ಚಿತ್ರಾಂಗದ ಮತ್ತು ಶೇಷ ಎಂಬುವರು ಆಚಾರ್ಯರೆಂದು ಅಭಿಪ್ರಾಯವಾಗುವುದು. ಯಮಕದ ವಿಷಯದಲ್ಲಿ ಇದ್ದಿರಬಹುದಾದ ಬೇರೊಬ್ಬ ಆಚಾರ್ಯನ ಹೆಸರು ಮಾತೃಕೆಯಲ್ಲಿ ಬಿಟ್ಟುಹೋಗಿರುವುದು ಸಾಧ್ಯ ಎಂದು ತೋರುತ್ತದೆ. ಈಗಾಗಲೇ ವಿದ್ವಾಂಸರು ರಾಜಶೇಖರನ ಈ ನಿರೂಪಣೆ ಕಾಲ್ಪನಿಕವಾದುದಾಗಿರಬೇಕೆಂದು ಊಹಿಸಿದ್ದಾರೆ.[7]

ಹೇಮಚಂದ್ರನು ಕೊಡುವ ಶಬ್ದಾಲಂಕಾರ ವಿಭಾಗಗಳು ವ್ಯಾಪಕವಾಗಿ ಚಿತ್ರಕಾವ್ಯದ ಎಲ್ಲ ಪ್ರಕಾರ ಗಳನ್ನೂ ಒಳಕೊಳ್ಳುವ ಹಾಗೆ ತೋರುತ್ತವೆ. ಜೊತೆಯ ಸ್ವರಗಳು ಯಾವುವಾದರೂ ಸರಿಯೆ, ವ್ಯಂಜನಗಳ ಆವೃತ್ತಿ ಅನುಪ್ರಾಸ, ಪದ್ಯವೊಂದರ ನಿಯತ ಪಾದಸ್ಥಾನಗಳಲ್ಲಿ ಸಮಾನರೀತಿಯ ಗುಣಿತಾಕ್ಷರಗಳ ಇಲ್ಲವೆ ಶಬ್ದ ಗಳ ಆವೃತ್ತಿ ಯಮಕ (ಸಮಾನರೀತಿ ಎನ್ನುವುದು ಧ್ವನ್ಯಾತ್ಮಕ ಅಥವಾ ಲಿಪ್ಯಾತ್ಮಕ ಹೇಗೂ ಆಗಬಹುದು); ಚಿತ್ರರೂಪದಲ್ಲಿ ಇಡಬಹುದಾದ ಅಕ್ಷರಸಂಯೋಜನೆಯ ಪದ್ಯಗಳೂ ಸ್ವರವ್ಯಂಜನಾದಿಗಳನ್ನು ವಿಶಿಷ್ಟ ರೀತಿಯಲ್ಲಿ ಆಯ್ದು ಜೋಡಿಸಿದ್ದರಿಂದಾಗಿ ಸಾಧ್ಯವಾಗುವ ಪದ್ಯಗಳೂ ಚಿತ್ರಗಳು; ಅರ್ಥಚಮತ್ಕಾರವನ್ನು ಕೆಲಮಟ್ಟಿಗೆ ಉಳ್ಳ ಶಬ್ದಕ್ರೀಡೆಯ ಒಂದು ಬಗೆ ಶ್ಲೇಷೆ; ಶ್ಲೇಷೆಯ ಮೂಲಕವಾಗಿಯೋ ಧ್ವನಿವ್ಯತ್ಯಾಸದಿಂದಲೋ ಹುಟ್ಟುವ ಕೊಂಕುಮಾತು ವಕ್ರೋಕ್ತಿ; ಅರ್ಥದಲ್ಲಿ ಸಮಾನತೆಯಿರುವಂತೆ ಮೇಲೆ ಮಾತ್ರ ತೋರುವ, ಆದರೆ ರೂಪದಲ್ಲಿ ಯಥಾರೀತಿಯಾಗಿರುವ ಎರಡು ಪದಗಳನ್ನು ಒಟ್ಟಿಗೆ ತರುವುದು ಪುನರುಕ್ತಾಭಾಸ ('ಕಾವ್ಯಾನುಶಾಸನ', ಸೂತ್ರ ೧೦೮–೧೧೨).[8]

ಹೇಮಚಂದ್ರನೂ ಆತನ ಹಾಗೆಯೇ ಇತರ ಕೆಲವರು ಆಲಂಕಾರಿಕರೂ 'ಚಿತ್ರ'ದಲ್ಲಿ ಭೋಜನ ಹಾಗೆ ಉಪವಿಭಾಗಗಳನ್ನು ವಿಂಗಡಿಸಿದ್ದಾರೆ. ಸ್ವರ, ವ್ಯಂಜನ, ಸ್ಥಾನ, ಗತಿ, ಆಕಾರ, ಚ್ಯುತ ಮತ್ತು ಗೂಢಗಳೆಂಬುವು ಆ ಉಪವಿಭಾಗಗಳು. ಆಧುನಿಕರು ಆಕಾರ ಮತ್ತು ಬಂಧಚಿತ್ರಗಳನ್ನು ಸಾಮಾನ್ಯವಾಗಿ ಒಂದಾಗಿ ಗಣಿಸುತ್ತಾರೆ; ಜೊತೆಗೆ 'ಪ್ರಶ್ನೋತ್ತರ', 'ಪ್ರಹೇಳಿಕ' ಮುಂತಾದುವನ್ನೂ ಈ ಗುಂಪಿನಲ್ಲಿ ಪರಿಗಣಿಸಿದ್ದಾರೆ. ಸಾಮಾನ್ಯವಾಗಿ ವರ್ಣಚಿತ್ರಗಳಲ್ಲಿ ಸ್ವರ, ವ್ಯಂಜನ ಮತ್ತು ಸ್ಥಾನಚಿತ್ರಗಳೆಂಬುದಾಗಿ ಮುಖ್ಯವಿಭಜನೆಯಿದ್ದರೂ ಅನೇಕ ಉಪ ಭೇದಗಳು ಏರ್ಪಡುವುದು ಸಾಧ್ಯವಿದೆ. ಗತಿಚಿತ್ರಗಳಲ್ಲಿ 'ಪಠಿತಭಂಗವಿಶೇಷದ ಗತಪ್ರತ್ಯಾಗತ, ಸರ್ವತೋ

ಭದ್ರ, ಅರ್ಧಭ್ರಮ, ತುರಂಗಪದ, ಗಜಪದ, ರಥಪದ ಮತ್ತು ಗೋಮೂತ್ರಿಕೆಗಳೆಂಬವು ಮುಖ್ಯ ಭೇದಗಳು. ಆಕಾರಚಿತ್ರಗಳು ಪದ್ಮಾದಿ ಆಕೃತಿಗಳು. ಬಂಧಚಿತ್ರಗಳು ಚಕ್ರ, ಶರಯಂತ್ರ, ವ್ಯೋಮ ಇತ್ಯಾದಿಗಳೆಂಬವು.

ಈ ಮೇಲಿನ ಎಲ್ಲ ವಿಧದ ಚಿತ್ರಗಳೂ ಎಲ್ಲ ಅಲಂಕಾರ ಗ್ರಂಥಗಳಲ್ಲಿಯೂ ನಿರೂಪಿತವಾಗಿರದೆ, ಯಥೋಚಿತವಾಗಿ ಮಾತ್ರ ನಿರೂಪಿತವಾಗಿರುತ್ತವೆ. ಇವುಗಳಲ್ಲಿಯ ಒಂದು ಸಮಾನವಾದ ಅಂಶವೆಂದರೆ, ಕೆಲವು ಗೊತ್ತಾದ ಸ್ಥಾನಗಳಲ್ಲಿ ಗೊತ್ತಾದ ಅಕ್ಷರಗಳು ಕುಶಲರೀತಿಯಲ್ಲಿ ಸಂಯೋಜನೆಗೊಂಡಿದ್ದು, ಓದುವಾಗ ಇಲ್ಲವೆ ಆಕೃತಿಗಳಲ್ಲಿ ರೂಪಿಸುವಾಗ ಆವೃತ್ತಿಗೊಳ್ಳುವುದು. ಇದು ಆಯಾ ವೈಚಿತ್ರ್ಯದಲ್ಲಿ ವಿಸ್ಮಯದ ಅಂಶವನ್ನು ಹೆಚ್ಚಿಸುವ ಸಂಗತಿ. ಆದ್ದರಿಂದ ಅನುಪ್ರಾಸ ಯಮಕಗಳು ಈ ಕವಿತ್ವಬಂಧಗಳ ಮೂಲಸ್ರೋತವೆನ್ನಬಹುದಾಗಿದೆ. ಈ ಅನುಪ್ರಾಸ ಯಮಕಗಳೂ ಬಂಧಗಳೂ ಸಾಹಿತ್ಯೇತಿಹಾಸದ ದೃಷ್ಟಿಯಿಂದ ಬಹಳ ಹಳೆಯವೇನಲ್ಲ. ಎಲ್ಲೋ ಒಮ್ಮೊಮ್ಮೆ ಹೊರತು, ಇವಕ್ಕೆ ಋಗ್ವೇದದಲ್ಲಿ ಮಹತ್ತ್ವವಿತ್ತ ಸಂದರ್ಭಗಳಿಲ್ಲ. ಭಾಸ, ಅಶ್ವಘೋಷ, ಕಾಳಿದಾಸರಂತಹ ಕವಿಗಳ ಕಾಲದಿಂದ ಈಚೆಗೆ ಶಬ್ದಚಮತ್ಕಾರಗಳು ಕವಿತ್ವದಲ್ಲಿ ಮೊದಲಾಯಿತೆಂದು ಹೇಳಬೇಕು. ಎಂದರೆ ಚಿತ್ರಕಾವ್ಯದ ಉದಯ ಲೌಕಿಕಸಂಸ್ಕೃತಯುಗದ ಉದಯದೊಂದಿಗೆ ಎನ್ನಬಹುದು. ಗೂಢಚಾರ ಉದ್ದೇಶಗಳಿಗಾಗಿ ನಿಯೋಜಿತವಾಗುತ್ತಿದ್ದ ಕೌಟಲೀಯ ಹಾಗೂ ಮೂಲದೇವೀಯ ಪದ್ಧತಿಯ ಮ್ಲೇಚ್ಛಿತ, ದುರ್ಬೋಧ ಇತ್ಯಾದಿ ಗೂಢಲೇಖನ ವಿಧಾನಗಳನ್ನು ಇಲ್ಲಿ ಪರಿಗಣಿಸಬೇಕಾಗಿಲ್ಲ. ಅವನ್ನು ಅತ್ಯಂತ ಜಟಿಲ ಹಾಗೂ ಕೃತಕ ರೀತಿಯ ಅಕ್ಷರ ಸಂಯೋಜನೆಗಳಿಂದ ಸಿದ್ಧಮಾಡಿರುತ್ತಿದ್ದಂತೆ ತೋರುತ್ತದೆ.

ಪ್ರಹೇಳಿಕೆಗಳ ಮಟ್ಟಿಗೆ, ಅದರ ಇತಿಹಾಸ ಋಗ್ವೇದದ ಕಾಲಕ್ಕೆ ಹೋಗುತ್ತದೆ. ಋಗ್ವೇದದ ಒಗಟುರೂಪದ ಮಂತ್ರಗಳಲ್ಲಿ, ಬ್ರಾಹ್ಮಣಗಳು ಮತ್ತು ಉಪನಿಷತ್ತುಗಳಲ್ಲಿ 'ಬ್ರಹ್ಮೋದ್ಯ'ಗಳೆಂದು ಹೇಳುವ ರಚನೆಗಳಲ್ಲಿ ಪ್ರಹೇಳಿಕೆಗಳ ಸ್ವರೂಪವನ್ನು ಕಾಣಬಹುದು. ಕುತೂಹಲ ವಿಸ್ಮಯಗಳನ್ನು ಹುಟ್ಟಿಸಲು, ಆಧ್ಯಾತ್ಮಿಕ, ಅನುಭಾವಿಕ ಕಾಣ್ಕೆಗಳನ್ನು ಅಭಿವ್ಯಕ್ತಿಗೊಳಿಸಲು ರಚಿಸುತ್ತಿದ್ದ ಈ ಮಂತ್ರಗಳಿಗೂ ಶಬ್ದವೈಖರಿ ಅಭ್ಯಾಸಬಲ ಬುದ್ಧಿಚಮತ್ಕಾರಗಳ ಮೂಲಕ ಪಂಡಿತಪ್ರಯತ್ನವಾಗಿ ರಚಿಸುತ್ತಿದ್ದ ಅನುಪ್ರಾಸ ಯಮಕಗಳು ಹಾಗೂ ಸ್ಥಾನ ಸ್ವರಾದಿ ಚಿತ್ರಗಳಿಗೂ ಸಾಕಷ್ಟು ವ್ಯತ್ಯಾಸವಿದೆಯೆಂಬುದನ್ನು ಮರೆಯಲಾಗದು.

ಸಂಸ್ಕೃತದಲ್ಲಿ ವಿದ್ವತ್ ಕಾವ್ಯದ ಪರಂಪರೆಯಲ್ಲಿ ಬಂದವರು, ದಂಡಿ, ಭಾರವಿ, ಭಟ್ಟಿ, ಕುಮಾರದಾಸ, ಮಾಘ, ರತ್ನಾಕರ, ಶಿವಸ್ವಾಮಿ, ಹರಿಚಂದ್ರ, ಜಿನಸೇನಾಚಾರ್ಯ, ಕವಿರಾಜ, ಶ್ರೀಹರ್ಷ ಈ ಕೆಲವರು, ತಮ್ಮ ಕೃತಿಗಳಲ್ಲಿ, ಪ್ರಸಂಗ ಬಂದಾಗ ಇಲ್ಲವೆ ಅವಕಾಶ ಮಾಡಿಕೊಂಡು, ಚಿತ್ರಕಾವ್ಯದ ಹಲವು ಪ್ರಕಾರಗಳಲ್ಲಿ ಯಥಾಸಾಧ್ಯವಾದವನ್ನೆಲ್ಲ ಪ್ರಯೋಗಿಸಿ ತಮ್ಮ ಪಾಂಡಿತ್ಯವನ್ನು ಮೆರೆದಿದ್ದಾರೆ. ಸಾಮಾನ್ಯವಾಗಿ ಕೃತಿಯ ಯಾವುದಾದರೊಂದು ಸರ್ಗ ಅಥವಾ ಸಂಧಿಯಲ್ಲಿ ಇವು ಇಡಿಕಿರಿದಿರುವುದೇ ರೂಢಿ. ಇವನ್ನು ರುಚಿಭೇದದ ಸಾಕ್ಷಿಗಳೆಂದು ಹೇಗೋ ಹಾಗೆಯೇ ರುಚಿಹೀನತೆಯ, ಕ್ಷೀಣಪ್ರತಿಭೆಯ ಸಾಕ್ಷ್ಯಗಳೆಂದು ತಿಳಿಯುವವರೂ ಉಂಟು. ಇವುಗಳಲ್ಲಿಯೂ ಉತ್ತಮ ಕವಿತ್ವದ ಗುಣವೆಷ್ಟು ಎನ್ನುವುದನ್ನು ಅಳೆದು ನೋಡುವುದಕ್ಕಿಂತ ಬಹುಶ್ರುತನಾದ ಕವಿಯ ಶಬ್ದಶಕ್ತಿಯ ವೈಖರಿಗೆ ತಲೆದೂಗುವುದೇ ಜಾಣತನ. ''ದುಃಖೇನ ಕೃತಮತ್ಯರ್ಥಂ ಕವಿಸಾಮರ್ಥ್ಯಸೂಚಕಮ್ । ದುಷ್ಕರಂ ನೀರಸತ್ವೇಽಪಿ ವಿದಗ್ಧಾನಾಂ ಮಹೋತ್ಸವಂ॥'' ಎಂಬ 'ಅಗ್ನಿಪುರಾಣ'ದ ಮಾತನ್ನಿಲ್ಲಿ ನೆನೆಯಬಹುದು (ಅ.೩೪೩–೩೨). ಲೇಖಕನ ಬಹುಶ್ರುತತ್ವವನ್ನು ಪ್ರದರ್ಶಿಸುವ, ದುಷ್ಕರವಾದ ಶ್ಲೇಷ ಯಮಕಾದಿಗಳಿಂದ, ಅಪೂರ್ವವಾದ ಗತಿಚಿತ್ರಗಳಿಂದ ಮತ್ತು ಬಂಧವಿಶೇಷಗಳ ಪ್ರಾವೀಣ್ಯದಿಂದ ವಿದ್ವಾಂಸರನ್ನು ಬೆರಗುಪಡಿಸಬೇಕೆಂಬ, ರಾಜಾನುಗ್ರಹವನ್ನು ಗಳಿಸಬೇಕೆಂಬ ಪ್ರಯತ್ನಗಳು ನಡೆದ ಫಲವಾಗಿ ಸಾಹಿತ್ಯದಲ್ಲಿ ಹೊಸ ಅಭಿರುಚಿ ತಲೆದೋರಿ, ಹೀಗೆ ಸಾಹಿತ್ಯ ವಿದ್ವತ್‌ಕವಿಗಳ ಕೈಯಲ್ಲಿ ಹಲವು ಕಾಲ ಸಾಗಿತೆಂದು ಹೇಳಬಹುದು. ಇವರು ರಾಜಾಸ್ಥಾನಗಳಲ್ಲಿ ನಡೆಯುತ್ತಿದ್ದ ವಾಕ್‌ಸ್ಪರ್ಧೆ ಕವಿತಾಸ್ಪರ್ಧೆಗಳಲ್ಲಿ ತಮ್ಮ ಕವಿತ್ವದ ವೈಖರಿಯನ್ನು ಪ್ರದರ್ಶಿಸುತ್ತಿದ್ದುದು ಕಾಲಕ್ರಮದಲ್ಲಿ ಗ್ರಂಥಸ್ಥವಾಗಿ ಪ್ರಬಲಿಸಿರಬೇಕು.

ಚಮತ್ಕಾರಕವಿತೆ ಎಂದೂ ಕಾವ್ಯರಚನೆಯಲ್ಲಿ ಆಸಕ್ತರಾದವರಿಗೆ, ಮುಖ್ಯವಾಗಿ ತರುಣರಿಗೆ, ಪಾಂಡಿತ್ಯ

ಪ್ರಿಯರಿಗೆ, ಆಕರ್ಷಣೆಯ ಸ್ಥಾನವಾಗಿದ್ದುದು ಸಹಜವೇ. ಚತುಷ್ಷಷ್ಟಿ ಕಲೆಗಳ ಪಟ್ಟಿಗಳಲ್ಲಿ ಇದರ ಬಗೆಗಳು ಎಡೆ ಪಡೆದುಕೊಂಡಿರುವುದನ್ನು ಕಾಣಬಹುದು. ವಾತ್ಸ್ಯಾಯನನ 'ಕಾಮಸೂತ್ರ'ಗಳಲ್ಲಿ ಮತ್ತು ಅವುಗಳಿಗೆ ಯಶೋಧರ ಕೃತ 'ಜಯಮಂಗಲಾ' ವ್ಯಾಖ್ಯಾನದಲ್ಲಿ, ಶ್ರೀಧರಸ್ವಾಮಿಗಳ ಭಾಗವತ ಟೀಕೆಯಲ್ಲಿ ಪ್ರಹೇಲಿಕಾ (ಒಗಟುಗಳು), ಪ್ರತಿಮಾಲಾ (ಒಂದು ಆಟ. ಒಬ್ಬನು ಒಂದು ಶ್ಲೋಕವನ್ನು ಹೇಳುತ್ತಾನೆ. ಇನ್ನೊಬ್ಬನು ಅದರ ಅಂತ್ಯಾಕ್ಷರದಿಂದ ಮೊದಲುಮಾಡಿ ಇನ್ನೊಂದು ಶ್ಲೋಕವನ್ನು ಹೇಳುತ್ತಾನೆ. ಹೀಗೆಯೇ ಇದು ಮುಂದುವರಿಯುತ್ತದೆ), ದುರ್ವಾಚಕ ಯೋಗ (ಇನ್ನೊಂದು ಆಟ; ಪ್ರತಿಯೊಬ್ಬ ಸ್ಪರ್ಧಿಯೂ ಪರುಷಾಕ್ಷರ ಘಟಿತವಾದ ಶ್ಲೋಕಗಳನ್ನು ಹೇಳುವುದು), ಕಾವ್ಯಸಮಸ್ಯಾಪೂರಣ (ಶ್ಲೋಕದ ಕೊನೆಯ ಪಾದವನ್ನು ಮೊದಲೇ ಕೊಟ್ಟು, ಆಮೇಲೆ ಅದರ ಮೊದಲ ಮೂರು ಪಾದಗಳನ್ನು ಸಮಂಜಸವಾಗುವಂತೆ ರಚಿಸಲು ತಿಳಿಸುವುದು), ಅಕ್ಷರಮುಷ್ಟಿಕಾಕಥನ (ಅಕ್ಷರಶ್ರೇಣಿ ಗಳಿಂದ ಅರ್ಥವನ್ನು ತಿಳಿಯುವುದು), ಮ್ಲೇಚ್ಛಿತ ವಿಕಲ್ಪ (ಉದ್ದಿಷ್ಟ ವ್ಯಕ್ತಿಗಲ್ಲದೆ ಅನ್ಯರಿಗೆ ತಿಳಿಯಲಾಗದ ಭಾಷೆ ಗಳಲ್ಲಿ ಮಾತನಾಡುವುದು), ಸಂಪಾಠ್ಯ (ಒಬ್ಬನು ಒಂದು ಶ್ಲೋಕವನ್ನು ಹೇಳುತ್ತಾನೆ. ಅದು ಇನ್ನೊಬ್ಬನಿಗೆ ಅಪರಿಚಿತವಾದ್ದು. ಆದರೂ ಅದನ್ನು ಆತನು ಮತ್ತೊಮ್ಮೆ ಯಥಾರೀತಿ ಹೇಳಿ ಒಪ್ಪಿಸುವುದು), ಮಾನಸೀ (ಅನುಸ್ವಾರ ಮತ್ತು ವಿಸರ್ಗಗಳನ್ನು ಯಥಾವತ್ತಾಗಿ ಬರೆದು, ಉಳಿದ ಅಕ್ಷರಗಳೆಡೆಯಲ್ಲಿ ಕೇವಲ ಅವುಗಳ ತಲೆ ಕೊಟ್ಟು, ಕೊಂಬು ಇತ್ಯಾದಿ ಚಿಹ್ನೆಗಳನ್ನು ತೋರಿಸಿ, ಒಬ್ಬನು ಒಂದು ಶ್ಲೋಕವನ್ನು ಬರೆದರೆ, ಇನ್ನೊಬ್ಬ ಆ ಚಿಹ್ನೆಗಳಿರುವಡೆಯಲ್ಲಿ ಉಚಿತವಾದ ಅಕ್ಷರಗಳನ್ನು ಪೂರ್ತಿಮಾಡುವುದು)—ಈ ಎಂಟು ಬಗೆಯ ಚಮತ್ಕಾರ ಕವಿತೆಯ ಬಗೆಗಳನ್ನು 'ಕಲೆ'ಗಳೆಂದು ನಿದರ್ಶಿಸಿದೆ.

ಪ್ರಾಕೃತ ಸಾಹಿತ್ಯದ 'ನಾಯಧಮ್ಮಕಹಾ'ದಲ್ಲಿ ಪಹೇಲಿಯಂ(=ಪ್ರಹೇಳಿಕೆ) ದ್ವಾಸಪ್ತತಿಕಲೆಗಳಲ್ಲಿ ಒಂದು ಎಂಬುದಾಗಿ ತೋರಿಸಿದೆ. ಹೀಗೆ ಅನೂಚಾನವಾಗಿ ವಿವರಿಸುವ ಕಲೆಗಳಲ್ಲಿ ಕಾವ್ಯರಚನೆಯ ಒಂದು ಭಾಗ ವಾದ ಚಮತ್ಕಾರ ಕವಿತೆ ಇಲ್ಲವೆ 'ಚಿತ್ರಕಾವ್ಯ' ಪ್ರಕಾರದ ಕೆಲವು ಬಗೆಗಳನ್ನು ಉಲ್ಲೇಖಿಸಿರುವುದು, ಇವುಗಳಲ್ಲಿ ವಿದ್ಯಾವಂತರಿಗೆ ಇದ್ದ ಆಸಕ್ತಿಯೇನೆಂಬುದನ್ನು ಸೂಚಿಸುವುದೆನ್ನಬೇಕು. ''ಗೋಷ್ಠ್ಯಾಂ ಕುತೂಹಲಾಧ್ಯಾಯೀ ವಾಗ್ಬಂಧಶ್ಚಿತ್ರಮುಚ್ಯತೇ'' ಎಂಬುದಾಗಿ 'ಅಗ್ನಿಪುರಾಣ'ದಲ್ಲಿ ಹೇಳಿರುವುದು (ಅ.೩೪೩–೨೨) ಇಂತಹ ಆಸಕ್ತಿ ಯನ್ನು ಲಕ್ಷಿಸಿಯೇ ಎಂದು ಊಹಿಸಬಹುದು. ಅಲ್ಲದೆ ಈ ಪುರಾಣಕರ್ತನು ಹೇಳಿರುವ ಪ್ರಶ್ನ, ಪ್ರಹೇಲಿಕಾ, ಗುಪ್ತ, ಚ್ಯುತ, ದತ್ತ, ಚ್ಯುತದತ್ತ, ಸಮಸ್ಯಾ ಎಂಬ ೭ ಭೇದಗಳ ಸ್ವರೂಪವಾದರೂ ಇದನ್ನೇ ಸಮರ್ಥಿಸುತ್ತದೆ. ''ಹೊಸದಾದ ಪದ ಪದಾರ್ಥಗಳ ಆಲೋಚನೆಯಿಂದ ಮಂದಬುದ್ಧಿಗಳ ಜ್ಞಾನವನ್ನು ಚುರುಕುಗೊಳಿಸುವುದು'' ಎಂಬುದಾಗಿ 'ಚಿತ್ರ'ದ ಲಕ್ಷಣವನ್ನು (''ಅಭಿನವ ಪದಪದಾರ್ಥ ಪರ್ಯಾಲೋಚನೇನ ಮಂದಬುದ್ಧೀನಾಂ ಚೇತೋ ಜ್ಞಾನಸ್ಯ ತ್ರಾಣಾದ್ ವಾ ಚಿತ್ರಮ್'', 'ಏಕಾವಲಿ', ೭–೫ ವೃತ್ತಿ) ಎಂದು ವಿದ್ಯಾಧರ ಹೇಳಿರುವುದರಲ್ಲಿ ಯುಕ್ತಿ ವಾದವೇ ಪ್ರಧಾನವಾಗಿದ್ದರೂ, ಸ್ವರೂಪವನ್ನು ಅದು ನೈಜವಾಗಿ ಬಿಂಬಿಸಿದೆ.

೩

ಕನ್ನಡ ಕಾವ್ಯಾಲಂಕಾರಗ್ರಂಥಗಳಲ್ಲಿ ಚಿತ್ರಕಾವ್ಯ

ಚಿತ್ರಕಾವ್ಯ ಪ್ರಕಾರಗಳ ಮೊದಲ ಪ್ರಸ್ತಾವವಿರುವುದು 'ಕವಿರಾಜಮಾರ್ಗ'ದಲ್ಲಿಯೇ. ಇಲ್ಲಿ ಶಬ್ದಾ ಲಂಕಾರ ವಿವರಣೆಯ ೨ನೆಯ ಪರಿಚ್ಛೇದದಲ್ಲಿ ಗ್ರಂಥಕರ್ತೃ ದುಷ್ಕರಕಾವ್ಯಪ್ರಕಾರಗಳೆಂದು [ಗತಪ್ರತ್ಯಾಗತ, ಗೂಢಚತುರ್ಥಪಾದ, ದ್ವ್ಯಕ್ಷರಾದಿಕ, ಅತಾಲವ್ಯ, ನಿರೋಷ್ಠ್ಯ, ಸರ್ವತೋಭದ್ರ, ನಿರುತ್ತರ], ಗೋಮೂತ್ರಿಕ, ಯಮಕ, ಗೋಪಿತಕ್ರಿಯೆ, ಅರ್ಥಭ್ರಮ, ಚಕ್ರ ಮತ್ತು ಮುರಜ ಬಂಧಗಳನ್ನು ಉಲ್ಲೇಖಿಸಿದ್ದಾನೆ. ಅಲ್ಲದೆ

ಇವುಗಳಿಗೆ ಕ್ರಮವಾಗಿ ಲಕ್ಷ್ಯಗಳನ್ನೂ ಒದಗಿಸಿದ್ದಾನೆ. ಮುಂದುವರಿದು ಭಾವೆ, ನುಸುಳ್, ಅಸ್ಪಷ್ಟಾಕ್ಷರ, ವರ್ಣವ್ಯತ್ಯಯ, ಬಿಂದುಚ್ಯುತಕ, ಒರ್ನುಡಿ, ವರ್ಣಚ್ಯುತಕ ಮತ್ತು ಸಮಸ್ತಕ (ಸಮಂತಿ) ಎಂಬ ಪ್ರಹೇಳಿಕೆಯ ಭೇದಗಳಿಗೆ ಲಕ್ಷಣನಿರ್ವಚನವಿಲ್ಲದಿದ್ದರೂ, ಲಕ್ಷ್ಯಗಳ ಮೂಲಕ ಅವನ್ನು ಊಹಿಸಿ ತಿಳಿಯುವಂತೆ ಅವನು ಮಾಡಿರುವಂತಿದೆ. ಈ ಗುಂಪಿನಲ್ಲಿ ವರ್ಣವ್ಯತ್ಯಯ, ಬಿಂದುಚ್ಯುತಕ, ವರ್ಣಚ್ಯುತಕಗಳು ಸೇರಿರುವುದರ ಔಚಿತ್ಯ ವಿಚಾರಾರ್ಹ. ಮೊದಲನೆಯದು ಬೇರೆಲ್ಲಿಯೂ ಕಾಣದ ಒಂದು ಬಗೆ. ಕೊನೆಯ ಎರಡೂ ಚ್ಯುತಚಿತ್ರಗಳ ಬಗೆಗಳು. ಎರಡು ಗಂಪುಗಳಲ್ಲಿಯೂ ದಂಡಿ ಭಾಮಹರಲ್ಲಿಲ್ಲದ ಹೊಸ ಬಗೆಗಳಿವೆ. ಪ್ರಹೇಳಿಕೆಯ ಭಾಗದಲ್ಲಿ ಸ್ವೋಪಜ್ಞತೆ ಮಿಗಿಲಾಗಿದೆ. ಈ ಭಾಗವಂತೂ ಗಾಢ ಅಧ್ಯಯನದ ವಿಷಯವಾಗಲು ಯೋಗ್ಯವಾಗಿದೆ.

ಅನಂತರದಲ್ಲಿ ನಾಗವರ್ಮನ ಸರದಿ. ಈತನ 'ಕಾವ್ಯಾವಲೋಕನ'ದಲ್ಲಿ, ಅದರ ಗುಣವಿವೇಕಾಧಿಕರಣ ದಲ್ಲಿ, ಚಿತ್ರದ ಸಾಮಾನ್ಯ ಲಕ್ಷಣದೊಂದಿಗೆ ಶರ, ಶೂಲ, ಚಾಪ, ಚಕ್ರ, ಅಸಿ ಎಂಬ ಬಂಧಗಳನ್ನೂ ಗಜ, ರಥ, ತುರಂಗಪದಗತಗಳೆಂಬ ಗತಿಗಳನ್ನೂ ಮುರಜ, ಗೋಮೂತ್ರಿಕೆ, ಪುಷ್ಕರ, ಅರ್ಧಭ್ರಮಣ, ಸರ್ವತೋಭದ್ರ, ಗತಪ್ರತ್ಯಾಗತಗಳೆಂಬ ಆಕೃತಿ ಮತ್ತು ಗತಿವಿಶೇಷಗಳನ್ನೂ ಅಕ್ಷರಚ್ಯುತಿ, ಬಿಂದುಚ್ಯುತಿ, ಏಕಾಕ್ಷರ, ದ್ವ್ಯಕ್ಷರ, ನಿರೋಷ್ಠ್ಯ, ಅತಾಲವ್ಯಗಳೆಂಬ ವರ್ಣ ಮತ್ತು ಚ್ಯುತಚಿತ್ರಗಳನ್ನೂ ಚ್ಯುತದತ್ತಾಕ್ಷರವೆಂಬ ಚ್ಯುತಚಿತ್ರ ವಿಶೇಷ ವನ್ನೂ ಕ್ರಿಯಾಕಾರಕ ಗೋಪಗಳು, ಗೂಢಚತುರ್ಥಗಳೆಂಬ ಗೂಢಚಿತ್ರಗಳನ್ನೂ ಉಲ್ಲೇಖಿಸಿರುವುದಲ್ಲದೆ, ಗಜ ರಥ ತುರಂಗಪದಗತ ಗತಿಗಳ ಹೊರತಾಗಿ ಎಲ್ಲಕ್ಕೂ ಲಕ್ಷ್ಯಗಳನ್ನು ಸಹ ಒದಗಿಸಿದೆ. ಬಳಿಕ ಪ್ರಹೇಳಿಕೆಗಳನ್ನು ಎತ್ತಿಕೊಂಡು, ಪ್ರಹೇಳಿಕೆಯ ಸಾಮಾನ್ಯ ಲಕ್ಷಣದೊಂದಿಗೆ ನುಸುಳ್, ಒರ್ನುಡಿ, ಭಾವೆ, ಅಸ್ಪಷ್ಟಾರ್ಥ, ಉಟಿವು, ನಾಮಾಂತರಿತ, ಕುಸುರಿಯ ನುಡಿ ಎಂಬ ಪ್ರಕಾರಗಳನ್ನು ಉಲ್ಲೇಖಿಸಿದ ನಾಗವರ್ಮನು ಕೊನೆಯದೊಂದರ ಹೊರತು ಉಳಿದವಕ್ಕೆ ಲಕ್ಷ್ಯಗಳನ್ನು ಕ್ರಮವಾಗಿ ಒದಗಿಸಿದ್ದಾನೆ. ಇವಕ್ಕೆ ದಂಡಿ ರುದ್ರಟರ ಲಕ್ಷಣಗ್ರಂಥಗಳೂ 'ಕವಿರಾಜಮಾರ್ಗ'ವೂ ಆಧಾರಸಾಮಗ್ರಿಯನ್ನು ನೀಡಿರುವುದು ನಿಜವಾದರೂ, ನಾಗವರ್ಮನಲ್ಲಿ ಹೊಸ ಪ್ರಭೇದ ಗಳಿವೆ, ಹೆಸರುಗಳಿವೆ, ವಿಶೇಷಾಂಶಗಳೂ ಇವೆ ಎನ್ನುವುದನ್ನು ಗಮನಿಸಬೇಕು.

ನಾಗವರ್ಮನು ಯಮಕಾನುಪ್ರಾಸಗಳನ್ನು ಸಾಕಷ್ಟು ವಿಸ್ತಾರವಾಗಿ ನಿರೂಪಿಸಿರುವುದು ಪ್ರತ್ಯೇಕವಾಗಿ ಉಲ್ಲೇಖಿಸಬಹುದಾದ ಸಂಗತಿ. ಆತನ ಈ ವಿಭಾಗದ ನಿರೂಪಣೆ ಗುಣವಿವೇಕಾಧಿಕರಣದ ಆರಂಭಭಾಗದಲ್ಲಿ, ಹತ್ತು ಸೂತ್ರಗಳಲ್ಲಿ ಬಿತ್ತರಗೊಂಡಿದ್ದು, ಲಕ್ಷ್ಯಗಳಲ್ಲಿ ಕಂಡುಬರುವ ಲಕ್ಷಣಶುದ್ಧಿ ಹಾಗೂ ಕಾವ್ಯದೃಷ್ಟಿ ಮೆಚ್ಚ ತಕ್ಕುವಾಗಿವೆ. ಭಾಮಹ ದಂಡಿ ರುದ್ರಟರ ಅನುಸರಣೆಯನ್ನು ವಿಶೇಷವಾಗಿ ಗಮನಿಸಬಹುದು, ಈ ಶಬ್ದಾಲಂಕಾರ ಭಾಗದಲ್ಲಿ. ಅಲ್ಲದೆ ಕೆಲವು ಹೊಸ ಬಗೆಗಳೂ ಇವೆ. ದುಷ್ಕರಕಾವ್ಯಗಳಲ್ಲಿ, ಅಕ್ಷರ ಸಂಯೋಜನೆಯಲ್ಲಿ ಸ್ವೀಕಾರ ಮಾಡಬಹುದಾದ ವಿಕಲ್ಪಗಳನ್ನು ಹೇಳಿರುವಲ್ಲಿಯೂ ಇದನ್ನು ನಾವು ಗಮನಿಸಬಹುದಾಗಿದೆ.

'ಉದಯಾದಿತ್ಯಾಲಂಕಾರ' ಕರ್ತೃ ತಾನು ಯಮಕ ಪ್ರಹೇಳಿಕಾದಿಗಳನ್ನು ಅಮಾರ್ಗವೆಂಬ ಕಾರಣ ಕ್ಕಾಗಿ ಕೈಬಿಟ್ಟಿರುವುದಾಗಿ ತಿಳಿಸಿದರೂ, ೨ ಪದ್ಯಗಳಲ್ಲಿ ಅವುಗಳ ಸ್ವರೂಪವನ್ನು ಚುಟುಕಾಗಿ, 'ಶಾಸ್ತ್ರ'ಕ್ಕೆ ಎನ್ನು ವಂತೆ ಹೇಳಿ ಮುಗಿಸಿದ್ದಾನೆ (ಪ. ೭೧–೭೩).

ಸಾಳ್ವನು 'ಶಾರದಾವಿಲಾಸ'ದಲ್ಲಿ ''ಶಬ್ದಾರ್ಥೋಭಯಚಿತ್ರಮಾಗಿ ವ್ಯಂಗ್ಯರಹಿತಮಪ್ಪುದಧಮ ಕಾವ್ಯಂ'' ಎಂಬುದಾಗಿ ತ್ರಿವಿಧ ಚಿತ್ರಗಳನ್ನು ಉಲ್ಲೇಖಿಸಿ, 'ಇವರ್ಕುದಾಹರಣೆ'ಯೆಂದು ಕ್ರಮವಾಗಿ ಅನುಪ್ರಾಸ ಮತ್ತು ಯಮಕಗಳ ೩ ಲಕ್ಷ್ಯಗಳನ್ನಷ್ಟೇ ಕೊಟ್ಟಿದ್ದಾನೆ. ಎಂದರೆ ಆತನ ಲಕ್ಷ್ಯಗಳು ಕೇವಲ ಶಬ್ದಾಲಂಕಾರದ, ಶಬ್ದ ಚಿತ್ರಗಳ ಲಕ್ಷ್ಯಗಳೇ ಆಗಿವೆ. ಹೀಗೆ ಮಾಡಲು ಕವಿಯ ಆಶಯವೇನೋ ತಿಳಿಯದು. ೩ನೆಯ ಲಕ್ಷ್ಯ ಐತಿ ಹಾಸಿಕವಾಗಿಯೂ ಗಮನಿಸಬಹುದಾದುದು. ಇದು ಕೊಂಕಣ ಚಕ್ರವರ್ತಿ ಜಯಕೇಶಿನೃಪಾಲನಿಗೆ ಸಂಬಂಧಿಸಿದೆ.

'ಅಪ್ರತಿಮವೀರಚರಿತ'ದಲ್ಲಿ ರೀತಿಶಯ್ಯಾದಿ ನಿರೂಪಣವೆಂಬ ಎರಡನೆಯ ಪ್ರಕರಣದಲ್ಲಿ ತಿರುಮಲಾ ರ್ಯನು ಕೆಲವು ಪ್ರಭೇದಗಳೊಂದಿಗೆ ಅನುಪ್ರಾಸ ಯಮಕಗಳ ಹಾಗೂ ''ಪ್ರಶ್ನೋತ್ತರಂಗಳೇಕಮಾಗಿರ್ಪುದು'', ''ಪಲವುಂ ಪ್ರಶ್ನಂಗಳ್ಗೊಂದೇ ಉತ್ತರಂ'' ಎಂಬೆರಡು ಚಿತ್ರೋತ್ತರಾಲಂಕಾರದ ಪ್ರಭೇದಗಳ ಹೊರತು ಬೇರೆ

ಯಾವ ಚಿತ್ರಪ್ರಕಾರಗಳನ್ನೂ ಕುರಿತಿಲ್ಲ. ಆದರೆ ಪ್ರಹೇಳಿಕೆಯ ವಿಭಾಗಕ್ಕೆ ಸೇರುವ 'ಪ್ರಶ್ನೋತ್ತರ'ಗಳ ಬಗ್ಗೆ ಪ್ರಸ್ತಾವಿಸುವ ಕನ್ನಡ ಆಲಂಕಾರಿಕರಲ್ಲಿ ಇವನೇ ಮೊದಲಿಗನು ಎನ್ನುವುದು ಒಂದು ವಿಶೇಷ ಸಂಗತಿ.

ಅಳಿಯ ಲಿಂಗರಾಜನು 'ನರಪತಿಚರಿತ'ದಲ್ಲಿ ಶಬ್ದಾಲಂಕಾರಪ್ರಕರಣವೆಂಬ ಎರಡನೆಯ ಆಶ್ವಾಸದಲ್ಲಿ ಅನುಪ್ರಾಸದ ಕೆಲವು ಪ್ರಭೇದಗಳನ್ನೂ ಯಮಕದ ಕೆಲವು ಪ್ರಭೇದಗಳನ್ನೂ ಲಕ್ಷ್ಯಸಹಿತವಾಗಿ ನಿರೂಪಿಸಿದ ಮೇಲೆ, ಹಾರ, ಷೋಡಶದಳಪದ್ಮ, ತ್ರಿಶೂಲ ಹಾಗೂ ಷಡರ ಚಕ್ರ ಈ ಬಂಧಗಳಿಗೆ ಲಕ್ಷ್ಯಗಳನ್ನು ಒದಗಿಸಿದ್ದಾನೆ.

ಜಾಯೇಂದ್ರನ 'ಕನ್ನಡ ಕುವಲಯಾನಂದ' ಅಪ್ಪಯ್ಯದೀಕ್ಷಿತರ 'ಕುವಲಯಾನಂದ'ದ ಕನ್ನಡ ಅನುವಾದವೆಂಬುದು ವಿದಿತವೇ ಇದೆ. ಇದರಲ್ಲಿ ಕಾವ್ಯರೀತಿ ಪದ್ಧತಿಯನ್ನು ಕುರಿತಾಗ 'ಚಿತ್ರ' ಎಂಬುದರ ಸಾಮಾನ್ಯ ಲಕ್ಷಣದೊಂದಿಗೆ ಶಬ್ದ, ಅರ್ಥ ಮತ್ತು ಉಭಯಚಿತ್ರಗಳೆಂದು ಅವುಗಳ ಮೂರು ಬಗೆಗಳನ್ನು ಸೂಚಿಸಿದೆಯಾದರೂ ಕರ್ತೃ ಜಾಯೇಂದ್ರನು ''ಮೂರು ಪ್ರಕಾರದ ಚಿತ್ರದೊಳು ಶಬ್ದಚಿತ್ರವು ಬಾಹುಲ್ಯದಿಂದ ನಿರಸವಾಗಿಹುದೆಂದು ಸತ್ಕವಿಗಳು ಆದರಣೆಯುಳ್ಳವರಾಗದಿಹುದರಿಂದ ನ್ಯೂನತ್ವ ಪೇಳಿವ್ವಾಯಿತು'' ಎಂಬುದಾಗಿ ಅದನ್ನು ಪೂರ್ತಿಯಾಗಿ ಕೈಬಿಟ್ಟಿದ್ದಾನೆ. ಹೀಗಾಗಿ ವರ್ಣ, ಗತಿ, ಬಂಧಾದಿ ಚಿತ್ರಗಳಿಗೆ ಇಲ್ಲಿ ಅವಕಾಶವಿಲ್ಲವಾಗಿದೆ. 'ಶಬ್ದಚಿತ್ರ'ದ ಲಕ್ಷ್ಯವೆಂದು ಅವನು ಹೇಳಿರುವ ಒಂದೇ ಒಂದು ಪದ್ಯವನ್ನು ವಿಶ್ಲೇಷಿಸಿದರೆ, ಅವನು ''ಯಮಕಾನುಪ್ರಾಸದಿಂದ ಶಬ್ದಚಮತ್ಕೃತಿ ಮಾತ್ರ ತೋರಿಹುದರಿಂದ ಶಬ್ದಚಿತ್ರವೆನಿಸುವುದು'' ಎಂದಿದ್ದರೂ, ಅದು ಛೇಕಾನುಪ್ರಾಸದ ಲಕ್ಷ್ಯಮಾತ್ರವಾಗಿ ಗೋಚರಿಸುತ್ತಿದೆ.

೪

ಕನ್ನಡ ಚಿತ್ರಕಾವ್ಯದ ಇತಿಹಾಸ

ಕನ್ನಡ ಸಾಹಿತ್ಯದ ಪ್ರಾಚೀನ ಕವಿಗಳು ತಾವು ಯಾವುದಾದರೂ ಒಂದು ಚಿತ್ರಕಾವ್ಯವನ್ನು ಇಲ್ಲವೆ ಆ ಪ್ರಕಾರದಲ್ಲಿ ಸೇರುವ ಯಮಕಕಾವ್ಯ, ಸಂಧಾನಕಾವ್ಯ, ಬಂಧಕಾವ್ಯ ಮುಂತಾದವುಗಳಲ್ಲಿ ಯಾವುದಾದರೂ ಒಂದು ಉಪಪ್ರಕಾರದ ಕಾವ್ಯವನ್ನು ರಚಿಸುತ್ತಿರುವುದಾಗಿ ವ್ಯಕ್ತವಾಗಿ ಹೇಳಿದ್ದು ಕಂಡುಬರುವುದಿಲ್ಲ. ಒಂದೋ ಎರಡೋ ಅಪವಾದಗಳಿರಬಹುದು ಎಂಬುದೇನೋ ನಿಜ. ನಮ್ಮ ಪ್ರಾಚೀನ ಕವಿಗಳು ಪೂರ್ವಕವಿ ಸಂಪ್ರದಾಯದ ಅನುಸರಣೆಯಂತೆ ಲೌಕಿಕ ಪ್ರಬಂಧವನ್ನೋ ಪುರಾಣವನ್ನೋ ಪುರಾಣಕಾವ್ಯವನ್ನೋ ರಚಿಸುವ ಬಗೆಗೆ ಗ್ರಂಥಾದಿ ಭಾಗದಲ್ಲಿ ಯಥೋಚಿತವಾಗಿ ಸಂಕಲ್ಪವಾಕ್ಯಗಳನ್ನು ಹೇಳಿರುವುದುಂಟು; ವಿಸ್ತಾರವಾದ ಕೃತಿಗಳನ್ನು ಹಾಗೆ ರಚಿಸುವುದುಂಟು. ಚಿತ್ರಕಾವ್ಯರಚನೆ ಒಂದು ಕಾವ್ಯ ಸಂಪ್ರದಾಯವಾಗಿ ಕನ್ನಡ ಭಾಷೆಯಲ್ಲಿ ಎಂದೂ ಪ್ರಬಲವಾಗಿ ಬೆಳೆದು ಬರಲಿಲ್ಲ. ಅದರ ಹಜ್ಜೆಗುರುತುಗಳು ಅಸ್ಪಷ್ಟವಾಗಿ ಮಾತ್ರ ಕಂಡುಬಂದಿವೆ.

ಸಂಸ್ಕೃತ ಸಾಹಿತ್ಯದಲ್ಲಿ ಪ್ರಾಚೀನ ಕಾಲದಿಂದ, ಸ್ವತಂತ್ರವಾಗಿಯೇ, ಚಿತ್ರಕಾವ್ಯರಚನೆಯ ಸಂಪ್ರದಾಯ ಬೆಳೆದುಬಂದಿದೆ; ಪ್ರಬಲಿಸಿದ ಘಟ್ಟಗಳೂ ಉಂಟು. ಇಲ್ಲಿ ಈ ಸಂಪ್ರದಾಯ ಆಧುನಿಕ ಕಾಲದಲ್ಲಿ ಸಹ ಮುನ್ನಡೆದಿದೆ. ಮಹಾಭಾರತ ಭಾಗವತಗಳನ್ನು ಒಳಕೊಂಡ ಹಾಗೆ ಅನಂತರದ ಲೌಕಿಕ ಸಂಸ್ಕೃತ ಯುಗದ ಭಾರವಿ, ಭಟ್ಟಿ, ಮಾಘ, ಶ್ರೀಹರ್ಷ, ಸುಬಂಧು, ದಂಡಿ, ತ್ರಿವಿಕ್ರಮ ಭಟ್ಟ ಈ ಕೆಲವರು ವಿದ್ವತ್ಕವಿಗಳಲ್ಲಿಯೂ ಸ್ವಲ್ಪ ವಿಶೇಷವಾಗಿ ಶಿವಸ್ವಾಮಿ, ರತ್ನಾಕರ ಮೊದಲಾದವರಲ್ಲಿಯೂ ಚಿತ್ರಕಾವ್ಯದ ವಿವಿಧ ಮಾದರಿಗಳನ್ನು, ಬಿಡಿಬಿಡಿಯಾಗಿಯೂ ಪಟ್ಟವಾಗಿಯೂ ಹರಡಿಕೊಂಡಿರತಕ್ಕವನ್ನು, ಎದುರುಗೊಳ್ಳುತ್ತೇವೆ. ಇವುಗಳು ಒಂದು ರೀತಿಯಾದರೆ, ಚಿತ್ರಕಾವ್ಯಪ್ರಕಾರಗಳಾದ ಯಮಕಶ್ಲೇಷಾದಿಗಳನ್ನು ಪ್ರಚುರತೆಯಿದ ಬಳಸಿ ಬರೆದ ಪ್ರತ್ಯೇಕವೂ ಸ್ವತಂತ್ರವೂ ಆದ ಕೃತಿಗಳು ಇನ್ನೊಂದು ರೀತಿಯವು. ಇವನ್ನು ಯಮಕಕಾವ್ಯಗಳು, ಶ್ಲೇಷಕಾವ್ಯಗಳು, ಸಂಧಾನಕಾವ್ಯಗಳು, ಬಂಧಕಾವ್ಯಗಳು ಮುಂತಾಗಿ ಆಧುನಿಕರು ವ್ಯವಹರಿಸುತ್ತಾರೆ.

ಸಂಸ್ಕೃತ ಭಾಷೆಯ ವಿದ್ವತ್‌ಕಾವ್ಯ ಸಂಪ್ರದಾಯದಲ್ಲಿ ಗಾಢವಾದ ಪ್ರವೇಶವೂ ಶ್ರದ್ಧಾಸಕ್ತಿಗಳೂ ಇದ್ದ ತೆಲುಗು ಭಾಷೆಯ ಕವಿಗಳು ಆ ಸಂಪ್ರದಾಯವನ್ನು ತಮ್ಮ ಭಾಷೆಯ ಸಾಹಿತ್ಯದಲ್ಲಿ ಚೆನ್ನಾಗಿ ರೂಢಿಸಿದ್ದು, ಕಸಿಗೊಳಿಸಿದ್ದು ಕಂಡುಬರುತ್ತದೆ. ಇಂದಿಗೂ ಅಷ್ಟಾವಧಾನ ಪರಂಪರೆಯನ್ನು, ಚಿತ್ರಕಾವ್ಯದ ರಚನಾವೈಚಿತ್ರ್ಯಗಳಿಗೆ ಎಡೆಗೊಡುವ ಒಂದು ಆಶುಕವಿತ್ವ ಪದ್ಧತಿಯನ್ನು, ಉಳಿಸಿಕೊಂಡಿರುವ ಈ ಭಾಷೆಯ ವಿದ್ವತ್‌ಕವಿಗಳು ಪ್ರಾಚೀನ ತೆಲುಗು ಸಾಹಿತ್ಯದ ವಿದ್ವತ್‌ಕಾವ್ಯ ಸಂಪ್ರದಾಯವನ್ನು ಪೋಷಿಸುವ ದೃಷ್ಟಿಯುಳ್ಳವರಾಗಿದ್ದಾರೆ. ಈ ಭಾಷೆಯ ಪ್ರಾಚೀನಸಾಹಿತ್ಯದಲ್ಲಿ ಉಕ್ತವಾಗಿರುವ 'ಚತುರ್ವಿಧ ಕವಿತ್ವ'ದಲ್ಲಿ[9] ಆಶು ಮತ್ತು ಚಿತ್ರಕವಿತೆಗಳು ತೆಲುಗು ದೇಶದಲ್ಲಿ ಎಂದಿನಿಂದಲೂ ವಿದ್ವಜ್ಜನಮಾನ್ಯವಾಗಿ ಬೆಳೆದುಕೊಂಡುಬಂದಿದೆ. ಇಲ್ಲಿ ಸಂಧಾನ ಕಾವ್ಯಗಳೂ ಗರ್ಭಕವಿತ್ವವೂ ಮಿಗಿಲಾಗಿರುವಂತೆಯೇ, ಸಂಸ್ಕೃತದಲ್ಲಿ ಸಹ ದುರ್ಲಭವಾದ ನಿರೋಷ್ಠ್ಯಕಾವ್ಯ ನಿರ್ದಂತಕಾವ್ಯಗಳು ಸಹ ರಚಿತವಾಗಿವೆ. 'ಕವಿಕಲ್ಪಿತ ಕಲ್ಪವಲ್ಲರಿ' ಎಂಬುದೊಂದು ಅಪೂರ್ವ ಕವಿತ್ವ ಚಮತ್ಕಾರ. ವೆಂಕಟಕವಿಯ ಒಂದು ಸೀಸಪದ್ಯದಲ್ಲಿ ಗರ್ಭಿತ ಪದ್ಯಭೇದಗಳು ೪೧, ಬಂಧಗಳು ೨೦, ವಿಲೋಮ ಚಿತ್ರಗಳು ೩ ಹೀಗೆ ಚೌಷಷ್ಟಿಭೇದಗಳಾಗುವುದು, ಕನ್ನಡದಲ್ಲಿ ಚಂದ್ರರಾಜನ 'ಮದನತಿಲಕ'ದ ವನಮಂಜರೀ ವೃತ್ತದಲ್ಲಿ (೧–೧೫) ೬೪ ಚಿತ್ರಭೇದಗಳು ಹುಟ್ಟುವುವೆಂದು ಹೇಳಿರುವುದನ್ನು ಹೋಲುತ್ತದೆ. ಉಭಯಸಮಾನವಾಗಿ 'ಸಮಾಚ್ಯ ವರ್ಣನಿಬಂಧನ' ಪ್ರಕಾರಗಳನ್ನೂ ಅಚಲಜಿಹ್ವಾವೃತ್ತದ ವಿರಳಲಕ್ಷ್ಯಗಳನ್ನೂ ಎತ್ತಿ ಹೇಳಬಹುದು. ಮೊದಲನೆಯದು ತಲಕಟ್ಟಿನ ಪದ್ಯಗಳು, ಸರ್ವಲಘು ಪದ್ಯಗಳು ಮೊದಲಾದವನ್ನು ಸಾಮಾನ್ಯವಾಗಿ ಒಳಕೊಳ್ಳುತ್ತವೆ. ಸಂಸ್ಕೃತದಲ್ಲಿಯೇ ಇಂತಹವು ವಿಶೇಷವಾಗಿ ರಚಿತವಾಗಿರುವಂತೆ ತೋರುವುದಿಲ್ಲ.

ಕನ್ನಡದಲ್ಲಿ ಚಿತ್ರಕಾವ್ಯದ ಪದ್ಧತಿ ತೆಲುಗು ಭಾಷೆಯಲ್ಲಿ ಪ್ರಬಲಿಸಿದಂತೆ ಪ್ರಬಲಿಸದೆ ಹೋದುದಕ್ಕೆ ಕಾರಣವೇನೋ ತಿಳಿಯದು. ಪ್ರಾಚೀನ ಜೈನ ಕನ್ನಡ ಕವಿಗಳಿಗೆ ಈ ವಿಷಯದಲ್ಲಿ ಅಷ್ಟು ಅಭಿರುಚಿ ಆಸಕ್ತಿಗಳಿದ್ದಿರಲಾರವು. ಪೊನ್ನಕವಿಯ ಅನುಪಲಬ್ಧಕೃತಿ 'ಗತಪ್ರತ್ಯಾಗತ' ವಿಲೋಮಚಿತ್ರದ ಒಂದು ಸ್ವತಂತ್ರಕೃತಿಯಾಗಿದ್ದಿರಬೇಕು. ಅದರ ಭಾಷೆ ವಸ್ತುಗಳನ್ನು ಕುರಿತು ನಿಶ್ಚಿತವಾಗಿ ಏನನ್ನು ಹೇಳಲೂ ನಮಗೆ ಸಾಧ್ಯವಾಗಿಲ್ಲ. ಶ್ರುತಕೀರ್ತಿ ತ್ರೈವಿದ್ಯವ್ರತಿಯ 'ರಾಘವಪಾಂಡವೀಯ'ದ ವಿಚಾರವೂ (ಪಂಪರಾ. ೧–೨೪, ೨೫; ಎಕ. II ೬೪/೭೧; ೧೧೬೩) ಅಷ್ಟೆ. ಇದು ಕನ್ನಡದ ಕೃತಿಯಾಗಿದ್ದಿರುವುದು ಬಹುಶಃ ಅಸಂಭವ. ಮುಮ್ಮಡಿ ಕೃಷ್ಣರಾಜರ ಆಶ್ರಯದ ಶ್ರೀನಿವಾಸ ಕವಿ ರಚಿಸಿದ 'ಕೃಷ್ಣನೃಪಜಯೋತ್ಕರ್ಷ' ವಾಗ್ದ್ವಯಶ್ಲೇಷೆಯ ಒಂದು ಪುಟ್ಟ 'ಭಾಷಾಚಿತ್ರ'. ಕವಿಚರಿತೆಕಾರರು ಉದ್ಧರಿಸಿರುವ ಭಾಗದ ಹೊರತು, ಈಗ ಈ ಕೃತಿಯು ಸಮಗ್ರವಾಗಿ ದೊರೆಯುವ ಹಾಗೆ ತೋರುವುದಿಲ್ಲ.

ಬಂಧಪ್ರಚುರವಾದ ಕಾವ್ಯಗಳೇ ವಿರಳವಾಗಿರುವುದರಿಂದ, ಬಂಧಕಾವ್ಯಗಳೆಂಬ ಸ್ವತಂತ್ರ ರಚನೆಗಳನ್ನು ಕನ್ನಡದಲ್ಲಿ ನಿರೀಕ್ಷಿಸುವಂತಿಲ್ಲ. ಹಾಗೆ ನೋಡಿದರೆ ವರ್ಣ, ಗೂಢ ಮತ್ತು ಗತಿ ಚಿತ್ರಗಳ ವಿಷಯದಲ್ಲಿಯೂ ಇದೇ ಮಾತು ಸಲ್ಲುತ್ತದೆ. ಪ್ರಚುರತೆಯ ದೃಷ್ಟಿಯಿಂದ ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ವರ್ಣಚಿತ್ರಗಳ ಸ್ಥಿತಿ ಎಷ್ಟೋ ಉತ್ತಮವೆಂದು ಹೇಳಬಹುದು. ಎಳಂದೂರ ಹರೀಶ್ವರನ 'ಪ್ರಭುದೇವರ ಪುರಾಣ' ಕವಿಯಿಂದಲೇ 'ಪ್ರಾಸರತ್ನಾಕರ' ಎಂಬ ಪರ್ಯಾಯನಾಮವನ್ನು ಪಡೆದುಕೊಂಡಿದ್ದು, ಈ ಕೃತಿಯನ್ನು ಒಂದು 'ಅನುಪ್ರಾಸ ಕಾವ್ಯ'ವೆಂದೇ ಕರೆಯಬಹುದಾಗಿದೆ. 'ಗುರುಭಕ್ತಾಂಡಾರ ಚರಿತೆ' ರಚಿಸಿದ ಕವಿ ತನ್ನನ್ನು 'ಪ್ರಾಸಭೂಷಣ' ಎಂದು ಕರೆದುಕೊಂಡಿರುವುದು, ಆತನಿಗೆ ಸಹ 'ಅನುಪ್ರಾಸಕಾವ್ಯ' ರಚಿಸುವ ಮನಸ್ಸಿದ್ದುದನ್ನೇ ಹೇಳುತ್ತದೆ. ಆದರೆ ಇಂತಹ ನಿದರ್ಶನಗಳು ವಿರಳ. ವರ್ಣಚಿತ್ರಗಳಲ್ಲಿಯೇ ಸೇರ್ಪಡೆಯಾಗುವ 'ಅಕ್ಷರಮಾಲೆ' ಮಾತ್ರ ಸ್ವಲ್ಪ ಮಹತ್ತ್ವದ ಸ್ಥಾನದಲ್ಲಿರುವುದು ಸಮಾಧಾನದ ಸಂಗತಿ. ಪೊನ್ನನ 'ಜಿನಾಕ್ಷರಮಾಲೆ'ಯಿಂದ ಆರಂಭವಾಗುವ ಈ ಬಗೆಯ ರಚನೆಗಳನ್ನು, ಜೈನರೂ ಸೇರಿದಂತೆ ವೀರಶೈವ ಮತ್ತು ಬ್ರಾಹ್ಮಣ ಕವಿಗಳಲ್ಲಿ ಕೆಲವರಾದರೂ ವಿರಳವಾಗಿ ಕೈಕೊಂಡಿದ್ದಾರೆ. ಜೈನ ಕವಿಗಳು ಜಿನಾಕ್ಷರಮಾಲೆಗಳನ್ನೂ ವೀರಶೈವ ಕವಿಗಳು ಶಿವಾಕ್ಷರಮಾಲೆಗಳನ್ನೂ ಬ್ರಾಹ್ಮಣ ಕವಿಗಳು ಹರ್ಯಕ್ಷರ ಮಾಲೆಗಳನ್ನೂ ಕಟ್ಟಿದ್ದಾರೆ. ಸ್ವರಮಾಲೆ, ವ್ಯಂಜನಮಾಲೆ, ಹಾಗೂ ಗುಣಿತ

ರೂಪಗಳಲ್ಲಿ ಇವು ಆಕೃತಿಗೊಂಡಿದ್ದು, ಇವು ಕಂದಪದ್ಯಗಳಲ್ಲಿಯೋ ಸಾಂಗತ್ಯಗಳಲ್ಲಿಯೋ ಇರುವುದನ್ನು ಗಮನಿಸಬಹುದು. ಲಘುಪ್ರಮಾಣದ ಸ್ತುತಿಪರ ರಚನೆಗಳು ಇವು. ಪಾರಿಶನೆಂಬ ಜೈನಕವಿ 'ರಾಮಜಯ' ಎಂಬ ಅಕ್ಷರಮಾಲೆಯೊಂದನ್ನು ಸು. ೪೦ ಕಂದಪದ್ಯಗಳಲ್ಲಿ ರಚಿಸಿದ್ದು, ಇದರಲ್ಲಿ ರಾಮಾಯಣದ ಕಥೆ ನಿರೂಪಿತವಾಗಿರುವುದು ಒಂದು ವಿಶೇಷ. ಆದರೆ ಒಟ್ಟಾರೆ ಈ 'ಅಕ್ಷರಮಾಲೆ'ಗಳಲ್ಲಿ, ಉದ್ದೇಶಿತ ಚಮತ್ಕಾರಗಳ ಇತಿಮಿತಿಗಳಿಂದ ಕೃತಕತೆಯೇ ಹೆಚ್ಚು, ಸ್ವಾರಸ್ಯ ಕಡಿಮೆ.

ಪ್ರಶ್ನೋತ್ತರಗಳು, ಸಮಸ್ಯೆಗಳು, ಭೇದೋಪಭೇದಗಳ ಪ್ರಹೇಳಿಕೆಗಳು ಒಂದು ಗುಂಪಿನ ರಚನೆಗಳು. ಕಾಲ ಹಾಗೂ ಕರ್ತೃತ್ವ ಇನ್ನೂ ವಿವಾದಾಸ್ಪದವಾಗಿರುವ 'ಕಂತಿ ಪಂಪನ ಸಮಸ್ಯೆಗಳು' ಎಂಬ ಲಘುಕೃತಿ, ಪ್ರಶ್ನೋತ್ತರಗಳು, ಸಮಸ್ಯೆಗಳು, ಪ್ರಹೇಳಿಕೆಗಳು ಮುಂತಾದುವನ್ನು, ವಿರಳವಾಗಿ ವರ್ಣಚಿತ್ರಗಳನ್ನು, ಒಳಕೊಂಡ ೪೯ ಕಂದಪದ್ಯಗಳ ಒಂದು ವಿಶಿಷ್ಟಕೃತಿ. ಭಾಷೆ ಶೈಲಿಗಳ ದೃಷ್ಟಿಯಿಂದ ಇದು ಈಗ ಸಾಮಾನ್ಯವಾಗಿ ತಿಳಿದಿರುವಂತೆ ಸು. ೧೧-೧೨ನೆಯ ಶ.ದ ರಚನೆಯಾಗಿದೆಯೆಂಬುದನ್ನು ಒಪ್ಪುವುದು ಕಷ್ಟ. ಭಾಷಾಪ್ರಯೋಗ ಶಿಥಿಲವಾದುದು, ಆಧುನಿಕವಾದುದು. ಚಮತ್ಕಾರಗಳಲ್ಲಿ ಮೆಚ್ಚುವಂತಹ ಸ್ವಾರಸ್ಯ ಅಷ್ಟಾಗಿಲ್ಲ. ಗ್ರಾಮ್ಯದ ಒರಟುತನ, ಸಹಜತೆ ಚಾತುರ್ಯಗಳು ಅಲ್ಲಲ್ಲಿ ಮಿಂಚಬಹುದಾದರೂ ವಿದ್ವತ್‌ಕವಿಗಳ ರಚನೆಯ ಪ್ರೌಢಿಮೆ, ಸೂಕ್ಷ್ಮತೆ, ವಾಗ್ವಿಲಾಸಗಳು ಇಲ್ಲಿ ಕಂಡುಬರುವುದಿಲ್ಲ. ಕೃತಿ ಕಂತಿಗಾಗಲಿ—ಆ ಹೆಸರಿನ ಒಬ್ಬ ಕಬ್ಬಿಗಿತಿಯಿದ್ದುದಾದರೆ, ಪಂಪನಿಗಾಗಲಿ—ಈ ಪಂಪನು ನಾಗಚಂದ್ರ ಕವಿಯೇ ಆಗಿದ್ದರೆ, ಇಬ್ಬರಿಗೂ ಮರ್ಯಾದೆ ತರುವಂತಹುದಲ್ಲ.

ವೀರಶೈವ ವಚನಕಾರರಲ್ಲಿ 'ಬೆಡಗಿನ ವಚನ'ಗಳು ಎಂಬಂತಹ ವಚನಗಳನ್ನು ಬರೆದವರು, ಸು.೪೫ರ ಮೇಲ್ಪಟ್ಟು ಜನರಿದ್ದಾರೆ. ಈ ವಚನಗಳಿಗೆ ಸಿಂಗಳದ ಬಸವರಾಜದೇವನೆಂಬವನು ಒಬ್ಬನೇ ವಿಸ್ತಾರವಾಗಿ ವ್ಯಾಖ್ಯಾನ ಬರೆದಿದ್ದಾನೆ. ಸೋಮಶೇಖರ ಶಿವಯೋಗಿ ಇನ್ನೊಬ್ಬ ಇಂಥ ವ್ಯಾಖ್ಯಾನಕಾರ. ಇವರು ಸಂಗ್ರಹಿಸಿ ವ್ಯಾಖ್ಯಾನಿಸಿದ ಬೆಡಗಿನ ವಚನಗಳ ಸಂಕಲನಗಳು ದೊರೆತು ಪ್ರಕಟವಾಗಿವೆ. ಈ ವಚನಗಳು ವೈದಿಕ ಬ್ರಹ್ಮೋದ್ಯಗಳ ಹಾಗೆ, ಪುರಾಣೇತಿಹಾಸಗಳ ಕೂಟಶ್ಲೋಕಗಳ ಹಾಗೆ ಆಧ್ಯಾತ್ಮಿಕ, ಹಾಗೂ ಅನುಭಾವಿಕ ಗೂಢಾರ್ಥಗಳಿಂದ ಕೂಡಿರುವಂತೆ ತೋರುತ್ತದೆ. ದಾಸಸಾಹಿತ್ಯದ ಮುಂಡಿಗೆಗಳೆಂಬಂತಹ ಕೀರ್ತನೆಗಳಲ್ಲಿಯೂ ಈ ಬಗೆಯ ಗೂಢಾರ್ಥದ ಹೊಳಹು ವಿಶೇಷವಾಗಿ ಕಂಡುಬರುತ್ತದೆ. ಮುಖ್ಯವಾಗಿ ಕನಕದಾಸರ ರಚನೆಗಳಲ್ಲಿ ಇಂಥವು ಅಧಿಕ.

'ಕರ್ಣಾಟಕ ಕವಿಚರಿತೆ'ಯಲ್ಲಿ ಉಕ್ತವಾದ 'ಪ್ರಶ್ನೋತ್ತರ ಚಿಂತಾಮಣಿ'ಯ ಸ್ವರೂಪವೇನೋ ತಿಳಿಯದು.[10] ನೃಪತುಂಗನ ಹೆಸರಿನಲ್ಲಿರುವ 'ಪ್ರಶ್ನೋತ್ತರ ರತ್ನಮಾಲಿಕಾ' ಎಂಬ ಪುಟ್ಟ ರಚನೆಗೆ, ಸು.೧೪ನೆಯ ಶತಮಾನಕ್ಕಿಂತ ಈಚೆಯದಲ್ಲದ್ದೆಂದು ಊಹಿಸಿರುವ, ಪದಶಃ ಅರ್ಥದ ಒಂದು ಹಳಗನ್ನಡ ಟೀಕೆ ದೊರೆತು, ಮೂಲದೊಂದಿಗೆ ಪ್ರಕಟವಾಗಿದೆ. ಜೈನ ಸಮುದಾಯದಲ್ಲಿ ಈ ಮೂಲವೂ ಟೀಕೆಯೂ ಒಂದು ಕಾಲಕ್ಕೆ ಸಾಕಷ್ಟು ಜನಪ್ರಿಯವಾಗಿದ್ದುವೆಂದು ತಿಳಿಯಲು ಆಧಾರಗಳಿವೆ.

ಚೆನ್ನಕೇಶವನ ಸ್ತುತಿಯುಳ್ಳುದೆಂಬ 'ಭಾವಾರ್ಥಶತಕ' (ಸು.೧೭೦೦) ''ಒಗಟಿಯ ರೂಪವಾದ ಕಂದಗಳು'' ಒಂದು ನೂರು ಇರುವ ರಚನೆಯೆಂದು ತೋರುತ್ತದೆ.[11] ಈಗ ಇದು ದೊರೆಯುವಂತೆ ತೋರುವುದಿಲ್ಲ. 'ಒಗಟಿಯ ಚೌಪದ' ಮಾನೌಮಿಯ ಚೌಪದಿಗಳ ಮಟ್ಟಿನಲ್ಲಿರುವ ಒಂದು ಒಗಟುಗಳ ಸಂಕಲನವೇ ಇರಬೇಕು.[12] 'ಮಾನೌಮಿಯ ಚೌಪದಿ'ಯ ಮುದ್ರಿತ ಪರಿಷ್ಕರಣಗಳಲ್ಲಿ ದೊರೆಯುತ್ತಿರುವ ಇಂತಹ ಚೌಪದಿಗಳು ಮೊದಮೊದಲಲ್ಲಿ ಸ್ವತಂತ್ರವಾಗಿಯೇ ಸಂಕಲಿತವಾಗಿದ್ದಿರಬೇಕು. ಉದಾಹರಣೆಗೆ 'ಒಗಟಿಯ ಪದಗಳು' (ಕಅಸಂ. ಕೆ. ೨೦೭/೩), 'ವಾಗಟಿಯ ಪದ' (ಕೆ. ೧೪೦೪/೪) ಎಂಬವನ್ನು ಇಲ್ಲಿ ಉಲ್ಲೇಖಿಸಬಹುದು. ಇವೆರಡೂ ಚಿಕ್ಕ ಸಂಕಲನಗಳು. ಪ್ರತಿಗಳು ಉತ್ತಮವಾಗಿದ್ದರೂ ಒಗಟುಗಳ ಸಂಖ್ಯೆ ತುಂಬ ಕಡಿಮೆ ಎನ್ನುವುದೇ ಇಲ್ಲಿಯ ಕೊರತೆ. 'ಲೆಕ್ಕದ ಚೌಪದ' ಗಣಿತ ಸಂಬಂಧವಾದ ಒಗಟುಗಳ ಸಂಕಲನವಾಗಿದ್ದು[13], ಇಂತಹವು ಬಹುಮಟ್ಟಿಗೆ ಕಂಠಸ್ಥಸಂಪ್ರದಾಯದಲ್ಲಿಯೇ ಪ್ರಚಲಿತವಿದ್ದಿರಬೇಕು.

ಆಧುನಿಕ ಕಾಲದಲ್ಲಿ ಜನಪದ ಸಾಹಿತ್ಯಸಂಗ್ರಹಗಳು ಒಗಟುಗಳನ್ನೂ ಒಳಕೊಂಡಿವೆ. ಒಗಟುಗಳ ಇಂತಹ ಸಂಗ್ರಹಗಳು ಸು. ೨೫ರ ಮೇಲ್ಪಟ್ಟು ಕಂಡುಬರುತ್ತಿದ್ದು, ಬೇರೆ ಬೇರೆ ಶೀರ್ಷಿಕೆಗಳ ಕೆಳಗೆ ಸಂಗ್ರಹಗೊಂಡಿವೆ. ೧೯೩೪ರಲ್ಲಿ ಸಿದ್ಧವಾದ ಶ್ಯಾಮಲಾ ಅವರ 'ಕನ್ನಡ ಒಗಟುಗಳು' ಇಂತಹ ಸಂಗ್ರಹಗಳಲ್ಲಿ ಹಳೆಯದು; ೧೯೭೪ರಲ್ಲಿ ಪ್ರಕಟವಾದ, ಎಂ. ಎಸ್. ಲಟ್ಟಿ ಸಂಗ್ರಹಿಸಿದ 'ಉತ್ತರ ಕರ್ನಾಟಕದ ಒಡಪುಗಳು' ಈಚೆಯದು. ಆದರೆ ಇಲ್ಲಿ ಗಮನಿಸಬೇಕಾದ ಒಂದು ಸಂಗತಿಯೆಂದರೆ ೧೯ನೆಯ ಶತಮಾನದ ಕೊನೆಯ ದಶಕಗಳಲ್ಲಿಯೂ ೨೦ನೆಯ ಶತಮಾನದ ಆದಿಭಾಗದಲ್ಲಿಯೂ ಪ್ರಕಟವಾಗುತ್ತಿದ್ದ ಜನಪ್ರಿಯ ಮಾಸಪತ್ರಿಕೆಗಳಲ್ಲಿ, 'ಕರ್ಣಾಟಕ ವಾಣೀವಿಲಾಸ', 'ಹಿತಬೋಧಿನಿ', 'ಸುರಭಿ' ಈ ಮುಂತಾದವುಗಳಲ್ಲಿ ಪ್ರತಿ ಸಂಚಿಕೆಯಲ್ಲಿಯೂ ಓದುಗರ ಬುದ್ಧಿಪರೀಕ್ಷೆಗೂ ರಂಜನೆಗೂ ಪದ್ಯ ಹಾಗೂ ಗದ್ಯರೂಪದ ಬಗೆಬಗೆಯ ಒಗಟುಗಳನ್ನು ಪ್ರಕಟಿಸುತ್ತಿದ್ದರು ಎನ್ನುವುದೇ ಆಗಿದೆ. ಈಗ ಇವು ಸಂಕಲಿತವಾಗಿ ಸಂಗ್ರಹರೂಪದಲ್ಲಿ ಹೊರಬರುವುದು ಅಪೇಕ್ಷಣೀಯ.

ಒಗಟುಗಳಲ್ಲಿ ಪಾರಿಹಾರಿಕೆ ಅಥವಾ ಯೋಗಮಾಲೆ ಎಂಬ ಹೆಸರಿನಲ್ಲಿ ಪ್ರಾಚೀನ ಲಾಕ್ಷಣಿಕರು ಕರೆದಿರುವ 'ಗೂಢಾರ್ಥದ ದೇವತಾಸ್ತುತಿ' ಹಾಗೂ ಪುರುಷ ಪ್ರಶಂಸೆ–ವಿಡಂಬನ ಪದ್ಯಗಳು ಸಾಕಷ್ಟು ಜನಪ್ರಿಯವಾಗಿ ಹಿಂದಿನ ಕಾಲದಿಂದ ಬೆಳೆದುಕೊಂಡು ಬಂದಿವೆ. ಇವುಗಳಲ್ಲಿ ಅಜ್ಞಾತಕರ್ತೃಕವಾದ 'ಮಣ್ಣೀಶ್ವರ ಕಾವ್ಯದ ನಾಂದ್ಯ' (ಕಅಸಂ. ಕೆ.೧೬೯/೧೩) ಮತ್ತು ಆ ರೀತಿಯ ಕೆಲವು ನಾಂದ್ಯಪದ್ಯಸಂಕಲನಗಳು ಗಮನಿಸತಕ್ಕವು. ಮಧ್ಯಕಾಲೀನ ಕನ್ನಡ ಸಾಹಿತ್ಯದ ಕೆಲವು ಸ್ವತಂತ್ರ ಕಾವ್ಯಗಳಲ್ಲಿ ಸಂಧಿಯ ಆರಂಭದ ಒಗಟಿನಂತಹ ದೇವತಾಸ್ತುತಿ ಪದ್ಯಗಳನ್ನೆಲ್ಲ ಒಗ್ಗೂಡಿಸಿ, ಪ್ರತಿ ಪದ್ಯಕ್ಕೂ ಪ್ರತಿಪದ ಟೀಕೆ ಬರೆದು ಪ್ರತ್ಯೇಕ ಸಂಕಲನಕೃತಿಯಾಗಿ ಮಾಡಿರುವುದನ್ನಿಲ್ಲಿ ಕಾಣಬಹುದು. 'ಮಣ್ಣೀಶ್ವರ ಕಾವ್ಯದ ನಾಂದ್ಯ'ದಲ್ಲಿ ೧೩ ಪದ್ಯಗಳೂ ಅವುಗಳ ಟೀಕೆಗಳೂ ಇವೆ. ಟೀಕೆ ಬರೆಯಲು ಶಕ್ತನಾದ ಒಬ್ಬ ಪಂಡಿತನೇ ಇಂತಹ ಸಂಕಲನಕೃತಿಯನ್ನು ಸಿದ್ಧಪಡಿಸಿರುತ್ತಾನೆಂದು ತೋರುತ್ತದೆ.

ಪೂರ್ವೋಕ್ತ ಸಂಕಲನ ಕೃತಿಯನ್ನೂ ಅಂತಹ ಇತರ ಕೆಲವು ಕೃತಿಗಳನ್ನೂ ಕೃತಿಭಾಗಗಳನ್ನೂ ಕೂಡಿಸಿ ಸ್ವಲ್ಪ ವಿಸ್ತಾರವಾದ ಸಂಕಲನ ಸಿದ್ಧಪಡಿಸಿರುವುದೂ ಉಂಟು. 'ವಾವೆಯ ಪದ' (ಮಾತೃಕೆಯಲ್ಲಿ 'ವಾಯು ಪದ' ಎಂದಿದೆ) ಅಂತಹ ಒಂದು ಸಂಕಲನ (ಕಅಸಂ. ಕೆ. ೧೩೦೯). ಇದಕ್ಕೆ ಪ್ರತಿಪದ ಟೀಕೆಯೂ ಇದೆ. ಕಾಲ ಕರ್ತೃತ್ವಗಳು ವಿದಿತವಲ್ಲದ ಈ ಸಂಕಲನ ಬಹುಶಃ ಬೇರೆಬೇರೆಯವರು ಸಿದ್ಧಪಡಿಸಿ ಒಗ್ಗೂಡಿಸಿರಲೂ ಬಹುದು.

'ರಾತ್ರಿಯ ನಲ್ಲನ ಪದ್ಯಗಳು' ಎಂಬ ಸಮಗ್ರ ಹಾಗೂ ಏಕಕವಿ ಕರ್ತೃಕವಾದ ಒಂದು ರಚನೆಯುಂಟು. ಕಾಲ ಕರ್ತೃಗಳು ತಿಳಿಯವು. ಈ ಕೃತಿ ಪುರುಷ ಪ್ರಶಂಸೆ–ವಿಡಂಬನ ಪದ್ಯಗಳ ಒಂದು ರಚನೆ. ಇಂತಹ ೧೧೮ ಪದ್ಯಗಳು ಇದರಲ್ಲಿವೆ (ಕಅಸಂ. ಕೆಎ.೨೮೫). ಸ್ವಲ್ಪ ಪಾಠಭೇದಗಳೊಡನೆ ಈ ಕೃತಿ ಈಗ ಹಲವು ವರ್ಷಗಳ ಹಿಂದೆ ಮೈಸೂರಿನಿಂದ ಮುದ್ರಿತವಾಗಿದೆ. ಇದರಲ್ಲಿ ೯೮ ಪದ್ಯಗಳು ಮಾತ್ರವಿದ್ದು, ಆಧುನಿಕವಾದೊಂದು ಪ್ರತಿಪದ ಟೀಕೆಯೂ ಇದೆ. ಪದ್ಯಗಳ ಚಮತ್ಕಾರ ಹಲವೆಡೆ ಹೃದ್ಯವಾಗಿದೆ; ಆದರೆ ಎಷ್ಟೋ ಕಡೆ ಟೀಕೆಯಿಲ್ಲದೆ ಪದ್ಯಾರ್ಥ ತಿಳಿಯುವುದೇ ಕಷ್ಟ.

ಕನ್ನಡ ಕವಿಗಳಿಗೆ ಚಿತ್ರಕಾವ್ಯ ರಚನೆಯಲ್ಲಿ ಯಾವ ಆಸಕ್ತಿಯಿದ್ದಿತು ಎಂಬುದನ್ನು ತಿಳಿಯಲು ಅವರ ಸಾಹಿತ್ಯ ಕೃತಿಗಳಲ್ಲಿ ಕೆಲವು ಸೂಚನೆಗಳು ದೊರೆಯುತ್ತವೆ.

'ಕವಿರಾಜಮಾರ್ಗ' 'ಕಾವ್ಯಾವಲೋಕನ'ಗಳಲ್ಲಿಯ ಶಬ್ದಾಲಂಕಾರ ಪ್ರಕರಣದ ಹಾಗೂ ಚಿತ್ರ ನಿರೂಪಣದ ಸಂಬಂಧಿತ ಭಾಗಗಳನ್ನು ವಿಮರ್ಶಿಮಾಡಿದರೆ, ಚಿತ್ರಕಾವ್ಯದ ಪ್ರಥೆ ಕನ್ನಡ ನಾಡಿನಲ್ಲಿ, ಸಾಹಿತ್ಯೋದಯದ ಕಾಲದಿಂದ ಒಂದಲ್ಲ ಒಂದು ರೀತಿಯಲ್ಲಿ ಬೆಳೆದುಕೊಂಡು ಬರುತ್ತಿತ್ತು ಎಂದು ತಿಳಿಯಲು ಅವಕಾಶವಾಗುತ್ತದೆ. ಲಾಕ್ಷಣಿಕರಾಗಲಿ, ಕವಿಗಳಾಗಲಿ ನೇರವಾಗಿ ಈ ಸಂಗತಿಯನ್ನು ಕುರಿತಿರಬಹುದು, ಕುರಿತಿಲ್ಲದೆ ಕೈಬಿಟ್ಟಿರಲೂಬಹುದು. ಆದರೆ ಕಂಠಸ್ಥ ಮತ್ತು ಗ್ರಂಥಸ್ಥ ಸಂಪ್ರದಾಯಗಳಲ್ಲಿ ಅದೊಂದು ಸುರಸವೂ ಅಪೇಕ್ಷಣೀಯವೂ ಆದ ಸಾಹಿತ್ಯಾಭ್ಯಾಸವಾಗಿದ್ದುದಂತೂ ನಿಜ.

ಪಂಪನೂ ಸೇರಿದಂತೆ ಪ್ರಾಚೀನ ಜೈನಕವಿಗಳು ಚಿತ್ರಕಾವ್ಯರಚನೆಯಲ್ಲಿ ತಮ್ಮ ಒಲವು ಧೋರಣೆಗಳೇನೆಂಬುದನ್ನು ಪ್ರಕಟಿಸಿಲ್ಲ. ಅವರು ಸಾಮಾನ್ಯವಾಗಿ ಉದಾಸೀನರಾಗಿ ತೋರುತ್ತಾರೆ, ಈ ವಿಷಯದಲ್ಲಿ. ಆದರೆ ಅವರ ಕೃತಿಗಳಲ್ಲಿ ಯಮಕಾನುಪ್ರಾಸ ಪ್ರಕಾರಗಳ ಹಾಗೂ ಶ್ಲೇಷೋಕ್ತಿ ವೈಚಿತ್ರ್ಯಗಳ ವಿಲಾಸಕ್ಕೆ ಕೊರತೆಯೇನಲ್ಲ. ಪೊನ್ನ, ರನ್ನ, ಜನ್ನ, ಮಧುರ, ಬಾಹುಬಲಿಪಂಡಿತ, ಬಂಧುವರ್ಮ ಹೀಗೆ ಹಲವರನ್ನು ನಾವು ಹೆಸರಿಸುತ್ತ ಹೋಗಬಹುದು. ಪೊನ್ನನ 'ಶಾಂತಿಪುರಾಣ'ದಲ್ಲಿ ಪ್ರಹೇಳಿಕೆಯ ವಿರಳಲಕ್ಷ್ಯಗಳನ್ನೂ ಕಾಣಬಹುದು.

ಚಂದ್ರರಾಜನ 'ಮದನತಿಲಕ' (ಸು. ೧೦೩೦) ಕಾಮಶಾಸ್ತ್ರದ ಕೃತಿ. ಕವಿ ಬಾಯಿಬಿಟ್ಟು 'ಚಿತ್ರ' ಎಂಬ ಮಾತು ಎತ್ತದಿದ್ದರೂ ''ಛಂದದಳಂಕಾರಂ ಕರಮೊಂದಿ....'', ''ಅಖಿಳ ನಾನಾಛಂದಕ್ಕಧಿಕೃತಮಿದೆಂದು....'', ''ನಾನಾಛಂದದಿನೈನೂಱು ಗದ್ಯಪದ್ಯಂಗಳಿಂ ವಿಶ್ರುತಂಮಾಡಿ....'' ಎಂಬುದಾಗಿ ಛಂದಸ್ಸಿಗೆ ಮಾತ್ರ ಒತ್ತುಕೊಟ್ಟು (೧–೫೬, ೫೭, ೫೮) ಕೃತಿರಚನೆಯ ರೀತಿಯನ್ನು ಸಾರಿದ್ದರೂ, ಅವನ ಗ್ರಂಥವೇ ಕನ್ನಡ ಚಿತ್ರಕಾವ್ಯದ ಇತಿಹಾಸದಲ್ಲಿ ಅಗ್ರಪಂಕ್ತಿಯ ಕೃತಿಯಾಗಿದೆ. ಈ ಕಾರಣಕ್ಕಾಗಿ ಇದೊಂದು ಅನನ್ಯಪ್ರಾಮುಖ್ಯದ ಗ್ರಂಥ. ವರ್ಣಚಿತ್ರಗಳು, ಬಂಧಚಿತ್ರಗಳು, ಗತಿಚಿತ್ರಗಳು, ಹಾಗೂ ಗರ್ಭಕವಿತ್ವ ಚಿತ್ರಗಳು ಮುಂತಾದವೆಲ್ಲ ಕಂಡುಬರುವ ಈ ಕೃತಿ ತನ್ನ ಮಿತಿಯಲ್ಲಿ ಚಿತ್ರಕಾವ್ಯದ ಒಂದು 'ಪ್ರಯೋಗಶಾಲೆ', ಒಂದು 'ಮಾರಾಟದ ಮಳಿಗೆ'. ಸಂಸ್ಕೃತ ಭಾಷೆಯಲ್ಲಿ ಸಹ ದೊರೆಯದ ಕೆಲವು ವೈಚಿತ್ರ್ಯಗಳಿವೆ ಇಲ್ಲಿ. ಶುದ್ಧಪಾಠದ ಕೊರತೆಯಿಂದಾಗಿ ಕೃತಿಯ ಸಾಹಿತ್ಯಭಾಗಗಳ ಆಶಯವನ್ನೂ ಚಿತ್ರಗಳ ಸ್ವರೂಪವನ್ನೂ ಸರಿಯಾಗಿ ಗ್ರಹಿಸುವುದು ಕಷ್ಟವಾಗಿದೆ.

ಗುರುಲಿಂಗವಿಭು (ಸು. ೧೫೫೦) ತನ್ನ 'ಭಿಕ್ಷಾಟನ ಚರಿತೆ'ಯೆಂಬ ವಾರ್ಧಕ ಷಟ್ಪದಿಯ ಕಾವ್ಯದಲ್ಲಿ ಕೆಲವು ಯಮಕಾನುಪ್ರಾಸ ಹಾಗೂ ಶ್ಲೇಷದ ಚಿತ್ರಗಳನ್ನು ಅಲ್ಲಲ್ಲಿ ತಂದಿದ್ದಾನೆ. ಅವನಿಗೆ ಚಿತ್ರಕವಿತೆಯ ಮೋಹವಿರುವುದು ಇದರಿಂದ ಸ್ಪಷ್ಟವಾಗುತ್ತದೆ. ''ನಿಲ್ಲು ನಿಲ್ಲು ಭಾಪುರೆ ಬಲರೆ ಜಾಗುರೇ ನಿನಗೆ ಸರಿಯಲ್ಲವೀ। ತೆಜದ ಸುಕವಿತ್ವ ಸಮಧುರ ವಿಚಿತ್ರ ವಿಸ್ತಾರವೆಂದೆಂಬ ನಾಲ್ಕು ಬಗೆಯ। ವಿರಚಿಸಲು ಬಲ್ಲ ವಸ್ತುಕ ಕವೀಂದ್ರರ ವಸ್ತು'' ಎಂಬುದಾಗಿ ತನ್ನನ್ನು ಕೀರ್ತಿಸುವವರು ಮಾತನಾಡುವರೆಂದು ಕವಿ ತನ್ನ ಅಗ್ಗಳಿಕೆಯನ್ನು ಹೇಳಿಕೊಂಡಿದ್ದಾನೆ (ಬಹುಶಃ ಇಲ್ಲಿ ಕವಿಪಾಠ ''....ತೆಜದಾಶುಕವಿತೆ ಸುಮಧುರ ಚಿತ್ರ ವಿಸ್ತಾರ'' ಎಂದಿರಬಹುದೆಂದು ತೋರುತ್ತದೆ). ''ಇತರರ ಮಾತಿರಲಿ, ಆಶು, ಮಧುರ, ಚಿತ್ರ ಮತ್ತು ವಿಸ್ತಾರಗಳೆಂಬ ಚತುರ್ವಿಧ ಕವಿತ್ವ ಶಕ್ತಿಯಲ್ಲಿ ವಸ್ತುಕ ಕವಿಶ್ರೇಷ್ಠರೇ ಅವಸ್ತು ಎಂದರೆ ಅಪ್ರಯೋಜಕರೆನಿಸುತ್ತಾರೆ'' ಎಂಬುದಾಗಿ ಈತನ ಹಾಗೆ ಬರೆಯಲು ಅವನನ್ನು ಮೆಚ್ಚಿಕೊಳ್ಳುವವರು ಹೇಳುತ್ತಿದ್ದರಂತೆ. ಚತುರ್ವಿಧ ಕವಿತ್ವದ ಪ್ರಥೆಯನ್ನು ಕವಿ ಬಲ್ಲವನಾಗಿರಬೇಕೆಂದು ಇದರಿಂದ ವಿದಿತವಾಗುತ್ತದೆ.

ಮುರಿಗೆ ದೇಶಿಕೇಂದ್ರನ (ಸು. ೧೫೬೦) 'ರಾಜೇಂದ್ರವಿಜಯ' ('ಹಮ್ಮೀರ ಕಾವ್ಯ')ದಲ್ಲಿ, ಕವಿ ''ರಸ ಭಾವ ಚಿತ್ರ ವರ್ಣಿತ।ದಸಮಾಯುತ ತಂತ್ರದೃಷ್ಟಿ ನೀತಿ ವಿಶಾಲೋ। ಲ್ಲಸದುತ್ಪ್ರೇಕ್ಷಾರ್ಥಂಗಳ। ಪಸರಂ ಹಮ್ಮೀರ ವೀರ ಕಾವ್ಯಂ ಭವ್ಯಂ॥'' ಎಂಬುದಾಗಿಯೂ ''ಪೊಗರಿಂಪು ನುಣ್ಪು ಪೆಂಪಿನ। ಸೊಗಸಿನ ರಸ ಭಾವ ಚಿತ್ರ ಸದಲಂಕಾರಾ॥ ದಿಗೆ ಸಲ್ವ ಚೆಲ್ವ ಕಾವ್ಯದ। ಬಗೆಯಱಿಯದ ಪುಚ್ಛಗುನ್ನಿ ಕೂಗಿದೊಡಳ್ಕೇ॥'' ಎಂಬುದಾಗಿಯೂ ತಿಳಿಸುವಾಗ ತನ್ನ ಕಾವ್ಯದಲ್ಲಿ 'ಚಿತ್ರ'ವಿರುವುದೆಂದು ಸೂಚನೆ ಕೊಟ್ಟಿರುವಂತಿದೆ. ಈ ಕೃತಿಯಲ್ಲಿ ಇತರ ವೀರಶೈವ ಕವಿಗಳ ರಚನೆಗಳಲ್ಲಿ ಹೇಗೋ ಹಾಗೆ ಯಮಕಾನುಪ್ರಾಸಗಳ ಸಮೃದ್ಧಿಯನ್ನು ಕಾಣಬಹುದು. ಹಾಗೆಯೇ 'ಚತುರ್ವಿಧಾರ್ಥ'ದ ಒಂದು ವಿರಳ ಲಕ್ಷ್ಯವೂ ಉಂಟು.

'ನಂದಿ ಮಾಹಾತ್ಮ್ಯ'ದ ಕರ್ತೃ ಗೋವಿಂದ ಕವಿಯ (ಸು.೧೬೦೦) ಹೆಸರನ್ನು ವಿಶೇಷವಾಗಿ ನೆನೆಯಬೇಕು. ಈತನ ಇನ್ನೊಂದು ಕಾವ್ಯ 'ಚಿತ್ರಭಾರತ'. 'ನಂದಿಮಾಹಾತ್ಮ್ಯ' ಒಂದು 'ಅನುಪ್ರಾಸಕಾವ್ಯ'. ನಮ್ಮ ಕವಿಗಳು ಯಮಕಾನುಪ್ರಾಸಗಳ ನಡುವೆ ಅಂತಹ ಭೇದ ಮಾಡುವುದಿಲ್ಲವಾದ್ದರಿಂದ 'ಯಮಕಕಾವ್ಯ'ವೆಂದು ಬೇಕಾದರೂ ಇದನ್ನು ಕರೆಯಬಹುದು. ''ಭಿತ್ತಿಯೊಂದಿನಿಸಿಲ್ಲದತಿಚಿತ್ರಮಂ....ನಡೆಯಿಪ ಕವೀಶ್ವರರ ಘನತೆ'' ಯಲ್ಲಿ ಕವಿಗೆ ಅಭಿಮಾನ. ''ಚಿತ್ರಚಾತುರ್ಯ ಛಂದೋಬಂಧ ಸಂಧಿ ವರಮಿತ್ರತ್ವ ರಸರೀತಿ....'' ಮುಂತಾದ

ಲಕ್ಷಣಗಳನ್ನರಿಯದವನು ತಾನೆಂಬ ವಿನಯ ಆತನದು. ತನ್ನ ಕಾವ್ಯ "ನವೀನರಸ ಚಿತ್ರಾರ್ಥಚರಿತ ಕಾವ್ಯ"ವೆಂದೂ "ಭೂವರವರಗೇಹದಂತೆ ಬಹುಭಾವ ನವಚಿತ್ರಬಂಧಗಳಿಂದ" ಕೂಡಿದುದೆಂದೂ "ಘನರಸ ಸಮೇತದಿಂ ಚಿತ್ರಪದದಿಂ ಮಿಱುಪ ಜಲಧರಪಟಲದಂತೆ" ಆಕರ್ಷಕವಾದುದೆಂದೂ ಆತನ ತಿಳಿವಳಿಕೆ. ಆದರೆ ಕಾವ್ಯದಲ್ಲಿ ಯಮಕಾನುಪ್ರಾಸಗಳ ಹೊರತು ಮತ್ತಾವ 'ಚಿತ್ರ' ಪ್ರಕಾರಗಳೂ ಗೋಚರಿಸುವುದಿಲ್ಲ. ಈ ಕವಿಯ 'ಚಿತ್ರ ಭಾರತ' ಚಿತ್ರಕವಿತ್ವದ ಮಾರ್ಗದಲ್ಲಿ ಬರೆದ ಭಾರತವೇ ಇಲ್ಲವೆ ಜಾಯೇಂದ್ರನು ತಿಳಿಸುವಂತೆ 'ಚಿತ್ರವ ಬರಸಿ'ದ ಭಾರತವೇ ತಿಳಿಯದು. ಈ ಕೃತಿ ದೊರೆತ ಹಾಗೆ ತೋರುವುದಿಲ್ಲ.

ಎಳಂದೂರು ಹರೀಶ್ವರನ (೧೬೦೬) 'ಪ್ರಭುದೇವರ ಪುರಾಣ', "ಕೃತಿವೆಸರು ಪ್ರಾಸರತ್ನಾಕರ' ಎಂದಿರುವುದರಿಂದ (೧-೫೨) 'ಪ್ರಾಸರತ್ನಾಕರ' ಎಂಬ ಬೇರೊಂದು ಹೆಸರಿನ ಕೃತಿ. ಇದರಲ್ಲಿಯ ಅನುಪ್ರಾಸಗಳ ಆಧಿಕ್ಯದಿಂದ ಇದೊಂದು 'ಅನುಪ್ರಾಸಕಾವ್ಯ'ವೆಂದೇ ಹೇಳಬಹುದಾದ ಕೃತಿ. ಕವಿ ಹಲವು ಏಕಪದ್ಯೈಕಗುಣಿತಾಕ್ಷರಗಳನ್ನೂ, ವಿರಳವಾಗಿ ಸರ್ವಲಘುಪದ್ಯವನ್ನೂ ರಚಿಸಿದ್ದಾನೆ. ಅಂತೂ ಈ ಕಾವ್ಯದ ವರ್ಣಚಿತ್ರಗಳು, ಮುಖ್ಯವಾಗಿ ಯಮಕಾನುಪ್ರಾಸಗಳು, ಇದಕ್ಕೆ ಕನ್ನಡ ಚಿತ್ರಕಾವ್ಯಗಳ ಪಂಕ್ತಿಯಲ್ಲಿ ಹಿರಿಯ ಸ್ಥಾನವನ್ನು ದೊರಕಿಸಿಕೊಟ್ಟಿವೆ. ಸ್ವಲ್ಪಮಟ್ಟಿಗೆ ಇದನ್ನು ಹೋಲತಕ್ಕದ್ದು ಪೆಮ್ಮಿಸೆಟ್ಟಿಯ (ಸು. ೧೬೫೦) 'ಗುರುಭಕ್ತಾಂಡಾರಚರಿತೆ'. ಕವಿ ತನ್ನ ಹೆಸರನ್ನು 'ಪ್ರಾಸಭೂಷಣ' ಎಂದು ಕರೆದುಕೊಂಡಿದ್ದಾನೆ. "ಶಿವಕವಿಗೆ ಪ್ರಾಸವೇ ಭೂಷಣಗಳಾಗಿ ಕೈಕೊಂಡೆ ನೆನ್ನ ಪೆಸರನು" ಎಂದು ಕವಿ, ಹಾಗೆ ಕರೆದುಕೊಳ್ಳಲು ಕಾರಣ ಕೊಟ್ಟಿದ್ದಾನೆ. ಸಹಜವಾಗಿಯೇ ಯಮಕಾನುಪ್ರಾಸಗಳ ಸುಗ್ಗಿ, ಈತನ ಕೃತಿ. ವೀರಶೈವ ಕೃತಿಕಾರರಿಗೆಲ್ಲ, ಪೆಮ್ಮಿಸೆಟ್ಟಿ ಸರಿಯಾಗಿಯೇ ಗುರುತಿಸಿರುವಂತೆ, ವರ್ಣಚಿತ್ರಗಳ ಹಾಗೂ ಯಮಕಾನುಪ್ರಾಸಗಳ ಮೋಹ ಮಿಗಿಲಾದುದು. ಎಷ್ಟೋ ವೇಳೆ ಅವುಗಳ ಹುಚ್ಚಾಟ ಬೊಬ್ಬಾಟದಲ್ಲಿ ಇದೇನು ಕಾವ್ಯವೋ ಕಾಗುಣಿತಗಳ ಕಸರತ್ತೋ ಎಂದು ದಿಗ್ಭ್ರಮೆಗೊಳ್ಳುವಂತಾಗುತ್ತದೆ. ಹರಿಹರ ರಾಘವಾಂಕರ ಬಳುವಳಿಯಿದು ಎಂದು ತೋರುತ್ತದೆ. ಚೇರಮ ಕವಿ, ಎಳಂದೂರು ಹರೀಶ್ವರ, ಪೆಮ್ಮಿಸೆಟ್ಟಿ, ಷಡಕ್ಷರಿ, ಇಮ್ಮಡಿ ಮುರುಗಾಸಿದ್ಧ, ಮುಖಬೋಳು ಸಿದ್ಧರಾಮ ಹೀಗೆ ಹಲವರನ್ನು ಹೆಸರಿಸುತ್ತ ಹೋಗಬಹುದು.

ಆಧುನಿಕ ಕಾಲದಲ್ಲಿ ಸ್ವತಂತ್ರವಾಗಿ ಚಿತ್ರಕಾವ್ಯದ ನಾನಾ ಪ್ರಕಾರಗಳಲ್ಲಿ, ಮುಖ್ಯವಾಗಿ ಬಂಧಕವಿತ್ವದಲ್ಲಿ ಚಮತ್ಕಾರಿಕವಾದ ರಚನೆಗಳನ್ನು ಮಾಡಿ ದೊರೆಗಳಿಗೆ, ಸರಕಾರದ ಹಿರಿಯ ಅಧಿಕಾರಿಗಳಿಗೆ ಒಪ್ಪಿಸಿ ಅವರಿಂದ ಪದವಿ ಪ್ರಶಸ್ತಿಗಳನ್ನು ಪಡೆಯುತ್ತಿದ್ದ ಒಂದು ಪರಿಪಾಠಿ ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದವರೆಗೆ ಇದ್ದಿತು. ಉದಾಹರಣೆಗೆ ಟಿ. ಶ್ರೀನಿವಾಸರಂಗಾಚಾರ್ಯರೆಂಬ ಪಂಡಿತರು ಈಗ್ಗೆ ೫೦-೬೦ ವರ್ಷಗಳಿಗೂ ಹಿಂದೆಯೇ ನಾಲ್ವಡಿ ಕೃಷ್ಣರಾಜ ಒಡೆಯರಿಗೂ ತಮ್ಮ ಕಾಲದ ವಿದ್ಯಾಧಿಕಾರಿಗಳಿಗೂ ತಮ್ಮ ಗೌರವವನ್ನು ಸೂಚಿಸುವ ಸಲುವಾಗಿ, ಹಾರಬಂಧ, ಷಡರ ಚಕ್ರಬಂಧ, ಷೋಡಶದಳ ಪದ್ಮಬಂಧ ಮುಂತಾಗಿ 'ಚಿತ್ರಬಂಧುಮಾಲಿಕೆ'ಗಳನ್ನು ಸಂಸ್ಕೃತ ಹಾಗೂ ಕನ್ನಡ ಭಾಷೆಗಳಲ್ಲಿ ರಚಿಸಿ ಸಮರ್ಪಿಸಿದ್ದರು. ಆ ಭಾಷೆಗಳಲ್ಲಿಯೇ ಪದ್ಯಾರ್ಥಗಳನ್ನು ವಿವರಿಸುವ ವ್ಯಾಖ್ಯಾನಗಳನ್ನೂ ತಾತ್ಪರ್ಯಗಳನ್ನೂ ಸಹ ಅವರು ಬರೆದರು. ಇವುಗಳಲ್ಲಿ ಬಹುಶಃ ಹೆಚ್ಚಿನವು ಆಕೃತಿ ಮತ್ತು ವಿವರಣೆಗಳೊಂದಿಗೆ ಇವರ ಗ್ರಂಥ 'ಮೈಸೂರ್ ಮೆಮ್ಸಿರಿ ಅಥವಾ ಶ್ರೀ ನಾಲ್ವಡಿ ಕೃಷ್ಣರಾಜೇಂದ್ರ ಮಹಿಮೆ' ಎಂಬುದರಲ್ಲಿ ಪ್ರಕಟವಾಗಿದೆ (೧೯೩೩). ಇದಕ್ಕಾಗಿ ಇವರಿಗೆ ಒಂದು ಸಂದರ್ಭದಲ್ಲಿ "ಕವಿತ್ವ ಬಂಧಕವಿತ್ವದಲ್ಲಿ ೧ನೆಯ ತರಗತಿಯ ಪ್ರಶಸ್ತಿ ಪತ್ರಿಕೆ" ಸಹ ದೊರೆಯಿತೆಂದು ತಿಳಿಯುತ್ತದೆ. ಷಡರ ಚಕ್ರ ಮತ್ತು ನಾಗಬಂಧಗಳು ಪೂರ್ವೋಕ್ತ ಗ್ರಂಥದ ಒಂದು ಭಾಗವಾಗಿಯೇ ಸೇರಿವೆ. ಇವರು ರಚಿಸಿದ ಬಂಧಗಳಲ್ಲಿ ಕೆಲವು ಕೃಷ್ಣನಿಗೂ ಕೃಷ್ಣರಾಜ ಒಡೆಯರಿಗೂ ಅನ್ವಯಿಸುವಂತೆ ಶ್ಲೇಷಾರ್ಥ ಪ್ರತಿಪಾದಕವಾಗಿಯೂ ಇರುವುದೊಂದು ವಿಶೇಷ. ಹೀಗೆಯೇ ಆಸ್ಥಾನ ವಿದ್ವಾಂಸರೂ ಭಾಷಾಪಂಡಿತರೂ ಆದ ಇನ್ನೂ ಹಲವರು ಬಂಧಚಿತ್ರಗಳನ್ನು ರಚಿಸಿ ಖ್ಯಾತರಾಗಿರಬಹುದು. ಈಚೆಗೆ ಪಿ. ಬಸವಣ್ಣನವರು ವರ್ಣಚಿತ್ರಗಳನ್ನೂ ಸಮಸ್ಯೆ ಪ್ರಶ್ನೋತ್ತರಗಳನ್ನೂ ರಚಿಸಿ, ತಮ್ಮ ಕವಿತೆಗಳ ಸಂಕಲನಗಳಲ್ಲಿ ಅವನ್ನು ಆಗಾಗ ಪ್ರಕಟಿಸಿದ್ದಾರೆ.

ಕರ್ಣಾಟಕದಲ್ಲಿ ಚಿತ್ರಕಾವ್ಯರಚನೆ ಒಂದು ಸಂಪ್ರದಾಯವಾಗಿ ಎಷ್ಟರಮಟ್ಟಿಗೆ ಜನಪ್ರಿಯತೆ ಗಳಿಸಿಕೊಂಡಿದ್ದಿತೋ, ತಿಳಿಯುವುದಕ್ಕೆ ನಮಗೆ ಆಧಾರಗಳು ಸಾಲವು. ಜಿನಸೇನಾಚಾರ್ಯರ (೯ನೆಯ ಶ.) ಸಂಸ್ಕೃತ 'ಪೂರ್ವಪುರಾಣ'ದಲ್ಲಿ, ಆ ಕಾಲದ ಅಭಿರುಚಿಯ ಸಂಕೇತವಾಗಿ, ಬಿಂದುಚ್ಯುತಕ, ಮಾತ್ರಾಚ್ಯುತಕ, ವ್ಯಂಜನಾಕ್ಷರಚ್ಯುತಕ, ಪ್ರಶ್ನೋತ್ತರಗಳು, ಕ್ರಿಯಾಗೋಪನ ಮುಂತಾದ ಚಿತ್ರಗಳನ್ನೂ ಪ್ರಶ್ನೆ ಸಮಸ್ಯೆಗಳನ್ನೂ ೧೨ನೆಯ ಪರ್ವದಲ್ಲಿ ಬಳಸಿರುವುದು ಕಾಣುತ್ತದೆ. ಲಕ್ಷ್ಯಗಳು ಸರಳವಾಗಿಯೂ ಸುಂದರವಾಗಿಯೂ ಇದ್ದು, ವಿನೋದ ಕಾಲಕ್ಷೇಪಗಳಿಗೆ ಸೂಕ್ತವಾದವಾಗಿವೆ. ಆಚಾರ್ಯರ ಕಾಲದಲ್ಲಿ ಇಂತಹವು ಪ್ರಚಲಿತವಿದ್ದಿರಬೇಕು ಎಂಬುದನ್ನು, 'ಕವಿರಾಜಮಾರ್ಗ'ದಲ್ಲಿ ಅವುಗಳಲ್ಲಿ ಕೆಲವಕ್ಕೆ ದೊರೆತಿರುವ ಪ್ರಾಶಸ್ತ್ಯದಿಂದ ನಾವು ಸುಲಭವಾಗಿ ಊಹಿಸಬಹುದಾಗಿದೆ. ವಿದ್ವಾಂಸರ ವಿನೋದಗೋಷ್ಠಿಗಳು, ರಾಜಸಭೆಗಳು, ವಾದಿಗಳ ವಾಗ್ಮಿಗಳ ಹಾಗೂ ಮತಾಚಾರ್ಯರ ವಾದಭೂಮಿಕೆಗಳು, 'ಕಾವ್ಯಕ್ರಿಯಾ' ಗೋಷ್ಠಿಗಳು, 'ಸರಸ್ವತೀ ಭವನ' 'ಕಾವ್ಯದೇವಾಯತನ' 'ವಿದ್ಯಾಗೋಷ್ಠಿ'ಗಳಂತಹ ಸಾಹಿತ್ಯಕೂಟಗಳು ಇಲ್ಲಿಲ್ಲ ಅವು ಬಗೆಬಗೆಯಾಗಿ ತಲೆದೋರುತ್ತಿದ್ದಿರಬೇಕು. ಸಂಸ್ಕೃತ ಪ್ರಾಕೃತ ಸಾಹಿತ್ಯಗಳ, ಹಾಗೂ ನೆರೆಯ ತಮಿಳು ತೆಲುಗು ಮೊದಲಾದ ದ್ರಾವಿಡ ಭಾಷಾಸಾಹಿತ್ಯಗಳ ವಿದ್ವತ್ ಕವಿಗಳ ಸಾಹಚರ್ಯದಿಂದ, ಅವರೊಡನೆ ನಡಸುತ್ತಿದ್ದಿರಬಹುದಾದ ವಾದವಿವಾದಗಳು, ವಿಚಾರವಿನಿಮಯಗಳು, ಸಲ್ಲಾಪ ಸಂಗೋಷ್ಠಿಗಳ ಮೂಲಕವಾಗಿ ಅವಕ್ಕೆ ಪುಷ್ಟಿ ದೊರೆಯುತ್ತಿದ್ದಿರಬೇಕು. ಅಲ್ಲದೆ ಕನ್ನಡನಾಡಿನ ವಿದ್ವತ್‌ಕವಿಗಳೂ ಸಾಮಾನ್ಯ ಸಾಹಿತ್ಯಾಸಕ್ತರೂ ಅನ್ಯಭಾಷೆಗಳಲ್ಲಿ ಬೆಳೆದುಬಂದಿದ್ದ ಚಿತ್ರಕಾವ್ಯದ ಸಂಪ್ರದಾಯವನ್ನೂ ಆ ಸಂಪ್ರದಾಯದ ಹಳೆಯ ಹಾಗೂ ಹೊಸ ರಚನೆಗಳನ್ನೂ ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಪರಿಚಯ ಮಾಡಿಕೊಳ್ಳುವ ಅವಕಾಶಗಳು ಆಗಾಗ ಒದಗುತ್ತಿದ್ದಿರಬಹುದು. ಈ ಪರಿಚಯ ಪ್ರಭಾವಗಳು ಏಕಮುಖವಾಗಿರದೆ, ಸಹಜವಾಗಿಯೇ ಪರಸ್ಪರವಾಗಿರಬೇಕು ಎಂದು ಸಕಾರಣವಾಗಿ ತಿಳಿಯುವುದಕ್ಕೆ ಆಧಾರಗಳಿವೆ.

ಬೇರೆಬೇರೆ ಚಾಲುಕ್ಯಶಾಖೆಗಳ ಪೋಷಣೆಯಲ್ಲಿ ಏಳಿಗೆಗೆ ಬಂದ, ೧೦–೧೧ನೆಯ ಶತಮಾನದ ಕನ್ನಡ ತೆಲುಗು ಭಾಷೆಯ ಸಾಹಿತ್ಯಗಳಲ್ಲಿ, ಕವಿಗಳು ಪರಸ್ಪರರ ರಚನೆಗಳನ್ನು ಗಮನಿಸುತ್ತಿದ್ದು, ವಿಶೇಷವೆಂದು ತೋರಿದ ಕವಿತ್ವಪದ್ಧತಿಗಳನ್ನು ಅನುಸರಿಸುತ್ತಿದ್ದುದನ್ನು ಈಗಾಗಲೇ ಕೆಲಮಟ್ಟಿಗೆ ಗುರುತಿಸಲಾಗಿದೆ. ಚಿತ್ರಕಾವ್ಯದ ಸಂಪ್ರದಾಯವನ್ನು ಕನ್ನಡದಲ್ಲಿ ಸು. ೯ನೆಯ ಶ.ದ ಮಧ್ಯಭಾಗದಿಂದಲೂ ತೆಲುಗಿನಲ್ಲಿ ಸು. ೧೧ನೆಯ ಶ.ದ ಮಧ್ಯಭಾಗದಿಂದಲೂ ಗುರುತಿಸಲು ಸಾಧ್ಯ. ಆದರೆ ಎರಡೂ ಭಾಷೆಗಳಲ್ಲಿ ಈ ಸಂಪ್ರದಾಯ ಪ್ರಯೋಗಶೀಲ ಕವಿಗಳ ಮನಸ್ಸನ್ನು ವಿಶೇಷವಾಗಿ ಸೆಳೆದುದು ಕ್ರಮವಾಗಿ ೧೧ನೆಯ ಶ.ದ ಮತ್ತು ೧೨ನೆಯ ಶ.ದ ಆದಿಭಾಗದಿಂದ. ಕಲ್ಯಾಣ ಚಾಲುಕ್ಯರ ೧ನೆಯ ಜಯಸಿಂಹನ (೧೦೧೫–೪೨) ಮಾಂಡಲಿಕನಾಗಿದ್ದ ರೇಚನೃಪನ ಆಸ್ಥಾನದ ಕವಿ 'ಮದನತಿಲಕ'ದ ಚಂದ್ರರಾಜನಿಂದ ಕನ್ನಡದಲ್ಲಿಯೂ, 'ಪ್ರಥಮಾಂಧ್ರಪ್ರೌಢಪ್ರಬಂಧ'ವೆನಿಸಿದ 'ಕುಮಾರಸಂಭವ'ದ ಕರ್ತೃ ನನ್ನೆಚೋಡನಿಂದ (೧೨ನೆಯ ಶ.) ತೆಲುಗಿನಲ್ಲಿಯೂ ಚಿತ್ರಕಾವ್ಯದ ಮಾದರಿಗಳು ರಚಿಸಲ್ಪಟ್ಟು, ಅವರ ಕೃತಿಗಳಲ್ಲಿ ಸಮಾವೇಶಗೊಂಡುವು. ನನ್ನೆಚೋಡನಿಗೆ ಕನ್ನಡ ಭಾಷೆಸಾಹಿತ್ಯಗಳ ಪರಿಚಯವಿದ್ದಿತೆಂದು ಹಲವರು ತೆಲುಗು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ತೆಲುಗಿನಲ್ಲಿ ಬಹುಪ್ರಚುರವಾದ 'ಗರ್ಭಕವಿತ್ವ'ದ ಮಾದರಿಗಳು 'ಮದನತಿಲಕ'ದಲ್ಲಿಯೇ ಕಂಡುಬರುತ್ತಿವೆ. ಇವರ ಕೃತಿಗಳಲ್ಲಿ ಸಮಾನವಾದ ಚಿತ್ರಕವಿತ್ವದ ಮಾದರಿಗಳು ಇನ್ನೂ ಇವೆ. ಈ ದೃಷ್ಟಿಯಿಂದ ಇವರ ಕೃತಿಗಳನ್ನು ಪರಸ್ಪರವಾಗಿ ಹೋಲಿಸಿದರೆ ಕೆಲವು ಹೊಸ ಸಂಗತಿಗಳು ತಿಳಿಯಬಹುದು.

'ಕರ್ಣಾಟಕ ಕಲ್ಯಾಣಕಾರಕ' ಎಂಬ ವೈದ್ಯಗ್ರಂಥದ ಕರ್ತೃ ಜಗದ್ದಳ ಸೋಮನಾಥನು (ಸು. ೧೧೭೫) ತನ್ನನ್ನು 'ಚಿತ್ರಕವಿ ಸೋಮಂ' ಎಂದೂ 'ವಿಚಿತ್ರಕವಿ ಜಗದ್ದಳ ಸೋಮನಾಥಂ' ಎಂದೂ ಕರೆದುಕೊಂಡಿರುವುದು ಬಹುಶಃ ಚಿತ್ರಕವಿತ್ವದ ಹಿನ್ನೆಲೆಯಲ್ಲಿಯೇ ಇದ್ದರೂ ಇರಬಹುದು. ಆದರೆ ಅದನ್ನು ದೃಢಪಡಿಸುವ ಸಾಕ್ಷ್ಯಗಳು ನಮಗೆ ದೊರೆಯುವು. ಹೀಗೆಯೇ ಕವಿಕಾಮನು (ಸು. ೧೨೦೦) ತನ್ನ 'ಶೃಂಗಾರ ರತ್ನಾಕರ'ದಲ್ಲಿ ತನಗೆ 'ಅನ್ಯಾದೃಶವಾದ ಕವಿತಾಶಕ್ತಿಯೂ ಅವಧಾನಶಕ್ತಿಯೂ' ಇದ್ದುದನ್ನು ''ಎಸಕಂಬೆತ್ತ ಮತಿಪ್ರಕಾಶಮುದ

ನಿನ್ನೇನೆಂದಪೆಂ'' ಎಂಬ ಪದ್ಯದಲ್ಲಿ (೭) ಸೂಚಿಸುವಂತೆ ತೋರುತ್ತಿದ್ದು, ಈ ನಿರೂಪಣೆ ಆ ಕವಿಯ ಸಾಂಪ್ರದಾಯಿಕ ಅವಧಾನಶಕ್ತಿಯ ಧೋರಣೆಯನ್ನೇ ಒಳಕೊಂಡಂತಿದೆ. ''...ನಾಲ್ದೆಸೆಯೊಳ್ ನಾಲ್ವರ ಕಂಟದೊಳ್ ಬರೆಯೆ ಕಬ್ಬಂಬೇಟ್ಟವನೊಲ್ದತ್ತಲಾ।ಡಿಸುವಂ ನೆತ್ತಮನಿತ್ತಲೋದಿದೊಡೆ ತಪ್ಪಂ ಪೇಳ್ದುದಂ ತಿರ್ದಿಯಾ।ಲಿಸುವಂ ಗೀತಮನೆನ್ನುಮಂ ನಗಿಸುವಂ ಶೃಂಗಾರ ರತ್ನಾಕರಂ'' ಎಂಬ ಮೂಲದ ಮಾತನ್ನು ಗಮನಿಸಿದರೆ ಅದು ತಿಳಿಯುತ್ತದೆ.

ಜನ್ನ ಕವಿಯ 'ಅನಂತನಾಥ ಪುರಾಣ'ದಲ್ಲಿ (೧೨೩೦), ಜಿನನ ಸಮವಸರಣಮಂಟಪವನ್ನು ಕವಿ ವರ್ಣಿಸುವಾಗ ''ಮುಕ್ತಕಂ ಕುಲಕಂ ಕೋಶಂ ಸಂಘಾತಮೆಂಬ ರಚನಾವೈಚಿತ್ರ್ಯ ಚಿತ್ರಾಯತನ ವೈದಂಡಿಕ ಪ್ರಬಂಧ ಬಂಧುರ ಪದ್ಯಬಂಧದೊಳಂ, ಉತ್ಕಳಿಕೆ ಚೂರ್ಣಿಕೆ ಲತಿಕೆ ಖಂಡಂ ವೃತ್ತಗಂಧಿ ಚಿತ್ರಮೆಂಬ ಗದ್ಯಬಂಧದೊಳಂ ಸಮ್ಮಿಳಿತ ರಸಭಾವ ಸಂಪಚ್ಛಂಪೂಕೃತಿಯೊಳಂ'' ಮಂಗಳವಾಚನಗಳು ಅಲ್ಲಿ ನಡೆಯುತ್ತಿದ್ದುವೆಂಬುದಾಗಿ (೧೦–೩೦ವ.) ನಿರೂಪಿಸಿರುವುದು ಗಮನಾರ್ಹವಾಗಿದೆ. ಇಲ್ಲಿ 'ಚಿತ್ರಾಯತನ' ಎಂಬ ಮಾತನ್ನು 'ಕವಿರಾಜಮಾರ್ಗ' ಮೊದಲಾದವುಗಳಲ್ಲಿ ಬರುವ 'ಚತ್ತಾಣ' ಎಂಬ ಮಾತಿನೊಡನೆ ಅಭಿನ್ನವಾಗಿ ಸಾಮಾನ್ಯವಾಗಿ ತಿಳಿಯಲಾಗುತ್ತಿದೆ.[15] ಇದು ಎಷ್ಟರಮಟ್ಟಿಗೆ ಸರಿಯೋ, ತಿಳಿಯದು. ವರ್ಣಚಿತ್ರ, ಗೂಢಚಿತ್ರ ಇತ್ಯಾದಿ ವಿವಿಧ ಚಿತ್ರಪ್ರಕಾರಗಳನ್ನು ಬಳಸಿದ ಪದ್ಯಬಂಧ ಎಂಬುದಾಗಿ 'ಚಿತ್ರಾಯತನ' ಶಬ್ದಕ್ಕೆ ಅರ್ಥಮಾಡಬಹುದೇನೋ ಎನಿಸುತ್ತದೆ. 'ಚಿತ್ರ' ಎಂಬುದು ಗದ್ಯಬಂಧದಲ್ಲಿ ಒಂದು ಬಗೆ ಎಂಬುದಾಗಿ ಇದೇ ಉಲ್ಲೇಖದಲ್ಲಿ ಬಂದಿದೆ. ಈ 'ಚಿತ್ರ' 'ಚಿತ್ರಕಾವ್ಯ' ಪ್ರಕಾರದಿಂದ ಬೇರೆಯೇ ಇರಬೇಕು. ಸಂಸ್ಕೃತದಲ್ಲಿ 'ಚಿತ್ರ' ಎಂಬ ಹೆಸರಿನ ಗದ್ಯಪ್ರಭೇದವೊಂದು ಎಲ್ಲಿಯೂ ಉಕ್ತವಾಗಿರುವಂತೆ ತೋರುವುದಿಲ್ಲ. ಇದು 'ಅಜಿತಪುರಾಣ'ದಲ್ಲಿ ಕಂಡುಬರುವಂತಹ ಮುಕ್ತಪದ ಗ್ರಹಣ ರೀತಿಯ (೪–೭೯ವ.) ಗದ್ಯರಚನೆಯಿರಬಹುದೇ, ತಿಳಿಯದು.

ಇದೇ ಕಾಲದ ಇನ್ನೊಬ್ಬ ಜೈನಕವಿ ಮಹಾಬಲ ತನ್ನ 'ನೇಮಿನಾಥಪುರಾಣ'ದಲ್ಲಿ (೧೨೫೪), ಗ್ರಂಥಾರಂಭಭಾಗದಲ್ಲಿ, ಭಾವಸೇನವ್ರತಿಯನ್ನು ನೆನೆಯುವಾಗ ಈ ಯತಿ ''ಗದ್ಯೋಪನ್ಯಾಸಮುದ್ಭಾಷಿತ ಪದಗತ ವರ್ಣಾಕ್ಷರತ್ಯಾಗಮಿಚ್ಛಾ। ಪದ್ಯೋಪನ್ಯಾಸ''ಗಳಲ್ಲಿ ಪರಿಣತನಾಗಿದ್ದನೆಂದು ಕೀರ್ತಿಸಿದ್ದಾನೆ (೧–೨೨). ಇದು ಕ್ರಮವಾಗಿ ಆತನ ವಾಗ್ಮಿತೆ, ಗಜರಥ ತುರಂಗಪದಗತಗಳೆಂಬ ಗತಿಚಿತ್ರಗಳನ್ನು ರಚಿಸುವುದು, ಕಂಠ್ಯತಾಲವ್ಯಾದಿ ವರ್ಗಾಕ್ಷರಗಳನ್ನು ಬಿಟ್ಟು ಪದ್ಯಗಳನ್ನು ರಚಿಸುವುದು, ಹಾಗೂ ದತ್ತಪದಿಗಳನ್ನು (ಕವಿಚರಿತೆಕಾರರು 'ನಿರ್ದಿಷ್ಟ ಇಚ್ಛಾಪದೋಪನ್ಯಾಸ' ಎಂಬ ಪಾಠವನ್ನು ಇಟ್ಟುಕೊಂಡಿದ್ದಾರೆ[16]; ಸ್ವಂತ ಇಚ್ಛೆಯ ಪಾದಗಳನ್ನು, 'ದತ್ತ'ವಾದ ಶಬ್ದಗಳನ್ನು ಬಳಸಿ ರಚಿಸುವುದು ಎಂಬರ್ಥದಲ್ಲಿ ಅವರ ಪಾಠವೇ ಸರಿಯಿರಬಹುದು. ತೆಲುಗಿನಲ್ಲಿ, 'ಅಪ್ಪ ಕವೀಯ'ದಲ್ಲಿ[17] ಇದನ್ನು 'ಇಚ್ಛಾವಾಕ್ಯಸಂಘಟ್ಟನ' ಎಂಬುದಾಗಿ ಹೇಳಿದೆ.) ರಚಿಸುವುದು–ಎಂಬ ವಿಭಾಗಗಳ ನೈಪುಣ್ಯವನ್ನು ಸೂಚಿಸುತ್ತದೆ. ಈ ನೈಪುಣ್ಯ ಈ ಯತಿಗೆ ಯಾವ ಭಾಷೆಯಲ್ಲಿದ್ದಿತು ಎಂಬುದನ್ನು ಹೇಳುವುದು ಕಷ್ಟ.

'ಭರತೇಶವೈಭವ'ದ ಕವಿ ರತ್ನಾಕರ (೧೫೫೭) 'ಯೋಗವಿಜಯ'ದ 'ವಿದ್ಯಾಗೋಷ್ಠಿ ಸಂಧಿ'ಯ ಒಂದು ಭಾಗದಲ್ಲಿ, ಭರತಚಕ್ರವರ್ತಿಯ ಮಕ್ಕಳ ಆಸ್ಥಾನದಲ್ಲಿ ನಡೆದ ವಿದ್ಯಾಪ್ರದರ್ಶನವನ್ನು ನಿರೂಪಿಸಿದ್ದಾನೆ. ಹೀಗೆ ನಿರೂಪಿಸುವಾಗ, ''ಒಂದು ಶಬ್ದಕೆ ಹಲವರ್ಥವಾ ಹಲವರ್ಥ।ಕೊಂದು ಶಬ್ದವ ನೆಲೆಗೊಳಿಸಿ॥ ಎಂದುದನೆನ್ನದೆ ಹೊಸಹೊಸ ಪರಿಯ ಸೊ।ಲ್ಲಿಂದ ಸುಗೋಷ್ಠಿ'' ಮಾಡಿದ, ''ಕ್ಷಣಕೊಂದು ಶತಕ ಘಳಿಗೆಗೊಂದು ಕಾವ್ಯವ। ಮಣಿಮಾಲೆಯೊ[ಲು]'' ರಚಿಸಿದ, ''ಅಷ್ಟಾವಧಾನ ಗಣ್ಯವೆ ನೂರು ಸಾವಿರ। ಶಿಷ್ಟ ಲಕ್ಷಾವಧಾನಗಳ'' ಸೃಷ್ಟಿಸಿ ತೋರಿದ (೬೪–೬೦, ೬೨,೬೪) ವಿದ್ವತ್ ಕವಿಗಳು ಆಸ್ಥಾನದಲ್ಲಿದ್ದರೆಂದು ಹೇಳಿದ್ದಾನೆ. ಅಲ್ಲದೆ ಎರಡು ಘಳಿಗೆಗಿಂತ ಕಡಿಮೆಯ ಕಾಲದಲ್ಲಿ ೧೨ ಅಂಗಶಾಸ್ತ್ರಗಳನ್ನು ನೆನೆದು, ಬರೆದು, ಓದಿ ಮುಗಿಸುವ ಯೋಗಿಗಳ ಶಿಷ್ಯರಿಗೆ ಈ 'ಚಮತ್ಕಾರ ಕವಿತೆ' ಅಶಕ್ಯವಾದುದೇನಲ್ಲ ಎಂದೂ (೬೪–೬೩) ಕೊಂಡಾಡಿದ್ದಾನೆ. ಈ ನಿರೂಪಣೆ ಸಹಜವಾಗಿಯೇ ಶ್ಲೇಷಕವಿತೆ, ಆಶುಕವಿತೆಗಳಲ್ಲಿ ಆ ವಿದ್ವತ್‌ಕವಿಗಳಿಗಿದ್ದ ಪ್ರತಿಭೆ ಪರಿಶ್ರಮಗಳನ್ನು ಸೂಚಿಸುತ್ತದೆ. ಶ್ಲೇಷಕವಿತ್ವದಲ್ಲಿ ಸಂಧಾನಕಾವ್ಯಗಳೂ ಭಾಷಾಚಿತ್ರಗಳೂ ಸೇರುತ್ತವೆನ್ನಬಹುದು. ಆಶುಕವಿತ್ವದಲ್ಲಿ ''ಏಕ

ಪಾದ ತ್ರಿಪಾದ ಕಠಿಣಪ್ರಾಸ ವಿಷಮಸಮಸ್ಯಾಪೂರ್ತಿಗಳು, ನ್ಯಸ್ತಾಕ್ಷರೀಸಂಘಟಿತಪದ್ಯಗಳು, ನಿಷೇಧಾಕ್ಷರ ರಚನಾಚಮತ್ಕೃತಿ, ಅಷ್ಟಾವಧಾನಗಳು, ಘಟಿಕಾಶತಗ್ರಂಥರಚನೆ, ಆಕಾಶಪುರಾಣಗಳು'' ಎಂಬಂತಹ ತತ್ಕಾಲೋಚಿತವಾಗಿ ತ್ವರಿತಗತಿಯಿಂದ ರಚಿತವಾಗುವ ಚಿತ್ರಕವಿತ್ವಪ್ರಕಾರಗಳು ಸೇರುತ್ತವೆ. ಇಂತಹ ಸಭೆಯಲ್ಲಿ ಆ ಭರತಪುತ್ರರು ''ನುಡಿದುದೆಲ್ಲಾಗಮ....ತುಟಿವಿಡುಕಿದುದೆಲ್ಲ ಚಿತ್ರಾರ್ಥ'' ಎಂಬಂತೆ ಶೋಭಿಸುತ್ತಿದ್ದರಂತೆ (೬೪–೭೩).

೧೮ನೆಯ ಶ.ದ ಕವಿಗಳಲ್ಲಿ ಇಬ್ಬರನ್ನಿಲ್ಲಿ ವಿಶೇಷವಾಗಿ ಗಮನಿಸಬೇಕು. ಅವರೆಂದರೆ, ಒಬ್ಬ 'ಸರಜಾ ಹನುಮೇಂದ್ರಚರಿತೆ' ಬರೆದ ಕೃಷ್ಣಶರ್ಮ (ಸು. ೧೭೦೦); ಇನ್ನೊಬ್ಬ ರಾಮಾಯಣವನ್ನು ಕೃತಿಗೊಳಿಸಿದ ವೆಂಕಾಮಾತ್ಯ (ಸು. ೧೭೭೦). ಮೈಸೂರು ಅರಮನೆಯಲ್ಲಿ ದ್ವಾರಾಧ್ಯಕ್ಷನಾಗಿದ್ದ ಬ್ರಾಹ್ಮಣಕವಿ ಕೃಷ್ಣಶರ್ಮನು ತನ್ನನ್ನು ''....ಕಾರ್ಯಖಡ್ಗಕವಿತ್ವಕರಣಿಕ ಕಕಾರಚಾತುರ್ವಿಧಕ್ರಮಾಚಾರ್ಯಧುರ್ಯ, ಲಕ್ಷಣಕವಿ, ಕುಕವಿನೀರ್ದೇರು ಪ್ರಚಂಡ ಜಂಝಾಮಾರುತ, ಆಶುಕವಿ'' ಎಂಬುದಾಗಿ ಕರೆದುಕೊಂಡಿದ್ದಾನೆ. ಖಡ್ಗವನ್ನೂ ಲೇಖನಿಯನ್ನೂ ಹಿಡಿಯಬಲ್ಲವನಾಗಿದ್ದ ಈ ಕವಿ ಆಶುಕವಿಯಾಗಿದ್ದನೆಂಬುದರಿಂದ ಮೇಲೆ ಹೇಳಿದ ಚಿತ್ರಕವಿತ್ವ ಪ್ರಕಾರಗಳಲ್ಲಿ ಈತ ಪಳಗಿದ್ದಿರಬೇಕು ಎನಿಸುತ್ತದೆ. ತೆಲುಗು ಕವಿ ಪೊತ್ತಪಿ ವೆಂಕಟರಮಣಕವಿ ಸಹ 'ಕಾರ್ಯಖಡ್ಗಪ್ರವೀಣ' ಎಂದು ತನ್ನನ್ನು 'ಲಕ್ಷಣದೀಪಿಕೆ'ಯಲ್ಲಿ ಕೊನೆಗೆ ಕರೆದುಕೊಂಡಿದ್ದಾನೆ.

ವೆಂಕಾಮಾತ್ಯನು ತನ್ನನ್ನು 'ಚತುರ್ವಿಧಕವಿತಾಪರಿಶೀಲ'ನೆಂದು 'ರಾಮಾಯಣ' ಮತ್ತು 'ರಮಾಭ್ಯುದಯ' ಗ್ರಂಥಗಳಲ್ಲಿಯೂ 'ಘಟಿಕಾಪ್ರಬಂಧರಚನಾವಿದಗ್ಧ'ನೆಂದು 'ಅಲಂಕಾರಮಣಿದರ್ಪಣ'ದಲ್ಲಿಯೂ ಕರೆದುಕೊಂಡಿದ್ದಾನೆ. 'ಚತುರ್ವಿಧ ಕವಿತ್ವ'ವೆನ್ನುವುದು ತೆಲುಗು ಸಾಹಿತ್ಯದಲ್ಲಿ ಸಂಪ್ರದಾಯಸಿದ್ಧವಾದ ಮಾತು. ಇಲ್ಲಿ ಆಶುಕವಿತ್ವ, ಮಧುರಕವಿತ್ವ, ಚಿತ್ರಕವಿತ್ವ ಮತ್ತು ವಿಸ್ತರಕವಿತ್ವಗಳು ಕೂಡಿ 'ಚತುರ್ವಿಧಕವಿತ್ವ'ವೆನಿಸುವುದು. ವೆಂಕಾಮಾತ್ಯನಿಗೆ ಈ ತೆಲುಗು ಸಂಪ್ರದಾಯದ ಪರಿಚಯವಿದ್ದಿತೋ ಏನೋ. ಆದರೆ ಅವನ 'ರಾಮಾಯಣ' ಕೃತಿಯಲ್ಲಿ ಯಮಕಾನುಪ್ರಾಸಗಳಂತೂ ವಿಶೇಷವಾಗಿ ಕಾಣುತ್ತವೆ; ಉಳಿದ 'ಚಿತ್ರ' ಪ್ರಕಾರಗಳೇನೂ ತೋರುತ್ತಿಲ್ಲ. ಅಂತೂ ಅವನು ಆಶುಕವಿಯಾಗಿ, ಚಿತ್ರಕವಿಯಾಗಿ ಪದ್ಯರಚನೆಮಾಡಲು ಶಕ್ತನಾಗಿದ್ದನೆಂದು ಹೇಳಬೇಕು. ಇವನು ಘಳಿಗೆಗೆ ಎಂದರೆ ೨೪ ನಿಮಿಷಗಳ ಕಾಲಾವಧಿಯಲ್ಲಿ ಒಂದು ಪ್ರಬಂಧವನ್ನು ರಚಿಸಲು ಶಕ್ತನಾಗಿದ್ದನೆಂದು, ಇನ್ನೊಂದು ಪ್ರಶಂಸೋಕ್ತಿಯಿಂದ ತಿಳಿಯುತ್ತದೆ. ರತ್ನಾಕರನು ಸಹ ''ಘಳಿಗೆಗೊಂದು ಕಾವ್ಯ''ವನ್ನು ಸರಗೊಳಿಸುವ ವಿದ್ವಾಂಸರ ಬಗ್ಗೆ ಹೇಳಿರುವುದನ್ನು ಈಗಾಗಲೇ ಗಮನಿಸಿದೆ. ತೆಲುಗು ಭಾಷೆಯ ಪ್ರಬಂಧಯುಗದ ಕವಿ ರಾಮರಾಜಭೂಷಣನು ತನ್ನ 'ನರಸಭೂಪಾಲೀಯ'ದಲ್ಲಿ ತನ್ನನ್ನು ''ಶತಲೇಖನೀಪದ್ಯಸಂಧಾನಧೌರೇಯುಃ। ಘಟಿಕಾಶತಗ್ರಂಥಕರಣಧುರ್ಯುಡ....'' ಎಂದು ಶ್ಲಾಘಿಸಿಕೊಂಡಿರುವುದನ್ನು ಇಲ್ಲಿ ನೆನೆಯಬಹುದು. ಅಲ್ಲದೆ ತೆಲುಗು ದೇಶದಲ್ಲಿ ೧೬ನೆಯ ಶ.ದಲ್ಲಿ ಆಶುಕವಿತ್ವಕ್ಕೂ ಅವಧಾನಪ್ರದರ್ಶನಗಳಿಗೂ ಬಹಳವಾಗಿ ಪ್ರಚಾರವಿದ್ದಿತೆಂಬುದು ತೆಲುಗು ವಿದ್ವಾಂಸರ ಅಭಿಪ್ರಾಯ.[18] ಸಹಜವಾಗಿಯೇ ವಿಜಯನಗರದ ಅರಸರಲ್ಲಿ, ಅದರಲ್ಲಿಯೂ ಕೃಷ್ಣದೇವರಾಯನ ಕಾಲದಲ್ಲಿ, ಚಿತ್ರಕವಿತ್ವದ ವೈಖರಿಗಳು ಅಹಮಹಮಿಕೆಯಿಂದ ಪ್ರದರ್ಶಿತವಾಗುತ್ತಿದ್ದು, ತೆಲುಗು ಮತ್ತು ಕನ್ನಡ ಭಾಷೆಯ ಕವಿಗಳು ಅವುಗಳಲ್ಲಿ ಭಾಗವಹಿಸುತ್ತಿದ್ದರೆಂದು ಭಾವಿಸಬಹುದು. ರತ್ನಾಕರನ ಕಾವ್ಯದಲ್ಲಿ ಬರುವ 'ವಿದ್ಯಾಗೋಷ್ಠಿ'ಯ ಚಿತ್ರ ಅದರ ಒಂದು ಸಮಕಾಲೀನ ಸಾಕ್ಷ್ಯವಾಗಿರಲೂ ಬಹುದು. ಮೈಸೂರು ಸಂಸ್ಥಾನದ ಚಿಕ್ಕದೇವರಾಜ ಒಡೆಯರ ಹಾಗೂ ಮುಮ್ಮಡಿ ಕೃಷ್ಣರಾಜ ಒಡೆಯರ ಆಸ್ಥಾನಗಳಲ್ಲಿಯೂ ಈ ಬಗೆಯ ಗೋಷ್ಠಿಗಳು ಕೆಲಮಟ್ಟಿಗಾದರೂ ಮುಂದುವರಿದಿರಬೇಕು. ಉದಾ.ಗೆ. ಚಿಕ್ಕದೇವರಾಜರ ಕಾಲದಲ್ಲಿ ರಚಿತವಾದ ಮಾಹಾತ್ಮ್ಯಗ್ರಂಥಗಳು ಮುಂತಾದವನ್ನು ನೋಡಿದರೆ ಆ ದೊರೆಯ ಸಭೆಯಲ್ಲಿ 'ಸರಸಕವಿತ್ವ', 'ಘನಸಾಹಿತೀರಸಾನುರಕ್ತಿ', 'ಸಾಹಿತ್ಯಪ್ರಸಂಗ', 'ಕವಿಪ್ರಸಂಗ'ಗಳು ಜರುಗುತ್ತಿದ್ದುವೆಂಬುದರ ನಿರೂಪಣೆ ದೊರೆಯುತ್ತದೆ. ಅಲ್ಲದೆ ಸಮಸ್ಯಾಪೂರ್ತಿಯ ಸಂದರ್ಭಗಳೂ ಇರುತ್ತಿದ್ದುವೆಂದು ತಿಳಿಯುತ್ತದೆ (ಚಿಕವಿ. ೫–೧೫೯). ಚಿಕುಪಾಧ್ಯಾಯನ ಹಾಗೂ ಶ್ರೀನಿವಾಸಕವಿಯ[19] ರಚನೆಗಳಲ್ಲಿ ಕೆಲವು, ಚಮತ್ಕಾರಕವಿತ್ವನಿದರ್ಶಕಗಳಾಗಿವೆ ಎಂಬುದನ್ನಿಲ್ಲಿ ನೆನೆಯಬಹುದಾಗಿದೆ.

ಅಡಿಟಿಪ್ಪಣಿಗಳು

1. ವಿವರಗಳಿಗೆ ನೋಡಿ: Kalanath Jha, *Figurative Poetry in Sanskrit Literature*, Motilal Banarsidass, Delhi, 1975, pp. 24–27.
2. ತೀ.ನಂ. ಶ್ರೀಕಂಠಯ್ಯ, 'ಭಾರತೀಯ ಕಾವ್ಯಮೀಮಾಂಸೆ', ಪ್ರಸಾರಾಂಗ, ಮೈಸೂರು, ೧೯೭೩(೪), ಪು. ೨೩೪–೩೫ (ಮೂಲ ೩, ಪು. ೪೯೭).
3. 'ಧ್ವನ್ಯಾಲೋಕ', ಉದ್ಯೋತ ೩, ಕಾರಿಕೆ ೯ ವೃತ್ತಿ.
4. Jha, op. cit. pp. 24–27.
5. ಕೆ. ಕೃಷ್ಣಮೂರ್ತಿ, ಚಿತ್ರಕಾವ್ಯ, 'ಕನ್ನಡ ವಿಶ್ವಕೋಶ', ಸಂ. ೭, ಪು. ೩೯೪.
6. Jha, op. cit. pp. 24–27.
7. ತೀ.ನಂ. ಶ್ರೀಕಂಠಯ್ಯ, ಪೂರ್ವೋಕ್ತ, ಪು. ೪; ಕೆ. ಕೃಷ್ಣಮೂರ್ತಿ, 'ಕನ್ನಡ ಕಾವ್ಯಮೀಮಾಂಸೆ', ಶಾರದಾಮಂದಿರ, ಮೈಸೂರು, ೧೯೬೯, ಪು. ೩–೪.
8. H. R. Kapadia, Illustrations of Letter-Diagrams, *JUB*., XXII–ii, pp. 60–61.
9. ವಿವರಗಳಿಗೆ ನೋಡಿ: ಕೋವೆಲ ಸಂಪತ್ಕುಮಾರಾಚಾರ್ಯ, 'ತೆಲುಗು ಛಂದೋವಿಕಾಸಮು', ಕುಲಪತಿಸಮಿತಿ, ವರಂಗಲ್ಲು, ೧೯೬೨, ಪು. ೨೦೭–೨೫.
10. ಸಂ. ೩, ೧೯೨೯, ಅನುಬಂಧ, ಪು. ೪೨೫.
11. ಕಕಚ., ಸಂ. ೨, ೧೯೭೩, ಪು. ೫೭೨.
12. ಕಕಚ., ಸಂ. ೩, ೧೯೨೯, ಪು. ೪೧೯.
13. ಕಕಚ., ಸಂ. ೨, ೧೯೭೩, ಪು. ೫೭೦.
14. ವಿವರಗಳಿಗೆ ನೋಡಿ: ಸಂ. ಹಾ.ಮಾ. ನಾಯಕ, 'ಕನ್ನಡ ಜಾನಪದ ಗ್ರಂಥಸೂಚಿ', ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೭೪, ಪು. ೬೧–೭೮, ೯೧–೯೭.
15. ತೀ ನಂ. ಶ್ರೀಕಂಠಯ್ಯ, 'ಚತ್ರಾಣ' ಮತ್ತು 'ಬೆದಂಡೆ', 'ಕಾವ್ಯಾನುಭವ', ಶಾರದಾಮಂದಿರ, ಮೈಸೂರು, ೧೯೭೦, ಪು. ೭೨. ಇ
16. ಕಕಚ., ಸಂ. ೧, ೧೯೬೧, ಪು. ೪೩೭ ಅ.ಟಿ.
17. ಸಂ. ಶ್ರೀರೇಕಮು ರಾಮಾನುಜಸೂರಿ, ಮದ್ರಾಸು, ೧೮೫೯, ಪು. ೨೮೧.
18. ಕೋವೆಲ ಸಂಪತ್ಕುಮಾರಾಚಾರ್ಯ, ಪೂರ್ವೋಕ್ತ, ಪು. ೨೧೨.
19. ಈ ಕವಿಯ ದ್ವಿಭಾಷಿಕ ಕೃತಿರಚನೆಯನ್ನು ಒಂದು ವಿಶೇಷವೆಂದು ಸಂಸ್ಕೃತ ವಿದ್ವಾಂಸರೂ ಗಮನಿಸಿದ್ದಾರೆ. Jha, op. cit., p. 157.

೨

ಅನುಪ್ರಾಸ, ಯಮಕ

೧

ಅನುಪ್ರಾಸ: ಲಕ್ಷಣ, ಪ್ರಭೇದಗಳು ಮತ್ತು ಲಕ್ಷ್ಯಗಳು

ಶಬ್ದಚಿತ್ರಗಳಲ್ಲಿ ಅನುಪ್ರಾಸ, ಆನಂದವರ್ಧನ ಅಪ್ಪಯ್ಯದೀಕ್ಷಿತರ ಹೊರತಾಗಿ ಬಹುಮಟ್ಟಿಗೆ ಎಲ್ಲ ಆಲಂಕಾರಿಕರಿಂದಲೂ ನಿರೂಪಿತವಾಗಿದೆ. ಛೇಕಾನುಪ್ರಾಸ ವೃತ್ತ್ಯನುಪ್ರಾಸಗಳನ್ನು ಸಾಮಾನ್ಯವಾಗಿ ಕುರಿತಿದೆ. ಆದರೆ ದಂಡಿಯನ್ನೊಳಕೊಂಡು ವಿಶ್ವನಾಥ ಮೊದಲಾದ ಕೆಲವರು ಶ್ರುತ್ಯನುಪ್ರಾಸವನ್ನೂ ರುಯ್ಯಕ ಜಯದೇವ ಮಮ್ಮಟ ಮೊದಲಾದ ಕೆಲವರು ಲಾಟಾನುಪ್ರಾಸವನ್ನೂ ಕುರಿತಿದ್ದಾರೆ. ಜಯದೇವನು ಸ್ಫುಟಾನುಪ್ರಾಸವೆಂದೂ, ಭಾಮಹ ಉದ್ಭಟರು ಗ್ರಾಮ್ಯಾನುಪ್ರಾಸವೆಂದೂ, ಹೀಗೆಯೇ ಉದ್ಭಟ, ಜಯದೇವ ವಿಶ್ವನಾಥರು, ಕ್ರಮವಾಗಿ ಪರುಷಾನುಪ್ರಾಸ, ಅರ್ಥಾನುಪ್ರಾಸ ಮತ್ತು ಅಂತ್ಯಾನುಪ್ರಾಸಗಳೆಂದೂ ಭೇದಗಳನ್ನು ವಿಂಗಡಿಸಿರುವುದು ಕಾಣುತ್ತದೆ. ಹೇಮಚಂದ್ರನು ಲಾಟವೆಂಬ ಹೆಸರಿನ ಅನುಪ್ರಾಸವನ್ನು ಮಾತ್ರ ತಿಳಿಸಿದರೂ ಅಕ್ಷರಗಳ ಅಥವಾ ಶಬ್ದಗಳ ಆವೃತ್ತಿ ಕುರಿತಾಗ ಸಕೃದಾವೃತ್ತಿ (ಒಂದು ಸಲದ ಆವೃತ್ತಿ), ಅಸಕೃದಾವೃತ್ತಿ (ಹಲವು ಸಲದ ಆವೃತ್ತಿ)ಗಳೆಂದು ಅವನ್ನು ಗುರುತಿಸಿದ್ದಾನೆ. ರುದ್ರಟ ಭೋಜರು ವೃತ್ತಿಗಳ ಹಿನ್ನೆಲೆಯಲ್ಲಿ ಅನುಪ್ರಾಸವನ್ನು ವಿಂಗಡಿಸಿದ್ದಾರೆ. ಭೋಜನು ಅನುಪ್ರಾಸ ವಿವೇಚನೆಯಲ್ಲಿ ಹೊಸದಾರಿ ಹಿಡಿದಿದ್ದಾನೆ; ವಿಸ್ತಾರವಾಗಿ ನಿರೂಪಿಸಿದ್ದಾನೆ. ಮೊದಲು ಶ್ರುತ್ಯನುಪ್ರಾಸ, ವರ್ಣಾನುಪ್ರಾಸ ಮತ್ತು ಪದಾನುಪ್ರಾಸಗಳೆಂಬ ಮೂರು ವಿಶಾಲವಾದ ವಿಭಾಗಗಳನ್ನು ಮಾಡಿಕೊಂಡಿದ್ದಾನೆ. ಬಳಿಕ 'ಶ್ರುತಿ'ಯನ್ನು ಗ್ರಾಮ್ಯ, ನಾಗರ, ಉಪನಾಗರ ಎಂಬುದಾಗಿ ಮತ್ತೆ ಮೂರಾಗಿ ವಿಭಜಿಸಿ, ಆ ಒಂದೊಂದನ್ನೂ ಕೆಲವು ಒಳವಿಭಾಗಗಳಾಗಿ ವಿಂಗಡಿಸಿದ್ದಾನೆ; ಹಾಗೆಯೇ 'ವರ್ಣ' ಮತ್ತು 'ಪದ'ಗಳಲ್ಲಿಯೂ ಒಳವಿಭಾಗಗಳನ್ನು ಹಿಂಜಿದ್ದಾನೆ. ಅಲ್ಲದೆ ಅನುಪ್ರಾಸದ ಆಧಾರದ ಮೇಲೆಯೇ ವೃತ್ತಿಗಳ ವಿಭಾಗಕರಣವೂ ಭೋಜನ ಅಲಂಕಾರ ಗ್ರಂಥದಲ್ಲಿ ನಡೆದಿದೆ.. ಉದಾಹರಣೆಗೆ ಕರ್ಣಾಟೀ, ಕೌಂತಲೀ, ಕೌಂಕೀ, ಔಂಡ್ರೀ, ಪೌಂಡ್ರೀ, ಕೌಂಕಣೀ ಮೊದಲಾದವು ಈ ತೆರನಾದವು. ಇವು ಕ್ರಮವಾಗಿ ಕಂಠ್ಯ, ತಾಲವ್ಯ, ಮೂರ್ಧನ್ಯ, ಸಜಾತೀಯ ದ್ವಿತ್ವ, ವಿಜಾತೀಯ ದ್ವಿತ್ವ, ದಂತ್ಯ ಮೊದಲಾದ ಅಕ್ಷರಗಳ ಅನುಪ್ರಾಸವನ್ನು ಸೂಚಿಸುವ ವೃತ್ತಿಗಳು. ಪದಗಳ ಅನುಪ್ರಾಸ, ಯಮಕದಂತೆ ತೋರುವಂತಹವು, ಸಮಸ್ತ ಹಾಗೂ ಅಸಮಸ್ತ ಪದಗಳ, ಅವ್ಯಪೇತ ಹಾಗೂ ವ್ಯಪೇತ ಪದಗಳ ಸಮ್ಮಿಶ್ರರೀತಿ ಕಾರಣವಾಗಿ ವಿಭಿನ್ನ ಉಪವಿಭಾಗಗಳಾಗಿ ಏರ್ಪಡಬಹುದು. ಭೋಜನ ಅನುಪ್ರಾಸ ವಿಚಾರಗಳನ್ನು ವಿಮರ್ಶಿಸಿದರೆ, ಮಾನವೀಯ ಭಾವನೆಗಳಾದ ವಿಸ್ಮಯ, ಆಶ್ಚರ್ಯ, ಆವೇಶಗಳ ಫಲವಾಗಿ ಏರ್ಪಡುವ ಒಂದು ವಿಧ್ಯಮಾನವೆಂದು ಅನುಪ್ರಾಸವನ್ನು ಗುರುತಿಸುವುದು ಸಾಧ್ಯವಿದೆ. ಆದರೆ ಕಾವ್ಯದಲ್ಲಿ ಬೇಸರವುಂಟಾಗದ ಹಾಗೆ ಅಕ್ಷರಗಳ ಪುನರುಕ್ತಿಯಿದ್ದರೆ ಮಾತ್ರ ಅದು ರಸಪೋಷಣೆಗೆ ಸಹಕರಿಸಬಲ್ಲುದು. ಲೋಚನಕಾರನು ಹೇಳುವಂತೆ ''ಒಂದೇ ರೂಪದ ವರ್ಣಾನುವೃತ್ತಿಯನ್ನು ಬಿಟ್ಟು ವೈವಿಧ್ಯದ ಸೊಗಸುಳ್ಳ ಅನುಪ್ರಾಸವನ್ನು ತಂದರೆ ದೋಷವಾಗುವುದಿಲ್ಲ'' (ಪು. ೮೫). ''ಕಟಕ ಮಕುಟಾದಿ ಭೂಷಣಂಗಳಂತೊಂದೊಂದವಯವದೊಳಿರ್ದೊಳ್ಪುವಡಿಸುಗುಂ'' ಎಂಬುದಾಗಿ ತಿರುಮಲಾರ್ಯನು ಸಂಸ್ಕೃತ ಲಾಕ್ಷಣಿಕರನ್ನು ಅನುಸರಿಸಿ ಹೇಳಿರುವುದನ್ನಿಲ್ಲಿ ನೆನೆಯಬಹುದು.

ಕುಂತಕನು ಅಕ್ಷರ ಸಂಯೋಜನೆಯಲ್ಲಿ ಲಂಬಿಸುವುದು ಇಲ್ಲವೆ ಸುತ್ತುಬಳಸುಮಾಡುವುದು ಎಂಬುದಾಗಿ ಹೇಳಿರುವುದಾದರೂ ಅನುಪ್ರಾಸವನ್ನೇ ಸೂಚಿಸುವುದಾಗಿದೆ. ಒಂದು, ಎರಡು ಮತ್ತು ಹಲವು ಅಕ್ಷರಗಳ ಆವೃತ್ತಿಯಿಂದಾಗಿ ಮೂರು ವಿಧಗಳನ್ನು ಅವನು ಕುರಿತಿದ್ದಾನೆ. ಆಯಾ ವರ್ಗದ ಅನುನಾಸಿಕದೊಂದಿಗೆ ಬೆರೆತು ಬರುವ ಕಂಠ್ಯ, ತಾಲವ್ಯ, ಮೂರ್ಧನ್ಯ, ದಂತ್ಯ ಮತ್ತು ಓಷ್ಠ್ಯಗಳ ಆವೃತ್ತಿ, ತ, ಲ ಮತ್ತು ನ ಎಂಬಕ್ಷರಗಳು ಸಾಮಾನ್ಯವಾಗಿ ಯುಗ್ಮಗಳಾಗಿ ಆವೃತ್ತಿ, ಉಳಿದ ವ್ಯಂಜನಗಳ ದ್ವಿತ್ವರೂಪದ ಆವೃತ್ತಿ ಎಂಬ ಬೇರೆ ಮೂರು ವಿಧಗಳ ವಿಭಜನೆಯನ್ನೂ ಆತ ಮಾಡಿದ್ದಾನೆ. ಇದು ಒಟ್ಟಿನಲ್ಲಿ ಭೋಜನ ವರ್ಗೀಕರಣದ ಹಾಗೆಯೇ.

ಅನುಪ್ರಾಸದ ವಿಚಾರವನ್ನು ವಿಸ್ತಾರವಾಗಿ ಪ್ರಸ್ತಾವಿಸುವ ಉದ್ದೇಶ ಇಲ್ಲಿಗೆ ಹೊರತಾದುದು. ಯಮಕ ವಿಚಾರಕ್ಕೆ ಸಹಾಯಕವಾಗಿ ಮಾತ್ರ ಅದನ್ನು ಇಲ್ಲಿ ಕುರಿತಿದೆ. ಸಂಸ್ಕೃತ ಆಲಂಕಾರಿಕರಲ್ಲಿ ವಾಮನ, ರುದ್ರಟ, ಉದ್ಭಟ, ಮಮ್ಮಟ ಈ ಕೆಲವರು ರೀತಿ ಮತ್ತು ವೃತ್ತಿಗಳ ಹಿನ್ನೆಲೆಯಲ್ಲಿ ಅನುಪ್ರಾಸವನ್ನು ಕುರಿತಿರುವುದರಿಂದ, ಅದರ ವಿಚಾರ ತುಂಬ ಅನಿವಾರ್ಯವೆಂದೂ ಈ ಸಂದರ್ಭದಲ್ಲಿ ಹೇಳುವಂತಿಲ್ಲ. ಪರಿಭಾಷೆಯಲ್ಲಿ ಸ್ವಲ್ಪಮಟ್ಟಿಗೆ ಯಾದೃಚ್ಛಿಕತೆಯೂ ಗೊಂದಲವೂ ಇರುವಂತಿದೆ. ವಾಮನ ವರ್ಣಾನುಪ್ರಾಸವೆಂದಿರುವುದನ್ನು ವಾಗ್ಭಟ ಹೇಮಚಂದ್ರಾದ್ಯರು ಛೇಕಾನುಪ್ರಾಸವೆಂದೂ, ಪದಾನುಪ್ರಾಸವೆಂದಿರುವುದನ್ನು ಲಾಟಾನುಪ್ರಾಸವೆಂದೂ ಕರೆದಿರುವುದು ಕಾಣುತ್ತದೆ. ವರ್ಣಾನುಪ್ರಾಸ ಬಿಡಿಯಕ್ಷರಕ್ಕೆ ಸಂಬಂಧಿಸಿದ್ದು, ಅದು ಮಿತವಾಗಿದ್ದಷ್ಟೂ ಒಳ್ಳೆಯದು ಎಂಬುದಾಗಿ ವಾಮನ (೪-೯) ತಿಳಿಸಿದ್ದಾನೆ. ಪಾದಾನುಪ್ರಾಸ ಪಾದಯಮಕದ ಹಾಗೆ ಎಂದು ತಿಳಿಸಿರುವುದರಿಂದ, ಸ್ಥಾನನಿಯಮದಲ್ಲಿ ಅದು ಯಮಕವೈಚಿತ್ರ್ಯದ ಹಾಗೆ ಎಂಬುದೇನೋ ನಿಜ. ಆದರೆ ಸ್ವರಯುಕ್ತ ವ್ಯಂಜನಗಳ ನಡುವೆ ಸಂಪೂರ್ಣಸಾದೃಶ್ಯ ಹಾಗೂ ಭಿನ್ನಾರ್ಥಕತ್ವ ಇವು ಯಮಕದ ವಿಶೇಷಗಳು ಎನ್ನುವುದರಿಂದ ಭೇದ ಸ್ಪಷ್ಟವಾಗುತ್ತದೆ.

ಶಬ್ದಚಿತ್ರದ ಒಂದು ಬಗೆ ಅನುಪ್ರಾಸ. ಇದರಲ್ಲಿ ಹೆಚ್ಚು ಪ್ರಸ್ತುತವಾದವು ಎಂದರೆ ವೃತ್ತಿ, ಛೇಕ ಮತ್ತು ಲಾಟ ಎಂಬವು. ಬಿಡಿ ವ್ಯಂಜನ ಹಲವು ಸಲ ಆವೃತ್ತಿಗೊಳ್ಳುವುದು 'ವೃತ್ತಿ'. ಎರಡು (ಅಥವಾ ಎರಡಕ್ಕಿಂತ ಹೆಚ್ಚಾದ) ವ್ಯಂಜನಗಳು ಅವ್ಯಪೇತವಾಗಿ (ವ್ಯಪೇತವಾಗಿ ಸಹ) ೨ ಸಲ ಸಂಯೋಜನೆಗೊಳ್ಳುವುದು 'ಛೇಕ'. ಅನ್ವಯ ಬೇರೆಯಾಗಿದ್ದರೂ ಪದ ಇಲ್ಲವೆ ಪದಾಂಶಗಳಲ್ಲಿ ಸಮಾನಾರ್ಥವೇ ಹೊರಡುವಂತೆ ಆವೃತ್ತಿಯಿದ್ದರೆ ಅದು 'ಲಾಟ'. ಶಬ್ದಗತಸಾಮ್ಯ ತೋರುವ ಈ ಬಗೆಯಲ್ಲಿ ಅನೇಕ ಹಾಗೂ ಏಕಪದಗಳ ಆವೃತ್ತಿ, ಏಕಸಮಾಸಗತ, ಭಿನ್ನಸಮಾಸಗತ, ಸಮಾಸಗತ-ಅಸಮಾಸಗತ ಪದಗಳ ಆವೃತ್ತಿ ಎಂಬುದಾಗಿ ೫ ಬಗೆಗಳುಂಟು (ಕೆಲಮಟ್ಟಿಗೆ ಈ ಲಾಟಾನುಪ್ರಾಸ, ವಾಮನ ಹೇಳುವ ಪಾದಾನುಪ್ರಾಸ ಒಂದೇ; ಉದ್ಭಟನು ಹೇಳುವ ಪದಾನುಪ್ರಾಸವೂ ಲಾಟಾನುಪ್ರಾಸವೂ ಒಂದೇ). ಏಕಸ್ಥಾನೀಯಗಳಾದ ವರ್ಣಗಳು ಒಂದಕ್ಕಿಂತ ಹೆಚ್ಚು ಸಲ ಆವೃತ್ತಿಗೊಳ್ಳುವುದು ಶ್ರುತ್ಯನುಪ್ರಾಸವೆನಿಸುವುದು. ಆದರೆ ಇದು ವೃತ್ತಿ ಅಥವಾ ಛೇಕ ಪ್ರಭೇದಗಳಲ್ಲಿಯೇ ಅಂತರ್ಗತವಾಗಬಹುದು.

ಅನುಪ್ರಾಸದ ಸಾಮಾನ್ಯ ಲಕ್ಷಣಗಳು : (i) ವ್ಯಂಜನ ಅಥವಾ ವ್ಯಂಜನಗಳು ಆವೃತ್ತಿಗೊಳ್ಳುತ್ತವೆ; ಸೇರುವ ಸ್ವರ ಯಾವುದೇ ಇರಬಹುದು. (ii) ವ್ಯಂಜನ ಒಂದೇ ಬಗೆಯದಿರಬಹುದು, ಹಲವು ಬಗೆಯದಿರಬಹುದು. (iii) ಬಿಡಿಯಕ್ಷರಗಳ ಇಲ್ಲವೆ ಯುಗ್ಮಗಳ ರೂಪವಾಗಿರಬಹುದು; ಪದ ಇಲ್ಲವೆ ಪದಾಂಶಗಳಾಗಿರಬಹುದು. (iv) ಪದ ಇಲ್ಲವೆ ಪದಾಂಶಗಳು ಸ್ಥಾನನಿಯಮ ಅನುಸರಿಸಿರಬಹುದು, ಅನುಸರಿಸದೆಯೂ ಇರಬಹುದು. (v) ಶಬ್ದರೂಪದಿಂದ ಹೊರಡುವ ಅರ್ಥಗಳಲ್ಲಿ ಅರ್ಥಾಂತರವಾಗಕೂಡದು. (vi) ಅಕ್ಷರ ಸಂಯೋಜನೆಯಲ್ಲಿ ಮಾಧುರ್ಯ ಅಪೇಕ್ಷಣೀಯ, ಕಠೋರತೆ ತ್ಯಾಜ್ಯ.

ಕನ್ನಡ ಅಲಂಕಾರ ಗ್ರಂಥಗಳಲ್ಲಿ 'ಕವಿರಾಜಮಾರ್ಗ'ದಲ್ಲಿ ''ಸಂಧಿಸಿದೆಣೆಯಕ್ಕರಮೊಂದೊಂದಱಿೊಳಗ ನಡಿಸಿ ಬಂದೊಡನುಗತಮಕ್ಕುಂ'' ಎಂಬುದಾಗಿ ತಿಳಿಸಿ, ಅಂತಹ ಪ್ರಾಶಸ್ತ್ಯವೇನನ್ನೂ ಕೊಡದೆ ಪ್ರಾಸಭೇದಗಳ ಜೊತೆಗೆ ಲಕ್ಷಣಿಸಿದೆ. ಛೇಕಾನುಪ್ರಾಸ ಇಲ್ಲಿ ವಿವಕ್ಷಿತ. ''ಸದೃಶಾಕ್ಷರವಿನ್ಯಾಸಂ। ಪದದೊಳ್ ಪಾದಂಗಳೊಳ್ ಪೊದಳ್ದೆ ಸೆದಿರೆ ಪೇ।ೞ್ವುದನುಪ್ರಾಸಂ'' ಎಂಬುದಾಗಿ ನಾಗವರ್ಮನು ಹೇಳಿರುವುದು ಸಹಜವಾಗಿಯೇ ಭಾಮಹನ ''ಸರೂಪವರ್ಣವಿನ್ಯಾಸ। ಮನುಪ್ರಾಸಂ ಪ್ರಚಕ್ಷತೇ'' ಎಂಬ (ಕಾವ್ಯಾಲಂ. ೨-೫) ಹಾಗೂ ದಂಡಿಯ ''ವರ್ಣಾವೃತ್ತಿರನುಪ್ರಾಸಃ। ಪಾದೇಷು ಚ ಪದೇಷು ಚ'' ಎಂಬ (ಕಾವ್ಯಾದ. ೧-೫೫) ಲಕ್ಷಣಭಾಗಗಳ ಅನುಸರಣೆಯೇ ಆಗಿದೆ. ಅಲ್ಲದೆ ಈತನು ಉದ್ಭಟನನ್ನು ಅನುಸರಿಸಿ, ವೃತ್ತಿಗಳ ಹಿನ್ನೆಲೆಯಲ್ಲಿ ಅನುಪ್ರಾಸ ವೈಚಿತ್ರ್ಯಗಳನ್ನು ಪರುಷಾ, ಮಧುರಾ (ಉಪನಾಗರಿಕೆ) ಮತ್ತು ಲಲಿತಾ ಎಂಬುದಾಗಿ ವಿಂಗಡಿಸಿರುವುದೂ ಕಾಣುತ್ತದೆ. ತಿರುಮಲಾರ್ಯನು ಹೀಗೆ ಮಾಡದೆ, ವ್ಯಕ್ತವಾಗಿ ಛೇಕಾನುಪ್ರಾಸ ಮತ್ತು ವೃತ್ತ್ಯನುಪ್ರಾಸಗಳೆಂಬುದಾಗಿ ಪ್ರಭೇದಗಳನ್ನು

ಲಕ್ಷಣ–ಲಕ್ಷ್ಯ ಸಹಿತವಾಗಿ ಮೊದಲ ಸಲ ಕುರಿತಿದ್ದಾನೆ. ಇದೇ ದಾರಿಯಲ್ಲಿ 'ನರಪತಿಚರಿತೆ'ದ ಕರ್ತೃ ಸಾಗಿದ್ದರೂ, ಲಾಟಾನುಪ್ರಾಸವನ್ನು ಇವನು ಹೆಚ್ಚಿಗೆ ಕುರಿತಿದ್ದಾನೆ. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿಯ ಪ್ರತಿಯೊಬ್ಬ ಕವಿಗೂ ಒಂದಲ್ಲ ಒಂದು ಪ್ರಮಾಣದಲ್ಲಿ ಅನುಪ್ರಾಸದ ಮೋಹವುಂಟು. ಆದರೆ ಇದು ಮಧ್ಯಕಾಲೀನ ಕವಿಗಳ ಷಟ್ಪದೀ ಕೃತಿಗಳಲ್ಲಿ, ಉದಾಹರಣೆಗೆ, ಹರಿಹರ ರಾಘವಾಂಕರು, ಲಕ್ಷ್ಮೀಶ, ಪೆಮ್ಮಿಸೆಟ್ಟಿ, ಎಳಂದೂರು ಹರೀಶ್ವರ, ಚೇರಮಾಂಕ, ಬಸವಾಂಕ, ಮುಖಬೋಳು ಸಿದ್ಧರಾಮ, ಶಾಂತೇಶ, ಷಡಕ್ಷರಿ ಮುಂತಾದವರ ರಚನೆಗಳಲ್ಲಿ, ಹಿತಮಿತ ವಾಗಿ ಮಾತ್ರವಲ್ಲದೆ, ಅತಿಯೆನ್ನುವ ಘಟ್ಟಕ್ಕೆ ಹೋಗಿರುವುದೂ ಉಂಟು.

'ಕವಿರಾಜಮಾರ್ಗ'ದಲ್ಲಿ :

ಜನವಿನುತನನಘನನುಪಮ । ನನುನಯಪರನರಸನಿನಿಸು ನೆನೆನೆನೆದು ಮನೋ ।
ಜನಿತಮುದನನಿಲತನಯನ । ನನನೃತವಚನಪ್ರಪಂಚನಿಂತಿರೆ ನುಡಿದಂ ॥ (೨–೫೨)

೯ ಎಣೆಯಕ್ಷರಗಳು ಇಲ್ಲಿ ಬಂದಿರುವುದರ ಜೊತೆಗೆ, ಬಿಡಿಯಾಗಿಯೂ ನಕಾರದ ಆವೃತ್ತಿಯನ್ನಿಲ್ಲಿ ಗಮನಿಸ ಬಹುದು. ಈ ಲಕ್ಷ್ಯವನ್ನು ಮಮ್ಮಟನ 'ಕಾವ್ಯಪ್ರಕಾಶ'ದ

ತತೋಽರುಣಪರಿಸ್ಪಂದಮಂದೀಕೃತವಪುಃ ಶಶೀ
ದಧ್ರೇ ಕಾಮಪರಿಕ್ಷಾಮಕಾಮಿನೀಗಂಡಪಾಂಡುತಾಂ ॥

ಎಂಬ ಲಕ್ಷ್ಯದೊಂದಿಗೆ ಹೋಲಿಸಬಹುದು. ಇದು ಛೇಕಾನುಪ್ರಾಸವಾಗಿ ಉದ್ದೇಶಿತವಾದ್ದು.

'ಕಾವ್ಯಾವಲೋಕನ'ದಲ್ಲಿ ಹೀಗೆ ಎಣೆಯಕ್ಕರದ ಪ್ರಸ್ತಾವವಿಲ್ಲ; ಲಕ್ಷಣ ಮತ್ತು ಲಕ್ಷ್ಯಗಳು ಬಿಡಿ ಯಕ್ಷರಗಳ ಆವೃತ್ತಿಯನ್ನೇ ಕುರಿತಿರುವುದು ಕಾಣುತ್ತದೆ. ಪರುಷಾದಿ ವೃತ್ತಿಗಳ ಲಕ್ಷಣ ಲಕ್ಷ್ಯಗಳಲ್ಲಿಯೂ ಇದೇ ಸಾಮಾನ್ಯಲಕ್ಷಣವಾಗಿದೆ. ಎರಡು ಉದಾ.

(i) ಚರ್ಚಲ್ ಶಶಿಶಿಶುವಂ ಕಱೆ । ಗರ್ಚಲ್ ಘನಘಟೆಯನುರ್ಚಲಮರದ್ರುಮಮಂ ।
ಸಾರ್ಚಲಿನನೆಂಬ ಸೊಡರನೊ । ಡರ್ಚಿದುವೆನೆ ನೀಳ್ದುವಿದಱ ಶಿಖರಕರಂಗಳ್ ॥

ಇಲ್ಲಿ 'ರ್ಚ' ಆವೃತ್ತಿಯ ಅಕ್ಷರ. ಆದ್ದರಿಂದ ಇದು ವರ್ಣಾನುಪ್ರಾಸದ ಲಕ್ಷ್ಯ. (ಶಶಿ–ಶಿಶು ಎಂಬಲ್ಲಿ ಛೇಕಾನು ಪ್ರಾಸದ ಲಕ್ಷಣವೂ ಉಂಟು).

(ii) ಖಗತತಿ ಸಾರೆ ಶಾಕಿನಿಯರಾರೆ ನಿಶಾಚರಕೋಟಿ ಪಾರೆ ಬ
ಳ್ಪುಗಳೆಡೆಯಾಡೆ ಭೂತಗಣಮಾಡೆ ಮರುಳ್ಪಡೆ ಪಾಡೆ ಸಾಹಸಂ
ನೆಗಟ್ದು ಮುಕುಂದನಸ್ತ್ರರಿಪುವೃಂದನಗುರ್ವಿಸೆ ಕೊಂದನಾಜಿಗ
ಟ್ಟಿ ಗನೆನೆ ಚಕ್ರವರ್ತಿಯನನಿಂದಿತ ಕೀರ್ತಿಯನಿಂದ್ರಮೂರ್ತಿಯಂ ॥

ಇಲ್ಲಿ ರಕಾರ, ಡಕಾರ ಹಾಗೂ ನ್ದಕಾರಗಳೆಂಬ ಭಿನ್ನವ್ಯಂಜನಗಳ ಆವೃತ್ತಿಯನ್ನು ಕಾಣಬಹುದಾಗಿದೆ. ಆದರೆ ಇಲ್ಲಿ ವೃತ್ತ್ಯನುಪ್ರಾಸದ ಹಾಗೂ ಛೇಕಾನುಪ್ರಾಸದ ಲಕ್ಷಣ ಬೆರೆತಿದೆ.

'ಅಪ್ರತಿಮವೀರಚರಿತ'ದಲ್ಲಿ ಛೇಕಾನುಪ್ರಾಸ ಮತ್ತು ವೃತ್ತ್ಯನುಪ್ರಾಸಗಳೆಂಬ ವೈವಿಧ್ಯಗಳಿದ್ದು ಇಲ್ಲಿ ''ಒಂದು ಪದ್ಯದೊಳೆರಡೆರಡುಮಕ್ಕರಂ ಜತೆಜತೆಯಾಗಿ ಪಲವುಂ ಬೞಿಯೊಳ್'' ಬರುವ ಛೇಕಾನುಪ್ರಾಸದ ಹಾಗೂ ''ಸ್ವರಂಗಳ್ ಬೇಱಿವೇಱಿಯಾಗಿರ್ದ'' ಛೇಕಾನುಪ್ರಾಸದ ೨ ಲಕ್ಷ್ಯಗಳು ಹೀಗಿವೆ :

(i) ಕಂದಂ ಕವಿಕೋಕಿಲ ಮಾ । ಕಂದಂ ಕೋಮಲನಿಕಾಸಿ ಕೃತಿಕಲ್ಪಲತಾ ।
ಕಂದಂ ವಿಸ್ಮಯರ ರಸದು । ಕ್ಕಂದಂ ಚಿಕದೇವರಾಯ ಚಂದನಚಂದಂ ॥ (೨–೧೫)

ಇಲ್ಲಿ 'ಕಂದಂ' ಎಂಬ ಎರಡಕ್ಷರಗಳು ಸ್ವರಮೈತ್ರಿಸಹವಾಗಿ ನಾಲ್ಕೂಪಾದಗಳ ಆದಿಯಲ್ಲಿ ಆವೃತ್ತಿಗೊಂಡಿದೆ. ಇದು ನಾಗವರ್ಮನು ತಿಳಿಸುವ ಮಧುರಾ ಅಥವಾ ಉಪನಾಗರಿಕೆ ಎಂಬ ಅನುಪ್ರಾಸವೇ. (''ತಂತಮ್ಮ ವರ್ಗದಂತ್ಯ ದೊಳಂತಾ ವರ್ಗಂಗಳಮಳ್ಗಳಾಗಿರೆ....ಮಧುರೆಯೆಂಬುದದಕ್ಕುಂ'').

(ii) ಕೃತಿಪತಿ ಚಿಕದೇವೇಂದ್ರಂ। ಕೃತಿ ಚಿಕದೇವೇಂದ್ರವಿಜಯಮೀ ಕೃತಿವೇಟ್ಟಂ।
ಕೃತಮತಿಯವನೊಲ್ಮೆ ಪುಮಾ! ಕೃತಿವೆತ್ತವೊಲೆಸೆವ ಸುಕೃತಿ ತಿರುಮಲೆಯಾರ್ಯಂ॥ (೨–೧೬)

ಇಲ್ಲಿ ಕೃತಿ–ಕೃತ ಎಂಬಲ್ಲಿ ಇಕಾರ ಅಕಾರಗಳು ಭಿನ್ನವಾಗಿದ್ದೂ ಅನುಪ್ರಾಸವುಂಟು. ಛೇಕಾನುಪ್ರಾಸದ ಸಾಮಾನ್ಯಲಕ್ಷಣ ಈ ಎರಡೂ ಲಕ್ಷ್ಯಗಳಲ್ಲಿ ಕಾಣಿಸುವುದಿಲ್ಲ. ಇದಕ್ಕೆ ಹೇಗೆ ಸಮಾಧಾನ ಕಂಡುಕೊಳ್ಳುವುದೋ ತಿಳಿಯದು. ಸ್ವರೂಪತಃ ಇವನ್ನು ಲಾಟಾನುಪ್ರಾಸಗಳೆಂದೇ ಕರೆಯಬೇಕಾಗುವುದು.

'ಅಪ್ರತಿಮವೀರಚರಿತ'ದಲ್ಲಿಯೇ ಅಕ್ಷರಗಳು ಹೀಗೆ ಜತೆಜತೆಯಾಗಿ ಬಾರದೆ, ''ಒಂದಕ್ಕರಮಾದೊಡ ಮೆರಡಕ್ಕರಮಾದೊಡಂ ಪಲವುಂ ವೇಳೆಯೊಳ್ ಬಳಸಿ'' ಬರುವುದು ವೃತ್ತ್ಯನುಪ್ರಾಸವೆನಿಸುವುದು. ಈ ಮುಂದಿನ ಪದ್ಯಗಳು ಕ್ರಮವಾಗಿ ಒಂದಕ್ಷರ ಹಾಗೂ ಎರಡಕ್ಷರಗಳ ಲಕ್ಷ್ಯಗಳು :

(i) ಅಕ್ಕರವೋದುವಂದೆ ಕುಱುಪಾದುದು ರೂಢಿಯು ಸತ್ಯವಾಕ್ಯಮೂ
ರ್ವಕ್ಕಳೊಳಾಡುವಂದೆ ಕುಱುಪಾದುದು ಸಂದ ಪರಾಕ್ರಮಂ ಕರಂ
ತಕ್ಕುದು ಚಿಕ್ಕದೇವವಿಭುಗಗ್ಗದ ಸತ್ಯಪರಾಕ್ರಮಾಂಕಮೇ
ನಕ್ಕುಮೆ ಮಿಕ್ಕ ಸೊಕ್ಕಿನರಮಕ್ಕಳ ನೊಕ್ಕಳಕಿಂತು ಪೆರ್ಚಳಂ॥ (೨–೧೭)

(ii) ಶರಣಂ ಶ್ರೀ ಚಿಕದೇವ ನಿನ್ನ ಚರಣಂ ಭೀತರ್ಗೆ ಮತ್ತಂ ಭಯೋ
ತ್ತರಣಂ ನಿನ್ನ ಪದಾಬ್ಜರೇಣುಭರಣಂ ತಾನೇ ಮಗುಳ್ದಾಪುದು
ತ್ತರಣಂ ತಾವಕದಿವ್ಯನಾಮಕರಣಂ ಮತ್ತಂ ಮಗುಳ್ದಿಂ ಕುಲೋ
ದ್ಧರಣಂ ನಿನ್ನನಘಾಂಘ್ರಿದಾಸ್ಯವರಣಂ ಬೇಱಿಲ್ಲ ಬೇಱಿಲ್ಲ ಕೇಳ್॥ (೨–೧೮)

'ನರಪತಿಚರಿತ'ದಲ್ಲಿ ''ವ್ಯಂಜನಯುಗ್ಮದ್ವಯ''ದಿಂದ ಛೇಕಾನುಪ್ರಾಸವೆಂದು ತಿಳಿಸಿ, ಕರ್ತೃ ಹೀಗೆ ಉದಾಹರಿಸಿದ್ದಾನೆ :

ಸೌಜನ್ಯಜನ್ಯಕೀರ್ತಿಯೆ। ಮಾಜವೆ ಕೇಳೊಲಿದು ಮಾರಮಾರ ಬಗೆಯಂ।
ರಾಜೀವ ಜೀವನೌಷಧ। ತೇಜನೆ ಖತಿ ಸಾಕು ಸಾಕು ಪಂಕಜಮುಖಿಯಂ॥ (೨–೨)

ಅಲ್ಲಿಯೇ ''ಒಂದೆರಳ್ಮೊರಕ್ಕರಕೆ ಪೊಂದದೆ ಸಂಖ್ಯಾವ್ಯವಸ್ಥೆ'' ಆವೃತ್ತಿಗೊಳ್ಳುವ ವೃತ್ತ್ಯನುಪ್ರಾಸದ ಉದಾಹರಣೆ :

ವರ ಕಂಠಸಕ್ತ ಮುಕ್ತಾ। ಸರವಿಸರ ಚಿರತ್ನರತ್ನಕರ್ಬುರಕಾಯಂ।
ಚರಣಾನತ ಶರಣಾಗತ। ಭರಣಂ ಕೃಷ್ಣಕ್ಷಮಾರಮಣನೆಸೆದಿರ್ಪಂ॥ (೨–೪)

ಅಲ್ಲಿಯೇ ಲಾಟಾನುಪ್ರಾಸದ ಲಕ್ಷ್ಯಣವನ್ನು ''ಶಬ್ದಾರ್ಥಯುಗಳಕಾವರ್ತಿ'' ಎಂದರೆ, ಅನ್ವಯದ ಭಿನ್ನಾರ್ಥಕತೆಯಿದ್ದೂ ಪದಪದಾಂಶಗಳ ಸರೂಪತೆಯೆಂದು ತಿಳಿಸಿ, ಹೀಗೆ ಲಕ್ಷ್ಯವನ್ನು ಕೊಟ್ಟಿದೆ :

ಕರುಣಾರಸವರುಣಾಲಯ। ತರುಣಾಂಬುಜನೇತ್ರ ಕೃಷ್ಣ ಪೃಥ್ವೀಪತಿಯಾ।
ನಿರತಂ ಪ್ರಣಯಕೆ ಗುರಿಯಾ। ಗಿರುವಾ ಸತಿ ಸತಿಯುದಾರೆ ಕೆಳದಿಯೆ ಕೇಳೌ॥ (೨–೬)

ಛೇಕಾನುಪ್ರಾಸ (ಪಾದಾನುಪ್ರಾಸ)ದ ಕೆಲವು ಲಕ್ಷ್ಯಗಳು :

ಅಭಿನವಮದಲೇಖಾಲಾಲಿತಂ ವಿಭ್ರಮಭ್ರೂ
ರಭಸಗತಿವಿಳಾಸಂ ದೀಪ್ತ ಕಂದರ್ಪ ದರ್ಪ
ಕ್ಷುಭಿತಗಳನಿನಾದಂ ಪ್ರಸ್ಫುರದ್ಘರ್ಮವಾರಿ
ಪ್ರಭವಮೆಸೆದುದಂತಾ ಕಾಂತೆಗಾ ಕಾಂತಸಂಗಂ॥
('ಪಂಪಭಾರತ' ೫–೨೮)

ಮನೆಯು ದೆಸೆಯು ನಾನಾ ವಸ್ತು ವಿಸ್ತಾರದಿಂದಿಂ
ಬಿನೊಳೆ ಸಮಚಿಱ ತಾನುಂ ರಾಗದಿಂದಾದಲಂಪಿಂ
ದನತಿಶಯ ವಿಭೂಷಾವೇಶದೊಳ್ ಕೂಡೆ ಕೆಯ್ಗೆ
ಯ್ದಿನಿಯನ ಬರವಾರ್ದಂತಿರ್ದವಳ್ ಕಣ್ಗೆವಂದಳ್ ॥
(ನಾಗವರ್ಮ, 'ವರ್ಧಮಾನ ಪುರಾಣ', ೮-೮೭)

ಇಷುಪ್ರಾಯಂ ಗೇಯಂ ಮುಷಿತ[ಕ]ರಣಂ ಶೀತಕಿರಣಂ
ವಿಷಾಹಾರಂ ಹಾರಂ ಹೃದಯದಹನಂ ಗಂಧವಹನಂ
ದ್ವಿಷಜ್ಜಾತಂ ಚೂತಂ ಪಿತೃವನಮದಾಯ್ತಂಬುಜವನಂ
ವಿಷಾದಾಯಂ ಕಾಯಂ ವನಿತೆಗವನಿಂ ಗಂಧವಹನಿಂ
('ಲೀಲಾವತಿ', ೭-೫೩)

ಸಾಲ ಸಾಲಂಗಳಿಂ ಬಕುಳ ಕುಳದಿಂದೆ ಹಿಂ
ತಾಲ ತಾಲಂಗಳಿಂ ಮಾಧವದಲಗ್ಗಳಿಂ ತ
ಮಾಲ ಮಾಲತಿಗಳಿಂ ಸಂರಂಭ ರಂಭದಿಂ ಮಂದ ಮಂದಾರದಿಂದೆ
ಜಾಲ ಜಾಲಂಗಳಿಂ ಸುರಹೊನ್ನೆ ಹೊನ್ನೆ ಬಗೆ
ಪಾಲ ಪಾಲಾಶತರು ತರುಣಾಮ್ರಚಯ ಕಿಂಕಿ
ಲಾಲಿ ಲಾಲಿತ ನವಾಶೋಕದಿಂದುದ್ಯದುದ್ಯಾನಮೇಂ ಚೆಲ್ವೆನಿಪುದೋ ॥
('ಜೈಮಿನಿ ಭಾರತ', ೩-೩೪)

ಲಾಟಾನುಪ್ರಾಸದ ಕೆಲವು ಲಕ್ಷ್ಯಗಳು :

(i) ಧವಳ ಗಜೇಂದ್ರಮುಂ ಧವಳ ಚಾಮರಮುಂ ಧವಳಾತಪತ್ರಮುಂ
ಧವಳವಿಲೋಚನೋತ್ಪಲವಧೂಜನಮುಂ ಬೆರಸಷ್ಟದಿಕ್ತಟಂ
ಧವಳಿಸೆ ಕೀರ್ತಿಯಿಂ ಧವಳಮಂಗಳಗೇಯದಿನೊಪ್ಪಿ ಬರ್ಪ ಕೌ
ರವಧವಳಂಗೆ ದೇಸಿಗನೆ ಬರ್ಪವೊಲೊರ್ವನೆ ಬರ್ಪುದಾದುದೇ ॥
('ಗದಾಯುದ್ಧ', ೫-೪೧)

(ii) ಮನೋವಚನಕಾಯವೃತ್ತಿ ಶುಭಮಲ್ತೆ ಪುಣ್ಯಾಸ್ರವಂ
ಮನೋವಚನಕಾಯವೃತ್ತ್ಯಶುಭಮಲ್ತೆ ಪಾಪಾಸ್ರವಂ
ಜಿನಾಗಮದೊಳಿಂ ಕಷಾಯಸಹಿತಂ ತಲೋದೀತ್ತಮು
ತ್ತನಂತಸುಖ ಹೃತ್ಕಷಾಯಸಹಿತಂ ಭವಾರಣ್ಯಜಂ ॥
('ಶಾಂತಿಪುರಾಣ' ೧೨-೫)

(iii) ತ್ರಿಜಗದಭಿಷ್ಟುತಂ ತ್ರಿಜಗದಾಶ್ರಯಣಂ ತ್ರಿಜಗಜ್ಜನಸ್ತುತಂ
ತ್ರಿಜಗದಾಶ್ರಯಣಂ ತ್ರಿಜಗದುಲ್ಲಸಿತಂ ತ್ರಿಜಗನ್ಮನೋಹರಂ
ತ್ರಿಜಗದಲಂಕೃತಂ ತ್ರಿಜಗದೇಕನುತಂ ತ್ರಿಜಗತ್ಸುಖಾಸ್ಪದಂ
ತ್ರಿಜಗದಘಚ್ಛಿದಂ ತ್ರಿಜಗದೀಶನುತಂ ಕಥೆ ಶಾಂತಿನಾಥನಾ ॥
('ಶಾಂತಿಪುರಾಣ', ೧೨-೫೫)

(vi) ತನಗಂ ಯೋಗಂಧರಂಗಂ ಪತಿಹಿತಕೃತಿಯೊಳ್ ಮಚ್ಚರಂ ಮನ್ಮಥಂಗಂ
ತನಗಂ ಸತ್ಕಾಮಿನೀಮೋಹನಘನಗುಣದೊಳ್ ಮಚ್ಚರಂ ಸ್ವದ್ರ್ರುಮಕ್ಕಂ
ತನಗಂ ವಂದಿವ್ರಜಪ್ರೀಣನವಿತರಣದೊಳ್ ಮಚ್ಚರಂ ಶೂದ್ರಕಂಗಂ
ತನಗಂ ಶೌರ್ಯೋಕ್ತಿಯೊಳ್ ಮಚ್ಚರಮೆನೆ ನೆಗಳ್ದಿರ್ದಾಚಿಯುಂ ಪೋಲ್ವನಾವಂ ॥
('ಶಾಸನಪದ್ಯಮಂಜರಿ', ಪು. ೧೫೫)

ವೃತ್ತ್ಯನುಪ್ರಾಸ (ವರ್ಣಾನುಪ್ರಾಸ)ದ ಕೆಲವು ಲಕ್ಷ್ಯಗಳು :

ರಣದೊಳರಾತಿವಾರಣಘಟಾಳಿಯನೊರ್ವನೆ ಗೆಲ್ದನೊಂದು ವಾ
ರಣದೊಳನೂನ ದಾನಗುಣದರ್ಪಿತ ಪೂರಣನಿಷ್ಟತುಷ್ಟದಾ
ರಣನವದಾತಕೀರ್ತಿಗೃಹತೋರಣನನ್ಯನರೇಂದ್ರಗಂಧವಾ
ರಣಮದವಾರಣಂ ವಿಜಯಕಾರಣನಮ್ಮನ ಗಂಧವಾರಣಂ ॥

('ಗದಾಯುದ್ಧ', ೧-೭)

ಇಲ್ಲಿ 'ಣ'ಕಾರದ ಪ್ರಚುರತೆ ರಚನೆಗೆ ಹಿತವಾಗಿ ಹೊಂದಿಬಂದಿದೆ.

ಬಳಸಿ ಸುಟಿದಾಡಿ ಕಾಲ್ವಿಡಿ। ದೆಳಸಿ ಕಲಾಲಾಪಮೊದವೆ ಜನನಿಯ ಮೊಲೆವಾ।
ಲ್ಗಳನುಂಬ ಶಿಶುಗಳಂತಿರೆ। ಕಳವೆಯ ಪಾಲ್ದೆನೆಯ ಪಾಲನುಂಡವು ಗಿಳಿಗಳ್ ॥

('ಪಂಪರಾಮಾಯಣ' ೭-೧೬೮)

ಇಲ್ಲಿ 'ಲ'ಕಾರ 'ಳ'ಕಾರಗಳು, ಹಿತಮಿತವಾಗಿ ಬೆರೆತು, ಅರ್ಥವನ್ನು ಮರಸದೆ ಬಂದಿವೆ.

ಮುಂದಲೆಯ ಹಿಡಿದೆಳೆದು ಸಭೆಯಲಿ
ತಂದು ಸೀರೆಯ ಸೆಳೆದರವದಿರ
ಮುಂದೆ ಮೌನದೊಳಿದ್ದರಲ್ಲದೆ ಪತಿಗಳುಸುರಿದರೆ
ಅಂದು ನೀ ಹಿಂದಿಕ್ಕಿಕೊಂಡುದ
ನಿಂದು ಮಱೆದ್ಯೆ ಸಂಧಿಗೋಸುಗ
ಮುಂದುವರಿವರೆ ಕೃಷ್ಣ ಎಂದಳು ದ್ರೌಪದೀದೇವಿ ॥

('ಕುಮಾರವ್ಯಾಸ ಭಾರತ', ಉದ್ಯೋಗ, ೬-೨೫)

ಇಲ್ಲಿ 'ದ'ಕಾರದ ಪ್ರಚುರತೆಯಿದ್ದರೂ ರಚನೆಯಲ್ಲಿ ಹೊಂದಿಬಂದಿದೆ.

ಅನುಪ್ರಾಸದ ಅತಿರೇಕ ದೊಡ್ಡ ಕವಿಗಳನ್ನೂ ಬಿಟ್ಟಿಲ್ಲ. ಒಂದೆರಡು ಉದಾಹರಣೆಗಳು :

ಆಳವಳಿಸಂ ಬೆಬ್ಬಳಿಸಂ। ಕಳವಳಿಸಂ ಕನಲನೊನಲನಳ್ಕಂ ಬಳ್ಕಂ।
ಚಳವಳಿಸಂ ಚಪ್ಪರಿಸಂ। ತಳವಳಿಸಂ ಬೇಸಱಿಯ್ದು ಬೆಳ್ಮೊಗದಿನಿರಂ ॥

('ಅಜಿತಪುರಾಣ', ೫-೮೮)

ಇಲ್ಲಿ 'ಳ'ಕಾರ ಸಂಘಟನೆ ಹಿತವಾದ ಒಂದು ಮಿತಿಯಲ್ಲಿದೆಯೆಂದು ಹೇಳುವುದು ಕಷ್ಟ.

ಜಡೆಯಿಡುಕುಱಿಡೆಯೆಡೆಯೊಳಡಿಯಿಡುವ ಕಡಲ ತಡಿ
ವಿಡಿದುಡುಗಡಣದೊಡೆಯನೊಡಲೊಡಕು ನಡನಡುಗಿ
ಬಡಕರಿಸಿ ಮಿಡುಮಿಡುಕಲಡಿಗಡಿಗೆ ಜಡಿಜಡಿದು ಪಡಪಡಿಪ ನಡುನಯನದ
ಮಡುವಿಡುವ ಜಲಧಿಯಂ ಕಡೆವ ಕಡೆಯೊಳ್ ಮೂಡಿ
ಘುಡುಘುಡಿಸಿ ಪಡೆಯ ಪಡಲಿಡೆ ಕೆಡಪುವುದ ತುಡುಕಿ
ಪಿಡಿದೊಡನೆ ಪೊಸೆದು ಕೊರಳೆಡೆ ತೊಡೆದ ಹಂಪೆಯ ಮೃಡಂ ಬಿಡದೆ ಸಲಹುಗೆಮ್ಮ ॥

('ಹರಿಶ್ಚಂದ್ರ ಕಾವ್ಯ', ೧-೩)

'ಡ'ಕಾರದ ಬಹುಸಂಖ್ಯೆಯ ಆವೃತ್ತಿಯನ್ನು ಇಲ್ಲಿ ನೋಡಬಹುದು. ಕವಿಯ ಕೌಶಲ ಸಾಮರ್ಥ್ಯಗಳು ಮೆಚ್ಚ ತಕ್ಕುವೇ ಆದರೂ, ರಚನೆ ಸಹಜವಾಗಿ ಮೂಡಿಬಂದುದೆಂದು ಹೇಳುವಂತಿಲ್ಲ; ಪಾಂಡಿತ್ಯಪ್ರಕಟನೆಯ ಕಾಂಕ್ಷೆ ಯಿಂದ ಮೂಡಿತೆಂದು ಹೇಳುವಂತಿದೆ. ಆದರೆ ಕಾವ್ಯದಲ್ಲಿ ಸಹಜ ರಚನೆಗಳೂ ಸಮೃದ್ಧವಾಗಿವೆ.

ಎತ್ತಿ ಬಹ ಸತ್ತಿಗೆಯ ಮೊತ್ತಂಗಳೆತ್ತಲುಂ
ಕತ್ತಲಿಸೆ ಪೊತ್ತ ಮುಸೆವೆತ್ತ ಬಲ್ಗತ್ತಿಗಳ
ಕಿತ್ತು ಭಟರೆತ್ತಿ ಜಡಿಯುತ್ತಿರಲ್ಕತ್ತ ಬೆಳಗಿತ್ತವವು ಮತ್ತೆ ಬಲಕೆ

ಸುತ್ತಲುಂ ಕೆತ್ತವೋಲ್ ಮತ್ತಗಜವೊತ್ತರಿಸಿ
ಮುತ್ತಿ ನಡೆಯುತ್ತೆಲರನೊತ್ತಿ ನಿಲಿಸುತ್ತಿರಲು
ದತ್ತ ಚಮರೋತ್ಥಿತ ಮರುತ್ತತಿಯೊಳುತ್ತಮಹಿಮೋತ್ತರಂ ಬಿತ್ತರಿಸಿತು ||
('ಜೈಮಿನಿ ಭಾರತ', ೪–೧೯)

ಇಲ್ಲಿ 'ತ್ತ' ಎಂಬ ಸಜಾತೀಯದ್ವಿತ್ವವನ್ನು ಒಂದೇ ವ್ಯಂಜನವೆಂದು ಗಣಿಸುವುದಾದರೆ, ಇದೂ ಈ ವಿಭಾಗದ ಲಕ್ಷ್ಯವೇ ಆಗಬಹುದು. ರಚನೆ ಇಲ್ಲಿಯೂ ಕೃತಕ, ಪಾಂಡಿತ್ಯ ಪ್ರಕಟನೆಯ ಕಾಂಕ್ಷೆಯ ಫಲ. ಆದರೆ ಇಲ್ಲಿಯೂ ಸಹಜ ರಚನೆಗಳು ಸಮೃದ್ಧವಾಗಿವೆ.

೨

ಯಮಕ: ಲಕ್ಷಣ, ಪ್ರಭೇದಗಳು

ಯಮಕ, ಶಬ್ದಗಳ ಸ್ಥಾನಕ್ರಮವ್ಯತ್ಯಯ ಅಥವಾ ವರ್ಣಗಳ ಇಲ್ಲವೆ ಶಬ್ದಗಳ ಪುನರಾವೃತ್ತಿಯಿಂದುಂಟಾಗುವ ಪ್ರತಿಧ್ವನನ. ಅದು ಸಮಾನಾಕ್ಷರದ ಆವೃತ್ತಿ ಇಲ್ಲವೆ ಭಿನ್ನಾರ್ಥಗಳನ್ನು ಕೊಡುವ ಸಮಾನಶಬ್ದಗಳ ಆವೃತ್ತಿಯಿಂದ ಸಿದ್ಧವಾಗುವುದು. ಅದು ಪಾದಗಳ ಆದಿ ಮಧ್ಯಾಂತಗಳಲ್ಲಿ ನಿರ್ದಿಷ್ಟ ಸ್ಥಾನಗಳಲ್ಲಿ ಕಾಣಿಸಿಕೊಳ್ಳುತ್ತದೆ; ಪಾದಗಳೇ ಆವೃತ್ತಿಗೊಳ್ಳಲೂ ಬಹುದು.

ಯಮಕದ ಬಗೆಗೆ, ಪ್ರಾಚೀನನಾದ ಭಾಮಹನು ಮೊದಲ ಆಲಂಕಾರಿಕನಾಗಿ ವಿಷಯವಿವೇಚನೆ ಮಾಡಿದ್ದಾನೆ. ''ಕಿವಿಗೆ ಒಂದೇ ಸಮವಾಗಿದ್ದರೂ ಅರ್ಥದಲ್ಲಿ ಪರಸ್ಪರ ಭೇದವಿರುವ ಅಕ್ಷರಗಳ ಪುನರುಕ್ತಿಯನ್ನು ಯಮಕವೆನ್ನುವರು. ಶಬ್ದಗಳು ಸುಲಭವಾಗಿ ಅರ್ಥವಾಗುವಂತಿರಬೇಕು; ಓಜೋಗುಣವಿದ್ದು ಪದಗಳ ಸಂಧಿ ಕಿವಿಗೆ ಹಿತವಾಗಿರಬೇಕು; ಅರ್ಥವು ತಿಳಿಯಾಗಿದ್ದು ಉಚ್ಚಾರಣೆ ಸುಖಕರವಾಗಿರಬೇಕು–ಇಂತಹುದನ್ನು ಮಾತ್ರ ರಸಿಕರು 'ಯಮಕ'ವೆಂದು ಮೆಚ್ಚುತ್ತಾರೆ'' (೨–೧೭, ೧೮). ಇದು ಅವನು ಕೊಡುವ ಸಾಮಾನ್ಯಲಕ್ಷಣ. ಬುದ್ಧಿಚಮತ್ಕಾರದ ಕಸರತ್ತಿನಿಂದ ಸಿದ್ಧವಾಗುವವನ್ನು ಕುರಿತು ಅವನು ''ಹಲವಾರು ಧಾತುಗಳ ಅನೇಕಾರ್ಥಗಳಿಂದ ತುಂಬಿತುಳುಕುವ ಲಕ್ಷ್ಯವು ಯಮಕದ ಆಭಾಸ ಮಾತ್ರ. ನಿಜವಾಗಿ ಅದು ಒಗಟೆಯೇ ಸರಿ'' ಎಂಬುದಾಗಿ (೨–೧೯) ದೂಷಿಸಿದ್ದಾನೆ.

ಬಳಿಕಣ ವಿಸ್ತಾರವಿವೇಚನೆ ದಂಡಿಯದು. ವರ್ಣಸಮೂಹದ ಪುನರಾವೃತ್ತಿಯೇ ಯಮಕ; ಇದು ಅವ್ಯಪೇತ, ವ್ಯಪೇತ ಎಂಬುದಾಗಿ ಎರಡು ವಿಧ. ಇವು ಪಾದಗಳ ಆದಿ ಅಥವಾ ಮಧ್ಯ ಅಥವಾ ಅಂತ್ಯದಲ್ಲಿ ಗೋಚರವಾಗುತ್ತದೆ. ಇದು ಏಕಪಾದ, ದ್ವಿಪಾದ, ಚತುಷ್ಪಾದ ಎಂಬುದಾಗಿ ಪ್ರಭೇದಗಳನ್ನು ಹೊಂದಿದೆ. ಅದರಲ್ಲಿಯೂ ಯಾವುದೇ ಪಾದದಲ್ಲಿ ಆದಿ ಮಧ್ಯಾಂತಗಳಲ್ಲಿಯೂ ಗೋಚರವಾಗಬಹುದು; ಮಧ್ಯಾಂತ ಇಲ್ಲವೆ ಮಧ್ಯಾದಿ ಇಲ್ಲವೆ ಆದ್ಯಂತಗಳಲ್ಲಿ ಇಲ್ಲವೆ ಸರ್ವತ್ರ ಗೋಚರವಾಗಬಹುದು. ಹೀಗೆ ಇದರಲ್ಲಿ ೭ ವಿಕಲ್ಪಗಳುಂಟು. ಈ ಪ್ರಮುಖವಾದ ೭ ವಿಕಲ್ಪಗಳೂ ಪರಸ್ಪರ ಸಾಂಕರ್ಯದಿಂದ ಇನ್ನೂ ಅನೇಕ ಪ್ರಭೇದಗಳಾಗಿ ಸಂಕರ, ದುಷ್ಕರ ಎಂಬ ಹೆಸರಿನಿಂದ ವರ್ಗೀಕೃತಗೊಂಡಿವೆ.

ವಾಮನನ 'ಕಾವ್ಯಾಲಂಕಾರಸೂತ್ರವೃತ್ತಿ'ಯಲ್ಲಿ ದಂಡಿಯ ವಿವೇಚನೆಯ ರೀತಿಯೇ ಮುನ್ನಡೆದಿದ್ದರೂ ಯಮಕಾಂಶಗಳು ಭೇದಗೊಳ್ಳುವ ರೀತಿಯಲ್ಲಿಯ ವ್ಯತ್ಯಾಸಗಳನ್ನು ಪ್ರತ್ಯೇಕವಾಗಿ ಕುರಿತಿದೆ. ಆ ವ್ಯತ್ಯಾಸಗಳನ್ನು ಶೃಂಖಲಾ, ಪರಿವರ್ತಕ ಮತ್ತು ಚೂರ್ಣಗಳೆಂದು ಇಲ್ಲಿ ಹೇಳಲಾಗಿದೆ. ಅಖಂಡವಾಗಿರುವ ವರ್ಣವಿನ್ಯಾಸದಲ್ಲಿ ಬೇರೆಬೇರೆ ಪದಚ್ಛೇದಗಳೇರ್ಪಟ್ಟು ಪದಾಂತರಗಳ ಚಾಲನೆಯಾದರೆ ಅದು ಶೃಂಖಲೆ; ವೇಷ ಕಟ್ಟಿಕೊಂಡ ನಟನು ಆಟ ಮುಗಿದ ಮೇಲೆ ತನ್ನ ಸ್ವರೂಪವನ್ನು ತಳೆಯುವಂತೆ, ಶಬ್ದವೊಂದು ಮತ್ತೊಂದು ವರ್ಣದ ಸಂಗದಿಂದ

ತಾತ್ಕಾಲಿಕವಾಗಿ ಬಂದಿದ್ದ ರೂಪವನ್ನು ಬಿಟ್ಟು ತನ್ನ ಪೂರ್ವರೂಪಕ್ಕೆ ಬರುವುದು ಪರಿವರ್ತಕ. ಒಂದು ಪದದಲ್ಲಿರುವ ಸಂಯುಕ್ತಾಕ್ಷರವನ್ನು ಬಿಡಿಸುವುದರಿಂದ ಆ ವರ್ಣದ್ವಯಗಳು ಪದಾಂತರಗಳಾಗಲು ಸಹಾಯಕವಾಗಿ ಪೂರ್ವದಲ್ಲಿದ್ದ ಪದಕ್ಕೆ ಲೋಪ ಬರುವುದಾದರೆ, ಅದು ಚೂರ್ಣ. ಯಮಕವೂ ಶುದ್ಧವೂ ಸಾರ್ಥಕವೂ ಆಗಬೇಕಾದರೆ ಪದಚ್ಛೇದಗಳ ಪಾತ್ರ ಮಹತ್ತರವಾದ್ದು ಎಂಬುದನ್ನು ವಾಮನ ಇತರರಿಗಿಂತ ಸ್ಪಷ್ಟವಾಗಿ ತೋರಿಸಿದ್ದಾನೆ. ರುದ್ರಟನಾದರೋ, ಮೊದಲು ಭಾಮಹನಂತೆಯೇ, ಸಮಾನವಾದ ಶ್ರುತಿಕ್ರಮವಿದ್ದು, ಪರಸ್ಪರವಾಗಿ ಅರ್ಥಭೇದವಿದ್ದು, ವರ್ಣಗಳ ಪುನರಾವೃತ್ತಿಯಾದಲ್ಲಿ ಅದು ಯಮಕವೆಂದೂ ಸಾಮಾನ್ಯವಾಗಿ ಈ ಯಮಕವು ಛಂದೋಬದ್ಧವಾದ ರಚನೆಯಲ್ಲಿ ಶಕ್ಯವಾದುದೆಂದೂ ತಿಳಿಸಿ, ಬಳಿಕ ಯಮಕವನ್ನು ಸಮಸ್ತಪಾದಜ, ಏಕದೇಶಜ ಎಂಬುದಾಗಿ ವಿಂಗಡಿಸಿದ್ದಾನೆ. ಮೊದಲನೆಯದನ್ನು ಪಾದ, ಅರ್ಧ (ಶ್ಲೋಕಾರ್ಧ) ಮತ್ತು ಶ್ಲೋಕಗಳ ಆವೃತ್ತಿರೂಪಗಳೆಂದು ಮತ್ತೆ ಪ್ರತ್ಯೇಕಿಸಿದ್ದಾನೆ. ಇದೂ ಹಿಂದಿನವರು ಹೇಳಿದ್ದೇ. ಆದರೆ ತಾನು ವಿವರಿಸಿದ ಯಮಕಭೇದಗಳನ್ನೆಲ್ಲ ''ಚೆನ್ನಾಗಿ ವಿಚಾರಿಸಿ, ಸಾವಧಾನರಾಗಿ, ಹೃದಯಂಗಮವಾದ ಪದಚ್ಛೇದಗಳಿಂದಲೂ ಪ್ರಸಿದ್ಧ ವಸ್ತುವಾಚಕಗಳಿಂದಲೂ ಕೂಡಿದ ಇವನ್ನು ಮಹಾಕಾವ್ಯಗಳಲ್ಲಿ ಹೇರಳವಾಗಿ ರಚಿಸಬೇಕು.'' ಎಂದಿರುವುದು (೩–೫೯) ನೋಡಿದರೆ, ಯಮಕಗಳನ್ನು ಅವನು ಕಾವ್ಯಶೋಭಾಕರಗಳೆಂದೇ ತಿಳಿದಿರುವುದು ಸ್ಪಷ್ಟವಾಗುತ್ತದೆ.

ಭೋಜನ 'ಸರಸ್ವತೀ ಕಂಠಾಭರಣ'ದಲ್ಲಿ, ಅದರ ಎರಡನೆಯ ಪ್ರಕರಣದಲ್ಲಿ, ಪೂರ್ವಾಚಾರ್ಯರನ್ನು ಅನುಸರಿಸಿಯೇ ಯಮಕ ಸಾಮಾನ್ಯದ ಲಕ್ಷಣವನ್ನು ''ವಿಭಿನ್ನಾರ್ಥವುಳ್ಳುದಾಗಿಯೂ ಏಕರೂಪವಾಗಿಯೂ ಇರತಕ್ಕ ವರ್ಣಸಮೂಹದ ಆವೃತ್ತಿ'' ಎಂಬುದಾಗಿ ತಿಳಿಸಿ ಅದರಲ್ಲಿ ದಂಡಿ ವಿಭಜಿಸುವಂತೆಯೇ ವ್ಯಪೇತ ಅವ್ಯಪೇತಗಳೆಂದು ವಿಶಾಲ ವಿಭಜನೆಯನ್ನು ಮಾಡಿ ಪಾದಗಳ ಆದಿಮಧ್ಯಾಂತಗಳಲ್ಲಿ ಆವೃತ್ತಿಯಾಗುವುದು ಸ್ಥಾನಯಮಕಗಳೆಂದೂ ಅವು ೭ ವಿಧಗಳಾಗಿರಬಹುದೆಂದೂ ಉಳಿದವು ಸೂಕ್ಷ್ಮ ಹಾಗೂ ಸ್ಥೂಲ ಭೇದದ ಅಸ್ಥಾನಯಮಕಗಳೆಂದೂ ನಿರೂಪಿಸಿದ್ದಾನೆ. ಲಕ್ಷಣ–ಲಕ್ಷ್ಯ ವಿವೇಚನೆಯಲ್ಲಿ ಸಾಮಾನ್ಯವಾಗಿ ದಂಡಿಯ 'ಕಾವ್ಯಾದರ್ಶ'ವನ್ನೂ, ಅಲ್ಲಲ್ಲಿ ರುದ್ರಟನ 'ಕಾವ್ಯಾಲಂಕಾರ'ವನ್ನೂ ಅನುಸರಿಸಿರುವನೆಂಬುದು ವಿದಿತ.

ವಾಗ್ಭಟನು (ಸು.೧೧೨೫–೪೩) ಯಮಕವನ್ನು ಪಾದಗತ, ಪದಗತ, ಮತ್ತು ವರ್ಣಗತ ಎಂಬುದಾಗಿ ಮೂರು ವಿಧಗಳಾಗಿ ವಿಂಗಡಿಸಿ, ಅನಂತರದಲ್ಲಿ ಈ ಒಂದೊಂದರಲ್ಲಿಯೂ ಸಂಯುತ ಮತ್ತು ಅಸಂಯುತಗಳೆಂದು ವಿಭಜನೆಮಾಡಿದ್ದಾನೆ. ಅನಂತರ ಈ ಎರಡರಲ್ಲಿಯೂ ಆದಿಮಧ್ಯಾಂತಗತಗಳೆಂಬ ಪುನರ್ವಿಭಜನೆಯಿಂದ, ಒಟ್ಟು ೧೮ ಯಮಕ ಭೇದಗಳನ್ನು ಹೇಳಿದ್ದಾನೆ (೪–೨೨). ಮುಂದೆ ಇವುಗಳಿಗೆ ಲಕ್ಷ್ಯಗಳನ್ನು ಒದಗಿಸಿದ್ದು, ಅಂತ್ಯ ಯಮಕಕ್ಕೆ ಗಣ್ಯತೆ ಸಂದಿರುವುದರ ಹೊರತಾಗಿ ಉಳಿದ ಲಕ್ಷ್ಯಗಳಲ್ಲಿ ಹೇಳತಕ್ಕ ವಿಶೇಷವೇನಿಲ್ಲ. ಇವನು ಸಂಯುತ ಅಸಂಯುತವೆಂದಿರುವುದು ದಂಡಿಯ ಅವ್ಯಪೇತ ವ್ಯಪೇತಗಳನ್ನೇ. ವರ್ಣಯಮಕವೆಂಬ ಒಂದು ಪ್ರಮುಖಭೇದವನ್ನು ವಾಗ್ಭಟ ಹೆಚ್ಚಾಗಿ ಹೇಳಿರುವನಾದರೂ ಅದರ ಔಚಿತ್ಯವನ್ನು ಸಮರ್ಥಿಸುವುದು ಕಷ್ಟ. ಏಕೆಂದರೆ ಯಮಕದಲ್ಲಿ ಬರುವಂತೆ ಪದ ಅಥವಾ ಹಿತವಾದ ಪದಚ್ಛೇದ ಸಾಧ್ಯವಾಗುವಂತಿರುವ ಪದಾಂಶಗಳು ಇಲ್ಲಿ ಬರುವುದಿಲ್ಲ; ನಿರ್ದಿಷ್ಟ ಸ್ಥಾನಗಳಲ್ಲಿ ಪರಸ್ಪರವಾಗಿ ಸಮಾನವಾಗಿರುವ ಬಿಡಿಯಕ್ಷರಗಳು ಮಾತ್ರ ಬರುತ್ತವೆ. ಸ್ಥಾನನಿಯಮವನ್ನೊಪ್ಪಿಕೊಂಡು ಬಂದ ಛೇಕಾನುಪ್ರಾಸವೆಂದೇ ಅದನ್ನು ತಿಳಿಯುವುದು ತಪ್ಪಲ್ಲ.

ಈ ವಿವೇಚನೆಯನ್ನು, ಮುಂದಿನ ಲಾಕ್ಷಣಿಕರ ನಿರೂಪಣೆ ಏನೇ ಇದ್ದರೂ, ಹೆಚ್ಚು ವಿಸ್ತರಿಸುವುದು ಅನಗತ್ಯವೆನ್ನಬೇಕು. ಪರಿಭಾಷೆಯನ್ನು ಕಲ್ಪಿಸಿರುವ ದೃಷ್ಟಿಯಿಂದ ಪ್ರಾಚೀನರಾದ ಸಂಸ್ಕೃತ ಆಲಂಕಾರಿಕರಲ್ಲಿ ಕೆಲವರು ಹಿಡಿದಿರುವ ಹಾದಿಯನ್ನು ಕುರಿತು ಆಧುನಿಕ ವಿದ್ವಾಂಸರು ಮಾಡಿರುವ ವಿಮರ್ಶೆಯ ಕೆಲವು ಅಂಶಗಳನ್ನು ಮುಂದೆ ಸಂಗ್ರಹಿಸಿ ಕೊಡಬಹುದಾಗಿದೆ :

''ಯಮಕಗಳನ್ನು ಬಲುಮಟ್ಟಿಗೆ ಎಲ್ಲಾ ಆಲಂಕಾರಿಕರೂ ಕುರಿತಿದ್ದಾರೆ; ಉದ್ಭಟ, ಆನಂದವರ್ಧನ ಹಾಗೂ ಅಪ್ಪಯ್ಯ ದೀಕ್ಷಿತರು ಹೊರತಾಗಿ. ಪ್ರಾಚೀನರಲ್ಲಿ ಭಾಮಹನು ಸಂಕೀರ್ಣರೀತಿಯ ಸಂದಷ್ಟಕ ಸಮುದ್ಗಕಗಳೂ ಸೇರಿದಂತೆ ಐದು ಮುಖ್ಯ ಪ್ರಕಾರಗಳನ್ನು ಮಾತ್ರ ಕುರಿತಿದ್ದಾನೆ. ಆದರೆ ದಂಡಿ, ಇದರ ಪ್ರತಿಯಾಗಿ,

ಸಾಮಾನ್ಯ ಯಮಕ ಪ್ರಭೇದಗಳೆಂದು ೪೩ ಬಗೆಗಳನ್ನು ತಿಳಿಸಿದ್ದಾನೆ; ಅಲ್ಲದೆ ೧೩ ಸಮುದ್ಗಕಗಳನ್ನು, ಸಂದಷ್ಟ, ಮಹಾಯಮಕ, ಶ್ಲೋಕಾಭ್ಯಾಸಯಮಕ ಹಾಗೂ ಪ್ರತಿಲೋಮಯಮಕಗಳೆಂಬ ಕೆಲವನ್ನೂ ಹೇಳಿದ್ದಾನೆ. ಇವನಿಗೆ ಸರಿಗಟ್ಟುವುದು ಮಾತ್ರವಲ್ಲದೆ, ಇವನನ್ನು ಮೀರಿಸುವ ಮಟ್ಟಿಗೆ ಭೋಜನ ಯಮಕಪ್ರಪಂಚ ವಿಸ್ತಾರವಾದುದಾಗಿದೆ. ಸೂಕ್ಷ್ಮಭೇದಗಳನ್ನು ಆತ ಗುರುತಿಸಿದ್ದಾನೆ. ಪಾದಗಳ ಆದಿ, ಮಧ್ಯ ಮತ್ತು ಅಂತ್ಯಗಳೆಂಬ ಸ್ಥಾನಗಳಲ್ಲಿ ಕಾಣಿಸಿಕೊಳ್ಳುವ ಈ ಯಮಕ ಭೇದಗಳಲ್ಲಿ, ಕೆಲವಕ್ಕೆ ಲಕ್ಷ್ಯಗಳಿಲ್ಲದೆ ಅವನು ಹೇಳದೆ ಬಿಟ್ಟಿರುವಂತಿದೆ. ಸ್ಥಾನನಿಯಮ ಮೀರಿದ ಯಮಕಗಳನ್ನು ಅಸ್ಥಾನಯಮಕಗಳೆಂಬುದಾಗಿ ಕರೆದು ನಿರೂಪಿಸಿರುವುದು ಅವನ ಒಂದು ವಿಶೇಷ. ಪಾದವೊಂದರಲ್ಲಿಯೇ ಎರಡು ಅಥವಾ ಹೆಚ್ಚಿನ ಯಮಕಾಂಶಗಳು ವ್ಯಪೇತ ಅಥವಾ ಅವ್ಯಪೇತ ರೀತಿಗಳಲ್ಲಿ ಆವೃತ್ತವಾಗುವುದನ್ನು ಇವು ಹೇಳುತ್ತವೆ. ಇದು ಪದ್ಯದ ಇತರ ಪಾದಗಳಲ್ಲಿಯೂ ಸಾಧ್ಯವೆಂಬುದು ವಿದಿತ. ಆವೃತ್ತಿ ತುಂಬ ಸಮೀಪಸ್ಥಾನಗಳಲ್ಲಿಯೇ ಆಗುತ್ತಿದ್ದು, ಒಂದಕ್ಕಿಂತ ಹೆಚ್ಚಿನ ಪಾದಗಳಲ್ಲಿಯೂ ವ್ಯಾಪಿಸಿ, ವರ್ಣ ಚಿತ್ರಗಳ ಹಾಗೆ ತೋರುವುದೂ ಸಾಧ್ಯವಿದೆ.

ರುದ್ರಟನೂ ಪ್ರಭೇದಗಳ ಬಗ್ಗೆ ತುಂಬ ಉತ್ಸಾಹ ತೋರಿದವನೇ. ಒಂದು ಪ್ರಕರಣವನ್ನೇ ಇದಕ್ಕೆ ಮೀಸಲು ಮಾಡಿದ್ದಾನೆ. ಗರ್ಭ, ಪುಚ್ಛ, ಪಂಕ್ತಿ, ವಕ್ರ, ಶಿಖಾ, ಮಾಲಾ ಇತ್ಯಾದಿಯಾಗಿ ಹೊಸ ಹೆಸರುಗಳನ್ನು ಕಲ್ಪಿಸಿದ್ದರೂ ಪ್ರಭೇದಗಳ ರೀತಿಯಲ್ಲಿ ಹೊಸತನವೇನೂ ಇಲ್ಲ. ಭೋಜನು ಕಾಂಚೀಯಮಕವೆಂಬ ಹೊಸ ಹೆಸರನ್ನು ಸಂಕೀರ್ಣವಾದೊಂದು ಪ್ರಭೇದಕ್ಕೆ ಕೊಟ್ಟಿದ್ದಾನೆ. ಮಮ್ಮಟ ವಿಶ್ವನಾಥರಂತಹ ರಸವಾದಿಗಳಾದ ಲಾಕ್ಷಣಿಕರು ವಿಸ್ತಾರಕ್ಕೆ ಹೋಗದೆ, ಸಂಕೀರ್ಣ ರೀತಿಯ ಯಮಕಗಳೂ ಬಂಧಗಳೂ ವಿಪತ್ಕಾರಕವೆಂದು ಭಾವಿಸಿಯೋ ಏನೋ ಏಷ್ಟೋ ಅಷ್ಟು ಮಾತ್ರ ಹೇಳಿದ್ದಾರೆ. ವಿದ್ಯಾಧರನು, ಯಮಕಗಳು ಸಾಹಿತ್ಯದಲ್ಲಿ ಬಳಕೆಯಾಗುವುದರ ಅಪೇಕ್ಷಣೀಯತೆಯ ವಿಚಾರವನ್ನು ಕುರಿತು ಚಿಂತಿಸಿರುವುದು ಗಮನಾರ್ಹ. ಪದ್ಯದ ಮೂರು ಪಾದಗಳಲ್ಲಿ ಮಾತ್ರವೇ ಯಮಕ ಬರುವುದನ್ನು ಅವನು ನಿಷೇಧಿಸಿರುವುದು ಸೋಜಿಗವುಂಟುಮಾಡುತ್ತದೆ. ಕಾವ್ಯದಲ್ಲಿ ಯಮಕಗಳ ಸಾರ್ವತ್ರಿಕವಾದ ಬಳಕೆ ರಸನಿಷ್ಪಾದನಕ್ಕೆ ಅಡ್ಡಿ ತರುವುದೆಂದು ಅವನ ಭಾವನೆ.''

ಸಂಸ್ಕೃತದಲ್ಲಿಯೂ ಕನ್ನಡದಲ್ಲಿಯೂ ಯಮಕ ಸಂಘಟನೆಯ ವಿಷಯದಲ್ಲಿ ಕೆಲಮಟ್ಟಿಗೆ ಸಂದಿಗ್ಧತೆಯುಂಟೆಂದು ತೋರುತ್ತದೆ. ಸಮಾನವಾದ ಯಮಕಭೇದಗಳಿಗೆ ನಾಮಾಂತರಗಳನ್ನು ಸೂಚಿಸುವುದು ಏಕೆ ಎಂದು ಹೇಳುವುದು ಕಷ್ಟ. ಆದರೆ ಇದನ್ನು ಅವರ ವೈಯಕ್ತಿಕ ಅಭಿರುಚಿಗೆ ಬಿಟ್ಟ ಸಂಗತಿ ಎಂದು ಅಲಕ್ಷಿಸಬಹುದು. ನಿಜವಾಗಿ ತೊಡಕಿರುವುದು ಯಮಕ ಸಂಘಟನೆಯಲ್ಲಿ, ಯಮಕಾಂಶಗಳ ಸಂಯೋಜನೆ ಹೇಗಿರಬೇಕು ಎಂಬುದರಲ್ಲಿ ಹಾಗೂ ಭಿನ್ನಾರ್ಥಕತ್ವದ ಸ್ವರೂಪ ಏನು ಎಂಬುದರಲ್ಲಿ. ಈ ವಿಷಯದಲ್ಲಿ ಮುಖ್ಯವಾಗಿ ಮೊದಲನೆಯದರಲ್ಲಿ ಅಂತಹ ನಿಯಮಗಳೇನಾದರೂ ಇರುವಂತೆ ತೋರುವುದಿಲ್ಲ. ಯಮಕಸಂಘಟನೆ ಸಮಗ್ರವಾದೊಂದು ಪದದಲ್ಲಿ ಇಲ್ಲವೆ ಪದಾಂಶಗಳಲ್ಲಿ ನಡೆಯಬಹುದು. ಪದಸಂಘಟನೆ ಅಥವಾ ಪದಚ್ಛೇದಗಳು ಸಾರ್ಥಕವಾಗಿ ನಡೆಯುವಾಗ ಭಿನ್ನಾರ್ಥಕತ್ವಕ್ಕೆ ಅವಕಾಶವಿರುತ್ತದೆ. ಹಾಗಲ್ಲದೆ ಅಖಂಡವಾದ ಪದ ಹಾಗೆಯೇ ಆವೃತ್ತವಾದರೂ ಸನ್ನಿವೇಶಬಲದಿಂದ ಸ್ವಲ್ಪಮಟ್ಟಿಗೆ ಭಿನ್ನಾರ್ಥಕತ್ವ ಸಂಘಟಿಸಬಹುದು; ಪದಗಳ ದ್ವಿರುಕ್ತಿಯಲ್ಲಿಯೂ ಹೀಗೆಯೇ ಪದಾಂಶಗಳಲ್ಲಿಯೂ ಭಿನ್ನಾರ್ಥಕತ್ವದ ಪರಿಗಣನೆ ಸಾಧ್ಯವಾಗದು. ಆಗ ಯಮಕತ್ವ ನಷ್ಟವಾಗಿ ಅನುಪ್ರಾಸದ ಪರಿಧಿಗೆ ಅಲ್ಲಿ ಎಡೆಯಾಗುತ್ತದೆ.

ಈ ವಿಚಾರದಲ್ಲಿ ಒಂದಿಬ್ಬರು ವ್ಯಾಖ್ಯಾನಕಾರರು ಕೊಂಚ ವಿಚಾರಮಾಡಿರುವಂತೆ ತೋರುತ್ತದೆ. 'ನಾಟ್ಯಶಾಸ್ತ್ರ'ದ ಅಭಿನವಗುಪ್ತರ ವ್ಯಾಖ್ಯಾನದಲ್ಲಿ, ೫೯-೬೯ರ ಲಕ್ಷ್ಯವನ್ನು ವಿಮರ್ಶಿಸುವಾಗ '' 'ಅತ್ರ ಚಾರ್ಥಭೇದೋ ಮುನಿನಾ ನಾದೃತ' ಇತಿ ತದಪ್ರಸಿದ್ಧಮ್, ವ್ಯುತ್ಪತ್ತ್ಯಾದಿನಾ ಪರಹೃದಯಂ ವೇದಿತಮಸ್ಮಾಭಿಃ'' ಎಂಬುದಾಗಿ ಹೇಳಿರುವುದನ್ನು ಗಮನಿಸಬಹುದು. ಭರತ ಭಾಮಹರು ಕೊಡುವ ಲಕ್ಷ್ಯಗಳು ಭಿನ್ನಾರ್ಥಕತ್ವವನ್ನು ಸಾಮಾನ್ಯವಾಗಿ ಪೋಷಿಸಿದರೂ; ಸಮಾನಾರ್ಥಕತ್ವದ ಛಾಯೆ ಅಲ್ಲಲ್ಲಿ ಸುಳಿದಿರುವುದೂ ಉಂಟು. ಕನ್ನಡ ಆಲಂಕಾರಿಕರ ಲಕ್ಷ್ಯಗಳಲ್ಲಿ ಸಹ ಭಿನ್ನಾರ್ಥಕತ್ವವನ್ನೇ ಪೋಷಿಸಿದೆ. 'ನಲಿನಲಿದು', 'ನೆನೆನೆನೆದು' ಎಂಬಂತಹ

ದ್ವಿರುಕ್ತಿಗಳನ್ನು ಛೇಕಾನುಪ್ರಾಸದ ಬಗೆಯಾಗಿ ತಿಳಿಯುವುದೇ ಸಹಜವಾದ್ದು. ಆದರೆ ಧಾತುಗಳಿಗೆ, ಹಾಗೆಯೇ ನಾಮವಾಚಕಗಳಿಗೆ, ದ್ವಿರುಕ್ತಿಯಿಂದ ಅರ್ಥಭೇದಕತ್ವವುಂಟೆಂದು ಕೆಲವರು ತಿಳಿಯುವುದನ್ನು ಒಪ್ಪಬಹುದು. ಪಂಪನ ''ದುಂದುಭಿಗಭೀರನಿನದಂ....'' ಎಂಬ ಪದ್ಯದಲ್ಲಿ ಪಾದಾದಿಯ 'ದುಂದುಭಿ' ಶಬ್ದದ ನಾನಾರ್ಥಗಳ ದೆಸೆಯಿಂದ ಪದಚ್ಛೇದವೇನೂ ಇಲ್ಲದೆಯೆ ಭಿನ್ನಾರ್ಥಕತ್ವ ಆ ಪದಕ್ಕೆ ಸಾಧ್ಯವಿರುತ್ತದೆ. ಆದರೆ ''ಘನ ದರ್ಪೋನ್ನದ್ಧ ಬೌದ್ಧ ಕ್ಷಿತಿಧರಪವಿಯೀ ಬಂದನೀ ಬಂದನೀ ಬಂ!ದನೆ ಸನ್ನ್ಯಾಯಾಯಿಕೋದ್ಯತ್ತ್ವಿವಿರತರಣಿಯೀ ಬಂದನೀ ಬಂಡನೀ ಬಂ!ದನೆ....'' ಎಂಬಂತಹ ಕಡೆ (ಶಾಸನ ಪದ್ಯಮಂಜರಿ, ಪ್ರ. ೮೪) 'ಬಂದನೀ' ಎಂಬ ಪದದ ಆವೃತಿ ಯಾವ ಭಿನ್ನಾರ್ಥವನ್ನೂ ತೋರಿಸುವುದಿಲ್ಲ. ಇಂತಹ ಸಮಾನಾರ್ಥಕ ಪದಗಳ ಕೇವಲ ಆವೃತ್ತಿಯಿಂದಾಗಿ ಚಮತ್ಕಾರಜನಕ ಕವಿಪ್ರೌಢಿಮೆಯೇನೂ ತೋರುವುದಿಲ್ಲ. ಇವನ್ನು ಪ್ರಾಚೀನ ಆಲಂಕಾರಿಕರನ್ನು ಆಶ್ರಯಿಸಿ ಲಾಟಾನುಪ್ರಾಸ ಪಾದಾನುಪ್ರಾಸಗಳ ಲಕ್ಷ್ಯಗಳಾಗಿ ತಿಳಿಯಬೇಕಾಗುತ್ತದೆ. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಇಂತಹ ಅನುಪ್ರಾಸವೈಚಿತ್ರ್ಯಗಳು ಸಮೃದ್ಧವೂ ಸಹಜಕವಿವ್ಯಾಪಾರಮೂಲವೈಚಿತ್ರ್ಯವೂ ಆಗಿ ಕಾಣಿಸಿಕೊಳ್ಳುತ್ತವೆ. ದೊಡ್ಡ ಕಾವ್ಯವಾಗಲಿ, ಚಿಕ್ಕ ಕಾವ್ಯವಾಗಲಿ ಕಣ್ಣು ಹಾಯಿಸಿದ ಕಡೆ ಇವನ್ನು ನಾವು ಎದುರುಗೊಳ್ಳುತ್ತೇವೆ.

ಇದರನಂತರದಲ್ಲಿ ಯಮಕದ ಲಕ್ಷಣವನ್ನು ಹೀಗೆ ನಿರೂಪಿಸಬಹುದು. (i) ಪದ ಅಥವಾ ಪದಾಂಶಗಳು ಒಂದಕ್ಕಿಂತ ಹೆಚ್ಚು ಸಲ ಆವೃತ್ತಿಗೊಳ್ಳುತ್ತವೆ. (ii) ಹೀಗೆ ಆವೃತ್ತಿಗೊಂಡಾಗ ಅವುಗಳ ನಡುವೆ ಅರ್ಥಭೇದ ವೇರ್ಪಟ್ಟಿರುತ್ತದೆ. (iii) ಇಂತಹ ಭಿನ್ನಾರ್ಥಕ ಪದ ಅಥವಾ ಪದಾಂಶಗಳು ಸಾಮಾನ್ಯವಾಗಿ ಸ್ಥಾನನಿಯಮವನ್ನು ಅನುಸರಿಸಿ, ಪದ್ಯಪಾದಗಳಲ್ಲಿ ಕಾಣಿಸಿಕೊಳ್ಳುತ್ತವೆ. (iv) ಆವೃತ್ತಿಗೊಳ್ಳುವ ಪದಗಳು ಅಖಂಡಶಬ್ದಗಳಾಗಿರಬಹುದು, ಸಮಾಸ ಶಬ್ದಗಳಾಗಿರಬಹುದು; ಪದಚ್ಛೇದ ಸಾಧ್ಯವಾಗುವಂತೆ ಅಕ್ಷರ ಸಂಘಟನೆಯಿಂದ ಕೂಡಿರಲೂ ಬಹುದು. (v) ಸ್ವರವ್ಯಂಜನಗಳೆರಡರ ಪೌನರುಕ್ತ್ಯ ಅಲ್ಲಿ ಘಟಿಸುತ್ತದೆ.

ಭರತನ 'ನಾಟ್ಯಶಾಸ್ತ್ರ' :

ಭರತನ (ಕ್ರಿ.ಶ. ಸು. ೨ನೆಯ ಶ.) 'ನಾಟ್ಯಶಾಸ್ತ್ರ'ದ ೧೬ನೆಯ ಅಧ್ಯಾಯದಲ್ಲಿ ಪಾದಾಂತ, ಕಾಂಚಿ, ಸಮುದ್ಗ, ವಿಕ್ರಾಂತ, ಚಕ್ರವಾಲ, ಸಂದಷ್ಟ, ಪಾದಾದಿ, ಆಮ್ರೇಡಿತ, ಚತುರ್ವ್ಯವಸಿತ, ಮಾಲಾ ಎಂಬ ನಾಟಕಾಶ್ರಯಗಳಾದ ದಶವಿಧ ಯಮಕ ಭೇದಗಳನ್ನು ಹೆಸರಿಸಿದೆ (೫–೬೦–೬೨). ಇವನ್ನು ಅಲ್ಲಿಯ ನಿರೂಪಣೆಯಂತೆ ಹೀಗೆ ಹೇಳಬಹುದು : (೧) ಪಾದಾಂತ: ನಾಲ್ಕು ಪಾದಗಳ ಅಂತ್ಯದಲ್ಲಿಯೂ ಸಮಾನಾಕ್ಷರಗಳಿರುವುದು (ಪ. ೬೩). (೨) ಕಾಂಚಿ : ಪಾದದ ಆದ್ಯಂತಗಳಲ್ಲಿ ಸಮಾನಪದದ್ವಯವಿರುವುದು (ಪ.೬೬). (೩) ಸಮುದ್ಗ : ಪದ್ಯಾರ್ಧವು ಹಾಗೆಯೇ ಸಂಪೂರ್ಣವಾಗಿ ಆವೃತ್ತವಾಗುವುದು (ಪ.೬೮). (೪) ವಿಕ್ರಾಂತ : ೨ನೆಯ ಪಾದ ೪ನೆಯ ಪಾದವಾಗಿ ಆವೃತ್ತಿಗೊಳ್ಳುವುದು (ಪ.೭೦). (೫) ಚಕ್ರವಾಲ : ಹಿಂದಿನ ಪಾದದ ಅಂತ್ಯದಲ್ಲಿಯ ಪದವು ಮುಂದಿನ ಪಾದದ ಆದಿಯಲ್ಲಿಯೂ ಆವೃತ್ತವಾಗುವುದು (ಪ. ೭೨). (೬) ಸಂದಷ್ಟ : ಪ್ರತಿಪಾದದ ಆದಿಯಲ್ಲಿಯೂ ಸಮಾನಪದಯುಗ್ಮವಿದ್ದು, ೨–೩ನೆಯ ಪಾದಗಳ ಆದಿಯಲ್ಲಿ ಪರಸ್ಪರಸಾಮ್ಯವುಳ್ಳ, ೨–೪ನೆಯ ಪಾದಗಳ ಅಂತ್ಯದಲ್ಲಿ ಪರಸ್ಪರ ಸಾಮ್ಯವುಳ್ಳ ರಚನೆಯಿರುವುದು (ಪ. ೭೫). (೭) ಪಾದಾದಿ : ೪ ಪಾದಗಳಲ್ಲಿಯೂ ಆದಿಯಲ್ಲಿ ಸಮಾನವಾದ ಯಮಕಾಂಶವಿರುವುದು (ಪ. ೭೭). (೮) ಆಮ್ರೇಡಿತ : ೪ ಪಾದಗಳಲ್ಲಿಯೂ ಅಂತ್ಯದಲ್ಲಿ ಸಮಾನವಾದ ಪದಯುಗ್ಮವಿರುವುದು (ಪ. ೭೯). (೯) ಚತುರ್ವ್ಯವಸಿತ : ೪ ಪಾದಗಳಲ್ಲಿಯೂ ಏಕರೀತಿಯಾದ ರಚನೆಯಿರುವುದು (ಪ. ೮೧). (೧೦) ಮಾಲಾ : ಒಂದೇ ವ್ಯಂಜನ ನಾನಾಸ್ವರಗಳಿಂದ ಕೂಡಿರುವುದು (ಪ. ೮೩). ಈ ಬಗೆಯನ್ನು ಯಮಕವೆಂದು ಹೇಳುವುದಕ್ಕಿಂತ, ವೃತ್ತ್ಯನುಪ್ರಾಸವೆಂದು ಕರೆಯುವುದೇ ಒಳ್ಳೆಯದೆಂದು ತೋರುತ್ತದೆ.

ಬರತನು ಕೊಟ್ಟಿರುವ ಯಮಕದ ಪ್ರಭೇದಗಳು ಪ್ರಮುಖ ಅಲಂಕಾರಶಾಸ್ತ್ರಜ್ಞರ ನಿರೂಪಣೆಯಲ್ಲಿಯೂ ಉಂಟು. ಆದುದರಿಂದ ಲಕ್ಷ್ಯಗಳನ್ನು ಉದ್ಧರಿಸದೆ ಬಿಟ್ಟಿದೆ.

ಭಾಮಹನ 'ಕಾವ್ಯಾಲಂಕಾರ' :

ಯಮಕವು ಆದಿ, ಮಧ್ಯಾಂತ, ಪಾದಾಭ್ಯಾಸ, ಆವಲಿ, ಮತ್ತು ಸಮಸ್ತಪಾದಗಳೆಂಬುದಾಗಿ ಐದು ವಿಧ. ಇವುಗಳಲ್ಲಿಯೇ ಸಂದಷ್ಟಕ, ಸಮುದ್ಗಕಗಳೂ ಅಂತರ್ಗತವಾಗುತ್ತವೆ. ಏಕೆಂದರೆ ಅವೂ ಪದ್ಯದ ಆದಿಯಲ್ಲಿರಬೇಕು ಇಲ್ಲವೆ ಮಧ್ಯಾಂತಗಳಲ್ಲಿರಬೇಕು. ಇದು ಭಾಮಹನ ನಿರೂಪಣೆ. ಮೊದಲ ಅಲಂಕಾರಗ್ರಂಥವಾದುದರಿಂದ ಅದರ ಲಕ್ಷ್ಯಗಳನ್ನು ಇಲ್ಲಿ ಉದ್ಧರಿಸಬಹುದಾಗಿದೆ:

ಪಾದಾದಿ

ಸಾಧುನಾ ಸಾಧುನಾ ತೇನ । ರಾಜತಾ ರಾಜತಾ ಭೃತಾ
ಸಹಿತಂ ಸಹಿತಂ ಕರ್ತುಂ । ಸಂಗತಂ ಸಂಗತಂ ಜನಂ ॥ (೧೧)

ಮಧ್ಯಾಂತ

ಸಾಧುಃ ಸಂಸಾರಾದ್ ಬಿಭ್ಯದಸ್ಮಾದಸಾರಾದ್ । ತ್ಯಕ್ತ್ವಾ ಕ್ಲೇಶಾಂತಂ ಯಾತಿ ವರ್ತ್ಮ ಪ್ರಶಾಂತಂ ।
ಜಾತಿಂ ವ್ಯಾಧೀನಾಂ ದುರ್ಜನಾನಾಮಧೀನಾಂ । ವಾಂಛನ್ ಜ್ಯಾಯಸ್ತ್ವಂ ಛಿಂದಿ ಮುಕ್ತ್ವಾನಯಸ್ತ್ವಂ ॥
(೧೨)

ಪಾದಾಭ್ಯಾಸ (ಪಾದಾವೃತ್ತಿ) [ನಾಟ್ಯಶಾ. ವಿಕ್ರಾಂತ, ೧೬–೭೧]

ನ ತೇ ಧೀರ್ಧೀರ ಭೋಗೇಷು । ರಮಣೀಯೇಷು ಸಂಗತಾ
ಮುನೀನಪಿ ಹರಂತ್ಯೇತೇ । ರಮಣೀ ಯೇಷು ಸಂಗತಾ ॥ (೧೩)

ಆವಲಿ

ಸಿತಾಸಿತಾಕ್ಷೀಂ ಸುಪಯೋಧರಾಧರಾಂ । ಸುಸನ್ಮದಾಂ ವ್ಯಕ್ತಮುದಾಂ ಲಲಾಮದಾಂ ।
ಘನಾಘನಾ ನೀಲಘನಾ ಘನಾಲಕಾಂ । ಪ್ರಿಯಾಮಿಮಾಮುತ್ಸುಕಯನ್ತಿ ಯನ್ತಿ ಚ ॥ (೧೪)

ಇಲ್ಲಿ ಆದಿ ಮಧ್ಯಾಂತಗಳ ನಿಯಮವಿಲ್ಲದೆ ಯಮಕದ ವರ್ಣಶ್ರೇಣಿ ಅನಿರ್ಬಂಧಿತ ಸ್ಥಾನಗಳಲ್ಲಿ ಗುಂಪುಗೂಡಿ ಬರುವುದರಿಂದ, ಇದು ಆವಲಿ ಎನಿಸಿದೆ.

ಸಮಸ್ತಪಾದ [ನಾಟ್ಯಶಾ. ಪಾದಾಂತ, ೧೬–೬೩]

ಅಮೀ ನೃಪಾ ಧ್ವಸ್ತಸಮಗ್ರಶಾಸನಾಃ । ಕದಾಚಿದಪ್ಯಪ್ರತಿಬದ್ಧಶಾಸನಾಃ ।
ಕೃತಾಂಗನಾಂ ಮಾರ್ಗಭಿದಾಂ ಚ ಶಾಸನಾಃ । ಪಿತೃಕ್ರಮಾಧ್ಯಾಸಿತತಾದೃಶಾಸನಾಃ ॥ (೧೫)

ಭಾಮಹನು ಹೀಗೆ ಕೆಲವು ಯಮಕಪ್ರಭೇದಗಳನ್ನು ನಿರೂಪಿಸಿದ ಮೇಲೆ ಒಟ್ಟಾಗಿ ದುಷ್ಕರಯಮಕದ ಬಗ್ಗೆ ಈ ರೀತಿ ಹೇಳಿದ್ದಾನೆ :

''ಒಂದು ಪಾದದ ಕಡೆಯು ಅದರ ಮುಂದಿನ ಪಾದದ ಕಡೆಯಲ್ಲಾಗಲಿ, ಇಲ್ಲವೆ ಒಂದು ಬಿಟ್ಟು ಮುಂದಿನ ಪಾದದ ಕಡೆಯಲ್ಲಾಗಲಿ, ಆವೃತ್ತವಾಗಬಹುದು. ಹಾಗೆಯೇ ನಾಲ್ಕುಪಾದಗಳೂ ಒಂದೇ ಸಮವಾಗಿರುವ ಸಂಪೂರ್ಣಯಮಕವೂ ಉಂಟು. ಇಂತಹ ಸಂಪೂರ್ಣಯಮಕವನ್ನು ಚೆನ್ನಾಗಿ ಪ್ರಯೋಗಿಸುವುದು 'ದುಷ್ಕರ' ಎನಿಸುವುದು.''

ದಂಡಿಯ 'ಕಾವ್ಯಾದರ್ಶ' :

ಯಮಕವಿವೇಚನೆಗೆ 'ಕಾವ್ಯಾದರ್ಶ' ಒಂದು ರೀತಿಯಲ್ಲಿ ಅಧಿಷ್ಠಾನವೆನ್ನಬಹುದಾದ ಕೃತಿ. ಇದನ್ನು ಈಚಿನ ಕಾಲದ ಆಲಂಕಾರಿಕರು ಗಮನಿಸಿ, ಯಥೋಚಿತವಾಗಿ ಅನುಸರಿಸಿದ್ದಾರೆ. ತೃತೀಯ ಪರಿಚ್ಛೇದದಲ್ಲಿ ನಿರೂಪಿತವಾಗಿರುವ ಇದರಲ್ಲಿಯ ಭೇದಗಳನ್ನೂ ಉಪಭೇದಗಳನ್ನೂ ಮುಂದೆ ಅನುಕ್ರಮವಾಗಿ ಗಮನಿಸಿ, ಲಕ್ಷ್ಯಗಳನ್ನುದ್ಧರಿಸಿದೆ.

೧. ಪಾದಾದಿ ಅವ್ಯಪೇತ ಯಮಕಭೇದಗಳು :

'ಕಾವ್ಯಾದರ್ಶ'ದಲ್ಲಿ ಮೊದಲು ಪದ್ಯ ೪ರಿಂದ ೧೮ರವರೆಗೆ 'ಪಾದಾದಿ ಅವ್ಯಪೇತ ಯಮಕ' ಲಕ್ಷ್ಯಗಳನ್ನು ಉದಾಹರಿಸಿದೆ. ಇವು ಕ್ರಮವಾಗಿ ಹೀಗಿವೆ :

ಪ್ರಥಮ ಪಾದಾದಿ

ಮಾನೇನ ಮಾನೇನ ಸಖಿ । ಪ್ರಣಯೋಽಭೂತ್ ಪ್ರಿಯೇ ಜನೇ ॥ (೪ಪೂ)

ದ್ವಿತೀಯ ಪಾದಾದಿ

ಮೇಘನಾದೇನ ಹಂಸಾನಾಂ । ಮದನೋ ಮದನೋದಿನಾ ॥ (೫ಪೂ)

ತೃತೀಯ ಪಾದಾದಿ

ಚತುರಂ ಚತುರಂಭೋಧಿ । ರಶನೋರ್ವೀ ಕರಗ್ರಹೇ ॥ (೬ಉ)

ಚತುರ್ಥ ಪಾದಾದಿ

ಪದಾತಿರಥನಾಗಾಶ್ವ । ರಹಿತೈರಹಿತೈಸ್ತವ ॥ (೭ಉ)

ಪ್ರಥಮ ದ್ವಿತೀಯ ಪಾದಾದಿ

ಮಧುರಂ ಮಧುರಂಭೋಜ । ವದನೇ ವದ ನೇತ್ರಯೋಃ ॥ (೮ಪೂ)

ಪ್ರಥಮ ತೃತೀಯ ಪಾದಾದಿ

ವಾರಣೋ ವಾ ರಣೋದ್ದಾಮೋ । ಹಯೋ ವಾ ಸ್ಮರ ದುರ್ಧರಃ ।
ನ ಯತೋ ನಯತೋಽಂತಂ ನ । ಸ್ತದಹೋ ವಿಕ್ರಮಸ್ತವ ॥ (೯)

ಪ್ರಥಮ ಚತುರ್ಥಪಾದಾದಿ

ರಾಜಿತೈರಾಜಿತೈಕ್ಷ್ಣ್ಯೇನ । ಜೀಯತೇ ತ್ವಾದೃಶೈರ್ನೃಪೈಃ ।
ನೀಯತೇ ಚ ಪುನಸ್ತೃಪ್ತಿಂ । ವಸುಧಾ ವಸುಧಾರಯಾ ॥ (೧೦)

ದ್ವಿತೀಯ ತೃತೀಯ ಪಾದಾದಿ

ಕರೋತಿ ಸಹಕಾರಸ್ಯ । ಕಲಿಕೋತ್ಕಲಿಕೋತ್ತರಮ್ ।
ಮನ್ಮನೋ ಮನ್ಮನೋಪ್ಯೇಷ । ಮತ್ತಕೋಕಿಲನಿಸ್ವನಃ ॥ (೧೧)

ದ್ವಿತೀಯ ಚತುರ್ಥ ಪಾದಾದಿ

ಕಥಂ ತ್ವದುಪಲಂಭಾಶಾ । ವಿಹತಾವಿಹ ತಾದೃಶೀ ।
ಅವಸ್ಥಾ ನಾಲಮಾರೋಢು । ಮಂಗನಾಮಂಗನಾಶಿನೀ ॥ (೧೨)

ತೃತೀಯ ಚತುರ್ಥಪಾದಾದಿ

ನಿಗೃಹ್ಯ ನೇತ್ರೇ ಕರ್ಷಂತಿ । ಬಾಲಪಲ್ಲವಶೋಭಿನಾ
ತರುಣಾ ತರುಣಾನ್ ಕೃಷ್ಟಾ । ನಲಿನೋ ನಲಿನೋನ್ಮುಖಾಃ ॥ (೧೩)

ಪ್ರಥಮ ದ್ವಿತೀಯ ತೃತೀಯ ಪಾದಾದಿ

ವಿಶದಾ ವಿಶದಾಮತ್ತ । ಸಾರಸೇ ಸಾರಸೇ ಜಲೇ ।
ಕುರುತೇ ಕುರುತೇನೇಯಂ । ಹಂಸೀ ಮಾಮಂತಕಾಮಿಷಮ್ ॥ (೧೪)

ಪ್ರಥಮ ದ್ವಿತೀಯ ಚತುರ್ಥ ಪಾದಾದಿ

ವಿಷಮಂ ವಿಷಮನ್ವೇತಿ । ಮದನಂ ಮದನಂದನಃ
ಸಹೇಂದುಕಲಯಾಪೋಢ । ಮಲಯಾ ಮಲಯಾನಿಲಃ ॥ (೧೫)

ಪ್ರಥಮ ತೃತೀಯ ಚತುರ್ಥ ಪಾದಾದಿ

ಮಾನಿನೀ ಮಾ ನಿನೀಷುಸ್ತೇ । ನಿಷಂಗತ್ವಮನಂಗ ಮೇ ।
ಹಾರಿಣೀ ಹಾರಿಣೀ ಶರ್ಮ । ತನುತಾಂ ತನುತಾಂ ಯತಃ ॥ (೧೬)

ದ್ವಿತೀಯ ತೃತೀಯ ಚತುರ್ಥ ಪಾದಾದಿ

ಜಯತಾ ತ್ವನ್ಮುಖೇನಾಸ್ಮಾ । ನಕಥಂ ನ ಕಥಂ ಜಿತಮ್ ।
ಕಮಲಂ ಕಮಲಙ್ಕುರ್ವ । ದಲಿಮದ್ದಲಿ ಮತ್ಪ್ರಿಯೇ ॥ (೧೭)

ಪಾದ ಚತುಷ್ಟಯಾದಿ

ರಮಣೀ ರಮಣೀಯಾ ಮೇ । ಪಾಟಲಾ ಪಾಟಲಾಂಶುಕಾ ।
ವಾರುಣೀ ವಾರುಣೀಭೂತ । ಸೌರಭಾ ಸೌರಭಾಸ್ಪದಮ್ ॥ (೧೮)

೨. ಪಾದಾದಿ ವ್ಯಪೇತ ಯಮಕಭೇದಗಳು :

ಈವರೆಗೆ ಪಾದಾದಿ ಅವ್ಯಪೇತ ಯಮಕ ಪ್ರಭೇದಗಳನ್ನು ನಿರೂಪಿಸಿದ್ದಾಗಿಯೂ ಇಲ್ಲಿಂದ ಮುಂದೆ ಪಾದಾದಿ ವ್ಯಪೇತ ಯಮಕದ ಪ್ರಭೇದಗಳನ್ನು ವಿವರಿಸುವುದಾಗಿಯೂ ದಂಡಿ ತಿಳಿಸಿ (೩–೧೯), ಅದಕ್ಕೆ ಅನು ಗುಣವಾಗಿ ಪದ್ಯ ೨೦ ರಿಂದ ೩೨ರ ವರೆಗೆ ಲಕ್ಷ್ಯಗಳನ್ನು ಉದಾಹರಿಸಿದ್ದಾನೆ.

ಪ್ರಥಮ ದ್ವಿತೀಯ ಪಾದಾದಿ

ಮಧುರೇಣದೃಶಾಂ ಮಾನ । ಮಧುರೇಣ ಸುಗಂಧಿನಾ ॥ (೨೦ಪೂ)

ಪ್ರಥಮ ತೃತೀಯ ಪಾದಾದಿ

ಕರೋಽತಿತಾಮ್ರೋ ರಾಮಾಣಾಂ । ತಂತ್ರೀತಾಡನವಿಭ್ರಮಮ್ ।
ಕರೋತಿ ಸೇರ್ಷ್ಯಂ ಕಾಂತೇ ವಾ । ಶ್ರವಣೋತ್ಪಲತಾಡನಮ್ ॥ (೨೧)

ಪ್ರಥಮ ಚತುರ್ಥ ಪಾದಾದಿ

ಸಕಲಾಪೋಲ್ಲಸನಯಾ । ಕಲಾಪಿನ್ಯಾನುನೃತ್ಯತೇ ।
ಮೇಘಾಲೀ ನರ್ತಿತಾ ವಾತೈಃ । ಸಕಲಾಪೋ ವಿಮುಞ್ಚತಿ ॥ (೨೨)

ದ್ವಿತೀಯ ತೃತೀಯ ಪಾದಾದಿ

ಸ್ವಯಮೇವ ಗಲನ್ಮಾನ । ಕಲಿ ಕಾಮಿನಿ ತೇ ಮನಃ ।
ಕಲಿಕಾಮಿಹ ನೀಪಸ್ಯ । ದೃಷ್ಟ್ವಾ ಕಾಂ ನ ಸ್ಪೃಶೇದ್ ದಶಾಮ್ ॥ (೨೩)

ದ್ವಿತೀಯ ಚತುರ್ಥ ಪಾದಾದಿ

ಆರುಹ್ಯಾಕ್ರೀಡಶೈಲಸ್ಯ । ಚಂದ್ರಕಾಂತಸ್ಥಲೀಮಿಮಾಮ್ ।
ನೃತ್ಯತ್ಯೇಷ ಚಲಚ್ಚಾರು । ಚಂದ್ರಕಾಂತಃ ಶಿಖಾವಲಃ ॥ (೨೪)

ತೃತೀಯ ಚತುರ್ಥ ಪಾದಾದಿ

ವರಾಹೇಣೋದ್ಧೃತಾ ಯಾಸೌ । ವರಾಹೇರುಪರಿ ಸ್ಥಿತಾ ॥ (೨೫)

ಪ್ರಥಮ ದ್ವಿತೀಯ ತೃತೀಯ ಪಾದಾದಿ

ಕರೇಣ ತೇ ರಣೇಷ್ವಂತ । ಕರೇಣ ದ್ವಿಷತಾಂ ಹತಾಃ ।
ಕರೇಣವಃ ಕ್ಷರದ್ರಕ್ತಾ । ಭಾಂತಿ ಸಾಂಧ್ಯಘನಾ ಇವ ॥ (೨೬)

ಪ್ರಥಮ ತೃತೀಯ ಚತುರ್ಥ ಪಾದಾದಿ

ಪರಾಗತರುರಾಜೀವ । ವಾತೈರ್ಧ್ವಸ್ತಾ ಭಟೈಶ್ಚಮೂಃ ।
ಪರಾಗತಮಿವ ಕ್ವಾಪಿ । ಪರಾಗತತಮಂಬರಮ್ ॥ (೨೭)

ದ್ವಿತೀಯ ತೃತೀಯ ಚತುರ್ಥ ಪಾದಾದಿ

ಪಾತು ವೋ ಭಗವಾನ್ ವಿಷ್ಣುಃ । ಸದಾ ನವಘನದ್ಯುತಿಃ ।
ಸ ದಾನವಕುಲಧ್ವಂಸೀ । ಸದಾನವರದಂತಿಹಾ ॥ (೨೪)

ಪಾದಚತುಷ್ಟಯಾದಿ

ಕಮಲೇಃ ಸಮಕೇಶಂ ತೇ । ಕಮಲೇರ್ಷ್ಯಾಕರಂ ಮುಖಮ್ ।
ಕಮಲೇಖ್ಯಂ ಕರೋಷಿ ತ್ವಂ । ಕಮಲೇವೋನ್ಮದಿಷ್ಣುಷು ॥ (೨೯)

ಇಲ್ಲಿಯವರೆಗಿನ (i–x) ಯಮಕಭೇದಗಳು ಸಜಾತೀಯ ವ್ಯಪೇತ ಪಾದಾದಿ ಯಮಕಭೇದಗಳು ; ಈ ಮುಂದಿನವು (xi–xiii) ವಿಜಾತೀಯ ಪಾದಾದಿ ವ್ಯಪೇತ ಯಮಕ ಭೇದಗಳು :

ಮುದಾ ರಮಣಮನ್ವೀತ । ಮುದಾರಮಣಿಭೂಷಣಾಃ ।
ಮದಭ್ರಮದ್ದೃಶಃ ಕರ್ತುಂ । ಮದಭ್ರಜಘನಾಃ ಕ್ಷಮಾಃ ॥ (೩೦)
ಉದಿತೈರನ್ಯಪುಷ್ಟಾನಾ । ಮಾ ರುತೈರ್ಮೇ ಹೃತಂ ಮನಃ
ಉದಿತೈರಪಿ ತೇ ದೂತಿ । ಮಾರುತೈರಪಿ ದಕ್ಷಿಣೈಃ ॥ (೩೧)
ಸುರಾಜಿತಹ್ರಿಯೋ ಯೂನಾಂ । ತನುಮಧ್ಯಾಸತೇ ಸ್ತ್ರಿಯಃ ।
ತನುಮಧ್ಯಾಃ ಕ್ಷರತ್ಸ್ವೇದ । ಸುರಾಜಿತಮುಖೇಂದವಃ ॥ (೩೨)

೩. ಅವ್ಯಪೇತ–ವ್ಯಪೇತಾತ್ಮ ಯಮಕಭೇದಗಳು :

ದಂಡಿ ಈವರೆಗೆ ವ್ಯಪೇತಯಮಕಪ್ರಭೇದಗಳು ನಿದರ್ಶಿತವಾದುವೆಂದೂ, ಇನ್ನು ಮುಂದೆ ಅವ್ಯಪೇತ–ವ್ಯಪೇತಾತ್ಮಕವಾದವು ನಿರೂಪಿಸಲ್ಪಡುತ್ತವೆಯೆಂದೂ ತಿಳಿಸಿ (೩–೩೩), ಅವುಗಳ ಲಕ್ಷ್ಯಗಳನ್ನು ಹೀಗೆ ಉದಾಹರಿಸಿದ್ದಾನೆ:

ಸಾಲಂ ಸಾಲಂಬಕಲಿಕಾ । ಸಾಲಂ ಸಾಲಂ ನ ವೀಕ್ಷಿತುಮ್ ।
ನಾಲೀನಾಲೀನವಕುಲಾ । ನಾಲೀ ನಾಲೀಕಿನೀರಪಿ ॥ (೩೪)
ಕಾಲಂ ಕಾಲಮನಾಲಕ್ಷ್ಯ । ತಾರತಾರಕಮೀಕ್ಷಿತುಮ್ ।
ತಾರತಾರಮ್ಯರಸಿತಂ । ಕಾಲಂ ಕಾಲಮಹಾಘನಮ್ ॥ (೩೫)
ಯಾಮ ಯಾಮತ್ರಯಾಧೀನಾ । ಯಾಮಯಾ ಮರಣಂ ನಿಶಾ ।
ಯಾಮಯಾಮ ಧಿಯಾ ಸ್ವರ್ತ್ಯಾ । ಯಾ ಮಯಾ ಮಥಿತೈವ ಸಾ ॥ (೩೬)

ಹೀಗೆ ಪಾದಾದಿ ಯಮಕಗಳ ಹಾಗೂ ಅವುಗಳ ಪ್ರಭೇದಗಳ ನಡೆ ನಿರೂಪಿತವಾಗಿದೆಯೆಂದೂ ಇತರ ಪ್ರಭೇದಗಳನ್ನು ಹೀಗೆಯೇ ಊಹಿಸಿಕೊಳ್ಳುವುದೆಂದೂ ದಂಡಿ ತಿಳಿಸಿ (೩–೩೭), ಗ್ರಂಥವಿಸ್ತರಭೀತಿಯಿಂದ ಭೇದಾಂತರಗಳನ್ನು ನಿರೂಪಿಸಲು ಹೋಗಿಲ್ಲವೆಂದೂ ಮುಂದೆ ದುಷ್ಕರಯಮಕದ ಕೆಲವು ಪ್ರಭೇದಗಳನ್ನು ವಿವರಿಸುವುದಾಗುವುದೆಂದೂ ಸೂಚಿಸಿದ್ದಾನೆ (೩–೩೮). ಈ ಮೊದಲು ಹೇಳಿದ ಪಾದಾದಿ ಯಮಕಗಳು ಸುಕರ ಯಮಕಗಳಾಗಿವೆ; ಮುಂದೆ ನಿರೂಪಿತವಾಗುವ ಪಾದಮಧ್ಯಯಮಕಗಳು ದುಷ್ಕರಯಮಕಗಳಾಗಿರುತ್ತವೆ ಎನ್ನುವುದು ರತ್ನಶ್ರೀಜ್ಞಾನನ ವ್ಯಾಖ್ಯಾಭಾಗದಿಂದ ವಿಶದವಾಗುತ್ತದೆ.

ಪಾದಮಧ್ಯ ಅವ್ಯಪೇತ (+ವ್ಯಪೇತ)

ಸ್ಥಿರಾಯತೇ ಯತೇಂದ್ರಿಯೋ । ನ ಹೀಯತೇ ಯತೇರ್ಭವಾನ್ ।
ಅಮಾಯತೇಯತೇಽಪ್ಯಭೂತ್ । ಸುಖಾಯ ತೇಽಯತೇ ಕ್ಷಯಮ್ ॥ (೩೯)

ಪಾದಮಧ್ಯ ವ್ಯಪೇತ

ಸಭಾಸು ರಾಜನ್ನಸುರಾಹತೈರ್ಮುಖೈ । ರ್ಮಹೀಸುರಾಣಾಂ ವಸುರಾಜಿತೈಃ ಸ್ತುತಾಃ ।
ನ ಭಾಸುರಾ ಯಾಂತಿ ಸುರಾನ್ನ ತೇ ಗುಣಾಃ । ಪ್ರಜಾಸು ರಾಗಾತ್ಮಸು ರಾಶಿತಾಂ ಗತಾಃ ॥ (೪೦)

ಪಾದಚತುಷ್ಟಯಾಂತ ವ್ಯಪೇತ ಯಮಕ

ತವ ಪ್ರಿಯಾ ಸಚ್ಚರಿತಾಪ್ರಮತ್ತ ಯಾ । ವಿಭೂಷಣಂ ಧಾರ್ಯಮಿಹಾಂಶುಮತ್ತಯಾ ।
ರತೋತ್ಸವಾಮೋದವಿಶೇಷಮತ್ತಯಾ । ನ ಮೇ ಫಲಂ ಕಿಂಚನ ಕಾಂತಿಮತ್ತಯಾ ॥ (೪೧)

ಪಾದಚತುಷ್ಟಯಾಂತ ಅವ್ಯಪೇತ (+ವ್ಯಪೇತ) ಯಮಕ

ಭವಾದೃಶಾ ನಾಥ ನ ಜಾನತೇ ನತೇ । ರಸಂ ವಿರುದ್ಧೇ ಖಲು ಸನ್ನತೇನತೇ ।
ಯ ಏವ ದೀನಾಃ ಶಿರಸಾ ನತೇನ ತೇ ॥ ಚರಂತ್ಯಲಂ ದೈನ್ಯರಸೇನ ತೇನ ತೇ ॥ (೪೨)

ಮಧ್ಯಾಂತ ವ್ಯಪೇತ ಯಮಕ

ಲೀಲಾಸ್ಮಿತೇನ ಶುಚಿನಾ ಮೃದುನೋದಿತೇನ । ವ್ಯಾಲೋಕಿತೇನ ಲಘುನಾ ಗುರುಣಾ ಗತೇನ ।
ವ್ಯಾಜೃಂಭಿತೇನ ಜಘನೇನ ಚ ದರ್ಶಿತೇನ । ಸಾ ಹಂತಿ ತೇನ ಗಲಿತಂ ಮಮ ಜೀವಿತೇನ ॥ (೪೩)

ಮಧ್ಯಾಂತ ಅವ್ಯಪೇತ (+ವ್ಯಪೇತ) ಯಮಕ

ಶ್ರೀಮಾನಮಾನಮರವರ್ತ್ಮ ಸಮಾನಮಾನ । ಮಾತ್ಮಾನಮಾನತಜಗತ್ಪ್ರಥಮಾನಮಾನಮ್ ।
ಭೂಮಾನಮಾನಯತಿ ಯಃ ಸ್ಥಿತಿಮಾನಮಾನ । ನಾಮಾನಮಾನಮತಮಪ್ರತಿಮಾನಮಾನಮ್ ॥ (೪೪)

ಆದಿಮಧ್ಯ ವ್ಯಪೇತ ಯಮಕ

ಸಾರಯಂತಮುರಸಾ ರಮಯಂತೀ । ಸಾರಭೂತಮುರುಸಾರಧರಾ ತಮ್ ।
ಸಾರವಾನುಕೃತಸಾರಸಕಾಂಚೀ । ಸಾ ರಸಾಯನಮಸಾರಮವೈತಿ ॥ (೪೫)

ಆದಿಮಧ್ಯ ಅವ್ಯಪೇತ (+ವ್ಯಪೇತ) ಯಮಕ (೨–೪), ಆದಿಮಧ್ಯಾಂತ ವ್ಯಪೇತಾವ್ಯಪೇತ ಯಮಕ (೧–೩).

ನಯಾನಯಾಲೋಚನಯಾನಯಾನಯಾ । ನಯಾನಯಾಂಧಾನ್ ವಿನಯಾನಯಾಯತೇ ।
ನ ಯಾನಯಾಸೀರ್ಜಿನಯಾನಯಾ ನಯಾ । ನಯಾನಯಾಂಸ್ತಾಂಜನಯಾನಯಾಶ್ರಿತಾನ್ ॥ (೪೬)

ಆದ್ಯಂತವ್ಯಪೇತ ಯಮಕ

ರವೇಣ ಭೌಮೋ ಧ್ವಜವರ್ತಿವೀರವೇ । ರವೇಜಿ ಸಂಯತ್ಯತುಲಾಸ್ತ್ರಗೌರವೇ ।
ರವೇರಿವೋಗ್ರಸ್ಯ ಪುರೋ ಹರೇರವೇ । ರವೇತ ತುಲ್ಯಂ ರಿಪುಮಸ್ಯ ಭೈರವೇ ॥ (೪೭)

ಆದ್ಯಂತ ಅವ್ಯಪೇತ(+ವ್ಯಪೇತ)ಯಮಕ

ಮಯಾ ಮಯಾಲಂಬ್ಯಕಲಾಮಯಾಮಯಾ । ಮಯಾಮಯಾತವ್ಯವಿರಾಮಯಾಮಯಾ ।
ಮಯಾಮಯಾರ್ತಿಂ ನಿಶಯಾಮಯಾಮಯಾ । ಮಯಾಮಯಾಮೂಂ ಕರುಣಾಮಯಾಮಯಾ ॥ (೪೮)

ಆದಿಮಧ್ಯಾಂತ ವ್ಯಪೇತ ಯಮಕ

ಮತಾಂಧುನಾನಾರಮತಾಮಕಾಮತಾ । ಮತಾಪಲಬ್ಧಾಗ್ರಿಮತಾನುಲೋಮತಾ ।
ಮತಾವಯುತ್ಯುತ್ತಮತಾವಿಲೋಮತಾ । ಮತಾಮ್ಯತಸ್ತೇ ಸಮತಾ ನ ವಾಮತಾ ॥ (೪೯)

ಆದಿಮಧ್ಯಾಂತ ಅವ್ಯಪೇತ(+ವ್ಯಪೇತ)ಯಮಕ

ಕಾಲಕಾಲಗಲಕಾಲಕಾಲಮುಖಕಾಲಕಾಲ । ಕಾಲಕಾಲಘನಕಾಲಕಾಲಘನಕಾಲಕಾಲ ।
ಕಾಲಕಾಲಸಿತಕಾಲಕಾ ಲಲನಿಕಾಲಕಾಲ । ಕಾಲಕಾಲಗತು ಕಾಲಕಾಲ ಕಲಿಕಾಲಕಾಲ । (೫೦)

ಇವೆಲ್ಲ ಸಜಾತೀಯವಾದ ಲಕ್ಷ್ಯಗಳು.

ಈವರೆಗೆ ದಂಡಿ ಅವ್ಯಪೇತ, ವ್ಯಪೇತ, ಅವ್ಯಪೇತ–ವ್ಯಪೇತವ್ಯಾಮಿಶ್ರ ಯಮಕ ಭೇದಗಳನ್ನು ಕುರಿತಿದ್ದು, ಇಲ್ಲಿಂದ ಮುಂದೆ ವಿಶಿಷ್ಟವಾದ ನಾಮಾಂತರಗಳನ್ನುಳ್ಳ ಕೆಲವು ಯಮಕಪ್ರಭೇದಗಳನ್ನು ನಿರೂಪಿಸಿರುವುದು ಕಾಣುತ್ತದೆ.

೪. ಸಂದಷ್ಟ ಯಮಕ

ಎರಡೆರಡು ಪಾದಗಳ ಅಂತಾದಿಗಳಲ್ಲಿ (೧–೨, ೨–೩, ೩–೪) ಯಮಕ ಪಾಲಿತವಾದಲ್ಲಿ, ಅದು ಸಂದಷ್ಟಯಮಕವಾಗುತ್ತದೆ. ಇದು ಮೇಲೆ ಹೇಳಿದವುಗಳಲ್ಲೇ ಅಂತರ್ಗತವಾಗಿದ್ದರೂ ವಿಸ್ತೃತವಾಗಿ ಅದನ್ನಿಲ್ಲಿ ವರ್ಣಿಸಲಾಗುವುದು (೩–೫೧) ಎಂದು ತಿಳಿಸಿ, ಈ ಲಕ್ಷ್ಯವನ್ನು ಬಳಿಕ ಕೊಟ್ಟಿದೆ :

ಉಪೋಢರಾಗಾಪ್ಯಬಲಾ ಮದೇನ ಸಾ । ಮದೇನಸಾ ಮನ್ಯುರಸೇನ ಯೋಜಿತಾ ।
ನ ಯೋಜಿತಾತ್ಮಾನಮನಙ್ಗತಾಪಿತಾ । ಙ್ಗತಾಪಿ ತಾಪಾಯ ಮಮಾಸ ನೇಯತೇ ॥ (೫೨)

[ಹೋಲಿಕೆ : ಚಕ್ರವಾಲ, ನಾಟ್ಯಶಾಸ್ತ್ರ, ೧೬–೭೨; ವ್ಯತ್ಯಾಸ : ಸಂದಷ್ಟ. ನಾಟ್ಯಶಾಸ್ತ್ರ ೧೬–೭೬]

೫. ಸಮುದ್ಗ ಯಮಕ

ನಾಲ್ಕುಪಾದಗಳಲ್ಲಿ ಯಾವುದೇ ಎರಡು ಪಾದಗಳ ಅಭ್ಯಾಸ ಎಂದರೆ ಆವೃತ್ತಿಯಾದಲ್ಲಿ, ಅದು ಸಮುದ್ಗ ಯಮಕವಾಗುತ್ತದೆ; ಅಲ್ಲದೆ, ಪಾದಗಳ ಆವೃತ್ತಿಯ ಅನೇಕರೂಪತೆಯೇ ಸಮುದ್ಗಯಮಕದ ಮತ್ತೊಂದು ಲಕ್ಷಣ (೩–೫೩) ಎಂಬುದಾಗಿ ತಿಳಿಸಿ, ಬಳಿಕ ಈ ಲಕ್ಷ್ಯವನ್ನು ಕೊಟ್ಟಿದೆ :

ವ್ಯವಹಿತ ಸಮುದ್ಗ (೧ + ೩, ೨ + ೪)

ನಾ ಸ್ಥೇಯಃ ಸತ್ತ್ವಯಾ ವರ್ಜ್ಯಃ । ಪರಮಾಯತಮಾನಯಾ ।
ನಾಸ್ಥೇಯಃ ಸ ತ್ವಯಾವರ್ಜ್ಯಃ । ಪರಮಾಯತಮಾನಯಾ ॥ (೫೪)

ಅವ್ಯವಹಿತ ಸಮುದ್ಗ (೧ + ೨, ೩ + ೪)

ನರಾ ಜಿತಾ ಮಾನನಯಾಸಮೇತ್ಯ । ನ ರಾಜಿತಾ ಮಾನನಯಾ ಸಮೇತ್ಯ ।
ವಿನಾಶಿತಾ ವೈಭವತಾಪನೇನ । ವಿನಾಶಿತಾ ವೈ ಭವತಾಪನೇನ ॥ (೫೫)

ವ್ಯವಹಿತಾವ್ಯವಹಿತ ಸಮುದ್ಗ (೧ + ೪, ೨ + ೩)

ಕಲಾಪಿನಾಂ ಚಾರುತಯೋಪಯಾಂತಿ । ವೃಂದಾನಿ ಲಾಪೋಢಘನಾಗಮಾನಾಮ್ ।
ವೃಂದಾನಿಲಾಪೋಢಘನಾಗಮಾನಾಂ । ಕಲಾಪಿನಾಂ ಚಾರುತಯೋಽಪಯಂತಿ ॥ (೫೬)

ಅವ್ಯವಹಿತ ಸಮುದ್ಗ (೧–೨)

ನಮಂದಯಾವರ್ಜಿತಮಾನಸಾತ್ಮಯಾ । ನ ಮಂದಯಾವರ್ಜಿತಮಾನಸಾತ್ಮಯಾ ।
ಉರಸ್ಯುಪಾಸ್ತೀರ್ಣಪಯೋಧರದ್ವಯಂ । ಮಯಾ ಸಮಾಲಿಂಗ್ಯತ ಜೀವಿತೇಶ್ವರಃ ॥ (೫೭)

ವ್ಯವಹಿತ ಸಮುದ್ಗ (೧–೩)

ಸಭಾ ಸುರಾಣಾಮಬಲಾ ವಿಭೂಷಿತಾ । ಗುಣೈಸ್ತವಾರೋಹಿ ಮೃಣಾಲನಿರ್ಮಲೈಃ ।
ಸ ಭಾಸುರಾಣಾಮಬಲಾ ವಿಭೂಷಿತಾ । ವಿಹಾರಯನ್ನಿರ್ವಿಶ ಸಂಪದಃ ಪುರಾಮ್ ॥ (೫೮)

ವ್ಯವಹಿತ ಸಮುದ್ಗ (೧–೪)

ಕಲಂ ಕಮುಕ್ತಂ ತನುಮಧ್ಯನಾಮಿಕಾ । ಸ್ತನದ್ವಯೀ ಚ ತ್ವದೃತೇ ನ ಹಂತ್ಯತಃ ।
ನ ಯಾತಿ ಭೂತಂ ಗಣನೇ ಭವನ್ಮುಖೀ । ಕಲಂಕಮುಕ್ತಂ ತನುಮಧ್ಯನಾಮಿಕಾ ॥ (೫೯)

ಅವ್ಯವಹಿತ ಸಮುದ್ಗ (೨–೩)

ಯಶಶ್ಚ ತೇ ದಿಕ್ಷು ರಜಶ್ಚ ಸೈನಿಕಾ । ವಿತನ್ವತೇಽಜೋಪಮ ದಂಶಿತಾ ಯುಧಾ ।
ವಿತನ್ವತೇಜೋಽಪಮದಂ ಶಿತಾಯುಧಾ । ದ್ವಿಷಾಂ ಚ ಕುರ್ವಂತಿ ಕುಲಂ ತರಸ್ವಿನಃ ॥ (೬೦)

ವ್ಯವಹಿತ ಸಮುದ್ಗ (೨–೪) [ನಾಟ್ಯಶಾ. ವಿಕ್ರಾಂತ, ೧೬–೭೧]

ಬಿಭರ್ತಿ ಭೂಮೇರ್ವಲಯಂ ಭುಜೇನ ತೇ । ಭುಜಂಗಮೋಽಮಾ ಸ್ಮರತೋ ಮದಂಚಿತಮ್ ।
ಶೃಣೂಕ್ತಮೇಕಂ ಸ್ವಮವೇತ್ಯ ಭೂಧರಂ । ಭುಜಂ ಗಮೋ ಮಾ ಸ್ಮ ರತೋ ಮದಂ ಚಿತಮ್ ॥ (೬೧)

ಅವ್ಯವಹಿತ ಸಮುದ್ಗ (೩–೪)

ಸ್ಮರಾನಲೋ ಮಾನವಿವರ್ಧಿತೋ ಯಃ । ಸ ನಿರ್ವೃತಿಂ ತೇ ಕಿಮಪಾಕರೋತಿ ।
ಸಮಂತತಸ್ತಾಮರಸೇಕ್ಷಣೇ ನ । ಸಮಂ ತತಸ್ತಾಮರಸೇ ಕ್ಷಣೇನ ॥ (೬೨)

ಅವ್ಯವಹಿತ ಸಮುದ್ಗ (೧–೨–೩)

ಪ್ರಭಾವತೋನಾಮ ನ ವಾಸವಸ್ಯ । ಪ್ರಭಾವತೋ ನಾಮನ ವಾ ಸವಸ್ಯ ।
ಪ್ರಭಾವತೋ ನಾಮ ನವಾಸವಸ್ಯ । ವಿಚ್ಛಿತ್ತಿರಾಸೀತ್ ತ್ವಯಿ ವಿಷ್ಟಪಸ್ಯ ॥ (೬೩)

ವ್ಯವಹಿತಾವ್ಯವಹಿತ (೧–೩–೪; ೩–೪)

ಪರಂಪರಾಯಾ ಬಲವಾರಣಾನಾಂ । ಪರಂ ಪರಾಯಾ ಬಲವಾರಣಾನಾಮ್ ।
ಧೂಲೀಃ ಸ್ಥಲೀರ್ವ್ಯೋಮ್ನಿ ವಿಧಾಯ ರುಂಧನ್ । ಪರಂ ಪರಾಯಾ ಬಲವಾ ರಣಾನಾಮ್ ॥ (೬೪)

ಅವ್ಯವಹಿತ ಸಮುದ್ಗ (೨–೩–೪)

ನ ಶ್ರದ್ದಧೇ ವಾಚಮಲಜ್ಜ ಮಿಥ್ಯಾ । ಭವದ್ವಿಧಾನಾಮಸಮಾಹಿತಾನಾಮ್ ।
ಭವದ್ವಿಧಾನಾಮಸಮಾಹಿತಾನಾಂ । ಭವದ್ವಿಧಾನಾಮಸಮಾಹಿತಾನಾಮ್ ॥ (೬೫)

ಅವ್ಯವಹಿತ ಪಾದಚತುಷ್ಟಯ ಸಮುದ್ಗ (ನಾಟ್ಯಶಾ. ಚತುರ್ವ್ಯವಸಿತ, ೧೬–೮೨)

ಸನ್ನಾಹಿತೋಮಾನಮರಾಜಸೇನ । ಸನ್ನಾಹಿತೋಮಾನಮ ರಾಜಸೇನ ।
ಸನ್ನಾ ಹಿತೋಮಾನಮರಾಜಸೇನ । ಸನ್ನಾಹಿತೋ ಮಾನಮ ರಾಜಸೇ ನ ॥ (೬೬)

೬. ಶ್ಲೋಕಾಭ್ಯಾಸ ಯಮಕ

(ಅರ್ಥಾಂತರದಿಂದ ಕೂಡಿರುವ) ಸಮಗ್ರ ಶ್ಲೋಕದ ಪುನರಾವೃತ್ತಿಯಾದಲ್ಲಿ, ಅದು 'ಶ್ಲೋಕಾಭ್ಯಾಸ' ವೆಂಬ ಯಮಕಭೇದವಾಗುತ್ತದೆ (೩–೬೭). ಅದರ ಲಕ್ಷ್ಯ :

ವಿನಾಯಕೇನ ಭವತಾ ವೃತ್ತೋಪಚಿತಬಾಹುನಾ ।
ಸ್ವಮಿತ್ರೋದ್ಧಾರಿಣಾ ಭೀತಾ ಪೃಥ್ವೀ ಯಮತುಲಾಶ್ರಿತಾ ॥ (೬೮)
ವಿನಾಯಕೇನ ಭವತಾ ವೃತ್ತೋಪಚಿತಬಾಹುನಾ ।
ಸ್ವಮಿತ್ರೋದ್ಧಾರಿಣಾಭೀತಾ ಪೃಥ್ವೀಯಮತುಲಾಶ್ರಿತಾ ॥ (೬೯)

೭. ಮಹಾಯಮಕ

ನಾಲ್ಕುಪಾದಗಳಲ್ಲಿಯೂ ಪಾದದ ಆವೃತ್ತಿಯಿಂದಾಗಿ ಏಕಾಕೃತಿಯಿದ್ದು, ಪಾದಾಂತರ್ಗತವಾಗಿಯೂ ಯಮಕವು ಗೋಚರಿಸುತ್ತಿದ್ದಲ್ಲಿ, ಅದು ಮಹಾಯಮಕಭೇದವಾಗುತ್ತದೆ (೩–೭೦). ಅದರ ಲಕ್ಷ್ಯ :

ಸಮಾನಯಾಸಮಾನಯಾ । ಸಮಾನಯಾಸಮಾನಯಾ ।
ಸ ಮಾ ನ ಯಾಸಮಾನಯಾ । ಸಮಾನಯಾಸಮಾಯಾ ॥ (೭೧)

೮. ವ್ಯಪೇತ ಅವ್ಯಪೇತ ಸಂದಷ್ಟ ವ್ಯಾಮಿಶ್ರ

ಧರಾಧರಾಕಾರಧರಾ ಧರಾಭುಜಾಂ । ಭುಜಾ ಮಹೀಂ ಪಾತುಮಹೀನವಿಕ್ರಮಾಃ ।
ಕ್ರಮಾತ್ ಸಹಂತೇ ಸಹಸಾ ಹತಾರಯೋ । ರಯೋದ್ಧುರಾ ಮಾನಧುರಾವಲಂಬಿನಃ ॥ (೭೨)

೯. ಪ್ರತಿಲೋಮಯಮಕ

ಪಾದಗಳ ಪ್ರತಿಲೋಮಗತಿವಾಚನದಿಂದ ಆವೃತ್ತಿ ಸಾಧ್ಯವಾದಲ್ಲಿ, ಅದು ಪ್ರತಿಲೋಮಯಮಕವೆನಿಸುತ್ತದೆ; ಇದರಲ್ಲಿ ಪಾದ ಪ್ರತಿಲೋಮ, ಅರ್ಧ(ಶ್ಲೋಕ)ಪ್ರತಿಲೋಮ, ಶ್ಲೋಕಪ್ರತಿಲೋಮ ಎಂಬುದಾಗಿ ಮೂರು ವಿಧಗಳು (೩–೭೩). ಇವುಗಳಿಗೆ ಕ್ರಮವಾಗಿ ಲಕ್ಷ್ಯಗಳು :

'ಪಾದ ಪ್ರತಿಲೋಮಯಮಕ' : ೧-೩ನೆಯ ಪಾದಗಳ ಪ್ರತಿಲೋಮಗತಿ

ಯಾಮತಾಶ ಕೃತಾಯಾಸಾ । ಸಾ ಯಾತಾ ಕೃಶತಾ ಮಯಾ ।
ರಮಣಾರಕತಾ ತೇಽಸ್ತು । ಸ್ತುತೇತಾಕರಣಾಮರ ॥ (೭೪)

'ಅರ್ಧ (ಶ್ಲೋಕ) ಪ್ರತಿಲೋಮಯಮಕ' ೧-೨ನೆಯ ಪಾದಗಳ ಪ್ರತಿಲೋಮಗತಿ

ನಾದಿನೋಽಮದನಾ ಧೀಃ ಸ್ವಾ। ನ ಮೇ ಕಾಚನ ಕಾಮಿತಾ ।
ತಾಮಿಕಾ ನ ಚ ಕಾಮೇನ । ಸ್ವಾಧೀನಾ ದಮನೋದಿನಾ ॥ (೭೫)

'ಶ್ಲೋಕ ಪ್ರತಿಲೋಮಯಮಕ' : ಒಟ್ಟಿಗೆ ನಾಲ್ಕು ಪಾದಗಳ ಪ್ರತಿಲೋಮಗತಿ

ಯಾನವಮಾನಯಮಾರಾವಿ । ಕಶೋನಾನಜನಾಶನಾ
ಯಾಮುದಾರಶತಾಧೀನಾ । ಮಾಯಾಮಾಯಮನಾದಿಸಾ ॥ (೭೬)
ಸಾ ದಿನಾಮಯಮಾಯಾಮಾ । ನಾಧೀತಾ ಶರದಾಮಯಾ ।
ನಾಶನಾಜನನಾ ಶೋಕ ।ವಿರಾಮಾಯ ನ ಮಾನಯಾ ॥ (೭೭)

ವಾಮನನ 'ಕಾವ್ಯಾಲಂಕಾರಸೂತ್ರವೃತ್ತಿ' :

ವಾಮನನು ''ಪಾದಾಃ ಪಾದಸ್ಯೈಕಸ್ಯಾನೇಕಸ್ಯ ಚಾದಿಮಧ್ಯಾಂತಭಾಗಾಃ ಸ್ಥಾನಾನಿ'' ಎಂಬುದಾಗಿ ಸೂತ್ರವನ್ನು ಬರೆದು ಇವುಗಳಿಗೆ ಅನುಕ್ರಮವಾಗಿ ಉದಾಹರಣೆಗಳನ್ನು ಕೊಟ್ಟಿದ್ದಾನೆ (ಅಧಿಕರಣ ೪-ಸೂತ್ರ ೨ರ ಮುಂದೆ) :

ಪಾದಯಮಕ

ಅಸಜ್ಜನವಚೋ ಯಸ್ಯ । ಕಲಿಕಾಮಧುಗರ್ಹಿತಮ್
ತಸ್ಯ ನ ಸ್ಯಾದ್ವಿಷತರೋಃ । ಕಲಿಕಾಮಧು ಗರ್ಹಿತಮ್ ॥

ಪಾದಾದಿ

ಹನ್ತ ಹನ್ತರರಾತೀನಾಂ । ಧೀರ ಧೀರರ್ಚಿತಾ ತವ ।
ಕಾಮಂ ಕಾಮಂದಕೀ ನೀತಿ । ರಸ್ಯಾ ರಸ್ಯಾ ದಿವಾನಿಶಮ್ ॥

ಪಾದಮಧ್ಯ

ವಸುಪರಾಸು ಪರಾಸುವಿಪೋಜ್ಝಿತೀ । ಷ್ವವಿಕಲಂ ವಿಕಲಂಕಶಶಿಪ್ರಭಮ್ ।
ಪ್ರಿಯತಮಂ ಯತಮಂತುಮನೀಶ್ವರಂ । ರಸಿಕತಾ ಸಿಕತಾಪ್ಸ್ವಿವ ತಾಸು ಕಾ ॥

ಅಂತ್ಯಯಮಕ

ಸುದೃಶೋ ರಸರೇಚಕಿತಂ ಚಕಿತಂ । ಭವತೀಕ್ಷಿತಮಸ್ತಿ ಮಿತಂ ಸ್ಮಿತಂ ।
ಅಪಿ ಹಾಸಲವಸ್ತವಕಸ್ತವ ಕ । ಸ್ತುಲಯೇನ್ನನು ಕಾಮಧುರಾಂ ಮಧುರಾಂ ॥

ಪಾದಾದಿ (೧-೨ನೆಯ ಪಾದಗಳಲ್ಲಿ)

ಭ್ರಮರ ದ್ರುಮಪುಷ್ಪಾಣಿ । ಭ್ರಮ ರತ್ಯೈ ಪಿಬನ್ ಮಧು ।
ಕಾ ಕುಂದಕುಸುಮೇ ಪ್ರೀತಿಃ ॥ ಕಾಕುಂ ದತ್ವಾ ವಿರೌಷಿ ಕಿಂ ॥

ಪಾದಮಧ್ಯ (೧-೨; ೩-೪)

ಅಶ್ಯಶಕ್ಯಂ ತ್ವಯಾ ದಶ್ತುಂ । ದುಃಖಂ ಶಕ್ಯಂತರಾತ್ಮನಿ ।
ಬಾಷ್ಪೋ ವಾಹೀಕನಾರೀಣಾಂ । ವೇಗವಾಹೀ ಕಪೋಲಯೋಃ ॥

ಪಾದಾಂತ್ಯ (೧-೨; ೩-೪)

ಸಪದಿ ಕೃತಪದಸ್ತ್ವದೀಕ್ಷಿತೇನ । ಸ್ಮಿತಶುಚಿನಾ ಸ್ಮರತತ್ತ್ವದೀಕ್ಷಿತೇನ ।
ಭವತಿ ಬತ ಜನಃ ಸಚಿತ್ತದಾಹೋ । ನ ಖಲು ಮೃಷಾ ಕುತ ಏವ ಚಿತ್ತದಾಹೋ ॥

ಪಾದಾಂತ್ಯ (೨-೪)

ಉದ್ವೇಜಯತಿ ಭೂತಾನಿ । ಯಸ್ಯ ರಾಜ್ಞಃ ಕುಶಾಸನಮ್ ।
ಸಿಂಹಾಸನವಿಯುಕ್ತಸ್ಯ । ತಸ್ಯ ಕ್ಷಿಪ್ರಂ ಕುಶಾಸನಮ್ ॥

ಸಮಸ್ತಪಾದಾಂತ

ನತೋನ್ನತಭ್ರೂಗತಿಬದ್ಧಲಾಸ್ಯಾಂ । ವಿಲೋಕ್ಯ ತನ್ವೀಂ ಶಶಿಪೇಶಲಾಸ್ಯಾಂ ।
ಮನಃ ಕಿಮುತ್ತಾಮ್ಯಸಿ ಚಂಚಲಾಸ್ಯಾಂ । ಕೃತೀ ಸ್ಮರಾಜ್ಞಾ ಯದಿ ಪುಷ್ಕಲಾ ಸ್ಯಾಂ ॥

ಏಕಾಕ್ಷರಯಮಕ

ನಾನಾಕಾರೇಣ ಕಾಂತಾಭ್ರೂ । ರಾರಾಧಿತಮನೋಭುವಾ ।
ವಿವಿಕ್ತೇನ ವಿಲಾಸೇನ । ತತಕ್ಷ ಹೃದಯಂ ನೃಣಾಂ ॥

ಅನೇಕಾಕ್ಷರಯಮಕ

ವಿವಿಧಧವವನಾ ನಾಗಗದ್ಧರ್ಧನಾನಾ । ವಿವಿತತಗಗನಾನಾಮುನುಜ್ಝಜ್ಝನಾನಾ ।
ರುರುಶಶಲಲನಾ ನಾವಬಂಧುಂಧುನಾನಾ । ಮಮ ಹಿ ಹಿತತನಾನಾ ನನಸ್ವಸ್ವ ನಾನಾ॥

ರುದ್ರಟನ 'ಕಾವ್ಯಾಲಂಕಾರ' :

ಸಮಸ್ತಪಾದಜ ಹಾಗೂ ಏಕದೇಶಜಗಳೆಂಬ ಪ್ರಮುಖವಿಭಾಗಗಳ ಕೆಳಗೆ ಮೂರನೆಯ ಅಧ್ಯಾಯದಲ್ಲಿ ರುದ್ರಟ ಗುರುತಿಸುವ ಯಮಕದ ಒಳಭೇದಗಳನ್ನು ಈ ಮುಂದೆ ನಿರೂಪಿಸಬಹುದಾಗಿದೆ.

೧. ಸಮಸ್ತಪಾದಜ ಯಮಕಭೇದಗಳು :

(i) ಪರ್ಯಾಯೇಣಾನ್ಯೇಷಾಮಾವೃತ್ತಾನಾಂ ಸಹಾದಿಪಾದೇನ ।
ಮುಖಸಂದಂಶಾವೃತಯಃ ಕ್ರಮೇಣ ಯಮಕಾನಿ ಜಾಯಂತೇ ॥ (೩)

ಮೊದಲ ಪಾದದೊಡನೆ ೨, ೩ ಹಾಗೂ ೪ ನೆಯ ಪಾದಗಳ ಆವೃತ್ತಿ ಕ್ರಮವಾಗಿ ಮುಖ, ಸಂದಂಶ, ಆವೃತಿ ಎಂಬ ಭೇದಗಳೆನಿಸುವುವು (೧-೨ರ ಸಾಮ್ಯ=ಮುಖ; ೧-೩ರ ಸಾಮ್ಯ=ಸಂದಂಶ; ೧–೪ರ ಸಾಮ್ಯ= ಆವೃತಿ). ಇವುಗಳಿಗೆ ಕ್ರಮವಾಗಿ ಲಕ್ಷ್ಯಗಳು :

ಮುಖ

ಚಕ್ರಂ ದಹತಾರಂ । ಚಕ್ರಂದ ಹತಾರವಮ್ ।
ಖಡ್ಗೇನ ತವಾಜಾ । ರಾಜನ್ನರಿನಾರೀ ॥ (೪)

ಸಂದಂಶ

ಸನ್ನಾರೀಭರಣೋಮಾಯ । ಮಾರಾಧ್ಯ ವಿಧುಶೇಖರಮ್ ।
ಸನ್ನಾರೀಭರಣೋಽಮಾಯ । ಸ್ತತಸ್ತ್ವಂ ಪೃಥಿವೀಂ ಜಯ ॥ (೫)

ಆವೃತಿ

ಮುದಾರತಾಡೀ ಸಮರಾಜಿರಾಜಿತಃ । ಪ್ರವೃದ್ಧತೇಜಾಃ ಪ್ರಥಮೋ ಧನುಷ್ಮತಾಮ್ ।
ಭವಾನ್ಬಿಭರ್ತೀಹ ನಗಶ್ಚ ಮೇದಿನೀ । ಮುದಾರತಾಡೀಸಮರಾಜಿರಾಜಿತಃ ॥ (೬)

(ii) ಪ್ರತ್ಯೇಕಂ ಪಶ್ಚಿಮಯೋರಾವೃತ್ತ್ಯಾ ಪಾದಯೋರ್ದ್ವಿತೀಯೇನ ।
ಯಮಕೇ ಸಂಜಾಯೇತೇ ಗರ್ಭಃ ಸಂದಷ್ಟಕಂ ಚೇತಿ ॥ (೭)

ಎರಡನೆಯ ಪಾದದೊಡನೆ ೩, ೪ನೆಯ ಪಾದಗಳ ಆವೃತ್ತಿ ಕ್ರಮವಾಗಿ ಗರ್ಭ, ಸಂದಷ್ಟಕ ಎಂಬ ಭೇದಗಳೆನಿಸುವುವು (೨–೩ರ ಸಾಮ್ಯ = ಗರ್ಭ; ೨-೪ರ ಸಾಮ್ಯ = ಸಂದಷ್ಟಕ). ಇವುಗಳಿಗೆ ಕ್ರಮವಾಗಿ ಲಕ್ಷ್ಯಗಳು:

ಗರ್ಭ

ಯೋ ರಾಜ್ಯಮಾಸಾದ್ಯ ಭವತ್ಯಚಿಂತಃ । ಸಮುದ್ರತಾರಂಭರತಃ ಸದೈವ ।
ಸಮುದ್ರತಾರಂ ಭರತಃ ಸ ದೈವ । ಪ್ರಮಾಣಮಾರಭ್ಯ ಪಯಸ್ಯುದಾಸ್ತೇ ॥ (೮)

ಸಂದಷ್ಟಕ

ಇದಂ ಚ ಯೇನ ಸ್ವಯಮಾತ್ಮಭೋಗ್ಯತಾಂ । ಸಮಸ್ತಕಾಂಚೀಕಮನೀಯತಾಕುಲಮ್ ।
ನಿತಂಬಬಿಂಬಂ ಕಥಮಸ್ತು ನೋ ನೃಣಾಂ । ಸ ಮಸ್ತಕಾಂಚೀ ಕಮನೀಯತಾಕುಲಮ್ ॥ (೯)

(iii) ಅನ್ಯೋನ್ಯಂ ಪಶ್ಚಿಮಯೋರಾವೃತ್ತ್ಯಾ ಪಾದಯೋರ್ಭವೇತ್ಪುಚ್ಛ ।
ಸರ್ವೈಃ ಸಾರ್ಧಂ ಯುಗಪತ್ಪ್ರಥಮಸ್ಯ ತು ಜಾಯತೇ ಪಂಕ್ತಿಃ ॥ (೧೦)

೩-೪ನೆಯ ಪಾದಗಳು ಪರಸ್ಪರವಾಗಿ ಆವೃತ್ತಿಯಾದರೆ 'ಪುಚ್ಛ'; ೧ನೆಯ ಪಾದವನ್ನು ಇತರ ಮೂರು ಪಾದಗಳೊಂದಿಗೆ ಆವೃತ್ತಿಮಾಡಿದರೆ 'ಪಂಕ್ತಿ' (೩-೪ರ ಸಾಮ್ಯ = ಪುಚ್ಛ; ೧-೨-೩-೪ರ ಸಾಮ್ಯ = ಪಂಕ್ತಿ). ಇವುಗಳಿಗೆ ಕ್ರಮವಾಗಿ ಲಕ್ಷ್ಯಗಳು :

ಪುಚ್ಛ

ಉತ್ತುಂಗಮಾತಂಗಕುಲಾಕುಲೇ ಯೋ । ವ್ಯಜೇಷ್ಟ ಶತ್ರೂನ್ಸಮರೇ ಸದೈವ ।
ಸ ಸಾರಮಾನೀಯ ಮಹಾರಿ ಚಕ್ರಂ । ಸಸಾರ ಮಾನೀ ಯಮಹಾರಿಚಕ್ರಮ್ ॥ (೧೧)

ಪಂಕ್ತಿ

ಸಭಾಜನೇನೋಪರಿ ಪೂರಿತಾಸೌ । ಸಭಾಜನೇ ನೋಪರಿಪೂರಿತಾಸೌ ।
ಸಭಾ ಜನೇನೋಽಪರಿಪೂರಿತಾಸೌ । ಸಭಾಜನೇ ನೋಽಪರಿಪೂರಿತಾಸೌ ॥ (೧೨)

(iv) ಪರಿವೃತ್ತಿರ್ನಾಮ ಭವೇದ್ಯಮಕಂ ಗರ್ಭಾವೃತಿಪ್ರಯೋಗೇಣ ।
ಮುಖಪುಚ್ಛಯೋಶ್ಚ ಯೋಗಾದ್ಯುಗ್ಮಕಮಿತಿ ಪಾದಜಂ ನವಮಮ್ ॥ (೧೩)

ಆವೃತಿ ಮತ್ತು ಗರ್ಭಗಳ ಸಹಪ್ರಯೋಗದಿಂದ 'ಪರಿವೃತ್ತಿ'; ಮುಖ ಮತ್ತು ಪುಚ್ಛಗಳ ಸಹಪ್ರಯೋಗದಿಂದ 'ಯುಗ್ಮಕ' (೧-೪ರ, ೨-೩ರ ಸಾಮ್ಯ = ಪರಿವೃತ್ತಿ; ೧–೨ರ, ೩-೪ರ ಸಾಮ್ಯ = ಯುಗ್ಮಕ). ಇವುಗಳಿಗೆ ಕ್ರಮವಾಗಿ ಲಕ್ಷ್ಯಗಳು :

ಪರಿವೃತ್ತಿ

ಮುದಾ ರತಾಸೌ ರಮಣೀ ಯತಾಽಯಾಂ । ಸ್ಮರಸ್ಯದೋಽಲಂ ಕುರುತೇನವೋಢಾ ।
ಸ್ಮರಸ್ಯದೋಽಲಂಕುರುತೇಽನವೋಢಾ । ಮುದಾರತಾಸೌ ರಮಣೀಯತಾಯಾಮ್ ॥ (೧೪)

ಯುಗ್ಮಕ

ವಿನಾಯಮೇನೋ ನಯತಾಽಸುಖಾದಿನಾ । ವಿನಾ ಯಮೇನೋನಯತಾ ಸುಖಾದಿನಾ ।
ಮಹಾಜನೋಽದೀಯತ ಮಾನಸಾದರಂ । ಮಹಾಜನೋದೀ ಯತಮಾನಸಾದರಮ್ ॥ (೧೫)

ಈವರೆಗೆ 'ಮುಖ'ದಿಂದ 'ಯುಗ್ಮಕ'ದವರೆಗೆ 'ಸಮಸ್ತಪಾದಜ ಯಮಕ'ದ ೯ ಪ್ರಭೇದಗಳನ್ನು ನೋಡಿದ್ದಾಯಿತು ಎಂಬುದಾಗಿ ತಿಳಿಸಿ ರುದ್ರಟನು, ಮುಂದೆ 'ಸಮುದ್ಗಕ' ಮತ್ತು 'ಮಹಾಯಮಕ'ಗಳೆಂಬ ಎರಡು ವಿಶೇಷಭೇದಗಳನ್ನು ಹೇಳಿದ್ದಾನೆ.

(v) ಅರ್ಧಂ ಪುನರಾವೃತ್ತಂ ಜನಯತಿ ಯಮಕಂ ಸಮುದ್ಗಕಂ ನಾಮ ।
ಶ್ಲೋಕಸ್ತು ಮಹಾಯಮಕಂ ತದೇವಮೇಕಾದಶೈತಾನಿ ॥ (೧೬)

ಪೂರ್ವಾರ್ಧವು ಉತ್ತರಾರ್ಧದಲ್ಲಿ ಆವೃತ್ತಿಯಾದರೆ ಸಮುದ್ಗಕ; ಸಂಪೂರ್ಣ ಶ್ಲೋಕವೇ ಪುನರಾವೃತ್ತಿಯಾದರೆ ಮಹಾಯಮಕ (ಇದು ದಂಡಿಯ ಶ್ಲೋಕಾಭ್ಯಾಸಕ್ಕೆ ಸದೃಶವಾದ್ದು; ದಂಡಿಯ ಮಹಾಯಮಕದ ಸ್ವರೂಪ ಬೇರೆ). ಇವುಗಳಿಗೆ ಕ್ರಮವಾಗಿ ಲಕ್ಷ್ಯಗಳು :

ಸಮುದ್ಗಕ

ನನಾಮ ಲೋಕೋ ವಿದಮಾನವೇನ । ಮಹೀ ನ ಚಾರಿತ್ರಮುದಾರಧೀರಮ್ ।
ನ ನಾಮಲೋಽಕೋಽವಿದಮಾನವೇನ । ಮಹೀನಚಾರಿತ್ರಮುದಾರಧೀರಮ್ ॥ (೧೭)

ಮಹಾಯಮಕ

ಸ ತ್ವಾರಂ ಭರತೋಽವಶ್ಯಮಬಲಂ ವಿತತಾರವಮ್ ।
ಸರ್ವದಾ ರಣಮಾನೈಷೀದವಾನಲಸಮುಸ್ಥಿತಃ ॥ (೧೮)
ಸತ್ತ್ವಾರಂಭರತೋ ವಶ್ಯಮವಲಂಬಿತತಾರವಮ್ ।
ಸರ್ವದಾರಣಮಾನೈಷೀ ದವಾನಲಸಮುಸ್ಥಿತಃ ॥ (೧೯)

೨. ಏಕದೇಶಜ ಯಮಕಭೇದಗಳು :

(i) ಪಾದಂ ದ್ವಿಧಾ ತ್ರಿಧಾ ವಾ ವಿಭಜ್ಯ ತತ್ರೈಕದೇಶಜಂ ಕುರ್ಯಾತ್
ಆವರ್ತಯೇತ್ತಮಂಶಂ ತತ್ರಾನ್ಯತ್ರಾಪಿ ವಾ ಭೂಯಃ ॥ (೨೦)

ಪಾದವನ್ನು ಎರಡಾಗಿಯೋ ಮೂರಾಗಿಯೋ ವಿಭಜಿಸಿ, ಆ ಏಕದೇಶವನ್ನು ಅಲ್ಲಿಯೇ ಅಥವಾ ಇತರ ಪಾದಗಳಲ್ಲಿ ಆವೃತ್ತಿಮಾಡಿದಲ್ಲಿ, ಅದು ಏಕದೇಶಜ ಯಮಕವೆನಿಸುವುದು.

(ii) ಅದ್ಯರ್ಧಾನ್ಯನ್ಯೋನ್ಯಂ ಪಾದಾವೃತ್ತಿಕ್ರಮೇಣ ಜನಯಂತಿ ।
ದಶ ಯಮಕಾನ್ಯಪರಸ್ಮಿನ್ಪರಿವೃತ್ತ್ಯಾ ತದ್ವದನ್ಯಾನಿ ॥ (೨೧)

ಏಕದೇಶಜಯಮಕವು ೧೦ ಪ್ರಭೇದಗಳಿಂದ ಕೂಡಿರುತ್ತದೆ. ಪ್ರಥಮಾರ್ಧದ ಅಂಶಗಳನ್ನು ಪ್ರಥಮಾರ್ಧದಲ್ಲಿಯೇ, ದ್ವಿತೀಯಾರ್ಧದ ಅಂಶಗಳನ್ನು ದ್ವಿತೀಯಾರ್ಧದಲ್ಲಿಯೇ, ಇಲ್ಲವೆ ಯಾವುದೇ ಅರ್ಧದ ಅಂಶಗಳನ್ನು ಯಾವುದೇ ಅರ್ಧದಲ್ಲಿ ಆವೃತ್ತಿಮಾಡಬಹುದು.

(iii) ಏತದುದಾಹರಣಾನಾಂ ಪಾದಾವೃತ್ತ್ಯೈವ ದರ್ಶಿತೋ ಮಾರ್ಗಃ ।
ಇಹ ವಿಂಶತಿಭೇದಮಿದಂ ಯಮಕಂ ನೋದಾಹೃತಂ ತೇನ ॥ (೨೨)

ಮುಖ ಸಂದಂಶಾದಿ ಪಾದಾವೃತ್ತಿಯಮಕಭೇದಗಳಂತೆಯೇ ಇವನ್ನೂ ಭಾವಿಸತಕ್ಕುದು. ಹಾಗೆಂದೇ ಉದಾಹರಣೆಗಳನ್ನು ಪ್ರತ್ಯೇಕವಾಗಿ ಕೊಟ್ಟಿಲ್ಲ. ಸಮಸ್ತಪಾದಜ, ಏಕದೇಶಜಗಳು ಸೇರಿ ಒಟ್ಟು ೨೦ ಭೇದಗಳು.

೩. ಅಂತಾದಿಕ ಯಮಕ ಭೇದಗಳು :

(iv) ಪ್ರಥಮ ತೃತೀಯಾಂತ್ಯಾರ್ಧೇ ತದನಂತರಭಾಗಯೋಃ ಪರಾವೃತ್ತೇ ।
ಅಂತಾದಿಕಮಿತಿ ಯಮಕಂ ವ್ಯಸ್ತಸಮಸ್ತೇ ತ್ರಿಧಾ ಕುರುತಃ ॥ (೨೩)

೧-೩ನೆಯ ಪಾದಗಳ ಕೊನೆಯರ್ಧಗಳು ೨-೪ನೆಯವುಗಳ ಕೊನೆಯರ್ಧಗಳಲ್ಲಿ ಆವೃತ್ತವಾದರೆ, ಅಂತಾದಿಕ, ವ್ಯಸ್ತ (೨) ಮತ್ತು ಸಮಸ್ತ ಎಂಬ ಯಮಕಗಳಾಗುವುವು. ಇವುಗಳ ಲಕ್ಷ್ಯಗಳು :

ವ್ಯಸ್ತ (ಪೂರ್ವಾರ್ಧ)

ನಾರೀಣಾಮಲಸಂ ನಾಭಿ । ಲಸನ್ನಾಭಿ ಕದಂಬಕಮ್ ।
ಪರಮಾಸ್ತ್ರಮನಂಗಸ್ಯ । ಕಸ್ಯ ನೋ ರಮಯೇನ್ಮನಃ ॥ (೨೪)

ವ್ಯಸ್ತ (ಪರಾರ್ಧ)

ಪಶ್ಯಂತಿ ಪಥಿಕಾಃ ಕಾಮ । ಶಿಖಿಧೂಮಶಿಖಾಮಿವ ।
ಇಮಾಂ ಪದ್ಮಾಲಯಾಲೀನಾಂ । ಲಯಾಲೀನಾಂ ಮಹಾವಲೀಮ್ ॥ (೨೫)

ಸಮಸ್ತ (ಎರಡೂ ಅರ್ಧಗಳು)

ಪುಷ್ಯನ್ವಿಲಾಸಂ ನಾರೀಣಾಂ। ಸನ್ನಾರೀಣಾಂ ಕುಲಕ್ಷಯಮ್।
ಆ ಕಲ್ಪಂ ವಸುಧಾಸಾರ। ಸುಧಾಸಾರ ಜಗಜ್ಜಯ॥ (೨೬)

(v) ದ್ವಿತೀಯಮನ್ಯಮರ್ಧಂ ಪರಿವೃತ್ತಮನಂತರೇ ಭವೇನ್ಮಧ್ಯಮ್।
ಮಧ್ಯಸಮಸ್ತಾಂತಾದಿಕಯೋಗಾದಪಿ ಜ್ಞಾಯತೇ ವಂಶಃ॥ (೨೭)

೨ನೆಯ ಪಾದದ ಕೊನೆಯರ್ಧ ೩ನೆಯದರ ಆದಿಯಲ್ಲಿ ಆವೃತ್ತವಾದರೆ 'ಮಧ್ಯ'ಯಮಕ. ಇದು ಹಿಂದೆ ಹೇಳಿದ ಅಂತಾದಿಕ (ಸಮಸ್ತ)ದೊಡನೆ ಸೇರಿದಾಗ 'ವಂಶ'ಯಮಕ(೧–೩ರ ಕೊನೆಯರ್ಧವೂ ೨–೪ರ ಆದ್ಯರ್ಧವೂ ಒಂದೇ ಆಗಿದ್ದು, ಮಧ್ಯಯಮಕದ ಲಕ್ಷಣವೂ ಜತೆಗೂಡಿರುತ್ತದೆ). ಇವುಗಳ ಲಕ್ಷ್ಯಗಳು :

ಮಧ್ಯ

ಸಮಸ್ತಭುವನವ್ಯಾಪಿ। ಯಶಸಸ್ತರಸೇಹತೇ।
ರಸೇಹತೇ ಪ್ರಿಯಂ ಕರ್ತುಂ। ಪ್ರಾಣೈರಪಿ ಮಹೀಪತೇ॥ (೨೮)

ವಂಶ

ಗ್ರೀಷ್ಮೇಣ ಮಹಿಮಾನೀತೋ। ಹಿಮಾನೀತೋಯಶೋಭಿತಃ।
ಯಶೋಽಭಿತಃ ಪರ್ವತಸ್ಯ। ಪರ್ವ ತಸ್ಯ ಹಿ ತನ್ಮಹತ್॥ (೨೯)

(vi) ಆವೃತ್ತಂ ಪ್ರಥಮಾದೌ ದ್ವಿತೀಯಮರ್ಧಂ ಚತುರ್ಥಪಾದಸ್ಯ।
ವಂಶಶ್ಚ ಚಕ್ರಕಾಖ್ಯಂ ಷಷ್ಠಂ ಚಾಂತಾದಿಕಂ ಯಮಕಮ್॥ (೩೦)

೪ನೆಯ ಪಾದದ ಕೊನೆಯರ್ಧವು ೧ನೆಯ ಪಾದದ ಮೊದಲರ್ಧದ ಆವೃತ್ತಿಯಾಗಿದ್ದು, ಹಿಂದೆ ಹೇಳಿದ ವಂಶ ಯಮಕದ ಲಕ್ಷಣವೂ ಜತೆಗೂಡಿದ್ದರೆ, ಅದು 'ಚಕ್ರಕ' ಯಮಕ (ಇವೆಲ್ಲ ಅಂತಾದಿಕ ಯಮಕಗಳು). ಇದರ ಲಕ್ಷ್ಯ :

ಸಭಾಜನಂ ಸಮಾನೀಯ। ಸ ಮಾನೀ ಯಃ ಸ್ಫುಟನ್ನಪಿ।
ಸ್ಫುಟಂ ನ ಪಿಹಿತಂ ಚಕ್ರೇ। ಹಿತಂ ಚಕ್ರೇ ಸಭಾಜನಮ್॥ (೩೧)

೪. ಆದ್ಯಂತಕಯಮಕ ಭೇದಗಳು :

(i) ಪ್ರಥಮಾದಿ ಪ್ರಥಮಾರ್ಧೈಃ ಪರಿವೃತ್ತಾನ್ಯತ್ರ ಸಾರ್ಧಮರ್ಧಾನಿ।
ಅನ್ಯಾನ್ಯನಂತರಾಣಾಂ ಜನಯಂತ್ಯಾದ್ಯಂತಕಂ ನಾಮ॥ (೩೨)

೧-೨-೩ನೆಯ ಪಾದಗಳ ಮೊದಲರ್ಧಗಳು ೨-೩-೪ನೆಯವುಗಳ ಕೊನೆಯರ್ಧಗಳಲ್ಲಿಯೂ ಆವೃತ್ತಿಯಾಗುವುದು 'ಆದ್ಯಂತಕ'ಯಮಕ.

[ರುದ್ರಟನು, ಇದು ಕೂಡ ಅಂತಾದಿಕ ಯಮಕದ ಹಾಗೆಯೇ ೬ ಪ್ರಭೇದಗಳನ್ನು ಹೊಂದಿರುತ್ತದೆಯೆಂದು ಮುಂದಿನ ಸೂತ್ರದಲ್ಲಿ (೩-೩೩) ತಿಳಿಸಿದ್ದಾನೆ. ೧ರ ಆದಿ ೨ರ ಅಂತ್ಯದಲ್ಲಿ ಆವೃತ್ತ, ೩ರ ಆದಿ ೪ರ ಅಂತ್ಯದಲ್ಲಿ ಆವೃತ್ತ (ಇದು ದ್ವಿವಿಧ ವ್ಯಸ್ತ ಮತ್ತು ಸಮಸ್ತ ಎಂದು ೨ ತೆರ), ೨ರ ಆದಿ ೩ರ ಅಂತ್ಯದಲ್ಲಿ ಆವೃತ್ತ, ಮಧ್ಯ ಸಮಸ್ತ ಆದ್ಯಂತಕ ಯೋಗವಾದಲ್ಲಿ 'ವಂಶ', ೧ರ ಅಂತ್ಯ ೪ರ ಆದಿಯಲ್ಲಿ ಆವೃತ್ತವಾಗಿ ವಂಶ ಲಕ್ಷಣವೂ ಕೂಡಿದಲ್ಲಿ 'ಚಕ್ರಕ' ಎಂಬುದಾಗಿ ವ್ಯಾಖ್ಯಾನಕಾರ ನಮಿಸಾಧು ವಿವರಿಸಿದ್ದಾನೆ].

(ii) ಪ್ರಥಮ ತೃತೀಯಾದ್ಯರ್ಧೇ ತದನಂತರಚರಮಯೋಃ ಪರಾವೃತ್ತೇ।
ಭವತಿ ಸಮಸ್ತಾಂತಾದಿಕಯೋಗಾದಪ್ಯರ್ಧಪರಿವೃತ್ತಿಃ॥ (೩೪)

೧-೩ನೆಯ ಪಾದಗಳ ಕೊನೆಯರ್ಧಗಳು ೨-೪ನೆಯವುಗಳ ಮೊದಲರ್ಧಗಳೊಡನೆ, ೧-೩ರ ಮೊದಲರ್ಧಗಳು ೨-೪ರ ಕೊನೆಯರ್ಧಗಳೊಡನೆ ಯಮಕಿತವಾದರೆ, ಅದು 'ಅರ್ಧಪರಿವೃತ್ತಿ'. ಇದರ ಲಕ್ಷ್ಯ :

ಸಸಾರ ಸಾಕಂ ದರ್ಪೇಣ । ಕಂದರ್ಪೇಣ ಸಸಾರಸಾ ।
ಶರನ್ನವಾನಾ ಬಿಭ್ರಾಣಾ । ನಾವಿಭ್ರಾಣಾ ಶರಂ ನವಾ ॥ (೩೫)

ಇಲ್ಲಿಂದ ಮುಂದೆ ರುದ್ರಟ ಇನ್ನೂ ಕೆಲವು ಪ್ರಭೇದಗಳನ್ನು ಹೀಗೆ ಕುರಿತಿದ್ದಾನೆ :

(iii) ಪಾದಸಮುದ್ಗಕಸಂಜ್ಞಂ ತತ್ರಾವೃತ್ತಾನಿ ಕುರ್ವತೆ ತಚ್ಚ ।
ಅಂತರಿತಾನಂತರಿತವ್ಯಸ್ತಸಮಸ್ತೇಷು ಪಾದೇಷು ॥ (೩೬)

೪ ಪಾದಗಳ ಅರ್ಧಗಳೂ ಆಯಾ ಪಾದಗಳಲ್ಲಿಯೇ ಆವೃತ್ತಿಯಾದರೆ, ಅದು ಪಾದಸಮುದ್ಗಕ; ಪಾದಾಂತರಗಳಲ್ಲಿ ಆವೃತ್ತಿಯಾದರೆ, ಆಗ ಅಂತರಿತ, ಅನಂತರಿತ, ವ್ಯಸ್ತ, ಸಮಸ್ತ ಇತ್ಯಾದಿಯಾಗಿ ನಾನಾಪ್ರಕಾರಗಳಾಗುತ್ತವೆ.

ಪಾದಸಮುದ್ಗಕ

ಮುದಾ ಸೇನಾಮುದಾಸೇನಾ । ದಸೌ ತಾಮುಸಮುಜ್ಝಸಮ್ ।
ಮಹೀನಾಥಮಹೀನಾಥ । ಜಯಶ್ರೀರಾಲಿಲಿಙ್ಗ ತಮ್ ॥ (೩೭)

ಯತ್ತ್ವಯಾ ಶಾತ್ರವಂ ಜನ್ಯೇ । ಮದಾಯತಮದಾಯತ ।
ತೇನ ತ್ವಾಮನುರಕ್ತೇಯಂ । ರಸಾಯತ ರಸಾಯತ ॥ (೩೮)

ರಸಾಸಾರ ರಸಾಸಾರ । ವಿದಾ ರಣವಿದಾರಣ ।
ಭವತಾರಂಭವತಾರ । ಮಹೀಯಶಮಹೀಯತ ॥ (೩೯)

ಮುಂದಿನ ಕೆಲವು ಪ್ರಭೇದಗಳು ಈ ರೀತಿಯಾಗಿವೆ :

(iv) ಆವೃತ್ತಾನಿ ತು ತಸ್ಮಿನ್ನಾದ್ಯರ್ಧಾನ್ಯರ್ಧಶೋ ವಿಭಕ್ತಾನಿ ।
ವಕ್ತ್ರಂ ತಥಾ ಶಿಖಾಂತ್ಯಾನ್ಯುಭಯಾನಿ ಚ ಜಾಯತೇ ಮಾಲಾ ॥ (೪೦)

ಪಾದಗಳ ಆದ್ಯರ್ಧಗಳನ್ನು ಮತ್ತೆ ಅರ್ಧಿಸಿ ಆವೃತ್ತಿಮಾಡಿದರೆ, 'ವಕ್ತ್ರ'; ಅಂತ್ಯಾರ್ಧಗಳನ್ನು ಮತ್ತೆ ಅರ್ಧಿಸಿ ಆವೃತ್ತಿಮಾಡಿದರೆ 'ಶಿಖಾ'; ಮತ್ತು 'ವಕ್ತ್ರ', 'ಶಿಖಾ' ಎರಡರ ಲಕ್ಷಣಗಳೂ ಸೇರಿದರೆ 'ಮಾಲಾ'. ಇವುಗಳಿಗೆ ಲಕ್ಷ್ಯಗಳು :

ವಕ್ತ್ರ

ಘನಾಘನಾಭಿನೀಲಾನಾ । ಮಾಸ್ಥಾಮಾಸ್ಥಾಯ ಶಾಶ್ವತೀಮ್ ।
ಚಲಾಚಲಾಪಿ ಕಮಲೇ । ಲೀನಾಲೀನಾಮಿಹಾವಲೀ ॥ (೪೧)

ಶಿಖಾ

ಯಾಸಾಂ ಚಿತ್ತೇ ಮಾನೋಽಮಾನೋ । ನಾರೀಭಿರ್ಯೋಽರಂ ತಾ ರಂತಾ
ಸಾರಪ್ರೇಮಾ ಸನ್ನಾಸನ್ನಾ । ಜಾಯೇತೈವಾನಂತಾ ನಂತಾ ॥ (೪೨)

ಮಾಲಾ

ಭೀತಾಭೀತಾ ಸನ್ನಾಸನ್ನಾ । ಸೇನಾ ಸೇನಾಗತ್ಯಾಗತ್ಯಾ
ಧೀರಾಧೀರಾಹ ತ್ವಾ ಹತ್ವಾ । ಸಂತ್ರಾಸಂ ತ್ರಾಯಸ್ವಾಯಸ್ವಾ ॥ (೪೩)

ಇನ್ನೂ ಕೆಲವು ಭೇದಗಳ ಪರಿಶೀಲನೆ :

ಮಧ್ಯಾನ್ಯರ್ಧಾರ್ಧಾನಿ ತು ಮಧ್ಯಂ ಕುರ್ವಂತಿ ತತ್ರ ಪರಿವೃತ್ತ್ಯಾ ।
ಆದ್ಯಂತಾನ್ಯಾದ್ಯಂತಂ ಕಾಂಚೀಯಮಕಂ ತಥೈಕತ್ರ ॥ (೪೪)

ಪಾದಗಳ ಮೊದಲರ್ಧಗಳ ಅಂತ್ಯಭಾಗದೊಂದಿಗೆ ಕೊನೆಯರ್ಧಗಳ ಆದಿಭಾಗದ ಆವೃತ್ತಿ 'ಮಧ್ಯ'; ಪಾದಗಳ ಮೊದಲರ್ಧಗಳ ಆದಿಭಾಗದೊಂದಿಗೆ ಕೊನೆಯರ್ಧಗಳ ಅಂತ್ಯಭಾಗದ ಆವೃತ್ತಿ 'ಆದ್ಯಂತ'; ಹಿಂದೆ ಹೇಳಿದ

ಮಧ್ಯ ಮತ್ತು ಆದ್ಯಂತಗಳ ಸಮ್ಮಿಶ್ರಣವಾಗಿ, ಪಾದಗಳ ಮೊದಲರ್ಧಗಳ ಆದಿಭಾಗ ಕೊನೆಯರ್ಧಗಳ ಕೊನೆಯ ಭಾಗವಾಗಿಯೂ, ಪಾದಗಳ ಮೊದಲರ್ಧಗಳ ಅಂತ್ಯಭಾಗ ಕೊನೆಯರ್ಧಗಳ ಆದಿಭಾಗವಾಗಿಯೂ ಆವೃತ್ತವಾದರೆ 'ಕಾಂಚೀ'. ಇವುಗಳ ಲಕ್ಷ್ಯಗಳು :

ಮಧ್ಯ

ಸಂತೋಽವತ ಬತ ಪ್ರಾಣಾನಿಮಾನಿಹ ನಿಹಂತಿ ನಃ ।
ಸದಾಜನೋ ಜನೋಽಯಂ ಹಿ । ಬೋದ್ಧುಂ ಸದಸದಕ್ಷಮಃ ॥ (೪೫)

ಆದ್ಯಂತ

ದೀನಾ ದೂನವಿಷಾದೀನಾ । ಶರಾಪಾದಿತಭೀಶರಾ ।
ಸೇನಾ ತೇನ ಪರಾಸೇ ನಾ । ರಣೇ ಪುಂಜೀವಿತೇಽರಣೇ ॥ (೪೬)

ಕಾಂಚೀ

ಯಾ ಮಾನೀತಾನೀತಾಯಾಮಾ । ಲೋಕಾಧೀರಾ ಧೀರಾಲೋಕಾ
ಸೇನಾಸನ್ನಾಸನ್ನಾ ಸೇನಾ । ಸಾರಂ ಹತ್ವಾಹ ತ್ವಾ ಸಾರಮ್ ॥ (೪೭)

ಇಲ್ಲಿಂದ ಮುಂದೆ ರುದ್ರಟನು ಪಾದಗಳು ಮೂರು ಭಾಗಗಳಾಗಿ ವಿಭಜಿಸಲ್ಪಟ್ಟು ೧೦-೧೦ರಂತೆ ಒಟ್ಟು ೩೦ ಯಮಕ ಭೇದಗಳು ಆ ವಿಭಜನೆಯಲ್ಲಿ ನಿಷ್ಪನ್ನಗೊಳ್ಳುವುವೆಂದೂ, ಬುದ್ಧಿವಂತನಾದವನು ಅವುಗಳ ಪಾದಾವೃತ್ತಿ ಕ್ರಮದಿಂದ ಆ ಭೇದಗಳನ್ನು ಊಹಿಸಿಕೊಳ್ಳಬೇಕೆಂದೂ, ಉದಾಹರಣೆಗಳನ್ನು ಕಲ್ಪಿಸಿಕೊಳ್ಳಬೇಕೆಂದೂ ತಿಳಿಸಿದ್ದಾನೆ (೩-೪೮, ೪೯). ಸೂಚನಾರ್ಥವಾಗಿ ೩ ಲಕ್ಷ್ಯಗಳು :

ಆದಿಮಧ್ಯ

ಸ ರಣೇ ಸರಣೇನ ನೃಪೋ। ಬಲಿತಾವಲಿತಾರಿಜನಃ ।
ಪದಮಾಪ ದಮಾತ್ಸ್ವಮತೇ । ರುಚಿತಂ ರುಚಿತಂ ಚ ನಿಜಮ್ ॥ (೫೩)

ಆದ್ಯಂತ

ಘನಾಘ ನಾಯಂ ನ ನಭಾ ಘನಾಘನಾನುದಾರಯನ್ನೇತಿ ಮನೋಽನು ದಾರಯನ್
ಸಖೇಽದಯಂ ತಾಮವಿಲಾಸ ಖೇದಯ । ನ್ನಹೀಯಸೇ ಗೋರಥವಾ ನ ಹೀಯಸೇ ॥ (೫೪)

ಮಧ್ಯಾಂತ

ಅಸತಾಮಹಿತೋ ಮಹಿತೋ । ಯುಧಿ ಸಾರತಯಾ ರತಯಾ ।
ಸ ತಯೋರುರುಚೇ ರುರುಚೇ । ಪರಮೋಭವತೇ ಭವತೇ ॥ (೫೫)

ಇಲ್ಲಿಯವರೆಗೆ ನಿಯತ ದೇಶಾವಯವ ಯಮಕಗಳ ಬಗೆಗೆ, ಎಂದರೆ ನಿರ್ದಿಷ್ಟ ಸ್ಥಾನ ಮತ್ತು ಅಂಶಗಳ ಯಮಕಭೇದಗಳನ್ನು ಕುರಿತುದಾಯಿತು. ಇಲ್ಲಿಂದ ಮುಂದೆ ಅನಿಯತ ದೇಶಾವಯವ ಯಮಕಗಳ ಬಗೆಗೆ ಸೂಚನೆಯನ್ನು ಕೊಟ್ಟು, ಅವನ್ನು ಲಕ್ಷೀಕರಿಸಲು ಸಾಧ್ಯವಿಲ್ಲವೆಂದೂ ಮಹಾಕವಿಗಳ ಲಕ್ಷ್ಯಗಳನ್ನು ನೋಡಿ ತಿಳಿದುಕೊಳ್ಳಬಹುದೆಂದೂ ಅವು ಅಸಂಖ್ಯವಾಗಿವೆಯೆಂದೂ ರುದ್ರಟನೂ ವ್ಯಾಖ್ಯಾತೃ ನಮಿಸಾಧುವೂ ಅಧ್ಯಾಯಾಂತ್ಯದಲ್ಲಿ ತಿಳಿಸಿದ್ದಾರೆ (೩-೫೬). ದಿಙ್ಮಾತ್ರ ಪ್ರದರ್ಶನಾರ್ಥವಾಗಿ ರುದ್ರಟ ಈ ಎರಡು ಲಕ್ಷ್ಯಗಳನ್ನು ಉದಾಹರಿಸಿದ್ದಾನೆ :

ಕಮಲಿನೀಮಲಿನೀ ದಯಿತಂ ವಿನಾ । ನ ಸಹತೇ ಸಹ ತೇನ ನಿಷೇವಿತಾಮ್ ।
ತಮಧುನಾ ಮಧುನಾ ನಿಹಿತಂ ಹೃದಿ । ಸ್ಮರತಿ ಸಾ ರತಿಸಾರಮಹರ್ನಿಶಮ್ ॥ (೫೭)

ಇಲ್ಲಿ ಪಾದಾದಿಯಲ್ಲಿ ಪ್ರಥಮಾಕ್ಷರ ಹೊರತಾಗಿ, ೩-೩ ಅಕ್ಷರಗಳ ನಡುವೆ ಯಮಕವೇರ್ಪಟ್ಟಿದೆ.

ಕಮಲಿನೀ ಸರಸಾ ಸರಸಾಮಿಯಂ । ವಿಕಸಿತಾನನಮಂ ನನಮಂಡನಮ್ ।
ಕಿಮಿತಿ ನಾಧಿಗತಾ ಧಿಗತಾದೃಶಂ । ಮಧುಕರೇಣ ಬತಾಣವತಾ ಕೃತಮ್ ॥ (೯೪)

ಇಲ್ಲಿ ಸ್ಥಾನ ಮತ್ತು ಅವಯವಗಳ ಅನಿರ್ದಿಷ್ಟತೆಯುಂಟು ; ಎಂದರೆ ಪಾದನಿಯಮಾನುಸಾರವಾದ ಲಕ್ಷಣಗಳಿಲ್ಲ.

ಭೋಜದೇವನ 'ಸರಸ್ವತೀಕಂಠಾಭರಣ' :

ಇತರರಲ್ಲಿಲ್ಲದ ಪ್ರಭೇದಗಳನ್ನು ಮಾತ್ರವೇ ಇಲ್ಲಿ ಗಮನಿಸಿದರೆ ಸಾಕು. ಮುಂದಿನ ನಾಲ್ಕು ಭೇದಗಳಿಗೆ ಅವು ವಿಜಾತೀಯ ಯಮಕಾಂಶಗಳಿಂದ ಕೂಡಿರುವುದು ಮುಖ್ಯ ಕಾರಣವಾಗಿ ದಂಡಿಯ ನಿರೂಪಣೆಯಿಂದಲೂ, ಮಧ್ಯಯಮಕದ ಬಗೆಗೆ ಭಿನ್ನಕಲ್ಪನೆ ಕಾರಣವಾಗಿ ರುದ್ರಟನ ನಿರೂಪಣೆಯಿಂದಲೂ, ಸದೃಶವಾದವು ಅವರ ಲಕ್ಷ್ಯಗಳಲ್ಲಿ ಕಂಡುಬರುವುದಿಲ್ಲ.. ಅವನ್ನಿಲ್ಲಿ ಉದ್ಧರಿಸಬಹುದು :

ಅವ್ಯಪೇತ ಆದಿ-ಮಧ್ಯ

ಘನಾಘನಾಭಸ್ಯ ಮಹೀಮಹೀಯಸಃ । ಸುರಾಸುರಾಣಾಂ ದಯಿತಸ್ಯ ತಸ್ಯ ಸಾ ।
ಧರಾಧರಾಕಾರಗೃಹಾ ಗೃಹಾರ್ಥಿನೋ । ಬಭೂವ ಭೂಮೇರ್ನಗರೀ ಗರೀಯಸೀ ॥ (೯೫)

ಅವ್ಯಪೇತ ಆದ್ಯಂತ

ದ್ರುತಂ ದ್ರುತಂ ವಹ್ನಿಸಮಾಗತಂ ಗತಂ । ಮಹೀಮಹೀನದ್ಯುತಿರೋಚಿತಂ ಚಿತಮ್ ।
ಸಮಂ ಸಮಂತಾದಪಗೋಪುರಂ ಪುರಂ । ಪರೈಃ ಪರೈರಪ್ಯನಿರಾಕೃತಂ ಕೃತಂ ॥ (೯೬)

ಅವ್ಯಪೇತ ಮಧ್ಯಾಂತ

ಉದಯಿ ತೇ ದಯಿತೇ ಜಘನಂ ಘನಂ । ಸ್ತನವತೀ ನವತೀರ್ಥತನುಸ್ತನುಃ ।
ಸುಮನಸಾಮನಸಾ ಸದೃಶೌ ದೃಶೌ । ದ್ಯುಕುರುಮೇ ಕುರು ಮೇಽಭಿಮುಖಂ ಮುಖಮ್ ॥ (೯೭)

ಅವ್ಯಪೇತ ಆದಿಮಧ್ಯಾಂತ

ಸೀಮಾಸೀ ಮಾನಭೂಮಿಃ ಫಣಿಬಲವಲನೋದ್ಭಾವಿರಾಜೀವಿರಾಜೀ
ಹಾರೀ ಹಾರೀತವದ್ಭಿಃ ಪರಿಸರಸರಣಾವಸ್ತಮಾಲೈಸ್ತಮಾಲೈಃ
ದೇವಾದೇವಾಪ್ತರಕ್ಷಃ ಕೃತಭವ ಭವತೋಽಗ್ರೇ ನ ದೀನೋ ನದೀನೋ
ಮುಕ್ತಾಮುಕ್ತಾಚ್ಛರತ್ನಃ ಸಿತರುಚಿರುಚಿರೋಲ್ಲಾಸಮುದ್ರಃ ಸಮುದ್ರಃ ॥ (೯೮)

ಮುಂದೆ 'ತ್ರಿಪಾದ ಯಮಕ'ದಲ್ಲಿ ಅವ್ಯಪೇತ ಪಾದಾದಿಯನ್ನು ನಿದರ್ಶಿಸಿದೆ, ಪ. ೯೯ರ ಲಕ್ಷ್ಯ ಈ ವಿಭಾಗದ 'ಕಾವ್ಯಾದರ್ಶ'ದ ೧೪ನೆಯ ಪದ್ಯವೇ ಆಗಿದೆ. ಆ ಮುಂದಿನ 'ದ್ವಿಪಾದಯಮಕ'ದಲ್ಲಿ ಅವ್ಯಪೇತ ಪಾದಾದಿಯ ಪ. ೧೦೦, 'ಕಾವ್ಯಾದರ್ಶ'ದ ೧೧ನೆಯ ಪದ್ಯವೇ ಆಗಿದೆ. 'ದ್ವಿಪಾದಯಮಕ'ಗಳಲ್ಲಿ :

ವ್ಯಪೇತ ಮಧ್ಯ

ತುಲಯತಿ ಸ್ಮ ವಿಲೋಚನ ತಾರಕಾಃ । ಕುರಬಕಸ್ತಬಕವ್ಯತಿಷಂಗಿಣಿ ।
ಗುಣವದಾಶ್ರಯಲಬ್ಧಗುಣೋದಯೇ । ಮಲಿನಿಮಾಲಿನಿ ಮಾಧವಯೋಷಿತಾಮ್ ॥ (೧೦೧)

ಅವ್ಯಪೇತ ಅಂತ್ಯ

ಖಂಡಿತಾಶಂಸಯಾ ತೇಷಾಂ । ಪರಾಙ್ಮುಖತಯಾ ತಯಾ ।
ಆವಿವೇಶ ಕೃಪಾ ಕೇತೂ । ಕೃತೋಚ್ಚೈರ್ವಾನರಂ ನರಮ್ ॥ (೧೦೨)

ಚತುರ್ಥಪಾದದ ಮಧ್ಯಯಮಕ

ವಿಲುಲಿತಾಲಕಸಂಹತಿರಾಮೃಶ । ಮೃಗದೃಶಾಂ ಶ್ರಮವಾರಿ ಲಲಾಟಜಮ್ ।
ತನುತರಂಗತತೀಃ ಸರಸಾಂ ದಲ । ತ್ಕುವಲಯಂ ವಲಯಂ ಮರುದಾವವೌ ॥ (೧೦೪)

ಅವ್ಯಪೇತ ಯಮಕದಲ್ಲಿ ಆವೃತ್ತಿಯ ಆಧಿಕ್ಯವೂ ಇರುವುದು ಸಾಧ್ಯ ಎಂದು ಭೋಜ ತಿಳಿಸಿ ಒದಗಿಸಿರುವ ಲಕ್ಷ್ಯ ಪಾದಾಂತ್ಯದಲ್ಲಿ ಒಂದು ಅಧಿಕ ಅವ್ಯಪೇತ ಯಮಕಾಂಶ ಸೇರಿ ಆದುದು; ಒಂದು ವಿಶೇಷವೆ.

ವಿಯದ್ವಿಯದ್ವ್ಯಕ್ತಿಪರಂಪರಂ ಪರಂ । ಘನಾಘನಾಲೀ ರಸಿತಾಸಿತಾ ಸಿತಾ ।
ಸರಃಸರಸ್ಯಃ ಸ್ವರಸಾರಸಾರಸಾ । ಸಭಾ ಸಭಾ ರಾತ್ರಿರತಾರತಾರತಾ ॥ (೧೦೪)

ಏಕರೂಪದ ಎಂದರೆ ಸಜಾತೀಯವಾದ ಯಮಕಾಂಶಗಳು, ಪಾದಾದಿ, ಪಾದಮಧ್ಯ ಹಾಗೂ ಪಾದಾಂತ್ಯಗಳು, ಇಲ್ಲಿಂದ ಮುಂದೆ ನಿದರ್ಶಿತವಾಗಿದ್ದು (ಪ. ೧೦೫–೭), ಇವು 'ಕಾವ್ಯಾದರ್ಶ'ದವೇ (ಸ. ೩೬, ೩೯, ೪೨) ಆಗಿವೆ.

ಅನಂತರದಲ್ಲಿ ವ್ಯಪೇತಯಮಕಭೇದಗಳ ಪ್ರಸ್ತಾವನವಿದೆ. ಇವುಗಳಲ್ಲಿ ೪ ಪಾದಗಳಲ್ಲಿಯೂ ಯಮಕ ಸಂಘಟನೆಯುಳ್ಳ ಪಾದಾದಿ, ಪಾದಮಧ್ಯ ಹಾಗೂ ಪಾದಾಂತಗಳಲ್ಲಿ ಪಾದಾದಿಯು ಕಾವ್ಯಾದರ್ಶದ ಪ. ೫೯ಕ್ಕೆ ಸದೃಶವಾದ್ದು, ಪಾದಾಂತವು ಪ. ೪೧ ರೊಂದಿಗೆ ಅಭಿನ್ನವಾದ್ದು (ಪ.೧೦೮–೧೦). ವ್ಯಪೇತಯಮಕದ ನಾಲ್ಕು ಪಾದಗಳ ಪಾದಮಧ್ಯವನ್ನಿಲ್ಲಿ ಉದ್ಧರಿಸಬಹುದು (ಪ. ೧೦೯) :

ಮದನದಾರುಣ ಉತ್ಥಿತ ಉಚ್ಛಿಖೋ । ಮಧುಮುದಾರುಣಹೂಣಮುಖಚ್ಛವಿಃ ।
ತರುಣಿದಾರುಣ ಏಷ ದಿಶಃ ಸಮಂ । ಮಮ ಹೃದಾರುಣದಾನ್ಮ್ರವಣಾನಲಃ ॥ (೧೦೯)

ಇನ್ನು ವ್ಯಪೇತದ ಆದಿಮಧ್ಯ, ಆದ್ಯಂತ, ಆದಿಮಧ್ಯಾಂತಗಳಲ್ಲಿ (ಪ. ೧೧೧, ೧೧೨, ೧೧೪), ವಿಜಾತೀಯ ಯಮಕಾಂಶಗಳ ಸಂಘಟನೆ ಕಾರಣವಾಗಿ ಎಲ್ಲವೂ ಇಲ್ಲಿ ಉಲ್ಲೇಖನಾರ್ಹವಾಗಿವೆ; ಮಧ್ಯಾಂತ (ಪ. ೧೧೩) ಭಾಮಹನ 'ಕಾವ್ಯಾಲಂಕಾರ'ದ ಲಕ್ಷ್ಯಕ್ಕೆ (ಪ. ೧೨) ಸದೃಶವಾದುದು.

ಘನಗಿರೀಂದ್ರವಿಲಂಘನಶಾಲಿನಾ । ವನಗತಾ ವನಜದ್ಯುತಿಲೋಚನಾ ।
ಜನಮತಾ ದದೃಶೇ ಜನಕಾತ್ಮಜಾ । ತರುಮೃಗೇಣ ತರುಸ್ಥಲಶಾಯಿನೀ ॥ (೧೧೧)

ವಿಹಗಾಃ ಕದಂಬಸುರಭಾವಿಹ ಗಾಃ । ಕಲಯಂತ್ಯನುಕ್ಷಣಮನೇಕಲಯಮ್ ।
ಭ್ರಮಯನ್ನುಪೈತಿ ಮುಹುರಭ್ರಮಯಂ । ಪವನಶ್ಚ ಧೂತನವನೀಪವನಃ ॥ (೧೧೨)

ಸಮಂ ಸ ಸೈನ್ಯೇನ ಸಮಂತತಃ ಸಮಂ । ಪುರಂದರಶ್ರೀಃ ಪುರಮುಚ್ಚಗೋಪುರಮ್ ।
ಮದಾಲಸಾಂ ತಾಂ ಪ್ರಮದಾಂ ಸುಸಮ್ಮದಾಂ । ಯಯೌ ನಿಧಾಯಾಕ್ಷಯಯೌವನಾ ಯಯೌ ॥
(೧೧೪)

ತ್ರಿಪಾದ ಮತ್ತು ದ್ವಿಪಾದ ಯಮಕಗಳಲ್ಲಿ ವ್ಯಪೇತ ಪಾದಾದಿಗಳ ಲಕ್ಷ್ಯಗಳು (ಪ. ೧೧೫, ೧೧೬, ೧೧೮) 'ಕಾವ್ಯಾದರ್ಶ'ದವೇ (ಪ. ೨೬, ೩೦, ೨೧) ಆಗಿವೆ. ಅಂತಯಮಕವನ್ನು ಪ್ರತ್ಯೇಕತೆಗಾಗಿ ಉಲ್ಲೇಖಿಸಬೇಕು :

ಇಹ ಮುಹುರ್ಮುದಿತೈಃ ಕಲಭೈಃ ರವಃ । ಪ್ರತಿದಿಶಂ ಕ್ರಿಯತೇ ಕಲಭೈರವಃ ।
ಸ್ಫುರತಿ ಚಾನುವನಂ ಚಮರೀಚಯಃ । ಕನಕರತ್ನಭುವಾಂ ಚ ಮರೀಚಯಃ ॥ (೧೧೭)

ಆ ಮುಂದಿನ ಅಂತಯಮಕ

ಯಸ್ಯಾಹುರತಿಗಂಭೀರ । ಗಲದಪ್ರತಿಮಂಗಲಮ್
ಸ ವಃ ಕರೋತು ನಿಃಸಂಗ । ಮುದಯಂ ಪ್ರತಿ ಮಂಗಲಮ್ ॥ (೧೧೯)

ಆವೃತ್ತಿಯ ಆಧಿಕ್ಯ

ಅವಸಿತಂ ಹಸಿತಂ ಪ್ರಸಿತಂ ಮುದಾ । ವಿಲಸಿತಂ ಹ್ರಸಿತಂ ಸ್ಮರಭಾಸಿತಮ್ ।
ನ ಸಮದಾಃ ಪ್ರಮದಾ ಹತಸಂಮದಾಃ । ಪುರಹಿತಂ ವಿಹಿತಂ ನ ಸಮೀಹಿತಮ್ ॥ (೧೨೦)

ಮುಂದೆ ವ್ಯಪೇತದಲ್ಲಿಯೇ ಏಕರೂಪವಾದ ಎಂದರೆ ಸಜಾತೀಯವಾದ ಯಮಕಾಂಶಗಳ ಆದಿ–ಮಧ್ಯ, ಮಧ್ಯಾಂತದ ಪ.೧೨೧, ಪ.೧೨೨ರ ಎರಡು ಲಕ್ಷ್ಯಗಳಿದ್ದು, ಇವೆರಡೂ 'ಕಾವ್ಯಾದರ್ಶ'ದವೇ(ಪ.೪೫, ೪೩) ಆಗಿವೆ, ಹಾಗೆಯೇ ಪಾದಮಧ್ಯದ ಪ. ೧೨೩ರ ಲಕ್ಷ್ಯವೂ ಕಾವ್ಯಾದರ್ಶದ್ದೇ (ಪ. ೪೦).

ಇಲ್ಲಿಂದ ಮುಂದೆ ಆದಿಮಧ್ಯಾಂತ ನಿಯಮವಿಲ್ಲದ, ಅವ್ಯಪೇತ ವ್ಯಪೇತಾತ್ಮಕವಾದ 'ಅಸ್ಥಾನಯಮಕ'ಗಳ ಪ್ರಸ್ತಾವವುಂಟು. ಪಾದದಲ್ಲಿ ಶ್ಲೋಕದಲ್ಲಿ, ಪಾದಸಂಧಿಯಲ್ಲಿ, ಸ್ವಭೇದ ಅನ್ಯಭೇದಗಳಲ್ಲಿ, ಸ್ಥೂಲವಾಗಿಯೂ ಸೂಕ್ಷ್ಮವಾಗಿಯೂ ಈ ಅಸ್ಥಾನ ಯಮಕಗಳು ಬರಬಹುದು ಎನ್ನುವುದು ಸೂರಿಗಳ ಅಭಿಪ್ರಾಯವೆಂದು ಭೋಜನು ತಿಳಿಸಿ (ಸೂ. ೬೩, ೭೪) ಲಕ್ಷ್ಯಗಳನ್ನು ಉದ್ಧರಿಸಿದ್ದಾನೆ. ಈ ಅಸ್ಥಾನಯಮಕಗಳು ಅಧಿಕಾವೃತ್ತಿಯ ದ್ವ್ಯಧಿಕ ವರ್ಣ–ಯುಗ್ಮದ ಯಮಕಾಂಶಗಳಿಂದ ಕೂಡಿದಾಗ ಸ್ಥೂಲ, ದ್ವಿವರ್ಣ-ಯುಗ್ಮದ ಯಮಕಾಂಶಗಳಿಂದ ಕೂಡಿದಾದ ಸೂಕ್ಷ್ಮ ಎನಿಸುತ್ತದೆಂದು ಆತನು ತಿಳಿದಿರುವಂತಿದೆ; ಹಾಗೆಯೇ ಸ್ವಭೇದ ಅನ್ಯಭೇದಗಳೆಂದರೆ ಸಜಾತೀಯ ಹಾಗೂ ವಿಜಾತೀಯ ಯಮಕಾಂಶಗಳೇ ಇರಬಹುದೆಂದು ತೋರುತ್ತದೆ.

ಈ ಪರಿಭಾಷೆಯ ಕಲ್ಪನೆಯಿಂದ ಹೆಚ್ಚೇನೂ ಸಾಧಿಸಿದಂತೆ ತೋರುವುದಿಲ್ಲ. ಇವುಗಳಲ್ಲಿ ಯಮಕಾಂಶಗಳು ಅನಿಯತ ಸ್ಥಾನಗಳಲ್ಲಿ ಪ್ರಚುರತೆಯಿಂದ ಕಾಣಿಸಿಕೊಂಡಿರುತ್ತದೆ ಎನ್ನುವುದು ಮುಖ್ಯವಾದ ಅಂಶ. ಇಂತಹವುಗಳು ಕೆಲವು 'ಕಾವ್ಯಾದರ್ಶ'ದಲ್ಲಿ ಬಂದಿರತಕ್ಕವೇ ಆಗಿವೆ; ಇನ್ನು ಕೆಲವು ಸ್ವರೂಪತಃ 'ಕಾವ್ಯಾದರ್ಶ' ರುದ್ರಟ 'ಕಾವ್ಯಾಲಂಕಾರ'ಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ನಿರೂಪಿತವಾಗಿರುವುದಕ್ಕೆ ಸದೃಶವಾದವೇ ಆಗಿವೆ. ದಿಕ್ಸೂಚಿಯಾಗಿ ಕೆಲವನ್ನಿಲ್ಲಿ ಉದ್ಧರಿಸಬಹುದು.

ಪಾದದಲ್ಲಿ ಸ್ಥೂಲಾವ್ಯಪೇತ

ವೀನಾಂ ವೃಂದಂ ಚೈತತ್ಕೂಟೇ। ಸಮರುತಿ ಸುತರುಣಿ ಸಮರುತಿ ಸುತರುಣಿ।
ಚಿತ್ರಂ ವಾ ತೇನ ಕ್ರೋಡೇऽಸ್ಮಿನ್ । ಸುರಮಣಿಗುಣರುಚಿ ಸುರಮಣಿ ಗುಣರುಚಿ ॥ (೧೨೪)

ಪಾದದಲ್ಲಿ ಸೂಕ್ಷ್ಮಾವ್ಯಪೇತ

ಸ್ವಸ್ಥಃ ಶೈಲೇ ಪಶ್ಯಾಸ್ತೇऽಸೌ। ರುರುರುರುರತಿರತಿತನುತನು ಮತಿಮತಿ।
ಲೋಕೋ ಯುದ್ವದ್ದೈತ್ಯಾನೀಕಂ। ಗುರು ಗುರುಮಯಿ ಮಯಿ ತರಿತರಿ ಸತಿಸತಿ ॥ (೧೨೫)

ಶ್ಲೋಕದಲ್ಲಿ ಸ್ಥೂಲಾವ್ಯಪೇತ

ನಗಜಾ ನ ಗಜಾ ದಯಿತಾ ದಯಿತಾ। ವಿಗತಂ ವಿಗತಂ ಲಲಿತಂ ಲಲಿತಮ್।
ಪ್ರಮದಾಪ್ರಮದಾಮಹತಾ ಮಹತಾ। ಮರಣಂ ಮರಣಂ ಸಮಯಾತ್ಸಮಯಾತ್ ॥ (೧೨೬)

ಶ್ಲೋಕದಲ್ಲಿ ಸೂಕ್ಷ್ಮಾವ್ಯಪೇತ

ವಿವಿಧಧವವನಾ ನಾನಾಗಗರ್ಧರ್ಧ್ವನಾನಾ। ವಿವಿತತಗಗನಾನಾನಾಮಮುಜ್ಜಜ್ಜನಾನಾ।
ರುರುಶಶಲಲನಾನಾ ನಾವಬಂಧುಂಧುನಾನಾ। ಮಮ ಹಿ ಹಿತತನಾನಾನಾನನ ಸ್ವಸ್ವನಾನಾ ॥ (೧೨೭)

ಪಾದಸಂಧಿಯ ಲಕ್ಷ್ಯ (ಪ. ೧೨೮) ಕಾವ್ಯಾದರ್ಶದ ಸಂದಷ್ಟದ ಲಕ್ಷ್ಯವೇ (ಪ. ೫೨). ಹಾಗೆಯೇ ಸೂಕ್ಷ್ಮದ ಇನ್ನೆರಡು ಭೇದ (ಪ. ೧೨೯, ಪ. ೧೩೫) ಕ್ರಮವಾಗಿ ಕಾವ್ಯಾದರ್ಶದ ಪ. ೪೯ರ, ರುದ್ರಟ ಕಾವ್ಯಾಲಂಕಾರದ ಪ. ೪೭ರ ಲಕ್ಷ್ಯಗಳೇ ಆಗಿವೆ. ಪ. ೧೩೭ ಕಾವ್ಯಾದರ್ಶದ ಪ. ೭೨ರ ಲಕ್ಷ್ಯವೇ. ಮುಂದಿನ ಪಾದಯಮಕಗಳಲ್ಲಿ ಪ. ೧೪೦, ೧೪೨, ೧೪೩, ೧೪೪ ಇವುಗಳು ಕ್ರಮವಾಗಿ ಕಾವ್ಯಾದರ್ಶದ ಪ. ೫೭, ಪ. ೬೨, ಪ. ೫೮, ಪ. ೫೯ರ ಲಕ್ಷ್ಯಗಳೇ ಆಗಿವೆ. ಕೆಲವು ಸಮುದ್ಗಭೇದಗಳಲ್ಲಿ ಉದಾಹರಣೆಗಳು ಬೇರೆ, ಸ್ವರೂಪ ಒಂದೇ (ಪ. ೧೪೮ ಕಾವ್ಯಾದರ್ಶದ ೫೬ರ ಲಕ್ಷ್ಯವೇ). ಮಹಾಯಮಕ ಭೇದಗಳಲ್ಲಿ ಪ. ೧೫೧ ಕಾವ್ಯಾದರ್ಶದ ಪ. ೭೧ರ ಲಕ್ಷ್ಯವೇ. ಉಳಿದ ಎರಡು ಲಕ್ಷ್ಯಗಳಲ್ಲಿ; ಪ. ೧೫೦ ೧-೩ ಮತ್ತು ೨-೪ರಲ್ಲಿ ಸಮಾನಪಾದಾವೃತ್ತಿಯಿದ್ದು, ಅದು ಸಮುದ್ಗಭೇದದಲ್ಲಿಯೇ ಅಂತರ್ಗತವಾಗುವುದರಿಂದ ಅದು ಹೇಗೆ 'ಮಹಾಯಮಕ'ವೋ ತಿಳಿಯುವುದಿಲ್ಲ.

ಪ. ೧೪೯ ''ಏಕಾಕಾರಂ ಚತುಷ್ಪಾದಂ ಮಹಾಯಮಕಮುಚ್ಯತೇ'' ಎಂಬ ಸೂತ್ರ (೬೭)ಕ್ಕೆ ಅನುಗುಣವಾಗಿಯೇ ಇದೆ.

ಸಭಾಸಮಾನಾಸಹಸಾಪರಾಗಾತ್ । ಸಭಾಸಮಾನಾ ಸಹಸಾ ಪರಾಗಾತ್ ।
ಸಭಾಸಮಾನಾ ಸಹಸಾಪರಾಗಾತ್ । ಸಭಾಸಮಾನಾ ಸಹಸಾಪರಾಗಾತ್ ॥

ವಾಗ್ಭಟನ 'ವಾಗ್ಭಟಾಲಂಕಾರ' :

ವಾಗ್ಭಟಾಲಂಕಾರದ ಸಂಯುತಾವೃತ್ತಿಯ ಪಾದಯಮಕ, ಮಧ್ಯಪಾದಯಮಕ, ಪಾದಾಂತಯಮಕ, ಆದಿ–ಮಧ್ಯ ಮಧ್ಯಾಂತಯಮಕ, ಅಯುತ ಆದಿಮಧ್ಯಯಮಕ, ಅಯುತ ಮಧ್ಯಾದಿ ಯಮಕ, ಅಯುತ ಆದ್ಯಂತ ಯಮಕ, ಶ್ಲೋಕಾವಸಾನಗಾವೃತ್ತಿಮಹಾಯಮಕ, ಸಂಯುತಾವೃತ್ತಿಯ ಆದಿಪದಯಮಕ, ಸಂಯುತಾವೃತ್ತಿ ಮಧ್ಯಮಪದಯಮಕ, ಸಂಯುತಾವೃತ್ತಿ ಅಂತಪದಯಮಕ, ಅಯುತ ಆದಿಪದಯಮಕ, ಅಯುತ ಮಧ್ಯಮ ಪದಯಮಕ, ಅಯುತ-ಅಂತಪದಯಮಕ, ಪಾದದ್ವಯ ಆದಿಮಧ್ಯ-ಮಧ್ಯಾಂತಯಮಕ, ಆದ್ಯಂತಯಮಕ ಇವು ಕ್ರಮವಾಗಿ ದಂಡಿಯ ಕಾವ್ಯಾದರ್ಶದ ಅವ್ಯವಹಿತಸಮುದ್ಗ(೧-೨), ಅವ್ಯಹಿತಸಮುದ್ಗ(೨-೩) ಅವ್ಯವಹಿತಸಮುದ್ಗ(೩-೪), ಅವ್ಯವಹಿತಸಮುದ್ಗ(೧+೨, ೩+೪), ವ್ಯವಹಿತಸಮುದ್ಗ(೧-೩), ವ್ಯವಹಿತಸಮುದ್ಗ(೨-೪), ವ್ಯವಹಿತ ಸಮುದ್ಗ (೧-೪), ಅವ್ಯವಹಿತಪಾದಚತುಷ್ಟಯ ಸಮುದ್ಗ (೧-೨-೩-೪), ಅವ್ಯಪೇತ ಪಾದಚತುಷ್ಟಯಾದಿ (೩-೧೮), ರುದ್ರಟಕಾವ್ಯಾಲಂಕಾರದ ಮಧ್ಯಯಮಕ (೩-೪೫), ಅದೇ ಗ್ರಂಥದ ಶಿಖಾ (೩-೪೨), ಕಾವ್ಯಾದರ್ಶದ ವ್ಯಪೇತ ಪಾದಚತುಷ್ಟಯಾದಿ (೩-೨೯), ಭೋಜನ ಸರಸ್ವತೀಕಂಠಾಭರಣದ ವ್ಯಪೇತ ಪಾದಮಧ್ಯ (೨-೧೦೯), 'ಕಾವ್ಯಾದರ್ಶ'ದ ವ್ಯಪೇತ ಪಾದ ಚತುಷ್ಟಯಾಂತ ಯಮಕ (೩-೪೧), ವಿಜಾತೀಯ ಪಾದಾದಿ ವ್ಯಪೇತ (೧-೨, ೩-೪), ರುದ್ರಟ ಕಾವ್ಯಾಲಂಕಾರದ ಆದ್ಯಂತಯಮಕ (೩-೪೬) ಎಂಬ ಪ್ರಭೇದಗಳೇ ಆಗಿವೆ. ಕೆಲವು ಅಧಿಕ ವೈಚಿತ್ರ್ಯಗಳನ್ನು ಮುಂದೆ ಉದ್ಧರಿಸಬಹುದು :

ಅಯುತ ಪಾದದ್ವಯ ಮಧ್ಯಯಮಕ

ವಸನ್ನರೋಗೋಽತ್ರ ಜನೋ ನ ಕಶ್ಚಿತ್ । ಪರಂ ಸರೋಗೋ ಯದಿ ರಾಜಹಂಸಃ ।
ಗೀತಂ ಕಲಂ ಕೋ ನ ಕರೋತಿ ಸಿದ್ಧಃ । ಶೈಲೇ ಕಲಂಕೋಜ್ಝಿತಕಾನನೇಽಸ್ಮಿನ್ ॥ (೪–೩೮)

ಅಯುತ ಪಾದದ್ವಯಾಂತ್ಯ ಯಮಕ

ಜಹುರ್ವಸಂತೇ ಸರಸೀಂ ನ ವಾರಣಾ । ಬಭುಃ ಪಿಕಾನಾಂ ಮಧುರಾ ನವಾರಣಾಃ ।
ರಸಂ ಚ ಕಾ ಮೋಹನಕೋವಿದಾರ ಕಂ । ವಿಲೋಕಯಂತೀ ಬಕುಲಾನ್ವಿದಾರಕಮ್ ॥ (೪–೩೯)

ಅಯುತ ದ್ವಿತೀಯಪಾದ ಚತುರ್ಥಪಾದಾಂತ್ಯಯಮಕ

ಯಥಾ ಯಥಾ ದ್ವಿಜಿಹ್ವಸ್ಯ ವಿಭವಃ ಸ್ಯಾನ್ಮಹತ್ತಮಃ ।
ತಥಾ ತಥಾಸ್ಯ ಜಾಯೇತ ಸ್ಪರ್ಧಯೇವ ಮಹತ್ತಮಃ ॥ (೪–೪೧)

ಸಂಯುತಾಸಂಯುತ ಯಮಕ

ದಾಸ್ಯತಿ ದಾಸ್ಯತಿಕೋಪಾದಾಸ್ಯತಿ ಸತಿ ಕರ್ಕರಾನ್ ಶಾಪಮ್ ।
ಭವತಿ ಭವತಿ ಹ್ಯನರ್ಥೋ ಭವ ತಿಮಿತಸ್ತೇನ ಬಟುಕ ತ್ವಮ್ ॥ (೪–೪೨)

ಸಂಯುತ ಪಾದಪದ್ಯಗತ

ಕುಲಂ ತಿಮಿಭಯಾದತ್ರ । ಕರೇಣೂನಾಂ ನ ದೀವ್ಯತಿ ।
ನ ದೀವ್ಯತಿ ಕರೇಣೂನಾಂ । ಪ್ರಾಣಿನಾಂ ಗಣನಾಪಿ ಕಾ ॥ (೪–೪೩)

ವರ್ಣಯಮಕ

ಗಂಗಾಂಬುಧವಲಾಂಗಾಭೋ । ಮುಮುಕ್ಷುಧ್ಯಾನತತ್ಪರಃ ।
ಪಾಪಾರ್ತಿಹರಣಾಯಾಸ್ತು ಸ । ಸಜ್ಞಾನೋ ಜಿನಃ ಸತಾಮ್ ॥ (೪–೪೪)

ಅಸಂಯುತ ವರ್ಣಯಮಕ

ಜಗದಾತ್ಮಕೀರ್ತಿಶುಭ್ರಂ । ಜನಯನ್ನುದ್ದಾಮದೋಃಪರಿಘಃ ।
ಜಯತಿ ಪ್ರತಾಪಪೂಷಾ । ಜಯಸಿಂಹಃ ಕ್ಷ್ಮಾಭೃದಧಿನಾಥಃ ॥ (೪-೪೫)

ಸಂಯುತಾಸಂಯುತ ವರ್ಣಯಮಕ

ಮಾಮಾಕಾರಯತೇ ರಾಮಾ । ಸಾ ಸಾ ಮುದಿತಮಾನಸಾ ।
ಯಾ ಯಾ ಮದಾರುಣಚ್ಛಾಯಾ । ನಾನಾಹೇಲಾಮಯಾನನಾ ॥ (೪-೪೬)

ಇವುಗಳಲ್ಲಿ ಕೊನೆಯ ಮೂರನ್ನು ಯಮಕವೈಚಿತ್ರ್ಯಗಳಾಗಿ ತಿಳಿಯದಿರುವುದೇ ಲೇಸು; ಅವನ್ನು ಅನುಪ್ರಾಸವೈಚಿತ್ರ್ಯದಲ್ಲಿ ಸೇರಿಸಬಹುದಾಗಿದೆ.

ಸಂಸ್ಕೃತ ಸಾಹಿತ್ಯದಲ್ಲಿ ಯಮಕಲಕ್ಷ್ಯಗಳು

ಚಿತ್ರಕಾವ್ಯ ಪ್ರಕಾರಗಳಲ್ಲಿ ಯಮಕಕಾವ್ಯಗಳ ರಚನೆಗಳೇ ಒಂದು ಪ್ರತ್ಯೇಕವಾದ ಗುಂಪಾಗಬಹುದು. ಇವುಗಳಲ್ಲಿ ನೀತಿವರ್ಮನ (ಸು. ೯ನೆಯ ಶ.) 'ಕೀಚಕವಧಂ' ಪ್ರಸಿದ್ಧವಾದ್ದು. ೫ ಸರ್ಗಗಳ ಈ ಕಾವ್ಯ ಶಬ್ದ ಚಿತ್ರಗಳ ಇತಿಹಾಸದಲ್ಲಿ ಒಂದು ಪ್ರಮುಖವಾದ ಮುಖದ ಬೆಳವಣಿಗೆಯನ್ನು ತೋರಿಸುತ್ತದೆ. ಕೀಚಕನ ಅತಿರೇಕಶೃಂಗಾರದ ಚಿತ್ರಣಕ್ಕೆ ಯಮಕವೈಚಿತ್ರ್ಯಗಳು ಎಷ್ಟರಮಟ್ಟಿಗೆ ಸಹಾಯಕವಾಗಬಹುದೆಂದು ತೋರಿಸಲು ಇದನ್ನು ಬರೆದಂತಿದೆ. ಇಡಿಯ ಗ್ರಂಥದಲ್ಲಿ ಯಮಕ ಸಮೃದ್ಧಿಯಿದ್ದರೂ ೩ನೆಯ ಸರ್ಗದಲ್ಲಿ ಯಮಕದೊಂದಿಗೆ ಶ್ಲೇಷೆ ಬೆರೆತು ಇದನ್ನು ಒಂದು 'ಶ್ಲೇಷಯಮಕಕಾವ್ಯ'ವೆಂದೂ ಕರೆಯಬಹುದು ಎನ್ನುವಂತಾಗಿದೆ. ಇಲ್ಲಿಯ ಈ ಶಬ್ದ ಚಮತ್ಕಾರ ಅಪ್ರಯತ್ನಪೂರ್ವಕವಾದ್ದು, ತುಂಬ ಸುಂದರವಾದ್ದು ಎಂದು ಕೆಲವು ಭಾಗಗಳ ಮಟ್ಟಿಗಾದರೂ ಹೇಳಬಹುದು. ಕರ್ತೃ ನಿಶ್ಚಯವಿಲ್ಲದ 'ನಲೋದಯ' ಕಾವ್ಯ ಅಪರಿಚಿತವೂ ವಿವಿಧವೂ ಆದ ಛಂದಸ್ಸುಗಳಲ್ಲಿ ರಚಿತವಾಗಿರುವ ಒಂದು ಶೈಲಿವೈಲಕ್ಷಣ್ಯದ ರಚನೆ. ಯಮಕಚಮತ್ಕಾರಗಳಿಂದ ಕಾವ್ಯವನ್ನು ವಿದ್ವನ್ಮಾನ್ಯವಾಗಿ ಮಾಡುವ ಪ್ರಯತ್ನ ಇಲ್ಲಿದೆ; ಪ್ರಾಸಾನುಪ್ರಾಸಗಳೂ ಸೇರಿ ಪದ್ಯದ ಶ್ರವ್ಯತೆ ಹೆಚ್ಚಿದೆ. ಚಿಕ್ಕ ಕಾವ್ಯಗಳಲ್ಲಿ 'ರಾಕ್ಷಸಕಾವ್ಯ', 'ಶೌರಿಕಥೋದಯ', 'ತ್ರಿಪುರದಹನ' ಎಂಬುವೂ ಶೋಭನಮುನಿ (೧೦ನೆಯ ಶ.) ಕೃತ 'ಚತುರ್ವಿಂಶತಿಕಾ' ಎಂಬುದೂ, ಸ್ವಲ್ಪ ದೊಡ್ಡಕಾವ್ಯವೇ ಆದ 'ಯುಧಿಷ್ಠಿರ ವಿಜಯ'ವೂ ಯಮಕಕಾವ್ಯಗಳ ಗುಂಪಿನಲ್ಲಿಯೇ ಗಣಿಸತಕ್ಕವು. ಕೆಲವರು ವಿದ್ವಾಂಸರ ಪ್ರಕಾರ ಕೇರಳದ ವೇದಾರಣ್ಯ ನಿವಾಸಿಗಳಾದ ಮಹರ್ಷಿ ಗೋಪಾಲಿಕಾ ದಂಪತಿಗಳ ಮಗನಾಗಿ ಜನಿಸಿದ 'ಯಮಕಕವಿ' ವಾಸುದೇವನೇ 'ಯುಧಿಷ್ಠಿರ ವಿಜಯ', 'ನಲೋದಯ', 'ಶೌರಿಕಥೋದಯ', 'ತ್ರಿಪುರದಹನ' ಇತ್ಯಾದಿ ಕಾವ್ಯಗಳ ಕರ್ತೃವೆಂದೂ ತಿಳಿಯುವುದು.

ಯಮಕಕವಿಗಳಲ್ಲಿ ರಾಮಾನುಜಶಿಷ್ಯನಾದ ಶ್ರೀವತ್ಸಾಂಕನು (೧೨ನೆಯ ಶ.) 'ವೈಕುಂಠಸ್ತವ', 'ಸುಂದರ ಬಾಹುಸ್ತವ' ಇತ್ಯಾದಿಯಾಗಿ ೫ ಸ್ತವಗಳನ್ನು ರಚಿಸಿದ್ದಾನೆ. ಇವನ ಮಗ ಪರಾಶರ ಭಟ್ಟನೂ ಖ್ಯಾತನು. ಈತನ ಹಲವು ಕೃತಿಗಳಲ್ಲಿ 'ಪರಾಶರವಿಜಯ' ಸ್ವಂತ ಜೀವನ ಕುರಿತದ್ದು; 'ಯಮಕ ರತ್ನಾಕರ' ಯಮಕವೈಚಿತ್ರ್ಯಗಳಿಗೆ ಹೆಸರಾದುದು; ಆರ್ಯಾ ಛಂದಸ್ಸಿನದು. ವಸ್ತು ಶ್ರೀಕೃಷ್ಣನನ್ನು ಕುರಿತಿದೆ. ಕೆಲವು ಪದ್ಯಗಳಲ್ಲಿ ಪದ್ಯದ ಪೂರ್ವಾರ್ಧ ಉತ್ತರಾರ್ಧದಲ್ಲಿ ಆವೃತ್ತಿಗೊಳ್ಳುವ ಯಮಕಭೇದವನ್ನು ಕಾಣಬಹುದು. ಇದು ಕವಿಶಕ್ತಿಗೆ ದ್ಯೋತಕವಾದ್ದು. ಧರ್ಮಘೋಷ ಯತಿಯು (೧೩೦೧) ನಾಲ್ಕು ಅರ್ಥಗಳನ್ನು ಕೊಡುವ ಪದ್ಯಗಳನ್ನು ರಚಿಸಿರುವ ಕವಿ. ಈತನ 'ಯಮಕಸ್ತುತಿ'ಗೆ ಸೋಮತಿಲಕನ ವ್ಯಾಖ್ಯಾನವಿದೆ. ಈ ಕವಿಯ ಇತರ ಕೃತಿಗಳು 'ಶ್ರೀಶ ಯಮಕಶತಕ' ಮತ್ತು 'ಅಚ್ಯುತಲೀಲಾ' ಎಂಬವು. ಮಾನಾಂಕನ 'ಬೃಂದಾವನ', 'ಮೇಘಾಭ್ಯುದಯ'ಗಳೂ ಯಮಕಕಾವ್ಯಗಳೇ. ೩೭ ಗ್ರಂಥಗಳನ್ನು ರಚಿಸಿರುವ ಆನಂದತೀರ್ಥರ (೧೧೯೮) 'ಯಮಕಭಾರತ' ಈ ಪದ್ಧತಿಯ ಕಾವ್ಯಗಳಲ್ಲಿ ಮುಖ್ಯವಾದ್ದು. ದ್ವೈತಸಿದ್ಧಾಂತದ ಪ್ರವರ್ತಕರಾದ ಇವರು ಸಮಗ್ರ ಮಹಾಭಾರತದ ಕಥೆಯನ್ನು ಸಮೃದ್ಧ ಯಮಕ ವೈಚಿತ್ರ್ಯಗಳಿಂದ ನಿರೂಪಿಸಿದ್ದಾರೆ.

ಪ್ರಾಕೃತ ಕಾವ್ಯಗಳಲ್ಲಿ ಪ್ರವರಸೇನನ 'ಸೇತುಬಂಧ' ಮೊದಲಾದವುಗಳಲ್ಲಿ ಗಲಿತಕಗಳೆಂಬ ರೀತಿಯ ಪದ್ಯಬಂಧಗಳಿದ್ದು, 'ಯಮಕಾದ್ಯಲಂಕಾರ ನಿಬಂಧನ ರಸಿಕತಯಾ', 'ಗಲಿತಕ ನಿಬಂಧನ ರಸಿಕತಯಾ' ಎಂಬಂತಹ ಮಾತುಗಳಿಂದ (ಹೇಮಚಂದ್ರನ 'ಕಾವ್ಯಾನುಶಾಸನ', ಪು. ೧೨೧), ''ಸರ್ವಾಸಾಮೇವ ಗಲಿತಾನಾಮ್ ಯಮಕಬಂಧಂ ಕುರ್ವಂತಿ ಕವಿವೃಷಭಾಃ'' (ವಿರಹಾಂಕ, 'ವೃತ್ತಜಾತಿಸಮುಚ್ಚಯ', ೪-೧೦೬) ಗಲಿತಕಗಳಲ್ಲಿ ಯಮಕ ಅವಿಭಾಜ್ಯವಾದ ಒಂದು ರಚನಾಂಶವೇ ಆಗಿದೆಯೆನ್ನಬಹುದು. ನೀಲಕಂಠದೀಕ್ಷಿತನು ''ಅಮಯೀ ಯಮಕೇ ಜಾಗೃತ್ಯಾಪಸ್ಮೃತ್ಯಾ ಚ ದುಷ್ಕವಾ'' ಎಂಬುದಾಗಿ ತನ್ನ 'ಗಂಗಾವತರಣ'ದಲ್ಲಿ (೧—೩೦) ಜುಗುಪ್ಸೆ ಪಟ್ಟಿದ್ದರೂ, ಯಮಕದ ಆಕರ್ಷಣೆಯಿಂದ ಹಿರಿಯ ಕವಿಗಳೂ ತಪ್ಪಿಸಿಕೊಳ್ಳಲು ಸಾಧ್ಯವಾಗಿಲ್ಲ.

ಮಾದರಿಗೆ ಭಾರವಿ ಮತ್ತು ಮಾಘರ ಕಾವ್ಯಗಳನ್ನು ಮಾತ್ರ ಇಲ್ಲಿ ಅವಲೋಕಿಸಲು ಸಾಧ್ಯ.

ಭಾರವಿಯ 'ಕಿರಾತಾರ್ಜುನೀಯ' :

ಪಾದ ಚತುಷ್ಟಯಾದಿ ಅವ್ಯಪೇತ (ಕಾವ್ಯಾದ. ೩—೧೮)

ವನೇಽವನೇ ವನಸದಾಂ । ಮಾರ್ಗಂ ಮಾರ್ಗಮುಪೇಯುಷಾಮ್ ।
ಬಾಣೈರ್ಬಾಣೈಃ ಸಮಾಸಕ್ತಂ । ಶಂಕೇಽಶಂ ಕೇನ ಶಾಮ್ಯತಿ ॥ (೧೫–೧೦)

ಸಮಸ್ತ ಅಂತಾದಿಕ ಯಮಕ (ರು.ಕಾವ್ಯಾಲಂ. ೩—೨೬)

ಮಾ ವಿಹಾಸಿಷ್ಟ ಸಮರಂ । ಸಮರಂತವ್ಯಸಂಯುತಃ ।
ಕ್ಷತಂ ಕ್ಷುಣ್ಣಾಸುರಗಣೈ । ರಗಣೈರಿವ ಕಿಂ ಯಶಃ ॥ (೧೫–೮)

ವ್ಯವಹಿತ ಸಮುದ್ಗ (ಕಾವ್ಯಾದ. ೩—೫೪)

ಸ್ಯಂದನಾ ನೋ ಚತುರಗಾಃ । ಸುರೇಭಾ ವಾವಿಪತ್ತಯಃ ।
ಸ್ಯಂದನಾ ನೋ ಚ ತುರಗಾಃ । ಸುರೇಭಾ ವಾ ವಿಪತ್ತಯಃ ॥ (೧೫–೧೬)

ಆದ್ಯಂತ ವ್ಯಪೇತಯಮಕ (ಕಾವ್ಯಾಲಂ. ೩—೪೬)

ದೂನಾಸ್ತೇಽರಿಬಲಾದೂನಾ । ನಿರೇಭಾ ಬಹು ಮೇನಿರೇ ।
ಭೀತಾಃ ಶಿತಶರಾಭೀತಾಃ । ಶಂಕರಂ ತತ್ರ ಶಂಕರಮ್ ॥ (೧೫–೩೧)

ವ್ಯವಹಿತ ಸಮುದ್ಗ (ಕಾವ್ಯಾದ. ೩-೬೧)

ತದ್ಗಣಾ ದದೃಶುರ್ಭೀಮಂ । ಚಿತ್ರಸಂಸ್ಥಾ ಇವಾಚಲಾಃ ।
ವಿಸ್ಮಯೇನ ತಯೋರ್ಯುದ್ಧಂ । ಚಿತ್ರಸಂಸ್ಥಾ ಇವಾಚಲಾಃ ॥ (೧೫–೩೫)

ಆದ್ಯಂತ ವ್ಯಪೇತ ಯಮಕ

ಅವದ್ಯನ್ಪತ್ರಿಣಃ ಶಂಭೋಃ । ಸಾಯಕೈರವಸಾಯಕೈಃ ।
ಪಾಂಡವಃ ಪರಿಚಕ್ರಾಮ । ಶಿಕ್ಷಯಾ ರಣಶಿಕ್ಷಯಾ ॥ (೧೫–೩೭)

ಸಂದಷ್ಟ ಯಮಕ (ಕಾವ್ಯಾದ. ೩-೫೨)

ತೇನ ವ್ಯಾತೇನಿರೇ ಭೀಮಾ । ಭೀಮಾರ್ಜುನಫಲಾನನಾಃ ।
ನ ನಾನುಕಂಪ್ಯ ವಿಶಿಖಾಃ । ಶಿಖಾಧರಜವಾಸಸಃ ॥ (೧೫–೪೨)

ಪಾದಚತುಷ್ಟಯ ಅವ್ಯವಹಿತ ಸಮುದ್ಗ (ಕಾವ್ಯಾದ. ೩-೬೬)

ವಿಕಾಶಮೀಯುರ್ಜಗತೀಶಮಾರ್ಗಣಾ । ವಿಕಾಶಮೀಯುರ್ಜಗತೀಶಮಾರ್ಗಣಾಃ ।
ವಿಕಾಶಮೀಯುರ್ಜಗತೀಶಮಾರ್ಗಣಾ । ವಿಕಾಶಮೀಯುರ್ಜಗತೀಶಮಾರ್ಗಣಾಃ ॥ (೧೫–೫೨)

ಪಾದಪ್ರತಿಲೋಮ ಯಮಕ (ಕಾವ್ಯಾದ. ೩-೭೪)

ವೇತ್ರಶಾಕಕುಜೇ ಶೈಲೇಽ । ಲೇಽಶೈಜೇಽಕುಕಶಾತ್ರವೇ ।
ಯಾತ ಕಿಂ ವಿದಿಶೋ ಜೇತುಂ । ತುಂಜೇಶೋ ದಿವಿ ಕಿಂತಯಾ ॥ (೧೫–೧೮)

ನನು ಹೋ ಮಥನಾ ರಾಘೋ । ಘೋರಾ ನಾಥಮಹೋ ನು ನ ।
ತಯದಾತವದಾ ಭೀಮಾ । ಮಾಭೀದಾ ಬತ ದಾಯತ ॥ (೧೫–೨೦)

ಶ್ಲೋಕ ಪ್ರತಿಲೋಮ ಯಮಕ (ಕಾವ್ಯಾದ. ೩–೭೬, ೭೭)

ನಿಶಿತಾಸಿರತೋಽಭೀಕೋ । ನ್ಯೇಜತೇಽಮರಣಾ ರುಚಾ ।
ಸಾರತೋ ನ ವಿರೋಧೀ ನಃ । ಸ್ವಾಭಾಸೋ ಭರವಾನುತ ॥
ತನುವಾರಭಸೋ ಭಾಸ್ವಾನ । ಧೀರೋಽವಿನತೋರಸಾ ।
ಚಾರುಣಾ ರಮತೇ ಜನ್ಯೇ । ಕೋಽಭೀತೋ ರಸಿತಾಶಿನಿ ॥ (೧೫–೨೨,೨೩)

ಮಾಘನ 'ಶಿಶುಪಾಲವಧ' :

ವ್ಯವಹಿತ ಸಮುದ್ಗ (ಕಾವ್ಯಾದ. ೩-೬೧)

ರಾಮೋ ರಿಪುಃ ಶರಾನಾಜಿ । ಮಹೇಷ್ವಾಸ ವಿಚಕ್ಷಣೇ ।
ಕೋಪಾದಥೈನಂ ಶಿತಯಾ । ಮಹೇಷ್ವಾ ಸ ವಿಚಕ್ಷಣೇ ॥ (೧೯–೫)

(ಮಲ್ಲಿನಾಥ ವ್ಯಾಖ್ಯೆಯಲ್ಲಿ 'ಅಭಿನ್ನಸಮಪಾದ' ಎಂಬ ಹೆಸರಿನ ಪಾದಾಭ್ಯಾಸಯಮಕಭೇದವೆಂದಿದೆ. ಈ ಗ್ರಂಥದಲ್ಲಿಯ ೧೯-೭, ೯, ೧೯, ೨೧, ೨೫, ೩೧, ೩೮, ೫೦, ೫೨, ೫೪, ೫೬, ೬೪, ೭೪, ೭೬, ೭೮, ೮೦, ೮೨ ಇವೂ ಇದೇ ಭೇದದ ಲಕ್ಷ್ಯಗಳಾಗಿವೆ.)

ಅಂತಾದಿಕ ಸಮಸ್ತ (ರು. ಕಾವ್ಯಾಲಂ. ೩–೧೬)

ಪ್ರಾಪ್ಯ ಭೀಮಮಸೌ ಜನ್ಯಂ । ಸೌಜನ್ಯಂ ದಧದಾನತೇ ।
ವಿಧ್ಯಸ್ಮ ಮೋಚ ನ ರಿಪೂ । ನರಿಪೂಗಾಂತಕಃ ಶರೈಃ ॥ (೧೯–೧೩)

(ಮಲ್ಲಿನಾಥ ವ್ಯಾಖ್ಯೆಯಲ್ಲಿ 'ಸಂದಂಶ' ಎಂದಿದೆ; ಇದು ರುದ್ರಟನ ಕಾವ್ಯಾಲಂಕಾರದ ೩-೫ರಿಂದ ಭಿನ್ನ.)

ಆದ್ಯಂತ

ಸಾದರಂ ಯುಧ್ಯಮಾನಾಪಿ । ತೇನಾನ್ಯನರಸಾದರಮ್ ।
ಸಾ ದರಂ ಪೃತನಾ ನಿನ್ಯೇ । ಹೀಯಮಾನಾ ರಸಾದರಮ್ ॥ (೧೯–೨೩)

(೧೯-೬೨ ಇದೇ ಭೇದದ ಇನ್ನೊಂದು ಲಕ್ಷ್ಯ)

ಶ್ಲೋಕ ಪ್ರತಿಲೋಮಯಮಕ

ವಾಹನಾಜನಿ ಮಾನಾಸೇ । ಸಾರಾಜಾವನಮಾ ತತಃ ।
ಮತ್ತಸಾರಗರಾಜೇಭೇ । ಭಾರೀಹಾವಜ್ಜನಧ್ವನಿ ॥
ನಿಧ್ವನಜ್ಜವಹಾರೀಭಾ । ಭೇಜೇ ರಾಗರಸಾತ್ತಮಃ ।
ತತಮಾನವಜಾರಾಸಾ । ಸೇನಾ ಮಾನಿಜನಾಹವಾ ॥ (೧೯–೩೩, ೩೪)

(೧೯-೯೦, ಇದೇ ಬಗೆಯ ಇನ್ನೊಂದು ಲಕ್ಷ್ಯ)

ಪಾದಾದಿ ವ್ಯಪೇತ

ಕರೇಣುಃ ಪ್ರಸ್ಥಿತೋಽನೇಕೋ । ರೇಣುರ್ಘಂಟಾಃ ಸಹಸ್ರಶಃ ।
ಕರೇಽಣುಃ ಶೀಕರೋ ಜಜ್ಞೇ । ರೇಣುಸ್ತೇನ ಶಮಂ ಯಯೌ ॥ (೧೯–೩೬)

ಅರ್ಧಪಾದ ಪ್ರತಿಲೋಮ ಯಮಕ

ನಾನಾಜಾವವಜಾನಾನಾ । ಸಾ ಜನೌಘಘನೌಜಸಾ ।
ಪರಾನಿಹಾಽಹಾನಿರಾಪ । ತಾನ್ಪ್ರಿಯಾತತಯಾಽನ್ವಿತಾ ॥ (೧೯–೪೦)

ಪಾದಪ್ರತಿಲೋಮಯಮಕ (ಕಾವ್ಯಾದ. ೩-೭೪)

ವಾರಣಾಽಗಗಭೀರಾ ಸಾ । ಸಾರಾಽಭೀಗಗಣಾರವಾ
ಕಾರಿತಾಽರಿವಧಾ ಸೇನಾ । ನಾಸೇಧಾ ವರಿತಾಽರಿಕಾ ॥ (೧೯-೪೪)

ವ್ಯವಹಿತ ಸಮುದ್ಗ (ಕಾವ್ಯಾದ. ೩-೫೪)

ಅಯಶೋಭಿದುರಾಲೋಕೇ । ಕೋಪಧಾಮರಣಾದ್ಯತೇ ।
ಅಯಶೋಭಿದುರಾ ಲೋಕೇ । ಕೋಪಧಾ ಮರಣಾದ್ಯತೇ ॥ (೧೯-೫೮)

ವ್ಯವಹಿತ ಸಮುದ್ಗ

ಆಪದಿ ವ್ಯಾಪೃತನಯಾ । ಸ್ತಥಾ ಯುಯುಧಿರೇ ನೃಪಾಃ ।
ಆಪ ದಿವ್ಯಾ ಪೃತನಯಾ । ವಿಸ್ಮಯಂ ಜನತಾ ಯಥಾ ॥ (೧೯–೬೦)

ಪಾದಾಂತ ವಿಜಾತೀಯ

ತತ್ರ ಬಾಣಾಃ ಸುಪರುಷಃ । ಸಮಧೀಯಂತ ಚಾರವಃ ।
ದ್ವಿಷಾಮಭೂತ್ಸುಪರುಷ । ಸ್ತಸ್ಯಾ ಕೃಷ್ಣಸ್ಯ ಚಾರವಃ ॥ (೧೯-೯೨)

ಮಧ್ಯಾಂತ ವ್ಯಪೇತ ಯಮಕ (ಕಾವ್ಯಾದ. ೩-೪೩)

ಭೀಮಾಸ್ತ್ರರಾಜಿನಸ್ತಸ್ಯ । ಬಲಸ್ಯ ಧ್ವಜರಾಜಿನಃ ।
ಕೃತಘೋರಾಜಿನಶ್ಚಕ್ರೇ । ಭುವಃ ಸರುಧಿರಾ ಜಿನಃ ॥

(ಮಲ್ಲಿನಾಥ ವ್ಯಾಖ್ಯೆಯಲ್ಲಿ 'ಚತುಷ್ಪಾದ ಯಮಕ' ಎಂದಿದೆ.)

ಅವ್ಯವಹಿತ ಸಮುದ್ಗ (ಕಾವ್ಯಾದ. ೩-೫೫)

ಸದೈವ ಸಂಪನ್ನವಪೂ ರಣೇಷು । ಸ ದೈವಸಂಪನ್ನವಪೂರಣೇಷು ।
ಮಹೋದಧೇಸ್ತಾರಿ ಮಹಾನಿತಾಂತಂ । ಮಹೋ ದಧೇಽಸ್ತಾರಿಮಹಾ ನಿತಾಂತಮ್ ॥ (೧೯-೧೧೭)

ಪಾದಾಂತ ಯಮಕಕ್ಕೆ ರಾಜಶೇಖರನ 'ಕಾವ್ಯಮೀಮಾಂಸೆ'ಯ ಒಂದು ಸುಂದರವಾದ ಉದಾಹರಣೆ :

ನ ಪ್ರಾಪ್ತಂ ವಿಷಮರಣಂ । ಪ್ರಾಪ್ತಮಪಾಪೇನ ಕರ್ಮಣಾ ವಿಷಮರಣಮ್ ।
ನ ಮೃತೋ ಭಾಗೀರಥ್ಯಾಂ । ಮೃತೋಽಹಮುಪಗೂಹ್ಯ ಮಂದಭಾಗೀ ರಥ್ಯಾಮ್ ॥

"ಭೀಕರ ಸಂಗ್ರಾಮ (ವಿಷಮ + ರಣ) ಕೈಸಾರಲಿಲ್ಲ; ಪ್ರತಿಯಾಗಿ ಪಾಪಕರ್ಮವಿಲ್ಲದಿದ್ದರೂ ವಿಷದಿಂದ ಸಾವು (ವಿಷ + ಮರಣ) ಒದಗಿಬಂದಿತು. ಭಾಗೀರಥಿಯಲ್ಲಿ ಸಾಯುವ ಯೋಗ ಬರಲಿಲ್ಲ. ಅದಕ್ಕೆ ಬದಲು ಮಂದ ಭಾಗಿಯಾದ ನಾನು ರಸ್ತೆಯಲ್ಲಿ ಬಿದ್ದು ಸತ್ತೆ".

'ಕವಿರಾಜಮಾರ್ಗ' 'ಕಾವ್ಯಾವಲೋಕನ'ಗಳಲ್ಲಿ ಯಮಕವಿಚಾರ

'ಕವಿರಾಜಮಾರ್ಗ' :

'ಕವಿರಾಜಮಾರ್ಗ'ದ ದ್ವಿತೀಯ ಪರಿಚ್ಛೇದದಲ್ಲಿ ದುಷ್ಕರ ಕಾವ್ಯಗಳ ಪಟ್ಟಿಯನ್ನು ಕೊಡುವಾಗ "[ಗೋಮೂತ್ರಿಕಂ] ಸಯಮಕಂ...."ಎಂಬುದಾಗಿ ಯಮಕದ ಪ್ರವೇಶಸೂಚನೆಯಿದ್ದು (೨-೧೧೨), ವರ್ಣ ಮತ್ತು ಗತಿಚಿತ್ರಗಳ ಬಳಿಕ, ಅದರ ಪ್ರಭೇದ ಸೂಚನೆಯೊಂದಿಗೆ (೨-೧೨೯), ೯ ಲಕ್ಷ್ಯಪದ್ಯಗಳು ಅನುಕ್ರಮವಾಗಿ ಬಂದಿವೆ (೨.೧೩೦-೧೩೮). ಈ ನಿರೂಪಣೆಯಲ್ಲಿ, ಕರ್ತೃವಿನ ಎದುರು ಭಾಮಹ ದಂಡಿಗಳ ಅಲಂಕಾರ ಕೃತಿಗಳೇ ಇದ್ದರೂ, ಆತನ ಸ್ವತಂತ್ರವಾದ ದೃಷ್ಟಿ ಲಕ್ಷ್ಯಗಳಲ್ಲಿ ಎದ್ದು ತೋರಿದೆ. ಅವು ಬಲುಮಟ್ಟಿಗೆ 'ಕವಿರಾಜ ಮಾರ್ಗ' ಕರ್ತೃವಿನ ಸ್ವಕೀಯ ರಚನೆಗಳೇ ಇರಬೇಕು. ಭಾಮಹ ದಂಡಿ ಇಬ್ಬರೂ ವಿಂಗಡಿಸಿ ನಿರೂಪಿಸಿರುವಷ್ಟು ಪ್ರಭೇದಗಳಾಗಲಿ, ಸದೃಶವಾದ ಪ್ರಭೇದಗಳಲ್ಲಿ ಕೇವಲವಾದ ಐಕ್ಯವಾಗಲಿ ತೋರುವುದಿಲ್ಲ ಎಂಬುದು ಗಮನಿಸ

ಬೇಕಾದ ಅಂಶ. ಕ್ರಮಾನುಸರಣೆಯಲ್ಲಿಯೂ ವ್ಯತ್ಯಾಸವಿದೆ. ಯಮಕದ ಸಾಮಾನ್ಯ ಲಕ್ಷಣವಾಗಲಿ, ವ್ಯಪೇತ ಅವ್ಯಪೇತ ವಿಭಜನೆಗಳಾಗಲಿ, ಪ್ರಭೇದಾಂತರಗಳ ಹೆಸರುಗಳಾಗಲಿ ಇಲ್ಲದಿರುವುದು ಮೆಚ್ಚತಕ್ಕುದಲ್ಲ. ಈ ಸ್ಥಿತಿಯನ್ನು ಗಮನಿಸಿದರೆ, ಕರ್ತೃ ತಾನು ಅವಲಂಬಿಸಿದ ಆಕರಗಳನ್ನು ಯಥಾವತ್ತಾಗಿ ಅನುಸರಿಸಬೇಕೆಂಬ ನಿಷ್ಠೆಗೆ ಕಟ್ಟುಬೀಳದೆ, ಪ್ರಾತಿನಿಧಿಕವಾಗಿ ಅನುಸರಿಸಿ ವಿಷಯಸಂಗ್ರಹ ಮಾಡಿದರೆ ಸಾಕು ಎಂಬ ಅಭಿಪ್ರಾಯ ತಳೆದಿದ್ದನೆಂದು ಭಾವಿಸಬೇಕಾಗುತ್ತದೆ. ಈಗ ಈ ಗ್ರಂಥದ ಯಮಕಗಳ ಸ್ವರೂಪವನ್ನು ವಿವೇಚಿಸಬಹುದು.

ಯಮಕಂ ಪಾದಪಾದಾರ್ಧ ಸಮಶ್ಲೋಕ[ಸು]ಗೋಚರಂ
ಪ್ರಮಿತಾದ್ಯಂತ[ಮಧ್ಯೋ]ಪಕ್ರಮಾನೇಕಪ್ರಕಲ್ಪಿತಂ ॥ (೨–೧೨೯)

ಎಂಬುದರಲ್ಲಿ, ಯಮಕ ಸಮಗ್ರವಾದ ಪಾದದಲ್ಲಿ, ಪಾದಭಾಗದಲ್ಲಿ ಹಾಗೂ ಶ್ಲೋಕಸಮಸ್ತದಲ್ಲಿ ಕಂಡು ಬರುವುದೆಂದೂ ಆ ನಿರ್ದೇಶಿತ ಸ್ಥಾನಗಳಲ್ಲಿ ಆದಿ, ಅಂತ್ಯ, ಮಧ್ಯಗಳಲ್ಲಿ ಅನೇಕ ರೀತಿಯಾಗಿ ಅದು ಕಾಣಿಸಿಕೊಳ್ಳುವುದೆಂದೂ ಸೂಚನೆಯಿದೆ. ಈ ಪದ್ಯ ಪ್ರಾಯಶಃ 'ಕಾವ್ಯಾದರ್ಶ'ದ ''ಏಕದ್ವಿತ್ರಿಚತುಷ್ಪಾದಯಮಕಾನಾಂ....'' ಎಂಬ ಪದ್ಯದ (೩-೨) ಸ್ಥೂಲವಾದ ಅನುವಾದ.

ಲಕ್ಷ್ಯಗಳ ಪರಿಶೀಲನೆಯಲ್ಲಿ ಮೊದಲು ಗಮನಿಸಬೇಕಾದ್ದು ಎಂದರೆ, ಎಲ್ಲ ಲಕ್ಷ್ಯಗಳೂ ಶ್ಲೋಕಗಳೇ ಆಗಿರುವುದು.

ತಾರಾ ಜಾನಕಿಯಂ ಪೋಗಿ । ತಾರಾ ತರಳನೇತ್ರೆಯಂ ।
ತಾರಾಧಿಪತಿತೇಜಸ್ವಿ । ತಾರಾದಿ ವಿಜಯೋದಯಾ ॥ (೧೩೦)

''ಚಂದ್ರನಂತೆ ತೇಜಸ್ವಿಯಾದವನೇ, ತಾರ ಮೊದಲಾದ ಸಿದ್ಧಿ (ಅಥವಾ ಶಕ್ತಿ)ಗಳನ್ನು ಸಾಧಿಸಿ ಅಭ್ಯುದಯಶಾಲಿಯಾದವನೇ, ಸೀತೆಯನ್ನು (ಹುಡುಕಿ) ಕರೆದು ತಾ; (ಆ) ಚಂಚಲನೇತ್ರೆಯನ್ನು ಹೋಗಿ ಕರೆದು ತಾ''

ಇದು ಕಾವ್ಯಾದರ್ಶದ 'ಪಾದಾದಿ ವ್ಯಪೇತ ಯಮಕಭೇದ'ಗಳಲ್ಲಿ 'ಪಾದಚತುಷ್ಟಯಾದಿ' ಅಂತರ್ಭೇದಕ್ಕೆ (೩-೨೯) ಸೇರಿದೆ. ('ತಾರಾಧಿ' ಎಂಬಲ್ಲಿಯ ಮಹಾಪ್ರಾಣಾಕ್ಷರವನ್ನು ಚಿತ್ರಕವಿತ್ವ ದೃಷ್ಟಿಯಿಂದ ಅಲ್ಪಪ್ರಾಣದೊಂದಿಗೆ ಅಭಿನ್ನವಾಗಿ ಗಣಿಸಲು ಸಾಧ್ಯವಿರುವುದರಿಂದ, ಈ ಲಕ್ಷ್ಯ ಕಾವ್ಯಾದರ್ಶದ ೩-೩೦ರ 'ವಿಜಾತೀಯ ಪಾದಾದಿಯಮಕ'ಕ್ಕೆ ಸದೃಶವೆಂದೂ ತಿಳಿಯಬಹುದು.)

ಕಟಿಪಂ ತಂದು [ನಿಕ್ಕುವಂ?] । ಕಟಿಪಂ ಕ[ಳೆ]ವಂ ಚಲ ।
ಕಟಿವಂ ಕಂಜನೇತ್ರೇ [ತಾಂ] । ಕಟಿವಂ ಬಟಿಕಾತ[ನುಂ] ॥ (೧೩೧)

ವಿವಿಧ ಮುದ್ರಿತ ಪರಿಷ್ಕರಣಗಳನ್ನು ಗಮನಿಸಿ ತಾತ್ಕಾಲಿಕವಾಗಿ ಕೂಡಿಸಿರುವ ಪಾಠವಿದು. ಸಂದರ್ಭ ಸ್ಪಷ್ಟವಿಲ್ಲದ ಕಾರಣ ಅಭಿಪ್ರಾಯ ವಿಶದತೆಯಿಲ್ಲ. ''ಕರೆತಂದು ನಿಶ್ಚಯವಾಗಿ ಕಳುಹಿಸಿಕೊಡುತ್ತಾನೆ. ಕಳಂಕವನ್ನು ಪರಿಹರಿಸುತ್ತಾನೆ. ಛಲಕ್ಕಾಗಿ ಪ್ರಾಣಕೊಡುತ್ತಾನೆ. ಎಲೆ ತಾವರೆಗಣ್ಣವಳೇ, ಬಳಿಕ ತಾನೂ ಸಾಯುತ್ತಾನೆ.''—ಹೀಗೆ ಏನಾದರೂ ಇಲ್ಲಿಯ ಅರ್ಥವಿರಬಹುದು.

ಇದು ಕಾವ್ಯಾದರ್ಶದ 'ಪಾದಾದಿ ವ್ಯಪೇತ ಯಮಕಭೇದ'ಗಳಲ್ಲಿ 'ವಿಜಾತೀಯ ಪಾದಾದಿಯಮಕ'ದ ಅಂತರ್ಭೇದಕ್ಕೆ (೩–೩೦) ಸೇರಿದೆ.

ದಾರುದಾರುಣನಂ ದಾನ । ವಾರಿ ವಾರಿತಲೋಕನಂ ।
ಬಾರ ಬಾ ರಣಮಂ ನೋಡಾ । ಸಾರಸಾರಾಂಬುದಾಭವಂ ॥ (೧೩೨)

''ಬಾರಯ್ಯ, ಬಾ; ದೇವದಾರುವಿನಂತೆ ಕಠಿನನಾಗಿರುವವನನ್ನು, ಅಸುರವೈರಿಯಾದ ವಿಷ್ಣುವಿನ ಕಣ್ಣುತಪ್ಪಿಸಿದವನನ್ನು, (ಆತನ) ಸಾರವಾದ ನೀರುಳ್ಳ ಮೋಡ (ಕಾರ್ಮೋಡ)ವನ್ನು ಹೋಲುವ ಕಾಳಗವನ್ನು, ನೋಡು.''

ಇದು ಭಾಮಹನ ಕಾವ್ಯಾಲಂಕಾರದ ಪಾದಾದಿ ಯಮಕಭೇದವನ್ನು (೨–೧೧), ಕಾವ್ಯಾದರ್ಶದ 'ಪಾದಾದಿ ಅವ್ಯಪೇತ ಯಮಕ'ಭೇದದ 'ಪಾದಚತುಷ್ಟಯಾದಿ' ಅಂತರ್ಭೇದವನ್ನು (೩–೧೮) ಅನುಸರಿಸಿದ್ದಾಗಿದೆ.

ಸಾರಸಾರಸನಾಥಾಮ । ಸಾರಸಾರಾನಿತಂಬಿಯಂ ।
ತಾರಾ ತಾರಾತರಂಗಾಭಾ । ಕಾರತಾರಮಣೀಯೆಯಂ ॥ (೧೩೩)

"ಉತ್ಕೃಷ್ಟವಾದ ಕಾಂಚೀದಾಮದಿಂದ ಸೊಗಸುವ ಜಘನಪ್ರದೇಶವುಳ್ಳವಳನ್ನು, ನಕ್ಷತ್ರದಂತೆಯೂ ಅಲೆಗಳಂತೆಯೂ ಪ್ರಕಾಶಮಾನವಾದ ಆಕೃತಿಸೌಂದರ್ಯವುಳ್ಳವಳನ್ನು ಕರೆದು ತಾ.".

ಇದು 'ಕಾವ್ಯಾದರ್ಶ'ದ 'ಪಾದಾದಿ ಅವ್ಯಪೇತ ಯಮಕ'ದ 'ಪ್ರಥಮ-ದ್ವಿತೀಯ-ತೃತೀಯ ಪಾದಾದಿ' ಅಂತರ್ಭೇದಕ್ಕೆ (೩–೧೪) ಸೇರಿದೆ.

ಅಜೇಯಂ ಪೋಲ್ಕುವಾ ಮತ್ತ । ಗಜಂ ವಾರಿಜನಾಭನಂ ।
ತ್ರಿಜಗ[ನ್ಮೋ]ದನಂ ಮತ್ತಂ । ನಿಜನೀಳಘನಾಭನಂ ॥ (೧೩೪)

"ಆ ಅಜೇಯವಾದ ಮದ್ದಾನೆ ಮೂರು ಲೋಕವನ್ನೂ ಸಂತೋಷಪಡಿಸುವ, ಕಪ್ಪುಮೋಡವನ್ನು ಹೋಲುವ, ವಿಷ್ಣುವನ್ನು ಹೋಲುತ್ತದೆ."

ಇದು ಭಾಮಹ 'ಕಾವ್ಯಾಲಂಕಾರ' 'ಕಾವ್ಯಾದರ್ಶ'ಗಳಲ್ಲಿ ಯಾವ ಯಮಕಭೇದವನ್ನೂ ಹೋಲುವುದಿಲ್ಲ. ಆದರೆ 'ಪಾದಾಂತ ವ್ಯಪೇತ ಯಮಕ' (೧–೩; ೨–೪) ಭೇದವೆಂದೂ 'ವಿಜಾತೀಯ ಪಾದಾಂತ'ವೆಂದೂ ಹೇಳಬಹುದು (ಹೋಲಿಸಿ : ಕಾವ್ಯಾದ. ೩-೩೧).

ಲೋಕವೈದಿಕ ಸಾಮ್ಯೈಕ । ಲೋಕನಾಕಾರಕಾರಕಾ ।
ನಾಕಿ ನೂತಪದವ್ಯಕ್ತಿ । ಶ್ರೀಕಾಂತಾ ಮಮಕಾಮದಾ ॥ (೧೩೫)

"ಜನಸಾಮಾನ್ಯರ ಹಾಗೂ ವೈದಿಕರ ಗಾನದಲ್ಲಿ ಒಂದೇ ರೀತಿಯಾದ ಪರಿಶೀಲನೆಗೆ (ತಕ್ಕ) ಆಕೃತಿಯನ್ನು ಮಾಡಿಕೊಳ್ಳುವವವಳೂ ದೇವತೆಗಳಿಂದ ಹೊಗಳಲ್ಪಟ್ಟ ಪಾದಗಳ ಸೊಬಗುಳ್ಳವಳೂ ಆದ ಲಕ್ಷ್ಮಿ ನನ್ನ ಇಷ್ಟಾರ್ಥವನ್ನು ಈಡೇರಿಸುವಾಕೆ."

ಇದು ಭಾಮಹ 'ಕಾವ್ಯಾಲಂಕಾರ'ದ 'ಆವಲಿ'ಯೆಂಬ ಯಮಕಭೇದವೆಂದು (ರುದ್ರಟ ಕಾವ್ಯಾಲಂಕಾರದ 'ಅನಿಯತ ದೇಶಾವಯವ ಯಮಕ'ವೂ ಆಗಬಹುದು) ತಿಳಿಯುತ್ತದೆ.

ವಾರಿ ವಾರಿಯೊಳಾದಾನಂ । ವಾರಿವಾರಿ ವಿತರ್ಕಮಂ ।
ವಾರಿ ವಾರಿಜಪ್ರೋದಾನಂ । ವಾರಿವಾರಿಜನಾಭನೊಳ್ ॥ (೧೩೬)

ಇದರ ಆಶಯ ಸ್ಪಷ್ಟವಾಗುತ್ತಿಲ್ಲ.

ಇದಕ್ಕೆ ಭಾಮಹ ರುದ್ರಟರ 'ಕಾವ್ಯಾಲಂಕಾರ'ಗಳಲ್ಲಿಯೂ 'ಕಾವ್ಯಾದರ್ಶ'ದಲ್ಲಿಯೂ ಕೇವಲ ಸದೃಶವಾದ ವೈಚಿತ್ರ್ಯವಿಲ್ಲ. 'ಕಾವ್ಯಾದರ್ಶ'ದ ಅವ್ಯಪೇತ-ವ್ಯಪೇತಾತ್ಮ ಯಮಕ ಭೇದಗಳಲ್ಲಿ 'ಪಾದ ಚತುಷ್ಟಯಾದಿ' ಅಂತರ್ಭೇದವನ್ನು (೩-೩೬) ಇದು ಭಾಗಶಃ ಹೋಲುತ್ತದೆ. ೧-೩ನೆಯ ಪಾದಾಂತಗಳಲ್ಲಿ ಅವ್ಯಪೇತ ಯಮಕವೂ ಇರುವುದರಿಂದ ಇದು ಬೇರೆಯೇ ಯಮಕವೈಚಿತ್ರ್ಯವಾಗಿ, ಇದೇ ಕಾರಣದಿಂದ ಇದನ್ನು 'ಆವಲಿ'ಯಲ್ಲಿಯೇ ಬೇಕಾದರೆ ಸೇರಿಸಲು ಶಕ್ಯವಿದೆ.

ವರವಾರನಾರಿಯೊಳ್ ನೆರೆದೆ[ನಾ]ನೆಲ್ಲಿ ನೆರೆದೆ[ಂ]
[ವ]ರವಾರನಾರಿಯೊಳ್ ನೆರೆದೆನಾನೆಲ್ಲಿ ನೀಂ
ಪರದ[ರಿಂ] ತರಿಸುವರಿಂತ[ಜಿ]ಯು ನೆಲ್ಲಂ
ಪುರಿದು ಮಾಜಿದೆ ಕಾಣದಂತಿರಿಸ[ಲಂ]ಗಡಿಯೊಳ್ ॥ (೧೩೭)

ಇದು ಅರ್ಥಸೌಕರ್ಯಕ್ಕಾಗಿ ತಾತ್ಕಾಲಿಕವಾಗಿ ಕೂಡಿಸಿರುವ ಪಾಠ. ಮೂಲದಲ್ಲಿ ಏನಿದ್ದಿತೋ ಹೇಳುವುದು ಕಷ್ಟ. ಅಂಗೀಕೃತ ಪಾಠದಂತೆ ಅರ್ಥ: "ಉತ್ತಮಳಾದ ಯಾವ ಹೆಂಗುಸಿನ ಸಮಾಗಮವನ್ನು ಪಡೆದೆ?" "ನಾನು ಎಲ್ಲಿ (ಹಾಗೆ) ಸಮಾಗಮ ಪಡೆದೆ? ಉತ್ತಮಳಾದ ವಾರಸ್ತ್ರೀಯಲ್ಲಿ ನಾನು ಸಮಾಗಮವನ್ನು ಪಡೆದೆ; ನೀನು ಎಲ್ಲಿ (ಯಾರ) ಸಮಾಗಮ ಪಡೆದೆ?" ತಿಳಿ, ಹೀಗೆ ಬತ್ತವನ್ನು ವ್ಯಾಪಾರಿಗಳಿಂದ ತರಿಸುತ್ತಾರೆ,

ಹುರಿದು ಮಾರಾಟಮಾಡದೆ ಅಂಗಡಿಯಲ್ಲಿ ಕಾಣದಂತಿರಿಸುವುದಕ್ಕೆ.'' ಪೂರ್ವಾರ್ಧದ ೨ ಪಾದಗಳಲ್ಲಿ, ವ್ಯಾಪಾರಿಗಳು ಗೂಢಭಾಷೆಯಲ್ಲಿ ಬತ್ತದ ವ್ಯಾಪಾರದ ಬಗ್ಗೆ ಆಡಿದೊಂದು ಮಾತಿನ ಇಂಗಿತವಿರಬೇಕು ಎಂದು ತೋರುತ್ತದೆ. ೪ನೆಯ ಪಾದದಲ್ಲಿ ''ಕಾಣದಂತಿರಿಸುಂಗಡಿಯೊಳ್'' ಎಂದು ಪ್ರತ್ಯಂತರದಲ್ಲಿದ್ದು, ಸಕಾರದ ಮಗ್ಗುಲ ಕೊಂಬು ಉತ್ಪದ ಭ್ರಾಂತಿಯನ್ನುಂಟುಮಾಡಿದ ಲಕಾರವಾಗಿದ್ದಿರುವುದು ಸಾಧ್ಯ.

ಇದು 'ಕಾವ್ಯಾದರ್ಶ'ದ ಅವ್ಯವಹಿತ (ಅವ್ಯಪೇತ) ಸಮುದ್ಗದ ಲಕ್ಷ್ಯವಾಗಿರಬೇಕೆಂದು (ಕಾವ್ಯಾದ. ೩-೫೭) ಕರ್ತೃ ಉದ್ದೇಶಿಸಿದಂತಿದೆ. ಆದರೆ ಯಮಕಲಕ್ಷಣ ಪೂರ್ಣಪಾದದಲ್ಲಿ ವ್ಯಾಪೃತವಾಗದಿರುವುದು ಇಲ್ಲಿಯ ಕೊರತೆ. ಇರುವಂತೆ ವ್ಯಪೇತಯಮಕದ ಪ್ರಥಮ-ದ್ವಿತೀಯ ಪಾದಾದಿ ಯಮಕವೆನ್ನಬೇಕಾಗಿದೆ (ಕಾವ್ಯಾದ. ೩-೨೦). ಪದ್ಯಪಾಠ ಮೂಲದಲ್ಲಿ 'ಅವ್ಯವಹಿತ ಸಮುದ್ಗ' ಭೇದದ ಲಕ್ಷ್ಯವೇ ಆಗಿದ್ದಿರಬೇಕು.

> ತಿಳಿಗೊಳನಂ ಪೂಗೊಳನನದಂ ನೆಗಬಿ । ಮುಳಿದು ಕೊಳ್ವ ಬಳಸೆ ನಾನದಂ ನೆ ।
> ಗಳೆ ತಾನೆಡೆಮನಂಗಜನೆದಪ್ಪಲಾ । ಗಳೆ ನಂಬವನದೊಪ್ಪುವಂ ವನೇಚರಮದಾ ॥ (೧೩೮)

ಈ ಪದ್ಯದ ಪಾಠ ಯಾವ ಪರಿಷ್ಕರಣದಲ್ಲಿಯೂ ತೃಪ್ತಿಕರವಾಗಿಲ್ಲ. ಅರ್ಥಸಾಮಂಜಸ್ಯವನ್ನು ತರಬೇಕಾದರೆ ತುಂಬ ತಿದ್ದುಪಾಟುಗಳನ್ನು ಅಂಗೀಕರಿಸಬೇಕಾಗುತ್ತದೆ. ಅದು ಅಷ್ಟು ಸರಿಯಲ್ಲವೆಂಬ ಕಾರಣದಿಂದ ಹಾಗೆ ಮಾಡಲು ಇಲ್ಲಿ ಯತ್ನಿಸಿಲ್ಲ. ಹಾಗೆಂದೇ ಅರ್ಥವನ್ನು ಬರೆಯಲೂ ಹೋಗಿಲ್ಲ.

ಇಲ್ಲಿ ಯಮಕವೂ ಸ್ಫುಟವಾಗಿ ತೋರುತ್ತಿಲ್ಲ. ಗುರುತಿಸಿರುವ ಮಟ್ಟಿಗೆ ಭಾಮಹ'ಕಾವ್ಯಾಲಂಕಾರ'ದ 'ಆವಲಿ'ಯ ಲಕ್ಷಣವನ್ನು ಇಲ್ಲಿ ಕಾಣಬಹುದಾಗಿದೆ.

ಈವರೆಗಿನ ಪರಿಶೀಲನೆಯನ್ನು ಗಮನಿಸಿ ಹೇಳಬಹುದಾದರೆ, 'ಕವಿರಾಜಮಾರ್ಗ'ದ ಯಮಕವಿವೇಚನೆ ಭಾಮಹ ದಂಡಿಗಳ ಅಲಂಕಾರ ಗ್ರಂಥಗಳಲ್ಲಿ ತೋರುವಂತೆ ಸಮಗ್ರವಾಗಿಯೂ ಪರಿಷ್ಕಾರವಾಗಿಯೂ ಇಲ್ಲದೆ ಹರಕು ಮುರುಕಾಗಿ ತೋರುತ್ತದೆ. ವಿವರಗಳು ಏನೇನೂ ಸಾಲವು. ಪದ್ಯಪಾಠಗಳು ಉಂಟುಮಾಡಿರುವ ಸಮಸ್ಯೆಗಳಿಂದಾಗಿ ಆ ವಿವರಗಳೂ ಸಂಗತಾರ್ಥಗಳಾಗದೆ, ನಿರಾಶೆಯುಂಟುಮಾಡುತ್ತವೆ. ಕೊಂಚಮಟ್ಟಿಗೆ ಸ್ವತಂತ್ರವಾದ ಧೋರಣೆಯನ್ನು ಕರ್ತೃ ಅವಲಂಬಿಸಿರುವುದು ನಿಜ. ಆದರೆ ಅದರಲ್ಲಿಯೂ ಅಷ್ಟೇನೂ ಕಟ್ಟುನಿಟ್ಟು ಕಂಡು ಬರುವುದಿಲ್ಲ; ಕೌಶಲ್ಯವೂ ಕಾಣಿಸುವುದಿಲ್ಲ.

ನಾಗವರ್ಮನ 'ಕಾವ್ಯಾವಲೋಕನ' :

ನಾಗವರ್ಮನು ಶಬ್ದಾಲಂಕಾರ ವಿಭಾಗ ಚತುರ್ವಿಧವೆನ್ನುವಾಗ ಯಮಕವನ್ನು ಆರಂಭದಲ್ಲಿಯೇ ಸೂಚಿಸಿ (ಸೂ. ೧೨೭), ಆ ವಿಭಾಗವನ್ನು ಯಮಕದ ಲಕ್ಷಣ–ಲಕ್ಷ್ಯ ನಿರೂಪಣೆಯಿಂದಲೇ ಆರಂಭಿಸಿದ್ದಾನೆ. ಅವನು ಕೊಡುವ ಲಕ್ಷಣವಿದು:

> ಪದವರ್ಣವ್ಯಾವೃತ್ತಿ ದ । ಲದು ಯಮಕಂ ವ್ಯವಹಿತಾವ್ಯಪೇತಾತ್ಮಂ ಮ ।
> ತ್ತದು ಪಾದದಾದಿಮಧ್ಯಾಂ । ತದೊಳಕ್ಕುಮನೇಕಭೇದನಿಯತಸ್ಥಿತಿಯಿಂ ॥ (ಸೂ. ೧೨೮)

ಇಲ್ಲಿ ''ಪದ ಮತ್ತು ವರ್ಣಗಳ ಆವೃತ್ತಿಯೇ ಯಮಕ; ಅದು ವ್ಯವಹಿತ (ವ್ಯಪೇತ) ಮತ್ತು ಅವ್ಯಪೇತ ರೂಪವಾದ್ದು; ಅಲ್ಲದೆ ಅದು ಪಾದಾದಿ, ಪಾದಮಧ್ಯ ಹಾಗೂ ಪಾದಾಂತ್ಯಗಳಲ್ಲಿ ಅನೇಕ ವೈಚಿತ್ರ್ಯಗಳೊಂದಿಗೆ ಘಟಿಸುವಂತಹುದು''–ಎಂಬ ವಿವರಣೆಯಿದೆ. ಈ ಸೂತ್ರ 'ಕಾವ್ಯಾದರ್ಶ'ದ ''ಅವ್ಯಪೇತವ್ಯಪೇತಾತ್ಮಾ ವ್ಯಾವೃತ್ತಿರ್ವರ್ಣಸಂಹತೇಃ....'' ಎಂಬುದರ (೩–೧) ಅನುವಾದವೇ ಆಗಿದೆ. ಇಲ್ಲಿಂದ ಮುಂದೆ ಯಮಕಭೇದಗಳಿಗೆ ಲಕ್ಷ್ಯಗಳನ್ನು ಉದ್ಧರಿಸಿದ್ದು, ಇವುಗಳಲ್ಲಿ ಒಂದು ಕ್ರಮವೂ ಸೊಗಸೂ ಇರುವುದಲ್ಲದೆ, ಸಂಖ್ಯಾದೃಷ್ಟಿಯಿಂದ ತಕ್ಕಮಟ್ಟಿಗೆ ತೃಪ್ತಿಕರವೂ ಆಗಿದೆ. ಈ ಲಕ್ಷ್ಯಗಳನ್ನು ತಕ್ಕ ಶೀರ್ಷಿಕೆಗಳೊಂದಿಗೆ ಲಾಕ್ಷಣಿಕನೇ ಪೃಥಕ್ಕರಿಸಿ ಕೊಟ್ಟಿರುವುದು ಸಹ, ಅವುಗಳ ಸ್ವರೂಪವನ್ನು ತಿಳಿಯಲು ಸಹಕಾರಿಯಾಗಿದೆ.[1]

ನಾಗವರ್ಮನು 'ವ್ಯವಹಿತಕ್ಕೆ' ಎಂಬುದಾಗಿ ಹೇಳಿ, ಕೊಟ್ಟಿರುವ ೧೨ ಲಕ್ಷ್ಯಗಳನ್ನು ಈಗ ಪರಿಶೀಲಿಸ ಬಹುದು:

ಮಾಣಿಕದಂತೊಪ್ಪಿದನೀ। ಮಾಣಿ ಕರಂ ಕಟೆಯೆ ಚೆಲ್ವುವಡೆದೆಂಬಿನೆಗಂ।
ಕ್ಷೋಣಿಯನಳೆಯಲ್ ಮುನ್ನಂ। ಕ್ಷೋಣಿಮನಂ ವಿಷ್ಣು ತಾನೆ ವಾಮನನಾದಂ॥ (೫೨೬)

''ಈ ವಟು ವಿಶೇಷವಾಗಿ ಪರಿಣತಗೊಂಡು ಚೆಲುವಾಗಿ ಮಾಣಿಕ್ಯದಂತೆ ಶೋಭಿಸಿದನು ಎನ್ನುವಂತೆ, ಒಂದೇ ಮನಸ್ಸಿನ ವಿಷ್ಣು ಭೂಮಿಯನ್ನು ಅಳೆಯುವುದಕ್ಕೆ ತಾನೇ ಹಿಂದೆ ವಾಮನನಾದನು.''

ಇದು 'ಕಾವ್ಯಾದರ್ಶ'ದ ಪಾದಾದಿ ವ್ಯಪೇತ ಯಮಕ ಭೇದಗಳಲ್ಲಿ ವಿಜಾತೀಯ ಪಾದಾದಿ ಯಮಕಗಳಲ್ಲಿ ೧–೨ ಮತ್ತು ೩–೪ರಲ್ಲಿ ಯಮಕವೇರ್ಪಟ್ಟಿರುವ ಲಕ್ಷ್ಯವನ್ನು (೩–೩೦) ಸ್ವರೂಪದಲ್ಲಿ ಹೋಲುತ್ತದೆ.

ತಿಂದುಕಪೀನಫಲಂಗಳ। ನೊಂದೊಂದೆಡೆಗಳೊಳಲಂಪು ಪೋಪನ್ನೆವರಂ।
ತಿಂದು ಕಪೀನಕುಳಂ ವ್ರತಿ। ಯಂದದಿನಿರ್ಪುದು ನಿಯುಕ್ತವನ್ಯಾಶನದಿಂ॥ (೫೨೭)

''ಕೋತಿಗಳೂ ಮುಂಗುಸಿಗಳೂ ಅಲ್ಲಲ್ಲಿ ತೂಬರೆಗಿಡದ ದಪ್ಪ ಹಣ್ಣುಗಳನ್ನು ಕಟ್ಟರೆಯಾಗುವ ಮಟ್ಟಿಗೆ ತಿಂದು (ಈಗ) ಕಾಡಿನ ಗೆಡ್ಡೆಗೆಣಸುಗಳನ್ನಷ್ಟೇ ತಿನ್ನುತ್ತ ವ್ರತಿಗಳ ಹಾಗೆ ಇದ್ದುಕೊಂಡಿವೆ.''

ಇದು 'ಕಾವ್ಯಾದರ್ಶ'ದ ಪಾದಾದಿ ವ್ಯಪೇತಯಮಕಭೇದಗಳಲ್ಲಿ, ಸಜಾತೀಯ ಪಾದಾದಿ ಯಮಕಗಳಲ್ಲಿ, ೧–೩ರಲ್ಲಿ ಯಮಕವೇರ್ಪಟ್ಟಿರುವ ಲಕ್ಷ್ಯವನ್ನು (೩–೨೧) ಸ್ವರೂಪದಲ್ಲಿ ಹೋಲುತ್ತದೆ.

ಫಲಸಾರಸನಮವಂತೆ। ತ್ತಲುಂವೊದವಿರೆ ಕುಳಿರ್ವ ಪುಟಿಲೊಳೆರ್ದೆಗೊಳ್ವಿನೆಗಂ।
ಕಲರುತಿ[ಯಿಂ] ಪಾಡಿದುದು। ತ್ಪಲಸಾರಸನಂ ಪುಳಿಂದಲಲನಾನಿಕರಂ॥ (೫೨೮)

''ತಂಪಾದ ತೋಪಿನಲ್ಲಿ ಮನೋಹರವಾಗಿ ಎಲ್ಲ ಕಡೆಯೂ ಹಣ್ಣುಗಳ ಶ್ರೇಣಿ (ಗೊಂಚಲು ಗೊಂಚಲು) ಒದಗಿರುತ್ತಿರಲು, ನೈದಿಲೆಯ ಒಡ್ಯಾಣ ತೊಟ್ಟ ಬೇಡಿತಿಯರ ಗುಂಪು ಮನೋಹರವಾದ ಧ್ವನಿಯಲ್ಲಿ ಹಾಡಿತು.''

ಇದು ಕಾವ್ಯಾದರ್ಶದ 'ಪಾದಾದಿ ವ್ಯಪೇತ ಯಮಕ' ಭೇದದಲ್ಲಿ, ಸಜಾತೀಯ ಪಾದಾದಿ ಯಮಕಗಳಲ್ಲಿ, ೧-೪ರಲ್ಲಿ ಯಮಕವೇರ್ಪಟ್ಟಿರುವ ಲಕ್ಷ್ಯವನ್ನು (೩-೨೨) ಸ್ವರೂಪದಲ್ಲಿ ಹೋಲುತ್ತದೆ (ಫಲ-ಪಲಗಳನ್ನು ಅಭಿನ್ನವಾಗೆಣಿಸಬೇಕು).

ಆಲೋಚಂ ಸಾಲದೆ ಶಿಶು। ಪಾಲನನುಱದಿಕ್ಕಿ ಮಿಕ್ಕ ಭುವನಸ್ಥಿತಿಯಂ।
ಪಾಲಿಸು ನೀಂ ನಿನಗೆ ಜಗ। ತ್ಪಾಲನವಿಜ್ಞಾನಮಂ ಪೆಱರ್ ಪ್ರಕಟಿಪರೇ॥ (೫೨೯)

''ಆಲೋಚನೆ ಸಾಲದೇ? ಶಿಶುಪಾಲನನ್ನು ಲಕ್ಷಿಸದೆ ನಿಗ್ರಹಿಸಿ, ಅತಿಶಯವಾದ ಲೋಕರಕ್ಷಣೆಯನ್ನು ನೀನು ನೋಡಿಕೋ. ನಿನಗೆ ಲೋಕವನ್ನು ಪಾಲಿಸುವ ವಿದ್ಯೆಯನ್ನು ಬೇರೆಯವರು ಸ್ಪಷ್ಟಮಾಡಬೇಕೇ?''

ಇದು 'ಕಾವ್ಯಾದರ್ಶ'ದ 'ಪಾದಾದಿ ವ್ಯಪೇತ ಯಮಕ' ಭೇದದಲ್ಲಿ, ಸಜಾತೀಯ ಪಾದಾದಿ ಯಮಕಗಳಲ್ಲಿ, ೨-೪ರಲ್ಲಿ ಯಮಕವೇರ್ಪಟ್ಟಿರುವ ಲಕ್ಷ್ಯವನ್ನು (೩-೨೪) ಸ್ವರೂಪದಲ್ಲಿ ಹೋಲುತ್ತದೆ.

ಸರಭಸದೆ ಕಾಲಯುವ ಸಾ। ಲ್ವರುಕ್ಮಿಬಾಣದ್ರುಮಾದಿಗಳ್ವೆರಸಖಿಲಾ।
ಸುರಚಕ್ರಂ ನಿನ್ನ ವಿಭಾ। ಸುರಚಕ್ರದ ಬಾಯ್ಗೆ ಬಾರದಿರದು ಮುರಾರೀ॥ (೫೩೦)

''ಕೃಷ್ಣಾ, ಕಾಲಯವ, ಸಾಲ್ವ, ರುಕ್ಮಿ, ಬಾಣ, ದ್ರುಮ (ಯಮಳಾರ್ಜುನ?) ಈ ಮುಂತಾದವರು ಸಹವಾಗಿ ಸಮಸ್ತ ಅಸುರರ ಸಮೂಹವೂ ನಿನ್ನ ಪ್ರಕಾಶಮಾನವಾದ ಚಕ್ರಾಯುಧದ ಬಾಯಿಗೆ ಅತಿಶೀಘ್ರವಾಗಿ ತುತ್ತಾಗದೆ ಇರುವುದಿಲ್ಲ.''

ಇದು 'ಕಾವ್ಯಾದರ್ಶ'ದ 'ಪಾದಾದಿ ವ್ಯಪೇತ ಯಮಕ' ಭೇದದಲ್ಲಿ, ಸಜಾತೀಯ ಪಾದಾದಿ ಯಮಕಗಳಲ್ಲಿ, ೩-೪ರಲ್ಲಿ ಯಮಕವೇರ್ಪಟ್ಟಿರುವ ಲಕ್ಷ್ಯವನ್ನು (೩-೨೫) ಸ್ವರೂಪದಲ್ಲಿ ಹೋಲುತ್ತದೆ.

ತಱಸಂದಿಸೆ ಕರಿಘಟೆಯಂ। ತಱಗಿರೆ ಪಾಯ್ದುವು ಶಿಲೀಮುಖಂ ಪುಷ್ಕರದೊಳ್॥
ಗಱಸಂದಿಸೆ ನೊರೆದೊರ್ವಿದ, ।ಲೆಱಗುವ ತೆಱದಿಂ ಶಿಲೀಮುಖಂ ಪುಷ್ಕರದೊಳ್॥ (೫೩೧)

''ನಿಶ್ಚಯಮಾಡಿಕೊಂಡು, ಆನೆಗಳ ಗುಂಪಿಗೆ ಬಾಣಪ್ರಯೋಗಮಾಡಲು, ಆ ಬಾಣಗಳು, ಗರಿಗಳ ಸದ್ದಿನೊಂದಿಗೆ ಏಕಕಾಲದಲ್ಲಿ ದುಂಬಿಗಳು ತಾವರೆಗೊಳವನ್ನು ಮುತ್ತುವ ರೀತಿಯಲ್ಲಿ, ಆನೆಗಳ ಸೊಂಡಿಲ ತುದಿಯಲ್ಲಿ ಮುತ್ತಿಕೊಳ್ಳಲು ಹೋಗಿ ನುಗ್ಗಿದುವು.''

ಇದು 'ಕಾವ್ಯಾದರ್ಶ'ದ ಪಾದಾಂತ ವ್ಯಪೇತದ ಲಕ್ಷ್ಯವನ್ನು (೩-೪೧) ಭಾಗಶಃ ಹೋಲುತ್ತದೆ. ಇದನ್ನು ಪಾದಾಂತ ವ್ಯಪೇತ ಯಮಕದ ಲಕ್ಷ್ಯವೆಂದು ಅಂಗೀಕರಿಸಿದರೆ, ೨-೪ನೆಯ ಪಾದಗಳಲ್ಲಿ ಮಾತ್ರ ಯಮಕ ವೇರ್ಪಟ್ಟಿದೆಯೆಂದು ತಿಳಿಯಬೇಕು.

ನೆಯ್ದಿಲೆಸೞುವಱ ಪೋಲ್ಕೆಯು । ನೆಯ್ದಲೆ ದಲ್ ಪಡೆದುವಿಲ್ಲ ಲೋಕಮನಲೆಯು ।
ಲ್ಕಯ್ದುಮಲರ್ಗಣೆಗಳೆಕ್ಕೆಮ । ಕೆಯ್ದು ಮನೋಜಂಗೆನಿಪ್ಪುವಾಕೆಯ ಕಣ್ಗಳ್ ॥ (೫೩೨)

''ಲೋಕವನ್ನು ಪೀಡಿಸಲು ಮನ್ಮಥನಿಗೆ ಐದು ಹೂಬಾಣಗಳೂ ಹಾಗಿರಲಿ, ಆಕೆಯ ಕಣ್ಣುಗಳೇ ಶಸ್ತ್ರವೆನಿಸುವುವು; ಅವುಗಳ ಹೋಲಿಕೆಗೆ ಬರುವುದಕ್ಕೆ ನೈದಿಲೆ ಹೂವಿನೆಸಳುಗಳು ಸಹ ಪುಣ್ಯ ಮಾಡಿಲ್ಲ.''

ಇದು ಈಗಾಗಲೇ ನೋಡಿರುವ 'ಕಾವ್ಯಾದರ್ಶ'ದ ೩–೩೦ರ ಯಮಕಲಕ್ಷ್ಯವನ್ನು ಹೋಲುವುದೇ ಆಗಿದೆ. 'ಕಾವ್ಯಾವಲೋಕನ'ದ ೫೨೬ನೆಯ ಲಕ್ಷ್ಯದಿಂದ ಇದು ಎಷ್ಟರಮಟ್ಟಿಗೆ ಭಿನ್ನವೋ, ತಿಳಿಯುತ್ತಿಲ್ಲ.

ಮಲರೆ ತಮದೊಡ್ಡು ಪಂಕಜ । ಮಲರೆ ವಿನೀಲೋತ್ಪಲಾಳಿ ಮುಗಿಯೆ ಖಲರ್ ಸಂ ।
ಚಲಿಸುತ್ತುಮುಗಿಯೆ ಜಗತೀ । ವಿಲೋಚನಂ ಮೂಡಿದಂ ವಿಲೋಚನನಾಗಳ್ ॥ (೫೩೩)

''ಕತ್ತಲ ದಟ್ಟಣೆ ಪರಾಙ್ಮುಖವಾಗಲು, ತಾವರೆ ಅರಳಲು, ನೈದಿಲೆ ಮುಚ್ಚಿಕೊಳ್ಳಲು, ದುಷ್ಟರು ಚಂಚಲಗೊಂಡು ಹೊರಹೋಗಲು, ಲೋಕದ ಕಣ್ಣಾದ ಸೂರ್ಯನು ಆಗ ಉದಯಿಸಿದನು (ರ-ಲ ಗಳಿಗೆ ಅಭೇದವನ್ನು ಗ್ರಹಿಸಿ, ಸೂರ್ಯನೆಂಬ ಅರ್ಥದ 'ವಿರೋಚನ', ಇಲ್ಲಿ 'ವಿಲೋಚನ' ಎಂದು ಆಗಿರುವಂತೆ ತೋರುತ್ತದೆ).''

ಇದಕ್ಕೆ ಕೇವಲ ಸದೃಶವಾದ ಯಮಕಭೇದ ಸಂಸ್ಕೃತ ಲಕ್ಷಣಗ್ರಂಥಗಳಲ್ಲಿ ತೋರುತ್ತಿಲ್ಲ. ೧-೨ನೆಯ ಪಾದಗಳಲ್ಲಿ ಪಾದಾದಿ ವ್ಯಪೇತ ಯಮಕತ್ವವೂ ೪ನೆಯ ಪಾದದಲ್ಲಿ ಪಾದಾದಿ–ಪಾದಮಧ್ಯ ವ್ಯಪೇತಯಮಕತ್ವವೂ ಗೋಚರವಾಗುತ್ತದೆ.

ಅಮಳ್ಗಳ್ ನಯವಿಕ್ರಮಗುಣ । ದಮಳ್ಗಳ್ ನೃಪಶಾಸ್ತ್ರಶಸ್ತ್ರಪರಿಣತರವರಂ ।
ಸಮರದೊಳುದಗ್ರಶೌರ್ಯಂ । ಸಮರಸಸಂಪನ್ನನಾವನುಱಿದಾಂಪನ್ನಂ ॥ (೫೩೪)

''(ಈ) ಅವಳಿಗಳು ನಯಗುಣ ವಿಕ್ರಮಗುಣಗಳ ಜೋಡಿಗಳು; ರಾಜನೀತಿ ಹಾಗೂ ಶಸ್ತ್ರವಿದ್ಯೆಯಲ್ಲಿ ಪರಿಣತರು, ಅವರನ್ನು ಯುದ್ಧದಲ್ಲಿ ಅಧಿಕ ಬಲಶಾಲಿಯಾದವನು, ಸಮರಸ ಸಂಪನ್ನನು, ಯಾವನು ತಾನೇ ಲಕ್ಷಿಸದೆ ಎದುರಿಸುವವನು?''

ಇದಕ್ಕೆ ಸಹ ಕೇವಲ ಸದೃಶವಾದ ಯಮಕಭೇದ ಸಂಸ್ಕೃತ ಲಕ್ಷಣಗ್ರಂಥಗಳಲ್ಲಿ ತೋರುತ್ತಿಲ್ಲ. ೧-೨ನೆಯ ಪಾದಗಳಲ್ಲಿ ಮಳ್ಗಳ್-ಮಳ್ಗಳ್ ಎಂಬ ಯಮಕವೇರ್ಪಟ್ಟು ಇದು ರುದ್ರಟ 'ಕಾವ್ಯಾಲಂಕಾರ'ದ ೩-೫೭ರ ಲಕ್ಷ್ಯವನ್ನು ಭಾಗಶಃ ಹೋಲುತ್ತದೆ; ಒಟ್ಟಾಗಿ ನೋಡಿದಾಗ ಇದು 'ಪಾದಾದಿ ವ್ಯಪೇತ ಯಮಕ'ವೆಂಬುದಾಗಿ ಮಾತ್ರ ಹೇಳಬಹುದು.

ಮಂತಣಕ್ಕಂ ಚದುರರ್ ಗಡ । ಮಂತಣಕಂ ನೆಗೞೆ ಬಂದರೆನಿಸಿರ್ದುಂ ತಾಂ ।
ಮಂತಣಮುಸಿರದೆ ಕೆಲರಾ । ಮಂತಣಮುಂಡಂತೆ ಪೆಱರ ನಯದೊಳೆ ತಣಿವರ್ ॥ (೫೩೫)

'' 'ಮಂತ್ರಾಲೋಚನೆಗೆ ಸಹ ಚತುರರಲ್ಲವೇ!; ಹಾಗೆ (ಎಂಬುದಾಗಿ) ಅಣಕಹುಟ್ಟಲು ಬಂದರು' ಎಂದೆನಿಸಿಯೂ, ಕೆಲವರು ಮಂತ್ರಾಲೋಚನೆಯ ಸಲಹೆಯನ್ನು ಕೊಡದೆ, ಆಮಂತ್ರಣವುಂಡವರ ಹಾಗೆ ಬೇರೆಯವರ ರಾಜನೀತಿಯಲ್ಲಿ ತೃಪ್ತಿಪಟ್ಟುಕೊಳ್ಳುತ್ತಾರೆ.''

ಇದು 'ಕಾವ್ಯಾದರ್ಶ'ದ ಪಾದಾದಿ ವ್ಯಪೇತ ಯಮಕದಲ್ಲಿ ಪಾದಚತುಷ್ಟಯಾದಿ ಅಂತರ್ಭೇದಕ್ಕೆ (೩-೨೯) ಸ್ಥೂಲವಾಗಿ ಸೇರಿದರೂ ೧-೨, ೩-೪ರಲ್ಲಿ ಪ್ರತ್ಯೇಕವಾಗಿ ಯಮಕತ್ವವೇರ್ಪಟ್ಟಿದೆ.

ಈ ಧರೆಯ ಪೆಂಡಿರುದ್ಧ್ನಪ । ಯೋಧರೆಯ ಮನೋಜರಾಗರಸಪೂರಿತಬಿಂ ।
ಬಾಧರೆಯ ಕಂಬುಕಮ್ರಶಿ । ರೋಧರೆಯ ಬೆಡಂಗನಾರುಮೋನೆಯ್ದುವರೇ ॥ (೫೩೬)

''ಈ ಲೋಕದ ಸ್ತ್ರೀಯರು, ಯಾರು ತಾನೇ ಉಬ್ಬಿದ ಕುಚವುಳ್ಳವಳ, ಪ್ರೀತಿರಸದಿಂದ ತುಂಬಿದ ತೊಂಡೆದುಟಿಯುಳ್ಳವಳ, ಶಂಖದಂತೆ ಮನೋಹರವಾದ ಕುತ್ತಿಗೆಯುಳ್ಳವಳ (=ಶ್ರೀಮತಿಯ) ಬೆಡಗನ್ನು ಪಡೆಯಲು ಶಕ್ತರಾಗಿದ್ದಾರೆ?'' ಇದು ಪಂಪನ 'ಆದಿಪುರಾಣ'ದಿಂದೆತ್ತಿದ ಲಕ್ಷ್ಯ (೪–೪೬).

ಇದು 'ಕಾವ್ಯಾದರ್ಶ'ದ ಪಾದಮಧ್ಯವ್ಯಪೇತವನ್ನು (೩–೪೦) ಹೋಲುತ್ತದೆಯಾದರೂ, ಅದಕ್ಕೆ ಕೇವಲ ಸದೃಶವಾದ್ದಲ್ಲ. ಆದರೆ ಪಾದಮಧ್ಯವ್ಯಪೇತ ಯಮಕದಲ್ಲಿ 'ಪಾದಚತುಷ್ಟಯಾಂತರ್ಗತ ಸಜಾತೀಯ ಯಮಕ'ವೆಂಬ ಅಂತರ್ಭೇದವಾಗಿ ತಿಳಿಯಲಡ್ಡಿಯಿಲ್ಲ.

ಪನ್ನಗಕನ್ಯೆಯೊರ್ವಳುಪದೇಶಮನಿತ್ತಳೊ ನಾಗಬಂಧಮಂ
ಪನ್ನಗಕನ್ಯೆಯೋ ಜಿತೆಯೊ ಮೆಯ್ಯೆರಡಿಲ್ಲೆನಿಪಪ್ಪುಗಳ್ಗೆ ತ
ತ್ಪನ್ನಗಕನ್ಯೆಯಪ್ಪುಗಳೆ ಮುಪ್ಪುರಿಗೂಡಿದುವೆಂಬ ಮಾತು ಮೆ
ಲ್ಪನ್ನಗಕನ್ಯೆ ಪೆರ್ಚುಗುಮಿವರ್ಕೊವಜರ್ ನಿನಗಾರೊ ನಲ್ಲಳೇ ॥ (೫೩೭)

''ಯಾವಳಾದರೊಬ್ಬ ನಾಗಕನ್ಯೆ ನಾಗಬಂಧವನ್ನು ಉಪದೇಶವಿತ್ತಳೋ? ಇದೇನು ನಾಗಕನ್ಯೆಯೋ, ಅಚಲೆಯೋ? ಮೈಗಳು ಎರಡಲ್ಲ(=ಒಂದೇ) ಎನ್ನುವಂತಹ ಆಲಿಂಗನಗಳಿಗೆ ಆ ನಾಗಕನ್ಯೆಯ ಆಲಿಂಗನಗಳೇ ಹೆಣೆದುಕೊಂಡವು ಎಂಬ ಮಾತು ಮಾರ್ದವವನ್ನು ವರ್ಧಿಸುವುದು. ಎಲೇ ನಗಕನ್ಯೆ, ಪ್ರಿಯೆ, ಇವಕ್ಕೆ ನಿನಗೆ ಯಾರು ಉಪಾಧ್ಯಾಯರು?''

ಇದು ಪಾದಾದಿ ವ್ಯಪೇತ ವ್ಯಂಜನದ ಲಕ್ಷ್ಯವೇ ('ಕಾವ್ಯಾದರ್ಶ', ೩–೨೯); ವಿಶೇಷವೇನೂ ತೋರುತ್ತಿಲ್ಲ.

ನಾಗವರ್ಮ ಇಲ್ಲಿಂದ ಮುಂದೆ 'ಪಾದಾದಿ ಯಮಕಕ್ಕೆ' ಎಂಬ ಸೂಚನೆಯೊಂದಿಗೆ ಬೇರೊಂದು ಬಗೆಯ ಯಮಕಭೇದವನ್ನು ಉದ್ಧರಿಸಿದ್ದಾನೆ :

ಉಪದಾತ್ತನುತೋನ್ನತಮಂ । ದ್ವಿಪಮದಪರಿಪೂರ್ಣಗಿರಿಸರಿತ್ಸಂತತಿಯಂ ।
ಉಪದಾತ್ತನುತೋನ್ನತಮಂ । ತಪನಕರೋತ್ತಪನತಪ್ತತಪನೋಪಲಮಂ ॥ (೫೩೮)

''(ಮಳೆಯ) ಕೊಡುಗೆಯಿಂದ ಚಿಕ್ಕವೂ ದೊಡ್ಡವೂ ಆದವನ್ನು (ಉಪದಾತ್+ತನುತಾ+ಉನ್ನತಮಂ), ಆನೆಯ ಮದಜಲದಿಂದ ತುಂಬಿದ ಬೆಟ್ಟದೊರೆಗಳ ಸಮೂಹವನ್ನು, ಶಿವನ ಪಾದಸಂಬಂಧದಿಂದ ಸುವಿಖ್ಯಾತವಾದುದನ್ನು (ಉ+ಪದ+ಆತ್ತ+ನುತ+ಉನ್ನತಮಂ), ಸೂರ್ಯಕಿರಣ ಚೆನ್ನಾಗಿ ಸುಡುವುದರಿಂದ ಸುಡಲ್ಪಟ್ಟ ಸೂರ್ಯಕಾಂತ ಶಿಲೆಯನ್ನು(?)''

ಇದು ಶೀರ್ಷಿಕೆಯ ಸೂಚನೆಯಂತೆ 'ಪಾದಾದಿ ಯಮಕಕ್ಕೆ' ಲಕ್ಷ್ಯವಾಗಬೇಕು. ಆದರೆ ಚತುಷ್ಪಾದಿಯಾದ ಕಂದವನ್ನು ದ್ವಿಪಾದಿಯಾಗಿ ಗ್ರಹಿಸಿದರೆ ಅದು ಸರಿಯಾಗಬಹುದು. ಅಂತಹ ವಿಚಾರ ಕವಿಗಿದ್ದಿರಲಾರದು; ಅಲ್ಲದೆ ಹಾಗೆ ಗ್ರಹಿಸುವುದೂ ಬಲುಮಟ್ಟಿಗೆ ಸರಿಯಲ್ಲ. ನಿಜವಾಗಿ ಇದು 'ಕಾವ್ಯಾದರ್ಶ'ದ ೩-೫೮ರ ಲಕ್ಷ್ಯಕ್ಕೆ, ಎಂದರೆ ೧–೩ನೆಯ ಪಾದಗಳಲ್ಲಿ ಯಮಕವೇರ್ಪಡುವ 'ವ್ಯವಹಿತ ಸಮುದ್ಗ'ದ ಲಕ್ಷ್ಯಕ್ಕೆ ಸರಿಯಾಗುವ ಲಕ್ಷ್ಯವಾಗಿದೆ. ರುದ್ರಟನ 'ಕಾವ್ಯಾಲಂಕಾರ'ದ ಸಮಸ್ತಪಾದಜಯಮಕಭೇದಗಳೊಳಗಿನ 'ಸಂದಂಶ'ವೆಂಬ ಅಂತರ್ಭೇದದ (೩–೫) ಲಕ್ಷ್ಯವೂ ಇದಕ್ಕೆ ಸದೃಶವಾಗಿರುವುದರಿಂದ ಈ ಲಕ್ಷ್ಯವನ್ನು 'ಸಂದಂಶ'ವೆಂಬ ಯಮಕವೆಂದು ತಿಳಿದರೂ ತಪ್ಪಲ್ಲ.

ಇಲ್ಲಿಂದ ಮುಂದಿನ ಲಕ್ಷ್ಯ 'ಮಧ್ಯಾಂತಯಮಕಕ್ಕೆ' ಎಂಬುದಾಗಿ ಉಕ್ತವಾಗಿದೆ. ಆ ಲಕ್ಷ್ಯ :

ನಾನಾಶಶಮೃಗಧರನುಂ । ಸಾನುಜತರು ಶಿಖರಲಗ್ನ ಶಶಮೃಗಧರನುಂ ।
ಪೀನ ಸರೋಜಾಲಯಮಂ । ವಾನೇಚರಯುವತಿ ಜಿತ ಸರೋಜಾಲಯಮಂ ॥ (೫೩೯)

''ಅನೇಕ ಮೊಲಗಳನ್ನೂ ಜಿಂಕೆಗಳನ್ನೂ ಒಳಗೊಂಡವನೂ ತಪ್ಪಲಿನ ಮರಗಳ ತುದಿಯಲ್ಲಿ ಸೇರಿದ (ಸೇರಿದಂತೆ

ಕಾಣುವ) ಮೊಲವೆಂಬ ಮೃಗವನ್ನು ಧರಿಸಿದವನಾದ ಚಂದ್ರನೂ ಅಧಿಕವಾದ ಸಂಪತ್ತಿಗೆ (ಸರೋಜ=ಕಮಲಾ=ಲಕ್ಷ್ಮಿ) ನೆಲೆಯಾಗಿರುವುದನ್ನು, ಬೇಡಿತಿಯರ ಚೆಲುವಿನಿಂದ ಪರಾಭವಗೊಂಡ ತಾವರೆಗೊಳವನ್ನು....''

ಮಾತೃಕೆಯಲ್ಲಿ ಮಧ್ಯಾಂತಯಮಕವೆಂದಿದೆಯಾದರೂ ಭಾಮಹನ 'ಕಾವ್ಯಾಲಂಕಾರ'ದ ಮಧ್ಯಾಂತ ಯಮಕಭೇದಕ್ಕೆ ಆಗಲಿ (೨-೧೨), 'ಕಾವ್ಯಾದರ್ಶ'ದ ಮಧ್ಯಾಂತವ್ಯಪೇತಯಮಕಭೇದಕ್ಕೆ ಆಗಲಿ (೩-೪೩), ಹೊಂದುವುದೆಂದು ಹೇಳಲಾಗದು. ಕಂದವನ್ನು ದ್ವಿಪಾದಿಯಾಗಿ ಗ್ರಹಿಸಿದರೆ ಹೊಂದುವುದೆಂದು ಹೇಳಲು ಸಾಧ್ಯ; ಆದರೆ ಹಾಗೆ ಗ್ರಹಿಸುವುದು ಸರಿಯಲ್ಲ. ನಿಜವಾಗಿ ಇದು ೧-೨ನೆಯ, ಹಾಗೂ ೩–೪ನೆಯ, ಪಾದಗಳಿಗೆ ಪ್ರತ್ಯೇಕವಾಗಿ ಐಕ್ಯವಿರುವ 'ಪಾದಾಂತಯಮಕ'ದ ಲಕ್ಷ್ಯ.

ಮುಂದಿನದು 'ಅಂತ್ಯಯಮಕ'ದ ಲಕ್ಷ್ಯವೆಂದು ಮಾತೃಕೆಯ ಸೂಚನೆಯಿಂದ ತಿಳಿಯುವುದು.

ಸಂದ ಸರ್ವಗತಂ ಧರ್ಮ । ನಂದನಾಧ್ವರ ತೋಷಿತಂ ।
ನಿಂದು ಯಾತ್ರೇಚ್ಛೆಯೊಳ್ ಧರ್ಮ । ನಂದನಾಧ್ವರತೋಷಿತಂ ॥ (೫೪೦)

''ಪ್ರಸಿದ್ಧವಾದ ಎಲ್ಲ ಕಡೆಗಳಲ್ಲಿಯೂ ಹೋದವನು ಯುಧಿಷ್ಠಿರನ ಯಾಗದಲ್ಲಿ ಸಂತೋಷಗೊಂಡವನಾಗಿ, ಯಾತ್ರೆಯ ಅಪೇಕ್ಷೆಯಿಂದ ಧರ್ಮವನ್ನು ಉತ್ತೇಜಿಸುವ ದಾರಿಯಲ್ಲಿ ಆಸಕ್ತಿಯಿಂದ ಉಳಿದುಕೊಂಡವನಾಗಿ, ಅಲ್ಲಿಯೇ ತಂಗಿ....'' (ಧರ್ಮನಂದನ + ಅಧ್ವರ + ತೋಷಿತಂ; ಧರ್ಮ + ನಂದನ + ಅಧ್ವ + ರತ + ಉಷಿತಂ).

ಮಾತೃಕೆಯ ಸೂಚನೆ ತೃಪ್ತಿಕರವಾಗಿಲ್ಲ. ೧-೩ರಲ್ಲಿಯಂತೆ ೨-೪ರಲ್ಲಿ ಸಹ ಪಾದಾಂತಗಳಲ್ಲಿ ಸಜಾತೀಯವೋ ವಿಜಾತೀಯವೋ ಯಮಕಾಕ್ಷರಗಳು ಇದ್ದಿದ್ದರೆ ಅದು ಸೂಚನೆಗೆ ಸರಿಯಾಗುತ್ತಿತ್ತು. ಈಗ ಇರುವಂತೆ ೨-೪ರಲ್ಲಿ ಭಾಮಹನ ಪಾದಾಭ್ಯಾಸಯಮಕದ (೨–೧೩) ಹಾಗೂ ದಂಡಿಯ ೨-೪ರ ಐಕ್ಯದ ವ್ಯವಹಿತ ಸಮುದ್ಗದ (೩-೬೧) ಲಕ್ಷಣ ತೋರುತ್ತಿದೆ; ಜೊತೆಗೆ ೧–೩ರಲ್ಲಿ ಪಾದಾಂತವ್ಯಪೇತ ಯಮಕದ ಲಕ್ಷಣವೂ ಇದೆ.

ನಾಗವರ್ಮನು ಈವರೆಗೆ ವ್ಯವಹಿತ ಅಥವಾ ವ್ಯಪೇತಯಮಕದ ಭೇದಗಳಿಗೆ ಲಕ್ಷ್ಯಗಳನ್ನು ನಿರೂಪಿಸಿ (ಪ. ೫೨೬-೪೦), ಇನ್ನು ಮುಂದೆ ಅವ್ಯವಹಿತ ಅಥವಾ ಅವ್ಯಪೇತ ಯಮಕದ ಭೇದಗಳಿಗೆ ೩ ಲಕ್ಷ್ಯಗಳನ್ನು ಒದಗಿಸಲು ಮುಂದುವರಿದಿದ್ದಾನೆ.

ಸರಂ ಸರಂ ಕಂತುವ ಮನ್ಮಥಾಂಬುಜಾ । ಕರಂ ಕರಂ ನೋಡೆ ಮೊಗಂ ವಳಿತ್ರಯಾಂ ।
ತರಂ ತರಂಗಂ ಸ್ಮರಸಿಂಧುಗಾ ಲತಾಂ । ಕುರಂ ಕುರಂಗಾಕ್ಷಿಯ ಕಣ್ ಮನೋಜನಾ ॥ (೫೪೧)

''(ಆಕೆಯ) ಸ್ವರ ಮನ್ಮಥನ ಬಾಣ; ಗಾಢವಾಗಿ ಲಕ್ಷಿಸಿದ್ದಾದರೆ ಮುಖ ಮನ್ಮಥನ ತಾವರೆಗೊಳ; ಹೊಟ್ಟೆಯ ಮೇಲಿನ ಮೂರು ಮಡಿಕೆಗಳು ಮನ್ಮಥಸಾಗರದ ಅಲೆಗಳು; (ಆ) ಜಿಂಕೆಗಣ್ಣವಳ ಕಣ್ಣುಗಳು ಮನ್ಮಥನ ಕುಡಿ ಬಳ್ಳಿಗಳು.''

ಇದು ಭಾಮಹನ 'ಕಾವ್ಯಾಲಂಕಾರ'ದ ಪಾದಾದಿ ಯಮಕಕ್ಕೆ (೨-೧೧) ಹಾಗೂ ದಂಡಿಯ 'ಕಾವ್ಯಾದರ್ಶ'ದ 'ಪಾದಾದಿ ಅವ್ಯಪೇತಯಮಕ'ದಲ್ಲಿ ಸೇರುವ 'ಪಾದಚತುಷ್ಟಯಾದಿ' ಯಮಕಭೇದಕ್ಕೆ (೩-೧೮) ಸದೃಶವಾದ ಲಕ್ಷ್ಯವಾಗಿದೆ.

ಸುರ ರಮಣೀ ರಮಣೀಯ । ಸ್ವರೂಪಮತಿ ತರಳ ತರಳ ವಿಲಸದ್ವಿದ್ಯುತ್ ।
ಸ್ಫುರಿತಮೆನೆ ಪೋಲ್ತು ಕರಗಿದು । ದರಗಿದು ದಹನೋಪತಪ್ತಮೆನೆ ತತ್ಕ್ಷಣದೊಳ್ ॥ (೫೪೨)

''ದೇವವನಿತೆಯ ಮನೋಹರವಾದ ಆಕೃತಿಯು ಸ್ವೇಚ್ಛಾಪ್ರಕೃತಿಯು, ಪ್ರಕಾಶಮಾನವಾಗಿ ಬೆಳಗುವ ಮಿಂಚಿನ ಹೊಳಪು ಎನ್ನುವಂತೆ ಹೋಲುವುದಾಗಿ, ಅದೇ ಕ್ಷಣದಲ್ಲಿ ಇದು ಬೆಂಕಿಗೆ ಸುಟ್ಟ ಅರಗು ಎನ್ನುವಂತೆ ಕರಗಿ ಹೋಯಿತು.''

ಕೇವಲ ಸದೃಶವಾದ ಭೇದ ಸಂಸ್ಕೃತ ಲಕ್ಷಣಗ್ರಂಥಗಳಲ್ಲಿ ತೋರುತ್ತಿಲ್ಲ. ಇದು ಪ್ರಥಮ-ದ್ವಿತೀಯ ಪಾದಗಳಲ್ಲಿ ಮಾತ್ರ ತೋರುವ ವಿಜಾತೀಯ ಪಾದಮಧ್ಯ ಅವ್ಯಪೇತ ಯಮಕದ ಲಕ್ಷ್ಯವೆಂದು ಹೇಳಬಹುದಾದ್ದು. ೩-೪ರಲ್ಲಿಯೂ ಯಮಕಲಕ್ಷಣವುಂಟು. ಆದರೆ ಇಲ್ಲಿ ಅದು ಅನುದ್ದೇಶಿತ.

ನಿನ್ನ ವಾಕ್ಯಾರ್ಥವೆಂಬೊಂದು । ರತ್ನಕಂ ಬೆಗಡಂ ಗಡಂ ।
ತನ್ನುಕ್ತಿಯಾಗೆ ತದ್ವಿದ್ಯ । ನನ್ನನಾದಂ ಬಲಂ ಬಲಂ ॥ (೫೪೩)

''ನಿನ್ನ ವಾಕ್ಯಾರ್ಥ ಎನ್ನುವ ಒಂದು ರತ್ನಕ್ಕೆ ಸಹ (ಅವನೇನೂ) ಗಾಬರಿಬೀಳುವುದಿಲ್ಲ! (ಆದರೆ) ತನ್ನ ಮಾತಾದರೆ ಬಲಿಷ್ಠನಾದ ಬಲನು (ಬಲದೇವನು?) ಸತ್ಯವನ್ನರಿತವನಾದವನು.''

ಇಲ್ಲಿಯೂ ಕೇವಲಸದೃಶವಾದ ಭೇದ ಸಂಸ್ಕೃತ ಲಕ್ಷಣಗ್ರಂಥಗಳಲ್ಲಿ ತೋರುತ್ತಿಲ್ಲ. ಇದನ್ನು ದ್ವಿತೀಯ-ಚತುರ್ಥ ಪಾದಾಂತ ವಿಜಾತೀಯ ಅವ್ಯಪೇತ ಯಮಕದ ಲಕ್ಷ್ಯವೆಂದು ಹೇಳಬಹುದು.

ಮುಂದೆ 'ಕಾವ್ಯಾವಲೋಕನ'ದಲ್ಲಿ 'ವ್ಯಪೇತಾವ್ಯಪೇತ'ದ ಏಕಮಾತ್ರ ಲಕ್ಷ್ಯವನ್ನು ಕಾಣಬಹುದಾಗಿದೆ.

ಸಬಳಿಕೆಯಿಂ ಪಾಱಿಯನೊ । ಕ್ಕಬೇರನಂತಾ ಕುಬೇರನಾಯಕನತಿವಿ
ಕ್ಲಬಚಿತ್ತಂ ತೊಟ್ಟಗೆ ತಾ । ಗಿ ಬಾಗಿದಂ ತಾಗಿ ಬಾಗಿದಂ ನರನಡಿಯೊಳ್ ॥ (೫೪೪)

''ಆ ಜುಗುಪ್ಸೆಗೊಂಡ ಮನಸ್ಸಿನ ಕುಬೇರನಾಯಕನು, ಕ್ರಮವನ್ನು ಮೀರಿ, ವೈರಿಯ ಹಾಗೆ ತನ್ನ ಈಟಿಯ ಬಲದಿಂದ (ಅರ್ಜುನನನ್ನು) ನೇರವಾಗಿ ಎದುರಿಸಿ ಸೋತನು; ಅವನ ಪಾದದಲ್ಲಿ ತಲೆಯಿಟ್ಟು ಮಣಿದನು.''

ಇದರಲ್ಲಿ ೨ನೆಯ ಪಾದದಲ್ಲಿ ವ್ಯಪೇತಯಮಕವೂ, ೪ರಲ್ಲಿ ಅವ್ಯಪೇತಯಮಕವೂ ಇದ್ದು, ಒಂದೇ ಲಕ್ಷ್ಯದಲ್ಲಿ ಎರಡೂ ಸೇರಿರುವುದರಿಂದ 'ವ್ಯಪೇತಾವ್ಯಪೇತದ ಲಕ್ಷ್ಯ'ವಾಗಿದೆ. ಅಲ್ಲದೆ ವಿಜಾತೀಯವೂ ಆಗಿದೆ. ಸಂಸ್ಕೃತ ಲಕ್ಷಣಗ್ರಂಥಗಳಲ್ಲಿ ಇದಕ್ಕೆ ಸಾದೃಶ್ಯವಿಲ್ಲ. ಮುಂದಿನ ಲಕ್ಷ್ಯ 'ವರ್ಣಾವೃತ್ತಿಯಮಕ'ದ್ದು :

ಚಾರೂರೂರೂದ್ಧರೂರೂರುರುಭುಜಶಿಖರೋದ್ಭಾಸಮಾನಾವಲೋಕಂ
ಕ್ರೂರಾರಾರಾತಿರಾರಾಚಮಪಡಿನುಡಿಯುತ್ತಂ ಮುರಧ್ವಂಸಿಯೊಳ್ ಸ
ದ್ಧಾರಾರಾರಾಜಿರಾರಾಜಿತಭುಜನೊಳವಷ್ಟಂಭದಿಂ ಚೆಲ್ವ ಕೆಯ್ಮ
ಕ್ಕಾರಾರಾರಾಧ್ಯರಾರಾರವರವರವರ್ಗಂತೊಪ್ಪಿದಂ ನೀಲಕಂಠಂ ॥ (೫೪೫)

ವರ್ಣಾವೃತ್ತಿಯಮಕವೆಂಬ ಹೆಸರು ನಾಗವರ್ಮನದೇ. ವಾಮನನ 'ಅಕ್ಷರಯಮಕ'ದ ವೈಚಿತ್ರ್ಯದಿಂದ ಇದು ಪ್ರೇರಿತವಾಗಿರುವಂತಿದೆ. ಅಲ್ಲಿಯ ರೀತಿಯನ್ನು ನೇರವಾಗಿ ಅನುಸರಿಸದೆ, ಸ್ವಲ್ಪ ಪ್ರತ್ಯೇಕತೆ ತಂದಿದೆ. ಗುರುತಿಸಿರುವ ಕಡೆ ವ್ಯಪೇತಯಮಕ ಲಕ್ಷಣವಿರುವುದು ಕಾಣುತ್ತದೆ (ಕೊನೆಯ ಪಾದದಲ್ಲಿ ಅವ್ಯಪೇತಯಮಕವುಂಟು; ಪ್ರಾಯಶಃ ಇದು ಅನುದ್ದೇಶಿತ). ಅನುಪ್ರಾಸಾಕ್ಷರವಾದ ರೇಫದಿಂದ ಸಾಧ್ಯವಾಗಿರುವ ಯಮಕವೆಂದು ಕವಿ ಹೀಗೆ ಉದ್ದೇಶಿಸಿರಬಹುದು. ಮೊದಲ ೩ ಪಾದಗಳ ವ್ಯಪೇತಯಮಕವೂ ೪ನೆಯ ಪಾದದ ವ್ಯಪೇತ ಮತ್ತು ಅವ್ಯಪೇತ ಯಮಕಗಳೂ ಈ ರೇಫದ ಪ್ರಚುರತೆಯನ್ನೇ ತೋರಿಸುತ್ತವೆ. ಪ್ರತ್ಯೇಕವಾಗಿ ಈ ಪದ್ಯ ಅನುಪ್ರಾಸದ ಲಕ್ಷ್ಯವೂ ಆಗಬಹುದು. ಪದ್ಯದ ಅರ್ಥ ವಿಶದವಾಗುತ್ತಿಲ್ಲ.

ನಾಗವರ್ಮ ಬಳಿಕ ಭಾಮಹ, ದಂಡಿ ಮತ್ತು ರುದ್ರಟರನ್ನು ಅನುಸರಿಸಿ, ಅವರ ಲಕ್ಷಣಗ್ರಂಥಗಳಲ್ಲಿ ಹೇಳಿರುವ ವಿಶಿಷ್ಟವಾದ ಹೆಸರುಗಳ ೪ ಯಮಕ ಭೇದಗಳನ್ನು ಪ್ರತ್ಯೇಕವಾಗಿ ನಿರೂಪಿಸಲು ತೊಡಗಿದ್ದಾನೆ. ಈ ಸಂಬಂಧವಾದ ಸೂತ್ರ:

ಪರಿವೃತ್ತಂ ಸಂದಷ್ಟಂ । ನಿರಂತರಾವಳಿ ಸಮುದ್ಗಮೆಂಬಿವು ಮೊದಲಾ ।
ಗಿರೆ ಯಮಕಭೇದಮನಿತುಂ । ಪರಿಭಾವಿಸೆ ತತ್ಪ್ರಪಂಚದೊಳ್ ಪೊಕ್ಕಿರ್ಕುಂ ॥ (ಸೂ. ೧೨೯)

''ವಿಚಾರ ಮಾಡಿದರೆ, ಪರಿವೃತ್ತ, ಸಂದಷ್ಟ, ಆವಳಿ, ಸಮುದ್ಗ ಎಂಬಿವು ಮೊದಲಾದ ಯಮಕಭೇದಗಳೆಲ್ಲ ಈಗ ಹೇಳಿದವುಗಳಲ್ಲಿಯೇ, ಎಂದರೆ ವ್ಯಪೇತ ಅವ್ಯಪೇತಾತ್ಮಕವೂ ಆದಿಮಧ್ಯಾಂತವೂ ಆದ ಯಮಕಭೇದಗಳಲ್ಲಿಯೇ ಅಂತರ್ಗತವಾಗಿರುತ್ತವೆ.'' ಈ ಸೂಚನೆ ಭಾಮಹನ 'ಕಾವ್ಯಾಲಂಕಾರ'ದ ೨–೧೦ರ ಹಾಗೂ 'ಕಾವ್ಯಾದರ್ಶ'ದ ೩–೫೧ರ ಸೂತ್ರಗಳ ಅನುವಾದದ ಫಲವೆಂದು ತೋರುತ್ತದೆ.

ಪರಿವೃತ್ತ

ತಾರಾತಾರಾಮುಳಿನಗುಳಿಕಾಹಾರನೀಹಾರನೀಕಾ
ಶೋರುಸ್ಫೂರ್ಜತ್ಪ್ರವಿತತಯಶೋರಂಜಿತಾಶೇಷಲೋಕಂ
ಸಾರಾಸಾರಾದ್ಯನುಗತವಿಚಾರೋಚಿತಾತ್ಮೀಯಚಿತ್ತೋ
ದಾರಪ್ರಜ್ಞಂ ನೆಗಟ್ದನವನೀಭಾಗದೊಳ್ ನಾಗವರ್ಮಂ ‖ (೫೪೭)

''ನಕ್ಷತ್ರಗಳು, ಮುತ್ತುಗಳು, ಸ್ವಚ್ಛವಾದ ಗ್ರಹ (ಶನಿಯ ಮಗ, ಒಂದು ಉಪಗ್ರಹ), ಹಾರ, ಮಂಜು ಇವುಗಳಿಗೆ ಸದೃಶವಾಗಿ, ವಿಶೇಷವಾಗಿ ಹರಡುವ ವಿಶಾಲವಾದ ಕೀರ್ತಿಯಿಂದ ಶೋಭಿಸಿದ ಸಮಸ್ತ ಲೋಕವುಳ್ಳವನೂ ಸಾರ ಮತ್ತು ಅಸಾರ ಮೊದಲಾದವುಗಳಿಗೆ ಅನುಗುಣವಾದ ವಿಚಾರದಿಂದ ಉಚಿತವೂ ಆತ್ಮೀಯವೂ ಆದ ಬುದ್ಧಿಯಿಂದ ಮೇಧಾವಿಯಾದವನೂ ಆದ ನಾಗವರ್ಮನು ಲೋಕದಲ್ಲಿ ವಿಖ್ಯಾತನಾದನು.''

ಈ ಯಮಕಭೇದವನ್ನು ನಾಗವರ್ಮ 'ಪರಿವೃತ್ತ' ಎಂದಿರುವನು. ಭಾಮಹ ದಂಡಿಗಳಲ್ಲಿ ಈ ಹೆಸರಿನ ಯಮಕಭೇದವಿಲ್ಲ. ಪ್ರಥಮಪಾದದ ಹಾರನೀ-ಹಾರನೀ ಎಂಬ ಅವ್ಯಪೇತ ಯಮಕ ಅನುದ್ದೇಶಿತವೆಂಬುದಾದರೆ, ೧–೩ರ ಪಾದಾದಿ ಅವ್ಯಪೇತ ಯಮಕವೆಂದು ಇದನ್ನು ಗುರುತಿಸಬಹುದು. ಈ ಹಿಂದೆ ಉಕ್ತವಾದ ಅವ್ಯಪೇತ ಯಮಕಗಳಲ್ಲಿ (೫೪೧–೪೩) ಇದಕ್ಕೆ ಸದೃಶವಾದ್ದು ಬಂದಿಲ್ಲ ಎನ್ನುವುದು ನಿಜ. ಆದರೆ ೫೪೭ರ ಈ ಲಕ್ಷ್ಯವನ್ನು 'ಪರಿವೃತ್ತ' ಎಂದು ಹೇಳಲು ಕಾರಣವೇನು? ರುದ್ರಟ 'ಕಾವ್ಯಾಲಂಕಾರ'ದಲ್ಲಿ 'ಪರಿವೃತ್ತಿ' ಎಂಬ ಸಮಸ್ತಪಾದಜ ಯಮಕಭೇದವೊಂದನ್ನು (೩–೧೩, ೧೪) ಕುರಿತಿದೆಯಾದರೂ ನಾಗವರ್ಮನ ಪರಿವೃತ್ತದ ಸ್ವರೂಪವನ್ನು ಅದು ಹೋಲುವುದಿಲ್ಲ. ಹೀಗಾಗಿ ಈ ಸಾಮಾನ್ಯ ಯಮಕ ಲಕ್ಷ್ಯವನ್ನು 'ಪರಿವೃತ್ತ'ವೆಂಬ ನಾಮಾಂತರದಿಂದ ಏಕೆ ಕರೆಯಿತೋ, ಅದನ್ನು ಹೇಗೆ ಸಮರ್ಥಿಸಬೇಕೋ ತಿಳಿಯದಾಗಿದೆ. ಈ ಲಕ್ಷ್ಯಪದ್ಯ ಸ್ವೋಪಜ್ಞವಾದ್ದು ಎನ್ನುವುದು ಸ್ವಾರಸ್ಯದ ಸಂಗತಿ. ಉಳಿದ ಯಮಕ ಲಕ್ಷ್ಯಗಳೂ ಹಾಗೆಯೇ ಇರಬೇಕು ಎನ್ನುವುದನ್ನು ಪರೋಕ್ಷವಾಗಿ ಇದು ತಿಳಿಸುತ್ತದೆ.

ಸಂದಷ್ಟ

ಓರೊರ್ವರ್ ಸೆಣಸಿ ತಗುಳ್ದನೇಕವಾರಂ । ವಾರಸ್ತ್ರೀಜನವಿದಿರೊಳ್ ತುಳುಂಕೆ ನೀರಂ ।
ನೀರಂಧ್ರಸ್ತನತಟದೊಳ್ ಕೃತೋಪಹಾರಂ । ಹಾರಶ್ರೀಗೆಣೆಯೆನಿಸಿತ್ತು ಪಾಕಣೌಘಂ ‖
(೫೪೮)

''ವಾರವನಿತೆಯರು ಪರಸ್ಪರವಾಗಿ ಸ್ಪರ್ಧಿಸಿ, ಅಟ್ಟಿಕೊಂಡು ಹೋಗಿ, ಹಲವು ಸಲ ಎದುರಿನಲ್ಲಿ ನೀರನ್ನು ತುಳುಕಾಡಲು, ಆ ನೀರಿನ ಹನಿಗಳ ರಾಶಿ ಸ್ತ್ರೀಯರ ಮೊಲೆಗಳೆಡೆ ಕಾಣಿಕೆಯಾಗಿ ಒಪ್ಪಿಸಿದ (ಮುತ್ತಿನ) ಹಾರದ ಸೊಬಗಿಗೆ ಸದೃಶವಾಯಿತು.''

ಈ ಲಕ್ಷ್ಯ ದಂಡಿಯ 'ಕಾವ್ಯಾದರ್ಶ'ದಲ್ಲಿ ಉಕ್ತವಾದ ಸಂದಷ್ಟಯಮಕದ ಲಕ್ಷಣ ಮತ್ತು ಲಕ್ಷ್ಯಗಳಿಗೆ (೩–೫೧, ೫೨) ಅನುಸಾರವಾಗಿದೆ. ರುದ್ರಟನ 'ಕಾವ್ಯಾಲಂಕಾರ'ದ ಸಂದಷ್ಟಕದೊಂದಿಗೆ (೩–೯) ಇದು ಎಷ್ಟು ಮಾತ್ರವೂ ಹೋಲುವುದಿಲ್ಲವೆನ್ನುವುದರಿಂದ ನಾಗವರ್ಮನಿಗೆ ದಂಡಿಯೇ ಮೂಲವೆಂಬುದು ನಿಶ್ಚಯ. ವಿರಳವರ್ಣ ವೃತ್ತವಾದ ಈ ಪ್ರಹರ್ಷಿಣೀವೃತ್ತವನ್ನು ಮುಕ್ತಪದಗ್ರಹಣದ ಲಕ್ಷ್ಯವನ್ನಾಗಿಯೂ ಗ್ರಹಿಸಬಹುದು. ನಾಟ್ಯ ಶಾಸ್ತ್ರಕಾರನು ತಿಳಿಸುವ ಚಕ್ರವಾಲದ (೧೬–೭೨) ಲಕ್ಷ್ಯವೂ ಆಗಬಹುದು.

ಆವಳಿ

ಶ್ರೇಯಂ ಶ್ರೇಯಂ ದ್ವಿಷದವ । ಸಾಯಕಸಾಯಕಪರಂಪರಂ ಲಲಿತಯುವ ।
ತ್ಯಾಯತನತ್ಯಾಯತನಂ । ಗೇಯೋದ್ಗಾಯತ್ಸಕಳಕಳಂ ಸಕಳಕಳಂ ‖ (೫೪೯)

''(ಆ ಊರು) ಶ್ರೇಯಸ್ಕರವಾದುದು, ಆಶ್ರಯಿಸಲು ಯೋಗ್ಯವಾದುದು, ಕಾಲಾಳುಗಳನ್ನು ತೀರಿಸುವ ಬಾಣಗಳ ಪರಂಪರೆಯನ್ನುಳ್ಳುದು; ಮನೋಹರವಾದ ಯುವತಿಯರಿಗೆ ಹೆಚ್ಚಿನ ನಮಸ್ಕಾರಕ್ಕೆ ಸ್ಥಾನವಾದುದು; ಗೀತದಲ್ಲಿ ಹಾಡುತ್ತಿರುವ ಎಲ್ಲ ಕಲೆಗಳನ್ನೂ ಉಳ್ಳದ್ದು; ಕೋಲಾಹಲಮಯವಾದುದು.''

ಇದು ಭಾಮಹನ ಕಾವ್ಯಾಲಂಕಾರದ 'ಆವಲಿ'ಯ ಲಕ್ಷ್ಯಕ್ಕೆ (೨–೧೪) ಅನುಗುಣವಾದ್ದಾಗಿದೆ. ಇರುವ ಯಮಕಗಳು ವ್ಯಪೇತಾತ್ಮಕವಾದವು; ವಿಜಾತೀಯವಾದವು. ಪಾದದ ಆದಿ ಮಧ್ಯಾಂತಗಳಲ್ಲಿ ಅವು ಯಾವುದೇ ಕ್ರಮ ಹಿಡಿದು ಬಂದಿಲ್ಲದ ಕಾರಣ, ಈ ಲಕ್ಷ್ಯ 'ಆವಳಿ' ಎನಿಸಿದೆ. 'ಆವಲಿ' ದಂಡಿ ರುದ್ರಟರಲ್ಲಿ ಅನುಕ್ತವೆಂಬುದರಿಂದಾಗಿ ನಾಗವರ್ಮ ಭಾಮಹನನ್ನು ಅನುಸರಿಸಿರುವುದು ಸ್ಪಷ್ಟ. ರುದ್ರಟನ ಅನಿಯತ ದೇಶಾವಯವ ಯಮಕವನ್ನು ಸಾದೃಶ್ಯಕ್ಕೆ ಇಲ್ಲಿ ನೆನೆಯಬಹುದು.

ಸಮುದ್ಗ

ಹರಿದಾಂತಂ ಬಲಂಬೆರ್ಚೆ । ಸುರಾಸುರ ಸಭಾಜನಂ ।
ಹರಿದಾಂತಂ ಬಲಂ ಬೆರ್ಚೆ । ಸುರಾಸುರಸಭಾಜನಂ ॥ (೫೫೦)

''ಇಂದ್ರನಿಂದ ನಿಯಂತ್ರಿತರಾದ ಸುರಾಸುರರೆಂಬ ಸಭಾಜನರು ಬಲಾನ್ವಿತರಾಗಲು(ಬಲಂ + ಪೆರ್ಚು), ಪ್ರಕಾಶದಿಂದ ಪ್ರಶಮನಗೊಂಡ ಸುರೆಯ ಒಳ್ಳೆಯ ರಸದ ಪಾತ್ರೆ (ಸುರಾ + ಸುರಸ + ಭಾಜನಂ)ಸತ್ತ್ವಗುಂದಲು (ಬಲಂ ಬೆರ್ಚು) ....''

ಇದು 'ಕಾವ್ಯಾದರ್ಶ'ದ ಸಮುದ್ಗ ಯಮಕಭೇದಗಳಲ್ಲಿ ಮೊದಲನೆಯದಾದ ೧–೩, ೨–೪ನೆಯ ಪಾದಗಳಲ್ಲಿ ಯಮಕವೇರ್ಪಟ್ಟಿರುವ ವ್ಯವಹಿತ ಸಮುದ್ಗ (೩–೫೪) ಲಕ್ಷ್ಯಕ್ಕೆ ಸರಿಬರುತ್ತದೆ; ಹಾಗೆಯೇ ರುದ್ರಟನ 'ಕಾವ್ಯಾಲಂಕಾರ'ದ ಇದೇ ರೀತಿಯ 'ಸಮುದ್ಗ' ಯಮಕದ (೩–೧೭)ಲಕ್ಷ್ಯಕ್ಕೆ ಕೂಡ ಸದೃಶವಾಗಿದೆ. ಆದರೆ ನಾಗವರ್ಮ ದಂಡಿಯನ್ನು ಅನುಸರಿಸಿರುವುದೇ ಸಾಧ್ಯ. ಯಮಕಭೇದದ ಹೆಸರು ಹಾಗೂ ಲಕ್ಷ್ಯಪದ್ಯದ ಛಂದಸ್ಸು ಇವುಗಳಿಂದ ಅದನ್ನು ಸುಲಭವಾಗಿ ಊಹಿಸಬಹುದು.

ನಾಗವರ್ಮನು ಇಲ್ಲಿಂದ ಮುಂದೆ ದುಷ್ಕರ ಯಮಕಗಳಲ್ಲಿಯ ವರ್ಣಸಂಯೋಜನೆಯ ವೈಚಿತ್ರ್ಯಗಳಲ್ಲಿ ಕೆಲವು ವಿಶೇಷಾಂಶಗಳನ್ನು ಹೀಗೆ ಕುರಿತಿದ್ದಾನೆ :

ಬ ವಕಾರಂಗಳ್ ಪ ಹವ । ರ್ಣವೆರಡುಮವಿಭೇದದಿಂದೆ ಸಲ್ಗುಂ ಸಂಯೋ ।
ಗವಿಶಿಷ್ಟಮುಂ ಸ್ವರೂಪಮು । ಮವಿಕಲ್ಪದೊಳೊಂದಿ ನೆಗಟ್ಗುಮವು ದುಷ್ಕರದೊಳ್ ॥
(ಸೂ. ೧೩೦)

ಇದರ ಆಶಯವೆಂದರೆ: ದುಷ್ಕರಯಮಕದಲ್ಲಿ ಬಕಾರ–ವಕಾರಗಳ ನಡುವೆ, ಪಕಾರ–ಹಕಾರಗಳ ನಡುವೆ ಭೇದವಿಲ್ಲದೆ ಯಮಕವೇರ್ಪಡಬಹುದು; ಹಾಗೆಯೇ ಸಂಯುಕ್ತಾಕ್ಷರ–ಯಥಾರೂಪದ ಅಕ್ಷರಗಳ ನಡುವೆ ವಿಕಲ್ಪವಿಲ್ಲದೆ ಯಮಕವೇರ್ಪಡಬಹುದು. ಸಂಸ್ಕೃತ ಲಾಕ್ಷಣಿಕರು ವ್ಯಕ್ತವಾಗಿ ಹೇಳಿರದ, ಆದರೆ ಅಲ್ಲಿ ಸಾಮಾನ್ಯವಾಗಿ ಅನುಸರಿಸಲ್ಪಡುವ ಈ ಬಗೆಯ ಯಮಕವ್ಯವಸ್ಥೆಯನ್ನು ನಾಗವರ್ಮನು ಇಲ್ಲಿ ವ್ಯಕ್ತವಾಗಿಯೇ ಲಕ್ಷ್ಯಸಹಿತವಾಗಿ ಸೂಚಿಸಿದ್ದಾನೆ. ಪಾದಮಧ್ಯ ಹಾಗೂ ಪಾದಾಂತವೈಚಿತ್ರ್ಯವನ್ನು ದುಷ್ಕರ ಯಮಕಗಳೆಂದು ತಿಳಿಯುವುದು ರೂಢಿಯೆಂದು 'ಕಾವ್ಯಾದರ್ಶ'ದ ಲಕ್ಷ್ಯಭಾಗಗಳಿಂದ ವಿದಿತವಾಗುತ್ತದೆ. ಸ್ಥೂಲವಾಗಿ ನಾಗವರ್ಮನೂ ಅದನ್ನು ಒಪ್ಪಿ, ವರ್ಣಸಂಯೋಜನವೈಚಿತ್ರ್ಯದ ಸಲುವಾಗಿ ಅವುಗಳಲ್ಲಿ ಮೂರನ್ನು ಮಾತ್ರ ಮುಂದೆ ನಿದರ್ಶಿಸಿದ್ದಾನೆ.

ನವಲಕ್ಕಂ ಕಟಕದೊಳಿ । ನ್ನವಲಕ್ಕಂ ನಿಜಮೆ ಪಿರಿದು ವಿಬುಧನಿಕಾಯ ।
ಕ್ಕವಳಂಬನಮಪ್ಪ.... । ಕ್ಕವಳಂ ಬಚನೈಕಸಾರವೆಂಬೀ ನುಡಿಯಂ ॥ (೫೫೨)

ಪದ್ಯದ ಭಾಗ ತ್ರುಟಿತವಾಗಿರುವುದೂ ಸೇರಿ, ಅಭಿಪ್ರಾಯ ಸ್ಪಷ್ಟವಾಗದೆ ಇದೆ. 'ಕಾವ್ಯಾದರ್ಶ'ದ ೩–೩೦ರ ಯಮಕಭೇದಕ್ಕೆ ಇದು ಸದೃಶವಾದುದು. ೩–೪ನೆಯ ಪಾದಗಳ ಯಮಕದಲ್ಲಿ ಬ–ವ ಕಾರಗಳ ಅಭೇದತ್ವವಿದೆ. 'ವಚನೈಕಸಾರ' ಎಂಬುದು ಯಮಕದ ಸಲುವಾಗಿ 'ಬಚನೈಕಸಾರ' ಆಗಿರುವಂತಿದೆ.

ಪಿಂಗಿದುದಿಲ್ಲಿನ್ನುಂ ಪುನ । ದಿಂ ಗೋವರ ಗಡಣದೊಳ್ ದನಂಗಾಹಿತನಂ ।
ನೀಂಗಳದೆತ್ತಱಿವಿರ್ ಬ । ರ್ಮಂಗಂ ಬಗೆದಱಿವುದರಿದನಂಗಾಹಿತನಂ ॥ (೫೫೩)

''ಗೊಲ್ಲರ ಸಮೂಹದಲ್ಲಿ ದನಕಾಯುವ ಸ್ವಭಾವ ಮನಸ್ಸಿನಿಂದ ಇನ್ನೂ ತೊಲಗಿಲ್ಲ. (ಪಾಪ), ನೀವು ಹೇಗೆ ತಾನೆ ತಿಳಿಯಬಲ್ಲಿರಿ? (ಆ) ಬ್ರಹ್ಮನಿಗೆ ಸಹ ಅಹಿತನಾದ ಮನ್ಮಥನನ್ನು ಆಲೋಚಿಸಿ ತಿಳಿಯುವುದು ಶಕ್ಯವಿಲ್ಲ.''

ಸಂವಾದಿಯಾದ ಯಮಕಭೇದ ಸಂಸ್ಕೃತಲಕ್ಷಣಗ್ರಂಥಗಳಲ್ಲಿ ಉಕ್ತವಲ್ಲ. ಪಾದಾಂತ ವ್ಯಪೇತವೆನ್ನ ಬಹುದಾದ ಈ ಲಕ್ಷ್ಯದಲ್ಲಿ, ೨ನೆಯ ಪಾದದಲ್ಲಿ ಕಾಪು>ಕಾಹು ಎಂದು ಅಂಗೀಕರಿಸಿರುವುದನ್ನು ನಾಗವರ್ಮ ಕುರಿತಿರು ವಂತೆ ತೋರುತ್ತದೆ. ಆದರೆ ಬ–ವ ಲಕ್ಷ್ಯದ ಹಾಗೆ ಒಳ್ಳೆಯ ಲಕ್ಷ್ಯವಲ್ಲ ಇದು ಎನ್ನಬೇಕು.

ಆ ಗಿರಿಯ ನಿತಂಬಂ ಶೋ । ಭಾಗುಣವಂ ತಳೆದುದಪ್ಸರಃ ಕುಲಲಲಿತಂ ।
ಮೇಗಣ ಶಿಖರಾಗ್ರಮುಮಿಂ । ಬಾಗಿ ಮನಕ್ಕೆಸೆವುದಪ್ಸರಃ ಕುಲಲಲಿತಂ ॥ (೫೫೪)

''ಆ ಬೆಟ್ಟದ ತಪ್ಪಲು ನೀರುತುಂಬಿದ ಸರೋವರಗಳಿಂದ ಮನೋಹರವಾಗಿ ಶೋಭಿಸಿತು; (ಅದರ) ಮೇಲಿನ ಶಿಖರದ ತುದಿಯೂ ಅಪ್ಸರೆಯರ ಸಮೂಹದಿಂದ ಮನೋಹರವಾಗಿ ಮನಸ್ಸಿಗೆ ಸೊಗಸಾಗಿ ತೋರುತ್ತದೆ.''

ಇದು ಪಾದಾಂತ ವ್ಯಪೇತ ಯಮಕವೇ; ವಾಸ್ತವವಾಗಿ ನಾಗವರ್ಮನ ಈ ಸೂತ್ರವೂ ಅದಕ್ಕೆ ಕೊಟ್ಟಿರುವ ಲಕ್ಷ್ಯಗಳೂ ಅನಾವಶ್ಯಕವಾಗಿದ್ದುವು.

ಅನ್ಯ ಅಲಂಕಾರಗ್ರಂಥಗಳಲ್ಲಿ ಯಮಕವಿಚಾರ

'ಉದಯಾದಿತ್ಯಾಲಂಕಾರ' :

ಉದಯಾದಿತ್ಯನು ಅರ್ಥಾಲಂಕಾರಗಳನ್ನು ನಿರೂಪಿಸಿದ ಬಳಿಕ, ಗ್ರಂಥಸಮಾಪ್ತಿಯನ್ನು ಮಾಡುವ ಮೊದಲು, ಒಲ್ಲದ ಮನಸ್ಸಿನಿಂದ ಎನ್ನುವಂತೆ

ಯಮಕ ಪ್ರಹೇಳಿಕಾದಿಗ । ಳಮಾರ್ಗಮೆಂದಿಂತು ಮಾಣ್ದೆನಾದೊಡ[ಮಂ]ತಾ ।
ಯಮಕ ಪ್ರಹೇಳಿಕಾದಿಗ । ಳ ಮಾರ್ಗಮಂ ತಿಳಿಯಲೆರಡು ಪದ್ಯದೊಳು[ಸಿ]ರ್ವೆಂ ॥ (ಪ. ೭೧)

ಎಂಬುದಾಗಿ ಸೂಚಿಸಿ, ಮುಂದೆ ಲಕ್ಷಣ–ಲಕ್ಷ್ಯನಿಬದ್ಧವಾದ

ಎರಡರ್ಥದಿನೆಸೆವೊಂದ । ಕ್ಷರಾಳಿ ಯಮಕಂ ಪದಾದಿ ಮಧ್ಯಾಂತಗತಂ ।
ಚ್ಚರಣದೊಳೊಂದುವರತ್ಯು । ಚ್ಚರಣದೊಳಹಿತಾವನೀಶರುದೆಗನರೇಶಾ ॥ (ಪ. ೭೨)

ಎಂಬ ಒಂದು ಪದ್ಯವನ್ನು ಬರೆದು, ಅದರಲ್ಲಿ ಯಮಕದ ಲಕ್ಷಣ, ಪ್ರಭೇದಗಳನ್ನು ಪೂರ್ವಾರ್ಧದಲ್ಲಿಯೂ ಲಕ್ಷ್ಯ ವನ್ನು ಉತ್ತರಾರ್ಧದಲ್ಲಿಯೂ ನಿರ್ದೇಶಿಸಿದ್ದಾನೆ (ಇದರ ಮುಂದಿನ ಪದ್ಯ ಪ್ರಹೇಳಿಕೆಯ ಲಕ್ಷ್ಯವಾಗಿದೆ.).

''ಯಮಕ ಪ್ರಹೇಳಿಕಾದಿಗಳು ಅಮಾರ್ಗದವು ಎಂದು ನಿರೂಪಿಸದೆ ಬಿಟ್ಟಿದ್ದೇನೆ; ಆದರೂ ಅವುಗಳ ಮಾರ್ಗವನ್ನು(ಸೂಕ್ಷ್ಮದಲ್ಲಿ) ತಿಳಿಯಲು, ಎರಡು ಪದ್ಯಗಳಲ್ಲಿ ಅವನ್ನು ಕುರಿತು ಹೇಳುತ್ತೇನೆ'' (ಪ.೭೧) ಎಂದು ಉದಯಾದಿತ್ಯ ಹೇಳಿರುವುದು, ಭಾಮಹನ ''ನಾನಾಧಾತ್ವರ್ಥಗಂಭೀರಾ ಯಮಕವ್ಯಪದೇಶಿನೀ....'' ಎಂಬ ಅಭಿಪ್ರಾಯದ (೨–೧೯) ಪ್ರತಿಧ್ವನಿಯಂತಿದೆ. ತನ್ನ ಸಂಗ್ರಹಗ್ರಂಥದಲ್ಲಿ ಮುಖ್ಯವಾದ ಅರ್ಥಾಲಂಕಾರ ವಿವರಗಳಿದ್ದರೆ ಸಾಕು, ಯಮಕ ಪ್ರಹೇಳಿಕಾದಿ ಶಬ್ದಾಲಂಕಾರ ಚಿತ್ರಕಾವ್ಯಗಳ ವಿವರಗಳು ಬೇಕಾಗಿಲ್ಲ ಎಂದು ಅವನು ಭಾವಿಸಿರು ವಂತಿದೆ. ಪ್ರಸ್ತುತ, ಇವುಗಳ ಬಗ್ಗೆ ತನ್ನ ಅಸಮ್ಮತಿಯನ್ನು ಸೂಚಿಸಿ ಬರೆದ ಪದ್ಯದಲ್ಲಿ ಸೊಗಸಾಗಿ ಯಮಕಾಲಂಕಾರ ವನ್ನು ಅವನು ಸಂಘಟಿಸಿರುವುದು ನೋಡಿದರೆ ಅವನ ಬುದ್ಧಿಕೌಶಲವನ್ನು ಮೆಚ್ಚುವಂತಾಗುತ್ತದೆ. ಅಲ್ಲದೆ ಭಾಮ ಹನು '' ಪ್ರತೀತಶಬ್ದಮೋಜಸ್ವಿ ಸುಶ್ಲಿಷ್ಟಪದಸಂಧಿ ಚ', ಎಂದು ಹೇಳಿರುವ ಒಳ್ಳೆಯ ಯಮಕದ ಲಕ್ಷಣಗಳನ್ನೆಲ್ಲ (೨–೧೮) ಆ ಲಕ್ಷ್ಯದಲ್ಲಿ ನಾವು ಕಾಣಬಹುದಾಗಿದೆ ಎನ್ನುವುದೂ ಸಾರಸ್ಯಸಂಗತಿಯೇ. ಇನ್ನು ಅದರ ಮುಂದಿನ ಪದ್ಯದಲ್ಲಿಯೂ ಭಾಮಹನ ೨-೯, ೧೭ರ ಅನುವಾದದ ಅಂಶಗಳನ್ನೇ ಕಾಣಬಹುದು. ಎಂದರೆ ಯಮಕವೆಂಬುದು ಅರ್ಥದಲ್ಲಿ ಪರಸ್ಪರಭೇದವಿರುವ ಅಕ್ಷರಗಳ ಗುಂಪು, ಅದು ಆದಿ, ಮಧ್ಯ ಮತ್ತು ಅಂತಗತವೆಂದು ಮೂರು ತೆರನಾದ್ದು ಎಂದು ಇಲ್ಲಿಯ ಆಶಯ. ''ಎಲೈ ಉದೆಗರಾಜಾ, ''ಶತ್ರುರಾಜರು ಬಹಳ ಮೇಲಾದ ಕಾಳೆಗದಲ್ಲಿ ನಿನ್ನ ಪಾದ ಗಳಿಗೆ ಶರಣಾಗುವರು'' ಎನ್ನುವುದು ಯಮಕಿತಭಾಗದ ಆಶಯ.

ಪದ್ಯ ೭೧ರಲ್ಲಿ, ೧–೩ನೆಯ ಪಾದಗಳನ್ನು ಮಾತ್ರ ಗಮನಿಸಿದರೆ, ಅಲ್ಲಿ ದಂಡಿ ಹೇಳುವಂತಹ ವ್ಯವಹಿತ ಸಮುದ್ಗದ ಲಕ್ಷಣವನ್ನು (೩–೫೮) ಕಾಣಬಹುದು. ಪದ್ಯವನ್ನು ಒಟ್ಟಾಗಿ ಪರಿಗಣಿಸಿದರೆ, ಪಾದಾದಿ ವ್ಯಪೇತದ (೩–೨೪) ಲಕ್ಷಣವೂ ಅದರೊಂದಿಗೆ ಸೇರಿದೆಯೆನ್ನಬೇಕು. ಪ. ೭೨ ಪಾದಾದಿ ವ್ಯಪೇತದ ಒಂದು ಪ್ರಭೇದದ ('ಕಾವ್ಯಾದರ್ಶ' ೩–೨೫) ಪ್ರತ್ಯೇಕ ಲಕ್ಷ್ಯ.

'ಮಾಧವಾಲಂಕಾರ' :

ದಂಡಿಯ 'ಕಾವ್ಯಾದರ್ಶ'ದ ಅನುವಾದವೆಂಬುದರಿಂದಾಗಿ ಮಾಧವನ 'ಮಾಧವಾಲಂಕಾರ' (೧೫೦೮) ದಲ್ಲಿ ಯಮಕವಿಚಾರ ತೃತೀಯಪರಿಚ್ಛೇದದಲ್ಲಿ ಮೊದಲ ೫೫ ಪದ್ಯಗಳಷ್ಟು ವಿಸ್ತಾರದಲ್ಲಿ ಸ್ಥಾನ ಪಡೆದಿದೆ. ಯಮಕಾಲಂಕಾರ ವೈಚಿತ್ರ್ಯಗಳನ್ನು ತೋರಿಸಲು ಮಾಧವನು ಸ್ವತಃ ಲಕ್ಷ್ಯಪದ್ಯಗಳನ್ನು ರಚಿಸಿರುವಲ್ಲಿ ವಹಿಸಿರುವ ಶ್ರಮ ಮತ್ತು ಕೌಶಲಗಳನ್ನು ಮೆಚ್ಚಬೇಕಾಗಿದೆ. ಇವುಗಳ ಮೂಲದಲ್ಲಿ ಲಕ್ಷ್ಯ ಸುಬೋಧವೂ ಸುರಸವೂ ಆಗಿದ್ದರೂ, ಪದ್ಯಪಾಠ ಹಲವೆಡೆ ಕೆಟ್ಟಿರುವುದು ಕಾರಣವಾಗಿ ಅಭಿಪ್ರಾಯವಿಶದತೆಗೆ ಕೊರತೆಯುಂಟಾಗಿರುವುದಕ್ಕೆ ವಿಷಾದಿಸಬೇಕಾಗಿದೆ. ಒಂದು ಮಿತಿಯಲ್ಲಿ ಸಾಧ್ಯವಿದ್ದಮಟ್ಟಿಗೆ ಪದ್ಯಗಳನ್ನು ಪರಿಷ್ಕರಿಸಿ, ಲಕ್ಷಣ–ಲಕ್ಷ್ಯಗಳ ಪರಿಶೀಲನೆಗೆ ಇನ್ನು ಮುಂದೆ ತೊಡಗಬಹುದಾಗಿದೆ.

'ಕಾವ್ಯಾದರ್ಶ'ದ ೩–೧ರ ಅನುವಾದವಾಗಿರುವ ''ಪ್ರಕಟ ನಿಯತ[ಮುಂ] ತಾನವ್ಯಪೇತ ವ್ಯಪೇತಾತ್ಮಕಮೆನಿಸುವ ವರ್ಣಾವೃತ್ತಿಯಾಗಲ್ಬುದಂ....'' ಎಂಬ ಮೊದಲ ಪದ್ಯವೇ (೩–೧) ದೋಷಯುಕ್ತವಾಗಿದೆ. ಆದರೆ ಯಮಕ ನಿಯತವಾಗಿ ಪ್ರಕಟವಾಗುವಂತಹುದು, ಅವ್ಯಪೇತ ಮತ್ತು ವ್ಯಪೇತಾತ್ಮಕವಾದುದು, ಅದು ವರ್ಣಾವೃತ್ತಿ, ಪಾದಗಳ ಸಮೂಹದಲ್ಲಿ ಆದಿ, ಮಧ್ಯ ಮತ್ತು ಅಂತ್ಯಗಳಲ್ಲಿ ಅದು ಕಾಣಿಸಿಕೊಳ್ಳುತ್ತದೆ ಎಂಬುದನ್ನು ತಿಳಿದುಕೊಳ್ಳಲು ಅದರಿಂದ ಅಡ್ಡಿಯೇನಿಲ್ಲ. ಅನಂತರದಲ್ಲಿ ಮೂಲದ ೩-೨ರ ಒಂದು ಶ್ಲೋಕವನ್ನೇ ಮಾಧವನು ಎರಡು ಕಂದ ಪದ್ಯಗಳಿಗೆ ವಿಸ್ತರಿಸಿ, ''ಏಕ ದ್ವಿ ತ್ರಿ ಚತುಃಪದಸಂಭವ ಯಮಕ ವಿತತಗಳ ಭೇದಸಮೂಹ''ದ ರೀತಿಯನ್ನು 'ಪೂರ್ವವಿಬುಧಜನಮತ'ದಿಂದ (ಎಂದರೆ ದಂಡಿಯನ್ನು ಅನುಸರಿಸಿ) ನಿರೂಪಿಸಿರುವುದಾಗಿಯೂ, ಅದು ಆದಿ ಮಧ್ಯಾಂತದಲ್ಲಿ, ಮಧ್ಯಾದಿಯಲ್ಲಿ, ಆದ್ಯಂತದಲ್ಲಿ ಹಾಗೂ ಸರ್ವತಃ ಉಪಯೋಗವಾಗುವುದಾಗಿಯೂ ತಿಳಿಸಿದ್ದಾನೆ. ಆ ಮುಂದಿನ ಪದ್ಯ (೩-೪) 'ಕಾವ್ಯಾದರ್ಶ'ದ ೩-೩ರ ಅನುವಾದವಾಗಿದ್ದು, ಇಲ್ಲಿ ಯಮಕ ಅನೇಕ ಪ್ರಭೇದಗಳಾಗಿ, ಸುಕರ ಮತ್ತು ದುಷ್ಕರ ಎಂಬ ಹೆಸರಿನಿಂದ ವರ್ಗೀಕೃತಗೊಂಡಿರುವುದನ್ನು ಸೂಚಿಸಿ, ಅವುಗಳಲ್ಲಿ ಕೆಲವನ್ನು ಸಮಸವಾಗಿ ಹೇಳುವುದಾಗಿ ಸಂಕಲ್ಪಿಸಿರುವುದು ಕಾಣುತ್ತದೆ.

ಪಾದಾದಿ ಅವ್ಯಪೇತ ಯಮಕ ಭೇದಗಳು :

ಪ್ರಥಮಪಾದಾದಿ (ಕಾವ್ಯಾದ. ೩-೪)

ತಾರಾ ತಾರಾಧಿಪಂ ಮೂಡುವನೆಲೆ ಸಖಿ ಚಿತ್ತೇಶನಂ ತಾರದಿರ್ದಂ
ದಾ ರಾಜಂ ರಾಜಹಂಸಂ ಚಲದಳಿ ಪಿಕನಾದಂ ಸುಗಂಧಾನಿಳಂ ಭೂ
ತಾರಾಮಂ ಮಲ್ಲಿಕಾವಲ್ಲರಿ ಶುಕನಿನದಂ ಗೀತಮಂಭೋಜಷಂಡಂ
ಮಾರಾಸ್ತ್ರಂ ಚೈತ್ರನಿಂತೆಲ್ಲವಿವುಳಿದಪವೇಯೆನ್ನನಿನ್ನಂಬುಜಾಕ್ಷೀ ॥ (೫)

''ಎಲೆ ಸಖಿ, ಚಂದ್ರನು ಉದಯಿಸುತ್ತಿದ್ದಾನೆ. ಮನಃಪ್ರಿಯನನ್ನು ಕರೆದು ತಾ; ತಾರದೆ ಇದ್ದ ಪಕ್ಷದಲ್ಲಿ ಆ ಚಂದ್ರ, ರಾಜಹಂಸ ಮೊದಲಾದುವೆಲ್ಲ ನನ್ನನ್ನು ಸುಮ್ಮನೆ ಬಿಡುವುದಿಲ್ಲ'' ಎಂದು ವಿರಹಿ ಇಲ್ಲಿ ಮೊರೆಯಿಟ್ಟಿದ್ದಾಳೆ.

ದ್ವಿತೀಯಪಾದಾದಿ (ಕಾವ್ಯಾದ. ೩-೫)

ಬೇಳ್ಪಗೀರ್ವಂ ಸುಧಾದೀಧಿತಿಧರನಮರೇಂದ್ರಾರ್ಚಿತಂ ಪನ್ನಗೇಂದ್ರಾ
ತಳ್ಪ[ಂ] ತಳ್ಪಂ.... ॥ (೬)

ಪದ್ಯ ದೋಷಯುಕ್ತವಾಗಿದೆ.

ತೃತೀಯಪಾದಾದಿ (ಕಾವ್ಯಾದ. ೩-೬)

ವೃಂದಾವನದೊಳ್ ನಗೆಯ[ಂ] । ನಂದಂಗೆ ಯಶೋದೆಗಬ್ಜಲೋಚನ[ನ]ಪ್ಪಾ ।
ನಂದನನಂದನವರತಂ । ಕುಂದದತಿಪ್ರಿಯ[ದಿ]ನಾಗಳೊಡರಿಸುತಿರ್ದಂ ॥ (೭)

''ವೃಂದಾವನದಲ್ಲಿ ನಂದ ಯಶೋದೆಯರಿಗೆ ಪುಂಡರೀಕಾಕ್ಷನಾದ ಆ ಪುತ್ರನು, ಅಂದು ಸರ್ವದಾ ತಪ್ಪದೆ ಅತ್ಯಂತ ಪ್ರೀತಿಯಿಂದ ಸಂತೋಷವನ್ನು ಉಂಟುಮಾಡುತ್ತಿದ್ದಾನೆ.''

ಚತುರ್ಥಪಾದಾದಿ (ಕಾವ್ಯಾದ. ೩-೭)

ಕಾರ ಮುಗಿಲ್ಗಳ ಬಣ್ಣ । ಕ್ಕೋರನ್ನಮೆನಿಪ್ಪ ಶಬ್ದಸಂತತಿ ಸರಿಯಂ ।
ಕಾರುಣ್ಯದೊಳಂ ಬಾಣಾ । ಸಾರಂ ಸಾರಂಗತತಿಯನಯ್ದಿದುವಾಗಳ್ ॥ (೮)

ಪದ್ಯದ ಪೂರ್ತಿ ಆಶಯ ತಿಳಿಯುವುದಿಲ್ಲ.

ಪ್ರಥಮ ದ್ವಿತೀಯ ಪಾದಾದಿ (ಕಾವ್ಯಾದ. ೩-೮)

ಭ್ರಮರದ್ಭ್ರಮರಂ ಮಣಿಯಾ । ಕುಮುದಂ ಕುಮುದಂ ವಿಕಾಸಿ ಪನ್ನಗವಲರ್ದ ।
ತ್ತಮ್ಮೃತಕರಂ ರಣಸಂಗದೊ । ಳಮಲಸರೋವರದೊಳೆಂದು ಕೆಳದಿಗೆ ನುಡಿದಳ್ ॥ (೯)

ಪದ್ಯದ ಆಶಯ ತಿಳಿಯುವುದಿಲ್ಲ.

ಪ್ರಥಮ ತೃತೀಯ ಪಾದಾದಿ (ಕಾವ್ಯಾದ. ೩-೯)

ಬಂದಂ ಬಂದಂದಶೋಕಧ್ವಜದೆಡೆಯೊಳದಂ ಬಾಣದಿಂ ಛೇದಿಸಲ್ಕ
ತ್ತೊಂದಂಬಂ ತೊಟ್ಟು ಪಾರ್ಥಂ... ॥ (೧೦)

ಪದ್ಯ ಸಲಕ್ಷಣವಾಗಿಲ್ಲ; ದೋಷಯುಕ್ತವಾಗಿದೆ.

ಪ್ರಥಮ ಚತುರ್ಥ ಪಾದಾದಿ (ಕಾವ್ಯಾದ. ೩-೧೦)

ವಸುಧಾ ವಸುಧಾರೆಗಳಿಂ ।
ದೆಸೆವ ಜನಂಗಳನೆ ತಣಿಪಿ ಭೂಮೀಶ್ವರ... ॥ (೧೧)

ಪದ್ಯ ಸಲಕ್ಷಣವಾಗಿಲ್ಲ; ದೋಷಯುಕ್ತವಾಗಿದೆ.

ದ್ವಿತೀಯ ತೃತೀಯ ಪಾದಾದಿ (ಕಾವ್ಯಾದ. ೩-೧೧)

ಇಂದಿರೆಯ ಕಾಂತ ಕೇಳ್ ನಿ । ನ್ನಿಂದಂನಿಂದಂ ಯುಧಿಷ್ಠಿರಂ ರಾಜ್ಯದೊಳಾ ।
ನಂದಂ ನಂದಂಗಾದುದು । ನಂದಖಿಲಧರಾಜನಂಗಳತಿವರ್ಣಿಪಿನಂ ॥ (೧೨)

''ಎಲೆ ಲಕ್ಷ್ಮೀಪತಿ (=ಕೃಷ್ಣ) ಕೇಳು. ಲೋಕವೆಲ್ಲಾ ಅತಿಶಯವಾಗಿ ವರ್ಣಿಸುವ ಹಾಗೆ, ನಿನ್ನಿಂದಾಗಿ ಧರ್ಮರಾಯನು ರಾಜ್ಯದಲ್ಲಿ ನೆಲೆಗೊಂಡನು; ನಂದನಿಗೆ ಆನಂದವಾಯಿತು.''

ದ್ವಿತೀಯ ಚತುರ್ಥಪಾದಾದಿ (ಕಾವ್ಯಾದ. ೩-೧೨)

ಆರೈದು ನೋಳ್ಪೊಡೀ ಸಂ । ಸಾರಂ ಸಾರಂ ಸಮಂತದಲ್ಲೆಂದತಿಗಂ ।
ಭೀರಮುನೀಶ್ವರನಂ ಸಂ । ಸಾರಂ ಸಾರಂಗನಯನೆ ಸಾರ್ಗಿತರಜನಂ ॥ (೧೩)

''ಎಲೆ ಹರಿಣಲೋಚನೆ, ವಿಚಾರಮಾಡಿ ನೋಡಿದರೆ, ಈ ಸಂಸಾರ ಸಾರವಾದ್ದಲ್ಲ ಎಂಬುದಾಗಿ ಭಾವಿಸಿ, ಸಂಸಾರದೊಂದಿಗೆ ಸಕಲಜನವೂ ಯತಿಶ್ರೇಷ್ಠನಲ್ಲಿಗೆ ತೆರಳಲಿ.'' (ನ್ಯಾಯವಾಗಿ ೪ನೆಯ ಪಾದದಲ್ಲಿ ಯಮಕ ಬೇರೆ ವರ್ಣಶ್ರೇಣಿಯಲ್ಲಿರಬೇಕಾಗಿತ್ತು.)

ತೃತೀಯ ಚತುರ್ಥ ಪಾದಾದಿ (ಕಾವ್ಯಾದ. ೩-೧೩)

ಪದ್ಯ ಸಲಕ್ಷಣವಾಗಿಲ್ಲ; ದೋಷಯುಕ್ತವಾಗಿದೆ.

ಪ್ರಥಮ ದ್ವಿತೀಯ ತೃತೀಯ ಪಾದಾದಿ (ಕಾವ್ಯಾದ. ೩-೧೪)

ಬೇಡಂ ಬೇಡಂ ಮೃಗೀಲೋಚನೆ ಸಮರಮನೆಂದೆನ್ನೊಳಾಂ ಬಂದೊಡಾ[ನಿ]
ನ್ನೋಡೆಂ ನೋಡೆನ್ನ ಬಲ್ಪಂ ನೆರೆವುದದಱನಿಂದೆನ್ನೊಳೆಂದೆರೆದೊಡಂ ಪೊ
ಕ್ಕಾಡಂ ಕಾಡಂ ಭಟಂ ಬೇಂಟೆಯ ನೆವನೆನಗಂ ಸೋಲ್ತು ಬಂದಪ್ಪನೆಂದು
ಳ್ಪಾಡುತ್ತುಂ ಮುಗ್ಧೆಯೊರ್ವಳ್ ನಿಜ ತೃಣಕುಟಿಯಂ ಪೊಕ್ಕಳಾನಂದದಿಂದಂ ‖ (೧೫)

"'ಹರಿಣೀಲೋಚನೆ, ಯುದ್ಧವನ್ನು ಬೇಡನು ಬಯಸುವುದಿಲ್ಲ' ಎಂಬುದಾಗಿ ಭಾವಿಸಿ ನನ್ನ ಪಾಡಿಗೆ ನಾನು ಬಂದರೆ, 'ನಾನಿನ್ನು ಓಡುವುದಿಲ್ಲ, ನನ್ನ ಸಾಮರ್ಥ್ಯವನ್ನು ನೋಡು, ನನ್ನೊಂದಿಗೆ ಕೂಡು' ಎಂದು ಪ್ರಾರ್ಥಿಸಿದರೂ ಅವನು ಪ್ರವೇಶಿಸಿ ಮಾತಾಡುವುದಿಲ್ಲ, ಕಾಡುವುದಿಲ್ಲ, (ಇರಲಿ) ಬೇಟೆಯ ನೆಪ, ನನಗೆ ಮನಸೋತು ಬರುತ್ತಾನೆ ಎಂದು ಒಳಗೇ ಮಾತಾಡಿಕೊಳ್ಳುತ್ತ ಮುಗ್ಧೆಯೊಬ್ಬಳು ತನ್ನ ಗುಡಿಸಲನ್ನು ಸಂತೋಷದಿಂದ ಪ್ರವೇಶಿಸಿದಳು.(?)"

ಪ್ರಥಮ ದ್ವಿತೀಯ ಚತುರ್ಥ ಪಾದಾದಿ (ಕಾವ್ಯಾದ. ೩-೧೫)

ಮೂಡಲ್ ಮೂಡಲ್ ಶಶಾಂಕಂ ಮುನಿಯೆ ಸರಸಿಜಂ ಚಕ್ರವಾಕೋತ್ಸವಂ ತಾಂ
ನೋಡಲ್ ನೋಡಲ್ ನೆಗಳ್ದುಳ್ಪಲರೆ ಕುವಲಯಂ ಮಾರುತಂ ಕಂಪು ತಂಪಂ
ತೀಡಲ್ ವಾರಾಶಿ ಪೆರ್ಚಂ ತಳೆಯಲಬಲೆಯರ್ ಹಾಸಮಂ ವಕ್ತ್ರದೊಳ್ತಾಂ
ಕಾಡಲ್ ಕಾಡಲ್ ಮನೋಜಂ ಚತುರವಿಟರ ಚಿತ್ತಂಗಳಂ ಲೀಳೆಯಿಂದಂ ‖ (೧೬)

"ಪೂರ್ವ ದಿಕ್ಕಿನಲ್ಲಿ ಚಂದ್ರನು ಉದಯಿಸಲು, ತಾವರೆಯ ಹಾಗೂ ಚಕ್ರವಾಕಗಳ ಸಂತೋಷ ಕುಗ್ಗಲು, ನೋಡ ನೋಡುತ್ತಿದ್ದಂತೆ ನೈದಿಲೆ ಒಳಗೆ ಅರಳುತ್ತಿರಲು, ವಾಯು ಕಂಪು ತಂಪುಗಳನ್ನು ತೀಡಲು, ಸಮುದ್ರವು ಆಧಿಕ್ಯವನ್ನೂ ಸ್ತ್ರೀಯರು ನಗೆಯನ್ನೂ ಮೊಗದಲ್ಲಿ ತಳೆಯಲು, ಮನ್ಮಥನು ಚತುರರಾದ ವಿಟರ ಚಿತ್ತಗಳನ್ನು ಲೀಲೆಯಿಂದ ಕಾಡುತ್ತಿರಲು...."

ಪ್ರಥಮ ತೃತೀಯ ಚತುರ್ಥ ಪಾದಾದಿ (ಕಾವ್ಯಾದ. ೩-೧೬)

ಬಲನಂ ಬಲನಂ ಕಂಡೊಂ । ದಲಗಂ ಕೊಂಡೈದಿ ಬಂದು ನಡುಗಲ್ಕಾಣದ ।
ಕುಲಮಂ ಕುಲಮಂ ಪೊಕ್ಕ । ಸ್ಖಲನಂ ಸ್ಖಲನಂ ಸಮಂತು ಕೊಂದಂ ರಾಮಂ ‖ (೧೭)

"ಬಲಶಾಲಿಯನ್ನು, ಆತನ ಸೈನ್ಯವನ್ನು ಕಂಡು ಒಂದು ಅಸ್ತ್ರವನ್ನೆತ್ತಿಕೊಂಡು ಸಮೀಪಿಸಿಬಂದು ನಡುಕವನ್ನೇ ತಿಳಿಯದ ವಂಶವನ್ನು, ಪ್ರತಿಪಕ್ಷದ ಭಟಸಮೂಹವನ್ನೂ ಹೊಕ್ಕ ಧೀರನಾದ ಖಳನನ್ನು ('ಸ್ಖಲನಂ ಖಲನಂ' ಎಂದು ಮೂಲವಿದ್ದಿರಬಹುದೇ?) ಶ್ರೀರಾಮನು ಚೆನ್ನಾಗಿ ಕೊಂದುಹಾಕಿದನು."

ದ್ವಿತೀಯ ತೃತೀಯ ಚತುರ್ಥ ಪಾದಾದಿ (ಕಾವ್ಯಾದ. ೩–೧೭)

ಪಾಡುತ್ತುಂ ಭೃಂಗಿ ಬಾಲಭ್ರಮರಿಗೆ ಮಕರಂದಂ ಕುಡಲ್ ಪದ್ಮದೊಳ್ಪಂ
ಕೂಡಲ್ ಕೂಡಲ್ ವನಶ್ರೀವಧು ಮಡುವಿನೊಳಂ ಗಜಂ ಬಲ್ಕನಾನಲ್
ತೀಡಲ್ ತೀಡಲ್ ಸುಗಂಧಾನಿಲನೆಳದಳಿರಂ ಪೊ[ಕ್ಕು]ಮಾ[ಖಿಂ]ಡಳಂ ಬಾ
ಬಾಡಲ್ ಬಾಡಲ್ ವಿಯೋಗಿಪ್ರಕರದ ವದನಂ ಚೆಲ್ವನಾದತ್ತು ಜೊನ್ನಂ ‖ (?) (೧೮)

"ಮೊರೆಯುತ್ತ ಹೆಣ್ಣುದುಂಬಿ ಎಳದುಂಬಿಗೆ ಮಕರಂದವನ್ನು ಕೊಡಲು, ವನಲಕ್ಷ್ಮಿಯೆಂಬ ವಧು ಸೇರಿ ತಾವರೆಯ ಸೊಬಗನ್ನು ಪಡೆಯಲು, ಮಡುವಿನಲ್ಲಿ ಆನೆ ವಿರಮಿಸಲು (?), ಪರಿಮಳದ ಗಾಳಿ ತೀಡುತ್ತಿರಲು, ಪೂರ್ವದಿಕ್ಕು ಎಳೆಯ ಚಿಗುರಿನ ಬಣ್ಣವೇರಿಯೂ ಬಾಡಲು, ವಿರಹಿಗಳ ಮುಖ ಮಂಕಾಗಲು, ಬೆಳದಿಂಗಳು ಸೊಗಸಾಯಿತು."

ಪಾದ ಚತುಷ್ಟಯಾದಿ

ಮುತ್ತಂ ಮುತ್ತಂಚೆಯಂ ಪೊತ್ತಿರಲುಡುಶಶಿಗಳ್ ವ್ಯೋಮದೊಳ್ ಕಾಂತಿಯಾಗಲ್
ಮತ್ತಾ ಮತ್ತಾಳಿ ಸುಯ್ಯಿಂದೆಱಗೆ ಕರದಿ ಸೋವುತ್ತೆ ಹಾಸಾಂಶುವಂ ಸೂ

ಸುತ್ತಂ ಸುತ್ತಂ ಕಟಾಕ್ಷದ್ಯುತಿಗಳಿನುರು ಸೂಸುತ್ತುವೈತಂದು ನೋಡೆ
ಲ್ಕಿತ್ತಂ ಕಿತ್ತಂತೆ ಪೋಯ್ತು ಚತುರವಿಟಸಮೂಹ ಕೃಪಾಲಿಯಾಗಳ್ ಮನೋಜ್ಞಂ ॥ (೧೯)

ಪದ್ಯದ ಆಶಯ ಸ್ಪಷ್ಟವಿಲ್ಲ.

೨. ಪಾದಾದಿ ವ್ಯಪೇತ ಯಮಕಭೇದಗಳು :

ಇಲ್ಲಿಯವರೆಗೆ ತಾನು ಅವ್ಯಪೇತವೆನಿಸಿದ ಪಾದಾದಿಯಮಕವನ್ನು ನಿರೂಪಿಸಿದ್ದಾಗಿಯೂ, ಇಲ್ಲಿಂದ ಮುಂದೆ '(ಪಾದಾದಿ) ವ್ಯಪೇತ ಯಮಕ'ವನ್ನು, ''ಆದಿಕವಿಜನಮತದಿಂ'' ತಡೆಯದೆ ನಿರೂಪಿಸುವುದಾಗಿ ಮಾಧವ ಸಂಕಲ್ಪಿಸಿ, ಹೀಗೆ ಲಕ್ಷ್ಯಗಳನ್ನು 'ಕಾವ್ಯಾದರ್ಶ'ದ ಅನುಕ್ರಮವನ್ನು ಹಿಡಿದು ಕೊಟ್ಟಿದ್ದಾನೆ:

ಪ್ರಥಮ ದ್ವಿತೀಯ ಪಾದಾದಿ (ಕಾವ್ಯಾದ. ೩-೨೦)

ಮಾತಂ ಮೆಚ್ಚಿವವನಲ್ಲೀ । ಮಾತಂಗ ತುರಂಗ ರಥ ಪದಾತಿ ಚತುಸ್ಸಂ ।
ಖ್ಯಾತಬಲಂ ಬಂದೊಡ್ಡಲ್ । ಭೂತಲಪತಿ ತೋರ್ಪೆನೆನ್ನ ಬಾಹಾಬಲಮಂ ॥ (೨೧)

''ಎಲೆ ರಾಜಾ, ಬರಿಯ ಮಾತು ಕೊಚ್ಚುವವನಲ್ಲ; ಗಜ ವಾಜಿ ರಥ ಪದಾತಿಗಳೆಂಬ ಚತುರಂಗಬಲ ಎದುರು ನಿಂತರೆ ನನ್ನ ತೋಳ್ಬಲವನ್ನು ತೋರಿಸುತ್ತೇನೆ.''

ಪ್ರಥಮ ತೃತಿಯ ಪಾದಾದಿ (ಕಾವ್ಯಾದ. ೩-೨೧)

ಬಾಳೆಯುನಱಸುವೆನೆಂದಾ । ಲೋಲಾಕ್ಷಿಯ ಪೋದ ಬಟ್ಟೆಯಂ ನೋಡಲ್ಕೊಂ ।
ಬಾಳೆಯ ಬನಮಂ ಪೊಕ್ಕಂ । ಲೋಲನದೊರ್ವಂ ಮನೋಭವಾತುರನೊರ್ವಂ ॥ (೨೨)

'ಲೋಲನೂ ಕಾಮಾತುರನೂ ಆದ ಒಬ್ಬನು ಬಾಲೆಯನ್ನು ಹುಡುಕುತ್ತೇನೆಂದು ಆ ಲೋಲನೇತ್ರೆ ತೆರಳಿದ ದಾರಿಯನ್ನು ತಿಳಿಯಲು ಹೊಂಬಾಳೆಯ ತೋಟವನ್ನು ಹೊಕ್ಕನು.''

ಪ್ರಥಮ ಚತುರ್ಥ ಪಾದಾದಿ (ಕಾವ್ಯಾದ. ೩-೨೨)

ಪಾಡಲ್ ಭ್ರಮರಚಯಂ ನಲಿ । ದಾಡ[ಲ್ಕೆ]ಲ್ಲಿ[ಯ] ಲತಾಳಿ ಚಕ್ರಯುಗಂ ಬಾ ।
ಯ್ಗೂಡ[ಲ್ಕಾ] ವನದೊಳ್ ನಡ । ಪಾಡಲ್ ಮನಮಂ [ವಿ]ಯೋ[ಗಿ] ತಾರನದೆಂದುಂ ॥ (೨೩)

''ದುಂಬಿಗಳು ದನಿಮಾಡಿದರೆ, ಬಳ್ಳಿಗಳು ನರ್ತಿಸಿದರೆ, ಚಕ್ರವಾಕಗಳ ಜೋಡಿ ಮುದ್ದಿಸಿದರೆ, ಆ ಬಗೆಯ ವನದಲ್ಲಿ ಸುತ್ತಾಡಲು ವಿರಹಿಯಾದವನು ಎಂದೂ ಮನಸ್ಸು ಮಾಡುವುದಿಲ್ಲ.''

ದ್ವಿತೀಯ ತೃತೀಯ ಪಾದಾದಿ (ಕಾವ್ಯಾದ. ೩-೨೩)

ಹೇಮಾಂಬುಜವನದಿಂ ಲತಿ । ಕಾ ಮಂಜರಿಯಿಂದೆ ಸೊಗಯಿಸಿಪ್ಪಾ ವನಮಂ ।
ಕಾಮಂ ಕೊಟ್ಟಪನೆನುತಂ । ಕಾಮುಕಜನವೈದೆ ತೊಱೆದುದಂದಾ ಕ್ಷಣದೊಳ್ ॥ (೨೪)

''ಹೊಂದಾವರೆಯ ಕೊಳದಿಂದ, ಬಳ್ಳಿಹೊದರುಗಳಿಂದ ಶೋಭಿಸುವ ವನವನ್ನು ಮನ್ಮಥನು ಕೊಡುತ್ತಾನೆ ಎನ್ನುತ್ತಾ ಕಾಮುಕರು ಆ ಕ್ಷಣದಲ್ಲಿಯೇ ಅದನ್ನು ತೊರೆದರು.''

ದ್ವಿತೀಯ ಚತುರ್ಥಪಾದಾದಿ (ಕಾವ್ಯಾದ. ೩-೨೪)

ಊದುವ ತಣ್ಣೆಲರಿಂದಂ । ಕಾದಂಬಸಮೇತ ಸರಸಿಜಾಕಾರದಿಂ ಚ ।
ಲ್ವಾದ ವನದೊಳ್ ಮನೋಜಂ । ಕಾದಂಬನಿತೆಯರೊಳೊಲ್ದು ಕೂಡುವ ವಿಟರಂ (?) ॥ (೨೫)

ಅಭಿಪ್ರಾಯ ಸ್ಪಷ್ಟವಿಲ್ಲ. ೪ನೆಯ ಪಾದ ''ಕಾದಂ ಬ(ವ)ನಿತೆಯರೊಳೊಲ್ದು....'' ಎಂದಿದ್ದಿರಬಹುದು.[2]

ತೃತೀಯ ಚತುರ್ಥ ಪಾದಾದಿ (ಕಾವ್ಯಾದ. ೩-೨೫)

ಪದ್ಯ ತ್ರುಟಿತವಾಗಿದೆ.

ಪ್ರಥಮ ದ್ವಿತೀಯ ತೃತೀಯ ಪಾದಾದಿ (ಕಾವ್ಯಾದ. ೩–೨೬)

ದಾನವಚಕ್ರೇಶನನಿಂ । ದಾನವನಂ ಕೊಲ್ವೆನೆಂದು ಕೋಪಂ ಮಿಗೆ ಬಂ ।
ದಾ ನವಜಲದಸಮಧ್ವನಿ । ತಾನೊದವಲ್ಲುಡಿದನಾಗಳಂಬುಜನೇತ್ರಂ ॥ (೨೭)

''ವಿಷ್ಣು (ಕೃಷ್ಣನು) ರಾಕ್ಷಸರಾಜನನ್ನು, 'ಇಂದು ನಾನು ಅವನನ್ನು ಕೊಲ್ಲುತ್ತೇನೆ' ಎಂದು ಮಿಗಿಲಾದ ಕೋಪದಿಂದ ಬಂದು ಗುಡುಗಿನಂತೆ ಗರ್ಜಿಸಿ ಮುರಿದಿಕ್ಕಿದನು.''

ಪ್ರಥಮ ತೃತೀಯ ಚತುರ್ಥಪಾದಾದಿ (ಕಾವ್ಯಾದ. ೩–೨೭)

ರಾಗಂ ಪುಟ್ಟಿತ್ತು ಜನ । ಕ್ಕಾಗಂ ಮಧು ಬಂದ ದಿನದೊಳೆಳಲತೆವನಮಂ ।
ರಾಗಂ ಮಿಕ್ಕಂಬುಜಪದ । ರಾಗಮನೀಕ್ಷಿಸೆ ಸರೋರುಹಾಯತನೇತ್ರೇ ॥ (೨೮)

''ವಿಶಾಲವಾದ ತಾವರೆಗಣ್ಣುವಳೇ, ವಸಂತೋದಯದ ದಿನದಲ್ಲಿ ಎಳಲತೆಯ ವನವನ್ನೂ ರಾಗಾತಿಶಯದ ತಾವರೆಯ ಸೊಬಗನ್ನೂ ನೋಡಲಾಗಿ ಜನಕ್ಕೆ ಪ್ರೀತಿ ಹುಟ್ಟಿತು.''

ದ್ವಿತೀಯ ತೃತೀಯ ಚತುರ್ಥಪಾದಾದಿ (ಕಾವ್ಯಾದ. ೩-೨೮)

ನೀರಂ ನೋಡಲ್ಕೆಂದು ನಿ । ವಾರಣಮಪ್ಪೊಂದಗುರ್ವುವಡೆದೊಡ್ಡಿರಲಾ ।
ವಾರಣ ಸಂತತಿಗಳ್ ತಾ । ವಾ ರಣದೊಳ್ ಕಣೆಯಗುರ್ವುವಡೆದತ್ತಾಗಳ್ ॥ (೨೯)

''ನೀರನ್ನು ನೋಡುವುದಕ್ಕೆಂದು ತಡೆಯಾಗುವ ಒಂದು ಬೆದರಿಕೆಯನ್ನೊಡ್ಡಿರಲು, ಆ ಆನೆಗಳ ಗುಂಪು, ಆಗ ಆ ಯುದ್ಧದಲ್ಲಿ ಬಾಣಗಳ ಭೀಕರತೆಗೆ ಗುರಿಯಾಯಿತು.''

ಪಾದ ಚತುಷ್ಟಯಾದಿ (ಕಾವ್ಯಾದ. ೩-೨೯)

ಹಾರಂ ವಕ್ಷೋಜದೊಳ್ ಕಂಗೊಳಿಸಿ ಮೆಱೆಯೆ ನೀಲೋತ್ಪಲಾಕ್ಷಿದ್ವಯಾವ್ಯಾ
ಹಾರಂ ತಾನೇ ನಿಪುಷ್ಪಧ್ವನಿಯ[ನಿ]ಳಿಸಲೊಂದಂದದಿಂ ತೋರ್ಪುದೊಂದಾ
ಕಾರಂ ಕಂದರ್ಪಬಾಣಕ್ಕೆಡೆಯೆನಿಸಿ ಲತಾತನ್ವಿ ವಪ್ಪಲ್ಲಿ ನೋಡ
ಲ್ಕಾರಂ ಸಾರಲ್ಕೆ ಪಕ್ಕಾಗಿಸ[ಳ]ವಳೆನುತಂ ನೋಡಿದಂ ಮಾಧವಾಂಕಂ ॥ (೩೦)

ಪದ್ಯದ ಆಶಯ ಕೆಲಮಟ್ಟಿಗೆ ಅಸ್ಪಷ್ಟ. 'ಕಾವ್ಯಾದರ್ಶ'ದ ಲಕ್ಷಣವನ್ನು ಕರ್ತೃ ಸರಿಯಾಗಿ ಗ್ರಹಿಸಿಲ್ಲ. ಪದ್ಯದ ೪ ಪಾದಗಳಲ್ಲಿಯೂ ಆವೃತ್ತಿಗೊಳ್ಳುವ ಪದ ಅಥವಾ ಪದಭಾಗ ಸಮಾನವಾಗಿರಬೇಕಾಗಿದ್ದು, ಇಲ್ಲಿ ಹಾಗಿಲ್ಲ. ಮಾಧವ ತನ್ನ ಹೆಸರು ಬರುವಂತೆ ಈ ಲಕ್ಷ್ಯಪದ್ಯ ರಚಿಸಿರುವುದು ಒಂದು ವಿಶೇಷ.

೩. ವಿಜಾತೀಯ ಪಾದಾದಿ ವ್ಯಪೇತಯಮಕಗಳು :

ಪಾದಗಳು ೧-೨, ೩-೪ರಲ್ಲಿ ಸಾಮ್ಯ (ಕಾವ್ಯಾದ. ೩-೩೦)

ತಾ[ನಂ]ದೆಚ್ಚನಿಟ್ಟ ಸಂ । ತಾನಂ ಮಿಥವುಡುಗಲಂಗಜಂ ಮುನಿವಡೆನು ।
ತ್ತಾನಂದಂ ಮಿಗೆ ಕೂಡಿ । ದರ್ಾ ನಂದನಘನದೊಳಾಳೆ ದಂಪತಿಯೂಥಂ ॥ (೩೧)

''ತಾನು ಅಂದು ಪ್ರಯೋಗಿಸಿದ ಸಂತಾನಪುಷ್ಪವು ನಿಸ್ಸತ್ವವಾಗಲು, ಇದರಿಂದ ಮನ್ಮಥನು ಕೆರಳಿ ಬಾಣ ಪ್ರಯೋಗಮಾಡಿದನು–ಎನ್ನುತ್ತ ಆನಂದದಿಂದ ಗಂಡುಹೆಣ್ಣಾನೆಗಳ ಜೋಡಿ ಆ ತೋಟದ ದಟ್ಟತೆಯಲ್ಲಿ ಸೇರಿ ಹೋಗಲು....''

ಪದ್ಯ ಸಲಕ್ಷಣವಾಗಿಲ್ಲ; ೩–೪ರಲ್ಲಿ ಪಾದಾದಿನಿಯಮ ತಪ್ಪಿಹೋಗಿದೆ. ಇದು ಕರ್ತೃವಿನ ಗ್ರಹಿಕೆಯ ತಪ್ಪೇ.

ಪಾದಗಳು ೧-೩, ೨-೪ರಲ್ಲಿ ಸಾಮ್ಯ (ಕಾವ್ಯಾದ. ೩-೩೧)

ಬಾಳಂ ಕೊಂಡೆಯ್ದಿ ಬಂದೊಡ್ಡಿದ ರಿಪುಬಲವಾರಾಶಿಯೊಳ್ತೊೞಱುವಾ ಕ
ಲ್ಲೋಲಂಬೊಲ್ಪಪ್ಪ ವಾಜಿವ್ರಜಮನಿರದೆ ಕೊಂದಿಕ್ಕಿ ನೋಡುತ್ತಲೀ[ಗಳ್]

ಬಾಳಂ ಬಾಹಾಬಳಂ ಕೈಮಿಗೆ ಕೆಡಪಿ ಬಲಾಧೀಶನಂ ಕಂಡನಂತೀ
ಲೋಲಂ ಪೋ ಪೋಗಲೆಂದಂದಿದಿರನದಿರದೇಂ ಬಂದನೋ ವೀರನೊರ್ವಂ ॥ (೩೨)

''ಕತ್ತಿಯನ್ನು ಹಿಡಿದು ಹೊರಟುಬಂದು, ಒಡ್ಡಿದ ಶತ್ರುಸಾಗರದಲ್ಲಿ ತೋರುವ ಅಲೆಗಳಂತೆ ಏರಿಬರುವ ಕುದುರೆಗಳ ಸೈನ್ಯವನ್ನು ತಡೆಯದೆ ಕೊಂದುಹಾಕಿ, ಈಗ ಈ ಲೋಲನಾದ ಬಾಲಕನು, ಬಾಹುಬಲವು ಮಿತಿಮೀರಲು, ಸೇನಾಧಿಪತಿಯನ್ನು ಕೆಡಹಿ ಎದುರು ಕಾಣಿಸಿಕೊಂಡಿದ್ದಾನೆ. ಆಗ ವೀರನೊಬ್ಬನು 'ಹೋಗಬೇಡ, ಹೋಗಬೇಡ' ಎಂದು ಹೆದರದೆ ಅವನ ಎದುರಿಗೆ ಬಂದನು (?).''

ಪಾದಗಳು ೧-೪, ೨-೩ರಲ್ಲಿ ಸಾಮ್ಯ (ಕಾವ್ಯಾದ. ೩-೩೨)

ಬಂದಂ ಮಜ್ಜೀವಿತಾಧೀಶ್ವರನೆನುತೆ ಮಹೋತ್ಸಾಹದಿಂ ಪೇಳಲಂದಾ
ನಂದಂ ಕೈಗಣ್ಮೆ ಪೆರ್ಚಿದನುನಯುದೊದವಂ ತಾಳ್ದಿ[ರಲ್ ಮು]ಚ್ಚುತಂ ತಾ
ನಂದಂಭೋಜಾಕ್ಷಿ ರೋಮಾಂಚದಿನೊಗೆದ ಲತಾಂಗಂ ಮನೋಜಾತಮಾಯ್ತಿಂ
ಬಂದಂ ಚೆಲ್ವಾಗೆ ತನ್ನಾಳಿಗೆ ತೊಡವುಗಳಂ ಕೊಟ್ಟಳಾಶ್ಚರ್ಯದಿಂದಂ ॥ (೩೩)

''ಅಂದು 'ನನ್ನ ಜೀವಿತೇಶ್ವರನು ಬಂದನು' ಎಂಬುದಾಗಿ ಬಹು ಸಂಭ್ರಮದಿಂದ ಹೇಳಲಾಗಿ, ಆನಂದವು ಉಕ್ಕೇರಿ, ಅನುನಯದ ಅತಿಶಯತೆಯಿಂದ ಇದ್ದು, ಮೆಚ್ಚುತ್ತ, ಆ ತಾವರೆಗಣ್ಣಿನ ಚೆಲುವೆ ರೋಮಾಂಚನದಿಂದ ಉಂಟಾದ ಬಳ್ಳಿಯೊಡಲು ಅನುರಾಗದಿಂದ ತುಂಬಿತು ಎನ್ನುವ ರೀತಿ ಸೊಗಸಲು, ತನ್ನ ಸಖಿಗೆ ಆಭರಣಗಳನ್ನು ಆಶ್ಚರ್ಯದಿಂದ ಕಾಣಿಕೆ ಕೊಟ್ಟಳು.''

ಮಾಧವನು ಮುಂದಿನ ಘಟ್ಟದಲ್ಲಿ 'ಕಾವ್ಯಾದರ್ಶ'ವನ್ನು ಅನುಸರಿಸಿ(೩-೩೩), ಅವ್ಯಪೇತ-ವ್ಯಪೇತಾತ್ಮಕ ಯಮಕಭೇದಗಳನ್ನೂ ಬಳಿಕ ಪಾದಾವೃತ್ತಿ ಯಮಕಗಳನ್ನೂ ನಿರೂಪಿಸಿದ್ದಾನೆ. ಈ ಬಗ್ಗೆ ಆತನ ಸ್ಪಷ್ಟ ಸೂಚನೆ ಹೀಗೆ:

ಪ್ರಕಟಿಸಿದೆನಿದಂ ಸದ್ರಾಗದಿಂದಂ ವ್ಯಪೇತಾ
ತ್ಮಕ ಯಮಕಮನಾನಿನ್ನವ್ಯಪೇ[ತವ್ಯಪೇತಾ]
ತ್ಮಕ ಯಮಕವಿಭೇದವ್ರಾತಮಂ ಲೀಲೆಯಿಂ ಭಾ
ವಕರಱಿವುದು ಪಾದಾವೃತ್ತಿಯಂ ಮುಂದೆ ಪೇಳ್ವೆಂ ॥ (೩೪)

ಹೀಗಿದ್ದರೂ ಮುಂದೆ ಕ್ರಮವಾಗಿ ಕಾಣಿಸಿಕೊಳ್ಳುವ ಲಕ್ಷ್ಯಪದ್ಯಗಳು 'ಕಾವ್ಯಾದರ್ಶ'ದ ಲಕ್ಷ್ಯ ಪದ್ಯಗಳನ್ನು (೩-೩೪~೫೦) ಹೋಲುವುದಿಲ್ಲ ಎನ್ನುವುದನ್ನು ಗಮನಿಸಿದಾಗ, ಮಾಧವನು ಮೂಲವನ್ನು ಹಾಗೇಕೆ ಅರ್ಥಮಾಡಿಕೊಂಡನೆಂಬುದು ತಿಳಿಯುವುದಿಲ್ಲ. ನಡನಡುವೆ ಕೆಲವು ಪದ್ಯಗಳು ಲುಪ್ತವಾಗಿರುವ ಸಾಧ್ಯತೆಯೂ ಇದೆ.

೩೫ ರಿಂದ ೩೭ ರವರೆಗೆ ಪದ್ಯಗಳು ಕ್ರಮವಾಗಿ ಪಾದ ಚತುಷ್ಟಯಾಂತ ಅವ್ಯಪೇತ, ಪಾದ ಚತುಷ್ಟಯಾದಿ–ಪಾದಚತುಷ್ಟಯಾಂತ(?) ಅವ್ಯಪೇತ, ಪಾದಚತುಷ್ಟಯಾದಿ-ಮಧ್ಯ-ಅಂತ್ಯ ಅವ್ಯಪೇತ ಯಮಕಭೇದಗಳ ಲಕ್ಷ್ಯಗಳಾಗಿವೆ. ಇವುಗಳಲ್ಲಿ ಮೊದಲೆರಡರ ಅರ್ಥ ತಕ್ಕಮಟ್ಟಿಗೆ ಗ್ರಾಹ್ಯ; ಕೊನೆಯದರಲ್ಲಿ ಪಾಠದೋಷಗಳಿರುವಂತಿದೆಯಾದ್ದರಿಂದ ಅರ್ಥಕ್ಲೇಶವುಂಟು.[3] ೩೮ ಮತ್ತು ೩೯ರಲ್ಲಿ ಅವ್ಯಪೇತ-ವ್ಯಪೇತ ಯಮಕ ಲಕ್ಷಣವಿದ್ದು, ಇವು ಕ್ರಮವಾಗಿ 'ಕಾವ್ಯಾದರ್ಶ'ದ ೩-೩೬ ಮತ್ತು ೩-೪೨ರ ಭೇದಗಳಿಗೆ ಕೇವಲ ಸದೃಶವಾಗಿವೆ ಎನ್ನಬಹುದು.

ಪಾದ ಚತುಷ್ಟಯಾಂತ ಅವ್ಯಪೇತ

ನೆಗಳ್ದಂಭೋರುಹಮಿತ್ರನಸ್ತಗಿರಿಯಂ ತಾನೈದಲುಂ ನೈ[ದ]ಲುಂ
ಸೊಗಸಂ ಬೀಱಲನಂಗಚಾಪಮಿದಿರೊಳ್ ಮಿಕ್ಕೇಳಲುಂ ಕೇಳಲುಂ
ಬಗೆಗೆಟ್ಟಾಳೆ ವಿಯೋಗಿ ತೀವ್ರಕಿರಣಂ ಭೂಚಕ್ರದಿಂ ಚಕ್ರದಿಂ
ದಗಲಲ್ಮಾಡಿದನೈಂದ್ರಿಯೊಳ್ ಪಡೆದು ತಾರಾರಾಜಿಸಂ ರಾಜಿಸಂ ॥ (೩೫)

ಪಾದ ಚತುಷ್ಟಯಾದಿ–ಅಂತ್ಯ ಅವ್ಯಪೇತ

ಕೂರಂ ಕೂರಂಬುದೊಟ್ಟಂ ಮದನನೆನಗ[ವಂ] ನಲ್ಲನೇನಲ್ಲನೇ ತಾಂ
ಬಾರಂ ಬಾ ರಮ್ಯಲೋಲೇಕ್ಷಣೆ ಪಿಡಿದವನಂ ತಪ್ಪಿದೆಂ ತಪ್ಪಿದೆಂದುಂ
ಸಾರಂ ಸಾರಂಗನೇತ್ರಂ ಪುಸಿದ ಪುಸಿಗೆನುತ್ತಾ[ಗ]ಲುಂ [ತಾಗ]ಲುಂ ಸಿಂ
ದೂರಂ ದೂರಂಬೊಲ್ಕೈದಂಬಿನೊಳೆ ಬರ್ಹವುಂ ಸೋಕಲಾಪಂ ಕಲಾಪಂ ॥ (೩೬)

ಪಾದ ಚತುಷ್ಟಯಾದಿ–ಮಧ್ಯ–ಅಂತ್ಯ ಅವ್ಯಪೇತ

ಧಾವಂ ಧಾವಂದಿಗಂ ಬಿತ್ತರಿಸಿ ತರಿಸಿ ಸಂಭೋಗದೊಳ್ ಭೋಗದೊಳ್ಪಂ
ಕಾವಂ ಕಾವಂತೆ ಕೊಟ್ಟಂ ನಱುದೆನಱದೆ ಸೌಭಾಗ್ಯಮುಂ ಭಾಗ್ಯಮುಂ ಸಂ
ದೀವಂ ದೀನಂಬೊಲೆನ್ನಂ ಕೆಳದಿ ಕೆಳದಿ[ಗ]ಯ್ತಂದೊಡಂ ತಂದೊಡಂ ಸೋ
ಲ್ಗಾವಂಗಾವಂಗೆ ಪೋಪೋ ಮಧುರಮಧುರ[ಮಾ]ಲಂಬನಕ್ಕಂ ಬನಕ್ಕಂ ॥ (೩೭)

ಪಾದ ಚತುಷ್ಟಯಾದಿ ಅವ್ಯಪೇತ- ವ್ಯಪೇತ('ಕಾವ್ಯಾದರ್ಶ' ೩–೩೬)ದ ಲಕ್ಷಣಕ್ಕೆ ಪ್ರತಿ ಪಾದದಲ್ಲಿಯೂ ಆದಿಯಲ್ಲಿ ''ಬಾಳಂ ಬಾಳಂ'' ಎಂಬ ಯಮಕವರ್ಣಗಳ ಆವೃತ್ತಿ ಸರಿಯಾಗಿದ್ದರೂ(೩೮), ಪಾದ ಚತುಷ್ಟಯಾಂತ ಅವ್ಯಪೇತ–ವ್ಯಪೇತ ('ಕಾವ್ಯಾದರ್ಶ' ೪೨)ದ ಲಕ್ಷಣಕ್ಕೆ ಪ್ರತಿಪಾದದಲ್ಲಿಯೂ ಅಂತ್ಯದಲ್ಲಿ ''ಕರಂ ಕರಂ'' ಎಂಬ ಯಮಕವರ್ಣಗಳ ಆವೃತ್ತಿ ಸರಿಯಾಗಿದ್ದರೂ (೩೯) ಲಕ್ಷ್ಯಪದ್ಯಗಳು ದೋಷಯುಕ್ತವಾಗಿರುವುದರಿಂದ ಅವನ್ನಿಲ್ಲಿ ಉದ್ಧರಿಸಿಲ್ಲ. ಹೀಗೆಯೇ ಮುಂದಿನ ಪದ್ಯ (೪೦)ದಲ್ಲಿ ಅಂತ್ಯಾದಿ ಯಮಕ ಲಕ್ಷಣ ತೋರಿದರೂ, ಅದರ ಮುಂದಿನ ಪದ್ಯ (೪೧)ದಲ್ಲಿ ಮಧ್ಯಯಮಕ ಲಕ್ಷಣ ತೋರಿದರೂ, 'ಕಾವ್ಯಾದರ್ಶ'ದ ಲಕ್ಷ್ಯಪದ್ಯಗಳೊಂದಿಗೆ ಅವುಗಳಿಗೆ ಸರಿಯಾದ ಹೋಲಿಕೆ ತೋರುವುದಿಲ್ಲವಾದ್ದರಿಂದಲೂ, ಅಭಿಪ್ರಾಯವಿಶದತೆಯಿಲ್ಲದಿರುವುದರಿಂದಲೂ, ಅವನ್ನೂ ಇಲ್ಲಿ ಉದ್ಧರಿಸಿಲ್ಲ. ಆ ಮುಂದಿನ ಪದ್ಯದ (೪೨) ರಚನೆಯಲ್ಲಿಯಾದರೋ ವಿವಿಧ ಯಮಕಲಕ್ಷಣ ಬೆರತಂತಿದ್ದು, 'ಕಾವ್ಯಾದರ್ಶ'ದ ಪದ್ಯದಲ್ಲಿ ಯಾವುದಾದರೂ ಒಂದರ ಜೊತೆಗೆ ಇಲ್ಲಿಯೂ ಸಾದೃಶ್ಯ ತೋರುವುದಿಲ್ಲ. ಆದ್ದರಿಂದ ಅದನ್ನೂ ಇಲ್ಲಿ ಕೈಬಿಟ್ಟಿದೆ.

ಪಾದಮಧ್ಯ ಅವ್ಯಪೇತ (ಕಾವ್ಯಾದ. ೩-೩೯)

ತೋರದ ರದಪತ್ರದ ವಿ। ಸ್ತಾರದ ರದಮುಂ ಕೃಪಾಣದಿಂ ಪೊಯ್ದುಳಿವಿಂ ।
ಪಾರದ ರದಮುಂ ಯುದ್ಧ ವಿ। ಶಾರದರದನಂದು ಮುಚ್ಚಿ ಪೊಯ್ದು ನಿರೂಪಂ ॥ (೪೩)

ಪದ್ಯ ಸಲಕ್ಷಣ; ಆದರೆ ಅಭಿಪ್ರಾಯ ಸ್ಪಷ್ಟವಿಲ್ಲ.

ಪಾದಾಂತ ವ್ಯಪೇತ ('ಕಾವ್ಯಾದರ್ಶ'ದಲ್ಲಿ ಸಾದೃಶ್ಯವಿಲ್ಲ; ಆದರೆ ಹೋಲಿಸಿ, ಭಾಮಹನ 'ಕಾವ್ಯಾಲಂಕಾರ': ಸಮಸ್ತಪಾದ, ೨–೧೫)

ನಾನಾ ಮುನಿಪಾವನನಮುಂ । ಮಾನಿತ ಸಕಲದ್ವಿಜೌಘಸಂಜೀವನಮುಂ ।
ಮೀನಾಂಕಮನಾ ವನಮುಂ । ಭೂನಾಥಂ ನೋಡಿ ಕಂಡನತ್ತಾ ವನಮುಂ ॥ (೪೪)

''ನಾನಾ ಮುನಿಗಳಿಂದ ಪಾವನವಾದ್ದನ್ನು, ಮಾನ್ಯರಾದ ಸಕಲದ್ವಿಜರ ಸಮೂಹಕ್ಕೆ ಸಂಜೀವನಪ್ರಾಯವಾದುದನ್ನು, ಮೀನಚಿಹ್ನೆಯುಳ್ಳ ಆ ವನವನ್ನು, ಭೂನಾಥನು ನೋಡಿ ತಿಳಿದನು (?)''.

ಪಾದಾಂತ ವ್ಯಪೇತ (ಕಾವ್ಯಾದ. ಸಾದೃಶ್ಯವಿಲ್ಲ)

ತಳಿರ್ವನೆಗಳ್ ನೀಹಾರಂ । ಬಳಸಿದ ಸಸಿಕಾಂತದರ್ಪಣಂ ಕಂದರ್ಪಂ ।
ಮುಳಿಯಲ್ ಮುಳಿದುವು ದರ್ಪಂ । ತೊಲಗಿದುದೆನಗೇಕೆ ಪೇಳದೇಂ ನೀಹಾರಂ । (೪೫)

''ಚಿಗುರಿನ ಮನೆಗಳು, ಮಂಜುಬಿದ್ದ ಚಂದ್ರಕಾಂತದ ಕನ್ನಡಿ ಇವು ಮನ್ಮಥ ಮುನಿಯಲಾಗಿ ತಾವೂ ಮುನಿದುವು; ನನಗೇಕೆ ಮದವುಡುಗಿತು? ಹೇಳು, ಅದೇನು ನೀಹಾರ (?)''.

ಪಾದಾಂತ ವ್ಯಪೇತ (ಕಾವ್ಯಾದ. ಸಾದೃಶ್ಯವಿಲ್ಲ)

ಅಳಿಯಂದದೆ ಕುಂತಲಮಂ। ತಳಿರಂದದೆ ನಾಡೆ ಸೊಗಯಿಸಿಕ್ಕುಂ ತಲಮಂ।
ಸುಲಲಿತಮಾ ಸಂಪದಮಂ। ಚಳಲತೆಯಿಂತಬ್ಬರಂತಿರೆನೆ ಸಂಪದಮಂ॥ (೪೬)

ಪದ್ಯ ಸಲಕ್ಷಣವಾಗಿದೆ; ಅಭಿಪ್ರಾಯ ಸ್ಪಷ್ಟವಿಲ್ಲ. ಕೊನೆಯ ಪಾದ ಅಶುದ್ಧ, ಮುಂದಿನದರಲ್ಲಿ.

ಪಾದಾಂತ ವ್ಯಪೇತ (ಕಾವ್ಯಾದ. ಸಾದೃಶ್ಯವಿಲ್ಲ)

ಲಲನೆಯಿವಳ್ ಕಂಗಳ ಮಂ। ಗಳ ಲಕ್ಷ್ಮಿಯ ತೆಜಿದೆ ಸುಳಿದಳಂಗಜಯಾನಂ।
ಸುಳಿವಂದದಿ ಕಂಗಳ ಮಂ। ಗಳಮಂಬಳನೆಸೆದುಡಂಗಜಯಾನಂ॥ (೪೭)

೪. ವಿಶಿಷ್ಟ ನಾಮಾಂತರದ ಯಮಕಗಳು (ಸಮಸ್ತಪಾದಜ ಯಮಕಗಳು) :

ನಿರ್ದಿಷ್ಟಸೂಚನೆಯಿಲ್ಲದಿದ್ದರೂ ಪ.೪೮ ಮತ್ತು ಆ ಮುಂದಿನ ಪದ್ಯಗಳು 'ಕಾವ್ಯಾದರ್ಶ'ದ ಸಮಸ್ತ ಪಾದಜಗಳಾದ ಯಮಕಭೇದಗಳ ಸ್ವರೂಪವನ್ನು ಅನುವಾದಿಸಿ ತೋರಿಸುವ ಪ್ರಯತ್ನವಾಗಿದೆಯೆಂದು ಸುಲಭವಾಗಿ ಗ್ರಹಿಸಬಹುದು. 'ಸಂದಷ್ಟ'ವನ್ನು ಏಕೆ ಬಿಟ್ಟಿದೆಯೋ ತಿಳಿಯದು. ಆದರೆ ಈ ಮುಂದೆ ತೋರಿಸಿರುವಂತೆ ಸಮುದ್ಗಯಮಕಭೇದಗಳನ್ನು ನಿರೂಪಿಸಿದೆ.

ವ್ಯವಹಿತ (ವ್ಯಪೇತ) ಸಮುದ್ಗ (ಕಾವ್ಯಾದ. ೩–೫೪)

ಸುರತರು ಚಿರ[ಮತಿ]ಮಧುರಾ। ಗರಂಜಿತಂ ಭ್ರಮರ ಹಿತಮನಂ ತಾನಾಗಲ್।
ಸುರತ ರುಚಿರಮ[ತಿ]ಮಧುರಾ। ಗರಂಜಿತಂ ಭ್ರಮರಹಿತಮನಂ ತಾನಾಗಲ್॥ (೪೮)

''ಕಲ್ಪವೃಕ್ಷ ಯಾವಾಗಲೂ ಅಧಿಕವಾಗಿ ಮಧುವಿನ ರಾಗದಿಂದ ರಂಜಿತವೂ ಭ್ರಮರಗಳಿಗೆ ಹಿತಮನಸ್ಕವೂ ಆದರೆ, ಆಗ ಸುರತದಿಂದ ಮನೋಹರವೂ ಅಧಿಕವಾಗಿ ವಸಂತದ ಸೊಬಗಿನಿಂದ ರಂಜಿತವೂ ಭ್ರಮರಹಿತವೂ ಆದ ಮನಸ್ಸು (ದೇವಲೋಕದ ವಿರಹಿಗಳಿಗಿರುತ್ತದೆ).''.

ವ್ಯವಹಿತ (ವ್ಯಪೇತ) ಸಮುದ್ಗ (ಕಾವ್ಯಾದ. ೩–೫೮)

ಭ್ರಮರ ಸಮಾಕುಲ[ಶರಣಂ?]। ಸಮುದಿತಮೃದುಪವನವಿಹರಣಸ್ಥಾನಂ ವಿ।
ಭ್ರಮರಸಮಾಕುಲಶರಣಂ। ಕಮಲಾಕರಮೆಸೆದುದಮಳಹಂಸಸಮೇತಂ॥ (೪೯)

''ದುಂಬಿಗಳ ಕೋಲಾಹಲದ ನೆಲೆಯೂ ಬೀಸುವ ಮೆಲ್ಗಾಳಿಯ ಸುಳಿದಾಟದ ಎಡೆಯೂ ಆದ ತಾವರೆಗೊಳವು ಕ್ಷೋಭೆಗೊಂಡ ನೀರಿನಿಂದ ವ್ಯಾಕುಲಗೊಂಡವರಿಗೆ ವಿಶ್ರಾಂತಿಸ್ಥಾನವೂ ಆಗಿ ಒಳ್ಳೆಯ ಹಂಸಗಳ ಸಹಿತವಾಗಿ ಶೋಭಿಸಿತು.''

ವ್ಯವಹಿತ (ವ್ಯಪೇತ) ಸಮುದ್ಗ (ಕಾವ್ಯಾದ. ೩–೬೧)

ಕಡಲೇನೆಸೆದುದೊ ಕಣ್ಗಂ। ದುಡುಪಾತಿಶರಂಗ ಮಹಿಮುಕರ ವಿಭ್ರಮ[ಮಾ]।
ಪಡಿಯೆನಲೆಸೆದುದೊ ಘನಪಥ। [ದು]ಡುಪಾತಿತರಂಗಮಹಿಮುಕರ ವಿಭ್ರಮ[ಮಾ]॥ (೫೦)

''ಕಣ್ಣಿಗೆ ಅದೊಂದು ಚಂದ್ರನ ಮಿಗಿಲಾದ ಅಲೆಗಳ ವೈಭವದ ಕಿರಣಗಳ ಬೆಡಗುಳ್ಳ ಆ ಕಡಲು ಏನು ಶೋಭಿಸಿತೋ! ಅದಕ್ಕೆ ಪ್ರತಿಯೆನ್ನುವಂತೆ ಆ ಆಕಾಶದಲ್ಲಿ ಚಂದ್ರನ ಮಿಗಿಲಾದ ಅಲೆಗಳ ವೈಭವದ ಕಿರಣಗಳ ಬೆಡಗು!''

ಅವ್ಯವಹಿತ (ಅವ್ಯಪೇತ) ಸಮುದ್ಗ (ಕಾವ್ಯಾದ. ೩–೬೨)

ಸೀಮಂತಿನಿ ಪಣ್ದಿಱಿಯಲ್ಕೆಂ[ದಂ]ದಾ। ರಾಮಾಂತದೆ ಸತ್ಯಮದಾಯ್ತು ಕೇಳಲ್।
ಕಾಮಾತು ರಂಭಾವನದಲ್ಲಿ ಕಂಡಂ। ಕಾಮಾತುರಂ ಭಾವನದಲ್ಲಿ ಕಂಡಂ॥ (೫೧)

''ಸುಂದರಿ ಹಣ್ಣು ಕೀಳಲೆಂದು ಅಂದು ಉದ್ಯಾನದ ಸೆರಗಿನಲ್ಲಿ ಬಂದು ಪ್ರಶ್ನಿಸಲು, ಅದು ನಿಶ್ಚಯವಾಯಿತು. ಕಾಮುಕನು ಅವಳನ್ನು ಬಾಳೆಯ ತೋಟದಲ್ಲಿ ನೋಡಿದನು. ಆ ಕಾಮುಕನು ಊಹಿಸಿಯೇ ಅವಳನ್ನು ಗುರುತಿಸಿದನು(?).''

ಅವ್ಯವಹಿತ (ಅವ್ಯಪೇತ) ಸಮುದ್ಗ (ಕಾವ್ಯಾದ. ೩-೫೨)

ಮತ್ತಾಳಿ ಕೇಳೀವನದಲ್ಲಿ ಕಂಡಂ। ಮತ್ತಾಳಿ ಕೇಳೀವನದಲ್ಲಿ ಕಂಡಂ।
ಚಿತ್ತೋದ್ಭವಂಗಾದುದತೀವರಮ್ಯಂ। ಪೆತ್ತಿರ್ದ ಬೀಡಿಂ ತದತೀವರಮ್ಯಂ॥ (೫೨)

''ಮತ್ತೆ, ಸಖೀ ಕೇಳು, ಈ ವನದಲ್ಲಿ ಅವನು ಕಂಡನು; ಮದಿಸಿದ ದುಂಬಿಗಳ ಈ ಕ್ರೀಡಾವನದಲ್ಲಿ ಕಂಡನು. ಇದು ಮನ್ಮಥನಿಗೆ ಬಹು ಮನೋಹರವಾಯಿತು. ತಾನಾಗಲೇ ಪಡೆದಿದ್ದ ಬೀಡಿಗಿಂತ ಅದು ಬಹುರಮಣೀಯವಾದುದಾಗಿದೆ.'' (೩, ೪ರ ಪಾದಾಂತ ಯಮಕ ಅನುದ್ದೇಶಿತ.)

ಅವ್ಯವಹಿತ (ಅವ್ಯಪೇತ) ಸಮುದ್ಗ (ಕಾವ್ಯಾದ. ೩-೫೫)

ಮಲ್ಲೀವನಂ ಕಾಮಿನಿಕಾಯುತಂ ನಂ। ಮಲ್ಲೀವನಂ ಕಾಮಿನಿಕಾಯುತಂ ನಂ।
ಪಿಲ್ಲೆಂಬಿನಂ ಕಾಯಮುದಾಳಿ ಮುಂ ತ। ಣ್ಪಿಲ್ಲೆಂಬಿನಂ ಕಾಯಮುದಾಳಿ ಮುಂತಂ (?)॥ (೫೩)

''ಸಖಿ(=ಆಳಿ), ಮಲ್ಲಿಗೆವನ ಕಾಮಿನಿಯರಿಗೆ ಆಶ್ರಯವಾದುದು; ನಮ್ಮಲ್ಲಿ ಈ ವನ ಕಾಮಿಗಳ ಗುಂಪಿಗೆ ನೆಲೆಯಾದುದು (ಕಾಮಿ + ನಿಕಾಯತಂ?); ನಣ್ಪು (ಸ್ನೇಹ) ಇಲ್ಲ ಎನ್ನುವಂತೆ ಧ್ವನಿಮಾಡುತ್ತಿರುವ ದುಂಬಿಗಳು; ಮೊದಲು ತಣ್ಪು (ತಂಪು) ಇಲ್ಲ ಎನ್ನುವಂತೆ ಈ ದೇಹ—ಹೀಗೆ (ವಿರಹಿಣಿಯಾದ) ನನ್ನ ಪಾಡು.''(?)

ಹೀಗೆ ಸಮುದ್ಗ ಭೇದಗಳಲ್ಲಿ ಕೆಲವನ್ನು ನಿದರ್ಶಿಸಿದ ಮೇಲೆ ಮಾಧವಾಂಕನು ಶ್ಲೋಕಾಭ್ಯಾಸ ಹಾಗೂ ಮಹಾಯಮಕಗಳನ್ನೂ ಸಂಸೃಷ್ಟಿಯನ್ನೂ ಏಕೆ ಹೇಳಿಲ್ಲವೋ; ಹೇಳಿದ್ದು ಲಬ್ಧಹಸ್ತಪ್ರತಿಯಲ್ಲಿ ನಷ್ಟವಾಗಿವೆಯೋ ತಿಳಿಯದು. ಮುಂದೆ 'ಪ್ರತಿಲೋಮಯಮಕ'ವನ್ನು 'ಕಾವ್ಯಾದರ್ಶ'ದ ನಿರೂಪಣೆಗೆ ಅನುಸಾರವಾಗಿ (೩-೭೩) ಹೇಳಲು ತೊಡಗಿ, ಪ್ರತಿಲೋಮತೆಯಿಂದ ಅಕ್ಷರಗಳ ಗುಂಪು ಆವೃತ್ತಿಯಾದರೆ, ಅದು 'ಪ್ರತಿಲೋಮಯಮಕ'ವಾಗುವುದೆಂದೂ, ಅದು ಪಾದ, ಶ್ಲೋಕಾರ್ಧ ಮತ್ತು ಶ್ಲೋಕ ಎಂಬುದಾಗಿ ಮೂರು ತೆರನಾಗಿರುತ್ತದೆಂದೂ ತಿಳಿಸಿದ್ದಾನೆ (೫೪). ಲಕ್ಷ್ಯಪದ್ಯ ದೋಷಯುಕ್ತವಾಗಿದೆ(೫೫).

ಮಾಧವಾಂಕನು ಲಕ್ಷಣ-ಲಕ್ಷ್ಯಗಳ ಮೂಲಕ ಯಮಕಭೇದಗಳನ್ನು ನಿರೂಪಿಸಲು ಸಾಮಾನ್ಯವಾಗಿ ತನಗೆ ಮೂಲಗ್ರಂಥವಾದ ದಂಡಿಯ 'ಕಾವ್ಯಾದರ್ಶ'ವನ್ನೇ ಅನುಸರಿಸಿರುವುದು ನಿಜ; ಬಹುಮಟ್ಟಿಗೆ ಅಲ್ಲಿಯ ಅನುಕ್ರಮವನ್ನೇ ಹಿಡಿದಿರುವುದೂ ನಿಜ. ಆದರೆ ಆತ ಸ್ವತಂತ್ರಿಸಿರುವುದೂ ಪಾದಾಂತಯಮಕಗಳ ಲಕ್ಷ್ಯಗಳ ಮೂಲಕವಾಗಿ ತಿಳಿಯುತ್ತದೆ. ಆತನು ಕೆಲವೆಡೆ ಸಂಗ್ರಹದೃಷ್ಟಿಯಿಂದ ಕೆಲವು ಭೇದಗಳನ್ನು ಲೋಪಿಸಿಯೂ ಇದ್ದಾನೆ. ಆತನ ಲಕ್ಷ್ಯಪದ್ಯಗಳು ಸರಳವಾದವು; ಛಂದೋಬಂಧಗಳು ಶಿಥಿಲ ಸ್ವರೂಪದವಾದರೂ ಹಲವೆಡೆ ಅಭಿಪ್ರಾಯ ವಿಶದತೆಗೆ ಕೊರತೆಯಿಲ್ಲ. ಹಸ್ತಪ್ರತಿ ಶುದ್ಧವಾಗಿದ್ದಿದ್ದರೆ ಪದ್ಯಗಳ ಆಶಯ ಇನ್ನೂ ಸ್ಫುಟವಾಗಿರಬಹುದಾಗಿತ್ತು.

'ಅಪ್ರತಿಮವೀರಚರಿತ' :

''ಯಮಕಂ ಪೌನರುಕ್ತ್ಯೇತು ಸ್ವರವ್ಯಂಜನಯುಗ್ಮಯೋಃ'' ಎಂಬುದಾಗಿ ಪೂರ್ವವಾಕ್ಯವೊಂದನ್ನು ಉದ್ಧರಿಸಿ, ''ಸ್ವರಭೇದವಿಲ್ಲದೆ ಪಲವುಮಕ್ಕರಂಗಳ್ ಎರಡುಂ ಪಾದದೊಳಾದೊಡಂ ನಾಲ್ಕುಂ ಪಾದಂಗಳೊಳಾದೊಡಂ ಮಿತಿಯಾದ ತಾಣದೊಳ್ ಬಳಸಿದರೆಯದು ಯಮಕಮೆನಿಪುದು'' ಎಂಬುದಾಗಿ ಅದಕ್ಕೆ ತಿರುಮಲಾರ್ಯನು ವೃತ್ತಿ ಬರೆದಿದ್ದಾನೆ. ಅವನ ಅಭಿಪ್ರಾಯದಲ್ಲಿ, 'ಪಲವುಮಕ್ಕರಂಗಳ್'ಗೆ ಎರಡಕ್ಕಿಂತ ಹೆಚ್ಚಿನ ಅಕ್ಷರಗಳು ಎಂದರ್ಥ; ಏಕೆಂದರೆ ಎರಡಕ್ಷರಗಳು ಅನಿಯತವಾಗಿ ಆವೃತ್ತಿಗೊಳ್ಳುವುದನ್ನು ಅವನು 'ವೃತ್ತ್ಯನುಪ್ರಾಸ'ವೆಂದು ಕರೆದಿದ್ದಾನೆ. ದಿಟವಾಗಿ ಆತನ ವೃತ್ತ್ಯನುಪ್ರಾಸ ಸಹ ಯಮಕದಲ್ಲಿ ಅಂತರ್ಗತವಾಗಬಹುದಾದ್ದೇ. ಅವನ ಈ ಸಂಬಂಧದ ಲಕ್ಷ್ಯಪದ್ಯ (೨-೧೮)ವನ್ನು ರುದ್ರಟನ 'ಅನಿಯತದೇಶಾವಯವ ಯಮಕ'ದಲ್ಲಿ ಗಣಿಸುವುದು ಶಕ್ಯ.

(i) ತಿರುಮಲಾರ್ಯನು ಒದಗಿಸಿರುವ ಸ್ವಕೃತ ಲಕ್ಷ್ಯಪದ್ಯಗಳಲ್ಲಿ ಮೊದಲನೆಯದು ಪಾದಚತುಷ್ಟಯಾಂತ ಸಜಾತೀಯ ವ್ಯಪೇತಯಮಕ; ಇದಕ್ಕೆ ಸದೃಶವಾದ್ದು ಭಾಮಹ 'ಕಾವ್ಯಾಲಂಕಾರ'ದ 'ಸಮಸ್ತಪಾದ' ಯಮಕ (೨-೧೫). ಆದರೆ ಯಮಕದ ಲಕ್ಷಣವನ್ನಿಲ್ಲಿ ಕಾಣುವುದು ಕಷ್ಟ.

ಪ್ರಕಟ ಕಪಟನಾಟಕನಂ । ಶಕಲಿಸಿ ದಿಗ್ಬಲಿಯನಿತ್ತನತಿ ಖೇಟಕನಂ ।
ಚಕಿತಜನೋತ್ಪಾಟಕನಂ । ಚಿಕದೇವಂ ಜಡಿದು ಜೈಯ್ತ ಜೀಕಾಟಕನಂ ॥ (೨-೧೯)

''ವ್ಯಕ್ತವಾಗಿ ಕಪಟನಾಟಕವಾಡುವವನೂ ಘನವಾದ ಗುರಾಣಿಯುಳ್ಳವನೂ ಗಾಬರಿಗೊಂಡ ಜನರನ್ನು ಸದೆಬಡಿಯುವವನೂ ಆದ ಜೈತಜೀಕಾಟಕನನ್ನು, ಚಿಕದೇವರಾಜನು ಬೆದರಿಸಿ, ತುಂಡರಿಸಿ ದಿಗ್ಬಲಿಗೊಟ್ಟನು.''

(ii) ೧-೨ ಮತ್ತು ೩-೪ನೆಯ ಪಾದಗಳಲ್ಲಿ ಬೇರೆಬೇರೆಯಾಗಿ ಐಕ್ಯವಿರುವ ಎರಡನೆಯ ಲಕ್ಷ್ಯಪದ್ಯ, ಭಾಮಹಾದ್ಯರಲ್ಲಿ ಸಾದೃಶ್ಯವಿಲ್ಲದ 'ಪಾದಾಂತ ವ್ಯಪೇತ'.

ನೆಲನಚ್ಚರಿಯಂ ಪಡೆಯಂ । ಡಲೆದಂ ಚಿಕದೇವನಾ ಮರಾಟರ ಪಡೆಯಂ ।
ಚಲದಿಂ ಕಾಣಿಸಿ ಕಡೆಯಂ । ತಲೆಗೊಯ್ದಂ ತಱುಬಿ ದಾದಜೀ ಕಾಕಡೆಯಂ ॥ (೨-೨೦)

''ಚಿಕದೇವರಾಜನು ಲೋಕ ಆಶ್ಚರ್ಯಪಡುವಂತೆ ಮರಾಠರ ಸೈನ್ಯವನ್ನು ಕಾಡಿದನು; ಹಠದಿಂದ ದಾದಜೀ ಕಾಕಡೆಯನ್ನು, ಅವನಿಗೆ ಕೊನೆಗಾಲವನ್ನು ಕಾಣಿಸಿ, ಬೆನ್ನಟ್ಟಿ ಹೋಗಿ ಶಿರಶ್ಛೇದನಮಾಡಿದನು.''

(iii) ೧-೨ ಮತ್ತು ೩-೪ನೆಯ ಪಾದಗಳಲ್ಲಿ ಬೇರೆಬೇರೆಯಾಗಿ ಐಕ್ಯವಿರುವ ಮೂರನೆಯ ಲಕ್ಷ್ಯಪದ್ಯ, 'ಕಾವ್ಯಾದರ್ಶ'ದ ವಿಜಾತೀಯ ಪಾದಾದಿ ವ್ಯಪೇತಯಮಕದ ಮೊದಲ ಲಕ್ಷ್ಯಕ್ಕೆ (೩-೩೦) ಸದೃಶವಾದುದು.

ಅಱೆಕಲ್ಗೂಡೆಂದೇ ತಿಳಿ । ದಱೆಕಲ್ಗೂಡಾಸೆಯುಳಿದು ಕೃಷ್ಣಪ ಬಸವರ್ ।
ಮುಱಿದರ್ಬೆಗುರ್ತು ಭರದೊಳ್ । ಮುಱಿದರ್ಬಿಡುಗಣ್ಣರೂರ ಪೇರಗುಳಿಗಳಂ ॥ (೨-೨೧)

''ಕೃಷ್ಣಪ ಮತ್ತು ಬಸವರು ಅರೆಕಲ್ಗೂಡು ಎಂಬ ಊರಿನ ಆಸೆಯನ್ನು ಬಿಟ್ಟುಕೊಟ್ಟು, ಅದನ್ನು ಬಂಡೆಗಲ್ಲು ಗೂಡು ಎಂದೇ ತಿಳಿದು, ಹೆದರಿ ಸೋತರು; ಶೀಘ್ರವಾಗಿ ಸ್ವರ್ಗದ ಬಾಗಿಲ ದೊಡ್ಡ ಅಗುಳಿಗಳನ್ನು ಮುರಿದರು (=ಸತ್ತರು).''

(iv) ೧-೨ ಮತ್ತು ೩-೪ ನೆಯ ಪಾದಗಳಲ್ಲಿ ಪ್ರತ್ಯೇಕವಾಗಿ ಐಕ್ಯವಿರುವ ನಾಲ್ಕನೆಯ ಲಕ್ಷ್ಯಪದ್ಯ, ಭಾಮಹಾದ್ಯರಲ್ಲಿ ಸಾದೃಶ್ಯವಿಲ್ಲದ 'ಮಧ್ಯವ್ಯಪೇತಯಮಕ'.

ತಱುಬಿ ಮಹಿಶೂರವರ್ ಪೊ । ಯ್ದುಱಿದರ್ ಮಹಿಶೂರರೆನಿಸಿ ಮಲೆನಾಡುಗರಂ ।
ಮುಱಿದೋಡಿ ಕೆಳದಿಯವರುಂ । ನೆಱೆದರ್ ಕೆಳದಿಯರ ತೆಱದೆ ಕೆಳೆತನದೊಳ್ಪಂ ॥ (೨-೨೨)

''ಮೈಸೂರಿನವರು ಮಲೆನಾಡಿಗರನ್ನು ಬೆನ್ನಟ್ಟಿ, ಲೋಕವೀರರೆನ್ನಿಸಿ ಹೊಡೆದು ಕಾದಿದರು; ಕೆಳದಿಯವರೂ ಸೋತು ಓಡಿಹೋಗಿ, ಗೆಳತಿಯರ ರೀತಿಯಲ್ಲಿ ಗೆಳೆತನದ ಸಜ್ಜನಿಕೆಯನ್ನು ಪ್ರದರ್ಶಿಸಿದರು.''

'ನರಪತಿಚರಿತ' :

ತಿರುಮಲಾರ್ಯನನ್ನು ಅನುಸರಿಸಿ ಅಳಿಯ ಲಿಂಗರಾಜನು ಸಹ ''ಸ್ವರಸಹಿತವ್ಯಂಜನತತಿಗಿರದಾವರ್ತಿಯೆ' ಯಮಕವೆಂದೂ, ಅದು ಆದ್ಯಂತಮಧ್ಯಗಾಮಿತೆಯಿಂದ ಪರಿಪರಿಯಾಗಿರಬಹುದೆಂದೂ ತಿಳಿಸಿ, ಐದು ಲಕ್ಷ್ಯಪದ್ಯಗಳನ್ನು, ಸ್ವಕೃತವಾದುವನ್ನು, ಒದಗಿಸಿದ್ದಾನೆ.

(i) ೧-೩ನೆಯ ಪಾದಗಳಲ್ಲಿ ಪಾದಾದಿಯಲ್ಲಿ ವಿಜಾತೀಯ ಅವ್ಯಪೇತ ಯಮಕ ಸಂಘಟನೆಯಿದೆ (೨ನೆಯ ಪಾದದ ಆದಿಯ ವರ್ಣಾವೃತ್ತಿಯನ್ನು ಅನುದ್ದೇಶಿತ ಎಂದು ತಿಳಿಯಬಹುದು). 'ಕಾವ್ಯಾದರ್ಶ'ದ ೩-೯ರ ಲಕ್ಷ್ಯಕ್ಕೆ ಸದೃಶವಾದುದು.

ಜೀವನ ಜೀವನಮಂ ನಿ । ರ್ಜೀವನಮಂ ಗೆಯ್ದು ಕೆಳದಿ ಚರಣಸರೋಜಾ ।
ತಾವನತಾವನನುರು ರಾ । ಜೀವಾನನನೊಪ್ಪುತಿರ್ಪನೀ ಕೃಷ್ಣನೃಪಂ ॥ (೩-೧೦)

''ಜೀವನ ಬದುಕನ್ನು ಇಂಗಿಸಿ, ಪಾದಕಮಲಗಳಿಗೆ ಮಣಿದವರನ್ನು ಕಾಪಾಡಿದವನೂ ತಾವರೆಮೊಗದವನೂ ಆದ ಕೃಷ್ಣ ಭೂಪಾಲನು ಶೋಭಿಸುತ್ತಿದ್ದಾನೆ.''

(ii) ೧-೨ ಮತ್ತು ೩-೪ ರಲ್ಲಿ ಪಾದಾಂತ್ಯದಲ್ಲಿ ಪ್ರತ್ಯೇಕವಾಗಿ ವ್ಯಪೇತಯಮಕ ಸಂಘಟನೆಯಿದೆ. ಇದಕ್ಕೆ ಭಾಮಹಾದ್ಯರಲ್ಲಿ ಸಾದೃಶ್ಯವಿಲ್ಲ. ಅಳಿಯ ಲಿಂಗರಾಜನು ತಿರುಮಲಾರ್ಯನನ್ನು ಅನುಸರಿಸಿ (೨-೨೦) ಈ ಲಕ್ಷ್ಯವನ್ನು ಕಲ್ಪಿಸಿರುವುದು ಸಾಧ್ಯ.

ನಿರುಪಮ ಸೇನಾಶರಣಂ। ಶರಜಾಲಕೃತದ್ವಿಷಜ್ಜನವಿನಾಶ ರಣಂ।
ಸ್ಮರಜಿತಕಾಮಿನಿಯರ ಸಂ। ಜ್ವರಹರನಿವನಹುದು ಕೃಷ್ಣ ಮೇದಿನಿಯರಸಂ॥ (೨-೧೧)

''ನೆಲದೊಡೆಯನಾದ ಕೃಷ್ಣನು ಅನುಪಮವಾದ ಸೇನೆಗೆ ಬಗ್ಗದವನು, ಬಾಣಗಳ ಸಮೂಹದಿಂದ ಶತ್ರುಗಳನ್ನು ಯುದ್ಧದಲ್ಲಿ ನಾಶಮಾಡಿದವನು, ಮನ್ಮಥನಿಗೆ ಸೋತ ಸುಂದರಿಯರ ಕಾಮುಜ್ವರಹರನು.''

(iii) ೧-೨ ಮತ್ತು ೩-೪ರಲ್ಲಿ ಪಾದಾಂತ್ಯದಲ್ಲಿ ಪ್ರತ್ಯೇಕವಾಗಿ ವ್ಯಪೇತಯಮಕಸಂಘಟನೆಯಿದ್ದು, ವಂಶಸ್ಥವೃತ್ತವಾಗಿರುವುದರ ಹೊರತು ಸ್ವರೂಪದಲ್ಲಿ ೨-೧೧ರ ಲಕ್ಷ್ಯದ ಹಾಗೆಯೇ.[4]

ಅರೋಗತಾಶ್ರೀಸುಕೃತಕ್ಷಮಾಕರಂ। ವಿರೋಧಿಭೂಪೋಪನತಕ್ಷಮಾಕರಂ।
ಸರೋಜನೇತ್ರಂ ಕೃತಪಂಕವಿಪ್ರಿಯಂ। ವಿರಾಜಿಪಂ ಕೃಷ್ಣನೃಪಂ ಕವಿಪ್ರಿಯಂ॥ (೨-೧೨)

(iv) ೨-೪ನೆಯ ಪಾದಗಳಲ್ಲಿ ಯಮಕ ಸಂಘಟನೆಯಿರುವ ವ್ಯವಹಿತ (ವ್ಯಪೇತ) ಸಮುದ್ಗದ ಲಕ್ಷ್ಯವಿದು. 'ಕಾವ್ಯಾದರ್ಶ'ದ ೩-೬೧ರ ಲಕ್ಷ್ಯಕ್ಕೆ ಸದೃಶವಾದುದು (ಭಾಮಹ 'ಕಾವ್ಯಾಲಂಕಾರ'ದ ೨-೧೩ರ 'ಪಾದಾಭ್ಯಾಸ'ವೂ ರುದ್ರಟ 'ಕಾವ್ಯಾಲಂಕಾರ'ದ ೩-೯ರ 'ಸಂದಷ್ಟಕ'ವೂ ಹೀಗೆಯೇ.).

ಹರಿಣಾಂಕ ಕುಲಾಬ್ಧಿಗರ್ಭಭೂ। ಕುರುವಿಂದಂ ಘನನಾದನಿಸ್ವನಂ।
ಪೊರೆವಂ ಪಣವಿತ್ತು ದೈನ್ಯದಾ। ಕುರುವಿಂದಂ ಘನನಾದನಿಸ್ವನಂ॥ (೨-೧೩)

''ಚಂದ್ರವಂಶವೆಂಬ ಸಾಗರದೊಳಗಿನ ಭೂಲೋಕಮಾಣಿಕ್ಯನೂ ಗುಡುಗಿನಂತಹ ಧ್ವನಿಯುಳ್ಳವನೂ ಆದವನು ಗಟ್ಟಿಯಾಗಿ ದನಿಯೇನನ್ನೂ ಮಾಡದೆ (ಗೋಪ್ಯವಾಗಿ), ಹಣವನ್ನು ಕೊಟ್ಟು ಬೇಡಿಕೆಯ ಊಟದಿಂದ ಕಾಪಾಡುತ್ತಾನೆ.''

(v) ಪಾದಚತುಷ್ಟಯಗಳಲ್ಲಿ, ಮಧ್ಯದಲ್ಲಿ ವಿಜಾತೀಯ ಅವ್ಯಪೇತ ಯಮಕವೇರ್ಪಟ್ಟಿರುವ ಈ ಲಕ್ಷ್ಯ ಅವ್ಯಪೇತ ಪಾದಮಧ್ಯ ಯಮಕಭೇದಕ್ಕೆ ಸೇರಿದ್ದು. ರುದ್ರಟ ಕಾವ್ಯಾಲಂಕಾರದ ವಿಜಾತೀಯ 'ಮಧ್ಯ' ಯಮಕದ ಭೇದಕ್ಕೆ (೩-೪೫) ಇದು ಸದೃಶವಾದುದು.

ಸ್ಮರಕಲಾಚತುರಂ ಚತುರಂಬುಧಿ। ಸ್ಫುರದುದಾರಯಶೋ ರಯಶೋಭಿತಂ।
ತುರಗ ಸಿಂಧುರಬಂಧುರಬಂಧ ಸುಂ। ದರಪುರಂ ಶಶಿವಂಶಶಿವಂ ನೃಪಂ॥ (೨-೧೪)

''ದೊರೆ ಕೃಷ್ಣರಾಜನು ಕಾಮಕಲೆಯಲ್ಲಿ ಚತುರನಾದವನು, ನಾಲ್ಕು ಸಮುದ್ರಗಳವರೆಗೆ ಬೆಳಗುವ ಅತಿಶಯ ಕೀರ್ತಿಸಂಪದದಿಂದ ಶೋಭಿಸುವವನು, ಕುದುರೆ ಆನೆಗಳನ್ನು ಮನೋಹರವಾಗಿ ಕಟ್ಟಿರುವ ಚೆಲುವಾದ ನಗರವುಳ್ಳವನು, ಚಂದ್ರವಂಶದ ಪರಮೇಶ್ವರನು.''

ಕನ್ನಡ ಸಾಹಿತ್ಯದಲ್ಲಿ ಕೆಲವು ಯಮಕಲಕ್ಷ್ಯಗಳು

ಯಮಕ ಒಂದು ಶಬ್ದಾಲಂಕಾರವಾಗಿ, ಅನುಪ್ರಾಸ ಸಹವಾಗಿ, ಸಂಸ್ಕೃತ ಸಾಹಿತ್ಯದ ಕೃತಿಗಳಲ್ಲಿ ಹೇಗೋ ಹಾಗೆಯೇ ಪ್ರಾಚೀನ ಕನ್ನಡ ಸಾಹಿತ್ಯದ ಕೃತಿಗಳಲ್ಲಿ ಕೂಡ, ಅದರ ಎಲ್ಲ ಕಾಲಘಟ್ಟದ ರಚನೆಗಳಲ್ಲಿಯೂ, ವಿಪುಲವಾಗಿಯೂ ವಿವಿಧವಾಗಿಯೂ ಕಂಡುಬಂದಿದೆಯೆಂದು ಯಾವ ಹಿಂಜರಿಕೆಯೂ ಇಲ್ಲದೆ ಹೇಳಬಹುದು. ಯಮಕ ಮತ್ತು ಅನುಪ್ರಾಸಗಳು ಪ್ರೌಢ-ಸರಳ, ಮಾರ್ಗ-ದೇಸಿ, ಶಿಷ್ಟ-ಜಾನಪದ ಎಂಬ ಭೇದವಿಲ್ಲದೆ, ಅಷ್ಟೇಕೆ ಆಡುಮಾತಿನಲ್ಲಿ ಸಹ, ಹರಿಹಾಯುತ್ತಿರುವುದು ಸಾಮಾನ್ಯಸಂಗತಿ. ಇದಕ್ಕೆ ಕಾರಣಗಳನ್ನು ವಿಶ್ಲೇಷಿಸಿದರೆ, ಸೃಜನಶೀಲಬುದ್ಧಿಗೆ ಆ ಬಗೆಯ ವಾಗ್ವ್ಯಾಪಾರ, ಚಮತ್ಕಾರ ಶಿಸ್ತು ಅಲಂಕಾರ ಎಂದು ವರ್ಣಿಸಬಹುದಾದ

ಒಂದು ಮಾತಿನ ಭಣಿತಿ ಕೇವಲ ಸಹಜವಾದುದು, ಇಷ್ಟವಾದುದು ಎಂಬ ತಥ್ಯ ಹೊಳೆಯುದೇ ಇರದು. ಛಂದಸ್ಸಿನ ಸಂಸಾರದಲ್ಲಿ ಪ್ರಾಸ, ಅನುಪ್ರಾಸ, ಯಮಕ, ವಡಿ ಇವೆಲ್ಲ ಒಂದು ಕುಟುಂಬದ ಸದಸ್ಯರೆಂದು, ಅಣ್ಣತಮ್ಮಂದಿರೆಂದು ಹೇಳಬಹುದಾದ ಶಬ್ದಾಲಂಕಾರ ಪ್ರಕ್ರಿಯೆಗಳೇ. ಪ್ರಾಸ ವಡಿಗಳು ದೇಶಭಾಷಾಕವಿತ್ವದ ವಿಶೇಷ ಲಕ್ಷಣಗಳು; ಯಮಕ ಅನುಪ್ರಾಸಗಳು ಸಂಸ್ಕೃತ ಪ್ರಾಕೃತಗಳನ್ನೂ ಒಳಕೊಂಡು ಭಾರತೀಯ ಭಾಷೆಗಳ ಸಾಮಾನ್ಯ ಲಕ್ಷಣಗಳು. ಪ್ರಾಚೀನ ಲಾಕ್ಷಣಿಕರು, ಚಿತ್ರಕಾವ್ಯದ ಪರಿಧಿಯಲ್ಲಿ ಯಮಕವನ್ನಷ್ಟೇ ಅಂಗೀಕರಿಸುವುದು ರೂಢಿ. ವರ್ಣಾವೃತ್ತಿಯಲ್ಲಿ ಪದ ಪದಗುಂಫನಗಳ ಚಮತ್ಕಾರ ಸಾಧ್ಯವಾಗುವುದು ಅದರಲ್ಲಿ ಮಾತ್ರವೇ. ಅಲ್ಲದೆ ಆವೃತ್ತಿಗೆ ಕಟ್ಟುಕಟ್ಟಳೆಗಳನ್ನು ವಿಧಿಸಿ, ಪಾದ ಮತ್ತು ಪದ್ಯ ಸಂಘಟನೆಗೆ ಆ ಆವೃತ್ತಿಯಲ್ಲಿ ಸಾಧ್ಯವಾಗುವ ವೈಚಿತ್ರ್ಯಗಳನ್ನೆಲ್ಲ ನಿರೂಪಿಸುವುದು ಸಹ ಅದರಲ್ಲಿ ಮಾತ್ರವೇ ಸಾಧ್ಯ. ಹಾಗೆಂದೇ ಭರತಾದಿ ಪ್ರಾಚೀನ ಲಾಕ್ಷಣಿಕರೆಲ್ಲ ಆ ಕೆಲಸವನ್ನು ಮಾಡಿದ್ದಾರೆ. ಅನುಪ್ರಾಸದಲ್ಲಿ ಅಕ್ಷರಗಳು ಸಂಖ್ಯೆ ಮತ್ತು ಸ್ಥಾನ ಎರಡೂ ದೃಷ್ಟಿಗಳಿಂದಲೂ ಸ್ವೇಚ್ಛಾಗಾಮಿಯಾಗಿ, ಇಲ್ಲವೆ ಅನಿರ್ದಿಷ್ಟವಾಗಿರುತ್ತವೆ. ಇನ್ನು ಪ್ರಾಸ ವಡಿಗಳಂತೂ ದೇಶಭಾಷೆಗಳಿಗೆ ಸೀಮಿತವಾದವು.

ಕನ್ನಡ ಸಾಹಿತ್ಯದಲ್ಲಿ ಸಾಹಿತ್ಯೋದಯದ ಕಾಲದಿಂದ ಇಂದಿನ ಕಾಲದವರೆಗೆ ಯಮಕದ ವ್ಯಾಪ್ತಿಯನ್ನು ಗಮನಿಸಬಹುದಾಗಿದೆ. ಅದರ ಬಳಕೆ ಸಹಜ ಸರಳ ಕವಿತ್ವದಲ್ಲಿ ವಿರಳವಾದುದು; ಪ್ರೌಢ ಅಲಂಕಾರ ಕವಿತ್ವದಲ್ಲಿ ಹೇರಳವಾದುದು ಎಂದು ಸಾಮಾನ್ಯವಾಗಿ ತೋರಿದರೂ, ಎಲ್ಲ ಬಗೆಯ ಸಾಹಿತ್ಯಪ್ರಕಾರಗಳಲ್ಲಿಯೂ ಅದು ತನ್ನ ಕೈಕಾಲುಗಳನ್ನು ಚಾಚಿರುವುದು ಕಾಣುತ್ತದೆ. ಪ್ರಯೋಗದಲ್ಲಿ ವೈವಿಧ್ಯವುಂಟು, ವೈಚಿತ್ರ್ಯವುಂಟು. ಒಮ್ಮೆ ಸ್ವಾಭಾವಿಕ, ಅನುದ್ದೇಶಿತ ಎಂಬಂತೆ, ಇನ್ನೊಮ್ಮೆ ಚಮತ್ಕಾರಿಕ, ಉದ್ದೇಶಿತ ಎಂಬಂತೆ ಅದರ ಹಾಸುಹೊಕ್ಕು. ಕವಿಯ ಪಾಂಡಿತ್ಯಪ್ರೀತಿ, ಅಲಂಕಾರಗಳ ಮೋಹ ಇವನ್ನು ಹೆಚ್ಚಾಗಿ ಗುರುತಿಸಬಹುದಾದ ಎಡೆಗಳಲ್ಲೆಲ್ಲ ಯಮಕದ ಎರಡನೆಯ ಮುಖವನ್ನು ಕಾಣಬಹುದು. ಬಳಕೆಯಲ್ಲಿ ಲಾಕ್ಷಣಿಕರ ನಿರ್ದೇಶನ, ಲಕ್ಷಣ, ವ್ಯವಸ್ಥೆಗಳನ್ನು ಅನುಸರಿಸಿದ ಲಕ್ಷ್ಯಗಳನ್ನು ಹೂಡಿರುತ್ತದೆ ಎಂದು ಹೇಳುವುದು ಕಷ್ಟ; ಅಲ್ಲಲ್ಲಿ ಅಂಥವು ದೊರೆಯುವುದು ಅಸಂಭವವೇನಲ್ಲ. ಆದರೆ ಹೆಚ್ಚಾಗಿ ಯಮಕದ ಪ್ರಯೋಗ ಕನ್ನಡ ಕವಿಗಳ ಸಹಜವಾದ ಪಾಂಡಿತ್ಯಪ್ರೀತಿ, ಅಲಂಕಾರಗಳ ಮೋಹ, ಪ್ರತಿಭೆಯ ವಿಲಾಸ ಇವುಗಳ ಫಲವಾದ ವಾಗ್ವ್ಯಾಪಾರವಾದ್ದರಿಂದ ಅವು ಸ್ವತಂತ್ರರೀತಿಯವು; ಸಾಮಾನ್ಯ ಲಕ್ಷಣದ ನಿರ್ಬಂಧಗಳನ್ನು ಸಡಿಲಿಸಿದವು. ಇಂತಹವನ್ನು ಭಾಮಹನು ಹೇಳುವ 'ಆವಲಿ'ಯಲ್ಲಿಯೋ ರುದ್ರಟನು ಹೇಳುವ 'ಅನಿಯತದೇಶಾವಯವ'ಗಳಲ್ಲಿಯೋ ಸೇರಿಸಬೇಕಾಗುತ್ತದೆ. ದುಷ್ಕರ ಇಲ್ಲವೆ ವ್ಯಾಮಿಶ್ರ ಸ್ವರೂಪದವು ಎನ್ನಬೇಕಾಗುತ್ತದೆ. ಇಲ್ಲವೆ ''ಏವಮೇವ ವಿಕಲ್ಪ್ಯಾನಿ ಯಮಕಾನೀತರಾಣ್ಯಪಿ'' ಎಂಬ 'ಕಾವ್ಯಾದರ್ಶ'ಕಾರನ ಮಾತಿನಿಂದ (೩-೩೭) ನಾವೂ ತೃಪ್ತಿಪಟ್ಟುಕೊಳ್ಳಬೇಕಾಗುತ್ತದೆ.

ಈ ಮುಂದೆ ದಿಕ್ಪ್ರದರ್ಶನಾರ್ಥವಾಗಿ ಕೆಲವು ಲಕ್ಷ್ಯಗಳನ್ನು ಎತ್ತಿಕೊಂಡು ಅವನ್ನು ಹೇಗೆ ವಿಭಜಿಸಬಹುದು, ಹೆಸರಿಸಬಹುದು ಎಂಬುದನ್ನು ನೋಡಬಹುದಾಗಿದೆ. ಅಸಂಖ್ಯ ಎಂದು ಹೇಳಲು ಹೋಗದಿದ್ದರೂ ಬಹುಸಂಖ್ಯ ಎಂದು ಹೇಳಲು ಹಿಂಜರಿಯಬೇಕಾಗಿಲ್ಲದ ಯಮಕವೈಚಿತ್ರ್ಯಗಳಲ್ಲಿ, ನೂರರಲ್ಲಿ ಹತ್ತುಪಾಲನ್ನಾದರೂ ಗುರುತಿಸಿ ವಿವರಿಸುವುದಕ್ಕೆ ಇಲ್ಲಿ ಎಡೆ ಸಾಲದೆನ್ನಬೇಕು. ಗುಣವರ್ಮ(೨), ಷಡಕ್ಷರಿ ಮೊದಲಾದ ಕವಿಗಳು ಯಮಕಾನುಪ್ರಾಸಗಳ ಪ್ರೀತಿಗೆ ತಮ್ಮನ್ನು ತೆತ್ತವರು ಎನ್ನಬೇಕು. ಆದ್ದರಿಂದ ಈ ಲಕ್ಷ್ಯಭಾಗ ಅಸಮಗ್ರವಾಗದೆ ವಿಧಿಯಿಲ್ಲ.[5]

ಮುಂದೆ ಉದ್ಧರಿಸುವ ನಿದರ್ಶನಗಳಲ್ಲಿ ಕೆಲವು ಲಾಕ್ಷಣಿಕ ಸಮ್ಮತವಾದ ನಿಯಮಗಳನ್ನು ಪೂರ್ತಿಯಾಗಿ ಪೂರೈಸುವಂತಿದ್ದರೆ, ಇನ್ನು ಕೆಲವು ಭಾಗಶಃ ಪೂರೈಸುವಂತಿವೆ. ಅಲ್ಲದೆ ಸಮ್ಮಿಶ್ರಸ್ವರೂಪದವಾಗಿವೆ. ಸಮ್ಮಿಶ್ರಸ್ವರೂಪದವುಗಳಲ್ಲಿ, ಆ ಸಮ್ಮಿಶ್ರತೆಗೆ ಕಾರಣವಾದ ಯಮಕಸಂಘಟನೆಯನ್ನು ಗೌಣವೆಂದೋ ಅನುದ್ದೇಶಿತವೆಂದೋ ತಿಳಿಯಬೇಕಾಗುತ್ತದೆ. ಪೂರ್ತಿಯಾಗಿ ಲಕ್ಷಣಸಮ್ಮತವಾದ ನಿದರ್ಶನಗಳು ದೊರೆತಾಗ, ಇಲ್ಲಿಯ ಇಂತಹ ಕೆಲವು ನಿದರ್ಶನಗಳು ಸ್ಥಾನಾಂತರಗೊಳ್ಳುತ್ತವೆ ಎಂದು ಆರಂಭದಲ್ಲಿಯೇ ಹೇಳಬೇಕಾಗಿದೆ.

೧. ಪಾದಾದಿ ಅವ್ಯಪೇತ ಯಮಕಭೇದಗಳು :

ಪ್ರಥಮ ಪಾದಾದಿ

ನಲಿನಲಿದು ಪುಲಿಯ ಮೊಲೆಯಂ। ಸಲೆ ಹರಿಣೀಶಿಶುಗಳುಣುತುಮಿರ್ದುವು ಸಿಂಹೀ।
ಕುಳದ ಘನಸ್ತನಮಂ ತಾ। ಮೊಲಿದುಂಡುವು ಬಾಳಶರಭಮೊದವಿದ ಮುದದಿಂ॥

(ಕರ್ಣಪಾರ್ಯ, 'ನೇಮಿನಾಥ ಪುರಾಣ', ೧೩–೮೩)

ದ್ವಿತೀಯ ಪಾದಾದಿ

ವನದೊಳನಾರತಂ ನಿಜಗುಣಂಗಳನೊಳ್ನುಡಿಯಂ ಸ್ವರೂಪಮಂ
ನೆನೆನೆನೆದೆಯ್ದೆ ನಿನ್ನ ಮಯಪಾದನಿತಂ ಸುಖಮಲ್ಲದುಂಟೆ ಮ
ತ್ತಿನ ಸುಖಮುರ್ವಿಪಂಗೆ ನಿನಗಂ ತನಗಂ ಸ್ಮರನೆಂದು ಸಂಗಮಂ
ಮುನಿಯದೆ ಮಾಳ್ಪನೆಂದು ಸುಖಮಚ್ಚರಿಯಲ್ತೆ ಸರೋರುಹೇಕ್ಷಣೇ॥

('ನಳಚಂಪು', ಪ. ೧೬೧)

ತೃತೀಯ ಪಾದಾದಿ

ಪರಮಗುರು ಪುಟ್ಟಿದಂದಿನ। ಪರಿತೋಷದ ಪರಮಕೋಟಿ ಪೆಂಪಿನೊಳಿದಱೊಂ।
ದೊರೆಗಂ ದೊರೆಗಂ ಬಾರದು। ಪರಿಕಿಪೊಡೆನೆ ಹೃಷ್ಟರಾದರಾ ದಂಪತಿಗಳ್॥

('ಪುಷ್ಪದಂತಪುರಾಣ', ೧೨–೯೭)

ಚತುರ್ಥ ಪಾದಾದಿ

ಪಳುಕಿಂದೆ ಸಮೆದ ಪೊಸ ಪು। ತ್ತಳಿಯಂ ಪೀಯೂಷಜಳದೆ ತೊಳೆದಂತೆ ಮನಂ।
ಗೊಳಿಸಿರ್ದಮಳಿನ ಗರ್ಭೆಯ। ತೊಳತೊಳತೊಳಗುವ ಲತಾಂಗಮಂಗಜವಿಭವಂ॥

(ಆಚಣ್ಣ, 'ವರ್ಧಮಾನಪುರಾಣ', ೧೩–೫೬)

ಪ್ರಥಮ ದ್ವಿತೀಯ ಪಾದಾದಿ (ವಿಜಾತೀಯ)

ಕುಡಿ ಕುಡಿನೀರಂ ಬಾಯಂ। ಬಿಡು ಬಿಡು ನೋವಿಂಗೆ ಸೆಡೆಯದಿರ್ ಸೆಡೆಯದಿರೆಂ।
ದಡಿಗಡಿಗೆ ನಗುತಮೋರಂ। ತೆಡೆಯುಡುಗದೆ ಪಿರಿದು ಬೇಗಮಾ ಖಗಪತಿಯಂ॥

('ಧರ್ಮಾಮೃತ' ೧೪–೧೧೧)

ಪ್ರಥಮ ಚತುರ್ಥ ಪಾದಾದಿ

ನೆಱೆ ನೆಱೆ ಚೂರ್ಣಮಾದ ಘನದೂಳಿಗಳೇ ಮರಿಚಂಗಳಾಗಿ ಪೊ
ಯ್ದುಱೆ ಮಿಱುಗುತ್ತು ನಿರ್ಪ ಜಳಮೆಂಬುರು ತೈಲದಿನೊಂದಿದುರ್ವಿಯೆಂ
ಬುಱುವ ವಿಶಾಳಭಾಜನದೊಳುಣ್ಮುವ ಬೇಗೆಯ ಬೆಂಕಿಯಿಂ ಕರಂ
ಬಱಬಱನಾಗಿ ತಾಳಿಸಿದವೊಲ್ ಕರಿವೋದುವು ಬೆಂದ ಬೆಟ್ಟುಗಳ್॥

(ಬಾಹುಬಲಿ, 'ಧರ್ಮನಾಥಪುರಾಣ', ೪–೭೯)

ತೃತೀಯ ಚತುರ್ಥ ಪಾದಾದಿ

ಅಡವಿ ಬಯಲಾಗೆ ನದಮೊ। ಟ್ಟುಡುಗೆ ತೆಮರ್ ಸರಿಸಮಾಗೆ ಬಟ್ಟೆಯೊಳೆಲ್ಲಂ।
ನಡೆನಡೆಯೆಂದೇಂ ನಡೆದುದೊ। ಪಡೆ ಪಡೆದಚ್ಚರಿಯನಾ ಸುರಾಪಗೆವರೆಗಂ॥

('ಕಾವ್ಯಾವಲೋಕನ', ಪ. ೨೯೪)

ಪ್ರಥಮ ದ್ವಿತೀಯ ತೃತೀಯ ಪಾದಾದಿ (ಸಜಾತೀಯ, ವಿಜಾತೀಯ)

ಕಱಿಕಱಿಗುಂದಿದಂ ಮೊಗದ ಮೈಸಿರಿಗಂದಮೃತಾಂಶು ಲಜ್ಜೆಯಿಂ
ಕುಱುಕುಱುಗೊಂಡು ಕಾಲ್ಸಿಡಿದುದೊಳ್ನಡೆಗಳ್ಕಿ ಮರಾಳನಾವಗಂ

ಪಱಿಪಱಿಯಾಯ್ತು ಪಜ್ಜಳಿಪ ಮೆಯ್ವೆಳಗಿಂಗೆಳಮಿಂಚಿನಲ್ಕದಾ
ರಱಿದಭಿವರ್ಣಿಪರ್ ಸತಿಯ ರೂಪಿನ ರೂಢಿಸಿದೊಂದು ಗಾಡಿಯಂ ॥

(ಮಲ್ಲ, 'ಕಾವ್ಯಸಾರ', ೬–೧೧೭)

ಪಾದ ಚತುಷ್ಟಯಾದಿ (ಸಜಾತೀಯ, ವಿಜಾತೀಯ)

ಸವನಂ ಸವನಂ ಕೃತಕಂ । ಜವನಂ ಜವನಂತೆ ವನಿತೆಗಾಯ್ತು ಕೊಲಲ್ ಬ ।
ರ್ಪವನಂ ಪವನಂ ಪೋಲ್ತುದು । ದವನಂ ದವನಂತೆ ವಿಷಮುಮಾಯ್ತನವರತಂ ॥

('ಲೀಲಾವತಿ', ೯-೧೩೩)

೨. ಪಾದಾದಿ ವ್ಯಪೇತ ಯಮಕ ಭೇದಗಳು :

ಪ್ರಥಮ ತೃತೀಯ ಪಾದಾದಿ

ಮಗುಟ್ದಿಂ ಮಗುಟ್ದಿಂ ಕನಸಿಂ । ಮಗುಟ್ದಿಂ ವಧುವೆಂದು ನೆಲೆಯನೇಱುವನೊಳಗಂ ।
ಪುಗುವಂ ಪವಡಿಸಿ ಕಣ್ಣಂ । ಮುಗಿವಂ ಮುಸುಕಿಡುವನಸಿಯಳಂ ಭಾವಿಸುವಂ ॥

('ಲೀಲಾವತಿ', ೪–೯)

ಪ್ರಥಮ ತೃತೀಯ ಪಾದಾದಿ

ಪ್ರಾಕೃತಶಾಸ್ತ್ರನಿಕರಂಗಳಿನಂತಾ । ಭೀಕರರ್ ಕರಮೆ ಕಾದೆ ಬೞಿಕ್ಕ ।
ಪ್ರಾಕೃತಶಾಸ್ತ್ರನಿಧಿಯಂ ತಿಗೆದಂ ಶೌ । ರ್ಯಾಕರಂ ನೆಟ್ಟನೆ ಮಾಗಧಭೂಪಂ ॥

(ಕರ್ಣಪಾರ್ಯ, 'ನೇಮಿನಾಥಪುರಾಣ', ೧೨–೨೪೦)

ದ್ವಿತೀಯ ಚತುರ್ಥ ಪಾದಾದಿ

ಜಿನನಂ ನಮ್ರಸುರಾಸುರೇಂದ್ರಜನನಂ ದುರ್ವಾರಮಾರಪ್ರಭಂ
ಜನನಂ ಶಾಶ್ವತವಿಶ್ವತತ್ತ್ವಮನನಂ ಮಾಂಗಲ್ಯಕೈವಲ್ಯಲೋ
ಚನನಂ ಸದ್ವಿನತೋಪಶಾಂತಮನನಂ ಮುಕ್ತ್ಯಂಗನಾಲೋಚನಾಂ
ಜನನಂ ತಾಳ್ದಿದನಾತ್ಮಹೃತ್ಕಮಳದೊಳ್ ಯೋಗೀಂದ್ರವೃಂದಾರಕಂ ॥

('ಪುಷ್ಪದಂತಪುರಾಣ', ೯-೮)

ತೃತೀಯ ಚತುರ್ಥ ಪಾದಾದಿ

ಪಿರಿದುಂ ನೀನೊಲವಿಂದೆ ಯತ್ನಿಸಿದೊಡಂ ಕಾದಂಬರೀದೇವಿಯಾ
ಚರಣೋಪಾಸನಸೌಖ್ಯಮಾದೊಡೆನಗಾದತ್ತಿಲ್ಲಮೀ ಪುಟ್ಟಿನೊಳ್
ದೊರೆಕೊಳ್ವಂತದು ತಾನೊಡರ್ಚ ಮಱುವುಟ್ಟಲ್ಲಾದೊಡಂ ನೀನೆಯುಂ
ದೊರೆವನ್ನಂ ಬಿಡಿದತ್ತು ಭೋಂಕೆನೆದರ್ ತದ್ರಾಜೇಂದ್ರಚಂದ್ರಾಂಕನಾ ॥

('ಕರ್ಣಾಟಕ ಕಾದಂಬರಿ', ೮-೪೪)

ಪ್ರಥಮ ದ್ವಿತೀಯ ಚತುರ್ಥ ಪಾದಾದಿ

ಪ್ರಿಯನಾದನಶ್ಯವಶ್ಯಂ । ಪ್ರಿಯನಕ್ಕುಂ ದುಷ್ಟನಾಗಿಯುಂ ಸಲೆ ದುಷ್ಟಾ ।
ಶ್ರಯಮಾಗಿಯುಂ ಶರೀರಂ । ಪ್ರಿಯಮಾದುದು ಸಕಲವಸುಮತೀತಳಕೆಲ್ಲಂ ॥

(ದುರ್ಗಸಿಂಹ, 'ಕರ್ಣಾಟಕ ಪಂಚತಂತ್ರ', ಪ. ೧೬೮)

ಪ್ರಥಮ ತೃತೀಯ ಚತುರ್ಥ ಪಾದಾದಿ

ರಾಗಮೆ ದೊರೆಕೊಳಿಕುಂ ದೋ । ಷಾಗಮುಮನುನೆಂದು ಪೇೞ್ವೆ ತೆಱದಿಂ ಸಂಧ್ಯಾ ।
ರಾಗಮೆ ದೊರೆಕೊಳಿಸಿತು ತಿಮಿ । ರಾಗಮುಮಂ ಜಾರಚೋರಜನವಲ್ಲಭಮಂ ॥

('ಪುಷ್ಪದಂತಪುರಾಣ', ೧೩-೨೦)

ಪಾದಚತುಷ್ಟಯಾದಿ

ದುಂದುಭಿಗಭೀರನಿನದಂ । ದುಂದುಭಿಸಂವತ್ಸರೋದ್ಭವಂ ಪ್ರಕಟಯಶೋ ।
ದುಂದುಭಿ ಸಿಂಹಾಸನ ಸುರ । ದುಂದುಭಿಪತಿಚರಣಕಮಲಭೃಂಗಂ ಪಂಪಂ ॥

(ಪಂಪ, 'ಆದಿಪುರಾಣ', ೧–೩೨)

೩. ವಿಜಾತೀಯ ಪಾದಾದಿ ವ್ಯಪೇತ ಯಮಕಭೇದಗಳು :

ಪ್ರಥಮ-ದ್ವಿತೀಯ, ತೃತೀಯ-ಚತುರ್ಥಪಾದಾದಿ

ನೆಗಟ್ದಿ ಮಹಾಲಯಮಲ್ಲದೆ । ನೆಗಟ್ದಿ ಮಹಾಲಯಮದಿಲ್ಲ ಯುವವರನಾರೀ ।
ಯುಗಪರಿವರ್ತನವಲ್ಲದೆ । ಯುಗಪರಿವರ್ತನಮದಿಲ್ಲ ತದ್ಭೂತಳದೊಳ್ ॥

(ಅಭಿನವ ವಾದಿವಿದ್ಯಾನಂದ, 'ಕಾವ್ಯಸಾರ', ಪ. ೧೦೦)

ಸುರತತೀಶ್ವರನಂಗಮನೀಕೆಗಳ್ । ಸುರತ ತೀವ್ರತೆಯಿಂ ನಡೆ ನೋಡಲ್ಕೆ ।
ಸರಲ ಮಾಚಿಕ್ಕೆಯ ಕಣ್ಗಳೆ ನಟ್ಟುವೀ । ಸರಲಮಾನಸರಕ್ಷಿಗಳೆಂಬಿನಂ ॥

('ಲೀಲಾವತಿ', ೪–೧೦೧)

ಕಂದದ ಕುಂದದ ನವಬಿಸ । ಕಂದದ ಕುಂದದ ಬೆಡಂಗನಾಳ್ದ ಮಳತೆ ಮೆಯ್ಯರ್ ।
ಸಂದಕ್ಷತದಿಂ ರುಚಿವೆರ । ಸಂದಕ್ಷತಗುಣರ ಚರಣಮಂ ಪೂಜಿಸಿದಂ ॥

('ಪುಷ್ಪದಂತಪುರಾಣ', ೧೪-೩)

ಪ್ರಥಮ-ತೃತೀಯ, ದ್ವಿತೀಯ-ಚತುರ್ಥ ಪಾದಾದಿ

ನ್ಯಾಯಂ ಮಂತ್ರಿಗಳುಕ್ತಿ ಬಪ್ಪನ ಮತಂ ಕಾಲೋಚಿತಂ ನಿಮ್ಮ ಭಿ
ಪ್ರಾಯಂ ನೆಟ್ಟನಲಂಘ್ಯಮಿಂತಿನಿತನೀಗಳ್ಮೀಱಿದೆಂ ಮೀಱಿದ
ನ್ಯಾಯಕ್ಕಿಂದವಗಾಹಸಂಗರರಸಂ ತೀರ್ಥಾಂಬು ಶತ್ರುಕ್ಷಯಂ
ಪ್ರಾಯಶ್ಚಿತ್ತಮಿದಂ ನೆಗೞ್ಚಿ ಪಡೆವೆಂ ತ್ವಚ್ಚಿತ್ತಕಾರುಣ್ಯಮಂ ॥

('ಅನಂತನಾಥ ಪುರಾಣ', ೧೩-೬೨)

ಪ್ರಥಮ-ಚತುರ್ಥ, ದ್ವಿತೀಯ–ತೃತೀಯ ಪಾದಾದಿ

ಮತ್ತಮಯೂರಗರ್ಜನೆಗೆ ಚಂದನಮಂ ಬಳಸಿರ್ದ ಪನ್ನಗಂ
ಸುತ್ತಱುವಂತೆ ತನ್ನ ಗಳಗರ್ಜನೆಗಂಜಿ ನಿಜಾಂಗಯಷ್ಟಿಯಿಂ
ಸುತ್ತಱುದಿರ್ದ ಪನ್ನಗನ ಗಂಟಲನೊತ್ತಿದೊಂದು ಕೆಯ್
ಮತ್ತಮದೊಂದು ಕಾಲಭುಜಗಂ ಪಿಡಿದಂತಿರೆ ಕಾಳಿಯಾಹಿಯಂ ॥

(ನೇಮಿಚಂದ್ರ, 'ನೇಮಿನಾಥಪುರಾಣ', ೮–೫೦)

೪. ಅವ್ಯಪೇತ–ವ್ಯಪೇತಾತ್ಮ ಯಮಕಭೇದಗಳು :

ಪಾದ ಚತುಷ್ಟಯಾದಿ

ಮನೆಮನೆಯೊಳ್ ಮನಮೊಲ್ದು ಮಾಪ್ಪ ಮಹೋತ್ಸವಂ
ಮನೆಮನೆಯೊಳ್ ಗುರುದೇವತಾತಿಥಿಪೂಜನಂ
ಮನೆಮನೆಯೊಳ್ ಬಹುಪುತ್ರ [ಸಂಪದ]ಮಾಕುಳಂ
ಮನೆಮನೆಯೊಳ್ ಧನಧಾನ್ಯಸಂಪದಮಪ್ಪಿನಂ ॥

(ನಾಗವರ್ಮ, 'ವರ್ಧಮಾನಪುರಾಣ', ೧-೭೧)

೫. ಕೆಲವು ದುಷ್ಕರ ಯಮಕಭೇದಗಳು :

ಪಾದಮಧ್ಯ ಅವ್ಯಪೇತ (ವಿಜಾತೀಯ)

ಕೊಂಕೊಳಲೆ ಕೊಳಲೆ ನಡೆಯಲೊ । ಡಂ ಕೆಸಱುನಿಸುಱುಯೆ ಸುಱುಯೆ ನೀರ್ಮುೞುಗಿದ ಮೀ ।
ನಂ ಕಳಲೆ ಕಳಲೆ ಚಂಚುವು । ಟಂ ಕರ್ದುಕಿದ ಜಗುಳೆ ಜಗುಳೆ ಸಾರ್ದತ್ತು ಬಕಂ ॥

('ಲೀಲಾವತಿ', ೯-೧೨)

ಸುರಭಿತರ ಪ್ರಮೋದ ಕಮಲಂ ಕಮಲಂ ಕಮಲಾಂಕ ಕಾಂತ ಬಂ
ಧುರನಿಕಟಂ ವಿಕೀರ್ಣ ಕುಮುದಂ ಕುಮುದಂ ಕುಮುದ ಪ್ರಹಾರಕಂ
ಹರಿವಿಹಿತ ಪ್ರಕೇತು ಮಧುಕಂ ಮಧುಕಂ ಮಧುಕಾಂತ ಶೋಭಿತಂ
ಸರಸಿರುಹಾಕರಂ ಸುಜನಕಂ ಜನಕಂ ಜನಕಂ ಸುಖೋದಯಂ ॥

(ಅಭಿನವ ವಾದಿವಿದ್ಯಾನಂದ, 'ಕಾವ್ಯಸಾರ', ಪ. ೭೪೪)

ವರಶಾತಕುಂಭ ಕುಂಭಸ್ತನದ ಪಲ್ಲವಾ
ಧರದ ಗುಣರಾಜಿ ರಾಜಿತದ ಕೋಮಲೆಗೆ ಸೌಂ
ದರ ಕುಂಕುಮಾಂಗ ಮಾಂಗಲ್ಯದಬಲೆಯುರುದಕಪೂರಿತ ಕನಕ ಕಲಶದ
ಸುರುಚಿವೆತ್ತರುಣ ತರುಣಪ್ರವಾಳದ ವಸ್ತ್ರ
ಪರಿವೃತದ ಕಲ್ಪ ಕಲ್ಪವಿಧಾನಮಾಗಿರದೆ
ವಿರಚಿಸಿದರಾಗ ರಾಗದೊಳಮಲ ಶೋಭನಸ್ನಾನವಂ ಸೋತ್ಸವದೊಳು ॥

('ಜೈಮಿನಿ ಭಾರತ', ೩೧-೫)

ಪಾದಮಧ್ಯ ವ್ಯಪೇತ (ವಿಜಾತೀಯ)

ಪದನಿಡುವಂಚೆಗಂಡ ಫಲದಿಂದೆ ಮರಾಳ ಮರಾಳಯಾನೆಯಂ
ಮದಕಳಕಂಠನಿಂ ಶ್ರವಣಸೌಖ್ಯಕಳಾಪ ಕಳಾಪರಮ್ಯೆಯಂ
ಮದನನ ಚಾಪದಿಂ ಮಧುರವಕ್ರಿಮದಾನಮದಾನತಾಂಗಿಯಂ
ಪದೆಯದುದಲ್ಲದಂಗಜ ಜಗಜ್ಜಯಶೋಭಿ ಯಶೋಭಿರಾಮೆಯಂ ॥

('ಲೀಲಾವತಿ', ೭-೬೧)

ಪಾದಾಂತ ವ್ಯಪೇತ (ಸಜಾತೀಯ)

ಸರಿತ್ಸ್ರೋತೋರಮ್ಯಂ ಕ್ಷಿತಿ ತೊಳಗೆ ಸಸ್ಯಪ್ರಸರದಂ
ಕರಂ ಕಾಂತಂ ಕಾಲಂಗಳೊಳೆ ಸಲಿಲಾವರ್ತಶರದಂ
ಶರಾರೂಢ್ಯತ್ಕಾಮಿದ್ವಿಪಕಳಭಮುಂದಾಗೆ ಸರದಂ
ಪರಾಗಶ್ರೀ ನೆಯ್ದಿಲ್ಗೊದವಿ ಬರೆ ಬಂದತ್ತು ಸರದಂ ॥

('ಲೀಲಾವತಿ,' ೫-೨೦)

ಪಾದಾಂತ ಅವ್ಯಪೇತ (+ ವ್ಯಪೇತ) (ಸಜಾತೀಯ, ವಿಜಾತೀಯ)

ಕೆಲದೊಳ್ ಪುಳಿಂದಿಯಿರೆ ಪೆ । ರ್ಬುಲಿ ಬಂದೊಡಮಂಜನಳ್ಕನೋಡಂ ನೋಡಂ ।
ಚಲದಿಂ ಕಾಡಂ ಕಾಡಂ । ಸಲೆ ಪಸಿವಂ ನುಱಿದು ತಣಿದು ಬೇಡಂ ಬೇಡಂ ॥

(ಹರಿಹರ, 'ಗಿರಿಜಾಕಲ್ಯಾಣ', ೧-೧೧೭)

ಮಧ್ಯಾಂತ ಅವ್ಯಪೇತ (ವಿಜಾತೀಯ)

ನುತಿಗೆಯ್ದಂ ನುತರಾಜರಾಜನಗಜಾತಾಕಾಂತನಂ ಕಾಂತನಂ
ಶಿತ ಶೂಲಾಹತನಾಗ ನಾಗಭರಣ ಭ್ರಾಜಿಷ್ಣುವಂ ಜಿಷ್ಣುವಂ
ದಿತನಂ ವಿಶ್ರುತ ದೇವದೇವನನುದಾರಶ್ರೀದನಂ ಶ್ರೀದನಂ
ದಿತನಂ ದರ್ಶಿತಭಾವ ಭಾವಜತಮಃಶ್ರೀಸೋಮನಂ ಸೋಮನಂ ॥

('ರಾಜಶೇಖರ ವಿಳಾಸ', ೩-೩೫)

ರಾಯು ಕೇಳಾಗ ಪೂರಾಯುಗಾಯೆಂದೊಳಸ್ರ
ತೋಯುದಿಂದವಯುವಂ ತೋಯುಲಳವಳಿದು ರಾ
ಧೇಯುಜಂ ಬಹಳ ಬಾಧೇಯುನಾಗಲ್ಕವನ ಸಾರಥಿ ರಥವ ತಿರುಗಿಸೆ
ಜೇಯುನೇರಿಸಿ ಬಿಲ್ಲಜೇಯು ಹರಿಸೂನು ಸಹ
ಸಾಯುತಿಕೆಯಿಂದೆ ನಿಜಸಾಯುಕವನುಗಿಯುತ್ತಡ
ಹಾಯಿದಂ ಕರೆ ಕೊಳ್ ಸಹಾಯಿಗಳನೆನುತ ಕಡುಗಲಿ ಸುಧನ್ವನ ಸರಿಸಕೆ ॥

('ಜೈಮಿನಿ ಭಾರತ', ೧೨–೨೮)

ಆದಂತ್ಯ ಅವ್ಯಪೇತ (ವಿಜಾತೀಯ) [ರುದ್ರಟನ ವಕ್ತ್ರ(೩-೪೧)]

ಕೇಳಂ ಕೇಳಂ ಮೃಗೀಲೋಚನೆಗಸು ನೆಱವೀ ತಾನವಂ ತಾನವಂ ವಾ
ಚಾಳಂ ಚಾಳಂ ಮರುಳ್ಮಾಡಿದನಳಿಪಳಿಪಂ ಕಾಱುವಂ ಕಾಱುವಂ ಹಿಂ
ದೋಳಂ ದೋಳಂ ಸಪಾಪ್ಮಂ ವಿಚಕಿಲನಲಿನೀ ಜಾಲಕಂ ಜಾಲಕಂ ಕ
ಬ್ಬಾಳಂ ಬಾಳಂದವಾಯ್ತಿಂ ನೆರಪನೊಲವಿನಿಂ ಕಾಳ್ಮನೋಜಂ ಮನೋಜಂ ॥

ಮಾರಂ ಮಾರಂ ಸವಂ ಮಾಡಿದನಬಲೆಗಿದೇಕನ್ನೆಯಂ ಕನ್ನೆಯಿಂದಿಂ
ದಾರಂ ದಾರಂಬೊಲೋತೊಂದಿದಳಿವಳಱಿಯೇನಲ್ಲಳೇ ನಲ್ಲಳೇ ನೀಂ
ಕೂರಂ ಕೂರಂ ದಲೆಂಬಂತೆಸಗೆ ಸುಖಮನಕ್ಕಾಡದಿರ್ ಕಾಡದಿರ್ ಸಂ
ಸಾರಂ ಸಾರಂ ಸಸ್ನೇಹಮನಱಿದಱಿದೊಲ್ದೀ ವಿರಾಗಂ ವಿರಾಗಂ ॥

('ಅನಂತನಾಥಪುರಾಣ', ೮–೨೮, ೨೯)

ಆದಿ ಮಧ್ಯಾಂತ ಅವ್ಯಪೇತ (ವಿಜಾತೀಯ)

ಮಾರಾಮಾರಾಮ ರಂಗತ್ಕಮಳ ಕಮಳವನಾತ್ಮನ ಸನ್ಮಾನ ಸಂಪ
ತ್ಸಾರಂ ಸಾರಂಗಯೋಷಿತ್ಸುರತ ಸುರತರೋನ್ಮಾನಭೋಗಂ ನಭೋಗಂ
ದಾರೂದಾರೂಢಮುಸ್ತೋಕದಳ ಕದಳ ಗುಂಜಾಕರಂ ಜಾಕರಂ ಮಂ
ದಾರೋದಾರೋರುಕುಂಜಂ ವಿಷಮವಿಷಮಹಾಪನ್ನಗೇಂದ್ರಂ ನಗೇಂದ್ರಂ ॥

(ಆಚಣ್ಣ, 'ವರ್ಧಮಾನ ಪುರಾಣ' ೧೦-೧೧)

೬. ಸಂದಷ್ಟಯಮಕ (ಚಕ್ರವಾಲಯಮಕ) :

ಚೋಳಕುಲವಿಲಯಕಾಳಂ । ಕಾಳಮುಖ ಪ್ರಾಪಿತೋದ್ಧಾಹಿತ ಮಾಳಂ ।
ಮಾಳವ ರಾಜಕ ಶೂಲಂ । ಶೂಲಾಯುಧ ಚರಣ ಕಮಲ ಭೃಂಗಂ ಸಿಂಗಂ ॥

('ಮದನತಿಲಕ', ೧–೫)

ಈ ಬಗೆಯನ್ನು ಪಾದಾಂತ ಮುಕ್ತಪದ ಗ್ರಹಣವೆಂದೂ ಹೇಳಬಹುದು. ವೃತ್ತ ('ಕಾವ್ಯವಲೋಕನ',ಪ. ೫೪೮) ಕಂದಗಳಲ್ಲಿ ಮಾತ್ರವೇ ಅಲ್ಲದೆ ರಗಳೆಯ ಪಾದಗಳಲ್ಲಿ ಸಹ ಅಲ್ಲಲ್ಲಿ ಕಣ್ಣಿಗೆ ಬೀಳುತ್ತದೆ. ಉದಾ.ಗೆ:

ನೂತನ ಸಂಗತ ಕೈವಲ್ಯ ಬೋಧ । ಬೋಧ ಪ್ರಕಾಶ ವಸ್ತು ಸ್ವರೂಪ ॥
ರೂಪಾತಿಶಯಾನ್ವಿತವಿತತವಿಭವ । ಭವನಿವಹಪಟಳನಿರ್ಮುಕ್ತ ಜೀವ ॥

('ಸುಕುಮಾರ ಚರಿತೆ', ೮–೬೬)

ಆ ನೆಗಟ್ದ ನಿಳಿಂಪಮದದ್ವಿಪಕ್ಕೆ । ಪಕ್ಕೆನೆ ಮಣಿಘಂಟಾಗಣದ ಮಸಕ ॥
ಮಸಕಟಿದ ರವಂಗಳಿನಂದೆಸೆಯೆ । ದೆಸೆಯೆಲ್ಲಂ ಬಧಿರಿತಮೆನಿಸುವನ್ನ ॥

('ಪುಷ್ಪದಂತಪುರಾಣ', ೧೦–೪೫)

ಹೀಗೆ ಸಾಗುವ ಪಂಕ್ತಿಗಳು 'ಸುಕುಮಾರಚರಿತೆ'ಯಲ್ಲಿ ೨೬ ಹಾಗೂ 'ಪುಷ್ಪದಂತ ಪುರಾಣ'ದಲ್ಲಿ ೨೨ ಇವೆ. ಈ ಯಮಕಸಂಘಟನೆ ಆದ್ಯಂತ ಪ್ರಾಸರಾಹಿತ್ಯದ ಕೊರತೆಯನ್ನು ಅದೊಂದು ರೀತಿಯಲ್ಲಿ ತುಂಬಿ ಕೊಡುತ್ತದೆ.

ಈ ಬಗೆಯ ಕೆಲವು ಗದ್ಯ ಪದ್ಯಗಳ ನಿದರ್ಶನಗಳು ಕನ್ನಡ ಸಾಹಿತ್ಯದಲ್ಲಿ ಗೋಚರಿಸುತ್ತವೆ. ಇವು ಸಹಜವಾಗಿಯೇ ಮುಕ್ತಪದ ಗ್ರಹಣಗಳು. ಕೆಲವನ್ನು 'ಚಕ್ರವಾಳ' ಎಂಬುದಾಗಿ ವಿಶೇಷಿಸಿರುವುದು ಸಂಸ್ಕೃತದಲ್ಲಿ 'ಚಕ್ರವಾಲ(ಕ)' ಎಂಬ ಯಮಕಭೇದದ ಅನುಸರಣೆಯ ಫಲ.[6] ಇಲ್ಲಿ ಭಿನ್ನಾರ್ಥಕತ್ವ ಎಲ್ಲೆಡೆಯೂ ಸಾಧ್ಯವಾಗದು ಎಂಬುದನ್ನು ಗಮನಿಸಬೇಕು.

(i) "ಜಯಜಯ ಜಗತ್ತ್ರಯಪತಿಕಿರೀಟಕೂಟಕೋಟಿಕಿರೀಟಮಣಿಮಸೃಣ ಚಾರುಚಂಚನ್ನಖ ಮಯೂಖೋದಂತಮಯೂಖಮಂಡಲ ಮಂಡಲೀಭೂತಸಕಲದಿಕ್ಪಾಲಮಾಲಾಮೌಳಿಮಣಿಕಿರಣ ಜಾಲ ಬಾಲಾತಪಚ್ಛಾಯಾರುಣಿತ ತರುಣಪಾರಿಜಾತಪಲ್ಲವಾಯಮಾನಪಾದಪಲ್ಲವ ಪಲ್ಲವಿತ ಕುಸುಮಿತಾನಲ್ಪಕಲ್ಪಲತಾಯಮಾನ.... ದ್ವಾತ್ರಿಂಶದಿಂದ್ರಮಣಿಮಯಕಿರೀಟಕೋಟಿಘಟಿತಘಟ್ಟಿತ ಪಾದಪೀಠ ಪೀಠೀಕೃತಮಂದರಾಚಲಶಿಖರ ಶಿಖರೀಭೂತ ತಿಲಕಾಯಮಾನ ಮಹನೀಯ ಮಹಿಮೋದಯ ಮಹಿಮೋದಯೋದ್ಭಾಸಿ ಭಗವಜ್ಜಿನೇಂದ್ರ ವೃಂದ ವೃಂದಾರಕ ಶ್ರೀಮದಜಿತ ಭಟ್ಟಾರಕ ಜಿನ...."

('ಅಜಿತಪುರಾಣ', ೪-೭೯ವ.)

(ii) "ಅಂತು ಕಾಣಲೊಡನೆ ಝಲ್ಲೆಂದ ಮೆಲ್ಲೆರ್ದೆಯುಂ ಮೆಲ್ಲೆರ್ದೆಯೊಡನೆ ಸಮುಲ್ಲಸಿತವಾದ ಮೆಯ್ಮವಿರುಂ ಮೆಯ್ಮವಿರನವಿರತಂ ಮುಟ್ಟಂಗಿಸಿದ ಘರ್ಮಜಲಕಳಿಕೆಗಳುಂ ಘರ್ಮಜಲಕಳಿಕೆಗಳುದಿರೆ ಕಂಪಿಸುವ ಕಾಯಮುಂ...."

('ಲೀಲಾವತಿ', ೪–೧೪೫ವ.)

ಈ ಮೇಲಿನ ಎರಡು ಲಕ್ಷ್ಯಗಳಲ್ಲಿಯೂ 'ಚಕ್ರವಾಳ' ಎಂಬ ಮಾತನ್ನೇನೂ ಬಳಸಿಲ್ಲ; ಲಕ್ಷಣವುಂಟು.

(iii) "ಜಯ ಸಕಳ ಕಳಂಕವಿಗತಪ್ರಭಾವ ಭಾವೈಕಗಮ್ಯಮಾನ ಮಾನಸಾದಿ ಪ್ರವರ್ತನಾಧಾರ ಧಾರಣಾದಿ ಯೋಗಮಾರ್ಗ ಪ್ರತ್ಯಕ್ಷ ಅಕ್ಷಯಾಕಾರ ಕಾರಕಪದವೀಧುರಂಧರ ಧರಾದಿ ಪ್ರಪಂಚ ನಿಲಯ ಲಯೋತ್ಪತ್ತಿರಹಿತ ಹಿತೋಪದೇಶಾರ್ಥಕೃತಚತುರ್ವೇದ ವೇದನಾ ಪ್ರಮೋದ ಯಮೀಂದ್ರ ಹೃದಯಾವಾಸ ವಾಸರೇಶ ಪ್ರಮುಖ ನಿಖಿಲಕಾಲಚಕ್ರ ಚಕ್ರಪ್ರವರ್ತನಾನುಶಾಸನ ಸನಕಸನಂದನಸನತ್ಕುಮಾರನಾರದ ಪ್ರಭೃತಿತತ್ವನಿಷ್ಠಾಪರವಿಬೋಧ ದೃಷ್ಟಿಗೋಚರ ಚರಾಚರ ಪ್ರಕೃತಿಮಿಶ್ರಿತಗುಣತ್ರಯ ತ್ರಯೀತರ್ಕಪ್ರವಚನಾತರ್ಕ್ಯಮಹಿಮ...."

('ಜಗನ್ನಾಥವಿಜಯ', ೧೨-೫೭ರ ಮುಂದೆ)

ಒಟ್ಟು ೨೮ ಸಾಲುಗಳಷ್ಟು ನಿಡಿದಾಗಿರುವ ಈ 'ಚಕ್ರವಾಳಗದ್ಯ'ದಲ್ಲಿ ಮುಕ್ತಪದವನ್ನು ಭಾಗಶಃ ಮಾತ್ರ ಮುಂದೆ ಗ್ರಹಿಸುವುದು ಗಮನಾರ್ಹವಾಗಿದೆ. ಚಮತ್ಕಾರ ಹೃದ್ಯವಾಗಿದೆ.

೧೧೩೭ರ ಚಿಕ್ಕಮಗಳೂರು ಶಾಸನವೊಂದರಲ್ಲಿ (ಎಕ. vi, ೧೬೧) ಭರತ ದಂಡನಾಯಕನೆಂಬವನನ್ನು ಶಾಸನಕವಿ 'ಮುಕ್ತಪದಗ್ರಹಣ'ವೆಂಬ ರೀತಿಯಲ್ಲಿರುವ, ಅನಿಯತದೇಶಾವಯವ ಯಮಕವೆಂದೂ ಹೇಳಬಹುದಾದ, ಯಮಕಾಲಂಕಾರದಲ್ಲಿ ಕೀರ್ತಿಸಲು ತೊಡಗಿ ಹಲವು ವೃತ್ತಗಳನ್ನೇ ಹೆಣೆದಿದ್ದಾನೆ. ಉದಾಹರಣೆಗೆ ಆರಂಭದ ಎರಡು ಪದ್ಯಗಳು :

(i) ಜಯ ಜಾಯಾಶರಣಂ ರಣಕ್ಷಿತಿಹತಕ್ಷತ್ರಂ ಹತಕ್ಷತ್ರನಿ
ರ್ದಯ ನಿರ್ದಾರಿತ ದೇಹಲೋಹಿತ ಪಯಶ್ಶ್ಯಾತಾಸಿ ಶಾತಾಸಿದು
ರ್ಜಯ ಧಾರಾ ಚಕಿತಾರಿ ರಕ್ಷಣ ಭುಜಾದಂಡಂ ಭುಜಾದಂಡಕೋ
ಟಿಯುವದ್ವೀರವಧೂಪ್ರಮೋದಿ ಭರತಶ್ರೀಮುಚ್ಚಮೂವಲ್ಲಭಂ ||

ನಯ ಯುಕ್ತ ಕ್ರಮ ವಿಕ್ರಮಂ ಕ್ರಮನಮದ್ಭೂಮಂಡಳಂ ಮಂಡಳ
ಪ್ರಿಯವೃತ್ತಂ ಪ್ರಿಯವೃತ್ತ ಸಂಗತ ಗುಣಗ್ರಾಮಂ ಗುಣಗ್ರಾಮಣೀ
ನಯನಾನಂದಕರಂ ಕರಾರ್ಪಿತಧನುರ್ಜಾಗ್ರಾವದೂರೀಕೃತಾ
ರಿಯಶೋರಾಜಿ ಜಿತೋದ್ಧತಾಜಿ ಭರತಶ್ರೀಮುಚ್ಚಮೂವಲ್ಲಭಂ ||

(ii) ಕವಿ ನಿರ್ವಾಣಂಗೆ ಬಾಣಂಗವನಿಗೆಸೆವ ಹರ್ಷಂಗೆ ಹರ್ಷಂಗೆ ವಿಖ್ಯಾ
ತ ವಿಜನ್ಮಾಘಂಗೆ ಮಾಘಂಗಖಿಳಸುಕವಿರತ್ನಂಗೆ ರತ್ನಂಗೆ ಸಂದೊ
ಪ್ಪುವಿಳಾರುದ್ರಂಗೆ ರುದ್ರಂಗೊದವಿದ ಪದಪಿಂದಗ್ಗಳಂಗಗ್ಗಳಂಗು
ತ್ಸವದಿಂದಾವಂ ದಿಟಂ ವಂದಿಸುವದಟನವಂ ಸತ್ಕವೀಂದ್ರಾವತಂಸಂ ॥

('ಕುಸುಮಾವಳಿ', ೧–೪)

೭. ಸಮುದ್ಗಯಮಕ :

ವ್ಯವಹಿತ ಸಮುದ್ಗ [ರುದ್ರಟನ ಸಮುದ್ಗಕ (೩-೧೭)]

ಕುವಲಯಕಧಿಪತಿಯಪ್ಪನೆ । ತನೆ ಲಕ್ಷಣಯುಕ್ತನಲ್ಲದಿರ್ದೊಡೆ ರಾಜಂ ।
ಕುವಲಯಕಧಿಪತಿಯಪ್ಪನೆ । ತನೆ ಲಕ್ಷಣಯುಕ್ತನಲ್ಲದಿರ್ದೊಡೆ ರಾಜಂ ॥

('ರಾಜಶೇಖರ ವಿಳಾಸ', ೧೧–೭೫)

ಸ್ಥಿರನೇ ಸದ್ಗುಣಿಯೇ ವಿವೇಕನಿಧಿಯೇ ವಿದ್ವಜ್ಜನಾಧಾರನೇ
ನಿರಹಂಕಾರ ವಿನೋದನೇ ಮನುಮುನಿಪ್ರಖ್ಯಾತನೇ ನಾಕನೇ
ಸ್ಥಿರನೇ ಸದ್ಗುಣಿಯೇ ವಿವೇಕನಿಧಿಯೇ ವಿದ್ವಜ್ಜನಾಧಾರನೇ
ನಿರಹಂಕಾರ ವಿನೋದನೇ ಮನುಮುನಿ ಪ್ರಖ್ಯಾತ ಕೀರ್ತಿಧ್ವಜಂ ॥

('ಶಾಸನಪದ್ಯಮಂಜರಿ', ಪು. ೧೨೪)

ಗುರುಜನಕಂ ಕವೀಂದ್ರಜನಕಂ ಗುಣವಜ್ಜನಕಂ ಸಮಸ್ತ ಸಾ
ಕ್ಷರಜನಕಂ ಜಗಜ್ಜನಕವೊಲ್ದುದನಿತ್ತ ಭಿರಕ್ಷಿಪರ್ತಿಯಿಂ
ಗುರುಜನಕಂ ಕವೀಂದ್ರಜನಕಂ ಗುಣವಜ್ಜನಕಂ ಸಮಸ್ತ ಸಾ
ಕ್ಷರಜನಕಂ ಜಗಜ್ಜನಕನೆಂಬುದು ಮೇದಿನಿ ಶಾಂತಿವರ್ಮನಂ ॥

('ಪುಷ್ಪದಂತ ಪುರಾಣ', ೧–೭೫)

ವನರಾಶಿಯೊಳಗೆ ಬೆಳೆದೆಸೆ । ವನೇಕ ವಿದ್ರುಮದ ಲತೆಯ ಪೊಂಪುಳಿಯವೋಲಾ ।
ವನರಾಶಿಯೊಳಗೆ ಬೆಳೆದೆಸೆ । ವನೇಕ ವಿದ್ರುಮದ ಲತೆಯ ಪೊಂಪುಳಿ ರಯ್ಯಂ ॥

('ಪುಷ್ಪದಂತ ಪುರಾಣ', ೯–೩೧)

ಈ ಮೇಲಿನ ಮೂರು ಉದಾಹರಣೆಗಳಲ್ಲಿ ಮೊದಲನೆಯದು ಮಾತ್ರವೇ ಲಾಕ್ಷಣಿಕಸಮ್ಮತವಾದ್ದು. ಉಳಿದೆರಡೂ ಭಾಗಶಃ ಲಕ್ಷಣವನ್ನು ಪೂರೈಸುತ್ತವೆ. ಇವನ್ನು ಪ್ರಥಮ-ತೃತೀಯ ಪಾದಗಳ ಆವೃತ್ತಿಯ ಈ ಮುಂದಿನ ಯಮಕ ಭೇದದಲ್ಲಿಯೂ ಗಣಿಸುವುದು ಶಕ್ಯವಿದೆ.

ವ್ಯವಹಿತ ಸಮುದ್ಗ [ರುದ್ರಟನ ಸಂದಂಶ (೩-೫)]

ಬುಧನಿಧಿ ವಿವೇಕನಿಧಿ ಗುಣ । ನಿಧಿಯಾದಿತ್ಯಾನುಜಂ ತದಂತೇವಾಸಂ ।
ಬುಧನಿಧಿ ವಿವೇಕನಿಧಿ ಗುಣ । ನಿಧಿ ಬರೆದಂ ತ್ರಿಕ್ರಮಾಂಕನೀ ಶಾಸನಮಂ ॥

(ಎಕ. v, ಅರಸೀಕೆರೆ ೨೨)

ಚಕ್ರಾಸಿ ಗದಾ ಕಾರ್ಮುಕ । ಚಕ್ರಧರಂ ಚಕ್ರಿ ಮುನ್ನಮಭ್ಯಾಸದೊಳಾ ।
ಚಕ್ರಾಸಿ ಗದಾ ಕಾರ್ಮುಕ । ಚಕ್ರಧರಂ ತಾನೆನಿಪ್ಪನಾ ಕಂದರ್ಪಂ ॥

('ಕುಸುಮಾವಳಿ', ೭–೬೯)

ಅರಮನೆಗಲ್ತು ಸೂಳೆಮನೆಗಲ್ತು ಸವಣ್ಮನೆಗಲ್ತು ಕೂಡೆ ಬ
ಲ್ಲರ ಬಗೆಗಲ್ತು ವಸ್ತುಕೃತಿಯಂ ಸಲೆ ಪೇಳ್ವುದು ಕಲ್ತು ಪೇಳಿದಂ
ದರಮನೆಗಲ್ತು ಸೂಳೆಮನೆಗಲ್ತು ಸವಣ್ಮನೆಗಲ್ತು ಕೂಡೆ ಬ
ಲ್ಲರ ಬಗೆಗಲ್ತದಾವೆಡೆಗಮುಲ್ತದು ಕಲ್ಪಿ ವಲಂ ಕವೀಂದ್ರರಾ ॥

('ಕಾವ್ಯಾವಲೋಕನ', ಪ. ೨೦೫)

ಅವ್ಯವಹಿತ ಸಮುದ್ಗ

ವಸುಮತಿರಾಜಿತಂ । ವಸುಮತಿರಾಜಿತಂ ।
ವಸುಮತಿರಾಜಿತಂ । ಕುಸುಮ ಬಾಣೋದಯಂ ॥

('ಮದನತಿಲಕ', ೧೦-೯)

೮. ಮಹಾಯಮಕ (?) :

ಕುಸುಮಾ ಮನೋಹರಂ । ಕುಸುಮಾ ಮನೋಹರಂ ।
ಕುಸುಮಾ ಮನೋಹರಂ । ಕುಸುಮಾ ಮನೋಹರಂ ॥

('ಮದನತಿಲಕ', ೧೦-೮೭)

ಈ ಲಕ್ಷ್ಯಪದ್ಯವನ್ನು 'ಮದನತಿಲಕ'ದ ಮಾತೃಕೆಯಲ್ಲಿ ಮಹಾಯಮಕವೆಂದಿದೆ. ಆದರೆ ದಂಡಿ ರುದ್ರಟರ ಮಹಾಯಮಕಗಳಿಂದ ಇದು ಬೇರೆ [ರುದ್ರಟನ ಪಂಕ್ತಿ (೩-೧೨)]. ಇದು ವಿಚಾರಾರ್ಹ.

೯. ಅವ್ಯಪೇತ-ವ್ಯಪೇತ-ಸಂದಷ್ಟ ಯಮಕ :

ಕಂಡೊಡನಾಡಿದಕ್ಕರಿಗನಕ್ಕರಿಗಂ ಗೆಡೆಗೊಂಡ ಪಂಡಿತಂ
ಪಂಡಿತನೆಯ್ದೆ ಕಲ್ತ ಚದುರಂ ಚದುರಂ ಸಭೆಗುಕ್ತಿಮಂಡನಂ
ಮಂಡನನಟ್ಟಿಯಂ ಕಿಡಿಸದಾಳ್ವ ನೃಪಂ ನೃಪನಿರ್ದ ಮಂಡಲಂ
ಮಂಡಲನೆಂದೊಡಯ್ದಲರಿದುನ್ನತಿಯಂ ಕವಿಚಕ್ರವರ್ತಿಯಾ ॥

('ಶಾಂತಿಪುರಾಣ', ೧೨-೭೮)

ಇಲ್ಲಿ ಭಿನ್ನಾರ್ಥಕತ್ವ ಲಕ್ಷಣಕ್ಕೆ ಭಂಗವಿದೆಯಾದರೆ, ಇದು ಶುದ್ಧವಾದ ಲಕ್ಷ್ಯವಾಗದು.

ಈ ವರೆಗೆ ದಂಡಿಯ 'ಕಾವ್ಯಾದರ್ಶ'ದ ಲಕ್ಷಣ-ಲಕ್ಷ್ಯಗಳ ನಿರ್ದೇಶನವನ್ನು ಮುಖ್ಯವಾಗಿ ಅಧಿಕರಿಸಿಕೊಂಡು ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಮಾರ್ಗಕವಿತ್ವಕ್ಕೆ ಪ್ರಾಶಸ್ತ್ಯವಿತ್ತು, ಯಮಕಭೇದಗಳಿಗೆ ಕನ್ನಡದಲ್ಲಿ ಲಕ್ಷ್ಯಗಳನ್ನು ಉದಾಹರಿಸಿದುದಾಯಿತು. ಭರತ, ದಂಡಿ,ರುದ್ರಟ, ಭೋಜ ಈ ಪ್ರಸಿದ್ಧ ಲಾಕ್ಷಣಿಕರ ನಿರೂಪಣೆಗಳಿಗೆ ಹೊಂದಿ ಕೊಳ್ಳುವ ಭೇದಗಳನ್ನು ಇನ್ನೂ ಶೋಧಿಸಿ ತೆಗೆಯುವುದು ಅವಶ್ಯವಿದೆ. ಆದರೆ ವಿಸ್ತಾರಭೀತಿಯಿಂದ ಇಲ್ಲಿ ಆ ಪ್ರಯತ್ನಕ್ಕೆ ಕಡಿವಾಣಹಾಕಿದೆ.

ಈ ವರೆಗೆ ನಮ್ಮ ಪ್ರಾಚೀನ ಸಾಹಿತ್ಯದಲ್ಲಿ ಯಮಕಸಂಘಟನೆ ಹೇಗೆ ಕಂಡುಬರುತ್ತದೆ ಎಂಬುದನ್ನು ಸ್ವಲ್ಪಮಟ್ಟಿಗೆ ಪರಿಚಯಮಾಡಿಕೊಂಡೆವು. ಇದಕ್ಕಾಗಿ ಚಂಪೂ ಕೃತಿಗಳನ್ನು ವಿಶೇಷವಾಗಿ ಲಕ್ಷಿಸಿದ್ದು, ದೇಶೀಯ ಗಳಾದ ಷಟ್ಪದೀ ಸಾಹಿತ್ಯದ ಕೃತಿಗಳನ್ನು ಪ್ರಾತಿನಿಧಿಕವಾಗಿ ಮಾತ್ರ ಗಮನಿಸಿದೆ. ರಗಳೆ ಸಾಂಗತ್ಯ ತ್ರಿಪದಿ ಮುಂತಾದುವನ್ನು ಕೈಬಿಟ್ಟಿದೆ. ಹೀಗೆ ಕೈಬಿಟ್ಟಿರುವ ಬಂಧಗಳಲ್ಲಿ, ಆ ಬಂಧಗಳಲ್ಲಿ ಕಟ್ಟಿರುವ ಕೃತಿಗಳಲ್ಲಿ ಯಮಕ ಸಂಘಟನೆಯಿರುವುದಿಲ್ಲ ಎಂಬುದು ಇದರ ಅರ್ಥವಲ್ಲ. ನಮ್ಮ ಲಾಕ್ಷಣಿಕರು ನಿರೂಪಿಸಿರುವ ಆದಿಮಧ್ಯಾಂತಗಳಾದ ಯಮಕಗಳನ್ನು ನಾವು ಇಲ್ಲಿಯೂ ನಿರೀಕ್ಷಿಸಬಹುದು. ಇವರು ಯಮಕ ಭೇದಗಳಿಗೆ ಲಕ್ಷಣನಿರ್ವಚನಮಾಡುವಾಗ, ಅನುಷ್ಟುಪ್ ಮತ್ತು ವರ್ಣ ವೃತ್ತಗಳನ್ನು ಲಕ್ಷ್ಯದಲ್ಲಿರಿಸಿಕೊಂಡಿದ್ದರು ಎಂಬುದನ್ನು ಗಮನಿಸಬೇಕು. ನಮ್ಮ ವೃತ್ತ ಕಂದಗಳಿಗೆ ಸಹ ಈ ನಿರ್ವಚನ ಚೆನ್ನಾಗಿ ಅನ್ವಯಿಸುತ್ತದೆಯೆಂಬುದರಿಂದ, ಹೀಗೆ ವೃತ್ತ ಕಂದಗಳನ್ನು ಹೂಡಿ ಚಂಪುಗಳನ್ನು ಬರೆದ ಕನ್ನಡದ ಮಾರ್ಗಕವಿಗಳಲ್ಲಿ ಹಲವರು ಈ ನಿರ್ವಚನವನ್ನು ಬಲ್ಲವರಾಗಿದ್ದರು ಎಂಬುದ ರಿಂದ, ಈ ಬಂಧಗಳಲ್ಲಿಯೇ ಅವನ್ನು ಪ್ರಾಶಸ್ತ್ಯ ಕೊಟ್ಟು ಗುರುತಿಸುವುದು ಸಮರ್ಥನೀಯವಾಗಬಹುದು. ಯಮಕಾಲಂಕಾರದ ಪ್ರೀತಿ ಪಂಪ, ಪೊನ್ನ, ರನ್ನ, ನಾಗವರ್ಮ(೨), ಜನ್ನ, ನೇಮಿಚಂದ್ರ, ರುದ್ರಭಟ್ಟ, ಬಂಧುವರ್ಮ, ಆಚಣ್ಣ, ಗುಣವರ್ಮ(೨), ಬಾಹುಬಲಿಪಂಡಿತ ಈ ಮೊದಲಾದ ಚಂಪೂಪದ್ಧತಿಯ ಮೊದಲಿಗರಲ್ಲಿ, ಸ್ವಲ್ಪ ಅನಂತರದವರಲ್ಲಿ, ಎದ್ದು ಕಾಣುವಂತಿದೆ. ಪಾಂಡಿತ್ಯದ ಬಲವುಳ್ಳ, ಅದನ್ನು ತೋರಿಸಿಕೊಳ್ಳುವ ಚಾಪಲ್ಯವೂ

ಇರುವ ಕವಿಗಳಲ್ಲಿ, ಅಲಂಕಾರಕವಿತ್ವ ವಿಜೃಂಭಿಸುವುದು ಸಹಜವೇ ಆಗಿದೆ. ಹೀಗಾಗಿ ಇವರಲ್ಲಿ ಪದ್ಯಕಟ್ಟುವ ಹೊಳವು, ಮಾತುಗಾರಿಕೆಯ ಮೋಜು ಬೆರೆತು, ಯಮಕ ಸಂಘಟನೆ ಸಹಜವಾದ ಕವಿಕಾರ್ಯದ ಅಂಗವೇ ಎನ್ನುವಂತೆ ಪ್ರಕಟಗೊಂಡಿರುತ್ತದೆ.

ಯಮಕ ಸಂಘಟನೆ ಕವಿತೆಗೆ ಶೋಭೆ ಹೆಚ್ಚಿಸುವ ಒಡವೆಯಂತಿದ್ದರೆ ಚೆನ್ನ. ಅದು ಬಂದುದೂ ಹೋದುದೂ ತಿಳಿಯದಂತಿದ್ದರೆ ಲೇಸು. ಪ್ರತಿಯಾಗಿ ಅಲಂಕಾರದ ಬಡಿಗೆಯಾಗಿ, ಮಾತಿನ ಬಡಿವಾರದ ಭಾಗವಾಗಿ ಬಳಕೆಯಾದರೆ ಚೆನ್ನಲ್ಲ. ಅದು ಕೃತಕವೂ ಉದ್ದೇಶಪೂರ್ವಕವೂ ಆಗಿ ಕಾಣಿಸಿಕೊಂಡರೆ ತ್ಯಾಜ್ಯ. ಎಂದರೆ ಯಮಕ ಇತರ ಕಾವ್ಯ ಪರಿಕರಗಳ ಹಾಗೆಯೇ ರಸ ಭಾವಗಳ ಸೊಂಪಿಗೆ ಸಹಕಾರಿಯಾದರೆ ಸೊಗಸು ಹೆಚ್ಚು ಎನ್ನುವುದು ವಿದಿತ.

ಘನದ ಕರಗಿದುದನಱಿದಪ । ಘನದ ವಿಲಾಸಮನದೆಂತು ನಂಬುವುದೊ ಘನಾ ।
ಘನದಿಂದಮಱಿಯಲಾದುದು । ಘನಾಘನಂ ಜವನ ದಾಱಿಗಿಲ್ಲೆಂಬಿನಿತಂ ॥

('ಆದಿಪುರಾಣ', ೪–೬೫)

ಈ ಪದ್ಯದಲ್ಲಿ ಘನ, ಘನಾಘನಗಳೆಂಬ ಯಮಕ ಶಬ್ದಗಳ ಆವೃತ್ತಿ ಸಹಜವೂ ಸುಬೋಧವೂ ಆಗಿರುವಂತೆ ಮೇಲೆ ತೋರುವುದಿಲ್ಲ; ಚಮತ್ಕಾರವೇನೋ ಇದೆ. ಸರ್ವತ್ರವೂ ಯಮಕೌಚಿತ್ಯವನ್ನು ಸಾಧಿಸಿರುವ ಕವಿಗಳು ಯಾರಾದರೂ ಇರುವಂತೆ ತಿಳಿಯದು.

ರುದ್ರಭಟ್ಟನು 'ಜಗನ್ನಾಥ ವಿಜಯ'ದಲ್ಲಿ, ಅದರ ದಶಮಾಶ್ವಾಸದಲ್ಲಿ, ಮೊದಲ ೧೮ ಪದ್ಯಗಳಾದ ಬಳಿಕ ರುಕ್ಮಿಣಿಯ ಶರೀರಸೌಂದರ್ಯವನ್ನು ವರ್ಣಿಸುವ ೩೦ ಪದ್ಯಗಳನ್ನು ಯಮಕಾಲಂಕಾರದೊಂದಿಗೆ ವರ್ಣಿಸಿದ್ದಾನೆ. ಈ ಪದ್ಯಗಳೆಲ್ಲ ಪಾದಾದಿ ಯಮಕ ಸಂಘಟನೆಯಿಂದ ಕೂಡಿದ್ದು, ೧-೨ ಮತ್ತು ೩-೪ನೆಯ ಪಾದಗಳಲ್ಲಿ ಪ್ರತ್ಯೇಕ ಯಮಕವೇರ್ಪಟ್ಟಿರುವ 'ವಿಜಾತೀಯ ಪಾದಾದಿವ್ಯಪೇತಯಮಕ' ಭೇದದ ಪದ್ಯಗಳಾಗಿವೆ ('ಕಾವ್ಯಾದರ್ಶ', ೩-೩೦). ಈ ಕವಿ ಹೀಗೆ ಒಂದೇ ಭೇದವನ್ನು ಏಕೆ ಹಿಡಿದನೋ ತಿಳಿಯದು. ಆದರೆ ಇವನು ಯಮಕಲಕ್ಷಣವನ್ನು ಲಕ್ಷಣ ಗ್ರಂಥಗಳ ಪರಿಶೀಲನೆಯಿಂದ ಸರಿಯಾಗಿ ಬಲ್ಲವನಾಗಿದ್ದನೆಂಬುದನ್ನು, ಇಲ್ಲಿಯ ಕೆಲವು ಪದ್ಯಗಳು "ಎರಡು ಅಥವಾ ಎರಡಕ್ಕಿಂತ ಹೆಚ್ಚಿನ ಸಮಾನಾಕ್ಷರಗಳಿಂದ ಕೂಡಿದ ಪದ ಅಥವಾ ಪದಭಾಗ ಅರ್ಥಭೇದದೊಂದಿಗೆ ಗೊತ್ತಾದ ಸ್ಥಾನಗಳಲ್ಲಿ ಸಂಘಟನೆಯಾಗಬೇಕು" ಎಂಬ ಸಾಮಾನ್ಯ ಲಕ್ಷಣವನ್ನು ಅನುಸರಿಸುವುದರ ಮೂಲಕ ತಿಳಿಯಬಹುದಾಗಿದೆ. ಎರಡು ಉದಾಹರಣೆಗಳು :

ತಾಮರಸಮುಖಿಯ ನಳಿತೋಳ್ । ತಾಮರಸ ಬೆಡಂಗುವೆತ್ತು ಸಿರಿಸದ ಸಮಸೋ ।
ದಾಮಕಮಂ ಗೆಲೆವಂದೆಸೆ । ದಾ ಮಕರಧ್ವಜನ ಪಾಶಮೆನೆ ಸೊಗಯಿಸುಗುಂ ॥ (೩೨)
ಸಂಪಗೆಯೊಳ್ ತನಗನುದಿವ । ಸಂ ಪಗೆ ಚೆಲ್ವಿಂದಮೆನಿಪ ನಾಸಾಮುಕುಳಂ ।
ಕಂಪನವಟ್ಟಿಸಿ ತುಂಬಿಗೆ । ಕಂಪನಮಂ ವಿಟಶಿರಕ್ಕೆ ಪಡೆವುದು ಸತಿಯಾ ॥ (೪೦)

ಈ ಬಗೆಯ ಅರ್ಥಭೇದನಕಾರಿಯಾದ ಯಮಕಸಂಘಟನೆಯನ್ನು ಇದೇ ಕಾಲದ ಕವಿ ನೇಮಿಚಂದ್ರನಲ್ಲಿ ಸಹ ಕಾಣಬಹುದಾಗಿದ್ದರೂ, ಈತನಲ್ಲಿ ಇದರ ಸೊಗಸು ಇನ್ನೂ ಹೆಚ್ಚು. ಎರಡು ಪದ್ಯಗಳನ್ನಿಲ್ಲಿ ಉದ್ಧರಿಸಬಹುದು :

ಇಂ ಪೇಟಿದೆ ನಿಲೆ ಹೃದಯಮೊ । ಳಿಂಪೇಟಿದೆ ಪೋಕುಮೆಂದೆ ಪೇಱಿಸ್ವಂ ಕೇಳಾಂ ।
ಪೆಂ ಪಗಲೆ ಧೃತಿಯನೆರ್ದೆಯಿಂ । ಪೆಂಪಗಲೆ ಸುಧಾಂಶು ಮೂಡಿದಿರುಳಳವಱಿವೆಂ ॥ (೫–೧೧)
ಆ ಕಳ್ಗಳಿಲ್ಲದೆಯುಮೆಸೆ । ವಾಕಳ್ಗಳ ಸೊರ್ಕು ಸಿಲ್ಕಿ ನಿಂದುದನಿಂದಾ ।
ನೇಕಗಲ್ವೆನೆನುತೆ ಮತ್ತಾ । ನೇಕಗವಾಶ್ರಯಮನುರ್ವಿಗಾಶ್ರಯನಾಗಳ್ ॥ (೫–೧೦೨)

ಪದಚ್ಛೇದದಲ್ಲಿ ಅರ್ಥಭೇದವನ್ನು ತರುವ ಈ ಯಮಕ ಸಂಘಟನೆಯೇ ಶ್ಲೇಷಾರ್ಥದಿಂದ ಅರ್ಥಭೇದವನ್ನು ತರುವ ಯಮಕ ಸಂಘಟನೆಗಿಂತ ಮನೋಹರವಾದುದೆನ್ನಬಹುದು. ಶ್ಲೇಷಾರ್ಥ ಸುಲಭವಾಗಿ ತಿಳಿಯುವಂತಿದ್ದರೆ ಅಡ್ಡಿಯಿಲ್ಲ. ಶ್ರಮಸಾಧ್ಯವಾಗಿ ತಿಳಿಯುವಂತಿದ್ದರೆ ಸೊಗಸು ಕಡಿಮೆಯೇ. ಇವಕ್ಕೆ ಹಿಂದೆಯೇ ಮಾದರಿಗಳನ್ನು ನಾವು ಗಮನಿಸಿದ್ದೇವೆ.

ಕವಿ ನೇಮಿಚಂದ್ರ 'ಎನ್ನನ್' ಎಂಬ ಒಂದೇ ಮಾತನ್ನು ಎಂಥವನು, ನನ್ನವನು, ನನ್ನನ್ನು ಎಂಬ ಮೂರು ಅರ್ಥಚ್ಛಾಯೆಗಳಲ್ಲಿ ಬಳಸಿ ವರ್ಣಿಸಿದ

ನೆಱೆ ಬಂದೀ ಮಧುವೆನ್ನನಂಗಭವನೆನ್ನಂ ಚಂದ್ರನೆನ್ನಂ ದಲೆಂ
ಪಱಿಯೆಂ ಕೇಳವನೆನ್ನನೆಂದಱಿಯದಂದೀಗಳ್ ವಿಯೋಗಾರ್ತೆಯೆಂ
ನೆಱೆ ಬಂದೀ ಮಧುವೆನ್ನನಂಗಭವನೆನ್ನಂ ಚಂದ್ರನೆನ್ನಂ ಕೊಲಲ್
ತಱಿಸಂದಿರ್ದಪರಾತನೊಳ್ ನೆರವು ನೀಂ ಶ್ರೀರೂಪಕಂದರ್ಪನೊಳ್ ॥ ('ಲೀಲಾವತಿ', ೨-೫೦)

ಎಂಬ ಪದ್ಯವೊಂದನ್ನು

ಕೊಂಕಣಚಕ್ರವರ್ತಿ ಜಯಕೇಶಿನೃಪಾಲನೊಳಾಂತರ್ ಭೂಭುಜರ್
ಕಂಕಣ ಚಿತ್ರಪತ್ರ ಘನಮಾರ್ಗಣ ಸಂಯುತರಾದರಾನತರ್
ಕಂಕಣ ಚಿತ್ರಪತ್ರ ಘನಮಾರ್ಗಣ ಸಂಯುತರಾದರೋಡಿದರ್
ಕಂಕಣ ಚಿತ್ರಪತ್ರ ಘನಮಾರ್ಗಣ ಸಂಯುತರಾದರದ್ಭುತಂ ॥ (ಪ.೬)

ಎಂಬ 'ಶಾರದಾವಿಲಾಸ'ದ ಶ್ಲಿಷ್ಟ, ಕ್ಲಿಷ್ಟ ಪದ್ಯದೊಂದಿಗೆ ಹೋಲಿಸಿ ನೋಡಬಹುದಾಗಿದೆ. ಈ ಎರಡನೆಯ ಪದ್ಯದ ಆಶಯ ಪಾಂಡಿತ್ಯದ ಬಲವಿಲ್ಲದೆ ಅರ್ಥವಾಗದು. ಹೀಗೆಯೇ ಚನ್ನವೀರ ಜಂಗಮದೇವನ 'ಷಟ್ಸ್ಥಲವಲ್ಲಭ'ದಲ್ಲಿ ಕವಿಯ ಬಗೆಬಗೆಯ ಯಮಕದ ಮೋಹ ಒಂದು ಅತಿರೇಕದ ನೆಲೆಗೆ ಮುಟ್ಟಿರುವಂತೆ ತೋರುತ್ತಿದ್ದು,

ಕಮಲನ ಕಮಲಂ ಸೋಂಕ । ಲ್ಕಮಲಂಗಳ್ ಕುಮುದಮಾಗೆ ಕಮಲಗಳೆಲ್ಲಂ ।
ಕಮಲಕೆ ನಲಿವುತ್ತಿರಲಾ । ಕಮಲಾಂಕಂ ಕಮಲಗಳನ ಕೆದರುತ್ತಿರ್ದುವು ॥ (೫–೨೨೮)

ಎಂಬಂತಹ ಪದ್ಯಗಳು ಓದುಗರನ್ನು ಅಲ್ಲಲ್ಲಿ ಗಾರುಗೆಡಿಸುತ್ತವೆ.

ಅರ್ಥಭೇದನ ಹಾಗೂ ಶ್ಲೇಷೆ ಇವನ್ನು ಲಘುವಾಗಿ ಸಮಾವೇಶಗೊಳಿಸಿರುವ ಲಕ್ಷ್ಯಗಳಿಗೂ ಕನ್ನಡದಲ್ಲಿ ಕೊರತೆಯಿರುವಂತೆ ತೋರುವುದಿಲ್ಲ. ತಿರುಮಲಾರ್ಯನ 'ಚಿಕದೇವರಾಜ ವಿಜಯ'ದ

ಪರಿದು ರಾವುತಪಾಡೊಳಿದಿರ್ಚಿಯಾ । ಪರಿ ದುರಾಸದನಂ ಸದೆದೀಱ್ಬುದುಂ ।
ಪಿರಿಯಪಟ್ಟಣಪೋಂ ಪೆಸರಿಂದಮೇ । ಪಿರಿಯ ಪಟ್ಟಣಮೊಳ್ಪುರುಳಿಂದೆಯುಂ ॥ (೨–೧೩೬)

ಎಂಬಂತಹ ಉದಾಹರಣೆಯಲ್ಲಿ ಅದನ್ನು ಗಮನಿಸಬಹುದಾಗಿದೆ.

೧೨. ಅನಿಯತ ದೇಶಾವಯವ(ಅಸ್ಥಾನ) ಯಮಕ :

ಇನ್ನು ಮುಂದೆ ಭಾಮಹ ರುದ್ರಟ ಮೊದಲಾದವರು ಸೂಚಿಸುವ ಅನಿಯತದೇಶಾವಯವಗಳಾದ ಇಲ್ಲವೆ ಅಸ್ಥಾನಗಳಾದ ಯಮಕಗಳನ್ನು ಹಾಗೂ ಗೌಣವಾಗಿ ಭಾಮಹಾದ್ಯರು ನಿರೂಪಿಸಿರುವ ಅನುಪ್ರಾಸ ವೈಚಿತ್ರ್ಯಗಳನ್ನು ದಿಕ್ಪ್ರದರ್ಶನಾರ್ಥವಾಗಿ ಇಲ್ಲಿ ಉದಾಹರಿಸಿದೆ. ಇವನ್ನು ಪದಾವೃತ್ತಿಯ ಪ್ರಚುರತೆಯ ಲಕ್ಷ್ಯಗಳಾಗಿ ಗಮನಿಸಬೇಕಲ್ಲದೆ, ಪ್ರಭೇದಗಳ ದೃಷ್ಟಿಯಿಂದ ಪರಿಶೀಲಿಸುವುದುಅಪೇಕ್ಷಣೀಯವೇನಲ್ಲ.

ಕಸವರಮೆಂಬುದು ನೆಱೆ ಸೈ । ರಿಸಲಾರ್ಪೊಡೆ ಪರವಿಚಾರ[ಮಂ] ಧರ್ಮಮುಮಂ ।
ಕಸವೇಂ ಕಸವರಮೇನು । ಬ್ಬಸಮಂ ಬಸಮಲ್ಲದಿರ್ದು ಮಾಡುವ[ವೆ]ಲ್ಲಂ ॥
('ಕವಿರಾಜಮಾರ್ಗ', ೩-೧೭೬)

ಸಮಲಾವಣ್ಯಪ್ರಸರದ । ಸಮವಿಭವದ ಸಮವಿಲಾಸದಗ್ಗಳಿಕೆಯೊಳಾರ್ ।
ಸಮನಿವರ್ಗೆನೆ ಸಮರಸದೊಳ್ । ಸಮಸಂದತ್ತವರ್ಗೆ ಸಮಸಮಾಯೋಗಸುಖಂ ॥
('ಆದಿಪುರಾಣ', ೮-೨೪)

ನಾಗಮ ನಾಗದಂತಿರೆ ಪಡಲ್ವಡೆ ವಾಹಮ ವಾರಿವಾಹದಂ
ತಾಗಿರೆ ವ್ಯಾಯುಮಾಗೆ ರಥಮುನ್ನಮನೋರಥದಂತೆ ಗೆಂಟುಗೆಂ

ಟಾಗೆ ವಿಪತ್ತಿಯಿಂ ಪಗೆಯೆ ಪತ್ತಿ ಬಲಂ ನಡುಗಿತ್ತು ಚಂಚಲಾಂ
ಭೋಗತ ಚಂದ್ರಮಂಡಲದವೊಲ್ ಜಿತಶತ್ರುಗೆ ಶತ್ರುಮಂಡಲಂ ॥

('ಅಜಿತಪುರಾಣ', ೨-೪೮)

ಯುತಕಮಳಂ ಗತಕಮಳಂ । ಭೃತಕುರವಂ ಮುಕ್ತಕುರವಮಾತ್ತ ಕುವಳಯಂ ।
ಪ್ರತಿಮುಕ್ತ ಕುವಳಯಂ ಚಿ । ತ್ರತರಂ ನೋಡುವ ನರಂಗೆ ಖಾತಮಖಾತಂ ॥

('ಚಂದ್ರಪ್ರಭ ಪುರಾಣ', ೧೫-೩೧)

ಪಡೆವನ್ನಂ ಪಕ್ವಬಿಂಬಕ್ಕಧರಮಧರತಾವಾಪ್ತಿಯಂ ನೇತ್ರಯುಗ್ಮಂ
ಪಡೆವನ್ನಂ ವೈರಮಂ ಕೈರವದೊಳುರುಭುಜಂಗಳ್ ಭುಜಂಗಾಧಿಪಂಗಂ
ಪಡೆವನ್ನಂ ಸೋಲಮಂ ಭಾಸುರದಶನಚಯಂ ಕುಂದದೊಳ್ ಕುಂದನೆಂದುಂ
ಪಡೆವನ್ನಂ ಯೌವನಶ್ರೀ ಪಡೆದುದು ನೃಪಪುತ್ರಾಂಗದೊಳ್ ನಾಡೆ ಚೆಲ್ವಂ ॥

('ಚಂದ್ರಪ್ರಭಪುರಾಣ', ೨-೨೩)

ಬಗೆಗಳವೆಂದಿದಂ ಬಗೆದೆಯಪ್ಪೊಡಿದೊಪ್ಪದು ನಿನ್ನಧೀನನೀ
ಬಗೆಯೆನಗುಳ್ಳುದೊಂದೆ ಬಗೆಯಾ ಬಗೆಯುಂ ನಿನತೆಂದೊಡಾವುದಾ
ಬಗೆ ಪೆಱತೆನ್ನದೆನ್ನ ಗಡ ನಿನ್ನನೆ ತಾಂ ಬಗೆದೆನ್ನನೀಗಳೀ
ಬಗೆ ಬಗೆದಂದುಮೀ ಬಗೆಗೊಡಂಬಡು ಬೇಡಿದಪೆಂ ಮನಃಪ್ರಿಯೇ ॥

('ಲೀಲಾವತಿ', ೧೪-೬೫)

ವಕುಳಂ ಸಪರಿಮಳ ಪ್ರಸ । ವಕುಳಂ ಸೌರಭಸಮಾಗತ ಭ್ರಮರಾರಾ ।
ವಕುಳಂ ಸೊಗಯಿಸಿದತ್ತೆಸೆ । ವ ಕುಳಂಬಿತ ವಿಟಪಮುವನಿಸಂಸ್ಥಾವಕುಳಂ ॥

(ಆಚಣ್ಣ 'ವರ್ಧಮಾನಪುರಾಣ', ೨-೭)

ಅನುಸಿಂಚತ್ಸಲ್ಲಕೀ ಶೀಕರಪರಿಚಯದಿಂ ಶೀತಶೀತಂ ಲತಾಲಿಂ
ಗನದಿಂದಂ ಮಂದಮಂದಂ ಫಣಿಗಣವಿಷದಿಂ ಭೀತಭೀತಂ ಚಳಚ್ಛಂ
ದನಶಾಖಾಂದೋಳದಿಂದಂ ಚಕಿತಚಕಿತಮಾಯ್ತುಚ್ಚರತ್ಕೀಚಕ ಪ್ರ
ಸ್ವನಿತಂ ಮಾನೇಯನಾಗಸ್ಫುಟಿತಕಟಮದಾಮೋದಭಾವಂ ಸಮೀರಂ ॥

(ನೇಮಿಚಂದ್ರ, 'ನೇಮಿನಾಥಪುರಾಣ', ೫-೯೬)

ಜಾತಿಗೆ ಪುಷ್ಪಜಾತಿಗಳ ಜಾತಿಯವೇಂ ಸಮಜಾತಿಯಪ್ಪುವೇ
ಜಾತಿಯೆ ಜಾತಿ ಮಿಕ್ಕರಲ ಜಾತಿಯದೇತಱ ಜಾತಿಯೆಂದಣಂ
ಜ್ಞಾತಿಯ ಜಾತಿಯುಂ ಪೊಗಳ್ದು ಜಾತಿವಿಚಾರವದೆಂದು ಕೊಯ್ದಳಾ
ಜಾತಿಯನಾ ವಿದಗ್ಧವಿಟಭೂ[ತಿ]ಯನಾ ರತಿರಾಗದೂತಿಯಂ ॥

(ಮಲ್ಲ, 'ಕಾವ್ಯಸಾರ', ೧೧-೮೦)

ಜಯಜಯ ಕಾಲಕಾಲ ತತವಿಭ್ರಮವಿಭ್ರಮ ಭಾನುಭಾನು ಚಿ
ನ್ಮಯ ಮಯವಂದ್ಯವಂದ್ಯ ಪದನೀರಜ ನೀರಜ ಧೀರಧೀರ ಸ
ನ್ನಯ ನಯಸಾನ್ವಿತಾನ್ವಿತನಿರಂಜನ ರಂಜನ ರಂಜಸ ಸತ್ವ ಸತ್ವಗಾ
ಶಯ ಶಯ ಭಾಗ್ಯ ಭಾಗ್ಯ ಜನನಂದಿತ ನಂದಿತ ಸುಪ್ರಭುಪ್ರಿಯಾ ॥

('ವೃಷಭೇಂದ್ರವಿಜಯ', ೪೨-೬೨)

ಕಮಲಾಕರನೆಯ್ದಲೊಡಂ । ಕಮಲಾಕರನೆಯ್ದಲಾಗಿ ಕುಮುದಂ ಕುಮುದಂ ।
ಕಮಲಾಳಿಗೆ ಕಮಲಾಳಿಗೆ । ಸಮುದಂ ಸಮುದಂ ಹರಿಹಿತಪಕ್ಷಿಗೆ ತೋರ್ಕುಂ ॥

('ರಾಜೇಂದ್ರವಿಜಯ', ೩-೨೬)

ಕಾಲಕಾಲಾಕಾಲಕಾಲಿಕಾಲಿಕಾತಿಲಕ
ಮೂಲಮೂಲಾಮೂಲ ಮುಕ್ತಮುಕ್ತಾಗೌರ
ಶೀಲಶೀಲಾಶೀಲ ಹರಹರ ದಯೋದಯೋದಾರ ದಾರಾರ್ಧದೇಹಾ
ಜಾಲಜಾಲಾಜಾಲ ಯಾತಯಾತನಜೀವ
ಪಾಲಪಾಲಾ ಫಾಲನೇತ್ರ ನೇತ್ರಾಧಿಪ ವಿ
ಲೋಲ ಲೋಲಾಲೋಲ ಭಂಗಗಂಗಾಪಗಾವಳಿ ಶಿವಲಿಂಗೇಶ್ವರಾ ॥

(ಇಮ್ಮಡಿ ಗುರುಸಿದ್ಧ, 'ಶಿವಲಿಂಗಷಟ್ಪದಿ', ಪ. ೯೦)

ಹರಿನಂದನನ ದಿವ್ಯಹರಿಮಯವರೂಥಮಂ
ಹರಿವೇಗದಿಂದೆಸೆವ ಹರಿಚತುಷ್ಟಯಮುಮಂ
ಹರಿಯುಮಂ ಪಳವಿಗೆಯ ಹರಿಯುಮಂ ಪಾರ್ಥನ ಲಹರಿಯುಮಂ ಧಾತುಗಿಡಿಸಿ
ಹರಿಬದ ಕಲಿಗಳಂ ಪ್ರಹರಿಸಿ ತಾಮ್ರಧ್ವಜಂ
ಹರಿನಾದಮಂ ಮಾಡಿ ಹರಿದಾಡುತಿರೆ ಕೂಡೆ
ಹರಿಣಾಂಕಕುಲಜಂ ವಿಹರಿಸಿದಂ ಬಾಣದಿಂ ಹರಿಕಿರಣಮಡಗುವಂತೆ ॥

('ಜೈಮಿನಿಭಾರತ', ೨೫-೪೬)

ಯಮಕ ಸಂಘಟನೆಯ ಸ್ವರೂಪ

ಕನ್ನಡ ಸಾಹಿತ್ಯದ, ಮುಖ್ಯವಾಗಿ ಪ್ರಾಚೀನ ಕನ್ನಡ ಸಾಹಿತ್ಯದ, ಚಂಪೂಪದ್ಧತಿಯನ್ನು ವಿಶೇಷವಾಗಿ ಗಮನಿಸಿ, ಯಮಕ ಸಂಘಟನೆಯ ಸ್ವರೂಪವನ್ನು ಹೀಗೆ ಸಂಗ್ರಹಿಸಬಹುದಾಗಿದೆ:

(i) ಯಮಕ ಸಂಘಟನೆಯಲ್ಲಿ ಯಮಕಾಂಶಗಳು ವಿಜಾತೀಯಗಳಾಗಿರುವುದೇ ಸಾಮಾನ್ಯ; ಸಜಾತೀಯವಾಗಿರುವುದು ವಿರಳ. (ii) ಪಾದಾದಿ ಯಮಕ ವೈಚಿತ್ರ್ಯಗಳು ಹೆಚ್ಚು ಪ್ರಚುರವಾದವು; ಅನಂತರ ಕ್ರಮವಾಗಿ ಪಾದಮಧ್ಯ, ಪಾದಾಂತಗಳ ವೈಚಿತ್ರ್ಯಗಳು ಎಡೆ ಪಡೆಯುತ್ತವೆ. (iii) ವ್ಯಪೇತರೀತಿಯವೇ ಹೆಚ್ಚಾಗಿ ಗೋಚರಿಸುತ್ತವೆ; ಅವ್ಯಪೇತ ರೀತಿಯವು ಕಡಿಮೆ. ವ್ಯಪೇತದಲ್ಲಿಯೂ ನಾಲ್ಕೂ ಪಾದಗಳ, ಮೂರು ಪಾದಗಳ ಹಾಗೂ ೧-೨, ೩-೪ನೆಯ ಪಾದಗಳ ಯಮಕ ಸಂಘಟನೆ ಅಧಿಕವಾಗಿ ಕಾಣಿಸಿಕೊಳ್ಳುತ್ತವೆ. ೧-೩, ೨-೪ನೆಯ ಹಾಗೂ ೧-೪, ೨-೩ನೆಯ ಪಾದಗಳಲ್ಲಿ ಕಡಿಮೆಯಾಗಿ ಕಾಣಿಸಿಕೊಳ್ಳುತ್ತವೆ. (ಷಟ್ಪದಿಯಾದರೆ, ಇಲ್ಲಿಯ ಪಾದಗಳ ಸಂಖ್ಯೆಗೆ ಅನುಗುಣವಾಗಿ ಪರಿಕ್ರಮ ಬಹುಶಃ ಹೀಗೆಯೇ). (iv) ಸಂದಷ್ಟ, ಸಮುದ್ಗಗಳಂತಹವು ತುಂಬ ವಿರಳ. ಶುದ್ಧವಾದವು ಎಂದು ತೋರುವವು ಇನ್ನೂ ವಿರಳವೇ. (v) ಅನಿಯತ ದೇಶಾವಯವ ಯಮಕಗಳು ನಿಯತದೇಶಾವಯವಗಳಾಗಿ ಲಾಕ್ಷಣಿಕರು ವಿವರಿಸಿರುವಂತಹ ಯಮಕಗಳಿಗಿಂತ ಹೆಚ್ಚು ವ್ಯಾಪ್ತವಾದವು. ಇಲ್ಲಿಯೂ ವ್ಯಪೇತ ರೀತಿಯವೇ ಅವ್ಯಪೇತ ರೀತಿಯವುಗಳಿಗಿಂತ ಅಧಿಕ. (vi) ಪಾದಾದಿ ವ್ಯಪೇತದ ಲಕ್ಷ್ಯಗಳಲ್ಲಿ ೨ನೆಯ ಇಲ್ಲವೆ ೪ನೆಯ ಪಾದದಲ್ಲಿ ಒಂದು ತಿರುವು ಕಾಣಿಸಿಕೊಳ್ಳುವುದು ಸಾಮಾನ್ಯ; ಎಂದರೆ ೨-೩-೪ನೆಯ ಪಾದಗಳಲ್ಲಿ ಇಲ್ಲವೆ ೧-೨-೩ನೆಯ ಪಾದಗಳಲ್ಲಿ ಯಮಕ ಸಂಘಟನೆಯಾಗಿರುತ್ತದೆ.

ಅಡಿಟಿಪ್ಪಣಿಗಳು

1. ಈ ಮುಂದಿನ ಲಕ್ಷ್ಯಗಳಲ್ಲಿ ಒಂದು ಪದ್ಯದ ಹೊರತು (ಕಾವ್ಯಾವ. ಪ. ೫೩೬; ಆದಿಪು. ೪–೪೬) ಉಳಿದವುಗಳಲ್ಲಿ ಯಾವುದೊಂದರ ಆಕರವೂ ತಿಳಿಯದು. ಕವಿಯ ಸ್ವರಚನೆ 'ವರ್ಧಮಾನ ಪುರಾಣ'ದಲ್ಲಿಯೂ ಈ ಪದ್ಯಗಳಿಲ್ಲ. ಲಕ್ಷಣಸಮರ್ಥನೆಗೆ ನಾಗವರ್ಮನೇ ಸ್ವತಃ ಇವನ್ನು ರಚಿಸಿ ಸೇರಿಸಿರಬಹುದು.

2. ಈ ಸೂಚನೆ ಗ್ರಾಹ್ಯವಾಗುವುದಾದರೆ, ಆಶಯ ಬಹುಶಃ ಹೀಗೆ: "ಬೀಸುವ ತಂಗಾಳಿಯಿಂದಲೂ ಕಲಹಂಸಗಳ ಸಹಿತವಾದ ತಾವರೆಗೊಳದಿಂದಲೂ ಮನೋಹರವಾದ ತೋಟದಲ್ಲಿ ವನಿತೆಯರೊಂದಿಗೆ ಪ್ರೀತಿಯಿಂದ ಒಡಗೂಡುವ ವಿಟಪುರುಷರನ್ನು ಮನ್ಮಥನು ಪಾಲಿಸಿದನು (ಅಥವಾ ರಹಸ್ಯವಾಗಿರಿಸಿದನು)." ವ–ಬ ಅಭೇದತ್ವವನ್ನು ಅಂಗೀಕರಿಸಿ 'ವನಿತೆ–ಬನಿತೆ' ಆಗಿದೆಯೆಂದು ತಿಳಿಯಬೇಕು.

3. ಪ. ೩೫೮ರ ಆಶಯ ಬಹುಶಃ ಹೀಗೆ: "ಲೋಕವಿಶ್ರುತನಾದ ಸೂರ್ಯನು ಮುಳುಗಲು, ನೈದಿಲೆ ಅರಳಲು, ಎದುರಿನಲ್ಲಿ ಕಾಮನಬಿಲ್ಲು ಕಾಣಿಸಿಕೊಳ್ಳಲು, ವಿರಹಿಯು ಈ ವಿಷಯ ಕೇಳುತ್ತಲೇ ಬುದ್ಧಿಗೆಟ್ಟು ಖಿನ್ನನಾಗಲು, ಉಜ್ವಲವಾದ ಕಿರಣಗಳು ಭೂಮಂಡಲದಿಂದಲೂ ಚಕ್ರವಾಕಗಳಿಂದಲೂ ದೂರವಾಗಲು, ಪೂರ್ವದಿಕ್ಕಿನಲ್ಲಿ ಪ್ರೀತಿಯಿಂದ (ಪದೆದು) ತಾರಾಧಿಪನಾದ ಚಂದ್ರನು ಶೋಭಿಸುತ್ತಾನೆ."

ಪ. ೩೬೦ರ ಆಶಯ ಅಷ್ಟು ಪರಿಷ್ಕಾರವಾಗಿ ಆಗುವುದಿಲ್ಲ. ನಲ್ಲನ್ + ಏನ್ + ಅಲ್ಲನೇ, ತಪ್ಪು + ದ + ಎನ್—ತಪ್ಪು + ಇದು, ಆಗಲುಂ—ತಾಗಲುಂ, ಸೋಕಲ್ + ಆಪಂ—ಕಲಾಪಂ ಎಂದು ಸಂಧಿಸ್ಥಾನದ ಯಮಕಾಂಶಗಳನ್ನು ಬಿಡಿಸಿ ಹೇಳುವುದು ಮಾತ್ರ ಶಕ್ಯ.

4. ಈ ಪದ್ಯದ ಅರ್ಥ: "ಆರೋಗ್ಯಸಂಪತ್ತು, ಪುಣ್ಯ, ಕ್ಷಮಾಗುಣ ಇವುಗಳಿಗೆ ನೆಲೆಯಾಗಿರುವವನು, ಶತ್ರುರಾಜರನ್ನು ನೆಲಕ್ಕೆ ಉರುಳುವಂತೆ ಮಾಡುವವನು, ತಾವರೆಗಣ್ಣನು ಎಂದರೆ ಸಾಕ್ಷಾತ್ ವಿಷ್ಣುವೇ ಆಗಿರುವವನು, ಕೆಸರಿನಂತಹವರನ್ನು ದೂರವಿಡುವವನು, ಕವಿಗಳಿಗೆ ಪ್ರಿಯನಾದವನು ಆದಂತಹ ಕೃಷ್ಣರಾಜನು ಶೋಭಿಸುತ್ತಾನೆ."

5. ಪದ್ಯಸಾಹಿತ್ಯದಲ್ಲಿಯೇ ಅಲ್ಲದೆ ಗದ್ಯಸಾಹಿತ್ಯದಲ್ಲಿಯೂ ಪದ್ಯಸಾಹಿತ್ಯದ ವಚನಭಾಗದಲ್ಲಿಯೂ ಯಮಕ ರಚನೆ ಸಾಧ್ಯ. ಇಲ್ಲಿ ಲಕ್ಷ್ಯಗಳನ್ನು ಉದಾಹರಿಸಿಲ್ಲ. ಮಾದರಿಗೆ: (i) "....ನೆಲದೊಳಾಚಂದ್ರಸ್ಥಾಯಿಯಾಗೆ ಚತುರ್ದಶಭುವನಂಗಳಂ ಪಸರಿಸಿ ನಿಂದೊಡೆಸೆದುದಾಹ ರಣಮೊಳ್ಪಿನುದಾಹರಣಮುಮಾಗೆ" (ಪಂಪಭಾ. ೧೨–೨೧೩ವ).

6. 'ಪದ್ಮರಾಜಪುರಾಣ'ದ "ನೆನೆಯಲಕ್ಕುಮೆ ನೆನೆದೊಡಂ ನುಡಿಯಲಕ್ಕುಮೇ ! ನೆನೆದೊಡಂ ನುಡಿದೊಡಂ ಬರೆಯಿಸಲ್ ಬಕ್ಕುಮೇ..." (೧೧–೧೮೮) ಎಂಬ ಪದ್ಯವನ್ನು ಮಾತೃಕೆಯಲ್ಲಿ 'ಇದು ಚಕ್ರವಾಳಂ' ಎಂದಿರುವಂತಿದೆ. ಆದರೆ ಶಬ್ದಸರಣಿಗಲ್ಲದೆ ಭಾವಸರಣಿಗೆ ಪ್ರಾಶಸ್ತ್ಯಕೊಟ್ಟಿರುವುದರಿಂದ ಇಲ್ಲಿ ಚಕ್ರವಾಳದ ನಿಯಮ ಸಡಿಲಗೊಂಡಿದೆ.

೩

ವರ್ಣಚಿತ್ರ

೧

ವ್ಯಂಜನಚಿತ್ರಗಳು

ಸಂಸ್ಕೃತದಲ್ಲಿ ವ್ಯಂಜನಚಿತ್ರಗಳು

ವರ್ಣಮಾಲೆಯ ವ್ಯಂಜನಗಳಲ್ಲಿ ಸಾಧ್ಯವಾದಷ್ಟು ಕನಿಷ್ಠ ಸಂಖ್ಯೆಯವನ್ನು ಉಪಯೋಗಿಸಿ ಕವಿ ಸಾರ್ಥಕವಾದ ಪದ್ಯವೊಂದನ್ನು ರಚಿಸುವುದು ವರ್ಣಚಿತ್ರಗಳ ಕೌಶಲಗಳಲ್ಲಿ ಒಂದು ಎನ್ನಬಹುದು. ದಂಡಿಯೂ ಭೋಜನೂ ಇವನ್ನು ವರ್ಣಚಿತ್ರಗಳೆಂದು ಕರೆದಿರುವುದು ಅತಿವ್ಯಾಪ್ತಿಸಂಕೇತವೆಂದು ನಾವು ಒಪ್ಪದೆ ಹೋದರೂ ಇವು ವ್ಯಂಜನ ಚಿತ್ರಗಳಲ್ಲಿ ಸೇರತಕ್ಕವು ಎನ್ನಲು ಅಡ್ಡಿಯಿಲ್ಲ. ದಂಡಿಯ 'ಕಾವ್ಯಾದರ್ಶ', ಭೋಜನ 'ಸರಸ್ವತೀ ಕಂಠಾಭರಣ' ಈ ಕೆಲವು ಲಕ್ಷಣ ಗ್ರಂಥಗಳಲ್ಲಿ ಲಕ್ಷ್ಯಗಳನ್ನು ತೋರಿಸಿ ಇವುಗಳ ಸ್ವರೂಪವನ್ನು ತಿಳಿಯುವಂತೆ ಮಾಡಿವೆ. ಲಕ್ಷಣ ನಿರ್ವಚನಕ್ಕೆ ಪ್ರತ್ಯೇಕ ಸೂತ್ರಗಳನ್ನು ಹೇಳಿಲ್ಲ. ಲಕ್ಷಣ ಗ್ರಂಥ ಮತ್ತು ಕಾವ್ಯಗ್ರಂಥಗಳ ವ್ಯಾಖ್ಯಾನಕಾರರು ಕೆಲವು ಸಾಮಾನ್ಯ ಲಕ್ಷಣಗಳನ್ನು ಹೇಳಿ, ಇವನ್ನು ಅನುಪ್ರಾಸವೆಂಬ ಶಬ್ದಾಲಂಕಾರದ ಲಕ್ಷ್ಯಗಳಾಗಿಯೂ ತಿಳಿದಿರುವುದುಂಟು. ಭಾರವಿ, ಮಾಘ ಮುಂತಾದ ಪಂಡಿತ ಕವಿಗಳು ಸಂಸ್ಕೃತ ಭಾಷೆಯ ತಮ್ಮ ಮಹಾಕಾವ್ಯಗಳಲ್ಲಿ ಇವುಗಳಿಗೆ ವಿರಳವಾಗಿ, ರತ್ನಾಕರ, ಶಿವಸ್ವಾಮಿ, ವಸ್ತುಪಾಲಾದಿಗಳು ಸ್ವಲ್ಪ ಹೆಚ್ಚಾಗಿ ನಿದರ್ಶನಗಳನ್ನು ಒದಗಿಸಿದ್ದಾರೆ. ಅವರ ಶಬ್ದ ಜ್ಞತೆಗೆ ಇವು ಸಾಕ್ಷ್ಯಗಳಾಗಿವೆ.

ಲಕ್ಷಣಗ್ರಂಥಗಳಲ್ಲಿ ಈ ವ್ಯಂಜನಚಿತ್ರಗಳನ್ನು, ಸುಲಭದಿಂದ ಕಷ್ಟದ ಕಡೆಗೆ ಎಂಬ ನಿಯಮದಂತೆ ಅವರೋಹಣ ಕ್ರಮದಲ್ಲಿ ನಿರೂಪಿಸಿದ್ದಾರೆ. ನಾಲ್ಕು ನಿರ್ದಿಷ್ಟ ವರ್ಣಗಳಿಂದ ರಚಿಸಿದ ಪದ್ಯ ಚತುರಕ್ಷರ(ರಿ), ಮೂರು ನಿರ್ದಿಷ್ಟ ವರ್ಣಗಳಿಂದ ರಚಿಸಿದ ಪದ್ಯ ತ್ರ್ಯಕ್ಷರ(ರಿ), ಎರಡು ನಿರ್ದಿಷ್ಟ ವರ್ಣಗಳಿಂದ ರಚಿಸಿದ ಪದ್ಯ ದ್ವ್ಯಕ್ಷರ(ರಿ), ಮತ್ತು ಒಂದೇ ಒಂದು ನಿರ್ದಿಷ್ಟ ವರ್ಣದಿಂದ ರಚಿಸಿದ ಪದ್ಯ ಏಕಾಕ್ಷರ(ರಿ). ಇವನ್ನು 'ಸರಸ್ವತೀ ಕಂಠಾಭರಣ' ಕಾರನು ಕ್ರಮವಾಗಿ ಚತುರ್ವ್ಯಂಜನ, ತ್ರಿವ್ಯಂಜನ, ದ್ವಿವ್ಯಂಜನ ಹಾಗೂ ಏಕವ್ಯಂಜನ ಎಂಬುದಾಗಿ ಹೆಸರಿಸಿದ್ದಾನೆ. ಈ ನಾಲ್ಕರ ವಿಷಯದಲ್ಲಿಯೂ ರಚನೆಯ ಸಾಮಾನ್ಯಲಕ್ಷಣಗಳನ್ನು ಹೀಗೆ ನಿರೂಪಿಸಬಹುದು:

(೧) ನಿರ್ದಿಷ್ಟ ವರ್ಣ ಎಂದರೆ ವ್ಯಂಜನ; ಸಾಮಾನ್ಯವಾಗಿ ಸಂಧಿನಿಯಮಕ್ಕೆ ಒಳಪಟ್ಟ ರೂಪದಲ್ಲಿರುವ ವ್ಯಂಜನ. (೨) ವ್ಯಂಜನ ಗುಣಿತಾಕ್ಷರ ರೂಪದಲ್ಲಿದ್ದು, ಯಾವುದೇ ಸ್ವರ ಅಥವಾ ಸ್ವರಗಳೊಂದಿಗೆ ಸೇರಿ ಆ ರೂಪ ಸಿದ್ಧವಾಗಿರಬಹುದು. (೩) ಸಂದರ್ಭಕ್ಕೆ ತಕ್ಕಂತೆ ವರ್ಗಪಂಚಮಾಕ್ಷರ ಅಥವಾ ಅನುಸ್ವಾರ ವಿಸರ್ಗಗಳು ಅಥವಾ ವಿಸರ್ಗದ ಪ್ರತಿಯಾಗಿ ಬರುವ ಸಂಧ್ಯಕ್ಷರ–ಇವು ಬರುವುದಕ್ಕೆ ನಿಷೇಧವಿಲ್ಲ. (೪) ಪಾದಾಂತ ಅಥವಾ ಪದ್ಯಾಂತ ವರ್ಣ ನಿರ್ದಿಷ್ಟವ್ಯಂಜನ ಅಥವಾ ವ್ಯಂಜನಗಳಿಗಿಂತ ಭಿನ್ನವಾಗಿದ್ದರೂ ದೋಷವಿಲ್ಲ.

ಈಗ ದಂಡಿ ಭೋಜರ ನಿರೂಪಣೆಯ ಅವರೋಹಣ ಕ್ರಮದಲ್ಲಿಯೇ ಈ ವ್ಯಂಜನ ಚಿತ್ರಗಳನ್ನು ಪರಿಶೀಲಿಸಬಹುದಾಗಿದೆ.

ಚತುರಕ್ಷರ(ರಿ)

ಇಡೀ ಪದ್ಯದಲ್ಲಿ ಯಾವುವಾದರೂ ನಾಲ್ಕು ನಿರ್ದಿಷ್ಟ ವ್ಯಂಜನಗಳನ್ನು ಬಳಸುವುದು ಚತುರಕ್ಷರ (ರಿ). ದಂಡಿಯ 'ಕಾವ್ಯಾದರ್ಶ'ದಲ್ಲಿ ಬರಿಯ ಲಕ್ಷ್ಯವನ್ನಷ್ಟೇ ಹೀಗೆ ಕೊಟ್ಟಿದೆ:

ರೇ ರೇ ರೋರುರುರೂರೋರು । ಗಾಗೋಗೋಽಗಾಙ್ಗಗೋಽಗಗುಃ ।
ಕಿಂ ಕೇಕಾಕಾಕುಕಃ ಕಾಕೋ । ಮಾಮಾ ಗಾಮಾ ಮಮಾಮಮ ॥ (೩-೯೨)

ವ್ಯಾಖ್ಯಾನಕಾರನಾದ ರತ್ನಶ್ರೀಜ್ಞಾನನು ''ರೇಫ ಗಕಾರ ಕಕಾರ ಮಕಾರ ಮಾತ್ರ ಪ್ರಯೋಗಾತ್ ಚತುರ್ವರ್ಣೋಽಯಂ ಶ್ಲೋಕ ಇತಿ'' ಎಂಬುದಾಗಿ ಸಾಮಾನ್ಯ ಟಿಪ್ಪಣಿ ಬರೆದಿದ್ದಾನೆ. ೪ನೆಯ ಒಂದು ಪಾದದಲ್ಲಿ ಮ-ಗ ಮಿಶ್ರವಾಗಿರುವುದರ ಹೊರತು, ಉಳಿದ ಪಾದಗಳಲ್ಲಿ ಕ್ರಮವಾಗಿ ರ,ಗ,ಕ ಎಂಬ ಅಕ್ಷರಗಳು ತನಿಯಾಗಿ ಬಳಕೆಯಾಗಿರುವುದು ಗಮನಿಸತಕ್ಕುದಾಗಿದೆ. 'ಸರಸ್ವತೀ ಕಂಠಾಭರಣದಲ್ಲಿ 'ಚತುರ್ವ್ಯಂಜನ'ದ ಲಕ್ಷ್ಯವಾಗಿ ಕೊಟ್ಟಿರುವ ಈ ಪದ್ಯ (೨–೨೫೯) 'ಶಿಶುಪಾಲವಧೆ'ಯೊಳಗಿನದು:

ಜಜೌಜೋಜಾಜಿಜಿಜ್ಜಾಜೀ । ತಂ ತತೋಽತಿತತಾಽತಿತುತ್ ।
ಭಾಭೋಽಭೀಭಾಭಿಭೂಭಾಭೂ । ರಾರಾರಿರರಿರೀರರಃ (೧೯–೩)

ಈ ರಚನೆಯನ್ನು 'ಏಕಾಕ್ಷರ ಪಾದ'ವೆಂದೂ 'ಭಿನ್ನೈಕಾಕ್ಷರಪಾದ'ವೆಂದೂ ತಿಳಿದಿರುವುದು ಕಾಣುತ್ತದೆ. ಮಲ್ಲಿನಾಥನು ಇದೇ ಲಕ್ಷ್ಯವನ್ನು ಕುರಿತ ಹಾಗೆ ''ಭಿನ್ನೈಕಾಕ್ಷರಪಾದಾಖ್ಯೋಽನುಪ್ರಾಸಭೇದಃ'' ಎಂಬುದಾಗಿ ಟಿಪ್ಪಣಿ ಬರೆದಿದ್ದಾನೆ. ಭಾರವಿ ಮಾಘ ರತ್ನಾಕರರ ಗ್ರಂಥಗಳಲ್ಲಿ 'ಏಕಾಕ್ಷರಪಾದ' ಎಂಬ ಸಾಮಾನ್ಯ ನಿರ್ದೇಶನವಿದ್ದರೆ, 'ಧರ್ಮಶರ್ಮಾಭ್ಯುದಯ'ದಲ್ಲಿ, 'ರುಕ್ಮಿಣಾಭ್ಯುದಯ'ದಲ್ಲಿ (೧೮–೩) 'ಚತುರಕ್ಷರ' ಎಂದಿದೆ.

ಭಾರವಿ ಹರಿಚಂದ್ರರ ಉದಾಹರಣೆಗಳನ್ನೂ ಮುಂದೆ ಎತ್ತಿ ಬರೆಯಬಹುದಾಗಿದೆ:

'ಕಿರಾತಾರ್ಜುನೀಯ'ದ ಲಕ್ಷ್ಯ

ಸ ಸಾಸಿಃ ಸಾಸುಸೂಃ ಸಾಸೋ । ಯೇಯಾಯೇಯಾಯಯಾಯಯಃ ।
ಲಲೌ ಲೀಲಾಂ ಲಲೋಽಲೋಲಃ । ಶಶೀಶಶಿಶುಶೀಃ ಶಶನ್ ॥ (೧೫-೫)

ಇಲ್ಲಿ ಸಕಾರ, ಯಕಾರ, ಲಕಾರ ಮತ್ತು ಶಕಾರಗಳನ್ನು ಕ್ರಮವಾಗಿ ೪ ಪಾದಗಳಲ್ಲಿಯೂ ಬಳಸಿದೆ; ಮಲ್ಲಿನಾಥನೇ ಟಿಪ್ಪಣಿಯಲ್ಲಿ 'ಏಕಾಕ್ಷರ ಪಾದಃ' ಎಂದಿದ್ದಾನೆ.

'ಧರ್ಮಶರ್ಮಾಭ್ಯುದಯ'ದ ಲಕ್ಷ್ಯ

ರೈರೋಽರರೀರೋರುರರುರತ್ । ಕಾಕುಕಂ ಕೇಕಿಕಙ್ಕೈಕಃ ।
ಚಞ್ಚುಚ್ಚಞ್ಚಚ್ಚಿಚ್ಚೋಽಚೇ । ತತತಾತೀತಿ ತಂ ತತಃ ॥ (೧೯–೩೨)

ಇಲ್ಲಿ ರಕಾರ, ಕಕಾರ, ಚಕಾರ, ತಕಾರಗಳನ್ನು ಕ್ರಮವಾಗಿ ೪ ಪಾದಗಳಲ್ಲಿಯೂ ಬಳಸಿದೆ (೧ನೆಯ ಪಾದದ ಕೊನೆಗೆ ತಕಾರವಿರುವುದನ್ನು ಸಾಮಾನ್ಯ ಲಕ್ಷಣದ ಅನುಸಾರವಾಗಿ ಒಪ್ಪಬಹುದು; ಅಲ್ಲದೆ ಅದು ೪ನೆಯ ಪಾದದಲ್ಲಿ ವಿಧಿಸಿರುವ ಅಕ್ಷರವೇ ಆಗಿದೆ).

ತ್ರ್ಯಕ್ಷರ(ರಿ)

ಇಡೀ ಪದ್ಯದಲ್ಲಿ ಯಾವುದಾದರೂ ಮೂರು ನಿರ್ದಿಷ್ಟ ವ್ಯಂಜನಗಳನ್ನು ಬಳಸುವುದು ತ್ರ್ಯಕ್ಷರ(ರಿ). ದಂಡಿಯ 'ಕಾವ್ಯಾದರ್ಶ'ದಲ್ಲಿಯ ಲಕ್ಷ್ಯವಿದು:

ದೇವಾನಾಂ ನನ್ದನೋ ದೇವೋ । ನೋದನೋ ವೇದನಿನ್ದಿನಃ ।
ದಿವಂ ದುದಾವ ನಾದೇನ । ದಾನೇ ದಾನವನನ್ದಿನಃ ॥ (೩–೯೩)

ಇಲ್ಲಿ ದಕಾರ, ವಕಾರ, ನಕಾರಗಳೆಂಬ ಮೂರು ನಿರ್ದಿಷ್ಟ ವರ್ಣಗಳನ್ನು ಮಾತ್ರ ಬಳಸಿದೆ. ರತ್ನಶ್ರೀಜ್ಞಾನನು ''ದಕಾರ ವಕಾರ ನಕಾರ ಮಾತ್ರಾತ್ಮಕತ್ವಾತ್ ತ್ರಿವರ್ಣೋಽಯಂ ಶ್ಲೋಕಃ'' ಎಂದಷ್ಟೇ ಹೇಳಿರುವನು. 'ಸರಸ್ವತೀ ಕಂಠಾಭರಣ'ದಲ್ಲಿ 'ತ್ರಿವ್ಯಂಜನ'ವೆಂದು ಇದನ್ನು ನಿದರ್ಶಿಸಿದ್ದು (೨-೨೬೦) ಇಲ್ಲಿಯ ಲಕ್ಷ್ಯ 'ಕಾವ್ಯಾದರ್ಶ'ದ ಪೂರ್ವೋಕ್ತ ಲಕ್ಷ್ಯವೇ ಆಗಿದೆ. ಭಾರವಿ, ಮಾಘ, ಹರಿಚಂದ್ರರ ಕಾವ್ಯಗಳಲ್ಲಿ ಇದರ ನಿದರ್ಶನಗಳಿಲ್ಲ. ಆದರೆ ರತ್ನಾಕರನ 'ಹರವಿಜಯ'ದಲ್ಲಿ ಎರಡು ಲಕ್ಷ್ಯಗಳಿದ್ದು (೪೬–೫೬,೪೮-೩೭), ಇಲ್ಲಿ ಒಂದನ್ನು ಉದ್ಧರಿಸಬಹುದಾಗಿದೆ:

ಸವಿಸರಾಸುರಸಾರವಸಾಸನೇ । ಸುರವರೋ ವಿವರಾಸುರಸಾಸ್ರವಃ ।
ಸ ವರವೀರವಸಾವುರುವೈರಿಸೂ । ರವಸರೇ ವಿರಸಂ ವಿರರಾಸ ಸಃ ॥ (೪೬–೫೬)

ದ್ವ್ಯಕ್ಷರ(ರಿ)

ಇಡೀ ಪದ್ಯದಲ್ಲಿ ಯಾವುವಾದರೂ ಎರಡು ನಿರ್ದಿಷ್ಟ ವ್ಯಂಜನಗಳನ್ನು ಬಳಸುವುದು ದ್ವ್ಯಕ್ಷರ(ರಿ). ದಂಡಿಯು 'ಕಾವ್ಯಾದರ್ಶ'ದಲ್ಲಿ ಬರಿಯ ಲಕ್ಷ್ಯವನ್ನಷ್ಟೇ (೩-೯೪) ಹೀಗೆ ಕೊಟ್ಟಿದೆ:

ಸೂರಿಃ ಸುರಾಸುರಾಸಾರಿ । ಸಾರಃ ಸಾರಸಿಸಾರಸಾಃ ।
ಸಸಾರ ಸರಸೀಃ ಸೀರೀ । ಸಸೂರೂಃ ಸ ಸುರಾರಸೀ ॥

ಆಶಯವನ್ನು ವ್ಯಾಖ್ಯೆಯ ಸಹಾಯದಿಂದ ತಿಳಿಯಬಹುದು. ರತ್ನಶ್ರೀಜ್ಞಾನನು ''ರೇಫ ಸಕಾರ ಮಾತ್ರ ಸ್ವಭಾವತಯಾ ದ್ವಿವರ್ಣೋಽಯಂ ಶ್ಲೋಕಃ'' ಎಂಬುದಾಗಿ ಮಾತ್ರ ತಿಳಿಸಿದ್ದಾನೆ. 'ಸರಸ್ವತೀ ಕಂಠಾಭರಣ'ದಲ್ಲಿ ಭಕಾರ ರಕಾರಗಳೆಂಬ ಎರಡು ವರ್ಣಗಳನ್ನು ಮಾತ್ರ ಬಳಸಿದ ದ್ವ್ಯಕ್ಷರವನ್ನು 'ದ್ವಿವ್ಯಂಜನ'ವೆಂದು ನಿದರ್ಶಿಸಿದ್ದು (೨-೨೬೨), ಇದು ಮಾಘನ 'ಶಿಶುಪಾಲವಧೆ'ಯಿಂದೆತ್ತಿದುದೇ (೧೯–೬೬) ಆಗಿದೆ. ಆ ಶ್ಲೋಕವಿದು:

ಭೂರಿಭಿರ್ಭಾರಿಭಿರ್ಭೀರೈ । ಭೂಭಾರೈರಭಿರೇಭಿರೇ ।
ಭೇರಿರೇಭಿಭಿರಭ್ರಾಭೈ । ರಭೀರುಭಿರಿಭೈರಿಭಾಃ ॥

ಮಾಘನ 'ಶಿಶುಪಾಲವಧೆ'ಯೊಂದರಲ್ಲಿಯೇ ಅದರ ೧೯ನೆಯ ಸರ್ಗದಲ್ಲಿ ಒಟ್ಟು ೧೦ ದ್ವ್ಯಕ್ಷರ ನಿದರ್ಶನಗಳಿವೆ. ಇವುಗಳಲ್ಲಿ ಕ್ರಮವಾಗಿ ಭ–ರ (೬೬), ನ–ಲ (೮೪), ವ–ಭ (೮೬), ಪ–ರ (೯೪), ಲ–ಕ (೯೮), ವ–ರ (೧೦೦), ರ–ಜ (೧೦೨), ಕ–ರ (೧೦೪), ದ–ರ (೧೦೬), ಶ–ರ (೧೦೮) ಎಂಬ ಅಕ್ಷರಯುಗ್ಮಗಳನ್ನು ಬಳಸಿರುವುದು ಕಂಡುಬರುತ್ತದೆ. ಎರಡು ಅಕ್ಷರಗಳನ್ನು ಬಳಸುವ ಸೌಲಭ್ಯದಿಂದಾಗಿ ರಚನೆ ಕವಿಗೆ ಕಷ್ಟವಾಗಿರಲಾರದು ಎಂಬುದೇ ಈ ಅಧಿಕ ಸಂಖ್ಯೆಯ ನಿದರ್ಶನಗಳಿಗೆ ಕಾರಣವಾಗಿರಬಹುದು. ಇವುಗಳಿಗೆ ''ದ್ವ್ಯಕ್ಷರಾನುಪ್ರಾಸಃ'' ಎಂಬುದು ಮಲ್ಲಿನಾಥನ ಸಾಮಾನ್ಯ ಟಿಪ್ಪಣಿ. ರತ್ನಾಕರನ 'ಹರವಿಜಯ'ದಲ್ಲಿ ೨೦ರ ಮೇಲ್ಪಟ್ಟು ಲಕ್ಷ್ಯಗಳಿದ್ದು, ಇವು ೪೩, ೪೮ನೆಯ ಸರ್ಗಗಳಲ್ಲಿ ಕಂಡುಬರುತ್ತವೆ.

ಭಾರವಿ ಮತ್ತು ಹರಿಚಂದ್ರರ ಕಾವ್ಯಗಳಿಂದಲೂ ಒಂದೊಂದು ಉದಾಹರಣೆಯನ್ನು ಮುಂದೆ ಎತ್ತಿ ಕೊಡಬಹುದಾಗಿದೆ :

'ಕಿರಾತಾರ್ಜುನೀಯ'ದ ಲಕ್ಷ್ಯ

ಚಾರಚುಞ್ಚುಶ್ಚಿರಾರೇಚೀ । ಚಞ್ಚಚ್ಚೀರರುಚಾ ರುಚಃ ।
ಚಚಾರ ರುಚಿರಶ್ಚಾರು । ಚಾರೈರಾಚಾರಚಞ್ಚುರಃ ॥ (೧೫–೩೮)

ಇಲ್ಲಿ ಚ ಕಾರ, ರ ಕಾರಗಳನ್ನು ಮಾತ್ರ ಬಳಸಿದೆ.

ಹರಿಚಂದ್ರನ 'ಧರ್ಮಶರ್ಮಾಭ್ಯುದಯ'ದ ಲಕ್ಷ್ಯ

ಕಾನನಾಃ ಕಾನನೇ ನುನ್ನಾ । ನಾಕೇಽನೀಕಾಙ್ಕಕಾನಿನಃ ।
ಕೇ ಕೇ ನಾನೀಕಿನೀನೇನ । ನಾಕೀನೈಕಾಕಿನಾ ನನು ॥ (೧೯–೯೨)

ಇಲ್ಲಿ ಕ ಕಾರ, ನ ಕಾರಗಳನ್ನು ಮಾತ್ರ ಬಳಸಿದೆ. ಇದೇ ಕೃತಿಯಲ್ಲಿ ಗ–ರ ಎಂಬ ಎರಡಕ್ಷರಗಳನ್ನು (೧೯–೫೪), ದ–ವ ಎಂಬ ಎರಡಕ್ಷರಗಳನ್ನು (೧೯–೮೮) ಬಳಸಿದ ಇನ್ನೂ ಎರಡೂ ನಿದರ್ಶನಗಳಿವೆ.

'ಹರವಿಜಯ'ದ ಲಕ್ಷ್ಯ

ತಾರೋತ್ತಾರತರೀ ತೀರ । ತರುತಾರೀತಿರುತ್ತರಾ ।
ತೀರಿತಾರಾತಿರಾತೋರು । ತರತಾರಾತಿರುತ್ತರಃ ॥ (೪೩–೧೦೭)

ಇಲ್ಲಿ ತಕಾರ ರಕಾರಗಳು ಪರ್ಯಾಯಕ್ರಮ ತಪ್ಪದೆ ಬಳಕೆಯಾಗಿರುವುದನ್ನು ಕಾಣಬಹುದು. ಇದು 'ಏಕಾಂತರಿತದ್ವ್ಯಕ್ಷರ'.

ಏಕಾಕ್ಷರ(೮)

ಇಡೀ ಪದ್ಯದಲ್ಲಿ ಯಾವುದಾದರೂ ಒಂದು ನಿರ್ದಿಷ್ಟ ವ್ಯಂಜನವನ್ನು ಬಳಸುವುದು ಏಕಾಕ್ಷರ (೮). ದಂಡಿಯು 'ಕಾವ್ಯಾದರ್ಶ'ದಲ್ಲಿ ಚಿತ್ರ ಅಥವಾ ದುಷ್ಕರ ಕಾವ್ಯಮಾರ್ಗದ ಕೊನೆಯ ಪ್ರಕಾರವಾಗಿ 'ಏಕಾಕ್ಷರ'ವನ್ನು ಕುರಿತಿದೆ (೩–೯೪). ಲಕ್ಷಣವನ್ನು ಬಾಯಿಬಿಟ್ಟು ಹೇಳಿಲ್ಲ; ಲಕ್ಷ್ಯದ ಮೂಲಕ ತಿಳಿಯುವಂತೆ ಮಾಡಿದೆ. ಆ ಲಕ್ಷ್ಯಪದ್ಯವಿದು :

ನೂನಂ ನುನ್ನಾನಿ ನಾನೇನ । ನಾನನೇನಾನನಾನಿ ನಃ ।
ನಾನೇನಾ ನನು ನಾನೂನೇ । ನೈನೇನಾನಾನಿನೋ ನಿನೀಃ ॥

ವ್ಯಾಖ್ಯಾನಕಾರರು ಇದರ ಅರ್ಥವನ್ನು ವಿವರಿಸಿರುವುದುಂಟು. ಅದನ್ನು ಆ ಮೂಲಗಳಿಂದಲೇ ತಿಳಿಯಬಹುದು. ರತ್ನಶ್ರೀಜ್ಞಾನನು "....ಅಯಂ ನಕಾರಮಾತ್ರ ನಿಬಂಧತ್ವಾದೇಕವರ್ಣಃ ಶ್ಲೋಕಃ" ಎಂಬುದಾಗಿ ತಿಳಿಸಿರುವಂತೆ ನಕಾರದಿಂದ ಕಟ್ಟಿದ ಶ್ಲೋಕವಿದು. 'ಸರಸ್ವತೀಕಂಠಾಭರಣ'ದಲ್ಲಿ ಸಹ ನಕಾರದ ಲಕ್ಷ್ಯವನ್ನೇ ಕೊಟ್ಟಿದ್ದು (೨–೨೬೨), ಅದು 'ಕಿರಾತಾರ್ಜುನೀಯ'ದಿಂದ (೧೫–೧೪) ಎತ್ತಿದುದೇ ಆಗಿದೆ. ಆ ಶ್ಲೋಕವಿದು:

ನ ನೋನನುನ್ನೋ ನುನ್ನೋನೋ । ನಾನಾ ನಾನಾನನಾ ನನು ।
ನುನ್ನೋಽನುನ್ನೋ ನನುನ್ನೇನೋ । ನಾನೇನಾ ನುನ್ನನುನ್ನನುತ್ ॥

ಇಲ್ಲಿ ಕೊನೆಯ ತಕಾರವೊಂದನ್ನು ಬಿಟ್ಟು ನಕಾರದಿಂದಲೇ ಪೂರ್ತಿ ಶ್ಲೋಕ ರಚಿತವಾಗಿದೆ. ಟೀಕೆಯ ಕೊನೆಗೆ "ಅಯಮೇಕವ್ಯಂಜನಃ । ಅಂತ್ಯಸ್ತ್ವಕಾರಸ್ತು ನ ದೋಷಾವಹಃ, 'ನಾಂತ್ಯವರ್ಣಸ್ತು ಭೇದಕಃ' ಇತ್ಯಭ್ಯನುಜ್ಞಾನಾತ್" ಎಂಬುದಾಗಿ ಹೇಳಿರುವುದನ್ನು ಗಮನಿಸಿದರೆ ಭಿನ್ನವಾದೊಂದು ವರ್ಣ 'ತ' ಕಾರ ಕೊನೆಗೆ ಬಂದಿರುವುದರಿಂದ ನಿಯಮೋಲ್ಲಂಘನವಾಗಿಲ್ಲವೆಂದು ನಾವು ತಿಳಿಯಲು ನಮಗೆ ಸಮರ್ಥನೆ ದೊರೆತಂತಾಗುತ್ತದೆ. ಇದೇ ಆಶಯವನ್ನು ಸರಸ್ವತೀಕಂಠಾಭರಣದ 'ಏಕವ್ಯಂಜನ'ದ ಲಕ್ಷ್ಯಪದ್ಯಕ್ಕೆ ಟೀಕೆ ಬರೆಯುವಾಗ ರಾಮಸಿಂಹ ಸಹ "ತಮಪಿ ಯೋ ನುದತಿ ಸ ನಾನೇನಾ ನ ನಿಷ್ಪಾಪಃ ಬಂಧಚ್ಛಾಯಾರ್ಥಕಾನ್ಯವರ್ಣಗುರುತ್ವೋನ್ಮೇಷ ಮಾತ್ರ ಪ್ರಯೋಜಕಸ್ತಕಾರೋ ನ ವೃತ್ತಿಶರೀರಾಂತರ್ಗತ ಇತಿ ದ್ವಿವ್ಯಂಜನತಾ ನಾಶಂಕನೀಯಾ" ಎಂದು ವ್ಯಕ್ತ ಮಾಡಿದ್ದಾನೆ.

ಸಂಸ್ಕೃತ ಸಾಹಿತ್ಯದಲ್ಲಿ ಏಕಾಕ್ಷರಿಗೆ ನಕಾರ ಬಳಸಿರುವುದೇ ಬಹುಶಃ ಸಾಮಾನ್ಯವಾದರೂ ಇತರ ವ್ಯಂಜನಗಳನ್ನೂ ಬಳಸಿರುವುದುಂಟು. ಇದಕ್ಕೆ ದಕಾರ ಮತ್ತು ಕಕಾರದ ಎರಡು ನಿದರ್ಶನಗಳನ್ನು ಮಾತ್ರ ಮುಂದೆ ಕೊಟ್ಟಿದೆ:

'ಶಿಶುಪಾಲವಧ'ದ ಲಕ್ಷ್ಯ

ದಾದದೋ ದುದ್ದದುದ್ದಾದೀ । ದಾದಾದೋ ದುದದೀದದೋಃ ।
ದುದ್ದಾದಂ ದದದೇ ದುದ್ದೇ । ದದಾದದದದೋಽದದಃ ॥ (೧೯-೧೧೪)

ಇದರ ಆಶಯವನ್ನು ಮಲ್ಲಿನಾಥನ ವ್ಯಾಖ್ಯೆಯಿಂದ ತಿಳಿಯಬಹುದು. ಇವನು "ಏಕಾಕ್ಷರಾನುಪ್ರಾಸೋಽಲಂಕಾರಃ" ಎಂಬುದಾಗಿ ಹೇಳಿರುವ ಮೂಲಕ ಅನುಪ್ರಾಸದಲ್ಲಿಯೂ ಇದನ್ನು ಗಣಿಸಿದ್ದಾನೆ.

'ಧರ್ಮಶರ್ಮಾಭ್ಯುದಯ'ದ ಲಕ್ಷ್ಯ

ಕಙ್ಕಃ ಕಿಂ ಕೋಕಕೇಕಾಕೀ । ಕಿಂ ಕಾಕಃ ಕೇಕಿಕೋಽಕಕಮ್ ।
ಕೌಕಃ ಕುಕ್ಕೈಕಕಃ ಕೈಕಃ । ಕಃ ಕೇಕಾಕಾಕುಕಾಙ್ಕಕಮ್ ॥ (೧೯–೮೩)

ಇದರ ಆಶಯವೂ ಇಲ್ಲಿ ಅಪ್ರಸ್ತುತ. ಕ ವರ್ಗದ ಪಂಚಮಾಕ್ಷರ 'ಙ'ವನ್ನು ಹಾಗೂ ಪಾದಾಂತ್ಯ ವರ್ಣ 'ಮ್'ವನ್ನು ಯೋಗವಾಹಾಕ್ಷರವಾದ ಅನುಸ್ವಾರವಾಗಿ ಗಣಿಸಬಹುದೆಂಬ ಕಾರಣಕ್ಕಾಗಿ ಇಲ್ಲಿ ಗ್ರಾಹ್ಯ ಮಾಡಿರುವಂತೆ ತೋರುತ್ತದೆ.

ವಸ್ತುಪಾಲನ 'ನರನಾರಾಯಣಾನಂದ ಕಾವ್ಯ'ದಲ್ಲಿ ಲಕಾರ ಬಳಸಿದ ಒಂದು ಲಕ್ಷ್ಯವಿದೆ (೧೪-೨೩). ಏಕಾಕ್ಷರ ಬಂಧದ ಚಮತ್ಕಾರ ಕುತೂಹಲಕ್ಕೆ ಅದನ್ನೂ ಇಲ್ಲಿ ಉದ್ಧರಿಸಿದರೆ, ಕವಿಸಾಮರ್ಥ್ಯ ನಿರ್ದೇಶಕವಾಗುವ ಆ ಲಕ್ಷ್ಯ ಇಲ್ಲಿಗೆ ಹೊರೆಯಾಗಲಾರದೆಂದು ತೋರುತ್ತದೆ.

ಲೋಲಾಲೋಲಂ ಲುಲಲೋಲೀಲೀ। ಲಾಲೀ ಲಾಲಲ್ಲಲೋಲ್ಲಲಃ ।
ಲೋಲಂ ಲೋಲಂ ಲುಲಲ್ಲೋಲೋ । ಲ್ಲೋಲಲ್ಲೀಲಾಲಲೋ ಲಲಃ ॥

ಕೆಲವು ವಿಶೇಷ ವರ್ಣಚಿತ್ರಗಳು

'ಸರಸ್ವತೀಕಂಠಾಭರಣ'ದಲ್ಲಿ ಕೆಲವು ಹೆಚ್ಚಿನ ವರ್ಣಚಿತ್ರಗಳನ್ನು ಎಂದರೆ ವ್ಯಂಜನಚಿತ್ರಗಳನ್ನು ಕುರಿತಿದೆ. ಅವನ್ನು ಕ್ರಮವಾಗಿ ಇಲ್ಲಿ ಉದ್ಧರಿಸಬಹುದು:

ಕ್ರಮಸ್ಥಸರ್ವವ್ಯಂಜನ

ಕಃ ಖಗೌಘಾಙಚಿಚ್ಛೌಜಾ ಝಾಞ್ಜೋಽಟೌಠೀಡಡಣ್ಢಣಃ ।
ತಥೋದಧೀನ್ಪಫರ್ಬಾಭೀರ್ಮಯೋಽರಿಲ್ವಾಶಿಷಾಂ ಸಹಃ ॥ (೨-೨೬೩)

ಇಲ್ಲಿ ಒಂದೇ ಪದ್ಯದಲ್ಲಿ ವರ್ಣಮಾಲೆಯ ಕಕಾರದಿಂದ ಹಕಾರದವರೆಗಿನ ಎಲ್ಲ ವ್ಯಂಜನಗಳೂ ಅನುಕ್ರಮವಾಗಿ ಬಳಕೆಯಾಗಿವೆ.

ಛಂದೋಕ್ಷರವ್ಯಂಜನ

ಸರತ್ಸುರಾರಾತಿಭಯಾಯ ಜಾಗ್ರತೋ ಜಲತ್ಯಲಂ ಸ್ತ್ರೋತ್ರಜನಸ್ಯ ಜಾಯತಾಮ್ ।
ಸ್ಮಿತಂ ಸ್ಮರಾರೇರ್ಗಿರಿಜಾಸ್ಯನೀರಜೇ ಸಮೇತನೇತ್ರತ್ರಿತಯಸ್ಯ ಭೂತಯೇ ॥ (೨-೨೬೪)

ಇಲ್ಲಿ ಛಂದಶ್ಶಾಸ್ತ್ರ ಪರಿಭಾಷೆಯ ಮಯರಸತಜಭನಗಳೆಂಬ ಗಣಾಕ್ಷರಗಳನ್ನೂ ಲಗಗಳೆಂಬ ಲಘು ಗುರು ಸಂಜ್ಞಾಕ್ಷರಗಳನ್ನೂ ಮಾತ್ರ ಬಳಸಿ ಸಾರ್ಥಕವಾದ ಪದ್ಯವನ್ನು ರಚಿಸಿದೆ.

ಷಡ್ಜಾದಿಸ್ವರವ್ಯಂಜನ

ಸಾ ಮಮಾರಿಧಮನೀ ನಿಧಾನಿನೀ ಸಾಮಧಾಮ ಧನಿಧಾಮಸಾಧಿನೀ ।
ಮಾನಿನೀ ಸಗರಿಮಾಪಪಾಪಪಾ ಸಾಪಗಾ ಸಮಸಮಾಗಮಾಸಮಾ ॥ (೨-೨೬೫)

ಇಲ್ಲಿ ಸಂಗೀತದ ಸರಿಗಮಪಧನಿಗಳೆಂಬ ಸ್ವರಸಪ್ತಕವನ್ನು ಸಂಜ್ಞಿಸುವ ಏಳು ಅಕ್ಷರಗಳನ್ನು ಮಾತ್ರ ಬಳಸಿ ಸಾರ್ಥಕವಾದ ಪದ್ಯವನ್ನು ರಚಿಸಿದೆ.

ಮುರಜಾಕ್ಷರವ್ಯಂಜನ

ಖರಗರ ಕಾಲಿತಕಂಠಂ ಮಥಿತಗದಂ ಮಕರಕೇತುಮರಣಕರಮ್ ।
ತಡಿದಿತಿ ರುರುಮುಂಡಹರಂ ಹರಮಂತರಹಂ ದಧೇ ಘೋರಮ್ ॥ (೨-೨೬೬)

ಇಲ್ಲಿ ಮುರಜವಾದನದಲ್ಲಿಯ ಲಹಕಾರಗಳು, ತಥದಧಮಗಳು, ರೇಫ, ಡಣ, ಕಖಗಘಜಗಳು ಮಾತ್ರ ಉಪಯೋಗವಾಗಿ, ಎಂದರೆ ಮುರಜವಾದನದಲ್ಲಿ ಕೇಳಿಸುವ ೧೬ ವ್ಯಂಜನಗಳು ಮಾತ್ರ ಬಳಕೆಯಾಗಿ ರಚಿತವಾದ ಪದ್ಯ ಈ ಪ್ರಕಾರಕ್ಕೆ ಸೇರಿದ್ದಾಗಿದೆ.

ಅಸಂಯೋಗ

ದಂಡಿಯ 'ಕಾವ್ಯಾದರ್ಶ', ಭೋಜನ 'ಸರಸ್ವತೀಕಂಠಾಭರಣ'ಗಳಲ್ಲಿ ಅನುಕ್ತವಾದ, ಆದರೆ ಮಲ್ಲಿನಾಥ 'ಶಿಶುಪಾಲವಧೆ'ಯ ವ್ಯಾಖ್ಯೆಯಲ್ಲಿ ಸೂಚಿಸಿರುವ 'ಅಸಂಯೋಗ' ಎಂಬ ವ್ಯಂಜನ ಚಿತ್ರವೊಂದರ ಬಗ್ಗೆ ಮುಂದೆ

ಗಮನಿಸಬೇಕಾಗಿದೆ. 'ಶಿಶುಪಾಲವಧೆ'ಯ ೧೯-೬೮ರ ನಿದರ್ಶನವನ್ನು ವ್ಯಾಖ್ಯಾನಿಸಿ ಕೊನೆಗೆ "ಅತ್ರ ಸಂಯೋಗಾಭಾವಾದಸಂಯೋಗಶ್ಚಿತ್ರಭೇದಃ" ಎಂದು ಮಲ್ಲಿನಾಥ ತಿಳಿಸಿರುವುದಕ್ಕೆ ಅನುಗುಣವಾಗಿ "ಸಜಾತೀಯ ಅಥವಾ ವಿಜಾತೀಯವಾದ ಯಾವುದೇ ವ್ಯಂಜನಗುಚ್ಛವನ್ನು ಉಪಯೋಗಿಸದೆ ಕಟ್ಟಿದ ಪದ್ಯವು 'ಅಸಂಯೋಗ'ವೆನಿಸುವುದು" ಎಂಬುದಾಗಿ ತಿಳಿಯಬಹುದು. 'ಒತ್ತಕ್ಷರಗಳಿಲ್ಲದ ಪದ್ಯ' ಎಂದು ಇದರ ಆಶಯ. ಇದಕ್ಕೆ ನಿದರ್ಶನಗಳು 'ಕಪ್ಫಿಣಾಭ್ಯುದಯ' (೧೮-೩೩), 'ನರನಾರಾಯಣಾನಂದ ಕಾವ್ಯ' (೧೪-೮, ೨೬) ಮೊದಲಾದೆಡೆ ಕಾಣುತ್ತವೆ.

'ಶಿಶುಪಾಲವಧೆ'ಯ ನಿದರ್ಶನ

ನಿಪೀಡನಾದಿವ ವಿಥೋ। ದಾನತೋಯಮನಾರತಮ್।
ವಪುಷಾಮುದಯಾಪಾತಾ। ದಿಭಾನಾಮಭಿತೋಽಗಲತ್॥ (೧೯-೬೮)

'ನರನಾರಾಯಣಾನಂದ' ಕಾವ್ಯದ ನಿದರ್ಶನ

ಅಸಮಸಮರಲೀಲಾಲಾಘವೇನಾಶು ತೂಣಾ
ವಿರಹಿಣಿ ಶರಭಾರೈಃ ಶೋಭಮಾನಾಭಿಮಾನಃ
ಅಹಿತನಿಹಿತಮೋಪಾದಾಯ ಬಾಣಂ ಶರೀರಾ
ದಧಿತ ಧನುಷಿ ಚೈಕಃ ಸಾಧುವಾದಂ ಚ ಲೇಭೇ॥ (೧೪-೮)

ಈ ಎರಡೂ ಉದಾಹರಣೆಗಳಲ್ಲಿ ಯಾವ ಒತ್ತಕ್ಷರಗಳನ್ನೂ ಉಪಯೋಗಿಸಿಲ್ಲ.

ಕ್ರಮಸ್ಥಪರಿಮಿತವ್ಯಂಜನ

'ಕ್ರಮಸ್ಥಸರ್ವವ್ಯಂಜನ' ಎಂಬುದಾಗಿ ಭೋಜ ವಿವರಿಸಿರುವ ರೀತಿಯಲ್ಲಿಯೇ ಅಲ್ಲವಾದರೂ, ವ್ಯಂಜನಗಳು ಒಂದು ಕ್ರಮದಲ್ಲಿ ವಿನ್ಯಾಸಗೊಂಡು, ಗೂಢವಾಗಿರುವುದಕ್ಕೆ ಕೆಲವು ಪ್ರಯತ್ನಗಳೇನೋ ಉಂಟು. ಕ್ಷೇಮೇಂದ್ರನ 'ಕವಿಕಂಠಾಭರಣ'ದಲ್ಲಿ ವಾಗ್ದೇವಿಯನ್ನು ಕುರಿತ ಮಂತ್ರದ ಸ್ವರೂಪವನ್ನು ನಿರೂಪಿಸುವಾಗ 'ಕವಿತ್ವಪ್ರಾಪ್ತಿ' ಎಂಬ ಮೊದಲ ಸಂಧಿಯಲ್ಲಿ ಪ. ೬ ರಿಂದ ೯ರ ವರೆಗಿನ ೪ ಶ್ಲೋಕಗಳಲ್ಲಿ ಹೀಗೆ ಮಾಡಿದೆ. ಮೊದಲನೆಯದು ಸ್ವರವಿನ್ಯಸ್ತ ಶ್ಲೋಕವಾಗಿದ್ದು, ಇಲ್ಲಿ ಅ ಕಾರದಿಂದ ಲ್ಯಾ ಕಾರದವರೆಗಿನ ೧೦ ಸ್ವರಗಳೂ ಕ್ರಮವಾಗಿ, ಗೂಢವಾಗಿ, ಪದ್ಯದಲ್ಲಿ ಅನುಕ್ರಮಗೊಂಡಿರುವುದನ್ನು ಕಾಣಬಹುದು; ಆ ಮುಂದಿನ ಶ್ಲೋಕದಲ್ಲಿ ಏಕಾರದಿಂದ ಜಕಾರದವರೆಗೆ, ಅದಕ್ಕೆ ಮುಂದಿನ ಎರಡು ಶ್ಲೋಕಗಳಲ್ಲಿ ಚಕಾರದಿಂದ ನಕಾರದವರೆಗೆ ಮತ್ತು ಪ ಕಾರದಿಂದ ಹ ಕಾರದವರೆಗೆ ವ್ಯಂಜನವರ್ಣಗಳ ವಿನ್ಯಾಸವುಂಟು. ಇಲ್ಲಿ ಕೊನೆಯ ೩ ಶ್ಲೋಕಗಳನ್ನು (೧-೭~೯) ಮಾತ್ರ ಉದ್ಧರಿಸಬಹುದಾಗಿದೆ :

ಏಕವ್ಯೈಶ್ವರ್ಯಸಂಯುಕ್ತ। ಮೋಜೋವರ್ಧನಮೌಷಧಮ್।
ಅಂತರಾಂತಃ ಕಲಾಖಂಡ। ಗಲದ್ಘನಸುಧಾಙ್ಘಿತಮ್॥

ಚಂದ್ರೋಚ್ಛಲಜ್ಜಲಂ ಪ್ರೋಜ್ಝ। ದಜ್ಞಾನಂ ಟಠಸಂಯುತಮ್।
ಡಂಬರ ಪ್ರೌಢಕಿರಣಂ। ತಥತಾಂ ದಧದುನ್ನತಮ್॥

ಪರಂ ಫಲಪ್ರದಂ ಬದ್ಧ। ಮೂಲೋದ್ಭವಮಯಂ ವಪುಃ।
ರಮ್ಯಂ ಲಘುವರಂ ಶರ್ಮ। ವರ್ಷತ್ ಸರ್ವಸಹಾಕ್ಷರಮ್॥

ಸಪ್ತವ್ಯಂಜನಬಂಧ

ನಿರ್ದಿಷ್ಟವಾದ ಏಳು ವಿಧದ ವ್ಯಂಜನಗಳನ್ನು ಮಾತ್ರವೇ ಬಳಸಿ ಪದ್ಯ ರಚಿಸುವುದು ಒಂದು ವೈಚಿತ್ರ್ಯವಾಗಿದ್ದು, ರತ್ನಾಕರನ 'ಹರವಿಜಯ'ದಲ್ಲಿ ಇದರ ಒಂದು ಲಕ್ಷ್ಯವಿದೆ.

ಸ ಸಾಧುಸಂಧೋ ನಿಧನಾಂಧಧುಂಧು । ರ್ಧನುರ್ಧುನಾನೋ ಧುರಿ ಧೀನಿಧೀನಾನ್ ।
ರುರೋಧ ರೋಧ್ಯೈಮ್ಮೃಧಮಾರ್ಗರಾಗಿ । ಮನಾಃ ಸಮುಗ್ರಾಸುರಸಾರಸೇನಾಃ ॥ (೪೮-೧೩)

ದಶವ್ಯಂಜನಬಂಧ

ನಿರ್ದಿಷ್ಟವಾದ ಹತ್ತು ವಿಧದ ವ್ಯಂಜನಗಳನ್ನು ಮಾತ್ರವೇ ಬಳಸಿ ಪದ್ಯ ರಚಿಸುವುದು. ಇದರ ೨ ಲಕ್ಷ್ಯಗಳು (೧೮-೧೨೨, ೧೨೬) ಶಿವಸ್ವಾಮಿಯ 'ಕಪ್ಪಿಣಾಭ್ಯುದಯ'ದಲ್ಲಿವೆ. ಒಂದನ್ನು ಇಲ್ಲಿ ಉದಾಹರಿಸ ಬಹುದು.

ಭಾಸುರಾಸಿಃ ಸ್ಮರಾಭಾಸ್ಕೋ । ಯಮಾಸ್ಯೇ ಗಮಯನ್ನರೀನ್ ।
ಜಾಯಮಾನಜಯಾಮಾಜಾ । ಲೀಲಾಮಲಭತಾಭಯಃ ॥ (೧೮-೧೨೨)

ಹೀಗೆಯೇ ತ್ರಯೋದಶ ವ್ಯಂಜನಬಂಧವೂ ಉಂಟು. 'ಪ್ರಮಾಣನಯತತ್ತ್ವಾಲೋಕ'ದ 'ರತ್ನಾಕರಾವತಾರಿಕಾ' ಎಂಬ ಸಂಸ್ಕೃತ ವ್ಯಾಖ್ಯೆಯಲ್ಲಿ (ಪು. ೭೭-೮೦) ೨ ದೊಡ್ಡ ವಾಕ್ಯಪುಂಜಗಳಲ್ಲಿ ತವರ್ಗ, ಪ-ಬ-ಭ-ಮ, ಯ-ರ-ಲ-ವ ಎಂಬ ಈ ೧೩ ವ್ಯಂಜನಗಳನ್ನು ಮಾತ್ರ ಬಳಸಿ ಬರೆದಿದೆ.

ಅಪಂಚವರ್ಗ

ವರ್ಗೀಯ ವ್ಯಂಜನಗಳಲ್ಲಿ ಎಂದರೆ ಕವರ್ಗಾದಿ ವರ್ಗಪಂಚಕಗಳಿಗೆ ಸೇರಿದ ವ್ಯಂಜನಗಳಲ್ಲಿ ಯಾವುದೊಂದನ್ನೂ ಉಪಯೋಗಿಸದೆ ಪದ್ಯ ರಚಿಸುವುದು. ಇದರ ಒಂದು ಲಕ್ಷ್ಯ ವಸ್ತುಪಾಲನ 'ನರನಾರಾಯಣಾನಂದ' ಕಾವ್ಯದಲ್ಲಿದೆ.

ಶರ್ವರೀಶ್ವರಯಶಾಃ ಸ್ವಯಂ ಶ್ರಿಯಃ । ಸಂಶ್ರಯೋ ವಶಶರಃ ಸಸಾರ ಸಃ ।
ವೈರಿವೀರವಲಯವ್ಯಯಾಶಯಾ । ವಾಸವಿಃ ಸರಸರಾವಲಾಲಸಃ ॥ (೧೪-೨೯)

ತಪಾಗಚ್ಛ ಪಟ್ಟಾವಳಿಯ ವ್ಯಾಖ್ಯೆಯಲ್ಲಿ ಸಹ (ವಿ.ಸಂ.೧೬೪೮) 'ಪಂಚವರ್ಗ ಪರಿಹಾರ' ಎಂಬುದಾಗಿ ಇಂಥ ಒಂದು ಲಕ್ಷ್ಯವಿದೆಯೆಂದು (ಪು.೧೧೭) ತಿಳಿದಿದೆ.

ಅಂತಃಸ್ಥಾಕ್ಷರ

ಯ ರ ಲ ವ ಗಳೆಂಬ ಅಂತಃಸ್ಥಾಕ್ಷರಗಳನ್ನು ಮಾತ್ರವೇ ಬಳಸಿ, ಪದ್ಯ ರಚಿಸುವುದು. ಇದರ ಒಂದು ಲಕ್ಷ್ಯ 'ನರನಾರಾಯಣಾನಂದ' ಕಾವ್ಯದಲ್ಲಿದೆ.

ವ್ಯಾಲಾವಲೀವಿಲಯಮರ್ಯರವಾಲಯೋಽಯಂ
ಲೋಲೈರಿಲಾವಲಯವೀರವರೈರವಾರ್ಯಃ
ವೈರಾವಿಲೋ ರಯಲಯೈರವಿವಾರವಾರೀ
ವೀರ್ಯಂ ಯುವಾ ರವಿರಿವಾವಿರಲಂ ವಿವವ್ರೇ ॥ (೧೪-೩೩)

ಅತ್ರಿವರ್ಗ

ವರ್ಗಪಂಚಕದಲ್ಲಿ ಯಾವುವಾದರೂ ಮೂರು ವರ್ಗಗಳ ವ್ಯಂಜನಗಳನ್ನು ಬಳಸದೆ ಪದ್ಯ ರಚಿಸುವುದು. ಇದರ ಒಂದು ಲಕ್ಷ್ಯ 'ನರನಾರಾಯಣಾನಂದ' ಕಾವ್ಯದಲ್ಲಿದೆ.

ಯುಧ್ಯಧ್ವಂ ಮಾ ಸ್ಮ ಧೀರಾ ಹರಿಹಯತನಯಂ ಮಾಮಿವ ಧ್ಯಾಯತಾಮುಂ
ಧೀರಧ್ವಾನೈರ್ನಿಷಿಧ್ಯ ಸ್ವಬಲಮಿತಿ ಬಹೂದಸ್ತಹಸ್ತೋ ವಿಹಸ್ತಃ
ದೈತ್ಯಧ್ವಂಸೀ ತದೈತ್ಯ ಪ್ರಿಯಸುಹೃದಮುಪಾಪ್ರಯಮಾಶ್ಲಿಷ್ಯ ಹೃಷ್ಯ
ದ್ರೋಮಸ್ತೋಮಂ ತಮಂತಃಶಮನಯಮನಯದ್ಧೈರ್ಯಧುರ್ಯಂ ಸ್ವಪುರ್ಯಾಮ್ ॥
(೧೪-೪೦)

ಇಲ್ಲಿ ಕ, ಚ ಮತ್ತು ಟ ವರ್ಗಗಳ ವ್ಯಂಜನಗಳನ್ನು ಉಪಯೋಗಿಸದೆ ಪದ್ಯ ರಚಿಸಿದೆ.

ತಾಲವ್ಯಪ್ರಾಯ

ಪ್ರಚುರತೆಯಿಂದ ತಾಲವ್ಯ ವ್ಯಂಜನಗಳನ್ನು ಬಳಸಿ ಪದ್ಯ ರಚಿಸುವುದು. ಇದರ ಲಕ್ಷ್ಯ 'ಕಪ್ಪಿಣಾಭ್ಯುದಯ'ದಲ್ಲಿದೆ.

> ಜ್ಯಾಯೋ ಯಶಶ್ಚ ಯಚ್ಛಾಯ । ಇಯಾಯಾಜೌ ಜಯೇಚ್ಛಯಾ ।
> ಯೋಜ್ಯಾಶೋಚ್ಯಾಶಯಃ ಶಂಯುಃ । ಶೌಚಶಯ್ಯಾಶಯೋಜ್ಝಿತಾ ॥ (೧೮–೩೭)

ಅಪುನರುಕ್ತಾಕ್ಷರ

ಬಳಸಿದ ಅಕ್ಷರವನ್ನು ಮತ್ತೆ ಬಳಸದೆ ಪದ್ಯ ರಚಿಸುವುದು. ಇದರ ಒಂದು ಲಕ್ಷ್ಯ 'ಕಪ್ಪಿಣಾಭ್ಯುದಯ' ದಲ್ಲಿದೆ.

> ಭಾಯೀ ಮೃಧೇ ಹತಾಜೀಶ । ಇಷುಚಾಪಘಟಾಕಿಣೀ ।
> ಅಥ ಗಾಢಂ ತದಾ ವೀರಃ । ಫಲನೀಡಂ ಬಭೌ ಸುಖೀ ॥ (೧೮–೧೩೨)

'ಕವಿರಾಜಮಾರ್ಗ' ಕಾವ್ಯಾವಲೋಕನಾದಿಗಳಲ್ಲಿ ವ್ಯಂಜನಚಿತ್ರಗಳು

ಕನ್ನಡ ಭಾಷೆಯ ಲಕ್ಷಣ ಗ್ರಂಥಗಳಲ್ಲಿ ಮುಖ್ಯವಾದ 'ಕವಿರಾಜಮಾರ್ಗ' 'ಕಾವ್ಯಾವಲೋಕನ'ಗಳಲ್ಲಿಯೂ ಇತರ ಲಕ್ಷಣಗ್ರಂಥಗಳಲ್ಲಿಯೂ ವ್ಯಂಜನ ಚಿತ್ರಗಳ ವಿಚಾರ ಹೇಗೆ ನಿರೂಪಿತವಾಗಿದೆಯೆನ್ನುವುದನ್ನು ಈಗ ಗಮನಿಸಬಹುದಾಗಿದೆ. ಇವು ಸಂಸ್ಕೃತ ಲಕ್ಷಣ ಗ್ರಂಥಗಳ ಸದೃಶ ಚಿತ್ರಲಕ್ಷ್ಯಗಳ ಅನುಕರಣೆಗಳೇ ಎನ್ನುವುದನ್ನು ಬಳಸಿದ ಛಂದಸ್ಸು ಶ್ಲೋಕ ಎನ್ನುವುದರಿಂದಲೂ ಎತ್ತಿಕೊಂಡ ಅಕ್ಷರಗಳು ಸಾಮಾನ್ಯವಾಗಿ ದಕಾರ ನಕಾರಗಳು ಹಾಗೂ ಮಕಾರ ಮಾತ್ರವೇ ಎನ್ನುವುದರಿಂದಲೂ ಸುಲಭವಾಗಿ ಊಹಿಸಿ ತಿಳಿಯಬಹುದಾಗಿದೆ. ಈ ಕನ್ನಡ ಲಕ್ಷಣ ಗ್ರಂಥಗಳ ರಚನೆಗಳನ್ನೇ ಸಾಹಿತ್ಯಗ್ರಂಥಕಾರರೂ ಕೆಲವಂಶಗಳಲ್ಲಿ ಅನುಕರಿಸಿದ್ದು, ಚಂದ್ರರಾಜನಂತಹ ಕವಿಗಳ ಪ್ರಯತ್ನಗಳಿಂದ ತಿಳಿಯುತ್ತದೆ. ಪಾಂಡಿತ್ಯಮೂಲವಾದ ಸ್ವತಂತ್ರ ಶಬ್ದಶಕ್ತಿಯಲ್ಲಿ ಅವರು ಉದಾಸೀನರಾಗಿದ್ದುದೇ ಇದರ ಕಾರಣವಿದ್ದರೂ ಇರಬಹುದು.

ಚತುರಕ್ಷರ(ರಿ)

ಈ ಭೇದವನ್ನು ಯಾವ ಕನ್ನಡ ಲಕ್ಷಣಗ್ರಂಥದಲ್ಲಿಯೂ ಕುರಿತಿಲ್ಲವಾದುದರಿಂದ, ಇದರ ವಿಚಾರವನ್ನು ಕೈಬಿಡಬೇಕಾಗಿದೆ. ದಂಡಿಯ 'ಕಾವ್ಯಾದರ್ಶ'ದ ಅನುವಾದವಾಗಿರುವ 'ಮಾಧವಾಲಂಕಾರ'ದಲ್ಲಿ, ದಂಡಿಯನ್ನು ಅನುಸರಿಸಿ ಯಥಾಸ್ಥಾನದಲ್ಲಿ ಇದರ ಪ್ರಸ್ತಾವ ಮೂಲತಃ ಬಂದಿದ್ದಿರಬಹುದಾದರೂ ಈ ಗ್ರಂಥದ ಪಾಠಗಳಲ್ಲಿಯ ಗೋಜುಗೊಂದಲಗಳಿಂದಾಗಿ ಅದರ ಗುರುತು ಹತ್ತುತ್ತಿಲ್ಲ. ಇದರ ಪ್ರಸ್ತಾವ ಇಲ್ಲಿ ತೃತೀಯ ಪರಿಚ್ಛೇದದ ಪದ್ಯ ೬೧ ರಿಂದ ೬೪ ರ ನಡುವೆ ಎಲ್ಲಿಯಾದರೂ ಇದ್ದಿರುವುದು ಸಾಧ್ಯ. ಈಗ ತುಂಬ ಗಲಿತರೂಪದಲ್ಲಿ ಪ್ರಕಟವಾಗಿರುವ ೩–೬೨ರ ಒಂದು ಲಕ್ಷ್ಯವೇ 'ಚತುರಕ್ಷರ'ದ ಲಕ್ಷ್ಯವಾಗಿರಲೂಬಹುದು.

ತ್ರ್ಯಕ್ಷರ(ರಿ)

ಈ ಭೇದ 'ಕವಿರಾಜಮಾರ್ಗ', 'ಕಾವ್ಯಾವಲೋಕನ'ಗಳಲ್ಲಿ ನಿರೂಪಿತವಾಗಿಲ್ಲ. 'ಮಾಧವಾಲಂಕಾರ' ದಲ್ಲಿ, ಪದ್ಯದ ಛಂದಸ್ಸು ಆಶಯಗಳು ವೈಪರೀತ್ಯಗೊಂಡಿರುವ ಈ ಲಕ್ಷ್ಯ ಪ್ರಾಯಃ ಈ ಭೇದದ ಸಂಬಂಧವಾದುದೇ ಇರುವಂತೆ ತೋರುತ್ತದೆ.

> ಮದನಂದನನುಂ ನೀನೆಂ । ದದನಾಂ ನೆನೆದಂದದುಂ ।
> ಮನೋನ್ಮಾದಮೆಂದುಂ । ಮದದನಾಯಾಗೆನಂದೆಮಾಂ ॥ (?) (೩–೬೧)

ಮ ಕಾರ ದ ಕಾರ ನ ಕಾರಗಳನ್ನು ಮಾತ್ರ ಬಳಸಿ ಪದ್ಯವನ್ನು ಅನುವಾದಕರ್ತನು ರಚಿಸಿದ್ದು, ಅನಂತರದಲ್ಲಿ ವಿಕ್ಷೇಪಕ್ಕೆ ಗುರಿಯಾಗಿರುವಂತೆ ತೋರುತ್ತದೆ. ದಂಡಿ ದ ಕಾರ ವ ಕಾರ ನ ಕಾರಗಳನ್ನು ಮಾತ್ರ ಬಳಸಿದ ಲಕ್ಷ್ಯಪದ್ಯವನ್ನು ಕೊಟ್ಟಿದ್ದನೆಂಬುದು ಸಮೀಪಸಾದೃಶ್ಯದ ಸಂಗತಿಯಾಗಿದೆ.

ದ್ವ್ಯಕ್ಷರ(೮)

ಈ ಭೇದವನ್ನು 'ಕವಿರಾಜಮಾರ್ಗ'ದಲ್ಲಿಯೂ 'ಕಾವ್ಯಾವಲೋಕನ'ದಲ್ಲಿಯೂ ಕುರಿತಿದೆ.

'ಕವಿರಾಜಮಾರ್ಗ'ದಲ್ಲಿಯ ಲಕ್ಷ್ಯ ಅಲ್ಪ ಸ್ವಲ್ಪ ವ್ಯತ್ಯಾಸಗಳೊಂದಿಗೆ ಮುದ್ರಿತ ಪರಿಷ್ಕರಣಗಳಲ್ಲಿ ಹಾಗೂ 'ಕರ್ಣಾಟಕ ಕವಿಚರಿತೆ'ಯಲ್ಲಿ ಕಂಡುಬರುತ್ತಿದ್ದು, ೧೯೬೮ರ ಕವಿರಾ.ದ ಪರಿಷ್ಕರಣದಲ್ಲಿರುವಂತೆ ಮುಂದೆ ಅದನ್ನು ಉದ್ಧರಿಸಿದೆ.

ಮಾನಿನಿ ಮುನ್ನಮಾಂ ನೀನೆ । ನೀನಾನಿನ್ನನುಮಾನಮೇಂ ।
ಮಾನಮಾನಾನೆ ಮುಂ ನಂನ್ನೈ । ಮಾನಮಾನನಮುಂ ನಿಂನಾ ॥ (೨–೧೨೨)

ಈ ಶ್ಲೋಕವು ಛಂದಸ್ಸು ಆಶಯಗಳ ದೃಷ್ಟಿಯಿಂದ ತೃಪ್ತಿಕರವಾಗಿದೆ ಎನ್ನುವಂತಿಲ್ಲ; ಮೊದಲರ್ಧದಲ್ಲಿ ಛಂದಸ್ಸು ಆಶಯಗಳು ಸಮಾಧಾನಕಾರಕವಾಗಿವೆಯೆಂದರೂ ಎರಡನೆಯರ್ಧದಲ್ಲಿ ತಪ್ಪು ಹೊಕ್ಕಿರುವಂತೆ ತೋರುವುದು. ಮಕಾರ ನಕಾರ ಇಲ್ಲಿ ಬಳಸಿದ ಅಕ್ಷರಗಳು. ತಾತ್ಕಾಲಿಕವಾಗಿ ಈ ಶ್ಲೋಕದ ಪಾಠವನ್ನು ಹೀಗೆ ಪರಿಷ್ಕರಿಸಿ ಕೊಡಬಹುದು:

ಮಾನಿನಿ ಮುನ್ನಮಾನ್ ನೀನೆ । ನೀನಾನಿನ್ನನುಮಾನಮೇನ್ ।
ಮಾನಮಾನಾನೆ ಮು[ನ್ನು]ನ್ನೈ । ಮಾನಮಾನನಮುಂ ನಿನ್ನಾ ॥

ಇಲ್ಲಿಯೂ ೪ನೆಯ ಪಾದ ಛಂದಸ್ಸಿನ ದೃಷ್ಟಿಯಿಂದ ಸಮರ್ಪಕವಾಗಿಲ್ಲವೆನ್ನಬೇಕು. ಈ ಪಾದದ ೭ ನೆಯ ಅಕ್ಷರ ಲಘುವಾಗಿರಬೇಕಾದ್ದು, ಗುರುವಾಗಿಯೇ ಉಳಿದುಕೊಳ್ಳುವಂತಾಗಿದೆ. ಪದ್ಯದಲ್ಲಿ ಹೆಚ್ಚಿನ ಮಾರ್ಪಾಡುಗಳಿಗೆ ಇಲ್ಲಿ ಯತ್ನಿಸಿಲ್ಲ. ಈಗ ಪದ್ಯದ ಅನ್ವಯ ಮತ್ತು ಆಶಯ: ''ಮಾನಿನಿ, ಮುನ್ನಂ ಆನ್ ನೀನೆ; ನೀನ್ ಆನ್; ಇನ್ ಅನುಮಾನಮ್ ಏನ್?; ಮಾನಮ್ ಆನ್, ಆನೆ ಮುನ್; ಉನ್ನೈ; ನಿನ್ನಾ ಮಾನಮ್ ಆನನಮುಮ್ (ಆನೆ)''. ''ಪ್ರಿಯಳೇ, ಮೊದಲು ನಾನು ನೀನೇ; ನೀನು ನಾನೇ; ಇನ್ನು ಅನುಮಾನವೇನು ? ಮಾನ ಎನ್ನುವುದು ನಾನೇ; ಮೊದಲು ನಾನೇ; ಆಲೋಚಿಸಿ ನೋಡು; ನಿನ್ನ ಮಾನವೂ ಮೊಗವೂ (ನಾನೇ).'' ಈ ಅನ್ವಯ ಆಶಯಗಳು ತಾತ್ಕಾಲಿಕವಾದವು.

'ಕಾವ್ಯಾವಲೋಕನ'ದಲ್ಲಿಯ ಲಕ್ಷ್ಯ ಇಷ್ಟು ತೊಡಕಾಗಿರುವಂತೆ ತೋರುವುದಿಲ್ಲ. ಅದನ್ನು ಮುಂದೆ ಎತ್ತಿ ಬರೆದಿದೆ:

ನಿಂದಾನಂದದದೊಂದೂನಂ । ನಿಂದಂದೇನಿಂದಿನಂದದಿಂ ।
ನಂದನಂದನ ನಿನ್ನಿಂದಂ । ನಂದನುಂ ದನುನಂದನಂ ॥ (ಶ. ೫೮೬)

ಇದರ ಅನ್ವಯ ಮತ್ತು ಆಶಯಗಳು ಹೀಗೆ: ''ನಂದನಂದನ, ನಿಂದ ಆನಂದದೆ ಅದೇನ್, ಇಂದಿನಂದದಿಂ, ಅದೊಂದು ಊನಂ ನಿಂದಂದು, ನಿನ್ನಿಂದಂ ನಂದನುಂ ದನುನಂದನಂ''. ''ಎಲೈ ನಂದಪುತ್ರನೇ (ಕೃಷ್ಣನೇ), ಸ್ಥಿರವಾದ ಆನಂದದಲ್ಲಿ ಈ ದಿವಸದಲ್ಲಿ ಆದ ಹಾಗೆಯೇ ಅದೊಂದು ಕೊರತೆಯುಂಟಾದಾಗ, ನಿನ್ನ ಕಾರಣವಾಗಿ ಆ ನಂದನೂ ದೈತ್ಯನೇ!''

ಈ ರೀತಿ ಅರ್ಥವನ್ನು ಹೇಳಲು ಸಾಧ್ಯವಿದ್ದರೂ, ಇದರ ಅಭಿಪ್ರಾಯ ಸಂದರ್ಭವೇನೆಂದು ತಿಳಿಯದಿರುವುದರಿಂದ ಸ್ಪಷ್ಟವಾಗುತ್ತಿಲ್ಲ.

'ಮಾಧವಾಲಂಕಾರ'ದಲ್ಲಿ ಎಂದಿನಂತೆ ಈ ಅಶುದ್ಧಪಾಠದ ಪದ್ಯವೊಂದು ದ್ವ್ಯಕ್ಷರದ ಲಕ್ಷ್ಯವಾಗಿರುವ ಸಾಧ್ಯತೆಯಿದೆ.

ಸೂರಿ ಸಾರಸರಸಾರಾ । ಸಾರಸಂ ಸಾರಸಂ ಸಸರಾಸುರಂ ।
ರೊವಾರಿ ಸರಸಾಸಾರಂ । ಸಾರಿಸಾರಿತಿ ಸಾರಿತಿ ॥ (?)

ಇಲ್ಲಿ ಮಾಧವನು ಸಕಾರ ರಕಾರಗಳನ್ನು ಮಾತ್ರ ಬಳಸಿ ಪದ್ಯವನ್ನು ರಚಿಸಿದ್ದಿರಬೇಕು ಎಂದು ಊಹಿಸುವುದು ಸಾಧ್ಯವಿದೆ.

ಈಚಿನ ಕಾಲದಲ್ಲಿ 'ಕರ್ಣಾಟಕ ಚಂದ್ರಾಲೋಕ'ವನ್ನು (೧೯೦೫) ರಚಿಸಿದ ಅಕ್ಕಲೇ ಲಕ್ಷ್ಮೀನರಸಿಂಹ ಶಾಸ್ತ್ರಿಗಳು ಕೊಟ್ಟಿರುವ 'ದ್ವ್ಯಕ್ಷರ'ದ ಲಕ್ಷ್ಯವಿದು :

ನಂದನ ನಂದನನಂದನ। ನಂದದ ನಂದನನ ನೊಂದೆನೀ ನಂದನನಂ ।
ನಂದೀನಾ ನೆನೆ ದೀನಾ । ನಂದದನೆ ನದೀನನಂದನಾನನ ನ್ನಂ ॥ (೧–೧೮)

ಇದರ ಅನ್ವಯ, ಆಶಯಗಳು ಬಲುಮಟ್ಟಿಗೆ ಹೀಗಿರಬಹುದೆಂದು ತೋರುತ್ತದೆ :

''ನಂದೀನಾ, ದೀನಾನಂದದನೆ, ನೆನೆ; ನೊಂದೆಂ; ನಂದನ ನಂದನನಂದನನ ಅಂದದ ನಂದನನ, ಈ; ನದೀನನಂದನಾನನನನ್ನಂ''.

''ಗೌರೀವಲ್ಲಭನೆ, ದೀನರಿಗೆ ಆನಂದದಾಯಕನೆ, ಪ್ರಾರ್ಥನೆಯನ್ನು ಲಾಲಿಸು; ನೊಂದಿದ್ದೇನೆ. ನಂದ ಗೋಪಾಲನ ಸಂತೋಷಕೊಡುವ ಮಗನ (ಕೃಷ್ಣನ) ಹಾಗಿರುವ ಮಗನನ್ನು, ಹರ್ಷದಿಂದಿರುವವನನ್ನು, ನನಗೆ ಕೊಡು. ಅವನು ಸಮುದ್ರಜನಾದ ಚಂದ್ರನಂತೆ ಮುಖವುಳ್ಳವನು''.

ಏಕಾಕ್ಷರ(ರಿ)

'ಕವಿರಾಜಮಾರ್ಗ', 'ಕಾವ್ಯಾವಲೋಕನ' ಮತ್ತು 'ಮಾಧವಾಲಂಕಾರ'ಗಳಲ್ಲಿ ಈ ಭೇದದ ನಿದರ್ಶನ ಗಳಿವೆ. ಪದ್ಯ ರಚನೆಗೆ ಎಲ್ಲವೂ ನಕಾರವನ್ನೇ ಆರಿಸುವುದು ಕುತೂಹಲಕರವಾದ್ದು. ಇಲ್ಲಿಯೂ ಪಾಠಸಮಸ್ಯೆ ಗಳುಂಟು; ಛಂದಸ್ಸಿನ ಅರೆಕೊರೆಗಳುಂಟು.

'ಕವಿರಾಜಮಾರ್ಗ'ದ ಲಕ್ಷ್ಯ, ಪರಿಷ್ಕರಣದಿಂದ ಪರಿಷ್ಕರಣಕ್ಕೆ ಪಾಠಭೇದಗಳನ್ನು ತೋರಿಸುತ್ತಿವೆ. ದೋಷಗಳೂ ಸಹಜವೇ.

ಕವಿಚರಿತೆಯ ಪಾಠ :

ನಿನ್ನಿಂ ನಿನ್ನ ನೆನೇ ನಿನ್ನಾ । ನಾನಾನನನನನ್ನನಂ ।
ನೀನೇ ನನ್ನನ್ನನಾನಾನಾ । ನಿನ್ನೀನೇನನನೂನನಂ ॥

ಈ ಪದ್ಯದ ಛಂದಸ್ಸು ಶ್ಲೋಕವೇ ಆದರೂ ಕವಿರಾ.ದ ೧೯೩೦ರ ಪರಿಷ್ಕರಣದಲ್ಲಿ ಏಕೆ 'ಗೀತಿಗೆ'ಯೆಂದು ತೋರಿಸಿದೆಯೋ ತಿಳಿಯದು. ಶ್ಲೋಕದ ಲಕ್ಷಣವೂ ಇಲ್ಲಿ ನಿರ್ದುಷ್ಟವಾಗಿಲ್ಲ. ಪದ್ಯದ ಆಶಯ ದುರವಗಾಹವಾದ್ದು. ನಕಾರವೊಂದನ್ನೇ ಬಳಸಿ ಪದ್ಯವನ್ನು ರಚಿಸಿದೆ. ಇದಕ್ಕೆ ಪ್ರೇರಣೆ ಪ್ರಾಯಃ 'ಕಾವ್ಯಾದರ್ಶ'ದ ೩–೯೫ರ ಲಕ್ಷ್ಯವೆ ಇರಬೇಕು.

'ಕಾವ್ಯಾವಲೋಕನ'ದ ಲಕ್ಷ್ಯದಲ್ಲಿಯೂ ಪ್ರಯುಕ್ತವಾದ ಅಕ್ಷರ ನಕಾರವೇ. ಸಮಸ್ಯೆಗಳು ಹಾಗೂ ದೋಷಗಳು ಇಲ್ಲಿಯೂ ನಮ್ಮನ್ನು ಎದುರಿಸುತ್ತಿವೆ. ಮುದ್ರಿತ ಪರಿಷ್ಕರಣದ ಪಾಠವಿದು:

ನಿನ್ನಿನೇನಿನ್ನನಾನನ್ನ । ನಿನ್ನನೆನ್ನನನೂನನಂ ।
ನುನ್ನನೈನನ್ನನೈನೇನೇ । ನೆನ್ನಿನ್ನಂ ನಿನ್ನೆನಾನುನಂ ॥

ಒಂದು ಹಸ್ತಪ್ರತಿಯಲ್ಲಿ ಮಾತ್ರ ಇದರ ಬಳಿಕ ಈ ಕಂದಪದ್ಯವಿದೆ :

ನೀನಾನು ನಿನ್ನನಾನೆಂ । ನಾನಿಂನನ್ನಿನ್ನ ನಿನ್ನನಾನಾನೂನುಂ ।
ನೂನಂನನ್ನೆನನೋನ್ನೈ । ನೀನೇನ್ನೈನಾನುನೀನುನೀನೇನೋನ್ನೈ ॥

ಈ ಎರಡೂ ಲಕ್ಷಣ ಶುದ್ಧವಾಗಿವೆ. ಪ್ರಾಯಃ ಶ್ಲೋಕದ ಆಶಯ ಅವಿದಿತವೆಂದು ತೋರಿಯೋ ಏನೋ ಅಭ್ಯಾಸಿಯೊಬ್ಬ ಕಂದಪದ್ಯವನ್ನು ರಚಿಸಿ ತನ್ನ ಬಳಿಯ ಪ್ರತಿಯಲ್ಲಿ ಬರೆದುಕೊಂಡಿರಬಹುದು.

'ಮಾಧವಾಲಂಕಾರ'ದಲ್ಲಿಯು ಈ ಕೆಳಗಿನ ಲಕ್ಷ್ಯವೂ ನಕಾರ ಘಟಿತವೇ. ಛಂದಸ್ಸು ಕೆಟ್ಟಿದೆ; ಆಶಯದ ಗೊತ್ತು ಸಿಕ್ಕದು.

ನಿನ್ನಿನ್ನಂ ನನನಾನೇನ । ನೆನ್ನಾನನೂನನೋನಂ ।
ನೀನಾನನು ನಿನ್ನೆ । ನೀನೇನನೋನನೇ ॥ (೩–೬೪)

'ಕರ್ಣಾಟಕ ಚಂದ್ರಾಲೋಕ' ಗ್ರಂಥದಲ್ಲಿಯ ಏಕಾಕ್ಷರದ ಲಕ್ಷ್ಯ :

ನನ್ನನ್ನನೆನ್ನನೇನೇ । ನುನ್ನೋನೆನನಿನನನನನನಾಂ ನಾನ್ಯೆನೋ ।
ನುನ್ನಂ ನಾನಾನನನೇ । ನನ್ನನುನೆನೆ ನೀನಿನೇನನೀನನನೇನಂ ॥ (೨–೧೭)

''ನನ್ನನ್ನಂ, ಎನ್ನಂ, ಏನೇನುಂನೋನಂ, ಅನಿನಂ, ಅನನನಂ, ಆಂ, ನಾನ್ಯೆನೋನುನ್ನಂ, ನಾನಾ ನನನೇ, ನನ್ನನುನೆನೆ, ನೀಂ, ಇನೇನಂ, ಈನಂ ಅನೇನಂ ಎಂದು ಪದವಿಭಾಗ. ನಾನು ಸ್ವಲ್ಪವೂ ವ್ರತಮಾಡಿಲ್ಲ. ಅನಾಥನು ಜೀವನವಿಲ್ಲದವನು, ನಾನಾವಿಧವಾದ ಪಾಪಗಳಿಂದ ಪೀಡಿತನಾದವನು. ಆದುದರಿಂದ ನನ್ನಂಥವನು ಯಾವ ಪ್ರಯೋಜನಕ್ಕೆ ಬಂದ ಮನುಷ್ಯ ? ನೀನು ರಾಜರಾಜನು, ನಿರ್ದೋಷನಾದವನು, ಲಕ್ಷ್ಮೀಪತಿಯು, ಎಲೈ ಸಹಸ್ರಮುಖವುಳ್ಳ ವಿಷ್ಣುವೇ, ನನ್ನ ಸ್ತೋತ್ರವನ್ನು (ನನ್ನ ರೀತಿಯನ್ನು) ಚಿತ್ತಕ್ಕೆ ತಂದುಕೋ ಎಂದು ತಾತ್ಪರ್ಯ.''

ಈ ಅರ್ಥಾನ್ವಯಗಳು ಸಂಸ್ಕೃತ ಭಾಷೆಯ ವ್ಯುತ್ಪತ್ತಿಬಲದಿಂದ ಸಿದ್ಧವಾದುವೆಂಬುದು ಸ್ವಯಂ ವಿದಿತ.

'ಸರಸ್ವತೀಕಂಠಾಭರಣ'ದೊಳಗಿನ ಕ್ರಮಸ್ಥಸರ್ವವ್ಯಂಜನಾದಿಗಳಾಗಲಿ, ಅಸಂಯೋಗವಾಗಲಿ ಕನ್ನಡ ಲಕ್ಷಣ ಗ್ರಂಥಗಳಲ್ಲಿ ನಿರೂಪಿತವಾಗಿಲ್ಲ. ಆದರೆ, ಈ ಸಂದರ್ಭದಲ್ಲಿ ಅಕ್ಕಲೇ ನರಸಿಂಹಶಾಸ್ತ್ರಿಗಳು ತಮ್ಮ 'ಕರ್ಣಾಟಕ ಚಂದ್ರಾಲೋಕ'ದಲ್ಲಿ ಕಟ್ಟಿರುವ ಗೀತಬಂಧವೊಂದನ್ನು ಭೋಜನ 'ಷಡ್ಜಾದಿಸ್ವರವ್ಯಂಜನ' ಎಂಬ ವ್ಯಂಜನಚಿತ್ರದೊಂದಿಗೆ ನೆನೆಯಬಹುದಾಗಿದೆ. ''ಸಾಪಗಂ ಗಾನಿಮಾ ಮಾಮಾ। ಸಮಾಮಾನಿನಿ ಪಾಪಮಂ॥ ಪಾರಿಪ್ಪ ರೀಪಂ ಧನೀಸಂ । ನಿಗಮಾಗಮ ಮಾಗಧಂ॥'' ಎಂಬ ಅನುಷ್ಟುಪ್ (೧–೨೧) ಶ್ಲೋಕ ಸಹ ಇದೇ ತೆರನಾದುದು. ''ಮೇಘವಾಹನನಾದ ಇಂದ್ರನೂ ಗಾತ್ರಮಾತ್ರವಾದ ಸರಸ್ವತಿಯೂ ಮಹಾಲಕ್ಷ್ಮಿಯೂ ಗಣೇಶಮಾತ್ರವಾದ ಪಾರ್ವತಿಯೂ ವೇದಶಾಸ್ತ್ರಗಳೇ ಸ್ತುತಿಪಾಠಕರಾಗಿಯುಳ್ಳ ಬ್ರಹ್ಮ ವಿಷ್ಣು ಮಹೇಶ್ವರ ಇವರುಗಳೂ ಪಾಪಪರಿಹಾರ ಕರೆಂದು ತಾತ್ಪರ್ಯ. ಇಲ್ಲಿರುವ ಅಕ್ಷರಗಳೆಲ್ಲಾ ಸಂಗೀತಶಾಸ್ತ್ರಕ್ಕೆ ಸಂಬಂಧಪಟ್ಟಿರುವುದರಿಂದ ಇದು ಗೀತಬಂಧ.'' ''ಮಹಾಮಾ ಎನ್ನುವುದರ ತದ್ಭವ ಮಾಮಾ. ಈ= ಸರಸ್ವತಿ, ಸಾ=ಲಕ್ಷ್ಮಿ, ಸಾಪ=ನೀರಿನಿಂದ ಕೂಡಿದುದು.''

ಇದೇ ಗ್ರಂಥದಲ್ಲಿಯು, 'ಚಿತ್ರಾಲಂಕಾರಗಳು' ಎಂಬುದಾಗಿ ಕರ್ತೃ ಕರೆದಿರುವ, ಕೆಲವು ವ್ಯಂಜನಚಿತ್ರಗಳು ಈ ರೀತಿಯಾಗಿವೆ :

ಚರಣನತಶರಣ ನಗಧರ । ಕರುಣಾಕೂಪಾರ ಗಿರಿಶಶರ ಗರುಡಹಯಾ ।
ಉರುರುಚಿನಿಧೀ ಮುನೀಶಿತ್ರ । ಸುರಾದಿನುತ ನನ್ನನೋವು ಪಾಂಡವಪಕ್ಷಾ ॥ (೧–೧೪)

''ಇದರಲ್ಲಿ ಮೊದಲನೇ ಪಾದದಲ್ಲಿ ಅಕಾರವಿನಾ ಸ್ವರಗಳೂ, ಓಷ್ಠ್ಯ ವರ್ಣಗಳೂ ಇಲ್ಲ ಮತ್ತು ಎರಡನೇ ಪಾದದಲ್ಲಿ ದಂತ್ಯಗಳೂ ಮೂರನೆಯದರಲ್ಲಿ ಕಂಠ್ಯಗಳೂ, ನಾಲ್ಕನೇದರಲ್ಲಿ ತಾಲವ್ಯಗಳೂ ಇಲ್ಲ.''—ಎಂಬುದಾಗಿ ಕರ್ತೃವಿನ ಟಿಪ್ಪಣಿಯಿದೆ. ಆಶಯ ವಿಶದವಿದೆ.

''ಅಂತಸ್ಥ, ಊಷ್ಮ, ಮೂರ್ಧನ್ಯಗಳಿಲ್ಲದುದಕ್ಕೆ'' ಎಂಬುದಾಗಿ ತಿಳಿಸಿ ನೀಡಿರುವ ಲಕ್ಷ್ಯವಿದು (ಆಶಯ ವಿಶದವಿದೆ) :

ಕನಕ ಕನತ್ತನುತನು ಪಿಕ । ನಿನಾದನಿಭನಾದೆ ಮಾನಿನೀಮಣಿ ಗಜಗಾ
ಮಿನಿ ಪದ್ಮನಿಭಾನನೆ ತಾಂ । ಮನೋಜನಂಗನೆ ಗಡೆಂದು ಬೀಗುಗುಮೆಂದುಂ ॥ (೧–೧೫)

''ನಿರ್ವರ್ಗೀಯಕ್ಕೆ'' ಎಂಬುದಾಗಿ ಉಲ್ಲೇಖಿಸಿರುವ ಆ ಮುಂದಿನ ಲಕ್ಷ್ಯಪದ್ಯದಲ್ಲಿ ಕೇವಲ ಅವರ್ಗೀಯಾಕ್ಷರಗಳಿಂದಲೇ ಸಾರ್ಥಕವಾದ ಪದ್ಯವನ್ನು ರಚಿಸಿದೆ (ಪದ್ಯಾದಿಯಲ್ಲಿ ಸ್ವತಂತ್ರವಾದ ದೀರ್ಘಾದಿ ಸ್ವರವೊಂದಿದೆ.).

ಆರಿರೆಯರಿಳೆಯೊಳಾಶಾ। ವಾರಾಶಿಯೊಳೀಸುವೀ ಶರೀಯರ್ಾವಳಿಯೊಳ್ ।
ವಾರಾಶಿಶಾಯಿಯೇ ಸುರ। ವೈರಿಯೊಳಿಳೆಯೆರೆಯಲಿಲ್ಲವೇ ಸಿರಿಯಿರೆಯುಂ ॥ (೧–೧೬)

ಇದರ ಆಶಯವೂ ವಿಶದವಿದೆ.

ಕನ್ನಡ ಸಾಹಿತ್ಯದಲ್ಲಿ ವ್ಯಂಜನಚಿತ್ರಗಳ ಕೆಲವು ಲಕ್ಷ್ಯಗಳು

ಕನ್ನಡ ಸಾಹಿತ್ಯದ ಪ್ರಾಚೀನ ಗ್ರಂಥಗಳಲ್ಲಿ ವ್ಯಂಜನ ಚಿತ್ರಗಳಲ್ಲಿ ಕೆಲವು ಭೇದಗಳು ಮಾತ್ರ ವಿರಳವಾಗಿ ಕಂಡು ಬರುತ್ತವೆ. ಕಡಿಮೆ ಸಂಖ್ಯೆಯ ವ್ಯಂಜನಗಳನ್ನು ಬಳಸಿ, ಸಹಜ ಸ್ಫೂರ್ತಿಯ ಸಾರ್ಥಕವಾದ ಪದ್ಯಗಳನ್ನು ರಚಿಸುವುದು ಪ್ರಾಯಃ ಕಷ್ಟಕರವಾದ್ದು ಎನ್ನುವ ಕಾರಣದಿಂದಲೇ ಅವುಗಳಲ್ಲಿ ಕೈ ತೊಡಗಿಸಿದವರ ಸಂಖ್ಯೆ ತೀರ ಸ್ವಲ್ಪ ಎನ್ನುವಂತಾಗಿದೆ. ಚಿತ್ರಕಾವ್ಯದ ಚಮತ್ಕಾರಗಳನ್ನು ಪ್ರದರ್ಶಿಸಬೇಕೆಂದು ಉದ್ದೇಶವಿಟ್ಟುಕೊಂಡ ಚಂದ್ರರಾಜನಂತಹ ಒಬ್ಬರಿಬ್ಬರು ಕವಿಗಳ ಗ್ರಂಥಗಳಲ್ಲಿ ಮಾತ್ರವೇ ಇವುಗಳಿಗೆ ನಿದರ್ಶನಗಳು ದೊರೆಯಬೇಕಾಗಿದೆ. ದೊರೆತ ಕೆಲವನ್ನು ಮುಂದೆ ಗಮನಿಸೋಣ.

'ಚತುರಕ್ಷರ'ವಾಗಲಿ, ಅದರ ಮತ್ತೊಂದು ರೂಪವಾದ 'ಏಕಾಕ್ಷರಪಾದ'ವಾಗಲಿ ಕನ್ನಡ ಸಾಹಿತ್ಯದಲ್ಲಿ ಬಳಕೆಯಾಗಿರುವುದಕ್ಕೆ ನಿದರ್ಶನಗಳು ತೋರುತ್ತಿಲ್ಲ. ತ್ರ್ಯಕ್ಷರ ಅಥವಾ ತ್ರಿವ್ಯಂಜನದ ಮುಂದಿನ ನಿದರ್ಶನಗಳೇನೋ ಒಂದೆರಡು ಕಂಡುಬರುತ್ತಿವೆ. ಇವುಗಳ ಒಂದು ಗಣ್ಯವಾದ ಆಕರವೆಂದರೆ ಚಂದ್ರರಾಜನ 'ಮದನತಿಲಕ'ವೇ. ಇಲ್ಲಿ ವ್ಯಂಜನ ಚಿತ್ರಗಳ ಭೇದಗಳಾದ ತ್ರ್ಯಕ್ಷರಿ, ದ್ವ್ಯಕ್ಷರಿ ಮತ್ತು ಏಕಾಕ್ಷರಿಗಳ ನಿದರ್ಶನಗಳು ದೊರೆಯುವುದು ಮಾತ್ರವೇ ವಿಶೇಷವಲ್ಲದೆ, ಇವೆಲ್ಲ ಕಂದಪದ್ಯದ ರಚನೆಗಳಾಗಿರುವುದೂ ಒಂದು ವಿಶೇಷವೇ. ವ್ಯಂಜನ ಚಿತ್ರಗಳು ಶ್ಲೋಕರೂಪವಾಗಿಯೇ ಇರಬೇಕಾದುದೇನೂ ಆವಶ್ಯಕವಿಲ್ಲವೆಂದು ಸ್ವತಂತ್ರವಾಗಿ ಯೋಚಿಸಿ, ಇವನ್ನು ಕಂದಪದ್ಯಗಳ ರೂಪದಲ್ಲಿ ರಚಿಸಿರುವುದಕ್ಕೆ, ನಮ್ಮ ಮೆಚ್ಚುಗೆ ಆತನಿಗೆ ಸಲ್ಲುತ್ತದೆ. ಆದರೆ ಅವನ ರಚನೆಗಳು ಈಗ ಪಾಠದೋಷಗಳಿಂದಾಗಿ ಕೆಟ್ಟು ಕುಳಿತಿರುವುದಕ್ಕೆ ವಿಷಾದಿಸಬೇಕಾಗಿದೆ.

ತ್ರ್ಯಕ್ಷರ(ರಿ)

'ಮದನತಿಲಕ'ದೊಳಗಿನ ನಿದರ್ಶನ—

ದಾನನಂದನಂ ಮಾನಾ। ಮಾನಂ ಮಾನಿನೀಮನೋಮದನಂ।
ಮಾನಿನಂ ನಾನಾ ನಾಮದಿನಂ। ದನನುದ್ದಾಮದಿನಿದಂ ದಾಮಂ ॥ (೬–೧೧)

ಇದು ಮುದ್ರಿತ ಪ್ರತಿಯ (ಕ ಹಸ್ತಪ್ರತಿ ಆಧಾರಿತ) ಪಾಠ. 'ಗ' ಹಸ್ತಪ್ರತಿಯಲ್ಲಿಯ ಪಾಠ ಈ ರೀತಿಯಾಗಿದೆ :

ದಾನನಂದನಂ ಮಾನಾ। ಮಾನಂ ಮಾನಿನಿ ಮನೋಮದನಂ ಮಾದಿನಂ।
ನಾನಾನಾಮನಂದನನು। ದ್ದಾಮದಿನಿದಂದಾಮಂ ॥ (?)

ಕವಿಚರಿತೆಯೊಳಗಿನ ಪಾಠ ಕ ಹಸ್ತಪ್ರತಿಯ ಪಾಠವನ್ನು ಹೋಲುತ್ತದೆಯಾದರೂ, ಅದನ್ನೂ ಒಳಗೊಂಡು ಎಲ್ಲವೂ ಅಶುದ್ಧವೇ ಆಗಿದೆ. ಈ ಸ್ಥಿತಿಯಲ್ಲಿ ಮಾಡುವುದೇನು? ದ ಕಾರ ನ ಕಾರ ಮ ಕಾರಗಳನ್ನು ಮಾತ್ರ ಬಳಸಿದ ರಚನೆಯೆಂಬುದು ಒಂದು ಖಚಿತವಾದ ಸಂಗತಿ. ಛಂದಸ್ಸು ಕಂದವೆಂದು ಕ್ಷೀಣವಾಗಿ ಮಾತ್ರ ಗೋಚರವಾಗುತ್ತದೆಯೆಂದರೆ ಪ್ರಸ್ತಾರಕ್ರಮ ಸಾಧ್ಯವಿಲ್ಲ. ಅರ್ಧ ಪೂರ್ವಾರ್ಧದಲ್ಲಿ ''ದಾನನಂದನನು(?) ಮಾನಾಮಾನನು, ಮಾನಿನೀಮನೋಮದನನು'' ಎಂಬುದಾಗಿ ಏನೋ ಒಂದು ರೀತಿ ಅಭಿಪ್ರಾಯವಾಗುತ್ತದೆ.

ಉತ್ತರಾರ್ಧದಲ್ಲಿ ಮೊದಲ ಪದವನ್ನು 'ಮಾನಿ [ನಾಂ]' ಎಂದಿಟ್ಟುಕೊಂಡು ಕವಿಚರಿತೆಯ ಪಾಠವನ್ನು ಅಂಗೀಕರಿಸಿದರೆ, ''ನಾನು ಮಾನಿ, ನಾನಾ ನಾಮಗಳನ್ನುಳ್ಳ ನಂದನನು, ಉದ್ದಾಮನು....'' ಎಂಬುದಾಗಿ ಒಂದು ರೀತಿ ಅರ್ಥಮಾಡಬಹುದು. ಛಂದಸ್ಸು ತೀರ ಅಸ್ತವ್ಯಸ್ತವಾದುದರಿಂದ ಇವೆಲ್ಲ ಊಹೆಗಳಿಗೆ ಬೆಲೆ ಬರುವುದಿಲ್ಲ ಎನ್ನದೆ ವಿಧಿಯಿಲ್ಲ.

'ಕನ್ನಡ ಕೈಪಿಡಿ'ಯಲ್ಲಿ 'ತ್ರ್ಯಕ್ಷರಪದ್ಯ'ವೆಂದಿರುವ ಒಂದು ಲಕ್ಷ್ಯ ಯಾವ ಆಕರದಲ್ಲಿಯದು ಎನ್ನುವುದು ತಿಳಿಯದು; ಛಂದಸ್ಸು ಆಶಯಗಳು ತೃಪ್ತಿಕರವಾಗಿವೆ. ಆ ಲಕ್ಷ್ಯಪದ್ಯ:

ನನ್ದನ ನನ್ದನ ನಿನ್ನೊ । ನ್ದನ್ದದ ಮೈ ಮುನ್ದೆ ನಿನ್ದುದೆನ್ದೆನೆ ಮುದದಿ ।
ನ್ದನ್ದಿನ್ದುನ್ದೆನ್ನದೆ ನೀ । ನೆನ್ದುಂ ಮನ್ಮನದೆ ನೆಮ್ಮಿ ನಿನ್ದೀ ಮುದಮಂ ॥

ಇದರ ಆಶಯ : ''ನಂದಗೋಪನ ಮಗನೆ (ಕೃಷ್ಣನೆ), ನಿನ್ನ ಒಂದು ಅಂದವಾದ ಮೈ ಮುಂದೆ ನಿಂತಿದೆ ಎಂದೆನ್ನಲು, ಮುದದಿಂದ ಅಂದು ಇಂದು ಉಂದು ಎನ್ನದೆ ನೀನು ಎಂದೂ ನನ್ನ ಮನಸ್ಸಿನಲ್ಲಿ ನೆಮ್ಮಿ ನಿಂತು ಮುದವನ್ನು ಕೊಡು''. ಚಿತ್ರಕವಿತ್ವ ನಿದರ್ಶನಾರ್ಥವಾಗಿ ಕೊಟ್ಟಿರುವ ಈ ಲಕ್ಷ್ಯಪದ್ಯ, ಈಚಿನ ಕಾಲದ ಒಂದು ರಚನೆಯಾಗಿರುವಂತೆ ತೋರುತ್ತದೆ. ಇಲ್ಲಿ ನ ಕಾರ ದ ಕಾರ ಮ ಕಾರಗಳನ್ನು ಮಾತ್ರ ಬಳಸಿ ಪದ್ಯವನ್ನು ರಚಿಸಿದ್ದು, ಇದು ಸಹಜವಾಗಿಯೇ 'ಮದನತಿಲಕ'ದ ನಿದರ್ಶನವನ್ನು ನೆನಪಿಗೆ ತರುತ್ತದೆ.

ದ್ವ್ಯಕ್ಷರ(ಠ)

'ಮದನತಿಲಕ'ದೊಳಗಿನ ನಿದರ್ಶನ :

ದನುನಂದನನಿನನಂದನ । ನಿನನಂದನನಿನನ ನಂದನನ ನಂದನನಂ ।
ದಿನನಂದನನೆಂದನುದಿನ । ದನನಿನನಾನನ್ನನಾದೆನಾಂದಂ ನಿನ್ನಂ ॥ (೬-೯೦)

ಈ ಪದ್ಯದ ಪಾಠ ಗ್ರಂಥದ ಎರಡು ಹಸ್ತಪ್ರತಿಗಳಲ್ಲಿಯೂ ಒಂದೇ ರೀತಿಯಾಗಿರುವಂತೆ ತೋರುತ್ತದೆ; ಕವಿಚರಿತೆಯಲ್ಲಿಯೂ ಸಮಾನಪಾಠವೇ ಇದೆ. ಕಂದಪದ್ಯದ ಛಂದಸ್ಸು ಸರಿಯಾಗಿದೆ. ಕೊನೆಯ ಪಾದವೊಂದರ ದೆಸೆಯಿಂದ, ಪದ್ಯದ ಆಶಯ ತಿಳಿಯಲು ಸ್ವಲ್ಪ ಕಷ್ಟವಿದೆ. ಈ ಪದ್ಯದಲ್ಲಿ 'ಇನನಂದನ' ಎಂಬ ಮಾತು ಮೇಲಿಂದ ಮೇಲೆ ಬರುತ್ತದೆ. ''ದನುನಂದನನ್, ಇನನಂದನನ್, ಇನನಂದನನ್, ಇನನ ನಂದನನ ನಂದನ[ನೆಂ]ದು, ಇನನಂದನನ್ ಎಂದು ಅನುದಿನದೆ....'' ಎಂಬವರೆಗೆ ಅನ್ವಯ ಸುಕರವಾಗಿದೆ. ಆದರೂ ಆಶಯದ ಸ್ಪಷ್ಟತೆ ಸಾಲದು.

ಆಚಣ್ಣನ 'ವರ್ಧಮಾನಪುರಾಣ'ದಲ್ಲಿ :

ಕಲಿ ಕೊಂಕಲ್ಕೇಕಕ್ಕುಂ । ಕೆಲಕ್ಕೆ ಕೋಲಿಕ್ಕೆ ಲಕ್ಕೆ ಲೆಕ್ಕಕ್ಕೆಲ್ಲಂ ।
ಕಲಿ ಕೊಲಲೆ ಕಲಲ್ಕಕ್ಕುಂ । ಕುಲಕಕ್ಕುಂ ಕಲಿ ಕಲಂಕಿ ಕೊಂಕೆ ಕಲಂಕಂ ॥ (೭-೫೩)

ಇದರ ಆಶಯ ಹೀಗೆ: ''ಶೂರನಾದವನು ಏತಕ್ಕೆ ಹಿಂಜರಿಯಬೇಕು? (ಶತ್ರುಗಳು) ಪಕ್ಕಕ್ಕೆ ಬಾಣವನ್ನು ಬಿಸಾಡುವ ಹಾಗೆ ಲಕ್ಷಗಳ ಲೆಕ್ಕದಲ್ಲಿ ಸಮಸ್ತರನ್ನೂ ಶೂರನಾದವನು ಕೊಲ್ಲುವುದಕ್ಕೆ ಕಲಿಯುವುದಾಗಬೇಕು. ಶೂರನಾದವನು ಚಪಲಚಿತ್ತನಾಗಿ ಹಿಂಜರಿದರೆ ಕುಲಕ್ಕೆ ಕಳಂಕವುಂಟಾಗುವುದು''.

ಈ ಪದ್ಯದ ಛಂದಸ್ಸು ಆಶಯಗಳು ತೃಪ್ತಿಕರವಾಗಿವೆ. ಕ ಕಾರ ಲ ಕಾರಗಳನ್ನು ಮಾತ್ರ ಬಳಸಿ ಸಾರ್ಥಕವಾದ ಪದ್ಯರಚನೆಯನ್ನು ಮಾಡಿದೆ. ಮಾತೃಕೆಯಲ್ಲಿಯೇ 'ದ್ವ್ಯಕ್ಷರಿ' ಎಂದು ಕರೆದಿರುವಂತೆ ತೋರುತ್ತದೆ. ಪುರಾಣಕಾವ್ಯವೊಂದರ ಕಥಾಸಂದರ್ಭದಲ್ಲಿ ಈ ಪದ್ಯ ಚೆನ್ನಾಗಿ ಹೊಂದಿಕೊಂಡು ಬಂದಿದೆ. ಪ್ರಜಾಪತಿ ಮಹಾರಾಜನ ಒಡ್ಡೋಲಗದಲ್ಲಿ ಪರಪಕ್ಷದ ದೊರೆ ಅಶ್ವಗ್ರೀವನೆಂಬವನ ಕಡೆಯ ದೂತನು ಹೊತ್ತುತಂದ ಸಂದೇಶವೊಂದರಿಂದ ಕೆರಳಿದ ಸಭಾಸದರು ಮಾಡಿದ ವೀರಾಲಾಪಗಳಲ್ಲಿ ಇದೂ ಒಂದಾಗಿದೆ.

'ನಿರೀಕ್ಷೆ' ಎಂಬ ಕವಿತಾಸಂಕಲನದಲ್ಲಿ :

ನಿನ್ನೆ ನೀನೇ ನಾನು ನನ್ನ ನೀನೆಂದ ನೀಂ
ನಿನ್ನನೇನೆಂದೆನ್ನಾನೆಂದು ದೀನನಾ
ದೆನ್ನನಿಂದೊದೆದೆ ನಂದನಾ ॥

ಹೊಸಗನ್ನಡ ಕಾಲದ ಪದ್ಯಸಂಕಲನ 'ನಿರೀಕ್ಷೆ' (೧೯೬೯). ಇದರ ಕರ್ತೃ ಪಿ. ಬಸವಣ್ಣನವರು. 'ಚಿತ್ರ ಕವಿತ್ವ'ದ ಪದ್ಯಗುಚ್ಛದಲ್ಲಿ ರಚಿಸಿ ಅದರಲ್ಲಿ ಸೇರಿಸಿರುವ 'ದ್ವ್ಯಕ್ಷರಿ'ಯಿದು (ಪು. ೪೧). ಈ ಪದ್ಯ ಒಂದು ಮಾತ್ರಾ ತ್ರಿಪದಿ. ಛಂದಸ್ಸು ತೃಪ್ತಿಕರ. ಕರ್ತೃವೇ ವಿವರಿಸಿರುವಂತೆ ಇದರ ಆಶಯ : ''ನಿನ್ನೆಯ ದಿನ ನೀನೇ ನಾನು ನನ್ನನ್ನೇ ನೀನು ಎಂದು ನೀನು ನಿನ್ನನ್ನು ನಾನು ಏನೆಂದೆನೆಂದು ದೀನನಾದ ನನ್ನನ್ನು ಇಂದು ಒದೆದೆ ಹೇ ನಂದನಾ''. ಇಲ್ಲಿ ನ ಕಾರ ದ ಕಾರಗಳನ್ನು ಮಾತ್ರ ಬಳಸಿದೆ.

ಏಕಾಕ್ಷರ(ರಿ)

'ಮದನತಿಲಕ'ದೊಳಗಿನ ನಿದರ್ಶನ :

ನಿನ್ನನ್ನಂ ನಿನ್ನನ್ನೆಂ । ನಿನ್ನಾಂನುನನನ್ನ ನಿನ್ನನನ್ನೆಂ ನಿನ್ನಂ।
ನಿನ್ನನ್ನಾಂ ನಾಂ ನೀನೆನೆ । ನಿನ್ನೆನ್ನಂ ನನ್ನಿಂ ನಿನ್ನನಾ ನಿನನೇನೇಂ ॥ (೬–೯)

ಇದು ಕ ಹಸ್ತಪ್ರತಿಯನ್ನಾಧರಿಸಿದ ಮುದ್ರಿತಗ್ರಂಥದ ಪಾಠ. 'ಗ' ಹಸ್ತಪ್ರತಿಯ ಪಾಠದಲ್ಲಿಯೂ 'ಕವಿಚರಿತೆ'ಯ ಪಾಠದಲ್ಲಿಯೂ ಕೊನೆಯ ಪಾದದಲ್ಲಿ ವ್ಯತ್ಯಾಸಗಳು ತೋರುತ್ತವೆ. 'ಗ' ಪ್ರತಿಯಲ್ಲಿ ಅದು ''ನೀನೇಂ ನಂನಂ ನೀನಂನ ನಾನಿನನೇನೇಂ'' ಎಂಬುದಾಗಿಯೂ 'ಕವಿಚರಿತೆ'ಯಲ್ಲಿ ''ನಿನ್ನೆನ್ನಂ ನನ್ನಿ ನಿನ್ನನಾನಿ ನನೆನ್ನೆಂ'' ಎಂಬುದಾಗಿಯೂ ಇದೆ.

ಕವಿಚರಿತೆಯ ಪಾಠದ ಪಾದಾಂತ್ಯಭಾಗದಲ್ಲಿ ''ನಿಜ, ನಿನ್ನನ್ನು ನಾನು ಸೂರ್ಯ ಎನ್ನುವುದಿಲ್ಲ'' ಎಂದು ಸುಲಭವಾಗಿ ಅರ್ಥವಾದರೂ ಒಟ್ಟು ಪದ್ಯದ ಅರ್ಥದಲ್ಲಿ ಸುಕರತೆಯಿಲ್ಲ. ಪಾಠದೋಷಗಳ ತೊಡಕನ್ನು ನಿವಾರಿಸಿ ಕೊಂಡಲ್ಲದೆ ಅರ್ಥವೈಶದ್ಯವೇರ್ಪಡದು.

'ನಿರೀಕ್ಷೆ' ಎಂಬ ಕವಿತಾಸಂಕಲನದಲ್ಲಿ :

ನನ್ನನೇನಾನುಂ ನೀನೆನೆ ನಿನ್ನ ನಾನಿನ್ನೇನನೆನೆ।
ನಿನ್ನಿನನಂ ನೀನಾನನ್ನಂ ನಿನ್ನಾನನಂ ನನೆ ನೂನಂ ॥

ಇದು ಉಕ್ತ ಪದ್ಯಸಂಕಲನದ 'ಏಕಾಕ್ಷರಿ' ಶ್ಲೋಕವಾದರೂ ಛಂದಸ್ಸಿನ ಸಾಮಾನ್ಯ ಕಟ್ಟಳೆಯನ್ನು ಉಲ್ಲಂಘಿಸಿದ್ದು. ಕವಿ ವಿವರಿಸಿರುವಂತೆ ಇದರ ಆಶಯ : ''ನನ್ನನ್ನು ನೀನು ಏನಾದರೂ ಅನ್ನುವುದಾದರೆ, ನಿನ್ನನ್ನು ನಾನು ಇನ್ನೇನು ತಾನೇ ಹೇಳಲಿ? (ಏನೊಂದೂ ಹೇಳದೆ ಹೊರಗೆ ಹೋಗಬೇಕಾಗುತ್ತದೆ. ಹಾಗೆ ಹೋದರೆ) ನಿನ್ನ ಗಂಡನನ್ನು ನೀನು ಹೊಂದುವತನಕ ನಿನ್ನ ಮುಖ ಯಾವಾಗಲೂ ಮೊಗ್ಗೇ (ಆಗಿರುತ್ತದೆ).''

ಕ್ರಮಸ್ಥ ಸರ್ವವ್ಯಂಜನ

ಇಮ್ಮಡಿ ಮುರಿಗಾ ಗುರುಸಿದ್ಧನ 'ಶಿವಲಿಂಗಷಟ್ಪದಿ'ಯಲ್ಲಿ :

ಕರಿವೈರಿ ಖಟ್ವಾಂಗಿ ಗಳಿತಾಘ ಜವಿಭೇದಿ
ಚರುಭುಕ್ತ ಛಂದ್ಯದ ವಿರಾಶಿ ಜನಿಸಂಹಾರಿ
ಝರಿಪು ಞವಿರಾಜಿ ಗಂಗಾಜೂಟ ಸಿತಿಕಂಠ ನಿಬಿಡದೃಢ ಸುಪ್ರವೀಣ
ತರುಣಾಬ್ಜಮೌಲಿ ಚಿನ್ನಾಥ ನಾದವಿನೋದಿ
ಧರಿತೇಷ್ಟನವಿತಾಹಿಪ ಫಣಾಹಿ ನೃತ್ಯಬಹು
ಭರಿತಾಮಯಧ್ವಂಸಿ ರಲವವಿತ್ರಾಕ್ಷ ಶಷದಾಯಿ ಸಪಿತ ಪ್ರಹಸಿತಾ ॥ (ಪ.೮೯)

ಇದರ ಆಶಯವನ್ನು ಇಲ್ಲಿ ವಿವರಿಸಿಲ್ಲ; ಇದರಲ್ಲಿ ಸರಳವಾದ ಅರ್ಥದ ಶಿವಸ್ತುತಿಯ ಮಾತುಗಳ ಜೊತೆಗೆ ಸಂಕೇತಾರ್ಥದ ಕೆಲವು ಮಾತುಗಳೂ ಸೇರಿರುವಂತಿದೆ.

ಈ ಪದ್ಯ ಒಂದು ಸಾರ್ಥಕ ಷಟ್ಪದಿಯಾಗಿದೆ. ಇದನ್ನು ಮಾತೃಕೆಯಲ್ಲಿ 'ಮಾತ್ರಿಕಾಮಾಲೆ' ಎಂಬುದಾಗಿ ಕರೆದಿದೆ. 'ಸರಸ್ವತೀಕಂಠಾಭರಣ'ದಲ್ಲಿಯ 'ಕ್ರಮಸ್ಥಸರ್ವವ್ಯಂಜನ'ದ ಲಕ್ಷಣ ಲಕ್ಷ್ಯಗಳಿಗೆ ಈ ಪದ್ಯ ಅನುಗುಣವಾಗಿರುವುದರಿಂದ ಇಲ್ಲಿ ಹಾಗೆಂದೇ ನಿರ್ದೇಶಿಸಿದೆ. ಕ ಕಾರದಿಂದ ಹ ಕಾರದವರೆಗೆ ಎಲ್ಲ ವ್ಯಂಜನಗಳೂ ಈ ಒಂದೇ ಪದ್ಯದಲ್ಲಿ ಅನುಕ್ರಮವಾಗಿ ಎಡೆಪಡೆದಿವೆ. 'ಮಾತ್ರಿಕಾಮಾಲೆ' ಎಂಬ ಮಾತು ಕೂಡ ಸಾರ್ಥಕವಾದುದೇ. ಗುಣಿತಾಕ್ಷರ ರೂಪದ ವರ್ಣಮಾಲೆಯ ಅಕ್ಷರಕ್ಕೆ 'ಮಾತ್ರಿಕೆ'ಯೆಂದು ಹೆಸರು; ಆದ್ದರಿಂದ 'ಮಾತ್ರಿಕಾಮಾಲೆ' ಎಂದರೆ ವರ್ಣಮಾಲೆ, ವರ್ಣಮಾಲೆಯ ಅಕ್ಷರಗಳು, ಅನುಕ್ರಮವಾಗಿ ಎಡೆಪಡೆದಿರುವ ಪದ್ಯವೆಂದಾಗುವುದು ಸಹಜವಾಗಿಯೇ ಇದೆ.

ಅಸಂಯೋಗಾದಿ ವ್ಯಂಜನಚಿತ್ರಗಳು

ಅಸಂಯೋಗ

ಭೋಜನು ನಿರೂಪಿಸಿರುವ ಉಳಿದ ಮೂರು ಅಧಿಕ ವ್ಯಂಜನಚಿತ್ರಗಳ ನಿದರ್ಶನಗಳು ಕನ್ನಡದಲ್ಲಿ ಗೋಚರಿಸುವುದಿಲ್ಲ; ಅಸಂಯೋಗದ ಕೆಲವು ನಿದರ್ಶನಗಳೇನೋ ಉಂಟು. 'ಸಿದ್ಧನಂಜೇಶನ 'ರಾಘವಾಂಕ ಚಾರಿತ್ರ', ಪದ್ಮಣಾಂಕನ 'ಪದ್ಮರಾಜಪುರಾಣ', ಬಸವಾಂಕನ 'ಉದ್ಭಟದೇವಚರಿತ', ಸೋಸಲೆ ರೇವಣಾಚಾರ್ಯನ 'ಮಹಿಮ್ನಸ್ತವಟೀಕೆ', ಇಮ್ಮಡಿ ಮುರಿಗಾ ಗುರುಸಿದ್ಧನ 'ಶಿವಲಿಂಗಷಟ್ಪದಿ', ಚೆನ್ನವೀರ ಜಂಗಮನ 'ಷಟ್ಸ್ಥಲ ವಲ್ಲಭೆ' ಈ ಕೆಲವು ಕಾವ್ಯಗಳಲ್ಲಿ 'ಅಸಂಯೋಗ'ದ ನಿದರ್ಶನಗಳು ಗೋಚರಿಸುತ್ತವೆಯಾದರೂ ಆಯಾ ಕಾವ್ಯ ಕರ್ತೃಗಳು ಅವನ್ನು ಹಾಗೆ ಉದ್ದೇಶಿಸಿರದೆ, ಉದ್ದೇಶಿಸಿದ್ದರೂ ಗೌಣವಾಗಿ ಮಾತ್ರ ಉದ್ದೇಶಿಸಿ, ಬೇರೆ ಚಿತ್ರಭೇದಗಳ ನಿದರ್ಶನಗಳನ್ನಾಗಿ ಅವನ್ನು ಕಟ್ಟಿರುವುದರಿಂದ ಆ ವಿಭಾಗಗಳಲ್ಲಿಯೇ ಅವನ್ನು ಪರಿಶೀಲಿಸಬೇಕಾಗುತ್ತದೆ.

'ಅರ್ಧನೇಮಿಪುರಾಣ'ದಲ್ಲಿ :

ಸುರಯಿಯ ಮುಗುಳ್ಗಳೊಳುರುವಳಿದಳಿಪತಿ
ಬಿರಯಿಸೆ ಬೆರಸುವ ಬಸದನ ಬೆಸನಿರೆ
ಸುರತ ಸುರಭಿರಸ ಪರಿಮಳಮಿಳಿತರೆ
ಬೆರಸಿದನರಮಗನರಸಿಯೊಳೆಸೆದಿರೆ ॥ (೬–೮)

ಮೊದಲನೆಯ ಎರಡು ಪಾದಗಳಲ್ಲಿ ಪಾಠದೋಷಗಳು ಕಾರಣವಾಗಿ ಅರ್ಥಕ್ಲೇಶಗಳಿವೆ. ೧೯೬೮ರ ಪರಿಷ್ಕರಣದಲ್ಲಿ ''ಸುರಯಿಯ ಬಿರಿಮುಗುಳೊಳು ರವದಳಿಪತಿ'' ಎಂದಿದೆ. ಯಾವುದೂ ತೃಪ್ತಿಕರವಾಗಿಲ್ಲ. ''ಸುರಯಿಯ ಬಿರಿಮುಗುಳು[ಉ]ವಳಿ[ಯ]ಳಿಪತಿ'' ಎಂದಿದ್ದರೂ ಇರಬಹುದು. ಮೊದಲ ಪಾದದಲ್ಲಿ 'ಮುಗುಳ್ಗ' ಎಂದೇ ಇದ್ದಿತು ಎಂದು ಒಂದು ಪಕ್ಷ ಭಾವಿಸಿದರೂ, ನಿಯಮಕ್ಕೆ ಭಂಗವೇನೂ ಇಲ್ಲ. ಏಕೆಂದರೆ 'ಳ್ಗ' ಶಿಥಿಲ ದ್ವಿತ್ವವೇ.

ಇದರ ಸಾಮಾನ್ಯವಾದ ಆಶಯ : ''ಸುರಗಿಯ ಮೊಗ್ಗುಗಳಲ್ಲಿ ಶೋಭಿಸುವ ಹೆಣ್ಣುದುಂಬಿ ಗಂಡುದುಂಬಿಗಳೆರಡೂ ವಿರಹಗೊಂಡಿರಲು ಕೂಡುವಂತೆ ಮದನನ (?) ಅಪ್ಪಣೆಯಿರಲು, ಸುರತ ಸುರಭಿರಸದ ಪರಿಮಳವು ಇಳಿತರುವಂತೆ ರಾಜಪುತ್ರನಾದ ವಸುದೇವನು ರಾಣಿಯಾದ ಶಾಲ್ಮಲಿದತ್ತೆಯೊಂದಿಗೆ ಶೋಭಾಯಮಾನವಾಗಿ ರತಿ ಸುಖವನ್ನು ಪಡೆದನು.''

೧೬ನೆಯ ಅಷ್ಟಿಛಂದಸ್ಸಿನ ಅಚಲಧೃತಿ ಎಂಬ ವೃತ್ತ, ಇಲ್ಲವೆ ಗೀತ್ಯಾರ್ಯಾ ಇದು. ಈ ಪದ್ಯದಲ್ಲಿ ಒತ್ತಕ್ಷರಗಳನ್ನು ಉಪಯೋಗಿಸಿಲ್ಲ. ಪರೋಕ್ಷವಾಗಿ ಇದನ್ನು ನಿಸ್ತಾಲವ್ಯವೆಂಬ ಚತುಃಸ್ಥಾನ ಚಿತ್ರದ ನಿದರ್ಶನವಾಗಿಯೂ ತಿಳಿಯಬಹುದು. ಏಕೆಂದರೆ ಇಲ್ಲಿ ತಾಲವ್ಯ ವರ್ಣಗಳಾವುವೂ ಉಪಯೋಗವಾಗಿಲ್ಲ.

ಜಾಯೇಂದ್ರನ ಕನ್ನಡ 'ಕುವಲಯಾನಂದ'ದಲ್ಲಿ :

ಸುರರರಿಖರಶರಭರ। ತರಹರಿಸರಿದಿರೆ ಗಿರಿ।
ವರ ವರಕರದುರೆ ಧರೆಯನುರೆ ಪೊರೆದಿರ್ಕೆ।
ಕರಿಶಿರ ತರಿದಿರರರೆ। ಗರಧರ ಪುರಹರ ಪರ।
ತರ ಗುರು ಪರಿಪರಿಚರಿತ ಮಹಾದೇವ॥

ಇದರ ಆಶಯ : ''ಗಜಾಸುರನನ್ನು ಕೊಂದವನೆ, ವಿಷಕಂಠನೆ, ತ್ರಿಪುರಾರಿಯೆ, ಶ್ರೇಷ್ಠನಾದ ಗುರುವೆ, ನಾನಾಚರಿತೆಯುಳ್ಳವನೆ, ರಾಕ್ಷಸರನ್ನು, ಖರ ಶರಭರನ್ನು (?) ತರಹರಿಸುವಂತೆ ನಿಗ್ರಹಿಸಿರಲು, ಗಿರಿಯಲ್ಲಿರುವವನೆ (?), ವರದಹಸ್ತದಲ್ಲಿ ಲೋಕವನ್ನು ಚೆನ್ನಾಗಿ ರಕ್ಷಿಸು.''

ರ ಕಾರದ ಅನುಪ್ರಾಸ ಎದ್ದು ತೋರುವಂತೆ ಪದ್ಯರಚನೆಗೆ ಉದ್ದೇಶಿಸುವುದು ಕವಿಗೆ ಮುಖ್ಯವೆಂದು ತೋರುತ್ತವೆ. ಆದರೆ ಇದು ಒತ್ತಕ್ಷರಗಳಿಲ್ಲದ 'ಅಸಂಯೋಗ'ದ ನಿದರ್ಶನವೂ ಆಗಬಹುದು. ಮಾತೃಕೆಯಲ್ಲಿ 'ಅಸಂಯೋಗ'ವೆಂದೇನೂ ಹೇಳಿಲ್ಲ. ಈ ದೃಷ್ಟಿಯಿಂದ ವೀರಶೈವ ಕವಿ ಸಂಪ್ರದಾಯದಂತೆ ಈ ನಿದರ್ಶನವನ್ನು, ದೀರ್ಘಪಾದಗಳ ಕೊನೆಯ ಗುರ್ವಕ್ಷರಗಳನ್ನು ಪಾದಾಂತದಲ್ಲಿಯದು ಹಾಗೂ ಅಂಕಿತಸಂಬಂಧವಾದ್ದು ಎಂದು ಪರಿಗಣಿಸದೆ ಹೋದ ಪಕ್ಷದಲ್ಲಿ, 'ಸರ್ವಲಘು'ಪದ್ಯವೆಂದೇ ಭಾವಿಸುವುದು ತಪ್ಪಾಗದು.

ಮುಕ್ತಾಕ್ಷರಗ್ರಸ್ತ

ಪರಿಚಿತವಾದ ಮುಕ್ತಪದಗ್ರಹಣದ ಹಾಗೆಯೇ; ಆದರೆ 'ಮುಕ್ತಾಕ್ಷರಗ್ರಸ್ತ' ಒಂದು ಅಕ್ಷರ ಚಮತ್ಕೃತಿವಿಶೇಷ. ಇದನ್ನು 'ವ್ಯಂಜನಚಿತ್ರ'ದಲ್ಲಿ ಸೇರಿಸಿ ಇಲ್ಲಿ ತೋರಿಸಿದೆಯಾದರೂ, ಸಂಸ್ಕೃತ ಲಾಕ್ಷಣಿಕರು ಕುರಿತಿರುವಂತೆ ತೋರುವುದಿಲ್ಲವಾದ್ದರಿಂದ, ಅವರು ಈ ಚಿತ್ರಪ್ರಕಾರಕ್ಕೆ ಕೊಟ್ಟಿರುವ ಸ್ಥಾನಮಾನಗಳೇನೆಂಬುದು ತಿಳಿಯದು.

ಹಿಂದಿನ ಮುಖ್ಯಪದದ ಅಂತ್ಯಾಕ್ಷರವನ್ನು ಎತ್ತಿಕೊಂಡು, ಅದನ್ನು ಮುಂದಿನ ಮುಖ್ಯಪದದ ಆದ್ಯಕ್ಷರವನ್ನಾಗಿ ಮಾಡುವುದು ಇಲ್ಲಿಯ ರಚನಾವಿಧಾನ; ಈ ವಿಧಾನ ಸಮಗ್ರಪದ್ಯದಲ್ಲಿ ಕ್ರಮಾಗತವಾಗಿ ವ್ಯಾಪಿಸಿದಾಗ, ಅದು 'ಮುಕ್ತಾಕ್ಷರಗ್ರಸ್ತ'ವೆಂಬ ಚಿತ್ರಭೇದದ ನಿದರ್ಶನವಾಗಿರುತ್ತದೆ.

'ಚೇರಮಕಾವ್ಯ'ದ ನಿದರ್ಶನ :

ಅಮಮ ಕರಿಮುಖಜನಕ ಕಮಲಾಕ್ಷನತಪಾದ
ದಮಿತಾಘ ಶಶಿಚೂಡ ಡಮರುಹಸ್ತೋತ್ತುಂಗ
ಗಮನಾಗಮನದೂರ ರಮಣೀಯತರಕಾಯ ಯಮಕಾಲ ಹರ ಸುವಿಪ್ರ
ಪ್ರಮಥೇಂದ್ರಜಿತಮದನ ನಮಿತಜನಸುರಭೂಜ
ಜಮದಗ್ನಿನುತ ಸರಸಸಮಯ ಪಾವನಜೀವಿ
ವಿಮಲತಾಪಸಮೋಹಿ ಹಿಮಗಿರಿಸುತಾರಾಮ ಮಮ ರಕ್ಷ ಭೋಗಮಲ್ಲ॥ (೧೧-೬೨)

ಇದರ ಆಶಯ: ''ಆಹಾ, ಗಣಪತಿಯ ತಂದೆ, ವಿಷ್ಣುವಿಂದ ನಮಸ್ಕೃತವಾದ ಪಾದಗಳುಳ್ಳವನು, ಪಾಪಗಳನ್ನು ದಮನಮಾಡಿರುವವರಿಗೆ ಒಲಿಯುವ ಚಂದ್ರಮೌಳಿ, ಎತ್ತಿದ ಕೈಯಲ್ಲಿ ಡಮರುಗವನ್ನು ಹಿಡಿದವನು, ಗಮನಾಗಮನಗಳಿಗೆ ದೂರಸ್ಥನಾದವನು, ರಮಣೀಯವಾದ ಆಕೃತಿಯುಳ್ಳವನು, ಯಮನಿಗೇ ಮೃತ್ಯುಸ್ವರೂಪನಾದವನು, ಹರಸದ್ಬ್ರಾಹ್ಮಣರಿಗೆ ಪ್ರಮಥೇಂದ್ರ, ಮನ್ಮಥನನ್ನು ಗೆದ್ದವನು, ನಮಸ್ಕರಿಸಿದ ಜನರಿಗೆ ಕಲ್ಪತರು, ಜಮದಗ್ನಿನುತಸರಸಸಮಯ, ಪಾವನಜೀವಿ, ಪವಿತ್ರರಾದ ತಪಸ್ವಿಗಳನ್ನು ಮೆಚ್ಚಿಕೊಳ್ಳುವವನು, ಪಾರ್ವತಿಯ ಪ್ರಿಯ, ಭೋಗಮಲ್ಲ, ನನ್ನನ್ನು ರಕ್ಷಿಸು.''

ಮಾತೃಕೆಯಲ್ಲಿ ಈ ಪದ್ಯವನ್ನು ''ಇದು ಮುಕ್ತಾಕ್ಷರಗ್ರಸ್ತ'' ಎಂಬುದಾಗಿ ಕರೆದಿದೆ.

ಸರ್ವಲಘು

ವರ್ಣವೃತ್ತವಾಗಲಿ ಮಾತ್ರಾವೃತ್ತವಾಗಲಿ ಸಮಗ್ರವಾಗಿ ಲಘ್ವಕ್ಷರಗಳಿಂದಲೇ ಕಟ್ಟಿದುದಾಗಿದ್ದರೆ ಅದು 'ಸರ್ವಲಘು'ವೃತ್ತವೆನಿಸುವುದು. ಹೀಗೆ ವೃತ್ತವು ಲಘ್ವಕ್ಷರಗಳಿಂದಲೇ ರಚಿತವಾಗಬೇಕಾದರೆ, ಯಾವುದೇ ಅಕ್ಷರ ದ್ವಿತ್ವವಾಗಿರುವುದು ಸಾಧ್ಯವಿಲ್ಲ. ಏಕೆಂದರೆ ದ್ವಿತ್ವದ ಹಿಂದಿನ ಅಕ್ಷರ ಗುರುವಾಗಿ ಪರಿಣಮಿಸಿ, ಅದರಿಂದ ನಿಯಮೋಲ್ಲಂಘನೆಯಾಗುವುದು. ಶಿಥಿಲದ್ವಿತ್ವವಾಗಿದ್ದ ಪಕ್ಷದಲ್ಲಿ ಹಿಂದಿನ ಅಕ್ಷರ ಗುರುವಾಗದ ಕಾರಣ, ಅಂತಹ ದ್ವಿತ್ವಗಳು ಬೇಕಾದರೆ ಉಪಯೋಗವಾಗಬಹುದು (ಉದಾ. ಅರ್ಥನೀ. ೬-೮). ದ್ವಿತ್ವಗಳು ಮಾತ್ರವಲ್ಲದೆ ಬಿಂದು ವಿಸರ್ಗಗಳು ಬಂದರೂ ಸಬಿಂದುಕ ಸವಿಸರ್ಗಾಕ್ಷರಗಳು ಗುರ್ವಕ್ಷರಗಳೇ ಆಗುವುದರಿಂದ ಅಂತಹ ಅಕ್ಷರಗಳೂ ಉಪಯೋಗವಾಗುವಂತಿಲ್ಲ. ಹಳಗನ್ನಡ ಭಾಷಾವ್ಯವಸ್ಥೆಗೆ 'ಸರ್ವಲಘು' ಚಿತ್ರಗಳು ಅಳವಡುವುದು ಕಷ್ಟ; ನಡುಗನ್ನಡಭಾಷೆಯ ಸ್ವರಾಂತಶಬ್ದಗಳ ಹಾಗೂ ಪ್ರಕೃತಿಪ್ರಯೋಗಗಳಂತಹ ಪ್ರಥಮಾವಿಭಕ್ತಿ ರೂಪಗಳ ರಚನೆಗೆ ಅಳವಡುವುದು ಸುಲಭ. ಇದೇ ಕಾರಣವಾಗಿ ಈ ಚಿತ್ರಭೇದ ಈ ಕಾಲದ ಸಾಹಿತ್ಯಗ್ರಂಥಗಳಲ್ಲಿಯೇ ವಿಶೇಷ. ಷಟ್ಪದಿಗಳಲ್ಲಿ ಪಾದಾಂತ್ಯದ ಗುರು ಹ್ರಸ್ವರೂಪವಾಗಿಯೂ ಇರಬಹುದೆನ್ನುವ ಸೌಕರ್ಯವು ಪದ್ಯ 'ಸರ್ವಲಘು'ವಿನದಾಗಿ ತೋರುವುದಕ್ಕೆ ಚೆನ್ನಾಗಿ ಒದಗುತ್ತದೆ.

'ಸರ್ವಲಘು'ಪದ್ಯಗಳು ಎರಡು ರೀತಿಯಾಗಿರುತ್ತವೆ: (೧) ವ್ಯಂಜನಾಕ್ಷರಗಳು ಅಕಾರಘಟಿತ ಗುಣಿತಾಕ್ಷರಗಳಾಗಿರುವುದು; (೨) ವ್ಯಂಜನಾಕ್ಷರಗಳು ವಿಭಿನ್ನ ಸ್ವರಘಟಿತ ಗುಣಿತಾಕ್ಷರಗಳಾಗಿರುವುದು. ಇವುಗಳಲ್ಲಿ ಮೊದಲನೆಯದು ಸ್ವರಚಿತ್ರದಲ್ಲಿ ಪ್ರಸ್ತಾಪಗೊಳ್ಳುವುದು ಉಚಿತವಾದ್ದರಿಂದ, ಎರಡನೆಯದನ್ನು ಈ ವ್ಯಂಜನಚಿತ್ರಭಾಗದಲ್ಲಿ ಮುಂದೆ ಪರಿಶೀಲಿಸಲಾಗುವುದು.

ಮುಖಬೋಳು ಸಿದ್ಧರಾಮನ 'ಷಟ್ಸ್ಥಲತಿಲಕ'ದಲ್ಲಿ :

ಕುಶಜಸಖದಶನ ವಸುರಸನವಿಸರ ವಿನಾಶ
ರಸಜ ವಿಷಮನ ಪದಬಿಸಜದಿ ಪೊಸದಸಮುಶಿವ
ದಶದಿಶ ವಿಲಸಿತ ವರಝುಷಸತಿ ಸುಭರಿತ ಕುಸುಮಶರನಸು ಪೊಸದ ಸಿತಗ
ಮಿಸುನಿವಸನನ ದೃಗ್ಬಿಸಜಪದಬಿಸಜಯುಸಿತ
ಬಿಸಿಯ ವಿಷಗಳ ವಸನದಶದಿಶಗಿರಿಶ ಪಶುಪ
ಶಶಿ ವಸು ಬಿಸಜ ಸಖತ್ರಿ ಕುಶಧರ ಬಸವ ಶಿವನು ಸಸಿನೆ ಸಲಹುಗೆ ಜಗವನು ॥

ಈ ಪದ್ಯದಲ್ಲಿ 'ವಿನಾಶ', 'ದೃಗ್ಬಿಸಜ', 'ಸಖತ್ರಿ' ಎಂಬಲ್ಲಿ ಮಾತೃಕೆಯಲ್ಲಿಯೇ ತಪ್ಪು ಘಟಿಸಿರುವುದು ಸಂಭಾವ್ಯ. ಕೆಲವೆಡೆ ಅಭಿಪ್ರಾಯವಿಶದತೆಯಿಲ್ಲವಾದ್ದರಿಂದ ಆಶಯವನ್ನು ವಿವರಿಸಿಲ್ಲ.

ಸಿದ್ಧನಂಜೇಶನ 'ರಾಘವಾಂಕ ಚಾರಿತ್ರ'ದಲ್ಲಿ :

ಶರವಣಜಜನಕ ಗರಸುರುಚಿರಗರಧರ ಪುರ
ಹರ ಹರ ವರದಕರ ರುಷಿರುಜುರುಚಿಗಮರಣರು
ಗರಿ ಮರುತರತರಮಣ ಡಮರುಗಲಲಿತ ಭಸಿತವಿಶದನಿಜಲಸದಪಘನ
ಶರಣಜನದಿವಿಜತರು ನರಕರಿವರ ಹರಹರ
ಣ ರುಡುರುತರ ಶರಭರಣರಿಪುರುಧಿರವಿರತ
ವರಿರಸಪರಿಕರಕರಣದುರಿತಚಯಹರ ಸುಖಿ ಜಯಜಯ ಮಹಿಮಶರನಿಧಿ ॥ (೧೬-೮೧ರ ಮುಂದೆ)

ಇದರ ಆಶಯ : ''ಕುಮಾರಸ್ವಾಮಿಯ ತಂದೆಯೆ, ನುಂಗಲು ಮನೋಹರವಾದ ವಿಷವನ್ನು ಧರಿಸಿದವನೆ, ತ್ರಿಪುರಗಳನ್ನು ಸುಟ್ಟವನೆ, ಶಿವನೆ, ವರದಹಸ್ತನೇ, (?), ಡಮರುಗವನ್ನು ಮನೋಹರವಾಗಿ ಧರಿಸಿದವನೇ, ವಿಭೂತಿಯನ್ನು ಧರಿಸಿದ ಸ್ವಚ್ಛವಾದ ತನ್ನ ಶರೀರವುಳ್ಳವನೆ, ಶರಣಜನರಿಗೆ ಕಲ್ಪವೃಕ್ಷವಾದವನೆ, (?), ಶರಭನಾಗಿ ನರಸಿಂಹನನ್ನು ನಿಗ್ರಹಿಸುವಾಗ ಉಂಟಾದ ರಣದಲ್ಲಿ ಶತ್ರುಗಳನ್ನು ನಿಗ್ರಹಿಸಿದವನೆ, ಪಾಪಗಳನ್ನು ಪರಿಹರಿಸಿದವನೆ, ಸುಖಿಯೆ, ಮಹಿಮಾಸಮುದ್ರನೆ, ನಿನಗೆ ಜಯವಾಗಲಿ.''

ಈ ವಾರ್ಧಕಷಟ್ಪದಿಯ ಒಂದು ವಿಶೇಷವೆಂದರೆ, ಇದೊಂದು ಪದ್ಯದಿಂದಲೇ ಇತರ ಷಟ್ಪದೀಭೇದಗಳನ್ನೂ ಹೊರಡಿಸಬಹುದು ಎಂಬುದು. ಈ ಕೌಶಲವನ್ನು ಮುಂದೆ ಗಮನಿಸಬಹುದಾಗಿದೆ. ಪ್ರಸ್ತುತ ಇದೊಂದು 'ಸರ್ವಲಘು'ಷಟ್ಪದಿ.

ನೀಲಕಂಠಾಚಾರ್ಯನ 'ಆರಾಧ್ಯಚಾರಿತ್ರ'ದಲ್ಲಿ :

ಸುರನಿಕರವರಮುಕುಟಮಣಿಕಿರಣಲಹರಿತತಿ
ಪರಿಕಲಿತಪರಚರಣಸರಸಿರುಹ ಭಜಕಕುಲ
ದುರಿತಸಮುದಯ ರುಚಿರ ಮದಕರಟಿದಳನಪಟುಹರಿಸದೃಶನತನುರಹಿತಂ
ಕರಿಲಪನಪಿತನಮಲಶತತರಣಿಘೃಣಿನಿಸರ
ಪರಿಭವವಿಲಸಿತತನು ಫಣಿಪಕರಕಟಕನುರು
ತರಗರಳಸರಳಗಳನನವರತಮವನಿಯಂ ಪೊರೆಗೆ ಗುರು ನೀಲಕಂಠಂ ॥ (೨-೪-೧)

ಇದರ ಆಶಯ : ''ದೇವತೆಗಳ ಸಮೂಹದ ಶ್ರೇಷ್ಠವಾದ ಕಿರೀಟಗಳ ರತ್ನಕಾಂತಿಯ ಪ್ರವಾಹಪುಂಜದಿಂದ ಕೂಡಿದ ಶ್ರೇಷ್ಠವಾದ ಪಾದಕಮಲಗಳನ್ನುಳ್ಳವನು, ಭಕ್ತವೃಂದದ ಪಾಪಸಮೂಹವೆಂಬ ಮದ್ದಾನೆಯನ್ನು ಸೀಳುವುದರಲ್ಲಿ ಸಮರ್ಥವಾದ ಸಿಂಹದೋಪಾದಿಯವನು, ಕಾಮದೂರನು, ಗಣೇಶನ ತಂದೆ, ಉಜ್ವಲವಾದ ನೂರು ಸೂರ್ಯರ ಕಾಂತಿಸಮೂಹವನ್ನು ಕೀಳುಗಳೆಯುವ ಶೋಭಾಯಮಾನವಾದ ದೇಹವುಳ್ಳವನು, ಸರ್ಪವನ್ನು ಕೈಗಡಗವಾಗಿ ಮಾಡಿಕೊಂಡವನು, ವಿಷಕಂಠನು, ಆದ ಗುರು ನೀಲಕಂಠನು ಸರ್ವದಾ ಲೋಕವನ್ನು ಕಾಪಾಡಲಿ.''

ಈ ವಾರ್ಧಕಷಟ್ಪದಿಯ ಪದ್ಯದಲ್ಲಿ ೩ನೆಯ ಪಾದದ ಕೊನೆಗೆ 'ರಹಿತಂ' ಎನ್ನುವಲ್ಲಿ, ೬ನೆಯ ಪಾದದಲ್ಲಿ 'ಅವನಿಯಂ', 'ನೀಲಕಂಠಂ' ಎನ್ನುವಲ್ಲಿ ನಿಯಮ ಸಬಿಂದುಕಶಬ್ದಗಳಿಂದಾಗಿ ಉಲ್ಲಂಘನೆಗೊಂಡಿದೆ. ಮೂಲದಲ್ಲಿ ಪಾಠ 'ರಹಿತ', 'ಅವನಿಯನು' ಎಂದೇ ಇದ್ದಿರಲೂಬಹುದು; ಇನ್ನು 'ನೀಲಕಂಠ' ಎಂಬ ಶಬ್ದ ಅಂಕಿತದ ಸಲುವಾಗಿ ತಪ್ಪದೆ ಬರುವ ಶಬ್ದವೆಂಬುದರಿಂದ ಅದನ್ನು ನಿಯಮದ ಕಟ್ಟಿಗೆ ಒಳಪಡಿಸಬೇಕಾಗಿಲ್ಲವೆಂದು ತೋರುತ್ತದೆ. ಈ ರಿಯಾಯಿತಿಗಳೆಲ್ಲ ಸಹ್ಯವಾದರೆ, ಆಗ ಇದೊಂದು 'ಸರ್ವಲಘು' ವೃತ್ತವೇ.

ಸೋಸಲೆ ರೇವಣಾಚಾರ್ಯನ 'ಮಹಿಮ್ನಸ್ತವಟೀಕೆ'ಯಲ್ಲಿ :

ಹರಿಹರ ಹರಿಹರಿಸಖ ದೃಗವ ಹರಿಸುರವರ ಹರಿ ಹರಿನತಚರಣ (?)
ಹರಿಸುತಹರ ಹರ ಹರಿವರಕಟಕನೆ ನರಹರಿಹರ ಹರ ಹರಿವರಮಕುಟ
ಭವ ಭವಹರ ಹರಗಣ ಗಣಪತಿಪಿತ ಪಶುಪ ಪರಮಶಿವಪದ ಪದವಚನ
ವೃಷಭಗ ಭಗಪದನಗ ಗುರು ನಿಗಮಗ ಗುಹಪಿತ ಇಹರಸುರಹರ ಯಮಹರ ॥

(ಕಕಚ. ೨-ಪು. ೩೨೧)

ಇದರ ಆಶಯ : ''ಬ್ರಹ್ಮನನ್ನು ನಿಗ್ರಹಿಸಿದವನು, ಶಿವ, ಇಂದ್ರನ ಕೆಳೆಯ, ಸುರಶ್ರೇಷ್ಠ, ಇಂದ್ರನಿಂದಲೂ ವಿಷ್ಣುವಿನಿಂದಲೂ ನಮಸ್ಕೃತವಾದ ಪಾದಗಳುಳ್ಳವನು, ಅರ್ಜುನನನ್ನು ಹುಸಿಕಾಳೆಗದಲ್ಲಿ ನಿಗ್ರಹಿಸಿದವನು, ಶಿವನು, ಸರ್ಪಭೂಷಣನು, ನರಸಿಂಹನನ್ನು ನಿಗ್ರಹಿಸಿದವನು, ಶಿವನು, ಚಂದ್ರನನ್ನು ಮುಡಿಯಲ್ಲಿ ಧರಿಸಿದವನು, ಭವ ಎನಿಸಿದವನು, ಜನ್ಮವನ್ನು ನೀಗುವವನು, ರುದ್ರಗಣಗಳಿಗೆ ಗಣಪತಿಗೆ ತಂದೆ ಎನಿಸಿದವನು, ಪಶುಪತಿ, ಪರಮ ಮೋಕ್ಷಸ್ಥಾನವೆನಿಸಿದವನು, ಅಕ್ಷರಾತ್ಮಕನು, ನಂದಿವಾಹನನು, ಜ್ಞಾನ ತೇಜಸ್ಸುಗಳ ಬೆಟ್ಟವಾಗಿರುವನು. ವೇದಗಳಲ್ಲಿ ಗಮಿಸುವವನು, ಗುಹನ ತಂದೆ, ಯಮನನ್ನು ಪರಿಹರಿಸಿದವನು (?)''

೩೧ ಅಕ್ಷರಗಳು ಪಾದಕ್ಕೆ ಬರುವಂತೆ ತೋರುವ ಈ ಪದ್ಯದ ಛಂದಸ್ಸು ಜಯಕೀರ್ತಿ ಲಕ್ಷಣಿಸುವ ೧೦ ನಗಣ+ಗ ಲಕ್ಷಣದ 'ಲಹರಿಕಾ' ವೃತ್ತವನ್ನು (೨-೨೬೨) ಬಲುಮಟ್ಟಿಗೆ ಹೋಲುತ್ತದೆ. ಮೊದಲ ಪಾದದಲ್ಲಿ ತಪ್ಪು ಬಿದ್ದಿರಬೇಕು. ಅವರ್ಗೀಯಾಕ್ಷರಗಳ ಪ್ರಾಸವಿಟ್ಟಿರುವುದು ಚಿಂತನೀಯ. ಟೀಕೆಯ ಅಂತ್ಯಭಾಗದಲ್ಲಿ 'ಶಶಿಕಲೆಯೆಂಬ ಸರ್ವಲಘುವೃತ್ತ' ಎಂಬ ಸೂಚನೆಯಿದ್ದರೂ, ಈ ಶಶಿಕಲೆಯೆಂಬ ವೃತ್ತ ಪ್ರಸಿದ್ಧವಾದುದೇನೂ ಅಲ್ಲ. ಪ್ರಸ್ತುತ ಈ ಪದ್ಯ ಸಮಗ್ರವಾಗಿ ಲಘ್ವಕ್ಷರಗಳಿಂದಲೇ ರಚಿತವಾಗಿರುವುದು ನಿಜ.

ಬಸವಕವಿಯ 'ಸಿದ್ಧಲಿಂಗಕಾವ್ಯ'ದಲ್ಲಿ :

ಕುವನಶುಚಿಪವನಖವಿಧುತಪನಸುಪುರುಷತನು
ಜವನ ಹರ ಜಡಜಸುತಜಡಜದೃಗಮರನಿಕರ
ದಿವಿಜಪತಿನುತ ಭುಜಗಧರ ಕುಧರಗೃಹ ಗಗನಕಚ ಗರಳಧರ ಪರತರ
ಧವಳತನು ಪವನಸಖನಯನ ಕಲುಷಚಯಗಿರಿ
ಪವಿ ಮದನತನು ವಿಪಿನಶಿಖಿ ಧನಪಸಖ ಪರಮ
ಕವಿನುತನೆ ವೇಶ್ಯಾತಟಾಕೇಶ ಗುರುಸಿದ್ಧಲಿಂಗ ಮಿಗೆ ಸಲಹೆಮ್ಮನು ॥ (ಕಕಚ ೩, ಪು. ೨೧೮)

ಇದರ ಆಶಯ : "ಪೃಥ್ವಿ, ಜಲ, ತೇಜಸ್ಸು, ವಾಯು, ಆಕಾಶ, ಚಂದ್ರ, ಸೂರ್ಯ, ಯಜಮಾನ ಎಂಬ ಅಷ್ಟಮೂರ್ತಿ ಸ್ವರೂಪನಾದವನೆ, ಯಮನನ್ನು ನಿಗ್ರಹಿಸಿದವನೆ, ಬ್ರಹ್ಮ ಮತ್ತು ವಿಷ್ಣು, ದೇವತೆಗಳು, ಇಂದ್ರ ಇವರಿಂದ ಕೀರ್ತಿತನಾದವನೆ, ಸರ್ಪಭೂಷಣನೆ, ಕೈಲಾಸವಾಸಿಯೆ, ವ್ಯೋಮಕೇಶನೆ, ವಿಷಕಂಠನೆ, ಶ್ರೇಷ್ಠವಾದ ಧವಳವರ್ಣದ ಶರೀರವುಳ್ಳವನೆ, ಅಗ್ನಿನೇತ್ರನೆ, ಪಾಪಸಮೂಹವೆಂಬ ಬೆಟ್ಟದ ವಜ್ರಾಯುಧವೆ, ಮನ್ಮಥನ ದೇಹವೆಂಬ ಅರಣ್ಯವನ್ನು ಸುಟ್ಟ ಬೆಂಕಿಯೆ, ಕುಬೇರನ ಕೆಳೆಯನೆ, ಶ್ರೇಷ್ಠಕವಿಗಳಿಂದ ಕೀರ್ತಿತನೆ, ಸೂಳೆಯಕೆರೆಯ ಸಿದ್ಧಲಿಂಗನೇ, ನಮ್ಮನ್ನು ಕಾಪಾಡು."

ಇಲ್ಲಿ ಅಂಕಿತದ ಹಾಗೆ ಸೇರಿಕೊಂಡಿರುವ ಕೊನೆಯ ಪಾದವನ್ನು ಬಿಟ್ಟರೆ, ಪದ್ಯವನ್ನು 'ಸರ್ವಲಘು'ವಾಗಿಯೇ ಕಟ್ಟಬೇಕೆನ್ನುವುದು ಕವಿಯ ಉದ್ದೇಶವಾಗಿರುವಂತೆ ತೋರುತ್ತದೆ.

ಕ್ರಮವಿಪರ್ಯಸ್ತಪರಿಮಿತವ್ಯಂಜನ

ಲಕ್ಷ್ಮೀಶನ 'ಜೈಮಿನಿಭಾರತ'ದಲ್ಲಿ :

ಚಪಲೆ ಚಂಚಲೆ ಚಾಟುವತಿ ಚಂಡಿ ಚಲವಾದಿ
ಕುಪಿತೆ ಕುತ್ಸಿತೆ ಕುಹಕೆ ಕುಜೆ ಕುಟಿಲೆ ಕುಲಗೇಡಿ
ಕಪಟಿ ಕಂಟಕಿ ಕಡುದುಷ್ಟೆ ಕಲಹಾರ್ಥಿ ವಿರಸೆ ಪರವಶೆ ಪಾದರಿ
ವಿಫಲೆ ವಿಹ್ವಲೆ ವಿಷಮೆ ವಿರಹಿ ವಿಪರೀತೆ ಮಿಗೆ
ತಪಿತೆ ತಸ್ಕರೆ ತವಕಿ ತವೆ ತಂದ್ರಿ ತಾಮಸಿಯೆ
ನಿಪ ವನಿತೆಯರ ನಿಜಕೆ ನಿಲಿಸಿ ನಿಶ್ಚೈಸಿದೊಡೆ ಬಳಿಕ ಬಳಲಿಕೆ ಬಾರದೇ ॥ (೫–೬೧)

ಪದ್ಯದ ಆಶಯ ಸರಳವಾಗಿರುವುದರಿಂದ, ಅದನ್ನಿಲ್ಲಿ ನಿರೂಪಿಸಬೇಕಾಗಿಲ್ಲ. ಇಲ್ಲಿ ಮೊದಲ ೫ ಪಾದಗಳಲ್ಲಿ ಚ ಕಾರ ಕು ಕಾರ, ಕ ಕಾರ, ವಿ ಕಾರ, ತ ಕಾರಗಳು ಆರಂಭದಲ್ಲಿರುವ ಪದಗಳ ಶ್ರೇಣಿಯನ್ನು ಕವಿ ಪವಣಿಸಿದ್ದಾನೆ. ಹಾಗೆ ಪವಣಿಸಿರುವುದರಲ್ಲಿ ಒಂದು ಕ್ರಮವಿದ್ದರೂ, ವರ್ಗಾಕ್ಷರಗಳ ಅನುಕ್ರಮವನ್ನು ಹಿಡಿದು ಕವರ್ಗಾದಿಯಾದ ಅಕ್ಷರಗಳು ಬರುವುದಿಲ್ಲ; ಎಲ್ಲ ವ್ಯಂಜನಗಳೂ ಬರುವುದೂ ಇಲ್ಲ. ಆದುದರಿಂದ ಈ ಪದ್ಯವನ್ನು 'ಕ್ರಮವಿಪರ್ಯಸ್ತ ಪರಿಮಿತವ್ಯಂಜನ' ಚಿತ್ರದ ನಿದರ್ಶನವಾಗಿ ತಿಳಿಯಬಹುದಾಗಿದೆ.

ವ್ಯಂಜನಮಾಲೆ

ಈಗಾಗಲೇ 'ಕ್ರಮಸ್ಥಸರ್ವವ್ಯಂಜನ' ವರ್ಣಚಿತ್ರದ ನಿರೂಪಣೆಯಲ್ಲಿ 'ಮಾತ್ರಿಕಾಮಾಲೆ'ಯ ಬಗ್ಗೆ ಸ್ವಲ್ಪಮಟ್ಟಿಗೆ ಗಮನಿಸಿದೆ. 'ಕ್ರಮಸ್ಥ ಸರ್ವವ್ಯಂಜನ'ದಲ್ಲಿ ಒಂದೇ ಪದ್ಯದಲ್ಲಿ ವರ್ಣಮಾಲೆಯ ಎಲ್ಲ ವ್ಯಂಜನಗಳೂ ಅನುಕ್ರಮವಾಗಿ ಗರ್ಭೀಕೃತವಾಗಿದ್ದರೆ, ವರ್ಣಮಾಲೆಯ ವ್ಯಂಜನಗಳೆಲ್ಲ ಪ್ರತ್ಯೇಕ ಪದ್ಯಗಳಲ್ಲಿ ಒಂದೊಂದಾಗಿ ನಿರೂಪಿತವಾಗಿರುವುದು 'ವ್ಯಂಜನಮಾಲೆ'ಯಲ್ಲಿ ಕಾಣುತ್ತದೆ. ಇದು ರೂಢಿಯಲ್ಲಿ 'ಅಕ್ಷರಾದಿ' ಅಥವಾ 'ಅಕ್ಷರಮಾಲೆ'ಗಳ ಒಂದು ಭಾಗವಾಗಿ ಕಾಣಿಸಿಕೊಳ್ಳುವುದು.

'ಅಕ್ಷರಮಾಲೆ'ಗಳು ಸ್ತೋತ್ರಸಾಹಿತ್ಯದ ಗುಂಪಿಗೆ ಸೇರಿರುವುದೇ ಸಾಮಾನ್ಯ. ಕವಿಯ ಇಷ್ಟದೈವದ ಸ್ತುತಿ ಮುಖ್ಯವಿಷಯ. ಪದ್ಯಗಳು ಸಾಮಾನ್ಯವಾಗಿ ಕಂದಗಳು; ಈಚೆಗೆ ಸಾಂಗತ್ಯಗಳು. ಕನ್ನಡದಲ್ಲಿ ಜೈನ

ವೀರಶೈವ ಮತ್ತು ಬ್ರಾಹ್ಮಣ ಕವಿಗಳಲ್ಲಿ ಕೆಲವರು ರಚಿಸಿರುವ ಅಕ್ಷರಮಾಲೆಗಳು ದೊರೆತಿವೆ. ಈಗ ತಿಳಿದಿರುವ ಮಟ್ಟಿಗೆ ಪೊನ್ನನ (ಸು. ೯೫೦) 'ಜಿನಾಕ್ಷರಮಾಲೆ' ಮೊದಲನೆಯದು. ನಾಗಚಂದ್ರನೂ (ಸು. ೧೧೦೦) ಒಂದು 'ಜಿನಾಕ್ಷರಮಾಲೆ'ಯನ್ನು ಬರೆದಿದ್ದಂತೆ ದೇವಚಂದ್ರ 'ರಾಜಾವಳೀಕಥೆ'ಯಲ್ಲಿ ಹೇಳಿದ್ದಾನೆ. ಹರಿಹರನು (ಸು. ೧೨೦೦) ಬರೆದಿದ್ದನೆನ್ನಲಾದ 'ಶಿವಾಕ್ಷರಮಾಲೆ' ದೊರೆತಿಲ್ಲ. ಅಜ್ಞಾತಕರ್ತೃಕವಾದ 'ಶಿವಾಕ್ಷರಮಾಲೆ' (ಸು. ೧೪೦೦)ಯೊಂದನ್ನು ಕವಿಚರಿತೆಕಾರರು ಗುರುತಿಸಿದ್ದಾರೆ. ಅಜ್ಞಾತಕರ್ತೃಕವೇ ಆದ 'ಹರ್ಯಕ್ಷರಮಾಲೆ' (ಸು. ೧೪೦೦)ಯೂ ಚಿಕುಪಾಧ್ಯಾಯನ 'ಅಕ್ಷರಮಾಲಿಕಾಸಾಂಗತ್ಯ'ವೂ ವಿಷ್ಣುಪರವಾದವು. ಇವುಗಳಲ್ಲಿ ಮೊದಲನೆಯದರ ಕರ್ತೃ ಬ್ರಾಹ್ಮಣನೇ ಇರಬಹುದು. ನಂಜುಂಡೇಶ್ವರನ ಸ್ತುತಿಯಿರುವ, ಅಜ್ಞಾತಕರ್ತೃಕವೇ ಆಗಿರುವ ಒಂದು 'ಅಕ್ಷರಮಾಲಿಕೆ' (ಸ. ೧೬೦೦) ಶತಕಗಳಂತೆ ಇಷ್ಟದೈವದ ಅಂಕಿತದೊಡನೆ ಮುಗಿಯುತ್ತದೆ. ಪರಮದೇವ ಕೃತವಾದ (೧೬೬೭) 'ನಾರಾಯಣಾಕ್ಷರಮಾಲಿಕಾಸ್ತೋತ್ರ' ದೊರೆತಿಲ್ಲ. ಮಾಣಿಕ್ಯಪುರದ ಜೈನಕವಿ ಪಾರಿಶನೆಂಬವನು ರಚಿಸಿದ 'ರಾಮಜಯ'ವೆಂಬ ಅಕ್ಷರಮಾಲೆಯ ಕಾಲ ತಿಳಿಯದು; ಇದು ಸಂಸ್ಕೃತ ಸ್ತೋತ್ರ ಸಾಹಿತ್ಯದಲ್ಲಿ ಕಾಣುವಂತೆ ಅಂತಾದಿಕ್ರಮದಲ್ಲಿ ರಚಿಸಿದ, ೪೦ ಕಂದಪದ್ಯಗಳ ಒಂದು ಕೃತಿ. ಇದು ಸ್ತುತಿರೂಪವಾಗಿರದೆ ರಾಮಾಯಣ ಕಥೆಯನ್ನು ಒಳಕೊಂಡಿರುವುದು ಗಮನಾರ್ಹವಾದ ಸಂಗತಿಯಾಗಿದೆ.

ಇಲ್ಲಿ ಅ ಕಾರದಿಂದ ಹ ಕಾರದವರೆಗಿನ ವರ್ಣಮಾಲೆಯ ಎಲ್ಲ ಸ್ವರ ಮತ್ತು ವ್ಯಂಜನಾಕ್ಷರಗಳನ್ನೂ ಪ್ರತಿಯೊಂದು ಪದ್ಯದ ಆರಂಭದಲ್ಲಿಯೂ ಬರುವ ಹಾಗೆ ಮಾಡಿರುತ್ತದೆ. ಎಂದರೆ ವರ್ಣಮಾಲೆಯ ಅಕ್ಷರಾನುಕ್ರಮದಲ್ಲಿ ಪ್ರತಿಪದ್ಯವನ್ನೂ ಆರಂಭಿಸಿದ್ದು, ವರ್ಣಮಾಲೆಯಲ್ಲಿ ಎಷ್ಟು ಅಕ್ಷರಗಳೋ ಅಷ್ಟು ಪದ್ಯಗಳು 'ಅಕ್ಷರಮಾಲೆ'ಗಳಲ್ಲಿರುತ್ತವೆ. ಈ 'ವ್ಯಂಜನಮಾಲಾ' ಚಿತ್ರದಲ್ಲಿ ವ್ಯಂಜನಾಕ್ಷರಸಂಯೋಜನೆಯ ಮಟ್ಟಿಗೆ ರಚನೆಯ ವಿಧಾನವನ್ನು ಗಮನಿಸಲಾಗಿದೆ; ಸ್ವರಾಕ್ಷರ ಸಂಯೋಜನೆಯನ್ನು 'ಸ್ವರಮಾಲಾ' ಚಿತ್ರದಲ್ಲಿ ಬಳಿಕ ಗಮನಿಸಲಾಗುವುದು.

ಕಂದಪದ್ಯದ ಛಂದಸ್ಸಿಗೆ ಪ್ರಾತಿನಿಧಿಕವಾಗಿ ಪೊನ್ನನ 'ಜಿನಾಕ್ಷರಮಾಲೆ'ಯನ್ನೂ ಸಾಂಗತ್ಯಕ್ಕೆ ಚಿಕುಪಾಧ್ಯಾಯನ 'ಅಕ್ಷರಮಾಲಿಕಾ ಸಾಂಗತ್ಯ'ವನ್ನೂ ಗಮನಿಸಿದರೆ ಸಾಕಾಗುತ್ತದೆ.

ಪೊನ್ನನ 'ಜಿನಾಕ್ಷರಮಾಲೆ' :

೩೯ ಕಂದ ಪದ್ಯಗಳ ಈ ಕೃತಿಯನ್ನು ಪೊನ್ನನು ರಚಿಸಿದನೆಂಬುದು

ಟಾಂತಂಬರಂ ಬುಧರ್ ಪೊಗ । ೞ್ವಂತಕ್ಕರಮಾಲೆಯಂ ಜಿನಸ್ತವನದೊಳೋ ।
ರಂತಿರೆ ಪೇೞ್ದಿಂ ಹಿಮಸೇ । ತ್ವಂ[ತು]ವರಂ ಪರೆವಿನಂ ಕುರುಳ್ಗಳ ಸವಣಂ ॥ (ಪ. ೩೮)

ಎಂಬ ಗ್ರಂಥಾಂತ್ಯದ ಪದ್ಯವೊಂದರಿಂದ ತಿಳಿಯುತ್ತದೆ. ಇದರಲ್ಲಿ ವರ್ಣಮಾಲೆಯ ಪಾಠಕ್ರಮವನ್ನು ಹಿಡಿದು, ವರ್ಗೀಯ ಹಾಗೂ ಅವರ್ಗೀಯ ವ್ಯಂಜನಾಕ್ಷರಗಳು ಕ್ರಮಾನುಸಾರವಾಗಿ ಪದ್ಯಗಳ ಆದಿಯಲ್ಲಿ ಬರುವಂತೆ ಮಾಡಿ ಪದ್ಯರಚನೆಮಾಡಿದೆ. ಆಯಾ ಪದ್ಯದ ಕೊನೆಗೆ ಅದೇ ವರ್ಗದ ಮುಂದಿನ ವ್ಯಂಜನಾಕ್ಷರ ಯಾವುದಿದೆಯೋ ಅದು ಬರುವಂತೆಯೂ ಪದ್ಯರಚನೆಯನ್ನು ನಿರ್ವಹಿಸಿದೆ. ಇದಕ್ಕೆ ಸಂಸ್ಕೃತದಲ್ಲಿ 'ಅಂತಾದಿಕ್ರಮ'ವೆಂದು ಹೇಳುವುದು ರೂಢಿ. ತಮಿಳು ಆಳ್ವಾರರ ಸ್ತೋತ್ರಪದ್ಯಗಳಲ್ಲಿಯೂ ಇದನ್ನು ಗಮನಿಸಬಹುದು.

'ಜಿನಾಕ್ಷರಮಾಲೆ'ಯ ಆದ್ಯಂತ ಪದ್ಯಗಳನ್ನು ಬಿಟ್ಟರೆ ನಡುವಣ ೩೭ ಪದ್ಯಗಳಲ್ಲಿ ವರ್ಗೀಯ ವ್ಯಂಜನಗಳು ೨೫, ಅವರ್ಗೀಯಗಳು ೮, ಱ–ೞ–ಳ ಮತ್ತು ಕ್ಷ ಕಾರ ಎಂಬ ೪ ಅಕ್ಷರಗಳು ಹೀಗೆ ಎಲ್ಲಾ ಸೇರಿ ೩೭ ಅಕ್ಷರಗಳ ಅನುಕ್ರಮವಿದೆ.[1]

ಉದಾಹರಣೆಗೆ, ಚ ವರ್ಗದ ಅಂತಾದಿ ಪದ್ಯಗಳು :

ಚತುರಾಸ್ಯಂಗಂ ನೆಗೞ್ದ ಹಿ । ಪತಿಗಮುಳ್ಳುಂಬಂ ಭವದ್ಗುಣಂ ಚಿಂತಿಸಲುಂ ।
ಸ್ತುತಿಯಿಸಲೆಂದೊಡೆ ಪರಜಿನ । ಪತಿ ಪೆಱತೇನೆಂದು ಪೊಗೞಲಱಿಯಂ ಮ್ಲೇಚ್ಛಂ ॥ (೭)

ಛತ್ರತ್ರಯಯುತ ವಿನಮಿತ । ಸುತ್ರಾಮಕಿರೀಟಮಣಿಗಣಾರ್ಚಿತಪದ ಜೀ ।
ವತ್ರಾಣ ನೀನೆ ನೋಡೆ ಪ । ವಿತ್ರನೆ ನಿನಗದಱಿನೊಳ್ಗುಣಂಗಳ್ ಸಹಜಂ ॥ (೮)

ಜಯಜಯ ಜಿನೇಂದ್ರ ಲೋಕ । ತ್ರಯವಂದ್ಯ ಸಮಸ್ತವಾದ ರುಜೆ ವಿಷಮವಿಷ ।
ತ್ರಯಮೞಿಗುಂ ನಿನ್ನ ಪದ । ದ್ವಯಮಂ ಚಿಂತಿಸುವೊಡೆನ್ನವೇವುವೋ ಮಜ್ಞಾ ॥ (೯)

ಝುಷ ಕುಲಿಶಾಂಕಿತಪದಯುಗ । ವೃಷಭಧ್ವಜ ವೃಷಭನಾಥ ಸುಚರಿತ್ರ ಗಜ ।
ದ್ವಿಷವಿಷ್ಟರ ಪೊಗೞಲ್ ಮ । ದ್ವಿಷಯಮೆ ನಿನ್ನಮಲಗುಣಗಣಂ ಸರ್ವಜ್ಞಾ ॥ (೧೦)

ಞಾನಮಯ ಸಿಂಹಪೀಠಾ । ಸೀನ ಜಗತ್ತ್ರಿತಯನಾಥ ನಿರ್ಮಲಶುಕ್ಲ ।
ಧ್ಯಾನ ನಿಮಗಲ್ಲದೇಕ । ಸ್ಥಾನಂ ಪೆಱರ್ಗುಂಟೆ ಬಗೆವೊಡಪಗತಕಪಟಾ ॥ (೧೧)

ಹೀಗೆ ವರ್ಣಮಾಲೆಯ ಅಕ್ಷರಗಳನ್ನು ಅಂತಾದಿಕ್ರಮದಲ್ಲಿ ನಡಸುವುದರಲ್ಲಿ, ವಸ್ತು ಯಾವುದೇ ಇರಲಿ, ಕೆಲಮಟ್ಟಿಗೆ ರಚನೆ ಅಸಹಜವಾಗದೆ ಇರುವುದು ಶಕ್ಯವಿಲ್ಲ. ಆದರೂ ರಚನೆಯಲ್ಲಿ ಸ್ನಿಗ್ಧತೆ ನಿರರ್ಗಳತೆಗಳಿಗೆ ಕೊರತೆಯಿಲ್ಲ. ಜಾಣ್ಮೆಯಿಂದ ಅಸಹಜತೆಯನ್ನು ನಿವಾರಿಸಿರುವ ಒಂದೆರಡು ಸಂದರ್ಭಗಳೂ ಉಂಟು. ಉದಾ.ಗೆ

ಣಪ[ರ]ಪವರ್ಣಕ್ಕಳಿಪಲ್ । ತಪಸ್ವಿಗಳ್ಮಾರ್ಗವಾಗದೆಂಬುದು ಜಿನ ನಿ ।
ನ್ನುಪದೇಶಮಿದಂ ನಂಬದೊ । ಡಪವರ್ಗಮನೆಂತುಮೆಯ್ದಲಾಱಿಂ ನಿರುತಂ ॥ (೧೬)

ಎಂಬ ಪದ್ಯದಲ್ಲಿ, 'ಣ ಪರ ಪವರ್ಣ' ಎಂಬ ಮಾತು '' 'ಣ' ಎಂಬ ಅಕ್ಷರ ಪರದಲ್ಲಿ ಬರುವ 'ಪ' ಎಂಬ ಅಕ್ಷರ'' ಎಂದಾಗಿ 'ಪಣ' (ದ್ರವ್ಯ, ಐಶ್ವರ್ಯ) ಎಂದು ಅರ್ಥವಾಗುವಂತೆ ಮಾಡಿರುವುದು ಮೆಚ್ಚತಕ್ಕುದಾಗಿದೆ. ಹೀಗೆಯೇ ''ಥಂಚಿತ್ಪರಂ ಕಕಾರಾದ್ಯಂಚಿತವಾಗಿರೆ....'' 'ಕಥಂಚಿತ್' ಎಂಬ ಮಾತಿಗೆ ದಾರಿ ಮಾಡುವುದು (೧೮).

ಚಾರದ ಭವವಿಲ್ಲ ನಿರಾ । ಧಾರಂ ಮತ್ತದಱ ದೆಸೆಗೆ ಪೇೞಿದೆನದಱಿಂ ।
ದಾರಯ್ವೊಡಸಾರಂ ಸಂ । ಸಾರಂ ಸುರಭುವನ ಭವನ ಮೂಲಸ್ತಂಭಾ ॥ (೨೮)

ಎನ್ನುವಂತಹ ರಚನೆಗಳಲ್ಲಿ ಪ್ರತಿಭೆಯ ಮಿಂಚು, ಸೊಗಸಾದ ಆರಂಭಕ್ಕೆ ಹೇಗೆ ಎಡೆಮಾಡುತ್ತದೆ ಎನ್ನುವುದನ್ನು ಕಾಣಬಹುದು. ಈಚೆಗೆ ಭಟ್ಟಾಕಳಂಕನ 'ಶಬ್ದಾನುಶಾಸನ'ದಲ್ಲಿ ಸೂ. ೬೫೮ರ ಕೆಳಗೆ ಈ ಕೃತಿಯ ''ಜವನಂ ಭಾವಲಯಂ....'' ಎಂಬ ಪದ್ಯ (೬) ಉದಾಹೃತವಾಗಿದೆ.

ಚಿಕುಪಾಧ್ಯಾಯನ 'ಅಕ್ಷರಮಾಲಿಕಾ ಸಾಂಗತ್ಯ'ದಲ್ಲಿ :

ಕಮಲೇಶ ಕಮಲಾಕ್ಷ ಕಮಲಾಪತಿ ಕಲ್ಕಿ । ಕಮನೀಯಪದ ಕರಿವರದ ।
ಕಮಲಜಾಂಡೋದರ ಕರುಣಿಸು ತವಪಾದ । ಕಮಲವೆ ಗತಿ ಕಟ್ಟಕಡೆಗೆ ॥

ಖರಹರ ಖಗಪತಿಗಮನ ಖಳಾಂತಕ । ಖರಕರಕೋಟಿಸುತೇಜ ।
ಖರನಖರಾಯುಧ [ಖರ್ಪ]ರಕರ ದುಃ । ಖರಸಖರಾಂಶು ಕಾಯೆನ್ನ ॥

ಗರುಡಗಮನ ಗಜರಕ್ಷ ಗದಾಧರ । ಗರಳಗ್ರೀವಾ[ದ್ಯ]ಧೀಶ ।
ಗರಧರಶಾಯಿ ಗರ್ವಿತಖಳವಿತತಿಸಂ । ಗರಶೀಲ ಗತಿ ನೀನೆನಗೆ ॥

ಘನವರ್ಣ ಘನರಿಪು ಘನಶಾಯಿ ಅಘಹರ । ಘನಮಹಿಮಾಂಬುಧಿಯನಘ ।
ಘನಕೆ ಘನವೆನಿಪಮೋಘವಿಕ್ರಮ ನಿನ್ನ । ಘನತೆಗೆ ನಮೊ ನಮೊಯೆಂಬೆ ॥

ಙಮಙಣಾದಿ ಶಬ್ದಾಙ್ಕ ನಿಸ್ಮರದಿ ಙಿ । ಙ್ಕಮನಾಂತು ಸುರರನಙ್ಕದೊಳು ।
ಙಮಙಣಾ ಶಬ್ದದೊಳೋಡಿಮೋಡಿಯೆ ಕೊಂದ । ಙಮಗಣಗೊಡೆಯಗೆರಗುವೆನು ॥

(ಪ. ೪೩-೪೭)

ಇವುಗಳ ಆಶಯ : ''ಲಕ್ಷ್ಮೀಪತಿ, ಕಮಲನೇತ್ರ, ಲಕ್ಷ್ಮೀಪ್ರಿಯ, ಕಲ್ಕಿ, ಮನೋಹರಪಾದಗಳುಳ್ಳವನೆ, ಗಜೇಂದ್ರನಿಗೆ ಕರುಣಿಸಿದವನೆ, ಬ್ರಹ್ಮಾಂಡವನ್ನು ಹೊಟ್ಟೆಯಲ್ಲಿ ಧರಿಸಿದವನೆ, ಕೊನೆಗೆ ನಿನ್ನ ಪಾದಕಮಲಗಳೇ ನನಗೆ ಗತಿ; ಕರುಣಿಸು.

ಖರನನ್ನು ಕೊಂದವನೆ, ಗರುಡವಾಹನನೆ, ದುಷ್ಟರಿಗೆ ಯಮಸ್ವರೂಪನೆ, ಕೋಟಿ ರವಿಪ್ರಕಾಶನೇ ತೀಕ್ಷ್ಣವಾದ ಉಗುರುಗಳೇ ಆಯುಧವಾಗಿರುವವನೆ, ಕೈಯಲ್ಲಿ ತಲೆಯೋಡು ಧರಿಸಿದ ಶಿವನ ದುಃಖರಸವನ್ನು ಒಣಗಿಸಿದ ಸೂರ್ಯನೆ, ನನ್ನನ್ನು ಕಾಪಾಡು.

ಗರುಡಗಮನನೆ, ಗಜೇಂದ್ರಪಾಲಕನೆ, ಗದಾಧರನೆ, ಶಿವಾದಿಗಳಿಗೆ ಅಧೀಶನೆ, ಶೇಷಶಾಯಿಯೆ, ಗರ್ವಿಷ್ಠರಾದ ದುಷ್ಟರ ಸಮೂಹದೊಂದಿಗೆ ಕಾಡುವ ಪ್ರವೃತ್ತಿಯುಳ್ಳವನೆ, ನೀನೆ ನನಗೆ ಗತಿ.

ಮೇಘವರ್ಣನೆ, ದುರ್ಭೇದ್ಯವನ್ನು ಭೇದಿಸುವವನೆ, ಸರ್ಪಶರೀರದ ಮೇಲೆ ಮಲಗಿದವನೆ, ಪಾಪಪರಿಹಾರಕನೆ, ಅತಿಶಯಮಹಿಮಾಸಮುದ್ರನೆ, ಪಾಪವಿರಹಿತನೆ, ಘನಕ್ಕೆ ಘನವೆನಿಸುವ ಅಮೋಘಸಾಹಸಿಯೆ, ನಿನ್ನ ಘನತೆಗೆ ನಮಸ್ಕಾರ ಎನ್ನುತ್ತೇನೆ.''

ಮುಂದಿನ ಪದ್ಯದ ಅರ್ಥ ವಿಶದವಿಲ್ಲ.

ಈ ಮೇಲೆ ಉದ್ಧರಿಸಿರುವ ಪದ್ಯಗಳು 'ಅಕ್ಷರಮಾಲಿಕೆ'ಯಲ್ಲಿ ಕವರ್ಗದ ಐದು ವ್ಯಂಜನಗಳಿಗೆ ಸಂಬಂಧಿಸಿದವು. ಪ್ರತಿ ಪದ್ಯದ ಆರಂಭವೂ ಅನುಕ್ರಮವಾಗಿ ವರ್ಗಾಕ್ಷರಗಳಿಂದ ಆಗಿರುವುದು ಮಾತ್ರವೇ ಅಲ್ಲದೆ, ಅಧಿಕ ವೈಚಿತ್ರ್ಯವಾಗಿ ಪ್ರತಿ ಪದ್ಯದಲ್ಲಿಯೂ ಆಯಾ ವರ್ಗಾಕ್ಷರ ಹಲವು ಸಲ ಆವೃತ್ತಿಗೊಳ್ಳುವುದೂ ಕಾಣುತ್ತದೆ. ಈ ಆವೃತ್ತಿಯೂ ಬಲುಮಟ್ಟಿಗೆ ಪ್ರತಿಗಣಕ್ಕೆ ಒಮ್ಮೆ ಎನ್ನುವಂತೆ ಆಗುವುದೂ ಕಾಣುತ್ತದೆ. ವರ್ಗಾಕ್ಷರದ ಆವೃತ್ತಿಯನ್ನು ಕಿವಿ ಮೇಲಿಂದ ಮೇಲೆ ಗ್ರಹಿಸುವಂತೆ ತರಬೇಕೆನ್ನುವುದೇ ಕವಿಯ ಅಪೇಕ್ಷೆ.

ಕವರ್ಗದ ಐದು ವ್ಯಂಜನಗಳ ಹಾಗೆಯೇ, ಆ ಮುಂದಿನ ನಾಲ್ಕು ವರ್ಗಗಳ ವ್ಯಂಜನಗಳನ್ನೂ ಹೀಗೆಯೇ ಅನುಕ್ರಮವಾಗಿ ಅವಶ್ಯವಿರುವಷ್ಟು ಪದ್ಯಗಳಲ್ಲಿ ಬಳಸಿ ಪದ್ಯರಚನೆಮಾಡಿದೆ. ಇಂಥ ರಚನೆಯಲ್ಲಿ ಕೆಲವು ಕಡೆ ಕೃತಕತೆ ಅನಿವಾರ್ಯವಾಗಿಯೇ ತಲೆದೋರುತ್ತದೆ. ಇದಕ್ಕೆ ಈಗಾಗಲೇ ಉದಾಹರಿಸಿರುವ ಕವರ್ಗದ ಪಂಚಮಾಕ್ಷರದ ೪೭ನೆಯ ಪದ್ಯವನ್ನೇ ನೋಡಬಹುದು. ಹೀಗೆಯೇ ಇತರತ್ರವೂ.

ಚಿಕುಪಾಧ್ಯಾಯನು ವರ್ಣಮಾಲೆಯ ಆ ಕಾಲದ ಪಾಠಕ್ರಮದಂತೆ ವ್ಯಂಜನಾಕ್ಷರಗಳನ್ನು ಕಕಾರದಿಂದ ಹಕಾರದ ವರೆಗೆ ಹೀಗೆ ಬಳಸಿ ಪದ್ಯರಚನೆ ಮಾಡಿರುವುದಲ್ಲದೆ, ಅಲ್ಲಿಂದ ಮುಂದೆಯೂ ಳ, ಕ್ಷ, ರ, ಇತಿ ಎಂಬುದು ಆರಂಭದಲ್ಲಿ ಬರುವಂತೆ ಇನ್ನೂ ನಾಲ್ಕು ಪದ್ಯಗಳನ್ನು ರಚಿಸಿದ್ದಾನೆ. ಇದಕ್ಕೆ ಕಾರಣ ವಿದಿತವೇ ಇದೆ. ಅಕಾರದಿಂದ ಹಕಾರದವರೆಗೆ ಸಂಸ್ಕೃತ ವರ್ಣಮಾಲೆಯ ಪಾಠಕ್ರಮವನ್ನು ಹೇಳಿ ಮುಗಿಸಿದ ಮೇಲೆ, ಕನ್ನಡ ಳ ಕಾರವನ್ನೂ ಕೂಡಿಸಿ, ''ಅ ಆ ಇ ಈ....ಯ ರ ಲ ವ ಶ ಷ ಸ ಹ ಳಾಕ್ಷರಾ ಇತಿ'' (ಳ+ಅಕ್ಷರಾ ಇತಿ) ಎಂಬುದಾಗಿ ಹೇಳುವ ಪರಿಪಾಠಿಯಿತ್ತು. ಅದನ್ನೇ ಇಲ್ಲಿ ಅನುಸರಿಸಿದೆ. ಈ ಕಾರಣ ಮುದ್ರಿತ ಗ್ರಂಥದಲ್ಲಿ, ೭೬ನೆಯ ಪದ್ಯ ಈಗ ಇರುವಂತೆ ''ಲವಲೇಶ ತಪ್ಪಿಗಳವಗೆಡಿಸುತ್ತಿದೆ....'' ಮುಂತಾಗಿ ಬರುವ ರಚನೆ ''ಳವಲೇಶ ತಪ್ಪಿಗಳವಗೆಡಿಸುತ್ತಿದೆ....'' ಮುಂತಾಗಿ ಇರಬೇಕಾಗುತ್ತದೆ. ಇಲ್ಲವೆ ''ಲ–ಳಯೋರಭೇದಃ'' ಎಂಬಂತೆ ಇಲ್ಲಿ ಮತ್ತೊಮ್ಮೆ ಕವಿ ಲಕಾರವನ್ನೇ ಆವೃತ್ತಿಗೊಳಿಸಿ, ಳಕಾರವಾಗಿ ಭಾವಿಸಬೇಕೆಂದು ಉದ್ದೇಶಿಸಿದಂತಿದೆ.

೨

ಸ್ಥಾನಚಿತ್ರಗಳು

ವರ್ಣಚಿತ್ರಗಳ ಒಂದು ಪ್ರಕಾರವಾಗಿ ಸ್ಥಾನಚಿತ್ರಗಳೆಂಬುವನ್ನು ಸ್ವರಚಿತ್ರಗಳ ನಿರೂಪಣೆಯ ಅನಂತರದಲ್ಲಿ ದಂಡಿಯೂ (೩–೮೮–೯೧) ವ್ಯಂಜನಚಿತ್ರಗಳ ಅನಂತರದಲ್ಲಿ ಭೋಜನೂ (೨–೨೬೭–೨೭೫) ನಿರೂಪಿಸಿದ್ದಾರೆ. ದಂಡಿ, ''ಯಃ ಸ್ವರ ಸ್ಥಾನ ವರ್ಣಾನಾಂ....'' ಎಂಬ ಸೂತ್ರದಲ್ಲಿ (೩–೮೩) ''ಸ್ವರ, ಸ್ಥಾನ ಮತ್ತು ವರ್ಣಗಳ ನಿಯಮಗಳನ್ನು ನಾಲ್ಕರವರೆಗೆ ಪಾಲಿಸುವುದು ಕವಿಗಳಿಗೆ ದುಷ್ಕರವೇ ; ಈ ದುಷ್ಕರ ಪ್ರಕರಣದಲ್ಲಿ ನಾಲ್ಕರ ವರೆಗಿನ ನಿಯಮಗಳನ್ನು ನಿರೂಪಿಸಿದೆ ; ಐದರಿಂದ ಮುಂದಿನ ನಿಯಮಗಳು ಸುಕರವೇ ಆಗಿರುತ್ತವೆ''

ಎಂದು ತಿಳಿಸಿರುವ ಪ್ರಕಾರ ಆ ಸ್ಥಾನ ನಿಯಮಗಳನ್ನು ಮುಂದೆ (೮೮–೯೧) ಕುರಿತಿದ್ದಾನೆ. ರತ್ನಶ್ರೀಜ್ಞಾನನು ''ಅಕಾರವೇ ಮೊದಲಾದ ಸ್ವರಗಳ, ಕಂಠವೇ ಮೊದಲಾದ ಸ್ಥಾನಗಳ, ಕಕಾರವೇ ಮೊದಲಾದ ವರ್ಣ (ವ್ಯಂಜನ) ಗಳ ನಿಯಮ'' ವೆಂದು ಮುಂದೆ ಇದನ್ನು ವಿಶದೀಕರಿಸಿದ್ದಾನೆ. ಸ್ಥಾನಚಿತ್ರಗಳು ಎಂದರೆ ''ವರ್ಣವತ್ಸ್ಥಾನೇಷ್ವಪಿ ಚತುರಾದಿ ನಿಯಮೇನ ಚಿತ್ರತ್ವಮ್'' ಎಂಬುದಾಗಿ ತಿಳಿಯಬೇಕೆಂದು ಭೋಜನ ಗ್ರಂಥದ ವ್ಯಾಖ್ಯಾಕಾರ ರಾಮಸಿಂಹನ ವ್ಯಾಖ್ಯಾನಭಾಗದಿಂದ ಅಭಿಪ್ರಾಯವಾಗುವುದು.

ವರ್ಣೋತ್ಪತ್ತಿ ಸ್ಥಾನಗಳೆಂದು ೮ ಸ್ಥಾನಗಳು ಪ್ರಸಿದ್ಧವಾಗಿವೆ. ''ಅಷ್ಟೌ ಸ್ಥಾನಾನಿ ವರ್ಣಾನಾಮುರಃ ಕಂಠಃ ಶಿರಸ್ತಥಾ। ಜಿಹ್ವಾಮೂಲಂ ಚ ದನ್ತಾಶ್ಚ ನಾಸಿಕೋಷ್ಠೌ ಚ ತಾಲು ಚ'' ಎಂಬ ಸೂತ್ರದಂತೆ ಉರಸ್ಸು, ಕಂಠ, ಶಿರಸ್ಸು, ಜಿಹ್ವಾಮೂಲ, ದಂತ, ನಾಸಿಕ, ಓಷ್ಠ ಹಾಗೂ ತಾಲು ಎಂಬವೇ ಆ ೮ ಸ್ಥಾನಗಳು. ಇವುಗಳಲ್ಲಿ ಜಿಹ್ವಾಮೂಲೀಯಗಳು ಸ್ವರತ್ವದ ಕಾರಣದಿಂದಲೂ ಉರಸ್ಯ ನಾಸಿಕ್ಯಗಳು ಕಾವ್ಯಪ್ರವೇಶಾಭಾವದಿಂದಲೂ ಪರಿಗಣನೆಯಿಂದ ಕೈಬಿಡಬಹುದಾದವು. ಉಳಿದ ಐದು ಸ್ಥಾನಗಳಲ್ಲಿ ಯಾವುವಾದರೂ ನಾಲ್ಕು ಸ್ಥಾನಗಳಲ್ಲಿ ಹುಟ್ಟುವ ವರ್ಣಗಳ ಪ್ರಯೋಗವನ್ನೊಪ್ಪಿಕೊಂಡು ಒಂದು ಸ್ಥಾನದಲ್ಲಿ ಹುಟ್ಟುವ ವರ್ಣಗಳ ಪ್ರಯೋಗವನ್ನು ಪದ್ಯದಲ್ಲಿ ನಿಷೇಧಿಸಿದರೆ, ಅವು ಚತುಃಸ್ಥಾನಚಿತ್ರಗಳೆನಿಸುವುವು. ಇವು ನಿಷ್ಕಂಠ್ಯ, ನಿಸ್ತಾಲವ್ಯ (ಅತಾಲವ್ಯ), ನಿರ್ದಂತ್ಯ, ನಿರೋಷ್ಠ್ಯ, ನಿರ್ಮೂರ್ಧನ್ಯಗಳೆಂದು ಐದು ತೆರನಾದವು. ಹೀಗೆಯೇ ಯಾವುವಾದರೂ ಮೂರು ಸ್ಥಾನಗಳಲ್ಲಿ ಹುಟ್ಟುವ ವರ್ಣಗಳ ಪ್ರಯೋಗವನ್ನೊಪ್ಪಿಕೊಂಡು, ಎರಡು ಸ್ಥಾನಗಳಲ್ಲಿ ಹುಟ್ಟುವವುಗಳ ಪ್ರಯೋಗ ವನ್ನು ಪದ್ಯದಲ್ಲಿ ನಿಷೇಧಿಸಿದರೆ, ಅವು ತ್ರಿಸ್ಥಾನಚಿತ್ರಗಳೆನಿಸುವುವು. ಉದಾಹರಣೆಗೆ, ಇವು ನಿರೋಷ್ಠ್ಯದಂತ್ಯ, ನಿರೋಷ್ಠ್ಯ ಮೂರ್ಧನ್ಯಗಳೆಂದು ಎರಡು ತೆರನಾಗಿ ಇರಬಲ್ಲವು. ಯಾವುವಾದರೂ ಎರಡು ಸ್ಥಾನಗಳಲ್ಲಿ ಹುಟ್ಟುವ ವರ್ಣಗಳ ಪ್ರಯೋಗವನ್ನೊಪ್ಪಿಕೊಂಡು, ಉಳಿದ ಮೂರು ಸ್ಥಾನಗಳಲ್ಲಿ ಹುಟ್ಟುವವುಗಳ ಪ್ರಯೋಗವನ್ನು ಪದ್ಯ ದಲ್ಲಿ ನಿಷೇಧಿಸಿದರೆ ಅವು ದ್ವಿಸ್ಥಾನಚಿತ್ರಗಳೆನಿಸುವುವು. ಉದಾಹರಣೆಗೆ, ದಂತ್ಯಕಂಠ್ಯ ಎಂಬ ಬಗೆಯಲ್ಲಿ ತಾಲವ್ಯ, ಓಷ್ಠ್ಯ ಮತ್ತು ಮೂರ್ಧನ್ಯ ವರ್ಣಗಳನ್ನು ನಿಷೇಧಿಸಿರುತ್ತದೆ. ಕೊನೆಯದಾಗಿ, ಯಾವುದಾದರೂ ಒಂದು ಸ್ಥಾನ ದಲ್ಲಿ ಹುಟ್ಟುವ ವರ್ಣಗಳ ಪ್ರಯೋಗವನ್ನೊಪ್ಪಿಕೊಂಡು, ಉಳಿದ ನಾಲ್ಕು ಸ್ಥಾನಗಳಲ್ಲಿ ಹುಟ್ಟುವ ವರ್ಣಗಳ ಪ್ರಯೋಗವನ್ನು ನಿಷೇಧಿಸಿದರೆ, ಅದು ಏಕಸ್ಥಾನ ಚಿತ್ರವೆನಿಸುವುದು. ಉದಾಹರಣೆಗೆ ಕಂಠ್ಯ ಎಂಬ ಬಗೆಯಲ್ಲಿ ತಾಲವ್ಯ, ದಂತ್ಯ, ಓಷ್ಠ್ಯ ಮತ್ತು ಮೂರ್ಧನ್ಯವರ್ಣಗಳನ್ನು ನಿಷೇಧಿಸಿರುತ್ತದೆ.

ದುಷ್ಕರಕಾವ್ಯ ರಚನೆಯಲ್ಲಿ ಸ್ಥಾನಚಿತ್ರಗಳು ಬೇರೆಬೇರೆ ಸಂಯೋಜನೆಗಳಿಂದ ಕೂಡಿರುವುದು ಶಕ್ಯ ವಾದರೂ ಕೆಲವನ್ನು ಮಾತ್ರ ಲಾಕ್ಷಣಿಕರು ಲಕ್ಷಣಿಸಿದ್ದಾರೆ; ಕವಿಗಳು ಸಹ ಕೆಲವನ್ನು ಮಾತ್ರವೇ ಬಳ ಸಿದ್ದಾರೆ.

ಈ ಎಲ್ಲ ಸ್ಥಾನಚಿತ್ರಗಳಿಗೂ ಸಮಾನವಾಗಿ ಅನ್ವಯಿಸುವ ಕೆಲವು ಲಕ್ಷಣಗಳನ್ನು ಹೀಗೆ ಗುರುತಿಸ ಬಹುದಾಗಿದೆ: (i) ಯಾವ ಸ್ಥಾನದ ವರ್ಣಗಳನ್ನು ನಿಷೇಧಿಸಿದೆಯೋ ಆ ಸ್ಥಾನದ ವರ್ಣಗಳ ಹೊರತಾಗಿ ಬೇರೆ ಸ್ಥಾನದ ವರ್ಣಗಳು ಬಳಕೆಯಾಗಲು ಅಡ್ಡಿಯಿಲ್ಲ; ಯಾವ ಸ್ಥಾನದ ವರ್ಣಗಳನ್ನು ಗ್ರಾಹ್ಯಮಾಡಬೇಕೆಂದು ಹೇಳಿದೆಯೋ ಆ ಸ್ಥಾನದ ವರ್ಣಗಳು ಮಾತ್ರ ಗ್ರಾಹ್ಯವಾಗಬೇಕಲ್ಲದೆ ಬೇರೆ ಸ್ಥಾನದ ವರ್ಣಗಳು ಗ್ರಾಹ್ಯವಾಗ ಬಾರದು. (ii) ಅನುನಾಸಿಕವರ್ಣಗಳ ಹಾಗೂ ಯೋಗವಾಹಗಳ ಬಳಕೆಯ ವಿಷಯದಲ್ಲಿ ವಿಧಿನಿಷೇಧಗಳೇನಿಲ್ಲ. (iii) ವರ್ಣಗಳ ವಿಷಯದಲ್ಲಿ, ವ್ಯಂಜನಗಳಿಗೆ ಹೇಗೋ ಹಾಗೆಯೇ ಸ್ವರಗಳಿಗೆ ಸಹ ವಿಧಿನಿಷೇಧಗಳು ಅನ್ವಯಿ ಸುತ್ತವೆ.

ಈ ಸ್ಥಾನಚಿತ್ರಗಳ ಸ್ವರೂಪವನ್ನು ದಂಡಿಯೂ ಆತನನ್ನು ಅನುಸರಿಸಿ ಭೋಜನೂ ನಿರೂಪಿಸಿದ್ದು, ಇವರ ನಿರೂಪಣೆಯ ಮೂಲಕ ಇವುಗಳ ಪರಿಚಯವನ್ನು ನಾವು ಮಾಡಿಕೊಳ್ಳಬಹುದಾಗಿದೆ. 'ಸ್ಥಾನಚಿತ್ರ' ಗಳೆಂಬ ಪರಿಭಾಷೆ ಭೋಜನದು. ಮುಂದಿನ ನಿರೂಪಣೆಯಲ್ಲಿ, ಭೋಜನ ಪರಿಕ್ರಮ ಹೆಚ್ಚು ಪರಿಷ್ಕಾರವಾಗಿಯೂ ಅಧಿಕ ವೈಚಿತ್ರ್ಯಗಳಿಂದ ಕೂಡಿಯೂ ಇರುವುದರಿಂದ ಅವನ ಕ್ರಮವನ್ನೇ ಅನುಸರಿಸಿದೆ.

ಚತುಃಸ್ಥಾನ ಚಿತ್ರಗಳು

ನಿಷ್ಕಂಠ್ಯ

''ಅಕುಹ ವಿಸರ್ಜನೀಯಾಃ ಕಂಠ್ಯಾಃ'' ಎಂಬ ಸೂತ್ರದನ್ವಯ ಕಂಠ್ಯವರ್ಣಗಳನ್ನು ನಿಷೇಧಿಸಿ ಪದ್ಯ ರಚನೆ ಮಾಡಿದರೆ, ಅದು ನಿಷ್ಕಂಠ್ಯದ ನಿದರ್ಶನವಾಗುವುದು.

ಭೂರಿಭೂತಿಂ ಪೃಥುಪ್ರೀತಿಮುರುಮೂರ್ತಿಂ ಪುರುಸ್ಥಿತಿಮ್ ।
ವಿರಿಞ್ಚಿಂ ಸೂಚಿರುಚಿಭೀಃ ಶುಚಿಭಿರ್ನುತಿಭಿರ್ಧಿನು ॥ (೨–೨೬೭)

ಇಲ್ಲಿ ಅವರ್ಣ, ಕವರ್ಗ, ಹಕಾರ, ವಿಸರ್ಗ ಈ ಕಂಠ್ಯವರ್ಣಗಳಾವುವೂ ಉಪಯೋಗವಾಗಿಲ್ಲ.

ನಿಸ್ತಾಲವ್ಯ (ಅತಾಲವ್ಯ)

''ಇಚುಯಶಾಸ್ತಾಲವ್ಯಾಃ'' ಎಂಬ ಸೂತ್ರದನ್ವಯ ತಾಲವ್ಯವರ್ಣಗಳನ್ನು ನಿಷೇಧಿಸಿ ಪದ್ಯರಚನೆ ಮಾಡಿದರೆ, ಅದು ನಿಸ್ತಾಲವ್ಯ (ಅತಾಲವ್ಯ)ದ ನಿದರ್ಶನವಾಗುವುದು.

ಸ್ಫುರತ್ಕುಣ್ಡಲರತ್ನೌಘಮಘವದ್ಧನುಕರ್ಬುರಃ ।
ಮೇಘನಾದೋಽಥ ಸಙ್ಗ್ರಾಮೇ ಪ್ರಾವೃಟ್ಕಾಲವದಾಬಭೌ ॥ (೨–೨೬೮)

ಇಲ್ಲಿ ಇವರ್ಣ, ಚವರ್ಗ, ಯಕಾರ, ಶಕಾರ, ಈ ತಾಲವ್ಯ ವರ್ಣಗಳಾವುವೂ ಉಪಯೋಗವಾಗಿಲ್ಲ.

ನಿರ್ದಂತ್ಯ

''ಲೃತುಲಸಾ ದಂತ್ಯಾ'' ಎಂಬ ಸೂತ್ರದನ್ವಯ ದಂತ್ಯವರ್ಣಗಳನ್ನು ನಿಷೇಧಿಸಿ ಪದ್ಯರಚನೆ ಮಾಡಿದರೆ, ಅದು ನಿರ್ದಂತ್ಯದ ನಿದರ್ಶನವಾಗುವುದು.

ಪಾಪಾಪಹಾರೀ ರಣಕರ್ಮಶೌಣ್ಡಃ । ಶ್ಚಣ್ಡೇಶಮಿಶ್ರೋ ಮಮ ಚಕ್ರಪಾಣಿಃ ।
ಭೂಯಾಚ್ಛ್ರಿಯಾಪಶ್ರಮಯೇಕ್ಷ್ಯಮಾಣೋ । ಮೋಕ್ಷಾಯ ಮುಖ್ಯಾಮರಪೂಗಪೂಜ್ಯಃ ॥
(೨–೨೬೯)

ಇಲ್ಲಿ ಲೃವರ್ಣ, ತವರ್ಗ, ಲಕಾರ, ಸಕಾರ ಈ ದಂತ್ಯವರ್ಣಗಳಾವುವೂ ಉಪಯೋಗವಾಗಿಲ್ಲ.

ನಿರೋಷ್ಠ್ಯ

''ಉಪೂಪಧ್ಮಾನೀಯಾ ಓಷ್ಠ್ಯಾಃ'' ಎಂಬ ಸೂತ್ರದನ್ವಯ ಓಷ್ಠ್ಯವರ್ಣಗಳನ್ನು ನಿಷೇಧಿಸಿ ಪದ್ಯರಚನೆ ಮಾಡಿದರೆ, ಅದು ನಿರೋಷ್ಠ್ಯದ ನಿದರ್ಶನವಾಗುವುದು.

ನಯನಾನನ್ದಜನನೇ ನಕ್ಷತ್ರಗಣಶಾಲಿನಿ ।
ಅಘನೇ ಗಗನೇ ದೃಷ್ಟಿರಙ್ಗನೇ ದೀಯತಾಂ ಸಕೃತ್ ॥ (ಕಾ.ಇ-೮೮; ಸ. ೨-೨೭೦)

ಇಲ್ಲಿ ಉವರ್ಣ, ಪವರ್ಗ, ಉಪಧ್ಮಾನೀಯ, ಈ ಓಷ್ಠ್ಯವರ್ಣಗಳಾವುವೂ ಉಪಯೋಗವಾಗಿಲ್ಲ. ''ಕಂಠ್ಯತಾಲವ್ಯದಂತ್ಯಮೂರ್ಧನ್ಯಮಾತ್ರ ಪ್ರಯೋಗಾತ್ ಚತುಸ್ಥಾನೋಽಯಂ ಶ್ಲೋಕ ಇತಿ'' (ರತ್ನಶ್ರೀ ಜ್ಞಾನ)

ನಿಮೂರ್ಧನ್ಯ

''ಋಟುರಷಾ ಮೂರ್ಧನ್ಯಾಃ'' ಎಂಬ ಸೂತ್ರದನ್ವಯ ಮೂರ್ಧನ್ಯವರ್ಣಗಳನ್ನು ನಿಷೇಧಿಸಿ ಪದ್ಯರಚನೆ ಮಾಡಿದರೆ, ಅದು ನಿಮೂರ್ಧನ್ಯದ ನಿದರ್ಶನವಾಗುವುದು.

ಶಲಭಾ ಇವ ಧಾವನ್ತಃ । ಸಾಯಕಾಸ್ತಸ್ಯ ಭೂಭುಜಃ ।
ನಿಪೇತುಃ ಸಾಯಕಚ್ಛಿನ್ನಾ । ಸ್ತೇನ ಸಂಯುಗಸೀಮನಿ ॥ (೨-೨೭೧)

ಇಲ್ಲಿ ಋವರ್ಣ, ಟವರ್ಗ, ರೇಫ ಮತ್ತು ಷಕಾರಗಳೆಂಬ ಮೂರ್ಧನ್ಯವರ್ಣಗಳಾವುವೂ ಉಪಯೋಗವಾಗಿಲ್ಲ.

ತ್ರಿಸ್ಥಾನ ಚಿತ್ರಗಳು

ನಿರೋಷ್ಠ್ಯದಂತ್ಯ

ಉಕ್ತ ಸೂತ್ರಗಳನ್ವಯ ಓಷ್ಠ್ಯ ಮತ್ತು ದಂತ್ಯವರ್ಣಗಳನ್ನು ನಿಷೇಧಿಸಿ ಪದ್ಯರಚನೆ ಮಾಡಿದರೆ, ಅದು ನಿರೋಷ್ಠ್ಯದಂತ್ಯದ ನಿದರ್ಶನವಾಗುವುದು.

ಜೀಯಾಜ್ಜಗಜ್ಜ್ಯೇಷ್ಠಗರಿಷ್ಠಚಾರ । ಶ್ಚಕ್ರಾರ್ಚಿಷಾ ಕೃಷ್ಣಕಡಾರಕಾಯಃ ।
ಹರಿರ್ಹಿರಣ್ಯಾಕ್ಷಶರೀರಹಾರೀ । ಖಗೇಶಗಃ ಶ್ರೀಶ್ರಯಣೀಯಶಯ್ಯಃ ॥ (೨-೨೭೨)

ಈ ಉಪಜಾತಿ ವೃತ್ತದಲ್ಲಿ ಪೂರ್ವೋಕ್ತ ಓಷ್ಠ್ಯ ಮತ್ತು ದಂತ್ಯವರ್ಣಗಳಾವುವೂ ಉಪಯೋಗವಾಗಿಲ್ಲ.

ನಿರೋಷ್ಠ್ಯಮೂರ್ಧನ್ಯ

ಉಕ್ತ ಸೂತ್ರಗಳನ್ವಯ ಓಷ್ಠ್ಯ ಮತ್ತು ಮೂರ್ಧನ್ಯ ವರ್ಣಗಳನ್ನು ನಿಷೇಧಿಸಿ ಪದ್ಯರಚನೆಮಾಡಿದರೆ, ಅದು ನಿರೋಷ್ಠ್ಯ ಮೂರ್ಧನ್ಯದ ನಿದರ್ಶನವಾಗುವುದು.

ಅಲಿನೀಲಾಲಕಲತಂ । ಕಂ ನ ಹನ್ತಿ ಘನಸ್ತನಿ ।
ಆನನಂ ನಲಿನಚ್ಛಾಯಂ । ನಯನಂ ಶಶಿಕಾನ್ತಿ ತೇ ॥ (ಸ. ೨-೨೭೩)

ಇಲ್ಲಿ ಪೂರ್ವೋಕ್ತ ಓಷ್ಠ್ಯ ಮತ್ತು ಮೂರ್ಧನ್ಯವರ್ಣಗಳಾವುವೂ ಉಪಯೋಗವಾಗಿಲ್ಲ. ''ಕಂಠ್ಯ ತಾಲವ್ಯದಂತ್ಯ ಮಾತ್ರಪ್ರಯೋಗಾತ್ ತ್ರಿಸ್ಥಾನೋಽಯಂ ಶ್ಲೋಕ ಇತಿ'' (ರತ್ನಶ್ರೀಜ್ಞಾನ).

ದ್ವಿಸ್ಥಾನ ಚಿತ್ರಗಳು

ದಂತ್ಯಕಂಠ್ಯ

ಉಕ್ತ ಸೂತ್ರಗಳನ್ವಯ ದಂತ್ಯ ಮತ್ತು ಕಂಠ್ಯವರ್ಣಗಳನ್ನು ಮಾತ್ರ ಉಪಯೋಗಿಸಿ ಪದ್ಯರಚನೆ ಮಾಡಿದರೆ, ಅದು ದಂತ್ಯಕಂಠ್ಯದ ನಿದರ್ಶನವಾಗುವುದು.

ಅನಙ್ಗಲಙ್ಘನಾಲಗ್ನನಾನಾತಙ್ಕಾ ಸದಙ್ಗನಾ ।
ಸದಾನಘ ಸದಾನನ್ದ ನತಾಙ್ಗೇ ಸಙ್ಗಸಂಗತ ॥ (ಕಾ. ೩-೮೦; ಸ.೨-೨೭೪)

ಇಲ್ಲಿ ಪೂರ್ವೋಕ್ತ ತಾಲವ್ಯ, ಓಷ್ಠ್ಯ ಹಾಗೂ ಮೂರ್ಧನ್ಯ ವರ್ಣಗಳಾವುವೂ ಉಪಯೋಗವಾಗಿಲ್ಲ. ''ಕಂಠದಂತ್ಯಮಾತ್ರಪ್ರಯುಕ್ತೋ ದ್ವಿಸ್ಥಾನೋಽಯಂ ಶ್ಲೋಕ ಇತಿ'' (ರತ್ನಶ್ರೀಜ್ಞಾನ).

ಏಕಸ್ಥಾನ ಚಿತ್ರಗಳು

ಕಂಠ್ಯ

ಉಕ್ತ ಸೂತ್ರದನ್ವಯ ಕಂಠ್ಯವರ್ಣಗಳನ್ನು ಮಾತ್ರ ಉಪಯೋಗಿಸಿ ಪದ್ಯರಚನೆ ಮಾಡಿದರೆ, ಅದು ಕಂಠ್ಯದ ನಿದರ್ಶನವಾಗುವುದು.

ಅಗಾ ಗಾಂ ಗಾಙ್ಗಕಾಕಾಙ್ಕಗಾಹಕಾಘಕಕಾಕಹಾ ।
ಅಹಾಹಾಙ್ಗಖಗಾಙ್ಕಾಗಗಕಙ್ಕಾಗಖಗಾಙ್ಕಗ ॥ (ಕಾ. ೩-೯೧; ಸ. ೨-೨೬೫)

ಇಲ್ಲಿ ಪೂರ್ವೋಕ್ತ ತಾಲವ್ಯ, ದಂತ್ಯ, ಓಷ್ಠ್ಯ ಮತ್ತು ಮೂರ್ಧನ್ಯ ವರ್ಣಗಳಾವುವೂ ಉಪಯೋಗವಾಗಿಲ್ಲ. ''ಕಂಠ್ಯಮಾತ್ರಪ್ರಯೋಗಾದೇಕಸ್ಥಾನೋಽಯಂ ಶ್ಲೋಕಃ'' (ರತ್ನಶ್ರೀಜ್ಞಾನ).

ಈ ಮೇಲಿನ ನಿರೂಪಣೆಯಲ್ಲಿ ದಂಡಿಯು ೪ ಸ್ಥಾನಚಿತ್ರಗಳನ್ನು ಮಾತ್ರ ನಿರೂಪಿಸಿದ್ದು, ಅವನ್ನು ಒಳಕೊಂಡ ಹಾಗೆ ಒಟ್ಟು ೯ ಸ್ಥಾನಚಿತ್ರಗಳನ್ನು ಭೋಜನು ನಿರೂಪಿಸಿರುವುದು ಕಾಣುತ್ತದೆ. ಅಲ್ಲದೆ, ಚತುಃಸ್ಥಾನಾದಿ ವಿಭಜನೆಗೆ ಅನುಸಾರವಾಗಿ ವಿವಿಧ ಸ್ಥಾನಚಿತ್ರಗಳನ್ನು ಪೃಥಕ್ಕರಿಸಿ, ಹೆಸರಿಸಿ ನಿರೂಪಿಸಿರುವುದು ಭೋಜನ ಗ್ರಂಥದಲ್ಲಿಯಷ್ಟೇ ಕಾಣುತ್ತದೆ.

ಸಂಸ್ಕೃತ ಸಾಹಿತ್ಯದಲ್ಲಿ ಸ್ಥಾನಚಿತ್ರಗಳ ಕೆಲವು ನಿದರ್ಶನಗಳು

ಕುಮಾರದಾಸ, ಭಾರವಿ, ಮಾಘ, ರತ್ನಾಕರ, ಹರಿಚಂದ್ರ ಮೊದಲಾದವರ ಕೃತಿಗಳಲ್ಲಿ ವಿರಳವಾಗಿ ಇವುಗಳ ಕೆಲವು ನಿದರ್ಶನಗಳು ಗೋಚರಿಸುತ್ತವೆ. ಆದರೆ ನಿರೋಷ್ಠ್ಯ, ನಿಸ್ತಾಲವ್ಯಗಳ ಹಾಗೆ ಇತರ ಚಿತ್ರಗಳು ಸಂಸ್ಕೃತದಲ್ಲಿ ಪ್ರಚುರವಾದಂತೆ ತೋರುವುದಿಲ್ಲ. ನಿರೋಷ್ಠ್ಯದ ವೈಭವವನ್ನು ನಾವು ದಂಡಿಯ 'ದಶಕುಮಾರ ಚರಿತೆ'ಯಲ್ಲಿ ಕಾಣುತ್ತೇವೆ. ನಿಷ್ಕಂಠ್ಯ, ನಿರ್ಮೂರ್ಧನ್ಯ ಸ್ಥಾನಚಿತ್ರಗಳು ಏಕೆ ತಕ್ಕ ಪ್ರಮಾಣದಲ್ಲಿ ಕಂಡು ಬರುವುದಿಲ್ಲವೋ ತಿಳಿಯದು. ನಿಷ್ಕಂಠ್ಯದ ಲಕ್ಷ್ಯಗಳಿಗೆ ಶೋಧನೆ ಅಗತ್ಯವಾಗಿದೆ.

ನಿಸ್ತಾಲವ್ಯ (ಅತಾಲವ್ಯ)

ಮಾಘನ 'ಶಿಶುಪಾಲವಧೆ'ಯಲ್ಲಿ :

ನಾಮಾಕ್ಷರಾಣಾಂ ಮಲನಾ ಮಾ ಭೂದ್ಭರ್ತುರಿತಃ ಸ್ಫುಟಮ್ ।
ಅಗೃಹ್ಣತ ಪರಾಙ್ಗಾನಾಮುಸೂನಸ್ರಂ ನ ಮಾರ್ಗಣಾಃ ॥ (೧೯-೧೧೦).

ಈ ಶ್ಲೋಕದ ವ್ಯಾಖ್ಯೆಯಲ್ಲಿ ''ತಾಲವ್ಯವರ್ಣಾಭಾವಾದತಾಲವ್ಯ ಇತಿ ಚಿತ್ರಭೇದಃ'' ಎಂಬುದು ಮಲ್ಲಿನಾಥ ಟಿಪ್ಪಣಿ.

ಹರಿಚಂದ್ರನ 'ಧರ್ಮಶರ್ಮಾಭ್ಯುದಯ'ದಲ್ಲಿ :

ಮೂರ್ಧಾನಂ ಮಧುಮಸ್ತತ್ರ ಕಙ್ಕಪತ್ರಕ್ಷತಾ ಭಟಾಃ ।
ಪ್ರಭೋರರ್ಥಾಸಮಾಪ್ತ್ಯಾ ವಾ ಪ್ರಾಣಾನಾಂ ರೋದ್ಧುಮುತ್ಕ್ರಮಮ್ ॥ (೧೯-೬೮)

ನಿರ್ಮೂರ್ಧನ್ಯ (ಅಮೂರ್ಧನ್ಯ)

'ನರನಾರಾಯಣಾನಂದ' ಕಾವ್ಯದಲ್ಲಿ :

ಸೇನಾವೇನಾಂ ಸಪತ್ನಸ್ಯ ಭಿನತ್ತಿ ನ ಕಥಂ ಜವಾತ್ ।
ವಚನಾನೀತಿ ಸೂತಸ್ಯ ನಿಶಮ್ಯ ಸ್ಮಯವಾನಥ ॥ (೧೪-೨೮)

'ಕಪ್ಫಿಣಾಭ್ಯುದಯ' ಕಾವ್ಯದಲ್ಲಿ :

ಹತಾಖಿಲಬಲಸ್ತೇನ । ಧ್ವಸ್ತಮುಕ್ತೈಃ ಸ ಸಂಯುಗೇ ।
ಯೋಧೈಃ ಕತಿಪಯೈಸ್ತಸೌಃ । ಚಿಂತಾವಾನ್ ಕೋಶಲಾಧಿಪಃ ॥ (೧೮-೧೪೦)

ನಿರ್ದಂತ್ಯ (ಅದಂತ್ಯ)

'ನರನಾರಾಯಣಾನಂದ' ಕಾವ್ಯದಲ್ಲಿ :

ಏವಂ ಪ್ರಗುಣಪ್ರಹರಣ । ಗಣಶೋಭಾಭಿರ್ವಿಭಾವಿಭುಜವಿಭವಾಃ ।
ಅಮರಪ್ರಕರೇಣ ಭೃಶಂ । ಹರ್ಷಪುಷಾ ಪುಷ್ಪಭರವೃಷ್ಟ್ಯಾ ॥ (೧೪-೨೫)

ನಿರೋಷ್ಠ್ಯ

ಭಾರವಿಯ 'ಕಿರಾತಾರ್ಜುನೀಯ'ದಿಂದ :

ಅಥಾಗ್ರೇ ಹಸತಾ ಸಾಚಿಸ್ಥಿತೇನ ಸ್ಥಿರಕೀರ್ತಿನಾ ।
ಸೇನಾನ್ಯಾ ತೇ ಜಗದಿರೇ ಕಿಞ್ಚಿದಾಯಸ್ತಚೇತಸಾ ॥ (೧೫-೩)

ಇತಿ ಶಾಸತಿ ಸೇನಾನ್ಯಾಂ ಗಚ್ಛತಸ್ತಾನನೇಕಧಾ ।
ನಿಷಿಧ್ಯ ಹಸತಾ ಕಿಂಚಿತ್ತಸ್ಥೇ ತತ್ರಾನ್ಧಕಾರಿಣಾ ॥ (೧೫-೨೯)

ಇವುಗಳಲ್ಲಿ ಮೊದಲನೆಯ ನಿದರ್ಶನವನ್ನು ಕುರಿತ ಹಾಗೆ, ಮಲ್ಲಿನಾಥನು ''ಓಷ್ಠ್ಯವರ್ಣಾಭಾವಾನ್ನಿರೌಷ್ಠ್ಯಮೇತತ್'' ಎಂಬುದಾಗಿ ಟಿಪ್ಪಣಿ ಬರೆದಿದ್ದಾನೆ.

ದಂಡಿಯ 'ದಶಕುಮಾರಚರಿತೆ'ಯಲ್ಲಿ :

ಸ ಕಿಲ ಕರಕಮಲೇನ ಕಿಞ್ಚಿತ್ಸಂವೃತಾನನೋ ಲಲಿತವಲ್ಲಭಾರಭಸದತ್ತ ದನ್ತಕ್ಷತವ್ಯಸನ ನಿಹ್ವಲಾಧರಮಣಿರ್ನಿರೋಷ್ಠ್ಯವರ್ಣಮಾತ್ಮಚರಿತಮಾಚಚಕ್ಷೇ–

''ರಾಜಾಧಿರಾಜನನ್ದನ, ನಗರನ್ಧ್ರಗತಸ್ಯ ತೇ ಗತಿಂ ಜ್ಞಾಸ್ಯನ್ನಹಂ ಚ ಗತಃ ಕದಾಚಿತ್ಕಲಿಙ್ಗಾನ್ । ಕಲಿಙ್ಗನಗರಸ್ಯ ನಾತ್ಯಾಸನ್ನಸಂಸ್ಥಿತ ಜನದಾಹಸ್ಥಾನಸಂಸಕ್ತಸ್ಯ ಕಸ್ಯಚಿತ್ಕಾನ್ತಾರ ಧರಣಿಜಸ್ಯಾಸ್ತೀರ್ಣಸರಸಕಿಸಲಯಸಂಸ್ತರೇ ತಲೇ ನಿಷದ್ಯ ನಿದ್ರಾಲೀಢ ದೃಷ್ಟಿರಶಯಿಷಿ । ಗಲತಿ ಚ ಕಾಲರಾತ್ರಿ ಶಿಖಣ್ಡಜಾಲಕಾನ್ಧಕಾರೇ, ಚಲಿತರಕ್ಷಸಿ ಕ್ಷರಿತನೀಹಾರೇ ನಿಜನಿಲಯ ನಿಲೀನನಿಃಶೇಷಜನೇ ನಿತಾನ್ತಶೀತೇ ನಿಶೀಥೇ ಘನತರ ಸಾಲಶಾಖಾನ್ತರಾಲನಿಹ್ರಾದಿನಿ ನೇತ್ರ ನಿಂಸಿನೀಂ ನಿದ್ರಾಂ ನಿಗೃಹ್ಣನ್, ಕರ್ಣದೇಶಂ ಗತಂ 'ಕಥಂ ಖಲೇನಾನೇನ ದಗ್ಧ ಸಿದ್ಧೇನ ಚಿರಂ ಸಾಕಾಲೇ ನಿದೇಶಂ ದಿತ್ಸತಾ ಜನ ಏಷ ರಾಗೇಣಾನರ್ಗಲೇನಾರ್ದಿತ ಇತ್ಥಂ ಖಲೀಕೃತಃ । ಕ್ರಿಯೇತಾಸ್ಯಾಣಕ ನರೇನ್ದ್ರಸ್ಯ ಕೇನಚಿ ದನನ್ತಶಕ್ತಿನಾ ಸಿದ್ಧ್ಯನ್ತರಾಯಃ' ಇತಿ ಕಿಂಕರಸ್ಯ ಕಿಂಕರ್ಯಾಶ್ಚಾತಿಕಾತರಃ ರಟಿತಮ್ ।''

ತದಾಕರ್ಣ್ಯ 'ಕ ಏಷ ಸಿದ್ಧಃ, ಕಾ ಚ ಸಿದ್ಧಿಃ, ಕಿಂ ಚಾನೇನ ಕಿಙ್ಕರೇಣ ಕರಿಷ್ಯತೇ' ಇತಿ ದಿದೃಕ್ಷಾಕ್ರಾನ್ತಹೃದಯಃ ಕಿಂಕರಗತಯಾ ದಿಶಾ ಕಿಂಚಿದನ್ತರಂ ಗತಸ್ತರಲತರನರಾಸ್ಥಿ ಶಕಲ ರಚಿತಾಲಂಕಾರಾಕ್ರಾನ್ತಕಾಯಮ್, ದಹನದಗ್ಧಕಾಷ್ಠನಿಷ್ಠಾಙ್ಗಾರ ರಜಃ ಕೃತಾಙ್ಗರಾಗಮ್, ತಡಿಲ್ಲತಾಕಾರಜಟಾಧರಮ್, ಹಿರಣ್ಯರೇತಸ್ಯರಣ್ಯಚಕ್ರಾನ್ಧಕಾರ ರಾಕ್ಷಸೇಕ್ಷಣಗೃಹೀತ ನಾನೇನ್ಧನ ಗ್ರಾಸಚಞ್ಚದರ್ಚಿಷಿ ದಕ್ಷಿಣೇತರೇಣ ಕರೇಣ ತಿಲಸಿದ್ಧಾರ್ಥಕಾದೀನ್ನಿರನ್ತರಚಟಚಟಾಯಿತಾನಾಕಿರನ್ತಂ, ಕಂಚಿದದ್ರಾಕ್ಷಮ್। ತಸ್ಯಾಗ್ರೇ ಸ ಕೃತಾಞ್ಜಲಿಃ ಕಿಂಕರಃ 'ಕಿಂ ಕರಣೀಯಮ್, ದೀಯತಾಂ ನಿದೇಶಃ' ಇತ್ಯತಿಷ್ಠತ್ । ಆದಿಷಶ್ಚಾಯಂ ತೇನಾತಿನಿಕೃಷ್ಟಾಶಯೇನ 'ಗಚ್ಛ, ಕಲಿಙ್ಗರಾಜಸ್ಯ ಕರ್ದನಸ್ಯ ಕನ್ಯಾಂ ಕನಕಲೇಖಾಂ ಕನ್ಯಾಗೃಹಾದಿಹಾನಯ' ಇತಿ...॥

ಹೀಗೆ 'ಮಂತ್ರಗುಪ್ತಚರಿತ'ವೆಂಬ ೭ನೆಯ ಉಚ್ಛ್ವಾಸ ಪೂರ್ತಿಯಾಗಿ (ಕೊನೆಯ ೪ ಸಾಲುಗಳಷ್ಟು ಹೊರತಾಗಿ) ಮೇಲೆ ಉದ್ಧರಿಸಿರುವ ರೀತಿಯಲ್ಲಿರುವ, ೨೧ ವಾಕ್ಯಪುಂಜಗಳಿಂದ ಕೂಡಿದ, ಅಚ್ಚಾಗಿರುವ ಪುಟಗಳಲ್ಲಿ ೧೯೩ ಪಙ್ಕ್ತಿಗಳಷ್ಟು ನಿಡಿದಾಗಿರುವ ನಿರೋಷ್ಠ್ಯರಚನೆಯಾಗಿದೆ.

ಕಥೆ ಹೇಳುವ ಮಂತ್ರಗುಪ್ತಕುಮಾರನು ತನ್ನ ಪ್ರಿಯದಯಿತೆಯ ಸರಭಸದಂತಕ್ಷತದಿಂದಾಗಿ ಅಧರ ಬಿಂಬವು ವ್ಯಾಕುಲಗೊಂಡ ಕಾರಣ ಓಷ್ಠ್ಯವರ್ಣಗಳನ್ನು ವರ್ಜಿಸಿ ಕಥೆ ಹೇಳಬೇಕಾಗಿ ಬಂತು ಎಂಬುದು ಕವಿಯ ಕಲ್ಪನೆಯಾಗಿದೆ. ಪಂಡಿತ ಕೇದಾರಶರ್ಮ ತಮ್ಮ ಬಾಲಕ್ರೀಡಾ ಎಂಬ ಹಿಂದಿ ವ್ಯಾಖ್ಯಾನದಲ್ಲಿ ''ಈ ಸುಂದರವಾದ ಪ್ರಯಾಸ ಬೇರಾವುದಾದರೂ ಉನ್ನತಭಾಷೆಯಲ್ಲಿದ್ದಿರಬಹುದು ಎಂಬುದಾಗಿ ಇಟ್ಟುಕೊಂಡರೂ, ದಂಡಿಯ ಕಾವ್ಯದಲ್ಲಿ ಓಷ್ಠ್ಯವರ್ಣರಹಿತವಾಗಿಯೂ ಕಥಾಪಾಠವು ಸ್ವಲ್ಪವಾದರೂ ಅರೋಚಕವಾಗಿ ಇಲ್ಲವೆ. ಕಠಿನವಾಗಿ ತೋರುವುದಿಲ್ಲ'' ಎಂದು ಟಿಪ್ಪಣಿ ಬರೆದಿದ್ದಾರೆ. ಚೌಂಡರಸ ಕವಿ ದಂಡಿಯನ್ನು ಈ ವಿಷಯದಲ್ಲಿ ಹೇಗೆ ಅನುಕರಿಸಿರುವನೆಂಬುದನ್ನು ನಾವು ಮುಂದೆ ಗಮನಿಸಬಹುದಾಗಿದೆ.

ರತ್ನಾಕರನು 'ಹರವಿಜಯ'ದಲ್ಲಿ ಸ್ಥಾನಚಿತ್ರಗಳಲ್ಲಿ ಒಂದು ನವೀನದೃಷ್ಟಿ ತೋರಿದ್ದಾನೆ. ಅದೆಂದರೆ, ನಿರ್ದಿಷ್ಟ ವರ್ಣಾಕ್ಷರಗಳನ್ನೇ ಬಳಸಿ ಪದ್ಯ ಕಟ್ಟುವುದಾಗಿ ಘೋಷಿಸಿರುವುದು. ಉದಾಹರಣೆಗೆ :

ತವರ್ಗಬಂಧ

ತಥಾ ದಧಾನೋಽತನುತಾಂ ನಿಧೀನಾಂ । ಧೂತಾನನೋಽನೂನಧುನೀನನಾದಃ ।
ತೇನೈಧಿತಾನಾಂ ನಿಧನಂ ತದಾನೀಂ । ನೂನಂ ನ ತೇನೇ ನ ಧನಾಧಿನಾಥಃ ॥
(ಸರ್ಗ ೪೮-ಪದ್ಯ ೮೨)

'ಕವಿರಾಜಮಾರ್ಗ', ಕಾವ್ಯಾವಲೋಕನಾದಿಗಳಲ್ಲಿ ಸ್ಥಾನಚಿತ್ರಗಳು

'ಕವಿರಾಜಮಾರ್ಗ'ದಲ್ಲಿ 'ದುಷ್ಕರ ಕಾವ್ಯ'ಗಳ ಪಟ್ಟಿಯಲ್ಲಿ ಅತಾಲವ್ಯ ನಿರೋಷ್ಠ್ಯಗಳನ್ನು ಹೇಳಿದ್ದ ಸೂತ್ರಪದ್ಯವೊಂದು, ೨-೧೧೧ನೆಯ ಪದ್ಯದ ಬಳಿಕ ಸೇರಬೇಕಾದ್ದು ನಷ್ಟವಾಗಿ ಹೋಗಿದೆಯೆಂದು ಮದ್ರಾಸು ಪರಿಷ್ಕರಣಕರ್ತರು ಭಾವಿಸಿದ್ದಾರೆ. ಆ ನಷ್ಟವಾದ್ದೆಂದು ತಿಳಿದ ಪದ್ಯವನ್ನು ಊಹಿಸಿ, ಅವರು ಹೀಗೆ ಅದನ್ನು ಬರೆದಿದ್ದಾರೆ :

ಗತಪ್ರತ್ಯಾಗತಂ ಗೂಢಚತುರ್ಥಂ ದ್ವ್ಯಕ್ಷರಾದಿಕಂ
ಅತಾಲವ್ಯಂ ನಿರೋಷ್ಠ್ಯಂ ಸರ್ವತೋಭದ್ರಂ ನಿರುತ್ತರಂ ॥ (೨-೧೧೧ ಮತ್ತು ೧೧೨ರ ನಡುವೆ)

ಈ ಭಾಗದಲ್ಲಿ ಗತಪ್ರತ್ಯಾಗತಾದಿಯಾದ ದುಷ್ಕರಕಾವ್ಯಭೇದಗಳಲ್ಲಿ ಕೆಲವು, ಮುಂದೆ ಲಕ್ಷ್ಯಭಾಗದಲ್ಲಿ ನಿರೂಪಿತವಾಗಿರುವಂತಹವು, ಇಲ್ಲಿ ಹೆಸರಿನ ಮಟ್ಟಿಗೆ ಉಲ್ಲೇಖಗೊಳ್ಳಬೇಕಾಗಿದ್ದುದು ಸಹಜವೇ. ಆದರೆ ಮೇಲಿನಂತೆಯೇ ಮೂಲದಲ್ಲಿ ಪದ್ಯವಿದ್ದಿರಬೇಕೆಂದು ತಿಳಿಯುವುದು ಕಷ್ಟ.

ಇದು ಹೇಗಿದ್ದರೂ 'ಕವಿರಾಜಮಾರ್ಗ'ದಲ್ಲಿ 'ಅತಾಲವ್ಯ'ದ ಎರಡು ಲಕ್ಷ್ಯಗಳೂ, ನಿರೋಷ್ಠ್ಯದ ಒಂದು ಲಕ್ಷ್ಯವೂ ಏಕಾಕ್ಷರ ದ್ವ್ಯಕ್ಷರಗಳ ಲಕ್ಷ್ಯಗಳ ಅನಂತರದಲ್ಲಿ ಕಂಡುಬರುತ್ತಿವೆಯಾದ್ದರಿಂದ ಅವನ್ನು ಪರಿಶೀಲಿಸಬಹುದಾಗಿದೆ. ನಿಷ್ಕಂಠ್ಯ, ನಿರ್ದಂತ್ಯ ಮತ್ತು ನಿರ್ಮೂರ್ಧನ್ಯದ ಲಕ್ಷ್ಯಗಳಾಗಲಿ ಅನ್ಯ ದ್ವಿಸ್ಥಾನ ಏಕಸ್ಥಾನ ಚಿತ್ರಗಳ ಲಕ್ಷ್ಯಗಳಾಗಲಿ ಇಲ್ಲಿ ಕಂಡುಬರುವುದಿಲ್ಲ ಎಂಬುದನ್ನು ಮೊದಲಲ್ಲಿಯೇ ಸೂಚಿಸಿಬಿಡಬಹುದು.

'ಕಾವ್ಯಾವಲೋಕನ'ದಲ್ಲಿ, ಸೂತ್ರ ೧೩೮ರಲ್ಲಿ, ''....ನಿರೋಷ್ಠ್ಯಮತಾಲ । ವ್ಯಾಕ್ಷರಮೆನೆ ನಿಜನಾಮ ಸಹ್ಯಕ್ಷಂ ಲಕ್ಷಣಮುದಾಗೆ ನೆಗಳ್ಗುಂ ಪಲವುಂ'' ಎಂಬ ಭಾಗದಲ್ಲಿ ಲಕ್ಷಣದ ಸಾಮಾನ್ಯ ಸೂಚನೆಯೊಂದಿಗೆ ಈ ವಿಚಾರ ಬಂದಿದೆ; ದ್ವ್ಯಕ್ಷರಿ ಮತ್ತು ಏಕಾಕ್ಷರಗಳ ಬಳಿಕ ಅನುಕ್ರಮವಾಗಿ ಇವುಗಳಿಗೆ ಒಂದೊಂದು ಲಕ್ಷ್ಯವೂ ಇದೆ. ಸ್ಥಾನಚಿತ್ರಗಳಲ್ಲಿ ನಿರೋಷ್ಠ್ಯ ಮತ್ತು ಅತಾಲವ್ಯಗಳನ್ನು ಮಾತ್ರವೇ ಆಯ್ದುಕೊಂಡಿರುವುದೂ, ಅವುಗಳ ಲಕ್ಷ್ಯಗಳನ್ನು ದ್ವ್ಯಕ್ಷರಿ ಹಾಗೂ ಏಕಾಕ್ಷರಗಳ ಬಳಿಕವೇ ಸೇರಿಸಿರುವುದೂ 'ಕವಿರಾಜಮಾರ್ಗ'ದ ಅನುಸರಣೆಯ ಫಲವೇ ಎಂದು ಊಹಿಸಬಹುದಾಗಿದೆ. ಹೆಸರುಗಳಲ್ಲಿಯೇ ಅವುಗಳ ಲಕ್ಷಣ ವ್ಯಕ್ತವಾಗುವಂತಿರುತ್ತದೆಯೆಂದು ನಾಗವರ್ಮ ಹೇಳಿ ತೃಪ್ತನಾಗಿರುವುದು ವಿದಿತವೇ ಇದೆ.

'ಕವಿರಾಜಮಾರ್ಗ'ದಲ್ಲಿ ಅತಾಲವ್ಯದ ಲಕ್ಷ್ಯಗಳು :

ಕಿಡಿಪಂ ಬಾರಗೇ ಮೆಯ್ಯಂ । ಕಿಡಿಪಂ ಕಿಡಿಪಂ ತೆ ಮುಂ ।
ಕಿಡಿಪಂ ಪೋಕುಮೋ ತಾಮುಂ । ಕಿಡಿಸಲ್ ಸು[ಡು] ಸೋಲಮೋ ॥ (೨-೧೨೩)

ಅಲ್ಪ ಪಾಠವ್ಯತ್ಯಾಸದೊಂದಿಗೆ ಮೇಲೆ ಪದ್ಯಪಾಠವನ್ನು ಕೊಟ್ಟಿದ್ದರೂ, ಸಂದರ್ಭವೇನೆಂದು ತಿಳಿಯದಿರುವುದರಿಂದ ಅರ್ಥವೈಶದ್ಯ ಸಾಲದು ಎನ್ನಬೇಕು. ಪರಿಷ್ಕೃತ ಪಾಠದಂತೆ ಪದ್ಯದ ಆಶಯ : ''ಎಲೆ (ಸಖೀ), ಬಾ; (ಆ ಹಾಳು ಮನ್ಮಥನು) ಮೈಯನ್ನು ಕೆಡಿಸುತ್ತಾನೆ (ಕೊಲ್ಲುತ್ತಾನೆ); ಕೆಡಿಸುತ್ತಾನೆ (ಕೊಲ್ಲುತ್ತಾನೆ); ಛೀ! ಕೆಡಿಸುತ್ತಾನೆ (ಕೊಲ್ಲುತ್ತಾನೆ); ಮೊದಲು ಕೆಡಿಸುತ್ತಾನೆ (ಕೊಲ್ಲುತ್ತಾನೆ); ಕೆಡಿಸಿದರೆ (ಕೊಂದರೆ)

ಅವಾದರೂ ಹೋಗುತ್ತವೆಯೇ (?). ಪ್ರೇಮವೇ, ಹಾಳಾಗು!'' ವಿರಹಿ ಹೆಣ್ಣೊಬ್ಬಳು ಸಖಿಯೊಂದಿಗೆ ತನ್ನ ವಿರಹದ ಪಾಡನ್ನು ತೋಡಿಕೊಳ್ಳುವ ಸಂದರ್ಭವನ್ನು ಹೇಳುವ ಮಾತಾಗಿರಬಹುದೇ, ಇದು?

ಇಲ್ಲಿ ತಾಲವ್ಯ ವರ್ಣಗಳಲ್ಲಿ ಚ ವರ್ಗದ ವರ್ಣಗಳನ್ನು ನಿಷೇಧಿಸಿದೆಯಲ್ಲದೆ, ಸ್ವರಗಳನ್ನು ನಿಷೇಧಿಸಿಲ್ಲ. ಇದು ಗಮನಿಸಬೇಕಾದ್ದು.

ಮಾರುತೀ ಪರಮೋದಾರ । ದಾರನೊಳ್ ಕೂಡು ನಲ್ಲನೊಳ್ ।
ಸಾರ ಕಾದಂಬಿನೀನಾಥ । ನಾರೂಢಗುಣಧಾಮನೊಳ್ ॥ (೨-೧೨೪)

ಇದರ ಆಶಯ : ''ಆಂಜನೇಯ, ಪರಮ ಉದಾರಿಯೂ ಚಂದ್ರನಂತೆ ತೇಜಸ್ವಿಯೂ ಗುಣಸಂಪನ್ನನೂ ಪ್ರಿಯನೂ ಆದ ಪತಿಯೊಂದಿಗೆ ನನ್ನನ್ನು ಸೇರಿಸು.''

ಇದು ರಾಮಾಯಣದ ಸನ್ನಿವೇಶವಾಗಿರುವುದು ಸಾಧ್ಯ. ಇದು ಪೂರ್ವಕವಿ ಕೃತಿಯೊಂದರಿಂದ ಉದ್ಧೃತ ವಿರಬಹುದು; ಇಲ್ಲವೆ ಕವಿರಾಜಮಾರ್ಗಕರ್ತೃವೇ ರಚಿಸಿ ಸೇರಿಸಿದ್ದೂ ಇರಬಹುದು. ಇದರಲ್ಲಿ ಎಲ್ಲಿಯೂ ತಾಲವ್ಯ ವರ್ಣಗಳನ್ನು ಬಳಸಿಲ್ಲ. ಆದರೆ ಸ್ವರಗಳ ಬಳಕೆಯಲ್ಲಿ ನಿಷೇಧವೇನಿಲ್ಲ ಎನ್ನುವುದನ್ನು ಇಲ್ಲಿಯೂ ಗಮನಿಸಬಹುದು.

'ಕಾವ್ಯಾವಲೋಕನ'ದಲ್ಲಿ ಅತಾಲವ್ಯದ ಲಕ್ಷ್ಯ :

ರೂಪುಂ ಸೊಬಗುಮಣ್ಮುಂ ನಾ । ಣ್ಗಾಪುಮಾಪುರ್ಗಂ ಪ್ರಭುತ್ವಮುಂ ।
ಕೋಪಮುಂ ಮಾಳ್ಪುದುಂ ತನ್ನೊಳ್ । ಭೂಪಂ ತಾಂ ಕೊಲ್ವುಗ್ಗಮಾತನಂ ॥ (ಪ. ೫೮೬)

ಇದರ ಆಶಯ : ''(ದೊರೆಯ) ರೂಪವೂ ಸೌಂದರ್ಯವೂ ಪೌರುಷವೂ ಮರ್ಯಾದೆಯನ್ನು ಕಾಪಾಡಿಕೊಳ್ಳುವುದೂ ರಭಸಪ್ರವೃತ್ತಿಯೂ ದೊರೆಯಾದವನು ತನ್ನಲ್ಲಿ ಕೋಪಮಾಡಿಕೊಳ್ಳುವುದೂ ಆತನನ್ನು ಕೊಲ್ಲುತ್ತವೆ.''

ಇಲ್ಲಿ ಪದ್ಯದ ಸಂದರ್ಭವೇನೆಂಬುದು ತಿಳಿಯದು. ಯಾವ ಆಕರದಿಂದ ಪದ್ಯವನ್ನೆತ್ತಿದೆಯೆನ್ನುವುದೂ ತಿಳಿಯದು. ಆದರೆ ಛಂದಸ್ಸು ಲಕ್ಷಣಾನ್ವಿತ; ಅರ್ಥವ್ಯಕ್ತಿ ಉತ್ತಮ. ಈ ಪದ್ಯದಲ್ಲಿ ಎಲ್ಲಿಯೂ ತಾಲವ್ಯ ವರ್ಣಗಳನ್ನು ಉಪಯೋಗಿಸಿಲ್ಲ. ತಾಲವ್ಯ ಸ್ವರಗಳನ್ನು ಸಹ ಉಪಯೋಗಿಸಿಲ್ಲ ಎನ್ನುವುದನ್ನು ಗಮನಿಸಬೇಕು. ಒಂದು ಭೇದಕ್ಕೆ ಎರಡು ಲಕ್ಷ್ಯಗಳನ್ನು ಕರ್ತೃ ಒದಗಿಸುವ ಆವಶ್ಯಕತೆಯೇನಿತ್ತೋ ತಿಳಿಯದು.

ದಂಡಿಯಲ್ಲಿ ಸ್ಥಾನಚಿತ್ರಗಳ ಪ್ರಸ್ತಾವ ಇದ್ದರೂ, 'ಮಾಧವಾಲಂಕಾರ'ದಲ್ಲಿ ಇದರ ಪ್ರಸ್ತಾವವಿಲ್ಲ; ಪ್ರಾಯಃ ಈ ಭಾಗ ನಷ್ಟವಾಗಿರಬಹುದು.

'ಕವಿರಾಜಮಾರ್ಗ'ದಲ್ಲಿ 'ನಿರೋಷ್ಠ್ಯ'ದ ಲಕ್ಷ್ಯ :

ನರನಾಯಕನಂ ನಿಂದಾನಿರದೀಗಳೆ ಕಾಂತನಂ ।
ನೆರೆದೇನದಱಿಂದಿಲ್ಲಾ ನೆರೆದಿರ್ದಾಗೆನಾಗೆನೇ ॥ (೨-೧೨೫)

ಇದರ ಆಶಯ : ''ನರಶ್ರೇಷ್ಠನಾದ ಪ್ರಿಯನನ್ನು ತಡಮಾಡದೆ ಈಗಲೇ ಕೂಡುವುದರಿಂದೇನು (ಲಾಭ) ? ಹಾಗೆ ಮಾಡುವುದರಿಂದ ಇಲ್ಲಿ ನಾನು (ಅವನಿಗೆ ಮಣಿದು, ಅವನನ್ನು) ಯಾಚಿಸಿದಂಥವಳಾಗಿ ಆಗುವುದಿಲ್ಲವೇ, ಆಗುವುದಿಲ್ಲವೇ?''

ಈ ಪದ್ಯದ ಸಂದರ್ಭವೇನೆಂಬುದು ತಿಳಿಯುವುದಿಲ್ಲ; ಗ್ರಂಥಕರ್ತೃ ಕೃತವೋ ಉದ್ಧೃತವೋ ತಿಳಿಯದು. ಛಂದಸ್ಸು ಲಕ್ಷಣಾನ್ವಿತವಾಗಿದ್ದರೂ, ಆಶಯದ ಅಸ್ಪಷ್ಟತೆ ಕೆಲಮಟ್ಟಿಗೆ ಉಳಿದುಕೊಂಡಿದೆ. ಈ ಪದ್ಯದಲ್ಲಿ ಓಷ್ಠ್ಯ ವರ್ಣಗಳಲ್ಲಿ ಸೇರುವ ಪ ವರ್ಗದ ವರ್ಣಗಳಾವುವೂ ಉಪಯೋಗವಾಗಿಲ್ಲ, ಓಷ್ಠ್ಯ ಸ್ವರಗಳು ಸಹ ಉಪಯೋಗವಾಗಿಲ್ಲ ಎನ್ನುವುದನ್ನು ಗಮನಿಸಬೇಕು.

'ಕಾವ್ಯಾವಲೋಕನ'ದಲ್ಲಿ ನಿರೋಷ್ಠ್ಯದ ಲಕ್ಷ್ಯ :

ನೆಗಟ್ಟೆ ಯಂತಿಸ್ಥಿತಿ ಚಿತ್ತದಿ । ನಗಲೆ ಕರಂ ನಿಜದೆ ತನ್ನ ತರಳತೆ ಕೆಲದಿಂ ।
ದಗಲದೆ ನಾಳೀಜಂಘಂ । ನಗಿಸಿತ್ತಾ ನಗದ ನಗದ ಖಚಿಸಂಹತಿಯಂ ॥ (ಪ. ೫೮೫)

ಇದರ ಆಶಯ : ''(ತನ್ನೊಂದಿಗೆ) ಸರಿಸಮನಾಗಿ ಹೊಂದಿಕೊಂಡಿರುವ ಸ್ಥಿತಿ ತೋರುತ್ತಿರಲು, ಮನಸ್ಸಿನಿಂದ ತನ್ನ ಸಹಜವಾದ ಚಾಂಚಲ್ಯ ಪೂರ್ತಿಯಾಗಿ ತೊಲಗಿಹೋಗಿರಲು, ಬಕಪಕ್ಷಿಯು ತನ್ನ ಪಕ್ಕದಿಂದ ತೊಲಗದೆ ಇದ್ದುದು, ಆ ಬೆಟ್ಟದಲ್ಲಿದ್ದ ನಗದಿರುವ ಋಷಿಗಳ ತಂಡವನ್ನೂ ನಗಿಸಿತು.''

ಪದ್ಯದ ಸ್ಪಷ್ಟವಾದ ಸಂದರ್ಭ ತಿಳಿಯದಿದ್ದರೂ, ತಪೋವನದಲ್ಲಿ ಋಷಿಗಳ ತಪಶ್ಚರ್ಯೆಗೆ ಸಂಬಂಧಪಟ್ಟ ಒಂದು ಸನ್ನಿವೇಶದ ವರ್ಣನಾಂಶವಿದು ಎಂದು ಊಹಿಸುವುದಕ್ಕೆ ಅಡ್ಡಿಯಿರಲಾರದು. ಛಂದಸ್ಸು ಸಲಕ್ಷಣ ಕಂದಪದ್ಯವಾಗಿದ್ದು, ಯಾವುದೋ ಹಿಂದಿನ ಕೃತಿಯಿಂದೆತ್ತಿ ಈ ಪದ್ಯವನ್ನು ಗ್ರಂಥಕರ್ತೃ ಉದ್ಧರಿಸಿರಬಹುದೆಂದು ತಿಳಿಯಲು ಇದು ಸಹಾಯಕವಾಗಿದೆ.

ಇಲ್ಲಿ ಓಷ್ಠ್ಯವರ್ಣಗಳಲ್ಲಿ ಸೇರುವ ಪವರ್ಗದ ಯಾವ ವರ್ಣಗಳೂ ಉಪಯೋಗವಾಗಿಲ್ಲ. 'ಯುತಿಸ್ಥಿತಿ' ಎನ್ನುವಲ್ಲಿ ಒಂದು ಕಡೆ, ಓಷ್ಠ್ಯಸ್ವರವಾದ ಉಕಾರ ಸೇರಿರುವುದು ಕಾಣುತ್ತದೆ. ಪ್ರತ್ಯಂತರದ ಪಾಠಾಂತರವನ್ನೊಪ್ಪಿಕೊಂಡು, 'ಯತಿಸ್ಥಿತಿ' ಎಂಬುದಾಗಿ ಪಾಠವನ್ನು ಗ್ರಹಿಸಿದರೆ, ಆಗ ನಿದರ್ಶನದ ಶುದ್ಧತೆ ಇನ್ನೂ ಹೆಚ್ಚುತ್ತದೆ ಎನ್ನಬಹುದು. ಆರ್. ನರಸಿಂಹಾಚಾರ್ಯರೂ ಅನಂತರದ ಪರಿಷ್ಕರಣಕರ್ತರೂ ಏಕೆ ಈ ಸಂಗತಿಯನ್ನು ಲಕ್ಷಿಸಲಿಲ್ಲವೋ ತಿಳಿಯದು.

ಕನ್ನಡ ಸಾಹಿತ್ಯದಲ್ಲಿ ಕೆಲವು ಸ್ಥಾನಚಿತ್ರಗಳ ನಿದರ್ಶನಗಳು

ಕನ್ನಡ ಸಾಹಿತ್ಯದ ಪ್ರಾಚೀನ ಗ್ರಂಥಗಳಲ್ಲಿ ಈಗ ತಿಳಿದಮಟ್ಟಿಗೆ ನಿಷ್ಕಂಠ್ಯ, ನಿರ್ದಂತ್ಯಗಳ ನಿದರ್ಶನಗಳು ಕಂಡುಬಂದಿಲ್ಲ. ಲಾಕ್ಷಣಿಕರೂ ಅವನ್ನು ಉದಾಸೀನಮಾಡಿರುವುದು ವಿದಿತವೇ ಇದೆ. ಲಕ್ಷಣಕಾರರು ಮನ್ನಿಸಿದ್ದರೂ ನಿಸ್ತಾಲವ್ಯದ ನಿದರ್ಶನಗಳು ಸಾಹಿತ್ಯಗ್ರಂಥಗಳಲ್ಲಿ ಕಂಡುಬರುವಂತೆ ತೋರುತ್ತಿಲ್ಲ; ಕ್ವಚಿತ್ತಾಗಿ ಹೊಸಗನ್ನಡ ಕಾಲದಲ್ಲಿ ಪ್ರಯೋಗವುಂಟು. ನಿರ್ಮೂರ್ಧನ್ಯದ ನಿದರ್ಶನಗಳು ಕೆಲಮಟ್ಟಿಗೆ ಉಂಟು; ಆದರೂ ವಿರಳ. ಇರುವುದರಲ್ಲಿ ತಕ್ಕಮಟ್ಟಿಗೆ ಪ್ರಚುರವಾದ್ದು ಎಂದರೆ ನಿರೋಷ್ಠ್ಯ. 'ಕವಿರಾಜಮಾರ್ಗ' 'ಕಾವ್ಯಾವಲೋಕನ'ಗಳ ಏಕಾಕ್ಷರ ದ್ವ್ಯಕ್ಷರಗಳು ಅಪ್ರಯುಕ್ತ ಸ್ಥಾನಚಿತ್ರಗಳಲ್ಲಿ ಒಂದೆರಡರ ಪರೋಕ್ಷ ಲಕ್ಷ್ಯಗಳಾಗಿ ಪರಿಗಣಿಸಲ್ಪಡಬಹುದು; ಹಾಗೆಯೇ ಚಂದ್ರರಾಜನ 'ಮದನತಿಲಕ'ದ ಏಕಾಕ್ಷರಿ, ದ್ವ್ಯಕ್ಷರಿ ಮತ್ತು ತ್ರ್ಯಕ್ಷರಿಗಳ ಮೂರು ಪದ್ಯಗಳು (೬–೯, ೧೦, ೧೧) ಹಾಗೂ ಆಚಣ್ಣನ 'ವರ್ಧಮಾನಪುರಾಣ'ದ ''ಕಲಿ ಕೊಂಕಲ್ಕೇಕಕ್ಕುಂ....'' (೭–೫೨) ಎಂಬ ಕಂದಪದ್ಯ ಸಹ. ಆದರೆ ಆಯಾ ಲಾಕ್ಷಣಿಕರೂ ಕವಿಯೂ ಈ ಪದ್ಯಗಳನ್ನು ಸ್ಥಾನಚಿತ್ರಗಳ ಲಕ್ಷ್ಯಗಳನ್ನಾಗಿ ಉದ್ದೇಶಿಸಿಲ್ಲವಾದ್ದರಿಂದ, ಅವನ್ನು ಯಾವುದಾದರೊಂದು ಸ್ಥಾನಚಿತ್ರದ ಲಕ್ಷ್ಯವಾಗಿ ತಿಳಿಯುವುದು ಸೂಕ್ತವಾಗಲಾರದು. ತಿಳಿದರೆ, ಗೌಣವಾಗಿ ಮಾತ್ರ ಅವು ಉಪಾದೇಯಗಳು.

ಚತುಃಸ್ಥಾನ ಚಿತ್ರಗಳು

ನಿಸ್ತಾಲವ್ಯ

ಪ್ರಾಚೀನ ಕವಿಗಳಲ್ಲಿ ಲಕ್ಷ್ಯಗಳು ತೋರುತ್ತಿಲ್ಲ. ಪಿ. ಬಸವಣ್ಣನವರ 'ನಿರೀಕ್ಷೆ' ಎಂಬ ಸಂಕಲನದ 'ಚಿತ್ರಕವಿತ್ವ' ಪದ್ಯಗುಚ್ಛದಿಂದ ಉದಾಹರಣೆ :

ಪುರಕಾಲ ಮನ್ಮಥಹರಂ । ವರಗಂಗೇಂದುಮೃಗಪನ್ನಗಡಮರುಕಧರಂ ।
ಕರುಣಾಕರಂ ಭವಹರಂ । ಪರಮಪರಂ ಪೊರೆಗೆ ಭುವನವನ್ನನವರತಂ ॥ (ಪು. ೪೩)

ಇದರ ಆಶಯ : ''ತ್ರಿಪುರಗಳಿಗೆ ಯಮಸ್ವರೂಪನಾದವನೂ, ಮನ್ಮಥನನ್ನು ನಿಗ್ರಹಿಸಿದವನೂ, ಶ್ರೇಷ್ಠವಾದ ಗಂಗೆ, ಚಂದ್ರ, ಮೃಗ, ಸರ್ಪ ಮತ್ತು ಡಮರುಗಳನ್ನು ಧರಿಸಿದವನೂ, ಕರುಣಾಕರನೂ, ಸಂಸಾರಕ್ಲೇಶವನ್ನು ನಿವಾರಿಸುವವನೂ, ಪರಾತ್ಪರನೂ ಆದವನು (ಪರಶಿವನು) ಲೋಕವನ್ನು ಸರ್ವದಾ ಕಾಪಾಡಲಿ.''

ಲಕ್ಷಣಾನ್ವಿತವಾದ ಈ ಕಂದ ಪದ್ಯದಲ್ಲಿ ತಾಲವ್ಯ ವರ್ಣಗಳಲ್ಲಿ ಚವರ್ಗದ ವರ್ಣಗಳನ್ನಾಗಲಿ ಯಕಾರ ಶಕಾರಗಳನ್ನಾಗಲಿ ಬಳಸದೆ ಪದ್ಯವನ್ನು ರಚಿಸಿದೆ. ಆದರೆ ತಾಲವ್ಯ ಸ್ವರಗಳನ್ನು (ಎಏ) ನಿಷೇಧಿಸಿಲ್ಲ.

ನಿರ್ಮೂರ್ಧನ್ಯ

ನಿರ್ಮೂರ್ಧನ್ಯದ ಲಕ್ಷ್ಯಗಳು ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಬಂದಿರುವಂತೆ ತೋರುವುದಿಲ್ಲ; ಈಚಿಯ ವೀರಶೈವ ಸಾಹಿತ್ಯದಲ್ಲಿ ಪರೋಕ್ಷವಾದ ರೀತಿಯಲ್ಲಿ ನಿರ್ಮೂರ್ಧನ್ಯದ ನಿದರ್ಶನಗಳು ಕೆಲವು ಕಂಡುಬಂದಿವೆ. ಮಾತೃಕೆಗಳಲ್ಲಿಯೇ 'ಅಚಲಜಿಹ್ವಾಪದ'ಗಳೆಂದು ಕರೆದಿರುವ ಈ ನಿದರ್ಶನಗಳನ್ನು ಪರಿಶೀಲಿಸಿದರೆ, ಇವು ನಿರ್ಮೂರ್ಧನ್ಯದ ನಿದರ್ಶನಗಳಾಗಿರುವುದು ತಿಳಿಯುತ್ತದೆ. 'ಅಚಲಜಿಹ್ವಾಪದ' ಎಂದರೆ ''ನಾಲಗೆ ಅಲುಗದಂತೆ ಉಚ್ಚಾರಮಾಡಬೇಕಾದ ಅಕ್ಷರಗಳಿಂದ ಕಟ್ಟಿದ ಪದ್ಯ'' ಎಂದು ಅರ್ಥವಾಗುವಂತೆ ತೋರುತ್ತದೆ. ನಾಲಗೆಯನ್ನೇ ಆಡಿಸದೆ ಯಾವ ಅಕ್ಷರವನ್ನೂ ಉಚ್ಚರಿಸಲು ಸಾಧ್ಯವಿಲ್ಲವಾದ್ದರಿಂದ, ಈ ಮಾತಿಗೆ ಬೇರೇನಾದರೂ ಅರ್ಥವಿರಬಹುದೇ ಎನ್ನುವುದು ಚಿಂತನೀಯ. ಇಂತಹ ರಚನೆಗಳನ್ನು ಷಡಕ್ಷರಿ, ಇಮ್ಮಡಿ ಮುರಿಗಾ ಗುರುಸಿದ್ಧರ ಕೃತಿಗಳಲ್ಲಿ ಕಾಣಬಹುದಾಗಿದೆ.[2]

ಷಡಕ್ಷರಿಯ 'ವೃಷಭೇಂದ್ರವಿಜಯ'ದಲ್ಲಿ

ಶಿವಮಯಕಾಯ ಭವ್ಯಮಹಿಮಾಂಗ ವಿಮಾಯ ಯಮೀಶಗಮ್ಯ ಶಾಂ
ಭವ ಸುಗಮಾಸಮಾಗಮಕುಶೇಶಯಹಂಸ ಖಗೇಶವಾಹವಾ
ಸವಮುಖಭಾವ್ಯ ವಿಶ್ವವಿಭು ಭಾವಭವಾಪಹ ಸಾಹಸಾಂಕ ಶಂ
ಭು ವಶಗಭಾವ ಪಾಹಿ ಬಸವೇಶ ಶುಭಾವಹವಾಕ್ಯವೈಭವಾ ॥ (೪೨-೬೦)

ಈ ಪದ್ಯದ ಆಶಯ : ''ಶಿವಮಯಶರೀರವುಳ್ಳವನೆ, ಅತಿಶಯಮಹಿಮಾನ್ವಿತನೆ, ಮಾಯಾವಿರಹಿತನೆ,ಯತಿಶ್ರೇಷ್ಠರಿಗೆ ನೆಲೆಯೆ, ಶಾಂಭವ,(?), ವಿಷ್ಣು ಇಂದ್ರ ಮೊದಲಾದವರ ಮನ್ನಣೆಗೆ ಪಾತ್ರನಾದವನೆ, ಲೋಕಸ್ವಾಮಿಯಾದವನೆ, ಮದನಾರಿಯೆ, ಸಾಹಸಲಕ್ಷಣನೆ, ಶಂಭು, ವಿಧೇಯರ ಸತ್ಯಸ್ವರೂಪನೆ, ಶುಭಪ್ರದವಾದ ವಾಕ್ಯಗಳಿಂದ ವಿಭವಾನ್ವಿತನೆ, ಬಸವೇಶ್ವರನೆ ರಕ್ಷಿಸು.''

ಈ ವೃತ್ತದಲ್ಲಿ ಸ್ವರವ್ಯಂಜನ ಸೇರಿದಂತೆ ಮೂರ್ಧನ್ಯವರ್ಣಗಳಾವುವೂ ಉಪಯೋಗವಾಗಿಲ್ಲ.

ಸಿತಕರಶತಕರಹುತವಹ । ನುತನಯನತ್ರಯವಿರಾಜಿತಾನನ ಸುಮನ ।
ಸ್ತುತಿನುತಸದಮಳಪದತಳ । ಶತದಳ ಸೋಮೇಶಲಿಂಗ ಜಯ ಭವಭಂಗಾ ॥ (೪೨-೬೧)

ಇದರ ಆಶಯ : ''ಸೂರ್ಯಾಗ್ನಿಚಂದ್ರರನ್ನು ತನ್ನ ಅತಿಶಯದ ಮೂರು ಕಣ್ಣುಗಳನ್ನಾಗಿ ಉಳ್ಳವನೂ ದೇವತೆಗಳ ಸ್ತುತಿಯಿಂದ ಖ್ಯಾತವಾದ ಪವಿತ್ರಪಾದಕಮಲಗಳನ್ನುಳ್ಳವನೂ ಆದ, ಜನ್ಮನಿರ್ಮೂಲನಕರನಾದ ಸೋಮೇಶಲಿಂಗವೇ ನಿನಗೆ ಜಯವಾಗಲಿ.''

ಇಲ್ಲಿಯೂ ಮೂರ್ಧನ್ಯವರ್ಣಗಳಾವುವೂ ಉಪಯೋಗವಾಗಿಲ್ಲ; ಟ ವರ್ಗದ ವರ್ಣಗಳನ್ನು ಮಾತ್ರವೇ ಕವಿ ಮೂರ್ಧನ್ಯಗಳೆಂದು ಭಾವಿಸಿದಂತಿದೆ. ಸಾಂಪ್ರದಾಯಿಕ ಮತದಲ್ಲಿ ''ರೇಫೆ ಮೂರ್ಧನ್ಯಂ'' ಎಂದಿರುವುದನ್ನು ನಾವು ಒಪ್ಪದೆ ತಳ್ಳಿಹಾಕಬಹುದಾದರೂ, ಳ ಕಾರ ಮೂರ್ಧನ್ಯವೇ. ಮೇಲಿನ ಪದ್ಯದಲ್ಲಿ, ೩–೪ನೆಯ ಪಾದಗಳಲ್ಲಿ ಳ ಕಾರವನ್ನು ನಿಷೇಧಿಸಿಲ್ಲವಾದ್ದರಿಂದ, ಕವಿ ಟ ವರ್ಗವನ್ನಷ್ಟೇ ನಿಷೇಧಿಸುವ ಅಕ್ಷರಗಳೆಂದು ಭಾವಿಸಿರಬೇಕು ಎಂದು ಊಹಿಸಬಹುದಾಗಿದೆ. ಪದ್ಯಕ್ಕೆ ಪಾಠಭೇದಗಳೂ ಇವೆ. ೪೨–೬೦ರಲ್ಲಿ ರೇಫವಾಗಲಿ ಷ ಕಾರ ಳ ಕಾರಗಳಾಗಲಿ, ಸ್ವರ ಋಋೂ ಕಾರಗಳಾಗಲಿ ಬಂದಿಲ್ಲ ಎನ್ನುವುದನ್ನು ಗಮನಿಸಬಹುದು.

ಇಮ್ಮಡಿ ಮುರಿಗಾ ಗುರುಸಿದ್ಧನ 'ಶಿವಲಿಂಗಷಟ್ಪದಿ'ಯಲ್ಲಿ :

ಭೂಮಿ ಕುಶ ಪಾವಕಾ[ಕಾಶ] ಯಜ್ವಾಬ್ಜಸಖ
ಸೋಮಜವಿಕಾಯ ಕಾಯಜವಿಜಯ ವಾಮಾಂಗ
ವಾಮವಾಸವಭವಾ ಜೀಯ ಹಯವಾಹಸಖ ಸಾಹಸಾಂಕ ಗುಹಾಶಯಾ

ಸಾಮಗೇಯ ವಿಮಾಯ ಗಾಂಗೇಯಮೋಹಭವ
ಭೀಮಶಿಖಿಬೀಜ ಭೀಮಾಪಹ ಮಹಾವಿಭವ
ಸೀಮ ಹೇಮನಗಚಾಪಾಘ ಜಿಹ್ವಗ ಖಗಪ ಪಾಹಿ ಮಾಂ ಶಿವಲಿಂಗೇಶ್ವರಾ ॥ (ಪ. ೮೮)

ಇದರ ಆಶಯ : ''ಪೃಥಿವಿ ಜಲ ತೇಜಸ್ಸು ಆಕಾಶ ಯಜಮಾನ ಸೂರ್ಯ ಚಂದ್ರ ವಾಯು ಎಂಬುವನ್ನು ಶರೀರವಾಗಿ ಉಳ್ಳವನೆ, ಮನ್ಮಥನನ್ನು ಗೆದ್ದವನೆ, ದೇಹದ ಎಡಭಾಗದಲ್ಲಿ ಪಾರ್ವತಿಯನ್ನು ಒಳಕೊಂಡವನೆ, ಭವವಿಲ್ಲದವನೆ, ಸ್ವಾಮಿಯೆ, ಕುಬೇರನ ಕೆಳೆಯನೆ, ಸಾಹಸಲಕ್ಷಣನೆ, ಗುಹಾವಾಸಿಯೆ, ಸಾಮಗಾನಪ್ರಿಯನೆ, ಮಾಯಾವಿರಹಿತನೆ, ಕುಮಾರಸ್ವಾಮಿಯನ್ನು ಮಗನಾಗಿ ಪಡೆದವನೆ, ಮಹೋಗ್ರ ಅಗ್ನಿಸ್ವರೂಪನೆ, ಉಗ್ರತೆಯನ್ನು ನಿವಾರಿಸುವವನೆ, ವೈಭವೋನ್ನತನೆ, ಮೇರುನಗವೇ ಧನುಸ್ಸಾದವನೆ, (?), ಶಿವಲಿಂಗೇಶ್ವರನೆ ನನ್ನನ್ನು ಕಾಪಾಡು.''

ಇದರಲ್ಲಿ ಮೂರ್ಧನ್ಯಗಳಾದ ಟ ವರ್ಗದ ಅಕ್ಷರಗಳಾಗಲಿ, ಷ ಕಾರ ಳ ಕಾರಗಳಾಗಲಿ ಉಪಯೋಗವಾಗಿಲ್ಲ; ಋೠಕಾರಗಳೆಂಬ ಮೂರ್ಧನ್ಯ ಸ್ವರಗಳೂ ಉಪಯೋಗವಾಗಿಲ್ಲ. ಮಾತೃಕೆಯಲ್ಲಿ 'ಅಚಲಜಿಹ್ವಾಪದ' ಎಂದಿದೆ.

ಇದೇ ಕವಿಯ 'ಪಂಚಾಶಿಕೆ'ಯಲ್ಲಿ :

ಶಿವ ಮಹೇಶ ಶಶಾಂಕ ಭಾವಕ
ಭವಕುಶೇಶಯಶಿಶಿ ಶಿವಾವಯ
ವ ವಶಗಾಂಬಕ ಭಾಪು ಭಾವಜಕುಂಜಕುಂಭೀಶ
ಜವಗ ಭೂಮಿ ಪಯೋಬ್ದಯಜ್ವ
ಚ್ಛವಿಪ ಪಾವಕ ಖಾಂಗ ಜಯ ಶಾಂ
ಭವ ಯಮೀಶ ಯಶೋಂಬುಮುಕ್ಚ್ಯಯ ಶಂಬಶಯ ಶಂಭು ॥ (೧೩-೪೩)

ಇದರ ಆಶಯ : ''ಶಿವ, ಮಹೇಶ್ವರ, ಚಂದ್ರ, ಮನ್ಮಥನೆಂಬ ತಾವರೆಯನ್ನು ಮುದುಡಿಸಿದ ಚಂದ್ರ, ಪಾರ್ವತಿಯನ್ನು ದೇಹಾರ್ಧದಲ್ಲಿ ಧರಿಸಿದವನೆ, ಅಗ್ನಿನೇತ್ರನೆ, ಭಾಪು, ಮನ್ಮಥನೆಂಬ ತಾವರೆಯನ್ನು ಮುರಿದಿಕ್ಕುವ ಗಜಶ್ರೇಷ್ಠನೆ, ವಾಯು ಭೂಮಿ ಜಲ ಗಗನ ಯಜಮಾನ ಚಂದ್ರ ಅಗ್ನಿ ಸೂರ್ಯ ಎಂಬ ಅಷ್ಟಮೂರ್ತಿಸ್ವರೂಪನೆ, ಶಾಂಭವ, ಯತಿಪತಿ, ಕೀರ್ತಿಯ ಮೇಘಸಮೂಹ, ಸುಖಶಯನ, ಶಂಭು.''

ಇಲ್ಲ ಮೂರ್ಧನ್ಯ ವರ್ಣಗಳಾದ ಟವರ್ಗ, ಷಕಾರ ಳಕಾರಗಳು, ಸ್ವರ ಋ ೠಕಾರಗಳು ಇವುಗಳಲ್ಲಿ ಯಾವುದನ್ನೂ ಉಪಯೋಗಿಸದೆ ಪದ್ಯ ರಚನೆ ಮಾಡಿದೆ. ಮಾತೃಕೆಯಲ್ಲಿ 'ಅಚಲಜಿಹ್ವಾಪದ' ಎಂದಿರುವುದು ಇಲ್ಲಿಯೂ ಕಾಣುತ್ತದೆ.

'ಗಯೋಪಾಖ್ಯಾನ' ಎಂಬ ಒಂದು ಗ್ರಂಥದೊಳಗಿನ ಲಕ್ಷ್ಯ :

ಭೂಮಿಪ ವಿಹಂಗವಾಹ ಮ । ಹಾಮಹಿಮಾ ಭವಭಯಾಪಹಾ ಭಾವಭವಾ ।
ಭಾವೋಹಾಪಹ ಬಹುವಿಭ । ವಾಮಾಗೇಹಾಂಗ ಪಾಹಿ ಪಾಪಾಗಪವೀ ॥
('ಕರ್ಣಾಟಕ ಛಂದೋಲಂಕಾರ ಸಾಹಿತ್ಯಲಕ್ಷಣ ಸಂಗ್ರಹವು', ಪು. ೪೭ರಲ್ಲಿ ಉದ್ಧೃತ.)

ಸಂದರ್ಭ ವಿಶದವಿಲ್ಲವಾದ್ದರಿಂದ, ಆಶಯವನ್ನು ವಿವರಿಸಿಲ್ಲ. ಈ ಪದ್ಯದಲ್ಲಿ ಎಲ್ಲಿಯೂ ಮೂರ್ಧನ್ಯವರ್ಣಗಳನ್ನು ಬಳಸಿಲ್ಲ. ಲಕ್ಷಣಗ್ರಂಥಕರ್ತೃ ಇದನ್ನು 'ಅಚಲಜಿಹ್ವೆ' ಎಂದಿದ್ದಾರೆ.

ನಿರೋಷ್ಠ್ಯ

ಚಂದ್ರರಾಜನ 'ಮದನತಿಲಕ' ದಲ್ಲಿ :

ಖರಕಿರಣನ ತನಯನ ಖರ । ಕಿರಣನ ದಶರಥನ ನಳನ ಜಲಜಜನ ಧರಾ ।
ವರನ ಶಶಧರನ ಶಕ್ರನ । ಚರಿತೆಯೆ ನಿಜಚರಿತವೆನಿಸಿದಾತನನೊಲ್ದಂ ॥ (೬-೧೩)

ಇದರ ಆಶಯ : ''ಸೂರ್ಯಪುತ್ರನ (ಕರ್ಣನ), ಸೂರ್ಯನ, ದಶರಥನ, ನಳನ, ಬ್ರಹ್ಮನ, ವಿಷ್ಣುವಿನ, ಚಂದ್ರನ ಇಂದ್ರನ ಚರಿತೆಯೇ ತನ್ನ ಚರಿತೆಯೆನಿಸಿದಾತನನ್ನು ಒಲಿಯುವಳು.''

ಲಭ್ಯ ಹಸ್ತಪ್ರತಿಗಳಲ್ಲಿ (ಕ. ಗ) ಈ ಪದ್ಯಪಾಠ ಛಂದಸ್ಸಿನ ದೃಷ್ಟಿಯಿಂದ ದೋಷಯುಕ್ತವಾಗಿರುವುದಲ್ಲದೆ, ೪ ನೆಯ ಪಾದದಲ್ಲಿ ಪಾದಾಂತರ್ಗತವಾಗಿಯೇ ಓಷ್ಠ್ಯವರ್ಣವೊಂದು ('ಮ') ಸೇರಿಕೊಂಡು ನಿಯಮೋಲ್ಲಂಘನವಾಗಿರುವುದೂ ಕಾಣುತ್ತದೆ. ಆದ್ದರಿಂದ ಕವಿಚರಿತೆಕಾರರು ಕೊಟ್ಟಿರುವ ಪಾಠವನ್ನೇ ಇಲ್ಲಿ ಅಂಗೀಕರಿಸಿದೆ. ಇದು ಸಮರ್ಥನೀಯವೂ ಆಗಿದೆ.

ಮಾತೃಕೆಯಲ್ಲಿಯೇ 'ನಿರೋಷ್ಠ್ಯಕಂದ' ವೆಂದಿದೆ. ಇಲ್ಲಿ ಸ್ವರ ವ್ಯಂಜನಗಳು ಸಹವಾಗಿ ಯಾವ ಓಷ್ಠ್ಯವರ್ಣವೂ ಬಳಕೆಯಾಗಿಲ್ಲ. ಪಾದಾಂತದ 'ಮ್' ಓಷ್ಠ್ಯವೇ ಆದರೂ, ಅದು ಪಾದಾಂತದಲ್ಲಿ ಬಂದಿರುವುದರಿಂದಲೂ, ಅನುಸ್ವಾರ ರೂಪದಲ್ಲಿರುವುದರಿಂದಲೂ ದೋಷವಿಲ್ಲವೆಂದು ತಿಳಿಯಬಹುದು. ಪ್ರಸ್ತುತ ನಿದರ್ಶನ ಒಂದು 'ಜತ್ತಿರಟ್ಟೆ' ವೂ ಆಗುವುದೆಂಬ ಸೂಚನೆಯಿದೆ. ಇದನ್ನು ಮುಂದೆ ಪರಿಶೀಲಿಸಬಹುದು.

'ಕಂತಿ ಪಂಪನ ಸಮಸ್ಯೆಗಳು' ಕೃತಿಯಲ್ಲಿ :

ಈ ಕೃತಿ ಮುಖ್ಯವಾಗಿ ಸಮಸ್ಯಾಪದ್ಯಗಳ ಕೃತಿ. ಆದರೆ ವಿರಳವಾಗಿ ಬೇರೆ ಚಿತ್ರಭೇದಗಳೂ ಇದರಲ್ಲಿ ಕಂಡುಬಂದಿದ್ದು, ಅವುಗಳಲ್ಲಿ ನಿರೋಷ್ಠ್ಯವೂ ಒಂದು. ಅಭಿನವಪಂಪನು ಕಂತಿಯನ್ನು ಉದ್ದೇಶಿಸಿ ಹೀಗೆ ಪ್ರಶ್ನಿಸಿದನಂತೆ :

ಎಲೆ ಕಂತಿ ನೀನು ಕುಣಿಯುವೆ। ಕಲೆಯೊಳು ನಾಂ ಚದುರೆಯೆಂದು ಲೀಲೆಯೊಳಿಂತುಂ।
ನೆಲೆಯಾಗಿ ಬಲ್ಲೆಯಾದೊಡೆ। ಸಲೆ ಪೇಳು ನಿರೋಷ್ಠ್ಯಮಪ್ಪ ಕಂದಮನೊಂದಂ ॥ (ಪ. ೪೪)

ಇದಕ್ಕೆ ಕಂತಿ ಹೀಗೆ ಉತ್ತರಿಸಿದಳಂತೆ :

ಸುರ ನರ ನಾಗಾಧೀಶ್ವರ। ಹೀರಕಿರೀಟಾಗ್ರಲಗ್ನ ಚರಣಸರೋಜಾ।
ಧೀರೋದಾರಚರಿತ್ರೋ। ತ್ಸಾರಿತಕಲುಷೌಘ ರಕ್ಷಿಸೆನ್ನನ್ನರುಹಾ ॥ (ಪ. ೪೫)

ಇದರ ಆಶಯ : ''ದೇವತೆಗಳು ಮಾನವರು ಹಾಗೂ ನಾಗರುಗಳ ಅಧೀಶ್ವರರ ವಜ್ರಕಿರೀಟಗಳ ತುದಿ ತಾಕಿದಂತಹ ಪಾದಕಮಲಗಳನ್ನುಳ್ಳವನೇ, ಧೀರವೂ ಉದಾರವೂ ಆದ ಚರಿತ್ರೆಯಿಂದ ಪಾಪಗಳ ಸಮೂಹವನ್ನು ತೊಲಗಿಸಿದವನೆ, ಅರ್ಹಂತನೇ ನನ್ನನ್ನು ರಕ್ಷಿಸು.''

ಇಲ್ಲಿ ಓಷ್ಠ್ಯವರ್ಣಗಳಲ್ಲಿ ಪವರ್ಗದ ಯಾವ ಅಕ್ಷರವನ್ನೂ ಉಪಯೋಗಿಸಿಲ್ಲ. ಆದರೆ ಓಷ್ಠ್ಯಸ್ವರಗಳ ವಿಷಯದಲ್ಲಿ ನಿಷೇಧವೇನೂ ಇಲ್ಲ. ಭಾಷೆ ಛಂದಸ್ಸುಗಳ ದೃಷ್ಟಿಯಿಂದ ಪದ್ಯ ನಿರ್ದುಷ್ಟವೆಂದು ಹೇಳಲಾಗದು. ಅಲ್ಲದೆ ಈ ಕೃತಿ ೧೧–೧೨ನೆಯ ಶತಮಾನದ ರಚನೆ ಎನ್ನುವ ವಿಷಯದಲ್ಲಿ ಬಲವಾದ ಸಂದೇಹವಿದ್ದೇ ಇದೆ.

ಚೌಂಡರಸನ 'ಅಭಿನವ ದಶಕುಮಾರಚರಿತೆ'ಯಲ್ಲಿ :

ಚೌಂಡರಸನ (ಸು. ೧೩೦೦) 'ಅಭಿನವ ದಶಕುಮಾರಚರಿತೆ'ಯಲ್ಲಿ ನಿರೋಷ್ಠ್ಯದ ಒಂದು ದೊಡ್ಡ ಗಣಿಯಿದೆ. ಈ ಕಾವ್ಯದ ೧೩ನೆಯ 'ಮಂತ್ರಗುಪ್ತ ನಿರೋಷ್ಠ ಕಥಾವೃತ್ತಾಂತ'ವೆಂಬ ಆಶ್ವಾಸ ಬಲುಮಟ್ಟಿಗೆ ಪೂರ್ತಿಯಾಗಿಯೇ (೧೩.೩–೬೩) ನಿರೋಷ್ಠ್ಯದ ಗದ್ಯಪದ್ಯಗಳಿಂದ ತುಂಬಿಹೋಗಿದೆ. ಆಶ್ವಾಸಾರಂಭದ ಕಥಾಭಾಗದಲ್ಲಿಯೇ ಮಂತ್ರಗುಪ್ತನೆಂಬ ಹತ್ತುಮಂದಿ ರಾಜಕುಮಾರರಲ್ಲಿ ಒಬ್ಬನಾದ ರಾಜಕುಮಾರನು ಅಣ್ಣ ರಾಜವಾಹನನ ಪ್ರಶ್ನೆಯ ಮೇರೆಗೆ ತನ್ನ ಭಾಗದ ಕಥೆಯನ್ನು ನಿರೂಪಿಸುವಾಗ ಏಕೆ ನಿರೋಷ್ಠ್ಯವಾಗಿಯೇ ತನ್ನ ಕಥೆಯನ್ನು ನಿರೂಪಿಸಬೇಕಾಗುತ್ತದೆ ಎನ್ನುವುದನ್ನು ಹೀಗೆ ಸ್ಪಷ್ಟಪಡಿಸಿದನೆಂದು ಚೌಂಡರಸ ನಿವೇದಿಸಿದ್ದಾನೆ:

ತನ್ನಧರಂ ಮನೋರಮೆಯ ದಂತಪರಿಕ್ಷತದಿಂ ಪಿಸುಳ್ದು ರ
ಕ್ತಂ ನೆಲೆಗಟ್ಟಿರಲ್ಕೆ ತುಟಿ ಮುಟ್ಟದೆ ಕೂರ್ತು ಕಥಾಪ್ರಪಂಚಮಂ
ಬಿನ್ನವಿಸಲ್ಕೆವೇಟ್ಟುದೆನುತುಂ ಸುಭಗಂ ಸುಖಿ ಮಂತ್ರಗುಪ್ತನ
ತ್ಯುನ್ನತಬುದ್ಧಿಯಿಂ ಸಹಜಕಾರ್ಯಮನಂದುಸಿರ್ದಂ ನಿರೋಷ್ಠದಿಂ ॥ (೧೩–೨)

ಸುಭಗನೂ ಸುಖಿಯೂ ಆದ ಮಂತ್ರಗುಪ್ತನ ತುಟಿ ಅವನ ಪ್ರಿಯೆಯ ದಂತಕ್ಷತದಿಂದಾಗಿ ಹಿಸಿದುಹೋಗಿ ರಕ್ತ ಹೆಪ್ಪುಗಟ್ಟಿತಂತೆ; ಆದ ಕಾರಣ ತಾನು ತನ್ನ ಅನುಭವದ ಕಥಾಪ್ರಪಂಚವನ್ನು ವಿಜ್ಞಾಪಿಸಬೇಕಾದರೆ ತುಟಿ ಸೋಕದ ಹಾಗೆ ಮಾತನಾಡಿ ವಿಜ್ಞಾಪಿಸಬೇಕಂತೆ. ಹೀಗೆ ತನ್ನ ಸಂಕಲ್ಪವನ್ನು ತಿಳಿಸಿ, ಅತಿಶಯವಾದ ಬುದ್ಧಿವಂತಿಕೆಯಿಂದ ಸಹಜ ಕಾರ್ಯವನ್ನು ಮುಂದೆ ನಿರೂಪಿಸಿದನೆಂದು ಕವಿ ತಿಳಿಸಿದ್ದಾನೆ. ಆದರೆ ಹಿಸಿದುಹೋದ ತುಟಿಯಿಂದ ಈಗ ತೋರುವಂತೆ ಓಷ್ಠ್ಯವರ್ಣಗಳಿಂದ ಕೂಡಿದ ತನ್ನ ಸಂಕಲ್ಪವನ್ನಾದರೂ ತಿಳಿಸಲು ಅವನಿಗೆ ಹೇಗೆ ಸಾಧ್ಯವಾಯಿತು? ಈ ಭಾಗ ಕವಿಯ ಮಾತಿನಲ್ಲಿಯೇ ನಿರೂಪಿತವಾಗಿದ್ದರೆ ಈ ಆಭಾಸ ತಪ್ಪುತ್ತಿತ್ತು; ಇಲ್ಲವೆ ಬಹುಕಷ್ಟದಿಂದ ಈ ಸಂಕಲ್ಪವನ್ನು ಸ್ವಲ್ಪ ಮಾತಿನಲ್ಲಿ ತಿಳಿಸಿ, ಬಳಿಕ ನಿರೋಷ್ಠ್ಯದಲ್ಲಿ ತನ್ನ ಕಥೆಯನ್ನು ವಿವರವಾಗಿ ಬಿತ್ತರಿಸಿದನೆಂದು ನಾವು ತಿಳಿಯಬೇಕು.

ಚಾಂಡರಸನ ಕಾವ್ಯದಲ್ಲಿ ೬೧ ಕಂದವೃತ್ತಗಳೂ ೪೮ ಲಘು ಪ್ರಮಾಣದ ಗದ್ಯವಾಕ್ಯಗಳೂ ಸಮಗ್ರವಾಗಿ ನಿರೋಷ್ಠ್ಯವರ್ಣಗಳಿಂದಲೇ ಕಟ್ಟಿದುವಾಗಿವೆ. ಇಷ್ಟು ವ್ಯಾಪಕ ಪ್ರಮಾಣದಲ್ಲಿ ಈ ರಚನೆಯನ್ನು ನಿರ್ವಹಿಸಿರುವುದು ಒಂದು ಸಾಹಸವೇ ಆಗಿದೆ. ಈ ಸಾಹಸಕ್ಕೆ ಸ್ಫೂರ್ತಿಯನ್ನು ನೀಡಿದವನು ದಂಡಿಕವಿಯೇ. ಚಾಂಡರಸನ 'ಅಭಿನವದಶಕುಮಾರಚರಿತೆ'ಗೆ ಮೂಲಗ್ರಂಥ ದಂಡಿಯ 'ದಶಕುಮಾರಚರಿತ'ವೇ ಆದುದರಿಂದ, ಅಲ್ಲಿ ಇದೇ ಕೃತಿಭಾಗ ನಿರೋಷ್ಠ್ಯ ರಚನೆಯಾಗಿರುವುದರಿಂದ, ಸಹಜವಾಗಿಯೇ ಕನ್ನಡ ಭಾಷೆಯಲ್ಲಿಯೂ ಈ ಸಾಹಸವನ್ನು ಕೈಕೊಳ್ಳುವುದು ಈ ಕವಿಗೆ ಅನಿವಾರ್ಯವೇ ಆಯಿತು. ಕಥಾಭಾಗದಲ್ಲಿ ಇದನ್ನು ನಿವಾರಿಸುವಂತಿರಲಿಲ್ಲ; ನಿರ್ವಹಿಸಲೇಬೇಕಾಯಿತು. ಧೈರ್ಯಮಾಡಿ ಬಲುಮಟ್ಟಿಗೆ ಯಶಸ್ವಿಯೂ ಆದನು.

ಮೇಲೆ ಉದಾಹರಿಸಿರುವ ಪದ್ಯ 'ದಶಕುಮಾರಚರಿತೆ'ಯೊಳಗಿನ ಈಗಾಗಲೇ ಉದ್ಧರಿಸಿರುವ ''ಸ ಕಿಲ ಕರಕಮಲೇನ ಕಿಞ್ಚಿತ್‌ಸಂವೃತಾನನೋ ಲಲಿತವಲ್ಲಭಾರಭಸದತ್ತದನ್ತಕ್ಷತವ್ಯಸನವಿಹ್ವಲಾಧರಮಣಿರ್ನಿರೋಷ್ಠ್ಯವರ್ಣಮಾತ್ಮಚರಿತಮಾಚಚಕ್ಷೆ'' ಎಂಬ ಗದ್ಯಭಾಗದ ಸರಳಾನುವಾದವೇ ಆಗಿದೆ. ಚಾಂಡರಸನ ನಿರೋಷ್ಠ್ಯ ರಚನೆಯನ್ನು ಸಮಗ್ರವಾಗಿ ಇಲ್ಲಿ ಉದ್ಧರಿಸುವುದು ಸಾಧ್ಯವಾಗದು. ಅದರ ವೈಚಿತ್ರ್ಯವನ್ನೂ ವೈಶಿಷ್ಟ್ಯವನ್ನೂ ಆತನ ಆ ಕಾವ್ಯಾಭಾಗವನ್ನು ನೇರವಾಗಿಯೇ ಓದಿ ತಿಳಿಯಬಹುದಾಗಿದೆ. ಇಲ್ಲಿ, ಈಗಾಗಲೇ ಉದ್ಧರಿಸಿರುವ ಸಂಸ್ಕೃತ 'ದಶಕುಮಾರಚರಿತ'ದ ಉದ್ಧೃತಭಾಗದಷ್ಟು ಕನ್ನಡಾನುವಾದವನ್ನು ಮಾತ್ರ ಎತ್ತಿ ಬರೆಯಬಹುದಾಗಿದೆ.

ಧರಣೀನಾಯಕ ಕೇಳ್ ನಿಜಾಂಘ್ರಿಸರಸೀಜಾತಂಗಳಿಂ ಕಾಣಲಾ
ದರದಿಂ ಸಾಗರಚೇಲಧಾರಿಣಿಯನೆಲ್ಲಾ ಚೆಂದದಿ ಸಂತತಂ
ತಿರುಗಿ ಶ್ರೀಗೆ ನಿರಂತರಂ ನೆಲೆಯೆನಲ್ ಸಾರ್ದಿರ್ದ ಸಲ್ಲಕ್ಷಣಂ
ಸ್ಥಿರದಿಂದಿರ್ದ ಕಳಿಂಗದೇಶದೆಡೆಯಂ ಸಾರ್ದೆಂ ಸದಾನಂದದಿಂ ॥೩॥

ಅಂತು ಕಳಿಂಗದೇಶಮ(ವ?)ನೆಯ್ದಿ

ಧರಣಿಯ ಕಂಠದೆಕ್ಕಸರದಂದದಿನಗ್ಗಳದಿಂ ನೆಗಟ್ಟಿ ಯಿಂ
ದಿರೆಯ ನಿಜಾನನಕ್ಕಡರ್ದ ರತ್ನದ ಕನ್ನಡಿಯಂದದಿಂ ನಿರಂ
ತರ ನಯಕಾಂತಿಯಂ ತಳೆದ ಸಜ್ಜನಸಂತತಿಯಿಂದೆ ಕೀರ್ತಿಯಂ
ಧರಿಸಿದ ತತ್ಕಳಿಂಗನಗರಾವತಿಯಂ ಸಲೆ ಕಂಡೆನುರ್ವಿಪಾ ॥೪॥

ಅಂತಾ ಕಳಿಂಗನಗರಿಯಂ ಕಂಡಾಕ್ಷಣದಿಂ

ಸಂತತ ರಥಾಂಗತತಿಗತಿ । ಚಿಂತಾಕೃತಿ ನೆಲಸೆ ಧರೆಗೆ ನಿದ್ರಾಲಸ್ಯಂ ।
ತಿಂತಿಣಿಯಿನಾಗೆ ಸರಸಿಜ । ಕಾಂತಂ ತಾನಸ್ತಗಿರಿಗೆ ನೆಟ್ಟನೆ ಸಾರ್ದಂ ॥೫॥

ಅಂತಸ್ತಗಿರಿಯನೆಯ್ದಲ್ಕಾ ಕಳಿಂಗನಗರಿಯಂತಿಕಶಾಖೆಗಳಲ್ಲಿ ಕಣ್ಗೆಯ್ಯಲೆಂದಿರ್ದ ಕಿನ್ನರ ಜಾಯಾಕಾಂತರ

ಇನಿತಾಯಾಸಂಗೆಯ್ಯಲ್ । ತನಗೇತಱ ಸಿದ್ಧಿ ತಾನದೆಲ್ಲಿಯ ಸಿದ್ಧಂ ।
ಸನಯಂ ತಾನಲ್ತೆನಿಸಿದ । ದನಿ ಕರ್ಣಕ್ಕೆಯ್ದಲದಱ ಸರಿಸಕೆ ನಡೆದೆಂ ॥೬॥

ಆ ದನಿಯ ಪಿಂ(ಹಿಂ?)ದನೆ ನಡೆಯೆ

ಹರಯದ ಜಾಯಾಕಾಂತರ್ । ತರದಿಂ ಕಿನ್ನರಶರೀರಿಗಳ್ ಸಡಗರದಿಂ ।
ದಿರದೆಯ್ದಿದರಾ ಕ್ಷಣದಿಂ । ಹರಧರಣಿಗೆ ಕಂಜನಾನದಂ ಧರಣೀಶಾ ॥೭॥

ಅಂತಾ ಕಿನ್ನರ ಜಾಯಾಕಾಂತರ್ ಚಿತಾಗ್ನಿಸ್ಥಾನಕ್ಕೆಯ್ದಲೊಡಂ

ಜಡೆ ಚಂಚತ್ಕಂಥೆ ರಕ್ತಾಂಕಿತನಿಖಿಳಶರೀರಂ ಸಸಿದ್ಧಾರ್ಥಹಸ್ತಂ
ಕಿಡಿಗಣ್ ಕಾರ್ಯಾರ್ಥಚಿತ್ತಂ ನರನಿಕರಲಸಜ್ಜಾಂಗಲಸ್ಥಾಲಿ ಲೆಕ್ಕಂ
ಗಡಿಗೆಟ್ಟಿರ್ದಿಂಧನಂ ತನ್ನಿದಿರ್ಗತಿಶಯದಿಂದಿರ್ದ ಕಿರ್ಚೆಯ್ದಿ ಚೆನ್ನಿಂ
ಗೆಡೆಯಾಗಲ್ಕಿರ್ದನಂದಗ್ಗಳದ ಯತಿಗಣಶ್ರೇಷ್ಠನಾಗಳ್ ಯಥೇಷ್ಟಂ ॥೮॥

ಏತಜಿದಜೀಯೆಂ ಘನಶಾ । ಖಾತತಿಯಿಂದಲರ್ಗಳೇಟ್ಗಿಯಿಂದೆಸೆದಿರ್ದ ।
ತ್ತಾತನ ಕೆಲದಲ್ಲಿ ದಳ । ಪ್ರಾತಂ ತಳ್ತಿರ್ದ ಶಾಖೆ ದೆಸೆಗಡರ್ದನಿಶಂ ॥೯॥

ಅಂತಾ ಹರಧರಣಿಯ ಶಾಖೆಯಲ್ಲಿರ್ದ ಯತಿಶ್ರೇಷ್ಠಂ ಕಿನ್ನರ ಜಾಯಾಕಾಂತರಂ ನಿರೀಕ್ಷಿಸಿಂತೆಂದಂ

ಸರಸಿಜನೇತ್ರೆಯುಂ ಘನಚಳಾಳಕಿಯುಂ ಕಳಕಂಠನಾದೆಯುಂ
ತರಳಕಟಾಕ್ಷೆಯುಂ ಕನಕಕಾಂತಿಶರೀರೆಯನಿಲ್ಲಿಗೆಯ್ದಿಸಾ
ದರದೆ ಕಳಿಂಗಕನ್ಯಕೆಯನೆಂದೆನೆ ಸಾಹಸದಲ್ಲಿ ಸಂದ ಕಿ
ನ್ನರನಿರದೆಯ್ದಿ ತತ್ಸತಿಯನಾ ಯತಿಯಾಜ್ಞೆಗೆ ತಂದನಾಕ್ಷಣಂ ॥೧೦॥

ಕಥಾವೃತ್ತಾಂತದ ಆರಂಭದ ಕೆಲಭಾಗವನ್ನು ಪ್ರಾತಿನಿಧಿಕವಾಗಿ ಮೇಲೆ ಉದ್ಧರಿಸಿದೆ. ಮೂಲ ಮತ್ತು ಅನುವಾದಗಳ ಪರಸ್ಪರವಾದ ತುಲನೆಯ ಮೂಲಕ, ಅನುವಾದಕರ್ತನ ಸಾಧನೆ ದೌರ್ಬಲ್ಯಗಳನ್ನು ಗುರುತಿಸುವುದು ಪ್ರಸ್ತುತಕ್ಕೆ ಅನಾವಶ್ಯಕ. ಸಾಮಾನ್ಯವಾಗಿ ಹೇಳುವುದಾದರೆ, ದಂಡಿಯ ಕೃತಿಯಲ್ಲಿಯ ಪದಲಾಲಿತ್ಯ, ಧಾರಾ ವಾಹಿಯಾದ ಶೈಲಿಯ ಲಕ್ಷಣ ಅನುವಾದದಲ್ಲಿಯೂ ಉಂಟು ಎನ್ನಬಹುದು. ರಚನೆ ಅಕೃತಕವಾದ್ದು, ಸರಸವಾದ್ದು ಎಂದು ತೋರುವ ಭಾಗಗಳಿಗೇನೂ ಕೊರತೆಯಿಲ್ಲ. ಈ ದೃಷ್ಟಿಯಿಂದ ಕವಿಶಕ್ತಿ ವಿಸ್ಮಯಜನಕವಾದ್ದು ಎಂದು ಹೇಳಲು ಅಡ್ಡಿಯೇನಿಲ್ಲ. ಆದರೆ ಓಷ್ಠ್ಯವರ್ಣಗಳನ್ನು ಬಿಟ್ಟು ಬರೆಯಬೇಕೆಂಬ ಪೂರ್ವಸಂಕಲ್ಪವೊಂದು ಇರುವುದ ರಿಂದ, ರಚನೆಯಲ್ಲಿ ಉದ್ದೇಶಪೂರ್ವಕವಾದ ಕವಿತ್ವ ರಚನೆಯ ದೃಷ್ಟಿ ಕಾರಣವಾಗಿ ಕೃತಕತೆ ಹರಿಹಾಯದಿರುವುದು ಸಾಧ್ಯವೇ ಇಲ್ಲ. ಎದ್ದು ತೋರುವ ಹಾಗೆ, ರಚನೆಯನ್ನು ಕೃತಕ, ನೀರಸ ಎಂದು ತೆಗಳುವ ಹಾಗೆ ಕವಿ ತಿಣುಕಿರು ವುದೇನೂ ಕಂಡುಬರುವುದಿಲ್ಲ ಎನ್ನುವುದು ಗಮನಾರ್ಹ. ಅಲ್ಲದೆ ಕಥಾರಂಭದಲ್ಲಿಯೇ ನಾವು ಓದಲಿರುವುದು ನಿರೋಷ್ಠ್ಯದ ರಚನೆಯೆಂಬ ಮುನ್ಸೂಚನೆಯಿರುವುದರಿಂದ, ಓದಿಗೆ ಅಸಹಜವಾದ ಒಂದು ಪೂರ್ವಮನಸ್ಕತೆ, ಪೂರ್ವಸಿದ್ಧತೆ ಒದಗುವಂತಾಗಿರುವುದು ಇಲ್ಲಿಯ ಒಂದು ದೌರ್ಬಲ್ಯ. ಆದರೆ ಈ ವಿಷಯದಲ್ಲಿ ದಂಡಿಯನ್ನು ಅನುಸರಿಸಬೇಕಾಗಿರುವ ಚೌಂಡರಸನನ್ನು ನಾವು ಆಕ್ಷೇಪಿಸುವಂತಿಲ್ಲ; ಅವನು ಅನುವಾದಕರ್ತನಾದ್ದರಿಂದ ನಿಸ್ಸಹಾಯಕ. ಈಗ ಕೊಟ್ಟಿರುವಂತಹ ಮುನ್ಸೂಚನೆಯನ್ನೇನೂ ಕೊಟ್ಟಿರದಿದ್ದರೆ, ಕೊಡಬೇಕಾಗಿದ್ದರೂ ವೃತ್ತಾಂತದ ಕೊನೆಗಾದರೂ ಕೊಟ್ಟಿದ್ದರೆ, ಆಗ ಚಿತ್ರಕವಿತ್ವ ರಚನೆಯಲ್ಲಿ ಚೌಂಡರಸನ ಶಕ್ತಿಸಾಮರ್ಥ್ಯಗಳ ಪರೀಕ್ಷೆಗೆ, ನಿರೂಪಣೆಯ ಗುಣಾವಗುಣವಿಮರ್ಶೆಗೆ ಅಂತಃಕರಣ ಪ್ರಮಾಣ ಚೆನ್ನಾಗಿ ಕೆಲಸಮಾಡಲು ಸಾಧ್ಯವಾಗು ತ್ತಿದ್ದಿತು. ಬಿಡಿಯಾದ ಗದ್ಯಪದ್ಯಗಳ ಹಾಗೂ ಒಟ್ಟು ಸಂದರ್ಭದ ಪರಿಣಾಮರಮಣೀಯತೆ ಹೃದ್ಯವಾಗಿದೆ ಎಂದು ಇಂಥ ವಾಚನದಲ್ಲಿ ತೋರಿದಾಗ ಕವಿಶಕ್ತಿಗೆ ಇನ್ನೂ ಹೆಚ್ಚಿನ ಬೆಲೆ ಬರುತ್ತಿದ್ದುದರಲ್ಲಿ ಅನುಮಾನವಿಲ್ಲ. ಈಗ ಅಂಥ ಪರಿಸ್ಥಿತಿ ತಪ್ಪಿದಂತಾಗಿದೆ.

ಈ ಕವಿಯ ನಿರೋಷ್ಠ್ಯ ರಚನೆಯ ಸ್ವರೂಪವನ್ನು ಈಗ ಗಮನಿಸೋಣ. ನಾವು ಗಮನಿಸುವ ಕಾವ್ಯ ಭಾಗದ ೭೧ ಕಂದವೃತ್ತಗಳು ಹಾಗೂ ೮೮ ಲಘುಪ್ರಮಾಣದ ಗದ್ಯವಾಕ್ಯಗಳಲ್ಲಿ, ಪ್ರಾಯಃ ಅನವಧಾನ ಕಾರಣ ವಾದ ಒಂದೆರಡು ಪ್ರಮಾದಗಳನ್ನು ಬಿಟ್ಟರೆ, ಓಷ್ಠ್ಯವರ್ಣಗಳಲ್ಲಿ ಪವರ್ಗದ ಯಾವುದೇ ವ್ಯಂಜನಾಕ್ಷರವಾಗಲಿ ಉ ಊ (ಮತ್ತು ಒ ಓ)ಗಳೆಂಬ ಸ್ವರಗಳಾಗಲಿ ಎಲ್ಲಿಯೂ ಉಪಯೋಗವಾಗದಂತೆ ನೋಡಿಕೊಂಡಿದೆ. ಓಷ್ಠ್ಯ

ಸ್ವರಗಳನ್ನು ಸ್ವತಂತ್ರವಾಗಿಯಾಗಲಿ, ಗುಣಿತಗಳಲ್ಲಾಗಲಿ ಬಳಸಿಲ್ಲ. ಆದರೆ ದಂತೋಷ್ಠ್ಯ 'ವ' ಕಾರವನ್ನೂ ಅನುಸ್ವಾರವಾಗಿ ಬರೆಯಲ್ಪಡುವ ಪಾದಾಂತರಾಳದ ಹಾಗೂ ಪಾದಾಂತದ ಮಕಾರವನ್ನೂ ನಿಷೇಧಿಸದೆ ಗ್ರಹಣಮಾಡಿದೆ.

ಈ ನಿರೋಷ್ಠ್ಯ ರಚನೆಯಲ್ಲಿ ಪ್ರಾಯಃ ಅನವಧಾನ ಕಾರಣವಾಗಿ ಒಂದೆರಡು ಪ್ರಮಾದಗಳಾಗಿವೆಯೆಂದು ಮೇಲೆ ಹೇಳಿದೆಯಷ್ಟೆ. 'ಕಳಿಂಗದೇಶಮನೆಯ್ದೆ'(೩ವ.), ಕಂಡೆನುರ್ವಿಪಾ(೪), 'ಆ ದನಿಯ ಪಿಂದನೆ ನಡೆಯೆ'(೬ವ) 'ಮುನಿದೆರ್ದೆಗಿರ್ಚನೀಯುದೆಲೆ' (೧೧) 'ದಿಶಾರಾಶಿಪಚಕ್ರಿತ್ರಯಂ' (೫೬ವ.), 'ಮಱಿದೆನೆಂದೆಯ್ತಂದಳಾ ಚಂದ್ರಲೇಖೆ' (೫೭), 'ತಂದತಿಸಾಹಸಿಯಂತಿರಿರ್ಪನೆಂದಾಯತನೇತ್ರೆ' (೫೮)—ಈ ಆರು ಸ್ಥಳಗಳಲ್ಲಿ ಕ್ರಮವಾಗಿ ಮ, ಪಾ, ಪಿಂ, ಮು, ಪ, ಮ, ರ್ಪ ಈಯಕ್ಷರಗಳು ಓಷ್ಠ್ಯವರ್ಣಗಳಾಗಿರುವುದು ನಿಯಮವನ್ನು ಉಲ್ಲಂಘಿಸಿದಂತಾಗಿದೆ. ಹೀಗೆಯೇ 'ಚಿಂತಾಕುಲಂ' (೨೫), ಕೇಳ್ದು (೩೪ವ.), 'ನಿಲ್ವುದಿದು' (೪೫) ಈ ಸ್ಥಳಗಳಲ್ಲಿ ಓಷ್ಠ್ಯಸ್ವರವಾದ ಉ ಕಾರ ಗುಣಿತಾಕ್ಷರಗಳಲ್ಲಿ ಸೇರಿಕೊಂಡು ಬಂದಿದೆ. ಇದು ಬಹುಶಃ ಅನವಧಾನ ಅಥವಾ ಅನ್ಯಥಾಜ್ಞಾನದ ದೆಸೆಯಿಂದ ಆಗಿರಬಹುದಾದ ಪ್ರಮಾದಗಳಿರಬೇಕು. ಕವಿ ಸಾಮಾನ್ಯವಾಗಿ ಎಚ್ಚರ ತಪ್ಪುವವನಲ್ಲ; ಪ ಕಾರ ಘಟಿತವಾಗಿ ಬಳಕೆಯಾಗುವ ರೂಢಿಯ ಹಳಗನ್ನಡ ಶಬ್ದಗಳನ್ನು ಅವನು ಹ ಕಾರಘಟಿತವಾಗಿ ಮಾಡಿ ನಿವಾರಿಸಿರುವುದು ಹೇಟ್ದುಳ್ (<ಪೇಟ್ದುಳ್), ಹದನ್ (<ಪದನ್), ಅಱುಹು (<ಅಱಿಪು), ಹರಸು (<ಪರಸು), ಹೆಚ್ಚಿ (<ಪೆರ್ಚಿ) ಇತ್ಯಾದಿ ಪ್ರಯೋಗಗಳನ್ನು ಕಂಡಾಗ ಮನವರಿಕೆಯಾಗುವುದು.

ಚಾಂಡರಸನು ಗದ್ಯಪದ್ಯಗಳು ಒಟ್ಟಾಗಿ ೧೦೯ ಕಾವ್ಯಭಾಗಗಳನ್ನು ಅಪಾರ ಸಂಯಮದಿಂದಲೂ ಅತಿಶಯ ಕೌಶಲದಿಂದಲೂ ನಿರೋಷ್ಠ್ಯವಾಗಿ ರಚಿಸಿರುವನಷ್ಟೆ. ಇವಿಷ್ಟೂ ಮೂಲಗ್ರಂಥದ ಕನ್ನಡ ಅನುವಾದವಾಗಿ, ಅವಶ್ಯವಾಗಿ ಹಾಗೆ ರಚನೆಯಾಗಬೇಕಾಗಿದ್ದ ಕಾವ್ಯಭಾಗಗಳು. ಅನುವಾದ ಮುಗಿದು, ತಾನು ಕೃತಕೃತ್ಯನಾದಾಗ, ಆತನಿಗೆ ಇಕ್ಕಟ್ಟಿನ ಸಂದಿಗೊಂದಿಗಳನ್ನು ಹೇಗೋ ದಾಟಿ ರಾಜಮಾರ್ಗಕ್ಕೆ ಬಂದು ನಿರಾಳವಾಗಿ ಉಸಿರಾಡುವವನ ಹಾಗೆ ಅನುಭವವಾಗಿರಬೇಕು. ಅಗಾಧವಾದ ಬಿಸಿಲ ಬೇಗೆಗೆ ಸಿಕ್ಕು ಬಳಲಿ ಬೆಂಡಾದವನು, ಬಾಯಾರಿಕೆಯಿಂದ ವಿಪರೀತವಾಗಿ ನೀರು ಕುಡಿಯಲು ಬಯಸುವ ಹಾಗೆ ಓಷ್ಠ್ಯವರ್ಣಗಳು ತುಂಬಿದ ರಚನೆಗೆ ಕೂಡಲೆ, ಹೇಗೆ ಉತ್ಸಾಹಿಸಿರುವನೆಂಬುದನ್ನು ಈ ಮುಂದಿನ ಕೃತಿಭಾಗದಲ್ಲಿಯೇ ಕಾಣಬಹುದು :

ಎಂದು ರಾಜವಾಹನಂಗೆ ಮಂತ್ರಗುಪ್ತಂ ತನ್ನ ವೃತ್ತಾಂತಮಂ ಪೇಳ್ವುದುಂ

ಧರಣಿಗೆ ನಿನ್ನ ಮಂತ್ರಮೆ ಫಲಂ ನಿಜಸತ್ವಮತೀವ ವಿಸ್ಮಯಂ
ಪಿರಿಯ ತಪಂ ಕರಂ ಪೊಸತು ಬುದ್ಧಿ ವಿಚಿತ್ರಮೆನುತ್ತನೇಕಸಾಂ
ದರವಚನಂಗಳಿಂ ಪದೆದು ಮನ್ನಿಸಿ ಸನ್ನುತ ಮಂತ್ರಗುಪ್ತನಂ
ನಿರವಧಿತುಷ್ಟಿಯಿಂ ನಲಿದು ಮೆಚ್ಚಿದನಾಗಳಭಂಗವಿಕ್ರಮಂ ॥ (೧೩–೬೩ವ., ೬೪)

ಈ ವೃತ್ತದಲ್ಲಿ ವ್ಯಂಜನಗಳಾದ ಓಷ್ಠ್ಯವರ್ಣಗಳೇ ೧೬ ಸ್ಥಳಗಳಲ್ಲಿ ಬಂದಿವೆ; ಓಷ್ಠ್ಯ ಸ್ವರಗಳು ೮ ಸ್ಥಳಗಳಲ್ಲಿ ಬಂದಿವೆ. ಈ ಪ್ರಚುರತೆ ಉದ್ದೇಶಪೂರ್ವಕರಚನೆಯ ಫಲವೇ ಇರಬೇಕೆಂದು ತೋರುತ್ತದೆ. ಇದರೊಂದಿಗೆ ಗಮನಿಸಬೇಕಾದ ಒಂದು ಸ್ವಾರಸ್ಯವೆಂದರೆ, ಪ ವರ್ಗದ ಎಲ್ಲ ಅಕ್ಷರಗಳನ್ನೂ ವೃತ್ತ ಒಳಗೊಂಡಿರುವುದು. ವಾಚ್ಯವಾಗಿ ಕವಿ ಈಯಂಶಗಳನ್ನು ಸೂಚಿಸದಿರುವುದರಿಂದ, ಚಿತ್ರಕವಿತ್ವದ ಕೌಶಲದ ದೃಷ್ಟಿಯಿಂದ ಇಲ್ಲಿಯ ಚಮತ್ಕಾರ ಹೆಚ್ಚು ಸೊಗಸುವುದೆನ್ನಬೇಕು.

'ಪದ್ಮರಾಜಪುರಾಣ'ದಲ್ಲಿ :

ಶಕ್ರಾದಿ ನಿರ್ಜರ ಕಿರೀಟರತ್ನಾಳಿಘೃ
ಣ್ಯಾಕ್ರಾಂತಚರಣಸರಸಿಜ ಕನತ್ಕಾಲಗಲ
ಚಕ್ರೇಶಧ[ವ]ಲಸಚ್ಛೃಂಗಾಟಕಸ್ಥಲಾಂತಶ್ಚರನ್ನೈಜತೇಜಾ
ಚಕ್ರಕರ ತನಯ ಲಸಿತಶರೀರ ಗಹನದಹ
ನ ಕ್ರಿಯಾಜ್ಞಾನಘನ ಕಾಶೀಶ ಸಂಸಾರ
ನಕ್ರಾಸ್ಯಗತನನೆನ್ನಂ ರಕ್ಷಿಸಾನತಜನಾಕ್ರಾಂದನ ತಿರಸ್ಕರಾ ॥ (೧೦–೧)

ಇದರ ಆಶಯ : ''ಇಂದ್ರ ಮೊದಲಾದ ದೇವತೆಗಳ ಕಿರೀಟರತ್ನಸಮೂಹದ ಪ್ರಕಾಶದಿಂದ ಆವೃತವಾದ ಪಾದ ಕಮಲಗಳನ್ನುಳ್ಳವನೆ, ಪ್ರಕಾಶಮಾನವಾದ ಕಪ್ಪುಗೊರಳುಳ್ಳವನೆ, ವಿಷ್ಣುವಿಗೆ ಒಡೆಯನಾದವನೆ, ಪ್ರಕಾಶಮಾನ ವಾದ ಶೃಂಗಾಟಕ ಸ್ಥಳದೊಳಗೆ ಪ್ರತಿಫಲಿಸುವ ತೇಜಶ್ಶಾಲಿಯೆ, ವಿಷ್ಣುವಿನ ಮಗನಾದ ಮನ್ಮಥನ ಉಜ್ವಲಶರೀರ ವೆಂಬ ಅರಣ್ಯವನ್ನು ಸುಟ್ಟವನೆ, ಕ್ರಿಯಾಜ್ಞಾನ ಶರೀರನೆ, ಕಾಶಿಪುರದ ಸ್ವಾಮಿಯೇ, ತನಗೆ ಶರಣರಾದವರ ಗೋಳನ್ನು ಪರಿಹರಿಸುವವನೆ, ಸಂಸಾರವೆಂಬ ಮೊಸಳೆಯ ಬಾಯಿಗೆ ಸಿಕ್ಕಿರುವ ನನ್ನನ್ನು ಕಾಪಾಡು.''

ಇಲ್ಲಿ ಓಷ್ಠ್ಯ ಸ್ವರಗಳಾಗಲಿ ವ್ಯಂಜನಗಳಾಗಲಿ ಉಪಯೋಗವಾಗಿಲ್ಲ.

ಚನ್ನವೀರ ಜಂಗಮದೇವನ (ಸು. ೧೫೦೦) 'ಷಟ್ಸ್ಥಲವಲ್ಲಭ'ದಲ್ಲಿ :

ದಿವಿಜರಿಗೆಱೆಯನು ವಸುಗಣನೆಯೊಳಿದ ಹಿಡಿದನು ಯತಿವರನೂ
ರವಿಗಣನೆಯೊಳಿಹಯೆಸಳುವ ಕುಱಿತನು ಕಡೆಯೊಳು ಹರ ನೆನೆದಾ
ನವ ವಿದಳಿತ ಸರಸಿಜವಿವೆಯೆನುತವನಿದಿರೊಳಗಿರಿಸಲು ತಾ
ಸವಿನಯದೊಡನೆರಸಿದ ಗಡಣದಿ ನುಡಿದಳು ಸತಿಕುಲದರಸೀ ॥ (೧-೧೦೧)

ಇಲ್ಲಿಯ ಆಶಯ : (ಪುರವರ್ಣನೆಯ ಭಾಗವಾಗಿ ಬರುವ ಹೂವಿನಂಗಡಿ ಸಾಲುಗಳ ವರ್ಣನಾಂಶವನ್ನು ಇಲ್ಲಿ ಕುರಿತಿದೆ. ಒಬ್ಬ ಮಾಲೆಗಾರ್ತಿ ಅತ್ತ ಸಾಗುತ್ತಿದ್ದ ಕವೀಶ್ವರನನ್ನು ನೋಡಿ ಹೀಗೆ ನುಡಿದಳಂತೆ:) ''ಇಂದ್ರನು ವಸುವಿನ (ಎಂದರೆ ಎಂಟರ) ಲೆಕ್ಕದಲ್ಲಿ ಇದನ್ನು ಗ್ರಹಣಮಾಡಿದನು. ಯತಿಶ್ರೇಷ್ಠನು ರವಿಯ (ಎಂದರೆ ಹನ್ನೆರಡರ) ಲೆಕ್ಕದಲ್ಲಿ ಇರುವ ದಳವನ್ನು ವಿಚಾರಿಸಿದನು. ಕೊನೆಗೆ ಈಶ್ವರನು ಸಹ ನೆನಪುಮಾಡಿಕೊಂಡ ಹೊಸದಾದ ಅರಳಿದ ತಾವರೆಗಳು ಇಲ್ಲಿವೆ.—ಹೀಗೆ ಎನ್ನುತ್ತ ಅವನ್ನು ಅವನ ಎದುರಿಗೆ ಇರಿಸಲು ಆ ನಾರೀಮಣಿ ತನ್ನ ಜೊತೆಯವರ ಗುಂಪಿನಲ್ಲಿ ವಿನಯಭಾವದಿಂದ ಮಾತನಾಡಿದಳು.''

ಇಲ್ಲಿ ಓಷ್ಠ್ಯವರ್ಣಗಳಲ್ಲಿ ಪವರ್ಗದ ಅಕ್ಷರಗಳನ್ನು ಉಪಯೋಗಿಸಿಲ್ಲ. ಓಷ್ಠ್ಯ ಸ್ವರಗಳನ್ನೇನೂ ನಿಷೇಧಿಸಿಲ್ಲವಾದ್ದರಿಂದ ಅವುಗಳ ಬಳಕೆ ಧಾರಾಳವಾಗಿದೆ. ಇಲ್ಲಿ ಹೇಳತಕ್ಕ ವಿಶೇಷವೊಂದಿದೆ. ಕವಿ ಈ ಪದ್ಯವನ್ನು 'ನಿರೋಷ್ಠ ದ್ವಿಸಂಧಾನ' ಎಂಬುದಾಗಿ ಕರೆದಿದ್ದಾನೆ. ಪದ್ಯಕ್ಕೆ ಎರಡು ಅರ್ಥಗಳುಂಟೆಂದು ಇದರ ಅಭಿಪ್ರಾಯ. ಮತ್ತೊಂದು ವಿಶೇಷವೆಂದರೆ, ಎಂಟು ನಗಣ, ಕೊನೆಗೊಂದು ಗುರು ಎಂಬ ಲಕ್ಷಣದ ವಿದಳಿತಸರಸಿಜ ಎಂಬ ವೃತ್ತದ ಹೆಸರು ಬಳಸಿದ ಮುದ್ರಾಲಂಕಾರದಲ್ಲಿ ಈ ವರ್ಣವೃತ್ತ ರಚಿತವಾಗಿದೆ ಎನ್ನುವುದು. ವೃತ್ತದ ಛಂದಸ್ಸು, ಪಾದಾಂತದ ಶೈಥಿಲ್ಯ ಲಕ್ಷಣ ಹೊರತಾಗಿ, ಸರಿಯಾಗಿದೆ. ನಡುಗನ್ನಡದ ಕಾಲದ ವೃತ್ತರಚನೆಯಲ್ಲಿ ಈ ಶೈಥಿಲ್ಯ ಸ್ವಾಭಾವಿಕವೆಂದು ತೋರುವುದು. ದ್ವಿತ್ವಾಕ್ಷರಗಳನ್ನೇ ಬಳಸದ 'ಅಸಂಯೋಗ'ವೆಂಬ ವ್ಯಂಜನಚಿತ್ರದ ಲಕ್ಷ್ಯವಾಗಿ ರುವುದು ಈ ವೃತ್ತದ ಮಗದೊಂದು ವಿಶೇಷ. ಹೀಗೆ ಈ ಅಪೂರ್ವವಾದ ವೃತ್ತ ನಿರೋಷ್ಠ್ಯವೆಂಬ ಸ್ಥಾನಚಿತ್ರ, ಅಸಂಯೋಗವೆಂಬ ವ್ಯಂಜನಚಿತ್ರ, ದ್ವಿಸಂಧಾನವೆಂಬ ಶ್ಲೇಷಾಲಂಕಾರ, ಹಾಗೂ ಮುದ್ರಾಲಂಕಾರವೆಂಬ ಶ್ಲೇಷ ಮೂಲವಾದ ಅರ್ಥಾಲಂಕಾರ ಈ ನಾಲ್ಕು ವೈಚಿತ್ರ್ಯಗಳಿಂದ ಕೂಡಿರುವುದು ಕಾಣುತ್ತದೆ.

ಶಾಂತೇಶನ (೧೫೬೧) 'ತೋಂಟದ ಸಿದ್ಧೇಶ್ವರನ ಪುರಾಣ'ದಲ್ಲಿ :

ಜಯ ಚರಾಚರರಕ್ಷ ಧೃತಗರ
ಜಯ ಜಟಾತಟಲಸಿತಸಿತಕರ
ಜಯ ಜನಾರ್ದನನೇತ್ರಚರಣನೀರಾಜಿತಾಂಗಗತ
ಜಯ ಜಿತಾಂತಕ ಜನನಕೃಂತಕ
ಜಯ ಧನೇಶಸಹಾಯ ಹರಿಹಯ
ಜಯ ನತಾಧಿಕ ಶಾಂತಿದಾಯಕ ಶಾಂತ ನಿಶ್ಚಿಂತ ॥

ಇದರ ಆಶಯ : ''ಚರಾಚರಗಳನ್ನು ರಕ್ಷಿಸುವವನೆ, ವಿಷವನ್ನು ಕೊರಳಲ್ಲಿ ಧರಿಸಿರುವವನೆ, ಜಡೆಗಳ ಬುಡದಲ್ಲಿ ಪ್ರಕಾಶಮಾನವಾದ ಚಂದ್ರನನ್ನು ತಳೆದವನೆ, ವಿಷ್ಣುವಿನ ಕಣ್ಣೆಂಬ ಹೂವಿನಿಂದ ಪೂಜೆಗೊಂಡು ಬೆಳಗಿದ ಪಾದ

ಗಳುಳ್ಳವನೆ, ಯಮುನನ್ನು ಗೆದ್ದವನೆ, ಭವನನ್ನು ಕತ್ತರಿಸಿದವನೆ, ಕುಬೇರನ ಗೆಳೆಯನೆ, ಹರಿಹಯ ಎನಿಸಿದವನೆ, ಶರಣಾಗತರಿಗೆ ಅತಿಶಯವಾಗಿ ಶಾಂತಿ ಕೊಡುವವನೆ, ಶಾಂತನೆ, ನಿಶ್ಚಿಂತನೆ, ನಿನಗೆ ಜಯವಾಗಲಿ.''

ಇಲ್ಲಿ ಸ್ವರ ವ್ಯಂಜನಗಳು ಸಹವಾಗಿ ಓಷ್ಠ್ಯವರ್ಣಗಳಾವುವೂ ಉಪಯೋಗವಾಗಿಲ್ಲ. ಯಮಕಾನುಪ್ರಾಸಗಳ ಬಳಕೆಯಿಂದ ರಚನೆಯನ್ನು ಬಣ್ಣವೇರಿಸುವ ಪ್ರಯತ್ನವೂ ನಡೆದಿದೆ.

ಷಡಕ್ಷರಿಯ 'ವೃಷಭೇಂದ್ರವಿಜಯ'ದಲ್ಲಿ :

ಶರಣಶರಣ್ಯ ಶಾಂತ ಶಶಿಶೇಖರಸಂಗತಚಿತ್ತಚೇತನಾ
ದರಚರಸಂಚಯಾಂಘ್ರಿಸರಸೀಜಸದಾರ್ಚಕ ಸಾರಸತ್ಯಸಂ
ಗರ ತತಸಾಹಸಾಂಕ ಗಣರಂಜನ ನಿರ್ಜಿತಕಾಲ ನೀತನಿ
ರ್ಜರತತಿಲಜ್ಜ ಧೀರ ಜಯ ಶಂಕರದಾಸ ಜಗತ್ತ್ರಯಾಧಿಕಾ ॥ (೧೩-೫೨)

ಇದರ ಆಶಯ : ''ಶರಣಜನರ ಆಶ್ರಯನೆ, ಶಾಂತನೆ, ಈಶ್ವರನಲ್ಲಿ ನಟ್ಟ ಮನಸ್ಸುಳ್ಳ ಜಂಗಮರ ಪಾದಕಮಲಗಳನ್ನು ಸದಾ ಪೂಜಿಸುವವನೆ, ಶ್ರೇಷ್ಠವಾದ ಸತ್ಯಪ್ರತಿಜ್ಞೆಯುಳ್ಳವನೆ, ಸಾಹಸಲಕ್ಷಣನೆ, ಗಣಗಳನ್ನು ಸಂತೋಷಗೊಳಿಸುವವನೆ, ಯಮನನ್ನು ಗೆದ್ದವನೆ, ದೇವತೆಗಳನ್ನೇ ನಾಚುವಂತೆ ಮಾಡಿದವನೆ, ಧೀರನೆ, ಜಗತ್ರಯಗಳಿಗೂ ಅಧಿಕನೆ, ಶಂಕರದಾಸನೆ ನಿನಗೆ ಜಯವಾಗಲಿ.''

ಪದ್ಯವನ್ನು ನಿರೋಷ್ಠ್ಯವೆಂದು ಮಾತೃಕೆಗಳಲ್ಲಿ ಕರೆದಿಲ್ಲ. ಆದರೆ ಸ್ವರಗಳೂ ಸೇರಿದಂತೆ ಓಷ್ಠ್ಯವರ್ಣಗಳನ್ನು ಬಳಸಿರದ ಈ ಪದ್ಯ ನಿರೋಷ್ಠ್ಯದ ಒಂದು ನಿದರ್ಶನವೇ ಆಗಿದೆ.

ಶೀತಕರಶೇಖರಸದಾನತನಿಜಾಂಗ ಜಗತೀತಳ ಜನಾನತ ನಿಶಾತಶರಧಾರಾ
ಘಾತಹೃತದೈತ್ಯ ಕರನೀತಸಕಳೇಷ್ಟ ಝಷಕೇತನಹರಾಂಕಧರ ಗೀತಸರಸೀಸಂ
ಜಾತದಿನನಾಯಕ ಜಿತೇತರನಿತಾಂತಜಡಚೇತನ ಜಗನ್ನಿಚಯತಾತ ಘನನಂದಿ
ಖ್ಯಾತಗಣನಾಥ ಕಲಕೇತಸಖ ಕಿನ್ನರದಯಾತತರಸಾರ್ಥಿ ಹರಜಾತ ಜಯ ಧೀರಾ ॥
(ಪರಿಶಿಷ್ಟ, ಪ. ೨೭)

ಇದರ ಆಶಯ : ''ಚಂದ್ರಶೇಖರನ ಪಾದಗಳಿಗೆ ಮಣಿಯುವ ದೇಹವುಳ್ಳವನೆ, ಜಗತ್ತಿನ ಜನರಿಂದ ನಮಸ್ಕೃತನಾದವನೆ, ತೀಕ್ಷ್ಣವಾದ ಶಸ್ತ್ರಧಾರೆಯ ಆಘಾತದಿಂದ ದೈತ್ಯರನ್ನು ಸಂಹರಿಸಿದವನೆ, ಸಕಲ ಇಷ್ಟಾರ್ಥಗಳನ್ನೂ ನೆರವೇರಿಸುವವನೆ, ಮನ್ಮಥನನ್ನು ಕೊಂದ ಪರಮೇಶ್ವರನ ಚಿಹ್ನವಾದ ಲಿಂಗವನ್ನು ಧರಿಸಿದವರ ಗೀತಗಳೆಂಬ ತಾವರೆಗಳನ್ನು ಅರಳಿಸುವ ಸೂರ್ಯನೆ, ಜಡಜನರನ್ನು ಗೆದ್ದವನೆ, ಜಗತ್ಸಮೂಹಗಳ ತಂದೆಯಾದವನೆ, ನಂದಿ ಮೊದಲಾದ ಗಣಗಳಿಗೆ ಒಡೆಯನೆ, ಕಲಕೇತ ಬೊಮ್ಮಯ್ಯನ ಮಿತ್ರನೆ, ಕಿನ್ನರಿ ಬೊಮ್ಮಯ್ಯನ ದಯೆಯನ್ನು ಬೇಡುವವನೆ, ಪರಮೇಶ್ವರ ಪುತ್ರನೆ, ಧೀರನೆ, ಬಸವೇಶ್ವರನೆ, ನಿನಗೆ ಜಯವಾಗಲಿ.''

ಈ ಲಲಿತವೃತ್ತ ದಿಟವಾಗಿ ಲಯಗ್ರಾಹಿ ಎಂದು ಹೇಳಬಹುದಾದ್ದು; ಛಂದಸ್ಸು ಸಲಕ್ಷಣವಾಗಿದೆ. ಸ್ವರವ್ಯಂಜನ ಓಷ್ಠ್ಯವರ್ಣಗಳಾವುವೂ ಇಲ್ಲಿ ಬಳಕೆಯಾಗಿಲ್ಲ. ಮಾತೃಕೆಯಲ್ಲಿ ನಿರೋಷ್ಠ್ಯವೆಂದು ಕರೆದಿರದಿದ್ದರೂ, ಸ್ವರೂಪದಿಂದ ಇದು ನಿರೋಷ್ಠ್ಯವೇ ಆಗಿದೆ.

ಇಮ್ಮಡಿ ಗುರುಸಿದ್ಧನ 'ಹಾಲಾಸ್ಯಪುರಾಣ'ದಲ್ಲಿ :

(i) ಗರಧರ । ಧರಗರ । ಧರನದ । ಶರದಕ ॥
(ii) ಘನರಥ । ಧನದಸ । ಹನನಯ । ಘನದಯ ॥
(iii) ಗತಗದ । ನತನರ । ಶತದಳ । ರತಶಕ ॥
(vi) ಧರಧರ । ಶರಕರ । ಕರಕರ । ಶರದಕ ॥
(v) ರಯಗತ । ನಯರಥ । ಶಯಕಕ । ಳಯಜರ ॥ (೪-೧೭-೧೫೮ ರಿಂದ ೧೬೨)

ಈ ಐದು ಚಿಕ್ಕ ವರ್ಣವೃತ್ತಗಳು, ೪ನೆಯ ಪ್ರತಿಷ್ಠೆ ಛಂದಸ್ಸಿನ ಸುರತರುವೆಂಬ ವೃತ್ತದ ನಿದರ್ಶನಗಳಾಗಿವೆ. ಇವುಗಳ ಆಶಯವನ್ನು ಪ್ರತ್ಯಂಗ ಸಮರ್ಪಕವಾಗಿ ತಿಳಿಯುವುದು ಕಷ್ಟ. ಮಾತೃಕೆಯಲ್ಲಿಯೇ

'ಸರ್ವಲಘು ನಿರೋಷ್ಠ' ಎಂದಿರುವಂತೆ ತೋರುವುದು. ಇವು ನಿರೋಷ್ಠ್ಯಗಳೇ ಅಲ್ಲದೆ, ಸ್ವರಚಿತ್ರಗಳ 'ತಲಕಟ್ಟಿನ ಪದ', ವ್ಯಂಜನಚಿತ್ರಗಳ 'ಅಸಂಯೋಗ' ಸಹ ಆಗಿವೆಯೆನ್ನಬಹುದು. ಹೀಗೆ ಮೂರು ವರ್ಣಚಿತ್ರ ಪ್ರಕಾರಗಳಿಗೆ ಈ ಪುಟ್ಟಪದ್ಯಗಳು ಸೇರುತ್ತವೆ. ಅನುಪ್ರಾಸ ಸಂಘಟನೆಯಂತೂ ಸುವಿದಿತ.

ಇದೇ ಕವಿಯ 'ಶಿವಲಿಂಗಷಟ್ಪದಿ'ಯಲ್ಲಿ :

ಜಲಧಿಶಯನನಯನಾಂಘ್ರಿಜಲಜ ಜಗದಾಧಾರ
ಲಲಿತಶಾರದ ನಿಜಶರಣನಿಕರಸಂತಾನ
ಚಲಿತಗರಗಲ ಗಾನರಸಲೀನಹೃದಯ ಶರಜನನ ಜನಕಾಂತಕಾರಿ
ಕಲಶಜಾರ್ಚಿತಚರಣ ಕನದಗಶರಾಸನ ಸ
ಕಲಕಲಾನಿಧಿ ದಯಾಗರ ಕಾಳಿಕಾಕಾಂತ
ಸಲೆ ರಕ್ಷಿಸಯ್ಯ ದಶಶತದಿನೇಶಾಕಾರ ಸಾರಚಾರಿತ್ರಚಿತ್ರಾ ॥ (ಪ. ೮೭)

ಪ್ರಾಚೀನ ಟೀಕೆಯ ವಿವರಣೆಯಂತೆ ಇದರ ಆಶಯ : ''ಜಲಧಿಶಯನ–ಸಾಗರಶಯನನಾದ ನಾರಾಯಣನ, ನಯನ–ನೇತ್ರ, ಅಂಘ್ರಿಜಲಜ–ಪಾದಕಮಲದಲ್ಲಿ, ಜಗತ್–ಜಗತ್ತುಗಳಿಗೆ, ಆಧಾರ–ಆಶ್ರಯನಾದಂಥ, ಲಲಿತಶಾರದ–ಕೋಮಲವಾದ ಶರನ್ಮೇಘದ ಛಾಯೆವನುಳ್ಳಂಥ, ನಿಜಶರಣನಿಕರಸಂತಾನ–ಯಥಾರ್ಥವಾದ ಏಕನಿಷ್ಠಾಪರರ ಸಮೂಹಕ್ಕೆ ಕಲ್ಪವೃಕ್ಷವಾದಂಥ, ಚರಿತಗರಗಲ–ಸಂಚಲಿಸುತಿರ್ದ ವಿಷವು ಕಂಠದಲುಳ್ಳಂಥ, ಸಹೃದಯ ಗೀತಾಮೃತದಿಂದೆ ಎರಕವಾದ, ಹೃದಯ–ಅಂತರಂಗವನುಳ್ಳಂಥ, ಶರಜನನಜನಕ–ಶರ–ಗಲಗಿನ ವನದಲ್ಲಿ ಜನನ–ಉತ್ಪತ್ತಿಯನುಳ್ಳ ಷಣ್ಮುಖನ, ಜನಕ–ತಂದೆಯಾದಂಥ, ಅಂತಕಾರಿ–ಯಮನಿಗೆ ಶತ್ರುವಾದಂಥ, ಕಳಸಜಾರ್ಚಿತ ಚರಣ–ಅಗಸ್ತ್ಯಋಷೀಶ್ವರನಿಂದೆ ಪೂಜಿಸಲ್ಪಟ್ಟ ಪಾದಗಳನುಳ್ಳಂಥ, ಕನತ್–ಮಿನಗುತಿರ್ದ, ಆಗಶರಾಸನ-ಮೇರುಧನುಸ್ಸನುಳ್ಳಂಥ, ಸಕಲಕಲಾನಿಧಿ-ಸಮಸ್ತಕಲೆಗಳಿಗೆ ಸ್ಥಾನವಾದಂಥ, ದಯಾಕರ-ಕರುಣಕ್ಕೆ ನಿಧಿ, ಕಾಳಿಕಾಕಾಂತ–ಪಾರ್ವತೀದೇವಿಗೆ ವಲ್ಲಭನಾದಂಥ, ದಶಶತ–ಸಾವಿರವಾದ, ದಿನೇಶ–ಸೂರ್ಯರ, ಸ್ವರೂಪದ ಹಾಂಗೆ ಸ್ವರೂಪವನುಳ್ಳ [ಸಾರಚಾರಿತ್ರಚಿತ್ರನೇ, ಚೆನ್ನಾಗಿ ಕಾಪಾಡು.]''

ಈ ಟೀಕೆಯ ಆಶಯ ಪೂರ್ತಿಯಾಗಿ ಸಮರ್ಪಕವಾಗಿದೆಯೆಂದು ಹೇಳಲಾಗದು. ಉದಾಹರಣೆಗೆ, 'ಜಲಧಿಶಯನನಯನಾಂಘ್ರಿಜಲಜ' ಎಂಬ ಸಮಸ್ತಪದವನ್ನಿಟ್ಟುಕೊಂಡು 'ವಿಷ್ಣುವಿನ ಕಣ್ಣನ್ನು ತನ್ನ ಪಾದ ಕಮಲಗಳಲ್ಲಿ ಉಳ್ಳವನು' ಎಂಬುದಾಗಿ ಅರ್ಥವನ್ನು ಹೇಳುವುದು ಸೂಕ್ತ. ಈ ಷಟ್ಪದಿಯನ್ನು ಮಾತೃಕೆಯಲ್ಲಿ 'ನಿರೋಷ್ಟ್ರಪದ' ಎಂದಿದ್ದು, ಇದು 'ನಿರೋಷ್ಠ್ಯಪದ' ಎಂಬುದರ ಅಪಲಿಖಿತವೆನ್ನುವುದರಲ್ಲಿ ಸಂಶಯವಿಲ್ಲ.

ಇದೇ ಕವಿಯ 'ಪಂಚಾಶಿಕೆ'ಯಲ್ಲಿ :

ಜಯ ಚರಾಚರರಕ್ಷ ಧೃತಗರ
ಜಯ ಜಟಾತಟಲಸಿತ ಸಿತಕರ
ಜಯ ಜನಾರ್ದನನೇತ್ರಚರಣಸರೋಜರಂಗಗತ
ಜಯ ಜಿತಾಂತಕ ಜನನಕೃಂತಕ
ಜಯ ಧನೇಶಸಹಾಯ ಹರಿಹಯ
ನಯತರಾಧಿಕ ಶಾಂತದಾಯಕ ಶಾಂತ ನಿಶ್ಚಿಂತ ॥ (೧೩–೪೪)

ಈ ಪದ್ಯ ಈಗಾಗಲೆ ನೋಡಿರುವ ಶಾಂತೇಶನ 'ತೋಂಟದ ಸಿದ್ದೇಶ್ವರಪುರಾಣ'ದ ಪದ್ಯವೇ ಆಗಿದೆ. ಸಣ್ಣಪುಟ್ಟ ಪಾಠಭೇದಗಳು ಲಿಪಿಕಾರಕೃತವೇ ಇರಬಹುದು. ಶಾಂತೇಶನಿಂದ ಗುರುಸಿದ್ಧನು ಈ ಪದ್ಯವನ್ನು ನೇರವಾಗಿ ಎತ್ತಿಕೊಂಡನೋ ಹೇಗೆ, ಎನ್ನುವುದು ವಿಚಾರಾರ್ಹ. ಈ ಪದ್ಯವನ್ನು ಮಾತೃಕೆಯಲ್ಲಿ 'ನಿರೋಷ್ಠಪದ' ವೆಂದಿದೆ. ಅದಕ್ಕೆ ಅನುಗುಣವಾಗಿಯೇ ಸ್ವರವ್ಯಂಜನಗಳು ಸಹವಾಗಿ ಓಷ್ಠ್ಯವರ್ಣಗಳಾವುವೂ ಈ ಪದ್ಯದಲ್ಲಿ ಬಳಕೆಯಾಗಿಲ್ಲ ಎನ್ನುವುದು ವಿದಿತವೇ ಇದೆ.

ಕಾಚಂದ್ರಕಾಂತಾಸ್ಯನೇ
ನಕೀಹೃದಯಕಂಜಾತಾರ್ಕನೇ ನಿರ್ಜರಾ
ಂಗಣಾರಣ್ಯಲಸದ್ಧನಂಜಯನೆ ನಾಳೀಕಾಕ್ಷನೇ ಶಂಖಚ
ಕ್ರಗದಾಲಂಕೃತಹಸ್ತನೇ ಹರಿಯೆ ನಾಗತ್ರಾಣನೇ ರಕ್ಷಿಸೈ ॥
('ಕರ್ಣಾಟ ಛಂದೋಲಂಕಾರ ಸಾಹಿತ್ಯ ಲಕ್ಷಣಸಂಗ್ರಹವು' ಪು. ೪೭ರಲ್ಲಿ ಉದ್ಧೃತ)

ಇದರ ಆಶಯ : ''ಗರುಡನು ವಾಹನವಾಗಿ ಸಂಚರಿಸುವವನೆ, ಕಪಿಗಳನ್ನು ರಕ್ಷಿಸುವವನೆ, ಪೂರ್ಣಚಂದ್ರನ ಹಾಗೆ ಮನೋಹರವಾದ ಮುಖವುಳ್ಳವನೆ, ಲೋಕಕ್ಕೆ ಆಧಾರವಾಗಿರುವವನೆ, ಸೀತೆಯ ಹೃದಯಕಮಲವನ್ನು ಅರಳಿಸುವ ಸೂರ್ಯನೆ, ರಾಕ್ಷಸರೆಂಬ ಕಾಡನ್ನು ಸುಡುವ ಪ್ರಬಲಾಗ್ನಿಯೆ, ಕಮಲಲೋಚನನೆ, ಶಂಖಚಕ್ರಗದೆಗಳಿಂದ ಶೋಭಿಸುವ ಕೈಗಳುಳ್ಳವನೆ, ಗಜೇಂದ್ರರಕ್ಷಕನೆ, ವಿಷ್ಣುವೇ ರಕ್ಷಿಸು.''

ಓಷ್ಠ್ಯವ್ಯಂಜನಗಳನ್ನಾಗಲಿ, ಸ್ವರಗಳನ್ನಾಗಲಿ ಇಲ್ಲಿ ಬಳಸಿಲ್ಲ.

ಈಚೆಯ ಕಾಲದ ಕವಿಗಳಲ್ಲಿ ಕೆಲವರು ನಿರೋಷ್ಠ್ಯದ ರಚನೆಗಳನ್ನು ಕೈಕೊಂಡಿದ್ದಾರೆ. ಪ್ರಾತಿನಿಧಿಕವಾಗಿ ಕೆಲವರ ರಚನೆಗಳನ್ನು ಗಮನಿಸಬಹುದು.

ಎಸ್. ಶ್ರೀಕಂಠಶಾಸ್ತ್ರಿಗಳ 'ಶ್ರೀಕಂಠೇಶ್ವರಶತಕ'ದಿಂದ :

ಧರಣಿಧರಶರಾಸಾ ಶೈಲಜಾಚಿತ್ತತೋಷಾ
ಧುರಜಿತ ದನುಜೇಶಾ ಕಾಲಸಂಹಾರರೋಷಾ
ದ್ವಿರಸನಧೃತಕೇಶಾ ಕೀರ್ತಿಸಂಕ್ಷಾಳಿತಾಶಾ
ಗರಧರನಗರೀಶಾ ಲಾಸ್ಯಲೀಲಾಟ್ಟಹಾಸಾ ॥ (ಪ. ೫೪)

ಪದ್ಯದ ಆಶಯ : ''ಬೆಟ್ಟವನ್ನೇ ಬಿಲ್ಲಾಗಿ ಧರಿಸಿದವನೆ, ಪಾರ್ವತಿಯ ಮನಸ್ಸನ್ನು ಸಂತೋಷಪಡಿಸಿದವನೆ; ಯುದ್ಧದಲ್ಲಿ ರಾಕ್ಷಸೇಶ್ವರನನ್ನು ಸೋಲಿಸಿದವನೆ, ಯಮನನ್ನು ನಿಗ್ರಹಿಸುವ ರೋಷವನ್ನು ತೋರಿಸಿದವನೆ, ಸರ್ಪವನ್ನು ಕೇಶದಲ್ಲಿ ಧರಿಸಿದವನೆ, ಕೀರ್ತಿಯಿಂದ ದಿಕ್ಕುಗಳನ್ನು ಸ್ವಚ್ಛಗೊಳಿಸಿದವನೆ, ನಂಜನಗೂಡಿನ ಸ್ವಾಮಿಯೆ, ಲಾಸ್ಯಲೀಲೆಯ ವೈಭವ ತೋರುವವನೆ (ನಿನಗೆ ವಂದನೆಗಳು).''

ಈ ಮಾಲಿನೀ ವೃತ್ತದಲ್ಲಿ ಮೊದಲ ಪಾದದ ಮೊದಲ ಮೂರು ಗಣಗಳು ಹಸ್ತಪ್ರತಿಯ ಲಿಖಿತದಲ್ಲೇ ಸದೋಷವಾಗಿದೆ; ಬರವಣಿಗೆಯ ಪ್ರತಿಲಿಪಿಯಲ್ಲಿ ಇದು ಘಟಿಸಿರುವಂತೆ ತೋರುವುದು. ಆದರೆ 'ನಿರೋಷ್ಠ್ಯ'ವೆಂಬ ಸೂಚನೆ ಹಸ್ತಪ್ರತಿಯಲ್ಲಿಯೇ ಇರುವುದು ಗಮನಿಸಬೇಕಾದ್ದು.

ಪಿ. ಬಸವಣ್ಣನವರ 'ನಿರೀಕ್ಷೆ'ಯೆಂಬ ಸಂಕಲನದಲ್ಲಿಯ 'ಚಿತ್ರಕವಿತ್ವ'ದ ಪದ್ಯಗುಚ್ಛದಿಂದ :

ಅಂಗಜಕಾಲಾಂಧಕಹರ । ಗಂಗಾಚಂದ್ರಧರ ಗಾನಲೋಲ ನಟೇಶಾ ।
ಕೆಂಗಣ್ಣಚೆಲ್ವ ವರಗೌ । ರಾಂಗ ದಿವಾರಾತ್ರಿ ರಕ್ಷಿಸೈ ಧರೆಯ ಗಿರಿಜೇಶಾ ॥

ಇದರ ಆಶಯ : ''ಮನ್ಮಥ, ಯಮ ಮತ್ತು ಅಂಧಕಾಸುರರನ್ನು ನಿಗ್ರಹಿಸಿದವನೆ, ಗಂಗೆಯನ್ನೂ ಚಂದ್ರನನ್ನೂ ಧರಿಸಿದವನೆ, ಗಾನಪ್ರಿಯನೆ, ನಟರಾಜನೆ, ಅಗ್ನಿನೇತ್ರನೆ, ಸುಂದರನಾದ ಧವಳಾಂಗನೆ, ಗಿರಿಜೇಶ್ವರನೆ, ಲೋಕವನ್ನು ಹಗಲುರಾತ್ರಿ ಕಾಪಾಡು.''

ಕರ್ತೃ ನಿರೋಷ್ಠ್ಯವೆಂದು ಕರೆದಿರುವಂತೆ ರಚನೆಯಲ್ಲಿ ಓಷ್ಠ್ಯಗಳಾದ ಪವರ್ಗದ ಯಾವುದೇ ಅಕ್ಷರವೂ ಇಲ್ಲಿ ಬಳಕೆಯಾಗಿಲ್ಲ.

ಈವರೆಗಿನ ಪರಿಶೀಲನೆಯಿಂದ ಹೇಳಬಹುದಾದ ಒಂದೆರಡು ಮಾತು ಎಂದರೆ: ಕನ್ನಡ ಭಾಷೆಯ ವರ್ಣಚಿತ್ರಗಳಲ್ಲಿ ಸ್ಥಾನಚಿತ್ರ ಪ್ರಕಾರಗಳಲ್ಲೆಲ್ಲ ನಿರೋಷ್ಠ್ಯ ತುಂಬ ಪ್ರಚುರವಾದುದು. ಇದರ ನಿದರ್ಶನಗಳು ನಡುಗನ್ನಡ ಕಾಲದ ಸಾಹಿತ್ಯಗ್ರಂಥಗಳಲ್ಲಿ, ಅದರಲ್ಲಿಯೂ ವೀರಶೈವಕವಿಗಳ ರಚನೆಗಳಲ್ಲಿ, ವಿಶೇಷವಾಗಿ ಕಂಡುಬಂದಿವೆ.

ಈ ಕವಿಗಳಿಗೆ ಶಬ್ದಾಲಂಕಾರ ಹಾಗೂ ಚಿತ್ರಕವಿತ್ವದ ಪ್ರಥೆಯಲ್ಲಿ ಅಭಿರುಚಿ ಹೆಚ್ಚು ಎನ್ನುವುದರಲ್ಲಿ ಸಂಶಯವಿಲ್ಲ. ವೈದಿಕ ಕವಿಗಳಲ್ಲಿ ಚಂದ್ರರಾಜ ಚೌಂಡರಸರು ಮುಖ್ಯರು. ಚಂದ್ರರಾಜನಂತೂ ಚಿತ್ರಕವಿತ್ವ ರಚನೆಗೆ ಸಂಕಲ್ಪ ಮಾಡಿ ಕುಳಿತವನು. ಅವನ ಪ್ರಯೋಗಶೀಲ ರಚನೆಗಳಲ್ಲಿ ನಿರೋಷ್ಠ್ಯ ಎಡೆಪಡೆಯುವುದು ಸ್ವಾಭಾವಿಕವೇ. ಚೌಂಡರಸನಿಗೆ ದಂಡಿಯೇ ಪ್ರೇರಕಕವಿ. ಆದರೆ ಬಳಸಿದ ಭಾಷೆ ಶೈಲಿಗಳು ಕನ್ನಡಕ್ಕೆ ಸಹಜವಾದವು, ವಿಶಿಷ್ಟವಾದವು. ಅವನ ಸಾಧನೆ, ಪ್ರಮಾದಗಳನ್ನು ಅಲಕ್ಷಿಸಿದರೆ, ವಿಸ್ಮಯಜನಕವಾದುದು, ಸ್ತುತ್ಯವಾದುದು. ಅವನ ರಚನೆ ಕಥೆಯ ನಿರೂಪಣೆಯ ಭಾಗವಾಗಿ, ವಾಹಕವಾಗಿ ಬಂದಿರುವುದರಿಂದ ಸಹಜತೆ ಇಲ್ಲಿ ಸಾಧ್ಯವಾಗಿದೆ. ಅವನ ಪ್ರಯತ್ನದ ಸಾರ್ಥಕತೆಗೆ ಅರ್ಥಾಲಂಕಾರಗಳ ವಲಯದಲ್ಲಿ ಅವನ ಕವಿತ್ವರಚನೆ ಸಾಗಿರುವುದೂ ಅದು ಕಥಾವಾಹಿ ಆಗಿರುವುದೂ ಮುಖ್ಯ ಕಾರಣಗಳೆನ್ನಬಹುದು. ಉಳಿದ ಕವಿಗಳ ರಚನೆಗಳೆಲ್ಲ ಬಲುಮಟ್ಟಿಗೆ ಭಕ್ತಿವಾಹಕಗಳು, ಮಹಿಮಾಸಂಕೀರ್ತನದ ಉದ್ದೇಶದವು. ಇವುಗಳಲ್ಲಿ ಯಮಕಾನುಪ್ರಾಸಗಳ ಅಬ್ಬರವೇ ಹೆಚ್ಚು. ಈ ಮಾರ್ಗದ ಶಬ್ದಾಲಂಕಾರವ್ಯಾಮೋಹ ಕಾರಣವಾಗಿ ಇವುಗಳಲ್ಲಿ ಕೃತಕತೆ ನೀರಸತೆಗಳು ಎದ್ದು ತೋರುತ್ತವೆ. ಬಂಧಗುಣದಲ್ಲಿ ಸೊಬಗುಸಾಲದೆ ಇವು ತೇಪೆಹಾಕಿದ ಮಾತಿನ ಬೊಂತೆಗಳಂತೆಯೂ ತೋರುತ್ತವೆ. ಪಾಠದೋಷಗಳೂ ಸೇರಿ ಕೆಲವು ಪದ್ಯಗಳ ಆಶಯವನ್ನು ಗುರುತಿಸುವುದೇ ಕ್ಲೇಶಕರವಾಗಿದೆ.

ತ್ರಿಸ್ಥಾನ, ದ್ವಿಸ್ಥಾನ ಮತ್ತು ಏಕಸ್ಥಾನ ಚಿತ್ರಗಳು

'ಸರಸ್ವತೀಕಂಠಾಭರಣ'ದಲ್ಲಿ ನಿರೂಪಿಸಿರುವಂತೆ ನಿರೋಷ್ಠ್ಯ–ದಂತ್ಯ, ನಿರೋಷ್ಠ್ಯ–ಮೂರ್ಧನ್ಯ ಎಂಬಂತಹ, ದಂತ್ಯ–ಕಂಠ್ಯ ಎಂಬಂತಹ ಸ್ಥಾನಚಿತ್ರಗಳನ್ನು ವ್ಯಕ್ತವಾಗಿ ನಿರ್ದೇಶಿಸಿದ ನಿದರ್ಶನಗಳು ಕನ್ನಡ ಸಾಹಿತ್ಯದಲ್ಲಿ ಕಂಡುಬರುವಂತೆ ತೋರುವುದಿಲ್ಲ. ಶೋಧಿಸಿದರೆ ಈ ಬಗೆಯ ರಚನೆಗಳು ಕಂಡುಬರಬಹುದೇನೋ? ಆದರೆ ಏಕಸ್ಥಾನಚಿತ್ರದ ರೀತಿ ಅಸ್ಪಷ್ಟವಾಗಿ ತೋರುತ್ತಿರುವಂತಿದೆ. ಚಂದ್ರರಾಜನ 'ಮದನತಿಲಕ'ದಲ್ಲಿ ಈ ಮುಂದಿನ ಒಂದು ನಿದರ್ಶನ, ''ಇದುವೆ ದಯಾಪಸಂಪುಟ ವರ್ಗತ್ರಿಯಕ್ಷರಂ'' ಎಂಬ ಸೂಚನೆಯೊಂದಿಗೆ ಕಾಣುತ್ತಿರುವುದು, ದಿಟವಾಗಿ ಏಕಸ್ಥಾನಚಿತ್ರದ ಒಂದು ನಿದರ್ಶನವೇ. ಬಹುಶಃ ಶ್ಲೋಕವಾಗಿದ್ದಂತೆ ತೋರುವ ಇದರ ಪಾಠ ಈಗ ತುಂಬ ವಿಕ್ಷಿಪ್ತಗೊಂಡಿದೆ. ಅದನ್ನು ತಾತ್ಕಾಲಿಕವಾಗಿ ಸ್ವಲ್ಪಮಟ್ಟಿಗೆ ಪರಿಷ್ಕರಿಸಿ ಈ ಮುಂದೆ ಉದ್ಧರಿಸಿದೆ :

ಬಾ ಪೋಪಂ ಪೋಪಮೆಂಬಾ । ಪಾಪಿ ಪಾನುಂ (?) ಮೋಪಿ
ಪೋ ಪಾಂಬ ಪೋ ಪೋಪ್ಪೈ । (೧೦–೩೧)

ಇಲ್ಲಿ ಓಷ್ಠ್ಯವರ್ಣಗಳನ್ನು ಮಾತ್ರ ಮೂಲದಲ್ಲಿ ಬಳಸಿದ್ದಿರಬೇಕೆಂದೂ ಪ್ರತಿಕಾರರ ಕೈವಾಡದಿಂದ ಪಾಠಗಳು ಕೆಟ್ಟಿರಬೇಕೆಂದೂ ತೋರುತ್ತದೆ. 'ದಯಾಪ ಸಂಪುಟ' ಎಂದರೆ ಏನೋ ತಿಳಿಯದು. 'ವರ್ಗತ್ರಿಯಕ್ಷರಂ' ಎಂಬುದು ಪವರ್ಗದ ಪ, ಬ, ಮ ಎಂಬ ಮೂರು ಅಕ್ಷರಗಳನ್ನು ಕುರಿತುದಾಗಿರಬೇಕು. 'ಪಾನುಂ(?)' ಇಲ್ಲಿ ದಂತ್ಯ ನ ಕಾರ ಸೇರಿರುವುದು ತಪ್ಪಾಗಿಯೇ ಎನ್ನುವುದು ನಿಶ್ಚಯ. ಪದ್ಯಪಾಠವನ್ನು ತೃಪ್ತಿಕರವಾಗಿ ಪರಿಷ್ಕರಿಸುವುದು ತೀರ ಕಷ್ಟ. ಅಕ್ಷರಗಳ ಸಂಖ್ಯೆ ಕಡಿಮೆ ಬಿದ್ದಿರುವುದೂ ಸಾಧ್ಯ. ಇದೇನು ಶ್ಲೋಕವೋ ಅಥವಾ ಮತ್ತಾವುದಾದರೂ ವರ್ಣವೃತ್ತವೋ ಎನ್ನುವುದನ್ನು ಗುರುತಿಸಲೂ ಕಷ್ಟವಾಗುತ್ತದೆ.[3]

೩

ಸ್ವರಚಿತ್ರಗಳು

ನಿರ್ದಿಷ್ಟಸ್ವರಸಹಿತವಾದ ಪದ ಪದಾಂಶಗಳಿಂದ ಕೂಡಿದ ಪದ್ಯಗಳನ್ನು ರಚಿಸುವುದು, ಚಿತ್ರಕಾವ್ಯಪ್ರಕಾರಗಳಲ್ಲಿ 'ಸ್ವರಚಿತ್ರ'ವೆನಿಸುವುದು. ಇದರಲ್ಲಿ ಹ್ರಸ್ವವೋ ದೀರ್ಘವೋ ಆದ ನಿರ್ದಿಷ್ಟವಾದೊಂದು ಸ್ವರವನ್ನು ಬಳಸುವುದು ಒಂದು ವಿಧವಾದರೆ, ಹ್ರಸ್ವವೋ ದೀರ್ಘವೂ ಆದ ಒಂದಕ್ಕಿಂತ ಹೆಚ್ಚಿನ ಸ್ವರಗಳನ್ನು ಬಳಸುವುದು

ಇನ್ನೊಂದು ವಿಧ. ಈ ಸ್ವರಗಳ ಸಂಯೋಜನೆಯಲ್ಲಿ ಒಂದು ನಿರ್ದಿಷ್ಟವಾದ ಕ್ರಮವನ್ನು ಸಾಮಾನ್ಯವಾಗಿ ಅನುಸರಿಸಿರುತ್ತದೆ.

ದಂಡಿ ಕ್ರಮವಾಗಿ ಚತುಃಸ್ವರ, ತ್ರಿಸ್ವರ, ದ್ವಿಸ್ವರ ಹಾಗೂ ಏಕಸ್ವರಗಳೆಂಬ ೪ ಸ್ವರಚಿತ್ರಗಳನ್ನು ಕುರಿತಿದ್ದರೆ, ಭೋಜನು ಹ್ರಸ್ವೈಕಸ್ವರ–ದೀರ್ಘೈಕಸ್ವರ, ಹ್ರಸ್ವದ್ವಿಸ್ವರ–ದೀರ್ಘದ್ವಿಸ್ವರ ಎಂದೂ, ತ್ರಿಸ್ವರಗಳಲ್ಲಿ ಹ್ರಸ್ವತ್ರಿಸ್ವರ ಹಾಗೂ ಚತುಃಸ್ವರಗಳಲ್ಲಿ ದೀರ್ಘಸ್ವರ ಎಂದೂ ೬ ಭೇದಗಳನ್ನು ಕುರಿತಿದ್ದಾನೆ. ಸ್ವರಚಿತ್ರಗಳಲ್ಲಿ ಹಲವು ಅಂತರ್ಭೇದಗಳು ಹೊರಡುವುದು ಶಕ್ಯವಿದ್ದರೂ,ಇಬ್ಬರೂ ಮಾದರಿಗೆ ಕೆಲವನ್ನು ಮಾತ್ರ ಲಕ್ಷಣಿಸಿರುವರೆಂದು ಸುಲಭವಾಗಿ ಊಹಿಸಬಹುದಾಗಿದೆ.

ಭೋಜದೇವನು ಸ್ವರಚಿತ್ರಗಳ ನಿರೂಪಣೆಯಲ್ಲಿ ದಂಡಿಯನ್ನು ಅನುಸರಿಸಿದ್ದರೂ ಹೆಚ್ಚು ಪರಿಷ್ಕಾರವಾಗಿಯೂ ಅಧಿಕವಿವರಗಳ ಸಹಿತವಾಗಿಯೂ ವಿಷಯವನ್ನು ಪ್ರತಿಪಾದಿಸಿರುವುದರಿಂದ ಮುಂದಿನ ಪರಿಶೀಲನೆಯಲ್ಲಿ ಆತನ ಕ್ರಮವನ್ನೇ ಅನುಸರಿಸಿದೆ. ಇಲ್ಲಿಯ ಕೆಲವು ಉದಾಹರಣೆಗಳನ್ನು ಹೇಮಚಂದ್ರನು ಸಹ ಸ್ವೀಕರಿಸಿದ್ದಾನೆ (ಸೂ. ೧೧೮ ವ್ಯಾಖ್ಯಾನ ಭಾಗ). 'ಸ್ವರಚಿತ್ರ'ವೆಂಬ ಪರಿಭಾಷೆ ಭೋಜನದೇ ಆಗಿದೆ.

ಹ್ರಸ್ವೈಕಸ್ವರ

ಒಂದೇ ವಿಧವಾದ ಹ್ರಸ್ವಸ್ವರವನ್ನು ಉಪಯೋಗಿಸಿ ಪದ್ಯವನ್ನು ರಚಿಸುವುದು 'ಹ್ರಸ್ವೈಕಸ್ವರ' ಸ್ವರಚಿತ್ರವೆನಿಸುವುದು. ಲಕ್ಷ್ಯವನ್ನು ಗಮನಿಸಿ ಹೇಳಬಹುದಾದರೆ, ಈ ಹ್ರಸ್ವೈಕಸ್ವರ ಪದ್ಯದಲ್ಲಿ ತಾನೇ ಸ್ವತಂತ್ರವಾಗಿ ಬರಬಹುದು ಇಲ್ಲವೆ ಯಾವುದೇ ವ್ಯಂಜನದ ಜೊತೆಯಲ್ಲಿ ಸೇರಿ ಗುಣಿತಾಕ್ಷರರೂಪದಲ್ಲಿ ಬರಬಹುದು.

ಉರುಗುಂ ದ್ಯುಗುರುಂ ಯುತ್ಸು ಚುಕುಶುಸ್ತುಷ್ಟುವುಃ ಪುರು ।
ಲುಲುಭುಃ ಪುಪುಷುರ್ಮುತ್ಸು ಮುಮುಹುರ್ನು ಮುಹುರ್ಮುಹುಃ ॥೨೭೬॥

ಇಲ್ಲಿ ಹ್ರಸ್ವೈಕಸ್ವರವಾದ ಉಕಾರವನ್ನು ಮಾತ್ರ ಉಪಯೋಗಿಸಿದೆ.

ದೀರ್ಘೈಕಸ್ವರ

ಒಂದೇ ವಿಧವಾದ ದೀರ್ಘಸ್ವರವನ್ನು ಉಪಯೋಗಿಸಿ ಪದ್ಯವನ್ನು ರಚಿಸುವುದು 'ದೀರ್ಘೈಕಸ್ವರ' ಸ್ವರಚಿತ್ರವೆನಿಸುವುದು.

ನೈಧೈರೈನೈರೈಶೈರೈನ್ದ್ರೈರೈಜೈರೈಲೈರ್ಜೈನೈಃ ಸೈದ್ಧೈಃ ।
ಮೈತ್ರೈರ್ನೈಕೈರ್ಧೈರ್ಯೈರ್ವೈರೈರ್ದೈಃ ಸ್ವೈಃ ಸ್ವೈರೈರ್ದೈವೈಸ್ತ್ರೈಸ್ತ್ರೈಃ ॥೨೭೭॥

ಇಲ್ಲಿ ದೀರ್ಘೈಕಸ್ವರವಾದ ಐಕಾರವನ್ನು ಮಾತ್ರ ಉಪಯೋಗಿಸಿದೆ ('ಕಾವ್ಯಾದರ್ಶ'ದಲ್ಲಿ ಸರ್ವತೋಭದ್ರದ ಲಕ್ಷ್ಯವನ್ನೇ ಹ್ರಸ್ವ-ದೀರ್ಘಗಳೆಂದು ಬೇರ್ಪಡಿಸದೆ, 'ಏಕಸ್ವರ' ಲಕ್ಷ್ಯವಾಗಿ ಪುನರುದಾಹರಿಸಿದೆ.)

ಹ್ರಸ್ವದ್ವಿಸ್ವರ

ಯಾವುವಾದರೂ ಎರಡು ವಿಧವಾದ ಹ್ರಸ್ವಸ್ವರಗಳನ್ನು ಉಪಯೋಗಿಸಿ ಪದ್ಯವನ್ನು ರಚಿಸುವುದು 'ಹ್ರಸ್ವದ್ವಿಸ್ವರ' ಸ್ವರಚಿತ್ರವೆನಿಸುವುದು. ಲಕ್ಷ್ಯವನ್ನು ಗಮನಿಸಿ ಹೇಳಬಹುದಾದರೆ, ಪದ್ಯದ ಒಂದು ಅರ್ಧ ಒಂದು ವಿಧವಾದ ಹ್ರಸ್ವಸ್ವರ ಸಹಿತವಾಗಿಯೂ ಇನ್ನೊಂದು ಅರ್ಧ ಇನ್ನೊಂದು ವಿಧವಾದ ಹ್ರಸ್ವಸ್ವರ ಸಹಿತವಾಗಿಯೂ ಇರಬಹುದು.

ಕ್ಷಿತಿಸ್ಥಿತಿಮಿತಿಕ್ಷಿಪ್ತಿವಿಧಿವಿನ್ನಿಧಿಸಿದ್ಧಿಲಿಟ್ ।
ಮಮ ತ್ರ್ಯಕ್ಷ ನಮದ್ದಕ್ಷ ಹರ ಸ್ಮರಹರ ಸ್ಮರ ॥೨೭೮॥

ಈ ಶ್ಲೋಕದ ಮೊದಲರ್ಧದಲ್ಲಿ ಹ್ರಸ್ವ ಇಕಾರವೂ ಎರಡನೆಯ ಅರ್ಧದಲ್ಲಿ ಹ್ರಸ್ವ ಅಕಾರವೂ ಕ್ರಮ ತಪ್ಪದೆ ಬಂದಿವೆ.

ದೀರ್ಘದ್ವಿಸ್ವರ

ಯಾವುವಾದರೂ ಎರಡು ವಿಧವಾದ ದೀರ್ಘಸ್ವರಗಳನ್ನು ಉಪಯೋಗಿಸಿ ಪದ್ಯವನ್ನು ರಚಿಸುವುದು 'ದೀರ್ಘದ್ವಿಸ್ವರ' ಸ್ವರಚಿತ್ರವೆನಿಸುವುದು. ಲಕ್ಷ್ಯವನ್ನು ಗಮನಿಸಿ ಹೇಳಬಹುದಾದರೆ ಇಲ್ಲಿಯೂ ಪದ್ಯದ ಒಂದು ಅರ್ಧ ಒಂದು ವಿಧವಾದ ದೀರ್ಘಸ್ವರ ಸಹಿತವಾಗಿಯೂ ಇನ್ನೊಂದು ಅರ್ಧ ಇನ್ನೊಂದು ವಿಧವಾದ ದೀರ್ಘಸ್ವರ ಸಹಿತವಾಗಿಯೂ ಇರಬಹುದು.

ಶ್ರೀದೀಪ್ತೀ ಹ್ರೀಕೀರ್ತೀ ಧೀನೀತೀ ಗೀಃಪ್ರೀತೀ ।
ಏಧೇತೇ ದ್ವೇ ದ್ವೇ ತೇ ಯೇ ನೇಮೇ ದೇವೇಶೇ ॥ (ಕಾ. ೩–೮೬; ಸ. ೨–೨೮೯)

ಈ ಪದ್ಯದ ಮೊದಲರ್ಧದಲ್ಲಿ ದೀರ್ಘ ಈ ಕಾರವೂ ಎರಡನೆಯ ಅರ್ಧದಲ್ಲಿ ದೀರ್ಘ ಏಕಾರವೂ ಅನುಕ್ರಮವಾಗಿ ಬಂದಿವೆ. (''ಇತೀಕಾರಸ್ಯೈಕಾರಸ್ಯ ಚ ಪ್ರಯುಕ್ತೇರ್ದ್ವಿಸ್ವರೋಽಯಂ ಶ್ಲೋಕಃ''–ರತ್ನಶ್ರೀಜ್ಞಾನ).

ಹ್ರಸ್ವತ್ರಿಸ್ವರ

ಯಾವುವಾದರೂ ಮೂರು ವಿಧವಾದ ಹ್ರಸ್ವಸ್ವರಗಳನ್ನು ಉಪಯೋಗಿಸಿ ಪದ್ಯವನ್ನು ರಚಿಸುವುದು 'ಹ್ರಸ್ವತ್ರಿಸ್ವರ' ಸ್ವರಚಿತ್ರವೆನಿಸುವುದು. ಲಕ್ಷ್ಯವನ್ನು ಗಮನಿಸಿ ಹೇಳುವುದಾದರೆ, ಪದ್ಯದ ಮೊದಲ ಮೂರು ಪಾದಗಳು ಒಂದೊಂದು ವಿಧವಾದ ಹ್ರಸ್ವಸ್ವರ ಸಹಿತವಾಗಿಯೂ ನಾಲ್ಕನೆಯದು ಇವುಗಳ ಸಮ್ಮಿಶ್ರಣವಾಗಿಯೂ ಇರುವುದು ಸಾಧ್ಯವೆಂದು ಹೇಳಬೇಕು.

ಕ್ಷಿತಿವಿಜಿತಿಕ್ಷಿತಿವಿಹಿತಿ । ವ್ರತರತಯಃ ಪರಗತಯಃ ।
ಉರು ರುರುಧುರ್ಗುರು ದುಧುವುಃ । ಸ್ವಮರಿಕುಲಂ ಯುಧಿ ಕುರವಃ ॥೨೮೦॥

ಈ ಪದ್ಯದಲ್ಲಿ (ಕಾವ್ಯಾದರ್ಶದಲ್ಲಿ ಕೊನೆಯ ಪಾದದ ಪಾಠ ''ಯುಧಿ ಕುರವಃ ಸ್ವಮರಿಕುಲಮ್'' ಎಂಬುದಾಗಿದೆ). ಮೊದಲ ಪಾದದಲ್ಲಿ ಹ್ರಸ್ವ ಇಕಾರವೂ, ಎರಡನೆಯ ಪಾದದಲ್ಲಿ ಹ್ರಸ್ವ ಅಕಾರವೂ, ಮೂರನೆಯ ಪಾದದಲ್ಲಿ ಹ್ರಸ್ವ ಉಕಾರವೂ, ನಾಲ್ಕನೆಯ ಪಾದದಲ್ಲಿ ಇವುಗಳ ಮಿಶ್ರಣವೂ ಉಪಯೋಗವಾಗಿವೆ. (''ಅಯಮಿಕಾರಾಕಾರೋಕಾರ ಮಾತ್ರ ಪ್ರಯೋಗಾತ್ ತ್ರಿಸ್ವರಃ ಶ್ಲೋಕ ಇತಿ''–ರತ್ನಶ್ರೀಜ್ಞಾನ).

ಚತುಃಸ್ವರಗಳಲ್ಲಿ ದೀರ್ಘಸ್ವರ

ಯಾವುವಾದರೂ ನಾಲ್ಕು ವಿಧವಾದ ದೀರ್ಘಸ್ವರಗಳನ್ನು ಉಪಯೋಗಿಸಿ ಪದ್ಯವನ್ನು ರಚಿಸುವುದು ಚತುಃಸ್ವರಗಳಲ್ಲಿ ದೀರ್ಘಸ್ವರವೆನಿಸುವುದು. ಲಕ್ಷ್ಯವನ್ನು ಗಮನಿಸಿ ಹೇಳುವುದಾದರೆ, ಶ್ಲೋಕದ ಪ್ರತಿಪಾದದಲ್ಲಿಯೂ ಒಂದೊಂದು ವಿಧವಾದ ದೀರ್ಘಸ್ವರ ಬಳಕೆಯಾಗಿರುವುದು ಸಾಧ್ಯ ಎನ್ನಬಹುದು.

ಆಮ್ನಾಯಾನಾಮಾಹಾನ್ತ್ಯಾ ವಾ । ಗ್ಗೀತೀರೀತೀಃ ಪ್ರೀತೀರ್ಭೀತೀಃ ।
ಭೋಗೋ ರೋಗೋ ಮೋಹೋ ಮೋದೋ । ಧ್ಯೇಯೋ ವೇಚ್ಛೇತ್ಕ್ಷೇಮೇ ದೇಶೇ ॥
(ಕಾ. ೩-೮೪; ಸ. ೨–೨೮೧)

ಇಲ್ಲಿ ಈ ಶ್ಲೋಕದ (ಕಾವ್ಯಾದರ್ಶದಲ್ಲಿ ಕೊನೆಯ ಪಾದದ ಪಾಠ ''ಧ್ಯೇಯೋ ಚೇಚ್ಛೇ ದೇಶೇ ಕ್ಷೇಮೇ'' ಎಂಬುದಾಗಿದೆ) ಪ್ರತಿಪಾದದಲ್ಲಿಯೂ ಒಂದೊಂದು ವಿಧವಾದ ದೀರ್ಘಸ್ವರವನ್ನು ಬಳಸಿದ್ದು, ಮೊದಲ ಪಾದದಲ್ಲಿ ಆ ಕಾರ, ಎರಡನೆಯದರಲ್ಲಿ ಈ ಕಾರ, ಮೂರನೆಯದರಲ್ಲಿ ಓ ಕಾರ, ನಾಲ್ಕನೆಯದರಲ್ಲಿ ಏ ಕಾರ ಇವು ಅನುಕ್ರಮವಾಗಿ ಬಳಕೆಯಾಗಿವೆ. (''ಆಕಾರಸ್ಯ ಈಕಾರಸ್ಯ ಓಕಾರಸ್ಯ ಏಕಾರಸ್ಯೈವ ಚ ಪ್ರಯೋಗಾತ್ ಚತುಃಸ್ವರೋಽಯಂ ಶ್ಲೋಕ ಇತಿ''–ರತ್ನಶ್ರೀಜ್ಞಾನ).

ಪ್ರತಿವ್ಯಂಜನವಿನ್ಯಸ್ತಸ್ವರ

ಪ್ರತಿಯೊಂದು ವ್ಯಂಜನದೊಂದಿಗೆ ಯಾವುದಾದರೂ ಸ್ವರವೊಂದು ಸೇರಿರುವಂತೆ, ಎಂದರೆ ವ್ಯಂಜನ ವಿರಹಿತವಾಗಿ ಸ್ವರವೇ ಎಲ್ಲಿಯೂ ಬಳಕೆಯಾಗಿರದಂತೆ ಇರುವುದು 'ಪ್ರತಿವ್ಯಂಜನವಿನ್ಯಸ್ತಸ್ವರ' ಚಿತ್ರವೆನಿಸುವುದು.

ತಾಪೇನೋಽಗ್ರ್ಯೋಽಸ್ತು ದೇಹೇ ನೋ ಹೇಯೋ ವಿಲ್ಲೋಽಭಿನಿನ್ದಿನಾ ।
ಜಾಯಾಗ್ರೇ ಹಿ ಗುಣಿಪ್ರೇಷ್ಠೇ ಹಿತೋಽಕ್ಷೇಪೋಽವ್ಯತೋಽಕ್ಷಿಣಿ ॥೨೮೨॥

ಅಪಾಸ್ತಸಮಸ್ತಸ್ವರ

'ಪ್ರತಿವ್ಯಂಜನವಿನ್ಯಸ್ತಸ್ವರ' ಚಿತ್ರದ ಲಕ್ಷ್ಯದಲ್ಲಿ ವಿನ್ಯಾಸಗೊಂಡ ಅಕಾರೇತರ ಸ್ವರಗಳನ್ನೆಲ್ಲಾ ತೆಗೆದು ಹಾಕಿದರೆ ಅದು 'ಅಪಾಸ್ತಸಮಸ್ತಸ್ವರ' ಚಿತ್ರವೆನಿಸುವುದು.

ತಪನ ಗ್ರಸ್ತದಹನ ಹಯವಲ್ಲಭನನ್ದನ ।
ಜಯಗ್ರಹ ಗಣಪ್ರಷ್ಠ ಹತಕ್ಷಪ ಮತಕ್ಷಣ ॥೨೮೩॥

ಸಂಸ್ಕೃತ ಸಾಹಿತ್ಯದಲ್ಲಿ ಕೆಲವು ಸ್ವರಚಿತ್ರಗಳು

ಕಾವ್ಯಸ್ಥವಾದ ಉದಾಹರಣೆಗಳು ಗೋಚರಿಸುತ್ತಿಲ್ಲ. ಇದಕ್ಕೆ ಕಾರಣವೇನೋ ತಿಳಿಯದು. ಪ್ರಸ್ತುತ ದಂಡಿ, ಭೋಜ ಹೇಮಚಂದ್ರರ ಅಲಂಕಾರ ಗ್ರಂಥಗಳಲ್ಲಿ ನಿರೂಪಣೆಯಿರುವುದರಿಂದ ಅವನ್ನೇ ಮಾದರಿಗಳಾಗಿ ನಾವು ಗ್ರಹಿಸಬಹುದಾಗಿದೆ. ವಿರಳವಾಗಿ ಗೋಚರಿಸುವ ಒಂದು ನಿದರ್ಶನ, 'ನರನಾರಾಯಣಾನಂದ' ಕಾವ್ಯದಲ್ಲಿದೆ.

ಹ್ರಸ್ವೈಕಸ್ವರ

ಅಗ್ರ್ಯಃ ಪ್ರತ್ಯಗ್ರವಲ್ಗತ್ತರಲತರಶರಂ ನಸ್ವಯಂ ಧನ್ವದಂಡಂ
ಚಂಡಂ ಕರ್ಷನ್ನಮರ್ಷಪ್ರಸರರಸಲಸದ್ಗರ್ವಸರ್ವಸ್ವವಶ್ಯಃ
ವರ್ಷನ್ ಹರ್ಷಪ್ರಕರ್ಷಂ ಗಗನತಲಗತಸ್ವರ್ಗಸದ್ವರ್ಗಮಂತಃ
ಪ್ರತ್ಯಕ್ಷತ್ರ್ಯಕ್ಷಕಲ್ಪಃ ಪ್ರಬಲಪರಬಲಧ್ವಂಸನಂ ಸ ವ್ಯಧತ್ತ ॥ (೧೪–೩೬)

ಇಲ್ಲಿ ಹ್ರಸ್ವ ಅಕಾರಸ್ವರವೊಂದನ್ನೇ ಬಳಸಿದೆ; ಮಾತೃಕೆಯಲ್ಲಿ 'ಆದ್ಯಸ್ವರಃ' ಎಂಬುದಾಗಿ ಕರೆದಿದೆ.

'ಕವಿರಾಜಮಾರ್ಗ' ಕಾವ್ಯಾವಲೋಕನಾದಿಗಳಲ್ಲಿ ಸ್ವರಚಿತ್ರಗಳು

'ಕವಿರಾಜಮಾರ್ಗ' 'ಕಾವ್ಯಾವಲೋಕನ'ಗಳಲ್ಲಿ ಸ್ವರಚಿತ್ರಗಳ ಪ್ರಸ್ತಾವವೇ ಇಲ್ಲ. 'ಕಾವ್ಯಾದರ್ಶ'ದಲ್ಲಿ ೪ ಸ್ವರಚಿತ್ರ ಭೇದಗಳು ನಿರೂಪಿತವಾಗಿದ್ದು 'ಕವಿರಾಜಮಾರ್ಗ'ದಲ್ಲಿ ಇವುಗಳನ್ನು ಕುರಿತಿಲ್ಲದಿರುವುದರ ಕಾರಣ ವೇನೋ ತಿಳಿಯದು; 'ಮಾಧವಾಲಂಕಾರ'ದಲ್ಲಿ, ಈಗ ಹಸ್ತಪ್ರತಿಯ ಅಸ್ತವ್ಯಸ್ತತೆಯ ದೆಸೆಯಿಂದ, ಕುರಿತಿದ್ದಿತೋ ಇಲ್ಲವೋ ಹೇಳುವುದು ಕಷ್ಟ. ಕಾವ್ಯಾವಲೋಕನಕಾರನು, ಸಾಮಾನ್ಯವಾಗಿ ರುದ್ರಟನ 'ಕಾವ್ಯಾಲಂಕಾರ'ವನ್ನು ಚಿತ್ರಕಾವ್ಯದ ವಿಷಯದಲ್ಲಿ ಅನುಸರಿಸುವವನು. ಅಲ್ಲಿ ಈ ಚಿತ್ರಭೇದದ ಪ್ರಸ್ತಾವವಿಲ್ಲವೆಂಬುದರಿಂದ ತಾನೂ ಹೇಳದೆ ಬಿಟ್ಟಿರಬಹುದು; ಹೀಗೆ ಬಿಡಲು 'ಕವಿರಾಜಮಾರ್ಗ'ದಲ್ಲಿಯ ಲೋಪವೂ ಕಾರಣವಾಗಿರಬಹುದು.

ಕನ್ನಡ ಸಾಹಿತ್ಯದಲ್ಲಿ ಸ್ವರಚಿತ್ರಗಳ ಕೆಲವು ನಿದರ್ಶನಗಳು

ಪ್ರಾಚೀನ ಮತ್ತು ಅರ್ವಾಚೀನ ಕನ್ನಡ ಸಾಹಿತ್ಯದ ಕೆಲವು ಕೃತಿಗಳಲ್ಲಿ ಸ್ವರಚಿತ್ರಗಳ ಕೆಲವು ನಿದರ್ಶನ ಗಳು ಕಂಡುಬರುತ್ತವೆ. ಇವುಗಳಲ್ಲಿ ಸಂಸ್ಕೃತ ಲಾಕ್ಷಣಿಕರು ನಿರೂಪಿಸಿರುವ ಮಾದರಿಗಳಲ್ಲಿ ಕೆಲವು ಮಾತ್ರವೇ ಕಾಣುತ್ತವೆ; ಅಲ್ಲಿ ನಿರೂಪಿಸಿರದ ಒಂದೆರಡು ಮಾದರಿಗಳನ್ನು ಸ್ವತಃ ಕಲ್ಪಿಸಿರುವಂತೆಯೂ ತೋರುತ್ತದೆ.

ಚಂದ್ರರಾಜನ 'ಮದನತಿಲಕ'ವನ್ನು ಹೊರತುಪಡಿಸಿದರೆ, ನಡುಗನ್ನಡ ಕಾಲದ ಬ್ರಾಹ್ಮಣ ವೀರಶೈವ ಕವಿಗಳಲ್ಲಿ ಈ ಬಗೆಯ ರಚನೆಗಳು ಹೆಚ್ಚಾಗಿ ದೊರೆಯುತ್ತವೆ. ಹೀಗೆ ಹೆಚ್ಚಾಗಿ ದೊರೆಯತಕ್ಕವುಗಳಲ್ಲಿ ಸ್ವರಚಿತ್ರಗಳ ಸೀಮೆಯನ್ನು ವಿಸ್ತರಿಸಿದ ಬಗೆಗಳುಂಟು. ಇವುಗಳಲ್ಲಿ ಗುಣಿತಚಿತ್ರಗಳು ಗಣ್ಯವಾದವು.

ಕನ್ನಡ ಸಾಹಿತ್ಯದಲ್ಲಿ ಹ್ರಸ್ವೈಕಸ್ವರದ ಕೆಲವು ಚಿತ್ರಗಳು ಕಂಡುಬಂದಿವೆ; ಸವರ್ಣೈಕಸ್ವರ, ದ್ವಿಸವರ್ಣ ಸ್ವರ ಎಂಬ ಎರಡು ನಾದರಿಗಳು ಹೊಸ ರೀತಿಯವು. ದಂಡಿ ಭೋಜರು ನಿರೂಪಿಸಿರುವ ಹಲವು ಸ್ವರಚಿತ್ರಗಳಲ್ಲಿ ಹ್ರಸ್ವದೀರ್ಘಗಳು ಪ್ರತ್ಯೇಕವಾಗಿ ಪರಿಗಣಿಸಲ್ಪಟ್ಟರೆ, ಕನ್ನಡದಲ್ಲಿ ಸವರ್ಣಗಳು ಒಟ್ಟಿಗೆ ಪರಿಗಣಿಸಲ್ಪಡುತ್ತವೆ ಎನ್ನುವುದು ಕೆಲವು ನಿದರ್ಶನಗಳ ಮೂಲಕ ಬಹುಮುಖ್ಯವಾಗಿ ಗಮನಿಸಬೇಕಾದ ಸಂಗತಿ. ಶೋಧಿಸಿದರೆ ದಂಡಿ ಭೋಜರು ತಿಳಿಸಿರುವಂತಹ ಸ್ವರಚಿತ್ರಗಳ ನಿದರ್ಶನಗಳೂ ಕಾಣಲು ದೊರೆಯಬಹುದು.

ಹ್ರಸ್ವೈಕಸ್ವರ

ಪದ್ಮಣಾಂಕನ 'ಪದ್ಮರಾಜಪುರಾಣ'ದಲ್ಲಿ :

ಘನರಸಶಯನತನಯಮದಮಥನ ಧವಳಘನ
ಘನವರದ ಶತದಳನಯನನಯನಪದಕಮಳ
ವನದಗಮನಧವ ಶತದಳವರತಪನದಹನನಯನ ಪರತರ ಗದಹರ
ಸನಕನತ ಸಮದಶಯನ ಶಮನಶಮನ ಭವಶ
ಮನ ಭಯಶಮನ ಗರಳಧರ ಗರಳಧರ ಪರಗ
ಮನ ತನಯ ಶಶಧರಧರ ಧರವರಭವನ ಕನದನಘ ಭವಹರಪರಮವ ॥ (೬-೪೦)

ಇದರ ಆಶಯ : ''ಸಮುದ್ರಶಯನನಾದ ವಿಷ್ಣುವಿನ ಮಗ ಮನ್ಮಥನ ಗರ್ವಭಂಗಮಾಡಿದವನು, ಬೆಳ್ಳಗಿನ ಮೈಯವನು, ಶ್ರೇಷ್ಠವರಗಳನ್ನು ನೀಡುವವನು, ವಿಷ್ಣುವಿನ ಕಣ್ಣಿನಿಂದ ಅರ್ಚಿಸಲ್ಪಟ್ಟ ಪಾದಪದ್ಮವನ್ನುಳ್ಳವನು, ಚಂದ್ರ ಸೂರ್ಯ ಮತ್ತು ಅಗ್ನಿಗಳನ್ನೇ ಕಣ್ಣಾಗಿ ಉಳ್ಳವನು, ಶ್ರೇಷ್ಠನು, ರೋಗನಿವಾರಕನು, ಸನಕನಿಂದ ನಮಸ್ಕೃತನಾದವನು, ಯಮನನ್ನು ನಿಗ್ರಹಿಸಿದವನು, ಜನ್ಮವನ್ನು ಹಿಂಗಿಸಿದವನು, ಭಯವನ್ನು ಹೋಗಲಾಡಿಸಿದವನು, ವಿಷಕಂಠನು, ಚಂದ್ರಶೇಖರನು, ಕೈಲಾಸವಾಸಿಯಾದವನು, ಪಾಪರಹಿತನು, ಭವನೆಂದೂ ಹರನೆಂದೂ ಕೀರ್ತಿತನಾದವನು.''

ಇಲ್ಲಿ ಹ್ರಸ್ವ ಅಕಾರವನ್ನು ಮಾತ್ರ ಇಟ್ಟುಕೊಂಡು ಪದ್ಯರಚನೆ ಮಾಡಿದೆ. ಸಂಸ್ಕೃತ ಲಾಕ್ಷಣಿಕರು ಹ್ರಸ್ವ ಅಕಾರವನ್ನು ಸೇರಿಸಿದ ವ್ಯಂಜನವನ್ನು ಸ್ವರಚಿತ್ರದಲ್ಲಿ ಗಣಿಸುವಂತೆ ತೋರುವುದಿಲ್ಲ; ಅಕಾರೇತರ ಸ್ವರಗಳನ್ನು ಲಕ್ಷಿಸುವುದೇ ಸಾಮಾನ್ಯ. ಈ ಧೋರಣೆಯನ್ನು 'ಅಪಾಸ್ತಸಮಸ್ತಸ್ವರ'ದಲ್ಲಿ ನಾವು ಈಗಾಗಲೇ ಗಮನಿಸಿದ್ದೇವೆ. ಇದು ಒಂದು ರೀತಿಯಲ್ಲಿ ಸರಿ. ಅಕಾರಗುಣಿತವ್ಯಂಜನ ಮೂಲವ್ಯಂಜನವಾಗಿಯೇ ಸಾಮಾನ್ಯವಾಗಿ ತಿಳಿಯಲ್ಪಡುವುದು ರೂಢಿ. ಈ ದೃಷ್ಟಿಯಿಂದ ಅಕಾರಗುಣಿತವ್ಯಂಜನ ಆಗುರುವೂ ಆಗಿದ್ದಾಗ, ಅಂತಹ ರಚನೆಗಳು 'ಸರ್ವಲಘು'ಗಳೆಂದೂ 'ತಲೆಕಟ್ಟಿನ ಪದ'ಗಳೆಂದೂ ಮಾತೃಕೆಗಳಲ್ಲಿ ಗುರುತಿಸಲ್ಪಟ್ಟಿರುವುದು ಸಮರ್ಥನೀಯವೇ. ಆದರೆ 'ಸರ್ವಲಘು'ಗಳಲ್ಲಿ ಅಕಾರದೊಂದಿಗೆ ಅಕಾರೇತರ ಸ್ವರಗಳೂ ಸಮ್ಮಿಶ್ರವಾಗಿ ಬರಬಹುದಾದರೆ, 'ತಲೆಕಟ್ಟಿನ ಪದ'ಗಳಲ್ಲಿ ಅಕಾರಮಾತ್ರ ಸ್ವರಗಳೇ ಬಂದಿರುತ್ತವೆ. ಈ ಕಾರಣ ತಲೆಕಟ್ಟಿನ ಪದಗಳು 'ಹ್ರಸ್ವೈಕಸ್ವರ'ದಲ್ಲಿ ಸಮಾವೇಶಗೊಳ್ಳುವುದು ಸಮಂಜಸವಾಗಿದೆ.

ಬಸವಾಂಕನ 'ಉದ್ಭಟದೇವ ಚರಿತೆ'ಯಲ್ಲಿ :

ಶಮನಶಮನ ಮದನಮದಗಹನದವ
ಕಮಳಭವವರದ ಹರ ಗರಳಗಳ ಪ
ರಮ ಪರತರ ಭವ ಭವಭಯಕದಳಚಯದಳನ ಕಳಕಳಭ

ಕಮನ ಧವಳಮಯರದನ ಪವನಪಥ
ಗಮನ ಗಮನತಪದತಳ ಸತತ ಸ
ದಮಳನಗವರನ ಮಗಳ ಮನದ ಸದನ ದರಹಸನವದನ ॥ (೬-೩೪)

ಇದರ ಆಶಯ : ''ಯಮನನ್ನು ನಿಗ್ರಹಿಸಿದವನು, ಮನ್ಮಥನ ಸೊಕ್ಕನ್ನು ಉರುಹಿದ ಕಾಡುಕಿಚ್ಚು, ಬ್ರಹ್ಮನನ್ನು ಅನುಗ್ರಹಿಸಿದವನು, ಹರ, ವಿಷಕಂಠ, ಅತಿಶಯನು, ಶ್ರೇಷ್ಠನು, ಭವ, ಸಂಸಾರದ ಭಯವೆಂಬ ಬಾಳೆಯನ್ನು ಸವರಿದವನು, ಮನೋಹರವಾದ ಆನೆಯ ಮರಿಯ ಚೆಲುವಾದ ಬಿಳಿಯ ದಂತದಂತಿರುವ ಆಕಾಶಮಾರ್ಗದಲ್ಲಿ ಚಲಿಸುವವನು, ಪರ್ವತೇಶ್ವರನ ಮಗಳ ಮನಸ್ಸಿನ ಮನೆಯೆನಿಸಿದವನು, ಮುಗುಳ್ನಗೆಯ ಮುಖವುಳ್ಳವನು.''

ಇಲ್ಲಿಯೂ ಹ್ರಸ್ವೈಕ ಸ್ವರವಾಗಿ ಅಕಾರವನ್ನು ಬಳಸಿ ಪದ್ಯವನ್ನು ರಚಿಸಿದೆ. ಗ್ರಂಥದ ಒಂದು ಹಸ್ತಪ್ರತಿಯಲ್ಲಿ 'ತಲೆಕಟ್ಟಿನ ಪದ'ವೆಂದೂ ಇನ್ನೊಂದರಲ್ಲಿ 'ಸರ್ವಲಘು'ವೆಂದೂ ಕರೆದಿದೆ.

ಎಳಂದೂರ ಹರೀಶ್ವರನ 'ಪ್ರಭುದೇವರ ಪುರಾಣ'ದಲ್ಲಿ

ಶತದಶಕಶಯನನರನತ ಸರಳಗರಳಗಳ
ಸತತಘನಕನಕನಗಸತ್ನದನ ಗದಗಹನ
ತ[ತ್ರಿ]ದಹನಕರ ತರಳನಯನ ನಯದಯಗ ದರಹಸನ ಶಶಿ(?)ಧರಶಕಲಕ
ಗತಕಹರ ಗಗನಕಚ ಸಚರಚರರಚನಗತ
ತತಚಯದ ಸಹಸಯಶ ದಶಶತಕದಳಶರನ
ಹತ ಚಳಳಕ(?) ಕಳಕಳನಕರರದನ ಘನರಥನ ಸು(?)ತನಯ ಕದನಕಥನ ॥ (೯-೧೬೦)

ಪ್ರಾಚೀನ ಟೀಕೆಯನ್ನಾಧರಿಸಿದ ಅರ್ಥ : ''ಸಾವಿರ ತಲೆಗಳ ಶೇಷನ ಮೇಲೆ ಮಲಗಿರುವ ವಿಷ್ಣುವಿನಿಂದಲೂ ಬ್ರಹ್ಮನಿಂದಲೂ ನಮಸ್ಕೃತನು, ವಿಷಕಂಠನು, ಘನವಾದ ಮೇರುಪರ್ವತದಲ್ಲಿ ನೆಲಸಿದವನು, ರೋಗಗಳೆಂಬ ಅರಣ್ಯಗಳ ಸಮೂಹವನ್ನು ಸುಟ್ಟವನು, ಹೊಳೆಯುವ ಕಣ್ಣುಳ್ಳವನು, ಮೃದುತರವಾದ ಕರುಣೆಯ ವೃಷಭದ ಮೇಲೆ ಸಾಗುವವನು, ಮುಗುಳ್ನಗೆಯುವನು, ಚಂದ್ರಲೇಖೆಯನ್ನು ತಲೆಯಲ್ಲಿ ಧರಿಸಿದವನು, ಕಪಟವನ್ನು ತೊರೆದವನು, ವ್ಯೋಮಕೇಶಿ, ಚರ ಅಚರಗಳನ್ನು ರಂಜಿಸುವವನು, ಅತಿಶಯ ಸಾಮರ್ಥ್ಯದ ಕೀರ್ತಿಯುಳ್ಳವನು, ಸಹಸ್ರದಲ ಕಮಲವು ಬಾಣವಾಗುಳ್ಳ ಮನ್ಮಥನನ್ನು ನಿಗ್ರಹಿಸಿದವನು, ಕುಂದಿಲ್ಲದೆ ಚಕಚಕಿಸುವ ಚಂದ್ರಕಿರಣದ ಹಾಗೆ, ದಂತದ ಹಾಗೆ ಬೆಳ್ಳಗಿರುವ ಮೇಘವೇ ವಾಹನವಾಗುಳ್ಳ ಇಂದ್ರನ ಮಗ ಅರ್ಜುನನೊಂದಿಗೆ ಯುದ್ಧಮಾಡಿದವನು-ಆದಂತಹ ದೇವನೇ ನಿನಗೆ ಜಯವಾಗಲಿ.''

ವರವರದಕರ ಶಮದ ಧರ ದರಹಸನವದನ
ಪರಮಪರತರಶಮನಮದದಮನ ಮದನಮದದಹನ
ಸರಸವಚ ಗಗನಕಚ ಸನಕನತ ಕನಕನಗಸದನ ಗದಗಹನದಹನ
ತರಸಗತ ನಭಚರ[ದ] ನಗರಹತ ಸತತಘನ
ತರತ ಮದಧವಳವವಯವ[ದ] ಗವವರಗ ಭವ
ಹರ ಕಮನ ವನಶಯನನಯನಪದಕಮಳಮಳಗಳತರಳ ಸರಳಗರಳ ॥ (೯-೨೭೨)

ಪ್ರಾಚೀನ ಟೀಕೆಯನ್ನಾಧರಿಸಿದ ಅರ್ಥ : ''ಉತ್ಕೃಷ್ಟವಾದ ಬೇಡಿಕೆಗಳನ್ನು ಈಡೇರಿಸುವ ಕೈಗಳುಳ್ಳವನು, ಸೈರಣೆಯುಳ್ಳವನು, ಮುಗುಳ್ನಗುವ ಮುಖವುಳ್ಳವನು, ಮಹಾತಿಶಯದ ಯಮನ ಗರ್ವವನ್ನೂ ಮನ್ಮಥನ ಗರ್ವವನ್ನೂ ನಿಗ್ರಹಿಸಿದವನು, ಸರಸೋಕ್ತಿಯುಳ್ಳವನು, ವ್ಯೋಮಕೇಶನೆನಿಸಿದವನು, ಸನಕಮುನಿಯಿಂದ ನಮಸ್ಕೃತನು, ಮೇರುವಿನಲ್ಲಿ ನೆಲಸಿದವನು, ರೋಗಗಳೆಂಬ ಅರಣ್ಯವನ್ನು ಸುಟ್ಟವನು, ವ್ಯಾಘ್ರಾಸುರನನ್ನು ಪರಿಹರಿಸಿದವನು, ಗಗನಗಾಮಿಗಳಾದ ತ್ರಿಪುರಗಳನ್ನು ನಾಶಮಾಡಿದವನು, ಸರ್ವದಾ ಗಂಭೀರವಾಗಿ ಸಾಗುವ ಧವಳಶರೀರದ ವೃಷಭದ ಮೇಲೆ ಸಾಗುವವನು, ಸಂಸಾರದಿಂದ ದೂರನಾದವನು, ಮನೋಹರವಾದ ನಾರಾಯಣನ ಕಣ್ಣನ್ನು ಪಾದಕಮಲದಲ್ಲಿ ಉಳ್ಳವನು, ನಿರ್ಮಲವಾದ ಕಂಠದಲ್ಲಿ ತೊಳಗುವ ವಿಷವನ್ನು ಧರಿಸಿದವನು-ಆದಂತಹ ದೇವನೇ ನಿನಗೆ ಜಯವಾಗಲಿ.''

ಇಮ್ಮಡಿ ಮುರಿಗಾ ಗುರುಸಿದ್ಧನ 'ಶಿವಲಿಂಗ ಷಟ್ಪದಿ'ಯಲ್ಲಿ :

ಮದನಮದಧರಮಘವ ಗತಗದ ಸಭಗಗಮನ
ಪದನಯನ ಧನದರತ ಕರಕರದ ಕನಕನಗ
ಸದನ ನಯವಚನ ಗರಧರ ಕರಶರಭ ಗಗನನಗರವನಗಹನದಹನ
ಸದಯ ಶರಭವ ಸರಸ ಸತತ ಶಮ ಶಮನ ಹರ
ಮದಘಘನ ಪವನ ದಶವದನಮದಹನನ ನರ
ಕದನಯುತ ಕಮನತಮವರಭವನ ರಮರಮಸಮವನ ನಮದಮರ ವರಪ ॥ (ಪ. ೮೬)

ಇದರ ಆಶಯ (ಪ್ರಾಚೀನ ಟೀಕೆಯನ್ನು ಅನುಸರಿಸಿ) : ''ಮನ್ಮಥನ ಸೊಕ್ಕೆಂಬ ಪರ್ವತಕ್ಕೆ ದೇವೇಂದ್ರನಾದಂಥ, ಹೋಗಲ್ಪಟ್ಟ ರೋಗವನ್ನುಳ್ಳಂಥ, ಷಡ್ಗುಣೈಶ್ವರ್ಯ ಸಂಪತ್ಸುರವನ್ನುಳ್ಳ, [ವಿಷ್ಣುವಿನ ಕಣ್ಣನ್ನು ಪಾದದಲ್ಲಿ ಉಳ್ಳವನು, ಕುಬೇರನಲ್ಲಿ ಆಸಕ್ತನಾದವನು, ಮೇರುಪರ್ವತದಲ್ಲಿ ನೆಲಸಿದವನು] ಹದುಳವಾದ ವಾಕ್ಯಗಳನುಳ್ಳಂಥ, ವಿಷವನು ಧರಿಸಿದ ಕಂಠ, ಹಸ್ತಗಳಲ್ಲಿ ಸರ್ಪಗಳನುಳ್ಳಂಥ, ಶರಭಾವತಾರಿಯಾದಂಥ, ಆಕಾಶದಲ್ಲಿ ಪಟ್ಟಣಗಳೆಂಬ ಅಟವಿಯನು ಸುಡುವುದಕ್ಕೆ ಅಗ್ನಿಯಾದಂಥ, ಷಣ್ಮುಖದೇವರಲ್ಲಿ ಪ್ರೀತಿಯನುಳ್ಳಂಥ, ನಿರಂತರವಾಗಿ ಅಂತಃಕರಣ ನಿಗ್ರಹವನುಳ್ಳಂಥ, ಯಮನನು ಸಂಹರಿಸಿದಂಥ, [ಹರನೆನಿಸಿದಂಥ, ನನ್ನ] ಪಾಪಗಳೆಂಬ ಮೋಡಗಳಿಗೆ ವಾಯುವಾದಂಥ, ರಾವಣನ ಮದವನು ಇಲ್ಲವಾಗಿಸಿದಂಥ, ಅರ್ಜುನನ ಯುದ್ಧದೊಡನೆ ಉದ್ಯುಕ್ತನಾದಂಥ, ಅತಿಶಯದಿಂದೆ ಮನೋಹರವಾದ ವೃಷಭೇಶ್ವರನಿಗೆ ಮನೋಹರವಾದ ಮಂದಿರವಾದಂಥ, ಲಕ್ಷ್ಮಿಗೆ ಒಡೆಯನಾದ ನಾರಾಯಣನನ್ನು ರಕ್ಷಿಸಿದಂಥ, ನಮಸ್ಕರಿಸಿಕೊಳ್ಳಲ್ಪಟ್ಟ ದೇವತೆಗಳಿಗೆ ಒಡೆಯನಾದ ದೇವೇಂದ್ರನನ್ನು ರಕ್ಷಿಸಿದಂಥ [ಶಿವನೇ, ನಿನಗೆ ನಮಸ್ಕಾರ].''

ಇಲ್ಲಿಯೂ ಹ್ರಸ್ವೈಕಸ್ವರವಾಗಿ ಅಕಾರವನ್ನು ಉಪಯೋಗಿಸಿ ಪದ್ಯರಚನೆ ಮಾಡಿದೆ. ಮಾತೃಕೆಯಲ್ಲಿ 'ಸರ್ವಲಘು ತಲೆಕಟ್ಟಿನ ಪದ' ಎಂದಿದೆ.

ಇದೇ ಕವಿಯ 'ಪಂಚಾಶಿಕೆ'ಯಲ್ಲಿ :

ಯಮಮದನಮದಶಮನ ಶರಭವ
ಮಮತ ಗತಗದಚಯ ಸರಸತಮ
ಕಮನವಚನ ಸದಮರವರ ಭವಶರದ ಕರಕರದ
ಶಮದಮಗತತ ಸವನರತನತ
ಗಮನರಹಕನದಗನಗರಹರ
ರಮರಮಶರಭಪರಮಮಹ ಮಮ ರಕ್ಷ ಹತದಕ್ಷ ॥ (೧೩–೪೨)

ಇದರ ಆಶಯ : ''ಯಮ ಮತ್ತು ಮನ್ಮಥರ ಗರ್ವವನ್ನು ಪರಿಹರಿಸಿದವನು, ಷಣ್ಮುಖನಲ್ಲಿ ವಾತ್ಸಲ್ಯವುಳ್ಳವನು, ರೋಗಗಳ ಸಮೂಹವನ್ನು ಹೋಗಲಾಡಿಸಿದವನು, ಅತ್ಯಂತ ಮನೋಹರವೂ ಸರಸವೂ ಆದ ಮಾತುಗಳುಳ್ಳವನು, ...(?), ದಕ್ಷನನ್ನು ನಿಗ್ರಹಿಸಿದವನು-ಆದವನೇ ನನ್ನನ್ನು ರಕ್ಷಿಸು.''

ಇಲ್ಲಿಯೂ ಹ್ರಸ್ವೈಕಸ್ವರವಾಗಿ ಅಕಾರವನ್ನು ಬಳಸಿ ಪದ್ಯರಚನೆ ಮಾಡಿದೆ. ಇಲ್ಲಿ ಇತರ ನಿದರ್ಶನಗಳಿಗಿಂತ ಭಿನ್ನವಾದ ಒಂದು ಲಕ್ಷಣವೆಂದರೆ 'ರಕ್ಷ' ಮತ್ತು 'ದಕ್ಷ' ಎಂಬ ಪದಗಳಲ್ಲಿ ದ್ವಿತ್ವವಿರುವುದು. ಆದರೆ ಇದರಿಂದ 'ಹ್ರಸ್ವೈಕಸ್ವರ' ಚಿತ್ರದ ಲಕ್ಷಣಕ್ಕೆ ಭಂಗವೇನಿಲ್ಲ. ಮಾತೃಕೆಯಲ್ಲಿ ಈ ನಿದರ್ಶನವನ್ನು 'ತಲೆಕಟ್ಟಿನ ಪದ' ಎಂದಿದೆ; 'ಸರ್ವಲಘು' ಎಂದು ಹೇಳಿಲ್ಲ ಎನ್ನುವುದನ್ನು ಗಮನಿಸಬೇಕು.

ಸವರ್ಣೈಕಸ್ವರ

ಚಂದ್ರರಾಜನ 'ಮದನ ತಿಲಕ'ದಲ್ಲಿ :

ಹರಹಾಸಧವಳ ಕಮಳಾ। ಕರಶರ ಧವಳಾಭ್ರ ಹಾರ ತಾರಾಚಳ ಪಾಂ।
[ಡು]ರಪತ್ರಖಂಡ ತಾರಾಂ। ಬರ [ಗಂ]ಗಾಜಳ ಶಶಾಂಕ ಶಂಕರನಲಯಂ ॥ (೬–೧೨)

ಇದರ ಆಶಯ : ''ಶಿವನ ನಗೆ, ಬೆಳ್ದಾವರೆಯ ಕೊಳದ ಜಲ, ಬೆಳ್ಮುಗಿಲು, ಮುತ್ತಿನ ಹಾರ, ರಜತಾದ್ರಿ, ಬೆಳ್ಳಿಲಿಯ ಎಸಳು, ನಕ್ಷತ್ರಖಚಿತವಾದ ಗಗನ, ಗಂಗೆಯ ನೀರು, ಚಂದ್ರ, ಕೈಲಾಸ (ಇವುಗಳ ಹಾಗೆ ಶುಭ್ರಚರಿತನು ಅಪೇಕ್ಷಣೀಯನಾದ ಇನಿಯನು).''

ಇದು ಮಾತೃಕೆಯ ಪ್ರಕಾರ 'ಅಕಾರಾಂತ ಕಂದ'; ಆದರೆ ಪದರಚನೆಯನ್ನು ಗಮನಿಸಿದರೆ ಒಂದೇ ಸ್ವರದ ಅಕಾರ ಆಕಾರಗಳೆಂಬ ಹ್ರಸ್ವಸ್ವರ ದೀರ್ಘಸ್ವರಗಳೆರಡೂ ಬರಬಹುದೆಂಬುದಾಗಿ ಕವಿ ತಿಳಿದಂತಿದೆ. ಆದ್ದರಿಂದ ಇದನ್ನು ಸವರ್ಣೈಕಸ್ವರವೆಂಬ ಹೊಸ ಹೆಸರಿನಿಂದ ಕರೆಯಬೇಕಾಗಿದೆ.

ದೂರುಂ ದೂರ್ಕುಂ ದುಷ್ಟುಂ। ನೂರುಂಟು ಕುರೂಪು ಕುತ್ಸು ಮುದುಗುರು ಗುರುಳುಂ।
ಸೂರುಳುತುಂ ದುಷ್ಟುಂತುಂ। ದೂರುವುದುಂ ಮುನ್ನುಮುಂತು ಸುಡು [ಬೂ]ತುಂತುಂ॥
(೧೦-೫)

ಇದರ ಆಶಯ ಸ್ಪಷ್ಟವಾಗಿ ಆಗುವಂತಿಲ್ಲ. ತ್ಯಾಜ್ಯರಾಗುವ ವೇಶ್ಯಾಸ್ತ್ರೀಯರ ಬಗ್ಗೆ ಇಲ್ಲಿ ಬರೆದಿರುವಂತಿದೆ. ಇಲ್ಲಿಯ ಶಬ್ದರೂಪಗಳು ಕೆಲವೆಡೆ ಸಂಶಯಾಸ್ಪದವಾಗಿರುವಂತಿದೆ : ಪಾಠಭೇದಗಳೇನೋ ತೋರುತ್ತಿಲ್ಲ. ವಾಸ್ತವವಾಗಿ ರ–ಱ ಕಾರಗಳ ಮಿಶ್ರಪ್ರಾಸದ ಸಂದರ್ಭ ಇಲ್ಲಿಯದು.

ಇದು ಮಾತೃಕೆಯ ಪ್ರಕಾರ 'ಕಿರ್ಗೊತ್ತಿನ ಕಂದ'. ಹಾಗೆಂದರೇನೋ ತಿಳಿಯದು. ನಿದರ್ಶನದ ಸ್ವರೂಪವನ್ನು ಗಮನಿಸಿದರೆ, ಉಕಾರ ಊಕಾರಗಳೆಂಬ ಹ್ರಸ್ವ ದೀರ್ಘಸ್ವರಗಳೆರಡೂ (ಉವರ್ಣ) ಉಪಯೋಗವಾಗಿರುವ ಇನ್ನೊಂದು ಸವರ್ಣೈಕಸ್ವರದ ನಿದರ್ಶನವೆಂದು ಇದನ್ನು ಕರೆಯಬೇಕಾಗುತ್ತದೆ.

ನೆಲೆಯೊಕೆರೆಗೆ ಪೇಳಿನೆ ಕೇಳೆನ್ನೆನೆಯೊ ಯೋಕೆಂಬೆ ನೆನೆನೆನೆವಂ
ಕೆಳೆಡೆಗೆಯ್ವಂ ನೆರೆವೆಂ ನೆರೆಯೆಂ ನೆರವೇಳ್ವಂ॥ (೧೦–೪೪)

ಹೀಗೆ ಮುದ್ರಿತ ಪ್ರತಿಯಲ್ಲಿ ಲಿಖಿತವಾಗಿರುವ ಪಾಠದಿಂದ, ಪದ್ಯದ ಛಂದಸ್ಸು ತೀರ ಅಸ್ತವ್ಯಸ್ತಗೊಂಡಿರುವುದನ್ನು ಸುಲಭವಾಗಿ ತಿಳಿಯಬಹುದು. ಕಂದಪದ್ಯವಿದ್ದಿರಬಹುದೇನೋ ? ಆದರೆ ಅದಕ್ಕೆ ಸಾಕಾಗುವಷ್ಟು ಮಾತ್ರೆಗಳಿಲ್ಲ. ಪ್ರಾಸಸ್ಥಾನದ ಹೊಂದಿಕೆಯಿಲ್ಲ. ಗ. ಪ್ರತಿಯ ಪಾಠದ ಸಹಾಯದಿಂದ ಅರ್ಥಾನುಕೂಲತೆಗಾಗಿ ಹೀಗೆ ಗದ್ಯರೂಪವಾಗಿ ಪಾಠವನ್ನು ಕೂಡಿಸಬಹುದು, ತಾತ್ಕಾಲಿಕವಾಗಿ :

''ಎಲೆಯೋಕೆಲೆಗೇ ಕೇಳಿನೆ, ಕೇಳಿಂ; ನೆನೆಯೆನೆ ನೆನೆಯೆಂ; ಏಕೆಂಬೆನೆ,
ನೆನೆದೇವೆಂ; ಕೇಳಿಡೆಗೆಯ್ದಂ; ನೆರೆವೆನೆ; ನೆರೆಯೆಂ; ನೆರೆವೇಟ್ಟಿಂ''

ಇಲ್ಲಿಯೂ ಮಾತೃಕೆಯಲ್ಲಿ 'ಏಕಾರಾಂತಮುಕ್ಕುಂ' ಎಂದಿದ್ದರೂ, ಎಕಾರ ಏಕಾರಗಳೆಂಬ ಹ್ರಸ್ವ ದೀರ್ಘಸ್ವರಗಳೆರಡೂ (ಎವರ್ಣ) ಉಪಯೋಗವಾಗಿರುವ ಸವರ್ಣೈಕಸ್ವರದ ನಿದರ್ಶನವೆಂಬುದಾಗಿ ಇದನ್ನು ತಿಳಿಯಬೇಕಾಗಿದೆ.

೬–೧೫ರ ಲಕ್ಷ್ಯ : ಕ ಪ್ರತಿಯಲ್ಲಿ 'ಓಕಾರಾಂತ ಕಂದ' ಎಂದೂ ಗ ಪ್ರತಿಯಲ್ಲಿ 'ಓಕಾರಾಂತ ಕಂದ॥ ಅನುಷ್ಟುಪ್' ॥ ಎಂದೂ ಇದ್ದು, ಛಂದಸ್ಸಿನ ದೃಷ್ಟಿಯಿಂದ ಕಂದದ ಲಕ್ಷಣವಾಗಲಿ, ಅನುಷ್ಟುಪ್ ಶ್ಲೋಕದ ಲಕ್ಷಣವಾಗಲಿ ಇಲ್ಲಿ ಸರಿಯಾಗಿ ಕೂಡುತ್ತಿಲ್ಲ. ಪಾಠದೋಷಗಳಿಂದ ಮೂಲಪಾಠದ ಗೊತ್ತು ಸರಿಯಾಗಿ ಹತ್ತುತ್ತಿಲ್ಲ. 'ಕವಿಚರಿತೆ'ಯೊಳಗಿನ ಪಾಠ 'ಗ' ಪ್ರತಿಯ ಪಾಠಕ್ಕೆ ಹತ್ತಿರವಾದ್ದು; 'ಓಕಾರಾಂತ ಪದ್ಯ'ವೆಂದು ಮಾತ್ರ ಇಲ್ಲಿ ಹೇಳಿದೆ. ಪ್ರಾಸಸ್ಥಾನವನ್ನು ಸರಿಪಡಿಸಿರುವಂತೆ ತೋರುವ ಇಲ್ಲಿಯ ಪದ್ಯಪಾಠ ಹೀಗಿದೆ :

ಓಮೋ ಮೊಲ್ಪೋ ತೋಮೊ ಮೋಪೋ।
ಪೋಮೋ ನೋಪೋ ಪೋಯ್ಪೋಳ್ಗೋಲೋ॥
ಕೋಮೋಲ್ಪೋಯ್ಪೋ ಸೋಮೊಂಕೊಳ್ಗೋಳ್।
ಗೋಮೊಂ ನೊಂದೋ ನೋರ್ಪೋ ಪೋರ್ಮೋ॥ (೬–೧೫)

ಈ ಪದ್ಯವಾದರೂ ತೃಪ್ತಿಕರವಾಗಿದೆ ಎನ್ನುವಂತಿಲ್ಲ; ಹ್ರಸ್ವ ಒಕಾರವೂ ಅಲ್ಲಲ್ಲಿ ಕಾಣುತ್ತಿದೆ. ದೀರ್ಘಸ್ವರಕ್ಕಾಗಿ ಸಿದ್ಧವಾದ ಲಕ್ಷ್ಯವಿದು. ಸ್ವಾರಸ್ಯವೆಂದರೆ ಕಂದದಲ್ಲಾಗಲಿ, ಅನುಷ್ಟುಪ್ ಶ್ಲೋಕದಲ್ಲಾಗಲಿ ಎಲ್ಲ

ಅಕ್ಷರಗಳೂ ಗುರ್ವಕ್ಷರಗಳಾಗಿರುವುದು ಲಕ್ಷಣದ ದೃಷ್ಟಿಯಿಂದ ಸಾಧ್ಯವಿಲ್ಲ. ಆದ್ದರಿಂದಲೇ ಕವಿಚರಿತೆಕಾರರು 'ಓಕಾರಾಂತಪದ್ಯ' ಎಂದಿರಬೇಕು. ಹಾಗಾದರೆ ಮಾತೃಕೆಗಳಲ್ಲಿ ಕಂದ, ಅನುಷ್ಟುಪ್ ಎಂದು ಹೇಳಿರುವುದರ ಗತಿಯೇನು ? ಅಲ್ಲದೆ ಗ ಪ್ರತಿಯಲ್ಲಿ ಓಕಾರಾಂತ ಕಂದವೆಂದೂ ಅನುಷ್ಟುಪ್ ಎಂದೂ ಎರಡು ಛಂದಸ್ಸುಗಳನ್ನೂ ಒಟ್ಟಿಗೆ ಸೂಚಿಸಿರುವಲ್ಲಿಯೂ ಅದು ಛಂದಸ್ಸಿನ ವಿಲಕ್ಷಣ ಗೊಂದಲದಿಂದಲೇ ಎಂದು ತೋರುತ್ತದೆ. ಇದರ ಪರಿಹಾರ ಸದ್ಯದಲ್ಲಿ ಸಾಧ್ಯವಿಲ್ಲ. ಇದೇ ಕವಿಯ ಈ ಬಗೆಯ ಇತರ ಸ್ವರಚಿತ್ರ ನಿದರ್ಶನಗಳನ್ನು ಗಮನಿಸಿದರೆ ಪದ್ಯವೇನೋ 'ದೀರ್ಘೈಕಸ್ವರ'ದ ಉದಾಹರಣೆಯಾಗಿರದೆ ಸವರ್ಣೈಕಸ್ವರದ ನಿದರ್ಶನವಾಗಿ ಚಂದ್ರರಾಜನಿಂದ ಮೂಲತಃ ರಚಿತವಾಗಿರಬೇಕೆಂದು ತೋರುತ್ತದೆ. ಶುದ್ಧಪಾಠ ತಿಳಿದುಬರುವವರೆಗೆ ಪದ್ಯದ ಆಶಯದ ಮಾತು ದೂರವೇ ಉಳಿಯುತ್ತದೆ.

ದ್ವಿಸವರ್ಣಸ್ವರ

ಚಂದ್ರರಾಜನ 'ಮದನ ತಿಲಕ'ದಲ್ಲಿ (ಕ ಪ್ರತಿಯಲ್ಲಿ) :

ಓಲೆದೋರೆ ಪೋಳೆವೋ । ರೆಲೆತೋತೋ ಪೋಗೆಂಬೊಡೆ ಪೋಡೆಂದೊಡೆಪೋ ।
ಬೆಳ್ವಲೆಗೊಲೆವೋ ಪೊಣ್ವಡೆ । ಪೊರೆವೊರೆವೊ ಕೆಂದೋಳ್ಗೆ ಕೊಳ್ಳೆನೊಡವೋಂ ಬೆಳ್ಪೊ ॥
(೬–೧೬)

'ಓಕಾರಾಂತವುಮೇಕಾರಾಂತವುಮೊಡಗೂಡಿದ ಕಂದ' ಎಂಬುದಾಗಿ ಮಾತೃಕೆಯ ಸೂಚನೆ ಪ್ರಾಯಃ 'ಕ' ಪ್ರತಿಯೊಳಗಿನದು. 'ಗ' ಪ್ರತಿಯ ಪಾಠವೂ ಶುದ್ಧವಾಗಿಲ್ಲವೆನ್ನುವುದು ವಿದಿತ. 'ಕವಿಚರಿತೆ'ಯಲ್ಲಿಯ ಪಾಠವೂ ತೃಪ್ತಿಕರವಲ್ಲ.

ಈ ಯಾವ ಪದ್ಯಪಾಠವೂ ಪದ್ಯದ ಆಶಯವೇನೆಂದು ತಿಳಿಯಲು ಸಹಾಯಮಾಡುವಂತಿಲ್ಲ. ಉತ್ತಮ ಸ್ತ್ರೀಯರಿಂದ ತ್ಯಾಜ್ಯರಾದ ಪುರುಷರ ವಿಷಯವನ್ನು ಹೇಳುವಾಗ ಈ ಪದ್ಯ ಬಂದಿರುವುದರಿಂದ, ಇಲ್ಲಿಯೂ ಅದೇ ವಿಷಯವಿರಬೇಕೆಂದು ಊಹಿಸಬಹುದು.

ಈ ನಿದರ್ಶನದಲ್ಲಿ ಮಾತೃಕೆಗಳಲ್ಲಿ ಹೇಳಿರುವಂತೆ ದೀರ್ಘದ್ವಿಸ್ವರಗಳು ಮಾತ್ರವೇ ಬಂದಿರದೆ, ಅವುಗಳ ಸವರ್ಣಗಳಾದ ಹ್ರಸ್ವಗಳೂ ಬಂದಿರಬಹುದೋ ಎಂಬ ಸಂಶಯ ಬರುವಂತೆ ಪದರಚನೆ ತೋರುತ್ತಿದೆ. ಈಗಾಗಲೇ ಗಮನಿಸಿರುವಂತೆ, ಇದು ಸಹ ದೀರ್ಘದ್ವಿಸ್ವರದ ನಿದರ್ಶನವಾಗಿರದೆ, ದ್ವಿಸವರ್ಣಸ್ವರದ ನಿದರ್ಶನವಾಗಿದೆಯೆಂದೇ ಹೇಳಬೇಕಾಗಿದೆ.

ಸ್ವರಮಾಲೆ

ಅಕ್ಷರಮಾಲೆ ಅಥವಾ ಅಕ್ಷರಾದಿಯಲ್ಲಿ ಸೇರುವ 'ಸ್ವರಮಾಲೆ' ಸ್ವರಚಿತ್ರದ ಒಂದು ಪ್ರಕಾರವಾಗಿದೆ. ಇದರಲ್ಲಿ ಪ್ರತಿಪದ್ಯವೂ ಒಂದೊಂದು ಸ್ವರದಿಂದ ಅನುಕ್ರಮವಾಗಿ ಆರಂಭವಾಗುತ್ತದೆ. ವರ್ಣಗಳ ಪಾಠಕ್ರಮ ಸಾಮಾನ್ಯವಾಗಿ ಸಂಸ್ಕೃತ ಭಾಷಾಮರ್ಯಾದೆಗೆ ಅನುಸಾರವಾಗಿರುತ್ತದೆ. ಭೋಜನು ನಿರೂಪಿಸಿರುವ 'ಕ್ರಮಸ್ಥ ಸರ್ವವ್ಯಂಜನ'ದ ಹಾಗೆಯೇ 'ಕ್ರಮಸ್ಥಸರ್ವಸ್ವರ' ಲಕ್ಷ್ಯವೂ ಸಾಧ್ಯವಿದೆಯಾದರೂ, ಒಂದೇ ಪದ್ಯದಲ್ಲಿ ಕಾಣಿಸಿಕೊಳ್ಳಬೇಕಾದ ಆ ಬಗೆಯ ನಿದರ್ಶನಗಳು ಕನ್ನಡ ಸಾಹಿತ್ಯದಲ್ಲಿ ಕಂಡುಬರುವುದಿಲ್ಲವಾದ್ದರಿಂದ 'ಸ್ವರಮಾಲೆ'ಯ ನಿದರ್ಶನವನ್ನೀಗ ನೋಡಬಹುದು.

ಚಿಕುಪಾಧ್ಯಾಯನ 'ಅಕ್ಷರಮಾಲಿಕಾಸಾಂಗತ್ಯ'ದಲ್ಲಿ :

ಅನಘನನಪ್ರಮೇಯನನಪ್ರತಿಮನ । ನನಿಮಿಷಾಧಿಪನನಚ್ಯುತನ ।
ಅನುಪಮಗುಣನನಭೇದ್ಯವಿಕ್ರಮನ ನಾ । ನನುಸರಿಸುವೆನನವರತ ॥ (೨೭)

ಆದಿಯ ರಂಗಾಧಾರನನಾದ್ಯರ । ನಾದರದಿಂದಾದರಿಪನ ।
ಆದಿಸೃಷ್ಟಿಯೊಳಜರುದ್ರರನಾಗಿಸಿ । ದ್ಧಾದಿವಸ್ತುವಿಗೆರಗುವೆನು ॥ (೨೮)

ಇದು ಪುಣ್ಯ ಇದು ಪಾಪ ಇದು ಸುಖ ಇದು ದುಃಖ । ಇದುವೊಳ್ಳಿತಿದು ಪೊಲ್ಲದೆಂದು ।
ಇದಕಿದೆಂ[ದೀ] ನುಡಿಯಿತ್ತೊಡೆ ಕಾಯ್ದೀಯಿ । [ಇ]ದನೆಯಡಿಗೆರಗುವೆನು (?) ॥ (೨೯)

ಈ ನುಡಿಯೀ ಬಗೆಯೀಯರಿವೀಯಿಚ್ಛೆ । ಈ ಮಾತಿನೀ[ಯಿ]ಹಪರಕೆ ।
ಈ ನನ್ನಿಯನೀ ಪೂಜಾರ್ಯನನ್ನಿತ್ತವೊಲು । ಈ ನಿನ್ನಡಿಗೆರಗುವೆನು ॥ (೩೦)

ಉತ್ತಮನುಚಿತಜ್ಞನುರುದಾನಿಯಿವಗಿದಿ । ರುತ್ತರವೀಯಲಂಜುವುದು ।
ಉತ್ತುಂಗನೆಂದು ಪೊಗಳ್ವುದು ಜಗ ನಿನ್ನೊ । ಳುತ್ತಮ ಭಕ್ತಿವೆತ್ತವನ ॥ (೩೧)

ಊರ್ಜಿತತೇಜ ನಿನ್ನೋಳಿಗವೇ ಸಾಕು । ಊರ್ಜಸ್ವಿಯಾಗಿ ಬಾಳ್ವವಗೆ ।
ಊರ್ಜಗವೂರ್ಧ್ವಲೋಕಗಳೋಳಿಗಗೆಯ್ಯು । ವೂರ್ಜನವವಗೆ ಪಾಸಟಿಯೆ ॥ (೩೨)

ಇದರ ಆಶಯ : ''ಪಾಪರಹಿತನನ್ನು, ಅಪ್ರಮೇಯನನ್ನು, ಅಪ್ರತಿಮನನ್ನು, ದೇವಾಧಿಪನನ್ನು, ಅಚ್ಯುತನನ್ನು, ಅಸದೃಶ ಗುಣವಂತನನ್ನು, ಅಭೇದ್ಯವಾದ ಪೌರುಷವುಳ್ಳವನನ್ನು ಯಾವಾಗಲೂ ನಾನು ಅನುಸರಿಸುತ್ತೇನೆ.

ಆದಿರಂಗಕ್ಕೆ ಆಧಾರನಾದವನಿಗೆ, ಆದ್ಯರನ್ನು ಆದರದಿಂದ ಆದರಿಸುವವನಿಗೆ, ಸೃಷ್ಟಿಯ ಆದಿಯಲ್ಲಿ ಬ್ರಹ್ಮ ರುದ್ರರನ್ನು ಸೃಜಿಸಿದ ಆದಿವಸ್ತುವಿಗೆ ನಮಸ್ಕರಿಸುತ್ತೇನೆ.

ಇದು ಪಾಪ-ಪುಣ್ಯ, ಇದು ಸುಖ-ದುಃಖ, ಇದು ಒಳಿತು-ಕೆಡುಕು ಎಂಬುದಾಗಿ ನಿರ್ಣಯಿಸಿ ತಿಳಿಸುವ ನಿನ್ನ ನಾಮವನ್ನು ಅನುಗ್ರಹಿಸು; ಕೊಟ್ಟರೆ ನೀನು ಸಲಹಿದ ಹಾಗೆಯೇ; ಈ ನಾಮವನ್ನೇ ಅನುಗ್ರಹಿಸು; ನಿನ್ನ ಪಾದಗಳಿಗೆ ಮಣಿಯುತ್ತೇನೆ.

ಈ ದಿವ್ಯನಾಮದಿಂದಲೇ ಈ ಇಹಪರಗಳಿಗೆ ಈ ಮಾತು, ಬಗೆ, ಅರಿವು, ಇಚ್ಛೆ ಲಭ್ಯವಾಗಿವೆ. ಈ ಸತ್ಯವನ್ನನುಗ್ರಹಿಸು. ಪೂಜಾರ್ಯನನ್ನೇ ಅನುಗ್ರಹಿಸಿದ ಹಾಗೆ ಈ ನಿನ್ನ ಪಾದಗಳಿಗೆ ನಮಸ್ಕರಿಸುವೆನು.

ನಿನ್ನಲ್ಲಿ ಉತ್ತಮ ಭಕ್ತಿಯುಳ್ಳವನನ್ನು ಉತ್ತಮನೂ, ಉಚಿತಜ್ಞನೂ, ಮಹಾದಾನಿಯೂ ಆದವನೆಂದು ಎದುರುತ್ತರ ಕೊಡಲು ಲೋಕ ಹೆದರಿಕೊಳ್ಳುತ್ತದೆ; ಉನ್ನತನೆಂದು ಹೊಗಳುತ್ತದೆ.

ಊರ್ಜಿತತೇಜನೆ, ನಿನ್ನ ಸೇವೆಯೇ ನನಗೆ ಸಾಕು. ಊರ್ಜಸ್ವಿಯಾಗಿ ಬಾಳುವವನಿಗೆ ಊರು, ಈ ಲೋಕ, ಮೇಲಿನ ಲೋಕ, ಎಲ್ಲವೂ ಸೇವೆ ಸಲ್ಲಿಸುತ್ತವೆ. ಲೋಗರು ಅವನಿಗೆ ಸಮವೇ ?''

ಈ ನಿದರ್ಶನದಲ್ಲಿ ಅವರ್ಣದಿಂದ ಮುಂದಿನ ಸ್ವರಗಳೆಲ್ಲವೂ ಸ್ವರಾಂಗಗಳಾದ ಅನುಸ್ವಾರ ವಿಸರ್ಗಗಳು ಸಹವಾಗಿ ನಡೆದು, ಈ ಸ್ವರಮಾಲೆಯಲ್ಲಿ ಇಂತಹ ಒಟ್ಟು ೧೬ ಪದ್ಯಗಳು ರಚನೆಯಾಗಿವೆ. ಪಾಠಕ್ರಮ ಸಂಸ್ಕೃತಭಾಷಾಮರ್ಯಾದೆಗೆ ಅನುಸಾರವಾಗಿದ್ದರೂ ಒವರ್ಣದ ವಿಷಯದಲ್ಲಿ ಹ್ರಸ್ವವನ್ನು ಮಾತ್ರವೇ ಬಳಸಿದೆ. (ಮುದ್ರಿತ ಗ್ರಂಥದಲ್ಲಿ ೩೪-೩೬ನೆಯ ಪದ್ಯಗಳಲ್ಲಿ ಪಾದಾದ್ಯಕ್ಷರವಾಗಿ ಈಕಾರವನ್ನು ತೋರಿಸಿರುವುದು ಸರಿಯಲ್ಲವೆಂದೂ ಲೃವರ್ಣವನ್ನು ತೋರಿಸಬೇಕಾಗಿದ್ದಿತೆಂದೂ ಹೇಳಬಹುದಾಗಿದೆ). ಚಿಕುಪಾಧ್ಯಾಯನು ಮುಂದೆ 'ಗುಣಿತಾಕ್ಷರ'ಗಳಲ್ಲಿ ಮಾಡಿರುವ ಹಾಗೆಯೇ ಇಲ್ಲಿಯೂ ಪಾದಾದಿಯ ಸ್ವರವನ್ನು ಪದ್ಯಾಂತರಾಳದಲ್ಲಿಯೂ ಆವೃತ್ತಿಗೊಳಿಸುವ ವೈಚಿತ್ರ್ಯವನ್ನು ಪ್ರಕಟಿಸಿದ್ದಾನೆ.

ಗುಣಿತಾಕ್ಷರಗಳು (ಗುಣಿತಚಿತ್ರಗಳು)

ಗುಣಿತಾಕ್ಷರಗಳೆಂದರೆ, ಸ್ವರರಹಿತ ವ್ಯಂಜನಗಳಿಗೆ ಅನುಕ್ರಮವಾಗಿ ಸ್ವರಗಳು ಸೇರಿ ಸಿದ್ಧವಾಗುವ ಅಕ್ಷರಗಳು. ವರ್ಗೀಯ ಮತ್ತು ಅವರ್ಗೀಯ ವ್ಯಂಜನಗಳಲ್ಲಿ ಪ್ರತಿಯೊಂದು ವರ್ಣಕ್ಕೂ ಅಕಾರದಿಂದ ಔಕಾರದ ವರೆಗೆ, ಸ್ವರಾಂಗ ವ್ಯಂಜನಾಂಗಗಳಾದ ಅನುಸ್ವಾರ ವಿಸರ್ಗಗಳನ್ನೂ ಸೇರಿಸಿ ಹೇಳುವ ಪಾಠಕ್ರಮದಂತೆ ಅಂ ಅಃ ವರೆಗೆ, ಅನುಕ್ರಮವಾಗಿ ಪ್ರತಿಯೊಂದು ಸ್ವರವನ್ನೂ ಸೇರಿಸಿ ನಡಸುವ ರೀತಿಗೆ ಕಾಗುಣಿತ (ಕ ಬಳ್ಳಿಯ ರಚನೆ) ವೆನ್ನಲಾಗುತ್ತದೆ. ಈ ಬಳ್ಳಿಯ ರಚನೆಯಲ್ಲಿ ಸಂಸ್ಕೃತ ವರ್ಣಗಳ ಪಾಠಕ್ರಮದಿಂದಾಗಿ ಋಕಾರಯುಕ್ತ ಗುಣಿತವನ್ನೂ ಹ್ರಸ್ವ ಏಕಾರ ಓಕಾರಗಳನ್ನೂ ಸಾಮಾನ್ಯವಾಗಿ ಸೇರಿಸಿರುವುದಿಲ್ಲ. ವರ್ಣಚಿತ್ರಗಳ ದೃಷ್ಟಿಯಿಂದ

ಗುಣಿತಾಕ್ಷರಿ ಅಥವಾ ಗುಣಿತಚಿತ್ರಗಳಲ್ಲಿ ೪ ಪ್ರಭೇದಗಳನ್ನು ಗುರುತಿಸಬಹುದು : (i) ಒಂದೇ ಪದ್ಯದಲ್ಲಿ ಕ್ರಮಾಗತವಾಗಿ ಗುಣಿತಾಕ್ಷರವೊಂದರ ಕಾಗುಣಿತ ಪೂರ್ತಿಯಾಗುವುದು. ಇದು 'ಏಕಪದ್ಯೈಕ ಗುಣಿತಾಕ್ಷರಿ'. (ii) ಹಲವು ಪದ್ಯಗಳಲ್ಲಿ ಕ್ರಮಾಗತವಾಗಿ ಗುಣಿತಾಕ್ಷರವೊಂದರ ಕಾಗುಣಿತ ಪೂರ್ತಿಯಾಗುವುದು. ಇದು 'ಬಹುಪದ್ಯೈಕ ಗುಣಿತಾಕ್ಷರಿ'. (iii) ಪ್ರತ್ಯೇಕವಾದ ಒಂದೊಂದು ಪದ್ಯದಲ್ಲಿ ಕ್ರಮಾಗತವಾಗಿ ಒಂದೊಂದರಂತೆ ಸಮಸ್ತ ಗುಣಿತಾಕ್ಷರಗಳ ಕಾಗುಣಿತವೂ ಪೂರ್ತಿಯಾಗುವುದು. ಇದು 'ಬಹುಪದ್ಯಸಮಸ್ತಗುಣಿತಾಕ್ಷರಿ'' (iv) ಹಲವು ಪದ್ಯಗಳಲ್ಲಿ ಕ್ರಮಾಗತವಾಗಿ ಒಂದೊಂದೂ ಗುಣಿತಾಕ್ಷರದ ಕಾಗುಣಿತ ಪೂರೈಸುವ ಕ್ರಮದಲ್ಲಿ, ಸಮಸ್ತ ಗುಣಿತಾಕ್ಷರಗಳ ಕಾಗುಣಿತವೂ ಪೂರ್ತಿಯಾಗುವುದು. ಇದು 'ಬಹುಪದ್ಯಸಮಸ್ತಗುಣಿತಾಕ್ಷರೀಮಾಲೆ'.

ಏಕಪದ್ಯೈಕ ಗುಣಿತಾಕ್ಷರಿ

ಎಳಂದೂರು ಹರೀಶ್ವರನ 'ಪ್ರಭುದೇವರ ಪುರಾಣ'ದಲ್ಲಿ :

ಎಳಂದೂರು ಹರೀಶ್ವರನ (೧೬೦೬) 'ಪ್ರಭುದೇವರ ಪುರಾಣ'ದ ಪ್ರತಿಯೊಂದು ಸಂಧಿಯಲ್ಲಿಯೂ ಒಂದಕ್ಕೆ ಕಡಿಮೆಯಿಲ್ಲದ ಹಾಗೆ, ೯ ಸಂಧಿಗಳಲ್ಲಿ ಒಟ್ಟು ೧೬ ಏಕಪದ್ಯೈಕ ಗುಣಿತಾಕ್ಷರಿಗಳಿವೆ. ಕವಿ ಆಯ್ದುಕೊಂಡ ಅಕ್ಷರಗಳು ಎಂದರೆ, ವರ್ಗಾಕ್ಷರಗಳಲ್ಲಿ ಕ, ಗ, ಚ, ಜ, ಟ, ಡ, ನ, ಪ, ಬ ಮತ್ತು ಮ; ಇವು ಅನುಕ್ರಮವಾಗಿ ಕಂಡುಬರುವ ಪದ್ಯಗಳು ಎಂದರೆ ೯–೧೬೭, ೧–೫೫, ೩-೪, ೭-೨೩೭, ೪-೧೪೭, ೫-೧೬೪, ೧–೫೬., ೬-೧೩೫, ೩-೧೪೦, ೨-೪. ಅವರ್ಗೀಯಾಕ್ಷರಗಳಲ್ಲಿ ಯ, ರ, ಲ, ವ, ಶ, ಹ ಎಂಬವನ್ನು ಆಯ್ದುಕೊಂಡಿದ್ದು, ಇವು ಅನುಕ್ರಮವಾಗಿ ಕಂಡುಬರುವ ಪದ್ಯಗಳು ಎಂದರೆ ೨-೩, ೨-೪೪, ೯-೨೭೩, ೨-೪೫, ೮-೧೯೨, ೯-೧೬೬. ಮಹಾಪ್ರಾಣಾಕ್ಷರಗಳನ್ನು, ಷಕಾರ ಸಕಾರಗಳನ್ನು ಕವಿ ಬಳಸಿರುವಂತೆ ತೋರುವುದಿಲ್ಲ. ಎಲ್ಲ ಪದ್ಯಗಳೂ ಶಿವಸ್ತುತಿ ಪರವಾದ ಶಬ್ದಗಳಿಂದ, ಇಲ್ಲವೆ ಸಮಾಸಪದಗಳಿಂದ ಘಟಿತವಾಗಿವೆ; ಗುಣಿತಗಳನ್ನು ಸಂಸ್ಕೃತ ಇಲ್ಲವೆ ಕನ್ನಡ ಪಾಠಕ್ರಮದಂತೆ, ಋಕಾರ ಹೊರತಾಗಿ, ಅನುಕ್ರಮವಾಗಿ ಅನುಸರಿಸಿದೆ. ಎಲ್ಲವೂ ಪರಿವರ್ಧಿನೀ ಷಟ್ಪದಿಗಳು. ಪ್ರಸ್ತುತ ಎಲ್ಲ ಪದ್ಯಗಳನ್ನೂ ಇಲ್ಲಿ ಉದಾಹರಿಸುವುದು ಅವಶ್ಯವಿಲ್ಲ; ಕೆಲವು ಪದ್ಯಗಳನ್ನು ಉದ್ಧರಿಸಿ, ಪ್ರಾಚೀನವಾದೊಂದು ಟೀಕೆಯನ್ನು ಅನುಸರಿಸಿ ಅವುಗಳ ಅರ್ಥವನ್ನು ಮುಂದೆ ಬರೆದಿದೆ.

ಗಕಾರ :

ಗಣವರ ಗಾನಪ್ರಿಯ ಗಿರಿಜಾಧವ
ಫಣಿಕಂಕಣ ಗೀರ್ವಾಣೇಶ್ವರನುತ
ತ್ರಿಣಯನ ಗುಹಪಿತ ಗೂಢಾ ಗೆಲ್ಲಿಗ ಗೈರಿಕನಗಸದನ
ಪ್ರಣುತ ಭುಜಗವರ ಗೋರಾಟ್‌ಕಂಧರ
ಗುಣಗಣರಂಜಿತ ಗೌವಸನಾನ್ವಿತ
ಪ್ರಣಯ ಸುವಾಕ್ಯನೆ ಗಂಗಾಧರ ಗೋಪತಿಗಮನನೆ ಜಯತು ॥ (೧–೫೫)

ಟೀಕು : ''ಪ್ರಮಥ ಗಣಗಳಿಗೆ ಒಡೆಯನು, ಗಾನಲೋಲನು, ಪಾರ್ವತೀಪತಿ, ಸರ್ಪಕಂಕಣನು, ಇಂದ್ರನಿಂದ ನಮಸ್ಕೃತನು, ಮುಕ್ಕಣ್ಣನು, ಷಣ್ಮುಖನ ತಂದೆ, ಗೋಪ್ಯ ಸ್ವರೂಪನು, ಜಯಶಾಲಿ, ಹೈಮಾಚಲ ನಿವಾಸಿ, ಸರ್ಪರಾಜನಿಂದ ನಮಸ್ಕೃತನು, ಬ್ರಹ್ಮನ ಕುತ್ತಿಗೆ(ತಲೆ)ಯನ್ನು ಕೈಯಲ್ಲಿ ಧರಿಸಿದವನು, ಗುಣಸಮೂಹದಿಂದ ಶೋಭಿಸುವವನು, ದಿಕ್ಕುಗಳೇ ಉಟ್ಟ ಬಟ್ಟೆಯಾಗಿರುವವನು, ಪ್ರೀತಿಯ ಮಾತಾಡುವವನು, ಗಂಗೆಯನ್ನು ಧರಿಸಿದವನು, ವೃಷಭನ ಮೇಲೆ ಸಂಚರಿಸುವವನು—ಆದ ದೇವನೆ ನಿನಗೆ ಜಯವಾಗಲಿ.''

ಬಕಾರ :

ಬಲ್ಲಿದ ಬಾಣನ ಬಾಗಿಲ ಕಾಯ್ವೆಡೆ
ಬಿಲ್ಲಿಂ ಪೊಯ್ಯಲು ಬೀಗುವರೇ ಮಹ
ಬುಲ್ಲಣೆಯಿಂದಂ ಬೂದಿಯ ಪೂಸುತ ಬೇಡುವರೇ ಮಗನಂ

ನಿಲ್ಲದೆ ಬೈವರೆ ನಂಬಿಯ ವನದೊಳು
ಸಲ್ವುದೆ ಬೋಗಣ್ಣನ ಪಿಂಪೋಪುದು
ಮಲ್ಲಂ ಬೌದ್ಧನ ಬನ್ನಂಬಡಿಪುದು ಕಲ್ವರೆ ಬಃಸದನಾ ॥ (೩–೧೪೦)

ಟೀಕು : ''ಬಲಶಾಲಿ ಬಾಣಾಸುರನ ಬಾಗಿಲನ್ನು ಕಾದುಕೊಂಡಿರುವರೆ, (ಅರ್ಜುನನು) ಬಿಲ್ಲಿಂದ ಹೊಡೆಯಲು ಸಂತೋಷಪಡುವರೆ, ಅತಿಶಯ ಸಡಗರದಿಂದ ವಿಭೂತಿ ಧರಿಸುತ್ತ, ಸಿರಿಯಾಳನ ಮಗನನ್ನು ಬೇಡುವರೆ, ವನದಲ್ಲಿ ನಂಬಿಯಣ್ಣನನ್ನು ಸಹಿಸದೆ ಬೈಯುವರೆ, ಕೆಂಭಾವಿ ಭೋಗಣ್ಣನ ಹಿಂದೆ ನಡೆಯುವುದು ಸಲ್ಲುತ್ತದೆಯೇ, ಕೊಬ್ಬಿದ ಬೌದ್ಧನ (ಜಿನನ) ಭಂಗಪಡಿಸುವುದನ್ನು ಕಲಿಯುವರೆ, ಮೇರುಪರ್ವತವಾಸಿಯೇ, ದೇವನೆ–ನಿನಗೆ ಜಯವಾಗಲಿ.''

ಯಕಾರ :

ಯತಿನುತ ಯಾಗವಿಭಸ್ಮನೆ ಸತತಂ
ಯಿತರೇತರಮರಿಯದಯೀಶ್ವರ ಸಂ
ಸೃತಿಹತ ಸದ್ಗತಿಯುತಯೂಥಸಮೇತಾ ಶಾಶ್ವತ ಶರ್ವಾ
ನುತಯೇಣಾಂಕಾಭೃತಯೈದೆಯ ಸಂ
ಹತ ಕೃತುಕರ್ತೃವಿನುತ ಶಿವಯೋಗಾ
ಮೃತ ಧೃತಯೌವನ ತ್ರ್ಯಂಬಕ ಯಃಪದ ಜಯ ಮತ್ಪ್ರಭುಗುರುವೇ ॥ (೨–೩)

ಟೀಕು : ''ಯತಿಗಳಿಂದ ಸ್ತುತನಾದವನೆ, ದಕ್ಷನ ಯಾಗವನ್ನು ಸುಟ್ಟವನೆ, ಅನ್ಯಾನ್ಯವೇನನ್ನೂ ತಿಳಿಯದ ಈಶ್ವರನೆ, ಸಂಸಾರ ಬಂಧನ ತೊಲಗಿಸುವವನೆ, ಸದ್ಗತಿವಂತರಾದ ಶಿವಶರಣರ ಸಮೂಹದಲ್ಲಿರುವವನೆ, ಶಾಶ್ವತನೆ, ಶರ್ವನೆ, ಚಂದ್ರಶೇಖರನೆ, ಚೆನ್ನಾಗಿ ಯಮನನ್ನು ನಿಗ್ರಹಿಸಿದವನೆ, ಇಂದ್ರನಿಂದ ಸ್ತುತನೆ, ಶಿವಯೋಗಾಮೃತ ವನ್ನು ಧರಿಸಿದವನೆ, ಯೌವನದ ಮುಕ್ಕಣ್ಣನೆ, ಯಾವುದಾದರೊಂದು ಅತಿಶಯ ಪದವಿಯುಳ್ಳ ನನ್ನ ಸ್ವಾಮಿಯೇ ಗುರುವೆ, ನಿನಗೆ ಜಯವಾಗಲಿ.''

ಲಕ್ಷ್ಮೀಶನ 'ಜೈಮಿನಿಭಾರತ'ದಲ್ಲಿ :

ಕಮಲದಳನಯನ ಕಾಳಿಯಮಥನ ಕಿಸಲಯೋ
ಪಮಚರಣ ಕೀಶಪತಿಸೇವ್ಯ ಕುಜಹರ ಕೂರ್ಮ
ಸಮಸತ್ಕಪೋಲ ಕೇಯೂರಧರ ಕೈರವಶ್ಯಾಮ ಕೋಕನದಗೃಹೆಯ
ರಮಣ ಕೌಸ್ತುಭಶೋಭ ಕಂಬು ಚಕ್ರ ಗದಾಬ್ಜ
ವಿಮಲಕರ ಕಸ್ತೂರಿಕಾತಿಲಕ ಕಾವುದೆಂ
ದಮಿತ ಪ್ರಭಾಮೂರ್ತಿಯಂ ನುತಿಸಲಾತನಂ ಹರಿ ನೆಗಪಿದಂ ಕೃಪೆಯೊಳು ॥ (೫–೮)

ಇದರ ಆಶಯ : '' 'ತಾವರೆಯ ಎಸಳಿನಂತಹ ಕಣ್ಣುಗಳುಳ್ಳವನೆ, ಕಾಳಿಯ ಸರ್ಪನನ್ನು ಮರ್ದಿಸಿದವನೆ, ಚಿಗುರನ್ನು ಹೋಲುವ ಪಾದಗಳುಳ್ಳವನೆ, ಕಪಿಶ್ರೇಷ್ಠನಿಂದ (ಸುಗ್ರೀವನಿಂದ) ಸೇವೆಗೊಂಡವನೆ, ಭೂಮಿಯ ಮಗ ನರಕನನ್ನು ನಿವಾರಿಸಿದವನೆ, ಆಮೆಯಂತೆ ಆಕಾರವುಳ್ಳ ಸುಂದರವಾದ ಕಪೋಲವುಳ್ಳವನೆ, ಬಾಹುಪೂರವನ್ನು ಧರಿಸಿದವನೆ, ನೈದಿಲೆಯಂತೆ ಕಪ್ಪಾಗಿರುವವನೆ, ಲಕ್ಷ್ಮಿಯ ಪತಿಯೆ, ಕೌಸ್ತುಭರತ್ನವನ್ನು ಎದೆಯ ಮೇಲೆ ಧರಿಸಿ ಶೋಭಿಸುವವನೆ, ಶಂಖ ಚಕ್ರ ಗದೆ ಮತ್ತು ಪುಂಡರೀಕಗಳನ್ನು ತಳೆದ ಕೈಗಳುಳ್ಳವನೆ, ಕಸ್ತೂರಿಯ ತಿಲಕವಿಟ್ಟ ವನೆ, ಕಾಪಾಡಬೇಕು' ಎಂಬುದಾಗಿ ಅಪಾರ ತೇಜಸ್ವಿಯಾದ ಕೃಷ್ಣನನ್ನು ಸ್ತೋತ್ರಮಾಡಲು, ಆ ಯೌವನಾಶ್ವ ನನ್ನು ಕೃಷ್ಣನು ದಯೆಯಿಂದ ಮೇಲೆತ್ತಿದನು.''

ಇಲ್ಲಿ ಸಂಸ್ಕೃತ ವರ್ಣಮಾಲೆಯ ಅನುಕ್ರಮದಂತೆ ಕಕಾರದ ಗುಣಿತವನ್ನು ನಡಸಿದೆ. 'ಕೃ' ಎಂಬು ದನ್ನು ಹೇಳಿಲ್ಲ; 'ಕಸ್ತೂರಿ' ಎಂಬಲ್ಲಿ 'ಕಃ' ಎಂಬ ಉಚ್ಚಾರವುಂಟೆಂದು ಕಲ್ಪಿಸಿದೆ. ಮುಖ್ಯಪದದ ಆದ್ಯಕ್ಷರ ದಲ್ಲಿಯೇ ಗುಣಿತದ ಅಕ್ಷರ ಬರುವಂತೆ ನೋಡಿಕೊಂಡಿದೆ.

ಜಯ ಚತುರ್ಮುಖಜನಕ ಜಯ ಚಾರುಚಾರಿತ್ರ
ಜಯ ಚಿದಾನಂದ ಜಯ ಚೀರಾಂಬರಜ್ಞೇಯ
ಜಯ ಜಯ ಚ್ಯುತಿದೂರ ಜಯ ಚೂಡಬರ್ಹಶೋಭಿತ ಚೇತನಸ್ವರೂಪ
ಜಯ ಚೈದ್ಯಮಥನ ಜಯ ಚೋದಿತಾಖಿಳಲೋಕ
ಜಯ ಚೌರ್ಯಕೃತಲೀಲ ಜಯ ಚಂಡಶತಕಿರಣ
ಜಯ ಚಕ್ರಧರಯೆಂದು ಕೃಷ್ಣನಂ ಕಲಿಸುಧನ್ವಂ ಪೊಗಳ್ದಂ ಮನದೊಳು ॥ (೧೩–೨೭)

ಇದರ ಆಶಯ : '' 'ಬ್ರಹ್ಮನ ತಂದೆಯೆ, ಮನೋಹರವಾದ ಚರಿತ್ರೆಯುಳ್ಳವನೆ, ಜ್ಞಾನ ಮತ್ತು ಆನಂದ ಸ್ವರೂಪನೆ, ಪೀತಾಂಬರಧರನೆ, ಅಚ್ಯುತನೆ, ನವಿಲುಗರಿಯ ಅಲಂಕಾರದಿಂದ ಶೋಭಿಸುವವನೆ, ಚೈತನ್ಯ ಸ್ವರೂಪನೆ, ಶಿಶುಪಾಲನನ್ನು ನಿಗ್ರಹಿಸಿದವನೆ, ಸಮಸ್ತಲೋಕಗಳೂ ಕ್ರಿಯಾಶೀಲವಾಗಿರುವಂತೆ ಮಾಡುವವನೆ, ಲೀಲೆಗಾಗಿ ಕಪಟನಾಟಕವಾಡುವವನೆ, ಸೂರ್ಯನಂತೆ ಉಗ್ರನಾಗಿರುವವನೆ, ಚಕ್ರಾಯುಧವನ್ನು ಧರಿಸಿರುವವನೆ' ಎಂಬುದಾಗಿ ಶೂರನಾದ ಸುಧನ್ವನು ಶ್ರೀಕೃಷ್ಣನನ್ನು ಮನಸ್ಸಿನಲ್ಲಿಯೇ ಹೊಗಳಿದನು.''

ಈ ಪದ್ಯ ಈ ಗ್ರಂಥದ ''ಓಲೆಗರಿಯ ಪ್ರತಿಗಳಲ್ಲಿಲ್ಲ''ವೆಂಬುದಾಗಿ ಕೆ. ನಂಜುಂಡಶಾಸ್ತ್ರಿ ಮತ್ತು ಎಚ್. ನಾಗಪ್ಪನವರ ಸವ್ಯಾಖ್ಯಾನ ಗ್ರಂಥದ ಟಿಪ್ಪಣಿಯಲ್ಲಿ ಹೇಳಿದೆ. ಇದು ಹೇಗಿದ್ದರೂ, ಇರುವ ಹಾಗೆ ಈ ಪದ್ಯ ಸಂಸ್ಕೃತ ವರ್ಣಮಾಲೆಯ ಅನುಕ್ರಮದಲ್ಲಿ ಚಕಾರದ ಗುಣಿತದಿಂದ ನಡೆದಿರುವುದು ಕಾಣುತ್ತದೆ. ಇಲ್ಲಿಯೂ 'ಚೃ' ಎಂಬುದಿಲ್ಲ; 'ಚಕ್ರಧರ' ಎನ್ನುವಲ್ಲಿ 'ಚಃ' ಸೇರಿದೆಯೆಂದು ಕರ್ತೃ ಭಾವಿಸಿರುವಂತಿದೆ.

ಗೋವಿಂದ ಕವಿಯ 'ನಂದಿಮಾಹಾತ್ಮ್ಯ'ದಲ್ಲಿ :

ಕಳಭ ಕಾಳಾಹಿ ಕಿಸಲಯ ಕೀರ ಕುಲಿಶ ಕೂ
ರ್ಮ ಲಘುಕೇಸರಿ ಕೈರವಂ ಕೋಕ ಕೌಮುದಿ ವಿ
ಮಲ ಕಂಜ ಕಸ್ತೂರಿಯುಂ ಗಮನ ವೇಣಿ ಕರತಳ ಲಸದ್ವಾಕ್ಯ ರದನಂ
ಚಲನ ಮಧ್ಯಾಂಬಕ ಸ್ತನ ಹಸನ ವದನ ತನು
ಕಲಿತ ಸೌಗಂಧದಿಂದೇಳಿಸುವ ಕಾಂತೆಯರ್
ನಲವಿನಿಂ ವನವಲಯದೊಳ್ ಕ್ರೀಡಿಸಲ್ಕಾಗ ಮೆಲ್ಲನೈತರುತಿರ್ದರು ॥ (೪-೧೦)

ಇದರ ಆಶಯ : ''ನಡೆ ಆನೆಯನ್ನು, ಜಡೆ ಕಾಳಸರ್ಪವನ್ನು, ಅಂಗೈ ಚಿಗುರನ್ನು, ಸೊಗಸಾದ ಮಾತು ಗಿಳಿಯನ್ನು, ಹಲ್ಲು ವಜ್ರಾಯುಧವನ್ನು, ಅಡಿ (ಚರಣ, ಪಾದ) ಆಮೆಯನ್ನು, ನಡು ಸಿಂಹದ ಮರಿಯನ್ನು (ಸಿಂಹದ ಮರಿಯ ನಡುವನ್ನು), ಕಣ್ಣು ನೈದಿಲೆಯನ್ನು, ಮೊಲೆ ಚಕ್ರವಾಕವನ್ನು, ನಗೆ ಬೆಳದಿಂಗಳನ್ನು, ಮೊಗ ಶುಭ್ರವಾದ ತಾವರೆಯನ್ನು, ಅಣ್ಕೆ (ಶರೀರಕ್ಕೆ ಲೇಪಿಸಿದ ಸುಗಂಧ) ಕಸ್ತೂರಿಯನ್ನು ತಿರಸ್ಕರಿಸುವ ಆ ಸ್ತ್ರೀಯರು ಉದ್ಯಾನಸೀಮೆಯಲ್ಲಿ ಸಂತೋಷದಿಂದ ಕ್ರೀಡಿಸಲೆಂದು ಮೆಲ್ಲಗೆ ಬರುತ್ತಿದ್ದರು.''

ಈ ಪದ್ಯದಲ್ಲಿ ಕ ಕಾರದ ಗುಣಿತ ಸಂಸ್ಕೃತ ವರ್ಣಮಾಲೆಯ ಕ್ರಮದಂತೆ ನಡೆದಿದೆ. 'ಕೃ' ಬಂದಿಲ್ಲ; 'ಕಸ್ತೂರಿ' ಎಂಬಲ್ಲಿ 'ಕಃ' ಎಂಬ ಉಚ್ಚಾರವುಂಟೆಂದು ಕಲ್ಪಿಸಿದೆ. ಗುಣಿತವು ಪದ್ಯದ ಪೂರ್ವಾರ್ಧದಲ್ಲಿ ದಟ್ಟೈಸಿರುವುದನ್ನು ಗಮನಿಸಬಹುದು. ಅಲ್ಲದೆ ಅದು ಉಪಮಾನವಾಗುವ ಶಬ್ದಗಳಿಗೆ ಮಾತ್ರ ಮೀಸಲಾಗಿರುವ ವಿಶೇಷವನ್ನೂ ಕಾಣಬಹುದಾಗಿದೆ. ಎರಡು ಸಮಾಸಶಬ್ದಗಳ ಹೊರತು, ಉಳಿದೆಡೆ ಮುಖ್ಯಪದಾದಿಯಲ್ಲೇ ಗುಣಿತದ ಅಕ್ಷರವಿದೆ.

ಷಡಕ್ಷರಿಯ 'ರಾಜಶೇಖರವಿಳಾಸ'ದಲ್ಲಿ :

ಮುಗಳೆ ಮನೋಜ್ಞಮಾತೆ ಮಿಗಿಲಿತ್ತೊಡೆ ಮೀಟದಿರಾತನಾಜ್ಞೆಯಂ
ಮುಗುದೆ ಕಳಲ್ಕೆ ಮೂಢತೆಯ ಮೋಣದ ಪುತ್ತಳಿಯಂತೆ ಮೈಯುನಿ
ತ್ತಗಲದೆ ಕೂಡಿ ಮೋಹಿಸಿ ಧನಂಬಡೆ ಮೌನಮಿದೇಕೆ ಮಂದಿರಂ
ಬುಗು ನಡೆ ಮಸ್ತಕಂದೊನೆಯದಿರ್ ಕಡುಮೂರ್ಖತೆ ಬೇಡ ಕಾಮಿನೀ ॥ (೧೧–೧೭೪)

ಇದರ ಆಶಯ : ''ಮಗಳೆ, ಮುದ್ದುತಾಯಿ, ಹೆಚ್ಚಾಗಿ ಕೊಟ್ಟರೆ ಅವನ ಅಪ್ಪಣೆಯನ್ನು ದಾಟಬೇಡ; ಮುಗ್ಧೆ, ಮೌಢ್ಯವನ್ನು ದೂರಮಾಡು; ಮೇಣದ ಗೊಂಬೆಯಂತೆ (ಅವನಿಗೆ) ಮೈಯನ್ನು ಒಪ್ಪಿಸಿ, (ಅವನನ್ನು) ಬಿಡದೆ ಸೇರಿ, ಮರಳುಮಾಡಿ, ಹಣವನ್ನು ಕೀಳು; ಏಕೆ ಸುಮ್ಮನಿದ್ದೀಯೆ? ಮನೆಯೊಳಗೆ ನಡೆ; ತಲೆ ಅಲ್ಲಾಡಿಸಬೇಡ; ಹೆಣ್ಣೇ, ಹಟಮಾಡುವುದು ಬೇಡ.''

ಇಲ್ಲಿ ಮಕಾರದ ಗುಣಿತ ಸಂಸ್ಕೃತ ವರ್ಣಮಾಲೆಯ ಅನುಕ್ರಮದಂತೆ ನಡೆದಿದೆ. ಮೃ ಬಂದಿಲ್ಲ; 'ಮಸ್ತಕ' ಎಂಬ ಶಬ್ದದಲ್ಲಿ 'ಮಃ' ಎಂಬುದು ಇದೆಯೆಂದು ಕಲ್ಪಿಸಿದೆ. ಒಂದೆಡೆ ಹೊರತು, ಅನ್ಯತ್ರ ಮುಖ್ಯ ಪದದ ಆದಿಯಲ್ಲಿಯೇ ಗುಣಿತದ ಅಕ್ಷರ ಬರುವಂತೆ ನೋಡಿಕೊಂಡಿದೆ.

ಇಮ್ಮಡಿ ಮುರಿಗಾ ಗುರುಸಿದ್ಧನ 'ಶಿವಲಿಂಗಷಟ್ಪದಿ'ಯಲ್ಲಿ :

ಕರುಣಿ ಕಾಮಿತದ ಕಿರಿ ದಂಷ್ಟ್ರೋತ್ತಮಾಂಗ ಮೃಗ
ಧರ ಸುಕೀಲದ್ಯುಮಣಿ ನಯನಕುಸುಮಾಸ್ತ್ರ ಸಂ
ಹರ ಕೂರ್ಮಖರ್ಪರವಿಭೂಷಿತೋರಸ್ಥಲ ಖಕೇಶ ಕೈಲಾಸನಿಲಯ
ಪರಮಕೋಮಲಮೂರ್ತಿ ಕೌತೂಹಲೋರು ವಿ
ಸ್ಫುರಿತ ಚಾರಿತ್ರ ಕಂಜಾಸನಶಿರೋಹಸ್ತ
ಗರಳಗಳ ಲಸಿತತ್ರಿವಿಷ್ಟಪೌಕಸ್ತುತ ಜಯೋಸ್ತು ಶಿವಲಿಂಗೇಶ್ವರಾ ॥ (ಪ. ೬೫)

ಇದರ ಆಶಯ : ''ದಯಾಳುವೆ, ಹಂದಿಯ ದಾಡೆಯ ಹಲ್ಲುಗಳನ್ನು ತಲೆಯಲ್ಲಿ ಧರಿಸಿದವನೆ (?), ಮೃಗಧರನೆ, ಕೈಲಾಸ ಪರ್ವತದ ಸೂರ್ಯನೆ, ಕಣ್ಣಿಂದ ಮನ್ಮಥನನ್ನು ಸಂಹರಿಸಿದವನೆ, ಆಮೆಯ ಚಿಪ್ಪಿನಿಂದ ಅಲಂಕೃತವಾದ ವಕ್ಷಸ್ಥಲವುಳ್ಳವನೆ, ವ್ಯೋಮಕೇಶನೆ, ಕೈಲಾಸವಾಸಿಯೆ, ಮಹಾಕೋಮಲಮೂರ್ತಿಯೆ, ಕುತೂಹಲಾಸ್ಪದವಾದ ಅತಿಶಯವೂ ಉಜ್ವಲವೂ ಆದ ಚಾರಿತ್ರವುಳ್ಳವನೆ, ಬ್ರಹ್ಮನ ಶಿರಸ್ಸನ್ನು ಅಂಗೈಯಲ್ಲಿ ಉಳ್ಳವನೆ, ವಿಷಕಂಠನೆ, ದೇವತೆಗಳಿಂದ ಸ್ತುತನಾಗುವವನೆ, ಶಿವಲಿಂಗೇಶ್ವರನೇ ನಿನಗೆ ಜಯವಾಗಲಿ.''

ಈ ಪದ್ಯವನ್ನು ಮಾತೃಕೆಯಲ್ಲಿ 'ಗುಣಿತಾಕ್ಷರ ಪದಂಗಳು' ಎಂಬುದಾಗಿ ಹೇಳಿದೆ. ಇಲ್ಲಿ ಕ ಕಾರದ ಗುಣಿತವು ಸಂಸ್ಕೃತ ವರ್ಣಮಾಲೆಯ ಅನುಕ್ರಮದಲ್ಲಿ ನಡೆದಿದೆ; ಇಲ್ಲಿಯೂ 'ಕೃ' ಬಂದಿಲ್ಲ; 'ತ್ರಿವಿಷ್ಟಪೌಕಸ್ತುತ' ಎಂಬಲ್ಲಿ 'ಕಃ' ಎಂಬ ಉಚ್ಚಾರವಿದೆ ಎಂದು ಕಲ್ಪಿಸಿದೆ. ಉಪಸರ್ಗ ಇಲ್ಲವೆ ಸಮಾಸಶಬ್ದದ ನಡುವೆ ಗುಣಿತವನ್ನು ಕೂಡಿಸಿದೆ.

ಪಿ. ಬಸವಣ್ಣನವರ 'ನಿರೀಕ್ಷೆ' ಸಂಕಲನದ ಒಂದು ಪದ್ಯ :

ಸರಸಗೌರೀಪ್ರೀತ ಸಾರಸದ್ಗುಣಭರಿತ
ಸಿರಿದೇವಿರಮಣಹಿತ ಸೀತಾಧಿಪತಿನಮಿತ
ಸುರನರಾಸುರವಿನುತ ಸೂರ್ಯೇಂದುನಯನಯುತ ಸೃಕ್ಪುಂಡಮರಶೋಭಿತ
ಸೆರೆಯಿಂದತೀತ ಸೇನಾನಿಪಿತ ಸ್ವೈಗಳೆವ
ಮರನದೀಭೂಷಿತ ಸೊಗಯಿಪತನುಜಿತ ಸೋಮ
ಧರಮಹಿತ ಸೌಭಾಗ್ಯದಾತ ಸಂಪ್ರೋಕ್ತಸಚ್ಚರಿತ ಸಃವರ್ಜಿತ ಪೊರೆ ॥ (ಪು. ೪೧)

ಇದರ ಆಶಯ : ''ಸುಂದರಿಯಾದ ಗೌರಿಯ ಪ್ರೀತಿಗೆ ಪಾತ್ರನಾದವನೆ, ಸಾರ ಸದ್ಗುಣಗಳಿಂದ ಕೂಡಿದವನೆ, ಲಕ್ಷ್ಮೀರಮಣನಿಗೆ ಹಿತವನ್ನುಂಟುಮಾಡುವವನೆ, ರಾಮನಿಂದ ನಮಸ್ಕೃತನಾದವನೆ, ದೇವತೆಗಳು ಮಾನವರು ರಾಕ್ಷಸರಿಂದ ವಂದಿತನೆ, ಸೂರ್ಯ ಚಂದ್ರರನ್ನೆ ಕಣ್ಣುಗಳಾಗಿ ಪಡೆದವನೆ, ರುಂಡಮಾಲೆಯಿಂದ ಶೋಭಿಸುವವನೆ, ಬಂಧನಕ್ಕೆ ನಿಲುಕದವನೆ, ಕುಮಾರಸ್ವಾಮಿಯ ತಂದೆಯೆ, ನೇರವಾಗಿ ಸುರಿಯುವ ದೇವಗಂಗಾನದಿಯಿಂದ ಭೂಷಿತನಾದವನೆ, ಸುಂದರನಾದ ಮನ್ಮಥನನ್ನು ಗೆದ್ದವನೆ, ಚಂದ್ರಶೇಖರನಾದ ಮಹಿಮಾನ್ವಿತನೆ, ಸೌಭಾಗ್ಯದಾಯಕನೆ, ಅತಿಶಯವಾಗಿ ಕೊಂಡಾಡಲ್ಪಟ್ಟ ಸನ್ಮಹಿಮೆಯುಳ್ಳವನೆ, ಕಾಪಾಡು.''

ಕರ್ತೃ 'ಗುಣಿತಾಕ್ಷರಿ' ಎಂದಿದ್ದಾರೆ. ಕನ್ನಡ ವರ್ಣಮಾಲೆಯ ಕ್ರಮದಲ್ಲಿ ಸಕಾರದ ಗುಣಿತ ಇಲ್ಲಿ ನಡೆದಿದೆ.

ಬಹುಪದ್ಯೈಕ ಗುಣಿತಾಕ್ಷರಿ

ಪಿ. ಬಸವಣ್ಣನವರ 'ಭಿಕ್ಷೆ' ಸಂಕಲನದ 'ಶ್ರೀಶಂಭುಸಾಹಸ್ರಿ'ಯಲ್ಲಿ :

ಕಮಲಭವಮದಮರ್ದಿ ಕರ್ಮದೂರ ಕಪರ್ದಿ
ಕಮಲಾಸ್ತ್ರನಿರ್ಮೂಲ ಕಂಬಲಾಶ್ವತಲೋಲ
ಕಮಲಾಕ್ಷಪೂಜ್ಯ ಕಪಿಕೇತುವಂದ್ಯ ಕರಿವದನಗುಹಪಿತ ಕಪಟರಹಿತ
ಕಮಲಾರಿಮೌಲಿ ಕಂಕಾಳಮಾಲಿ ಕಪಾಲಿ
ಕಮಲಾಪ್ತಸೂನುಗರ್ವಹರ ಕನಕಶರೀರ
ಕಮಲಲಾಂಛನಮಿತ್ರ ಕಮಲಸಖಿಚಂದ್ರಾಗ್ನಿನೇತ್ರ ಶ್ರೀಶಂಭು ಪೊರೆಗೆ ‖ (೧೬)

ಕಾಲಾರಿ ಕಾಕಾರಿನಮಿತ ಕಾಂಕ್ಷಾರಹಿತ
ಕಾಲಭೈರವ ಕಾಮವೈರಿ ಕಾರುಣ್ಯನಿಧಿ
ಕಾಲಕೂಟಗ್ರೀವ ಕಾರ್ತಸ್ವರಶರೀರಿ ಕಾಂಚನಕುಧರಕಾರ್ಮುಕ
ಕಾಲಾಸಗೋಪ ಕಾತ್ಯಾಯನೀಕಾಂತ ಕಾ
ಕೋಲಕಂಧರ ಕಾರ್ತಿಕೇಯಪಿತ ಕಾಳಿಕಾ
ಲೋಲ ಕಾದಂಬಿನೀಕುಸುಮಧರ ಕಾಂಡಜಾಕ್ಷಶರ ಶ್ರೀಶಂಭು ಪೊರೆಗೆ ‖ (೩೨)

ಇವುಗಳ ಆಶಯ : ''ಬ್ರಹ್ಮನ ಗರ್ವವನ್ನು ನಿರ್ಮೂಲಿಸಿದವನು, ಕರ್ಮವಿರಹಿತನು, ಕಪರ್ದಿಯೆಂಬ ಹೆಸರಿನವನು, ಮನ್ಮಥನನ್ನು ಸುಟ್ಟವನು, ಕಂಬಲ ಮತ್ತು ಅಶ್ವತರ ಗಾನದಲ್ಲಿ ಆಸಕ್ತನು, ವಿಷ್ಣುವಿನಿಂದ ಪೂಜಿತನು, ಅರ್ಜುನನಿಂದ ವಂದ್ಯನು, ಗಣಪತಿ ಕುಮಾರಸ್ವಾಮಿಗಳಿಗೆ ತಂದೆ, ನಿರ್ವಂಚಕನು, ಚಂದ್ರಶೇಖರನು, ರುಂಡಮಾಲಾಧರನು, ಕಪಾಲಹಸ್ತನು, ಸೂರ್ಯಪುತ್ರನ ಗರ್ವವನ್ನು ಕಳೆದವನು, ಹೊಂಬಣ್ಣದ ಮೈಯವನು, ಕಮಲಲಾಂಛನನ ಗೆಳೆಯ, ಸೂರ್ಯಚಂದ್ರರನ್ನೂ ಅಗ್ನಿಯನ್ನೂ ಕಣ್ಣುಗಳಾಗಿ ಉಳ್ಳವನು, ಆಗಿರುವ ಶಂಭುವು ನಮ್ಮನ್ನು ಕಾಪಾಡಲಿ.

ಯಮನ ಶತ್ರು, ರಾಮನಿಂದ ಪೂಜಿತನಾದವನು, ಕಾಂಕ್ಷೆಗಳಿಲ್ಲದವನು, ಕಾಲಭೈರವನು, ಮನ್ಮಥವೈರಿ, ದಯಾಳು, ವಿಷಕಂಠ, ಹೊಂಬಣ್ಣದ ಮೈಯವನು, ಮೇರುನಗವೇ ಬಿಲ್ಲಾದವನು, ಧ್ವಜರಕ್ಷಕ (?), ಪಾರ್ವತೀಪತಿ, ವಿಷಕಂಠ, ಕುಮಾರಸ್ವಾಮಿಯ ತಂದೆ, ಕಾಳಿಯಲ್ಲಿ ಆಸಕ್ತನು, ಕಾದಂಬಿನೀಪುಷ್ಪದಿಂದ ಅಲಂಕೃತನು, ವಿಷ್ಣುವನ್ನು ಬಾಣವಾಗಿ ಉಳ್ಳವನು, ಶಂಭು ನಮ್ಮನ್ನು ಕಾಪಾಡಲಿ.''

ಈ ಸಹಸ್ರನಾಮಗಳ ಪದ್ಯದಲ್ಲಿ ಹೀಗೆ ಕ ಕಾರದ ಗುಣಿತ ಮುಂದುವರಿದು ಕ ದಿಂದ ಕೌ ವರೆಗೆ ೧೧, ಗ ದಿಂದ ಗೋ ವರೆಗೆ ೫, ಚ ದಿಂದ ಚಿ ವರೆಗೆ ೩, ಜ ದಿಂದ ಜೀ ವರೆಗೆ ೪, ತ ದಿಂದ ತ್ರಿ (ತೃಗೆ ಪ್ರತಿನಿಧಿ?)ವರೆಗೆ ೫, ದ ದಿಂದ ದು ವರೆಗೆ ೪, ಧ ೧, ನ ದಿಂದ ನೀ ವರೆಗೆ ೪, ಪ ದಿಂದ ಪ್ರ ವರೆಗೆ ೪, ಬ ದಿಂದ ಬಾ ವರೆಗೆ ೨, ಭ ದಿಂದ ಭೂ ವರೆಗೆ ೩, ಮ ದಿಂದ ಮು ವರೆಗೆ ೩, ಯ ೧, ರ ದಿಂದ ರಾ ವರೆಗೆ ೨, ವ ದಿಂದ ವೃ ವರೆಗೆ ೪, ಶ ೧, ಸ ದಿಂದ ಸು ವರೆಗೆ ೪, ಹ ೧ ಹೀಗೆ ಒಟ್ಟು ೬೩ ಪದ್ಯಗಳನ್ನು ರಚಿಸಿದೆ. ಇಲ್ಲಿ ಅನೇಕ ಗುಣಿತಾಕ್ಷರಿಗಳ ಕಾಗುಣಿತವನ್ನು ಪೂರ್ತಿಯಾಗಿ ನಡಸಿಲ್ಲ; ಆದ್ದರಿಂದ ಇಲ್ಲಿ ಕ್ರಮಾನುಸರಣೆಗೆ ಲೋಪ ಬಂದಿದೆ. ಆ ಕಾರಣ ಇದು ನಿಯಮಾನುಸಾರವಾದ ನಿದರ್ಶನವಾಗಿಲ್ಲ ಎನ್ನಬಹುದು. ಬಹುಮಟ್ಟಿಗೆ ಸಮಗ್ರವಾಗಿ ಕ್ರಮಾನುಸರಣೆ ಕಾಣುವುದು ಕ ಕಾರದ ಗುಣಿತವೊಂದರಲ್ಲಿಯೇ. ಈ ಪದ್ಯದಲ್ಲಿ 'ಬಹುಪದ್ಯೈಕ ಗುಣಿತಾಕ್ಷರಿ'ಯ ಲಕ್ಷಣ ಕಾಣುವುದು ಈ ೧೧ ಪದ್ಯಗಳ ಗುಚ್ಛದಲ್ಲಿಯೇ; ಅನಂತರದ ಗುಣಿತಾಕ್ಷರಿಗಳಲ್ಲಿ ಭಾಗಶಃ ಮಾತ್ರ ಈ ಲಕ್ಷಣ ಕಾಣುತ್ತದೆ. ಪದ್ಯಾಂತರಾಳದಲ್ಲಿಯೂ ಗುಣಿತಾಕ್ಷರದ ಆವೃತ್ತಿಯಾಗುವಂತೆ ರಚನೆಯನ್ನು ನಡಸಿರುವುದು ಇಲ್ಲಿ ಎದ್ದು ಕಾಣುತ್ತದೆ; ಕರ್ತೃವಿನ ಉದ್ದೇಶವೂ ಮುಖ್ಯವಾಗಿ ಅದೇ ಆಗಿದೆ.

ಬಹುಪದ್ಯಸಮಸ್ತ ಗುಣಿತಾಕ್ಷರಿ

ಚಿಕುಪಾಧ್ಯಾಯನ 'ಅಕ್ಷರಮಾಲಿಕಾ ಸಾಂಗತ್ಯ'ದಲ್ಲಿ :

ಕಾಕರ ಕಿನಿಸು ಕುಜನರ ಕೂಡಾಳಿಕೆ । ಕೂಕೆ ಕೈಕೊ ಕೌಕಂಕನೆ ।
ಕಾಕಂಗೆಟ್ಟು ಕಷ್ಟದ ಕಾರ್ಯವೆಲ್ಲವು । ಕೈಂಕರ್ಯವಿತ್ತೊೖವು ರಂಗ ॥ (೬೧)
ಗಾರಾಗಿ ಗುರುಗುಟ್ಟಿ ಗೂಗೆವೊಲ್ ಗೈಮೆಯಿಂ । ಗೋರಿಗೊಳುತೆ ಗೌರವದ ।
ದಾರಿಗಂಡರ ಬಿಟ್ಟು ಗರ್ವಿಪ ಮನುಜರ । ಸಾರದೊಳ್ ಸಲಹು ಸರ್ವೇಶ ॥ ೬೨
ಚಾರಿವರಿದು ಚಿಂತಿಸಿ ಚೀರುತರುಚುತ । ಚೂರಿಸದಿಚ್ಚೆ ಚೈತನ್ಯ ।
ಚೋರತ್ವವೆತ್ತಿದೆಯೆನೆ ಚೌದಂತನ ಕಾದು । ದಾರ ಚಂಡಚಕ್ರಧರ ಜಯತು (೬೩)
ಜಾರಿ ಜಿನುಗಿ ಜೀವಿಸಿ ಜುಣುಗುತೆ ಜೂಜು । ಗಾರಿಕೆ ಜೇಂಟಿಯಿಂ ಜೈಸಿ ।
ಜೋರುಂಡು ಜೋಗುಟ್ಟುವೀ ಜಂಜಡಜನ । ದಾರ್ೖಕೆ ಶ್ರೀಶಗೇನೊಳದೆ ॥ (೬೪)
ಟಾಕಿನ ಜಟಟೀಕ ಮೋಟುಕಾಟೂರಿಸಿ । ಟೀಕವೆನಿಸಿ ನೆಟ್ಟೈಸಿ ।
ಟೋಕಿಸಿ ಟೌಂಕಿಸಿ ಟಂಕಿಪ ಟಕ್ಕರ । ದೇಕೆ ಪುಟ್ಟಿದರೊ ಶ್ರೀಹರಿಯೆ ॥ (೬೫)
ಡಾಕಿನಿಯಡಿವೊಕ್ಕೋಕಜ ಕುಡುಗೆಂದೊ । ಜೂಕೆಯು ನಡೆಯಲ್ಲುಡ್ಡೈದ ।
ಡೋಕೆಂಬ ಡೌಡೆಯು ಡಂಬರ ಡಬ್ಬುಗಂ । ಡೇಕೆ ಭಜಿಸರೊ ಶ್ರೀಹರಿಯ ॥ (೬೬)

ಇವುಗಳ ಆಶಯ : ''ರಂಗ, ಅಲ್ಪರ ಕೋಪ, ಕೆಟ್ಟವರ ಸಂಗ, ಕಷ್ಟದ ಕಾರ್ಯ ಎಲ್ಲ ಅಬ್ಬರವೂ ತೊಲಗುವ ಹಾಗೆ ನಿನ್ನ ಸೇವೆಯನ್ನು ಕೊಟ್ಟು ಸಲಹು(?).

ಸರ್ವೇಶ್ವರ, ಪೀಡಿತರಾಗಿ, ಗೂಬೆಯ ಹಾಗೆ ಗುರುಗುಟ್ಟಿ, ತಮ್ಮ ಸತ್ಕಾರ್ಯಗಳಿಂದ ಎಲ್ಲರನ್ನೂ ಆಕರ್ಷಿಸುತ್ತ, ಗೌರವದ ದಾರಿಯಲ್ಲಿ ನಡೆಯುವವರನ್ನು ಬಿಟ್ಟು, ಗರ್ವಿಸುವ ಮನುಷ್ಯರನ್ನು ಬುದ್ಧಿಕೊಟ್ಟು ಕಾಪಾಡು.

ಉಪಾಯದಿಂದ ಸಾಗಿ, ಚಿಂತಿಸಿ, ಚೀರುತ್ತ ರಚುತ್ತ ಕಾಡದೆ, ಇಚ್ಛೆ ಚೈತನ್ಯಲೀಲೆಯನ್ನು ಪ್ರಕಟಿಸಿದೆ ಎನ್ನುವಂತೆ ಗಜೇಂದ್ರನನ್ನು ಕಾಪಾಡಿದ ಚಕ್ರಧರನೇ, ನಿನಗೆ ಜಯವಾಗಲಿ(?).

ಏಳುತ್ತ ಬೀಳುತ್ತ ಗೊಣಗುಟ್ಟುತ್ತ ಬದುಕಿ, ನುಸುಳುತ್ತ, ಜೂಜುಗಾರಿಕೆ ಬೇಟೆಗಳನ್ನಾಡಿ ಗೆಲ್ಲುತ್ತ, ಸೊಕ್ಕಿನಿಂದ ಮೆರೆಯುವ ಕ್ಷುದ್ರರ ಆರೈಕೆ ವಿಷ್ಣುವಿಗೆ ಏಕೆ ಬೇಕು ?

ಶ್ರೀಹರಿಯೆ, ಶಿವಿಯ, ಟಾಕುಟೀಕಿನವರಾದ, ಗರ್ವದಿಂದ ನಿಮಿರಿ ಗದ್ದಲಮಾಡುವ ವಂಚಕರು ಯಾವ ಪ್ರಯೋಜನಕ್ಕಾಗಿ ಹುಟ್ಟಿದರೋ ? (?)

ಕ್ಷುದ್ರದೇವತೆಗಳನ್ನು ನಂಬಿ, ಅವುಗಳ ಜೊತೆಗೆ ಅಬ್ಬರದಲ್ಲಿ ಮೆರವಣಿಗೆಯಲ್ಲಿ ಸಾಗುವ ಡೌಡೆಯೆಂಬ ವಾದ್ಯಧ್ವನಿಯಂತೆ ಡಂಬಾಚಾರ ಮಾಡುವವರನ್ನು ನೋಡಿಯೂ ಏಕೆ ಶ್ರೀಹರಿಯನ್ನು ಭಜಿಸುವುದಿಲ್ಲವೋ ?(?)''

ಮೇಲಿನ ಆರು ಉದ್ಧೃತಪದ್ಯಗಳ ಹಾಗೆಯೇ ವರ್ಗೀಯ ಅವರ್ಗೀಯ ವ್ಯಂಜನಗಳಿಗೆ ನಡೆಯುವ ಇನ್ನೂ ೧೫ ಪದ್ಯಗಳುಂಟು. ಒಟ್ಟು ೨೧ ಪದ್ಯಗಳಲ್ಲಿ ಹೀಗೆ ಆರಾಧ್ಯದೈವದ ಸ್ತುತಿಯನ್ನು ಮಾಡಿ ಚಿಕುಪಾಧ್ಯಾಯನು, ''ಈ ಕಕಾರಾದಿ ಕ್ಷಕಾರಾಂತ್ಯಗುಣಿತದಿಂ । ತಾ ಕಲ್ಪಿಸಿ ಸಾಂಗತ್ಯವನು'' ಆ ದೈವಕ್ಕೆ ಒಪ್ಪಿಸಿದೆನೆಂದು ಕೊನೆಯಲ್ಲಿ ಹೇಳಿಕೊಂಡಿದ್ದಾನೆ (ಪ. ೧೦೨). ಇಲ್ಲಿಯ ಗುಣಿತದ ಪದ್ಧತಿಯಲ್ಲಿ, ಪ್ರತಿಪದ್ಯದಲ್ಲಿಯೂ ಮಹಾಪ್ರಾಣಗಳನ್ನೂ ಅನುನಾಸಿಕಗಳನ್ನೂ ಹೊರತುಪಡಿಸಿ, ವರ್ಗಪ್ರಥಮ ಮತ್ತು ತೃತೀಯಾಕ್ಷರಗಳ ಗುಣಿತವನ್ನು ಮಾತ್ರ ನಡಸಿರುವುದು ಕಾಣುತ್ತದೆ. ಇದು ಪದರಚನೆಯ ಅನುಕೂಲಕ್ಕಾಗಿ ಮಾಡಿಕೊಂಡಿರುವ ಏರ್ಪಾಡು ಎಂದು ತೋರುತ್ತದೆ. ಇನ್ನು ಗುಣಿತವನ್ನು ನಡಸುವಾಗ, ಆಯಾ ವ್ಯಂಜನದ ಮೊದಲ ಗುಣಿತಾಕ್ಷರವನ್ನು ಪದ್ಯದಲ್ಲಿ ಎಲ್ಲಿಯೋ ಒಂದು ಕಡೆ ಬರುವಂತೆ ಮಾಡಿ, ಎರಡನೆಯ ಗುಣಿತಾಕ್ಷರದಿಂದ ಅದನ್ನು ನಡಸಿರುವುದು ಕಾಣುತ್ತದೆ. ಸಂಸ್ಕೃತ ವರ್ಣಮಾಲೆಯ ಕ್ರಮವನ್ನೇ ಸಾಮಾನ್ಯವಾಗಿ ಅನುಸರಿಸಿ ಗುಣಿತ ನಡೆಯುವುದು. ಆವಶ್ಯಕತೆಗಾಗಿ

ಕ್ಲಿಷ್ಟ ಹಾಗೂ ಕಲ್ಪಿತ ಪದಗಳನ್ನು ತರುವುದರಿಂದ ಹಲವೆಡೆ ಪದ್ಯಗಳ ಆಶಯ ಸ್ಪಷ್ಟವಾಗುವುದಿಲ್ಲ; ರಚನೆ ಕೃತಕವೂ ವಿಲಕ್ಷಣವೂ ಕ್ಲಿಷ್ಟವೂ ಆಗಿ ತೋರುವುದೇ ಸಾಮಾನ್ಯ. ಆದರೂ ಕವಿ ಈ ವಿಸ್ತಾರಶಬ್ದ ಚಮತ್ಕಾರ ವನ್ನು ರೂಪಿಸುವುದರಲ್ಲಿ ವ್ಯಕ್ತಮಾಡಿರುವ ಕೌಶಲ, ವ್ಯುತ್ಪತ್ತಿಗಳನ್ನು ಮೆಚ್ಚಬಹುದಾಗಿದೆ.

ಬಹುಪದ್ಯಸಮಸ್ತಗುಣಿತಾಕ್ಷರೀಮಾಲೆ

ಈ ಪ್ರಕಾರದ ಲಕ್ಷಣ ಪೂರ್ತಿಯಾಗಿ ಕಂಡುಬರುವ ನಿದರ್ಶನವಿಲ್ಲ. ಈಗಾಗಲೇ ನೋಡಿರುವ ೨-ನೆಯ ನಿದರ್ಶನ. ಅದು ಪೂರ್ಣವಾಗಿ ಲಕ್ಷಣವನ್ನು ಪೂರೈಸುವಂತೆ ರಚಿತವಾಗಿದ್ದ ಪಕ್ಷದಲ್ಲಿ, ಅಖಂಡವಾಗಿ ಅದನ್ನು ಗ್ರಹಣಮಾಡಿದಾಗ ಇಲ್ಲಿಗೆ ಲಕ್ಷ್ಯವಾಗಲು ಸಾಧ್ಯವಿದ್ದಿತು.

ಅಡಿಟಿಪ್ಪಣಿಗಳು

1. 'ಶಾಂತಿಪುರಾಣ'ದಲ್ಲಿ ಪೊನ್ನನ ಅನ್ಯಕೃತಿಗಳ ಪ್ರಸ್ತಾವವಿದ್ದರೂ 'ಜಿನಾಕ್ಷರಮಾಲೆ'ಯ ಪ್ರಸ್ತಾವವಿಲ್ಲ. ಗ್ರಂಥಕರ್ತೃತ್ವವನ್ನೂ ಪರೋಕ್ಷವಾಗಿ ತಿಳಿಯಬೇಕಾಗಿದೆ.

2. 'ಅಚಲಜಿಹ್ವಾಪದ' ತೆಲುಗು ಭಾಷೆಯ ಲಕ್ಷಣಗ್ರಂಥಗಳಲ್ಲಿಯೂ ಉಲ್ಲೇಖಗೊಂಡಿದೆ. 'ಲಕ್ಷಣ ಶಿರೋಮಣಿ'ಯಲ್ಲಿ "ಜಿಹ್ವಾಚಲಜಿಹ್ವಂಬುನು" ಎಂದು (೪೩೭) ಹೇಳುವಾಗ, ಜಿಹ್ವಾಪದ, ಅಚಲಜಿಹ್ವಾಪದ ಎಂದು ಎರಡು ಬಗೆಗಳನ್ನು ಸೂಚಿಸುವಂತಿದೆ. ಓಷ್ಠ್ಯವರ್ಣಗಳಲ್ಲಿ ಜಿಹ್ವಾಚಲನವಿಲ್ಲದ ದ್ವ್ಯಕ್ಷರಗಳನ್ನು (ಭ, ವ) ಬಳಸಿದ 'ಓಷ್ಠ್ಯಾಚಲಜಿಹ್ವಾದ್ವ್ಯಕ್ಷರಿ' ಎಂಬ ಪ್ರಭೇದವನ್ನು ಸಲಕ್ಷ್ಯವಾಗಿ ಇಲ್ಲಿ ತೋರಿಸಿದೆ (೪-೨೦೩). ಇಲ್ಲಿಯೂ 'ಅಚಲ ಜಿಹ್ವೆ' ಎಂಬುದಕ್ಕೆ ಈಗ ತಿಳಿದಿರುವುದಕ್ಕಿಂತ ಬೇರೆ ಯಾವ ಅರ್ಥವನ್ನೂ ಸೂಚಿಸಿಲ್ಲ.

3. ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿಭಂಡಾರದಲ್ಲಿ ನಿಕ್ಷಿಪ್ತವಾಗಿರುವ ಈ ಗ್ರಂಥದ ಹಸ್ತಪ್ರತಿಗಳಲ್ಲಿ, ಕೃತಿಭಾಗ ಲಭ್ಯವಿರುವ ಗ. ಹಸ್ತಪ್ರತಿಯಲ್ಲಿ (ಕೆಎ. ೪೫೪) ಸಹ, ಸಹಾಯಕವಾಗುವ ಸೂಚನೆಗಳಿಲ್ಲ.

೪.

ಶ್ಲೇಷಚಿತ್ರ, ಗರ್ಭಕವಿತ್ವ

೧

ಶ್ಲೇಷಚಿತ್ರ

ಶ್ಲೇಷಕಾವ್ಯಗಳು : ದ್ವಿಸಂಧಾನ, ತ್ರಿಸಂಧಾನಕಾವ್ಯಗಳು ಇತ್ಯಾದಿ

ಚಿತ್ರಕಾವ್ಯಗಳಲ್ಲಿ ಯಮಕಕಾವ್ಯಗಳು ಒಂದು ಗುಂಪಾದರೆ, ಶ್ಲೇಷಕಾವ್ಯಗಳು ಇನ್ನೊಂದು ಗುಂಪಾಗುತ್ತವೆ. ಇಲ್ಲಿ ಸಮಗ್ರಕಾವ್ಯದಲ್ಲಿ, ಪದ್ಯಗಳಲ್ಲಿಯ ಪದಶ್ರೇಣಿಗಳು ಒಂದಕ್ಕಿಂತ ಹೆಚ್ಚಿನ ಅರ್ಥಗಳನ್ನು ಕೊಡುವಂತೆ ರಚನೆಯಿರುತ್ತದೆ. ಇಂತಹ ರಚನೆಗಳು ಎರಡು ಭಿನ್ನವಾದ ಕಥೆಗಳನ್ನೇ ಹೇಳುವಂತಿದ್ದರೆ ಅವಕ್ಕೆ ದ್ವಿಸಂಧಾನ ಕಾವ್ಯಗಳೆಂದೂ, ಜೊತೆಜೊತೆಗೇ ಮೂರು ಭಿನ್ನವಾದ ಕಥೆಗಳನ್ನು ಹೇಳುವಂತಿದ್ದರೆ ಅವಕ್ಕೆ ತ್ರಿಸಂಧಾನಕಾವ್ಯಗಳೆಂದೂ ಹೇಳಲಾಗುತ್ತದೆ. ದ್ವಿಸಂಧಾನ ಕಾವ್ಯಗಳನ್ನು ದ್ವ್ಯಾಶ್ರಯ ಕಾವ್ಯಗಳೆಂದೂ ಹೇಳುವುದುಂಟು.

ಪ್ರಾಚೀನ ಲಾಕ್ಷಣಿಕ ದಂಡಿ (ಸು. ೬೫೦–೯೦) ಒಂದು ದ್ವಿಸಂಧಾನಕಾವ್ಯವನ್ನು ರಚಿಸಿದ್ದನೆಂಬ ಸೂಚನೆ ಭೋಜನ 'ಶೃಂಗಾರ ಪ್ರಕಾಶ'ದ ''ದಂಡಿನೋ ಧನಂಜಯಸ್ಯ ವಾ ದ್ವಿಸಂಧಾನೇ'', ''ರಾಮಾಯಣ ಮಹಾಭಾರತಯೋರ್ದಂಡಿಃ ದ್ವಿಸಂಧಾನಮಿವ'' ಎಂಬ ವಾಕ್ಯಗಳಿಂದ ದೊರೆತಿದೆ. ಅಲ್ಲದೆ ವಸ್ತು ರಾಮಾಯಣ ಭಾರತಗಳ 'ದ್ವಿಸಂಧಾನ'ವೆಂಬುದು ಇಲ್ಲಿ ಸ್ಪಷ್ಟವಾಗಿಯೇ ಇದೆ. ಈ ಕೃತಿ ಈಗ ಲಭ್ಯವಿಲ್ಲ. ಜೈನಕವಿ ಧನಂಜಯನು (ಸು. ೯೦೦) ಸಹ ದಂಡಿಯನ್ನನುಸರಿಸಿ 'ರಾಘವ ಪಾಂಡವೀಯ' ಎಂಬ ಇದೇ ಬಗೆಯ ಕೃತಿ ರಚಿಸಿದ್ದು, ಇದು ಪ್ರಕಟಗೊಂಡು ಪ್ರಸಿದ್ಧವಾಗಿದೆ. ''ಅನುಪಮಕವಿವ್ರಜಂ ಜೀಯೆನೆ ರಾಘವಪಾಂಡವೀಯಮಂ ಪೇೞ್ದು ಯಶೋವನಿತಾಧೀಶ್ವರನಾದಂ ಧನಂಜಯಂ ವಾಗ್ವಧೂಪ್ರಿಯಂ ಕೇವಳನೇ'' ಎಂಬುದಾಗಿ (೧–೧೮) ಕನ್ನಡಕವಿ ದುರ್ಗಸಿಂಹನು (೧೦೩೧) ತನ್ನ 'ಕರ್ಣಾಟಕ ಪಂಚತಂತ್ರ'ದಲ್ಲಿ ಈತನನ್ನು ಕೀರ್ತಿಸಿದ್ದಾನೆ. ಈಚೆಗೆ ಸಂಧ್ಯಾಕರ ನಂದಿ (೧೨ನೆಯ ಶ.) 'ರಾಮಚರಿತ' ('ರಾಮಪಾಲಚರಿತ') ಮತ್ತು 'ಆನಂದಕಾವ್ಯ' ಎಂಬವನ್ನು ರಚಿಸಿದ್ದು, ಮೊದಲನೆಯದರಲ್ಲಿ ಶ್ರೀರಾಮನ ಕಥೆಯೂ ಕವಿಯ ಆಶ್ರಯದಾತನಾದ ಬಂಗಾಲದ ದೊರೆ ರಾಮಪಾಲನ (೧೧೦೪–೩೦) ಕಥೆಯೂ ಏಕಕಾಲದಲ್ಲಿ ನಿರೂಪಿತವಾಗಿವೆ. ಕನ್ನಡಕವಿ ನಾಗಚಂದ್ರ (ಸು. ೧೧೦೦) ಪ್ರಾಯಃ ಕೀರ್ತಿಸುವ ಶ್ರುತಕೀರ್ತಿ ತ್ರೈವಿದ್ಯನು, ''ವಿಬುಧಚಮತ್ಕೃತಿಯೆನಿಸಿ ಗತಪ್ರತ್ಯಾಗತದಿಂ'' ೧೮ ಸರ್ಗಗಳ ವಿಸ್ತಾರದಲ್ಲಿ 'ರಾಘವಪಾಂಡವೀಯ'ವನ್ನು ರಚಿಸಿದನೆಂದು ತಿಳಿಯುತ್ತದೆ. ಧನಂಜಯ, ಶ್ರುತಕೀರ್ತಿ ತ್ರೈವಿದ್ಯರ ಹಾಗೆಯೇ ತಾನೂ ಒಂದು 'ರಾಘವಪಾಂಡವೀಯ'ವನ್ನು ರಚಿಸಿದ ಕವಿ ಎಂದರೆ ಕದಂಬ ಕಾಮದೇವನ (೧೧೮೨–೯೭) ಆಶ್ರಿತನಾದ ಕವಿರಾಜನೆಂಬುವನು. ಇದು ೧೩ ಸರ್ಗಗಳ ಒಂದು ರಚನೆ. ಈ ಬಗೆಯ ಕಾವ್ಯಕರ್ತೃಗಳಲ್ಲಿ ಇವನು ಗಣ್ಯನೆಂದೂ ಮಾರ್ಗದರ್ಶಕನೆಂದೂ ಕೆಲವರು ಭಾವಿಸುತ್ತಾರೆ. ಕವಿರಾಜನು ''ಶ್ರೀರಾಮಾಯಣದ ಮಾಣಿಕ್ಯವನ್ನು ಭಾರತಸುವರ್ಣದಲ್ಲಿ ಮೆಟ್ಟಿದರೆ, ಯಾರ ಮನಸ್ಸು ತಾನೇ ವಿಸ್ಮಯೋಲ್ಲಾಸಿಯಾಗದು ?'' ಎಂದು (೧–೩೫) ಹೇಳಿರುವುದರ ಜೊತೆಗೆ, ''ಒಂದೇ ಪದ್ಯದಲ್ಲಿ ಶ್ಲೇಷವನ್ನು ತರುವುದೇ ಮಹಾಪರಿಶ್ರಮದ ಕೆಲಸ; ಎರಡು ಮಹಾಕಥೆಗಳನ್ನು ಒಟ್ಟಿಗೆ ಕೂಡಿಸುವುದೆಂದರೆ ಆದಿಶೇಷನ ಪ್ರಯಾಸಕ್ಕೆ ಸಮಾನ'' ಎಂದೂ (೧–೩೮) ಹೇಳಿರುವುದನ್ನು ನೆನೆದರೆ ಈ ಬಗೆಯ ಕವಿಗಳ ಪರಿಶ್ರಮವೇನೆಂಬುದು ನಮಗೆ ಮನಸ್ಸಿಗೆ ಬರಬಹುದು.

ರಾಮಾಯಣ ಭಾರತಗಳ ವಿಷಯದಲ್ಲಿ ಇಂತಹ ಚಮತ್ಕಾರವನ್ನು ಮೆರೆದ ಹಾಗೆಯೇ ಶೈವ ವೈಷ್ಣವ ಕಥಾಭಾಗಗಳ ವಿಷಯದಲ್ಲಿಯೂ ಮೆರೆದಿರುವುದುಂಟು. ಚಾಲುಕ್ಯ ಸೋಮದೇವನ (೧೧೨೬–೩೮) ಆಸ್ಥಾನದಲ್ಲಿದ್ದ ವಿದ್ಯಾಮಾಧವನು 'ಪಾರ್ವತೀ ರುಕ್ಮಿಣೀಯ'ವೆಂಬ ೯ ಸರ್ಗಗಳ ದ್ವಿಸಂಧಾನ ಕಾವ್ಯದಲ್ಲಿ ಶಿವಪಾರ್ವತಿ

ಯರ ಹಾಗೂ ಕೃಷ್ಣರುಕ್ಮಿಣಿಯರ ವಿವಾಹಗಳೆರಡೂ ಪ್ರಕಟವಾಗುವಂತೆ ಕಥಾನಿರ್ವಹಣೆ ಮಾಡಿದ್ದಾನೆ. ವೆಂಕಟಾಧ್ವರಿಯ (೧೭ನೆಯ ಶ.) 'ಯಾದವ ರಾಘವೀಯ'ದಲ್ಲಿ ಕೃಷ್ಣ ರಾಮರ ಕಥೆಗಳೂ ಹರದತ್ತಸೂರಿಯ (೧೮ನೆಯ ಶ.) 'ರಾಘವನೈಷಧೀಯ'ದಲ್ಲಿ ರಾಮ ನಳರ ಕಥೆಗಳೂ ಏಕಕಾಲದಲ್ಲಿ ಇದೇ ವಿಧಾನದಲ್ಲಿ ನಿರೂಪಿತವಾಗಿವೆ.

ವಸ್ತುವಿನ ದೃಷ್ಟಿಯಿಂದ ಭಿನ್ನತೆಯುಳ್ಳ ಕೆಲವು ರಚನೆಗಳಲ್ಲಿ ಲಕ್ಷ್ಮಣಭಟ್ಟನ ಮಗ ರಾಮಚಂದ್ರನ 'ರಸಿಕ ರಂಜನ' (೧೫೪೨) ಏಕಕಾಲದಲ್ಲಿ ಶೃಂಗಾರವನ್ನೂ ವೈರಾಗ್ಯವನ್ನೂ ನಿರೂಪಿಸುವ ೧೩೦ ಶ್ಲೋಕಗಳ ಒಂದು ಪುಟ್ಟ ರಚನೆ. ಜೈನಕವಿ ಸೋಮಪ್ರಭಾಚಾರ್ಯನ 'ಶೃಂಗಾರ ವೈರಾಗ್ಯತರಂಗಿಣಿ' ೪೬ ಶ್ಲೋಕಗಳ ಒಂದು ಪುಟ್ಟ ಕಾವ್ಯ (೧೨೭೬). ಇದರಲ್ಲಿ ಸ್ತ್ರೀಸಂಗದಲ್ಲಿರುವುದರ ಅನನುಕೂಲಗಳೂ ವಿರಕ್ತಜೀವನ ನಡಸುವುದರ ಅನುಕೂಲಗಳೂ ಏಕಕಾಲದಲ್ಲಿ ವ್ಯಕ್ತಗೊಳ್ಳುವಂತೆ ನಿರೂಪಣೆಯಿದೆ. ಈ ಕೃತಿಯ ಒಂದು ವಿಶೇಷ ಎಂದರೆ, ಪ್ರತಿಯೊಂದು ಶ್ಲೋಕಕ್ಕೂ ನೂರು ರೀತಿಯಲ್ಲಿ ಅರ್ಥ ಹೇಳುವ ಸಾಧ್ಯತೆಯಿರುವುದು. ಇದೊಂದು ಶತಾರ್ಥೀ ಕಾವ್ಯ.

ಶ್ಲೇಷಕಾವ್ಯಗಳಲ್ಲಿ ಶ್ರೀನಿವಾಸನ 'ಶ್ಲೇಷಚೂಡಾಮಣಿ', ಶಿವಪ್ರಸಾದನ 'ಶ್ಲೇಷೋಲ್ಲಾಸ', ವೆಂಕಟಾಚಾರ್ಯನ 'ಶ್ಲೇಷ ಚಂಪೂರಾಮಾಯಣ', ಚಿದಂಬರನ 'ಶ್ಲೇಷಚಿಂತಾಮಣಿ' ಇವು ಲಘುಗಾತ್ರದ ಉಲ್ಲೇಖನಾರ್ಹ ರಚನೆಗಳಾಗಿವೆ. ರಾಮಭದ್ರನ 'ರಾಮಾಷ್ಟಪ್ರಾಸ', ಸೂರ್ಯನಾರಾಯಣನ 'ಪ್ರಾಸಭಾರತ', ಚಿತ್ರಕವಿಯ 'ಚಿತ್ರರತ್ನಾಕರ', ವೀರರಾಘವನ 'ವಿಶೇಷಣ ರಾಮಾಯಣ', ಹಾಗೂ ಸೋಮಕುಂಜರನ 'ಚಿತ್ರಕಾವ್ಯ' ಇವೂ ಶ್ಲೇಷಸಮೃದ್ಧವಾದ ರಚನೆಗಳಾಗಿವೆ. ಸೋಮೇಶ್ವರದೇವನ 'ಸುರತೋತ್ಸವ', ವೆಂಕಟದೇಶಿಕನ 'ಪಾದುಕಾಸಹಸ್ರ', ಸಾಗರಚಂದ್ರನ 'ಮಂತ್ರಾಧಿರಾಜಕಲ್ಪ' ಇವೂ ಈ ಗುಂಪಿನಲ್ಲೇ ಬರತಕ್ಕವು.

ಕೆಲವು ಕಾವ್ಯಗಳಲ್ಲಿ ಭಾಗಶಃ ದ್ವಿಸಂಧಾನ ಮಾರ್ಗದ ಅನುಸರಣೆ ಕಂಡುಬರುತ್ತದೆ. ನೀತಿವರ್ಮನ 'ಕೀಚಕವಧ' (೧೧ನೆಯ ಶ.)ದಲ್ಲಿ, ಅದರ ೩ನೆಯ ಸರ್ಗದಲ್ಲಿ ದ್ರೌಪದಿ ವಿರಾಟನನ್ನು ಕುರಿತು ಹೇಳುವ ಮಾತುಗಳು ಶ್ಲೇಷಚಮತ್ಕಾರದಿಂದ ಅಲ್ಲಿಯೇ ಅಜ್ಞಾತವೇಷದಲ್ಲಿದ್ದ ಪಾಂಡವರಿಗೆ ಬೇರೆ ಅರ್ಥವನ್ನು ಕೊಡುವಂತಾಗಿ ತೋರುತ್ತಿರುವುದು. ಶ್ರೀಹರ್ಷನ 'ನೈಷಧೀಯ ಚರಿತ'ದಲ್ಲಿ (೧೨ನೆಯ ಶ.), ಅದರ ೧೩ನೆಯ ಸರ್ಗದಲ್ಲಿ, ನಿಜನಳನಿಗೂ ವೇಷಾಂತರದ ನಳನಿಗೂ ಅನ್ವಯಿಸುವಂತೆ ಶ್ಲೇಷಾರ್ಥ ಕಲ್ಪನೆಯಿದೆ.

ದ್ವಿಸಂಧಾನ ಕಾವ್ಯದಲ್ಲಿ ವಿಲೋಮಕಾವ್ಯಗಳದು ಬೇರೊಂದು ರೀತಿ. ಶ್ಲೇಷಾಲಂಕಾರವನ್ನು ಬಳಸದೆ, ಗತಿಚಿತ್ರಗಳಿಂದ ಇದನ್ನು ಸಾಧಿಸಲಾಗುತ್ತದೆ. ೩೬ ಶ್ಲೋಕಗಳ 'ರಾಮಕೃಷ್ಣ ವಿಲೋಮಕಾವ್ಯ'ದಲ್ಲಿ ಉತ್ತರಾರ್ಧದ ಎರಡು ಪಾದಗಳನ್ನು ವಿಲೋಮಗತಿಯಲ್ಲಿ ಓದಿದರೆ ಪೂರ್ವಾರ್ಧವಾಗಿ, ರಾಮಕೃಷ್ಣರಿಬ್ಬರ ಕಥೆಗಳೂ ನಡೆಯುವಂತೆ ಪದಸಂಯೋಜನೆ ಮಾಡಿದೆ. ಚಾಮರಾಜನಗರದ ರಾಮಶಾಸ್ತ್ರಿಗಳು 'ಸೀತಾರಾವಣ ಸಂವಾದ ಝರೀ' ಎಂಬ ೧೦೨ ಶ್ಲೋಕಗಳ ಕೃತಿಯಲ್ಲಿ ಚ್ಯುತ, ಅಧಿಕ ಮತ್ತು ದತ್ತಾಕ್ಷರಗಳನ್ನು ಬಳಸಿ ಸೀತೆ ಮತ್ತು ರಾವಣರ ನಡುವೆ ನಡೆದ ಸಂವಾದ ಸಂದರ್ಭವನ್ನು ೫೯ ಶ್ಲೋಕಗಳಲ್ಲಿ, ದ್ವಿಸಂಧಾನಮಾರ್ಗದಲ್ಲಿ, ರಚಿಸಿದ್ದಾರೆ. ಈ ಬಗೆಯ ೧೦೦ ಶ್ಲೋಕಗಳನ್ನು ರಚಿಸುವ ಅವರ ಪ್ರಯತ್ನ ಪೂರೈಸದೆ, ಅದನ್ನು ಮುಂದೆ ಮೈಸೂರು ಸೀತಾರಾಮಶಾಸ್ತ್ರಿಗಳು ಪೂರೈಸಿದ ಹಾಗೆ ತಿಳಿಯುತ್ತದೆ.[1] 'ನಲ ಹರಿಶ್ಚಂದ್ರೀಯ' ಎಂಬ ವಿಲೋಮಕಾವ್ಯದಲ್ಲಿ ೫೦ ಶ್ಲೋಕಗಳಿದ್ದು, ಇದು ಇನ್ನೂ ಪ್ರಕಟವಾಗಿಲ್ಲ.

'ದ್ವಿಸಂಧಾನಕಾವ್ಯ'ದಲ್ಲಿ ಇನ್ನೂ ಒಂದು ಪದ್ಧತಿಯುಂಟು. ಹೇಮಚಂದ್ರನ (೧೦೮೮–೧೧೭೨) 'ಕುಮಾರಪಾಲಚರಿತ'ದ ೨೦ ಸರ್ಗಗಳು ಸಂಸ್ಕೃತದಲ್ಲಿಯೂ ೮ ಸರ್ಗಗಳು ಪ್ರಾಕೃತದಲ್ಲಿಯೂ ಇರುವುದು ಕಾರಣವಾಗಿ ಇದೂ ಒಂದು ರೀತಿಯಲ್ಲಿ ದ್ವ್ಯಾಶ್ರಯ ಕಾವ್ಯವಾಗಿದೆ. ಈ ಕೃತಿಯಲ್ಲಿ ಸಂಸ್ಕೃತ ಪ್ರಾಕೃತ ವ್ಯಾಕರಣ ತತ್ವಗಳು ಸಹ ಏಕಕಾಲದಲ್ಲಿ ತಿಳಿಯುವಂತೆ ನಿರೂಪಣೆಯಿದೆ.

'ದ್ವಿಸಂಧಾನಕಾವ್ಯ' ಪದ್ಧತಿಯನ್ನು ಬೆಳೆಸಿದ ಪ್ರಯತ್ನಗಳೂ ಕೆಲವು ಕಂಡುಬರುತ್ತವೆ. ಎಂದರೆ ಎರಡಕ್ಕಿಂತ ಹೆಚ್ಚಿನ ಕಥೆಗಳು ಏಕಕಾಲದಲ್ಲಿ ನಿರೂಪಿತವಾಗಿರುವಂತೆ ಕೌಶಲವನ್ನು ತೋರುವುದೇ ಆ ಪದ್ಧತಿಯ ಬೆಳವಣಿಗೆಯ ಹೆಜ್ಜೆ. ವಿಜಯನಗರದ ಪ್ರಭು ೧ನೆಯ ವೆಂಕಟನ ಆಶ್ರಿತನಾದ ಅನಂತನಾರಾಯಣನ ಮಗ ಚಿದಂಬರ ಕವಿಯ (೧೫೮೬–೧೬೧೪) ಮೂರು ಸರ್ಗಗಳ ರಾಘವ 'ಯಾದವ ಪಾಂಡವೀಯ' ಎಂಬ ತ್ರಿಸಂಧಾನ ಕಾವ್ಯದಲ್ಲಿ ರಾಮಾಯಣ ಭಾರತ ಮತ್ತು ಭಾಗವತಗಳ ಕಥೆಗಳು ಏಕಕಾಲದಲ್ಲಿ ನಿರೂಪಿತವಾಗಿರುವುದು ಕಾಣುತ್ತದೆ. ಇದೊಂದು ಸಾಹಸವೇ ಸರಿ. 'ಪಂಚಕಲ್ಯಾಣಚಂಪು' ಐದು ಕಥೆಗಳನ್ನು ನಿರ್ವಹಿಸುತ್ತದೆ. ಏಳು ಕಥೆಗಳನ್ನು ಹೇಳುವ ಸಪ್ತಸಂಧಾನ ಕಾವ್ಯಗಳೂ ಇರುವುದೆಂಬ ಅಭಿಪ್ರಾಯವಿದೆ. ಸೋಮಪ್ರಭನ 'ಶತಾರ್ಥೀ ಕಾವ್ಯ'ದ ಬಗ್ಗೆ ಈ ಮೊದಲೇ ಹೇಳಿದೆ.

ಕವಿರಾಜನ 'ರಾಘವಪಾಂಡವೀಯ'ದಿಂದ ಒಂದು ಉದಾಹರಣೆ :

> ನೃಪೇಣ ಕನ್ಯಾಂ ಜನಕೇನ ದಿತ್ಸಿತಾ। ಮಯೋನಿಜಾಂ ಲಂಭಯಿತುಂ ಸ್ವಯಂವರೇ।
> ದ್ವಿಜಪ್ರವರ್ಯೇಣ ಸ ಧರ್ಮನಂದನಃ। ಸಹಾನುಜಸ್ತತ್ಪುರಮುಪ್ಯನೀನಯತ್ ॥ (೨-೧)

ರಾಮಾಯಣಪರವಾದ ಅರ್ಥ :

"ಆ ದ್ವಿಜಶ್ರೇಷ್ಠನಾದ ವಿಶ್ವಾಮಿತ್ರನು ಜನಕರಾಜನಿಂದ ಸ್ವಯಂವರದಲ್ಲಿ ಕೊಡಬೇಕೆಂದು ನಿರ್ಣೀತೆಯಾಗಿದ್ದ ಅಯೋನಿಜೆ ಸೀತೆಯನ್ನು ಕೊಡಿಸುವ ಉದ್ದೇಶದಿಂದ ಧನುರ್ಧಾಸಕ್ತನಾದ ಶ್ರೀರಾಮನನ್ನು ಲಕ್ಷ್ಮಣನೊಡನೆ ಮಿಥಿಲಾಪಟ್ಟಣಕ್ಕೆ ಕರೆದುಕೊಂಡು ಬಂದನು."

ಭಾರತಪರವಾದ ಅರ್ಥ :

"ಒಬ್ಬ ದ್ವಿಜಶ್ರೇಷ್ಠನು ಸ್ವಯಂವರದಲ್ಲೇ ಮಗಳನ್ನು ಕೊಡಬೇಕೆಂದು ತಂದೆಯಿಂದ ನಿರ್ಣೀತೆಯಾಗಿದ್ದ ಅಯೋನಿಜೆ ದ್ರೌಪದಿಯನ್ನು ಕೊಡಿಸುವ ಉದ್ದೇಶದಿಂದ ತಮ್ಮಂದಿರೊಡನೆ ಧರ್ಮರಾಯನನ್ನು ಪಟ್ಟಣಕ್ಕೆ ಕರೆತಂದನು."

ಹರದತ್ತ ಸೂರಿಯ 'ರಾಘವ ನೈಷಧೀಯ'ದಲ್ಲಿ :

> ರಾಮೋಽಭಿರಾಮಃ ಸನಲಃ ಪ್ರತೀತಃ। ಪುತ್ರೋಽಭವತ್ತಸ್ಯ ಸುಸತ್ಯಸಂಧಃ।
> ಸಲಕ್ಷ್ಮಣಃ ಸದ್ಭರತಃ ಸಶತ್ರುಹಾ। ಚತುರ್ವಿಧತ್ವಂ ಗತವಾನಿವೈಕಃ ॥ (೧-೨)

ರಾಮಾಯಣಪರವಾದ ಅರ್ಥ :

"ಅವನಿಗೆ (ದಶರಥನಿಗೆ) ಮನೋಹರನೂ ಉದಾರಪ್ರಿಯನೂ ಪ್ರಖ್ಯಾತನೂ ಸತ್ಯಸಂಧನೂ ಆದ ರಾಮನೆಂಬ ಮಗ ಹುಟ್ಟಿದನು. ಲಕ್ಷ್ಮಣ ಭರತ ಶತ್ರುಘ್ನರೊಂದಿಗೆ ಒಡಗೂಡಿದ ರಾಮನು ಬ್ರಹ್ಮನೊಬ್ಬನೇ ನಾಲ್ಕು ರೂಪಗಳನ್ನು ತಾಳಿದಂತೆ ಕಂಡನು."

ನಳಕಥಾಪರವಾದ ಅರ್ಥ :

"ಅವನಿಗೆ (ವೀರಸೇನನಿಗೆ) ಸರ್ವದಾ ಅಗ್ನಿಯನ್ನು ಪೂಜಿಸುವವನೂ (=ರಾಮ) ಮನೋಹರನೂ ಪ್ರಖ್ಯಾತನೂ ಸತ್ಯಸಂಧನೂ ಆದ ನಳನೆಂಬ ಮಗನು ಹುಟ್ಟಿದನು. ಲಕ್ಷಣಾನ್ವಿತನೂ ಒಳ್ಳೆಯ ಪಾಲಕನೂ ಶತ್ರುಸಂಹಾರಕನೂ ಆಗಿ ಒಬ್ಬನೇ ಆದರೂ ನಳ, ಲಕ್ಷ್ಮಣ, ಭರತ, ಶತ್ರುಘ್ನರ ನಾಲ್ಕು ರೂಪಗಳನ್ನು ತಾಳಿದಂತೆ ಕಂಡನು."

ದ್ವಿಸಂಧಾನಕಾವ್ಯದ ಚಮತ್ಕಾರವನ್ನು ಹೆಚ್ಚಿಸುವ ಇನ್ನೊಂದು ಬಗೆಯಿದೆ. ಅದನ್ನು ಗತಪ್ರತ್ಯಾಗತವೆಂಬ ಗತಿಚಿತ್ರದ ಮೂಲಕ ಸಾಧಿಸಲಾಗುತ್ತದೆ. ಇಲ್ಲಿ ಪದ್ಯದ ಒಂದು ಅರ್ಥವನ್ನು, ಅದನ್ನು ಯಥಾಕ್ರಮದಲ್ಲಿ ಓದುವುದರಿಂದಲೂ ಇನ್ನೊಂದು ಅರ್ಥವನ್ನು ಅದನ್ನೇ ವಿಪರೀತಕ್ರಮದಲ್ಲಿ ಓದುವುದರಿಂದಲೂ ಪಡೆಯುವಂತಿರುತ್ತದೆ. ಇಂತಹ ಕಾವ್ಯವನ್ನು 'ಅನುಲೋಮವಿಲೋಮಕಾವ್ಯ' ಎಂದು ಹೇಳಿದೆ. ಒಂದು ಲಕ್ಷ್ಯ :

ಅರಿಶಾಣ ಘಾಲ ವೆಂಕಟಾಚಾರ್ಯನ 'ರಾಘವಯಾದವೀಯ'ದಲ್ಲಿ :

ಯಾತುರಾಜಿದಭಾಭಾರಂ ದ್ಯಾಂ ವ ಮಾರುತಗಂಧಗಂ ।
ಸೋಽಗಮಾರ ಪದಂ ಯಕ್ಷತುಂಗಾಭೋಽನಘಯಾತ್ರಯಾ ॥ (ಪ. ೧೪)

ಅನುಲೋಮ ಕ್ರಮದಲ್ಲಿ ಇದರ ಆಶಯ :

''ಕುಬೇರನಂತೆ ಅತಿಶಯಕಾಂತಿಯನ್ನುಳ್ಳ, ರಾಕ್ಷಸಪಂಕ್ತಿಯನ್ನು ಸೀಳುವಂಥ ತೇಜಶ್ಶಾಲಿಯಾದ ಶ್ರೀರಾಮನು ಪರಿಮಳಯುಕ್ತ ಮಂದಾನಿಲ ಬೀಸುವ, ಸ್ವರ್ಗದಂತಿದ್ದ ಚಿತ್ರಕೂಟ ಪರ್ವತಸ್ಥಾನಕ್ಕೆ ಬಂದನು.''

ಯಾತ್ರಯಾ ಘನಭೋ ಗಾತುಂ ಕ್ಷಯದಂ ಪರಮಾಗಸಃ ।
ಗಂಧಗಂ ತರುಮಾವ ದ್ಯಾಂ ರಂಭಾಭಾದಜಿರಾ ತು ಯಾ ॥

ಮೊದಲಿನ ಪದ್ಯದ ವಿಲೋಮಕ್ರಮದಲ್ಲಿ ಇದರ ಆಶಯ :

''ಮೇಘಪ್ರಭನಾದ ಶ್ರೀಕೃಷ್ಣನು (ಸತ್ಯಭಾಮೆಯ ಬಗೆಗೆ) ತನ್ನ ಮಹಾಪರಾಧಕ್ಕೆ ಪರಿಹಾರವೆಂದು ಪಾರಿಜಾತವೃಕ್ಷವನ್ನು ತರಲು ರಂಭೆಯಿಂದ ಶೋಭಿಸುತ್ತಿರುವ ಅಂಕಣವುಳ್ಳ ಸ್ವರ್ಗಕ್ಕೆ ಯಾತ್ರೆಗೆ ಹೋಗುವಂತೆ ಹೋದನು.''

ಹೀಗೆಯೇ ತ್ರಿಸಂಧಾನಕಾವ್ಯದ ಒಂದು ಲಕ್ಷ್ಯವನ್ನು ಮುಂದೆ ಉದ್ಧರಿಸಿಕೊಡಬಹುದಾಗಿದೆ.

ಚಿದಂಬರಕವಿಯ 'ಯಾದವ ರಾಘವ ಪಾಂಡವೀಯ'ದಲ್ಲಿ[2] :

ಶುಭದಶರಥವೀರಸ್ತ್ರಾಮವನ್ನುಗ್ರಸೇನಃ
ಪೃಥುಭುಜಧೃತರಾಷ್ಟ್ರಃ ಪಾಂಡುಕೀರ್ತ್ಯಾ ಪ್ರಶಸ್ತಃ
ಜಗತಿ ಯದುಚಿತಂ ಮಾಮಾನವಾನಾಂ ಪ್ರಿಯಂ ಯತ್
ಸ ತದತನುತ ಪೂರ್ವಾಖ್ಯಾತರಾಜಾಧ್ವಚಾರೀ ॥ (ತರಂಗ ೧–ಪದ್ಯ ೧)

ಯಾದವಪರವಾದ ಅರ್ಥ :

''ದಿಗ್ವಿಜಯದಲ್ಲಿ ಜಯಲಕ್ಷ್ಮಿಯನ್ನು ಪಡೆದಿರುವ ರಥದಲ್ಲಿ ಕುಳಿತು ಯುದ್ಧಮಾಡುವ ವೀರರಿಂದ ಕೂಡಿದ, ತನ್ನ ಭುಜಬಲದಿಂದ ರಾಷ್ಟ್ರವನ್ನು ಪಾಲಿಸುತ್ತಿರುವ, ವಿಮಲಕೀರ್ತಿಯಿಂದ ಪ್ರಸಿದ್ಧನಾದ, ಉಗ್ರಸೇನನೆಂಬ ರಾಜನು ಮಧುರಾಪಟ್ಟಣವನ್ನು ಪಾಲಿಸತಕ್ಕವನಾಗಿ, ತನ್ನ ಪೂರ್ವಜರಾದ ಯದು ಮೊದಲಾದ ರಾಜರುಗಳಿಂದ ಬೆಳೆಸಲ್ಪಟ್ಟ ಕೊಳ, ಅನ್ನಸತ್ರ, ಆರಾಮ, ಗ್ರಾಮನಿರ್ಮಾಣ ಮೊದಲಾದ ಜನಹಿತ ಕಾರ್ಯಗಳನ್ನು ನಳ ಮೊದಲಾದ ಪ್ರಸಿದ್ಧ ರಾಜರುಗಳ ಸನ್ಮಾರ್ಗದಲ್ಲಿ ಸಿರತನಾಗಿ ಅಧಿಕವಾಗಿ ಮಾಡಿದನು.''

ರಾಮಾಯಣಪರವಾದ ಅರ್ಥ :

''ದಶರಥ ಮಹಾರಾಜನು ಅಯೋಧ್ಯಾಪಟ್ಟಣದ ರಾಜ. ಅವನ ಸೇನೆ ಉಗ್ರವಾದುದು. ಅವನ ವೀರ ಯೋಧರು ರಥದಲ್ಲೇ ಕುಳಿತು ಯುದ್ಧಮಾಡಿ ಜಯವನ್ನು ಪಡೆದವರು. ಅವನು ಧವಳಕೀರ್ತಿಯನ್ನು ಹೊಂದಿದ್ದವನು. ವಿಶಾಲವಾದ ಭುಜಬಲದಿಂದ ರಾಷ್ಟ್ರವನ್ನು ಪಾಲಿಸುತ್ತಿದ್ದನು. ತನ್ನ ಪೂರ್ವಜರಾದ ಇಕ್ಷ್ವಾಕು, ಕಕುತ್ಸ್ಥ ಮೊದಲಾದ ರಾಜರುಗಳು ನಡೆದ ದಾರಿಯಲ್ಲಿ ತಾನೂ ನಡೆದು, ಮನುಕುಲದಲ್ಲಿ ಹುಟ್ಟಿದ ತನ್ನ ರಾಜರು ಮಾಡುತ್ತಿದ್ದ, ಇಂದ್ರನಿಗೆ ಸಹಾಯಮಾಡುವುದು ಮೊದಲಾದ ಪ್ರಿಯಕರ್ಮಗಳನ್ನು ನಡೆಸುತ್ತಾ, ಜನಹಿತವಾದ ಕೊಳ ಕಟ್ಟಿಸುವುದು, ಸಾಲುಮರ ನೆಡಿಸುವುದು ಮೊದಲಾದ ಕೆಲಸಗಳನ್ನು ಹೆಚ್ಚುಹೆಚ್ಚಾಗಿ ಮಾಡಿ, ತನ್ನ ರಾಜ್ಯವನ್ನು ಪಾಲಿಸುತ್ತಿದ್ದನು.''

ಭಾರತಪರವಾದ ಅರ್ಥ :

''ಹಸ್ತಿನಾವತಿಯ ರಾಜ ಧೃತರಾಷ್ಟ್ರ. ರಥಚಾರಿಗಳಾಗಿ ಜಯಶೀಲರಾದ ಯೋಧರು ಅವನಿಗೆ. ಉಗ್ರವಾದ ಸೇನೆಯುಳ್ಳವನು. ತನ್ನ ವಿಶಾಲತೋಳ್ಬಲದಿಂದ ರಾಷ್ಟ್ರವನ್ನು ಧರಿಸಿದ್ದರಿಂದಲೇ ಅವನಿಗೆ ಧೃತರಾಷ್ಟ್ರನೆಂಬ ಹೆಸರು. ತನ್ನ ತಮ್ಮ ಪಾಂಡುರಾಜನ ನಿರ್ಮಲಕೀರ್ತಿಯಿಂದ ಇವನು ಪ್ರಥಿತನಾದವನು. ತನ್ನ ಪೂರ್ವಜನಾದ ಯಯಾತಿಯ ಕನಿಷ್ಠಪುತ್ರನಾದ ಪುರುರಾಜನು ನಡೆದು ಬಂದು ಉತ್ತಮ ದಾರಿಯಲ್ಲಿ ತಾನೂ ನಡೆದು, ತಟಾಕನಿರ್ಮಾಣ ಮೊದಲಾದ ಜನಹಿತಕಾರ್ಯಗಳಿಂದ ದೇಶವನ್ನು ಅಭಿವೃದ್ಧಿಪಡಿಸಿದನು.''

ಕನ್ನಡದಲ್ಲಿ ಸಂಧಾನಕಾವ್ಯಗಳು

ಕನ್ನಡದಲ್ಲಿ, ತೆಲುಗು ಭಾಷೆಯಲ್ಲಿ ಪ್ರವರ್ಧಮಾನಕ್ಕೆ ಬಂದ ಹಾಗೆ ಸಂಧಾನಕಾವ್ಯಗಳು ಏಕೆ ಬೆಳೆದು ಬರಲಿಲ್ಲವೋ ತಿಳಿಯದು. ಸಮಗ್ರ ಕನ್ನಡ ಸಾಹಿತ್ಯದ ಇತಿಹಾಸದ ಪುಟಗಳನ್ನು ತಿರುವಿಹಾಕಿದರೆ, ಎಲ್ಲಿಯೂ ಸಂಧಾನಕಾವ್ಯದ ಒಂದೇ ಒಂದಾದರೂ ರಚನೆ ಕಂಡುಬಾರದಿರುವುದು ಆಶ್ಚರ್ಯದ ಸಂಗತಿಯಾಗಿದೆ.

ಪಂಪಕವಿಯ (೯೪೧) 'ಪಂಪಭಾರತ'ದಲ್ಲಿ ಬರುವ 'ಸಮಸ್ತಭಾರತ' (೧೪–೫೯, ೬೧) ಎಂಬ ಪದಕ್ಕೆ, ಪಂಪನ ಆಶ್ರಯದಾತನಾಗಿದ್ದ ಅರಿಕೇಸರಿಯ (೨) ಕಾಲದ ರಾಜಕೀಯವ್ಯಕ್ತಿಗಳ ಹಾಗೂ ಸಂದರ್ಭಗಳ ಕಥೆಯೂ ವ್ಯಾಸಭಾರತದ ಕೌರವಪಾಂಡವರ ಕಥೆಯೂ 'ಸಮಾಸೀಕರಿಸಿ' ಬರೆದ ಭಾರತ ಎಂಬುದಾಗಿ ಮುಳಿಯ ತಿಮ್ಮಪ್ಪಯ್ಯನವರು ಮೊದಲು ಪ್ರತಿಪಾದಿಸಿದರು. ಅವರ ಅಭಿಪ್ರಾಯದಲ್ಲಿ ಈ ಕೃತಿ ಒಂದು ಸಮಾಸೋಕ್ತಿಕಾವ್ಯ ಎಂದರೆ ಒಂದು ದ್ವಿಸಂಧಾನ ಕಾವ್ಯ ಅಥವಾ ಅದರ ಒಂದು ರೀತಿ. ಇದಕ್ಕಾಗಿ ಅವರು ಕಾವ್ಯಸ್ಥವಾದ ಅಂತಹ 'ಸಂಧಾನಿಸಿದ' ಭಾಗಗಳನ್ನು ವಿಸ್ತಾರವಾಗಿ ವಿಮರ್ಶಿಸಿ, ಕಾವ್ಯಕಥೆಯ ಇತರ ಭಾಗಗಳಲ್ಲಿಯೂ ಸ್ಫುಟವೋ ಅಸ್ಫುಟವೋ ಆಗಿ ಆ ರೀತಿಯ 'ಸಂಧಾನ'ವುಂಟೆಂದು ತೋರಿಸುವ ಪ್ರಯತ್ನ ಮಾಡಿದ್ದಾರೆ.

''....ಈ ಕಥೆಯೊಳ್ ತಗುಳ್ಚಿ ಪೋ। ಲಿಪೊಡೆನಗಟ್ಟಿಯಾದುದು ಗುಣಾರ್ಣವಭೂಭುಜನಂ ಕಿರೀಟಿಯೊಳ್'' (೧–೧೪), ''....ಆರೂಢಸರ್ವಜ್ಞನಂ ವೈ। ರಿನರೇಂದ್ರೋದ್ದಾಮದರ್ಪೋದ್ದಳನನನೆ ಕಥಾನಾಯಕಂ ಮಾಡಿ ಸಂದ। ರ್ಜುನನೊಳ್ ಪೋಲ್ಸೀ ಕಥಾಭಿತ್ತಿಯನನುನಯದಿಂ ಪೇೞಲೆಂದೆತ್ತಿಕೊಂಡೆಂ'' (೧–೫೧) ಎಂಬುದಾಗಿ ಕವಿ ಹೇಳಿರುವ ಮಾತುಗಳನ್ನು ಲಕ್ಷಿಸಿದರೆ ತಿಮ್ಮಪ್ಪಯ್ಯನವರ ಗ್ರಹಿಕೆಯಲ್ಲಿ ಸ್ವಲ್ಪ ಹುರುಳಿರಬೇಕೆಂದು ಭಾವಿಸುವಂತಾಗುತ್ತದೆ. ಆದರೆ ಸಂಸ್ಕೃತ ಸಾಹಿತ್ಯಸಂಪ್ರದಾಯದಲ್ಲಿ ನಾವು ಗಮನಿಸಿರುವಂತಹ ರೀತಿಯ 'ದ್ವಿಸಂಧಾನಕಾವ್ಯ' ಪದ್ಧತಿಯ ರಚನೆ ಇದಲ್ಲ ಎಂದು ಹೇಳಬೇಕಾಗುತ್ತದೆ. ಪಂಪನ ಕಾವ್ಯದಲ್ಲಿ ವ್ಯಕ್ತಿ ಹಾಗೂ ಸಂದರ್ಭಗಳ ಅಭೇದಕರಣ ಶ್ಲೇಷಮೂಲವಾದುದಾಗಿರದೆ, ವಾಚ್ಯಮೂಲವೇ ಆಗಿರುತ್ತದೆ. ಎಂದರೆ ಮೂಲದ ವ್ಯಕ್ತಿ ಹಾಗೂ ಸಂದರ್ಭಗಳನ್ನು ಮರೆಮಾಡಿ, ವರ್ತಮಾನದ ವ್ಯಕ್ತಿ ಹಾಗೂ ಸಂದರ್ಭಗಳು ಪ್ರಕಟವಾಗಿಯೇ ಉಲ್ಲೇಖಗೊಂಡಿರುತ್ತವೆ. ಆದ್ದರಿಂದ 'ದ್ವಿಸಂಧಾನ'ದ ಲಕ್ಷಣ ಇಲ್ಲಿ ತೋರುವುದಿಲ್ಲ ಎನ್ನುವುದು ವಿದಿತವೇ ಇದೆ. ಪಂಪನ ಮಾರ್ಗವನ್ನೇ ಅನುಸರಿಸಿ, ಈ ಬಗೆಯಲ್ಲಿಯೇ ಸಮಾಸೀಕೃತ ರಚನೆಗಳನ್ನು ರನ್ನನೂ ಪ್ರಾಯಶಃ ಒಬ್ಬರಿಬ್ಬರು ಇತರ ಕವಿಗಳೂ ಸ್ವಲ್ಪಮಟ್ಟಿಗೆ ಮಾಡಿರುವರಾದರೂ ಇವೂ ನಮ್ಮ ಪರಿಶೀಲನೆಯಿಂದ ಹೊರಗುಳಿಯುತ್ತವೆ.

ಭಾಗಶಃ ದ್ವಿಸಂಧಾನಲಕ್ಷಣವುಳ್ಳ ರಚನೆಗಳೇನೋ ಕನ್ನಡದಲ್ಲಿ ಕ್ವಚಿತ್ತಾಗಿಯಾದರೂ ಗೋಚರಿಸುತ್ತವೆ. ಉದಾ.ಗೆ ರುದ್ರಭಟ್ಟನ (ಸು. ೧೧೮೦) 'ಜಗನ್ನಾಥವಿಜಯ'ದ ಪ್ರಥಮಾಶ್ವಾಸದ ಮೊದಲೈದು ಪದ್ಯಗಳಲ್ಲಿ ದೇವತಾಸ್ತುತಿಯ ಜೊತೆಗೆ ಕವಿಯ ಆಶ್ರಯದಾತನಾದ ಹೊಯ್ಸಳ ವೀರಬಲ್ಲಾಳನ ಕೊಂಡಾಟವೂ ಸೇರಿಕೊಂಡು ಬಂದಿದೆ. ಎಂದರೆ ಆ ಪದ್ಯಗಳಲ್ಲಿ ಎರಡೆರಡು ಕಥಾಂಶಗಳೋ ವರ್ಣನಾಂಶಗಳೋ ಹೊರಡುವಂತೆ ಪದಸಂಘಟನೆಯಿದೆಯೆಂದು ಹೇಳಬಹುದಾಗಿದೆ. ಈ ಪದ್ಯಗಳಿಗೆ 'ಪಂಚಪಾಷಾಣ'ವೆಂಬ ಸಂಸ್ಕೃತವ್ಯಾಖ್ಯಾನವೊಂದಿದೆ.[3] ಇಲ್ಲಿ ಮಾದರಿಗೆ ಒಂದು ಪದ್ಯವನ್ನು ಎತ್ತಿಕೊಡಬಹುದು :

ಅರಿಕಾಮಧ್ವಂಸಿ ನಾಗವ್ರಜಮಯಕಟಕಂ ರಾಜರಾಜಪ್ರತಿಷ್ಠಾ
ನಿರತಂ ಲೀಲಾಕ್ರಮೋದಂಚಿತನಿರವಧಿಗಾಂಗೇಯಕಂ ದ್ವಿಟ್ಪುರಧ್ವಂ
ಸರತಕ್ರೋಧಂ ವೃಷಾಂಕಂ ವಿಬುಧನುತನುಮಾಕಾಮಿನೀಜೀವಿತೇಶಂ
ಪರಮೈಶ್ವರ್ಯಾಸ್ಪದಂ ರಕ್ಷಿಸುಗೆ ವಸುಧೆಯಂ ಯುದ್ಧರಂಗತ್ರಿಣೇತ್ರಂ ॥ (೧–೩)

ಈ ಪದ್ಯದ ಶಿವಪರವಾದ ಅರ್ಥ :

''ವೈರಿಯಾದ ಮನ್ಮಥನನ್ನು ನಿಗ್ರಹಿಸಿದವನು, ಸರ್ಪಗಳ ಕಡಗವನ್ನು ಧರಿಸಿದವನು, ಕುಬೇರನ ಉತ್ಕರ್ಷದಲ್ಲಿ ಆಸಕ್ತನಾದವನು, ಕ್ರೀಡೆಯಲ್ಲಿ ಅತಿಶಯ ಸಂತೋಷದಿಂದ ನಿರತನಾದ ಷಣ್ಮುಖನನ್ನು ಮಗನಾಗಿ

ಪಡೆದಿರುವವನು, ತ್ರಿಪುರಗಳ ನಾಶದಲ್ಲಿ ಆಸಕ್ತವಾದ ಕೋಪವುಳ್ಳವನು, ವೃಷಭದ ಲಾಂಛನವನ್ನು ತಳೆದವನು, ದೇವತೆಗಳಿಂದ ಸ್ತುತನಾದವನು, ಪಾರ್ವತಿಗೆ ಪತಿಯಾದವನು, ಉತ್ಕೃಷ್ಟವಾದ ಸ್ವಾಮಿತ್ವಕ್ಕೆ ಆಸ್ಪದನಾದವನು, ರಣರಂಗದಲ್ಲಿ ಶತ್ರುಸಂಹಾರಕವಾದ ಹಣೆಗಣ್ಣುಳ್ಳವನು ಆದ ಈಶ್ವರನು ಭೂಮಿಯನ್ನು ರಕ್ಷಿಸಲಿ.''

ಈ ಪದ್ಯದ ವೀರಬಲ್ಲಾಳಪರವಾದ ಅರ್ಥ :

''ಶತ್ರುವಾದ ಉಚ್ಚಂಗಿ ಕೋಟೆಯ ಅಧೀಶ್ವರನಾದ ಕಾಮದೇವನನ್ನು ನಿಗ್ರಹಿಸಿದವನು, ಆನೆಗಳ ಸಮೂಹದ ದಂಡನ್ನುಳ್ಳವನು, ಮೂರನೆಯ ರಾಜರಾಜನನ್ನು ಚೋಳಸಿಂಹಾಸನದಲ್ಲಿ ಪ್ರತಿಷ್ಠಿಸುವುದರಲ್ಲಿ ಆಸಕ್ತನಾದವನು ಅತಿಸುಲಭವಾಗಿಯೇ ಗಳಿಸಿದ ವಿಪುಲವಾದ ಸಂಪತ್ತನ್ನುಳ್ಳವನು, ಶತ್ರುರಾಜರ ನಗರಗಳನ್ನು ಧ್ವಂಸ ಮಾಡುವುದರಲ್ಲಿ ಆಸಕ್ತವಾದ ಕ್ರೋಧವುಳ್ಳವನು, ಧರ್ಮವೇ ಭೂಷಣವಾದವನು, ವಿದ್ವಾಂಸರಿಂದ ಸ್ತುತನಾದವನು, ಉಮಾದೇವಿಯೆಂಬ ರಾಣಿಗೆ ಪತಿಯಾದವನು, ಪರಮೇಶ್ವರನೆಂಬ ಪ್ರಶಸ್ತಿಗೆ ಪಾತ್ರನಾದವನು, ಯುದ್ಧರಂಗ ತ್ರಿಣೇತ್ರನೆಂದು ಖ್ಯಾತನಾದವನು ಆದ ವೀರಬಲ್ಲಾಳ(೨)ನು ಭೂಮಿಯನ್ನು ರಕ್ಷಿಸಲಿ.''

ಚೆನ್ನವೀರ ಜಂಗಮದೇವನ (ಸು.೧೫೦೦) 'ಷಟ್ಸ್ಥಲ ವಲ್ಲಭ'ದಲ್ಲಿ, ಪ್ರಥಮಾಶ್ವಾಸದಲ್ಲಿ, ೯೬ರಿಂದ ೧೦೧ನೆಯ ಪದ್ಯದವರೆಗೆ, ಒಟ್ಟು ಐದು ಪದ್ಯಗಳೂ ಪಂಚಮಾಶ್ವಾಸದಲ್ಲಿ ೧೨೩ನೆಯ ಒಂದು ಪದ್ಯವೂ ಈ ಸಂದರ್ಭದಲ್ಲಿ ಗಮನಿಸಬಹುದಾಗಿದೆ. ಈ ಪದ್ಯಗಳನ್ನು ಕ್ರಮವಾಗಿ ದ್ವಿಸಂಧಾನ ಚಂಪಕಮಾಲಾವೃತ್ತ, ದ್ವಿಸಂಧಾನ ಉತ್ಪಲಮಾಲಾವೃತ್ತ, ದ್ವಿಸಂಧಾನ ಮಲ್ಲಿಕಾ(ಮಾಲಾ)ವೃತ್ತ, ಕುಸುಮಿತಲತಾವೃತ್ತ ದ್ವಿಸಂಧಾನ, ವಿದಳಿತಸರಸಿಜವೃತ್ತ (ನಿರೋಷ್ಠ ದ್ವಿಸಂಧಾನ) ಹಾಗೂ ದ್ವಿಸಂಧಿ ಭುಜಂಗವಿಜೃಂಭವೃತ್ತ ಎಂಬುದಾಗಿ ಕರೆದಿದೆ. ಮೇಲುನೋಟದಲ್ಲಿಯೇ, ಈ ವೃತ್ತಗಳು ವೃತ್ತನಾಮಸೂಚನೆಯಿರುವ ಮುದ್ರಾಲಂಕಾರದಲ್ಲಿ ಕಟ್ಟಿದ ಪದ್ಯಗಳೆಂದು ತಿಳಿಯುತ್ತವೆಯಾದರೂ, ಇವುಗಳ ಹೆಚ್ಚಿನ ಚಮತ್ಕಾರವೇನೆಂಬುದು ಪದ್ಯಗಳನ್ನು ವಿಶ್ಲೇಷಿಸಿದಾಗ ತಿಳಿಯುತ್ತದೆ; ಈ ಪದ್ಯಗಳಲ್ಲಿ ಶ್ಲೇಷಮೂಲವಾಗಿ ಹುಟ್ಟುವ ದ್ವಿಸಂಧಾನತ್ವದ ಲಕ್ಷಣವುಂಟು ಎಂಬುದು ವಿದಿತವಾಗುತ್ತದೆ. ಆ ಪದ್ಯಗಳನ್ನು ನೋಡೋಣ :

ಮೊದಲ ಐದು ಪದ್ಯಗಳ ಸಂದರ್ಭ, ಪುರವರ್ಣನೆಯ ಭಾಗವಾಗಿ ಬರುವ ಹೂವಿನಂಗಡಿಗಳ ವರ್ಣನೆಗೆ ಸಂಬಂಧಿಸಿದುದು.

[ಹಿನ್ನೆಲೆ : ''ಕುಸುಮ ವಿಕ್ರಯವಸರದೊಳ್ ಓರ್ವ ಕವೀಶ್ವರಂ ಪೋಗುತ್ತಿರಲೊರ್ವ ಮಾಲೆಗಾರ್ತಿ ಪೂಸರಂಗಳಂ ಪಿಡಿದು ಮೇಲಕ್ಕೆ ನೆಗಹಿ ತೋರುತಿರ್ದಳದೆಂತೆಂದೊಡೆ'']

ದ್ವಿಸಂಧಾನ ಚಂ.ವೃ.

ಸುರಪತಿ ಸೋಲ್ತನರ್ಕ ಮನಮಿಟ್ಟ ಸುಧಾಕರ ಸೋಲ್ತ ಮತ್ತೆ ಮೂ
ತರರುಗಳೊಪ್ಪೆ ಮೂವರುಗಳೊತ್ತಿನೊಳಗ್ನಿಯುಂ ಸೋಲ್ತರೆಲ್ಲರುಂ
ವಿರತನು ಸೋಲ್ತನೊನ್ಮೆ ಪದಿಮೂರನೆ ಪೂವಿಗೆಯೆಂಬುತಾಗ ಪೂ
ಸರವನುಯೆತ್ತಿ ತೋರಿದಳು ಚಂಪಕಮಾಲೆಯ ಮಾಲೆಗಾರ್ತಿಯುಂ ॥ (ಪ. ೯೬)

ಸಾಮಾನ್ಯವಾಗಿ ಹೊರಡುವ ಸಂದರ್ಭೋಚಿತವಾದ ಅರ್ಥ :

'' 'ಇಂದ್ರ ಮರುಳಾದನು, ಸೂರ್ಯ ಮನಸ್ಸು ಮಾಡಿದನು, ಚಂದ್ರ ಇಷ್ಟಪಟ್ಟನು, ಅಲ್ಲದೆ ಸೂರ್ಯನ ಅಂಗದೇವತೆಗಳು ಮೂವರೂ ಜೊತೆಯ ಅಗ್ನಿಯೂ ಸೇರಿದಂತೆ ಎಲ್ಲರೂ ಸೋತು ಹೋದರು; (ಹಾರದ) ಹದಿಮೂರನೆಯ ಹೂವಿಗೆ ಒಂದು ಸಲ ಸಂನ್ಯಾಸಿ ಕೂಡ ಸೋತನು' ಎನ್ನುತ್ತ ಆಗ ಮಾಲೆಗಾರ್ತಿಯು ಸಂಪಿಗೆ ಹೂವಿನ ಹಾರವನ್ನು ಮೇಲೆತ್ತಿ (ಆ ಕವಿಶ್ರೇಷ್ಠನಿಗೆ) ತೋರಿಸಿದಳು.''

ವಿಶೇಷವಾಗಿ ಹುದುಗಿಸಿರುವ ಛಂದಸ್ಸಿನ ಅರ್ಥ :

''ಇಂದ್ರನೆಂಬ ಗಣ (ನಾಕ=ನಗಣ) ಒಳಗಾಯಿತು, ಸೂರ್ಯನೆಂಬ ಗಣ (ರವಿ=ಜಗಣ) ಒಡಗೂಡಿತು, ಚಂದ್ರನೆಂಬ ಗಣ (ಅಬ್ಜಾರಿ=ಭಗಣ) ಸೇರಿತು, ಸೂರ್ಯಸಹಾಯಕರೆಂಬ ಗಣಗಳು ಮೂರೂ

(ರವಿ=ಮೂರು ಜಗಣಗಳು) ಜೊತೆಯ ಅಗ್ನಿಗಣವೂ (ಶಿಖಿ=ರಗಣ) ಸೇರಿ ಅಂತೂ ಎಲ್ಲವೂ ಸರಣಿಗೊಂಡುವು. (ವೃತ್ತದ) ಹದಿಮೂರನೆಯ ಅಕ್ಷರಕ್ಕೆ ವಿರತಿಯೂ (ಚಂಪಕಮಾಲೆಯಲ್ಲಿ ೧೩ನೆಯ ಅಕ್ಷರಕ್ಕೆ ಯತಿ) ಬಂದಿತು–ಎಂಬುದಾಗಿ ಆಗ (ಕಾವ್ಯ)ಮಾಲೆಯನ್ನು ಕಟ್ಟಬಲ್ಲ ಆಕೆಯು (ಆ ಕವಿಶ್ರೇಷ್ಠನಿಗೆ) ಚಂಪಕಮಾಲಾವೃತ್ತವನ್ನು ಕಟ್ಟಿ ತೋರಿಸಿದಳು.''

ದ್ವಿಸಂಧಾನ ಉ.ವೃ.

ಎತ್ತಿದುದೊಂದು ಪೂಸರಕೆ ಚಂದ್ರನುಮಗ್ನಿಸುರಾಧಿಪರ್ಕಳುಂ
ಚಿತ್ತವನಿತ್ತುದಲ್ಲದೆಯುಂ ಮತ್ತೆ ಸುಧಾಕರನಿರ್ಮ್ಮಯಗ್ನಿಯೊ
ನ್ಮ್ಮಂತಿರಲಂತ್ಯದೊಳ್ ಹರಿಹರಾದಿಗಳಾಸೆ ನಿರಾಸೆಯೆಂದವಳ್
ದಂತದ ಪುಷ್ಪ ಕಂಡೆ ನುಡಿದುತ್ಪಲಮಾಲೆಯ ತೋರುತಿರ್ದಪಳ್ ॥ (ಪ. ೯೭)

ಸಾಮಾನ್ಯಾರ್ಥ :

''ಎತ್ತಿದ ಒಂದು ಹೂವಿನ ಹಾರಕ್ಕೆ ಚಂದ್ರನೂ ಅಗ್ನಿ ಮತ್ತು ಇಂದ್ರರೂ ಮನಸ್ಸುಕೊಟ್ಟುದೇ ಅಲ್ಲದೆ, ಇನ್ನೊಮ್ಮೆ ಚಂದ್ರನು ಎರಡು ಸಲ, ಅಗ್ನಿ ಒಂದು ಸಲ ಆಸೆಪಟ್ಟರು; ಕೊನೆಗೆ ಹರಿಹರರಿಗೆ ಆಸೆ ನಿರಾಸೆಯಾಯಿತು–ಎಂದು ನುಡಿದು ಆ ಮಾಲೆಗಾರ್ತಿ ತನ್ನ ಹೂವಿನಂತಹ ಹಲ್ಲುಗಳ ಕಾಂತಿ ಕಂಡುವ ಹಾಗೆ ನೈದಿಲೆಹೂವಿನ ಹಾರವನ್ನು ತೋರುತ್ತಿದ್ದಾಳೆ.''

ಛಂದಸ್ಸಿನ ಅರ್ಥ :

''ಎತ್ತಿದ ಒಂದು ಹೂವಿನಹಾರದಂತಹ ವೃತ್ತಕ್ಕೆ ಚಂದ್ರಗಣವೂ (ಭಗಣ), ಅಗ್ನಿ ಮತ್ತು ಇಂದ್ರ ಗಣಗಳೂ (ರಗಣ ಮತ್ತು ನಗಣಗಳೂ) ಸೇರಿಕೊಂಡವು, ಅಲ್ಲದೆ ಇನ್ನೊಮ್ಮೆ ಚಂದ್ರಗಣಗಳು ೨ ಸಲ (೨ ಭಗಣಗಳು), ಅಗ್ನಿಗಣ ಒಂದು ಸಲ (ರಗಣ) ಜೊತೆಗೂಡಿದವು; ಕೊನೆಗೆ ಹರಿ (ಲಘು) ಮತ್ತು ಹರ (ಗುರು) ಸೇರಿದರೂ ಗಣಗಳು ಪೂರ್ಣಗೊಳ್ಳದೆ ಅಪೂರ್ಣವಾಗುವಂತಾಯಿತು–ಎಂಬುದಾಗಿ (ಕಾವ್ಯ)ಮಾಲೆಯನ್ನು ಕಟ್ಟಬಲ್ಲ ಆಕೆ (ಆ ಕವಿಶ್ರೇಷ್ಠನಿಗೆ) ಉತ್ಪಲಮಾಲಾವೃತ್ತವನ್ನು ಕಟ್ಟಿ ತೋರಿಸಿದಳು.''

ದ್ವಿಸಂಧಾನ ಮಲ್ಲಿಕಾ (ಮಾಲಾ) ವೃತ್ತ

ವೀತಿಹೋತ್ರನ ವಾಯುಮಾಠರರಿಬ್ಬರಿಂ ಶಶಿಯೊಬ್ಬನಂ
ಮತ್ತೆಯುಂ [ಜ್ವ]ಲನಂ ಇವೆಲ್ಲರ ಕಾಂತಿಯಂ ಸರಿಗೂಡಿ ತಾಂ
ಪೂತವರ್ಚಿತಪಾದ ಪೂಸರದಲ್ಲಿ ತಾಪಸ[ನೆಂ]ಟರೊಳ್
ಪ್ರೀತಿಮಾಡಿದ ಮಲ್ಲಿಕಾವರಮಾಲೆಯೆಂದುರೆ ತೋರ್ದಳುಂ ॥ (ಪ. ೯೮)

ಸಾಮಾನ್ಯಾರ್ಥ :

''ಅಗ್ನಿ, ವಾಯು, ರವಿಯ ಅಂಗದೇವತೆಗಳಿಬ್ಬರು, ಚಂದ್ರನೊಬ್ಬ, ಹಾಗೂ ಅಗ್ನಿ ಇವರೆಲ್ಲರ ಕಾಂತಿಯನ್ನೂ ಒಂದುಮಾಡಿಕೊಂಡು ಪೂಜ್ಯವೂ ಅರ್ಚಿತವೂ ಆದ ಪಾದಕಮಲಗಳಲ್ಲಿ, ಶಿವನ ಅಷ್ಟಮೂರ್ತಿಗಳಲ್ಲಿ(?) ಒಲುಮೆಯನ್ನು ತೋರಿದ ಮಲ್ಲಿಗೆಹೂವಿನ ಸೊಗಸಾದ ಮಾಲೆಯಿದು–ಎಂಬುದಾಗಿ ಅದನ್ನು ತೋರಿಸಿದಳು.''

ಛಂದಸ್ಸಿನ ಅರ್ಥ :

''ಅಗ್ನಿ, ವಾಯು, ರವಿಗಳೆರಡು, ಚಂದ್ರ ಮತ್ತು ಅಗ್ನಿ ಎಂಬ ಗಣಗಳಿಂದ (ರಗಣ, ಸಗಣ, ೨ ಜಗಣಗಳು, ಭಗಣ ಮತ್ತು ರಗಣ) ಕೂಡಿದುದಾಗಿ, ಕವಿಶ್ರೇಷ್ಠನಾದ ನಿನ್ನ ಪೂಜ್ಯವೂ ಅರ್ಚಿತವೂ ಆದ ಪಾದಕಮಲಗಳಲ್ಲಿ, ೮ನೆಯ ಅಕ್ಷರಕ್ಕೆ ಯತಿಯಿರುವಿಕೆಯಲ್ಲಿ ಆಸಕ್ತವಾದ ಮಲ್ಲಿಕಾಮಾಲಾವೃತ್ತವಿದು–ಎಂದು (ಕಾವ್ಯ)ಮಾಲೆಯನ್ನು ಕಟ್ಟುವಾಕೆ ಆ ವೃತ್ತವನ್ನು ತೋರಿದಳು.''

[ಹಿನ್ನೆಲೆ : ''ಮತ್ತೊರ್ವ ಮಾಲೆಗಾರ್ತಿ ಕುಸುಮದ ಗೊಂಚಲಂ ಲತೆ ಸಮೇತವಾಗಿ ತೋರುತಿರ್ಪಳದೆಂತೆಂದೊಡೆ'']

ಕುಸುಮಿತಲತಾವೃತ್ತ ದ್ವಿಸಂಧಾನ

ಭೂನಾರೀವಕ್ಷಸ್ಥಳದೊಳಗೆ ಪುಟ್ಟೀ ಲತಾಂತಂ ನಭಕ್ಕಂ
ಚೆನ್ನಿಂ ಬಾಯ್ವಿ[ಟ್ಟ]ರ್ಪಲರಿಗೆ ಬಿಡೌಜಂ ತ್ರಿವಾರಂ ಅಪಾರಂ
ಪಾನೀಯಂಗಳ್ ನೀಡಿ ಸಲಹಿದ ಮತ್ತಂ ದಲೀರ್ಪೈದು ವಾರಂ
ಮುನ್ನಿಲ್ಲಿರ್ದುದ್ದೈ ಕುಸುಮಿತಲತಾವಲ್ಲಿಯೆಂದೆಂದಳಾಗಂ॥ (ಪ. ೧೦೦)

ಸಾಮಾನ್ಯಾರ್ಥ : ''ಭೂದೇವಿಯ ಎದೆಯೊಳಗೆ ಹುಟ್ಟಿ ಈ ಹೂವು ಆಕಾಶದತ್ತ ಚೆನ್ನಾಗಿ ಬಾಯಿ ತೆರೆದಿರುವ ಹೂವಿಗೆ ಇಂದ್ರನು ಮೂರು ಸಲ ಅಪಾರವಾಗಿ ಪಾನೀಯಗಳನ್ನು ನೀಡಿದ, ಬಳಿಕವೂ ಹತ್ತು ಸಲ ಕಾಪಾಡಿದ. ಆದಕ್ಕೆ ಮೊದಲೇ ಈ ಅರಳಿದ ಹೂಬಳ್ಳಿ ಇಲ್ಲಿತ್ತು ಎಂದಳು. (?)''

ಛಂದಸ್ಸಿನ ಅರ್ಥ :

''ಭೂಮಿಯೆಂಬ ಗಣದಿಂದ (ಮಗಣ) ಆರಂಭವಾಗಿ ಈ ಹೂವಿನಂತಹ ಅಕ್ಷರರಚನೆ,ನಭವೆಂಬ ಗಣಕ್ಕೆ (ವ್ಯೋಮ=ತಗಣ) ಬಯಸಿ, ಇಂದ್ರನೆಂಬ ಗಣ (ನಗಣ), ಮೂರು ಸಲ ತೋಯಗಳೆಂಬ ಗಣಗಳನ್ನು (೩ ಯಗಣಗಳು) ಸೇರಿಸಿಕೊಂಡು, ಪಾದದಲ್ಲಿ ೫–೫ ಅಕ್ಷರಗಳಿಗೆ ೨ ಸಲ ಯತಿ ಬರುವಂತೆ ಸಂಯೋಜಿತವಾಗಿರುವ ಕುಸುಮಿತಲತಾವಲ್ಲಿಯೆಂಬ ವೃತ್ತವಿದು–ಎಂಬುದಾಗಿ ತಿಳಿಸಿದಳು.''

ವಿದಳಿತ ಸರಸಿಜವೃತ್ತ(ನಿರೋಷ್ಠ ದ್ವಿಸಂಧಾನ)

ದಿವಿಜರಿಗೆರೆಯನು ವಸುಗಣನೆಯೊಳಿದ ಹಿಡಿದನು ಯತಿವರನೂ
ರವಿಗಣನೆಯೊಳಿಹಯೆಸಳುವ ಕುರಿತನು ಕಡೆಯೊಳು ಹರ ನೆನೆದಾ
ನವವಿದಳಿತಸರಸಿಜವಿವೆಯೆನುತವನಿದಿರೊಳಗಿರಿಸಲು ತಾ
ಸವಿನಯದೊಡವೆರಸಿದ ಗಡಣದಿ ನುಡಿದಳು ಸತಿಕುಲದರಸೀ॥ (ಪ. ೧೦೧)

ಸಾಮಾನ್ಯಾರ್ಥ :

''ಇಂದ್ರನು ಎಂಟರ ಲೆಕ್ಕದಲ್ಲಿ ಇದನ್ನು ಕೊಂಡನು, ಯತಿಶ್ರೇಷ್ಠನೂ ೧೨ ದಳಗಳಿರುವುದನ್ನು ಅಪೇಕ್ಷಿಸಿದನು, ಕೊನೆಗೆ ಶಿವನೇ ಜ್ಞಾಪಿಸಿಕೊಂಡ ಹೊಸದಾಗಿ ಅರಳಿದ ತಾವರೆಗಳು ಇಲ್ಲಿವೆ–ಎಂಬುದಾಗಿ (ಆ ಕವಿ ಶ್ರೇಷ್ಠನ) ಎದುರಿಗಿರಿಸಲು ಜೊತೆಯವರೊಂದಿಗಿದ್ದ ಆ ಸಜ್ಜನೆ ವಿನಯಪೂರ್ವಕವಾಗಿ ಮಾತನಾಡಿದಳು.''

ಛಂದಸ್ಸಿನ ಅರ್ಥ :

'' ಇಂದ್ರನ ಗಣಗಳು (ನಗಣಗಳು) ೮, ಕಡೆಯಲ್ಲಿ ಹರ (ಒಂದು ಗುರು) ಹೀಗೆ ಗಣರಚನೆಯಿದ್ದು, ೧೨ನೆಯ ಅಕ್ಷರಕ್ಕೆ ಯತಿ ಬರುವಂತೆ ಹೊಸದಾಗಿ ರಚಿಸಿದ 'ವಿದಳಿತಸರಸಿಜ'ವೆಂಬ ವೃತ್ತಗಳು ಇವು ಎಂಬುದಾಗಿ ಕವಿಶ್ರೇಷ್ಠನ ಎದುರು (ಕಾವ್ಯ)ಮಾಲೆ ರಚಿಸುವವಳು ತಿಳಿಸಿದಳು.''

ದ್ವಿಸಂಧಿ ಭುಜಂಗವಿಜೃಂಭ ವೃತ್ತ

ಮತ್ತಾ ದೀರ್ಘಾಂಗಂ ರೌದ್ರಂ ಭೂತದಿ ಪೆಡೆಯೊಳು ಧರೆಯನುಮಿಮ್ಮಿಯ್ಯಪ್ಪಳಿಸುತ್ತಲೊ
ಮ್ಮತ್ತಾಕಾಶಕ್ಕೊನ್ಮಿಂಗಂ ನೋಡುತಲಿ ಸುರಪುರದೆಸೆಯನೀಕ್ಷಿಸುತ್ತಲು ಮುಮ್ಮೆಯುಂ
ಶಕ್ತ್ಯಾಭೀಳಂ ಹಾಳಾಹಾಳಾಗ್ನಿಯನುಗುಳುತ ಮರುತನ ನುಂಗುತಾ ಯತಿಶಂಗಂ (?)
ಸುತ್ತೆಂಟುಂ ದಿಕ್ಕಿಂದಂ ನಿಂದೀಕ್ಷಿಸುತೆಡಬಲಕೊಲೆದು ಭುಜಂಗ ಜೃಂಭಿಸುತಿರ್ದುದುಂ॥ (೫-೧೨೩)

ಈ ಪದ್ಯ ಸಿದ್ಧಲಿಂಗಯತಿ ಬಂಡಿಯ ಹಳ್ಳಿಯ ದಾರಿಯಲ್ಲಿ ಜನರ ಪೆಟ್ಟಿನಿಂದ ಸತ್ತಿದ್ದ ಕ್ರೂರಸರ್ಪವನ್ನು ಮತ್ತೆ ಬದುಕಿಸಿದ ಕಥಾಭಾಗಕ್ಕೆ ಸಂಬಂಧಿಸಿದ್ದಾಗಿದೆ.

ಸಾಮಾನ್ಯಾರ್ಥ :

''ಮತ್ತೆ ಆ ಭಯಂಕರವಾದ ನೀಳಶರೀರಿ ಸರ್ಪವು ಹೆಡೆಯಲ್ಲಿ ಭೂಮಿಯನ್ನು ಎರಡು ಸಲ ಅಪ್ಪಳಿಸುತ್ತ, ಒಂದೇಬಾರಿಗೆ ಆಕಾಶಕ್ಕೆ ನಿಮಿರಿ ನಿಲ್ಲುತ್ತ, ನೋಡುತ್ತ, ಸ್ವರ್ಗದ ಕಡೆ ಮೂರು ಸಲ ನೋಡುತ್ತ, ಶಕ್ತಿ

ಯಂತೆ ಭಯಂಕರವಾದ ಹಾಲಾಹಲದಂತಹ ಬೆಂಕಿಯನ್ನು ಉಗುಳುತ್ತ, ವಾಯುಭಕ್ಷಣಮಾಡುತ್ತ, ನಿಂತು, ಸುತ್ತ ಎಂಟು ದಿಕ್ಕಿಂದಲೂ ನೋಡುತ್ತ, ಎಡಬಲಗಳಿಗೆ ಒಲೆಯುತ್ತ, ಕೆರಳಿ ಮೊರೆಯುತ್ತಿದ್ದಿತು.''

ಛಂದಸ್ಸಿನ ಅರ್ಥ :

''ಉಗ್ರವೂ ನೀಳವಾದ ಪಾದವುಳ್ಳದ್ದೂ ಆದ ಭುಜಂಗ(ವಿಜೃಂಭಿತ) ಎಂಬ ವೃತ್ತವು ಧರೆಯೆಂಬ ಗಣವನ್ನು ೨ ಸಲ (೨ ಮಗಣ), ಆಕಾಶವೆಂಬ ಗಣವನ್ನು (ತಗಣ) ಒಂದು ಸಲ, ಸುರಪುರವೆಂಬ ಗಣವನ್ನು (ನಗಣ) ಮೂರು ಸಲ ಒಳಕೊಂಡು, ಅಗ್ನಿಯೆಂಬ ಗಣವನ್ನೂ (ರಗಣ) ವಾಯುವೆಂಬ ಗಣವನ್ನೂ (ಸಗಣ) ಬಳಸಿಕೊಂಡು (ಹರಿಹರರೆಂಬ ಲಘು ಗುರುಗಳಿಂದ ಸೇರಿ), ೮ ಮತ್ತು ೧೧ನೆಯ ಸ್ಥಾನದಲ್ಲಿ ಯತಿಯುಳ್ಳುದಾಗಿ, ತೂಗಿ ತೊನೆದು, ವೈಭವದಿಂದ ಸಾಗುತ್ತದೆ.''

ಚೆನ್ನವೀರ ದೇಶಿಕನು ನಾಗವರ್ಮನ 'ಛಂದೋಂಬುಧಿ'ಯ ಪ್ರತ್ಯಕ್ಷ ಪರಿಚಯವುಳ್ಳವನಾಗಿ, ಅದರಲ್ಲಿಯ ಪೂರ್ವೋಕ್ತವೃತ್ತಗಳ ಲಕ್ಷಣವನ್ನು ಪರಿಶೀಲಿಸಿಯೇ ಮೇಲಿನ ಚಮತ್ಕಾರಯುಕ್ತ ದ್ವಿಸಂಧಾನಪದ್ಯಗಳನ್ನು ಕಟ್ಟಿರುವನೆಂದು ನಾವು ಹೇಳಬಹುದಾಗಿದೆ. ಛಂದಶ್ಶಾಸ್ತ್ರವನ್ನು ಕಾವ್ಯವಿಷಯವಾಗಿ ಪರಿವರ್ತಿಸಿದ ಇತರ ಹಲವು ಕನ್ನಡ ಕವಿಗಳ ಹಾಗೆ ಈತನಿಗೂ ಒಂದು ಸ್ಥಾನವಿದೆಯೆಂದು ತಿಳಿಯಬೇಕು. ಆದರೆ ಮೇಲಿನ ಲಕ್ಷ್ಯಪದ್ಯಗಳಲ್ಲಿ ೧–೯೬ರ ಚಂಪಕಮಾಲೆ ಹಾಗೂ ೧–೧೦೧ರ ವಿದಳಿತಸರಸಿಜ ಇವು ಮಾತ್ರವೇ ಸೊಗಸುವ ಚಮತ್ಕಾರವುಳ್ಳ ವೃತ್ತಗಳೆಂದು ಭಾವಿಸಬಹುದಾಗಿದೆ. ಅವುಗಳ ಗತಿಯಲ್ಲಿ ನಿರರ್ಗಳತೆಯಿದೆ, ದ್ವಿಸಂಧಾನದ ಸಹಜಸಂಯೋಜನೆಯಿದೆ; ಉಳಿದವುಗಳಲ್ಲಿ ಕಾಠಿನ್ಯವೂ ಕೃತಕತೆಯೂ ಹೆಚ್ಚು.

ವೃತ್ತನಾಮದ ಮುದ್ರಾಲಂಕಾರದ ಇನ್ನೂ ಹಲವು ನಿದರ್ಶನಗಳು ಕನ್ನಡ ಸಾಹಿತ್ಯದ ಕಾವ್ಯ ಮತ್ತು ಶಾಸ್ತ್ರಗ್ರಂಥಗಳಲ್ಲಿ ಅಲ್ಲಲ್ಲಿ ಕಂಡುಬರುತ್ತವೆ. ಉದಾ.ಗೆ, ಮತ್ತೇಭವಿಕ್ರೀಡಿತ (ಪಂಪಭಾ. ೮-೩೭, ೯–೨೫; ಛಂದೋಂಬು. ೧–೨೬; ಗದಾಯು. ೧-೨೭; ಮಲ್ಲಿಪು. ೯-೫೪, ಚಂದ್ರಪ್ರ. ೮-೩೩, ಇ.), ಶಾರ್ದೂಲವಿಕ್ರೀಡಿತ (ಸೂಕ್ತಿಸು. ೩-೩೧), ಚಂಪಕಮಾಲೆ (ಉದ್ಯೋಸಾ. ಪ.೪೧೪), ಮಣಿಭೂಷಣ (ಸುಕುಮಾ.೭-೨೨), ಶಿಖರಿಣಿ (ಲೋಕೋಪ.೮-೫೪), ಪ್ರಮಿತಾಕ್ಷರ(ಕಾವ್ಯಾವ.೭೨), ದ್ರುತವಿಲಂಬಿತ (ನಾವರ್ಧ. ೧೨-೫೧, ಪುಷ್ಪಪು.೧೩–೧೧೭) ಮಂಗಳ (ಲೋಕೋಪ. ಫಲಶ್ರುತಿ ಶ್ಲೋಕ) ಇತ್ಯಾದಿ ವೃತ್ತಗಳು ಹಾಗೆ ಗ್ರಂಥಾಂತರ್ಗತ ಪದ್ಯಗಳೊಳಗೆ ಸೇರಿಕೊಂಡು ಓದುಗರಿಗೆ ಚಮತ್ಕಾರವನ್ನು ಉಂಟುಮಾಡುವಂತಿವೆ. ಆದರೆ ಇವುಗಳಲ್ಲಿ ದ್ವಿಸಂಧಾನದ ಲಕ್ಷಣವೇನೂ ಕಾಣಬರುವುದಿಲ್ಲವಾದ್ದರಿಂದ ಇವುಗಳ ಪ್ರಸ್ತಾವವನ್ನು ಇಲ್ಲಿ ವಿಸ್ತರಿಸುವ ಅಗತ್ಯವಿಲ್ಲ.

ಅನೇಕಾರ್ಥವಾಚಿ

ಒಂದಕ್ಕಿಂತ ಹೆಚ್ಚು ಅರ್ಥಗಳು ಹೊರಡುವಂತಿರುವ ಬಿಡಿಪದ್ಯಗಳನ್ನು ರಚಿಸುವ ಒಂದು ಪದ್ಧತಿ ವಿದ್ವತ್ ಕವಿಗಳಲ್ಲಿ ಆಗಾಗ ಕಂಡುಬಂದಿದ್ದು ಇದನ್ನು ಭಾರವಿಯ 'ಕಿರಾತಾರ್ಜುನೀಯ' (೧೫–೪೫), ರತ್ನಾಕರನ 'ಹರವಿಜಯ' (೪೩–೨೯೨; ೪೮-೧೨೪) ಮುಂತಾದವರ ಕಾವ್ಯಗಳಲ್ಲಿ ಗಮನಿಸಬಹುದು. ಇವು 'ಅರ್ಥತ್ರಯವಾಚಿ'ಗಳೋ (ಕಿರಾತಾ. ೧೫–೪೫, ಕಪ್ಪಿಣಾ. ೧೮-೧೩೪, ಹರವಿ. ೪೩-೨೯೨), ಇಲ್ಲ 'ಅರ್ಥಚತುಷ್ಟಯವಾಚಿ'ಗಳೋ (ಜಾನಕೀ. ೧೮–೩೫, ೩೬; ಹರವಿ. ೪೮–೧೨೪) ಆಗಿರಬಹುದು.

'ಕಿರಾತಾರ್ಜುನೀಯ'ದ ಒಂದು 'ಅರ್ಥತ್ರಯವಾಚಿ' ಪದ್ಯ :

> ಜಗತೀಶರಣೇ ಯುಕ್ತೋ ಹರಿಕಾಂತಃ ಸುಧಾಸಿತಃ
> ದಾನವರ್ಷೀ ಕೃತಾಶಂಸೋ ನಾಗರಾಜ ಇವಾಬಭೌ ॥ (೧೫-೪೫)

ಮೊದಲನೆಯ ಅರ್ಥ :

''ಭೂಮಿಯ ರಕ್ಷಣೆಗೆ ನಿಂತವನೂ (ಜಗತೀ–ಶರಣೇ) ಸಿಂಹಗಳಿಗೆ ಪ್ರಿಯನೂ ಸುಣ್ಣದಂತೆ ಬೆಳ್ಳಗಿರುವವನೂ (ಸುಧಾ–ಸಿತಃ) ದಾನವರೂ ಋಷಿಗಳೂ ಕಾಮನೂ ನಾನಾಫಲಗಳ ಅಭಿಲಾಷೆಯ ನಿರೀಕ್ಷೆಯನ್ನಿಟ್ಟು

ಕೊಳ್ಳಲು ಅವಕಾಶವಾದವನೂ (ದಾನವ–ಋಷಿ–ಇ–ಕೃತಾಶಂಸೋ) ಆದ ಹಿಮವಂತನಂತೆ (ಅಗರಾಜ ಇವ) ಈಶ್ವರನೊಡನೆ ಯುದ್ಧದಲ್ಲಿ (ಈಶರಣೇ) ತೊಡಗುವುದಕ್ಕೆ ಶಕ್ತನೂ ಸಿಂಹದಂತೆ ಮನೋಹರನೂ ಪ್ರಜಾ ಪಾಲಕನೂ ಕೃಷ್ಣವರ್ಣನೂ (ಸುಧಾ-ಸಿತಃ) ಬಹುಪ್ರದನೂ (ದಾನ–ವರ್ಷೀ) ಜಯಾಭಿಲಾಷಿಯೂ ಆದ ಅರ್ಜುನನು (ನಾ) ಜಗತ್ತಿನಲ್ಲಿ ಕಂಗೊಳಿಸಿದನು.''

ಎರಡನೆಯ ಅರ್ಥ :

''ರಾಕ್ಷಸರೊಡನೆ ಯುದ್ಧದಲ್ಲಿ (ಜಗತೀಶ–ರಣೇ) ಪಾಲುಗೊಂಡದ್ದೂ, ಇಂದ್ರನಿಗೆ ಪ್ರಿಯವಾದುದೂ ಅಮೃತದಂತೆ ಬೆಳ್ಳಗಿರುವುದೂ (ಸುಧಾ–ಸಿತಃ), ಮದೋದಕ ಸುರಿಸುತ್ತಿರುವುದೂ (ದಾನ–ವರ್ಷೀ) ಹಾಗೂ ಜಯಿಸುವ ಆಸೆಯುಳ್ಳುದೂ ಆದ ಐರಾವತದಂತೆ (ನಾಗರಾಜ ಇವ) ರಾಕ್ಷಸರೊಡನೆ ಯುದ್ಧದಲ್ಲಿ ಸಮರ್ಥನೂ ಇಂದ್ರನಿಗೆ ಪ್ರಿಯನೂ ಅಮೃತದಂತೆ ಸ್ವಚ್ಛವಾದ ಶೀಲವುಳ್ಳವನೂ ದಾನಿಯೂ ಜಯಗಳಿಸುವ ಆಸೆಯುಳ್ಳವನೂ ಆದ ಅರ್ಜುನನು ಕಂಗೊಳಿಸಿದನು.''

ಮೂರನೆಯ ಅರ್ಥ :

''ಭೂಮಿಯ ರಕ್ಷಣೆಯಲ್ಲಿ (ಜಗತೀ–ಶರಣೇ) ನಿಯೋಜಿತನೂ ಕೃಷ್ಣನಿಗೆ ಪ್ರಿಯನೂ ಭೂಮಿಗೆ ಬದ್ಧನೂ (ಸುಧಾ=ವಸುಧಾ; ಸಿತಃ=ಬದ್ಧಃ), ದಾನವರು, ಋಷಿಗಳು, ಲಕ್ಷ್ಮಿ ಇವರಿಂದ ಪ್ರಶಂಸಿತನೂ ಆದ ಶೇಷನಂತೆ (ನಾಗರಾಜ ಇವ) ಭೂಮಿಯ ರಕ್ಷಣೆಯಲ್ಲಿ ತೊಡಗಿದವನೂ ಕೃಷ್ಣನಿಗೆ ಪ್ರಿಯನೂ ಅಮೃತಕ್ಕೆ ಬದ್ಧನೂ (ಸುಧಾ-ಸಿತಃ=ಅಮೃತಪ್ರಿಯಃ), ದಾನವರು ಋಷಿಗಳು ಲಕ್ಷ್ಮಿ (ಇ) ಇವರ ಹೊಗಳಿಕೆಗೆ ಪಾತ್ರನೂ ಆದ ಅರ್ಜುನನು ಕಂಗೊಳಿಸಿದನು.''

ಈ ಶ್ಲೇಷಾರ್ಥವಿರಚನೆ ವಿನ್ಯಾಸಗಳು 'ಕಿರಾತಾರ್ಜುನೀಯ'ದ ಮಲ್ಲಿನಾಥವ್ಯಾಖ್ಯಾನವನ್ನು ಅನುಸರಿಸಿದೆ. ಶಬ್ದಗಳ ನಾನಾರ್ಥಗಳನ್ನೂ ಸಮಾಸಪದಗಳನ್ನೂ ವಿಭಿನ್ನವಾಗಿ ವಿಂಗಡಿಸಿ ಯಥೋಚಿತ ವಿಗ್ರಹವಾಕ್ಯಗಳನ್ನು ಮಾಡಿಕೊಳ್ಳುವ ಸೌಕರ್ಯವನ್ನೂ ಇವಕ್ಕೆ ಪೋಷಕವಾದ ಸಂಧಿಕಾರ್ಯಗಳನ್ನೂ ಅವಲಂಬಿಸಿ ಈ 'ಅನೇಕಾರ್ಥವಾಚಿ' ಸಾಧ್ಯವಾಗಿದೆಯೆನ್ನಬೇಕು. ಹೀಗೆ ಮಾಡಿದ್ದರಿಂದ ಪ್ರಸ್ತುತ ಪದ್ಯ ಕನಿಷ್ಠ ೬ ವಿಧವಾದ ಅರ್ಥಗಳನ್ನು ತಾಳಿಕೊಳ್ಳುವುದು ಸಾಧ್ಯವಾಗಿದೆ.

'ಕಪ್ಫಿಣಾಭ್ಯುದಯ'ದ 'ಅರ್ಥತ್ರಯವಾಚಿ' :

ಸಂತಾಪಸೀತಾನಲಶುದ್ಧದಕ್ಷಿಣೋ। ವೃತ್ತಃ ಸಮಾನಾರ್ಜುನಯಾಪನಶ್ರಿಯಾ
ಸುವರ್ಣಭೂತೋಽಥ ಸುರಾಸವಾಸನೋ। ಬಭಾರ ಸರ್ವೇಣ ಪದೇನ ರಾಮತಾಮ್ ॥ (೧೮–೧೩೪)

'ಹರವಿಜಯ'ದ 'ಅರ್ಥಚತುಷ್ಟಯವಾಚಿ' :

ಸಸತ್ತ್ವಶಾಲೀ ಸಮುದತ್ತ್ವಮಾಪ್ತೋ। ನಿಬದ್ಧಮೂಲಃ ಸ್ಥಿರಭೂತಿಚರ್ಚಃ।
ಉತ್ಸೇಧವಾನಸ್ಖಲಿತಃ ಶುಚಿತ್ವಾ। ತ್ಸನ್ನಾಗರಾಜಶ್ರಿಯಮಾಪ ಗುರ್ವೀಮ್ ॥ (೪೮–೧೨೪)

ಕನ್ನಡದಲ್ಲಿ ವಿರಳವಾಗಿ ಮಾತ್ರ ನಿದರ್ಶನ ಗೋಚರಿಸುತ್ತದೆ. ಮುರಿಗೆ ದೇಶಿಕೇಂದ್ರನ (ಸು. ೧೫೬೦) 'ರಾಜೇಂದ್ರ ವಿಜಯ'ದಲ್ಲಿ ''ಇದಱೊಳ್ ಚತುರ್ವಿಧಾರ್ಥಂ'' ಎಂಬುದಾಗಿ ಸೂಚಿಸಿರುವ ಆ ಲಕ್ಷ್ಯ ಹೀಗಿದೆ :

ರಾಜಕಳಾಲಂಕಾರಂ। ನೈಜೇಂದ್ರಿಯಸರಸಧವಳವರ್ಣಿತಮೋಹಂ।
ಭ್ರಾಜಿತಮತಿಹಿತಪದಸಂ। ಯೋಜಿತಸಿದ್ಧಾಂತಸಾರಕೌಮುದಿರಾಗಂ ॥ (೨–೬೪)

ತಾತ್ಕಾಲಿಕವಾಗಿ ಇಲ್ಲಿ ನಾಲ್ಕು ಅರ್ಥಗಳನ್ನು ಹೇಳಲು ಯತ್ನಿಸಿದೆ. ಹೀಗೆ ಹೇಳುವಾಗ ಈ ಪದ್ಯ ಬೆಳುದಿಂಗಳ ವರ್ಣನೆಯ ಒಂದು ಅಂಶವಾಗಿ ಬಂದಿದೆಯೆಂಬುದರಿಂದ ಮೊದಲು ಬೆಳುದಿಂಗಳ ಪರವಾಗಿ, ಬಳಿಕ ಗ್ರಂಥಪರವಾಗಿ, ರಾಜಪರವಾಗಿ ಹಾಗೂ ಅನುರಾಗಪರವಾಗಿ ಎಂಬುದಾಗಿ ವಿಭಜಿಸಿ ಅರ್ಥಹೇಳಿದೆ.

ಬೆಳುದಿಂಗಳ ಪರವಾಗಿ :

"ಚಂದ್ರನ ಹದಿನಾರು ಕಳೆಗಳಿಗೆ ಅಲಂಕಾರಪ್ರಾಯವಾದುದು, ಸಹಜವಾದ ಓಜಸ್ಸಿನಿಂದ ಮನೋಹರವಾಗಿರುವ ಬಿಳಿಯ ಬಣ್ಣವುಳ್ಳುದು, ಕತ್ತಲೆಯನ್ನು ಕಳೆಯುವಂತಹುದು, ಪ್ರಕಾಶಮಾನವಾದುದು, ಅತಿಹಿತವಾದ ಕಿರಣಗಳಿಂದ ಕೂಡಿ ಪೂರ್ಣವಾಗಿ ಸಿದ್ಧವಾಗಿರುವ ಉತ್ಕೃಷ್ಟವಾದ ಬೆಳುದಿಂಗಳ ಕಾಂತಿ."

ಗ್ರಂಥಪರವಾಗಿ :

"ಬುದ್ಧಿಯನ್ನು ಚುರುಕುಗೊಳಿಸುವ ಹಿತವಾದ ಶಬ್ದಗಳಿಂದ ಕಟ್ಟಿದುದಾಗಿರುವ ವ್ಯಾಕರಣಸಿದ್ಧಾಂತ ಸಾರವಾದ 'ಕೌಮುದಿ'ಯ ಪ್ರಭಾವವು ಉತ್ತಮವಿದ್ಯೆಗಳಿಗೆ ಭೂಷಣಪ್ರಾಯವಾದುದು. ಓಜೋನ್ವಿತವೂ ರಸಯುಕ್ತವೂ ಆದ ಸ್ಪಷ್ಟವಾದ ಅಕ್ಷರಗಳಿಂದ ಕೂಡಿದುದು, ಅಜ್ಞಾನವನ್ನು ಹೋಗಲಾಡಿಸುವಂತಹುದು."

ರಾಜನ ಪರವಾಗಿ :

"ರಾಜೋಚಿತವಾದ ವಿದ್ಯೆಗಳಿಗೆ (ಆತನು) ಭೂಷಣಪ್ರಾಯನಾದವನು. ತನ್ನ ಕರ್ಮಜ್ಞಾನೇಂದ್ರಿಯಗಳು ಸರಸವೂ ಮನೋಹರವೂ ಆಗಿ ವರ್ಣಿಸಲ್ಪಡುವುದರಿಂದ ಮೋಹವುಂಟುಮಾಡುವವನು, ಪ್ರಖರವಾದ ಬುದ್ಧಿಯುಳ್ಳವನು, ಅಯ್ದು ಪದಗಳಿಂದ ನಿಬದ್ಧವಾದ ಶಾಸ್ತ್ರನಿರ್ಣಯದ ಸಾರದ ಮೇಲೆ ಬೆಳಕು ಚೆಲ್ಲುವವನು."

ಅನುರಾಗಪರವಾಗಿ :

"ಅತಿಶಯಹಿತವಾದ ಸ್ಥಿತಿಯಿಂದ ಕೂಡಿದ ವಿಶದವಾದ ಬೆಳುದಿಂಗಳಿನಂತಹ ಅನುರಾಗವು ರಾಜನ ವರ್ಚಸ್ಸಿಗೆ ಅಲಂಕಾರಪ್ರಾಯವಾದುದು. ತನ್ನ ಇಂದ್ರಿಯಗಳ ಆಕರ್ಷಣೆಯಿಂದ ಬಿಳಿಯ ಬಣ್ಣವಾದ ಮೋಹವೆನಿಸಿದುದು, ಶೋಭಿಸುವಂತಹುದು."

ಭಾಷಾಚಿತ್ರಗಳು

ಭಾಷಾಚಿತ್ರಗಳೆಂಬುದಾಗಿ ಹೇಳಬಹುದಾದ ಕೆಲವು ರಚನೆಗಳು ಸಂಸ್ಕೃತದಲ್ಲಿದ್ದು, ಇವುಗಳಲ್ಲಿ ಒಂದು ಪದ್ಯ ಅಥವಾ ಗದ್ಯಭಾಗ ಬೇರೆಬೇರೆಯ ಭಾಷೆಗಳಲ್ಲಿಯೂ ಸಾರ್ಥಕವಾಗಿ ಓದಲು ಸಾಧ್ಯವಾಗುವಂತೆ ಕುಶಲ ರೀತಿಯ ಶಬ್ದಸಂಯೋಜನೆಯಿರುತ್ತದೆ. 'ಸರಸ್ವತೀಕಂಠಾಭರಣ'ದ 'ಭಾಷಾಂತರಗತ'ವೆಂಬ ವಿಲೋಮಚಿತ್ರ ಪ್ರಕಾರ ಒಂದು ರೀತಿಯಲ್ಲಿ ಭಾಷಾಚಿತ್ರವೇ. ಇದನ್ನು ಆ ಭಾಗದಲ್ಲಿ ಗಮನಿಸಿದೆ. ರತ್ನಾಕರನ 'ಹರವಿಜಯ'ದ 'ಭಾಷಾಸಮಾವೇಶ' (೪-೧೧), 'ಪಿಶಾಚಭಾಷಾ ಸಮಾವೇಶ' (೪-೧೬), 'ಭಾಷಾಷಟ್ಕ ಸಮಾವೇಶ (೪-೩೫) ಎಂಬ ಸೂಚನೆಗಳ ಮೂರು ನಿದರ್ಶನಗಳೂ ಶಿವಸ್ವಾಮಿಯ 'ಕಪ್ಫಿಣಾಭ್ಯುದಯ'ದ ಒಂದು 'ಭಾಷಾಷಟ್ಕ ಸಮಾವೇಶ'ವೂ (೧೮-೧೨೮) ಈ ವಿಭಾಗಕ್ಕೆ ಸೇರುತ್ತವೆಂದು ತೋರುವುದು. ಇವುಗಳ ಸ್ವರೂಪ ಮೇಲು ನೋಟದಲ್ಲಿ ಸ್ಪಷ್ಟವಾಗದು. ವ್ಯಾಖ್ಯಾನಗಳ ನೆರವೂ ಇಲ್ಲವಾಗಿದೆ. ಒಂದು ಪದ್ಯವನ್ನು ೬ ಭಾಷೆಗಳಲ್ಲಿ ಓದಲು ಸಾಧ್ಯವಾಗುವಂತೆ ರಚಿಸುವ ಕೌಶಲ ಅಸಾಮಾನ್ಯವಾದುದೇ ಸರಿ.

ಅಜಿತಸೇನನ 'ಅಲಂಕಾರಚಿಂತಾಮಣಿ'ಯಲ್ಲಿ "ಸಂಸ್ಕೃತಪ್ರಾಕೃತಾದಿ ಉಕ್ತಿವೈಚಿತ್ರ್ಯವು ಎಲ್ಲಿ ಕಾಣುತ್ತದೋ ಅಲ್ಲಿ ಒಂದು ವರ್ಣದ ವ್ಯತ್ಯಾಸದಿಂದ ಉಂಟಾದ ಚಿತ್ರ ಶುದ್ಧವೆಂದು ಹೇಳಲಾಗುತ್ತದೆ" (೨-೧೬) ಎಂದು ತಿಳಿಸಿ 'ಸಂಸ್ಕೃತ-ಪ್ರಾಕೃತಜಾತಿ', 'ಸಂಸ್ಕೃತ-ಕರ್ಣಾಟಜಾತಿ'ಗಳಿಗೆ ಒಂದೊಂದು ಲಕ್ಷ್ಯವನ್ನು ಒದಗಿಸಿದ್ದಾನೆ. ಇಲ್ಲಿ ಕ್ರಮವಾಗಿ ಸಂಸ್ಕೃತ-ಪ್ರಾಕೃತ ಭಾಷೆಗಳಲ್ಲಿ, ಸಂಸ್ಕೃತ-ಕನ್ನಡ ಭಾಷೆಗಳಲ್ಲಿ ಪ್ರತ್ಯೇಕವಾಗಿ ಎರಡೆರಡು ಪ್ರಶ್ನೆಗಳಿದ್ದು, ಇವುಗಳಿಗೆ ಉಭಯಸಮಾನವಾದ ಉತ್ತರವನ್ನು ಪಡೆಯುವ ಕುಶಲ ಶಬ್ದಸಂಯೋಜನೆಯಿದೆ.

ಸಂಸ್ಕೃತ-ಪ್ರಾಕೃತ ಜಾತಿಗೆ :

ಸುಖಕರ ಧರ್ಮನಿದೇಶೀ । ಕಃ ಸ್ಯಾತ್ಸಂಬೋಧಯಾಶು ಬುಧ ಹರಿಣವತ್
ತಿತ್ಥಯರ ಪೂಜಣತ್ಥಂ । ಕೇಣಸದಾ ಜಾಂತಿ ಅಮರಿಂದಾ ॥ (೨-೧೭)

''ಬುಧ, ಜಿಂಕೆಗೆ ಹೇಳು : ಸುಖಕರವಾದ ಧರ್ಮವನ್ನು ಉಪದೇಶಮಾಡುವವನು ಯಾರು?; ತೀರ್ಥಂಕರನ ಪೂಜಾರ್ಥವಾಗಿ ಅಮರೇಂದ್ರರು ಸದಾ ಯಾವುದರಲ್ಲಿ ಹೋಗುತ್ತಾರೆ?'' ಇವುಗಳಿಗೆ ಉಭಯಸಮಾನವಾದ ಉತ್ತರವೆಂದರೆ : ''ವಿಮಾಣೇಣ''. ಈ ಮಾತು ಸಂಸ್ಕೃತಪ್ರಶ್ನೆಗೆ ಉತ್ತರವಾಗಬೇಕಾದರೆ, ''ವಿಮಾಣ್ + ಏಣ= ವಿಮಾಣೇಣ; ಜಿನ (=ವಿಮಾಣ್), ಜಿಂಕೆಯೇ'' ಎಂದು ಅನ್ವಯ; ಪ್ರಾಕೃತ ಪ್ರಶ್ನೆಗೆ ಉತ್ತರವಾಗಬೇಕಾದರೆ, ''ವಿಮಾಣೇಣ(=ವಿಮಾನೇನ : ತೃತೀಯಾವಿಭಕ್ತ್ಯಂತ ನಾಮಪದ)=ವಿಮಾನದಿಂದ.''

ಸಂಸ್ಕೃತ–ಕರ್ಣಾಟ ಜಾತಿಗೆ :

ಜಹಾತಿ ಕೀದೃಶೀ ಕಾಂತಂ ವಧೂಃ ಸಂಬುಧ್ಯತಾಂ ರಿಪುಃ ।
ಏನೆಂದು ಕರೆವಂ ನಾಥಂ ಕಾಂತೆಯಂ ಸಂಬುಭುಕ್ತೆಯಿಂ ॥

''ಶತ್ರುವಿಗೆ ತಿಳಿಸುವುದಾಗಲಿ: ಎಂತಹ ವಧು ಕಾಂತನನ್ನು ತೊರೆಯುವಳು?; ಪತಿ ಪತ್ನಿಯನ್ನು ಬಾಯಾರಿಕೆಯಿಂದಾಗಿ ಏನೆಂದು ಕರೆಯುತ್ತಾನೆ ? '' ಇವುಗಳಿಗೆ ಉಭಯಸಮಾನವಾದ ಉತ್ತರ : 'ನೀರತಾರೇ.' ಸಂಸ್ಕೃತ ಪ್ರಶ್ನೆಗೆ ಉತ್ತರವಾಗಬೇಕಾದರೆ ''ನೀರತಾ+ಅರೇ; ರತಾನ್ನಿಷ್ಕ್ರಾಂತಾ ನೀರತಾ ಅರೇ''=''ಎಲೈ ಶತ್ರುವೇ, ರತಿಕ್ರೀಡೆಯನ್ನು ಮುಗಿಸಿದವಳು (ಅಥವಾ ಪ್ರೀತಿಯಿಲ್ಲದವಳು)'' ಎಂದು ಅನ್ವಯ. ಕನ್ನಡ ಪ್ರಶ್ನೆಗೆ ಉತ್ತರವಾಗಬೇಕಾದರೆ, ''ನೀರ ತಾರೇ''=''ನೀರನ್ನು ತೆಗೆದುಕೊಂಡು ಬಾ'' ಎಂದು ಅನ್ವಯ.

ಪದಚ್ಛೇದದಲ್ಲಿ ಒಂದು ವರ್ಣದ ವ್ಯತ್ಯಾಸದಿಂದ ಎರಡು ಭಾಷೆಗಳಿಗೆ ಒಂದೇ ಮಾತು ಅನ್ವಯಿಸುವಂತಿರುವುದು ಇಲ್ಲಿ ಕಂಡು ಬರುತ್ತದೆ.

'ಕಪ್ಪಿಣಾಭ್ಯುದಯ'ದ 'ಭಾಷಾಷಟ್ಕಸಮಾವೇಶ'ದ ಒಂದು ನಿದರ್ಶನವನ್ನು ಮಾತ್ರ ಇಲ್ಲಿ ಉದ್ಧರಿಸಬಹುದು :

ಚಣ್ಡಪಟ್ಟಿಶಕುನ್ತಾಸಿಫಲತೋಮರಭಾಸುರೇ ।
ತುರಙ್ಗಕುಞ್ಜರಾವಿದ್ಧೇ ಸಮ್ಬುದ್ಧೇ ಭೀಮಸಂಗರೇ॥ (೧೮–೧೨೮)

ಈ ಪದ್ಯದ ಆಶಯವನ್ನು ವಿವರಿಸಲು ಇಲ್ಲಿ ಸಾಧ್ಯವಾಗಿಲ್ಲ. ಇದಕ್ಕೆ ವ್ಯಾಖ್ಯಾನವೊಂದು ಇಲ್ಲದುದೇ ಮುಖ್ಯ ಕಾರಣ. ಆದರೆ ೬ ಭಾಷೆಗಳಲ್ಲಿ ಈ ಪದ್ಯವನ್ನು ಓದುವುದೂ ಅರ್ಥೈಸುವುದೂ ಸಾಧ್ಯವಿದೆಯೆನ್ನುವುದಂತೂ ನಿಶ್ಚಯ. ಪ್ರಾಯಃ ಇಲ್ಲಿ ಉದ್ದೇಶಿತವಾಗಿರುವ ಭಾಷಾಷಟ್ಕವೆಂದರೆ, ಸಂಸ್ಕೃತ, ಪ್ರಾಕೃತ, ಅಪಭ್ರಂಶ, ಪೈಶಾಚಿ, ಶೌರಸೇನಿ, ಮಾಗಧಿ ಇರಬಹುದು.

ವಾಗ್ದ್ವಯಶ್ಲೇಷೆ

ಶ್ರೀನಿವಾಸಕವಿ ಮುಮ್ಮಡಿ ಕೃಷ್ಣರಾಜನ ಆಶ್ರಿತನು; 'ಕವಿಸಾರ್ವಭೌಮ' ಬಿರುದಾಂಕಿತನು. ಈತನು ಆ ದೊರೆಯ ಸ್ತುತಿರೂಪವಾದ 'ಕೃಷ್ಣನೃಪಜಯೋತ್ಕರ್ಷ' ಎಂಬ ಗ್ರಂಥವನ್ನು ೧೮೧೨ರಲ್ಲಿ ರಚಿಸಿದ್ದಾನೆ. ಇದರಲ್ಲಿ ೮ ಪದ್ಯಗಳೂ ೬ ಗದ್ಯಗಳೂ ಇವೆ. ಈ ಕೃತಿ ಸಮಗ್ರವಾಗಿ ಈಗ ದೊರೆಯುವಂತೆ ತೋರುತ್ತಿಲ್ಲ. ''ವಿರಾಮಭೇದದಿಂದ ಸಂಸ್ಕೃತರೂಪವಾಗಿಯೂ ಕರ್ಣಾಟರೂಪವಾಗಿಯೂ ಇರುವಂತೆ ಕವಿ ಬಹಳ ಚಮತ್ಕಾರದಿಂದ ಈ ಗ್ರಂಥವನ್ನು ರಚಿಸಿದ್ದಾನೆ.'' ಕವಿ ಇದನ್ನು ಹೀಗೆ ತಿಳಿಸಿದ್ದಾನೆ :

ರೇಖಾಕ್ಷಿತಿಷು ವಿರಾಮೈಃ ಪ್ರಭವತಿ ಕರ್ಣಾಟವಾಙ್ಮಯಂ ಪತ್ರಂ
ಸಂಸ್ಕೃತಕೃತಿಸ್ತು ಸಿಧ್ಯತಿ ಲಾಕ್ಷಾಂಕನಿದರ್ಶಿತೈಃ
ಕೃಷ್ಣಜಯೋತ್ಕರ್ಷಾಖ್ಯಾ ಸಂಸ್ಕೃತಕರ್ಣಾಟವಾಗ್ದ್ವಯಶ್ಲಿಷ್ಟಾ
ಅನ್ಯಾದೃಶೀ ಕೃತಿರಿಯಂ ಸತ್ಪ್ರೀತ್ಯೈ ಶ್ರೀನಿವಾಸರಚಿತಾಸ್ತು ॥

ಇದರ ಅಭಿಪ್ರಾಯವೆಂದರೆ: ''ರೇಖೆಯನ್ನು (|) ತೋರಿಸಿರುವ ಎಡೆಗಳಲ್ಲಿ ವಿರಾಮವನ್ನು ತರುವುದರಿಂದ ಕನ್ನಡ ಭಾಷೆಯ ರಚನೆಯ ಪತ್ರ ಸಿದ್ಧವಾಗುತ್ತದೆ. ಸಂಸ್ಕೃತರಚನೆಯಾದರೋ ಲಾಕ್ಷಾಂಕ (–) ನಿದರ್ಶಿತವಾದ

ಸ್ಥಳಗಳಲ್ಲಿ ಪದವಿಭಾಗವನ್ನು ಮಾಡುವುದರ ಮೂಲಕ ಸಿದ್ಧವಾಗುವುದು. ⌣ ದ್ವಿತ್ವಶೈಥಿಲ್ಯದ ಸ್ಥಾನ. ಸಂಸ್ಕೃತ ಕನ್ನಡ ಭಾಷಾದ್ವಯಗಳು ಹೆಣೆದುಕೊಂಡಂತಹ 'ಕೃಷ್ಣಜಯೋತ್ಕರ್ಷ' ಎಂಬ ಹೆಸರಿನ, ಶ್ರೀನಿವಾಸ ಕವಿರಚಿತವಾದ ಅನ್ಯಾದೃಶವಾದ ಈ ಕೃತಿ ಸತ್ಪ್ರೀತಿಯನ್ನು ಕೊಡಲಿ.''

ಕರ್ಣಾಟಕ ಕವಿಚರಿತೆಕಾರರು ಉದ್ಧರಿಸಿರುವಷ್ಟು ಕೃತಿಭಾಗವನ್ನೇ ಇಲ್ಲಿ ಎತ್ತಿಕೊಂಡು ಪರಿಶೀಲಿಸಿದೆ:

ಭೂವಲ್ಲಿ । ರಣದಲಿ । ನಿಯಂತೆ ।
ಶಕ್ರಸಮಶ್ರೇಯ । ಆಳಿದೆ । ಮಹಾವೀರ್ಯ ।
ಕೃಷ್ಣನೃಪೇಂದ್ರ ಫಲಿಸು । ಕೃಪ
ಜಯಾರ್ಹಮದ್ವಿನುತಿ ಲಕ್ಷಿಸು । ರಸಿಕವರ್ಯ ॥

ಅವಧಾರಿಸುಮಹನೀಯ । ಮಹಿಮಾಢ್ಯ । ಮಹಸ್ವಿ । ಮಹಿಸೂರಮಹೀಪತಿ । ಮಹಾವಂಶಜನು । ಶ್ರೇಯಸ್ವಿಸರ್ವಾಧಿಕಪ್ರಭಾವಹನು । ಕಪೋಲನಾಸಿಕಾದ್ಯವಯವಸೌಂದರ್ಯಶೋಭಿತನು । ಧರಾಧಿಕಾರಯೋಗ್ಯಮಿತಗಂಭೀರಭಾಷಣನು । ದ್ರುಹಿಣಸೃಷ್ಟವಿಶಿಷ್ಟಜಗದಲಿ । ಕಾಂತಿಕಾಂತಗತಿಲಕಸಮನು । ವ್ಯವಸ್ಥಿತಶಮದಮನು । ವಿಹಿತಧರ್ಮನಿಷ್ಠನು । ಶ್ರೇಷ್ಠಸಭಾಸನ್ಮಾನ್ಯನು । ಪರಮೋಹ ಹರಬಲವಿಜಯಕೃಪಾದಿ ಮನೋಹರಗುಣಪ್ರವರ್ಧನನು । ಶ್ರುತಿಪರಿಶೀಲನಾಢ್ಯಪೃಥುರುಕ್ಮಾಂಗದವಿಭಾವನೋಚಿತತುಚಿತರಲಸದ್ರಾಜ್ಯನು । ಸಾರಫಲದಾತನು । ಶಾಂತಿವಿಶಿಷ್ಟನು । ತೋಷಿತದೇವಬ್ರಾಹ್ಮಣ ಪೂಜೋಪಚಾರಫಲದಿಂದದ್ರವ್ಯಬುದ್ಧಿ ಸಂಪನ್ನನು । ಪ್ರಣಯರಸವಾರಿದನು । ಜಾಯಮಾನ ವಿಪಕ್ಷಗಳ ಪ್ರಹಾರ ಕರಣೋದ್ದಾಮ ಧೀರನು । ದಾಸದಶಾಧ್ಯುಷಿತರಾಜರಾಜೇಂದ್ರನುಂನಮೋಘಗುಣನಿಧಿಭೂತದಯಾಢ್ಯ । ಗೋಪಾಲನೆ । ಕ್ಷಣಕ್ಷಣಕೃತಿ ವಿಷಯಕೆ । ಬಹುಚಾತುರ್ಯಗಾರ । ಕಲಿಯುಗಾವತೀರ್ಣಪ್ರತ್ಯಕ್ಷನಯ । ಸದ್ಬೋಧ । ನೀ । ಧರ್ಮಪಣವಂತನು । ಸಾಮ್ರಾಜ್ಯಧುರಂಧರನು ॥

ನಿತ್ಯಜಯಾನ್ವಿತರಣವಿಧಿಯಾಗೋ । ವಿಬುಧರ । ತೋರುತ । ನಿಜ । ವನಮಾಲೀ । ಕೀರ್ತಿ ಶುಚೀಕೃತದಿಕ್ತಟನಾಗೋ । ವಿಪುಳಮಹಿಮ । ನೀ । ಹಿತಮತಿಶಾಲೀ । ನೃಪಸಭಯಲ್ಲಿಕ । ಭೂಷಣವಾಗಯ । ಆರ್ಜವಪೋಷಿತ । ಸಕಲದ್ವಿಜನು । ಶ್ರೀಕೃಷ್ಣವಿಭೋ । ಮಯಿ ಸೂರಿಪತೇ । ಪ್ರೇಮಭರಿತ । ನಿರು । ಪರಮ ಮುದಿತನು ॥

ಇಲ್ಲಿ ಉದ್ಧರಿಸಿರುವ ಪಾಠದಲ್ಲಿಯೂ ರೇಖೆಗಳ ಹಾಗೂ ಇತರ ಚಿಹ್ನೆಗಳ ಸೂಚನೆಗಳಲ್ಲಿಯೂ ಮಾತೃಕೆಯ ಲಿಖಿತ ಯಥಾರೀತಿಯಾಗಿ ಕಂಡುಬರುವುದೇ ಎಂಬುದನ್ನು ದೃಢಪಡಿಸಿಕೊಳ್ಳಲು ಸಾಧ್ಯವಾಗಿಲ್ಲ. ಆದ್ದರಿಂದ ಮುಂದಿನ ಅರ್ಥವಿವರಣೆಯಲ್ಲಿ ಕೆಲಮಟ್ಟಿಗೆ ಸಂದಿಗ್ಧತೆಯುಳಿದಿದ್ದು, ಅದನ್ನು ತಾತ್ಪೂರ್ತಿಕವೆಂದು ತಿಳಿಯಬೇಕು. ಅಲ್ಲಲ್ಲಿ ಬೇರೆ ರೀತಿಯಲ್ಲಿಯೂ ಅರ್ಥವಿವರಣೆಯನ್ನು ಕೊಡುವ ಸಾಧ್ಯತೆಯೂ ಇಲ್ಲದಿಲ್ಲ.

ಸಂಸ್ಕೃತ ಭಾಷೆಯ ರಚನೆಯಾಗಿ:

''ಭೂವಲಯದಲ್ಲಿ (ಭೂ+ವಲ್ಲಿಃ) ಯುದ್ಧವೀರನೆ, ನಿಗ್ರಹಸಮರ್ಥನೆ, ಇಂದ್ರನಿಗೆ ಸಮಾನನೆ, ಶ್ರೇಯಃ ಪರಂಪರೆಯನ್ನು ನೀಡುವವನೆ, ಮಹಾಪರಾಕ್ರಮಿಯೆ, ಕೃಷ್ಣರಾಜನೆ, ಫಲೋನ್ಮುಖವಾದ ಕೃಪೆಯುಳ್ಳವನೆ, ಜಯಾರ್ಹನೆ, ನನ್ನ ವಿಶೇಷವಾದ ಸ್ತುತಿಯನ್ನಾಲಿಸುವ ಒಳ್ಳೆಯ ರಸಿಕಾಗ್ರಣಿಯೆ–

ವಿಶೇಷ ಬುದ್ಧಿಸಾಮರ್ಥ್ಯವಿರುವ ಶ್ರೇಷ್ಠಮಹನೀಯನೆ (ಅವಧಾರಿ ಸುಮಹನೀಯ), ರಾಜ್ಯಲಕ್ಷ್ಮಿಗೆ ಒಡೆಯನೆ (ಮಹಿ + ಮಾ + ಆಢ್ಯ), ತೇಜಸ್ವಿಯೆ (ಮಹಸ್ವಿ), ಲೋಕದಲ್ಲಿ ಸೂರ್ಯನಂತೆ ಪ್ರಕಾಶಿಸುವ ದೊರೆಯೆ (ಮಹಿ + ಸೂರ + ಮಹೀಪತಿ), ಉತ್ಕೃಷ್ಟವಾದ ವಂಶದಲ್ಲಿ ಜನಿಸಿದವನೆ (ಮಹಾವಂಶ + ಜನು), ಶ್ರೇಯಸ್ಕರನಾಗಿ ಸರ್ವರನ್ನೂ ಮೀರಿಸುವಂಥ ಪ್ರಭಾವಶಾಲಿಯೇ (ಶ್ರೇಯಸ್ವಿ + ಸರ್ವಾಧಿಕ + ಪ್ರಭಾವ), ಗಲ್ಲ ಕೆನ್ನೆ ಮೂಗು ಮೊದಲಾದ ಅವಯವಗಳ ಸೌಂದರ್ಯದಿಂದ ಶೋಭಿಸುವ ಶರೀರವುಳ್ಳವನೆ (ಹನು ಕಪೋಲ ನಾಸಿಕಾದ್ಯವಯವ ಸೌಂದರ್ಯಶೋಭಿ), ಲೋಕವನ್ನಾಳುವ ಅಧಿಕಾರವನ್ನು ಹೊಂದಿದ, ಅಮಿತ ಗಾಂಭೀರ್ಯದಿಂದ ಕೂಡಿದ ವಾಕ್ಕುಳ್ಳವನೆ (ಧರಾಧಿಕಾರಯೋಗಿ + ಅಮಿತಗಂಭೀರಭಾಷಣ + ನು), ಬ್ರಹ್ಮನಿರ್ಮಿತವಾದ ವಿಶಿಷ್ಟವಾದ ಜಗತ್ತನ್ನು ಜಯಿಸಿ (?) ದುಂಬಿಯ ಕಾಂತಿಯಂತೆ ಆಕರ್ಷಕವಾದ ತಿಲಕವುಳ್ಳವನೆ (ದ್ರುಹಿಣ ಸೃಷ್ಟ ವಿಶಿಷ್ಟ ಜಗತ್ + ಅಲಿಕಾಂತಿ ಕಾಂತಗ ತಿಲಕಸಮ + ನು), ಮನುಚಕ್ರವರ್ತಿಯ ವ್ಯವಸ್ಥೆಗಳನ್ನು ಅಳವಡಿಸಿಕೊಂಡವನೆ, ಶಾಂತಿಯನ್ನು ಕೊಡುವವನೆ (ಸ + ಮನು + ವ್ಯವಸ್ಥಿತ; ಶಮದ), ಮನುವಿಹಿತನಾದ ಧರ್ಮದಲ್ಲಿ ನಿಷ್ಠೆಯುಳ್ಳವನೆ ಮನು ವಿಹಿತ ಧರ್ಮನಿಷ್ಠ), ಮಾನವ ಶ್ರೇಷ್ಠನೆ, ಬೆಳಗುವ ಗೌರವವುಳ್ಳವನೆ (ನು + ಶ್ರೇಷ್ಠ; ಸ + ಭಾಸತ್ + ಮಾನಿ), ಅವಿಶ್ರಾಂತವಾದ ಊಹಾಶಕ್ತಿಯುಳ್ಳವನೆ, ಮಹೇಶ್ವರನಿಂದ ಬಲಶಾಲಿಯಾದ ಅರ್ಜುನ, ಕೃಪ ಮೊದಲಾದವರ ಮನಸ್ಸನ್ನು ಆಕರ್ಷಿಸುವ ಗುಣದಿಂದ ಕೂಡಿದ ಧನುಷ್ಟಂಕಾರವನ್ನು ಸಹ ಪರಿಶೀಲಿಸುವ ಸಾಮರ್ಥ್ಯವುಳ್ಳವನೆ (ಅನುಪರಮ + ಊಹ; ಹರಬಲವಿಜಯ ಕೃಪಾದಿ ಮನೋಹರಗುಣ ಪ್ರವರ್ಧನ + ನು), ಕಿವಿಗಳವರೆಗೆ ಚಾಚಿದ ದೊಡ್ಡದಾದ ಚಿನ್ನದ ಬಾಹುಪೂರವನ್ನು ತೊಟ್ಟವನೆ, ಆಕಾಶಮಂಡಲದಲ್ಲಿ ಪ್ರಕಾಶಿಸುವ ಸೂರ್ಯನಂತೆ ಉಜ್ವಲನಾದವನೆ (ಶ್ರುತಿಪರಿಶೀಲನ + ಆಢ್ಯ + ಪೃಥುರುಕ್ಮಾಂಗದ; ವಿಭಾವನೋಚಿತ + ಶುಚಿ + ತರಲ), ಸತ್ಪುರುಷರ ಸಮೂಹಕ್ಕೆ ಅನುಸಾರವಾಗಿ ಫಲನೀಡುವ ಹಾಗೂ ಸಮಸ್ತಶರೀರವನ್ನು ವ್ಯಾಪಿಸುವ ಶಾಂತಿಯಿಂದ ವಿಶಿಷ್ಟನಾದವನೆ (ಸದ್ರಾಜಿ + ಅನುಸಾರ + ಫಲದ + ಆತನುಶಾಂತಿ + ವಿಶಿಷ್ಟ), ನಮ್ರವಾಗಿ ತನ್ನಲ್ಲಿ ಆಶ್ರಯ ಪಡೆದ ದೇವಬ್ರಾಹ್ಮಣರ ಪೂಜೋಪಚಾರ ಫಲವಾಗಿ ಶಾಶ್ವತವಾದ ಸಮೃದ್ಧಿಯುಳ್ಳವನೆ(?) (ನುತೋಷಿತ ದೇವ ಬ್ರಾಹ್ಮಣ ಪೂಜೋಪಚಾರ....ದ್ರವ್ಯ ಬುದ್ಧಿಸಂಪನ್ನ + ನು), ಸ್ನೇಹಭಂಜಕರಾದಂತಹ ದೈತ್ಯರಂತಿರುವ ಶತ್ರುಗಳ ಕಂಠಚ್ಛೇದದಲ್ಲಿ ಅತಿಶಯವಾಗಿ ಧೀರನಾದವನೆ (ಪ್ರಣಯರಸ + ವಾರಿ, ದನುಜಾಯಮಾನ + ವಿಪಕ್ಷ, ಗಳಪ್ರಹಾರ ಕರಣೋದ್ದಾಮಧೀರ + ನು), ಪ್ರಜೆಗಳಲ್ಲಿ ದಾಸನಂತೆ ಇರುವಂತಹ ರಾಜರಾಜೇಂದ್ರನೆ, ನಮಸ್ಕಾರಕ್ಕೆ ತಕ್ಕುದಾದ ಗುಣಗಳನ್ನುಳ್ಳವನೆ, ದಯಾನಿಧಿಯೆ (ದಾಸದಶಾಧ್ಯುಷಿತ + ರಾಜರಾಜೇಂದ್ರ, ನಮೋಘ + ಗುಣನಿಧಿ, ಭೂತ ದಯಾಢ್ಯ), ಗೋಪಾಲನದಲ್ಲಿ ಮೇಲ್ವಿಚಾರಣೆ ನಡಸುವುದೇ ತನ್ನ ಉತ್ಸವವೆಂದು ಆ ಕಾರ್ಯವನ್ನೇ ಧ್ಯೇಯವಾಗಿ ಉಳ್ಳವನೆ (ಗೋಪಾಲನೇಕ್ಷಣ ಕ್ಷಣಕೃತಿ ವಿಷಯಕ), ಅನೇಕ ವಿಧವಾದ ಚಾತುರ್ಯಗಳಿಗೆ ನೆಲೆಯಾಗಿರುವವನೆ (ಬಹು + ಚಾತುರೀ + ಅಗಾರ), ಕಲಿಯುಗದಲ್ಲಿ ಅವತರಿಸಿರುವ ನೀತಿಯ ಪ್ರತ್ಯಕ್ಷಮೂರ್ತಿಯೆ (ಕಲಿಯುಗಾವತೀರ್ಣ ಪ್ರತ್ಯಕ್ಷನಯ), ಯಾಚಕರನ್ನು ಆಗಿಂದಾಗಲೇ ಶ್ರೀಮಂತರನ್ನಾಗಿ ಮಾಡುವ ಪ್ರತಿಜ್ಞೆಯುಳ್ಳವನೆ (ಸದ್ಯೋ + ಧನೀ + ಧರ್ಮಪಣವಂತ + ನು), ಸಾಮ್ರಾಜ್ಯಭಾರವನ್ನು ಹೊರುವವನೆ (ಸಾಮ್ರಾಜ್ಯಧುರಂಧರ + ನು)

ನಿತ್ಯಜಯಗಳನ್ನು ವಿತರಣೆಮಾಡುವ ವಿಶೇಷವಾದಂತಹ ಬುದ್ಧಿಯುಳ್ಳ (ನಿತ್ಯಜಯಾನ್ + ವಿತರಣ + ವಿಧಿಯಾ) ಗೋ ಮತ್ತು ವಿದ್ವಾಂಸರಲ್ಲಿ ಆಸಕ್ತನಾದವನೆ....(?), ಕೀರ್ತಿಯಿಂದ ದಿಗ್ಗಜಗಳು ಧವಳಿತವಾಗುವಂತೆ ಮಾಡಿದವನೆ (ದಿಕ್ತಟ + ನಾಗಃ), ಮಹಾಮಹಿಮನೆ, ಎಲ್ಲರೂ ಬಯಸುವಂತಹ ಬುದ್ಧಿಯುಳ್ಳವನೆ (ಮಹಿಮನ್ + ಈಹಿತಮತಿಶಾಲೀ), ನೃಪಸಭೆಗೆ ವಾಗ್ಭೂಷಣನಾಗಿರುವವನೆ, ಋಜುತ್ವದಿಂದ ಪೋಷಿತರಾದ ಸಮಸ್ತದ್ವಿಜ ಪರಿವೃತನೆ (ನೃಪಸಭೆಯಲ್ಲಕ ?; ವಾಕ್ + ಅಯಂ; ಆರ್ಜವಪೋಷಿತಸಕಲದ್ವಿಜ + ನು); ಶ್ರೀಕೃಷ್ಣರಾಜನೆ, ನನ್ನಂತಹ ಪಂಡಿತರಿಗೆ ಸ್ವಾಮಿಯೆ, ಪ್ರೇಮಭರಿತನೆ, ಅತ್ಯಾನಂದಪೂರ್ಣನೆ (ಮಯಿಸೂರಿಪತೇ; ಪ್ರೇಮಭರಿತ; ನಿರುಪರಮ + ಮುದಿತ + ನು).”

ಕನ್ನಡ ಭಾಷೆಯ ರಚನೆಯಾಗಿ :

''ರಸಿಕಾಗ್ರಣಿಯೆ, ಭೂಮಿಯಲ್ಲಿಯ (ಭೂ + ಅಲ್ಲಿ = ಭೂವಲ್ಲಿ) ಯುದ್ಧಗಳಲ್ಲಿ ಸ್ಥಿರವಾದವನೆ, ಇಂದ್ರನಿಗೆ ಸಮನಾದ ಶ್ರೇಯಸ್ಸುಳ್ಳವನೆ, ಆಳಿದ ಮಹಾಶೂರನೆ, ಕೃಷ್ಣನೃಪೇಂದ್ರ, ಉಪಕಾರಿಯಾಗು; ದಯಾಳುವೆ, ಜಯಾರ್ಹನೆ, ನನ್ನ ಸ್ತುತಿಯನ್ನು ಲಕ್ಷಿಸು.

ಮಹನೀಯನೆ, ಅವಧಾರಿಸು (ಅವಧಾರಿಸು ಮಹನೀಯ), ನೀನು (ನೀ) ಮಹಿಮಾಶಾಲಿ, ತೇಜಸ್ವಿ, ಮಹಿಸೂರಿನ ದೊರೆ, ಮಹಾವಂಶದಲ್ಲಿ ಜನಿಸಿದವನು, ಶ್ರೇಯಸ್ಕರನಾಗಿ ಎಲ್ಲರನ್ನೂ ಮೀರಿಸುವ ಪ್ರಭೆಯನ್ನು ತಳೆದಿರುವವನು, ಕೆನ್ನೆ ಮೂಗು ಮೊದಲಾದ ಅವಯವಗಳ ಸೌಂದರ್ಯದಿಂದ ಶೋಭಿತನು, ಧರಾಧಿಕಾರಯೋಗ್ಯನಾಗಿಯೂ ಮಿತವೂ ಗಂಭೀರವೂ ಆದ ವಾಕ್ಕುಳ್ಳವನು, ಬ್ರಹ್ಮನಿರ್ಮಿತವಾದ ವಿಶಿಷ್ಟವಾದ ಜಗತ್ತಿನಲ್ಲಿ (ಜಗದಲಿ) ಕಾಂತಿಯುತವಾಗಿಯೂ ಮನೋಹರವಾಗಿಯೂ ಇರುವ ತಿಲಕಪ್ರಾಯನಾದವನು, ಶಮದಮಗಳನ್ನು ನಿಗ್ರಹಿಸಿದವನು, ವಿಹಿತವಾದ ಧರ್ಮದಲ್ಲಿ ನಿಷ್ಠೆಯುಳ್ಳವನು, ಶ್ರೇಷ್ಠರಿಂದ ಕೂಡಿದ ಸಭೆಯಲ್ಲಿ ಸನ್ಮಾನಿತನು, ಶತ್ರುಗಳ ಮೋಹವನ್ನು ಪರಿಹರಿಸುವ ಬಲದಿಂದ ಅರ್ಜುನ, ಕೃಪ ಮೊದಲಾದವರ ಮನಸ್ಸನ್ನು ಆಕರ್ಷಿಸುವ ಶ್ರೇಷ್ಠಗುಣವುಳ್ಳವನು, ಪುರಾಣೇತಿಹಾಸಗಳಲ್ಲಿ ಸ್ಥಾನಹೊಂದಿದ ಪೃಥು ರುಕ್ಮಾಂಗದ ಮೊದಲಾದ ರಾಜರ ಆಳ್ವಿಕೆಯಂತೆ ಉಚಿತವೂ ಬಹುಸ್ವಚ್ಛವೂ ಆದ ಉತ್ಕೃಷ್ಟರಾಜ್ಯವುಳ್ಳವನು, ಸಾರವತ್ತಾದ ಫಲಗಳನ್ನು ನೀಡುವವನು, ಶಾಂತಿ ವಿಶಿಷ್ಟನು, ತುಷ್ಟರಾದ ದೇವಬ್ರಾಹ್ಮಣರ ಪೂಜೋಪಚಾರಫಲದಿಂದ ದ್ರವ್ಯವನ್ನೂ ಬುದ್ಧಿಯನ್ನೂ ಹೊಂದಿದವನು (ಫಲದಿಂದ ದ್ರವ್ಯಬುದ್ಧಿಸಂಪನ್ನನು), ಸ್ನೇಹರಸವನ್ನು ವರ್ಷಿಸುವ ಮೇಘವಾಗಿರುವವನು, ಜನಿಸುವ ಶತ್ರುಗಳ ಸಂಹಾರಕಾರ್ಯದಲ್ಲಿ ಮಹಾಧೀರನಾದವನು, ದಾಸರ ಸ್ಥಿತಿಯ ಸಂಕಟಕ್ಕೆ ಮರುಗಿದ ರಾಜರಾಜೇಂದ್ರನು, ನಮಸ್ಕಾರಕ್ಕೆ ತಕ್ಕುದಾದ ಗುಣಗಳ ನಿಧಿಯೂ ಜೀವದಯಾಸಂಪನ್ನನೂ ಆದವನು, ಸಾಕ್ಷಾತ್ ಕೃಷ್ಣನೇ ಎನಿಸಿದವನು, ಪ್ರತಿಕ್ಷಣದ ಕಾರ್ಯಗಳ ಆಚರಣೆಯಲ್ಲಿ ಬಹುಚತುರನೆನಿಸಿದವನು, ಕಲಿಯುಗದಲ್ಲಿ ಅವತರಿಸಿರುವ ನೀತಿಯ ಪ್ರತ್ಯಕ್ಷಮೂರ್ತಿ, ಒಳ್ಳೆಯ ಯೋಧ, ಧರ್ಮದಲ್ಲಿ ವ್ಯವಹರಿಸುವವನು, ಸಾಮ್ರಾಜ್ಯಧುರಂಧರನು.

ಮೂರ್ತಿವೆತ್ತ ಕೃಷ್ಣನೆ, ವಿದ್ವಾಂಸರನ್ನು ಮೆರೆಸುತ್ತ ಕಾಳಗದಲ್ಲಿ ಶಾಶ್ವತಜಯವನ್ನು ಪಡೆಯಯ್ಯ, ಮಹಾಮಹಿಮನೆ, ಹಿತಕಾರಿಯಾದ ಬುದ್ಧಿಯುಳ್ಳವನೆ, ದಿಗಂತಗಳನ್ನು ನಿನ್ನ ಕೀರ್ತಿಯಿಂದ ಬೆಳಗಯ್ಯ, ಋಜುತ್ವದಿಂದ ಪೋಷಿತರಾದ ಸಮಸ್ತಬ್ರಾಹ್ಮಣರಿಂದ ಒಡಗೂಡಿದ ನೀನು, ನೃಪಸಭೆಗೆಲ್ಲ(?) ಭೂಷಣವಾಗಯ್ಯ, ಶ್ರೀಕೃಷ್ಣರಾಜನೆ, ಮೈಸೂರು ದೊರೆಯೆ, ಪರಮಸಂತುಷ್ಟನಾಗಿ ಪ್ರೇಮಪೂರ್ಣನಾಗಿ ಇರು.''

ಸಂಜ್ಞಾರ್ಥಾದಿ ಶ್ಲೇಷೆ

ಪರಿಚಿತ ವಿಷಯಗಳಾಗಿರುವ ಮಹಾಭಾರತದ ಅಷ್ಟಾದಶಪರ್ವಗಳು, ನವರಸಗಳು, ಷಷ್ಟಿ ಸಂವತ್ಸರಗಳು, ಚತುರ್ವಿಂಶತಿ ತೀರ್ಥಂಕರರು ಮೊದಲಾದವುಗಳ ವ್ಯೂಹದಿಂದ ಯಥೋಚಿತ ಸಂಖ್ಯೆಯಲ್ಲಿ ಹೆಸರುಗಳನ್ನು ಆಯ್ದುಕೊಂಡು, ಪ್ರಕೃತವಾದ ಒಂದು ಸಂದರ್ಭಕ್ಕೆ ಅವನ್ನು ಕುಶಲರೀತಿಯಲ್ಲಿ ಸಂಯೋಜಿಸುವುದನ್ನು 'ಸಂಜ್ಞಾರ್ಥಾದಿ ಶ್ಲೇಷೆ' ಎಂದು ಕರೆಯಬಹುದು. ಹೀಗೆ ಮಾಡುವುದರಲ್ಲಿ, ಆಯಾ ಹೆಸರಿನ ಶ್ಲೇಷೆ ಎಂದರೆ ದ್ವಂದ್ವಾರ್ಥಗಳ ಸೌಕರ್ಯ ಕವಿಗೆ ಚೆನ್ನಾಗಿ ಒದಗಿಬರುತ್ತದೆ. ಈ ಬಗೆಯ ಪದಗಳ ಶ್ಲೇಷಾರ್ಥದಲ್ಲಿ, ಮುಖ್ಯವಾದ ಅರ್ಥ ಪ್ರಕೃತಸಂದರ್ಭಕ್ಕೆ ಅಪ್ರಸ್ತುತವಾಗಿದ್ದರೂ, ಓದುವಾಗ ಅದು ಗೌಣವಾಗಿ ಸ್ಫುರಿಸುವಂತಿರುತ್ತದೆ. ಈ ಅಂಶವೇ ಪದ್ಯಾರ್ಥದ ಚೆಲುವನ್ನು ಹೆಚ್ಚಿಸುವಂತಹುದು. ಕ್ಷೇಮೇಂದ್ರನು 'ಕವಿಕಂಠಾಭರಣ'ದ 'ಪರಿಚಯಪ್ರಾಪ್ತಿ' ಎಂಬ ಐದನೆಯ ಸಂಧಿಯಲ್ಲಿ, ಕವಿಗೆ ತರ್ಕ, ವ್ಯಾಕರಣ, ಭರತಶಾಸ್ತ್ರ, ಅರ್ಥಶಾಸ್ತ್ರ, ಕಾಮಶಾಸ್ತ್ರ, ಭಾರತ ರಾಮಾಯಣಗಳು ಇತ್ಯಾದಿಗಳ ಪರಿಚಯವಿರಬೇಕೆಂದು ತಿಳಿಸುವಾಗ, ಈ ಬಗೆಯ ಕೆಲವು ಸ್ವಕೃತ ಅನ್ಯಕೃತ ಲಕ್ಷ್ಯಪದ್ಯಗಳನ್ನು ಕೊಟ್ಟಿರುವುದನ್ನಿಲ್ಲಿ ನೆನೆಯಬಹುದು (ಐ-೨).

ಕ್ಷೇಮೇಂದ್ರನು ಉದಾಹರಿಸುವ ಭಟ್ಟ ಮುಕ್ತಿಕಲಶನ 'ವ್ಯಾಕರಣಪರಿಚಯ'ದ ನಿದರ್ಶನ :

ದ್ವಿಗುರಪಿ ಸದ್ವಂದ್ವೋಽಹಂ । ಗೃಹೇ ಚ ಮೇ ಸತತಮವ್ಯಯೀಭಾವಃ
ತತ್ಪುರುಷ ಕರ್ಮಧಾರಯ । ಯೇನಾಹಂ ಸ್ಯಾಂ ಬಹುವ್ರೀಹಿಃ ॥ (ಪ. ೩೫)

ಇದರ ಆಶಯ : ''ನನ್ನ ಬಳಿಯಲ್ಲಿ ಎರಡು ಹಸುಗಳಿವೆ. ಅಲ್ಲದೆ ನಾನು ಹೆಂಡತಿಯನ್ನು ಮದುವೆಯಾಗಿರುವುದರಿಂದ ಜೋಡಿಯಾಗಿದ್ದೇವೆ. ನಮ್ಮ ಮನೆಯಲ್ಲಿ ಯಾವಾಗಲೂ ಖರ್ಚೇ ಇಲ್ಲ (ಎಂದರೆ ಖರ್ಚಿಗೆ ಏನೂ ಇಲ್ಲ). ಆದ್ದರಿಂದ, ಅಯ್ಯಾ ಮನುಷ್ಯ, ನನಗೆ ಏನಾದರೂ ಕೆಲಸವನ್ನು ಹೇಳಿ ಮನೆಯಲ್ಲಿ ಭತ್ತ ಹೆಚ್ಚಾಗುವಂತೆ ಮಾಡು!''

ಇಲ್ಲಿ ವ್ಯಾಕರಣದ ದ್ವಿಗು, ದ್ವಂದ್ವ, ಅವ್ಯಯೀಭಾವ, ತತ್ಪುರುಷ, ಕರ್ಮಧಾರಯ ಮತ್ತು ಬಹುವ್ರೀಹಿ ಎಂಬ ಸಮಾಸಭೇದಗಳ ಹೆಸರುಗಳು ಚಮತ್ಕಾರವಾಗಿ ಸೇರಿವೆ.

ಕನ್ನಡ ಸಾಹಿತ್ಯದಲ್ಲಿ ಈ ಬಗೆಯ ಉದಾಹರಣೆಗಳು ಸಾಕಷ್ಟು ದೊರೆಯುತ್ತವೆ. ಇಲ್ಲಿ ಕೆಲವನ್ನು ಗಮನಿಸಬಹುದು.

ತೀರ್ಥಕರನಾಮಸಂಯೋಜನೆ

ನಾಗವರ್ಮನ 'ವರ್ಧಮಾನ ಪುರಾಣ'ದಲ್ಲಿ :

ಪುರುಪುಣ್ಯಂ ವಿಮಳೋರುಕೀರ್ತಿ ಸುಮತಿ ಶ್ರೀನಂದನಂ ಧರ್ಮಸ
ಚ್ಚರಿತಂ ವೀರನನಂತಕಾಂತಿನಿಳಯಂ ಚಂದ್ರಪ್ರಭಾಸ್ಯಂ ಮನೋ
ಹರಪಾರ್ಶ್ವಂ ವರಪುಷ್ಪದಂತನಜಿತಂ ಶ್ರೇಯೋಮತಂ ಸುವ್ರತಂ
ಧರೆಯೊಳ್ ತೋರ್ಕುರು ತರ್ಕಿಕಂ ಜಿನಕುಮಾರಾಭಾಸಮಂ ನಾಕಿಗಂ ॥ (೧–೩೦)

ಇದು ನಾಗವರ್ಮನ ಆತ್ಮಪ್ರಶಂಸೆಯ ಭಾಗವಾದ ಪದ್ಯ. ''ಅಧಿಕಪುಣ್ಯನು, ನಿಷ್ಕಳಂಕವೂ ಅತಿಶಯವೂ ಆದ ಕೀರ್ತಿಯುಳ್ಳವನು, ಒಳ್ಳೆಯ ಬುದ್ಧಿಯುಳ್ಳವನು, ಲಕ್ಷ್ಮೀಪುತ್ರನು, ಧರ್ಮದ ಒಳ್ಳೆಯ ಆಚರಣೆಯುಳ್ಳವನು, ವೀರನು, ಅನಂತವಾದ ಕಾಂತಿಗೆ ನೆಲೆಯಾದವನು, ಚಂದ್ರನ ಪ್ರಕಾಶವನ್ನು ಸೂಸುವ ಮುಖವುಳ್ಳವನು, ಮನೋಹರರಾದವರು ಮಗ್ಗುಲಲ್ಲಿರುವವನು, ಹೂವಿನಂತೆ ಸೊಗಸಾಗಿರುವ ಹಲ್ಲುಗಳುಳ್ಳವನು, ಅಜೇಯನು, ಶ್ರೇಯಸ್ಕರನಾದವನು, ಸದ್ವ್ರತವಾಚರಿಸುವವನು ಆಗಿರುವ, ಒಳ್ಳೆಯ ತಾರ್ಕಿಕನಾಗಿರುವ, ನಾಗವರ್ಮನು ಲೋಕದಲ್ಲಿ ಜಿನಕುಮಾರರ ಎಂದರೆ ತೀರ್ಥಂಕರರ ಹಾಗೆ ತೋರುತ್ತಾನೆ.''

ಹೀಗೆ ಸಾಮಾನ್ಯವಾಗಿ ಅರ್ಥ ಹೇಳಬಹುದಾದ ಈ ಪದ್ಯದಲ್ಲಿ, ಕ್ರಮವಾಗಿ ವೃಷಭ, ವಿಮಲ, ಸುಮತಿ, ಅಭಿನಂದನ, ಧರ್ಮನಾಥ, ವೀರ, ಅನಂತನಾಥ, ಚಂದ್ರಪ್ರಭ, ಪಾರ್ಶ್ವನಾಥ, ಪುಷ್ಪದಂತ, ಅಜಿತ, ಶ್ರೇಯಾಂಸ, ಮುನಿಸುವ್ರತ ಎಂಬ ತೀರ್ಥಂಕರರ ಹೆಸರುಗಳು ಗೂಢವಾಗಿ ಸೇರಿಕೊಂಡಿವೆ.

ನೇಮಿಚಂದ್ರನ 'ಲೀಲಾವತೀ ಪ್ರಬಂಧ'ದಲ್ಲಿ :

ವದನಂ ಚಂದ್ರಪ್ರಭಂ ವಿಕ್ರಮಭುಜಮಜಿತಂ ಪಾಣಿ ಪದ್ಮಪ್ರಭಂ ಸಂ
ಪದಮೆಂದುಂ ವರ್ಧಮಾನಂ ಗುಣತತಿ ವಿಮಳಂ ತನ್ನ ಪೆಂಪೊಂದನಂತಂ
ಹೃದಯಂ ಸ್ವಾಧೀನಧರ್ಮಂ ಮತಿ ಪುರುಚರಿತಂ ಶೀತಲಂ ಸುವ್ರತಂ ತಾ
ನದಱಿಂ ಪ್ರತ್ಯಕ್ಷತೀರ್ಥೇಶ್ವರನೆನೆ ನೆಗಟ್ದಂ ವಿಶ್ವವಿದ್ಯಾವಿನೋದಂ ॥ (೧–೯೪)

ಕಥಾನಾಯಕನಾದ ರೂಪಕಂದರ್ಪನ ಮಹಿಮೆಯನ್ನು ಕೀರ್ತಿಸುವ ಪದ್ಯವಿದು. ಇದು ಪರೋಕ್ಷವಾಗಿ ನೇಮಿಚಂದ್ರ ಕವಿಯ ಆತ್ಮಪ್ರಶಂಸೆಯೂ ಹೌದು. 'ವಿಶ್ವವಿದ್ಯಾವಿನೋದ'ನೆನಿಸಿದ ಆ ರೂಪಕಂದರ್ಪನು, ತಾನು ಪ್ರತ್ಯಕ್ಷತೀರ್ಥೇಶ್ವರನೆಂದು ತೋರಿದ್ದು ಹೇಗೆ ಎಂಬುದನ್ನು ಇಲ್ಲಿ ಕವಿ ತಿಳಿಸಲು ಯತ್ನಿಸಿದ್ದಾನೆ. ''ಮುಖ ಚಂದ್ರಪ್ರಭೆಯುಳ್ಳದು, ಶೌರ್ಯಯುಕ್ತವಾದ ತೋಳುಗಳು ಅಜೇಯವಾದುವು, ಅಂಗೈ ತಾವರೆಯ ಸೊಬಗುಳ್ಳದು, ಸಂಪತ್ತು ಬೆಳೆಯುತ್ತಿರುವಂತಹುದು, ಗುಣಸಮೂಹ ನಿಷ್ಕಳಂಕವಾದುದು, ತನ್ನ ಹಿರಿಮೆ ಅನಂತ

ವಾದುದು, ಹೃದಯ ಧರ್ಮಕ್ಕೆ ಅಧೀನವಾದುದು, ಬುದ್ಧಿ ಉತ್ಕೃಷ್ಟ ನಡೆವಳಿಕೆಯುಳ್ಳುದು, ಒಳ್ಳೆಯ ವ್ರತಗಳ್ಳ ಸಾಧುವಾದವು. ಆ ಕಾರಣದಿಂದ ವಿಶ್ವವಿದ್ಯಾವಿನೋದನಾದ ತಾನು ಪ್ರತ್ಯಕ್ಷತೀರ್ಥಂಕರನೇ ಎನಿಸಿದನು.'' ಇದು ಪದ್ಯದ ಸಾಮಾನ್ಯವಾದ ಆಶಯ.

ಇಲ್ಲಿ ಚಂದ್ರಪ್ರಭ, ಅಜಿತ, ಪದ್ಮಪ್ರಭ, ವರ್ಧಮಾನ, ವಿಮಳ, ಅನಂತನಾಥ, ಧರ್ಮನಾಥ, ವೃಷಭ, ಶೀತಲ, ಮುನಿಸುವ್ರತ ಈ ತೀರ್ಥಂಕರರ ಹೆಸರುಗಳು ಗೌಣಾರ್ಥದಲ್ಲಿ ಸೇರಿವೆ. ಇದೇ ಪದ್ಯ ಈ ಕವಿಯ 'ಅರ್ಧ ನೇಮಿ ಪುರಾಣ'ದಲ್ಲಿಯೂ (೧-೪೩) ಬಂದಿದ್ದು, 'ವಿಶ್ವವಿದ್ಯಾವಿನೋದಂ', ಎಂಬೆಡೆಗೆ 'ಪದ್ಮನಾಭಪ್ರಧಾನಂ' ಎಂಬುದಾಗಿ ಬೇರೆ ಮಾತಿದೆ. ಇದು ಕವಿಯ ಪೋಷಕನಾದ ಸೆಜ್ಜೆವಳ್ಳ ಪದ್ಮನಾಭನ ಮಹಿಮೆಯನ್ನು ಕೀರ್ತಿಸುವ ಪದ್ಯವಾಗಿರುವುದರಿಂದ, ಸಹಜವಾಗಿಯೇ ಆತನ ಹೆಸರು ಕೊನೆಗೆ ಸೇರಿದೆ.

ಕವಿನಾಮಸಂಯೋಜನೆ

ಮಧುರ ಕವಿಯ 'ಧರ್ಮನಾಥ ಪುರಾಣ'ದಲ್ಲಿ :

ಕವಿತಾಶ್ರೀಗೆ ಜನಾರ್ದನಂ ಪುರುಷರತ್ನಂ ಪುಷ್ಪದಂತಂ
ಪ್ರವರೋತ್ತುಂಗ ಗಜಾಂಕುಶಂ ಮನಸಿಜಾಕಾರಂ ಸಭಾಮಧ್ಯಲ
ಬ್ಧವರ ಶ್ರೀವಿಜಯಂ ಸಮಸ್ತಸುಜನೋತ್ತಂಸಂ ಯಶಶ್ಚಂದ್ರನು
ತ್ಸವಲೀಲಾರಥನೇಮಿಯೆಂದು ಮಧುರಂ ಪೆತ್ತಂ ಮಹಾಖ್ಯಾತಿಯಂ ॥ (೧-೭೮)

ಇದು ಮಧುರ ಕವಿಯ ಸ್ವವಿಚಾರನಿವೇದನೆಯ ಭಾಗದ ಒಂದು ಪದ್ಯ. ''ಕವಿತಾಲಕ್ಷ್ಮಿಗೆ ವಿಷ್ಣು, ಪುರುಷಶ್ರೇಷ್ಠ, ಹೂವಿನಂತಹ ಹಲ್ಲುಗಳುಳ್ಳವನು, ಗಣ್ಯರಲ್ಲಿ ಉನ್ನತರೆಂಬ ಗಜಗಳಿಗೆ ಅಂಕುಶಪ್ರಾಯನಾದವನು, ಮನ್ಮಥನಂತೆ ಸುಂದರಾಕಾರನು, ಸಭಾಮಧ್ಯದಲ್ಲಿ ಉತ್ಕೃಷ್ಟವಾದ ಸಂಪತ್ತನ್ನು ಗಳಿಸಿದವನು, ಸಮಸ್ತ ಸಜ್ಜನರ ನಡುವೆ ಭೂಷಣಪ್ರಾಯನಾದವನು, ಕೀರ್ತಿಯ ಪ್ರಸರಣದಲ್ಲಿ ಚಂದ್ರನಂತಹವನು, ಉತ್ಸಾಹಭರಿತವಾದ ಲೀಲೆಗಳೆಂಬ ರಥವು ಸಾಗಲು ಅನುವಾದ ಅದರ ಚಕ್ರದ ಸುತ್ತುಪಟ್ಟಿ ಎಂಬುದಾಗಿ ಮಧುರನು ಮಹಾಪ್ರಸಿದ್ಧಿಯನ್ನು ಪಡೆದನು''—ಎಂಬುದಾಗಿ ಈ ಪದ್ಯದ ಆಶಯ.

ಇಲ್ಲಿ ಕವಿ ಪ್ರಸಿದ್ಧ ಪ್ರಾಚೀನ ಕನ್ನಡ ಕವಿಗಳಲ್ಲಿ ಕೆಲವರ ಹೆಸರುಗಳನ್ನು ಬಳಸಿಕೊಂಡು ತಾನು ಅವರಿಗೆ ಸಮಾನನೆಂದು ಪರೋಕ್ಷವಾಗಿ ಹೇಳಿಕೊಂಡಿದ್ದಾನೆ. ಹೀಗೆ ಮಾಡುವುದರಲ್ಲಿ ಪೂರ್ವಕವಿಸ್ಮರಣೆಯೂ ಅದಂತಾಯಿತು ಎಂದು ಆತ ಭಾವಿಸಿರಬೇಕು. ಇಲ್ಲಿ ಕ್ರಮವಾಗಿ ಜನ್ನ, ರನ್ನ, ಪುಷ್ಪದಂತ (ಈತ ಪ್ರಸಿದ್ಧನಾದ ಅಪಭ್ರಂಶ ಕವಿಯೆಂದು ತೋರುತ್ತದೆ.) ಗಜಾಂಕುಶ, ಮನಸಿಜ, ಶ್ರೀವಿಜಯ, ಸುಜನೋತ್ತಂಸ, ಚಂದ್ರ, ನೇಮಿಚಂದ್ರ ಈ ಕವಿಗಳ ಹೆಸರುಗಳು ಸಮಾವೇಶಗೊಂಡಿವೆ.

ಕೃತಿನಾಮಸಂಯೋಜನೆ

ಪದ್ಮಣಾಂಕನ 'ಪದ್ಮರಾಜ ಪುರಾಣ'ದಲ್ಲಿ :

ಮಾಲತೀಮಾಧವೀಯೊಾನ್ವಿತದೆ ನಾಟಕದ
ಲೀಲೆಯಂ ಯೋಗಿ ಕುಸುಮಾಂಜಲಿಯಿನಾ ತರ್ಕ
ಶೀಲತೆಯನಿಂದ್ರ ಚಂದ್ರಾಂಕದಿಂ ವ್ಯಾಕರಣಮಂ ವಿಲಸಿತಧ್ವನಿಗಳಿಂ
ಲಾಲಿತಾಲಂಕಾರಮಂ ಚಂಪಕೋತ್ಪಲವಿ
ಶಾಲತ್ವದಿಂ ಛಂದಮಂ ಮಹಾಶ್ರೀಹರ್ಷ
ದಾಲಂಬದಿಂ ಕಾವ್ಯಮಂ ಪೋಲ್ತು ರಂಜಿಸುವುದಾ ನಂದನಂ ನಂದನಂ ॥ (೮-೨೬)

ಉದ್ಯಾನವನವೊಂದರ ವರ್ಣನೆಯ ಪದ್ಯವಿದು. ''ಮಾಲತೀಪುಷ್ಪ, ಮಾಧವೀಪುಷ್ಪಗಳಿಂದ ಕೂಡಿ ನಾಟಕದ ಲೀಲೆಯನ್ನು, ಯೋಗಿಗಳ ಪುಷ್ಪಾಂಜಲಿಯಿಂದ ತರ್ಕಶಾಸ್ತ್ರವನ್ನು, ಇಂದ್ರ ಚಂದ್ರರ ಕುರುಹುಗಳಿಂದ

ವ್ಯಾಕರಣಶಾಸ್ತ್ರವನ್ನು, ಸೊಗಸಾದ ಧ್ವನಿಗಳಿಂದ ಮನೋಹರವಾದ ಅಲಂಕಾರಶಾಸ್ತ್ರವನ್ನು, ಚಂಪಕ ಮತ್ತು ಉತ್ಪಲ ಪುಷ್ಪಗಳಿಂದ ಛಂದಶ್ಶಾಸ್ತ್ರವನ್ನು, ಅತಿಶಯ ಸಂತೋಷದ ಆಲಂಬನೆಯಿಂದ ಕಾವ್ಯವನ್ನು, ಹೋಲುವುದಾಗಿ ಆ ನಂದನವು ನಂದನನ್ನು ರಂಜಿಸಿತು.''

ಇಲ್ಲಿ ಭವಭೂತಿಯ 'ಮಾಲತೀಮಾಧವ'ನಾಟಕ, ಪತಂಜಲಿಯ ಯೋಗಭಾಷ್ಯ, ಐಂದ್ರ ಮತ್ತು ಚಾಂದ್ರ ವ್ಯಾಕರಣಗಳು, ಧ್ವನಿತತ್ತ್ವವಿರುವ 'ಧ್ವನ್ಯಾಲೋಕ', ಚಂಪಕಮಾಲೆ ಉತ್ಪಲಮಾಲೆಯೆಂಬ ವೃತ್ತಗಳ ಲಕ್ಷಣ ಹೇಳಿರುವ ನಾಗವರ್ಮನ 'ಛಂದೋಂಬುಧಿ', ಶ್ರೀಹರ್ಷಕವಿಯ 'ಶೃಂಗಾರನೈಷಧ' ಕಾವ್ಯ–ಇವನ್ನು ಕವಿ ಗೌಣಾರ್ಥದಲ್ಲಿ ಸಂಯೋಜಿಸಿದ್ದಾನೆ. ಸಂಯೋಜನೆ ಅಷ್ಟು ಸಮರ್ಥವಾಗಿದೆಯೆಂದು ಹೇಳಲಾಗದು.

ಹೊಸಗನ್ನಡ ಕಾಲದ ಕವಿ ಪಿ. ಬಸವಣ್ಣನವರ 'ಭಿಕ್ಷೆ' ಎಂಬ ಕವಿತಾಸಂಕಲನದಲ್ಲಿ ಸೇರಿರುವ 'ಅಚ್ಚ ಸುಖಿ ನಿಜಗುಣ' ಎಂಬ ಕವಿತೆಯಲ್ಲಿ :

ಸಾಧಕಗೆ ತೋರಿಸಿದೆ ಕೈವಲ್ಯಪದ್ಧತಿಯು
ಜಗಕೆ ಬೀರಿದೆ ಪಾರಮಾರ್ಥ ಪ್ರಕಾಶಿಕೆಯು
ವಿಶ್ವಕೋಶವೊರೆದ ವಿವೇಕಚಿಂತಾಮಣಿಯು
ನೀನುಲಿದ ಪರಮಾರ್ಥಗೀತೆಯದು ವಾಸಿಷ್ಠ
ಪರಮಾನುಭವಬೋಧೆ ಮೈತ್ರೇಯಿ ಸವಿದ ಸುಧೆ
ನಿನ್ನಯನುಭವಸಾರ ಜಗಕುಪನಿಷತ್ಸಾರ ॥ (ನುಡಿ, ೨)

ನಿಜಗುಣ ಶಿವಯೋಗಿಯ ಹಿರಿಮೆಯನ್ನು ಕೊಂಡಾಡುವಾಗ, ಇಲ್ಲಿ ಆತನ ಗ್ರಂಥಗಳ ಹೆಸರುಗಳನ್ನು ಗೌಣವಾಗಿಟ್ಟುಕೊಂಡು, ಸಾಧನೆಗಳನ್ನು ಮುಖ್ಯವಾಗಿ ಭಾವಿಸಿರುವುದು ಕಂಡುಬರುತ್ತದೆ.

'ಕೈವಲ್ಯ ಪದ್ಧತಿ', 'ಪರಮಾರ್ಥ ಪ್ರಕಾಶಿಕೆ' ಮುಂತಾದುವು ಆತನ ಗ್ರಂಥಗಳು. ಪದ್ಯವನ್ನು ಅರ್ಥಯಿಸುವಾಗ ''ನಿಜಗುಣ ಶಿವಯೋಗಿಯೇ ನೀನು ಸಾಧಕನಿಗೆ ಮೋಕ್ಷದ ಹಾದಿಯನ್ನು ತೋರಿಸಿದೆ, ಮುಕ್ತಿಯ ಬೆಳಕನ್ನು ಲೋಕಕ್ಕೆ ಹರಡಿದೆ. ವಿವೇಕಚಿಂತಾರತ್ನವೇ ಆಗಿರುವ ನೀನು ವಿಶ್ವಕೋಶವನ್ನು ರೂಪಿಸಿದೆ. ನೀನು ಹಾಡಿದ ಮೋಕ್ಷದ ಹಾಡು ವಾಸಿಷ್ಠ, ನಿನ್ನ ಪರಮಾನುಭವದ ಉಪದೇಶ ಮೈತ್ರೇಯಿ ಸವಿದ ಅಮೃತ, ನಿನ್ನ ಅನುಭವದ ಸಾರವೇ ಜಗತ್ತಿಗೆ ಉಪನಿಷತ್ತಿನ ಸಾರವಾಗಿದೆ''—ಎಂಬುದಾಗಿ ಮುಖ್ಯಾರ್ಥದ ವಿವಕ್ಷೆ ಕಾಣುತ್ತದೆ.

ನವರಸಾಖ್ಯಾಸಂಯೋಜನೆ

ಅಗ್ಗಳನ 'ಚಂದ್ರಪ್ರಭಪುರಾಣ'ದಲ್ಲಿ :

ಕರಿಣೀಶೃಂಗಾರಮುಗ್ರೋರಗಭಯಮಗದೈರ್ಘ್ಯಾದ್ಭುತಂ ದಸ್ಯುವೀರಂ
ಶರಭಾಕಾರೋರು ರೌದ್ರಂ ಪ್ಲವಗವಿಕೃತಿಹಾಸ್ಯಂ ಚಮೂರು ಪ್ರಣಶ್ಯ
ದ್ವ್ಯರುಬೀಭತ್ಸಂ ದವವ್ಯಾಕುಲಖಗಕರುಣಂ ಯೋಗಿರಾಟ್‌ಶಾಂತ ಶಾಂತಂ
ದೊರೆವೆತ್ತಾಶ್ಚರ್ಯಭೂತಂ ನವರಸಮಯಮಾಯ್ತಾ ನಗೇಂದ್ರೋಪಕಂಠಂ ॥ (೧೦–೪೩)

ಮಣಿಕೂಟವೆಂಬ ಗಿರಿಯ ವರ್ಣನೆಯ ಭಾಗವಾಗಿ ಈ ಪದ್ಯ ಬಂದಿದೆ. ಈ ಗಿರಿಯು ನವರಸಮಯವಾಯಿತು ಎಂಬುದಾಗಿ ಕವಿ ಹೇಳಿ ಅದನ್ನು ಸಮರ್ಥಿಸುವುದು ಹೀಗೆ: ''ಹೆಣ್ಣಾನೆಗಳ ಶೃಂಗಾರ, ಭಯಂಕರ ಸರ್ಪಗಳ ಭಯ, ಪರ್ವತಗಳ ವಿಸ್ತಾರದ ಅದ್ಭುತ, ವನಚರರ ವೀರ, ಶರಭಮೃಗಗಳ ಆಕಾರದಿಂದುಂಟಾದ ಮಿಗಿಲಾದ ರೌದ್ರ, ಕಪಿಗಳ ವಿಕಾರವರ್ತನೆಯ ಹಾಸ್ಯ, ಹುಲಿಗಳು ಜಿಂಕೆಗಳನ್ನು ಕೊಲ್ಲುವ ಬೀಭತ್ಸ, ಕಾಡುಕಿಚ್ಚಿನಿಂದ ತಳಮಳಿಸುವ ಹಕ್ಕಿಗಳ ಕರುಣೆ, ಯೋಗಿರಾಜರಾದ ಶಾಂತಸ್ವಭಾವದವರ ಶಾಂತ ಇವು ಆಶ್ಚರ್ಯಾವಹವಾಗಿ ಉಂಟಾಗಿ ಆ ನಗೇಂದ್ರದ ತಪ್ಪಲು ಪ್ರದೇಶ ನವರಸಮಯವಾಯಿತು.''

ಇಲ್ಲಿ ಶೃಂಗಾರಾದಿಯಾದ ನವರಸಗಳು ಗೌಣವಾದ ಅರ್ಥದಲ್ಲಿ ಸೇರಿ, ಅಲಂಕಾರಶಾಸ್ತ್ರದ ಪರಿಭಾಷೆಯ ಆ ರಸಗಳು ಸ್ಮರಣೆಗೆ ಬರುವಂತೆ ಸಂಯೋಜನೆಯಿದೆ. ಈ ಪದ್ಯ 'ಸೂಕ್ತಿಸುಧಾರ್ಣವ'ದ 'ಪರ್ವತವರ್ಣನೆ'ಯಲ್ಲಿ ಸಮಾವೇಶಗೊಂಡಿದೆ (ಪ. ೨೨೦).

'ಸೂಕ್ತಿಸುಧಾರ್ಣವ' 'ಕಾವ್ಯಸಾರ'ಗಳಲ್ಲಿಯ ಅಜ್ಞಾತಕರ್ತೃಕಪದ್ಯ :

ಕರುಣಂ ಚಕ್ರಕ್ಕೆ ಹಾಸ್ಯಂ ಕುವಲಯಕೆ ಭಯಂ ಜಾರೆಯರ್ಗದ್ಭುತಂ ಸಾ
ಗರಕಂ ಬೀಭತ್ಸು ನಕ್ತಂಚರವರತರುಣೀರಕ್ತಪಾನಕ್ಕೆ ವೀರಂ
ಸ್ಮರಭೂಪಾಲಂಗೆ ರೌದ್ರಂ ವಿರಹತತಿಗೆ ಶಾಂತಂ ಚಕೋರಕ್ಕೆ ಶೃಂಗಾ
ರರಸಂ ಕಾಂತಾಜನಕ್ಕಾಗಿರೆ ನವರಸಮಂ ಬೀಱುತಿರ್ದಂ ಶಶಾಂಕಂ ‖ (೯–೨೩೪; ೮–೨೬೭)

ಉದಯಿಸುತ್ತಿರುವ ಚಂದ್ರ ಸೂಸಿದ ಬೆಳುದಿಂಗಳಿಂದ ಚಕ್ರವಾಕಗಳು, ನೈದಿಲೆ, ಜಾರೆಯರು, ಸಮುದ್ರ, ರಾಕ್ಷಸಿಯರು ಮನ್ಮಥ, ವಿರಹಿಗಳು, ಹಾಗೂ ಚಕೋರಗಳು ಇವರಲ್ಲಿ ಉಂಟಾದ ಭಾವನೆಗಳನ್ನೂ ಕಾರ್ಯಗಳನ್ನೂ ನವರಸಗಳನ್ನು ಬಳಸಿ ಇಲ್ಲಿ ನಿರೂಪಿಸಿದೆ.

ಗುರುಲಿಂಗವಿಭುವಿನ 'ಭಿಕ್ಷಾಟನ ಚರಿತೆ'ಯಲ್ಲಿ :

ಹೆಱೆದುಱುಬಿನಿಂದೆ ಶೃಂಗಾರ ಶೂಲದಿ ವೀರ
ನೆಱೆ ಹರಸಿ ಭಿಕ್ಷಗೆಯ್ವಲ್ಲಿ ಕರುಣಂ ಕಿಡಿಗೆ
ದಱುವ ಭಾಳಾಕ್ಷದಿಂ ರೌದ್ರ ಪುಲಿದೊವಲುಡುಗೆಯಿಂ ಹಾಸ್ಯ ಮೆಯ್ದೊಡವಿನಾ
ಮಱುಹಾವಿನಿಂ ಭಯಂ ರುಂಡದಿಂ ಬೀಭತ್ಸ
ಹೊಱಗೆಯ ಶಬದಿನದ್ಭುತ ಕ್ಷಮುತ್ವದಿ ಶಾಂತ
ಮೆಱೆಯೆ ಶ್ರೀಕೃಷ್ಣನಿದಿರಿನಲಿ ನವರಸಭರಿತನಾಗಿರ್ದನಗಜೇಶನು ‖ (೩–೪೨)

ಇಲ್ಲಿ ಶಿವನ ವೇಷಭೂಷಣಗಳ ಹಾಗೂ ಕ್ರಿಯೆಗಳ ನಿರೂಪಣೆಯನ್ನು ನವರಸಗಳ ಸಂಜ್ಞೆಗಳನ್ನು ಬಳಸಿ ವಿವರಿಸಿದೆ.

ಲಕ್ಷ್ಮಕವಿಯ (೧೭೨೪) 'ರುಕ್ಮಾಂಗದ ಚರಿತ್ರೆ'ಯಲ್ಲಿ :

ಜಾರರಿಗೆ ಭಯ ಚಕೋರಕೆ ಕರುಣವದ್ಭುತಂ
ವಾರಿಧಿಗೆ ಚಕ್ರವಾಕಂಗಳಿಗೆ ಬೀಭತ್ಸ
ನಾರೀಜನಕ್ಕೆ ಸಿಂಗಾರ ಮನ್ಮಥರಾಯಗತುಳೋತ್ಕರುಷದ ವೀರ
ಕೈರವಕದಂಬಗಳಿಗತಿಹಾಸ್ಯ ಕಮಲಕ್ಕೆ
ಕ್ರೂರ ರೌದ್ರಂ ಶಾಂತ ಶಶಿಕಾಂತಗಳ್ಗೆನಲ್
ತಾರೇಶನೆಸೆದ ನವರಸಭರಿತದಿಂದಲತಿಮಾಂಗಲ್ಯಕರಮಾಗಿಯೆ ‖ (೧೧–೯)

ಚಂದ್ರೋದಯದ ಸಂದರ್ಭವನ್ನು ಕುರಿತ ಪದ್ಯವಿದು. ''ಚಂದ್ರನು ಜಾರರಿಗೆ ಭಯಾನಕ, ಚಕೋರಕ್ಕೆ ಕರುಣ, ಸಮುದ್ರಕ್ಕೆ ಅದ್ಭುತ, ಸ್ತ್ರೀಯರಿಗೆ ಶೃಂಗಾರ, ಮನ್ಮಥರಾಜನಿಗೆ ಅತಿಶಯೋತ್ಕರ್ಷದ ವೀರ, ನೈದಿಲೆಗಳ ಸಮೂಹಕ್ಕೆ ಉಲ್ಲಾಸ, ತಾವರೆಗೆ ಕಠಿನಕರವಾದ ರೌದ್ರ, ಚಂದ್ರಕಾಂತಶಿಲೆಗಳಿಗೆ ಶಾಂತ ಎನ್ನುವಂತೆ ಬಹಳ ಮಂಗಳಕರವಾಗಿ, ನವರಸಗಳಿಂದ ತುಂಬಿ ಶೋಭಿಸಿದನು.''

ಇಲ್ಲಿಯೂ ಚಂದ್ರೋದಯವು ಜಾರರಿಗೆ ಭಯಾನಕವಾಯಿತು, ಬೆಳುದಿಂಗಳು ಕುಡಿಯುವ ಚಕೋರ ಪಕ್ಷಿಗಳಿಗೆ ದಯಾವಹವಾಯಿತು ಎಂದು ಮುಂತಾಗಿ ಹೇಳುವ ಮುಖ್ಯಾರ್ಥದ ಬೋಧೆಯೊಂದಿಗೆ ನವರಸಗಳ ಹೆಸರುಗಳು ಗೌಣವಾಗಿ ಸೇರುವಂತೆ ಮಾಡಿದೆ.

ಭಾರತ ಪರ್ವನಾಮ ವ್ಯಕ್ತಿನಾಮ ಸಂಯೋಜನೆ

ಭೀಮಕವಿಯ 'ಬಸವಪುರಾಣ'ದಲ್ಲಿ :

ಆದಿರುದ್ರಗಣಾದಿಪರ್ವಂ। ವಾದಿಗಳ ಹೃತ್‌ಶಲ್ಯಪರ್ವಂ।
ಮೋದಭಕ್ತಿಗೆ ಬಸವಸಿಂಹಾಸನ ಸಭಾಪರ್ವಂ।

ವೇದವಿದರುದ್ಯೋಗಪರ್ವಂ । ವೇದಿಸುವರಿಗೆ ಶಾಂತಿಪರ್ವಂ ।
ಮೇದಿನಿಯೊಳಖಿಳಾಗಮುಜ್ಞರ ಕರ್ಣಪರ್ವಮಿದು ॥ (೫-೨)

ಭೀಮಕವಿ ತನ್ನ ಕೃತಿಯ ಹೆಗ್ಗಳಿಕೆಯನ್ನು ಸಂಸ್ಕೃತ ಮಹಾಭಾರತದ ಇಲ್ಲವೆ ಪ್ರಾಯಃ ಆ ವೇಳೆಗೆ ಕನ್ನಡ ನಾಡಿನಲ್ಲಿ ಪ್ರಸಿದ್ಧವಾಗಿದ್ದ ಕನ್ನಡ ಭಾರತದ ಪರ್ವವಿಭಜನೆಯನ್ನು ಬಳಸಿಕೊಂಡು ನಿರೂಪಿಸಿರುವಂತೆ ತೋರುವುದು. ''ಆದಿರುದ್ರಗಣಗಳ ವಿಚಾರವುಳ್ಳ ಮೊದಲ ಪರ್ವ ವಾದಿಗಳ ಹೃದಯಕ್ಕೆ ಈಟಿಯಂತಹ ಪರ್ವ, ಭಕ್ತಿಗೆ ಬಸವೇಶ್ವರರು ಸಿಂಹಾಸನವನ್ನಿಟ್ಟ ಸಭೆಯ ಪರ್ವ, ವೇದವಿದರಿಗೆ ಉದ್ಯೋಗವೀಯುವ ಪರ್ವ, ವೇದನೆ ಪಡುವವರಿಗೆ ಶಾಂತಿಯನ್ನೀಯುವ ಪರ್ವ, ಲೋಕದಲ್ಲಿ ಎಲ್ಲಾ ಆಗಮಗಳನ್ನರಿತವರಿಗೆ ಕಿವಿಗಳಿಗೆ ಸಂತೋಷ ತುಂಬುವ ಪರ್ವ, ಈ ಬಸವಪುರಾಣ.''

ಇಲ್ಲಿ ಆದಿ, ಶಲ್ಯ, ಸಭಾ, ಉದ್ಯೋಗ, ಶಾಂತಿ ಮತ್ತು ಕರ್ಣಪರ್ವಗಳ ಹೆಸರುಗಳು ಪ್ರಕಾರಾಂತವಾಗಿ ಸೇರಿವೆ.

ಷಡಕ್ಷರಿಯ 'ವೃಷಭೇಂದ್ರವಿಜಯ'ದಲ್ಲಿ:

ಗುರು ಕರ್ಣಶ್ರಾವ್ಯಮುಚ್ಚೈಃಖಲಜನಭೀಷ್ಮಂ ಲಸದ್ಭೀಮಧರ್ಮ
ಸ್ಫುರಿತಂ ಪಾಷಂಡಹೃಚ್ಛಲ್ಯಗುಣಗಣಯುತಂ ಚಂದ್ರಿಕಾಪಾಂಡುಕೀರ್ತ್ಯಾ
ಕರಮುದ್ಯದ್ವಾದಿವಾದಪ್ರಚಯವಿಜಯಕಂ ಸೋಮವಂಶಾನುಗಶ್ರೀ
ಚರಿತಂ ನಾನಾಸುಪರ್ವಾಶ್ರಿತಮಿದು ಪದಶೋಭಾಧುರೀಣಂ ಪುರಾಣಂ ॥ (೧-೫೮)

ಷಡಕ್ಷರಿ ತನ್ನ ಕೃತಿಯ ಹೆಗ್ಗಳಿಕೆಯನ್ನು ಮಹಾಭಾರತದ ಕೆಲವು ಪ್ರಮುಖಪಾತ್ರಗಳ ಹೆಸರುಗಳನ್ನು ವ್ಯಾಜಾಂತರದಿಂದ ಬಳಸಿ ಪ್ರಕಟಿಸಿರುವುದು ಇಲ್ಲಿ ಕಾಣುತ್ತದೆ. ''ಈ ಪುರಾಣ ಗೌರವಾಸ್ಪದವಾದ್ದು, ಕಿವಿಗೆ ಹಿತವಾದುದು, ಉದ್ವೃತ್ತರಾಗಿ ನಡೆಯುವ ದುಷ್ಟರಿಗೆ ಭಯೋತ್ಪಾದಕವಾದುದು, ಉತ್ಕೃಷ್ಟವೂ ಬಲಿಷ್ಠವೂ ಆದ ಧರ್ಮದಿಂದ ಬೆಳಗುವಂತಹುದು, ಪಾಷಂಡಿಗಳ ಹೃದಯವನ್ನಿರಿಯುವ ಗುಣಗಳ ಸಮೂಹದಿಂದ ಯುಕ್ತ ವಾದುದು, ಬೆಳುದಿಂಗಳಂತೆ ಬೆಳ್ಳಗಿರುವ ಕೀರ್ತಿಗೆ ನೆಲೆಯಾದುದು, ವಾದಿಗಳ ವಾದಸಮೂಹವನ್ನು ಗೆಲ್ಲುವಂತ ಹುದು, ಶೈವಕುಲದ ಉಜ್ವಲಚರಿತ್ರೆಯುಳ್ಳುದು, ಹಲವು ಪರ್ವಗಳನ್ನು ಒಳಕೊಂಡಿರುವುದು, ಶಬ್ದಾಲಂಕಾರ ಗಳಿಂದ ಶೋಭಿಸುವಂತಹುದು.''

ಹೀಗೆ ಕವಿ ತಿಳಿಸುವುದು ಉದ್ದೇಶವಾದರೂ ದ್ರೋಣ, ಕರ್ಣ, ಭೀಷ್ಮ, ಭೀಮ, ಧರ್ಮರಾಯ, ಶಲ್ಯ, ಪಾಂಡು, ಅರ್ಜುನ, ಚಂದ್ರವಂಶ, ಅಷ್ಟಾದಶ ಪರ್ವಗಳು ಎಂಬ ಮಹಾಭಾರತ ವ್ಯಕ್ತಿ, ಹಾಗೂ ಸಂದರ್ಭಗಳು ಬರುವಂತೆ ಮಾಡಿದ್ದಾನೆ.

ಸಂವತ್ಸರಾಖ್ಯಾಸಂಯೋಜನೆ

ಮಲ್ಲಿಕಾರ್ಜುನನ 'ಸೂಕ್ತಿಸುಧಾರ್ಣವ'ದಲ್ಲಿ ಸಂಕಲಿತ :

ಮನೆ ಸಲೆ ಹೇವಿಳಂಬಿ ಸಹಕಾರಿ ವಿಕಾರಿ ವಿರೋ[ಧ]ಕೃತ್ ಸುಹೃ
ಜ್ಜನಮೆ ಸಮಾನಮನ್ನಣೆ ವಿರೋಧಿ ಪರಾಭವಿ ಶರ್ವರಿ ಶಾಲಿ ಮಾವ ನ್ಯೆ
ದುನನೆ ಕರಂ ಪ್ರಮಾಥಿ ನಿಜವಲ್ಲಭೆ ದುರ್ಮುಖಿಯೆಂದೊಡೆನ್ನ ಪೆಂ
ಪಿನ ವಿಭವಂ ಪ್ಲವಂಗದವೊಲಾದುದು ಮನ್ಮಥಚಿತ್ರಭಾನುವಿಂ ॥ (೮-೪೩೬)

ಈ ಪದ್ಯ ಯಾವ ಕವಿಯದೋ, ಕೃತಿಯೊಳಗಿನದೋ ತಿಳಿಯದು. ಚಂದ್ರೋದಯ ವರ್ಣನೆಯನ್ನು ಕುರಿತ ೮ನೆಯ ಆಶ್ವಾಸದಲ್ಲಿ, ರಾತ್ರಿವಿಹಾರವರ್ಣನಭಾಗವಾದ ವೇಶ್ಯಾಜನವರ್ತನೆಗಳನ್ನು ನಿರೂಪಿಸುವ ಭಾಗವಾಗಿ ಸೇರಿರುವ ಪದ್ಯಗಳಲ್ಲಿ ಇದೂ ಒಂದಾಗಿದೆ. ಇದು ವಿಟಪುರುಷನೊಬ್ಬ ಆಡುವ ಮಾತಾಗಿರುವಂತೆ ತೋರುತ್ತದೆ. ಸಂವತ್ಸರದ ಕೆಲವು ಹೆಸರುಗಳನ್ನು ಬಳಸಿಕೊಂಡು ಅವನು ತನ್ನ ಸಂಸಾರದ ವಿಷಮಸ್ಥಿತಿಯನ್ನು ತನ್ನ ಪ್ರೇಯಸಿ ವೇಶ್ಯೆಗೆ ಮನವರಿಕೆ ಮಾಡುವುದು ಕಾಣುತ್ತದೆ. ಅದು ಹೀಗೆ: ''ನನ್ನ ಮನೆ ತೀರ ದೂರಸ್ಥ

ವಾದ್ದು (?), ಸಹಕಾರಿಗಳೆಲ್ಲ ವಿಕಾರಿಗಳು, ಸ್ನೇಹಿತರೆಲ್ಲ ವಿರೋಧಿಸುವವರು, ಸಮಾನರೊಂದಿಗೆ ಮನ್ನಣೆ ನನಗೆ ವಿರುದ್ಧವಾಗಿದೆ, ರಾತ್ರಿಯೆಂಬುದು ನನಗೆ ಅಸಡ್ಡೆಗೆ ಕಾರಣವಾಗಿದೆ, ಮಾವ ಶಕ್ತನು (?), ಮೈದುನನು ಕೀಟಲೆಕೋರ, ನನ್ನ ಪತ್ನಿ ಕೆಟ್ಟಮೋರೆಯವಳು. ಹೀಗಿರಬೇಕಾದರೆ, ನನ್ನ ಅತಿಶಯವಾದ ವೈಭವವು ಮನ್ಮಥನೆಂಬ ಕಿಚ್ಚಿಗೆ ಸಿಕ್ಕಿ, ಕಪಿಯ ಪಾಡಿನಂತಾಗಿದೆ.''

ಈ ಪದ್ಯದಲ್ಲಿ ಗೌಣಾರ್ಥದಲ್ಲಿ ಹೇವಿಳಂಬಿ, ವಿಕಾರಿ, ವಿರೋಧಿಕೃತ್, ವಿರೋಧಿ, ಪರಾಭವ, ಶಾರ್ವರಿ, ಪ್ರಮಾದಿ, ದುರ್ಮುಖಿ, ವಿಭವ, ಪ್ಲವಂಗ, ಮನ್ಮಥ, ಚಿತ್ರಭಾನು ಈ ಸಂವತ್ಸರನಾಮಗಳು ರೂಢಿಯ ಶಬ್ದ ರೂಪಗಳಲ್ಲಿ ಬಳಕೆಯಾಗಿರುವುದನ್ನು ಗಮನಿಸಬಹುದು. ಕವಿಚಾತುರ್ಯ ಶ್ಲಾಘ್ಯವಾದುದು ಎನ್ನುವನುಟ್ಟಿಗೆ ಈ ಸಂಯೋಜನೆ ಸುಂದರವಾಗಿದೆಯೆನ್ನಬಹುದು.

ಮಧುರ ಕವಿಯ ಹಂಪೆಯ ಶಾಸನ (೧೪೧೦)ದಲ್ಲಿ :

ತನುವಂ ಮನ್ಮಥಸೌಮ್ಯಭಾವಮೊಳಕಯ್ಕಲ್ ನಂದನಶ್ರೀಮುಖಂ
ತನಗಾನಂದಮನೀಯೆ ವಿಕ್ರಮಜಯಂಗಳ್ತೋಳೊಳಿಂಬಾಗೆ ನೆ
ಟ್ಟನೆ ಸಾಧಾರಣಮಲ್ಲದೀಶ್ವರಪದಾಬ್ಜಂ ಪಾರ್ಥಿವಶ್ರೀಯನೀ
ಯೆ ನಯಂಬೆತ್ತುದು ಕೀರ್ತಿದುಂದುಭಿನಿನಾದಂ ಲಕ್ಷ್ಮಣಾಮಾತ್ಯನಾ ॥

(ಸೌಇಇ., iv, ೨೬೭, ಪು. ೬೦-೬೬)

ಮಧುರಕವಿ ತನ್ನ ಆಶ್ರಯದಾತನಾದ ಲಕ್ಷ್ಮಣ(=ಲಕ್ಷ್ಮೀಧರ)ನ ಹಿರಿಮೆಯನ್ನು ಇಲ್ಲಿ ಕೆಲವು ಸಂವತ್ಸರನಾಮಗಳನ್ನು ಬಳಸಿ ಕೀರ್ತಿಸಿದ್ದಾನೆ. ಅದು ಹೀಗೆ: ''ಶರೀರವನ್ನು ಮನ್ಮಥನ ಸೌಮ್ಯವಾದ ಭಾವವು ತುಂಬಿರಲು, ಪುತ್ರರ ಸುಂದರವಾದ ಮೊಗಗಳು ತನಗೆ ಆನಂದವನ್ನು ಕೊಡುತ್ತಿರಲು, ಪೌರುಷದ ವಿಜಯಗಳು ತೋಳುಗಳಲ್ಲಿ ಶೋಭಿಸಲು, ಸಾಧಾರಣವಲ್ಲದ ಈಶ್ವರನ ಪಾದಕಮಲಗಳು ದೊರೆತನದ ಸಿರಿಸಂಪತ್ತುಗಳನ್ನು ತಂದುಕೊಡಲು, ಮಂತ್ರಿ ಲಕ್ಷ್ಮಣನ ಕೀರ್ತಿದುಂದುಭಿಯ ಧ್ವನಿ ಸೊಗಸಾಯಿತು.''

'ಸೂಕ್ತಿಸುಧಾರ್ಣವ'ದ ಪೂರ್ವೋಕ್ತಪದ್ಯದಲ್ಲಿ ತೋರುವುದಕ್ಕಿಂತ ಇಲ್ಲಿಯ ಚಮತ್ಕಾರ ಉತ್ತಮವಾದ್ದು, ರಚನೆ ನಿರರ್ಗಳವಾದ್ದು ಎಂದು ಹೇಳಬಹುದು. ಇಲ್ಲಿ ಮನ್ಮಥ, ಸೌಮ್ಯ ಮುಂತಾಗಿ ೧೨ ಸಂವತ್ಸರಗಳ ಹೆಸರುಗಳು ಸಮಾವೇಶಗೊಂಡಿವೆ.

ನಿಜಗುಣ ಶಿವಯೋಗಿಯ (ಸು. ೧೫೦೦) 'ಕೈವಲ್ಯಪದ್ಧತಿ'ಯಲ್ಲಿ :

ನೀನೊಲಿಯದ ನಿಮಿಷವೆ ಪಲವರುಷವ
ದಾನೆಂತುಳಿವೆನು ಮನ್ನಿಸು ದೇವ ॥ಪ॥
ಜ್ಞಾನವಿರೋಧಿ ಮಾಯಾವಿಕೃತಿ ಬಹು । ಧಾನ್ಯದೆ ಶುಕ್ಲಧಾತುಗಳಾಗೆ
ಈ ನಿಖಿಳ ಪ್ರಜೋತ್ಪತ್ತಿಯನವರೊಳು । ನೀನುಂಟುಮಾಳ್ಪೆ ಸರ್ವೇಶ್ವರಾ ॥ (೧)
ಮುಳಿದು ಮನ್ಮಥನ ವಿಕ್ರಮವನು ಜಯಿಸಿ ಮು । ಪ್ಪೊಳಲ ದುರ್ಮುಖಿ ರಾಕ್ಷಸರನಿಕ್ಕಿ ।
ನಳ ಪಾರ್ಥಿವಾದಿ ಶ್ರೀಮುಖದ ಸೌಮ್ಯರಿಗೆ ಮಂ । ಜುಳಕರಾನಂದವೀವನುಪಮ ॥ (೨)
ಭಾವಿಸೆ ಪ್ರಭವಾದಿ ಕ್ಷಯ ಕಡೆಯಾದವಂ । ಭಾವವಿಕಾರತ್ವವಿರಹಿತ ।
ಜೀವ ದುಃಖಾರ್ಣವೋತ್ತರಣಪ್ಲವಮಹಿ । ಮಾ ವಿಭವದ ಶಂಭುಲಿಂಗವೆ ॥ (೩)

(ಶಿವಕಾರುಣ್ಯಸ್ಥಲ, ಪ. ೨೫)

ಶಿವಸ್ತುತಿಯಲ್ಲಿ ಸಂವತ್ಸರನಾಮಗಳನ್ನು ಚಮತ್ಕಾರಪೂರ್ವಕವಾಗಿ ಇಲ್ಲಿ ಸಮಾವೇಶಗೊಳಿಸಿದೆ. ''ನೀನು ಒಲಿಯದ ನಿಮಿಷವೇ ಹಲವು ವರ್ಷ; ನಾನು ಹೇಗೆ ತಾನೆ ನಿನ್ನನ್ನು ಬಿಟ್ಟು ಇರಬಲ್ಲೆ? ಜ್ಞಾನ ವಿರೋಧಿಯಾದ ಮಾಯಾವಿಕೃತಿಗಳಿಂದ, ಆಹಾರಸೇವನೆ ಮಾಡುವುದಾಗಿ ಶುಕ್ಲವೂ ಧಾತುವೂ ಉಂಟಾಗಿ, ಫಲವಾಗಿ ಪ್ರಜೆಗಳ ಉತ್ಪತ್ತಿಯಾಗುವಂತೆ ಸರ್ವೇಶ್ವರನಾದ ನೀನು ಮಾಡುವೆ; ನೀನು ಕೆರಳಿ ಮನ್ಮಥನ ಬಲವನ್ನು ಗೆದ್ದು, ತ್ರಿಪುರಗಳ ಕೆಟ್ಟಮೋರೆಯ ರಾಕ್ಷಸರನ್ನು ನಾಶಮಾಡಿ, ನಳಮಹಾರಾಜ ಮೊದಲಾದ ಸುಮುಖರಾದ

ಸಜ್ಜನರಿಗೆ ಆನಂದವನ್ನುಂಟುಮಾಡುವ ಉಪಮಾತೀತನಾಗಿರುವೆ, ನೀನು; ವಿಚಾರಮಾಡಿದರೆ, ಹುಟ್ಟು ಸಾವುಗಳು ನೀನೆ, ಭಾವವಿಕಾರವಿರಹಿತನು ನೀನೆ, ಜೀವರಾಶಿಯನ್ನು ದುಃಖಸಾಗರದಿಂದ ಸಾಗಿಸುವ ತೆರೆಯೆಂಬ ಮಹಿಮಾ ವೈಭವದ ಶಂಭುಲಿಂಗವೇ !''

ಇಲ್ಲಿ ಸೊಬಗಿನಸೋನೆಮಟ್ಟಿನ ೩ ನುಡಿಗಳಿದ್ದು, ವಿರೋಧಿ, ವಿಕೃತಿ ಮುಂತಾಗಿ ೨೨ ಸಂವತ್ಸರನಾಮಗಳನ್ನು ಕೌಶಲದಿಂದ ಕೂಡಿಸಿರುವುದು ಕಾಣುತ್ತದೆ.

ಗುಬ್ಬಿಯ ಮಲ್ಲಣಾರ್ಯನ 'ಭಾವಚಿಂತಾರತ್ನ' (೧೫೧೩) :

ಶ್ರೀಮುಖಾಬ್ದದೊಳಿದು ಸಮಾಪ್ತಿಯಾಯಿತ್ತಿದಂ
ಪ್ರೇಮದಿಂದೋದಿದೊಡೆ ಭಾವಮಂ ಪ್ರಾಜ್ಞರ ಮ
ಹಾಮನಸ್ಸಿಂಗೀವ ಧಾತುಲಕ್ಷಣಗಳುಂಟೈಶ್ವರಂ ಬಹುಧಾನ್ಯದ
ಸಾಮಗ್ರ ಧನರಾಜಿಯಾದಿ ವೈಭವಗಳಂ....(೯-೫೯)

ಇಲ್ಲಿ ಪದ್ಯಸಮಾಪ್ತಿಯ ವರ್ಷವನ್ನು ತಿಳಿಸುವಾಗ, ಉಂಟಾದ ಸಹಜಸ್ಫೂರ್ತಿಯಿಂದ ಭಾವ, ಧಾತು, ಈಶ್ವರ, ಬಹುಧಾನ್ಯಗಳೆಂಬ ಸಂವತ್ಸರನಾಮಗಳನ್ನೂ ಕವಿ ತಂದಿದ್ದಾನೆ.

ಗೋವಿಂದಕವಿಯ 'ನಂದಿಮಾಹಾತ್ಮ್ಯ' (೧೫೮೧) :

ಅತಿವಿಕಾರಿಣಿ ಕ್ರೋಧಿ ದುರ್ಮುಖಿ ವಿರೋಧಿ ದು
ರ್ಮತಿ ವಿಕೃತಿ ವ್ಯಯ ಕಾಲಯುಕ್ತಿ ಜ್ವಾಲಾಭಿಶೋ
ಭಿತ ಚಿತ್ರಭಾನುವೊಲ್ದಿವ ಶಾರ್ವರಿ ರುಧಿರೋದ್ಗಾರಿ ರಕ್ತಾಕ್ಷಿಯಾಗಿ
ಸತತ ವಿಚ್ಛಿನ್ನ ಕಲಹಂಗೊಂಡು ನಂದನ
ಪ್ರತತಿಯೋವದೆ ಪ್ಲವಂಗಪ್ರಕೃತಿವೆತ್ತಿರ್ದ
ಸತಿಯುಳಿದು ಸೌಖ್ಯಮಿರ್ಪವನಂತೆ ಸಾರೂಪ್ಯಮಂ ಬಿಡಲು ಸುಖಮೆಂದನು ॥ (೯-೬೧)

ನಂದಿ ಕೂಷ್ಮಾಂಡಗಣಪನಿಗೆ ತನಗೊಂದು ತಪಸ್ಸಿನ ಕ್ಷೇತ್ರವನ್ನು ಸೂಚಿಸುವಂತೆ ಕೋರಿದಾಗ ಅದರ ಕಾರಣವನ್ನು ಆತ ಪ್ರಶ್ನಿಸಿದನು. ನಂದಿ ತಾನು ಶಿವನ ಸಾರೂಪ್ಯವನ್ನು ಪಡೆದಿದ್ದುದು ಕಾರಣವಾಗಿ ಪಾರ್ವತಿಗೆ ಉಂಟಾದ ಮತಿಭ್ರಾಂತಿಯನ್ನು ಸೂಕ್ಷ್ಮವಾಗಿ ತಿಳಿಸಿ, ತನಗೆ ಶಿವಸಾರೂಪ್ಯದಿಂದ ಬಿಡುಗಡೆಯಾದರೆ ಸಾಕು ಎಂದು ತಿಳಿಸುವಾಗ ಮೇಲಿನಂತೆ ಒಂದು ದೃಷ್ಟಾಂತವನ್ನಿತ್ತನು. ಹೀಗೆ ಕೊಟ್ಟ ದೃಷ್ಟಾಂತವೆಂದರೆ: ''ವಿಕಾರಿ, ಕ್ರೋಧಿ, ದುರ್ಮುಖಿ, ವಿರೋಧಿ ಮುಂತಾಗಿ ಕರೆಯುವಂತೆ ಸ್ವಭಾವವುಳ್ಳ, ಉರಿಗಣ್ಣಿನ, ಸದಾ ಜಗಳವಾಡುವ, ಕಪಿಗಳಂತೆ ಆಡುವ ಮಕ್ಕಳಿಂದ ಕೂಡಿದ ಪತ್ನಿಯನ್ನು ಬಿಟ್ಟು ಸುಖವಾಗಿರುವವನ ಹಾಗೆ ಶಿವಸಾರೂಪ್ಯವನ್ನು ಬಿಟ್ಟರೆ ನನಗೆ ಸುಖ.'' ಇಲ್ಲಿ ಸತಿಗೆ ಹೇಳಿರುವ ವಿಶೇಷಣಗಳಲ್ಲಿ ಹಲವು ಸಂವತ್ಸರನಾಮಗಳು ಬಂದಿವೆ.

ವೆಂಕಟರಮಣಯ್ಯನವರ 'ಗಯೋಪಾಖ್ಯಾನ'ದಲ್ಲಿ :

"...ಅಶೇಷಾವರ್ಣನೀಯ ಮಹಾಮಹಿಮಾತಿಶಯವಿರಾಜತ್ತದೀಯವನ ಭೂಮಧ್ಯಭಾಗದೊಳು ಬಹುಧಾನ್ಯಪ್ರಮಾಥಿ ವಿಕ್ರಮ ಪ್ರಭವ ವಿಭವ ಪರಿಪೂರ್ಣನಾಗಿಯುಂ ಭೀತಜನಭಯಪಾರಾವಾರ ತಾರಣಪ್ಲವನಾಗಿಯುಂ ಸರ್ವಧಾರಿ ರಾಕ್ಷಸ ವಿರೋಧಕೃತ್ ಯುವ ಭಾವಸಮೇತನಾಗಿಯುಂ ಅಸಾಧಾರಣ ಪಾರ್ಥಿವ ವ್ಯಂಜನ ಶೋಭಕೃತ್ ಶ್ರೀಮುಖಪಂಕಜನಾಗಿಯುಂ ಆಂಗಿರಸಶಿಷ್ಯ ವಿರೋಧಿವಿಜಯಾಂಕಿತ ಸ್ವೀಯಕಥಾಗೀಯಮಾನಜನಾನಂದಘಟನಾವಿಳಂಬಿಯಾಗಿಯುಂ ಸ್ವಭಾನುಪ್ರಹತ ಚಿತ್ರಭಾನುಖರಕರನಾಗಿಯುಂ ಸ್ವಕೀಯಜನ್ಮಸಿದ್ಧಾರ್ಥಿ ಜನಪಾಲನವಿದ್ಯಾಪ್ರಕಟೀಕರಣಧುರೀಣನಾಗಿಯುಂ ನಿಜರಥಧ್ವಜಾಗ್ರಭಾಗ ನಿಷಣ್ಣಪಿಂಗಳೇಕ್ಷಣ ಪ್ಲವಂಗ ಪುಂಗವಾಭಂಗರಂಗದುತ್ತುಂಗಹರ್ಯಕ್ಷನಾದ ಪರಾಭವದ್ರುಧಿರೋದ್ಗಾರಿ ಪರೀಧಾವಿ ಸಂಗರಾಸಕ್ತ ದುರ್ಮತಿ ಜನಸಮೂಹ ಶುಭಕೃದಕ್ರೋಧನಕಟಾಕ್ಷವೀಕ್ಷಣನಾಗಿಯುಂ ಪಾರ್ವಶಾರ್ವರೀಚಂದ್ರಪ್ರತಿಮಸೌಮ್ಯಮುಖಪಂಕಜನಾಗಿಯುಂ ಸತ್ಯಧರ್ಮ

ವಿಜಿತ ನಳನಹುಷನಾಗಿಯುಂ ಮನ್ಮಥಜಯಶ್ರೀಪ್ರಕಟಿತರೂಪಲಾವಣ್ಯವೈಭವನಾಗಿಯುಂ ಅರೌದ್ರ್ಯೋಪಾಂತ ರಕ್ತಾಕ್ಷಿದ್ವಿತಯನಾಗಿಯುಂ ದುಂದುಭಿಪ್ರತಿಮಗಂಭೀರಧ್ವಾನವಿರಾಜಮಾನನಾಗಿಯುಂ ಧೌತಶುಕ್ಲಾಂಬರ ಪರಿವೀತಕಟೀತಟನಾಗಿಯುಂ ಸತ್ಯವಿಕೃತಿಸುಲಭನಾಗಿಯುಂ ಅಕ್ಷಯ ಚಾರ್ವಿಷುಧಿವಿರಾಜತ್ಪಾಶ್ಚಾತ್ಯಭಾಗನಾಗಿಯುಂ ಅನೇಕವಿಧಧಾತುಚಿತ್ರಿತೇಂದ್ರಕೀಲಕಟಕಸ್ಥಾನಾಚರಿತದಿವ್ಯತಪಃಪ್ರಭಾವವಿಜಿತಪಾರ್ವತೀಶ್ವರನಾಗಿಯುಂ ಸರ್ವಜಿತ್ಸಾಹಸಾಂಕಿತನಾಗಿಯುಂ ಕುಂತೀನಂದನಾಖ್ಯಾವಿಖ್ಯಾತನಾಗಿಯುಂ ಸ್ವಕೀಯವಂಶಾಭಿವೃದ್ಧ್ಯಭಿಪಯುಕ್ತಪ್ರಜೋತ್ಪತ್ತಿಕಾಮನಾಗಿಯುಂ ಸಮಸ್ತನೃಪಾಖ್ಯ ವಿಶ್ವಾವಸು ಕರಣೋಚಿತ ಸ್ವೀಯಬಲಾರ್ಜಿತಧನಂಜಯನಾಮನಾಗಿಯುಂ ಮೃಗಯಾಸಕ್ತಿಯಿಂದಿಷುಧೃತಕರಸರೋರುಹನಾಗಿ ಸಂಚರಿಸುತಿರ್ಪರ್ಜುನನಂ ಕಂಡು ಗಯಂ ಬೆರಗಾಗಿ ಸ್ವಕೀಯಮಾನಸಾಂಬುಜದೊಳೀ ವಿಧದಿಂ ವಿತರ್ಕಿಸಿದಂ. (೧೦-೨)

ಈ ವಿಸ್ತಾರವಾದ ಗದ್ಯಭಾಗ, ಗಂಧರ್ವನಾದ ಗಯನು ನಾರದನ ಸಲಹೆಯಂತೆ ತನಗೆ ಕೃಷ್ಣನ ದೆಸೆಯಿಂದ ಉಂಟಾಗಲಿದ್ದ ವಿಪತ್ತನ್ನು ಪರಿಹರಿಸಿಕೊಳ್ಳಲು ಅರ್ಜುನನ ಮರೆಹೊಕ್ಕ ಸನ್ನಿವೇಶದಲ್ಲಿ ಬಂದಿರುವ ಅರ್ಜುನನ ವ್ಯಕ್ತಿವರ್ಣನೆಯಾಗಿದೆ. ದ್ವೈತವನವರ್ಣನೆಯ ಭಾಗದ ಮುಂದುವರಿಕೆಯಾಗಿರುವ ಈ ವರ್ಣನ ಭಾಗದಲ್ಲಿ ಷಷ್ಟಿಸಂವತ್ಸರಗಳಲ್ಲಿ ೫೦ರ ಹೆಸರನ್ನು ಕೂಡಿಸಿರುವುದನ್ನು ಕಾಣಬಹುದಾಗಿದೆ. ಈ ಗದ್ಯಭಾಗದ ಆಶಯವನ್ನು, ಅದರ ವಿಸ್ತಾರದಿಂದಾಗಿ ಇಲ್ಲಿ ವಿವರಿಸದೆ ಬಿಟ್ಟಿದೆ.

ರಾಶಿನಾಮಸಂಯೋಜನೆ

ಪಾಯಣ್ಣವ್ರತಿಯ 'ಸಮ್ಯಕ್ತ್ವಕೌಮುದಿ'ಯಲ್ಲಿ ;

ನಡು ಸಿಂಹ ಧನು ಪುರ್ಬು ಕುಚ ಕುಂಭ ಮೀನಾಕ್ಷಿ । ಮಡದಿ ಮಕರಪತ್ರದಿಂದ ।
ಸಡಗರದಿಂ ನಿಡುಹಸ್ತದಿಂದಲಿ ಕನ್ನೆ । ಬೆಡಗಿಂದೊಪ್ಪಿದಳ್ ರಾಶಿಯಂತೆ ॥

ಇಲ್ಲಿ ಸ್ತ್ರೀರೂಪವನ್ನು ವರ್ಣಿಸುವಾಗ ಸಿಂಹ, ಧನು ಮೊದಲಾದ ದ್ವಾದಶರಾಶಿಗಳ ಹೆಸರುಗಳಲ್ಲಿ ಅವಶ್ಯವಾದ ಏಳನ್ನು ಎತ್ತಿಕೊಂಡು ವರ್ಣಿಸಿರುವುದು ಕಾಣುತ್ತದೆ.

ವಾಸರನಾಮಸಂಯೋಜನೆ

ಗುರುಲಿಂಗವಿಭುವಿನ 'ಭಿಕ್ಷಾಟನಚರಿತೆ'ಯಲ್ಲಿ :

ಚಾರುವಾದಿತ್ಯಾಶ್ರಿತನ ಸೋಮಕೋಟೀರ
ಭಾರನಂ ಮಂಗಳಾಕಾರನಂ ವಿಬುಧವಿ
ಸ್ತಾರನುತಿಪಾತ್ರತ್ರಿಣೇತ್ರನಂ ಬೃಹಸ್ಪತಿಶತಕೋಟಿಸಂಕಾಶನಂ
ನಾರಾಯಣಾಕ್ಷಿಪೂಜಿತ ಶುಕ್ರವರನ ಶನಿ
ವಾರವಂದ್ಯನನಗಣಿತ ಪ್ರಮಥರುಗಳ ಪರಿ
ವಾರದೊಡೆಯನನೇಳುವಾರ ತಪ್ಪದೆ ನೆನೆದು ಬದುಕುವುದು ಸರ್ವಜನರು ॥ (೩-೫೯)

ಇದರ ಅರ್ಥ : ''ಸೂರ್ಯನಿಗೆ ನೆಲೆಯಾದವನು, ಚಂದ್ರನನ್ನು ಮುಡಿಯಲ್ಲಿ ಧರಿಸಿದವನು, ಮಂಗಳವಾದ ಆಕೃತಿಯುಳ್ಳವನು, ದೇವತೆಗಳ ಸ್ತೋತ್ರಕ್ಕೆ ಪಾತ್ರನಾದ ಮುಕ್ಕಣ್ಣನು, ನೂರುಕೋಟಿ ಬೃಹಸ್ಪತಿಗಳಿಗೆ ಸಾಟಿಯಾದವನು, ವಿಷ್ಣುವಿನ ಕಣ್ಣಿಂದ ಪೂಜಿತನಾದ ಮಹಾತೇಜಸ್ವಿ, ಶನಿವಾರದಂದು ನಮಸ್ಕೃತನು, ಅಸಂಖ್ಯ ಪ್ರಮಥರ ಸ್ವಾಮಿಯಾದವನು—ಆಗಿರುವ ಶಿವನನ್ನು ಏಳು ದಿನವೂ ಸರ್ವರೂ ತಪ್ಪದೆ ನೆನೆದು ಬದುಕಬೇಕು.''

ಇಲ್ಲಿ ಭಾನುವಾರ ಮೊದಲಾಗಿ ಏಳುವಾರಗಳ ಹೆಸರುಗಳು ಶಿವನ ಪೂಜೆಯ ನಿಮಿತ್ತದಿಂದ ಸೇರುವಂತೆ ಕವಿ ಮಾಡಿರುವುದು ಕಾಣುತ್ತದೆ. ಸೂರ್ಯ, ಚಂದ್ರ, ಮನೋಹರವಾದವನು, ವಿದ್ವಾಂಸ, ಬೃಹಸ್ಪತಿ, ಶುಕ್ರಾಚಾರ್ಯ, ಶನಿ ಇವರ ಹೆಸರುಗಳು ಶಿವಪೂಜೆಯ ಸಂದರ್ಭಕ್ಕೆ ಅನ್ವಯಿಸುತ್ತವೆ.

೨

ಗರ್ಭಕವಿತ್ವ

ಚಿತ್ರಕಾವ್ಯದ ಒಂದು ಪದ್ಧತಿಯಾಗಿ, ಪ್ರಕಾರವಾಗಿ ಗರ್ಭಕವಿತ್ವವನ್ನು ಯಾವ ಸಂಸ್ಕೃತ ಲಾಕ್ಷಣಿಕನೂ ಕುರಿತಿಲ್ಲ; ಕನ್ನಡ ಲಾಕ್ಷಣಿಕರೂ ಕುರಿತಿಲ್ಲ. ಆದರೆ ತೆಲುಗು ಭಾಷೆಯಲ್ಲಿ ಕವಿಗಳೂ ಲಾಕ್ಷಣಿಕರೂ ಸಮಾನವಾಗಿ ಈ ಪದ್ಧತಿಗೆ ಪ್ರಾಶಸ್ತ್ಯ ಕೊಟ್ಟಿದ್ದಾರೆ. ಲಕ್ಷಣಗ್ರಂಥಗಳಲ್ಲಿ 'ಕಾವ್ಯಾಲಂಕಾರ ಚೂಡಾಮಣಿ', 'ಅಪ್ಪಕವೀಯ', ' ಲಕ್ಷಣ ಶಿರೋಮಣಿ ' ಮೊದಲಾದವುಗಳಲ್ಲಿಯೂ ಕಾವ್ಯಗಳಲ್ಲಿ ನನ್ನೆಚೋಡನ ' ಕುಮಾರಸಂಭವ ' ಮೊದಲಾದವುಗಳಲ್ಲಿಯೂ ಇದನ್ನು ಗಮನಿಸಬಹುದಾಗಿದೆ. ' ಅಪ್ಪಕವೀಯ 'ದ ನಿರೂಪಣೆ ಸಾಕಷ್ಟು ವಿಸ್ತಾರವಾದುದು. ಇವನ್ನು ಲಕ್ಷಿಸಿ ಹೇಳುವುದಾದರೆ ಹೀಗೆ ಹೇಳಬಹುದು :

ಒಂದು ದೀರ್ಘ ಪದ್ಯಜಾತಿಯ ಗರ್ಭದಲ್ಲಿ ಒಂದೋ ಹಲವೋ ಚಿಕ್ಕ ಪದ್ಯಜಾತಿಗಳನ್ನು ಅಡಗಿಸಿಡುವುದು ಸಾಧ್ಯವಿದೆ. ಹೀಗೆ ಅಡಗಿಸಿಟ್ಟ ಪದ್ಯಜಾತಿಗಳನ್ನು ಪ್ರತ್ಯೇಕಿಸಿ ತೋರಿಸಬಹುದು. ಹಾಗೆ ಪ್ರತ್ಯೇಕಿಸಿದ ಪದ್ಯ ಗಣವಿನ್ಯಾಸ ಪ್ರಾಸ ಯತಿ(ವಡಿ)ನಿಯಮಗಳಿಗೆ, ಅರ್ಥಪ್ರತೀತಿಗೆ ಅನುಗುಣವಾಗಿರಬೇಕಾದುದು ಅತ್ಯವಶ್ಯ. ಇದು ಸಾಧ್ಯವಾಗುವುದು, ದೀರ್ಘಪದ್ಯದ ರಚನೆಯಲ್ಲಿ ಶಬ್ದಗಳು ಸಮುಚಿತರೀತಿಯಲ್ಲಿ ಸಂಧಿ ವಿಸಂಧಿಗಳಿಗೆ ಸಮಾಸ ಅಸಮಾಸಗಳಿಗೆ ಹೊಂದಿಬರುವ ಸಂಯೋಜನೆಯಿಂದ ಹಾಗೂ ನಿರ್ದಿಷ್ಟವಾದ ಅಕ್ಷರಗಳು ನಿರ್ದಿಷ್ಟವಾದ ಸ್ಥಾನಗಳಲ್ಲಿ ಆವೃತ್ತಿಗೆ ಅನುವಾಗುವುದರಿಂದ. ಈ ಅಗತ್ಯಕ್ಕೆ ಅನುಗುಣವಾಗಿ ಮುಖ್ಯವೃತ್ತವೆನ್ನಬಹುದಾದ ದೀರ್ಘ ಪದ್ಯದಲ್ಲಿ ಪದ ಪದಭಾಗ ಇಲ್ಲವೆ ಅಕ್ಷರಗಳನ್ನು, ಅಕ್ಷರ ಸಮುದಾಯವಾದ ಗಣಗಳನ್ನು ಲೋಪಿಸುವುದರ ಇಲ್ಲವೆ ಸ್ಥಾನಾಂತರಗೊಳಿಸುವುದರ ವ್ಯತ್ಯಯ ನಡೆಯಬೇಕಾಗುತ್ತದೆ. ಸಾಮಾನ್ಯವಾಗಿ ಮುಖ್ಯವೃತ್ತದ ಅರ್ಥ ಪೂರ್ಣವಾಗಿಯೋ ಭಾಗಶಃ ಆಗಿಯೋ ಉದ್ಧೃತವೃತ್ತಗಳಲ್ಲಿಯೂ ಉಳಿದುಕೊಳ್ಳುತ್ತದೆ. ಆದರೆ ಕೆಲವು ಸಲ ಇವುಗಳಲ್ಲಿ ಅರ್ಥಚ್ಛಾಯೆಗಳೂ ಅರ್ಥಭೇದಗಳೂ ಏರ್ಪಡುವುದುಂಟು. ಹೀಗೆ ಆದಾಗ ಚಮತ್ಕಾರ ಇನ್ನೂ ಹೃದ್ಯ. ಈ ಬಗೆಯ ರಚನೆ ಗರ್ಭಕವಿತ್ವವೆನಿಸುವುದು. ಚತುರ್ವಿಧ ಕವಿತ್ವದಲ್ಲಿ ಕೆಲವರು ಚಿತ್ರ, ಆಶು ಮತ್ತು ಬಂಧಕವಿತ್ವಗಳ ಜೊತೆಗೆ ಗರ್ಭಕವಿತ್ವವನ್ನೂ ಸೇರಿಸುವರು. ಉದ್ದೇಶಿಸಿದ ಗರ್ಭಸ್ಥಪದ್ಯಗಳ ಸಲುವಾಗಿ ತಕ್ಕ ಅಕ್ಷರ ಸಂಯೋಜನೆಗಳೂ ಪದಗುಂಫನಗಳೂ ಮೊದಲಲ್ಲಿಯೇ ಆಗಿರಬೇಕಾದ ಕಾರಣ, ಈ ಬಗೆಯ ಕವಿತ್ವವನ್ನು ಚಿತ್ರ ಕಾವ್ಯದಲ್ಲಿ ಸೇರಿಸುವುದು ಸೂಕ್ತವೇ ಆಗಿದೆ. ಅಲ್ಲದೆ ಗರ್ಭಕವಿತ್ವದ ಚಮತ್ಕಾರ ಒಮ್ಮೊಮ್ಮೆ ಬಂಧಚಿತ್ರದ ಚಮತ್ಕಾರದೊಂದಿಗೆ ತಳುಕುಗೊಂಡಿರುವುದಕ್ಕೂ ನಿದರ್ಶನವಿದೆ.

ಗರ್ಭಕವಿತ್ವದ ಸಾಮಾನ್ಯಲಕ್ಷಣಗಳನ್ನೂ ವಿಧಿನಿಷೇಧಗಳನ್ನೂ ಕುರಿತು ಅಂತಹ ಪ್ರಯೋಗಸೂತ್ರಗಳೇನನ್ನೂ, ಕ್ವಚಿತ್ತಾಗಿ ಹೊರತು, ತೆಲುಗು ಲಾಕ್ಷಣಿಕರೇ ಆದರೂ ಬರೆದಿರುವಂತೆ ತೋರುವುದಿಲ್ಲ. ಅವರೇ ಕೊಟ್ಟಿರುವ ಲಕ್ಷ್ಯಪದ್ಯಗಳನ್ನೂ ಕಾವ್ಯಸ್ಥನಿದರ್ಶನಗಳನ್ನೂ ನೋಡಿ ಇದರ ಸ್ವರೂಪವನ್ನು ನಾವು ತಿಳಿಯಬೇಕಾಗುತ್ತದೆ. ಪ್ರಯೋಗದಲ್ಲಿ ಹೆಚ್ಚಿನ ಸ್ವಾತಂತ್ರ್ಯಕ್ಕೆ ಇದು ಅವಕಾಶ ಮಾಡಿದೆಯೆನ್ನಬೇಕು. ಪರಿಶೀಲಿಸಿದಾಗ, ವರ್ಣ, ಮಾತ್ರಾ ಮತ್ತು ಅಂಶವೃತ್ತಗಳೆಂಬ ಮೂರು ವಿಧದ ಪದ್ಯಜಾತಿಗಳಲ್ಲಿಯೂ ಈ ಚಮತ್ಕಾರ ಸಾಧ್ಯವಿದೆಯೆಂದೂ ವರ್ಣವೃತ್ತಮೂಲದಿಂದ ಮಾತ್ರಾ ಹಾಗೂ ಅಂಶವೃತ್ತಗಳನ್ನು ಹೊರಡಿಸುವ ಪ್ರಥೆಯೇ ಹೆಚ್ಚು ಪ್ರಚುರವಾದುದೆಂದೂ ತಿಳಿಯುತ್ತದೆ. ' ಅಪ್ಪಕವೀಯ 'ದಲ್ಲಿ ನಿರೂಪಿಸಿರುವ ಗರ್ಭಕವಿತ್ವಭೇದಗಳು, ಸಾಮಾನ್ಯಲಕ್ಷಣ ಹೀಗಿವೆ :

ಗಾಂಗೇಯು ಕಾಶೇಯು ಘನಕಂದಗೀತ ಸಂದರ್ಭ ಚಂಪಕಮಾಲಿಕಯು ವರಿಷ್ಠ
ಕಂದಪದ್ಯದ್ವಯು ಕಮಲವಿಲಸಿತರುಗ್ಮವತಿಕಾಗರ್ಭಿತ ಕ್ರೌಂಚಪದಮು

ಗೀತ ಮತ್ತೇಭವಿಕ್ರೀಡಿತಾಕಂದಗರ್ಭಿತಸೀಸಮುನಟ ಷಡ್ವೃತ್ತಗರ್ಭಿ
ತೋತ್ಪಲಮಾಲಿಕಯುನು ಸುಕಲ್ಪಿತಕಲ್ಪವಲ್ಲಿಯು ಸೀಸರೂಪದ್ವಿಪದಯು ॥

ಸ್ರಗ್ವಿಣೀ ಗರ್ಭಭುಜಂಗಪ್ರಯಾತಂಬು ಕಂದಗರ್ಭಿತಮಣಿಗಣನಿಕರಮು
ಕಲಿತ ಚತುರ್ವಿಧ ಕಂದಪದ್ಯಮುನಷ್ಟವಿಧಕಂದಮುನು ಬಂಚವಿಧಸುವೃತ್ತ—

ತೇ। ಮಾದಿಗಾ ಗಲ ಕೊನ್ನಿ ಪದ್ಯಮುಲು ಪೆಕ್ಕು
ಸರವಿ ಬದ್ಯಮುಲಿಮಿಡಿ ದೋಷಮುಲು ಲೇಕ
ಕಾನ ವಚ್ಚಿನನವಿಯೆಲ್ಲ ಗರ್ಭಕವಿತ
ಧರಣಿನೊಪ್ಪಾರನೀ ರೀತಿ ದನರು ಗೃಷ್ಣ ॥ (೪-೩೮೧)

ಗರ್ಭಕವಿತ್ವದಲ್ಲಿ ಹಲವು ಪ್ರಯೋಗಗಳು ಸಾಧ್ಯ, ಒಂದು ಛಂದೋಪದ್ಧತಿಯ ಪದ್ಯಜಾತಿಯಿಂದ ಬೇರೊಂದು ಛಂದೋಪದ್ಧತಿಯ ಪದ್ಯಜಾತಿಯನ್ನು ಸಹ ಹೊರಡಿಸಬಹುದು, ಆಯಾ ಛಂದಸ್ಸಿನ ಪದ್ಯಗಳು ಸಲಕ್ಷಣವಾಗಿರುವಂತೆ ನೋಡಿಕೊಳ್ಳಬೇಕು, ಉದ್ಧೃತ ಪದ್ಯಗಳ ಸಂಖ್ಯಾಮಿತಿ ಕರ್ತೃವಿನ ಕೌಶಲವನ್ನು ಅವಲಂಬಿಸಿ ಎಷ್ಟಾದರೂ ಇರಬಹುದು–ಎನ್ನುವ ಕೆಲವಂಶಗಳನ್ನು ಈ ನಿರೂಪಣೆಯಿಂದ ಗ್ರಹಿಸಬಹುದಾಗಿದೆ. ಕವಿಯ ಕೌಶಲವಿರುವುದು ಮುಖ್ಯವೃತ್ತದಲ್ಲಿ (ಇದು ಸಗರ್ಭವೃತ್ತ) ಕೀಲಕ್ಷರಗಳನ್ನು ಯಾವ ಸ್ಥಾನಗಳಲ್ಲಿ, ಯಾವ ಸಂಖ್ಯೆಯಲ್ಲಿ ಆವೃತ್ತಿಗೊಳ್ಳುವಂತೆ ಸಂಯೋಜಿಸಿರುತ್ತದೆ ಎಂಬುದನ್ನು ನಿರ್ಧರಿಸುವುದರಲ್ಲಿದೆ.

ಈ ವೃತ್ತಗಳ ವ್ಯಾಪ್ತಿಯನ್ನು ತಿಳಿಯಲು ಪ್ರೊತ್ತಪಿ ವೆಂಕಟರಮಣ ಕವಿಯ 'ಲಕ್ಷಣ ಶಿರೋಮಣಿ'ಯ ವೃತ್ತಾಧಿಕಾರದ ಈ ಭಾಗವನ್ನೂ ಇಲ್ಲಿ ಉದ್ಧರಿಸಬಹುದು : ''....ಸೌಗಂಧಿಕಕುಸುಮಮಂಜರೀಗರ್ಭಿತೋತ್ಪಲ ಮಾಲಿಕಾವೃತ್ತಂಬುನು, ಕಂದಗರ್ಭಿತಚಂಪಕಮಾಲಿಕಾವೃತ್ತಂಬುನು, ವೃತ್ತಕಂದಖಡ್ಗಗರ್ಭಿತಸೀಸಂಬುನು, ವೃತ್ತಕಂದ ಗರ್ಭಿತಸೀಸಂಬುನು, ಮಂಗಳಮಹಾಶ್ರೀವನಮಯೂರಗರ್ಭಿತಲಯಗ್ರಾಹಿಯು, ಮಣಿಗಣನಿಕರನವಾಕ್ಷರ ಕಂದತ್ರಯ ಷಡ್ವಿಧಗರ್ಭಿತ ಸರಸಿಜವೃತ್ತಂಬುನು, ಗೀತಗರ್ಭಿತವೃತ್ತಂಬುನು, ಖಡ್ಗಗರ್ಭಿತಸುಗಂಧಿವೃತ್ತಂಬುನು ....''(೪೨೭). ಇನ್ನೂ ಹೇಳಬಹುದೆಂದರೆ, ಚಂಪಕಮಾಲೆಯಲ್ಲಿ ಕಂದ ತೇಟಗೀತಗಳೂ, ಭುಜಂಗಪ್ರಯಾತದಲ್ಲಿ ಸ್ರಗ್ವಿಣಿಯೂ, ಮಣಿಗಣನಿಕರದಲ್ಲಿ ಕಂದವೂ, ಸೀಸಪದ್ಯದಲ್ಲಿ ಮತ್ತೇಭವಿಕ್ರೀಡಿತ ತೇಟಗೀತ ಕಂದಗಳೂ ಹೊರಡಬಹುದು. ಒಂದೇ ಕಂದಪದ್ಯದಿಂದ ಚತುರ್ವಿಧ, ಷಡ್ವಿಧ ಕಂದಗಳೂ ಹುಟ್ಟಬಹುದು. 'ಲಕ್ಷಣ ಶಿರೋಮಣಿ'ಯಲ್ಲಿ ಲಕ್ಷ್ಯಭಾಗ ನಷ್ಟವಾಗಿದ್ದು, ಚಿತ್ರಕವಿ ಪೆದ್ದನನ 'ಲಕ್ಷಣಸಾರಸಂಗ್ರಹ'ದಲ್ಲಿ ಕಂದವೈವಿಧ್ಯದ ಲಕ್ಷಣನಿರ್ವಚನವನ್ನು ಕಾಣಬಹುದಾಗಿದೆ. ಅವನು ನಿರೂಪಿಸಿರುವ ಚತುಷ್ಕಂದ (ನಲ ಹಾಗೂ ಜಗಣ ಭೇದಗಳದು)ವೇ ಅಲ್ಲದೆ ವೃತ್ತಗರ್ಭಿತಕಂದ, ಭಾಸ್ಕರವಿಲಸಿತ ಕಂದದ್ವಯ, ಕ್ರೌಂಚಪದಕಂದದ್ವಯ, ಮಣಿಗಣನಿಕರಕಂದ ಪ್ರಮಿತಾಕ್ಷರಕಂದಗಳೆಂಬವನ್ನು ಸಹ ವೆಂಕಟರಮಣಕವಿ ಉಲ್ಲೇಖಿಸಿದ್ದಾನೆ.

ಚಿತ್ರಕವಿ ಪೆದ್ದನನ ಕಂದಪ್ರಭೇದಗಳನ್ನು ಹೀಗೆ ಸಂಗ್ರಹಿಸಬಹುದು : (೧) ಕಂದದ ಪೂರ್ವೋತ್ತರಾರ್ಧಗಳು ಬಿಡಿಬಿಡಿಯಾಗಿದ್ದು, ಅವನ್ನು ಅದಲುಬದಲು ಬರೆದು ಓದುವುದಕ್ಕೆ ಸಾಧ್ಯವಾಗುವಂತಿದ್ದರೆ, ಅದು ದ್ವಿವಿಧಕಂದ. (೨) ಒಂದೇ ಕಂದವನ್ನು ನಾಲ್ಕು ಬಗೆಯ ಕಂದಗಳಾಗಿ ಬರೆದು ಓದಲು ಸಾಧ್ಯವಾಗುವಂತಿದ್ದರೆ, ಅದು ಚತುಷ್ಕಂದ. ಇದರ ಭೇದಗಳೆಂದರೆ: ಯಥಾರೂಪದ ಕಂದ ಮೊದಲನೆಯದು; ಉತ್ತರಾರ್ಧದಿಂದ ಆರಂಭಿಸಿ ಓದುವುದು ಎರಡನೆಯದು; ಪೂರ್ವೋತ್ತರಾರ್ಧಗಳಲ್ಲಿ ೫ ನೆಯ ಗಣದಿಂದಾರಂಭಿಸಿ ಓದುವುದು ಮೂರನೆಯ ಮತ್ತು ನಾಲ್ಕನೆಯ ಕಂದಗಳು. ಇಲ್ಲಿ ಹ್ರಸ್ವಪಾದಗಳಲ್ಲಿ ೨ನೆಯ ಗಣ ನಲವಿದ್ದುದಾದರೆ ಅದು ನಲಚತುಷ್ಕಂದ, ಜಗಣವಿದ್ದುದಾದರೆ ಅದು ಜಗಣಚತುಷ್ಕಂದ(೨—೮೯—೯೩).

ಈ ವಿವರಣೆಯನ್ನು ಒಂದೆರಡು ನಿದರ್ಶನಗಳಿಂದಲೇ ವಿಶದಪಡಿಸಬಹುದಾಗಿದೆ. ಮೊದಲು 'ಕಂದಗೀತ ಗರ್ಭ ಚಂಪಕಮಾಲಾವೃತ್ತ'ದ ಒಂದು ಲಕ್ಷ್ಯವನ್ನು ನೋಡಿ, ಬಳಿಕ ಚತುಷ್ಕಂದದ ಲಕ್ಷ್ಯವನ್ನು ನೋಡಬಹುದಾಗಿದೆ.

ಕಂದಗೀತಗರ್ಭ ಚಂಪಕಮಾಲಾವೃತ್ತ

ನರಹರಿ ಕೇಶವಾ ವನಜನಾಭ ರಮಾಧವ ವಂಶಹಸ್ತ ಬಂ
ಧುರ ಸುಗುಣಾಕರಾ ದುರಿತದೂರ ಜನಾರ್ದನ ದೋರ್ಬಲಾಢ್ಯ ಗೀ
ರ್ವರ ಗಿರಿಶಸ್ತುತಾ ಮುರಹರಾ ಸುರಪೂಜಿತಮುಖ್ಯಪಾದ ಸುಂ
ದರ ಪುರುಷಾಗ್ರಣೀ ಭುಜಗತಲ್ಪ ಶಚೀಪತಿಪುತ್ರರಕ್ಷಣಾ ॥

('ಅಪ್ಪಕವೀಯಮು', ೧–೩೪೬—೪೮)

ಕಂದ

ಹರಿ ಕೇಶವಾ ವನಜನಾ । ಭ ರಮಾಧವ ವಂಶಹಸ್ತ ಬಂಧುರ ಸುಗುಣಾ ।
ಗಿರಿಶಸ್ತುತಾ ಮುರಹರಾ । ಸುರಪೂಜಿತಮುಖ್ಯಪಾದ ಸುಂದರಪುರುಷಾ ॥

ಗೀತ

ವನಜನಾಭ ರಮಾಧವ ವಂಶಹಸ್ತ । ದುರಿತದೂರ ಜನಾರ್ದನ ದೋರ್ಬಲಾಢ್ಯ ।
ಮುರಹರಾ ಸುರಪೂಜಿತಮುಖ್ಯಪಾದ । ಭುಜಗತಲ್ಪ ಶಚೀಪತಿಪುತ್ರರಕ್ಷ ॥

ಚತುರ್ವಿಧ ಕಂದ

ಮುಖ್ಯಪದ್ಯ

ಸುಜ್ಞಾನಯೋಗ ತತ್ತ್ವವಿ । ಧಿಜ್ಞಲ್ ಭವಬಂಧನಮುಲ ದ್ರೆಂಚುಚು ಭುವಿಲೋ ।
ನಜ್ಞಾನಪದಮು ಬೊಂದಕ । ಪ್ರಾಜ್ಞುಲ್ ಶಿವುಗೊಲ್ತು ರಚಲ ಭಾವನ ದವುಲನ್ ॥

(ನನ್ನೆ ಚೋಡನ 'ಕುಮಾರಸಂಭವ', ೧೨-೨೭)

ಗರ್ಭಸ್ಥಗಳು

ಭವಬಂಧನಮುಲ ದ್ರೆಂಚುಚು । ಭುವಿಲೋನಜ್ಞಾನಪದಮು ಬೊಂದಕ ಪ್ರಾಜ್ಞುಲ್ ।
ಶಿವುಗೊಲ್ತು ರಚಲ ಭಾವನ । ದವುಲನ್ ಸುಜ್ಞಾನಯೋಗ ತತ್ತ್ವವಿಧಿಜ್ಞುಲ್ ॥
ಅಜ್ಞಾನಪದಮು ಬೊಂದಕ । ಪ್ರಾಜ್ಞುಲ್ ಶಿವುಗೊಲ್ತು ರಚಲ ಭಾವನ ದವುಲನ್ ।
ಸುಜ್ಞಾನಯೋಗ ತತ್ತ್ವವಿ । ಧಿಜ್ಞುಲ್ ಭವಬಂಧನಮುಲ ದ್ರೆಂಚುಚು ಭುವಿಲೋ ॥
ಶಿವುಗೊಲ್ತು ರಚಲ ಭಾವನ । ದವುಲನ್ ಸುಜ್ಞಾನಯೋಗತತ್ತ್ವವಿಧಿಜ್ಞುಲ್ ।
ಭವಬಂಧನಮುಲ ದ್ರೆಂಚುಚು । ಭುವಿಲೋನಜ್ಞಾನಪದಮು ಬೊಂದಕ ಪ್ರಾಜ್ಞುಲ್ ॥

ಈ ನಿದರ್ಶನದಲ್ಲಿ ಮೊದಲನೆಯದು ಯಥಾರೂಪದ ಕಂದ; ಎರಡನೆಯದರಲ್ಲಿ ಪೂರ್ವಾರ್ಧದ ೫ನೆಯ ಗಣದಿಂದ ಪದ್ಯದ ಆರಂಭವಾಗಿದೆ; ಮೂರನೆಯದರಲ್ಲಿ ಯಥಾರೂಪದ ಕಂದದ ಪೂರ್ವೋತ್ತರಾರ್ಧಗಳನ್ನು ಅದಲುಬದಲು ಮಾಡಿದೆ; ನಾಲ್ಕನೆಯದರಲ್ಲಿ ಉತ್ತರಾರ್ಧದ ೫ನೆಯ ಗಣದಿಂದ ಪದ್ಯದ ಆರಂಭವಾಗಿದೆ. ಪ್ರಾಸಕ್ಕೆ ಅನುಗುಣವಾಗಿ ಗೊತ್ತಾದ ಸ್ಥಾನಗಳಲ್ಲಿ ಪದರಚನೆಯಿರುವುದನ್ನೂ ಗಮನಿಸಬೇಕು.

ಮದರಾಸು ಪ್ರಾಚ್ಯಕೋಶಾಗಾರದಲ್ಲಿಯ ಒಂದು ಹಸ್ತಪ್ರತಿಯಲ್ಲಿ (ನಂ. ೩೨೪೪) 'ಕಲ್ಪಿತಕಲ್ಪವಲ್ಲಿ' ಎಂಬ ಹೆಸರಿನ ಒಂದು ಪದ್ಯವಿದ್ದು, ಅದನ್ನು ಸೀಸ, ದ್ವಿಪದ ಮುಂತಾಗಿ ೧೩ ವಿಧದ ಗದ್ಯಪದ್ಯಗಳನ್ನಾಗಿ ಓದಿಕೊಳ್ಳಬಹುದೆಂದು ಅಲ್ಲಿಯೇ ಸೂಚನೆಯಿದೆ ಎಂದು ಹೇಳಲಾಗಿದೆ.

ಉತ್ಥಾಯಾರ್ಯ

ಮುಖ್ಯವಾದ ಸಂಗತಿಯೆಂದರೆ, ಕ್ರಿ.ಶ. ಸು. ೯ನೆಯ ಶ.ದ ಸಂಸ್ಕೃತ ಕವಿ ರತ್ನಾಕರನ 'ಹರವಿಜಯ'ದಲ್ಲಿಯೇ ಗರ್ಭಕವಿತ್ವದ ಲಕ್ಷ್ಯವಿರುವುದು. ಇಲ್ಲಿ ಎರಡು ಮತ್ತೇಭವಿಕ್ರೀಡಿತ ವೃತ್ತಗಳಿಂದ ಒಂದು ಆರ್ಯಾವೃತ್ತವನ್ನು ಹೊರಡಿಸಿದೆ (ಸರ್ಗ ೪೬-೭೧, ೭೨ ಮತ್ತು ಅದರ ಮುಂದಿನ ಪದ್ಯ). ವರ್ಣವೃತ್ತದಿಂದ

ಮಾತ್ರಾವೃತ್ತವನ್ನು ಪಡೆದಂತಾಗಿದೆ, ಇದರಿಂದ. 'ಉತ್ಥಾರ್ಯಾ' (ವೃತ್ತ ಅಥವಾ ವೃತ್ತಗಳಿಂದ ಹೊರಡಿಸುವ ಆರ್ಯಾ) ಎಂದಿರುವ ಆ ಲಕ್ಷ್ಯ ಹೀಗಿದೆ:

ಸಶ್ರೀಮಾನಮೃದುರ್ನಿಸರ್ಗಗಹನೇ ದರ್ಪಾನ್ನಿಕೃತ್ತದ್ವಿಷೋ
ವಂಶ್ಯಶ್ಚಾರುಯಶಸ್ತದಾ ದಧದಧಃ ಸದ್ಯೋ ಹೃತಶ್ರೀರಿಪೋಃ
ದತ್ತಾರ್ಘ್ಯೋ ನಯಮಾರ್ಗಗೋಚರಗುಣಃ ಪುಷ್ಟೀಭವನ್ಮಾರಣೇ
ಸೇನಾನಮ್ರಲಸತ್ಕರಾಂಜಲಿಪುಟೈರ್ನೀತಾರಿಶಂಕಂ ಸುರೈಃ ॥

ಇತ್ಥಂ ದುರ್ಧರದರ್ಪದೋದ್ಭ್ರಮತಯಾ ಮೃದ್ನಂಶ್ಚ ಮಾರಾತತಾ
ಭಾಸ್ವಾನ್ನಾಸುಮತಿ ಕ್ಷಪಾ ಇವ ತದಾ ಸೂದಾರಶೋಭಾನುಗಃ
ಟಂಕಾರೈರ್ವ್ಯಥಿತಾರಿಸಂಹತಿ ಧನುರ್ವೃತ್ತ್ಯಾ(ಪ್ರ್ಯಾತಾ)ತ್ತಕೀರ್ತಿ ರಣೇ
ಯತ್ತಾನ್ನಿಸಂಜಿತಶಿಂಜಿನೀಕಸರಟಃ ಕಾಮಂ ತಮವ್ಯಂಸಯತ್ ॥ (ಯುಗಲಕಮ್)

ಶ್ರೀದುರ್ಗದತ್ತವಂಶ್ಯಃ । ಸಹೃದಯಗೋಷ್ಠೀರಸೇನ ಲಲಿತಾಂಕಮ್ ।
ಇದಮಮೃತಭಾನುಸೂನು । ರ್ವ್ಯಧತ್ತ ರತ್ನಾಕರಃ ಕಾವ್ಯಮ್ ॥ (ಇತ್ಯೇತದುತ್ಥಾರ್ಯಾ)

ತೆಲುಗುದೇಶದ ಸಂಸ್ಕೃತಕವಿ ವೆಂಕಟೇಶ್ವರನು ತನ್ನ 'ರಾಮಾಯಣಸಂಗ್ರಹ' (೧೮೬೬)ವೆಂಬ ೩೦ ಸರ್ಗಗಳ ಚಂಪುವಿನಲ್ಲಿ ಪ್ರತಿಪದ್ಯದಿಂದಲೂ ೪ ಬೇರೆ ಪದ್ಯಗಳು ಹೊರಡುವಂತೆ ಕೃತಿರಚನೆಮಾಡಿದ್ದು, ಇದನ್ನು 'ಚತುಶ್ಚಿತ್ರಗರ್ಭ' ಎಂದು ಕರೆಯಲಾಗಿದೆ. ಬಾಲಕಾಂಡದೊಳಗಿನ ಇಂಥ ಒಂದು ಪದ್ಯದಲ್ಲಿ ಕವಿ ತನ್ನ ಹೆಸರನ್ನೂ ಅಳವಡಿಸಿದ್ದಾನೆ.[4] ಈ ಚಮತ್ಕಾರಕವಿತೆ ಸಂಸ್ಕೃತ ಭಾಷೆಯಲ್ಲಿ ಅಪೂರ್ವವಾದುದೆನ್ನಲಾಗಿದೆ. ಈ ಕವಿ ಆಧುನಿಕನೆಂದರೂ, ರತ್ನಾಕರನ ರಚನೆಯ ಮೂಲಕ ಗರ್ಭಕವಿತ್ವ ಸಂಸ್ಕೃತದಲ್ಲಿ ಅಪರಿಚಿತವಾದುದೇನಲ್ಲ ಎನ್ನಬಹುದು.

ಕನ್ನಡದಲ್ಲಿ ಗರ್ಭಕವಿತ್ವದ ಕೆಲವು ನಿದರ್ಶನಗಳು

ಕನ್ನಡದಲ್ಲಿ ತೆಲುಗಿನ ಹಾಗೆ ಪ್ರಚುರತೆಯಿಂದಲ್ಲವಾದರೂ ಕೆಲವು ಕೃತಿಗಳಲ್ಲಿ ಗರ್ಭಕವಿತ್ವದ ಕೆಲವು ನಿದರ್ಶನಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಇವುಗಳಲ್ಲಿ 'ಮದನತಿಲಕ'ದವು ಅಲ್ಲಿನವುಗಳಿಗಿಂತ ಪ್ರಾಚೀನವಾದವು, ಗಮನಾರ್ಹವಾದವು. ತೆಲುಗು ವಿದ್ವಾಂಸರಾರೂ ಈ ಸಂಗತಿಯನ್ನು ಗಮನಿಸಿದ ಹಾಗಿಲ್ಲ. ಈಗ ದೊರೆಯುವ ಲಕ್ಷ್ಯಗಳು :

೧. ಚಂದ್ರರಾಜನ 'ಮದನತಿಲಕ'ದಲ್ಲಿ:

ಚತುರಶೀತಿವೃತ್ತಭೇದಗರ್ಭ ವನಮಂಜರೀವೃತ್ತ

ಅಂಗನೃಪಾಯತಿ ತುಂಗಭುಜಂ ಕಲಿಯಿಂಗಿತ ಶಿಕ್ಷಿತನಿಂದುಯಶಂ
ಪಿಂಗಜದೊಂಗತ ಭೃಂಗಕಚಂ ಗಲಿ ಮಂಗಳಲಕ್ಷಣಯುಕ್ತನಿವಂ
ಸಂಗರಕೇಸರಿ ಸಂಗಗುಣಂ ಬಲಿ ಭೃಂಗರದಕ್ಷನುವಾಯತನುಂ
ಸಂಗದ ಸನ್ಮತಿ ರಂಗವಹಂ ಸಲೆ ಭಂಗಿಯನೀಕ್ಷಿಸಿ ರೇಚನೃಪಂ॥ (೧–೧೫)

ಈ ವೃತ್ತದ ಸಾಧ್ಯತೆಗಳನ್ನು ವಿವರಿಸುತ್ತ ಚಂದ್ರರಾಜನು "ಇದುವೆ ಎಡೆಯಕ್ಕರಮುಂ ಕಿಱಿಯಕ್ಕರಮುಂ [ಚೌ]ಪದಿಗೆಯುಮೆರಡು ಷಟ್ಪದಿಯುಂ ತ್ರಿಪದೋನ್ನತಿಯುಂ ವ[ನಜ]ಮುಖಿಯುಂ [ತೋಟಕಮುಂ] ಚಿತ್ರಪದಮುಂ ಕಮಳಮುಂ ಚಂದ್ರಿಕೆಯುಮಿಂದುಮುಖಿಯುಂ ಮೊದಲಾಗೆ ೮೪ ವೃತ್ತಮುಂಟಾದ ಮುರಜಬಂಧಮುಂ ಗೋಮೂತ್ರಿಕೆಯುಮಕ್ಕುಂ" ಎಂಬುದಾಗಿ ಸೂಚಿಸಿದ್ದಾನೆ. ಈ ಸೂಚನೆಯಿಂದ ಕೆಲವು ವರ್ಣ ಮತ್ತು ಅಂಶಬಂಧಗಳಿಗೆ ಈ ವೃತ್ತ ಎಡೆಮಾಡುವುದು ಸಾಧ್ಯವಿದೆಯೆಂದು ತಿಳಿಯುತ್ತದೆ. ಪ್ರಾಯಶಃ ಮಾತ್ರಾಬಂಧಗಳಲ್ಲಿಯೂ ಕೆಲವಕ್ಕೆ ಅವಕಾಶವಾಗಬಹುದೆಂದು ತೋರುತ್ತದೆ.[5]

ಈ ವೃತ್ತವು ವರ್ಣವೃತ್ತ ಮೊದಲಾದವುಗಳಿಗೆ ಹೊಂದಿಕೊಳ್ಳಲು ಅನುವಾದ ಶಬ್ದರಚನೆ ಈ ಪದ್ಯದಲ್ಲಿದೆ. ಪ್ರತ್ಯಯೋಪಸರ್ಗಗಳ ಗಂಟಿಲ್ಲದೆ ಮಾತುಗಳು ಬಿಡಿಬಿಡಿಯಾಗಿವೆ. ಇದರಿಂದ ಮಾತುಗಳನ್ನು ಜೋಡಿಸುವಾಗ ಅನ್ವಯಕ್ಲೇಶವಿರುವುದಿಲ್ಲ. ಮೂರು ಬಗೆಗಳಲ್ಲಿ ಪ್ರಾಸವಿಡುವ ಸೌಲಭ್ಯವಿದೆ. ಅಕ್ಷರಗಣವಾದರೆ, ಭಗಣ, ಸಗಣ ಹಾಗೂ ಗುರುವಿನ ವಹಿವಾಟು; ಅಂಶಗಣವಾದರೆ ವಿಷ್ಣು, ರುದ್ರ; ಮಾತ್ರಾಗಣವಾದರೆ ಚತುರ್ಮಾತ್ರಾಗಣ—ಹೀಗೆ ವಿನ್ಯಾಸವೈಚಿತ್ರ್ಯದಿಂದ ಈ ವನಮಂಜರೀವೃತ್ತ ವಿವಿಧವೃತ್ತ ವಿಲಾಸವನ್ನು ಮೆರೆಯುವ ಒಂದು ಅಪೂರ್ವಮಾದರಿಯಾಗಿದೆ.

ಕರ್ಣಾಟಕ ಕವಿಚರಿತೆಕಾರರು ಈ ಕವಿಯ ಚರಿತ್ರೆಯನ್ನು ಬರೆಯುವಾಗ, ಈ ಪದ್ಯವನ್ನುದ್ಧರಿಸಿ, ಇದರಲ್ಲಿ ಗರ್ಭಸ್ಥವಾದ ಏಳು ವೃತ್ತಬಂಧಗಳನ್ನು ಬಿಡಿಸಿ ಬರೆದಿದ್ದಾರೆ; ಅಲ್ಲದೆ ಪ್ರಕೃತ ಲೇಖಕನೂ ಕೆಲವನ್ನು ಅನ್ಯತ್ರ ಬಿಡಿಸಿ ತೋರಿಸಿದ್ದಾನೆ. ಓದುಗರು ಆಯಾ ಮೂಲಗಳನ್ನು ಗಮನಿಸಬಹುದಾಗಿದೆ. ಇಲ್ಲಿ ನಿದರ್ಶನಾರ್ಥವಾಗಿ ಕೆಲವು ವೃತ್ತಗಳನ್ನು ಉದ್ಧರಿಸಿಕೊಟ್ಟಿದೆ :

ಕವಿಸೂಚಿತವಾದ ಗರ್ಭಸ್ಥಪದ್ಯಗಳು :

ಎಡೆಯಕ್ಕರ

ಶಿಕ್ಷಿತಂ ಕಲಿಯಿಂಗಿತನಿಂದುಯಶಂ । ಲಕ್ಷಣ ಕಲಿ ಮಂಗಳಯುಕ್ತನಿವಂ ।
ದಕ್ಷನುಂ ಬಲಿ ಭೃಂಗರವಾಯತನುಂ । ಈಕ್ಷಿಸಿ ಸಲೆ ಭಂಗಿಯ ರೇಚನೃಪಂ ॥

ಕಿರಿಯಕ್ಕರ

ಅಂಗನೃಪಾಯತಿ ತುಂಗಭುಜಂ । ಇಂಗಿತಶಿಕ್ಷಿತನಿಂದುಯಶಂ ।
ಪಿಂಗಜದೊಂಗತ ಭೃಂಗಕಚಂ । ಮಂಗಳಲಕ್ಷಣಯುಕ್ತನಿವಂ ॥

ಚೌಪದಿಗೆ

ಶಿಕ್ಷಿತನಿಂದುಯಶಂ । ಲಕ್ಷಣಯುಕ್ತನಿವಂ ।
ದಕ್ಷನುಪಾಯತನುಂ । ಈಕ್ಷಿಸಿ ರೇಚನೃಪಂ ॥

ಎರಡು ಷಟ್ಪದಿಗಳು

(i) ಅಂಗನೃಪಾಯತಿ । ತುಂಗಭುಜಂ ಕಲಿ । ಯಿಂಗಿತಶಿಕ್ಷಿತನಿಂದುಯಶಂ ॥
ಪಿಂಗಜದೊಂಗತ । ಭೃಂಗಕಚಂ ಕಲಿ । ಮಂಗಳಲಕ್ಷಣಯುಕ್ತನಿವಂ ॥
(ii) ಸಂಗರಕೇಸರಿ । ಸಂಗಗುಣಂ ಬಲಿ । ಭೃಂಗರ ದಕ್ಷನುಪಾಯತನುಂ ॥
ಸಂಗದ ಸನ್ಮತಿ । ರಂಗವಹಂ ಸಲೆ । ಭಂಗಿಯನೀಕ್ಷಿಸಿ ರೇಚನೃಪಂ ॥

ತ್ರಿಪದೋನ್ನತಿ

ಅಂಗನೃಪಾಯತಿ ತುಂಗಭುಜಂ । ಇಂಗಿತಶಿಕ್ಷಿತನಿಂದುಯಶಂ ।
ಪಿಂಗಜದೊಂಗತ ಭೃಂಗಕಚಂ ಕಲಿ । ಮಂಗಳಲಕ್ಷಣಯುಕ್ತನಿವಂ ॥

ವನಜಮುಖಿ (=ಪದ್ಮಮುಖಿ)

ತುಂಗಭುಜಂ ಕಲಿಯಿಂಗಿತಶಿಕ್ಷಿತನಿಂದುಯಶಂ
ಭೃಂಗಕಚಂ ಕಲಿ ಮಂಗಳಲಕ್ಷಣಯುಕ್ತನಿವಂ
ಸಂಗಗುಣಂ ಬಲಿ ಭೃಂಗರದಕ್ಷನುಪಾಯತನುಂ
ರಂಗವಹಂ ಸಲೆ ಭಂಗಿಯನೀಕ್ಷಿಸಿ ರೇಚನೃಪಂ ॥

ತೋಟಕ

ಕಲಿಯಿಂಗಿತಶಿಕ್ಷಿತನಿಂದುಯಶಂ । ಕಲಿ ಮಂಗಳಲಕ್ಷಣಯುಕ್ತನಿವಂ ।
ಬಲಿ ಭೃಂಗರದಕ್ಷನುಪಾಯತನುಂ । ಸಲೆ ಭಂಗಿಯನೀಕ್ಷಿಸಿ ರೇಚನೃಪಂ ॥

ಚಿತ್ರಪದ

ಅಂಗನೃಪಾಯತಿ ತುಂಗಭುಜಂ । ಇಂಗಿತಶಿಕ್ಷಿತನಿಂದುಯಶಂ ।
ಪಿಂಗಜದೊಂಗತ ಭೃಂಗಕಚಂ । ಮಂಗಳಲಕ್ಷಣಯುಕ್ತನಿವಂ ॥

ಕಮಳ

ಶಿಕ್ಷಿತನಿಂದುಯಶಂ । ಲಕ್ಷಣಯುಕ್ತನಿವಂ ।
ದಕ್ಷನುವಾಯತನುಂ । ಈಕ್ಷಿಸಿ ರೇಚನೃಪಂ ॥

ಇಲ್ಲಿ ಕೊನೆಯ ಎರಡು ವೃತ್ತಗಳನ್ನು ಬಿಟ್ಟು ಉಳಿದುವನ್ನು ಉದ್ಧರಿಸಿದೆ. ಉದ್ಧರಿಸಿರುವ ವೃತ್ತಗಳಲ್ಲಿಯೂ ಕಿರಿಯಕ್ಕರ, ಷಟ್ಪದಿ, ತ್ರಿಪದೋನ್ನತಿ, ಚಿತ್ರಪದ ಈ ಕೆಲವು ಪದ್ಯಜಾತಿಗಳನ್ನು ಒಂದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಉದ್ಧರಿಸಬಹುದಾಗಿದೆ. ವಿಸ್ತಾರಭೀತಿಯಿಂದ ಹಾಗೆ ಮಾಡದೆ ಕೈಬಿಟ್ಟಿದೆ.

ಉದ್ಧರಿಸಬಹುದಾದ ಇತರ ಕೆಲವು ಗರ್ಭಸ್ಥಪದ್ಯಗಳು :

ಗಿರಿಧರ

ಕಲಿ । ಸಲೆ । ಬಲಿ । ಕಲಿ ॥

ಸೌಂದರ

ತುಂಗಭುಜಂ । ಭೃಂಗಕಚಂ । ಸಂಗಗುಣಂ । ರಂಗವಹಂ ॥

ಸೌಮ್ಯಾ

ಕಲಿ ಶಿಕ್ಷಿತನಿಂದುಯಶಂ । ಕಲಿ ಲಕ್ಷಣಯುಕ್ತನಿವಂ ।
ಬಲಿ ದಕ್ಷನುವಾಯತನುಂ । ಸಲೆಯೀಕ್ಷಿಸಿ ರೇಚನೃಪಂ ॥

ಕುಮುದ

ಕಲಿ ತುಂಗಭುಜಂ । ಕಲಿ ಭೃಂಗಕಚಂ । ಬಲಿ ಸಂಗಗುಣಂ । ಸಲೆ ರಂಗವಹಂ ॥

ಮಾಣವಕ

ತುಂಗಭುಜಂ ಇಂದುಯಶಂ । ಭೃಂಗಕಚಂ ಯುಕ್ತನಿವಂ ।
ಸಂಗಗುಣಂ ಆಯತನುಂ । ರಂಗವಹಂ ರೇಚನೃಪಂ ॥

ಕೋಮಲರುಚಿರ

ಶಿಕ್ಷಿತನಿಂದುಯಶಂ ಕಲಿ ತುಂಗಭುಜಂ । ಲಕ್ಷಣಯುಕ್ತನಿವಂ ಕಲಿ ಭೃಂಗಕಚಂ ।
ದಕ್ಷನುವಾಯತನುಂ ಬಲಿ ಸಂಗಗುಣಂ । ಈಕ್ಷಿಸಿ ರೇಚನೃಪಂ ಸಲೆ ರಂಗವಹಂ ॥

ಮೋಟಕ

ಅಂಗನೃಪಾಯತಿ ತುಂಗಭುಜಂ ಕಲಿ । ಪಿಂಗಜದೊಂಗತ ಭೃಂಗಕಚಂ ಕಲಿ ।
ಸಂಗರಕೇಸರಿ ಸಂಗಗುಣಂ ಬಲಿ । ಸಂಗದ ಸನ್ಮತಿ ರಂಗವಹಂ ಸಲೆ ॥

ನಲಿನಿ

ಕಲಿಯಂಗನೃಪಾಯತಿ ಶಿಕ್ಷಿತನಿಂದುಯಶಂ । ಕಲಿ ಪಿಂಗಜದೊಂಗತ ಲಕ್ಷಣಯುಕ್ತನಿವಂ ।
ಬಲಿ ಸಂಗರಕೇಸರಿ ದಕ್ಷನುವಾಯತನುಂ । ಸಲೆ ಸಂಗದ ಸನ್ಮತಿ ಈಕ್ಷಿಸೆ ರೇಚನೃಪಂ ॥

ಏಳೆ

ಅಂಗನೃಪಾಯತಿ ತುಂಗಭುಜಂ ಕಲಿ । ಭೃಂಗಕಚಂ ಲಕ್ಷಣಯುಕ್ತಂ ॥

ಮದನವತಿ

ಇಂಗಿತಶಿಕ್ಷಿತನಿಂದುಯಶಂ ಕಲಿ ತುಂಗಭುಜಂ
ಮಂಗಳಲಕ್ಷಣಯುಕ್ತನಿವಂ ಕಲಿ ಭೃಂಗಕಚಂ
ಭೃಂಗರದಕ್ಷನುಪಾಯುತನುಂ ಬಲಿ ಸಂಗಗುಣಂ
ಭಂಗಿಯನೀಕ್ಷಿಸಿ ರೇಚನೃಪಂ ಸಲೆ ರಂಗವಹಂ ॥

ದ್ವಿಪದಿ(=ದುವಯಿ)

ಸಂಗಗುಣಂ ತುಂಗಭುಜಂ ಕಲಿಯಿಂಗಿತಶಿಕ್ಷಿತನಿಂದುಯಶಂ
ರಂಗವಹಂ ಭೃಂಗಕಚಂ ಕಲಿ ಮಂಗಳಲಕ್ಷಣಯುಕ್ತನಿವಂ ॥

ಈ ಮೇಲೆ ೨೦ ಬಗೆಯ ಪದ್ಯಭೇದಗಳನ್ನಷ್ಟೇ ಉದ್ಧರಿಸಿದೆ. ಕವಿ ಸೂಚಿಸಿರುವುದು ೮೪ ಪದ್ಯಭೇದಗಳನ್ನು ಎಂಬುದನ್ನು ನೆನೆದರೆ ಆತನ ಛಂದಸ್ಸು ಹಾಗೂ ಚಿತ್ರಕಾವ್ಯರಚನೆಯ ಸಾಮರ್ಥ್ಯದ ಅರಿವು ನಮಗೆ ಆಗುತ್ತದೆ. ಈ ಪದ್ಯದಲ್ಲಿ ಕವಿ ತಂದಿರುವ ಆಕಾರ ಚಿತ್ರಭೇದಗಳನ್ನು ಆ ಪ್ರಕರಣದಲ್ಲಿ ಗಮನಿಸಬಹುದಾಗಿದೆ.

ದಂಡಕಗರ್ಭ ಕಂದ

'ಮದನತಿಲಕ'ದಲ್ಲಿಯೇ ೮–೯ ಎರಡು ಕಂದಪದ್ಯಗಳಾಗಿರುವಂತೆ ತೋರುವುದಾದರೂ, ಪಾಠದೋಷಗಳಿಂದ ಅವುಗಳಲ್ಲಿ ಅಭಿಪ್ರಾಯವಿಶದತೆ ತೋರುತ್ತಿಲ್ಲ. ಪ್ರಸ್ತುತ ''ಇದುವೆ ದಂಡಕಮುಮಕ್ಕುಂ'' ಎಂಬ ಸೂಚನೆಯಿಂದಾಗಿ ಈ ೨ ಕಂದಗಳಿಂದ ದಂಡಕವನ್ನೂ ಬಿಡಿಸಬಹುದೆಂದು ಭಾವಿಸಲು ಶಕ್ಯವಿದೆ. ಆದರೆ ದಂಡಕದ ಲಕ್ಷಣವನ್ನು ಅಲ್ಲಿ ಗುರುತಿಸುವುದು ಸುಲಭದ ಕೆಲಸವಲ್ಲ.

ಚೌಪದಿಕಾಗರ್ಭ ಕಂದ

ಅಲ್ಲಿಯೇ ೮–೩೪ರ ಒಂದು ಪದ್ಯಜಾತಿ ವರ್ಣವೃತ್ತವಾಗಿ ಸಭಮ ಎಂಬ ಗಣರಚನೆಯದು. ಆದರೆ ಆ ವಿನ್ಯಾಸದ ವೃತ್ತ ಪೂರ್ವನಿರ್ದೇಶಿತವಲ್ಲ. 'ಸೂಕ್ತಿಸುಧಾರ್ಣವ'ದಲ್ಲಿಯ ೮–೧೯ರ ಒಂದು ಕಂದಪದ್ಯ, ''ರತಿಹೀನ ಪೆಟಿವ ಕುಬ್ಜಂ....''ಎಂಬುದು, ಇದನ್ನು ಭಾಗಶಃ ಮಾತ್ರ ಹೋಲುತ್ತದೆ. ''ಸರೋಗ [ಸರಾಗ] ಚೌಪದಿಗೆಯುಮಕ್ಕುಂ'' ಎಂದಿರುವುದರಿಂದ, ಅಂಶಛಂದಸ್ಸಿನ ಚೌಪದಿಯಾಗಿ (ವಿ.ರು) ಇದನ್ನು ಪ್ರಸ್ತಾರಿಸಬಹುದೆಂದು ಸೂಚನೆ ದೊರೆತಂತಾಗಿದೆ. ಅದು ಹೀಗೆ :

ರತಿಹೀನಂ ಪೆಟಿವಂ ಕುಬ್ಜಂ । ಮತಿವಂತಂ ಕೃಶನತ್ಯಂತಂ ।
ಖುತವಾಕ್ಯಂ ಸತಿಯಂ ಕಾಯು । ಲ್ಕತಿಶಿಷ್ಟಂ ಪೆಜಿತೇಂ ಶ್ರೇಷ್ಠಂ ॥ (೮-೩೪)

ಅಲ್ಲಿಯೇ ೧೦–೧೦ರ ಒಂದು ಪದ್ಯಜಾತಿ, ಕವಿಯ ಸೂಚನೆಯಂತೆ ('ವೃತ್ತಬಂಧಮುಂ') ಯಾವುದಾದರೊಂದು ವೃತ್ತವಾಗಲೂ ಸಾಧ್ಯವಿದೆ. ಇರುವಂತೆ ಪದ್ಯದ ಛಂದಸ್ಸು ಅನಿರ್ದಿಷ್ಟ. ಅಭಿಪ್ರಾಯವಿಶದತೆಯೂ ಸಾಲದು. ಆದ್ದರಿಂದ ಕವಿಸೂಚನೆಯನ್ನು ಕಾರ್ಯಗತಗೊಳಿಸುವುದರಲ್ಲಿ ತೊಡಕುಗಳಿವೆ.

ಅಲ್ಲಿಯೇ ೧೦–೧೪, ೧೫ರ ಎರಡು ಕಂದಪದ್ಯಗಳಿದ್ದು, ಕವಿಯ ಸೂಚನೆಯಂತೆ ''ಇದುವೆ ಎರಡು ಕಂದಮುಂ ದ್ವಿಪದಿಕೆಯುಂ ಗೀತಿಕೆಯುಮೈದುಮಕ್ಕರಮುಮಕ್ಕುಂ'' ಎಂದಿದೆ.

ದ್ವಿಪದಿಕಾಗೀತಿಕಾಪಂಚವಿಧಾಕ್ಷರಗರ್ಭ ಕಂದ

ಮುಖ್ಯಪದ್ಯಗಳು ಹೀಗೆ ಎರಡು ಕಂದಗಳಾಗಿವೆ :

ಧುರದೊಳಗಿಂದ್ರಸುತನೆ[ನಲ್] । ಪರನಾರಿಗೆ ಪಾಯುಜ ಸ್ವಯಂ ತಾನೆನಲು ।
ರ್ವರಿಗೆ ಗಿರಿಜಾತ್ಮಭವನೆನೆ । ವರವಿಕ್ರಮನುನ್ನತೋನ್ನತಂ ತಾನೆನಿಕುಂ ॥
ಪರಮ ಹರಭಕ್ತನಿವನೆನೆ । ದೊರೆಯುಂ ಗುಣಿಯೂರ್ಜಿತಂ ನಯಜ್ಞಂ ಸುಭಟಂ ।
ಕರಮೆ ಚರಿತಾರ್ಥನತಿರುಚಿ । ಹರಿಸಾಹಸನೀಶ್ವರಂ ಸ್ಮರಂ ಸಚ್ಚರಿತಂ ॥ (೧೦-೧೪,೧೫)

ಗರ್ಭಸ್ಥಪದ್ಯಗಳಲ್ಲಿ ಕೆಳಗಿನವು ಹೀಗಿವೆ :

ದ್ವಿವಿಧಕಂದ

ವರೆಗೆ ಗಿರಿಜಾತ್ಮಭವನೆನೆ । ವರವಿಕ್ರಮನುನ್ನತೋನ್ನತಂ ತಾನೆನಿಕುಂ ।
ಧುರದೊಳಗಿಂದ್ರಸುತನೆನಲ್ । ಪರನಾರಿಗೆ ವಾಯುಜ ಸ್ವಯಂ ತಾನೆನಲು ॥

ಈ ಉದ್ಧಾರದಿಂದ ಯಥಾರೂಪದ ಕಂದ, ಪೂರ್ವೋತ್ತರಾರ್ಧಗಳ ವಿಪರ್ಯಯದ ಕಂದ—ಹೀಗೆ 'ದ್ವಿವಿಧಕಂದ' ಗಳಾದವು.

ಕರವು ಚರಿತಾರ್ಥನತಿರುಚಿ । ಹರಿಸಾಹಸನೀಶ್ವರಂ ಸ್ಮರಂ ಸಚ್ಚರಿತಂ ।
ಪರವು ಹರಭಕ್ತನಿವನೆನೆ । ದೊರೆಯುಂ ಗುಣಿಯೂರ್ಜಿತಂ ನಯಜ್ಞಂ ಸುಭಟಂ ॥

ಇದು ಇನ್ನೊಂದು 'ದ್ವಿವಿಧಕಂದ'ದ ಸಂಯೋಜನೆ.

ಈ ಮುಂದಿನ ಕೆಲವು ಗರ್ಭಸ್ಥಪದ್ಯಗಳಲ್ಲಿ ಅಂಶವೃತ್ತಗಳೇ ಅಧಿಕವಾಗಿವೆ. ಇವುಗಳಲ್ಲಿ ಯಥೋಚಿತ ಸ್ಥಾನಗಳಲ್ಲಿ ಪರ್ಯಾಯಗಣಗಳು ಬರುವುದನ್ನು ಅಂಗೀಕರಿಸಬೇಕಾಗುತ್ತದೆ. ಕೊನೆಯ ಐದು ಪದ್ಯಗಳಲ್ಲಿಯೂ ಇದನ್ನು ಗಮನಿಸಬಹುದು.

ದ್ವಿಪದಿಕೆ

ಧುರದೊಳಗಿಂದ್ರಸುತನೆನಲ್ ಪರನಾರಿಗೆ ವಾಯುಜ ಸ್ವಯವೆನಲು
ವರ್ರೆಗೆ ಕರವೆಯತಿರುಚಿ ಹರಿಸಾಹಸನೀಶ್ವರನೂರ್ಜಿತಂ ಸ್ಮರಂ ॥

ಗೀತಿಕೆ—ಆರ್ಯಾಭೇದ

ಧುರದೊಳಗಿಂದ್ರಸುತನೆನಲ್ । ಪರನಾರಿಗೆ ವಾಯುಜ ಸ್ವಯಂ ತಾನು ।
ವರ್ರೆಗೆ ಗಿರಿಜಾತ್ಮಭವನೆನೆ । ವರವಿಕ್ರಮನುನ್ನತೋನ್ನತಂ ಸುಭಟಂ ॥

ಗೀತಿಕೆ—ಅಂಶವೃತ್ತ

ಧುರದೊಳಗಿಂದ್ರಸುತನೆನ। ಲ್ಪರನಾರಿಗೆ ವಾಯುಜನೆನೆ ತಾಂ ಸ್ವಯಂ।
ಗಿರಿಜಾತ್ಮಭವನುವರ್ರೆಗೆ ತಾಂ। ವರವಿಕ್ರಮನುನ್ನತೋನ್ನತನೆನಿಕುಂ ॥

ಪಿರಿಯಕ್ಕರ

ಧುರದೊಳಗಿಂದ್ರಸುತನೆನಲ್ ಪರನಾರಿಗೆ ವಾಯುಜ ಸ್ವಯಂ ತಾನೆನಲು
ವರ್ರೆಗೆ ಗಿರಿಜಾತ್ಮಭವನೆನೆ ವರವಿಕ್ರಮನುನ್ನತೋನ್ನತಂ ಸುಭಟಂ
ಪರವು ಹರಭಕ್ತನಿವನೆನೆ ದೊರೆಯುಂ ಗುಣಿಯೂರ್ಜಿತಂ ನಯಜ್ಞಂ ಸುಭಟಂ
ಕರವು ಚರಿತಾರ್ಥನತಿರುಚಿ ಹರಿಸಾಹಸನೀಶ್ವರಂ ಸ್ಮರಂ ಸಚ್ಚರಿತಂ ॥

ದೊರೆಯಕ್ಕರ

ಧುರದೊಳಗಿಂದ್ರಸುತನೆನಲ್ ವಾಯುಜ ತಾನುವರ್ರೆಗೆನೆ
ಗಿರಿಜಾತ್ಮಭವನೆನೆ ವರವಿಕ್ರಮನುನ್ನತೋನ್ನತಂ ಪರವು
ಹರಭಕ್ತನಿವನೆನೆ ದೊರೆಯುಂ ಗುಣಿಯೂರ್ಜಿತಂ ನಯಜ್ಞಂ
ಚರಿತಾರ್ಥನತಿರುಚಿ ಹರಿಸಾಹಸನೀಶ್ವರಂ ಸಚ್ಚರಿತಂ ॥

ನಡುವಣಕ್ಕರ

ಪರನಾರಿಗೆ ವಾಯುಜ ಸ್ವಯಂ ತಾನೆನಲುವರ್ರೆಗೆ
ಗಿರಿಜಾತ್ಮಭವನೆನೆ ವರವಿಕ್ರಮನುನ್ನತೋನ್ನತಂ
ಪರವು ಹರಭಕ್ತನಿವನೆನೆ ದೊರೆಯುಂ ಗುಣಿಯೂರ್ಜಿತಂ
ಕರವು ಚರಿತಾರ್ಥನತಿರುಚಿ ಹರಿಸಾಹಸನೀಶ್ವರಂ ॥

ಎಡೆಯಕ್ಕರ

ಪರನಾರಿಗೆ ಪಾಯುಜ ಸ್ವಯಂ ತಾನೆನಲ್
ವರವಿಕ್ರಮನುನ್ನತೋನ್ನತಂ ತಾನೆನಿಕುಂ
ದೊರೆಯುಂ ಗುಣಿಯೂರ್ಜಿತಂ ನಯಜ್ಞಂ ಸುಭಟಂ
ಹರಿಸಾಹಸನೀಶ್ವರಂ ಸ್ಮರಂ ಸಚ್ಚರಿತಂ ॥

ಕಿರಿಯಕ್ಕರ

ಧುರದೊಳಗಿಂದ್ರಸುತನೆನಲ್ ಪರ । ನಾರಿಗೆ ಪಾಯುಜ ಸ್ವಯಂ ತಾನ್ ।
ಹರಭಕ್ತನಿವನೆನೆ ದೊರೆಯುಂ ಗುಣಿ । ಚರಿತಾರ್ಥನತಿರುಚಿ ಹರಿಸಾಹಸಂ ॥

ಕೊನೆಯದಾಗಿ ಅಲ್ಲಿಯೇ ೧೦–೨೪ರ ಕಂದದಿಂದ 'ನಾಲ್ಕುವೃತ್ತಮುಮಕ್ಕುಂ....'' ಎಂಬುದು ಕವಿಯ ಸೂಚನೆ. ಪಾಠದೋಷದಿಂದಾಗಿ ಇತರ ಪದ್ಯಜಾತಿಗಳನ್ನು ಹೊರಡಿಸುವುದು ಸಾಧ್ಯವಿಲ್ಲವಾಗಿದೆ.

೨. ಸಿದ್ಧನಂಜೇಶನ 'ರಾಘವಾಂಕಚಾರಿತ್ರ'ದಲ್ಲಿ :

ಇಲ್ಲಿ ಒಂದು ವಾರ್ಧಕಷಟ್ಪದಿಯಲ್ಲಿ ಇತರ ಷಟ್ಪದೀಷಟ್ಕದ ಭೇದಗಳೂ ಉದ್ದಂಡವೂ ಅಡಗಿರುವುದು ಕಾಣುತ್ತದೆ. ಕವಿಯೇ ಆ ಭೇದಗಳನ್ನೂ ಬಿಡಿಸಿ ತೋರಿಸಿದ್ದಾನೆ. ''ಏಳು ಬಗೆಯ ಷಟ್ಪದಿ ಅಡಕವಾದ ವಾರ್ಧಿಕಷಟ್ಪದಿ''—ಎಂಬ ಸೂಚನೆ ಮಾತೃಕೆಯದೇ ಇರಬಹುದು.[6]

ಸಪ್ತವಿಧಷಟ್ಪದೀಗರ್ಭ ವಾರ್ಧಕ

ಮುಖ್ಯಪದ್ಯವಾದ ವಾರ್ಧಕಷಟ್ಪದಿ

ಶರವಣಜಜನಕಗರಸುರುಚಿರಗರಧರಪುರ
ಹರಹರವರದಕರರುಷಿರುಜುರುಚಿಗಮರಣರು
ಗರಿಮರುತರತರಮಣಡಮರುಗಲಲಿತಭಸಿತವಿಶದ ನಿಜಲಸದಪಘನ
ಶರಣಜನದಿವಿಜತರುನರಕರಿವರಹರಹರ
ಣರುಡುರುತರಶರಭರಣರಿಪುರುಧಿರವಿರತ
ಪರಿರಸಪರಿಕರಕರಣದುರಿತಚಯ ಹರ ಸುಖಿ ಜಯಜಯ ಮಹಿಮಶರನಿಧಿ ॥

(ಸಂಧಿ ೧೯–ಪದ್ಯ ೮೧ರ ಮುಂದೆ)

ಶರ

ಶರವಣಜಜನಕ । ಗರಸುರುಚಿರ ಗರ ।
ಧರಪುರ ಹರಹರ ವರದಕರ ।
ಶರಣಜನ ದಿವಿಜ । ತರು ನರಕರಿವರ ।
ಹರ ಹರಣರುಡುರುತರಶರಭ ॥ ೧ ॥

ಕುಸುಮ

ಶರವಣಜಜನಕ ಗರ । ಸುರುಚಿರ ಗರಧರಪುರ ।
ಹರಹರವರದಕರರುಷಿರುಜು ರುಚಿಗ ।
ಶರಣಜನದಿವಿಜತರು । ನರಕರಿವರ ಹರಹರ ।
ಣರುಡರುತರಶರಭರಣರಿಪುರುಧಿರ ॥೨॥

ಭೋಗ

ಶರವಣಜಜನಕ ಗರಸುರು । ಚಿರ ಗರಧರಪುರ ಹರಹರ
ವರದಕರರುಷಿರುಜುರುಚಿಗಮರಣರುಗರಿಮ ।
ಶರಣಜನದಿವಿಜತರು ನರ । ಕರಿವರಹರಹರಣ ರುಡುರು ।
ತರ ಶರಭರಣರಿಪು ರುಧಿರವಿರತಪರಿ ರಸ ॥೩॥

ಭಾಮಿನಿ

ಶರವಣಜಜನಕ ಗರಸುರುಚಿರ । ಗರಧರ ಪುರಹರ ಹರ ವರದಕ ।
ರ ರುಷಿರುಜು ರುಚಿಗಮರಣರುಗರಿಮರುತರತರಮಣ ।
ಶರಣಜನದಿವಿಜತರು ನರಕರಿ । ವರ ಹರಹರಣ ರುಡುರುತರ ಶರ ।
ಭರಣರಿಪುರುಧಿರವಿರತಪರಿರಸಪರಿಕರಕರಣ ॥೪॥

ಪರಿವರ್ಧಿನಿ

ಶರವಣಜ ಜನಕ ಗರಸುರುಚಿರ ಗರ। ಧರ ಪುರಹರ ಹರ ವರದಕರ ರುಷಿರು।
ಜು ರುಚಿಗಮರಣರುಗರಿಮರುತರತರಮಣಡಮರುಗಲಲಿತ।
ಶರಣಜನದಿವಿಜತರುನರಕರಿವರ । ಹರಹರಣರುಡುರುತರಶರಭರಣ ರಿ ।
ಪುರುಧಿರವಿರತಪರಿರಸಪರಿಕರ ಕರಣದುರಿತಚಯ ಹರ ॥೫॥

ಉದ್ದಂಡ

ಒಂದನೆಯ ಪದ್ಯದಂತೆಯೇ ಇದೆ ॥೬॥

ಈ ನಿದರ್ಶನವನ್ನು ಈಗಾಗಲೇ 'ವರ್ಣಚಿತ್ರ' ಪ್ರಕರಣದಲ್ಲಿ 'ಸರ್ವಲಘು'ವಿಗೆ ಲಕ್ಷ್ಯವಾಗಿ ಗಮನಿಸಿದ್ದೇವೆ. ಇಲ್ಲಿ 'ಗರ್ಭಕವಿತ್ವ'ದ ಲಕ್ಷ್ಯವಾಗಿ ಗಮನಿಸಿದ್ದು, ಚಮತ್ಕಾರ ಹೃದ್ಯವೆಂದು ಹೇಳುವಂತಿಲ್ಲ. ರಕಾರದ ಅನುಪ್ರಾಸದ ಬಹಳಿಕೆಯಿಂದ ಅರ್ಥ ಮರೆಯಾಗುವಂತಾಗಿದೆ.

೩. ವೆಂಕಟರಮಣಯ್ಯನವರ 'ಗಯೋಪಾಖ್ಯಾನ'ದಲ್ಲಿ:

ಈಚೆಗೆ ವೆಂಕಟರಮಣಯ್ಯನವರ 'ಗಯೋಪಾಖ್ಯಾನ'ದಲ್ಲಿ (೧೮೮೪) ಗರ್ಭಕವಿತ್ವದ ನೇರವಾದ ಕೆಲವು ನಿದರ್ಶನಗಳು ಕಂಡುಬರುವುದು ಗಮನಾರ್ಹವಾಗಿದೆ. ನೇರವಾದ ನಿದರ್ಶನಗಳು ಹೀಗೆ ಕಂಡುಬರುತ್ತಿರುವುದಕ್ಕೆ ಈ ಕವಿಗೆ ತೆಲುಗುಭಾಷೆಯ ಪ್ರೌಢಿಮೆಯೇ ಕಾರಣವೆಂದು ಊಹಿಸಬಹುದಾಗಿದೆ. ಕವಿಯ ಸ್ಥಳ ತೆಲುಗು ಸೀಮೆಯಾದ ಕೃಷ್ಣಗಿರಿ. ಇವರು ತಮ್ಮ ಗ್ರಂಥವನ್ನು ''ಸಂಸ್ಕೃತಕರ್ಣಾಟಾಂಧ್ರಭಾಷೆಗಳಲ್ಲಿ ಸರಳಕವಿ ಸಾರ್ವಭೌಮರೆನಿಸಿ ಬಹುಗ್ರಂಥಕರ್ತರಾಗಿ ಪ್ರಖ್ಯಾತಿಗೊಂಡಿರ್ಪ ಬ್ರ॥ ಶ್ರೀ॥ ರಾ॥ ಶ್ರೀ॥ ಉಲಚನಾಡು ಪೆನ್ಷನ್ ಸಿರಸ್ತೇದಾರ್ ವೆಂಕಟರಮಣಯ್ಯನವರಿಂದ ಸರಸಾಲಂಕಾರ ಶಬ್ದಾರ್ಥಭಾವಚಿತ್ರಕಾವ್ಯಮಾಗಿರುವ ಗಯೋಪಾಖ್ಯಾನವೆಂಬ ಕರ್ಣಾಟಚಂಪೂಪ್ರಬಂಧವು'' ಎಂಬುದಾಗಿ ಪರಿಚಯಿಸಿಕೊಂಡಿದ್ದಾರೆ. ಈ ಪರಿಚಯದಲ್ಲಿ ಅವರಿಗೆ ಆಂಧ್ರಭಾಷೆಯಲ್ಲಿ ಎಂದರೆ ತೆಲುಗಿನಲ್ಲಿ ಗ್ರಂಥರಚನೆಮಾಡುವ ಶಕ್ತಿಯಿದ್ದಿತೆನ್ನುವುದು ಸುವಿದಿತವೇ ಇದೆ. ಆದುದರಿಂದ ಇಲ್ಲಿಯ ಗರ್ಭಕವಿತ್ವದ ನಿದರ್ಶನಗಳು ತೆಲುಗಿನ ಮಾದರಿಗಳಿಗೆ ಸಮೀಪವಾಗಿರುವ ಶುದ್ಧವಾದ ಲಕ್ಷ್ಯಗಳೆಂದು ಬೇಕಾದರೆ ಗ್ರಾಹ್ಯವಾಗಬಹುದು. ಪ್ರಸ್ತುತ, ಇಲ್ಲಿಯ ನಿದರ್ಶನಗಳಲ್ಲಿ ಮುಖ್ಯಪದ್ಯಜಾತಿಯನ್ನೂ ಅದರ ಗರ್ಭಸ್ಥ ರೂಪಾಂತರಗಳನ್ನೂ ಒಟ್ಟಿಗೆ ಕಾಣುವ ಹಾಗೆ ಕವಿಯೇ ಬರೆದಿರುವುದೂ, ಇವನ್ನು ಕಥಾಭಾಗವಾಗಿ ಸಂಯೋಜಿಸಿರುವುದೂ ಗಮನಾರ್ಹವಾಗಿವೆ. ಈಗ ಆ ನಿದರ್ಶನಗಳನ್ನು ಇಲ್ಲಿ ಒಂದೊಂದಾಗಿ ಉದ್ಧರಿಸಬಹುದಾಗಿದೆ.

ಷಟ್ಕಂದಗರ್ಭಿತ ಕಂದ

ಮುಖ್ಯವೃತ್ತ:

ಖರಹಾ ಕರಧೃತಶರ ವರ । ಕರುಣಾಧರಣೀವರಸುಖಕರ ಹರಿ ತರುಸಂ ।
ಚರಪಾ ಸುರಸಮುದಯಪತಿ । ಶರಣಾ ಸರಸಾ ಕರಿನುತಚರಣಬಿಸರುಹಾ ॥ (೧೧-೨೬)

''ಇದರಲ್ಲಿ ಗರ್ಭಿತವಾಗಿರುವ ಆರು ಕಂದಪದ್ಯಗಳು'' :

ಕರಧೃತಶರ ವರಕರುಣಾ । ಧರಣೀವರಸುಖಕರ ಹರಿ ತರುಸಂಚರಪಾ ।
ಸುರಸಮುದಯಪತಿಶರಣಾ । ಸರಸಾ ಕರಿನುತಚರಣಬಿಸರುಹಾ ಖರಹಾ ॥

ಧರಣೀವರಸುಖಕರ ಹರಿ । ತರುಸಂಚರಪಾ ಸುರಸಮುದಯಪತಿಶರಣಾ ।
ಸರಸಾ ಕರಿನುತಚರಣಬಿ । ಸರುಹಾ ಖರಹಾ ಕರಧೃತಶರ ವರಕರುಣಾ ॥

ವರಸುಖಕರ ಹರಿ ತರುಸಂ । ಚರಪಾ ಸುರಸಮುದಯಪತಿಶರಣಾ ಸರಸಾ ।
ಕರಿನುತಚರಣಬಿಸರುಹಾ । ಖರಹಾ ಕರಧೃತಶರ ವರಕರುಣಾಧರಣೀ ॥

ಸುರಸಮುದಯಪತಿಶರಣಾ । ಸರಸಾ ಕರಿನುತಚರಣಬಿಸರುಹಾ ಖರಹಾ ।
ಕರಧೃತಶರ ವರಕರುಣಾ । ಧರಣೀವರಸುಖಕರ ಹರಿ ತರುಸಂಚರಪಾ ॥

ಸರಸಾ ಕರಿನುತಚರಣಬಿ । ಸರುಹಾ ಖರಹಾ ಕರಧೃತಶರ ವರಕರುಣಾ ।
ಧರಣೀವರಸುಖಕರ ಹರಿ । ತರುಸಂಚರಪಾ ಸುರಸಮುದಯಪತಿಶರಣಾ ॥

ಕರಿನುತಚರಣಬಿಸರುಹಾ । ಖರಹಾ ಕರಧೃತಶರ ವರಕರುಣಾಧರಣೀ ।
ವರಸುಖಕರ ಹರಿ ತರುಸಂ । ಚರಪಾ ಸುರಸಮುದಯಪತಿಶರಣಾ ಸರಸಾ ॥ (೧೧-೨೬ ರಿಂದ ೩೨)

ಮುಖ್ಯವೃತ್ತದ ಆಶಯವಿದು: ''ಎಲೈ ಖರಾಸುರನನ್ನು ನಿಗ್ರಹಿಸಿದವನೆ, ಕೈಯಲ್ಲಿ ಬಾಣವನ್ನು ಹಿಡಿದವನೆ, ಪರಮಸಾಧುಗಳಾದ ಲೋಕಮಾನ್ಯರಿಗೆ ಸುಖದಾಯಕನೆ, ವಿಷ್ಣುವೆ, ಕಪಿರಕ್ಷಕನೆ, ದೇವೇಂದ್ರನಿಗೆ ಆಶ್ರಯದಾತನೆ, ಗಜೇಂದ್ರನಿಂದ ನುತಿಸಲ್ಪಟ್ಟ ಪಾದಕಮಲಗಳುಳ್ಳವನೆ–''

ಉಳಿದ ಪದ್ಯಗಳಲ್ಲಿಯೂ ಈ ಆಶಯದ ಮಾತುಗಳನ್ನೇ ಬೇರೆಬೇರೆ ಅನುಕ್ರಮದಲ್ಲಿ ಕಾಣಬಹುದಾಗಿದೆಯಾದ್ದರಿಂದ ಅವುಗಳ ಆಶಯವನ್ನು ಇಲ್ಲಿ ಪ್ರತ್ಯೇಕವಾಗಿ ನಿರೂಪಿಸಿಲ್ಲ.

ಭಕ್ತಸಂಕೀರ್ತನದ ಹತ್ತು ಅಂಶಗಳು ಮುಖ್ಯವೃತ್ತದಲ್ಲಿದ್ದು, ಅವು ಉಳಿದ ಕಂದಪದ್ಯಗಳಲ್ಲಿ ಛಂದಸ್ಸಿಗೆ ಹೊಂದಿಕೊಂಡು ವ್ಯತ್ಯಸ್ತಕ್ರಮದಲ್ಲಿ ಸರಣಿಗೊಳ್ಳುವುದನ್ನು ಕಾಣಬಹುದಾಗಿದೆ. ಈಗಾಗಲೇ ತೆಲುಗು 'ಚತುರ್ವಿಧಕಂದ'ದ ಲಕ್ಷ್ಯಪದ್ಯಗಳಲ್ಲಿ ಗಮನಿಸಿರುವಂತೆ ಇಲ್ಲಿಯೂ ೨-೪ನೆಯ ಪಾದಗಳಲ್ಲಿ ೮ನೆಯ ಗಣ ᑌᑌ– (ಅಥವಾ– –) ಆಗಿರುವುದನ್ನೂ ೧-೩ನೆಯ ಪಾದಗಳಲ್ಲಿ ೨ನೆಯ ಗಣ ᑌᑌᑌᑌ (ಅಥವಾ ᑌ–ᑌ) ಆಗಿರುವುದನ್ನೂ ಗುರುತಿಸಬಹುದು. ಈ ಪದ್ಯದಲ್ಲಿ ೧೭ಸಲ ಪ್ರಾಸಾಕ್ಷರವಾದ ರಕಾರ ಆವೃತ್ತಿಗೊಂಡು, ಅವು ಉಳಿದ ಪದ್ಯಗಳ ರಚನೆಗೆ ಹೇಗೆ ಒದಗಿವೆಯೆಂದು ವಿಶ್ಲೇಷಿಸುವುದು ಕುತೂಹಲಕರವಾದುದು.

ದ್ವಿಪದ ಮತ್ತಕೋಕಿಲದ್ವಯ ಕಂದ ಮಣಿಗಣನಿಕರ– ವಿಸ್ಫುರಿತ ಇತ್ಯಾದಿ ಪದ್ಯನವಕಗರ್ಭಿತ ಸೀಸ

ಮುಖ್ಯವೃತ್ತ

ನೀರದಪ್ರಭ ಯಾಮಿನೀಚರನೀಚಮಾರಣ ಹಸ್ತಿಪಾ ಮನುರಮ್ಯವಂಶ್ಯ
ಹಾರಶೋಭಿತ ಶ್ಯಾಮಲಾಂಗ ಮಹಾತ್ಮಕಾ ರಘುಸತ್ತಮಾ ಕಮಲಾನನ ಘನ
ವಾರಣಸ್ತುತ ಭೀಮವಾರಿಧಿಬಂಧನಾ ರಣಭೀಕರಾ ನವಲಕ್ಷಣಾಢ್ಯ
ಚಾರುಭೂಷಣ ರಾಮ ಸದ್ಗುಣಸಾರ ನಾರದರಂಜನಾನತರಕ್ಷಣಪ್ರ ॥

ಸ್ವನವದುರುಶರವಿಸರ ಸುವದನವೇದ
ನುತಪದಯುಗ ತ್ರಿದಶಪತಿರತಿದ ಶೂರ
ವನಜದಳನಯನ ಪವನತನಯಸೇವ್ಯ
ನಗಧರ ಭವಭಯಹರ ವಿಹಗಪಗಮನ ॥ (೧೧-೩೩, ೩೪)

ದ್ವಿಪದ

ನೀರದಪ್ರಭ ಯಾಮಿನೀಚರನೀಚ । ಮಾರಣ ಹಸ್ತಿಪಾ ಮನುರಮ್ಯವಂಶ್ಯ ॥
ಹಾರಶೋಭಿತ ಶ್ಯಾಮಲಾಂಗ ಮಹಾತ್ಮ । ಕಾ ರಘುಸತ್ತಮಾ ಕಮಲಾನನ ಘನ ॥
ವಾರಣಸ್ತುತ ಭೀಮವಾರಿಧಿಬಂಧ । ನಾ ರಣಭೀಕರಾ ನವಲಕ್ಷಣಾಢ್ಯ ॥
ಚಾರುಭೂಷಣ ರಾಮ ಸದ್ಗುಣಸಾರ । ನಾರದರಂಜನಾ ನತರಕ್ಷಣಪ್ರ ॥ (೧೧-೩೫, ೩೬)

ಮತ್ತಕೋಕಿಲ (೧)

ನೀರದಪ್ರಭ ಯಾಮಿನೀಚರನೀಚಮಾರಣ ಹಸ್ತಿಪಾ
ಹಾರಶೋಭಿತ ಶ್ಯಾಮಲಾಂಗ ಮಹಾತ್ಮಕಾ ರಘುಸತ್ತಮಾ
ವಾರಣಸ್ತುತ ಭೀಮವಾರಿಧಿಬಂಧನಾ ರಣಭೀಕರಾ
ಚಾರುಭೂಷಣ ರಾಮ ಸದ್ಗುಣಸಾರ ನಾರದರಂಜನಾ ॥ (೧೧–೩೮)

ಮತ್ತಕೋಕಿಲ (೨)

ಯಾಮಿನೀಚರನೀಚಮಾರಣ ಹಸ್ತಿಪಾ ಮನುರಮ್ಯವಂ
ಶ್ಯಾಮಲಾಂಗ ಮಹಾತ್ಮಕಾ ರಘುಸತ್ತಮಾ ಕಮಲಾನನಾ
ಭೀಮವಾರಿಧಿಬಂಧನಾ ರಣಭೀಕರಾ ನವಲಕ್ಷಣಾ
ರಾಮ ಸದ್ಗುಣಸಾರ ನಾರದರಂಜನಾ ನತರಕ್ಷಣಾ ॥ (೧೧–೩೯)

(ಇಲ್ಲಿ ೨–೩ನೆಯ ಪಾದಗಳೆಡೆ ಮನುರಮ್ಯವಂಶ್ಯ + ಅಮಲಾಂಗ ಎಂದು ಭಾವಿಸಬೇಕಾಗುವುದು.)

ಕಂದ

ಮನುರಮ್ಯವಂಶ್ಯ ಕಮಲಾ । ನನ ಘನನವಲಕ್ಷಣಾಢ್ಯ ನತರಕ್ಷಣಪ್ರ ।
ಸ್ವನವದುರುಶರವಿಸರ ಸುವ । ದನವೇದನುತಪದಯುಗ ತ್ರಿದಶಪತಿರತಿದಾ ॥ (೧೧–೪೦)

ಮಣಿಗಣನಿಕರ

ಸ್ವನವದುರುಶರವಿಸರ ಸುವದನವೇ
ದನುತಪದಯುಗ ತ್ರಿದಶಪತಿರತಿದಾ
ವನಜದಳನಯನ ಪವನತನಯಸೇ
ವ್ಯ ನಗಧರ ಭವಭಯಹರ ವಿಹಗಪಾ ॥ (೧೧–೪೧)

ವಿಸ್ಫುರಿತ

ನೀರದಪ್ರಭ । ಹಾರಶೋಭಿತ । ವಾರಣಸ್ತುತ । ಚಾರುಭೂಷಣ ॥ (೧೧–೪೨)

ಈ ಗರ್ಭಕವಿತ್ವದ ಲಕ್ಷ್ಯದಲ್ಲಿ, ಈಗಾಗಲೇ ನಾವು 'ಮದನತಿಲಕ'ದ ಲಕ್ಷ್ಯದಲ್ಲಿ ನೋಡಿರುವಂತೆ ಸಂಶ್ಲಿಷ್ಟವಾಕ್ಯದ, ಕರ್ತೃಕರ್ಮಕ್ರಿಯಾನುಸಾರ ರಚನೆಯುಳ್ಳ ಶಬ್ದನ್ಯಾಸವಿಲ್ಲವೆಂಬುದನ್ನು ಸುಲಭವಾಗಿ ಗುರುತಿಸಬಹುದು. ಇಲ್ಲಿಯ ಬಿಡಿಯಾದ ಇಲ್ಲವೆ ಸಮಾಸನಿಷ್ಠವಾದ ಸಂಬೋಧನಪರ ಕರ್ತೃಪದಗಳ ಮಾಲೆಯಿಂದಾಗಿ, ಮುಖ್ಯವೃತ್ತ ಬೇರೆ ವೃತ್ತಗಳಾಗಿ ಅಳವಡುವುದು ಸುಲಭವಾಗಿದೆ. ಈ ಕಾವ್ಯಭಾಗವು ಷಟ್ಕಂದಗರ್ಭಿತ ಕಂದದ ಮುಂದುವರಿಕೆಯೇ ಆಗಿರುವುದರಿಂದ ಇದೂ ಭಕ್ತಸಂಕೀರ್ತನದ ಭಾಗವೇ ಆಗಿದೆ. ಇದು ಶ್ರೀರಾಮನ ಸ್ತುತಿಯೆಂಬುದೂ ವಿದಿತವೇ ಇದೆ.

ಮುಖ್ಯವೃತ್ತವಾಗಿರುವ ಸೀಸ ಮತ್ತು ತೇಟಗೀತಗಳೂ ದ್ವಿಪದವೂ ತೆಲುಗು ಸಾಹಿತ್ಯದ ಛಂದೋಪದ್ಧತಿಗೆ ಅನುಗುಣವಾಗಿ ರಚಿತವಾಗಿವೆ. ಅಂಶಗಣಾತ್ಮಕವೆಂಬುದನ್ನು ಗಮನಿಸಬೇಕು. ವಿಸ್ಫುರಿತವೆಂಬ ವರ್ಣವೃತ್ತ ಸಂಸ್ಕೃತ ಛಂದೋಗ್ರಂಥಗಳಲ್ಲಿ ಅನುಕ್ತವೆಂದು ತೋರುತ್ತದೆ. ಉಳಿದ ವರ್ಣವೃತ್ತಗಳಲ್ಲಿ , ಮಣಿಗಣನಿಕರ (ದಿಟವಾಗಿ ಇದು ಮಣಿಗುಣನಿಕರ) ಲಕ್ಷಣಾನ್ವಿತವಾದುದು. ಕರ್ತೃ ಮಲ್ಲಿಕಾಮಾಲೆ (ರಸಜಜಭರ) ಯನ್ನು ತೆಲುಗಿನ ರೂಢಿಯಂತೆ ಮತ್ತಕೋಕಿಲವೆಂದಿದ್ದಾರೆ.

ಮುಖ್ಯವೃತ್ತದ ಆಶಯ : ''ಮೋಡದ ಕಾಂತಿಯುಳ್ಳವನೆ, ರಾಕ್ಷಸರೆಂಬ ನೀಚರನ್ನು ಸಂಹರಿಸುವವನೆ, ಗಜೇಂದ್ರರಕ್ಷಕನೆ, ಸೂರ್ಯವಂಶದ ವೈವಸ್ವತಮನುವಿನ ಮಗನಾದ ಇಕ್ಷ್ವಾಕುವಿನಿಂದ ಶೋಭಿಸುವ ಸಂತತಿಗೆ ಸೇರಿದವನೆ, ಮಾಲೆಯಿಂದ ಅಲಂಕೃತನಾದವನೆ, ನೀಲವರ್ಣದ ಮೈಯವನೆ, ಮಹನೀಯನೆ, ರಘುಕುಲಶ್ರೇಷ್ಠನೆ, ತಾವರೆಮೊಗದವನೆ, ಗಜೇಂದ್ರನಿಂದ ಸ್ತುತನಾದವನೆ, ಭಯಂಕರವಾದ ಸಮುದ್ರವನ್ನು ಸೇತುವೆಯಿಂದ ಕಟ್ಟಿದವನೆ, ಯುದ್ಧದಲ್ಲಿ ಭಯೋತ್ಪಾದಕನೆ, ಶುಭಲಕ್ಷಣಗಳಿಂದ ಸಂಪದ್ಯುಕ್ತನೆ, ಮನೋಹರವಾದ ಅಲಂಕಾರಗಳನ್ನು

ತೊಟ್ಟವನೆ, ಸದ್ಗುಣಗಳ ಸಾರವೆ, ನಾರದನ ಸ್ತುತಿಯಿಂದ ಸುಪ್ರೀತನೆ, ಮಣಿದವರನ್ನು ಕಾಪಾಡುವವನೆ, ಶ್ರೀರಾಮನೆ, ಧ್ವನಿಯುಕ್ತವಾದ ಶ್ರೇಷ್ಠವಾದ ಬಾಣಗಳನ್ನುಳ್ಳವನೆ, ಸ್ಫುಟೋಚ್ಚಾರದ ವೇದಗಳಿಂದ ಸ್ತುತವಾದ ಪಾದಗಳುಳ್ಳವನೆ, ಇಂದ್ರನ ಕಾಂಕ್ಷೆಯನ್ನು ಪೂರೈಸುವವನೆ, ಶೂರನೆ, ಪುಂಡರೀಕಾಕ್ಷನೆ, ಆಂಜನೇಯನಿಂದ ಸೇವಿಸಲ್ಪಡುವವನೆ, ಗೋವರ್ಧನಗಿರಿಧಾರಿಯೆ, ಸಂಸಾರದ ಭಯವನ್ನು ಪರಿಹರಿಸುವವನೆ, ಗರುಡಗಮನನೇ—''

ಕಂದಗರ್ಭಿತ ಚಂಪಕಮಾಲಾವೃತ್ತ

ಮುಖ್ಯವೃತ್ತ

ಸ್ಥಿರ ಸುವಿನೋದ ಶೂರ ಭವ ದೇವವರಸ್ತುತ ಮಾಧವಧೂಧವಾ
ಖರದಮನಾ ಸುಧೀರ ಖಲಕಾಲ ಮುದಶ್ರದ ಹಾರಧಾರಣಾ
ಹರಿ ಪವನಾಂಗ ಭೂರತಿದ ಯಾದವವರ್ಯ ಸುಧೀವಿನೋದದಾ
ಕ್ಷರ ವರದಾತ ತಾರಿವಧಸಾಧನ ಧರ್ಮಗ ರಾಮ ಭೂವರಾ ॥ (೧೧–೪೫)

ಕಂದ

ಸುವಿನೋದ ಶೂರ ಭವ ದೇ । ವ ವರಸ್ತುತ ಮಾಧವಧೂಧವಾ ಖರದಮನಾ ।
ಪವನಾಂಗಭೂರತಿದ ಯಾ । ದವವರ್ಯ ಸುಧೀವಿನೋದದಾಕ್ಷರ ವರದಾ ॥ (೧೧–೪೬)

ಈ ನಿದರ್ಶನದಲ್ಲಿ, ಮುಖ್ಯವೃತ್ತದ ಆಶಯ: ''ಸ್ಥಿರನೆ, ವಿನೋದಿಯೆ, ಶೂರನೆ, ದೇವನೆ, ದೇವೇಂದ್ರನಿಂದ ಸ್ತುತನೆ, ಲಕ್ಷ್ಮೀರಮಣನೆ, ಖರಾಸುರನನ್ನು ನಿಗ್ರಹಿಸಿದವನೆ, ಪರಮಜ್ಞಾನಿಯೆ, ನೀಚರಿಗೆ ಯಮಸ್ವರೂಪನೆ, ಸಂತೋಷದಾಯಕನೆ, ಮಾಲೆ ತೊಟ್ಟವನೆ, ಇಂದ್ರ ಮತ್ತು ಆಂಜನೇಯರ ಹಾಗೂ ಭೂಮಿಯ ಕಾಂಕ್ಷೆಯನ್ನು ಪೂರೈಸುವವನೆ, ಯದುಕುಲಶ್ರೇಷ್ಠನೆ, ವಿವೇಕಿಗಳನ್ನು ರಂಜಿಸುವವನೆ, ನಾಶವಿಲ್ಲದವನೆ, ವರದಾಯಕನೆ—''

ಈ ವೃತ್ತ ನಾಗಬಂಧವೆಂಬ ಆಕಾರಚಿತ್ರವಾಗಿಯೂ ಅಳವಡುವುದೆಂಬ ಸೂಚನೆಯನ್ನು ಕರ್ತೃ ಕೊಟ್ಟಿದ್ದಾರೆ. ಇದನ್ನು ಆ ಪ್ರಕರಣದಲ್ಲಿಯೇ ಗಮನಿಸಬಹುದು.

ಕಂದಾಷ್ಟಕಗರ್ಭಿತ ಚಂಪಕಮಾಲಾವೃತ್ತ

ಮುಖ್ಯವೃತ್ತ

ಹರಿ ಪರಮಂ ಸ್ವಬಾಂಧವದಯಾಪರನನ್ವಹಮೆಮ್ಮ ದುಃಖಮಂ
ಪರಿಹರಿಪಂ ನಗಾರಿಮುಖಪಾಲ ರಮಾರಮಣೀಮನೋಹರಂ
ಸುರವರದಂ ಸತೀ ನಿನಗೆ ಸೋದರ ಖಂಡಿತಭಂಡನಾಗತಾ
ಸುರ ಕರಿಪಂ ಸುಭಕ್ತಿ ಪರಿಶುದ್ಧರ ಕಾಯ್ವ ಬಲ್ಲೆ ಸನ್ನುತಂ ॥ (೧೨–೭)

ಎಂಟು ಕಂದಗಳು

ಪರಮಂ ಸ್ವಬಾಂಧವ ದಯಾ । ಪರನನ್ವಹಮೆಮ್ಮ ದುಃಖಮಂ ಪರಿಹರಿಪಂ ।
ವರದಂ ಸತೀ ನಿನಗೆ ಸೋ । ದರ ಖಂಡಿತಭಂಡನಾಗತಾಸುರ ಕರಿಪಂ ॥

ಹರಿ ಪನ್ನಗಾರಿಮುಖಪಾ । ಲ ರಮಾರಮಣೀಮನೋಹರಂ ಸುರವರದಂ ।
ಕರಿಪಂ ಸುಭಕ್ತಿ ಪರಿಶು । ದ್ಧರ ಕಾಯ್ವ ಬಲ್ಲೆ ಸನ್ನುತಂ ಹರಿ ಪರಮಂ ॥

ವರದಂ ಸತೀ ನಿನಗೆ ಸೋ । ದರ ಖಂಡಿತಭಂಡನಾಗತಾಸುರ ಕರಿಪಂ ।
ಪರಮಂ ಸ್ವಬಾಂಧವದಯಾ । ಪರನನ್ವಹಮೆಮ್ಮ ದುಃಖಮಂ ಪರಿಹರಿಪಂ ॥

ಕರಿಪಂಸುಭಕ್ತಿ ಪರಿಶು । ದ್ಧರ ಕಾಯ್ವ ಬಲ್ಲೆ ಸನ್ನುತಂ ಹರಿ ಪರಮಂ ।
ಹರಿಪನ್ನಗಾರಿಮುಖಪಾ । ಲ ರಮಾರಮಣೀಮನೋಹರಂ ಸುರವರದಂ ॥

ಪರಮಂ ಸ್ವಬಾಂಧವದಯಾ । ಪರನನ್ವ ಹಮೆಮ್ಮ ದುಃಖಮಂ ಪರಿಹರಿಪಂ ।
ಹರಿ ಪನ್ನಗಾರಿಮುಖಪಾ । ಲ ರಮಾರಮಣೀಮನೋಹರಂ ಸುರವರದಂ ॥

ಹರಿಪಂ ನಗಾರಿಮುಖಪಾ । ಲ ರಮಾರಮಣೀಮನೋಹರಂ ಸುರವರದಂ ।
ವರದಂ ಸತೀ ನಿನಗೆ ಸೋ । ದರ ಖಂಡಿತಭಂಡನಾಗತಾಸುರ ಕರಿಪಂ ॥

ವರದಂ ಸತೀ ನಿನಗೆ ಸೋ । ದರ ಖಂಡಿತಭಂಡನಾಗತಾಸುರ ಕರಿಪಂ ।
ಕರಿಪಂ ಸುಭಕ್ತಿ ಪರಿಶು । ದ್ಧರ ಕಾಯ್ವುವ ಬಲ್ಲೆ ಸನ್ನುತಂ ಹರಿ ಪರಮಂ ॥

ಕರಿಪಂ ಸುಭಕ್ತಿ ಪರಿಶು । ದ್ಧರ ಕಾಯ್ವುವ ಬಲ್ಲೆ ಸನ್ನುತಂ ಹರಿ ಪರಮಂ ।
ಪರಮಂ ಸ್ವಬಾಂಧವ ದಯಾ । ಪರನನ್ವಹಮೆಮ್ಮ ದುಃಖವಂ ಪರಿಹರಿಪಂ ॥ (೧೬–೮–೧೫)

ಈ ಕಾವ್ಯಭಾಗ ಪ್ರಕೃತ 'ಗಯೋಪಾಖ್ಯಾನ'ದಲ್ಲಿ ಸುಭದ್ರೆಯ ರಾಯಭಾರ, ಸುಭದ್ರಾರ್ಜುನಸಂವಾದದ ಮುಂದಿನ ಭಾಗವಾಗಿ, ಕೃಷ್ಣನಿಗೆ ಸುಭದ್ರೆ ತನ್ನ ಪತಿಯು ಶರಣುಬಂದ ಗಯನನ್ನು ಸಂರಕ್ಷಿಸುವ ಸಂಕಲ್ಪದಿಂದಿದ್ದಾನೆ ಎಂಬುದಾಗಿ ತಿಳಿಸುವ ಸಂದರ್ಭದಲ್ಲಿ ಬಂದಿದೆ. ಅರ್ಜುನನ ಮಾತು ಎಂದು ಆಕೆ ಕೃಷ್ಣನಿಗೆ ನಿವೇದಿಸಿದ ಪದ್ಯವೇ ಇಲ್ಲಿ ಸದ್ಯದ ಚಮತ್ಕಾರದ ಭಾಗವಾಗಿದೆ.

ಈ ಮುಖ್ಯವೃತ್ತದ ಆಶಯ ಈ ರೀತಿಯಾಗಿದೆ: ''ಎಲೈ ಕಾಂತೆ, ಶ್ರೀಕೃಷ್ಣನು ಅತ್ಯುನ್ನತನು; ತನ್ನ ಬಂಧುಗಳ ಮೇಲೆ ದಯೆತೋರುವವನು, ಪ್ರತಿದಿನವೂ ನಮ್ಮ ದುಃಖವನ್ನು ಪರಿಹರಿಸುವನು, ಇಂದ್ರನೇ ಮೊದಲಾದವರನ್ನು ಕಾಪಾಡುವವನು; ಲಕ್ಷ್ಮೀದೇವಿಯ ಮನಸ್ಸನ್ನು ಗೆದ್ದವನು, ದೇವತೆಗಳಿಗೆ ವರದಾಯಕನು, ಯುದ್ಧಕ್ಕೆ ಬಂದ ಅಸುರರನ್ನು ನಿಗ್ರಹಿಸಿದವನು, ಗಜೇಂದ್ರರಕ್ಷಕನು ನಿನ್ನ ಸೋದರನಾಗಿದ್ದಾನೆ. ಈ ಖ್ಯಾತನು ಒಳ್ಳೆಯ ಭಕ್ತಿಯಿಂದ ಪರಿಶುದ್ಧರಾದವರನ್ನು ಕಾಯುವವನು ಎಂಬುದನ್ನು ನಾನು ಬಲ್ಲೆನು.''

ಗರ್ಭಸ್ಥಪದ್ಯಗಳಲ್ಲಿ ಶಬ್ದಗಳ ಸ್ಥಾನಾಂತರದಿಂದ ಉಂಟಾಗುವ ಕೆಲವು ಅರ್ಥಭೇದಗಳೂ ಗಮನಿಸತಕ್ಕುವಾಗಿವೆ. ಉದಾಹರಣೆಗೆ, ೨ನೆಯ ಕಂದದಲ್ಲಿ, ''ಹರಿಪನ್ನಗಾರಿ ಮುಖಪಾಲ'' ಎಂದರೆ ''ಇಂದ್ರ, ಗರುಡ ಮುಂತಾದವರನ್ನು ಪಾಲಿಸುವವನು'' ಎಂದಾದರೆ, ೪ನೆಯದರಲ್ಲಿ ''ಗಜೇಂದ್ರನನ್ನು ಪಾಲಿಸಿದವನು'' (ಕರಿಪಂ) ಎಂದೂ, ೬ನೆಯದರಲ್ಲಿ ''ಸೂರ್ಯನನ್ನು ಪಾಲಿಸಿದವನು (ಹರಿಪಂ)'', ''ಇಂದ್ರನೇ ಮೊದಲಾದವರನ್ನು ಪಾಲಿಸಿದವನು (ನಗಾರಿಮುಖಪಾಲ) ಎಂದೂ ಅರ್ಥವಾಗುವುದು. ಇಂತಹ ಕಡೆ ಚಮತ್ಕಾರ ನಿಜವಾಗಿ ಹೃದ್ಯ. ಈ ಪದ್ಯದಲ್ಲಿ ಪ್ರಾಸಾಕ್ಷರವಾದ ರಕಾರ ೧೬ ಸಲ ಆವೃತ್ತಿಗೊಂಡಿದ್ದು, ಕಂದಗಳ ರಚನೆಗೆ ಅವು ಹೇಗೆ ಒದಗಿವೆಯೆನ್ನುವುದನ್ನು ಗಮನಿಸಿದರೆ, ಕವಿಕೌಶಲದ ಅರಿವು ನಮಗೆ ಸ್ವಲ್ಪಮಟ್ಟಿಗೆ ವಿದಿತವಾಗುತ್ತದೆ.

ಅಡಿಟಿಪ್ಪಣಿಗಳು

1. ಈ ಕೃತಿಯ ಬಂಧಚಮತ್ಕಾರಗಳನ್ನು 'ಗೂಢಚಿತ್ರ'ದ ಅಧ್ಯಾಯದಲ್ಲಿ ಗಮನಿಸಬಹುದಾಗಿದೆ. ಕೃತಿಯ ಮೊದಲ ಭಾಗದ ಪ್ರಕಟನೆ ೧೯೦೫ರಲ್ಲಿ ಮೈಸೂರಿನ ಸರ್ಕಾರಿ ಮುದ್ರಣಾಲಯದಲ್ಲಿ ಆಗಿದ್ದರೂ, ರಚನೆ ೧೮೯೯ರ ವೇಳೆಗಾಗಲೇ ಸಿದ್ಧವಾಗಿದ್ದಿತು ಎಂದು ಆರ್. ನರಸಿಂಹಾಚಾರ್ಯರ ಪ್ರಶಂಸೋಲ್ಲೇಖದಿಂದ ತಿಳಿಯುವುದು. ಅಲ್ಲದೆ ಅವರ ಹಾಗೂ ಎ. ಮಹದೇವ ಶಾಸ್ತ್ರಿಗಳು, ಮುಖ್ಯಸ್ಥರು, ಪ್ರಾಚ್ಯಕೋಶಾಗಾರ ಇವರ ಮೆಚ್ಚುಮಾತುಗಳ ಭಾಗ ಕೃತಿಸ್ವರೂಪದ ವಿವರಣೆಯನ್ನೂ ಕೆಲಮಟ್ಟಿಗೆ ನೀಡುತ್ತದೆ. ಕೃತಿಗೆ ಕೃತಿಕರ್ತರ ಸ್ವೋಪಜ್ಞವಾದ ವ್ಯಾಖ್ಯಾನವೂ ವಿಸ್ತಾರವಾಗಿರುವುದರಿಂದ, ಕೃತಿಯ ಪದ್ಯಗಳ ಆಶಯ ತಿಳಿಯಲು ಅನುಕೂಲವಾಗಿದೆ.

2. ಈ ಕೃತಿಯು ಇನ್ನೂ ಪ್ರಕಟವಾಗಿರುವಂತೆ ತೋರುವುದಿಲ್ಲ. ಮೈಸೂರಿನ ಪ್ರಾಚ್ಯಸಂಶೋಧನಾಲಯದಲ್ಲಿ ನಿಕ್ಷಿಪ್ತವಾಗಿರುವ ಹಸ್ತಪ್ರತಿಯಿಂದ ಪದ್ಯವನ್ನುದ್ಧರಿಸಿದೆ.

3. ಈ ಪಂಚಪಾಷಾಣ ವ್ಯಾಖ್ಯಾನವು ಸಂಸ್ಕೃತದಲ್ಲಿದ್ದು, ಆರ್. ಶಾಮಶಾಸ್ತ್ರಿಗಳ 'ಜಗನ್ನಾಥವಿಜಯ'ದ ಪರಿಷ್ಕರಣದಲ್ಲಿ ಅನುಬಂಧವಾಗಿ ಪ್ರಕಟಗೊಂಡಿದೆ. ವಿಸ್ತಾರವಾಗಿರುವ ಈ ವ್ಯಾಖ್ಯಾನದ ಆದಿಭಾಗದ ಪೀಠಿಕೆಯಲ್ಲಿ "....ದೇವತಾಪ್ರಾರ್ಥನಾರೂಪನಾಂದೀಮಂಗಲಶ್ಲೋಕೇ ತ್ರಿವಿಧಮಪಿ ಮಂಗಲಮಾಚರತಿ" ಎಂಬ ಮಾತನ್ನು ಗಮನಿಸಬೇಕು. ರಾಜ ಮತ್ತು ದೇವತಾಪಕ್ಷಗಳ ಅನೇಕವಾದ ಅರ್ಥಗಳನ್ನು ಹೊರಡಿಸುವ ಹಾಗೆ ಅರ್ಥಸಂಯೋಜನೆ ಪದ್ಯಗಳಲ್ಲಿದೆ.

4. ನೋಡಿ: **Kalanath Jha, *Figurative Poetry in Sanskrit Literature*, 1975, pp 155–56.**

5. ಈ ವೃತ್ತದ ಆಶಯವನ್ನು ಸಮರ್ಪಕವಾಗಿ ವಿವರಿಸುವುದರಲ್ಲಿ ಕೆಲವು ತೊಡಕುಗಳಿವೆ. "ಈ ಶ್ಲೋಕದಲ್ಲಿ ತಪ್ಪುಗಳಿವೆ" ಎಂಬುದಾಗಿ ಕವಿಚರಿತೆಕಾರರೂ ಭಾವಿಸಿದ್ದಾರೆ. ಆದ್ದರಿಂದ ಇಲ್ಲಿಯ ಚಮತ್ಕಾರನಿರ್ದೇಶನದಲ್ಲಿ ಕೆಲಮಟ್ಟಿಗೆ ಸಂದಿಗ್ಧತೆಯುಂಟು ಎಂದು ಹೇಳಬೇಕಾಗಿದೆ.

6. ಈ ವೃತ್ತದ ಆಶಯವನ್ನು ಸಹ ಸಮರ್ಪಕವಾಗಿ ವಿವರಿಸುವುದರಲ್ಲಿ ಕೆಲವು ತೊಡಕುಗಳಿವೆ. ಇಲ್ಲಿಯೂ ಕೆಲವು ತಪ್ಪುಗಳಾಗಿರುವಂತೆ ತೋರುವುದು. ಆದ್ದರಿಂದ ತಕ್ಕ ಪದಚ್ಛೇದಗಳನ್ನು ಮಾಡದೆ ಪದ್ಯವನ್ನು ಅಲ್ಲಲ್ಲಿ ಹಾಗೆಯೇ ಉಳಿಸಿದೆ.

೫

ಗೂಢಚಿತ್ರ

ಗೂಢಚಿತ್ರ

ಅರ್ಥಚಿತ್ರಗಳಲ್ಲಿ ಸೇರುವ ಪ್ರಶ್ನೋತ್ತರ, ಏಕಾನೇಕೋತ್ತರ, ಗೂಢ, ಕೂಟ, ಪ್ರಹೇಳಿಕಾ ಇತ್ಯಾದಿಗಳಲ್ಲಿ ಗೂಢಚಿತ್ರ ಸಹ ಒಂದು. ಇಲ್ಲಿ ಕ್ರಿಯೆಯೋ, ಕಾರಕವೋ, ಕರ್ಮಪದವೋ, ಸಂಬಂಧಸೂಚಕವಾದೊಂದು ಪದವೋ, ಒಂದು ಪಾದವೋ ಹೇಳದೆ ಅಡಗಿಸಿರುತ್ತದೆ. ಹಾಗೆ ಅಡಗಿಸಿಟ್ಟ ಪದವನ್ನೋ ಪದಾಂಶವನ್ನೋ ಪಾದವನ್ನೋ ಗುರುತಿಸುವ ಹಾಗೆ ಪದ್ಯರಚನೆಯನ್ನು ಮಾಡುವುದು ಈ ಗುಂಪಿನ ರಚನೆಗಳಲ್ಲಿ ಕಂಡುಬರುತ್ತದೆ. ಇದು 'ಕಣ್ಣುಮುಚ್ಚಾಲೆಯಾಟ'ದ ರೀತಿಯ ಒಂದು ಕವಿತಾಕ್ರೀಡೆ. ಉದಾಹರಣೆಗೆ ಸೂಚಿಸಬಹುದಾದರೆ, ಸಂಸ್ಕೃತದಲ್ಲಿ, ರಘುನಾಥ ದೀಕ್ಷಿತನ ಮಗ ಕೃಷ್ಣಕವಿ ರಾಮಾಯಣದ ಕಥೆಯನ್ನು ವಸ್ತುವಾಗಿಟ್ಟುಕೊಂಡು ೧೪ ಸರ್ಗಗಳ 'ಕ್ರಿಯಾಗೋಪನ ರಾಮಾಯಣ' ಅಥವಾ 'ಚಂದ್ರಕಲಾವಿಲಾಸ' ಎಂಬ ಕಾವ್ಯವನ್ನು ರಚಿಸಿದ್ದಾನೆ; ಇದರಲ್ಲಿ ಎಲ್ಲ ಪದ್ಯಗಳಲ್ಲಿಯೂ ಕ್ರಿಯೆ ಸ್ಪಷ್ಟವಾಗಿ ಇರುವಂತೆ ತೋರದ ಹಾಗೆ ಅಡಗಿಸಲ್ಪಟ್ಟಿರುವುದು ಕಾಣುತ್ತದೆ. ಹೀಗೆ ಸಮಗ್ರವಾಗಿ ಅಲ್ಲದಿದ್ದರೂ ಇತರ ಕೃತಿಗಳಲ್ಲಿ ಯಾವುದಾದರೊಂದು ರೀತಿಯಲ್ಲಿ ಕ್ರಿಯೆಯೋ ಕಾರಕವೋ ಮತ್ತಾವುದಾದರೂ ವಾಕ್ಯಾಂಶವೋ ಗೂಢವಾಗಿರುವ ನಿದರ್ಶನಗಳು ಅಲ್ಲಲ್ಲಿ ಕಂಡುಬರುವುವು.

ಸಂಸ್ಕೃತ ಅಲಂಕಾರಗ್ರಂಥಗಳಲ್ಲಿ ಗೂಢಚಿತ್ರಗಳು

ರುದ್ರಟನ (ಸು.೮೫೦) 'ಕಾವ್ಯಾಲಂಕಾರ'ದಲ್ಲಿ, ಅದರ ಪಂಚಮಾಧ್ಯಾಯದಲ್ಲಿ, ''ಪ್ರಚ್ಛನ್ನತ್ವಾದ್ಭವತಸ್ತದ್ಗೂಢೇ ಕಾರಕಕ್ರಿಯಾಂತರಯೋಃ'' ಎಂಬುದಾಗಿ ಒಂದು ಸೂತ್ರಭಾಗದಲ್ಲಿ (೨೬) ಕಾರಕಗೂಢ ಮತ್ತು ಕ್ರಿಯಾಗೂಢಗಳನ್ನು ಕುರಿತಿದೆ. ಕಾರಕ ಮತ್ತು ಕ್ರಿಯೆಗಳು ಪ್ರಚ್ಛನ್ನವಾಗಿ ಇದ್ದಲ್ಲಿ, ಕ್ರಮವಾಗಿ ಕಾರಕಗೂಢವೆಂದೂ ಕ್ರಿಯಾಗೂಢವೆಂದೂ ಕರೆಯಲ್ಪಡುತ್ತವೆಯೆಂಬುದು ಇಲ್ಲಿಯ ಅಭಿಪ್ರಾಯ. ಇಲ್ಲಿಯೇ ಕೊಟ್ಟಿರುವ ಲಕ್ಷ್ಯದ (೩೦) ಪೂರ್ವಾರ್ಧ ಕಾರಕಗೂಢದ, ಉತ್ತರಾರ್ಧ ಕ್ರಿಯಾಗೂಢದ ಸ್ವರೂಪವನ್ನು ವಿಶದಪಡಿಸಲೆಂದು ಬಂದವಾಗಿವೆ. ಆ ಲಕ್ಷ್ಯ :

> ಪಿಬತೋ ತವಾರಿ ವಾಸ್ಯಾಂ ಸರಿತಿ ಶರಾವೇಣ ಪಾತಿತಾ ಕೇನ ।
> ವಾರಿ ಶಿಶಿರಂ ರಮಣ್ಯೋ ರತಿಖೇದಾದಪುರುಷಸ್ಯೇವ ॥ (೫–೩೦)

ವ್ಯಾಖ್ಯೆಯ ನಿರೂಪಣೆಯಂತೆ ಇಲ್ಲಿಯ ಕಾರಕಗೂಢದ ಸ್ವರೂಪ ಹೀಗೆ : ''ಯಾರಿಂದ ಬೀಳಿಸಲ್ಪಟ್ಟರು'' ಎಂಬ ಪ್ರಶ್ನೆಯೆದ್ದಾಗ, ''ಬೀಳಿಸಲ್ಪಟ್ಟವರು ಯಾರು'' ಎಂಬುದು ಮೇಲುನೋಟಕ್ಕೆ ತಿಳಿಯುವುದಿಲ್ಲ. ಇದಕ್ಕೆ 'ಶರಾವೇಣ' ಎಂಬುದನ್ನು ಶರೌ+ಏಣ ಎಂದು ಬಿಡಿಸಿದಾಗ ಸ್ಪಷ್ಟವಾಗುತ್ತದೆ. ''ಜಿಂಕೆಯೇ ಈ ನದಿಯಲ್ಲಿ ನೀರು ಕುಡಿಯುತ್ತಿರುವ ನಿನ್ನ ಮೇಲೆ ಬಾಣಗಳೆರಡು ಯಾರಿಂದ ಬಿಡಲ್ಪಟ್ಟವು?'' ಎಂದು. ಮೇಲುನೋಟದಲ್ಲಿ 'ಶರಾವೇಣ' ಎರಡು ಪದಗಳಿರುವುದು ಕಾಣದೆ, ಪಾತ್ರೆಯೆಂದು ತೋರುತ್ತದೆ.

ಅಲ್ಲಿಯದೇ ನಿರೂಪಣೆಯಂತೆ ಇಲ್ಲಿಯ ಕ್ರಿಯಾಗೂಢದ ಸ್ವರೂಪ ಹೀಗೆ: 'ಅಪುರುಷಸ್ಯೇವ' ಎಂಬ ಪದವನ್ನು ಅಪುಃ+ಉಷಸ್ಯೇವ ಎಂದು ವಿಘಟಿಸಿ, 'ಪ' ಧಾತುವಿನ ಲುಙ್ ಲಕಾರದ ಪ್ರಥಮ ಪುರುಷ ಬಹುವಚನದ 'ಅಪುಃ' ಎನ್ನುವುದನ್ನು ಸ್ಪಷ್ಟಪಡಿಸಿದೆ. ''ರತಿವಿಲಾಸಶ್ರಾಂತರಾದ ರಮಣಿಯರು ಶೀತಲವಾದ ಜಲವನ್ನು ಉಷಃಕಾಲದಲ್ಲಿ ಪಾನಮಾಡಿದರು'' ಎಂದರ್ಥ; 'ಉಷಃಕಾಲದಲ್ಲಿ ಪಾನಮಾಡಿದರು' ಎಂಬ ಅರ್ಥವನ್ನುಳ್ಳ 'ಅಪುರುಷಸ್ಯೇವ' ಎಂಬ ಪದದಲ್ಲಿಯೇ ಕ್ರಿಯಾಪದ ಗುಪ್ತವಾಗಿದೆ. 'ಪುರುಷರಲ್ಲದವರಂತೆ' ಎಂದು ಹೇಳುವ ವಿರೋಧಾಭಾಸ ಮೇಲೆ ತಿಳಿಸಿದ ಹಾಗೆ ಪದವನ್ನು ವಿಘಟಿಸಿದ್ದರಿಂದ ಪರಿಹಾರವಾಗುತ್ತದೆ.

ರುದ್ರಟನ ಅನಂತರದಲ್ಲಿ ಭೋಜದೇವ ಸ್ವಲ್ಪ ವಿಸ್ತಾರದಲ್ಲಿ ಈ ಪ್ರಕಾರವನ್ನು ಕುರಿತಿದ್ದಾನೆ. ತನ್ನ 'ಸರಸ್ವತೀಕಂಠಾಭರಣ'ದಲ್ಲಿ ಅವನು 'ಗೂಢ'ದ ಎಂದರೆ 'ಗುಪ್ತ'ದ ೬ ವಿಧಗಳನ್ನು ಲಕ್ಷಿಸಿದ್ದಾನೆ. ದ್ವಿತೀಯ ಪರಿಚ್ಛೇದದಲ್ಲಿ ಆ ವಿಧಗಳನ್ನು ಹೀಗೆ ಹೇಳಿದೆ :

> ಕ್ರಿಯಾಕಾರಕಸಂಬಂಧೇ ಪದಾಭಿಪ್ರಾಯವಸ್ತುಭಿಃ ।
> ಗೋಪಿತೈಃ ಷಡ್ವಿಧಂ ಪ್ರಾಹುರ್ಗೂಢಂ ಗೂಢಾರ್ಥವೇದಿನಃ ॥ (೨-೧೩೫)

ಗೂಢಾರ್ಥವೇದಿಗಳು ಗೋಪಿತವಾದ ಅರ್ಥದ ಕ್ರಿಯಾ, ಕಾರಕ, ಸಂಬಂಧ, ಪಾದ, ಅಭಿಪ್ರಾಯ ಮತ್ತು ವಸ್ತುಗಳೆಂಬ ಆರು ವಿಧದ ಗೂಢಗಳನ್ನು ಹೇಳಿರುವರೆಂದು ಇದರಿಂದ ತಿಳಿಯುವುದು. ಈ ಗೂಢಗಳನ್ನು ಗುಪ್ತಗಳೆಂದು ಕರೆಯುವುದೇ ಹೆಚ್ಚು ರೂಢಿಯಾದ್ದು.

ಭೋಜನು ಒದಗಿಸಿರುವ ಲಕ್ಷ್ಯ ಮತ್ತು ರಾಮಸಿಂಹನ ವ್ಯಾಖ್ಯೆಯ ಸಹಾಯದಿಂದ ಇವುಗಳ ಪರಿಚಯವನ್ನಿಲ್ಲಿ ಮಾಡಿಕೊಳ್ಳಬಹುದು.

ಕ್ರಿಯಾಗುಪ್ತ

> ಸ್ತನಜಘನಭರಾಭಿರಾಮಮಂದಂ । ಗಮನಮಿದಂ ಮದಿರಾರುಣೇಕ್ಷಣಾಯಾಃ ।
> ಕಥಮಿವ ಸಹಸಾ ವಿಲೋಕಯಂತೋ । ಮದನಶರಜ್ವರಜರ್ಜರಾ ಯುವಾನಃ ॥ (೩೬೬)

''ಜಘನಭಾರದಿಂದ ಮನೋಹರವಾದ ಮದಿರೇಕ್ಷಣೆಯ ಮಂದಗಮನವನ್ನು ಅವಲೋಕಿಸಿದ ಓ ಯುವಕರೇ, ಹೇಗೆ ತಾನೆ ನೀವು ಕಾಮಬಾಣಪೀಡಿತರಾಗದೆ ಇರುತ್ತೀರಿ?'' ಇಲ್ಲಿ 'ಇರುತ್ತೀರಿ' ಎನ್ನುವರ್ಥದ 'ನ ಸ್ಥ' ಎನ್ನುವ ಮಧ್ಯಮ ಪುರುಷ ಬಹುವಚನಪ್ರಯೋಗವನ್ನು ವಿಲೋಮಿಸಿ 'ಸ್ಥ ನ' ಎಂದು ಮಾಡಿಕೊಂಡು, ಮುಂದಿರುವ 'ಜಘನ' ಪದದ ಸಾಹಚರ್ಯದಿಂದ ವರ್ಣನೆಗೆ ರೋಚಕವಾಗುವ ರೀತಿಯಲ್ಲಿ ವರ್ಣವನ್ನು ಪಲ್ಲಟಿಸಿ ('ಸ್ಥ' ಮಹಾಪ್ರಾಣವನ್ನು ಅಲ್ಪಪ್ರಾಣಗೊಳಿಸಿ) 'ಸ್ತನ' ಎಂಬುದಾಗಿ ಪ್ರಯೋಗಿಸುವುದರ ಮೂಲಕ ಕವಿ ಕ್ರಿಯಾಪದವನ್ನು ಗೂಢವಾಗಿರಿಸಿದ್ದಾನೆ.

ಕಾರಕಗುಪ್ತ

> ಪಿಬತಸ್ತೇ ಶರಾವೇಣ ವಾರಿ ಕಹ್ಲಾರಶೀತಲಂ ।
> ಕೇನೇಮೌ ದುರ್ವಿದಗ್ಧೇನ ಹೃದಯೇ ವಿನಿವೇಶಿತಾ ॥ (೩೬೭)

''ಶರಾವ ಎಂದರೆ ದೊಣೆಯಲ್ಲಿ ಕಲ್ಹಾರಶೀತಲವಾದಂತಹ ಜಲವನ್ನು ಪಾನಮಾಡುವ ನಿನ್ನ ಎದೆಗೆ ಯಾವ ನೀಚನು ಇದನ್ನು ಹೊಡೆದನು?'' ಇಲ್ಲಿ, ಮೊದಲನೆಯ ಪಾದದಲ್ಲಿಯ 'ಶರಾವೇಣ' ಎನ್ನುವ ಪದದಲ್ಲಿ, 'ಶರಾವ' ಎನ್ನುವ ಶಬ್ದ ತೃತೀಯಾವಿಭಕ್ತ್ಯಂತವಾಗಿ 'ಶರಾವೇಣ' ಎಂದಾಗಿದೆ. ಇದೇ ಶಬ್ದವನ್ನು ಬೇರೆ ರೀತಿಯಲ್ಲಿ ಸಂಧಿಬಿಡಿಸಿ, ಶರೌ + ಏಣ ಎಂದು ಪದದ್ವಯಾತ್ಮಕವಾಗಿ ರೂಪವನ್ನು ಮಾಡಿಕೊಂಡರೆ, ಆಗ ಬಾಣವನ್ನು ಹೊಡೆಯುವ ಕ್ರಿಯೆಗೆ 'ಶರೌ' ಕರ್ಮಪದವಾಗಿಯೂ 'ಏಣ' ಜಿಂಕೆಗೆ ಸಂಬೋಧನವಾಚಕವಾಗಿಯೂ ಆಗಿ, 'ಶರೌ' ಎಂಬ ಕರ್ಮಕಾರಕವು ಗುಪ್ತವಾಗಿದ್ದುದು ಸ್ಪಷ್ಟವಾಗುತ್ತದೆ.

ರುದ್ರಟನ ಕಾರಕಗೂಢದ ಲಕ್ಷ್ಯವನ್ನು ಪರಸ್ಪರ ಸಾದೃಶ್ಯಕ್ಕಾಗಿ ಇಲ್ಲಿ ನೆನೆಯಬಹುದಾಗಿದೆ.

ಸಂಬಂಧಗೂಢ

> ನ ಮಯಾಗೋರಸಾಭಿಜ್ಞಂ ಚೇತಃ ಕಸ್ಮಾತ್ಪ್ರಕುಪ್ಯಸಿ।
> ಅಸ್ಥಾನರುದಿತೈರೇಭಿರಲಮಾಲೋಹಿತೇಕ್ಷಣೇ ॥ (೩೬೮)

''ಓ ನಾಯಕಿಯೇ ನನ್ನ ಮನಸ್ಸಿಗೆ ಕ್ರೋಧರಸದ ಪರಿಚಯವೇ ಇಲ್ಲ. ನನ್ನ ಮೇಲೆ ಏಕೆ ಕೋಪಿಸಿಕೊಳ್ಳುವೆ? ಅಸ್ಥಾನದಲ್ಲಿ ನಿನ್ನ ಈ ಕೋಪವನ್ನೂ ಕಣ್ಣುಕೆಂಪನ್ನೂ ಸಾಕುಮಾಡು.'' ಇಲ್ಲಿ 'ಮಯಾಗೋರ

ಸಾಭಿಜ್ಞಂ' ಎನ್ನುವ ಪಾದಭಾಗದಲ್ಲಿ ಸಂಬಂಧ ಬೋಧಕವಾದ ಷಷ್ಠ್ಯಂತಪದವು ಗುಪ್ತವಾಗಿದೆ. 'ಮೇ ಆಗೋರಸಾಭಿಜ್ಞಂ' ಎಂದು ಪದವಿಭಾಗಮಾಡಿ, ಯಾಂತಾದೇಶವನ್ನು ಹೇಳಿ, 'ಮಯಾಗೋರಸಾಭಿಜ್ಞಂ' ಎಂಬುದಾಗಿ ಮಾಡಿಕೊಂಡಿದೆ. 'ಮಯಾ' ಎಂಬುದು ತೃತೀಯಾಂತಪದವೆಂದು ಭ್ರಾಂತಿಹುಟ್ಟಿ, 'ಮೇ' ಎಂಬ ಸಂಬಂಧ ಬೋಧಕವಾದ ಪದವು ಇಲ್ಲಿ ಗುಪ್ತವಾಗಿರುವಂತಾಗಿದೆ.

ಈ ಲಕ್ಷ್ಯ ದಂಡಿಯ 'ಕಾವ್ಯಾದರ್ಶ'ದ 'ಸಮಾಗತಾ' ಎಂಬ ಪ್ರಹೇಳಿಕೆಯ ಲಕ್ಷ್ಯವೇ ಆಗಿದೆಯೆಂಬುದನ್ನು ನೆನೆಯಬಹುದು. ವ್ಯಾಖ್ಯಾನಕಾರ ರತ್ನಶ್ರೀಜ್ಞಾನನು ''ಇತಿ ಗೂಢಾರ್ಥಪ್ರಹೇಲಿಕಾಂ ಸಮಾಗತಾಮಾಹುಸ್ತದ್ವಿದಃ ''ಎಂದಿರುವ ವ್ಯಾಖ್ಯಾಭಾಗವನ್ನು ಗಮನಿಸಬೇಕು.

ಪಾದಗೂಢ (ಗೂಢಚತುರ್ಥ)

ದ್ಯುವಿಯದ್ಗಾಮಿನೀ ತಾರಸಂರಾವವಿಹತಶ್ರುತಿಃ ।
ಹೈಮೀಷು ಮಾಲಾ ಶುಶುಭೇ ವಿದ್ಯುತಾಮಿವ ಸಂಹತಿಃ ॥ (೩೬೯)

ಇಲ್ಲಿ ಪೂರ್ವಾರ್ಧಸ್ಥಿತವಾದ ೨, ೧, ೭, ೫, ೧೧, ೯, ೧೩ ಮತ್ತು ೧೬ ಈ ಅಕ್ಷರಗಳಿಂದ ನಾಲ್ಕನೆಯ ಪಾದವನ್ನು ಮಾಡಿದೆ. ಆ ಪಾದವೇ ''ವಿದ್ಯುತಾಮಿವ ಸಂಹತಿಃ'' ಎಂಬುದಾಗಿದೆ; ಎಂದರೆ ನಾಲ್ಕನೆಯ ಪಾದದ ಅಕ್ಷರಗಳನ್ನು ಪದ್ಯದ ಮೊದಲ ಎರಡು ಪಾದಗಳಲ್ಲಿಯೇ ಗೂಢವಾಗಿ ಅಡಗಿಸಿಟ್ಟಿದೆ.

ಈ ಲಕ್ಷ್ಯಪದ್ಯ ಭಾರವಿಯ 'ಕಿರಾತಾರ್ಜುನೀಯ'ದ್ದು (೧೫–೪೩). ಮಲ್ಲಿನಾಥನು ತನ್ನ ವ್ಯಾಖ್ಯೆಯಲ್ಲಿ ''ಚತುರ್ಥಪಾದವರ್ಣಾನಾಂ ತ್ರಿಪಾದ್ಯಾಂ ಸಂಭವಾದ್ಗೂಢಚತುರ್ಥಪಾದಮಾಹುಃ'' (ಮೂರು ಪಾದಗಳಲ್ಲಿಯ ಅಕ್ಷರಗಳ ವಿಚಿತ್ರವಾದ ಸಂಯೋಜನೆಯಿಂದ ಗೂಢವಾದ ನಾಲ್ಕನೆಯ ಪಾದವು ರಚಿತವಾಗಿರುತ್ತದೆ.) ಎಂಬುದಾಗಿ ಬರೆದಿರುವುದರಿಂದ ನಾಲ್ಕನೆಯ ಪಾದದ ಅಕ್ಷರಗಳು ಪದ್ಯದ ಮೊದಲ ಮೂರು ಪಾದಗಳಲ್ಲಿ ಎಲ್ಲಿಯಾದರೂ ಗೂಢವಾಗಿರಬಹುದೆಂದು ತಿಳಿಯುತ್ತದೆ. 'ಶಿಶುಪಾಲವಧ'ದ ವ್ಯಾಖ್ಯೆಯಲ್ಲಿ ಸಹ ''ತ್ರಿಪಾದ್ಯಂತರ್ಗತ ಚತುರ್ಥಪಾದಾಕ್ಷರತ್ವಾದ್ಗೂಢಚತುರ್ಥಾಖ್ಯಶ್ಚಿತ್ರವಿಶೇಷಃ'' (೧೯–೯೬) ಎಂದೇ ಹೇಳಿದೆ. ಈ ಕಾವ್ಯದಲ್ಲಿಯೂ (೧೯–೯೬) 'ಧರ್ಮಶರ್ಮಾಭ್ಯುದಯ' ಮುಂತಾದ ಇತರ ಕಾವ್ಯಗಳಲ್ಲಿಯೂ ಪಾದಗೂಢದ ನಿದರ್ಶನಗಳು ದೊರೆಯುತ್ತವೆ.

ಅಭಿಪ್ರಾಯಗೂಢ

ಯದಿ ದೇವರೇಣ ಭಣಿತಾ ಖಡ್ಗೇ ಗೃಹೀತ್ವಾ ರಾಜಕುಲಂ ವ್ರಜ ।
ತತ್ಕಿಂ ಸೇವಕವಧ್ವಾ ಹಸಿತ್ವಾವಲೋಕಿತಂ ಶಯನಂ ॥ (೩೭೦)

''ಪ್ರಥಮ ರಾತ್ರಿಯಲ್ಲಿ ತಾನು ಬೇರೆ ಸ್ತ್ರೀಯೊಡನಿದ್ದುದನ್ನು ದಾಸಿ ತಿಳಿಯದಿರಲಿ ಎಂದು ಉಷಃಕಾಲದಲ್ಲಿಯೇ ಬಂದ ಆಕೆಯನ್ನು ಬೇರೊಂದೆಡೆಗೆ ವ್ಯಾಜಾಂತರವನ್ನು ಒಡ್ಡಿ ಕಳಿಸಿದಾಗ, ಆಕೆ, ಆ ಶಯ್ಯೆಯ ಮೇಲೆ ಗುರುತುಬಿದ್ದ ವಿಪರೀತರತದ ಲಕ್ಷಣಗಳನ್ನು ಕಂಡು 'ಓಹೋ, ನನ್ನ ತಿಳಿವಳಿಕೆಗೆ ಬಾರದಿರಲಿ ಎಂದೇ ಕಳಿಸುತ್ತಿರುವನು' ಎಂಬುದಾಗಿ ಅಭಿಪ್ರಾಯಗರ್ಭವಾಗಿ ಶಯ್ಯೆಯನ್ನು ಅವಲೋಕಿಸುತ್ತಾಳೆ. ಇಲ್ಲಿ 'ಅವಲೋಕಿತಂ' ಎನ್ನುವ ಪದದಿಂದ ಈ ಅಭಿಪ್ರಾಯವು ಗುಪ್ತವಾಗಿದೆ.

ಮೇಲೆ ಸಂಸ್ಕೃತ ಲಕ್ಷ್ಯವನ್ನು ಉದ್ಧರಿಸಿದೆಯಾದರೂ, ಇದು ಪ್ರಾಕೃತಮೂಲದ ಪದ್ಯದ ಸಂಸ್ಕೃತ ಛಾಯೆಯಾಗಿದೆ. ವಾಸ್ತವವಾಗಿ ಈ 'ಗೂಢ'ಚಿತ್ರವು ವ್ಯಂಗ್ಯಕ್ಕೆ ಲಕ್ಷ್ಯವಾಗಬಹುದಾದ್ದು.

ವಸ್ತುಗೂಢ

ಪಾನೀಯಂ ಪಾತುಮಿಚ್ಛಾಮಿ ತ್ವತ್ತಃ ಕಮಲಲೋಚನೇ ।
ಯದಿ ದಾಸ್ಯಸಿ ನೇಚ್ಛಾಮಿ ನೋ ದಾಸ್ಯಸಿ ಪಿಬಾಮ್ಯಹಂ ॥ (೩೭೧)

''ಓ ಕಮಲಲೋಚನೆಯೇ, ನೀನು ನೀಡಿದ ಪಾನೀಯವನ್ನು ನಾನು ಕುಡಿಯಲಿಚ್ಛಿಸುತ್ತೇನೆ.'' ನೀನು ಕೊಡುವುದಾದರೆ, ನನಗೆ ಬೇಡ; ಕೊಡುವುದಿಲ್ಲವಾದರೆ, ಬೇಕು; ಕುಡಿಯುತ್ತೇನೆ.'' ಇಲ್ಲಿ ಗೋಚರವಾಗುವ ವಿರೋಧಾಭಾಸವನ್ನು, ಎರಡು ಸಲ ಬರುವ 'ದಾಸ್ಯಸಿ' ಎಂಬ ಪದದಲ್ಲಿ ಒಂದನ್ನು ನಾಮಪದವನ್ನಾಗಿಯೂ ಇನ್ನೊಂದನ್ನು ಕ್ರಿಯಾಪದವನ್ನಾಗಿಯೂ ಮಾಡಿಕೊಂಡು ಮೊದಲಿನದನ್ನು ದಾಸೀ+ಅಸಿ ಎಂದು ವಿಭಾಗಿಸಿ ಕೊಂಡರೆ ಪರಿಹರಿಸುವುದು ಸಾಧ್ಯವಿದೆ. 'ದಾಸೀ' ಎಂಬ ವಸ್ತುವು ಅಲ್ಲಿ ಗುಪ್ತವಾಗಿದ್ದುದು ಸ್ಪಷ್ಟವಾಗಿದೆ.

'ಸುಭಾಷಿತರತ್ನ ಭಾಂಡಾಗಾರ'ದ ಚತುರ್ಥಪ್ರಕರಣದಲ್ಲಿ ಕ್ರಿಯಾಗುಪ್ತಾದಿಗಳ ಒಂದು ಉಪವಿಭಾಗವೇ ಇದ್ದು, ಕ್ರಿಯಾ, ಕರ್ತೃ, ಕರ್ಮ, ಕರಣ, ಸಂಪ್ರದಾನ, ಅಪಾದಾನ, ಸಂಬಂಧ, ಅಧಿಕರಣ, ಆಮಂತ್ರಿತ, ಕರ್ತೃಕ್ರಿಯಾ, ಕರ್ತೃಕರ್ಮಕ್ರಿಯಾ, ಸಂಧಿ, ಸಮಾಸ, ಲಿಂಗ, ಸುಪ್‌ವಚನ, ತಿಙ್‌ವಚನಗುಪ್ತಗಳೆಂಬ ೧೬ ಗೂಢಗಳನ್ನು ಪ್ರತ್ಯೇಕ ಶೀರ್ಷಿಕೆಗಳ ಕೆಳಗೆ ಗುರುತಿಸಿ ನಿದರ್ಶನಗಳನ್ನು ಕೊಟ್ಟಿದೆ (೪–೧~೫೩). ಇವೆಲ್ಲವನ್ನೂ ಕುರಿತು ವಿವೇಚಿಸುವುದು ಕನ್ನಡ ಚಿತ್ರಕಾವ್ಯದ ಇತಿಹಾಸದ ದೃಷ್ಟಿಯಿಂದ ಅವಶ್ಯವೇನಲ್ಲ.[1]

ಸಂಸ್ಕೃತ ಸಾಹಿತ್ಯದಲ್ಲಿ ಗೂಢಚಿತ್ರಗಳ ಕೆಲವು ನಿದರ್ಶನಗಳು

ಈಗ ತಿಳಿದ ಮಟ್ಟಿಗೆ ಕಾವ್ಯಸ್ಥ ನಿದರ್ಶನಗಳು ಕಡಿಮೆ. 'ಹರವಿಜಯ'ದಲ್ಲಿ ಗೂಢಾರ್ಥಶ್ಲೋಕ (೪೩–೭೧), ಗೂಢಕರ್ತೃಕ (೪೩–೩೦೭), ಗೂಢಕ್ರಿಯಾಕರ್ಮಕರ್ತೃಕ (೪೩–೩೬೪), ಗೂಢಕ್ರಿಯಾಕರ್ತೃಕ (೪೮–೩೧) ಹೀಗೆ ಒಂದೇ ಕಡೆ ೪ ಲಕ್ಷ್ಯಗಳಿವೆ. ಗೂಢಚತುರ್ಥಪಾದದ ಲಕ್ಷ್ಯಗಳೇನೋ ಅಲ್ಲಲ್ಲಿ ತಕ್ಕಮಟ್ಟಿಗೆ ಗೋಚರಿಸುತ್ತವೆ ('ಜಾನಕೀಹರಣ', ಅ. ೧೮; 'ಶಿಶುಪಾಲವಧ' ೧೯–೯೬; 'ಕಪ್ಫಿಣಾಭ್ಯುದಯ' ೧೮–೬೫; 'ಧರ್ಮಶರ್ಮಾಭ್ಯುದಯ' ೧೯–೩೫ ಇ.). 'ಜಾನಕೀಹರಣ'ದಲ್ಲಿ 'ಸಂಬಂಧಗೂಢ'ವುಂಟು (೧೮–೨೫).

ಕ್ರಿಯಾಗುಪ್ತ :

ವಿರಾಟನಗರೇ ರಾಜನ್ ಕೀಚಕಾದುಪಕೀಚಕಮ್।
ಅತ್ರ ಕ್ರಿಯಾಪದಂ ಗುಪ್ತಂ ಯೋ ಜಾನಾತಿ ಸ ಪಂಡಿತಃ ॥ (ಸುರಭಾ. ಪು. ೫೪೬)

''ಎಲೆ ದೊರೆಯೆ, ಹಕ್ಕಿಯು ನಗರದಲ್ಲಿ ಒಂದು ಬಿದಿರ ಮೆಳೆಯಿಂದ ಇನ್ನೊಂದು ಬಿದಿರ ಮೆಳೆಗೆ ಅಲೆಯಿತು. ಇಲ್ಲಿ ಕ್ರಿಯಾಪದ ಗೂಢವಾಗಿದೆ. ಯಾರು ಇದನ್ನು ತಿಳಿಯುವನೋ, ಅವನೇ ಪಂಡಿತ.''

ಇಲ್ಲಿ ವಿಃ=ಹಕ್ಕಿ, ಅಟ=ಅಲೆಯಿತು (ಅಟ್ ಧಾತುವಿನ ಭೂತಕಾಲದ ಪ್ರಥಮಪುರುಷ ಏಕವಚನ ರೂಪ) ಎಂಬ ವಿಭಜನೆಯನ್ನು 'ವಿರಾಟ' ಶಬ್ದದಲ್ಲಿ ಕಂಡುಕೊಂಡು, 'ನಗರೇ' ಎಂಬುದನ್ನು ಪ್ರತ್ಯೇಕಿಸಿಕೊಂಡರೆ ಇದು ವಿದಿತವಾಗುತ್ತದೆ.

'ಕಪ್ಫಿಣಾಭ್ಯುದಯ'ದಲ್ಲಿ ಇನ್ನೂ ಎರಡು ಕ್ರಿಯಾಗುಪ್ತಿಯ ನಿದರ್ಶನಗಳಿವೆ (೧೮–೮೦, ೮೩)

ಕಾರಕಗುಪ್ತ :

ಅಂಭೋರುಹಮಯೇ ಸ್ನಾತ್ವಾ ವಾಪೀಪಯಸಿ ಕಾಮಿನೀ।
ದದಾತಿ ಭಕ್ತಿಸಂಪನ್ನಾ ಪುಷ್ಪಂ ಸೌಭಾಗ್ಯವರ್ಧನಮ್ ॥ ('ಸೂಕ್ತಿಮುಕ್ತಾವಳಿ', ಪು. ೩೪೯)

''ಕಾಮಿನಿಯು ಭಕ್ತಿಸಂಪನ್ನೆಯಾಗಿ, ಕೊಳದ ನೀರಿನಲ್ಲಿ ಸ್ನಾನಮಾಡಿ, ಮನ್ಮಥನಿಗೆ ಸೌಭಾಗ್ಯವರ್ಧನದ ಸಲುವಾಗಿ ತಾವರೆಯನ್ನು ಅರ್ಪಿಸಿದಳು.''

ಇಲ್ಲಿ ಚತುರ್ಥೀವಿಭಕ್ತಿ 'ಅಯೇ' ಎಂಬ ಶಬ್ದದಲ್ಲಿದೆ (ಮನ್ಮಥ ಎಂಬರ್ಥದ 'ಇಃ' ಎಂಬ ಶಬ್ದದ ಚತುರ್ಥೀವಿಭಕ್ತ್ಯಂತರೂಪ 'ಅಯೇ'). ಇದು 'ಅಂಭೋರುಹಂ' ಶಬ್ದದೊಂದಿಗೆ ಸೇರಿಕೊಂಡು, ಸುಬದ್ಧವಾದ 'ಅಂಭೋರುಹಮಯೇ' ಎಂಬ ಹೊಸಪದ ಸಿದ್ಧವಾಗಿದೆ. ಅದು 'ವಾಪೀಪಯಸಿ'ಗೆ ವಿಶೇಷಣವಾಗಿ ಪರಿಣಮಿಸಿದೆ.

ಹೀಗೆಯೇ ಉಳಿದ ವಿಭಕ್ತಿಗಳ ವಿಷಯದಲ್ಲೂ ಸಾಧ್ಯ. ಸಾಮಾನ್ಯವಾಗಿ ಸಂಧಿಸ್ಥಾನಗಳನ್ನು ತಿಳಿಯುವುದೇ ಚಮತ್ಕಾರ ಭಾಗವಾಗಿರುವುದರಿಂದ ಇದು ಸಂಹಿತಾಗುಪ್ತ (ಸಂಧಿಗುಪ್ತ) ಎಂದು ಸಹ ಎನಿಸುತ್ತದೆ.

ಸಮಾಸಗೂಢ

ವಿಷಾದೀ ಭೈಕ್ಷ್ಯಮಶ್ನಾತಿ ಸದಾರೋಗಂ ನ ಮುಂಚತಿ
ರುಷ್ಟೇನಾಪಿ ತ್ವಯಾ ವೀರಾ ಶಂಭುನಾರಿರಿವ ಕೃತಃ ॥ (ಸುರಭಾ. ಪು. ೫೪೮)

''ವಿಷವನ್ನು ತಿನ್ನುವ ಅಭ್ಯಾಸವಿರುವವನು ಭಿಕ್ಷವನ್ನು ತಿನ್ನುತ್ತಾನೆ, (ಹಾಗೂ) ಪತ್ನಿಸಹಿತವಾಗಿ ಪರ್ವತವನ್ನು ಬಿಟ್ಟು ಕದಲುವುದಿಲ್ಲ. ಎಲೆ ವೀರ, ರೋಷಗೊಂಡರೂ ನೀನು ನಿನ್ನ ಶತ್ರುವನ್ನು ಶಿವನಂತೆ ಭಾವಿಸುತ್ತೀಯೆ.''

ಇಲ್ಲಿ 'ವಿಷಾದೀ' ಎಂಬ ಶಬ್ದವನ್ನು ಒಡೆದು ವ್ಯಾಖ್ಯಾನಿಸಿದರೆ, 'ವಿಷವನ್ನು ತಿನ್ನುವವನು' ಎಂದಾಗುತ್ತದೆ; ಇಲ್ಲವೆ 'ದುಗುಡಗೊಂಡವನು' ಎಂದಾಗುತ್ತದೆ. 'ಸದಾರೋಗಂ ನ ಮುಂಚತಿ' ಸಮಾಸಶಬ್ದವಾಗದೆ ಇದ್ದ ಸ್ಥಿತಿಯಲ್ಲಿ ''ಯಾವಾಗಲೂ ರೋಗದಿಂದ ನರಳುವವನು'' ಎಂದಾಗುವುದು; ಇಲ್ಲವೆ ಸಮಾಸ ಪದವಾಗಿ ಗ್ರಹಿಸಿದಾಗ ''ಸದಾರಃ (ಪತ್ನಿಸಹಿತವಾಗಿ) + ಅಗಮ್ (ಪರ್ವತ) ನ ಮುಂಚತಿ (ಬಿಟ್ಟುಕದಲುವುದಿಲ್ಲ).''

ಗೂಢಪಾದತ್ರಯ

ಸೇನಾ ರುರುಧಿರೇ ತೇನ ರುಧಿರೇಽರೇರುತೇಽರುಧಿ ।
ರುತೇನ ಸೇಧಿನಾ ನಾರೇ ನಾಧಿತೇ ನಾಧಿರೇಧಿನಾ ॥ ('ಕಪ್ಫಿಣಾಭ್ಯುದಯ', ೧೮-೩೯)

ಇಲ್ಲಿ ೩ನೆಯ ಪಾದದ ಅಕ್ಷರಗಳು ೧, ೨ ಮತ್ತು ೪ ನೆಯ ಪಾದಗಳಲ್ಲಿ ಗೂಢವಾಗಿ ಬೆರೆತುಕೊಂಡಿವೆ.

ಗೂಢಚತುರ್ಥಪಾದ

ಶರವರ್ಷೀ ಮಹಾನಾದಃ ಸ್ಫುರತ್ಕಾರ್ಮುಕಕೇತನಃ
ನೀಲಚ್ಛವಿರಸೌ ರೇಜೇ ಕೇಶವಚ್ಛಲನೀರದಃ ॥ ('ಶಿಶುಪಾಲವಧ', ೧೯-೯೬)

ಇಲ್ಲಿ ೪ನೆಯ ಪಾದದ ಅಕ್ಷರಗಳು ಮೊದಲ ಮೂರು ಪಾದಗಳಲ್ಲಿ ಗೂಢವಾಗಿ ಬೆರೆತುಕೊಂಡಿವೆ.

ದುರ್ಜನಃ ಸತ್ಸಭಾಂ ಪ್ರಾಪ್ಯಾಮೀಹತೇ ನ ಸ್ವಭಾವತಃ
ಕಿಮುಲೂಕಸ್ತಮೋಹನ್ತ್ರೀಂ ಭಾಸ್ವತಃ ಸಹತೇ ಪ್ರಭಾಮ್ ॥ ('ಧರ್ಮಶರ್ಮಾಭ್ಯುದಯ', ೧೯-೩೫)

ಇಲ್ಲಿ ೪ನೆಯ ಪಾದದ ಅಕ್ಷರಗಳು ಮೊದಲ ಎರಡು ಪಾದಗಳಲ್ಲಿಯೇ ಗೂಢವಾಗಿ ಬೆರೆತುಕೊಂಡಿರುವುದನ್ನು ಗಮನಿಸಬಹುದು.

ಗೂಢಾರ್ಥಶ್ಲೋಕ

ಯಾ ಹತಾರಿಗಣಾಜಸ್ರಮವದಾತಾ ನ ಸುಂದರಾನ್ ।
ಯಾತಾ ಗಜಮದಾನಂದಹರಿಣಾಸ್ರವತಾಸುರಾನ್ ॥ ('ಹರವಿಜಯ', ೪೩-೭೧)

ಇಲ್ಲಿ ಶ್ಲೋಕದ ಉತ್ತರಾರ್ಧದ ಅಕ್ಷರಗಳು ಪೂರ್ವಾರ್ಧದ ೨ ಪಾದಗಳಲ್ಲಿಯೇ ಗೂಢವಾಗಿ ಬೆರೆತುಕೊಂಡಿವೆ.

ಇಲ್ಲಿಯೇ ತೆಲುಗು ಕವಿಗಳ ಒಂದು ಬೇರೆ ರೀತಿಯ ಪಾದಗೋಪನವನ್ನು ಪರಿಚಯಿಸಬಹುದು. ಚಿತ್ರಕವಿ ಪೆದ್ದನನು, 'ಲಕ್ಷಣಸಾರಸಂಗ್ರಹಮು' ಕೃತಿಕರ್ತೃ, ಚಂಪಕಮಾಲಾವೃತ್ತವೊಂದನ್ನು ಆ ಬಗೆಯಲ್ಲಿ ರಚಿಸಿದ್ದಾನೆ.

ಘನ ಹರಿ ಭಾನುಜಾಪ್ತಮತಿಕಂಜಭವಾ ಯುತುಲಪ್ರತಾಪಭಾ
ಗ್ಯನಿಧಿ ಕೃಪಾಕರಾ ಜನಕಜಾಯುತ ಶುಕ್ರ್ಯಕಚಾಮಹಾತ್ಮಪಾ

ನನಿ ವಟಿ ಕೇನ ಶೂರ ಚಯುವರ್ಯ ಸುಧೀಸರಸಾದ್ಯ ಹೃದ್ಯಶಾ
ಹನುಮಜಯಪ್ರಭಾಧಿಕನಯಕ್ರಮಪಾವನಚರ್ಯಸದ್ಯಶಾ ॥

ಇಲ್ಲಿ ೪ನೆಯ ಪಾದದ ಅಕ್ಷರಗಳು ಮೊದಲ ಮೂರು ಪಾದಗಳಲ್ಲಿ ಅಡಗಿಸಲ್ಪಟ್ಟಿವೆಯೆಂಬುದೇನೋ ಸರಿ. ಅಡಗಿಸಿರುವ ರೀತಿಯಲ್ಲಿ ಒಂದು ವಿಶೇಷವೆಂದರೆ, ಮೊದಲನೆಯ ಪಾದದ ಆರಂಭದಿಂದ ಮೂರನೆಯ ಪಾದದ ಅಂತ್ಯದವರೆಗೆ ಎರಡೆರಡು ಅಕ್ಷರಗಳನ್ನು ಬಿಟ್ಟು ಮೂರನೆಯ ಅಕ್ಷರವನ್ನು ಗ್ರಹಿಸುತ್ತ ಹೋದರೆ, ಪದ್ಯದ ೪ನೆಯ ಪಾದ ಸಿದ್ಧವಾಗುತ್ತದೆ.

ಚ್ಯುತದತ್ತಾಕ್ಷರಗೂಢ

ಶ್ರೀನಿವಾಸಕವಿಯ 'ಶ್ರೀಕೃಷ್ಣರಾಜಪ್ರಭವೋದಯ'ವೆಂಬ ಹತ್ತು ಸ್ತಬಕಗಳ ಸಂಸ್ಕೃತಗ್ರಂಥದಲ್ಲಿ ಪ್ರತಿಶ್ಲೋಕವೂ ಚಮತ್ಕಾರವಾಗಿ ರಚಿಸಲ್ಪಟ್ಟಿದೆ. ಒಂದು ಪದ್ಯವನ್ನು ಇಲ್ಲಿ ಉದ್ಧರಿಸಬಹುದು:

ಮಹಿಶೂರಪುರೀಂ ಭವತಃ । ಕೃಷ್ಣ ವಿಭೋ ವೇದ್ಮಿ ಮಹಿತಶೂರಪುರೀಂ ।
ಯಸ್ಯಾಂ ತಾಪಹರಸ್ತ್ವಂ । ಲೋಕಾನುಷಿತಾನ್ ಹಿ ತೋಷಿತಾನ್ ಕುರುಷೇ ॥

''ನಿನ್ನ ಮಹಿಶೂರಪುರಿಯೆಂಬುದು ಮಹಿತಶೂರಪುರಿ ಎಂದಿರಬೇಕು. ಆ ಪಟ್ಟಣದಲ್ಲಿ ನೀನು ತಾಪಹಾರಕನಾಗಿ ಅಲ್ಲಿ ವಾಸಮಾಡುವ ಜನರನ್ನು ತೋಷಿತರನ್ನಾಗಿ ಮಾಡುತ್ತಿಯೆ.''

ಇಲ್ಲಿ 'ತಾಪಹರ' ಪದಕ್ಕೆ 'ತಾಪವನ್ನು ಹೋಗಲಾಡಿಸುವವನು' ಎಂದು ಒಂದು ಅರ್ಥ. 'ತಕಾರವನ್ನು ತೆಗೆದುಹಾಕುವವನು' ಎಂಬುದು ಇನ್ನೊಂದು ಅರ್ಥ. ''ಉಷಿತರನ್ನು ತೋಷಿತರನ್ನಾಗಿ ಮಾಡುತ್ತೀಯೆ'' ಎಂಬಲ್ಲಿ 'ಉಷಿತ' ಶಬ್ದಕ್ಕೆ ಹಿಂದೆ ತೆಗೆದ ತಕಾರವನ್ನು ಸೇರಿಸಿ ತೋಷಿತರನ್ನಾಗಿ ಮಾಡಿದ್ದೀಯೆ—ಎಂಬುದು ಇಲ್ಲಿಯ ಅರ್ಥಸ್ವಾರಸ್ಯ, ಪದಪ್ರಯೋಗಚಮತ್ಕೃತಿ.[2]

ಇಲ್ಲಿಯೂ ಭಾಷಾಶ್ಲೇಷದ ಗೂಢರಚನೆಗಳು ಸೇರಿರುವುದನ್ನು ಗಮನಿಸಬಹುದು. ''ಭಾಷಾಶ್ಲಿಷ್ಟಾ ಮಯಾ ಸೃಷ್ಟಾಃ ಪ್ರಬಂಧಾಃ ಪಂಚ ಸಂತಿ ಹಿ....'' ಎಂಬುದಾಗಿ ಸಂಕಲ್ಪಿಸಿ, ಅಂತಹ ಕೆಲವು ರಚನೆಗಳನ್ನು ಮುಮ್ಮಡಿ ಕೃಷ್ಣರಾಜ ಒಡೆಯರನ್ನು ಉದ್ದೇಶಿಸಿ, ಆತನಿಗೆ ಕವಿ ಕೇಳಿಸಿದನೆಂದು ನಿರೂಪಣೆಯಿದೆ.

ಚಾಮರಾಜನಗರದ ರಾಮಶಾಸ್ತ್ರಿಗಳ 'ಸೀತಾರಾವಣ ಸಂವಾದಝರಿ'ಯಿಂದ :

ಅತಲ್ಪಂ ನಿದ್ರಾಳೂ ರಜನಿಷು ಕುವಾಗ್ ದುರ್ಗತತಮೋ
ಮಹಾಕಾತರ್ಯಾಢ್ಯೋ ಮನಸಿ ವಿಧುತ ಪ್ರೋಜ್ಜ್ವಲಯಶಾಃ
ವಧಾನ್ಮಾಂಸಾದಾನಾಂ ಬಹುವಿಮತಲಃ ಭೋ ಜನಕಜೇ
ಕಥಂ ಶ್ಲಾಘ್ಯೋ ರಾಮಃ; ಖಲ ತಮುಸಕೃನ್ಮಾ ಸ್ಪೃಶ ಗಿರಾ ॥ (೧೮)

ರಾವಣ : ''ಜನಕನ ಮಗಳೇ, ರಾತ್ರಿಗಳಲ್ಲಿ ಹಾಸಿಗೆಯಿಲ್ಲದೆ ತೂಕಡಿಸುತ್ತಾನೆ ರಾಮ; ಮಾತೇ ಆಡಲಾರದ ಅತಿದರಿದ್ರ ಅವನು; ಮನಸ್ಸಿನಲ್ಲಿ ಮಹಾಕಾತುರ ತುಂಬಿದವನು; ಪ್ರಜ್ವಲಯಶಸ್ಸನ್ನು ಕಳೆದುಕೊಂಡವನು; (ಕೆಲವು) ರಾಕ್ಷಸರನ್ನು ಕೊಂದ ಕಾರಣ ಬಹುಜನ ಶತ್ರುಗಳನ್ನು ಪಡೆದುಕೊಂಡವನು. ಇಂಥವನು ಹೇಗೆ ತಾನೆ ಶ್ಲಾಘ್ಯ?''

ಸೀತೆ : ''ದುಷ್ಟ, ಅವನನ್ನು ಮೇಲಿಂದಮೇಲೆ ಮಾತಿನಿಂದ ಮುಟ್ಟಬೇಡ.'' (''ಮಾತಿನಲ್ಲಿ ತಕಾರವನ್ನು ಮೇಲಿಮೇಲಿ ಪ್ರಯೋಗಿಸಬೇಡ.'')

ತಕಾರಚ್ಯುತವಾದ ಮೇಲಿನ ಅರ್ಥ : ''ರಾತ್ರಿಗಳಲ್ಲಿ ಅಲ್ಪನಿದ್ರೆಯುಳ್ಳವನು; ಬೈಗುಳಗಳಿಗೆ ಎಟುಕದವನು (ದುರ್ಗಮ); ಮನಸ್ಸಿನಲ್ಲಿ ಮಹಾಕಾರ್ಯ (ವಿಚಾರ) ತುಂಬಿದವನು; ಚಂದ್ರನಂತೆ ಹೊಳೆಯುವ ಕೀರ್ತಿಯುಳ್ಳವನು; ರಾಕ್ಷಸರ ಸಂಹಾರದಿಂದ ಬಹುವಾಗಿ ಕಂಗೊಳಿಸುವವನು. ಅಂಥ ರಾಮ ಶ್ಲಾಘ್ಯನೇ.''

ಇದು 'ಚ್ಯುತಾಕ್ಷರ' ಮೂಲವಾದ ದ್ವಿಸಂಧಾನದ ರೀತಿ.

ರಾಮೋ ವಾಚ್ಯತಿವಿಪ್ರಿಯೋಽತಿಚಲಿತಶ್ರೀಸ್ತನ್ವಿ ನೀಚಂ ವಪುಃ
ಬಿಭ್ರತ್ ಕಾನನಸೀಮ್ನಿ ರಾಕ್ಷಸಚಯಾಯತ್ತಸ್ಸ್ವಯಂ ವೇತ್ಸಿ ತನ್
ಮಾಂ ಪಶ್ಯಾತಿವಿಚಕ್ಷಣೋಽಸ್ಮಿ ಬಹುಧಾ ಚಾಪೈಕವೀರೋಽಸ್ಮ್ಯಹಂ
ಲಬ್ಧಶ್ರೀಪ್ರಚಯಸ್ತಥಾಽಸ್ಮಿ; ಕಿಮರೇ ಚೇಲಂ ಬಧಾನಾಸಕೃತ್ ॥ (೧೯)

ರಾವಣ : ''ಕೃಶಾಂಗಿ, ರಾಮ ಅತಿವಿಪ್ರಿಯವಾಗಿ ಮಾತಾಡುವವನು; ಸಂಪತ್ತನ್ನು ಕಳೆದು ಕೊಂಡವನು; ನಿಕೃಷ್ಟವಾದ ಶರೀರವನ್ನು ಹೊಂದಿ ಅವನು ಕಾಡಿನ ಅಂಚಿನಲ್ಲಿ ರಾಕ್ಷಸರ ಅಧೀನನಾಗಿರುವುದನ್ನು ನೀನೇ ತಿಳಿದಿದ್ದೀಯೇ; ನನ್ನನ್ನು ನೋಡು, ಅನೇಕ ಪ್ರಕಾರಗಳಿಂದ ಅತಿವಿಚಕ್ಷಣನಾದವನು ನಾನು; ಬಿಲ್ಗಾರಿಕೆ ಯಲ್ಲಿ ಸಾಟಿಯಿಲ್ಲದ ವೀರ; ಸಂಪತ್ ಸಮೃದ್ಧಿಗಳಿಸಿರುವಂಥವನು ನಾನು.''

ಸೀತೆ : ''ನೀಚ, (ಸುಮ್ಮನೆ ಏಕೆ ಹರಟುತ್ತೀಯೆ); (ಆಡಿದ ಮಾತುಗಳ ಎಣಿಕೆಗೆ) ಸೆರಗಿನ ತುದಿ ಯಲ್ಲಿ ಉದ್ದಕ್ಕೆ ಗಂಟುಗಳನ್ನು ಹಾಕಿಕೋ.'' [''ನಿನ್ನ ಮಾತಿನಲ್ಲಿ 'ಚ'ಗೆ ಬದಲು 'ಲ' ಇಡು.'']

ಚಕಾರಚ್ಯುತವಾಗಿ ಲಕಾರದತ್ತವಾದ ಮೇಲಿನ ಅರ್ಥ : ''ರಾಮ ವಾಲಿಗೆ ಅತ್ಯಂತ ಅಹಿತ; ಅತ್ಯಂತ ಸುಲಭವಾದ ಸಂಪತ್ತುಳ್ಳವನು; ನೀಲವರ್ಣದ ಶರೀರ ಧರಿಸಿದವನು; ಕಾಡಿನ ಅಂಚಿನಲ್ಲಿ ರಾಕ್ಷಸರ ಲಯಕ್ಕೆ ಸಿದ್ಧವಾಗಿರುವವನು—ಎಂದು ನೀನೇ ತಿಳಿದಿದ್ದೀಯೆ; ನನ್ನನ್ನು ನೋಡು, ಅತಿವಿಲಕ್ಷಣ ನಾನು; ಮಾತಿನಲ್ಲಿ ಎಣೆಯಿಲ್ಲದ ಶೂರ; ಸಂಪತ್ತಿನ ಹಾನಿ ಉಳ್ಳವನು.''

ಇದು ಪ್ರತಿದತ್ತಾಕ್ಷರ (ಚ್ಯುತದತ್ತಾಕ್ಷರ) ಮೂಲವಾದ ದ್ವಿಸಂಧಾನದ ರೀತಿ.

ಹಾರೌಚಿತ್ಯನಿವೇದಕಾಖಿಲಗುಣಸ್ಸೀತೇಽಸ್ಮ್ಯಹಂ ಪಶ್ಯ ಮಾಂ
ಸರ್ಗಾತ್ಯಂತ ಬಹಿರ್ಭವತ್ವಧಿಷಣಾಪಾದಿ ಸ್ವರೂಪೋಽಸ್ಮ್ಯಹಂ
ಸ್ತ್ಯಾಂ ಚಾಹಂ ಹನನತ್ಯಗಸ್ಯಭಿಮತಿಸ್ತೇ ಚೇತ್ತಥಾ; ರೇಽಧಮ
ಪ್ರಾಕ್ ಸಂನ್ಯಾಸತ ಏವ ತೇ ಸಮುಚಿತಂ ವೇದ್ಮಿ ಸ್ವರೂಪಂ ನನು ॥ (೩೪)

ರಾವಣ : ''ಸೀತೆಯೇ ಮುತ್ತಿನ ಹಾರದಷ್ಟು ರಮಣೀಯವಾದ ಮತ್ತು ಶುಭ್ರವಾದ ಗುಣಗಳುಳ್ಳ ವನು; ನೋಡು ನನ್ನನ್ನು; ಸೃಷ್ಟಿಗೆ ಹೊರತಾದುದೆಂಬ ಬುದ್ಧಿಯನ್ನು ಹುಟ್ಟಿಸುವಂಥ ಸ್ವರೂಪವುಳ್ಳವನು; ಹಿಂಸೆಯನ್ನೂ ಬಿಟ್ಟವನಾದೇನು, ನಿನಗೆ ಹಾಗೆ ಇಷ್ಟವಾದರೆ.''

ಸೀತೆ : ''ಎಲೈ ಅಧಮ, ಈ ಹಿಂದೆ ಸಂನ್ಯಾಸಿಯ ವೇಷದಲ್ಲಿಯೇ ನಿನ್ನ ಯೋಗ್ಯವಾದ ಸ್ವರೂಪವನ್ನು ನಾನು ತಿಳಿದಿರುವೆನಲ್ಲ?'' ['' 'ಸಂ' ಎಂಬ ಅಕ್ಷರ ಮೊದಲಲ್ಲಿ ಸೇರಿಸಿದರೆ, ನಿನ್ನ ಸ್ವರೂಪ ತಿಳಿಯುತ್ತದೆ ಯಲ್ಲವೆ?'']

'ಸಂ'ದತ್ತವಾದ ಮೇಲಿನ ಅರ್ಥ : ''ಸಂಹಾರಕ್ಕೆ ಯೋಗ್ಯನೆಂದು ತೋರಿಸುವ ಎಲ್ಲ ಗುಣಗಳಿಂದ ಕೂಡಿದವನು; ಸಂಸರ್ಗಕ್ಕೆ (ಸಂಭಾಷಣಕ್ಕೆ) ಹೊರತಾದವನು ಎಂದು ಬುದ್ಧಿ ಹುಟ್ಟಿಸುವ ಸ್ವರೂಪದವನು; ನಿನಗೆ ಹಾಗೆನ್ನಿಸಿದರೆ, ನಾನು ಶರೀರವನ್ನೂ (ಸಂಹನನ) ಬಿಟ್ಟೇನು.''

ಇದು ಅಧಿದತ್ತಾಕ್ಷರ (ದತ್ತಾಕ್ಷರ) ಮೂಲವಾದ ದ್ವಿಸಂಧಾನದ ರೀತಿ.

ಇದೇ ಕಾವ್ಯದ ಇನ್ನೊಂದು ಪ್ರತಿ ಉದಾಹರಣೆಯೊಂದಿಗೆ ಈ ವಿಶಿಷ್ಟ ರೀತಿಯ ಗೂಢಚಿತ್ರವೆನ್ನಬಹುದಾದ ರಚನೆಯ ಪ್ರಕರಣವನ್ನು ಮುಗಿಸಬಹುದು :

ಜುಷ್ಟೋ ಮಂತ್ರಿಜನೇನ ಸಂಗತಧಿಯಾ ಮದ್ವನ್ನ ಕಶ್ಚಿತ್ ಪ್ರಭುಃ
ಪ್ರಾಪ್ತಾತ್ಯುಜ್ವಲಕೀರ್ತಿಸಂಹತಿರಹಂ ತೈಸ್ತೈಶ್ಚರಿತ್ರೈರ್ನಿಜೈಃ
ರಾಮೋ ನಾರ್ಹತಿ ತುಲ್ಯತಾಂ ಜನಕಜೇ ಸಂಗ್ರಾಮಸಿಂಹಸ್ಯ ಮೇ;
ಸರ್ವಂ ಸತ್ಯಮರೇ ಪರಂ ತ್ವನುಚಿತಸ್ಸಂನ್ಯಾಸ ಏಕಸ್ತವ ॥ (೨೨)

ರಾವಣ : "ನನ್ನ ಮಂತ್ರಿಗಳು ಬುದ್ಧಿವಂತರು, ನನ್ನಂಥ ಪ್ರಭುಗಳೇ ಇಲ್ಲ. ನನ್ನ ಸಾಹಸಕೃತಿಗಳಿಂದ ಕೀರ್ತಿ ಬಂದಿದೆ. ಯುದ್ಧದಲ್ಲಿ ವೀರನಾದ ನನಗೆ ರಾಮನೆಂತು ಸರಿಯಾದಾನು?"

ಸೀತೆ : "ಎಲೈ ರಾವಣ, ನಿನ್ನ ಮಾತೆಲ್ಲ ಸರಿ; ನಿನ್ನ ಸಂನ್ಯಾಸಿವೇಷ ಮಾತ್ರ ತಪ್ಪಾಯಿತು." [ನಿನ್ನ 'ಸಂ' ಎಂಬ ಉಪಸರ್ಗ ಸೇರಿಸಿದ್ದು ತಪ್ಪಾಗಿದೆ.]

'ಸಂ' ಉಪಸರ್ಗವನ್ನು ಬಿಟ್ಟ ಮೇಲಿನ ಅರ್ಥ : "ಬುದ್ಧಿಯಿಲ್ಲದ ಮಂತ್ರಿಗಳಿಂದ ಕೂಡಿದ ನನ್ನಂಥ ಪ್ರಭು ಯಾರೂ ಇಲ್ಲ. ನನ್ನ ಕೃತಿಗಳಿಂದ ಕೀರ್ತಿಗೆ ಹಾನಿ ಬಂದಿದೆ. ನಾನು ಗ್ರಾಮಸಿಂಹ (=ನಾಯಿ).[3]

'ಕವಿರಾಜಮಾರ್ಗ' 'ಕಾವ್ಯಾವಲೋಕನ'ಗಳ ಗೂಢ(ಗುಪ್ತ)ಗಳು

'ಕವಿರಾಜಮಾರ್ಗ'ದ ದ್ವಿತೀಯ ಪರಿಚ್ಛೇದದಲ್ಲಿ, ಆರಂಭದಲ್ಲಿಯೇ ದುಷ್ಕರ ಕಾವ್ಯಗಳು ಯಾವುವು ಎಂಬುದನ್ನು ತಿಳಿಸುವಾಗ 'ಗೋಪಿತಕ್ರಿಯಂ' ಕೂಡ ಒಂದು ಎನ್ನುವುದನ್ನು ಸೂಚಿಸಿರುವುದಲ್ಲದೆ (೨–೧೧೨), ಅದಕ್ಕೆ ಒಂದು ಲಕ್ಷ್ಯವನ್ನೂ ಒದಗಿಸಿದೆ (೨–೧೪೧). ಈ ಸೂಚನೆ ಮತ್ತು ಲಕ್ಷ್ಯಗಳ ನಡುವೆ ಇನ್ನೊಂದು ಗೂಢವಾಗಿ 'ಗೂಢಚತುರ್ಥ'ದ ಸೂಚನೆಯೂ (೨–೧೧೯) ಅದಕ್ಕೆ ಒಂದು ಲಕ್ಷ್ಯವೂ (೨–೧೨೦) ಬಂದಿವೆ. "ಈ (ಇನ್) ಪ್ರತೀತಿ ತೋರ್ಪನಾ ಗೂಢಚತುರ್ಥಂಗಳ ಲಕ್ಷ್ಯಮಂ" ಎಂಬುದಾಗಿರುವ ಸೂಚನೆಯಲ್ಲಿ ಬಹುವಚನವಾಗಿ ಗೂಢಚತುರ್ಥವನ್ನು ಏಕೆ ಹೇಳಿದೆಯೋ ತಿಳಿಯದು. ಅದಕ್ಕೆ ಸಾರ್ಥಕತೆಯಿಲ್ಲ. ಲಕ್ಷ್ಯಪದ್ಯವೂ ಒಂದೇ ಇದೆಯೆನ್ನುವುದನ್ನು ಗಮನಿಸಬೇಕು. ಹೀಗೆ ಗೂಢಚತುರ್ಥ ಅಥವಾ ಪಾದಗೂಢ, ಕ್ರಿಯಾಗೋಪಕ ಅಥವಾ ಕ್ರಿಯಾಗೂಢ ಈ ಎರಡು ಗೂಢಚಿತ್ರಗಳನ್ನು ಮಾತ್ರ ಇಲ್ಲಿ ಹೇಳಿರುವುದನ್ನು ನಾವು ಗಮನಿಸುತ್ತೇವೆ. 'ಕವಿರಾಜಮಾರ್ಗ'ಕಾರನಿಗೆ ಈ ವಿಷಯ ಎಲ್ಲಿಂದ ದೊರೆಯಿತು? ದಂಡಿ ಭಾಮಹರಲ್ಲಿ ಇಲ್ಲದ ಈ ವಿಷಯವನ್ನು ರುದ್ರಟನಿಂದ ಏನಾದರೂ ಅವನು ಸ್ವೀಕರಿಸಿರಬಹುದೇ? —ಇದು ಶೋಧನೆಗೆ ವಿಷಯ.

ಈಚೆಗೆ 'ಕಾವ್ಯಾವಲೋಕನ'ದ ಗುಣವಿವೇಕಾಧಿಕರಣದಲ್ಲಿ, ನಾಗವರ್ಮನು ತಾನೂ ಚಿತ್ರಕಾವ್ಯ ಪ್ರಕಾರಗಳನ್ನು ಪಟ್ಟಿಮಾಡುವ ಒಂದು ಸೂತ್ರದಲ್ಲಿ (೧೩೯) "ಗೋಪಿತಕ್ರಿಯಾಕಾರಕಂ ನಿಗೂಢಚತುರ್ಥಂ" ಎಂಬುದಾಗಿ ಸೂಚಿಸಿದ್ದಾನೆ. ಈ ಸೂಚನೆಯ ರೀತಿ 'ಕವಿರಾಜಮಾರ್ಗ'ದ ಪ್ರಭಾವವನ್ನು ಸೂಚಿಸುವಂತೆ ತೋರುತ್ತದೆ. ಕ್ರಿಯಾಗುಪ್ತ, ಕಾರಕಗುಪ್ತ ಮತ್ತು ಗೂಢಚತುರ್ಥ ಎಂಬ ಮೂರು ವಿಧದ ಗೂಢಗಳೇ ಇವು. ಇವಕ್ಕೆ ಒಂದೊಂದು ಲಕ್ಷ್ಯವನ್ನೂ ನಾಗವರ್ಮನು ಒದಗಿಸಿದ್ದಾನೆ. ಲಕ್ಷ್ಯಗಳ ನಿರ್ದೇಶನಮಾಡುವ ಸೂಚನೆ ಮಾಡುವಲ್ಲಿ 'ಕ್ರಿಯಾಗೋಪ', 'ಕಾರಕಗೋಪ' ಎಂಬ ಎರಡನ್ನೂ ಸಮಸ್ತರೂಪದಲ್ಲಿ 'ಕ್ರಿಯಾಕಾರಕಗೋಪಂಗಳ್' ಎಂಬುದಾಗಿ ಕರೆದು, ಕ್ರಮವಾಗಿ ಲಕ್ಷ್ಯಗಳನ್ನು ಕೊಟ್ಟಿರುವನು. ಲಕ್ಷಣನಿರ್ವಚನವನ್ನೇನೂ ಮಾಡಿಲ್ಲವಾದ್ದರಿಂದ ಲಕ್ಷ್ಯದ ದುಷ್ಕರಾಂಶವನ್ನು ಶ್ರಮಪಟ್ಟು ಗುರುತಿಸಬೇಕಾಗುತ್ತದೆ. ಪಾದಗೂಢವೆಂಬುದನ್ನು 'ಗೂಢಚತುರ್ಥ'ವೆಂದು ಕರೆದು ಲಕ್ಷ್ಯವನ್ನು ಬರೆದಿದೆ. ಇಲ್ಲಿಯೂ ಲಕ್ಷಣಸೂಚನೆಯಿಲ್ಲದಿರುವುದರಿಂದ ಸಂಸ್ಕೃತ ಅಲಂಕಾರಗ್ರಂಥಗಳ ಪರಿಶೀಲನೆಯಿಂದ ಇಲ್ಲಿಯ ದುಷ್ಕರಾಂಶವನ್ನು ಗುರುತಿಸಬೇಕಾಗುತ್ತದೆ. ಈಗ ಈ ಎರಡೂ ಲಕ್ಷಣಗ್ರಂಥಗಳಿಂದ ಲಕ್ಷ್ಯಗಳನ್ನೆತ್ತಿ ಪರಿಶೀಲಿಸಬಹುದು.

ಕ್ರಿಯಾಗುಪ್ತ

'ಕವಿರಾಜಮಾರ್ಗ'ದ ಲಕ್ಷ್ಯ :

ಅರಸಿಯ ದಿವ್ಯಸೇವಾದರದಿರದೀಗಡೆ ನಿ।
ನ್ನರಸಿಯನೆಯ್ದುವಿನಂ ಪರಿಜನಮಂ ಕಳಿಪಿಂ ॥

"ಅರಸಿಯ ದಿವ್ಯಸೇವೆಯ ಆದರಣೆಯಲ್ಲಿ, ನಿನ್ನ ಅರಸಿಯನ್ನು ತಪ್ಪದೆ ಈಗಲೇ ಬಂದು ಸೇರುವ ಹಾಗೆ ಪರಿಜನರನ್ನು ಇನ್ನು ಕಳುಹಿಸು."

ಮುದ್ರಿತಗ್ರಂಥಗಳಲ್ಲಿ, ಈ ಶ್ಲೋಕದ ಮೊದಲ ಪಾದದ ಕೊನೆಗೆ 'ಸೇವಾ' ಎಂದಿರದೆ 'ಸೇನಾ' ಎಂದೇ ಇದೆಯಾದರೂ, ಅದು ಸರಿಯಾದ ಪಾಠವಿರಲಾರದೆಂದು ಹಸ್ತಪ್ರತಿಯೊಂದರ (ಮೈಓಲೈ. ನಂ. ೧೧೦) ಪಾಠಭೇದವನ್ನು ಇಲ್ಲಿ ಅಂಗೀಕಾರಮಾಡಿದೆ.

'ಕಳಿಪ' ಎಂಬ ಕ್ರಿಯಾವಾಚಕವು ಪದ್ಯದಲ್ಲಿ ವ್ಯಕ್ತವಾಗಿಯೇ ಇರುವುದರಿಂದ, ಇಲ್ಲಿ ಯಾವ ರೀತಿಯಲ್ಲಿ ಕ್ರಿಯೆ ಗುಪ್ತವಾಗಿರಬೇಕು ಎಂದು ಕವಿ ಭಾವಿಸಿದ್ದನೋ ತಿಳಿಯುತ್ತಿಲ್ಲವಾಗಿದೆ. ''ಅರಸಿಯ ದಿವ್ಯಸೇವಾದರದೆ ಇರು; ಅದೀಗಡೆ ನಿನ್ನರಸಿಯನೆಯ್ದು ವಿನಂ ಪರಿಜನಮಂ ಕಳಿಪಿನ್'' ಎಂದು ಇದ್ದುದಾದರೆ, ಅವಶ್ಯವಾದ ಇನ್ನೊಂದು ಕ್ರಿಯಾಪದ 'ಇರು' ಎನ್ನುವುದು ಪದ್ಯದಲ್ಲಿ ಗುಪ್ತವಾಗಿದೆ ಎಂದು ತಿಳಿಯಲು ಅವಕಾಶವಾಗುತ್ತದೆ. ಆಗ ಅರ್ಥ ''(ನೀನು) ರಾಣಿಯ ದಿವ್ಯಸೇವಾದರಣೆಯಲ್ಲಿರು; ಈಗಲೇ ನಿನ್ನ ಪತ್ನಿಯನ್ನು ಹೋಗಿ ಸೇರುವಂತೆ (ಅವಳನ್ನು ನೋಡಿಕೊಳ್ಳಲು ಸಹಾಯವಾಗಲು ಅನುಕೂಲವಾಗಲಿ ಎಂದು) ಪರಿಜನರನ್ನು ಇನ್ನು ಕಳಿಸಿಕೊಡು'' ಎಂಬುದಾಗಿ ಆಗುವುದು. ಇಲ್ಲವೆ ''ಅರಸಿಯ ದಿವ್ಯಸೇವಾದರದೆ ಇರದೆ ಈಗಡೆ ನಿನ್ನರಸಿಯನ್ ಎಯ್ದುವಿನಂ ಪರಿ; ಜನಮಂ ಕಳಿಪಿನ್'' ಎಂದು ಇದ್ದುದಾದರೆ, ಅವಶ್ಯವಾದ ಇನ್ನೊಂದು ಕ್ರಿಯಾಪದ 'ಪರಿ' ಎನ್ನುವುದು ಪದ್ಯದಲ್ಲಿ ಗುಪ್ತವಾಗಿದೆಯೆನ್ನಬಹುದು. ಆಗ ಅರ್ಥ ''ರಾಣಿಯ ದಿವ್ಯಸೇವೆಯ ಆದರಣೆಗಾಗಿ ತಪ್ಪದೆ ಈಗಲೇ ನಿನ್ನ ಪತ್ನಿಯಲ್ಲಿಗೆ ಹೋಗಲು ಧಾವಿಸು; ಜನರನ್ನು ಕಳಿಸಿಕೊಡು, ಇನ್ನು—'' ಎಂದಾಗುವುದು. ಹೇಗಾದರೂ, ಪದ್ಯದಲ್ಲಿ ಎರಡು ಕ್ರಿಯಾಪದಗಳನ್ನು ಅಂಗೀಕರಿಸುವುದು ತಪ್ಪದು.

ಇಲ್ಲಿ ಕ್ರಿಯಾಗೋಪನ ಹೀಗೆಯೇ ಇದೆಯೆಂದು ನಿಶ್ಚಿತವಾಗಿ ಹೇಳುವುದು ಕಷ್ಟ. ಮುಳಿಯ ತಿಮ್ಮಪ್ಪಯ್ಯನವರೂ ಎಂ. ವಿ. ಸೀತಾರಾಮಯ್ಯನವರೂ ಬೇರೆಬೇರೆಯಾಗಿ ಕ್ರಿಯಾಗೋಪನವನ್ನು ಗುರುತಿಸುವ ಪ್ರಯತ್ನಗಳನ್ನು ಈ ಮೊದಲು ಮಾಡಿದ್ದಾರೆ. ತಿಮ್ಮಪ್ಪಯ್ಯನವರು ಪದ್ಯವನ್ನು ತಮಗೆ ತೋರಿದ ಒಂದು ರೀತಿಯಲ್ಲಿ ಅರ್ಥಮಾಡಿ, '''ಕಳಿಪಿಂ' ಎಂದು ಮಧ್ಯಮ ಪುರುಷಬಹುವಚನದಂತೆ ತೋರುವುದರಿಂದ ಪ್ರಕೃತಾರ್ಹವಾದ 'ಕಳಿಪು' ಎಂಬ ಕ್ರಿಯಾಪದವು ಗುಪ್ತವಾಗಿ ಭಾಸವಾಗುತ್ತಿದೆ'' ಎಂದು ಅಭಿಪ್ರಾಯಪಟ್ಟಿದ್ದಾರೆ.[4] ಇದು ತೃಪ್ತಿಕರವೆನಿಸದು. ಸೀತಾರಾಮಯ್ಯನವರು ಇದನ್ನು ಅಂಗೀಕರಿಸದೆ, ''ದ್ವಿತೀಯಪಾದದ ನಾಮವಾಚಕವಾದ 'ಅರಸಿ'ಯೊಂದಿಗೆ ಪ್ರಥಮಪಾದದಲ್ಲಿ 'ಅರಸಿ' (ಅಱಸಿ=ಹುಡುಕಿ) ಎಂಬ ಕ್ರಿಯಾಪದವನ್ನು ನಾಮವಾಚಕ ಭ್ರಾಂತಿ ಬರುವಂತೆ ಕವಿ ಚಮತ್ಕೃತಿಯಿಂದ ಯೋಜಿಸಿರುವನೆಂದು ತೋರುತ್ತದೆ'' ಎಂಬುದಾಗಿ ಊಹಿಸಿದ್ದಾರೆ.[5] ದುಷ್ಕರ ಕಾವ್ಯಬಂಧದಲ್ಲಿ ರ–ಱ ಕಾರಗಳ ಭೇದವನ್ನು ಗಣಿಸಬೇಕಾಗಿಲ್ಲ ಎಂಬ ಗ್ರಹಿಕೆಯನ್ನು ಒಪ್ಪುವುದು ಕಷ್ಟ. ಶಬ್ದಗಳ ಭಿನ್ನಾರ್ಥಕತ್ವವು ಅಡ್ಡಿಯಾಗದಿದ್ದರೆ ಒಪ್ಪಬಹುದಾಗಿತ್ತು. ಸಂಸ್ಕೃತದಲ್ಲಿ ರ–ಲ, ವ–ಬ, ಪ–ಹ ನಡುವೆ ಅಭೇದವನ್ನು ಅಂಗೀಕರಿಸುವಾಗ ಶಬ್ದಗಳಲ್ಲಿ ಭಿನ್ನಾರ್ಥಕತ್ವವಿರುವುದಿಲ್ಲವೆನ್ನುವುದನ್ನು ಗಮನಿಸಿದರೆ, ಇದು ತಿಳಿಯುತ್ತದೆ. ಆದುದರಿಂದ ಈ ಊಹೆಯನ್ನವಲಂಬಿಸಿ ಅವರು ಮಾಡಿರುವ ಪದ್ಯಾರ್ಥವನ್ನು ಒಪ್ಪಲಾಗದು.

'ಕಾವ್ಯಾವಲೋಕನ'ದ ಲಕ್ಷ್ಯ :

> ಪರಿವರ್ಜಿತದೋಷನನಾ । ದರದಿಂ ದೇವಾದಿದೇವನೆಂದಿರದರೆಬರ್ ।
> ದುರಘಾವಿಲಿಪ್ತರಂ ದೇ । ವರೆಂದು ಬಗೆಬೆದಱಿ ದೆಸೆಗೆ ದಿಙ್ಮೂಢತೆಯಿಂ ॥ (೫೮೯)

''ಕೆಲವರು ಪರಿವರ್ಜಿತವಾದ ದೋಷವುಳ್ಳವನನ್ನು (=ದೋಷದೂರನಾದ ಜಿನನನ್ನು) ದೇವಾದಿದೇವನೆಂದು (ಮೊದಲು) ಹೇಳಿ, ಅನಂತರದಲ್ಲಿ, ಸುಮ್ಮನಿರದೆ, ನೀಚವಾದ ಪಾಪಲೇಪದಿಂದ ಕೂಡಿದವರನ್ನು (=ಪಾತಕಿಗಳಾದ ಅನ್ಯರನ್ನು) ದೇವರು ಎಂಬುದಾಗಿ, ದಿಕ್ಕುದಿಕ್ಕುಗಳಿಗೆ ಮನಸ್ಸು ಹರಿದು, ದಿಗ್ಭ್ರಮೆಯಿಂದ....''

ಈ ವಾಕ್ಯ ಅಪೂರ್ಣವಾಗಿರುವುದು ವಿದಿತ. ಇಲ್ಲಿ ''ಪರಿವರ್ಜಿತದೋಷನನ್....'' ಎಂಬ ಪಾದಭಾಗದಲ್ಲಿ ''ಪರಿವರ್ ಜಿತದೋಷನನ್'' ಎಂಬುದಾಗಿ ಪದವಿಭಾಗ ಮಾಡಿಕೊಂಡರೆ, 'ಜಿತದೋಷನನ್' ಎಂಬ

ಪದ 'ದೋಷದೂರನನ್ನು' (=ದೋಷದೂರನಾದ ಜಿನನನ್ನು) ಎಂಬುದಾಗಿ ಮೊದಲು ಸೂಚಿಸಿದ ಅರ್ಥವನ್ನೇ ಕೊಡುತ್ತ, ಪದ್ಯದಲ್ಲಿ ವಿನ್ಯಾಸಗೊಂಡಿರುವ ವಾಕ್ಯಕ್ಕೆ ತಕ್ಕ ಕ್ರಿಯಾಪದವನ್ನೂ ಪಡೆಯುವುದು ಸಾಧ್ಯವಾಗುತ್ತದೆ. ಆಗ ವಾಕ್ಯ "....ಬಗೆಬೆದಱಿ ದೆಸೆಗೆ ದಿಙ್ಮೂಢತೆಯಿಂ ಪರಿವರ್" ಎಂಬ ಅನ್ವಯಕ್ಕೆ ಹೊಂದಿಕೊಳ್ಳುತ್ತದೆ. ಅಲ್ಲಿಗೆ 'ಪರಿವರ್' ಎಂಬ ಗುಪ್ತವಾದ ಕ್ರಿಯಾವಾಚಕದಿಂದ ಈ ಪದ್ಯ ಕ್ರಿಯಾಗುಪ್ತದ ನಿದರ್ಶನವಾಗಿದೆ ಎನ್ನಬಹುದು. ಮುಳಿಯ ತಿಮ್ಮಪ್ಪಯ್ಯನವರು ಈ ಗೂಢಚಿತ್ರವನ್ನು ಸರಿಯಾಗಿಯೇ ಗುರುತಿಸಿದ್ದಾರೆ.

ಕಾರಕಗುಪ್ತ

'ಕವಿರಾಜಮಾರ್ಗ'ದಲ್ಲಿ ಕಾರಕಗುಪ್ತವನ್ನು ಪ್ರಸ್ತಾವಿಸಿಯೇ ಇಲ್ಲ. ಪ್ರಸ್ತಾವವಾಗಿದ್ದರೆ 'ಕ್ರಿಯಾಗೋಪಕ' ಮತ್ತು 'ಚಕ್ರಶ್ಲೋಕ'ಗಳ ನಡುವೆ ಅದು ಸ್ಥಾನಪಡೆಯಬೇಕಾಗಿತ್ತು. ಆದರೆ ಪ. ೧೧೨ರಲ್ಲಿ 'ಗೋಪಿತಕ್ರಿಯ'ವೆಂಬ ಒಂದೇ ಉಕ್ತವಾಗಿರುವುದರಿಂದ, ಈ ಗ್ರಂಥಕರ್ತೃವಿಗೆ ಕಾರಕಗುಪ್ತವನ್ನು ನಿರೂಪಿಸುವ ಉದ್ದೇಶವೇನೂ ಇದ್ದಂತೆ ತೋರುವುದಿಲ್ಲ.

'ಕಾವ್ಯಾವಲೋಕನ'ದ ಲಕ್ಷ್ಯ :

> ಏನನೇನಂ ಮಹಾಘೋರಂ । ನಾನಾಜನ್ಮಾಂತರಂಗಳೊಳ್ ।
> ತಾನಾಗಿಸದು ಸಂಸಾರಿ । ಗಾ ನಿರ್ವಾಣಪದಂಬರಂ ॥ (೫೯೦)

"ಮಹಾಘೋರವಾದ ಏನೇನನ್ನು ತಾನೆ, ಸಂಸಾರಿಗೆ ಆ ಮೋಕ್ಷಪದವಿ ಲಭಿಸುವ ತನಕ ಹಲವು ಬೇರೆಬೇರೆ ಜನ್ಮಗಳಲ್ಲಿ ಉಂಟುಮಾಡುವುದಿಲ್ಲ?"

ಇಲ್ಲಿ 'ಉಂಟುಮಾಡುವುದಿಲ್ಲ' ಎಂದು ಕ್ರಿಯೆಗೆ ಕರ್ತೃಕಾರಕ ಯಾವುದೆಂಬುದು ತಿಳಿಯುವುದಿಲ್ಲ. ಆದರೆ ಮೊದಲ ಪಾದದ ಆದಿಯ 'ಏನನೇನಂ' ಎಂಬ ಪದವನ್ನು 'ಏನಂ+ಏನಂ' ಎಂದು ವಿಭಜಿಸಿಕೊಂಡು ಎರಡನೆಯ 'ಏನಂ' ಎಂಬುದನ್ನು 'ಪಾಪ' ಎಂಬರ್ಥವನ್ನು ಕೊಡುವ ("ಕಲುಷಂ ವೃಜಿನೈನೋಘಮಂಹೋ ದುರಿತ ದುಷ್ಕೃತಂ", 'ಅಮರಕೋಶ' ೧-೪-೧೪೭) ಶಬ್ದವನ್ನಾಗಿ ತಿಳಿದರೆ ಅಗತ್ಯವಾದ ಕರ್ತೃಕಾರಕ ಸಿಕ್ಕಂತಾಗುತ್ತದೆ. ಆಗ ಪದ್ಯದ ಅನ್ವಯ "ಮಹಾಘೋರಂ ಏನಂ ಸಂಸಾರಿಗೆ ಆ ನಿರ್ವಾಣಪದಂಬರಂ ನಾನಾಜನ್ಮಾಂತರಂಗಳೊಳ್ ಏನಂ ತಾನಾಗಿಸದು?" ಎಂದಾಗಿ, "ಮಹಾಘೋರವಾದ ಪಾಪವು ಸಂಸಾರಿಯಾದವನಿಗೆ ಆ ಮೋಕ್ಷಪದವಿ ಲಭಿಸುವ ತನಕ ಹಲವು ಬೇರೆಬೇರೆಯಾದ ಜನ್ಮಗಳಲ್ಲಿ ಏನನ್ನು ತಾನೇ ಉಂಟುಮಾಡುವುದಿಲ್ಲ" ಎಂಬ ಅಭಿಪ್ರಾಯ ಅದರಿಂದ ವಿಶದವಾಗುತ್ತದೆ. ಪದ್ಯದಲ್ಲಿ 'ಏನಂ' ಎಂಬ ಕರ್ತೃಕಾರಕ ಗುಪ್ತವಾಗಿ ಸೇರಿಕೊಂಡಿರುವುದರಿಂದ ಇದು 'ಕಾರಕಗುಪ್ತ'ದ ನಿದರ್ಶನವಾಗಿದೆ.

ಪಾದಗೂಢ (ಗೂಢಚತುರ್ಥ)

'ಕವಿರಾಜಮಾರ್ಗ'ದ ಲಕ್ಷ್ಯ :

> ಘನಸ್ತನಿತಮುಂ ಕೇಕಿಸ್ವನಮುಂ ನೀರ ಧಾರೆಯುಂ
> ಮನಂಬೆರ್ಚಿಕ್ಕುಮಿಂತೆತ್ತಂ ಘನಮಿಂತು ಘನಸ್ತನಿ ॥ (೨-೧೨೦)

"ಘನಸ್ತನವುಳ್ಳವಳೇ, ಗುಡುಗೂ ನವಿಲಿನ ಕೇಗೂ ನೀರಿನ ಧಾರೆಯೂ ಮನಸ್ಸನ್ನು ಉಲ್ಲಾಸಗೊಳಿಸುತ್ತವೆ; ಹೀಗೆ ಎತ್ತಲೂ ಮೋಡವೇ!"

ಇಲ್ಲಿ ನಾಲ್ಕನೆಯ ಪಾದದ ಅಕ್ಷರಗಳು ಮೊದಲ ಮೂರು ಪಾದಗಳಲ್ಲಿಯೇ ಗೂಢವಾಗಿ ಸೇರಿವೆ. ಅಕ್ಷರಗಳ ಸಂಖ್ಯೆ ಕ್ರಮವಾಗಿ ೧, ೨, ೨೨, ೨೩ (ಸಂಧಿಸ್ಥಾನ), ೧, ೨, ೩, ೪. ನಾಲ್ಕನೆಯ ಪಾದದ

ಅಂತ್ಯಾಕ್ಷರ ನ್ಯಾಯವಾಗಿ ಗುರುವಾಗಿರಬೇಕಾಗಿತ್ತು; ಸಂಬೋಧನೆಯ ಕಾರಣದಿಂದ ಹ್ರಸ್ವವಾಗಿಯೇ ಉಳಿದಿದೆ ಯೆಂದು ತಿಳಿಯಬೇಕು. ಮುಳಿಯ ತಿಮ್ಮಪ್ಪಯ್ಯನವರು ಗೂಢಚತುರ್ಥದ ಲಕ್ಷಣವನ್ನು ಸರಿಯಾಗಿ ಗ್ರಹಿಸಿಲ್ಲ.

'ಕಾವ್ಯಾವಲೋಕನ'ದ ಲಕ್ಷ್ಯ :

> ಆತನಲ್ಲದನಂ ಮೆಚ್ಚೆಂ ಮಾತೇಂ ತಾಂ ಮಾರನಾದೊಡಂ ।
> ಕೇತನಂ ರತಿರಾಗಕ್ಕೆ ಕೇತನಂ ತಾರ ನಲ್ಲನಂ ॥ (ಪ. ೫೯೧)

''ಮಾತೇನು, ತಾನು ಮನ್ಮಥನೇ ಆದರೂ ಆತನಲ್ಲದವನನ್ನು ನಾನು ಮೆಚ್ಚುವುದಿಲ್ಲ. (ಸಖೀ), ರತಿರಾಗಕ್ಕೆ ನೆಲೆಯಾಗಿರುವವನನ್ನು, ಆ (ನನ್ನ) ನಲ್ಲನಾದ ಕೇತನನ್ನು, ಕರೆದುಕೊಂಡು ಬಾ.''

ಇಲ್ಲಿಯೂ ನಾಲ್ಕನೆಯ ಪಾದದ ಅಕ್ಷರಗಳು ಮೊದಲ ಮೂರು ಪಾದಗಳಲ್ಲಿಯೇ ಗೂಢವಾಗಿ ಸೇರಿವೆ. ಅಕ್ಷರಗಳ ಸಂಖ್ಯೆ ಕ್ರಮವಾಗಿ ೧೭, ೧೮, ೧೯, ೧೧ (ಅನುಸ್ವಾರವನ್ನು ಗಣಿಸಬಾರದು), ೧೩, ೩, ೪, ೬. (ಕ್ರಮಾನುಸರಣೆಗೆ ಬೆಲೆಕೊಡಬೇಕಾದುದು ಅವಶ್ಯ ಎಂಬುದಾದರೆ ೧೭, ೧೮, ೧೯ರ ಕ್ರಮವನ್ನು ೧೭, ೨, ೧೯ ಎಂದು ಬೇಕಾದರೆ ಮಾಡಿಕೊಳ್ಳಬಹುದು).

ಇಲ್ಲಿಯೂ ತಿಮ್ಮಪ್ಪಯ್ಯನವರ ಗ್ರಹಿಕೆ ಮೇಲೆ ಹೇಳಿದ ಕಾರಣಕ್ಕಾಗಿಯೇ ಸರಿಯಾಗಿಲ್ಲ.

ಕನ್ನಡ ಸಾಹಿತ್ಯದಲ್ಲಿ ಗೂಢಚಿತ್ರಗಳ ಕೆಲವು ನಿದರ್ಶನಗಳು

ಇದು ಇನ್ನೂ ವಿವರವಾಗಿ ಶೋಧಿತವಾಗಬೇಕಾಗಿದೆ. ಈಗ ತಿಳಿದಮಟ್ಟಿಗೆ ಹಿಂದಿನ ಕವಿಗಳು ಯಾರೂ ಪ್ರಕಟವಾಗಿ 'ಗೂಢ'ದ ನಿದರ್ಶನಗಳನ್ನು ತಾವು ಬರೆಯುತ್ತಿರುವುದಾಗಿ ಹೇಳಿಲ್ಲ.

ಕ್ರಿಯಾಗುಪ್ತ :

ಒಂದು ನಿದರ್ಶನ 'ಕಂತಿ ಪಂಪನ ಸಮಸ್ಯೆಗಳು' ಎಂಬ ರಚನೆಯಲ್ಲಿ ಕಂಡುಬರುತ್ತಿದ್ದು, ಮುಂದೆ ಅದನ್ನು ಉದ್ಧರಿಸಿದೆ.

ಪಂಪಕವಿ ಎಂದರೆ ನಾಗಚಂದ್ರನು ಕಂತಿಯನ್ನು ಕುರಿತು

> ಕಂತಿಯೆ ಚಿತ್ರಗ್ರಂಥದ । ನೀತಿಯನನುವಾಗಿ ತಿಳಿಯುತಿರ್ಪೊಡೆ ಮತ್ತಂ ।
> ಕೌತುಕದಿಂ ಕ್ರಿಯೆ ಕಾಣದ । ನೂತನ ಕಂದವನು ಬೇಗದಲಿ ನೀಂ ಪೇಳಾ ॥ (೪೬)

ಎಂಬುದಾಗಿ ಪ್ರಶ್ನಿಸಿದನಂತೆ. 'ಕ್ರಿಯೆ ಕಾಣದ' ಕಂದಪದ್ಯವೆಂದರೆ, 'ಕ್ರಿಯಾಗುಪ್ತ'ವೆಂಬ 'ಗೂಢ' ಚಿತ್ರದ ಪದ್ಯ ಎಂದರ್ಥ. ಚಿತ್ರಕಾವ್ಯರಚನೆಯ ಲಕ್ಷಣಗಳನ್ನು ಬಲ್ಲವಳಾದರೆ ಆಕೆ ಅಂತಹ ಪದ್ಯವೊಂದನ್ನು ರಚಿಸಲಿ ಎಂಬುದಾಗಿ ಕಂತಿಗೆ ನಾಗಚಂದ್ರನ ಸವಾಲು. ಆಗ ಕಂತಿ,

> ಸಾರನವರತ ಮನೋಹರ । ಚಾರುತರ ಪ್ರೀತಿಯುಕ್ತ ಮೋಹನಮದನಾ ।
> ನೀರೆಯರ ಮನವನೆಳೆಯುವ । ಧೀರಗುಣೋಜ್ವಲನೆ ಎನ್ನನಗಲದೆ ದಯೆಯಿಂ ॥ (೪೭)

ಎಂಬುದಾಗಿ ಉತ್ತರಿಸಿದಳು. ಇರುವಂತೆ ಅರ್ಥಮಾಡಿದರೆ, ''ಸಾರವತ್ತಾದ ಹೊಸ ಭೋಗಗಳಿಂದ ಮನೋಹರವೂ ಚಾರುತರವೂ ಆದ ಪ್ರೀತಿಯಿಂದ ಕೂಡಿರುವ ಮೋಹನಮದನನೇ, ನೀರೆಯರ ಮನಸ್ಸನ್ನು ಎಳೆಯುವ ಧೀರ ಗುಣೋಜ್ವಲನೇ, ನನ್ನನ್ನು ಅಗಲದೆ, ದಯೆಯಿಂದ....'' ಎಂಬುದಾಗಿ ಅಪೂರ್ಣವಾಗಿ ವಾಕ್ಯವೇರ್ಪಟ್ಟು, ಕ್ರಿಯಾ ವಾಚಕವೇ ಇಲ್ಲದಂತಾಗುತ್ತದೆ. ಈ ಪದ್ಯದಲ್ಲಿ ಸಾರ್+ಅನವರತ ಎಂದು ಪದ್ಯಾದಿಯಲ್ಲಿ ಪದಚ್ಛೇದಮಾಡಿ ಕೊಂಡರೆ, ''ಮನೋಹರನೇ, ಚಾರುತರವಾದ ಪ್ರೀತಿಯಿಂದ ಕೂಡಿದ ಮೋಹನಮದನನೇ, ನೀರೆಯರ

ಮನಸ್ಸನ್ನು ಎಳೆಯುವ ಧೀರಗುಣೋಜ್ವಲನೇ, ನನ್ನನ್ನು ಅಗಲದೆ, ಯಾವಾಗಲೂ ದಯೆಯಿಂದ ಕೂಡಿಕೊಂಡಿರು''–ಎಂಬುದಾಗಿ ಅರ್ಥವಾಗುವುದು.

ಪದ್ಯದ ಆದಿಭಾಗದಲ್ಲಿ 'ಸಾರ್' ಕ್ರಿಯಾವಾಚಕ ಗುಪ್ತವಾಗಿರುವುದರಿಂದ ಇದು ಕ್ರಿಯಾಗುಪ್ತದ ನಿದರ್ಶನವಾಗಿದೆ. ರಚನೆಯಲ್ಲಿ ಇದು ಕಾವ್ಯಾವ.ದ 'ಕ್ರಿಯಾಗೋಪ'ದ ಆರಂಭದ ರಚನೆಗೆ ಸದೃಶವಾಗಿರುವುದನ್ನಿಲ್ಲಿ ನೆನೆಯಬಹುದು.

ಚ್ಯುತದತ್ತಾಕ್ಷರ ಮೂಲವಾದ ಅಭಿಪ್ರಾಯಗೂಢ

ಅರಮನೆವಿದ್ವಾಂಸ ಜಯರಾಯಾಚಾರ್ಯರು ರಚಿಸಿರುವ, 'ಶ್ರೀ ಕೃಷ್ಣ ರಾಜ್ಯಾಭ್ಯುದಯ'ವೆಂಬ ಪ್ರಶಸ್ತಿ ಮಾಲಿಕೆಯ ಭಾಗವಾದ, ೧೮ನೆಯ ಪದ್ಯಗುಚ್ಛದ ಎರಡು ಪದ್ಯಗಳು :

(i) ಕಲೆ ಕಮಲಾನನಂ ಕುಡುಕುಡೆಂದಪನರ್ಥಿಗಳಾಸೆಯಂ ವಲಂ
ಲಲಿತಗುಣಾಳಿಗಂ ಕಣಿ ಕುರುಳ್ಕಿದನಾಜಿಯೊಳಾಪ್ತರೆಲ್ಲರಂ
ಕೆಳೆಗೊಳುತಂತು ಕಾಯಿಸಿದಪಂ ನೆರೆ ಕಾವಗೆ ಸಾಟಿ ಕೃಷ್ಣಭೂ
ತಲಪತಿ ನೀನುಮಾ ಕಸವಗೊಂಡರಿಯುಂ ಪಿರಿದುಂ ಸಮಾನರಯ್ ॥

''ಕೃಷ್ಣರಾಜನೇ, ನೀನೂ ಆ ಕಕಾರವು ಸಕಾರವಾಗಿ ಮಾರ್ಪಟ್ಟ ಶತ್ರುವೂ (ಧೂಳೀಪಟವಾದ ಶತ್ರುವೂ) ಬಲುಮಟ್ಟಿಗೆ ಸಮಾನರಾದವರು—'' ಎಂಬುದಾಗಿ ಪದ್ಯಾಂತದಲ್ಲಿ ದೊರೆಯುವ ಸೂಚನೆಯಿಂದಲೂ ''ಈ ಪದ್ಯದ ಕಕಾರಗಳಿಗೆ ಸಕಾರವನ್ನಿಟ್ಟುಕೊಂಡರೆ ಶತ್ರುಪರವಾಗಿ ಅರ್ಥವಾಗುವುದು'' ಎಂಬ ವಾಕ್ಯದ ಟಿಪ್ಪಣಿಯಿಂದಲೂ ಈ ಪದ್ಯದ ಯಥಾರೀತಿ ಕೃಷ್ಣರಾಜ ಒಡೆಯರ ಪರವಾದ ಅರ್ಥವನ್ನೂ ಕಕಾರವಿರುವೆಡೆಗಳಲ್ಲಿ ಸಕಾರವನ್ನಿಟ್ಟ ವ್ಯತ್ಯಸ್ತ ರೀತಿ ಶತ್ರುಪರವಾದ ಅರ್ಥವನ್ನೂ ಒಳಕೊಂಡಿರುತ್ತವೆಯೆಂದು ತಿಳಿಯಬಹುದಾಗಿದೆ.

ಯಥಾರೀತಿಯಾದ ಪದ್ಯದಿಂದ ಹೊರಡುವ ಕೃಷ್ಣರಾಜ ಒಡೆಯರ ಪರವಾದ ಅರ್ಥವನ್ನು ಹೀಗೆ ಹೇಳಬಹುದು :

''ಕೃಷ್ಣರಾಜನೇ, ನೀನೂ ಆ ಕಕಾರವು ಸಕಾರವಾಗಿ ಮಾರ್ಪಟ್ಟ ಶತ್ರುವೂ (ಧೂಳೀಪಟವಾದ ಶತ್ರುವೂ) ಬಲುಮಟ್ಟಿಗೆ ಸಮಾನರಾದವರು. ನೀನು ಸುಂದರವಾದ ತಾವರೆಮೊಗದವನು, ಯಾಚಕರ ಬಯಕೆಯನ್ನು 'ಪೂರೈಸು, ಪೂರೈಸು' ಎನ್ನುವವನು; ಮನೋಹರವಾದ ಗುಣಗಳ ಗುಂಪಿಗೆ ಗಣಿ; ಯುದ್ಧದಲ್ಲಿ ಶಸ್ತ್ರ ಝಳಪಿಸಿದವನು; ಆಪ್ತರಾದವರೆಲ್ಲರನ್ನೂ ಸ್ನೇಹಮಾಡಿಕೊಂಡು, ಅವರು ನಿನ್ನ ನಿರೀಕ್ಷೆಯಲ್ಲಿರುವಂತೆ ಮಾಡುವವನು; ಮಿಗಿಲಾಗಿ ಮನ್ಮಥನಿಗೆ ಸಮಾನನು.''

ವ್ಯತ್ಯಸ್ತ ರೀತಿಯಿಂದ ಪದ್ಯ ಮತ್ತು ಅದರ ಆಶಯಗಳು ಹೀಗಿರುತ್ತವೆ :

ಸಲೆ ಸಮಲಾನನಂ ಸುಡುಸುಡೆಂದಪನರ್ಥಿಗಳಾಸೆಯಂ ವಲಂ
ಲಲಿತಗುಣಾಳಿಗಂ ಸಣಿ ಸುರುಳ್ಕಿದನಾಜಿಯೊಳಾಪ್ತರೆಲ್ಲರಂ
ಸೆಳೆಗೊಳುತಂತು ಸಾಯಿಸಿದಪಂ ನೆರೆ ಸಾವಗೆ ಸಾಟಿ ಕೃಷ್ಣಭೂ
ತಲಪತಿ ನೀನುಮಾ ಕಸವಗೊಂಡರಿಯುಂ ಪಿರಿದುಂ ಸಮಾನರಯ್ ॥

''ಕೃಷ್ಣರಾಜನೇ, ನೀನೂ ಆ ಕಕಾರವು ಸಕಾರವಾಗಿ ಮಾರ್ಪಟ್ಟ ಶತ್ರುವೂ (ಧೂಳೀಪಟವಾದ ಶತ್ರುವೂ) ಬಲುಮಟ್ಟಿಗೆ ಸಮಾನರಾದವರು. ಆ ಶತ್ರುವು ಬಹುವಾಗಿ ಕೊಳಕುಮೋರೆಯವನು; ಯಾಚಕರ ಬಯಕೆಯನ್ನು 'ಸುಡು ಸುಡು' ಎನ್ನುವವನು; ಮನೋಹರವಾದ ಗುಣಗಳ ಗುಂಪಿಗೆ ಶನಿ; ಯುದ್ಧದಲ್ಲಿ ಮುದುರಿಕೊಂಡವನು; ಆಪ್ತರಾದವರೆಲ್ಲರನ್ನೂ ಎಳೆತರಿಸಿ, ಆ ರೀತಿಯಲ್ಲಿ ಸಾಯಿಸುವವನು. ಮಿಗಿಲಾಗಿ ಸಾಯುವ ಸ್ಥಿತಿಯಲ್ಲಿರುವವನಿಗೆ ಸಮಾನನು.''

(ii) ಮೊನೆಯೊಳ್ಕಾಯ್ದು ಕೆಳರ್ವುದಾ ಕೊಡೆಗಳಂ ಬಲ್ಲಬ್ಬಿಗರ್ಗೀವುದೊ
ಳ್ದನಮಂ ಕಾಣ್ಬರ ಮೊತ್ತಕೇ ತೆರುವುದಾ ಕಾಮೋರುರುಕ್ತ್ವಂ ಕಲಾ
ಯನದಲ್ಲಿರ್ಪುದು ಕೋರಿದರ್ಗೆ ಕಡಗಂಗೊಂಡೀವುದೀಯೆಲ್ಲಮುಂ
ನಿನಗುಂ ಸಾಟಿಯರಾತಿಗಂ ಸಮನಿಸಲ್ ಕೃಷ್ಣೇಂದ್ರ ತಾನಾ ಕಪಂ ॥

"ಕೃಷ್ಣರಾಜನೇ, ಆ ಕಕಾರವು ಪಕಾರವಾಗಿ ಮಾರ್ಪಟ್ಟರೆ (ಆ ದೇವೇಂದ್ರನು ಪ್ರಾಪ್ತವಾದರೆ) ಈಯೆಲ್ಲವೂ ನಿನಗೂ ಶತ್ರುವಿಗೂ ಸಮಾನವಾದವು" ಎಂಬುದಾಗಿ ಪದ್ಯಾಂತದಲ್ಲಿ ದೊರೆಯುವ ಸೂಚನೆಯಿಂದಲೂ "ಈ ಪದ್ಯದ ಕಕಾರಗಳಿಗೆ ಪಕಾರವನ್ನಿಟ್ಟುಕೊಂಡರೆ ಶತ್ರುಪರವಾಗಿ ಅರ್ಥವಾಗುವುದು" ಎಂಬ ವಾಕ್ಯದ ಟಿಪ್ಪಣಿಯಿಂದಲೂ ಈ ಪದ್ಯದ ಯಥಾರೀತಿ ಕೃಷ್ಣರಾಜ ಒಡೆಯರ ಪರವಾದ ಅರ್ಥವನ್ನೂ ಕಕಾರವಿರುವೆಡೆಗಳಲ್ಲಿ ಪಕಾರವನ್ನಿಟ್ಟ ವ್ಯತ್ಯಸ್ತರೀತಿ ಶತ್ರುಪರವಾದ ಅರ್ಥವನ್ನೂ ಒಳಕೊಂಡಿರುತ್ತವೆಯೆಂದು ತಿಳಿಯಬಹುದಾಗಿದೆ.

ಯಥಾರೀತಿಯಾದ ಪದ್ಯದಿಂದ ಹೊರಡುವ ಕೃಷ್ಣರಾಜ ಒಡೆಯರ ಪರವಾದ ಅರ್ಥವನ್ನು ಹೀಗೆ ಹೇಳಬಹುದು :

"ಕೃಷ್ಣರಾಜನೇ, ಆ ಕಕಾರವು ಪಕಾರವಾಗಿ ಮಾರ್ಪಟ್ಟರೆ (ಆ ದೇವೇಂದ್ರನು ಪ್ರಾಪ್ತವಾದರೆ), ಯುದ್ಧದಲ್ಲಿ ಕೆರಳಿ ಕೋಪಿಸುವುದು, ಕವಿಶ್ರೇಷ್ಠರಿಗೆ ಛತ್ರಗಳನ್ನು ಕೊಡುವುದು, ತಮ್ಮನ್ನು ಸಂದರ್ಶಿಸುವವರ ಸಮೂಹಕ್ಕೆ ವಿಪುಲವಾಗಿ ದ್ರವ್ಯವನ್ನು ನೀಡುವುದು, ಆ ಕಾಮುಕಲಾಪ್ರಕಟನೆಯ ಪ್ರಸಂಗದಲ್ಲಿ ತೊಡೆಗಳನ್ನು ಕಾಮದಿಂದ ಪೀಡಿಸುವುದು, ಬೇಡಿದವರಿಗೆ ಕೈಗಡಗವನ್ನು ತೆಗೆದುಕೊಡುವುದು ಇವೆಲ್ಲವೂ ನಿನಗೂ ಆ ಶತ್ರುಗಳಿಗೂ ಸಮಾನವಾಗಿರುತ್ತವೆ."

ವ್ಯತ್ಯಸ್ತರೀತಿಯಿಂದ ಪದ್ಯ ಮತ್ತು ಅದರ ಆಶಯಗಳು ಹೀಗಿರುತ್ತವೆ :

ಮೊನೆಯೊಳ್ಪಾಯ್ದು ಪೆಳರ್ವುದಾ ಪೊಡೆಗಳಂ ಬಲ್ಲಬ್ಬಿಗರ್ಗೀವುದೊ
ಳ್ದನಮಂ ಪಾಣ್ಬರ ಮೊತ್ತಕೇ ತೆರುವುದಾ ಪಾಮೋರುರುಪ್ತ್ವಂ ಪಲಾ
ಯನದಲ್ಲಿರ್ಪುದು ಪೋರಿದರ್ಗೆ ಪಡಗಂಗೊಂಡೀವುದೀಯೆಲ್ಲಮುಂ
ನಿನಗುಂ ಸಾಟಿಯರಾತಿಗಂ ಸಮನಿಸಲ್ ಕೃಷ್ಣೇಂದ್ರ ತಾನಾ ಕಪಂ ॥

"ಕೃಷ್ಣರಾಜನೇ, ಆ ಕಕಾರವು ಪಕಾರವಾಗಿ ಮಾರ್ಪಟ್ಟರೆ (ಆ ದೇವೇಂದ್ರನು ಪ್ರಾಪ್ತವಾದರೆ), ಯುದ್ಧದಲ್ಲಿ ಮೇಲೆಬಿದ್ದು ಹೆದರಿಕೊಳ್ಳುವುದು, ಕವಿಶ್ರೇಷ್ಠರಾದವರಿಗೆ ಏಟುಗಳನ್ನು ಕೊಡುವುದು, ಹಾದರಿಗರ ಸಮೂಹಕ್ಕೆ ವಿಪುಲವಾಗಿ ದ್ರವ್ಯವನ್ನು ತೆರುವುದು, ಕಜ್ಜಿಯಂತೆ ಕಾಣಿಸಿಕೊಂಡು ಪೂರ್ತಿ ಅಡಗಿಹೋಗುವುದು ಅವರ ಪಲಾಯನದಲ್ಲಿ ಕಂಡು ಬರುವುದು, (ತಮ್ಮ ಪರವಾಗಿ ನಿಂತು) ಹೋರಾಡಿದವರಿಗೆ ಕೈಗೆ ಭಿಕ್ಷಾಪಾತ್ರೆಯನ್ನು ಕೊಡುವುದು, ಇವೆಲ್ಲವೂ ನಿನಗೂ ಆ ಶತ್ರುಗಳಿಗೂ ಸಮಾನವಾಗಿರುತ್ತವೆ."

ಇಲ್ಲಿ ಒಂದು ತೊಡಕುಂಟು : ೨ನೆಯ ಪಾದದಲ್ಲಿ 'ಮೊತ್ತಕೇ' ಎಂದೇ ಇರಿಸಿಕೊಳ್ಳುವುದು ಅರ್ಥದ ದೃಷ್ಟಿಯಿಂದ ಅನಿವಾರ್ಯವಾಗಿದೆ. ಮುದ್ರಿತಪಾಠದಲ್ಲಿ 'ಕೋ' ಎಂಬುದು 'ಕೇ' ಎಂದು ತಪ್ಪಾಗಿ ಮುದ್ರಿತವಾಗಿರುವುದು ಸಾಧ್ಯವಿದ್ದರೆ, ಆಗ ಯಥಾರೀತಿಯ ಪದ್ಯದಲ್ಲಿ ಈ ಸಂಬಂಧದ ಆಶಯಭಾಗ "ತಮ್ಮನ್ನು ಸಂದರ್ಶಿಸುವವರ ಸಮೂಹದೊರೆಗೆ ಅಧಿಕವಾಗಿ ದ್ರವ್ಯವನ್ನು, ಇಗೋ (ಕೋ !) ಸಲ್ಲಿಸುತ್ತದೆ" ಎಂದೂ ವ್ಯತ್ಯಸ್ತರೀತಿಯ ಪದ್ಯದಲ್ಲಿ ಅದು "ಹಾದರಿಗರ ಸಮೂಹ, ಆ ಶತ್ರುಗಳಿಗೆ ಅಧಿಕವಾದ ದ್ರವ್ಯವನ್ನು, ಹೋಗು (ಪೋ != ಬಿಡು) ಸಲ್ಲಿಸುತ್ತದೆ" ಎಂದೂ ಇರುವುದು ಶಕ್ಯ. ಈ ವಿಷಯದಲ್ಲಿ ನಿರ್ಣಯ ಕಷ್ಟ.

ಸಂಜ್ಞಾರ್ಥಾದಿ ಗೂಢ

ವಸ್ತುಗೂಢವೆಂದು ಹೇಳಲಾಗದಿದ್ದರೂ, ಅದನ್ನು ಮರೆಮಾಡಿ ರಾಶಿ, ಸಂವತ್ಸರ ಮುಂತಾದುವುಗಳ ಮೂಲಕ ಅದು ಪ್ರಕಟವಾಗುವಂತೆ ಮಾಡುವುದು ಒಂದು ರೀತಿಯ ಗೂಢಚಿತ್ರವೇ. ಸಂಜ್ಞೆಗಳ ಮೂಲಕ ವಸ್ತು

ವನ್ನು ಗೂಢವಾಗಿಡುವ ಈ ಚಿತ್ರಗಳಲ್ಲಿ ಚಮತ್ಕಾರ ಸ್ಫುಟವಾಗಿದ್ದು, ಒಂದು ಬಗೆಯ ಪ್ರಹೇಳಿಕೆಗಳ ಧಾಟಿ ಕಾಣುತ್ತದೆ.

ಗುರುಲಿಂಗವಿಭುವಿನ 'ಭಿಕ್ಷಾಟನ ಚರಿತೆ'ಯಲ್ಲಿ:

ದೇಶಂಗಳಱಿಯೆ ನಿನ್ನ[ಯ] ಕಣ್ಗಳೀರಾಱು
ರಾಶಿಗಳೊಳೊಂದು ರಾಶಿಯ ನೆಲೆನೊಲೆಗಳೊಂದು
ರಾಶಿಯನು ನಿನ್ನ ತನುವಿನೊಳು ಕಾಣಿಸದೆ ಕಾಣಿಸುವ ತನುಮಧ್ಯವೊಂದು
ರಾಶಿಯನು ನಿನ್ನ ಭ್ರೂಲತೆಯೊಂದು ರಾಶಿಯನು
ನೀ ಸಹಿತಲೊಂದು ರಾಶಿಯ ಪೋಲ್ವೆಯೆಂದೊರ್ವ
ವೇಶಿ ಮಗಳಂ ಪೊಗಳುವುದ ಕೇಳಿ ನಸುನಗುತ ರಾಶಿಗಮನಂ ನಡೆದನು ॥ (೨–೨೨)

''ಲೋಕಪ್ರಕಟವಾಗುವಂತೆ ನಿನ್ನ ಕಣ್ಣುಗಳು ದ್ವಾದಶರಾಶಿಗಳಲ್ಲಿ ಒಂದು ರಾಶಿಯನ್ನು ಎಂದರೆ 'ಮೀನ'ವನ್ನು, ಕುಚಗಳು ಒಂದು ರಾಶಿಯನ್ನು ಎಂದರೆ 'ಕುಂಭ'ವನ್ನು, ದೇಹದ ತೆಳ್ಳನೆಯ ನಡು ಒಂದು ರಾಶಿಯನ್ನು ಎಂದರೆ 'ಸಿಂಹ'ವನ್ನು, ಬಳ್ಳಿಯಂತಹ ಹುಬ್ಬು ಒಂದು ರಾಶಿಯನ್ನು ಎಂದರೆ 'ಧನೂ'ವನ್ನು, ನಿನ್ನ ಸಹಿತವಾಗಿ ಒಂದು ರಾಶಿಯನ್ನು ಎಂದರೆ 'ಕನ್ಯಾ'ವನ್ನು ಹೋಲುತ್ತಿರಲು ನೀನು 'ರಾಶಿ'ಗಳನ್ನು ಹೋಲುತ್ತೀಯೆ'' ಎಂಬುದಾಗಿ ಒಬ್ಬ ವೇಶ್ಯೆ ತನ್ನ ಮಗಳನ್ನು ಹೊಗಳುವುದು ಕೇಳಿ, ರಾಶಿಯ ಮೇಲೆ ಸಂಚರಿಸುವಾತನು ಎಂದರೆ 'ವೃಷಭ' ವಾಹನನಾದ ಈಶ್ವರನು ನಸುನಗುತ್ತ ನಡೆದನು (ವೃಷಭಗಮನನಾದ ಶಿವನು ಮೀನನೇತ್ರೆ, ಕುಂಭಕುಚೆ, ಸಿಂಹಮಧ್ಯಮೆ ಮುಂತಾಗಿ ವರ್ಣಿಸಲ್ಪಟ್ಟ ಕನ್ಯೆಯನ್ನು ನೋಡಿದನೆಂಬುದು ತಾತ್ಪರ್ಯ).

ಇಲ್ಲಿ ದ್ವಾದಶರಾಶಿಗಳಲ್ಲಿ ಕೆಲವನ್ನು ಯಥೋಚಿತವಾಗಿ ಬಳಸಿದೆ.

ಸಂವತ್ಸರಾವೇಶಿಯಾದ ಗೋಪಾಂಗನೆಯ
ಸಂವತ್ಸರವ ನೋಡಿ ಸಂವತ್ಸರವನಱಿದು
ಸಂವತ್ಸರಾರಿ ನೆರೆಯಲ್ಕೆ ಸಂವತ್ಸರೆಯದಾಗಿ ಸಂವತ್ಸರದಲಿ
ಸಂವತ್ಸರದ ವೀಣೆಯಂ ಗೀತಜಾತಿಯಿಂ
ಸಂವತ್ಸರವನುಂಟುಮಾಡಿ ನುಡಿಸುತ ಪಾಡಿ
ಸಂವತ್ಸರನ ಜಡೆದಱುಬಿನ ಸಂವತ್ಸರೇಶ್ವರನ ಲಾಂಛನವ ಸೆಳೆಕೊಂಡಳು ॥ (೩–೧೪)

ಶ್ರೀಕೃಷ್ಣನು 'ಮನ್ಮಥ'ನ ಆವೇಶವುಂಟಾದ ಗೋಪಸ್ತ್ರೀಯ 'ಶ್ರೀಮುಖ'ವನ್ನು ನೋಡಿ, ಅವಳ 'ಭಾವ'ವನ್ನು ತಿಳಿದುಕೊಂಡು, 'ರಾಕ್ಷಸ' ವೈರಿಯಾದ ಆತನು ಅವಳೊಂದಿಗೆ ಒಡಗೂಡಲು, ಅವಳಲ್ಲಿ 'ಶುಕ್ಲ' ವುಂಟಾಗಿ, 'ಆನಂದ'ದಲ್ಲಿ 'ಜಯ' ಎಂಬ ವೀಣೆಯನ್ನು ಗೀತಜಾತಿಗಳಿಂದ 'ಪ್ರಮೋದ'ವುಂಟುಮಾಡಿ ನುಡಿಸುತ್ತ ಹಾಡಿ, 'ಈಶ್ವರ'ನ ಜಟೆಯ 'ಶಾರ್ವರಿ'ಗೊಡೆಯನಾದ ಚಂದ್ರನ ಚಿಹ್ನೆಯನ್ನು (ಎಂದರೆ 'ಅರ್ಧಚಂದ್ರ'ವೆಂಬ ಹೆಸರಿನ ನಖಕ್ಷತವನ್ನು) ಅವನಿಂದ ಪಡೆದುಕೊಂಡಳು (ಗ್ರಂಥದ ಪ್ರಾಚೀನ ಟೀಕೆಯಲ್ಲಿ 'ರೌದ್ರಿ' ಎಂದರೆ ರುದ್ರ ವೀಣೆಯನ್ನು ಎಂದೂ, ಗೀತಗಳಲ್ಲಿದ್ದ ಸಿದ್ಧವಾದ ಅರ್ಥಗಳನ್ನುಂಟುಮಾಡಿ ಎಂಬರ್ಥದಲ್ಲಿ 'ಸಿದ್ಧಾರ್ಥಿ'ಯನ್ನು ಎಂದೂ ಅರ್ಥಮಾಡಿ ಟೀಕೆ ಬರೆದಿದೆ. ಆದರೆ ನಾನು ಬೇರೆ ರೀತಿಯಲ್ಲಿ ಅರ್ಥಮಾಡಿದ್ದೇನೆ).

ಇಲ್ಲಿ ಷಷ್ಟಿ ಸಂವತ್ಸರಗಳಲ್ಲಿ ಕೆಲವನ್ನು ಬಳಸಿದೆ.

ನಕ್ಷತ್ರಮುಂಟಪದೊಳೊರ್ವ ಗೋಪಾಲಸತಿ
ನಕ್ಷತ್ರರಮಣನನುಜನ ತೊಡೆಯ ಮೇಲಿರ್ದು
ನಕ್ಷತ್ರಮಂ ಪಿಡಿದು ನಕ್ಷತ್ರದಿಂ ಹಿಮವ ತುಂಬುತಿರಲಾಕ್ಷಣದೊಳು
ನಕ್ಷತ್ರಜನಕ ದನಿದೋಱಿ ಬಾಗಿಲೊಳದಂ
ನಕ್ಷತ್ರದಿಂ ಕೇಳುತಿದ್ದು ಭಿಕ್ಷವ ನೀಡಿ
ನಕ್ಷತ್ರಪತಿಧರಗೆ ವಂದಿಸಿ ಮರಳಿ ಮನೆಯ ನಕ್ಷತ್ರಮಂ ಸಾರ್ದಳು ॥ (೩–೨೫)

"'ಉತ್ತರಾ(ಭಾದ್ರ)'ವೆಂಬ ಹೆಸರಿನ ಮಂಟಪದಲ್ಲಿ ಒಬ್ಬ ಗೋಪಸ್ತ್ರೀ, 'ರೇವತೀ' ದೇವಿಗೆ ಪತಿಯಾದ ಬಲದೇವನ ತಮ್ಮನ ಎಂದರೆ ಕೃಷ್ಣನ ತೊಡೆಯ ಮೇಲಿದ್ದು, 'ಭರಣಿ'ಯನ್ನು ಹಿಡಿದು, 'ಹಸ್ತ'ದಿಂದ ಪಚ್ಚಕಪ್ಪುರವನ್ನು ತುಂಬುತ್ತಿರಲು, ಆ ಕ್ಷಣದಲ್ಲಿ 'ವಿಶಾಖ'ನ ಎಂದರೆ ಷಣ್ಮುಖನ ತಂದೆಯಾದ ಈಶ್ವರನು ಶಬ್ದ ಮಾಡಲಾಗಿ, ಬಾಗಿಲಲ್ಲಿಯೇ ಅದನ್ನು 'ಶ್ರವಣ'(ಕಿವಿ)ದಿಂದ ಕೇಳಿ ಮೇಲೆದ್ದು ಭಿಕ್ಷವನ್ನು ಅವನಿಗೆ ನೀಡಿ, ನಕ್ಷತ್ರಗಳಿಗೆ ಒಡೆಯನಾದ ಚಂದ್ರನನ್ನು ಧರಿಸಿದ ಆ ಈಶ್ವರನಿಗೆ ನಮಸ್ಕರಿಸಿ, ಮತ್ತೆ ಮನೆಯ 'ಮೂಲ'ಸ್ಥಾನವನ್ನು ಸೇರಿಕೊಂಡಳು."

ಇಲ್ಲಿ ೨೭ ನಕ್ಷತ್ರನಾಮಗಳಲ್ಲಿ ಕೆಲವನ್ನು ಆಯ್ದುಕೊಂಡು ಚಮತ್ಕಾರಜನಕವಾಗಿ ಪದ್ಯವನ್ನು ಕಟ್ಟಿದೆ.

ಎಳಂದೂರು ಹರೀಶ್ವರನ 'ಪ್ರಭುದೇವರ ಪುರಾಣ'ದಲ್ಲಿ :

ರಾಶಿಮಧ್ಯಳೆ ರಾಶಿಕುಚಯುಗ್ಮೆ ಕೋಮಲೇ
ರಾಶಿಪುರ್ಬಿನ ಮಹಾರ್ಥಮಣಿ ರಾಗಾಧರೇ
ರಾಶಿಗಂಗಳೆ ನನ್ನ ರಾಶಿಯೆ ಬಾರೆಂದು ರಾಶಿವೆಸರೊಳು ಮೋಹದಿಂ
ಬೋಸರಿಸಿ ಕರೆವುತ್ತೆ ಭುಜಗಜನರೊಳು ನೀನು
ಲೇಸುಬಿಡ್ದಂತೆ ಒಳಪುಗುತಮವರರ್ಥ ಲವ
ಲೇಶವುಳಿಯದ ಹಾಗೆ ಗವರೆಂದು ವೇಸೆ ಪೇಳುವ ನುಡಿಗೆ ನಗುತ ಮತ್ತಂ॥ (೪-೧೩೦)

ಇಲ್ಲಿ "'ಸಿಂಹ'ಮಧ್ಯೆಯೆ, 'ಕುಂಭ'ಕುಚಯುಗ್ಮೆಯೆ, ಕೋಮಲೆಯೆ, 'ಧನುಸ್ಸಿ'ನ ಹುಬ್ಬಿನ ಹೆಣ್ಣೇ, ಕೆಂಪುತುಟಿಯವಳೇ; 'ಮೀನ'ನೇತ್ರೆಯೆ, ನನ್ನ 'ಕನ್ಯೆ'ಯೇ ಬಾ ಎಂಬುದಾಗಿ ರಾಶಿಗಳ ಹೆಸರಿನಿಂದ...." ಎಂಬುದಾಗಿ ಯಥೋಚಿತವಾಗಿ ದ್ವಾದಶರಾಶಿಗಳ ಹೆಸರನ್ನು ಬಳಸಿಕೊಂಡಿದೆ.

ಸಂವತ್ಸರನ ಚೆಲ್ವ ಪೋಲ್ವ ವಿಟನಂ ಕಂಡು
ಸಂವತ್ಸರಾಂಗಿ ಕುಳಿತಿರಲವಳ್ಗೆ ಮತ್ತೊರ್ವೆ
ಸಂವತ್ಸರದೊಳು ಕುಳಿರ್ನೀರ್ದಕವ ತಂದವಳ ಸಂವತ್ಸರವ ತೊಳೆವುತಂ
ಸಂವತ್ಸರೇಶನಿದಿರಿಗೆ ತರಲುಮವಳ ಮನ
ಸಂವತ್ಸರವನವಗ್ರಹಿಸಿ ಕಾಣುತಲಂಜಿ
ಸಂವತ್ಸರನ ವೈರಿ ಸಲಹೆಂದು ಭಸಿತವಿಡುವಳ ನೋಡುತಿರಲು ಮುಂದೆ ॥ (೪-೧೩೧)

"'ಮನ್ಮಥ'ನ ಸೌಂದರ್ಯವನ್ನು ಹೋಲುವ ವಿಟನನ್ನು ನೋಡಿ, 'ಸೌಮ್ಯಾಂಗಿ' ಕುಳಿತುಕೊಂಡಿರಲು, ಮತ್ತೊಬ್ಬಳು 'ಪ್ಲವ'(ಹರಿಯುವ ನೀರು)ದಲ್ಲಿ ಶೀತಲಜಲವನ್ನು ತಂದು, ಅವಳ 'ಶ್ರೀಮುಖ'ವನ್ನು ತೊಳೆಯುತ್ತ, 'ಯುವ'ಶ್ರೇಷ್ಠನ ಎದುರಿಗೆ ತರಲು, ಆವಳ ಮನಸ್ಸು 'ಪರಾಭವ'ವನ್ನು ಅನುಭವಿಸಿ, ನೋಡುತ್ತ, ಹೆದರಿ, 'ಮನ್ಮಥ'ನ ವೈರಿಯೆ (='ಈಶ್ವರ') ಕಾಪಾಡು" ಎಂದು ವಿಭೂತಿ ಧರಿಸುವವಳನ್ನು ನೋಡುತ್ತಿರಬೇಕಾದರೆ...."

ಇಲ್ಲಿ ೬೦ ಸಂವತ್ಸರಗಳಲ್ಲಿ ಕೆಲವನ್ನು ಯಥೋಚಿತವಾಗಿ ಆಯ್ಕೆ ಮಾಡಿಕೊಂಡಿದೆ.

ಪ್ರಾಣೇಶದಾಸರ ಕೃತಿ :

ಪಾಹಿ ನಾರಾಯಣನೆ ಪಾಹಿ ವಾಸುಕಿಶಯನ।
ಪಾಹಿ ಗರುಡಧ್ವಜನೆ ಪಾಹಿ ಕಮಲಾಕ್ಷ ॥ ಪ ॥

ಸಂವತ್ಸರಾಂಬರ ನತಜನರ ಪರಿಪಾಲ। ಸಂವತ್ಸರ ಹರೇ ಕಾರುಣ್ಯನಿಧಿಯೇ।
ಸಂವತ್ಸರಕೆ ನಿನ್ನ ಸಮರಾರೊ ತ್ರಿಜಗದಿ। ಸಂವತ್ಸರ ಜಲಜಕೆ ಸಂವತ್ಸರುಪಮಾ ॥ ೧ ॥
ಸಂವತ್ಸರಾಕ್ಷ ನುತಗಜವೈರಿಸಂಹರನೆ। ಸಂವತ್ಸರಾದಿ ಸಂವತ್ಸರರಿಪು।
ಸಂವತ್ಸರಕುವರನೆ ಸಂವತ್ಸರನೆ ಎನ್ನ। ಸಂವತ್ಸರವಳಿದು ಕೊಡು ಸಂವತ್ಸರಮತಿ ॥ ೨ ॥

ಸಂವತ್ಸರಸಮಗ್ರ ಪ್ರಾಣೇಶವಿಠಲನೆ। ಸಂವತ್ಸರಸ್ವಾಮಿ ದೋಷದೂರ।
ಸಂವತ್ಸರಪಿತ ಸಿರಿ ಸಂವತ್ಸರನೇ ಕ್ಲೇಶ। ಸಂವತ್ಸರ ಮಾಡು ದೀನಕಲ್ಪತರು ॥ ೩ ॥

ಇಲ್ಲಿ 'ಸಂವತ್ಸರ' ಶಬ್ದ ೬೦ ಸಂವತ್ಸರಗಳ ಹೆಸರುಗಳಲ್ಲಿ ಸಂದರ್ಭೋಚಿತವಾದವನ್ನು ಕೂಡಿಸಿಕೊಳ್ಳುವ ಇಂಗಿತದಿಂದ ಬಳಸಿರುವುದಾಗಿದೆ. ಹಾಗೆ ಕೂಡಿಸಿಕೊಂಡುದಾದರೆ, ಹೀಗೆ ಈ ಕೃತಿಯ ಅರ್ಥ ವಿಶದಪಡುತ್ತದೆ:

'ಶುಕ್ಲಾಂ'ಬರನೆ, ಆಶ್ರಿತಜನರನ್ನು ರಕ್ಷಿಸುವವನೇ; 'ಪ್ರಜಾಪತಿ'ಯೇ, ಹರಿಯೇ, ಕಾರುಣ್ಯನಿಧಿಯೇ; 'ವಿಕ್ರಮ'ಕ್ಕೆ ನಿನಗೆ ಸಮನಾದವರು ಮೂರು ಲೋಕಗಳಲ್ಲಿಯೂ ಯಾರಿದ್ದಾರೆ?; 'ಶ್ರೀಮುಖ'ವುಳ್ಳ ಕಮಲಕ್ಕೆ 'ಪಿಂಗಳೋ'ಪಮನೇ(೧); 'ಚಿತ್ರಭಾನು'(ಅಗ್ನಿ)ನೇತ್ರನೇ, ಪ್ರಸಿದ್ಧನಾದ ಗಜಾಸುರನನ್ನು ಸಂಹರಿಸಿದವನೇ; 'ಖರ' ಮೊದಲಾದ 'ರಾಕ್ಷಸ'ರಿಗೆ ಶತ್ರುವಾದವನೇ; 'ನಂದನ' ಕುಮಾರನೇ, 'ಈಶ್ವರ'ನೇ; ನನ್ನ 'ದುರ್ಮತಿ'ಯನ್ನು ಪರಿಹರಿಸಿ, ನನಗೆ 'ಸೌಮ್ಯ' ಬುದ್ಧಿಯನ್ನು ನೀಡು(೨). 'ಆನಂದ'ಪರಿಪೂರ್ಣನಾದವನೇ, ಪ್ರಾಣೇಶ ವಿಠಲನೇ; 'ಸರ್ವಜಿತ್'ಸ್ವಾಮಿಯೇ, ದೋಷದೂರನೇ; 'ಮನ್ಮಥ'ನ ತಂದೆಯೇ, ಆಸುರೀಸಂಪತ್ತನ್ನು(ಸಿರಿ) 'ಕ್ಷಯ'ಗೊಳಿಸುವವನೇ(೩); ದೀನರಿಗೆ ಕಲ್ಪವೃಕ್ಷವಾಗಿರುವವನೇ, ಕಷ್ಟಗಳ 'ಪರಾಭವ'ವನ್ನು ಮಾಡು.[7]

ಇಲ್ಲಿ ಸಂವತ್ಸರಗಳಲ್ಲಿ ಅವಶ್ಯವಾದ ಶಬ್ದಗಳು ನಿಗೂಢವಾಗಿದ್ದು, ಅವನ್ನು ಸಂದರ್ಭವನ್ನು ಗಮನಿಸಿ ನಾವು ಗುರುತಿಸಿಕೊಳ್ಳಬೇಕಾಗಿರುವುದರಿಂದ, ಇಲ್ಲಿಯ ಚಮತ್ಕಾರ ವಿಶೇಷರೀತಿಯದು ಎನ್ನಬೇಕು.

ವಸ್ತುಗೂಢ

ವಸ್ತುವನ್ನು ನೇರವಾಗಿ ಸೂಚಿಸದೆ, ಪರೋಕ್ಷವಿವರಣೆಗಳಿಂದ ಅದು ಬೋಧೆಯಾಗುವಂತೆ ಮಾಡುವುದು ಗೂಢದ ಇನ್ನೊಂದು ಚಮತ್ಕಾರ.

ಶಾಂತ ನಿರಂಜನನ 'ಅಬ್ಬಲೂರು ಚರಿತೆ'ಯಲ್ಲಿ:

ಶಿಶುಗಳಾಹರದಂತೆ ಪಶುಪತಿ ಹೆಸರಂತೆ। ಋಷಿಗಳ ನಾಮದಂತೆಸೆವ।
ಬಸವನ ಹೆಸರಂತೆ ಎಸೆದಿಹ ತರುಗಳ। ಪಸರಿಸಿ ನೋಡುತ್ತೈದಿದರು ॥
ಮಿಗೆ ರೋಗಿಯಂತೆ ಸಾಗರದಂತೆ ಗೌರಿಯ। ಮಗನಂತೆ ಯೋಗಿಗಳಂತೆ।
ನಗುವರಂದದಿ ಹಲುಗಿರಿವರಂದದಿ ತರು। ಬಗೆಗೊಂಡವೇನ ಪೇಳುವೆನು ॥
ಧರೆ ಬಾಯಿದೆರೆದಂತೆ ಕುದುರೆಯ ಹೆಸರಂತೆ। ಹಿರಿಯರ ಕರೆವವರಂತೆ।
ಸಿರದಂತೆ ಜಾರೆಯ ಹೆಸರಂತೆಯಿರುತಿಹ। ತರುವನೋಡುತ ತೆರಳಿದರು ॥ (೩. ೧೭–೧೯)

ಇಲ್ಲಿ ಕಾಡಿನ ಮರಗಳ ಹೆಸರುಗಳನ್ನು ನೇರವಾಗಿ ಹೇಳದೆ, ಚಮತ್ಕಾರದಿಂದ ಗೂಢಗೊಳಿಸಿ ಹೇಳಿರುವುದು ಕಾಣುತ್ತದೆ. ಇವು ಕ್ರಮವಾಗಿ ಪಾಲೆ(ಹಾಲೆ), ಈಶ್ವರಿ, ಶಾಂಡಿಲ್ಯ(ಬಿಲ್ವಪತ್ರೆ), ನಂದಿ(ಪ. ೧೭), ಶೀತಭೀರು (ಮಲ್ಲಿಗೆ), ಸಿಂಧುಕ(ಲಕ್ಕಿ), ಬ್ರಹ್ಮಣ್ಯ(ಹೂವರಚಿ), ಚಲ್ಲ/ನಗರೆ, ಪಲ್ಲು(ಬ್ರಂಹೇಡಿ)(ಪ. ೧೮), ಬೀಟೆ(ಬೀಡೆ); ಸಾಂಬ್ರಾಣಿ, ಬನ್ನಿ(ಶಮೀ), ಶಿರಪೊಟ್ಟಲಿ, ಪಾದರಿ(ಪ: ೧೯) ಎಂಬ ಮರಗಳೆಂದು ತೋರುತ್ತದೆ.

ಷಡಕ್ಷರಿಯ 'ರಾಜಶೇಖರ ವಿಳಾಸ'ದಲ್ಲಿ:

ವರುಣನ ಕುಂತದುತ್ಕರದ ಕೇತುವ ಕೇಕಿವಿಳಾಸದರ್ಭಕೋ
ದರೆಯ ವಿಲೂನನಾಸೆಯ ಸುರೂಪೆಯ ಪಾಣ್ಬೆಯ ಮೇಘನಾದದಿಂ
ದಿರೆಯ ಪಟಿರದೇಟಿಗೆಯ ಕಪೋತದ ಬೊಟ್ಟಿನ ಕೆಂಡದಬ್ಬಿನೀ
ವರನಭಿಧಾನಮಂ ತಳೆದ ಭೂರುಹಮೊಪ್ಪುಗುಮಾ ವನಾಂತದೊಳ್ ॥ (೫–೫೭)

ಇಲ್ಲಿ 'ಅಂತೆ' ಎಂಬ ಪ್ರಕಾರವಾಚಕವನ್ನು ಬಳಸದೆ ಬೇರೊಂದು ರೀತಿಯಲ್ಲಿ ಎಂದರೆ ಪರ್ಯಾಯಶಬ್ದಗಳ ಮೂಲಕ ಕೆಲವು ಮರಗಳನ್ನು ಹೆಸರಿಸಿದೆ. ಇಲ್ಲಿ ಹೀಗೆ ಸೂಚಿತವಾಗಿರುವ ಮರಗಳೆಂದರೆ, ಇಟ್ಟೆ(ಕಾಜಿವಾರ),

ಕತ್ತಾಳೆ(ರಕ್ಕಸಬಾಳೆ), ನವಿಲಾಡಿ(ನವಿಲಡಿ), ಬಸರಿ, ಮೂಕೊರತಿ, ಚೆನ್ನಂಗಿ, ಸಾದರಿ, ಮೊಳಗು, ಲಕ್ಕಿ, ಶ್ರೀಗಂಧ, ಪಾರಿವಾಳ(ಹಾಲಿವಾಣ), ತಿಲಕ, ಇಂಗಳ, ಅರ್ಕ್ಕ(ಎಕ್ಕ) ಎಂಬವು.

ಅನ್ವಯಗೂಢ

ಭಿನ್ನಾರ್ಥವನ್ನು ಕೊಡುವ ಹಾಗೆ ಮೊದಲು ಶಬ್ದಸಂಘಟನೆಯನ್ನು ಮಾಡಿ ಅನಂತರದಲ್ಲಿ ಸೂಕ್ತವಾದ ಪದಚ್ಛೇದ, ಧ್ವನಿಯ ಕಾಕುಗಳಿಂದ ಆ ಅರ್ಥಭೇದವನ್ನು ಪರಿಹರಿಸುವುದು ಗೂಢದ ಒಂದು ಚಮತ್ಕಾರ.

ಕನಕದಾಸರ ಒಂದು ಕೃತಿಯಲ್ಲಿಯ ಪಲ್ಲವಿಯ ಭಾಗವನ್ನೂ ಒಂದು ನುಡಿಯನ್ನೂ ಇಲ್ಲಿ ಉದಾಹರಿಸಬಹುದು :

ಪರಮಪುರುಷ ನೀ ನೆಲ್ಲಿಕಾಯಿ ॥ ಪ ॥
ಸರಸಿಯೊಳಗೆ ಕರಿ ಕೂಗಿರೆಕಾಯಿ ॥ ಅ.ಪ ॥

ಕ್ರೂರವ್ಯಾಧಿಗಳೆಲ್ಲ ಹೀರೆಕಾಯಿ। ಘೋರದುಷ್ಕೃತಗಳ ತೋರೆಕಾಯಿ।
ಭಾರತಕಥೆ ಕರ್ಣ ತುಂಬಿಕಾಯಿ। ವಾರಿಜಾಕ್ಷನೆ ಗತಿಯೆಂದಿಪ್ಪೆಕಾಯಿ ॥ ೨ ॥

ಇಲ್ಲಿ ನೆಲ್ಲಿಕಾಯಿ ಮುಂತಾಗಿ ಕಾಯಿ, ತರಕಾರಿಗಳ ಹೆಸರುಗಳು ಪಾದಾಂತ್ಯಭಾಗಗಳಲ್ಲಿ ಉದ್ದಕ್ಕೆ ಬಂದಿರುವುದನ್ನು ಕಾಣಬಹುದು. ಆ ಶಬ್ದಗಳನ್ನು ಇಟ್ಟುಕೊಂಡು ಅರ್ಥಮಾಡಿದರೆ, ಅಪಾರ್ಥ ಇಲ್ಲವೆ ಹಾಸ್ಯಾಸ್ಪದವಾದ ಅರ್ಥ ಪ್ರತಿ ಪಾದದಲ್ಲಿಯೂ ಹೊರಡುತ್ತದೆ. ಇದನ್ನು ನಿವಾರಿಸುವುದು ಹೇಗೆ? ನೆಲ್ಲಿಕಾಯಿ, ಕೂಗಿರೆಕಾಯಿ ಮುಂತಾದ ಸಸ್ಯವಾಚಕಶಬ್ದಗಳಲ್ಲಿ ಪೂರ್ವಪದವನ್ನು ಪ್ರತ್ಯೇಕಿಸಿ, 'ಕಾಪಾಡು' ಎಂಬರ್ಥದಲ್ಲಿ 'ಕಾಯಿ' ಎಂಬ ಪೂರ್ಣಕ್ರಿಯಾಪದವನ್ನು ಮಾಡಿಕೊಂಡು ತಕ್ಕಂತೆ ಓದಿದರೆ ಅದು ನಿವಾರಣೆಯಾಗಿ ವಿಹಿತವಾದ ಅರ್ಥ ಬರುತ್ತದೆ. 'ಕ್ರಿಯಾಗುಪ್ತ'ದ ಲಕ್ಷ್ಯವನ್ನಾಗಿಯೂ ಇದನ್ನು ತಿಳಿಯಬಹುದು. ಆಗ ಪದ್ಯ ಹೀಗೆ ರೂಪುಗೊಳ್ಳುತ್ತದೆ :

ಪರಮಪುರುಷ ನೀನೆಲ್ಲಿ, ಕಾಯಿ ॥ ಪ ॥
ಸರಸಿಯೊಳಗೆ ಕರಿ ಕೂಗಿರೆ, ಕಾಯಿ ॥ ಅ.ಪ ॥

ಕ್ರೂರವ್ಯಾಧಿಗಳೆಲ್ಲ ಹೀರೆ, ಕಾಯಿ। ಘೋರದುಷ್ಕೃತಗಳ ತೋರೆ, ಕಾಯಿ।
ಭಾರತಕಥೆ ಕರ್ಣ ತುಂಬಿ, ಕಾಯಿ। ವಾರಿಜಾಕ್ಷನೆ ಗತಿಯೆಂದಿಪ್ಪೆ, ಕಾಯಿ ॥ ೨ ॥

ವಿಭಕ್ತಿ ಪರಿಣಾಮ

ಷಡ್ವಿಧಕಾರಕಗಳಲ್ಲಿ ಯಾವುದಾದರೊಂದು ಗೂಢವಾಗಿರುವಂತೆ ಪದ್ಯ ರಚಿಸುವ ಪದ್ಧತಿ ಸಂಸ್ಕೃತದ ಗೂಢಚಿತ್ರಗಳಲ್ಲಿ ಕಂಡುಬರುತ್ತದೆ. ಕನ್ನಡದಲ್ಲಿ ಈ ಬಗೆಯದು ಕಂಡುಬಂದಿಲ್ಲ. ಆದರೆ ಬೇರೆ ರೀತಿಯಲ್ಲಿ ವಿಭಕ್ತಿಪ್ರಯೋಗದ ಚಮತ್ಕಾರವನ್ನು ಮೆರೆದಿರುವ ಲಕ್ಷ್ಯಗಳು ವಿರಳವಾಗಿ ಉಂಟು. ಅವುಗಳಲ್ಲಿ ಕೆಲವನ್ನು ಮುಂದೆ ಉದಾಹರಿಸಬಹುದಾಗಿದೆ.

ಜನ್ನನ 'ಅನಂತನಾಥ ಪುರಾಣ'ದಲ್ಲಿ :

ಸನ್ನಿದಮೆನೆ ತಾಂ ತನ್ನಂ। ತನ್ನಿಂದಂ ಕಂಡು ತನಗೆ ತನ್ನತ್ತಣಿನೇಂ।
ತನ್ನ ಗುಣಂಗಳ್ ನೆಱೆದಿರೆ। ತನ್ನೊಳೆ ನಿಂದನೊ ವಿನೇಯಜನಮುಖತಿಲಕಂ ॥ (೧೪-೫೮)

ಇಲ್ಲಿ ತಾನ್ ಎಂಬ ಪ್ರಥಮಪುರುಷ ಸರ್ವನಾಮ ತನ್ನ ಸಪ್ತವಿಭಕ್ತಿಗಳನ್ನೂ ಅನುಕ್ರಮವಾಗಿ ಪಡೆದುಕೊಂಡು ಬಳಕೆಯಾಗಿರುವುದು ಕಾಣುತ್ತದೆ.

"ಕಾರಕಗತಿಯೊಳ್ ವಿಭಕ್ತಿ ಪರಿಣತಮಕ್ಕುಂ" ಎಂಬುದಾಗಿ ನಾಗವರ್ಮನು 'ಶಬ್ದಸ್ಮೃತಿ'ಯ ಸೂ. ೩೪ರಲ್ಲಿ ತಿಳಿಸಿ, ಅದಕ್ಕೆ 'ಗದಾಯುದ್ಧ'ದ ಒಂದು ಲಕ್ಷ್ಯವನ್ನೆತ್ತಿ ಕೊಟ್ಟಿದ್ದಾನೆ. ಆ ಪದ್ಯ :

ಅಸುಹೃತ್ಸೇನೆಗೆ ಸಾಲ್ವನೊರ್ವನೆ ಗಡಂ ರುದ್ರಾವತಾರಂ ಗಡಂ
ನೊಸಲೊಳ್ ಕಣ್ ಗಡವೆಂದು ನಂಬಿ ಪೊರೆದೆಂ ತಾನಕ್ಕೆ ತಮ್ಮಮ್ಮನ
ಕ್ಕಿಸಲಂಬಂ ತಿರುವಾಯ್ಗೆ ತಂದಱವರೇ ತಮ್ಮಿರ್ವರುಂ ಕೆಯ್ದುವಂ
ಬಿಸುಟರ್ ಜೋಳದ ಪಾೞಿಯಂ ಬಗೆದರಿಲ್ಲಾ ದ್ರೌಣಿಯುಂ ದ್ರೋಣನುಂ ॥ (೨-೧೭)

ಇಲ್ಲಿ ವಿಭಕ್ತಿ ಪರಿಣಾಮವನ್ನು ಕ್ರಮವಾಗಿ ಗುರುತಿಸುವುದು ಕಷ್ಟ. "ತಾಂ ಅಸುಹೃತ್ಸೇನೆಗೆ ಸಾಲ್ವನೊರ್ವನೆ ಗಡಂ", "ತನಗೆ ನೊಸಲೊಳ್ ಕಣ್ ಗಡಂ", "ಎಂದು ನಂಬಿ ತನ್ನಂ ಪೊರೆದೆಂ", "ತನ್ನೊಳ್ ಜೋಳದ ಪಾೞಿಯಂ ಬಗೆದರಿಲ್ಲ"—ಹೀಗೆ ನಾಲ್ಕುಕಡೆ ಗೂಢವಾಗಿದ್ದ ವಿಭಕ್ತಿರೂಪಗಳನ್ನು ಪ್ರಕಟಮಾಡಬಹುದು. ಷಷ್ಠಿ ಪ್ರಕಟವಾಗಿಯೇ ಇದೆ.

ಕಾರಕಮುಖದಿಂದ ವಿಭಕ್ತಿ 'ಪರಿಣಾಮಿಸುವ' ಈ ಪ್ರಕ್ರಿಯೆ 'ವಿಭಕ್ತಿ ಪರಿಣಾಮ'ವೆನಿಸುವುದೆಂದು ಕೇಶಿರಾಜನ 'ಶಬ್ದಮಣಿದರ್ಪಣ'ದಲ್ಲಿಯೂ ನಿರೂಪಿತವಾಗಿದ್ದು, ಅದಕ್ಕೆ ಅಲ್ಲಿ ಈ ಕೆಳಗಿನ ಒಂದು ಉದಾಹರಣೆಯನ್ನು ಕೊಟ್ಟಿದೆ:

ಕಡುಗಲಿ ಸೆಣಸುವ ಭಟರಾ। ರೊಡೆಯಂಗತಿಹಿತವರಾರ್ ಧುರಕ್ಕೊದಗುವರಾರ್।
ತೊಡರ್ದೊಡೆ ಭಂಗಂ ಬರ್ಪುದು। ಸಡಗರವಿದು ಜಯಮೆ ಮೆಱೆವುದಱ ಬೊಪ್ಪಲನಂ॥

(ಸೂತ್ರ ೧೫೬, ಪ್ರಯೋಗ ೬)

ಸಪ್ತವಿಭಕ್ತಿಗಳೂ ಅನಂಪು.ದ ಲಕ್ಷ್ಯದಲ್ಲಿ ಪ್ರಕಟವಾಗಿ ಪ್ರಯೋಗವಾಗಿರುವುದು ಕಂಡುಬಂದರೆ, ಶಮದ.ದ ಉದಾಹೃತಲಕ್ಷ್ಯದಲ್ಲಿ ಅವ್ಯಕ್ತವಾಗಿ ಪ್ರಯೋಗವಾಗಿರುವುದನ್ನು ಕಾಣಬಹುದಾಗಿದೆ. "ಆತಂ (ತಾಂ) ಕಡುಗಲಿ, ಆತನಂ ಸೆಣಸುವ ಭಟರಾರ್, ಆತನಿಂದೆ ಒಡೆಯಂಗತಿಹಿತನರಾರ್, ಆತಂಗೆ ಧುರಕ್ಕೊದಗುನರಾರ್, ಆತನತ್ತಣಿಂ ತೊಡರ್ದೊಡೆ ಭಂಗಂ ಬರ್ಪುದು, ಆತನ ಸಡಗರವಿದು, ಆತನೊಳ್ ಜಯಮೆ ಮೆಱೆವುದು" ಎಂಬಂತೆ ಅವ್ಯಕ್ತವಾಗಿರುವ ವಿಭಕ್ತ್ಯಂತ ಸರ್ವನಾಮಶಬ್ದಗಳನ್ನು ಗುರುತಿಸಿದರೆ ಅಭಿಪ್ರಾಯ ವಿಶದವಾಗುವುದು.

ವಿಭಕ್ತಿ ಪ್ರತ್ಯಯಗಳನ್ನು ಕ್ರಮವರಿತು ಬಳಸಿದ್ದರೂ, ಪದ್ಯದ ಅರ್ಥ ಹೊಂದಿಕೊಂಡು ನಡೆಯುವುದರಿಂದ, ಅದು ಮೇಲುನೋಟಕ್ಕೆ ತೋರದೆ ಗೂಢವಾಗಿರುವುದು ಸಾಧ್ಯ :

ನೆಲನಿದು ನೆಲನಂ ಪಾಲಿಸು। ನೆಲದಿಂ ಪುರುಳಕ್ಕುಮಾರ್ ನೆಲಕ್ಕೆಱಗದವರ್।
ನೆಲದತ್ತಣಿನುಱದರಿಯಂ। ತೊಲಗಿಸು ನೆಲದೆಱೆಯ ನೆಲದೊಳೊದವಿಸು ಜಸಮಂ॥

('ಶಬ್ದಸ್ಮೃತಿ', ಪ. ೮೬)

ಮರನಿರ್ದುದು ಮರನಂ ಕಡಿ। ಮರದಿಂ ಮಾಡಾನೆಯಂ ಮರಕ್ಕೆಱ ನೀರಂ।
ಮರದತ್ತಣಿನೆಲೆ ಬಿಲ್ದುದು। ಮರದದು ಪಣ್ ಮರದೊಳಿರು ತಳಿರ್ತಿರ್ದ ಮರನೇ॥

('ಶಬ್ದಮಣಿದರ್ಪಣ', ಸೂ. ೧೦೩)

ಮೊದಲನೆಯ ಲಕ್ಷ್ಯದಲ್ಲಿ ಸಂಬೋಧನೆಯಿಲ್ಲ; ಎರಡನೆಯದರಲ್ಲಿದೆ. ಉಳಿದಂತೆ ವಿಭಕ್ತಿಗಳ ಕ್ರಮಾಗತವಾದ ನಡೆಯುಂಟು.

ಚೇರಮಾಂಕನ 'ಚೇರಮ ಕಾವ್ಯ'ದಲ್ಲಿ:

ವಿಳುವರುಷದ ಹರಿಯುದೊಳು ನಂಬಿಯಣ್ಣಂ ಸ
ಮೇಳದೊಳಗಾಡುವೆಳಮಕ್ಕಳೊಡಗೂಡಿ ತಾಂ
ಧೂಳಿನ್ನ ದೆಸೆವ್ ಬಂಡಿಯೊಳೋಡುತಿರಲು ನರಸಿಂಗ ಮೊನೆಯರ ಮದಗಜ

ತಾಳಿ ಸಪ್ತಾವಸ್ಥೆಯಂ ಬರುತ್ತಿರಲಿರ್ದ
ಬಾಲಕರು ಕೆಟ್ಟೋಡೆ ಕಂಡಿಭಂ ನವಿುಸೆ ಕ
ಟ್ಟಾಳೊರ್ವನಿರೆ ಕೇಳುತವರ ಮನೆಗುತ್ತುಂಗಚೋಳನೃಪನೆಯ್ತಂದನು ॥ (೯–೨೨)

ಈ ಪದ್ಯದ ಅನಂತರದಲ್ಲಿ ಗ.ಪ್ರತಿಯಲ್ಲಿ ಇದೇ ಅರ್ಥದ ಸಂಸ್ಕೃತ ಪದ್ಯವೊಂದಿದೆ. ಅಲ್ಲದೆ, ''ಇದು ಸಂಸ್ಕೃತದ ವಿಭಕ್ತಿಯ ಪದನು, ಇನ್ನು ಅದರರ್ಥದ ಕನ್ನಡದ ಪದನು'' ಎಂಬ ಗದ್ಯವಿದೆ. ವಾಸ್ತವವಾಗಿ ಮೇಲಿನ ಕನ್ನಡ ಪದ್ಯದ ಮೊದಲಲ್ಲಿಯೇ ಇದರ ಸ್ಥಾನ, ಈ ಗದ್ಯದ ಸೂಚನೆಯ ಪ್ರಕಾರ, ಇರಬೇಕಾಗಿದ್ದುದು ಪಂಡಿತ ಲಿಪಿಕಾರ ಇಲ್ಲವೆ ಅಭ್ಯಾಸಿ ಅದನ್ನು ಅಲ್ಲಿ ಬರೆದಿರುವ ಸಾಧ್ಯತೆಯಿದೆ. (ಇಲ್ಲವೆ ಸಂಸ್ಕೃತಪದ್ಯವೇ ಕವಿಕೃತವಿದ್ದು ಕನ್ನಡ ಪದ್ಯವನ್ನು ಅನಂತರ ಯಾರಾದರೂ ಅನುವಾದಿಸಿ ಸೇರಿಸಿರಬಹುದು.)

ಆ ''ಸಂಸ್ಕೃತ ವಿಭಕ್ತಿಯ ಪದನು'' :

ಬಾಲಕೈರ್ಯಸ್ತೋಽಪಿ ಸಪ್ತವರ್ಷಾಂತರೇ
ಲೀಲಯಾ ಶಾಕಟಸ್ಥೋ ವರ್ತತೇಽಪಿ ತ
ತ್ಕಾಲೇ ಮದದ್ವಿಪಶ್ಚಾಯಯೌ ದೃಷ್ಟ್ವಾತಮುನ್ನತಂ ಸೌಂದರೇಶಂ
ಆಲೋಕನೇನ ನತ್ವಾ ಯಯೌ ಶ್ರುತ್ವಾ ನೃ
ಪಾಲ ನರಸಿಂಹಮುನಿಯಾರ್ನಾಮಧೇಯಃ ಕೃ
ಪಾಲು ಶಿವವಿಪ್ರವರ ಜಡೆಯ ನಯಿನಾರೋರ್ವರಾಲಯಮಗಚ್ಛತ್ಸ್ವಕಂ ॥

ಈ ಪದ್ಯ ಕನ್ನಡ ಪದ್ಯದ ಸಂಸ್ಕೃತ ರೂಪವಾಗಿ ತೋರುವುದಲ್ಲದೆ, ಗ.ಪ್ರತಿಯ ಸೂಚನೆಯ ಆಶಯ ಏನೆಂಬುದು ಸ್ಪಷ್ಟವಿಲ್ಲ.

ಪದ ವಾಕ್ಯಾದಿ ಗೂಢಚಿತ್ರಗಳು

ಆಲಂಕಾರಿಕರು ಬಹುಶಃ ಕೂಟಗಳಲ್ಲಿಯೇ ಸೇರಿಸುವ 'ವಾಕ್ಯಾದಿ ವರ್ಣಸಂಯೋಜನೆ'ಯನ್ನು ಒಂದು ಪ್ರಕಾರವಾಗಿ ಗಣಿಸಬಹುದಾಗಿದೆ. ಇದೊಂದು ರೀತಿಯ ಅಕ್ಷರ ಚಮತ್ಕೃತಿಭೇದ. ಯಾರಾದರೊಬ್ಬ ಉದ್ದೇಶಿತ ವ್ಯಕ್ತಿಯನ್ನೋ ಯಾವುದಾದರೊಂದು ವಿಷಯವನ್ನೋ ಪದ್ಯದ ವಾಕ್ಯಘಟಕಗಳ ಪ್ರಥಮಾಕ್ಷರಗಳನ್ನು ಒಗ್ಗೂಡಿಸುವುದರಿಂದ ತಿಳಿಯಲು ಸಾಧ್ಯವಾಗುವಂತೆ ಪದ್ಯರಚನೆಯನ್ನು ಮಾಡಿರುತ್ತದೆ. ಮೇಲುನೋಟದಲ್ಲಿ ಇದು ತಿಳಿಯುವಂತಿರುವುದಿಲ್ಲ. ಕವಿಯೇ ಪದ್ಯದಲ್ಲಿ ಏನಾದರೂ ಸೂಚನೆಯನ್ನು ಕೊಟ್ಟಿರಬೇಕಾಗುತ್ತದೆ, ಇಲ್ಲವೆ ಅಂತಹ ಸೂಚನೆಯನ್ನು ಪ್ರತ್ಯೇಕವಾಗಿಯಾದರೂ ಹೇಳಿರಬೇಕಾಗುತ್ತದೆ. ತೀಕ್ಷ್ಣಮತಿಗೆ, ಸೂಚನೆಯಿಲ್ಲದೆಯೂ ಚಮತ್ಕಾರವನ್ನು ಗುರುತಿಸುವ ಕೌಶಲ್ಯವಿದ್ದರೆ, ಗುರುತಿಸಬಹುದಾದಂತಹ ಸಂಯೋಜನೆಗಳೂ ಇರುವುದು ಸಾಧ್ಯ. ಇದೂ ಒಂದು ರೀತಿಯ ಗೂಢಚಿತ್ರವೇ.

ಸಂಸ್ಕೃತ ಸಾಹಿತ್ಯದಲ್ಲಿ ಈ ಬಗೆಯ ಕೆಲವು ರಚನೆಗಳಿರುವಂತೆ ತೋರುವುದು. ಇಲ್ಲಿ ಒಂದು ಉದಾಹರಣೆಯನ್ನು ಕೊಡಬಹುದು.

ಪ್ರತ್ಯಂಕಮಂಕುರಿತ ಸರ್ವರಸಾವತಾರ। ನ್ನವ್ಯೋಲ್ಲಸತ್ಕುಸುಮರಾಜಿವಿರಾಜಿ ಬಂಧಂ।
ಘರ್ಮೇತರಾಂಶುರಿವ ವಕ್ರತಯಾತಿರಮ್ಯಂ। ನಾಟ್ಯಪ್ರಬಂಧಮತಿಮಂಜುಲ ಸಂವಿಧಾನಂ ॥
(೧–೭)

ಇದು 'ಚಂದ್ರಾಲೋಕ'ದ ಕರ್ತೃವಾದ ಜಯದೇವನ (ಸು. ೧೨೦೦) 'ಪ್ರಸನ್ನ ರಾಘವ' ಎಂಬ ನಾಟಕದೊಳಗಿನ ಪದ್ಯ. ಈ ವಸಂತತಿಲಕ ವೃತ್ತದ ಮಧ್ಯಯತಿಸ್ಥಾನವಾದ ೮ನೆಯ ಅಕ್ಷರವನ್ನೂ (ಯತಿಸ್ಥಾನ ಲಕ್ಷಣ ಗ್ರಂಥನಿರ್ದೇಶಿತವಲ್ಲ) ಪಾದಾಂತಯತಿಸ್ಥಾನವಾದ ೧೪ನೆಯ ಅಕ್ಷರವನ್ನೂ ಲಕ್ಷಿಸಿ, ವಾಕ್ಯಘಟಕಗಳು ಏರ್ಪಟ್ಟ ಹಾಗೆ ಭಾವಿಸಿದರೆ, ಪಾದಾದಿಯ ಅಕ್ಷರ ಹಾಗೂ ಮಧ್ಯಯತಿಸ್ಥಾನದ ಅಕ್ಷರಗಳನ್ನು ಕೂಡಿಸಿ ಓದಿ 'ಪ್ರಸನ್ನ

ರಾಘವ (ನಾಮಂ)' ಎಂಬುದಾಗಿ ನಾಟಕದ ಹೆಸರನ್ನು ಪಡೆಯಬಹುದಾಗಿದೆ. ಇಲ್ಲಿ ಕವಿಯಿಟ್ಟ ಸೂಚನೆಯೇನೂ ಇಲ್ಲದೆ, ಹೆಸರನ್ನು ಗುರುತಿಸಬೇಕಾಗಿದೆ.

ಇಂತಹ ಉದಾಹರಣೆಗಳು ಕನ್ನಡ ಸಾಹಿತ್ಯದಲ್ಲಿಯೂ ಕೆಲವು ಕಂಡುಬಂದಿವೆ. ಕೆಲವನ್ನು ಮುಂದೆ ಗಮನಿಸಬಹುದಾಗಿದೆ.

(೧) ಇಮ್ಮಡಿ ಹರಿಹರನ ಕಾಲದ ಒಂದು ನಿಸಿದಿಗಲ್ಲಿನಲ್ಲಿ :

ಮುನಿಸಂ ಮನ್ಮಥಯುದ್ಧದೊಳ್ ನಿರುತಂ ತತ್ತ್ವಾರ್ಥದೊಳ್ ಭಕ್ತಿಯಂ
ಜಿನಪಾದಾಂಬುಜದೊಳ್ ದ್ರವಾಧಿಕತೆಯಂ ಸಚ್ಚಿತ್ತದೊಳ್ ದೇಸೆಯಂ
ವಿನುತಾಚಾರಚಯಂಗಳೊಳ್ ವಚನಮಂ ವಕ್ತೃತ್ವದೊಳ್ ರುಕ್ಮರಂ
ಜನೆಯಂ ದೇಹದ ಕಾಂತಿಯೊಳ್ ನಿಱಿಸಿದರ್ ವಾಕ್ಯಾದಿವರ್ಣಾಹ್ವಯರ್ ॥

(ಎಕ. vii, ಸೊರಬ, ೧೪೩; ೧೩೮೮)

''ವಾಕ್ಯದ ಮೊದಲಕ್ಷರದ ಹೆಸರಿನವರು ವಿಷಯಾಸಕ್ತಿಯಲ್ಲಿ ಕ್ರೋಧವನ್ನು, ತತ್ತ್ವಾರ್ಥದಲ್ಲಿ ದೃಢ ವಿಶ್ವಾಸವನ್ನು, ಜಿನನ ಪಾದಕಮಲದಲ್ಲಿ ಭಕ್ತಿಯನ್ನು, ಸುಮನಸ್ಕತೆಯಲ್ಲಿ ಆರ್ದ್ರತೆಯ ಅತಿಶಯತೆಯನ್ನು, ಉತ್ತಮವಾದ ಆಚಾರಸಮೂಹಗಳಲ್ಲಿ ರುಚಿಯನ್ನು, ಮಾತುಗಾರಿಕೆಯಲ್ಲಿ ಮಾತನ್ನು, ದೇಹದ ಕಾಂತಿಯಲ್ಲಿ ಹೊಂಬಣ್ಣವನ್ನು ಸ್ಥಾಪಿಸಿದರು.'' ಇದು ಪದ್ಯದ ಸಾಮಾನ್ಯವಾದ ಅರ್ಥ.

ಇಲ್ಲಿ 'ವಾಕ್ಯಾದಿ ವರ್ಣಾಹ್ವಯರ್' ಎಂಬ ಸೂಚನೆ ವ್ಯಕ್ತವಾಗಿಯೇ ಇದೆ. ಈ ಸೂಚನೆಯಂತೆ 'ವಾಕ್ಯದ ಮೊದಲಕ್ಷರದ ಹೆಸರಿನವರು' ಇಲ್ಲಿ ಉದ್ದೇಶಿತರಾದ ವ್ಯಕ್ತಿ ಎಂಬುದಾಗಿ ತಿಳಿಯುತ್ತದೆ. ಪ್ರತಿಯೊಂದು ವಾಕ್ಯಘಟಕದ ಅಥವಾ ಆಶಯದ ಆದ್ಯಕ್ಷರವನ್ನೂ ಕೂಡಿಸಿ ಓದಿದರೆ, ಎಂದರೆ ಕ್ರಮವಾಗಿ ಪದ್ಯದ ಮೊದಲ ಪಾದ ದಲ್ಲಿ ೧, ೧೦ ಮತ್ತು ೧೮ನೆಯ, ಎರಡನೆಯ ಪಾದದಲ್ಲಿ ೮, ೧೮ನೆಯ, ಮೂರನೆಯ ಪಾದದಲ್ಲಿ ೧೦, ೧೮ನೆಯ ಅಕ್ಷರಗಳನ್ನು ಕೂಡಿಸಿ ಓದಿದರೆ, ಇಲ್ಲಿ ಕೀರ್ತಿತನಾಗಿರುವ ಜೈನಯತಿಯ ಹೆಸರು 'ಮುನಿಭದ್ರದೇವರು' ಎಂಬು ದಾಗಿ ತಿಳಿಯುತ್ತದೆ.

(೨) ಅಗ್ಗಳನ 'ಚಂದ್ರಪ್ರಭ ಪುರಾಣ'ದಲ್ಲಿ :

ಪರಿಜನ ಫಳವತ್ ಕ್ಷೇತ್ರೋ। ತ್ಕರ ಬಂಧುಸಮೂಹ ಭವನ ಮಹಿಳಾವಳಿಯಿಂ।
ಬುರುತರ ಪವರ್ಗ ಚಿಂತಾ। ಪರಿಗತನಪವರ್ಗಚಿಂತೆಯಂ ಮಾಡುಗುಮೇ ॥ (೧೩–೮೨)

''ಪರಿಜನರು, ಫಲವತ್ತಾದ ಕ್ಷೇತ್ರಗಳ ಸಮೂಹ, ಬಂಧುಗಳ ಗುಂಪು, ಭವನಗಳು, ಮಹಿಳೆಯರು ಎನ್ನುವ ಅಧಿಕವಾದ ಪವರ್ಗ ವಿಷಯಗಳ ಚಿಂತೆಯಿಂದ ಕೂಡಿದವನು ಮೋಕ್ಷದ ಯೋಚನೆಯನ್ನು ಮಾಡು ತ್ತಾನೆಯೇ ?'' ಇದು ಪದ್ಯದ ಸಾಮಾನ್ಯವಾದ ಆಶಯ.

ಪವರ್ಗದ ಚಿಂತೆಗೆ ಸಿಕ್ಕಿದವನು ಅಪವರ್ಗದ ಚಿಂತೆಯನ್ನು ಮಾಡುತ್ತಾನೆಯೇ ? ಪವರ್ಗ ಹಾಗೂ ಪವರ್ಗವಲ್ಲದುದು (= ಅಪವರ್ಗ) ಎಂಬುದಾಗಿ ಹೇಳುವುದರಲ್ಲಿ ಕವಿ ಚಮತ್ಕಾರವನ್ನು ಕಲ್ಪಿಸಿದ್ದಾನೆ. 'ಪವರ್ಗ ಚಿಂತಾಪರಿಗತನ್'' ಎಂದರೇನು ? ಕವಿ ಇಟ್ಟಿರುವ ಸೂಚನೆ ಇಲ್ಲಿಯೇ ಇದೆ. ಪವರ್ಗ ಎಂದರೆ, ಪ ಫ ಬ ಭ ಮ ಎಂಬ ವರ್ಣಮಾಲೆಯ ಪವರ್ಗದ ಐದು ಅಕ್ಷರಗಳು. ಅವು ಪದ್ಯದಲ್ಲಿಯೇ ಪರಿಜನ, ಫಳವತ್ ಕ್ಷೇತ್ರೋತ್ಕರ, ಬಂಧುಸಮೂಹ, ಭವನ ಮತ್ತು ಮಹಿಳಾವಳಿ ಎಂಬ ಪದಗಳ ಆರಂಭದಲ್ಲಿ ನಿಹಿತವಾಗಿದೆ. ಹೆಣ್ಣು ಹೊನ್ನು ಮಣ್ಣುಗಳ ಮೋಹವುಳ್ಳವನು ಮುಕ್ತಿಯ ಬಗ್ಗೆ ಯೋಚಿಸಲಾರನಷ್ಟೆ !

(೩) ಪದ್ಮಣಾಂಕನ 'ಪದ್ಮರಾಜ ಪುರಾಣ'ದಲ್ಲಿ :

ಸರಳವೃತ್ತಂ ಕಲಾಸ್ಫೂರ್ತಿ ಲೇಖಸ್ತುತಂ
ಶರಣನಿಧಿ ಮಾನ್ಯಂ ದಳಿತಕಲ್ಪನಂ ರಮಾ
ಕರವಿಗ್ರಹಂ ಸರಸವಿಸರಸರಸಂ ರಂಜಿತಾಂತರಂಗಂ ಪವಿತ್ರಂ

ದುರಿತಾರಿ ಮಿತರಹಿತಸುಮಹಿಮಂ ದೇಹಗುಣ
ನಿರಸನಂ ವಂದಿತಾಖಿಲಜನಂ ಭಕ್ತಸುರ
ತರು ಜಿತಾಕ್ಷಂ ಸಿದ್ಧಿದಂ ದಂಭವೈರಿ ಮಾದರಸ[ನೊ]ಪ್ಪಿದ[ನೆಂ]ತೆನೆ ॥ (೨–೧೬)

"ಸರಳವಾದ ಆಚರಣೆಯುಳ್ಳವನು, ಕಲೆಗಳಿಗೆ ಸ್ಫೂರ್ತಿಯಾದವನು, ಲೇಖಗಳಲ್ಲಿ ಸ್ತುತನಾದವನು, ಶರಣರಿಗೆ ನಿಧಿಪ್ರಾಯನು, ಮಾನ್ಯನು, ಕಲ್ಪವೆಂಬ ವೇದಾಂಗವನ್ನಿಕ್ಕಿದವನು, ತಾವರೆಯ ಮೈಬಣ್ಣವುಳ್ಳವನು, ಸರಸಸಮೂಹದಿಂದ ಕೂಡಿದವನು, ಶೋಭಾಯಮಾನವಾದ ಅಂತರಂಗವುಳ್ಳವನು, ಪವಿತ್ರನು, ಪಾಪಗಳಿಗೆ ವೈರಿ, ಅಮಿತವಾದ ಮಹಿಮೆಗಳುಳ್ಳವನು, ದೇಹಗುಣದೂರನಾದವನು, ಸರ್ವರಿಂದಲೂ ನಮಸ್ಕೃತನಾದವನು, ಭಕ್ತರಿಗೆ ಕಲ್ಪವೃಕ್ಷದಂಥವನು, ಜಿತೇಂದ್ರಿಯನು, ಸಿದ್ಧಿಪ್ರದಾಯಕನು, ಗರ್ವನಿರ್ಮೂಲಕನು ಆಗಿರುವ ಮಾದರಸನು ಹೇಗೆ ಒಪ್ಪಿದನು ಎಂದರೆ...." ಇದು ಪದ್ಯದ ಸಾಮಾನ್ಯವಾದ ಆಶಯ.

ಈ ಪದ್ಯದಲ್ಲಿ ಏನಾದರೂ ಕವಿತ್ವದ ಚಮತ್ಕಾರವಿರುವಂತೆ ಮೇಲುನೋಟದ ಪರಿಶೀಲನೆಯಿಂದ ತಿಳಿಯುವುದು ಸಾಧ್ಯವಿಲ್ಲ. ಆದರೆ ಕರ್ತೃ ಪದ್ಮಣಾಂಕನೋ ಇಲ್ಲವೆ ಪ್ರತಿಭಾವಂತನಾದ ಯಾವನಾದರೊಬ್ಬ ಅಭ್ಯಾಸಿಯೋ "ಈ ಪದ್ಯದ ಪ್ರತ್ಯೇಕ ಪದಂಗಳ ಮೊದಲಕ್ಷರಂಗಳ ಕೂಡಿಯೋದಿದೊಡೆ 'ಸಕಲೇಶ ಮಾದರಸರಂ ಪದುಮಿದೇವಂ ಭಜಿಸಿದ'ನೆಂದಿರ್ಕುಮಿದೊಂದು ಪ್ರಬಂಧಂ" ಎಂಬುದಾಗಿ ಒಂದು ಸೂಚನೆಯಿಟ್ಟಿರುವುದನ್ನು ಗಮನಿಸಿದಾಗ, ಆ ಚಮತ್ಕಾರವೇನೆಂದು ತಿಳಿಯುತ್ತದೆ. ಈ ಸೂಚನೆ ಈ ಗ್ರಂಥದ ಒಂದು ಹಸ್ತಪ್ರತಿ (ಅ)ಯಲ್ಲಿ ಮಾತ್ರ ಲಿಖಿತವಾಗಿದ್ದರೂ, ಕವಿಯ ರಚನೆಯಲ್ಲಿ ಈ ಚಮತ್ಕಾರ ಪೂರ್ವೋದ್ದೇಶಿತವಾಗಿತ್ತು ಎನ್ನುವುದಂತೂ ನಿಶ್ಚಯ. ಹಸ್ತಪ್ರತಿಯಲ್ಲಿ "ಇದೊಂದು ಪ್ರಬಂಧಂ" ಎಂದಿರುವುದರ ಅರ್ಥ, ಇದು ಒಂದು ಚಿತ್ರಕಾವ್ಯ ಪ್ರಕಾರದ ಲಕ್ಷ್ಯ ಎಂದೇ ಆಗಿರಬೇಕು.

ಪದ್ಯದೊಳಗೇ ಹೆಸರನ್ನೋ ವಾಕ್ಯವನ್ನೋ ಹೀಗೆ ಗೂಢಗೊಳಿಸುವ ಚಮತ್ಕಾರ ಒಂದು ತೆರನಾದರೆ, ಪದ್ಯದೊಳಗಿನ ಸೂಚನೆಯನ್ನೆತ್ತಿಕೊಂಡು ಅನ್ಯಮೂಲಗಳಿಂದ ವಿಷಯವನ್ನು ಊಹಿಸುವಂತೆ ಗೂಢಚಿತ್ರವನ್ನು ರೂಪಿಸುವುದು ಇನ್ನೊಂದು ತೆರ. ಇದಕ್ಕೆ ಒಂದು ಉದಾಹರಣೆ :

ಮುರಿಗೆ ದೇಶಿಕೇಂದ್ರನ 'ರಾಜೇಂದ್ರವಿಜಯ'ದಲ್ಲಿ :

ಗೋಕ್ಕೈಚಾಂದ್ರೋಣಾನಿಂ । ವ್ಯೈಕೊಂಕುಂ ಕೂಚಿಬೊಂಬೆ ಹೇಮಾಧೂಪಾಂ ।
ಶೂಕಂಚಂದೋಹಂಮಿಂ । ಗೌಕೂಬೈಕಾವೊಸೋಯಿ ಮೋಹಾಮುಂಗುಂ ॥

ಹಸಮೋ ಜಂಗಮ ಭಾಪುಪ್ರೋ ಶಿವನಿಶಂ ಮಾರಾವುರೇ ಹೂಬತಂ
ವಿಸಿ ಪಂಚಾಗುಜಪಾತಿ ದೇಕುದಥ ಕೆಂಬೋಯೋಕದಾನಂ ಪ್ರದಂ
ಅಸುವೇ ಶ್ರೀನುತೆ ಜೋಕೆ ಜೂಜೆಮೆಬಿಸೀ ಬಾಸಾಹೂವೀದೀಪಕೋ
ಪ್ರಸರೈಕ್ಯೈಕ ಸುವರ್ಣದಿಂ ನುತಿಪೆನಾನತ್ಯಂತ ಮಾನಾಗ್ರರಂ ॥ (೧–೧೩, ೧೪)

ಈ ಪದ್ಯಗಳ ಆಶಯವನ್ನು ಇರುವ ಹಾಗೆ ಅರ್ಥಮಾಡಿಕೊಂಡು ಗ್ರಹಿಸುವುದಕ್ಕೆ ಸಾಧ್ಯವಿಲ್ಲ. ಎರಡನೆಯ ಪದ್ಯದಲ್ಲಿ ಅಲ್ಲಲ್ಲಿ ಸಾರ್ಥಕವಾದ ಪದಗಳನ್ನು ಕಾಣಬಹುದಾದರೂ, ಅವುಗಳಿಂದಲೇ ಪದ್ಯದ ಆಶಯ ವಿಶದವಾಗದು. ಆದರೆ ಈ ಪದ್ಯದ ಕೊನೆಗೆ ಬಂದಿರುವ ಮಾತು ಗಮನಿಸಬೇಕಾದ್ದು. "ಈ ಸಮೂಹದ ಒಂದೊಂದೇ ಒಳ್ಳೆಯ ಅಕ್ಷರದಿಂದ ಅತ್ಯಂತ ಗೌರವಾಸ್ಪದರನ್ನು ನಾನು ಸ್ತುತಿಸುತ್ತೇನೆ" ಎಂಬ ಆ ಮಾತಿನಲ್ಲಿ ಪದ್ಯವನ್ನು ಅರ್ಥೈಸುವ ರಹಸ್ಯ ಅಡಗಿದೆ. ಸ್ವಲ್ಪ ವಿಚಾರಮಾಡಿದರೆ, ಈ ಕವಿ ಬಸವಣ್ಣ, ಚೆನ್ನಬಸವಣ್ಣ, ಪ್ರಭುದೇವರ ಸ್ತುತಿಯ ಬಳಿಕ ಬೇರೆ ಶಿವಶರಣರನ್ನು ನೆನೆದಿರಬೇಕು ಎಂಬ ನಿಜ ಹೊಳೆಯುತ್ತದೆ. ಪ್ರಸ್ತುತ ಈ ಕುಲಕದಲ್ಲಿ ೪೮ ಮಂದಿ ಶಿವಶರಣರ ಹೆಸರುಗಳನ್ನು, ಅವರ ಹೆಸರಿನ ಮೊದಲಕ್ಷರದ ಮೂಲಕ ಸೂಚಿಸಲಾಗಿದೆ. ಇವರಲ್ಲಿ ಹಲವರನ್ನು ಗುರುತಿಸಬಹುದು; ಬಲುಮಟ್ಟಿಗೆ ಎಲ್ಲರೂ ವಚನಕಾರರು. ಕೆಲವರು ಈಗ ನಮಗೆ ತಿಳಿಯದ ಅಥವಾ ಇನ್ನೂ

ಗುರುತಿಸಲು ಸಾಧ್ಯವಾಗಿರದ ವಚನಕಾರರು. ಪದ್ಯಪಾಠದಲ್ಲಿ ಏನಾದರೂ ತಪ್ಪುಗಳಿದ್ದರೆ, ನಮ್ಮ ಗ್ರಹಿಕೆಯಲ್ಲಿಯೂ ತಪ್ಪುಗಳಾಗುವುದು ಸಹಜ.

ಈಗ ಪೂರ್ವೋಕ್ತ ಪದ್ಯಗಳಲ್ಲಿ ಬಂದಿರುವ ಅಕ್ಷರಗಳ ಅನುಕ್ರಮವನ್ನು ಹಿಡಿದು ಆ ಶಿವಶರಣರು ಯಾರೆಂಬುದನ್ನು ಇಲ್ಲಿ ನೋಡೋಣ :

ಗೋರಕ್ಷ, ಕೈವಲ್ಯ/ಚೋಳ, ಚಾಂಗು ಬೊಲ್ಲಯ್ಯ, ಗಾವುದಿ ಮಾಚಯ್ಯ/ಗಾಣದ ಕನ್ನಪ್ಪ, ನಿಂಬಾಣದ ಗಣೇಶ್ವರ/ನಿಂಬಿಯಕ್ಕ, ಮೈದುನ ರಾಮಯ್ಯ, ಕೊಂಡಗುಳಿ ಕೇಶಿರಾಜ, ಕುಂಬಾರ ಗುಂಡಯ್ಯ, ಸೂಜಿಕಾಯಕದ ರಾಮಿತಂದೆ/ಸೂಳೆ ಸಂಕವ್ವ, ಚಿಕ್ಕಯ್ಯ/ಚಿಕ್ಕಮಾದಯ್ಯ, ಬೊಂತಾದೇವಿ, ಬೆಡಗಿನ ಸುಂದರಯ್ಯ, ಹೇರೂರ ಹೆಣ್ಣು/ಹೇರೂರ ನಾಗಣ್ಣ, ಮೌಕ್ತಿಕ ಸಂಗಯ್ಯ, ಧೂಪದ ಗೊಗ್ಗವ್ವೆ/ಧೂಪದ ಮಾಚಯ್ಯ, ಶೂಲದ ಬೊಮ್ಮಯ್ಯ, ಕಂಬದ ಮಾರಿತಂದೆ/ಕಂಕರೀ ಕಕ್ಕಯ್ಯ, ಚಂದಿಮರಸ, ದೋನಮಾರ್ಯ, ಹಂಪೆಯ ರಾಮಣ್ಣ, ಮಿಂಡ ಸಂಗಯ್ಯ/ಮಿಂಡ ನಾಗಯ್ಯ ಇ., ಗೌರಾರ್ಯ/ಗೌಳಭಟ್ಟಾರಕ, ಕೂಗಿನ ಮಾರಿತಂದೆ ಬೈಯಣಯ್ಯ, ಕಾಮವಟ್ಟದ ಭೀಮಣ್ಣ/ಕಾಳವ್ವೆ ಇ., ಮೊಕ್ಕಳದ ರಾಮಯ್ಯ/ಮೋರನ ವೇಮಯ್ಯ, ಸೋಮಲದೇವಿ/ಸೋವಣ್ಣ ಭಕ್ತ ಇ., ಇಳೆಹಾಳ ಬೊಮ್ಮಯ್ಯ, ಮೋಳಿಗೆ ಮಾರಯ್ಯ/ಮೋಳಿಗೆ ಮಹಾದೇವಿ, ಹಾವಿನ ಹಾಳ ಕಲ್ಲಯ್ಯ, ಮುಂಡು ಬೊಮ್ಮಯ್ಯ, ಗುಂಡಬ್ರಹ್ಮಯ್ಯ (ಪ ೧೩), ಹಡಪದ ಅಪ್ಪಣ್ಣ/ಹಡಪದ ರೇಚಯ್ಯ. ಸಕಲೇಶ ಮಾದರಸ/ಸತ್ಯಕ್ಕ ಇ., ಮೇದರ ಕೇತಯ್ಯ, ಜಂಬೂರು ಮಹಾಕಾಳಯ್ಯ, ಗಜೇಶ ಮಸಣಯ್ಯ/ಗಣದಾಸಿ ವೀರಣ್ಣ, ಮಡಿವಾಳ ಮಾಚಯ್ಯ/ಮಧುವಯ್ಯ ಇ., ಭಾನುದೇವಯ್ಯ, ಪುರದ ನಾಗಣ್ಣ, ಓಲೆಯ ಶಾಂತಯ್ಯ/ಓಹಿಲಯ್ಯ; ಶಿವಲೆಂಕ ಮಂಚಣ್ಣ/ಶಿವನಾಗಮಯ್ಯ ಇ., ವರದಾನಿ ಗುಡ್ಡಮ್ಮ/ವಚನಭಂಡಾರಿ ಶಾಂತರಸ, ನಿಜಗುಣಾರ್ಯ/ನಿಜಲಿಂಗದೇವ ಇ., ಶಂಕರ ದಾಸಿಮಯ್ಯ, ಮಾದಾರ ಚೆನ್ನಯ್ಯ/ಮಾದಾರ ದೂಡಯ್ಯ, ರಾಯಸದ ಮಂಚಣ್ಣ/ರಾಯಮ್ಮ ಇ., ಉರಿಲಿಂಗದೇವ/ಉರಿಲಿಂಗಪೆದ್ದಿ ಇ., ರೇವಣ ಸಿದ್ಧ/ರೇಕಮ್ಮ ಇ., ಹೂಚಲದೇವಿ, ಬಹುರೂಪಿ ಚೌಡಯ್ಯ/ಬಳ್ಳೇಶ ಮಲ್ಲಯ್ಯ, ತಂಗಟೂರು ಮಾರಯ್ಯ/ತಂಡೇಶ ಮಾರಯ್ಯ, ವಿಶ್ವೇಶ್ವರಾಚಾರ್ಯ/ವಿಮಳಿ ದೇವ, ಸಿದ್ಧರಾಮ/ಸಿದ್ಧಾಂತಿ ವೀರ ಸಂಗಯ್ಯ, ಪಂಡಿತಾರಾಧ್ಯ, ಚಾಮಯ್ಯ/ಚಾಮರದ ಚಿಕ್ಕಿದೇವಯ್ಯ ಇ., ಗುಪ್ತಮಂಚಣ್ಣ/ಗುಡ್ಡವ್ವೆ, ಜಗಳಗಂಟಿ ಕಾಮಯ್ಯ, ವಾಗೀಶ ನೈನಾರು, ತಿರುನೀಲಕಂಠ/ತಿರುಜ್ಞಾನ ಸಂಬಂಧಿ, ಢೇವರ ದಾಸಿಮಯ್ಯ, ಕುಪ್ಪಸದ ಚಂದಯ್ಯ, ದಸರಯ್ಯ, ಧವಳೇಶ ರಾಮಯ್ಯ, ಕೆಂಭಾವಿ ಭೋಗಣ್ಣ, ಚೋಳ ಬಸವೇಶ, ಏಕಾಂತದ ರಾಮಯ್ಯ/ಏಲೇಶ್ವರದ ಕೇತಯ್ಯ, ಕನ್ನದ ಮಾರಿತಂದೆ/ಕನ್ನಡಿ ಕಾಯಕದ ಅಮ್ಮಿದೇವಯ್ಯ ಇ., ದಾಸೋಹದ ಸಂಗಣ್ಣ, ನಂಬಿಯಣ್ಣ, ಪ್ರಸಾದಿ ಭೋಗಣ್ಣ, ದಂಡಭಕ್ತ, ಅಜಗಣ್ಣ/ಅರಿವಿನ ಮಾರಿತಂದೆ ಇ., ಸುರಗಿಯ ಚೌಡಯ್ಯ, ವೇದಮೂರ್ತಿ ಸಂಗಣ್ಣ/ವೇದಕಂಚುಕಿ, ಶ್ರೀಪತಿ ಪಂಡಿತ, ನುಲಿಯ ಚಂದಯ್ಯ, ತೆಲುಗು ಬೊಮ್ಮಯ್ಯ/ತೆಲುಗೇಶ ಮಸಣಯ್ಯ, ಜೋದರ ಮಾಯಣ್ಣ, ಕೆರೆಯ ಪದ್ಮರಸ, ಮೆರೆಮಿಂಡಯ್ಯ, ಬಿಬ್ಬಿ ಬಾಚಯ್ಯ, ಸೀಮಂತಿನಿ, ಬಾಹೂರ ಬೊಮ್ಮಣ್ಣ/ಬಾಲ ಸಂಗಣ್ಣ ಇ., ಸಾಮವೇದಿ, ಹೊಡೆಹುಲ್ಲ ಬಂಕಣ್ಣ/ಹೊನ್ನ ಕಾಯಕದ ಬೊಮ್ಮಯ್ಯ, ವೀರಶಂಕರ ದಾಸಿಮಯ್ಯ/ವೀರಗೊಲ್ಲಾಳಯ್ಯ ಇ., ದೀಪದ ಕಲಿಯಾರು, ಪದ್ಮಣಾಂಕ/ಪಡಿಹಾರಿ ಬಸವಯ್ಯ, ಕೋಲ ಶಾಂತಯ್ಯ/ಕೋವೂರ ಬ್ರಹ್ಮಯ್ಯ ಇ.,

ಇಲ್ಲಿ ನಾಲ್ಕು (ದ್ರೋ, ಪಾಂ, ಜೂ, ಜೆ) ಅಕ್ಷರಗಳಿಗೆ ಹೊರತು ಉಳಿದವುಗಳಿಗೆ ವಿವರಣೆ ಕೊಟ್ಟಿದೆ. ಕೆಲವು ಕಡೆ ಕರ್ತೃವಿನ ಮನಸ್ಸಿನಲ್ಲಿ ಯಾವ ಶಿವಶರಣನ ಹೆಸರಿದ್ದಿತೆಂದು ಊಹಿಸುವುದು ಕಷ್ಟ. ಪ್ರಸಿದ್ಧ ವಚನಕಾರರ ಹೆಸರನ್ನು ಊಹಿಸುವುದು ಉತ್ತಮಪಕ್ಷ. ಮೇಲೆ ಗುರುತಿಸಿರುವ ಹೆಸರುಗಳಲ್ಲಿ ತಪ್ಪುಗಳಿಗೆ, ಸಂದೇಹಗಳಿಗೆ ಅವಕಾಶವಿದೆ. ಒಂದು ಗಮನಾರ್ಹ ಸಂಗತಿಯೆಂದರೆ, ಯಾವುದೊಂದು ಅಕ್ಷರವೂ ಪುನರಾವೃತ್ತಿಯಾಗದಿರುವುದು.[೩] ಇದು ಅಕ್ಷರಮುಷ್ಟಿಕಾ ಅಥವಾ ಅಕ್ಷರಮುದ್ರಾ ಎಂಬ ಚಮತ್ಕಾರಭೇದದ ಕವಿತೆಗೆ ಲಕ್ಷ್ಯವಾಗಬಹುದು.

ಪದ್ಯಗುಚ್ಛಗಳ ಆದ್ಯಕ್ಷರಗಳನ್ನು ಕ್ರಮವಾಗಿ ಕೂಡಿಸುವುದರ ಮೂಲಕ ಬೇಕಾದ ಪದವನ್ನೋ ವಾಕ್ಯವನ್ನೋ ಪಡೆಯುವಂತೆ ಚಮತ್ಕಾರವನ್ನು ತಂದಿರುವುದರ ಕೆಲವು ನಿದರ್ಶನಗಳೂ ಕನ್ನಡ ಸಾಹಿತ್ಯದಲ್ಲಿ ಉಂಟು. ಒಂದೆರಡು ನಿದರ್ಶನಗಳು :

ಮುದ್ದಣನ 'ಶ್ರೀರಾಮ ಪಟ್ಟಾಭಿಷೇಕ'ದಲ್ಲಿ :

ಶ್ರೀಮದಚಲಾತ್ಮಜಾನನಕೈರವಾಬ್ಜಂ ನಿ । ರಾಮಯಂ ದಿವ್ಯಕೇಶಂ... ॥ ೧ ॥
ರಾಗಮಣಿರುಚಿರಾಜಿತೋತ್ತಮಾಂಗಂ ಸುಪು । ನ್ನಾಗಾಚ್ಛಪುಂಡರೀಕಾಕಲಿತ... ॥ ೨ ॥
ಮಲವಿನಾಶಂ ಬಾಡಬಾಶ್ರಯಂ ಸತ್ತ್ವಸಂ । ಕುಲಯುಕ್ತನಧಿಕಗುಣ... ॥ ೩ ॥
ಚಂಚಲಾಯತನೇತ್ರೆ ಕಪಿಮುಖಸ್ತುತಿಪಾತ್ರೆ । ಪಂಚಮಸುವಾಣಿ ಫಣಿವೇಣಿ... ॥ ೪ ॥
ದ್ರಾವಕಂ ವಿನತಾತ್ಮಬಂಧ್ವಸಚ್ಚರಿತನಿ । ದ್ರಾರ್ವಕಂ ನಾಗಾವೃತಾಂಗಂ... ॥ ೫ ॥
ಯತಿಗಣಾಶ್ರಯಮೆನಿಸಿ ಶಬ್ದಾರ್ಥಭಾವದಿಂ । ದತಿರಸಾಲಂಕಾರಮೊಪ್ಪೆ... ॥ ೬ ॥
ನಮುಚಿಸೂದನನಿಂಗೆ ಸಖನಾಗಿ ಪ್ರೇಮದಿಂ । ನಮುಚಿಸೂದನಮುಖ್ಯ... ॥ ೭ ॥
ಮಾರಹರನಂಶಮೆನಲಂಬಿಕಾತ್ಮಜನಾಗಿ । ವಾರಿಧಿಯನುತ್ತರಿಸಿ... ॥ ೮ ॥
ಮಿಗೆ ಮಾಧವಗೆ ಮಿತ್ರನಾದೆ ಮೈದೋಜಿದೀ । ಜಗದೊಳೆಲ್ಲೆಲ್ಲಿಯುಂ ಚರಿಸಿ.... ॥ ೯ ॥

(೧.೧–೯)

ಈ ನಾಂದೀಸಂಧಿಯಲ್ಲಿಯ ಪದ್ಯಗಳ ಆದ್ಯಕ್ಷರಗಳನ್ನು ಒಗ್ಗೂಡಿಸಿ ಓದಿದರೆ, ''ಶ್ರೀ ರಾಮಚಂದ್ರಾಯ ನಮೋಮಿ'' ಎಂಬುದಾಗಿ ಒಂದು ಸಂಸ್ಕೃತ ವಾಕ್ಯವಾಗುವುದು. ಹೀಗೆ ವಾಕ್ಯವನ್ನು ಪಡೆಯಲು ಕವಿ ಕೃತಿಯಲ್ಲಿಯೇ ಯಾವ ಸೂಚನೆಯನ್ನೂ ಇಟ್ಟಿಲ್ಲ.

ಎಂ. ಚೆನ್ನಕೃಷ್ಣಯ್ಯನವರ ವಿದ್ಯಾರ್ಥಿಗಳ ಕೈಪಿಡಿ 'ವ್ಯಾಸಂಗಾನಂದದಾಯಿನಿ'ಯಲ್ಲಿ :

ಪ್ರಾಸಂಗಿಕವಾಗಿ ಆರಂಭದಲ್ಲಿಯೇ (ಪುಟ ೧–೨) ''ಕುಸುಮ ಷಟ್ಪದಿ ಅಥವಾ ಸೀಸ ಪದ್ಯಗಳು'' ಎಂಬುದಾಗಿ ಛಂದಸ್ಸನ್ನು ಸೂಚಿಸಿರುವ 'ಶ್ರೀರಜತಮಹೋತ್ಸವಾಭಿನಂದನಂ' ಎಂಬ ಒಂದು ರಚನೆಯಿದೆ. ಈ ರಚನೆ ನಾಲ್ವಡಿ ಕೃಷ್ಣರಾಜ ಒಡೆಯರ ಆಳ್ವಿಕೆಯ ಬೆಳ್ಳಿಹಬ್ಬದ ಆಚರಣೆಗೆ ಬರೆದುದಾಗಿದ್ದು, ಇದನ್ನು ಕರ್ತೃ ಕೋಲಾರದ ಪ್ರೌಢಶಾಲೆಯಲ್ಲಿ, ೮–೮–೧೯೨೭ರಲ್ಲಿ, ಓದಿದ ಹಾಗೆ ತಿಳಿಯುವುದು. ಕೃಷ್ಣರಾಜ ಒಡೆಯರ ಗುಣಶೀಲಗಳನ್ನೂ ಸಾಧನೆಗಳನ್ನೂ ಕೀರ್ತಿಸಿರುವ ಈ ಪದ್ಯಗುಚ್ಛದ ಕೊನೆಗೆ ಲೇಖಕರೇ ''ಸೀಸಪದ್ಯದ ಪ್ರತಿಪಂಕ್ತಿಯ ಮೊದಲನೆಯ ಅಕ್ಷರಗಳನ್ನು ಕೂಡಿಸಿ ಓದಿದರೂ ನಿಜಾರ್ಥಕ ವಾಕ್ಯವಾಗುವುದು'' ಎಂಬುದಾಗಿ ಟಿಪ್ಪಣಿ ಬರೆದಿರುವುದು, ಇಲ್ಲಿಯ ಚಮತ್ಕಾರವನ್ನು ತಿಳಿಯಲು ಸಹಾಯ ಮಾಡುವುದು. 'ನಿಜಾರ್ಥಕವಾಕ್ಯ' ಎಂದಿರುವುದು, 'ತಮಗೆ ಸಂಬಂಧಪಟ್ಟ ವಿಷಯವನ್ನು ಹೇಳುವ ವಾಕ್ಯ' ಎಂಬರ್ಥದಲ್ಲಿಯೇ ಇರಬಹುದು. ಈ ಮುಂದೆ ಆ ಪದ್ಯಗುಚ್ಛವನ್ನುದ್ಧರಿಸಿದೆ :

ಶ್ರೀಮನ್ಮಹೀಶೂರ। ಭೂಮಿವಲ್ಲಭ ಸುಶ್ರ । ಜಾಮೋದ ನಾಲ್ವಡಿಯ ಕೃಷ್ಣರಾಜ ।
ಗೋಮಿನೀರಮಣ ಸು । ಕ್ಷೇಮಾಯುರಾರೋಗ್ಯ । ಮಾ ಮಂಗಳಂ ಜಯಂ ನಿಮಗೊದಗಲಿ ॥
ರೀತಿರೀತಿಯ ಸದ್ವಿ । ನೀತಿಯಿಂ ನೀತಿಯಂ । ಪ್ರೀತಿಯಿಂ ಸಕಲ ಜಾತಿಯನೆ ಪೊರೆವೈ ।
ಬೀತು ಕಂಗೆಡಿಪ್ಪೈ ವಿ । ಭೀತಿಯಂ ಕೊಡಿಪ್ಪೈ ವಿ । ಭೂತಿಯಂ ಜನಕೀತಿಬಾಧೆ ಬಿಡಿಪ್ಪೈ ॥
ದರ್ಪದಿಂ ಕುಜನರಂ । ತರ್ಪೆ ನೀಂ ಸುಪಥಕ್ಕೆ । ಮಾರ್ಪಟ್ಟು ಸುಜನರಾಗೊಪ್ಪೆ ನಲಿವೈ ।
ನೂರ್ಪತ್ತುಮಬುದಮಂ । ದರ್ಪಕಾಕೃತಿಸೌಖ್ಯ । ಮಿರ್ಪುದೈ ನೀಂ ಶೌರ್ಯಧೈರ್ಯಕಾರ್ಯ ॥
ರಮಣೀಯ ಗುಣಮಾಲ । ಕಮನೀಯ ಜನಪಾಲ । ಸುಮನೋಜ್ಞ ಬಾಲಗೋಪಾಲಲೋಲ ।
ಪಮಗಾರಿಸನಿಧ ಸ । ಪ್ತಮಹಾಸ್ವರವ್ರಾತ । ವಿಮಲಸಂಗೀತ ಸುಪ್ರೀತಚೇತ ॥

ರಸವತ್ಸುಕಾವ್ಯ ಕ। ರ್ತೃಸಮೂಹ ಪರಿಪೋಷ। ಕುಶಲವಿದ್ಯಾತೋಷ ಗುಣವಿಭೂಷ।
ಸ್ಪಶಮುಖ್ಯಸಂದೇಶ। ವಶ ಶಾಸ್ತ್ರದೃಷ್ಟಿ ದೃ। ಷ್ಟ ಸಮಸ್ತ ದೇಶವಾರ್ತಾವಿಶೇಷ॥

ರಜತಾಖ್ಯ ಸುಮಹೋತ್ಸ। ವಜನೋದ ನಿಜಬೋಧ। ಭಜಕ ಬಾಲಕದತ್ತ ಸುಪ್ರಸಾದ।
ಸಜಯ ಚಾಮಾಹ್ವಯಾ। ತ್ಮಜ ಕಲ್ಪಕಲ್ಪಭೂ। ವಿಜಸಮಾನುಜ ಯೌವರಾಜ್ಯಪೂಜ್ಯ॥

ಹಾರಿ ಸಿಂಹಾಸನಾ। ಧಾರ ರಾಜಕುಮಾರ। ಧೀರಧರ್ಮಪಥಾನುಸಾರಿ ಶೌರಿ।
ಯರಸುವಂಶದ ಯಾದ। ವರ ರತ್ನಪರಿನೂತ್ನ। ವಿರಲೇನೊ? ಪೇಳ್ ಪ್ರತ್ನಸಾಕ್ಷಿರತ್ನ॥

ಸಂಮತಂ ಪಂಚವಿಂ। ಶಂ ವಿಂಚಿ ಸೌಖ್ಯದಿಂ। ದೆಮ್ಮನಬ್ದಂ ಪಾಲಿಸಿರ್ಪ ಸೊಗದೆ।
ಘಮ್ಮನಿನ್ನೈವತ್ತು। ಮಂ ಮುದಂಬೆತ್ತಾಳ್ದು। ಸುಮ್ಮಾನದಿಂ ಸುವರ್ಣೋತ್ಸವವಡೆ॥

ದಾರಾತ್ಮಜಸಮೇತ। ಮಾ ರಾಜಿಪಾ ವಜ್ರ। ಚಾರೂತ್ಸವಂಬೆತ್ತು ವೀರ ಮೆರೆದು।
ರಾರಾಜಿಸ್ಸೆ ಈ ಪ್ರ। ಜಾರಾಜಿಯಿಂ ಸುವ್ಯ। ಕ್ಷೀರಸಾಪುಷ್ಟಿಯಿಂ ತುಷ್ಟಿವಡೆದು॥

ಜಯಜಯ ಶ್ರೀಕೃಷ್ಣ। ದಯಿತೇಶ್ವರ ವಿತೃಷ್ಣ। ನಯದಯಾದಾಕ್ಷಿಣ್ಯಶಾಂತು ಬಾಳ್ದು।
ಭಯಮೆಂಬುದಿಲ್ಲದಾ। ಜಯಕೀರ್ತಿವೈಭವಾ। ಶ್ರಯನಾಗು ಚೆನ್ನಿಗಗೊಲ್ದು ಕೃಷ್ಣ॥

ಕುವಲೇಶ ಸರ್ವದೋ। ತ್ಸವಯುಕ್ತನಾಗಿರ್ಪೆ। ಶಿವವಿಷ್ಣು ಪೂಜಾಧುರಂಧರಾ ಮ।
ತಿವರೇಣ್ಯ ಚಾಮುಂಡಿ। ಯ ವರಪ್ರಸಾದದಿಂ। ದವನೀಶ ಜಯಮಂಗಳಂ ನೃಪರ್ಷಿ॥

ಇರದೆಯ್ದಿ ಸಂತೃಪ್ತ। ನಿರುವಿನ್ನು ವೈಸ್ರಾಯಿ। ಕರ ಹತ್ತುವರೆಲಕ್ಷ ಕಡಮೆಮಾಡಿ।
ದುರುತರಪ್ರಿಯವಚಂ। ನೆರೆ ಸಂತಸಕ್ಕಾಯ್ತು। ಧರೆಗೆಲ್ಲ ನಾಲ್ವಡಿಯ ಕೃಷ್ಣರಾಜ॥

ಈ ಪದ್ಯಗುಚ್ಛವನ್ನು ಮೇಲಿನ ಕ್ರಮದಂತೆ ಬರೆದು, ಪಾದಾದಿಯ ಆದ್ಯಕ್ಷರಗಳನ್ನು ಕೂಡಿಸಿ ಓದಿದರೆ ''ಶ್ರೀ ಗೋರೀಬೀದನೂರ ಪರಸ್ಪರ ಸಹಾಯ ಸಂಘದಾ ರಾಜಭಕುತಿ ಇದು'' ಎಂಬುದಾಗಿ ಒಂದು ವಾಕ್ಯವೇರ್ಪಡುತ್ತದೆ. ಈಗಿನ ಗೌರೀಬಿದನೂರಿನ ಪರಸ್ಪರ ಸಹಾಯಸಂಘದ ಸದಸ್ಯರ ಪರವಾಗಿ ರಾಜಭಕ್ತಿಯನ್ನು ಸೂಚಿಸಿದ್ದೇನೆಂದು ಈ ಲೇಖಕರು ಪರೋಕ್ಷವಾಗಿ ಇಲ್ಲಿ ಸೂಚನೆಯನ್ನಿಟ್ಟಿದ್ದಾರೆ.

ಪಿ. ಬಸವಣ್ಣನವರ 'ಭಿಕ್ಷೆ' ಎಂಬ ಕವಿತಾಸಂಕಲನದಲ್ಲಿ :

ಆರಂಭದಲ್ಲಿಯೇ ಸೇರಿರುವ 'ಶ್ರೀ ಶಿವಕುಮಾರ ಸ್ವಾಮ್ಯಷ್ಟಕಂ', 'ಶಿವರಾತ್ರಿ ರಾಜೇಂದ್ರ ರಕ್ಷಿಸು', 'ದೇಗುಲಜ್ಯೋತಿ' ಎಂಬ ಮೂರು ಕವಿತೆಗಳೂ (ಪು.೧–೭) ಇದೇ ರೀತಿಯವು. ಇವುಗಳಲ್ಲಿ ಮೊದಲನೆಯದರಲ್ಲಿ ೮ ವಾರ್ಧಕ ಷಟ್ಪದಿಯ ಪದ್ಯಗಳಿವೆ; ಎರಡನೆಯದರಲ್ಲಿ ಇದೇ ಛಂದಸ್ಸಿನ ೧೦ ಪದ್ಯಗಳೂ, ಮೂರನೆಯದರಲ್ಲಿ ೫ ಪದ್ಯಗಳೂ ಇವೆ. ಇವುಗಳ ವಾಕ್ಯಾದಿ ವರ್ಣಸಂಯೋಜನೆಯಲ್ಲಿ ಒಂದೇ ಬಗೆಯ ತಂತ್ರವನ್ನು ಅನುಸರಿಸಿದೆ. ಎಂದರೆ ಪ್ರತಿ ಕವಿತೆಯಲ್ಲಿಯೂ ಪದ್ಯಾದಿಯ ಅಕ್ಷರವನ್ನು ಕೂಡಿಸಿ ಓದಿದರೆ. ಕ್ರಮವಾಗಿ 'ಶ್ರೀ ಶಿವಕುಮಾರ ಸ್ವಾಮಿ', 'ಶಿವರಾತ್ರಿ ರಾಜೇಂದ್ರ ರಕ್ಷಿಸು', 'ದೇಗುಲಜ್ಯೋತಿ' ಎಂಬುದಾಗಿ ಮಾತುಗಳು ರೂಪುಗೊಳ್ಳುತ್ತವೆ. ಕೊನೆಯ ಎರಡು ಕವಿತೆಗಳಲ್ಲಿ ಇವೇ ಶೀರ್ಷಿಕೆಗಳೂ ಆಗಿವೆ. ಇವುಗಳಲ್ಲಿ ಗೂಢವಾಗಿರುವ ಚಮತ್ಕಾರವೇನೆಂದು ತಿಳಿಯಲು ಕಷ್ಟವಾಗದಂತೆ ಕರ್ತೃವೇ ಪದ್ಯಾದಿಯ ಅಕ್ಷರವನ್ನು ದಪ್ಪಕ್ಷರಗಳಲ್ಲಿ ಮುದ್ರಿಸಿ ತೋರಿಸಿದ್ದಾರೆ. ಶೀರ್ಷಿಕೆಯನ್ನು ಬೇರೆಯಾಗಿ ಸೂಚಿಸಿದ್ದರೆ, ಆದ್ಯಕ್ಷರವನ್ನು ಯಥಾರೂಪದ ಅಕ್ಷರಗಳಲ್ಲೇ ಮುದ್ರಿಸಿದ್ದರೆ, ಚಮತ್ಕಾರದ ಬೆಲೆ ತನ್ನ ಗೂಢತೆಯಿಂದಾಗಿ ಹೆಚ್ಚುತ್ತಿತ್ತು ಎಂದು ಹೇಳಬಹುದಾಗಿದೆ. ಪ್ರಸ್ತುತ, ರಚನೆಯಲ್ಲಿ ಸಮಾನತಂತ್ರವನ್ನು ಅನುಸರಿಸುವುದರಿಂದ, ಚಿಕ್ಕ ಕವಿತೆಯಾದ 'ದೇಗುಲಜ್ಯೋತಿ' ಎಂಬುದನ್ನು ಮಾತ್ರ ಇಲ್ಲಿ ಮಾದರಿಗೆ ಉದಾಹರಿಸಿದೆ :

ದೇಗುಲವೆ ತಾನಾದ ದೇಹದೊಳು ನೆಲಸಿರ್ಪ। ಆಗುಹೋಗುಗಳರಿದ... ॥ ೧ ॥

ಗುರುಕೃಪಾಸುಧೆಯುಣಿಸಿ ದುರಿತಕರ್ಮವನಳಿಸಿ। ಶರಣಸಂಗದಿ ಬೆರೆಸಿ... ॥ ೨ ॥

ಲಸಿತಭಸಿತವ ಪೂಸಿ ಪೆರ್ನೊಸಲ ಸಿಂಗರಿಸಿ। ಹಸನಾದ ರುದ್ರಾಕ್ಷಮಣಿಮಾಲೆಯಂ... ॥ ೩ ॥

ಜ್ಯೋತಿಯಂದದಿ ಬೆಳಗಿ ಕತ್ತಲೆಯ ಕಳೆಯುತ್ತ । ಜಾತಿಮತ ವೈಷಮ್ಯವನು... ॥ ೪ ॥
ತಿರಿಯುದಲೆ ಯಾವುದನು ನೆನೆದ ಮಾತ್ರಕೆ ಪಡೆದು । ಬರಿಹೊಟ್ಟೆಯಲಿ ದಣಿದು... ॥ ೫ ॥

ಚ್ಯುತಚಿತ್ರಗಳು

ಕೆಲವರು ಪ್ರತ್ಯೇಕವಾಗಿ ಚ್ಯುತಚಿತ್ರಗಳೆಂಬ ಅಕ್ಷರಚಮತ್ಕೃತಿಗಳನ್ನು ಭಾವಿಸಿರುವುದುಂಟು. ನಿಷೇಧ ಅಥವಾ ಲೋಪ ಇಲ್ಲಿ ಮುಖ್ಯಪಾತ್ರ ವಹಿಸುತ್ತದೆ. ಓದುಗನ ವಿದ್ವತ್ತಿನ ಪರೀಕ್ಷೆಗಾಗಿ ಮಾತ್ರೆ, ಅರ್ಧಮಾತ್ರೆ ಇಲ್ಲವೆ ಬಿಂದು (ಅನುಸ್ವಾರ) ಅಥವಾ ಒಂದು ಅಕ್ಷರ ಇವನ್ನು ಉದ್ದೇಶಪೂರ್ವಕವಾಗಿ ಬಿಡಲಾಗುತ್ತದೆ. ಮೊದಲ ಮೂರು ಸಂದರ್ಭಗಳಲ್ಲಿ ಹೀಗೆ ಬಿಟ್ಟ ಅಂಶವನ್ನು ಸೇರಿಸಿದಾಗ ವಿವಕ್ಷಿತಾರ್ಥ ಸಿಕ್ಕುತ್ತದೆ. ನಾಲ್ಕನೆಯದರಲ್ಲಿ ವಿವಕ್ಷಿತಾರ್ಥ ಸಿಕ್ಕಬೇಕಾದರೆ ನಿರ್ದಿಷ್ಟವಾದ ಅಕ್ಷರಗಳನ್ನು ಬಿಡಬೇಕಾಗುತ್ತದೆ. ಸಂಸ್ಕೃತ ಕನ್ನಡ ಲಾಕ್ಷಣಿಕರು ಇವನ್ನು ಪ್ರಹೇಳಿಕೆಗಳಲ್ಲಿಯೇ ಸೇರಿಸಿ ಸಾಮಾನ್ಯವಾಗಿ ವಿವೇಚಿಸುವುದರಿಂದ ಇಲ್ಲಿಯೂ ಹಾಗೆಯೇ ಮಾಡಿದೆ.

ಅಡಿಟಿಪ್ಪಣಿಗಳು

1. ವಿವರಗಳಿಗೆ ನೋಡಿ : Jha, Figurative Poetry in Sanskrit Literature, pp.84–89.
2. ಆರ್. ನರಸಿಂಹಾಚಾರ್ಯ, ಕನ್ನಡಕ್ಕೆ ಪ್ರೋತ್ಸಾಹ, ಕಸಾಪ. ೧೯–೧, ೧೯೩೪.
3. ಕೆ. ಕೃಷ್ಣಮೂರ್ತಿ, ಚಿತ್ರಕಾವ್ಯ, 'ಕನ್ನಡ ವಿಶ್ವಕೋಶ', ಸಂ. ೭, ಪು. ೩೯೫.
4. ವಿವರಗಳಿಗೆ ನೋಡಿ : 'ಕವಿರಾಜಮಾರ್ಗವಿವೇಕ', ಪು. ೨೪೪.
5. ವಿವರಗಳಿಗೆ ನೋಡಿ : 'ಕವಿರಾಜಮಾರ್ಗ', ಟಿಪ್ಪಣಿಗಳು, ಪು. ೨೪೩–೪೪.
6. ಸುರಭಿ, ೧–೨, ಪು. ೨೯.
7. 'ಶ್ರೀ ಹರಿದಾಸ ಭಾರತೀ' ೨–೨, ಡಿ. ೧೯೫೧, ಪು. ೬-೭.

೭

ಪ್ರಹೇಳಿಕೆ

ಪೀಠಿಕೆ

ಚದುರ್, ಜಾಣ್

ಪ್ರಹೇಳಿಕೆ, ಅದರ ನಾನಾ ಪ್ರಕಾರಗಳಲ್ಲಿ, ಚಿತ್ರಕಾವ್ಯದ ಒಂದು ದೊಡ್ಡ ವಿಭಾಗವಾಗಿದೆ. ಅದರ ನಿರೂಪಣೆಗೆ ಮೊದಲು ಉಕ್ತಿವೈಚಿತ್ರ್ಯದ ಚದುರ್ (>ಚದುರು), ಜಾಣ್, ಬೆಡಂಗು (>ಬೆಡಗು), ಪದಿರ್ (>ಪದಿರು, ಪದುರು, ಪದರು; ಹದಿರ್, ಹದಿರು, ಹದುರು) ಈ ಕೆಲವು ರೂಪಗಳ ಬಗೆಗೆ ಕೆಲವು ಮಾತುಗಳನ್ನು ಹೇಳಬೇಕಾಗುತ್ತದೆ.

'ಚದುರ್' ಎಂದರೆ ಚಾತುರ್ಯ, ಕೌಶಲ ಎಂದೂ ಅಂತಹ ಗುಣದಿಂದ ಹುಟ್ಟಿದ ಚತುರೋಕ್ತಿ, ವಕ್ರೋಕ್ತಿ ಎಂದೂ ಅರ್ಥವಾಗುವುದು. ''ಹಸುರಿನ ನೆಲ ಚದುರಿನ ಚಾ[ರು]ಚಾವಡಿ ಮುದದ ಮಂದಿರ.... ಎನಿಪ ಸೂಳೆಗೇರಿಯುಂ'' (ಅಂಜಚ. ೩–೯೧), ''ಚದುರಂ ನುಡಿದ ನಾಲಗೆಯ ಮೊಟ್ಟಮೊದಲಿಗೆ ಕೊಯ್ದು'' (ಬಸಪು. ೪೫–೨೯), ''ವಿರಹ ಮೋಹನ ಲಲ್ಲೆ ಚಲ್ಲವು ಹದುರು ಚದುರುಗಳು'' (ಸಾಳ್ವಭಾ. ೧೭–೨೬), ''ಹದಿರು ಚದುರಿನಾಗರ ಕೌಳಿಯ ಪೇಟೆಯೊದವಿದ ಮೋಹನಶಾಲೆ'' (ಕಂನವಿ. ೨–೮೭) ಎಂಬ ಪ್ರಯೋಗಗಳ ಮೂಲಕ ಹಾಗೆ ಅರ್ಥವಾಗಲು ಸಾಧ್ಯವಿದೆ. ಇಲ್ಲಿ ಹದುರು–ಚದುರುಗಳು ಒಟ್ಟಿಗೆ ಪ್ರಸ್ತಾವಗೊಂಡಿರುವುದು ಗಮನಿಸತಕ್ಕುದಾಗಿದೆ.

'ಜಾಣ್' ಎಂದರೆ ಚಾತುರ್ಯ, ವಿವೇಕ ಎಂದೂ ಅಂತಹ ಗುಣಗಳಿಂದ ಹುಟ್ಟಿದ ಜಾಣತನದ ಮಾತು, ವಿವೇಕದ ಮಾತು ಎಂದೂ ಅರ್ಥವಾಗುವುದು. ''ಕಬ್ಬದೊಳೆಂದುಂ ಸನ್ನಿದಮಾಗಿರ್ಕೆ ಕಣ್ಣಮಯ್ಯನ ಕಡುಜಾಣ್'' (ಕಬ್ಬಿಕಾ. ೪) ಎಂಬಂತಹ ಪ್ರಯೋಗಗಳು ಚಾತುರ್ಯ ಬೋಧಕವಾದವು ಎನ್ನುವುದಕ್ಕಿಂತ ಚತುರೋಕ್ತಿ ಬೋಧಕವಾದವು ಎಂದು ತಿಳಿಯುವುದೇ ಬಹುಶಃ ಸೂಕ್ತ. ''ಕುಱಿತವರಲ್ಲದೆ ಮತ್ತಂ ಪೆಱರುಂ ತಂತಮ್ಮ ನುಡಿಯೊಳೆಲ್ಲರ್ ಜಾಣರ್'' (ಕವಿರಾ. ೩–೮), ''ಮಾತಿನಲಿ ಸೋತವನೆ ಜಾಣ'' (ಸರ್ವಜ್ಞ. ೧೩೪೨) ಎಂಬಂತಹ ಪ್ರಯೋಗಗಳಲ್ಲಿ ಜಾಣನೆಂದರೆ ವಾಕ್ಚತುರನೇ ಇರಬೇಕು. ಜಾಣ್ನುಡಿ, ಜಾಣ್ಮಾತು ಇವು ನುಡಿ, ಮಾತು ಎಂಬ ವಿಶೇಷ್ಯಗಳಿಂದ ಕೂಡಿ ಚತುರೋಕ್ತಿಯೆಂಬರ್ಥವನ್ನು ಸುಲಭವಾಗಿ ಸೂಚಿಸುತ್ತವೆ (ಜಗವಿ. ೧–೧೦; ಕಬ್ಬಿಕಾ. ೧; ಬಾಧಪು. ೧–೪೯, ೬–೬೫; ಧರ್ಮಾಮೃ. ೧೪–೧೬೭ ಇ.). ಜಾಣ್ನುಡಿಕಾರ್ತಿ ಮಾತಿನಲ್ಲಿ ಜಾಣೆ (ಪಾರ್ಶ್ವಪು. ೧೨–೯). 'ಜಾಣ್ಮೆ' ಸಹ ಜಾಣತನ, ಚಾತುರ್ಯ ಎಂಬ ಅರ್ಥಗಳ ಮಾತಿನಂತೆ ಸಹಜವಾಗಿಯೇ ತೋರಿದರೂ ಹೆಚ್ಚಿನ ಸಂದರ್ಭಗಳಲ್ಲಿ ಅದರ ಅರ್ಥ ಉಕ್ತಿಪರವಾದುದು. ಉದಾ.ಗೆ ''ಪ್ರಗಲ್ಭತೆಯೆನಲು ಜಾಣ್ಮೆ'' (ಮಂಗರಾ. ೧೩೫–೩೬) ಸೂಚ್ಯವಾಗಿ 'ಪ್ರಗಲ್ಭವಾಕ್', 'ಪ್ರೌಢವಾಕ್' ಆದವನ ಗುಣವಿಶೇಷ ಎಂಬರ್ಥವನ್ನೇ ಕೊಡುವ ವಿವರಣೆಯೆಂದು ತೋರುವುದು. ''ಬಣ್ಣಿಸುವವನ ಜಾಣ್ಮೆಗೆ....'' (ಗಿರಿಕ. ೪–೪), ''ಅನುನಯಾಲಾಪಂಗಳಿಂ ಮಾನಿನಿಗೆ ತನ್ನಯ ಜಾಣ್ಮೆ ಮೆಱೆಯಲು'' (ಬಸವು. ೪೦–೨೩), ''ಪಕ್ಷಿಗೀತಕೆ ಬಹುದೀ ಜಾಣ್ಮೆಯೆಂದುದು ಚೊಕ್ಕ ಮಾತಿನ ರಾಜಕೀರ'' (ಭರಚ. ೬–೯) ಇತ್ಯಾದಿ ಪ್ರಯೋಗಗಳನ್ನೂ ಹೀಗೆಯೇ ಲಕ್ಷಿಸಬೇಕು.

ಬೆಡಂಗು(=ಬೆಡಗು)

ಇನ್ನು 'ಬೆಡಂಗು'(>ಬೆಡಗು)ವಿನ ವಿಚಾರ. ರಮ್ಯತೆ ಮನೋಜ್ಞತೆಗಳನ್ನು ಕುರಿತ ಶಬ್ದವಿದು. ''ಬೆಡಂಗೆಂದು ಮನೋಹರಂ'' (ಕಶಬ್ದ. ೪೨೪), ''ತವೆ ಬೆಡಂಗೆನೆ ರಮ್ಯಮಕ್ಕು'' (ಕಬ್ಬಿಕೈ. ೩೧), ''ಬೆಡಗೆನೆ ರಮ್ಯಂ'' (ಕವಿಕಂ. ೧೪೧) ಎಂದು ನಿಘಂಟುಗಳು ಹೇಳುತ್ತವೆ. ಪಂಪಭಾ. ೧–೧೪೦, ೧೪೮, ಚಂದ್ರಪು. ೩–೨, ಪಂಪರಾ. ೩–೩೮, ಜೈಮಿಭಾ. ೧೧–೧೬ ಇ. ಹಲವು ಕಾವ್ಯಪ್ರಯೋಗಗಳಿಂದಲೂ ಇದು ವಿದಿತ. ಆದರೂ

ಇದು 'ಜಾಣ್'ಗೆ ಹತ್ತಿರದ ಶಬ್ದವಾಗಿದ್ದು, ಈ ಕೆಳಗಿನ ಪ್ರಯೋಗಗಳಿಂದ 'ಬೆಡಂಗು' (>ಬೆಡಗು) ಮಾತು ಚತುರೋಕ್ತಿಯನ್ನು ಸೂಚಿಸುವುದೆಂದು ತಿಳಿದರೆ ತಪ್ಪಾಗಲಾರದು.

(i) ಅದಱಿಂ ಪರಮಾಗಮ ಕೋ । ವಿದನಪ್ಪುದು ಪೂರ್ವಕಾವ್ಯರಚನೆಗಳಂ ತಾಂ ।
ಮೊದಲೊಳ್ ಕಲ್ತಂಗಲ್ಲದೆ । ಪದದೊಳ್ ಜಾಣುಂ ಬೆಡಂಗುಮುಕ್ಕುಮೆ ಕೃತಿಯೊಳ್ ॥

(ಕವಿರಾ. ೧–೯)

(ii) ಅತಿಶಯ ವರ್ಣಕ್ರಮಮೊಂ । ದು ತೆಱಂ ಪದರಚನೆಯೊಂದು ತೆಱನರ್ಥಮದೊಂ ।
ದು ತೆಱಂ ಬೆಡಂಗು ಬೇಱೊಂ । ದು ತೆಱಂ ನುಡಿಗೆನೆ ಮನಕ್ಕೆ ವರೆ ಹಳೆ ನುಡಿದಂ ॥

(ಶಾಂತಿಪು. ೨–೬೪)

ಜೊತೆಗೆ ಮಂಗರಾಜನ 'ಅಭಿನವಾಭಿಧಾನ'ದ ಆರಂಭದಲ್ಲಿ ಅವನು ಕವಿಗಳ ವಿಶೇಷವನ್ನು ಕೀರ್ತಿಸುತ್ತ ಹೇಳಿರುವ "ವರರುಚಿಯ ಜಾಣ್ಮೆ ಗೋಪಾಲಿಕನ ಬೆಡಗು...." (೧–೩) ಎಂಬ ನಿರೂಪಣೆಯನ್ನೂ ಗಮನಿಸಬಹುದು. ಕಾಲ ಕ್ರಮದಲ್ಲಿ ಈ ಶಬ್ದದ ಅರ್ಥ ಅಪಕರ್ಷಗೊಂಡು ತೋರಿಕೆ, ಬಿನ್ನಾಣ, ಚೆಲ್ಲುತನ ಎಂಬಂತಹ ಅರ್ಥಚ್ಛಾಯೆಗಳಿಗೆ ಶಿಥಿಲಗೊಂಡಿದ್ದು, ಬಸವ. ೭೭, ಜೈಮಿಭಾ. ೭–೬, ೩೦–೧೮ ಇತ್ಯಾದಿ ಪ್ರಯೋಗಗಳ ಮೂಲಕ ತಿಳಿಯುತ್ತದೆ.

'ಬೆಡಗು' ಎಂಬ ಅಬಿಂದುಕರೂಪದಲ್ಲಿ ಈ ಶಬ್ದ ವಚನಸಾಹಿತ್ಯದ ಒಂದು ವಿಶಿಷ್ಟರಚನೆಗೆ ಪ್ರಯೋಗವಾಗ ತೊಡಗಿದ್ದು ೧೨ನೆಯ ಶ.ದ ಅವಧಿಯಲ್ಲಿ ಕಂಡುಬರುತ್ತದೆ. "ಒಂದು ಶಬ್ದಕ್ಕೆ ಪಲವರ್ಥಮಂ ಪಲವರ್ಥಕೊಂದು ಶಬ್ದಂ ನುಡಿವ ಬೆಡಗುವಿಂ ನಾನಾರ್ಥಮೆಂದು ಪೇಟ್ವಿಂ ವಿಬುಧರಱಿವಂತೆ...." (೮೬೫) ಎಂಬ ಒಂದು ಮಾತು 'ಅಭಿನವಾಭಿಧಾನ'ದ ನಾನಾರ್ಥಕಾಂಡದ ಆದಿಯಲ್ಲಿದ್ದು (೫–೧), ಇಲ್ಲಿ 'ಬೆಡಗು' ಎಂಬ ಮಾತು ಶಬ್ದಪ್ರಯೋಗದ ವೈಚಿತ್ರ್ಯವನ್ನು ಪರೋಕ್ಷವಾಗಿ ಸೂಚಿಸುವಂತೆ ತೋರುತ್ತದೆ. ವಚನಸಾಹಿತ್ಯದಲ್ಲಿ ಸಿದ್ಧಸಂಕೇತಗಳ ಮೂಲಕ ವಾಗಿ ಆಳವಾದ ಆಧ್ಯಾತ್ಮಿಕ ಅನುಭವ ಹಾಗೂ ಚಿಂತನೆಗಳನ್ನು ಅಭಿವ್ಯಕ್ತಿಗೊಳಿಸಲು ನಾನಾರ್ಥಬೋಧಕವಾದ ಶಬ್ದಗಳನ್ನು ಪ್ರಯೋಗಿಸಿರುವುದನ್ನು ಕಾಣಬಹುದು. ಇಲ್ಲಿಯ ಸಂಕೇತಗಳು ಒಗಟಿನ ಮಾತುಗಳಿದ್ದ ಹಾಗೆ. ಅವುಗಳಿಗಿರುವ ಎರಡು ಅಥವಾ ಎರಡಕ್ಕಿಂತ ಹೆಚ್ಚು ಅರ್ಥಗಳನ್ನು ಭೇದಿಸಿದರೆ, ಅಂತರ್ಗತವಾದ ಅನುಭವ ಅಥವಾ ಚಿಂತನೆಯ ಹೊಲಬು ನಮಗೆ ಸಿಕ್ಕುತ್ತದೆ. ಸಂಪ್ರದಾಯಸ್ಥ ವ್ಯಾಖ್ಯಾನಕಾರರು ನಮಗಾಗಿ ಆ ಕೆಲಸವನ್ನು ಮಾಡಿದ್ದಾರೆ; ಹಾಗಲ್ಲದಿದ್ದರೆ ಇವು 'ಬಿಡಿಸಲಾಗದ ಒಗಟು'ಗಳ ಹಾಗೆಯೇ ಉಳಿದುಕೊಂಡು ಬಿಡುತ್ತಿದ್ದುವು. ಈ ಬಗ್ಗೆ ಮುಂದೆ ನಾವು ವಿವರವಾಗಿ ಗಮನಿಸಬಹುದು.

'ಬೆಡಗು' ವಚನಸಾಹಿತ್ಯದ ಒಂದು ಪದ್ಧತಿಗೆ ಮಾತ್ರ ಸೀಮಿತವಾಗಿರದೆ, ಆ ಬಗೆಯ ಇತರ ರಚನೆಗಳಿಗೆ ಕೂಡ, ಮುಖ್ಯವಾಗಿ ಪ್ರಹೇಳಿಕೆ ಅಥವಾ ಒಗಟುಗಳಿಗೆ ಕೂಡ ಬಳಕೆಯಾದುದಕ್ಕೆ ಸಾಕ್ಷ್ಯಗಳಿವೆ. ಸರ್ವಜ್ಞನ ತ್ರಿಪದಿಗಳಲ್ಲಿಯ ಒಗಟುಗಳಲ್ಲಿ ಒಂದೊಂದೆಡೆ "....ಕವಿಗಳೀ ಬೆಡಗ ಪೇಳುವುದು ಸರ್ವಜ್ಞ" (೧೮೯೮) ಎಂಬಂತಹ ಮಾತು ಕಂಡುಬರುತ್ತದೆ. ಇದನ್ನು ಗಮನಿಸಿಯೋ ಏನೋ ಇಂತಹ ರಚನೆಗಳನ್ನೆಲ್ಲ ಒಗ್ಗೂಡಿಸಿ 'ಬೆಡಗಿನ ಪದ್ಧತಿ' ಎಂಬುದಾಗಿ ಕರೆದಿರುವುದು ಕೂಡ ಉಂಟು. ಅಲ್ಲದೆ ಸಾಮಾನ್ಯವಾಗಿ ಚೌಪದದ ಒಗಟುಗಳ ಸಂದರ್ಭದಲ್ಲಿ ಕೂಡ, ಸವಾಲಾಗಿ ಒಡ್ಡಿದ ಒಗಟನ್ನು ಬಿಡಿಸುವವನು "ನೀನು ಹೇಳಿದ ಬೆಡಗು ಬೆನಕ ಕಾಣಣ್ಣಾ, ನಾನೊಂದು ಬೆಡಗ ಹೇಳುವೆನು ಕಾಣಣ್ಣ" ಎಂದು ಹೇಳಿರುವಂತಹ ರಚನೆಗಳಿವೆ.

ಪದಿರ್

ಈಗ ಪದಿರ್ ಎಂಬುದರ ಬಗ್ಗೆ ನೋಡೋಣ. ಈ ಶಬ್ದ ಕನ್ನಡ ಸಾಹಿತ್ಯದಲ್ಲಿ ಮೇಲಿನ ಶಬ್ದಗಳಿಗಿಂತ ಕಡಿಮೆ ಪ್ರಚುರವಾದ್ದು; ಆದರೆ ಉಕ್ತಿವೈಚಿತ್ರ್ಯದ ದೃಷ್ಟಿಯಿಂದ ಹೆಚ್ಚಾಗಿ ಗಮನಿಸಬೇಕಾದ್ದು. ಪ್ರಯೋಗ ಗಳನ್ನು ಪರಿಶೀಲಿಸಿದರೆ ಇದು ವಿವಿಧ ಅರ್ಥಚ್ಛಾಯೆಗಳಲ್ಲಿ ಗೋಚರಿಸುತ್ತದೆ. ಕೆಲವು ಛಾಯೆಗಳನ್ನಿಲ್ಲಿ ಗಮನಿಸ ಬಹುದು.

'ವಡ್ಡಾರಾಧನೆ'ಯ (ಸು.೯೨೦) 'ವಿದ್ಯುಚ್ಚೋರನೆಂಬ ರಿಸಿಯ ಕಥೆ'ಯಲ್ಲಿ ವಿದ್ಯುಚ್ಚೋರನೆಂಬ ಕಳ್ಳನಿಗೂ ಯಮದಂಡನೆಂಬ ತಳಾರನಿಗೂ ನಡೆದ ಒಂದು ಸಂವಾದದ ನಿರೂಪಣೆಯಲ್ಲಿ ''ಪದಿರಿನಿಂ ನುಡಿವ ಸೂಳೆಯ್ಮಾತುಗಳಂ ಕಾಪಿನವರುಂ ಪೊಲಲ ಜನಮುಂ ಕೇಳ್ದು ಚೋದ್ಯಂಬಟ್ಟು ಬೆಱಗಾಗಿರ್ದೊಡೆ'' ಎಂಬ ಒಂದು ಭಾಗವಿದೆ (ಸಾಲು ೧೦–೧೧). 'ಪದಿರಿನಿಂ' ಎಂಬ ಇಲ್ಲಿಯ ಮಾತಿಗೆ ತಮಿಳಿನ 'ಪಿದಿರ್' ಎಂಬ ಪರ್ಯಾಯ ಶಬ್ದವನ್ನು ಸೂಚಿಸಿ, ''ಒಗಟಿಯಿಂದ, ಅರ್ಥಗರ್ಭಿತವಾಗಿ, ಎರಡರ್ಥಗಳನ್ನು ಕೊಡುವ'' ಎಂಬ ಅರ್ಥವನ್ನು ಆ ಗ್ರಂಥದ ಸಂಪಾದಕರು ಬರೆದಿದ್ದಾರೆ (ಟಿಪ್ಪಣಿಗಳು, ಪು. ೨೫೨). ಸಂವಾದಗಳಲ್ಲಿ ಪದಿರ್ ಬಳಸುವ ರೂಢಿಯನ್ನು ''ಪದಿರನಾಡುವ ಸೂಳ್ನುಡಿ ದುಷ್ಟಚೇಷ್ಟೆಯಂ ಮೆಱೆಯಿಪ ತಮ್ಮ ಭಂಗಿ ಮಱಿಪಾಟಿ ಮನೋಜಸುಖಕ್ಕೆ ಸಂತತಂ ಮಱುಗುವ ಚಿತ್ತದಿಂ ರಜನಿರಂಜನಮಾದುದು ಬಂಧಕೀಜನಂ'' ಎಂಬ 'ಸೂಕ್ತಿಸುಧಾರ್ಣವ'ದ (೮–೮೫) ಪ್ರಯೋಗದಿಂದಲೂ ತಿಳಿಯಬಹುದಾಗಿದೆ. ಅಲ್ಲದೆ ಇಲ್ಲಿಯ ಪ್ರಯೋಗವೂ ಸೇರಿದಂತೆ ವೇಶ್ಯಾಗೃಹಗಳ ವಿಟವೇಶ್ಯಾಸಲ್ಲಾಪಗಳಲ್ಲಿ 'ಪದಿರ್' ಎಂಬ ಮಾತು, ಅದರ ವಿವಿಧ ರೂಪಾಂತರಗಳಲ್ಲಿ ಬಳಕೆಯಾಗಿರುವುದನ್ನು ಇನ್ನೂ ಹಲವು ಕಾವ್ಯಗಳಲ್ಲಿ ಕಾಣಬಹುದಾಗಿದೆ (ಅನಂಪು. ೮–೨೧; ಹಚಕಾ. ೪–೩೯; ಜೀವಂಚ. ೧೭–೧೮; ಅಂಜಚ. ೩–೯೧, ೧೨೭; ಪದ್ಮರಾ. ೮–೮೬; ಭಿಕ್ಷಾಚ. ೨–೫೦; ರಾಜಶೇ. ೧೧–೩೨; ಉದ್ಭದೇ. ೪–೩೯; ಚಿಕವಿ. ೬–೬೫; ಚೆಬಪು. ೧೧–೩೭; ಕಂನವಿ. ೨–೮೭; ತುರಂಗ. ೭–೨೧; ಚಂದ್ರಸಾ. ೧೮–೭೫; ರಾಘಚಾ. ೭–೨೫ ಇ.). ಇವುಗಳಲ್ಲಿ ಕೆಲವು ಉಲ್ಲೇಖಗಳು, ವಡ್ಡಾರಾ.ಯ ಉಲ್ಲೇಖದಲ್ಲಿ ತೋರುವಂತೆ ಇಬ್ಬರ ನಡುವೆ ನಡೆಯುವ ಅರ್ಥಗರ್ಭಿತವಾದ ಹಾಗೂ ಎರಡರ್ಥಗಳನ್ನು ಕೊಡುವ ಸಂದರ್ಭಗಳನ್ನು ಹೇಳುವಂತೆಯೇ ಇವೆ.

ಮೂರು ಸಂದರ್ಭಗಳನ್ನು ಇಲ್ಲಿ ಉದ್ಧರಿಸಬಹುದಾಗಿದೆ:

(i) ಚರಿಸದಿರಿ ನೀವೆಂದು ಬಾಗಿಲ । ಹೊರೆಯೊಳಿನ್ನಯ ಪುರುಷನೂರಿಗೆ ।
ಸರಿದನಂಥಕ ಮಾವನತ್ತೆ ಜರಾಂಗಿ ಭಾವ-ಮೃತ ॥
ಭರದ ಯೌವನೆ ನಾನು ನಾದಿನಿ । ತರಳೆ ಮತ್ತಾರಿಱಗರೆನುತೊಳ ।
ಸರಿದು [ಹದಿರನು] ನುಡಿವ ಜಾರೆಯನರಸನೀಕ್ಷಿಸಿದ ॥ (ಜೀವಂಚ. ೧೭–೧೮)

(ii) ಅತ್ತತ್ತ ಬೇಸಱಿಸುತಿದೆ ಮಗುವು ಕೋಣೆಯೊಳ
ಗತ್ತ ಮಾವದಿರ ಮಲಗುವ ನಿದ್ರೆ ಕೆಟ್ಟಪುದು
ಹೊತ್ತಱಿದ್ದೆನ್ನ ಪತಿಯೂರ್ಗೆ ಪೋದಂ ಬಾರನತ್ತಲಿನ್ನೇನಾದನೋ
ಹೊತ್ತು ಹೋಗದು ನಡುಮನೆಯ ಹರಳುನೆಲ ಮೆಯ್ಯ
ನೊತ್ತಿ ನಿದ್ದೆಯ ಕಿಡಿಸಿತೇಗುವೆನೊ ವಿಧಿಯೆಂದೆ
ನುತ್ತೊರ್ವ ಜಾರೆ ಜಾರಗೆ ಹದಿರ ನುಡಿದಳುಭಯಾರ್ಥವಾಗೊಂದೆಡೆಯೊಳು ॥

(ಭಿಕ್ಷಾಚ. ೨–೫೦)

(iii) ಇನನಿಲ್ಲವಿಂದು ಬಾರಂ । ಘನತಿಮಿರಮಿದಪ್ಪುದಕಟ ನೇಹಮದಿಲ್ಲಂ ।
ಮನೆಯೊಳ್ಸೊಡರಿದೆ ಪೋದುದು । ಜನರಹಿತಂ ನೆರೆಯಿದೆಂದು ಪದಿರಿಂ ನುಡಿದಳ್ ॥

(ರಾಜಶೇ. ೧೧–೩೨)

ಈ ಪದ್ಯಗಳಲ್ಲಿ, ವೇಶ್ಯೆಯರು ಸಂಕೇತದಿಂದ ವಿಟರನ್ನು ಒಳಗೆ ಸೆಳೆದುಕೊಳ್ಳುವ ಚತುರೋಕ್ತಿಗಳನ್ನಾಡಿದರೆಂಬುದು ಸುವಿದಿತ; ಆದರೆ ಹೊರನೋಟಕ್ಕೆ, ಎಂದರೆ ನೋಡುವ ಇತರರ ಕಣ್ಣಿಗೆ, ಬಂದ ವಿಟರನ್ನು ದೂರೀಕರಿಸಿದರೆಂದು ತೋರುವ ಹಾಗೆಯೂ ಆ ಚತುರೋಕ್ತಿಯಲ್ಲಿ ಆಶಯವನ್ನು ಹುದುಗಿಸಿದೆ. ಇಲ್ಲಿಯ ಪದ ರಚನೆಯಲ್ಲಿ ವಿಟನಿಗೆ ಅನುಕೂಲವಾಗುವ ಆಶಯವನ್ನು ವೇಶ್ಯೆ ಆಡದೆಯೇ ಆಡಿದಂತಾಗಿದೆ. ವಾಚ್ಯಾರ್ಥಕ್ಕೆ ಬಾಧೆ ಬಾರದ ಸ್ವಭಾವೋಕ್ತಿಯೊಂದು ವ್ಯಂಗ್ಯಾರ್ಥದ ವಕ್ರೋಕ್ತಿಯೊಂದನ್ನು ಗರ್ಭೀಕರಿಸಿಕೊಂಡಿರುವುದು ಇಲ್ಲಿಯ ವಿಶೇಷ. ಈ ವೇಶ್ಯಾ–ವಿಟಸಂಕೇತವೇ 'ಪದಿರ್'. 'ಕಾವ್ಯಾವಲೋಕನ'ದಲ್ಲಿ ನಿರೂಪಿತವಾಗಿರುವ 'ಭಾವ' ಎಂಬ ಅರ್ಥಾಲಂಕಾರದ ಲಕ್ಷ್ಯ ಸದೃಶರೀತಿಯದಾಗಿದೆ.

"...ವಿತರ್ಕ। ಕ್ರಮದಿಂದರ್ಥಾಂತರಮಂ। ಸಮನಿಸುವೊಂದುಕ್ತಿ ಭಾವಮೆನೆ ಪೆಸರ್ವಡೆಗುಂ॥"

ಎಂಬುದಾಗಿ ಈ ಅಲಂಕಾರದ ಲಕ್ಷಣ (೬೧೩). ಆ ಲಕ್ಷ್ಯಪದ್ಯವನ್ನು ಇಲ್ಲಿ ಉದ್ಧರಿಸಬಹುದು:

ಪಡುವಳ್ ಕೀಱುಲೊಳಿನ್ಮು ತೊಟ್ಟು ಪಡುವಳ್ ಮುತ್ತಬ್ಬೆಯಾ ಕೋಣೆಯೊಳ್
ಪಡುವಂ ಶಕ್ತಿವಿಹೀನನಂಧಬಧಿರಂ ಕೇಳಜ್ಜನೀ ಬಾಗಿಲೊಳ್
ಪಡುವೆಂ ಬಾಲಿಯೆನೊರ್ವಳಿಲ್ಲಿ ಮನೆಯಾಣ್ಮಂ ಪೋದನಿಂದೂರ್ಗೆ ನೀಂ
ಪಡಲೆಂದೆಂತೆಡೆವೇಡುವಯ್ ಪಥಿಕ ಮತ್ತೀ ಪೊಟ್ಟಱೊಳ್ ಗಾಂಪನೇ॥ (೬೧೬)

ಈ ಲಕ್ಷ್ಯಪದ್ಯ ರುದ್ರಟನ 'ಕಾವ್ಯಾಲಂಕಾರ'ದ ಇದೇ ಹೆಸರಿನ ಅಲಂಕಾರದ ಲಕ್ಷ್ಯಪದ್ಯವಾದ, 'ಏಕಾಕಿನೀ ಯದಬಲಾ ತರುಣೀ ತಥಾಹ....'' (೭-೪೧) ಎಂಬುದರ ಸ್ವತಂತ್ರಾನುವಾದವಾಗಿದೆ. ಸಾದೃಶ್ಯವುಳ್ಳ ಇನ್ನೊಂದು ಸದೃಶಲಕ್ಷ್ಯಪದ್ಯವನ್ನು, ''ಅಂಬಾ ಶೇತೇತ್ರ ವೃದ್ಧಾ ಪರಿಣತವಯಸಾಮಗ್ರಣೀರತ್ರ ತಾತೋ....'' ಎಂಬುದಾಗಿ ಆರಂಭವುಳ್ಳುದನ್ನು 'ಧ್ವನ್ಯಾಲೋಕ'ದಲ್ಲಿ (ಪು. ೧೦೫) ಸಹ ಗಮನಿಸಬಹುದಾಗಿದೆ.

'ಪದಿರ್' ಒಂದು ಚತುರೋಕ್ತಿ ವಿನ್ಯಾಸ, ಜಾಣ್ಮೆಯ ನುಡಿ, ಸಂಕೇತಮೂಲಕವಾಗಿ ಆಶಯದ ಅಭಿವ್ಯಕ್ತಿ. ಇದನ್ನು ವಿಟ-ವೇಶ್ಯಾ ಪ್ರಸಂಗಗಳ ಸಂದರ್ಭಗಳಲ್ಲಿ ಬರುವ ''ರಾಗದೋವರಿ ಪದಿರ ಪಾಳಿಯಂ....'' (ಪದ್ಮರಾ. ೮-೮೬) ''ಒರೆದಳ್ ಪದಿರಿಂದಂ....'' (ಉದ್ಭದೇ. ೪-೩೯), ''ಪದುರೀ ತಾಣದೆ ಬಲ್ತುದು . .'' (ಚಿಕವಿ. ೬-೬೫), ''ಹದಿರ ಹಾಡುವಾಡುವ ಸ್ತ್ರೀಯರ....'' (ಹಚಕಾ. ೪-೩೯), ''ಸೊಕ್ಕುಜವ್ವನೆಯರಾಡುವ ಹದಿರ್....'' (ಚೆಬಪ್ರ. ೧೧-೩೭) ಇತ್ಯಾದಿ ಇನ್ನೂ ಹಲವು ಪ್ರಯೋಗಗಳಿಂದ ತಿಳಿಯಬಹುದು. ಅನ್ಯ ಪ್ರಸಂಗಗಳಲ್ಲಿಯೂ ಇದೇ ಅರ್ಥದಲ್ಲಿ ಬಳಕೆಯುಂಟು ಎನ್ನುವುದು, ''....ಜಾಣ್ಪದಿರೆಂಬುವನಱಿದು ತನ್ನ ತೊಡೆಗಳ್ಗೆಡೆಗುನ್ಮದ ಕರಿಯಂ ಬರ್ದೆಯುಮಂ ಮುದದಿಂ ಶ್ರೀರೇಚನೃಪತಿ ಬಸಮಾಗಿಸುವಂ'' (ಮದತಿ. ೧-೨೩), ''ಎಳಸೋಲದೊಳ್ ಪದಿರೊಳೊತ್ತು'' (ಅರ್ಥನೇ. ೫-೭೦), ''ನಲ್ಲಳ ಕೂಡೆ ಹದಿರನಾಡಿದನು'' (ಬರಚ. ೧೪-೧೦೦) ಈ ಕೆಲವು ಪ್ರಯೋಗಗಳಿಂದ ವಿದಿತವಾಗುತ್ತದೆ.

ಅರ್ಥಚ್ಛಾಯೆಗಳು ವಿಸ್ತಾರಗೊಂಡು ವಿಶಿಷ್ಟ ಸಂಕೇತಪೂರ್ವಕವಾದ ಧ್ವನ್ಯರ್ಥದಲ್ಲಿ ಮುಂದೆ 'ಪದಿರ್' ಶಬ್ದ ಪಂಚತಂ. ೨೯೦-೧೨, ವರ್ಧಪು. ೭-೯ವ., ಮದತಿ. ೧೧-೨೭, ಗುರುಚಾ. ೧-೧೬ ಮೊದಲಾದೆಡೆಗಳಲ್ಲಿ, ವ್ಯಂಗ್ಯವಾದ ಮಾತು, ಆಕ್ಷೇಪ-ಎಂಬರ್ಥಗಳಲ್ಲಿ, ಸೋಮಚಾ. ೪-೬೨, ಪ್ರೌಢರಾ. ೧-೪೪, ಕುವ್ಯಾಸ. ೧೪-೨೯ ಮೊದಲಾದೆಡೆಗಳಲ್ಲಿ, ಬಳಕೆಯಾಗಿವೆ. ಸನ್ನೆ, ಸಂಕೇತ ಎಂಬರ್ಥಗಳನ್ನು ಒಳಕೊಂಡ ಪಂಚತಂ. ೨೯೦-೧೨, ಶಬ್ದಾನು. ೫೮೫ವ್ಯಾ. ಮೊದಲಾದ ಪ್ರಯೋಗಗಳ ಜೊತೆಗೆ ಪಂಪಭಾ. ೯-೧೦೪ವ., ಶಾಂತಿಪು. ೩-೧೦೭ವ. ಪಂಪರಾ. ೧೩-೩೪ವ. ನೇಮಿಪು. ೧೧-೧೪೮ವ. ಮೊದಲಾದೆಡೆಗಳ 'ಪದಿರ ಪಱಿ' ಎಂಬ ಮಾತನ್ನೂ ಪ್ರಾಯಶಃ ಪರಿಗಣಿಸಬೇಕಾಗುತ್ತದೆ.

ಹೀಗೆ ಪೂರ್ವಕವಿ ಪ್ರಯೋಗಗಳನ್ನು ಪರಿಶೀಲಿಸಿದರೆ 'ಪದಿರ್' ಶಬ್ದ ಮೂಲತಃ ಉಕ್ತಿವೈಚಿತ್ರ್ಯವನ್ನು ಸೂಚಿಸುತ್ತಿದ್ದು, ಅದು ಸ್ವತಂತ್ರವಾಗಿಯೋ ಸಂವಾದದ ಭಾಗವಾಗಿಯೋ ಬರುತ್ತಿದ್ದುದು ನಿಶ್ಚಯವೆನ್ನಬೇಕು. ಇದರ ಸ್ವರೂಪವನ್ನು ಹೀಗೆ ಸೂಚಿಸಬಹುದು :

(i) ಕಟಕಿ ಹುಸಿ ನುಸುಳ್ ಮುಂತಾದವುಗಳಂತೆ ಅಲ್ಲದೆ 'ಪದಿರ್', 'ಜಾಣ್' ಮತ್ತು 'ಚದುರ್'ಗಳ ಹಾಗೆ ಮಾತಿನ ಸಾತ್ವಿಕರೂಪವನ್ನು ಹೇಳುತ್ತದೆ. (ii) ಅದರಲ್ಲಿ ಒಂದು ಆಶಯವು ಸ್ವಾಭಾವಿಕ ರೀತಿಯಲ್ಲಿ ನೇರವಾಗಿ ವ್ಯಕ್ತವಾಗಿರದೆ, ಗೂಢಾರ್ಥ, ದ್ವಂದ್ವಾರ್ಥ, ಸಂಜ್ಞೆ, ಸಂಕೇತಗಳ ಹೊದಿಕೆಯನ್ನು ಪಡೆದು ವಕ್ರ ಅಥವಾ ಪರೋಕ್ಷ ಮಾರ್ಗದಲ್ಲಿ ನಿರೂಪಿತವಾಗಿರುತ್ತದೆ. (iii) ಸಾಮಾನ್ಯವಾಗಿ ಸಂಭಾಷಣೆಯ ರೂಪದಲ್ಲಿ, ಇಬ್ಬರು ಆಪ್ತವ್ಯಕ್ತಿಗಳ ಇಲ್ಲವೆ ಗೂಢವಾಗಿ ಸಂಬಂಧವನ್ನು ಬಯಸುವ ವ್ಯಕ್ತಿಗಳ ನಡುವೆ ಇದು ನಡೆಯುತ್ತದೆ; ಅವರಿಗೆ ಮಾತ್ರ ಅಭಿಪ್ರಾಯವಾಗುವಂತಿರುತ್ತದೆ. (iv) ಆಡುವವರೂ ಅರ್ಥಮಾಡಿಕೊಳ್ಳುವವರೂ ಮಾತಿನ ಮರ್ಮವನ್ನರಿತ ನುಡಿಜಾಣರೂ ಚಮತ್ಕಾರೋಕ್ತಿಪ್ರಿಯರೂ ಆಗಿದ್ದರೆ ಅದು ಸೊಗಸುತ್ತದೆ.

ಈ ಲಕ್ಷಣಗಳನ್ನು ಪರಿಶೀಲಿಸಿದರೆ, ಇವೇ ಲಕ್ಷಣಗಳನ್ನು ಬಹುಮಟ್ಟಿಗೆ ಹೊಂದಿರುವ ಪ್ರಹೇಳಿಕೆ ಹಾಗೂ ಅದರ ವಿಭಿನ್ನ ಪ್ರಕಾರಗಳನ್ನು 'ಪದಿರ್'ಗಳೆಂದು ಹೇಳಲು ಅವಕಾಶವಿದೆಯೆನ್ನಬಹುದು. ವಿಶಾಲಾರ್ಥವುಳ್ಳ 'ಪದಿರ್' ಎಲ್ಲ ಬಗೆಯ ಪ್ರಹೇಳಿಕೆಗಳನ್ನೂ, ಅವು ಚಮತ್ಕಾರಜನಕಗಳಾದ ಉಕ್ತಿವೈಚಿತ್ರ್ಯಗಳೇ ಆದುದರಿಂದ, ಒಳಕೊಳ್ಳುವುದು. ಆದರೆ ಎಲ್ಲ ಬಗೆಯ 'ಪದಿರ್'ಗಳನ್ನೂ ಪ್ರಹೇಳಿಕೆಗಳೆನ್ನಲಾಗದು. ಪದಿರ್ ಪ್ರಹೇಳಿಕೆಗಳು ಸೋದರ ಸಂಬಂಧವುಳ್ಳವು. ದ್ರಾವಿಡ ಪರ್ಯಾಯಶಬ್ದಗಳಲ್ಲಿ 'ಪದಿರ್'ಗೆ ಸಮೀಪದ ಶಬ್ದಗಳಿವೆ. ತಮಿಳಿನಲ್ಲಿ ಪಿದಿರ್, ಪುದಿರ್, ಪಿಜಿ ಇವು ಒಗಟು, ಸಮಸ್ಯೆ, ಪ್ರಹೇಳಿಕೆ ಎಂಬ ಅರ್ಥವನ್ನು ನೇರವಾಗಿ ಕೊಡುವ ಶಬ್ದಗಳು; ಕೊಲಾಮಿಯ ಪುಂದ್, ಗೊಂಡಿಯ ಪುಂದಾ ಇವುಗಳಿಗೆ ಸಹ ಅವೇ ಅರ್ಥಗಳು (ದ್ರಾವಿಡ ಜ್ಞಾತಿಪದಕೋಶ ೩೪೨೫). ಈಗಲೂ ಉತ್ತರಕನ್ನಡ ಜಿಲ್ಲೆಯ ಕನ್ನಡದ ಆಡುಮಾತಿನಲ್ಲಿ 'ಗೂಢವಾಗಿ, ಗೊಂದಲಮಯವಾಗಿ ಮಾತನಾಡುವುದಕ್ಕೆ 'ಹದಿರು ಮಾತನಾಡುವುದು' ಎನ್ನುವರೆಂದು ತಿಳಿದಿದೆ. ಮೇಲುನೋಟಕ್ಕೆ ಒಂದು ಅರ್ಥ, ಒಳಗೆ ಇನ್ನೊಂದು ಅರ್ಥ ಎಂಬುದೂ ಅರ್ಥವನ್ನು ಚತುರೋಕ್ತಿವಿನ್ಯಾಸದಿಂದಲೋ ಭಂಗ್ಯಂತರದಿಂದಲೋ ಇಲ್ಲವೆ ಸಂಜ್ಞೆ, ಸಂಕೇತಗಳಿಂದಲೋ ಸೂಚಿಸುವುದು ಉಭಯಸಮಾನವಾದ ಅಂಶ ಪ್ರಹೇಳಿಕೆಗಳ ವಿನೋದಗೋಷ್ಠಿಗಳು ವಿಟ–ವೇಶ್ಯಾಸಲ್ಲಾಪಗಳಲ್ಲಿ ನಡೆಯುತ್ತಿದ್ದುದು 'ರಾಜಶೇಖರ ವಿಳಾಸ'ದ ನಿರೂಪಣೆಯಿಂದ (೧೧–೧೬ಲವ. ~೧೭೪) ಸ್ಪಷ್ಟಪಟ್ಟಿದೆ. ''ಪದಿರ್' ಎಂಬುದರ ಉಲ್ಲೇಖವೂ ಹೆಚ್ಚಾಗಿ ವಿಟ-ವೇಶ್ಯಾಸಲ್ಲಾಪಗಳಲ್ಲಿಯೇ ನಮ್ಮ ಸಾಹಿತ್ಯದಲ್ಲಿ ಬಂದಿರುವುದು ಗಮನಾರ್ಹವಾಗಿದೆ. ಪ್ರಹೇಳಿಕೆ ಎಂಬ ಸಂಸ್ಕೃತ ಶಬ್ದದ ನಿಷ್ಪತ್ತಿಯೂ ಇದನ್ನು ಸಮರ್ಥಿಸುವಂತಿದೆ.

ಮುಂಡಿಗೆ

ಪದ್ಯನಿಬದ್ಧವಾದ ಉಕ್ತಿವೈಚಿತ್ರ್ಯದ ಒಂದು ಬಗೆಯಾಗಿರುವ 'ಮುಂಡಿಗೆ' 'ಪದಿರ್'ಗಿಂತ ಹೆಚ್ಚು ಖಚಿತವಾದ್ದು; ಪ್ರಹೇಳಿಕೆಯ ಸ್ಪಷ್ಟಲಕ್ಷಣವನ್ನುಳ್ಳದು. ಈ ಶಬ್ದದ ಅರ್ಥ ನಿಷ್ಪತ್ತಿಗಳೇನು ಎನ್ನುವುದು ನಿಶ್ಚಿತವಾಗಿ ತಿಳಿದಿಲ್ಲ. 'ಕನಕದಾಸರ ಮುಂಡಿಗೆಗಳು' ಎಂದೇ ಪ್ರಸಿದ್ಧವಾಗಿರುವ ಅವರ ಕೆಲವು ಕೀರ್ತನೆಗಳ ವಿಷಯದಲ್ಲಿ ಈ ಪದಪ್ರಯೋಗ ಸಾಮಾನ್ಯವಾಗಿ ಕಂಡುಬಂದಿದೆ. ''ಕಟ್ಟಿಗೆಯ ದೊಡ್ಡ ತೊಲೆಯು (ಮುಂಡಿಗೆಯು) ಎತ್ತಲು ಹೇಗೆ ಸುಲಭಸಾಧ್ಯವಲ್ಲವೋ ಹಾಗೆಯೇ ಕನಕನ ಈ ಜಾತಿಯ ಹಾಡುಗಳನ್ನು ಸುಲಭವಾಗಿ ಅರ್ಥಮಾಡಲು ಸಾಧ್ಯವಿಲ್ಲವೆಂದೇ ಇವುಗಳಿಗೆ ಮುಂಡಿಗೆಗಳೆಂದು ಕರೆದಿರುವರು'' ಎಂಬುದಾಗಿ ಬುರ್ಲಿ ಬಿಂದುಮಾಧವ ಊಹಿಸಿದ್ದಾರೆ.[1] ಮುಂಡಿಗೆ ಮತ್ತು ಮುಡಿಗೆ ಎಂಬೆರಡು ಶಬ್ದಗಳು ಬರುವ ಕೆಲವು ಸಂದರ್ಭಗಳನ್ನು ಗಮನಿಸಿ, ಇವು ಒಂದು ರೀತಿಯ ಸವಾಲನ್ನು ಸೂಚಿಸುವ ಶಬ್ದಗಳೆಂದು ಗ್ರಹಿಸಿ, 'ಸಿಂಗಿರಾಜಪುರಾಣ' 'ಮುಡಿಗೆಯಷ್ಟಕ' ಮುಂತಾದವುಗಳನ್ನು ವಿಶೇಷವಾಗಿ ಲಕ್ಷಿಸಿ, ಎಂ. ಚಿದಾನಂದಮೂರ್ತಿಯವರು ''ಮುಂಡಿಗೆ ಮತ್ತು ಮುಡಿಗೆಗಳೆರಡೂ ಸಮಾನಾರ್ಥಕಗಳು. ಎರಡಕ್ಕೂ ಟೊಪ್ಪಿಗೆ ಅಥವಾ ತಲೆಯ ಮೇಲಿನ ಉಡುಪು ಎಂಬುದು ಮೂಲಾರ್ಥ'' ಎಂಬುದಾಗಿ ಭಾವಿಸಿದ್ದಾರೆ[2]. ಈ ಎರಡು ಶಬ್ದಗಳೂ ಭಿನ್ನಮೂಲಗಳಿಂದ ಬಂದಿರುವ ಸಾಧ್ಯತೆಯಿದೆಯೆಂದು ಅವರು ಸಂದೇಹಿಸಿರುವುದು ಸರಿಯಾಗಿಯೇ ಇದೆ. ಅವರು ಗ್ರಹಿಸಿರುವಂತೆ ಮುಂಡಿಗೆ ಸಂಸ್ಕೃತ 'ಮುಂಡ' ಪ್ರಕೃತಿಯಿಂದ ಬಂದಿರುವುದು ಅಸಂಭವವೇನಲ್ಲ. ಸಂಸ್ಕೃತದಲ್ಲಿ 'ಮುಂಡ' ಎಂದರೆ ತಲೆ, ಹಣೆ ಎಂಬ ಅರ್ಥಗಳಿವೆ; ಆದ್ದರಿಂದ 'ಮುಂಡಿಗೆ' (ಮುಂಡ + ಇಗ) ಎಂದರೆ ತಲೆಯುಡುಗೆ ಎಂದಾಗಬಹುದು. ಕಾಲಾನಂತರದಲ್ಲಿ ಸವಾಲು ಎಂಬರ್ಥವೂ ಸವಾಲಿನಂತೆ, ಒಗಟಿನಂತೆ ಅರ್ಥೈಸಲು ಕಷ್ಟವಾಗಿರುವ ಪದ್ಯ ಎಂಬರ್ಥವೂ ಆ ಶಬ್ದಕ್ಕೆ ಬಂದಿರುವುದು ಸಾಧ್ಯ. ಕನಕದಾಸರ ಈ ಗುಂಪಿನ ಒಂದು ಕೀರ್ತನೆಯಲ್ಲಿಯೇ (೧೬೨) ''ಹರಿದಾಸ ಕನಕನು ಹಾಕಿದ ಮುಂಡಿಗೆ। ಸಿರಿ ಆದಿಕೇಶವನಾಣೆ ಬಲ್ಲವರು ಹೇಳಿ॥" ಎಂದಿರುವುದನ್ನು ಇಲ್ಲಿ ನೆನೆಯಬಹುದು.

ಕನಕದಾಸರ ಮುಂಡಿಗೆಗಳು ಸಂಖ್ಯೆಯಲ್ಲಿ ೨೦–೨೫ ಇರಬಹುದು. ಪುರಂದರದಾಸ, ಪ್ರಸನ್ನವೆಂಕಟದಾಸ, ಭಾಗಣ್ಣದಾಸ ಮುಂತಾದ ಹರಿದಾಸರ ರಚನೆಗಳಲ್ಲಿ ಸಹ ವಿರಳವಾಗಿ ಇಂತಹ ಪದ್ಯಗಳುಂಟು. ಇವುಗಳ

ಸ್ವರೂಪ ಒಂದೇ ತೆರನಾದುದಲ್ಲ. ಕೆಲವು ಪಾರಿಹಾರಿಕಿ, ಸಂಖ್ಯಾತ ಇತ್ಯಾದಿ ಪ್ರಹೇಳಿಕೆಗಳ ಗುಂಪಿಗೂ, ಇನ್ನು ಕೆಲವು ಬೆಡಗಿನ ವಚನಗಳ ರೀತಿಗೂ ಸೇರಿವೆ; ಸಾಮಾನ್ಯ ಒಗಟುಗಳ ರೀತಿಯ ಶಬ್ದಾರ್ಥಚಮತ್ಕಾರದವು ಸಹ ಇವೆ. ಇವನ್ನು ರಚಿಸುವುದರಲ್ಲಿ ಈ ಹರಿದಾಸರು ಪ್ರಹೇಳಿಕೆಗಳ ನಾನಾ ಪ್ರಕಾರಗಳ ಪೂರ್ವಸಂಪ್ರದಾಯವನ್ನು ಕೆಲಮಟ್ಟಿಗಾದರೂ ಬಿಡದೆ ಮುನ್ನಡಸಿರುವಂತೆ ತೋರುತ್ತದೆ. ಇವುಗಳಲ್ಲಿ ಕನಕದಾಸರ ಮುಂಡಿಗೆಗಳು ಸಂಖ್ಯಾಧಿಕ್ಯದಿಂದಾಗಿಯೂ ಕಾವ್ಯತ್ವ ಸಮರಸಗೊಂಡ ಚಮತ್ಕಾರವಿಶೇಷದಿಂದಾಗಿಯೂ ನಮ್ಮ ಗಮನ ಸೆಳೆಯುತ್ತವೆ.

ಇಂತಹ ಹಾಡುಗಳನ್ನು ರಚಿಸಲು ಕಾರಣವೇನು? ಈ ಬಗ್ಗೆ ಒಂದು ನಿರೂಪಣೆ ಈ ರೀತಿಯಾಗಿದೆ: (೧) ಕೆಲವು ಪಾಂಡಿತ್ಯಪ್ರದರ್ಶನಕ್ಕಾಗಿ ಇರಬೇಕು. (೨) ಇನ್ನೂ ಕೆಲವು ಪಾಂಡಿತ್ಯಪರೀಕ್ಷೆಗಾಗಿಯೂ ಇದ್ದಂತೆ ಕಾಣುತ್ತವೆ. (೩) ಮತ್ತೆ ಕೆಲವು ಬುದ್ಧಿಪೂರ್ವಕವಾಗಿ ಗುಹ್ಯಭಾಷೆಯಲ್ಲಿ ಹೇಳಿದಂತೆ ಅನಿಸುವುದು. (೪) ಕೆಲವೊಮ್ಮೆ ಜ್ಞಾನಿ ಜ್ಞಾನಿಗಳ ಅಂತರಿಕಭಾಷೆಯಾಗಿ ಹೊರಹೊಮ್ಮಿದ್ದನ್ನೂ ಕಾಣಬಹುದು. (೫) ಆತ್ಮಾನುಭವ ಹಾಗೂ ತತ್ತ್ವಜ್ಞಾನವನ್ನು ವಿವರಿಸಿದ್ದನ್ನು ನೋಡಬಹುದು. (೬) ಪಂಡಿತರನ್ನೂ ಪೌರಾಣಿಕರನ್ನೂ ಕೆಣಕಿದ ಕೆಲವು ಹಾಡುಗಳನ್ನೂ ಕಾಣಬಹುದು.''[3] ''ತಾತ್ವಿಕ ವಿಚಾರ, ವೈಯಕ್ತಿಕ ದರ್ಶನಗಳನ್ನು ಬೇರೆಬೇರೆ ಪ್ರತಿಮೆಗಳ ಮೂಲಕ ಆ ಹಾಡುಗಳಲ್ಲಿ ಹೇಳಲಾಗಿದೆ'' ಎಂಬುದಾಗಿಯೂ ಭಾವಿಸಲಾಗಿದೆ.[4]

ಬೆಡಗಿನ ವಚನಗಳಿಗೆ ಸಿಂಗಳದ ಸಿದ್ಧಬಸವರಾಜ ಮುಂತಾದವರ ಟೀಕುಗಳು ಇರುವ ಹಾಗೆ ಈ ಮುಂಡಿಗೆಯ ಹಾಡುಗಳಿಗೆ ಪೂರ್ವಸಂಪ್ರದಾಯಸಿದ್ಧವಾದ ಟೀಕುಗಳಾಗಲಿ ಟಿಪ್ಪಣಿಗಳಾಗಲಿ ನಮ್ಮ ಕಾಲದವರೆಗೆ ಬಂದಿಲ್ಲವೆಂದು ತೋರುತ್ತದೆ. ಈ ಕಾರಣದಿಂದಾಗಿ ಕೆಲವರು ಮಾಡಿರುವ ಅರ್ಥ ವಿವರಣೆಗಳು ಇನ್ನು ಕೆಲವರಿಗೆ ಹಿಡಿಸದೆ ಹೋಗಿವೆ.

ಪ್ರಹೇಳಿಕೆಯ ಸ್ವರೂಪ

'ಪ್ರಹೇಳಿಕೆ' ಎಂಬ ಮಾತಿಗೆ ಒಗಟುಮಾತು, ಗೂಢಾರ್ಥದ ಪದ್ಯ ಮುಂತಾಗಿ ಅರ್ಥಗಳಿರುವುದನ್ನು ನಿಘಂಟುಗಳಲ್ಲಿ ತೋರಿಸಿದೆ. ಗೌಣ ಅಥವಾ ಅಧಮ ಕಾವ್ಯಪ್ರಕಾರವಾದ ಚಿತ್ರಕಾವ್ಯದ ಒಂದು ಭಾಗ ಪ್ರಹೇಳಿಕೆ. ನಿಜವಾದ ಅರ್ಥವನ್ನು ಮುಚ್ಚಿಟ್ಟು, ಬೇರೊಂದು ಅರ್ಥವನ್ನು ಸೂಚಿಸುವುದು ಮುಖ್ಯಲಕ್ಷಣವಾಗಿರುವ ಈ ಪ್ರಕಾರದಲ್ಲಿ ಮುಚ್ಚಿಡುವ ಕಲೆಯೇ ಮಹತ್ತ್ವವನ್ನು ಪಡೆದಿರುತ್ತದೆ. ಒಳಹೊರಗಿನ ಅರ್ಥಗಳು ಇಲ್ಲಿ ಬೇರೆಬೇರೆ; ಹೊರಗಿನ ಅರ್ಥದ ಕೋಟೆಯನ್ನು ಕಲ್ಪನಾಶಕ್ತಿ ವ್ಯುತ್ಪತ್ತಿಗಳ ಬಲದಿಂದ ಭೇದಿಸಿ ಒಳಗಿನ ಅರ್ಥವನ್ನು ಕಂಡುಕೊಳ್ಳಬೇಕಾಗುತ್ತದೆ. ದಿಟ್ಟವೂ ಆಕರ್ಷಕವೂ ಆದ ರಚನೆ, ಕಲ್ಪನೆಯ ಸೊಗಸು, ಕೇಳುವವರನ್ನು ಬೆರಗುಪಡಿಸುವ ಗುಣ ಇವು ಈ ಪ್ರಕಾರದ ವಿಶೇಷಗುಣಗಳು.

ಈ ಶಬ್ದದ ರೂಪಭೇದಗಳು, ಅರ್ಥನಿಷ್ಪತ್ತಿಗಳು, ಲಕ್ಷಣ ಹಾಗೂ ಪ್ರಚುರತೆಯನ್ನು ಪರಿಚಯಮಾಡಿಕೊಳ್ಳಲು ಈಗ ಪ್ರಯತ್ನಿಸಬಹುದು. ಭಾರತೀಯ ನಿಘಂಟುಗಳು, ಆಧುನಿಕ ಕಾಲದ ಸಂಸ್ಕೃತ ಪ್ರಾಕೃತಾದಿ ಭಾಷಾಕೋಶಗಳು ಈ ಬಗೆಗೆ ಏನು ಹೇಳುತ್ತವೆ?

'ಅಮರಕೋಶ'ದ ವಾಗ್ವರ್ಗದಲ್ಲಿ ''ಪ್ರವಹ್ಲಿಕಾ ಪ್ರಹೇಲಿಕಾ'' ಎಂದಿದೆ (೧-೬-೧೪೦); ಹಲಾಯುಧನ 'ಅಭಿಧಾನರತ್ನಮಾಲಾ'ದಲ್ಲಿ ''ಪ್ರಹ್ವಲೀಕಾ ಪ್ರಹೇಲಿಕಾ'' ಎಂದು ಅದರ ಸ್ವರ್ಗಕಾಂಡದಲ್ಲಿ ಹೇಳಿದೆ (೧-೧೫೨). ಈ ಎರಡು ಆಕರಗಳಲ್ಲಿಯೇ ಪ್ರಹೇಳಿಕೆಗೆ ಪ್ರವಹ್ಲಿಕಾ, ಪ್ರಹ್ವಲೀಕಾ ಎಂಬ ಎರಡು ರೂಪಭೇದಗಳ ಪರ್ಯಾಯ ಶಬ್ದ ಗೋಚರಿಸುತ್ತಿದೆ. ನಿಘಂಟುಕಾರರು ಗುರುತಿಸಿರುವ ಇನ್ನೂ ಕೆಲವು ರೂಪಗಳಿವೆ. 'ಶಬ್ದಕಲ್ಪದ್ರುಮ'ದಲ್ಲಿ ''ತತ ಪರ್ಯಾಯಃ। ಪ್ರವಹ್ಲಿಕಾ ೨ । ಇತ್ಯಮರಃ । ೧-೬-೬॥ ಪ್ರವಹ್ಲಿಕಾ ೩ ಪ್ರವಹ್ಲೀಃ ೪ ಪ್ರವಹ್ಲೀ ೫ ಪ್ರಹೇಲಿಃ ೬। ಇತಿ ಭರತಃ॥ ಪ್ರಶ್ನದೂತೀ ೭ ಪ್ರವಹ್ಲೀಕಾ ೮। ಇತಿ ಶಬ್ದರತ್ನಾವಲೀ ॥'' ಎಂಬುದಾಗಿ ಉಲ್ಲೇಖವಿದೆ. ಇವುಗಳಲ್ಲಿ ಕೆಲವು ರೂಪಗಳನ್ನು ತಮ್ಮ ಇಂಗ್ಲಿಷ್-ಸಂಸ್ಕೃತ ನಿಘಂಟುವಿನ Riddle ಎಂಬ ಉಲ್ಲೇಖದ ಸಂದರ್ಭದಲ್ಲಿ ಮೋನಿಯರ್ ವಿಲಿಯಂಸ್ ತೋರಿಸಿದ್ದಾರೆ; ತಮ್ಮ ಸಂಸ್ಕೃತ–ಇಂಗ್ಲಿಷ್ ನಿಘಂಟುವಿನಲ್ಲಿ

'ಪ್ರಹ್ವಲೀಕಾ' ಎಂಬುದು 'ಪ್ರವಲ್ಹಿಕಾ' ಎಂಬುದರ ಅಶುದ್ಧ ರೂಪವೆಂದು ತಿಳಿಸಿರುವರಲ್ಲದೆ, 'ಪ್ರಹೇಲಿಕಾ'ವನ್ನೇ 'ಪ್ರಹೇಲಕ' ಎಂಬ ಮುಖ್ಯ ಉಲ್ಲೇಖದ ಕೆಳಗೆ ತೋರಿಸಿದ್ದಾರೆ. ಹಲಾಯುಧನ ಕೋಶವನ್ನು ಸಂಪಾದಿಸಿರುವ ಆಫ್ರೆಕ್ಟ್ 'ಪ್ರಹ್ವಲೀಕಾ' ಎಂಬುದು 'ಪ್ರಬಲ್ಹಿಕಾ'ದ ಅಶುದ್ಧರೂಪವೆಂದು ಸೂಚಿಸಿ, ಅದಕ್ಕೆ ಪರ್ಯಾಯರೂಪವಾಗಿ 'ಪ್ರಹೇಲಿಕಾ' ಎಂಬುದನ್ನೇ ತಮ್ಮ ಸಂಪಾದಿತ ಗ್ರಂಥದಲ್ಲಿ ತೋರಿಸಿದ್ದಾರೆ. ಕನ್ನಡ ಟೀಕೆಯ ಹಲಾಯುಧನ ಕೋಶದಲ್ಲಿ 'ಪ್ರಹ್ವಲೀಕಾ' ಎಂಬ ಪಾಠದ ಜೊತೆಗೆ 'ಪ್ರವಲ್ಲೀಕಾ' ಎಂಬ ಪಾಠಭೇದವೂ ಇದ್ದು ಈ ಗ್ರಂಥದ ಸಂಪಾದಕರು ಎರಡನೆಯ ಪಾಠವನ್ನೇ ಮುಖ್ಯಪಾಠವಾಗಿ ಅಂಗೀಕರಿಸಿದ್ದಾರೆ. / ಕಿಟ್ಟೆಲ್ ತಮ್ಮ ಕನ್ನಡ ನಿಘಂಟುವಿನಲ್ಲಿ ಮಂಗರಾಜನ 'ಅಭಿನವಾಭಿಧಾನ'ದ ಹಸ್ತಪ್ರತಿಗಳ ಆಧಾರದ ಮೇಲೆ ಅಲ್ಲಿ ದೊರೆಯುವಂತೆ ತೋರುವ ಪ್ರವಲ್ಲಿಕೆ, ಪ್ರವಹ್ಲಿಕೆ, ಪ್ರಹ್ವಲೀಕೆ ಎಂಬ ಪಾಠಾಂತರಗಳನ್ನೆಲ್ಲ ಪ್ರಹೇಲಿಕೆಯ ಹಾಗೆಯೇ ಮುಖ್ಯ ಉಲ್ಲೇಖಗಳನ್ನಾಗಿ ಮಾಡಿ ತೋರಿಸಿದ್ದಾರೆ. ಇವೆಲ್ಲ ಹೀಗಿದ್ದರೂ, ಶಬ್ದಕಲ್ಪದ್ರುಮ ವಾಚಸ್ಪತ್ಯಾದಿ ಭಾರತೀಯ ನಿಘಂಟುಕಾರರೂ ಮೆಕ್ಡೊನೆಲ್, ಟರ್ನರ್ ಮೊದಲಾದ ವಿದೇಶೀಯ ನಿಘಂಟುಕಾರರೂ 'ಪ್ರಹೇಲಿಕಾ' ಎಂಬುದನ್ನೇ ಮುಖ್ಯ ರೂಪವಾಗಿ ಅಂಗೀಕರಿಸಿದ್ದಾರೆ.

ಈ ಸಂಗತಿಗಳನ್ನು ಪರಿಶೀಲಿಸಿದಾಗ 'ಪ್ರಹೇಲಿಕಾ' ಪ್ರಮುಖ ಹಾಗೂ ಪ್ರಚಲಿತ ರೂಪವೆಂದೂ ನಾನಾ ವರ್ಣಪಲ್ಲಟಗಳಿಗೆ ಸಿಕ್ಕು ವ್ಯತ್ಯಸ್ತಗೊಂಡಿರುವ ಇದರ ಪರ್ಯಾಯರೂಪಗಳಲ್ಲಿ ಪ್ರವಹ್ಲಿಕಾ ಇಲ್ಲವೆ ಪ್ರವಲ್ಹಿಕಾ ಎಂಬುದು ಗ್ರಾಹ್ಯ ಹಾಗೂ ಗೌಣರೂಪವೆಂದೂ ಹೇಳಬೇಕಾಗುತ್ತದೆ. ಪ್ರವಹ್ಲಿಕಾ, ಪ್ರವಲ್ಹಿಕಾ ಎಂಬೆರಡು ರೂಪಗಳಲ್ಲಿ ಮೊದಲನೆಯದೇ ಶುದ್ಧರೂಪವಿದ್ದಿರಬಹುದಾದರೂ ವರ್ಣಪಲ್ಲಟದ ಪ್ರಕ್ರಿಯೆಯ ಪ್ರಭಾವದಿಂದಾಗಿ ಎರಡನ್ನೂ ಗ್ರಾಹ್ಯರೂಪಗಳಾಗಿ ಅಂಗೀಕರಿಸಬಹುದೆಂದು ತೋರುತ್ತದೆ.

ಪ್ರವಹ್ಲಿಕಾ, ಪ್ರಹೇಲಿಕಾ ಇವು ವಿಭಿನ್ನ ಧಾತುಗಳಿಂದ ಹುಟ್ಟಿರುವ, ಮೊದಲಲ್ಲಿ ವಿಭಿನ್ನ ಆಶಯಗಳಿಂದ ಕೂಡಿದ್ದ ಶಬ್ದಗಳಾಗಿವೆ; ಆದರೆ ಕಾಲಾಂತರದಲ್ಲಿ ಧ್ವನಿಸಾಮ್ಯದಿಂದಾಗಿ ಪ್ರತ್ಯೇಕ ಅರ್ಥಚ್ಛಾಯೆಗಳನ್ನು ಕಳೆದುಕೊಂಡು ಒಂದೇ ಆಶಯವನ್ನು ಕೊಡುವ ಒಂದೇ ಶಬ್ದದ ಪರ್ಯಾಯರೂಪಗಳಾಗಿ ವ್ಯವಹಾರಕ್ಕೆ ಬಂದಿರಬೇಕು– ಎಂದು ದುರ್ಗಾ ಭಾಗವತ್ ಅವರು ಊಹಿಸಿದ್ದಾರೆ. ಅವರ ಗ್ರಹಿಕೆಯಂತೆ ಪ್ರವಹ್ಲಿಕಾ ಎಂಬುದು ಪ್ರಹೇಲಿಕಾ ಎಂಬುದಕ್ಕಿಂತ ಪ್ರಾಚೀನವಾದ್ದು; ಮೊದಲನೆಯದು ಮಹಾಭಾರತ ಪೂರ್ವಕಾಲದಲ್ಲಿಯೇ ಗೋಚರಿಸುತ್ತದೆ, ಎರಡನೆಯದು ಅನಂತರದ ಕಾಲದಲ್ಲಿ ಸಾಹಿತ್ಯ ಮತ್ತು ಅಲಂಕಾರಶಾಸ್ತ್ರಗ್ರಂಥಗಳಲ್ಲಿ ಕಂಡುಬರುವಂಥದು. ಈ ಬೇರೆಬೇರೆ ಶಬ್ದಗಳು ಸಮಾನಾರ್ಥವನ್ನು ಕೊಡುವಂತಾದುದು ಹೇಗೆ ಎನ್ನುವುದನ್ನು ವಿವರಿಸಬೇಕಾದರೆ, ಇನ್ನೂ ವಿಚಾರ ಅಗತ್ಯವೆಂದು ಅವರ ಭಾವನೆ.

'ಪ್ರವಹ್ಲಿಕಾ', ಭರತನ ಪ್ರಕಾರ "ಪ್ರವಹ್ಲತೇ ಆಚ್ಛಾದಯತಿ" ಎಂಬುದಾಗಿ ವಿವರಿಸಬಹುದಾದ ಪ್ರವಹ್ಲ್ ಧಾತುವಿಗೆ ಸಂಬಂಧಿಸಿದ್ದು; 'ಪ್ರಹೇಲಿಕಾ' ಪ್ರಹೇಲ್ ಧಾತುವಿಗೆ ಸಂಬಂಧಿಸಿ "ಅಭಿಪ್ರಾಯಂ ಸೂಚಯತಿ" ಎಂಬುದಾಗಿ ವಿವರಿಸಬಹುದಾದ್ದು. ವಹ್ಲ್ ಎಂಬುದು ಪರಿಭಾಷಣ ಎಂಬರ್ಥವನ್ನು ಕೊಡುವಂತೆಯೇ ಛಾದನ ಎಂಬರ್ಥವನ್ನೂ ಕೊಡುವುದೆಂಬುದನ್ನು ಗಮನಿಸಿದರೆ ಈ ಪರ್ಯಾಯ ರೂಪಗಳ ನಡುವೆ ಸಾಮ್ಯ ವೇರ್ಪಡಲು ಇಂತಹ ಸಂಗತಿಯೂ ಕಾರಣವಾಗಿರಬಹುದೆಂದು ಊಹಿಸಲು ಅವಕಾಶವಾಗುತ್ತದೆ. ಇದಕ್ಕೆ ಪ್ರಾಧಾನ್ಯವೆಂಬರ್ಥವೂ ಇದ್ದು ಪ್ರವಹ್ಲಿಕಾ ವೈದಿಕಾಚರಣೆಯ ಗಂಭೀರವಾದ ಉದ್ದೇಶವುಳ್ಳದ್ದು, ದೇವತೋಪಾಸನೆ, ವಿರುದ್ಧಶಕ್ತಿಯನ್ನು ಬಗ್ಗಿಸುವುದು ಮುಂತಾದ ಸಂದರ್ಭಗಳಲ್ಲಿ ಪ್ರಯುಕ್ತವಾದ್ದು ಎಂದು ತಿಳಿಯಲು ಆಸ್ಪದವಾಗಿದೆ. ಪ್ರವಹ್ಲಿಕಾ ಆದಿತ್ಯರಿಗೆ ಸಂಬಂಧಿಸಿದ್ದು ಎಂದು ನಿರುಕ್ತ ತಿಳಿಸುತ್ತದೆ. ಐತರೇಯ ಮತ್ತು ಕೌಷೀತಕೀ ಬ್ರಾಹ್ಮಣಗಳಲ್ಲಿ 'ಐತಶ ಪ್ರಲಾಪ'ದ ಸಂಬಂಧದಲ್ಲಿ ಇದು ಬಂದಿರುವುದಾಗಿಯೂ, ಶಾಂಖಾಯನ ಶ್ರೌತಸೂತ್ರ (೧೨–೨೭–೭), ಆಶ್ವಲಾಯನ ಗೃಹ್ಯಸೂತ್ರಗಳಲ್ಲಿ (೧೦–೫) ಸಹ ಈ ಶಬ್ದವನ್ನು ಕಾಣಬಹುದೆಂದೂ, 'ಅತಿವಾದ' ಎಂದರೆ ಬೈಗುಳದ ಮಾತು–ಸಹಜವಾಗಿಯೇ ಅಶ್ಲೀಲವಿಷಯ ವರ್ಣನೆಯೂ ಸೇರಿರುತ್ತದೆ– ಇದರ ಒಂದು ಅಂಶವೆಂದೂ ದುರ್ಗಾ ಭಾಗವತ್ ಈ ಬಗ್ಗೆ ತಿಳಿಸಿದ್ದಾರೆ.[5]

'ಪ್ರಹೇಲಿಕಾ' ಹಿಲ್ ಧಾತುವಿನಿಂದ ಜನ್ಯವಾದ್ದೆಂಬ ಸೂಚನೆಯನ್ನು ಶಬ್ದಕಲ್ಪದ್ರುಮ, ಮೋನಿಯರ್ ವಿಲಿಯಂಸ್ ಅವರ ಕೋಶಗಳಲ್ಲಿ ನೀಡಿರುವುದುಂಟು. ಸ್ವೇಚ್ಛಾಪ್ರವರ್ತನೆ, ಪ್ರಣಯಾಸಕ್ತಿಯಿಂದ ಕ್ರೀಡಿಸು ಮುಂತಾಗಿ ಅರ್ಥಗಳಿವೆ. ಪ್ರಹೇಲಾ ಶಬ್ದಕ್ಕೆ, ಅದಕ್ಕೆ ಅನುಗುಣವಾಗಿಯೇ ಮೋ. ವಿಲಿಯಂಸ್, ಆಪ್ಟೆ, ಟರ್ನರ್ ಮೊದಲಾದವರು ಅರ್ಥಗಳನ್ನು ಹೇಳಿದ್ದಾರೆ. ಹೇಲಾ, ಪ್ರಹೇಲಾ ಶಬ್ದಗಳಿಗೆ ಹಿಲ್ ಧಾತು ಹೀಗೆ ಮೂಲವಾಗಿ ತೋರುತ್ತಿದ್ದರೂ, ''ಪ್ರಹಿಲತಿ ಅಭಿಪ್ರಾಯಂ ಸೂಚಯತೀತಿ'' ಎಂದು ಶಬ್ದಕಲ್ಪದ್ರುಮಾದಿಗಳಲ್ಲಿ ಸ್ವಲ್ಪ ಭಿನ್ನವಾಗಿಯೂ ನಿರ್ವಚನವಿರುವುದು ಕಾಣುತ್ತದೆ. ಇದು ಹೇಗಿದ್ದರೂ 'ಪ್ರಹೇಲಿಕಾ' ಕ್ರೀಡೆ, ವಿನೋದ ವಿಲಾಸಗಳ ಸಂಬಂಧವಾದ ಶಬ್ದವಾಗಿರುವುದಂತೂ ನಿಶ್ಚಯ; ಲಾಕ್ಷಣಿಕರ ಲಕ್ಷಣನಿರೂಪಣೆಯೂ ಅದನ್ನೇ ಪೋಷಿಸುತ್ತದೆ. ಪ್ರವಹ್ಲಿಕಾದ ಉದ್ದೇಶ ಪ್ರಯೋಜನಗಳ ಪ್ರತಿಯಾಗಿ, 'ಪ್ರಹೇಲಿಕಾ' ಸ್ವಭಾವತಃ ಲಘು ವಾದ್ದು, ಲೌಕಿಕ ಸ್ವರೂಪವುಳ್ಳದ್ದು, ಶಬ್ದಚಮತ್ಕಾರದಿಂದ ರೂಪತಳೆದದ್ದು, ವಿನೋದವಷ್ಟೇ ಪ್ರಯೋಜನ ವನ್ನಾಗಿ ಉಳ್ಳದ್ದು, ಹೊಕ್ಕುಬಳಕೆಯಲ್ಲಿ ವಿಧಿನಿಷೇಧಗಳೇನೂ ಇಲ್ಲದೆ ಜನಪ್ರಿಯತೆ ಗಳಿಸಿದ್ದು ಎಂದು ಹೇಳ ಬೇಕಾಗುತ್ತದೆ. ಅದು ಒಂದು ಬಗೆಯ ವಿಲಾಸಿಗಳ ಹಾಗೂ ವಿನೋದಪ್ರಿಯರ ನಡುವೆ ನಡೆಯುವ ಮಾತಿನ ಆಟ ಎನ್ನುವುದನ್ನು ಲಕ್ಷ್ಯಗಳು ಸುಲಭವಾಗಿ ಸಮರ್ಥಿಸುತ್ತವೆ. ವಾಚಸ್ಪತ್ಯಾದಿ ನಿಘಂಟುಕಾರರು ''ದುರ್ವಿ ಜ್ಞಾನಾರ್ಥ ಪ್ರಶ್ನಃ'', ''ಕೂಟಾರ್ಥಭಾಷಿತಾ ಕಥಾ'' ಎಂದು ಅದನ್ನು ಲಕ್ಷಣಿಸಿದರೂ ಅದರ ಉಗಮದ, ಪ್ರಯೋಜನದ ವಿಷಯದಲ್ಲಿ ಏಕಾಭಿಪ್ರಾಯವೇ ಇದೆ.

ಪ್ರಹೇಳಿಕೆಯನ್ನು ಹೋಲುವ ಸಮಾನಾರ್ಥಕ ಶಬ್ದಗಳು ಸಂಸ್ಕೃತೇತರ ಆರ್ಯಭಾಷೆಗಳಲ್ಲಿಯೂ ಕಂಡು ಬರುತ್ತಿದ್ದು, ಟರ್ನರ್ ಅವರ ಕೋಶದ ಪ್ರಕಾರ (ಉಲ್ಲೇಖಸಂಖ್ಯೆ ೮೯೧೧) ಸಂಸ್ಕೃತ 'ಪ್ರಹೇಲಿಕಾ 'ವಿಗೆ ಪ್ರಾಕೃತ ದಲ್ಲಿ 'ಪಹೇಲಿಯಾ' (poem with a hidden meaning), ಪಂಜಾಬಿಯಲ್ಲಿ ಪರ್ಹೇಲೀ, ಪಹೇಲೀ (riddle), ಒರಿಯದಲ್ಲಿ 'ಪಹಳೀ' (riddle, proverb), ಹಿಂದಿಯಲ್ಲಿ ಪಹೇಲೀ (riddle) ಎಂದು ರೂಪಗಳಿರುವುದು ತಿಳಿಯುತ್ತದೆ. ಬಂಗಾಳಿ ಮತ್ತು ಬಿಹಾರಿಯಲ್ಲಿ ಪಹೇಲೀ ಎಂದಿರುವುದನ್ನು ಇದರೊಂದಿಗೆ ಸೇರಿಸಿಕೊಳ್ಳ ಬಹುದು. 'ಗೂಢಾಶಯ ಪದ್ಯ' ಎಂಬರ್ಥದ 'ಪಹೇಲಿಯಾ' ಶಬ್ದವನ್ನು ಪ್ರಾಕೃತ ನಿಘಂಟುಗಳಾದ 'ಅಭಿಧಾನ ರಾಜೇಂದ್ರಕೋಶ' ಹಾಗೂ 'ಪಾಇಅ ಸದ್ದ ಮಹಣ್ಣವೋ'ಗಳ ಸಂಪಾದಕರು ತೋರಿಸಿರುವುದು ಮಾತ್ರವಲ್ಲದೆ ಆಕರ ಗಳ ಸೂಚನೆಯನ್ನೂ ನೀಡಿದ್ದಾರೆ. ಕೆಲವರು ಭಾರತೀಯ ನಿಘಂಟುಕಾರರು 'ಹೇಯಾಲಿ' ಭಾಷಾರೂಪವೆಂದು ತೋರಿಸಿದ್ದಾರೆ; ಆ ರೂಪ ಎಲ್ಲಿಯದೋ ತಿಳಿಯದು. 'ಸ್ವಯಂಭೂಚ್ಛಂದ'ದಲ್ಲಿ ಅಪಭ್ರಂಶಭಾಷೆಯ ಛಂದಸ್ಸು ಗಳನ್ನು ಕುರಿತ ಸಂದರ್ಭದಲ್ಲಿ ಪಹೇಲೀ (<ಪ್ರಹೇಲಿಕಾ) ಮತ್ತು ಹಿಆಲಿಆ (<ಹೃದಯಾಲಿಕಾ) ಎಂಬ ಎರಡು ಒಗಟಿನಂತಹ ರಚನೆಗಳ ಬಗ್ಗೆ ತಿಳಿಸಿದ್ದು, ಈತನನ್ನೇ ಅನುಸರಿಸುವ ರಾಜಶೇಖರನೂ ತನ್ನ 'ಛಂದಃಶೇಖರ'ದಲ್ಲಿ ಪ್ರಹೇಲಿಕಾ, ಹೃದಯಾಲಿಕಾಗಳ ಬಗ್ಗೆ ಕುರಿತಿದ್ದಾನೆ.

ಕನ್ನಡದಲ್ಲಿ ಪ್ರಹೇಳಿಕೆಯನ್ನು 'ಕವಿರಾಜಮಾರ್ಗ'ದಲ್ಲಿ 'ಹೇಳಿಕೆ'ಯೆಂದೂ (೨-೧೪೩) 'ಕಾವ್ಯಾವ ಲೋಕನ'ದಲ್ಲಿ 'ಪೇಳಿಕೆ'ಯೆಂದೂ ಕರೆದಿದೆ. 'ಹೇಳಿಕೆ' 'ಪ್ರಹೇಳಿಕೆ'ಯೆಂಬುದರ ಸಂಕ್ಷಿಪ್ತರೂಪವೋ, ತದ್ಭವವೋ? ಸಂಕ್ಷಿಪ್ತರೂಪವೇ ಇರಬಹುದು. 'ಪೇಳಿಕೆ' ಎಂಬ ಈಚಿನ ಗ್ರಂಥರೂಪ, ಬಹುಶಃ 'ಹೇಳಿಕೆ'ಯೆಂಬುದರ ಪಶ್ಚಗಾಮೀ ರಚನೆ (Back formation)ಯಿದ್ದರೂ ಇದ್ದೀತು. ಕಿಟ್ಟೆಲ್ ಕೋಶದಲ್ಲಿ ದೇಶ್ಯಪದವಾಗಿ ತೋರಿಸಿರುವ 'ಪೇೞಿಕೆ' ರೂಪ ಭ್ರಾಂತಿಮೂಲವಾದ ರೂಪವೆಂಬುದರಲ್ಲಿ ಸಂದೇಹವಿಲ್ಲ.

ಮೋ. ವಿಲಿಯಂಸ್ ಅವರ ಪ್ರಕಾರ ಪ್ರಹೇಲಕಜ್ಞಾನ ಒಗಟುಗಳನ್ನು ಒಡ್ಡುವ ಕಲೆ ಅಥವಾ ವಿಜ್ಞಾನ. ಅವರು ಪ್ರಶ್ನದೂತೀ, ಕೂಟಪ್ರಶ್ನ, ದುಷ್ಟಕೂಟ, ಗೂಢಪ್ರಶ್ನ, ಗೂಢ, ಗೂಢವಾಕ್ಯ, ಶ್ಲೇಷ, ಶ್ಲೇಷೋಕ್ತಿ ಇವನ್ನೆಲ್ಲ ಏಕಾಭಿಪ್ರಾಯದ ಶಬ್ದಗಳನ್ನಾಗಿ ಗ್ರಹಿಸಿ, ಅದರಲ್ಲಿ ಸರ್ವತೋಭದ್ರ, ವರ್ಧಮಾನ, ಅಂತರ್ಲಾಪಿಕಾ, ಬಹಿರ್ಲಾಪಿಕಾ, ಶೋಧನೀ, ಬೃಹಚ್ಚಾಲಿನೀ, ಮಹಾಚಾಲಿನೀ ಇತ್ಯಾದಿ ವಿವಿಧಪ್ರಕಾರಗಳನ್ನು ಹೆಸರಿಸಿದ್ದಾರೆ. ಶಬ್ದಕಲ್ಪದ್ರುಮ, ವಾಚಸ್ಪತ್ಯ ಮೊದಲಾದ ನಿಘಂಟುಗಳ ರಚಕರು ಧರ್ಮದಾಸಸೂರಿಯ 'ವಿದಗ್ಧಮುಖಮಂಡನ'ದ

ಆಧಾರದ ಮೇಲೆ ಪ್ರಹೇಲಿಕಾದಲ್ಲಿ ಆರ್ಥೀ ಮತ್ತು ಶಾಬ್ದೀ ಎಂಬ ಎರಡು ಪ್ರಭೇದಗಳನ್ನು ವಿಂಗಡಿಸಿ, ಒಂದೊಂದು ಲಕ್ಷ್ಯವನ್ನು ಉದ್ಧರಿಸಿದ್ದಾರೆ. ಬ್ರಹ್ಮೋದ್ಯ, ಪ್ರಶ್ನ ಅಥವಾ ಪ್ರಶ್ನೋತ್ತರ, ಕೂಟ, ಪ್ರವಹ್ಲಿಕಾ, ವಿವಾದ, ಸಮಸ್ಯಾ, ಗೂಢ ಮತ್ತು ಹೃದಯಾಲಿಕಾ ಇವನ್ನು ಪ್ರಹೇಳಿಕೆಯ ಏಕಾಭಿಪ್ರಾಯದ ಪದಗಳಾಗಿ ದುರ್ಗಾ ಭಾಗವತ್ ಅವರು ಈಚೆಗೆ ಒಗ್ಗೂಡಿಸಿದ್ದಾರೆ.[6]

ಪ್ರಹೇಳಿಕೆಯ ಸ್ಥಾನ ಪ್ರಯೋಜನಗಳ ವಿಷಯದಲ್ಲಿ ಪ್ರಾಚೀನರ ಅಭಿಪ್ರಾಯವೇನೆಂಬುದನ್ನು ಈಗ ಸ್ವಲ್ಪ ಗಮನಿಸಬಹುದು.

ಪ್ರಹೇಳಿಕೆಯ ವಿಷಯದಲ್ಲಿ ಪ್ರಾಚೀನ ಲಾಕ್ಷಣಿಕರಿಗೆ ಒಳ್ಳೆಯ ಅಭಿಪ್ರಾಯವಿದ್ದಿತೆಂದು ಹೇಳಲಾಗದು. ಭಾಮಹನು ಶಬ್ದಾಲಂಕಾರಗಳಲ್ಲಿ ಯಮಕವನ್ನು ಲಕ್ಷಣಿಸಿಯಾದ ಮೇಲೆ, ಪ್ರಾಸಂಗಿಕವಾಗಿ ಪ್ರಹೇಳಿಕೆಯನ್ನು ಕುರಿತು ಹೀಗೆಂದಿದ್ದಾನೆ (೨-೧೯, ೨೦) :

> ನಾನಾಧಾತ್ವರ್ಥಗಂಭೀರಾ । ಯಮಕವ್ಯಪದೇಶಿನೀ ।
> ಪ್ರಹೇಲಿಕಾ ಸಾ ಹ್ಯುದಿತಾ । ರಾಮಶರ್ಮಾಚ್ಯುತೋತ್ತರೇ ॥
>
> ಕಾವ್ಯಾನ್ಯಪಿ ಯದೀಮಾನಿ । ವ್ಯಾಖ್ಯಾಗಮ್ಯಾನಿ ಶಾಸ್ತ್ರವತ್ ।
> ಉತ್ಸವಃ ಸುಧಿಯಾಮೇವ । ಹನ್ತ ದುರ್ಮೇಧಸೋ ಹತಾಃ ॥

"ಹಲವಾರು ಧಾತುಗಳ ಅನೇಕಾರ್ಥದಿಂದ ತುಂಬಿ ತುಳುಕುವ ಲಕ್ಷ್ಯವು ಯಮಕದ ಆಭಾಸ ಮಾತ್ರ. ನಿಜವಾಗಿ ನೋಡಿದರೆ ಅದು ಒಗಟೆಯೇ ಸರಿ. ರಾಮಶರ್ಮನ 'ಅಚ್ಯುತೋತ್ತರ'ವೆಂಬ ಕಾವ್ಯದಲ್ಲಿ ಇಂತಹ ಒಗಟುಗಳನ್ನು ನೋಡಬಹುದು" (೧೯). "ಶಾಸ್ತ್ರವೇನೋ ವ್ಯಾಖ್ಯಾನವಿಲ್ಲದೆ ಅರ್ಥವಾಗುವುದಿಲ್ಲ. ಈ ಕಾವ್ಯಗಳೂ ಶಾಸ್ತ್ರದಂತೆಯೇ ವ್ಯಾಖ್ಯಾನವಿಲ್ಲದೆ ತಿಳಿಯದೆ ಹೋಗುವುದಾದರೆ ಪಂಡಿತರಿಗೆ ಮಾತ್ರ ಆನಂದವಾಗಬಹುದು. ಆದರೆ ಅಲ್ಪಮತಿಗಳೆಲ್ಲರೂ ಹತರಾದಂತೆಯೇ."[7]

ರಾಮಶರ್ಮನು ಪ್ರಹೇಳಿಕೆಗಳನ್ನು ತನ್ನ ಕಾವ್ಯದಲ್ಲಿ ಹೇಗೆ ತಂದಿದ್ದನೋ, ಯಾವ ಪ್ರಮಾಣದಲ್ಲಿ ತಂದಿದ್ದನೋ ತಿಳಿಯಲು ಈಗ ಅವನ ಗ್ರಂಥ ಉಪಲಬ್ಧವಿಲ್ಲ. 'ಕಾವ್ಯಾದರ್ಶ'ದ ವ್ಯಾಖ್ಯಾನಕಾರನಾದ ರತ್ನಶ್ರೀಜ್ಞಾನನು ಇವನನ್ನು ಕಾವ್ಯಾಲಂಕಾರದಲ್ಲಿ ಪೂರ್ವಸೂರಿಯೆಂದು ಉಲ್ಲೇಖಿಸಿದ್ದಾನೆ (೨-೭೮ ವ್ಯಾಖ್ಯಾನ). "ಭಾಮಹನು 'ಅಚ್ಯುತೋತ್ತರ'ವೇ ಮುಂತಾದ ಕಾವ್ಯಗಳ ಯಮಕಗಳನ್ನು ನಿಂದಿಸಲು ಈ ಶ್ಲೋಕವನ್ನು ಬರೆದಿರುವುದು ಸುಸ್ಪಷ್ಟ" ಎಂದಿರುವ ಕೆ. ಕೃಷ್ಣಮೂರ್ತಿಗಳು "ಒಗಟೆಯಂತಹ ರಚನೆ ಕಾವ್ಯದಲ್ಲಿ ಅತಿಯಾಗ ಬಾರದು; ಕಾವ್ಯವು ಎಲ್ಲರಿಗೂ ತಿಳಿಯುವಂತೆ ಸುಲಭವಾಗಿರಬೇಕು" ಎಂಬುದು ಭಾಮಹನ ಅಭಿಪ್ರಾಯವೆಂದು ಭಾವಿಸಿದ್ದಾರೆ.[8]

ಸದೃಶಪದ್ಯವೊಂದು 'ಭಟ್ಟಿಕಾವ್ಯ'ದಲ್ಲಿ ಹೀಗಿದೆ :

> ವ್ಯಾಖ್ಯಾಗಮ್ಯಮಿದಂ ಕಾವ್ಯಂ । ಉತ್ಸವಃ ಸುಧಿಯಾಮಲಮ್ ॥
> ಹತಾ ದುರ್ಮೇಧಸಶ್ಚಾಸ್ಮಿನ್ । ವಿದ್ವತ್ಪ್ರಿಯತಯಾ ಮಯಾ ॥ (೨೨-೩೪)

"ವ್ಯಾಖ್ಯಾನದ ಮೂಲಕ ತಿಳಿಯಬೇಕಾದ ಈ ಕಾವ್ಯದಲ್ಲಿ ಪರ್ಯಾಪ್ತವಾದ ಉಲ್ಲಾಸ ಪಂಡಿತರಿಗೇ ಸರಿ; ಇದರಲ್ಲಿ ನನ್ನ ವಿದ್ವತ್ಪ್ರಿಯತೆಯಿಂದ ಜಡಮತಿಗಳು ಹತರಾದರು."

ಈ ಉಲ್ಲೇಖವನ್ನು ಲಕ್ಷಿಸಿ, ತೀ. ನಂ. ಶ್ರೀಕಂಠಯ್ಯನವರು, "ಇದನ್ನು ಉದ್ದೇಶಿಸಿಯೇ ಇರಬಹುದು, ಭಾಮಹನು ಈ ಮಾತುಗಳನ್ನೇ ತಿರುಗಿಸಿಕೊಂಡು, 'ಅಚ್ಯುತೋತ್ತರ'ವೆಂಬ ಕಾವ್ಯದ ಪ್ರಹೇಳಿಕೆಗಳನ್ನು ಕುರಿತು ಮಾತಾಡುವ ನೆವದಲ್ಲಿ 'ಈ ಕಾವ್ಯಗಳನ್ನು ಕೂಡ ಶಾಸ್ತ್ರದಂತೆ, ವ್ಯಾಖ್ಯಾನದ ಮೂಲಕವೇ ತಿಳಿಯಬೇಕಾದಲ್ಲಿ, ಪಂಡಿತರಿಗೆ ಮಾತ್ರ ಉಲ್ಲಾಸ; ಪಾಪ, ಜಡಮತಿಗಳು ಹತರಾದರು' ಎಂದು ಹೇಳಿ, ಶಾಸ್ತ್ರಕ್ಕೂ ಕಾವ್ಯಕ್ಕೂ ಇರಬೇಕಾದ ವ್ಯತ್ಯಾಸವನ್ನು ಸೂಚಿಸಿದ್ದಾನೆ" ಎಂಬುದಾಗಿ ಹೇಳಿದ್ದಾರೆ. ಭಟ್ಟಿ ಭಾಮಹರ ಕಾಲದ ಪೌರ್ವಾಪರ್ಯ ಸಮಸ್ಯೆ ಇನ್ನೂ ಬಗೆಹರಿದಿಲ್ಲವೆಂಬುದಾಗಿ ತಿಳಿಸಿ, ಕೆ. ಕೃಷ್ಣಮೂರ್ತಿಗಳು, ಭಾಮಹನಾದ ಮೇಲೆ ಭಟ್ಟಿ

ಬರೆದಿದ್ದ ಪಕ್ಷದಲ್ಲಿ ''ಪಂಡಿತರು ಮಾತ್ರ ಮೆಚ್ಚುವಂತಹುದೇ ಉತ್ತಮಕಾವ್ಯವೆಂದು ತನ್ನ ಕೃತಿಯಿಂದ ತೋರಿಸಿ, ಹೀಗೆ ಭಾಮಹನ ಅಭಿಪ್ರಾಯವನ್ನು ಅವನ ಮಾತುಗಳನ್ನೇ ಉಪಯೋಗಿಸಿಕೊಂಡು ಅಣಕವಾಡಿರಬಹುದು'' ಎಂದು ಗ್ರಹಿಸಿದ್ದಾರೆ.

ದಂಡಿ ಮತ್ತು ಆತನನ್ನು ಇಲ್ಲಿ ಯಥಾವತ್ತಾಗಿ ಅನುವಾದಿಸಿರುವ ಭೋಜದೇವ ಇವರು, ಪ್ರಹೇಳಿಕೆಗಳಿಗೂ ಪ್ರಸಂಗವಶದಿಂದ ಉಪಯೋಗವುಂಟೆಂದು ಸಮರ್ಥಿಸಿದ್ದಾರೆ. ಅವರು ಹೇಳುವುದು ಹೀಗೆ (೩-೯೭; ೫-೧೩೪).

ಕ್ರೀಡಾಗೋಷ್ಠೀ ವಿನೋದೇಷು । ತಜ್ಞೈರಾಕೀರ್ಣಮಂತ್ರಣೇ ।
ಪರವ್ಯಾಮೋಹನೇ ಚಾಪಿ । ಸೋಪಯೋಗಾ ಪ್ರಹೇಲಿಕಾ ॥

''ಕ್ರೀಡೆ ಮನೋರಂಜನೆಗಳಲ್ಲಿ, ವಿದ್ವಾಂಸರ ಪರಸ್ಪರ ಸಂಭಾಷಣೆಗಳಲ್ಲಿ, ಚತುರ ಪ್ರತ್ಯುಕ್ತಿಗಳಲ್ಲಿ, ಮುಖ್ಯ ವಿಷಯಗಳನ್ನು ಚರ್ಚಿಸುವ ತಜ್ಞರ ದೊಡ್ಡ ಸಮೂಹಗಳಲ್ಲಿ, ಇನ್ನೊಬ್ಬರನ್ನು ಬೆರಗುಪಡಿಸುವ ಸಂದರ್ಭಗಳಲ್ಲಿ ಪ್ರಹೇಳಿಕೆಗಳನ್ನು ಬಳಸಲಾಗುತ್ತದೆ.'' ಇಲ್ಲಿ ಜನಸಮ್ಮರ್ದದ ಸ್ಥಳಗಳಲ್ಲಿ ಅದೊಂದು ರೀತಿಯ ಸಂಕೇತ ಭಾಷೆಯಲ್ಲಿ ಯಾವುದೋ ಗುಟ್ಟು ಮಾತಾಡುವುದು 'ಆಕೀರ್ಣಮಂತ್ರ'ವೆಂದೂ, ವಸ್ತುಸ್ಥಿತಿಯಿಂದ ಬೇರೆಯಾದ ಏನನ್ನಾದರೂ ಹೇಳಿ ನಂಬಿಸಿ ವ್ಯಕ್ತಿಯನ್ನು ದಾರಿ ತಪ್ಪುವಂತೆ ಮಾಡುವುದು 'ಪರಕಾ(ವ್ಯಾ)ಮೋಹನ'ವೆಂದೂ ಕಲಾನಾಥ ಝಾ ಭಾವಿಸಿದ್ದಾರೆ.[9]

'ವಿಷ್ಣುಧರ್ಮೋತ್ತರ ಪುರಾಣ'ದ ತೃತೀಯ ಖಂಡದಲ್ಲಿ 'ಪ್ರಹೇಳಿಕಾಲಕ್ಷಣ'ವೆಂಬ ಪ್ರತ್ಯೇಕವಾದ ಒಂದು ಅಧ್ಯಾಯವೇ ಇದ್ದು (೧೬), ಇದರಲ್ಲಿ ಪ್ರಹೇಳಿಕೆಯ ಸ್ವರೂಪವನ್ನು ವಿವರಿಸಿದೆ. ''ಕಾವ್ಯದಲ್ಲಿ ಯಾವ ಕೆಲವು ದೋಷಗಳು ಈವರೆಗೆ ಹೇಳಲ್ಪಟ್ಟಿವೆಯೋ ಅವುಗಳಲ್ಲಿ ಕೆಲವು ದೋಷಗಳು ಪ್ರಹೇಳಿಕಾ ಎಂಬುದರ ರೂಪವನ್ನು ಹೊಂದುತ್ತವೆ ಮತ್ತೆ ಕೆಲವು ಬೇರೆಬೇರೆ ಚಿತ್ರಕಾವ್ಯವಾಗುತ್ತವೆ.... ಇವು ಒಂದೊಂದೇ ಶ್ಲೋಕದಿಂದಾಗಲಿ ಅಥವಾ ಎರಡೆರಡು ಶ್ಲೋಕಗಳಿಂದಾಗಲಿ ರಚಿಸಲ್ಪಡಬೇಕು. ಅನೇಕ ಶ್ಲೋಕಗಳಿಂದ ಅಂತಹ ರಚನೆಗಳನ್ನು ಮಾಡಬಾರದು'' (೩-೧೬-೧,೨). ಇಲ್ಲಿ ಪ್ರಹೇಳಿಕೆಗಳ ಒಂದು ಲಕ್ಷಣ, ಪ್ರಮಾಣ ಮತ್ತು ಅಡಕಗುಣ ನಿರ್ದೇಶಿತವಾಗಿವೆ. ಈ ಪುರಾಣದ ಅಧ್ಯಾಯಾಂತ್ಯದಲ್ಲಿ, ಈ ಪ್ರಹೇಳಿಕೆಗಳಲ್ಲಿ ಸಹ ಲಜ್ಜೆ, ಜುಗುಪ್ಸೆ, ಅಮಂಗಲ ಸೂಚಕವಾದ ಪದಗಳು ವರ್ಜ್ಯಗಳೆಂದೂ ಅಂತಹವನ್ನು ಹೊಂದಿರುವ ರಚನೆಗಳು ಸತ್ಪುರುಷರಿಗೆ ಉದ್ವೇಗಕ್ಕೆ ಕಾರಣವೇ ಹೊರತು ಸುಖಪ್ರದವಲ್ಲವಾದ್ದರಿಂದ ಅವನ್ನು ಬಳಸಬಾರದೆಂದೂ ಸ್ಪಷ್ಟವಾದ ಮಾತುಗಳಲ್ಲಿ ಹೇಳಿದೆ (೩-೧೬-೧೫). ಇದು ಪರೋಕ್ಷವಾಗಿ ಪ್ರಹೇಳಿಕೆಗಳಲ್ಲಿ ಯಾವುದಾದರೂ ಒಂದು ಬಗೆ, ಕೀಳು ಅಭಿರುಚಿಯನ್ನು ಪೋಷಿಸುವಂತೆ ಇದ್ದಿರಬೇಕು ಎಂದು ಸೂಚಿಸುತ್ತದೆ.

ಈಚೆಗೆ, ಧರ್ಮದಾಸನೆಂಬ ಬೌದ್ಧಕವಿ ರಚಿಸಿದ 'ವಿದಗ್ಧಮುಖ ಮಂಡನ'ದಲ್ಲಿ (೧೩ನೆಯ ಶ.) ಪ್ರಹೇಳಿಕೆಗಳೇ ಕೃತಿವಿಷಯವಾಗಿದ್ದು, ಇಲ್ಲಿ ಪ್ರಹೇಳಿಕೆಯ ಸಾಮಾನ್ಯ ಲಕ್ಷಣವನ್ನು ಲಕ್ಷ್ಯಪೂರ್ವಕವಾಗಿ ಕುರಿತಿದೆ.

ವ್ಯಕ್ತೀಕೃತ್ಯ ಕಮಪ್ಯರ್ಥಂ । ಸ್ವರೂಪಾರ್ಥಸ್ಯ ಗೋಪನಾತ್ ।
ಯತ್ರ ಬಾಹ್ಯಾಂತರಾವರ್ಥೌ । ಕಥ್ಯತೇ ಸಾ ಪ್ರಹೇಲಿಕಾ ॥

ಸಾ ದ್ವಿಧಾರ್ಥೀ ಚ ಶಾಬ್ದೀ ಚ । ವಿಖ್ಯಾತಾ ಪ್ರಶ್ನಶಾಸನೇ ।
ಆರ್ಥೀ ಸ್ಯಾದರ್ಥವಿಜ್ಞಾನಾತ್ । ಶಾಬ್ದೀ ಶಬ್ದಸ್ಯ ಭಂಗತಃ ॥

ಕನ್ನಡ ಪ್ರಹೇಳಿಕೆ : ಒಗಂಟು (=ಒಗಟು)

ಸುಲಭವಾಗಿ ತಿಳಿಯಲು ಅಥವಾ ನೇರವಾಗಿ ಅರ್ಥಮಾಡಲು ಸಾಧ್ಯವಾಗದ ಮಾತು, ವಾಕ್ಯ ಅಥವಾ ಪದ್ಯ ಎಂಬ ಅರ್ಥದಲ್ಲಿ, ಗೂಢವಾದ ಮಾತುಗಳಲ್ಲಿ ಯಾವುದೋ ಒಂದು ಆಶಯವನ್ನು ಹುದುಗಿಸಿಟ್ಟ ಉಕ್ತಿ ಅಥವಾ ರಚನೆ ಎಂಬ ಅರ್ಥದಲ್ಲಿ ಸಂಸ್ಕೃತದಲ್ಲಿ ಪ್ರಚುರವಾಗಿರುವ 'ಪ್ರಹೇಳಿಕೆ' ಎಂಬ ಉಕ್ತಿಪ್ರಕಾರದ

ಪರ್ಯಾಯ ಶಬ್ದವಾಗಿ ಕನ್ನಡದಲ್ಲಿ 'ಒಗಟು' ಎಂಬುದನ್ನು ಬಳಸುವುದು ರೂಢಿಯಾಗಿದೆ. ಈ ಶಬ್ದ ನಮ್ಮ ಪ್ರಾಚೀನ ಸಾಹಿತ್ಯದಲ್ಲಿ 'ಒಗಂಟು' ಎಂಬುದಾಗಿಯೂ ಒಗಟು, ಓಗಟಿ, ವಾಗಟಿ, ಒಗಟಿ ಎಂದು ಮುಂತಾಗಿಯೂ ಕಂಡುಬರುತ್ತದೆ. ದಕ್ಷಿಣ ಕರ್ನಾಟಕದಲ್ಲಿ ಒಗಟು ಎಂದು ಪರಿಚಿತವಾದ ಮಾತು ಉತ್ತರ ಕರ್ನಾಟಕದಲ್ಲಿ ಒಡಪು, ವಡಬು ಎಂಬ ರೂಪಗಳಲ್ಲಿ ಪ್ರಚಲಿತವಿರುವುದು ಗೋಚರಿಸುತ್ತದೆ. ಒಗಟು, ಒಗಟಿ ಇತ್ಯಾದಿ ರೂಪಗಳು ಒಗಟಾಗು, ಒಗಟಿಯಾಗು, ಒಗಟು ಹಾಕು ಮುಂತಾದ ಕ್ರಿಯಾರೂಪಗಳಲ್ಲಿ ಹೊಸಗನ್ನಡ ಕವಿತೆ ಕಥೆ ಕಾದಂಬರಿಗಳಲ್ಲಿ ಪ್ರಯೋಗದಲ್ಲಿವೆ.

ಒಗಂಟು (>ಒಗಟು) ಶಬ್ದದ ನಿಷ್ಪತ್ತಿ ವಿವಾದಗ್ರಸ್ತವಾದುದು. ಅದರ ವಿವೇಚನೆ ಇಲ್ಲಿಗೆ ಪ್ರಸ್ತುತವಲ್ಲ.

ಸಂಸ್ಕೃತದ 'ಪ್ರಹೇಳಿಕೆ' ಮತ್ತು ಕನ್ನಡದ 'ಒಗಟು' ಅಭಿನ್ನವಾದವು ಎನ್ನುವುದನ್ನು 'ಅಭಿಧಾನ ವಸ್ತುಕೋಶ'ದ ''ಒಗಂಟಿ ತಾಂ ಪ್ರಹೇಳಿಕೆ'' (೮೧-೩೬) ಎಂಬ, 'ಹಲಾಯುಧ ನಿಘಂಟು'ವಿನ ''ಪ್ರವ(ಲ್ಹೀ)ಲ್ಹೀಕಾ ಪ್ರಹೇಳಿಕಾ-ಈ ೨ ಒಗಂಟಿ'' (೨೫-೧೫೧) ಎಂಬ, ಮಂಗರಾಜನ (೧೩೯೮) 'ಅಭಿನವಾಭಿಧಾನ'ದ "ಒಗಟಿಯದು ಪ್ರಹೇಳಿಕೆ ಪ್ರವಲ್ಹಿಕೆಯುಂ'' (೨೭-೭) ಎಂಬ ಸೂಚನೆಗಳಿಂದ ತಿಳಿಯಬಹುದಾಗಿದೆ. ಕುಮಾರ ಪದ್ಮರಸನ (೧೨೧೫) 'ಸಾನಂದಚರಿತೆ'ಯ ''ನೆರೆದ ವಿಶ್ವದ ಒಳಗೆ ಹೊಱಗೆ ನಾರಣನೆಂದ ಮಱೆನುಡಿಯ ವೇದದೊಗಟಿಯರ್ಥವಂ ಅಱಿದದಱ ಹೃದಯಮಂ ತೆಱೆದು'' (೨-೧೬೩) ಎಂಬ ಒಂದು ಉಲ್ಲೇಖದಲ್ಲಿ ಒಗಟಿಯು 'ಮಱೆನುಡಿ' ಎಂದರೆ ಗೂಢವಾದ ಮಾತು ಎಂಬ ಸೂಚನೆಯಿದೆ. ಅದೃಶ್ಯಕವಿಯ 'ಪ್ರೌಢರಾಯನ ಕಾವ್ಯ'ದಲ್ಲಿ (ಸು. ೧೫೮೦) ''ಭ್ರಾಂತಿಯಲಿ ಪೇಳ್ದೊಗಟು ಪದ್ಯವೆನಲು'' (೧-೪೮) ಎಂದಿರುವುದು, ಅರ್ಥೈಸುವಲ್ಲಿ ಒಗಟಿನ ಹೊರರೂಪ ಭ್ರಾಂತಿಯನ್ನುಂಟುಮಾಡುವಂತೆ ಇರುತ್ತದೆ ಎಂಬ ಅಭಿಪ್ರಾಯ ಕೊಡುತ್ತದೆ. ''ಹರುಷದಿ ಒಗಟ ತಿಳಿವರಿಗೆ ಬೆಲ್ಲದಚ್ಚು। ಗುರು ಕಲ್ಲಿಲಿಂಗನ ಕಥೆಯು'' (೧-೪೫) ಎಂಬ ಬಸವನ 'ಕಲ್ಲಿಲಿಂಗೇಶ್ವರ ಚಾರಿತ್ರ'ದ ಮಾತು ಒಗಟು ಭೇದಿಸಿದರೆ ಮನಸ್ಸಿಗೆ ಹಿತವಾಗುವುದನ್ನು ಹೇಳುತ್ತದೆ.

ಈಗ ತಿಳಿದಿರುವ ಮಟ್ಟಿಗೆ 'ಒಗಂಟು' ಶಬ್ದದ ಪ್ರಾಚೀನತಮ ಪ್ರಯೋಗವಿರುವುದು, ನಾಗವರ್ಮನ (೧೦೪೨) 'ಕಾವ್ಯಾವಲೋಕನ'ದಲ್ಲಿ. ಆ ಪ್ರಯೋಗವಿದು :

ಕಾಱಿರೆಮಾಗೆ ಕಾವ್ಯರಸಮರ್ಥಮುಮಕ್ಕರಮುಂ ಪ್ರತೀತಿಯಂ
ಮಾಱಿನೆಗಂ ಜಲಕ್ಕನಿರೆ ಪೇೞದೆ ಕೆಮ್ಮನೊಗಂಟುವೇೞ್ದು ಚೀ
ನೋೞ್ಪುದೆ ಮುಯ್ವನಾ ಕೃತಿಗೆ ಪಂಚಿಕೆವೇೞ್ಪುದದರ್ಕೆ ಟಿಪ್ಪಣಂ
ಬೇೞ್ಪುದು ಟೀಕುವೇೞ್ಪುದೆನೆ ಪೇೞ್ದವನುಂ ಕವಿಯೆಂಬ ಲೆಕ್ಕಮೋ ॥ (ಪ. ೨೯೯)

ಇದೊಂದು ಅಜ್ಞಾತಕವಿ ಕರ್ತೃಕವಾದ ಪದ್ಯ. ಇದನ್ನು 'ಸೂಕ್ತಿಸುಧಾರ್ಣವ' (ಸು. ೧೨೪೫)ದಲ್ಲಿಯೂ ಉದ್ಧರಿಸಿದೆ (೧-೬೭). ''ಮಾತು ಹಾಗೂ ಅರ್ಥಗಳು ಸುಲಭವಾಗಿ ತಿಳಿಯುವಂತೆ, ರಸ ತೊರೆಯಾಗಿ ಹರಿಯುವಂತೆ, ಸ್ವಾಭಾವಿಕವಾಗಿ ಕಾವ್ಯವನ್ನು ಹೇಳಬೇಕು; ಹಾಗಲ್ಲದೆ ಸುಮ್ಮನೆ ಒಗಟಾಗಿ ಹೇಳಿ, ತಾನೇನೋ ಅತಿಶಯವಾದ್ದನ್ನು ಸಾಧಿಸಿದೆನೆಂದೂ ಹೆಮ್ಮೆಪಡಬಹುದೇ? ಕೃತಿಗೆ ಪಂಚಿಕೆ, ಟಿಪ್ಪಣಿ, ಟೀಕು ಎಂಬ ಸಲಕರಣೆಗಳೆಲ್ಲ ಬೇಕು ಎನ್ನುವಂತೆ ಕಾವ್ಯ ರಚಿಸಿದವನನ್ನು ಕವಿ ಎಂಬುದಾಗಿ ಪರಿಗಣಿಸಲು ಸಾಧ್ಯವೇ?'' ಇದು ಮೇಲಿನ ಪದ್ಯದ ಆಶಯ. ಪ್ರಚ್ಛನ್ನವಾಗಿದ್ದು ಪ್ರಕಾಶಕ್ಕೆ ಬರಲು ಬುದ್ಧಿಬಲದ ಅಗತ್ಯವನ್ನು ಕೋರುವಂತೆ ಇರುವ ಯಾವುದಾದರೊಂದು ರಚನೆ ಒಗಟಿನ ಹಾಗೆ, ಅಲ್ಲಿ ಅರ್ಥಪ್ರತೀತಿ ಕೂಡಲೇ ಹೃದಯಂಗಮವಾಗುವಂತಿರದೆ, ಸುತ್ತುಬಳಸಿನ ದಾರಿಯನ್ನು ಹಿಡಿದು ಆಗುತ್ತದೆ ಎಂಬುದನ್ನಿಲ್ಲಿ ಗಮನಿಸಬಹುದು. ಪಾರ್ಶ್ವಪಂಡಿತನು (೧೨೨೨) ತನ್ನ 'ಪಾರ್ಶ್ವನಾಥ ಪುರಾಣ'ದಲ್ಲಿಯೂ ಇದೇ ಆಶಯವನ್ನು ವ್ಯಕ್ತಮಾಡಿದ್ದಾನೆ :

ಮಸೃಣಂ ಪ್ರಸನ್ನತರಮಾ । ಗಸಕಟಿಮಂತೆಡೆಯೊಳಿರ್ದು ಮಿಲ್ಲದವೋಲ್ ತೋ ।
ಱಿಸುವಂತಿರರ್ಥಮಂ ಪ್ರಕ । ಟಿಸಿ ಪೇೞದೊಗಂಟುವೇೞ್ವ ಕವಿಯುಂ ಕವಿಯೇ ॥ (೧-೭೫)

"ಕಾವ್ಯದಲ್ಲಿ ಅರ್ಥಪ್ರತೀತಿ ಹೃದಯಂಗಮವಾಗಿರಬೇಕು. ಒಗಟಾಗಿ ಹೇಳುವ ಕವಿಯೂ ಒಬ್ಬ ಕವಿಯೇ'' ಎಂಬುದಾಗಿ ಪಾರ್ಶ್ವ ಪ್ರಶ್ನಿಸಿದ್ದಾನೆ. ''ಲಲಿತವೂ ಪ್ರಸನ್ನತರವೂ ಆಗಿ ತುಂಬಿಕೊಂಡಿರುವಂತೆ ವ್ಯಕ್ತಾವ್ಯಕ್ತವಾಗಿ ತೋರುವಂತೆ ಅರ್ಥದ ಪ್ರತೀತಿಯನ್ನು ಉಂಟುಮಾಡದೆ ಒಗಟಾಗಿ ಕಾವ್ಯವನ್ನು ಹೇಳುವ ಕವಿಯೂ ಒಬ್ಬ ಕವಿಯೇ?'' ಎಂಬ ಆತನ ಪ್ರಶ್ನೆಯಲ್ಲಿಯೂ ಹಿಂದಿನ ಅಜ್ಞಾತಕವಿಯ ಪ್ರಶ್ನೆಯಲ್ಲಿರುವಂತೆಯೇ ಒಗಟಿನ ಬಗ್ಗೆ ಆಕ್ಷೇಪಕರ ಧೋರಣೆಯೇ ಇದೆ. ಸಹಜಕವಿತ್ವದ ದೃಷ್ಟಿಯಿಂದ ಇದು ಸರಿ.

ರಾಜವಂಶದ ಕುಲೀನಸ್ತ್ರೀಯರು ಗರ್ಭವತಿಯರಾದರೆ, ಅವರ ಮನಸ್ಸಂತೋಷಕ್ಕೆ, ಬೇಸರದ ಪರಿಹಾರಕ್ಕೆ, ಅವರೊಂದಿಗೆ ಒಗಟು ಬಿಡಿಸುವ ವಿನೋದದಲ್ಲಿ ಪರಿಚರ್ಯೆಯವರು ತೊಡಗುತ್ತಿದ್ದಂತೆ ತೋರುವುದು.

ಜಿನಸೇನರ (ಸು. ೮೫೦) 'ಮಹಾಪುರಾಣ'ದಲ್ಲಿ ದೇವತಾಸ್ತ್ರೀಯರು ಜನಜನನಿಯಾಗಲಿದ್ದ ಮರು ದೇವಿಯ ಪರಿಚರ್ಯೆಯ ಸಂದರ್ಭದಲ್ಲಿ, ಅವಳ ಮನಸ್ಸನ್ನು ಹೀಗೆ ರಂಜಿಸಿದರೆಂಬ ನಿರೂಪಣೆ ಬಂದಿದೆ :

ಅಂತರ್ವತ್ನೀಮಥಾಭ್ಯರ್ಣೇ ನವಮೇ ಮಾಸಿ ಸಾದರಂ ।
ವಿಶಿಷ್ಟ ಕಾವ್ಯಗೋಷ್ಠೀಭಿರ್ದೇವ್ಯಸ್ತಾಮಿತ್ಯರಂಜಯನ್ ॥
ನಿಗೂಢಾರ್ಥಕ್ರಿಯಾಪಾದ್ಯೈರ್ಬಿಂದುಮಾತ್ರಾಕ್ಷರಚ್ಯುತೈಃ ।
ದೇವ್ಯಸ್ತಾಂ ರಂಜಯಾಮಾಸುಃ ಶ್ಲೋಕೈರನ್ಯೈಶ್ಚ ಕೈಶ್ಚನ ॥ (೧೨-೨೧೮, ೨೧೯)

ಕನ್ನಡ ಕವಿಗಳೆದುರು ಈ ಮಾದರಿಯಿದ್ದುದರಿಂದ, ಪೊನ್ನಕವಿ 'ಶಾಂತಿಪುರಾಣ'ದಲ್ಲಿ (೯—೧೯೨ವ.)

''ಮತ್ತಮಾಹಾರೋತ್ತರಾನ್ನಪಾನಕಾಧಿಷ್ಠಿತ ಮನಃಪ್ರಸಾದಪ್ರದವಿನೋದದರ್ಶನ ಪ್ರಸ್ತಾವಘಟನಾವರ ಪ್ರಾಪ್ತವೈದಗ್ಧ್ಯ ಜನಸಂಭಾಷಣಗೋಷ್ಠೀನಿರ್ದೇಶಚತುರ ವಚನೋಪಪನ್ನಗರ್ಭಾಧ್ಯಾತ ಪರಿಜ್ಞಾನೋದ್ರೇಕನುಮರೀಸ್ಖಲಕರತಂತ್ರನ್ಯಮಾನಸಂ ತಾಂತರ ಪ್ರಹೇಳಿಕಾ ಸಮಸ್ಯಾಸಮಾಸೋದಿತ ಕಾಲದೊಳ್...''

ದೇವಿ ಐರಾಮಹಾದೇವಿಯನ್ನು ದೇವತಾಸ್ತ್ರೀಯರು ರಂಜಿಸಿದರೆಂದಿದ್ದಾನೆ.

ನಾಗವರ್ಮಕವಿಯು 'ವರ್ಧಮಾನ ಪುರಾಣ'ದಲ್ಲಿ (೧೦೪೨) ಜಿನಜನನಿ ಪ್ರಿಯಕಾರಿಣೀ ದೇವಿಯನ್ನು ದೇವತಾಸ್ತ್ರೀಯರು ಸೇವಿಸಿದರೆಂದು ತಿಳಿಸುವಾಗ,

ಕಥೆ ಕ[ಬ್ಬಂ]ಗಳ ಗೀತ । ಸ್ಮೃತಿ ನೃತ್ಯ ನೆತ್ತಮೊಗಟು ಪರಿವಾದಿನಿ[ಎಂ] ।
ದಿತಮೆಂಬನೇಕಭೇದ । ಪ್ರತರ ವಿನೋದದೊಳೆ ಸತಿಗೆ ಪೊತ್ತಂ ಕಳಿವರ್ ॥ (೧೧—೫೧)

ಎಂಬುದಾಗಿ ಹೇಳಿದೆ. ''ದೇವವನಿತೆಯರು ಕಥೆ, ಕಾವ್ಯಗಳು, ಗೀತ, ನೆನಪುಗಳು, ನೃತ್ಯ, ನೆತ್ತ, ಒಗಟು, ಏಳು ತಂತಿಗಳ ವೀಣೆ ನುಡಿಸುವುದು ಎಂಬಂತಹ ಅನೇಕ ತೆರನಾದ ವಿನೋದಗಳಿಂದ ಜಿನಜನನಿಗೆ ಹೊತ್ತು ಹೋಗುವಂತೆ ಮಾಡಿದರು'' ಎಂಬುದು ಪದ್ಯದ ಆಶಯ.

ಹೀಗೆಯೇ ಬಾಹುಬಲಿಯ (೧೩೫೨) 'ಧರ್ಮನಾಥ ಪುರಾಣ'ದಲ್ಲಿ ಸಹ, ಜಿನಜನನಿ ಸುವ್ರತಾ ದೇವಿಯ ಪರಿಚರ್ಯೆಯನ್ನು ತಿಳಿಸುವಾಗ ''ಸುರಕುಮಾರಿಯರೊಡನೆ ಪ್ರಹೇಳಿಕಾ ವಿನೋದದಿಂ ಪೊತ್ತಂ ಕಳಿಪುತ್ತುಂ'' (೬—೯೬ವ.) ಆಕೆ ಇರುತ್ತಿದ್ದಳೆಂದು ಹೇಳಿದೆ. ಜಿನಜನನಿಯಲ್ಲದ ಗರ್ಭವತಿ ವಿಜಯಾವತೀದೇವಿಯ ಗರ್ಭದ ಬಳವಿಯನ್ನು ಬಣ್ಣಿಸುವಾಗ 'ಕುಸುಮಾವಳೀ' ಕಾವ್ಯದ ಕರ್ತೃ (ಸು. ೧೨೦೦) ''ರಸವತ್ ಕಾವ್ಯಕಥಾ ಪ್ರಹೇಳಿಕೆಗಳಂ ಪೇಳುತ್ತುಂ'' ಸಖಿಯರು ಆಕೆಯನ್ನು ರಂಜಿಸಿದರೆಂಬುದಾಗಿ (೫—೧೯) ತಿಳಿಸಿದ್ದಾನೆ.

ಕಾಲಕ್ಷೇಪಕ್ಕೆ ಒಗಟುಗಳನ್ನೊಡ್ಡುವುದು, ಬಿಡಿಸುವುದು ಒಂದು ಹಳೆಯ ಕಾಲದ ವಿನೋದವಾಗಿತ್ತು ಎನ್ನುವುದನ್ನು ಇದರಿಂದ ತಿಳಿಯಬಹುದಾಗಿದೆ. ಆದರೆ ಪೊನ್ನ ಕವಿಯಲ್ಲಿ ಕಂಡುಬರುವಂತೆ, ಇತರ ಕವಿಗಳಲ್ಲಿ ಅಂತಹ ಒಗಟುಗಳ ಮಾದರಿಗಳನ್ನು ನಾವು ಕಾಣಲಾರೆವು. ಅವರ ಹೇಳಿಕೆಗಳು ಔಪಚಾರಿಕವಾಗಿದ್ದು, ನಿದರ್ಶನಗಳು ಇಲ್ಲದಿರುವುದರಿಂದ ಅಷ್ಟರ ಮಟ್ಟಿಗೆ ಹಳೆಯ ಕಾಲದ ಒಗಟುಗಳನ್ನು ನಾವು ಕಳೆದುಕೊಂಡಂತಾಗಿದೆ.

ಒಗಟು 'ಓಗಟೆ' ಎಂಬ ರೂಪದಲ್ಲಿ ಕೆಲವು ಕಾವ್ಯಗಳಲ್ಲಿ ಬಳಕೆಯಾಗಿದೆ; ಗೂಢವಾದ ಮಾತು ಮತ್ತು ಅದರ ಅರ್ಥ ಎಂಬುದೇ ಇಲ್ಲಿಯ ಉಲ್ಲೇಖಗಳ ಇಂಗಿತ ಕೂಡ.

'ಅಭಿನವ ದಶಕುಮಾರಚರಿತೆ'ಯಲ್ಲಿಯ ಉಲ್ಲೇಖ ಈ ರೀತಿಯಾಗಿದೆ:

ಪರಹೃದಯಪ್ರವೀಣತೆಯನೋಗಟೆಯರ್ಥಮನೂರ್ಧ್ವಬುದ್ಧಿಯ
ಚ್ಚರಿಯನನನ್ಯಯಾರ್ಥಘಟನಾವಿಧಿಯಂ ಸತತಂ ಲಸತ್ಕಳಾ
ಪರಿಣತಿಯಂ ಸಮಸ್ತಜನವೈಶಿಕಮಂ ವಿಧಿಯೊಂದುಗೂಡಿದಂ
ಧರಣಿಯೊಳೆಂಬಿನಂ ಮೆಱೆವಳಾ ಮುದುಗುಂಟಣಿಯುರ್ವರಾಧಿಪಾ ‖ (೮–೨೨)

ಮುದುಕಿಯಾದ ಕುಂಟಣಿಯೊಬ್ಬಳ ಚಾತುರ್ಯವನ್ನು ವಿವರಿಸುವಾಗ ಬ್ರಹ್ಮನು ಪರೇಂಗಿತಜ್ಞತೆ, ಒಗಟಿನ ಅರ್ಥ ಮೊದಲಾದವನ್ನು ಒಗ್ಗೂಡಿಸಿ ಆಕೆಯನ್ನು ನಿರ್ಮಿಸಿರಬೇಕು ಎನ್ನುವಂತೆ ಆಕೆಯಿದ್ದಳೆಂಬುದು ಕವಿಯ ಬಣ್ಣನೆ. ಒಗಟಿನ ಅರ್ಥ ತಿಳಿಯಲು ಕಷ್ಟಸಾಧ್ಯ ಎನ್ನುವುದು ಇಲ್ಲಿ ಸೂಚಿತವಾಗಿದೆ.

'ಕುಮಾರವ್ಯಾಸ ಭಾರತ'ದಲ್ಲಿ (ಸು. ೧೪೦೦). ಕರ್ಣಪರ್ವದ ಭಾಗದಲ್ಲಿ, ಕರ್ಣಾರ್ಜುನರ ಯುದ್ಧದ ಸಮಯದಲ್ಲಿ ವಿಧಿವಿಲಾಸದಿಂದಾಗಿ ಕರ್ಣನ ತೇರು ಭೂಮಿಯಲ್ಲಿ ಹೂತುಹೋಗಿ ಎತ್ತಲು ಬಾರದ ಸ್ಥಿತಿಯೊದಗಿದ ಒಂದು ವಿಕಟಸನ್ನಿವೇಶದ ವರ್ಣನೆಯಿದೆ. ಆ ಸಂದರ್ಭದಲ್ಲಿ ಕರ್ಣನ ಮಾತು ಇದು:

ಮೂಗಿನಲಿ ಬೆರಳಿಟ್ಟು ಮುಕುಟವ। ತೂಗಿ ತೊನೆದನು ಪೂತು ಮಝು ನಿ।
ರ್ಭಾಗಧೇಯನು ರಾಯನಕಟಾ ಶಿವ ಮಹಾದೇವ।
ಈಗಳಿದು ತಾನೇನು ವಿಧಿ ಬರೆ। ದೋಗಟೆಯೊ ಕುರುವಂಶವಜ್ರದ।
ಬೇಗಡೆಯೊ ಮಾಮಾ ಎನುತ ಮಱುಗಿದನು ಕಲಿಕರ್ಣ ‖ (೨೬–೧೪)

ಹೋರಾಟ ತನಗೆ ಅನುಕೂಲವಾಗಿರುವ ವೇಳೆಯಲ್ಲಿ ಕರ್ಣನ ರಥದ ಗಾಲಿಗಳು ನೆಲದಲ್ಲಿ ಹೂತುಹೋದುದು ಕಂಡಾಗ ಕರ್ಣನಿಗೆ ಆ ಸಂದರ್ಭ ವಿಧಿ ಬರೆದ ಒಗಟಿನಂತೆ ತೋರಿ, ಅವನಿಗೆ ಮಿಗಿಲಾಗಿ ಆಶ್ಚರ್ಯವಾಯಿತಂತೆ.

ಈಚೆಗೆ 'ದಿವ್ಯಸೂರಿಚರಿತೆ'ಯಲ್ಲಿ ನಮ್ಮಾಳ್ವಾರರ ಹಾಗೂ ಮಧುರಕವಿಯಾಳ್ವಾರರ ವಿಚಾರವನ್ನು ನಿರೂಪಿಸುವಾಗ ಒಂದೆಡೆ

ನೋಡಿದ ಮೇಲವರ್ಮತಿಸಮೀಕ್ಷಿಸುತೋಗಟೆಯಾದ ಮಾತನೊಂ
ದಾಡಲದರ್ಕಿವರ್ಮಿಗೆ ಸದುತ್ತರಮಾಗಿ ನಿರೂಪಮೀಯಲೋ
ಲಾಡಿ ಮುದಬ್ಧಿಯೊಳ್ ನುಡಿಯುಮುಂಟೆನುತಿಂತಿವರಂಘ್ರಿಸೇವೆಯಂ
ಮಾಡಿ ಪ್ರಸನ್ನರಪ್ಪವೊಲೊಡರ್ಚುವೆನಾಮೆನುತಾತ್ಮಬುದ್ಧಿಯಿಂ ‖ (೪–೧೯)

ಮಧುರಕವಿಯಾಳ್ವಾರರು ಪರೀಕ್ಷಾರ್ಥವಾಗಿ ನಮ್ಮಾಳ್ವಾರರಿಗೆ ಓಗಟೆಯಾದ ಮಾತೊಂದನ್ನು ಆಡಿದರೆಂದೂ ಅದಕ್ಕೆ ಅವರು ಸರಿಯಾದ ಉತ್ತರವನ್ನು ಕೊಟ್ಟರೆಂದೂ ನಿರೂಪಿಸಿದೆ. ಒಬ್ಬರ ಮಹಿಮೆಯ ಪರೀಕ್ಷೆಗೆ ಒಗಟು ಸಹ ಪರೀಕ್ಷಾನಿಕಷವಾಗಿದ್ದಿತೆಂದು ತಿಳಿಯುವಂತೆ ಈ ಸಂದರ್ಭವಿದೆ.

ಪ್ರಹೇಳಿಕೆಯ ಲಕ್ಷಣ, ಪ್ರಭೇದಗಳು

ಶಬ್ದಮೂಲವಾದ ಚಮತ್ಕಾರ ತೋರುವ ರಚನೆ ಶಬ್ದಚಿತ್ರವೆಂದೂ ಅರ್ಥಮೂಲವಾದ ಚಮತ್ಕಾರ ತೋರುವ ರಚನೆ ಅರ್ಥಚಿತ್ರವೆಂದೂ ಶಬ್ದಾರ್ಥಗಳೆರಡರ ಚಮತ್ಕಾರ ತೋರುವವು ಉಭಯಚಿತ್ರಗಳೆಂದೂ ಹೇಳಲ್ಪಡುತ್ತವೆ. ಈ ಉಭಯಚಿತ್ರಗಳೆಂಬವು ಪ್ರಹೇಳಿಕೆ (ಒಗಟು), ಕೂಟ (ಗೂಢರೀತಿಯ ಕಾವ್ಯ ಚಮತ್ಕಾರ) ಎಂಬಂತಹ ರಚನೆಗಳ ಮೂಲಕ ಪರಿಚಿತವಾದವು. ಅಲಂಕಾರಶಾಸ್ತ್ರಜ್ಞರಲ್ಲಿ ಬಹಳ ಮಂದಿ ಈ ಬಗೆಯ ಚಿತ್ರಗಳನ್ನು ಮನ್ನಿಸಿಲ್ಲ; ಧ್ವನ್ಯಾಲೋಕಕಾರನೂ ಇದನ್ನು ಕೈಬಿಟ್ಟಿದ್ದಾನೆ. ಇದು ಶಬ್ದ ಮತ್ತು ಅರ್ಥಾಲಂಕಾರಗಳ ಸಂಯುಕ್ತ ಹಾಗೂ ಅವಿಭಾಜ್ಯ ರೀತಿ ಎಂಬುದರಿಂದಾಗಿ, ಹೇಳದಿದ್ದರೂ ಇರಬಹುದು. ಹೀಗೆ ಉಭಯಾಲಂಕಾರಗಳೂ ಕಂಡುಬರುವ ರಚನೆಗಳಲ್ಲಿ ಕೂಟಗಳು ಹೆಚ್ಚು ಗಮನಾರ್ಹವಾದವು. ಇವುಗಳಲ್ಲಿ

ಪ್ರಹೇಳಿಕೆಗಳ ಕೆಲವು ಬಗೆಗಳು, ಪ್ರಶ್ನಗಳು, ಅಕ್ಷರಗಳನ್ನು ಅಡಗಿಸಿಡುವುದು, ಸ್ಥಾನಗಳಲ್ಲಿ ಕೂರಿಸುವುದು, ಚ್ಯುತ ಮಾಡುವುದು ಮುಂತಾದ ಶಾಬ್ದಿಕ ಚಮತ್ಕಾರಗಳು ಸೇರುತ್ತವೆ. ಕೇವಲ ಅರ್ಥಾಲಂಕಾರದಿಂದ ಕೂಟ ಹುಟ್ಟುವುದು ವಿರಳ; ನಿರ್ದಿಷ್ಟವಾದೊಂದು ಶಬ್ದಾಲಂಕಾರ ಇಲ್ಲವೆ ಉಭಯಾಲಂಕಾರಗಳ ಸಹಾಯದಿಂದಲೋ ಆ ಮೂಲಕವಾಗಿಯೋ ಅದು ರೂಪ ತಳೆಯುವುದು ಸಾಮಾನ್ಯ. ಕುವಲಯಾನಂದಕಾರನು ನಿರೂಪಿಸುವ ಸೂಕ್ಷ್ಮ, ಪಿಹಿತ, ಗೂಢೋಕ್ತಿ, ವ್ಯಾಜೋಕ್ತಿ, ವಿವೃತೋಕ್ತಿ, ಛೇಕೋಕ್ತಿ, ವಕ್ರೋಕ್ತಿ ಮೊದಲಾದುವುಗಳಲ್ಲಿ ಒಂದು ಬಗೆಯ ಶಬ್ದಾರ್ಥಚಮತ್ಕಾರವಿದ್ದರೂ ಇವನ್ನು ಕೂಟಗಳಲ್ಲಿ ಗಣಿಸುವುದಿಲ್ಲ. ಕೂಟಗಳು ಯಮಕ ಮೂಲವಾದವು, ಅಕ್ಷರಮೂಲವಾದವು, ಶಬ್ದಗಳ ನಾನಾರ್ಥಗಳನ್ನು ಅವಲಂಬಿಸಿದವು, ಸಂಧಿ ಹಾಗೂ ಸಮಾಸ ಶಬ್ದಗಳನ್ನು ಕೂಡಿಸುವುದು ಅನ್ವಯಿಸುವುದು ಮೊದಲಾದವನ್ನು ಆಶ್ರಯಿಸಿದವು ಎಂಬಂತಹ ರೀತಿಯಲ್ಲಿರುತ್ತವೆ. ಇವಕ್ಕೆ 'ಸುಭಾಷಿತರತ್ನಭಾಂಡಾಗಾರ' ಮುಂತಾದ ಆಕರಗಳನ್ನು ನೋಡಿ ತಿಳಿಯಬಹುದಾಗಿದೆ.

ಉಭಯಚಿತ್ರಗಳಲ್ಲಿ ಕೆಲವು ಸಾಮಾನ್ಯವಾದ, ಅಷ್ಟು ಗಣ್ಯವೇನೂ ಅಲ್ಲದ ಚಮತ್ಕಾರಕವಿತ್ವಗಳುಂಟು. ಪ್ರತಿಮಾಲಾ, ದುರ್ವಾಚಕಯೋಗ, ಮ್ಲೇಚ್ಛಿತವಿಕಲ್ಪ, ಸಂಪಾಠ್ಯ, ಮಾನಸೀ, ಕಾವ್ಯಕ್ರಿಯಾ, ಕ್ರಿಯಾಕಲ್ಪ, ಆಕೀರ್ಣಮಂತ್ರ ಮತ್ತು ಪರವ್ಯಾಮೋಹನ ಇತ್ಯಾದಿಯಾದವು ಇವು. ಇವನ್ನು ವಾತ್ಸ್ಯಾಯನ ಕಾಮಸೂತ್ರದಲ್ಲಿ ಹೇಳಿದೆ. 'ಜಯಮಂಗಲಾ' ವ್ಯಾಖ್ಯೆಯಲ್ಲಿ ವಿವರಣೆಯಿದೆ. ಇವುಗಳ ಸ್ವರೂಪವನ್ನು ಮುಂದೆ ಗಮನಿಸಬಹುದಾಗಿದೆ.

'ಕಾವ್ಯಾದರ್ಶ' ಮತ್ತು 'ವಿಷ್ಣುಧರ್ಮೋತ್ತರ ಪುರಾಣ'

ದಂಡಿ (ಕ್ರಿ.ಶ. ೭ನೆಯ ಶ.) ತನ್ನ 'ಕಾವ್ಯಾದರ್ಶ'ದ ತೃತೀಯ ಪರಿಚ್ಛೇದದಲ್ಲಿ ಪ್ರಹೇಳಿಕೆಗಳನ್ನು ಲಕ್ಷಣ–ಲಕ್ಷ್ಯ ಸಹಿತವಾಗಿ ಪ್ರತ್ಯೇಕವಾಗಿ ಕುರಿತಿದ್ದಾನೆ. ಉಕ್ತಪರಿಚ್ಛೇದದಲ್ಲಿ ಈ ಪ್ರಸ್ತಾವ ಸೂತ್ರ ೯೬ ರಿಂದ ೧೦೭ರ ನಡುವೆ ಹಾಗೂ ಲಕ್ಷ್ಯಪದ್ಯಗಳು ೧೦೭ ರಿಂದ ೧೨೪ರ ನಡುವೆ ಬಂದಿದ್ದು, ಬೇರೆಬೇರೆ ವ್ಯಾಖ್ಯಾನಕಾರರು ಇವನ್ನು ಯಥೋಚಿತವಿಸ್ತಾರದಲ್ಲಿ ವಿವರಿಸಿದ್ದಾರೆ. ಪ್ರಸ್ತುತ, ಉಪಲಬ್ಧ ವಾಖ್ಯಾನಗಳಲ್ಲಿ ಪ್ರಾಚೀನತಮವೂ ಅಧಿಕ ವಿಸ್ತೃತವೂ ಆದ, ಸಿಂಹಳದ ಬೌದ್ಧಲೇಖಕ ರತ್ನಶ್ರೀಜ್ಞಾನನ 'ರತ್ನಶ್ರೀ' ವ್ಯಾಖ್ಯಾನವನ್ನು (೯೩೧) ಅನುಸರಿಸಿ, ದಂಡಿ ನಿರೂಪಿಸಿರುವ ಪ್ರಹೇಳಿಕೆಗಳ ಸ್ವರೂಪವನ್ನು ಪರಿಚಯಿಸಲು ಇಲ್ಲಿ ಪ್ರಯತ್ನಿಸಿದೆ. ಈ ಪ್ರಯತ್ನದಲ್ಲಿ ಸಂಬಂಧಪಟ್ಟ ಸೂತ್ರಭಾಗವನ್ನು ಮೊದಲು ಉದ್ಧರಿಸಿ, ಅದರ ಲಕ್ಷ್ಯವನ್ನು ಅನಂತರದಲ್ಲಿ ಉದಾಹರಿಸಿ, ಆಯಾ ಪ್ರಹೇಳಿಕೆಯ ಆಶಯವನ್ನು ವ್ಯಾಖ್ಯಾನದ ನೆರವಿನಿಂದ ವಿಶದಪಡಿಸುವ ಕ್ರಮವನ್ನು ಅನುಸರಿಸಿದೆ.

ದಂಡಿ ಪ್ರಹೇಳಿಕೆಗಳನ್ನು ಸತ್ಪ್ರಹೇಳಿಕೆಗಳು, ದುಷ್ಪ್ರಹೇಳಿಕೆಗಳು ಎಂದು ಎರಡು ಗುಂಪುಗಳನ್ನಾಗಿ ಮಾಡಿ, ಇವುಗಳ ಸಂಖ್ಯೆಯನ್ನು ಕ್ರಮವಾಗಿ ೧೬ ಮತ್ತು ೧೪ ಎಂಬುದಾಗಿ ತಿಳಿಸಿದ್ದಾನೆ. ಅವನು ಹೇಳುವ ೧೬ ಸತ್ಪ್ರಹೇಳಿಕೆಗಳು ಹೀಗಿವೆ: ಸಮಾಗತಾ, ವಂಚಿತಾ, ವ್ಯುತ್ಕ್ರಾಂತಾ, ಪ್ರಮುಷಿತಾ, ಸಮಾನರೂಪಾ, ಪರುಷಾ, ಸಂಖ್ಯಾತ, ಪ್ರಕಲ್ಪಿತಾ, ನಾಮಾಂತರಿತಾ, ನಿಭೃತಾ, ಸಮಾನಶಬ್ದಾ, ಸಮ್ಮೂಢ, ಪಾರಿಹಾರಿಕಿ(ಯೋಗಮಾಲಾ), ಏಕಚ್ಛನ್ನಾ, ಉಭಯಚ್ಛನ್ನಾ ಮತ್ತು ಸಂಕೀರ್ಣ (೩:೯೮–೧೦೬). 'ವಿಷ್ಣುಧರ್ಮೋತ್ತರ ಪುರಾಣ'ದಲ್ಲಿ ಸಮಾಗತಾ, ವಂದಿತಾ, ದುಃಖಿತಾ, ಪರಿಹಾಸಿಕ, ಪರುಷಾ, ಸಂಖ್ಯಾತಾ,ಕಲ್ಪಿತಾ, ನಾಮಾಂತರಿತಾ, ನಿಭೃತಾ, ಸಮಾನಶಬ್ದಾ, ವ್ಯಾಮೂಢಾ, ಗುಚ್ಛಾ, ಸಂಕೀರ್ಣ, ವ್ಯಭಿಚಾರಿಣೀ, ವೃತ್ತಬಂಧನಿದರ್ಶಿತಾ, ನಷ್ಟಾಕ್ಷರಾ, ವರ್ಣಭ್ರಷ್ಟಾ, ಲೇಶಾ ಎಂಬ ೧೮ ಬಗೆಯ ಪ್ರಹೇಳಿಕೆಗಳನ್ನು ಲಕ್ಷಣಿಸಿದೆ; ಲಕ್ಷ್ಯಗಳನ್ನು ಒದಗಿಸಿಲ್ಲ(೩–೧೬:೩–೧೪)[10].

ಸಮಾಗತಾ

ಆಹುಃ ಸಮಾಗತಾಂ ನಾಮ ಗೂಢಾರ್ಥಾಂ ಪದಸಂಧಿನಾ ॥ (೯೮)

ಸ ಮಯಾಗೋರಸಾಭಿಜ್ಞಂ ಚೇತಃ ಕಸ್ಮಾತ್ಪ್ರಕುಪ್ಯಸಿ ।
ಅಸ್ಥಾನರುದಿತೈರೇತೈರಲಮಾಲೋಹಿತೇಕ್ಷಣೇ ॥ (೧೦೮)

'ಮಯಾಗೋರಸಾಭಿಜ್ಞಂ' ಎಂಬ ಮಾತಿನಲ್ಲಿ ಸಂಬಂಧಸೂಚಕವಾದ ಷಷ್ಠ್ಯಂತಪದ ಗುಪ್ತವಾಗಿದೆ. 'ಮೇ ಆಗೋರಸಾಭಿಜ್ಞಂ' ಎಂದು ವಿಭಜಿಸಿ ಯಾಂತಾದೇಶವನ್ನು ಮಾಡಿ 'ಮಯಾಗೋರಸಾಭಿಜ್ಞಂ' ಎಂಬುದಾಗಿ ಮಾಡಿದೆ. 'ಮಯಾ' ಎಂಬುದು ತೃತೀಯಾಂತಪದವೆಂಬ ಭ್ರಾಂತಿ ಹುಟ್ಟಿ, 'ಮೇ' ಎಂಬ ಸಂಬಂಧವಾಚಕವು ಅಲ್ಲಿ ಗುಪ್ತವಾಗಿ, ಸ್ಪಷ್ಟವಾಗಿದೆ.

'ವಿಷ್ಣುಧರ್ಮೋತ್ತರ ಪುರಾಣ'ದಲ್ಲಿಯ ಸಮಾಗತಾದ ಲಕ್ಷಣ:

ತಸ್ಯಾಂ ಮಾತ್ರಾವಶಾದರ್ಥೋ ಗೋಪ್ಯತೇ ಸಾ ಸಮಾಗತಾ ॥ (೩. ೧೬-೩)

''ಯಾವ ಪ್ರಹೇಳಿಕೆಯಲ್ಲಿ ಒಂದು ಮಾತ್ರೆಯಿಂದ ಅರ್ಥಭೇದವನ್ನು ತೋರ್ಪಡಿಸಬಹುದಾದ ಶಬ್ದದಿಂದ ವಕ್ತೃವಿಗೆ ಇಷ್ಟವಾದ ಅರ್ಥವು ಮರೆಮಾಚಿಸಲ್ಪಡುತ್ತದೆಯೋ ಅಂತಹ ಪ್ರಹೇಳಿಕೆಗೆ 'ಸಮಾಗತಾ' ಎಂದು ಹೆಸರು'' ಎಂದಿದೆ.

ವಂಚಿತಾ

ವಂಚಿತಾನ್ಯತ್ರ ರೂಢೇನ ಯತ್ರ ಶಬ್ದೇನ ವಂಚನಾ ॥ (೯೮)
ಕುಬ್ಜಾಮಾಸೇವಮಾನಸ್ಯ ಯಥಾ ತೇ ವರ್ಧತೇ ರತಿಃ ।
ನೈವಂ ನಿರ್ವಿಶತೋ ನಾರೀರಮರಸ್ತ್ರೀವಿಡಂಬಿನೀಃ ॥ (೧೦೯)

ಬೇರೊಂದು ಸನ್ನಿವೇಶದಲ್ಲಿ ಪ್ರಸಿದ್ಧವಾಗಿರುವ ಶಬ್ದವನ್ನುಪಯೋಗಿಸಿ, ವಿವಕ್ಷಿತಾರ್ಥವನ್ನು ಅದರಲ್ಲಿ ಹುದುಗಿಸಿ ವಂಚಿಸುವಂತಹ ಪ್ರಸಂಗವೇ 'ವಂಚಿತಾ'. ಇಲ್ಲಿ ವಿವಕ್ಷಿತವಾದ ಅರ್ಥಕ್ಕಿಂತ ಅವಿವಕ್ಷಿತವಾದ ಅರ್ಥದಲ್ಲಿಯೇ ಶ್ರೋತೃವಿಗೆ ಬುದ್ಧಿ ಓಡುವಂತಿರುತ್ತದೆ.

ಅಮರನಾರಿಯರ ಸಮಾಗಮಕ್ಕಿಂತ 'ಕುಬ್ಜಾ' ಸ್ತ್ರೀ ಸಮಾಗಮ' ಆನಂದದಾಯಕವಾದ್ದು ಎಂಬ ಅಪಹಾಸ್ಯಕರವಾದ, ಅವಿವಕ್ಷಿತವಾದ ಅರ್ಥ ಇಲ್ಲಿ ಮೇಲುನೋಟದ್ದು; 'ಕಾನ್ಯಕುಬ್ಜ' ಶಬ್ದದ ಉತ್ತರ ಪದವಾದ 'ಕುಬ್ಜಾ' ಎನ್ನುವುದು ಕಾನ್ಯಕುಬ್ಜ ದೇಶದ ಸ್ತ್ರೀಯನ್ನೇ ಸಂಕ್ಷಿಪ್ತವಾಗಿ ಸೂಚಿಸುತ್ತದೆ (ಸತ್ಯಾ ಎಂದರೂ ಭಾಮಾ ಎಂದರೂ 'ಸತ್ಯಭಾಮಾ' ಎಂದೇ ವಿದಿತವಾಗುವ ಹಾಗೆ) ಎಂದಾದರೆ, ಅಂತಹ ಸ್ತ್ರೀಯರ ಸಮಾಗಮ ಅಮರ್ತ್ಯನಾರಿಯರ ಸಮಾಗಮಕ್ಕಿಂತ ಆನಂದದಾಯಕವಾದದ್ದು ಎಂದು ಅಭಿಪ್ರಾಯವಾಗುವುದು. ಇದೇ ಗ್ರಾಹ್ಯವಾಗಬೇಕಾದ ವಿವಕ್ಷಿತಾರ್ಥ.

ವಿಷ್ಣುಧ.ದಲ್ಲಿ 'ವಂದಿತಾ' ಎಂದಿರುವುದು 'ವಂಚಿತಾ' ಎಂಬುದರ ಅಪಲಿಖಿತವಿರಬಹುದು. ''ಪರ್ಯಾಯವಚನಾದ್ಯಸ್ಯಾಂ ವಂದಿತಾ ಸಾ ಪ್ರಕೀರ್ತಿತಾ'' (೩.೧೬-೩) ಎಂಬುದು ಇಲ್ಲಿಯ ಲಕ್ಷಣ. (ಪ್ರಸಿದ್ಧವಾದ ಶಬ್ದದಿಂದ ಬೋಧಿಸದೆ ಪರ್ಯಾಯಶಬ್ದದಿಂದ ಗೂಢವಾದ ಅರ್ಥವನ್ನು ಬೋಧಿಸುವ ಪ್ರಹೇಳಿಕೆ 'ವಂದಿತಾ' ಎನಿಸುವುದು.) ಇದು ಕಾವ್ಯಾದರ್ಶದ 'ಪರವ್ಯಾಮೋಹನ' (೩-೯೭)ಕ್ಕೆ ಸದೃಶವಾದ್ದೇ.

ವ್ಯುತ್ಕ್ರಾಂತಾ

ವ್ಯುತ್ಕ್ರಾಂತಾತಿವ್ಯವಹಿತ ಪ್ರಯೋಗಾನ್ಮೋಹಕಾರಿಣೀ ॥ (೯೯)
ದಂಡೇ ಚುಂಬತಿ ಪದ್ಮಿನ್ಯಾ ಹಂಸಃ ಕರ್ಕಶಕಂಟಕೇ ।
ಮುಖಂ ವಲ್ಗುರವಂ ಕುರ್ವಂಸ್ತುಂಡೇನಾಂಗಾನಿ ಘಟ್ಟಯನ್ ॥ (೧೦೦)

ಅರ್ಥಕ್ಕೆ ದೂರಾನ್ವಯವಾಗುವಂತೆ ಶಬ್ದಗಳನ್ನು ಪ್ರಯೋಗಿಸಿ, ಆ ಪ್ರಯೋಗದಿಂದ ಶ್ರೋತೃವಿಗೆ ಭ್ರಮೆಯುಂಟಾಗುವಂತೆ ಮಾಡಿದಲ್ಲಿ, ಅದು 'ವ್ಯುತ್ಕ್ರಾಂತಾ'. ಎಂದರೆ, ಅನ್ವಯವಾಗಬೇಕಾದ ಪದಗಳ ನಡುವೆ ಸಂಬಂಧ ತೋರದಿರುವಂತೆ ಅನ್ವಯವಾಗದಿರುವಂತಹ ಬೇರೆ ಪದಗಳನ್ನು ತರುವುದರ ಮೂಲಕ ಭ್ರಮೆಯನ್ನುಂಟುಮಾಡಲಾಗುತ್ತದೆ, ಇಲ್ಲಿ. ಹಂಸವು ಪದ್ಮದ ಮುಖವನ್ನು ಕೊಕ್ಕಿನಿಂದ ಚುಂಬಿಸುತ್ತದೆ, ಮನೋಹರವಾಗಿ ಧ್ವನಿಮಾಡುತ್ತದೆ, ಕಂಟಕಭೂಯಿಷ್ಠವಾದ ಕಮಲದ ನಾಳಗಳಲ್ಲಿ ಮೈ ತುರಿಸಿಕೊಳ್ಳುತ್ತದೆ ಎನ್ನುವುದು

ವಿವಕ್ಷಿತವಾದ ಅರ್ಥ. ಆದರೆ ಲಕ್ಷ್ಯವನ್ನು ಓದಿದಾಗ, ಹಂಸಪಕ್ಷಿಯು ಸ್ವರೂಪಕ್ಕೆ ವಿರುದ್ಧವಾಗಿ ತೋರುವಂತೆ, ದಂಡವನ್ನು ಚುಂಬಿಸುತ್ತದೆ ಮೊದಲಾಗಿ ಅಭಿಪ್ರಾಯವುಂಟಾಗುವಂತಿದೆ. 'ಹಂಸಃ', 'ಚುಂಬತಿ', 'ಮುಖಂ' ಎಂಬ ಪದಗಳು ದೂರಸ್ಥವಾಗಿ, 'ದಂಡೇ' ಎನ್ನುವುದು ಸಮೀಪಸ್ಥವಾಗಿ ಪ್ರಯೋಗವಾಗಿರುವುದೇ ಹೀಗೆ ಅಭಿಪ್ರಾಯವಾಗುವುದಕ್ಕೆ, ಭ್ರಮೆಯುಂಟಾಗುವುದಕ್ಕೆ ಕಾರಣವಾಯಿತು.

ವಿಷ್ಣು ಧ.ದಲ್ಲಿ 'ದುಃಖಿತಾ' ಎಂದಿರುವುದು ಇದೇ ಬಗೆಯನ್ನೇ ಇರಬೇಕು.

ವೃತ್ತಾಂತಗೋಪಿಕಾಂತಾಯಾ ಪದೈಃ ವ್ಯವಹಿತೈರ್ಭವೇತ್ ।
ಅಪ್ರಸಿದ್ಧೈಸ್ತು ಪರ್ಯಾಯೈಃ ದುಃಖಿತಾ ನಾಮ ಸಾ ಸ್ಮೃತಾ ॥ (೩.೧೬-೪)

(ಅನ್ವಯ ದೃಷ್ಟಿಯಿಂದ ವ್ಯವಹಿತವಾದ ಪದಗಳಿಂದ ಪ್ರಕೃತವೃತ್ತಾಂತವನ್ನು ಗೋಪನಮಾಡಿದರೂ ಅಪ್ರಸಿದ್ಧವಾದ ಪರ್ಯಾಯಪದಗಳಿಂದ ಪ್ರಕೃತಾರ್ಥವನ್ನು ಗೋಪನಮಾಡಿದುದೇ ಆದರೂ ಅದಕ್ಕೆ 'ದುಃಖಿತಾ' ಎಂದು ಹೆಸರು.)

ಪ್ರಮುಷಿತಾ

ಸಾ ಸ್ಯಾತ್ ಪ್ರಮುಷಿತಾ ಯಸ್ಯಾಂ ದುರ್ಬೋಧಾರ್ಥಾ ಪದಾವಲೀ ॥ (೯೯)

ಖಾತಯಃ ಕನಿ ಕಾಲೇ ತೇ ಸ್ಫಾತಯಃ ಸ್ಫೀತವಲ್ಗವಃ ।
ಚಂದ್ರೇ ಸಾಕ್ಷಾದ್ಭವನ್ತ್ಯತ್ರ ವಾಯವೋ ಮಮ ಧಾರಿಣಃ ॥ (೧೦೧)

ಅರ್ಥವು ಬಹಳ ಕಷ್ಟದಿಂದ ತಿಳಿಯುವ ಹಾಗೆ ಪದಗಳನ್ನು ಯೋಜಿಸಿದ್ದರೆ, ಅದು 'ಪ್ರಮುಷಿತಾ'.

ಲಕ್ಷ್ಯಪದ್ಯದಲ್ಲಿಯ ಶಬ್ದಗಳೆಲ್ಲ, ಉದಾ॰ಗೆ ಕನಿ (=ಕನ್ಯೆ), ಚಂದ್ರೇ (=ಮನೋಹರ), ವಾಯವಃ (=ಪ್ರಾಣವಾಯುಗಳು), ಕಾಲೇ (=ಪಾದಗಳು; 'ಕಾಲ್' ದ್ರಾವಿಡ ಶಬ್ದ!) ಇವೆಲ್ಲ, ಪ್ರಕೃತಕ್ಕೆ ಬೇಕಾದ ಅರ್ಥವನ್ನು ಕಷ್ಟದಿಂದ ತಂದುಕೊಡುವ ಅಪ್ರಸಿದ್ಧಶಬ್ದಗಳಾಗಿವೆ. ಈ ಅರ್ಥಗಳಲ್ಲಿ ಇವನ್ನು ಇತರ ಕವಿಗಳು ಪ್ರಯೋಗಿಸಿರದ ಕಾರಣ ಇವು ದುರ್ಬೋಧಾರ್ಥಕಗಳಾದವು. ಆದ್ದರಿಂದ ಇದು 'ಪ್ರಮುಷಿತಾ'. ''ಕನ್ಯೆ, ನಿನ್ನ ಪಾದಗಳಲ್ಲಿಯ ಗೆಜ್ಜೆಯ ದನಿ ಕೇಳಿ ನನ್ನ ಪ್ರಾಣ ನಿನ್ನಲ್ಲಿಗೆ ಓಡಿಬರುತ್ತದೆ'' ಎನ್ನುವುದು ಪದ್ಯದ ಆಶಯ.

ಸಮಾನರೂಪಾ

ಸಮಾನರೂಪಾ ಗೌಣಾರ್ಥಾರೋಪಿತೈರ್ಗ್ರಥಿತಾ ಪದೈಃ ॥ (೧೦೦)

ಅತ್ರೋದ್ಯಾನೇ ಮಯಾ ದೃಷ್ಟಾ ವಲ್ಲರೀ ಪಂಚಪಲ್ಲವಾ ।
ಪಲ್ಲವೇ ಪಲ್ಲವೇ ತಾಮ್ರಾ ಯಸ್ಯಾಃ ಕುಸುಮಮಂಜರೀ ॥ (೧೦೨)

ಗೌಣಾರ್ಥಬೋಧಕ ಶಬ್ದಗಳ ಸಂಘಟನೆಯ ಮೂಲಕ ಮುಖ್ಯಾರ್ಥದ ವಿವಕ್ಷೆಯನ್ನು ಮಾಡಿದರೆ, ಅದು 'ಸಮಾನರೂಪಾ'.

ಲಕ್ಷ್ಯಪದ್ಯದಲ್ಲಿ 'ಪಂಚಪಲ್ಲವ', 'ವಲ್ಲರೀ' ಎಂಬೆರಡು ಶಬ್ದಗಳನ್ನು ಕೊಟ್ಟು 'ವಿಸ್ತಾರವಾದ ಚಿಗುರುಗಳಿಂದ ಕೂಡಿದ ಬಳ್ಳಿ' ಎಂಬರ್ಥವನ್ನು ಹೇಳಿ (ಇಲ್ಲಿ 'ಪಂಚಪಲ್ಲವ' ಗೌಣಾರ್ಥದಲ್ಲಿದೆ), 'ವಲ್ಲರೀ' ಶಬ್ದದ ಸ್ತ್ರೀಲಿಂಗ ಪ್ರಯೋಗಸಾಹಚರ್ಯದಿಂದ, 'ಪಂಚಪಲ್ಲವ' ಶಬ್ದಕ್ಕೆ ''ಪ್ರಸಿದ್ಧವಾದ ಕೈ'' ಎಂಬ ಅರ್ಥವನ್ನಿಟ್ಟುಕೊಳ್ಳುವುದರ ಮೂಲಕ ''ಸುಕುಮಾರಿಯಾದ ತರುಣಿ'' ಎಂಬ ಅರ್ಥವನ್ನು ತೆಗೆದುಕೊಳ್ಳಬೇಕಾಗಿದೆ. ಆದ್ದರಿಂದ ಇಲ್ಲಿ ಗೌಣಾರ್ಥದಲ್ಲಿ ಪ್ರಯೋಗವಾದ ಪಂಚಪಲ್ಲವ, ವಲ್ಲರೀ ಎಂಬೆರಡು ಶಬ್ದಗಳು ಮುಖ್ಯಾರ್ಥವಿವಕ್ಷೆಯನ್ನೇ ಹೊಂದಿರುವ ಕಾರಣ ಇದು ಸಮಾನರೂಪಾ ಪ್ರಹೇಳಿಕೆ.

ವಿಷ್ಣು ಧ.ದಲ್ಲಿ ''ಸಮಾನರೂಪತುಲ್ಯಾರ್ಥೋ ಶಬ್ದೈರನ್ಯೈಃ ಪ್ರಕೀರ್ತಿತಾ'' (ಬೇರೆ ಬೇರೆ ಶಬ್ದಗಳಿಂದ ಕೂಡಿದ್ದರೂ ಸಮಾನಾರ್ಥಕವಾಗಿದ್ದರೆ ಅದು 'ಸಮಾನರೂಪಾ'; ೩-೧೬-೫).

ಪರುಷಾ

ಪರುಷಾ ಲಕ್ಷಣಾಸ್ತಿತ್ವಮಾತ್ರವ್ಯುತ್ಪಾದಿತಶ್ರುತಿಃ ॥ (೧೦೦)

ಸುರಾಃ ಸುರಾಲಯೇ ಸ್ವೈರಂ ಭ್ರಮಂತಿ ದಶನಾರ್ಚಿಷಾ ।
ಮಜ್ಜಂತ ಇವ ಮತ್ತಾಸ್ತೇ ಸೌರೇ ಸರಸಿ ಸಂಪ್ರತಿ ॥ (೧೧೩)

ಪ್ರಯೋಗ ಪ್ರತೀತಿಗೆ ಒಂದು ಕಡೆ ಗಮನಕೊಟ್ಟು, ಇನ್ನೊಂದು ಕಡೆ ಗಮನಕೊಡದೆ, ಶಾಸ್ತ್ರಲಕ್ಷಣ (ವ್ಯಾಕರಣ) ಸಮನ್ವಿತವಾಗುವುದೆಂಬ ಒಂದೇ ಕಾರಣದಿಂದ ಸ್ಥಾನಾಂತರದಲ್ಲಿ ಪ್ರಯೋಗಿಸಲ್ಪಡುವ ಪದವನ್ನು ಸಂಘಟಿಸಿದರೆ, ಅಂತಹ ಪ್ರಯೋಗ ರಸ್ಯತೆಯಿಲ್ಲದಿರುವ ಕಾರಣ 'ಪರುಷಾ' ಎನಿಸುತ್ತದೆ.

ಲಕ್ಷ್ಯಪದ್ಯದಲ್ಲಿ 'ಸುರಾಲಯ', 'ಸೌರೇ ಸರಸಿ', 'ಮಜ್ಜಂತಃ', 'ಮತ್ತಾಃ', 'ಭ್ರಮಂತಿ' ಈ ಪದಗಳು ವ್ಯಾಕರಣಲಕ್ಷಣಕ್ಕೆ ಹೊಂದುವಂತೆ ಇದ್ದು, ದೇವತೆಗಳಿಗೂ ಮದ್ಯಪಾಯಿಗಳಿಗೂ ಸಮಾನವಾಗಿ ಅನ್ವಯವಾಗುವಂತಹ ಪದಗಳಾಗಿರುವ ಕಾರಣದಿಂದ, ಚಮತ್ಕಾರದ ಅತಿಶಯತೆಯೇನೂ ಇಲ್ಲದೆ ಇದೆ; ಇದನ್ನು 'ಪರುಷಾ' ಪ್ರಹೇಳಿಕೆ ಎಂದು ಕರೆಯಬಹುದಾಗಿದೆ.

ವಿಷ್ಣುಧ.ದಲ್ಲಿ ಇದರ ಲಕ್ಷಣ : "ದುರ್ಬೋಧಾಕ್ಷರಬಂಧಾ ಚ ಪರುಷಾ ನಾಮತಃ ಸ್ಮೃತಾ" (೩.೧೬-೭). (ಅರ್ಥಬೋಧದಲ್ಲಿ ಕ್ಲಿಷ್ಟಗಳಾದ ಪದಗಳಿಂದ ಕೂಡಿದ್ದಲ್ಲಿ, 'ಪರುಷಾ' ಎಂದು ಹೆಸರು.)

ಸಂಖ್ಯಾತಾ

ಸಂಖ್ಯಾತಾ ನಾಮ ಸಂಖ್ಯಾನಂ ಯತ್ರ ವ್ಯಾಮೋಹಕಾರಣಂ । (೧೦೧)
ನಾಸಿಕ್ಯಮಧ್ಯಾ ಪರಿತಶ್ಚಾತುರ್ವರ್ಣ್ಯವಿಭೂಷಿತಾ ।
ಅಸ್ತಿ ಕಾಚಿತ್‌ಪುರೀ ಯಸ್ಯಾಮಷ್ಟವರ್ಣಾಹ್ವಯಾ ನೃಪಾಃ ॥ (೧೧೪)

ಭ್ರಮೆಯುಂಟಾಗುವಂತೆ ಎಂದರೆ ಅಭಿಪ್ರಾಯ ವಿಶದವಾಗದ ರೀತಿಯಲ್ಲಿ ಶಬ್ದಗಳನ್ನು ಸಂಘಟಿಸಿ ಅನುಕ್ತವಾದ ವಿವಕ್ಷಿತಾರ್ಥವನ್ನು ಬಳಸಿರುವ ಸಂಖ್ಯಾವಾಚಕಶಬ್ದಗಳ ಮೂಲಕ ಸ್ಪಷ್ಟಮಾಡಿಕೊಳ್ಳುವುದೇ 'ಸಂಖ್ಯಾತಾ'.

ಈ ಲಕ್ಷ್ಯಪದ್ಯದಲ್ಲಿ ಪ್ರಸಿದ್ಧವಾದ ಒಂದು ನಗರವನ್ನೂ (ಕಾಂಚಿ) ಅಲ್ಲಿಯ ಒಬ್ಬ ಪ್ರಸಿದ್ಧ ರಾಜನನ್ನೂ (ಪಲ್ಲವ=ಅಷ್ಟವರ್ಣ) ಹೇಳುವುದು ಕವಿಯ ವಿವಕ್ಷೆ. ವಿಶೇಷಣಗಳನ್ನು ತೆಗೆದುಕೊಂಡರೆ, ನಾಸಿಕ್ಯಮಧ್ಯ ಎಲ್ಲಿಗೂ ಅನ್ವಯವಾಗುವುದಿಲ್ಲ. ಹಾಗೆಯೇ ಅಷ್ಟವರ್ಣ ಸಹ(ವರ್ಣಗಳು ನಾಲ್ಕೇ ಎನ್ನುವ ಕಾರಣ). ಆದರೆ ಆಯಾ ಶಬ್ದಗಳ ಜೊತೆಗೆ ಸೇರಿದ ಸಂಖ್ಯಾವಾಚಿಗಳನ್ನು ಅನ್ವಯಗೊಳಿಸಿ ಅರ್ಥೈಸಿದರೆ ಅಭಿಪ್ರಾಯ ವಿಶದವಾಗುವುದು. ಕಾಞ್ಚೀ-ಕ್‌ಆಞ್‌ಚ್‌ಈ; ಞ್ ನಾಸಿಕ್ಯವಾದ ಮಧ್ಯಾಕ್ಷರ. ಅದರ ಎರಡು ಮಗ್ಗುಲಲ್ಲಿಯೂ ೨-೨ ಅಕ್ಷರಗಳಿದ್ದು, 'ಚಾತುರ್ವರ್ಣ್ಯ ವಿಭೂಷಿತ' (೪ ಅಕ್ಷರಗಳಿಂದ ಕೂಡಿದೆ)ವಾಗಿದೆ. ಇದು ನಗರದ ಹೆಸರಿಗೂ ನಗರಕ್ಕೂ ಅನ್ವಯಿಸುತ್ತದೆ. 'ಅಷ್ಟವರ್ಣಾಹ್ವಯ' ಶಬ್ದ ಅಪ್ರಸಿದ್ಧವಾದ್ದು; ನಗರಕ್ಕೆ ಅನ್ವಿತವಾಗದಿದ್ದಾಗ 'ಅಷ್ಟವರ್ಣ' ಹೆಸರಿನ ಒಬ್ಬ ದೊರೆ(ಪಲ್ಲವಾಃ=೮ ಅಕ್ಷರಗಳು)ಯ ಹೆಸರೂ ತಿಳಿಯುತ್ತದೆ.

ವಿಷ್ಣುಧ.ದಲ್ಲಿ ಇದರ ಲಕ್ಷಣವನ್ನು "ಸಂಖ್ಯಾಮಾತ್ರಸಮಾನತ್ವಾತ್ಸಂಖ್ಯಾತಾಖ್ಯಾ ತಥೋಚ್ಯತೇ" (ಕೇವಲ ಸಂಖ್ಯಾಸಾಮ್ಯದಿಂದ ಕೂಡಿದ ಅರ್ಥಗಳಿಗೆ ಬೋಧಕವಾಗುವುದು 'ಸಂಖ್ಯಾತಾ' ಎನಿಸುವುದು) ಎಂದಿದೆ (೩.೧೬-೬).

ಪ್ರಕಲ್ಪಿತಾ

ಅನ್ಯಥಾ ಭಾಸತೇ ಯತ್ರ ವಾಕ್ಯಾರ್ಥಃ ಸಾ ಪ್ರಕಲ್ಪಿತಾ ॥ (೧೦೦)
ಗಿರಾ ಸ್ಖಲಂತ್ಯಾ ನಮ್ರೇಣ ಶಿರಸಾ ದೀನಯಾ ದೃಶಾ ।
ತಿಷ್ಠಂತಮಪಿ ಸೋತ್ಕಂಪಂ ವೃದ್ಧೇ ಮಾಂ ನಾನುಕಂಪಸೇ ॥ (೧೧೫)

ಯಾವುದೇ ಪದ್ಯದ ಪದಸಮುದಾಯದಿಂದ ಒಂದು ರೀತಿಯಲ್ಲಿ ಅಭಿಧೇಯಾರ್ಥವು ಬಂದು (ಆಯಾ ಪದದ ವಿಶೇಷಣಸಾಮರ್ಥ್ಯದಿಂದಾಗಿ) ತದ್ವಿರುದ್ಧವಾದ ಅರ್ಥವೇ ಭಾಸವಾಗುವುದಾದರೆ, ಅದು 'ಪ್ರಕಲ್ಪಿತಾ'. ಅನ್ಯಥಾರ್ಥ ಪರಿಕಲ್ಪನೆಯಿಂದಾಗಿ ಈ ಹೆಸರು.

ಲಕ್ಷ್ಯಪದ್ಯದಲ್ಲಿರುವ 'ಗಿರಾ', 'ಶಿರಸಾ', 'ದೃಶಾ' ಈ ಮೂರು ವಿಶೇಷ್ಯಗಳಿಗೆ ಕ್ರಮವಾಗಿ ಕೊಟ್ಟಿರುವ 'ಸ್ಖಲಂತ್ಯಾ', 'ನಮ್ರೇಣ', 'ದೀನಯಾ' ಎಂಬ ವಿಶೇಷಣಗಳಿಂದ ಎಲ್ಲರಿಗೂ ವೃದ್ಧಿತರುವ ಲಕ್ಷ್ಮಿಯನ್ನು ಕುರಿತು ಪ್ರಾರ್ಥನೆ ಮಾಡುವ ಅಭಿಧೇಯಾರ್ಥವು ವಿವಕ್ಷಿತವಾಗಿದೆ; ಆದರೆ ಇವೇ ವಿಶೇಷಣಗಳಿಂದ ಒಬ್ಬ ವೃದ್ಧೆಯನ್ನು ಕಾಮಿಸುವ ಕಾಮುಕನ ಕಾಮುಕಪ್ರಾರ್ಥನೆಯೂ ಎಂದರೆ ತದ್ವಿರುದ್ಧವಾದ ಇಲ್ಲವೆ ಅನ್ಯಥಾರ್ಥವೆನ್ನಬಹುದಾದ ಆಶಯವೂ ಹೊರಡುವುದು ಸಾಧ್ಯ.

ವಿಷ್ಣುಧ.ದಲ್ಲಿ ಇದರ ಲಕ್ಷಣವನ್ನು ''ಅರ್ಥಾಂತರಾನ್ಯಕಲ್ಪನಯಾ ಕಲ್ಪಿತಾ ಚ ತಥೋಚ್ಯತೇ'' (ಕಲ್ಪಿತವಾದ ಇತರ ನಿಗೂಢಾರ್ಥಗಳಿಂದ ಕೂಡಿದ್ದು 'ಕಲ್ಪಿತಾ') ಎಂದಿದೆ (೩.೧೬-೭).

ನಾಮಾಂತರಿತಾ

ಸಾ ನಾಮಾಂತರಿತಾ ಯಸ್ಯಾಂ ನಾಮ್ನಿ ನಾನಾರ್ಥಕಲ್ಪನಾ ॥ (೧೦೧)

ಆದೌ ರಾಜೇತ್ಯಧೀರಾಕ್ಷಿ ಪಾರ್ಥಿವಃ ಕೋಽಪಿ ಗೀಯತೇ ।
ಸನಾತನಶ್ಚ ನೈವಾಸೌ ರಾಜಾ ನೈವ ಸನಾತನಃ ॥ (೧೦೨)

ಯಾವುದೇ ವ್ಯಕ್ತಿಯ ಹೆಸರಿನ ಬಗ್ಗೆ ನಾನಾರ್ಥಕಲ್ಪನೆಯನ್ನು ಮಾಡುವುದರ ಮೂಲಕ ನಾಮಾಂತರಗಳು ತಿಳಿಯುವಂತಿದ್ದ ಪಕ್ಷದಲ್ಲಿ ಅದು 'ನಾಮಾಂತರಿತಾ'.

ಲಕ್ಷ್ಯಪದ್ಯದಲ್ಲಿರುವ 'ಸನಾತನ' ಶಬ್ದಕ್ಕೆ ನಾನಾರ್ಥಗಳನ್ನು (ತನ, ಆತನ, ನ+ಆತನ=ನಾತನ, ಸ+ನಾತನ=ಸನಾತನ) ಕಲ್ಪಿಸುವುದರ ಮೂಲಕ ರಾಜನಿಗೆ ನಾಮಾಂತರಗಳನ್ನು ಯೋಜಿಸಿರುವ ಕಾರಣ, ಪೂರ್ವಾರ್ಧದ 'ರಾಜಾ' ಹಾಗೂ ಉತ್ತರಾರ್ಧದ 'ತನ' ಎರಡೂ ಸೇರಿ 'ರಾಜಾತನ' ಎಂದಾಗಿ, ವೃಕ್ಷವಿಶೇಷವನ್ನು ಸೂಚಿಸುವ ಈ ಶಬ್ದ 'ಪಾರ್ಥಿವ' ಎನ್ನುವುದಕ್ಕೆ ವಿಶೇಷಣವಾಗಿ ಬೇರೊಂದು ಅರ್ಥದಲ್ಲಿ ಪರಿಕಲ್ಪಿತವಾಗಿದೆ.

ವಿಷ್ಣುಧ.ದಲ್ಲಿ ಇದರ ಲಕ್ಷಣವನ್ನು ''ಅನ್ಯಸ್ಯ ಸಂಜ್ಞಾವ್ಯಾಮೋಹಾನ್ನಾಮಾಂತರಿತಸಂಜ್ಞಿತಾ'' (ಮತ್ತೊಂದು ಸಂಜ್ಞೆಯಿಂದ ಕೂಡಿರುವ, ಭ್ರಮಕ್ಕೆ ಕಾರಣವಾದ, ಪ್ರಕೃತಸಂಜ್ಞೆಗೆ ಬೋಧಕವಾದುದು 'ನಾಮಾಂತರಿತ' ಎನಿಸುವುದು) ಎಂದಿದೆ (೩.೧೬-೭).

ನಿಭೃತಾ

ನಿಭೃತಾ ನಿಭೃತಾನ್ಯಾರ್ಥಾ ತುಲ್ಯಧರ್ಮಸ್ಪೃಶಾ ಗಿರಾ ॥ (೧೦೩)

ಹೃತದ್ರವ್ಯಂ ಜನಂ ತ್ಯಕ್ತ್ವಾ ಧನವಂತಂ ವ್ರಜಂತಿ ಕಾಃ ।
ನಾನಾಭಂಗಿಶತಾಕೃಷ್ಟಲೋಕಾ ವೇಶ್ಯಾ ನ ದುರ್ಧರಃ ॥ (೧೦೪)

ಸಮಾನಧರ್ಮಬೋಧಕಗಳಾದ ಶಬ್ದಗಳಿಂದ ಕೂಡಿದ್ದು, ಅವುಗಳಿಂದ ಒಂದು ಅರ್ಥ ಉಕ್ತವಾಗಿರುವುದರ ಜೊತೆಗೆ ಇನ್ನೊಂದು ಅರ್ಥವೂ ಹೊಳೆಯುವಂತಿದ್ದರೆ, ಅದು 'ನಿಭೃತಾ'.

''ಧನವೆಲ್ಲವನ್ನೂ ಕಳೆದುಕೊಂಡವನನ್ನು ಬಿಟ್ಟು ಧನಿಕನನ್ನೇ ಹೋಗಿ ಸೇರುವವರು ಯಾರು?'' ಈ ಪ್ರಶ್ನೆಗೆ ''ನಾನಾ ಭಂಗಿಗಳಿಂದ ಲೋಕವನ್ನು ಆಕರ್ಷಿಸುವ ವೇಶ್ಯೆಯಲ್ಲ'' ಎಂಬುದು ಉತ್ತರ. ''ಹಾಗಾದರೆ ಯಾರು?'' ಉತ್ತರ ''ಲಕ್ಷ್ಮಿ''ಯೆಂದು. ಏಕೆಂದರೆ ಲಕ್ಷ್ಮಿ ಧನಿಕರಿಗೇ ಒಲಿಯುತ್ತಾಳೆ.

ವಿಷ್ಣುಧ.ದಲ್ಲಿ ಇದರ ಲಕ್ಷಣವನ್ನು ''ಅರ್ಥವ್ಯಾಮೋಹತಃ ಪ್ರೋಕ್ತಾ ನಿಭೃತಾ ಚ ಮಹಾನೃಪ'' (ಪ್ರಕೃತಾರ್ಥವನ್ನು ತಿಳಿಯಲು ಸಾಧ್ಯವೇ ಆಗದಿರುವುದು 'ನಿಭೃತಾ)' ಎಂದಿದೆ (೩.೧೬-೮).

ಸಮಾನಶಬ್ದಾ

ಸಮಾನಶಬ್ದೋಽಪನ್ಯಸ್ತಶಬ್ದಪರ್ಯಾಯಸಾಧಿತಾ ॥ (೧೦೫)

ಜಿತಪ್ರಕೃಷ್ಟಕೇಶಾಖ್ಯೋ ಯಸ್ತವಾಭೂಮಿಸಾಹ್ವಯಃ ।
ಅಸೌ ಮಾಮುತ್ಕಮಧಿಕಂ ಕರೋತಿ ಕಲಭಾಷಿಣಿ ॥ (೧೦೬)

ಒಮ್ಮೆ ಹೇಳಿದ ಶಬ್ದದ ಪರ್ಯಾಯಶಬ್ದವನ್ನು ಹೇಳಿ ಅರ್ಥಸೂಚನೆ ಮಾಡಿದಲ್ಲಿ, ಅದು 'ಸಮಾನ ಶಬ್ದಾ'.

ಒಬ್ಬ ನಾಯಕಿಯ ಅಧರವರ್ಣನೆಯಲ್ಲಿ ಉಕ್ತವಾದ ವಾಕ್ಯವಿದು. ಇಲ್ಲಿ ಆಖ್ಯ ಮತ್ತು ಆಹ್ವಯ ಎಂಬ ಸಮಾನಾರ್ಥಕ ಪರ್ಯಾಯಶಬ್ದಗಳನ್ನು ಬಳಸಿ ಅರ್ಥವನ್ನು ಪುಷ್ಟೀಕರಿಸಿದೆ. ('ಜಿತಪ್ರಕೃಷ್ಟಕೇಶಾ' ಎನ್ನುವಲ್ಲಿ 'ಪ್ರಕೃಷ್ಟಕೇಶಾ' ಎನ್ನುವುದಕ್ಕೆ ಪ್ರವಾಳ ಎಂಬ ಅರ್ಥವುಂಟೆಂದು ಕವಿಯ ಆಶಯ.)

ವಿಷ್ಣುಧ.ದಲ್ಲಿ ಇದರ ಲಕ್ಷಣವನ್ನು ''ಸಮಾನಶಬ್ದಾ ಕಥಿತಾ ತುಲ್ಯಶಬ್ದನಿಬಂಧನಾ'' (ಅರ್ಥಭೇದ ವಿದ್ದರೂ ಸಮಾನ ಶಬ್ದಗಳಿಂದ ಕೂಡಿರುವುದು 'ಸಮಾನಶಬ್ದಾ') ಎಂದಿದೆ (೩.೧೬–೮).

ಸಮ್ಮೂಢಾ

ಸಮ್ಮೂಢಾ ನಾಮ ಯಾ ಸಾಕ್ಷಾನ್ನಿರ್ದಿಷ್ಟಾರ್ಥಾಪಿ ಮೂಢಯೇ । (೧೦೭)
ಶಯನೀಯೇ ಪರಾವೃತ್ಯ ಶಯಿತೌ ಕಾಮಿನೌ ರುಷಾ ।
ತಥೈವ ಶಯಿತೌ ರಾಗಾತ್ ಸ್ವೈರಂ ಮುಖಮಚುಂಬತಾಂ ॥ (೧೦೮)

ಪದ್ಯದಲ್ಲಿಯ ಪದಗಳಿಂದ ಒಂದು ಅರ್ಥ ನಿರ್ದಿಷ್ಟವಾಗಿ ಪ್ರತಿಪಾದಿತವಾಗಿದ್ದರೂ ತತ್ತ್ವಾರ್ಥ ಪ್ರತಿಪಾದಿತವಾಗದೆ ಭ್ರಮೆಯುಂಟಾಗುವಂತಿದ್ದ ಪಕ್ಷದಲ್ಲಿ, ಅದು 'ಸಮ್ಮೂಢಾ'.

ಶಯ್ಯೆಯ ಮೇಲಿರುವ ನಾಯಕ ನಾಯಿಕೆಯರು ಕೋಪಗೊಂಡಾಗ ಪರಸ್ಪರ ವಿರುದ್ಧ ದಿಕ್ಕುಗಳಿಗೆ ಮಲಗಿಕೊಂಡು ಹಾಗೆಯೇ ತಂತಮ್ಮ ಮುಖಗಳನ್ನು ಚುಂಬಿಸಿದರು. ಇದು ಪ್ರತಿಪಾದಿತವಾದ, ಭ್ರಮೆಗೊಳಿಸುವಂತಹ ಅರ್ಥ. ಇದು ಹೇಗೆ ತಾನೇ ಸಾಧ್ಯ? ಇಲ್ಲಿ 'ತಥೈವ' ಎಂಬ ಪದ ಭ್ರಾಂತಿಜನಕವಾದ್ದು. ಅದಕ್ಕೆ 'ಯಥಾಪೂರ್ವಂ' ಎಂದರೆ ಮೊದಲಿನಂತೆಯೇ ಎಂದು ಅರ್ಥಮಾಡಿಕೊಂಡರೆ, ''ಶಾಂತಕೋಪರಾಗಿ ತಂತಮ್ಮ ಮುಖಗಳನ್ನು ಚುಂಬಿಸಿದರು'' ಎಂಬ ತತ್ತ್ವಾರ್ಥ ವಿದಿತವಾಗುತ್ತದೆ.

ವಿಷ್ಣುಧ.ದಲ್ಲಿ ಇದನ್ನು 'ವ್ಯಾಮೂಢ'ವೆಂದು ಕರೆದು, ''ಅರ್ಥಾನುಲೋಮ ದುರ್ಬೋಧಾ ವ್ಯಾಮೂಢೇತಿ ತಥೋಚ್ಯತೇ'' (ಅನುಲೋಮ ಪ್ರತಿಲೋಮಗಳಿಂದ ಅರ್ಥಬೋಧವೇ ಉಂಟಾಗದಂತಿರುವುದು 'ವ್ಯಾಮೂಢ') (೩.೧೬–೯) ಎಂದಿದೆ.

ಪಾರಿಹಾರಿಕೀ (ಯೋಗಮಾಲಾ)

ಯೋಗಮಾಲಾತ್ಮಕಂ ನಾಮ ಯಸ್ಯಾಃ ಸಾ ಪಾರಿಹಾರಿಕೀ ॥ (೧೦೯)
ವಿಜಿತಾನ್ನಭವದ್ವೇಷಿಗುರುಪಾದಹತೋ ಜನಃ ।
ಹಿಮಾಪಹಾಮಿತ್ರಧರೈರ್ವ್ಯಾಪ್ತಂ ವ್ಯೋಮಾಭಿನಂದತಿ ॥ (೧೧೦)

ಪ್ರಸಿದ್ಧರಾದ ವ್ಯಕ್ತಿಗಳ ಸಂಬಂಧವನ್ನು ಮಾಲಾರೂಪವಾಗಿ ಸೇರಿಸಿರುವ ಕಾರಣ ಇದು 'ಪಾರಿಹಾರಿಕೀ' ಅಥವಾ 'ಯೋಗಮಾಲಾ'.

ಲಕ್ಷ್ಯ ಪದ್ಯದಲ್ಲಿ, ಪ್ರಸಿದ್ಧನಾದ ಗರುಡನಿಂದ ತರಲ್ಪಟ್ಟ (ವಿ=ಪಕ್ಷಿಯಾದ ಗರುಡ) ಅಮೃತವನ್ನು ಆಹಾರವಾಗಿ ಸೇವಿಸುವ ಇಂದ್ರನ (ವಿಜಿತಾನ್ನ=ಅಮೃತಭೋಜಿ), ಮಗ ಅರ್ಜುನನ (ವಿಜಿತಾನ್ನಭವ=ಇಂದ್ರಪುತ್ರ), ಶತ್ರುವಾದ ಕರ್ಣನ (ವಿಜಿತಾನ್ನಭವದ್ವೇಷಿ=ಇಂದ್ರಪುತ್ರನಾದ ಅರ್ಜುನನ ವೈರಿ), ತಂದೆಯಾದ ಸೂರ್ಯನ (ವಿಜಿತಾನ್ನಭವದ್ವೇಷಿಗುರು=ಇಂದ್ರಪುತ್ರನಾದ ಅರ್ಜುನನ ವೈರಿಯಾಗಿರುವ ಕರ್ಣನ ತಂದೆ) ಕಿರಣಗಳಿಂದ ತಪ್ತರಾದ ಜನ ಹಿಮವನ್ನು ಪರಿಹರಿಸುವ ಅಗ್ನಿಯ (ಹಿಮಾಪಹ=ಅಗ್ನಿ) ವೈರಿಯಾದ ಜಲವನ್ನು (ಹಿಮಾಪಹಾಮಿತ್ರ=ಅಗ್ನಿವೈರಿ, ಜಲ) ಧರಿಸಿದ ಮೋಡವು (ಹಿಮಾಪಹಾಮಿತ್ರಧರ=ಹಿಮವನ್ನು ಪರಿಹರಿಸುವ ಅಗ್ನಿಯ ವೈರಿಯಾದ ಜಲವನ್ನು ತುಂಬಿಕೊಂಡ ಮೋಡ) ಕವಿದಂತಹ ಗಗನವನ್ನು ಮಳೆಗಾಗಿ ಹೊಗಳುತ್ತಾರೆ.

ವಿಷ್ಣುಧ.ದಲ್ಲಿ 'ಗುಚ್ಛಾ' ಎಂದು ಕರೆದಿರುವಂತೆ ತೋರುತ್ತದೆ. ಇದರ ಲಕ್ಷಣ ಇಲ್ಲಿ ''ಗುಚ್ಛಾಖ್ಯಾ

ಕಥಿತಾ ವೃತ್ತೇ ನಾನಾಬಂಧನಿಬಂಧನಾ'' (ನಾನಾವಿಧವಾದ ವೃತ್ತಗಳಲ್ಲಿ ಕಟ್ಟಿದ ಬಂಧದ ಸಂಯೋಜನದಿಂದ ರಚಿಸಿದ್ದು 'ಗುಚ್ಛಾ') (೩.೧೬–೯) ಎಂದಿದೆ.

ಏಕಚ್ಛನ್ನಾ

ಏಕಚ್ಛನ್ನಾಶ್ರಿತಂ ವ್ಯಜ್ಯ ಯಸ್ಯಾಮಾಶ್ರಯಗೋಪನಮ್ ॥ (೧೦೪)
ನ ಸ್ಪೃಶತ್ಯಾಯುಧಂ ಜಾತು ನ ಸ್ತ್ರೀಣಾಂ ಸ್ತನಮಂಡಲಂ ।
ಅಮನುಷ್ಯಸ್ಯ ಕಸ್ಯಾಪಿ ಹಸ್ತೋಽಯಂ ನ ಕಿಲಾಫಲಃ ॥ (೨೨೧)

ಆಶ್ರಯ ಆಶ್ರಿತಗಳೆಂಬ ಎರಡು ಅಂಶಗಳಲ್ಲಿ ಆಶ್ರಿತವೆಂಬ ಅಂಶವನ್ನು ಪ್ರಕಟಗೊಳಿಸಿ, ಆಶ್ರಯವೆಂಬ ಅಂಶವನ್ನು ನಿಗೂಢವಾಗಿರಿಸಿದಲ್ಲಿ, ಅದು 'ಏಕಚ್ಛನ್ನಾ'.

''ಮನುಷ್ಯೇತರವಾದ ಹಸ್ತವೊಂದು ಆಯುಧಗ್ರಹಣಸಮರ್ಥವಾಗಿಲ್ಲ, ಕಾಮಿನಿಯ ಸ್ತನಮಂಡಲ ಸ್ಪರ್ಶಕ್ಕೆ ಸಮರ್ಥವಾಗಿಲ್ಲ, ಆದರೂ ಅದು ವ್ಯರ್ಥವಲ್ಲ.'' ಇಲ್ಲಿ ಆಶ್ರಿತವಾದ 'ಹಸ್ತ' ಪ್ರಕಟವಾಗಿ, ಆಶ್ರಯವನ್ನು ಮುಚ್ಚಿರಿಸಿದೆ. ಅದನ್ನು ಹೀಗೆ ಪ್ರಕಟಿಸಬಹುದು: 'ಅಮನುಷ್ಯ' ಎಂದರೆ ಗಂಧರ್ವ (ಮನುಷ್ಯೇತರನಾದವನು). 'ಗಂಧರ್ವಹಸ್ತ' ಎಂಬಷ್ಟರಲ್ಲಿಯೇ ಶಬ್ದದ ಅರ್ಥ ಮುಗಿಯುವುದಿಲ್ಲ; 'ಗಂಧರ್ವಹಸ್ತ' ಎಂದರೆ ಏರಂಡ (=ಹರಳೆಣ್ಣೆ) ಎಂದು ಅರ್ಥವಿರುವುದರಿಂದ ''ಹರಳೆಣ್ಣೆಯ ಜಿಡ್ಡು ಹತ್ತಿದ ಕೈಗೆ ಆಯುಧ ಹಿಡಿಯುವುದು ಸಾಧ್ಯವಿಲ್ಲ, ಕಾಮಿನಿಯ ಸ್ತನಮಂಡಲ ಸ್ಪರ್ಶವೂ ಯುಕ್ತವಲ್ಲ'' ಎಂದು ಅಭಿಪ್ರಾಯವಾಗುವುದು. 'ಸ್ತನಮಂಡಲ' ಎಂಬುದಕ್ಕೆ 'ಪಯೋಧರ' ಪರ್ಯಾಯಶಬ್ದ. ಅದನ್ನು ಹಿಡಿದು ಹರಳೆಣ್ಣೆ ಹತ್ತಿದ ಕೈಗೆ ನೀರು ಅಂಟುವುದಿಲ್ಲ ಎಂದೂ ಮುಚ್ಚಿರಿಸಿದ ಅರ್ಥವನ್ನು ಹೊರತೆಗೆಯಬಹುದು.

ವಿಷ್ಣುಧ.ದಲ್ಲಿ: ''ಏಕೋಭಯಬಹುಚ್ಛನ್ನೇ ಯಥಾರ್ಥಪರಿಗೋಪಿತೇ'' (ವಿವಕ್ಷಿತಾರ್ಥ ಒಂದು ಬಾಹ್ಯಾರ್ಥದಿಂದ ತೋರಿಸಲ್ಪಡುವುದು) (೩.೧೬.೧೦)

ಉಭಯಚ್ಛನ್ನಾ

ಸಾ ಭವೇದುಭಯಚ್ಛನ್ನಾ ಯಸ್ಯಾಮುಭಯಗೋಪನಂ ॥ (೧೦೫)
ಕೇನ ಕಃ ಸಹ ಸಂಭೂಯ ಸರ್ವಕಾರ್ಯೇಷು ಸನ್ನಿಧಿಂ ।
ಲಬ್ಧ್ವಾ ಭೋಜನಕಾಲೇ ತು ಯದಿ ದೃಷ್ಟೋ ನಿರಸ್ಯತೇ ॥ (೨೨೨)

ಆಶ್ರಯ ಆಶ್ರಿತಗಳೆಂಬ ಎರಡು ಅಂಶಗಳೂ ನಿಗೂಢವಾಗಿದ್ದಲ್ಲಿ 'ಉಭಯಚ್ಛನ್ನಾ'. ''ಯಾವುದು ಯಾವುದೋ ಒಂದರ ಸಹಿತವಾಗಿ ಎಲ್ಲ ಕೆಲಸಗಳಲ್ಲಿಯೂ ಜೊತೆಯಲ್ಲಿಯೇ ಇದ್ದುಕೊಂಡಿರುತ್ತದೆ? ಆದರೆ ಭೋಜನ ಕಾಲದಲ್ಲಿ ಮಾತ್ರ ಕಾಣಿಸಿಕೊಂಡರೆ ನಿರಸನ ಹೊಂದುತ್ತದೆ?''

ಇಲ್ಲಿ ಆಶ್ರಯ ಆಶ್ರಿತಗಳೆರಡೂ ನಿಗೂಢವಾಗಿದೆ. ಪದ್ಯದ ಆದಿಯಲ್ಲಿರುವ 'ಕೇನ', 'ಕಃ' ಎರಡನ್ನೂ ವಿವರಿಸಿದರೆ ಆ ಆಶ್ರಯ ಆಶ್ರಿತ ಭಾಗಗಳೆರಡೂ ಪ್ರಕಟವಾಗುತ್ತವೆ. 'ಕಂ' ಪದಕ್ಕೆ ತಲೆ, ತಲೆಗೂದಲು ಎಂಬರ್ಥಗಳಿವೆ. ಅದನ್ನು ಲಕ್ಷಿಸಿ ''ಕೇನ ಕಃ'' ಎಂದರೆ ''ತಲೆಗೂದಲಿನಿಂದ ಕೂಡಿದ ತಲೆ'' ಎಲ್ಲ ಕೆಲಸಗಳಲ್ಲಿಯೂ ಜೊತೆಗೂಡಿರುವದೆಂದೂ ಭೋಜನಕಾಲದಲ್ಲಿ 'ಕೂದಲು' ಕಣ್ಣಿಗೆ ಬಿದ್ದರೆ ಆಗ ಅದು ತ್ಯಾಜ್ಯವಾಗುತ್ತದೆಂದೂ ಅರ್ಥಮಾಡುವುದು ಸಾಧ್ಯವಾಗುತ್ತದೆ. ಇಲ್ಲಿ ಆಶ್ರಿತವಾದ 'ಕೂದಲು', ಆಶ್ರಯವಾದ 'ತಲೆ' ಎರಡೂ ಪ್ರಚ್ಛನ್ನವಾಗಿರುವ ಕಾರಣ ಇದು 'ಉಭಯಚ್ಛನ್ನಾ'.

ವಿಷ್ಣುಧ.ದಲ್ಲಿ ''ಏಕೋಭಯಬಹುಚ್ಛನ್ನೇ ಯಥಾರ್ಥಪರಿಗೋಪಿತೇ ॥'' (೩.೧೬–೧೦) ಎಂದಿದೆ

ಸಂಕೀರ್ಣಾ

ಸಂಕೀರ್ಣಾ ನಾಮ ಸಾ ಯಸ್ಯಾಂ ನಾನಾಲಕ್ಷಣಸಂಕರಃ ॥ (೧೦೫)
ಸಹಯಾ ಸಗಜಾ ಸೇನಾ ಸುಭಟೇಯಂ ನ ಚೇಜ್ಜಿತಾ ।
ಅಮಾತ್ಯಕೋಽಯಂ ಮೂಢಃ ಸ್ಯಾದಕ್ಷರಜ್ಞಸ್ತು ನಃ ಸುತಃ ॥ (೨೨೩)

ಸಮಾಗತವೇ ಮೊದಲಾದ ಒಂದಕ್ಕಿಂತ ಹೆಚ್ಚಿನ ಪ್ರಹೇಳಿಕೆಗಳು ಒಂದರೊಡನೊಂದು ಹೆಣೆದು ಕೊಂಡಿದ್ದಲ್ಲಿ, ಅದು 'ಸಂಕೀರ್ಣಾ'.

ಹಯ, ಗಜ, ಭಟ ಇವರಿಂದ ಕೂಡಿದ ಸೈನ್ಯವನ್ನು ಜಯಿಸದೆ ಹೋದ ಪಕ್ಷದಲ್ಲಿ ನಮ್ಮ ಮಗನು ತಾಯಿಗೆ ತಕ್ಕ ಮಗನಲ್ಲ (ಅಮಾತೃಕಃ); ಮತ್ತು ಅಕ್ಷರಜ್ಞನಲ್ಲದ ಮೂಢನಾಗಿರುತ್ತಾನೆ (ಇಲ್ಲಿ 'ನಾಮಾಂತರಿತಾ' ಮತ್ತು 'ವಂಚಿತಾ' ಎರಡೂ ಹೆಣೆದುಕೊಂಡಿವೆ). ಯಾವುದೋ ಒಂದು ಅಂಶ ಇಲ್ಲಿ ಗೂಢ ವಾಗಿರುತ್ತದೆ. ಆ ಗೂಢವನ್ನು ಬಿಡಿಸುವುದು ಹೀಗೆ : 'ಸಹಯಾ' ಮುಂತಾದ ಕಡೆ ''ಹಕಾರ ಯಕಾರಗಳಿಂದ ಕೂಡಿದ'' ಎಂದು ಮುಂತಾಗಿ ಅರ್ಥಮಾಡಿಕೊಳ್ಳಬೇಕು (ಹ–ಯ, ಗ–ಜ, ಭ–ಟ). 'ಅಮಾತೃಕಃ' ಎನ್ನು ವಲ್ಲಿಯ 'ಮಾತೃಕಾ' ಶಬ್ದದೊಂದಿಗೆ ಅವನ್ನು ವಿಶೇಷಣಗಳನ್ನಾಗಿ ತೆಗೆದುಕೊಂಡು, ಅಂತಹ ಬೀಜಾಕ್ಷರಗಳಿಂದ ಕೂಡಿದ ವಿದ್ಯೆಯನ್ನು ವಶಪಡಿಸಿಕೊಳ್ಳದವನು ಅ–ಮಾತೃಕನೆಂದೂ ಕೇವಲ ಅಕ್ಷರಜ್ಞನೆಂದೂ 'ಅಕ್ಷರ' ಎಂದರೆ ಶಾಶ್ವತವಿದ್ಯೆಯನ್ನು (ನ ಕ್ಷರತಿ ಇತಿ ಅಕ್ಷರಂ) ಅರಿಯದ ಮೂಢನೆಂದೂ ತಿಳಿಯಲ್ಪಡುತ್ತಾನೆ ಎಂಬುದಾಗಿ ಅರ್ಥ ಮಾಡಿಕೊಳ್ಳಲು ಅನಂತರ ಸುಗಮವಾಗುತ್ತದೆ.

ವಿಷ್ಣು ಧ.ದಲ್ಲಿ ಇದರ ಲಕ್ಷಣವನ್ನು "ಸಂಕೀರ್ಣಾ ಸಂಭವೋಪೇತಾ ಯಾ ತದರ್ಥಕರೀ ಭವೇತ್" (ವಿವಕ್ಷಿತವಾದ ಮುಖ್ಯಾರ್ಥವು ಒಂದು ಅಥವಾ ಎರಡು ಬಾಹ್ಯಾರ್ಥಗಳಿಂದ ಗೋಪಿಸಲ್ಪಟ್ಟು ವಿವಕ್ಷಿತಾರ್ಥ ಬೋಧವು ಆದರಿಂದ ಸಂಭವಿಸಬಹುದಾದರೆ ಅದು 'ಸಂಕೀರ್ಣಾ' ಎನಿಸುವುದು) ಎಂಬುದಾಗಿ ಹೇಳಿದೆ (೩.೧೬–೧೦).

ದಂಡಿ ಈ ಮೇಲಿನ ೧೬ ಪ್ರಹೇಳಿಕೆಗಳನ್ನೂ ಪೂರ್ವಾಚಾರ್ಯರಿಂದ ನಿರ್ದೇಶಗೊಂಡವು ಎಂಬ ಕಾರಣ ಸತ್ಪ್ರಹೇಳಿಕೆಗಳು ಎಂದೂ ಉಳಿದುವನ್ನೆಲ್ಲ ದುಷ್ಪ್ರಹೇಳಿಕೆಗಳು ಎಂದೂ ಕರೆದಿದ್ದಾನೆ; ಆ ದುಷ್ಪ್ರಹೇಳಿಕೆಗಳು ೧೪ ಎಂಬುದಾಗಿಯೂ ತಿಳಿಸಿದ್ದಾನೆ.

'ವಿಷ್ಣುಧರ್ಮೋತ್ತರ ಪುರಾಣ'ದಲ್ಲಿಯ ಇತರ ಪ್ರಕಾರಗಳು

ಪರಿಹಾಸಿಕಾ

ಕಲ್ಪನಾ ಗೋಪಿತಾರ್ಥಾತ್ತು ಕಥಿತಾ ಪರಿಹಾಸಿಕಾ ॥(೩.೧೬–೫)

ಪ್ರಕೃತಾರ್ಥಬೋಧಕಗಳಾದ ಪದಗಳನ್ನು ಅರ್ಥಾನುಗುಣವಾಗಿ ಅರ್ಥಾಂತರಬೋಧಕಗಳಾಗುವಂತೆ ಕಲ್ಪಿಸಿದಲ್ಲಿ ಅದು 'ಪರಿಹಾಸಿಕಾ' (೩-೧೬-೫).

ವ್ಯಭಿಚಾರಿಣೀ

ತದರ್ಥಕಾರೀ ಯತ್ರಾರ್ಥೋ ಜ್ಞಾಯತೇಽನ್ಯಾರ್ಥಕಾಮುಕಃ ।
ರಾಜನ್ ಶಬ್ದವಶಾತ್ಸಾ ಚ ಕಥಿತಾ ವ್ಯಭಿಚಾರಿಣೀ ॥ (೨.೧೬–೧೧)

ಪ್ರಕೃತಾರ್ಥಬೋಧಕವಾದ ಯಾವ ಕಾವ್ಯವು ಮತ್ತೊಂದು ಅಪ್ರಕೃತಾರ್ಥದಿಂದ ಕೂಡಿಯೇ ಪ್ರಕೃತಾರ್ಥಕ್ಕೆ ಬೋಧಕವಾಗುತ್ತದೆಯೋ ಅಂತಹ ಶಬ್ದಸನ್ನಿವೇಶದಿಂದ ಕೂಡಿರುವುದು 'ವ್ಯಭಿಚಾರಿಣೀ' ಎನಿಸುವುದು (೩-೧೬-೧೧).

ವೃತ್ತಬಂಧನಿದರ್ಶಿತಾ

ಉಕ್ತೋರ್ಥೋ ವೃತ್ತಬಂಧೇನ ಮಾತ್ರಾಭಿಃ ಸ್ಥಾಪಿತಾ ತಥಾ ।
ನಷ್ಟಾರ್ಥಾ ವಾ ಚ ಸಾ ಪ್ರೋಕ್ತಾ ವೃತ್ತಬಂಧನಿದರ್ಶಿತಾ ॥ (೩.೧೬–೧೨)

ವೃತ್ತಬಂಧದಿಂದ ಕೂಡಿದ ಕಾವ್ಯವು ಮಾತ್ರಾವ್ಯತ್ಯಾಸವಿದ್ದರೂ ಪ್ರಕೃತಾರ್ಥಕ್ಕೆ ಲೋಪವಿಲ್ಲದೆ ಸ್ಥಾಪಿಸಲ್ಪಟ್ಟರೂ ಮತ್ತು ಅರ್ಥಲೋಪವಿದ್ದರೂ ವೃತ್ತಕ್ಕೆ ಭಂಗ ಬರದೆ ಸ್ಥಾಪಿಸಲ್ಪಟ್ಟರೂ ಅದು 'ವೃತ್ತಬಂಧ ನಿದರ್ಶಿತಾ' (೩-೧೬-೧೨).

ನಷ್ಟಾಕ್ಷರಾ

ನಷ್ಟಾಕ್ಷರಾ ತು ಕಥಿತಾ ವಿನ್ಯೈಕೇನ ತದರ್ಥದಾ ॥ (೩.೧೬–೧೩)

ಒಂದು ಅಕ್ಷರ ಲೋಪದಿಂದಲಾದರೂ ವಿವಕ್ಷಿತಾರ್ಥಬೋಧಕವಾದ ರಚನೆ 'ನಷ್ಟಾಕ್ಷರಾ' ['ಚ್ಯುತಚಿತ್ರ'ದಲ್ಲಿ ಪರಿಗಣಿಸಬಹುದು] (೩–೧೬–೧೩).

ವರ್ಣಭ್ರಷ್ಟಾ

ಅನ್ಯಾರ್ಥತಾ ತಥೈವೋಕ್ತಾ ವರ್ಣಭ್ರಷ್ಟಾ ನರೇಶ್ವರ ॥ (೩.೧೬–೧೩)

ಒಂದು ಅಕ್ಷರಲೋಪದಿಂದ ಅನ್ಯಾರ್ಥಬೋಧಕವಾದ ರಚನೆ ವರ್ಣಭ್ರಷ್ಟಾ ['ಚ್ಯುತಚಿತ್ರ'ದಲ್ಲಿ ಪರಿಗಣಿಸಬಹುದು] (೩-೧೬-೧೩).

ಲೇಶಾ

ಕಾಲಸ್ವರೂಪರೂಪಾಣಾಂ ವ್ಯಾಖ್ಯಾನೇನ ತದರ್ಥದಾ ।
ಬೀಜಮಾತ್ರೇಣ ಲೇಶಾಖ್ಯಾ ಭೂಮಿಪಾಲ ಪ್ರಕೀರ್ತಿತಾ ॥ (೩.೧೬–೧೪)

ಯಾವ ರಚನೆಯಲ್ಲಿ ಕಾಲದ ಸ್ವರೂಪ ಮತ್ತು ಅದರ ವಿಶೇಷರೂಪ ಇವನ್ನು ವ್ಯಾಖ್ಯಾನಮಾಡುವುದರಿಂದ ಸೂಕ್ಷ್ಮ ರೂಪದಿಂದ ತಿಳಿದು ಅಂತಹ ಅರ್ಥಬೋಧಕತ್ವವನ್ನೂ ಒಪ್ಪಬಹುದೋ ಆ ರಚನೆ 'ಲೇಶಾ' ಎನಿಸುತ್ತದೆ (೩–೧೬–೧೪).

ಇತರ ಆಲಂಕಾರಿಕರು ನಿರೂಪಿಸಿರುವ ಪ್ರಹೇಳಿಕೆಗಳು

ಇತರ ಆಲಂಕಾರಿಕರು ನಿರೂಪಿಸಿರುವ ಪ್ರಹೇಳಿಕೆಗಳಲ್ಲಿ ರುದ್ರಟ, ಭೋಜರು ಲಕ್ಷಿಸಿರತಕ್ಕಂತಹವನ್ನು ಮುಂದೆ ಗಮನಿಸಬಹುದಾಗಿದೆ.

ರುದ್ರಟನ (ಸು. ೮೫೦) 'ಕಾವ್ಯಾಲಂಕಾರ'

ರುದ್ರಟ ತನ್ನ 'ಕಾವ್ಯಾಲಂಕಾರ'ದ ೫ನೆಯ ಅಧ್ಯಾಯದಲ್ಲಿ ಒಂದು ಬಗೆಯ ಪ್ರಹೇಳಿಕೆಯನ್ನು ಸಲಕ್ಷ್ಯವಾಗಿ ಕುರಿತಿದ್ದಾನೆ. ಅದು 'ಸ್ಪಷ್ಟಪ್ರಚ್ಛನ್ನಾರ್ಥಪ್ರಹೇಳಿಕಾ' (ಪ. ೨೪, ೨೫). ನಮಿಸಾಧುವಿನ ಟೀಕೆಯನ್ನು ಅವಲಂಬಿಸಿ, ಅದರ ಸ್ವರೂಪವನ್ನು ಹೀಗೆ ತಿಳಿಯಬಹುದು:

ಕಾನಿ ನಿಕೃತ್ತಾನಿ ಕಥಂ ಕದಲೀವನವಾಸಿನಾ ಸ್ವಯಂ ತೇನ ।
ಕಥಮಪಿ ನ ದೃಶ್ಯತೇಽಸಾವನ್ವಕ್ಷಂ ಹರತಿ ವಸನಾನಿ ॥ (೨೯)

ಪ್ರಚ್ಛನ್ನವಾದ ಅರ್ಥವನ್ನು ಸ್ಪಷ್ಟವಾಗುವಂತೆ ಮಾಡುವುದು ಸಾಧ್ಯವಾಗುವಂತಹ ರಚನೆಯಿದ್ದರೆ, ಅದು 'ಸ್ಪಷ್ಟಪ್ರಚ್ಛನ್ನಾರ್ಥಪ್ರಹೇಳಿಕೆ'.

ಲಕ್ಷ್ಯಪದ್ಯದಲ್ಲಿ ''ಬಾಳೆಯ ತೋಟದ ಒಳಗೆ ಅವಿತುಕೊಂಡಂತಹ ಆ ವ್ಯಕ್ತಿಯಿಂದ ಯಾವುವು ಹೇಗೆ ಕದಿಯಲ್ಪಟ್ಟವು?'' ಎಂಬ ಪ್ರಶ್ನವಾಕ್ಯವಿದೆ. ಅದರಲ್ಲಿಯೇ ಉತ್ತರವೂ ಇದೆ ಎನ್ನುವುದನ್ನು ಮನಗಾಣಬೇಕು. ಪದ್ಯವನ್ನು ಒಂದು ಸಲ ಓದಿದರೆ, ಪ್ರಶ್ನೆ ಸ್ಪಷ್ಟವಾಗಿದ್ದು ಉತ್ತರ ಪ್ರಚ್ಛನ್ನವಾಗಿರುವಂತೆ ತೋರುತ್ತದೆ. ಇನ್ನೊಂದು ಸಲ ಅದೇ ಪದ್ಯವನ್ನು ಪದವಿಭಾಗಕೌಶಲದೊಡನೆ ಅರ್ಥಾಂತರವಾಗುವಂತೆ ಓದಿದರೆ ಆ ಪ್ರಚ್ಛನ್ನವಾಗಿರುವ ಉತ್ತರ ಸ್ಪಷ್ಟವಾಗುತ್ತದೆ. ಆಗ ಮೇಲಿನ ಪ್ರಶ್ನವಾಕ್ಯದಲ್ಲಿ 'ಕಾನಿ', 'ಕದಲೀವನವಾಸಿನಾ' ಎಂಬುದಾಗಿ ಇದ್ದುದು, ಉತ್ತರ ವಾಕ್ಯದಲ್ಲಿ 'ಕಾನಿ' (ಶಿರಸ್ಸುಗಳು), 'ಕದಲೀವ ನವಾಸಿನಾ' (೯ ಕತ್ತಿಗಳಿಂದ ಬಾಳೆಯ ಹಾಗೆ) ಎಂಬುದಾಗಿ ಮಾರ್ಪಡುವುದಾಗುತ್ತದೆ.

ಇದರ ಇನ್ನೊಂದು ಮುಖ ಎಂದರೆ: ಇರತಕ್ಕ ವಾಕ್ಯವನ್ನು ಇದ್ದ ಹಾಗೆಯೇ ವಾಚನಮಾಡಿದಲ್ಲಿ ಒಂದು ವೃತ್ತಾಂತದ ಪ್ರಶ್ನರೂಪವಾದ ಅರ್ಥ ಗೊತ್ತಾಗುವುದು; ಅಲ್ಲಿಯೇ ಉತ್ತರ ನಮಗೆ ಸಿಕ್ಕುವುದಿಲ್ಲ. ಆ ಪ್ರಶ್ನವಾಕ್ಯದ 'ಅನ್ವಕ್ಷಂ' 'ವಸನಾನಿ', 'ನ ದೃಶ್ಯತೇ' ಎಂಬ ಮೂರು ವಿಶೇಷಣಗಳಿಂದ ಉತ್ತರ ರೂಪವಾದ ಅರ್ಥ 'ಗಾಳಿ' ಎಂದು ಹೊಳೆಯುತ್ತದೆ. ಹಿಂದಿನ ಭೇದದಲ್ಲಿಯಾದರೋ ಉತ್ತರ ಅಲ್ಲಿಯೇ ಹುದುಗಿತ್ತು; ಈ ಭೇದದಲ್ಲಿ ಆಶಯವನ್ನು ಹೊರಗಿನಿಂದ ಕಂಡುಕೊಳ್ಳಬೇಕಾಗಿದೆ.

ಭೋಜದೇವನ 'ಸರಸ್ವತೀಕಂಠಾಭರಣ'

ಭೋಜದೇವನ 'ಸರಸ್ವತೀಕಂಠಾಭರಣ'ದಲ್ಲಿ, ದಂಡಿ ರುದ್ರಟರು ನಿರೂಪಿಸಿರುವುದರಿಂದ ಬೇರೆಯಾದ ಕೆಲವು ಪ್ರಹೇಳಿಕೆಗಳನ್ನು ನಿರೂಪಿಸಿದೆ. ಆ ಸಂಬಂಧವಾಗಿ ಆತನು ತನ್ನ ಗ್ರಂಥದ ದ್ವಿತೀಯ ಪರಿಚ್ಛೇದದಲ್ಲಿ ಹೇಳಿರುವ ಸೂತ್ರ:

ಪ್ರಹೇಲಿಕಾ ಸಕೃತ್ಪ್ರಶ್ನಃ ಸಾಪಿ ಷೋಢಾ ಚ್ಯುತಾಕ್ಷರಾ
ದತ್ತಾಕ್ಷರೋಭಯಂ ಮುಷ್ಟಿರ್ಬಿಂದುಮತ್ಯರ್ಥವತ್ಯಪಿ॥ (ಸೂತ್ರ ೧೩೩)

ಪ್ರಹೇಳಿಕೆ ಎಂದರೆ ಒಮ್ಮೆ ಪ್ರಶ್ನಿಸುವುದು ಎಂದರ್ಥ. ಇದು ೬ ವಿಧವಾಗಿ ವಿಭಜಿಸಲ್ಪಡುತ್ತದೆ. ಅವು ಯಾವುವೆಂದರೆ: ಚ್ಯುತಾಕ್ಷರ, ದತ್ತಾಕ್ಷರ, ಚ್ಯುತದತ್ತಾಕ್ಷರ, ಮುಷ್ಟಿ, ಬಿಂದುಮತಿ ಮತ್ತು ಅರ್ಥವತಿ. ಒಂದೊಂದಾಗಿ ಇವುಗಳ ಸ್ವರೂಪವನ್ನು ಟೀಕೆಯ ಸಹಾಯವನ್ನು ಅವಲಂಬಿಸಿ ಮುಂದೆ ಗಮನಿಸೋಣ:

ಚ್ಯುತಾಕ್ಷರ

ಪಯೋಧರಭರಾಕ್ರಾಂತಾ ಸಂನಮಂತೀ ಪದೇಪದೇ ।
ಪದಮೇಕಂ ನ ಕಾ ಯಾತಿ ಯದಿ ಹಾರೇಣ ವರ್ಜಿತಾ ॥ (ಪ. ೩೫೮)

ಇಲ್ಲಿ ವಿಹಂಗಿಕೆ (ಹಕ್ಕಿ) 'ಕಾಹಾರ'ದಿಂದ ವರ್ಜಿತವಾಗಿ ಮುಂದಕ್ಕೆ ಹೆಜ್ಜೆಯಿಡುವುದಿಲ್ಲ ಎಂದು ಹೇಳಬೇಕಾಗಿರುವಾಗ, ''ಹಾರೇಣ ವರ್ಜಿತಾ'' ಎಂದು ಹೇಳಿದೆ. ಆದ್ದರಿಂದ 'ಕಾ' ಎನ್ನುವ ಅಕ್ಷರ, 'ಹಾರೇಣ' ಎಂಬುದರ ಹಿಂದೆ ಇರಬೇಕಾದ್ದು ಚ್ಯುತವಾಗಿದೆ ಎನ್ನಬೇಕು; ಆದ್ದರಿಂದಲೇ ಇದು 'ಚ್ಯುತಾಕ್ಷರ'. 'ಕಾ' ಎಂಬ ಅಕ್ಷರವನ್ನು 'ಹಾರೇಣ' ಎಂಬುದರ ಹಿಂದೆ ಸೇರಿಸಿಕೊಂಡರೆ ವಿಹಂಗಿಕೆಗೆ ಅದು ಹೊಂದಿಕೊಳ್ಳುತ್ತದೆ. ವಾಕ್ಯ ಇರುವಂತೆಯೇ ಒಬ್ಬ ತರುಣಿಯ ವರ್ಣನೆಯ ಬಗ್ಗೆ ಪ್ರಶ್ನೆಯಾಗಿದೆ; ಅದಕ್ಕೆ ಹೊಂದುವಂತೆ ''ಹಾರದಿಂದ ವರ್ಜಿತೆಯಾದ ಸ್ತ್ರೀ ಮುಂದಕ್ಕೆ ಹೆಜ್ಜೆಯಿಡುವುದಿಲ್ಲ'' ಎಂಬ ಉತ್ತರ ಹೊರಡುವುದು ಸ್ವಾಭಾವಿಕವಾಗಿದೆ. (ಇದು ಒಂದು ರೀತಿಯಲ್ಲಿ ವರ್ಣಚಿತ್ರವೇ.)

ದತ್ತಾಕ್ಷರ

ಕಾಂತಯಾನುಗತಃ ಕೋಽಯಂ ಪೀನಸ್ಕಂಧೋ ಮದೋದ್ಧತಃ ।
ಮೃಗಾಣಾಂ ಪೃಷ್ಠತೋ ಯಾತಿ ಶಂಬರೋ ರೂಢಯೌವನಃ ॥ (೩೫೯)

ಇಲ್ಲಿ ಬನೆಯ ಪಾದದಲ್ಲಿ 'ಶಬರಃ' ಎಂದು ಹೇಳುವುದಕ್ಕೆ ಬದಲಾಗಿ 'ಶಂಬರಃ' ಎಂದು ಒಂದು ಅನುಸ್ವಾರವನ್ನು ಹೆಚ್ಚಾಗಿ ಕೊಟ್ಟ ರೂಪವನ್ನು ಬಳಸಿರುವ ಕಾರಣ, ಇದು 'ದತ್ತಾಕ್ಷರ'. ಆ ಅನುಸ್ವಾರವನ್ನು ತೆಗೆದುಹಾಕಿದರೆ, 'ಶಬರಃ' ಎಂದಾಗಿ ಶ್ಲೋಕಾರ್ಥವು ಪ್ರಸಂಗಕ್ಕೆ ತಕ್ಕಂತೆ ಹೊಂದಿಕೊಳ್ಳುತ್ತದೆ.

ಚ್ಯುತದತ್ತಾಕ್ಷರ

ವಿದಗ್ಧಃ ಸರಸೋ ರಾಗೀ ನಿತಂಬೋಪರಿಸಂಸ್ಥಿತಃ ।
ತನ್ವಂಗ್ಯಾಲಿಂಗಿತಃ ಕಂಠೇ ಕಲಂ ಕೂಜತಿ ಕೋ ವಿಟಃ ॥ (೩೬೦)

ಇಲ್ಲಿ 'ವಿಟಃ' ಎಂಬ ಶಬ್ದದಲ್ಲಿ 'ವಿ' ಚ್ಯುತನಾಡಿ, 'ಘ' ದತ್ತನಾಡಿದರೆ ''ಘಟಃ ಕೂಜತಿ'' ಎಂಬ ಎರಡನೆಯ ಅರ್ಥ ಹೊರಡುತ್ತದೆ.

ಅಕ್ಷರಮುಷ್ಟಿಕಾ

ಅತಿಃ ಅತಿಃ ಅಸ್ಮ ಅಲಂ ಪ್ರೀದ್ಯ ರದ್ಯ ಜದ್ಯ ಫದ್ಯ ।
ಮೇಲಾ ಮೇಲಾ ಮೇಲಂ ಮೇಲಂ ಘಸ ಘಸ ಘಸ ಘಸ ॥ (೩೬೧)

ಅಕ್ಷರಗಳ ಮುಷ್ಟಿಯನ್ನೇ 'ಅಕ್ಷರಮುಷ್ಟಿ' ಎಂದು ಕರೆದಿದೆ. ಶ್ಲೋಕದ ೪ ಪಾದಗಳನ್ನು ಒಂದರ ಕೆಳಗೆ ಒಂದರಂತೆ ಈ ಕೆಳಗೆ ಕಾಣಿಸಿರುವಂತೆ ಮುರಜ ಬಂಧದಲ್ಲಿ ಯೋಜಿಸಿದರೆ ಆಗ ಸಾರ್ಥಕವಾದ ಬೇರೊಂದು ಶ್ಲೋಕವೆ ಹೀಗೆ ಆಗುತ್ತದೆ. (ಮುರಜಬಂಧರಚನೆಗೆ 'ಬಂಧ'ಗಳನ್ನು ಕುರಿತ ಭಾಗದಲ್ಲಿಯ ನಕ್ಷೆ ನೋಡಿ.)

ಅದ್ಯ ಮೇ ಸಫಲಾ ಪ್ರೀತಿರದ್ಯ ಮೇ ಸಫಲಾ ರತಿಃ ।
ಅದ್ಯ ಮೇ ಸಫಲಂ ಜನ್ಮ ಅದ್ಯ ಮೇ ಸಫಲಂ ಫಲಂ ॥ (೩೬೨)

ಬಿಂದುಮತಿ

ತವಾವವಾದಃ ಪ್ರತ್ಯಬ್ಧಿ ಪತಾಕಾ ಪ್ರತಿಸಂಗರಂ ।
ಫಲಂ ಪ್ರತ್ಯದ್ಭುತೋಪಾಯಂ ಯಶಾಂಸಿ ನತು ನ ಕ್ವಚಿತ್ ॥ (೩೬೩)

ಈ ಪದ್ಯದಲ್ಲಿ ಪ್ರಸಕ್ತವಾದ ಒಂದು ಅರ್ಥದ ಕಡೆಗೆ ಸೂಚನೆಯಿದೆ. ಇಲ್ಲಿ ಸೂಚ್ಯವಾದ ಅರ್ಥಕ್ಕೆ ಹೊಂದುವ ಹಾಗೆ ಶಬ್ದಗಳ ಹಾಗೂ ವರ್ಣಗಳ ಸ್ಥಾನದಲ್ಲಿ ಬರಿಯ ಬಿಂದುಗಳನ್ನೇ ಬಳಸಿ, ವ್ಯಂಜನಗಳ ಜೊತೆಗೆ ಸೇರುವ ಉಚಿತ ಸ್ವರಾಕ್ಷರಗಳ ಕಾಗುಣಿತ ಚಿಹ್ನಗಳನ್ನು ('ಅ' ಸೂಚಿಸುವ ತಲಕಟ್ಟು ಒಂದನ್ನು ಬಿಟ್ಟು) ಆಯಾ ಸ್ಥಾನಗಳಲ್ಲಿ ಗುರುತಿಸಿ, ಅಂತಹ ೪ ಪಾದಗಳ ಪದ್ಯದ ನಕ್ಷೆಯನ್ನು ಹಾಕುವುದು 'ಬಿಂದುಮತಿ'.



ಇದರ ನಿರ್ಭೇದ ಎಂದರೆ ಒಗಟು ಬಿಡಿಸುವುದು ಹೀಗೆ:

ಉದಧಾವುದಧಾವಾಜ್ಞಾ ಸಂಯುಗೇ ಸಂಯುಗೇ ಜಯಃ ।
ಸಾಹಸೇ ಸಾಹಸೇ ಸಿದ್ಧಿಃ ಸರ್ವತ್ರ ತವ ಕೀರ್ತಯಃ ॥ (೩೬೪)

ಅರ್ಥಪ್ರಹೇಲಿಕಾ

ಉತ್ತಪ್ತಕಾಂಚನಾಭಾಸಂ ಸಂದಷ್ಟದಶನಚ್ಛದಂ
ಸರಸಂ ಚುಂಬ್ಯತೇ ಹೃಷ್ಟೈರ್ವೃದ್ಧೈರಪಿ ಕಿಮುಜ್ಜ್ವಲಂ ॥ (೩೬೫)

ಈ ಪದ್ಯದಲ್ಲಿ ಅಪ್ರಸಕ್ತವಾದ ಸುಂದರಿಯ ಮೊಗದ ಬಣ್ಣನೆಯಲ್ಲಿ ಪ್ರಶ್ನೆಯನ್ನಿಟ್ಟು, 'ವೃದ್ಧ' ಪದದ ಸಾಹಚರ್ಯದಿಂದ ಉತ್ತರವಾದ ''ಪಕ್ವಾಮ್ರಫಲಂ'' ಎಂಬುದಕ್ಕೆ ಸರಿಹೊಂದುವಂತೆ ಎರಡು ಅರ್ಥಗಳ ಪದ ಪ್ರಯೋಗವನ್ನು ಪದ್ಯದಲ್ಲಿ ಮಾಡಿದ್ದಾನೆ. 'ಸಂದಷ್ಟದಶನಚ್ಛದಂ'–ಒಂದು ಜಾತಿಯ ಮಾವಿನ ಹಣ್ಣು ತಿನ್ನುವಾಗ ತುಟಿಯು ಕಡಿತವಾಗುವುದು. ಇದು ಸ್ವಾಭಾವಿಕ.

ಸಂಸ್ಕೃತದಲ್ಲಿ ಪ್ರಹೇಳಿಕೆಯ ಕೆಲವು ನಿದರ್ಶನಗಳು

'ಪ್ರಹೇಳಿಕೆ'ಯ ಕೆಲವು ಸಂಸ್ಕೃತ ಲಕ್ಷ್ಯಗಳನ್ನು 'ಸುಭಾಷಿತರತ್ನ ಭಾಂಡಾಗಾರ' ದಂತಹ ಆಕರಗಳನ್ನು ನೋಡಿ ತಿಳಿಯಬಹುದಾಗಿದೆ. ಇಲ್ಲಿ ಹೆಚ್ಚು ಉದಾಹರಣೆಗಳನ್ನು ಕೊಡಲು ಸಾಧ್ಯವಾಗದು. ಅಲ್ಲದೆ ಈಗಾಗಲೇ 'ಕಾವ್ಯಾದರ್ಶ' ಮೊದಲಾದ ಅಲಂಕಾರಗ್ರಂಥಗಳಲ್ಲಿ ವಿಭಿನ್ನ ಶೀರ್ಷಿಕೆಗಳ ಅಡಿಯಲ್ಲಿ ಕೆಲವು ಪ್ರಹೇಳಿಕೆಗಳ ಲಕ್ಷ್ಯಗಳು

ಬಂದೇ ಇವೆ. ಅವುಗಳಿಂದ ಈ ವಿಭಾಗದ ಪ್ರಭೇದಗಳ ಸ್ವರೂಪವಂತೂ ವಿದಿತವಾಗುತ್ತದೆ. ಪ್ರಸ್ತುತ ಜಿನಸೇನರ 'ಮಹಾಪುರಾಣ' ದಿಂದ ಹಾಗೂ 'ಸುಭಾಷಿತರತ್ನಭಾಂಡಾಗಾರ' ದಿಂದ ಮೂದರಿಗೆ ಕೆಲವು ಲಕ್ಷ್ಯಗಳನ್ನು ಉದ್ಧರಿಸಿದೆ:

ಜಿನಸೇನರ 'ಮಹಾಪುರಾಣ'ದಲ್ಲಿ

ನಾಭೇರಭಿಮತೋ ರಾಜ್ಞಸ್ತ್ವಯಿ ರಕ್ತೋ ನ ಕಾಮುಕಃ ।
ನ ಕುತೋಽಪ್ಯಧರಃ ಕಾಂತ್ಯಾ ಯಃ ಸದೋಜೋಧರಃ ಸ ಕಃ ॥ (೨೨೫)

ಪರಿಚರ್ಯೆಯ ದೇವತಾಸ್ತ್ರೀಯರು ಜಿನಜನನಿಯಾಗಲಿದ್ದ ಮರುದೇವಿಯನ್ನು ಸಂತೋಷಪಡಿಸಲು ಕೊಟ್ಟ ಒಗಟುಗಳಲ್ಲಿ ಇದು ಒಂದು.

"ನಾಭಿರಾಜನಿಗೆ ಪ್ರಿಯನೂ ನಿನ್ನಲ್ಲಿ ಅನುರಾಗವುಳ್ಳವನೂ ಕೆಂಪಾದವನೂ ಕಾಮುಕನಲ್ಲದವನೂ ಯಾವ ಕಾರಣದಿಂದಲೂ ಅಧರ (ನೀಚ)ನಲ್ಲದವನೂ ಕಾಂತಿಯಿಂದ ಯಾವಾಗಲೂ ಓಜೋಧರನೂ (ತೇಜಸ್ವಿ) ಆದವನು ಯಾವನು?" ಇದಕ್ಕೆ ಆಕೆಯ ಉತ್ತರ: 'ಅಧರ' (=ಕೆಳದುಟಿ). 'ಅಲಂಕಾರ ಚಿಂತಾಮಣಿ'ಯಲ್ಲಿ ಇದನ್ನು 'ಅರ್ಥಪ್ರಹೇಲಿಕಾ' ಎಂದಿದೆ (೨–೨೬).

ವಟವೃಕ್ಷಃ ಪುರೋಽಯಂ ತೇ ಘನಚ್ಛಾಯಃ ಸ್ಥಿತೋ ಮಹಾನ್ ।
ಇತ್ಯುಕ್ತೋಽಪಿ ನ ತಂ ಘರ್ಮೇ ಶ್ರಿತಃ ಕೋಽಪಿ ವದಾದ್ಭುತಂ॥

"ನೋಡು, ನಿನ್ನ ಮುಂದೆಯೇ ದೊಡ್ಡ ಆಲದ ಮರದ ನೆರಳು ಬೇಕಾದಷ್ಟಿದೆ ಎಂದು ತೋರಿಸಿಕೊಟ್ಟರೂ ಬಿಸಿಲಿನಲ್ಲಿ ಬಳಲುತ್ತಿದ್ದ ಯಾವನೂ ನೆರಳಿಗೆ ಹೋಗಲಿಲ್ಲ. ಈ ಸೋಜಿಗವೇನು?" ಈ ಒಗಟನ್ನು ಒಡೆಯುವುದು ಹೀಗೆ : ವಟವೃಕ್ಷಃ=ವಟೋ (ವಟುವೇ) + ಋಕ್ಷಃ (ಕರಡಿ) ಎಂಬುದಾಗಿ ಬಿಡಿಸಿದರೆ ಸಾಕು. ವಟು ಕರಡಿಯ ಬಳಿಗೆ ಹೋಗಲಿಲ್ಲ ಎಂಬುದು ಸಹಜವೇ. 'ಅಲಂಕಾರಚಿಂತಾಮಣಿ'ಯಲ್ಲಿ ಇದನ್ನು 'ಸ್ಪಷ್ಟಾಂಧಕ (ಪ್ರಹೇಲಿಕಾ)' ಎಂದಿದೆ (೨–೨೯).

'ಸುಭಾಷಿತರತ್ನಭಾಂಡಾಗಾರ'ದಲ್ಲಿ

ಅಪಾದೋ ದೂರಗಾಮೀ ಚ ಸಾಕ್ಷರೋ ನ ತು ಪಂಡಿತಃ ।
ಅಮುಖಃ ಸ್ಫುಟವಕ್ತಾ ಚ ಯೋ ಜಾನಂತಿ ಸಾ ಪಂಡಿತಃ ॥

"ಕಾಲುಗಳಿಲ್ಲ, ಆದರೆ ದೂರವನ್ನು ಕ್ರಮಿಸಬಲ್ಲುದು; ಅಕ್ಷರಗಳುಂಟು, ಆದರೆ ಪಂಡಿತನೇನಲ್ಲ; ಬಾಯಿಲ್ಲ, ಆದರೆ ಸ್ಫುಟವಾಗಿ ಮಾತನಾಡಬಲ್ಲುದು. ಇದನ್ನು ಅರ್ಥಮಾಡಿಕೊಳ್ಳಬಲ್ಲವನು-ಪಂಡಿತನೆನಿಸುತ್ತಾನೆ." (ಇದರ ಉತ್ತರ 'ಲಿಖಿತಪತ್ರ'.)

ಈ ಪ್ರಹೇಳಿಕೆಯನ್ನು ಪ್ರಶ್ನರೂಪದಲ್ಲಿಯೂ ಇಡಬಹುದು. ಇಟ್ಟಾಗ, ಉತ್ತರ ಅಥವಾ ಅದರ ಸೂಚನೆ ಕೊನೆಯ ಪಾದದಲ್ಲಿರುತ್ತದೆ.

ಲಸದ್ಬಿಂದುಭಿರಾಭಾಂತಿ ಮುಖೈರಮರವಾರಣಾಃ ।
ಘಟಾಘಟನಯಾ ವ್ಯೋಮ್ನಿ ವಿಚರಂತಸ್ತ್ರಿಧಾ ಸ್ರುತಃ ॥ (ಪ. ೨೩೮)

"ಮೂರು ಸ್ಥಾನಗಳಲ್ಲಿ ಮದವನ್ನು ಸ್ರವಿಸುವ ದೇವಗಜಗಳು ಗುಂಪುಗೂಡಿ ಆಕಾಶದಲ್ಲಿ ಸಂಚರಿಸಬಲ್ಲವಾಗಿ, 'ಬಿಂದು' (ಚುಬ್ಬು)ಗಳ ಮುಖದಿಂದ ಶೋಭಿಸುತ್ತವೆ."

ಇಲ್ಲಿ 'ಘಟಾ' ಶಬ್ದಕ್ಕೆ ಸಮೂಹವೆಂಬ ಅರ್ಥ ಹೊಂದಿದ್ದರೂ, 'ಘಂಟಾ' ಎಂಬ ಸಬಿಂದುಕರೂಪವಿರುವುದು ಇನ್ನೂ ಚೆನ್ನಾಗಿ ಹೊಂದುತ್ತದೆ. ಇದು 'ಬಿಂದುಚ್ಯುತಕ'ದ ಲಕ್ಷ್ಯ (ನೋಡಿ 'ಅಲಂಕಾರಚಿಂತಾಮಣಿ' ೨–೩೫).

ಜಗೇ ಕಯಾಪಿ ಸೋತ್ಕಂಠಂ ಕಿಮವ್ಯಾಕುಲಮೂರ್ಛನಂ ।
ವಿರಹೇಂಗನಯಾ ಕಾಂತಸಮಾಗಮನಿರಾಶಯಾ ॥ (ಪ. ೨೪೧)

"ಪತಿಯ ಸಮಾಗಮದಲ್ಲಿ ನಿರಾಸೆಗೊಂಡ ಸ್ತ್ರೀಯೊಬ್ಬಳು ಪತಿವಿಯೋಗದಲ್ಲಿ ವ್ಯಾಕುಲತೆಯಿಂದ ಸ್ವಲ್ಪ ಉತ್ಕಂಠಿತೆಯಾಗಿ ಗದ್ಗದ ಕಂಠದಿಂದ ಹಾಡಿದಳು."

ಇಲ್ಲಿ 'ಜಗೇ' ಎಂದರೆ 'ಹಾಡಿದಳು' ಎಂಬುದಾಗಿ ವಿರೋಧವಾದ ಆಶಯ ವ್ಯಕ್ತವಾಗಿದೆ. 'ಜಗ್ಲೇ' ಎಂದಿಟ್ಟುಕೊಂಡರೆ 'ಶೋಕಿಸಿದಳು' ಎಂದಾಗುವುದು. ಇದು 'ಅರ್ಧಮಾತ್ರಾಚ್ಯುತಕ' (=ವ್ಯಂಜನಚ್ಯುತಕ)ದ ಲಕ್ಷ್ಯ.

'ಹಿತಬೋಧಿನಿ' ಪತ್ರಿಕೆಯಲ್ಲಿ

ವೃಕ್ಷಾಗ್ರವಾಸೀ ನ ತು ಪಕ್ಷಿರಾಜಃ । ತ್ರಿಣೇತ್ರಧಾರೀ ನ ಚ ಶೂಲಪಾಣಿಃ ।
ಜಲಾಂತರಸ್ಥೋ ನ ತು ಮೇಘರಾಜಃ । ನ ದೇವ ರಕ್ಷೋರಗಮಾನುಷೇಷು ॥ (೨-೨)

"ಮರದ ತುದಿಯಲ್ಲಿರುವುದು, ಆದರೆ ಗರುಡನಲ್ಲ; ಮೂರು ಕಣ್ಣುಳ್ಳದು, ಆದರೆ ಶಿವನಲ್ಲ; ಒಳಗೆ ನೀರುಂಟು, ಆದರೆ ಮೇಘರಾಜನಲ್ಲ; ದೇವತೆಗಳು ರಾಕ್ಷಸರು ಉರಗರು ಹಾಗೂ ಮನುಷ್ಯರಲ್ಲಿ ಯಾರೂ ಅಲ್ಲ. (ಉತ್ತರ 'ತೆಂಗಿನಕಾಯಿ'.)

ಸ್ಥಾಣುರ್ಭವಾನ್ ಮೂಲವಿಹೀನ ಏವ । ಪುತ್ರೋ ವಿಶಾಖೋ ರಮಣೀತ್ವಪರ್ಣಾ ।
ಪರೋಪನೀತೈಃ ಕುಸುಮೈರಜಸ್ರಂ । ಫಲತ್ಯಭೀಷ್ಟಂ ಕಿಮಿದಂ ವಿಚಿತ್ರಂ ॥ (೨-೩, ಪು. ೧೧೯)

ಇದು ಮೋಟುಮರ ಮತ್ತು ಈಶ್ವರ ಎರಡಕ್ಕೂ ಅನ್ವಯಿಸುವ ಚಮತ್ಕಾರದಿಂದ ಕೂಡಿದೆ. "ನೀನು ಸ್ಥಾಣು (ಈಶ್ವರ, ಮೋಟುಮರ). ಮೂಲವಿಹೀನನು (ಆದಿರಹಿತನು, ಬೇರಿಲ್ಲದ್ದು), ಪುತ್ರ ವಿಶಾಖನು (ಕುಮಾರ ಸ್ವಾಮಿ, ರೆಂಬೆಗಳಿಲ್ಲದ್ದು), ರಮಣಿ ಅಪರ್ಣಾ (ಪಾರ್ವತಿ, ಎಲೆಗಳಿಲ್ಲದ್ದು); ಹೀಗಿದ್ದರೂ ಪರರಿಂದ ಸಮರ್ಪಿತವಾದ ಹೂವುಗಳಿಂದ ಬೇಕಾದ ಫಲ ನೀಡುವೆ. ಇದೇನು ವಿಚಿತ್ರ!"

ಪಾಂಥಾರಿ ದ್ವಿಷದಂಗನಾಸುತವಿಭೋರ್ಭೃತ್ಯಸ್ಯ ವರ್ಮಾಹೃತಃ
ಪುತ್ರಸ್ತ್ರೀ ಸಹಜಂ ಧರಸ್ಯ ಭಗಿನೀನಾಥಾತ್ಮಜಸ್ತ್ರೀ ಪಿತುಃ
ಸೂನೋರ್ಮಾತುಲವೈರಿತಾತತನಯಸ್ವಾಮೀಶ್ವರಸ್ಯಾಂಗನಾ
ಮಾತಾ ತದ್ಧರರಾಜಸೂನುಸುಹೃದಃ ಪುತ್ರೀಕಟಾಕ್ಷೋಸ್ತು ವಃ ॥ (೨-೫)

"ಪಾಂಥರ ಶತ್ರು ಮನ್ಮಥನ, ಶತ್ರು ಹರನ, ಪತ್ನಿ ಗಂಗೆಯ, ಮಗ ಭೀಷ್ಮನ, ಸ್ವಾಮಿ ದುರ್ಯೋಧನನ, ಭೃತ್ಯ ಕರ್ಣನ, ಕವಚವನ್ನು ಕಸಿದ ಇಂದ್ರನ, ಮಗ ವಾಲಿಯ, ಪತ್ನಿ ತಾರೆಯ, ಒಡಹುಟ್ಟಿದ ಕೌಸ್ತುಭವನ್ನು ಧರಿಸಿದ ಕೃಷ್ಣನ, ತಂಗಿ ಸುಭದ್ರೆಯ, ಪತಿ ಅರ್ಜುನನ, ಮಗ ಅಭಿಮನ್ಯುವಿನ, ಪತ್ನಿ ಉತ್ತರೆಯ, ತಂದೆ ವಿರಾಟನ, ಮಗ ಉತ್ತರನ, ಮಾವ ಕೀಚಕನ, ಶತ್ರು ಭೀಮನ, ತಂದೆ ವಾಯುವಿನ, ಮಗ ಹನುಮಂತನ, ಸ್ವಾಮಿ ಸುಗ್ರೀವನ, ಸ್ವಾಮಿ ರಾಮನ, ಪತ್ನಿ ಜಾನಕಿಯ, ತಾಯಿ ಭೂಮಿಯನ್ನು ಧರಿಸಿದ ಪರ್ವತದ, ರಾಜ ಹಿಮವಂತನ, ಮಗ ಮೈನಾಕನ, ಮಿತ್ರ ಸಮುದ್ರರಾಜನ, ಮಗಳು ಲಕ್ಷ್ಮಿಯ ಕಟಾಕ್ಷ ನಮಗಿರಲಿ." ಇದು 'ಪಾರಿಹಾರಿಕೆ'ಯ ನಿದರ್ಶನ.

'ಕವಿರಾಜಮಾರ್ಗ' ಕಾವ್ಯಾವಲೋಕನಾದಿಗಳ ಪ್ರಹೇಳಿಕೆಗಳು

'ಕವಿರಾಜಮಾರ್ಗ' (ಸು.೮೫೦)ದ ದ್ವಿತೀಯ ಪರಿಚ್ಛೇದದಲ್ಲಿ, ಅದರ ಕರ್ತೃ ಕೆಲವು ಪ್ರಹೇಳಿಕೆಗಳನ್ನು 'ಹೇಳಿಕೆ'ಗಳೆಂಬ ಹೆಸರಿನಲ್ಲಿ ಪ್ರತ್ಯೇಕವಾಗಿ ಕುರಿತಿದ್ದಾನೆ (ಪ.೧೪೩–೧೫೨). ಆ ಹೇಳಿಕೆಗಳಲ್ಲಿಯ ವಿಭೇದಗಳನ್ನು ಸಂಕ್ಷೇಪವಾಗಿ ಹೇಳುವುದಾಗಿ ಮೊದಲು ಸಂಕಲ್ಪಿಸಿ (ಪ.೧೪೩), ಆ ಸಂಕಲ್ಪದಂತೆ ಆ ವಿಭೇದಗಳನ್ನು ಹೀಗೆ ಪಟ್ಟಿ ಮಾಡಿದ್ದಾನೆ (ಪ. ೧೪೪):

ಭಾವೆಯುಂ ನುಸುಳುಮಸ್ಪಷ್ಟಾಕ್ಷರಮು । ಮಾ ವರ್ಣವ್ಯತ್ಯಯಮುಂ ಬಿಂದುಚ್ಯುತಿಯುಂ ।
ಭಾವಿಸಿದೊನರ್ುಡಿಯುಂ ವರ್ಣಚ್ಯುತಮುಂ। ಕೇವಳಮುವಜಿ ಭೇದ[ಮಾ] ಸುಸಮಸ್ತಕ[ಮುಂ]॥

ಈ ಪದ್ಯದ ಪ್ರಕಾರ, 'ಕವಿರಾಜಮಾರ್ಗ'ದಲ್ಲಿ ಭಾವೆ, ನುಸುಳ್, ಅಸ್ಪಷ್ಟಾಕ್ಷರ, ವರ್ಣವ್ಯತ್ಯಯ, ಬಿಂದುಚ್ಯುತಿ, ಒನರ್ುಡಿ, ವರ್ಣಚ್ಯುತ ಮತ್ತು ಸುಸಮಸ್ತಕ (ಸಮಸ್ತಕ) ಎಂಬ ೮ ಪ್ರಹೇಳಿಕೆಗಳು ಮುಂದೆ ನಿರೂಪಿತವಾಗುತ್ತವೆಯೆಂದು ತಿಳಿಯುತ್ತದೆ. ಕೆಲವರು ೭ ಪ್ರಹೇಳಿಕೆಗಳೆಂದು ಗ್ರಹಿಸಿರುವುದು ಒಪ್ಪತಕ್ಕದ್ದಲ್ಲ. ಯಥಾಮತಿಯಾಗಿ ಇಲ್ಲಿ ತಿದ್ದಿರುವ ಪಾಠದಂತೆ 'ಸುಸಮಸ್ತಕ' ಎಂಬ ಒಂದು ಪ್ರಹೇಳಿಕೆಯನ್ನೂ ಕವಿ ಬಳಸಿರುವುದು ಬಲುಮಟ್ಟಿಗೆ ಸಂಭಾವ್ಯವಾದ್ದು. ವರ್ಣಚ್ಯುತಕದ ಲಕ್ಷ್ಯವಾದ ಬಳಿಕ ಬಂದಿರುವ ಸಮಂತಿ(?)ಯ ಲಕ್ಷ್ಯ ಆ ಬನೆಯ ಭೇದಕ್ಕಾಗಿ ಕೊಟ್ಟಿರುವುದು ಎಂದೇ ತೋರುತ್ತದೆ. 'ಸುಸಮಸ್ತಕಮುಂ' ಎಂಬುದರ ಮೂಲಪಾಠ 'ಸುಸಮಂತ್ರಕಮುಂ' ಎಂದೇ ಇದ್ದಿರಲೂ ಬಹುದು; ಆದರೆ ಇಲ್ಲಿ ಮುದ್ರಿತ ಗ್ರಂಥಗಳಲ್ಲಿಯ ಪಾಠವನ್ನು ತಿದ್ದುವ ಧೈರ್ಯಮಾಡಿಲ್ಲ. ಈ ಎಂಟು ಭೇದಗಳಲ್ಲಿ ಯಾವುವು, ಎಷ್ಟರಮಟ್ಟಿಗೆ ದಂಡಿ ಮೊದಲಾದ ಪೂರ್ವಾಚಾರ್ಯರ ನಿರೂಪಣೆಯನ್ನು ಅನುಸರಿಸಿವೆ ಎನ್ನುವುದು ವಿಶದವಾದ ಪರಿಶೀಲನೆಯಿಂದ ತಿಳಿಯಬೇಕಾದ್ದು. ನಾಮಸಾಮ್ಯ, ಲಕ್ಷ್ಯಸ್ವರೂಪದ ಸಾಮ್ಯ ಎರಡೂ ಉಂಟೇ? ಆ ಎರಡರಲ್ಲಿ ಯಾವುದೊಂದಾದರೂ ಉಂಟೇ? ಇದು ಗಾಢಪರಿಶೀಲನೆಯಿಂದಲೇ ವ್ಯಕ್ತವಾಗಬೇಕಾದ್ದು. ಇಲ್ಲಿ 'ಬಿಂದುಚ್ಯುತಿ' 'ಚ್ಯುತಚಿತ್ರ'ದಲ್ಲಿ ಸೇರಬಹುದಾದ್ದು.

ಈ ಸಂದರ್ಭದಲ್ಲಿ ಈಚೆಯ ಆಲಂಕಾರಿಕ ಇಮ್ಮಡಿ ನಾಗವರ್ಮನ (೧೦೪೨) 'ಕಾವ್ಯಾವಲೋಕನ'ದ ಸದೃಶಭಾಗದತ್ತ ನಮ್ಮ ಕಣ್ಣು ಹೊರಳುವುದು ಸಹಜವೇ. ಆ ಗ್ರಂಥದ ೩ನೆಯ ಗುಣವಿವೇಕಾಧಿಕರಣದಲ್ಲಿ ಒಂದು ಸೂತ್ರ (೧೪೦) 'ಪೇಳಿಕೆ' (<ಪ್ರಹೇಲಿಕಾ)ಗಳ ಪ್ರಯೋಜನ ಸಾಮಾನ್ಯಲಕ್ಷಣಗಳನ್ನೂ ಇನ್ನೊಂದು ಸೂತ್ರ (೧೪೧) ಲಕ್ಷ್ಯಪೂರ್ವಕವಾಗಿ (ಪ. ೫೯೫–೬೦೦) ಅವುಗಳ ಭೇದಗಳನ್ನೂ ಕುರಿತಿರುವುದು ಕಾಣುತ್ತದೆ. ಆ ಭೇದಗಳನ್ನು ಹೇಳುವ ಸೂತ್ರವಿದು:

ನುಸುಳೊನರ್ುಡಿ ಭಾವೆ ಮನ । ಕ್ಕೆಸೆವಸ್ಪಷ್ಟಾರ್ಥಮುಜಿವು ನಾಮಾಂತರಿತಂ।
ಕುಸುರಿಯ ನುಡಿಯೆಂಬಿವು ಭಾ । ವಿಸೆ ಪೇಳಿಕೆಗಳೊಳೆ ಪೇಟ್ವಿ ಭೇಧಮುವಕ್ಕುಂ ॥ (೧೪೧)

ನಾಗವರ್ಮನು (೨) ತನ್ನ ಕೃತಿಯ ಒಂದು ಆಕರವಾಗಿ 'ಕವಿರಾಜಮಾರ್ಗ'ವನ್ನು ಸಹ ಬಳಸಿರುವುದು ಈಗಾಗಲೇ ವಿದಿತವಾಗಿದೆ; ಆದ್ದರಿಂದ ಅಲ್ಲಿಯ ಭಾವೆ, ನುಸುಳ್, ಅಸ್ಪಷ್ಟಾರ್ಥ, ಒನರ್ುಡಿ ಇಲ್ಲಿಯೂ ಹಾಗೆಯೇ ಉಕ್ತವಾಗಿದ್ದರೆ ಆಶ್ಚರ್ಯವೇನಿಲ್ಲ. ಉಳಿದವುಗಳಲ್ಲಿ ಮೇಲುನೋಟಕ್ಕೆ ನಾಮಸಾಮ್ಯವೇನೂ ಇಲ್ಲ. ಅವು ಸ್ವೋಪಜ್ಞವಿರಬಹುದು ಇಲ್ಲವೆ ಸ್ವೀಕೃತವೇ ಇರಬಹುದು. ಪರಿಶೀಲನೆಯಿಂದ ಅದನ್ನು ಸ್ಪಷ್ಟಪಡಿಸಿಕೊಳ್ಳಬೇಕಾಗಿದೆ.

ಈಗ ದಂಡಿ, ರುದ್ರಟ ಮತ್ತು ಭೋಜದೇವರು ತಮ್ಮ ಅಲಂಕಾರಗ್ರಂಥಗಳಲ್ಲಿ ನಿರೂಪಿಸಿರುವ ಪ್ರಹೇಳಿಕೆಗಳ ನಿರೂಪಣೆಯ ಹಿನ್ನೆಲೆಯಲ್ಲಿ, ಅವುಗಳ ಅವಲಂಬನೆಯಲ್ಲಿ, 'ಕವಿರಾಜಮಾರ್ಗ' 'ಕಾವ್ಯಾವಲೋಕನ'ಗಳ ಪ್ರಹೇಳಿಕೆಗಳನ್ನು ತುಲನೆಮಾಡಿ, ಒಂದೊಂದೂ ಪ್ರಭೇದದ ಪರಿಚಯವನ್ನು ಮಾಡಿಕೊಳ್ಳಲು ಪ್ರಯತ್ನಿಸಬಹುದು.

ಭಾವೆ/ಭಾವಮೆ

'ಕವಿರಾಜಮಾರ್ಗ'ದ ಲಕ್ಷ್ಯ

ಸವಿಹಿತಮಪ್ಪ ಕರ್ಣಪೂರೋತ್ಪಳಮಂ
ಧವಳವಿಲೋಚನೆಯ ಗುಣಸುಂದರಮಂ
ಕಿವಿವರಂ ನೀಳ್ದ ನಯನಯುಗದೊಳೊ
ಪ್ಪುವವಳಾನವಯವದೇಕೆ ಕಳೆಯವೇಳ್ದಂ ಪ್ರಿಯೆಯಂ ॥ (ಪ. ೧೪೫)

''(ನನ್ನ) ಪ್ರಿಯೆಯನ್ನು, ಕಿವಿವರೆಗೆ ನೀಳವಾಗಿರುವ ಕಣ್ಣುಗಳಿಂದ ಶೋಭಿಸುವವಳನ್ನು, ಬಿಳಿಯ ಕಣ್ಣುಗಳುಳ್ಳವಳ (ಕಣ್ಣುಗಳ) ಗುಣದಿಂದ ಕೂಡಿ ಸುಂದರವಾಗಿರುವ (ಬೆಳ್ಳನೆಯ ಕಣ್ನೋಟವೆಂಬ ಹುರಿಬಿಗಿದು ಸುಂದರವಾಗಿರುವ ಎಂದೂ ಆಗಬಹುದು), ಚೆನ್ನಾಗಿ ಒಪ್ಪುವ, ಕನ್ನವುರದ ನೈದಿಲೆಯನ್ನು ಏಕೆ(ತಾನೆ) ತೆಗೆದುಬಿಡಬೇಕೆಂದು ನಾನು ಸುಲಭವಾಗಿ ಹೇಳಿದೆನು?''

'ಕಾವ್ಯಾವಲೋಕನ'ದ ಲಕ್ಷ್ಯ :

ಈ ನವೀನ ಸಿತಾಂಭೋಜಾ । ನೂನ ಸೀತಾವತಂಸಕಂ ।
ತಾನದೇವುದೊ ಕರ್ಣಾಂತ । ವ್ಯಾನತಾಯತಲೋಚನೇ ॥ (ಪ. ೫೯೭)

''ಆಕರ್ಣಾಂತವಾಗಿ ನಿಡುಗೊಂಕುಗೊಂಡು ವಿಶಾಲವಾಗಿರುವ ಕಣ್ಣುಗಳನ್ನು ಉಳ್ಳವಳೇ, ಈ ಹೊಸ ದಾದ ಬೆಳ್ದಾವರೆಯ ಉತ್ಕೃಷ್ಟವಾದ ಬಿಳಿಯ ಕನ್ನವುರ ಏತಕ್ಕೆ ಬರುತ್ತದೆ?(ಆದರಿಂದ ಏನು ಪ್ರಯೋಜನ?)''

ಈ ಪ್ರಹೇಳಿಕೆಯನ್ನು 'ಕವಿರಾಜಮಾರ್ಗ'ದಲ್ಲಿ 'ಭಾವೆ'ಯೆಂದೂ 'ಕಾವ್ಯಾವಲೋಕನ'ದಲ್ಲಿ 'ಭಾಮು' ಯೆಂದೂ ಹೇಳಿದೆ. ದಂಡಿ ಮೊದಲಾದವರಲ್ಲಿ ಈ ಹೆಸರಿನ ಪ್ರಹೇಳಿಕೆಯಿಲ್ಲ. 'ಭಾಮಾ' ಎಂದರೆ ಸೊಕ್ಕಿದ ಹೆಣ್ಣು ಎಂದರ್ಥ. ಇದರ ಸಮಸಂಸ್ಕೃತ ರೂಪವನ್ನು ನಾಗವರ್ಮನೂ, ತದ್ಭವರೂಪವನ್ನು ಕವಿರಾಜಮಾರ್ಗಕಾರನೂ ಬಳಸಿರುವುದು ಸಾಧ್ಯ. ಈ ಪ್ರಭೇದಕ್ಕೆ ಈ ಹೆಸರನ್ನು ಮೊದಲು ಕವಿರಾಜಮಾರ್ಗಕಾರನೇ ಸೂಚಿಸಿದನೇ? ಹೆಸರಿನ ಸಾರ್ಥಕತೆಯೇನು? ಎರಡೂ ಆಕರಗಳಲ್ಲಿ ಪರಸ್ಪರ ಸದೃಶವಾಗಿ ತೋರುವ ಲಕ್ಷ್ಯಗಳಿಂದ ವಸ್ತು ಸೊಕ್ಕಿದ ಹೆಣ್ಣನ್ನು ಕುರಿತಿದೆಯೆಂದೂ ಆದ್ದರಿಂದ ಈ ಪ್ರಭೇದಕ್ಕೆ ಕೊಟ್ಟಿರುವ ಹೆಸರುಗಳು ಅನ್ವರ್ಥವಾಗಿವೆಯೆಂದೂ ಹೇಳಬಹುದೇ? —ಈ ವಿಷಯದಲ್ಲಿ ಹೀಗೆಯೇ ಸರಿ ಎನ್ನುವಂತಿಲ್ಲ.

ಲಕ್ಷ್ಯಪದ್ಯಗಳಲ್ಲಿ ಸಾದೃಶ್ಯವಿದೆ, ನಿಜ; ವೈದೃಶ್ಯವೂ ಇದೆ. 'ಕವಿರಾಜಮಾರ್ಗ'ದ ಲಕ್ಷ್ಯದಲ್ಲಿ ಸಂದರ್ಭ ಸ್ಪಷ್ಟವಿಲ್ಲ. ಪದ್ಯವು ಸ್ವಕೃತವೇ, ಸ್ವೀಕೃತವೇ ತಿಳಿಯದು. ಮುಳಿಯ ತಿಮ್ಮಪ್ಪಯ್ಯನವರು, ಈ ಪದ್ಯ ಕನ್ನಡ ರಾಮಾಯಣ ಗ್ರಂಥವೊಂದರ ಸೀತಾಪರಿತ್ಯಾಗ ಭಾಗಕ್ಕೆ ಸಂಬಂಧಿಸಿದ್ದು ಎಂಬುದಾಗಿ ಊಹಿಸಿ, ಅದಕ್ಕೆ ಅನುಗುಣ ವಾಗಿ ಅರ್ಥ ಹೇಳಿದ್ದಾರೆ. ಅವರ ಪ್ರಕಾರ, ''ಪ್ರಿಯೆಯನ್ನು ತ್ಯಜಿಸಿದ ಮೇಲೆ ಪಶ್ಚಾತ್ತಾಪಗೊಳ್ಳುತ್ತಾ ಆಕೆಯ ಗುಣ ಸೌಂದರ್ಯಗಳನ್ನು ನೆನೆದು ಮರುಗುವ ನಾಯಕನ ಮಾತಿದು.''[11] ಆದರೆ ಅವರ ವಿವರಣೆ ತೃಪ್ತಿಕರವಾಗಿ ತೋರುವುದಿಲ್ಲ; ಅಲ್ಲದೆ ಅನಾವಶ್ಯಕವಾಗಿ ಎರಡು ಕಡೆ ಪಾಠಗಳನ್ನೂ ಅವರು ತಿದ್ದಿದ್ದಾರೆ. ''ಕಿವಿಯವರೆಗೂ ನೀಳವಾಗಿದ್ದು ಬೆಳ್ಳಗೆ ಬೆಳ್ನೈದಿಲೆಯಂತೆ ಸುಂದರವಾಗಿರುವ ಕಣ್ಣುಳ್ಳವರಿಗೆ ಕಿವಿಯ ನೈದಿಲೆ ಅನಾವಶ್ಯಕ ಎಂದು ಉತ್ತರ'' ಎಂದು ಎಂ. ವಿ. ಸೀತಾರಾಮಯ್ಯನವರು ಗ್ರಹಿಸಿದ್ದಾರೆ. ಇದೂ ತೃಪ್ತಿಕರವಾಗಿ ತೋರುವುದಿಲ್ಲ.[12] ಹಾಗಾದರೆ ಸಂದರ್ಭವೇನಿರಬಹುದು? ನನಗೆ ತೋರುವುದು ಹೀಗೆ: ಕನ್ನವುರದ ನೈದಿಲೆಯು ಪ್ರಿಯೆಯ ವಿಶಾಲವಾದ ಕಣ್ಣುಗಳಿಗೆ ಅಡ್ಡಬಂದು ಪ್ರಿಯರ ಪರಸ್ಪರ ವೀಕ್ಷಣೆಗೆ ಅಡಚಣೆಯೊಡ್ಡುವುದೆಂದು ತಿಳಿದು, ಅದನ್ನು ತೊಲಗಿಸುವಂತೆ ಪ್ರಿಯನು ಆಕೆಗೆ ಮೊದಲು ಹೇಳಿರಬೇಕು. ಆಕೆ ಹಾಗೆಯೇ ಮಾಡಿದ ಮೇಲೆ, ಆತನು ''ಪ್ರಿಯೆ ಕಿವಿಯಲ್ಲಿ ಧರಿಸಿದ್ದ ಕನ್ನವರವು 'ಸವಿಹಿತ'ವಾಗಿಯೇ ಇದ್ದಿತಲ್ಲ, ಆ ಧವಳನೇತ್ರೆಯ ನೇತ್ರಗಳ 'ಗುಣ'ದಿಂದ ಅದು 'ಸುಂದರ'ವಾಗಿಯೂ ಇದ್ದಿತಲ್ಲ, ವಿಶಾಲಲೋಚನೆಯಾದ ಆಕೆಯ ಸೌಂದರ್ಯವನ್ನು ಹೀಗೆ ಅಧಿಕಗೊಳಿಸುತ್ತಿದ್ದ ಕನ್ನವುರವನ್ನು ತಾನು ತೆಗೆಯಲು ಹೇಳಿ ಆ ಸೌಂದರ್ಯಕ್ಕೆ ಕುಂದುಂಟುಮಾಡಿದೆನಲ್ಲ'' ಎಂಬುದಾಗಿ ಸಹಜ ವಾಗಿಯೇ ಅನಂತರದಲ್ಲಿ ಪರಿತಪಿಸಿರಬೇಕು.

ಈ ಆಶಯವನ್ನು ಪೋಷಿಸುವ ಒಂದು ನಿದರ್ಶನವನ್ನು ನೇಮಿಚಂದ್ರನ (ಸು.೧೧೯೦) 'ಲೀಲಾವತೀ ಪ್ರಬಂಧ'ದಿಂದ ಇಲ್ಲಿ ಎತ್ತಿಕೊಡಬಹುದು:

ಲಲನೆಯ ಕನ್ನವುರದ ನೈ । ದಿಲೊಳೆ ಬಟಿಲ್ದಿರ್ಪ ನೇತ್ರಪುತ್ರಿಕೆಗಳ್ ಕಾ ।
ದಲನಂ ಕಾಣದೆ ವಿರಹಾ । ನಲನಿಂ ಪೊರಳುತ್ತುಮಿರ್ಪವೋಲ್ ಕರಮೆಸೆಗುಂ ॥ (೧೨–೪೪)

ಈ ಪದ್ಯದೊಂದಿಗೆ 'ಕವಿರಾಜಮಾರ್ಗ'ದ ಪೂರ್ವೋಕ್ತ ಪದ್ಯವನ್ನು ಹೋಲಿಸಿ ನೋಡಬಹುದು.

ಇನ್ನು 'ಕಾವ್ಯಾವಲೋಕನ'ದ ಲಕ್ಷ್ಯಪದ್ಯವನ್ನು ನೋಡೋಣ. ಇಲ್ಲಿಯು ಸಂದರ್ಭವೂ ಸ್ಪಷ್ಟವಿಲ್ಲ. 'ಕವಿರಾಜಮಾರ್ಗವಿವೇಕ'ಕಾರರು ಕವಿರಾ.ದ ಪೂರ್ವೋಕ್ತ ಲಕ್ಷ್ಯಪದ್ಯದ ಸಾರವೇ ಇಲ್ಲಿಯೂ ಕಂಡುಬರುತ್ತದೆ ಎಂದು ಮಾತ್ರ ಹೇಳಿ ತೃಪ್ತರಾಗಿದ್ದಾರೆ[13]. ಇಲ್ಲಿಯೂ ಸಂದರ್ಭ ಕವಿರಾ.ದಲ್ಲಿ ಇದ್ದಂತೆಯೇ ಎಂದು ತೋರುತ್ತದೆ. ಪ್ರಿಯರ ಪರಸ್ಪರ ವೀಕ್ಷಣೆಗೆ ಅಡಚಣೆಯೊಡ್ಡುವುದೆಂದು ತಿಳಿದು, ಪ್ರಿಯನು ತನ್ನ ಪ್ರಿಯೆಗೆ ಬೆಳ್ದಾವರೆಯ ಕನ್ನವುರವನ್ನು ತೋರಿಸಿ ''ಅದರಿಂದ ಏನು ಪ್ರಯೋಜನ?'' ಎಂದು ಹೇಳಿ, ಅದನ್ನು ತೊಲಗಿಸುವಂತೆ ಪರೋಕ್ಷವಾಗಿ ಸೂಚಿಸಿರಬೇಕು. ಹಾಗೆಯೇ ಆಕೆ ಮಾಡಿದಾಗ, ಆಕೆಯ ಮುಖದ ಅಂದವನ್ನು ಹೆಚ್ಚಿಸುತ್ತಿದ್ದ ಕನ್ನವುರವನ್ನು ತಾನು ತೆಗೆಯುವಂತೆ ಪ್ರಿಯೆಗೆ ಹೇಳಿದ್ದು ತಪ್ಪಾಯಿತಲ್ಲ ಎಂಬುದಾಗಿ ಆತ ಪರಿತಪಿಸಿದ ವಿಷಯ ಈ ಪದ್ಯದಲ್ಲಿ ನಿರೂಪಿತವಾಗಿಲ್ಲ ಎನ್ನುವುದು ವಿದಿತವೇ ಇದೆ.

ಮುಖ್ಯವಾದ ವಿಷಯ ಎಂದರೆ ಈ ಭಾವೆ ಅಥವಾ ಭಾಮೆ ಹೇಗೆ ಒಂದು ಪ್ರಹೇಳಿಕೆಯಾಗಿದೆ ಎನ್ನುವುದು. ''ಪ್ರಿಯರು ಪರಸ್ಪರರನ್ನು ಕಣ್ಣುತುಂಬ ನೋಡುವ ಉತ್ಕಟೇಚ್ಛೆಯುಳ್ಳವರಾಗಿದ್ದರು'' ಎಂಬ ಉತ್ತರ ರೂಪದ ಆಶಯ ಪ್ರಚ್ಛನ್ನವಾಗಿ ಪದ್ಯದಲ್ಲಿ ಅಡಗಿದೆಯೆಂದು ತೋರುತ್ತದೆ.

ನುಸುಳ್

'ಕವಿರಾಜಮಾರ್ಗ'ದ ಲಕ್ಷ್ಯ

ತಿರಿವುದದೊಂದು ಚಕ್ರದೊಳೆ ನಿಂದು ದಿವಾ । ಕರನೆ ಮತ್ತ[ರಿ]ದು ಕಳೆವೊಡಂತದನಾವೆಡೆಯಿಂ ।
ದರಮೆಯಾಗಿ ನೆಲಸಿ ಕೆಲಕಾಲದಿಂ । ಪೊರೆದಿರದೞಿದ ಬೞಿಕೆ ತಾ[ಂ] ನೆಲದೊಳ್ ॥ (ಪ. ೧೪೬)

ಈ ಪದ್ಯದ ಶುದ್ಧಪಾಠ ಇನ್ನೂ ನಿರ್ಣಯವಾಗಬೇಕಾಗಿದೆ; ಮೇಲೆ ಕೊಟ್ಟಿರುವ ಪದ್ಯಪಾಠ ತಾತ್ಕಾಲಿಕವಾದ್ದು.

"ಒಂದು ಚಕ್ರದಲ್ಲಿಯೇ ಸುತ್ತುತ್ತದೆ; ಸೂರ್ಯನೇ ಅದನ್ನು ಕತ್ತರಿಸಿ ಹಾಕಿದರೆ ಯಾವುದೋ ದಿಕ್ಕಿನಲ್ಲಿ ಸ್ವಲ್ಪವಷ್ಟೇ ನೆಲಸಿದ್ದು, ಪೂರ್ತಿ ನಷ್ಟವಾದ ಬಳಿಕ ಅದು ಭೂಮಿಯಲ್ಲಿರುವುದಿಲ್ಲ.''

ಇದು ಪದ್ಯದ ಅರ್ಥ. ಇಲ್ಲಿ ಪ್ರಶ್ನೆಯಾಗಿ ಪ್ರಹೇಳಿಕೆಯನ್ನು ರೂಪಿಸಿರದಿದ್ದರೂ, ''ಹಾಗಾದರೆ ಅದು ಯಾವುದು?'' ಎಂಬ ಪ್ರಶ್ನೆ ಇಲ್ಲಿ ಅಧ್ಯಾಹೃತವಾಗಿದೆ. ಮುಳಿಯ ತಿಮ್ಮಪ್ಪಯ್ಯನವರು ಈ ಪ್ರಶ್ನೆಗೆ 'ಗಾಳಿ' ಎಂಬುದು ಉತ್ತರವೆಂದು ಭಾವಿಸಿ, ಅದಕ್ಕೆ ಅನುಗುಣವಾಗಿ ಪದ್ಯವನ್ನು ವ್ಯಾಖ್ಯಾನಿಸಿದ್ದಾರೆ; ಅವರ ವ್ಯಾಖ್ಯಾನ ತೃಪ್ತಿಕರವಾಗಿರುವಂತೆ ತೋರುವುದಿಲ್ಲ.[14] ''ತನ್ನ ಜೊತೆಯ ಹಕ್ಕಿಯನ್ನು ಅಗಲಿದ ಚಕ್ರವಾಕ ಪಕ್ಷಿಯನ್ನು ಕುರಿತ 'ಅರ್ಥದ ನುಸುಳು' ಇಲ್ಲಿ ಇದ್ದಿರಬಹುದು'' ಎನ್ನುವ[15] ಎಂ. ವಿ. ಸೀತಾರಾಮಯ್ಯನವರ ಊಹೆಯಾದರೂ ಹೀಗೆಯೇ. ಉತ್ತರವು ಮುಖ್ಯವಾಗಿ 'ಚಕ್ರ' ಎಂಬ ಶಬ್ದಕ್ಕಿರುವ ವಿವಿಧಾರ್ಥಗಳಲ್ಲಿ ಒಂದನ್ನು ಅವಲಂಬಿಸಿದೆ. ಆ ವಿವಿಧವಾದ ಅರ್ಥಗಳಲ್ಲಿ ಗಾಣ, ಕುಂಬಾರನ ತಿಗುರಿ, ಮಂಡಲ, ಸೈನ್ಯ, ದಿಗಂತ, ಗತಿಕ್ರಮ, ಪ್ರದೇಶ, ಸಮೂಹ ಈ ಕೆಲವನ್ನು ಇಲ್ಲಿ ಪರಿಗಣಿಸಬಹುದಾಗಿದೆ. ಮಂಡಲದಲ್ಲಿ ಇದ್ದು ಇಲ್ಲವೆ ಗತಿಕ್ರಮವನ್ನು ಅನುಸರಿಸಿ ಸುತ್ತುವುದು ಯಾವುದು? ಚಂದ್ರ. ಚಂದ್ರನನ್ನು ತನ್ನ ಪ್ರಕಾಶದಿಂದ ನಿವಾರಿಸುವವನು ಯಾವನು? ಸೂರ್ಯ. ಅವನು ಉದಯಾರಂಭ ಸಮಯದಲ್ಲಿ ಹೇಗೆ ಚಂದ್ರನನ್ನು ನಿವಾರಿಸಿದರೂ, ಅವನು ಪಶ್ಚಿಮ ದಿಕ್ಕಿನಲ್ಲಿ ಸ್ವಲ್ಪಕಾಲ, ಸ್ವಲ್ಪಭಾಗದಷ್ಟು ಉಳಿದಿರುತ್ತಾನೆ; ಆ ಮೇಲೆ ಆ ಸ್ವಲ್ಪಭಾಗವೂ ಅಳಿದುಹೋಗಿ, ಚಂದ್ರನು ಭೂಮಿಯಿಂದ ಪೂರ್ತಿಯಾಗಿ ಕಣ್ಮರೆಯಾಗಿ ಹೋಗುತ್ತಾನೆ.

'ಕಾವ್ಯಾವಲೋಕನ'ದ ಲಕ್ಷ್ಯ

ತಿರಿವುದು ಬೈಕೆಂಗೊಳ್ಳದು । ಮೊರೆವುದು ಮಱಿದುಂಬಿಯಲ್ತು ಕತ್ತರಿಗಾಳಂ ।
ಬೆರಸಿ ತನುಗೊಂದಿ ದೊರೆಕೊಂ । ಡಿರೆಯುಂ ಕೆಸಟಿಂಕಮಲ್ಲಿದಾವುದೊ ಪೇೞಿಂ ॥ (ಪ. ೫೯೫)

“ಸುತ್ತುವುದು; (ಆದರೆ) ಭಿಕ್ಷೆ ಬೇಡುವುದಿಲ್ಲ. ಮೊರೆಯುವುದು; (ಆದರೆ) ಮರಿದುಂಬಿಯಲ್ಲ. ಕತ್ತರಿಗಾಳವೆಂಬ ಮಲ್ಲಯುದ್ಧದ ಒಂದು ಬಗೆಯ ವರಸೆಯಿಂದ ಕೂಡಿ ದೇಹಕ್ಕೆ ಸೇರಿಕೊಂಡಿದೆಯಾದರೂ ಕೆಸರಂಕವಲ್ಲ (=ಅಖಾಡವಲ್ಲ?). ಇದು ಯಾವುದು, ಹೇಳಿ?”

ಈ ಲಕ್ಷ್ಯಪದ್ಯವನ್ನು ಮುಳಿಯ ತಿಮ್ಮಪ್ಪಯ್ಯನವರು ವ್ಯಾಖ್ಯಾನಿಸುತ್ತ, ಈ ‘ಪ್ರಶ್ನರೂಪವಾದ ಹೇಳಿಕೆ’ಯ ಉತ್ತರ ‘ಗಾಳಿ’ ಅಥವಾ ‘ಬಿರುಗಾಳಿ’ ಎಂದಿದ್ದಾರೆ. ಅದಕ್ಕೆ ಅನುಗುಣವಾಗಿಯೇ ಅವರ ವಿವರಣೆಯಿದೆ. ಆದರೆ ಉತ್ತರ, ವಿವರಣೆಗಳು ತೃಪ್ತಿಕರವಾಗಿಲ್ಲ.[16]

ಪದ್ಯದ ಉತ್ತರ, ‘ಕತ್ತರಿಗಾಳ್’ ಎಂಬ ಶಬ್ದಕ್ಕಿರುವ ಇನ್ನೊಂದು ಅರ್ಥವನ್ನು ಅವಲಂಬಿಸಿದೆ. ಕತ್ತರಿಗಾಳ ಎಂಬ ಶಬ್ದಕ್ಕೆ ‘ಮಲ್ಲಯುದ್ಧದಲ್ಲಿ ಒಂದು ವರಸೆ’ ಎಂದೂ ‘ಗಾಣ ಹೊಡೆಯುವಾಗ ಗಾಣಿಗನು ಕುಳಿತುಕೊಳ್ಳುವ ಗಾಣದ ಭಾಗ’ ಎಂದೂ ಅರ್ಥಗಳಿವೆ. ಇವುಗಳಲ್ಲಿ ಎರಡನೆಯ ಅರ್ಥವೇ ನಮಗೆ ಬೇಕಾದ್ದು. ‘ಕತ್ತರಿ’ ಎಂಬ ಶಬ್ದಕ್ಕೆ ಇವೇ ಅರ್ಥಗಳಿದ್ದು, ಎರಡನೆಯ ಅರ್ಥದ ಪ್ರಯೋಗಗಳನ್ನು “ಕತ್ತರಿಯಿಲ್ಲದೆ ಗಾಣವಾಡುವ ಎಗ್ಗನಂ” (‘ಧರ್ಮಾಮೃತ’ ೫-೧೦೬ ಅ.ಟಿ.), “ಗಾಣದ ಕತ್ತರಿಯಂ ಕೇಣದೊಳೇಱ....ಗಾಣಮಂ ತಿರುಗಿಸುತ್ತ” (‘ರೇವಣ ಸಿದ್ಧೇಶ್ವರ ಪುರಾಣ’ ೨೬-೩), “ಎತ್ತು ಗಾಣನ ನುಂಗು ಕತ್ತರಿಯ ಕಣಿ ನುಂಗು । ಸುತ್ತಿ ಹೊಡೆಯುವನ ನೊಗ ನುಂಗು । ಈ ಮಾತು ಸತ್ಯ ತಾನೆಂದ॥” (‘ಸರ್ವಜ್ಞನ ವಚನಗಳು’, ೨೦೭೯) ಮೊದಲಾದೆಡೆ ಕಾಣಬಹುದಾಗಿದೆ. ‘ಕತ್ತರಿಗಾಳ್’ ಎಂದರೆ ‘ಕತ್ತರಿ’ಯನ್ನುಳ್ಳ ಗಾಳ (< ಗಾಣ). ಪದ್ಯದಲ್ಲಿ ಮೇಲೆ ತೋರುವ ‘ಮಲ್ಲಯುದ್ಧದ ಒಂದು ಬಗೆಯ ವರಸೆ’ ಎಂಬ ಅರ್ಥಕ್ಕಿಂತ ಬೇರೆಯಾದ ಅರ್ಥವನ್ನು, ‘ಗಾಣಿಗ ಕುಳಿತುಕೊಳ್ಳುವ ಗಾಣದ ಭಾಗ’ ಎಂಬ ವಿವಕ್ಷಿತವಾದ ಅರ್ಥವನ್ನು ತೆಗೆದುಕೊಂಡರೆ, ಉಳಿದ ಪ್ರಶ್ನೆಗಳಿಗೂ ಅರ್ಥವೈಶದ್ಯವುಂಟಾಗುತ್ತದೆ. ಗಾಣ ತಿರುಗುತ್ತದೆ, ಭಿಕ್ಷೆಬೇಡುವುದಿಲ್ಲ, ನಿಜ; ಗಾಣ ಸದ್ದು ಮಾಡುತ್ತದೆ, ಮರಿದುಂಬಿಯಲ್ಲ, ನಿಜ; ಕುಳಿತುಕೊಳ್ಳುವ ಭಾಗವನ್ನುಳ್ಳ ಗಾಣ ಗಾಣಿಗನ ಶರೀರಕ್ಕೆ ಅಂಟಿರುತ್ತದೆ, ಅಖಾಡವಲ್ಲ, ನಿಜ. ಈ ವಿವರಣೆ ಸ್ಪಷ್ಟವಾದ ಮೇಲೆ ‘ಗಾಣ’ ಎಂಬ ಉತ್ತರವೂ ಸ್ಪಷ್ಟವಾಗುತ್ತದೆ. ‘ಕತ್ತರಿಗಾಳಂ’ ಶಬ್ದದಲ್ಲಿ ಗಾಳ (<ಗಾಣ) ಎಂಬುದೂ ಸೇರಿಹೋಗಿ ಆಶಯ ಸ್ಪಷ್ಟಗೊಳ್ಳದೆ ಭ್ರಾಂತಿಯುಂಟಾಗಿತ್ತೆನ್ನಬಹುದು.

ಪದ್ಯದ ಕೊನೆಯ ಪಾದದಲ್ಲಿ “ಕೆಸಱಂಕಮಲ್ಲಿದಾವುದೊ” ಬಲುಮಟ್ಟಿಗೆ ವ್ಯಾಕರಣ ಸಮ್ಮತವಲ್ಲದ ಪ್ರಯೋಗ; “ಕೆಸಱಂಕಮಲ್ಲದಾವುದೊ” ಎಂದು ಮೂಲಪಾಠವಿದ್ದಿರಬೇಕು. “ಕೆಸಱಂಕಂ + ಅಲ್ಲದು (>ಅಲ್ತು) + ಆವುದೊ” ಎಂಬುದು ಪದವಿಭಜನೆಯ ರೀತಿ. ಒಂದು ಪಕ್ಷ ಮೂಲಪಾಠ “ಕೆಸಱಂಕ[ನ]ಲ್ಲದಾವುದೊ” ಎಂದಿದ್ದರೂ ಆಶ್ಚರ್ಯವೇನಿಲ್ಲ. ‘ಕೆಸಱಂಕ’ ಶಬ್ದಕ್ಕೆ ‘ಕೆಸರಿನ ಕಳ’ (ಅಖಾಡ) ಸಂದಿಗ್ಧವಾದ ಅರ್ಥ; ‘ಮಲ್ಲ’ ಎನ್ನುವುದು ಕೋಶಸಿದ್ಧವೂ ಪ್ರಸಿದ್ಧವೂ ಆದ ಅರ್ಥ (ನೋಡಿ. ‘ಕೆಸಱಂಕರೆಂದು ಮಲ್ಲರ್’, ‘ಶಬ್ದಮಣಿದರ್ಪಣ’, ಪ್ರಯೋಗಸಾರ, ೬೩; “ಕೆಸಱಂಕರೆನಲ್ಕೆ ಮಲ್ಲರೊಳ್”, ‘ಕರ್ಣಾಟಕ ನಿಘಂಟು’, ಪು. ೨೭).

ಈಗ ನುಸುೞ್ ಎಂಬ ಈ ಪ್ರಹೇಳಿಕೆ ಯಾವ ಪೂರ್ವಪ್ರಚುರವಾದ ಪ್ರಹೇಳಿಕೆಯಲ್ಲಿ ಅಂತರ್ಗತವಾಗುತ್ತದೆ ಎಂಬುದನ್ನು ಗುರುತಿಸಬೇಕಾಗಿದೆ. “ನುಸುೞ್ ಸೂಕ್ಷ್ಮದ್ವಾರಪ್ರವೇಶೇ” ಎಂದು ‘ಶಬ್ದಮಣಿದರ್ಪಣ’ದ ಧಾತುಪಾಠದಲ್ಲಿದೆ (೯೭೪). ದಂಡಿಯ ‘ವಂಚಿತಾ’ ಪ್ರಹೇಳಿಕೆಯಲ್ಲಿ ಇದು ಅಂತರ್ಗತವಾಗಬಹುದು ಎಂದು ನಾಗವರ್ಮನ ಲಕ್ಷ್ಯಪದ್ಯವನ್ನು ಕುರಿತ ಹಾಗೆ ಆರ್. ನರಸಿಂಹಾಚಾರ್ಯರು ಗ್ರಹಿಸಿರುವುದು ಕಾಣುತ್ತದೆ.[17]

ಅಸ್ಪಷ್ಟಾಕ್ಷರ/ಅಸ್ಪಷ್ಟಾರ್ಥ

‘ಕವಿರಾಜಮಾರ್ಗ’ದ ಲಕ್ಷ್ಯ

> ನೆಟ್ಟನೆ ತಾಂ ಸವಿಯೊಳೊಂದಿರೆ ಭೋಜನಮಾ । ನಟ್ಟು ಬಡಿಸು ನಾಮಱಿಯದೆನಸುಂ ಸವಿಯುಂ।
> ಪುಟ್ಟಿದಾರುಮಱಿಯದದಱ ಪೆಸರೊ । ಆಟ್ಟುದಂ ಪೇೞ್ ಕೇಳ್ದ[ೞ]ನೆಂದಱಿಯೆಂ ॥ (ಪ. ೧೪೭)

“ರುಚಿಯುಳ್ಳ ಭೋಜನವನ್ನು, ನಾವು ತಿಳಿಯದ ಎಷ್ಟೋ ರುಚಿಯಡುಗೆಗಳನ್ನು ಬೇಗ ಅಡಿಗೆಮಾಡಿ

ಬಡಿಸು. (ಇನ್ನೂ) ಹುಟ್ಟಿರದ, ಯಾರೂ (ಈವರೆಗೆ) ತಿಳಿದಿರದ ಹೆಸರಿನಿಂದ ಅಡುಗೆ ಮಾಡಿದ್ದನ್ನು (ತಿಳಿದು) ಹೇಳಲಾಗಿ, ಅದನ್ನು ಕೇಳಿಯೂ ಅದು ಏನೆಂಬುದು ನನಗೆ ಗೊತ್ತಿಲ್ಲ.''

ಇದು ದಿಟವಾಗಿ ಅಸ್ಪಷ್ಟವಾಗಿ ಉಚ್ಚಾರವಾದ ಅಕ್ಷರದ ದೆಸೆಯಿಂದ ಅಸ್ಪಷ್ಟವಾದ ಅರ್ಥವನ್ನುಳ್ಳ ಪ್ರಹೇಳಿಕೆಯೇ. ಮುಳಿಯ ತಿಮ್ಮಪ್ಪಯ್ಯನವರೂ ಅವರನ್ನು ಅನುಸರಿಸಿ ಎಂ. ವಿ. ಸೀತಾರಾಮಯ್ಯನವರೂ ಸಮಸ್ಯೆಯ ನಿಜವಾದ ಸ್ಥಾನವನ್ನೂ ನಿವೃತ್ತಿಯನ್ನೂ ಸರಿಯಾಗಿಯೇ ಗ್ರಹಿಸಿರುವಂತೆ ತೋರುತ್ತದೆ.[18] ''ಹುಟ್ಟಿದ ಯಾರೂ ತಿಳಿದಿರದ ಆ ರುಚಿಯ ಹೆಸರಿನಲ್ಲಿ ಅಡುಗೆಮಾಡಿದ್ದನ್ನು ಹೇಳಲಾಗಿ, ಕೇಳಿ, ಅದೇನೆಂದು ನಾನು ತಿಳಿಯದವನಾಗಿದ್ದೇನೆ" ಎನ್ನುವಾಗ, ಹುಟ್ಟಿದ ಯಾರಿಗೂ ತಿಳಿದಿರದ ರುಚಿಯ ಅಡುಗೆಯನ್ನು ಮಾಡುವುದು ಹೇಗೆ, ಅದನ್ನು ಇಂತಹ ರುಚಿಯೆಂದು ಅವರು ಹೇಳುವುದಾದರೂ ಹೇಗೆ, ಹೇಳಿದ್ದನ್ನು ಕೇಳಿದರೂ ಅದೇನೆಂದು ತಿಳಿಯಲಿಲ್ಲ ಎಂದರೆ ಅಭಿಪ್ರಾಯವೇನು? ಇವೆಲ್ಲ ಗೊಂದಲದ ಪ್ರಶ್ನೆಗಳಾಗಿ ಪರಿಣಮಿಸಿ, ಅರ್ಥದ ಅಸ್ಪಷ್ಟತೆಯುಂಟಾಗುವುದು ನಿಶ್ಚಯ. ಇದರ ನಿವಾರಣೆ ಹೇಗೆ? ಲಕ್ಷ್ಯಪದ್ಯದಲ್ಲಿ ಅಸ್ಪಷ್ಟಾಕ್ಷರವನ್ನು ಗುರುತಿಸಿದರೆ, ಆಗ ಅರ್ಥದ ಗತಿ ಬದಲಾಗುತ್ತದೆ. ''ಪುಟ್ಟಿದಾರುಮಱಿಯದ'' ಎಂಬುದನ್ನು ''ಪುಟ್ಟಿದಾಱುಮಱಿಯದ'' ಎಂದಾಗುವಂತೆ ರೇಫೋಚ್ಚಾರವನ್ನು ಸರಿಪಡಿಸಿಕೊಂಡರೆ (''ರೇಫೆ ಪುಟ್ಟುವ ತಾಣವಂ ಬೆಟ್ಟಿತ್ತಾಗುಚ್ಚರಿಸೆ ಱಕಾರಂ ಪುಟ್ಟುಗುಂ'', ಶಮದ. ಸೂತ್ರ ೨೯ರ ವೃತ್ತಿ), ಆಗ ಪರಿಚಿತಗಳಾದ ಆರು ರಸಗಳೂ (ಸಿಹಿ, ಹುಳಿ, ಉಪ್ಪು, ಖಾರ, ಒಗಚು, ಕಹಿ ಎಂಬ ಷಡ್ರಸಗಳು) ತಿಳಿಯದ (ಅಲ್ಲದ), ಅದೊಂದು ಬೇರೆಯೇ ಆದ ಹೆಸರಿನ ರಸದ (ರುಚಿಯ) ಅಡುಗೆಯನ್ನು ನೀನು ಹೇಳಿದರೆ, ಅದನ್ನು ಕೇಳಿದರೂ ನನಗೆ ಅದು ಏನೆಂದು ತಿಳಿಯುವುದಿಲ್ಲ ಎಂದಾಗುವುದು.

ಇದರ ಅಭಿಪ್ರಾಯ ''ಷಡ್ರಸೋಪೇತವಾದ, ನಾವಿನ್ನೂ ರುಚಿನೋಡಿರದ, ಹೊಸಹೊಸ ರುಚಿಯ ಅಡುಗೆಗಳನ್ನು ಮಾಡಿ ಬಡಿಸು. ಷಡ್ರಸಗಳಲ್ಲಿ ಒಂದೂ ಅಲ್ಲದ ರಸದಿಂದ (ರುಚಿಯಿಂದ) ಮಾಡಿದ ಅಡುಗೆಯನ್ನು ನೀನು ಹೇಳಿದರೆ, ನನಗೇನು ತಿಳಿಯುತ್ತದೆ?'' ಎಂಬುದಾಗಿರಬೇಕೆಂದು ತೋರುತ್ತದೆ.

ಈ ಪ್ರಹೇಳಿಕೆ ಸಾಮಾನ್ಯರೇಫ ಶಕಟರೇಫಗಳು (ರ–ಱ) ಉಚ್ಚಾರದಲ್ಲಿ ಉಂಟುಮಾಡಬಹುದಾದ ಭ್ರಾಂತಿಯ ಮೂಲಕವಾಗಿ, 'ಅಸ್ಪಷ್ಟಾಕ್ಷರ'ವೆನಿಸಿತು, ಅರ್ಥದ ಅಸ್ಪಷ್ಟತೆಗೂ ದಾರಿಮಾಡಿತು. ಉಚ್ಚಾರಣೆಯನ್ನು ಸರಿಯಾಗಿ ಮಾಡಲಾಗಿ, ಅಸ್ಪಷ್ಟಾಕ್ಷರವು ಸ್ಪಷ್ಟವಾದ ಅಕ್ಷರವಾಗಿ ಪರಿಣಮಿಸಿ, ಅರ್ಥವೂ ಸ್ಪಷ್ಟವಾಯಿತು. ಉದ್ದೇಶಪೂರ್ವಕವಾಗಿಯೇ, ಎಂದರೆ ಪ್ರಹೇಳಿಕೆಯ ವಿನೋದಕ್ಕಾಗಿಯೇ ಲಕ್ಷ್ಯಪದ್ಯದಲ್ಲಿ ರ–ಱ ಕಾರಗಳ ಉಚ್ಚಾರದಲ್ಲಿ ಭ್ರಾಂತಿಯನ್ನು ಕಲ್ಪಿಸಿದೆ. ಆದ್ದರಿಂದ 'ಕವಿರಾಜಮಾರ್ಗ'ದ ಕಾಲಕ್ಕೆ 'ರ–ಱ'ಕಾರಗಳ ಉಚ್ಚಾರಣೆಯ ಭೇದದಲ್ಲಿ ಅಸ್ಪಷ್ಟತೆ ಪ್ರಾರಂಭವಾಗಿತ್ತೆ? ಎಂಬ ಸಂಶಯ[19] ಅನಾವಶ್ಯಕ.

'ಕಾವ್ಯಾವಲೋಕನ'ದ ಲಕ್ಷ್ಯ

ದಂಡಿತಾರಾತಿಭೂಭೃ । ತ್ಕಾಂಡಂ ಮೆಚ್ಚಿದಂ ಕರಂ ।
ಗಾಂಡೀವಧನ್ವಂ ಮುಂದೆ । ಕಂಡಂ ಭಯಾಕರವಂ ॥ (ಪ. ೫೯೮)

''ಶತ್ರುರಾಜರನ್ನು ದಂಡಿಸಿದ ಬಾಣವುಳ್ಳವನಾದ (=ಶತ್ರುರಾಜರನ್ನು ಬಾಣಗಳಿಂದ ದಂಡಿಸಿದ) ಗಾಂಡೀವಿಯು (ಅರ್ಜುನನು) ವಿಶೇಷವಾಗಿ ಮೆಚ್ಚಿದನು; ಮುಂದೆ ಭಯಾಕರವನ್ನು (=ಭಯಕ್ಕೆ ಆಸ್ಪದವಾದುದನ್ನು?) ನೋಡಿದನು.''

ಈ ಲಕ್ಷ್ಯಪದ್ಯವನ್ನು 'ಕವಿರಾಜಮಾರ್ಗ'ದ ಅಸ್ಪಷ್ಟಾಕ್ಷರದ ಲಕ್ಷ್ಯಪದ್ಯದೊಂದಿಗೆ ಪ್ರಸ್ತಾಪಿಸಿ, ತಿಮ್ಮಪ್ಪಯ್ಯನವರು ''ನಾಗವರ್ಮನು ಅಸ್ಪಷ್ಟಾರ್ಥಕ್ಕೆ ಕೊಟ್ಟ ಉದಾಹರಣಪದ್ಯದಲ್ಲಿ ಅಕ್ಷರಗಳೇ ಕಡಿಮೆಯಿರುವುದರಿಂದ ಅದನ್ನಿಲ್ಲಿ ವಿವೇಚಿಸಿಲ್ಲ'' ಎಂದು ತಿಳಿಸಿದ್ದಾರೆ.[20] ಎಂ. ವಿ. ಸೀತಾರಾಮಯ್ಯನವರು, ಕವಿರಾ.ದ 'ಅಸ್ಪಷ್ಟಾಕ್ಷರ'ವನ್ನೇ 'ಕಾವ್ಯಾವಲೋಕನ'ದಲ್ಲಿ 'ಅಸ್ಪಷ್ಟಾರ್ಥ'ವೆಂದು ಕರೆದಿರುವಂತೆ ಕಾಣುತ್ತದೆ ಎಂದು ಊಹಿಸಿದ್ದಾರೆ.[21] ಪೂರ್ವೋಕ್ತ ಲಕ್ಷ್ಯಪದ್ಯ ಒಂದು ಉಪಜಾತಿ[22]; ಆದ್ದರಿಂದ ಅದರಲ್ಲಿ ಅಕ್ಷರಗಳು ಕಡಿಮೆ

ಯಿವೆಯೆಂದು ತಿಳಿಯುವ ಅಗತ್ಯವಿಲ್ಲ. ಅಸ್ಪಷ್ಟಾಕ್ಷರ ಅಸ್ಪಷ್ಟಾರ್ಥಗಳು ಬಹುಶಃ ಅಭಿನ್ನವೇ ಇದ್ದೀತು. ಆದರೆ ಇದರ ನಿಶ್ಚಿತತೆ ಲಕ್ಷ್ಯಪದ್ಯದ 'ನಿರ್ಭೇದ'ವನ್ನವಲಂಬಿಸಿದೆ.

ಗಾಂಡೀವಿ ವಿಶೇಷವಾಗಿ ಮೆಚ್ಚಿದುದು ಏನು ಎಂದು ತಿಳಿಯಲು ತಕ್ಕ ಕರ್ಮಪದವಿಲ್ಲ. ಇದರಿಂದ ಅರ್ಥದಲ್ಲಿ ಅಸ್ಪಷ್ಟತೆಯಿದೆ. ಇದರ ಪರಿಹಾರ ಹೇಗೆ? ''ಮೆಚ್ಚಿದಂ ಕರಂ'' ಎಂಬುದನ್ನು ''ಮೆಚ್ಚಿದಂಕರಂ'' ಎಂದು ಮಾಡಿಕೊಂಡರೆ ಮೆಚ್ಚಿದ+ಅಂಕರಂ ಎಂಬ ಪದಚ್ಛೇದ ಸಾಧ್ಯವಾಗುತ್ತದೆ. ಆಗ ''ಶತ್ರುರಾಜರನ್ನು ದಂಡಿಸಿದ ಬಾಣವುಳ್ಳವನಾದ ಗಾಂಡೀವಿಯು, (ತನ್ನ ಬಾಣಪ್ರಯೋಗ ಕೌಶಲವನ್ನು) ಮೆಚ್ಚಿದ ಯೋಧ ಸಮೂಹವನ್ನು, ಭಯಕ್ಕೆ ಆಸ್ಪದವಾದುದನ್ನು, ಮುಂದೆ ನೋಡಿದನು'' ಎಂಬುದಾಗಿ ಸ್ಪಷ್ಟವಾದ ಅರ್ಥ ಸಾಧ್ಯವಾಗುತ್ತದೆ. ಅಂಕ ಎಂದರೆ ಬಿರುದಿನಾಳು, ವೀರ, ಜಟ್ಟಿ ಎಂಬರ್ಥಗಳುಂಟು.

ವರ್ಣವ್ಯತ್ಯಯ

'ಕವಿರಾಜಮಾರ್ಗ'ದಲ್ಲಿ ಮಾತ್ರವೇ ಉಲ್ಲೇಖವಾಗಿರುವ ಪ್ರಹೇಳಿಕೆಯಿದು. ಇದರ ಗ್ರಂಥಪಾಠ ಆ ಗ್ರಂಥದ ಮೂರು ಮುದ್ರಿತ ಪರಿಷ್ಕರಣಗಳಲ್ಲಿಯೂ ಬೇರೆಬೇರೆಯಾಗಿರುವುದರಿಂದ, ಅವನ್ನು ಪ್ರತ್ಯೇಕವಾಗಿಯೇ ಉದ್ಧರಿಸುವುದು ಸೂಕ್ತವಾದರೂ, ಪ್ರಸ್ತುತಕ್ಕೆ ಎರಡನ್ನು ಮಾತ್ರವೇ ಉದ್ಧರಿಸಿದೆ.

ಕೆ. ಬಿ. ಪಾಠಕ್ ಅವರ ಪರಿಷ್ಕರಣದಲ್ಲಿ :

ಆವನಾಮುಕತ್ವಕ್ಷುಚಯಂ । ಕ್ರುವನೊಚರಾಮುಯುದಷ್ಟಾಪಾಯುದೆಗಳೊಳ್ ।
ಸೆವಿಸೆವಮುಲಹೈವಸುಮುಕ್ತಿಮುಹಾ । ದೇವನಿನನಂನನನಪ್ಪೊನಸಹಾಯುಗುಣಂ ॥ (ಪ. ೧೪೬)

ಎ. ವೆಂಕಟರಾವ್, ಎಚ್. ಶೇಷ ಅಯ್ಯಂಗಾರ್ ಅವರ ಪರಿಷ್ಕರಣದಲ್ಲಿ :

ಆವನಾಮುಕತ್ವಕ್ಷ ಚಯಂ । ಕ್ರಾವನೊಚರಾಮಾಯು ದಷ್ಟಾಸಾಯುದೆಗಳೊಳ್ ।
ಸೇವಿಸೆವಮುಲಹೈವಸುಮುಕ್ತಿಮುಹಾ । ದೇವ ನಿನ್ನನ್ನನನಪ್ಪೊನಸಹಾಯುಗುಣಂ ॥ (ಪ. ೧೪೮)

ಪದ್ಯ ಕಂದವಾಗಿದೆಯೆನ್ನುವುದು ಬಹುಶಃ ಮೇಲುನೋಟದ ಪರಿಶೀಲನೆಯಿಂದಲೇ ವ್ಯಕ್ತವಾಗುತ್ತದೆ. ಕೂಡಲೇ ನಮ್ಮ ಗಮನಕ್ಕೆ ಬರುವ ಇನ್ನೊಂದು ಸಂಗತಿಯೆಂದರೆ, ಪದ್ಯದಲ್ಲಿ ಪದಗಳ ಅಕ್ಷರಸಂಯೋಜನೆ ಅಸ್ತವ್ಯಸ್ತಗೊಂಡಿದೆ ಎನ್ನುವುದು. ಆದ್ದರಿಂದಲೇ ಇದು 'ವರ್ಣವ್ಯತ್ಯಯ'. ಅಸ್ತವ್ಯಸ್ತಗೊಂಡಿರುವ ಅಕ್ಷರ ಸಂಯೋಜನೆಯನ್ನು ಮೊದಲಿನ ಹಾಗೆ ಸಾರ್ಥಕವಾಗುವಂತೆ ಪುನಸ್ಸಂಯೋಜಿಸುವುದೇ ಈ ಪ್ರಹೇಳಿಕೆಯನ್ನು ಬಿಡಿಸುವುದು ಹಾಗೂ ಅದರ ಉತ್ತರ. ಪದ್ಯದ ನಾಲ್ಕು ಪಾದಗಳಲ್ಲಿ, ಮೂರನೆಯದರ ಅಂತ್ಯಭಾಗದಿಂದ ನಾಲ್ಕನೆಯ ಪಾದ ಪೂರ್ತಿಯಾಗಿ ''ಮಹಾ। ದೇ(ವಾ) ನಿನ್ನನ್ನನಪ್ಪೊನಸಹಾಯುಗುಣಂ॥'' ಎಂಬುದಾಗಿರುವುದು ಮೂಲಪಾಠದಲ್ಲಿಯೇ ಸಾರ್ಥಕವಾದ ಅಕ್ಷರಸಂಯೋಜನೆಯಾಗಿದೆ. ಅದಕ್ಕೆ ಹಿಂದಿನ ಪದ್ಯಭಾಗವನ್ನು ಸಾರ್ಥಕಗೊಳಿಸಬೇಕಾಗಿದೆ. ತಿಮ್ಮಪ್ಪಯ್ಯನವರು ''ಅಕ್ಷರಗಳು ಹಿಂದುಮುಂದಾಗಿ ತೋರುವುದಕ್ಕೆ ಈ ಹೆಸರೆಂದು ತೋರುವುದು'' ಎಂಬುದಾಗಿ ಬರೆದಿರುವುದು ಸರಿಯಲ್ಲ.[23] ''ವರ್ಣವ್ಯತ್ಯಯ ಎಂದರೆ ಅಕ್ಷರಗಳ ಸ್ಥಾನಗಳು ಹಿಂದುಮುಂದಾಗುವುದು'' ಎಂಬ ಸೀತಾರಾಮಯ್ಯನವರ ಟಿಪ್ಪಣಿ ಸಹ ಈ ರೀತಿಯದೆ.[24]

ಈ ಪದ್ಯದ ಸಾರ್ಥಕವಾದ ವರ್ಣಸಂಯೋಜನೆ ಸಾಧ್ಯವಾಗದೆ ಇದೆ.

ಬಿಂದುಚ್ಯುತಕ

'ಕವಿರಾಜಮಾರ್ಗ'ದ ಲಕ್ಷ್ಯ

ಸೊಗಯಿಸುಗುಮಿಂದ್ರನೀಲಮಣಿಸನ್ನಿಭದೊಳ್
ಮಿಗೆ ಜಳನಿಧಿಯೊಳಗುದಿತದಿಂದಿರದವೊಲ್
ನೆಗೆದತಿಧವಳಮೂರ್ತಿಗೆ ಘನವಳಯುಸದಗ್ಧ
ಗಗನದೊಳು [ಳಿ]ದು[ಳಿ]ದು ವಿಶಾಳಿತಾಶಾವಳಯಂ ॥ (ಪ. ೧೪೯)

''ವಿಶೇಷವಾಗಿ ಸಮುದ್ರದಲ್ಲಿ ಹುಟ್ಟಿದ ಕುದುರೆಯ (ಇಂದಿರ=ಅಶ್ವ, ಉಚ್ಚೈಶ್ರವಸ್ಸು) ಹಾಗೆ ಕಾಣಿಸಿಕೊಂಡ ಅತಿಬಿಳುಪಿನ ಮೂರ್ತಿಗೆ (ಚಂದ್ರನಿಗೆ) ಮೋಡಗಳ ಸಮೂಹದಿಂದ ದಟ್ಟೈಸಿದ ಆಕಾಶದಲ್ಲಿ ಅಡಗಿ ಅಡಗಿ ವಿಶಾಲಗೊಂಡ ದಿಕ್ಕುಗಳ ಸಮೂಹ ಇಂದ್ರನೀಲರತ್ನದ ಹೋಲಿಕೆಯಲ್ಲಿ ಸೊಗಯಿಸಿತು.''

ಲಕ್ಷ್ಯಪದ್ಯದಲ್ಲಿ, ಚಂದ್ರನಿಗೆ ದಿಕ್ಕುಗಳು ಇಂದ್ರನೀಲರತ್ನದ ಹೋಲಿಕೆಯಲ್ಲಿ ಸೊಗಯಿಸಿತು ಎಂದರೆ ಅರ್ಥವೇನು ಎಂಬುದು ತಿಳಿಯುವುದಿಲ್ಲ. ಉಚಿತಸ್ಥಾನವನ್ನು ಗುರುತಿಸಿ ಚ್ಯುತವಾದ ಬಿಂದುವನ್ನು ಸೇರಿಸಿದರೆ, ಅರ್ಥ ಸ್ಪಷ್ಟವಾಗುತ್ತದೆ. ಸೊಗಸುಗೊಂಡಿದ್ದು ಚಂದ್ರನ ಬಿಂಬ ಎನ್ನುವುದು ಕವಿಸಹಜವಾದ ವರ್ಣನೆ. ಆದ್ದರಿಂದ ಅದು ಸಾಧ್ಯವಾಗಬೇಕಾದರೆ 'ಘನವಳಯ' ಎಂಬ ಶಬ್ದಕ್ಕೆ ಕೊನೆಗೆ ಬಿಂದು ಸೇರಿಸಿ 'ಘನವಳಯಂ' ಎಂದು ಮಾಡಬೇಕು. ಆಗ ಅರ್ಥ: ''ವಿಶೇಷವಾಗಿ ಸಮುದ್ರದಲ್ಲಿ ಹುಟ್ಟಿದ ಉಚ್ಚೈಶ್ರವಸ್ಸಿನ ಹಾಗೆ ಕಾಣಿಸಿಕೊಂಡ ಪಾಂಡುವರ್ಣದ ಚಂದ್ರನಿಗೆ, ಆತನ ಆಕೃತಿಯು ವರ್ತುಲವು (=ಘನವಳಯಂ) ಎಂದರೆ ಪೂರ್ಣಬಿಂಬವು, ದಿಕ್ಕುಗಳ ಸಮೂಹವನ್ನು ತನ್ನ ಕಾಂತಿಯಿಂದ ಬೆಳಗಿ ವಿಶಾಲಗೊಳಿಸಿದುದು, ಹಗಲಿನ ಸೂರ್ಯನ ತಾಪದಿಂದ ಬೆಂದ ಇಲ್ಲವೆ ಮೋಡಕವಿದ ಆಕಾಶದಲ್ಲಿ ಅಡಗಿ ಅಡಗಿ ಇಂದ್ರನೀಲರತ್ನದ ಹೋಲಿಕೆಯಲ್ಲಿ ಸೊಗಯಿಸಿತು.''

ಪ್ರಸ್ತುತ ಒಂದು ಸಂಗತಿ ವಿಶದಪಡಬೇಕು. 'ಬಿಂದುಚ್ಯುತಕ'ವನ್ನು 'ಕಾವ್ಯಾಲಂಕಾರ'ದಲ್ಲಿ ರುದ್ರಟನು ''ಇರುವ ಬಿಂದುವನ್ನು ಬಿಟ್ಟು'' ಅರ್ಥಾಂತರವನ್ನು ಸಾಧಿಸುವ ಒಂದು ಚಮತ್ಕಾರವನ್ನಾಗಿ ಹೇಳಿರುವುದು ಕಾಣುತ್ತದೆ. ವ್ಯಾಖ್ಯಾನವು ''ಅತ್ರ ಬಿಂದೌ ಚ್ಯುತೇಽರ್ಥಾಂತರಂ ಭವತಿ'' ಎಂದು ಅದನ್ನು ಸಮರ್ಥಿಸಿದೆ.

ಕಾಂತೋ ನಯನಾನಂದೀ ಬಾಲೇಂದುಃ ಖೇ ನ ಭವತಿ ಸದಾ ॥ (೫–೨೮)

ಎಂಬ ಲಕ್ಷ್ಯಭಾಗದಲ್ಲಿ ''ಬಾಲೇಂದುಃ'' ಶಬ್ದದಲ್ಲಿಯ ಬಿಂದುವನ್ನು ಚ್ಯುತಮಾಡಿ ''ಬಾಲೇ ದುಃಖೇನ'' ಎಂದು ಮಾಡಿಕೊಂಡು ಅರ್ಥಾಂತರವನ್ನು ಸಾಧಿಸುವುದನ್ನು ನಿದರ್ಶಿಸಿದೆ.

ಈಗ ಜಿನಸೇನರ 'ಮಹಾಪುರಾಣ' ದಿಂದಲೂ ಒಂದು ನಿದರ್ಶನವನ್ನೆತ್ತಿ ಕೊಡಬಹುದು.

ಲಸದ್ಬಿಂದುಭಿರಾಭಾಂತಿ ಮುಖೈರಮರವಾರಣಾಃ ।
ಘಟಾಘಟನಯಾ ವ್ಯೋಮ್ನಿ ವಿಚರಂತಸ್ತ್ರಿಧಾ ಸ್ರುತಃ ॥ (೧೨–೨೩೮)

ಇಲ್ಲಿ ಎರಡನೆಯ ಪಾದದಲ್ಲಿ 'ಘಂಟಾ' ಎಂದಿರಬೇಕಾದ್ದು ಬಿಂದುಚ್ಯುತವಾದ ರೂಪದಲ್ಲಿಯೇ ಮೂಲದಲ್ಲಿರುವುದು ನೋಡಿದರೆ, ಇರುವ ಬಿಂದುವನ್ನು ಬಿಡುವುದೂ ಇರಬೇಕಾದ ಬಿಂದುವನ್ನು ಸೇರಿಸುವುದೂ ಎರಡೂ 'ಬಿಂದುಚ್ಯುತಕ'ಗಳೇ ಎನ್ನುವುದು ತಿಳಿಯುತ್ತದೆ. ಆದ್ದರಿಂದ ಕವಿರಾ.ದ ಲಕ್ಷ್ಯಪದ್ಯದ ನಮ್ಮ ಪರಿಶೀಲನೆ ಅನುಚಿತವಾದುದೇನಲ್ಲ; 'ಕಾವ್ಯಾವಲೋಕನ'ದಲ್ಲಿಯೂ ಹೀಗೆಯೇ ಎನ್ನುವುದನ್ನು ನೆನೆಯಬೇಕು.

'ಕಾವ್ಯಾವಲೋಕನ'ದ ಲಕ್ಷ್ಯ:

ಇಂದು ನೋಡಿದು ಬೇಱಂದ । ಮೊಂದಿನಂದಮದಲ್ತಱಂ ।
ಮಂದಮಂದಂ ಕರಸ್ಪರ್ಶಂ । ತಂದಪ್ಪುದುಪತಾಪಮಂ ॥ (ಪ. ೫೮೨)

ನಾಗವರ್ಮನು ಬಿಂದುಚ್ಯುತಕವನ್ನು ಪ್ರಹೇಳಿಕೆಯಾಗಿ ಹೇಳದೆ ಅಕ್ಷರಚಮತ್ಕೃತಿಗಳಲ್ಲಿ ಒಂದು ಪ್ರಭೇದವಾಗಿ ಹೇಳಿದ್ದಾನೆ. ದಿಟವಾಗಿ ಇದೊಂದು 'ಚ್ಯುತಚಿತ್ರ'. ಕವಿರಾಜಮಾರ್ಗಕಾರನ ಅನುಕ್ರಮವನ್ನು ಹಿಡಿದು, ನಾಗವರ್ಮನ ಲಕ್ಷ್ಯಪದ್ಯವನ್ನೂ ಇಲ್ಲಿಯೇ ವಿವೇಚನೆಗೆ ಎತ್ತಿಕೊಂಡಿದೆ.

ಇಲ್ಲಿಯೂ ''ಇದ್ದ ಬಿಂದುವನ್ನು ಲೋಪಿಸಿ ಅರ್ಥಸಮನ್ವಯ ಮಾಡುವುದು'' ಎಂಬ ಸೂತ್ರಾರ್ಥವನ್ನು ಗ್ರಹಿಸದೆ, ''ಇರಬೇಕಾದ ಎಡೆಯಲ್ಲಿ ಬಿಂದುವನ್ನು ಆದೇಶಿಸಿ ಅರ್ಥಸಮನ್ವಯ ಮಾಡುವುದು'' ಎಂಬುದಾಗಿಯೇ ಸೂತ್ರಾರ್ಥವಿಟ್ಟುಕೊಂಡು ವಿಚಾರಮಾಡುವುದು ಅವಶ್ಯವೆಂದು ತೋರುತ್ತದೆ.

ಪದ್ಯದ ಆಶಯ, ಇರುವಂತೆ ಹೀಗೆ : ''ಈ ದಿನ ನೋಡು. ಇದು ಬೇರೆ ರೀತಿ; ಸ್ವಲ್ಪವೂ ಎಂದಿನ ಹಾಗೆ ಅಲ್ಲ. ಕೈಗಳ ಸೋಂಕು ಮೆಲ್ಲಮೆಲ್ಲಗೆ ಉಪತಾಪವನ್ನುಂಟುಮಾಡುತ್ತದೆ.''

''ನೋಡಿದು'' ಎಂಬ ಮಾತನ್ನು ''ನೋಡಿಂದು'' ಎಂಬುದಾಗಿ ಉಚಿತಸ್ಥಾನದಲ್ಲಿ ಬಿಂದು ಸೇರಿದ ಮಾತನ್ನಾಗಿ ಪರಿವರ್ತಿಸಿದರೆ ಪದ್ಯದ ಆಶಯ ಹೀಗಿರುತ್ತದೆ: ''ಈ ದಿನ ನೋಡು. ಇಂದು(=ಚಂದ್ರನು) ಬೇರೆ ರೀತಿ; ಸ್ವಲ್ಪವೂ ಎಂದಿನ ಹಾಗೆ ಅಲ್ಲ. (ಅವನ) ಕಿರಣಗಳ ಸೋಂಕು ಮೆಲ್ಲಮೆಲ್ಲಗೆ ಉಪತಾಪವನ್ನು (ಧಗೆಯನ್ನು) ಉಂಟುಮಾಡುತ್ತದೆ.''

ಈಗ ಪದ್ಯದ ಅಭಿಪ್ರಾಯ ಇನ್ನೂ ಸುರಸವಾಗುತ್ತದೆ. ಪ್ರಿಯನೋ ಪ್ರಿಯೆಯೋ ತನ್ನ ಸಖನ ಇಲ್ಲವೆ ಸಖಿಯ ಸಂಗಡ ತನ್ನ ವಿರಹದ ತಾಪ ಬೆಳುದಿಂಗಳ ದೆಸೆಯಿಂದ ಅಧಿಕಗೊಂಡುದನ್ನು ಮೇಲಿನ ಮಾತಿನಲ್ಲಿ ಸೂಚಿಸಿರಬಹುದೆಂದು ಊಹಿಸಲು ಸಾಧ್ಯವಿದೆ.

ಒನರ್ಚುಡಿ

'ಕವಿರಾಜಮಾರ್ಗ'ದ ಲಕ್ಷ್ಯ:

ಆವುದು ಬಾಗಿದುದುಮಧಿಕಂ ಬಸನಂ ।
ಕೇವಳಮಾಗೆ ನೆಗೆವುದುಚಿತಾವಯವ [ದಂ] ।
[ದೇ]ವದಿಂ ನಿಂದು ಸಿತಗನಂ ನುಡಿವು[ದ]ದು ।
ಭಾವಿಸೆ ಬಗೆಗೊಳದಾರ[ನೊನರ್ಚುಡಿಯಿಂ] ॥ (ಪ. ೧೫೦)

ಮುದ್ರಿತಗ್ರಂಥಗಳ ಪಾಠ ಅಲ್ಲಲ್ಲಿ ಅಶುದ್ಧವಾಗಿರುವಂತಿದೆ. ಅರ್ಥ ಸುಕರವಾಗಿರುವಂತೆ ಇಲ್ಲಿ ಪಾಠಪರಿಷ್ಕರಣ ಮಾಡಿಕೊಂಡಿದೆಯಾದರೂ, ಅದು ಪೂರ್ತಿಯಾಗಿ ತೃಪ್ತಿಕರವಾಗಿದೆಯೆಂದು ತೋರುವುದಿಲ್ಲ. ಈ ಪರಿಷ್ಕರಣದಂತೆ ಪದ್ಯದ ಆಶಯವನ್ನು ಹೀಗೆ ಹೇಳಬಹುದು: ''ಯಾವುದು ಬಾಗಿರುತ್ತದೆಯೋ, ಅಧಿಕವಾದ ವ್ಯಸನ (ದುಷ್ಕಟ) ಸಂಪೂರ್ಣವಾಗಲು ಶರೀರದ ಉಚಿತವಾದೆಡೆಯಿಂದ ಮೇಲೆ ನಿಮಿರುತ್ತದೆಯೋ, ಜುಗುಪ್ಸೆಯಾಗುವಂತೆ ಸ್ಥಾಯಿಯಾಗಿದ್ದು ಜಾರನನ್ನು ಹೀನ್ಯೈಸುತ್ತದೆಯೋ, ಅದು ವಿಚಾರಮಾಡಿದರೆ ಯಾರನ್ನು ತಾನೇ 'ಒನರ್ಚುಡಿ'ಯಿಂದ ರಂಜಿಸದು ?''

ಈ ಪ್ರಹೇಳಿಕೆಯ ಸ್ವರೂಪವೇನು? ಲಕ್ಷ್ಯಪದ್ಯದ ಉತ್ತರವೇನು? ಎರಡು ಅಥವಾ ಎರಡಕ್ಕಿಂತ ಹೆಚ್ಚಿನ ಸಂದರ್ಭವಿಶೇಷಗಳನ್ನು ಸೂಚಿಸಲು ಒಂದೇ ಮಾತು ಸಾಕಾಗುವಂತಿರುವುದು 'ಒನರ್ಚುಡಿ' ಪ್ರಹೇಳಿಕೆಯ ಲಕ್ಷಣ. ತಿಮ್ಮಪ್ಪಯ್ಯನವರು ''ಒಂದು ವ್ಯಕ್ತಿಯ ಕೊರಳಿನಲ್ಲಿರುವ 'ಆರ' (ಹಾರ) ವಾಚಕವಾದ ಒನರ್ಚುಡಿಯನ್ನು ವರ್ಣಿಸುವ ಅದೇ ನುಡಿಯಿಂದ ಅರ್ಥಾವಗಾಹನೆಮಾಡಿಕೊಳ್ಳುವ ಪದ್ಯವಾಗಿ ತೋರುತ್ತಿದೆ'' ಎಂದೂ, ಈ ಹಾರವನ್ನು ಭಾವಿಸಿದಲ್ಲಿ, ಅದು ''ಒಂದು ನದಿಯನ್ನು ಹೋಲಿಕೆಗೊಳ್ಳುವುದು'' ಎಂದೂ ಅಭಿಪ್ರಾಯಪಟ್ಟಿದ್ದಾರೆ.[25] ನಿರೂಪಣೆ ಅದಕ್ಕೆ ಅನುಗುಣವಾಗಿಯೇ ಇದೆ. ಅವರು ಮಾಡಿರುವ ಅರ್ಥಾನ್ವಯಗಳು ಕಷ್ಟಪಟ್ಟು ಎಳೆದು ತಂದವುಗಳ ಹಾಗೆ ತೋರುತ್ತವೆ; ತೃಪ್ತಿನೀಡುವುದಿಲ್ಲ. ಸೀತಾರಾಮಯ್ಯನವರು ಪದ್ಯದಲ್ಲಿ ಅರ್ಥಶ್ಲೇಷವಿದೆಯೆಂದು ಸೂಚಿಸಿ, ಒಂದೆರಡು ಶಬ್ದಗಳ ಅರ್ಥಗಳನ್ನು ತಿಳಿಸಿ ಕೈಬಿಟ್ಟಿದ್ದಾರೆ.[26]

ಈ ಪ್ರಹೇಳಿಕೆಗೆ 'ಧ್ವಜ' ಎಂಬುದು ಉತ್ತರವಿರುವಂತೆ ತೋರುತ್ತದೆ. 'ಧ್ವಜ' ಎಂಬ ಶಬ್ದಕ್ಕಿರುವ ನಾನಾರ್ಥಗಳಲ್ಲಿ 'ಬಾವುಟ' ಮತ್ತು 'ಪುರುಷನ ಜನನೇಂದ್ರಿಯ' ಎಂಬ ಅರ್ಥಗಳು ಇಲ್ಲಿಗೆ ಪ್ರಸ್ತುತವಾದವು. ಆಗ ಮೊದಲನೆಯ ಅರ್ಥ ಹೀಗೆ: ಯಾವುದು ಸಾಮಾನ್ಯವಾದ ಸ್ಥಿತಿಯಲ್ಲಿ ಏರಿಸಲ್ಪಡದೆ ಇರುವುದೋ, ಯುದ್ಧ ಮೊದಲಾದ ವಿಶೇಷಸಂದರ್ಭಗಳ ವ್ಯಸನದಲ್ಲಿ ತಕ್ಕ ರೀತಿಯಲ್ಲಿ ಮೇಲೇರಿಸಲ್ಪಡುವುದೋ, ತಿರಸ್ಕಾರಭಾವದಲ್ಲಿ ಸ್ಥಾಯಿಯಾಗಿ ನಿಂತು ಪ್ರತಿಪಕ್ಷದ ದುಷ್ಟರನ್ನು ಹಂಗಿಸುವುದೋ, ಅದು 'ಧ್ವಜ'ವೆಂಬ ಮಾತಿನಲ್ಲಿ ಯಾರನ್ನು ತಾನೆ ಆಕರ್ಷಿಸದು?''

ಎರಡನೆಯ ಅರ್ಥ ಹೀಗೆ: ''ಯಾವುದು ಸಾಮಾನ್ಯವಾದ ಸ್ಥಿತಿಯಲ್ಲಿ ಅಧೋಮುಖವಾಗಿ ಯಥಾಸ್ಥಿತಿಯಲ್ಲಿರುವುದೋ, ಸ್ತ್ರೀವ್ಯಸನ ಸಂಪೂರ್ಣವಾಗಿ ಆವರಿಸಿದಾಗ ತಕ್ಕ ಸ್ಥಾನದಿಂದ ನಿಮಿರಿ ನಿಲ್ಲುತ್ತದೆಯೋ, ತಿರಸ್ಕಾರಭಾವದಲ್ಲಿ ಸ್ಥಾಯಿಯಾಗಿ ನಿಂತು ಹಾದರಿಗನನ್ನು ಹೀನ್ಯೈಸುವುದೋ, ಅದು 'ಧ್ವಜ' ವೆಂಬ ಮಾತಿನಲ್ಲಿ ಯಾರನ್ನು ತಾನೆ ಕುತೂಹಲಿಗಳನ್ನಾಗಿ ಮಾಡುವುದಿಲ್ಲ?''

ಈ ಅರ್ಥಕಲ್ಪನೆ ಎಷ್ಟರಮಟ್ಟಿಗೆ ಸಮರ್ಥನೀಯವಾದ್ದು ಎನ್ನುವುದು ಚಿಂತನೀಯ. ಆರ್. ನರಸಿಂಹಾಚಾರ್ಯರು ಈ ಪ್ರಭೇದವನ್ನು ದಂಡಿಯ 'ಸಮಾನಶಬ್ದಾ'ಕ್ಕೆ ಸದೃಶವಾದ್ದು ಎಂದು ಗ್ರಹಿಸಿದ್ದಾರೆ.

'ಕಾವ್ಯಾವಲೋಕನ'ದ ಲಕ್ಷ್ಯ

ಒಂದುಂ ಗಳಿಗೆಯೊಳೆ ಸಂಪುಟ। ದಂದದೆ ಮುಡಿದಿರ್ಪರಹಿತರೆರೆದ ನಂ[ಕೋಂ]।
ಡೊಂದಱೊಳೆ ಮೆಱೆದು ಗಣಪತಿ । ಯಂದದಿನೊಸೆದಿರ್ಪರಿದಿರ್ಗೆ ವಂದಿಂದರಸಾ ॥ (ಪ: ೫೯೬)

''ಇಂದ್ರನ ಎದುರಿಗೆ ಬಂದು, ಶತ್ರುಗಳು ಒಂದು ಗಳಿಗೆಯಲ್ಲಿಯೇ ಸಂಪುಟದ ಹಾಗೆ ಮುಚ್ಚಿಕೊಂಡಿದ್ದಾರೆ; ಬೇಡಿದ ಜನ, (ಏಕದಂತನಾದ) ಗಣಪತಿಯ ಹಾಗೆ ಒಂದೇ ಕೋಡಿನಲ್ಲಿ ಮೆರೆದು ಸಂತೋಷಪಟ್ಟಿದ್ದಾರೆ.''

ಈ ಪದ್ಯವನ್ನು ಮುಳಿಯ ತಿಮ್ಮಪ್ಪಯ್ಯನವರು ಸರಿಯಾಗಿಯೇ ಅರ್ಥೈಸಿದ್ದಾರೆ; ಅವರು ''ನರಕೋಂಡೊಂದಱೊಳೆ'' ಎಂಬ ಪಾಠವನ್ನು ''ನರರ್ ಕೋಡೊಂದಱೊಳೆ'' ಎಂಬುದಾಗಿ ತಿದ್ದಿರುವುದು ಸಮರ್ಥನೀಯವೇ ಆಗಿದೆ.[27] ''ಮುಡಿದಿರ್ಪರ್'' ಎಂದರೆ ಮೃತರಾಗಿದ್ದಾರೆ ಎಂದೂ ''ಕೋಡೊಂದಱೊಳೆ'' ಎಂದರೆ ''ಒಂದೇ ಸಲದ ಕೊಡುವಿಕೆ, ದಾನ'' (''ಕೊಡುವ ಭಾವದೊಳಂ ಭಯ ಶೈತ್ಯ ಶೃಂಗಂಗಳಲ್ಲಿಗನುಮತಂ ಕೋಡು'', 'ಶಬ್ದಮಂಜರಿ', ೯೫) ಎಂದೂ ಅರ್ಥಮಾಡಿಕೊಂಡರೆ ದೊರೆಯ ವೀರ ಮತ್ತು ದಾನಗುಣಗಳನ್ನು ಇಲ್ಲಿ ಕುರಿತಿರುವುದು ಸ್ಪಷ್ಟವಾಗುತ್ತದೆ.

'ಕವಿರಾಜಮಾರ್ಗ' 'ಕಾವ್ಯಾವಲೋಕನ'ಗಳ 'ಒಗ್ಗಡಿ' ಒಂದೇ ರೀತಿಯಾಗಿರುವಂತೆ ತೋರುವುದಿಲ್ಲ. ಕವಿರಾ.ದ ಲಕ್ಷ್ಯಪದ್ಯದ ಉತ್ತರ ಹೊರಗಿನಿಂದ ಊಹಿಸಿಕೊಳ್ಳಬೇಕಾದ್ದು; ಕಾವ್ಯಾವ.ದ್ದು ಪದ್ಯದ ಒಳಗೇ ಇರುವ ಪದಗಳ ಭಿನ್ನಾರ್ಥಗಳನ್ನು ಅವಲಂಬಿಸಿ ಸಿದ್ಧವಾದ್ದು. ಈ ವ್ಯತ್ಯಾಸಕ್ಕೆ ಕಾರಣಗಳೇನೋ ತಿಳಿಯದು. ಆರ್. ನರಸಿಂಹಾಚಾರ್ಯರು 'ಕಾವ್ಯಾವಲೋಕನ'ದ ಲಕ್ಷ್ಯಪದ್ಯವನ್ನು ಕುರಿತ ಹಾಗೆ ದಂಡಿಯ 'ಸಮಾನಶಬ್ದಾ' ಪ್ರಹೇಳಿಕೆಗೆ ಸಂವಾದಿಯಾದುದು ಎಂದು ತಿಳಿದಿದ್ದಾರೆ.[28]

ವರ್ಣಚ್ಯುತಕ/ಅಕ್ಷರಚ್ಯುತಕ

'ಕವಿರಾಜಮಾರ್ಗ'ದ ಲಕ್ಷ್ಯ :

ತಳಮಳಗುತ್ತುಂ ಜನಿತನಿಜಭೀತಿ ಮನಂ
ಗೊಳೆ ಕಳವಳಿಸಿ ಚರಿತ[ರ್] ನಿಲಲಣ್ಮದೆ [ಮೊ]
ಕ್ಕಳವೊಳಗೆ ಸುೞಿದರರಸಂ ಮನದೊಳ್
ಮುಳಿದಸಿಯನೆ ನೋ[ಡೆ] ಪರಿವಾರದವರ್ ॥ (ಪ.೧೫೧)

ಮುದ್ರಿತಗ್ರಂಥಗಳ ಪಾಠ ತೃಪ್ತಿಕರವಾಗಿಲ್ಲ; ಅರ್ಥ ಸುಕರವಾಗುವಂತೆ ಸಂಪಾದಕೀಯ ಸವರಣೆಯನ್ನು ಈಗಾಗಲೇ ಮಾಡಿರುವುದರ ಜೊತೆಗೆ ಇನ್ನೂ ಒಂದು ಕಡೆ ಮಾಡಿದೆ.

ಈ ಪದ್ಯದ ಆಶಯ ಇರುವಂತೆ ಹೀಗೆ: ''ಅರಸನು ಮನಸ್ಸಿನಲ್ಲಿಯೇ ಕೋಪಿಸಿ ಕತ್ತಿಯನ್ನೇ ನೋಡಲಾಗಿ, ಪರಿವಾರದವರು ತಳಮಳಿಸಿ, ತಮ್ಮಲ್ಲಿ ಹುಟ್ಟಿದ ಭೀತಿ ತಮ್ಮ ಮನಸ್ಸನ್ನು ಹಿಡಿದಿರಲು ಕಳವಳಪಟ್ಟು, (ಪರಿಸ್ಥಿತಿ) ತಿಳಿದವರಾದ ಅವರು ಅಲ್ಲಿ ನಿಲ್ಲುವುದಕ್ಕೆ ಧೈರ್ಯಮಾಡದೆ ಪೂರ್ತಿಯಾಗಿ ಒಳಗಡೆ ಹೋಗಿ ಸೇರಿಕೊಂಡರು.''

ಇದು ವರ್ಣಚ್ಯುತಕವಾದ್ದರಿಂದ, ಸರಿಯಾದ ಅರ್ಥಾನ್ವಯಗಳಿಗಾಗಿ ಬೇಕಾದ ಒಂದು ಅಕ್ಷರ ಪದ್ಯದ ಯಾವುದೋ ಸ್ಥಾನದಲ್ಲಿ ಲೋಪವಾಗಿದ್ದು, ಅದನ್ನು ಗುರುತಿಸಿ ಆ ಸ್ಥಾನದಲ್ಲಿ ಅದನ್ನು ಸಂಯೋಜಿಸಬೇಕಾಗಿದೆ. ಇಲ್ಲಿ ಆ ಸ್ಥಾನ ಯಾವುದು? ಆನೆಯ ಪಾದದಲ್ಲಿ, ''ಮುಳಿದಸಿಯನೆ'' ಎಂಬ ಪದದಲ್ಲಿ 'ದ' ಎಂಬ ಅಕ್ಷರದ ಬಳಿಕ 'ರ' ಎಂಬ ಅಕ್ಷರವನ್ನು ಸಂಯೋಜಿಸಿ, ''ಮುಳಿದರಸಿಯನೆ'' ಎಂಬುದಾಗಿ ಮಾಡಿಕೊಳ್ಳುವುದಾದರೆ, ಅರ್ಥಾನ್ವಯಗಳು ಹೆಚ್ಚು ಸ್ಫುಟವಾಗುತ್ತವೆ. ಆಗ ''ಅರಸನು ಮನಸ್ಸಿನಲ್ಲಿಯೇ ಕೋಪಿಸಿ, ತನ್ನ ಅರಸಿಯನ್ನೇ ನೋಡಲಾಗಿ'' ಎಂಬ ಸಮುಚಿತವಾದ ಆರಂಭದೊಂದಿಗೆ ಮುಂದಿನ ಪದ್ಯಭಾಗದ ಆಶಯ ಚೆನ್ನಾಗಿ ಹೊಂದಿ

ಕೊಳ್ಳುತ್ತದೆ. ''ಮುಳಿದಸಿಯುಳನೆ'' ಎಂದು ಮಾಡಿಕೊಂಡರೂ ''ತನ್ನ ಪತ್ನಿಯನ್ನೇ'' ಎಂಬರ್ಥವನ್ನು ಕೊಡುವುದರಿಂದ 'ಯು' ಎಂಬ ಅಕ್ಷರದ ಬಳಿಕ 'ಳ' ಎಂಬ ಅಕ್ಷರದ ಸಂಯೋಜನೆಯೂ ಪರ್ಯಾಯವಾಗಿ ಸಾಧುವೇ ಆಗುತ್ತದೆ.

ಚ್ಯುತವಾದ ಅಕ್ಷರವನ್ನು ಹೊರಗಿನಿಂದ ತಂದು ಸೇರಿಸಿದ್ದರಿಂದ ಛಂದಸ್ಸಿಗೆ ಭಂಗ ಬರಕೂಡದು ಎಂಬುದು ನಿಜ; ಪದ್ಯ, ಗೀತಿಕೆಯಾಗಿರುವುದರಿಂದ ಛಂದಸ್ಸಿನ ದೋಷ ಇಲ್ಲಿ ತಟ್ಟಲಾರದು.

'ಕಾವ್ಯಾವಲೋಕನ'ದ ಲಕ್ಷ್ಯ (ಅ. ಪ್ರತಿಯ ಪಾಠದಂತೆ)

ಕುಲಜನಭಿಮಾನಿ ತಕ್ಕಂ । ಚಲಮುಱಿವಂ ನೆಗಟಿನಾತನಿಂತಿದನೆಂತುಂ ।
ಜಲಜಾಯತಾಕ್ಷಿ ಕೆಲನುಂ । ನೆಲನುಂ ನಗುವಂತು ಪೊಲ್ಲಕೆಯ್ಗುಂ ಚಾರಂ ॥ (ಪ. ೫೯೧)

ನಾಗವರ್ಮನು ವರ್ಣಚ್ಯುತಕವನ್ನೆ ಅಕ್ಷರಚ್ಯುತಕವೆಂದು ಕರೆದಿದ್ದು, ಇದನ್ನು ಸಹ ಬಿಂದುಚ್ಯುತಕದ ಹಾಗೆಯೇ ಪ್ರಹೇಳಿಕೆಯಾಗಿ ಹೇಳದೆ, ಅಕ್ಷರಚಮತ್ಕೃತಿಗಳಲ್ಲಿ ಒಂದು ಪ್ರಭೇದವನ್ನಾಗಿ ಹೇಳಿದ್ದಾನೆ. ಇದೂ ನ್ಯಾಯವಾಗಿ 'ಚ್ಯುತಚಿತ್ರ'ದಲ್ಲಿ ಪ್ರತ್ಯೇಕವಾಗಿ ಗಣಿಸತಕ್ಕದ್ದೇ. ಕವಿರಾಜಮಾರ್ಗಕಾರನ ಅನುಕ್ರಮವನ್ನು ಹಿಡಿದು ನಾಗವರ್ಮನ ಲಕ್ಷ್ಯಪದ್ಯವನ್ನೂ ಇಲ್ಲಿಯೇ ಪರಿಶೀಲನೆಗೆ ಎತ್ತಿಕೊಂಡಿದೆ. ವರ್ಣಚ್ಯುತಕದ ಲಕ್ಷಣವನ್ನೇ ಇಲ್ಲಿಯೂ ಹೇಳಬೇಕೆಂದು ತೋರುತ್ತದೆ.

ಇರುವಂತೆ ಪದ್ಯದ ಆಶಯ ಹೀಗೆ: ''ಕುಲಜ, ಅಭಿಮಾನಿ, ಯೋಗ್ಯ, ಚಲ ತಿಳಿದವನು; ಆತನು ಹೀಗೆ ಇದನ್ನು ಎಷ್ಟು ಮಾತ್ರವೂ ಮಾಡುವುದಿಲ್ಲ; ಎಲೆ ಕಮಲಲೋಚನೆ, ಅಕ್ಕಪಕ್ಕದವರೂ ಲೋಕವೂ ನಗುವ ಹಾಗೆ ಚಾರನು ಕೆಟ್ಟದ್ದು ಮಾಡುವನು.''

ಇದೊಂದು ಆಭಾಸಕರವಾದ ವಾಕ್ಯ. ಕೆಟ್ಟದ್ದು ಮಾಡುವಂತಹವನಲ್ಲ ಎಂದು ಮೊದಲು ಹೇಳಿ, ಬಳಿಕ ಮಾಡುವನು ಎಂದು ಹೇಳುವುದರಲ್ಲಿ ಆಭಾಸವಿದೆ. ಇದು ಸರಿಯಾಗಬೇಕಾದರೆ, ''ಪೊಲ್ಲಕೆಯ್ಗುಂ ಚಾರಂ'' ಎಂಬೆಡೆಯಲ್ಲಿ, ''ಪೊಲ್ಲಕೆಯ್ಗುಮೆ ಚಾರಂ'' ಎಂಬುದಾಗಿ (ಕೆಯ್ಗುಂ + ಎ = ಕೆಯ್ಗುಮೆ) ಪ್ರಶ್ನಾರ್ಥಕವಾಗುವಂತೆ ಪಾಠವನ್ನು 'ಎ' ಎಂಬ ಅಕ್ಷರವನ್ನು ಹೊಸದಾಗಿ ಸೇರಿಸುವುದರ ಮೂಲಕ ವ್ಯತ್ಯಾಸಮಾಡಿದರೆ ಸಾಕಾಗುತ್ತದೆ. ಆಗ ''ಚಾರನು ಕೆಟ್ಟದ್ದು ಮಾಡುವನೇ?'' ಎಂಬ ಪ್ರಶ್ನೆಯೂ ''ಮಾಡನು'' ಎಂಬ ಅಧ್ಯಾಹೃತವಾದ ಉತ್ತರವೂ ಪದ್ಯದ ಆಶಯವನ್ನು ಸರಿಯಾಗಿ ರೂಪಿಸುತ್ತವೆ.

ಚ್ಯುತದತ್ತಾಕ್ಷರ

'ಕಾವ್ಯಾವಲೋಕನ'ದ ಲಕ್ಷ್ಯ

ಸೀತಾರಾಮಸಮೀಪಸ್ಥಂ । ಧೌತಶೀಲಸಿತಪ್ರಭಂ ।
ವೀತತ್ರಾಸಂ ಮನಂಗೊಳ್ಗುಂ । ಪ್ರೀತಿಯಿಂದೊಂದಿ ಲಕ್ಷಣಂ ॥ (ಪ. ೫೮೮)

ಇದು 'ಕಾವ್ಯಾವಲೋಕನ'ದಲ್ಲಿ ಮಾತ್ರವೇ ಇರುವ ಒಂದು ಅಕ್ಷರಚಮತ್ಕೃತಿ. 'ಕವಿರಾಜಮಾರ್ಗ'ದಲ್ಲಿ ಸಂವಾದಿಯಾದ ಚಿತ್ರಪ್ರಭೇದದ ಹೆಸರಾಗಲಿ, ಲಕ್ಷ್ಯವಾಗಲಿ ಇಲ್ಲ. ಇದು ದಿಟವಾಗಿ ಪ್ರಹೇಳಿಕೆಯ ಗುಂಪಿಗೆ ಸೇರತಕ್ಕುದಲ್ಲವಾದರೂ, ಅಕ್ಷರಚ್ಯುತಕ ಬಿಂದುಚ್ಯುತಕಗಳ ಹಾಗೆಯೇ ಇದನ್ನು ಪರಿಗಣಿಸಿ ಇಲ್ಲಿಯೇ ಪ್ರಸ್ತಾಪಿಸಿದೆ. ಈ ಮೂರು ಚಿತ್ರಭೇದಗಳೂ ನಾಗವರ್ಮನ ದೃಷ್ಟಿಯಲ್ಲಿ ವರ್ಣಚಿತ್ರಗಳೇ ಎಂದು ಭಾವಿಸಬಹುದಾಗಿದೆ.

ಇರುವ ಹಾಗೆ ಈ ಶ್ಲೋಕದ ಅಭಿಪ್ರಾಯ: ''ಸೀತಾರಾಮರಿಗೆ ಸಮೀಪಸ್ಥನೂ ಶುಭ್ರಶೀಲಗುಣದಿಂದ ಕೂಡಿದವನೂ ಧವಳವರ್ಣದ ಮೈಬಣ್ಣವುಳ್ಳವನೂ ನಿರಾಯಾಸನೂ ಆದವನು, ಲಕ್ಷಣವುಳ್ಳವನಾಗಿ ಪ್ರೀತಿಯಿಂದ ಮನಸ್ಸನ್ನು ಸೆಳೆಯುವನು.''

ಇಲ್ಲಿ ಆನೆಯ ಪಾದದಲ್ಲಿಯ 'ಕ್ಷ' ಕಾರವನ್ನು ಚ್ಯುತಮಾಡಿ 'ಕ್ಷ್ಮ'ಕಾರವನ್ನು ದತ್ತಮಾಡಿದಲ್ಲಿ, ''ಸೀತಾರಾಮರಿಗೆ ಸಮೀಪಸ್ಥನೂ ಶುಭ್ರವಾದ ಶೀಲಗುಣದಿಂದ ಕೂಡಿದವನೂ ಧವಳವರ್ಣದ ಮೈಬಣ್ಣವುಳ್ಳವನೂ ನಿರಾಯಾಸನೂ ಆದ ಲಕ್ಷ್ಮಣನು ಪ್ರೀತಿಯಿಂದ ಕೂಡಿ ಮನಸ್ಸನ್ನು ಸೆಳೆಯುವನು'' ಎಂಬುದಾಗಿ ಸಮುಚಿತವಾದ ಅರ್ಥ ಹೊರಡುತ್ತದೆ.

ಸಮಸ್ತ್ರಕೆ/ಸಮಂತಿ [ಸಮಂತಕ/ಸಮಂತ]

'ಕವಿರಾಜಮಾರ್ಗ'ದ ಲಕ್ಷ್ಯ

ವಿಗಳಿತರಾಗನಾಮೊಂ ನಿನ್ನಾಮುದಜಿ ।
ಸೊಗಯಿಸುಗುಂ ಕಟಕತ್ವಮಂ ಸಮರ್ಥಬಲಂ ।
ಬಗೆದೆನಗೊಯ್ಯನೆಸಗೆಯಿಂದುಮೊದಾ ।
ಲಗಲಲಾಟಿಸುಗುಮದೆ ಪೇಟ್ದಿ ಬನದೊಳ್ ॥ (ಪ. ೧೫೦)

ಈ ಲಕ್ಷ್ಯಪದ್ಯದ ಪಾಠ ಅಶುದ್ಧವಾಗಿದೆಯೆನ್ನುವುದರಲ್ಲಿ ಏನೂ ಸಂಶಯವಿಲ್ಲ. ಈ ಪಾಠವನ್ನು ಸರಿಯಾಗಿ ಯೋಜಿಸಲು, ಈ ಪ್ರಹೇಳಿಕೆಯ ಹೆಸರು ಲಕ್ಷಣಗಳ ಸ್ವರೂಪವೂ ತೀರ ಅನಿಶ್ಚಿತವಾಗಿಯೇ ಇರುವುದು ಇನ್ನೊಂದು ಅಡ್ಡಿಯಾಗಿದೆ. ಪ. ೧೪೪ರ ಕೊನೆಗೆ ಬಂದಿರುವ ಹೆಸರು 'ಸುಸಮಸ್ತ್ಕ'ವೆ? ಇಲ್ಲವೆ 'ಸಮಸ್ತ್ಕ'ವೆ? 'ಸಮಸ್ತ್ಕ'ವಿದ್ದೀತು. 'ಸಮಸ್ತ್ಕ' 'ಸಮಂತಕ'ದ ಅಪಲಿಖಿತವಾಗಿರಬಹುದೆ?[29] ಇರುವುದು ಸಾಧ್ಯ. ಸಕಾರವು ನಕಾರವಾಗಿ, ನಕಾರವು ಸಕಾರವಾಗಿ ಲಿಖಿತವಾಗುವುದೂ ಓದಲ್ಪಡುವುದೂ ಸಾಮಾನ್ಯ. 'ಸಮಂತಕ' ಶಬ್ದ ಸಮಂತ+ಕ ಇರಬಹುದೇ? 'ಸಮಂತ' ಎಂಬ ಸಂಸ್ಕೃತಶಬ್ದ 'ಎಲ್ಲ ಕಡೆಯೂ ಇರುವ, ಸರ್ವವ್ಯಾಪಕವಾದ' ಎಂಬ, 'ಪೂರ್ಣವಾದ, ಸಮಗ್ರವಾದ' ಎಂಬ ಅರ್ಥಗಳಲ್ಲಿ ಗುಣವಾಚಕವಾಗಿಯೂ, 'ಸೀಮೆ, ಎಲ್ಲೆ' ಎಂಬ ಅರ್ಥದಲ್ಲಿ ವಿಸರ್ಗಾಂತ ನಾಮವಾಚಕವಾಗಿಯೂ ಪ್ರಸಿದ್ಧವಿದೆ. ವಿಶೇಷಣರೂಪಗಳೂ ಉಂಟು. ಇದೇ ಶಬ್ದ ಪ. ೧೪೪ರ ಮೂಲಪಾಠದಲ್ಲಿ 'ಸುಸಮಂತಕ'ವೆಂದು 'ಸು' ಉಪಸರ್ಗದೊಂದಿಗೆ, 'ಕ' ಸ್ವಾರ್ಥಸೂಚಕ ಪ್ರತ್ಯಯ ಸೇರಿ ಪ್ರಯೋಗವಾಗಿದ್ದಿರುವುದು ಬಲುಮಟ್ಟಿಗೆ ಸಂಭಾವ್ಯವಾದ್ದು. ಪ. ೧೫೦ರ ಸೂಚನೆಯಾಗಿ ಬಂದಿರುವ 'ಸಮಂತಿ', ದಿಟವಾಗಿ 'ಸಮಂತ' ಎಂಬುದರ ಅಪಲಿಖಿತವೇ ಇರಬೇಕು.

ಮುಳಿಯ ತಿಮ್ಮಪ್ಪಯ್ಯನವರು, ''ಪೂರ್ವೋಕ್ತವಾದ ಹಲವು 'ಹೇಳಿಕೆ'ಗಳು ಸಮ್ಮಿಳಿತವಾಗಿ ರೂಪಿತವಾದುದೇ 'ಸಮಂತಿ' ಅಥವಾ 'ಸಮಸ್ತ್ಕ' ಎಂಬ ಹೆಸರನ್ನೊಂದುವುದಾಗಿ ತೋರುವುದು. ಬಹುಶಃ ಗ್ರಂಥಪಾತವಿರುವುದರಿಂದ ಅರ್ಥವು ವಿಶದವಾಗುವಂತಿಲ್ಲ. ಇದು ಬನದಲ್ಲಿ ತೋರಿದ ಅದೊಬ್ಬ ಋಷಿಯನ್ನು ಮದವಿಳಿದ ಆನೆಯೊಡನೆ ಹೋಲಿಸಿದ ಮಾತಾಗಿ ತೋರುತ್ತದೆ'' ಎಂಬುದಾಗಿ ತಿಳಿಸಿರುತ್ತಾರೆ.[30] ಸೀತಾರಾಮಯ್ಯನವರು ''ಇದು 'ವಿಗಳಿತರಾಗ'ನಾದ ಮುನಿಯೊಬ್ಬನನ್ನು ವರ್ಣಿಸುವ ಪದ್ಯವೆಂದು ಸೂಚಿತವಾಗುತ್ತದೆ'' ಎಂದು ಮಾತ್ರ ಹೇಳಿದ್ದಾರೆ.[31] ಆದರೆ ಈ ಪದ್ಯದಲ್ಲಿ, ಅರಸನೊಬ್ಬ ವೈರಾಗ್ಯಗೊಂಡು ಮಗನಿಗೆ ರಾಜ್ಯವೊಪ್ಪಿಸಿ ಅರಣ್ಯಕ್ಕೆ ತೆರಳುವಾಗ, ಆ ಮಗನು ವ್ಯಕ್ತಪಡಿಸಿದ ಪ್ರತಿಕ್ರಿಯೆ ನಿರೂಪಿತವಾಗಿರುವಂತೆ ತೋರುತ್ತದೆ. ಮೊದಲ ಪಾದದಲ್ಲಿಯೂ ಮೂರನೆಯ ಪಾದದ ಕೊನೆಯ ನಾಲ್ಕು ಅಕ್ಷರಗಳಿಂದ ಹಿಡಿದು ಪದ್ಯಾಂತದವರೆಗೆ ನಡುವೆ ಕೆಲವು ಭಾಗಗಳಲ್ಲಿಯೂ ಸೂಕ್ತ ಪಾಠಪರಿಷ್ಕರಣ ಆಗಬೇಕಾಗುವುದು. ತಾತ್ಕಾಲಿಕವಾಗಿ ಒಂದು ಊಹಾತ್ಮಕಪರಿಷ್ಕರಣವನ್ನು ಸಿದ್ಧಮಾಡಿ, ಮುಂದೆ ಉದ್ಧರಿಸಿದೆ:

ವಿಗಳಿತರಾಗನಾಮೊನಿನ್ನಾಮುದ[ಜೆಂ] ।
ಸೊಗಯಿಸುಗುಂ ಕಟಕತ್ವಮಂ ಸಮರ್ಥಬಲಂ ।
ಬಗೆದೆನಗೊಯ್ಯನೆಸಗೆಯಿಂದುಮೊ[ಡಾ] ।
[ರ]ಗಲಲಾಟಿಸುಗುಮ[ದನೇವೇಟ್ದಿಂ] ಬನದೊಳ್ ॥ (ಪ. ೧೫೦)

''ವೈರಾಗ್ಯಪರನಾದವನು ಯಾವನು ತಾನೆ(ವೈರಾಗ್ಯ ತಪಶ್ಚರ್ಯೆಗಳು ಹೊರತಾಗಿ)ಇನ್ನು ಯಾವುದರಿಂದ ಶೋಭಿಸುತ್ತಾನೆ? ಸಮರ್ಥಬಲನಾದ ಆತನು ವಿಚಾರಮಾಡಿ ರಾಜಧಾನಿಯ ಸ್ವಾಮಿತ್ವವನ್ನು (ರಾಜತ್ವವನ್ನು) ಮೆಲ್ಲಗೆ (ಉಪಾಯವಾಗಿ) ನನಗೆ ಒಪ್ಪಿಸಿ, ವನಕ್ಕೆ ತೆರಳುವುದಾದರೆ, ಯಾರು ತಾನೆ ಹೀಗೆ ಎಲ್ಲವನ್ನೂ ತ್ಯಜಿಸಲು ಬಯಸುತ್ತಾರೆ? ಅದನ್ನು ಏನೆಂದು ಹೇಳಲಿ?''

ಅರ್ಥವೂ ಅನ್ವಯವೂ ಕೂಡುವಂತೆ ಮಾಡಿದ ಈ ಪ್ರಯತ್ನದ ಸಾಧುತ್ವ ಹೇಗೇ ಇರಲಿ, ಇಲ್ಲಿ ಪ್ರಹೇಳಿಕೆಯ ಸ್ವರೂಪವೇನು? ಸಮಸ್ಯೆ ಎಲ್ಲಿ, ನಿವೃತ್ತಿ ಹೇಗೆ? ಇವು ತಿಳಿಯುವುದಿಲ್ಲ. ನಾಗವರ್ಮನ ಪ್ರಹೇಳಿಕೆಗಳಲ್ಲಿ ಇದಕ್ಕೆ ಸಂವಾದಿಯಾದುದಿಲ್ಲ. ''ನಿಶ್ಶೇಷವಾಗದೆ ಉಳಿದಿರುವಿಕೆ'' ಎಂಬ ಅರ್ಥದಿಂದ 'ಉಟಿವು' 'ಸಮಂತಿ'ಯೊಡನೆ ಅಭಿನ್ನವಾಗಿದ್ದಿರಲೂ ಬಹುದು ಎಂಬುದಾಗಿ ತಿಮ್ಮಪ್ಪಯ್ಯನವರು ಭಾವಿಸಿ, ನಾಗವರ್ಮನ 'ಉಟಿವು' ಪ್ರಹೇಳಿಕೆಯನ್ನು ಸಮಸ್ತಕ (ಸಮಂತಿ) ದೊಂದಿಗೆ ಹೋಲಿಸಿ ನೋಡುವ ಯತ್ನಮಾಡಿದ್ದಾರೆ.[32] ಇದು ತೃಪ್ತಿಕರವಾಗಿಲ್ಲ. ಇವೆರಡೂ ಬೇರೆಯಾದ ಪ್ರಹೇಳಿಕೆಗಳೆಂದೇ ತಿಳಿಯಬೇಕಾಗಿದೆ.

'ಕಾವ್ಯಾವಲೋಕನ'ದಲ್ಲಿ ಎರಡು ಪ್ರಹೇಳಿಕೆಗಳು ಬೇರೆಯೇ ಇವೆ. ಒಂದು 'ಉಟಿವು', ಇನ್ನೊಂದು 'ನಾಮಾಂತರಿತ'.

ಉಟಿವು

ಉಮೆಗೆ ಮಹೀಜೆಗೆ ಸುಮನೋ । ರಮಣೀ[ಮಣಿ] ನಚ್ಚಿನಾ ತಿಳೋತ್ತಮೆಗೊಳ್ಪಿಂ ।
ಸಮನೆನಿಸುವ ಮಂದಾಕಿನಿ । ಯಮುನಾನದಿ ಸಿಂಧುಸಂಕರಂ ಕಣ್ಗೆಸೆಗುಂ ॥ (ಪ. ೫೯೯)

''ಪಾರ್ವತಿಗೆ, ಸೀತೆಗೆ, ದೇವತಾಸ್ತ್ರೀಯರಲ್ಲಿ ರತ್ನವೆನಿಸಿದ ನೆಚ್ಚಿನ ತಿಲೋತ್ತಮೆಗೆ ಶೋಭೆಯಲ್ಲಿ ಸಮಾನವೆನ್ನಿಸುವ ಗಂಗೆ ಯಮುನೆ ಮತ್ತು ಸಿಂಧು ನದಿಗಳ ಸಂಪರ್ಕವು ಶೋಭಿಸುತ್ತದೆ''. 'ಉಟಿವು' ''ಅವಶಿಷ್ಟೇ ವಿಮೋಚನೇ ಚ'' (ಶಮಧಾ) ಎಂಬರ್ಥ ಕೊಡುವ ಮಾತು 'ಉಳಿವು' ಎಂದಾದರೆ 'ಗೋಪನೇಷು ಕುಳಂ' (ಶಮಧಾ) ಎಂದಿರುವುದರಿಂದ, ಅಲ್ಲಿ ಏನೋ ಗೂಢವಾಗಿದೆಯೆಂದು ತಿಳಿಯಲು ಅವಕಾಶವಾಗುತ್ತದೆ. ಕನ್ನಡ ನಿಘಂಟು 'ಉಟಿವು=ಒಂದು ಉಕ್ತಿವಿಶೇಷ (ಮರೆಮಾಡಿ ಹೇಳುವುದು)' ಎಂಬುದಾಗಿ ಅರ್ಥಹೇಳಿದೆ (ಪು. ೧೧೧೦). ''ಸ್ಥಾನವ್ಯಕ್ತಿಯಂ ಪೇಟಿಕ್ಕೊಡೆ ಉಟಿ'' ಎಂದು ಶಮದ.ದ ಸಹಜ ಅಟಗಳ ಪಟ್ಟಿಯಲ್ಲಿದೆ. ಆಗ ಎಡೆಯಲ್ಲಿರುವ ವ್ಯಕ್ತಿ ಎಂದು ಅರ್ಥವಾಗುವುದು. ಈ ಅರ್ಥ ಇಲ್ಲಿಗೆ ಸಂಗತವೆಂದು ತೋರುತ್ತದೆ. ಸ್ಥಾನ ಸಂಬಂಧವನ್ನು ಸೂಚಿಸುವ ಮಾತು 'ಉಟಿವು' ಎಂದು ಆಗ ತಿಳಿಯಬಹುದು.

ಇಲ್ಲಿ ಚಮತ್ಕಾರವೇನು? ಅದು ಬಹುಶಃ ಹೀಗೆ : ಮೇಲುನೋಟಕ್ಕೆ ಇಲ್ಲಿ ಪಾರ್ವತಿ, ಸೀತೆ ಮೊದಲಾದ ವರಿಗೆ ನದಿಗಳ ಸಂಪರ್ಕ ಹೇಗೆ ಸಾಧ್ಯ ಎಂಬ ಪ್ರಶ್ನೆ ತೊಡಕನ್ನು ಉಂಟುಮಾಡುತ್ತದೆ. ಆದರೆ ವಿಚಾರಮಾಡಿ ದಾಗ, ಪಾರ್ವತಿಗೆ ಗಂಗೆಯು ಸವತಿಯಾದ್ದರಿಂದ, ಸೂರ್ಯವಂಶದ ಅರಸರ ಮನೆಯ ಸೊಸೆಯಾದ ಸೀತೆಗೆ ಸೂರ್ಯ ಸುತೆಯಾದ ಯಮುನೆಯೊಂದಿಗೆ ಬಾಂಧವ್ಯವೇರ್ಪಡುವುದರಿಂದ, ತಿಲೋತ್ತಮೆ ಒಬ್ಬ ಅಪ್ಸರಸೆಯಾಗಿದ್ದು ಆಕೆಯ ಜನ್ಮಸ್ಥಾನ ಸಿಂಧು ಎಂದರೆ ಕ್ಷೀರಸಾಗರವಾದ್ದರಿಂದ, ಸ್ವಾಭಾವಿಕವಾಗಿಯೇ ಪಾರ್ವತಿಗೆ ಗಂಗೆಯು, ಸೀತೆಗೆ ಯಮುನೆಯು, ಹಾಗೂ ತಿಲೋತ್ತಮೆಗೆ ಸಿಂಧುವಿನ ಸಂಪರ್ಕ ಸೊಗಸಿತು ಎನ್ನಬೇಕು.

ನಾಮಾಂತರಿತ

ಮೊದಲೊಳ್ ವಿಕಾರಿ ನಾಕಾ । ರದರ್ಶನೀಯಂ ವಿರಾಮದೊಳ್ ಸಾಯಕಮಂ ।
ತದು ತಾಂ ವಿನಿಂದ್ಯಮಲ್ಲಾ । ದಿದೇವಪುತ್ರಂ ಸದಾನವಾರಿಪ್ರಮುಖಂ ॥ (ಪ. ೬೦೦)

''ಮೊದಲಲ್ಲಿ ವಿಕಾರಿಯಾದುದು. ಆಕಾರದಲ್ಲಿ ದರ್ಶನಕ್ಕೆ ಯೋಗ್ಯವಾಗದುದು. ಅಂತ್ಯದಲ್ಲಿ ಅದು ಸಾಯಕ (=ಬಾಣ). (ಆದರೂ) ವಿಶೇಷವಾಗಿ ನಿಂದ್ಯವಲ್ಲ. ಆತ ಆದಿದೇವನ ಪುತ್ರ, ಅಸುರವೈರಿಗಳಲ್ಲಿ (ದೇವತೆಗಳಲ್ಲಿ) ಪ್ರಮುಖರಿಂದ ಕೂಡಿದವನು.''

ಇಲ್ಲಿ ಯಾವುದೋ ಒಂದು ವ್ಯಕ್ತಿನಾಮವನ್ನು, ಅದರಲ್ಲಿಯೂ ದೇವತಾವ್ಯಕ್ತಿಯ ಹೆಸರನ್ನು, ಹುದುಗಿಸಿಟ್ಟಿದೆ. ಅದನ್ನು ಭೇದಿಸುವ ರೀತಿಯೂ ಪದ್ಯದಲ್ಲಿಯೇ ಸೂಚಿತವಾಗಿದೆ. ಅದು ಹೀಗೆ :

"ಮೊದಲಲ್ಲಿ 'ವಿ' ಎಂಬ ಅಕ್ಷರದಿಂದ ಕೂಡಿದವನು ('ವ'ಕಾರ + ಇ = ವಿಕಾರ); ಆಮೇಲೆ 'ನಾ' ಎಂಬ ಅಕ್ಷರದಿಂದ ಕಾಣಿಸಿಕೊಳ್ಳುವವನು ('ನಾ'ಕಾರ); ಕೊನೆಯಲ್ಲಿ ಅದು 'ಯಕ' ಸಹಿತವಾದುದು [ಸಾ(<ಸಹ)+ 'ಯಕ']. ಅಲ್ಲಿಗೆ ಹುದುಗಿರುವ ಹೆಸರು 'ವಿನಾಯಕ' ಎಂದು ಈಗ ವಿದಿತವಾಯಿತು. ಈ ಹೆಸರು ವಿನಿಂದ್ಯವಲ್ಲ, ನಿಜ. ಈ 'ವಿನಾಯಕ' (=ಗಣಪತಿ) ಆದಿದೇವನಾದ ಶಂಕರನ ಮಗ; ಸುರಪ್ರಮುಖರಿಂದ ಒಡಗೂಡಿರತಕ್ಕವನು ಮದಜಲದಿಂದ ಕೂಡಿದ ಮುಖವುಳ್ಳವನು ಎಂದೂ ಆಗಬಹುದು)."

ಮುಳಿಯ ತಿಮ್ಮಪ್ಪಯ್ಯನವರು ಇದೇ ಉತ್ತರವನ್ನು ಗುರುತಿಸಿದ್ದರೂ, ಅವರ ವಿವರಣೆ ಕೆಲಮಟ್ಟಿಗೆ ಭಿನ್ನವಾಗಿದೆ.[33] ಮೇಲೆ ಕೊಟ್ಟಿರುವ ವಿವರಣೆಯೇ ಸರಳವೂ ಸ್ವಾಭಾವಿಕವೂ ಆಗಿ ತೋರುವುದು ಎಂದು ನನ್ನ ಅಭಿಪ್ರಾಯ. ಈ ಪ್ರಹೇಳಿಕೆಯ ಹೆಸರು ಹಾಗೂ ಲಕ್ಷಣದ ಅನ್ವಯ ದಂಡಿಯ 'ಕಾವ್ಯಾದರ್ಶ'ದಲ್ಲಿ ನಿರೂಪಿತವಾಗಿರುವ 'ನಾಮಾಂತರಿತ'ವೆಂಬ ಪ್ರಹೇಳಿಕೆಗೆ (೩–೧೦೨, ೧೧೬) ಅನುಗುಣವಾಗಿಯೇ ಇವೆ.

'ಕಾವ್ಯಾವಲೋಕನ'ದ ಸೂತ್ರ ೧೪೧ರಲ್ಲಿ 'ನಾಮಾಂತರಿತ'ವಾದ ಬಳಿಕ 'ಕುಸುರಿಯ ನುಡಿ' ಎಂಬ ಪೇಳಿಕೆಯನ್ನು ಹೇಳಿದೆ. ಈ ೬ನೆಯದಾದ ಪೇಳಿಕೆಯನ್ನು ಹೆಸರಿಸಿರುವುದಲ್ಲದೆ, ಅದಕ್ಕೆ ಲಕ್ಷ್ಯವನ್ನು ಕೊಟ್ಟಿಲ್ಲ. "ಕುಸುರಿ ಮೊದಲಾದ ಪ್ರಶ್ನೋತ್ತರ ಪ್ರಕಾರಂಗಳ್ಗಮಿಲ್ಲಿ ಪ್ರಯೋಗಮಂ ಕಂಡುಕೊಳ್ವುದು" ಎಂಬುದಾಗಿ ಒಂದು ಸೂಚನೆಯೇನೋ 'ನಾಮಾಂತರಿತ'ದ ಲಕ್ಷ್ಯಪದ್ಯದ ಬಳಿಕ ದೊರೆಯುತ್ತದೆ. ಈ ಸೂಚನೆಯಿಂದ 'ಕುಸುರಿ'ಯೂ ಅಂತಹ ಕೆಲವು 'ಪೇಳಿಕೆ'ಗಳೂ 'ಪ್ರಶ್ನೋತ್ತರ'ಗಳ ಗುಂಪಿಗೆ ಸೇರಿದವು ಎಂಬುದು ತಿಳಿಯುತ್ತದೆ. 'ಪ್ರಶ್ನೆ'ಗಳ ಪ್ರಕಾರದಲ್ಲಿ ಇವುಗಳ ಸ್ವರೂಪ ತಿಳಿಯುವುದು ಸಾಧ್ಯವಿದೆಯೇನೊ, ಮುಂದೆ ನೋಡೋಣ.

ಕನ್ನಡದ ಇತರ ಅಲಂಕಾರ ಗ್ರಂಥಗಳಲ್ಲಿ ಪ್ರಹೇಳಿಕೆಗಳು

ಕವಿರಾ. ಮತ್ತು ಕಾವ್ಯಾವ.ಗಳಿಂದ ಮುನ್ನಡೆದರೆ, ಪ್ರಹೇಳಿಕೆಯನ್ನು ಕುರಿತು 'ಉದಯಾದಿತ್ಯಾಲಂಕಾರ'ದಲ್ಲಿ (ಸು. ೧೧೫೦) ದೊರೆಯುವ ಸ್ವಲ್ಪವೇ ಆದ ವಿವರಗಳನ್ನು ಗಮನಿಸಬಹುದು.

'ಉದಯಾದಿತ್ಯಾಲಂಕಾರ'ದ ಕರ್ತೃ ಈ ಸಂಬಂಧದಲ್ಲಿ ಹೀಗೆ ಪೀಠಿಕೆ ಹಾಕುತ್ತಾನೆ :

> ಯಮಕ ಪ್ರಹೇಳಿಕಾದಿಗ । ಳಮಾರ್ಗಮೆಂದಿಂತು ಮಾಣ್ದೆನಾದೊಡ[ಮಂ]ತಾ ।
> ಯಮಕ ಪ್ರಹೇಳಿಕಾದಿಗ । ಳ ಮಾರ್ಗಮಂ ತಿಳಿಯಲೆರಡು ಪದ್ಯದೊಳು [ಸಿ]ರ್ಪೆಂ ॥ (ಪ. ೭೧)

ಯಮಕ ಪ್ರಹೇಳಿಕಾದಿ ಶಬ್ದಾಲಂಕಾರಗಳು 'ಅಮಾರ್ಗ'ವೆಂಬ ಕಾರಣದಿಂದಾಗಿ ತಾನು ಅವನ್ನು ಕೈಬಿಟ್ಟಿರುವುದಾಗಿ ಹೇಳಿಯೂ, ಒಂದೊಂದು ಪದ್ಯದಲ್ಲಿ ಕ್ರಮವಾಗಿ ಅವುಗಳ ಸ್ವರೂಪವನ್ನು ಅವನು ಸೂಚಿಸಿದ್ದಾನೆ; ಸೂಚನೆಯ ಪದ್ಯವೇ ವ್ಯವಹಿತ ಅಥವಾ ವ್ಯಪೇತ ಯಮಕದ ಸುಂದರವಾದ ಲಕ್ಷ್ಯವಾಗಿರುವುದು ಒಂದು ಸ್ವಾರಸ್ಯ. ಪ್ರಹೇಳಿಕೆಯ ಪ್ರಭೇದವನ್ನೇನೂ ಸೂಚಿಸದೆ, ಅವನು ಉದ್ಧರಿಸಿರುವ ಅದರ ಏಕಮಾತ್ರ ಲಕ್ಷ್ಯ ಹೀಗಿದೆ :

> ಸಂಧಿಸಿ ಮೂಱುಕಾಶದ । ಪಿಂದೊರ್ವಂ ನಿಂದನಾ ಸದಾಶಿವನಿಂದಂ ।
> ಬಂದುದು ಲೆಕ್ಕಂ ಸಾಸಿರ । ಮೆಂದೊಡವಂತವನನಱುಪೊಡಾಗಮವಱುವಂ ॥ (ಪ. ೭೩)

ಎಂ. ವಿ. ಸೀತಾರಾಮಯ್ಯನವರು ಈ ಪ್ರಹೇಳಿಕೆಯ ಅಂತರಾರ್ಥವನ್ನು "ಯೋಗಶಾಸ್ತ್ರದ ಸಹಾಯದಿಂದ" ತಿಳಿಯುವ ಪ್ರಯತ್ನವನ್ನು ಮಾಡಿ, ಅದಕ್ಕೆ ಅನುಗುಣವಾಗಿ ಸವಿಸ್ತರವಾದ ಟಿಪ್ಪಣಿಯನ್ನೇ ಇದರ ಬಗ್ಗೆ ಹೀಗೆ ಬರೆದಿದ್ದಾರೆ: "ಷಟ್‌ಚಕ್ರಗಳ ಜ್ಞಾನಾನುಭವಗಳ ಮೂಲಕ ಯೋಗಸಿದ್ಧಿಯನ್ನು ಎಂದರೆ ಬ್ರಹ್ಮೈಕ್ಯ ಜ್ಞಾನವನ್ನು ಪಡೆಯಲುಂಟೆಂದು ಆ ಶಾಸ್ತ್ರ ತಿಳಿಸುತ್ತದೆ........ನಾಲ್ಕನೆಯ ಚಕ್ರವಾದ ಅನಾಹತ ಚಕ್ರದಲ್ಲಿ ಅಂತಃಕರಣವೆಂಬ ಅಷ್ಟದಳಪದ್ಮವೂ ಅದರ ನಡುವೆ ಮೂರು ರೇಖಾವಲಯಗಳೂ ಇವೆ. ಈ ರೇಖಾವಲಯಾಂತರ್ಗತವಾದ ದಹರಾಕಾಶವೇ ಪದ್ಯದಲ್ಲಿ ಹೇಳಿರುವ 'ಮೂಱುಕಾಶ' ಎಂದು ತೋರುತ್ತದೆ. ಪರಮಾತ್ಮನು ಜೀವಾತ್ಮ

ರೂಪದಲ್ಲಿ ವ್ಯಕ್ತವಾಗಿರುವುದು ಇಲ್ಲಿಯೆ....ಅನಾಹತ ಚಕ್ರದ ಅಧಿಷ್ಠಾತೃವಾದ ಸದಾಶಿವನ ಕೃಪೆಯಿಂದಲೇ ಮೋಕ್ಷದ್ವಾರವು ತೆರೆಯುವುದರಿಂದ ಸದಾಶಿವನನ್ನು ಅರಿತರೆ—ಎಂದರೆ ಅನಾಹತ ಚಕ್ರಸಾಧನೆಯಾದ ಮೇಲೆ— ವೇದಾಗಮಗಳನ್ನು ಅರಿತಂತೆಯೇ. ಸಹಸ್ರಾರ ಚಕ್ರವು ನಿರ್ಗುಣಬ್ರಹ್ಮನಿವಾಸ, 'ಸಹಸ್ರಾರ' ಪರಬ್ರಹ್ಮನ ವಿಶ್ವವ್ಯಾಪಕತ್ವದ ಸಂಕೇತ. 'ಸಹಸ್ರ ಶೀರ್ಷಾ ಪುರುಷಃ' ಎಂಬಲ್ಲಿಯೂ ಸಹಸ್ರಸಂಖ್ಯೆ 'ಪುರುಷ' (ಪರಬ್ರಹ್ಮ)ನ ವ್ಯಾಪಕತ್ವದ ದ್ಯೋತಕ. ಆದ್ದರಿಂದ, 'ಲೆಕ್ಕಂ ಸಾಸಿರ ಸದಾಶಿವನಿಂ' ಬಂದುದು ಎಂದರೆ ಪರಬ್ರಹ್ಮಜ್ಞಾನವು ಮೋಕ್ಷದಾಯಕನಾದ ಸದಾಶಿವನಿಂದ ಬಂದಿತು ಎಂದು ಗ್ರಹಿಸಬೇಕು.''[34]

ಸದ್ಯಕ್ಕೆ ಇದರಿಂದ ಭಿನ್ನವಾದ ಪ್ರಹೇಳಿಕೆಯ ಅಂತರಾರ್ಥವೇನಿರಬಹುದೆಂದು ತಿಳಿಯುತ್ತಿಲ್ಲವಾದ್ದರಿಂದ ಇದನ್ನೇ ಇಲ್ಲಿ ಗ್ರಹಿಸಿದೆ. ಇದನ್ನು 'ಕಾವ್ಯಾದರ್ಶ'ದಲ್ಲಿ ೨ನೆಯದಾಗಿ ನಿರೂಪಿತವಾಗಿರುವ 'ಸಂಖ್ಯಾತ' ಪ್ರಹೇಳಿಕೆಯ ಲಕ್ಷ್ಯವೆಂದು ಹೇಳಬಹುದಾಗಿದೆ.

ಅನಂತರದ ಅಲಂಕಾರಗ್ರಂಥಗಳಲ್ಲಿ, ದಂಡಿಯ 'ಕಾವ್ಯಾದರ್ಶ'ದ ಅನುವಾದವೇ ಆದ 'ಮಾಧವಾಲಂಕಾರ' ದಲ್ಲಿ (ಸು. ೧೫೦೦) ಪ್ರಹೇಳಿಕೆಗಳ ನಿರೂಪಣೆಯನ್ನು ನಾವು ನಿರೀಕ್ಷಿಸುವುದು ಸಹಜವೇ. ಇಲ್ಲಿ ಕಾವ್ಯದೋಷ ಗಳನ್ನು ಕುರಿತ ಲಕ್ಷಣಭಾಗಕ್ಕೆ ಮೊದಲು, ದಂಡಿ ಕುರಿತ ಹಾಗೆ ಆ ನಿರೂಪಣೆ ಕಾಣಿಸಿಕೊಳ್ಳಬೇಕಾಗಿತ್ತು. ಆದರೆ ಈಗ ದೊರೆತಿರುವ ಆ ಗ್ರಂಥದಲ್ಲಿ, ಅದರ ಮುದ್ರಿತ ಪರಿಷ್ಕರಣವನ್ನು[35] ಗಮನಿಸಿ ಹೇಳಬಹುದಾದರೆ, ಪ್ರಹೇಳಿಕೆಯ ಸಾಮಾನ್ಯಲಕ್ಷಣದ ನಿರ್ವಚನವಾಗಲಿ, ಅದರ ಪ್ರಭೇದಗಳ ಲಕ್ಷ್ಯಗಳಾಗಲಿ ಕಂಡುಬಂದಿಲ್ಲ. ಪ್ರಾಯಶಃ ಮೂಲಗ್ರಂಥದಲ್ಲಿ, ಯಥೋಚಿತಸ್ಥಾನದಲ್ಲಿ, ಸಂಗ್ರಹವಾಗಿಯಾದರೂ 'ಕಾವ್ಯಾದರ್ಶ'ದ ಪ್ರಹೇಳಿಕೆಯ ಲಕ್ಷಣ ಲಕ್ಷ್ಯಭಾಗಗಳು ಅನುವಾದಿತವಾಗಿದ್ದಿರಬೇಕು; ಸ್ವಾಭಾವಿಕವಾಗಿಯೇ ತೊಡಕಾಗಿರುವ, ಅರ್ಥಾಲಂಕಾರಗಳ ಹಾಗೆ ಮುಖ್ಯವೇನೂ ಅಲ್ಲದ, ಈ ಭಾಗಗಳು ಸರಿಯಾಗಿ ನಕಲಾಗದೆ ಕಾಲಾಂತರದಲ್ಲಿ ಪ್ರತಿಗಳಲ್ಲಿ ಲುಪ್ತವಾಗಿ ಹೋಗಿರಬೇಕು. ಈ ಗ್ರಂಥದಲ್ಲಿ ಹೀಗೆ ಲುಪ್ತವಾಗಿರುವ ಭಾಗಗಳು ಇನ್ನೂ ಕೆಲವಿವೆ. ಹಾಗಲ್ಲದೆ, ''ಆ ದುಷ್ಕರ ಮಾರ್ಗದಲ್ಲಿ ಸ್ವಲ್ಪವನ್ನು ಹೇಳಿದ್ದೇನೆ, ಮುಂದೆ ವಿಶೇಷವಾಗಿ ದೋಷಗಳ ಭೇದಗಳನ್ನು ಸ್ವಲ್ಪ ವಿವರಿಸುತ್ತೇನೆ'' ಎಂಬುದಾಗಿ ಹೇಳಿರುವುದರಿಂದ (೩–೬೬), ದುಷ್ಕರ ಭೇದಗಳಾದ ಅಕ್ಷರಚಮತ್ಕೃತಿ ಮತ್ತು ಕಾವ್ಯದೋಷಗಳ ನಡುವೆ ಪ್ರಹೇಳಿಕೆಗಳನ್ನು ದಂಡಿ ಕುರಿತ ಹಾಗೆ ಇವನು ಕುರಿತಿಲ್ಲ, ಅಕ್ಷರಚಮತ್ಕೃತಿಗಳ ಬಳಿಕ ಪ್ರಹೇಳಿಕೆಗಳನ್ನು ಕೈಬಿಟ್ಟು ಕಾವ್ಯದೋಷಗಳ ನಿರೂಪಣೆಗೆ ಲಾಕ್ಷಣಿಕನಾದ ಮಾಧವನು ತೊಡಗಿದನೆಂದು ಭಾವಿಸಿದರೆ, ಅದೂ ಸಂಭಾವ್ಯವೇ ಆಗಿದೆ. ಹೀಗಿದ್ದೂ 'ಏಕಾಕ್ಷರಿ'ಯ ಲಕ್ಷ್ಯದ ಬಳಿಕ ಬರುವ ಈ ಪದ್ಯ ಪ್ರಹೇಳಿಕೆಯ ಪ್ರಭೇದ ವೊಂದರ ಲಕ್ಷ್ಯವೇ ಇರಬಹುದೇ ಎಂಬ ಶಂಕೆ ಸುಳಿಯುತ್ತದೆ:

> **ತೊಳತೊಳಗೆ ಶಿಶಿರಕರನಾ । ಜಳದಾಧ್ವದೊಳಲರೆ ಕೈರವಾವಳಿ ನಳಿನಾ ।**
> **ವಳಿ ಸಂಕೋಚಿಸೆ ಚಿತ್ತಂ । ಗೊಳಿಸಿದನಾ ವನದೊಳಖಿಲಧರಣೀನಾಥಂ ॥** (ಪ. ೬೫)

ಮೇಲೆ ಹೊಳೆಯುವ ಅರ್ಥ ಸರಳವಾಗಿಯೇ ಇದೆ; ಅಂತರಾರ್ಥವೇನಿದೆಯೋ ತಿಳಿಯದು.

ಈಚಿನ ಕಾಲದಲ್ಲಿ ತಿರುಮಲಾರ್ಯನ (೧೬೪೫–೧೭೦೬) 'ಅಪ್ರತಿಮವೀರ ಚರಿತ'ದಲ್ಲಿ, ಅದರ ತೃತೀಯ ಪ್ರಕರಣದಲ್ಲಿ 'ಚಿತ್ರೋತ್ತರಾಲಂಕಾರ' (೮೩) ಎಂಬ ಒಂದು ಪ್ರಹೇಳಿಕೆಯ ಎರಡು ಒಳಭೇದಗಳ ಲಕ್ಷಣವು ಸಲಕ್ಷ್ಯವೂ ಸವ್ಯಾಖ್ಯವೂ ಆಗಿ ನಿರೂಪಿತವಾಗಿದೆ. ಆದರೆ ಇದು 'ಪ್ರಶ್ನ' ಪ್ರಕರಣಕ್ಕೆ ಸಂಬಂಧಿಸಿರುವುದರಿಂದ, ಅಲ್ಲಿಯೇ ಇದನ್ನು ಗಮನಿಸಬಹುದಾಗಿದೆ. ತರುವಾಯದಲ್ಲಿ ಅಳಿಯ ಲಿಂಗರಾಜನ (೧೮೨೩–೬೪) 'ನರಪತಿ ಚರಿತ'ದಲ್ಲಿ ಬಂಧಗಳನ್ನು ಸ್ವಲ್ಪ ಕುರಿತಿದೆಯಾದರೂ ಪ್ರಹೇಳಿಕೆಗಳ ಪ್ರಸ್ತಾವವಿಲ್ಲ. ಆಧುನಿಕ ಕಾಲದ ಕನ್ನಡ ಅಲಂಕಾರಶಾಸ್ತ್ರದ ಕೈಪಿಡಿಗಳಲ್ಲಿ ಯಮಕಾನುಪ್ರಾಸಗಳ ನಿರೂಪಣೆ ಕೆಲಮಟ್ಟಿಗೆ ಬಂದಿರುತ್ತದೆಯಾದರೂ, ವರ್ಣಚಿತ್ರಗಳು, ಪ್ರಹೇಳಿಕೆಗಳು ಮುಂತಾದುವನ್ನು ವಿವರಿಸಿರುವುದಿಲ್ಲ.

ಕನ್ನಡ ಸಾಹಿತ್ಯದಲ್ಲಿ ಪ್ರಹೇಳಿಕೆಗಳು

ಕನ್ನಡ ಲಾಕ್ಷಣಿಕರಲ್ಲಿ ಕವಿರಾಜಮಾರ್ಗಕಾರ ಪ್ರಹೇಳಿಕೆಯ ಕೆಲವು ಬಗೆಗಳಿಗೆ ಲಕ್ಷ್ಯಗಳನ್ನಷ್ಟೇ ಒದಗಿಸಿದ್ದಾನೆ. ನಾಗವರ್ಮನಾದರೋ ಕೆಲಮಟ್ಟಿಗೆ ದಂಡಿಯನ್ನನುಸರಿಸಿ "ಸುಕವಿಪ್ರಕಾರಕ್ಕೆ ವಿನೋದಕೇಳಿಗುಪಯೋಗಹೇತುಗಳ್ ಪ್ರಚ್ಛನ್ನಪ್ರಕಟಾರ್ಥಂಗಳ್......." ಎಂಬುದಾಗಿ (ಸೂ.೧೪೦) ಪ್ರಯೋಜನ ಸ್ವರೂಪಗಳ ಬಗೆಗೆ ಸಂಕ್ಷಿಪ್ತ ಸೂಚನೆ ಕೊಟ್ಟಿದ್ದಾನೆ. ದಂಡಿ ತಿಳಿಸಿರುವ ಎಲ್ಲ ವಿವರಗಳೂ ಇಲ್ಲ; ಪ್ರಭೇದಗಳೂ ವಿಶಿಷ್ಟವಾದವು. ಈಚೆಗೆ 'ಉದಯಾದಿತ್ಯಾಲಂಕಾರ'ಕಾರನು ಪ್ರಹೇಳಿಕೆಯನ್ನು ಹೆಸರಿಸಿ, ಒಂದು ಲಕ್ಷ್ಯವನ್ನು ಒದಗಿಸುವುದರಲ್ಲಿ ತೃಪ್ತನಾಗಿದ್ದಾನೆ (ಪ. ೭೧, ೭೩). ಅವನ ಭಾವನೆಯಲ್ಲಿ ಅದು 'ಅಮಾರ್ಗ'ದೊಳಗಿನದು.

ಪೊನ್ನನ 'ಶಾಂತಿಪುರಾಣ'ದಲ್ಲಿ

ಜಿನಜನನಿಯಾದ ಐರಾ ಮಹಾದೇವಿಯ ಮಗನಾಗಿ ಶಾಂತಿನಾಥನು ಜನಿಸಲಿದ್ದಾಗ, ಆಕೆಯ ಪರಿಚರ್ಯೆಯ ಸಲುವಾಗಿ ಸೌಧರ್ಮೇಂದ್ರನು ದೇವತಾಸ್ತ್ರೀಯರನ್ನು ನಿಯಮಿಸಿದನೆಂದೂ ಅವರು ಆಕೆಯನ್ನು ಪರಿಪರಿಯಾಗಿ ಸೇವಿಸಿದರೆಂದೂ ನಿರೂಪಣೆಯಿದೆ. ಈ ನಿರೂಪಣೆಯ ಒಂದು ಭಾಗವಾಗಿ, ಊಟವಾದ ಬಳಿಕ ಭೋಜನಶಾಲೆಯಲ್ಲಿ ಕುಳಿತುಕೊಂಡಾಗ ದೇವಿಯ ಮನಸ್ಸನ್ನು ಪ್ರಸನ್ನಗೊಳಿಸುವ ವಿನೋದಗಳನ್ನು ಮಾಡುತ್ತ, ವಿದ್ವಜ್ಜನ ಸಂಭಾಷಣಗೋಷ್ಠಿಗಳನ್ನು ನಡಸುತ್ತ, ಚತುರ ವಚನಗಳನ್ನು ನುಡಿಯುತ್ತ, ಪ್ರಹೇಳಿಕೆಗಳನ್ನೂ ಸಮಸ್ಯೆಗಳನ್ನೂ ಒಡ್ಡುತ್ತಿದ್ದರೆಂಬುದಾಗಿ (೯–೧೯೨ ವ.–೧೯೬) ಹೇಳಿದೆ.

ಹಾಗೆ ಒಡ್ಡಿದ ಸಮಸ್ಯೆಗಳು ಈ ರೀತಿಯಾಗಿವೆ :

> ಅಡರಿ ತೊಡರ್ಪಿನೊಳಿರ್ಪಂ । [ತೊ]ಡರ್ವಹಿತರನಿಱಿದು ಪಗೆಯ ಕಾಲಂ ಪಿಡಿವಂ ।
> ಕುಡು ಬೆಸನಮ [ನೇ] ಮ್ಮಂದಿಗೆ । ಮಿಡುಕನೆನೆ [ಚಪಲನದಾರ್ಗೆ ಪೇೞ್ ಲೆ ದೇವೀ] ॥ (೯–೧೯೩)

ಪದ್ಯಾಂತ ತ್ರುಟಿತಭಾಗವನ್ನು ಊಹೆಯಿಂದ ತುಂಬಿದೆ. "ಮೇಲೆ ನುಗ್ಗಿ ಬಂದು ಬಂಧನಕ್ಕೆ ಸಿಕ್ಕಿದ್ದಾನೆ. ಪ್ರತಿಭಟಿಸುವ ಶತ್ರುಗಳನ್ನು ಹೊಯ್ದು,-(ಸೋತು) ಅವರ ಕಾಲು ಹಿಡಿಯುತ್ತಾನೆ. ಅಪ್ಪಣೆಮಾಡು. ಏನು, ಅವನು ಜನಕ್ಕೆ ಜಗ್ಗುವುದಿಲ್ಲ—ಎಂದರೆ ಈ ಚಪಲನು ಯಾರು, ಹೇಳು ದೇವಿ?" ಬಹುಶಃ ಈ ಒಗಟಿನ ಉತ್ತರ: 'ಬಂದಿ'. 'ಬಂದಿ'ಗೆ 'ಸೆರೆಯಾಳು' ಎಂದೂ 'ತೋಳಿನ ಆಭರಣ' ಎಂದೂ ಅರ್ಥಗಳಿವೆ. ಆಗ "ಆಳವಟ್ಟು ಆಭರಣ ಹೇಳುವ ಶಬ್ದದಲ್ಲಿದ್ದಾನೆ" ಎಂದೂ "ಪ್ರತಿಭಟಿಸುವ ಶತ್ರುಗಳನ್ನು ಹೊಯ್ದು, ಅವರ ಕಾಲುಗಳನ್ನು ಸೆರೆಯಾಳಾಗಿ ಕಟ್ಟುತ್ತಾನೆ" ಎಂದೂ ಅಭಿಪ್ರಾಯವಾಗುವುದು ಸಾಧ್ಯ.

> [ಚಂ]ಡಾ[ಳಿ]ಪತಿಯ ಮನಮೊರ್ದೆ । ಗೊಂಡು ಮನಃಪದ್ಮಮುಕುಳಮಂ ಸವಿವಳಿಯಂ ।
> ಕಂಡೊಡೆ ಮುನಿವಾನರರುಂ । ಪೆಂಡಿರುದಾರತೆಗದೇಕೆ ಮುನಿವರೊ ದೇವೀ ॥ (೯–೧೯೪)

ಇದರ ಆಶಯವೇನು? "ಚಂಡಾಲಸ್ತ್ರೀ ಪತಿಯ ಮನಸ್ಸು ಹೃದಯಗಳನ್ನು ಸೆಳೆದು ಅವಳ ಮನಸ್ಸೆಂಬ ತಾವರೆ ಮೊಗ್ಗನ್ನು ಸವಿಯುವ ದುಂಬಿಯನ್ನು ನೋಡಿದರೆ, ಮುನಿಗಳೂ ವಾನರರೂ ಹೆಂಗುಸರ ಉದಾರತೆಗೆ ಏಕೆ ತಾನೆ ಕೋಪಿಸುತ್ತಾರೆ, ದೇವಿ?"

ಒಂದಕ್ಕೊಂದು ಹೊಂದಿಕೆಯಿಲ್ಲದ ಈ ವಿಚಿತ್ರವಾದ ಪ್ರಶ್ನೆಗೆ ಉತ್ತರ ಹೀಗೆ: "ತುಂಟತನದ ಗಂಡು ದುಂಬಿಯ ಮನಸ್ಸು ಹೃದಯಗಳನ್ನು ಸೆಳೆದು ಅದರ ಮನಸ್ಸೆಂಬ ತಾವರೆಮೊಗ್ಗನ್ನು ಸವಿಯುವ ದುಂಬಿ (ಹೆಣ್ಣು ದುಂಬಿ)ಯನ್ನು ನೋಡಿದರೆ, ಕೋಪಿಸುವ ಮನುಷ್ಯರೂ ಹೆಂಗುಸರ ಉದಾರತೆಗೆ ಏಕೆ ತಾನೆ ಕೋಪಿಸುತ್ತಾರೆ? (ಕೋಪಿಸುವುದಿಲ್ಲ ಎನ್ನುವುದು ಆಶಯ)."

ಇದು ಸಾಧ್ಯವಾದುದು 'ಚಂಡಾಳಿ' ಶಬ್ದವನ್ನು ಚಂಡಾಲೀ (=ಚಂಡಾಲಸ್ತ್ರೀ) > ಚಂಡಾಳಿ ಎಂದೂ, ಚಂಡ + ಅಳಿ (=ಅಲಿ) ಎಂದೂ, 'ಮುನಿ ವಾನರರುಂ' 'ಮುನಿವಾ ನರರುಂ' ಎಂದೂ ವಿಭಿನ್ನ ಪದಚ್ಛೇದಗಳಿಂದ ಎನ್ನುವುದು ವಿದಿತ. 'ಚಂಡಾಳಿ' ಶಬ್ದದ ಶ್ಲೇಷೆಗೆ ಉದ್ಭದೇ. ೨–೫೦, ಚಂಪ್ರಸಾ. ೧೭-೧೬ ಮುಂತಾದ ಕಾವ್ಯ

ಪ್ರಯೋಗಗಳನ್ನು ನೋಡಬಹುದು. 'ಮುನಿ ವಾನರರುಂ' ಎಂಬ ಶಬ್ದದಲ್ಲಿ 'ಮುನಿ ವಾ ನರರುಂ' ಎಂಬ ಇನ್ನೊಂದು ಪದಚ್ಛೇದದ ಚಮತ್ಕಾರವೂ ಸಾಧ್ಯ.

ಲವಲೀ ಲವಂಗ ಪಲ್ಲವ । ಸವಿಪಲ್ಲವಮ [ವ]ನಯುವದೆ ದುಃಖದಮುದಱಿಂ ।
ಲವಲೀ ಲವಂಗ ಪಲ್ಲವ। [ಸವಿಪಲ್ಲವ]ನೆರಡೆ ನಿಜಯಶಃಸುಕುಮಾರಂ ॥ (೯–೧೯೫)

ಇದರ ಅಭಿಪ್ರಾಯ ವಿಶದವಾಗುತ್ತಿಲ್ಲ.

ತಾಳದೊಳೆಸೆವಳಿಯಂ ಹಿಂ । ತಾಳದೊಳೆಸೆವಳಿಯುಮರ [ಲೊ]ಳೆಸೆವಳಿಯಂ ತಾಂ ।
ಮೇಳಿಸುತುಮಿರ್ಪುದಂ ಚದು । ರೇಳಿಗೆ ತಾವಿಳಿಯಲಾಗ ಕಿಳಿವವನೆಗ್ಗಂ ॥ (೯–೧೯೬)

''ತಾಳೆಯ ಮರದಲ್ಲಿ ಶೋಭಿಸುವ ದುಂಬಿಯನ್ನು, ಹಿಂತಾಳದಲ್ಲಿ ಶೋಭಿಸುವ ದುಂಬಿಯನ್ನು, ಹೂವಿನಲ್ಲಿ ಶೋಭಿಸುವ ದುಂಬಿಯನ್ನು ಒಂದುಗೂಡಿಸುವುದು ಚಾತುರ್ಯದ ಅತಿಶಯತೆಯನ್ನು ತೋರಿಸುತ್ತದೆ. ತಾವು ಬಿಡುವುದು ಸಾಧ್ಯವಿಲ್ಲವೋ, ಅರ್ಥಮಾಡಿಕೊಳ್ಳುವವನು ದಡ್ಡ''. ಹೇಗೆಂದರೇನು? ತಾ+ಇಳಿಯಲಾಗ ಎಂದು ಪದಚ್ಛೇದ ಮಾಡಿಕೊಂಡು, '' 'ತಾ' ಎಂಬ ಅಕ್ಷರವನ್ನು ಬಿಡುವುದು ಸಾಧ್ಯವಿಲ್ಲವೋ, ಅರ್ಥಮಾಡಿಕೊಳ್ಳುವವನು ಹೆಡ್ಡ'' ಎಂಬುದಾಗಿ ಆಶಯವನ್ನು ಕಂಡುಕೊಂಡರೆ ಚಮತ್ಕಾರವನ್ನು ತಿಳಿಯುವುದು ಸಾಧ್ಯವಾಗುತ್ತದೆ. ತಾಳ=ತಾಳೀ (ಸಂ) > ತಾಳಿ ('ತ' ಬಿಟ್ಟರೆ 'ಅಳಿ' ಎಂದಾಯಿತು); ಹಿಂತಾಳ=ಹಿಂತಾಳೀ (ಸಂ) > ಹಿಂತಾಳಿ ('ತ' ವರೆಗೆ ಅಕ್ಷರ ಬಿಟ್ಟರೆ 'ಅಳಿ' ಎಂದಾಯಿತು); 'ಅರಲೊಳೆಸೆವಳಿ' ಸ್ವಯಂವ್ಯಕ್ತವೇ ಇದೆ (ದುಂಬಿಗೆ ಸಂಸ್ಕೃತದಲ್ಲಿ 'ಪುಷ್ಪಲಿಟ್' ಎಂದು ಹೆಸರು. ಆದ್ದರಿಂದ 'ಪುಷ್ಪ' ಎಂಬ ಶಬ್ದದಲ್ಲಿಯೂ ಅದು ಕಂಡುಬರುತ್ತದೆ.).

ನಾಗಚಂದ್ರನ 'ಪಂಪರಾಮಾಯಣ'ದಲ್ಲಿ

ಸೀತಾಸ್ವಯಂವರವನ್ನು ವರ್ಣಿಸುವಾಗ, ಆಕೆಯನ್ನು

ಮನಸಿಜನೆನೆ ರತಿಯೆನೆ ಕ । ರ್ಬಿನ ಬಿಲ್ಲೆನೆ ಕುಸುಮಬಾಣಮೆನೆ ಕೋಕಿಲನಿ ।
ಸ್ವನಮೆನೆ ಮಧುಕರಝಂಕೃತ । ಮೆನೆ ಸೀತೆಯ ಪಸದನಕ್ಕೆ ಪರ್ಯಾಯಂಗಳ್ ॥ (೫–೪೫)

ಎಂಬುದಾಗಿ ಕವಿ ವರ್ಣಿಸಿದ್ದಾನೆ. ಇಲ್ಲಿ ಮನ್ಮಥ, ರತಿ, ಇಕ್ಷುಚಾಪ, ಪುಷ್ಪಬಾಣ, ಪಿಕಧ್ವನಿ, ಭೃಂಗನಾದಗಳು ಎಂದರೆ ಸೀತೆಯ ಭೂಷಣಗಳೆಂದು ಕವಿ ವರ್ಣಿಸುವುದರಲ್ಲಿ ಒಗಟಿನಂತಹ ಚಮತ್ಕಾರವಿರುವುದು ವಿದಿತ. ಇದನ್ನು

ಕಂದರ್ಪಃ ಕಂಕಣಂ ಪ್ರೋಕ್ತಂ ರತಿಸ್ಯಾತ್ ಹಾರಯಷ್ಟಿಕಾ ।
ಧನುರ್ಭ್ರೂರ್ಲತಿಕಾ ಜ್ಞೇಯಾ ಧಮ್ಮಿಲ್ಲಃ ಪುಷ್ಪಸಾಯಕಃ ॥
ಕಲಕಿಂಕಿಣಿಕಾ ಕಾಂಚೀ ಕೋಕಿಲಸ್ವನ ಉಚ್ಯತೇ ।
ಅಲಿಝಂಕೃತಿಕಾ ಜ್ಞೇಯಾ ನೂಪುರಂ ಭಾಸುರಂ ಬುಧೈಃ ॥

ಎಂಬ ಉತ್ತರಗಳಿಂದ ಬಳೆ, ಒಂದೆಳೆಹಾರ, ಹುಬ್ಬು, ಮುಡಿಯ ಹೂ, ಒಡ್ಯಾಣದ ದನಿ ಹಾಗೂ ಕಾಲಂದಿಗೆ ಎಂಬುದಾಗಿ ತಿಳಿದುಕೊಳ್ಳಬೇಕಾಗುತ್ತದೆ.

ಮಲ್ಲಕವಿಯ 'ಕಾವ್ಯಸಾರ'ದಲ್ಲಿ

ವೃಕ್ಷನಾಮಗಳನ್ನು ಮುಚ್ಚಿಟ್ಟ ಹಾಗೂ ತೆರೆದಿಟ್ಟ ಈ ಪದ್ಯಗಳ ಚಮತ್ಕಾರ ಪರಸ್ಪರವಾಗಿ ಹೋಲಿಸಿ ನೋಡಬಹುದಾದ್ದು. ಉಭಯ ಸಮಾನವಾದ ಅಂಶವನ್ನು ಇವುಗಳಲ್ಲಿ ಕಾಣುವುದೂ ಸಾಧ್ಯವಿದೆ.

ವಿಕಸಿತಪುಷ್ಪದಂತರಳಿ ಕನ್ನಡಿಗರ್ ಕರೆವಂತೆ ಬನ್ನಿ ಬಂ
ಧಕಿಯರ ನಾಮದಂತೊಗೆವ ಪಾದರಿ ರೋಗಿಗಳಂತೆ ತಾರಿ ಪಾ
ವಕನ ಶರೀರದಂತಿರುಳಿ ಸುಂಕಿಗನಂತಿರೆ ಚಿಲ್ಲ ಸಂದ ಲಾ
ವಕನ ನಿಯೋಗದಂತೆಸೆವ ಬೊಬ್ಬುಳಿ ಪರ್ಬಿದರಣ್ಯವೊಪ್ಪುಗುಂ ॥

ಅರಳಿದ ಪುಷ್ಪದಂತೆ ಮುಗುಳಂ ಮೊಗಮುಂ ತೊಳೆದಂತೆ ಬಾಗಿ ಮಾ
ತಱಿಯುದಳಂತೆ ಮೂಗಿ ಮಿಗಿಲುಂಡವರಂತಿರೆ ತೇಗು ಕಾದುವಂ
ತಿರೆ ಕರವೀರ ಮುಯ್ಯ್ ನಡುವಿನಂತೆರವಂ ಕರೆವಂತೆ ಪಾಲೆ ಶಂ
ಕರಸಖನಂತೆ ಹೊನ್ನೆಯುಳಿಯಂತಿರದಂತಿರರಣ್ಯಮೊಪ್ಪುಗುಂ ॥ (೩–೧೩೬,೧೩೭)

ಇಲ್ಲಿ ಕ್ರಮವಾಗಿ ಅರಳಿ, ಬನ್ನಿ, ಪಾದರಿ, ತಾರಿ, ಇರುಳಿ, ಚಿಲ್ಲ, ಬೊಬ್ಬುಳಿ, ಮುಗುಳಿ, ಬಾಗಿ, ಮೂಗಿ, ತೇಗ, ಕರವೀರ, ಎರವ (ಎಲವ), ಪಾಲೆ, ಹೊನ್ನೆ ಇವನ್ನು ಹೇಳಿದೆ.

ಅಳಿಯಳಕದ ಗಜಗಮನೇ । ನಳಿನಮುಖೀ ಪೇಟಿ ನಿನಗೆವೊತ್ತೆಯದೇನೆನ ।
ಲೊಳುಸಂಪಗೆ ಮಱಿಸಿಂಹ[ವೆ] । ಕಳಿಯಾಣ್ಮ[ನೆ] ಕಳ್ಳಿರೆನಲು ಚದುರಂ ಪೋದಂ ॥ (೮–೪೬೧)

ವೇಶ್ಯೆ ವಿಟನನ್ನು ಆಹ್ವಾನಿಸಿದರೂ, ಅವನು ಆಕೆಯನ್ನು ಕೂಡಬಯಸಿದ್ದರೂ, ಹೊರಟುಹೋದದ್ದು ಏಕೆ ? ಇದು ಒಂದು ವಿಚಿತ್ರಸನ್ನಿವೇಶ; ಒಗಟಿನಂತಹ ನಡೆವಳಿಕೆ. ಮೇಲುನೋಟಕ್ಕೆ ವಿಟನನ್ನು ವೇಶ್ಯೆ ಆಹ್ವಾನಿಸಿದಂತೆ ತೋರುವುದಲ್ಲದೆ, ದಿಟವಾಗಿ ಅವನ ಒಡನಾಟ ಆಕೆಗೆ ಇಷ್ಟವಿಲ್ಲ. ಆದ್ದರಿಂದ ಆಕೆ ಪರೋಕ್ಷವಾದ ರೀತಿಯಲ್ಲಿ ಆತನಿಗೆ, ಅಳಿಗೆ ಸಂಪಿಗೆ, ಆನೆಗೆ ಸಿಂಹ, ತಾವರೆಗೆ ಚಂದ್ರ ಹೇಗೆ ಅಪಕಾರಿಯೋ ಹಾಗೆಯೇ ಆತನು ತನಗೆ ಅನಿಷ್ಟಕಾರಕನೆಂದು ಅರ್ಥಬರುವಂತೆ ಮಾತನಾಡುತ್ತಾಳೆ. ಜಾಣನಾದ ಆ ವಿಟ ಅವಳ ಇಂಗಿತ ತಿಳಿದು ಹೊರಟು ಹೋಗುತ್ತಾನೆ.

ವಿಟನ ಸಂಬೋಧನೋಕ್ತಿಗಳಿಗೆ ಕ್ರಮವಾಗಿ ವಿರುದ್ಧಾಶಯದ ಸಂಬೋಧನೋಕ್ತಿಗಳನ್ನು ವೇಶ್ಯೆ ಬಳಸಿದಳೆಂದು ತಿಳಿದಾಗ, ಪದ್ಯದ ಅಭಿಪ್ರಾಯ ಸ್ಪಷ್ಟವಾಗುತ್ತದೆ.

ವಾರಿಜನೇತ್ರೆ ಭೃಂಗಕುಟಿಲಾಳಕಿ ಚಂದನಗಂಧಿ ನಿನ್ನೊಳಂ
ಕೂರುಮೆಯಿಂದೆ ಕೂಡಿದ ಕಲಾಕುಶಲಜ್ಞನದಾವನೆಂಬುದುಂ
ಮಾರನ ಪಟ್ಟದಾನೆ ಮಱೆಯೇತಕೆಯೆನ್ನೊಳು ಪೇಟ್ವುದೆಂದೆನಲ್
ಸೇರಿದ [ನೂ]ಱುಪಾದದವ ರೋಹಿಣಿಯಾಣ್ಮನ ಮುಂದೆ ನಾಲ್ಕ[ಱಾ]॥ (೮–೪೬೩)

ಇದರ ಆಶಯ: ಪ್ರಾಯಶಃ ಸಖಿಯೊಬ್ಬಳು ತನ್ನ ಗೆಳತಿ ವೇಶ್ಯೆಯನ್ನು ಕೇಳಿದಳು: ''ತಾವರೆಗಣ್ಣವಳೆ, ದುಂಬಿಗುರುಳಿನವಳೆ, ಶ್ರೀಗಂಧದ ಪರಿಮಳ ಸೂಸುವ ಮೈಯವಳೆ, ಮನ್ಮಥನ ಪಟ್ಟದಾನೆಯೆ, ಏಕೆ ಮರೆಮಾಚುತ್ತೀಯೆ? ನನ್ನೊಂದಿಗೆ ಹೇಳು, ಪ್ರೀತಿಯಿಂದ ನಿನ್ನನ್ನು ಒಡಗೂಡಿದ ರಸಿಕನಾರು?'' ಇದಕ್ಕೆ ಆಕೆಯ ಉತ್ತರ: ''ಚಂದ್ರನ ಮುಂದೆ ನಾಲ್ಕನೆಯ ರಾಶಿಯಲ್ಲಿರುವ ಸೂರ್ಯನು (ನೂಱು ಪಾದದವ?) ನನ್ನನ್ನು ಕೂಡಿದ್ದನು.''

ಈ ಉತ್ತರದ ಅರ್ಥವೇ ಇಲ್ಲಿಯ ಒಗಟು. ''ಸೂರ್ಯನ ಹಿಂದೆ ನಾಲ್ಕನೆಯ ರಾಶಿಯಲ್ಲಿ ಚಂದ್ರನಿದ್ದಾಗ ಕೃಷ್ಣಪಕ್ಷದ ಅಷ್ಟಮಿಯಾಗುತ್ತದೆ. ಪೂರ್ಣಚಂದ್ರನು ಅರ್ಧಚಂದ್ರನಾಗಿರುತ್ತಾನೆ. ಹೀಗೆ ಪೂರ್ಣಚಂದ್ರನನ್ನು ಅರ್ಧಚಂದ್ರನನ್ನಾಗಿಸುವ ಪುರುಷನು ನನ್ನನ್ನು ಸೇರಿದ್ದನು. ಹೀಗೆಯೇ ಆದರೆ ಇನ್ನು ಕೆಲವೇ ದಿನಗಳಲ್ಲಿ ನಾನು ಅಮಾವಾಸ್ಯೆಯ ಚಂದ್ರನಾಗುತ್ತೇನೆ''. ಇದು ಬಹುಶಃ ವೇಶ್ಯೆಯ ಇಂಗಿತವಿರಬೇಕು.[36]

ಪೊಸತೊಂದಂ ತೀವಿ ಮತ್ತಾ ಕರಡಗೆಯ ಬಹಿರ್ಭಾಗದೊಳ್ ಕಾಂತೆಯೊರ್ವಳ್
ಸಸಿಯಂ ಸೂಡಿರ್ದನಂ ಚಂಪಕಮನಹಿಯುಮುಲ್ಲೇಖನಂಗೆಯ್ದು ತನ್ನಾ
ಪ್ತಸಖೀಹಸ್ತಾಬ್ಜದಿಂದಟ್ಟಲವಳದನೆ ತಂದೀಯೆ ನೋಡುತ್ತೆ ಬೇಗಂ
ವಸುಧೇಶಂ ತಾನೆ ಬಂದಂ ಸುಗುಣರಱಿವುದಾ ವಸ್ತುವೇನೆಂಬುದೆಂದುಂ ॥ (೮–೪೬೬)

ಇದರ ಆಶಯ : ''ಹೊಸತಾದ ಭರಣಿಯನ್ನು ಸಿದ್ಧಮಾಡಿಕೊಂಡು, ಅದರ ಹೊರಭಾಗದಲ್ಲಿ ಒಬ್ಬಾಕೆ ಚಂದ್ರಧರನಾದ ಶಿವನನ್ನು, ಸಂಪಿಗೆ ಹೂವನ್ನು, ಹಾವನ್ನು ಚಿತ್ರಿಸಿ, ತನ್ನ ಆಪ್ತಸಖಿಯ ಕೈಯಲ್ಲಿ ಕಳುಹಲು, ಅವಳು ತಂದಿತ್ತ ಆ ಭರಣಿಯನ್ನು ನೋಡಿದ ಕೂಡಲೇ ದೊರೆ ತಾನೇ ಅವಳಿರುವಲ್ಲಿಗೆ ಹೊರಟುಬಂದನು. ಆ ವಸ್ತು ಏನು ಎನ್ನುವುದನ್ನು ಸುಗುಣರು ತಿಳಿಯಲಿ.''

''ಸುಗುಣರಜಿಪುದಾ ವಸ್ತುವೇನೆಂಬುದೆಂದುಂ'' ಎನ್ನುವುದು ಕವಿ ಒಡ್ಡಿರುವ ಸಮಸ್ಯೆ. ಇದಕ್ಕೆ ಉತ್ತರವೇನು? ಬಹುಶಃ ಅದು ಹೀಗೆ:

''ಚಂದ್ರಸಹಾಯನಾದ, ದುಂಬಿಗಳೇ ಹೆದೆಯಾದ ಬಿಲ್ಲನ್ನು ಹಿಡಿದುಕೊಂಡ ಮನ್ಮಥನ ಬಾಧೆಗೆ ನಾನು ಒಳಗಾಗಿದ್ದೇನೆ; ಅದು ನಿನ್ನಿಂದ ಪರಿಹಾರವಾಗಬೇಕು''—ಎಂಬ ಆಶಯವನ್ನು ವಿರಹಿಣಿ ವಿರುದ್ಧವಾದ ಸಂಕೇತಗಳ ಮೂಲಕ, ಎಂದರೆ ರಾಹು, ಸಂಪಿಗೆ ಹಾಗೂ ಶಿವನ ಚಿತ್ರಗಳನ್ನು ಬರೆಯುವುದರ ಮೂಲಕ ಸೂಚಿಸಿದ್ದಾಳೆ. ಈ ಸಂಕೇತಗಳು ಸೂಚಿಸುವ ಪರೋಕ್ಷವಾದ ಆಶಯವನ್ನು ದೊರೆ ತಿಳಿದುಕೊಂಡು ಹೊರಟು ಬಂದನು.[37]

ಈ ಪದ್ಯ ಬಲ್ಲಾಲ ವಿರಚಿತ 'ಭೋಜಪ್ರಬಂಧ'ದ ಈ ಕೆಳಗಿನ ಪದ್ಯದ ಸ್ವತಂತ್ರವಾದ ಅನುವಾದವಾಗಿರುವಂತೆ ತೋರುತ್ತದೆ:

ಕಾಚಿದ್ ಬಾಲಾ ರಮಣವಸತಿಂ ಪ್ರೇಷಯಂತೀ ಕರಂಡಂ
ದಾಸೀಹಸ್ತಾತ್ಸಭಯಮಲಿಖದ್ವ್ಯಾಲಮಸ್ಯೋಪರಿಷ್ಟಾತ್।
ಗೌರೀಕಾಂತಂ ಪವನತನಯಂ ಚಂಪಕಂ ಚಾತ್ರ ಭಾವಂ
ಪೃಚ್ಛತ್ಯಾರ್ಯೋ ನಿಪುಣತಿಲಕೋ ಮಲ್ಲಿನಾಥಃ ಕವೀಂದ್ರಃ ॥ (ಪ. ೩೨೩)

ಶಾಂತಕವಿಯ 'ಸತ್ಯೇಂದ್ರಚೋಳನ ಸಾಂಗತ್ಯ'ದಲ್ಲಿ

ಈ ಕೃತಿಯಲ್ಲಿ ಒಂದು ಹಸ್ತಪ್ರತಿಯ (ಕೆ. ೫೮೯)ಪ್ರಕಾರ ಒಟ್ಟು ೯ ಸಂಧಿಗಳು, ೧೬೬೪ ಪದ್ಯಗಳಿವೆ. ಇದರಲ್ಲಿ ಕೆಲವು ಗೂಢಾರ್ಥದ ಪದ್ಯಗಳು ಕಂಡುಬರುತ್ತವೆ. ಕೃತಿಯ ಕಾಲ ಸು. ೧೬೦೦. ಕೃತಿಯ ರಚನೆ ಭಾಷಾ ದೃಷ್ಟಿಯಿಂದ ತಕ್ಕಮಟ್ಟಿಗೆ ಹಳೆಯದು ಎನ್ನುವಂತಿದ್ದು, ಅನಂತರದ ಒಬ್ಬರಿಬ್ಬರು ಕವಿಗಳು, ಇಲ್ಲಿಯ ಈ ಬಗೆಯ ಪದ್ಯಗಳನ್ನು ಅನುಕರಿಸಿ, ಅಲ್ಪ ಸ್ವಲ್ಪ ವ್ಯತ್ಯಾಸಗಳೊಂದಿಗೆ ತಮ್ಮ ಗ್ರಂಥದಲ್ಲಿ ಇವನ್ನು ಸೇರಿಸಿಕೊಂಡ ಹಾಗೆ ತೋರುತ್ತದೆ. ಇದು ಸರಿಯಾದರೆ, ಶಾಂತಕವಿಗೆ ಚಿತ್ರಕವಿತ್ವದ ರಚನೆಯಲ್ಲಿ ತುಂಬ ಅಭಿರುಚಿಯೂ ಸಾಮರ್ಥ್ಯವೂ ಇದ್ದುವೆಂದು ಹೇಳಬೇಕಾಗುತ್ತದೆ. ಆತನು ಜೀವಿಸಿದ್ದ ಪರಿಸರದಲ್ಲಿ ಇಂತಹ ಪದ್ಯಗಳು ಜನ ಮೆಚ್ಚುಗೆ ಗಳಿಸಿದ್ದಿರಬೇಕು.

ಪ್ರಸ್ತುತ, ಕೆಲವು ಗೂಢಾರ್ಥದ ಪದ್ಯಗಳನ್ನು ಇಲ್ಲಿ ಉದ್ಧರಿಸಿ ಕೊಡಬಹುದಾಗಿದೆ:

ಬಿಡದೆಯೊರ್ವನ ಬೆನ್ನ ತೊಡರಿಕೊಂಡಿರುವಳು । ಕೆಡಹಿ ಮೂಗನೆ ಕೊಯಿಸಿಕೊಂಡು ।
ಉಡುಗೊರೆ ಉಚಿತಕ್ಕೆ ಸಡಗರದಿಂದಲಿ ಮುಂದೆ । ನಡೆವಳ ತಂದು ಮಾರಿದರು । (೨-೧೬)

ವೀಳೆಯದೆಲೆಯನ್ನು ಇಲ್ಲಿ ಕುರಿತಿದೆ. ಅಂಗೈಗೆ ಅಂಟಿಕೊಂಡು, ತೊಟ್ಟು ತೆಗೆಸಿಕೊಂಡು, ತಾಂಬೂಲಚರ್ವಣಕ್ಕೆ ಹಾಗೂ ಉಪಾಯನದಾನಾದಿ ಮಂಗಳಕಾರ್ಯಗಳಿಗೆ ಅದನ್ನು ಬಳಸುವರೆಂದು ಇಲ್ಲಿಯ ಆಶಯ.

ಜಡಿವ ಶೂಲದ ಮೇಲಕಡರಿಕೊಂಡಿರುವಳು । ನಡುನೆತ್ತಿಯೊಳು ಕಣ್ಣು ಮೆರೆವ ।
ಮಡದಿಯ ಹಿಡಿತಂದು ಕೆಡಹಿ ಚರ್ಮವ ಸುಲಿದು । ಮಡಗಿ ಮಾರಿದರಂಗಡಿಯೊಳು ॥ (೨-೧೮)

ಶೂಲದಂತಹ ಎತ್ತರದ ಗಿಡದಲ್ಲಿ ಬಿಡುವ, ಕಣ್ಣುಳ್ಳ, ಸುಲಿದು ತೆಗೆಯುವ ಅಡಕೆಯನ್ನು ಇಲ್ಲಿ ಕುರಿತಿದೆ.

ನಡುವಿಗೆ ಮದ್ದಳೆ ಜಡಿದುಕೊಂಡಿರುವುದು । ನುಡಿಸಲರಿಯಳೊಂದು ಗತಿಯ ।
ಒಡಲೊಳಮೃತರಸವ ಮಡಗಿಕೊಂಡಿರುವಳ ಬೀದಿ । ಎಡೆಯಲಿ ತಂದು ಮಾರಿದರು । (೨-೨೬)

ಮದ್ದಳೆಯಂತೆ ಆಕೃತಿಯುಳ್ಳ, ಆದರೆ ಸಂಗೀತವಾದ್ಯವಾಗಿ ಬಳಸಲಾಗದ ಹಲಸಿನ ಹಣ್ಣನ್ನು ಇಲ್ಲಿ ಕುರಿತಿದೆ.

ಹಾರುವ ಕೇರಿಯ ಸೇರಿಕೊಂಡಿರುವಳು । ನಾರುವ ಗುಣಗಳ ಬಿಡಳು ।
ನಾರಿಯ ಕರೆತಂದು ಕ್ಷೀರವನುಣಲಿಕ್ಕಿ । ಮಾರಿದರಂಗಡಿಯೊಳಗೆ ॥ (೨-೩೬)

ಬ್ರಾಹ್ಮಣರು ಅಡಿಗೆಗೆ ಬಳಸುವ, ಸುವಾಸನೆಯ, ನೀರಿನಲ್ಲಿ ಕರಗಿದಾಗ ಹಾಲಿನ ಬಣ್ಣ ತಳೆಯುವ, ಇಂಗು ಇಲ್ಲಿ ಉದ್ದೇಶಿತವಾದ ಪದಾರ್ಥ.

ನೀರುಂಡು ಬೆಳೆವುದು ನೀರು ತನಗೆ ಹಗೆ । ಬೇರೆ ನಾಲ್ವರ ಕೂಡಿಕೊಂಡು ।
ಭೋರೆಂದು ಗಗನಕ್ಕೆ ಹಾರುವ ಧೀರೆಯು । ಮಾರುವ ಪಸರಗಳಧಿಕ ॥ (೨–೩೯)

ತಯಾರಿಕೆಯಲ್ಲಿ ನೀರು ಬಳಕೆಯಾಗಿ, ಬಳಿಕ ನೀರಲ್ಲಿ ನೆನೆದರೆ ಹಾಳಾಗುವ ಕಾಗದದಿಂದ ಆದ ಗಾಳಿಪಟವನ್ನು, ಸೂತ್ರ ಗೋರಂಟಿ ಕಡ್ಡಿ ಮತ್ತು ದಾರಗಳಿಂದ ಕೂಡಿರುವುದನ್ನು, ಮಾರುತ್ತಿದ್ದರೆಂದು ಪದ್ಯದ ಆಶಯ.

ಎರಡು ಪಕ್ಕದ ಪಕ್ಷಿ ನಡುಬೆನ್ನಿನೊಳು ಶೂಲ । ಮೆರೆವ ಕಂಗಳು ಪದಿನಾಲ್ಕು ।
ಹರಿದು ನ್ಯಾಯುವ ತಿದ್ದಿ ಸೆರೆಮನೆಯನು ಹೊಕ್ಕು । ನರಳ್ವುದು ನಡುಪಸರದಲಿ ॥ (೨–೪೯)

ಇದು ತಕ್ಕಡಿಯನ್ನು ಹೇಳುವ ಪದ್ಯ. ಎರಡು ತಟ್ಟೆಗಳೇ ಎರಡು ಪಾರ್ಶ್ವಗಳು. ನಡುವೆ, ತಕ್ಕಡಿಯ ಮುಳ್ಳು. ಒಟ್ಟಾಗಿ ೧೪ ರಂಧ್ರಗಳು. ತೂಗಿದ ಕೆಲಸವಾದ ಮೇಲೆ ಸುತ್ತಿ ಗೊತ್ತಾದ ಜಾಗದಲ್ಲಿ ಸೇರುವುದು.

ರೇವಣಸಿದ್ಧನ 'ಮುರುಳಸಿದ್ಧ ದೇವರ ಚರಿತ್ರೆ'ಯಲ್ಲಿ

ಈ ಬಗೆಯ ಗೂಢಾರ್ಥದ ರಚನೆಗಳು ರೇವಣಸಿದ್ಧನ 'ಮುರುಳಸಿದ್ಧ ದೇವರ ಚರಿತ್ರೆ' ಎಂಬ ಸಾಂಗತ್ಯ ಗ್ರಂಥದಲ್ಲಿ (೧೬೪೧) ಸಹ ಕಂಡುಬರುತ್ತವೆ. ಇವು ೫ ಮತ್ತು ೭ ನೆಯ ಸಂಧಿಗಳಲ್ಲಿ ಅರಣ್ಯ ಮತ್ತು ನಗರ ವರ್ಣನೆಯ ಭಾಗಗಳಲ್ಲಿ ಶ್ರೇಣೀಬದ್ಧವಾಗಿವೆ. ಈ ಪದ್ಯಗಳಲ್ಲಿ ಕೆಲವು ಶಾಂತಕವಿಯ ಪೂರ್ವೋಕ್ತಕೃತಿಯಲ್ಲಿ ಕಂಡುಬಂದ ಸ್ಥಾನ ಮತ್ತು ರೀತಿಗಳಲ್ಲೇ ಕಂಡುಬರುವಂತೆ ತೋರುವುದು. ಅಲ್ಲಲ್ಲಿ ಹೊಸಪದ್ಯಗಳೂ ಉಂಟು; ವ್ಯತ್ಯಾಸಗಳೂ ಉಂಟು.

ಶಾಂತಕವಿಯ ಕೃತಿ ಇನ್ನೂ ಪ್ರಕಟವಾಗಿರದ ಕಾರಣದಿಂದಲೂ, ರೇವಣಸಿದ್ಧನ ಕೃತಿ ಈಗ ಪ್ರಕಟವಾಗಿ ಪ್ರಸಿದ್ಧವಾಗಿರುವುದರಿಂದಲೂ ಈ ಕೃತಿಯಿಂದಲೇ ಹೆಚ್ಚಿನ ಲಕ್ಷ್ಯಗಳನ್ನು ಆಯ್ದು ಕೊಟ್ಟಿದೆ. ಇನ್ನೊಬ್ಬ ಈಚಿನ ಕವಿ ಬಸವನ 'ಕಲ್ಲೆ ಲಿಂಗೇಶ್ವರಚಾರಿತ್ರ' ದಲ್ಲಿಯೂ ಬಲುಮಟ್ಟಿಗೆ ಇವೇ ಪದ್ಯಗಳನ್ನು ಕಾಣಬಹುದಾಗಿದ್ದು, ಈ ಗ್ರಂಥವೂ ಪ್ರಕಟವಾಗಬೇಕಾಗಿದೆ. ಈ ಕೊನೆಯ ಗ್ರಂಥದ ಹಸ್ತಪ್ರತಿಯೊಂದರಲ್ಲಿ ಕೊನೆಗೆ ಕೊಟ್ಟಿರುವ ಹಳೆಯ ಟೀಕೆಯನ್ನು ಆಧರಿಸಿ, ಗೂಢಾರ್ಥಗಳ ಆಶಯವನ್ನು ಇಲ್ಲಿ ಕಂಡುಕೊಳ್ಳಬಹುದಾಗಿದೆ.

ಸೋಮನ ಧರಿಸಿ ಭಾಗೀರಥಿಯನು ಪೊತ್ತ । ಕಾಮಹರನ ದೃಷ್ಟಿಯಂತೆ ।
ನೇಮದಿವೊಪ್ಪುತ ವೃಕ್ಷಂಗಳಿದ್ದುವು । ಆ ಮಹಾವನದಿ ಸೊಂಪಿನಲಿ ॥ (೨೪)

ಇದು ಎಳನೀರು ತುಂಬಿದ ಕಾಯಿಗಳನ್ನು ಹೊತ್ತ ತೆಂಗಿನ ಮರವನ್ನು ಹೇಳುತ್ತದೆ. ಕಾಮಹರನೆನಿಸಿದ ಶಿವನಿಗೆ ಮೂರು ಕಣ್ಣುಗಳು. ತೆಂಗಿನ ಕಾಯಿಗೆ 'ತ್ರ್ಯಕ್ಷಫಲ'ವೆಂದು ಹೆಸರು.

ಕೆಟ್ಟವೋರೆಯ ಮೂಳಿ ಅಷ್ಟು ಬಾಲಕರನ್ನು । ಗಟ್ಟ್ಯಾಗಿ ಮೂಡೆಯೊಳ್ ಬಿಗಿದು ।
ಬಿಟ್ಟು ಹೋದಾರೆಂದು ಸುತ್ತ ಬೇಲಿಯ ಬಿಗಿದು । ಕಟ್ಟೆ ನಡುವಿಗೆ ವೃಕ್ಷವಿಹವು ॥ (೩೧)

ಸೋಲೆಗಳ ಸುತ್ತಿನೊಳಗೆ ತೊಳೆಗಳನ್ನು ಹುದುಗಿಸಿಕೊಂಡ, ತರಕಲು ಆಕಾರದ ಹಲಸಿನ ಹಣ್ಣಿನ ಮರವನ್ನು ಇಲ್ಲಿ ಹೇಳಿದೆ.

ಶಂಭು ಮೊದಲು ಶಕ್ತಿದೇವತೆಯರ ಪ್ರೀತಿ । ಸಂಭ್ರಮದಿಂ ರಸ ತುಂಬಿ ।
ರಂಭೇರ ಮೈಸಿರಿ ಹೊಂಬಣ್ಣವೆಂದೆನ್ನ । ಹಂಬಲಿಸುವ ವೃಕ್ಷವಿಹವು ॥ (೩೬)

ಶಕ್ತಿಪೂಜೆ ಮೊದಲಾದವುಗಳಲ್ಲಿ ಬಳಸುವ, ಮಿಂಚುವ ಹೊಂಬಣ್ಣದ ನಿಂಬೆಯ ಹಣ್ಣಿನ ಮರವನ್ನು ಇಲ್ಲಿ ಕುರಿತಿದೆಯೆಂದು ತೋರುವುದು.

ಸುದತಿಯರ ತೊಡೆಗೆನ್ನ ಸರಿಯೆಂದು ಪೇಳ್ವರು । ಇದಕೇಕೆ ಜನ್ಮ ಸಾಕೆನುತ ।
ಹದಿನೆಂಟು ಮಾಸವು ವಿಧಿ ಬರೆದಾಯುವು । ಒದಗಿ ಸಿರವು ಬಾಗಿ ವೃಕ್ಷ ॥ (೩೪)

ಸುಂದರಿಯರ ತೊಡೆಯ ನುಣುಪಿನ ಬಣ್ಣನೆಗೆ ಕವಿಗಳು ಬಳಸುವುದು ಬಾಳೆಯ ಕಾಂಡವನ್ನು. ಬಾಳೆಯ ಮರ ಗೊನೆಯ ಭಾರಕ್ಕೆ ಬಗ್ಗುವುದು; ಫಲ ಬಿಟ್ಟ ಮೇಲೆ ಅದರ ಬೆಳವಣಿಗೆ ನಿಲ್ಲುವುದು.

ಎಲ್ಲಕ್ಕೂ ಮೊದಲು ನನ್ನೆಲ್ಲಿಯೆಂಬರು ಜನ । ಬಲ್ಲಿದವರು ಮನದೊಳಗೆ ।
ಸಲ್ಲೀಲೆಯಿಂದಲಿ ಸಕಲಕೆ ಉಪಕಾರಿ । ಪಲ್ಲೈಸುತಿಹವು ವನದೊಳಗೆ ॥ (೩೬)

ಶರೀರಪೋಷಣೆಯಲ್ಲಿ ನೆಲ್ಲಿಯ ಕಾಯಿ ಅತಿಶ್ರೇಷ್ಠವೆಂದು ಪರಿಗಣಿತವಾಗಿದೆ. ಇಲ್ಲಿ ನನ್ನ+ಎಲ್ಲಿ, ನನ್+ನೆಲ್ಲಿ ಎಂಬುದಾಗಿ ಪದವನ್ನು ಒಡೆಯುವ ಚಮತ್ಕಾರವಿದೆ.

ಉರುವ ನಾಮವು ತೋರಲರಳುಗಳಲ್ಲಿಲ್ಲ । ಬೀರಿ ಫಲವು ಅಂಗ ತುಂಬ ।
ಮೀರಿ ಗರ್ಭವ ಜಿಗಿದಾರೈದು ನೋಡಲು । ಸೇರಿದ ಕ್ರಿಮಿಯಿಹ ವೃಕ್ಷ ॥ (೪೦)

ಇದು ಅತ್ತಿಯ ಮರವನ್ನು ಕುರಿತಿದೆಯೆನ್ನುವುದು ವಿದಿತ. ಅತ್ತಿಯ ಮರದಲ್ಲಿ ಹೂವು ಬರುವುದಿಲ್ಲ ಎನ್ನುವುದು ಒಂದು ನಂಬಿಕೆ. ಹಣ್ಣಿನೊಳಗೆ ಕ್ರಿಮಿಗಳುಂಟು.

ಗುರುಗಳು ಊರಿಂದ ತ್ವರಿತದಿ ದಯಮಾಡಿ । ಪುರದ ಮುಂದಿರೆ ಭಕ್ತ ಕೇಳಿ ।
ಭರದಿಂದ ಹೊರಟಾಗ ಚರಣವ ವಂದಿಸಿ । ಸಿರುತ ಕರೆವ ನಾಮ ವೃಕ್ಷ ॥ (೪೬)

ಇದು ಶಮೀವೃಕ್ಷದ ಕನ್ನಡ ಹೆಸರಾದ 'ಬನ್ನಿ' ಎಂಬ ಮರವನ್ನು ಹೇಳುವುದು ಸ್ಪಷ್ಟ.

ಮನೆಯ ಮಗನು ಗೆಲವಿಂದಲಿ ಕೆಲಸವ । ಮನವೊಲಿದವ ಮಾಡದಿರಲು ।
ಶುನಕಬುದ್ಧಿಯ ತಾಳ್ದು ಕನಲಿ ಮಾತಾಡಲು । ಜನನಿ ಪೇಳುವ ನಾಮ ವೃಕ್ಷ ॥ (೪೭)

ಇದು 'ಮಡ್ಡಿ' ಎಂಬ ಮರವನ್ನು ಸೂಚಿಸುವಂತೆ ತೋರುತ್ತದೆ; ಟೀಕೆಯಲ್ಲಿ 'ಎಲಚಿ' ಎಂದಿದೆ.

ರಂಗಾಗಿ ಕುಸುಮ ಹಿಂಗುತಲಿರುವುದು । ಅಂಗಕ್ಕೆ ತೃಪ್ತಿಯ ಪರ್ಣ ।
ಹಿಂಗದೆ ಮನುಜಗೆ ವೃದ್ಧಾಪ್ಯಕಾಲದಿ । ಕಂಗೊಳಿಸುವ ನಾಮ ವೃಕ್ಷ ॥ (೫೧)

ಇದು ಮುತ್ತುಗದ ಮರವನ್ನು ಕುರಿತಿರುವುದು ಸ್ಪಷ್ಟ. ಮುತ್ತುಗದ ಬಣ್ಣದ ಹೂ ಹಾಗೂ ದುಂಡನೆಯ ನಯವಾದ ಎಲೆ ಇಲ್ಲಿ ಸೂಚಿತವಾಗಿದೆ.

ಈ ಕೃತಿಯ ೭ನೆಯ ಸಂಧಿಯಲ್ಲಿ ಸಹ ಇಂತಹ ಕೆಲವು ಪದ್ಯಗಳಿವೆ. ಇವು ಇಲ್ಲಿ ಪುರವರ್ಣನೆಯ ಭಾಗವಾಗಿ ಬಂದಿವೆ. ಕವಿ ಇವನ್ನು ಕುರಿತಾಗ

ಮಳಿಗೆಗಳಲಿ ಬೇಗ ಬಳಸಿಹ ದಿನಸುಗಳ । ಉಳಿಯದೆ ಒಗಟನಿಂ ಪೇಳ್ವೆ ।
ತಿಳಿವಂಥ ಪ್ರೌಢರಿಗೆ ಬಲುಪೆರ್ಚಿ ನಗುವೋಲ್ ನಿ । ಮ್ಮೊಳೆಯ ಬಾಲಕನುಸುರುವನು ॥ (೫೩)

ಎಂಬುದಾಗಿ ಒಂದು ಪೀಠಿಕೆಯ ಮಾತು ಹೇಳಿದ್ದಾನೆ. ವಾಸ್ತವವಾಗಿ ಪ್ರೌಢರಿಗೆ ಸಹ ಇಲ್ಲಿಯ ಎಲ್ಲ ಒಗಟುಗಳನ್ನೂ ಬಿಡಿಸಿ, ಉತ್ತರಗಳನ್ನು ಕಂಡುಕೊಳ್ಳುವುದು ಕಷ್ಟವಿದೆ. ಇದು ಏನೇ ಇದ್ದರೂ, ಒಂದೆರಡು ಉದಾಹರಣೆಗಳನ್ನು ಇಲ್ಲಿ ನೋಡಬಹುದು:

ಮನೆಯ ಗಂಡನ ಬಿಟ್ಟು ಇನಿಯನಿಗೆ ಕೈನೀಡೆ । ತನುಜರು ನಾಸಿಕ ಕೊಠೆಯೆ ।
ಅನುವಾಗಿ ಸಕಲಕ್ಕೆ ಗೆಲವಿಂದ ಮುಂ ಪೋಪ । ವನಿತೆಯ ತಂದು ಮಾರುವರು ॥ (೫೪)

ವೀಳ್ಯದ ಎಲೆ ತನ್ನ ಬಳ್ಳಿಯ ತವರುಮನೆ ಬಿಟ್ಟು ತನ್ನನ್ನು ಬಯಸಿದವರ ಕೈಗೆ ಭೋಗವಸ್ತುವಾಗಿ ಸೇರುತ್ತದೆ. ಅವರ ಸೇವೆಯ ಜನ ಆ ಎಲೆಯ ತೊಟ್ಟು ಹಾಗೂ ಹಿಂಬದಿಯ ನಾರು ತೆಗೆದು ಅವರ ಸೇವನೆಗೆ ಅದನ್ನು ನೀಡುತ್ತಾರೆ. ಅಲ್ಲದೆ ಮಂಗಳಕಾರ್ಯಗಳಿಗೆಲ್ಲ ಅದು ಬಳಕೆಗೆ ಬರುತ್ತದೆ. ಕೋಮಲತೆಯ ದೃಷ್ಟಿಯಿಂದ ವನಿತೆಯೇ ಸರಿ. ವೀಳ್ಯದ ಜೊತೆಯದು ಅಡಕೆ. ಅದನ್ನು ಕವಿ ಬಣ್ಣಿಸುವುದು ಹೀಗೆ:

ನಾರಿಯ ಮೈಸೀಳಿ ತೂರ್ಯ ನಡುವಿಗೆ ಸೀಳಿ । ಮೀರಿ ಕಿಚ್ಚಿನಲಿ ಸುಡುವಂಥ ।
ಧೀರೆಯ ಹರುಷದಿ ಸಕಲಕ್ಕೆ ಸಲುವಂಥ । ಪೋರಿಯ ತಂದು ಮಾರುವರು ॥ (೫೫)

ಹೊರಗೆ ಸೀಗೆಯ ಮೆಳೆ ಒಳಗೆ ಕಂಚಿನ ಕೋಟೆ । ಬೆರೆದಿರೆ ಸುಣ್ಣ ಗಾರೆಯಲಿ ।
ಇರುವ ಲಿಂಗಕೆ ಪಾರಿ ಎರೆವ ದ್ವಾರವು ಮೂರು । ಮೆರೆವಂಥ ಪಸರಂಗಳಿಹವು ॥ (೫೬)

ಸುಲಿದ ತೆಂಗಿನ ಕಾಯಿಯ ಆಕಾರವನ್ನು ಕವಿ ಇಲ್ಲಿ ಜುಂಗು, ಕರಟ, ಬೆಳ್ಳನೆಯ ಕಾಯಿಭಾಗ ಮತ್ತೆ ಎಳನೀರು ಈ ನಾಲ್ಕು ಘಟ್ಟಗಳೂ ತಿಳಿಯುವಂತೆ ಬಣ್ಣಿಸಿದ್ದಾನೆ.

ನಾರಿಯ ಮೈಬಣ್ಣ ತೋರುವ ಚಿನ್ನವು । ಸೇರಿ ರಸವು ದುಂಡಾಗಿ ।
ಧಾರಿಣಿಪತಿಗಳ ಊಟಕ್ಕೆ ಸಲುವಂಥ । ಪೋರಿಯ ತಂದು ಮಾರುವರು ॥ (೫೭)

ನಿಂಬೆಯ ಹಣ್ಣಿನ ಹೊರಮೈ ಬಣ್ಣ ಚಿನ್ನದ ಹೊಳಪಿನ ಹಾಗೆ. ರಸಭರಿತವಾದ ಈ ಹಣ್ಣಿನ ಆಕಾರ ದುಂಡಗೆ. ಅರಸರೂ ಊಟಕ್ಕೆ ಬಯಸುವಂತಹುದು ಇದು.

ಬಿಂದಿಗೆಯೊಳು ತಾನು ಚಂದವಾಗಿರುವಳು । ಮಂದಿಯೊಳಗೆ ಹಲ್ಲ ಕಿಸಿದು ।
ಅಂದೆಗಾರರು ಕೊಂಡು ಮೆಲ್ಲೆ ರುಚಿದೋರುವ । ಚಂದದ ಪಸರಗಳಿಹವು ॥ (೫೯)

ಬಿಂದಿಗೆಯ ಹಾಗೆ ಆಕಾರವುಳ್ಳದ್ದು ದಾಳಿಂಬೆ ಹಣ್ಣು. ಅದು ಬಿರುಕುಬಿಟ್ಟರೆ ಬಿಳಿಯ (ಕೆಂಪು) ಹಲ್ಲುಗಳ ಹಾಗೆ ಒಳಗೆ ಬೀಜಗಳು ಕಾಣುತ್ತವೆ.

ಹದಿನೆಂಟು ತಿಂಗಳು ಒದವಿದ ಬಾಲೆಯ । ಮುದದಿ ಮನೆಗೆ ಕರೆತಂದು ।
ಪದುಳದಿ ಸದನವ ತುಂಬಿ ತ್ರಿರಾತ್ರಿಯ । ಉದಯದಿ ಮಾರುವ ಪಸರ ॥ (೬೦)

ಇದು ಹಿಂದೆಯೇ ಗಮನಿಸಿದಂತೆ (೫–೩೪) ಬಾಳೆಯ ಗೊನೆ. ಮೂರು ದಿನಗಳಲ್ಲಿ ಅದು ಪಕ್ವಕ್ಕೆ ಬಂದು ಮಾರಾಟಕ್ಕೆ ಸಿದ್ಧವಾಗುತ್ತದೆ.

ಕೆಟ್ಟ ಮನುಜರು ಸುತರ ಮುಟ್ಟದಂತಿರೆ ಬೇಲಿ । ಕಟ್ಟಿಕೊಂಡಿಹಳು ಮೈತುಂಬ ।
ಪಟ್ಟಣದ ಬೀದಿಯಲಿ ತಟ್ಟನೆ ಕಡಿದಾಗ । ಹೊಟ್ಟೆಯ ಸೀಳಿ ಮಾರುವರು ॥ (೬೧)

ಇದು ಸಹ ಹಿಂದೆ ಗಮನಿಸಿದಂತೆ (೫–೩೧) ಹಲಸಿನ ಹಣ್ಣನ್ನು ಕುರಿತಿರುವುದು ವಿದಿತ. ಬಣ್ಣನೆಯಲ್ಲಿ ಸಹಜತೆ ಸೊಗಸುಗಳುಂಟು.

ಹುಡುಗನ ಪೆತ್ತವಳ ಒಡಹುಟ್ಟು ತನಗಿಲ್ಲ । ಕಡುಮೋಹದ ಸುತೆಯಿಲ್ಲ ।
ನುಡಿವರೆಲ್ಲರು ಮಾತುಲನೆಂದು ಕಾಯುವ । ಪಡೆದ ರಂಗಾದ ಫಲಗಳ ॥ (೬೨)

ಇಲ್ಲಿ ಮಾದಲದ ಹಣ್ಣನ್ನು 'ಮಾತುಲುಂಗ(ಕ)' ಎಂಬುದಾಗಿ ಸಂಸ್ಕೃತದಲ್ಲಿ ಕರೆಯುವುದನ್ನು ಲಕ್ಷಿಸಿ ಒಂದು ಚಮತ್ಕಾರವನ್ನು ಮಾಡಿದೆ. ಆದರೆ ಚಮತ್ಕಾರ ಅಷ್ಟು ಹೃದ್ಯವೆನ್ನುವಂತಿಲ್ಲ. ಸಂಸ್ಕೃತದಲ್ಲಿ ಮಾತುಲ ಎಂದರೆ ದತ್ತೂರಿ ಎಂದಾಗುವುದು; ಸೋದರಮಾವ ಎಂದಾಗುವುದು. ತಾಯಿಯ ಅಣ್ಣನೋ ತಮ್ಮನೋ ಆಗಲಿ, ಮಗಳಾಗಲಿ ಇಲ್ಲದೆ ಈ ಹಣ್ಣನ್ನು ಎಲ್ಲರೂ 'ಮಾತ್ತುಲ' ಎಂದು ಕರೆಯುವುದೀಗ ವಿಚಿತ್ರ!

ತ್ರಾಸಿನೊಳಗೆ ಇಡೆ ಘಾಸಿ ಮಾಳ್ಪುದು ಜನರ । ಸೂಸಿ ನಾಸಿಕ ನೇತ್ರದೊಳಗೆ ।
ಮೋಸ ಹೋದವನಂತೆ ಸೂಸುತಿರ್ಪುವು ನೀರು । ಲೇಸಿನ ಪಸರಂಗಳಿಹವು ॥ (೬೦)

ಇದು ಕಣ್ಣು ಮೂಗುಗಳಲ್ಲಿ ಉರಿಯೆಬ್ಬಿಸುವ ಒಣಮೆಣಸಿನ ಕಾಯಿಯ ಘಾಟನ್ನು ಹೇಳುವ ಮಾತು ಎನ್ನುವುದು ಸ್ಪಷ್ಟ.

ಗಿಡಕೆ ಮನೆಯ ಕಟ್ಟಿ ಪಡೆವಳು ತನುಜರ । ಬಿಡದೆ ಜೋಗುಳವ ಪಾಡುವಳು ।
ಒಡನೆ ರಸವು ಕೂಡೆ ಹುಡುಗರು ಕಾಣುತ್ತ । ತಡೆಯದೆ ತಂದು ಮಾರುವರು ॥ (೬೧)

ಇದು ರಾಣಿಜೇನು ಕಾರಣವಾಗಿ ಸಿದ್ಧವಾಗುವ ಜೇನುಹುಳುಗಳ ಹುಟ್ಟು ಮತ್ತು ಅಲ್ಲಿ ಶೇಖರವಾಗುವ ಜೇನು ಇವನ್ನು ಹೇಳುತ್ತದೆ.

ಸತ್ತಿಗೆಯನೆತ್ತುವಳು ನಾಚಿಕೊಳ್ಳುತ ತಾನು । ಉತ್ತಮಳಾಗಿ ಒಳಗಿರಲು ।
ಮತ್ತೆ ಜನರು ನೋಡಿ ಕಿತ್ತು ಜುಟ್ಟನೆ ಕೊಯ್ವ । ಎತ್ತಿನ ಮೇಲ್ಪೇರುವ ಪಸರ ॥ (೬೩)

ಈರುಳ್ಳಿಯನ್ನು ಇಲ್ಲಿ ಕವಿ ಕುರಿತಿರುವುದು ವಿದಿತವಾಗುತ್ತದೆ.

ಪುರುಷನಾಳುವ ಸ್ತ್ರೀಯು ಉರವ್ಮೈಯ ಪಿಡಿವುದು । ಭರದಿಂದ ಕುಚಗಳನೊತ್ತಿ ।
ವಿರಹ ಮನದೊಳಗೆಲ್ಲ ಧರಿಸಿದವಳ ಮೆಚ್ಚು । ಪರರಿಗೆ ಅತಿಪೆಚ್ಚು ಪಸರ ॥ (೬೫)

ಅರಿಸಿನದ ಕೊಂಬು, ಹುಡಿಗಳನ್ನು ಅಂಗಡಿಗಳಲ್ಲಿ ಮಾರುತ್ತಿದ್ದರೆಂದು ಇಲ್ಲಿ ಚಮತ್ಕಾರದಿಂದ ಹೇಳಿದೆ. ಗೃಹಿಣಿಯರು ತಮ್ಮ ಎದೆ ಮೈಗಳಲ್ಲಿ ಅರಿಸಿನ ಹಚ್ಚುವರೆಂದು ಹೇಳಿದೆ. ಟೀಕೆಯಲ್ಲಿ ಕುಪ್ಪುಸವೆಂದಿದೆ.

ಅಂಗಡಿಯಲ್ಲಿ ಮಾರುವ ಪದಾರ್ಥಗಳೆಲ್ಲ ಸಸ್ಯಸಂಬಂಧವಾದವೇ ಆಗಿರಬೇಕಾಗಿಲ್ಲ. ಇತರ ವಸ್ತುಗಳೂ ಇರಬಹುದು. ಈ ಮುಂದೆ ಗುರುತಿಸಿರುವ ಹಾಗೆ, ಅಲ್ಲಿ ಊಟದ ತಳಿಗೆಯನ್ನೂ ಪೂಜೆಯ ಜಾಗಟೆಯನ್ನೂ ಮಾರುತಿದ್ದರೆನ್ನುವುದು ಸ್ವಾರಸ್ಯದ ಸಂಗತಿ.

ಪುಡಿಬೂದಿ ತಿಂಬುತ್ತ ಗೊಡಗುಟ್ಟಿ ರಂಗಾಗಿ । ಬಿಡದೆ ಗಗನಕೆ ಬಾಯ್ದೆರೆದು ।
ಸಡಗರದಿ ಜಾಣರು ತಡೆಯದೂಟಕೆ ಬರೆ । ನಡೆದು ಬರುವಳ ಮಾರುವರು ॥ (೮೧)

ಎಂಬಲ್ಲಿ ಊಟದ ತಳಿಗೆಯನ್ನೂ

ಅಂಗ ತೆಳ್ಳಗೆ ಅಗಿ ತಿಂಗಳಂತಿರುವುದು । ಹಿಂಗದೆ ಹಗ್ಗದಿಂ ಕಟ್ಟಿ ।
ಮುಂಗೊಂಡು ಜಡಿಯಲು ಡೊಂಬಿಯ ಮಾಳ್ಪಂಥ । ಸಂಗಿಯ ತಂದು ಮಾರುವರು ॥ (೮೨)

ಎಂಬಲ್ಲಿ ಪೂಜೆಯ ವೇಳೆಯ ಜಾಗಟೆಯನ್ನೂ ಸೊಗಸಾದ ರೀತಿಯಲ್ಲಿ ವರ್ಣಿಸಿರುವುದನ್ನು ಕಾಣಬಹುದು. ನಿಜವಾಗಿ ಇಲ್ಲಿಯ ಕಾವ್ಯದ ಸೊಗಸು ಅಪೂರ್ವವಾದುದು.

ಕೆಲವು ಸ್ವಾರಸ್ಯವಾದ ಪದ್ಯಗಳನ್ನು, ವಿವರಣೆಯಿಲ್ಲದೆ ಆಶಯವನ್ನಷ್ಟೇ ಸೂಚಿಸಿ, ಆಸಕ್ತರ ಕುತೂಹಲಕ್ಕಾಗಿ ಇಲ್ಲಿ ಮುಂದೆ ಉದ್ಧರಿಸಿ ಕೊಟ್ಟಿದೆ :

ಕೆಸರೊಳು ಹುಟ್ಟುವುದು ಬಿಸಿಲಲ್ಲಿ ಮಲಗುವುದು । ಹಸನಾಗಿ ಸವಿದೋರುವುದು ।
ಕುಶಲದಿ ನೀರಾಡೆ ದೆಸೆಯ ಬಿಟ್ಟೋಡುವುದು । ಪಸರಂಗಳಿರ್ಪುವಲ್ಲಲ್ಲಿ ॥ (೬೯)

ಉಪ್ಪು ಎಂದು ಆಶಯ.

ಶಿರದಲ್ಲಿ ದಾನಿಯನಿರಿಸಿಕೊಂಡಿರುವಳು । ಇರದೆ ತಿಂಬುವಳು ಮಡಕೆಯಲಿ ।
ತ್ವರಿತ ಕಂಬಕೆ ಕಟ್ಟಿ ತ್ವರಿತ ಎಳೆದಾಡಲು । ಹರುಷದಿ ವಸ್ತು ಕೊಡುವಳು ॥ (೮೮)

ಕಡೆಗೋಲು ಎಂದು ಆಶಯ.

ಹುಲ್ಲುಮನೆಯೊಳಾಗ ಮೆಲ್ಲನೆ ತೂಗುವಳು । ಕಲ್ಲು ಕಟ್ಟುವರು ನಾಸಿಕಕೆ ।
ಬಲ್ಲಿದರ್ಪಿಡಿತಂದು ಮೆಲ್ಲನೆ ರುಚಿದೋರ್ಪ । ಅಲ್ಲಿಗಲ್ಲಿಗೆ ಮಾರುವರು ॥ (೯೩)

ಪಡುವಲಕಾಯಿ ಎಂದು ಆಶಯ.

ಗಂಡನೊಬ್ಬನಿಗಿರ್ಪರಿಬ್ಬರು ಹೆಂಡಿರು । ಬಂಡಿಲಿ ವ್ಯಾಜ್ಯ ಮಾಡುವರು ।
ಕಂಡಂಥ ನಾಮದ ಕಾಯಿಗಳನು ತಂದು । ತಂಡತಂಡದಿ ಮಾರುತಿಹರು ॥ (೯೬)

ಸವತೀ(ಸವತೆ)ಕಾಯಿ ಎಂದು ಆಶಯ.

ಎಳೆಯ ಕಪ್ಪಿನ ಬಾಲೆ ಬಿಳಿಯ ಮಲ್ಲಿಗೆ ಸೂಡಿ । ಬಳಿಗೊಂಡು ವಿಟರೊಳು ನಗುತ ।
ಬಳಸಿದ ವಸ್ತುವ ಉಳಿದಂಥ ವಿವರವ । ತಿಳಿಪುತಿರ್ದಳು ಅಂಗಡಿಯಲಿ ॥ (೧೦೧)

ಬರೆಹದ ಕಡಿತ ಎಂದು ಆಶಯ.

ಕಲ್ಲೊಳಗೆ ಹುಟ್ಟುವುದು ಕೊಳ್ಳಿಯಲಿ ಸುಡುವುದು । ಉಳ್ಳಷ್ಟಕಳಿ ಮಿಗಿಲಹುದು ।
ಮಳ್ಳಿ ರಂಡೆಯು ಹಿಡಿದು ಉರುಳಿಸೆ ನೀರೊಳು । ಗೊಳ್ಳೆಂದು ಕೂಗುವ ಪಸರ ॥(೧೦೨)

ಸುಣ್ಣ ಎಂದು ಆಶಯ.

ಹೀಗೆಯೇ, ಈ ಮೊದಲು ಗಮನಿಸಿದ ವನವರ್ಣನೆಯ ಭಾಗದಿಂದಲೂ (ಸಂಧಿ ೫) ಕೆಲವು ಪದ್ಯಗಳನ್ನು ಉದ್ಧರಿಸಬಹುದು:

ಮುಟ್ಟಲು ಸೊಡ್ಡನು ಗಟ್ಯಾಗಿ ಹಾಕುವಳು । ಹುಟ್ಟಿ ಬರುತ ತುರುಬಿಕ್ಕಿ ।
ಕೆಟ್ಟ ಮೂಳಿಯು ಹಿಡಿದು ಜೆಟ್ಟಿ ದಬ್ಬಣದಿಂಧ । ಕಟ್ಟ ಮಾರುವ ವೃಕ್ಷವಿಹವು ॥ (೪೨)

ಗೇರು ಹಣ್ಣು ಎಂದು ಆಶಯ.

ಅಲಗಿನ ಮನೆಯಲ್ಲಿ ನರಳುತ್ತ ಮೆಲ್ಲನೆ । ಬಲುಭಾರವನು ಹೊತ್ತುಕೊಂಡು ।
ಅಲಸದೆ ವಸುಧೆಗೆ ಉಲುಪೆಯ ಹಿಡಿದಂತೆ । ಗೆಲವಿಂದ ತರುಗಳೊಪ್ಪಿದವು ॥ (೪೩)

ಖರ್ಜೂರ ಎಂದು ಆಶಯ.

ಮೊಲೆಯು ಮುಟ್ಟಲು ಹುಡುಗಿ ಬಲುಹಿಂದ ಪಿಡಿವಳು । ಸಲೆ ತನ್ನ ಉಗುರ ನಾಟಿಪಳು ।
ಒಲಿದು ಮಾತಾಡಲು ಫಲವನೀವಳು ಮತ್ತೆ । ಲಲನೆಯು ಪೆಸರಿನ ವೃಕ್ಷ ॥ (೪೪)

ಬೋರೆಯ ಹಣ್ಣು ಎಂದು ಆಶಯ.

ಇದೇ ಪನವರ್ಣನೆಯ ಭಾಗವಾಗಿ ಬರುವ ಕಾಡುಮೃಗಗಳ ವರ್ಣನೆಯಲ್ಲಿ,

ಸಣ್ಣದಾಗಿರುವುದು ಬಣ್ಣದಲ್ಲಿ ನಸುಬೂದ । ಕಣ್ಣಿಗೆ ಕಜ್ಜಳವಿಟ್ಟು ।
ತಣ್ಣನೆಯ ನೆರಕೆಯಲಿ ನುಣ್ಣನೆಯ ಮೆಳೆಗಿಡ । ಬಣ್ಣಿಸಿ ಹಾಡುವ ಮೃಗವು ॥ (೫೦)
ಕರಿಯ ಕಂಬಳಿ ಪೊದ್ದು ಹರುಷದಿ ಮುಖದೊಳು । ಧರಿಸಿ ಬೂದಿಯ ನಲವಿಂದ।
ಬೆರಳು ಕೂರುಗುರಿಂಬ ಕೆರೆವುತ್ತ ಭೂಮಿಯ । ಮರುಳುಗೊಂಡಿರುವಂಥ ಮೃಗವು ॥ (೬೪)
ಕಾಂತಾರದೊಳು ಮನೆ ಜ್ಯೋತಿತೆರದಿ ನೇತ್ರ । ಪ್ರೀತಿಯಲಿ ಮೂಬಣ್ಣವಹುದು ।
ಆತುರಕೆ ಪಶುಕಾಯ್ದು ಹೊಟ್ಟೆಯ ಹೊರೆವಂಥ । ಖ್ಯಾತಮೃಗಗಳಲ್ಲಿಹವು ॥ (೬೫)

ಎಂಬ ಮೂರು ಪದ್ಯಗಳಲ್ಲಿ ಕ್ರಮವಾಗಿ ಕೋಗಿಲೆ, ಕರಡಿ ಮತ್ತು ಹುಲಿಗಳನ್ನು ಕವಿ ಕುರಿತಿರುವುದು ನಿಚ್ಚಳವಾಗಿ ತೋರುತ್ತದೆ. ಇಂತಹ ಪದ್ಯಗಳನ್ನು ಕವಿ ಹೆಚ್ಚಾಗಿ ಹೆಣೆಯಲು ಹೋಗಿಲ್ಲ.

ಯಾವುದಕ್ಕೂ ಒಂದು ಮಿತಿಯುಂಟು. ಕವಿಗೆ ಈ ತೆರನ ಚಮತ್ಕಾರಕವಿತೆಯಲ್ಲಿ ಆಸಕ್ತಿಯೂ ಶಕ್ತಿಯೂ ಮಿಗಿಲಾಗಿಯೇ ಇದ್ದರೂ, ಅಲ್ಲಲ್ಲಿ ವಾವೆಯ ಪದ್ಯಗಳನ್ನು ಕಟ್ಟುವ ಮೂಲಕವೂ ಅದನ್ನು ಶ್ರುತಪಡಿಸಿದ್ದರೂ, ಸಮಗ್ರ ಕಾವ್ಯದಲ್ಲಿ ಒಗಟಿನಂತಹ ಪದ್ಯಗಳನ್ನು ತರುವುದಾದರೆ, ಅದರಿಂದ ಕಾವ್ಯ ಅರ್ಥವ್ಯಕ್ತಿಗೆ ಎರವಾಗುತ್ತದೆ, ಬೇಸರದ ಬಣಬೆಯಾಗುತ್ತದೆ ಎಂಬ ಅರಿವುಳ್ಳವನಾಗಿದ್ದಾನೆ, ಈ ಕವಿ. ''ಅಗಜೆಯ ವನದೊಳು ಇರುವಂಥ ವೃಕ್ಷವ । ಒಗಟಿನಿಂದುಸುರಲಳವಲ್ಲ'' ಎಂದು ತಿಳಿಸಿ, ''ಜಗದೊಳು ಹೆಸರಾಗಿ ಇರುವಂಥ ಹೆಸರಲಿ । ಸೊಗಸಾಗಿ ನುಡಿವೆ ಬಲ್ಲನಿತ'' ಎಂದು ತನ್ನ ಒಲವು ಸರಳ ಕವಿತ್ವದ ಕಡೆಗೇ ಎನ್ನುವುದನ್ನೂ ಸ್ಪಷ್ಟಪಡಿಸಿದ್ದಾನೆ.

ಬಸವ ಕವಿಯ 'ಕಲ್ಲೆ ಲಿಂಗೇಶ್ವರ ಚಾರಿತ್ರ'ದಲ್ಲಿ

ಈ ಸಾಂಗತ್ಯಗ್ರಂಥದಲ್ಲಿ ೧೧ ಸಂಧಿಗಳೂ, ೧೦೯೭ ಪದ್ಯಗಳೂ ಇವೆ. ಇಲ್ಲಿ ಕೆಲವು ವಾವೆಯ ಪದಗಳೂ ಗೂಢಾರ್ಥ ಪದ್ಯಗಳೂ ಇದ್ದು, ಇವು ಅಲ್ಪ ಸ್ವಲ್ಪ ಶಾಬ್ದಿಕ ವ್ಯತ್ಯಾಸಗಳ ಹೊರತು ಶಾಂತ ಮತ್ತು ರೇವಣಸಿದ್ಧರ ಕೃತಿಯೊಳಗಿನವೇ ಎನ್ನುವಂತಿವೆ. ಸಂದರ್ಭಗಳೂ ಅಲ್ಲಿರುವಂತೆಯೇ ಅರಣ್ಯ ಮತ್ತು ನಗರ ವರ್ಣನೆಗಳಿಗೆ ಸಂಬಂಧಿಸಿದವು. ಇವುಗಳಿಗೆ ಒಂದು ಮಾತೃಕೆಯಲ್ಲಿ (ಕಆಸಂ.ಕೆಬಿ.೫೧೦) ಟೀಕೆ ಬರೆದಿರುವುದರಿಂದ ಆಶಯವನ್ನು ಸುಲಭವಾಗಿ ತಿಳಿಯಬಹುದಾಗಿದೆ. ಅಲ್ಲದೆ ಈ ಟೀಕೆಯ ಸಹಾಯದಿಂದ ರೇವಣಸಿದ್ಧನ ಕೃತಿಯ ಇಂತಹ

ಪದ್ಯಗಳ ಆಶಯವನ್ನೂ ಗ್ರಹಿಸಬಹುದಾಗಿದೆ. ಇದನ್ನು ಗಮನಿಸಿದಾಗ ಇವುಗಳಲ್ಲಿ ಒಂದನ್ನು ಇನ್ನೊಂದು ಅನುಸರಿಸಿದೆಯೆಂದು ಭಾವಿಸಬಹುದು. ಈ ಬಗೆಯ ಪದ್ಯಗಳ ಸಂಖ್ಯೆಯೂ ಬಲುಮಟ್ಟಿಗೆ ಅಲ್ಲಿರುವಷ್ಟೇ. ಪ್ರಸ್ತುತ, ಮಾದರಿಗೆ ಎರಡು ಗೂಢಾರ್ಥದ ಪದ್ಯಗಳನ್ನು ಅರಣ್ಯವರ್ಣನೆಯ ಭಾಗದಿಂದ ಇಲ್ಲಿ ಎತ್ತಿಕೊಡಬಹುದು. ಇವು ರೇವಣಸಿದ್ಧನ ಕೃತಿಯಲ್ಲಿರುವಂತೆ ತೋರುವುದಿಲ್ಲ ಎನ್ನುವುದೂ ಇದಕ್ಕೆ ಒಂದು ಕಾರಣ :

> ಉರಿಯಾತ ನಿಂತ ಕೊಳ್ಳಿವರ್ಣದ ಮೃಗಗಳು । ಶಿರದೆಡೆ ಶೂಲವೆರಡಿಟ್ಟು ।
> ತರುಲತೆಗಳ ಕೆಡೆಬಡಿವುತ್ತ ಜೀವಿಯು । ಸರೋವರದೊಳು ಹಿಂಡುಹಿಂಡು ॥ (೨–೫೧)

ಕಪ್ಪುಮೈ, ತಲೆಯ ಮೇಲೆ ತಿವಿಯುವ ಕೋಡುಳ್ಳ ಕಾಡೆಮ್ಮೆಯನ್ನು ಇಲ್ಲಿ ಕುರಿತಿದೆ.

> ಜ್ಯೋತಿಯಿಲ್ಲದ ಮನೆರೀತಿಯ ಬಣ್ಣವು । ಮೂತಿ ಮೂಗನೆ ಕೈಯ ಮಾಡಿ ।
> ಕಾತ ಫಲವು ಗದ್ದೆ ಕದಳಿ ಕಬ್ಬು ಮರನ । ಘಾತುಗೆಡಿಪ ಜೀವಿಗಳು ॥ (೨–೫೨)

ಕಪ್ಪುಮೈಯ, ದೊಡ್ಡ ಆಕಾರದ, ಸೊಂಡಿಲೆ ಕೈಯಾಗಿರುವ ಆನೆಯನ್ನು ಇಲ್ಲಿ ಕುರಿತಿದೆ.

ಬೆಡಗಿನ ವಚನಗಳು

ವೀರಶೈವ ವಚನಕಾರರು ವಿಶಿಷ್ಟರೀತಿಯ ಭಾಷೆ ಶೈಲಿಗಳನ್ನು ಬಳಸಿ ರಚಿಸಿರುವ ಒಂದು ಗುಂಪಿನ ವಚನಗಳಿಗೆ 'ಬೆಡಗಿನ ವಚನಗಳು' ಎಂಬುದಾಗಿ ಕರೆಯುವ ರೂಢಿಯಿದೆ. ಇಲ್ಲಿ 'ವಚನಗಳು' ಎಂಬುದನ್ನು ವಿಶೇಷಿಸಿರುವ 'ಬೆಡಗು' ಶಬ್ದದ ಸ್ವರೂಪವನ್ನು ಪೀಠಿಕೆಯ ಭಾಗದಲ್ಲಿಯೇ ಕೆಲಮಟ್ಟಿಗೆ ವಿವೇಚಿಸಿದೆ.

ಬೆಡಗಿನ ವಚನಗಳನ್ನು ಹಲವರು ವಚನಕಾರರು ರಚಿಸಿದ್ದಾರೆ, ಇವರಲ್ಲಿ ಪ್ರಸಿದ್ಧರೂ ಅಪ್ರಸಿದ್ಧರೂ ಕೂಡಿ ಸಮಾನವಾಗಿ ಪ್ರಬುದ್ಧವೆಂದು ತೋರುವ ವಚನಗಳನ್ನೇ ರಚಿಸಿರುವುದು ಒಂದು ಸ್ವಾರಸ್ಯ. ಪ್ರಸಿದ್ಧರಲ್ಲಿ ಅಲ್ಲಮಪ್ರಭು; ಬಸವಣ್ಣ. ಅಕ್ಕಮಹಾದೇವಿ, ಚನ್ನಬಸವಣ್ಣ, ಆದಯ್ಯ, ಮೋಳಿಗೆಯ ಮಾರಯ್ಯ ಈ ಮೊದಲಾದವರಿದ್ದಾರೆ; ಅಪ್ರಸಿದ್ಧರಲ್ಲಿ ಅಥವಾ ಸಾಮಾನ್ಯ ವಚನಕಾರರಲ್ಲಿ ಕೋಲ ಶಾಂತಯ್ಯ, ಬಿಬ್ಬಿ ಬಾಚಯ್ಯ, ಮಧುವಯ್ಯ, ಡಕ್ಕೆಯ ಬೊಮ್ಮಣ್ಣ, ಶಿವಲೆಂಕ ಮಂಚಣ್ಣ, ಬಹುರೂಪಿ ಚೌಡಯ್ಯ, ತುರುಗಾಹಿ ರಾಮಣ್ಣ, ಕದಿರೆ ರೆಮ್ಮವ್ವೆ, ಮಲಹರದ ಕಾಯಕದ ಚಿಕ್ಕದೇವಯ್ಯ, ಹಡಪದಪ್ಪಣ್ಣ ಮುಂತಾದವರಿದ್ದಾರೆ. ಸುಮಾರು ನಲವತ್ತೈದು ಮಂದಿ ವಚನಕಾರರಿಗೆ ಮೇಲ್ಪಟ್ಟು ಬೆಡಗಿನ ವಚನ ಬರೆದವರನ್ನು ಗುರುತಿಸಲಾಗಿದೆ. ಇವರಲ್ಲಿ ಹಲವರ ವಚನಗಳ ಆಶಯವನ್ನು ಸಿಂಗಳದ ಸಿದ್ಧಬಸವರಾಜ ದೇವನೊಬ್ಬನೇ ವಿಸ್ತಾರವಾಗಿ ವ್ಯಾಖ್ಯಾನ ಬರೆದು ವಿವರಿಸಿರುವುದು ಕಂಡುಬರುತ್ತದೆ. ಇದರಲ್ಲಿ ಇವನು ಸಮರ್ಥನಾಗಿದ್ದನೆಂದು, ಇವನ ಹೆಸರಿನ ಹಿಂದೆ ಸೇರಿರುವ 'ಬೆಡಗಿನ' ಎಂಬ ವಿಶೇಷಣದಿಂದಲೇ ನಾವು ತಿಳಿಯಬಹುದು. ಇವನಲ್ಲದೆ ತೋಂಟದ ಸಿದ್ಧಲಿಂಗನ ಬೆಡಗಿನ ವಚನಗಳಿಗೆ ಟೀಕೆ ಬರೆದ ಸೋಮಶೇಖರ ಶಿವಯೋಗಿ ಮೊದಲಾದ ಇತರ ಟೀಕಾಕಾರರೂ ಇದ್ದಾರೆ.

ಬೆಡಗಿನ ವಚನಗಳನ್ನು ಪ್ರಹೇಳಿಕೆಗಳ ವಿಭಾಗದಲ್ಲಿ ಸೇರಿಸುವುದು ಪೂರ್ತಿಯಾಗಿ ಸರಿಯಲ್ಲವಾದರೂ, ಸ್ವರೂಪತಃ ಅವುಗಳಲ್ಲಿ ಪ್ರಹೇಳಿಕೆಗಳ ಲಕ್ಷಣಗಳನ್ನು ನಾವು ಹೇರಳವಾಗಿ ಕಾಣಬಹುದಾದ್ದರಿಂದ ಅವನ್ನೂ ಒಂದು ರೀತಿಯ ಪ್ರಹೇಳಿಕೆಗಳೆಂದೇ ಹೇಳಬಹುದಾಗಿದೆ. ಬೆಡಗು ಎಂದರೆ ಒಗಟು, ಒಗಟುಮಾತು ಎಂದೇ ಅರ್ಥ; ಬೆಡಗಿನ ವಚನಗಳು ಎಂದರೆ ಒಗಟಿನ ವಚನಗಳು ಎಂದೇ ತಿಳಿದರೆ ತಪ್ಪಾಗಲಾರದು. ಈ ಬಗೆಯ ವಚನಗಳನ್ನು ದಾಸರ ಪದಗಳ ಮುಂಡಿಗೆಯ ಕೀರ್ತನೆಗಳಿಗೆ ಸದೃಶವಾಗಿ ತಿಳಿಯುವುದು ತಪ್ಪಲ್ಲ. ವಸ್ತು ಮತ್ತು ರೀತಿಗಳಲ್ಲಿ ಅವುಗಳ ನಡುವೆ ಸಾಮ್ಯವಿದೆ. ಎರಡರ ಅಭಿವ್ಯಕ್ತಿವಿಧಾನದಲ್ಲಿ ಒಂದು ಗದ್ಯ, ಇನ್ನೊಂದು ಪದ್ಯ ಎನ್ನುವುದಿಷ್ಟೇ ವ್ಯತ್ಯಾಸ. ಮುಂಡಿಗೆಯ ಕೀರ್ತನೆಗಳು ಪ್ರಹೇಳಿಕೆಗಳಂತೆ ಎಂದು ತಿಳಿಯುವುದಾದರೆ, ಬೆಡಗಿನ ವಚನಗಳನ್ನೂ ಹಾಗೆಯೇ ತಿಳಿಯುವುದು ಸಾಧ್ಯ.

ಬೆಡಗಿನ ವಚನಗಳು ಹೇಗೆ ಪ್ರಹೇಳಿಕೆಗಳು? ಹೀಗೆ ಕಾರಣಗಳನ್ನು ಕಂಡುಕೊಳ್ಳಬಹುದು: (i) ಶಬ್ದಗಳಿಗೆ, ಉಕ್ತಿಗಳಿಗೆ ವಾಚ್ಯಾರ್ಥ ಹಾಗೂ ಮೇಲೆ ತಿಳಿಯುವ ಅರ್ಥ ಬೇರೆ; ಪ್ರಕಾರಾಂತರವಾದ ಅರ್ಥ ಹಾಗೂ ನಿಜವಾದ

ಅರ್ಥವೇ ಬೇರೆ. (ii) ಈ ಪ್ರಕಾರಾಂತರವಾದ ಅರ್ಥವೆನ್ನುವುದು ಶಬ್ದಗಳಿಗೆ ಆರೋಪಿಸಿದ ಪ್ರತಿಮೆ ಸಂಕೇತಗಳ ಮೂಲಕ ಸಿದ್ಧವಾಗುತ್ತದೆ; ಇವು ಒಂದು ವಚನದಲ್ಲಿ ಸಾವಯವಸಂಬಂಧವುಳ್ಳುವಾಗಿ ಒಂದು ಸಮಗ್ರಸಂದರ್ಭವನ್ನೋ ಶಬ್ದಚಿತ್ರವನ್ನೋ ರೂಪಿಸಿರುತ್ತವೆ. (iii) ಮೇಲೆ ತಿಳಿಯುವ ಅರ್ಥ ಅಸಂಗತ, ಅಸಂಭಾವ್ಯ ಎನ್ನುವಂತಿದ್ದು, ಪ್ರಕಾರಾಂತರವಾದ ಅರ್ಥ ಅವುಗಳನ್ನು ಪರಿಹರಿಸುವಂತಿರುತ್ತದೆ. ಮೊದಲು ಉದ್ದೇಶಪೂರ್ವಕವಾಗಿ ಹುಟ್ಟಿಸಿದ ಭ್ರಾಂತಿ (ಅಥವಾ ಬೆಡಗು) ಶಬ್ದ ಮತ್ತು ಉಕ್ತಿಗಳ ಹಿಂದಿನ ಸಂಕೇತಗಳು ಯಾವುವೆಂಬುದನ್ನು ತಿಳಿದಾಗ ತನ್ನಿಂದ ತಾನೆ ಪೊರೆಕಳಚಿಹೋಗುತ್ತದೆ. (iv) ಗೋಪನ ಅಥವಾ ಆಚ್ಛಾದನೆ ಹಾಗೂ ಪ್ರಶ್ನಗರ್ಭವಾದ ವಾಕ್ಯರಚನೆ ಇಲ್ಲಿಯೂ ಉಂಟು. (v) ಬ್ರಾಹ್ಮಣಗಳಲ್ಲಿಯೂ ಉಪನಿಷತ್ತುಗಳಲ್ಲಿಯೂ ಕಂಡುಬರುವ 'ಬ್ರಹ್ಮೋದ್ಯ' ಎಂಬ ರೀತಿಯ ಒಗಟುಗಳ ಹಾಗೆ ಇಲ್ಲಿಯೂ ಮತೀಯ ಹಾಗೂ ತಾತ್ತ್ವಿಕವಾದ ವಿಷಯ ವಿನ್ಯಾಸವುಳ್ಳುದಾಗಿದೆ; ಬೌದ್ಧ ಜಾತಕಕಥೆಗಳಲ್ಲಿ ಕಾಣುವ ಹಾಗೆ ಪುಷ್ಕಳವಾಗಿ ಪ್ರಾಣಿಸಂಕೇತಗಳನ್ನು ಬಳಸಿದೆ. (vi) ನಿಗೂಢತೆ, ಅಸಂಭಾವ್ಯತೆ, ಅಶ್ಲೀಲತೆಗಳನ್ನು ಲಕ್ಷಣಗಳನ್ನಾಗಿ ಉಳ್ಳ ಪಶುಪಕ್ಷಿಗಳ ಹಾಗೂ ಸ್ತ್ರೀಪುರುಷರ ಪ್ರಕೃತಿವ್ಯಾಪಾರಗಳನ್ನು ಚಿತ್ರಿಸಿದೆ. (vii) ಅರ್ಥಾಂತರವನ್ನು ಭೇದಿಸಿ ಮೂಲಾರ್ಥವನ್ನು ಅರಿಯುವ ಕುತೂಹಲವೂ ಅರಿತಾಗ ವಿಸ್ಮಯವೂ ಸಹಜವಾಗಿಯೇ ಉಂಟು.

ಬೆಡಗಿನ ವಚನಗಳಲ್ಲಿ ಮುಖ್ಯಶಬ್ದಗಳು ಸಂಕೇತವಾಹಕಗಳಾಗಿರುತ್ತವೆ. ಇವುಗಳಲ್ಲಿ ಕೆಲವು ಸಿದ್ಧ ಸಂಕೇತಗಳು; ಹಲವು ಸಂದರ್ಭಸೃಷ್ಟಿಯ ಸಂಕೇತಗಳು. ಉದಾ.ಗೆ ಮಲೆ-ಸಂಸಾರ, ಹಂಸ-ಆತ್ಮ, ಬೇವಿನ ಮರ-ಸಂಸಾರದಲ್ಲಿ ಆಸಕ್ತವಾದ ಶರೀರ, ನಾಯಿ-ಇಂದ್ರಿಯಗಳು, ಅಗ್ನಿ-ಜ್ಞಾನ ಹೀಗೆ. ಒಂದೇ ಸಂಕೇತ ಆಯಾ ಸಂದರ್ಭಕ್ಕೆ ಅನುಗುಣವಾಗಿ ಬೇರೆ ಬೇರೆ ಅರ್ಥಗಳನ್ನು ಸೂಚಿಸುವುದೂ ಉಂಟು. ಉದಾಹರಣೆಗೆ, 'ಜೀವ' ಎನ್ನುವುದನ್ನು ಹಸು, ಗುಬ್ಬಿ, ಮಗ, ಗೂಡಿಗೊಡೆಯ, ಆಡು ಎಂಬ ಸಾಂಕೇತಿಕ ಶಬ್ದಗಳೂ, 'ಜೀವಾತ್ಮ' ಎನ್ನುವುದನ್ನು ಮತ್ಸ್ಯ, ಎರಳೆ ಎಂಬ ಶಬ್ದಗಳೂ, 'ಮಾಯೆ' ಎನ್ನುವುದನ್ನು ಕಾಡೆಮ್ಮೆ, ಹಿತ್ತಿಲ ಬಾಗಿಲು, ಕಾಳಿ ಎಂಬ ಶಬ್ದಗಳೂ ದ್ಯೋತಿಸುತ್ತವೆ. ಒಂದು ವಚನದಲ್ಲಿ ಒಂದು ಸಂದರ್ಭವಿರುತ್ತದೆ. ಆ ಸಂದರ್ಭ ಇಡಿಯಾಗಿ ಒಂದು ಸಂಕೇತಸೃಷ್ಟಿ, ಒಂದು ಪ್ರತಿಮಾಲೋಕ. ಮತೀಯ ನಂಬಿಕೆ, ಆಚರಣೆ, ತತ್ತ್ವಗಳು ಇವುಗಳ ಒಳಗಿನ ಹುರುಳು. ಸಂಕೇತಗಳನ್ನು ಹೂಡಿದವರು ಬಳಸಿರುವ ಶಬ್ದಗಳ ಹಾಗೂ ಸಂಕೇತಗಳ ಸಂಬಂಧ ಪೂರ್ವಭಾವಿಯಾಗಿ ತಿಳಿದಿದ್ದರೆ, ಇಲ್ಲವೆ ಈ ತೆರನ ವಚನಗಳ ಧಾಟಿ ಧೋರಣೆಗಳನ್ನೂ ಮೂಲವೂ ಮುಖ್ಯವೂ ಆದ ಸಂಕೇತಗಳನ್ನೂ ಮತಧರ್ಮದ ಆಚಾರ ವಿಚಾರಗಳನ್ನೂ ಗಾಢವಾಗಿ ಅರಿತವರಾಗಿದ್ದರೆ, ಬೆಡಗಿನ ವಚನಗಳ ಆಶಯ ತಿಳಿಯುವುದು ಸಾಧ್ಯವಾದೀತು. ಸದ್ಯದ ಸ್ಥಿತಿಯಲ್ಲಿ ಟೀಕೆಗಳ ನೆರವಿಲ್ಲದೆ ಇವುಗಳ ಅರ್ಥ ಹೃದ್ಯವಾಗುವಂತಿಲ್ಲ ಎನ್ನುವುದಂತೂ ನಿಶ್ಚಯ.

ಈ ಗುಂಪಿನ ವಚನಗಳು ಬುದ್ಧಿಪೂರ್ವಕವಾದವು, ಭಾವಜನ್ಯವಾದುವಲ್ಲ ಎನ್ನುವ ಮಾತಿದೆ. ಇದು ಕೆಲಮಟ್ಟಿಗೆ ನಿಜ. ಒಗಟುಗಳನ್ನು ಕಟ್ಟುವುದು, ಒಗಟು ಮಾತಾಡುವುದು ಮಾನವಸ್ವಭಾವಕ್ಕೆ ಸಹಜವಾದುದು ಎನ್ನುವುದರಿಂದ ಹೀಗೆ ಭಾವಿಸಬಹುದು. ಅಲ್ಲದೆ ಅನಿರ್ವಚನೀಯವಾದ ಅಲೌಕಿಕ ಭಾವ ಆಶಯಗಳು ಅಭಿವ್ಯಕ್ತವಾಗಲು 'ಬೆಡಗು' ಒಂದು ಅನಿವಾರ್ಯ ಸಾಧನೆಯೂ ಆಗಿರಬಹುದು. ಲೌಕಿಕ ವ್ಯವಹಾರದ ಪ್ರಕರಣಗಳಿಗೆ ಇಲ್ಲಿ ಅವಕಾಶವಿಲ್ಲ, ಪಾರಮಾರ್ಥಿಕ ಸಾಧನೆಯ ವಿಧಿ ವಿಧಾನಗಳನ್ನು ಒಂದು ರಹಸ್ಯಮಯ ಭಾಷೆಯಲ್ಲಿ ನಿರೂಪಿಸುವುದೇ ಇಲ್ಲಿಯ ಉದ್ದೇಶ ಎಂಬ ಮಾತೂ ಇದೆ. ವಸ್ತುವಿನ ಬಗ್ಗೆ ಹೀಗೆ ಅಭಿಪ್ರಾಯವನ್ನು ಪ್ರಕಟಿಸಿದೆ: "ಮಾಯೆಯು ಇಂದ್ರಿಯಗಳ ಮೂಲಕ ಆತ್ಮನನ್ನು ದಿಕ್ಕುಗೆಡಿಸುತ್ತಾಳೆ. ಗುರುವಿನ ಕರುಣೆಯಿಂದ ವ್ಯಕ್ತಿ ತನ್ನ ಮಾರ್ಗವನ್ನು ಕಂಡುಕೊಂಡು, ಆ ಮಾರ್ಗದಲ್ಲಿಯೇ ಕ್ರಮಿಸುತ್ತಾನೆ. ನಿರಾಕಾರ ವಸ್ತುವಿನಲ್ಲಿ ಐಕ್ಯವನ್ನು ಪಡೆದು ತನ್ನ ಆತ್ಯಂತಿಕ ಸಹಜಸ್ಥಿತಿಯನ್ನು ಮುಟ್ಟುತ್ತಾನೆ. ಇದು ಬಹುತೇಕ ಎಲ್ಲ ಬೆಡಗಿನ ವಚನಗಳ ಮೂಲ ವಸ್ತು. ಒಳವಿವರಗಳಲ್ಲಿ ವ್ಯತ್ಯಾಸಗಳು ಬರಬಹುದು; ವಿವರಿಸಲು ಬೇರೆಬೇರೆ ಸಂಕೇತಗಳ ಬಳಕೆಯಾಗಬಹುದು. ರೆ ಎಲ್ಲ ಬೆಡಗಿನ ವಚನಗಳು ಈ ಕೇಂದ್ರವಸ್ತುವಿನ ಸುತ್ತ ಗೋಪಿಕೆಯರಂತೆ ಪರಿಭ್ರ ಎಸುತ್ತವೆ."[38]

ಬೆಡಗಿನ ವಚನಗಳು ಧಾಟಿ ಧೋರಣೆಗಳಲ್ಲಿ ಬಲುಮಟ್ಟಿಗೆ ಏಕರೀತಿಯಾಗಿಯೇ ಇರುತ್ತವೆ. ಹಿರಿಯ ವಚನಕಾರರು ಮೊದಮೊದಲಲ್ಲಿ ಪ್ರತಿಭೆಪಾಂಡಿತ್ಯಗಳ ಫಲವಾಗಿ ರೂಪಿಸಿದ, ಅನುಭಾವಸಿದ್ಧವಾದ ಬೆಡಗಿನ ಮಾತುಗಾರಿಕೆ ಮುಂದಿನ ಸಾಮಾನ್ಯ ವಚನಕಾರರಿಗೆ ಅನುಕರಣಯೋಗ್ಯವಾಗಿ ಪರಿಣಮಿಸಿದಂತೆ ತೋರುತ್ತದೆ. ಆದರೆ ಇವನ್ನು ಆ ಕಾರಣಕ್ಕಾಗಿಯೇ ಬುದ್ಧಿಪೂರ್ವಕವಾದ ಜಡ, ಅನುಕರಣಶೀಲ ವಚನಗಳೆಂದು ಅಲ್ಪವಾಗಿ ತಿಳಿಯುವುದೂ ಸಾಧ್ಯವಿಲ್ಲ. ರೂಪಕಗಳೂ ಪ್ರತಿಮೆಗಳೂ ಬೇರೆಬೇರೆ ಸಂದರ್ಭಗಳಿಗೆ ಅನುಗುಣವಾಗಿ ಅರ್ಥಾಂತರಗೊಳ್ಳುವುದನ್ನು ಇಲ್ಲಿ ಕಾಣಬಹುದು; ಮಾತುಗಾರಿಕೆಯಲ್ಲಿ ಕಾವ್ಯಗುಣಗಳನ್ನೂ ಗುರುತಿಸಬಹುದು. ಎಷ್ಟೋ ವಚನಗಳಲ್ಲಿಯ ಸಂಕೇತಸೃಷ್ಟಿಯಲ್ಲಿ ಸ್ವಾಭಾವಿಕತೆ, ನಿರರ್ಗಳತೆ, ತಾರ್ಕಿಕವಾದ ಬೆಳವಣಿಗೆಗಳನ್ನು ಕಾಣಬಹುದು. ಇದಕ್ಕಿಂತ ಮಿಗಿಲಾಗಿ ವೈಯಕ್ತಿಕತೆಯನ್ನೂ ಕಾಣಬಹುದಾಗಿದೆ. ರೂಢಿಯ ಅಥವಾ ಸಾಂಪ್ರದಾಯಿಕವಾದ ಅರ್ಥ ಆಶಯಗಳ ಅಭಿವ್ಯಕ್ತಿಗೆ ಹೊಸ ಸಂಕೇತಗಳನ್ನು ಹೂಡುವ ವೈಯಕ್ತಿಕತೆಗೆ ಹೇರಳ ನಿದರ್ಶನಗಳನ್ನು ಕೊಡಬಹುದಾಗಿದೆ. ಅನುಭವ ಅನುಭಾವಗಳಿಂದ ಸಾಧಕನ ಅಂತರಂಗದಲ್ಲಿ ಅರಗಿ ಕರಗಿ ಕುಳಿತ ತತ್ತ್ವಜ್ಞಾನ ಒಗಟುಗಳಂತೆ ಹೊಮ್ಮಿ ಬಂದಿರುವುದನ್ನು ಅಲ್ಲಗಳೆಯಲಾಗದು. ಬೇರೆ ಬೇರೆ ವೃತ್ತಿಯ ವಚನಕಾರರು ತಮ್ಮ ತಮ್ಮ ವೃತ್ತಿ ಆಚರಣೆಗಳಿಗೆ ಅನುಗುಣವಾಗಿ ವಿಶಿಷ್ಟ ಸಂಕೇತಗಳನ್ನೂ ಪ್ರತಿಮೆಗಳನ್ನೂ ಬಳಸಿರುವುದರಿಂದ ಅಭಿವ್ಯಕ್ತಿಯಲ್ಲಿ ಸ್ವಾತಂತ್ರ್ಯವೂ ನಾವೀನ್ಯವೂ ಉಂಟೆಂದು ಹೇಳಬೇಕಾಗಿದೆ. ಕೆಲವು ಸಂಕೇತಗಳು ವಿರೋಧಾಭಾಸದ ಮಾಲೆಗಳನ್ನು ಕಟ್ಟುತ್ತವೆ; ಇನ್ನು ಕೆಲವು ವಿಸ್ಮಯದ ಶಬ್ದಚಿತ್ರಗಳನ್ನು ಹೂಡುತ್ತವೆ. ವ್ಯಾಖ್ಯಾನಕಾರನ ವಿವರಣೆ ಎಷ್ಟು ಪ್ರಾಮಾಣಿಕವಾದ್ದು? ಅವನು ಪರಂಪರೆಯ ಅರ್ಥವನ್ನು ಬಲ್ಲವನಾಗಿ ಬರೆಯುತ್ತಿರುವನೋ ಸ್ವಬುದ್ಧಿಯಿಂದ ವಿಶ್ಲೇಷಿಸುತ್ತಿರುವನೋ?—ಹೀಗೆ ಸಂದೇಹಿಸಲು ಅವಕಾಶವಿಲ್ಲವೇ? ಇದು ಸಹ ಚಿಂತನೀಯವಾದ್ದೇ.

ಗೂಢವಾದ ಭಾಷೆಯಲ್ಲಿ ತತ್ತ್ವವಿಚಾರವನ್ನೇ ಆಗಲಿ, ಅನುಭಾವವಿಶೇಷವನ್ನೇ ಆಗಲಿ ನಿರೂಪಿಸುವುದಕ್ಕೆ ಕಾರಣಗಳೇನು ಎನ್ನುವುದು ವಿಚಾರವಂತರ ಎಂದಿನ ಪ್ರಶ್ನೆಯಾಗಿದೆ. ಮುಂಡಿಗೆಯ ಕೀರ್ತನೆಗಳ ವಿಚಾರದಲ್ಲಿ ನಡೆಸಿದ ಚಿಂತನೆಗಳೇ ಇಲ್ಲಿಗೂ ಅನ್ವಯಿಸುತ್ತವೆ. ಒಂದು ಸಂಪ್ರದಾಯದ ಭಾಗವಾಗಿ ಹುಟ್ಟಿರುವ ಈ ವಚನರಚನೆಯ ವೈಖರಿಯನ್ನು ಅದರ ಕಟ್ಟುಪಾಡುಗಳಿಗೆ ಒಳಪಟ್ಟ ಜನ ಅನುಸರಿಸುವುದೂ ಪೋಷಿಸುವುದೂ ಸಹಜವೇ ಆಗಿದೆ. ತಾವು ಸಂಪ್ರದಾಯದ ಹಿರಿಯರ ಮೇಲ್ಪಂಕ್ತಿಯನ್ನು ಹಿಡಿದು ಆಗಾಗ ಹಳೆಯ ಸಂಕೇತಗಳನ್ನು ಉಳಿಸಿಕೊಂಡು, ಆ ಸಂಕೇತಗಳನ್ನು ವಿನ್ಯಾಸಗೊಳಿಸುವಲ್ಲಿ ಹಳೆಯ ಧಾಟಿ ಧೋರಣೆಗಳನ್ನೇ ಅನುಸರಿಸಿದರೂ, ತಮ್ಮ ತಮ್ಮ ವೃತ್ತಿಯ ಆಚರಣೆಯ ಅಭಿನಿವೇಶಕ್ಕೆ ತಕ್ಕಂತೆ ಶಬ್ದಸಂಯೋಜನೆಯಲ್ಲಿ ಅವರು ಹೊಸತನವನ್ನು ತೋರಿಸಿದರೆಂದು ಹೇಳಬೇಕು. ಈ ದೃಷ್ಟಿಯಿಂದ ಇತರ ಸೈದ್ಧಾಂತಿಕ ವಚನಗಳ ಹಾಗೆಯೇ ಬೆಡಗಿನ ವಚನಗಳಲ್ಲಿ ಸಹ ಒಂದು ತೆರನ ಮೂಲನಿಷ್ಠೆ ಗತಾನುಗತಿಕತೆಗಳೂ ವ್ಯಕ್ತಿವೈಶಿಷ್ಟ್ಯ ನವನವೋನ್ಮೇಷಶಾಲಿತೆಗಳೂ ಇವೆಯೆನ್ನಬಹುದು.

ಕೆಲವು ಉದಾಹರಣೆಗಳನ್ನಿಲ್ಲಿ ಎತ್ತಿಕೊಡಬಹುದು.[39]

ಮಧುವಯ್ಯನ ವಚನ :

ಕುದುರೆಯ ನರಿ ಕೊಂದು ನರಿಯ ಇಱುಹೆ ತಿಂದು
ಆ ಇಱುಹೆ ತನ್ನ ತಾ ಸತ್ತಿತ್ತು ಅರ್ಕೇಶ್ವರಲಿಂಗವನಱಿವುದಕ್ಕೆ ॥ ೧೪ ॥

ಸಿಂಗಳದ ಸಿದ್ಧಬಸವರಾಜನ ಟೀಕು : ''ಸತ್ತ್ರಾಣವ ಜ್ಞಾನೋದಯವಾದಲ್ಲಿ ಪ್ರಾಣವಾಯು ವಿಕಾರ ನಷ್ಟವಾಯಿತ್ತೆಂಬುದೀಗ 'ಕುದುರೆಯ ನರಿ ಕೊಂದು' ಎಂಬ ಶಬ್ದಕ್ಕರ್ಥ.

ಆ ಸತ್ತ್ರಾಣವವು ಶರಣನ ಸೂಕ್ಷ್ಮವಾದ ಪರಿಪೂರ್ಣಜ್ಞಾನವ ಅವಗ್ರಹಿಸಿತ್ತೆಂಬುದೀಗ 'ನರಿಯ ಇಱುಹೆ ತಿಂದು' ಎಂಬ ಶಬ್ದಕ್ಕರ್ಥ.

ಆ ಸತ್ಪ್ರಣವವನವಗ್ರಹಿಸಿದ ಶರಣನ ಪರಿಪೂರ್ಣಜ್ಞಾನವು ಆ ಪರವಸ್ತುವಿನಲ್ಲಿ ನಿಷ್ಪತ್ತಿಯಾಯಿತ್ತೆಂಬುದೀಗ 'ಆ ಇಱುಹೆ ತನ್ನ ತಾ ಸತ್ತಿತ್ತು ಅರ್ಕೇಶ್ವರ ಲಿಂಗವನಱಿವುದಕ್ಕೆ' ಎಂಬ ಶಬ್ದಕ್ಕರ್ಥ.''

ಇಲ್ಲಿ ಪ್ರಣವಜ್ಞಾನದಿಂದ ಸಾಧಕ ಪರವಸ್ತುವನ್ನು ಪಡೆಯುವನೆಂಬುದನ್ನು 'ನರಿ' ಮತ್ತು 'ಇರುವೆ'ಗಳ ಸಂಕೇತಗಳನ್ನು ಬಳಸಿ ತಿಳಿಸಿದೆ.

ಬಿಬ್ಬಿ ಬಾಚಯ್ಯನ ವಚನ:

> **ಉರಿಯ ಮೊನೆಯ ಮೇಲೆ ಅರಗಿನ ಬೊಂಬೆ ತಿರುಗಾಡುತ್ತದೆ**
> **ಉರಿ ಕರಗಿ ಬೊಂಬೆ ಉಳಿಯಿತ್ತು**
> **ಏಣಾಂಕಧರ ಸೋಮೇಶ್ವರಲಿಂಗವನಿದಿರಿಗಿಟ್ಟುಕೊಂಡು ॥ ೧ ॥**

ಸಿಂಗಳದ ಸಿದ್ಧಬಸವರಾಜನ ಟೀಕು :

''ಜ್ಞಾನಾಗ್ನಿ ಪ್ರಕಾಶದ ಅಗ್ರದಲ್ಲೆಂಬುದೀಗ 'ಉರಿಯ ಮೊನೆಯ ಮೇಲೆ' ಎಂಬ ಶಬ್ದಕ್ಕರ್ಥ.

ಶರಣನ ಜ್ಞಾನಾಗ್ನಿ ಪ್ರಕಾಶವನೊಳಕೊಂಡು ನಿರ್ಭಾವಸ್ವರೂಪವಾದ ಪರಬ್ರಹ್ಮವು ಸಂಬಂಧವಾಗಿಹುದೆಂಬುದೀಗ 'ಅರಗಿನ ಬೊಂಬೆ ತಿರುಗಾಡುತ್ತದೆ' ಎಂಬ ಶಬ್ದಕ್ಕರ್ಥ.

ಆ ಶರಣನ ಚಿದಗ್ನಿ ಪ್ರಕಾಶವು ಪರಬ್ರಹ್ಮದಲ್ಲಿ ವಿಶ್ರಾಂತಿಯನೆಯ್ದಲು ಆ ಪರಬ್ರಹ್ಮವೊಂದೆ ಉಳಿಯಿತ್ತೆಂಬುದೀಗ 'ಉರಿ ಕರಗಿ ಬೊಂಬೆ ಉಳಿಯಿತ್ತು' ಎಂಬ ಶಬ್ದಕ್ಕರ್ಥ.

ಆ ಶರಣನ ಸಮ್ಯಕ್‌ಜ್ಞಾನಪ್ರಕಾಶವನೊಳಕೊಂಡಿರ್ಪ ಪರಬ್ರಹ್ಮವೆ ಕರಸ್ಥಲದಲ್ಲಿ ಇಷ್ಟಲಿಂಗವಾಗಿ ಮೂರ್ತಿಗೊಂಡು ಸತ್ಕ್ರಿಯೋಪಚಾರಂಗಳ ಕೈಕೊಳ್ಳುತ್ತಿಹುದೆಂಬುದೀಗ 'ಏಣಾಂಕಧರ ಸೋಮೇಶ್ವರಲಿಂಗವನಿದಿರಿಗಿಟ್ಟುಕೊಂಡು' ಎಂಬ ಶಬ್ದಕ್ಕರ್ಥ.''

ಸಾಧಕನು ಜ್ಞಾನದ ಬಲದಿಂದ ಪರಬ್ರಹ್ಮದ ಸಂಬಂಧ ಪಡೆಯುತ್ತಾನೆ, ಪರಬ್ರಹ್ಮದಲ್ಲಿ ಒಂದಾಗುತ್ತಾನೆ. ಆ ಪರಬ್ರಹ್ಮವೇ ಕರಸ್ಥಲದ ಇಷ್ಟಲಿಂಗ : ಇದು 'ಉರಿ,' 'ಅರಗಿನಬೊಂಬೆ' ಹಾಗೂ 'ಸೋಮೇಶ್ವರಲಿಂಗ' ಈ ಸಂಕೇತಗಳ ಮೂಲಕ ವ್ಯಕ್ತವಾಗುವ ಆಶಯ.

ಅಱಿವಿನ ಮಾರಿತಂದೆಯ ವಚನ:

> **ತಾವರೆಯ ನಾಳದ ತೞಿಪಿನಲ್ಲಿ ಮೂಱುಲೋಕವನೊಳಕೊಂಡ**
> **ಗಾತ್ರದಾನೆ ಎಡತಾಕುತ್ತದೆ**
> **ನಾಳ ಹಱಿಯದು ಆನೆಯಂಗಕ್ಕೆ ನೋವಿಲ್ಲ**
> **ಇದೇನು ಚೋದ್ಯವೆಂದು ಕೇಳುವ ಬನ್ನಿ**
> **ಸದಾಶಿವಮೂರ್ತಿ ಲಿಂಗವ ॥ ೩೦ ॥**

ಪೂರ್ವೋಕ್ತವಾದ ಎರಡು ವಚನಗಳಿಗೆ ಸಿಂಗಳದ ಸಿದ್ಧಬಸವರಾಜನ ಟೀಕುವಿನ ರೀತಿಯನ್ನು ತಿಳಿಯಲು ನೇರವಾಗಿ ಆ ಟೀಕುಗಳನ್ನೇ ಉದ್ಧರಿಸಿದೆ. ಇಲ್ಲಿ ಸಾರಾಂಶವನ್ನಷ್ಟೇ ಗ್ರಹಿಸಿ, ಸಂಕೇತ ಸೂಚಿಸುವ ಆಶಯವೇನೆಂದು ತಿಳಿಯಬಹುದು.

ಹೃದಯಕಮಲದ ಸುಜ್ಞಾನದ್ವಾರವನ್ನು 'ತಾವರೆಯ ನಾಳ', ಚಿತ್‌ಸ್ವರೂಪನಾದ ಶರಣನ ತನುತ್ರಯಂಗಳನ್ನು ಒಳಕೊಂಡಿರುವ ಚಿದಹಂಕಾರಸ್ವರೂಪವಾದ ಭಕ್ತಿಯನ್ನು 'ಮೂಱು ಲೋಕವನೊಳಕೊಂಡ ಗಾತ್ರದಾನೆ', ಅಂತಹ ಶರಣನು ಇಷ್ಟಪ್ರಾಣಲಿಂಗದಲ್ಲಿ ಸುಜ್ಞಾನಸಿರೀ ಹಿಡಿದು ಚರಿಸುವನೆಂಬುದನ್ನು 'ಎಡತಾಕುತ್ತದೆ', ಆ ಶರಣನ ಸುಜ್ಞಾನಕ್ಕೆ ಕೇಡಿಲ್ಲ ಎನ್ನುವುದನ್ನು 'ನಾಳ ಹಱಿಯದು', ಅವನ ಅಂಗಕ್ಕೆ ಸಂಸಾರವ್ಯಾಪ್ತಿಯ ದುಃಖವಿಲ್ಲ ಎನ್ನುವುದನ್ನು 'ಆನೆಯಂಗಕ್ಕೆ ನೋವಿಲ್ಲ,' ಆತನ ಚಿತ್‌ಪ್ರಭಾಂಗಕ್ಕೆ ಸಂಸಾರಬಂಧನ ಒಂದು ಆಶ್ಚರ್ಯ ಎನ್ನುವುದನ್ನು 'ಇದೇನು ಚೋದ್ಯವೆಂದು ಕೇಳುವ ಬನ್ನಿ' ಎಂಬ ಸಂಕೇತಗಳು ಕ್ರಮವಾಗಿ ಸೂಚಿಸುತ್ತವೆ.

ಟೀಕೆಯಲ್ಲಿ ಮೊದಲು 'ಭಕ್ತಿ'ಯನ್ನು, ಬಳಿಕ 'ಶರಣ'ನನ್ನು 'ಆನೆ'ಯೆಂದಿರುವ ವ್ಯತ್ಯಾಸವನ್ನು ಗಮನಿಸಬೇಕು.

ಬಹುರೂಪಿ ಚೌಡಯ್ಯನ ವಚನ

ಒಂದಱಿಲ್ಲಿ ಬಂದು ನಾಲ್ಕಱಿಲ್ಲಿ ಆಡಿ। ಒಂದಱಿಲ್ಲಿ ನಡೆದು ಮೂಱಱಿಲ್ಲಿ ಕೂಡಿ।
ಎಂಟಱಿಲ್ಲಿ ಕಂಟಕವಾಯಿತ್ತು। ರೇಕಣ್ಣಪ್ರಿಯ ನಾಗಿನಾಥನಲ್ಲಿ ॥ ೪ ॥

ಅನಾದಿ ಪರಶಿವತತ್ತ್ವದಿಂದ ಚಿತ್ಸ್ವರೂಪನಾದ ಶರಣ ಉದಯಿಸಿದನೆಂಬುದನ್ನು 'ಒಂದಱಿಲ್ಲಿ ಬಂದು' ಎಂಬುದು ಹೇಳುತ್ತದೆ. ಆ ಶರಣನು ಚತುರ್ವಿಧ ಭಕ್ತಿಯನ್ನು ಆಚರಿಸುವನೆಂಬುದನ್ನು 'ನಾಲ್ಕಱಿಲ್ಲಿ ಆಡಿ' ಎಂಬುದು ಹೇಳುತ್ತದೆ; ಅವನ ಶಿವಾದ್ವೈತ ಭಕ್ತಿಯ ಆಚರಣೆಯನ್ನು 'ಒಂದಱಿಲ್ಲಿ ನಡೆದು' ಎಂಬುದೂ, ಲಿಂಗತ್ರಯದಲ್ಲಿ ಅವನು ಬೆರಸಿದನೆಂಬುದನ್ನು 'ಮೂಱಱಿಲ್ಲಿ ಕೂಡಿ' ಎಂಬುದೂ ಹೇಳುತ್ತವೆ. ಆ ಶರಣ ಅಷ್ಟವಿಧ ಭಕ್ತಿಗಳನ್ನು ಆಚರಿಸಿದ್ದರಿಂದ ತಾನೆಂಬ ಭಾವನಡಗಿ ಲಿಂಗದಲ್ಲಿ ಸಮರಸತೆ ಪಡೆದನೆಂಬುದನ್ನು 'ಎಂಟಱಿಲ್ಲಿ ಕಂಟಕವಾಯಿತ್ತು' ಎಂಬುದು ಸೂಚಿಸುತ್ತದೆ.

ಸಂಖ್ಯೆಯ ಈ ಸಂಕೇತಗಳು ಒಗಟಿನ ಲಕ್ಷಣವನ್ನು ಸಹಜವಾಗಿಯೇ ಪ್ರತಿಬಿಂಬಿಸುವುದನ್ನು ಗಮನಿಸಬೇಕು.

ಸುಂಕದ ಬಂಕಣ್ಣನ ವಚನ

ಮುತ್ತು ಮೊಲೆಯ ನುಂಗಿತ್ತು। ಮೊಲೆ ಅಬಲೆಯ ನುಂಗಿತ್ತು।
ಅಬಲೆಯ ಬಲೆಯಲ್ಲಿ ಬಲವಂತರೆಲ್ಲರೂ ಸಿಕ್ಕಿದರು। ಸುಂಕಕ್ಕಡಹಿಲ್ಲ ಬಂಕೇಶ್ವರಲಿಂಗಾ ॥ ೫ ॥

ಪರಶಿವ ತತ್ತ್ವದಲ್ಲಿ ಬೆರಸಿ ಪರಬ್ರಹ್ಮಸ್ವರೂಪವಾಗಿರುವುದು ಮುಕ್ತಿ. ಆ ಮುಕ್ತಿಯನ್ನು ಕರಸ್ಥಲದ ಇಷ್ಟಲಿಂಗ ಪರಿಗ್ರಹಿಸಿತು ಎನ್ನುವುದನ್ನು 'ಮುತ್ತು ಮೊಲೆಯ ನುಂಗಿತ್ತು' ಎನ್ನುವ ಉಕ್ತಿ ಹೇಳುತ್ತದೆ. ಅಮೃತಕುಂಭದ ಸ್ವರೂಪದಂತಿರುವ ಇಷ್ಟಲಿಂಗವು ಚಿದ್ರೂಪವಾದ ಶರಣಸತಿಯನ್ನು ವ್ಯಾಪಿಸಿತ್ತು ಎನ್ನುವುದನ್ನು 'ಮೊಲೆ ಅಬಲೆಯ ನುಂಗಿತ್ತು' ಎನ್ನುವ ಉಕ್ತಿ ಹೇಳುತ್ತದೆ. ಶರಣಸತಿ ಆಚರಿಸುವ ಭಕ್ತಿಮಾರ್ಗವೇ ಬಲೆ. ವೀರಮಾಹೇಶ್ವರರು ನಿಷ್ಠೆಯಿಂದ ಆ ಮಾರ್ಗದಲ್ಲಿ ನಿರತರಾದರು ಎನ್ನುವುದನ್ನು 'ಅಬಲೆಯ ಬಲೆಯಲ್ಲಿ ಬಲವಂತರೆಲ್ಲರೂ ಸಿಕ್ಕಿದರು' ಎಂಬುದು ಹೇಳುತ್ತದೆ. ಸಕಲ ಪದಾರ್ಥಗಳನ್ನು ಲಿಂಗಾರ್ಪಿತ ಮಾಡಿದ ಮೇಲೆ ಬೇಱೆ ಅರ್ಪಣಕ್ಕೆ ಅವಕಾಶವಿಲ್ಲ ಎನ್ನುವುದನ್ನು 'ಸುಂಕಕ್ಕಡಹಿಲ್ಲ' ಎಂಬುದರಿಂದ ತಿಳಿಯಬಹುದು.

ಇಲ್ಲಿ 'ಮುಕ್ತಿ' ಎಂಬ ಧ್ಯೇಯ 'ಮುಕ್ತ' ಎಂಬ ಮಾತನ್ನು ನೆನಪಿಗೆ ತಂದು, ಅದು 'ಮುತ್ತು' ಎಂಬ ತದ್ಭವರೂಪವನ್ನು ಪಡೆದಿರುವುದು ಮಾತ್ರವಲ್ಲದೆ 'ಮುತ್ತು (ಎಂದರೆ ಮುತ್ತಿನ ಒಡವೆ) ವಕ್ಷಸ್ಥಲದಲ್ಲಿ ಶೋಭಿಸಬೇಕಾದುದು, ವಕ್ಷಸ್ಥಲವನ್ನೇ ನುಂಗಿಹಾಕಿತು' ಎಂಬ ಬೆಡಗಿನ ವಚನದ ರೀತಿಗೆ ತಕ್ಕ ವೈಪರೀತ್ಯಕಲ್ಪನೆಯನ್ನು ಕೂಡ ಪ್ರೇರಿಸಿರುವುದು ಸ್ವಾರಸ್ಯಕರವಾಗಿದೆ; ಜೊತೆಗೆ ಇಷ್ಟಲಿಂಗ–ಮೊಲೆ ಈ ಸಂಕೇತಕಲ್ಪನೆಯೂ ಮನೋಹರವಾದುದು. ಸಂಕೇತಗಳ ಹಿಂದಿನ ಆಶಯ ತಿಳಿದಾಗ ವಚನದ ಕಾವ್ಯತ್ವ ಜಗ್ಗನೆ ದೀಪಹೊತ್ತಿದಂತೆ ಬೆಳಗುವುದು. ಶಬ್ದಶಯ್ಯೆಯಲ್ಲಿ ಪ್ರಾಸಾನುಪ್ರಾಸಗಳ ಚೆಲುವು ಅರ್ಥಗುಣವನ್ನು ಬೆಳಸುವಲ್ಲಿ ತಾನೂ ಸಹಕಾರಿಯಾಗಿದೆ, ಇಲ್ಲಿ.

ಪ್ರಭುದೇವರ ವಚನ

ಹುಟ್ಟುಬಂಜೆಯ ಮಗನೊಬ್ಬ ಈನದೆಮ್ಮೆಯ ಗಿಣ್ಣ ಬೇಡಿದನು
ಕೊಂಬಿಲ್ಲದ ಮರನನೇಱಿ ಹೊಟ್ಟೆತುಂಬ ಹಣ್ಣ ಮೆಲಿದನು
ಗುಹೇಶ್ವರ ಗುಹೇಶ್ವರಾ ಇಳಿ ಇಳಿ ಎಂದೊಡೆ ಅಳುತ್ತೈದಾನೆ ॥ ೮ ॥

ಸಿಂಗಳದ ಸಿದ್ಧಬಸವರಾಜನ ಟೀಕೆಯನ್ನೇ ಎತ್ತಿ ಬರೆಯಬಹುದು: ''ಜನನ ಕರ್ಮಗಳಿಲ್ಲದ ಚಿದಂಶೀಭೂತನಾಪಾತ್ಮನು ನಿಜವಂ ಮಱೆದು ಜೀವಭಾವಭ್ರಾಂತಿಯಿಂ ಜ್ಞಾನೋತ್ಪತ್ತಿಯಿಲ್ಲದ ಮಾಯಾಸುಖವನಿಚ್ಛೈಸುತ್ತಿರಲದೀಗ 'ಹುಟ್ಟುಬಂಜೆಯ ಮಗನೊಬ್ಬ ಈನದೆಮ್ಮೆಯ ಗಿಣ್ಣ ಬೇಡಿದನು' ಎಂಬ ಶಬ್ದಕ್ಕರ್ಥ.

ಇಂತು ಮಾಯಾಸುಖವನಿಚ್ಛೈಸುತ್ತಿರ್ದ ಜೀವನು ಕೊಂಬಿಲ್ಲದ ಮರನೆಂದೊಡೆ, ತಾಳಮರ ಅಂತಪ್ಪ ಮರದ ಗುಣಧರ್ಮವನುಳ್ಳ ದೇಹವೆಂಬ ವೃಕ್ಷವನಾಶ್ರಯಿಸಿ ತತ್ಕರ್ಮಫಲಂಗಳನನುಭವಿಸುತ್ತಿರಲದೀಗ 'ಕೊಂಬಿಲ್ಲದ ಮರನನೇಱಿ ಹೊಟ್ಟೆತುಂಬ ಹಣ್ಣ ಮೆಲಿದನು' ಎಂಬ ಶಬ್ದಕ್ಕರ್ಥ.

ಇಂತೀ ದೇಹಸುಖಂಗಳ ಮಚ್ಚಿ ಬಿಡಲಾಱದೆ ಸಂಸಾರ ದುಃಖಕ್ಕೊಳಗಾಗಿ ಮಱುಗುತ್ತಿರ್ದ ಜೀವನೆಂಬುದೀಗ 'ಗುಹೇಶ್ವರ ಗುಹೇಶ್ವರಾ ಇಳಿ ಇಳಿ ಎಂದೊಡೆ ಅಳುತ್ತೈದಾನೆ' ಎಂಬ ಶಬ್ದಕ್ಕರ್ಥ.''

ನೂರಾರು ಬೆಡಗಿನ ವಚನಗಳಲ್ಲಿ ೬ ವಚನಗಳನ್ನು ಮಾತ್ರ ಇಲ್ಲಿ ಉದ್ಧರಿಸಿದೆ. ಅವುಗಳ ಭಾಷೆ ಶೈಲಿಗಳಲ್ಲಿ ರಚನೆಯ ದೀರ್ಘತೆ ಹ್ರಸ್ವತೆಗಳಲ್ಲಿ, ಮಾದರಿಗಳಲ್ಲಿ, ಎಷ್ಟೋ ವೈವಿಧ್ಯ ವೈಚಿತ್ರ್ಯಗಳನ್ನು ನಾವು ಮನಗಾಣಬಹುದಾಗಿದೆ.

ಬೆಡಗು ವಚನಪದ್ಧತಿಗೆ ಮಾತ್ರ ಮೀಸಲಾಗಿದ್ದಿರಲಾರದು. ಬೇರೆ ರೀತಿಯ ಸಾಹಿತ್ಯರಚನೆಗಳಿಗೆ ಸಹ ಅನ್ವಯಿಸುತ್ತಿದ್ದಿರಬೇಕು. ಸೇವುಣ ದೊರೆಗಳಾದ ಭಿಲ್ಲಮ ಹಾಗೂ ಜೈತುಗಿಯ ಕಾಲದಲ್ಲಿದ್ದ ಸೋಮನಾಥ ಪಂಡಿತನೆಂಬ ಶಾಸನಕವಿ (೧೧೯೦) ತನ್ನನ್ನು ''ಸಾಸನವ ಪೇಳ್ದ ಬೆಡಗಿನ ಸೋಮನಾಥಪಂಡಿತರ್ಗೆ....'' ಎಂಬುದಾಗಿಯೂ ''ಖ್ಯಾತಂ ಬೆಡಗಿನ ಸೋಮಂ ಸಾತಿಶಯೋಕ್ತಿಯೊಳೆ ಪೇಳ್ದನೆನೆ ಮೆಚ್ಚದರಾರ್'' ಎಂಬುದಾಗಿಯೂ ತಾನು ಬರೆದ ಶಾಸನಗಳಲ್ಲಿ ಹೇಳಿಕೊಂಡಿದ್ದಾನೆ. ಇಲ್ಲಿ 'ಬೆಡಗಿನ' ಎಂಬ ವಿಶೇಷಣದ ಅರ್ಥ ಈ ದೃಷ್ಟಿಯಿಂದ ಪರಿಶೀಲಿಸತಕ್ಕುದಾಗಿದೆ.

ಮುಂಡಿಗೆಯ ಕೀರ್ತನೆಗಳು

'ಬೆಡಗಿನ ವಚನಗಳು' ಎಂಬಂತೆಯೇ 'ಬೆಡಗಿನ ಕೀರ್ತನೆಗಳು' ಎಂದು ಹೇಳಬಹುದಾದ ಕೆಲವು ರಚನೆಗಳುಂಟು. ಹೀಗೆ ಹೇಳಲು ವಸ್ತುಸಾದೃಶ್ಯ ಮಾತ್ರವೇ ಕಾರಣವಲ್ಲ, ''ಬೆಡಗ ಬಲ್ಲರೆ ಪೇಳಿ ಕನಕದಾಸ ಎನ್ನೊಡೆಯಾದಿಕೇಶವ ಬಲ್ಲನೀ ಬೆಡಗ॥'' (೧೫೮), ''ಭಾಗವತರ ಬೆಡಗಿದು ಬೆಳುದಿಂಗಳಾಯಿತಮ್ಮ'' (೧೬೬) ಎನ್ನುವಂತಹ ಕೀರ್ತನೆಗಳೊಳಗಿನ ಸಾಕ್ಷ್ಯಗಳೂ ಸಹಾಯಕಕಾರಣಗಳಾಗಿವೆ. ಇಲ್ಲಿ ಬಳಸಿದ ಒಂದು ಸಂಕಲನದಲ್ಲಿ ೯೩ ರಿಂದ ೧೦೦, ೧೫೮ ರಿಂದ ೧೬೬ರವರೆಗೆ ಇಂತಹ ರಚನೆಗಳಿವೆ. ಕೆಲವು ಬೇರೆ ವರ್ಗಗಳಲ್ಲಿ ಸೇರುವಂತಹವನ್ನು ಬಿಟ್ಟು ಉಳಿದ ಕೆಲವನ್ನು ಇಲ್ಲಿ ಪರಿಶೀಲನೆಗೆ ಎತ್ತಿಕೊಂಡಿದೆ.

ಈ ಕೀರ್ತನೆಗಳು ಪದ್ಯನಿಬದ್ಧವಾದವು ಎನ್ನುವುದರ ಹೊರತು, ಉಳಿದ ಲಕ್ಷಣಗಳಲ್ಲಿ ಬೆಡಗಿನ ವಚನಗಳನ್ನು ಹೋಲತಕ್ಕವು. ಇವುಗಳು ರಾಗ ತಾಳಗಳ ಕಟ್ಟಿಗೆ ಒಳಪಟ್ಟವು; ಪಲ್ಲವಿ ಸಹಿತವಾಗಿ ಎರಡಕ್ಕಿಂತ ಹೆಚ್ಚಿನ ನುಡಿಗಳಿಂದ ಕೂಡಿದವು. ನುಡಿಗಳು ಸಾಮಾನ್ಯವಾಗಿ ಚತುಷ್ಪದಿಗಳು; ವಿರಳವಾಗಿ ದ್ವಿಪದಿಗಳೂ ಉಂಟು. ಬೆಡಗಿನ ವಚನಗಳ ಹಾಗೆಯೇ ರೂಪಕಗಳು, ಸಂಕೇತಗಳು, ಪ್ರತಿಮೆಗಳ ಮೂಲಕ ತತ್ತ್ವಸ್ವರೂಪವನ್ನೂ ಅನುಭಾವದ ನಿಗೂಢತೆಯನ್ನೂ ಇವುಗಳಲ್ಲಿ ವ್ಯಕ್ತಮಾಡಿದೆ. ಶಬ್ದಗಳಲ್ಲಿ ಕ್ಲೇಶವಿಲ್ಲ; ಅವು ಹೊರಡಿಸುವ ಅರ್ಥದಲ್ಲಿಯೂ ಕ್ಲೇಶವಿಲ್ಲ. ಆದರೆ ಆ ಅರ್ಥ ಎಂದರೆ ವಾಚ್ಯಾರ್ಥ ಅಸಂಗತವೂ ಆಭಾಸಕರವೂ ಆದ ಅಭಿಪ್ರಾಯವನ್ನುಂಟುಮಾಡುವಂತಿರುವುದು ಏಕೆ, ಸಮುಚಿತವಾದ ವ್ಯಂಗ್ಯಾರ್ಥವಾವುದೂ ಧ್ವನಿಸುತ್ತಿಲ್ಲದಿರುವುದು ಏಕೆ ಎನ್ನುವುದೇ ಅರ್ಥವಾಗದಿರುವ ಸಂದರ್ಭ ಇಲ್ಲಿಯದು. ಇದೇ ಇಲ್ಲಿಯ ಬೆಡಗು, ಬೆರಗು. ವಾಕ್ಯಾರ್ಥವು ಸಂಗತವೂ ವಿಹಿತವೂ ಆದ ಅಭಿಪ್ರಾಯವನ್ನು ಕೊಡಬೇಕಾದರೆ ಏನು ಮಾಡಬೇಕು? ಶಬ್ದವೂ ಅದರ ವಾಚ್ಯಾರ್ಥವೂ ತಮ್ಮ ಒಡಲಲ್ಲಿ, ಬೇರಾವುದೋ ಉದ್ದೇಶಿತವೂ ಉಪಯುಕ್ತವೂ ಆದ ಅರ್ಥ ಧ್ವನಿಗಳನ್ನು ಹುದುಗಿಸಿಕೊಂಡಿರುವುದನ್ನು ಗುರುತಿಸಬೇಕಾಗುತ್ತದೆ. ಆಗ ನಮ್ಮ ಒಳಗಣ್ಣು ಆ ಒಳಪದರವನ್ನು ಹೊಕ್ಕು ಅವನ್ನು ಹೊರಗೆಳೆಯಬೇಕಾಗುತ್ತದೆ. ನಿಗೂಢವಾದ ಅರ್ಥವನ್ನು ಹುದುಗಿಸಿಟ್ಟ ಇಲ್ಲಿಯ ಶಬ್ದಗಳಿಗೆ ಹಾಗೂ ಉಕ್ತಿಗಳಿಗೆ ಪೂರ್ವಸಿದ್ಧವಾದ ಅರ್ಥಗಳೂ ಆಶಯಗಳೂ ಇದ್ದು, ಅವು ವಿಶಿಷ್ಟಾನುಭವದ ದ್ಯೋತಕಗಳೆಂದೂ ವಿಶಿಷ್ಟಾರ್ಥಬೋಧಕಗಳೆಂದೂ ಶಾಸ್ತ್ರಜ್ಞಾನದ, ಪರಂಪರೆಯ ಪರಿಚಯವಿರುವವರು ಮಾತ್ರವೇ ಅವನ್ನು ತಿಳಿಸ

ತಕ್ಕವರೆಂದೂ ವಿದ್ವಾಂಸರು ಭಾವಿಸಿದ್ದಾರೆ. ಇವು ಬೌದ್ಧಿಕ ಚಮತ್ಕಾರವನ್ನು ಮೆರೆಯುವಂತಹವು ಎನ್ನುವುದರಲ್ಲಿ ಸಂಶಯವಿಲ್ಲ.

ಕೆಲವು ನಿದರ್ಶನಗಳನ್ನು ಈಗ ನೋಡಬಹುದು :

ಕನಕದಾಸರ ರಚನೆಗಳಲ್ಲಿ :

ಎಂದೆಂದು ಇಂಥ ಚೋದ್ಯವ ಕಂಡಿದ್ದಿಲ್ಲವೊ ॥ ಪ ॥
ಅಂಗಡಿಬೀದಿಯೊಳೊಂದು ಆಕಳ ಕರು ನುಂಗಿತು
ಲಂಘಿಸುವ ಹುಲಿಯು ಕಂಡ ನರಿಯು ನುಂಗಿತು ॥ ೧ ॥
ಹುತ್ತದೊಳಾಡುವ ಸರ್ಪ ಮತ್ತಗಜವ ನುಂಗಿತು
ಉತ್ತರದಿಶೆಯೊಳು ಬೆಳುದಿಂಗಳಾಯಿತಮ್ಮ ॥ ೨ ॥
ಯೋಗಮಾರ್ಗಿ ಕಾಗಿನೆಲೆಯಾದಿಕೇಶವರಾಯ
ಭಾಗವತರ ಬೆಡಗಿದು ಬೆಳುದಿಂಗಳಾಯಿತಮ್ಮ ॥ ೩ ॥ (೧೬೬)

ಆಕಳು ಎಂದರೆ ಜೀವ, ಕರು ಎಂದರೆ ಕುಂಡಲಾಗ್ನಿಯ ಅನ್ನ ತೃಪ್ತಿ; ಸರ್ಪ ಎಂದರೆ ಕುಂಡಲಿನಿ; ಆನೆ ಎಂದರೆ ಅಹಂಕಾರ ಅಥವಾ ಮದ; ಉತ್ತರ ದಿಶೆಯೆಂದರೆ ಅಪರ ವಯಸ್ಸು; ಬೆಳುದಿಂಗಳು ಎಂದರೆ ಜ್ಞಾನೋದಯ.

ಲಟಪಟ ನಾ ಸಟೆಯಾಡುವೆನಲ್ಲ । ವಿಠಲನ ನಾಮ ಮರೆತು ಪೋದೆನಲ್ಲ ॥ ಪ ॥
ಶೇಷಗಿರಿಯ ಮೇಲೆ ಸವುತೆಯ ಬಿತ್ತಿ । ದೇವಗಿರಿಯ ಮೇಲೆ ಅವತಾರ [ವೆತ್ತಿ?] ।
ಹಾಳೂರಿನೊಳಗೊಬ್ಬ ಕುಂಬಾರ ಸತ್ತ । ಗೋಕರ್ಣದೊಳಗೊಬ್ಬ ಪರದೇಶಿ ಅತ್ತ ॥ ೧ ॥
ನಾ ಸಮಯದಿ ಮೂರು ರಾಯರ ಕಂಡೆ । ಕುಪ್ಪುಸ ತೊಟ್ಟ ಕೋಳಿಯ ಕಂಡೆ ।
ಬೆಳ್ಳಕ್ಕಿ ಬೆರಣಿಯ ಮಾಳ್ಪುದ ಕಂಡೆ । ನರಿ ಸೂಳೆಗೆಯ್ವುದ ಕಣ್ಣಾರೆ ಕಂಡೆ ॥ ೨ ॥
ನುಸಿಯೊಂದು ರೊಟ್ಟಿಯ ಸುಡುವುದ ಕಂಡೆ । ಆಡೊಂದು ಮದ್ದಳೆ ಬಡಿವುದ ಕಂಡೆ ।
ಕಪ್ಪೆ ತತ್ಥೈಯೆಂದು ಕುಣಿವುದ ಕಂಡೆ । ಬಾಡದಾದಿಕೇಶವನ ಕಣ್ಣಾರೆ ಕಂಡೆ ॥ ೩ ॥

ಇದರ ಬೆಡಗಿನ ಅರ್ಥವೇನೋ ತಿಳಿಯದು. ಇದೇ ಬಗೆಯವು ೧೫೮, ೧೬೦, ೧೬೨, ೧೬೫ ಈ ಸಂಖ್ಯೆಯವು.

ಲೌಕಿಕ ವಿಷಯವನ್ನು ಕುರಿತು ಸಹ ಬೆಡಗಿನ ವಚನ ರಚಿತವಾಗಬಹುದು ಎನ್ನುವುದಕ್ಕೆ ಒಂದು ಉದಾಹರಣೆ :

ಮರ ನುಂಗುವ ಪಕ್ಷಿ ಮನೆಯೊಳಗೆ ಬಂದಿದೆ– ಇದರ । ಕುರುಹ ಪೇಳಿ ಕುಳಿತಿದ್ದ ಜನರು ॥ ಪ ॥
ಒಂಟಿಕೊಂಬಿನ ಪಕ್ಷಿ ಒಡಲೊಳಗೆ ಕರುಳಿಲ್ಲ । ಗಂಟಲು ಮೂರುಂಟು ಮೂಗಿಲ್ಲವು ।
ಕುಂಟಮನುಜನಂತೆ ಕುಳಿತಿಹುದು ಮನೆಯೊಳಗೆ । ಎಂಟುಹತ್ತರ ಅನ್ನವನು ಭಕ್ಷಿಸುವುದು ॥
ನುಡಿಯುತಲುಂಬುದು ನಡುನೆತ್ತಿಯಲಿ ಬಾಯಿ
ಕಡುನಾದದ ಗಾಯನ ಮಾಡುತಿಹುದು
ಅಡವಿಯೊಳಗೆ ಹುಟ್ಟುವುದು ಅಗಲಿ ಎರಡಾಗುವುದು
ಬಡತನವು ಬಂದರೆ ಬಹಳ ರಕ್ಷಿಪುದು ॥ ೨ ॥
ಕಂಜವದನೆಯರ ಕರದಿ ನಲಿದಾಡುವುದು । ಎಂಜಲ ತಿನಿಸುವುದು ಮೂಜಗಕೆ ।
ರಂಜಿಪ ಮಣಿಯ ಸಿಂಹಾಸನದ ಮೇಲಿದ್ದ । ಕುಂಜರವರದಾದಿಕೇಶವ ತಾ ಬಲ್ಲ ॥ ೩ ॥

ಈ ಕೀರ್ತನೆ ಬೀಸುವ ಕಲ್ಲನ್ನು ಕುರಿತದ್ದು; ಇದು ತಿಳಿದ ಮೇಲೆ ಉಳಿದ ವಿವರಣೆ ಸುಲಭವಾಗಿ ಊಹಿಸಬಹುದಾದ್ದು.

ಶಿಶುನಾಳ ಶರೀಫರ ರಚನೆಗಳಲ್ಲಿ :

ಶಿಶುನಾಳ ಶರೀಫರ ಪದಗಳಲ್ಲಿ ಕನಕದಾಸರ ಮುಂಡಿಗೆಯ ಕೀರ್ತನೆಗಳನ್ನು ಹೋಲತಕ್ಕ ರಚನೆಗಳು

ಅಲ್ಲಲ್ಲಿ ಕಂಡುಬರುತ್ತವೆ. ಇವನ್ನು ಬೇಕಾದರೆ ಮುಂಡಿಗೆಯ ಪದಗಳೆನ್ನಬಹುದು. ಎರಡು ಉದಾಹರಣೆಗಳನ್ನಿಲ್ಲಿ ಉದ್ಧರಿಸಬಹುದು :

ನನ್ನೊಳಗ ನಾ ತಿಳಕೊಂಡೆ । ನನಗೆ ಬೇಕಾದ ಗಂಡನ್ನ ಮಾಡಿಕೊಂಡೆ ॥ ಪ ॥
ಅಜ್ಞಾ ಪ್ರಕಾರ ನಡಕೊಂಡೆ । ನಾ ಎಲ್ಲಾರ ಹಂಗೊಂದು ಹರಕೊಂಡೆ ॥ ಅ.ಪ ॥

ಆರು ಮಕ್ಕಳನಡುವಿಗಟ್ಟಿ । ಮೂರು ಮಕ್ಕಳ ಬಿಟ್ಟಿಗೊಟ್ಟಿ ।
ಇವನ ಮೇಲೆ ಮನವಿಟ್ಟಿ । ಎನ್ನ ಬದುಕು ಬಾಳಿವೆಲ್ಲಾ ಬಿಟ್ಟಿಗೊಟ್ಟಿ ॥ ೧ ॥

ಒಂದನಾಡಿದರೆ ಕಡಿಮೆಯೆಂದೆ । ಮತ್ತೆರಡನಾಡಿದರೆ ಹೆಚ್ಚೆಂದೆ ।
ಬೆಡಗ ಮಾತಿದು ನಿಜವೈತೆಂದೆ । ಇದು ಸುಜ್ಞಾನಿಗಳಿಗೇ ತಿಳಿತೆಂದೆ ॥ ೨ ॥

ಶಿವಶಿವಾಯೆಂಬ ಹಾದಿ ಬೇಡಿಕೊಂಡೆ । ಗುರೂಪದೇಶವ ಪಡಕೊಂಡೆ ।
ಈ ಭವಕೆ ಬಾರದಂತೆ ಮಾಡಿಕೊಂಡೆ । ಗುರುಗೋವಿಂದನ ಪಾದ ಹಿಡಕೊಂಡೆ ॥ ೩ ॥

ಈ ಪದದಲ್ಲಿ 'ಬೆಡಗ ಮಾತು' ಎಂದು ಬಂದಿರುವುದನ್ನು ಗಮನಿಸಬೇಕು. 'ಬೇಕಾದ ಗಂಡ' ಎಂದರೆ ಉಪಾಸನಾದೈವವೆಂದೂ, 'ಆರು ಮಕ್ಕಳು' ಎಂದರೆ ಅರಿಷಡ್ವರ್ಗವೆಂದೂ, 'ಮೂರು ಮಕ್ಕಳು' ಎಂದರೆ ತಾಪತ್ರಯಗಳೆಂದೂ, 'ಒಂದು' 'ಎರಡು' ಎಂಬವು ಅದ್ವೈತ ದ್ವೈತಗಳು ಎಂದೂ ಮುಂತಾಗಿ ಅರ್ಥವಾಗುವಂತೆ ತೋರುತ್ತದೆ.

ಕೋಡಗನ ಕೋಳಿ ನುಂಗಿತ । ನೋಡವ್ವ ತಂಗಿ ॥ ಪ ॥

ಆಡು ಆನೆಯ ನುಂಗಿ । ಗೋಡೆ ಸುಣ್ಣವ ನುಂಗಿ ।
ಆಡಲು ಬಂದ ಪಾತರದವಳ ಮದ್ದಲಿ ನುಂಗಿತ ॥ ೧ ॥

ಒಳ್ಳು ಒನಕಿಯ ನುಂಗಿ । ಬೀಸುಕಲ್ಲು ಗೂಟವ ನುಂಗಿ ।
ಕುಟ್ಟಲಿಕೆ ಬಂದ ಮುದುಕಿಯ ನೊಣವು ನುಂಗಿತ ॥ ೨ ॥

ಹಗ್ಗ ಮಗ್ಗವ ನುಂಗಿ । ಮಗ್ಗವ ಲಾಳಿ ನುಂಗಿ ।
ಮಗ್ಗದಾಗಿರುವ ಅಣ್ಣನ ಕುಣಿಯು ನುಂಗಿತ ॥ ೩ ॥

ಎತ್ತು ಜತ್ತಗಿ ನುಂಗಿ । ಬತ್ತ ಬಾನವ ನುಂಗಿ ।
ಮುಕ್ಕಟ ತಿರುವೊ ಅಣ್ಣನ ಮೇಳಿ ನುಂಗಿತ ॥ ೪ ॥

ಗುಡ್ಡ ಗುಹ್ವರ ನುಂಗಿ । ಗಹ್ವರ ಇರಿವೆ ನುಂಗಿ ।
ಗುರುಗೋವಿಂದನ ಪಾದ ಆತ್ಮ ನುಂಗಿತ ॥ ೫ ॥ (೨೫೩)

ಈ ಬೆಡಗಿನ ಆಶಯವೇನೋ ವಿಚಾರಮಾಡಬೇಕಾಗಿದೆ. ಗುರುವಿನ ಕೃಪೆಗೆ ಶಿಷ್ಯನು ಪಾತ್ರನಾಗಿ, ಅವನ ಸತ್ವಾತಿಶಯವನ್ನು ತಾನು ಒಳಕೊಂಡು ಮೀರಿ ಬೆಳೆದುದನ್ನು ಇಲ್ಲಿ ಸೂಚಿಸಲಾಗಿದೆಯೋ ಏನೋ ?

ಸರ್ವಜ್ಞನ ತ್ರಿಪದಿಗಳ ಒಗಟುಗಳು

ಸರ್ವಜ್ಞನ (ಸು. ೧೬೦೦) ತ್ರಿಪದಿಗಳಲ್ಲಿ ಒಗಟುಗಳು ಒಂದು ಗುಂಪು. ಇವುಗಳಲ್ಲಿ ಲಭ್ಯವಿದ್ದಷ್ಟನ್ನು 'ಬೆಡಗಿನ ಪದ್ಧತಿ' ಎಂಬ ವಿಭಾಗದ ಕೆಳಗೆ ಚನ್ನಪ್ಪ ಉತ್ತಂಗಿಯವರು ಸಂಗ್ರಹಿಸಿ, ತಮ್ಮ 'ಸರ್ವಜ್ಞವಚನಗಳು' ಸಂಕಲನದಲ್ಲಿ (೧೯೨೭) ಪ್ರಕಟಿಸಿದ್ದಾರೆ. ಹೀಗೆ ಪ್ರಕಟವಾಗಿರುವ ಒಗಟುಗಳ ಸಂಖ್ಯೆ ೭೦. ಅವರು ಇವುಗಳಿಗೆ ಕ್ವಚಿತ್ತಾಗಿ ಪಾಠಭೇದಗಳನ್ನು ಸೂಚಿಸಿದ್ದಾರೆ; ಟೀಕೆಯ ಭಾಗದಲ್ಲಿ, ಸಾಧ್ಯವಿದ್ದವುಗಳಿಗೆ ವಿವರಣೆ, ಉತ್ತರಗಳನ್ನೂ ಒದಗಿಸಿದ್ದಾರೆ.

ಈ ಒಗಟಿನ ತ್ರಿಪದಿಗಳ ಸಂಖ್ಯೆ ಎಷ್ಟು ಎನ್ನುವುದನ್ನು ಗೊತ್ತುಮಾಡುವುದು ಕಷ್ಟ. ಸರ್ವಜ್ಞನ ತ್ರಿಪದಿಗಳ ಸಂಖ್ಯೆಯಲ್ಲಿ ಹೆಚ್ಚು ಕಡಮೆಗಳಿರಬಹುದು; ಕರ್ತೃತ್ವದ ಹಾಗೂ ಪ್ರಕ್ಷಿಪ್ತವಾದ ತ್ರಿಪದಿಗಳ ವಿಚಾರದಲ್ಲಿ ಅನೇಕ ಸಮಸ್ಯೆಗಳಿರಬಹುದು; ಛಂದಸ್ಸಿನ ಸಂಬಂಧವಾದ ಸಂದೇಹಗಳೂ ಇರಬಹುದು. ಇವು ಇಲ್ಲಿ

ಅಷ್ಟು ಪ್ರಸ್ತುತವಲ್ಲ. ಪ್ರಹೇಳಿಕೆಗಳಾಗಿ ಇವುಗಳ ಸ್ವರೂಪ, ಇತಿಮಿತಿ ಹಾಗೂ ವೈಶಿಷ್ಟ್ಯಗಳು ಇವನ್ನು ಪ್ರಾತಿನಿಧಿಕವಾಗಿ ವಿವೇಚಿಸುವುದು ಇಲ್ಲಿಯ ಉದ್ದೇಶವಾದ್ದರಿಂದ, ಸರ್ವಜ್ಞನ ಹೆಸರಿನಲ್ಲಿ ಸಂಗ್ರಹಿತವಾಗಿರುವ ಈ ಬಗೆಯ ಎಲ್ಲ ರಚನೆಗಳನ್ನೂ ಸಾಮಾನ್ಯವಾಗಿ ಪರಿಶೀಲನೆಗೆ ಒಪ್ಪಿಕೊಂಡಿದೆ.

ಸರ್ವಜ್ಞನವು ಎನ್ನುವ ಒಗಟಿನ ತ್ರಿಪದಿಗಳನ್ನು ಇಲ್ಲಿ ೮ ಗುಂಪುಗಳಾಗಿ ವಿಭಜಿಸಬಹುದಾಗಿದೆ : ೧. ಮಾತಿನ ಬೆಡಗಿಲ್ಲದೆ ಸರಳವಾಗಿ ಉದ್ದೇಶಿತ ವ್ಯಕ್ತಿ, ವಸ್ತು ಅಥವಾ ಸಂಗತಿಯನ್ನು ಅವ್ಯಕ್ತವಾಗಿರಿಸುವುದು. ೨. ಒಂದು ವಾಕ್ಯದಲ್ಲಿಯೇ ಒಗಟಿನ ಆಶಯ ಗರ್ಭೀಕೃತವಾಗಿರುವುದು. ೩. ನಮಗೆ ಪರಿಚಿತವಾದ ಅಥವಾ ಯೋಚಿಸಿದರೆ ಹೊಳೆಯಬಹುದಾದ ವ್ಯಕ್ತಿ, ವಸ್ತು ಅಥವಾ ಸಂಗತಿಯ ಸಾಮಾನ್ಯ ಅಥವಾ ವಿಶೇಷ ಲಕ್ಷಣಗಳನ್ನೋ ವಿವರಣೆಯನ್ನೋ ಸೂಚಿಸಿ, ಕೂಡಲೇ ಅವನ್ನು ನಿರಾಕರಿಸುವುದರ ಮೂಲಕ ನೈಜ ಅಥವಾ ಉದ್ದೇಶಿತ ವ್ಯಕ್ತಿ, ವಸ್ತು ಅಥವಾ ಸಂಗತಿಯನ್ನು ಅವ್ಯಕ್ತವಾಗಿರಿಸುವುದು. ೪. ಅನ್ಯವ್ಯಕ್ತಿ, ವಸ್ತು ಅಥವಾ ಸಂಗತಿಯ ಧರ್ಮವನ್ನೋ ಲಕ್ಷಣಗಳನ್ನೋ ಸಾದೃಶ್ಯವುಂಟೆಂಬ ಕಾರಣದಿಂದ ಆರೋಪಿಸಿ, ಇತ್ಯಾತ್ಮಕವಾಗಿಯೇ ನೈಜ ಅಥವಾ ಉದ್ದೇಶಿತ ವ್ಯಕ್ತಿ, ವಸ್ತು ಅಥವಾ ಸಂಗತಿಯನ್ನು ಅವ್ಯಕ್ತವಾಗಿರಿಸುವುದು. ೫. ಭಾವನೆಗೆ ಬಣ್ಣ ಕೊಟ್ಟು, ಭಾವನೆಯಿಂದ ಮಾತ್ರ ಸಾದೃಶ್ಯವನ್ನು ಸಾಧಿಸಬಹುದಾದ ಬೆಡಗಿನಂತಹ ಮಾತುಗಳನ್ನು ಬಳಸಿ ನೈಜ ಅಥವಾ ಉದ್ದೇಶಿತ ವ್ಯಕ್ತಿ, ವಸ್ತು ಅಥವಾ ಸಂಗತಿಯನ್ನು ಅವ್ಯಕ್ತವಾಗಿರಿಸುವುದು. ೬. ಅಸಂಭಾವ್ಯವೆಂದು ತೋರುವುದು ಮಾತ್ರವಲ್ಲದೆ, ಅನುಚಿತವೂ ಅಸಂಗತವೂ ಆಗಿ ತೋರುವ ಸಂಗತಿ ಸಂದರ್ಭಗಳಿಂದ, ಬೆಡಗಿನ ಭಣಿತಿಯಿಂದಲೇ ನೈಜ ಅಥವಾ ಉದ್ದೇಶಿತ ವ್ಯಕ್ತಿ, ವಸ್ತು ಅಥವಾ ಸಂಗತಿಯನ್ನು ಅವ್ಯಕ್ತವಾಗಿರಿಸುವುದು. ೭. ಸಂಖ್ಯಾತ್ಮಕವಾದವು ೮. ಇತರ ರೀತಿಯ ರಚನೆಗಳು.

೧. ಸರಳ ನಿರೂಪಣೆ

ಮುಂಗೈಯೊಳಾಡುವುದು ಹಿಂಗುವುದು ಹಿಗ್ಗುವುದು
ಸಿಂಗಿಯಲಿ ಸೀಳಿಬಿಡುತಿಹುದು ಆ ವಿಗಡ
ಸಂಗವನು ನೋಡು ಸರ್ವಜ್ಞ ।। (೧೮೮೮)

ಉತ್ತರ : ಗಿಣಿ; ವಿವರಣೆಯ ಅಗತ್ಯವೇ ಬೀಳುವುದಿಲ್ಲ (ಸಿಂಗಿ= ಕೊಕ್ಕು).

ಅಡವಿಯಲಿ ಹುಟ್ಟಿಹುದು ಗಿಡಮರನು ಆಗಿಹುದು
ಕಡಿದರೆ ಕಂಪ ಕೊಡುತಿಹುದು ಇದನೊಡೆದು
ತಡೆಯದೇ ಪೇಳಿ ಸರ್ವಜ್ಞ ।। (೧೯೦೮)

ಉತ್ತರ : ಗಂಧದ ಮರ; ವಿವರಣೆಯ ಅಗತ್ಯವೇ ಬೀಳುವುದಿಲ್ಲ.

೨. ಒಂದೇ ವಾಕ್ಯ

ಉರಿಬಂದು ಬೇಲಿಯನು ಹರಿದು ಹೊಕ್ಕುದ ಕಂಡೆ
ಅರಿದಿದು ಬಗೆಗೆ ಕವಿಕುಲದ ಶ್ರೀಪಶ್ರರುಗ
ಳಿಯುತಿದನು ಪೇಳಿ ಸರ್ವಜ್ಞ ।। (೧೮೬೧)

ಉತ್ತರ : ಸೂರ್ಯೋದಯದ ಕೆಂಪು ಮೂಡಿ, ನಿದ್ರಿಸುವಾಗ ಮುಚ್ಚಿದ ಕಣ್ಣುರೆಪ್ಪೆ ತೆರೆಯಿತು. ರೂಪಕವಾಗಿರುವ ಮೊದಲಪಾದದಲ್ಲಿ, ಅರುಣೋದಯದ ಹೊಂಗಾಂತಿ ಉರಿಯೆಂದೂ, ಮುಚ್ಚಿದ ಕಣ್ಣುರೆಪ್ಪೆಯೇ ಕಣ್ಣಿನ ಬೇಲಿಯೆಂದೂ ಕಲ್ಪಿಸಿದೆ. ಉಳಿದ ಮಾತುಗಳು ಪಾದಪೂರಣಕ್ಕೆ ಬಂದವು.

ಕಚ್ಚಿದರೆ ಕಚ್ಚುವುದು ಕಿಚ್ಚಲ್ಲ ಚೇಳಲ್ಲ
ಅಚ್ಚರಿಯಲ್ಲ ಅರಿದಲ್ಲ ಈ ಮಾತು
ನಿಶ್ಚಯಂ ಬಲ್ಲಿ ಸರ್ವಜ್ಞ ।। (೧೮೬೬)

ಉತ್ತರ : ಮೆಣಸಿನಕಾಯಿ; ಮೆಣಸಿನಕಾಯಿ ಕಡಿದರೆ ಬಾಯಿ ಉರಿಯುವುದು; ಆದರೆ ಆ ವಸ್ತು ಬೆಂಕಿಯಲ್ಲ,

ಚೇಳಲ್ಲ. ಮೊದಲ ಪಾದದಲ್ಲಿ 'ಕಚ್ಚು' ಶಬ್ದದ ಅರ್ಥಚ್ಛಾಯೆಯ ಭಿನ್ನತೆಯಿಂದ ಉದ್ದೇಶ ಸಾಧಿತವಾಗಿದೆ. ಉಳಿದ ಮಾತುಗಳು ಪಾದಪೂರಣಕ್ಕೆ ಬಂದವು.

೩. ನೇತ್ಯಾತ್ಮಕ ಸ್ವರೂಪ

ಕಡೆಗಪ್ಪು ನಡು ಬಿಳಿದು ಉಡುವ ವಸ್ತ್ರವದಲ್ಲ
ಬಿಡದೆ ನೀರುಂಟು ಮಡುವಲ್ಲ ಕವಿಗಳೇ
ಬೆಡಗು ಪೇಳುವುದು ಸರ್ವಜ್ಞ ॥ (೧೮೯೯)

ಉತ್ತರ: ಮೋಡ; ನೀಲಾಕಾಶದ ನಡುವೆ ಬಿಳಿಯ ಮೋಡ; ವಸ್ತ್ರದಂತೆ ಉಡಲು ಸಾಧ್ಯವಿಲ್ಲ. ಮೋಡ ದಟ್ಟೈಸಿದರೆ ನೀರು ತುಂಬಬಹುದು; ಮಡುವಲ್ಲ.

ಹಲ್ಲುಂಟು ಮೃಗವಲ್ಲ ಸೊಲ್ಲು ಸೋಜಿಗವಲ್ಲ
ಕೊಲ್ಲುವುದು ತನ್ನ ನಂಬಿದರ ಇದನರಿದು
ಬಲ್ಲವರು ಹೇಳಿ ಸರ್ವಜ್ಞ ॥ (೧೯೨೫)

ಉತ್ತರ: ಗರಗಸ; ಗರಗಸದ ಹಲ್ಲುಗಳು ಮರ ಕೊಯ್ಯುತ್ತವೆ; ಶಬ್ದ ಸಹಜ; ತನಗೆ ಅಂಟಿಕೊಂಡಿರುವ ಮರವನ್ನೇ ಅದು ಕೊಯ್ಯುತ್ತದೆ.

೪. ಇತ್ಯಾತ್ಮಕ ಸ್ವರೂಪ

ಕಾಲಿಲ್ಲದೇ ಹರಿಗು ತೋಳಿಲ್ಲದೆ ಹೊಱುಗು
ನಾಲಿಗಿಲ್ಲದೆಲೆ ಉಲಿವುದು ಕವಿಕುಲದ
ಮೇಲುಗಳು ಪೇಳಿ ಸರ್ವಜ್ಞ ॥ (೧೪೬೨)

ಉತ್ತರ: ಹೊಳೆ; ಕಾಲುಗಳಿಲ್ಲದೆ ನಡೆಯುವುದು, ತೋಳುಗಳಿಲ್ಲದೆ ತೆಪ್ಪ ದೋಣಿಗಳ ಮೂಲಕ ಜನರನ್ನೂ ವಸ್ತುಗಳನ್ನೂ ಸಾಗಿಸುವುದು, ನಾಲಿಗೆಯಿಲ್ಲದೆಯೇ ಮೊರೆಯುವುದು.

ನೆತ್ತಿಯಲಿ ಉಂಬುವುದು ಸುತ್ತಲೂ ಸುರಿಸುವುದು
ಎತ್ತಿದರೆ ಎರಡು ಹೋಳಹುದು ಕವಿಗಳಿದ
ಕುತ್ತರವ ಪೇಳಿ ಸರ್ವಜ್ಞ ॥ (೧೪೬೬)

ಉತ್ತರ: ಬೀಸುವ ಕಲ್ಲು; ನಡುವಣ ಬಾಯಿಯ ಭಾಗದಲ್ಲಿ ಧಾನ್ಯವನ್ನು ಹಾಕಲಾಗುವುದು. ಬೀಸಿದಾಗ ತರಿ, ಹಿಟ್ಟು ಕಲ್ಲಿನ ಸುತ್ತ ಸುರಿಯುವುದು. ಎತ್ತಿದರೆ ಎರಡು ಹೋಳಾಗುವುದು.

೫. ಭಾವನೆಗೆ ಪ್ರಾಶಸ್ತ್ಯ

ಕಲ್ಲರಳಿ ಹೂವಾಗಿ ಎಲ್ಲರಿಗೆ ಬೇಕಾಗಿ
ಮಲ್ಲಿಕಾರ್ಜುನನ ಶಿಖರಕ್ಕೆ ಬೆಳಕಾಗಿ
ಬಲ್ಲವರು ಹೇಳಿ ಸರ್ವಜ್ಞ ॥ (೧೪೫೯)

ಉತ್ತರ: ಸುಣ್ಣ; ಸುಣ್ಣಕಲ್ಲು ಕುದಿಸಿದಾಗ ಮೃದುಗೊಂಡು ಮನೆಮಾಡುಗಳನ್ನೂ ದೇವಾಲಯಗಳನ್ನೂ ತನ್ನ ಧವಳಪ್ರಭೆಯಿಂದ ಬೆಳಗುತ್ತದೆ (ಇದರ ಸರಳವಾದ ರೂಪ ''ಕಲ್ಲರಳಿ ಹೂವಾಯ್ತು । ಎಲ್ಲರಿಗೂ ಬೇಕಾಯ್ತು । ಮಲ್ಲಯ್ನ ಶಿಖರಕ್ಕೆ ಬೆಳಕಾಯ್ತು ॥'' ಎಂಬ ರೂಪದಲ್ಲಿ ಜನಪದ ಸಾಹಿತ್ಯದಲ್ಲಿಯೂ ಗೋಚರಿಸುತ್ತದೆ).

ಬಂದಿಹೆನು ನಾನೊಮ್ಮೆ ಬಂದು ಹೋಗುವೆನೊಮ್ಮೆ
ಬಂದೊಮ್ಮೆ ಹೋಗಿ ಬಾರೆನು ಕವಿಗಳಲಿ
ವಂದ್ಯರಿದ ಪೇಳಿ ಸರ್ವಜ್ಞ ॥ (೧೯೪೨)

ಉತ್ತರ: ಆತ್ಮನ ದೇಹಧಾರಣೆ; ದೇಹಧಾರಣೆ ಆಕಸ್ಮಿಕವಾದ್ದು. ಸಾವು ಬಂದಾಗ ಅದರ ಅಂತ್ಯವಾಗುತ್ತದೆ. ಆ ದೇಹ ಪುನರ್ಭವಿಸುವುದಿಲ್ಲ.

೬. ಅಸಂಗತವಾಗಿ ತೋರುವ ಬೆಡಗು ಮಾತಿನ ಲಕ್ಷ್ಯಗಳು

ಕೋಡಗವು ಕುದುರೆಯಲಿ ನೋಡನೋಡುತ ಹುಟ್ಟಿ
ಕಾಡಾನೆಗೆರಡು ಗಱಿ ಮೂಡಿ ಗಗನದಿಱಿ
ದಾಡುವುದ ಕಂಡೆ ಸರ್ವಜ್ಞ ॥ (೧೮೬೮)

ಉತ್ತರ : ಮೋಡ; ಅದು ತಳೆಯುವ ವಿವಿಧಾಕೃತಿಗಳು.

ಅರೆವ ಕಲ್ಲಿನ ಮೇಲೆ ಮರವು ಹುಟ್ಟಿದ ಕಂಡೆ
ಮರದ ಮೇಲೆರಡು ಕರ ಕಂಡೆ ವಾಸನೆಯು
ಬರುತಿಹದ ಕಂಡೆ ಸರ್ವಜ್ಞ ॥ (೧೮೬೯)

ಉತ್ತರ : ಅರೆಗಲ್ಲಿನ ಮೇಲೆ ಮರದ ಸಾಧನದಿಂದ ಸಂಬಾರ ಪದಾರ್ಥವನ್ನು ಅರೆಯುವುದು.

೭. ಇತರ

ಮಲ್ಲಿಗೆ ಹುಳಿಯಕ್ಕು ಕಲ್ಲಿಗೆ ಗಂಟಕ್ಕು
ಹಲ್ಲಿಗೆ ನೊಣನು ಸವಿಯಕ್ಕು ಕನ್ನಡದ
ಸೊಲ್ಲುಗಳ ನೋಡಿ ಸರ್ವಜ್ಞ ॥ (೧೮೬೪)

ಉತ್ತರ : ಮೇಲಿನ ಅರ್ಥ ಮಲ್ಲಿ (<ಮಲ್ಲೆ<ಮೊಲ್ಲೆ) ಹೂವಿಗೆ ಹುಳಿ ಆಗುತ್ತದೆ, ಬೆಣಚು ನೊರಜು ಮುಂತಾದ ಕಲ್ಲುಗಳಿಗೆ ಗಂಟು ಆಗುತ್ತದೆ, ಬಾಯೊಳಗಿನ ಹಲ್ಲುಗಳಿಗೆ ನೊಣ ರುಚಿಯಾಗಿರುತ್ತದೆ ಎಂಬ ರೀತಿಯಲ್ಲಿದೆ. ಆದರೆ ವಿವಕ್ಷಿತಾರ್ಥ ಇಲ್ಲಿ ಬೇರೆಯೇ ಇದೆ. ಮಣ್ಣಿನ ಸಣ್ಣ ಪಾತ್ರೆಯಲ್ಲಿ ಹುಳಿಪದಾರ್ಥಗಳನ್ನಿಟ್ಟರೂ ಕಿಲುಬುವುದಿಲ್ಲ (ಮಲ್ಲಿ< ಮಲ್ಲೆ; ಮಲ್ಲಿ + ಗೆ<ಮಲ್ಲೆ + ಗೆ), ನೂಲಿನಿಂದ ಹೆಣೆದು ಹೆಣಿಗೆಯ ಗಂಟುಗಳಿಂದ ಕಣ್ಣುಕಣ್ಣಾಗಿರುವ ಬಲೆಗೆ ಅಥವಾ ಬಲೆಚೀಲಕ್ಕೆ (=ಕಲ್ಲಿ) ಗಂಟುಗಳು ಇರುತ್ತವೆ, ಗೌಳಿಗೆ (=ಹಲ್ಲಿ) ನೊಣಗಳು ತಿನ್ನಲು ರುಚಿಯಾಗಿರುತ್ತವೆ ಎಂಬುದಾಗಿ ತಿಳಿಯುವುದೇ ಆ ವಿವಕ್ಷಿತಾರ್ಥ.

'ಮಲ್ಲಿ', 'ಕಲ್ಲಿ' ಮತ್ತು 'ಹಲ್ಲಿ' ಎಂಬ ರೂಪದ ಶಬ್ದಗಳು ಚತುರ್ಥೀವಿಭಕ್ತಿ ಕೂಡಿ ಉಂಟುಮಾಡಿದ ಭ್ರಾಂತಿಯಿದು. ಶಬ್ದ ಸ್ವರೂಪ ಸ್ಪಷ್ಟವಾದಾಗ ಅರ್ಥವೂ ಸ್ಪಷ್ಟವಾಯಿತು. ದಂಡಿಯ 'ಸಮಾಗತಾ' ಪ್ರಹೇಳಿಕೆಯ ಲಕ್ಷ್ಯವೆಂದು ಇದನ್ನು ಅಂಗೀಕರಿಸಬಹುದು.

ಹತ್ತುತಲೆ ಕೆಂಪು ಮತ್ತಾಱುತಲೆ ಕಪ್ಪು
ಹೆತ್ತವ್ವ ನೊಡಲನುರಿಸುವುದು ಕವಿಗಳಿದ
ರರ್ಥವನು ಪೇಳಿ ಸರ್ವಜ್ಞ ॥ (೧೮೮೫)

ಉತ್ತರ : ಮೇಲಿನ ಅರ್ಥ ''ಹತ್ತುತಲೆಗಳು ಕೆಂಪಾಗಿಯೂ ಆರು ತಲೆಗಳು ಕಪ್ಪಾಗಿಯೂ ಇದ್ದು, ತಾಯಿಯ ಹೊಟ್ಟೆಯುರಿಸುವುದು'' ಎಂದು. ಆದರೆ ವಿವಕ್ಷಿತಾರ್ಥವೇ ಬೇರೆ. ಬೆಂಕಿ ಹೊತ್ತಿಕೊಂಡಾಗ ಕೆಂಪಾಗಿರುತ್ತದೆ, ಆರಿಹೋದಾಗ ಅದು ಹೊತ್ತಿದ ಭಾಗವೆಲ್ಲ ಕಪ್ಪಾಗುತ್ತದೆ. ತಾನು ಹುಟ್ಟಿದ ಮರವನ್ನು ಇಲ್ಲವೆ ಒಲೆಗೂಡನ್ನು ಅದು ಸುಡುತ್ತದೆ. ಇದು ಬೆಂಕಿಯ ಸಹಜಲಕ್ಷಣ.

'ಹತ್ತುತಲೆ', 'ಆಱುತಲೆ' ಎಂಬ ಶಬ್ದರೂಪಗಳು ಉಂಟುಮಾಡಿದ ಭ್ರಾಂತಿಯಿದು. ಶಬ್ದಸ್ವರೂಪ ಸ್ಪಷ್ಟವಾದಾಗ ಅರ್ಥವೂ ಸ್ಪಷ್ಟವಾಯಿತು. ಇದೂ ದಂಡಿಯ 'ಸಮಾಗತಾ' ಪ್ರಹೇಳಿಕೆಯ ಲಕ್ಷ್ಯವಾಗಿ ಅಂಗೀಕೃತವಾಗಬಹುದಾದ್ದು.

ಪಾತಾಳಕಿಳಿಯುವುದು ಸೀತಳವ ತರುತಿಹುದು
ಭೂತಳದ ಮೇಲೆ ಇರುತಿಹುದಿದು ತಾನು
ಏತಱಿದು ಹೇಳಿ ಸರ್ವಜ್ಞ ॥ (೧೮೮೨)

ಉತ್ತರ: ಏತ; ಬಾವಿಗೆ ಇಳಿಯಬಿಟ್ಟ ಏತ ಸಿಹಿನೀರನ್ನು ಮೇಲೆ ತರುತ್ತದೆ; ನೀರೆಳೆಯುವ ಮೊದಲು ಅದರ ನೆಲೆ ನೆಲದ ಮೇಲೆ.

ಇಲ್ಲಿ 'ಏತ' ಎಂಬ ಉತ್ತರ, ಪ್ರಶ್ನೆಯಲ್ಲಿಯೇ ಒಂದು ರೀತಿಯಲ್ಲಿ ಹುದುಗಿದೆ. ಇದನ್ನು ಭೋಜನು ತಿಳಿಸಿರುವ 'ಉತ್ತರಪ್ರಶ್ನೆ'ದ ಲಕ್ಷ್ಯವಾಗಿ ಅಂಗೀಕರಿಸಬಹುದು.

ತ್ರಿಪದಿಗಳ ರೂಪದಲ್ಲಿರುವ ಸರ್ವಜ್ಞನ ಒಗಟುಗಳು ಆ ಶಕ್ತಿಶಾಲಿ ಕವಿಯ ಸರಸವಾದ ಕವಿತ್ವಶಕ್ತಿಯ ಮನೋಹರವಾದ ಕಾವ್ಯಕಣಿಕೆಗಳು. ಆತನ ಹೃದಯಂಗಮವಾದ ಭಾವಜ್ಞತೆ, ತೀಕ್ಷ್ಣವಾದ ಬುದ್ಧಿಯ ಹರಿವು ಇವು ಒಂದರೊಂದಿಗೆ ಒಂದು ಮೇಲಾಟವಾಡಿರುವ ಹಾಗೆ ತೋರುತ್ತದೆ. ಈ ರಚನೆಗಳು ವಸ್ತುವೈವಿಧ್ಯವನ್ನು ಸಾಧಿಸಿರುವುದರ ಜೊತೆಗೆ, ರಂಜನೆಗಾಗಿ ಭಿನ್ನರುಚಿಯ ಜನರನ್ನು, ಮುಖ್ಯವಾಗಿ ವಿನೋದಪ್ರಿಯರಾದ ರಸಿಕರನ್ನು, ತಮ್ಮತ್ತ ಸೆಳೆದುಕೊಳ್ಳಲು ಸಮರ್ಥವಾಗಿವೆ. ಸರ್ವಜ್ಞನನ್ನು ಜನಸಾಮಾನ್ಯರ ಕವಿಯೆಂದು ಹೇಳುವುದಕ್ಕೆ ಈ ರಚನೆಗಳಿಂದಲೂ ಪುಷ್ಟಿ ದೊರೆತಿದೆ. ಸಮಾಜದ ಲೋಪದೋಷಗಳನ್ನು ತಿದ್ದಲು, ಜನರಿಗೆ ನೀತಿಯ ಮಾತುಗಳನ್ನು ಹೇಳಲು ಅವನು ಯಾವಾಗಲೂ ಮುಂಗಾಲ ಮೇಲೆ ನಿಂತಿರುತ್ತಿದ್ದುದು ನಿಜ; ತಪ್ಪು ಇಲ್ಲವೆ ಲೋಪ ಕಂಡೆಡೆ ಕೆರಳುತ್ತಿದ್ದುದೂ ಕೆಣಕುತ್ತಿದ್ದುದೂ, ನಿರ್ದಾಕ್ಷಿಣ್ಯವಾಗಿ ಮರ್ಯಾದೆ ಕಳೆಯುವಂತಹ ಮಾತು ಆಡುತ್ತಿದ್ದುದೂ ಮೊಗಕ್ಕೆ ಮಸಿ ಬಳಿಯುತ್ತಿದ್ದುದೂ ನಿಜ. ಆದರೆ ವಿನೋದಪ್ರಸಂಗಗಳಿಗೆ ಅವನು ಕಣ್ಣುಮುಚ್ಚಿ ಕುಳಿತಿರುತ್ತಿರಲಿಲ್ಲ. ಜನರೊಂದಿಗೆ ಕಲೆತು ಅವರನ್ನು ವಿನೋದಪಡಿಸುತ್ತಿದ್ದನು, ತಾನೂ ವಿನೋದಿಸುತ್ತಿದ್ದನು. ನೀತಿಬೋಧೆಗೆ, ಸಮಾಜದ ರೋಗರುಜಿನಗಳ ಚಿಕಿತ್ಸೆಗೆ ಬೇಕಾದ ಸಾಧನವಿಶೇಷಗಳು ಇಲ್ಲಿಗೆ ಬೇಕಾಗಿರಲಿಲ್ಲ; ಮರ್ಮಸ್ಪರ್ಶಿಯಾದ ಭಾಷಾಶೈಲಿಗಳ ಅಗತ್ಯವೂ ಇರಲಿಲ್ಲ. ಉಪದೇಶವಾಗಲಿ ಅನ್ಯಾಪದೇಶವಾಗಲಿ ಇಲ್ಲಿಯ ಉದ್ದೇಶವಲ್ಲ. ಆಕ್ಷೇಪವೆತ್ತಲೂ ಆವೇಗಪಡಲೂ ಅವಕಾಶವೇನೂ ಇರಲಿಲ್ಲ.

ಈ ಒಗಟುಗಳು ಸರಸಕವಿತಾವಾಹಿನಿಯೇನಲ್ಲ. ಇವು ಚಮತ್ಕಾರದ ಚಾಟೂಕ್ತಿಗಳು; ಚಾತುರ್ಯದ ಚಟಾಕಿಗಳು; 'ಬಿನ್ನಾಣದೋಗಟೆ'ಗಳು; 'ಬಣ್ಣವಾತು'ಗಳು. ಆದ್ದರಿಂದ ಕೆಲವರು ಇವನ್ನು ಬೆಡಗುಗಳು, ಬೆಡಗಿನಪದ್ಧತಿಯ ರಚನೆಗಳು ಎಂದಿರುವುದು. ಸರ್ವಜ್ಞನೇ ಒಂದು ಒಗಟುಪದ್ಯದಲ್ಲಿ ''ಕವಿಗಳೇ! ಬೆಡಗು ಪೇಳುವುದು ಸರ್ವಜ್ಞ'' ಎಂಬುದಾಗಿ ತಿಳಿಸಿರುವುದನ್ನಿಲ್ಲಿ ನೆನೆಯಬಹುದು. ಆದರೆ ಈ ಬೆಡಗುಗಳು, ಒಂದೆರಡು ನಿದರ್ಶನಗಳನ್ನು ಬಿಟ್ಟರೆ ವಚನಕಾರರ ಬೆಡಗಿನ ವಚನಗಳಿಂದ ಭಿನ್ನವಾದವು ಎನ್ನಬೇಕು. ವಚನಕಾರರ ಬೆಡಗುಗಳು ಆಧ್ಯಾತ್ಮದ ಮಡಿಲಲ್ಲಿ ಮೊಗದೋರಿದವು; ಅಸಂಭಾವ್ಯತೆ ಅಸಾಂಗತ್ಯಗಳ ಕೂಸುಗಳು; ಅಂತರಾರ್ಥ ವಿಶದಪಟ್ಟಾಗ ಗಾಢವಾದ ತಾತ್ತ್ವಿಕ ಚಿಂತನೆಗೆ ಮನಸ್ಸನ್ನು ತೊಡಗಿಸುವಂತಹವು. ಅವುಗಳ ಭಾಷೆ ಕೂಟಭಾಷೆ, ಗುಹ್ಯಭಾಷೆ. ಸರ್ವಜ್ಞನ ವಚನಗಳ ಒಗಟುಗಳು ಲೌಕಿಕದ ಉಡಿಯಲ್ಲಿ ಉದ್ಭವಿಸಿದವು; ಸಂಭಾವ್ಯತೆ ಸಾಂಗತ್ಯಗಳಿಗೆ ಎರವಾಗದವು. ಅಂತರಾರ್ಥ ತಿಳಿದಾಗ ಅದು ಒದಗಿಸುವ ಸರಳ ರಂಜನೆಗೆ ತಲೆದೂಗಿಸುವಂತಹವು, ನಕ್ಕು ನಲಿಯಿಸುವಂತಹವು. ಸ್ವರೂಪದಲ್ಲಿ ಇವು ಜನಪದಸಾಹಿತ್ಯದ ಕಂಠಸ್ಥ ಸಂಪ್ರದಾಯದ ಗದ್ಯಪದ್ಯಾತ್ಮಕವಾದ ಒಗಟುಗಳನ್ನೂ ಚೌಪದದ ಒಗಟುಗಳನ್ನೂ ಹೋಲತಕ್ಕವಾಗಿವೆ. ಇವನ್ನು ಪರಸ್ಪರವಾಗಿ ಹೋಲಿಸಿದರೆ, ಗ್ರಾಮೀಣವಾದ ಮನಸ್ಸು ಬಯಸುವ, ಹಾಗೂ ವರಿಸುವ, ವ್ಯಕ್ತಿ ವಸ್ತು ಅಥವಾ ಸಂಗತಿಗಳು ಯಾವುವು ಎನ್ನುವುದನ್ನು ಸುಲಭವಾಗಿ ಪಟ್ಟಿಮಾಡಿ ಹೇಳಬಹುದು. ಅವರ ಸಂಸ್ಕಾರ ಸಂಬಂಧಗಳೂ ಆಸೆ ಅಭಿರುಚಿಗಳೂ ಅನುಭವವಿಶೇಷಗಳೂ ಈ ತೆರನಾದವು ಎಂದು ಗುರುತಿಸಿ, ಅವುಗಳ ಮೂಲಕ ಒಂದು ಕಾಲದ ಗ್ರಾಮಜೀವನದ ಪುನರ್ರಚನೆಯನ್ನೂ ಮಾಡಬಹುದು.

ಸರ್ವಜ್ಞನ ಒಗಟುಗಳ ವಸ್ತುವಿನ ವ್ಯಾಪ್ತಿಯೇನು? ಸುಣ್ಣ, ಬೆಣ್ಣೆ, ಗುಡುಗು ಮಿಂಚುಗಳು, ಸೂರ್ಯ ಸೂರ್ಯೋದಯಗಳು, ಹರಿಯುವ ಹೊಳೆ, ಉರಿಯುವ ಬೆಂಕಿ, ತಲೆಗೂದಲು, ಮೆಣಸಿನಕಾಯಿ, ನವಿಲು, ಕಡೆಗೋಲು, ಸೇವಗೆಮಣೆ, ಮೀನು ಮತ್ತು ಹಕ್ಕಿಗಳನ್ನು ಹಿಡಿಯುವ ಬಲೆಗಳು, ಪಿಚಕಾರಿ, ಕೋಳಿ-ಹುಂಜಗಳು, ಇಕ್ಕಳ, ಬೀಸುವ ಕಲ್ಲು, ಒರಳುಗುಂಡು, ಮೋಡ, ತೊಟ್ಟಿಲು, ಏತ, ಆಡು, ನೊಣ, ಗಿಣಿ,ಮುಳ್ಳುಹಂದಿ, ಹೊಲ

ಕಾಯುವ ಬೆಚ್ಚುಗೊಂಬೆ, ದೇಹ, ಅರೆಯುವ ಕಲ್ಲು, ತಾಂಬೂಲ, ಕ್ಷಣ್ಣು, ಅಂಗಿ, ನೂಲು ತೆಗೆಯುವ ರಾಟೆ, ನೂಲುಂಡೆಗಳು, ಗಂಧದ ಮರ, ಮಾವು, ಗಾಳಿಯ ಪಟ, ಕೊಡಲಿಯ ಕಾವು, ಎಳನೀರು, ಗರಗಸ—ಈ ಮುಂತಾದ ವಸ್ತುಗಳ ಮೇಲೆ, ಈ ವಸ್ತುಗಳಿಗೆ ಸಂಬಂಧಿಸಿದ ಸಂಗತಿಗಳ ಹಾಗೂ ಅನುಭವಗಳ ಮೇಲೆ ಸರ್ವಜ್ಞನ ಒಗಟುಗಳು ರಚಿತವಾಗಿವೆ. ಇವೆಲ್ಲ ಬಲುಮಟ್ಟಿಗೆ ನಮ್ಮ ಹಳ್ಳಿಗರಿಗೆ ಪರಿಚಿತವೂ ಅವಶ್ಯವೂ ಆದ ವಸ್ತುಗಳೇ. ಯಾವುದೋ ಒಂದು ಕಾಣದ ಲೋಕದ ಅಸಾಮಾನ್ಯವಸ್ತುವಿಶೇಷವೂ ಘನಗಂಭೀರ ಅನುಭವವಿಶೇಷವೂ ಇಲ್ಲಿ ಚಿತ್ರಿತವಾಗಿದೆ ಎನ್ನುವಂತಿಲ್ಲ. ದೃಶ್ಯಲೋಕದ ಸರಳಸಾಮಾನ್ಯ ವಸ್ತುಗಳೂ ಅವನ್ನು ಆಶ್ರಯಿಸಿದ ಸ್ವಾಭಾವಿಕ ಅನುಭವಗಳೂ ಇಲ್ಲಿ ನಮಗೆ ಕಾಣಲು ಸಿಗುತ್ತವೆ. ಕೆಲವು ಒಗಟುಗಳ ಅರ್ಥವನ್ನು ತಿಳಿಯುವುದು ಇನ್ನೂ ಸಾಧ್ಯವಾಗಿಲ್ಲವಾದರೂ, ಅವೂ ಹೀಗೆಯೇ ವರ್ಣ್ಯವಸ್ತುಗಳನ್ನೂ ಅನುಭವಗಳನ್ನೂ ಕುರಿತಿರಬಹುದು.

ಸರ್ವಜ್ಞನ ಒಗಟುಗಳ ವೈಚಿತ್ರ್ಯವನ್ನು ಈಗಾಗಲೇ ಪೀಠಿಕೆಯ ಭಾಗದಲ್ಲಿ ಗಮನಿಸಲಾಗಿದೆ. ಈ ರಚನೆಗಳು ಕವಿಕಾರ್ಯದ ಫಲ ಎನ್ನುವಂತಹವು. ರೂಪಕಗಳಲ್ಲಿ ಒಂದು ಚಿತ್ರವನ್ನು ಅರಳಿಸುವ ಪ್ರತಿಭೆಯ ವಿಲಾಸ, ವಕ್ರೋಕ್ತಿಗಳ ಮೂಲಕ ವಸ್ತುವನ್ನು ರೂಪಿಸುವ ಕಲ್ಪನೆಯ ಚದುರು, ಸಂಕೇತಗಳಲ್ಲಿ, ಪ್ರತಿಮೆ ರೂಪಕಗಳಲ್ಲಿ ಅರ್ಥವನ್ನು ಹೃದಯಂಗಮವಾಗಿ ಹೊಳೆಯಿಸುವ ಬುದ್ಧಿಕೌಶಲ ಇವು ಮೆಚ್ಚಬೇಕಾದವು. ಪರಿಚಿತವಾದೊಂದು ವಸ್ತುವನ್ನು ಇಲ್ಲವೆ ಸಂದರ್ಭವಿಶೇಷವನ್ನು ವರ್ಣಿಸುವ ವ್ಯಾಜದಲ್ಲಿ, ಸಾದೃಶ್ಯಯೋಗವುಳ್ಳ ನಿಗೂಢವಾದ ಬೇರೆಯೇ ಒಂದು ವಸ್ತುವನ್ನು ಇಲ್ಲವೆ ಸಂದರ್ಭವಿಶೇಷವನ್ನು ಗುರುತಿಸುವಂತೆ ಮಾಡುವ ಶಕ್ತಿ ಕವಿಯಲ್ಲಿ ಅಪಾರವಾಗಿರುವುದು ಇಲ್ಲಿಯ ನಿದರ್ಶನಗಳಿಂದ ವಿದಿತವಾಗುತ್ತದೆ.

ಸುಣ್ಣಕಲ್ಲು ಕುದಿದು ಸಾರಣೆಗೆ ಸಿದ್ಧವಾಗುವುದನ್ನು ಕಲ್ಲರಳಿ ಹೂವಾಯಿತೆಂದು ಹೇಳುವುದೂ, ಸುಣ್ಣ ಬಳಿದ ಮೇಲೆ ಗುಡಿಗುಂಡಾರಗಳು ತಂಪಾಗಿ ಬೆಳ್ಳಗೆ ಬೆಳಗುತ್ತವೆ ಎನ್ನುವುದನ್ನು ''ಮಲ್ಲಿಕಾರ್ಜುನನ ಶಿಖರಕ್ಕೆ ಬೆಳಕಾಗಿ'' ಎಂದು ವರ್ಣಿಸುವುದೂ ಅನುಪಮವಾದ ಭಾವೋನ್ಮೇಷದ ಫಲವೇ ಎನ್ನಬೇಕು. ಹರಿಯುವ ಹೊಳೆಯನ್ನು ಕಂಡಾಗ, ಅದು ಕಾಲಿಲ್ಲದೆಯೇ ಮುಂದೆ ಸಾಗುತ್ತದೆ, ತೋಳಿಲ್ಲದೆಯೇ ಜನರನ್ನೂ ವಸ್ತುಗಳನ್ನೂ ದೋಣಿ ತೆಪ್ಪಗಳ ಮೂಲಕ ಹೊತ್ತು ಸಾಗಿಸುತ್ತದೆ, ನಾಲಿಗೆಯಿಲ್ಲದೆಯೇ ನುಡಿಯುವಂತೆ ಮೊರೆಯುತ್ತದೆ ಎಂಬುದಾಗಿ ಪರಿಭಾವಿಸಿದ್ದು ಸಹ ಅಂತಹ ಭಾವೋನ್ಮೇಷದ ಫಲವೇ. ''ಬಟ್ಟಲದ ಬಾಯಂತೆ'' ಹುಟ್ಟಿಬಂದ ಸೂರ್ಯನ ಹೊಂಗಾಂತಿಗೆ ಜನ ಕಣ್ದೆರೆದು ನಿದ್ದೆ ತಿಳಿದೇಳುವ ಚರ್ಯೆಗೆ ''ಉರಿ ಬಂದು ಬೇಲಿಯನು ಹರಿದು ಹೊಕ್ಕುದ ಕಂಡೆ'' ಎಂದು ಕವಿ ಉದ್ಗಾರ ತೆಗೆಯುವಂತೆ ತೋರುತ್ತದೆ. ಸೇವಗೆಯ ಮಣೆಯಲ್ಲಿ ಸೇವಗೆ ತೆಗೆಯುವುದರಲ್ಲಿ ಏನು ವಿಶೇಷ ? ಮಣೆ ಮರದಲ್ಲಿ ಮಾಡಿದ್ದು; ಆ ಮರದ ಮಣೆಯನ್ನು ಒತ್ತಿದಾಗ ಕೆಳಗೆ ಬೀಳುವುದು ಹಿಟ್ಟಿನ ಸೇವಗೆ. ''ಒಣಗಿದಾ ಮರ ಚಿಗಿತು ಬಿಳಿಲು ಬಿಡುವುದು ಕಂಡೆ'' ಎಂದು ಹೇಳಿ ಕವಿ ಕೇಳುವವರಿಗೆ ಅಚ್ಚರಿ ಹುಟ್ಟಿಸುತ್ತಾನೆ. ಅರ್ಥ ತಿಳಿದಾಗ ಆ ಭಾವಸತ್ಯದ ಸೊಗಸಿಗೆ ನಾವು ತಲೆದೂಗುತ್ತೇವೆ; ಆಗ ಅಸಂಭಾವ್ಯವೇ ಸಂಭಾವ್ಯವಾಗಿ ಆ ಮಾತಿನ ರೀತಿಗೆ ನಾವು ಮರುಳಾಗುತ್ತೇವೆ.

''ಆಸನದಲುಂಬುವುದು ಸೂಸುವುದು ಬಾಯಲ್ಲಿ'' (ಪಿಚಕಾರಿ), ''ಪೆಂಡತಿಗೆ ಮೊಲೆಯಿಲ್ಲ'' (ಕೋಳಿ), ''ಗಣಿಕೆಯೊ ಮೂಗಿನಲಿ ಮೊಣಕಾಲು ಹುಟ್ಟಿಹುದು, ಅಜುವತ್ತು ಸಿಂಹ ಒಂದಿಜುವ ಕಚ್ಚಿದ ಕಂಡೆ'' ಇವು ಮೇಲೆ ಆಭಾಸವನ್ನೂ ಅಸಾಂಗತ್ಯವನ್ನೂ ಸೃಷ್ಟಿಸುತ್ತವೆ; ಆದರೆ ಆಶಯ ತಿಳಿದಾಗ ವಿಪರೀತವೃತ್ತಿ ಯಾವುದೋ ಸಂದರ್ಭಸನ್ನಿವೇಶಗಳಲ್ಲಿ ಸಹಜವೃತ್ತಿಯಾಗುವುದರ ಸೋಜಿಗವನ್ನು ಕಂಡು ಸಂತೋಷಿಸುವಂತೆ ಮಾಡುತ್ತವೆ. ''ಎಂತುಂಬುದಂಬಲಿಯ ಮತ್ತೊಬ್ಬನೈದಾನೆ! ಅಂತಕನಲ್ಲ ಅಜನಲ್ಲ ಈ ತುತ್ತ । ನೆಂತುಂಬರಯ್ಯ?'' ಎಂದು ಪ್ರಶ್ನಿಸುವಾಗ, ''ಯಾವ ಮಹಾಪುರುಷನಿಂದ ಏನು ಅಡ್ಡಿಯೋ?'' ಎಂದು ನಾವು ಗಾಢವಾಗಿ ಚಿಂತಿಸುವಂತೆ ಒಗಟು ದೊಡ್ಡ ಸಮಸ್ಯೆಯನ್ನು ಒಡ್ಡುತ್ತದೆ. ಆದರೆ ತುತ್ತಿನಲ್ಲಿ 'ನೊಣ' ಸಿಕ್ಕಿದ್ದರಿಂದ ಹೀಗೆ ಎಂದು ತಿಳಿದಾಗ ಸಣ್ಣ ಸಂಗತಿ ಭಾರಿ ಸಮಸ್ಯೆಯಾದ ವೈಚಿತ್ರ್ಯಕ್ಕೆ ನಮಗೆ ಲಜ್ಜೆ ಹರ್ಷಗಳು ಒಟ್ಟಿಗೆ ಅನುಭವವಾಗುತ್ತವೆ.

ಸರ್ವಜ್ಞನ ತ್ರಿಪದಿಗಳ ಬಂಧ ಸರಳವಾದ್ದು . ಚೆಲುವಾದ್ದು. ಅದು ಪ್ರೌಢಿಮೆಗೆ ಕೈ ಎತ್ತುವುದಿಲ್ಲ;

ಪುಟ್ಟಪುಟ್ಟ ಮಾತುಗಳ ದೇಸಿಗೆ ಅದರ ಒಲವು. ಸಾಮಾನ್ಯವಾಗಿ ಭಾಷೆ ಶುದ್ಧವಾದ್ದು, ಛಂದಸ್ಸು ಕಟ್ಟುಮೀರದ್ದು. ರಚನೆಗಳು ಬೇರೆಯವರಿಗೆ ಉದ್ದೇಶಿತವಾದವು, ಸಂಬೋಧನಪರವಾದವು ಎನ್ನುವ ಕಾರಣದಿಂದಾಗಿ ಆಗಾಗ "ಬಲ್ಲವರು ಹೇಳಿ ಸರ್ವಜ್ಞ", "ಕವಿಜನರೆ ಅರ್ತಿಯಿಂ ಪೇಳಿ ಸರ್ವಜ್ಞ", "ಇದನು ಬಲ್ಲಣ್ಣಗಳು ಹೇಳಿ ಸರ್ವಜ್ಞ" ಎನ್ನುವಂತಹ ಮಾತುಗಳು, ಪದ್ಯದ ೮ ರಿಂದ ೧೧ನೆಯ ಗಣದ ವ್ಯಾಪ್ತಿಯಲ್ಲಿ ಬರುತ್ತಿರುತ್ತವೆ. ಕವಿಗಳನ್ನು ಕುರಿತ ಸಂಬೋಧನೆಯೇ ಹೆಚ್ಚು. ಇದಕ್ಕೆ ಏನು ಕಾರಣ? ಕವಿಗಳು ಎಂದರೆ ಬಲ್ಲವರು, ಕಲಿತವರು, ಕವಿತೆಯನ್ನು ಕಟ್ಟುವ ಶಕ್ತಿಯುಳ್ಳವರು ಎಂಬ ಅಭಿಪ್ರಾಯವಿರಬೇಕು. ಒಡ್ಡಿದ ಒಗಟುಗಳಿಗೆ ಉತ್ತರ ಹೇಳಿ ಪ್ರತಿಯಾಗಿ ಒಗಟುಗಳನ್ನು ಕಟ್ಟುವ ಕವಿಗಳ ನಡುವೆಯೇ ಈ ಬುದ್ಧಿವ್ಯಾಪಾರದ ಚತುರೋಕ್ತಿವಿನಿಮಯ ನಡೆಯುತ್ತಿದ್ದಿರಬೇಕು ಎಂದು ಇದರಿಂದ ನಾವು ಊಹಿಸಬಹುದಾಗಿದೆ.

ಸಂಖ್ಯಾತ

'ಪಂಪಭಾರತ'ದಲ್ಲಿ :

ಪರಿಕಿಪುದೊಂದಱಿಂದೆರಡನೋತೊಳಕೊಳ್ವುದು ಮೂಱಱಿಂದೆ ನಾ
ಲ್ಕರಿದಱಿದಯ್ದಱಿಂದೆ ನೆಱೆ ಕಲ್ವುದು ನಿರ್ಣಯಮಾಗಿರಾಱಱೊಳ್
ಪರಿಣತನಪ್ಪುದೇೞಱೊಳವೊಂದದೆ ನಿಲ್ವುದು ದುರ್ವಿಮಂತ್ರಮಂ
ಪರಿಪಟವಾಳಮಂ ಪಿರಿದನೋದಿದೊಡಪ್ಪ ಪದಾರ್ಥಮಾವುದೋ ॥ (೧೩-೬೬)

ಈ ಪದ್ಯಕ್ಕೆ ವ್ಯಾಸಭಾರತದ ಉದ್ಯೋಗ ಪರ್ವದೊಳಗಿನ ೩೩ನೆಯ ಪ್ರಜಾಗರ ಪರ್ವದ ೪೪ನೆಯ (೪೮ನೆಯ/೫೨ನೆಯ) ಶ್ಲೋಕ ಮೂಲವಾಗಿರುವಂತೆ ಕಾಣುತ್ತದೆ. ಆ ಶ್ಲೋಕ:

ಏಕಯಾ ದ್ವೌ ವಿನಿಶ್ಚಿತ್ಯ ತ್ರೀಂಶ್ಚತುರ್ಭಿರ್ವಶೇ ಕುರು ।
ಪಂಚ ಜಿತ್ವಾ ವಿದಿತ್ವಾ ಷಟ್ ಸಪ್ತ ಹಿತ್ವಾ ಸುಖೀ ಭವ ॥

ಇದರ ವ್ಯಾಖ್ಯಾನ : ಏಕಯಾ–ಬುದ್ಧ್ಯಾ, ದ್ವೌ–ಪುಣ್ಯಪಾಪೇ, ತ್ರೀನ್–ಶತ್ರುಮಿತ್ರಬಾಂಧವಾನ್, ಚತುರ್ಭಿಃ–ಸಾಮಾದ್ಯುಪಾಯೈಃ, ಪಂಚ–ಜ್ಞಾನೇಂದ್ರಿಯಾಣಿ, ಷಟ್–ಸಂಧ್ಯಾದಿಗುಣಾನ್, ಸಪ್ತ–ದ್ಯೂತಸ್ತ್ರೀಪಾನಾದೀನಿ ಸಪ್ತವ್ಯಸನಾನಿ–(ಒಂದರಿಂದ ಎರಡನ್ನು ನಿಶ್ಚಯಿಸಬೇಕು. ಮೂರನ್ನು ನಾಲ್ಕರಿಂದ ವಶಮಾಡಿಕೋ. ಐದನ್ನು ಜಯಿಸಿ ಆರನ್ನು ತಿಳಿ. ಏಳನ್ನು ಪರಿತ್ಯಾಗಮಾಡಿ ಸುಖಿಯಾಗು.)

ವ್ಯಾಸಭಾರತದ ಶ್ಲೋಕ ಮತ್ತು ಅದರ ವ್ಯಾಖ್ಯಾನ ಇವನ್ನು ಲಕ್ಷಿಸಿ ಪಂಪಭಾರತದ ಪದ್ಯದ ಆಶಯವನ್ನು ಹೀಗೆ ಹೇಳಬಹುದು:

ಒಂದರಿಂದ ಎಂದರೆ ಬುದ್ಧಿಯಿಂದ, ಎರಡನ್ನು ಎಂದರೆ ಕಾರ್ಯಾಕಾರ್ಯಗಳನ್ನು (ಅಥವಾ ಪುಣ್ಯಪಾಪಗಳನ್ನು) ಪರೀಕ್ಷಿಸುವುದು; ಮೂರರಿಂದ ಎಂದರೆ ಶತ್ರು ಮಿತ್ರ ಬಾಂಧವರಿಂದ (ಮಿತ್ರ, ಉದಾಸೀನ ಮತ್ತು ಶತ್ರುಗಳಿಂದ) ನಾಲ್ಕು ಎಂದರೆ ಸಾಮ ದಾನ ಭೇದ ಮತ್ತು ದಂಡಗಳೆಂಬ ಚತುರೋಪಾಯಗಳನ್ನು ಚೆನ್ನಾಗಿ ಒಳಗುಮಾಡಿಕೊಳ್ಳುವುದು (ವಾಸ್ತವವಾಗಿ, ಇಲ್ಲಿ ಚತುರೋಪಾಯಗಳಿಂದ ಶತ್ರು, ಮಿತ್ರ ಮತ್ತು ಬಾಂಧವರೆಂಬ ಮೂರನ್ನು ವಶಪಡಿಸಿಕೊಳ್ಳಬೇಕು ಎಂಬಂತಹ ವಾಕ್ಯರಚನೆಯಿರಬೇಕು; ಅದರ ವಿರುದ್ಧವನ್ನು ಕವಿ ಏಕೆ ಹೇಳಿರುವನೋ ತಿಳಿಯದು.); (ಇದು) ಕಷ್ಟವಾದ್ದು; ಐದರಿಂದ ಎಂದರೆ ತ್ವಕ್, ಚಕ್ಷು, ಶ್ರೋತ್ರ, ಜಿಹ್ವೆ ಮತ್ತು ಘ್ರಾಣಗಳೆಂಬ ಪಂಚೇಂದ್ರಿಯಗಳಿಂದ (ಪಂಚೇಂದ್ರಿಯಗಳ ಕಾರ್ಯಗಳ ಸರಿಯಾದ ಪ್ರವರ್ತನೆಯಿಂದ) ಅರ್ಥಮಾಡಿಕೊಂಡು, ಇದನ್ನು ಪೂರ್ಣವಾಗಿ ಕಲಿತುಕೊಳ್ಳಬೇಕು. ನಿಶ್ಚಯವಾಗಿರುವಂತೆ, ಆರರಲ್ಲಿ ಎಂದರೆ ಸಂಧಿ ವಿಗ್ರಹ ಯಾನ ಆಸನ ಸಂಶ್ರಯ ದ್ವೈಧೀಭಾವ ಎಂಬ ರಾಜನೀತಿಯ ಷಾಡ್ಗುಣ್ಯದಲ್ಲಿ ಪರಿಣತನಾಗಬೇಕು. ಏಳರಲ್ಲಿ ಎಂದರೆ ಸ್ತ್ರೀ, ಅಕ್ಷ, ಮೃಗಯಾ, ಪಾನ, ವಾಕ್ಪಾರುಷ್ಯ, ದಂಡಪಾರುಷ್ಯ, ಅರ್ಥದೂಷಣ ಎಂಬ ಏಳು ದುಶ್ಚಟಗಳಲ್ಲಿ (ಸಪ್ತವ್ಯಸನಗಳಲ್ಲಿ) ಸೇರದೆ ಇರಬೇಕು. ದುರ್ಮಂತ್ರವನ್ನು ಹರಡುವ ವಂಚನೆಯನ್ನು ಅಭ್ಯಾಸಮಾಡಿದರೆ ಬಂದ ಲಾಭವೇನು?

ಈ ಪದ್ಯದ ಆಶಯವನ್ನು ಸಮರ್ಪಕವಾಗಿ ತಿಳಿಯುವುದರಲ್ಲಿ ಕೆಲವು ತೊಡಕುಗಳಿವೆ.[40] 'ಕುಮಾರವ್ಯಾಸ ಭಾರತ'ದಲ್ಲಿ:

ಒಂದಱಿಂದೆರಡಹುದನಱಿ ಮೂ । ಱಂದವನು ತಿಳಿ ನಾಲ್ಕಱಲಿ ಮನ ।
ಸಂದಿಸದಿರೈದಱಲಿ ವರ್ಜಿಪುದಾಱನೇಳಱಲಿ ।
ಒಂದಿಸದಿರೆಂಟನು ವಿಚಾರಿಸಿ । ಮುಂದುವರಿಯೊಂಬತ್ತಱಲಿ ಮನ ।
ಗುಂದದಿರುವೀರೈದಱಲಿ ಭೂಪಾಲ ಕೇಳೆಂದ ॥

(ಉದ್ಯೋಗಪರ್ವ, ೩-೩)

ಈ ಪದ್ಯ ವ್ಯಾಸ ಮತ್ತು ಪಂಪಭಾರತಗಳ ಪದ್ಯಗಳನ್ನೇ ಅನುಸರಿಸಿದ್ದಾದರೂ, ಕೆಲವು ಹೆಚ್ಚಿನ ವಿವರಗಳಿಂದಲೂ ಕೂಡಿದೆ. ಇದನ್ನು ಸಹ ಸಮರ್ಪಕವಾಗಿ ಅರ್ಥೈಸುವುದರಲ್ಲಿ ಕೆಲವು ತೊಡಕುಗಳಿವೆ. ಪದ್ಯದಲ್ಲಿ ಹೀಗೆ ಆಶಯವನ್ನು ವಿವರಿಸಬಹುದು :

ಒಂದರಿಂದ ಎಂದರೆ ಬುದ್ಧಿಯಿಂದ, ಎರಡು ಎಂದರೆ ಕಾರ್ಯಾಕಾರ್ಯಗಳು (ಅಥವಾ ಪುಣ್ಯಪಾಪಗಳು) ಆಗುವುದನ್ನು ತಿಳಿದುಕೋ; ನಾಲ್ಕರಲ್ಲಿ ಎಂದರೆ ಚತುರೋಪಾಯಗಳ ಮೂಲಕವಾಗಿ, ಮೂರರ ರೀತಿಯನ್ನು ಎಂದರೆ ಶತ್ರು ಮಿತ್ರ ಮತ್ತು ಬಾಂಧವ (ಉದಾಸೀನ)ರೆಂಬ ಅನುಬಂಧಿಗಳ ಸ್ವಭಾವವನ್ನು ತಿಳಿದುಕೋ (ಎಂದರೆ, ಮಿತ್ರರನ್ನು ಸಾಮದಿಂದಲೂ ಉದಾಸೀನರನ್ನು ದಾನ ಭೇದಗಳಿಂದಲೂ ಶತ್ರುಗಳನ್ನು ಸಾಮಾದಿ ನಾಲ್ಕು ಉಪಾಯಗಳಿಂದಲೂ ವಶಪಡಿಸಿಕೊಳ್ಳಬೇಕು ಎಂದು ಅಭಿಪ್ರಾಯ). ಐದರಲ್ಲಿ ಎಂದರೆ ಪಂಚೇಂದ್ರಿಯಗಳಲ್ಲಿ ಮನಸ್ಸು ಒಳಗಾಗುವಂತೆ ಮಾಡಬೇಡ. ಆರನ್ನು ಎಂದರೆ ಅರಿಷಡ್ವರ್ಗಗಳೆನಿಸಿದ ಕಾಮ ಕ್ರೋಧ ಲೋಭ ಮೋಹ ಮದ ಮಾತ್ಸರ್ಯಗಳನ್ನು ಬಿಟ್ಟುಬಿಡು. ಏಳರಲ್ಲಿ ಎಂದರೆ ಸ್ತ್ರೀ ಇತ್ಯಾದಿ ಸಪ್ತವ್ಯಸನಗಳಲ್ಲಿ, (ಅವು ಸಾಲವು ಎಂದು) ಎಂಟನ್ನು ಎಂದರೆ ಧನ, ಕುಲ, ವಿದ್ಯೆ, ರೂಪ, ಯೌವನ, ಬಲ, ಪರಿವಾರ, ಅಧಿಕಾರಗಳೆಂಬ ಅಷ್ಟಮದಗಳನ್ನು ಸೇರಿಸಬೇಡ. ಒಂಬತ್ತರಲ್ಲಿ ಎಂದರೆ ಆತ್ಮನ ಜ್ಞಾನ, ಸುಖ, ದುಃಖ, ಇಚ್ಛೆ, ದ್ವೇಷ, ಪ್ರಯತ್ನ, ಧರ್ಮ, ಅಧರ್ಮ, ಸಂಸ್ಕಾರ ಎಂಬ ೯ ಗುಣಗಳನ್ನು (ಇಲ್ಲವೆ ಅಹಿಂಸೆ, ಸತ್ಯ, ಅಸ್ತೇಯ, ಶೌಚ, ಇಂದ್ರಿಯನಿಗ್ರಹ, ದಯೆ, ಕ್ಷಮೆ, ಆರ್ಜವ, ದಾನ ಎಂಬ ಸಾಧಾರಣ ಧರ್ಮಗಳನ್ನು) ವಿಚಾರಪೂರ್ವಕವಾಗಿ ತಿಳಿದು ಮುಂದುವರಿ. ಹತ್ತರಲ್ಲಿ ಎಂದರೆ, ಶ್ರೋತ್ರ ತ್ವಕ್ಕು ಚಕ್ಷುಸ್ಸು ಜಿಹ್ವೆ ನಾಸಿಕಗಳೆಂಬ ಐದು ಬುದ್ಧೀಂದ್ರಿಯಗಳ ಹಾಗೂ ವಾಕ್ಕು ಪಾಣಿ ಪಾದ ಪಾಯು ಉಪಸ್ಥಗಳೆಂಬ ಐದು ಕರ್ಮೇಂದ್ರಿಯಗಳ ಉಚಿತವಾದ ಪ್ರವರ್ತನೆಯಲ್ಲಿ ಎಂದೂ ಎಚ್ಚರ ತಪ್ಪಬೇಡ.

ಕುಮಾರವ್ಯಾಸನ ಪದ್ಯದ ಆಶಯ ಇದೇ ಎಂದು ನಿಷ್ಕರ್ಷೆಯಾಗಿ ಹೇಳಲು ಇಲ್ಲಿ ಸಾಧ್ಯವಿಲ್ಲ. ತೊಡಕು ಆರಂಭವಾಗುವುದು ''ವರ್ಜಿಪುದಾಱನೇಳಱಲಿ....''ಎಂಬ ಭಾಗದಿಂದ ಮುಂದಕ್ಕೆ. 'ಪಂಪಭಾರತ ದೀಪಿಕೆ'ಯಲ್ಲಿ 'ಪಂಪಭಾರತ'ದ ೧೩–೬೬ರ ಬಗೆಗೆ ವ್ಯಾಖ್ಯಾನಿಸುವಾಗ, ಈ ಪದ್ಯವನ್ನೂ ಉದಾಹರಿಸಿ, ಅಲ್ಲಿ ''ವರ್ತಿಪುದಾಱನೇಳಱಲಿ....'' ಎಂದು ಪಾಠವನ್ನು ಇಟ್ಟುಕೊಂಡಿದೆ. ''ವರ್ತಿಪುದಾಱನು'' ಎಂದಾದರೆ ''ರಾಜನೀತಿಯ ಷಾಡ್ಗುಣ್ಯವನ್ನು ಆಚರಿಸಬೇಕು'' ಎಂದು ಅರ್ಥವನ್ನು ವ್ಯಾಸಭಾರತ ಪಂಪಭಾರತಗಳ ಆಶಯಕ್ಕೆ ಅನುಗುಣವಾಗಿ ಹೊರಡಿಸುವುದು ಸಾಧ್ಯವಿದೆ. ಆದರೆ ಆಗ ವಾಕ್ಯರಚನೆ ''ವರ್ತಿಪುದಾಱಱೊಳು'' ಎಂಬ ರೀತಿಯಲ್ಲಿ ಇರಬೇಕಾಗಿತ್ತು; ಅಲ್ಲದೆ 'ವರ್ತಿಪುದು' ಎಂದು ಇಟ್ಟುಕೊಳ್ಳುವುದಕ್ಕೆ ಹಾಗೆ ಎಲ್ಲಿಯೂ ಪಾಠಾಂತರಗಳೇ ಇಲ್ಲ; ಮುದ್ರಿತ ಪರಿಷ್ಕರಣಗಳೂ ಅದನ್ನು ಪೋಷಿಸುತ್ತಿಲ್ಲ. ಕುಮಾರವ್ಯಾಸ ಈ ಭಾಗದಿಂದ ಮುಂದಕ್ಕೆ ಸ್ವತಂತ್ರಿಸಿ ಮಾರ್ಪಡಿಸಿಕೊಂಡಿರಬಹುದು. ''ಏಳಱಲಿ ಒಂದಿಸದಿರೆಂಟನು'' ಎಂಬುದಕ್ಕೆ ಸಪ್ತವ್ಯಸನಗಳಲ್ಲಿ, ಅರಸನ ೮ ಕರ್ಮಗಳಾದ ಆದಾನ, ವಿಸರ್ಗ, ಪ್ರೈಷ, ನಿಷೇಧ, ಅರ್ಥವಚನ, ವ್ಯವಹಾರ, ದಂಡಶುದ್ಧಿ ಇವುಗಳನ್ನು ಇಲ್ಲವೆ ರಾಜನ ೮ ವ್ರತಗಳಾದ ದುಷ್ಟಶಿಕ್ಷೆ ಶಿಷ್ಟರಕ್ಷೆ ದಾನ ಯಜನ ದ್ರವ್ಯಸಂಗ್ರಹಣ ಶತ್ರುರಾಜಮರ್ದನ ರಾಜ್ಯವಿಸ್ತರಣ ಆಶ್ರಿತರಾಜರಿಂದ ಕಪ್ಪಕಾಣಿಕೆ ಕೊಳ್ಳುವುದು ಇವುಗಳನ್ನು ಇಲ್ಲವೆ ಆತ್ಮನ ೮ ಗುಣಗಳಾದ ಸರ್ವಭೂತದಯೆ, ಕ್ಷಾಂತಿ,

ಅನಸೂಯತೆ, ಶೌಚ, ಅನಾಯಾಸ, ಮಂಗಲ, ಅಕಾರ್ಪಣ್ಯ, ಅಸ್ಪೃಹತೆ ಇವುಗಳನ್ನು ಸೇರಿಸಬೇಕ ಎಂದೂ ಅರ್ಥಮಾಡುವುದು ಶಕ್ಯವಿದೆ.[41]

ಈ ಪದ್ಯದ ಇನ್ನೊಂದು ವಿವರಣೆ ಹೀಗಿದೆ: ''ಧೃತರಾಷ್ಟ್ರ, ಒಂದೇ ಅದ್ವಿತೀಯ ವಸ್ತುವಿನಿಂದ ದ್ವಂದ್ವವಾಗಿ ತೋರುವ ಈ ಜಗತ್ತು ಹುಟ್ಟಿತೆಂದು ತಿಳಿ. ಮೂರು ಗುಣಗಳ ಸ್ವರೂಪವನ್ನರಿತು ನಾಲ್ಕು ಪುರುಷಾರ್ಥಗಳಲ್ಲಿ ನಿಷ್ಠೆಯಿಂದಿರು. ಪಂಚೇಂದ್ರಿಯಗಳಲ್ಲಿ ಆಸಕ್ತನಾಗದೆ ಅರಿಷಡ್ವರ್ಗಗಳನ್ನು ಗೆದ್ದು ಸಪ್ತವ್ಯಸನಗಳನ್ನು ತ್ಯಜಿಸು. ಯೋಗದ ಅಷ್ಟಾಂಗಗಳನ್ನು ಶ್ರದ್ಧೆಯಿಂದ ವಿಚಾರಿಸಿ [ನವವಿಧ] ಭಕ್ತಿಮಾರ್ಗದಲ್ಲಿ ಮುಂದುವರಿ. ಹತ್ತುಬಗೆಯ ಸಾಮಾನ್ಯಧರ್ಮಗಳನ್ನು ಉಪೇಕ್ಷಿಸಬೇಡ.''

ಟಿಪ್ಪಣಿಯಲ್ಲಿ ಅರಿಷಡ್ವರ್ಗ, ಸಪ್ತವ್ಯಸನ, ಯೋಗದ ಅಷ್ಟಾಂಗ, ನವವಿಧ ಭಕ್ತಿಮಾರ್ಗಗಳನ್ನು ವಿವರಿಸಿದೆ; ಇವು ಸುವಿದಿತವೇ. ಹತ್ತುಬಗೆಯ ಸಾಮಾನ್ಯ ಧರ್ಮಗಳನ್ನು ''ಸಂತೋಷ, ತಾಳ್ಮೆ, ಮನೋನಿಗ್ರಹ, ಪರದ್ರವ್ಯದಲ್ಲಿ ಅನಪೇಕ್ಷೆ, ಶುಚಿತ್ವ, ಇಂದ್ರಿಯನಿಗ್ರಹ, ಶಾಸ್ತ್ರವಿಚಾರ, ಆತ್ಮಜ್ಞಾನ, ಸತ್ಯ, ಕೋಪಿಸಿಕೊಳ್ಳದಿರುವುದು (ಮನು. ೬–೯೨)'' ಎಂಬುದಾಗಿ ಅರ್ಥೈಸಿದೆ.[42]

ಇಲ್ಲಿ ''ವರ್ಜಿಪುದಾಜನೇಳಜಲಿ ಒಂದಿಸದಿರು'' ಎಂದೇ ಪಾಠವನ್ನಿಟ್ಟುಕೊಂಡು ಅರ್ಥಮಾಡಿದೆ.

ಮುದ್ದಣನ 'ಶ್ರೀ ರಾಮಪಟ್ಟಾಭಿಷೇಕ'ದಲ್ಲಿ:

ಒಂದನೆಡೆಗೆಯ್ದೆರಡು ಭಾವಮಂ ತೊಱೆದು ಮೂ
ಱಂದದಿಂ ಪದೆದು ನಾಲ್ಕಱೊಳೈದನಳವಡಿಸಿ
ಸಂದಾಱನೊದೆದು ಸದೆದೇೞನೆಂಟುಮನಿಕ್ಕಿ ಹೃದಯಮಮರ್ಾಂಬರದೊಳು
ನಿಂದಿರಿಸಿ ಬಿಂದುರೂಪಮನೊಱಲ್ದೊಂಭತ್ತ
ಱಿಂದೆಱಗಿ ನುತಿಸಿದರನಂತಚಿತ್ರಭನನಿಂ
ತೆಂದಮಂದಾನಂದದಿಂದೊಂದಿದಮಲಗುಣಸಾಂದ್ರರ್ ಮುನೀಂದ್ರರಂದು ॥ (೫–೬೪)

ಇದರ ಅಭಿಪ್ರಾಯ ಹೀಗೆ: ''ಏಕವಾದ ಬ್ರಹ್ಮವನ್ನು ಆಶ್ರಯಿಸಿ, ಜೀವಾತ್ಮ ಪರಮಾತ್ಮ ಭೇದರೂಪವಾದ ಆ ಬ್ರಹ್ಮದ ದ್ವಿಧಾಸ್ವರೂಪವನ್ನು ತ್ಯಜಿಸಿ, ಆ ಬ್ರಹ್ಮವೊಂದೇ ಬ್ರಹ್ಮ ವಿಷ್ಣು ರುದ್ರರೆಂಬುದಾಗಿ ಭಾವಿಸಿ, ಧರ್ಮಾದಿ ನಾಲ್ಕುವಿಧದ ಪುರುಷಾರ್ಥಗಳಲ್ಲಿ ತತ್ಪರವಾಗಿರುವಂತೆ ಕಣ್ಣು ಕಿವಿ ಮೊದಲಾದ ಪಂಚೇಂದ್ರಿಯಗಳ ವ್ಯಾಪಾರವನ್ನು ನಿಯಮನಗೊಳಿಸಿ, ಕಾಮ ಕ್ರೋಧಾದಿ ಅರಿಷಡ್ವರ್ಗವನ್ನು ನಿಗ್ರಹಿಸಿ, ಮೃಗಯೆ ದ್ಯೂತ ಮೊದಲಾದ ಸಪ್ತವ್ಯಸನಗಳನ್ನೂ ಧನ ಕುಲ ಮುಂತಾಗಿರುವ ಅಷ್ಟಮದಗಳನ್ನೂ ದೂರೀಕರಿಸಿ, ಅಂತರಂಗದಲ್ಲಿ ಬಿಂದುಸ್ವರೂಪನಾದ ಪರಮಾತ್ಮನನ್ನು ನಿಲಿಸಿಕೊಂಡು, ಪ್ರೀತಿಭಾವದಿಂದ ಶ್ರವಣ ಕೀರ್ತನ ಮುಂತಾದ ನವವಿಧ ಭಕ್ತಿಗಳಿಂದ ವಂದಿಸಿ, ನಿಸ್ಸೀಮ ಜ್ಞಾನಜ್ಯೋತಿಯಾದ ಭಗವಂತನನ್ನು ಮಿಗಿಲಾದ ಆನಂದದಿಂದ ಕೂಡಿದ ಉತ್ಕೃಷ್ಟ ಗುಣಸಂಪನ್ನರಾದ ಮುನಿಶ್ರೇಷ್ಠರು ಸ್ತುತಿಸಿದರು.''

ಪಾಂಚಾಳ ಗಂಗನ 'ಚೆನ್ನರಾಮನ ಸಾಂಗತ್ಯ'ದಲ್ಲಿ:

ಕಾಯುವೆ ಮೂರು ಕಾಲಾರು ಮಸ್ತಕ ನವ। ಬಾಯಿ ಒಂಬತ್ತು ಬಾಲೆರಡು।
ಕಯ್ಗಳು ನಾಲ್ಕು ಕಂಗಳ ರವೆ ಹದಿನೆಂಟು। ಮೆಯ್ಯಿಕ್ಕಿ ನಾನೆರಗುವೆನು॥ (೧–೨)

ಇದು ವಿನಾಯಕನ ಸ್ತುತಿ: ''ವಿನಾಯಕ, ಸರ್ಪ ಮತ್ತು ಮೂಷಕ ಹೀಗೆ ಶರೀರ ೩; ವಿನಾಯಕ ಮತ್ತು ಮೂಷಕಗಳ ಕಾಲುಗಳು ಒಟ್ಟು ೬; ಸರ್ಪದ ೭ ಹೆಡೆಗಳು, ವಿನಾಯಕ ಮತ್ತು ಮೂಷಕದ ತಲೆಗಳು ೨ ಹೀಗೆ ಒಟ್ಟು ೯ ತಲೆಗಳು; ಹಾಗೆಯೇ, ೯ ಬಾಯಿಗಳು; ಮೂಷಕ ಹಾಗೂ ಸರ್ಪದ ೨ ಬಾಲಗಳು; ವಿನಾಯಕನ ೪ ಕೈಗಳು; ಸರ್ಪದ ೭ ಹೆಡೆಗಳ ೧೪ ಕಣ್ಣುಗಳು ಮತ್ತು ವಿನಾಯಕ ಮೂಷಕರ ಕಣ್ಣುಗಳು ೪ ಹೀಗೆ ೧೮ ಕಣ್ಣುಗಳು —ಇಂತಹ ವಿನಾಯಕನಿಗೆ ನಾನು ಎರಗುತ್ತೇನೆ.''

ಶಾಂತ ನಿರಂಜನನ 'ಅಬ್ಬಲೂರು ಚರಿತೆ'ಯಲ್ಲಿ :

ಈರೈದನೊಡೆಮೆಟ್ಟಿ ಬೇರೈದನೆ ಬಿಟ್ಟು । ಆರು ಮೂರೊಂಬತ್ತನಟ್ಟಿ ।
ಸಾರೂಪ್ಯವಡೆದು ಲಂ[ಬ]ಕ ಮನಕಳವಟ್ಟ । ಭಾರಿ ಯೋಗೈಕ್ಯರಲ್ಲೆಸೆಯೆ ॥ (೩-೪೬)

ಪಂಚ ಜ್ಞಾನೇಂದ್ರಿಯಗಳು ಮತ್ತು ಪಂಚ ಕರ್ಮೇಂದ್ರಿಯಗಳೆಂಬವನ್ನು ಸಾಧಿಸಿ, ಮಂತ್ರ ಸ್ಪರ್ಶ ಭಾವ ಅಭಾವ ಮಹಾ ಎಂಬ ಐದು ಬೇರೆ ಯೋಗಗಳನ್ನೂ ('ಲಿಂಗಪುರಾಣ', ಅ. ೫೫; 'ವಿವೇಕ ಚಿಂತಾಮಣಿ' ೧-೮೯) ಬಿಟ್ಟು(?) ವ್ಯಾಧಿ, ಸ್ತ್ಯಾನ(ಅನರ್ಹತೆ), ಸಂಶಯ, ಪ್ರಮಾದ, ಆಲಸ್ಯ, ಅವಿರತಿ, ಭ್ರಾಂತಿದರ್ಶನ, ಅಲಬ್ಧ ಭೂಮಿಕತ್ವ, ಅನವಸ್ಥಿತತ್ವ ಎಂಬ ೯ ಯೋಗವಿಘ್ನಗಳನ್ನೂ ಪರಿಹರಿಸಿಕೊಂಡು, ಏಕೀಭಾವದಿಂದ ಊರ್ಧ್ವದಲ್ಲಿ ಮನಸ್ಸು ನಟ್ಟ ಯೋಗಿಗಳು ಅಲ್ಲಿ ಶೋಭಿಸಿದರು.

ನೂರೊಂದನ 'ಸೌಂದರ ಕಾವ್ಯ' ದಲ್ಲಿ:

ಕಾಲಾರು ತಲೆ ಮೂರು ಬಾಲವೆರಡು ಬ್ರಹ್ಮ । ಕೈಗಳೆ ನಾಲ್ಕು ಕಣ್ಣಾರು ।
ನಾಲಗೆ ನಾಲ್ಕು ಶ್ರೀರಂಗಧಾಮನ ಪುರ । ಬಾಲವಿಘ್ನೇಶಗೊಂದಿಸುವೆ ॥ (೧-೧೩)

ವಿವರಣೆ: [ಇದು ಗಣಪತಿಯ ಸ್ತುತಿಯೆನ್ನುವುದು ಪದ್ಯದಲ್ಲಿಯೇ ಸೂಚಿತವಾಗಿದೆ; ಆದ್ದರಿಂದ ಸಂಖ್ಯಾತ್ಮಕವಾದ ಗೂಢಗಳನ್ನು ಭೇದಿಸುವಲ್ಲಿ ಪೂರ್ವಭಾವಿಯಾಗಿ ಸೂಚನೆ ಸಿಕ್ಕಂತಾಗುತ್ತದೆ.] ವಾಹನವಾದ ಇಲಿಯ ೪ ಕಾಲುಗಳೂ ಸೇರಿ ಗಣಪತಿಗೆ ಕಾಲುಗಳು ೬; ವಾಹನವಾದ ಇಲಿಯದು, ಸೊಂಟಕ್ಕೆ ಸುತ್ತಿದ ಹಾವಿನದು ಹಾಗೂ ತನ್ನದೇ ಆದ ಆನೆಯದು ಹೀಗೆ ತಲೆಗಳು ೩; ಇಲಿಯದು ಹಾಗೂ ಹಾವಿನದು ಹೀಗೆ ಬಾಲಗಳು ೨; ದೇವತೆಯಾದ್ದರಿಂದ ಕೈಗಳು ೪; ಇಲಿಯದು, ಹಾವಿನದು ಹಾಗೂ ತನ್ನದೇ ಆದ ಆನೆಯದು ಹೀಗೆ ಕಣ್ಣುಗಳು ೬; ಇಲಿಯದು ಹಾಗೂ ತನ್ನದೇ ಆದ ಆನೆಯದು ಒಂದೊಂದು ಮತ್ತು ಹಾವಿನದು ಎರಡು ಹೀಗೆ ನಾಲಗೆಗಳು ೪. ಈ ಚಹರೆಯುಳ್ಳ ಶ್ರೀರಂಗಧಾಮನ ಪುರದ ಗಣಪತಿಗೆ ವಂದಿಸುತ್ತೇನೆ. (ಹೊಟ್ಟೆಗೆ ಹಾವು ಸುತ್ತಿ, ಇಲಿಯೇರಿದ ಗಣಪತಿ)

ಮಹಲಿಂಗಸ್ವಾಮಿಯ 'ಬಾಲರಾಮನ ಸಾಂಗತ್ಯ'ದಲ್ಲಿ:

ವರ ಕಿವಿ ನಾಲ್ಕು ದೇಹಗಳು ಮೂರಾಗಿ । ಬಾಲಗಳೆರಡು ಕರ ನಾಲ್ಕು ।
ಅವ ಮೃಗವನಾ ಬೇಡುವೆ ನಯನವು ಹದಿನೆಂಟು । ಜಿಹ್ವೆ ಹದಿನಾರರಲಿ ಕೊಡು ಮತಿಯ ॥

(೧೬-೨)

ಇದೂ ವಿನಾಯಕ ಸ್ತುತಿಯೆ. ವಿನಾಯಕನ ಮತ್ತು ಮೂಷಕದ ೪ ಕಿವಿಗಳು, ವಿನಾಯಕನ ಮತ್ತು ಮೂಷಕದ ೨ ನಾಲಗೆಗಳು, ೭ ಹೆಡೆ ಹಾವಿನ ೧೪ ನಾಲಗೆಗಳು ಹೀಗೆ ಒಟ್ಟು ೧೬ ನಾಲಗೆಗಳು. ಉಳಿದ ವಿವರಣೆ ಗಂಗನ ಪದ್ಯದಲ್ಲಿರುವಂತೆಯೇ.

ಕಾಯವೆ ಮೂರು ಕಾಲಾರು ಮಸ್ತಕ ನವ । ಬಾಯಿ ಒಂಬತ್ತು ಬಾಲವೆರಡು ।
ಕರಗಳು ನಾಲ್ಕು ಕಂಗಳ ರವೆ ಹದಿನೆಂಟಕ್ಕೆ । ಮೆಯ್ಯಿಕ್ಕಿ ಮುನ್ನ ಎರಗುವೆನು ॥

ಇದೂ ವಿನಾಯಕನ ಸ್ತುತಿಯೆ. ಗಂಗನ ಪದ್ಯವನ್ನೇ ಹೋಲುತ್ತದೆ. ವಿವರಣೆ ಅಲ್ಲಿಯಂತೆಯೇ.

'ಚೌಪದದ ಒಗಟುಗಳು' :

ಕಾಲಾಱು ತಲೆ ಮೂಱು ತ್ರೈಮೂರ್ತಿಯಲ್ಲ । ಬಾಲಂಗಳೆರಡು ಕಿವಿ ನಾಲ್ಕು ಮೃಗವಲ್ಲ ।
ನಾಲಗೆಯು ನಾಲ್ಕುಂಟು ವಿಪರೀತವಲ್ಲ । ಇದ ಹೇಳಬಲ್ಲ ಜಾಣನಿಗೆ ಅರಿದಲ್ಲ ॥ (೧)

ವಿವರಣೆ: [ಮೇಲಿನಂತೆಯೇ; ಮಾತಿನ ರೀತಿ ಬೇರೆ] ೬ ಕಾಲು, ೩ ತಲೆ ಉಂಟು ಎಂದು ತ್ರಿಮೂರ್ತಿಗಳಲ್ಲ; ೨ ಬಾಲ, ೪ ಕಿವಿ (ಇಲಿಯದು ೨, ತನ್ನದೇ ಆನೆಯ ಮುಖದ್ದು ೨) ಉಂಟು ಎಂದು ಮೃಗವಲ್ಲ; ೪ ನಾಲಗೆ ಉಂಟು ಎಂದು ವಿಚಿತ್ರವೇನಲ್ಲ. (ಹೊಟ್ಟೆಗೆ ಹಾವು ಸುತ್ತಿ, ಇಲಿಯೇರಿದ ಗಣಪತಿ.)

ಒಂದು ಮರ ಹುಟ್ಟಿ ಹನ್ನೆರಡು ಕವಲಾಯ್ತು । ಒಂದು ಕವಲಿಂಗೆ ಮೂವತ್ತು ಎಲೆಯಾಯ್ತು ।
ಅದರೊಳಗೆ ಹದಿನೈದು ಕರಿದು ಬಿಳಿದಾಯ್ತು । ಇದ ಹೇಳಬಲ್ಲ ಜಾಣರಿಗೆ ಅರಿದಾಯ್ತು ॥ (೧೭)

ವಿವರಣೆ: ವರ್ಷವೆಂಬ ಮರಕ್ಕೆ ತಿಂಗಳೆಂಬ ೧೨ ಕವಲುಗಳು; ಆ ತಿಂಗಳೆಂಬ ಒಂದೊಂದು ಕವಲಿಗೆ ದಿನಗಳೆಂಬ ೩೦ ಎಲೆಗಳು; ಆ ದಿನಗಳಲ್ಲಿ ೧೫ ದಿನ ಕೃಷ್ಣಪಕ್ಷ, ೧೫ ದಿನ ಶುಕ್ಲಪಕ್ಷ.

ಕನಕದಾಸರ ಕೃತಿ:

ಏನಿದೆತ್ತಣ ಬಯಕೆ ಎಲೊ ಮಂಕುಜೀವ
ನೀನರಿತರೆ ಪೇಳು ನಿಜವಾಗಿ ಎನಗೆ । ಪ ।

ಎಂಟೆರಡು ಮಾರುತರು ಎಡೆಎಡೆಗೆ ಬರುತಿರಲು ।
ನೆಂಟರೈವರು ಕೂಡಿ ಆಕ್ರಮಿಸುತಿಹರು ।
ದಾಂಟುವುದಶಕ್ಯ ಎರಡೊಂದು ಬಲೆಗಳಲಿ ।
ಕಂಟಕದಿ ಕಡುತಾಪದಿಂದ ಬಳಲುವರು ॥

ಆರೆರಡು ದಂತಿಗಳು ದಾರಿಯಲಿ ನಿಂದಿಹವು ।
ಆರುಮೂರು ತುರುಗಳು ದಾರಿಗೊಂಡವು ।
ಮೂರೆರಡು ನೀಡಾಡಿ ಕೋರುವುದು ಎನ್ನಾಣೆ ।
ಸಾರಿ ಏನೇನಹುದೆಂಬುದನು ನೋಡು ॥

ಪರರನ್ನು ನಿಂದಿಸದೆ ಪರಕೆ ಯೋಗ್ಯನಾಗಿ ।
ಪರರ ಪಾಪ ನೀ ಕಟ್ಟಿಕೊಳದೆ ।
ಪರಮಾತ್ಮ ಕಾಗಿನಲೆಯಾದಿಕೇಶವರಾಯ ।
ಪರಹಿತಕೆ ಸಖನೆಂದು ಭಜಿಸೆಲೋ ಮನುಜ ॥

ವಿವರಣೆ: ೮ + ೨ = ೧೦ ವಾಯುಗಳು (೫ ಪ್ರಾಣವಾಯುಗಳು + ೫ ಉಪವಾಯುಗಳು) ನಡನಡುವೆ ಬರುತ್ತಿರಲು, ಪಂಚಕರ್ಮೇಂದ್ರಿಯಗಳು (ನಂಟರು) ಒಟ್ಟಾಗಿ ಆಕ್ರಮಿಸುತ್ತಿದ್ದಾರೆ; ೨ + ೧ = ೩ ಈಷಣಗಳ (ಹೆಣ್ಣು, ಹೊನ್ನು, ಮಣ್ಣು) ಬಲೆಯಿಂದ ಬಿಡಿಸಿ ಕೊಳ್ಳುವುದು ಕಷ್ಟ; ಕ್ಲೇಶಗಳು ಕಾಡಲಾಗಿ ಬಳಲುತ್ತಾರೆ. (೧)

೬ + ೨ = ೮ ಮದ(ದಂತಿ)ಗಳು (ಧನ, ಕುಲ, ವಿದ್ಯಾ, ರೂಪ, ಯೌವನ, ಬಲ, ಪರಿವಾರ, ಅಧಿಕಾರ) ಸಾಧನೆಯ ದಾರಿಯಲ್ಲಿ ಅಡ್ಡವಾಗಿವೆ; ೬ + ೩ = ೯ ಭಕ್ತಿ(ತುರು)ಗಳು (ಶ್ರವಣ, ಕೀರ್ತನ, ಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯ, ಸಖ್ಯ, ಆತ್ಮನಿವೇದನ) ದಾರಿ ಬಿಡುವಂತಾಗಿವೆ; ೩ × ೨ = ೬ ಶತ್ರುಗಳು (ಕಾಮ ಕ್ರೋಧಾದಿ ಅರಿಷಡ್ವರ್ಗಗಳು) ತೊಲಗುವಂತೆ ಮಾಡುವುದು.

ಗೋಪಾಲದಾಸರ ತಮ್ಮಂದಿರ ಕೃತಿ:

ಐದನೆಯ ತಿಂಗಳಲಿ ನಿಶ್ಚೈಸಿದೆ । ಪ ।
ಐದು ವರುಷದವನು ಮುಂದಾಹ ಶುಭಚರಿತೆ । ಅ.ಪ ।

ಐದರೊಳಗೊಂದರ ತನಯನೆನಿಸಿಕೊಂಡು ।
ಐದರೊಳಗೊಂದು ಮಾರ್ಗವನೆ ಪಿಡಿದು ।
ಐದರೊಳಗೊಂದು ರಾಶಿಯ ದಾರಿ ರಕ್ಕಸರ ।
ಐದೆರಡು ವರುಷಗಳ ಮ್ಲಾನಮಾಡಿದನೆಂದು ॥

ಐದರೊಳಗೊಂದರ ತನಯಳಿಗೆ ನಮಿಸಿ ಮ ।
ತ್ತೈದೆರಡು ಮುಖದವನ ಸುತವೀರನ ।
ಐದತ್ವನ್ನೈದಿಸಿ ಅರಿಯ ವರಪುರವನ್ನು ।
ಐದರೊಳಗೊಬ್ಬನ ಮುಖಕೆ ನೀಡಿದನೆಂದು ॥

ಐದು ಇಂದ್ರಿಯಗಳೊಳಗೊಂದರಧಿಪನ ಸುತನ ।
ಐದು ಪ್ರಾಣವನು ಸೆಳೆದವನ ರಥಕೆ ।
ಐದು ನಾಲ್ಕು ಗ್ರಹಗಳೊಳು ಕಡೆಯುವನೆನಿಸಿ ।
ಐದು ರೂಪದಿನವ್ಮೊಳಿದ್ದು ಸಲಹುವನೆಂದು ॥

ಐದ(ವ)ರೊಳು ನೋಡಲು ಅತಿಬಲವೆಂದೆನಿಸಿ ।
ಐದೊಂದು ರಥಿಕರೊಳು ಅಧಿಕನೆನಿಸಿ ।
ಐದು ಪುರ ಬೇಡೆ ಕೊಡದಿರಲವನ ಮಡದಿಯರ ।
ಐದು ಮುತ್ತೈತನ ದೂರಮಾಡಿದನೆಂದು ॥

ಐದು ಬಾಣನ ಗೆಲಿದ ಆಶ್ರಮವ ಕೈಕೊಂಡು ।
ಐದೊಂದು ಅರಿಗಳನು ಮುರಿದು ಮೆಟ್ಟಿ ।
ಐದು ಪ್ರಾಣರಿಗೆ ಗುರುಗೋಪಾಲವಿಟ್ಠಲನ ।
ಐದೆರಡು ನಾಮಗಳಿಂದ ಭಜಿಸುವನೆಂದು ॥

ವಿವರಣೆ : ಶ್ರವಣದಿಂದ ನಿಶ್ಚೈಸಿದೆ । ಪ ।

ಪ್ರಜೋತ್ಪತ್ತಿ ಎಂದರೆ ಬ್ರಹ್ಮ ಮುಂದೆ ಆಗುವ ಶುಭಚರಿತೆಯನ್ನು । ಅ.ಪ. ।
(ಚೈತ್ರದಿಂದ ಲೆಕ್ಕಮಾಡಿದರೆ ಶ್ರಾವಣ ೫ನೆಯ ತಿಂಗಳು; ಪ್ರಭವದಿಂದ ಲೆಕ್ಕಿಸಿದರೆ ಪ್ರಜೋತ್ಪತ್ತಿ ೫ನೆಯ ಸಂವತ್ಸರ)

ಪಂಚಭೂತಗಳಲ್ಲಿ ಒಂದಾದ ವಾಯುವಿನ ಪುತ್ರ ಹನುಮಂತನೆನಿಸಿಕೊಂಡು, ಪಂಚಭೂತಗಳಲ್ಲಿ ಒಂದಾದ ಆಕಾಶಮಾರ್ಗವನ್ನು ಹಿಡಿದು, ಪಂಚಭೂತಗಳಲ್ಲಿ ಒಂದಾದ ಜಲರಾಶಿಯನ್ನು (ಸಮುದ್ರವನ್ನು) ಲಂಘಿಸಿ, ರಾಕ್ಷಸರ ಧಾತುವನ್ನು ಎಂದರೆ ಶಕ್ತಿ ಸಾಮರ್ಥ್ಯಗಳನ್ನು (ಪ್ರಭವದಿಂದ ಲೆಕ್ಕಮಾಡಿದರೆ ಧಾತು ಸಂವತ್ಸರ ೧೦ ನೆಯದು) ಕುಗ್ಗಿಸಿದನೆಂದು (೧).

ಪಂಚಭೂತಗಳಲ್ಲಿ ಒಂದಾದ ಭೂಮಿಯ ಮಗಳಾದ ಸೀತೆಗೆ ನಮಸ್ಕರಿಸಿ, ದಶಮುಖನೆನಿಸಿದ ರಾವಣನ ವೀರನಾದ ಮಗನನ್ನು ಪಂಚತ್ವವೈದಿಸಿ ಎಂದರೆ ಸಂಹರಿಸಿ, ಶತ್ರುವಿನ ಶ್ರೇಷ್ಠವಾದ ಲಂಕಾಪಟ್ಟಣವನ್ನು ಪಂಚಭೂತಗಳಲ್ಲಿ ಒಂದಾದ ಅಗ್ನಿಯ ಮುಖಕ್ಕೆ ನೀಡಿದನೆಂದು (೨).

ಪಂಚೇಂದ್ರಿಯಗಳಲ್ಲಿ ಒಂದಾದ ಚಕ್ಷುರಿಂದ್ರಿಯದ ಸ್ವಾಮಿಯಾದ ಸೂರ್ಯನ ಮಗ ಕರ್ಣನ ಪಂಚ ಪ್ರಾಣಗಳನ್ನೂ ಸೆಳೆದ ಅರ್ಜುನನ ರಥಕ್ಕೆ ನವಗ್ರಹಗಳಲ್ಲಿ ಕಡೆಯವನಾದ ಕೇತು ಎಂದರೆ ಧ್ವಜದಲ್ಲಿರುವವನು ಎನಿಸಿ, ಪ್ರಾಣ ಅಪಾನ ವ್ಯಾನ ಉದಾನ ಸಮಾನಗಳೆಂಬ ಪ್ರಾಣವಾಯುಗಳ ರೂಪದಲ್ಲಿ ನಮ್ಮಲ್ಲಿದ್ದು ಕಾಪಾಡುವವನು ಎಂದು (೩).

ಧರ್ಮರಾಯ ಮೊದಲಾಗಿ ಐವರು ಪಾಂಡವರಲ್ಲಿ ಮಹಾಬಲಶಾಲಿಯೆನಿಸಿ, ಭೀಮಾರ್ಜುನಾದಿ ಆರು ಮಂದಿ ರಥಿಕರಲ್ಲಿ ಅಧಿಕನಾದವನೆನಿಸಿ, ಶಕ್ರಪ್ರಸ್ಥವೇ ಮೊದಲಾದ ಐದು ಊರುಗಳನ್ನು ಬೇಡಿ, ಕೌರವನು ಅವನ್ನು ಕೊಡದಿರಲು, ಅವನ ಪತ್ನಿಯರ ಮುತ್ತೈದೆತನ (ಹರಿದ್ರಾ, ಕುಂಕುಮ, ಬಳೆ, ಓಲೆ, ಮಾಂಗಲ್ಯ)ವನ್ನು ದೂರಮಾಡಿದನೆಂದು (೪).

ಮನ್ಮಥನನ್ನು ಗೆದ್ದ ಸಂನ್ಯಾಸಾಶ್ರಮವನ್ನು ಸ್ವೀಕರಿಸಿ, ಕಾಮ ಕ್ರೋಧ ಮುಂತಾದ ಅರಿಷಡ್ವರ್ಗಗಳನ್ನು ನಿವಾರಿಸಿ, ಪ್ರಾಣಾಪಾನಾದಿ ಪಂಚವಾಯುಗಳಿಗೆ ಗುರುವಾದ ಮುಖ್ಯಪ್ರಾಣನನ್ನು ಗೋಪಾಲವಿಟ್ಠಲನ ಮತ್ಸ್ಯ ಕೂರ್ಮ ಮೊದಲಾಗಿ ದಶಾವತಾರಗಳ ಹೆಸರುಗಳಿಂದ ಭಜಿಸುವನು ಎಂದು (೫).

ಭಾಗಣ್ಣದಾಸರ ಕೃತಿ : 'ತತ್ತ್ವಸಾರ'

ಒಗೆತನದೊಳು ಸುಖವಿಲ್ಲ, ಇದ
ಒಲ್ಲೆನೆಂದರೆ ನೀ ಬಿಡೆಯಲ್ಲ । ಪ ।

ಜಗದೊಳು ಹಗರಣ ಮಿಗಿಲಾಯಿತು ಪ
ನ್ನಗ ನಗ ನಗರ ನಿವಾಸ । ಅ.ಪ ।

ಮೂರು ಬಣ್ಣಗೆಯ ಮನೆಗೆ ಮೂರೆರಡು ಭೂತಗಳು
ಮೂರು ನಾಲ್ಕು ಪ್ರಾಕಾರಕ್ಕೆ ಮೂರಾರು ಛಿದ್ರಗಳು
ಮೂರು ಅವಸ್ಥೆ ದಿನಕೆ ಮೂರು ನೂರಾರ್ಹತ್ತರಲಿ
ಮೂರು ವಿಧದನ್ನದಿಂದ ಮೂರು ತಾಪಕ್ಕಾರೆ ॥ ೧ ॥

ಐದು ಮಂದಿ ಭಾವನವರು ಐದು ಮೈದುನರು ಕೂಡಿ
ಐದು ಪರಿ ತಾನಾಗಿ ಮಾವನೈದು ಕತ್ತಲೆಕೋಣೆ
ಗೈದುವಂತೆ ಮಾಡುವರು ಐದು ತಂದು ಬೆಚ್ಚಿಸುವರು
ಐದನೆ ಬೊಕ್ಕಸದ ಮನೆ ಎಲ್ಲಿದೆಯೊ ನಾ ಕಾಣೆ ॥ ೨ ॥

ಆರಾರು ಎರಡು ಸಾವಿರ ದಾರಿಯಲ್ಲಿ ಹೋಗಿ ಬರುವರು
ಆರು ಮೂರು ಮೂರು ಸಾವಿರದಾರುನೂರು ನಿತ್ಯದಿ
ಆರು ನಾಲ್ಕು ಮಂದಿ ಹಿರಿಯ ಪಾರುಪತ್ಯಗಾರರಿದಕೆ
ಆರು ಎರಡು ವಿಧದಲೆನ್ನ ಗಾರುಮಾಡುತಿಪ್ಪರೋ ॥ ೩ ॥

ಒಬ್ಬ ಬೆಳಕು ಮಾಡುವ ಮತ್ತೊಬ್ಬ ಕತ್ತಲೆಗೈದಿಸುವ
ಒಬ್ಬ ಎರಡೂ ಮಾಡುವ ಮೇಲೊಬ್ಬ ನಿಂತು ನೋಡುವ
ಒಬ್ಬ ಮೂವರ ಒಳೊಳಗೆ ಹಬ್ಬಿಕೊಂಡಿಪ್ಪವರಂತೆ
ಒಬ್ಬನ ಕಾಣದೆ ನಾ ತಬ್ಬಿಬ್ಬಿಗೊಳಗಾದೆ ॥ ೪ ॥

ಆರು ಹತ್ತರ ಮೂಲದಿ ಆರುಮಂದಿ ಬಿಡದೆ ಎನ್ನ
ಘೋರೈಸುವರೊ ಮರಳೊಂದು ವಿಚಾರ ಮಾಡಲೀಸರೊ
ಆರು ಮೂರು ವಿಧದ ಸೋಪಸ್ಕರ ಒಂದಾದರಿಲ್ಲ
ಆರೆ ಇಬ್ಬರು ಸವತೇರ ಹೋರಾಟವೇನೆಂಬೆ ॥ ೫ ॥

ವಿವರಣೆ : ಈ ಶರೀರ ಸತ್ವ (ಬಿಳುಪು), ರಜಸ್ಸು (ಕೆಂಪು) ಮತ್ತು ತಮಸ್ಸು (ಕಪ್ಪು) ಎಂಬ ೩ ಗುಣ (ಬಣ್ಣ)ಗಳಿಂದಾದುದು; ಪೃಥಿವಿ ಅಪ್ಪು ತೇಜಸ್ಸು ವಾಯು ಆಕಾಶ ಎಂಬ ೫ ಭೂತ(ವಸ್ತು)ಗಳಿಂದಾದುದು; ತ್ವಕ್ಕು ಚರ್ಮ ಮಾಂಸ ರುಧಿರ ಮೇದಸ್ಸು ಮಜ್ಜೆ ಅಸ್ಥಿ ಎಂಬ ೭ ಧಾತು(ಪ್ರಾಕಾರ)ಗಳಿಂದಾದುದು; ಕಣ್ಣುಗಳು ಕಿವಿಗಳು ಮೂಗಿನ ಹೊಳ್ಳೆಗಳು ಬಾಯಿ ಮೂತ್ರದ್ವಾರ ಗುದದ್ವಾರ ಎಂಬ ೯ ರಂಧ್ರ(ಛಿದ್ರ)ಗಳಿಂದಾದುದು; ಜಾಗೃತ್ ಸ್ವಪ್ನ ಸುಷುಪ್ತಿ ಎಂಬ ಅವಸ್ಥೆಗಳಲ್ಲಿ ನಡೆಯುವಂತಹುದು; ೩೬೦ ದಿನಗಳಲ್ಲಿ ಎಂದರೆ ವರ್ಷವಿಡೀ ಸಂಚಿತ ಆಗಾಮಿ ಪ್ರಾರಬ್ಧ ಎಂಬ ೩ ಕರ್ಮಫಲ(ಅನ್ನ)ಗಳನ್ನು ಉಣ್ಣಬೇಕಾಗಿದೆ; ಆಧ್ಯಾತ್ಮಿಕ ಆಧಿದೈವಿಕ ಆದಿಭೌತಿಕ ಎಂಬ ೩ ತಾಪಗಳನ್ನು ಸಹಿಸಲಾರದೆ ಇದ್ದೇನೆ. (೧)

ಈ ಸಂಸಾರದಲ್ಲಿ ಶ್ರವಣ ನಯನ ಘ್ರಾಣ ತ್ವಕ್ಕು ರಸನ ಎಂಬ ೫ ಜ್ಞಾನೇಂದ್ರಿಯಗಳು (ಭಾವನವರು), ವಾಕ್ ಪಾಣಿ ಪಾದ ಪಾಯು ಉಪಸ್ಥ ಎಂಬ ೫ ಕರ್ಮೇಂದ್ರಿಯಗಳು (ಮೈದುನರು) ಕೂಡಿ, ಮನಸ್ಸು ಬುದ್ಧಿ ಚಿತ್ತ ಅಹಂಕಾರ ಚೇತನ ಎಂಬ ಪಂಚವೃತ್ತಿಯಿಂದ ಕೂಡಿರುವ ಮನಸ್ಸು (ಮಾವ) ಇವೆಲ್ಲ ನನ್ನನ್ನು ತಾಮಿಸ್ರ ಅಂಧತಾಮಿಸ್ರ ಮೋಹ ಮಹಾಮೋಹ ನಿಧನ ಎಂಬ ೫ ಅವಿದ್ಯೆಗಳಿಗೆ (ಕತ್ತಲೆಕೋಣೆ) ನೂಕುತ್ತಿವೆ; ಶಬ್ದ ಸ್ಪರ್ಶ ರೂಪ ರಸ ಗಂಧಗಳೆಂಬ ಪ್ರಲೋಭನಗಳನ್ನು ಒಡ್ಡಿ ಹೆದರಿಸುವರು; ಅನ್ನಮಯ, ಪ್ರಾಣಮಯ, ಮನೋಮಯ ವಿಜ್ಞಾನ ಆನಂದಮಯವೆಂಬ ೫ ಕೋಶ(ಬೊಕ್ಕಸ)ಗಳಲ್ಲಿ ೫ ನೆಯ ಕೋಶ ಆನಂದಮಯ (ಬೊಕ್ಕಸ) ಎಲ್ಲಿದೆಯೋ ನಾನು ಕಾಣೆ. (೨)

ಈ ದೇಹವೆಂಬ ಪಟ್ಟಣಕ್ಕೆ ೬ × ೬ = ೩೬, ೩೬ × ೨ = ೭೨ ಸಾವಿರ ನಾಡಿ(ದಾರಿ)ಗಳಿವೆ; ಈ ನಾಡಿಗಳಲ್ಲಿ ಉಚ್ಛ್ವಾಸ ನಿಶ್ವಾಸಗಳ ಮೂಲಕ ದಿನವೊಂದಕ್ಕೆ ೬ × ೩ = ೧೮, ೧೮ + ೩ = ೨೧ ಸಾವಿರದ ಆರುನೂರು ವಾಯು

(ಹೋಗಿಬರುವವರು) ಆಡುತ್ತಿರುತ್ತದೆ. ಇದಕ್ಕೆ ಪಂಚಭೂತಗಳು, ಪಂಚ ತನ್ಮಾತ್ರಗಳು, ಪಂಚ ಕರ್ಮೇಂದ್ರಿಯಗಳು, ಪಂಚಜ್ಞಾನೇಂದ್ರಿಯಗಳು, ಮನಸ್ಸು, ಬುದ್ಧಿ, ಅಹಂಕಾರ, ಚಿತ್ತ ಎಂಬ ೬×೪=೨೪ ತತ್ತ್ವಗಳು (ಪಾರುಪತ್ಯಗಾರರು), ಧನ ಕುಲ ವಿದ್ಯಾ ರೂಪ ಯೌವನ ಬಲ ಪರಿವಾರ ಅಧಿಕಾರ ಎಂಬ ೮ ಮದಗಳನ್ನು ಪ್ರೇರಿಸಿ ನನ್ನನ್ನು ಹಾಳುಮಾಡುತ್ತಿದ್ದಾರೆ. (೩)

ಈ ದೇಹದಲ್ಲಿ ಜೀವದ ಸಾಧನೆಗಾಗಿ ವಿಶ್ವಾದಿರೂಪಗಳಿಂದ ಪರಮಾತ್ಮನು ಮಾಡುವ ವ್ಯಾಪಾರಗಳು : ವಿಶ್ವನಾಮಕ ಪರಮಾತ್ಮನು ದಕ್ಷಿಣಾಕ್ಷಿಸ್ಥಿತನಾಗಿ ಜಾಗ್ರದವಸ್ಥೆಗೆ (ಬೆಳಕು) ಪ್ರೇರಕನಾಗಿದ್ದಾನೆ; ಪ್ರಾಜ್ಞನಾಮಕ ಪರಮಾತ್ಮನು ಹೃದಯಸ್ಥಿತನಾಗಿ ಜೀವನಿಗೆ ಗಾಢನಿದ್ರೆಗೆ (ಕತ್ತಲೆ) ಪ್ರೇರಕನಾಗಿದ್ದಾನೆ; ತೈಜಸನಾಮಕ ಪರಮಾತ್ಮನು ಕಂಠ ಪ್ರದೇಶದಲ್ಲಿದ್ದು ಸುಷುಪ್ತಿಗೆ ಪ್ರೇರಕನಾಗಿದ್ದಾನೆ; ತುರ್ಯನಾಮಕ ಪರಮಾತ್ಮನು ಶಿರಸ್ಸಿನ ಮೇಲಿದ್ದು ಆನಂದವುಂಟುಮಾಡುತ್ತಾನೆ; ಒಬ್ಬನಾದ ಪರಮಾತ್ಮನು ಮೂವರಾದ ಆತ್ಮ, ಅಂತರಾತ್ಮ, ಜ್ಞಾನಾತ್ಮ ರೂಪಗಳಲ್ಲಿ ಒಳಗೆ ವ್ಯಾಪಿಸಿದ್ದಾನೆ; ಹೀಗೆ ವಿಶ್ವಾದಿಯಾದ ೮ ರೂಪಗಳಿಂದ ನನ್ನ ಒಳಹೊರಗೆ ಮಾಡುವ ವ್ಯಾಪಾರಗಳಿಂದಾಗಿ ನಾನು ದಿಕ್ಕು ತೋರದೆ ಹೋದೆ. (೪)

೬+೧೦=೧೬ ಕಳೆಗಳನ್ನು (ಪಂಚಭೂತಗಳು, ಪಂಚತನ್ಮಾತ್ರಗಳು, ಪಂಚ ಜ್ಞಾನೇಂದ್ರಿಯಗಳು, ಮನಸ್ಸು) ಉಳ್ಳದು ಲಿಂಗಶರೀರ. ಇದು ಜೀವನ ಸ್ವರೂಪಶರೀರಕ್ಕೆ ಸುತ್ತ ಹೊಟ್ಟೆನಂತೆ ಆವರಿಸಿಕೊಂಡಿದೆ; ಕಾಮ ಕ್ರೋಧಾದಿ ಅರಿಷಡ್ವರ್ಗಗಳು ಗಾಬರಿಪಡಿಸುತ್ತಿವೆ. ೬+೩=೯ ವಿಧದ ಭಕ್ತಿಗಳಲ್ಲಿ (ಶ್ರವಣ ಕೀರ್ತನ, ಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯ, ಸಖ್ಯ, ಆತ್ಮನಿವೇದನ) ಮುಕ್ತಿಮಾರ್ಗದ ಬುತ್ತಿಯಾಗಿ ಒಂದಾದರೂ ಇಲ್ಲ. ಆಸೆ ಮತ್ತು ಲಜ್ಜೆಗಳು (ಸವತಿಯರು) ಹೋರಾಟ ನಡಸುತ್ತಿವೆ. (೫)

ಪಾರಿಹಾರಿಕಿ ಅಥವಾ ಯೋಗಮಾಲೆ

ಪ್ರಹೇಳಿಕೆಗಳ ಒಂದು ಕವಲು ಪಾರಿಹಾರಿಕಿ ಅಥವಾ ಯೋಗಮಾಲೆ ಎಂಬ ಹೆಸರಿನ ('ಕಾವ್ಯಾದರ್ಶ' ೩-೧೦೪) ಗೂಢಾರ್ಥದ ದೇವತಾಸ್ತುತಿಗಳು ಮತ್ತು ಗೂಢಾರ್ಥದ ಪುರುಷಪ್ರಶಂಸೆ ವಿಡಂಬನೆಗಳು. ಈ ಕವಲಲ್ಲಿ ಮೊದಲನೆಯ ಗುಂಪು, ಎಂದರೆ ಗೂಢಾರ್ಥದ ದೇವತಾಸ್ತುತಿ ಎನ್ನುವುದು ತಕ್ಕಮಟ್ಟಿಗೆ ಗಣ್ಯವಾದ್ದು. ಈ ಗುಂಪಿನ ಕೆಲವು ರಚನೆಗಳನ್ನು ಲಕ್ಷಿಸಿ, ಅವನ್ನು ಆ ಹೆಸರಿನಿಂದ ಮೊದಲು ಕರೆದವರು ಪ್ರಾಯಶಃ 'ಕರ್ಣಾಟಕ ಕವಿಚರಿತೆ'-ಕಾರರೇ. ಆ ಮಾದರಿಯ ಎರಡನೆಯ ಗುಂಪಿನ ರಚನೆಗಳಿಗೆ, ಆ ಸೂಚನೆಯನ್ನೇ ಆದರ್ಶವಾಗಿಟ್ಟುಕೊಂಡು, ಇಲ್ಲಿ ಗೂಢಾರ್ಥದ ಪುರುಷಪ್ರಶಂಸೆ, ವಿಡಂಬನೆ ಎಂಬುದಾಗಿ ಕರೆದಿದೆ. ಈ ಬಗೆಯ ಪದ್ಯಗಳನ್ನು ಒಳಕೊಂಡ ಒಂದು ಸಮಗ್ರ ಕೃತಿಯ ಸ್ವರೂಪವನ್ನು ಪೀಠಿಕೆಯಲ್ಲಿ ವಿವರಿಸುತ್ತ, ಇವು 'ಒಗಟಿಯ ರೀತಿಯಿಂದ' ನಿರೂಪಿಸಿದವು ಎಂದೂ "ಈ ರೀತಿಯಾದ ಮಾತುಗಳನ್ನು ನೇಯಾರ್ಥವೆಂಬ ಹೆಸರಿನಿಂದ ಸಂಸ್ಕೃತಕವಿಗಳು ಕಾವ್ಯದೋಷಗಳ ನಡುವೆ ಒಂದಾಗಿ ಪರಿಗಣಿಸಿರುತ್ತಾರೆ" ಎಂದೂ ಬರೆದಿರುವುದುಂಟು. ಅಲ್ಲಿಯೇ ಮುಂದುವರಿದು "ಲಲಿತಬಂಧವಾದ ಕಾವ್ಯದ ನಡುವೆ ಈ ವಿಧವಾದ ನೇಯಾರ್ಥಕಲ್ಪನೆಯು ದುಷ್ಟವೆಂದೆನಿಸುವುದಲ್ಲದೆ ನೇಯಾರ್ಥವೆಂಬ ಕಲ್ಪನಾ-ಪ್ರಕಾರವನ್ನೇ ತಿಳಿಸುವುದಕ್ಕಾಗಿ ಈ ಪದ್ಯಗಳು ರಚಿಸಲ್ಪಟ್ಟಿರುವುದರಿಂದ ಈ ಕಲ್ಪನಾರೀತಿಯು ದೋಷದ ಪ್ರಕರಣದಲ್ಲಿ ಸೇರುವುದಿಲ್ಲ, ಗುಣದ ಗುಂಪಿನಲ್ಲಿಯೇ ಸೇರತಕ್ಕದ್ದಾಗಿರುತ್ತೆ" ಎಂದೂ ಹೇಳಿದೆ. ಇದು ವಿಚಾರಣೀಯ.

ಮೇಲೆ ಸೂಚಿಸಿರುವ ಎರಡು ಗುಂಪಿನ ರಚನೆಗಳೂ ಒಗಟುಗಳೆಂಬ ಒಂದು ದೊಡ್ಡ ಪ್ರಕಾರಕ್ಕೆ ಸೇರಿದವು ಎನ್ನುವ ವಿಷಯದಲ್ಲಿ ಸಂದೇಹವಿಲ್ಲ. ಇವನ್ನು ನೇಯಾರ್ಥದ ದೋಷದ ಲಕ್ಷ್ಯಗಳೆಂದು ಗ್ರಹಿಸುವುದು ಮಾತ್ರ ಒಪ್ಪತಕ್ಕುದಲ್ಲ. ಏಕೆಂದರೆ ನೇಯದ ದೋಷ ಘಟಿಸುವುದು ಕಾರಕ ಹಾಗೂ ಕ್ರಿಯೆಗಳಿಗೆ ಇರಬೇಕಾದ ಸಂಬಂಧ ಕಲ್ಪನೆಯಲ್ಲಿ ನಡುವಣ ಅಧ್ಯಾಹಾರ, ಎಂದರೆ ವಾಕ್ಯದಲ್ಲಿ ಇಲ್ಲದಿರುವ ಪದಗಳನ್ನು ಅರ್ಥಪೂರ್ತಿಗಾಗಿ ಊಹಿಸಿಕೊಂಡು ಸೇರಿಸುವುದು, ಸಂದರ್ಭಕ್ಕೆ ಹೊಂದದೆ ಹೋದ ಪಕ್ಷದಲ್ಲಿ-ಎನ್ನುವುದು ವಿದಿತವಿದೆ (ಭಾಮಹನ

'ಕಾವ್ಯಾಲಂಕಾರ', ೧–೩೮; 'ಕವಿರಾಜಮಾರ್ಗ' ೧೧–೧೦೧; 'ಕಾವ್ಯಾವಲೋಕನ', ಸೂ. ೧೧೯; 'ಶಬ್ದಮಣಿ ದರ್ಪಣ', ಸೂ. ೧೫೬). ಪ್ರಸ್ತುತ, ಈ ಒಗಟಿನ ಪದ್ಯಗಳಲ್ಲಿ, ಬಾಂಧವ್ಯಸೂಚಕವಾಗಿ ಬಂದಿರುವ ಶಬ್ದಗಳ ಅರ್ಥ ಆಯಾ ಕಥಾಂಶ ಅಥವಾ ಪೌರಾಣಿಕ ಸಂದರ್ಭದ ತಿಳಿವಳಿಕೆಯೊಂದಿಗೆ ಬೆಸೆದುಕೊಂಡಿರುತ್ತಿದ್ದು, ಅದು ಸ್ಪಷ್ಟವಾದರೆ ಅರ್ಥವೂ ಸ್ಪಷ್ಟವಾಗುವಂತೆ ಸಂಯೋಜನೆಯಿರುತ್ತದೆ. ಹಾಗೆ ಸ್ಪಷ್ಟವಾಗುವುದು ಒಗಟನ್ನು ಬಿಡಿಸುವವನ ವ್ಯುತ್ಪತ್ತಿಯನ್ನು ಅವಲಂಬಿಸಿರುತ್ತದೆ. ಆ ದೃಷ್ಟಿಯಿಂದ ಇಲ್ಲಿಯ ವಾಕ್ಯರಚನೆಯಲ್ಲಿ ಕ್ಲಿಷ್ಟತೆಯಿರುವುದೆಂದು ಹೇಳಬಹುದಲ್ಲದೆ, ನೇಯಾರ್ಥದ ದೋಷಲಕ್ಷಣವಾದ ಅಸ್ಪಷ್ಟತೆ, ಸಂದಿಗ್ಧತೆಗಳು ಇರುವುವೆಂದು ಹೇಳುವಂತಿಲ್ಲ. ಒಂದು ಪಕ್ಷ ಉದ್ದೇಶಿತವಾದ, ಮುಖ್ಯವಾದ ಆಶಯದಲ್ಲಿ ಒಂದಕ್ಕಿಂತ ಹೆಚ್ಚಿನ ಅರ್ಥಗಳು ಹೊರಡುವಂತಿದ್ದರೂ, ಅವೂ ಸಹಜವಾದ ಸರಿಯಾದ ಅರ್ಥಗಳಾಗಿಯೇ ಗ್ರಾಹ್ಯವಾಗುತ್ತವೆಯಾದ್ದರಿಂದ, ಅಧ್ಯಾಹಾರದ ಸಂದಿಗ್ಧತೆಯೆಂದು ಪರಿಗಣಿಸಬೇಕಾಗಿಲ್ಲ.

ಕೆಲವರು ಈ ಬಗೆಯ ರಚನೆಗಳನ್ನು 'ಮುಂಡಿಗೆಗಳು' ಎಂಬುದಾಗಿ ಕರೆದಿರುವುದುಂಟು. ಕನಕದಾಸರ ಕೀರ್ತನೆಗಳಲ್ಲಿ ಇಂತಹ ಕೆಲವು ರಚನೆಗಳಿವೆ; ಇವನ್ನೂ ಅವರವೇ ಆದ 'ಬೆಡಗು'ಗಳೆಂಬ ರಚನೆಗಳನ್ನೂ ಒಗ್ಗೂಡಿಸಿ ಮುಂಡಿಗೆಗಳೆಂಬ ಹೆಸರಿನಲ್ಲಿ ವಿಚಾರಮಾಡಿರುವುದು ಕಾಣುತ್ತದೆ. 'ಮುಂಡಿಗೆ', 'ಮುಡಿಗೆ' ಎಂಬ ಮಾತುಗಳು ಸವಾಲು, ಸವಾಲುಪದ್ಯಗಳು ಎಂಬ ಆಶಯವನ್ನು ಕೊಡುವ ಮಾತುಗಳಾಗಿ ಬಳಕೆಯಾಗಿರುವ ನಿದರ್ಶನಗಳಿವೆ. ಗೂಢಾರ್ಥದ ದೇವತಾಸ್ತುತಿ, ಪುರುಷಪ್ರಶಂಸೆ, ವಿಡಂಬನೆಗಳೂ ಕೆಲಮಟ್ಟಿಗೆ ಸವಾಲು, ಸವಾಲು ಪದ್ಯಗಳಾಗಬಹುದು. ಆದರೆ ಬೆಡಗುಗಳನ್ನೂ ಒಳಕೊಂಡಂತೆ 'ಮುಂಡಿಗೆ' ಬಳಕೆಯಾಗುತ್ತಿರುವುದರಿಂದ ಇಲ್ಲಿ, ಆ ಪ್ರಕಾರದ ಶೀರ್ಷಿಕೆಯನ್ನು ಗ್ರಹಿಸದೆ ಬಿಟ್ಟಿದೆ.

ದಂಡಿಯ 'ಕಾವ್ಯಾದರ್ಶ'ದ ಪ್ರಹೇಳಿಕೆಗಳಲ್ಲಿ ಒಂದಾಗಿ ನಿರೂಪಿತವಾಗಿರುವ ಪಾರಿಹಾರಿಕೆ ಅಥವಾ ಯೋಗಮಾಲೆಯ (೩–೧೦೪ ಮತ್ತು ಅದರ ರತ್ನಶ್ರೀ ಟೀಕೆ) ಲಕ್ಷಣವನ್ನೇ ಎಲ್ಲ ವಿಧದಲ್ಲಿಯೂ ಪೂರೈಸುವುದರಿಂದ ಪ್ರಸ್ತುತ ಪರಿಶೀಲನೆಯಲ್ಲಿ ಈ ಗುಂಪಿನ ರಚನೆಗಳನ್ನು ಆ ಹೆಸರಿನಿಂದಲೇ ಕರೆದಿದೆ.

ಗೂಢಾರ್ಥದ ದೇವತಾಸ್ತುತಿಗಳು ಎರಡು ತೆರನಾದವು. ಕವಿಗೆ ಇಷ್ಟವಾದ ಇಲ್ಲವೆ ಆತ ಉದ್ದೇಶಿಸಿದ ದೈವದ ಹೆಸರು ಪದ್ಯಾಂತದಲ್ಲಿ ನೇರವಾಗಿ ಉಕ್ತವಾಗಿದ್ದು, ಆ ದೈವದ ಹೆಸರಿಗೆ ಹಿಂದೆ ಬರುವ ಬಾಂಧವ್ಯ ಸೂಚಕವಾದ ಉಕ್ತಿಗಳು ಬಲುಮಟ್ಟಿಗೆ ಗೂಢವಾಗಿರುತ್ತವೆ. ಇದು ಒಂದು ರೀತಿ. ದೈವದ ಹೆಸರೂ ಬಾಂಧವ್ಯ ಸೂಚಕವಾದ ಉಕ್ತಿಗಳೂ ಬಲುಮಟ್ಟಿಗೆ ಸಮಾನವಾಗಿ ಗೂಢವಾಗಿರುತ್ತದೆ. ಇದು ಇನ್ನೊಂದು ರೀತಿ. ಓದುಗರು ಈ ಎರಡು ಸಂದರ್ಭಗಳಲ್ಲಿಯೂ, ಸಂದರ್ಭವನ್ನು ತಮ್ಮ ವ್ಯುತ್ಪತ್ತಿಯ ಬಲದಿಂದ ಊಹಿಸಿ, ಗುರುತಿಸಿ, ಗೂಢಾರ್ಥವನ್ನು ಭೇದಿಸಬೇಕಾಗುತ್ತದೆ, ಆಶಯವನ್ನು ಸ್ಪಷ್ಟಪಡಿಸಿಕೊಳ್ಳಬೇಕಾಗುತ್ತದೆ. ಈ ವ್ಯುತ್ಪತ್ತಿ ಅವರ ಗಾಢವಾದ ಸಾಹಿತ್ಯಾಭ್ಯಾಸ, ಪುರಾಣೇತಿಹಾಸಗಳ ಪರಿಚಯವನ್ನು ಅವಲಂಬಿಸಿರುತ್ತದೆ.

ಸಾಮಾನ್ಯವಾಗಿ ಎಲ್ಲ ಗೂಢಾರ್ಥದ ದೇವತಾಸ್ತುತಿಗಳಲ್ಲಿಯೂ ಇಷ್ಟವಾದ ಅಥವಾ ಉದ್ದೇಶಿಸಿದ ದೈವದ ಹೆಸರನ್ನು, ಆ ದೈವದ ಸಂಬಂಧವಾಗಿ ಸಾಧ್ಯವಿರುವಂತಹ ನೇರವಾದ ಇಲ್ಲವೆ ಸುತ್ತುಬಳಸಿನ ಬಾಂಧವ್ಯದ ಕುಣಿಕೆಗಳನ್ನು ಹೆಣೆಯುವ ಚಮತ್ಕಾರದಿಂದ ಸಿದ್ಧಪಡಿಸಿರುತ್ತದೆ. ಆಯ್ದುಕೊಂಡ ಪದ್ಯಜಾತಿಯ ದೀರ್ಘತೆಯ ಪ್ರಮಾಣವನ್ನು ಅನುಸರಿಸಿ, ಈ ಕುಣಿಕೆಗಳು ಹೆಣೆದುಕೊಳ್ಳುತ್ತವೆ. ಕವಿ ಒಂದು ಇತಿಮಿತಿಯಲ್ಲಿ ಸಹಜವೋ ಕೃತಕವೋ ಆದ ರೀತಿಯಲ್ಲಿ ಬಾಂಧವ್ಯದ ಕುಣಿಕೆಗಳನ್ನು ಹೆಣೆದಿರುವುದರಿಂದ, ಎಳೆಗಳನ್ನು ಕಲ್ಪಿಸಿರುವುದರಿಂದ, ಕಲ್ಪನೆ ಸ್ವೇಚ್ಛೆಯಾಗಿಯೂ ವಿವಿಧ ವಾಗ್ವೈಚಿತ್ರ್ಯಗಳಿಂದ ನಿಬಿಡವಾಗಿಯೂ ಇರುತ್ತದೆ. ಒಟ್ಟಿನಲ್ಲಿ ಕವಿತೆಗೆ ಭಾವದ ಆವೇಶ ಸ್ಫೂರ್ತಿಯಾಗಿರದೆ, ಉದ್ದೇಶಪೂರ್ವಕವಾದ ಚಮತ್ಕಾರದ ಪ್ರದರ್ಶನ ಇಲ್ಲಿ ಎದ್ದು ತೋರುವ ಅಂಶವಾಗಿರುತ್ತದೆ.

ಕನ್ನಡ ಸಾಹಿತ್ಯದಲ್ಲಿ ಗೂಢಾರ್ಥದ ದೇವತಾಸ್ತುತಿಗಳು ಈವರೆಗೆ ನಡುಗನ್ನಡ ಸಾಹಿತ್ಯದ ಅವಧಿಯಲ್ಲಿಯೇ ಹೆಚ್ಚಾಗಿ ಕಂಡುಬಂದಿವೆ. ಇದೇ ಬಗೆಯವು ಪುರುಷಪ್ರಶಂಸೆ–ವಿಡಂಬನೆಗಳು ಸಹ. ಮುಖ್ಯಲಕ್ಷಣದಲ್ಲಿ

ದೇವತಾಸ್ತುತಿಗಳಂತೆಯೇ ಇವೂ ಬಾಂಧವ್ಯದ ಕುಣಿಕೆಗಳಿಂದ ರಚಿತವಾಗಿದ್ದರೂ, ಸ್ವಲ್ಪ ಹೆಚ್ಚಿನ ವೈಚಿತ್ರ್ಯಗಳು ಇಲ್ಲಿ ಪ್ರಕಟಗೊಂಡಿವೆಯೆನ್ನಬಹುದು; ವಿರಳವಾಗಿ ಬಾಂಧವ್ಯದ ಬೆಸುಗೆಗಳನ್ನು ತಾರದೆ, ಬೇರೆ ಚಮತ್ಕಾರ ವಿಶೇಷಗಳನ್ನು ಹೂಡಿರುವುದೂ ಉಂಟು. ಕೊನೆಗೆ ಅಂಕಿತದಂತಹ ಒಂದು ಮಾತು ಪ್ರತಿಪದ್ಯದಲ್ಲಿಯೂ ಆವೃತ್ತಿಗೊಂಡಿರಬಹುದು. ಈಗ ತಿಳಿದ ಮಟ್ಟಿಗೆ 'ರಾತ್ರಿಯ ನಲ್ಲನ ಪದ್ಯ' ಎಂಬುದರ ಪದ್ಯಗಳು ಈ ತೆರನಾದವು.

ಈ ಸಮಗ್ರಕೃತಿ ಇಂತಹ ಗೂಢಾರ್ಥದ ಪದ್ಯಗಳಿಂದಲೇ ರೂಪುಗೊಂಡಿರಬಹುದು, ಇಲ್ಲವೆ ಸಂಧ್ಯಾದಿಯ ಪದ್ಯವಾಗಿ ನಿಯತವಾಗಿ ಎನ್ನುವಂತೆ ಅವು ಬಂದಿರಬಹುದು. ಈ ಎರಡು ರೀತಿಗಳಲ್ಲದೆ ಕಾವ್ಯದ ಹರವಿನಲ್ಲಿ ಎಲ್ಲಿಯಾದರೂ ಬಿಡಿಯಾಗಿಯೋ ಇಲ್ಲವೆ ಪ್ರತ್ಯೇಕವಾದೊಂದು ಕವಿತೆಯಾಗಿಯೋ ಈ ರಚನೆಗಳು ಬಂದಿರುವುದೂ ಸಾಧ್ಯ.

೧. ಸಮಗ್ರಕೃತಿ ಗೂಢಾರ್ಥದ ಪದ್ಯಗಳಿಂದಾಗಿರುವುದು : ಚೆನ್ನಕೇಶವನ ಸ್ತುತಿ ವಿಷಯವಾಗಿರುವ 'ಭಾವಾರ್ಥಶತಕ' (ಸು. ೧೭೦೦) ''ಒಗಟಿಯ ರೂಪವಾದ ಕಂದಗಳು'' ಸೇರಿದ ಕೃತಿ ಎಂಬುದಾಗಿ ಕವಿಚರಿತೆ ಕಾರರು ಉಲ್ಲೇಖಿಸಿರುವರಾದರೂ (ಕಕಚ.ಸಂ. ೨–ಪು. ೫೭೨) ವಿವರಣೆಯೇನೂ ಒದಗಿಸಿಲ್ಲ. ಪ್ರಾಯಃ ಈ ಕೃತಿ ಈಗ ದೊರೆಯುವುದಿಲ್ಲ. ನೂರು ಕಂದಪದ್ಯಗಳ ಒಂದು ರಚನೆಯಾಗಿರಬೇಕು ಎಂದು ಮಾತ್ರ ಊಹಿಸಬಹುದು. ಯಾವುದಾದರೊಂದು ನಿರ್ದಿಷ್ಟ ಕೃತಿಯ ಪ್ರತಿಯೊಂದು ಸಂಧ್ಯಾದಿಯ ಗೂಢಾರ್ಥದ ದೇವತಾಸ್ತುತಿಗಳನ್ನೆಲ್ಲ ಆ ಕೃತಿಯಿಂದ ಪ್ರತ್ಯೇಕಿಸಿ, ಸ್ವತಂತ್ರಕೃತಿಯನ್ನಾಗಿ ಮಾಡಿರುವುದನ್ನು ಅಜ್ಞಾತಕರ್ತೃಕವಾದ 'ಮಣ್ಣೇಶ್ವರಕಾವ್ಯದ ನಾಂದ್ಯ' ಎಂಬ ಕೃತಿಯಲ್ಲಿ (ಸು. ೧೬೦೦) ನಾವು ಕಾಣಬಹುದಾಗಿದೆ. ಈ ಕೃತಿಯಲ್ಲಿ ಇಂತಹ ೧೩ ಸ್ತುತಿಪದ್ಯಗಳಿವೆ. ಪ್ರತಿ ಪದ್ಯಕ್ಕೂ ಅಲ್ಲಿಯೇ, ಅಜ್ಞಾತಕರ್ತೃಕವೇ ಆದ ಒಂದು ಟೀಕೆಯೂ ಇದೆ. ಈ ನಾಂದ್ಯಪದ್ಯಗಳ ಸಂಗ್ರಾಹಕನೇ ಆ ಟೀಕೆಯನ್ನೂ ಬರೆದಿರಬಹುದೇ ಹೇಗೆಂದು ತಿಳಿಯದು. ಅಲ್ಲದೆ ಮೂಲಗ್ರಂಥವಾದ 'ಮಣ್ಣೇಶ್ವರಕಾವ್ಯ' ಯಾವುದೆನ್ನುವುದು ತಿಳಿಯದು. ಈ ಬಗ್ಗೆ ಯಾವ ವಿವರವೂ ದೊರೆಯುತ್ತಿಲ್ಲ. ಈ ನಾಂದ್ಯದ ಪದ್ಯಗಳಿಗೂ ಈಚಿನ ಕಾಲದ ಕವಿ ನೂರೊಂದನ (ಸು. ೧೭೪೦) 'ಸೌಂದರ ಚಾರಿತ್ರ' ಅಥವಾ 'ಸೌಂದರಕಾವ್ಯ'ದ ಸಂಧ್ಯಾದಿಯ ಗೂಢಾರ್ಥದ ಪದ್ಯದ್ವಿತಯದಲ್ಲಿ ಸಟೀಕವಾಗಿರುವ ಮೊದಲನೆಯ ಪದ್ಯಗಳಿಗೂ ಬಲುಮಟ್ಟಿಗೆ ಸಾಮ್ಯವಿದೆ. ಅದನ್ನು ಆ ಕೃತಿಯ ಸಂದರ್ಭದಲ್ಲಿ ಪ್ರತ್ಯೇಕವಾಗಿ ಚರ್ಚಿಸಲಾಗುವುದು. ಇಲ್ಲಿ ಪದ್ಯಗಳನ್ನು ಉದ್ಧರಿಸುವಾಗ ಅವಶ್ಯವಿರುವೆಡೆ ಪಾಠಭೇದಗಳನ್ನು ಮಾತ್ರ ಸೂಚಿಸಿದೆ.

ಸ್ವತಂತ್ರ ರಚನೆಗಳು :

'ಮಣ್ಣೇಶ್ವರ ಕಾವ್ಯದ ನಾಂದ್ಯ'ದಲ್ಲಿ :

ಇದರ ಓಲೆಯ ಪ್ರತಿ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದಲ್ಲಿದ್ದು (ಕೆ. ೧೬೯/೧೩; ಪತ್ರಗಳು ೫೭–೬೦), ಅಲ್ಲಿಂದ ಆರಂಭದ ನಾಲ್ಕು ಪದ್ಯಗಳನ್ನು, ಮುಂದೆ ಲಕ್ಷ್ಯಗಳಾಗಿ ಉದ್ಧರಿಸಿಕೊಟ್ಟಿದೆ; ಕೆಲವು ಸಂಪಾದಕೀಯ ತಿದ್ದುಪಡಿಗಳೊಂದಿಗೆ, ಅಲ್ಲಿಯ ಟೀಕೆಯನ್ನೇ ಇಲ್ಲಿ 'ವಿವರಣೆ' ಎಂಬುದಾಗಿ ಎತ್ತಿ ಬರೆದಿದೆ.

ತರುವುರದನ ತಂದೆ ತನುಜೆಯ ಮನೆ ಸಖ । ತರುಣನಮ್ಮನ ವರನಣುಗ ।
ನರಸಿಯಾತ್ಮಜನ ಮಾವನ ಮಗನುರುಪಿದ । ಗುರುವೆ ಮಣ್ಣೇಶ ಮಾಂ ತ್ರಾಹಿ ॥ ೧ ॥

ವಿವರಣೆ : ತರುವುರದನ–ಚಂದ್ರನ, ತಂದೆ–ಸಮುದ್ರದ, ತನುಜೆಯ–ಲಕ್ಷ್ಮಿಯ, ಮನೆಯ–ತಾವರೆಯ, ಸಖ–ಸೂರ್ಯನ, ತರುಣ–ಕರ್ಣನ, ಅಮ್ಮನ–ಕೊಂತಿಯ, ವರನ–ಪಾಂಡವನ [ಪಾಂಡುವಿನ], ಅಣುಗನ–ಅರ್ಜುನನ, ಅರಸಿಯ–ಸುಭದ್ರೆಯ, ಆತ್ಮಜನ–ಅಭಿಮನ್ಯುವಿನ, ಮಾವನ–ವಿಷ್ಣುವಿನ, ಮಗನ–ಮನ್ಮಥನ, ಉರುಪಿದ–ದಹಿಸಿದಂಥ, ಮಣ್ಣೇಶ–ಚಿತ್ಸೃಷ್ಟಿಗೆ ಕರ್ತೃವಾದಂಥ, ಗುರುವೆ–ಎಲೆ ಆಚಾರ್ಯನೆ, ಮಾಂ–ಎನ್ನನು, ತ್ರಾಹಿ–ರಕ್ಷಿಸು. ['ಸೌಂದರಕಾವ್ಯ'ದ ಹಸ್ತಪ್ರತಿಯಲ್ಲಿ ತರುಉದರನ–ಚಂದ್ರನ ಎಂದಿದೆ.]

ದಿಟ್ಟಿಯಿಂ ಕೇಳ್ವನ ಹೊಟ್ಟೆಗುಂಬನ ಬೆನ್ನ । ಮೆಟ್ಟಿ ಗಮಿಪನಮ್ಮನೊಡನೆ ।
ಹುಟ್ಟಿದವನ ಅಜೀಯಟ್ಟಿದವಗೆ ಭೋಗಂ । ಗೊಟ್ಟ ಮಣ್ಣೇಶ ಮಾಂ ತ್ರಾಹಿ ॥ ೨ ॥

ವಿವರಣೆ : ದಿಟ್ಟಿಯಿಂ ಕೇಳ್ವನ–ಸರ್ಪನ, ಹೊಟ್ಟೆಗುಂಬನ–ನವಿಲಿನ, ಬೆನ್ನ ಮೆಟ್ಟಿ ಗಮಿಪನ–ಷಣ್ಮುಖನ, [ಅಮ್ಮನ]–ಪಾರ್ವತಿಯ, ಒಡನೆ ಹುಟ್ಟಿದವನ–ವೈನಾಕನ, ಅಜೀಯಟ್ಟಿದವಗೆ–ದೇವೇಂದ್ರಗೆ, ಭೋಗಂಗೊಟ್ಟ–ಭೋಗವನಿತ್ತಂಥ, ಮಣ್ಣೇಶ–ಎಲೆ ಮಣ್ಣೇಶ್ವರನೆ [ಮಾಂ–ಎನ್ನನು, ತ್ರಾಹಿ–ರಕ್ಷಿಸು].

ನಾಸಿಕದುಂಬನ ಘಾಸಿಗೈದನ ಭೇ । ದಿಸಿದನಂಗನೆಯ ಪಿತನ ।
ಸೂಸದುಂಡವಗೆ ವಂದಿಸಿದಾತಗೆಯಾದಿ । ವಾಸ ಮಣ್ಣೇಶ ಮಾಂ ತ್ರಾಹಿ ॥ ೩ ॥

ವಿವರಣೆ : ನಾಸಿಕದುಂಬನ–ಗಜೇಂದ್ರನ, ಘಾಸಿಗೈದನ–ಮೊಸಳೆಯ, ಭೇದಿಸಿದನ–ವಿಷ್ಣುವಿನ, ಅಂಗನೆಯ–ಲಕ್ಷ್ಮಿಯ, ಪಿತನ–ಸಮುದ್ರನ, ಸೂಸದುಂಡವಗೆ–ಅಗಸ್ತ್ಯನಿಗೆ, ವಂದಿಸಿದಾತಂಗೆ–ವಿಂಧ್ಯಾಚಲಕ್ಕೆ, ಆದಿ–ಹಿಮಾಚಲವೇ, ವಾಸ–ಸ್ಥಾನವಾದಂಥ, [ಮಣ್ಣೇಶ–ಎಲೆ ಮಣ್ಣೇಶ್ವರನೆ, ಮಾಂ–ಎನ್ನನು, ತ್ರಾಹಿ–ರಕ್ಷಿಸು].

ಕಡಲ ದಾಂಟಿದನ ಸಂಗಡ ಹುಟ್ಟಿದನ ತಂದೆ । ಒಡಲಿಗುಂಬನ ವೈರಿ ಸತಿಯಾ ।
ಪಡೆದನಯ್ಯನ ತಾಯ ಪತಿಯ ಮಗನ ಕೊಂದ । ಮೃಡನೆ ಮಣ್ಣೇಶ ಮಾಂ ತ್ರಾಹಿ ॥ ೪ ॥

ವಿವರಣೆ : ಕಡಲದಾಂಟಿದನ–ಹನುಮಂತನ, ಸಂಗಡ ಹುಟ್ಟಿದನ–ಭೀಮನ, ತಂದೆಯ–ವಾಯುವ್ಯನ [ವಾಯುವಿನ], ಒಡಲಿಗುಂಬನ–ಸರ್ಪನ, ವೈರಿಯ–ಚಂದ್ರನ, ಸತಿಯ-ರೋಹಿಣಿಯ, ಪಡೆದನ–ದಕ್ಷನ, ಅಯ್ಯನ–ಬ್ರಹ್ಮನ, ತಾಯ–ಲಕ್ಷ್ಮಿಯ, ಪತಿಯ–ವಿಷ್ಣುವಿನ, ಮಗನ–ಮನ್ಮಥನ, ಕೊಂದ–ಹತಿಸಿದಂಥ, ಮೃಡನೆ–ರಕ್ಷಣ್ಯಕ್ಕೆ ಕರ್ತೃವಾದಂಥ, [ಮಣ್ಣೇಶ–ಎಲೆ ಮಣ್ಣೇಶ್ವರನೆ, ಮಾಂ–ಎನ್ನನು, ತ್ರಾಹಿ–ರಕ್ಷಿಸು.]

'ಮುನಿಸುವ್ರತ ಚರಿತೆ'ಯಲ್ಲಿ :

ಅಜ್ಞಾತಕರ್ತೃಕವಾದ 'ಮುನಿಸುವ್ರತ ಚರಿತೆ'ಯೆಂಬ ಕೃತಿಯಲ್ಲಿ (ಕನ್ನಡ ಸಾಹಿತ್ಯ ಪರಿಷತ್ತು, ಹಸ್ತಪ್ರತಿಭಂಡಾರ) ಟೀಕೆಯೊಂದಿಗೆ ೧೫ ಪದ್ಯಗಳು, ಈ ರೀತಿಯವು ದೊರೆಯುತ್ತವೆ. ಲಿಪಿಕಾರಸ್ಖಾಲಿತ್ಯಗಳನ್ನು ತಿದ್ದಿ, ಎರಡು ಪದ್ಯಗಳನ್ನಿಲ್ಲಿ ಉದ್ಧರಿಸಬಹುದು :

ಇಂದು ಪಡೆದವನಾ ಮಗಳತ್ತೆಯಯ್ಯನ । ಬಂದಿಗಿಟ್ಟವನ ಕೊಂದವನ ।
ಕಂದನ ಸುಟ್ಟನ ಬಿಲ್ಲು ಕೊಪ್ಪಿಗೆಯೊಳು । ನಿಂದು ಸಲಹೊ ಸುವ್ರತೇಶಾ ॥ ೧ ॥

ಟೀಕು : ಇಂದುಯೆಂದರೆ ಚಂದ್ರ, ಚಂದ್ರನ ಪಡೆದಾತ ಸಮುದ್ರ, ಆತನ ಮಗಳು ಲಕ್ಷ್ಮಿ, ಅತ್ತೆ ದೇವಕೀದೇವಿ, ತಂದೆ ಉಗ್ರಸೇನ, ಉಗ್ರಸೇನನ ಬಂದಿಗಿಟ್ಟಂಥಾತ ಕಂಸ, ಕಂಸನ ಕೊಂದಾತ ಕೃಷ್ಣ, ಕೃಷ್ಣನ ಮಗ ಮನ್ಮಥ, ಆತನ ಬಿಲ್ಲುಕೊಪ್ಪಿನಂತೆಸೆವ ಪಾಂಡುಕಶಿಲೆಯೊಳೊಪ್ಪುವ ಜಿನೇಶ್ವರ.

ಚಳಿಯ ಮಗಳ ಗಂಡನಣುಗನ ಪೊತ್ತನ । ನಿಳೆಯೊಳಾಡಿಪನನೋಡಿಪನಾ ।
ಬಿರಿದುಣ್ಬವನ ತಲೆಯುವಳ ಮಗಳ ಗಂಡ । ಗೊಲಿದು ಸುವ್ರತಜಿನ ಸಲಹೋ ॥ ೧೪ ॥

ಟೀಕು : ಚಳಿಯೆಂದರೆ ಹಿಮವಂತಪರ್ವತ, ಮಗಳು ಗಿರಿಜೆ, ಗಂಡ ಈಶ್ವರ, ಮಗ ಷಣ್ಮುಖ, ಪೊತ್ತಾತ ನವಿಲು, ಆಡಿಪ[ನ] ಮೇಘರಾಜ[ನನ್ನು], ಓಡಿಪನು ವಾಯು, ಉಂಬಾತನು ಸರ್ಪನ, ಮೇಲೆ ಭೂಮಿದೇವಿ, ಮಗಳು ಸೀತೆ, ಗಂಡ ರಾಘವ, ಗೆದ್ದಾತ ಜಿನೇಶ್ವರ.

ಈ ಕೃತಿ ಜೈನಪರವಾಗಿದ್ದರೂ, ಬಾಂಧವ್ಯದ ಸರಣಿಯನ್ನು ರೂಪಿಸುವಾಗ ವೈದಿಕಪರವಾದ ನಿರೂಪಣೆಯನ್ನು ಬಹುಮಟ್ಟಿಗೆ ಒಳಕೊಂಡಿರುವುದು ಒಂದು ವಿಶೇಷ. ಪದ್ಯಾಂತದಲ್ಲಿ ಜೈನಪರವಾದ ತಿರುವು ಪಡೆದಾಗ, ಕೃತಿ ಜೈನಕಥೆಯ ಸಂಗತಿಗೆ ಸಮೀಪವಾಗುತ್ತದೆ.

'ರಾತ್ರಿಯ ನಲ್ಲನ ಪದ್ಯ'ದಲ್ಲಿ :

'ರಾತ್ರಿಯ ನಲ್ಲನ ಪದ್ಯ' ಎಂಬ ಹೆಸರಿನ ಅಜ್ಞಾತಕರ್ತೃಕವಾದ ಒಂದು ಕೃತಿ (ಸು. ೧೭೦೦)ಯನ್ನು ಕವಿಚರಿತೆಕಾರರು ಗುರುತಿಸಿ, ತಮ್ಮ ಗ್ರಂಥದ ಮೂರನೆಯ ಸಂಪುಟದಲ್ಲಿ ಅಲ್ಲಿಯ ಎರಡು ಪದ್ಯಗಳನ್ನು ಉದಾಹರಿಸಿದ್ದಾರೆ. ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿಭಂಡಾರದಲ್ಲಿ ಈ ಕೃತಿಯ ಒಂದು ಕಾಗದದ ಹಸ್ತ ಪ್ರತಿಯಿದೆ (ಕೆ.ಎ. ೨೮೫). ಇದೇ ಕೃತಿ 'ರಾತ್ರೀನಲ್ಲರ ಪದ್ಯ' ಎಂಬ ಹೆಸರಿನಲ್ಲಿ, ''ಮೈಸೂರು ಶ್ರೀರಾಮ ಪೇಟೆಯಲ್ಲಿರುವ ಎಸ್. ದಾಸಪ್ಪನವರಿಂದ ಪ್ರತಿಪದ ಟೀಕು'' ಸಹಿತವಾಗಿ ಮೈಸೂರಿನಿಂದಲೇ ೧೮೯೪ರಲ್ಲಿ ಪ್ರಕಟ ವಾಗಿದೆ. ೧೯೧೧ರ 'ವಾಗ್ಭೂಷಣ'ದ ೧೬-೧, ೩ರಲ್ಲಿಯೂ ಕೆಲವು ಪದ್ಯಗಳ ಮಟ್ಟಿಗೆ ಪ್ರಕಟವಾಗಿದೆ (ಪು. ೧೩-೧೪; ೬೧-೬೨).

ಕವಿಚರಿತೆಕಾರರು ಕೃತಿಯಲ್ಲಿ ೧೨೦ ಪದ್ಯಗಳಿವೆ ಎಂದಿದ್ದಾರೆ; ಉಕ್ತ ಹಸ್ತಪ್ರತಿಯಲ್ಲಿ ೧೧೮ ಪದ್ಯಗಳು ಲಿಖಿತವಾಗಿವೆ; ಮುದ್ರಿತ ಗ್ರಂಥದಲ್ಲಿ ೯೮ ಪದ್ಯಗಳಿವೆ. ಪದ್ಯಸಂಖ್ಯೆಯ ಹೆಚ್ಚುಕಡಮೆಗಳಿರಲಿ, ಹಸ್ತಪ್ರತಿ ಮತ್ತು ಮುದ್ರಿತ ಪ್ರತಿಗಳ ನಡುವೆ ಪದ್ಯಗಳ ಆನುಪೂರ್ವಿಯಲ್ಲಿಯೂ ಅವುಗಳ ಪಾಠದಲ್ಲಿಯೂ ಬಹಳವಾಗಿ ವ್ಯತ್ಯಾಸಗಳು ಕಂಡುಬರುತ್ತವೆ. ಎರಡರಲ್ಲೂ ಭಾಷೆ ಛಂದಸ್ಸಿನ ದೋಷಗಳು ಇಡಿಕಿರಿದಿವೆ. ಇದರಿಂದಾಗಿ, ಈ ಕೃತಿಯ ಬೇರೆ ಹಸ್ತಪ್ರತಿಗಳು ದೊರೆತಾಗ ಮಾತ್ರ ಗ್ರಂಥಪಾಠ ಉತ್ತಮಗೊಳ್ಳುವುದನ್ನು ನಿರೀಕ್ಷಿಸಬೇಕಾಗುತ್ತದೆ.

ಪ್ರಸ್ತುತ ಪರಿಶೀಲನೆಗೆ ಮುದ್ರಿತಗ್ರಂಥವನ್ನೇ ಆಧರಿಸಿದೆ. ಹಸ್ತಪ್ರತಿಯನ್ನು ಕೆಲವೆಡೆ ಯಥೋಚಿತ ವಾಗಿ ಬಳಸಿಕೊಂಡು ಪಾಠಗಳನ್ನು ಪರಿಷ್ಕರಿಸಿದೆ; ಅಲ್ಲಲ್ಲಿ ಸಣ್ಣ ಪುಟ್ಟ ಸಂಪಾದಕೀಯ ತಿದ್ದುಪಡಿಗಳನ್ನೂ ಮಾಡಿದೆ. ಒಟ್ಟಿನಲ್ಲಿ ಇಲ್ಲಿಯ ಪದ್ಯಪಾಠ ಪ್ರಚಲಿತಪ್ರತಿ (vulgate) ಎನ್ನಬಹುದಾದ ಮುದ್ರಿತಪ್ರತಿಗೆ ಅನು ಸಾರವಾಗಿದೆ. ಹಸ್ತಪ್ರತಿಯಲ್ಲಿಯ ಹೆಚ್ಚಿನ ಪದ್ಯಗಳನ್ನು, ಅವುಗಳಲ್ಲಿಯೂ ಭಾಷಾಛಂದಸ್ಸಿನ ದೋಷಗಳಿರು ವುದರಿಂದಲೂ, ಅವುಗಳಿಗೆ ಟೀಕೆಟಿಪ್ಪಣಿಗಳೇನೂ ದೊರೆಯದಿರುವುದರಿಂದಲೂ, ಅಲ್ಲಲ್ಲಿ ತ್ರುಟಿತ ಭಾಗಗಳಿರುವುದ ರಿಂದಲೂ, ಇಲ್ಲಿ ಸೇರಿಸದೆ ಕೈಬಿಟ್ಟಿದೆ (ಕೊನೆಗೆ ಪ್ರಾತಿನಿಧಿಕವಾಗಿ ಎರಡು ಪದ್ಯಗಳನ್ನು ಉದ್ಧರಿಸಿದೆ).

ಕೃತಿ ನಿರೂಪಣೆಯ ಸಂದರ್ಭವೆಂದರೆ : ಮಧುರಾನಗರದ ವೇಶ್ಯಾವಾಟಿಕೆಯಲ್ಲಿ, ಬೆಳಗಾದ ಮೇಲೆ ವೇಶ್ಯೆಯರು ತಮ್ಮ ಮನೆಜಗುಲಿಗಳ ಮೇಲೆ ಕುಳಿತು, ಹಿಂದಿನ ರಾತ್ರಿಯಲ್ಲಿ ಬಂದು ಹೋದ ವಿಟರ ವಿಚಾರವನ್ನು ಮಾತನಾಡಿಕೊಳ್ಳುವುದು ಒಂದು ರೂಢಿ. ಅದರಂತೆ ಒಮ್ಮೆ ಚದುರೆಯಾದ ವೇಶ್ಯೆಯೊಬ್ಬಳು ತನ್ನ ತಂಗಿಯನ್ನು ಈ ಬಗ್ಗೆ ಪ್ರಶ್ನಿಸಿದಳು. ಆಕೆ ಮನ್ಮಥನಂತಹ ಆ ವಿಟನು (ಬಹುಶಃ ಬೇರೆ ಬೇರೆ ರಾತ್ರಿಗಳ ಬೇರೆ ಬೇರೆ ವಿಟರು) ಹೇಗಿರುವನೆಂಬುದನ್ನು ತನ್ನ ಅಕ್ಕನಿಗೆ ಗೂಢವಾದ ರೀತಿಯಲ್ಲಿ ನಿರೂಪಿಸಿದಳು.

ಈ ಪದ್ಯಗಳ ರೀತಿಯಲ್ಲಿ ಒಂದು ವಿಶೇಷವಿದೆ; ಇಲ್ಲಿ ಬಾಂಧವ್ಯದ ವ್ಯಕ್ತಿವಾಚಕಗಳು ದೇವತಾಪರ ವಾದವು; ಉದ್ದೇಶಿತ ವ್ಯಕ್ತಿ ವಿಟಪುರುಷ. ಆದ್ದರಿಂದ ಇವನ್ನು 'ಗೂಢಾರ್ಥದ ಪುರುಷಪ್ರಶಂಸೆ'ಗಳೆನ್ನಬಹುದು. ಕೆಲವೆಡೆ ದೇವತಾಪರವಲ್ಲದ, ಗಂಭೀರವೂ ಅಲ್ಲದ ರಚನೆಗಳು ಬಂದಿರುವುದರಿಂದ, ಅಂತಹವನ್ನು 'ಗೂಢಾರ್ಥದ ಪುರುಷವಿಡಂಬನೆ'ಗಳೆಂದು ಕರೆಯಬಹುದಾಗಿದೆ. ಇಲ್ಲೆಲ್ಲ ಹಾಸ್ಯ, ವಿನೋದ, ಚಮತ್ಕಾರಗಳ ಪ್ರದರ್ಶನವೇ ಮುಖ್ಯ ಉದ್ದೇಶವಾಗಿದೆ.

ಮುಂದೆ ಮುದ್ರಿತಗ್ರಂಥದ ಆನುಪೂರ್ವಿಯನ್ನು ಅನುಸರಿಸಿ ಉದಾಹರಣೆಯಾಗಿ ನಾಲ್ಕು ಪದ್ಯಗಳನ್ನು ಕೊಟ್ಟಿದೆ; ಅಲ್ಲಿಯ 'ಟೀಕು' ಆಧುನಿಕವಾದ್ದರಿಂದಲೂ ವಿಸ್ತಾರವಾಗಿರುವುದರಿಂದಲೂ ಅದರ ಸಾರಾಂಶವನ್ನಷ್ಟೇ ಸಂಗ್ರಹಿಸಿ 'ವಿವರಣೆ'ಯನ್ನು ಬರೆಯಲಾಗಿದೆ; ಈ ವಿವರಣೆಯಲ್ಲಿಯೂ ಅಲ್ಪ ಸ್ವಲ್ಪ ಸ್ವಕೀಯವಾದ ಬದಲಾವಣೆ ಗಳನ್ನು ಮಾಡಿಕೊಂಡಿದೆ.

ಸ್ಮರಶರಪಿತನ ಶರದೊಳೆಚ್ಚನ । ವರಮಾತೆಯು ಪತಿಗೆ ಜಗದಿ ಜನ್ಮಿಸಿದವನಂ ।
ತ್ವರಿತದಿ ಶಪಿಸಿದನಪ್ಪನ । ತೆರದಿಂ ರಾಜಿಸಿದನಕ್ಕ ರಾತ್ರಿಯ ನಲ್ಲಂ ॥ ೬ ॥

ವಿವರಣೆ : ಮನ್ಮಥನ ತಂದೆಯಾದ ಕೃಷ್ಣನನ್ನು, ಬಾಣದಿಂದ ಘಾತಿಸಿದ ಭೀಷ್ಮನ, ತಾಯಿ ಗಂಗೆಯ,

ಪತಿ ಸಮುದ್ರರಾಜನಿಗೆ, ಹುಟ್ಟಿದ ಚಂದ್ರನನ್ನು, ಶಪಿಸಿದ ಗಣಪತಿಯು, ತಂದೆ ಶಿವನ ರೀತಿಯಲ್ಲಿ ರಾತ್ರಿಯ ವಿಟನು ಶೋಭಿಸಿದನು.

ಉರಚರನ ಮಗಳ ಗಂಡನ । ಶರದಲಿ ಸತ್ತವನ ಮಡದಿಯಣ್ಣನ ಹೆತ್ತಳ ।
ಹರುಷದಿ ಕೂಡಿದ ಮಹಿಮನ । ತಿರದೊಳು ತಾ ಪೋಲ್ದನಕ್ಕ ರಾತ್ರಿಯ ನಲ್ಲಂ ॥ ೧೫ ॥

ವಿವರಣೆ: ಕೌರವ್ಯನೆಂಬ ಸರ್ಪರಾಜನ, ಮಗಳು ಉಲೂಪಿಯು, ಪತಿ ಅರ್ಜುನನ, ಬಾಣಕ್ಕೆ ಸಿಕ್ಕು ಸತ್ತ ಜಯದ್ರಥನ, ಪತ್ನಿ ದುಶ್ಶಳೆಯ, ಅಣ್ಣ ದುರ್ಯೋಧನನನ್ನು, ಹಡೆದ ಗಾಂಧಾರಿಯನ್ನು, ಒಡಗೂಡಿದ ಧೃತರಾಷ್ಟ್ರನನ್ನು (ಕುರುಡನನ್ನು) ರಾತ್ರಿಯ ವಿಟನು ಹೋಲುತ್ತಿದ್ದನು.

ಉರಗೇಂದ್ರನಳಿಯನಣ್ಣನ । ವರಮಾತೆಯ ಮಾವನರಸಿಯಪ್ಪಿದನವ್ವೆಯ ।
ಭರದಿಂದ ಮದುವೆಯಾದನ । ತರಳನ ತಾ ಪೋಲ್ದನಕ್ಕ ರಾತ್ರಿಯ ನಲ್ಲಂ ॥ ೨೭ ॥

ವಿವರಣೆ: ಕೌರವ್ಯನೆಂಬ ಸರ್ಪರಾಜನ, ಅಳಿಯ ಅರ್ಜುನನ, ಅಣ್ಣ ಧರ್ಮರಾಯನ, ತಾಯಿ ಕುಂತಿಯ, ಮಾವ ವಿಚಿತ್ರವೀರ್ಯನ, ರಾಣಿ ಅಂಬಾಲಿಕೆಯನ್ನು, ಆಲಿಂಗಿಸಿದ ವ್ಯಾಸನ, ತಾಯಿ ಸತ್ಯವತಿಯನ್ನು, ವರಿಸಿದ ಶಂತನುವಿನ, ಮಗ ಭೀಷ್ಮನನ್ನು (ಮುದುಕನನ್ನು) ರಾತ್ರಿಯ ವಿಟನು ಹೋಲುತ್ತಿದ್ದನು.

ಉತ್ತರೆಯ ತಾಯ ತಮ್ಮನ । ಕತ್ತಲೆಯೊಳ್ಕುತ್ತಿ ಪೋದನಣ್ಣನಯ್ಯನನು ।
ಪೊತ್ತುಂ ತಿರುಗಿಸುವಾತನ । ಚಿತ್ತರವಂ-ತಾಂ ಪೋಲ್ದನಕ್ಕ ರಾತ್ರಿಯ ನಲ್ಲಂ ॥ ೨೮ ॥

ವಿವರಣೆ: ಸುದೇಷ್ಣೆಯ, ತಮ್ಮ ಕೀಚಕನನ್ನು, ಇರುಳಲ್ಲಿ ಕೊಂದ ಭೀಮನ, ಅಣ್ಣ ಧರ್ಮರಾಯನ, ತಂದೆ ಯಮನನ್ನು, ಹೊತ್ತು ತಿರುಗಿಸುತ್ತಿರುವ ಕೋಣವನ್ನು ರಾತ್ರಿಯ ವಿಟನು ಹೋಲುತ್ತಿದ್ದನು.

ಚಮತ್ಕಾರಭೇದವನ್ನು ನಿದರ್ಶಿಸಲು ಇದೇ ಕೃತಿಯಿಂದ ಇನ್ನೆರಡು ಪದ್ಯಗಳನ್ನು ಎತ್ತಿ ಕೊಡಬಹುದು; ಈ ಚಮತ್ಕಾರ ಭೇದವು ಬಾಂಧವ್ಯದ ಬೆಸುಗೆಯ ಶಬ್ದಗಳಾಗಿರದೆ, ವಸ್ತು ಅಥವಾ ಜೀವಿಯನ್ನು ಸೂಚಿಸುವ ನಾಮವಾಚಕಗಳಾದ ಪದಕೋಶದ ಬೇರೆ ರೀತಿಯ ಶಬ್ದಗಳಾಗಿರುತ್ತವೆ:

ರಾವಣನ ಶಿರದ ಸಂಖ್ಯೆಯ । ಭಾವಿಸಿ ಚತುರಂಗದಲ್ಲಿ ಒಂದರ ಪೆಸರಂ ।
ದೇವರು ಪಿಡಿವಾಯುಧ ವರ । ದೀವಿಗೆಯೊಳ್ಪೋಲ್ದನಕ್ಕ ರಾತ್ರಿಯ ನಲ್ಲಂ ॥ ೩೩ ॥

ವಿವರಣೆ: ರಾವಣನ ತಲೆಗಳ ಸಂಖ್ಯೆಯಾದ 'ದಶ' ಎನ್ನುವುದನ್ನು ತೆಗೆದುಕೊಂಡು, ಚತುರಂಗ ಸೇನೆಯೊಳಗಿನ 'ರಥ' ಎಂಬುದನ್ನು ಅದಕ್ಕೆ ಸೇರಿಸಿ, ವಿಷ್ಣು ಹಿಡಿಯುವ ಆಯುಧವಾದ 'ಚಕ್ರ' ಎಂಬುದನ್ನೂ ದೀಪದ ಬತ್ತಿಯನ್ನು ಸೂಚಿಸುವ 'ವರ್ತಿ' ಎಂಬುದನ್ನೂ ಬಳಿಕ ಅನುಕ್ರಮವಾಗಿ ಕೂಡಿಸಿದರೆ 'ದಶರಥಚಕ್ರವರ್ತಿ' ಎಂದಾಗುವುದು. ಆತನನ್ನು ರಾತ್ರಿಯ ವಿಟನು ಹೋಲುತ್ತಿದ್ದನು.

ಇರುಳೊಳ್ ಕಾಣುವ ಸ್ವಪ್ನದ । ವರ ಕನ್ನಡಪೆಸರ ನೋಡೆ ಮೂರಕ್ಷರಮಂ ।
ಬರೆದದ ತುದಿಯಿಂದೋದಲು । ಪರಿಯಂ ತಾಂ ಪೋಲ್ದನಕ್ಕ ರಾತ್ರಿಯ ನಲ್ಲಂ ॥ ೩೬ ॥

ವಿವರಣೆ: 'ಕನಸು' ಎಂದು ಬರೆದು, ಅದನ್ನು ಕೊನೆಯಕ್ಷರದಿಂದ ಹಿಂದಕ್ಕೆ ಓದಿದರೆ 'ಸುನಕ' < ಶುನಕ) ಎಂದರೆ ನಾಯಿಯೆಂದಾಗುವುದು. ಅದನ್ನು ರಾತ್ರಿಯ ವಿಟನು ಹೋಲುತ್ತಿದ್ದನು.

ಈ ಎರಡನೆಯ ಲಕ್ಷ್ಯವನ್ನು ಹೋಲುವ ಇನ್ನೂ ಒಂದು ಸರಳವಾದ ಲಕ್ಷ್ಯವಾಗಿ, ಈ ಪದ್ಯವನ್ನು ಉದಾಹರಿಸಬಹುದು:

ಕಾಗೆಯ ರಿಪುವಿನ ಸಂಸ್ಕೃತ । ವಾಗಿರುತಿಹ ನಾಮಧೇಯಮೆರಡಕ್ಷರಮು ।
ನ್ನಾಗಿಸಿ ತುದಿಮೊದಲಿಂ ಬರೆ । ದಾಗಿರ್ದನ ಪೋಲ್ದನಕ್ಕ ರಾತ್ರಿಯ ನಲ್ಲಂ ॥ ೪೧ ॥

ವಿವರಣೆ: ಕಾಗೆಯ ಶತ್ರು ಕೋಗಿಲೆಗೆ ಸಂಸ್ಕೃತದಲ್ಲಿ 'ಪಿಕ' ಎಂದು ಹೆಸರು; ಅದನ್ನು ಕೊನೆಯಕ್ಷರದಿಂದ ಹಿಂದಕ್ಕೆ ಓದಿದರೆ 'ಕಪಿ' ಎಂದಾಗುವುದು. ಆ ಕಪಿಯನ್ನು ರಾತ್ರಿಯ ವಿಟನು ಹೋಲುತ್ತಿದ್ದನು.

ಸಂಧ್ಯಾದಿಯಲ್ಲಿ ಪದ್ಯಶರಚನೆಗಳು :

ಯಾವುದಾದರೊಂದು ಕೃತಿಯ ಪ್ರತಿಯೊಂದು ಸಂಧಿಯ ಆದಿಯಲ್ಲಿಯೂ ಬಹುಮಟ್ಟಿಗೆ ನಿಯತವಾಗಿ ಎನ್ನುವಂತೆ ಗೂಢಾರ್ಥದ ದೇವತಾಸ್ತುತಿಗಳು ಬಂದಿರುವುದನ್ನು ಈ ಗುಂಪಿನ ರಚನೆಗಳಲ್ಲಿ ಕಾಣಬಹುದು. ಈ ರೀತಿಯ ರಚನೆಗಳು ಈಗ ತಿಳಿದ ಮಟ್ಟಿಗೆ ಲಕ್ಷ್ಮಯ್ಯಕವಿಯ (೧೬೩೭) 'ಮದನಮೋಹಿನಿಯ ಕಥೆ'ಯಲ್ಲಿಯೂ ಗೋವಿಂದ ವೈದ್ಯನ 'ಕಂಠೀರವ ನರಸರಾಜವಿಜಯ' (೧೬೪೮)ದಲ್ಲಿಯೂ ಕಂಡುಬರುತ್ತವೆ. ಆ ಲಕ್ಷ್ಯಪದ್ಯಗಳನ್ನು ಮುಂದೆ ಉದಾಹರಿಸಿ, ಅವುಗಳ ಆಶಯವನ್ನು ವಿಶದಪಡಿಸಬಹುದು.

'ಮದನ ಮೋಹಿನಿಯ ಕಥೆ'ಯಲ್ಲಿ :

ಈ ಕೃತಿಯಲ್ಲಿ ಈ ಬಗೆಯ ಪದ್ಯಗಳು ಕ್ರಮವಾಗಿ ೪, ೫, ೬, ೭ ಮತ್ತು ೮ನೆಯ ಸಂಧಿಗಳಲ್ಲಿ ಮಾತ್ರ ಕಂಡುಬರುತ್ತಿದ್ದು, ಉಳಿದ ೧, ೨, ೩, ೯, ೧೦ ಮತ್ತು ೧೧ನೆಯ ಸಂಧಿಗಳಲ್ಲಿ ಕಂಡುಬರುತ್ತಿಲ್ಲ. ಆದರೆ ೧ ಮತ್ತು ೯ನೆಯ ಸಂಧಿಗಳಲ್ಲಿ, ಸಂಧ್ಯಂತಗಳಲ್ಲಿ ಉಪಾಂತ್ಯ ಹಾಗೂ ಅಂತ್ಯಪದ್ಯಗಳಾಗಿ ಇವು ಕಾಣಿಸಿಕೊಂಡಿವೆ. ಹೀಗಿದ್ದೂ ಈ ಬಗೆಯ ಪದ್ಯರಚನೆ ಗ್ರಂಥಕರ್ತೃವಿಗೆ ಇಷ್ಟವಾಗಿದ್ದಿತೆಂದೂ, ಅದನ್ನು ಕ್ರಮಬದ್ಧವಾಗಿ ಸಂಯೋಜಿಸುವುದು ಆತನ ಮನಸ್ಸಿನಲ್ಲಿದ್ದಿತೆಂದೂ ತಿಳಿಯುವುದು ಸಾಧ್ಯವಿದೆ. ಇಲ್ಲಿ ಎರಡು ಪದ್ಯಗಳನ್ನು ಉದ್ಧರಿಸಿದೆ. ಅವುಗಳಿಗೆ ಸ್ವಕೀಯವಾಗಿ ವಿವರಣೆ ಬರೆದಿದೆ.

ತಾಯ ತಲೆಯ ತಱಿದವನನೋವಿದವನ । ಆಯತಾಕ್ಷಿಯನೊಯಿದವನನು ।
ತಾಯೊಡಹುಟ್ಟಿದವನ ಸರಳಲಿ ಕೊಂದ । ದೇವನೆ ಸಲಹೆನ್ನನೊಲವಿಂದ ॥ (೫–೧)

ವಿವರಣೆ : ತನ್ನ ತಾಯಿ ರೇಣುಕೆಯ, ತಲೆಯನ್ನು ಕತ್ತರಿಸಿದ ಪರಶುರಾಮನನ್ನು, ತನ್ನ ಮೇಲೆರಗಿದಾಗ ಸಮಾಧಾನಪಡಿಸಿದ ಶ್ರೀರಾಮನ, ಪತ್ನಿ ಸೀತೆಯನ್ನು, ಅಪಹರಿಸಿದ ರಾವಣನನ್ನು, ಕಮಲದ ಜೊತೆಯಲ್ಲಿ ಹುಟ್ಟಿದ ಬ್ರಹ್ಮನ ಅಸ್ತ್ರದಲ್ಲಿ (ಬ್ರಹ್ಮಾಸ್ತ್ರದಲ್ಲಿ) ಕೊಂದ ಶ್ರೀರಾಮನೇ ಕಾಪಾಡು.

ತಂಗಿಯ ಮಗನ ಕೊಂದವನಯ್ಯನ ಬಂದು । ನುಂಗಿದವನ ಹಗೆಯೊಡೆಯನ ।
ಅಂಗಭಾವದ ರಾಣಿಯ ವರಚರಣವ । ಹಿಂಗದೆ ನಾ ಬಲಗೊಂಬೆನು ॥ (೬–೧)

ವಿವರಣೆ : ತಂಗಿ ಸುಭದ್ರೆಯ, ಮಗ ಅಭಿಮನ್ಯುವನ್ನು, ಕೊಂದ ಕರ್ಣನ, ತಂದೆ ಸೂರ್ಯನನ್ನು, ಬಂದು ನುಂಗಿದ ರಾಹುವೆಂಬ ಸರ್ಪನ, ವೈರಿ ಗರುಡನ, ಸ್ವಾಮಿ ವಿಷ್ಣುವಿನ, ವಕ್ಷಃಸ್ಥಲದಲ್ಲಿ ನೆಲಸಿರುವ ಲಕ್ಷ್ಮಿಯ, ಪಾದಗಳನ್ನು ನಾನು ಪ್ರದಕ್ಷಿಣೆ ಬರುತ್ತೇನೆ.

ಶಬ್ದದ ನಾನಾರ್ಥಗಳ ಬಲವನ್ನು ಅವಲಂಬಿಸಿ, ಚಮತ್ಕಾರಭೇದವನ್ನು ಇದೇ ಕವಿ ತೋರಿಸಿರುವುದಕ್ಕೆ ಒಂದು ಉದಾಹರಣೆಯನ್ನು ಇಲ್ಲಿ ಎತ್ತಿಕೊಡಬಹುದು :

ಶಿವನ ವೈರಿಯ ಸುತನನು ಕಾಯ್ದ ದೇವನೆ । ಶಿವನ ಮೇಲೆಯು ಪವಡಿಸಿದನೆ ।
ಶಿವನ ವೈರಿಯ ಬೆನ್ನಲಿ ಬಹ ವಸ್ತುವೆ । ಶಿವನ ಪರ್ಣದಲಿದ್ದವನೆ ಕಾಯೊ ॥ (೯–೨೧)

ವಿವರಣೆ : ಮನ್ಮಥನ ಮಗ ಅನಿರುದ್ಧನನ್ನು, ರಕ್ಷಿಸಿದ ಕೃಷ್ಣನೇ, ನೀರಿನ ಮೇಲೆ ಮಲಗಿದವನೆ, ವೇದಗಳನ್ನು ಅಸಹನೆಯಿಂದ ಕದ್ದೊಯ್ದ ತಮಸಾಸುರನನ್ನು (ಇಲ್ಲವೆ ಸೋಮಕನನ್ನು, ಇಲ್ಲವೆ ಮಧುಕೈಟಭರನ್ನು) ಬೆನ್ನಟ್ಟಿಹೋದವನೆ, ನೀರಿನ ಮೇಲೆ ಆಲದ ಎಲೆಯಲ್ಲಿ ಮಲಗಿದವನೆ, ವಿಷ್ಣುವೇ ಕಾಪಾಡು.

ಇಲ್ಲಿ 'ಶಿವ' ಎಂಬ ಶಬ್ದವು ದೇವತೆಯಾದ ಪರಮೇಶ್ವರ, ನೀರು (ಸಮುದ್ರ), ವೇದಗಳು ಎಂಬ ಅರ್ಥಗಳಲ್ಲಿ ಪ್ರಯುಕ್ತವಾಗಿರುವಂತೆ ತೋರುತ್ತದೆ. 'ಹರಿ' ಎಂಬ ಶಬ್ದವು ನಾನಾರ್ಥಗಳನ್ನುಳ್ಳುದಾಗಿ, ಅದನ್ನು ಬಳಸಿದ ಪದ್ಯಗಳು 'ಗೂಢಾರ್ಥದ ದೇವತಾಸ್ತುತಿ'ಗಳಲ್ಲಿ ಕೆಲವೆಡೆ ಕಂಡುಬಂದಿವೆ; ಇತರತ್ರವೂ ಅಂತಹ ಪದ್ಯಗಳುಂಟು. ಪ್ರಸ್ತುತ 'ಶಿವ' ಶಬ್ದವನ್ನು ಹೀಗೆ ಬಳಸಿದ ಲಕ್ಷ್ಯಗಳು ವಿಶೇಷವಾಗಿ ಇರುವಂತೆ ತೋರುವುದಿಲ್ಲ; ಅಲ್ಲದೆ ಪೂರ್ವೋಕ್ತಪದ್ಯ ಶಬ್ದಾಲಂಕಾರದ ದೃಷ್ಟಿಯಿಂದ 'ಪಾದಾದಿ ಯಮಕ'ದಲ್ಲಿಯೂ ನಿಬದ್ಧವಾಗಿದೆ.

'ಕಂಠೀರವ ನರಸರಾಜ ವಿಜಯ'ದಲ್ಲಿ :

ಈ ಕೃತಿಯಲ್ಲಿ ಕೆಲವು ಸಂಧಿಗಳ ಆದಿಯಲ್ಲಿ ಮಾತ್ರ ಈ ಬಗೆಯ ಪದ್ಯಗಳಿವೆ. ಆದರೆ ಕವಿ ಇವನ್ನು ಸಂಧ್ಯಾದಿಯಲ್ಲಿಯೇ ನಾಂದೀಪದ್ಯವಾಗಿ ತಂದಿರುವುದು ಗಮನಿಸತಕ್ಕುದಾಗಿದೆ. ಈ ಬಗೆಯ ದೇವತಾಸ್ತುತಿ ಕವಿಗೆ ಇಷ್ಟವಾದ್ದು ಎನ್ನುವುದಂತೂ ನಿಶ್ಚಯ.

ಉದ್ಧೃತ ಪದ್ಯಗಳ ಬಳಿಕ ಕೊಟ್ಟಿರುವ ಪ್ರತಿಯೊಂದೂ ಪದ್ಯದ ವಿವರಣೆ ಈ ಕೃತಿಯ ಸಂಪಾದಿತ ಗ್ರಂಥದ (೧೯೨೬) ಆರಂಭಭಾಗದಲ್ಲಿ (ಪು. xix-xx) ಒದಗಿಸಿರುವ, ಸಂಪಾದಕವರ್ಗದವರೇ ಸಿದ್ಧಪಡಿಸಿ ಪ್ರಕಟಿಸಿರುವ 'ಪ್ರಹೇಳಿಕಾರ್ಥದೀಪಿಕೆ'ಯ ಯಥಾನುವಾದವೇ ಆಗಿದೆ. ಇಲ್ಲಿ ಮೊದಲ ಎರಡು ಪದ್ಯಗಳನ್ನು ಅವುಗಳ ವಿವರಣೆಯೊಂದಿಗೆ ಉದ್ಧರಿಸಿದೆ :

ಗೋಪತಿಸುತನ ತಮ್ಮನ ತಂದೆಯ ದಿವ್ಯ । ರೂಪಿಗೆ ನಲಿದ್ಧುದನೊಲಿದು ।
ಚಾಪಕೆ ಶರವ ಮಾಡಿದನಯ್ಯ ಶ್ರೀಲ । ಕ್ಷ್ಮೀಪತಿ ಸಲಹು ಸಜ್ಜನರ ॥ (೨-೨)

ವಿವರಣೆ : "ಸ್ವರ್ಗಕ್ಕೆ ಅಧಿಪತಿಯಾದ ಇಂದ್ರನ, ಮಗನಾದ ವಾಲಿಯ, ತಮ್ಮನಾದ ಸುಗ್ರೀವನ, ತಂದೆಯಾದ ಸೂರ್ಯನ ಕಾಂತಿಗೆ ಅರಳುವ ಕಮಲವನ್ನು, ಒಲಿದು ಬಾಣವನ್ನಾಗಿ ಮಾಡಿದ ಮನ್ಮಥನ, ತಂದೆಯಾದ ಶ್ರೀಕೃಷ್ಣನೇ ಸತ್ಪುರುಷರನ್ನು ಕಾಪಾಡು."

ಹರಿವಾಹನನ ತಾಯನುಜನ ವೈರಿಯ । ನಿರದೆ ತುತ್ತಾಗಿ ನುಂಗಿದನ ।
ಹಿರಿಯಣ್ಣನಿಂದ ಪಥವ ಪಡೆದನ ಸುತ । ನರಸ ಸಲಹು ತ್ರಿಜಗವ ॥ (೪-೧)

ವಿವರಣೆ : "ಗಿಳಿದೇರನಾದ ಮನ್ಮಥನ, ತಾಯಿಯಾದ ಲಕ್ಷ್ಮಿಯ, ತಮ್ಮನಾದ ಚಂದ್ರನಿಗೆ, ಶತ್ರುವಾದ ಹಾವನ್ನು (ರಾಹು), ನುಂಗಿದ ಗರುಡನ, ಅಣ್ಣನಾದ ಅರುಣನಿಂದ, ಮಾರ್ಗವನ್ನು ಪಡೆದ ಸೂರ್ಯನ, ಮಗನಾದ ಸುಗ್ರೀವನಿಗೆ, ರಾಜನಾದ ಶ್ರೀರಾಮನೇ, ಮೂರು ಲೋಕವನ್ನೂ ಕಾಪಾಡು."

ಶಾಂತ ನಿರಂಜನನ (ಸು. ೧೬೫೦) 'ಅಬ್ಬಲೂರು ಚರಿತೆ'ಯಲ್ಲಿ :

ಇದರಲ್ಲಿ ೬ ಸಂಧಿಗಳಿದ್ದು, ಸಂಧಿ ೧ ರಲ್ಲಿ ೨, ೩ ಮತ್ತು ೪ನೆಯ ಪದ್ಯಗಳು, ಸಂಧಿ ೩ ರಲ್ಲಿ ೨ನೆಯ ಪದ್ಯ, ಸಂಧಿ ೪ರಲ್ಲಿ ೨ ಮತ್ತು ೩ನೆಯ ಪದ್ಯಗಳು, ಸಂಧಿ ೬ರಲ್ಲಿ ೨ನೆಯ ಪದ್ಯ ಗೂಢಾರ್ಥದ ದೇವತಾಸ್ತುತಿಗಳಾಗಿವೆ. ಇವುಗಳಿಗೆ ಟೀಕೆ ವಿವರಣೆಗಳೇನೂ ಇಲ್ಲ. ಇಲ್ಲಿ ಎರಡು ಪದ್ಯಗಳನ್ನು ಉದಾಹರಿಸಿದೆ; ಸ್ವಕೀಯವಾಗಿ ವಿವರಣೆಯನ್ನೂ ಬರೆದಿದೆ :

ಕರಿವದನನ ಪೆತ್ತ ನೀರೆಯ ತಂದೆಯ । ಅರಿಯ ಕುಮಾರನಗ್ರಜನ ।
ಪಿರಿದು ಪೆತ್ತನ ಮೂರುಜಾವಕೆ ಬರಿಸಿದ । ವರ ಗುರುನಾಥಗೊಂದಿಸುವೆ ॥ (೪-೩)

ವಿವರಣೆ : ಗಣಪತಿಯನ್ನು ಹೆತ್ತ ಪಾರ್ವತಿಯ, ತಂದೆ ಹಿಮವಂತನ, ಶತ್ರು ಇಂದ್ರನ, ಕುಮಾರ ಅರ್ಜುನನ, ಅಣ್ಣ ಧರ್ಮರಾಯನನ್ನು, ಮಗನಾಗಿ ಪಡೆದ ಯಮನನ್ನು ಭಯಗೊಳಿಸಿದ ಶಿವನಿಗೆ ವಂದಿಸುತ್ತೇನೆ.

ನಾಗಧರನ ಪೆತ್ತಳಪ್ಪನ ಅಳಿಯನ । ಪೂಗೋಲಲೆಸೆದನತ್ತಿಗೆಯ ।
ಭಾಗದೊಡೆಯನ ಶಿರವರಿದನ ಪಾದಕ್ಕೆ । ಬಾಗುವೆ ಶಿರವನು ಮುದದಿ ॥ (೬-೨)

ವಿವರಣೆ : ಹೊಟ್ಟೆಗೆ ಹಾವು ಬಿಗಿದಿರುವ ಗಣಪತಿಯ, ತಾಯಿ ಪಾರ್ವತಿಯ, ತಂದೆ ಹಿಮವಂತನ, ಅಳಿಯ ಶಿವನನ್ನು, ಹೂಬಾಣದಿಂದ ಹೊಡೆದ ಮನ್ಮಥನ, ಅತ್ತಿಗೆ ಸರಸ್ವತಿಯ, ಪತಿ ಬ್ರಹ್ಮನ, ಐದನೆಯ ತಲೆಯನ್ನು ಕತ್ತರಿಸಿದ ಶಿವನ ಪಾದಗಳಿಗೆ ಮಣಿಯುತ್ತೇನೆ.

ನೂರೊಂದನ (ಸು.೧೭೪೦) 'ಸೌಂದರಚಾರಿತ್ರ' ('ಸೌಂದರಕಾವ್ಯ')ದಲ್ಲಿ :

ಇದರಲ್ಲಿ ೧೧ ಸಂಧಿಗಳು ಇದ್ದು, ಸಾಮಾನ್ಯವಾಗಿ ಪ್ರತಿಯೊಂದರಲ್ಲಿಯೂ ಸಂಧ್ಯಾದಿಯಲ್ಲಿ ೨ ಪದ್ಯಗಳು ಗೂಢಾರ್ಥದ ದೇವತಾಸ್ತುತಿಗಳಾಗಿವೆ. ಆ ಎರಡು ಪದ್ಯಗಳಲ್ಲಿ ಮೊದಲನೆಯದಕ್ಕೆ ಟೀಕೆಯಿದ್ದು, ಆ ಪದ್ಯವೂ

ಅದರ ಟೀಕೆಯೂ, ಈಗಾಗಲೇ ಉದ್ಧರಿಸಿರುವ 'ಮಣ್ಣೇಶ್ವರಕಾವ್ಯದ ನಾಂದ್ಯ'ದ ಪದ್ಯವೂ ಟೀಕೆಯೂ ಇರುವಂತೆಯೇ ಬಲುಮಟ್ಟಿಗೆ ಇವೆ. ನಾಂದ್ಯದ ೧೩ನೆಯ ಒಂದು ಪದ್ಯ ಮಾತ್ರ 'ಸೌಂದರಕಾವ್ಯ'ದಲ್ಲಿರುವಂತಿಲ್ಲ. ನಾಂದ್ಯದ ಪದ್ಯಗಳಲ್ಲಿ 'ಮಣ್ಣೇಶ ಮಾಂ ತ್ರಾಹಿ' ಎಂದು ಅಂಕಿತವಿದ್ದರೆ, 'ಸೌಂದರಕಾವ್ಯ'ದ ಪದ್ಯಗಳಲ್ಲಿ 'ತ್ರಿಣೇಶ ಮಾಂ ತ್ರಾಹಿ' ಎಂಬುದಾಗಿ ಅಂಕಿತವಿದೆ. ಇದೊಂದು ವಿಶೇಷ. ಉಳಿದಂತೆ, ಪದ್ಯ ಮತ್ತು ಟೀಕೆಗಳಲ್ಲಿ, ಸಾಮಾನ್ಯ ಪಾಠಭೇದಗಳನ್ನು ಅಲಕ್ಷಿಸಿದರೆ, ಮುಖ್ಯ ವಿಷಯದಲ್ಲಿ ಪಾಕ್ಯೈಕ್ಯವೇ ಇದೆ. ಈ ಸಮಾನ ಪದ್ಯಗಳು ಹೀಗೆ ಕಂಡುಬರಲು ಕಾರಣವೇನು? 'ಮಣ್ಣೇಶ್ವರಕಾವ್ಯ' ಅಥವಾ ಆ ಕಾವ್ಯದ ನಾಂದ್ಯಪದ್ಯಗಳ ಸಂಕಲನದಿಂದ ನೂರೊಂದನೇ ಅವನ್ನು ಎತ್ತಿಕೊಂಡಿರಬಹುದೇ? ಇಲ್ಲವೆ ಬೇರೆ ಮೂಲವೇನಾದರೂ ಇರಬಹುದೋ, ವಿಚಾರಮಾಡಬೇಕಾಗಿದೆ. ಇನ್ನು ಎರಡನೆಯ ಪದ್ಯಕ್ಕೆ ಕರ್ತೃ ನೂರೊಂದನೇ ಇದ್ದರೂ ಇರಬಹುದು. ಅದಕ್ಕೆ ಟೀಕೆಯೇನೂ ಇಲ್ಲದಿರುವುದು ಗಮನಾರ್ಹವಾದ್ದು. ಇಲ್ಲಿ ಎರಡು ಪದ್ಯಗಳನ್ನು ಉದಾಹರಿಸಬಹುದಾಗಿದೆ:

ಅಂಗವಿಲ್ಲದನ ನುಂಗುವ ಹಗೆಯುನ । ಹಿಂಗದೇರುವನೊರಸುತನ ।
ಕಂಗಳಿಂದುರುಪಿದ ಗಂಗಾಧರ ಮಹಾ । ಲಿಂಗ ಕೊಡೆನಗೆ ಸುಮತಿಯ ॥ (೨–೩)

ವಿವರಣೆ : ''ಆಕಾರವಿಲ್ಲದ ಗಾಳಿಯನ್ನು, ಆಹಾರವಾಗಿ ಕೊಳ್ಳುವ ಸರ್ಪದ, ಶತ್ರುವಾದ ಗರುಡನನ್ನು, ವಾಹನವಾಗಿ ಮಾಡಿಕೊಂಡಿರುವ ವಿಷ್ಣುವಿನ, ಮಗನಾದ ಮನ್ಮಥನನ್ನು, ಸುಟ್ಟುರುಹಿದ ಶಿವನೇ ಒಳ್ಳೆಯ ಬುದ್ಧಿಯನ್ನು ಕೊಡು.''

ತರಣಿಯ ಮಗನ ಕೊಂದವನಣ್ಣನಯ್ಯನ । ಪುರದೊಳಗಿರುವ ಪಾಪಿಗಳ ।
ಸೆರೆ ಬಿಡಿಸಿದ ಶರಣಾಗತವಜ್ರಪಂ । ಜರ ಪರಶಿವನೆ ಬಾ ಮತಿಗೆ ॥ (೩–೨)

ವಿವರಣೆ : ''ಸೂರ್ಯಪುತ್ರನಾದ ಕರ್ಣನನ್ನು, ಕೊಂದ ಅರ್ಜುನನ, ಅಣ್ಣ ಧರ್ಮರಾಯನ, ತಂದೆ ಯಮನ, ಪಟ್ಟಣದೊಳಗಿರುವ ಪಾಪಿಗಳ ಸೆರೆಬಿಡಿಸಿದ ಶಿವನೇ ಬುದ್ಧಿಯನ್ನು ಕೊಡು.''

ರೇವಣಸಿದ್ಧನ 'ಮರುಳಸಿದ್ಧದೇವರ ಚರಿತ್ರೆ'ಯಲ್ಲಿ :

ಮಾವೆಯ ಪದಗಳ ಪ್ರಪಂಚ ವಿಸ್ತಾರವಾದುದು. ಕವಿಗಳಲ್ಲಿ ಸಾಂಗತ್ಯಕಾರರಿಗೆ ಇದು ತುಂಬ ಅಚ್ಚುಮೆಚ್ಚಿನದು. ಹಾಗಾಗಿ ರೇವಣಸಿದ್ಧನ 'ಮರುಳಸಿದ್ಧದೇವರ ಚರಿತ್ರೆ'ಯಲ್ಲಿಯೂ ಇಂತಹ ಉದಾಹರಣೆಗಳು ಅಲ್ಲಲ್ಲಿ ಕಂಡುಬರುತ್ತವೆ. ಇವು ಸಂಧಿಯ ಆರಂಭದ ನಾಂದೀಪದ್ಯಗಳಾಗಿ ಬರುವುದು ಮಾತ್ರವಲ್ಲದೆ, ಅಲ್ಲಲ್ಲಿ ಚೆದುರಿದಂತೆ ಗ್ರಂಥಶರೀರದಲ್ಲಿಯೂ ಇವೆ. ೬ ಮತ್ತು ೭ನೆಯ ಸಂಧಿಗಳಲ್ಲಿ ಸಾಲುಗಟ್ಟಿ ಇವು ಬರುತ್ತವೆ. ಆರಂಭದಲ್ಲಿಯೇ ಈಯೆಲ್ಲ ಉದಾಹರಣೆಗಳಲ್ಲಿಯೂ ಇವು ಗೂಢಾರ್ಥದ ದೇವತಾಸ್ತುತಿಗಳಾಗಿ, ಈ ಹಿಂದೆ ನಾವು ಗಮನಿಸಿದ ನಾಂದ್ಯದ ಪದ್ಯಗಳ ಹಾಗೆಯೇ ರಚನೆಯ ವೈಖರಿಯುಂಟೆಂದು ಹೇಳಬಹುದು. ಪ್ರಸ್ತುತ, ಕೆಲವು ಉದಾಹರಣೆಗಳನ್ನು ಮಾತ್ರ ಇಲ್ಲಿ ಲಕ್ಷಿಸಬಹುದಾಗಿದೆ :

ಚಂದ್ರನ ತಂಗಿಯ ಹೊಂದಿದವನ ಗರ್ಭ । ದಿಂದ ಬಂದವನರಸಿಯಳೆ ।
ಅಂದದಾನೆಯುಗೋಡ ಓದುವ ಮಠದಲ್ಲಿ । ನಿಂದ ದೇವಿಯೆ ಕೊಡು ಮತಿಯ ॥ (೧–೯)

''ಕ್ಷೀರಸಾಗರದಲ್ಲಿ ಚಂದ್ರನೊಂದಿಗೆ ಹುಟ್ಟಿದ ಲಕ್ಷ್ಮಿಯ, ಕೈಹಿಡಿದ ವಿಷ್ಣುವಿನ, ನಾಭಿಕಮಲದಿಂದ ಹುಟ್ಟಿದ ಬ್ರಹ್ಮನ, ರಾಣಿಯೆನಿಸಿದ ಸರಸ್ವತಿಯೇ ನನಗೆ ಬುದ್ಧಿಕೊಡು.''

ಕಣ್ಣಿಂದ ಕೇಳ್ವವಗುಂಬ ತುತ್ತಾದವನ । ಚಿಣ್ಣನ ಬಿರುದುಳ್ಳವನ ।
ಅಣ್ಣನಯ್ಯನ ಮಡುಹಿದ ಗುರುವೇ ಮು । ಕ್ಕಣ್ಣನೆ ಕೊಡು ಬೇಗ ಮತಿಯ ॥ (೬–೧)

''ಚಕ್ಷುಶ್ರವವೆನಿಸಿದ ಸರ್ಪನಿಗೆ ಆಹಾರವಾದ ವಾಯುವಿನ, ಮಗ ಭೀಮನ, ಕೀರ್ತಿಶಾಲಿಯಾದ ಅಣ್ಣ ಧರ್ಮರಾಯನ, ತಂದೆ ಯಮನನ್ನು ನಿಗ್ರಹಿಸಿದ ಶಿವನೇ ನನಗೆ ಬುದ್ಧಿ ನೀಡು.''

ಗಂಡಸುತನದಿಂದ ಖಾಂಡವ ಕಡಿದವನ । ಬಂಡಿ ನಡಸಿದನೇರುವುದಕೆ ।
ಖಂಡಿತವೈರಿಯ ಮಾಲೆಲಿ ತಾಳ್ದನೆ । ಕೆಂಡಗಣ್ಣನೆ ಸಲಹೆನ್ನ । (೬–೬)

''ಖಾಂಡವವನ್ನು ದಹಿಸಿದ ಅರ್ಜುನನ, ರಥದ ಸಾರಥಿಯಾದ ಕೃಷ್ಣನು (ವಿಷ್ಣು) ಏರುವುದಾದ ಗರುಡನಿಗೆ, ಬದ್ಧ ವೈರಿಯಾದ ಸರ್ಪವನ್ನು ಭೂಷಣವಾಗಿ ಧರಿಸಿದ ಶಿವನೇ ನನ್ನನ್ನು ಕಾಪಾಡು.''

ಜವಗನ ಸಖನ ವಾಹನ ತಲೆಯುಳ್ಳನ । ಯುವತಿಯ ಗರ್ಭದಿಂ ಬಂದ ।
ಕುವರಿಯನಂಕದಿ ಹವಣಿಂದಲಿಟ್ಟಂಥ । ಶಿವನೆ ಮರುಳಸಿದ್ಧ ತ್ರಾಹಿ ॥ (೬–೬)

''ವೇಗಗಾಮಿಯೆನಿಸಿದ ವಾಯುವಿನ, ಗೆಳೆಯನಾದ ಅಗ್ನಿಯ, ವಾಹನವಾದ ಟಗರನ್ನು ಎಂದರೆ ಟಗರಿನ ತಲೆಯನ್ನು, ಉಳ್ಳವನಾದ ದಕ್ಷನ, ಪತ್ನಿಯಾದ ಪ್ರಸೂತಿಯ ಹೊಟ್ಟೆಯಲ್ಲಿ ಹುಟ್ಟಿದ ಸತೀದೇವಿಯನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡ ಶಿವನೇ ಕಾಪಾಡು.''

ಚತುರ್ಮುಖನ ತಾಯಿಗೆ ಹಿತವುಳ್ಳ ಗೆಳೆಯನ । ಸುತನ ಕುವರನ ಮೊಮ್ಮಗನ ।
ಖತಿಯಿಂಥ ಕೊಂದವನ ನುಂಗುವನನೇರುವನ । ಸತತ ಪಡೆದ ದೇವ ಸಲಹು ॥ (೬–೯)

''ಬ್ರಹ್ಮನ ತಾಯಿಯಾದ ತಾವರೆಗೆ, ಸಖನಾದ ಸೂರ್ಯನ, ಮಗ ಯಮನ, ಮಗ ಧರ್ಮರಾಯನ, ಮೊಮ್ಮಗ ಪರೀಕ್ಷಿದ್ರಾಜನನ್ನು, ಕೊಂದ ಸರ್ಪನನ್ನು, ನುಂಗುವ ನವಿಲನ್ನು, ಹತ್ತುವ ಕುಮಾರಸ್ವಾಮಿಯನ್ನು ಮಗನಾಗಿ ಪಡೆದ ಶಿವನೇ ಕಾಪಾಡು.''

ಕಾವ್ಯದ ಹರವಿನಲ್ಲಿ ಬಿಡಿಯಾಗಿ ಬಂದಿರುವ ಸದೃಶರಚನೆಗಳು

ಈ ಗುಂಪಿನ ರಚನೆಗಳು ಮಧ್ಯಕಾಲೀನ ಕನ್ನಡ ಸಾಹಿತ್ಯದ ಕೆಲವು ಕೃತಿಗಳಲ್ಲಿಯೂ 'ಮುಂಡಿಗೆ'ಗಳೆಂದು ಸಾಮಾನ್ಯವಾಗಿ ಹೇಳುವ ದಾಸರ ಕೀರ್ತನೆಗಳಲ್ಲಿಯೂ ಅಲ್ಲಲ್ಲಿ ಕಂಡುಬಂದಿವೆ. ಇವು ಗ್ರಂಥಗಳಲ್ಲಿ ಚೆದರಿದಂತೆ ಇರಬಹುದಾದರೂ, ಸಾಮಾನ್ಯವಾಗಿ ಆದ್ಯಂತಗಳಲ್ಲಿ ಬಂದಿರುವುದೇ ರೂಢಿ. ಕವಿಯ ಆರಾಧ್ಯದೈವ ಯಾವುದೆಂಬುದನ್ನು ಅನುಸರಿಸಿ ಈ ಗೂಢಾರ್ಥದ ದೇವತಾಸ್ತುತಿಗಳು ಶಿವಪರವೋ ವಿಷ್ಣುಪರವೋ ಆಗುತ್ತವೆ. ಇಲ್ಲಿ ಕೆಲವು ನಿದರ್ಶನಗಳನ್ನು ಗಮನಿಸಬಹುದಾಗಿದೆ.

ಪದ್ಮಣಾಂಕನ (ಸು. ೧೩೮೫) 'ಪದ್ಮರಾಜ ಪುರಾಣ'ದಲ್ಲಿ :

ಹಂತಿಗೊರಲವನನೇಳಿಸೆ ಪೆರ್ಬೆರಲೊಳೊತ್ತಿ
ಹಂತವಂ ಮುಱಿದು ಮೂಱವತೆಯುಳ್ಳರಮನೆಯ
ನಂತಪುರಮಂ ಮಾಡಿ ನೀರ್ಪೂವ ಮುಡಿದು ತನ್ನಂ ನೆನೆವ ಮಾಹಪುಣ್ಯರಾ
ಪಿಂತಿಲಮರ್ದುಣಿವರನೆನಿಸಿ ಕಪ್ಪುವಟ್ಟೆಗನ
ನಾಂತು ಬರವೀವ ಹತ್ತದೆ ತುತ್ತುತುದಿಯಾಗಿ
ಮಂತುರವರಿಜದಾಳ್ದು ನೆಱೆ ಮೆಱೆವ ಕಾಶಿಯೊಡೆಯಂ ತಡೆಯದೋವುಗೆಮ್ಮಂ ॥ (೧೩–೬೫)

ಮಾತೃಕೆಯಲ್ಲಿ ಈ ಪದ್ಯವನ್ನು 'ಅಚ್ಚಕನ್ನಡಂ' ಎಂದಿರುವುದು ಗಮನಿಸತಕ್ಕುದಾಗಿದೆ. 'ಕಾಶಿ' ಎಂಬ ಸಂಸ್ಕೃತ ಅಂಕಿತ ನಾಮವನ್ನು ಬಿಟ್ಟರೆ ತದ್ಭವಗಳೂ ದೇಶ್ಯಶಬ್ದಗಳೂ ಮಾತ್ರವೇ ಈ ಪದ್ಯದಲ್ಲಿ ಬಳಕೆಯಾಗಿರುವುದರಿಂದ ಈ ಸೂಚನೆಗೆ ಅನುಸಾರವಾಗಿಯೇ ಈ ಪದ್ಯವಿದೆ ಎನ್ನಬಹುದು (ಮುಂದಿನ ವಿವರಣೆ ಸ್ವಕೀಯವಾದ್ದು).

ವಿವರಣೆ : ''ರಾವಣನನ್ನು ಅವಮಾನಿಸಲು, (ಕೈಲಾಸವನ್ನು ಎತ್ತಲು ಯತ್ನಿಸಿದ್ದ ಅವನನ್ನು) ಕಾಲ ಹೆಬ್ಬೆರಳಲ್ಲಿ ಕೆಳಕ್ಕೆ ಒತ್ತಿ ಅವನ ಸಂಕಲ್ಪವನ್ನು ಮುರಿದು, ಉನ್ಮನಿ ಮನೋನ್ಮನಿ ಸಹಜೆ ಎಂಬ ಯೋಗದ ಮೂರು ಅವಸ್ಥೆಗಳನ್ನು ತನ್ನ ಅಂತಃಪುರವಾಗಿ ಮಾಡಿಕೊಂಡು, ಚಂದ್ರನನ್ನು ತಲೆಯಲ್ಲಿ ಧರಿಸಿ, ತನ್ನನ್ನು ನೆನೆಯುವ ಪುಣ್ಯವಂತರ ಹಿತ್ತಿಲಲ್ಲಿಯೇ ಇರುವ ದೇವಶ್ರೇಷ್ಠನೆನ್ನಿಸಿ, ರಾಕ್ಷಸನಾದ (ನೀಲಾಂಬರ–ಕಪ್ಪುವಟ್ಟೆಗ=ರಾಕ್ಷಸ) ಗಜಾಸುರನನ್ನು ವಸ್ತ್ರವಾಗಿ ಧರಿಸಿ ವರದಹಸ್ತನಾಗಿ ಕಡೆಗೆ 'ಮಂತ್ರಮೂರ್ತಿ' ಎನಿಸಿದ ಕಾಶಿ ವಿಶ್ವೇಶ್ವರನೇ ನಮ್ಮನ್ನು ಕಾಪಾಡು.''

ಕುಮಾರವ್ಯಾಸನ (ಸು. ೧೪೦೦) 'ಕರ್ಣಾಟಭಾರತ ಕಥಾಮಂಜರಿ'ಯಲ್ಲಿ :

ವೇದಪುರುಷನ ಸುತನ ಸುತನ ಸ । ಹೋದರನ ಮೊಮ್ಮಗನ ಮಗನ ತ ।
ಳೋದರಿಯ ಮಾತುಳನ ಮಾವನನತುಳ ಭುಜಬಲದಿ ।
ಕಾದಿ ಗೆಲಿದನನಣ್ಣನವ್ವೆಯ । ನಾದಿನಿಯ ಜಠರದಲಿ ಜನಿಸಿದ ।
ನಾದಿಮೂರುತಿ ಸಲಹೊ ಗದಗಿನ ವೀರನಾರಯಣ ॥ (ಆದಿಪರ್ವ, ೧–೨೩)

''ನಾರಾಯಣಸುತನಾದ ಬ್ರಹ್ಮನ, ಅವನ ಮಗನಾದ ವಸಿಷ್ಠನ, ಅವನ ಸಹೋದರನಾದ ಮರೀಚಿಯ, ಮೊಮ್ಮಗನಾದ(=ಮಗನಾದ ಕಶ್ಯಪನ ಮಗ) ಇಂದ್ರನ, ಮಗನಾದ ಅರ್ಜುನನ, ವಧುವಾದ ಸುಭದ್ರೆಯ, ಸೋದರ ಮಾವನಾದ ಕಂಸನ, ಮಾವನಾದ ಜರಾಸಂಧನನ್ನು ಮಲ್ಲಯುದ್ಧದಿಂದ ಕಾದಿ ವಿಜಯ ಸಂಪಾದಿಸಿದ ಭೀಮನ, ಅಣ್ಣನಾದ ಧರ್ಮರಾಜನ, ತಾಯಿಯಾದ ಕುಂತಿಯ, ನಾದಿನಿಯಾದ ದೇವಕಿಯ ಗರ್ಭದಲ್ಲಿ ಹುಟ್ಟಿದ ಅನಾದಿಮೂರುತಿಯಾದ ಗದುಗಿನ ವೀರನಾರಾಯಣನೆ (=ಕೃಷ್ಣನೆ) ರಕ್ಷಿಸು.''[46]

ಆಶುಕವಿ ಕೃಷ್ಣಶರ್ಮನ 'ಸರಜಾ ಹನುಮೇಂದ್ರ ಯಶೋವಿಲಾಸ'ದಲ್ಲಿ :

ಸಂತೆ ಬೆನ್ನೂರ ಪಾಳೆಯಗಾರರ ವಂಶದ ಸರಜಾ ಹನುಮಪ್ಪನಾಯಕನ ಚರಿತ್ರೆಯಾಗಿರುವ (ಸು.೧೭೦೦) ಈ ಕೃತಿಯಲ್ಲಿ ಕೆಲವು ಪಾವೆಯ ಪದಗಳಿದ್ದು, ಮೂರು ಪದ್ಯಗಳನ್ನು ಇಲ್ಲಿ ಉದ್ಧರಿಸಬಹುದಾಗಿದೆ. ಆಶುಕವಿಯಾಗಿದ್ದ ಕೃಷ್ಣಶರ್ಮನಿಗೆ ಈ ಬಗೆಯ ಚಮತ್ಕಾರದ ಪದ್ಯಗಳನ್ನು ಕಟ್ಟುವುದು ವಿನೋದದ ವಿಷಯವಾಗಿರಬಹುದು.

ಎರಡೈದು ಸ್ಯಂದನದವನ ಕುಮಾರನ। ವರಮಿತ್ರನ ಚಮೂಪತಿಯ।
ಕರುಣದಿ ಪೆತ್ತನ ಸರಿಗೃಹದವನ। ತರುಣನ ಪೊಲ್ದನು ನೀರಂ॥

ಹತ್ತು ರಥಗಳವನ ಎಂದರೆ ದಶರಥನ, ಮಗ ಶ್ರೀರಾಮನ, ಗೆಳೆಯ ಸುಗ್ರೀವನ, ಸೇನಾಪತಿ ಆಂಜನೇಯನ, ತಂದೆ ವಾಯುವಿನ, ಮನೆಯಲ್ಲಿ ವಾಸವಿರುವ ಸೂರ್ಯನ, ಮಗ ರೇವಂತನನ್ನು ಪ್ರಿಯನು ಹೋಲುತ್ತಾನೆ.

ಪತ್ತು ತಲೆಯವನ ತಾತನ ತಮ್ಮಗೆ। ಉತ್ತಮದುಪಕಾರವನು।
ಚಿತ್ತರದಲಿ ಮಾಡಿದವನನು ಪೋಲ್ದನು। ಮತ್ತಕಾಶಿನಿ ರಾತ್ರಿನೀರಂ॥

ಹತ್ತು ತಲೆಯವನ ಎಂದರೆ ರಾವಣನ, ತಾತ ಪುಲಸ್ತ್ಯನ, ತಮ್ಮ ನಾರದನಿಗೆ ವಿಷ್ಣುಭಕ್ತಿಯ ಪ್ರಸಾದವನ್ನಿತ್ತು ಅನುಗ್ರಹಿಸಿದ ನಾರಾಯಣನನ್ನು ರಾತ್ರಿನೀರನು ಹೋಲುವನಾದನು.

ಹರಿಸುತನನುಜನ ಅಣ್ಣನ ಎರಡನೆ। ಗುರುವಾಗಿ ನಿಜಜನ್ಮಸ್ಥಳವು।
ವರ ಕರ್ಣವಾದನ ಪೋಲ್ದನು ನೀರನು। ತರುಣಿ ಕೇಳ್ದಿಯ ಅಚ್ಚರಿಯ॥ (೪–೪೦–೪೨)

ಇಂದ್ರನ ಮಗನಾದ ಅರ್ಜುನನ, ತಮ್ಮ ನಕುಲನ, ಅಣ್ಣ ಭೀಮನ, ಎರಡನೆಯ ಗುರು ಎಂದರೆ ಯುಧಿಷ್ಠಿರನಿಗೆ ಸಮನಾಗಿ ಹಿರಿಯನೆನಿಸಿ ತನ್ನ ಜನ್ಮಸ್ಥಳ ಕರ್ಣ (ಕಿವಿ) ಎಂಬ ಪ್ರತೀತಿಯಿರುವ ಆ ಕರ್ಣನನ್ನು ಪ್ರಿಯನು ಹೋಲುವವನಾದನು (?).

'ಕಲ್ಲೆ ಲಿಂಗೇಶ್ವರನ ಚಾರಿತ್ರ'ದಲ್ಲಿ:

ಬಸವ ಕವಿಯ ಈ ಕೃತಿಯಲ್ಲಿ ಕೆಲವು ಪಾವೆಯ ಪದಗಳಿದ್ದು, ಇವುಗಳಲ್ಲಿ ಕೆಲವು ರೇವಣಸಿದ್ಧನ 'ಮರುಳಸಿದ್ಧದೇವರ ಚರಿತ್ರೆ' ಯೊಳಗಿನವೇ ಆಗಿವೆ. ಇವನ್ನು ಬಿಟ್ಟು, ಬೇರೆಯ ನಾಲ್ಕು ಉದಾಹರಣೆಗಳನ್ನು ಮಾತ್ರ ಇಲ್ಲಿ ಉದ್ಧರಿಸಬಹುದಾಗಿದೆ.

ಋತು ಸುತ ವೈರಿಯ ಸುತೆಯಾಳ್ದನಪ್ಪನ। ಸತತ ಕುವರಿಗೆ ಸೋತವನ।
ಋತಿಯಿಂದ ಸೀಳ್ದನ ಅಣ್ಣನಯ್ಯನ ಕೊಂದ। ಶಿತಿಕಂಠ ಶಿವನೆ ಮಾಂ ತ್ರಾಹಿ॥ (೪–೧)

''ಗಿರಿರಾಜನ ಮಗನಾದ ಮೈನಾಕನ, ಶತ್ರು ದೇವೇಂದ್ರನ, ಮಗಳು ದೇವಸೇನೆಯ, ಪತಿ ಷಣ್ಮುಖನ, ತಂದೆ ಯಜ್ಞೇಶ್ವರನ, ಮಗಳು ದ್ರೌಪದಿಗೆ, ಮೋಹಿತನಾದ ಕೀಚಕನನ್ನು, ಕೊಂದ ಭೀಮನ, ಅಣ್ಣ ಧರ್ಮರಾಯನ, ತಂದೆ ಯಮನನ್ನು ನಿಗ್ರಹಿಸಿದ ಶಿವನೇ ನನ್ನನ್ನು ಕಾಪಾಡು.''

ಅಜನ ಕುವರನಾತ್ಮಜನ ಮಾವನ ಸುತೆ । ನಿಜದಿ ಕೂಡಿದನ ಕುವರಿಯಳ ।
ಮೋಜಿನ ಗೆಳೆಯನ ಪೆತ್ತನ ನೇತ್ರದೊಳ್ । ಪೂಜೆಗೊಂಬಾತನೆ ತ್ರಾಹಿ ॥ (೬–೧೨)

''ಬ್ರಹ್ಮನ ಮಗನಾದ ಮರೀಚಿಯ, ಮಗ ಕಶ್ಯಪನ, ಮಾವ ದಕ್ಷಬ್ರಹ್ಮನ, ಅಳಿಯನಾದ ಚಂದ್ರನ, ಮಗಳು ರತಿದೇವಿಯ, ಪತಿ ಮನ್ಮಥನ, ತಂದೆ ವಿಷ್ಣುವಿನ ಕಣ್ಣಿಂದ ಪೂಜಿಸಲ್ಪಟ್ಟ ಶಿವನೇ ಕಾಪಾಡು.''

ಕುರುಪತಿ ತಂಗಿಯ ವರನ ಸೀಳ್ದನಣ್ಣನ । ನಿರುತದಿ ಪೆತ್ತನ ಪಿತನ ।
ವರ ಕುವರನ ಕರುಣ ಒದಗುವುದು ಬಾಣದಲಿ । ಚರಿತೆ ನಿಂದಿಸುವಂಥ ಜನಕೆ ॥ (೬–೪)

ದುರ್ಯೋಧನನ ತಂಗಿಯಾದ ದುಶ್ಶಳೆಯ, ಪತಿ ಸೈಂಧವನನ್ನು, ಕೊಂದ ಅರ್ಜುನನ, ಅಣ್ಣ ಧರ್ಮರಾಯನ, ತಂದೆ ಯಮನ, ಮಗ ಶನಿಯ ಪಂಚಮದ (ಬಾಣದಲಿ) ಕಾಟ ಈ ಚರಿತ್ರೆಯನ್ನು ನಿಂದಿಸಿದವರಿಗೆ ಕಾಡುತ್ತದೆ.

ವಿಧಿಯ ರಾಣಿಯ ಅತ್ತೆ ಅಣ್ಣಗೆ ಶಪಿಸಿದನ । ಮುದದಿ ಪೆತ್ತಳ ಅನುಜನನು ।
ಕದನದಿ ದೂಡಿದಗೆ ಪದವಿಯ ಕೊಟ್ಟವನೆ । ಮದಸುರರಿಪು ರಕ್ಷಿಸೆನ್ನ ॥ (೬–೧೨)

''ಬ್ರಹ್ಮಪತ್ನಿ ಸರಸ್ವತಿಯ, ಅತ್ತೆ ಲಕ್ಷ್ಮಿಯ, ಅಣ್ಣ ಚಂದ್ರನಿಗೆ, ಶಾಪವಿತ್ತ ಗಣಪತಿಯನ್ನು, ಹೆತ್ತ ಪಾರ್ವತಿಯ, ತಮ್ಮ ಮೈನಾಕನನ್ನು, ಯುದ್ಧದಲ್ಲಿ ನೂಕಿದ ಇಂದ್ರನಿಗೆ ಪದವಿಯನ್ನು ಕೊಟ್ಟವನೇ, ಗಜಾಸುರ ವೈರಿಯಾದ ಶಿವನೇ, ನನ್ನನ್ನು ರಕ್ಷಿಸು.''

'ಹಾವೆ ಮತ್ತು ಗಟ್ಟಿಪದಗಳು' ಸಂಕಲನದಲ್ಲಿ :

ಕನ್ನಡ ಅಧ್ಯಯನ ಸಂಸ್ಥೆಯ ಕೆ. ೧೩೯ ಮತ್ತು ಕೆ. ಎ. ೪೩೦ ನೆಯ ಸಂಖ್ಯೆಯ ಹಸ್ತಪ್ರತಿಗಳ ಆಧಾರದ ಮೇಲೆ ಸಿದ್ಧವಾಗಿರುವ ಈ ಸಂಪಾದಿತ ಕೃತಿಯಲ್ಲಿ (ಸಂ. ಜಿ. ಜಿ. ಮಂಜುನಾಥನ್) ೧೧೧ ಪದ್ಯಗಳಿದ್ದು, ಇದರಲ್ಲಿ 'ಚೆನ್ನಬಸವಪುರಾಣ', 'ರಾಘವಾಂಕಚಾರಿತ್ರ', 'ಭಿಕ್ಷಾಟನಚಾರಿತ್ರ', 'ಗುರುರಾಜಚಾರಿತ್ರ', 'ಹಮ್ಮೀರ ಕಾವ್ಯ' ಈ ಕೆಲವು ಗ್ರಂಥಗಳ ಪ್ರಹೇಳಿಕೆಗಳಲ್ಲಿ ಕೆಲವು, ಟೀಕೆಯೊಂದಿಗೆ ಒಗ್ಗೂಡಿರುವುದು ಕಾಣುತ್ತದೆ. ಕೃತಿಯ ಕಾಲವನ್ನು ಸು. ೧೭೫೦ ಎಂದು ಭಾವಿಸಲಾಗಿದೆ. ಕೆಲವು ಪದ್ಯಗಳ ಆಕರಗಳನ್ನು ಇನ್ನೂ ಗುರುತಿಸುವುದು ಸಾಧ್ಯವಾಗಿಲ್ಲ. ಇದು ಸಮ್ಮಿಶ್ರರೂಪದ ಕೃತಿಯಾದುದರಿಂದ, ಇದನ್ನು ಪ್ರತ್ಯೇಕವಾಗಿ ಕೊಟ್ಟಿದೆ. ನ್ಯಾಯವಾಗಿ ಇದರ ಸ್ಥಾನ ಸ್ವತಂತ್ರರಚನೆಗಳಲ್ಲಿ. ಈ ಸಂಕಲನದಿಂದ ೪ ಪದ್ಯಗಳನ್ನು ಉದ್ಧರಿಸಿ, ಟೀಕೆಯ ಸಹಾಯದಿಂದ ಅವುಗಳ ಅರ್ಥವನ್ನೂ ಮುಂದೆ ವಿವರಿಸಿದೆ.

ಪುತ್ತದೊಳಗಣ ದೀರ್ಘಪೃಷ್ಠಮಂ ತೆಗೆದ ಮಹಿ
ಮೋತ್ತಂಸಪಿತನ ಸತಿಯತ್ತಿಗೆಯ ಮಗನ ಕೃಪೆ
ವೆತ್ತ ತಚ್ಛಿಷ್ಯನಿಂ ಪಾಳಾದ ಪಟ್ಟಣಾಧಿಪನ ಜನಕನ ಪುತ್ರರ
ಹೆತ್ತವ್ವೆಯಾತ್ಮಜಳ ಸುತನಿಂದೆ ಕಲ್ಮಣ್ಣ
ತತ್ತ ಕಾರ್ಯಕೆ ಪೊರಿಸಿದಂಗನೆಯನೊಯಿದವನ
ಒತ್ತಿಲಿ ಜನಿಸಿದವಗೆ ಕೃಪೆಯಾದನಾತ್ಮಜನ ಪೆತ್ತಳಯ್ಯಂಗೆರಗುವೆ ॥ (೬)

ಇದರ ಅರ್ಥ : ''ಹುತ್ತದೊಳಗಿನ ಹಾವನ್ನು ತೆಗೆದ ಮಹಿಮಾಶಾಲಿಯಾದ ಬಾಲಸಂಗಯ್ಯನ ತಂದೆ ಬಸವಣ್ಣನ, ಪತ್ನಿ ನೀಲಲೋಚನೆಯ, ಅತ್ತಿಗೆ ನಾಗಲಾಂಬಿಕೆಯ, ಮಗ ಚೆನ್ನಬಸವಣ್ಣನ ಕೃಪೆಗೆ ಪಾತ್ರನಾದ ಸಿದ್ಧರಾಮನ, ಶಿಷ್ಯ ಬಿಲ್ಲೇಶಬೊಮ್ಮಯ್ಯನಿಂದೆ ಹಾಳುಸುರಿಯುವಂತಾದ ಸಂಯಮಿ ಎಂಬ ನಗರದ ಒಡೆಯ ಯಮನ, ತಂದೆ ಸೂರ್ಯನ, ಮಕ್ಕಳು ವಾಲಿ ಸುಗ್ರೀವರನ್ನು, ಹಡೆದ ತಾಯಿ ಅಹಲ್ಯೆಯ (?), ಮಗಳು ಅಂಜನದೇವಿಯ (?), ಮಗ ಆಂಜನೇಯನ ಮೂಲಕ ಕಲ್ಲುಮಣ್ಣುಗಳನ್ನು ಸೇತುಬಂಧನಕ್ಕೆ ಹೊರಿಸಿದ ರಾಮನ, ಪತ್ನಿ ಸೀತೆಯನ್ನು ಅಪಹರಿಸಿದ ರಾವಣನ, ಒಡಹುಟ್ಟಿದ ವಿಭೀಷಣನಿಗೆ ಕೃಪೆಮಾಡಿದ ರೇವಣಸಿದ್ಧನ, ಮಗ ರುದ್ರಮುನಿಯನ್ನು, ಹಡೆದ ತಾಯಿ ಸೌಂದರ ನಾಚಿಯಮ್ಮನ, ತಂದೆ ರಾಜೇಂದ್ರ ಚೋಳರಾಯನಿಗೆ ನಮಸ್ಕರಿಸುತ್ತೇನೆ.''

ಹತ್ತಿರಡನೆಯ ತಾರೆ ಪೆಸರಳ । ಪೆತ್ತವನ ಭವನದಲಿ ತಮ್ಮಯ ।
ಮೂರ್ತಿ ಮಸುಳಿಸ ಕಳೆದ ಭೂಪನ ಸತಿಗೆ ಅಕ್ಷಯವ ।
ಇತ್ತವನ ಸತಿಯನುಜೆಯಣ್ಣನ । ಉತ್ತಮಾಂಗದಿ ಧರಿಸಿ ಏಣನ ।
ಮತ್ತೆ ಕರದಲಿ ಪಿಡಿದ ಮೃತ್ಯುಂಜಯನೆ ಸಲಹೆಮ್ಮ ॥ (೫೯)

ಇದರ ಅರ್ಥ: ''ಉತ್ತರೆಯನ್ನು ಹೆತ್ತ ವಿರಾಟರಾಜನ ಮನೆಯಲ್ಲಿ ಅಜ್ಞಾತನಾಗಿದ್ದ ದೊರೆ ಧರ್ಮರಾಯನ, ಪತ್ನಿ ದ್ರೌಪದಿಗೆ ಅಕ್ಷಯವಸ್ತ್ರವನ್ನು ಕೊಟ್ಟ ಕೃಷ್ಣನ, ಪತ್ನಿ ಲಕ್ಷ್ಮಿಯ, ತಂಗಿ (ಸವತಿ?) ವೃಂದೆಯ, ಅಣ್ಣ ಚಂದ್ರನನ್ನು (?) ತಲೆಯಲ್ಲಿ ಧರಿಸಿಯೂ ಜಿಂಕೆಯನ್ನು ಕೈಯಲ್ಲಿ ಹಿಡಿದ ಶಂಕರನೇ ನಮ್ಮನ್ನು ಸಲಹು.''

ಆರಡಿಯ ವಾಹನನ ವಾಹನನ । ದಾರಿಯೊಳು ತರುತಿರ್ದ ಪ್ರೇಮದಿ
ಮಾರಸತಿಪಿತ ಪ್ರೇಮಿಯನ ಹೊರುವವ ನೂಂಕಿದನು ತಾಯಿ ।
ಸೂರಿಯನ ಸುತ ಭೂಮಿಗೊಂದಲು । ಭೂರಿಕ್ಲೇಶಮದಾಯ್ತು ನದಿರಮ
ಣಾರಿಪಿತ ತಾಂ ಭಂಗವಾದುದೆನುತ್ತೆ ಪೇಳಿದಳು ॥ (೬೦)

ಇದರ ಅರ್ಥ: ''ದುಂಬಿಯ ವಾಹನವಾದ ತಾವರೆಯ, ವಾಹನವಾದ ಉದಕವನ್ನು ದಾರಿಯಲ್ಲಿ ತರುತ್ತಿದ್ದೆ. (ಆಗ) ಪ್ರೀತಿಯಿಂದ ಮನ್ಮಥನ ಪತ್ನಿಯಾದ ರತಿಯ, ತಂದೆ ಚಂದ್ರನಲ್ಲಿ ಅಭಿಮಾನವಿರುವ ಪರಮೇಶ್ವರನನ್ನು, ಸವಾರಿಯಲ್ಲಿ ಒಯ್ಯುವ ವೃಷಭನು (ಎತ್ತು) ನನ್ನನ್ನು ನೂಕಿದನು. ಎಲೆ ತಾಯಿ, ಸೂರ್ಯನ ಮಗನಾದ ಕರ್ಣನ ಹೆಸರನ್ನು ಉಳ್ಳ ಕರ್ಣಲು (?) ನೆಲಕ್ಕೆ ಬೀಳಲು ನನಗೆ ತುಂಬ ದುಃಖವಾಯಿತು. ಹೊಳೆಗಳಿಗೆ ಒಡೆಯನಾದ ಸಾಗರನ, ಶತ್ರು ಅಗಸ್ತ್ಯನ, ತಂದೆ ಕೊಡನು (ಕುಂಭ) ಒಡೆದುಹೋಯಿತು ಎಂದು ಹೇಳಿದಳು.''

ನಗಹರಪುತ್ರಮಾತುಳಕುಮಾರಿಯ ಗಂಡನ ತಂದೆಯಪ್ಪನಾ
ಮಗನ ಪಿತಾಮಹಾತ್ಮಜನ ಕಂದನ ಮಾವನ ತಾತನಯ್ಯನಾ
ಸೊಗಸಿನ ತುಂಡಮಂಡಲವ ಖಂಡಿಸಿದುದ್ಭಟನಾಟಕಾಭಿರಾ
ಮಗುರು ಪವಿತ್ರಚಿತ್ರಪವಿಚಿತ್ರಕಲಾಪನೆ ತಂದೆ ಶಂಕರಾ ॥

ಇದರ ಅರ್ಥ: ''ಪರ್ವತ ವೈರಿಯಾದ ಇಂದ್ರನ, ಮಗ ಅರ್ಜುನನ, ಮಾವ ದ್ರುಪದನ, ಮಗಳು ದ್ರೌಪದಿಯ, ಪತಿ ಧರ್ಮರಾಯನ, ತಂದೆ ಯಮನ, ತಂದೆ ಸೂರ್ಯನ, ಮಗ ಕರ್ಣನ, ತಾತ ಕಶ್ಯಪಬ್ರಹ್ಮನ, ಸೊಗಸಾದ ಮುಖವನ್ನು ಚಿವುಟಿಹಾಕಿದ ತಾಂಡವೇಶ್ವರನಾದ ಗುರುವೆ, ನಿರ್ಮಲನಾದ ಚಂದ್ರನನ್ನು (?) ಶಿರೋಭೂಷಣವಾಗಿ ಧರಿಸಿದವನೇ, ತಂದೆ ಶಂಕರನೇ!''

ಇಲ್ಲಿ ಪ್ರಾತಿನಿಧಿಕವಾಗಿ ಕೆಲವು ಪದ್ಯಗಳನ್ನಷ್ಟೇ ಉದ್ಧರಿಸಿದೆ. ಯಮಕ, ಶ್ಲೇಷೆಗಳನ್ನು ಆಧರಿಸಿದ ಮತ್ತು ಕ್ಲಿಷ್ಟವಾದ ವಾಣಿಯ ರಚನೆ ಹೆಣೆದುಕೊಂಡು ಇನ್ನೂ ಎಷ್ಟೋ ಪದ್ಯಗಳಿವೆ. ಈ ಕೃತಿಯ ಟೀಕು ತೃಪ್ತಿಕರವಾಗಿ ಮೂಲದ ಆಶಯವನ್ನು ವಿವರಿಸುವಂತೆ ಅನೇಕ ಕಡೆಗಳಲ್ಲಿ ತೋರುವುದಿಲ್ಲ. ಇಲ್ಲಿ ಉದ್ಧರಿಸಿರುವ ಪದ್ಯಗಳ ವಿಷಯದಲ್ಲಿಯೇ ಆ ತೊಡಕನ್ನು ಗಮನಿಸಬಹುದಾಗಿದೆ. ಆದರೆ ಅಷ್ಟುಮಟ್ಟಿನ ಪ್ರಯತ್ನವನ್ನಾದರೂ ಟೀಕೆಯ ಕರ್ತೃ ಮಾಡಿರುವುದನ್ನು ಮೆಚ್ಚಬೇಕಾಗುವುದು.

ಹರಿದಾಸರ ಕೀರ್ತನೆಗಳು

ಈಗ ತಿಳಿದಮಟ್ಟಿಗೆ ಪುರಂದರದಾಸರು (ಸು. ೧೫೪೦) ಕನಕದಾಸರು (ಸು. ೧೫೫೦), ಪ್ರಸನ್ನವೆಂಕಟದಾಸರು (ಸು.೧೬೮೦-೧೭೫೨) ಮುಂತಾದವರ ಕೀರ್ತನೆಗಳಲ್ಲಿ ಗೂಢಾರ್ಥದ ದೇವತಾಸ್ತುತಿಗಳು ಕೆಲವು ದೊರೆಯುತ್ತವೆ. ಇವು ಆಯಾ ದಾಸರ ವಿಶಿಷ್ಟವಾದ ಅಂಕಿತದಿಂದ ಮುಗಿಯುವುವಾಗಿದ್ದು, ವಿಷ್ಣುವಿನ ಅಥವಾ ಆ ದೈವದ ಬೇರೆ ಬೇರೆ ಅವತಾರಗಳನ್ನೂ ಲೀಲೆಗಳನ್ನೂ ಕೀರ್ತಿಸುವ ಎರಡು ಅಥವಾ ಎರಡಕ್ಕಿಂತ ಹೆಚ್ಚಿನ ನುಡಿಗಳಿಂದ ಕೂಡಿರುತ್ತವೆ. ಈ ನುಡಿಗಳು ಪಲ್ಲವಿ ಅನುಪಲ್ಲವಿಗಳಿಂದ ನಿಬದ್ಧವಾಗಿ, ತಾಳಪ್ರಧಾನವಾದ ವಿವಿಧ ಗತಿಗಳಲ್ಲಿ ನಡೆಯುವಂತೆ ಸ್ನಿಗ್ಧವಾದ ಛಂದೋರೂಪಗಳಲ್ಲಿರುತ್ತವೆ; ಬಹುಶಃ ಅಂಶವೃತ್ತಗಳಾಗಿರುತ್ತವೆ. ಇವುಗಳು

ಹಾಡಿಗೆ ಒಗ್ಗುವಂತೆ ಆಡುಮಾತಿನ ಭಾಷಾಶೈಲಿಯಲ್ಲಿದ್ದು, ಸರಸವೂ ಸ್ವಾಭಾವಿಕವೂ ಆದ ಗತಿ ಗಮಕಗಳನ್ನು ಹಿಡಿದು ನಡೆಯುವಂತಿರುತ್ತವೆ; ಇತರ ಕೀರ್ತನೆಗಳ ಹಾಗೆಯೇ ಇವೂ ವಿವಿಧವಾದ ರಾಗಗಳಲ್ಲಿ, ತಾಳಗಳಲ್ಲಿ ಹಾಡಲ್ಪಡುವ ಸೌಕರ್ಯವುಳ್ಳವೆಂಬುದು ಮಾತೃಕೆಗಳಲ್ಲಿಯ ಸೂಚನೆಗಳಿಂದಲೂ ಪ್ರಯೋಗಗಳಿಂದಲೂ ಸಿದ್ಧವಾಗಿದೆ. ಉದಾಹರಣೆಗೆ, ಕನಕದಾಸರ ಕೀರ್ತನೆಗಳಲ್ಲಿ, ಮುಂದೆ ಉದ್ಧರಿಸಿರುವ ನಾಲ್ಕು ಲಕ್ಷ್ಯಗಳೂ ಕ್ರಮವಾಗಿ ಆನಂದಭೈರವಿ–ಅಟತಾಳ, ಸಾವೇರಿ–ಅಟತಾಳ, ಸಾರಂಗ–ಅಟತಾಳ, ಸುರಟಿ-ಝಾಪುತಾಳಗಳಲ್ಲಿವೆಯೆಂದು ಮುದ್ರಿತ ಗ್ರಂಥಗಳಲ್ಲಿ ಸೂಚಿತವಾಗಿದೆ; ಹೀಗೆಯೇ ಉಳಿದವುಗಳಿಗೂ ಸೂಚನೆಗಳಿವೆ.

ವಸ್ತುವಿನ ದೃಷ್ಟಿಯಿಂದ, ಉದ್ದೇಶಿತ ದೈವದ ಬಾಂಧವ್ಯದ ಎಳೆಗಳನ್ನು ಹೆಣೆಯುವಾಗ ಇಲ್ಲವೆ ಸುತ್ತು ಬಳಸಿನ ಮಾತುಗಳಲ್ಲಿ ಆ ದೈವದ ಮಹಿಮೆಗಳನ್ನೋ ಲೀಲೆಗಳನ್ನೋ ನಿರೂಪಿಸುವಾಗ ರಾಮಾಯಣ ಭಾರತಗಳ ಹಾಗೂ ಭಾಗವತಾದಿ ವೈಷ್ಣವ ಪುರಾಣಗಳ ಕಥಾಂಶಗಳನ್ನೂ ಪೌರಾಣಿಕ ಘಟನೆಗಳನ್ನೂ ಅವಲಂಬಿಸಿರುವುದು ವಿಶೇಷವಾಗಿ ಕಂಡುಬರುತ್ತದೆ. ಆ ನಿರೂಪಣೆ ಸಹ ದ್ವೈತಸಂಪ್ರದಾಯದ ನಂಬಿಕೆಗಳನ್ನೂ ಕಟ್ಟುಕಟ್ಟಳೆಗಳನ್ನೂ ಮೀರಿ ಹೋಗದಂತೆ ಇರುವುದಲ್ಲದೆ, ಅದರಿಂದಾಗಿಯೇ ಕೆಲವು ವಿಶಿಷ್ಟವಾದ ಹೊಂದಾಣಿಕೆಗಳನ್ನು ಸಹ ಅಂಗೀಕರಿಸುವಂತಾಗಿದೆ. 'ಮೂಗ್ರಾಮ ಮುರಿದ' ಬೌದ್ಧಾವತಾರದ ಕಲ್ಪನೆ, 'ಸೋಮನ ಜನಕನ ಸತಿಯು ಧರಿಸಿದನ ರೋಮಕೋಟಿಯೊಳಿಟ್ಟಿಹನ' ಎಂಬ ಆಂಜನೇಯನೂ ಭೀಮನೂ ಅಭಿನ್ನರು ಎಂಬ ಕಲ್ಪನೆಗಳು ಈ ರೀತಿಯಾದವು. ಹೀಗೆಯೇ 'ಪತಿವ್ರತೆಯರ ಭಂಗಿಸಿ' ಎನ್ನುವ ಮಾತು, ಬಹುಶಃ ಬೌದ್ಧಾವತಾರದ ಕಲ್ಪನೆಗಾಗಿ ಬಂದುದು, ಆಲೋಚಿಸತಕ್ಕುದಾಗಿದೆ.

ಬಾಂಧವ್ಯದ ಎಳೆಗಳನ್ನು ಕೂಡಿಸಿ ಮುನ್ನಡೆಯುವಾಗ, ಬಂಧುತ್ವದ ವಿವರಗಳು ಪರಿಚಿತವೂ ಪ್ರಸಿದ್ಧವೂ ಇರುವವನ್ನು ಗುರುತಿಸುವುದು ಕಷ್ಟವಾಗದು; ಆದರೆ ಭಾರತದಿಂದಲೋ ಭಾಗವತ ವಿಷ್ಣುಪುರಾಣಗಳಿಂದಲೋ ಎತ್ತಿದ, ಹೆಚ್ಚು ಪರಿಚಿತವಲ್ಲದ ವಿವರಗಳನ್ನು ತಿಳಿಯುವುದು ನಿಜವಾಗಿ ಒಂದು ಸಾಹಸವೇ. ಈ ವಿವರಗಳನ್ನು ಕೆಲವರು, ಹಿರಿಯರಿಂದಲೋ ಪಂಡಿತರಿಂದಲೋ ಕೇಳಿ ಬಲ್ಲವರಾಗಿ, ಸುಲಭವಾಗಿ ನಿರೂಪಿಸುತ್ತಾರೆ; ಆದರೆ ಇದು ಎಲ್ಲರಿಗೂ ಎಲ್ಲ ಸಂದರ್ಭಗಳಲ್ಲಿಯೂ ಸಾಧ್ಯವಾಗದ ಕಾರಣ, ಇವು ತಿಳಿಯುವವರೆಗೆ ಆಯಾ ಸ್ತುತಿಭಾಗಗಳು ಸಂದೇಹದಲ್ಲಿಯೇ ಉಳಿದುಕೊಂಡಿರುತ್ತವೆ. ಕೆಲವು ವೇಳೆ ಅಲ್ಪಸ್ವಲ್ಪ ಸಂಪಾದಕೀಯ ತಿದ್ದುಪಡಿಗಳಿಂದ ಸಂಗತಿಗಳನ್ನು ವಿಶದಪಡಿಸಿಕೊಳ್ಳಬಹುದು; ಆದರೆ ಆ ತಿದ್ದುಪಡಿಗಳಲ್ಲಿ ಸ್ವಲ್ಪ ಅನಿಶ್ಚಿತತೆ ಉಳಿದುಕೊಂಡಿರುವಂತೆಯೇ ಭಾಸವಾಗುತ್ತದೆ. ನಾನಾರ್ಥವಾಹಕಗಳಾದ ಶಬ್ದಗಳು ಬಳಕೆಯಾಗಿರುವಲ್ಲಿಯೂ, ಯಮಕಗಳನ್ನು ತರಲು ಶಬ್ದಗಳನ್ನು ಪುನರಾವರ್ತಿಸುವಲ್ಲಿಯೂ, ಸಂಗತಿಗಳು ಬೇಗ ವಿಶದವಾಗುವುದಿಲ್ಲ. ಆದರೆ ಕನಕದಾಸರಿಗಾಗಲಿ, ಇತರ ಹರಿದಾಸರಿಗಾಗಲಿ ಈ ಬಗೆಯ ಗೂಢಾರ್ಥದ ದೇವತಾಸ್ತುತಿಗಳನ್ನು ರಚಿಸುವುದರಲ್ಲಿ ಕ್ಲೇಶವಾಗಲಿ, ಆಯಾಸವಾಗಲಿ ಆಗಿರುವಂತೆ ತೋರುವುದಿಲ್ಲ. ಅವರ ಪುರಾಣೇತಿಹಾಸಗಳ ಗಾಢವಾದ ಹಾಗೂ ಆತ್ಮೀಯವಾದ ತಿಳಿವಳಿಕೆಯನ್ನೇ ಅವು ಸಾರುತ್ತವೆ. ಇದನ್ನು ಕಂಡಾಗ ನಮಗೆ ಅವರ ಶಕ್ತಿಯ ಬಗ್ಗೆ ಅಚ್ಚರಿಯೂ ಅಭಿಮಾನವೂ ಉಂಟಾಗುತ್ತವೆ. ಪುರಂದರದಾಸರ ಕೃತಿ[47] :

ಹೊಸ ಪರಿಯೋ ರಂಗ ಹೊಸ ಪರಿಯೊ ‖ ಪ ‖
ಶಶಿಧರ ವಂದ್ಯನೆ ಕುಸುಮಜ ಜನಕನೆ ‖ ಅ. ಪ ‖

ತಮ್ಮಗೆ ನೀ ಮತ್ತೆ ತಮ್ಮನಾದೆಯೊ ರಂಗ । ಬೊಮ್ಮಗೆ ನೀ ಪರಬೊಮ್ಮನಾದ್ಯೋ ।
ಹೆಮ್ಮಗನ ಮಗನ ಮೊಮ್ಮಗನಾದೆಯೋ । ಮೊಮ್ಮಗನ ಮಗಳ ಮದುವ್ಯಾದ್ಯೋ ರಂಗ ‖ ೧ ‖

ಮಾವಗೆ ನೀ ಮತ್ತೆ ಮಾವನಾದ್ಯೋ ರಂಗ । ಮಾವನ ಮಗಳ ಮದುವ್ಯಾದ್ಯೋ ।
ಭಾವಗೆ ನೀ ಮತ್ತೆ ಭಾವನಾದೆಯೊ ರಂಗ । ಭಾವಜಸಖನಿಗೆ ಭಾವನಾದೆಯೋ ರಂಗ ‖ ೨ ‖

ಅತ್ತೆಯ ಅರ್ಥಿಯಲಿ ಆಳಿದೆಯೋ ರಂಗ । ಅತ್ತೆಯ ಮಗಳ ನೀ ಮದುವ್ಯಾದ್ಯೋ ।
ಮತ್ತೆ ಒಬ್ಬರಿಗುಂಟೆ ಈ ಪರಿಯು ಪುರು । ಷೋತ್ತಮ ಪುರಂದರ ವಿಠಲ ನಿನಗಲ್ಲದೆ ‖ ೩ ‖

ವಿವರಣೆ: ರಾಮಾವತಾರದಲ್ಲಿ ತಮ್ಮನಾಗಿದ್ದ ಲಕ್ಷ್ಮಣನಿಗೆ, ಕೃಷ್ಣಾವತಾರದಲ್ಲಿ ಆ ಲಕ್ಷ್ಮಣ ಬಲರಾಮನಾಗಿ ಹುಟ್ಟಿದಾಗ ತಾನು ಅವನ ತಮ್ಮನಾದನು; ಸೃಷ್ಟಿಕರ್ತನಾದ ಬ್ರಹ್ಮನಿಗೇ, ಆತನನ್ನು ತನ್ನ ನಾಭಿಕಮಲದಿಂದ ತರುವುದರ ಮೂಲಕ ತಾನು ಪರಬ್ರಹ್ಮನಾದನು; ಹಿರಿಯಮಗ ಬ್ರಹ್ಮನ, ಮಗ ಸ್ವಾಯಂಭುವ ಮನುವಿನ, ಮಗಳು ಆಕೂತಿದೇವಿಯ ಮಗ ಯಜ್ಞನಾಮಕನಾದನು; ತನ್ನ ಮಗನಾದ ಚತುರ್ಮುಖಬ್ರಹ್ಮನ ಮಗ ಜಾಂಬವಂತನ, ಮಗಳು ಜಾಂಬವತಿಯನ್ನು ವರಿಸಿದನು.

ಮಾವ ಸಮುದ್ರರಾಜನಿಗೆ (ಲಕ್ಷ್ಮಿಯ ತಂದೆ) ತನ್ನ ಕಾಲುಬೆರಳಲ್ಲಿ ಹುಟ್ಟಿದ ಗಂಗೆಯು ಹೋಗಿ ಸೇರುವಂತೆ ಮಾಡಿದ್ದರಿಂದ ತಾನೇ ಮಾವನಾದನು; ಸೋದರಮಾವ ವೃಷಭಾನುವಿನ (ತಾಯಿ ಯಶೋದೆಯ ಅಣ್ಣ) ಮಗಳು ರಾಧೆಯನ್ನು ವರಿಸಿದ; ವರುಣನ ಮಗನಾದ ಭೃಗುಋಷಿಗೆ ಕಪಿಲ ನಾಮಕನಾದ ನೀನು ನಿಮ್ಮಕ್ಕನೆನಿಸಿದ ಖ್ಯಾತಿದೇವಿಯನ್ನು ಕೊಟ್ಟಿದ್ದರಿಂದ ಭಾವನಿಗೆ ಭಾವನಾದವನು (ವರುಣನ ಮಗಳು ಲಕ್ಷ್ಮಿದೇವಿ; ವರುಣನ ಮಗ ಭೃಗುಋಷಿ. ಕರ್ದಮಋಷಿಯ ಮಗ ಕಪಿಲ ನಾಮಕನಾದವನು ವಿಷ್ಣು. ಇದೇ ಕರ್ದಮನ ಮಗಳು ಖ್ಯಾತಿದೇವಿ. ಆದ್ದರಿಂದ ಲಕ್ಷ್ಮಿಗೆ ವರುಣನ ಮಗ ಭೃಗು ಸೋದರ. ಈ ಭೃಗು ತನ್ನ ಸೋದರಿಯಾದ ಲಕ್ಷ್ಮಿಯ ಗಂಡ ವಿಷ್ಣುವಿಗೆ ಭಾವನಾಗುವನು.). ಮನ್ಮಥನ ಸ್ನೇಹಿತನಾದ ಚಂದ್ರನಿಗೆ, ಅವನು ಹುಟ್ಟಿದ ಸಮುದ್ರದಲ್ಲಿಯೇ ಲಕ್ಷ್ಮಿಯೂ ಹುಟ್ಟಿದ್ದರಿಂದ, ಆಕೆಯ ಪತಿಯಾದ ವಿಷ್ಣು ಭಾವನಾದನು.

ಮಾವನಾದ ವರುಣದೇವನ ಪತ್ನಿ ಯಮುನಾದೇವಿ ವಿಷ್ಣುವಿನ ಅತ್ತೆ; ಅವಳ ತಂಗಿಯಾದ ಕಾಳಿಂದಿಯೂ ವಿಷ್ಣುವಿಗೆ ಅತ್ತೆಯ ವಾವೆಯೇ; ಆ ಕಾಳಿಂದಿಯನ್ನು ಕೃಷ್ಣ ತನ್ನ ಒಬ್ಬ ರಾಣಿಯನ್ನಾಗಿ ಸ್ವೀಕರಿಸಿದ; ತಂದೆ ವಸುದೇವನ ಸಹೋದರಿ (ಸೋದರತ್ತೆ)ಯ ಮಗಳಾದ ಮಿತ್ರವಿಂದೆಯನ್ನು ಕೃಷ್ಣ ಮದುವೆಯಾದನು.

ಕನಕದಾಸರ ಕೃತಿಗಳು[48] :

ಕರತಾರೆ ಕಾಮಿನಿ ಕಮಲಜಪಿತನ। ಹರಿಯ ತೋರೆ ಸಾಸಿರನಾಮವುಳ್ಳವನ।
ನಗರಾಜ ವೈರಿಯ ಮಗನ ಬೀಗನ। ನಗವ ಬೆನ್ನಲಿ ಪೊತ್ತು ಜಗವನಾಳುವನ।
ನಗವ ಕಿತ್ತವನ ಶಿರವ ಹರಿದವನ। ನಗಸುತಾಪತಿ ಕಾಯದೊಳು ಮೂಡಿಹನ ॥ ೧ ॥

ಪಾತಾಳಕಿಳಿದು ಭೂಮಿಯನೊಯ್ದವನ ಕಿ। ರಾತನನಟ್ಟಿ ಸತಿಯ ಗೆದ್ದವನ।
ಮಾತು ಕದ್ದವನ ಕುಕ್ಷಿಯ ಸೀಳಿದವನ। ಮಾತೆಗೆ ಮಾತು ಕೊಟ್ಟವನ ಮಾವನ ಬೀಗ ॥ ೨ ॥

ಕಣ್ಣಿಂದ ಕೇಳ್ವನ ಹಗೆಯನಾಳುವನ। ಕಣ್ಣಿಂದ ತಿಳಿದು ಕಲ್ಪಿಸದವನ।
ಕಣ್ಣನಿರಿದು ದಾನವ ಬೇಡಿದವನ। ಅಣ್ಣಗಳ ಕಂಗಳ ಕಾಲಲೊತ್ತಿದನ ॥ ೩ ॥

ಮಂದರಗಿರಿಯನುಗುರಲೆತ್ತಿದವನ। ಬೆಂದುಹೋದಾವೆಂದು ಗೋವ ಕಾಯ್ದವನ।
ಮಂದೆಗಾಯ್ದವನ ಮನ್ಮಥನ ಪೆತ್ತವನ। ತಂದೆ ಶ್ರೀ ಬಾಡದಾದಿಕೇಶವನ ॥ ೪ ॥

ವಿವರಣೆ : ಮೈನಾಕಪರ್ವತದ ವೈರಿಯಾದ ಇಂದ್ರನ, ಮಗ ಅರ್ಜುನನ, ಬೀಗನಾದ ಕೃಷ್ಣನನ್ನು; ಮಂದರಾದ್ರಿಯನ್ನು ಸಾಗರಮಥನಕಾಲದಲ್ಲಿ ಕೂರ್ಮವಾಗಿ ಬೆನ್ನ ಮೇಲೆ ಹೊತ್ತು ಲೋಕವಾಳುವವನನ್ನು; ಕೈಲಾಸಪರ್ವತವನ್ನು ಕಿತ್ತ ರಾವಣನ ತಲೆಯನ್ನು ರಾಮಾವತಾರದಲ್ಲಿ ಕತ್ತರಿಸಿದವನನ್ನು; ಹಿಮವಂತನ ಪುತ್ರಿ ಪಾರ್ವತಿಯ ಪತಿ ಶಿವನ ಹೃದಯದಲ್ಲಿ ವಾಸಮಾಡಿದವನ (ಅರ್ಧಭಾಗದಲ್ಲಿ ಹರಿಹರರೂಪಾಗಿ ನೆಲೆಸಿರುವವನನ್ನು) (೧).

ಭೂಮಿಯನ್ನು ಕದ್ದು ಒಯ್ದಿದ್ದ ಹಿರಣ್ಯಾಕ್ಷನೆಂಬ ರಾಕ್ಷಸನನ್ನು ಪಾತಾಳಕ್ಕಿಳಿದು ಹೋಗಿ, ಸೋಲಿಸಿ, ಆ ಭೂದೇವಿಯನ್ನು ಸಾಧಿಸಿ ತಂದವನನ್ನು; ವೇದಗಳನ್ನು ಅಪಹರಿಸಿದ್ದ ತಮನನ್ನು (ಹಯಗ್ರೀವ, ಸೋಮಕ, ಮಧುಕೈಟಭ) ಕೊಂದವನನ್ನು, ತನ್ನ ತಾಯಿ ಸುಭದ್ರೆಗೆ ಬಲರಾಮನ ಮಗಳು ವತ್ಸಲೆಯನ್ನು ತರುವುದಾಗಿ ವಚನವನ್ನು ಕೊಟ್ಟ ಅಭಿಮನ್ಯುವಿನ ಸೋದರಮಾವನನ್ನು (೨).

ಸರ್ಪದ ಶತ್ರುವಾದ ಗರುಡನನ್ನು ಸ್ವಾಮಿಯಾಗಿ ಆಳುವವನನ್ನು, ಸ್ಥೂಲಜ್ಞಾನಕ್ಕೆ ನಿಲುಕದವನನ್ನು, ಶುಕ್ರಾಚಾರ್ಯನ ಕಣ್ಣು ಚುಚ್ಚಿ ಬಲಿಯಿಂದ ದಾನ ತೆಗೆದುಕೊಂಡವನನ್ನು(೪), ಗೋವರ್ಧನಗಿರಿಯನ್ನು (?) ಉಗುರಿನಿಂದಲೇ ಕೆಳಕ್ಕೆ ಒತ್ತಿದವನನ್ನು, ಈಷಿಕಾ ಎಂಬ ಅಡವಿಯಲ್ಲಿ ಹೊತ್ತಿದ ಕಾಡುಕಿಚ್ಚಿನಿಂದ ಗೋವುಗಳನ್ನೂ ಗೊಲ್ಲರನ್ನೂ ರಕ್ಷಿಸಿದವನನ್ನು, ತುರುಮಂದೆಯನ್ನು ಕಾಯ್ದವನನ್ನು, ಮನ್ಮಥನ ತಂದೆಯಾದವನನ್ನು, ವಿಷ್ಣುವನ್ನು ತೋರಿಸು (೫).

ಏಣನಯನೆ ಏಣಭೋಜಮಧ್ಯಳೆ ತೋರೆ ಏಣಾಂಕಬಿಂಬಮುಖಿ ।
ಏಣವೈರಿಯ ವೈರಿಯ ಶಿರಕುಚಯುಗೆ ಕರೆತಾರೆ ಏಣಾಂಕಧರಸಖನ ॥ ಪ ॥

ಚಳಿಯ ಮಗಳ ತಾಯಳಿಯನ ತನಯನ । ಇಳುಹದೆ ಪೊತ್ತಿಹನ ।
ಬಳಿದುಣ್ಣನೀಸದೆ ಸೆಳೆದುಂಡನಣ್ಣನ । ಸಲಹಿದಾತನ ಸುತನ ।
ಕಳದೊಳು ತಲೆಯ ಚಂಡಾಡಿದ ಧೀರನ । ಬಳಿ ವಾಘೆಯನು ಪಿಡಿದನ ।
ಇಳೆಯ ಮೊರೆಯ ಕೇಳಿ ಖಳರುತ್ತಮಾಂಗವ । ನಿಳುಹಿದಾತನ ತೋರೆಲೆ ॥ (೧)

ಇಪ್ಪತ್ತುನಾಲ್ಕು ನಾಮಗಳೊಳಗೇಳನು । ತಪ್ಪದೆಣಿಸಿ ಕಳೆದು ।
ಬಪ್ಪುವ ಎಂಟನೆಯ ನಾಮದ ಪೆಸರಿನೊಳ್ । ಇಪ್ಪ ಕಡೆಯ ಬೀಡಲಿ ।
ಅಪ್ಪ ಜಯದರಸನ ಕೂಡೆ ಜನಿಸಿದಳ । ಕಪ್ಪು ವರ್ಣದ ಮೈಯಳ ।
ಅಪ್ಪನ ಮಿತ್ರನ ಮಗನೆಂಬ ಬೊಮ್ಮನ । ಬೊಪ್ಪನ ತೋರೆನಗೆ ॥ (೨)

ಬಿಡುಗಣ್ಣ ಬಾಲೆ ತನ್ನೊಡೆಯನ ನುಡಿ ಕೇಳಿ । ದೃಢದಿಂದ ನಡೆದು ಬಂದು ।
ಜಡಿವ ಕೋಪಕೆ ಶಾಪವಡೆದು ಕೊಂಡಾಕ್ಷಣ । ನುಡಿದ ದಿನವು ದಶಟಲು ।
ಪಡೆಯನೆಲ್ಲವ ನಡುರಣದಲಿ ಸೋಲಿಸಿ । ಜಡಿದು ಗೋವುಗಳನೆಲ್ಲ ।
ಒಡನೆ ತನ್ನಯ ಪುರಕೆ ಹೊಡೆತಂದ ಧೀರನ । ಒಡೆಯನ ತೋರೆನಗೆ ॥ (೩)

ಸುರರ ವಾದ್ಯದ ಪೆಸರಲಿ ಬಸುರಲಿ ಬಂದ । ಉರಗನತ್ತೆಯ ಮಗನ ।
ಹಿರಿಯ ತಮ್ಮನೆ ಸುತ್ತಿ ನುಂಗದೆ ತಂದೆಯ । ಮರಳಿ ನುಂಗಿದ ಧೀರನ ।
ಧುರದೊಳು ಧ್ವಜವ ಕೀಲಿಸಿದಾತನ ಕು । ವರರೆಲ್ಲರನು ಕೊಂದನ ।
ವರಮಾತೆಯ ಕೂಡ ಜನಿಸಿದ ಧೀರನ । ಗರುವೆ ನೀ ತೋರೆನಗೆ ॥ (೪)

ಮೂರು ಬಟ್ಟೆಯೊಳಿಪ್ಪ ನಾರಿಯ ಗಂಡನ । ವೈರಿಯ ಹಿರಿಯಣ್ಣನ ।
ಮೂರೊಂದು ಮಾತಿನ ಸಾರವನೇ ಕದ್ದು । ವಾರಿಧಿಯನೆ ಪೊಕ್ಕನ ।
ಬೇರೊಂದು ರೂಪದಿ ಜನಿಸಿ ಖಳನ ಕೊಂದು । ಧಾರಿಣಿಸುರರಿಗಿತ್ತನ ।
ವೀರ ಕಾಗಿನೆಲೆಯಾದಿಕೇಶವ ರಘು । ವೀರನ ಕರೆದು ತೋರೆ ॥ (೫)

ವಿವರಣೆ: ಹರಿಣನೇತ್ರೆ, ಸಿಂಹಮಧ್ಯೆ, ಚಂದ್ರಮುಖಿ ಕರೆದು ತಾ । ಪ । ಜಿಂಕೆಯ ವೈರಿ ಸಿಂಹದ, ವೈರಿ ಆನೆಯ, ಕುಂಭಸ್ಥಳದಂತೆ ಕುಚಯುಗವನ್ನುಳ್ಳವಳೆ, ಶಿವನ ಸ್ನೇಹಿತನಾದ ವಿಷ್ಣುವನ್ನು ಕರೆದು ತಾ ।ಅ.ಪ.।

ಹಿಮವಂತನ, ಮಗಳಾದ ಪಾರ್ವತಿಯ, ತಾಯಿ ಮೇನಾದೇವಿಗೆ, ಅಳಿಯ ಶಿವನ, ಮಗ ಕಾರ್ತಿಕೇಯನನ್ನು, ಹೊತ್ತುಕೊಂಡಿರುವ ನವಿಲನ್ನು, ತಿನ್ನುವುದಕ್ಕೆ ಬಿಡದೆ ತಾನೇ ಹಾವನ್ನು ತಿನ್ನುವ ಗರುಡನ, ಅಣ್ಣ ಅರುಣನನ್ನು, ಪೋಷಿಸಿದ ಸೂರ್ಯನ, ಮಗ ಕರ್ಣನನ್ನು, ಯುದ್ಧದಲ್ಲಿ ಕೊಂದ ಅರ್ಜುನನ, ರಥದ ಕಡಿವಾಣ ಹಿಡಿದು ದುಷ್ಟರನ್ನು ನಾಶಮಾಡಿದ ಕೃಷ್ಣನನ್ನು ತೋರಿಸು. (೧)

ಕೇಶವಾದಿ ೨೪ ವಿಷ್ಣುನಾಮಗಳಲ್ಲಿ ಏಳರ ಅನಂತರದಲ್ಲಿ ಬರುವ ವಾಮನನೆಂಬ ಎಂಟನೆಯ ಹೆಸರಿನಲ್ಲಿ ಕೊನೆಯಕ್ಷರ ನಕಾರದಿಂದ ಆರಂಭವಾಗುವ ಸ್ಥಳದಲ್ಲಿ ಎಂದರೆ ನರಕದಲ್ಲಿ ಸ್ವಾಮಿಯಾದ ಯಮನ, ಒಡಹುಟ್ಟಿದವಳಾದ ಯಮುನೆಯ, ತಂದೆ ಸೂರ್ಯನ, ಗೆಳೆಯ ಕಮಲದ, ಮಗ ಬ್ರಹ್ಮನ, ತಂದೆ ವಿಷ್ಣುವನ್ನು ನನಗೆ ತೋರಿಸು. (೨)

ದೇವತಾಸ್ತ್ರೀ ಉರ್ವಶಿಯು, ತನ್ನ ಸ್ವಾಮಿ ಇಂದ್ರನ ಮಾತು ಕೇಳಿ ಬಂದು, ತನ್ನ ಕಾಂಕ್ಷೆ ಈಡೇರದಿರಲು ಕೋಪಿಸಿದ್ದು ಕಾರಣವಾಗಿ, ಆಕೆಯಿಂದ ಶಾಪಕ್ಕೆ ಗುರಿಯಾದ ಅರ್ಜುನನು ಅಜ್ಞಾತವಾಸದ ಅವಧಿ ಮುಗಿಯಲು ಉತ್ತರ ಗೋಗ್ರಹಣದಲ್ಲಿ ಕೌರವರ ಪಡೆಯನ್ನು ಸೋಲಿಸಿ, ವಿರಾಟನ ಗೋವುಗಳನ್ನೆಲ್ಲ ವಿರಾಟನಗರಿಗೆ ಹಿಂದಿರುಗಿಸಿದ ಅರ್ಜುನನ, ಸ್ವಾಮಿಯಾದ ಕೃಷ್ಣನನ್ನು ತೋರಿಸು. (೩)

ಆನಕದುಂದುಭಿ ಎಂಬ ಹೆಸರಿನ ವಸುದೇವನ, ಹೊಟ್ಟೆಯಲ್ಲಿ ಹುಟ್ಟಿದ ಶೇಷನ ಅವತಾರವಾದ ಬಲರಾಮನ, ಅತ್ತೆ ಕುಂತಿಯ, ಮಗ ಧರ್ಮರಾಯನ, ಹಿರಿಯ ತಮ್ಮ ಭೀಮನನ್ನು, ಪಾಂಡವರು ಅರಣ್ಯವಾಸ ದಲ್ಲಿದ್ದಾಗ ನಹುಷನು ಸರ್ಪನಾಗಿ ಸುತ್ತಿಕೊಡರೂ ನುಂಗಿಹಾಕದೆ, ಭೀಮನ ತಂದೆ ವಾಯುವನ್ನು ನುಂಗಿದ ಆ ಸರ್ಪವನ್ನು, ಧ್ವಜದಲ್ಲಿ ಚಿಹ್ನೆಯಾಗಿರಿಸಿಕೊಂಡ ದುರ್ಯೋಧನನ, ಮಕ್ಕಳನ್ನೆಲ್ಲ ಕೊಂದ ಅಭಿಮನ್ಯುವಿನ, ತಾಯಿ ಸುಭದ್ರೆಯ, ಒಡಹುಟ್ಟಿದ ಕೃಷ್ಣನನ್ನು ನನಗೆ ತೋರಿಸು. (೪)

ತ್ರಿಪಥಗೆಯಾದ ಗಂಗೆಯ, ಪತಿ ಸಮುದ್ರನ, ವೈರಿ ಲಕ್ಷ್ಮಣನ, ಹಿರಿಯಣ್ಣ ಶ್ರೀರಾಮನನ್ನು, ಚತು ರ್ವೇದಗಳನ್ನು ಅಪಹರಿಸಿ ಸಾಗರವನ್ನು ಹೊಕ್ಕ ಸೋಮಕನನ್ನು, ಮತ್ಸ್ಯಾವತಾರದಿಂದ ಕೊಂದು, ಬ್ರಾಹ್ಮಣರಿಗೆ ನೀಡಿದ ವಿಷ್ಣುವನ್ನು ತೋರಿಸು (೫)

ಸೀತಾಪತಿ ರಘುನಾಥನೆಂಬಾತನು । ಈತನೇನೆ, ಸಖಿ, ಈತನೇನೆ ॥ ಪ ।

ವ್ಯಾಸನ ಜನನಿಯ ವಾಸರೂಪ ತಾಳ್ದನು । ದೇಶದೊಳಗೆ ಬಲು ಹೊಗರೆ (?) ಯುಳ್ಳವನು ।
ನಾಸಿಕದೊಳೊರ್ವಳ ಪೊತ್ತು ಮೆರೆದನ ಮು । ನೀಶರ ಶಾಪವಡೆಯ ಕೊಂದಾತನ ॥ (೧)

ಆನೆವಾಹನ ಪಿತನ ತಾಯನಳೆದವನು । ಭಾನುಸುತಗೆ ಶಾಪವನಿತ್ತು ಜರೆದವನು ।
ಕಾನನವಾಸದಿ ನಿಂದಳಿಗೊಡೆಯ ನಿ । ಧಾನ ಶರಧಿಯಲಿ ವಾಸಮಾಡಿದವನು ॥ (೨)

ಮೂಗ್ರಾಮ ಮುರಿದು ವಾಜಿಯನೇರಿ ಮೆರೆದನು । ಸಾಗರಸುತೆಯಳ ಮೇಲೆ ಮೋಹಿಸಿದನು ।
ಉಗ್ರಾಹಿ ಅಹೋಬಲಪತಿ ರಾಜ ಕನಕಗೆ । ಭಾಗ್ಯವನೀವ ಕಾಗಿನೆಲೆಯಾದಿಕೇಶವನು ॥ (೩)

ವಿವರಣೆ : ಮತ್ಸ್ಯಗಂಧಿಯೆನಿಸಿದ ಸತ್ಯವತಿಯ, ವಾಸಸ್ಥಾನವಾದ ಮತ್ಸ್ಯದ (ಉಪರಿಚರ ವಸುವಿನ ಮೂಲಕ ಮತ್ಸ್ಯದಲ್ಲಿ ಸತ್ಯವತಿ ಜನಿಸಿದ್ದು), ರೂಪವನ್ನು ತಳೆದವನು (ಎಂದರೆ ಮತ್ಸ್ಯಾವತಾರದವನು); ಶರೀರ ವೆಂಬ ಪ್ರದೇಶದಲ್ಲಿ ಡುಬ್ಬದ ಮೇಲೆ ಚಿಪ್ಪನ್ನು ಉಳ್ಳವನು (ಕೂರ್ಮಾವತಾರದವನು); ತನ್ನ ಮೂಗಿನ ತುದಿಯ ಮೇಲೆ ಭೂದೇವಿಯನ್ನು ಎತ್ತಿ ತಂದು ಹೊತ್ತು ಮೆರೆದವನು (ವರಾಹಾವತಾರದವನು); ಸನಕಾದಿಗಳ ಶಾಪದಿಂದ ಹುಟ್ಟಿದ ಹಿರಣ್ಯಕಶಿಪುವನ್ನು ಕೊಂದವನು (ನರಸಿಂಹಾವತಾರದವನು) (೧)

ಭಗದತ್ತನ, ತಂದೆ ನರಕಾಸುರನ, ತಾಯಿ ಭೂಮಿಯನ್ನು, ಪಾದದಿಂದ ಅಳೆದವನು (ವಾಮನಾವತಾರ ದವನು) ; ಕರ್ಣನಿಗೆ ಶಾಪವನ್ನು ಕೊಟ್ಟವನು (ಪರಶುರಾಮಾವತಾರದವನು); ಅರಣ್ಯವಾಸವನ್ನು ಅನುಭವಿಸಿದ ಸೀತೆಗೆ ಸ್ವಾಮಿಯಾದವನು (ರಾಮಾವತಾರದವನು); ಸಮುದ್ರಮಧ್ಯದ ದ್ವಾರಕೆಯಲ್ಲಿ ವಾಸಮಾಡಿದವನು (ಕೃಷ್ಣಾವತಾರದವನು) (೨)

ಮೂರು ಗ್ರಾಮಗಳನ್ನು ಮುರಿದವನು (ಬೌದ್ಧಾವತಾರದವನು); ಕುದುರೆಯನ್ನೇರಿ ಮೆರೆದವನು (ಕಲ್ಕ್ಯವತಾರದವನು); ಅಹೋಬಲದ ಸ್ವಾಮಿ ನರಸಿಂಹನು; ಕಾಗಿನೆಲೆಯ ಆದಿಕೇಶವನು (೩)

ಮಂಗಳಾರತಿಯ ಪಾಡಿರೇ ಮಾನಿನಿಯರು[49]

ಅಂಧಕನನುಜನ ಕಂದನ ತಂದೆಯ । ಕೊಂದನ ಶಿರದಲಿ ನಿಂತವನ ।
ಚಂದದಿ ಪಡೆದನ ನಂದನೆಯಳ ನಲ । ವಿಂದ ಧರಿಸಿದ ಮುಕುಂದನಿಗೆ ॥ (೧)

ರಥವನಡರಿ ಸುರಪಥದಲಿ ತಿರುಗುವ । ಸುತನಿಗೆ ಶಾಪವನಿತ್ತವನ ।
ಖತಿಯನು ತಡೆದನ ಸತಿಯ ಜನನಿ ಸುತ । ಸತಿಯರನಾಳಿದ ಚತುರನಿಗೆ ॥ (೨)

ಹರಿಯ ಮಗನ ಶಿರ ತರಿದನ ತಂದೆಯ । ಹಿರಿಯ ಮಗನ ತಮ್ಮನ ಪಿತನ ।
ಭರದಿ ಭುಜಿಸಿದವನ ಶಿರದಲಿ ನಟಿಸಿದ । ವರ ಕಾಗಿನೆಲೆಯಾದಿ ಕೇಶವಗೆ ॥ (೩)

ವಿವರಣೆ: ಧೃತರಾಷ್ಟ್ರನ, ತಮ್ಮ ಪಾಂಡುವಿನ, ಮಗ ಧರ್ಮರಾಯನ, ತಂದೆ ಯಮನನ್ನು, ಕೊಂದ ಶಿವನ, ತಲೆಯಲ್ಲಿ ನೆಲಸಿದ ಚಂದ್ರನನ್ನು, ಮಗನಾಗಿ ಪಡೆದ ಸಮುದ್ರರಾಜನ, ಮಗಳು ಲಕ್ಷ್ಮಿಯನ್ನು, ಪತ್ನಿಯಾಗಿ ಪಡೆದ ವಿಷ್ಣುವಿಗೆ (೧)

ಸೂರ್ಯನ, ಮಗ ಕರ್ಣನಿಗೆ, ಶಾಪವಿತ್ತ ಪರಶುರಾಮನ, ಕ್ರೋಧವನ್ನು ನಿಗ್ರಹಿಸಿದ ಶ್ರೀರಾಮನ, ಪತ್ನಿ ಸೀತೆಯ, ತಾಯಿ ಭೂದೇವಿಯ, ಮಗ ನರಕಾಸುರನ, ಸೆರೆಯಲ್ಲಿದ್ದ ೧೬೦೦೦ ಸ್ತ್ರೀಯರನ್ನು, ಕೈಹಿಡಿದ ಕೃಷ್ಣನಿಗೆ (೨)

ಸೂರ್ಯನ, ಮಗ ಕರ್ಣನ, ತಲೆಯನ್ನು ಕತ್ತರಿಸಿದ ಅರ್ಜುನನ, ತಂದೆ ಪಾಂಡುವಿನ, ಹಿರಿಯ ಮಗ ಧರ್ಮರಾಯನ, ತಮ್ಮ ಭೀಮನ, ತಂದೆ ವಾಯುವನ್ನು, ನುಂಗಿದ ಸರ್ಪನ, ತಲೆಯ ಮೇಲೆ ನರ್ತಿಸಿದ ಕೃಷ್ಣನಿಗೆ (೩)–

ಪ್ರಸನ್ನ ವೆಂಕಟದಾಸರ ಕೃತಿ

ಭಾವೆ ತೋರೆಲೆ ಸಿರಿನಿವಾಸನಾ ಜಗದ
ಜೀವಗಳಿಗೆ ಭಿನ್ನನಾದ ಮಾವೆಯಿಲ್ಲದ ಶ್ರೀನಿವಾಸನಾ ॥ ಪ ॥

ಮಾವನ ಅಣುಗನನುಜೆಯಳಿಗೆ
ಮಾವನೆನಿಸಿದ ತನ್ನ ಮಗಳ
ಮಾವನ ಸೊಸೆಯ ಬಸಿರಲುದಿಸಿ ಮರಮೆಳೆಯನು ಸೇರಿ ಮತ್ತೆ
ಮಾವನ ಸುತರಿಗಜ್ಜನೆನಿಸಿದಾ ಮಗುಳೆ
ಮಾವನ ಮಾವನ ಮಗಳಿಗಣ್ಣನೆನಿಸಿದಾ ಒಮ್ಮೆ
ಮಾವನ ಭವನವೆಣ್ಣಳ ಬಿಡಿಸಿ ರಮಿಸಿದ ಶ್ರೀನಿವಾಸನ ॥ (೧)

ಸತಿಯ ಸುತೆಗೆ ಅರಸನಾದ
ಸತಿಯಳಿಗೆ ಸಹೋದರನಾದ
ಸತ್ಯಿಯಳನುಜ ಕುಲದಿ ಜನಿಸಿ ಸತಿ ಹಲವರ ಕೂಡಿ ಸುಖಿಸಿ
ಸತಿ ಸಖಿಯರ ಬಂಧುವೆನಿಸಿದಾ ಮತ್ತೆ ಸುತನ
ಸತಿಯ ಮಗನ ಮೊಮ್ಮನೆನಿಸಿದಾ ಒರ್ವ ಮೊಮ್ಮನ
ಸತಿಗೆ ನೋಡಿದಳಿಯನೆನಿಸಿದ ಶ್ರೀನಿವಾಸನಾ ॥ (೨)

ಅಣ್ಣಗೆ ಜನಕನಾಗಿ ಮಗನ
ಅಣ್ಣನೆನಿಸಿದ ಜಗವರಿಯಲು
ಅಣ್ಣನೆ ತಮ್ಮಗೆ ತಮ್ಮನಾದ ಹುಟ್ಟಿದ ತಾಣವ ಜರಿದು ಬೆಳೆದು
ಅಣ್ಣಗೆ ಭಾವನಾಗಿರುವ ಚೆಲುವನೆ ತನ್ನ ಭಾವನ
ಅಣ್ಣನಯ್ಯಂಗೆ ಪೌತ್ರನಾದವನೆ ಪ್ರ
ಸನ್ನವೆಂಕಟ ತನ್ನವಳಿಗಾಪ್ತನಾಗಿ ಹೊರೆವನೆ ಶ್ರೀನಿವಾಸನಾ ॥ (೩)

ಈ ಪದ್ಯದ ಆಶಯ ತಿಳಿಯಬೇಕಾಗಿದೆ.

ಕಳೆದ ಶತಮಾನದ ಕೆಲವು ಮಾಸಪತ್ರಿಕೆಗಳಲ್ಲಿಯೂ ಈ ಬಗೆಯ ಚಮತ್ಕಾರಜನಕವಾದ ಪದ್ಯಗಳನ್ನು ಅವುಗಳ ಉತ್ತರಗಳೊಂದಿಗೆ ಪ್ರಕಟಿಸುತ್ತಿದ್ದುದು ಕಾಣುತ್ತದೆ. ಇವುಗಳನ್ನು ಸಂಕಲಿಸುವುದರಿಂದ ಪ್ರಯೋಜನವಿದೆ. ಇಲ್ಲಿ ಒಂದು ಉದಾಹರಣೆಯನ್ನು ಮಾತ್ರ ಆಯ್ದು ಕೊಡಬಹುದಾಗಿದೆ.[50]

ಹನ್ನೊಂದು ವರ್ಷದಾತನ । ಮುನ್ನೆತ್ತಿಯನ್ನೇರಿ ಬಹನ ಅಣ್ಣನ ಸಖನೊಳು ।
ಉನ್ನತದಿ ಜನಿಸಿದಾತನ । ಪುಣ್ಯಾಂಗನೆ ಇರಲಿ ನಮ್ಮ ಜಿಹ್ವಾಗ್ರದೊಳು ॥

"ಹನ್ನೊಂದನೇ ವರುಷದವ ಈಶ್ವರನು, ಅವನ ನೆತ್ತಿಯನ್ನೇರಿದವ ಚಂದ್ರನು, ಅವನ ಸೋದರ ಸೂರ್ಯನು, ಅವನ ಮಿತ್ರ ತಾವರೆ, ಅದರಲ್ಲಿ ಜನಿಸಿದ ಬ್ರಹ್ಮನು. ಆತನ ಪತ್ನಿಯಾದ ಸರಸ್ವತಿಯು ನನ್ನ ನಾಲಿಗೆಯ ತುದಿಯಲ್ಲಿ ಇರಲಿ."

ಹೊಸಗನ್ನಡ ಕಾಲದ ಕವಿಗಳಲ್ಲಿ, ಈ ಬಗೆಯ ರಚನೆ ಕ್ವಚಿತ್ತಾಗಿ ಕಂಡುಬಂದಿದೆ. ಆಸೂರಿ ಕೆ. ರಾಮಸ್ವಾಮಿ ಅಯ್ಯಂಗಾರ್ ಅವರ 'ಮಾರುತಿಭಕ್ತಿದರ್ಪಣ' ಎಂಬ ಷಟ್ಪದಿಯ ಒಂದು ಪದ್ಯಕಾವ್ಯದಲ್ಲಿ, ಅದರ ೯ನೆಯ ತರಂಗದಲ್ಲಿ ೩ ಪದ್ಯಗಳು (೪೮–೫೦) ಈ ಬಗೆಯದಾಗಿವೆ. ಇವನ್ನು 'ಚಿತ್ರಬಂಧ' ಎಂಬುದಾಗಿ ಗ್ರಂಥ ಕರ್ತೃ ಕರೆದಿದ್ದಾರೆ. ಆ ೩ ಪದ್ಯಗಳಲ್ಲಿ ಒಂದನ್ನು, ಅವರ ಸೂಚನೆಗಳನ್ನೇ ಅವಲಂಬಿಸಿ ವಿವರಣೆಯೊಂದಿಗೆ, ಮುಂದೆ ಉದ್ಧರಿಸಿದೆ.

ಕಮಲಾಕ್ಷ ತನುಜೆಯಂ ತಾಳ್ದವನ ಭಜಿಸಿದನ
ಮಮತೆಯಣುಗಿಯ ಸೆರೆಗೆ ಸಿಲ್ಕಿದನ ಪೆತ್ತವಳೊ
ಳಮಿತಾನುರಾಗಮಂ ತಾಳ್ದವನ ಜನಕನನುಜೆಯ ಪತಿಯ ಹಿರಿಯಣ್ಣನ
ಪ್ರಮುಖಾನುಜನ ಪಿತನ ಸತ್ಪುತ್ರನೆಂದೆನಿಸಿ
ಕಮಲಸಖಕುಲಮೌಳಿಯಾಲಿಂಗನವನಾಂತು
ಸುಮಭವನ ಪಟ್ಟಾಧಿಕಾರಮಂ ಪಡೆವನೆಮಗಮಿತಭಕ್ತಿಯನೀಯಲಿ ||

ವಿವರಣೆ: ನಾರಾಯಣನ ಮಗಳು ಗಂಗೆಯನ್ನು ಧರಿಸಿದ ಶಿವನನ್ನು, ಸ್ತುತಿಸಿದ ಬಾಣಾಸುರನ, ಮಗಳು ಉಷೆಯ, ಪ್ರೀತಿಯ ಬಂಧನಕ್ಕೆ ಸಿಕ್ಕ ಅನಿರುದ್ಧನ, ತಾಯಿ ರತಿಯಲ್ಲಿ ಅನುರಾಗ ತಳೆದ ಮನ್ಮಥನ, ತಂದೆ ಕೃಷ್ಣನ, ತಂಗಿ ಸುಭದ್ರೆಯ, ಪತಿ ಅರ್ಜುನನ, ಹಿರಿಯಣ್ಣ ಧರ್ಮರಾಯನ, ದೊಡ್ಡತಮ್ಮ ಭೀಮನ, ತಂದೆ ವಾಯುವಿನ, ಮಗ ಎನಿಸಿ ಸೂರ್ಯವಂಶಶ್ರೇಷ್ಠನಾದ ರಾಮನ ಅಪ್ಪುಗೆಯನ್ನು ಪಡೆದು ಬ್ರಹ್ಮಪಟ್ಟವನ್ನು ಪಡೆಯುವ ಮಾರುತಿ ನಮಗೆ ಅಧಿಕಭಕ್ತಿಯನ್ನು ನೀಡಲಿ.

ಈವರೆಗೆ ಗೂಢಾರ್ಥದ ದೇವತಾಸ್ತುತಿಗಳೆಂಬ ಹಾಗೂ ಗೂಢಾರ್ಥದ ಪುರುಷಪ್ರಶಂಸೆ ವಿಡಂಬನೆಗಳೆಂಬ ಗುಂಪಿನ ಕೆಲವು ರಚನೆಗಳ ಮಾದರಿಗಳನ್ನು ಪರಿಚಯಮಾಡಿಕೊಂಡೆವು. ಇವುಗಳಲ್ಲಿ ಸ್ತುತಿಪದ್ಯಗಳೇ ಕಾವ್ಯ ಸ್ವಾರಸ್ಯದ ದೃಷ್ಟಿಯಿಂದ ಗಣ್ಯವಾದವು; ಇತರ ರಚನೆಗಳು ಹೆಚ್ಚಿನ ಮಟ್ಟಿಗೆ ಚಮತ್ಕಾರಜನಕವಾದವು. ಭಗವಂತನ ವಿಚಾರದಲ್ಲಿ ಭಕ್ತನ ದೃಷ್ಟಿವಿಶೇಷ ಹಾಗೂ ರಚನಾಸಂದರ್ಭ ಇವನ್ನು ಹಿಡಿದು ಸ್ತುತಿಪದ್ಯಗಳಲ್ಲಿ ಒಂದು ತೆರನ ವೈವಿಧ್ಯವೂ ಆಕರ್ಷಣೆಯೂ ಉಂಟು. ಭಕ್ತನ ಆರ್ದ್ರಹೃದಯದಿಂದ ಲಿಪ್ತವಾದ ಸರಳ ಮನಸ್ಸಿನ ಈ ರಚನೆಗಳಲ್ಲಿ ಭಾವಗೀತಾತ್ಮಕವಾದ ಚಿತ್ತಲಹರಿಯನ್ನು ನಾವು ಅಷ್ಟಾಗಿ ಕಾಣಲಾರೆವು ಎನ್ನುವುದು ನಿಜ; ಆದರೆ ಕಾವ್ಯಸೃಷ್ಟಿಯ ಚಮತ್ಕಾರವಿಶೇಷಗಳನ್ನು ಮೆರೆಯುವ ಭೂಮಿಕೆಯಲ್ಲಿ ಹುಟ್ಟಿದ ಬುದ್ಧಿಪೂರ್ವಕವಾದ ಒಂದು ಬಗೆಯ ಮನೋವಿಲಾಸವನ್ನು ಅಲ್ಲಿ ಕಾಣುತ್ತೇವೆ. ಹಿಂದಿನ ಭಕ್ತಕವಿಗಳು ಹಾಕಿರುವ ಒಂದು ಪೂರ್ವಪದ್ಧತಿಯ ಮೇಲ್ಪಂಕ್ತಿ ಅವರಿಗಿರುವುದರಿಂದ, ಅದರ ಪ್ರಭಾವ ಪ್ರಚೋದನೆಗಳಿಗೆ ಅವರು ಸಹಜವಾಗಿಯೇ ಒಳಗಾಗಿರುವುದರಿಂದ, ಈ ರಚನೆಗಳಲ್ಲಿ ಕೆಲಮಟ್ಟಿಗೆ ಗತಾನುಗತಿಕತೆ ಅನಿವಾರ್ಯವಾಗಿದೆ. ಪುರಂದರ ಕನಕರಂಥ ಹರಿದಾಸರ ರಚನೆಗಳೂ ಆರಂಭದ ಸಾಂಗತ್ಯಕಾರರ ರಚನೆಗಳೂ ಅಂತಹ ಮೇಲ್ಪಂಕ್ತಿಗಳನ್ನು ಹಾಕಿರುವಂತೆ ತೋರುತ್ತದೆ.

ಕವಿ ವಿಷ್ಣುಭಕ್ತನಾದರೆ ರಾಮಾಯಣ ಭಾರತಗಳೂ ಭಾಗವತ ಮೊದಲಾದ ವೈಷ್ಣವ ಪುರಾಣಗಳೂ, ಶಿವಭಕ್ತನಾದರೆ ರಾಮಾಯಣ ಭಾರತಗಳನ್ನು ಒಳಕೊಂಡು ಶಿವಪುರಾಣ ಲಿಂಗಪುರಾಣಾದಿ ಶೈವಪುರಾಣಾದಿಗಳೂ ಯಥೋಚಿತವಾಗಿ ಕಥಾಂಶಗಳನ್ನೂ ಪೌರಾಣಿಕ ಸಂದರ್ಭವಿಶೇಷಗಳನ್ನೂ ಈ ಬಗೆಯ ರಚನೆಗಳಿಗೆ ವಸ್ತುವಾಗಿ ಒದಗಿಸಿರುತ್ತವೆ. ಈ ವಸ್ತು ಪ್ರತೀತಿಯಿಂದ, ಗುರುಮುಖದಿಂದ ಶ್ರುತಿರೂಪವಾಗಿ ಪರಿಚಿತವಾಗಿರಬಹುದು; ನೇರವಾಗಿ ಆ ಧಾರ್ಮಿಕಗ್ರಂಥಗಳ ಅಭ್ಯಾಸದಿಂದ ಪರಿಚಿತವಾಗಿರಬಹುದು. ಬಹುಶಃ ಮೊದಲನೆಯ ಪರ್ಯಾಯವೇ ಹೆಚ್ಚು ಸಂಭಾವ್ಯವಾದ್ದು. ಇಂತಹ ಪರಿಚಯದ ಫಲವಾಗಿ ಕವಿ ರೂಪಿಸುವ ಬಾಂಧವ್ಯದ

ಬೆಸುಗೆಗಳೂ ನಿರೂಪಣವೈಖರಿಗಳೂ ಅವನ ಮತೀಯವಾದ ಅಭಿರುಚಿ ಅಭಿನಿವೇಶಗಳಿಗೆ ಅನುಗುಣವಾಗಿಯೇ ನಿರೂಪಿತವಾಗಿರುವುದಂತೂ ನಿಶ್ಚಯ. ವೀರಶೈವ ಹಾಗೂ ಹರಿದಾಸ ಸಂಪ್ರದಾಯದ ಕವಿಗಳ ರಚನೆಗಳನ್ನು ನೋಡಿದರೆ ಇದು ತಿಳಿಯುತ್ತದೆ. ಇಷ್ಟಾಗಿ, ಜನಪ್ರಿಯವಾದ ಮಹಾಭಾರತವನ್ನೇ ಇವರೆಲ್ಲ ಅಧಿಕವಾಗಿ ಅವಲಂಬಿಸಿರುವುದು ಗಮನಿಸತಕ್ಕುದಾಗಿದೆ. ಅದು ನಮ್ಮ ಸಂಸ್ಕೃತಿಯ ಪ್ರಮುಖ ವಾಹಕವಾಗಿರುವುದೂ, ನಮಗೆ ಬಹುವಾಗಿ ಆತ್ಮೀಯವೂ ಪರಿಚಿತವೂ ಆಗಿರುವುದೇ ಇದಕ್ಕೆ ಕಾರಣವೆಂದು ಹೇಳಬೇಕು. ಅದರಲ್ಲಿಯೂ ಕೆಲವು ಪ್ರಮುಖ ಕಥಾಸಂದರ್ಭಗಳೂ ಪಾತ್ರಗಳೂ ಮೇಲಿಂದ ಮೇಲೆ ಆವೃತ್ತಿಗೊಳ್ಳುತ್ತಿರುವುದು ಕವಿಗಳ ಮನಸ್ಸಿನ ಧಾಟಿಯನ್ನೂ ತೋರಿಸುತ್ತದೆ. ವಿಷ್ಣುವಿನ ಅವತಾರಮಹಿಮೆಗಳನ್ನು ಅಖಂಡವಾಗಿ ಕೀರ್ತಿಸುವ ಗೂಢಾರ್ಥದ ದೇವತಾಸ್ತುತಿಗಳು ಭಾರತವನ್ನೇ ವಿಶೇಷವಾಗಿ ಅನುಸರಿಸಿದ್ದರೂ ಭಾಗವತ, ವಿಷ್ಣು, ಪದ್ಮ ಇತ್ಯಾದಿ ಪುರಾಣಗಳೂ ಸಹಜವಾಗಿಯೇ ಅವರ ಸ್ಮರಣ ಚಿಂತನಗಳಲ್ಲಿ ಇದ್ದಿರುವುದು ಸಾಧ್ಯವೆಂದು ತೋರುತ್ತದೆ. ಶೈವಪರವಾದ ರಚನೆಗಳಲ್ಲಿಯೂ ಹೀಗೆಯೇ. ಇವು ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಲಿಂಗ ಮತ್ತು ಶಿವಪುರಾಣಗಳ ಮೂಲಗಳನ್ನು ಅನುಸರಿಸಿರುತ್ತವೆ; ಶ್ರುತಿರೂಪವಾಗಿಯೇ ಅವರಿಗೆ ಸಂದರ್ಭವಿಶೇಷಗಳು ಮನವರಿಕೆಯಾಗಿರಬಹುದು. ಇವುಗಳಲ್ಲಿ ವೈವಿಧ್ಯ ಸಾಲದೆಂದೇ ಹೇಳಬೇಕು.

ಗೂಢಾರ್ಥದ ಪುರುಷಪ್ರಶಂಸೆ–ವಿಡಂಬನೆಗಳನ್ನು ಸದ್ಯದಲ್ಲಿ 'ರಾತ್ರಿಯ ನಲ್ಲನ ಪದ್ಯಗಳು' ಎಂಬ ಅಜ್ಞಾತಕರ್ತೃಕ ಕೃತಿಯಲ್ಲಿ ಮಾತ್ರವೇ ಕಾಣುತ್ತೇವೆ. ಇದರ ಬಗ್ಗೆ ಒಂದೆರಡು ಅಂಶಗಳನ್ನು ಹೆಚ್ಚಿಗೆ ಹೇಳಬೇಕು. ಇಲ್ಲಿಯ ಪದ್ಯಗಳು ಬುದ್ಧಿಪೂರ್ವಕವಾಗಿ ಕಟ್ಟಿದವಾದ್ದರಿಂದ, ಭಕ್ತಿಯ ಸೆಲೆಯಿಂದ ಇವು ಹೊಮ್ಮಿದವಲ್ಲವಾದ್ದರಿಂದ, ಇಲ್ಲಿ ಪಾಂಡಿತ್ಯ ಪ್ರದರ್ಶನದ ಹಾಗೂ ಚಮತ್ಕಾರದ ಕಾಂಕ್ಷೆ ಎದ್ದು ತೋರುತ್ತದೆ. ಈಗ ಇರುವಂತೆ ಈ ರಚನೆಗಳಲ್ಲಿ ಭಾಷೆ ಛಂದಸ್ಸಿನ ದೋಷಗಳು, ಕವಿ ಮಾರ್ಗಕವಿತ್ವವನ್ನು ಬಲ್ಲವನಾಗಿಯೂ ಸ್ವತಃ ಅದರಲ್ಲಿ ಅಸಮರ್ಥನೆಂಬುದನ್ನು ಸಾರುವಂತಿವೆ; ''ದೊಡ್ಡ ಕವಿಗಳ ಕೃತಿಗಳ ಸಮೀಪದ ವಾಸನೆಯನ್ನೂ ಸಹ ಹೊಂದಲು ಈ ಕೃತಿಯು ಅರ್ಹವಾಗಿಲ್ಲ'' ಎಂಬ ನಿಮ್ಮರೋಕ್ತಿ ನಿಜವೇ ಎಂದು ಸಮ್ಮತಿಸುವಂತಿವೆ. ಕೃತಿಯು ಒಂದು ಕಾಲದ ಜನಪ್ರಿಯತೆ ಕಾರಣವಾಗಿ, ನಡುನಡುವೆ ಬಾಯಿಂದ ಬಾಯಿಗೆ ಸಾಗುವಾಗ, ಹಲವೆಡೆ ತಪ್ಪುಗಳು ಬಿದ್ದು ಈಗಿನ ರೂಪ ಅದಕ್ಕೆ ಬಂದಿರಬಹುದು. ಇದು ಏನಿದ್ದರೂ ಇಲ್ಲಿ ಚಮತ್ಕಾರಕವಿತ್ವದ ಶುದ್ಧ ರೂಪವನ್ನು ಕಾಣಬಹುದಾಗಿದೆ.

ಈ ಕೃತಿ ಚಮತ್ಕಾರ ಕವಿತ್ವದ ಪ್ರದರ್ಶನಕ್ಕೆಂದೇ ಹುಟ್ಟಿದ್ದು. ಈ ಕಾರಣವಾಗಿ ರಾಮಾಯಣ ಭಾರತಗಳ ಹಾಗೂ ಅನೇಕ ಪುರಾಣಗಳ ಕಥಾಂಶಗಳನ್ನೂ ಸಂದರ್ಭ ವಿಶೇಷಗಳನ್ನೂ ವೈವಿಧ್ಯದಲ್ಲಿ, ವೈಚಿತ್ರ್ಯಗಳಲ್ಲಿ ಇಲ್ಲಿ ಮನಗಾಣಬಹುದಾಗಿದೆ. ಜೊತೆಗೆ ಜ್ಯೋತಿಷದ ಪ್ರಯೋಜನವನ್ನೂ ಪಡೆದ ಸಂಗತಿಗಳಿವೆ; ಭಾಷಾ ಪ್ರಯೋಗದ ಚಮತ್ಕಾರಗಳನ್ನೂ ಬಳಸಿಕೊಂಡಿದೆ. ಈ ಕಾರಣಗಳಿಂದ ಇಲ್ಲಿಯ ಪದ್ಯಗಳನ್ನು ಅರ್ಥೈಸುವುದರಲ್ಲಿ ಪ್ರಾಚೀನ ಶಾಸ್ತ್ರ ಪುರಾಣಗಳ ಹೆಚ್ಚಿನ ತಿಳಿವಳಿಕೆ ಬೇಕಾಗುತ್ತದೆ. ರಚನೆಗಳು ಕ್ಲಿಷ್ಟವೂ ಕೃತಕವೂ ಆಗಿ ತೋರುವಂತೆ, ಹಲವು ಸಲ ಬಾಂಧವ್ಯದ ಕೊಂಡಿಗಳು ಅಚ್ಚರಿ ದಿಗ್ಭ್ರಮೆಗಳನ್ನು ಹುಟ್ಟಿಸುವಂತೆ ವಕ್ರಮಾರ್ಗಗಳನ್ನು ಹಿಡಿಯುತ್ತವೆ. ಹರಿದಾಸರ ಹಾಗೂ ಸಾಂಗತ್ಯಕವಿಗಳ ರಚನೆಗಳ ಸಹಜತೆ ಸೊಗಸುಗಳನ್ನು ಇಲ್ಲಿ ನಿರೀಕ್ಷಿಸಲಾಗದು. ಕವಿ ರಚನೆಯ ಉದ್ದೇಶವನ್ನು ತಿಳಿಸುತ್ತ,

> ಬಲ್ಲವರೆನುತಲಿ ಅಂಕೆಯು । ನಿಲ್ಲದೆ ನಾ ಮಾಡಿಕೊಂಬೆ ಕರುಣದಿ ರಾತ್ರಿಯ ।
> ನಲ್ಲನ ಪದ್ಯಾರ್ಥಂಗಳ । ನೆಲ್ಲವನರುಹುವುದು ಎನಗೆ ಬುಧಜನ ಮುಂದದಿಂ ।

ಎಂದು ಹೇಳಿರುವುದು ನೋಡಿದರೆ, ತಾನು ಪದ್ಯರೂಪದ ಕೆಲವು ಒಗಟುಗಳನ್ನು ಬುದ್ಧಿವಂತರಿಗೆ ಹಾಕಿರುವುದಾಗಿಯೂ, ಶಕ್ತಿಯಿದ್ದರೆ ಅವರು ಅವನ್ನು ಬಿಡಿಸಬಹುದೆಂದೂ ಆಹ್ವಾನಿಸಿರುವಂತೆ ತೋರುತ್ತದೆ. ಹಸ್ತಪ್ರತಿಯ ಪೀಠಿಕೆಯಲ್ಲಿ ಈ ಬಗೆಯ ಪದ್ಯಗಳ ಪ್ರಯೋಜನವನ್ನು ವಿವರಿಸುತ್ತ, ''ಕಲ್ಪನಾಚಾತುರಿಯಿಂದ ಪರಿಶೀಲಿಸುವವರಿಗೆ ಅತಿಶಯಿತವಾದ ಲೋಕವೃತ್ತವೈಶದ್ಯವೊಂದುಂಟಾಗುತ್ತೆ'' ಎಂದು ತಿಳಿಸಿರುವುದನ್ನು ಪೂರ್ತಿಯಾಗಿ

ಒಪ್ಪಲಾಗದು; ಆದರೆ ''ಚತುರರ ವಿನೋದಗೋಷ್ಠಿಯಲ್ಲಿ ಇಂತಹ ಮಾತುಗಳು ಆನಂದವನ್ನುಂಟುಮಾಡುತ್ತವೆ'' ಎಂದಿರುವುದೇನೋ ಕೆಲಮಟ್ಟಿಗೆ ನಿಜ (ಪು. ೨, ೪).

ನುಸುಳ್

ಕವಿರಾಜಮಾರ್ಗಕಾರ, ಕಾವ್ಯಾವಲೋಕನಕಾರರು ನಿರೂಪಿಸಿರುವ 'ನುಸುಳ್' ಪ್ರಹೇಳಿಕೆಗೆ ಸದೃಶವಾಗಿ ತೋರುವ ಒಂದು ಲಕ್ಷ್ಯವನ್ನು 'ಕಂತಿ ಪಂಪನ ಸಮಸ್ಯೆಗಳು' ಸಂಕಲನದಿಂದ ಎತ್ತಿ ಕೊಡಬಹುದಾಗಿದೆ. ಪಂಪನು ಕೊಟ್ಟ ಪ್ರಶ್ನೆಯಿದು:

ಪೊಡೆಪೊಡೆದುಂ ಒಡೆದರೆ ತಾಂ । ಪುಡಿಯಾಗಿಯುಂಮಾಗದಿರ್ಪುದಿದರಭಿಧಾನಂ ।
ಕಡು ಸೀಯದುಮವಣ ಬೇಯದು । ನಡುವಿನೊಳಂ ಸ್ತ್ರೀಯರಾಂಪರೇನೆಲೆ ಕಂತೀ ॥ ೧೧ ॥

ಪದ್ಯದ ಕೊನೆಯಲ್ಲಿ 'ಪ್ರಶ್ನೆ'ಯಿದ್ದರೂ ಇದರ ರಚನೆ ಪ್ರಹೇಳಿಕೆಯದೇ. ಇದು ಸ್ವತಂತ್ರವಾಗಿಯೇ ಪ್ರಹೇಳಿಕೆಯ ಲಕ್ಷ್ಯವಾಗಿ ನಿಲ್ಲಲು ಶಕ್ತವಾದುದು. ಆದರೆ ಕಂತಿ ಇದಕ್ಕೆ ಪ್ರಹೇಳಿಕೆಯ ರೀತಿಯಲ್ಲಿಯೇ ಉತ್ತರಿಸಿದ್ದು ಚಮತ್ಕಾರವನ್ನು ದ್ವಿಗುಣಗೊಳಿಸಿದಂತಾಗಿದೆ. ಆಕೆಯ ಉತ್ತರ 'ನಾಮಾಂತರಿತ' ವೆಂದು ಹೇಳುವಂತಿದೆ. 'ಅಂತಃಪ್ರಶ್ನೆ'ಯೂ ಆಗಬಹುದು.
ಕಂತಿಯ ಉತ್ತರ ಈ ರೀತಿಯಿದೆ:

ಕಡೆದೊಡೆಯಲ್ ಹರನಾಮಂ । ನಡುದೊಡೆಯಲ್ ಹವಿಯ ನಾಮಮಾದ್ಯಕ್ಷರಮಂ ।
ತೊಡೆಯಲ್ಕೆ ರವಿಯ ನಾಮಂ । ಕಡೆಯಿಂದೋದಲ್ಕೆ ವಿರಹ ಕೇಳೆಲೆ ಪಂಪಾ ॥

ಪಂಪನು ''ಎಲೆ ಕಂತೀ, ಹೊಡೆದು ಹೊಡೆದು ಒಡೆದು ಹಾಕಿದರೆ ಹುಡಿಯಾಗಿಯೂ ಆಗದು, ಬೆಂಕಿಯಲ್ಲಿ ಸೀಯದು, ಸ್ವಲ್ಪವೂ ಬೇಯದು; ಸ್ತ್ರೀಯರು ನಡುವಿನಲ್ಲಿ ಧರಿಸುತ್ತಾರೆ, ಇದೇನು?'' ಎಂದು ಪ್ರಶ್ನಿಸಿದನು. ಕಂತಿ ಇದಕ್ಕೆ ಉತ್ತರವಾಗಿ, ''ಎಲೆ ಪಂಪ, ಕೇಳು, ಕಡೆಯಕ್ಷರ ಬಿಟ್ಟರೆ 'ಹರ', ನಡುವಣಕ್ಷರ ಬಿಟ್ಟರೆ 'ಹವಿ', ಮೊದಲಕ್ಷರ ಬಿಟ್ಟರೆ 'ರವಿ', ಹಿಂದಿನಿಂದ ಓದಿದರೆ 'ವಿರಹ' '' ಎಂದಳು.

ಉತ್ತರ 'ಹರವಿ' (=ಮಡಕೆ) ಎಂದು ಇದರಿಂದ ವಿದಿತವಾಗುತ್ತದೆ.

ನಾಮಾಂತರಿತ

ನಾಮಾಂತರಿತದ ಲಕ್ಷ್ಯಗಳು ಬಗೆಬಗೆಯಾಗಿ ಇರಬಹುದು. ಪ್ರಹೇಳಿಕೆಯನ್ನು ಗರ್ಭೀಕರಿಸಿಕೊಂಡಂತೆ ಇರಬಹುದು, ಇಲ್ಲವೆ ಪ್ರಶ್ನೆಯ ರೂಪದಲ್ಲಿರಬಹುದು. ಬೇರೆಯ ರೀತಿಯಲ್ಲಿಯೂ ಇರಲು ಸಾಧ್ಯ. ಪ್ರಸ್ತುತ ಈ ಪದ್ಯವನ್ನು ಮಾಸಪತ್ರಿಕೆಯೊಂದರಿಂದ, ಮೊದಲನೆಯದಕ್ಕೆ ಲಕ್ಷ್ಯವಾಗಿ ಎತ್ತಿಕೊಡಬಹುದು.[51]

॥ ರಾಗ ಜಲಾಪ್ ಆದಿತಾಳ ॥

ಚಾಪದೊಳಿಹುದೊಂದು । ರೂಪದೊಳಿಲ್ಲದು ।
ಮನೆಯೊಳಗಿರ್ದ್ದುದು । ವನದೊಳು ತೋರದು ॥ ೧ ॥

ರಾಗದೊಳಿಹುದೊಂದು । ಭೋಗದೊಳಿಲ್ಲಂ ॥ ನೀರಜಗತಮದು । ನೀರಿನೊಳಿಲ್ಲಂ ॥ ೨ ॥
ಇಹುದದು ಭೂಜದೆ । ಮಹಿಯೊಳಗಿಲ್ಲಂ ॥ ಕೋಪದೊಳಿಹುದದು ತಾಪದೊಳಿಲ್ಲಂ ॥ ೩ ॥
ವಸತಿಯೊಳಿದ್ದರು । ಹೊಸಲಿಗೆ ಸಾರದು ॥ ಯುಗದೊಳಗಿದ್ದರು । ಜಗದೊಳಗಿಲ್ಲ ॥ ೪ ॥
ಈ ವರ್ಣಂಗಳ । ಭಾವಿಸಿ ಕೂಡಲು ॥ ವಸುಧಾಧೀಶನ ಪೆಸರಾಗುವುದು ॥ ೫ ॥

ದಪ್ಪಕ್ಷರದ ಅಕ್ಷರಗಳಿಂದ 'ಚಾಮರಾಜಭೂಪತಿಯು' ಎಂದಾಗುವುದು.

ಕಮಲೆಯ ಚಾರುತ್ವದ ಮೇಣ್ । ಸುಮಬಾಣನ ಯಕ್ಷಪತಿಯ ಮಿಥಿಲಾಧಿಪನಾ ।
ವಿಮಲಾಹ್ವಯಾದಿ ವರ್ಣವ । ಸುಮತಿಗಳೊಗ್ಗೂಡಿಸಿದೊಡೆ ದೊರೆವೆಸರಕ್ಕುಂ ॥ (ಅದೇ)

ಕಮಲೆಯ=ಶ್ರೀ; ಚಾರುತ್ಪದ=ಚಾ; ಸುಮಬಾಣನ (ಮನ್ಮಥ)=ಮ; ಯಕ್ಷಪತಿಯ=ರಾ; ಮಿಥಿಲಾಧಿಪನಾ (ಜನಕ)=ಜ :ಶ್ರೀ ಚಾಮರಾಜ.

ಪಿ. ಬಸವಣ್ಣನವರು ''ಮಹಾಮಹಿಮರೆಮ್ಮಂ ಪೊರೆಗೆ'' ಎಂಬ, ಅರ್ಧಪದ್ಯದ ಸೂಚನೆ ಸಹಿತವಾದ ಮೂರು ವಾರ್ಧಕ ಷಟ್ಪದಿಗಳ ಒಂದು ಕವಿತೆಯನ್ನು ರಚಿಸಿದ್ದಾರೆ ('ನಿರೀಕ್ಷೆ', ಪದ್ಯ ೩೯). ಅದರಲ್ಲಿ, ಪ್ರಶ್ನೆಗಳ ಒಂದು ಸರಪಣಿಯನ್ನು ಒಂದೊಂದು ಪದ್ಯದಲ್ಲಿಯೂ ಪ್ರತ್ಯೇಕವಾಗಿ ನೇಯುತ್ತ ಹೋಗಿ, ಅಂಕಿತ ನಾಮವೊಂದನ್ನು ಒಂದು ಗೊತ್ತಾದ ಕ್ರಮದಲ್ಲಿ ಗುರುತಿಸುವಂತೆ ತಿಳಿಸಿದ್ದಾರೆ. ಆ ಸೂಚನೆ ಆರಂಭದ ಅರ್ಧಪದ್ಯದಲ್ಲಿ ಈ ರೀತಿಯಾಗಿದೆ:

ಕೆಳಗೊರೆವ ಕೇಳ್ವಿಗಳ ಮೂರಕ್ಕರದ ಬದಲು । ಗಳ ನಡುವಣಕ್ಕರಂಗಳ್ಕ್ರಮದೊಳಾವರ ವಿ
ಮಳನಾಮಗಳನೊರೆವುವೊ ಆ ಮಹಾಮಹಿಮರೆಮ್ಮಂ ಪೊರೆಗನವರತಂ ॥

ಕೆಳಗಿರುವ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಮೂರಕ್ಷರಗಳ ಉತ್ತರವುಂಟು; ಆ ಉತ್ತರಗಳಲ್ಲಿ ನಡುವಿನ ಅಕ್ಷರಗಳನ್ನು ಅನುಕ್ರಮವಾಗಿ ಸೇರಿಸಿದರೆ ಗೂಢವಾಗಿರುವ ಅಂಕಿತನಾಮವು ವ್ಯಕ್ತವಾಗುತ್ತದೆ ಎಂದು ಇದರಿಂದ ತಿಳಿಯುತ್ತದೆ. ಇಲ್ಲಿ ಒಂದು ಪದ್ಯವನ್ನು ಮಾದರಿಗೆ ಉದ್ಧರಿಸಬಹುದು:

ಮಗುವಳುತಿರಲ್ಕಾಗಿ ಮಲಗಿಸಲ್ಮಾತೆಯು
ಸೊಗಸಿನಿಂ ಪಾಡುವರದೇಂ ಸರ್ಪಸಂತತಿಗೆ
ಪಗೆಯಾರು ಭಗವಂತನೊಳ್ಬೆರೆದು ಚಿರಮುಕ್ತಿ ಪಡೆಯಲೇತೊರೆಯಬೇಕು
ನಗಗಳಂ ಸದೆಬಡಿದು ರೆಕ್ಕೆ ಮುರಿದವನಾರು
ಮುಗುದೆಪದಪಾವ ಲಿಂಗಂ ಗಗನ ಸರಿಸಮಂ
ಜಗದೊಳಾವುದು ಆ ಮಹಾಮಹಿಮ ಸದ್ಗತಿಯ ನೀಡುತ್ತ ಸಲಹಲೆಮ್ಮಂ ॥

ಕ್ರಮವಾಗಿ ಇಲ್ಲಿಯ ಪ್ರಶ್ನೆಗಳಿಗೆ ಉತ್ತರಗಳು ಈ ರೀತಿಯಾಗಿವೆ : ಜೋಗುಳ, ಗರುಡ, ಶಂಕೆ, ಮುಮುಕ್ಷಾ, ಸ್ತ್ರೀಲಿಂಗ, ಸಾಗರ.

ಈ ಉತ್ತರಗಳಲ್ಲಿ ಮಧ್ಯಾಕ್ಷರಗಳನ್ನು ಅನುಕ್ರಮವಾಗಿ ಸೇರಿಸಿ ಕೊಂಡು ಓದಿದರೆ, 'ಗುರು ಶಂಭುಲಿಂಗ' ಎಂದಾಗುವುದು.

ಇದೇ ಲೇಖಕರೇ 'ಪ್ರಹೇಳಿಕಾಪಂಚಕ' ಎಂಬ ಇನ್ನೊಂದು ಕವಿತೆಯಲ್ಲಿ ('ಭಿಕ್ಷೆ', ೧೯೮೧) ಐದು ವಾರ್ಧಕ ಷಟ್ಪದಿಗಳನ್ನು, ಪದ್ಯಾರ್ಧದ ಸೂಚನೆ ಸಹಿತವಾಗಿ ಬರೆದಿದ್ದಾರೆ. ಇದರಲ್ಲಿಯೂ ಪ್ರತಿಯೊಂದು ಪದ್ಯದಲ್ಲಿಯೂ ಕೆಲವು ಪ್ರಶ್ನೆಗಳಿದ್ದು, ಅವುಗಳಿಗೆ ದೊರೆಯುವ ಉತ್ತರರೂಪವಾದ ಶಬ್ದಗಳ ಮಧ್ಯಾಕ್ಷರಗಳನ್ನು ಅನುಕ್ರಮವಾಗಿ ಓದಿದರೆ, ಗೂಢವಾದ ವ್ಯಕ್ತಿನಾಮವೊಂದು ಸುವ್ಯಕ್ತವಾಗುತ್ತದೆ. ಇದನ್ನು 'ಪದಸಮಸ್ಯೆ' ಎಂದೂ ಹೇಳಬಹುದು.

ಪ್ರಹೇಳಿಕೆಗಳ ನಿರ್ಭೇದವನ್ನು ಸೂಚನಾಪದ್ಯದಲ್ಲಿ ಹೀಗೆ ನಿರ್ದೇಶಿಸಿದೆ :

ಕೆಳಗೊರೆವ ಕೇಳ್ವಿಗಳ ಮೂರಕ್ಕರದ ಬದಲು
ಗಳ ಮಧ್ಯವರ್ಣಂಗಳಿಂದೆಸೆವ ಮಹಿಮ ತಾ
ನೊಲಿದೀಗೆ ಭಕ್ತರ್ಗೆ ಸಕಲಸಿರಿಸಂಪದವ ನೋಜ್ಯೋಗ ಮೋಕ್ಷಂಗಳ ॥

ಈ ಸೂಚನೆಯನ್ನು ಅನುಸರಿಸಿ ಬರುವ ಐದು ಪದ್ಯಗಳಲ್ಲಿ ಮೊದಲನೆಯದು ಹೀಗಿದೆ:

ಪ್ರೇಮಿಸುವನಾರು ರಘುಸುತನಾರ ನುಡಿಗೇಳ್ದು
ಭಾಮೆಯಂ ವನಕಟ್ಟಿದಂ ಸತಿಯು ನಾಸಿಕಕೆ
ರಾಮಣೀಯಕಮಾದುದೇಂ ಧಾನ್ಯ ಶೇಖರಿಪ ತಾಣಕೇನೆಂದು ನುಡಿವರ್
ರಾಮವೈರಿಯ ಜನನಿನಾಮವೇನ್ಕುಲಶರಧಿ
ಸೋಮನಾರ್ಸದವಕಾಶ ದೊರೆಯಲದೇಂ ನವಿಲಿ
ಗಾಮೋದವೀವುದಾವುದು ಆ ಮಹಾಮಹಿಮನೀಗೆ ಸಕಲೈಶ್ವರ್ಯವಂ ॥ ೧ ॥

ಕ್ರಮವಾಗಿ ಇಲ್ಲಿಯ ಪ್ರಶ್ನೆಗಳಿಗೆ ಉತ್ತರಗಳು ಅವರೇ ಸೂಚಿಸಿರುವಂತೆ ಹೀಗಿವೆ: ಇನಿಯ, ರಜಕ, ಮೂಗುತಿ, ಕಣಜ, ಕೇಶಿನಿ, ಕುವರ, ಸುಯೋಗಿ, ಮುಗಿಲು. ಈ ಉತ್ತರಗಳಲ್ಲಿ ಮಧ್ಯಾಕ್ಷರಗಳನ್ನು ಅನುಕ್ರಮವಾಗಿ ಸೇರಿಸಿ ಕೊಂಡು ಓದಿದರೆ 'ನಿಜಗುಣ ಶಿವಯೋಗಿ' ಎಂದಾಗುವುದು.

ಮುಂದೆ ಇದೇ ಮಾದರಿಯಲ್ಲಿ ಇದೇ ಹೆಸರನ್ನು ಹುದುಗಿಸಿಕೊಂಡ ಇನ್ನೂ ಕೆಲವು ಪದ್ಯಗಳಿವೆ. ಈ ರಚನೆ ಗಳನ್ನು ದಂಡಿ ನಾಗವರ್ಮರನ್ನು ಅನುಸರಿಸಿ 'ನಾಮಾಂತರಿತ' ಎಂದು ಹೇಳಬಹುದು.

ಸ್ವತಂತ್ರರಚನೆಗಳು ಹಾಗೂ ಸಂಕಲನಗಳು

ಪ್ರಹೇಳಿಕೆಗಳ ಸ್ವತಂತ್ರರಚನೆಗಳು ಹಾಗೂ ಸಂಕಲನಗಳು, ೧೯ನೆಯ ಶತಮಾನಕ್ಕೆ ಪೂರ್ವದವು, ತೀರ ವಿರಳವಾದವು. ಕರ್ಣಾಟಕ ಕವಿಚರಿತೆಕಾರರು ನಡುಗನ್ನಡ ಕಾಲದ ಒಂದೆರಡು ಇಂತಹ ಗ್ರಂಥಗಳನ್ನು ಸಾಮಾನ್ಯ ವಿವರಗಳೊಂದಿಗೆ ತಮ್ಮ ಗ್ರಂಥದ ತೃತೀಯ ಸಂಪುಟದಲ್ಲಿ ಉಲ್ಲೇಖಿಸಿದ್ದಾರೆ. ಇವುಗಳಲ್ಲಿ 'ಭಾವಾರ್ಥಶತಕ' (ಸು. ೧೭೦೦)ವನ್ನು ಕುರಿತು ''ಒಗಟಿಯ ರೂಪವಾದ ಕಂದಗಳು. ಚೆನ್ನಕೇಶವಸ್ತುತಿ ಇದೆ'' ಎಂದು ತಿಳಿಸಿರುವರಲ್ಲದೆ ಉದಾಹರಣೆಯನ್ನೇನೂ ಕೊಟ್ಟಿಲ್ಲ. ಈಗ ಈ ಕೃತಿ ದೊರೆಯುವಂತೆ ತೋರುವುದಿಲ್ಲ. ಅಲ್ಲಿಯೇ ಅನುಬಂಧದಲ್ಲಿ (ಪು.೪೮೯) ಹೆಸರಿಸಿರುವ 'ಒಗಟಿಯ ಪದ' ಈಗ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿಭಂಡಾರ ದಲ್ಲಿರುವ ಕೆ. ೧೮೦೪/೪ ಎಂಬ ಸಂಖ್ಯೆಯ ಹಸ್ತಪ್ರತಿಯ 'ವಾಗಟಿ ಪದ' ಎಂಬ ಸಂಕಲನದ ಕೃತಿಯೇ ಇದ್ದರೂ ಇರಬಹುದು. ಪುಟ ೩೦೭ರಲ್ಲಿ ನಾಲ್ಕು ಉದಾಹರಣೆಗಳೊಂದಿಗೆ ಕುರಿತಿರುವ 'ಲೆಕ್ಕದ ಚೌಪದ' (ಸು. ೧೭೦೦) ಪ್ರಸಿದ್ಧವೂ ಜನಪ್ರಿಯವೂ ಆದ 'ಚೌಪದದ ಒಗಟಿ'ಗಳ ಒಂದು ಉಪವಿಭಾಗ ಅಥವಾ ಒಳಸಂಕಲನವೆಂದೇ ತೋರುತ್ತದೆ. ಮೌಖಿಕ ಸಂಪ್ರದಾಯದಲ್ಲಿ ಪ್ರಚಲಿತವಿದ್ದುದು ಕಾರಣವಾಗಿ ಈ ಒಗಟಿಗಳಲ್ಲಿ ಪಾಠಭೇದಗಳು ಸಹಜವಾಗಿಯೇ ತೋರುತ್ತವೆ; ಸಾಮಾನ್ಯವಾದ ಒಗಟುಗಳೂ ಲೆಕ್ಕದ ಒಗಟುಗಳೂ ಒಂದೇ ಸಂಕಲನದಲ್ಲಿ ಕೂಡಿ ಕೊಂಡು ಬರುವುದೂ, ಪ್ರತ್ಯೇಕವಾಗಿ ಸಣ್ಣ ಸಂಕಲನಗಳಾಗಿ 'ಮಾನೌಮಿಯ ಚೌಪದ' ಅಥವಾ 'ಹರಕೆಯ ಪದ' ಗಳ ಹಿಂದೋ ಮುಂದೋ ಸೇರಿರುವುದೂ ಈಗಿನ ಹಸ್ತಪ್ರತಿಗಳನ್ನು ಗಮನಿಸಿದಾಗ ತಿಳಿಯುತ್ತದೆ. 'ಮಾನೌಮಿಯ ಚೌಪದ' (='ಮಹಾನವಮಿಯ ಪದ')ದ ಮುದ್ರಿತಗ್ರಂಥದಲ್ಲಿ ಒಗಟಿಗಳು, ಲೆಕ್ಕದ ಒಗಟಿಗಳು ಎಂಬ ಪ್ರತ್ಯೇಕ ಶೀರ್ಷಿಕೆಯ ಕೆಳಗೆ ಇಂತಹ ಕೆಲವು ರಚನೆಗಳನ್ನು ಗಮನಿಸಬಹುದಾಗಿದೆ. 'ಭಾವಾರ್ಥಶತಕ' ಬಿಟ್ಟರೆ ಒಂದು ದೃಷ್ಟಿಯಿಂದ ಈ ಚೌಪದದ ಒಗಟುಗಳೂ ಸ್ವತಂತ್ರ ಹಾಗೂ ಬಿಡಿರಚನೆಗಳೇ ಎನ್ನಬಹುದು.

ಸ್ವತಂತ್ರ ರಚನೆಗಳಲ್ಲಿ, ಒಂದು ಮೊತ್ತದಲ್ಲಿ ಒಗಟುಗಳನ್ನು ನಾವು ಸರ್ವಜ್ಞನ ತ್ರಿಪದಿಗಳಲ್ಲಿ (ಸು. ೧೬೦೦) ಕಾಣುತ್ತೇವೆ. ಇವನ್ನು ಒಗ್ಗೂಡಿಸಿ 'ಬೆಡಗಿನ ಪದ್ಧತಿ' ಎಂಬ ಶೀರ್ಷಿಕೆಯ ಕೆಳಗೆ ಸಂಗ್ರಹಿಸಿ ಸರ್ವಜ್ಞನ ತ್ರಿಪದಿಗಳ ಸಂಕಲನಗಳಲ್ಲಿ ಸೇರಿಸಿರುವುದೂ ಉಂಟು.

ಚೌಪದದ ಒಗಟುಗಳು

ಈ ಚೌಪದಗಳ ಸಂಖ್ಯೆ ಎಷ್ಟು ಎಂಬುದು ನಿಶ್ಚಿತವಾಗಿ ತಿಳಿಯದು. ಹಸ್ತಪ್ರತಿಗಳಲ್ಲಿ ಬೇರೆಬೇರೆಯ ಸಂಖ್ಯೆಯಲ್ಲಿ, ಪಾಠಭೇದಗಳಲ್ಲಿ, ಇವು ದೊರೆಯುತ್ತಿವೆ. ಮುದ್ರಿತ ಗ್ರಂಥದಲ್ಲಿ ೩೦ ಸಾಮಾನ್ಯ ಒಗಟುಗಳೂ ೧೦ ಲೆಕ್ಕದ ಒಗಟುಗಳೂ ಸಂಕಲಿತವಾಗಿವೆ; ಇವುಗಳಿಂದ ಭಿನ್ನವಾದ ಇಲ್ಲವೆ ಅಧಿಕಪಾಠಭೇದಗಳಿರುವ ೧೯ ಒಗಟುಗಳು ಕ.ಅ.ಸಂ.ಯ. ಕೆ.೮೬೪/೨ ಈ ಹಸ್ತಪ್ರತಿಯಲ್ಲಿ ಕಂಡುಬರುತ್ತವೆ. ಈ ಪ್ರತಿಯಲ್ಲಿಯೇ ೭ ಒಗಟುಗಳಷ್ಟು ಕೃತಿಭಾಗ (ಪ. ೩ ರಿಂದ ೯) ನಷ್ಟವಾಗಿದ್ದು, ಇವೂ ಮುದ್ರಿತಪ್ರತಿಯಲ್ಲಿ ಸಂಕಲಿತವಾಗಿರುವುದಕ್ಕಿಂತ ಬೇರೆಯಾದವೇ ಆಗಿದ್ದರೂ ಇರಬಹುದು; ಹೀಗೆಯೇ ಕೆ. ೧೮೦೪/೪ ಈ ಹಸ್ತಪ್ರತಿಯಲ್ಲಿಯೂ ಈ ಎರಡರಿಂದ ಭಿನ್ನವಾದ ಇಲ್ಲವೆ ಅಧಿಕ ಪಾಠಭೇದಗಳಿರುವ ೨೬ ಒಗಟುಗಳಿವೆ. ಅಂತೂ ಸು. ೮೦–೯೦ರ ಸಂಖ್ಯೆಯಲ್ಲಿ ಚೌಪದದ ಒಗಟುಗಳು ನಮಗೆ ಪರಿಶೀಲನೆಗೆ ದೊರೆಯುತ್ತವೆ ಎನ್ನಬಹುದು.

ಕನ್ನಡ ಸುಜಾಣ ಕವಿಗಳ ದೇವ ಕೇಳು ।
ಬಿನ್ನಾಣದೊಗಟಿಯ ನೀ ತಿಳಿದು ಹೇಳು ॥

ಎಂಬ ದ್ವಿಪದಿಯ ಪೀಠಿಕೆಯೊಂದಿಗೆ ಈ ಚೌಪದಗಳು ಆರಂಭವಾಗುತ್ತವೆ. ನಡುಗನ್ನಡ ಭಾಷೆಯಲ್ಲಿರುವ, ಸು. ೧೭೦೦–೧೭೫೦ರ ನಡುವೆ ರಚಿತವಾಗಿರುವಂತೆ ತೋರುವ, ಈ ಚೌಪದಗಳೂ ಸೇರಿದಂತೆ ಸಂಕಲಿತವಾಗಿರುವ 'ಮಾನೌಮಿಯ ಚೌಪದ'ಗಳ ಕಥನಭಾಗವನ್ನು ಪರಿಶೀಲಿಸಿ ಕರ್ತೃ ಯಾರು, ಆತನ ಕಾಲ ದೇಶಗಳು ಯಾವುವು ಎನ್ನುವುದನ್ನು ಆ ಗ್ರಂಥದ ಸಂಪಾದಕರು, ಎನ್. ಅನಂತರಂಗಾಚಾರ್ಯರು, ಪೀಠಿಕೆಯ ಭಾಗದಲ್ಲಿ ಚರ್ಚಿಸಿರುತ್ತಾರೆ. ಗ್ರಂಥಕಾರನ ಹೆಸರು ನಂಜುಂಡಯ್ಯನೆಂದಿರಬಹುದೆಂದೂ ಆತನು ಟಿ. ನರಸೀಪುರ ತಾಲ್ಲೂಕಿನ ಮೂಗೂರು ಸ್ಥಳದವನಿರಬಹುದೆಂದೂ ಮೈಸೂರು ದೊರೆಗಳಾದ ದೊಡ್ಡ ಕೃಷ್ಣರಾಜ ಒಡೆಯರ ಕಾಲದಲ್ಲಿ, ಸು. ೧೭೩೦ರಲ್ಲಿ, ಈ ಚೌಪದಗಳನ್ನು ಆತನು ರಚಿಸಿರಬಹುದೆಂದೂ ಅವರು ಗ್ರಂಥದೊಳಗೆ ದೊರೆಯುವ ಆಂತರಿಕ ಸಾಕ್ಷ್ಯಗಳಿಂದ ಊಹಿಸಿರುತ್ತಾರೆ. ಇದು ಹೀಗಿದ್ದರೂ ಸಾಮಾನ್ಯ ಹಾಗೂ ಲೆಕ್ಕದ ಒಗಟುಗಳು ವಿಷಯವಾಗಿರುವ ಚೌಪದಗಳು ಇದೇ ಕರ್ತೃ ರಚಿಸಿದ್ದು ಎಂದು ಹೇಳುವುದೂ ಕಷ್ಟ. ಕಾಲದಿಂದ ಕಾಲಕ್ಕೆ ಇವು ಭಿನ್ನಕವಿಕರ್ತೃಕಗಳಾಗಿ ವಿನೋದಗೋಷ್ಠಿಗಳಲ್ಲಿ ಪ್ರಚಲಿತವಾಗುತ್ತ ಇದ್ದಿರಬೇಕು ಎಂದು ತೋರುತ್ತದೆ. ಕೆಲವು ಒಗಟುಗಳು ತಮ್ಮ ಸಾದೃಶ್ಯವಿಶೇಷದಿಂದಲೂ ಪಾಠಭೇದಗಳಿಂದಲೂ ಹಲವರ ಕೈವಾಡವನ್ನೇ ಸೂಚಿಸುವಂತಿವೆ.

ಚೌಪದದ ಒಗಟುಗಳನ್ನು ಕೆಲವು ಸಣ್ಣ ಗುಂಪುಗಳಾಗಿ ವಿಂಗಡಿಸಬಹುದು. ೧. ನಮಗೆ ಪರಿಚಿತವಾದ ಅಥವಾ ಯೋಚಿಸಿದರೆ ಹೊಳೆಯಬಹುದಾದ ವ್ಯಕ್ತಿ, ವಸ್ತು ಅಥವಾ ಸಂಗತಿಯ ಸಾಮಾನ್ಯ ಅಥವಾ ವಿಶೇಷ ಲಕ್ಷಣಗಳನ್ನೋ ವಿವರಣೆಯನ್ನೋ ಸೂಚಿಸಿ, ಕೂಡಲೇ ಅವನ್ನು ನಿರಾಕರಿಸುವುದರ ಮೂಲಕ ನೈಜ ಅಥವಾ ಉದ್ದೇಶಿತ ವ್ಯಕ್ತಿ, ವಸ್ತು, ಅಥವಾ ಸಂಗತಿಯನ್ನು ಅವ್ಯಕ್ತವಾಗಿರಿಸುವುದು. ೨. ಅನ್ಯ ವ್ಯಕ್ತಿ, ವಸ್ತು ಅಥವಾ ಸಂಗತಿಯ ಧರ್ಮವನ್ನೋ ಲಕ್ಷಣಗಳನ್ನೋ ಸಾದೃಶ್ಯವುಂಟೆಂಬ ಕಾರಣದಿಂದ ಆರೋಪಿಸಿ, ಇತ್ಯಾತ್ಮಕವಾಗಿಯೇ ನೈಜ ಅಥವಾ ಉದ್ದೇಶಿತ ವ್ಯಕ್ತಿ, ವಸ್ತು ಅಥವಾ ಸಂಗತಿಯನ್ನು ಅವ್ಯಕ್ತವಾಗಿರಿಸುವುದು. ೩. ಭಾವನೆಗೆ ಬಣ್ಣ ಕೊಟ್ಟು, ಭಾವನೆಯಿಂದ ಮಾತ್ರ ಸಾದೃಶ್ಯವನ್ನು ಸಾಧಿಸಬಹುದಾದ ಬೆಡಗಿನಂತಹ ಮಾತುಗಳನ್ನು ಬಳಸಿ ನೈಜ ಅಥವಾ ಉದ್ದೇಶಿತ ವ್ಯಕ್ತಿ, ವಸ್ತು ಅಥವಾ ಸಂಗತಿಯನ್ನು ಅವ್ಯಕ್ತವಾಗಿರಿಸುವುದು. ೪. ಗಣಿತದ ಸಮಸ್ಯೆಗಳನ್ನು ಒಗಟುಗಳಂತೆ ಒಡ್ಡುವುದು.

ಈಗ ಈ ಬಗೆಯ ಒಗಟುಗಳ ಸ್ವರೂಪವನ್ನು ತಿಳಿಯಲು, ಕೆಲವು ಉದಾಹರಣೆಗಳನ್ನು ಮುಂದೆ ಉದ್ಧರಿಸಬಹುದು.

೧. ನೇತ್ಯಾತ್ಮಕ ಸ್ವರೂಪದ ನಿದರ್ಶನಗಳು

ಹುಟ್ಟುತಲೆ ಹಸುರುಂಟು ಪಚ್ಚೆ ತಾನಲ್ಲ । ಬೆಳೆಯುತಲೆ ಕೆಂಪುಂಟು ಮಾಣಿಕ್ಯವಲ್ಲ ।
ಕಟ್ಟಕಡೆಯಲಿ ಕಪ್ಪು ಕಸ್ತೂರಿ ಅಲ್ಲ । ಸೃಷ್ಟಿಸಿದ ಗೋಪಾಲಕೃಷ್ಣ ತಾ ಬಲ್ಲ ॥

ಉತ್ತರ : ರಾಗಿ. ರಾಗಿ ಬೆಳೆವಣಿಗೆಯ ಘಟ್ಟದಲ್ಲಿ ಪಡೆಯುವ ಬಣ್ಣಗಳನ್ನಿಲ್ಲಿ ಹೇಳಿದೆ.

ಒಳನಾಱು ಹೊರನಾಱು ತೆಂಗು ತಾನಲ್ಲ । ಒಳಕೋಟೆ ಹೊಱಕೋಟೆ ಪಟ್ಟಣವು ಅಲ್ಲ ।
ಒಳಗೆ ಹರಳುಂಟು ಮಾಣಿಕ್ಯವಲ್ಲ । ಇದ ಹೇಳಬಲ್ಲ ಜಾಣರಿಗೆ ಅರಿದಲ್ಲ ॥

ಉತ್ತರ : ಹುಣಿಸೆಹಣ್ಣು. ಒಳಹೊರಗೆ ನಾರು, ಒಳ ಹೊರಗೆ ತಿರುಳು ಮತ್ತು ತೊಗಟೆಗಳು, ಒಳಗೆ ಹುಣಿಸೆಯ ಬೀಜ.

ಗರಗರನೆ ತಿರುಗುವುದು ಚಕ್ರ ತಾನಲ್ಲ । ಗಱಿಗಳೆರಡುಂಟು ಹಾಱುವ ಪಕ್ಷಿ ತಾನಲ್ಲ ।
ಶಿರಸದೊಳ್ ಕೊಂಬುಂಟು ಮೃಗಜಾತಿಯಲ್ಲ । ಎಲ್ಲರಾ ಮನೆಯೊಳಗೆ ತಾನಿಲ್ಲದಿಲ್ಲ ॥

ಉತ್ತರ: ಬೀಸುವ ಕಲ್ಲು. ಬೀಸುವಾಗ ತಿರುಗುತ್ತದೆ. ಎರಡು ಹೋಳುಗಳಿರುತ್ತವೆ. ಹಿಡಿಯಲು ಮೇಲಿನ ಹೋಳಿಗೆ ಸೇರಿಸಿದ ಗೂಟವೊಂದಿರುತ್ತದೆ.

೨. ಇತ್ಯಾತ್ಮಕ ಸ್ವರೂಪದ ಲಕ್ಷ್ಯಗಳು

ಕಂಬವೆರಡಱ ಮೇಲೆ ನಿಂತಳಾ ಬಾಲೆ । ನಿಂತು ಕರಗಳ ಮುಗಿವಳಿಂಟಿಲೆಯು ಮೇಲೆ ।
ಸಂಭ್ರಮದಿ ಹಾಕುವಳು ಕೊರಳ ಜಪಮಾಲೆ । ಹಂಬಲಿಸುತಿದ್ದಳು ರಂಭೆ ನಿನ ಮೇಲೆ ॥

ಉತ್ತರ: ರಾಟೆ. ಬಾವಿಕಟ್ಟೆಯ ಎರಡು ಬದಿಗಳ ಕಲ್ಲುಗಳ ನಡುವೆ ಮೇಲ್ಭಾಗದಲ್ಲಿರುತ್ತದೆ; ಕೈಮುಗಿದು ಕೊಂಡಿರುವಂತೆ ತೋರುತ್ತದೆ; ಸೇದುವ ಹಗ್ಗದಿಂದ ಕೂಡಿರುತ್ತದೆ; ನೀರಿಗಾಗಿ ತರುಣಿ, ಸೇದುವ ಬಾವಿಯ ರಾಟೆಯನ್ನು ನೆನೆಯುತ್ತಾಳೆ.

ಹುಟ್ಟುತಲೆ ಹುಡುಗಿ ಬೆಳೆಯುತಲೆ ದೊಡ್ಡವಳು । ಹೊಟ್ಟೆಯಲಿ ಮುತ್ತನ್ನು ಕಟ್ಟಿಕೊಂಡಿಹಳು ।
ಹಳದಿ ಪಟ್ಟೆಯ ಸೀರೆಯುಟ್ಟುಕೊಂಡಿಹಳು । ತುಟ್ಟತುದಿ ಮರದಲ್ಲಿ ಕುಳಿತುಕೊಂಡಿಹಳು ॥

ಉತ್ತರ: ದಾಳಿಂಬೆ ಹಣ್ಣು. ಆರಂಭದಲ್ಲಿ ಹೀಚು, ಆಮೇಲೆ ಸ್ವಾದಕ್ಕೆ ಯೋಗ್ಯ. ಹಣ್ಣಿನೊಳಗೆ ಮುತ್ತಿನಂಥ ಬೀಜ. ಈ ಬೀಜದ ಸುತ್ತ ಹಳದಿಯ ಸಿಪ್ಪೆ.

ಸುತ್ತು ಬಟುವಾಗಿ ನೆತ್ತಿಯಲಿ ಕೊಟ್ಟಾಗಿ । ಒತ್ತಿ ನೋಡಿದರೆ ನಯವಾಗಿ ಮೃದುವಾಗಿ ।
ಮತ್ತೆ ಸರ್ವರಿಗೆಲ್ಲ ತಾನಾಸೆಯಾಗಿ । ಅರ್ತಿಯಿಂ ನೋಡುವರಿಗತಿಚೋದ್ಯವಾಗಿ ॥

ಉತ್ತರ: ಮೊಲೆ. ವೃತ್ತಾಕಾರ, ತುದಿಯಲ್ಲಿ ಚೂಚಕ. ಸ್ಪರ್ಶಕ್ಕೆ ನಯ, ಮೃದು. ಪುರುಷರಿಗೆ ಬಯಕೆಯ, ಕುತೂಹಲದ ವಸ್ತು.

೩. ಭಾವನೆಗೆ ಪ್ರಾಶಸ್ತ್ಯವಿತ್ತ ಬೆಡಗುಮಾತಿನ ನಿದರ್ಶನಗಳು

ಇಟ್ಟೆಡೆಗೆ ತಾಗುವುದು ಬಾಣ ತಾನಲ್ಲ । ನೆಟ್ಟ ಗಾಯಕೆ ನೋವು ಕಂಡುಬರಲಿಲ್ಲ ।
ಇಟ್ಟು ತೆಗೆಯಲುಬಹುದು ಅದು ಚೋದ್ಯವಲ್ಲ । ಕಷ್ಟಪಟ್ಟರು ಹೇಳಲರಿದು ಬಂದಿಲ್ಲ ॥

ಉತ್ತರ: ಗೂಡಾರ್ಥ. ಗುರಿಯನ್ನು ಮುಟ್ಟುವುದು ಎಂದರೆ ಹೃದಯಸ್ಪರ್ಶಿಯೂ ಬುದ್ಧಿಪ್ರಚೋದಕವೂ ಆಗಿರುವುದು. ಬಿಡಿಸಲು ಕಷ್ಟವಾದರೂ ದೈಹಿಕವಾಗಿ ಯಾವ ಪರಿಣಾಮವೂ ಇಲ್ಲ. ಒಗಟನ್ನು ಹೂಡಿ, ಬಿಡಿಸಬಹುದು. (ಕೊನೆಯ ಪಾದ ''ಕಷ್ಟಪಟ್ಟರೆ ಹೇಳಲರಿದು ಎಂದಿಲ್ಲ'' ಎಂಬುದಾಗಿ ಇದ್ದಿರಬಹುದು.)

ಕಸ್ತೂರಿಗಿಡ ಹುಟ್ಟಿ ಕಂಪಿಲ್ಲ ನೋಡಿ । ವಿಸ್ತರಿಸಿ ನೋಡಿದರೆ ಕರ್ಪೂರದಾ ಚಾಳಿ ।
ಕರ್ಪೂರವ ತುಂಬುವರೆ ಕರಡಿಗೆಯ ನೋಡಿ । ಎಪ್ಪತ್ತು ವರ್ಷಕ್ಕೆ ತಪ್ಪ ತೋಱುತು ನೋಡಿ ॥

ಉತ್ತರ: ಕಣ್ಣು. ಕಸ್ತೂರಿಯಂತೆ ಕಪ್ಪು ಬಣ್ಣದ ಅಪೂರ್ವ ವಸ್ತು, ಆಕರ್ಷಣೆಯ ವಿಷಯ. ಕರ್ಪೂರದ ಭರಣಿಯಂತೆ ಚೆಲುವಾದವು. ವೃದ್ಧಾಪ್ಯದಲ್ಲಿ ಕಣ್ಣಿನ ನೋಟ ಮುಸುಕು ಬೀಳುತ್ತದೆ.

೩. ಗಣಿತದ ಸಮಸ್ಯೆಗಳನ್ನು ಒಡ್ಡಿದ ನಿದರ್ಶನಗಳು :

ಹದಿನಾಱು ಮನೆಯು ಲಾಯದಲೊಬ್ಬ ಸೆಟ್ಟಿ । ಕುದುರೆಗಳ ಆಱಾಱು ಹೆಚ್ಚಿನಲಿ ಕಟ್ಟಿ ।
ಅದು ರಾಜಬೀದಿಯಲಿ ಸಾವಿರದ ಸೃಷ್ಟಿ । ಇದ ಹೇಳಬಲ್ಲವನು ಲೆಕ್ಕದಲಿ ಗಟ್ಟಿ ॥

ಎಂಟಮಂದಿ ಹೆಂಡರಿಗೆ ಅವನೊಬ್ಬ ಗಂಡ । ಕಂಠಮಾಲೆಯ ಸರಕೆ ಮುತ್ತನೇ ಕೊಂಡ ।
ಒಂಟೊಂಟಿ ಮುತ್ತಿಗೂ ಹೆಚ್ಚು ಬೆಲೆ ಕಂಡ । ಎಂಟುಮಂದಿಗೆ ಮುತ್ತ ಸರಿಮಾಡಿಕೊಂಡ ॥

ಹನ್ನೊಂದು ಹನ್ನೆರಡು ಹದಿಮೂಱು ಬಣ್ಣ । ಇನ್ನಿದಱ ತೂಕವನು ನಾವಱಿವೆವಣ್ಣ ।
ಚೆನ್ನಾಗಿ ಗುಣಿಸಿ ಭಾಗಿಸಿ ಹೇಳಿರಣ್ಣ । ಮುನ್ನೂಱು ವರಹಕ್ಕೆ ಸರಿಮಾಡಿರಣ್ಣ ।

ಗಿಣಿ ಗಿಡುಗ ಗಿಡವೊಂದಱಿಂ ಹಾಱುವಾಗ । ಗಿಣಿ ಕ್ಷಣಕೆ ಶತಕ್ರೋಶವನು ಪೋಗೆ ಬೇಗ ।
ಕ್ಷಣಕೆಯೊಂದೊಂದ ಹೆಚ್ಚುತ ಪೋಗಿ ಗಿಡುಗ । ಗಿಣಿವಿಡುವುದೆನಿತು ದಿನಕೆಂದು ನುಡಿ ಬೆಡಗ ॥

ಒಗಟಿಯ ಚೌಪದಗಳು ಸ್ವರೂಪತಃ ಮನೋರಂಜನಾತ್ಮಕವಾದವು; ಸಾಮಾನ್ಯ ಕವಿತ್ವಶಕ್ತಿಯ ಜನರ ರಚನೆಗಳು. ಅವು ರಚಿತವಾಗುತ್ತಿದ್ದುದು ಸಾಮಾನ್ಯ ಸಾಹಿತ್ಯ ವಿನೋದಾಸಕ್ತಿಯ ಜನರಿಗಾಗಿ; ಆ ರಚನೆಗಳ ಭಾಷೆಶೈಲಿಗಳು ಸರಳವೂ ಸಾಮಾನ್ಯವೂ ಆದ ರೀತಿಯವು. ಪ್ರೌಢಕವಿಗಳಿಗೆ ಇರುತ್ತಿದ್ದ ಹಾಗೆ ನಾನಾ ಶಾಸ್ತ್ರಗಳ ಪರಿಚಯ ಪ್ರೌಢಿಮೆಗಳಾಗಲಿ, ಪುರಾಣೇತಿಹಾಸಗಳ ಗಾಢವೂ ವ್ಯಾಪಕವೂ ಆದ ತಿಳಿವಳಿಕೆಯಾಗಲಿ, ಉನ್ನತವೂ ಉದಾತ್ತವೂ ಆದ ಕಲ್ಪನಾಸಾಮರ್ಥ್ಯ, ಹೃದಯವನ್ನು ಕಲಕುವ ಭಾವನೆಗಳ ಆವೇಶ ಇಂತಹ ಕವಿತ್ವಪರಿಕರಗಳಾಗಲಿ ಈ ಸರಳ ಚೌಪದದ ಕವಿಗಳಿಗೆ ಇರಲಿಲ್ಲವೆಂದರೆ ತಪ್ಪಾಗುತ್ತದೆ. ಕವಿ ಅಕ್ಷರಸ್ಥನೂ ಲೌಕಿಕ ವ್ಯವಹಾರಗಳಲ್ಲಿ ಕುಶಲನೂ ವಿನೋದಪ್ರಿಯನೂ ಆಗಿದ್ದರೆ, ಸಾಮಾನ್ಯವಾದ ತಿಳಿವಳಿಕೆಯೇ ಈ ಚೌಪದಗಳ ರಚನೆಗೆ ಯಥೇಚ್ಛವಾಗುತ್ತಿತ್ತು. ಆತನ ಕಲ್ಪನೆಯ ಕಣ್ಣು ಅವನ ಸುತ್ತಮುತ್ತಣ ಪರಿಚಿತ ವ್ಯಕ್ತಿಗಳನ್ನೂ ಪದಾರ್ಥವಿಶೇಷಗಳನ್ನೂ ಸಂದರ್ಭಗಳನ್ನೂ ದಾಟಿ ಮುಂದೆ ನೋಡುವುದಿಲ್ಲ; ನೋಡುವ ಅಗತ್ಯವೂ ಇರುವುದಿಲ್ಲ. ಅದು ಸುತ್ತಿ ಸುಳಿಯುವುದು ರಾಮ, ಕೃಷ್ಣ, ಶಿವ, ದೇವೇಂದ್ರ ಈ ದೊಡ್ಡ ದೇವರ ಸುತ್ತ; ಕುರುಬ, ನೇಕಾರ, ಕುಂಬಾರ, ದರ್ಜಿ ಇಂತಹ ವೃತ್ತಿಯ ಜನರ ವ್ಯವಹಾರಗಳ ಸುತ್ತ. ಬತ್ತ, ರಾಗಿ, ರಾಟೆ, ಗಾಳಿಪಟ, ಅಂಗಿ, ತಿಥಿ, ಅಡಕೆ, ಪಡುವಲಕಾಯಿ, ನೆಲ್ಲಿಕಾಯಿ, ದಾಳಿಂಬೆ, ಹುಣಿಸೆಹಣ್ಣು, ಬೀಸುವಕಲ್ಲು, ಒರಳುಗುಂಡು, ನವಿಲು, ಹಾವು, ಹುಲಿ, ಎಮ್ಮೆ, ಮೇಕೆ ಇಂತಹ ವಸ್ತುಗಳ ಆಯ್ಕೆಯನ್ನು ಗಮನಿಸಿದಾಗ ಹಳ್ಳಿಯ ಜನಜೀವನದ, ಪರಿಸರದ ರಚನೆಗಳಾಗಿ ಈ ಚೌಪದದ ಒಗಟುಗಳು ಕಾಣಿಸಿಕೊಳ್ಳುತ್ತಿದ್ದುದು ಸಾಮಾನ್ಯವಾಗಿತ್ತೆಂದು ಹೇಳಬಹುದು. ಉತ್ತರವಾಗುವ ವಸ್ತು ಅಥವಾ ಸಂಗತಿಗಳನ್ನು ಗೂಢವಾಗಿರಿಸಿ ಒಗಟುಗಳನ್ನು ಕಟ್ಟುವಾಗ ಸಾದೃಶ್ಯಕ್ಕೆ ಸಂಭಾವ್ಯತೆಗೆ ತರುವ ವಿಶೇಷಣಗಳಾಗಲಿ ವಿವರಣೆಗಳಾಗಲಿ ಹೀಗೆಯೇ ಪರಿಚಿತವೂ ಸರಳಸಾಮಾನ್ಯವೂ ಆದವು. ಉದಾಹರಣೆಗೆ, ಪಡುವಲಕಾಯಿಯ ವರ್ಣನೆಗೆ ಹಾವು ಕಬ್ಬುಗಳು, ಹಲಸಿನಹಣ್ಣಿನ ವರ್ಣನೆಗೆ ಕಜ್ಜಿಹಿಡಿದ ಮೈ, ಉಯ್ಯಾಲೆಯಾಟಗಳು ಒದಗುತ್ತವೆ. ಪ್ರಾಣಿ ಪಕ್ಷಿಗಳು, ಹೂಹಣ್ಣು ತರಕಾರಿಗಳು, ಗಿಡಮರಗಳು, ಒಡವೆ ಮಾಡಿಸುವಾಗ ಬಲ್ಲ ಮುತ್ತು ಮಾಣಿಕ್ಯಗಳು, ಓಲೆಕೊಪ್ಪುಗಳು ಇವು ಪರಿಚಿತ ಪ್ರಪಂಚ. ಕೋಟೆಕೊತ್ತಲಗಳು, ಆನೆ ಕುದುರೆಗಳು ಆಗೊಮ್ಮೆ ಈಗೊಮ್ಮೆ ಬಾರದೆ ಇರುವುದಿಲ್ಲ.

ಚೌಪದದ ಒಗಟುಗಳು ಸರಳವಾದ ಭಾಷೆ ಛಂದಸ್ಸುಗಳಲ್ಲಿ ರೂಪಗೊಂಡವು. ಇಲ್ಲಿಯ ಭಾಷೆಗೆ ಬಿಗಿಯಾದ ವ್ಯಾಕರಣದ ಕಟ್ಟುಕಟ್ಟಳೆಗಳು ಅನ್ವಯಿಸುವುದಿಲ್ಲ. ರೂಢಿಭಾಷೆಗೆ ಹತ್ತಿರವಾಗಿ ಮಾತಿನ ರೀತಿ ಇರುತ್ತದೆ. ಆದರೂ ಗ್ರಾಮ್ಯವಲ್ಲ, ಶಿಥಿಲವೂ ಅಲ್ಲ. ಹಾಗೆಯೇ ರಚನೆ ನಿರ್ಭಾವಗದ್ಯದ ಸರಳ ವಾಕ್ಯಗಳ ಸಂಯೋಜನೆಯ ಸಪ್ಪೆಬರೆಹವೂ ಅಲ್ಲ. ಸಾಹಿತ್ಯದ ಸೊಬಗು ಸೊಗಡುಗಳು ಕಟುಗಂಧವನ್ನು ಸೂಸದ ಪುಟ್ಟಹೂವಿನ ಮೃದು ಪರಿಮಳದಂತೆ ಹಗುರವಾಗಿ ಪದ್ಯದ ಸಾಲುಗಳಲ್ಲಿ ಹರಡಿಕೊಂಡಿರುತ್ತವೆ. ವರ್ಣ್ಯವಸ್ತುವನ್ನು ಕಟ್ಟಲು ಬಳಸುವ ಪದಗಳು ಸಾಮಾನ್ಯವಾದವೇ ಆದರೂ ಕಟ್ಟಲು ಅನುಸರಿಸುವ ವಿಧಾನ ಬಲುಮಟ್ಟಿಗೆ ರೂಪಕೋಕ್ತಿಗಳ ರಂಜನೆಯ, ಕಲ್ಪನೆಯ ಸರಸ ಕಾವ್ಯರಚನೆಯ ವಿಧಾನವೇ ಆಗಿದೆ. ರೂಪಕಗಳು ಇಲ್ಲವೆ ಸಂಕೇತಗಳು, ಕೆಲವೊಮ್ಮೆ ಪರ್ಯಾಯೋಕ್ತಿಗಳು ಚಿತ್ರಗಳನ್ನು ರೂಪಿಸುತ್ತವೆ. ವರ್ಣ್ಯಪದಾರ್ಥದ ನಿಜಸ್ವರೂಪವನ್ನು 'ಮುಚ್ಚಿ' (ಎಂದರೆ ಅದಲ್ಲವೆಂದು ನಿಷೇಧಿಸಿ) ಅದನ್ನು ಬೇರೊಂದನ್ನಾಗಿ ವರ್ಣಿಸುವ 'ಅಪಹ್ನುತಿ'ಯ ಲಕ್ಷಣವೂ ಇಲ್ಲಿ ಗೋಚರಿಸುತ್ತದೆ. ಈ ಕಾರಣಗಳಿಂದಲೇ ಕೇಳುವ ಸಹೃದಯರಿಗೆ, ಒಗಟು ಬಿಡಿಸಬೇಕೆಂಬ ಛಲಗಾರರಿಗೆ ಈ ಚೌಪದಗಳ ಕವಿ 'ಕನ್ನಡ ಸುಜಾಣ, ಕವಿಗಳ ದೇವ', 'ಬಿನ್ನಾಣದೊಗಟಿಯ' ಬಲ್ಲ ಮೇಧಾವಿ. ಇವನು ಬಳಸಿದ ಚೌಪದಿಗೆ ಗಣನಿಯಮವಿದ್ದರೂ ಪ್ರಾಸನಿಯಮ ಐಚ್ಛಿಕವಾದ್ದು. ಆದಿಪ್ರಾಸಕ್ಕಿಂತ ಅಂತ್ಯಪ್ರಾಸದ ಒಲವು ಹೆಚ್ಚು. ಒಗಟಿನ ಅರ್ಥ ಗೂಢವಾಗಿದ್ದರೂ ವಾಚ್ಯವಾಗಿರುವ ಪದ್ಯಾರ್ಥದಲ್ಲಿ ಯಾವ ಕ್ಲೇಶವೂ ಇಲ್ಲ.

ಒಗಟುಗಳು ಬಿಡಿಸುವವರಿಗೆ ಒಡ್ಡಿದ ಸವಾಲುಗಳು. ಅದಕ್ಕಾಗಿಯೇ, ''ಇದ ಹೇಳಬಲ್ಲ ಜಾಣನಿ(ರಿ)ಗೆ ಅರಿದಲ್ಲ'', ''ಸೃಷ್ಟಿಸಿದ ಗೋಪಾಲಕೃಷ್ಣ ತಾ ಬಲ್ಲ'', ''ಇದ ಹೇಳಬಲ್ಲವನು ಲೆಕ್ಕದಲಿ ಗಟ್ಟಿ'', ''ಅಱಿಯದವಗಾಱು ತಿಂಗಳ ಎಡನ ಕೊಟ್ಟಿ'', ''ಪೃಥ್ವಿಯೊಳು ಬಲ್ಲ ಜಾಣರಿಗೆ ಅರಿದಲ್ಲ'', ''ಲೋಲ ಹಂಪೆಯ ವಿರೂಪಾಕ್ಷ ತಾ ಬಲ್ಲ'',

''ರೂಢಿಯೊಳು ಚೆನ್ನಕೇಶವರಾಯ ಬಲ್ಲ'', ''ಸೊಲ್ಲಿದರೆ ಪುಲಿಗೆಱೆಯ ಸೋಮನೇ ಬಲ್ಲ'', ''ಬಾಲಭಾಷೆಗಳಲ್ಲ ನುಡಿ ನಿಜವದೇನು'' ಎನ್ನುವಂತಹ ಮಾತುಗಳು ಚೌಪದಿಯ ಕೊನೆಗೆ ಬರುತ್ತಿರುತ್ತವೆ. ಒಗಟುಗಳು ಸಂಬೋಧನ ಪರವಾಗಿರುವುದನ್ನು ಇಂತಹ ಮಾತುಗಳು ಸಾರುತ್ತವೆ. ಈ ಪ್ರವೃತ್ತಿ ಸಂಸ್ಕೃತ ಪ್ರಹೇಳಿಕೆಗಳಲ್ಲಿ ಕಂಡುಬರುವ ''ಯೋ ಜಾನಾತಿ ಸ ಪಂಡಿತಃ'', ''ಯೇ ಜಾನಂತಿ ತೇ ಪಂಡಿತಾಃ'', ''ಇಹ ಜಾನಾತಿ ಪಂಡಿತಃ'' ಎಂಬಂತಹ ಮಾತುಗಳನ್ನು ಹೋಲುತ್ತವೆ. ಅಲ್ಲದೆ ''ನೀನು ಹೇಳಿದ ಬೆಡಗು ಕಹಳೆ ಕಾಣಣ್ಣ। ನಾನೊಂದು ಬೆಡಗ ಹೇಳುವೆನು ಕೇಳಣ್ಣ'' ಎಂದು ಶೃಂಖಲಾರೂಪವಾಗಿ ಒಗಟುಗಳನ್ನು ಹೆಣೆಯುತ್ತ ಹೋಗುವ ವಿನೋದವಿಹಾರವೂ ಕಂಡು ಬರುತ್ತದೆ.

ಕಲ್ಪನಾಚತುರರಿಗೆ ಒಂದು ಬಗೆಯ ಒಗಟುಗಳು ಬುದ್ಧಿಗೆ ಆಹಾರ ಒದಗಿಸಿದರೆ, ವ್ಯವಹಾರಕುಶಲಿಗಳಿಗೆ ಲೆಕ್ಕದ ಒಗಟುಗಳು ಇನ್ನೊಂದು ರೀತಿಯಲ್ಲಿ ಬುದ್ಧಿಗೆ ಆಹಾರ ಒದಗಿಸುತ್ತವೆ. ಲೆಕ್ಕದ ಒಗಟುಗಳನ್ನು ಬಿಡಿಸಲು ಗಣಿತದ ಪ್ರಜ್ಞೆ ಅವಶ್ಯ. ಅಂತಹ ಪ್ರಜ್ಞೆಯಿದ್ದೂ ಲೆಕ್ಕದ ಚೌಪದಗಳನ್ನು ಅರ್ಥಯಿಸುವುದರಲ್ಲಿ ಕೆಲವು ತೊಡಕುಗಳಿವೆ. ಇದಕ್ಕೆ ಕಾರಣ ಇಲ್ಲಿಯ ಕೋಷ್ಟಕ, ಅಳತೆತೂಕಗಳು ಹಳೆಯ ಕಾಲದ್ದು ಎನ್ನುವುದು. ಕ್ರೋಶ, ಗಾವುದ, ಯೋಜನ ಮುಂತಾದ ದೂರಸೂಚಕ ಮಾತುಗಳಿಗೆ, ಸೇರು, ತೂಕ, ಬಣ್ಣ, ವರಹ, ಮೊಳ, ಹಣ,ಹಾಗ, ಗದ್ಯಾಣ, ಮಣ, ಟಂಕಿ, ಸೂಸುಗಣೆ, ಹೇಱು ಇಂತಹ ಅಳತೆ ತೂಕದ ಮಾತುಗಳಿಗೆ ನಿಖರವಾದ ಅರ್ಥಗಳನ್ನು ತಿಳಿಯುವುದು ಈಗ ಕಷ್ಟ. ಈವರೆಗೆ ಲೆಕ್ಕದ ಚೌಪದಗಳಿಗೆ ಅರ್ಥಗಳನ್ನು ವಿವರಿಸುವ ಪ್ರಯತ್ನವನ್ನು ಯಾರೂ ಮಾಡಿದಂತಿಲ್ಲ. ಇದು ಅವಶ್ಯವಾಗಿ ಆಗಬೇಕಾದ್ದು. ಭಾರತೀಯ ಗಣಿತಪದ್ಧತಿಯನ್ನು ತಿಳಿಯಲು ಇಲ್ಲಿಯ ಸಾಮಗ್ರಿಯೂ ಅದರ ಗಣಿತವೂ ಸಹಾಯಕವಾಗಿವೆಯೆಂದು ಹೇಳಬಹುದಾಗಿದೆ.

ಸರ್ವಜ್ಞನ, ಚೌಪದಗಳ ಹಾಗೂ ಜನಪದ ಸಾಹಿತ್ಯದ ಒಗಟುಗಳು

ಸರ್ವಜ್ಞನ ತ್ರಿಪದಿಗಳ, ಒಗಟಿಯ ಪದಗಳ ಹಾಗೂ ಜನಪದ ಸಾಹಿತ್ಯದ ಒಗಟುಗಳ ನಡುವೆ ಕಂಡು ಬರುವ ವಸ್ತುಸಂಬಂಧವಾದ ಸಾಮ್ಯಗಳೂ ಶಾಬ್ದಿಕಸಾಮ್ಯಗಳೂ ಗಮನಾರ್ಹವಾದವು. ಈ ಸಾಮ್ಯಗಳಿಗೆ ಕಾರಣವೇನು? ಪ್ರಾಯಃ ಈ ಎಲ್ಲ ಒಗಟುಗಳೂ ಕಂಠಸ್ಥ ಸಂಪ್ರದಾಯದಲ್ಲಿಯೇ ಹುಟ್ಟಿ ಬೆಳೆಯುತ್ತಿದ್ದುದು ಹಾಗೂ ಅವುಗಳ ವಸ್ತುವಿನ ವ್ಯಾಪ್ತಿ ಬಲುಮಟ್ಟಿಗೆ ಸೀಮಿತವಾಗಿದ್ದುದು. ಕೆಲವು ನಿದರ್ಶನಗಳಿಂದ[52] ಈ ಸಂಗತಿಯನ್ನು ವಿಶದಪಡಿಸಬಹುದು.

ನವಿಲು, ಮೇಕೆ ಮುಂತಾದುವನ್ನು ಕುರಿತ ಕೆಲವು ಒಗಟುಗಳ ನಡುವೆ ಅಂತಹ ಶಾಬ್ದಿಕಸಾಮ್ಯಗಳು ತೋರದಿರಬಹುದಾದರೂ ವಸ್ತುವಿನ ಆಯ್ಕೆಯಲ್ಲಿಯ ಆತ್ಮೀಯತೆಯನ್ನು ತಿಳಿಯಲು ಅಡ್ಡಿಯಿಲ್ಲ. ಜನಪದ ಸಾಹಿತ್ಯದಲ್ಲಿಯ ಮೇಕೆ, ನವಿಲು ಕುರಿತ ಒಗಟು (೧೦, ೨೯) ಚೌಪದದ ಆ ಸಂಬಂಧವಾದ ಒಗಟಿನ (೭, ೨) ಪ್ರತಿರೂಪವೇ.

'ಇಕ್ಕಳ' ಕುರಿತ ನಿದರ್ಶನವನ್ನೀಗ ನೋಡೋಣ :

ತ್ರಿಪದಿಯಲ್ಲಿರುವುದು :

ಎಂಟು ಬಳ್ಳದ ನಾವು ಗಂಟಲಲಿ ಮುಳ್ಳುಂಟು
ಬಂಟರನು ಹಿಡಿದು ಬಡಿಸುವುದು ಕವಿಗಳಲಿ
ಬಂಟರಿದ ಹೇಳಿ ಸರ್ವಜ್ಞ ॥ (೧೮೭೫)

ಚೌಪದದಲ್ಲಿರುವುದು :

ನೆಂಟರನು ಹಿಡಿದು ಬಡಿಸುವ ಜಾಣನೀತ । ಎಂಟಂಗೆ ಕಿಚ್ಚಿಕ್ಕಿ ಬಾಯ್‌ಬಿಡುವನೀತ ।
ಟೆಂಟಣಿಸಿ ಬಾಯೂಱಿ ನೀರ್ ಕುಡಿವನೀತ । ಎಂಟು ಬಳ್ಳದ ಹೆಸರ ಹೇಳೆಂದನೀತ ॥ (೧೫)

ಪ್ರಾಸ ಒಂದೇ ವಿಧವಾಗಿರುವುದು ಗಮನಾರ್ಹ; ಎಂಟು ಬಳ್ಳದ ಹೆಸರು 'ಇಕ್ಕಳ' ಎಂದೇ. ಅದೇ ಹೆಸರೆಂದು ಹೇಳುವಲ್ಲಿ ಇದು 'ಅಂತಃಪ್ರಶ್ನೆ'ಯ ಲಕ್ಷ್ಯವೂ ಆಗಬಲ್ಲುದು. ಇತರ ಸಮೀಪ ಸಾದೃಶ್ಯಗಳೂ ಇಲ್ಲಿವೆ.
'ವರ್ಷ' ಕುರಿತ ನಿದರ್ಶನ ತ್ರಿಪದಿಯಲ್ಲಿ ಹೀಗಿದೆ :

ಇನ್ನು ಬಲ್ಲರೆ ಕಾಯಿ ಮುನ್ನೂಱು ಅಱುವತ್ತು
ಹಣ್ಣು ಹನ್ನೆರಡು ಗೊನೆ ಮೂಱು ತೊಟ್ಟೊಂದು
ಚೆನ್ನಾಗಿ ಹೇಳಿ ಸರ್ವಜ್ಞ ॥ (೧೪೯೭)

ಚೌಪದದಲ್ಲಿ ಹೀಗಿದೆ :

ಒಂದು ಮರ ಹುಟ್ಟಿ ಹನ್ನೆರಡು ಕವಲಾಯ್ತು । ಒಂದು ಕವಲಿಂಗೆ ಮೂವತ್ತು ಎಲೆಯಾಯ್ತು ।
ಅದಱೊಳಗೆ ಹದಿನೈದು ಕರಿದು ಬಿಳಿದಾಯ್ತು । ಇದ ಹೇಳಬಲ್ಲ ಜಾಣರಿಗೆ ಅರಿದಾಯ್ತು ।

ಮರದ ಬೆಳವಣಿಗೆಯನ್ನು ದೃಷ್ಟಿಯಲ್ಲಿಟ್ಟುಕೊಂಡರೂ ನಿರೂಪಣೆಯಲ್ಲಿ ಪ್ರತ್ಯೇಕತೆಯನ್ನು ತೋರಿರುವುದು ಇಲ್ಲಿ ಸ್ಪಷ್ಟವಾಗಿದೆ.

ಜನಪದ ಸಾಹಿತ್ಯದಲ್ಲಿ ಇದೇ ಇನ್ನೂ ಅಡಕವಾಗಿ

ಒಂದು ಮರ । ಹನ್ನೆರಡು ಕಾಯಿ ।
ಮೂನ್ನೂರರವತ್ತೈದು ಎಲೆಗಳು ॥ (೧೫೪)

ಎಂಬುದಾಗಿಯೋ, ಸ್ವಲ್ಪ ಬೇರೆಯಾಗಿ

ಹನ್ನೆರಡು ಕೊಟ್ಟಡಿ ಮೂವತ್ತು ತೊಟ್ಟಿಲು । ಮಲಗುವರು ಮಾತ್ರ ಇಬ್ಬರೇ ಮಕ್ಕಳು ॥

ಎಂಬುದಾಗಿಯೋ ರೂಪವನ್ನು ಪಡೆದಿರುವುದು ಕಾಣುತ್ತದೆ.

'ಕಣ್ಣು' ಕುರಿತ ಒಂದು ಒಗಟು :

ತ್ರಿಪದಿಯಲ್ಲಿರುವುದು :

ಕಡೆ ಕಪ್ಪು ನಡು ಬಿಳಿದು ಉಡುವ ವಸ್ತ್ರವದಲ್ಲ
ಬಿಡದೆ ನೀರುಂಟು ಮಡುವಲ್ಲ ಕವಿಗಳೀ
ಬೆಡಗು ಪೇಳುವುದು ಸರ್ವಜ್ಞ ॥ (೧೪೯೮)

ಚೌಪದದಲ್ಲಿರುವುದು :

ಕಡೆ ಬಿಳಿದು ನಡು ಕಪ್ಪು ಮಡಿವಸ್ತ್ರವಲ್ಲ । ಅಡಸಿ ನೀರ್ದುಂಬುವರೆ ಕೊಡನು ತಾನಲ್ಲ ।
ಅಡಿಗಡಿಗೆ ಬೆಳಗುವರೆ ಕನ್ನಡಿಯು ಅಲ್ಲ । ಪೊಡವಿಯೊಳು ಬಲ್ಲ ಜಾಣರಿಗೆ ಅರಿದಲ್ಲ ॥ (೨೬)

ಚೌಪದದ ರಚನೆಗೆ ಪ್ರತ್ಯಂತರದಲ್ಲಿ (ಕೆ ೮೬೪/೨ ; ಪ. ೨೧) ಗಮನಾರ್ಹವಾದ ಪಾಠಭೇದವಿದೆ. ಹಾಗೆಯೇ ತ್ರಿಪದಿ ಚೌಪದಗಳ ನಡುವೆಯೂ ಹೆಚ್ಚು ವ್ಯತ್ಯಾಸಗಳಿವೆ. ಮೊದಲ ಪಾದದಲ್ಲಿಯೇ ಕಪ್ಪು ಬಿಳುಪಿನ ವ್ಯತಾಸ ಎದ್ದು ತೋರುವಂತಿದೆ. ಚೌಪದದ ರಚನೆ ಮುದ್ದಾದುದು, ತಾರ್ಕಿಕವಾದುದು.
'ಅಂಗಿ' ಕುರಿತ ಒಂದು ಒಗಟು :

ತ್ರಿಪದಿಯಲ್ಲಿ :

ಕರವುಂಟು ಕಾಲಿಲ್ಲ ಶಿರ ಹಱಿದ ಮುಂಡವು
ನರದಿ ಬಿಗಿದಾಱು ತುಂಡದಕೆ ಕವಿಗಳೆ
ಅಱಿದಿದನು ಪೇಳಿ ಸರ್ವಜ್ಞ ॥ (೧೪೯೯)

ಚೌಪದದಲ್ಲಿ :

ಕೆಯ್ಯುಂಟು ಕಾಲಿಲ್ಲ ತಲೆಹೋದ ಮುಂಡ। ಮೆಯ್ಯೆಲ್ಲ ಒಂಬತ್ತು ವಿಧ ಗಾಯಗೊಂಡ।
ಒಯ್ಯೆಂದು ರಾಯರಾ ಹೆಗಲೇರಿಕೊಂಡ। ಕೈಕಳಚಿ ಬಿಟ್ಟರೆ ತಾ ಮುದುರಿಕೊಂಡ॥ (೧೨)

ಚೌಪದದ ರಚನೆಗೆ ಪ್ರತ್ಯಂತರದಲ್ಲಿ (ಕೆ. ೧೮೦೪/೪; ಪ. ೧೮) ಗಮನಾರ್ಹ ಪಾಠಭೇದವಿದೆ. ಹಾಗೆಯೇ ತ್ರಿಪದಿ ಚೌಪದಗಳ ನಡುವೆಯೂ ವ್ಯತ್ಯಾಸಗಳಿವೆ. ಚೌಪದದ ರಚನೆ ಚೆನ್ನಾದ್ದು; ತ್ರಿಪದಿಯೇ ಇಲ್ಲಿ ವಿಸ್ತಾರಗೊಂಡಿರಬಹುದು. ಇದೇ ವಸ್ತುವಿನ ಜನಪದ ಸಾಹಿತ್ಯದ ರಚನೆ (೨೨೩) ಚೌಪದ ರಚನೆಯನ್ನೇ ಸರಳಗೊಳಿಸಿಕೊಂಡ ರೂಪಾಂತರ. ಇದರೊಂದಿಗೆ ಇದೇ ವಸ್ತುವಿನ ಸಂಸ್ಕೃತದ

ಅಸ್ತಿ ನಾಸ್ತಿ ಶಿರೋನಾಸ್ತಿ ಬಾಹೂರಸ್ತಿ ತಥೈವ ಚ
ಪಾದೌ ನಾಸ್ತಿ ತಥಾ ತಸ್ಯ ನಿತ್ಯಂ ಪುರುಷಭಕ್ಷಣಂ ॥ (ಹಿತಬೋಧಿನಿ ೨-೪)

ಎಂಬ ಪ್ರಹೇಳಿಕೆಯನ್ನು ಸಹ ಹೋಲಿಸಬಹುದು.

'ಗಾಳಿಪಟ' ಕುರಿತ ಒಗಟನ್ನೀಗ ನೋಡಬಹುದು :

ತ್ರಿಪದಿಯಲ್ಲಿ :

ಕಾಲಿಲ್ಲ ಕೊಂಬುಂಟು ಬಾಲದಾ ಪಕ್ಷಿಯದು
ಮೇಲೆ ಹಾರುವುದು ಹದ್ದಲ್ಲ ಕವಿಗಳಲಿ
ಬಾಲರಿದ ಪೇಳಿ ಸರ್ವಜ್ಞ ॥ (೧೯೨೦)

ಚೌಪದದಲ್ಲಿ :

ಅಂಬರದೊಳಾಡುವುದು ಪಕ್ಷಿ ತಾನಲ್ಲ। ಕೊಂಬು ಬಾಲಗಳುಂಟು ಮೃಗಜಾತಿಯಲ್ಲ।
ಸಂಭ್ರಮದ ಬಿಲ್ಲುಂಟು ಎಸೆವಾತನಲ್ಲ। ಇದು ಹೇಳಬಲ್ಲ ಜಾಣನಿಗೆ ಅರಿದಲ್ಲ॥

ಎರಡರಲ್ಲೂ ಸಾದೃಶ್ಯ ವೈಸಾದೃಶ್ಯಗಳಿವೆ; ಎರಡು ಚಿತ್ರಗಳಲ್ಲಿಯೂ ಸ್ವಾರಸ್ಯವಿದೆ.

ಸರ್ವಜ್ಞನ ತ್ರಿಪದಿಗಳಿಗೆ ಜನಪದ ಸಾಹಿತ್ಯದ ರಚನೆಗಳೊಂದಿಗೆ ಮಾತ್ರ ಸಾದೃಶ್ಯ ತೋರುವಂತಹ ರಚನೆಗಳೂ ಕೆಲವು ಇವೆ. ಒಂದೆರಡನ್ನು ಮುಂದೆ ನೋಡಬಹುದು :

'ತೊಟ್ಟಿಲು' ಕುರಿತ ಒಗಟು :

ಕಾಲುಂಟು ನಡೆಯದುದು ಮೂಲೆಯಲಿ ಕಟ್ಟಿಹುದು
ಬಾಲಕರ ನೊಮ್ಮ ಹೊರುವುದು ಕವಿಗಳಲಿ
ಬಾಲರಿದ ಪೇಳಿ ಸರ್ವಜ್ಞ ॥ (೧೮೮೧)

ಕಾಲುಂಟು ನಡೆಯದು। ಮೂಲೇಲಿ ಕಟ್ಟಿಹುದು।
ಬಾಲಾರನ್ನೊಮ್ಮೆ ಹೊರುವುದು। ಇದು ಯಾವುದು ? ॥ (೧೯)

ತ್ರಿಪದಿಯೇ ಶಿಥಿಲಗೊಂಡು ಜನಪದ ಸಾಹಿತ್ಯಕ್ಕೆ ಹೊಕ್ಕಿರಬಹುದು.

'ಗಂಧದ ಕಲ್ಲು' (ಸಾಣೆಕಲ್ಲು) ಕುರಿತ ಒಗಟು :

ಅರೆವ ಕಲ್ಲಿನ ಮೇಲೆ ಮರವು ಹುಟ್ಟಿದು ಕಂಡೆ
ಮರದ ಮೇಲೆರಡು ಕರ ಕಂಡೆ ವಾಸನೆಯು
ಬರುತಿಹುದ ಕಂಡೆ ಸರ್ವಜ್ಞ ॥ (೧೮೯೪)

ಅರೆಕಲ್ಲಿನ ಮೇಲೆ। ಮರ ಮೂಡಿದುದ ಕಂಡೆ।
ಮರದ ಮೇಲೆರಡು। ಕರಗಳನು ಕಂಡೆ।
ಅದು ಮುಂದೆ ಶಿವನ ಮುಖದಲಿ। ಮೆರೆವುದ ಕಂಡೆ ॥ (೩೯)

ಜನಪದ ಸಾಹಿತ್ಯದ ರಚನೆಯಲ್ಲಿ ಮುಕ್ತಾಯದ ಭಾಗ ಮನೋಹರವಾದ್ದು. ಅರೆಯುವ ಗಂಧದ ಕಲ್ಲು, ಗಂಧದ ಕೊರಡು, ಅರೆಯುತ್ತಿರುವ ಕೈ ಹಾಗೂ ತೆಯ್ದ ಗಂಧ ಶಿವನ ಪೂಜೆಗೆ ವಿನಿಯೋಗವಾಗುವುದು ಇವೆಲ್ಲ ಚೆನ್ನಾಗಿ ಇಲ್ಲಿ ವ್ಯಕ್ತಗೊಂಡಿವೆ. 'ಹುಂಜ–ಕೋಳಿ' ಕುರಿತ ಒಗಟಿನಲ್ಲಿ (೧೮೭೨–೪೭೭) ಕೇವಲವಾದ ಸಾಮ್ಯವೇ ಇದೆ.

ಹೀಗೆಯೇ ಚೌಪದಗಳ ಒಗಟುಗಳಿಗೆ ಜನಪದ ಸಾಹಿತ್ಯದ ರಚನೆಗಳೊಂದಿಗೆ ಮಾತ್ರ ಸಾದೃಶ್ಯ ತೋರುವ ರಚನೆಗಳೂ ಉಂಟು. ಉದಾಹರಣೆಗೆ :

'ರಾಗಿ' ಕುರಿತ ಒಗಟು :

ಹುಟ್ಟುತಲೆ ಹಸುರುಂಟು ಪಚ್ಚೆ ತಾನಲ್ಲ । ಬೆಳೆಯುತಲೆ ಕೆಂಪುಂಟು ರತ್ನ ತಾನಲ್ಲ ।
ಕಟ್ಟೆ ಕಡೆಯಲಿ ಕಪ್ಪು ಕಸ್ತೂರಿ ಅಲ್ಲ । ಸೃಷ್ಟಿಸಿದ ಗೋಪಾಲಕೃಷ್ಣ ತಾ ಬಲ್ಲ ॥ (೫)

ಹುಟ್ಟುತ್ತಲೆ ಹಸರುಂಟು । ಪಚ್ಚೆ ತಾನಲ್ಲ ।
ಬೆಳೆಯುತ್ತಲೆ ಕೆಂಪುಂಟು । ನವರತ್ನ ವಲ್ಲ ।
ಕಡೆಕಡೆಗೆ ಕಪ್ಪುಂಟು । ಕಸ್ತೂರಿ ಅಲ್ಲ ।
ಇದ ಹೇಳಬಲ್ಲ ಜಾಣರಿಗೆ । ಅರಿಯದೆ ಇಲ್ಲ ॥ (೪೯೯)

ಚೌಪದದ ರಚನೆಗೆ ಪ್ರತ್ಯಂತರದಲ್ಲಿ (೧೮೦೪/೪) ಪಾಠಭೇದವಿದೆ. "ರತ್ನ ತಾನಲ್ಲ" ಮುದ್ರಿತ ಪುಸ್ತಕದ ಪಾಠವಾದರೆ, ಉಕ್ತ ಹಸ್ತಪ್ರತಿಯ ಪಾಠದಲ್ಲಿ "ಮಾಣಿಕ್ಯವಲ್ಲ" ಎಂದಿದೆ; ಜನಪದ ಸಾಹಿತ್ಯದ ಲಕ್ಷ್ಯದಲ್ಲಿ 'ನವರತ್ನವಲ್ಲ" ಎಂದಿದೆ. ಒಗಟು ಹೇಗೆ ಬೆಳೆಯುತ್ತ ಹೋಗುತ್ತದೆ ಎನ್ನುವುದನ್ನು ಇಂತಹ ಉದಾಹರಣೆಗಳಿಂದ ತಿಳಿಯಬಹುದಾಗಿದೆ.

ಒಂದು ಇನ್ನೊಂದನ್ನು ಅನುಕರಿಸುವಾಗ ಅಧಿಕವಾದ ವ್ಯತ್ಯಾಸಗಳಿಗೂ ಎಡೆಯಾಗಬಹುದು ಎನ್ನುವುದಕ್ಕೆ ಒಂದೆರಡು ನಿದರ್ಶನಗಳನ್ನು ಕೊಡಬಹುದು :

ಬೆಳ್ಗೊಡೆ ಕುರಿತ ಒಂದು ಒಗಟು ಚೌಪದದಲ್ಲಿ ಹೀಗಿದೆ :

ಮೊಗ್ಗಾಗಿ ಅರಳುವುದು ಪೂಜಾತಿಯಲ್ಲ । ಅಗ್ರದೊಳು ಕೊಂಬುಂಟು ಮೃಗಜಾತಿಯಲ್ಲ ।
ದುರ್ಗಾಧಿಪತಿಗಳಿಗೆ ತಾನಿಲ್ಲದಿಲ್ಲ । ಇದು ಹೇಳಬಲ್ಲ ಜಾಣರಿಗೆ ಅರಿದಿಲ್ಲ ॥ (೧೧)

ಪ್ರತ್ಯಂತರದಲ್ಲಿ (ಕೆ. ೧೮೦೪/೪) ಹೀಗಿದೆ :

ಮೊಗ್ಗಾಗಿ ಅರಳುವುದು ಪುಷ್ಪ ತಾನಲ್ಲ । ಉಗ್ಗಡಿಸಿ ನೋಡಿದರೆ ಪರಿಮಳವು ಇಲ್ಲ ।
ದುರ್ಗಾಧಿಪತಿಯ ಮುಂಡೆಯೊಳಿಲ್ಲದಿಲ್ಲ । ಇದು ಹೇಳಬಲ್ಲ ಜಾಣರಿಗೆ ಅರಿದಲ್ಲ ॥ (೧೬)

ಇದೇ ಒಗಟು ಜನಪದ ಸಾಹಿತ್ಯದಲ್ಲಿ ಕಂಡುಬರುವ ರೂಪವಿದು :

ಮೊಗ್ಗಾಗಿ ಅರಳುವುದು । ಪುಷ್ಪ ತಾನಲ್ಲ ।
ಸೂರ್ಯಕಿರಣಕ್ಕೂ ಅದು । ಬಾಡುವುದಿಲ್ಲ ।
ಹಿಗ್ಗಲಿಸಿ ನೋಡಿದರೆ । ಪರಿಮಳವೂ ಇಲ್ಲ ।
ದುರ್ಗಾಧಿಪತಿಗಳಿಗೆ । ಬೇಕಾದುದೂ ಅಲ್ಲ ।
ಅದ ಹೇಳಬಲ್ಲ ಜಾಣರಿಗೆ । ಅರಿಯದದೂ ಅಲ್ಲ ॥ (೪೦೩)

ಚೌಪದದ ಭಿನ್ನಪಾಠಗಳಲ್ಲಿಯ ವ್ಯತ್ಯಾಸ ಗಮನಾರ್ಹವಾದ್ದು ನಿಜ; ಆದರೆ ಒಗಟಿನ ಉತ್ತರ 'ಬೆಳ್ಗೊಡೆ' ಎನ್ನುವುದರಲ್ಲಿ ಅವುಗಳ ನಡುವೆ ಭಿನ್ನಾಭಿಪ್ರಾಯವಿಲ್ಲ. ಇದಕ್ಕೆ ಪ್ರತಿಯಾಗಿ ಜನಪದ ಸಾಹಿತ್ಯ ರಚನೆಯಲ್ಲಿ, ಪಾಠವ್ಯತ್ಯಾಸ ಅರ್ಥವೈಪರೀತ್ಯಗಳೆರಡೂ ಉಂಟು. ಜನಪದ ಸಾಹಿತ್ಯದ ರಚನೆ 'ಬೆಳ್ಗೊಡೆ' ಎಂಬುದನ್ನು ಬೀಳ್ಕೊಟ್ಟು, 'ಛತ್ರಿ' ಎಂಬಷ್ಟನ್ನೇ ಉತ್ತರವಾಗಿಟ್ಟುಕೊಳ್ಳಲು "ದುರ್ಗಾಧಿಪತಿಗಳಿಗೆ ಬೇಕಾದುದೂ ಅಲ್ಲ" ಎಂದು ಮೂಲದ ಧಾಟಿಯನ್ನೇ ಬದಲಿಸಿಕೊಂಡಿದೆ.

ಈಗ ಇನ್ನೊಂದು ಉದಾಹರಣೆಯನ್ನೆತ್ತಿಕೊಳ್ಳೋಣ. ಈ ಉದಾಹರಣೆ ಚೌಪದದಲ್ಲಿ 'ತಂಬೂರಿ' ಅರ್ಥದ ಒಗಟನ್ನು ಕುರಿತದ್ದು :

ಬಾಯಗಲವಾಗಿ ಐಬೆರಳ ನುಂಗುವಳು
ಬೀಯ ಮಾಱುವನು ಹೆಗಲೇಱಿ ಬರುತಿಹಳು
ಬಾಯೆಂದು ಕರೆದರೇ ಓಯೆನ್ನುತಿಹಳು
ರಾಯರಾಣಿಯರ ಆಸ್ಥಾನದೊಳಗೊಪ್ಪುತಿಹಳು ॥ (೨೪)

ಜನಪದ ಸಾಹಿತ್ಯದಲ್ಲಿ ಇದು ಹೀಗೆ ಬಂದಿದೆ :

ಬಾಯಿ ಅಗಲವಾಗಿ । ಮೂಬೆರಳು ನುಂಗುವುದು ।
ಬೀಯ ಮಾರುವವನ । ಹೆಗಲೇರಿ ಬರುವುದು ।
ಬಾ ಬಾ ಎಂದು ಕೂಗಿದರೆ । ಬಾಗಿಲಿಗೆ ಬರುವುದು ।
ರಾಯ ರಾಣಿಯರ ಹಸ್ತಕ್ಕೆ । ಇಕ್ಕೆ ಒಪ್ಪುವುದು । (೩೪೬)

ಈ ಉದಾಹರಣೆಯ ಅರ್ಥ ತಂಬೂರಿಯೆಂದೇ ಆಗುವುದೇ ? ಪ್ರಾಯಶಃ ಆಗಲಾರದು. ಬಳೆ, ಬಳೆಗಾರ ಸೆಟ್ಟಿ, ಬಳೆ ಕಡಗ ಧರಿಸುವುದು ಇವನ್ನು ಕುರಿತುದಾಗಿರಬಹುದು. ಅಂತೂ ಬದಲಾವಣೆ ಇಲ್ಲಿ ಸ್ಫುಟವಾಗಿರುವಂತೆ ತೋರುವುದಿಲ್ಲ.

ಜನಪದ ಸಾಹಿತ್ಯದ ಒಗಟುಗಳಲ್ಲಿ ಗಣನಿಯಮ ಪ್ರಾಸನಿಯಮಗಳು ತೋರುವ ರಚನೆಗಳನ್ನು ವಿಂಗಡಿಸಿ ತೆಗೆದು ಅವನ್ನು ತ್ರಿಪದಿಯಂತೆಯೋ ಚೌಪದದಂತೆಯೋ ಪುನರ್ರಚಿಸುವುದು ಸಾಧ್ಯವಿದೆ. ಆಗ ಪದ್ಯಾತ್ಮಕ ಒಗಟುಗಳು ಗದ್ಯಾತ್ಮಕವಾದ ಒಗಟುಗಳಿಂದ ಬೇರ್ಪಟ್ಟು ನಿಲ್ಲುತ್ತವೆ. ಹೀಗೆ ಮಾಡಿದಾಗ ಆ ಒಗಟುಗಳ ಮೂಲವನ್ನು ಸಹ ಸರ್ವಜ್ಞನ ತ್ರಿಪದಿಗಳು ಮೊದಲಾದ ಕಡೆ ಗುರುತಿಸುವುದು ಸಾಧ್ಯವಾಗಬಹುದು. ಕೆಲವು ಸಂದರ್ಭಗಳಲ್ಲಿ ಜನಪದರಚನೆಗಳೇ ಶಿಷ್ಟಕವಿರಚನೆಗಳಾಗಿ ಮಾರ್ಪಟ್ಟಿರಲೂಬಹುದು.

ಚಿಕುಪಾಧ್ಯಾಯನ 'ಚಿತ್ರಶತಕ ಸಾಂಗತ್ಯ'ದಲ್ಲಿ

ಚಿಕುಪಾಧ್ಯಾಯನ (೧೬೭೨) 'ಚಿತ್ರಶತಕ ಸಾಂಗತ್ಯ'ದಲ್ಲಿ (ಕಅಸಂ. ಕೆಎ. ೪೦೬) ಕವಿಯ ಮಾತಿನಂತೆ ''ಒಗಟಿ ಚದುರ್ವಾತಿನ ಪದನೈವತ್ತು'' ಸೇರಿದೆ ಎಂದು ತಿಳಿಯುತ್ತದೆ. ಶತಕದ ಆರಂಭದ ೫೦ ಪದ್ಯಗಳು ಅಚ್ಚಕನ್ನಡ ಮಾತುಗಳಲ್ಲಿ ರಂಗನಾಥನ ಸ್ತುತಿಯನ್ನು ಕುರಿತಿವೆ. ಇಲ್ಲಿ ಇಂಗಳಗಣ್ಣ (ಈಶ್ವರ), ಇಂಗಡಲಣುಗಿಯಾಣ್ಮ (ವಿಷ್ಣು), ಕಾರೊಡಲ (ವಿಷ್ಣು), ನೆಗಳ್ದೀರ (ವರುಣ), ಬೆಂಗದಿರ (ಸೂರ್ಯ) ಎಂದು ಮುಂತಾಗಿ ಶಬ್ದಗಳನ್ನು ಕನ್ನಡವಾಗಿರುವಂತೆ ನೋಡಿಕೊಂಡಿದೆ, ಮಾಡಿಕೊಂಡಿದೆ. ಪದ್ಯ ೫೨ ರಿಂದ ಒಗಟಿಯಂತಹ ಪದ್ಯಗಳು ಬಂದಿವೆ. ಹಲವು ಪದ್ಯಗಳು ತ್ರುಟಿತವಾಗಿರುವುದರಿಂದ ಕವಿಯ ಕೌಶಲದ ಪೂರ್ಣ ಪರಿಚಯ ಸಾಧ್ಯವಾಗದೆ ಇದೆ.

ಪ್ರಸ್ತುತ ಲಭ್ಯವಿರುವಷ್ಟು ಪದ್ಯಗಳನ್ನು ನೋಡಿದರೆ, ಕವಿ ಕನ್ನಡ ನಾಮವಾಚಕ ಕ್ರಿಯಾವಾಚಕಗಳಲ್ಲಿ ಒಂದಕ್ಕಿಂತ ಹೆಚ್ಚಿನ ಅರ್ಥಗಳು ಹೊರಡಬಹುದಾದುವನ್ನು ಆಯ್ದುಕೊಂಡು, ನಾಮವಾಚಕಗಳಾಗಿದ್ದಾಗ ಕ್ರಿಯಾವಾಚಕಗಳನ್ನಾಗಿಯೂ ಕ್ರಿಯಾವಾಚಕಗಳಾಗಿದ್ದಾಗ ನಾಮವಾಚಕಗಳನ್ನಾಗಿಯೂ ಅವುಗಳ ಭಿನ್ನಾರ್ಥಗಳನ್ನು ಗ್ರಹಿಸಿ ಚಮತ್ಕಾರ ಹುಟ್ಟುವಂತೆ ಬರೆದಿರುವ ಚದುರುಮಾತಿನ ಚಾಟುಪದ್ಯಗಳು ಇವು. ಇವುಗಳಲ್ಲಿ ಶ್ಲೇಷೆ ವಿರೋಧಾಭಾಸಗಳ ಸುಳಿವನ್ನು ಕಾಣಬಹುದು. ಕವಿಚರಿತೆಕಾರರು ಕನ್ನಡ ಭಾಷೆಯ ವಿಷಯವಾದ 'ಕೆಲವು ಚಮತ್ಕಾರೋಕ್ತಿ'ಗಳೆಂದು ಇವನ್ನು ಗುರುತಿಸಿದ್ದಾರೆ.

ಕೆಲವು ಉದಾಹರಣೆಗಳು :

ಬನ್ನಿಯೆಂಬುದು ಮರನಲ್ಲ ಬಸುರಿಯೆಂಬು । ದುಂ ನೋಡೆ ಪಾದಪವಲ್ಲ ।
ಚೆನ್ನೆ ನೀಯೆಂಬುದು ಭೂರುಹವಲ್ಲ । ಕನ್ನಡ ಬೆಡಗಲ್ತೆ ರಂಗಾ ॥ (ಪ. ೭೪)

ಬನ್ನಿಯ ಮರವನ್ನು ಮರವಲ್ಲ ಎಂದು ಹೇಳುವಾಗ ಕವಿ ಏನೋ ಚಮತ್ಕಾರವಿಟ್ಟಿದ್ದಾನೆ ಎಂದು ನಮಗೆ ತೋರುತ್ತದೆ. ಅದು ಕೂಡಲೇ ಏನೆಂದು ಹೊಳೆಯದೆ ನಾವು ಪೇಚಾಡಲೂಬಹುದು. ಆಗ 'ಬನ್ನಿ' ಬರ್ ಧಾತುವಿನ ಮಧ್ಯಮಪುರುಷ ವಿಧ್ಯರ್ಥದ ಬಹುವಚನರೂಪವೆಂದು ಹೊಳೆದರೆ ವಿರೋಧದ ಆಭಾಸ ತೊಲಗಿ, ಶ್ಲೇಷೆಯ ಚಮತ್ಕಾರ ಆಸ್ವಾದ್ಯವಾಗುತ್ತದೆ. ಹೀಗೆಯೇ ಇತರ ಶಬ್ದಗಳಲ್ಲಿಯೂ 'ಬಸುರಿ' ಮರವಲ್ಲ, ಗರ್ಭಿಣಿ ಎಂದೂ 'ಚೆನ್ನೆ' ಚೆನ್ನಂಗಿ ಮರವಲ್ಲ, ಸುಂದರಿ ಎಂಬ ಸಂಬೋಧನೆ ಎಂದೂ ತಿಳಿದಾಗ ಸಂತೋಷವಾಗುತ್ತದೆ.

ತಾಳೆಂಬುದು ಗಿಡುಮೂಲಮದಲ್ಲದು । ಬಾಳೆಂಬುದು ಕತ್ತಿಯಲ್ಲ ।
ಆಳೆಂಬುದು ಜಗದೊಳಗಲ್ಲವೀ ನುಡಿ । ಕೇಳಕೇಳಲು ಚಿತ್ರ ರಂಗಾ ॥ (೭೫)

ಇಲ್ಲಿ ತಾಳ್, ಬಾಳ್, ಆಳ್ ಎಂಬುದರ ಅರ್ಥಗಳನ್ನು ಧರಿಸು, ಜೀವಿಸು, ಮನುಷ್ಯ ಎಂಬುದಾಗಿ ಗ್ರಹಿಸಬೇಕೆಂಬುದು ಕವಿಯ ಆಶಯ.

ಒಡಲಿಂಗೆಯುಸುರುಂಟೆ ಮಡಿಲಿಂಗೆ ಹಡಹುಂಟೆ । ಎಡರಿಂಗೆ ಏಳಿಗೆಯುಂಟೆ।
ಸೊಡರಿಂಗೆ ಬೆಳಕುಂಟೆ ಸೋಜಿಗವೀ ನುಡಿ । ನುಡಿಗಲ್ತವರಿಗೆ ರಂಗೇಶಾ ॥ (೭೮)

ಒಡಲು–ಉಸಿರು, ಮಡಿಲು–ಹಡಹು, ಎಡರು–ಏಳಿಗೆ, ಸೊಡರು–ಬೆಳಕು ಇವು ಸಂಬಂಧವುಳ್ಳವೇ. ಆದರೂ ಕವಿ ' ಇಲ್ಲ ' ಎಂದು ಅಭಿಪ್ರಾಯವಾಗುವಂತೆ ' ಉಂಟೇ ? ' ಎಂದು ಪ್ರಶ್ನಿಸಿದ್ದಾನೆ. ನಿಜ ; ಸಂಬಂಧವುಳ್ಳವಾದರೂ ಒಂದರಲ್ಲಿರುವ ವರ್ಣಗಳು ಇನ್ನೊಂದರಲ್ಲಿಲ್ಲ ಎಂಬುದು ಇಲ್ಲಿಯ ಆಶಯವಿರಬಹುದು.

ಅಂಚೆ ಹಂಸೆಯದಲ್ಲ ಮಿಂಚು ತಟಿತ್ತಲ್ಲ। ಹಂಚೆಂಬುದೋಡು ತಾನಲ್ಲ।
ಹಂಚಿಯೆಂಬುದು ಹುಲ್ಲಲ್ಲ ರಂಗೇಶ್ವರ । ಮಿಂಚಲ್ತೆ ಕನ್ನಡಮಾತು ॥ (೮೧)

ಇಲ್ಲಿ ಅಂಚೆ, ಮಿಂಚು, ಹಂಚು, ಹಂಚಿ ಶಬ್ದಗಳಿಗೆ ಅಲ್ಲಿ ಹೇಳಿರುವ ಹಂಸೆ, ತಟಿತ್ತು, ಓಡು ಮತ್ತು ಹುಲ್ಲು ಎಂಬ ಅರ್ಥಗಳು ಸಾಧ್ಯ. ಆದರೆ ಕವಿ ಆ ಶಬ್ದಗಳಿಗೆ ವಸ್ತ್ರ, ಪ್ರಕಾಶಿಸು (ಕ್ರಿ), ವಿತರಣೆ ಮಾಡು (ಕ್ರಿ), ವಿತರಣೆ ಮಾಡಿ (ಮ.ಪು. ವಿಧ್ಯರ್ಥಕ ಬ.ವ. ರೂಪ) ಎಂಬುದಾಗಿ ಅರ್ಥಗಳನ್ನು ಭಾವಿಸಬೇಕೆಂದು ಉದ್ದೇಶಿಸಿದ್ದಾನೆ.

ಸರಸನನರಸನೆಂಬುದು ಪೂರ್ಣಗೃಹವನು । ಅರಮನೆಯೆಂದುಸುರುವುದು ।
ನರಪಕುಮಾರನನರಮಗನೆಂಬುದೇ । ನೊರೆ ರಂಗ ಕನ್ನಡದೊಳ್ಪು ॥ (೯೦)

ಇಲ್ಲಿ ಕವಿ ಮೊದಲು ಸ + ರಸ, ಅ + ರಸ ಎಂದೂ, ಪೂರ್ಣಗೃಹ, ಅರ (= ಅರ್ಧ) ಗೃಹ ಎಂದೂ, ನರಪ ನರ (ಪಕಾರ ಲೋಪ) ಎಂದೂ ವಿರೋಧ ತೋರುವಂತೆ ಮಾಡುತ್ತಾನೆ. ಬಳಿಕ ಅರಸ=ದೊರೆ, ಅರಮನೆ=ರಾಜಗೃಹ, ಅರಮಗ=ರಾಜಪುತ್ರ ಎಂದೂ ಗ್ರಹಿಸಿದಾಗ ಆ ವಿರೋಧ ತೊಲಗುವಂತೆ ಮಾಡುತ್ತಾನೆ.

ಈ ಬಗೆಯ ಪದ್ಯಗಳಲ್ಲಿ, ಒಂದು ಬಗೆಯ ಚಮತ್ಕಾರ, ರಂಜನೆ ಇರುವುದು ನಿಜ. ಆದರಿಂದಲೇ ಕವಿ ' ಕನ್ನಡ ಬೆಡಗಲ್ತೇ ರಂಗಾ ', ' ಕೇಳಲು ಚಿತ್ರ ರಂಗಾ ', ' ಸೋಜಿಗವೀ ನುಡಿ ', ' ಒಳ್ಳಿತೀ ಗುಟ್ಟುಲಿ ರಂಗಾ ' ಎಂಬಂತಹ ಮಾತುಗಳಿಂದ ಆಗಾಗ ನಮ್ಮ ಮನಸ್ಸಿಗೆ ಆ ನುಡಿಬೆಡಗು ನಾಟುವಂತೆ ಮಾಡಿದ್ದಾನೆ. ಇವನ್ನೂ ಒಗಟುಗಳೆಂದು ಆತ ಭಾವಿಸಿದ್ದಾನೆ.

ಕೃಷ್ಣಕವಿಯ ' ಸರಜಾಹನುಮೇಂದ್ರಯಶೋವಿಲಾಸ 'ದಲ್ಲಿ :

ಇಲ್ಲಿ ಕವಿ ಬೇರೊಂದು ರೀತಿ ಬೆಡಗಿನ ನುಡಿಯನ್ನು ಈ ಕೆಳಕಂಡ ಪದ್ಯದಲ್ಲಿ ತಂದಿರುವುದನ್ನು ಕಾಣಬಹುದು :

ಕರಿ ಹರಿ ಸರ್ಪ ಬರ್ಹಿಯಉ ತುಂಬಿ ಚಂಪಕ । ಸರಸದಿ ವೈರವನುಳಿದು ।
ನಿರುತದಿ ನೆಲಸಿತು ನಿನ್ನ ದೇಹದೊಳೆಂದು । ತರಳೆಯ ನುಡಿಸಿದನೊರ್ವಂ ॥ (೮–೩೭)

ಮೇಲುನೋಟಕ್ಕೇ, ಸ್ವಾಭಾವಿಕವೈರದ ಪ್ರಾಣಿಗಳು ಎಂಬ ನಾತಿರಲಿ, ಪ್ರಾಣಿಗಳು ವ್ಯಕ್ತಿಯ ದೇಹದಲ್ಲಿ ನೆಲಸುವುದು ಹೇಗೆ ಎಂಬ ಪ್ರಶ್ನೆಯೇ ಗೊಂದಲ ಹುಟ್ಟಿಸುತ್ತದೆ. ಆದರೆ ಸುಂದರಿಯಾದವಳು ಕರಿಕುಂಭಕುಚೆ, ಸಿಂಹಕಟಿ, ನಾಗವೇಣಿ, ಅಳಿಕುಂತಳೆ, ಚಂಪಕನಾಸಿಕೆ ಎಂಬ ಸ್ವಾರಸ್ಯವಾದ ಅಲಂಕಾರೋಕ್ತಿಗಳು ಹೊಳೆದಾಗ ಆ ಪ್ರಶ್ನೆ ಇಲ್ಲವಾಗುತ್ತದೆ.

ಪ್ರಶ್ನೆಗಳು

ಪ್ರಹೇಳಿಕೆಯ ಒಂದು ದೊಡ್ಡ ಪ್ರಕಾರ 'ಪ್ರಶ್ನೆ'ಗಳು. ಇದು ಪ್ರಮುಖವಾಗಿ ಏಕಪೃಷ್ಟ ಪ್ರಶ್ನೋತ್ತರ (ಒಬ್ಬ ಕೇಳಿದ ಪ್ರಶ್ನೆಗಳಿಗೆ ಉತ್ತರ ಹೇಳುವುದು) ಮತ್ತು ದ್ವಿಪೃಷ್ಟ ಪ್ರಶ್ನೋತ್ತರ (ಇಬ್ಬರು ಪರಸ್ಪರವಾಗಿ ಪ್ರಶ್ನಿಸುವುದು ಹಾಗೂ ಉತ್ತರಿಸುವುದು) ಎಂಬುದಾಗಿ ಎರಡು ವಿಧ. ಈ ಎರಡನೆಯದನ್ನು ಯುಗಪತ್ ಪ್ರಶ್ನೋತ್ತರ ಅಥವಾ ಉಕ್ತಿ ಪ್ರತ್ಯುಕ್ತಿ ಎಂದೂ ಹೇಳುವುದುಂಟು. ಮೊದಲನೆಯದರಲ್ಲಿ ಅಂತಃಪ್ರಶ್ನ ಅಥವಾ ಅಂತರಾಲಾಪ, ಬಹಿಃಪ್ರಶ್ನ ಅಥವಾ ಬಹಿರಾಲಾಪ ಎಂದು ಮುಂತಾಗಿ ಆರು ವಿಧಗಳುಂಟು. ಎರಡರಲ್ಲಿಯೂ ಕೆಲವು ಛಾಯಾಭೇದಗಳುಂಟು. ಮೊದಲನೆಯದರಲ್ಲಿ ೨ ಅಂತಹ ಭೇದಗಳಿವೆ. ಒಂದು, ಪದ್ಯದ ಮೊದಲ ಮೂರು ಪಾದಗಳಲ್ಲಿಯ ಪ್ರಶ್ನೆಗಳಿಗೆ ಉತ್ತರಗಳು, ಕೊನೆಯ ಎಂದರೆ ೪ ನೆಯ ಪಾದದಲ್ಲಿರುತ್ತವೆ. ಎರಡು, ಪ್ರಶ್ನೆಗಳು ಎಲ್ಲ ಪಾದಗಳಲ್ಲಿಯೂ ಇರಬೇಕೆಂದೇನೂ ಇಲ್ಲ; ಪ್ರಶ್ನೆಗಳು ಏನೇ ಇರಲಿ, ಉತ್ತರ ೪ ನೆಯ ಪಾದದಲ್ಲಿರುವ ಕ್ರಮಾಗತ ಪದಗಳನ್ನು ಆರಿಸಿಕೊಂಡು ಹೊಂದಿಸುವುದರಲ್ಲಿರುತ್ತದೆ. ಈ ಉತ್ತರ ಮೇಲು ನೋಟಕ್ಕೆ ಆಭಾಸಕರವಾದೊಂದು ಆಶಯದಂತೆ ತೋರಲೂಬಹುದು. ಎರಡನೆಯದರಲ್ಲಿಯೂ ಹೀಗೆಯೇ ೨ ಛಾಯೆಗಳು. ಪ್ರಶ್ನೆಗೆ ಒಂದು ಅಖಂಡಪದ ಉತ್ತರ ಹೇಳುವುದು ಮತ್ತು ಒಂದೇ ಶಬ್ದದಿಂದ ಅಕ್ಷರವನ್ನೆತ್ತಿ ಹೊಂದಿಸಿಕೊಳ್ಳುವುದು. ಭೋಜನು ಮೊದಲನೆಯ ಮುಖ್ಯಭೇದದಲ್ಲಿ ಹೆಚ್ಚು ಛಾಯೆಗಳನ್ನು ಹೇಳಿದ್ದಾನೆ. ದ್ವಿಪೃಷ್ಟ ಪ್ರಶ್ನೋತ್ತರದಲ್ಲಿ ಅಂತಹ ವಿಶೇಷಗಳೇನೂ ತೋರುವುದಿಲ್ಲ. ಅನ್ಯೋಕ್ತಿ ವಕ್ರೋಕ್ತಿ ಶ್ಲೇಷೆಗಳ ಮೂಲಕವಾಗಿ ಈ ಉಕ್ತಿ ಪ್ರತ್ಯುಕ್ತಿ ಚಮತ್ಕಾರಗಳು ನಡೆಯುತ್ತವೆ.

ಪ್ರಶ್ನೆಗಳು ಪ್ರಹೇಳಿಕೆಯ ಒಂದು ಗಣ್ಯವಾದ ಭಾಗವಾಗಿರುವುದಲ್ಲದೆ, ಬಹುಸ್ವಾರಸ್ಯವಾದ ಭಾಗವೂ ಆಗಿದೆ. ಒಬ್ಬನ ಬುದ್ಧಿಶಕ್ತಿಯನ್ನು ಕೆದಕಿ ನೋಡುವ ತಂತ್ರ ಇದರಲ್ಲಿ ಹೆಚ್ಚು; ಇದು ನೇರವಾದ ಆಹ್ವಾನವೂ ಹೌದು. ರುದ್ರಟ, ಭೋಜ, ಧರ್ಮದಾಸ, ಅಜಿತಸೇನ ಈ ಲಾಕ್ಷಣಿಕರೆಲ್ಲ ಪ್ರಶ್ನಗಳ ವಿಭಾಗಕ್ಕೆ ಸಾಕಷ್ಟು ಗಮನ ಕೊಟ್ಟಿದ್ದಾರೆ. ಇಲ್ಲಿ ಪ್ರಾತಿನಿಧಿಕವಾಗಿ ಭೋಜನ 'ಸರಸ್ವತೀ ಕಂಠಾಭರಣ'ದಲ್ಲಿ ಹೇಳಿರುವುದನ್ನು ಗಮನಿಸಿದರೆ ಸಾಕಾಗುತ್ತದೆ. ಭೋಜದೇವನು (೧೦೦೫–೫೪) ತನ್ನ 'ಸರಸ್ವತೀ ಕಂಠಾಭರಣ'ದಲ್ಲಿ, ಎರಡನೆಯ ಪರಿಚ್ಛೇದದಲ್ಲಿ ಇದರ ಸ್ವರೂಪವನ್ನು 'ಗೂಢ'ಗಳನ್ನು ವಿವರಿಸಿದ ಬಳಿಕ ಹೇಳಿದ್ದಾನೆ (೧೩೬–೧೩೭). ಆ ಸೂತ್ರಗಳು :

ಯಸ್ತು ಪರ್ಯನುಯೋಗಸ್ಯ ನಿರ್ಭೇದಃ ಕ್ರಿಯತೇ ಪದೈಃ ।
ವಿದಗ್ಧಗೋಷ್ಠ್ಯಾಂ ವಾಕ್ಯೈರ್ವಾ ತಂ ಹಿ ಪ್ರಶ್ನೋತ್ತರಂ ವಿದುಃ ॥ (ಪ. ೧೩೬)

ವಿದ್ವಾಂಸರ ಗೋಷ್ಠಿಗಳಲ್ಲಿ ಬರುವ ಪ್ರಶ್ನಗಳ ರಹಸ್ಯವನ್ನು ಪದಗಳ ಮೂಲಕವಾಗಿಯೋ ವಾಕ್ಯಗಳ ಮೂಲಕವಾಗಿಯೋ ಸ್ಪಷ್ಟಪಡಿಸುವುದು 'ಪ್ರಶ್ನೋತ್ತರ' ಎಂದು ಹೇಳಲ್ಪಡುವುದು.

ಅಂತಃಪ್ರಶ್ನ ಬಹಿಃಪ್ರಶ್ನ ಬಹಿರಂತಃಸಮಾಹ್ವಯೈಃ ।
ಜಾತಿಪೃಷ್ಟೋತ್ತರಾಭಿಖ್ಯೈಃ ಪ್ರಶ್ನೈಸ್ತದಪಿ ಷಡ್ವಿಧಂ ॥
(ಪ. ೧೩೭)

ಪ್ರಶ್ನವಾಕ್ಯಗಳಲ್ಲಿರುವ ಪದಗಳಿಂದ ಪ್ರಶ್ನೆಗೆ ಬೇಕಾದ ಗೂಢವಾದ ಉತ್ತರ ಹೊರಪಟ್ಟರೆ ಅದು 'ಪ್ರಶ್ನೋತ್ತರ' ಗೂಢವೆನಿಸುವುದು. ಇದು ಅಂತಃ, ಬಹಿಃ, ಬಹಿರಂತಃ, ಜಾತಿ, ಪೃಷ್ಟ ಮತ್ತು ಉತ್ತರ ಎಂಬುದಾಗಿ ೬ ವಿಧ.

ಅಂತಃಪ್ರಶ್ನ

ಕಾಹಮಸ್ಮಿ ಗುಹಾ ವಕ್ತಿ ಪ್ರಶ್ನೇಽಮುಷ್ಮಿನ್ನಿಮುತ್ತರಂ।
ಕಥಮುಕ್ತಂ ನ ಜಾನಾಸಿ ಕದರ್ಥಯಸಿ ಯತ್ಸಖೇ ॥ (ಪ. ೩೭೨)

ಇಲ್ಲಿ 'ಕದರ್ಥಯಸಿ' ಎಂಬ ಪದದಲ್ಲಿಯ ಕಕಾರ, ಥಕಾರಗಳನ್ನು ತೆಗೆದಲ್ಲಿ, ಉಳಿದ ಪದಾಂಶ 'ದರ್ಯಸಿ' (ದರೀ+ಅಸಿ) ಎಂಬುದೇ ಉತ್ತರವಾಗುವುದು. 'ಕದರ್ಥಯಸಿ' ಎಂಬ ಪ್ರಶ್ನೆಯೊಳಗೇ 'ದರ್ಯಸಿ' ಎಂಬ ಉತ್ತರ ಅಡಗಿರುವ ಕಾರಣ, ಇದು 'ಅಂತಃಪ್ರಶ್ನ' (ಇದೇ ಅಂತರಾಲಾಪ).

ಗುಹೆ ಮಾಡುವ ಪ್ರಶ್ನವಾಕ್ಯ 'ಕಾಹಮಸ್ಮಿ' (=ನಾನು ಯಾರು ?). ಅದಕ್ಕೆ ''ಅಲ್ಲಿಯೇ ಉತ್ತರ ಇದೆ. ನಾನು ಆಗಲೇ ಹೇಳಿದೆನಲ್ಲವೇ'' ಎನ್ನುವ ಅರ್ಥದ ''ಕಥಮುಕ್ತಂ ನ ಜಾನಾಸಿ'' ಎನ್ನುವ ವಾಕ್ಯಾಂಶ ವನ್ನು ಗ್ರಹಿಸಬೇಕು. ಇದಕ್ಕೆ ''ಕದರ್ಥಯತಿ'' ಎನ್ನುವ ವಾಕ್ಯಾಂಶದ (ಕಕಾರ ಥಕಾರಗಳಿಂದ ಮುಕ್ತವಾದ್ದು) ಅರ್ಥಾಂತರವನ್ನು ಹೊಂದಿಸಿದರೆ 'ದರ್ಯಸಿ' (=ನೀನು ಒಂದು ಗುಹೆ) ಎನ್ನುವ ಉತ್ತರ ಸಿದ್ಧವಾಗುತ್ತದೆ.

ಬಹಿಃಪ್ರಶ್ನ

ಭದ್ರ ಮಾಣವಕಾಖ್ಯಾಹಿ ಕೀದೃಶಃ ಖಲು ತೇ ಪಿತಾ।
ವೇಲಾಂದೋಲಿತಕಲ್ಲೋಲಃ ಕೀದೃಶಶ್ಚ ಮಹೋದಧಿಃ ॥ (ಪ. ೩೭೩)

ಎರಡು ಮಾದರಿಯ ಪ್ರಶ್ನೆಗಳಿದ್ದು, ಎರಡಕ್ಕೂ ಒಂದೇ ಉತ್ತರವಿರುತ್ತದೆ. ಆ ಉತ್ತರಪ್ರಶ್ನ ವಾಕ್ಯದಿಂದ ಹೊರಗಿದ್ದು, ಅದು ಉತ್ತರವಾಗುವ ಒಂದು ಪದವನ್ನು ವಿಭಜಿಸುವುದರಿಂದ ಸಿದ್ಧವಾಗುತ್ತದೆ. ಇದು 'ಬಹಿಃಪ್ರಶ್ನ' (ಇದೇ ಬಹಿರಾಲಾಪ).

ಮೊದಲ ಪ್ರಶ್ನೆ: ನಿನ್ನ ತಂದೆ ಎಂತಹವನು ಎಂದು. ಎರಡನೆಯ ಪ್ರಶ್ನೆ: ಸಮುದ್ರ ಎಂತಹದು ಎಂದು. ಎರಡಕ್ಕೂ ಒಂದೇ ಉತ್ತರ: 'ಮಜ್ಜನ್ಮಕರಃ'. ಮೊದಲ ಪ್ರಶ್ನೆಗೆ ''ಮತ್+ಜನ್ಮಕರಃ'' ಎಂದೂ ಎರಡನೆಯ ಪ್ರಶ್ನೆಗೆ ''ಮಜ್ಜತ್+ಮಕರಃ'' ಎಂದೂ ವಿಭಜಿಸುವುದರಿಂದ ಅದು ಸಾಧ್ಯವಾಗುತ್ತದೆ.

ಬಹಿರಂತಃಪ್ರಶ್ನ

ಸುಭದ್ರಾಂ ಕ ಉಪಾಯಂಸ್ತ ಪ್ರಶ್ನೇಽಮುಷ್ಮಿನ್ನ ಉತ್ತರಃ।
ಸ ಕೀದೃಕ್ಕಪಿಮಾಚಷ್ಟೇ ವ್ಯೋಮನ್ನಿ ಪರ್ಣಸ್ಥಿತಿಃ ಕುತಃ ॥ (ಪ. ೩೭೪)

ಪ್ರಶ್ನವಾಕ್ಯಕ್ಕೆ ಬೇಕಾದ ಉತ್ತರವು ಪ್ರಶ್ನವಾಕ್ಯಕ್ಕಿಂತ ಹೊರಗಡೆ ಇದ್ದು, ಆ ಉತ್ತರ ಪ್ರಶ್ನವಾಕ್ಯ ದೊಳಗಿನ ಅರ್ಥದೊಂದಿಗೆ ಅನ್ವಿತವಾಗುವಂತೆಯೂ ಇದ್ದು ಅರ್ಥಪೂರ್ಣತೆಯಾದರೆ ಅದು 'ಬಹಿರಂತಃಪ್ರಶ್ನ'. (ಇದೇ ಬಹಿರಂತರಾಲಾಪ).

ಸುಭದ್ರೆಯನ್ನು ಯಾರು ವಿವಾಹವಾದನು ? ಇದು ಪ್ರಶ್ನೆ. ಇದಕ್ಕೆ ಉತ್ತರ, ಗಗನವಿಹಾರಿಯಾದಂತಹ ಒಂದು ಕಪಿಯೊಂದಿಗೆ ಕೂಡಿದ ವ್ಯಕ್ತಿ ಎಂದಾಗಬೇಕು. ಎಂದರೆ ಸುಭದ್ರೆ ಮನುಷ್ಯಜಾತಿಗೆ ಸೇರಿದವಳಾದ್ದರಿಂದ ವಿವಾಹವಾಗುವವನೂ ಅದೇ ಜಾತಿಯ 'ನರ'ನೇ ಆಗಬೇಕು. ಆ 'ನರ' ಎನ್ನುವ ಪದಕ್ಕೆ 'ವಾ' ಎನ್ನುವ ಮಾತನ್ನು ಸೇರಿಸಿದಾಗ 'ವಾನರ' ಎಂದಾಗಿ ಧ್ವಜದಲ್ಲಿ 'ವಾನರ'ವನ್ನುಳ್ಳ (ವಾಯುತ+ನರ) 'ನರ' ಎಂದಾಗುತ್ತದೆ; ಎಂದರೆ 'ಅರ್ಜುನ' ಎಂದಾಗುತ್ತದೆ. ಇಲ್ಲಿ 'ವಾಯುತಃ' ಎನ್ನುವ ಉತ್ತರವು ಪ್ರಶ್ನವಾಕ್ಯದ ಹೊರಗಿದ್ದು, ''ಕೀದೃಕ್ ಕಪಿಂ'' ಎಂದು ಪ್ರಶ್ನವಾಕ್ಯದೊಳಗಿನ ಪ್ರಶ್ನೆಯಾಗಿರುವ ಕಾರಣ, ಇದು ಬಹಿರಂತಃ ಪ್ರಶ್ನರೂಪವಾದ್ದೆಂದು ತಿಳಿಯುವುದು.

ಜಾತಿಪ್ರಶ್ನ

ಕೀದೃಶಾ ಭೂಮಿಭಾಗೇನ ರಾಜಾ ಸ್ನಾತೋಽನುಮೀಯತೇ।
ಪ್ರಾಂಗಣಂ ಕುರುತೇತ್ಯುಕ್ತಾಃ ಕಿಮಾಹುಸ್ತದನಿಚ್ಛವಃ॥ (ಪ. ೩೭೫)

ಪ್ರಶ್ನವಾಕ್ಯಕ್ಕೆ ಒಂದು ಉತ್ತರವಿರುತ್ತದೆ. ಆ ಉತ್ತರದ ಆನುಪೂರ್ವಿಯನ್ನು ವಿಲೋಮವಾಗಿ ಯೋಜಿಸಿದರೆ ಮತ್ತೊಂದು ಪ್ರಶ್ನೆಗೆ ಅದು ಉತ್ತರವಾಗಿ ಪರಿಣಮಿಸುತ್ತದೆ. ಇದು 'ಜಾತಿಪ್ರಶ್ನ'.

ಯಾವ ಭೂಮಿಭಾಗವನ್ನು ನೋಡಿದರೆ ರಾಜನು ಸ್ನಾನಮಾಡಿದ್ದಾನೆಂದು ಗೊತ್ತಾಗುತ್ತದೆ? ಇದು ಪ್ರಶ್ನೆ. ಇದಕ್ಕೆ ಉತ್ತರ "ಹೈಮವಾರಕ ರಂಜಿನಾ", ಎಂದರೆ "ಸುವರ್ಣಮಯವಾದ ಬಣ್ಣವನ್ನುಳ್ಳ ನೀರು ಎಲ್ಲಿ ಚೆಲ್ಲಿರುತ್ತದೆಯೋ ಆ ಸ್ಥಳ" ಎಂದು. ಮತ್ತೊಂದು ಪ್ರಶ್ನೆಗೆ, ಅಂಗಣವನ್ನು ಸರಿಮಾಡಲು ನಿಯಮಿತರಾದ ಕೆಲಸಗಾರರು ಆ ಕೆಲಸವನ್ನು ಮಾಡಲು ಇಚ್ಛೆಯಿಲ್ಲದಿದ್ದಾಗ ಹೇಳಿದ ಉತ್ತರ ಮೇಲಣ ಉತ್ತರವಾಕ್ಯದ ವಿಲೋಮಗತಿಯಿಂದಲೇ ಸಿದ್ಧವಾಗುತ್ತದೆ. "ಹೈಮವಾರಕ ರಂಜಿನಾ" ಎಂಬುದರ ವಿಲೋಮಗತಿ "ನಾಜಿರಂ ಕರವಾಮಹೈ" ("=ನಾವು ಅಂಗಣವನ್ನು ಸರಿಮಾಡುವುದಿಲ್ಲ") ಎಂದಾಗಿ, ಅದು ಉತ್ತರವಾಗುತ್ತದೆ.

ಪೃಷ್ಟಪ್ರಶ್ನ

ಕೋ ಸೋ ಜೋಅಣವಾಓ ಕೋ ದಂಡಾಣಂ ದುವೇ ಸಹಸ್ಸಾಇಂ।
ಕಾ ಕಾಲೀ ಕಾ ಮಧುರಾ ಕಿಂ ಶುಕ ಪೃಥುಕಾನನಚ್ಛಾಯಾಂ॥ (ಪ. ೩೭೬)

ಪ್ರಶ್ನವಾಕ್ಯವು ಪ್ರಾಕೃತದಲ್ಲಿದ್ದು, ಉತ್ತರವು ಅದರ ಸಂಸ್ಕೃತ ರೂಪವಾಗಿರಬಹುದು; ಹಾಗೂ ಪ್ರಶ್ನ ವಾಕ್ಯದಲ್ಲಿ ಪ್ರಶ್ನವಾಚಕವಾದ ಸರ್ವನಾಮವನ್ನು ಪ್ರಶ್ನವಾಕ್ಯದೊಂದಿಗೇ ಯೋಜಿಸಿ ಪ್ರಕೃತಕ್ಕೆ ತಕ್ಕಂತೆ ಮತ್ತೊಂದು ರೀತಿಯ ಪದವಿಭಾಗವನ್ನು ಮಾಡುವಾಗ ಅದೇ ಉತ್ತರವಾಗುತ್ತದೆ. ಇದು 'ಪೃಷ್ಟಪ್ರಶ್ನ'.

"ಕೋ ಸೋ ಜೋಅಣವಾಓ" ಎನ್ನುವುದು ಪ್ರಾಕೃತ. ಇದರ ಸಂಸ್ಕೃತರೂಪ 'ಕಃ ಸಃ ಯೋಜನಪಾದಃ', ಕಾಲುದಾರಿ ಯಾವುದು ಎನ್ನುವುದು ಇಲ್ಲಿಯ ಪ್ರಶ್ನೆ. ಇದರ ಉತ್ತರ "ಕೋ ಸೋ" ಎನ್ನುವುದನ್ನು "ಕೋಸೋ" ಎಂದು ಕೂಡಿಸಿ, ಅದರ ಸಂಸ್ಕೃತರೂಪ "ಕ್ರೋಶಃ" ಎಂದಾಗಿ, "ಕ್ರೋಶಃ ಯೋಜನಪಾದಃ" ಎಂದರೆ "ಕಾಲುದಾರಿ ಕ್ರೋಶಪ್ರಮಾಣದ್ದಾಗಿದೆ" ಎಂಬ ಉತ್ತರ ಸಿದ್ಧವಾಗುತ್ತದೆ.

ಉತ್ತರಪ್ರಶ್ನ.

ಕಿಂ ವಸಂತಸಮಯೇ ವನಭಕ್ಷಃ ಪೃಷ್ಟವಾನ್ಸ ಪೃಥುಲೋಮವಿಲೇಖಃ।
ಉತ್ತರಂ ಚ ಕಿಮವಾಪತುರೇತತ್ ಕಾನನಾದತಿಮಿರಾದಪಿ ಕಾಲೀ॥ (ಪ. ೩೭೭)

ಇಲ್ಲಿ ಪ್ರಶ್ನವಾಕ್ಯದ ಉತ್ತರವೇನು ಎನ್ನುವ ಪ್ರಶ್ನವಾಕ್ಯದಲ್ಲಿಯೇ ಉತ್ತರವಿದೆ; ಆದ್ದರಿಂದ ಇದು 'ಉತ್ತರಪ್ರಶ್ನ'.

"ವಸಂತದಲ್ಲಿ ಮರಗಳಿಗೆ ಆಹಾರ ಯಾವುದು? ಎಂಬುದಾಗಿ ಬೆಸ್ತನು ಪ್ರಶ್ನಿಸಿದನು. ಇದಕ್ಕೆ (ಪದ್ಯದ ಮೊದಲ ಎರಡು ಪಾದಗಳಿಗೆ) ಉತ್ತರವೇನು? ಕಾಡಿಗಿಂತಲೂ, ಕತ್ತಲೆಗಿಂತಲೂ ಕಪ್ಪಾದ ಕೋಗಿಲೆಗಳ ಸಾಲು."

ಪ್ರಶ್ನದ ಕೆಲವು ಸಂಸ್ಕೃತ ಲಕ್ಷ್ಯಗಳು

ಜಿನಸೇನಾಚಾರ್ಯರ (ಸು. ೮೫೦) ಸಂಸ್ಕೃತ 'ಮಹಾಪುರಾಣ'ದ ೧೨ನೆಯ ಪರ್ವದಲ್ಲಿ ಕೆಲವು 'ಪ್ರಶ್ನ'ಗಳಿದ್ದು, ಇವುಗಳಲ್ಲಿ ವೈವಿಧ್ಯವಿದೆ. ಕೆಲವು ಅಕ್ಷರಚ್ಯುತಿಯ ವಿಭಾಗದ 'ಚ್ಯುತಾಕ್ಷರ'ದ ವೈಚಿತ್ರ್ಯಗಳಾದರೆ, ಇನ್ನು ಕೆಲವು 'ಸರಸ್ವತೀ ಕಂಠಾಭರಣ'ದಲ್ಲಿ ಲಕ್ಷಣಿಸಲ್ಪಟ್ಟ ಪ್ರಶ್ನಗಳ ಪರಿಧಿಯೊಳಗೆ ಬರುವಂತಹವಾಗಿವೆ. ಜಿನಸೇನಾಚಾರ್ಯರು ಕನ್ನಡ ನಾಡಿನ ವಿದ್ವತ್ಕವಿಗಳಾದುದರಿಂದ, ಪ್ರಾಚೀನ ಕರ್ನಾಟಕದಲ್ಲಿ ಪಂಡಿತರ ವಿನೋದಗೋಷ್ಠಿಗಳಲ್ಲಿ ಪ್ರಚಲಿತವಿದ್ದ ಪ್ರಹೇಳಿಕೆಗಳ ಸ್ವರೂಪವನ್ನು ಅವರ ರಚನೆಗಳ ಮೂಲಕ ತಿಳಿಯಲು

ಅನವಕಾಶವಿರುವುದರಿಂದ, ಇಲ್ಲಿ ಕೆಲವು 'ಪ್ರಶ್ನೆ'ಗಳನ್ನು ಬೇರೆಬೇರೆ ಮಾದರಿಗಳಿಗಾಗಿ ಮುಂದೆ ಉದ್ಧರಿಸಿದೆ. ಈ ಪದ್ಯಗಳಲ್ಲಿ ಕೆಲವನ್ನು ಅಜಿತಸೇನನು 'ಅಲಂಕಾರ ಚಿಂತಾಮಣಿ'ಯ 'ಚಿತ್ರಾಲಂಕಾರ ಪ್ರರೂಪಣ'ದಲ್ಲಿ ಲಕ್ಷ್ಯಗಳಾಗಿ ಆಯ್ದುಕೊಂಡಿದ್ದಾನೆ. ಅಲ್ಲದೆ ಈ ವಿಷಯವನ್ನು ಅವನು ವ್ಯಕ್ತವಾಗಿಯೇ "ಪ್ರಹೇಳಿಕಾ ಪ್ರಭೃತಿ ಇದಂ ಸರ್ವಂ ಪೂರ್ವಪುರಾಣೇ ದಿಕ್ಕನ್ಯಾಭಿರ್ಮರುದೇವ್ಯಾಲಸ್ಯಪರಿಹಾರಗೋಷ್ಠ್ಯಾಮುಕ್ತಂ" ಎಂಬುದಾಗಿ ಹೇಳಿಯೂ ಇದ್ದಾನೆ (ಪು. ೩೪).

ಕ್ವ ಕೀದೃಕ್ ಶಸ್ಯತೇ ರೇಖಾ ತವಾಣುಭ್ರೂ ಸುವಿಭ್ರಮೇ।
ಕರಿಣೀಂ ಚ ವದಾನ್ಯೇನ ಪರ್ಯಾಯೇಣ ಕರೇಣುಕಾ ॥

(ಪ. ೨೨೬)

ಸೂಕ್ಷ್ಮವಾದ ಹುಬ್ಬುಗಳುಳ್ಳವಳೂ ಉತ್ತಮವಾದ ಚೇಷ್ಟೆಗಳುಳ್ಳವಳೂ ಆದ ದೇವಿಯೇ, ನಿನ್ನ ಯಾವ ಅವಯವಗಳಲ್ಲಿ ಎಂತಹ ರೇಖೆಯು ಶ್ರೇಷ್ಠವಾಗಿದೆ? ಉತ್ತರ: 'ಕರೇಣುಕಾ' (ಹೆಣ್ಣಾನೆ).

ಕಿಮಾಹುಃ ಸರಲೋತ್ತುಂಗ ಸಚ್ಛಾಯ ತರುಸಂಕುಲಂ।
ಕಲಭಾಷಿಣಿ ಕಿಂ ಕಾಂತಂ ತವಾಂಗೇ ಸಾಲಕಾನನಂ ॥

(ಪ. ೨೨೭)

"ಮಧುರಭಾಷಿಣಿಯೇ, ಸರಳವೂ ಉನ್ನತವೂ ಉತ್ತಮವಾದ ನೆರಳುಳ್ಳುದೂ ಆದ ಮರಗಳ ಗುಂಪು ಯಾವುದೆಂದು ಜನರು ಹೇಳುತ್ತಾರೆ? ನಿನ್ನ ಶರೀರದಲ್ಲಿ ಸುಂದರವಾದುದು ಯಾವುದು?" ಎರಡು ಪ್ರಶ್ನೆಗಳಿಗೂ ಉತ್ತರ: 'ಸಾಲಕಾನನ' (ಸಾಲ+ಕಾನನ, ಸಾಲ ವೃಕ್ಷಗಳ ತೋಪು; ಸ+ಅಲಕ+ಆನನ, ಮುಂಗುರುಳು ಸಹಿತವಾದ ಮುಖ).

ಸಮಜಂಘಾತುಕಂ ಬಾಲಂ ಕ್ಷಣಂ ನೋಪೇಕ್ಷತೇ ಹರಿಃ।
ಕಾ ತುಕಂ ಸ್ತ್ರೀ ಹಿಮೇ ವಾಂಛೇತ್ಸಮಜಂಘಾತುಕಂಬಲಂ ॥

(ಪ. ೨೪೦)

"ಸಿಂಹ ಘಾತುಕವಾದ ಆನೆಯ ಮರಿಯನ್ನು (ಸಮಜಂ–ಸಾಮಜಂ) ಒಂದು ಕ್ಷಣಕಾಲವೂ ಉಪೇಕ್ಷೆ ಮಾಡುವುದಿಲ್ಲ. ಶೀತಕಾಲದಲ್ಲಿ ಯಾವ ಸ್ತ್ರೀ ಯಾವುದನ್ನು ಅಥವಾ ಪುತ್ರನನ್ನು ಇಚ್ಛಿಸುವಳು?" ಉತ್ತರ: ಸಮಾನವಾದ ಕಣಕಾಲುಗಳುಳ್ಳ ಸ್ತ್ರೀ ಕಂಬಳಿಯನ್ನು ಮತ್ತು ಬಲಿಷ್ಠನಾದ ಪುತ್ರನನ್ನು ಇಚ್ಛಿಸುವಳು (ಕಂ ಬಾಲಂ—ಕಂಬಲಂ).

ಇದು ಮಾತ್ರಾಚ್ಯುತಕ. 'ಅಲಂಕಾರ ಚಿಂತಾಮಣಿ'ಯಲ್ಲಿ ಇದನ್ನು ಮಾತ್ರಾಚ್ಯುತಕ ಪ್ರಶ್ನೋತ್ತರ ವೆಂದಿದೆ (೨–೩೭).

ಕಃ ಪಂಜರ ಮಧ್ಯಾಸ್ತೇ ಕಃ ಪರುಷನಿಸ್ವನಃ
ಕಃ ಪ್ರತಿಷ್ಠಾ ಜೀವಾನಾಂ ಕಃ ಪಾಠ್ಯೋಕ್ಷರಚ್ಯುತಃ ॥ (ಪ. ೨೪೨)

"ಪಂಜರದಲ್ಲಿ ಯಾವುದಿರುತ್ತದೆ? ಯಾವುದು ಕಠೋರವಾದ ಶಬ್ದವುಳ್ಳುದು? ಜೀವಗಳಿಗೆ ಆಶ್ರಯ ವಾವುದು? ಅಕ್ಷರಚ್ಯುತವಾದ ಯಾವುದು ಪಠಿಸುವುದಕ್ಕೆ ಯೋಗ್ಯವಾದುದು?" ಉತ್ತರ: (ಶು)ಕಃ, (ಕಾ)ಕಃ, (ಲೋ)ಕಃ, (ಶ್ಲೋ)ಕಃ.

ಇದು 'ಪ್ರಶ್ನ'ರೂಪದ ಅಕ್ಷರಚ್ಯುತಕ ಅಥವಾ ವರ್ಣಚ್ಯುತಕ; ಚ್ಯುತವಾಗಿರುವ ಅಕ್ಷರ ಒಂದೊಂದೇ ಆದ್ದರಿಂದ ಏಕಾಕ್ಷರಚ್ಯುತಕ. 'ಅಲಂಕಾರ ಚಿಂತಾಮಣಿ'ಯಲ್ಲಿ ಇದನ್ನು 'ಅಕ್ಷರಚ್ಯುತ ಪ್ರಶ್ನೋತ್ತರ'ವೆಂದಿದೆ (೨–೩೯, ೪೦).

ಕೇ ಮಧುರಾರಾವಾಃ ಕೇ ಹರಿಕಂಧರೇ।
ಕೇನೋಹ್ಯತೇ ಗಂಧಃ ಕೇನಾಖಿಲಾರ್ಥದೃಕ್ ॥

(ಪ. ೨೪೪)

''ಮಧುರವಾದ ಶಬ್ದವುಳ್ಳವು ಯಾವುವು? ಸಿಂಹದ ಕುತ್ತಿಗೆಯಲ್ಲಿ ಏನಿದೆ? ಯಾವುದು ಪರಿಮಳವನ್ನು ಧರಿಸುತ್ತದೆ? ಆತ್ಮನು ಯಾವುದರಿಂದ ಸಕಲ ಪದಾರ್ಥಗಳನ್ನೂ ತಿಳಿಯುವನು?'' ಉತ್ತರ : ಕೇ (ಕಿನೋ), ಕೇ (ಸರಾ), ಕೇ (ತಕೇ), ಕೇ (ವಲೇ).

ಇದೂ ಪ್ರಶ್ನರೂಪದ ಅಕ್ಷರಚ್ಯುತಕ ಅಥವಾ ವರ್ಣಚ್ಯುತಕ ; ದ್ವ್ಯಕ್ಷರಚ್ಯುತಕ. ಪ. ೨೪೬, ೨೪೮ ಸಹ ಇದೇ ಬಗೆಯವು. 'ಅಲಂಕಾರ ಚಿಂತಾಮಣಿ'ಯಲ್ಲಿ ಇದನ್ನು 'ದ್ವ್ಯಕ್ಷರಚ್ಯುತ ಪ್ರಶ್ನೋತ್ತರ'ವೆಂದಿದೆ. (೨–೪೧, ೪೨).

ಕಾಕಃ ಶ್ರೂಯತೇ ನಿತ್ಯಂ ಕಾಕೀಂ ಸುರತಪ್ರಿಯಾಂ ।
ಕಾನನೇ ವದೇದಾನೀಂ ಚತುರಕ್ಷರವಿಚ್ಯುತಂ ॥ (ಪ. ೨೫೧)

ಕಾಮುಕಃ ಶ್ರೂಯತೇ ನಿತ್ಯಂ ಕಾಮುಕೀಂ ಸುರತಪ್ರಿಯಾಂ ।
ಕಾಂತಾನನೇ ವದೇದಾನೀಂ ಚತುರಕ್ಷರವಿಚ್ಯುತಂ ॥ (ಪ. ೨೫೨)

''ದೇವಿಯೇ, ನಾಲ್ಕು ಚರಣಗಳಲ್ಲಿ ನಾಲ್ಕು ಅಕ್ಷರಗಳು ಕಡಿಮೆಯಾಗಿರುವ ಪದ್ಯಕ್ಕೆ ಆ ಅಕ್ಷರಗಳನ್ನು ಸೇರಿಸಿ ಹೇಳು''. ಉತ್ತರ : ಕಾ(ಮು)ಕಃ, ಕಾ(ಮು)ಕೀಂ, ಕಾ(ಂತಾ)ನನೇ, ಚ(ತು)ರಕ್ಷರ. ಪ. ೨೫೨ರಲ್ಲಿ 'ಚತುರಕ್ಷರವಿಚ್ಯುತ'ವಾದ ಪದ್ಯವನ್ನು ಹೇಳು ಎಂಬ ಇನ್ನೊಂದು ಪ್ರಶ್ನೆಯಿದ್ದು, ಅದಕ್ಕೆ ಪ. ೨೫೧ ಉತ್ತರ ವಾಗುತ್ತದೆ.

ಒಂದಕ್ಕೊಂದು ಪ್ರಶ್ನೆ ಉತ್ತರವಾಗುವ ಲಕ್ಷ್ಯಪದ್ಯಗಳು ಪ. ೨೫೧ ಮತ್ತು ೨೫೨. ಅಲ್ಲದೆ ಮಧ್ಯಾಕ್ಷರದ ಲೋಪಾದೇಶಗಳ ಸಂಯೋಜನೆ ಇಲ್ಲಿಯ ವಿಶೇಷ. 'ಅಲಂಕಾರ ಚಿಂತಾಮಣಿ'ಯಲ್ಲಿ 'ಏಕೋತ್ತರಾಕ್ಷರಚ್ಯುತಪಾದ'ವೆಂದಿದೆ.

ತವಾಂಬ ಕಿಂ ವಸತ್ಯಂತಃ ಕಾ ನಾಸ್ತ್ಯವಿಧವೇ ತ್ವಯಿ ।
ಕಾ ಹಂತಿ ಜನಮಾದ್ಯೋನಂ ವದಾದ್ಯೈರ್ವ್ಯಂಜನೈಃ ಪೃಥಕ್ ॥ (ಪ. ೨೫೩)

''ತಾಯಿ, ನಿನ್ನ ಗರ್ಭದಲ್ಲಿ ಯಾವುದು ವಾಸಮಾಡುತ್ತಿದೆ? ನಿನ್ನಲ್ಲಿ ಯಾವುದಿಲ್ಲ? ಹೊಟ್ಟೆಬಾಕನಾದ ಮನುಷ್ಯ ನನ್ನು ಯಾವುದು ನಾಶಗೊಳಿಸುತ್ತದೆ?'' ಉತ್ತರ : ತುಕ್ (ಶಿಶು), ಶುಕ್ (ಶೋಕ), ರುಕ್ (ರೋಗ).

ಆದಿವ್ಯಂಜನವೊಂದನ್ನು ವ್ಯತ್ಯಾಸಮಾಡಿದ ಬಹಿಃಪ್ರಶ್ನೆಯಿದು. ಪ. ೨೫೪ ಇದೇ ರೀತಿಯದು. (ಆದರೆ ಪ. ೨೫೩ರ ರಚನೆ ವ್ಯಂಜನ+ಹ್ರಸ್ವಸ್ವರ ; ಪ. ೨೫೪ರ ರಚನೆ ವ್ಯಂಜನ+ದೀರ್ಘಸ್ವರ). (ನೋಡಿ : 'ಅಲಂಕಾರ ಚಿಂತಾಮಣಿ', ೨–೩೩).

ಕಃ ಸಮುತ್ಸೃಜ್ಯತೇ ಧಾನ್ಯೇ ಘಟಯತ್ಯಂಬ ಕೋ ಘಟಂ।
ವೃಷಾನ್ದಶತಿ ಕಃ ಪಾಪೀ ವದಾದ್ಯೈರಕ್ಷರೈಃ ಪೃಥಕ್ ॥ (ಪ. ೨೫೫)

''ಧಾನ್ಯಗಳಲ್ಲಿ ಯಾವುದನ್ನು ಬಿಡುತ್ತಾರೆ? ಘಟವನ್ನು ಯಾವನು ಮಾಡುತ್ತಾನೆ? ಇಲಿಗಳನ್ನು ಯಾವ ಪಾಪಿ ಭಕ್ಷಿಸುತ್ತದೆ? ಮೊದಲನೆಯ ಅಕ್ಷರಗಳನ್ನು ಬದಲಾಯಿಸಿ ಉತ್ತರ ಹೇಳು.'' ಉತ್ತರ : (ಪ)ಲಾಲ (ಹೊಟ್ಟು), (ಕು)ಲಾಲ (ಕುಂಬಾರ), (ಬಿ)ಲಾಲ (ಬೆಕ್ಕು).

ಆದ್ಯಕ್ಷರವನ್ನು ವ್ಯತ್ಯಾಸಮಾಡಿದ ಬಹಿಃಪ್ರಶ್ನೆಯಿದು.

ಸಂಬೋಧ್ಯಸೇ ಕಥಂ ದೇವಿ ಕಿಮಸ್ತ್ಯರ್ಥಕ್ರಿಯಾಪದಂ
ಶೋಭಾ ಚ ಕೀದೃಶಿ ವ್ಯೋಮ್ನಿ ಭವತೀದಂ ನಿಗದ್ಯತಾಂ ॥ (ಪ. ೨೫೬)

''ಎಲೆ ದೇವಿಯೆ, ನಿನ್ನನ್ನು ಸಂಬೋಧನೆಯಿಂದ ಕರೆಯುವುದು ಹೇಗೆ? 'ಅಸ್ತಿ' ಎಂಬ ಅರ್ಥವುಳ್ಳ ಕ್ರಿಯಾಪದ ಯಾವುದು? ಎಂತಹ ಆಕಾಶದಲ್ಲಿ ಶೋಭೆ?" ಉತ್ತರ: 'ಭವತಿ'.

ಹಲವು ಪ್ರಶ್ನೆಗಳ ಉತ್ತರ ಪ್ರಶ್ನವಾಕ್ಯದಲ್ಲಿಯೇ ಇದೆ; ಇದು ಉತ್ತರಪ್ರಶ್ನ (ಇದೇ ರೀತಿಯದು ಪ. ೨೫೬ ಕೂಡ). 'ಅಲಂಕಾರ ಚಿಂತಾಮಣಿ'ಯಲ್ಲಿ 'ನಿಹ್ನುತ್ಯೈಕಾಲಾಪಕ' ಎಂದಿದೆ.

ಆಸಾದಯತಿ ಯದ್ರೂಪಂ ಕರೇಣುಃ ಕರಣೈರ್ವಿನಾ ।
ತತ್ತೇ ಕಮಲಪತ್ರಾಕ್ಷಿ ಭವತ್ಯಕ್ಷಯಮವ್ಯಯಂ ॥ (ಪ. ೨೫೯)

"ಎಲೆ ಕಮಲನೇತ್ರೆಯೇ, ಬೇರೆ ಸಾಧನೆಗಳಿಲ್ಲದೆ ಹಸ್ತದಲ್ಲಿರುವ ಸೂಕ್ಷ್ಮರೇಖೆ ಯಾವುದರ ಸ್ವರೂಪವನ್ನು ತಿಳಿಸುತ್ತದೆಯೋ ಅದು ನಿನಗೆ ಅಕ್ಷಯವೂ ಅವ್ಯಯವೂ ಆಗಿರಲಿ; ಅದು ಯಾವುದು?" ಉತ್ತರ: ಆಯುಷ್ಯ.

ಪ್ರಶ್ನವಾಕ್ಯಕ್ಕೆ ಬೇಕಾದ ಉತ್ತರ ಹೊರಗಿದ್ದು, ಆ ಉತ್ತರ ಪ್ರಶ್ನವಾಕ್ಯದೊಳಗಿನ ಅರ್ಥದೊಂದಿಗೆ ಅನ್ವಿತವಾಗುವಂತಿರುವುದರಿಂದ, ಇದು 'ಬಹಿರಂತಃಪ್ರಶ್ನ'.

ಕಃ ಕೀದೃಙ್ನ ನೃಪೈರ್ದಂಡ್ಯಃ ಕಃ ಖೇ ಭಾತಿ ಕುತೋಽಂಬ ಭೀಃ ।
ಭೀರೋಃ ಕೀದೃಙ್ನ ವೇಶಸ್ತೇ ನಾನಾಗಾರವಿರಾಜಿತಃ ॥ (ಪ. ೨೬೦)

"ಎಂತಹ ಮನುಷ್ಯನು ರಾಜರಿಂದ ಶಿಕ್ಷಿಸುವುದಕ್ಕೆ ಯೋಗ್ಯನಲ್ಲ? ಆಕಾಶದಲ್ಲಿ ಯಾವನು ಶೋಭಿಸುತ್ತಾನೆ? ಭಯಸ್ಥನಿಗೆ ಯಾವುದರಿಂದ ಭಯ? ನಿನ್ನ ವಾಸಸ್ಥಾನ ಎಂತಹುದು?" ಉತ್ತರ: "ನಾನಾಗಾರ ವಿರಾಜಿತಃ." ಅನಾಗಾ ನಾ (ಅಪರಾಧವಿಲ್ಲದ ಮನುಷ್ಯ), ರವಿಃ (ಸೂರ್ಯ), ಆಜಿತಃ (ಯುದ್ಧದಿಂದ), ನಾನಾಗಾರವಿರಾಜಿತಃ (ವಿವಿಧ ಗೃಹಗಳಿಂದ ಶೋಭಿತವಾದುದು)." ಇದು 'ಅಲಂಕಾರಚಿಂತಾಮಣಿ'ಯ ಪ್ರಕಾರ 'ಅಂತರಾಲಾಪಕ ಪ್ರಶ್ನೋತ್ತರ' (೨–೩೦). ನಾಲ್ಕು ಪ್ರಶ್ನೆಗಳಿಗೂ ಉತ್ತರ ಪದ್ಯದಲ್ಲಿಯೇ ಪದಚ್ಛೇದವಿಶೇಷದಿಂದ ದೊರೆಯುತ್ತದೆ. ೨೬೧ನೆಯ ಪದ್ಯ ಸಹ ಇದೇ ರೀತಿಯ ರಚನೆಯುಳ್ಳದು. ಈ ರಚನೆಯೊಂದಿಗೆ 'ಹಿತಬೋಧಿನಿ' ಪತ್ರಿಕೆಯೊಳಗಿನ ಈ ರಚನೆಯನ್ನು ಹೋಲಿಸಬಹುದು.

ಕಃ ಖೇಚರತಿ ಕಾ ರಮ್ಯಾ । ಕಿಂ ಜಪ್ಯಂ ಕಿಂ ವಿಭೂಷಣಂ
ಕೋ ವಂದ್ಯಃ ಕೀದೃಶೀ ಲಂಕಾ । ವೀರಮರ್ಕಟಕಂಪಿತಾ ॥ (೨–೫)

ಅಲ್ಲಿಯೇ ಸೂಚಿಸಿರುವ ಉತ್ತರ: ೧ ವಿ ೨ ರ ೩ ಮ ೪ ಕಟಕಂ ೫ ಪಿತಾ ೬ 'ವೀರಮರ್ಕಟಕಂಪಿತಾ'.

ಕನ್ನಡ ಅಲಂಕಾರಗ್ರಂಥಗಳಲ್ಲಿ ಪ್ರಶ್ನಗಳು

ಕೆಲವು ವರ್ಣಚಿತ್ರಗಳ ಹಾಗೂ ಗತಿಚಿತ್ರದೊಳಗಿನ ಸರ್ವತೋಭದ್ರದ ಅನಂತರದಲ್ಲಿ 'ಕವಿರಾಜಮಾರ್ಗ'ದಲ್ಲಿ 'ನಿರುತ್ತರ'ವೆಂಬ ಒಂದು ದುಷ್ಕರೋಕ್ತಿಯನ್ನು ಕುರಿತಿದೆ. ಲಕ್ಷಣವನ್ನು ನಿರೂಪಿಸಿಲ್ಲದ ಕಾರಣ, ಲಕ್ಷ್ಯದಿಂದಲೇ ಅದನ್ನು ತಿಳಿಯಬೇಕಾಗಿದೆ. ಈ ಪ್ರಕಾರ 'ಪ್ರಶ್ನ'ಗಳ ಗುಂಪಿಗೆ ಸೇರಿದ್ದೆಂದು ಅದರ ಹೆಸರೇ ಪರೋಕ್ಷವಾಗಿ ಸೂಚಿಸುತ್ತದೆ. ಅಲ್ಲದೆ ಲಕ್ಷ್ಯಪದ್ಯ ಪ್ರಶ್ನೆಗಳಿಂದ ಕೂಡಿರುವುದು ವಿದಿತವೇ ಇದೆ. 'ಪ್ರಶ್ನ'ಗಳ ಗುಂಪಿನ ಈ ಪ್ರಹೇಳಿಕಾಪ್ರಕಾರವು ಇಲ್ಲಿ ನಿರೂಪಿತವಾಗಿರುವುದು ಸ್ಥಾನೋಚಿತವಾಗಲಿಲ್ಲವೆನ್ನಬೇಕು. ಲಕ್ಷ್ಯ ಪದ್ಯ:

ಪೆಱನಾವಂ ಧರಾಚಕ್ರಕ್ಕೆಱೆಯಂ ಕೆಳೆಯಪ್ಪವಂ
ನೆಱೆಯಾರೆಣೆಯೆಂಬನ್ನಂ ಕುಱಿತಬ್ಧಿಗೆ ಬನ್ನಮಂ ॥ (೨–೧೨೬)

"(ತಮ್ಮ) ಭಂಗವನ್ನು, (ನಿನ್ನ ಹೊರತು) ಬೇರೆ ಯಾರು ಭೂಮಂಡಲದ ಸ್ವಾಮಿ, (ನಿನ್ನ ಹಾಗೆ) ಸ್ನೇಹಿತನಾಗುವವನು, (ನಿನಗೆ) ಸರಿಯಾದ ಸಮಾನರು ಯಾರು ಎನ್ನುವ ಹಾಗೆ ಸಾಗರಕ್ಕೆ ಉದ್ದೇಶಿಸಿ (ಸೂಚಿಸಿ, ನಿವೇದಿಸಿ?) . . ."

ಇದೊಂದು ಅಪೂರ್ಣವಾಕ್ಯ. ಜೊತೆಗೆ ಸಂದರ್ಭವೂ ಸ್ಪಷ್ಟವಾಗಿರದ ಕಾರಣ ಅರ್ಥವಿಶದತೆಯೂ ಸಾಧ್ಯವಿಲ್ಲವಾಗಿದೆ. ಮುಳಿಯ ತಿಮ್ಮಪ್ಪಯ್ಯನವರೂ ಎಂ. ವಿ. ಸೀತಾರಾಮಯ್ಯನವರೂ ಬೇರೆಯಾದ

ಅರ್ಥಾನ್ವಯಗಳನ್ನು ಮಾಡಿರುವರಾದರೂ[53], ಅವು ತೃಪ್ತಿಕರವಾಗಿವೆಯೆಂದು ಹೇಳುವಂತಿಲ್ಲ. ಸಾಗರದಂತಹ ಸ್ವಾಮಿ, ಸ್ನೇಹಿತ, ಸಮಾನಸ್ಕಂಧ ವ್ಯಕ್ತಿ ಯಾರಿದ್ದಾರೆ? ಇಲ್ಲಿಯ ಮೂರು ಪ್ರಶ್ನೆಗಳಿಗೂ '' ಯಾರೂ ಇಲ್ಲ '' ಎನ್ನುವುದು ಖಂಡಿತವಾದ ಉತ್ತರ. ಅದು ಹಾಗೆ ಖಂಡಿತವಾದ್ದು ಎನ್ನುವುದರಿಂದಲೇ, ಪ್ರಶ್ನೆಗಳಿಗೆ ಉತ್ತರದ ಆವಶ್ಯಕತೆ ಬೀಳುವುದಿಲ್ಲ. ಆದ್ದರಿಂದ ಇದು 'ನಿರುತ್ತರ'. ಇಲ್ಲಿಯ ಪ್ರಶ್ನೆಗಳು 'ಕೂಟಪ್ರಶ್ನ'ದಲ್ಲಿರುವ ಹಾಗೆ ಉತ್ತರವೇ ಸಿಕ್ಕದ ಪ್ರಶ್ನೆಗಳೇನಲ್ಲ; ಉತ್ತರ ಅಗತ್ಯವಿಲ್ಲದ ಪ್ರಶ್ನೆಗಳು. ಇಷ್ಟು ಹೇಳಿಯೂ, ಈ 'ದುಷ್ಕರೋಕ್ತಿ'ಯ ಸ್ವರೂಪ ಈಗ ನಾವು ತಿಳಿದಿರುವುದಕ್ಕಿಂತ ಬೇರೆಯಾಗಿದ್ದರೂ ಇರಬಹುದು.

ಕುಸುರಿಯ ನುಡಿ

ನಾಗವರ್ಮನ 'ಕಾವ್ಯಾವಲೋಕನ'ದಲ್ಲಿ ಪ್ರತ್ಯೇಕವಾಗಿ 'ಪ್ರಶ್ನ' ಅಥವಾ 'ಪ್ರಶ್ನೋತ್ತರ'ಗಳ ಪ್ರಕಾರವನ್ನು ಕುರಿತಿಲ್ಲ. ಸೂತ್ರ ೧೪೧ರಲ್ಲಿ 'ನುಸುಳ್' ಮೊದಲಾದ ಪ್ರಹೇಳಿಕೆಗಳನ್ನು ಪಟ್ಟಿಮಾಡುವಾಗ 'ಕುಸುರಿಯ ನುಡಿ' ಎಂಬುದು ಒಂದು ಭೇದವಾಗಿ ಸೇರಿದ್ದು, 'ನಾಮಾಂತರಿತ'ದ ಬಳಿಕ ಕೊನೆಯದಾಗಿ ಇದನ್ನು ಹೆಸರಿಸಿದೆ. ಲಕ್ಷ್ಯಭಾಗದಲ್ಲಿ ಗ್ರಂಥವಿಸ್ತಾರಭಯದಿಂದಲೋ ಮತ್ತಾವ ಕಾರಣದಿಂದಲೋ ಇದಕ್ಕೆ ಲಕ್ಷ್ಯವನ್ನು ಒದಗಿಸದೆ '' ಕುಸುರಿ ಮೊದಲಾದ ಪ್ರಶ್ನೋತ್ತರ ಪ್ರಕಾರಂಗಳ್ಗಮಿಲ್ಲಿ ಪ್ರಯೋಗಮಂ ಕಂಡುಕೊಳ್ವುದು '' ಎಂಬುದಾಗಿ ಒಂದು ಸೂಚನೆಯನ್ನು ಮಾತ್ರ ಕೊಟ್ಟಿದೆ. ಇದನ್ನು ಗಮನಿಸಿದರೆ, 'ಕುಸುರಿಯ ನುಡಿ' ಅಥವಾ 'ಕುಸುರಿ' ಪ್ರಶ್ನೋತ್ತರದ ಒಂದು ಪ್ರಕಾರವಿರಬೇಕೆಂದು ಅಭಿಪ್ರಾಯವಾಗುವುದು. ಯಾವ ರೀತಿಯ 'ಪ್ರಶ್ನೋತ್ತರ' ಎಂಬುದು ತಿಳಿಯುತ್ತಿಲ್ಲ. ಈ ಭೇದವನ್ನು 'ಕವಿರಾಜಮಾರ್ಗ'ದಲ್ಲಿಯೂ ಕುರಿತಿಲ್ಲ. ಮುಳಿಯ ತಿಮ್ಮಪ್ಪಯ್ಯನವರೇನೋ 'ಕವಿರಾಜಮಾರ್ಗ'ದ 'ನಿರುತ್ತರ' ಹಾಗೂ ಅಂತಹ ಇತರ ಪ್ರಶ್ನೋತ್ತರಾದಿಗಳನ್ನು ನಾಗವರ್ಮ 'ಕುಸುರಿಯ ನುಡಿ' ಎಂದರೆ ಒಳಗಿನ ಅರ್ಥವನ್ನು ಆದೊಂದು ಕೌಶಲದಿಂದ ಸೂಚಿಸುವ ಮಾತು—ಎನ್ನುತ್ತಾನೆ ಎಂಬುದಾಗಿ ತಿಳಿದಿದ್ದಾರೆ. ಆದರೆ ಇದು ಹೀಗಿರಲಾರದು. ಕುಸುರಿಯ ನುಡಿ ಅಥವಾ ಕುಸುರಿ 'ಪ್ರಶ್ನೋತ್ತರ'ದ ಪ್ರಕಾರಗಳಲ್ಲಿ ಒಂದು ಭೇದವಷ್ಟೇ ಎನ್ನುವುದು ನಾಗವರ್ಮನ ಮಾತಿನಿಂದಲೇ ತಿಳಿಯುತ್ತದೆ.

ಕುಸುರಿಯ ಸ್ವರೂಪವೇನು ಎಂದು ಲಕ್ಷ್ಯಗಳೇನೂ ಇಲ್ಲದೆ ಹೇಳುವುದು ಕಷ್ಟ. ಈ ಸಂದರ್ಭದಲ್ಲಿ ಹಳೆಯ ಕೆಲವು ಉಲ್ಲೇಖಗಳನ್ನು ಇಲ್ಲಿ ನೆನೆಯಬಹುದು. ವಿಪ್ರವೇಷದ ಅಗ್ನಿಗೆ ಖಾಂಡವವನವನ್ನು ದಹಿಸಲು ಅವಕಾಶವಿತ್ತನೆಂದು ಕೃಷ್ಣ ಅರ್ಜುನನ್ನು ಆಕ್ಷೇಪಿಸಿದಾಗ, ಅರ್ಜುನ '' ಪಸಿದುಣವೇಡಿದಂ ಬಡವನಾನುಣಲಿತ್ತೆನ ದಲ್ಲದಿಲ್ಲಿ ದಲ್। ಕುಸುರಿಯ ಮಾತುಗಾಣೆನ್ '' ಎಂದು ಉತ್ತರವಿತ್ತನೆಂದು 'ಪಂಪಭಾರತ'ದಲ್ಲಿ ಒಂದೆಡೆ (೫–೭೨) ಉಕ್ತವಾಗಿದೆ. 'ಧರ್ಮಾಮೃತ'ದ ಕವಿ ನಯಸೇನನು ತನ್ನ ಕೃತಿಯ ಪೀಠಿಕಾಭಾಗದಲ್ಲಿ, ಕೃತಿಯೆನಿಸಬೇಕಾದರೆ '' ರಸಭಾವಂ ಗಮಕಂ ಕಾ। ಳಸೆ ನಾಣ್ನುಡಿ ದೇಸಿವೆತ್ತ ಪೊಸನುಡಿ ಮಾರ್ಗಂ। ಕುಸುರಿಯ ಬಗೆ '' ಇವು ಅವಶ್ಯವಾಗಿ ಇರಬೇಕೆಂದು ತಿಳಿದಿದ್ದಾನೆ (೧–೪೦). ಮಧುರಕವಿಯೂ ತನ್ನ ಕೃತಿ 'ಧರ್ಮನಾಥ ಪುರಾಣ'ದ ಆರಂಭ ಭಾಗದಲ್ಲಿ '' ಬಿನ್ನಣದ ಕುಸುರಿ ಪಸರಿಸುವನ್ನಂ ಗುಣ ಜಾತಿ ಬಂಧಮುಳವಡೆ....'' (೧–೩೭) ಎಂದೂ '' ಬಣ್ಣನೆಯ ಕುಸುರಿವಾತುಗಳಣ್ಣಂದಿರ ತೆಱದಿನನ್ನವಿನ್ನವೆನುತ್ತುಂ ಬಣ್ಣಿಸಲಱಿಯೆಂ '' ಎಂದೂ ಹೇಳಿದ್ದಾನೆ (೧–೭೦). ಚಿಕ್ಕಮಗಳೂರು ಶಾಸನವೊಂದರಲ್ಲಿ (ಎಕ., vi, ೯೪ ; ೧೦೬೦ ?) ವೀರನೊಬ್ಬನ ಸಾಹಸವನ್ನು ಬಣ್ಣಿಸುವಾಗ '' ಮಸಕದಿಂ ಕಂಕಣೆ ಪುಸಿ ನಸೆ ಬಂಚನೆ। ಕುಸುರಿಯ ಚಿತ್ರಂ . . '' ಇವುಗಳಲ್ಲಿ ಒಳ್ಗಂಡನಾಗಿದ್ದನೆಂದು ಹೇಳಿದೆ.

ಕಾವ್ಯಾಧಾರಗಳನ್ನು ಲಕ್ಷಿಸಿ ಕುಸುರಿಯ ಮಾತು, ಕುಸುರಿವಾತು ಇವುಗಳಿಗೆ ಬೆಡಗಿನ ಮಾತು, ಸೂಕ್ಷ್ಮವಾದ ನುಡಿ ಮುಂತಾಗಿಯೂ, ಕುಸುರಿಯ ಬಗೆ ಎಂಬುದಕ್ಕೆ ಬೆಡಗಿನ ರೀತಿ, ಸೂಕ್ಷ್ಮವಾದ ರೀತಿ ಮುಂತಾಗಿಯೂ ಅರ್ಥ ಹೇಳಬಹುದು. ಆದರೆ ಪ್ರಶ್ನೋತ್ತರಗಳಂತಹ, ಸಮಸ್ಯೆಯಂತಹ ಪ್ರಹೇಳಿಕೆಯ ಪ್ರಕಾರ

ವನ್ನು ಪಂಪಾದಿ ಕವಿಗಳು ಲಕ್ಷಿಸಿಯೋ, ಉದ್ದೇಶಿಸಿಯೋ 'ಕುಸುರಿ' ಎಂಬ ಪದವನ್ನು ಬಳಸಿರಬೇಕೆಂದು 'ಕಾವ್ಯಾವಲೋಕನ'ದ ಉಲ್ಲೇಖಗಳ ಹಿನ್ನೆಲೆಯಲ್ಲಿ ಊಹಿಸಿದರೆ ತಪ್ಪಾಗಲಾರದು. ಇನ್ನು ಶಾಸನದ ಪ್ರಯೋಗ, 'ಕುಸುರಿಯ ಚಿತ್ರಂ' ಎಂದರೇನು? 'ಚಿತ್ರಂ' ಎಂದರೆ ಆಶ್ಚರ್ಯವೆಂದು ಅರ್ಥವೋ, ಚಮತ್ಕಾರವೆಂದು (ಚಿತ್ರ ಕಾವ್ಯದ ರೀತಿಯ ಚಮತ್ಕಾರ, ಬೆಡಗು) ಅರ್ಥವೋ? ಕತ್ತಿವರಸೆಯಲ್ಲಿ ಎದುರಾಳಿಗಳು ಪರಸ್ಪರವಾಗಿ ತೋರಿಸುವ ಸವಾಲು ಜವಾಬಿನಂತಹ ಚಮತ್ಕಾರಗಳನ್ನು ಈ ಉಕ್ತಿ ಕುರಿತಿರಬಹುದೇ? ಅಂತೂ ಈ ಕೆಲವು ಪ್ರಯೋಗಗಳು 'ಕುಸುರಿ' ಎಂಬ ಮಾತು ಪದಿರ್, ಪೇಳಿಕೆ, ಬೆಡಗು ಮುಂತಾದವುಗಳ ಹಾಗೆ ಉಕ್ತಿವೈಚಿತ್ರ್ಯವನ್ನು ಹೇಳುವ ಶಬ್ದವೆಂದೂ ಬಹುಶಃ ಇದು 'ಪ್ರಶ್ನೋತ್ತರ'ದ ಒಂದು ಪ್ರಕಾರವಿರಬಹುದೆಂದೂ ಹೇಳುವುದು ಸಾಧ್ಯವಿದೆ.

ಈಚೆಗೆ ತಿರುಮಲಾರ್ಯನು 'ಅಪ್ರತಿಮವೀರ ಚರಿತ'ದಲ್ಲಿ, ಅದರ ತೃತೀಯ ಪ್ರಕರಣದಲ್ಲಿ, ಎರಡು ರೀತಿಯ 'ಚಿತ್ರೋತ್ತರಾಲಂಕಾರ'ಗಳನ್ನು ಹೇಳಲು ಸಂಕಲ್ಪಿಸಿ 'ಪ್ರಶ್ನ'ಗಳನ್ನು ಸವ್ಯಾಖ್ಯಾನವಾಗಿ ಕುರಿತಿದ್ದಾನೆ (೮೩).

ಪ್ರಶ್ನೋತ್ತರಾಂತರಾಭಿನ್ನ । ಮುತ್ತರಂ ಚಿತ್ರಮುತ್ತರಂ ॥ (೧೦)

ಈ ಸೂತ್ರದ ವೃತ್ತಿಯಲ್ಲಿ ''ಪ್ರಶ್ನದ ನುಡಿಯನೆ ಉತ್ತರಮಾಗಿ ಪೇೞ್ವುದೆಂದುಂ ಪಲವುಂ ಪ್ರಶ್ನಂಗಳ್ಗೊಂದೆ ಉತ್ತರಮಂ ಪೇೞ್ವುದೆಂದುಮೆರಡು ತೆಱಂ'' ಎಂದಿದೆ.

೧. ಪ್ರಶ್ನೆ ಉತ್ತರಗಳು ಒಂದೇ ಆಗಿರುವುದರ ಲಕ್ಷ್ಯ:

ಭೂರಿ ಮಹಿಶೂರ ಭಟರಿ । ಕ್ಕೇರಿಯ ಪೆರ್ದಟಿಮನಱಿಸಿಯಾಂ ಬಾರದ ಮು ।
ನ್ನಾರಿದನೋಡಿಸಿದವನೆನೆ । ಯಾರಿದನೋಡಿಸಿದನೆಂದು ಪಡಿನುಡಿಗುಡುವರ್ ॥ (ಪ. ೧೬೩)

ಮೈಸೂರಿನವರು ಒಮ್ಮೆ ಇಕ್ಕೇರಿಯವರ ಪಾಳಯವನ್ನು ಬರಿದುಮಾಡಲು ಬಯಸಿ ಅದರ ಬಳಿಗೆ ಬಂದರಂತೆ; ಆದರೆ ಅವರ ಸದ್ದು ಕೇಳುತ್ತಲೇ ಇವರು ಓಡಿಹೋದರಂತೆ. ಆ ಮೂಲವನ್ನು ತಿಳಿಯಲು ಬಯಸಿ ''ಆರಿದಂ ಓಡಿಸಿದಂ?'' ಎಂದು ಪ್ರಶ್ನಿಸಲಾಗಿ, ''ಆರಿದಂ ಓಡಿಸಿದಂ'' ಎಂದೇ ಪ್ರತಿಧ್ವನಿಯ ರೀತಿಯ ಉತ್ತರ ಹೊರಟಿತಂತೆ. ಪ್ರಶ್ನೆ ''ಆರ್ ಇದಂ ಓಡಿಸಿದಂ'' (= ಯಾರು ಇದನ್ನು ಓಡಿಸಿದವರು?) ಎಂದು; ಅದರ ಉತ್ತರ ''ಆರಿದಂ ಓಡಿಸಿದಂ'' (= ಅಬ್ಬರಿಸಿದವನು ಓಡಿಸಿದವನು) ಎಂದು.

ಪದಚ್ಛೇದದ ವ್ಯತ್ಯಾಸವನ್ನೂ ಎರಡೂ ವಾಕ್ಯಾಂಶಗಳ ಅಂತ್ಯಭಾಗದಲ್ಲಿ ಅವನ್ – ಅನ್ ಎಂದು ಇರುವುದರ ವ್ಯತ್ಯಾಸವನ್ನೂ ಗಣನೆಗೆ ತರದೆ ಪ್ರಶ್ನೆ ಉತ್ತರಗಳು ಒಂದೇ ಎಂದು ನಾವು ಭಾವಿಸಬೇಕಾಗಿದೆ.

ಇದು 'ಸರಸ್ವತೀಕಂಠಾಭರಣ'ದ 'ಪ್ರಶ್ನ' ಮಾಲೆಯಲ್ಲಿ ಕೊನೆಯದಾದ 'ಉತ್ತರ ಪ್ರಶ್ನ' ಎಂಬುದಕ್ಕೆ ಸಂವಾದಿಯಾದ್ದು ಎನ್ನಬಹುದು.

೨. ಹಲವು ಪ್ರಶ್ನೆಗಳಿಗೆ ಉತ್ತರ ಒಂದೇ ಆಗಿರುವುದರ ಲಕ್ಷ್ಯ:

ಬಿದಿಯಿಂದಮೊ ಪೋಣ್ ನಿನಗಾ । ಗದರಿಂದಮೊ ಚೆನ್ನಬಸವ ನೀಂ ಮುಱಿದ್ಯೆಯೆಂ ।
ಬುದುಮೆಮ್ಮ ಬೊಮ್ಮಬರೆಪಂ । ಪದಗೆಡಿಸಿತ್ತೆಂದು ಕೆಳದಿದೊರೆಗವನೊರೆಪಂ ॥ (ಪ. ೧೬೩)

ಚೆನ್ನಬಸವನು ಮೈಸೂರಿನವರಿಗೆ ಸೋತು ಬಿದನೂರಿಗೆ ಹೋದಾಗ, ಆ ದೊರೆ ಅವನೊಡನೆ ''ನೀನು ಸೋತುದು ದೈವಯತ್ನದಿಂದಲೋ ನಿನಗೆ ಆಗದವರ ಮೋಸದಿಂದಲೋ'' ಎಂದು ಎರಡು ಪ್ರಶ್ನೆಗಳನ್ನು ಕೇಳಿದನಂತೆ. ಎರಡಕ್ಕೂ ಅವನು ''ನಮ್ಮ 'ಬೊಮ್ಮಬರೆಪ' (='ಬ್ರಹ್ಮಲಿಖಿತ') ನಮ್ಮನ್ನು ಹದಗೆಡಿಸಿತ್ತು'' ಎಂಬುದಾಗಿ ಒಂದೇ ಉತ್ತರವನ್ನು ಕೊಟ್ಟನಂತೆ. ಇಲ್ಲಿ 'ಬೊಮ್ಮಬರೆಪ' ಎಂದರೆ 'ಹಣೆಬರೆಹ' ಎಂದೂ 'ಸಬ್ಬನಿಸ ಬೊಮ್ಮಯ್ಯನ ಕಳ್ಳೋಲೆ' (=ಅಧಿಕಾರಿ ಬೊಮ್ಮಯ್ಯನ ಕಳ್ಳ ಪತ್ರದ ಕಾರಣ ಕೆಲಸ ಕೆಟ್ಟಿತು) ಎಂದೂ ಎರಡು ಅಭಿಪ್ರಾಯಗಳನ್ನೂ ಒಂದೇ ಉತ್ತರದ ಮೂಲಕ ಚೆನ್ನಬಸವನು ತಿಳಿಸಿದನಂತೆ. ಈ ಉತ್ತರ ದೊರೆ ಕೇಳಿದ ಎರಡು ಪ್ರಶ್ನೆಗಳಿಗೂ ಪ್ರತ್ಯೇಕವಾದ ಹಾಗೂ ಸಮಂಜಸವಾದ ಉತ್ತರವೇ ಆಗಿತ್ತು ಎನ್ನುವುದನ್ನು ನಾವು ಗಮನಿಸಬೇಕು.

ಇನ್ನೂ ಈಚೆಗೆ ಜಾಯೇಂದ್ರನು (೧೭೩೪) 'ಕನ್ನಡ ಕುವಲಯಾನಂದ'ದಲ್ಲಿ ತಾನೂ ಚಿತ್ರಾಲಂಕಾರವನ್ನು ಕುರಿತಿರುವುದನ್ನು ನೋಡಬಹುದು.

ಭಾವಿಸಿ ನೋಡೆ ಪ್ರಶ್ನೋತ್ತರ ಪದಂಗಳೊಂದೇ
ತೀವಿದುತ್ತರವುಸುರೆ ಚಿತ್ರ

ಎಂಬುದಾಗಿ ಪೂರ್ವಾರ್ಧದಲ್ಲಿ ಲಕ್ಷಣವನ್ನು ತಿಳಿಸಿ,

ದಾವಾಗ್ನಿ ತರುಗುಲ್ಮ ಲತೆಗಳ ದಹಿಪ ಮ
ತ್ತಾವಂ ಕಾದಾತ ಪಾಂಡವರ॥ (೮೪)

ಎಂಬುದಾಗಿ ಉತ್ತರಾರ್ಧದಲ್ಲಿ ಲಕ್ಷ್ಯ ನೀಡಿದ್ದಾನೆ.

ಪ್ರಶ್ನೆ ಉತ್ತರಗಳಿಗೆ ಒಂದೇ ಪದವನ್ನು ಬಳಸಿದ್ದರೆ, ಅದು ಚಿತ್ರವೆನಿಸುವುದೆಂದು ಮೇಲಿನ ಸೂತ್ರದ ಆಶಯ. ಇದು ಹೇಗೆಂದರೆ : ತರು ಗುಲ್ಮ ಲತೆಗಳನ್ನು 'ದಾವಾಗ್ನಿ' (ಎಂದರೆ ಉತ್ತರ ಕರ್ನಾಟಕದ ಮಾತಿನ ರೀತಿಯಲ್ಲಿ 'ಯಾವ ಅಗ್ನಿ') ದಹಿಸುತ್ತಾನೆ? ಎಂಬುದು ಪ್ರಶ್ನೆ. ಅದಕ್ಕೆ ಉತ್ತರ 'ದಾವಾಗ್ನಿ' (ಎಂದರೆ ಕಾಡುಕಿಚ್ಚು) ಎಂದೇ.

''ಮತ್ತಾವಂ ಕಾದಾತಂ ಪಾಂಡವರ''–ಇದು ಮುಂದಿನ ಪ್ರಶ್ನೆ. 'ಆವಂ ಕಾದಾತಂ' (ಯಾವನು ರಕ್ಷಿಸಿದವನು) ಎಂಬ ಪ್ರಶ್ನೆಗೆ, 'ಆವಂ ಕಾದಾತಂ' (ಗೋವುಗಳನ್ನು ರಕ್ಷಿಸಿದವನು ಎಂದರೆ ಶ್ರೀಕೃಷ್ಣ) ಎಂದೇ ಉತ್ತರ.

ಕೇಳುವ ಪ್ರಶ್ನೆಯ ಶಬ್ದವೊಂದರಲ್ಲಿಯೇ ಉತ್ತರ ಅಡಗಿರುವುದು ಇನ್ನೊಂದು ರೀತಿ. ಇದಕ್ಕೆ ಅಲ್ಲಿಯ ಲಕ್ಷ್ಯ:

ಧುರದಲ್ಲಿ ಸಾಹಸ್ರ । ಕರದಿ ಬಾಣಸೆವಾವ ।
ದುರಿತವನು ಹರಿಸಲಿ ದೇವನಾವ ॥
ಹರಿಯು ಪಾಲಿಪನಾವ । ಸುರೆ ಅಹಿತವೆ ಮಾಳ್ಪ ।
ನೆರದ ವಿಷಯದಿ ಮುನಿಯೆ ಕಾವನಾವ ॥

''ಯುದ್ಧದಲ್ಲಿ ಸಹಸ್ರಕರಗಳಲ್ಲಿ ಬಾಣ ಬಿಡುವವನಾರು?'' ಈ ಪ್ರಶ್ನೆಗೆ ಉತ್ತರ 'ಬಾಣ' (ಬಾಣಾಸುರ). ಪಾಪವನ್ನು ಹರಿಸಲು ಯಾವ ದೇವರಿದ್ದಾನೆ? ಈ ಪ್ರಶ್ನೆಗೆ ಉತ್ತರ 'ಹರಿ' (ವಿಷ್ಣು). (ಸಲೆ ಎಂಬ ಅವ್ಯಯವನ್ನು ಬೇರ್ಪಡಿಸಿದ ಕೂಡಲೇ ಉತ್ತರ ಅಲ್ಲಿಯೇ ಸಿಕ್ಕುತ್ತದೆ). 'ಹರಿ'ಯೆಂದರೆ (ಪಾರ್ಥನ) ಕುದುರೆಗಳನ್ನು ಸಲಹುವವನು ಯಾರು? ಹರಿ (ಕೃಷ್ಣ). ಮರ್ಮದ ವಿಷಯದಲ್ಲಿ ಅಹಿತವನ್ನು ಮಾಡುವುದು ಯಾವುದು(?). ಅಹಿ (= ಹಾವು) (ತವೆ ಎಂಬ ಅವ್ಯಯವನ್ನು ಇಲ್ಲಿಯೂ ಬೇರ್ಪಡಿಸಿದರೆ ಉತ್ತರ ಸಿಕ್ಕುತ್ತದೆ). ಮುನಿದರೆ ಕಾಪಾಡುವವನು ಯಾರು? ಈ ಪ್ರಶ್ನೆಗೆ ಉತ್ತರ : ಮುನಿಯೇ ಕಾಪಾಡುವವನು.

ಕನ್ನಡ ಸಾಹಿತ್ಯದಲ್ಲಿ 'ಪ್ರಶ್ನೋತ್ತರ'ದ ನಿದರ್ಶನಗಳು

ಪ್ರಶ್ನೋತ್ತರಗಳು ಕನ್ನಡ ಜನರ ವಿನೋದ, ಕಾಲಕ್ಷೇಪಗಳ ಸಾಧನವಾಗಿದ್ದಂತೆಯೇ, ರಾಜಾಸ್ಥಾನದಲ್ಲಿ ಪ್ರಶಂಸೆ, ಪ್ರಶಸ್ತಿಗಳನ್ನು ಗಳಿಸುವ ಸಲುವಾಗಿಯೂ ನಡೆಯುತ್ತಿರಬೇಕು. 'ಸೌಂದರ ಕಾವ್ಯ'ದಲ್ಲಿ.

ಶಾನಸ್ತಂಭವು ಅಂತರ್ಲಾಪಿ ಬಹಿರ್ಲಾಪಿ ಆ । ಷ್ಟಾಂಗಯೋಗದಿಗ್ದೇಶ
ಊನವಿಲ್ಲದೆ ವಾಯುವೇಗ ಮನೋವೇಗ । ಭೂನಾಥಗಾಡಿ ತೋರಿದರು ॥ (೨–೩೪)

ಎಂಬುದಾಗಿ ಬಂದಿರುವುದನ್ನು ನೆನೆಯಬಹುದು.

ಷಡಕ್ಷರಿಯ 'ರಾಜಶೇಖರ ವಿಳಾಸ' (೧೬೫೪) ದಲ್ಲಿ, ರಾಜಶೇಖರನ ಚಂದ್ರಿಕಾವಿಹಾರ ಸಂದರ್ಭದಲ್ಲಿ ಕೆಲವು ಪ್ರಶ್ನೋತ್ತರ ಸಂದರ್ಭಗಳು ವೇಶ್ಯಾಗೃಹಗಳಲ್ಲಿ ನಡೆದ ಹಾಗೆ ನಿರೂಪಣೆಯಿದೆ. ಅವನ್ನು ಇಲ್ಲಿ ಗಮನಿಸಬಹುದು.

೧. ಒಬ್ಬ ವೇಶ್ಯೆ ತನ್ನ ಪ್ರಿಯಕರನೊಂದಿಗೆ ಸಂಭಾಷಿಸುತ್ತ ಹೀಗೆ ಒಂದು ಒಗಟಿನ ಪ್ರಶ್ನೆಯನ್ನು ಅವನಿಗೆ ಕೊಟ್ಟಳಂತೆ :

ವಾದಿ ಸಮನಾಂತ ನಾಮಮ । ನಾದಂ ತಳೆದಾತನಳಿದುದೇಂ ಭೋಗಿಜನಾ ।
ಹ್ಲಾದಕನಾವಂ ತಾರಕ । ಭೇದಕನಾವಂ .... ॥ (೧೯–೧೭೦)

ಇದಕ್ಕೆ ಆ ಪ್ರಿಯಕರನು "ಕುಮಾರನಲ್ತೆ ಮೃಗಾಕ್ಷೀ" ಎಂದು ಉತ್ತರಿಸಿದನಂತೆ. (ಪ್ರಶ್ನೆಯೂ ಉತ್ತರವೂ ಒಂದೇ ಕಂದಪದ್ಯದಲ್ಲಿಯೇ ಸೇರಿಕೊಂಡು ಬಂದಿದೆಯಾದರೂ ಇಲ್ಲಿ ಪ್ರಸ್ತುತ ಉದ್ದೇಶದ ಸಲುವಾಗಿ ಬೇರ್ಪಡಿಸಿ ಕೊಟ್ಟಿದೆ).

ವೇಶ್ಯೆಯ ಪ್ರಶ್ನೆಗಳು ಮೂರು ; ಈ ಪ್ರಶ್ನೆಗಳಲ್ಲಿ ಮೊದಲಿನ ಎರಡು ಪ್ರತ್ಯೇಕವಾದವು. ಅವೆರಡರ ಉತ್ತರಗಳನ್ನು ಕೂಡಿಸಿದರೆ ಮೂರನೆಯ ಪ್ರತ್ಯೇಕವಾದ ಪ್ರಶ್ನೆಗೆ ಅದು ಉತ್ತರವಾಗುತ್ತದೆ. ಇದು ಇಲ್ಲಿಯ ಸಂಯೋಜನೆ. ಇದು 'ಸರಸ್ವತೀ ಕಂಠಾಭರಣ'ದಲ್ಲಿ ವಿವರಿಸಿರುವ 'ಬಹಿರಂತಃಪ್ರಶ್ನೆ'ಯ ಲಕ್ಷ್ಯವಾಗಿದೆ.

ಮೊದಲನೆಯ ಪ್ರಶ್ನೆ : 'ವಾ' ಆದಿಯಾಗಿ, 'ಮ' ಮತ್ತು 'ನ' ಅಂತ್ಯವಾಗಿ ಇರುವವನು 'ವಾಮನ'. ಅವನು ಅಳಿದದ್ದು 'ಕು' (=ಭೂಮಿ) ಅನ್ನು. ಎರಡನೆಯ ಪ್ರಶ್ನೆ : ಭೋಗಿಜನರಿಗೆ ಆಹ್ಲಾದಕರನಾದವನು 'ಮಾರ' (=ಮನ್ಮಥ). ಮೂರನೆಯ ಪ್ರಶ್ನೆ : ತಾರಕಾಸುರನನ್ನು ಸಂಹರಿಸಿದವನು 'ಕುಮಾರ' (=ಕುಮಾರಸ್ವಾಮಿ, ಷಣ್ಮುಖ).

೨. ಅದೇ ವೇಶ್ಯೆಗೆ ಅದೇ ಪ್ರಿಯಕರನು ತನ್ನ ಸರದಿಯಾಗಿ ತಾನೊಂದು ಪ್ರಶ್ನೆಯನ್ನು ಕೊಟ್ಟನು. ಅದು ಹೀಗೆ :

ವನದ ಸಮಧ್ಯದ ಪರ್ಯಾ । ಯ ನಾಮದೊಳ್ ಗಮಿಪುದೇಂ ತದಾಶ್ರಯಮೇಂ ಜೀ ।
ವನಕೆ ಮುನಿವವನದಾವಂ । ವನನಿಧಿಯೆಂತಪ್ಪುದೆನಗೆ ಪೇಳ್ ಕಮಲಾಕ್ಷೀ ॥ (೧೧–೧೭೧)

ಇಲ್ಲಿ ಪ್ರಿಯಕರನು ನಾಲ್ಕು ಪ್ರಶ್ನೆಗಳನ್ನು ಕೇಳಿದ್ದಾನೆ. ಈ ಪ್ರಶ್ನೆಗಳು ಪ್ರತ್ಯೇಕವಾದವಲ್ಲ, ಪರಸ್ಪರ ಸಂಬಂಧವುಳ್ಳವು. ಇವುಗಳಲ್ಲಿ ಮೊದಲ ಮೂರು ಪ್ರಶ್ನೆಗಳಿಗೆ ಬೇಕಾದ ಉತ್ತರ ನಾಲ್ಕನೆಯ ಪ್ರಶ್ನೆಯೊಳಗೇ ಹುದುಗಿಕೊಂಡಿದೆ. ಈ ನಾಲ್ಕನೆಯ ಪ್ರಶ್ನೆಯಲ್ಲಿ ಹುದುಗಿರುವ 'ವನನಿಧಿ' ಎಂಬುದೇ ಉತ್ತರವೆಂದು ಕಂಡುಕೊಳ್ಳುವುದರಲ್ಲಿ ಇಲ್ಲಿಯ ಚಾತುರ್ಯವಿದೆ. ಇದು 'ಉತ್ತರಪ್ರಶ್ನೆ'ಯ ಲಕ್ಷ್ಯ.

ಮೊದಲನೆಯ ಪ್ರಶ್ನೆ : 'ವನ'ದ 'ಸ'ಕಾರ ಮಧ್ಯದ ರೂಪ 'ವಸನ' ಎಂದು. ಅದರ ಪರ್ಯಾಯ ನಾಮ 'ಅಂಬರ'. 'ಅಂಬರ' (ಎಂದರೆ ಆಕಾಶ)ದಲ್ಲಿ ಚಲಿಸುವುದು ಯಾವುದು ? 'ವನನಿಧಿ'; ಎಂದರೆ ಮೋಡ (ನೀರು ತುಂಬಿರುವುದು ಎಂಬ ಅರ್ಥದಲ್ಲಿ ಕವಿ ಹೀಗೆ ಕಲ್ಪಿಸಿರಬಹುದು ; 'ವನನಿಧಿ' ಶಬ್ದಕ್ಕೆ ಸಮುದ್ರವೆಂಬುದೇ ಪ್ರಸಿದ್ಧವಾದ ಅರ್ಥ). ಎರಡನೆಯ ಪ್ರಶ್ನೆ : ಆ ಮೋಡಕ್ಕೆ ಆಶ್ರಯವಾದ್ದು ಏನು ? 'ವನನಿಧಿ' ಎಂದರೆ ಸಮುದ್ರ. ಮೂರನೆಯ ಪ್ರಶ್ನೆ : ಆ (ಸಮುದ್ರದ) ನೀರಿಗೆ ಕೋಪಿಸುವವನು ಯಾರು ? 'ವನನಿಧಿ' ಎಂದರೆ ಅಗ್ನಿ, ಬಡಬಾಗ್ನಿ. ('ಅಗ್ನೇರಾಪಃ' ಎಂದು ಶ್ರುತಿ).

೩. ವಿದ್ಯಾವಂತನಾದ ವಿಟನೊಬ್ಬ ತನ್ನ ವೇಶ್ಯೆಗೆ 'ಸಕ್ಕದದ ಬಹಿರ್ಲಾಪಿ'ಯ ಪರೀಕ್ಷೆಯನ್ನು ಕೊಟ್ಟನಂತೆ. 'ಸಕ್ಕದದ ಬಹಿರ್ಲಾಪಿ' ಎಂದರೆ 'ಸಂಸ್ಕೃತ ಭಾಷೆಯಲ್ಲಿರುವ ಬಹಿಃಪ್ರಶ್ನೆ' ಎಂದು ಅರ್ಥ. ಆ ಪ್ರಶ್ನೆಯಿದು :

ಬ್ರಹ್ಮಾಣೀ ಕಾ ಜನೇಷ್ಟಂ ದಧತಿ ಝಡಿತಿ ಕೇ ತಾಪಸಾಂಗಂ ಚ ಕೀದೃಕ್
ಪ್ರೀತಾ ಕಾ ಕುತ್ರ ವಿಶ್ವಂ ನಿವಸತಿ ವಿಬುಧಾಬೋಧನಂ ಕಿಂ ನೃಪಾಲಃ
ಕಸ್ಯೈ ಸನ್ನದ್ಧ ಈಶಃ ಪತಿರಿತಿವಿದಿತಃ ಕಸ್ಯ ವಂದ್ಯಾ ಚ ಕೌ ಕಿಂ
ವಕ್ತೀಶಃ ಕೌ ಜಗತ್ಸಂಹರಣಭರಣ ಕೌ ಮಂಗಳೋಕ್ತಿಃ ಕವೇಃ ಕಾ ॥ (೧೧–೧೭೨)

ಇಲ್ಲಿ ೧೨ ಪ್ರಶ್ನೆಗಳಿವೆ. ಈ ಎಲ್ಲ ಪ್ರಶ್ನೆಗಳಿಗೂ ಪ್ರತ್ಯೇಕವಾಗಿ ಉತ್ತರಗಳುಂಟು. ಆ ಉತ್ತರಗಳನ್ನೆಲ್ಲ ಅನುಕ್ರಮವಾಗಿ ಜೋಡಿಸಿದರೆ ಉದ್ದೇಶಿತವಾದ ಬೇರೊಂದು ಉತ್ತರ ಹೊರಡುತ್ತದೆ. ಕಾಳಿದಾಸಕವಿ ರಚಿತವಾದ 'ರಘುವಂಶ' ಕಾವ್ಯದ ಮಂಗಳಶ್ಲೋಕವೇ ಆ ಬೇರೊಂದು ಉತ್ತರ. ವಿಟನಿಗೆ ಅವನ ವೇಶ್ಯೆ, ''ಅಂತರ್ಲಾಪಿಯಿನುತ್ತರಂಬೇಳ್ದವನ ಚಿತ್ತಂಬಡೆದಿರ್ದಳ್'' ಎಂಬುದಾಗಿ ಕವಿ ತಿಳಿಸಿದ್ದಾನೆ. ಪ್ರಶ್ನೆ 'ಬಹಿರ್ಲಾಪಿ' (ಬಹಿಃಪ್ರಶ್ನೆ)ಯಾಗಿಯೂ ಉತ್ತರ 'ಅಂತರ್ಲಾಪಿ' (=ಅಂತಃಪ್ರಶ್ನೆ)ಯಾಗಿಯೂ ಇದ್ದಿತೆಂದು ಕವಿ ಹೇಳಿರುವುದು ವಿಚಿತ್ರವಾಗಿದೆ. ವಾಸ್ತವವಾಗಿ ಇದು ಬಹಿರಂತಃಪ್ರಶ್ನೆಯ ಲಕ್ಷ್ಯವಾಗಿದೆ.

ಪ್ರಶ್ನೆ–ಉತ್ತರಗಳು : ಬ್ರಹ್ಮಾಣೀ ಕಾ–ವಾಕ್; ಜನೇಷ್ಟಂ ದಧತಿ ಝುಡಿತಿ ಕೇ=ಅರ್ಥಾ; ತಾಪಸಾಂಗಂ ಚ ಕೀದೃಕ್–ವಿವಸಂ; ಪ್ರೀತಾ ಕಾ–ಸಂಪೃಕ್ತಾ; ವಿಶ್ವಂ ಕುತ್ರ ನಿವಸತಿ–ಜಾ (ಉ=ಪರಮೇಶ್ವರ; ಜ ಎಂಬುದರ ಸಪ್ತಮ್ಯಂತ ಜಾ); ವಿಬುಧಾಬೋಧನಂ ಕಿಂ=ವಾಕ್; ನೃಪಾಲಃ ಕಸ್ಯೈ ಸನ್ನದ್ಧಃ=ಅರ್ಥ ಪ್ರತಿಪತ್ತಯೇ; ಈಶಃ ಪತಿರಿತಿ ವಿದಿತಃ ಕಸ್ಯ—ಜಗತಃ; ವಂದ್ಯೌ ಚ ಕೌ=ಪಿತರೌ; ಕಿಂ ವಕ್ತೀಶಂ='ವಂದೇ'; ಕೌ ಜಗತ್ಸಂಹರಣ ಭರಣ ಕೌ—ಪಾರ್ವತೀಪ (=ಈಶ್ವರ), ರಮೇಶ್ವರ (=ವಿಷ್ಣು); ಕವೇಃ ಮಂಗಳೋಕ್ತಿಃ ಕಾ=ವಾಗರ್ಥಾವಿವ ಸಂಪೃಕ್ತೌ। ವಾಗರ್ಥಪ್ರತಿಪತ್ತಯೇ॥ ಜಗತಃ ಪಿತರೌ ವಂದೇ। ಪಾರ್ವತೀ ಪರಮೇಶ್ವರೌ॥ (ಕಾಳಿದಾಸನ 'ರಘುವಂಶ ಕಾವ್ಯ'ದ ಮಂಗಳಶ್ಲೋಕ).

ಒಂದು 'ಗಟ್ಟಿಪದ್ಯ'ದ ಪದ್ಯ :

ಬಲನ ಕೊಂದವನಾರು ದ್ರವ್ಯವ। ಗಳಿಸಿ ತ್ಯಾಗವನಾವ ಮಾಡುವ
ಒಲಿದು ಮಖರಕ್ಷಣೆಗೆ ರಾಮನವೊಯ್ದ ಮುನಿಯಾರು।
ಜ್ವಲನಸಖಗೇನೆಂದು ನುಡಿವರು। ತಿಳಿದು ಪೇಳೀ ಪ್ರಶ್ನೆಗುತ್ತರ
ದೊಳಗೆ ಮಧ್ಯಕ್ಷರಗಳಾತನು ನಿಮ್ಮ ರಕ್ಷಿಸಲಿ ॥ (೬೧)

ಇದಕ್ಕೆ ವಾಸವ, ಉದಾರಿ, ಕೌಶಿಕ ಮತ್ತು ಜವಗ ಎಂಬ ಶಬ್ದಗಳ ಮಧ್ಯಾಕ್ಷರಗಳಿಂದಾದ 'ಸದಾಶಿವ' ಎಂಬುದು ಉತ್ತರ.

ಜನಪದ ಸಾಹಿತ್ಯದಲ್ಲಿ ಒಗಟುಗಳಂತಹ ಪ್ರಶ್ನೋತ್ತರಗಳುಂಟು. ಪ್ರಹೇಳಿಕೆಯ ಲಕ್ಷಣಗಳಾದ ನಿಗೂಢತೆ, ಅಸಂಭಾವ್ಯತೆ, ಅಶ್ಲೀಲತೆಗಳನ್ನು ಅವುಗಳಲ್ಲಿ ಕಾಣುವುದರಿಂದ, ಅವು ಇಲ್ಲಿ 'ಪ್ರಶ್ನೋತ್ತರ'ಗಳ ಗುಂಪಿಗೆ ಸೇರಲು ತಕ್ಕವಾಗಿವೆ. ಸವಾಲು ಜವಾಬುಗಳಂತೆಯೇ ಇವು ಸಾಗುವುದನ್ನು ನಾವು ಗಮನಿಸಬಹುದು. ಒಗಟಿನಂತೆ ಮೇಲುನೋಟಕ್ಕೆ ಹೊರಡುವ ಪ್ರಶ್ನೆಗಳ ಅರ್ಥ ಕುತೂಹಲವನ್ನೂ ವಿಪರೀತಾರ್ಥವನ್ನೂ ಉಂಟುಮಾಡುತ್ತಿದ್ದು, ಉತ್ತರ ತಿಳಿದಾಗ ಕುತೂಹಲದ ತೃಪ್ತಿಯನ್ನೂ ಸಮುಚಿತಾರ್ಥವನ್ನು ತಿಳಿದ ಹರ್ಷವನ್ನೂ ಉಂಟುಮಾಡುತ್ತವೆ. ಇಲ್ಲಿ ಒಂದು ಉದಾಹರಣೆಯನ್ನೆತ್ತಿಕೊಡಬಹುದು :

ಮಾತಾಡ್ ಮಾತಾಡು ಮಲ್ಲಿಗೆ
ಸಂಪಿಗೆ ಶಾವಂತಿಗೆ ಗುಂಪಿನಲ್ಲಿ ಕೇದಿಗೆ ॥ ಪ ॥

ಒಬ್ಬೋನ ಕಟ್ಟಿದ್ದೆ, ಒಬ್ಬೋನ ಬಿಟ್ಟಿದ್ದೆ
ಒಬ್ಬೋನ ಕರಕೊಂಡು ಒಳಗ್ಹೋದೆ ಮಲ್ಲಿಗೆ ॥

ಯಾವೋನ ಕಟ್ಟಿದ್ದೆ ಯಾವೋನ ಬಿಟ್ಟಿದ್ದೆ
ಯಾವೋನ ಕರಕೊಂಡು ಒಳಗ್ಹೋದೆ ಮಲ್ಲಿಗೆ ?

ಹಸುವನ್ನು ಕಟ್ಟಿದ್ದೆ ಕರುವನ್ನು ಬಿಟ್ಟಿದ್ದೆ
ಹಾಲನ್ನು ಕರಕೊಂಡು ಒಳಗ್ಹೋದೆ ಮಲ್ಲಿಗೆ ॥ ೧ ॥

ಒಬ್ಬೋನ ನೂಕಿದ್ದೆ ಒಬ್ಬೋನ ಹಾಕಿದ್ದೆ
ಒಬ್ಬೋನ ಜೊತೆಯಲ್ಲಿ ತಿರುಗಿಬಂದೆ ಮಲ್ಲಿಗೆ ॥

ಯಾವೋನ ನೂಕಿದ್ದೆ ಯಾವೋನ ಹಾಕಿದ್ದೆ
ಯಾವೋನ ಜೊತೆಯಲ್ಲಿ ತಿರುಗಿಬಂದೆ ಮಲ್ಲಿಗೆ

ಕದವನ್ನು ನೂಕಿದ್ದೆ ಅಗಣೀಯ ಹಾಕಿದ್ದೆ
ದೀಪದ ಜೊತೆಯಲ್ಲಿ ತಿರುಗಿಬಂದೆ ಮಲ್ಲಿಗೆ ॥ ೨ ॥

ಒಬ್ಬೋನ ಹಾಸಿದ್ದೆ ಒಬ್ಬೋನ ಹೊದ್ದಿದ್ದೆ
ಒಬ್ಬೋನ ಎಳಕೊಂಡು ಮಲಗಿದ್ದೆ ಮಲ್ಲಿಗೆ ॥

ಯಾವೋನ ಹಾಸಿದ್ದೆ ಯಾವೋನ ಹೊದ್ದಿದ್ದೆ
ಯಾವೋನ ಎಳಕೊಂಡು ಮಲಗಿದ್ದೆ ಮಲ್ಲಿಗೆ ?

ಹಾಸಿಗೆ ಹಾಸಿದ್ದೆ ಕಂಬಳಿಯ ಹೊದ್ದಿದ್ದೆ
ತಲೆದಿಂಬ ಎಳಕೊಂಡು ಮಲಗಿದ್ದೆ ಮಲ್ಲಿಗೆ ॥ ೩ ॥

ಹೊಸಗನ್ನಡ ಕಾಲದ ಪ್ರಯತ್ನವಾಗಿ ಪಿ. ಬಸವಣ್ಣನವರ 'ನಿರೀಕ್ಷೆ' ಸಂಕಲನದ ಚಿತ್ರಕವಿತ್ವ ಗುಚ್ಛದಿಂದ ಅಲ್ಲಿಯ ಮೂರೂ ಉದಾಹರಣೆಗಳನ್ನು ಇಲ್ಲಿ ಎತ್ತಿಕೊಡಬಹುದಾಗಿದೆ.

ಕಲಿ ರಾವಣ ಸತಿಯ ಪಿತನ। ವಿಲೋಮನಾರ್ ತನ್ನ ಕಾಯ್ವರಂ ಕಾಯ್ವುದದೇನ್ ।
ಕುಲಮಂ ಬೆಳಗಿಪನಾವಂ । ಸಲೆ ಧರ್ಮಕಳಿದನ ತಿಳುಪು; ಯಮಧರ್ಮಸುತಂ ॥

ರಾವಣನ ತಂದೆ 'ಮಯ'; ಅದರ ವಿಲೋಮ 'ಯಮ'; ತನ್ನನ್ನು ರಕ್ಷಿಸಿದವನನ್ನು ರಕ್ಷಿಸುವುದು 'ಧರ್ಮ'; ಕುಲವನ್ನು ಬೆಳಗುವವನು 'ಸುತ'; ಧರ್ಮಕ್ಕಾಗಿ ಪ್ರಾಣ ತೆತ್ತವನು 'ಯಮಧರ್ಮಸುತ' (= ಧರ್ಮರಾಯ). ಉತ್ತರ ಪದ್ಯದ ಕೊನೆಯಲ್ಲಿಯೇ ಇದೆ. ಅಷ್ಟು ಭಾಗವನ್ನು ತೆರಪಾಗಿ ಬಿಟ್ಟು, ಪ್ರತ್ಯೇಕವಾಗಿ ಉತ್ತರವನ್ನು ತೋರಿಸಲೂ ಬಹುದು. ಇದು ಅಂತಃಪ್ರಶ್ನೆ (ಅಂತರ್ಲಾಪಿ).

ಸೀಮಂತಿನಿಯರೊಳಾರತಿಶಾಂತೆ। ರಾಜನ್ಯರುಗಳೊಳಾರ್ಕಲಿಭೀಮ ॥
ವಿದ್ವಜ್ಜನಗಳಿಗಾವುದು ವಂದ್ಯ । ಆದ್ಯಂತಗಳನು ಕೂಡಿಸಿ ನೋಡು ॥

'ಆದ್ಯಂತಗಳನು' ಎಂದರೆ, ಪ್ರತಿಪಾದದ ಆದ್ಯಂತಾಕ್ಷರಗಳನ್ನು ಎಂದು ಅರ್ಥ. ಆಗ ಸೀತೆ, ರಾಮ, ವಿದ್ಯ ಎಂಬ ಉತ್ತರಗಳು ಹೊರಡುತ್ತವೆ. ಈ ಉತ್ತರಗಳು ಪ್ರಶ್ನೆಯ ಪದ್ಯದಲ್ಲಿಯೇ ಇರುವುದರಿಂದ ಇದೂ 'ಅಂತರ್ಲಾಪಿ'ಯ ಲಕ್ಷ್ಯವೇ.

ಆವ ಪದದಾದ್ಯಕ್ಷರಂಗಳೆರಡಂ ಪಠಿಸೆ
ಸೇವೆಗೊಳ್ಳುವ ಗ್ರಹಂಗಳ ಸಂಖ್ಯೆಯಹುದು ಮೇ
ಣಾವುದರ ಕೊನೆಯಕ್ಕರಂಗಳೆರಡನ್ನೋದೆ ಮೃಗಗಳಾ ವಾಸವಹುದು
ಯಾವ ಪದ ತೀವಿ ಬೆಳೆದಿರುವ ಷೋಡಶಿಯ ತರು
ಣಾವಸ್ಥೆಯಂ ಸಾರಿ ಪೇಳ್ವುದೌ ಜಗಕೆ ಮ
ತ್ತಾವ ಪದಮಂ ವಿಲೋಮವೆಸಗಿದೊಡಂ ತಾನೆಯಹುದು ನವಯೌವನವತೀ ॥

ಗೂಢವಾದ ಪದದ ಆದ್ಯಕ್ಷರಗಳೆರಡು ಗ್ರಹಸಂಖ್ಯೆಯಾಗುವುದು ಎಂದರೆ ಅದು 'ನವ' ಎಂದಾಗಬೇಕು. ಅದೇ ಗೂಢಪದದ ಅಂತ್ಯಾಕ್ಷರಗಳೆರಡು ಮೃಗಗಳ ವಾಸಸ್ಥಾನವೆಂಬ ಅರ್ಥವನ್ನುಳ್ಳದು ಎಂದರೆ ಅದು 'ವನ' ಎಂದಾಗಬೇಕು. ಷೋಡಶಿಯ ತಾರುಣ್ಯವನ್ನು ಹೇಳುವ ಪದ ಎಂದರೆ 'ಯೌವನ'. ಉತ್ತರ 'ನವಯೌವನ' ಎಂದು ಇದರಿಂದ ತಿಳಿಯುವುದು. ಇದನ್ನು ವಿಲೋಮಗತಿಯಲ್ಲಿ ಓದಿದರೂ 'ನವಯೌವನ' ಎಂದೇ ಆಗುವುದು. ಪದ್ಯದಲ್ಲಿಯೇ 'ನವಯೌವನವತೀ' ಎಂಬ ಸಂಬೋಧನರೂಪದ ಕೊನೆಯ ಶಬ್ದದೊಳಗೆ ಈ ಶಬ್ದ ಹುದುಗಿಕೊಂಡಿರುವುದರಿಂದ ಇದು 'ಅಂತಃಪ್ರಶ್ನೆ'.

ಇದೇ ಲೇಖಕರ ಪೂರ್ವೋಕ್ತ ಸಂಕಲನದಿಂದಲೇ ಬೇರೊಂದು ಉದಾಹರಣೆ :

ಕಡೆದೊಡೆಯಲ್ಬುನಿಯಾಗುಂ। ನಡುದೊಡೆಯಲ್ಕೆನ್ನ ಯೆಂದಹುದು ಮೊದಲಿನದಂ।
ತೊಡೆಯಲ್ಕೆ ಮಂಜೆನಿಕ್ಕುಂ। ಕಡೆಯಿಂದೋದಲ್ಕೆ ತಾನೆಯಹುದ್ಯೆ ಮಿತ್ರಾ ॥

ಇದರ ಉತ್ತರ 'ಮಹಿಮ'. ಇದು ಬಹಿರ್ಲಾಪಿಗೆ ಲಕ್ಷ್ಯ.

ಪ್ರಶ್ನೋತ್ತರಗಳು

ಪ್ರಹೇಳಿಕೆಯ ವಿಭಾಗಕ್ಕೆ ಶುದ್ಧವಾಗಿ ಸೇರದ ಒಂದು ಗುಂಪಿನ ರಚನೆಗಳು ಇವು. ಮತಧರ್ಮ, ದರ್ಶನ, ಮತ್ತು ನೀತಿಯ ನಿರೂಪಣೆಗೆ ಪ್ರಶ್ನೋತ್ತರ ಪದ್ಧತಿಯನ್ನು ಬಳಸುವುದು ವೇದೋಪನಿಷತ್ತುಗಳ ಕಾಲದಿಂದ ಕಂಡುಬರುತ್ತದೆ. 'ಪ್ರಶ್ನೋಪನಿಷತ್ತು' ಈ ಬಗೆಯ ಒಳ್ಳೆಯ ಲಕ್ಷ್ಯಗ್ರಂಥ. ಪ್ರಶ್ನೋತ್ತರ ರೂಪದಲ್ಲಿ ತಿಳಿವಳಿಕೆಯ ಪ್ರಸಾರ ಅನುಕೂಲಕರವಾಗಿ ತೋರಿದ್ದು, ಮಧ್ಯಕಾಲೀನ ಸಂಸ್ಕೃತ ಪ್ರಾಕೃತ ಸಾಹಿತ್ಯದಲ್ಲಿ ಈ ಪದ್ಧತಿ ವಿಶೇಷವಾಗಿ ಪ್ರಚಾರವಾದಂತೆ ತೋರುತ್ತದೆ.

ಬೌದ್ಧಸಾಹಿತ್ಯದ 'ಮಿಲಿಂದಪಹ್ನ'ದಂತಹ ಪಾಲಿಕೃತಿಗಳು, ವೈದಿಕ ಸಾಹಿತ್ಯದ 'ಪ್ರಶ್ನೋತ್ತರ ಮಾಲೆ'ಗಳಂತಹ ಸಂಸ್ಕೃತಕೃತಿಗಳು ಹಳೆಯ 'ಬ್ರಹ್ಮೋದ್ಯ' ಸಂಪ್ರದಾಯದ ಕವಲುಗಳು. ಮತಧಾರ್ಮಿಕ ಹಾಗೂ ಪ್ರಾಯೋಗಿಕ ನೀತಿಗಳ ಸಮ್ಮಿಶ್ರಣಗಳೆನ್ನಬಹುದಾದ ಈ ಪ್ರಶ್ನೋತ್ತರ ರಚನೆಗಳು ಚುಟುಕುಮಾತುಗಳ ರಚನೆಗಳು. ಮತಧರ್ಮಪರವಾದವು ವಿಸ್ತಾರಗುಣದವು, ಸಡಿಲವಾದ ಬಂಧಲಕ್ಷಣವುಳ್ಳವು. 'ಮಹಾಭಾರತ'ದ ವನಪರ್ವದಲ್ಲಿ ಬರುವ 'ಯಕ್ಷಪ್ರಶ್ನ' ಧರ್ಮ ನೀತಿಗಳ ಒಂದು ಒಳ್ಳೆಯ ಸಂಹಿತೆ. ವೈದಿಕ ಸಂಪ್ರದಾಯದ ಕವಿಗಳಿಗೆ ಒಳ್ಳೆಯ ಮಾದರಿಯಾಗಿ, ಬೌದ್ಧ ಜೈನ ಕವಿಗಳಿಗಿಂತ ಅವರು ಈ ಪದ್ಧತಿಯನ್ನು ಹೃದ್ಯವಾಗಿ ಬಳಸುವುದು ಇಂತಹ ಸಂಪ್ರದಾಯದಿಂದಾಗಿಯೇ ಸಾಧ್ಯವಾಗಿರಬೇಕು. ವೈದಿಕೇತರ ಕವಿಗಳು ಕಲ್ಪಿತಕಥೆಗಳನ್ನು ಸೊಗಸಾಗಿ ಬಳಸಿಕೊಂಡುದು ಕಾಣುತ್ತದೆ.[54]

ಈ ಬಗೆಯ ರಚನೆಗಳಲ್ಲಿ ಶುಕಮುನಿಯದೆಂಬ 'ಪ್ರಶ್ನೋತ್ತರಮಾಲೆ', ಶಂಕರಾಚಾರ್ಯರದೆಂಬ 'ಪ್ರಶ್ನೋತ್ತರ ರತ್ನಮಾಲಿಕಾ'[55], ಅಮೋಘವರ್ಷನದೆಂಬ 'ಪ್ರಶ್ನೋತ್ತರ ರತ್ನಮಾಲಿಕಾ' ಕೆಲವು ಎನ್ನಬಹುದು.

(೧) ಶುಕನ 'ಪ್ರಶ್ನೋತ್ತರಮಾಲೆ'ಯಿಂದ ಒಂದು ಉದಾಹರಣೆ :

ಕೋ ವಾ ದರಿದ್ರೋ ಽತಿ ವಿಶಾಲತೃಷ್ಣಾ। ಶ್ರೀಮಾನ್ ಚ ಕೋ ಯಸ್ಯ ಮನಶ್ಚ ತುಷ್ಟಂ।
ಜೀವನ್ಮೃತಃ ಕಸ್ತು ನಿರುದ್ಯಮೋ ಯಃ। ಕಾ ವಾ ಮೃತಿರ್ ದೀನಜನೇ ದುರಾಶಾ ॥

ದರಿದ್ರನು ಯಾರು? ಆಸೆಬುರುಕ. ಶ್ರೀಮಂತನು ಯಾರು? ತೃಪ್ತಮನುಷ್ಯ. ಜೀವನ್ಮೃತನು ಯಾರು? ನಿರುದ್ಯೋಗಿ. ಸಾವಿಗೆ ಸಮಾನವಾದ್ದು ಯಾವುದು? ದೀನಜನರಲ್ಲಿ ದುರಾಶೆ.

(೨) ಶಂಕರರ ಹೆಸರಿನ 'ಪ್ರಶ್ನೋತ್ತರ ರತ್ನಮಾಲಿಕಾ'ದಲ್ಲಿ ೧೮೦ ಪ್ರಶ್ನೆಗಳು ಇವೆ. ಅವುಗಳಿಗೆ ಆಚಾರ್ಯರೇ ಸೂಚಿಸಿದ ಅರ್ಥಗಳೊಂದಿಗೆ ೬೫ ಶ್ಲೋಕಗಳು ಸಂಗ್ರಹಿತವಾಗಿವೆ. ಒಂದು ಉದಾಹರಣೆ :

ಕಿಂ ಜೀವಿತಮನವದ್ಯಂ। ಕಿಂ ಜಾಡ್ಯಂ ಪಾಠತೋಽಪ್ಯನಭ್ಯಾಸಃ।
ಕೋ ಜಾಗರ್ತಿ ವಿವೇಕೀ। ಕಾ ನಿದ್ರಾ ಮೂಢತಾ ಜಂತೋಃ ॥

ಶ್ರೇಷ್ಠವಾದ ಬಾಳು ಯಾವುದು? ದೋಷವಿಲ್ಲದೆ ಇರುವುದು. ದಡ್ಡತನ ಯಾವುದು? ಓದು, ಅಭ್ಯಾಸ ಇಲ್ಲದೆ ಇರುವಿಕೆ. ಎಚ್ಚರವುಳ್ಳವನಾರು? ವಿವೇಕಿ. ನಿದ್ರೆ ಯಾವುದು? ಮನುಷ್ಯನ ಮೂಢತನ (ಈ ಪದ್ಯ ಅಮೋಘವರ್ಷನ ಕೃತಿಯಲ್ಲಿಯೂ ಉಂಟು).

(೩) ಅಮೋಘವರ್ಷನ ಹೆಸರಿನಲ್ಲಿ 'ಪ್ರಶ್ನೋತ್ತರ ರತ್ನಮಾಲಿಕಾ' ಎಂಬ ಕೃತಿಯಿದ್ದು[56], ಇದರಲ್ಲಿ ೩೦

ಪದ್ಯಗಳಿವೆ. ಇವುಗಳ ಸಂಕಲನಕ್ಕೆ ಒಂದು ಹಳಗನ್ನಡ ಟೀಕೆಯಿದ್ದು, ಇದರ ಕಾಲ ಕರ್ತೃಗಳು ತಿಳಿಯವು. ಎರಡು ಉದಾಹರಣೆಗಳು :

ಕಸ್ಮಾದ್ ಭಯಮಿಹ ಮರಣಾ । ದಂಧಾದಪಿ ಕೋ ವಿಶಿಷ್ಯತೇ ರಾಗೀ ।
ಕಃ ಶೂರೋ ಯೋ ಲಲನಾ । ಲೋಚನಬಾಣೈರ್ನ ಚ ವ್ಯಥಿತಃ ॥

"ಇಹ–ಸಂಸಾರದೊಳು, ಕಸ್ಮಾದ್ ಭಯಂ–ಆವುದರತ್ತಣಿಂ ಭಯಮಕ್ಕುಮೆಂದೊಡೆ, ಮರಣಾತ್–ತನ್ನ ಪ್ರಾಣಮಂ ನೋವಲ್ಪಿಡೆಗೊಟ್ಟ ಮೊದಲಾಗೊಡೆಯನೆ ಕೋಪಾದಿಯಂಗಳನಾಂತು ಗೆಯ್ವನು, ಧರ್ಮಮನರಿಯದ ಜ್ಞಾನಿ ಜನಂಗಳ್ ಭಯಂಬಡುಗುಮೆಂಬುದಿದರ ಅರ್ಥ. ಅಂಧಾತ್ ಅಪಿ–ಕುರುಡನತ್ತಣಿಂ ಮತ್ತೆ ಆವನು ವಿಶೇಷಿಸಲ್ಕೆ ಪಡುವನು. ರಾಗೀ–ಇಂದ್ರಿಯವಿಷಯಂಗಳೊಳಪ್ಪ ರಾಗಮನುಳ್ಳವನು ಕುರುಡನತ್ತಣಿಂ ವಿಶೇಷಿಸಲ್ಪಟ್ಟ ಕುರುಡನೆಂಬುದರ್ಥ. ಕಃ–ಆವನು, ಶೂರಃ–ಕಲಿಯೆಂದೊಡೆ, ಲಲನಾಲೋಚನಬಾಣೈಃ–ಅನಂತಾನಂತ ಸಂಸಾರವನ್ನು ಪೆರ್ಚಿಸುವಂತಪ್ಪ ಸ್ತ್ರೀಯರ್ಕಳ ಕಡೆಗಣ್ಣ ನೋಟವೆಂಬಂಬುಗಳಿಂದಂ, ಯಃ–ಆವನೊರ್ವನು ತನ್ನ ಮನವ, ನ ಚ ವ್ಯಥಿತಃ–ನೋಯಲಿಸದಾತನೇ ಕಲಿ ಎಂಬುದರ್ಥ.

ಸ್ತ್ರೀವಿಷಯಂ ಮೊದಲಾಗೊಡೆಯ ರಾಗಮಂ ಪತ್ತುವಿಟ್ಟು ಅಡಿಗಡಿಗೆ ಸಾವ ಹುಟ್ಟುವ ದುಃಖಕ್ಕಂಜುವವರುಗಳು ಕೊಲ್ಲೆ ಇಲ್ಲದೆ ಜೈನಧರ್ಮದೊಳು ನೆಗಳಲು ವೇಳ್ಪುಮೆಂಬುದಿದರ ತಾತ್ಪರ್ಯಂ."

ಕಿಂ ಗಹನಂ ಸ್ತ್ರೀಚರಿತಂ । ಕಶ್ಚತುರೋ ಯೋ ಖಂಡಿತಸ್ತೇನ ।
ಕಿಂ ದಾರಿದ್ರ್ಯಮಸಂತೋಷ । ಷ ಏವ ಕಿಂ ಲಾಘವಂ ಯಾಚಾವತ್ ॥

"ಗಹನಂ–ಸಂಸಾರವೆಂಬ ದುರ್ಗಂ, ಕಿಂ–ಏನು ಎಂದೊಡೆ, ಸ್ತ್ರೀಚರಿತಂ-ಸ್ತ್ರೀಯರ್ಕಳ ನೆಗಳ್ತೆಯೆ ಸಂಸಾರಮೆಂಬಡವಿ, ಚತುರಃ–ಬುದ್ಧಿಮಂತನು, ಕಃ–ಆವನು, ಯಃ-ಆವನೊರ್ವನು, ತೇನ–ಆ ಸ್ತ್ರೀಯರ್ಕಳ ನೆಗಳ್ತೆಯಿಂದಂ, ನ ಖಂಡಿತಃ–ಬಾಧಿಸಲ್ಪಡದವನು, ಆತನೇ ಚತುರನು, ಕಿಂ ಏನು, ದಾರಿದ್ರ್ಯಂ–ಬಡತನವು, ಅಸಂತೋಷಃ= ಕೋಟ್ಯಾನುಕೋಟಿ ದ್ರವ್ಯವುಳ್ಳೊಡಂ ತಣಿವಿಲ್ಲದಾತನೇ ದರಿದ್ರನೆಂಬುದರ್ಥಂ. ಕಿಂ–ಏನು, ಲಾಘವಂ–ಹುಲ್ಲು ಕಡ್ಡಿಯಿಂದೆ ನೊಚ್ಚಿತು ಎಂದೊಡೆ, ಯಾಚಾಂ–ಬೇಡಿ ಬಪ್ಪ ಮನುಷ್ಯನು, ಹುಲ್ಲಿಂದ ನೊಚ್ಚಿದನೆಂಬುದರ್ಥ.

ಸ್ತ್ರೀವಿಷಯಂ ನೊದಲಾಗೊಡೆಯಮಂ ಪತ್ತುವಿಟ್ಟು ಆತ್ಮಾನುಷ್ಠಾನ ಮನದೊಳು ಸಂತೋಷವನುಳ್ಳವರ್ಗಳುಮೇನುಮಂ ಬೇಡದಿಹರ ಜನ್ಮಮೇ ಸಫಲ ಎಂಬುದಿದರ ತಾತ್ಪರ್ಯಂ."

ಪ್ರಶ್ನೆಗಳಿಗೆ ಉತ್ತರ ಸೂಚಿಸಿರದ, ಪ್ರಶ್ನಮಾಲಿಕೆಗೆ ಕನಕದಾಸರ ಒಂದು ಕೀರ್ತನೆಯನ್ನು ಮುಂದೆ ಉದ್ಧರಿಸಬಹುದು. ಇದನ್ನು ಮಹಾಭಾರತದೊಳಗಿನ 'ಕೂಟಪ್ರಶ್ನೆ'ಯಂತೆ ತಿಳಿಯಬಹುದೇ, ವಿಚಾರಣೀಯ. ಕೂಟಪ್ರಶ್ನಗಳ ಹಾಗೆ ಇಲ್ಲಿಯ ಪ್ರಶ್ನೆಗಳು ಕಠಿನವಾದವಲ್ಲ ಎಂದು ತೋರುತ್ತದೆ ; ಹೀಗಿದ್ದೂ ಈ ಕೀರ್ತನೆಯ ಪ್ರಶ್ನೆಗಳಿಗೆ ಉತ್ತರಗಳು ಹೊಳೆಯುತ್ತಿಲ್ಲ.

ಬಲ್ಲವರು ಪೇಳಿರೈ ಬಹುವಿಧದ ಚತುರತೆಯ
ಎಲ್ಲರಿಗು ಸಮ್ಮತವು ಏಕಾಂತವಲ್ಲ ॥ ಪ ॥

ಕಂಕಣಕೆ ಮೊದಲೇನು ಕಾಮರ್ುಗಿಲ ಕಡೆಯೇನು
ಶಂಕರನ ಮೊಮ್ಮಗನ ಮುಖದ ಸಿರಿಯೇನು
ಪಂಕಜಕೆ ಕುರುಹೇನು ಪಾರ್ಥಿಯಳ ತಪವೇನು
ಅಂಕಿತಕೆ ಕುರುಹೇನು ಅಜನ ಗುಣವೇನು ? ॥ ೧ ॥

ಕವಿಗಳಿಗೆ ಕಣ್ಣೇನು ಕಾವನಿರುಹುಗಳೇನು
ಲಲನೆಯರ ಒಲಿಸುವ........ಇದೇನು
ನೆಲಗಳಿಗೆ ಸಾಕ್ಷಿಯೇನು ನ್ಯಾಯದಾ ಪರಿಯೇನು
ಬಲವ ನಿಲಿಸುವುದೇನು ಭಾಗ್ಯವು ಇದುಯೇನು ? ॥ ೨ ॥

ಸತ್ಯಕ್ಕೆ ಕುರುಹೇನು ಪೃಥ್ವಿಗೆ ಕಡೆಯೇನು
ಚಿತ್ತವನು ಸೆಳೆದೊಯ್ವ ಕಪಟವು ಇದೇನು
ಮರ್ತ್ಯದೊಳು ಕಾಗಿನೆಲೆಯಾದಿಕೇಶವನಂಘ್ರಿ
ಅರ್ತಿಯಿಂದಲಿ ಕೂಡಿದುದಕೆ ಫಲವೇನು? ‖ ೩ ‖

(ಕನಕದಾಸರ ಭಕ್ತಿಗೀತಗಳು, ೧೬೩)

ಆಶುಕವಿ ಕೃಷ್ಣಶರ್ಮನ ‘ ಸರಜಾ ಹನುಮೇಂದ್ರ ಯಶೋವಿಲಾಸ’ (ಸು. ೧೭೦೦)ದಲ್ಲಿ ಚಮತ್ಕಾರ ಕವಿತೆಯ ವೈಚಿತ್ರ್ಯಗಳಿದ್ದು, ಒಂದೆಡೆ ‘ ಕವಿಯ ಗುಟ್ಟು ’ ಎಂದು ಕವಿಯೇ ಸೂಚಿಸಿರುವಂತೆ ತೋರುವ ಈ ಪದ್ಯಾಂಶವಿದೆ :

ಏಣ್ಗುಟ್ಟುಂದಳದ ಸಿಂಧುರದ ಪೆಸರಿನೊಳ್ಕಾದಲರ್ಕಾದಲರಿಂಗೆ ‖
. . . . . .
. . . . . ಗೆ ‖

ಕವಿ ಸ್ವಲ್ಪ ಭಾಗ ಬರೆದು, ಇನ್ನು ಸ್ವಲ್ಪ ಭಾಗವನ್ನು ಓದುವವರ ಊಹೆಗೆ ಬಿಟ್ಟಿರುವಂತೆ ತೋರುವುದು. ಉದ್ಧರಿಸಿರುವ ಭಾಗ ಏನನ್ನು ಹೇಳುವುದೋ ತಿಳಿಯುತ್ತಿಲ್ಲ. ಅಲ್ಲಿ ಪಾಠದೋಷಗಳಿರುವಂತಿದೆ. “ ಆನೆಯ ಹೆಸರಿನಲ್ಲಿ ಪ್ರಿಯರು ಪ್ರಿಯರಿಗೆ ” ಎಂದರೆ ಏನೆಂಬುದು ತಿಳಿಯುವುದಿಲ್ಲ. ಅಂತೂ ಇದೊಂದು ವಿರಳರೀತಿಯ ಚಮತ್ಕಾರವನ್ನು ಕವಿ ಉದ್ದೇಶಿಸಿದ್ದು, ಇಂತಹುದು ಕನ್ನಡ ಸಾಹಿತ್ಯದಲ್ಲಿ ಬೇರೆ ಕಂಡುಬಂದಿಲ್ಲ.

ಪಿ. ಬಸವಣ್ಣನವರ ‘ ನಿರೀಕ್ಷೆ ’ ಕವನ ಸಂಕಲನದ (೧೯೭೫) ‘ ಚಿತ್ರಕವಿತ್ವ ’ದ ಪದ್ಯಗುಚ್ಛದಿಂದ ಎರಡು ‘ ಪ್ರಶ್ನೋತ್ತರ ’ಗಳನ್ನು ಮುಂದೆ ಉದಾಹರಿಸಿದೆ :

ಮರಣದೇವತೆಯಾರು ಜೀವಕಾಧಾರಮೇನ್
ಸುರರೊಡೆಯನಾರ್ ರೋಹಿಣೀಪತಿಯ ಹೆಸರೇನು
ಹರನ ಬಲಗಣ್ಣೇನು ವೈಕುಂಠಪತಿ ಯಾರು ಗಜಕೆ ನಿಜಶತ್ರುವಾರು
ಕರೆದು ನಿಜಶಿಷ್ಯನಂ ಬಳಿಯಲ್ಲಿ ಕುಳ್ಳಿರಿಸಿ
ಗುರುವೊಮ್ಮೆ ಮೇಲೊರೆದ ಪ್ರಶ್ನೆಗಳಿಗೆಲ್ಲಕಂ
ಸರಿಯೊಂದೆ ಮಾತಿನೊಳಗುತ್ತರವ ನೀಡೆನಲು ಹರಿಯೆಂದರ್ ಪೇಳ್ವನೆಂದಂ ‖

ಹಲವು ಪ್ರಶ್ನೆಗಳಿಗೆ ಒಂದೇ ಉತ್ತರ : ‘ ಹರಿ ’. ಹರಿ ಶಬ್ದದ ನಾನಾರ್ಥಗಳಿಂದ ಇದು ಸಿದ್ಧವಾಗಿದೆ (ಯಮ, ವಾಯು, ಇಂದ್ರ, ಚಂದ್ರ, ಸೂರ್ಯ, ವಿಷ್ಣು, ಸಿಂಹ).

ಶರವ ತಾ ಶಂಕರಿಯೆ ಬಾಣಮೆನ್ನೊಳಿಹುದೇಂ
ಹರಿತದಂಬಲ್ಲ ಕಂಬುಗ್ರೀವೆ ವನಮನಾ
ಪರಿ ಕೇಳ್ದ ವಿಪಿನವನ್ನೆಂತೀವೆ ಕಾಡಲ್ಲವಾ ಕಾಂತೆ ಜೀವನಕ್ಕೆ
ಪರಿತಪಿಪೆ ನಾಂ ಜಾಯೆ ವಿಪುಲಧನವಿರಲೇನು
ಕೊರತೆ ಸಿರಿಗಲ್ಲವಾ ಸಿಂಗಾರಿ ಬಾಯಾರಿ
ಸೊರಗಿ ನೀರಂ ಕೇಳ್ದೆನೆನಲತಿಜವದೊಳುದಕವನ್ನೀಯೆ ತೋಷವಾಂತೆಂ ‖

ಇಲ್ಲಿಯ ಪ್ರಶ್ನೋತ್ತರದ ರೀತಿ ಭಿನ್ನವಾದ್ದು. ‘ನೀರು’ ಎಂಬ ಕನ್ನಡ ಶಬ್ದದ ಸಂಸ್ಕೃತ ಪರ್ಯಾಯ ಶಬ್ದಗಳು ಅವುಗಳಿಗಿರುವ ನಾನಾರ್ಥಗಳ ದೆಸೆಯಿಂದ ಉಂಟುಮಾಡುವ ಭ್ರಾಂತಿಯನ್ನು ಮೇಲೆ ಲಕ್ಷ್ಯವಾಗಿಟ್ಟುಕೊಂಡು ಪದ್ಯರಚನೆಮಾಡಿದೆ.

ಸಮಸ್ಯೆಗಳು

ಪ್ರಹೇಳಿಕೆಯ ಮತ್ತೊಂದು ಪ್ರಕಾರ ‘ಸಮಸ್ಯೆ’. “ಸಮಸ್ಯಾ ತು ಸಮಾಸಾರ್ಥಾ” ಎಂದು ಅಮರ ಕೋಶದಲ್ಲಿ (೧–೬–೧೮೧) ಹೇಳಿರುವ ಪ್ರಕಾರ “ಕವಿಶಕ್ತಿ ಪರಿಜ್ಞಾನಾರ್ಥವಾಗಿ ಪೂರೈಸುವುದಕ್ಕೆ ಕೊಡುವ

ಪದ್ಯದ ಕೆಲವು ಭಾಗ'' ಎಂದು ಅಭಿಪ್ರಾಯವಾಗುವುದು. 'ಸಮಸ್ಯೆ'ಯೆಂದರೆ 'ಸಂಘಟಿಸುವುದು' ಎಂದರ್ಥ. ಅಪೂರ್ಣವಾಗಿರುವುದನ್ನು ಪೂರ್ಣಗೊಳಿಸುವುದು, ತುಂಬುವುದು ಸಾಧ್ಯವಿರುವ ಪದ್ಯಾತ್ಮಕವಾದ ಪ್ರಹೇಳಿಕೆಯೇ ಸಮಸ್ಯೆ. ಕವಿತ್ವರಚನೆಯ ಕೆಳಹಂತದ ಈ ಪ್ರಕಾರ ಮಧ್ಯಕಾಲೀನ ಭಾರತದಲ್ಲಿ ತುಂಬ ಜನಪ್ರಿಯವಾಗಿದ್ದಿರ ಬೇಕು ಎಂದು ಭಾವಿಸಲಾಗಿದೆ. ವಾತ್ಸ್ಯಾಯನ ಕಾಮಸೂತ್ರದಲ್ಲಿ 'ಕಾವ್ಯಸಮಸ್ಯಾಪೂರಣ'ವನ್ನು ಚತುಷ್ಷಷ್ಟಿ ಕಲೆಗಳಲ್ಲಿ ಒಂದು ಕಲೆಯನ್ನಾಗಿ ಗುರುತಿಸಿದೆ.

ಸಮಸ್ಯೆಯ ಸ್ವರೂಪ ಹೀಗಿದೆ : ಪದ್ಯವೊಂದು ನಾಲ್ಕು ಪಾದಗಳಲ್ಲಿದ್ದರೆ, ಅದರ ಮೊದಲ ಮೂರು ಪಾದ ಗಳಲ್ಲಿ ಇಲ್ಲವೆ ಎರಡು ಪಾದಗಳಲ್ಲಿದ್ದರೆ, ಅದರ ಮೊದಲ ಪಾದದಲ್ಲಿ ಒಂದೋ ಹಲವೋ ಪ್ರಶ್ನೆಗಳನ್ನು ಕೇಳಿರುತ್ತದೆ ಅಥವಾ ವಿಲಕ್ಷಣಸಂಗತಿಯೊಂದನ್ನು ನಿರೂಪಿಸಿರುತ್ತದೆ. ಉತ್ತರ ಕೊನೆಯ ಪಾದದಲ್ಲಿ ಬರುತ್ತದೆ. ಹೀಗಲ್ಲದೆ ಮೊದಲೇ ಉತ್ತರದ ಭಾಗವಿದ್ದು, ಆ ಬಳಿಕ ಪ್ರಶ್ನೆಗಳ ಭಾಗ ಬರಲೂಬಹುದು. ಪದ್ಯವೊಂದರ ಭಾಗವನ್ನು ಹಾಗೆ ಪೂರ್ಣಗೊಳಿಸುವುದಕ್ಕೆ ಅಥವಾ ತುಂಬುವುದಕ್ಕೆ ಇನ್ನೊಬ್ಬರಿಗೆ ಹೇಳಿದರೆ, ಅವರು ಆ ಪದ್ಯದ ಭಾಗ ಯಾವ ಛಂದಸ್ಸಿನಲ್ಲಿದೆಯೋ ಅದೇ ಛಂದಸ್ಸಿನಲ್ಲಿ ಅರ್ಥಾನ್ವಯಗಳು ಸಮಂಜಸವಾಗಿ ಆಗುವಂತೆಯೂ ಭಾಷಾವ್ಯಾಕರಣ ನಿಯಮಗಳಿಗೆ ಹೊಂದಿಕೊಳ್ಳುವಂತೆಯೂ ಸಮಗ್ರಪದ್ಯವನ್ನು ರೂಪಿಸಬೇಕಾಗುತ್ತದೆ. ಹೀಗೆ ರೂಪಿಸುವುದನ್ನು 'ಸಮಸ್ಯಾಪೂರ್ತಿ', 'ಸಮಸ್ಯಾಪೂರಣ' ಎಂದು ಕರೆಯಲಾಗುವುದು. ಸಮಸ್ಯೆಯಲ್ಲಿ ಪೂರೈಸುವುದು ಗಾದೆಯೋ ನುಡಿಗಟ್ಟೋ ಆಗಿದ್ದರೆ ಅದನ್ನು 'ಆಭಾಣಕ' ಎನ್ನುತ್ತಾರೆ.

ನಮ್ಮ ದೇಶದಲ್ಲಿ ದೊರೆಗಳ ಹಾಗೂ ಆಸ್ಥಾನಿಕರ ವಿನೋದಕಾಲಕ್ಷೇಪವಾಗಿ ಸಮಸ್ಯೆ ಒಂದು ಕಾಲಕ್ಕೆ ತುಂಬ ಜನಪ್ರಿಯವಾಗಿದ್ದಂತೆ ತೋರುವುದು. 'ಭೋಜಪ್ರಬಂಧ'ದಲ್ಲಿ ಪದ್ಯಾತ್ಮಕ ಸಮಸ್ಯೆಗಳು ಹಲವನ್ನು ಕೊಟ್ಟಿದೆ. ಕಾಳಿದಾಸಕವಿಯ ವಿಚಾರದಲ್ಲಿ ಸಮಸ್ಯಾಪೂರ್ತಿಯ ಐತಿಹ್ಯಗಳು ಹೆಚ್ಚು. ಸಂಸ್ಕೃತ ಭಾಷೆಯಲ್ಲಿ ಸಮಸ್ಯೆಗಳು ಶ್ಲೋಕರೂಪದಲ್ಲಿರುವುದು ಸಾಮಾನ್ಯವಾದರೂ ವೃತ್ತರೂಪವಾಗಿಯೂ ಇರಬಹುದು. ಸಮಸ್ಯೆಯಾಗಿ ಕೊಡುವ ಭಾಗ ಪದ್ಯದ ಆದಿಯ ಅಥವಾ ಅಂತ್ಯದ ಒಂದೋ ಎರಡೋ ಪಾದಗಳಾಗಿರಬಹುದಾದರೂ ಸಾಮಾನ್ಯವಾಗಿ ಕೊನೆಯ ಪಾದವನ್ನು ಕೊಡುವುದೇ ಹೆಚ್ಚು ರೂಢಿಯಾದ್ದು. ಪ್ರಸಿದ್ಧ ಕವಿಗಳ ಪದ್ಯಗಳ ಪಾದಗಳು, ಉತ್ತಮವೂ ಸ್ವಾರಸ್ಯಕರವೂ ಆದವು, ಸಮಸ್ಯೆಗೆ ಪದ್ಯಪಾದಗಳನ್ನು ಕೊಡುವವರ ಹಾಗೂ ಅವುಗಳಿಂದ ಸಮಸ್ಯಾಪೂರ್ತಿ ಮಾಡುವವರ ಸ್ಮರಣಶಕ್ತಿ, ಬುದ್ಧಿಶಕ್ತಿಗಳಿಗೆ ಒಳ್ಳೆಯ ನಿಕಷಗಳೆನ್ನಬಹುದು. ಕೆಲವೊಮ್ಮೆ ಆಪಾತತಃ ಅಪಾರ್ಥಕವೋ ಆಭಾಸಕರವೋ ಆದ ಪಾದಗಳನ್ನು ಕೊಟ್ಟು, ಉಳಿದ ಭಾಗವನ್ನು ಪೂರೈಸುವಾಗ ಆ ತೋರಿಕೆಯ ಅಪಾರ್ಥ ಆಭಾಸಗಳು ನಿವೃತ್ತಿಯಾಗುವಂತೆ, ಪದ್ಯಾರ್ಥ ಗಂಭೀರವೂ ವಿಹಿತವೂ ಆಗುವಂತೆ ರಚನೆಯ ಕೌಶಲ ವನ್ನು ಮೆರೆಯುವುದೂ ಉಂಟು. ಈ ಎರಡನೆಯ ಗುಂಪಿನವುಗಳಲ್ಲಿ, ವಿನೋದಮೂಲವಾದ ಆಶುಕವಿತ್ವದ ಚಮತ್ಕಾರವನ್ನು ಮನಗಾಣಬಹುದು. ರಾಜಾಸ್ಥಾನಗಳಲ್ಲಿ, ಅದಕ್ಕಿಂತ ಹೆಚ್ಚಾಗಿ ಕವಿ ಸಹೃದಯರ ಪ್ರತ್ಯೇಕ ಗೋಷ್ಠಿಗಳಲ್ಲಿ ಈ ಬಗೆಯ ಕವಿತಾಕಾಲಕ್ಷೇಪದ ವಿನೋದವಿಹಾರಗಳು ನಡೆಯುತ್ತಿದ್ದುವೆಂದು ತೋರುತ್ತದೆ. ತೆಲುಗು ದೇಶದಲ್ಲಿ ಇದು ತುಂಬ ಸಾಮಾನ್ಯವಾಗಿದ್ದು, ರಾವಿಪಾಟಿ ಲಕ್ಷ್ಮೀನಾರಾಯಣ ಎಂಬುವರು 'ಸಮಸ್ಯಾ ಪೂರಣ' ಎಂಬ ತಮ್ಮ ಸಮಸ್ಯೆಗಳ ಸಂಕಲನವನ್ನೇ ಪ್ರಕಟಿಸಿದ್ದಾರೆ. ಸಾಮಾನ್ಯವಾಗಿ ಇವು ಸ್ವರೂಪದಲ್ಲಿ ನಮ್ಮ 'ಕಂತಿ ಪಂಪನ ಸಮಸ್ಯೆಗಳು' ಕೃತಿಯ ಸಮಸ್ಯೆಗಳಿಗೆ ಸದೃಶವಾಗಿರುತ್ತವೆ ಎನ್ನಬಹುದು. ಸಮಸ್ಯಾ ಪೂರ್ತಿಯ ಕಾವ್ಯರಚನೆಯಲ್ಲಿ ಕರ್ನಾಟಕದ ಕಿತ್ತೂರಿನ ನರಸಿಂಹಾಚಾರ್ಯ ಭೀಮಾಚಾರ್ಯ ಪುಣೇಕರ ಅವರು ಪ್ರಸಿದ್ಧರಾಗಿದ್ದರೆಂದು ತಿಳಿಯುತ್ತದೆ.

ಸಂಸ್ಕೃತದಲ್ಲಿ ಪ್ರತ್ಯೇಕವಾಗಿ ಸಮಸ್ಯೆಗಳ ಬಗ್ಗೆ ಲಕ್ಷಣ–ಲಕ್ಷ್ಯ ನಿರೂಪಣೆಯನ್ನು ಪ್ರಾಚೀನ ಆಲಂಕಾರಿಕರು ಮಾಡಿರುವಂತೆ ತೋರುವುದಿಲ್ಲ. ಈಚೆಯ 'ಭೋಜಪ್ರಬಂಧ'ದಂತಹ ಗ್ರಂಥಗಳಲ್ಲಿ, ಸುಭಾಷಿತ ಸಂಗ್ರಹಗಳಲ್ಲಿ ಇಂತಹ ಸಮಸ್ಯೆಗಳನ್ನು ಸಂಗ್ರಹಿಸಿಕೊಟ್ಟಿರುವುದುಂಟು. ಉದಾಹರಣೆಗೆ, ಪ್ರಸಿದ್ಧವಾದ 'ಸುಭಾಷಿತರತ್ನ ಭಾಂಡಾಗಾರ'ವೆಂಬ ಸಂಕಲನದಲ್ಲಿ, ಅದರ ನಾಲ್ಕನೆಯ ಚಿತ್ರಪ್ರಕರಣದಲ್ಲಿ ೭೭ ಸಮಸ್ಯೆ

ಗಳನ್ನು 'ಸಮಸ್ಯಾಖ್ಯಾನ' ಎಂಬ ಶೀರ್ಷಿಕೆಯ ಕೆಳಗೆ, ತಕ್ಕ ಸೂಚನೆಗಳೊಂದಿಗೆ ಸಂಗ್ರಹಿಸಿಕೊಟ್ಟಿರುವುದನ್ನು ಗಮನಿಸಬಹುದು.

ಮಾದರಿಗೆ ಸಂಸ್ಕೃತ ಸಮಸ್ಯೆಗಳನ್ನು 'ಸುಭಾಷಿತರತ್ನ ಭಾಂಡಾಗಾರ' ಮೊದಲಾದವುಗಳಲ್ಲಿ ಗಮನಿಸಬಹುದು.

ಕನ್ನಡ ಸಾಹಿತ್ಯದಲ್ಲಿ ಸಮಸ್ಯೆಗಳ ಸಲುವಾಗಿ ಪದ್ಯಪಾದಗಳನ್ನು ಕೊಡುತ್ತಿದ್ದುದೂ ಅವನ್ನು ಸೇರಿಸಿಕೊಂಡು ಪದ್ಯದ ಉಳಿದ ಪಾದಗಳನ್ನು ಪೂರೈಸುತ್ತಿದ್ದುದೂ ಎಷ್ಟರಮಟ್ಟಿಗೆ ಚಿತ್ರಕಾವ್ಯದ ಒಂದು ಭಾಗವಾಗಿ ಹಿಂದಿನಿಂದ ನಡೆದುಕೊಂಡು ಬರುತ್ತಿದೆಯೆಂದು ತಿಳಿಯಲು ವಿಶೇಷವಾಗಿ ಆಧಾರಗಳು ದೊರೆಯುತ್ತಿಲ್ಲ. ಆದರೆ ಪ್ರಹೇಳಿಕೆಯ ನಾನಾ ಪ್ರಕಾರಗಳ ಸಂಬಂಧದಲ್ಲಿ ಪಂಡಿತಪಾಮರರ ನಡುವೆ ಸಹೃದಯಗೋಷ್ಠಿಗಳು ನಡೆಯುತ್ತಿದ್ದ ಹಾಗೆಯೇ ಸಮಸ್ಯೆಗಳ ಸಂಬಂಧದಲ್ಲಿಯೂ ನಡೆಯುತ್ತಿದ್ದಿರಬೇಕು. ಪಂಡಿತಮಂಡಲಿಗಳಲ್ಲಿಯೂ ರಾಜಾಸ್ಥಾನಗಳಲ್ಲಿಯೂ ಸಂಸ್ಕೃತಸಾಹಿತ್ಯ ಸಂಪ್ರದಾಯದ ಮಾದರಿಯನ್ನು ಹಿಡಿದು ಕೆಲಮಟ್ಟಿಗಾದರೂ ಕನ್ನಡ ಭಾಷೆಯಲ್ಲಿ ಸಮಸ್ಯೆಗಳ ಕಾಲಕ್ಷೇಪ ನಡೆಯುತ್ತಿದ್ದಿರುವುದು ಸಾಧ್ಯ. ಇದನ್ನು ತಿಳಿಯುವ ಒಂದೆರಡು ಸಾಕ್ಷ್ಯಗಳು ಈ ಭಾಷೆಯ ಗ್ರಂಥಗಳಲ್ಲಿ ಕಣ್ಣಿಗೆ ಬೀಳುತ್ತವೆ. 'ರಾಘವಾಂಕ ಚಾರಿತ್ರ'ದಲ್ಲಿ ರಾಘವಾಂಕನನ್ನು ವರ್ಣಿಸುವಾಗ ''ಗಳಿಗೆಗೆ ಶತಗ್ರಂಥಕರಗರ್ವಿ ಕವಿಭುಜಗ । ಲಲಿತಮಾನಸ ಸಮಸ್ಯೆಯ ಪೇಳುವ ಖಳಗವಿ । ಗಳ ಬೆನ್ನ ಚಮ್ಮಟಿಗೆ ವಿಷಮದ ಸಮಸ್ಯೆಯಿತ್ತಳುಕಿಸುವೆನೆಂಬ ಕವಿಯ ತಲೆಗೆರಪ ಬರಸಿಡಿಲು....'' ಎಂದು ಮುಂತಾಗಿ ವರ್ಣಿಸುವಾಗ ಸುಲಭದ ಮತ್ತು ಕಷ್ಟವಾದ ಸಮಸ್ಯೆಗಳ ವಿಚಾರಗಳಲ್ಲಿ ಅವನು ಬಲ್ಲಿದನಿದ್ದನೆಂದು ತಿಳಿಯುತ್ತದೆ (೧೪–೩೯). ಕುಮಾರವ್ಯಾಸ ಭಾರತದ ಉದ್ಯೋಗಪರ್ವದ ಕೃಷ್ಣರಾಯಭಾರದ ಪ್ರಸಂಗದಲ್ಲಿ, ಕವಿ ಕುಮಾರವ್ಯಾಸನು, ದುರ್ಯೋಧನನ ಸಭಾಸ್ಥಾನದಲ್ಲಿ ''ಸಲೆ ಸಮಸ್ಯಕನಂತಪದ್ಯವ ಘಳಿಲನನ್ವಯಿಸುವ'' ಚತುರ್ಭಾಷಾ ವಿಶಾರದರಾದ ಕವಿಗಳೂ ಇದ್ದರೆಂಬುದಾಗಿ ವರ್ಣಿಸಿದ್ದಾನೆ (ಸಂಧಿ ೮–ಪದ್ಯ ೩೭). ಆತ ತಾನು ಬಲ್ಲಂತಹ ಸಮಸ್ಯಾಪೂರ್ತಿಯ ಗೋಷ್ಠಿಗಳ ಪರಿಚಯವಿದ್ದೇ ಹೀಗೆ ಬರೆದಿರುವುದು ಸಾಧ್ಯ. ಸಮಸ್ಯೆಯ ಪಾದಗಳನ್ನು ಕೊಟ್ಟಾಗ, ಅದನ್ನು ಹೊಂದಿಸಿಕೊಂಡು ಪೂರ್ತಿಪದ್ಯವನ್ನು ಕೂಡಲೇ ರಚಿಸುವ ಸಾಮರ್ಥ್ಯ ಆ ಕವಿಗಳಿಗೆ ಇದ್ದಿತೆಂದು ಕವಿ ಹೇಳಿರುವುದು, ಸ್ವತಃ ಕುಮಾರವ್ಯಾಸನಂತಹ ಕವಿಗೆ ಸಹಜವಾದ್ದಾಗಿದೆ. ಮೈಸೂರರಸು ಚಿಕದೇವರಾಜನು ಹೇಗೆ ಕಾಲಯಾಪನಮಾಡುತ್ತಿದ್ದನೆಂದು ಬಗೆಬಗೆಯಾಗಿ ಬಣ್ಣಿಸಿರುವ ಕವಿ ತಿರುಮಲಾರ್ಯನು, ಆ ದೊರೆ ''ಸಮವಿಷಮಂಗಳೆಂಬಿನಮೆರಟತ್ತಿಜದಿಂ ಪಲವುಂ ಸಮಸ್ಯೆಯಂ । ಸಮನಿಸುತೊರ್ಮೆ....''ವಿನೋದಿಸುತ್ತಿದ್ದನೆಂದೂ (ಚಿಕವಿ. ೫–೧೫೯) ತಿಳಿಸಿರುವನು. ಸಮಸ್ಯೆಗಳಲ್ಲಿ ಸಮ ವಿಷಮ ಭೇದಗಳೆಂದರೇನು? ಇಲ್ಲಿ ಸರಳ ಹಾಗೂ ಕೂಟ ರೀತಿಯ ಪ್ರಶ್ನೋತ್ತರಗಳನ್ನು ಕವಿ ಉದ್ದೇಶಿಸಿರುವುದು ಸಾಧ್ಯ. ಆಗ ಇಲ್ಲಿಯ 'ಸಮಸ್ಯೆ' ಎಂಬ ಮಾತು ಪದ್ಯಪೂರ್ತಿಯ ಸಮಸ್ಯಾಪ್ರಕಾರವನ್ನು ಸೂಚಿಸುವುದೋ ಇಲ್ಲವೋ ನಿಶ್ಚಯವಾಗಿ ಹೇಳಲಾಗದು. ಸಮಸ್ಯೆಯನ್ನೇ 'ತೊಡಕು' ಎಂದಿರುವ ಸಂದರ್ಭವೂ ಉಂಟು. ದೇವರಾಜನು (ಸು. ೧೪೧೦) ತನ್ನ 'ಸೊಬಗಿನ ಸೋನೆ'ಯಲ್ಲಿ ಶಬ್ದಶ್ಲೇಷೆಯ ಚಮತ್ಕಾರವೊಂದನ್ನು ನೇಯುತ್ತ ''ತೊಡಕೆಂಬ ನುಡಿ ನಾನಾ ಚಿತ್ರ ಬಂಧಗ।ಳೆಡೆಯೊಳುಂಟಲ್ಲಿ ಭಾವಿಪಡಿಲ್ಲ'' ಎಂಬುದಾಗಿ ಚದುರ್ ಎಂಬ ನಾಡನ್ನು ಕೀರ್ತಿಸುವಾಗ ತಿಳಿಸಿದ್ದಾನೆ. ಇಲ್ಲಿ 'ತೊಡಕು' ಮಾತಿಗೆ ಕಷ್ಟ ಎಂಬುದು ಪರಿಚಿತಾರ್ಥ. ಕವಿ ಇದರೊಂದಿಗೆ ಪ್ರಹೇಳಿಕೆಯೆಂದೋ ಸಮಸ್ಯೆಯೆಂದೋ ವಿಶಿಷ್ಟಾರ್ಥವನ್ನೂ ಅಲ್ಲಿ ವಿವಕ್ಷೆಗೊಳಿಸಿರುವುದು ವಿದಿತ.

'ಕಂತಿ–ಪಂಪನ ಸಮಸ್ಯೆಗಳು' ಎಂದು ರೂಢಿಯಾಗಿ ಹೇಳುವ, ಕಂದಪದ್ಯಗಳಲ್ಲಿರುವ ಒಂದು ಚಿಕ್ಕ ಕೃತಿ ಈ ಗುಂಪಿನ ಪ್ರಾತಿನಿಧಿಕವೂ ಪ್ರಸಿದ್ಧವೂ ಆದ ಕೃತಿ. ಕನ್ನಡ ಅಧ್ಯಯನ ಸಂಸ್ಥೆಯಲ್ಲಿರುವ ಈ ಕೃತಿಯ ಹಸ್ತಪ್ರತಿಯಲ್ಲಿ (ಕೆ. ೯೧೭/೨, ಪತ್ರಗಳು ೧ ರಿಂದ ೫) ೨೮ ಪದ್ಯಗಳಿವೆ. ಆದರೆ ಇದು ತ್ರುಟಿತವಾದ ಓಲೆ ಪ್ರತಿ; ಅಶುದ್ಧವಾದ್ದು, ಅಸಮಗ್ರವೂ ಅವ್ಯವಸ್ಥಿತವೂ ಆದ್ದು. ೧೮೯೩ರಲ್ಲಿ ಬೆಂಗಳೂರಿನಿಂದ ಪ್ರಕಟವಾಗಿರುವ, ಬಿ. ಪದ್ಮರಾಜ ಪಂಡಿತರು ಪರಿಷ್ಕರಿಸಿರುವ, ಈ ಗ್ರಂಥದ ಪ್ರಥಮ ಮುದ್ರಣದಲ್ಲಿ ೪೯ ಪದ್ಯಗಳಿವೆ. ಇದನ್ನು

ಬಹುಮಟ್ಟಿಗೆ ಆಧರಿಸಿಯೇ ಸಿದ್ಧವಾಗಿರುವ, ಈಚೆಗೆ ೧೯೪೨ರಲ್ಲಿ ಮೂಡಬಿದರೆಯಿಂದ ಪ್ರಕಟವಾಗಿರುವ ಈ ಗ್ರಂಥದ ಎರಡನೆಯ ಮುದ್ರಣದಲ್ಲಿ ೪೭ ಪದ್ಯಗಳಿವೆ. ಪೂರ್ವೋಕ್ತ ಹಸ್ತಪ್ರತಿಯ ಪಾಠಗಳಿಗೂ ಈ ಎರಡು ಮುದ್ರಿತ ಪರಿಷ್ಕರಣಗಳ ಪಾಠಗಳಿಗೂ ಅಧಿಕ ಸಂಖ್ಯೆಯ ಹಾಗೂ ಗಮನಾರ್ಹ ರೀತಿಯ ಪಾಠಭೇದಗಳು ಗೋಚರಿಸುತ್ತವೆ. ಒಂದು ವಿಶೇಷವೆಂದರೆ, ನಾಗಚಂದ್ರ ಕವಿ ಕಂತಿಯ ಕೈಯಿಂದ ಹೊಗಳಿಸಿಕೊಳ್ಳಲು ಸತ್ತ ಹಾಗೆ ನಟಿಸಿ ಮಲಗಿದ್ದು, ಕಂತಿ ಆತನನ್ನು ಕೀರ್ತಿಸಿದ್ದು ಈ ವಿಚಾರ ಹಸ್ತಪ್ರತಿಯಲ್ಲಿ ಮಾತ್ರವೇ ಇದೆ.

ಈ ಕೃತಿಯ ಕರ್ತೃತ್ವ ರಚನಾಕಾಲಗಳೂ ಭಾಷೆ ಶೈಲಿಗಳೂ ಕನ್ನಡ ಸಾಹಿತ್ಯ ಚರಿತ್ರೆಯ ವಿವಾದಾಸ್ಪದ ಸಂಗತಿಗಳಲ್ಲಿ ಸೇರಿಕೊಂಡು ಬಹುಕಾಲದಿಂದ ವಿದ್ವಾಂಸರ ಚರ್ಚೆ ಜಿಜ್ಞಾಸೆಗಳಿಗೆ ವಿಷಯಗಳಾಗಿ ಪರಿಣಮಿಸಿವೆ. ಮುಖ್ಯವಾಗಿ, ೧೧-೧೨ನೆಯ ಶತಮಾನಗಳ ಪ್ರಸಿದ್ಧ ಚಂಪೂಕವಿ ನಾಗಚಂದ್ರಕವಿಯ ಸಮಕಾಲೀನಳಾಗಿ ಕಂತಿಯೆಂಬ ಒಬ್ಬ ಕಬ್ಬಿಗಿತಿ ಇದ್ದಳೇ, ಅವರಿಬ್ಬರ ನಡುವೆ ಸಮಸ್ಯಾಪೂರ್ತಿಯ ಸ್ಪರ್ಧೆಯೊಂದು ನಡೆಯಿತೇ ಎನ್ನುವುದು ಈ ಚರ್ಚೆ ಜಿಜ್ಞಾಸೆಗಳ ತಿರುಳಾಗಿದೆ. ಸಾಹಿತ್ಯ ಚರಿತ್ರೆಯ ಪರಿಧಿಯೊಳಗೆ ಬರುವ ಈ ವಿಷಯದ ವ್ಯಾಪಕವಾದ ಚರ್ಚೆ ಇಲ್ಲಿ ಪ್ರಸ್ತುತವೇನಲ್ಲ. ಕಂತಿ–ಪಂಪನ ಸಮಸ್ಯೆಗಳಿಗೆ ಕಾರಣಕರ್ತರಾದವರು ಕಂತಿ ನಾಗಚಂದ್ರರೇ ಇರಲಿ, ಈಚಿನ ಕಾಲದ ಬೇರೆ ಯಾರಾದರೂ ಆಗಿರಲಿ, ಕೃತಿಯ ಭಾಷೆ ಶೈಲಿಗಳು ಯಾವುದೇ ಪರ ವಿರೋಧ ಸಾಕ್ಷ್ಯವನ್ನು ಹೇಳಲಿ, ಈ 'ಸಮಸ್ಯೆ'ಯ ಕೃತಿ ತಕ್ಕಮಟ್ಟಿನ ಹಿಂದಿನ ಕಾಲದಲ್ಲಿ ರಚಿತವಾಗಿರುವುದು ನಿಶ್ಚಯ. ಇದು ಕನ್ನಡ ಚಿತ್ರಕಾವ್ಯದ ಇತಿಹಾಸದಲ್ಲಿ ವಿಶಿಷ್ಟವಾದ ಒಂದು ಸ್ಥಾನವನ್ನು ಪಡೆದಿರುವುದು ನಿಜ. ಈ ದೃಷ್ಟಿಯಿಂದ ಈ ಕೃತಿಯ ರಚನಾವೈಚಿತ್ರ್ಯವನ್ನು ಇಲ್ಲಿ ಪರಿಶೀಲನೆಗೆ ತೆಗೆದುಕೊಂಡಿದೆ.

'ಕಂತಿ ಪಂಪನ ಸಮಸ್ಯೆಗಳು' ಪ್ರಹೇಳಿಕೆಗಳ ಒಂದು ಉಪವಿಭಾಗವಾಗಿ ಇಲ್ಲಿ ಗಣಿಸಿರುವ 'ಸಮಸ್ಯೆ' ಎಂಬ ಪ್ರಕಾರದ ಲಕ್ಷ್ಯಗ್ರಂಥ. ಇದರಲ್ಲಿ ಚಿತ್ರಕಾವ್ಯದ ಇತರ ವಿಭಾಗಗಳಿಗೆ ಸೇರುವ ಕೆಲವು ನಿದರ್ಶನಗಳು ವಿರಳವಾಗಿ ಗೋಚರಿಸುತ್ತವೆಯಾದರೂ ಹೆಚ್ಚಿನವು ಸಮಸ್ಯೆಗಳಿಗೆ ಸಂಬಂಧಿಸಿದವೇ ಆಗಿರುವುದರಿಂದ ಹೀಗೆ ತಿಳಿಯುವುದು ತಪ್ಪಾಗದು. ಇಲ್ಲಿ ೩೯ ಪದ್ಯಗಳು ಸಮಸ್ಯೆಗೆ ಲಕ್ಷ್ಯಗಳು; ಉಳಿದವು ಇತರ ವೈಚಿತ್ರ್ಯಗಳಿಗೆ ಸೇರಿದವು. ಈಗ ಸಮಸ್ಯೆಗಳನ್ನು ಕುರಿತ ಲಕ್ಷ್ಯಗಳನ್ನು ನೋಡೋಣ.

ಸಮಸ್ಯೆಯನ್ನು ಕೊಡುವವನು ಪಂಪ, ಎಂದರೆ 'ಅಭಿನವ ಪಂಪ' ಬಿರುದಿನ ನಾಗಚಂದ್ರ. ಅದಕ್ಕೆ ಉತ್ತರ ಹೇಳುವವಳು, ಎಂದರೆ ಸಮಸ್ಯೆಯನ್ನು ಪೂರೈಸುವವಳು ಕಂತಿ. ನಾಗಚಂದ್ರನು ಕಂದಪದ್ಯದ ಕೊನೆಯ ಪಾದವನ್ನು ಸಮಸ್ಯೆಗೆ ಎಂದು ಒಡ್ಡಿದ್ದಾನೆ; ಎಂದರೆ ಸಮಗ್ರವಾದೊಂದು ಪದ್ಯದಲ್ಲಿ ಕೊನೆಯ ಪಾದವನ್ನು ಮಾತ್ರ ಹೇಳಿ ಆ ಪದ್ಯದ ಮೊದಲ ಮೂರು ಪಾದಗಳನ್ನು ಕೂಡಿಸಿ ಪದ್ಯವನ್ನು ಅದು ಇರಬೇಕಾದ ರೀತಿಯಲ್ಲಿ ಪೂರ್ಣಗೊಳಿಸುವಂತೆ ಕಂತಿಗೆ ತಿಳಿಸಿದ್ದಾನೆ. ಹಾಗೆ ತಿಳಿಸುವಲ್ಲಿ ಕೊಟ್ಟ ಸಮಸ್ಯಾಪಾದ ಆಕೆಯನ್ನು ಉದ್ದೇಶಿಸಿ ಪ್ರಶ್ನೆಮಾಡಿದಂತಿರದೆ ಯಾವುದೋ ಒಂದು ಅರ್ಥವನ್ನೂ ಆಶಯವನ್ನೂ ಒಳಕೊಂಡ ಸಮಗ್ರವಾದೊಂದು ವಾಕ್ಯವೇ ಆಗಿರುತ್ತದೆ. ಇಲ್ಲಿ ಗಮನಿಸಬೇಕಾದ ಒಂದು ವಿಶೇಷವೆಂದರೆ, ಸಮಸ್ಯಾಪಾದದ ಅರ್ಥ ಆಶಯಗಳು ತಮ್ಮ ಮಟ್ಟಿಗೆ ಪೂರ್ಣವಾಗಿದ್ದರೂ ಮೇಲುನೋಟದಲ್ಲಿಯೇ ಅಪಾರ್ಥವನ್ನೂ ಆಭಾಸಕರವಾದ ಆಶಯವನ್ನೂ ಕೊಡುವಂತಿರುತ್ತವೆ ಎನ್ನುವುದು. ಇದೇ ಕಾರಣವಾಗಿ ಕೊಟ್ಟ ಸಮಸ್ಯಾಪಾದ ಚಮತ್ಕಾರಿಕವಾಗಿದ್ದು, ಒಂದು ಬಗೆಯ ವಿನೋದವನ್ನೂ ಕುತೂಹಲವನ್ನೂ ಹುಟ್ಟಿಸುತ್ತವೆ. ವಾಕ್ಯವೇನೋ ಭಾಷೆಯ ದೃಷ್ಟಿಯಿಂದ ಪೂರ್ಣವೂ ಶುದ್ಧವೂ ಆಗಿದ್ದರೂ ಅಭಿಪ್ರಾಯದ ದೃಷ್ಟಿಯಿಂದ ಅದು ಒಂದು ಒಗಟಾಗಿ ವಿಲಕ್ಷಣವಾಗಿರುವಂತೆ ಕಾಣುತ್ತದೆ; ಅಂತಹ ಒಂದು ವಾಕ್ಯ ನಿಜವಾಗಿ ಇರುವುದು ಶಕ್ಯವಲ್ಲ ಎಂದು ಭಾವಿಸುವಂತೆ ಆಗುತ್ತದೆ. ಹೆಚ್ಚು ಹಾಸ್ಯಾಸ್ಪದವಾಗಿ ತೋರುವ ವಾಕ್ಯ ಹೆಚ್ಚು ಕುತೂಹಲಜನಕವಾಗಿರುವುದು ಸಹಜ. ಆರಂಭದಿಂದ ಉಳಿದ ಪಾದಗಳನ್ನು ಕಲ್ಪಿಸಿ ಪೂರೈಸಿದಾಗ, ಕುತೂಹಲದ ಗುಳ್ಳೆಯೊಡೆದು, ಆಪಾತತಃ ಅಪಾರ್ಥಕರವೂ ಆಭಾಸಕರವೂ ಆದ ಸಮಸ್ಯಾಪಾದದ ಅರ್ಥ ಆಶಯಗಳು ಪೂರ್ತಿಯಾಗಿ ಮಾರ್ಪಟ್ಟು ಸಮುಚಿತವಾದ ಅರ್ಥ ಆಶಯಗಳನ್ನು ಪಡೆದುಕೊಂಡ ಗಂಭೀರರೀತಿಯ ಪದ್ಯವೊಂದು ರೂಪಗೊಳ್ಳುತ್ತದೆ.

ನಾಗಚಂದ್ರನು ಸಮಸ್ಯಾಪಾದವನ್ನು ಕಂತಿಗೆ ಕೊಟ್ಟಾಗ, ಅದನ್ನೊಳಕೊಂಡ ಸಮಗ್ರವಾದ ಪದ್ಯವನ್ನು, ಕಂತಿ ಉತ್ತರಿಸಿದ ರೀತಿಯಲ್ಲಿರುವ ಪದ್ಯವನ್ನು ಪೂರ್ವಭಾವಿಯಾಗಿಯೇ ತಿಳಿದವನಾಗಿದ್ದನೇ ಎನ್ನುವ ಪ್ರಶ್ನೆಯೊಂದು ಏಳುತ್ತದೆ. ಆದರೆ ಈ ಪ್ರಶ್ನೆ ಅನಾವಶ್ಯಕವೆಂದು ತೋರುತ್ತದೆ. ಅವನು ಚಮತ್ಕಾರಜನಕವಾಗಿ ಕೊಟ್ಟ ಸಮಸ್ಯಾಪಾದವನ್ನು, ಕಂತಿ ಸ್ವಯಂಸ್ಫೂರ್ತಿಯಿಂದ ಉಚಿತಸೌಷ್ಠವದ ಪದ್ಯವನ್ನಾಗಿ ಹೊಸದಾಗಿಯೇ ರೂಪಿಸಿದಳೆಂದು ಹೇಳಬಹುದಾಗಿದೆ. ಇದಕ್ಕೆ ಪದ್ಯರಚನೆಯ ದೃಷ್ಟಿಯಿಂದ ಹೆಚ್ಚು ಸಂಭಾವ್ಯವಾದ ಇನ್ನೊಂದು ಪರ್ಯಾಯವುಂಟು. ಅದೆಂದರೆ, ಸಮಸ್ಯಾಪಾದದ ಆದಿಯ ತಿರುಪುಪದವನ್ನು ಕೇಂದ್ರಮಾಡಿಕೊಂಡು ಪದ್ಯಾದಿಯಿಂದಲೇ ಉಚಿತವಾದ ಅರ್ಥ ಆಶಯಗಳ ಪದ್ಯವೊಂದನ್ನು ರಚಿಸುತ್ತ ಬಂದು, ತಿರುಪುಪದದ ಸ್ಥಾನದ ಹತ್ತಿರ ಬಂದಾಗ ಸಮಸ್ಯಾಪಾದಕ್ಕೆ ಸಾಕಾಗುವಷ್ಟು ಆ ಪದವನ್ನು ಕತ್ತರಿಸಿ ತೆಗೆದು ಸಮಸ್ಯಾಪಾದವನ್ನು ವಕ್ರಗತಿಯಲ್ಲಿ ಚಮತ್ಕಾರಜನಕವಾಗುವಂತೆ ಮುಂದೆ ರೂಪಿಸುವುದು. ತಿರುಪುಪದವನ್ನು ಕೇಂದ್ರಮಾಡಿಕೊಂಡು, ಅದರಿಂದ ಕತ್ತರಿಸಿ ತೆಗೆದ ಪದಭಾಗದಿಂದ ಮೊದಲೇ ಸಮಸ್ಯಾಪಾದವನ್ನು ರಚಿಸಿ, ಮೊದಲ ಮೂರು ಪಾದಗಳನ್ನು ಅನಂತರ ಅದಕ್ಕೆ ಹೊಂದಿಕೊಳ್ಳುವಂತೆ ಸೇರಿಸಿ ಸಮಗ್ರಪದ್ಯವನ್ನು ರೂಪಿಸಿರುವುದೂ ಅಸಂಭವವೇನಲ್ಲ.

ಮೇಲೆ ಹೇಳಿದ ತಿರುಪುಪದದ ಸ್ವರೂಪವೇನು? ಸಮಸ್ಯಾಪಾದದ ವಾಕ್ಯಾರಂಭಕ್ಕೆ ಸಾರ್ಥಕವಾದ ಒಂದು ಪದವಾಗಿ ಒದಗುವ ಮಟ್ಟಿಗೆ ಆ ಪದದ ಕೊನೆಯ ಭಾಗವನ್ನು ಬೇರ್ಪಡಿಸುವುದು ಅಥವಾ ಕತ್ತರಿಸುವುದು ಇಲ್ಲಿ ಸಾಧ್ಯವಾಗಬೇಕು. ಹೀಗೆ ಕತ್ತರಿಸುವುದರಲ್ಲಿ ಶಬ್ದರೂಪ ಕೆಡದ ಹಾಗೆಯೇ ಕತ್ತರಿಸಬಹುದು. ಹಾಗೆ ಕತ್ತರಿಸಿ ತೆಗೆದ ಭಾಗ ಸ್ವತಂತ್ರವಾಗಿರಬಹುದು ಇಲ್ಲವೆ ಸಂಧಿಕಾರ್ಯವಾದ ಶಬ್ದದ ಒಂದು ಭಾಗವೂ ಆಗಿರಬಹುದು. ಅಕ್ಷರಗಳ ನ್ಯೂನಾತಿರೇಕಗಳೇನೂ ಆಗದ ಹಾಗೆ ಕತ್ತರಿಸಬಹುದು, ನ್ಯೂನಾತಿರೇಕಗಳೊಂದಿಗೆ ಕತ್ತರಿಸಿರಲೂ ಬಹುದು. ಇದು ತಿರುಪುಪದವನ್ನು ಬಳಸುವ ಸಾಮಾನ್ಯವಾದ ಪರಿಕ್ರಮ. ಶಬ್ದರೂಪ ಚಾಕ್ಷುಷವಾಗಿ ಒಂದೇ ಆಗಿ ಉಳಿದುಕೊಂಡರೂ ಭಾಷೆಯ ದೃಷ್ಟಿಯಿಂದ ಭಿನ್ನಾರ್ಥದ ಬೇರೆಯೇ ಆದ ಪದವಾಗಿ ಮಾರ್ಪಡುವುದೂ ವಿರಳವಾಗಿ ಉಂಟು.

ಮುಂದೆ ಕೆಲವು ಉದಾಹರಣೆಗಳ ಮೂಲಕ ಈ ಸಮಸ್ಯಾಪದ್ಯಗಳ ಸ್ವರೂಪವನ್ನು ನೋಡಬಹುದು :

(i) ಶಬ್ದರೂಪ ಕೆಡದಂತೆ ಕೊಟ್ಟ ಸಮಸ್ಯಾಪಾದ:

ಪಂಪ : ಪತಿಗಾಂ ಭಕ್ತಿಯೊಳು ನಮಿಸಿ ಸದ್ಗತಿ ಪಡೆವೆಂ ।

ಕಂತಿ : ನತಸುರಕಿನ್ನರ ಮುಕುಟೀ । ಗತ ರುಚಿರಪ್ರತ್ನರತ್ನಗಣರುಚಿಲಹರೀ ।
ಶತಪತ್ರೋಜ್ವಲಪದ ಜಿನ । ಪತಿಗಾಂ ಭಕ್ತಿಯೊಳು ನಮಿಸಿ ಸದ್ಗತಿ ಪಡೆವೆಂ ॥

ಇಲ್ಲಿ ಜಿನ + ಪತಿಗಾಂ ಎಂಬುದಾಗಿ ತಿರುಪುಪದಭಾಗದಲ್ಲಿ ಶಬ್ದರೂಪ ಕೆಡದಹಾಗೆ ಪದಚ್ಛೇದವನ್ನು ತಂದಿದೆ.

ಪಂಪ : ಮುಖದೊಳ್ ದೀವಿಗೆಯ ಹಚ್ಚಿ ಸಂತೋಷಿಸುವರ್ ।

ಕಂತಿ : ಮುಖಮಂಟಪದೊಳ್ ವಿಲಸಿತ । ಮುಕುರಗಳಂ ಕಟ್ಟಿ ದೇವಬಿಂಬಗಳಿಟ್ಟುಂ ।
ಸಕಲವಿಭವಂಗಳಿಂದಭಿ । ಮುಖದೊಳ್ ದೀವಿಗೆಯ ಹಚ್ಚಿ ಸಂತೋಷಿಸುವರ್ ॥ ೧೯ ॥

ಇಲ್ಲಿ ಅಭಿ + ಮುಖದೊಳ್ ಎಂಬುದಾಗಿ ತಿರುಪುಪದದ ಭಾಗದಲ್ಲಿ ಶಬ್ದರೂಪ ಕೆಡದ ಹಾಗೆ ಪದಚ್ಛೇದವನ್ನು ತಂದಿದೆ; ಆದರೆ ಮೇಲಿನ ಉದಾಹರಣೆಯಷ್ಟು ಸ್ಪಷ್ಟವಾದ ಪದಚ್ಛೇದ ಇಲ್ಲಿ ಸಾಧ್ಯವಾಗಿಲ್ಲ. ಪದದ ಪೂರ್ವಭಾಗದಲ್ಲಿಯ ಉಪಸರ್ಗ ಸಂಧಿಯ ಭಾಗವಾಗಿ ರೂಪುಗೊಂಡಿದೆ.

(ii) ಚಾಕ್ಷುಷವಾಗಿ ಒಂದೇ ರೂಪದ, ಆದರೆ ಭಿನ್ನಾರ್ಥದ ಪದಗಳ ಪಾದರಚನೆ :

ಪಂಪ : ಕಳ್ಳಂ ಕುಡಿವುದನು ಕಂಡೆ ಜೈನರ ಮನೆಯೊಳ್ ।

ಕಂತಿ : ಹೊಳ್ಳಿಸಿ ಗೋಡೆಯ ಕನ್ನವ । ನೊಳ್ಳಿಯ ಕತ್ತರಿಯ ಕೊಟಿದು ನೆಲುವಿನ ಮೊಸರಂ ।
ಬೆಳ್ಳಿಯ ಬಟ್ಟಲೊಳಿಕ್ಕುತ । ಕಳ್ಳಂ ಕುಡಿವುದನು ಕಂಡೆ ಜೈನರ ಮನೆಯೊಳ್ ॥ ೭ ॥

ಸಮಸ್ಯಾಪಾದದಲ್ಲಿ 'ಕಳ್ಳಂ' ಎಂಬುದು 'ಮದ್ಯ' ಎಂಬರ್ಥದ 'ಕಳ್' ಎಂಬ ಕನ್ನಡ ಪ್ರಕೃತಿಯ ದ್ವಿತೀಯಾ ವಿಭಕ್ತ್ಯಂತರೂಪವೆಂದು ಸುಲಭವಾಗಿ ಊಹಿಸಬಹುದಾಗಿದೆ; ಸಮಸ್ಯಾಪೂರ್ತಿಯ ಸಂದರ್ಭದಲ್ಲಿ ಅದು 'ಚೋರ' ಎಂಬರ್ಥದ 'ಕಳ್ಳಂ' ಎಂಬ ಪ್ರಥಮಾಂತರೂಪವಾಗಿದೆ. ಇವು ಚಾಕ್ಷುಷವಾಗಿ ಒಂದೇ ರೂಪದ, ಆದರೆ ಭಿನ್ನಾರ್ಥದ ಪದಗಳು.

(iii) ಅಕ್ಷರಗಳ ನ್ಯೂನಾತಿರೇಕಗಳಿಲ್ಲದೆ ಶಬ್ದರೂಪ ಕೆಡುವಂತೆ ಪದಚ್ಛೇದವಾದ ಸಮಸ್ಯಾಪಾದ :

ಪಂಪ : ದನವಮಂ ಕೊಯ್ಕೊಯ್ದು ಬಸದಿಗೊಯ್ಯುತ್ತಿರ್ಪರ್ ।

ಕಂತಿ : ವನದೊಳಗೆ ಪುಟ್ಟಿ ಕಂಪಿನ । ತನಿರಸಮಂ ಪತ್ತು ದೆಸೆಗೆ ಬೀರುತ್ತಿರುವಾ ।
ಘನತರ ಸುರುಚಿರ ಸಚ್ಚಂ । ದನವಮಂ ಕೊಯ್ಕೊಯ್ದು ಬಸದಿಗೊಯ್ಯುತ್ತಿರ್ಪರ್ ॥ ೬ ॥

ಇಲ್ಲಿ ಸಚ್ಚಂ+ದನವಮಂ ಎಂಬಲ್ಲಿ ಉತ್ತರಭಾಗದಲ್ಲಿ ಅಕ್ಷರಗಳ ನ್ಯೂನಾತಿರೇಕಗಳೇನಿಲ್ಲ.

ಪಂಪ : ಸತ್ತವಳೆದ್ದೋಡಿ ಪೋದಳೇನಿದು ಚಿತ್ರಂ ।

ಕಂತಿ : ಅತ್ತೆಯು ಬೈಗುಳಮಾತಿಂ । ದತ್ತಿಗೆದಾರ್ಜನ್ಯದಿಂದೆ ಗಂಡನ ಪೆಟ್ಟಿಂ ।
ಮತ್ತೆ ಮುದಿಮಾವನಿಂ ಬೇ । ಸತ್ತವಳೆದ್ದೋಡಿ ಪೋದಳೇನಿದು ಚಿತ್ರಂ ॥ ೧೪ ॥

ಇಲ್ಲಿಯೂ ಬೇ+ಸತ್ತವಳ್ ಎಂಬಲ್ಲಿ ಉತ್ತರಭಾಗದಲ್ಲಿ ಅಕ್ಷರಗಳ ನ್ಯೂನಾತಿರೇಕಗಳೇನಿಲ್ಲ.

(iv) ಅಕ್ಷರಗಳ ನ್ಯೂನಾತಿರೇಕಗಳೊಂದಿಗೆ ಶಬ್ದರೂಪ ಕೆಡುವಂತೆ ಪದಚ್ಛೇದವಾದ ಸಮಸ್ಯಾಪಾದ :

ಪಂಪ : ತಲೆಯೊಳ್ ಜಾರೆಯರು ಬಂದು ರಮಿಸುತ್ತಿರ್ಪರ್ ॥

ಕಂತಿ : ಮಲಗಲು ನಿದ್ರೆಯು ಬಾರದೆ । ಯಲರಂಬಿನ ದಾಳಿ ಮುಸುಕೆ ಪತಿಯಂ ವಂಚಿಸಿ ।
ಗಲಗುಗಳಂ ತೋಱಿದೆ ಕ । ತ್ತಲೆಯೊಳ್ ಜಾರೆಯರು ಬಂದು ರಮಿಸುತ್ತಿರ್ಪರ್ ॥ ೨೨ ॥

ಇಲ್ಲಿ 'ಕ+ತ್ತಲೆಯೊಳ್' ಎಂಬುದರಲ್ಲಿ ಉತ್ತರಭಾಗವನ್ನು 'ತಲೆಯೊಳ್' ಎಂಬುದಾಗಿ ಮಾಡಿಕೊಂಡು ಸಮಸ್ಯಾಪಾದವನ್ನು ಸಿದ್ಧಮಾಡಿದೆ; ಸ್ವತಂತ್ರಪದವೊಂದನ್ನು ಛೇದಿಸಿದೆ.

ಪಂಪ : ಅಡಿಯಿಂದಳಕವನು ತಿದ್ದಿಕೊಂಬರ್ ಸತಿಯರ್ ।

ಕಂತಿ : ಕಡುಚೆಲುವಿಂ ರವಿ ಮೂಡ । ಲ್ಕೊಡನೆ ಕುಶೇಶಯವನುಟ್ಟು ಸಿಂಗರಿಸುತ್ತುಂ ।
ಪಿಡಿದಿಹ ಮಣಿಮಯ ಕೈಗ । ನ್ನಡಿಯಿಂದಳಕವನು ತಿದ್ದಿಕೊಂಬರ್ ಸತಿಯರ್ ॥ ೨೩ ॥

ಇಲ್ಲಿ 'ಕೈಗ+ನ್ನಡಿಯಿಂದಳಕವನು' ಎನ್ನುವುದರಲ್ಲಿ 'ಅಡಿಯಿಂದಳಕವನು' ಎಂಬುದಾಗಿ ಮಾಡಿಕೊಂಡು ಸಮಸ್ಯಾಪಾದವನ್ನು ಸಿದ್ಧಮಾಡಿದೆ; ಇಲ್ಲಿಯೂ ಸ್ವತಂತ್ರಪದವನ್ನು ಛೇದಿಸಿದೆ.

ಪಂಪ : ನಗದಿರೆ ನೀಂ ಮುಂದೆ ಕರಡಿ ಬರ್ಪುದು ಸಹಜಂ ।

ಕಂತಿ : ಬಗೆಬಗೆ ಗಿಡಗಳ ಗುಂಪಿಹ । ವಿಗೆ ಗುಹೆ ಬಹು ಗುಂಡುಕಲ್ಲು ಪಳ್ಳದಿ ಕೂಡಿದ ।
ವಿಗಗಣರವದಿಂದೊಂದಿದ । ನಗದಿರೆ ನೀಂ ಕರಡಿ ಮುಂದೆ ಬರ್ಪುದು ಸಹಜಂ ॥ ೩೨ ॥

ಇಲ್ಲಿ ಒಂದಿದನ್+ಅಗದಿರೆ ಎಂದು ಸಂಧಿ ವಿಭಜನೆಯಾದರೆ, ಗಿಡಗಳ ಗುಂಪು ಇದ್ದು ಗುಹೆ ಮುಂತಾದವುಗಳಿಂದ ಕೂಡಿದವನು ಬೆಟ್ಟದಲ್ಲಿದ್ದರೆ ಕರಡಿ ಕಾಣಿಸಿಕೊಳ್ಳುವುದು ಸಹಜ ಎಂದು ಅಭಿಪ್ರಾಯ ಕೊಡುತ್ತದೆ. ಇದೇ ಸಮುಚಿತಾರ್ಥ. ಆದರೆ 'ನಗದಿರೆ' ಎಂದು ಸಂಧಿ ಕೆಡುವಂತೆ ಪದಚ್ಛೇದಮಾಡಿ ಸಮಸ್ಯಾಪಾದವನ್ನು ಕೊಟ್ಟಿದೆ.

ಪಂಪ : ನಗೆಮುಖದೊಳು ಕಪ್ಪು ಕಾಣ್ಬುದೇನಿದು ಚಿತ್ರಂ ।

ಕಂತಿ : ವಿಗಿಲೆನಿಪೋಪಳ ಕಣ್ಣಾ । ಡಿಗೆ ಚುಂಬಿಪ ಸಮಯದಲಿ ಸಂಬಂಧಿಸುತುಂ ।
ಬಗೆಬಗೆ ರತಿಗಳ ಮಾಳ್ಪ ನಿ । ನಗೆ ಮುಖದೊಳು ಕಪ್ಪು ಕಾಣ್ಬುದೇನಿದು ಚಿತ್ರಂ ॥ ೩೧ ॥

ಇಲ್ಲಿಯದು ಬೇರೊಂದು ರೀತಿ. 'ನಿನಗೆ ಮುಖದೊಳು' ಎಂದು ಇರಬೇಕಾದ್ದು, ಪೂರ್ವಪದದ ಒಂದು ಭಾಗ ಸಾರ್ಥಕವಾಗುವಂತೆ ಛೇದಗೊಂಡು ಉತ್ತರಪದದೊಂದಿಗೆ ಬೆರೆತು ಬೇರೆಯೇ ಅರ್ಥದ ಒಂದು ಸಮಾಸಪದವಾಗಿ ಮಾರ್ಪಟ್ಟಿರುವುದು ಕಾಣುತ್ತದೆ.

(v) ಸಮಸ್ಯೆಗೆ ಒಂದು ಪಾದವನ್ನು ಕೊಡುವುದು ಸಾಮಾನ್ಯವಾದ ಪದ್ಧತಿ. ವಿಶೇಷ ಸಂದರ್ಭದಲ್ಲಿ ಒಂದೇ ಪದವೇ ಸಮಸ್ಯಾಪಾದದಂತೆ ಕೆಲಸಮಾಡಬಹುದು.

ಪಂಪ : ಮತ್ತಾ ಗಜಗತಿ ಕಂತಿಯುಃ । ಚಿತ್ತಜಸಮರೂಪ ಭೂಪನಾಸ್ಥಾನದೊಳಂ ।
ನೆತ್ತಿಯನು ಬಾಗಿ ಬರುತಿರೆ । ಮುತ್ತೈದಾಗೆಂದು ಪಂಪ ಕಂತಿಯನುಸುರ್ದಂ ॥ ೩ ॥

ಕಂತಿ : ಕರಿಯುರಗ ಮೇಘ ಶಂಖಂ । ವರಮಂಬುಧಿ ಮೇಣು ಮತ್ಸ್ಯ ಕಮಠಂಗಳೊಳಂ ।
ಪರಿಕಿಸಿ ನವಮುತ್ತಿನ್ನದೆ । ವರ ಮುತ್ತೈದೆನ್ನಬಹುದೆ ನರಗುಃ ಪಂಪಾ ॥ ೪ ॥

ಕಂತಿಗೆ ಪಂಪ ತನ್ನನ್ನು 'ಮುತ್ತೈದೆಯಾಗು' ಎಂದನಂತೆ; ಆಕೆ ಚಮತ್ಕಾರದಿಂದ ಮುತ್ತುಗಳು ೯ ವಿಧವಾದವು ಎಂದೂ ೫ ವಿಧವೆಂದು ಹೇಳಬೇಕಾದುದಿಲ್ಲವೆಂದೂ ಅವನಿಗೆ ಸಮಸ್ಯಾಪೂರ್ತಿಯಾದ ಪದ್ಯವನ್ನು ಉತ್ತರವಾಗಿ ತಿಳಿಸಿದಳಂತೆ. ಇತರ ಪದ್ಯಗಳ ಭಾಷೆಯಂತೆಯೇ ಇಲ್ಲಿಯ ಭಾಷೆಯೂ ಅಶುದ್ಧವಾದ್ದು; ರಚನೆಯಂತೂ ಕೃತಕವಾದ್ದು.

'ಕಂತಿ–ಪಂಪನ ಸಮಸ್ಯೆಗಳು' ಎಂಬ ಈ ಚಿಕ್ಕ ಕೃತಿಯಲ್ಲಿ ೧೧–೧೨ನೆಯ ಶತಮಾನದ ಭಾಷೆ ಶೈಲಿ ಛಂದಸ್ಸುಗಳ ಯಾವುದೇ ರೀತಿ ನೀತಿಗಳು ಗೋಚರಿಸುವುದಿಲ್ಲ; ನಾವು ನೋಡಿರುವ ಹಸ್ತಪ್ರತಿ ಹಾಗೂ ಮುದ್ರಿತ ಪ್ರತಿಗಳ ಎಲ್ಲ ಪದ್ಯಗಳಲ್ಲಿಯೂ ಏನಾದರೂ ಲೋಪದೋಷಗಳು ಇದ್ದೇ ಇರುತ್ತವೆ. ಇವನ್ನು ಈಗ ಲಭ್ಯವಾಗಿರುವ ರೀತಿಯಲ್ಲಿ ಪರಿಶೀಲಿಸಿದ್ದಾದರೆ, ಪ್ರಾಚೀನವಾದ ಕೃತಿಯೊಂದು ಕೆಡುತ್ತ ಬಂದು ಈಗ ಕಂಡು ಬರುತ್ತಿರುವ ರೂಪದಲ್ಲಿ ದೋಷಯುಕ್ತವಾಗಿ ತೋರುತ್ತಿರಬೇಕು ಎಂದು ತರ್ಕಿಸುವುದೂ ಕಷ್ಟವಾಗುತ್ತದೆ. ಚಿತ್ರಕಾವ್ಯದ ಒಂದು ಮಾದರಿಯಾಗಿ ಇದನ್ನು ಪರಿಶೀಲಿಸುವುದಷ್ಟೇ ಪ್ರಸ್ತುತವಾದ್ದು ಎನ್ನುವುದರಿಂದ ಈ ಜಟಿಲವಾದ ಪ್ರಶ್ನೆಗೆ ಇಲ್ಲಿ ಕೈಹಾಕುವುದಕ್ಕೆ ಹೋಗಿಲ್ಲ.

'ಕಂತ್ತಿಯ ಸಮಾಸ್ಯಗಳು' ಎಂಬ ಶೀರ್ಷಿಕೆಯ ಕ.ಅ.ಸಂ.ಯ ಹಸ್ತಪ್ರತಿಯನ್ನೇ (ಕಅಸಂ. ೯೧೭/೨) ಆರ್. ನರಸಿಂಹಾಚಾರ್ಯರು ನೋಡಿರಬೇಕೆಂದು ತೋರುತ್ತದೆ. ಅವರು 'ಕರ್ಣಾಟಕ ಕವಿಚರಿತೆ'ಯಲ್ಲಿ ಕಂತಿಯನ್ನು ಕುರಿತಾಗ ಉದ್ಧರಿಸಿರುವ ''ಕವಿರಾಯ ಕವಿಪಿತಾಮಹ....'' ಎಂಬ ಕಂದ ಪದ್ಯವೂ ಅದರ ಮುಂದಿನ ಎರಡು ಪದ್ಯಗಳೂ ಆ ಹಸ್ತಪ್ರತಿಯಿಂದಲೇ ಅವರು ಉದ್ಧರಿಸಿರುವುದು ಸಾಧ್ಯವೆಂದು ಉಭಯಸಮಾನವಾದ ತ್ರುಟಿತಭಾಗದಿಂದ ಊಹಿಸಬಹುದಾಗಿದೆ. ಹಲವೆಡೆ ಅವರು ಪಾಠಗಳನ್ನು ಪರಿಷ್ಕರಿಸಿಕೊಂಡಿದ್ದಾರೆ. ಅವರು ಉದ್ಧರಿಸದೆ ಬಿಟ್ಟ ವೈಯಕ್ತಿಕ ಚರಿತ್ರೆಯ ಇನ್ನೂ ಎರಡು ಪದ್ಯಗಳು ಹಸ್ತಪ್ರತಿಯಲ್ಲಿವೆಯಾದರೂ, ಅವು ತೀರ ಅಶುದ್ಧವಾಗಿರುವುದರಿಂದ ಅವರು ಅವನ್ನು ಎತ್ತಿಕೊಂಡಿಲ್ಲವೆಂದು ಭಾವಿಸುವುದೂ ಸಾಧ್ಯವಿದೆ. ಅಭಿನವಪಂಪನು ಕಂತಿಯಿಂದ ಹೊಗಳಿಸಿಕೊಳ್ಳಲು ಸತ್ತವನಂತೆ ನಟಿಸಿ ಮಲಗಿದನೆಂದೂ, ಆಗ ಕಂತಿ ''ಕವಿರಾಯ ಕವಿಪಿತಾಮಹ ....'' ಮುಂತಾಗಿ ಅವನನ್ನು ಕೀರ್ತಿಸಿದಳೆಂದೂ ಇದರಿಂದ ತೃಪ್ತನಾದ ಆತನು ''ನೆವದಿಂ ನೀ(ಂ) ಪೊಗಳ್ದೆ ಕಂತಿ ನಿನ್ನಂ ಗೆ(ಲ್ದೆ)ನು'' ಎಂದು ಹೇಳಿದನೆಂದೂ (ಪ. ೧೫ ರಿಂದ ೧೯) ಇಲ್ಲಿ ವಿಷಯನಿರೂಪಣೆಯಿದೆ. ಆದರೆ ಈ ನಿರೂಪಣೆಯಾದರೂ ತಕ್ಕ ಸಂದರ್ಭವಾಗಿ, ಪೂರ್ವಾಪರ ವಿವರಗಳೊಂದಿಗೆ ಇಲ್ಲಿ ಬಾರದಿರುವುದು ವಿಷಾದದ ಸಂಗತಿ. ಮುದ್ರಿತ ಗ್ರಂಥಗಳಲ್ಲಿ ಈ ಸಂದರ್ಭದ ಯಾವ ಪದ್ಯವೂ ಇಲ್ಲವೆನ್ನುವುದು ಗಮನಾರ್ಹ.

ಕಂತಿ ಕೀರ್ತಿಸಿದ ಪದ್ಯಗಳಲ್ಲಿ

ಇನ್ನೇಕೆ ದೋರನೋಲಗ । ಇನ್ನೇಕೆ ಕವಿತ್ವ ವಾದ ತರ್ಕ ಸಮಸ್ಯಂ ।
ಇನ್ನೇಕೆ ಬಲು ವಿಚಾರವು । ಚೆನ್ನಿಗಕವಿ ಪಂಪರಾಜನಳಿದ ಬಳಿಕ್ಕಂ ॥ ೧೭ ॥

ಎಂಬುದಾಗಿ ಆಕೆ ಶೋಕಿಸಿದಳೆಂದಿದೆ. ಇಲ್ಲಿ ಸಮಸ್ಯೆ ವಿದ್ವತ್‌ಗೋಷ್ಠಿಯ ಒಂದು ಭಾಗವಾಗಿತ್ತೆಂದು ನೇರವಾದ ಸೂಚನೆಯೊಂದು ನಮಗೆ ದೊರೆಯುತ್ತದೆ. ದೇವಚಂದ್ರನ 'ರಾಜಾವಳೀಕಥೆ'ಯಲ್ಲಿ ಬೇರೊಂದು ರೀತಿಯ ನಿರೂಪಣೆಯಿದ್ದು, ಪಂಪ ಕಂತಿಗೆ 'ಸಾವಿರಪ್ರಶ್ನೆ'ಗಳನ್ನು ಕೇಳಿದನೆಂದೂ ಆಕೆ ಉತ್ತರ ಕೊಟ್ಟಳೆಂದೂ ಇದರಿಂದ ಆಕೆಗೆ ರಾಜಸಭೆಯಲ್ಲಿ ಅಧಿಕ ಕವೀಶ್ವರಿಯಾಗುವ ಯೋಗ ಘಟಿಸಿತೆಂದೂ ಅಲ್ಲಿ ಉಲ್ಲೇಖವಾಗಿದೆ.

ಷಡಕ್ಷರಿಯ 'ರಾಜಶೇಖರ ವಿಳಾಸ' (೧೬೫೪)ದಲ್ಲಿ ಈ ಬಗೆಯ ಸಮಸ್ಯೆಗೆ ಒಂದು ಸಂಸ್ಕೃತ ನಿದರ್ಶನವಿದ್ದು, ಅದನ್ನು ಅಲ್ಲಿ 'ಪ್ರಹೇಳಿಕೆ'ಯೆಂದಿದೆ. ಇದನ್ನು ಪ್ರಹೇಳಿಕೆಯ ಒಂದು ಪ್ರಕಾರವಾದ ಸಮಸ್ಯೆ ಎನ್ನಬಹುದಾಗಿದೆ. ಈ ನಿದರ್ಶನವು ಆ ಕಾವ್ಯದಲ್ಲಿ ರಾಜಶೇಖರನ ಚಂದ್ರಿಕಾವಿಹಾರ ವರ್ಣನೆ ಬರುವ ಏಕಾದಶಾಶ್ವಾಸದೊಳಗೆ ಬರುತ್ತದೆ.

ರಣೇನ ಸಾಧ್ಯತೇ ಸರ್ವಂ । ಮಠೇನ ಧ್ರಿಯತೇ ಮಹೀ ।
ಅಸಾರೇ ಕ್ರೀಡತೇ ಹಂಸಃ । ಕವಿಶ್ಲೇಷೇ ಕಿಮದ್ಭುತಂ ॥ (ಪ. ೧೭೩)

ವೇಶ್ಯೆಯೊಬ್ಬಳು ತನ್ನ ಪ್ರಿಯಕರನಿಗೆ, ಆಪಾತತಃ ಆಭಾಸಕರವಾದ ಮೂರು ಚಮತ್ಕಾರದ ವಾಕ್ಯಗಳನ್ನು ಸಮಸ್ಯೆಗಳಾಗಿ ಒಡ್ಡಿದಾಗ, ಅವನು ಅದಕ್ಕೆ ಉತ್ತರವಾಗಿ ನಾಲ್ಕನೆಯ ವಾಕ್ಯವನ್ನು ಆಡಿದಂತೆ ತಿಳಿಯುತ್ತದೆ. ''ರಣದಿಂದ ಸರ್ವವೂ ಸಾಧಿಸಲ್ಪಡುತ್ತದೆ. ಮಠದಿಂದ ಮಹಿಯು ಧರಿಸಲ್ಪಡುತ್ತದೆ. ಅಸಾರದಲ್ಲಿ ಹಂಸವು ಕ್ರೀಡಿಸುತ್ತದೆ''. ಇವೇ ಆ ವೇಶ್ಯೆ ಹೇಳಿದ ಮೂರು ಚಮತ್ಕಾರದ ವಾಕ್ಯಗಳು. ಆಗ ವಿಟನು 'ಕ'ಕಾರವನ್ನು ವಿಶ್ಲೇಷಿಸಿರುವುದರಿಂದ ಅದು ಅದ್ಭುತವಾಗಿದೆಯೆಂದು ಸೂಚಿಸುತ್ತಾನೆ. ಪ್ರತಿ ವಾಕ್ಯದ, ಎಂದರೆ ಪದ್ಯಪಾದದ, ಆರಂಭದಲ್ಲಿ 'ಕ'ಕಾರವನ್ನು ಕೂಡಿಸಿ ಪದವನ್ನು ರೂಪಿಸಿದರೆ, ಆಗ ಚಮತ್ಕಾರದ ವಾಕ್ಯ ಹೀಗೆ ಸಾಧಾರಣ ವಾಕ್ಯವಾಗಿ ಪರಿಣಮಿಸುತ್ತದೆ.

ಕರಣೇನ ಸಾಧ್ಯತೇ ಸರ್ವಂ । ಕಮಠೇನ ಧ್ರಿಯತೇ ಮಹೀ ।
ಕಾಸಾರೇ ಕ್ರೀಡತೇ ಹಂಸಃ । ಕವಿಶ್ಲೇಷೇ ಕಿಮದ್ಭುತಂ ॥

''ಕ್ರಿಯಾಚಾರದಿಂದ ಏನನ್ನಾದರೂ ಸಾಧಿಸಬಹುದು. ಆದಿಕೂರ್ಮನಿಂದ ಭೂಮಿ ಧರಿಸಲ್ಪಟ್ಟಿದೆ. ಸರೋವರದಲ್ಲಿ ಹಂಸವು ಕ್ರೀಡಿಸುತ್ತದೆ. ಕವಿಗಳ ಶ್ಲೇಷೆಗೆ ಏನು ತಾನೆ ಅದ್ಭುತವಾದ್ದು ಇದೆ?'' ಈ ಪದ್ಯ ಅರ್ಥದ ದೃಷ್ಟಿಯಿಂದ ಸಮರ್ಪಕವಾಗಿರಬಹುದಾದರೂ, ಛಂದಸ್ಸಿನ ದೃಷ್ಟಿಯಿಂದ ತೃಪ್ತಿಕರವಾದಂತೆ ತೋರುವುದಿಲ್ಲ. ಮೊದಲೆರಡು ಪಾದಗಳಲ್ಲಿ ಅಕ್ಷರಸಂಖ್ಯೆ ಒಂದೊಂದು ಅಕ್ಷರದಿಂದಾಗಿ ಹೆಚ್ಚಿ, ಅನುಷ್ಟುಪ್ ಶ್ಲೋಕದ ರಚನೆಗೆ ಶೈಥಿಲ್ಯವುಂಟಾಗಿದೆ ಎನ್ನಬೇಕು.

ಸಮಸ್ಯೆಯ ಈಚಿನ ಉದಾಹರಣೆಗಳಿಗೆ ಪಿ. ಬಸವಣ್ಣನವರ 'ನಿರೀಕ್ಷೆ' ಎಂಬ ಕವಿತಾಸಂಕಲನದ (೧೯೭೫) 'ಚಿತ್ರಕವಿತ್ವ' ಎಂಬ ಪದ್ಯಗುಚ್ಛದ ಎರಡು ಪದ್ಯಗಳನ್ನು ನಾವು ಗಮನಿಸಬಹುದಾಗಿದೆ. 'ರಾಜಶೇಖರ ವಿಳಾಸ'ದ ರಚನೆ ಮತ್ತು ಸೂಚನೆಗಳಿಂದ ಪ್ರಾಯಃ ಪ್ರೇರಿತವಾಗಿ ಅವರು 'ಪ್ರಹೇಳಿಕೆ' ಎಂದಿರುವ ಉದಾಹರಣೆಯಿದು :

ವನಮಂ ರಚಿಪನರ್ತಿಪರ್ಶಿವನಂ । ದನಮಂ ಜಯಿಪರ್ಪಡೆವರ್ಸರಂ ।
ಪನಿಯಂ ಧರಿಪರ್ತಪಸಾಚರಿಪರ್ । ಕನಿಯೋಜನದಿಂದತಿಚಿತ್ರಮ ಪಾರ್ ॥

ಪ್ರತಿಪಾದದ ಆರಂಭದಲ್ಲಿ 'ಕ' ಎಂಬುದರ ನಿಯೋಜನದಿಂದ ಮೊದಲ ಮೂರು ವಾಕ್ಯಗಳ ಆಭಾಸಕರವಾದ ಅರ್ಥ ಪರಿಹಾರಗೊಳ್ಳುತ್ತದೆ. ಆಗ ಪದ್ಯ

ಕವನಮಂ ರಚಿಪನರ್ತಿಪರ್ಶಿವನಂ । ಕದನಮಂ ಜಯಿಪರ್ಪಡೆವರ್ಸರಂ ।
ಕಪನಿಯಂ ಧರಿಪರ್ತಪಸಾಚರಿಪರ್ । ಕನಿಯೋಜನದಿಂದತಿಚಿತ್ರಮ ಪಾರ್ ॥

ಎಂಬುದಾಗಿ ಸಾರ್ಥಕವಾದ ರಚನೆಯಾಗುತ್ತದೆ. ಆದರೆ ಛಂದಸ್ಸಿನ ದೃಷ್ಟಿಯಿಂದ ಅಕ್ಷರ ಇಲ್ಲವೆ ಮಾತ್ರಾ ಛಂದಸ್ಸಿನ ಯಾವುದೇ ಸಂಪ್ರದಾಯಬದ್ಧ ರಚನೆಗೂ ಇದು ಹೊಂದದಿರುವುದು ಇಲ್ಲಿಯ ಒಂದು ಲೋಪವೆನ್ನಬಹುದು.

ಈಗ ಇದೇ ಕವಿಯ 'ಸಮಸ್ಯಾಪೂರಣ'ವೆಂಬ ರಚನೆಯ ಲಕ್ಷ್ಯವನ್ನು ಉದಾಹರಿಸಬಹುದು.
ಸಮಸ್ಯಾಪಾದ :

ಮಲದೊಳ್ನೆಲೆಸಿರ್ಪಳಂ ವರಿಸಿದಂ ಶ್ರೀಶಂ ।

ಸಮಸ್ಯಾಪೂರ್ತಿಯಾದ ಪದ್ಯ :

ಬಲವಾದ ಶೇಷನಂ ಸು । ತ್ತಿ ಲೇಸಿನಿಂ ಕಡೆಯೆ ದೇವದಾನವಮುಖ್ಯರ್ ।
ಪೊಳೆವ ಸುಧಾಬ್ಧಿಯೊಳುದಿಸಿ ಕ । ಮಲದೊಳ್ನೆಲೆಸಿರ್ಪಳಂ ವರಿಸಿದಂ ಶ್ರೀಶಂ ॥

ಹೀಗೆ ರಚನೆ ಪೂರ್ಣಗೊಂಡಾಗ, ಮೊದಲಿನ ಆಭಾಸಕರವಾದ ಅರ್ಥ ನಿವೃತ್ತಿಗೊಂಡಿದೆ.

ಸಾಮಾನ್ಯ ಉಭಯಚಿತ್ರಗಳು

ಈಗಾಗಲೇ ಗಮನಿಸಿರುವಂತೆ ಪ್ರತಿಮಾಲಾದಿಗಳು ಇವು. ಇವುಗಳ ಸಾಮಾನ್ಯಲಕ್ಷಣ ಎಂದರೆ : (೧) ಪ್ರತಿಮಾಲಾ: ಇದು ಅಂತ್ಯಾಕ್ಷರಿ ಎಂದು ಪರಿಚಿತವಾಗಿರುವ ಒಂದು ಕೂಟ. ಇಬ್ಬರು ಅಥವಾ ಎರಡು ಗುಂಪಿನವರು ನಡಸುವ ಈ ಸ್ಪರ್ಧೆಯಲ್ಲಿ ಒಬ್ಬ ಅಥವಾ ಒಂದು ಕಡೆಯುವರಲ್ಲಿ ಯಾವನಾದರೊಬ್ಬ ಹೇಳಿದ ಪದ್ಯದ ಕೊನೆಯ ಅಕ್ಷರವನ್ನೆತ್ತಿಕೊಂಡು, ಅದರಿಂದ ಆರಂಭವಾಗುವ ಬೇರೊಂದು ಪದ್ಯವನ್ನು ಇನ್ನೊಬ್ಬ ಅಥವಾ ಇನ್ನೊಂದು ಕಡೆಯುವರಲ್ಲಿ ಯಾವನಾದರೊಬ್ಬ ಹೇಳುವುದು. ಹೀಗೆ ಎಷ್ಟು ಪದ್ಯಗಳನ್ನಾದರೂ ಹೇಳಬಹುದು; ಹೇಳಲು ಸಾಧ್ಯವಾಗದೆ ಹೋದಾಗ ಸ್ಪರ್ಧೆ ನಿಲ್ಲುತ್ತದೆ. (೨) ದುರ್ವಾಚಕಯೋಗ: ಶಬ್ದ ಅಥವಾ ಅರ್ಥದ ದೃಷ್ಟಿಯಿಂದ ಉಚ್ಚರಿಸಲು ಅಥವಾ ಉಪಯೋಗಿಸಲು ಕಷ್ಟವಾಗುವಂತಹ ಪದಗಳನ್ನು ಉಪಯೋಗಿಸಿ ಪದ್ಯ ರಚಿಸುವುದು. ಇದರಲ್ಲಿ ಒಂದು ಗುಂಪು ಇಂತಹ ಪದ್ಯದ ರಚನೆಗೆ ಇನ್ನೊಂದು ಗುಂಪನ್ನು ಸ್ಪರ್ಧೆಗೆ ಕರೆಯುವುದೂ ಅಂತ್ಯಾಕ್ಷರ ವಿಧಾನದಲ್ಲಿ ಇನ್ನೂ ಕಷ್ಟತರವಾದ ಅಂತಹ ಪದ್ಯ ರಚಿಸುವಂತೆ ಇಕ್ಕಟ್ಟನ್ನು ಉಂಟು ಮಾಡುವುದೂ ಸಾಧ್ಯ. (೩) ಮ್ಲೇಚ್ಛಿತ ವಿಕಲ್ಪ : ತಜ್ಞರು ವಿಧಿಸುವಂತಹ ವಿವಿಧ ರೀತಿಗಳಲ್ಲಿ ಅಕ್ಷರಗಳನ್ನು ಸರಿಹೊಂದಿಸಿ ಸಿದ್ಧವಾದ ಪದಗಳಿಂದ ಕಟ್ಟಿದ, ಅರ್ಥಮಾಡಿಕೊಳ್ಳಲು ಕಷ್ಟವಾಗಿರುವಂತಹ ಪದ್ಯವನ್ನು ರಚಿಸುವುದು. (೪) ಸಂಪಾಠ್ಯ : ಒಬ್ಬ ಪುಸ್ತಕವೊಂದನ್ನು ಮೊದಲು ಓದುತ್ತಾನೆ; ಇನ್ನೊಬ್ಬ ಅದರ ಪದ್ಯಗಳು ಕಿವಿಗೆ ಬೀಳುವ ಮೊದಲೇ, ಅದನ್ನು ಓದಿನ ಸ್ಥಾಯಿಗೆ ಅನುಗುಣವಾಗಿ ಎರಡು ಧ್ವನಿಗಳೂ ಏಕೀಭವಿಸಿ ಕೇಳಿಬರುವ ಹಾಗೆ ಓದುವುದು. (೫) ಮಾನಸೀ: ಚಾಕ್ಷುಷ, ಚಾಕ್ಷುಷವಲ್ಲದುದು ಎಂದು ಇದರಲ್ಲಿ ಎರಡುವಿಧ. ಯಾರಾದರೊಬ್ಬರು ಅರ್ಥವೇನೆಂದು ಹೇಳದೆ, ಪದ್ಯವೊಂದರ ವ್ಯಂಜನಗಳು, ಅನುನಾಸಿಕಗಳು ಮತ್ತು ಮಹಾಪ್ರಾಣಗಳನ್ನು ಯಥಾಕ್ರಮದಲ್ಲಿ ಪದ್ಮಾದಿ ಬಂಧಗಳಿಗೆ ಅನುಸಾರವಾಗಿ ಬರೆದರೆ, ಇನ್ನೊಬ್ಬರು ತಕ್ಕ ಸ್ವರಗುಣಿತಗಳು ಛಂದಸ್ಸು ಸಂಧಿಸಮಾಸಗಳನ್ನು ಹೊಂದಿಸಿ ಪದ್ಯವನ್ನು ಪೂರ್ತಿಗೊಳಿಸುವುದು. ಹೀಗೆ ಬರೆದುದನ್ನು ಓದಿದಾಗ, ಅದು 'ಆಕಾಶಮಾನಸೀ' ಎಂಬ ಚಾಕ್ಷುಷವಲ್ಲದ ಮಾನಸೀ ಪ್ರಭೇದವೆನಿಸುವುದು.

ಇವಲ್ಲದೆ 'ಕಾವ್ಯಕ್ರಿಯಾ' ಎಂಬುದು ಸಂಸ್ಕೃತ, ಪ್ರಾಕೃತ ಹಾಗೂ ಅಪಭ್ರಂಶ ಭಾಷೆಗಳಲ್ಲಿ ಪದ್ಯ ರಚಿಸುವ ಒಂದು ಹವ್ಯಾಸವನ್ನು ಹೇಳುವ ಒಂದು ಪರಿಭಾಷೆಯಾಗಿದೆ. ಜನರ ಗುಂಪಿನ ನಡುವೆ ಸಂಕೇತ ಭಾಷೆಯ ರೀತಿಯ ಮಾತುಗಾರಿಕೆಯಿಂದ ಗುಟ್ಟು ಮಾತನಾಡುವುದನ್ನು 'ಆಕೀರ್ಣಮಂತ್ರ' ಎನ್ನಲಾಗುತ್ತದೆ. ವಸ್ತುಸ್ಥಿತಿಯನ್ನು ಮರೆಮಾಡಿ, ಬೇರೇನೋ ಹೇಳಿ ಇತರರು ಅದೇ ನಿಜವೆಂದು ನಂಬುವಂತೆ ಮಾಡುವುದು 'ಪರವ್ಯಾಮೋಹನ' ಎನಿಸುತ್ತದೆ. ಈ ಎರಡೂ ಪ್ರಹೇಳಿಕೆ (ಒಗಟು)ಗಳ ಮೂಲಕ ಪ್ರತೀತವಾಗುವುವು. ಈಗ ಇವು ಅಂತರಿಸಿ ಹೋಗಿದ್ದರೂ ಒಂದು ಕಾಲದಲ್ಲಿ ಜನ ಈ ಚತುರೋಕ್ತಿಗಳ ಕಾಲಕ್ಷೇಪದಲ್ಲಿ ಅತ್ಯುತ್ಸಾಹದಿಂದ ತೊಡಗಿರುತ್ತಿದ್ದ ಅಭ್ಯಾಸವಿದ್ದಿತು. 'ಸರಸ್ವತೀಭವನ', 'ಕಾವ್ಯದೇವಾಯತನ', 'ವಿದ್ಯಾಗೋಷ್ಠಿ' ಮುಂತಾದ ಸಾಹಿತ್ಯಗೋಷ್ಠಿಗಳಲ್ಲಿ ಇಂಥವು ಜರುಗುತ್ತಿದ್ದಿರಬೇಕು.

ಕನ್ನಡ ನಾಡಿನಲ್ಲಿ 'ಅಂತ್ಯಾಕ್ಷರಿ', 'ಕಾವ್ಯಕ್ರಿಯಾ' ಇಂತಹವುಗಳಿಗೆ ನಿದರ್ಶನಗಳನ್ನು ಇತ್ತೀಚೆಯ ಕಾಲದವರೆಗೆ ಕಾಣಬಹುದಾಗಿತ್ತು. ಈ ಸಂದರ್ಭದಲ್ಲಿ 'ಪಂಪಭಾರತ'ದ 'ಅಕ್ಕರದ ಗೊಟ್ಟಿ' (೪–೨೯), ''ಆದಕ್ಕರ ಗೊಟ್ಟಿಯುಂ ಚದುರರೊಳ್ಪಾತುಂ'' (೪–೩೧), ಇವು ನೆನಪಿಗೆ ಬರುವುದು ಸಹಜವೇ.

ಅಡಿಟಿಪ್ಪಣಿಗಳು

1. ಕನಕದಾಸರ ಮುಂಡಿಗೆಗಳು, 'ಮಹಾತ್ಮ ಕನಕದಾಸ ಪ್ರಶಸ್ತಿ', ಬೆಂಗಳೂರು, ೧೯೬೫, ಪು. ೪೯
2. ಪ್ರಾಚೀನ ಕರ್ಣಾಟಕದಲ್ಲಿ 'ದಿವ್ಯ' ಮತ್ತು 'ಮುಂಡಿಗೆ', 'ಸಂಶೋಧನ ತರಂಗ', ೧೯೬೬, ಪು. ೧೦೧–೦೪
3. 'ಮಹಾತ್ಮ ಕನಕದಾಸ ಪ್ರಶಸ್ತಿ', ಪು. ೪೯–೫೦
4. ಸಂಪಾದಕರ ಮುನ್ನುಡಿ, 'ಶ್ರೀ ಕನಕದಾಸರ ಭಕ್ತಿಗೀತಗಳು', ಧಾರವಾಡ, ೧೯೫೫, ಪು. ೨೯

5–6 The Riddle in Indian Life, Lore and Literature, 1965

7–8 'ಕನ್ನಡ ಕಾವ್ಯಾಲಂಕಾರ', ಮೈಸೂರು, ೧೯೭೫, ಪು. ೭೭

9. Figurative Poetry in Sanskrit Literature, 1975, p. 101
10. ಮೂಲ ಅನುವಾದಗಳಿಗೆ ಬಳಸಿರುವ ಆಕರ: ಸಂಕೀಘಟ್ಟಂ ವೆಂಕಟಾಚಾರ್ಯ (ಅನು), ಖಂಡ ೩–ಭಾಗ ೧, ಮೈಸೂರು, ೧೯೫೩, ಪು. ೬೯–೭೨
11. 'ಕವಿರಾಜಮಾರ್ಗ ವಿವೇಕ', ಮೈಸೂರು, ೧೯೭೩, ಪು. ೨೪೫–೪೬
12. 'ಕವಿರಾಜಮಾರ್ಗಂ', ಬೆಂಗಳೂರು, ೧೯೬೮, ಪು. ೨೫೦–೫೧

13–14. ಕವಿವಿ. ಪು. ೨೪೬; ಪು. ೨೪೬–೪೭

15. ಕವಿರಾ. ಪು. ೨೫೧–೫೨
16. ಕವಿವಿ. ಪು. ೨೪೭
17. 'ಕಾವ್ಯಾವಲೋಕನ', ಉಪೋದ್ಘಾತ, ಪು. xlvi
18. ಕವಿವಿ. ಪು. ೨೪೭–೪೮; ಕವಿರಾ. ಪು. ೨೫೨
19. ಕವಿರಾ. ಪು. ೨೫೨
20. ಕವಿವಿ. ಪು. ೨೪೮
21. ಕವಿರಾ. ೨೫೨
22. 'ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಛಂದಸ್ಸಿನ ಚರಿತ್ರೆ', ೧, ಮೈಸೂರು ೧೯೮೦, ಪು. ೪೬೩
23. ಕವಿವಿ. ಪು. ೨೪೮
24. ಕವಿರಾ. ಪು. ೨೫೨
25. ಕವಿವಿ. ಪು. ೨೪೮
26. ಕವಿರಾ. ಪು. ೨೫೨
27. ಕವಿವಿ. ಪು. ೨೪೮–೪೯
28. 'ಕಾವ್ಯಾವಲೋಕನ', ಉಪೋದ್ಘಾತ, ಪು. xlvi
29. 'ಕನ್ನಡ ಗ್ರಂಥಸಂಪಾದನೆ', ೧೯೬೪, ಪು. ೮೯, ೯೩
30. ಕವಿವಿ. ಪು. ೨೪೯
31. ಕವಿರಾ. ಪು. ೨೫೩

32–33 ಕವಿವಿ. ಪು. ೨೪೯–೫೦; ಪು. ೨೫೦–೫೧

34. ಎಂ. ವಿ. ಸೀತಾರಾಮಯ್ಯ (ಸಂ), 'ಉದಯಾದಿತ್ಯಾಲಂಕಾರ', ಮೈಸೂರು, ೧೯೭೦, ಪು. ೯೧ (ಪರಿಶಿಷ್ಟ)
35. ಎಚ್. ತಿಪ್ಪೇರುದ್ರಸ್ವಾಮಿ (ಸಂ), 'ಮಾಧವಾಲಂಕಾರ', ಮೈಸೂರು, ೧೯೭೮

36–37. ಈ ಪದ್ಯಗಳ ಅರ್ಥ ವಿವರಣೆಯಲ್ಲಿ ವಿದ್ವಾನ್ ಎನ್ ರಂಗನಾಥ ಶರ್ಮರು ನನಗೆ ಸಹಾಯವಾಗಿದ್ದಾರೆ. ಎರಡನೆಯ ಪದ್ಯದ ಬಗೆಗೆ ಅವರ (೨೪–೬–೮೫ರ ಪತ್ರ) ವಿವರಣೆ: 'ಪೊಸತೊಂದಂ ತೀವಿ' ಎಂದು ಹೇಳಿದ್ದರಿಂದ ನಾಯಿಕೆ ಮೊದಲೇ ಮನ್ಮಥನ ಚಿತ್ರವನ್ನು ಬರೆದು, ಹೆದೆಯೇರಿಸಿದಂತೆ ಚಿತ್ರಿಸಿ, ಹೆದೆಗೆ ದುಂಬಿಗಳನ್ನು ಅಳವಡಿಸಿದ್ದಳು. ಮನ್ಮಥನ ಧನುಸ್ಸಿನ ಹೆದೆ ಭ್ರಮರಮಯವಷ್ಟೆ. ಇದರಿಂದ ನಾಯಿಕೆಯ ಕಾಮಾವಸ್ಥೆ ಸೂಚಿತವಾಗುತ್ತದೆ. ಅನಂತರ ಚಂದ್ರನನ್ನು ಬರೆದು ಸೇರಿಸಿದಳು. ಅದೇ ಹೊಸ ವಸ್ತು! ಚಂದ್ರೋದಯವಾದ್ದರಿಂದ ವಿರಹವು ಸಹನಾತೀತವೆಂದು ಅಭಿಪ್ರಾಯ. ಕರಡಿಗೆಯ ಮೇಲೆ ಹರ, ಚಂಪಕ, ಅಹಿಗಳನ್ನು ಚಿತ್ರಿಸಿದಳು. ಆಶಯವೇನೆಂದರೆ, "ಹರನು

ಮನ್ಮಥನನ್ನೂ ಚಂಪಕವು ದುಂಬಿಯನ್ನೂ ಅಹಿಯು (ರಾಹು) ಚಂದ್ರನನ್ನೂ ಕಬಳಿಸಿದಂತೆ ಮನ್ಮಥನು ನನ್ನನ್ನು ಕಬಳಿಸುವುದರಲ್ಲಿದ್ದಾನೆ. ಆದ್ದರಿಂದ ಬೇಗ ಬಾ'' ಎಂದು. ಇದನ್ನರಿತು "ವಸುಧೇಶಂ ತಾನೆ ಬಂದಂ". ನನ್ನ ವಿವರಣೆಗೆ ಇಲ್ಲಿಂದಲೇ ಸೂಚನೆ ಪಡೆದಿದ್ದೇನೆ. ಆದರೆ ವಿವರಣೆ ಬೇರೆ ರೀತಿಯಲ್ಲಿದೆ

38. ಎಂ. ಚಿದಾನಂದಮೂರ್ತಿ, 'ವಚನ ಸಾಹಿತ್ಯ', ಬೆಂಗಳೂರು, ೧೯೭೫, ಪು. ೨೦೨. ಈ ಆಕರಗಳನ್ನೂ ನೋಡಬಹುದು: ಎಂ. ಎಸ್. ಸುಂಕಾಪುರ (ಸಂ), 'ಸಕಲಪುರಾತನರ ಬೆಡಗಿನ ವಚನಗಳು', ಧಾರವಾಡ, ೧೯೭೮, ಪು. iv–x; ಎಚ್. ತಿಪ್ಪೇರುದ್ರಸ್ವಾಮಿ, 'ಶರಣರ ಅನುಭಾವ ಸಾಹಿತ್ಯ', ಮೈಸೂರು, ೧೯೭೮, ಪು. ೨೫೯–೭೯; 'ಗವಿದೀಪ್ತಿ', ಪು. ೪೨೬; ಎಲ್. ಬಸವರಾಜು, 'ಅಲ್ಲಮನ ವಚನಚಂದ್ರಿಕೆ', ಪೀಠಿಕೆ

39. ಟೀಕೆಗಳಿಗೆ ಆಕರ : ಎಂ. ಎಸ್. ಸುಂಕಾಪುರ (ಸಂ), 'ಸಕಲ ಪುರಾತನರ ಬೆಡಗಿನ ವಚನಗಳು', ೧೯೭೮

40. ಅಲ್ಲದೆ ನೋಡಿ : 'ಪಂಪಭಾರತದ ದೀಪಿಕೆ', ೧೯೭೧, ಪು. ೫೩೫–೩೬

41. ನೋಡಿ : 'ಶ್ರೀವತ್ಸ ನಿಘಂಟು', ಗತಿಕ–೮; ರಾಜವೃತ–೮; ಆತ್ಮಗುಣ–೮

42. ಎನ್. ರಂಗನಾಥಶರ್ಮ, 'ವಿದುರನೀತಿ', ಕಸಾಪ., ಬೆಂಗಳೂರು, ೧೯೭೩

43. ಕನಕದಾಸರ ಮುಂಡಿಗೆಗಳು, 'ಕನಕದಾಸ ಪ್ರಶಸ್ತಿಗ್ರಂಥ', ಪು. ೫೨

44. ಶ್ರೀ ಹರಿದಾಸ ಭಾರತಿ, ೨–೮, ಜೂನ್ ೧೯೫೨, ೧೭–೧೯

45. 'ರಾತ್ರಿಯ ನಲ್ಲನ ಪದ್ಯ', ಕಅಸಂ. ಕೆಎ. ೨೮೫ (೬–೧–೧೯೦೮ರಂದು ಆನಂದಾಳ್ವಾರ್ ಬರೆದುದು)

46. ಪ್ರಚಲಿತ ಮುದ್ರಣಗಳಲ್ಲಿ ಈ ಪದ್ಯವಿದೆ. ಈ ಪದ್ಯದ ಪಾಠ ಮತ್ತು ಅರ್ಥನಿರ್ಣಯಗಳಿಗೆ ನೋಡಿ : "ವೇದಪುರುಷನ ಸುತನ ಸುತನ...." ಪದ್ಯದ ಪಾಠ ಮತ್ತು ಅರ್ಥ, 'ಗಮಕ ಮಂದಾರ', ಡಿಸೆಂಬರ್ ೧೯೮೩, ಪು. ೭೩–೭೯

47. ಶ್ರೀ ಹರಿದಾಸ ಭಾರತೀ, ೮–೧, ನವೆಂಬರ್ ೧೯೫೭, ಪು. ೧೦–೧೪

48. ಮೂಲ ಮತ್ತು ವಿವರಣೆಗಳಿಗೆ : 'ಶ್ರೀ ಕನಕದಾಸರ ಭಕ್ತಿಗೀತಗಳು', ಧಾರವಾಡ ೧೯೬೫, ಪು. ೧೧೩–೨೩

49. ಮೂಲ ಮತ್ತು ವಿವರಣೆಗಳಿಗೆ : 'ಮಹಾತ್ಮ ಕನಕದಾಸ ಪ್ರಶಸ್ತಿಗ್ರಂಥ', ಬೆಂಗಳೂರು ೧೯೬೫, ಪು. ೫೦–೫೧

50. ಹಿತಬೋಧಿನಿ, ೨, ೫, ೬, ಫೆಬ್ರವರಿ ೧೮೮೫, ಮಾರ್ಚ್ ೧೮೮೫

51. ಕರ್ಣಾಟಕ ವಾಣೀವಿಲಾಸ, ೧–೩, ೪, ೧೮೮೮

52. ರಾಮೇಗೌಡ, 'ನಮ್ಮ ಒಗಟುಗಳು', ಮೈಸೂರು, ೧೯೭೦; ದೇವುಡು, 'ಕರ್ಣಾಟಕ ಸಂಸ್ಕೃತಿ', ಬೆಂಗಳೂರು, ೧೯೩೫

53. ಕವಿವಿ. ಪು. ೨೪೩–೪೪; ಕವಿರಾ. ಪು. ೨೪೧

54. Durga Bhagwat, The Riddle in Indian Life, Lore and Literature, pp.16–18

55. ವೈ. ಪ್ರಣತಾರ್ತಿಹರ ಶಾಸ್ತ್ರೀ (ಅನು), ಮೈಸೂರು, ೧೯೬೨

56. ಬಿ.ಬಿ. ಮಹೀಶವಾಡಿ (ಸಂ), ಧಾರವಾಡ, ೧೯೭೭

೭

ಗತಿಚಿತ್ರ

ಲಕ್ಷಣ, ಪ್ರಭೇದಗಳು

ವರ್ಣಗಳನ್ನು ಅಥವಾ ವರ್ಣಶ್ರೇಣಿಗಳನ್ನು ಒಂದು ಗೊತ್ತಾದ ಕ್ರಮದಲ್ಲಿ ಚಮತ್ಕಾರಜನಕವಾಗಿ ನಡಸುವುದರ ಮೂಲಕ ಶಾಬ್ದಿಕವೈಚಿತ್ರ್ಯವನ್ನು ಹುಟ್ಟಿಸುವುದು 'ಗತಿಚಿತ್ರ'ವೆನಿಸುವುದು. ಇದರಲ್ಲಿ ಹಲವು ವಿಧ. ಗತಪ್ರತ್ಯಾಗತ, ಗೋಮೂತ್ರಿಕ, ಅರ್ಧಭ್ರಮ ಮತ್ತು ಸರ್ವತೋಭದ್ರಗಳೆಂಬವು ಮುಖ್ಯವಾದವು. ಅಲ್ಲದೆ ತುರಂಗಪದ, ಗಜಪದ ಹಾಗೂ ರಥಪದಗಳೆಂಬುವು, ಚದುರಂಗದಾಟದ ಗತಿಗೆ ಅನುಸಾರವಾದವು ಸಹ, ಇವೆ. ಇವುಗಳ ಸ್ವರೂಪವನ್ನು ಈಗ ಗಮನಿಸಬಹುದಾಗಿದೆ.

೧. ಗತಪ್ರತ್ಯಾಗತ

'ಗತಪ್ರತ್ಯಾಗತ' ಎಂದರೆ ಎಡದಿಂದ ಬಲಗಡೆಗೆ, ಬಲದಿಂದ ಎಡಗಡೆಗೆ ಒಂದು ಪದವನ್ನೋ ಪದ್ಯವನ್ನೋ ಓದಿದಾಗ ಅಕ್ಷರಗಳಲ್ಲಿ ಯಾವ ವ್ಯತ್ಯಾಸವೂ ಆಗದಿರುವ ರಚನೆಯೆಂದರ್ಥ. ಈ ನಡೆ ಪದ್ಯಗಳಿಗೆ ಸಂಬಂಧಿಸಿದಾಗ, ಅದು ಚಿತ್ರಕಾವ್ಯದ ವ್ಯಾಪ್ತಿಗೆ ಬರುತ್ತದೆ. ರೂಢಿಯಲ್ಲಿರುವ ಕ್ರಮವನ್ನು ಹಿಡಿದು ಎಂದರೆ ಅನುಲೋಮಗತಿಯಲ್ಲಿ ಓದಿದರೂ, ಅದಕ್ಕೆ ವಿಪರೀತ ಕ್ರಮವನ್ನು ಹಿಡಿದು ಎಂದರೆ ವಿಲೋಮಗತಿಯಲ್ಲಿ (ಅಥವಾ ಪ್ರತಿಲೋಮಗತಿಯಲ್ಲಿ) ಓದಿದರೂ ವಿವಕ್ಷಿತವಾದ ಪದ್ಯಾರ್ಥವು ಪೂರ್ಣಗೊಳ್ಳುವಂತೆ ಅಕ್ಷರಸಂಯೋಜನೆ ಕುಶಲ ರೀತಿಯಲ್ಲಿ ನಡೆದಿರುತ್ತದೆ, ಇಲ್ಲಿ.

ಗತಪ್ರತ್ಯಾಗತ ಪದ್ಯದಲ್ಲಿ ಸಮಗ್ರವಾಗಿ ಕಂಡುಬರುತ್ತಿದ್ದರೆ, ಎಂದರೆ ನಾಲ್ಕು ಪಾದಗಳಿಗೂ ಅನ್ವಯಿಸುತ್ತಿದ್ದರೆ, ಅದು ಶ್ಲೋಕಗತಪ್ರತ್ಯಾಗತವೆನಿಸುವುದು. ಅರ್ಧಪದ್ಯದ ಮಟ್ಟಿಗೆ ಕಂಡುಬರುತ್ತಿದ್ದರೆ, ಅದು ಶ್ಲೋಕಾರ್ಧಗತಪ್ರತ್ಯಾಗತವೆನಿಸುವುದು. ಹಾಗೆಯೇ ಪಾದಪಾದಕ್ಕೆ ಸಂಬಂಧಿಸಿದ್ದಾದರೆ ಪಾದಗತಪ್ರತ್ಯಾಗತವೆನಿಸುವುದು. ಇಲ್ಲಿ ಶ್ಲೋಕವೆಂದಿದ್ದರೂ ಗತಪ್ರತ್ಯಾಗತ ಅನುಷ್ಟುಪ್ ಜಾತಿಗೆ ಮಾತ್ರ ಅನ್ವಯಿಸದೆ, ವೃತ್ತಗಳಿಗೆ ಕೂಡ ಅನ್ವಯಿಸಬಹುದು ಎಂಬುದನ್ನು ತಿಳಿದಿರಬೇಕು.

ಗತಪ್ರತ್ಯಾಗತ ಸಾಮಾನ್ಯವಾಗಿ ಮೇಲಿನ ಮೂರು ರೀತಿಗಳಲ್ಲಿಯೇ ಇದ್ದರೂ, ಇದರಲ್ಲಿ ಕವಿಶಕ್ತಿಗೆ ಅನುಸಾರವಾಗಿ ಚಮತ್ಕಾರಗಳು ಬಗೆಬಗೆಯಾಗಿ ಇರಬಹುದು. ರುದ್ರಟ ಮತ್ತು ಭೋಜರು ಇಂತಹ ಕೆಲವು ವಿಶೇಷಗಳನ್ನು ಗುರುತಿಸಿದ್ದಾರೆ. ಉದಾಹರಣೆಗೆ ರುದ್ರಟನ ಪ್ರತಿಲೋಮಾನುಲೋಮಪಾಠದ ಎರಡನೆಯ ಬಗೆಯನ್ನೂ ಭೋಜನ ಭಾಷಾಂತರಗತದ ಬಗೆಯನ್ನೂ ಗಮನಿಸಬಹುದು. ಗತಪ್ರತ್ಯಾಗತಗಳಲ್ಲಿ ಯಮಕಾನುಪ್ರಾಸಗಳ ವೈಚಿತ್ರ್ಯ ಬೆರೆತು ಬರುವುದೂ ಒಂದು ಅಧಿಕಲಕ್ಷಣ. ಈ ಎಲ್ಲ ವೈಚಿತ್ರ್ಯಗಳನ್ನೂ ಒಟ್ಟಿಗೆ 'ವಿಲೋಮಚಿತ್ರ'ಗಳೆಂಬ ಹೆಸರಿನಲ್ಲಿ ವ್ಯವಹರಿಸುವ ಗತಿಚಿತ್ರಗಳ ಒಂದು ಭಾಗವಾಗಿ ತಿಳಿಯಬಹುದು. ಗತಪ್ರತ್ಯಾಗತ ಚಿತ್ರಕಾವ್ಯ ಪದ್ಧತಿಯಲ್ಲಿ ವಿಸ್ಮಯದ ಅಂಶಕ್ಕೆ ಸಹಕಾರಿಯಾದುದೆಂದು ಕೆಲವರು ಸಂಸ್ಕೃತ ಆಲಂಕಾರಿಕರು ಪ್ರಕಟವಾಗಿಯೇ ತಿಳಿಸಿದ್ದಾರೆ. ಯಾವ ಕ್ರಮದಲ್ಲಿ ವರ್ಣಪಂಕ್ತಿ ಹೊರಟಿದೆಯೋ ಅದಕ್ಕೆ ಎದುರಿನಿಂದ ಹಾಗೆಯೇ ಅದನ್ನು ಓದಬಹುದು ಎನ್ನುವ ಆಶ್ಚರ್ಯದಿಂದಾಗಿ 'ಚಿತ್ರ' ಎಂಬುದು ಅನ್ವರ್ಥಕವಾಗಿದೆ ಎಂದು ವಿದ್ಯಾಧರ 'ಏಕಾವಳಿ'ಯಲ್ಲಿ (೭–೫ ವೃತ್ತಿ) ಬರೆದಿರುವುದನ್ನು ನೆನೆಯಬಹುದು.

ಇಲ್ಲಿಯೇ ವಿಲೋಮ ಕಾವ್ಯಗಳ ಬಗೆಗೆ ಕೆಲವು ಮಾತುಗಳನ್ನು ಹೇಳಬಹುದು. ವಕ್ರೋಕ್ತಿ ಮತ್ತು ಶ್ಲೇಷ ಮೂಲವಾಗಿ ದ್ವ್ಯರ್ಥಿ, ತ್ರ್ಯರ್ಥಿ ಕಾವ್ಯಗಳು ಹುಟ್ಟಿರುವುದು ಶಕ್ಯ. ಶ್ಲೇಷಪ್ರಿಯತೆ ಉದೀಚ್ಯರ ಲಕ್ಷಣವೆಂದು ಬಾಣನ ಮತ ('ಹರ್ಷಚರಿತ', ೧–೭). ಕವಿರಾಜನು ''....ಅರ್ಧನಾರೀಶ್ವರಮಯೀ ಮೂರ್ತಿರೇಕತ್ರ

ಶೋಭಿತಾವನ್'' ('ರಾಘವಪಾಂಡವೀಯ', ೧–೪೨) ಎಂಬುದಾಗಿ ಇದರ ಅಭೇದವನ್ನು ಸೂಚಿಸಿದ್ದಾನೆ. ಸುಬಂಧು ಮತ್ತು ಬಾಣಭಟ್ಟರ ಶ್ಲೇಷದ ಗೀಳು ಉಚ್ಚಕೋಟಿಗೆ ಮುಟ್ಟಿದಾಗ ಬಹುಲಾರ್ಥ ಪ್ರಬಂಧಗಳು ಹುಟ್ಟಿಕೊಂಡಿರಬೇಕು ಎಂದು ಎ. ಬಿ. ಕೀಥ್ ಅಭಿಪ್ರಾಯ. ಈ ಬಗೆಯ ರಚನೆಗಳು ಯಮಕಾನುಪ್ರಾಸಗಳು, ಸರ್ವತೋಭದ್ರ, ಚಕ್ರ, ಗೋಮೂತ್ರಿಕ ಮುಂತಾದ ಬಂಧಗಳ ರಚನೆಯಲ್ಲಿ ಕವಿಗಳು ತೊಡಗಿದ್ದ ಕಾವ್ಯಶೈಲಿಯ ಅವನತಿಕಾಲದಲ್ಲಿ ಪ್ರಚುರಗೊಂಡಿರಬೇಕೆನ್ನುವುದು ವಿಮರ್ಶಕರ ಮತ. ಇವಕ್ಕಾಗಿ ನಾನಾರ್ಥಕೋಶಗಳೇ ಅಲ್ಲದೆ, ವಿಶಿಷ್ಟ ಬಹುಲಾರ್ಥಕಾವ್ಯೋಪಯುಕ್ತ ಕೋಶಗಳೂ ಹುಟ್ಟಿದುವು. 'ಕಾವ್ಯಕಲ್ಪಲತಾವೃತ್ತಿ' ಎಂಬ ಕವಿಶಿಕ್ಷಾ ಗ್ರಂಥದಲ್ಲಿ ೩ನೆಯ 'ಶ್ಲೇಷಸಿದ್ಧಿ' ಎಂಬ ಅಧ್ಯಾಯದಲ್ಲಿ ಇಂಥ ಶ್ಲೇಷೋಪಯೋಗಿ ಶಬ್ದಗಳ ಪಟ್ಟಿಯುಂಟು. ಕವಿರಾಜನು

ಪದಮೇಕಮಪಿ ಶ್ಲಿಷ್ಟಂ ವಕ್ತುಂ ಭೂಯಾನ್ ಪರಿಶ್ರಮಃ ।
ಕಥಾದ್ವಯೈಕ್ಯಂ ನಿರ್ವೋಢುಂ ಕಿಂ ಧರಾಪತಿತೋಽಧಿಕಃ ॥

ಎಂದೂ (ರಾಘಪಾಂ. ೧–೪೨) ಹರದತ್ತಸೂರಿಯು ತನ್ನ 'ರಾಘವ ನೈಷಧೀಯ'ದ ವ್ಯಾಖ್ಯೆಯಲ್ಲಿ ''ಸಂಸ್ಕೃತ ಭಾಷಾರೂಪೋಽರ್ಥಾಂತರಶ್ಲೇಷಸಂಘಟಿತೋ ದುರ್ಘಟಃ ಕವ್ಯಂತರೈಃ ಸ್ವಪ್ನೇಪಿ ವ್ಯಥಾಯಿ ಪ್ರಬಂಧೋಽಯಮಮ್'' (೧–೭) ಎಂದೂ ತಿಳಿಸಿದ್ದಾರೆ. ಸುಬಂಧು ಬಾಣರದು ಶ್ಲೇಷಕಾವ್ಯಗಳಲ್ಲದೆ, ದ್ವ್ಯರ್ಥಿಗಳಲ್ಲ. ದೈವಜ್ಞ ಸೂರ್ಯಸೂರಿ ತನ್ನ 'ರಾಮಕೃಷ್ಣವಿಲೋಮಕಾವ್ಯ'ದಲ್ಲಿ ''ಸಮಾಕ್ಷರಾಂಘ್ರಿ । ವಿಷಮಾಕ್ಷರಾರ್ಧ । ದ್ವೇಧಾ ಭವೇದ್ವ್ಯಸ್ತಕವಿತ್ವ ಸೀಮಾ'' (ಪು. ೨೦, ಶ್ಲೋ. ೭) ಎಂಬಲ್ಲಿ ವ್ಯಸ್ತಕವಿತ್ವವೆಂದು ಅದನ್ನು ಕರೆದಿದ್ದಾನೆ.

ಈ ಬಹುಲಾರ್ಥ ಕಾವ್ಯಗಳನ್ನು ಅರ್ಥೈಸುವ ಕ್ಲೇಶವನ್ನು ಬಲ್ಲವರಾದ ಕಾವ್ಯಕರ್ತೃಗಳು ಕವಿಹೃದಯವನ್ನು ವಿದಿತಗೊಳಿಸಲು ತಾವೇ ವ್ಯಾಖ್ಯಾನ ರಚಿಸುತ್ತಿದ್ದುದು ಸಾಮಾನ್ಯ. ಹರದತ್ತಸೂರಿ 'ರಾಘವ ನೈಷಧೀಯ'ಕ್ಕೆ ಹೀಗೆ ಮಾಡಿದ್ದಾನೆ. ಈ ಬಗೆಯ ರಚನೆಗಳ ಗೀಳು ಬೆಳೆದಂತೆ, ಧನಂಜಯನ ದ್ವಿಸಂಧಾನ ಕಾವ್ಯದಲ್ಲಿ ತ್ರ್ಯರ್ಥಕ, ಚತುರರ್ಥಕ, ಪಂಚಾರ್ಥಕ ಶ್ಲೋಕಗಳಿವೆ. ಮುಂದೆ ತ್ರ್ಯರ್ಥೀ ಮುಂತಾದ ಕಾವ್ಯಗಳ ರಚನೆಗೆ ಇದು ದಾರಿಮಾಡಿಕೊಟ್ಟಿತು. ಚಿದಂಬರ ಸುಮತಿಯ 'ರಾಘವ–ಪಾಂಡವ–ಯಾದವೀಯ'ದ ಮೊದಲ ಶ್ಲೋಕವೇ ಸು. ೧೦ ಅರ್ಥಗಳು ಸಾಧ್ಯವೆಂಬಂಥ ರಚನೆಯಾಗಿದೆ. ವ್ಯಾಖ್ಯಾನಕಾರನಾದ ಕವಿಯ ತಂದೆ ಆ ಪದ್ಯದಲ್ಲಿ ಬ್ರಹ್ಮ, ವಿಷ್ಣು, ಶಿವ, ಕುಮಾರ, ಶ್ರೀರಾಮ, ಬಲರಾಮ, ಪರಶುರಾಮ, ಮನ್ಮಥ, ಅಜ ಮಹಾರಾಜ, ಭೀಷ್ಮ, ಇವರ ವರ್ಣನೆಯುಂಟೆಂದಿದ್ದಾನೆ. ಈ ಬಗೆಯ ರಚನೆ ಪಂಚಾರ್ಥೀ ಕಾವ್ಯಗಳಿಗೆ ಬಲುಮಟ್ಟಿಗೆ ನಿಂತಿತು ಎಂದು ತೋರುತ್ತದೆ. ಒಬ್ಬ ಕವಿಯಂತೂ ಒಂದು ನಾಟಕವನ್ನೇ ದ್ವ್ಯರ್ಥಿಯಾಗಿ ಕಟ್ಟಿದ್ದಾನೆ. ಈ ಬಗೆಯ ಬಹುಲಾರ್ಥಕ ಕಾವ್ಯಗಳಲ್ಲಿ ಒಂದನ್ನು ಲಕ್ಷಿಸಿ, ''ವಿಶ್ವಸಾಹಿತ್ಯದಲ್ಲಿಯೇ ಇಂತಹುದು ನಿಸ್ಸಂಶಯವಾಗಿ ವಿಶಿಷ್ಟವಾದುದು'' ಎಂದು ಮೇಕ್ಡನಲ್ ಹೇಳಿದರೆ, ''ಅಸ್ಥಾನದಲ್ಲಿ ಪ್ರವೃತ್ತಗೊಂಡ ಕೌಶಲದ ವಿಜಯ'' ಎಂದು ಕೀಥ್ ಕರೆದಿದ್ದಾರೆ.

ಚಿತ್ರಕಾವ್ಯದ ಯುಗದಲ್ಲಿ ಬದುಕಿದ ಕವಿ ಬುದ್ಧಿಗೆ ಬೆರಗು ಹುಟ್ಟಿಸುವ ಕವಿತ್ವರಚನೆಗೆ ಇಷ್ಟಪಡುವುದು ಸಹಜವೇ. ಹಾಗಲ್ಲದೆ ಹೃದಯಂಗಮಕವಿತೆಗೆ ಇಷ್ಟಪಡುವಂಥವನು ಈ ದಾರಿ ಹಿಡಿಯುವುದಿಲ್ಲ. ಇದು ಏನಿದ್ದರೂ, ಬಹುಲಾರ್ಥಕ ಕಾವ್ಯಗಳು ಲೋಕದ ಭಿನ್ನರುಚಿಯ ಫಲ. ಈ ಹಿನ್ನೆಲೆಯಲ್ಲಿ ನೋಡಿದರೆ ವಿಲೋಮ ಕಾವ್ಯಗಳು, ಪದ್ಯವನ್ನು ಅನುಲೋಮಗತಿಯಿಂದ ಓದಿದರೆ ಒಂದು ಕಥೆಯೂ ವಿಲೋಮಗತಿಯಿಂದ ಓದಿದರೆ ಇನ್ನೊಂದು ಕಥೆಯೂ ಅಭಿಪ್ರಾಯವಾಗುವ ರಚನೆಗಳಾಗಿದ್ದು, ಇವನ್ನು ಗತಪ್ರತ್ಯಾಗತ ಕಾವ್ಯಗಳು ಇಲ್ಲವೆ ವಿಲೋಮ ಕಾವ್ಯಗಳು ಎನ್ನಲಾಗುತ್ತವೆ. ಇವೂ ದ್ವ್ಯರ್ಥಿಗಳೇ; ಗತಿಚಿತ್ರ ಇಲ್ಲಿ ಹೆಚ್ಚಿನ ವಿಶೇಷ. ಅಜ್ಞಾತಕರ್ತೃಕ 'ನಲಹರಿಶ್ಚಂದ್ರೀಯಂ', ವೆಂಕಟಾಧ್ವರಿಯ 'ಯಾದವರಾಘವೀಯಂ', ರಾಮಚಂದ್ರಕವಿಯ 'ರಸಿಕರಂಜನಂ', ಶ್ರುತಕೀರ್ತಿಯ 'ರಾಘವ ಪಾಂಡವೀಯಂ', ವಿಂಜಮೂರಿ ಸೋಮೇಶ್ವರ ಕವಿಯ 'ರಾಘವ ಯಾದವೀಯಂ', ದೈವಜ್ಞ ಸೂರ್ಯಸೂರಿಯ 'ರಾಮಕೃಷ್ಣ ವಿಲೋಮ ಕಾವ್ಯ' ಇವು ಈ ತೆರನ ವಿಲೋಮ ಕಾವ್ಯಗಳು.

೨. ಗೋಮೂತ್ರಿಕೆ

ಅಜಿತಸೇನನ 'ಅಲಂಕಾರಚಿಂತಾಮಣಿ'ಯಲ್ಲಿ

ಯತ್ರೈಕಾನ್ತರಿತಂ ಪಾಶ್ಚ ಮೂಧ್ವಾರ್ಧಃ ಕ್ರಮತೋಽಕ್ಷರಮ್ ।
ತಾಂ ಹಿ ಗೋಮೂತ್ರಿಕಾಮಾಹ ಸರ್ವವಿದ್ಯಾವಿಶಾರದಃ ॥ (೨–೮೩)

ಎಂಬುದಾಗಿಯೂ, ಭೋಜದೇವನು

ಗತಿರುಚ್ಚಾವಚಾ ಯತ್ರ ಮಾರ್ಗೇ ಮೂತ್ರಸ್ಯ ಗೋರಿವ ।
ಗೋಮೂತ್ರಿಕೇತಿ ತತ್ಪ್ರಾಹುರ್ದುಷ್ಕರಂ ಚಿತ್ರವೇದಿನಃ ॥ (೩–೧೧೫)

ಎಂಬುದಾಗಿಯೂ, ಗೋಮೂತ್ರಿಕೆಯ ಲಕ್ಷಣವನ್ನು ನಿರೂಪಿಸಿದ್ದಾರೆ.

ನಡೆಯುತ್ತಿರುವ ಗೋವು ಮೂತ್ರ ವಿಸರ್ಜಿಸಿದರೆ, ನೆಲದ ಮೇಲೆ ವಿಸರ್ಜಿತಮೂತ್ರದಿಂದ ಅದೊಂದು ಬಗೆಯಲ್ಲಿ ವಕ್ರರೇಖೆಗಳು (zig–zag lines) ಏರ್ಪಡುತ್ತವೆ. ಚಿತ್ರದಲ್ಲಿ ರೂಪಿಸಿದಾಗ ಹಾಗೆ ಕಾಣುವುದು ಮಾತ್ರವಲ್ಲದೆ, ಪದ್ಯಪಾದದ ಅಕ್ಷರಗಳನ್ನೆ ಕೂಡಿಸಿಕೊಂಡು ಹಾಗೆಯೇ ಓದಲೂ ಬೇಕಾಗುತ್ತದೆ. ಇದು 'ಗೋಮೂತ್ರಿಕ' ಎನಿಸುತ್ತದೆ. ಇದರಲ್ಲಿ ಹಲವು ವಿಧಗಳು. ಇದರಲ್ಲಿ ಒಂದು ಬಗೆಯಲ್ಲಿ—ಪದ್ಯವೊಂದರ (ಅನುಷ್ಟುಪ್) ಎರಡು ಅರ್ಧಗಳನ್ನು ಕ್ರಮವಾಗಿ ಒಂದರ ಕೆಳಗೆ ಒಂದು ಬರೆದರೆ, ಮೊದಲರ್ಧದ ವಿಷಮಸ್ಥಾನಗಳ ಅಕ್ಷರಗಳನ್ನು ಎರಡನೆಯರ್ಧದ ಸಮಸ್ಥಾನಗಳ ಅಕ್ಷರಗಳೊಂದಿಗೆ ಸೇರಿಸಿಕೊಂಡು ಓದಿದಾಗ ಅದು ಪದ್ಯದ ಪೂರ್ವಾರ್ಧ (ಮೊದಲರ್ಧ) ವಾಗಿಯೂ, ಎರಡನೆಯರ್ಧದ ವಿಷಮಸ್ಥಾನಗಳ ಅಕ್ಷರಗಳನ್ನು ಮೊದಲನೆಯರ್ಧದ ಸಮಸ್ಥಾನಗಳ ಅಕ್ಷರಗಳೊಂದಿಗೆ ಸೇರಿಸಿಕೊಂಡು ಓದಿದಾಗ ಅದು ಪದ್ಯದ ಉತ್ತರಾರ್ಧ (ಎರಡನೆಯರ್ಧ) ವಾಗಿಯೂ ಪರಿಣಮಿಸುತ್ತವೆ. ಇದರ 'ಚಿತ್ರ' ತಳಮೇಲಾದ V ಹೆಣೆದುಕೊಂಡು, ಪದ್ಯದ ಅಗತ್ಯಕ್ಕೆ ಅನುಗುಣವಾದಷ್ಟು ಸಂಖ್ಯೆಯ Vಗಳ ಒಂದು ಶ್ರೇಣಿಯ ರೂಪದಲ್ಲಿರುತ್ತದೆ.

ಗೋಮೂತ್ರಿಕವನ್ನು ಭೋಜನು ಬಂಧಚಿತ್ರದಲ್ಲಿ ಕುರಿತರೂ, ಗತಿವೈಚಿತ್ರ್ಯವನ್ನು ಅದು ಅನುಸರಿಸಿದ್ದು ಎಂಬುದಾಗಿ ಪೂರ್ವೋಕ್ತಪದ್ಯದಲ್ಲಿಯೇ ತಿಳಿಸಿರುವುದರಿಂದ ಈ ವಿಭಾಗದಲ್ಲಿಯೇ ಇದನ್ನು ಗಮನಿಸಬಹುದು. ಇದರಲ್ಲಿ ಕೆಲವು ಬಗೆಗಳಿವೆ: ಪದ್ಯದ ಎರಡು ಅಥವಾ ಎರಡಕ್ಕಿಂತ ಹೆಚ್ಚಿನ ಪಾದಗಳನ್ನು ಕೂಡಿಸುವಂತಹುದು ಪಾದಗೋಮೂತ್ರಿಕ; ಮೊದಲು ಪದ್ಯವೊಂದರಲ್ಲಿ ಅದನ್ನು ಕೂಡಿಸಿ, ಬಳಿಕ ಇನ್ನೊಂದು ಪದ್ಯಕ್ಕೆ ಅವಕಾಶಮಾಡಿಕೊಡುವಂತಹುದು ಅರ್ಧಗೋಮೂತ್ರಿಕ; ಎರಡು ಪದ್ಯಗಳಿಂದ ಕೂಡಿಸಲು ಸಾಧ್ಯವಾಗುವಂತಹುದು ಶ್ಲೋಕಗೋಮೂತ್ರಿಕ ಇ. ಅಲ್ಲದೆ, ಈ ಕೊನೆಯ ಪ್ರಭೇದದಲ್ಲಿ ಎರಡು ಪದ್ಯಗಳು ಎರಡು ಬೇರೆಯೇ ಭಾಷೆಗಳಲ್ಲಿ ಇಲ್ಲವೆ ವಿಭಿನ್ನ ಛಂದಸ್ಸುಗಳಲ್ಲಿ ರಚಿಸಲ್ಪಡುವ ವೈಚಿತ್ರ್ಯವುಂಟು. ಗೋಮೂತ್ರಿಕಾಭೇದ ಮತ್ತು ಅದರ ಅಂತರ್ಭೇದಗಳಿವೆ. ಇದರಲ್ಲಿ ನೂರು, ಸಾವಿರ ಅಥವಾ ಬಹುಸಂಖ್ಯೆಯ ಗೋಮೂತ್ರಿಕಾ ಪದ್ಯಗಳನ್ನು ಹೊರಡಿಸುವುದು ಸಾಧ್ಯವಿರುತ್ತದೆ. ಇದು ಸಂಸ್ಕೃತಭಾಷೆ ಹೆಮ್ಮೆಪಡಬಹುದಾದಂತಹ ಅದ್ಭುತ ಕೌಶಲ.

ಇವುಗಳ ರಚನೆಯ ವಿಧಾನವೇನು? ಗೋಮೂತ್ರಿಕ ಪದ್ಯದ ಛಂದಸ್ಸಿಗೆ ಅನುಗುಣವಾಗಿ ವಿವಿಧ ವಿನ್ಯಾಸಗಳಲ್ಲಿರುವುದು ಸಾಧ್ಯ. 'ಅಲಂಕಾರಚಿಂತಾಮಣಿ'ಯಲ್ಲಿ ಇದರ ಕೆಲವು ಲಕ್ಷ್ಯಗಳನ್ನು ಕಾಣಬಹುದಾಗಿದೆ. ಪ್ರಸಿದ್ಧವಾದ ಒಂದೆರಡು ವಿನ್ಯಾಸಗಳನ್ನು ಮಾತ್ರ ಇಲ್ಲಿ ಗಮನಿಸಬಹುದಾಗಿದೆ.

೧. ಅನುಷ್ಟುಪ್ ಛಂದಸ್ಸಿನ ಪದ್ಯಗಳಿಗೆ ಅನುಸರಿಸುವ ೨ ವಿಧಾನಗಳು :

ಮೊದಲು ಒಂದು ಅಡ್ಡಗಲದ ಚಚ್ಚೌಕವನ್ನು ಮಾಡಿಕೊಂಡು, ಅದನ್ನು ಅಡ್ಡಗಲವಾಗಿಯೇ ಅರ್ಧಿಸುವುದು. ಬಳಿಕ ಎಡಭಾಗದಲ್ಲಿ ಕೆಳಮೂಲೆಯಿಂದ ೮ ವಕ್ರೋರ್ಧ್ವರೇಖೆಗಳನ್ನು ಚಚ್ಚೌಕದ ಮೇಲ್ತುದಿ ಮುಟ್ಟುವಂತೆ ಎಳೆಯುವುದು. ಬಳಿಕ ಎಡಭಾಗದ ಮೇಲುಮೂಲೆಯಿಂದ ೮ ವಕ್ರವಾದ ಅಧೋರೇಖೆಗಳನ್ನು ಚಚ್ಚೌಕದ ತುದಿ ಮುಟ್ಟುವಂತೆ ಎಳೆಯುವುದು. ಹೀಗೆ ಮಾಡಿದಾಗ ಆ ರೇಖೆಗಳೆರಡೂ ಒಂದೇ ಬಿಂದುವಿನಲ್ಲಿ ಚಚ್ಚೌಕವನ್ನು

ಅರ್ಧಿಸಿದ ರೇಖೆಯನ್ನು ಛೇದಿಸುತ್ತವೆ. ಈಗ ಪದ್ಯದ ಎರಡೂ ಅರ್ಧಗಳನ್ನು ಪ್ರತ್ಯೇಕವಾಗಿ ತೆಗೆದುಕೊಂಡು ಅಕ್ಷರಗಳನ್ನು ತುಂಬುತ್ತಾ ಹೋದರೆ, ಬೆಸಸಂಖ್ಯೆಯ ಅಕ್ಷರಗಳು ಕ್ರಮವಾಗಿ ಮೇಲಿನ ಹಾಗೂ ಕೆಳಗಿನ ತ್ರಿಕೋನಗಳಲ್ಲಿಯೂ ಸಮಸಂಖ್ಯೆಯ ಅಕ್ಷರಗಳು ಚಚ್ಚೌಕವನ್ನು ಅರ್ಧಿಸಿದ ರೇಖೆಯ ಮೇಲೆಯೂ ಅಳವಡುತ್ತವೆ. ಹೀಗೆಂದರೆ ೧–೨ನೆಯ ಪಾದಗಳಲ್ಲಿಯೂ, ೩–೪ನೆಯ ಪಾದಗಳಲ್ಲಿಯೂ ಸಮಸ್ಥಾನಗಳಲ್ಲಿಯ ಅಕ್ಷರಗಳು ಸಮಾನಾಕ್ಷರಗಳೇ ಆಗಿರುತ್ತವೆ. ಆಗ ಗೋಮೂತ್ರಿಕಾ ಗತಿಯಲ್ಲಿ ಅಕ್ಷರಗಳನ್ನು ಪಠಿಸುವುದು ಸಾಧ್ಯವಾಗುತ್ತದೆ.

೨. ಚಚ್ಚೌಕವನ್ನು ಅರ್ಧಿಸದೆಯೇ ಅಕ್ಷರಗಳನ್ನು ತುಂಬುವ ಕ್ರಮವೂ ಉಂಟು. ಹೀಗೆ ಅರ್ಧಿಸದಿದ್ದಾಗ, ವಜ್ರಾಕೃತಿಯ ರೇಖಾಕೃತಿಗಳು ವಿನ್ಯಾಸಗೊಳ್ಳುವುದರಿಂದ, ಆಗ ಆ ರೇಖಾಕೃತಿಗಳ ಮಧ್ಯದಲ್ಲಿ ಸಮಸಂಖ್ಯೆಯ ಅಕ್ಷರಗಳನ್ನು ಅಳವಡಿಸಬೇಕಾಗುತ್ತದೆ.

ವಿನ್ಯಾಸಕ್ರಮಗಳು :

ರಾಜೀವೋಪಮಸತ್ಪಾದ । ಸನ್ಮತೇ ಕುರು ಶಾಸನಮ್ ।
ಆಜೀರ್ಣೋಪಲಸತ್ಖೇದ । ಜನ್ಮ ಮೋಃಜ್ ಕುಶಶಾತನಮ್ ॥ (ಅಲಂಕಾರಚಿಂತಾಮಣಿ, ೨–೮೬)

ತ್ವಮಂಬ ರೇಚಿತಂ ಪಶ್ಯ । ನಾಟಕೇ ಸುರಸಾನ್ವಿತಮ್ ।
ಸ್ವಮಂಬರೇ ಚಿತಂ ವೈಶ್ಯ । ಪೇಟಕೇ ಸುರಸಾರಿತಮ್ ॥ (ಅಲಂಕಾರಚಿಂತಾಮಣಿ, ೨–೩೨)



ಗತಿ ೧



ಗತಿ ೨

೩. ಚಚ್ಚೌಕವನ್ನೇನೂ ಮಾಡಿಕೊಳ್ಳದೆ ಮೇಲೆ ಹೇಳಿದ ಹಾಗೆಯೇ ಸಮಪ್ರಮಾಣದ ೧೫–೧೫ ವಕ್ರೋರ್ಧ್ವ ಹಾಗೂ ವಕ್ರ ಅಧೋರೇಖೆಗಳನ್ನು ಒಂದನ್ನೊಂದು ಛೇದಿಸುವಂತೆ ದ್ವಿರೇಖಾಕೃತಿಗಳನ್ನು ರಚಿಸಿದರೆ, ಎಡಬಲಗಳಲ್ಲಿ ವಕ್ರರೇಖೆಗಳನ್ನುಳಿದು ೧೪ ವಜ್ರಾಕೃತಿಗಳೇರ್ಪಡುತ್ತವೆ. ಈಗ ಹಿಂದಿನಂತೆಯೇ ಅನುಷ್ಟುಪ್ ಪದ್ಯದ ಮೊದಲರ್ಧವನ್ನೂ ಎರಡನೆಯರ್ಧವನ್ನೂ ಪ್ರತ್ಯೇಕವಾಗಿ ತೆಗೆದುಕೊಂಡು ಕ್ರಮವಾಗಿ ಮೇಲಿನ ರೇಖಾಗ್ರಗಳಲ್ಲಿ ಹಾಗೂ ಕೆಳಗಣ ರೇಖಾಗ್ರಗಳಲ್ಲಿ ಬರೆಯಬೇಕು. ಹೀಗೆ ಬರೆದಾಗಲೂ ಸಮಸ್ಥಾನದ ಅಕ್ಷರಗಳು ಸಮಾನಾಕ್ಷರಗಳೇ ಆಗಿರುತ್ತವೆ. ಆಗ ಪದ್ಯವನ್ನು ಗೋಮೂತ್ರಿಕಾಗತಿಯಲ್ಲಿ ಪಠಿಸಲು ಅನುಕೂಲವಾಗುತ್ತದೆ. ಇದಕ್ಕೆ ಈ ವಿಭಾಗದಲ್ಲಿಯೇ ಮುಂದಿನ ಗತಪ್ರತ್ಯಾಗತದ ಲಕ್ಷ್ಯಗಳನ್ನು ನೋಡಬಹುದು.

೪. ಪದ್ಯಗಳು ಸಮಚತುಷ್ಪದಿಗಳಾದ ವರ್ಣವೃತ್ತಗಳಾಗಿದ್ದರೆ ವಿನ್ಯಾಸ ೧–೨ರಂತೆಯೇ ಇರುತ್ತದೆ; ಆದರೆ ಅಂತಹ ವಿನ್ಯಾಸಗಳ ಎರಡು ಆಕೃತಿಗಳು ಒಂದಾದ ಬಳಿಕ ಒಂದರಂತೆ ಸಿದ್ಧವಾಗುತ್ತವೆ. ಇದಕ್ಕೆ ಅನುಗುಣವಾಗಿ ೧–೨ನೆಯ ಪಾದಗಳಲ್ಲಿ ಒಂದು ರೀತಿಯ ಬೆಸ–ಸಮಸ್ಥಾನದ ಅಕ್ಷರಗಳೂ, ೩–೪ನೆಯ ಪಾದಗಳಲ್ಲಿ ಇನ್ನೊಂದು ರೀತಿಯ ಬೆಸ–ಸಮಸ್ಥಾನದ ಅಕ್ಷರಗಳೂ ಸಾಮಾನ್ಯವಾಗಿ ರೂಪಗೊಂಡಿರುತ್ತವೆ.

೩. ಅರ್ಧಭ್ರಮ

ಈ ಗತಿಚಿತ್ರದ ಲಕ್ಷಣವನ್ನು ದಂಡಿ 'ಕಾವ್ಯಾದರ್ಶ'ದಲ್ಲಿ (೩–೮೦), ಆತನನ್ನು ಅನುಸರಿಸಿ ಭೋಜನು 'ಸರಸ್ವತೀ ಕಂಠಾಭರಣ'ದಲ್ಲಿ (೩–೧೧೦) ಈ ರೀತಿ ನಿರೂಪಿಸಿದ್ದಾರೆ : ''ಆಹುರರ್ಧಭ್ರಮಂ ನಾಮ ಶ್ಲೋಕಾರ್ಧಭ್ರಮಣಂ ಯದಿ.'' ಇದನ್ನು ರತ್ನಶ್ರೀಜ್ಞಾನನು 'ಕಾವ್ಯಾದರ್ಶ'ದ ತನ್ನ ವ್ಯಾಖ್ಯೆಯಲ್ಲಿ ಹೀಗೆ ವಿವರಿಸಿದ್ದಾನೆ :

> "ಔತ್ತರಾಧರ್ಯೇಣ ಚತುರ್ಷು ಪಾದೇಷ್ವಭಿವ್ಯಕ್ತ್ಯರ್ಥಂ ಲಿಖಿತೇಷು ಪ್ರಥಮಮಕ್ಷರಮಾರಭ್ಯ ಔತ್ತರಾಧರ್ಯೇಣ ದ್ವಿರಾದ್ಯಂತತಃ ಕ್ರಮೇಣ ಪಾಠೇ ಅರ್ಧಂ ನಿಷ್ಪದ್ಯತೇ, ಪುನಸ್ತಥೈವ ಪರಿಶಿಷ್ಟಸ್ಯ ಪಾಠೇ ಅಪರಾರ್ಧನಿಷ್ಪತ್ತಿರಿತಿ ಶ್ಲೋಕಸ್ಯ ದ್ವಾಭ್ಯಾಂ ಭ್ರಮಣಂ ಶ್ಲೋಕಾರ್ಧಭ್ರಮಣಂ ಯದಿ ಭವೇತ್ ತಾದೃಶಮರ್ಧಭ್ರಮಂ ನಾಮ ದುಷ್ಕರಮಾಹುರಾಮನಾಂತ ತದ್ವಿದಃ''

ಇದರ ಸಾಮಾನ್ಯವಾದ ಆಶಯವನ್ನು ಹೀಗೆ ತಿಳಿಯಬಹುದಾಗಿದೆ:

''ಪದ್ಯಪಾದಗಳನ್ನು ಒಂದರ ಕೆಳಗೆ ಒಂದರಂತೆ ಬರೆಯಬೇಕು. ಮೊದಲು ಅಧೋಮುಖವಾಗಿ ಪ್ರತಿ ಪಾದದ ಆದ್ಯಕ್ಷರವನ್ನು ಬರೆದು, ಅನಂತರದಲ್ಲಿ ಆಯಾ ಪಾದದ ಅಂತ್ಯಾಕ್ಷರವನ್ನು ಊರ್ಧ್ವಮುಖವಾಗಿ ಬರೆಯುವುದಾದರೆ ಪದ್ಯದ ಮೊದಲನೆಯ ಪಾದ ಸಿದ್ಧವಾಗುತ್ತದೆ. ಹೀಗೆಯೇ ಪ್ರತಿಪಾದದ ದ್ವಿತೀಯಾಕ್ಷರವನ್ನು ಅಧೋಮುಖವಾಗಿ ಬರೆದು, ಅನಂತರದಲ್ಲಿ ಆಯಾ ಪಾದದ ಉಪಾಂತ್ಯಾಕ್ಷರವನ್ನು ಊರ್ಧ್ವಮುಖವಾಗಿ ಬರೆದರೆ ಎರಡನೆಯ ಪಾದ ಸಿದ್ಧವಾಗುತ್ತದೆ. ಈ ಪ್ರಕಾರವಾಗಿ ಶ್ಲೋಕಾರ್ಧವು (ಶ್ಲೋಕಾರ್ಧದ ಅಕ್ಷರನ್ಯಾಸ) ಇಡೀ ಶ್ಲೋಕದಲ್ಲಿ ಭ್ರಮಿಸುವಂತಿರುವುದು ಅರ್ಧಭ್ರಮವೆನಿಸುವುದು.''

ಶ್ಲೋಕದ ಮೊದಲನೆಯ ಅರ್ಧವನ್ನು ಸಿದ್ಧಪಡಿಸುವಾಗ ೪ ಪಾದಗಳಲ್ಲಿಯೂ ಕ್ರಮವಾಗಿ ೩ ರಿಂದ ೬ನೆಯ ಅಕ್ಷರದವರೆಗೆ ಮೇಲೆ ವಿವರಿಸುವ ರೀತಿಯಲ್ಲಿ ಭ್ರಮಣಗೊಳಿಸುವ ಆವಶ್ಯಕತೆ ಬೀಳುವುದಿಲ್ಲ. ಆದರೆ ಶ್ಲೋಕದ ಮೊದಲನೆಯ ಅರ್ಧ ಸಿದ್ಧವಾಗುವಲ್ಲಿ ಮಾತ್ರ ಉತ್ತರಾರ್ಧದ ಎರಡೂ ಪಾದಗಳ ಅಕ್ಷರಗಳು ಸಹಾಯ ಮಾಡಿರುತ್ತವೆ. ಮೊದಲನೆಯ ಅರ್ಧದಲ್ಲಿ, ಮೊದಲ ಪಾದದ ಮೊದಲ ೪ ಅಕ್ಷರಗಳು ಒಟ್ಟು ಪದ್ಯದ ೧, ೯, ೧೭ ಮತ್ತು ೨೫ನೆಯ ಅಕ್ಷರಗಳಿಂದಲೂ, ಅನಂತರದ ೪ ಅಕ್ಷರಗಳು ೩೨, ೨೪, ೧೬ ಮತ್ತು ೮ನೆಯ ಅಕ್ಷರಗಳಿಂದಲೂ ಸಿದ್ಧವಾಗುತ್ತವೆ; ಎರಡನೆಯ ಪಾದದ ಮೊದಲ ೪ ಅಕ್ಷರಗಳು ಒಟ್ಟು ಪದ್ಯದ ೨, ೧೦, ೧೮ ಮತ್ತು ೨೬ನೆಯ ಅಕ್ಷರಗಳಿಂದಲೂ, ಅನಂತರದ ೪ ಅಕ್ಷರಗಳು ೩೧, ೨೩, ೧೫ ಮತ್ತು ೭ನೆಯ ಅಕ್ಷರಗಳಿಂದಲೂ ಸಿದ್ಧವಾಗುತ್ತವೆ.

ಇದರ ಕ್ರಮವನ್ನು ಕೋಷ್ಟಗಳನ್ನು ಬರೆದು ದಂಡಿಯ 'ಕಾವ್ಯಾದರ್ಶ'ದ ಈ ಲಕ್ಷ್ಯಪದ್ಯದ ಮೂಲಕ (೩–೮೧) ಹೀಗೆ ತೋರಿಸಬಹುದು :

ಮನೋಭವ ತವಾನೀಕಂ । ನೋದಯಾಯ ನ ಮಾನಿನೀ ।
ಭಯಾದಮೇಯಾಮಾ ಮಾ ವಾ । ವಯಮೇನೋಮಯಾ ನತ ॥

ಮ 1	ನೋ 2	ಭ 3	ವ 4	ತ 5	ವಾ 6	ನೀ 7	ಕಂ 8
ನೋ 9	ದ 10	ಯಾ 11	ಯ 12	ನ 13	ಮಾ 14	ನಿ 15	ನೀ 16
ಭ 17	ಯಾ 18	ದ 19	ಮೇ 20	ಯಾ 21	ಮಾ 22	ಮಾ 23	ವಾ 24
ವ 25	ಯ 26	ಮೇ 27	ನೋ 28	ಮ 29	ಯಾ 30	ನ 31	ತ 32

ಗತಿ ೩

ಅರ್ಧಭ್ರಮದ ಸಂಸ್ಕೃತ ಸಾಹಿತ್ಯದ ಲಕ್ಷ್ಯಗಳು ಶ್ಲೋಕರೂಪವಾಗಿರುವುದೇ ಸಾಮಾನ್ಯ. ಇತರ ಛಂದಸ್ಸಿನ ಪದ್ಯಗಳಲ್ಲಿ ಹೇಗೆ? ರಚನೆಯ ಸಾಮಾನ್ಯ ವಿಧಾನ ಮೇಲಿನಂತೆಯೇ ಇದ್ದು, ಅಕ್ಷರಸಂಖ್ಯೆಯ ಸ್ಥಾನಗಳು ಬೇರೆಯಾಗಿರುತ್ತವೆ.

೪. ಸರ್ವತೋಭದ್ರ

ಈ ಗತಿಚಿತ್ರದ ಲಕ್ಷಣವನ್ನು ದಂಡಿ 'ಕಾವ್ಯಾದರ್ಶ'ದಲ್ಲಿ (೩–೮೦), ಆತನನ್ನು ಅನುಸರಿಸಿ ಭೋಜನು 'ಸರಸ್ವತೀಕಂಠಾಭರಣ'ದಲ್ಲಿ (೩–೧೧೦) ಈ ರೀತಿ ನಿರೂಪಿಸಿದ್ದಾರೆ: ''...ತದಿಷ್ಟಂ ಸರ್ವತೋಭದ್ರಂ ಭ್ರಮಣಂ ಯದಿ ಸರ್ವತಃ''. ದಂಡಿಯ ವ್ಯಾಖ್ಯಾಕಾರನಾದ ರತ್ನಶ್ರೀಜ್ಞಾನನು ''ಸರ್ವತೋಽನುಲೋಮಪ್ರತಿಲೋಮತಃ ಪೂರ್ವವದೌತ್ತರಾಧರ್ಯೇಣ ಚ ಯದಿ ಭ್ರಮಣಂ ಶ್ಲೋಕಸ್ಯ ಭವೇತ್ ತಾದೃಶಂ ಸರ್ವತೋಭದ್ರಂ ನಾಮ ದುಷ್ಕರಮಿಷ್ಟಂ ತಜ್ಞೈರಿತಿ'' ಎಂಬುದಾಗಿ ಇದನ್ನು ವಿವರಿಸಿದ್ದಾನೆ.

ಇದರ ಸಾಮಾನ್ಯವಾದ ಆಶಯವೆಂದರೆ : ''ಎಲ್ಲ ರೀತಿಯಲ್ಲಿಯೂ ಅನುಲೋಮ ಪ್ರತಿಲೋಮ ಭಾವದಿಂದ ಮತ್ತು ಮೊದಲಿನ ಹಾಗೆಯೇ ಮೇಲಿನಿಂದ ಕೆಳಗೆ, ಕೆಳಗಿನಿಂದ ಮೇಲೆ ಎಂಬ ಕ್ರಮದಲ್ಲಿ ಸಂಪೂರ್ಣ ಶ್ಲೋಕವೇ ಭ್ರಮಿಸುವಂತಿರುವುದು ಸರ್ವತೋಭದ್ರವೆನಿಸುವುದು. ಇದು ದುಷ್ಕರವಾದರೂ ಇಷ್ಟವಾದ ಒಂದು ಕ್ರಮವೆಂದು ತಜ್ಞರು ಭಾವಿಸುತ್ತಾರೆ.''

ಅರ್ಧಭ್ರಮದಲ್ಲಿ ಶ್ಲೋಕದ ೪ ಪಾದಗಳ ಅಕ್ಷರಗಳನ್ನು ಕ್ರಮವಾಗಿ ೪ ಅಡ್ಡ ಸಾಲುಗಳ, ಪ್ರತಿಸಾಲಿಗೆ ೮ ಕೋಷ್ಠಗಳ ನಕ್ಷೆಯಲ್ಲಿ ತುಂಬಿದರೆ, ಸರ್ವತೋಭದ್ರದಲ್ಲಿ ಶ್ಲೋಕದ ೪ ಪಾದಗಳ ಅಕ್ಷರಗಳನ್ನು ಕ್ರಮವಾಗಿ ೮ ಅಡ್ಡಸಾಲುಗಳ, ಪ್ರತಿಸಾಲಿಗೆ ೮ ಕೋಷ್ಠಗಳ ನಕ್ಷೆಯಲ್ಲಿ ತುಂಬಬೇಕಾಗುವುದು. ಹೀಗೆ ಮಾಡಬೇಕಾದರೆ ಶ್ಲೋಕದ ೪ ಪಾದಗಳನ್ನೂ ಅನುಲೋಮ ಕ್ರಮದಲ್ಲಿ ಕ್ರಮವಾಗಿ ಮೊದಲ ೪ ಅಡ್ಡಸಾಲುಗಳ ಕೋಷ್ಠಗಳಲ್ಲಿ ಬರೆದು, ಅವನ್ನೇ ೪ನೆಯ ಪಾದದಿಂದ ಆರಂಭಿಸಿ ಪ್ರತಿಲೋಮ ಕ್ರಮದಲ್ಲಿ ಕ್ರಮವಾಗಿ ಅನಂತರದ ೪ ಅಡ್ಡ ಸಾಲುಗಳ ಕೋಷ್ಠಗಳಲ್ಲಿ ಬರೆಯುವ ಸಾಧ್ಯತೆ ಶ್ಲೋಕದಲ್ಲಿರಬೇಕು. ಎಂದರೆ ಒಂದು ಶ್ಲೋಕ ಸರ್ವತೋಭದ್ರದ ಗತಿಗೆ ಒಪ್ಪಬೇಕಾದರೆ, ಅದರ ಪ್ರತಿಪಾದದಲ್ಲಿಯೂ ಮೊದಲ ೪ ಅಕ್ಷರಗಳನ್ನು ಅನುಲೋಮ ಕ್ರಮದಲ್ಲಿಯೂ ಆ ಮೇಲಿನ ೪ ಅಕ್ಷರಗಳನ್ನು ಪ್ರತಿಲೋಮ ಕ್ರಮದಲ್ಲಿಯೂ ಓದಿದಾಗ ವ್ಯತ್ಯಾಸವೇನೂ ಇಲ್ಲದೆ ಸಮಾನವೇ ಆಗಿರುವಂಥ ಅಕ್ಷರನ್ಯಾಸವಿರಬೇಕು. ಇಷ್ಟು ಮಾಡಿದ ಮೇಲೆ ಮೊದಲ ೪ ಅಡ್ಡಸಾಲುಗಳನ್ನು ಅನುಲೋಮ

ಗತಿಯಲ್ಲಿಯೂ ಅನಂತರದ ೪ ಅಡ್ಡಸಾಲುಗಳನ್ನು ಪ್ರತಿಲೋಮಗತಿಯಲ್ಲಿಯೂ ಓದಿದಾಗ ಒಂದೇ ಆಗಿರುತ್ತದೆ; ಮೊದಲ ೪ ಉದ್ದಸಾಲುಗಳನ್ನು ಮೇಲಿನಿಂದ ಕೆಳಗೆ ಹಾಗೂ ಕೆಳಗಿನಿಂದ ಮೇಲೆ ಅನುಲೋಮಗತಿಯಲ್ಲಿಯೂ, ಅನಂತರದ ೪ ಉದ್ದಸಾಲುಗಳನ್ನು ಮೇಲಿನಿಂದ ಕೆಳಗೆ ಹಾಗೂ ಕೆಳಗಿನಿಂದ ಮೇಲೆ ಪ್ರತಿಲೋಮಗತಿಯಲ್ಲಿಯೂ ಓದಿದಾಗ ಒಂದೇ ಆಗಿರುತ್ತದೆ. ಇಡೀ ಶ್ಲೋಕದ ಭ್ರಮಣೆಯನ್ನು ಈ ರೀತಿಯಲ್ಲಿ ಗುರುತಿಸಬಹುದಾಗಿದೆ.

ಅರ್ಥಭ್ರಮದ ರಚನೆಯನ್ನು ವಿವರಿಸಿದ ಹಾಗೆಯೇ ಸರ್ವತೋಭದ್ರದ ರಚನೆಯನ್ನೂ ವಿವರಿಸಲು ಸಾಧ್ಯವಿದೆ. ಶ್ಲೋಕದ ಎರಡೂ ಅರ್ಥಗಳನ್ನು ಒಗ್ಗೂಡಿಸಿಕೊಳ್ಳಬೇಕು. ಮೊದಲನೆಯ ಅರ್ಥದಲ್ಲಿ, ಮೊದಲು ಪಾದದ ಮೊದಲ ೪ ಅಕ್ಷರಗಳು ಒಟ್ಟು ಪದ್ಯದ ೧, ೯, ೧೭, ೨೫ನೆಯ ಅಕ್ಷರಗಳಿಂದಲೂ ಅನಂತರದ ೪ ಅಕ್ಷರಗಳು ೩೨, ೨೪, ೧೬, ೮ನೆಯ ಅಕ್ಷರಗಳಿಂದಲೂ ಸಿದ್ಧವಾಗುತ್ತವೆ; ಎರಡನೆಯ ಪಾದದ ಮೊದಲ ೪ ಅಕ್ಷರಗಳು ಒಟ್ಟು ಪದ್ಯದ ೨, ೧೦, ೧೮, ೨೬ನೆಯ ಅಕ್ಷರಗಳಿಂದಲೂ ಅನಂತರದ ೪ ಅಕ್ಷರಗಳು ೩೧, ೨೩, ೧೫, ೭ನೆಯ ಅಕ್ಷರಗಳಿಂದಲೂ ಸಿದ್ಧವಾಗುತ್ತವೆ. ಈಗ ಇಲ್ಲಿಂದ ಮುನ್ನಡೆಯ ಬೇಕು. ಮೂರನೆಯ ಪಾದದ ಮೊದಲ ೪ ಅಕ್ಷರಗಳು ಒಟ್ಟು ಪದ್ಯದ ೩, ೧೧, ೧೯, ೨೭ನೆಯ ಅಕ್ಷರಗಳಿಂದಲೂ ಅನಂತರದ ೪ ಅಕ್ಷರಗಳು ೩೦, ೨೨, ೧೪, ೬ನೆಯ ಅಕ್ಷರಗಳಿಂದಲೂ ಸಿದ್ಧವಾಗುತ್ತವೆ. ನಾಲ್ಕನೆಯ ಪಾದದ ಮೊದಲ ೪ ಅಕ್ಷರಗಳು ಒಟ್ಟು ಪದ್ಯದ ೪, ೧೨, ೨೦, ೨೮ನೆಯ ಅಕ್ಷರಗಳಿಂದಲೂ ಅನಂತರದ ೪ ಅಕ್ಷರಗಳು ೨೯, ೨೧, ೧೩, ೫ನೆಯ ಅಕ್ಷರಗಳಿಂದಲೂ ಸಿದ್ಧವಾಗುತ್ತವೆ.

ಇದನ್ನು ದಂಡಿಯ 'ಕಾವ್ಯಾದರ್ಶ'ದ ನಿದರ್ಶನದಿಂದ ಸ್ಪಷ್ಟಮಾಡಿಕೊಳ್ಳಬಹುದಾಗಿದೆ :

ಸಾಮಾಯಾಮಾ ಮಾಯಾಮಾಸಾ । ಮಾರಾನಾಯಾಯಾನಾ ರಾಮಾ ।
ಯಾನಾವಾರಾರಾವಾನಾಯಾ । ಮಾಯಾರಾಮಾ ಮಾರಾಯಾಮಾ ॥ (೩-೮೨)

ಸಾ	ಮಾ	ಯಾ	ಮಾ	ಮಾ	ಯಾ	ಮಾ	ಸಾ
ಮಾ	ರಾ	ನಾ	ಯಾ	ಯಾ	ನಾ	ರಾ	ಮಾ
ಯಾ	ನಾ	ವಾ	ರಾ	ರಾ	ವಾ	ನಾ	ಯಾ
ಮಾ	ಯಾ	ರಾ	ಮಾ	ಮಾ	ರಾ	ಯಾ	ಮಾ
ಮಾ	ಯಾ	ರಾ	ಮಾ	ಮಾ	ರಾ	ಯಾ	ಮಾ
ಯಾ	ನಾ	ವಾ	ರಾ	ರಾ	ವಾ	ನಾ	ಯಾ
ಮಾ	ರಾ	ನಾ	ಯಾ	ಯಾ	ನಾ	ರಾ	ಮಾ
ಸಾ	ಮಾ	ಯಾ	ಮಾ	ಮಾ	ಯಾ	ಮಾ	ಸಾ

ಗತಿ ೪

ಶ್ಲೋಕಗಳ ವಿಷಯದಲ್ಲಿ ಈ ಬಗೆಯ ಕೋಷ್ಠ ರಚನೆ ಸಾಧ್ಯವೆಂಬುದು ನಿಜ; ಆದರೆ ಉಳಿದ ಛಂದಸ್ಸಿನ ಪದ್ಯಗಳ ವಿಷಯದಲ್ಲಿ ಹೇಗೆ? ನಿದರ್ಶನಗಳ ಮೂಲಕ ಇದನ್ನು ಸ್ಪಷ್ಟಪಡಿಸಿಕೊಳ್ಳಬೇಕಾಗಿದೆ.

ಸಂಸ್ಕೃತ ಅಲಂಕಾರಗ್ರಂಥಗಳಲ್ಲಿ ಗತಿಚಿತ್ರಗಳು

ದಂಡಿಯ 'ಕಾವ್ಯಾದರ್ಶ'

೧. ಗತಪ್ರತ್ಯಾಗತ :

ಮೊದಲ ಬಾರಿಗೆ 'ಗತಪ್ರತ್ಯಾಗತ'ದ ಪ್ರಸ್ತಾವ ಇಲ್ಲಿ ಬರುತ್ತದೆ. ಯಮಕ ಭೇದಗಳನ್ನು ನಿರೂಪಿಸಿದ ಬಳಿಕ ದಂಡಿ ಈ ಸಂಬಂಧವಾದ ವಿಷಯವನ್ನು ಹೀಗೆ ಕುರಿತಿದ್ದಾನೆ :

> ಆವೃತ್ತಿಃ ಪ್ರಾತಿಲೋಮ್ಯೇನ ಪಾದಾರ್ಧಶ್ಲೋಕಗೋಚರಾ ।
> ಯಮಕಂ ಪ್ರತಿಲೋಮತ್ವಾತ್ ಪ್ರತಿಲೋಮಮಿತಿ ಸ್ಮೃತಂ ॥ (೩-೭೩)

ಇದರಿಂದ ಗತಪ್ರತ್ಯಾಗತವನ್ನು ಪ್ರತಿಲೋಮಯಮಕದಲ್ಲಿಯೇ ಸೇರಿಸಿ ದಂಡಿ ವಿಚಾರಮಾಡಿರುವುದು ತಿಳಿಯುತ್ತದೆ. ಇದರಲ್ಲಿ ಪಾದ, ಶ್ಲೋಕಾರ್ಧ ಹಾಗೂ ಶ್ಲೋಕ ಎಂಬುದಾಗಿ ಮೂರು ಬಗೆಗಳೆಂದೂ ಈ ಮೂರೂ ಪ್ರತಿಲೋಮಯಮಕಗಳೆಂದೂ ಅವನ ಅಭಿಪ್ರಾಯವಾಗಿದೆ. ಆತ ಕೊಟ್ಟಿರುವ ಲಕ್ಷ್ಯಗಳ ಸ್ವರೂಪವನ್ನು, ವ್ಯಾಖ್ಯಾನಗಳ ಸಹಾಯವನ್ನು ಪಡೆದು ಮುಂದೆ ಗಮನಿಸಬಹುದಾಗಿದೆ.

ಪಾದಪ್ರತಿಲೋಮಯಮಕ (ಪಾದ ಗತಪ್ರತ್ಯಾಗತ)

> → ಯಾಮತಾಶ ಕೃತಾಯಾಸಾ । ಸಾ ಯಾತಾ ಕೃಶತಾ ಮಯಾ । ←
> → ರಮಣಾರಕತಾ ತೇಽಸ್ತು । ಸ್ತುತೇತಾಕರಣಾಮರ ॥ ← (೭೪)

ಅನುಲೋಮವಾಗಿ ನಡೆದ ೧, ೩ನೆಯ ಪಾದಗಳು ಕ್ರಮವಾಗಿ ೨, ೪ನೆಯ ಪಾದಗಳಲ್ಲಿ ಪ್ರತಿಲೋಮವಾಗಿ ನಡೆಯುತ್ತವೆ.

ಅರ್ಧಪ್ರತಿಲೋಮಯಮಕ (ಶ್ಲೋಕಾರ್ಧ ಗತಪ್ರತ್ಯಾಗತ)

> → ನಾದಿನೋಽಮದನಾ ಧೀಃ ಸ್ವಾ । → ನ ಮೇ ಕಾಚನ ಕಾಮಿತಾ ।
> ತಾಮಿಕಾ ನ ಚ ಕಾಮೇನ । ← ಸ್ವಾಧೀನಾ ದಮನೋದಿನಾ ॥ ← (೭೫)

ಅನುಲೋಮವಾಗಿ ನಡೆದ ೧, ೨ನೆಯ ಪಾದಗಳು ಕ್ರಮವಾಗಿ ೪, ೩ನೆಯ ಪಾದಗಳಲ್ಲಿ ಪ್ರತಿಲೋಮವಾಗಿ ನಡೆಯುತ್ತವೆ.

ಶ್ಲೋಕ ಪ್ರತಿಲೋಮಯಮಕ (ಶ್ಲೋಕ ಗತಪ್ರತ್ಯಾಗತ)

> → ಯಾನಮಾನಯಮಾರಾವಿ । → ಕಶೋನಾನಜನಾಶನಾ ।
> → ಯಾಮುದಾರಶತಾಧೀನಾ । → ಮಾಯಾಮಾಯಮನಾದಿ ಸಾ । (೭೬)
>
> ಸಾ ದಿನಾಮಯಮಾಯಾಮಾ । ← ನಾಧೀತಾ ಶರದಾಮುಯಾ । ←
> ನಾಶನಾಜನನಾ ಶೋಕ । ← ವಿರಾಮಾಯ ನ ಮಾನಯಾ ॥ ← (೭೭)

ಅನುಲೋಮವಾಗಿ ನಡೆದ ೧, ೨, ೩, ೪ನೆಯ ಪಾದಗಳು ಕ್ರಮವಾಗಿ ೪, ೩, ೨, ೧ನೆಯ ಪಾದಗಳಲ್ಲಿ

ಪ್ರತಿಲೋಮವಾಗಿ ನಡೆಯುತ್ತವೆ. ಇಲ್ಲಿ ೭೬ನೆಯ ಪದ್ಯ ಅನುಲೋಮಗತಿಯಲ್ಲಿದ್ದು, ೭೭ನೆಯದು ಅದರ ಪ್ರತಿಲೋಮವಾಗಿದೆ.

ಗತಿಚಿತ್ರಗಳ ಒಂದು ಪರಿಕ್ರಮ 'ಗತಪ್ರತ್ಯಾಗತ' ಮತ್ತು ಅದರ ವೈಚಿತ್ರ್ಯಗಳು. ಗೋಮೂತ್ರಿಕ, ಅರ್ಧಭ್ರಮ ಹಾಗೂ ಸರ್ವತೋಭದ್ರಗಳೆಂಬವು ಉಳಿದ ವೈಚಿತ್ರ್ಯಗಳು. ಇವುಗಳಲ್ಲಿ ಮೊದಲನೆಯದು ಸರಳವಾಗಿದ್ದು, ಸ್ವಲ್ಪ ಹೆಚ್ಚಿನ ಪ್ರಚಾರವುಳ್ಳದ್ದು; ಉಳಿದವುಗಳಿಗೂ ತಕ್ಕಮಟ್ಟಿನ ವ್ಯಾಪ್ತಿಯೇನೋ ಉಂಟು. ಇವುಗಳ ಪರಿಚಯವನ್ನೀಗ ಮಾಡಿಕೊಳ್ಳಬಹುದು.

೨. ಗೋಮೂತ್ರಿಕೆ

ಮದನೋ ಮದಿರಾಕ್ಷೀಣಾಮಪಾಂಗಾಸ್ತ್ರೋ ಜಯೇದಯಮ್ ।
ಮದೇನೋ ಯದಿ ತತ್ಕ್ಷೀಣಮನಂಗಾಯಾಂಜಲಿಂ ದದೇ ॥ (೩–೭೯)

೩. ಅರ್ಧಭ್ರಮ

ಮನೋಭವ ತವಾನೀಕಂ । ನೋದಯಾಯ ನ ಮಾನಿನೀ ।
ಭಯಾದಮೇಯಾಮಾ ಮಾ ವಾ । ವಯಮೇನೋಮಯಾ ನತ ॥ (೩–೮೧)

೪. ಸರ್ವತೋಭದ್ರ

ಸಾಮಾಯಾಮಾ ಮಾಯಾ ಮಾಸಾ । ಮಾರಾನಾಯಾಯಾನಾ ರಾಮಾ ।
ಯಾನಾವಾರಾರಾವಾನಾಯಾ । ಮಾಯಾರಾಮಾ ಮಾರಾಯಾಮಾ ॥ (೩–೮೨)

ಇವುಗಳ (೩, ೪) ಉದ್ಧಾರಕ್ರಮವನ್ನು, ಸಾಮಾನ್ಯ ಲಕ್ಷಣವನ್ನು ಕುರಿತಾಗ ಈಗಾಗಲೇ ಗಮನಿಸಿದೆ.

ರುದ್ರಟನ 'ಕಾವ್ಯಾಲಂಕಾರ'

೧. ಗತಪ್ರತ್ಯಾಗತ : ಪ್ರತಿಲೋಮಾನುಲೋಮಪಾಠ

ರುದ್ರಟನು ಗತಪ್ರತ್ಯಾಗತವೆಂಬ ಹೆಸರನ್ನೇನೂ ಹೇಳದೆ ಅದನ್ನೇ 'ಪ್ರತಿಲೋಮಾನುಲೋಮಪಾಠ'ವೆಂದು ಕರೆದು, ಅದನ್ನು ಸ್ರಗ್ಧರಾವೃತ್ತವೊಂದರ ಮೂಲಕ ತೋರಿಸಿದ್ದಾನೆ. ಆ ವೃತ್ತ ಹೀಗಿದೆ :

→
ವೇದಾಪನ್ನೇ ಸ ಶಕ್ಲೇ ರಚಿತನಿಜರುಗುಚ್ಛೇದಯತ್ನೇಽರಮೇರೇ ।
ದೇವಾಸಕ್ತೇಽಮದಕ್ಷೋ ಬಲದಮನಯದಸ್ತ್ರೋದದುರ್ಗಾಸವಾಸೇ ॥
ಸೇವಾಸರ್ಗಾದುದಸ್ತ್ರೋ ದಯನಮದಲವಕ್ಷೋದಮುಕ್ತೇ ಸವಾದೇ ।
ರೇಮೇ ರತ್ನೇಽಯದಚ್ಛೇ ಗುರುಜನಿತಚಿರಕ್ಲೇಶಸನ್ನೇಽಪದಾವೇ ॥ (೧೭)
←

ಪ್ರತಿಲೋಮಾನುಲೋಮಪಾಠದ ಇನ್ನೊಂದು ಬಗೆ :

ಸಮರಣಮಹಿತೋಪಾ ಯಾಸ್ತ್ನಾಮಾರಿಪಾತಾ
ವನರತಿಸರಮಾಯಾ ವಾನರಾ ಮಾಪಸಾರಂ
ಅಮರತತವರಾಲೀಮಾನಮಾಸಾದ್ಯ ನೇದಾ
ರಣಮಹಿಮತತಾಶಾ ಧೀರಭಾವೇಽಸಿರಾತೇ ॥ (೨೨)

ಇಲ್ಲಿ ಪದ್ಯದ ಪ್ರತಿಪಾದವನ್ನೂ ೪, ೫ ಮತ್ತು ೭ ಅಕ್ಷರಗಳ ಮೂರು ಖಂಡಗಳಾಗಿ ಮಾಡಿಕೊಂಡು, ಸಮಗ್ರಪಾದದ ೭ನೆಯ ಅಕ್ಷರವನ್ನು ಬದಲಾಯಿಸದೆ ಅಂಶಗಳಲ್ಲಿಯೇ ಅಕ್ಷರಗಳ ಸ್ಥಾನಗಳನ್ನು ವಿಪರ್ಯಯಗೊಳಿಸಿ, ಅನುಲೋಮ ವಿಲೋಮ ಛಾಯೆಯನ್ನು ತರುವುದರಿಂದ ಬೇರೊಂದು ಶ್ಲೋಕ ನಿಷ್ಪನ್ನವಾಗುವುದು ಸಾಧ್ಯ. ಅದು ಹೀಗೆ :

ಸರಮಣಹಿಮತೋಯಾಪಾಸ್ತ್ಮಾನಾರಿತಾಪಾ ।
ವರನತಿರಸಮಾವಾಯಾನಮಾರಾ ಪರಂ ಸಾ ।

ಗೋಮೂತ್ರಿಕೆ

(ದಂಡಿಯ 'ಕಾವ್ಯಾದರ್ಶ' ೩–೭೮)



ಗತಿ ೫

ಅರಮತ ಬತ ರಾಮಾ ಲೀನಸಾಮಾದ್ಯದೂನೇ ।
ರಮಣಹಿತಮತಾಧೀಶಾರವೇ ಭಾಸಿತೇರಾ ॥ (೨೩)

ರುದ್ರಟನ 'ಕಾವ್ಯಾಲಂಕಾರ'ದಲ್ಲಿ 'ಚತುರಂಗಪೀಠರಚಿತ ರಥ ತುರಗ ಗಜಾದಿ ಪದಪಾಠೈಃ' (೫–೨) ಎಂಬುದಾಗಿ ಹೇಳುವುದನ್ನು ನಮಿಸಾಧು ವ್ಯಾಖ್ಯಾನಿಸುತ್ತ, ''ಚತುರಂಗಪೀಠಂ ದ್ಯೂತಕಾರಿವಿದಿತ ಚತುರಂಗಫಲಕ ಸ್ತತ್ರ ರಚಿತೈ ರಥ ತುರಗಗಜಾದಿ ಪಾದಪಾಠೈಃ ಪಠ್ಯತೇಽನೇನೇತಿ ಪಾಠಃ ಶ್ಲೋಕಃ । ಆದಿಗ್ರಹಣಾತ್ ನರಪದ ಸಂಗ್ರಹಃ ।'' (ಪು.೫೦) ಎಂಬುದಾಗಿ ತಿಳಿಸಿದ್ದಾನೆ. ಇವುಗಳಲ್ಲಿ ವಿವರಗಳು ಸ್ಪಷ್ಟವಿಲ್ಲದ 'ನರಪದ'ದ ವಿಚಾರ ಹೊರತಾಗಿ ಉಳಿದವುಗಳ ಬಗೆಗೆ ನೋಡಬಹುದು.

೨. ರಥಪದ ಪಾಠ :

ರುದ್ರಟನ 'ಕಾವ್ಯಾಲಂಕಾರ'ದಲ್ಲಿ ಈ ಬಂಧದ ಪ್ರಸ್ತಾಪವಿದೆ. ಅಲ್ಲಿರುವ ಇದರ ಲಕ್ಷ್ಯಪದ್ಯ :

ಇತೀಕ್ಷಿತಾ ಸುರೈಶ್ಚಕ್ರೇ । ಯಾ ಯಮಾಮಮಮಾಯಯಾ ॥
ಮಹಿಷಂ ಪಾತು ವೋ ಗೌರೀ । ಸಾಯತಾಸಿಸಿತಾಯಸಾಂ ॥ (೫–೧೪)

ಇ	ತೀ	ಕ್ಷಿ	ತಾ	ಸು	ರೈ	ಶ್ಚ	ಕ್ರೇ
ಯಾ	ಯ	ಮಾ	ಮ	ಮ	ಮಾ	ಯ	ಯಾ
ಮ	ಹಿ	ಷಂ	ಪಾ	ತು	ವೋ	ಗೌ	ರೀ
ಸಾ	ಯ	ತಾ	ಸಿ	ಸಿ	ತಾ	ಯ	ಸಾ

ಗತಿ ೬

ಇದಕ್ಕೆ ನಮಿಸಾಧುವಿನ ವಿವರಣೆ ''ರಥಪದ ನ್ಯಾಯೇನ ಯುಕ್ಪಾದಯೋರಾವೃತ್ತಿನಿವೃತ್ತಿಭ್ಯಾಂ ಪಾಠಃ'' ಎಂಬುದಾಗಿದೆ. ಇದರ ಪ್ರಕಾರ ೨–೪ನೆಯ ಪಾದಗಳ ಆವೃತ್ತಿ ನಿವೃತ್ತಿಗಳಿಂದ ಪಾಠ ಬರುತ್ತದೆಂದು ಅರ್ಥವಾಗುತ್ತದೆ. ಆದರೆ ಇದು ಸ್ಪಷ್ಟವಾಗುವುದಿಲ್ಲ. ೨–೪ನೆಯ ಪಾದಗಳಲ್ಲಂತೂ abcddcba ಮಾದರಿಯಲ್ಲಿ ಅಕ್ಷರ ಪುನರಾವರ್ತನೆಯಿರುವುದನ್ನು ಗಮನಿಸಬೇಕು. ಆ ಎರಡನ್ನೂ ಎಡದಿಂದ ಬಲಕ್ಕೇ ಆಗಲಿ ಬಲದಿಂದ ಎಡಕ್ಕೇ ಆಗಲಿ ಹೇಗೆ ಓದಿದರೂ ಒಂದೇ. ಅಂತೂ ಚತುರಂಗದಲ್ಲಿ ರಥದ ಗತಿಯೊಂದನ್ನು ಇದು ಸೂಚಿಸುವುದು ಸಾಧ್ಯ (bishop ಎಂದು ಅರ್ಥವೋ?). 'ಅಗ್ನಿಪುರಾಣ'ದಲ್ಲಿ (ಅ. ೩೪೩–ಪ. ೬೫), 'ಅಲಂಕಾರ ಚೂಡಾಮಣಿ'ಯಲ್ಲಿ (ಪೃ. ೬೩) ಇದರ ಪ್ರಸ್ತಾಪವುಂಟು. ವಿನಯವಿಜಯಗಣಿಯ 'ಆನಂದಲೇಖಾ', ಕುಲಮಂಡನಸೂರಿಯ 'ವೀರಜಿನಸ್ತವ'ಗಳಲ್ಲಿ (೨೨–ಪು. ೯೭; ೧೩) ಸಹ ಉಂಟು.

೩. ತುರಗಪದ ಪಾಠ :

ರುದ್ರಟನ 'ಕಾವ್ಯಾಲಂಕಾರ'ದಲ್ಲಿ ಈ ಬಂಧವಿದ್ದು, ಇದರ ಲಕ್ಷ್ಯಪದ್ಯವಿಂತಿದೆ :

ಸೇನಾ ಲೀಲೀಲೀನಾ ನಾಲೀ । ಲೀನಾನಾ ನಾನಾಲೀಲೀಲೀ ।
ನಾಲೀನಾಲೀಲೇ ನಾಲೀನಾ । ಲೀಲೀಲೀ ನಾನಾನಾನಾಲೀ ॥ (೫–೧೫)

ಕ ಸೇ 1	ಶ ನಾ 30	ಝ ಲೀ 9	ನ ಲೀ 20	ಗ ಲೀ 3	ಭ ನಾ 24	ಟ ನಾ 11	ಯ ಲೀ 26
ತ ಲೀ 16	ಧ ನಾ 19	ಖ ನಾ 2	ವ ನಾ 29	ಞ ನಾ 10	ರ ಲೀ 27	ಘ ಲೀ 4	ಬ ಲೀ 23
ಷ ನಾ 31	ಜ ಲೀ 8	ಥ ನಾ 17	ಢ ಲೀ 14	ಪ ಲೇ 21	ಚ ನಾ 6	ಮ ಲೀ 25	ಠ ನಾ 12
ದ ಲೀ 18	ಣ ಲೀ 15	ಸ ಲೀ 32	ಛ ನಾ 7	ಲ ನಾ 28	ಡ ನಾ 13	ಫ ನಾ 22	ಙ ಲೀ 5

ಗತಿ ೭

ಈ ಸಂಬಂಧದಲ್ಲಿ ನಮಿಸಾಧುವಿನ ವಿವರಣೆ ಹೀಗಿದೆ: ''ಅತ್ರ ತುರಗಪದ ಪರಿಜ್ಞಾನಾಯ ಶ್ಲೋಕೋ ಯಥಾ—'ಕಶಝೋನಾಗಭಟಾಯ ತಥ ಖೇವೇಞರಾಘಬೇ । ಷಜೇಥಾಢೇ ಪಚೇ ಮೇಠೇ ದೋಣಸಛಲಡೇಫಙಸೇ ॥' ಅನುಂ ಶ್ಲೋಕಂ 'ಸೇನಾಲೀ' ಇತ್ಯಾದಿ ಪ್ರಸ್ತುತ ಶ್ಲೋಕೋಪರಿಭಾಗೇ ಯಥಾಕ್ರಮಾಕ್ಷರಂ ಲಿಖಿತ್ವಾ ತತಃ ಏತಚ್ಛ್ಲೋಕಗತಮಾತೃಕಾಪಠಿತ ಕಾದಿವರ್ಣಕ್ರಮಾನುಮಿತತುರಗಪದಕ್ರಮೇಣ ಪ್ರಸ್ತುತಃ ಶ್ಲೋಕಃ ಉಚ್ಚೀಯ ಇತಿ।''. ಇದರ ಪ್ರಕಾರ ದತ್ತಶ್ಲೋಕವನ್ನು ಮೇಲೆ ತೋರಿಸಿರುವಂತೆ ಬರೆದು, ''ಕಶಝೋ'' ಎಂದು ಮೊದಲಾಗುವ ಸೂತ್ರದ ಮೂಲಾಕ್ಷರಗಳನ್ನು ಅದರ ಅಕ್ಷರಗಳ ಮೇಲೆ, ಮೇಲೆ ತೋರಿಸಿರುವಂತೆ, ಹೊಂದಿಸಿ ಬರೆಯಬೇಕು. ಅನಂತರ ಕ, ಖ, ಗ, ಘ, ಙ....ಇತ್ಯಾದಿಯಾಗಿ ವ್ಯಂಜನಗಳ ಅನುಕ್ರಮಣಿಯನ್ನು ಹಿಡಿದು ಓದಿದಾಗ ಮೇಲಿನ ಶ್ಲೋಕವೇ ಬರುತ್ತದೆ. ಚದುರಂಗದಲ್ಲಿ move of a knight ಎಂದು ಇದರರ್ಥ. ಅದರ ಗತಿಗನುಗುಣವಾಗಿ ಓದುವಂತೆ ಅಕ್ಷರಗಳು ಇಲ್ಲಿ ಹರಡಿರುತ್ತವೆ. ಅಗ್ನಿಪುರಾಣದಲ್ಲಿ (೩೪೩–೩೮) 'ಕಾವ್ಯಾನುಶಾಸನ'ದ 'ಅಲಂಕಾರ ಚೂಡಾಮಣಿ' ಮತ್ತು 'ವಿವೇಕ' ವ್ಯಾಖ್ಯಾನಗಳಲ್ಲಿ ಇದನ್ನು ಕುರಿತಿದೆ. 'ಆನಂದಲೇಖಾ' (ಪು. ೧೨೭)ದಲ್ಲಿ ಇದರ ಲಕ್ಷ್ಯಪದ್ಯವುಂಟು. ಚದುರಂಗದ ತುರಂಗಪದ ಕ್ರಮದ ಮೂಲಸೂತ್ರ ಇಲ್ಲಿ ಅಡಗಿರುವಂತಿದೆ. 'ಸರಸ್ವತೀ ಕಂಠಾಭರಣ'ದಲ್ಲಿ ಕೂಡ ಈ ಬಂಧದ ಉಲ್ಲೇಖವಿದ್ದು ಅಲ್ಲಿಯ ಲಕ್ಷ್ಯಪದ್ಯ ಇಂತಿದೆ:

> ಬಾಲಾ ಸುಕಾಲಬಾಲಾ ಸಾ । ಕಾಂತಿಲಾಲಕಲಾಲಿತಾ ।
> ಸಸ್ನಾ ಸುತವತೀ ಸಾರಾ । ದರ್ಪಿಕಾ ವ್ರತಗರ್ಧಿತ ॥ ೪೦ ॥ (ಚಿತ್ರಪ್ರಕರಣಮ್)

ಅಲ್ಲಿಯೇ, ಇದರ ನ್ಯಾಸಕ್ರಮದ ಪದ್ಯ ಹೀಗಿದೆ:

> ಕ್ರಮಾತ್ಪಾದಚತುಷ್ಕೇಽಸ್ಯ ಪಂಕ್ತಿಶಃ ಪರಿಲೇಖಿತೇ ।
> ತುರಂಗಪದಯಾತೇನ ಶ್ಲೋಕೋಽನ್ಯ ಉಪಜಾಯತೇ ॥
> ಯಥಾ
> ಬಾಲಾ ಲಲಿತ ತೀವ್ರಸ್ನಾ ಸುಕಲಾ ರಾಗತರ್ಪಿಕಾ ।
> ಸುದಂತಿಕಾ ವರ್ಧಿತಾ ವಾ ಸಾ ಕಾಲಾ ತಲಲಾಸಕಾ ॥

ಇದರ ಪ್ರಕಾರ ದತ್ತಶ್ಲೋಕದಲ್ಲಿ ಚತುರಂಗಪದಕ್ರಮದಿಂದ ಅಕ್ಷರಗಳನ್ನು ಕೂಡಿಸಿದಾಗ ''ಬಾಲಾ ಲಲಿತ'' ಎಂಬ ಎರಡನೆಯ ಶ್ಲೋಕ ಹೊರಹೊರಡುತ್ತದೆ. ಮೇಲಿನ ಸೂತ್ರಪದ್ಯವನ್ನೇ ಇಲ್ಲಿಗೂ ಅನ್ವಯಿಸಬಹುದು.

ಅದರಂತೆಯೇ ಮೂಲಾಕ್ಷರಗಳ ಸರಣಿಯನ್ನು ಹಿಡಿದು ಸಾಗಬೇಕು. ಆದರೆ ೨೬ನೆಯ ಅಕ್ಷರದ ಸ್ಥಾನದಲ್ಲಿ 'ಕಾ'ಕ್ಕೆ ಬದಲು 'ಸಾ' ಬರುತ್ತದೆ. ಇದು ವಿಚಾರಾರ್ಹ.

ಮೂಲಾಕ್ಷರ ಮತ್ತು ಸಂಖ್ಯಾನುಸಾರ ವಿನ್ಯಾಸ ಕ್ರಮಗಳು :

ಬಾ ಕ	ಲಾ ಶ	ಸು ಝ	ಕಾ ನ	ಲ ಗ	ಬಾ ಭ	ಲಾ ಟ	ಸಾ ಯ
ಕಾಂ ತ	ತಿ ಧ	ಲಾ ಖ	ಲ ವ	ಕ ಞ	ಲಾ ರ	ಲಿ ಘ	ತಾ ಬ
ಸ ಷ	ಸ್ವಾ ಜ	ಸು ಥ	ತ ಢ	ವ ಪ	ತೀ ಚ	ಸಾ ಮ	ರಾ ಠ
ದ ದ	ರ್ಪಿ ಣ	ಕಾ ಸ	ಪ್ರ ಛ	ತ ಲ	ಗ ಡ	ರ್ಥಿ ಫ	ತ ಙ

ಗತಿ ೮

ಬಾ 1	ಲಾ 30	ಸು 9	ಕಾ 20	ಲ 3	ವಾ 24	ಲಾ 11	ಕಾ 26
ಕಾಂ 16	ತಿ 19	ಲಾ 2	ಲ 29	ಕ 10	ಲಾ 27	ಲಿ 4	ತಾ 23
ಸ 31	ಸ್ವಾ 8	ಸು 17	ತ 14	ವ 21	ತೀ 6	ಸಾ 25	ರಾ 12
ದ 18	ರ್ಪಿ 15	ಕಾ 32	ಪ್ರ 7	ತ 28	ಗ 13	ರ್ಥಿ 22	ತ 5

ಗತಿ ೯

೪. ಗಜಪದ ಪಾಠ

ಚದುರಂಗದಲ್ಲಿ move of a castle ಎಂದು ಇದರ ಅರ್ಥ. ರುದ್ರಟನ 'ಕಾವ್ಯಾಲಂಕಾರ'ದಲ್ಲಿರುವಂತೆ ಗಜಪದ ಅನುಷ್ಟುಪ್‌ನಲ್ಲಿದ್ದರೆ, ಅಕ್ಷರಗಳು ೧, ೯; ೨, ೧೦; ೩, ೧೧; ಮತ್ತು ೪, ೧೨ ಪ್ರಥಮಪಾದವನ್ನು ರೂಪಿಸುತ್ತವೆ.

ಯೋ ನಾನಾಧೀನಾವಾ ಧೀರಾ । ನಾಧೀವಾ ರಾಧೀರಾ ರಾಜನ್ ।
ಕಿಂ ನಾನಾಶಂ ನಾಕಂ ಶಂ ತೇ । ನಾಶಂಕಂತೇಽಶಂ ತೇ ತೇಜಃ ॥ (೧೬)

ಇದಕ್ಕೆ ನಮಿಸಾಧು ಹೇಳುವುದು : ''ಅತ್ರ ಗಜಪದನ್ಯಾಯೇನ ಶ್ಲೋಕ ಉತ್ಪದ್ಯತೇ । ಸ ಚ ಶ್ಲೋಕಗತ ಪ್ರಥಮ

ನವಮ ದ್ವಿತೀಯ ದಶವ ತೃತೀಯೈಕಾದಶಚತುರ್ಥದ್ವಾದಶಾದಿ ಕ್ರಮೇಣ ಉಚ್ಚೇಯ ಇತಿ.'' ಇದರ ಪ್ರಕಾರ ೧-೯-೨-೧೦-೩-೧೧-೪-೧೨, ೫-೧೩-೬-೧೪-೭-೧೫-೮-೧೬, ೧೭-೨೫-೧೮-೨೬-೧೯-೨೭-೨೦-೨೮, ೨೧-೨೯-೨೨-೩೦-೨೩-೩೧-೨೪-೩೨ ಈ ಕ್ರಮದಲ್ಲಿ ಅಕ್ಷರಗಳನ್ನು ಪಠಿಸಿದಾಗಲೂ ಇದೇ ಪದ್ಯ ಬರುತ್ತದೆ. ಒಂದು ರೀತಿಯಲ್ಲಿ ಗೋಮೂತ್ರಿಕೆ, ಮುರಜಗಳನ್ನು ಹೋಲುವ ಬಂಧವಿದು.

ಯೇ	ನಾ	ನಾ	ಧೀ	ನಾ	ಪಾ	ಧೀ	ರಾ
ನಾ	ಧೀ	ಪಾ	ರಾ	ಧೀ	ಗಾ	ರಾ	ಜನ್
ಕಿಂ	ನಾ	ನಾ	ಶಂ	ನಾ	ಕಂ	ಶಂ	ತೇ
ನಾ	ಶಂ	ಕಂ	ತೇ	ಶಂ	ತೇ	ತೇ	ಜಃ

ಗತಿ ೧೦

ಆನೆಯ ಹೆಜ್ಜೆಗಳು ದೊಡ್ಡವು; ನಡೆ ದೀರ್ಘವೂ ಮಂದವೂ ಆದುದು. ಆಯಂಶವನ್ನು ಸೂಚಿಸಲೆಂಬಂತೆ ಲಕ್ಷ್ಯಪದ್ಯದ ಪ್ರತಿಯಕ್ಷರವೂ ದೀರ್ಘಾಕ್ಷರವೋ ಸಬಿಂದುಕ ಇಲ್ಲವೆ ಸವಿಸರ್ಗ ಗುರ್ವಕ್ಷರವೋ ಆಗಿರುವುದನ್ನೂ ಗಮನಿಸಬಹುದು. 'ಹರವಿಜಯ'ದಲ್ಲಿಯ 'ಚತುರಂಗಾಶ್ವಪದಪೂರಣಶ್ಲೋಕ'ದ ಲಕ್ಷ್ಯವನ್ನು (೪೩-೧೪೬) ಇದರೊಂದಿಗೆ ಹೋಲಿಸಿ ನೋಡಬಹುದಾಗಿದೆ; 'ಅಲಂಕಾರಚೂಡಾಮಣಿ'ಯಲ್ಲಿ (ಪು. ೬೩) ಇದರ ಪ್ರಸ್ತಾವವಿದೆ.

೫. ಅರ್ಧಭ್ರಮ

ಸರಸಾಯಾರಿವೀರಾಲೀ । ರಸನವ್ಯಾಧ್ಯದೇಶ್ವರಾ ।
ಸಾ ನಃ ಪಾಯಾದರಂ ದೇವೀ । ಯಾವ್ಯಾಯಾಗಮದಧ್ಯರಿ ॥ (೧೮)

ಇದರ ವಾಚನಕ್ರಮವನ್ನು ಹಿಂದೆಯೇ ಕುರಿತಿದೆ.

ಸ	ರ	ಸಾ	ಯಾ	ರಿ	ವೀ	ರಾ	ಲೀ
ರ	ಸ	ನ	ವ್ಯಾ	ಧ್ಯ	ದೇ	ಶ್ವ	ರಾ
ಸಾ	ನಃ	ಪಾ	ಯಾ	ದ	ರಂ	ದೇ	ವೀ
ಯಾ	ವ್ಯಾ	ಯಾ	ಗ	ಮ	ದ	ಧ್ಯ	ರಿ

ಗತಿ ೧೧

೬. ಸರ್ವತೋಭದ್ರ

ರಸಾ ಸಾರರಸಾ ಸಾರ । ಸಾಯತಾಕ್ಷ ಕ್ಷತಾಯಸಾ ।
ಸಾತಾವಾತ ತವಾತಾಸಾ । ರಕ್ಷತಸ್ತ್ವಸ್ತ್ವತಕ್ಷರ ॥ (೨೦)

ಇದರ ವಾಚನಕ್ರಮವನ್ನು ಹಿಂದೆಯೇ ಕುರಿತಿದೆ.

ರ	ಸಾ	ಸಾ	ರ	ರ	ಸಾ	ಸಾ	ರ
ಸಾ	ಯ	ತಾ	ಕ್ಷ	ಕ್ಷ	ತಾ	ಯ	ಸಾ
ಸಾ	ತಾ	ವಾ	ತ	ತ	ವಾ	ತಾ	ಸಾ
ರ	ಕ್ಷ	ತ	ಸ್ತ್ವ	ಸ್ತ್ವ	ತ	ಕ್ಷ	ರ
ರ	ಕ್ಷ	ತ	ಸ್ತ್ವ	ಸ್ತ್ವ	ತ	ಕ್ಷ	ರ
ಸಾ	ತಾ	ವಾ	ತ	ತ	ವಾ	ತಾ	ಸಾ
ಸಾ	ಯ	ತಾ	ಕ್ಷ	ಕ್ಷ	ತಾ	ಯ	ಸಾ
ರ	ಸಾ	ಸಾ	ರ	ರ	ಸಾ	ಸಾ	ರ

ಗತಿ ೧೨

ಭೋಜದೇವನ 'ಸರಸ್ವತೀಕಂಠಾಭರಣ'

ಭೋಜದೇವನು ಮೊದಲ ಸಲ 'ಗತಿಚಿತ್ರ' ಎಂಬ ಮಾತನ್ನು ಬಳಸಿ, ಅದರಲ್ಲಿ ಗತಪ್ರತ್ಯಾಗತದ ಕೆಲವು ಪ್ರಕಾರಗಳನ್ನು ನಿರೂಪಿಸಿದ್ದಾನೆ. ರಾಮಸಿಂಹನ ವ್ಯಾಖ್ಯೆಯ ಸಹಾಯದಿಂದ ಅವುಗಳ ಸ್ವರೂಪವನ್ನು ಮುಂದೆ ಗಮನಿಸಬಹುದು :

೧. ಗತಪ್ರತ್ಯಾಗತ

ವಾರಣಾಗಗಭೀರಾ ಸಾ । ಸಾರಾಭೀಗಗಣಾರವಾ ।
ಕಾರಿತಾರಿವಧಾ ಸೇನಾ । ನಾಸೇಧಾವರಿತಾರಿಕಾ ॥ (೨–೨೯೯)

ವಿಷಮಪಾದಗಳಲ್ಲಿ (೧,೩) ಗತಿಯೂ ಸಮಪಾದಗಳಲ್ಲಿ (೨,೪) ಪ್ರತ್ಯಾಗತಿಯೂ ಇದ್ದಲ್ಲಿ ಗತಪ್ರತ್ಯಾಗತ. ಇದು ದಂಡಿ ಹೇಳಿರುವ ಪಾದ ಗತಪ್ರತ್ಯಾಗತವೇ.

ಅಕ್ಷರಗತ

ನಿಶಿತಾಸಿರತೋಽಭೀಕೋ । ನ್ಯೇಜತೇಽಮರಣಾ ರುಚಾ ।
ಚಾರುಣಾ ರಮತೇ ಜನ್ಯೇ । ಕೋ ಭೀತೋ ರಸಿತಾಶಿನಿ ॥ (೩೦೦)

ಆರಂಭದಿಂದ ಸಮಾಪ್ತಿಯವರೆಗೆ ಯಾವ ವರ್ಣಮಾಲೆಯ ಆನುಪೂರ್ವಿ ಸ್ವೀಕರಿಸಲ್ಪಟ್ಟಿತೋ ಅದೇ ಆನುಪೂರ್ವಿ ಸಮಾಪ್ತಿಯಿಂದ ತೊಡಗಿ ಹಿಂದಕ್ಕೆ ಬಂದು ಆರಂಭದಲ್ಲಿ ಪರ್ಯವಸಾನ ಹೊಂದುತ್ತದೆ. ಇದು ದಂಡಿ ಹೇಳಿರುವ ಶ್ಲೋಕಾರ್ಧ ಗತಪ್ರತ್ಯಾಗತವೇ.

ಶ್ಲೋಕಾಂತರ

ವಾಹನಾಜನಿ ಮಾನಸೇ । ಸಾರಾಜಾವನಮಾ ತತಃ ।
ಮತ್ತಸಾರಗರಾಜೇಭೇ । ಭಾರೀಹಾವಜ್ಜನಧ್ವನಿ ॥ (೩೦೧)

ನಿಧ್ವನಜ್ಜವಹಾರೀಭಾ । ಭೇಜೇ ರಾಗರಸಾತ್ತಮಃ ।
ತತಮಾನವಜಾರಾಸಾ । ಸೇನಾ ಮಾನಿಜನಾಹವಾ ॥ (೩೦೨)

ಅನುಲೋಮಗತಿಯ ಮೊದಲ ಶ್ಲೋಕ, ಪ್ರತಿಲೋಮದಲ್ಲಿ ಬೇರೊಂದು (ಎಂದರೆ ಎರಡನೆಯ) ಶ್ಲೋಕವಾಗಿದೆ. ಇದು ದಂಡಿ ಹೇಳಿರುವ ಶ್ಲೋಕ ಗತಪ್ರತ್ಯಾಗತವೇ. ಇದು ಮಾಘನ 'ಶಿಶುಪಾಲವಧ'ದೊಳಗಿನ ಲಕ್ಷ್ಯವೇ ಆಗಿದೆ (೧೯–೩೩, ೩೪).

ಭಾಷಾಂತರಗತ

ಇಹ ರೇ ಬಹಲಾ ಲಾಸೇ । ಬಾಲಾ ರಾಹುಮಲೀಮಸಾ ।
ಸಾಲಕಾ ರಸಲೀಲಾ ಸಾ । ತುಂಗಾಲಾಲಿ ಕಲಾರತ ॥ (೩೦೩)

ತರಲಾ ಕಲಿಲಾ ಗಾತುಂ । ಸಾಲಾಲೀ ಸರಕಾಲಸಾ ।
ಸಾಮಲೀ ಮುಹುರಾಲಾವಾ । ಸೇಲಾಲಾ ಹವ ರೇಹಇ ॥ (೩೦೪)

ಅನುಲೋಮಗತಿಯ ಮೊದಲ ಶ್ಲೋಕ ಸಂಸ್ಕೃತದಲ್ಲಿದ್ದು, ಪ್ರತಿಲೋಮಗತಿಯ ಎರಡನೆಯ ಶ್ಲೋಕ ಪ್ರಾಕೃತವಾಗಿ ಪರಿಣಮಿಸುತ್ತದೆ. ಇದನ್ನು ಭಾಷಾಂತರಗತಪ್ರತ್ಯಾಗತ ಎನ್ನಲಾಗುತ್ತದೆ. ''ಇತರ ಭಾಷೆಗಳಲ್ಲಿಯೂ ಇದೇ ರೀತಿಯ ಗತಪ್ರತ್ಯಾಗತಗಳನ್ನು ತಿಳಿಯತಕ್ಕದ್ದು'' ಎಂದು ವ್ಯಾಖ್ಯಾನಕಾರ ಹೇಳಿರುವುದು ಕುತೂಹಲಕರವಾಗಿದೆ. ಇದು ಎಷ್ಟರಮಟ್ಟಿಗೆ ಕಾರ್ಯಸಾಧ್ಯವೋ ತಿಳಿಯದು. ಹಾಗೆ ಮಾಡುವುದು ಸಾಧ್ಯವಿದೆಯೆನ್ನುವುದು ಆತನ ಅಭಿಪ್ರಾಯ. ಭಾಷೆಯ ವ್ಯತ್ಯಾಸದಿಂದಾಗಿ ಇದು ಪ್ರತ್ಯೇಕವಾದ ಒಂದು ಪ್ರಕಾರವಾಗಿ

ಪರಿಣಮಿಸಿದೆಯಲ್ಲದೆ, ಗತಿಚಿತ್ರದ ಲಕ್ಷಣದ ಪ್ರಕಾರ ಇದು ಅದಕ್ಕೆ ನೇರ ಹಿಂದಿನ ಶ್ಲೋಕಾಂತರ ಗತಪ್ರತ್ಯಾಗತದಲ್ಲಿಯೇ ಸೇರತಕ್ಕುದಾಗಿದೆ.

ಅರ್ಥಾನುಗತ

→ ← → ← → ← → ←
ವಿದಿತೇ ದಿವಿ ಕೇಽನೀಕೇ । ತಂ ಯಾಂತಂ ನಿಜಿತಾಜಿನಿ ।
→ ← → ← → ← → ←
ವಿಗದಂ ಗವಿ ರೋದ್ಧಾರೋ । ಯೋದ್ಧಾ ಯೋ ನತಿಮೇತಿ ನ ॥ (೩೦೫)

ಪಾದಾಂತರ್ಗತ ಪದಗುಂಫಗಳನ್ನು ಅನುಲೋಮ ಪ್ರತಿಲೋಮಗಳಲ್ಲಿ ನಡಸಿದಾಗಲೂ ಅರ್ಥವ್ಯತ್ಯಾಸವಿಲ್ಲದೆ ಇರುವಂತಹುದು ಅರ್ಥಾನುಗತ ಗತಪ್ರತ್ಯಾಗತ. ಏಕಕಾಲದಲ್ಲಿ ಸಂಪೂರ್ಣಶ್ಲೋಕ ಗತಪ್ರತ್ಯಾಗತವಾಗಿ ಅನ್ವಯವಾಗುವುದೂ ಸಾಧ್ಯ. ಇದು 'ಶಿಶುಪಾಲವಧ'ದೊಳಗಿನ ಲಕ್ಷ್ಯವೇ ಆಗಿದೆ. (೧೯–೯೦).

ಗತಿಚಿತ್ರಗಳಲ್ಲಿ ಗತಪ್ರತ್ಯಾಗತದ ಮಾದರಿಗಳನ್ನು ಭೋಜದೇವನು ತೋರಿಸಿ ಆದ ಮೇಲೆ ತುರಂಗಪದ, ಅರ್ಧಭ್ರಮ ಮತ್ತು ಸರ್ವತೋಭದ್ರಗಳೆಂಬ ಮೂರು ಬೇರೆ ಮಾದರಿಗಳನ್ನು ತೋರಿಸಿದ್ದಾನೆ. ರುದ್ರಟನ ಗಜಪದವೊಂದು ಹೊರತಾಗಿ ಉಳಿದವು ಇಲ್ಲಿ ನಿರೂಪಿತವಾದಂತೆ ಆಗಿದೆ. ಈ ಪ್ರಭೇದಗಳನ್ನೀಗ ನೋಡೋಣ.

೨. ತುರಂಗಪದ ಗತಿ

ಬಾಲಾ ಸುಕಾಲಬಾಲಾ ಕಾ । ಕಾಂತಿಲಾಲಕಲಾಲಿತಾ ।
ಸಸ್ವಾ ಸುತವತೀ ಸಾರಾ । ದರ್ಪಿಕಾ ವ್ರತಗರ್ಧಿತ ॥ (೩೦೬)

"ಈ ಶ್ಲೋಕದ ನಾಲ್ಕು ಪಾದಗಳನ್ನೂ ಕ್ರಮವಾಗಿ ಪಂಕ್ತಿಪಂಕ್ತಿಯಾಗಿ ಬರೆದು ಮತ್ತೆ ಕುದುರೆಹಜ್ಜೆಯ ನಡೆಯಂತೆ ವರ್ಣಗಳನ್ನು ಜೋಡಿಸಿಕೊಂಡರೆ ಮತ್ತೊಂದು ಶ್ಲೋಕ ನಿಷ್ಪನ್ನವಾಗುತ್ತದೆ." ಹೀಗೆ ಭೋಜದೇವನೇ ೩೦೭ನೆಯ ಶ್ಲೋಕದಲ್ಲಿ ಕ್ರಮವನ್ನು ವಿವರಿಸಿದ್ದಾನೆ. ಅವನ ವಿವರಣೆಯಂತೆ ವರ್ಣಸಂಯೋಜನೆ ಮಾಡಿದರೆ, ಇಲ್ಲಿಯ ಗತಿಚಿತ್ರದ ಸ್ವರೂಪ ಹೇಗಿರುತ್ತದೆ ಎಂದು ಹಿಂದೆಯೇ ತೋರಿಸಿದೆ.

೩. ಅರ್ಧಭ್ರಮ

ಸಸತ್ವರತಿದೇ ನಿತ್ಯಂ । ಸದರಾಮರ್ಷನಾಶಿನಿ ।
ತ್ವರಾಧಿಕಕಸನ್ನಾದೇ । ರಮಕತ್ವಮಕರ್ಷತಿ ॥ (೩೦೯)

ಈ ಲಕ್ಷ್ಯ ಭಾರವಿಯ 'ಕಿರಾತಾರ್ಜುನೀಯ'ದ್ದು (೧೫–೨೭).

ಸ	ಸ	ತ್ವ	ರ	ತಿ	ದೇ	ನಿ	ತ್ಯಂ
ಸ	ದ	ರಾ	ಮ	ರ್ಷ	ನಾ	ಶಿ	ನಿ
ತ್ವ	ರಾ	ಧಿ	ಕ	ಕ	ಸ	ನ್ನಾ	ದೇ
ರ	ಮ	ಕ	ತ್ವ	ಮ	ಕ	ರ್ಷ	ತಿ

ಗತಿ ೧೩

೪. ಸರ್ವತೋಭದ್ರ

ದೇವಾಕಾನಿನಿ ಕಾವಾದೇ । ವಾಹಿಕಾಸ್ವಸ್ವಕಾಹಿ ವಾ ।
ಕಾಕಾರೇಭಭರೇಽಕಾಕಾ । ನಿಸ್ವಭವ್ಯವ್ಯಭಸ್ವನಿ ॥ (೩೧೦)

ಈ ಲಕ್ಷ್ಯ ಭಾರವಿಯ 'ಕಿರಾತಾರ್ಜುನೀಯ'ದ್ದು (೧೫–೨೫).

ದೇ	ವಾ	ಕಾ	ನಿ	ನಿ	ಕಾ	ವಾ	ದೇ
ವಾ	ಹಿ	ಕಾ	ಸ್ವ	ಸ್ವ	ಕಾ	ಹಿ	ವಾ
ಕಾ	ಕಾ	ರೇ	ಭ	ಭ	ರೇ	ಕಾ	ಕಾ
ನಿ	ಸ್ವ	ಭ	ವ್ಯ	ವ್ಯ	ಭ	ಸ್ವ	ನಿ
ನಿ	ಸ್ವ	ಭ	ವ್ಯ	ವ್ಯ	ಭ	ಸ್ವ	ನಿ
ಕಾ	ಕಾ	ರೇ	ಭ	ಭ	ರೇ	ಕಾ	ಕಾ
ವಾ	ಹಿ	ಕಾ	ಸ್ವ	ಸ್ವ	ಕಾ	ಹಿ	ವಾ
ದೇ	ವಾ	ಕಾ	ನಿ	ನಿ	ಕಾ	ವಾ	ದೇ

ಗತಿ ೧೪

ಗೋಮೂತ್ರಿಕಾದಿ ಅನ್ಯಪ್ರಕಾರಗಳಿಂದು ಭೋಜನು ಪಾದ, ಅರ್ಧಶ್ಲೋಕ, ಶ್ಲೋಕ, ವಿಪರೀತ ಶ್ಲೋಕ, ಭಿನ್ನಚ್ಛಂದ, ಸಂಸ್ಕೃತ–ಪ್ರಾಕೃತ, ಸಮಸಂಸ್ಕೃತ ಪಾದ, ಅರ್ಧ ಎಂಬ ಗೋಮೂತ್ರಿಕೆಗಳನ್ನೂ ಗೋಮೂತ್ರಿಕಾಧೇನು, ಶತಧೇನು, ಸಹಸ್ರಧೇನು, ಅಯುತಧೇನು, ಲಕ್ಷಧೇನು, ಕೋಟಿಧೇನು, ಕಾಮಧೇನು ಎಂಬಂತಹ ಧೇನುಪ್ರಕಾರಗಳನ್ನೂ ನಿರೂಪಿಸಿದ್ದಾನೆ (೨–೩೨೪~೪೪). ಇವುಗಳ ವಿವರಣೆ ಇಲ್ಲಿಯ ನಮ್ಮ ಮಿತಿಗೆ ಮೀರಿದ್ದು. ಗತಿಚಿತ್ರವಾಗಿ ಗೋಮೂತ್ರಿಕೆಯ ಪ್ರಪಂಚ ದೊಡ್ಡದೆಂಬುದು ನಿಶ್ಚಯ.

ಗತಿಚಿತ್ರಗಳ ಕೆಲವು ಸಂಸ್ಕೃತ ನಿದರ್ಶನಗಳು

ಸಂಸ್ಕೃತ ಸಾಹಿತ್ಯದಲ್ಲಿ ಭಾರವಿ, ಮಾಘ, ರತ್ನಾಕರ, ಹರಿಚಂದ್ರ, ಶಿವಸ್ವಾಮಿ, ವೇದಾಂತದೇಶಿಕ ಈ ಮೊದಲಾದವರ ರಚನೆಗಳಲ್ಲಿ ಗತಿಚಿತ್ರಗಳು ವಿಶೇಷವಾಗಿ ಕಂಡುಬರುತ್ತವೆ. ರತ್ನಾಕರನಲ್ಲಿ ವೈವಿಧ್ಯ ಹೆಚ್ಚೆಂದು ಹೇಳಬಹುದು; ಸಂಖ್ಯೆಯೂ ಹೆಚ್ಚೇ. ಹಾಗೆ ನೋಡಿದರೆ ಗತಿಚಿತ್ರಗಳನ್ನು ಕೆಲವಟ್ಟಿಗಾದರೂ ಬಳಸದ ವಿದ್ವತ್ ಕವಿಯೇ ಇಲ್ಲ. ಇಲ್ಲಿ ನಿದರ್ಶನಕ್ಕೆ ಕೆಲವನ್ನು ನೋಡಬಹುದು.

ಭಾರವಿಯ 'ಕಿರಾತಾರ್ಜುನೀಯ'ದಲ್ಲಿ :

೧. ಗತಪ್ರತ್ಯಾಗತ

ಪಾದಗತ ಗತಪ್ರತ್ಯಾಗತ (ಪ್ರತಿಲೋಮಾನುಲೋಮಪಾದ)

→ ←
ವೇತ್ರಶಾಕಕುಜೇ ಶೈಲೇಽ । ಲೇಶೈಜೇಽಕುಕಶಾತ್ರವೇ ।
→ ←
ಯಾತ ಕಿಂ ವಿದಿಶೋ ಜೇತುಂ । ತುಂಜೇಶೋ ದಿವಿ ಕಿಂತಯಾ ॥ (೧೫-೧೮)

ಶ್ಲೋಕ ಗತಪ್ರತ್ಯಾಗತ

→ →
ನಿಶಿತಾಸಿರತೋಽಭೀಕೋ । ನ್ಯೇಜತೇಽಮರಣಾ ರುಚಾ ।
→ →
ಸಾರತೋ ನ ವಿರೋಧೀನಃ । ಸ್ವಾಭಾಸೋ ಭರವಾನುತ ॥ (೧೫-೨೨)

← ←
ತನುವಾರಭಸೋ ಭಾಸ್ವಾ । ನಧೀರೋಽವಿನತೋರಸಾ ।
← ←
ಚಾರುಣಾ ರಮತೇ ಜನ್ಯೇ । ಕೋಽಭೀತೋ ರಸಿತಾಶಿನಿ ॥ (೧೫-೨೩)

೨. ಗೋಮೂತ್ರಿಕೆ

ನಾಸುರೋಽಯಂ ನ ವಾ ನಾಗೋ । ಧರಸಂಸ್ಥೋ ನ ರಾಕ್ಷಸಃ ।
ನಾ ಸುಖೋಯಂ ನವಾಭೋಗೋ । ಧರಣಿಸ್ಥೋ ಹಿ ರಾಜಸಃ ॥ (೧೫-೧೨)

೩-೪. ಈ ಮೊದಲು 'ಸರಸ್ವತೀಕಂಠಾಭರಣ'ದ ವಿವರಣೆಯ ಸಂದರ್ಭದಲ್ಲಿ ಇಲ್ಲಿಯ ಅರ್ಧಭ್ರಮ ಸರ್ವತೋಭದ್ರ (೧೫-೨೭, ೨೫)ಗಳನ್ನು ಪರಿಶೀಲಿಸಿದೆ.

ಮಾಘನ 'ಶಿಶುಪಾಲವಧ'ದಲ್ಲಿ :

೧. ಗತಪ್ರತ್ಯಾಗತ

ಪಾದಗತ ಗತಪ್ರತ್ಯಾಗತ (ಪ್ರತಿಲೋಮಾನುಲೋಮಪಾದ)

ನಾನಾಜಾವ ವಜಾ ನಾನಾ । ಸಾ ಜನೌಘಘನೌಜಸಾ ।
ಪರಾನಿಹಾಽಹಾನಿರಾಪ । ತಾನ್ವಿಯಾತತಯಾಽನ್ವಿತಾ ॥ (೧೯-೪೦)

ಶ್ಲೋಕಾರ್ಧ ಗತಪ್ರತ್ಯಾಗತ

ತಂ ಶ್ರಿಯಾ ಘನಯಾಽನಸ್ತ । ರುಚಾ ಸಾರತಯಾ ತಯಾ ।
ಯಾತಯಾ ತರಸಾ ಚಾರು । ಸ್ತನಯಾಽನಘಯಾ ಶ್ರಿತಂ ॥ (೧೯-೪೮)

ಇಲ್ಲಿಯ ಅರ್ಥಾನುಗತ ಹಾಗೂ ಶ್ಲೋಕ ಗತಪ್ರತ್ಯಾಗತಗಳನ್ನು 'ಸರಸ್ವತೀಕಂಠಾಭರಣ'ದ ವಿವರಣೆಯಲ್ಲಿ ನೋಡಿದೆ.



ಗತಿ ೧೫



ಗತಿ ೧೬

೨. ಗೋಮೂತ್ರಿಕೆ

ಪ್ರವೃತ್ತೇ ವಿಕಸದ್ಧ್ವಾನಂ ಸಾಧನೇಪ್ಯವಿಷಾದಿಭಿಃ ।
ವವೃಷೇ ವಿಕಸದ್ಧ್ವಾನಂ ಯುಧಮಾಪ್ಯವಿಷಾಣಿಭಿಃ ॥ (೧೯–೪೬)

೩. ಅರ್ಧಭ್ರಮ

ಅಭೀಕಮತಿಕೇನೇದ್ಧೇ । ಭೀತಾನಂದಸ್ಯ ನಾಶನೇ ।
ಕನತ್ಸಕಾಮಸೇನಾಕೇ । ಮಂದಕಾಮಕಮಸ್ಯತಿ ॥ (೧೯–೬೨)

ಅ	ಭೀ	ಕ	ಮ	ತಿ	ಕೇ	ನೇ	ದ್ಧೇ
ಭೀ	ತಾ	ನಂ	ದ	ಸ್ಯ	ನಾ	ಶ	ನೇ
ಕ	ನ	ತ್ಸ	ಕಾ	ಮ	ಸೇ	ನಾ	ಕೇ
ಮಂ	ದ	ಕಾ	ಮ	ಕ	ಮ	ಸ್ಯ	ತಿ

ಗತಿ ೧೭

೪. ಸರ್ವತೋಭದ್ರ

ಸಕಾರನಾನಾರಕಾಸ । ಕಾಯಸಾದದಸಾಯಕಾ ।
ರಸಾಹವಾವಾಹಸಾರ । ನಾದವಾದದವಾದನಾ ॥ (೧೯–೨೭)

ಈ ಪ್ರಸಿದ್ಧ ಕಾವ್ಯಗಳೇ ಅಲ್ಲದೆ, ಬೇರೆ ಕೆಲವು ಕಾವ್ಯಗಳಲ್ಲಿಯೂ ಗತಿಚಿತ್ರಗಳ ಲಕ್ಷ್ಯಗಳು ದೊರೆಯಬಹುದು. ಇದನ್ನು ನಿದರ್ಶಿಸುವುದಕ್ಕೆ ಹರಿಚಂದ್ರಕವಿಯ 'ಧರ್ಮಶರ್ಮಾಭ್ಯುದಯ'ದಿಂದ ಕೆಲವು ಲಕ್ಷ್ಯಗಳನ್ನು ಉದಾಹರಿಸಿದೆ :

೧. ಗತಪ್ರತ್ಯಾಗತ

ಪಾದ ಗತಪ್ರತ್ಯಾಗತ (ಪ್ರತಿಲೋಮಾನುಲೋಮಪಾದ)

→ ←
ಮಾರಸಾರ ಸಮಾಕಾರಾ । ರಾಕಾಮಾ ಸರಸಾ ರಮಾ ।
→ ←
ಸಾ ಗತಾ ಹಸನಾ ತೇನ । ನ ತೇನಾಸಹತಾಗಸಾ ॥ (೧೯–೧೧)

ಶ್ಲೋಕಾರ್ಧ ಗತಪ್ರತ್ಯಾಗತ (ಅನುಲೋಮಪ್ರತಿಲೋಮಾರ್ಧ)

→ →
ರಾಗಿತಾಜಿನರಾ ಕಾಪಿ । ನೇತೇನಾತತತಾಮಸಾ ।
← ←
ಸಾಮತಾತತನಾ ತೇನೇ । ಪಿಕಾರಾವಜಿತಾ ಗಿರಾ ॥ (೧೯–೪೫)

ಸ	ಕಾ	ರ	ನಾ	ನಾ	ರ	ಕಾ	ಸ
ಕಾ	ಯ	ಸಾ	ದ	ದ	ಸಾ	ಯ	ಕಾ
ರ	ಸಾ	ರು	ವಾ	ವಾ	ರು	ಸಾ	ರ
ನಾ	ದ	ವಾ	ದ	ದ	ವಾ	ದ	ನಾ
ನಾ	ದ	ವಾ	ದ	ದ	ವಾ	ದ	ನಾ
ರ	ಸಾ	ರು	ವಾ	ವಾ	ರು	ಸಾ	ರ
ಕಾ	ಯ	ಸಾ	ದ	ದ	ಸಾ	ಯ	ಕಾ
ಸ	ಕಾ	ರ	ನಾ	ನಾ	ರ	ಕಾ	ಸ

ಗತಿ ೧೮

ಶ್ಲೋಕ ಗತಪ್ರತ್ಯಾಗತ

→ ನಿಜದೋರದನೋದಿರ್ಣ । → ಶ್ರೀರತಾ ಘನತಾವಿಭಾ ।
→ ತರಸಾರಬಲಂ ಚೇರು । → ರಿಭಾ ಭೂತಹೃತೋ ಭೃಶಂ ॥ (೧೯–೪೯)

ಸಂಭೃತೋ ಹೃತಭೂಭಾರಿ ← । ರುಚೇऽಲಂ ವರಸಾರತಃ ← ।
ಭಾವಿತಾನಘ ತಾರಶ್ರೀ ← । ರ್ಣ ದೀನೋ ದರದೋऽಜನಿ ← ॥ (೧೯–೫೦)

೨. ಗೋಮೂತ್ರಿಕೆ

ಸ ವಾಜಿಸಿಂಧುರಗ್ರಾಮಾನ್ಸಂಭ್ರಮಾದಭಿಧಾವಿತಃ ।
ಜವಾದಸಿಂ ಸ್ಫುರದ್ಧಾಮಾ ಬಿಭ್ರನ್ನಾದಮುಧಾತ್ತತಃ ॥ (೧೯–೭೮)



ಗತಿ ೧೯

೩. ಅರ್ಧಭ್ರಮ

ಜಘಾನ ಕರಬಾಲೀಯಘಾತೇನಾರೇರ್ಬಲಂ ಬಲೀ ।
ನ ನಾಪ್ರಾ ತೇ ನಿರಾಲಂಬಾ ಕರೇ ತೇನಾವನಿರ್ವರಃ ॥ (೧೯–೨೪)

ಜ	ಘಾ	ನ	ಕ	ರ	ಬಾ	ಲೀ	ಯ
ಘಾ	ತೇ	ನಾ	ರೇ	ರ್ಬ	ಲಂ	ಬ	ಲೀ
ನ	ನಾ	ಪ್ರಾ	ತೇ	ನಿ	ರಾ	ಲಂ	ಬಾ
ಕ	ರೇ	ತೇ	ನಾ	ವ	ನಿ	ರ್ವ	ರಃ

ಗತಿ ೨೦

೪. ಸರ್ವತೋಭದ್ರ

ಭರಂ ಯಾಮಮಯಾರಂಭ । ರಂಜಿತಾ ದದತಾಜಿರಂ ।
ಯಾತಾ ಕ್ಷಮಾ ಮಾಕ್ಷತಾ ಯಾ । ಮದಮಾರರಮಾದಮ ॥ (೧೯–೮೩)

ಕಾವ್ಯಸ್ಥವಾದ ಗತಿಚಿತ್ರಗಳಿರುವಂತೆಯೇ ಅಲ್ಲೊಂದು ಇಲ್ಲೊಂದು ಶಾಸನಸ್ಥವಾದ ಗತಿಚಿತ್ರವೂ ಇರುವಂತಿದೆ. ಇದಕ್ಕೆ ಒಂದು ಉದಾಹರಣೆಯನ್ನು ಇಲ್ಲಿ ಎತ್ತಿ ಬರೆಯಬಹುದು :

→ →
ಕಂಜರಂ ಪುರಿತೇಂದ್ರಂ ಚ । ಮಹೋದಾಳಿ ಸದಾಳಿಕಾ ।
← ←
ಕಾಳಿದಾಸ ಳಿದಾ ಹೋಮ । ಚಂದ್ರಂ ತೇ ರಿಪುರಂಜಕಂ ॥

ಇದು ಮೊಳಕಾಲ್ಮೂರು ೩೯ನೆಯ ಶಾಸನದ (ಎಕ. xi) ಪದ್ಯವಾಗಿದ್ದು, ಇಲ್ಲಿ ೧–೨ನೆಯ ಪಾದಗಳು ಅನುಲೋಮಗತಿಯಲ್ಲಿಯೂ, ೩–೪ನೆಯ ಪಾದಗಳು ವಿಲೋಮಗತಿಯಲ್ಲಿಯೂ ಸಾಗಿ ಏಕೀಭವಿಸುವುದನ್ನು ಕಾಣಬಹುದು. ಹೆಚ್ಚಿನ ಗತಿಚಿತ್ರಗಳು ಬಂದಳಿಕೆ ಗ್ರಾಮದ ಶಾಂತೀಶ್ವರ ಬಸದಿಯಲ್ಲಿ ಕಂಡು ಬಂದಿದ್ದು, ಅವನ್ನು ಮುಂದೆ ಉದ್ಧರಿಸಲಾಗಿದೆ.

ಭ	ರಂ	ಯಾ	ಮ	ಮ	ಯಾ	ರಂ	ಭ
ರಂ	ಜಿ	ತಾ	ದ	ದ	ತಾ	ಜಿ	ರಂ
ಯಾ	ತಾ	ಕ್ಷ	ಮಾ	ಮಾ	ಕ್ಷ	ತಾ	ಯಾ
ಮ	ದ	ಮಾ	ರ	ರ	ಮಾ	ದ	ಮ
ಮ	ದ	ಮಾ	ರ	ರ	ಮಾ	ದ	ಮ
ಯಾ	ತಾ	ಕ್ಷ	ಮಾ	ಮಾ	ಕ್ಷ	ತಾ	ಯಾ
ರಂ	ಜಿ	ತಾ	ದ	ದ	ತಾ	ಜಿ	ರಂ
ಭ	ರಂ	ಯಾ	ಮ	ಮ	ಯಾ	ರಂ	ಭ

ಗತಿ ೨೧

ಸಂಸ್ಕೃತ ಸಾಹಿತ್ಯದಲ್ಲಿ, ಗ್ರಾಂಥಿಕ ಹಾಗೂ ಶಾಸನ ಸಾಹಿತ್ಯ ಎರಡರಲ್ಲಿಯೂ ಗತಿಚಿತ್ರಗಳ ಕೆಲವು ನಿದರ್ಶನಗಳು ಸಾಮಾನ್ಯವಾಗಿ ಕಂಡುಬರುತ್ತವೆ. 'ಹರವಿಜಯ' (೪೩–೧೧೩), 'ಕಪ್ಫಿಣಾಭ್ಯುದಯ' (೧೮–೮೭), 'ನರನಾರಾಯಣಾನಂದ' (೧೪–೨೮) ಮೊದಲಾದವುಗಳಲ್ಲಿ ಅರ್ಧಭ್ರಮದ ನಿದರ್ಶನಗಳುಂಟು. ಇವುಗಳಲ್ಲಿಯೇ (ಕ್ರಮವಾಗಿ ೪೩–೧೦೨; ೧೮–೮೫; ೧೪–೨೭) ಸರ್ವತೋಭದ್ರದ ನಿದರ್ಶನಗಳನ್ನೂ ಕಾಣಬಹುದು. 'ಯಾದವಾಭ್ಯುದಯ'ದಲ್ಲಿಯೂ (೯–೧೦೧, ೧೦೨) ಈ ಎರಡನೆಯದರ ನಿದರ್ಶನಗಳುಂಟು.

ವಿರಳವಾಗಿ ಕನ್ನಡ ನಾಡಿನ ಶಾಸನಗಳಲ್ಲಿ ನಕ್ಷೆಯೊಂದಿಗೆ ಸರ್ವತೋಭದ್ರದ ಕೆಲವು ಲಕ್ಷ್ಯಗಳನ್ನು ಕಾಣಬಹುದಾಗಿದೆ (ಉದಾಹರಣೆಗೆ: ಮೈಆರಿ. ೧೯೧೭, ಹೆಬ್ಬಟ, ಪು. ೨೦, ನಕ್ಷೆ xi, ಪು. ೩೧–೩೨; ಎಕ. vii, ಬಂದಲಿಕೆ ೨೨೪, ೨೨೮–೩೧, ಸು. ೧೧೦೦; ಸೌಇಇ. vii, ೨೩೮, ೧೫೮೭ ಇ.).

(i) ಹೆಬ್ಬಟದ ಶಾಸನದಲ್ಲಿ, ಚಕ್ರರೂಪದ ಯಂತ್ರವೊಂದರ ಹಿಂಬದಿಯಲ್ಲಿ ಹೀಗೆ ತೋರಿಸಿರುವ ಒಂದು ಲಕ್ಷ್ಯ :

ಕ್ಷೀ	ರ	ಗೋ	ಪ	ಪ	ಗೋ	ರ	ಕ್ಷೀ
ರ	ಕ್ಷ	ಮ	ಕ್ಷ	ಕ್ಷ	ಮ	ಕ್ಷ	ರಃ
ಗೋ	ಮಾ	ನೇ	ಗ	ಗ	ನೇ	ಮಾ	ಗೋ
ಪ	ಕ್ಷ	ಗ	ತ್ರೈ	ತ್ರೈ	ಗ	ಕ್ಷ	ಪಃ

ಗತಿ ೨೨

ಇದು ಗಂಗ ಮಾರಸಿಂಹನ ಕಾಲದ (೯೬೧–೭೪) ಶಾಸನದೊಳಗಿನದು. ಇಂತಹ ಶಾಸನದ ಕಲ್ಲುಗಳನ್ನು ಗೋಕಲ್ಲುಗಳೆಂದು ಕರೆಯುವುದು ವಾಡಿಕೆ. ಹಳ್ಳಿಯ ಪ್ರವೇಶಸ್ಥಾನದ ಹತ್ತಿರ ಇಂತಹ ಕಲ್ಲುಗಳನ್ನು ಗಮನಿಸಬಹುದು. ನಕ್ಷೆಗಳು ಸ್ವಲ್ಪ ಭಿನ್ನವಾಗಿರಬಹುದು. ಪ್ರಸಿದ್ಧದೊರೆಗಳು ಇವನ್ನು ಗೋರಕ್ಷಣೆಯ ಉದ್ದೇಶದಿಂದ ಹಾಕಿಸುತ್ತಿದ್ದರೆಂದು ಭಾವಿಸಲಾಗಿದೆ. ದನಗಳಿಗೆ ಬರುವ ರೋಗಗಳನ್ನು ವಾಸಿಮಾಡಲು ಇಂತಹ ಶಾಸನ ಶಿಲೆಗಳನ್ನು ತೊಳೆದ ನೀರು ಗುಣಕಾರಿಯೆಂಬುದಾಗಿ ಆ ಕಾಲಕ್ಕೆ ತಿಳಿಯುತ್ತಿದ್ದರು. ಸರ್ವತೋಭದ್ರದ ಮೇಲಿನ ಶಾಸನ ಶಿಲೆಯ ಮುಂಬದಿಯಲ್ಲಿ, ಚಕ್ರದಂತಹ ಯಂತ್ರದ ಕೆಳಗೆ ''ಶ್ರೀ ಮಾರಸಿಙ್ಗ ಪಸುಗಳ್ಗೊಪಕರಿಸಿದಂ'' ಎಂದಿರುವುದು ಇದನ್ನು ಸೂಚಿಸುತ್ತದೆ.

(ii) ಶಿಕಾರಿಪುರದ ಬಸ್ತಿಯ ಶಾಸನದಲ್ಲಿ ಉದ್ಧೃತವಾದ ಲಕ್ಷ್ಯ :

ಶಾಂತೇ ಭೂತತಭೂತೇಶಾಂ । ತೇಮರಾ ನನರಾ ಮತೇ ।
ಭೂ ರಾಜತೇ ತೇಜರಾ ಭೂ । ತನತೇ ಮಮ ತೇ ನತ ॥

ಇದನ್ನು ಅಲ್ಲಿಯೇ ಇರುವ ಹಿಂದಿನ ಚಕ್ರಬಂಧದ ಶಾರ್ದೂಲವಿಕ್ರೀಡಿತ ವೃತ್ತದಿಂದ ಉದ್ಧರಿಸಿ ಸರ್ವತೋಭದ್ರವಾಗಿ ಮಾಡಿದೆ. ಇದರಿಂದ ಇಲ್ಲಿ 'ಗರ್ಭಕವಿತ್ವ'ದ ಲಕ್ಷಣವನ್ನೂ ಕಾಣಬಹುದು.

(iii) ಶಿಕಾರಿಪುರ ತಾಲ್ಲೂಕು, ತಾಳಗುಂದ ಹೋಬಳಿ ಬಂದಲಿಕೆಗ್ರಾಮದ ಶಾಂತೀಶ್ವರ ಬಸದಿಯ ರಂಗಮಂಟಪದ ನೈರುತ್ಯದ ಕಂಭದಲ್ಲಿ (೨೨೮)

ಯದ್ಭೂವಿಸ್ಮಯಮಾಸ್ತ ಶಾಂತಿಜಿನನೇಯಂ ಶ್ರೀಯುಸಾತಾನಿತಂ
ಯನ್ನೀರಭ್ರಮಿಜಾತಿಭೂತಿಜಿದನಾಜಿಸ್ವಾಸ್ಪದೇ ಸೂದಯಂ
ಚಕ್ರಂ ಚಿತ್ರಮಿಹಾರಿವೈರಿಜಿದಳಂ ನವ್ಯೇಂದ್ರಭೂರಿಸ್ತುತೇ
ತೇನೇ ಜೀಯವಿಧೇಯಲೋಕಚಕಿತಾತಂಕವ್ಯಯಂ ತಜ್ಜ್ಞತೇ ॥

ಭಾಸತೇ ನುತಕಾಮೇಶ ಶಾನ್ತೇ ಮಾತಾನಿತಾ ತವ ।
ಯಾ ಹಿತಾಹಿತಭಿಂಧಾನಾಸೂರೀನಾರಕ್ಷತಾದಿನ ॥

ಅನುಲೋಮ ಪ್ರತಿಲೋಮ ಶ್ಲೋಕದ್ವಯ

ಭಾಸತೇ ನುತಕಾಮೇಶ ಶಾನ್ತೇ ಮಾತಾನಿತಾ ತವ ।
ವತತಾನಿತಾಮಾನ್ತೇಶಾ ಶಮೇಕಾ ತನುತೇ ಸಭಾ ॥

ಅನುಲೋಮ ಪ್ರತಿಲೋಮೈಕರೂಪಶ್ಲೋಕ

ಸಂಗರಾನಿಯಮಾದೇವ ನ ವಂದೇನ್ಯಮತಂ ಹಿತಂ ।
ಸಂಗತಾಗಮನಾಥಶ್ಚಾನ್ನಮಾಮೋ ವನಮಾತನು ॥ (?)

ಮುಗಿದ ಕಡೆಯಿಂದ ಮ[ತ್ತೊಂ]ದು

ಸಂಗರಾನಿಯಮಾದೇವ ನ ವಂದೇನ್ಯಮತಂ ಹಿತಂ ।
ತಂ ಹಿತಂ ಮನ್ಯದೇವಂ ನ ವದೇಮಾಯ ನಿರಾಗಸಂ ॥

ಅನುಲೋಮ ಪ್ರತಿಲೋಮೈಕಶ್ಲೋಕ

ಮಮ ಮಾನಸ ನಾಮಾಶ ಜಿನಾನಾಮನಮಾತತಾನ್ ।
ತಾತಮಾನಮನಾನಾಜಿಶಮಾನಾಸನ ಮಾ ಮಮ ॥

ಗತಪ್ರತ್ಯಾಗತೈಕ ಶ್ಲೋಕ ॥

(iv) ಅದೇ ಮಂಟಪದ ಈಶಾನ್ಯದ ಕಂಭದಲ್ಲಿ (೨೩೦) :

ಯತ್ಸಂಸೂಚಿತಕಂ ವದಾನ್ಯಮಹಿತಂ ಕಾಮಂ ವರಾರಿಸ್ತುತಂ ।
ಯದ್ವಾರಿಭ್ರಮಣೈಃ ಸಮಾನಮತುಳಂ ಶಾಂತಾತ್ಮ ತೇ ತೇ ಸ್ವಯಂ ॥
ವೃತ್ತಂ ಕಾರಿತನೀತಿಚಕ್ರಮಹಿತಾತಿಕ್ರಾಂತಿಗೇಯಂ ಏತೇ ।
ತೇನೇ ಜೇಯವಿನೇಯಲೋಕನ್ಯಜಿನಾತಂಕನ್ಯಯಂ ತಚ್ಚ ತೇ ॥

(v) ಅದೇ ಮಂಟಪದ ಆಗ್ನೇಯಕಂಭದಲ್ಲಿ (೨೩೧) :

ಯತ್ಸಂಸೂಚಿತ ವಸ್ತುವೃತ್ತಿಮಹಿಮಾ ಯಂ ಯಕ್ಷಕೈ ರಕ್ಷಿತಂ ।
ಯದ್ವಾರಿ ಭ್ರಮಣಾತಿರಮ್ಯಮತುಳಂ ಶಾಂತಾಕೃತೇ ಚಿನ್ಮಯಂ ।
ವೃತ್ತಂ ವಿಸ್ಮಯಕಾರಿ ಚಕ್ರಮರಿಘಾತಿಧ್ವಂಸಜಾತಾ ನ ತೇ ।
ತೇನೇ ಜೇಯವಿಧೇಯಲೋಕನ್ಯಜಿನಾತಂಕವ್ಯಯಂ ತಚ್ಚ ತೇ ॥

ಈ ಶಾಸನಗಳ ಬಂಧಚಿತ್ರಗಳಿಗೆ ಪ್ರತಿಯೊಂದಕ್ಕೂ ''ಈ ಬಂಧವನ್ನು ಬೇರೆ ಪತ್ರದಲ್ಲಿ ನೋಡುವದು'' ಎಂಬುದಾಗಿ ಕೊನೆಗೆ ಸೂಚನೆಯಿದ್ದರೂ ಎಕ., ೭ನೆಯ ಸಂಪುಟದಲ್ಲಿ ಆ ಬಂಧಗಳನ್ನು ಕೊಟ್ಟಿರುವಂತೆ ಕಂಡು ಬರಲಿಲ್ಲ. ಇದಕ್ಕೆ ಕಾರಣ ತಿಳಿಯದು.

(vi) ೧೫೮೭ರ ಶಾಸನದಲ್ಲಿ ''ಇಂದ್ರವಜ್ರಾವೃತ್ತದಿಂದ ಚತುರ್ವಿಂಶತ್ಯಕ್ಷರ ಲಲಿತಪಂಚಾಕ್ಷರ ರೂಪ ಸರ್ವತೋಭದ್ರ ಚಿತ್ರಪ್ರಬಂಧದಿಂದ ರಚಿಸಿದ ಚಿತ್ರಶ್ಲೋಕ'' ಎಂದಿರುವ ಲಕ್ಷ್ಯ :

ಶ್ರೀ ವೀತವೀರಾಗತವೀಗವೀತಂ । ಶ್ರೀರಾಗವೀತಂ ಗತರಾಗರಾಗಂ ।
ಶ್ರೀಗಂ ತತಂ ರಾಗತರಾಂಗರಾಗಂ । ಶ್ರೀವೀತರಾಗಂ ತತವೀರಗಂತಂ ॥

ಈ ಲಕ್ಷ್ಯದಲ್ಲಿ ಶ, ವ, ತ, ರ, ಗ ಎಂಬ ಐದು ವಿಧದ ಅಕ್ಷರಗಳನ್ನೇ ಬಳಸಿರುವುದು ನಿಜ; ೨೪ ಅಕ್ಷರಗಳಿಂದ ಕೂಡಿದ್ದು ಎಂಬುದು ಸರಿಯಲ್ಲ. 'ಗತಿ'ಗೆ ಹೇಗೆ ಅಳವಡುವುದೋ ತಿಳಿಯದು.

'ಕವಿರಾಜಮಾರ್ಗ' 'ಕಾವ್ಯಾವಲೋಕನ'ಗಳಲ್ಲಿ ಗತಿಚಿತ್ರಗಳು

೧. ಗತಪ್ರತ್ಯಾಗತ

'ಕವಿರಾಜಮಾರ್ಗ'ದಲ್ಲಿ ದುಷ್ಕರ ಕಾವ್ಯಗಳು ಯಾವುವೆಂದು ಸೂಚಿಸುವ ಎರಡು ಪದ್ಯಗಳಲ್ಲಿ ಈಗಾಗಲೇ ಮದ್ರಾಸು ಪರಿಷ್ಕರಣಕರ್ತರು ಊಹಿಸಿರುವಂತೆ (೨-೧೧೧ರ ಅಡಿಟಿಪ್ಪಣಿ) ಮೊದಲನೆಯದು ಬಿಟ್ಟುಹೋಗಿರುವುದು ಸಂಭಾವ್ಯ. ಆ ಬಿಟ್ಟುಹೋಗಿರುವ ಪದ್ಯ ಹೀಗಿರಬಹುದೆಂದು ಅವರು ಊಹಿಸಿದ್ದಾರೆ :

ಗತಪ್ರತ್ಯಾಗತಂ ಗೂಢಚತುರ್ಥಂ ದ್ವ್ಯಕ್ಷರಾದಿಕಂ ।
ಅತಾಲವ್ಯಂ ನಿರೋಷ್ಠ್ಯಂ ಸರ್ವತೋಭದ್ರಂ ನಿರುತ್ತರಂ ॥

ಗ್ರಂಥಪಾತವಾಗಿರುವುದು ಸಂಭವನೀಯವೇ ಆದರೂ, ಹೀಗೆಯೇ ಪದ್ಯವಿತ್ತೆಂದು ಖಂಡಿತವಾಗಿ ಹೇಳಲಾಗದು ಎಂಬುದನ್ನು ಹಿಂದೆಯೇ ಸ್ಥಾನಚಿತ್ರಗಳ ವಿಷಯವನ್ನು ಕುರಿತಾಗ ಸೂಚಿಸಿದೆ. ಅಂತೂ ಈ ಲಕ್ಷಣಗ್ರಂಥದಲ್ಲಿ ದುಷ್ಕರಕಾವ್ಯಭೇದಗಳ ವಿವರಣೆ ತೊಡಗುವುದೇ ಗತಪ್ರತ್ಯಾಗತದಿಂದ. ಇದರ ಭೇದಗಳನ್ನು ಕರ್ತೃ ಹೀಗೆ ತಿಳಿಸಿದ್ದಾನೆ :

> ಪದ ಪಾದ ಸಮಸ್ತಾರ್ಥ[ಗತ] ಭೇದಚತುಷ್ಟಯಂ ।
> ವಿದಿತಾಳಂಕ್ರಿಯಾಧಾರಂ ಮೊದಲ್ ಪೇೞ್ದುದು ದುಷ್ಕರಂ ॥ (೨–೧೨೪)

ಪದಗತ, ಪಾದಗತ, ಸಮಸ್ತಗತ ಮತ್ತು ಅರ್ಥಗತ ಎಂಬ ನಾಲ್ಕು ಗತಪ್ರತ್ಯಾಗತ ಭೇದಗಳೆಂದು ಇದರಿಂದ ತಿಳಿಯುವುದು.

ಪದಗತ

> ಮುನ್ನಂ ತನ್ನಂ ತಾನೆ ತಾನೇ । ಕೆನ್ನಂ ಕೆನ್ನಂ ನಿರಂತರಂ ।
> ಭಿನ್ನಂ ಬಂದಿಪ್ಪನಂತಿನ್ನುಂ । ತನ್ನಿಂ ತನಗಮೇವಳೋ ॥ (೧೨೫)

ಕವಿರಾ.ದ ಮೂರು ಪರಿಷ್ಕರಣಗಳಲ್ಲಿಯೂ ಅಲ್ಪಸ್ವಲ್ಪ ವ್ಯತ್ಯಾಸದೊಂದಿಗೆ ಈ ಲಕ್ಷ್ಯಪದ್ಯದ ಪಾಠ ಬಲುಮಟ್ಟಿಗೆ ಇಲ್ಲಿ ಕೊಟ್ಟಿರುವಂತೆಯೇ ಇದೆ. ಆದರೆ ಲಕ್ಷಣಾನ್ವಿತವಾಗಿ ಈ ಪದ್ಯ? ಮೊದಲ ಅರ್ಧದಲ್ಲಿ ಯಮಕ ಲಕ್ಷಣವನ್ನು ಸ್ವಲ್ಪ ಕಾಣಬಹುದು. ಆದರೆ ಇಲ್ಲಿಯ ಅಕ್ಷರಸಂಯೋಜನೆ ಪದಗುಂಫಗಳಲ್ಲಾಗಲಿ ಪಾದಗಳಲ್ಲಾಗಲಿ ಅನುಲೋಮ ಪ್ರತಿಲೋಮಗಳಲ್ಲಿ ಒಂದೇ ಆಗಿರುವಂತೆ ಬಂದಿಲ್ಲ ಎನ್ನುವುದರಿಂದಾಗಿ ಪದ್ಯಪಾಠದಲ್ಲಿ ತಪ್ಪುಗಳುಂಟಾಗಿವೆಯೆಂದೇ ತಿಳಿಯಬೇಕಾಗಿದೆ. ಕವಿರಾ.ದ ಪರಿಷ್ಕರಣಕರ್ತರೂ ಇತರರೂ ಹಾಗೆಂದೇ ತಿಳಿದಿದ್ದಾರೆ. ಅರ್ಥಸಾಮಂಜಸ್ಯವೂ ತೋರುತ್ತಿಲ್ಲ.

'ಪದಗತ' ಎಂಬ ಭೇದವನ್ನು ದಂಡಿ ತಿಳಿಸಿಲ್ಲ; ಅದರ ಸ್ವರೂಪವೂ ತಿಳಿಯದು. ಈ ಭೇದವನ್ನು ಕವಿರಾಜಮಾರ್ಗಕಾರನೇ ಕಲ್ಪಿಸಿದನೋ, ಹೇಗೆ ಎನ್ನುವುದು ವಿಚಾರಣೀಯ.

ಪಾದಗತ

> ಪೀನಂ ಕಾಡು ಮದಕ್ಕೇಂ ಕೇಳನನೂನಳಿನಂ ಮದಾ ।
> ತಾನಿಂತಳಿಜನಂ ಕನಾ ... ನದೆಸನೆದೇನನಾ ॥ (೧೨೬)

ಕವಿರಾ.ದ ೧೯೩೦ರ ಪರಿಷ್ಕರಣದಂತೆ ಈ ಲಕ್ಷ್ಯಪದ್ಯವನ್ನು ಇಲ್ಲಿ ಉದ್ಧರಿಸಿದೆ. ಪದ್ಯ ತ್ರುಟಿತವಾಗಿರುವುದರ ಜೊತೆಗೆ ಅಧಿಕವಾಗಿ ವಿಕ್ಷಿಪ್ತವಾಗಿರುವುದು ಮೇಲುನೋಟದಲ್ಲಿಯೇ ತಿಳಿಯುವಂತಿದೆ. ಲಕ್ಷಣಸಮನ್ವಯ ಇಲ್ಲಿಯೂ ಸಾಧ್ಯವಿಲ್ಲ. ಮೂಲತಃ ಇಲ್ಲಿ ದಂಡಿಯ ನಿರೂಪಣೆಯ ರೀತಿಯ ಪಾದಗತ ಗತಪ್ರತ್ಯಾಗತದ ಲಕ್ಷಣ ಗೋಚರಿಸುವಂತೆ ಪದ್ಯಪಾಠವಿದ್ದಿರಬೇಕು ಎಂದು ತಿಳಿಯುವುದೂ ಕಷ್ಟವಿದೆ.

ಸಮಸ್ತಗತ

> ನಾದಭೇದನನಾದಾನಾ ನಾದಾನಾಮುದನೋದನಾ ।
> ನಾದನೋದಮುನಾದಾನಾ ನಾದಾನಾನದಭೇದನಾ ॥ (೧೨೭)

ಪಾಠಕ್ ಪರಿಷ್ಕರಣದ ಹೊರತಾಗಿ ಉಳಿದವುಗಳಲ್ಲಿ ಪದ್ಯಪಾಠ ಮೇಲಿನಂತಿದೆ. ಇಲ್ಲಿ ಪದ್ಯಪಾಠ ಲಕ್ಷಣಕ್ಕೆ ಒಂದು ರೀತಿಯಲ್ಲಿ ಸರಿಯಿರುವಂತೆ ತೋರುತ್ತದೆ. ಆದರೆ ಅರ್ಥ? ಮುಳಿಯ ತಿಮ್ಮಪ್ಪಯ್ಯನವರು "ಇದು ನೃಪತುಂಗನ ಅಲ್ಲವೆ ಒಬ್ಬ ಧನುರ್ವಿದ್ಯಾನಿಪುಣ ವೀರನ ವರ್ಣನೆಯಾಗಿರುವಂತೆ ತೋರುತ್ತಿದೆ. 'ನಾದಭೇದನನ್ ನಾನಾದಾನ(ದಿಂದ) ಆಮುದ(ಶಿಷ್ಯ)ರನ್ನು ನೋದನಾನ್ (ಪ್ರೋತ್ಸಾಹಿಸುವವನು) ಆದ ಆದಾನ (ಕರಗ್ರಹಣ) ಅನಾದಾನ (ಅಗ್ರಹಣ)ಗಳಿಂದ ನದಭೇದನಾ(ನ್) (ನದಿಯಲ್ಲಿ ಮೀಯುವವನು) ಆದನ್' ಎಂದು ಅರ್ಥವಾಗಿರಬಹುದು" ಎಂಬುದಾಗಿ ಬರೆದಿದ್ದಾರೆ.[1] ಈ ಅರ್ಥ ಸಮಂಜಸವಾಗಿರುವಂತೆ ತೋರುವುದಿಲ್ಲ. ಇದು ಹೇಗಿದ್ದರೂ,

ಲಕ್ಷಣಸಮನ್ವಯದ ವಿಚಾರ ಹೇಗೆ? ದಂಡಿ ಭೋಜದೇವರು ಕೊಡುವ 'ಶ್ಲೋಕಗತಪ್ರತ್ಯಾಗತ'ದ ಲಕ್ಷಣ ಇಲ್ಲಿ ಕಾಣಿಸುವುದಿಲ್ಲ. ಅನುಲೋಮ ಪ್ರತಿಲೋಮಗಳಿಂದ ಒಂದೊಂದು ಬೇರೆಯೇ ಶ್ಲೋಕವಾಗುವ ಲಕ್ಷಣ ಅಲ್ಲಿಯದು. ಇದು ಅದರಿಂದ ಭಿನ್ನವಾಗಿದ್ದು, ಅನುಲೋಮದ ಅಥವಾ ಯಥಾಕ್ರಮದ ಸಂಯೋಜನೆಯ ಪ್ರತಿಲೋಮದ ಅಥವಾ ವಿಪರೀತಕ್ರಮದ ಸಂಯೋಜನೆಯೂ ಏಕರೀತಿಯದಾಗಿ ನಡೆಯುವಂತೆ ಇರುವುದು ಇಲ್ಲಿ ಕಾಣುತ್ತದೆ. ರುದ್ರಟನು ನಿರೂಪಿಸಿರುವ 'ಪ್ರತಿಲೋಮಾನುಲೋಮಪಾಠ'ವೆಂಬ ಗತಪ್ರತ್ಯಾಗತ ವೈಚಿತ್ರ್ಯಕ್ಕೆ ಸದೃಶವಾಗಿರುವ ನಿದರ್ಶನವಿದು. ಈ ಭೇದದ ಕಲ್ಪನೆ, ದಂಡಿಯಲ್ಲಿಲ್ಲದ್ದು, ಕವಿರಾಜಮಾರ್ಗಕಾರನಿಗೆ ಹೇಗೆ ಮೂಡಿತೋ ವಿಚಾರಣೀಯವಾದ್ದು.

ಅರ್ಧ(ಶ್ಲೋಕಾರ್ಧ)ಗತ (?)

→ ←
ನಾನಮಾನಮಸೇನಾಸೇ । ಸೇನಾಸೇಮನಮಾನನಾ ।
→ ←
ದೀನಮಾನಮನಾನಾದೀ । ದೀನಾನಾಮನಮಾನದೀ ॥ (೧೧೮)

ಪಾಠಕ್ ಅವರ ಪರಿಷ್ಕರಣ ಹೊರತಾಗಿ, ಉಳಿದವುಗಳಲ್ಲಿ ಪದ್ಯಪಾಠ ಸಮಾನವಾಗಿ ಮೇಲೆ ಕೊಟ್ಟಿರುವಂತೆಯೇ ಇದೆ. ಆದರೆ ಅರ್ಥ ಮತ್ತು ಲಕ್ಷಣಸಮನ್ವಯ ಎರಡೂ ತೊಡರಿಕೊಳ್ಳುವ ಸಂಗತಿಗಳೇ. ಅರ್ಥ ಏನಾದರಿರಲಿ, ಲಕ್ಷಣವೇನೋ ಈಗಿರುವಂತೆ ೧ನೆಯ ಪಾದ ಅನುಲೋಮದಲ್ಲಿ ನಡೆದರೆ, ಎರಡನೆಯ ಪಾದದಲ್ಲಿ ಅದರ ಪ್ರತಿಲೋಮದ ನಡೆಯನ್ನು ಕಾಣಬಹುದು; ೩ನೆಯ ಪಾದ ಅನುಲೋಮದಲ್ಲಿ ನಡೆದರೆ, ೪ನೆಯ ಪಾದದಲ್ಲಿ ಅದರ ಪ್ರತಿಲೋಮದ ನಡೆಯನ್ನು ಕಾಣಬಹುದು. ಇದು ದಂಡಿ ಮೊದಲಾದವರು ವಿವರಿಸಿರುವ ಶ್ಲೋಕಾರ್ಧ ಗತಪ್ರತ್ಯಾಗತದ ಸ್ವರೂಪದಿಂದ ಭಿನ್ನವಾದ್ದು; ವಾಸ್ತವವಾಗಿ ಇದು ಪಾದಗತದ ಲಕ್ಷಣವನ್ನೇ ಉಳ್ಳ ಲಕ್ಷ್ಯ. ಒಂದು ಪಕ್ಷ ೨–೧೧೪ರ ಸೂತ್ರಪದ್ಯದಲ್ಲಿ ''ಪದ ಪಾದ ಸಮಸ್ತಾ[ರ್ಥಾಂ]ತ[ರ] ಭೇದಚತುಷ್ಟಯಂ'' ಎಂಬುದಾಗಿ ಮೂಲಪಾಠವಿದ್ದುದು ನಿಜವಾದರೆ 'ಅರ್ಥಾಂತರ' ಎಂಬ ಭೇದದ ಗತಪ್ರತ್ಯಾಗತವೆಂದು ಹೇಳಲು ಅವಕಾಶವುಂಟೇ ? ಇದನ್ನಾದರೂ ತಕ್ಕಂತೆ ವಿಮರ್ಶಿಸಲು ಪದ್ಯಪಾಠದಿಂದ ಸರಿಯಾದ ಅರ್ಥವೇ ಹೊರಡುತ್ತಿಲ್ಲ. ಈ ವಿಷಯದಲ್ಲಿ ತಿಮ್ಮಪ್ಪಯ್ಯನವರ ಸೂಚನೆಯಾಗಲಿ, ಸೀತಾರಾಮಯ್ಯನವರ ವಿವರಣೆಯಾಗಲಿ[೨] ಸಹಾಯಮಾಡುವಂತಿಲ್ಲ.

ಇವನ್ನು ಗಮನಿಸಿದಾಗ 'ಕವಿರಾಜಮಾರ್ಗ'ದ ಯಾವ 'ಗತಪ್ರತ್ಯಾಗತ'ದ ಭೇದವೂ ಆ ಗ್ರಂಥಕ್ಕೆ ಮೂಲವಾದ 'ಕಾವ್ಯಾದರ್ಶ'ದಲ್ಲಿ ನಿರೂಪಿತವಾಗಿರುವ ಆ ಗತಿಚಿತ್ರದ ಸದೃಶಭೇದಗಳೊಂದಿಗೆ ಹೋಲದೆ ಇರುವುದು ಸ್ಪಷ್ಟವಾಗುತ್ತದೆ. ಅಲ್ಲಿ ಹೇಳಿರದ ಪದಗತ ಎಂಬುದು ಇಲ್ಲಿದೆ; ಅಲ್ಲಿಯ ಪಾದಗತ ಇಲ್ಲಿ ಹೇಗೆ ನಿರೂಪಿತವಾಗಿದೆ ಎಂದು ತಿಳಿಯುವುದಕ್ಕೆ ಸಾಧ್ಯವಾಗದಂತೆ ಪಾಠದೋಷಗಳಿಂದ, ತ್ರುಟಿತಭಾಗದಿಂದ ಇಲ್ಲಿ ಪದ್ಯಸ್ವರೂಪ ವಿಕ್ಷಿಪ್ತಗೊಂಡಿದೆ; ಅಲ್ಲಿಯ ಶ್ಲೋಕಗತ, ಇಲ್ಲಿಯ ಸಮಸ್ತಗತ ಭಿನ್ನಸ್ವರೂಪದವಾಗಿವೆ; ಅಲ್ಲಿಯ ಶ್ಲೋಕಾರ್ಧಗತ ಇಲ್ಲಿಯ ಅರ್ಧಗತ ಭಿನ್ನವಾಗಿರುವುದು ಮಾತ್ರವೇ ಅಲ್ಲದೆ, ಅಲ್ಲಿಯ ಪಾದಗತದಂತೆಯೇ ಇಲ್ಲಿಯ ಅರ್ಧಗತ ತೋರುತ್ತಿದೆ. ಪದ್ಯಪಾಠದ ಕ್ಲೇಶಗಳೂ ದೋಷಗಳೂ ಪರಿಹಾರವಾದಲ್ಲದೆ ಈ ಬಗ್ಗೆ ನಿರೂಪಣೆ ಸಮರ್ಪಕವಾಗಿರುವುದು ಶಕ್ಯವಿಲ್ಲ.

'ಕಾವ್ಯಾವಲೋಕನ'ದಲ್ಲಿ ಚಿತ್ರಗಳೆಂಬವು ಯಾವುವು ಎನ್ನುವುದನ್ನು ಸೂತ್ರ ೧೩೯ರಲ್ಲಿ ಹೇಳುತ್ತ 'ಪ್ರತಿನಿಯತಗತಪ್ರತ್ಯಾಗತ'ವನ್ನು ಸಹ ಅಲ್ಲಿ ಸೇರಿಸಿದೆ. ಸೂತ್ರದಲ್ಲಿ ಹೇಳಿರುವ ಅನುಕ್ರಮವನ್ನು ಹಿಡಿದು ಕೊನೆಯಲ್ಲಿ ಗತಪ್ರತ್ಯಾಗತದ ಒಂದು ಲಕ್ಷ್ಯವನ್ನು ನಾಗವರ್ಮ ಸೇರಿಸಿದ್ದಾನೆ. ಪ್ರಭೇದಗಳನ್ನಾಗಲಿ, ಅವುಗಳ ಲಕ್ಷಣ ಲಕ್ಷ್ಯಗಳನ್ನಾಗಲಿ, ಸಂಸ್ಕೃತ ಆಲಂಕಾರಿಕರನ್ನು, ಆತನು ಅನುಸರಿಸಿದ ದಂಡಿ ರುದ್ರಟರ ಮಟ್ಟಿಗಾದರೂ, ಆಶ್ರಯಿಸಿ ನಿರೂಪಿಸಿಲ್ಲದಿರುವುದು ಏಕೋ ತಿಳಿಯದು. ಮಿತವ್ಯಯದ ದೃಷ್ಟಿಯಿಂದ ಒಂದು ಮಾದರಿಯನ್ನಷ್ಟೇ

ಹೇಳಿರಬಹುದು; ಇಲ್ಲವೆ ಕನ್ನಡದಲ್ಲಿ ಈ ಬಗೆಯ ನಿದರ್ಶನಗಳು ಹೆಚ್ಚಾಗಿ ಇಲ್ಲವೆಂಬುದಕ್ಕಾಗಿಯೂ ಹೀಗೆ ಮಾಡಿರಬಹುದು. ನಾಗವರ್ಮನು ಕೊಡುವ ಲಕ್ಷ್ಯ :

> ತಾರವೀವೀರತಾಸಾರ । ಸೀರಸಾಕಾರಸಾರಕಾ ।
> ತಾರನಾನಾರತಾಕಾರ । ಕಾರಕಾತಾರಕಾರತಾ ॥ (ಪ. ೫೯೨)

''ಈ ಶ್ಲೋಕದಲ್ಲಿ ತಪ್ಪು ಬಿದ್ದಿರುವ ಹಾಗೆ ತೋರುತ್ತದೆ'' ಎಂದು ಆರ್. ನರಸಿಂಹಾಚಾರ್ಯರು 'ಕಾವ್ಯಾವಲೋಕನ'ದ ತಮ್ಮ ೧೯೦೩ರ ಪರಿಷ್ಕರಣದಲ್ಲಿ ಭಾವಿಸಿದ್ದಾರೆ. ''ಓಲೆಯ ಪ್ರತಿಯಲ್ಲಿ ಈ ಶ್ಲೋಕವೇ ಇಲ್ಲ'' ಎಂಬುದಾಗಿ ಎಚ್. ಆರ್. ರಂಗಸ್ವಾಮಿ ಅಯ್ಯಂಗಾರ್ ಅವರು ಇದೇ ಗ್ರಂಥದ ೧೯೩೩ರ ಪರಿಷ್ಕರಣದಲ್ಲಿ ಹೆಚ್ಚಿನ ಮಾತು ಸೇರಿಸಿದ್ದಾರೆ. ಕವಿರಾ.ದ ಸಮಸ್ಯೆಯೇ ಇಲ್ಲಿಯೂ ತಲೆಹಾಕುತ್ತಿದೆಯೆಂದು ಇದರಿಂದ ಹೇಳಬೇಕಾಗಿ ಬಂದಿದೆ. ಇರುವಂತೆ ಇಲ್ಲಿಯ ಅಕ್ಷರಸಂಯೋಜನೆಯಲ್ಲಿ, ಅನುಲೋಮ ಪ್ರತಿಲೋಮಗಳ ವಾಚನದಲ್ಲಿ ಐಕ್ಯವೇ ತೋರುವುದಿಲ್ಲ. ಯಾವ ಪ್ರಭೇದವನ್ನೂ ಇಲ್ಲಿ ಗುರುತಿಸಲು ಸಾಧ್ಯವಾಗದೆ ಇದೆ. ಅರ್ಥ ಸಾಮಂಜಸ್ಯವೂ ತೋರದಿರುವುದು ಕ್ಲೇಶವನ್ನು ಹೆಚ್ಚಿಸುತ್ತಿದೆ.

ಈಚೆಗೆ ದಂಡಿಯ 'ಕಾವ್ಯಾದರ್ಶ'ವನ್ನು ಅನುವಾದಿಸಿದ ಮಾಧವನು ತನ್ನ 'ಮಾಧವಾಲಂಕಾರ'ದಲ್ಲಿ ಗತಪ್ರತ್ಯಾಗತವನ್ನು ಸಹಜವಾಗಿಯೇ ಕುರಿತಿದ್ದಾನೆ.

> ಪ್ರತಿ[ಲೋ]ಮತೆಯಿಂದಕ್ಷರ । ವಿತತಿಗಳಾವೃತ್ತಿ ನಾಮದಿಂದಂ ಯಮ[ಕ] ।
> ಪ್ರತಿಲೋಮ[ವ]ದಂತಕ್ಕುಂ । [ಗ]ತಪಾದದೊಳರ್ಥದೊಳ್ತರಂ ಪ್ರಕಟಿಸುಗುಂ ॥ (೩–೫೪)

ಇದು 'ಕಾವ್ಯಾದರ್ಶ'ದ ಸದೃಶ ಭಾಗದ

> ಆವೃತ್ತಿಃ ಪ್ರಾತಿಲೋಮ್ಯೇನ । ಪಾದಾರ್ಧಶ್ಲೋಕಗೋಚರಾ ।
> ಯಮಕಂ ಪ್ರತಿಲೋಮತ್ವಾತ್ । ಪ್ರತಿಲೋಮಮಿತಿ ಸ್ಮೃತಂ ॥ (೩–೭೩)

ಎಂಬ ಶ್ಲೋಕದ ಅನುವಾದವಾಗಿರುವಂತೆ ತೋರುತ್ತದೆ. ಅನುವಾದಿತ ಪದ್ಯಪಾಠ, ಈ ಗ್ರಂಥದ 'ಚಿತ್ರ' ನಿರೂಪಣೆಯ ಇತರ ಪದ್ಯಪಾಠಗಳು ಹೇಗೋ ಹಾಗೆಯೇ ಕೆಟ್ಟಿರುವುದರಿಂದ ಮೂಲದ ಆಶಯ ಅಲ್ಲಿ ಸರಿಯಾಗಿ, ಸಮಗ್ರವಾಗಿ ಮೂಡಿಲ್ಲವೆನ್ನಬೇಕು. ''ಪ್ರತಿಲೋಮತೆಯಿಂದ ಅಕ್ಷರಸಮೂಹಗಳ ಆವೃತ್ತಿ 'ಪ್ರತಿಲೋಮ ಯಮಕ'ವೆಂಬ ಹೆಸರನ್ನು ಪಡೆದುಕೊಳ್ಳುತ್ತದೆ. ಅದು ಪಾದದಲ್ಲಿ, ಪದ್ಯಾರ್ಧದಲ್ಲಿ; ಕ್ರಮವಾಗಿ ಕಾಣಿಸಿಕೊಳ್ಳುತ್ತದೆ''—ಹೀಗೆ ಪದ್ಯದ ಅರ್ಥವನ್ನು ತಾತ್ಕಾಲಿಕವಾಗಿ ಹೇಳಬಹುದು. ಶ್ಲೋಕಗತ ಅಥವಾ ಸಮಸ್ತಗತ ಎಂದು ಹೇಳಬಹುದಾದ ಕೊನೆಯ ಪ್ರಭೇದದ ಸೂಚನೆ ಸೂತ್ರಪದ್ಯದಲ್ಲಿ ಹೊರಡುತ್ತಿಲ್ಲ. ಇದಕ್ಕೆ ಕಾರಣವೇನೋ ತಿಳಿಯದು.

ಇದಕ್ಕೆ ಅಲ್ಲಿಯೇ ಮುಂದೆ ಕೊಟ್ಟಿರುವ ಲಕ್ಷ್ಯಪದ್ಯವಿದು :

> ತಾರಾ ಮಾರನೆ ನೀರಂ ಗಾಗಾರಾನೀನೆ ರಮಾರತಾ। ತೀರ ಪಾವನಪಾಧೀರ ಸಾರಸನಿರಾಜಾ ।
> ಮಾರಕಾರವನಿರತಾ ತಾರಾ ನಿವರಕಾರಾ । ಮಾಜಾರಾನಿಪರ ಸಾರಧೀ ॥ (೩–೫೫)

ಇಲ್ಲಿ ಛಂದೋದೋಷ ಅರ್ಥಕ್ಲೇಶಗಳು ಎದ್ದು ತೋರುವ ಹಾಗೆ ಪಾಠ ಅಶುದ್ಧವಾಗಿರುವುದು ಸುವಿದಿತ. ಮೊದಲ ಪಾದವೇನೋ, ''ತಾರಾ ಮಾರನೆ ನೀ ರಾಗಂ । ಗಂರಾ ನೀನೆರಮಾ[ರಾ]ತಾ ॥'' ಎಂದು ಒಂದು ಪಕ್ಷ ಇದ್ದುದಾದರೆ, ''ಮಾರನೆ, ನೀನು ರಾಗವನ್ನು ಉಂಟುಮಾಡು'' ಎಂಬ ಆಶಯದೊಡನೆ 'ಪಾದಗತ ಗತಪ್ರತ್ಯಾಗತ'ವಾಗಲು ಸಾಧ್ಯ. ಆಗಲೂ ಎರಡನೆಯ ಪಾದ ಅನುಲೋಮವಾಚನದಲ್ಲಿ ವ್ಯರ್ಥಪಾದವಾಗಿ ತೋರುವುದು ಏಕೆ ಎಂಬುದಕ್ಕೆ ಉತ್ತರ ಹೇಳುವುದು ಕಷ್ಟವೇ. ಅಂತೂ ಕನ್ನಡ ಲಕ್ಷಣಗ್ರಂಥಗಳ ಗತಪ್ರತ್ಯಾಗತದ ಲಕ್ಷ್ಯವಾವುದೂ ಸಮರ್ಪಕವಾಗಿಲ್ಲದಿರುವುದಕ್ಕೆ ವಿಷಾದಿಸಬೇಕಾಗಿದೆ.

ಈಚೆಯ 'ಅಪ್ರತಿಮವೀರಚರಿತೆ'ಯಲ್ಲಾಗಲಿ, 'ನರಪತಿಚರಿತ'ದಲ್ಲಾಗಲಿ ಗತಿಚಿತ್ರಗಳ ಪ್ರಸ್ತಾವವೇ ಇಲ್ಲ; ಆದ್ದರಿಂದ 'ಗತಪ್ರತ್ಯಾಗತ'ವನ್ನೂ ಅಲ್ಲಿ ನಿರೀಕ್ಷಿಸುವಂತಿಲ್ಲ.

೨. ಗೋಮೂತ್ರಿಕೆ

'ಕವಿರಾಜಮಾರ್ಗ'ದಲ್ಲಿ ದುಷ್ಕರಕಾವ್ಯ ಪ್ರಕಾರಗಳ ಹೆಸರುಗಳನ್ನು ಉಲ್ಲೇಖಿಸುವ ಪದ್ಯವೊಂದರಲ್ಲಿ (೨-೧೧೨), ಈಗ ತ್ರುಟಿತವಾಗಿರುವ ಭಾಗದಲ್ಲಿ ''[ಗೋಮೂತ್ರಿಕಂ ಸ]ಯಮಕಂ'' ಎಂದು ಗೋಮೂತ್ರಿಕೆಯನ್ನು ಉಲ್ಲೇಖಿಸಿದ ಪಾಠ ಮೂಲದಲ್ಲಿ ಇದ್ದಿರಬೇಕೆಂದು ಮದ್ರಾಸು ಪರಿಷ್ಕರಣದ ಸಂಪಾದಕರು ಭಾವಿಸಿದ್ದಾರೆ; ಬೆಂಗಳೂರು ಪರಿಷ್ಕರಣದ ಸಂಪಾದಕರು ಅದನ್ನು ಒಪ್ಪಿದ್ದಾರೆ. ಇದೊಂದು ಸಂಭಾವ್ಯವಾದ ಊಹಾಪರಿಷ್ಕರಣ. ಈಗ ಲಕ್ಷ್ಯಪದ್ಯವನ್ನು ನೋಡೋಣ :

ಜಲದಾಗಮದಿಂ ಚಿತ್ತಸ್ಖಲಿತಂ ಕೇಕಿನರ್ತನಂ ।
ಜಲದಾಗಮದಿಂ ಚಿತ್ತಸ್ಖಲಿತಂ ಕೇಳ ನಲ್ಲನಂ ॥ (೨–೧೨೮)

''ಮಳೆಗಾಲದಿಂದ ಚಿತ್ತಚಾಂಚಲ್ಯ, ನವಿಲುಗಳ ಕುಣಿತ; ಮಳೆಗಾಲದಿಂದ (ನನಗೆ) ಚಿತ್ತಚಾಂಚಲ್ಯ (ಉಂಟಾಗುತ್ತಿದೆ); (ಆದ್ದರಿಂದ) ನಲ್ಲನನ್ನು ವಿಚಾರಿಸು.''

ಇಲ್ಲಿ ಹೇಳತಕ್ಕ ಹೆಚ್ಚಿನ ಮಾತೊಂದುಂಟು. ಮದ್ರಾಸು ಪರಿಷ್ಕರಣದಲ್ಲಿ ಈ ಲಕ್ಷ್ಯಪದ್ಯದ ೩-೪ ನೆಯ ಪಾದಗಳನ್ನು ''[ಜಳದಾಗಮದಿಂ ಚಿತ್ತಸ್ಖಲಿತಂ ಕೇಕಿ ನರ್ತನಂ]'' ಎಂಬುದಾಗಿ ಸಂಪಾದಕೀಯ ಪಾಠವಾಗಿ ಸ್ವೀಕರಿಸಿದೆ. ಇದು ಹಸ್ತಪ್ರತಿಗಳ ಆಧಾರದಿಂದ ಪೋಷಿತವಾದುದಲ್ಲ; ಅಲ್ಲದೆ ಈ ಸಂಪಾದಕೀಯ ಪರಿಷ್ಕರಣ ಅನಾವಶ್ಯಕವೂ ಹೌದು. ಛಂದಸ್ಸು, 'ಚಿತ್ರ'ದ ಉದ್ಧಾರಕ್ರಮ ಇವುಗಳ ದೃಷ್ಟಿಯಿಂದಲೂ ಪದ್ಯಾರ್ಥದ ದೃಷ್ಟಿಯಿಂದಲೂ ಪಾಠಕ್ ಪರಿಷ್ಕರಣದ ಪದ್ಯಪಾಠ ತೃಪ್ತಿಕರವಾಗಿಯೇ ಇದೆ. ಇದರ ಉದ್ಧಾರಕ್ರಮ ಹೀಗೆ :



ಗತಿ ೨೩

'ಕಾವ್ಯಾವಲೋಕನ'ದಲ್ಲಿ 'ಕವಿರಾಜಮಾರ್ಗ'ದ ಅನುಕ್ರಮವನ್ನೇನೂ ಹಿಡಿಯದೆ, ಶರದಿಂದ ಮುರಜದ ವರೆಗೆ ಬಂಧಚಿತ್ರಗಳನ್ನು ನಿರೂಪಿಸಿದ ಬಳಿಕ ''ಮುರಜಂ ಅರ್ಧಪ್ರಸ್ತಾರದಿಂ ಗೋಮೂತ್ರಿಕೆಯಕ್ಕುಂ'' ಎಂಬ ಸೂಚನೆಯ ಮೂಲಕ ಮುರಜದಿಂದ ಹೊರಡಿಸಬಹುದಾದ ಒಂದು ವಿವಿಧೋದ್ದೇಶದ ಗೋಮೂತ್ರಿಕೆಯನ್ನು ನಿರ್ದೇಶಿಸಿಯೂ, ಆ ಬಳಿಕ ಕಂದಪದ್ಯವಾಗಿರುವ ಒಂದು ಸ್ವತಂತ್ರವಾದ ಗೋಮೂತ್ರಿಕೆಯನ್ನು ನಿರ್ದೇಶಿಸಿಯೂ ಈ ಗತಿಚಿತ್ರವನ್ನು ನಿರೂಪಿಸಿರುವುದು ಕಾಣುತ್ತದೆ. ಆದ್ದರಿಂದ ಎರಡೂ ಗಮನಾರ್ಹವಾದ ರಚನಾವೈಶಿಷ್ಟ್ಯವುಳ್ಳವು.

(i) ಮುರಜವು ಅರ್ಧಪ್ರಸ್ತಾರದಿಂದ ಗೋಮೂತ್ರಿಕೆಯಾಗುವುದು :

ಅಜಾತಶಂಖಂ ತಾನಾಪ್ತ । ನಜಂಗಮನಸೂಯನಂ ।
ಗಜಾಂಕುಶಂ ಗತಾಪ್ರಾಪ್ತ । ವಿಜಯಂ ಮಧುಸೂದನಂ ॥ (ಪ. ೩೭೭)

ಈ ಪದ್ಯದ ಸಂದರ್ಭವೇನೋ ತಿಳಿಯದು. ಇದರ ಸಾಮಾನ್ಯವಾದ ಅರ್ಥವು ಬಹುಶಃ ಹೀಗೆ : "ಮಧುಸೂದನನು ವಿಷ್ಣುವಿನ ಶಂಖ (ಎನ್ನುವಂತಿರುವವನು); ಬ್ರಹ್ಮನಿಗೆ ಕೂಡ ಆಪ್ತನಾಗಿರುವವನು; ಅಸೂಯಾವಿರಹಿತನು; ಮನ್ಮಥನಿಗೆ ಅಂಕುಶದಂತಿರುವವನು; ವಿಜಯಲಾಭವುಳ್ಳವನು."

ಮುರಜದಂತೆ ಈ ಲಕ್ಷ್ಯಪದ್ಯದ ಉದ್ಧಾರ ಕ್ರಮವನ್ನು ಬಂಧಚಿತ್ರಗಳ ಭಾಗದಲ್ಲಿ ಗಮನಿಸಬಹುದು; ಇಲ್ಲಿ ಗೋಮೂತ್ರಿಕದ ರಚನೆಯನ್ನು ಮಾತ್ರ ಗಮನಿಸಬಹುದು. 'ಅರ್ಧಪ್ರಸ್ತಾರ'ವೆಂದರೆ ಏನು? 'ಮುರಜ'ದ ಉದ್ಧಾರಕ್ರಮದಲ್ಲಿ ನಾಲ್ಕು ಸಾಲುಗಳ ರಚನೆ ಅವಶ್ಯವಾಗಿರುತ್ತದೆ; 'ಗೋಮೂತ್ರಿಕೆ'ದ ಉದ್ಧಾರಕ್ರಮದಲ್ಲಿ ಎರಡು ಸಾಲುಗಳ ರಚನೆ ಸಾಕಾಗುತ್ತದೆ. ಬಹುಶಃ ಈ ಕಾರಣಕ್ಕಾಗಿಯೇ 'ಅರ್ಧಪ್ರಸ್ತಾರ' ಎಂದಿರಬಹುದು.

(ii) ಸ್ವತಂತ್ರವಾದ ಗೋಮೂತ್ರಿಕೆ :

ಸಂಸ್ಕೃತ ಭಾಷೆಯ ಲಕ್ಷಣ ಮತ್ತು ಸಾಹಿತ್ಯ ಗ್ರಂಥಗಳಲ್ಲಿ ಶ್ಲೋಕರೂಪವಾಗಿರುವುದರ ಪ್ರತಿಯಾಗಿ, ನಾಗವರ್ಮ ಕಂದಪದ್ಯದಲ್ಲಿ ಗೋಮೂತ್ರಿಕೆಯನ್ನು ರಚಿಸಿರುವುದು ವಿಶೇಷವಾಗಿ ಉಲ್ಲೇಖಿಸಬಹುದಾದ ಸಂಗತಿ. ಇದಕ್ಕೆ ಹೆಚ್ಚಿನ ಪ್ರಯತ್ನ ಕೌಶಲಗಳು ಬೇಕಾಗುವುದು ಸಹಜವೇ. ಶ್ಲೋಕ ಛಂದಸ್ಸಿನಲ್ಲಿರುವ ಹಾಗೆ ಮಾತ್ರಾವೃತ್ತವಾಗಿರುವ ಕಂದಪದ್ಯದಲ್ಲಿ ಅಕ್ಷರಗಳ ಸಂಖ್ಯೆ ನಿಯಮಿತವಾದುದೇನಲ್ಲ; ಹೀಗಿದ್ದೂ ರಚನೆಯ ಉದ್ದೇಶವನ್ನೂ ಉದ್ಧಾರಕ್ರಮವನ್ನೂ ದೃಷ್ಟಿಯಲ್ಲಿಟ್ಟುಕೊಂಡು ನಾಗವರ್ಮ ಪದ್ಯದ ಒಂದೊಂದು ಅರ್ಧಕ್ಕೂ ೨೪ ಅಕ್ಷರಗಳೇ ಬರುವ ಹಾಗೆ, ಆ ಅಕ್ಷರಗಳ ಸಂಯೋಜನೆಯಲ್ಲಿ ಸಹ ಪರ್ಯಾಯಸ್ಥಾನಗಳಲ್ಲಿ ಏಕರೂಪವಾದ ವರ್ಣಗಳೇ ಆವೃತ್ತಿಗೊಳ್ಳುವ ಹಾಗೆ ನೋಡಿಕೊಂಡಿದ್ದಾನೆ.

ಉರುತರ ಸಿತಕೀರ್ತಿಗುಣಾ । ಕರಂ ಪದಾನತವಿರೋಧಿವರ್ಗಂ ನೆಗಳ್ದಂ ॥
ಸುರುಚಿರನುತಮೂರ್ತಿ ಘೃಣಾ । ಪರಂ ಸದಾ ಹಿತಕರೋಕ್ತಿದುರ್ಗಂ ಜಗದೊಳ್ ॥ (ಪ. ೫೭೮)

ಈ ಲಕ್ಷ್ಯಪದ್ಯವನ್ನು ಪರಿಶೀಲಿಸಿದರೆ, ಪದ್ಯದ ಉತ್ತರಾರ್ಧದ ೨೦ನೆಯ ಅಕ್ಷರವು ಪೂರ್ವಾರ್ಧದ ೨೦ನೆಯ ಅಕ್ಷರದ ಆವೃತ್ತಿಯೇ ಆಗಿರಬೇಕಾದ್ದು, ಆಗದೆ ನಿಯಮದ ಉಲ್ಲಂಘನೆಯಾಗಿದೆ; ಎಂದರೆ ವ–ವ ಎಂದಿರುವುದರ ಪ್ರತಿಯಾಗಿ ವ–ದು ಎಂದಾಗಿದೆ.[3] ಇದರಿಂದ ಪಾಠದೋಷವೇನಾದರೂ ಉಂಟೇ ಎಂದು ಸಂಶಯ ಸುಳಿಯುವುದು ಸಹಜ. ಆದರೆ ಈ ಪದ್ಯದಲ್ಲಿ ಪಾಠದೋಷವೇನೂ ಇಲ್ಲ. ವಿಹಿತವಾದ ಅರ್ಥವನ್ನು ಈಗಿರುವ ಪದ್ಯಪಾಠವೇ ಕೊಡುತ್ತಿದೆಯೆಂಬುದರಿಂದ, ಪಾಠಾಂತರಗಳಾವುವೂ ಇಲ್ಲದಿರುವುದರಿಂದ, ಆ ಸಂಶಯವನ್ನು ತಳ್ಳಿಹಾಕಬಹುದು. ಕವಿ ಸ್ವಲ್ಪಮಟ್ಟಿಗೆ ಸ್ವಾತಂತ್ರ್ಯವಹಿಸಿ, ೨ ಸ್ಥಾನಗಳನ್ನು ದಾಟಿ ಅಕ್ಷರಾವೃತ್ತಿಲಕ್ಷಣವನ್ನು ಪಾಲಿಸಿದ್ದಾನೆಂದು ತಿಳಿದರೆ ತಪ್ಪಲ್ಲ. ಈವರೆಗೆ ನೋಡಿದ ಗೋಮೂತ್ರಿಕದ ಲಕ್ಷ್ಯಪದ್ಯಗಳಲ್ಲಿಯೇ ಅಕ್ಷರಾವೃತ್ತಿಯಲ್ಲಿ ಸೂಕ್ಷ್ಮವಾದ ವ್ಯತ್ಯಾಸಗಳನ್ನು ಕವಿಗಳು ತಂದಿರುವುದನ್ನು ಕಾಣಬಹುದಾಗಿದೆ.

'ಮಾಧವಾಲಂಕಾರ'ದಲ್ಲಿ ಗೋಮೂತ್ರಿಕೆಯನ್ನು ಕುರಿತ ಸೂತ್ರ ಅಪಪಾಠಗಳ ದೆಸೆಯಿಂದ ವಿಕ್ಷಿಪ್ತಗೊಂಡಿದೆ. ಅದನ್ನು ತಕ್ಕಮಟ್ಟಿಗೆ ಹೀಗೆ ಪರಿಷ್ಕರಿಸಬಹುದು :

ಎರಡರ್ಧಂಗಳೆ ಗೀತಾಂ । ತರಮಾಗಿಯೆಯೆಯೇಕರೂಪಮಾಗಿರೆ ನೋಡಲ್ ।
ನಿರುತಂ ವರ್ಣಾಳಿಗೆ ದು । ಷ್ಕರಮದು ಗೋಮೂತ್ರಿಕಾಭಿಧಾನವನಾಳ್ಗಂ ॥ (೩–೫೬)

ಈ ಸೂತ್ರಪದ್ಯ 'ಕಾವ್ಯಾದರ್ಶ'ದಲ್ಲಿರುವ ಇದೇ ವಿಷಯದ, ಈಗಾಗಲೇ ನೋಡಿರುವ, ಸೂತ್ರಪದ್ಯದ (೩–೭೮) ಅನುವಾದವಾಗಿರುವುದು ವಿದಿತವೇ ಇದೆ. ಇಲ್ಲಿಯ ಲಕ್ಷ್ಯಪದ್ಯವೂ ಅಶುದ್ಧಪಾಠದ ದೆಸೆಯಿಂದ ಉದ್ಧಾರಕ್ರಮಕ್ಕೆ ಅಳವಡದೆ ಇದೆ. ಸಾಮಾನ್ಯವಾದ ತಪ್ಪುಗಳನ್ನು ತೆಗೆದರೆ, ಈ ಪದ್ಯವನ್ನು ಈ ರೂಪದಲ್ಲಿಡಬಹುದು :

ಪಾರಾವಾರಧೀರಂ ಭೂರಾಜಂ ರುಚಿರಾಕಾರಂ ಮಾರಾ ।
ಕಾರಂ ಧೀರಂ ಹಾರಾಳಿರುಚಿಗಳಿಂದೆ ರುಚಿಚಾರಂ ॥ (೩–೫೭)



ಗತಿ ೨೬



ಗತಿ ೨೫

ಪದ್ಯಪಾಠದಲ್ಲಿ ಶಬ್ದರೂಪಗಳು ''ಪಾರಾವಾರಧೀರಾ ಭೂರಾಜಾ....'' ಎಂದು ಮುಂತಾಗಿ ಸಂಬೋಧನ ಪರವಾಗಿ ಮೂಲದಲ್ಲಿ ಇದ್ದಿರಲೂಬಹುದು. ಇರುವಂತೆ ಅರ್ಥ ''ಸಮುದ್ರದಂತೆ ಧೀರನು, ಭೂಮಂಡಲಸ್ವಾಮಿ, ಮನೋಹರವಾದ ಆಕೃತಿಯುಳ್ಳವನು, ಮನ್ಮಥ ಸ್ವರೂಪನು, ಶೂರನು, ಹಾರಗಳ ಕಾಂತಿಯಿಂದ ಶೋಭಿಸುವವನು'' ಎಂದು ಭಾವಿಸಬಹುದು.

ಪ್ರಸ್ತುತ, ಗೋಮೂತ್ರಿಕದ ಉದ್ಧಾರಕ್ರಮವನ್ನು ನೋಡಿದರೆ, ಲಕ್ಷಣ ಕೂಡುವುದಿಲ್ಲವಾದ್ದರಿಂದ, ಇಲ್ಲಿ ಉದ್ಧಾರಕ್ರಮವನ್ನು ಬರೆದಿಲ್ಲ. ಆರಂಭ ಭಾಗದಲ್ಲಿ ಮಾತ್ರ ಕೆಲಮಟ್ಟಿಗೆ ಉದ್ಧಾರಕ್ರಮ ಹೊಂದಿಕೊಳ್ಳುವುದು ಕಂಡರೂ ಮುಂದೆ ತೊಡಕುಗಳು ಹೆಚ್ಚಾಗಿ ಬರುವುದನ್ನು ಈಗಿನ ಪದ್ಯಪಾಠದಲ್ಲಿ ಎದುರಿಸುವುದು ಕಷ್ಟ. ಅಲ್ಲದೆ ಛಂದಸ್ಸಿನ ದೃಷ್ಟಿಯಿಂದ, ಪಾದಗಳ ವಿಭಜನೆಯೂ ಸರಿಯಾಗಿ ಆಗದಿರುವುದು, ಪಾಠಕ್ಲೇಶವನ್ನು ಎತ್ತಿ ತೋರಿಸುವ ಸಂಗತಿಯಾಗಿದೆ.

೩. ಅರ್ಥಭ್ರಮ

'ಕವಿರಾಜಮಾರ್ಗ'ದಲ್ಲಿ ದುಷ್ಕರಕಾವ್ಯಭೇದಗಳಲ್ಲಿ 'ಶ್ರೀಮದರ್ಥಭ್ರಮಂ' ಎಂಬುದಾಗಿ ಹೆಸರಿಸಿರುವ ಈ ಗತಿಚಿತ್ರದ (೨–೧೧೦) ಲಕ್ಷ್ಯಪದ್ಯ ಈಗ ಪ್ರಕಟವಾಗಿರುವ ಒಂದೊಂದು ಪರಿಷ್ಕರಣದಲ್ಲಿಯೂ ಒಂದೊಂದು ತೆರನಾಗಿದ್ದು, ಯಾವುದೂ ಉದ್ಧಾರಕ್ರಮಕ್ಕೆ ಸರಿಬರುವುದಿಲ್ಲ. ಪಾಠದೋಷಗಳಿಂದಾಗಿ ಪದ್ಯಸ್ವರೂಪ ತೀರ ಕೆಟ್ಟಿರುವುದೇ ಇದಕ್ಕೆ ಕಾರಣ.

ಮೊದಲ ಪರಿಷ್ಕರಣದಲ್ಲಿ (೧೮೯೮) :

ನರದಾನಪರೊನೆಂನೆನರದಾಕೆನರಾಕಮಾ
ಅರಿದೈತಿಂದನಾದರಿಕ್ಕುಂಪರಿದಾನಪರಾದಿಯೆ । (೨-೧೩೭)

ಎರಡನೆಯ ಪರಿಷ್ಕರಣದಲ್ಲಿ (೧೯೩೦/೧೯೭೩) :

ನರದಾರಪರಾನೋನೇ ನರದಾರೇನರಾರಮಾ
ಅರಿದಯ್ತಿಂದವದಾರಿಕ್ಕುಂ ಪರಿದಾನ ಪರಾಧಿಯೋ ॥ (೨–೧೩೯)

ಮೂರನೆಯ ಪರಿಷ್ಕರಣದಲ್ಲಿ (೧೯೬೮) :

ನರದಾನಪರೊನೆಂನೆ ನರದಾ ಕೆನರಾಕಮಾ
ಅರಿದೈತಂದಾದರಿಕ್ಕುಂ ಪರಿದಾನ ಪರಾದಿಯೆ ॥ (೨–೧೩೯)

ಇವುಗಳಲ್ಲಿ ಯಾವುದೊಂದೂ ಸಾರ್ಥಕವಾದ ರಚನೆಯಾಗಿ ತೋರುವುದಿಲ್ಲ. ಅಕ್ಷರಸಂಖ್ಯೆ, ಪ್ರಸ್ತಾರಕ್ರಮ ಎರಡು ದೃಷ್ಟಿಗಳಲ್ಲಿಯೂ ಛಂದಸ್ಸು ಕೆಟ್ಟಿರುವುದು ಕಾಣುತ್ತದೆ. ಈ ಕಾರಣಗಳಿಂದ ಸಹಜವಾಗಿಯೇ ಉದ್ಧಾರಕ್ರಮ ಸಲಕ್ಷಣವಾಗುವುದು ಸಾಧ್ಯವಿಲ್ಲವಾಗಿದೆ.[4]

ಈಗ 'ಕಾವ್ಯಾವಲೋಕನ'ದ ಲಕ್ಷ್ಯವನ್ನು ಗಮನಿಸೋಣ :

ಶ್ರೀರಾಮಾಥಾಮನಾಮಂ ತಾ । ರಾರಾರಾರಾಸಮಾಸಮಂ ।
ಮಾರಾರಿ ನಿನ್ನೊಳ್ ಸಮಾನಾ । ಧಾರಾ ನಿನ್ನಾತನೊಳ್ ಸಮಂ ॥ (ಪ. ೫೮೦)

ಆರ್. ನರಸಿಂಹಾಚಾರ್ಯರು ಅಂಗೀಕರಿಸುವ ಈ ಪಾಠವನ್ನೇ ಈಚೆಯ ಪರಿಷ್ಕರಣದಲ್ಲಿ ಸಹ ಅನುಸರಿಸಿದೆ. ಪದ್ಯದ ಅರ್ಥವೇನೋ ವಿಶದಪಡುವುದಿಲ್ಲ. ೩ನೆಯ ಪಾದದಲ್ಲಿ ಛಂದಸ್ಸು ಸಂದಿಗ್ಧವಾದ್ದು.

ಈ ಉದ್ಧಾರಕ್ರಮ ತೃಪ್ತಿಕರವಾಗಿದೆ ಎನ್ನುವಂತಿಲ್ಲ.[5] ಉದ್ಧಾರಕ್ರಮದಂತೆ ವಾಚನಮಾಡುವಾಗ ೪ನೆಯ ಪಾದದಲ್ಲಿ ೬ನೆಯ ಅಕ್ಷರವನ್ನು ನಕಾರದ್ವಿತ್ವದೊಂದಿಗೆ, ೩ನೆಯ ಸಾಲಿನಲ್ಲಿ ೫ನೆಯ ಅಕ್ಷರವನ್ನು ನಕಾರದ್ವಿತ್ವರಹಿತವಾಗಿ ಪರಿಗಣಿಸಬೇಕಾಗುತ್ತದೆ.

ಶ್ರೀ	ರಾ	ಮಾ	ಧಾ	ಮ	ನಾ	ಮಂ	ತಾ
ರಾ	ರಾ	ರಾ	ರಾ	ಸ	ಮಾ	ಸ	ಮಂ
ಮಾ	ರಾ	ರಿ	ನಿ	ಷ್ಠೊಳ್	ಸ	ಮಾ	ನಾ
ಧಾ	ರಾ	ನಿ	ಷ್ಠಾ	ತ	ನೊಳ್	ಸ	ಮಂ

ಗತಿ ೨೬

'ಮಾಧವಾಲಂಕಾರ'ದಲ್ಲಿ ಅರ್ಥಭ್ರಮದ ಲಕ್ಷಣವಿದ್ದು, ಸಂಪಾದಕೀಯವಾದ ತಿದ್ದುಪಡಿಗಳಿಂದ ಅದನ್ನು ''ಶ್ಲೋಕಾರ್ಥಂ ಭ್ರಮಿಯಿಪ್ಪೊಡೆ ವಿ । ವೇಕಿಗಳಿಂ ಪೆಸರದಪ್ಪುದರ್ಥಭ್ರಮಂ....'' ಎಂಬುದಾಗಿ ಗ್ರಹಿಸಬಹುದಾಗಿದೆ. ಇದು 'ಕಾವ್ಯಾದರ್ಶ'ದ ''ಪ್ರಾಹುರರ್ಥಭ್ರಮಂ ನಾಮ ಶ್ಲೋಕಾರ್ಧಭ್ರಮಣಂ ಯದಿ'' ಎಂಬ ಸೂತ್ರಪದ್ಯಭಾಗದ (೩-೮೦) ಅನುವಾದವೇ ಆಗಿದೆ. ಲಕ್ಷ್ಯಪದ್ಯ ಪಾಠದೋಷಗಳಿಂದ ಬಹುಪಾಗಿ ಕೆಟ್ಟಿದೆ.

ಮಾನಾಯತಾಮಳಾಕಾರಾ । ನಾನಾನರಸಮಾನೇಕಾ ।
ಯಾನಾಯಾನಿವುಮಾಲಾತಾ । ನತಾಚಿರಗಿಸಮಾ ॥

ಇದನ್ನು ಉದ್ಧಾರಗೊಳಿಸುವುದು ಸಾಧ್ಯವಿಲ್ಲವಾಗಿದೆ. ಛಂದಸ್ಸು, ಅರ್ಥ ಎರಡು ದೃಷ್ಟಿಗಳಿಂದಲೂ ಇಲ್ಲಿಯ ಪಾಠ ಸಮಾಧಾನಕರವಾಗಿಲ್ಲ.

೪. ಸರ್ವತೋಭದ್ರ

'ಕವಿರಾಜಮಾರ್ಗ'ದಲ್ಲಿ, ಅತಾಲವ್ಯ ನಿರೋಷ್ಠ್ಯಗಳ ಬಳಿಕ ಸರ್ವತೋಭದ್ರದ ಲಕ್ಷ್ಯವೊಂದನ್ನು ಹೇಳಿದೆ. ಇದು ಒಂದೊಂದು ಪರಿಷ್ಕರಣದಲ್ಲಿ ಒಂದೊಂದು ತೆರದಲ್ಲಿ ಪ್ರಕಟವಾಗಿದ್ದು, ಮದ್ರಾಸು ಪರಿಷ್ಕರಣದ ತಿದ್ದುಪಾಟುಗಳು 'ಬಂಧಾನುಗುಣವಾಗಿ' ಮಾಡಿಕೊಂಡ ಸ್ವತಂತ್ರವಾದ ತಿದ್ದುಪಾಟುಗಳಾಗಿವೆ; ಬೆಂಗಳೂರು ಪರಿಷ್ಕರಣ ಇದನ್ನೇ ಸಾಮಾನ್ಯವಾಗಿ ಅನುಸರಿಸಿದೆ. ಆದ್ದರಿಂದ ಆ ಪರಿಷ್ಕರಣಗಳ ಪಾಠವನ್ನಿಲ್ಲಿ ಕೆಳಗೆ ಕ್ರಮವಾಗಿ ಉದಾಹರಿಸಬಹುದು :

ದೀನಾದೀನಾ ನಾದಿ ನಾದೀ । ನಾನಿನ್ನಾ ನೇನೆ ನಾನಿನಾ ।
ದೀನಾದಾನಿನಿದಾನಾದೀ । ನಾನೇ ನಿಂನ ನನಿಂನನಾ ॥ (೨-೧೨೬)

ದೀನಾದೀನಾನಾಃದಿನಾದೀ । ನಾನಿಂನಾನೇನೆನಾನಿನಾ ।
ದೀನಾದಾನಿನಿದಾನಾದೀ । ನಾನೆನಿಂನನನಿಂನನಾ ॥ (೨-೧೨೬)

ಇವುಗಳಲ್ಲಿ ಯಾವುದೊಂದೂ ಸಾರ್ಥಕರಚನೆಯಾಗಿ ತೋರುವುದಿಲ್ಲ. ಛಂದಸ್ಸು ಸಂಶಯಾಸ್ಪದವಾದ್ದು. ಮದ್ರಾಸು ಪರಿಷ್ಕರಣಕರ್ತರು ತಿದ್ದಿದ ಪಾಠವನ್ನಿಟ್ಟುಕೊಂಡು ಉದ್ಧಾರಕ್ರಮವನ್ನೇನೋ ತೋರಿಸಿದ್ದಾರೆ. ಪಾಠವನ್ನು ಹೀಗೆ ಸ್ವತಂತ್ರಿಸಿ ತಿದ್ದಿರುವುದು ಮಾತ್ರವೇ ಅಲ್ಲದೆ, ''ಆವೃತ್ತಿಯಲ್ಲಿ ಹ್ರಸ್ವ ದೀರ್ಘಗಳೂ ಅಲ್ಪ

ಪ್ರಾಣ ಮಹಾಪ್ರಾಣಗಳೂ ಸಮನಾಗಿರುವುವು. ಬಿಂದುವನ್ನು ಗ್ರಹಿಸಬಹುದು, ಬಿಡಬಹುದು'' ಎಂಬುದಾಗಿ ತಾವೇ ಸೂಚಿಸಿರುವ ರಿಯಾಯಿತಿಗಳನ್ನು ಜಾರಿಗೊಳಿಸಿಯೂ ಇದ್ದಾರೆ. ಇಲ್ಲಿಯ ಗತಿಚಿತ್ರ ಸಮರ್ಪಕವಾಗಿರಬೇಕಾದರೆ, ಪ್ರತಿಪಾದದಲ್ಲಿಯೂ ಮೊದಲ ನಾಲ್ಕು ಅಕ್ಷರಗಳು ಅನುಲೋಮ ಗತಿಯಲ್ಲಿಯೂ ಆಮೇಲಿನ ನಾಲ್ಕು ಅಕ್ಷರಗಳು ಮೊದಲನೆಯವುಗಳ ವಿಲೋಮಗತಿಯಲ್ಲಿಯೂ ನಡೆಯುವುದು ಅವಶ್ಯ. ಆದರೆ ಪೂರ್ಣವಾಗಿ ಅನುಲೋಮಪ್ರತಿಲೋಮತ್ವ ಕೂಡಿಬರುವುದಿಲ್ಲ, ಮುದ್ರಾಸು ಪರಿಷ್ಕರಣಕರ್ತರು ತೋರಿಸಿದ ಉದ್ಧಾರ ಕ್ರಮದಲ್ಲಿ. ಹೋಗಲಿ, ಪದ್ಯಕ್ಕೆ ಏನಾದರೂ ಅರ್ಥ ಹೊರಡುವುದೂ ಸಾಧ್ಯವಿದೆಯೇ? ಪದ್ಯದಿಂದ ಸಮಂಜಸವಾಗಿ ಅರ್ಥವೇ ಹೊರಡದಿದ್ದಾಗ, ಪದಗಳಾಗಲಿ ವಾಕ್ಯವಾಗಲಿ ಯಾವುವು ಏನು ಎಂಬುದೇ ತಿಳಿಯದಿದ್ದಾಗ, ಈ ಲಕ್ಷ್ಯದ ಉದ್ಧಾರಕ್ರಮ ಸರಿಯಾಗಿರುತ್ತದೆಯೆಂದು ನಂಬುವುದು ಸಾಧ್ಯವಿಲ್ಲ. ಈ ಕಾರಣಕ್ಕಾಗಿಯೇ, ಇಲ್ಲಿ ಉದ್ಧಾರ ಕ್ರಮವನ್ನು ತೋರಿಸದೆ ಕೈಬಿಟ್ಟಿದೆ.

ಈಗ 'ಕಾವ್ಯಾವಲೋಕನ'ದ ಕಡೆಗೆ ಹೊರಳಬಹುದು. ನಾಗವರ್ಮನು ಸೂತ್ರ ೧೩೭–೧೩೮ರ 'ಚಿತ್ರ' ಭೇದಗಳಲ್ಲಿ, ೧೩೭ರ ಕೊನೆಗೆ ಸರ್ವತೋಭದ್ರವನ್ನು ಉಲ್ಲೇಖಿಸಿದ್ದಾನೆ. ಆದರೆ 'ಅರ್ಧಭ್ರಮಣ'ದ ಲಕ್ಷ್ಯವನ್ನು ನಿದರ್ಶಿಸಿದ ಮೇಲೆ ''ಸರ್ವತೋಭದ್ರ[ಕ್ಕಂ] ಲಕ್ಷ್ಯಮನಱಿದುಕೊಳ್ವುದು'' ಎಂಬ ಒಂದು ಸೂಚನೆಯನ್ನು ಮಾತ್ರ ಕೊಟ್ಟಿದ್ದಾನೆ. ಬೇರೆ ಒಂದೆರಡು ಗತಿಚಿತ್ರಗಳ ಹಾಗೆಯೇ ಲಕ್ಷ್ಯವನ್ನು ಹೇಳದೆ, ಸೂಚನೆಯಿಂದಷ್ಟೇ ಅವನು ತೃಪ್ತನಾಗಿರುವುದು ಇಲ್ಲಿಯೂ ಕಾಣುತ್ತದೆ.

'ಮಾಧವಾಲಂಕಾರ'ದಲ್ಲಿ ಅರ್ಧಭ್ರಮದ ಲಕ್ಷಣ ಹೇಳುವ ಸೂತ್ರಪದ್ಯದಲ್ಲಿಯೇ ''ಆಲೋಕಿಸೆ ಸಕಳಾಂಘ್ರಿಗಳೊಳ್ । ಶ್ಲೋಕಂ ಭ್ರಮಿಯಿಪ್ಪೊಡೆ ಸರ್ವತೋಭದ್ರಮದುಂ'' ಎಂಬುದಾಗಿ ಸರ್ವತೋಭದ್ರದ ಲಕ್ಷಣ ಉಕ್ತವಾಗಿದೆ. ಇದು ದಂಡಿಯ 'ಕಾವ್ಯಾದರ್ಶ'ದ ''ತದಿಷ್ಟಂ ಸರ್ವತೋಭದ್ರಂ ಭ್ರಮಣಂ ಯದಿ ಸರ್ವತಃ'' ಎಂಬ ಸೂತ್ರಭಾಗದ(೩-೮೦) ಸಾಮಾನ್ಯ ಅನುವಾದ. ಲಕ್ಷ್ಯ ಬಿಟ್ಟುಹೋಗಿದೆಯೋ, ಅರ್ಧಭ್ರಮಕ್ಕೆ ಕೊಟ್ಟ ಲಕ್ಷ್ಯವೇ ಇಲ್ಲಿಗೂ ಅನ್ವಯವಾಗುವಂತೆ ಮೂಲದಲ್ಲಿ ಪದ್ಯಪಾಠವಿದ್ದಿತೋ, ಈಗ ಪ್ರಕಟವಾಗಿರುವ ಪರಿಷ್ಕರಣದ ಭಾಗದಿಂದ ತಿಳಿಯುವುದು ಕಷ್ಟ.

೫. ಇತರ ಗತಿಚಿತ್ರಗಳು

ಈಗ ನಿರೂಪಿಸಿರುವ ಗತಿಚಿತ್ರಗಳೇ ಅಲ್ಲದೆ, 'ಕಾವ್ಯಾವಲೋಕನ'ದಲ್ಲಿ ಚಿತ್ರಭೇದಗಳನ್ನು ಉಲ್ಲೇಖಿಸುವ ಸೂತ್ರ ೧೩೭ರಲ್ಲಿ ''ಇಭ ರಥ ತುರಂಗಪದಗತಪಾಠಂ'' ಎಂಬುದಾಗಿ ಹೇಳುತ್ತ, ಇನ್ನೂ ಕೆಲವು ಗತಿಚಿತ್ರಗಳ ಸೂಚನೆಯನ್ನು ಕರ್ತೃ ಕೊಟ್ಟಿದ್ದಾನೆ. ಮುಂದೆ ಬಂಧಚಿತ್ರಗಳನ್ನು ಸಲಕ್ಷ್ಯವಾಗಿ ಕುರಿತಮೇಲೆ, ''ಗಜರಥ ತುರಂಗಪದಗತಪಾಠಂಗಳ್ಗಂ ಲಕ್ಷ್ಯಮಂ ನೋಡಿಕೊಳ್ವುದು'' ಎಂಬುದಾಗಿ ಆ ಸೂಚನೆಯನ್ನೇ ಪುನಃ ಉಲ್ಲೇಖಿಸಿ, ಲಕ್ಷ್ಯಗಳನ್ನೇನೂ ಉದಾಹರಿಸದೆ ಸುಮ್ಮನಾಗಿದ್ದಾನೆ. ನಾಗವರ್ಮನು ಈ ಸೂಚನೆಯನ್ನಾದರೂ ರುದ್ರಟನ 'ಕಾವ್ಯಾಲಂಕಾರ'ದ ''ಚತುರಂಗಪೀಠವಿರಚಿತರಥತುರಗಗಜಾದಿ ಪದಪಾಠೈಃ'' ಎಂಬ ಸೂತ್ರಭಾಗ (೫-೩)ದಿಂದ, ಹಾಗೂ ಆತನೇ ಕೊಡುವ ರಥಪದ, ತುರಗಪದಪಾಠ, ಗಜಪದಪಾಠಗಳೆಂಬ ಗತಿಚಿತ್ರಭೇದ ಲಕ್ಷ್ಯಗಳಿಂದ (೫-೧೪, ೧೫, ೧೬) ಪ್ರೇರಿತನಾಗಿಯೇ ಕೊಟ್ಟಿರುವನು ಎಂದು ನಿಶ್ಚಯವಾಗಿ ಹೇಳಬಹುದು.

ಕನ್ನಡ ಸಾಹಿತ್ಯದಲ್ಲಿ ಗತಿಚಿತ್ರಗಳ ಕೆಲವು ನಿದರ್ಶನಗಳು

೧. ಗತಪ್ರತ್ಯಾಗತ

ಪೊನ್ನಕವಿ (ಸು. ೮೫೦) 'ಗತಪ್ರತ್ಯಾಗತ' ಎಂಬ ಹೆಸರಿನ ಇಲ್ಲವೆ 'ಗತಪ್ರತ್ಯಾಗತ'ವಾದ ಒಂದು ಕೃತಿಯನ್ನು ಸಂಸ್ಕೃತದಲ್ಲಿಯೋ ಕನ್ನಡದಲ್ಲಿಯೋ ಬರದಿರಬಹುದೆಂಬುದಾಗಿ, ಆ ಕವಿಯ 'ಶಾಂತಿಪುರಾಣ'ದ

ಸಂದ ಗತಪ್ರತ್ಯಾಗತ । ಮೆಂದೀ ಕೃತಿಯೊಂದಿವಕ್ಕೆ ಗೆಲ್ಗುಂ ನೀಂ ಪೇ ।
ೞ್ದೊಂದೆರಡು ಮುಕ್ತಕಂ ಪೆಱ । ರೊಂದೊಂದಧ್ಯಾನಮೇಂ ಕುರುಳ್ಗಳ ಸವಣಾ ॥ (೧೨–೭೪)

ಎಂಬ ಒಂದು ಪದ್ಯದ ಆಧಾರದ ಮೇಲೆ, ವಿದ್ವಾಂಸರಲ್ಲಿ ಸಾಮಾನ್ಯವಾದ ಒಂದು ಅಭಿಪ್ರಾಯ ಈಗ ಬಹುಕಾಲದಿಂದ ರೂಢಿಯಾಗಿದೆ. ಈ ಪದ್ಯದ ಆಶಯದಲ್ಲಿ ಕೆಲಮಟ್ಟಿಗೆ ಅಸ್ಪಷ್ಟತೆಯಿದೆ. ಈ ಅಸ್ಪಷ್ಟವಾದ ಉಲ್ಲೇಖವನ್ನು ಅವಲಂಬಿಸಿ, ಪೊನ್ನಕವಿ 'ಗತಪ್ರತ್ಯಾಗತ'ವೆಂಬ, ಇಲ್ಲವೆ 'ಗತಪ್ರತ್ಯಾಗತ'ವಾಗಿ ರಚಿತವಾಗಿರುವ ಕೃತಿಯೊಂದನ್ನು ರಚಿಸಿರಬಹುದು ಎಂದು ತಿಳಿಯುವುದು ತುಂಬ ಧೈರ್ಯದ ಗ್ರಹಿಕೆಯಾಗುತ್ತದೆ. ಒಂದು ಪಕ್ಷ ಇಂತಹ ಕೃತಿ ರಚಿತವಾಗಿತ್ತು ಎಂದು ಇಟ್ಟುಕೊಂಡರೂ ಈಗಂತೂ ಇದು ದೊರೆಯುವುದಿಲ್ಲ. ಶೀರ್ಷಿಕೆಯ ಬಲದಿಂದ, ಚಿತ್ರ ಕಾವ್ಯದ 'ಗತಪ್ರತ್ಯಾಗತ'ದೊಂದಿಗೆ ಆ ಕೃತಿಗೆ ಏನಾದರೂ ಸಂಬಂಧವನ್ನು ಊಹಿಸುವುದೇನೋ ಶಕ್ಯ. ಇದು ಹೇಗಾದರೂ ಇರಲಿ, ಕನ್ನಡ ಸಾಹಿತ್ಯದಲ್ಲಿ ಗತಿಚಿತ್ರಭೇದವಾದ 'ಗತಪ್ರತ್ಯಾಗತ'ದ ಮೊತ್ತಮೊದಲ ಉಲ್ಲೇಖ ನಮಗೆ ಕಂಡುಬರುವುದು 'ಶಾಂತಿಪುರಾಣ'ದಲ್ಲಿಯೇ ಎಂಬುದನ್ನು ಇಲ್ಲಿ ವಿಶೇಷವಾಗಿ ಸ್ಮರಿಸಬಹುದು.

ಈಚೆಗೆ ನಾಗಚಂದ್ರನು (ಸು. ೧೧೦೦), 'ಪಂಪರಾಮಾಯಣ'ದ ಪೂರ್ವಾಚಾರ್ಯಸ್ತುತಿಭಾಗದಲ್ಲಿ ಶ್ರುತಕೀರ್ತಿ ತ್ರೈವಿದ್ಯಯತಿಯೆಂಬವನನ್ನು ಕೀರ್ತಿಸುತ್ತ,

ಶ್ರುತಕೀರ್ತಿ ತ್ರೈವಿದ್ಯ । ವ್ರತಿ ರಾಘವಪಾಂಡವೀಯಮಂ ವಿಬುಧಚಮ ।
ತ್ಕೃತಿಯೆನಿಸಿ ಗತಪ್ರತ್ಯಾ । ಗತದಿಂ ಪೇೞ್ದಮಲಕೀರ್ತಿಯಂ ಪ್ರಕಟಿಸಿದಂ ॥

ಎಂಬುದಾಗಿ (೧–೨೫) ಹೇಳಿರುವುದು ಕಾಣುತ್ತದೆ. ಗತಪ್ರತ್ಯಾಗತದ ಮೂಲಕ ದ್ವಿಸಂಧಾನಕಾವ್ಯವಾಗಿರ ಬಹುದಾದ 'ರಾಘವಪಾಂಡವೀಯ' ಬಹುಶಃ ಸಂಸ್ಕೃತಭಾಷೆಯ ಕೃತಿಯೇ ಆಗಿರಬೇಕಲ್ಲದೆ, ಕನ್ನಡ ಭಾಷೆಯ ಕೃತಿಯಾಗಿರಲಾರದು. ಇನ್ನೂ ಈಚೆಗೆ ಮಹಾಬಲಕವಿ (೧೨೫೪) 'ನೇಮಿನಾಥಪುರಾಣ'ದಲ್ಲಿ ಭಾವಸೇನ ವ್ರತಿಯ ವಿದ್ವತ್ತನ್ನು ಮೆಚ್ಚಿಕೊಳ್ಳುತ್ತ, ಆತ 'ಪದಗತ'ದಲ್ಲಿಯೂ ಸಮರ್ಥನಾಗಿದ್ದನೆಂದು ಸೂಚಿಸಿರುವುದು (೧–೨೨) ಗತಪ್ರತ್ಯಾಗತವನ್ನೇ ಕುರಿತಿರುವುದು ಶಕ್ಯವಾದರೂ, ಅದು ಆ ಆಚಾರ್ಯನ ಸಂಸ್ಕೃತಭಾಷಾಪ್ರೌಢಿಮೆಯನ್ನು ಲಕ್ಷಿಸಿಯೇ ಎಂದು ಸಾಮಾನ್ಯವಾಗಿ ಭಾವಿಸಬಹುದು.

ಕನ್ನಡ ಸಾಹಿತ್ಯದಲ್ಲಿ 'ಗತಪ್ರತ್ಯಾಗತ'ದ ನಿದರ್ಶನಗಳು ವಿರಳ. ಈ ಚಿತ್ರದ ಇತಿಹಾಸ ಈಗ ತಿಳಿದ ಮಟ್ಟಿಗೆ 'ಮದನತಿಲಕ'ದ ಮೂರು ಗತಪ್ರತ್ಯಾಗತಗಳಿಂದ ಮೊದಲಾಗುವಂತೆ ತೋರುತ್ತದೆ.

ಸಾಹಸಾ ಮದಯಾಹಾಸ । ಸಹಾಯಾದರಿತೋಪರಿ ।
ವಿಹತೋರಯಸೋಹೇಮ । ಮಹೇಸೋಮ ಯಗಾಹಸ ॥ (೧–೪೨)

ಕವಿ ಈ ಪದ್ಯವನ್ನು 'ಅರ್ಧಪಾದಗತಪ್ರತ್ಯಾಗತ ವಿಷಮಚಕ್ರಶ್ಲೋಕ' ಎಂದು ಕರೆದಿದ್ದಾನೆ. ಅಲ್ಲಿಗೆ ಇದು ವಿವಿಧೋದ್ದೇಶದ ಗತಪ್ರತ್ಯಾಗತ ಲಕ್ಷ್ಯವಾಯಿತು. ಆದರೆ ಅರ್ಧಪಾದ ಗತಪ್ರತ್ಯಾಗತ ಎಂದರೆ ಏನು? 'ಪಾದಗತ'ವೆಂಬುದರಲ್ಲಿ ಅರ್ಧದಷ್ಟು ಲಕ್ಷಣ ತೋರುವುದು ಎಂದು ಅರ್ಥವೇ? ಇಲ್ಲಿ ಪಾದಗತ, ಶ್ಲೋಕಾರ್ಧಗತ, ಸಮಸ್ತಪಾದಗತ ಯಾವುದರ ಲಕ್ಷಣವೂ ಇಲ್ಲ. ಪದ್ಯಪಾಠದಲ್ಲಿ ತಪ್ಪುಗಳಾಗಿರುವ ಸಾಧ್ಯತೆ ಹೆಚ್ಚಾಗಿರುವುದ ರಿಂದ ಗತಪ್ರತ್ಯಾಗತದ ಲಕ್ಷಣವೇ ಇಲ್ಲಿ ಗೋಚರಿಸುತ್ತಿಲ್ಲ. ಸ್ವಲ್ಪ ಭಿನ್ನಪಾಠವಿರುವ ಕವಿಚರಿತೆಯ ಉದ್ಧೃತಿ ಯಿಂದಲೂ ಸಹಾಯವಾಗದು. ಪ್ರಾಯಶಃ ಉಕ್ತಪದ್ಯದಲ್ಲಿ ಪಾದ ೧ರಲ್ಲಿ 'ದಯಾಹಾಸ' ಎಂಬ ಅರ್ಧಪಾದದ ಪ್ರತಿಲೋಮಗತಿಯನ್ನು ಪಾದ ೨ರಲ್ಲಿ 'ಸಹಾಯಾದ' ಎಂಬ ಅರ್ಧಪಾದದಲ್ಲಿಯೂ, ಪಾದ ೩ರಲ್ಲಿ [ಮ]ಸೋ ಹೇಮ ಎಂಬ ಅರ್ಧಪಾದದ ಪ್ರತಿಲೋಮಗತಿಯನ್ನು ಪಾದ ೪ರಲ್ಲಿ 'ಮಹೇಸೋಮ' ಎಂಬ ಅರ್ಧಪಾದದಲ್ಲಿಯೂ ಕಾಣಬಹುದು ಎನ್ನುವುದೇ ಇಲ್ಲಿಯ 'ಗತಪ್ರತ್ಯಾಗತ'ದ ಸ್ವರೂಪವಿರಬಹುದು. ಆದರೆ ಪದ್ಯದ ಅರ್ಥವೇನೋ ತಿಳಿಯದು.

ಕುಸುಮಾಮನೋಹರಂ । ಕುಸುಮಾಮನೋಹರಂ ।
ಕುಸುಮಾಮನೋಹರಂ । ಕುಸುಮಾಮನೋಹರಂ ॥ (೧೦–೮)

ಇದು ವಿಮಲಾ ಎಂಬ ವೃತ್ತ (ಹೇಮಚಂದ್ರನ 'ಛಂದೋನುಶಾಸನ', ೨–೬೬); 'ಗ.ಪ್ರತಿ'ಯಲ್ಲಿ ಮಾತ್ರವೇ ಕಂಡುಬರುವಂಥದು. ಕವಿ ಈ ಪದ್ಯವನ್ನು ''ಇದುವೆ ಗತಪ್ರತ್ಯಾಗತಮುಂ ಮುರಜಬಂಧಮುಂ ಕಿರಿಯ

ಸರ್ವತೋಭದ್ರಮುಂ ಮಹಾಯಮಕಮುಮಕ್ಕುಂ'' ಎಂಬುದಾಗಿ ತಿಳಿಸಿರುವುದರಿಂದ ಇದೂ ವಿವಿಧೋದ್ದೇಶದ ಗತಪ್ರತ್ಯಾಗತವೇ. ಈ ಪದ್ಯ ಕಾವ್ಯಾವ.ದಲ್ಲಿ ಪ. ೫೮೦ರ ಬಳಿಕ, 'ಅರ್ಧಭ್ರಮಣ'ದ ಲಕ್ಷ್ಯಪದ್ಯದ ಕೆಳಗೆ, ಅಲ್ಪ ಪಾಠವ್ಯತ್ಯಾಸದೊಂದಿಗೆ, ಕೆಲವು ಪ್ರತಿಗಳಲ್ಲಿ ಕಂಡುಬರುತ್ತದೆ. ಆ ಗ್ರಂಥದ ಸಂಪಾದಕರು ಇದನ್ನು ಪ್ರಕ್ಷೇಪವಾಗಿ ಗುರುತಿಸಿ ಕೈಬಿಟ್ಟಿದ್ದಾರೆ. 'ಮದನತಿಲಕ'ದ ಪದ್ಯವೇ ಅಲ್ಲಿ ಪ್ರತಿಕಾರರ ಅಥವಾ ಅಭ್ಯಾಸಿಗಳ ಕೈವಾಡದಿಂದ ಸೇರ್ಪಡೆಯಾಗಿರುವುದು ಸಾಧ್ಯ.

ಇದನ್ನು ಗತಪ್ರತ್ಯಾಗತದ ಲಕ್ಷ್ಯವೆಂದು ಅರ್ಥ ಹಾಗೂ ರಚನೆಯ ದೃಷ್ಟಿಯಿಂದ ಹೇಳಲು ಸಾಧ್ಯವಿಲ್ಲ; ಇದರಲ್ಲಿ ಪ್ರತಿಪಾದವೂ ಅನುಲೋಮಗತಿಯಲ್ಲಿಯೇ ಆವೃತ್ತಿಗೊಂಡಿದೆಯಲ್ಲದೆ ಅದರ ಪ್ರತಿಲೋಮಗತಿ ಬರುವುದೇ ಇಲ್ಲ ಎನ್ನುವುದು ವಿದಿತ.

→ →
ತನುಪರನರಹದಿನರಪತಿ । ಮನುನಯನಶುಭಾಶುಭಂ ನಿಜ[ಧ]ನದಂ ॥
← ←
[ಧ]ನದಜನಿಭಂ ಶುಭಾಶು ನ । ಯನನುಮತಿಪರನದಿಹರನರಪನುತಂ ॥ (೧೦-೧೦)

ಮೇಲುನೋಟಕ್ಕೆ ಕಂದಪದ್ಯದಂತೆ ತೋರುವ ಈ ಪದ್ಯ ಕಂದದ ಲಕ್ಷಣಕ್ಕೆ ಸರಿಬರುತ್ತಿಲ್ಲ; ಆರ್ಯಾವರ್ಗದ ಬೇರೆ ಪದ್ಯಗಳ ಲಕ್ಷಣವೂ ಹೊಂದುತ್ತಿಲ್ಲ. ಸದ್ಯದಲ್ಲಿ ಇದರ ಛಂದಸ್ಸು ಅನಿರ್ದಿಷ್ಟ. ಶುದ್ಧಪಾಠದ ನಿಷ್ಕರ್ಷೆಯನ್ನು ಇದು ಅವಲಂಬಿಸಿದೆಯೆಂದು ಹೇಳುವುದು ತೀರ ಅವಶ್ಯವಾಗಿಯೂ ತೋರುವುದಿಲ್ಲ. ಏಕೆಂದರೆ ಇದು ಅರ್ಥದ ದೃಷ್ಟಿಯಿಂದ ಸ್ವಲ್ಪ ಕ್ಲೇಶವನ್ನು ಒಡ್ಡಿದರೂ ರಚನೆಯ ದೃಷ್ಟಿಯಿಂದ ಇದು ದಂಡಿ ಹೇಳುವ ಶ್ಲೋಕಾರ್ಧ ಗತಪ್ರತ್ಯಾಗತ ಇಲ್ಲವೆ ಭೋಜ ಹೇಳುವ ಅಕ್ಷರಗತ ಗತಪ್ರತ್ಯಾಗತದ ರಚನೆಗೆ ತೃಪ್ತಿಕರವಾಗಿ ಹೊಂದಿಕೊಳ್ಳುತ್ತದೆ. (ಅನುಸ್ವಾರವನ್ನು ಗ್ರಹಿಸುವುದೂ ಬಿಡುವುದೂ ಅಲ್ಪಪ್ರಾಣ ಮಹಾಪ್ರಾಣಗಳ ವಿನಿಮಯವೂ ಇಲ್ಲಿ ಐಚ್ಛಿಕ).

ತನುಪರನ್, ಅರಹದಿ (?) ನರಪತಿ, ಮನುನಯನ್, ಅಶುಭಾಶುಭನ್, ನಿಜಧನದನ್; ಧ(=ದ) ನದಜ ನಿಭನ್, ಶುಭಾಶು ನಯನ್, ಅನುಮತಿಪರನ್, ಅದಿಹರ (?) ನರಪ ನುತನ್ ಎಂಬುದಾಗಿ ಪದಚ್ಛೇದ ಮಾಡಿಕೊಂಡು ಸ್ವಲ್ಪ ಮಟ್ಟಿಗೆ ಅರ್ಥವನ್ನೂ ಕಂಡುಕೊಳ್ಳಬಹುದು. ಇದು 'ಮದನತಿಲಕ'ದ ಗತಪ್ರತ್ಯಾಗತದ ನಿದರ್ಶನಗಳಲ್ಲಿ ಉತ್ತಮವಾದ್ದು.

ಆಚಣ್ಣನ 'ವರ್ಧಮಾನ ಪುರಾಣ'ದಲ್ಲಿಯ ಲಕ್ಷ್ಯ ಗಮನಾರ್ಹವಾದುದು. ಅದನ್ನಿಲ್ಲಿ ಉದ್ಧರಿಸಬಹುದು :

→
ಕುಂದಿನಿಂದೆಚ್ಚನದು ಬಂ । ಟಂದಮಲ್ಲದೆ ನಿಂದುದೆಂ ।
ದೆಂದು ನಿಂದೆಲ್ಲಮದಟಂ । ಬಂದು ನಚ್ಚದೆ ನಿಂದಿಕುಂ ॥ (೭-೫೩)
←

ಇದರಲ್ಲಿ ಪಾಠದೋಷವಾಗಲಿ, ಅರ್ಥಕ್ಲೇಶವಾಗಲಿ ಇಲ್ಲ. ''ಕೊರತೆಯಿರುವಂತೆ ಬಾಣಪ್ರಯೋಗ ಮಾಡಿದನು. ಅದು ಶೌರ್ಯದ ರೀತಿಯಲ್ಲದೆ ಹೋಯಿತು ಎಂಬುದಾಗಿ ಹೇಳುತ್ತ ಹೇಳುತ್ತ ಎಲ್ಲರೂ ಬಂದು, ಶೌರ್ಯವನ್ನು ಭರವಸೆಯಿಡದೆ ನಿಂದಿಸುತ್ತಾರೆ.'' ಇದು ಪದ್ಯದ ಸಾಮಾನ್ಯವಾದ ಆಶಯ.

ಇದು ಸಮಸ್ತಪಾದ ಗತಪ್ರತ್ಯಾಗತವೇ ಆದರೂ, ದಂಡಿ ಹೇಳುವ ಶ್ಲೋಕ ಇಲ್ಲವೆ ಭೋಜ ಹೇಳುವ ಶ್ಲೋಕಾಂತರಗತ ಪ್ರತ್ಯಾಗತದ ರೀತಿಯಲ್ಲಿರುವ ರಚನೆಯಲ್ಲ. ಇದು ರುದ್ರಟನ 'ಪ್ರತಿಲೋಮಾನುಲೋಮಪಾಠ'ವೆಂಬ ರೀತಿಯಲ್ಲಿರುವ ರಚನೆ. ಪದ್ಯವನ್ನು ಅನುಲೋಮ ಗತಿಯಲ್ಲಿ ಓದಿದರೂ ಪ್ರತಿಲೋಮಗತಿಯಲ್ಲಿ ಓದಿದರೂ ರೂಪವೂ ಅರ್ಥವೂ ಏಕರೀತಿಯಲ್ಲಿಯೇ ಉಳಿಯುವುದು ಇಲ್ಲಿಯ ರಚನಾವೈಚಿತ್ರ್ಯ. ಕನ್ನಡಭಾಷೆಯಲ್ಲಿಯೂ ಸಂಸ್ಕೃತದಲ್ಲಿರುವ ಹಾಗೆ ಗತಿಚಿತ್ರಗಳಲ್ಲಿ ಸಾರ್ಥಕವಾದ ಪದಸಂಯೋಜನೆಯನ್ನು ಕೌಶಲದಿಂದ ತರುವುದು ಸಾಧ್ಯವಿದೆಯೆನ್ನುವುದಕ್ಕೆ ಆಚಣ್ಣನ ಲಕ್ಷ್ಯ ಒಂದು ಒಳ್ಳೆಯ ಸಾಕ್ಷ್ಯವಾಗಿದೆ.

ಪದ್ಮಣಾಂಕನ 'ಪದ್ಮರಾಜಪುರಾಣ'ದಲ್ಲಿ (ಸು. ೧೩೮೫) ವಾರ್ಧಕ ಷಟ್ಪದಿಯಲ್ಲಿರುವ ಪದ್ಯವೊಂದು ವಿಶೇಷ ಸೂಚನೆಯೊಡನೆ ಈ ರೀತಿಯಾಗಿ ಕಂಡುಬರುತ್ತದೆ: ''ಕರ್ನಾಟಕ ವಿಭಕ್ತಿಮಾತ್ರದಲ್ಲಿ ಉಪನ್ಯಾಸ

ಚ್ಛಾಯೆಯಿಂದ ಅನುಲೋಮ ಪ್ರತಿಲೋಮಾರ್ಥದಮಾಗಿ ಮಾಡಿದ ಕವಿಮುಖಕವಾಟಾಖ್ಯಸಾರ್ಥಕವಾದ ಮಹಾಪ್ರಬಂಧಮಿದು.''

→
ವರವಿತನುನಿರಭೀಗಕನತಾವಿಕಭಸಶಿವ
ನಿರತತನುವಿರುಚಾರುಚಜರಾತನುಪಶುಪಸು
ಸರಸರಸಕಮರಣರತವಿರತಹಿಯುತಯುಜಕಕುಶಲಕರಶಶಕಕರಕ ॥
ಕರಕಕಶಶರಕಲಶಕುಕಜಯುತಯುಹಿತರವಿ
ತರಣರಮುಕಸರಸರಸಸುಪಶುಪನುತರಾಜ
ಚರಚಾರುವಿನುತತರನಿವಶಿಸಭಕವಿತಾನಕಗಭೀರನಿನುತವಿರವ ॥ (೧೩–೫೧ವ., ೫೨)
←

ಕರ್ತೃ ಪದ್ಮಣಾಂಕನು ಈ ಪದ್ಯವನ್ನು 'ಕವಿಮುಖಕವಾಟ' ಎಂಬ ಹೆಸರಿನ ಅರ್ಥಯುಕ್ತವಾದ 'ಮಹಾಪ್ರಬಂಧ' ಎಂಬುದಾಗಿ ಕರೆದುಕೊಂಡು ಸಂತೋಷಪಟ್ಟಿದ್ದಾನೆ. ಅನುಲೋಮಪ್ರತಿಲೋಮಗತಿಗಳಲ್ಲಿ ಓದಿದರೂ ಅರ್ಥ ಕೊಡುತ್ತದೆ. ''ಕರ್ಣಾಟಕ ವಿಭಕ್ತಿಮಾತ್ರದಲ್ಲಿ ಉಪನ್ಯಾಸಚ್ಛಾಯೆಯಿಂದ'' ಎಂದರೆ ಏನು ಎನ್ನುವುದು ನಿಷ್ಕೃಷ್ಟವಾಗಿ ತಿಳಿಯದು. ಇಲ್ಲಿಯ ವಾಕ್ಯರಚನೆಗೆ ಕನ್ನಡ ವಿಭಕ್ತಿಪ್ರತ್ಯಯಗಳನ್ನು ಬಳಸಿ ಸಂದರ್ಭೋಚಿತವಾಗಿ ವಿಗ್ರಹವಾಕ್ಯಗಳನ್ನು ಮಾಡಿಕೊಳ್ಳುವುದರ ಮೂಲಕ ಅರ್ಥವಿವರಣೆ ಸಾಧ್ಯವೆಂಬುದು ಪ್ರಾಯಶಃ ಅದರ ಅಭಿಪ್ರಾಯವಿರಬಹುದು.

ಈ ಪದ್ಯ ದಂಡಿ ಹೇಳಿರುವ ಶ್ಲೋಕಾರ್ಧ ಗತಪ್ರತ್ಯಾಗತ ಅಥವಾ ಭೋಜನ ನಿರೂಪಣೆಯ 'ಅಕ್ಷರಗತ' ಗತಪ್ರತ್ಯಾಗತ ರೀತಿಯ ರಚನೆಯಾಗಿದೆ. ಎಂದರೆ ಈ ಪದ್ಯದ ಮೊದಲ ೩ ಪಾದಗಳನ್ನು ಅನುಲೋಮಗತಿಯಲ್ಲಿಯೂ ಆ ಮೇಲಿನ ೩ ಪಾದಗಳನ್ನು ಪ್ರತಿಲೋಮಗತಿಯಲ್ಲಿಯೂ ಓದಿದರೆ ಅವು ಏಕರೀತಿಯಾಗಿರುತ್ತವೆ. ಇಲ್ಲಿ ಗತಪ್ರತ್ಯಾಗತದ ಲಕ್ಷಣವೇನೋ ಸಮರ್ಪಕವಾಗಿ ಕೂಡುತ್ತದೆ, ನಿಜ. ಆದರೆ ಈ ಪದ್ಯಕ್ಕೆ ಅರ್ಥವೇನು? ಅರ್ಥವನ್ನು ಹೇಳಲು ಈ ಲೇಖಕನಿಗಂತೂ ಸಾಮರ್ಥ್ಯವಿಲ್ಲ.

ಹಿರಿಯೂರು ರಂಗನ (ಸು.೧೬೫೦) 'ಪಂಪಾವಿರೂಪಾಕ್ಷಶತಕ'ದಲ್ಲಿ 'ಪಂಚವರ್ಣಗರ್ಭಿತ ಅನುಲೋಮ'ವೆಂದಿರುವ ಒಂದು ಲಕ್ಷ್ಯ :

ವರಸುತನು ನುತಸುರವರತ್ರಾ । ದರಶರಣ ನರಶರದ ಶಂಕರ
ದುರಿತರಿಪು ಪುರಿತರಿದುರನಿಲಸುನಿಯುಮುಮುಯುನಿಜದಾ
ಪರಮಶಿವ ವಶಿಮುರಪಥಹಬಂ । ಧುರವದನ ನದವರ ಧುರಂಧರ
ನರಕಯುಶ ಶಯುಕರನಯುನ ಪಂಪಾವಿರೂಪಾಕ್ಷ ॥ (ಪ. ೯೭)

ಇಲ್ಲಿ ಸಮಾನವಾದ ೫–೫ ಅಕ್ಷರಗಳು ಅನುಲೋಮ–ವಿಲೋಮಗತಿಗಳಲ್ಲಿ ನಡೆದು, ಶಿವಸಂಕೀರ್ತನಪರವಾದ ಪ್ರತ್ಯೇಕವಾದ ಅರ್ಥಗಳನ್ನು ಕೊಡುವುದನ್ನು ಕಾಣಬಹುದು.

'ವಕ್ರಗತಿ'ಯೆಂದಿರುವ ಪದ್ಯ :

ಕಾಲಹರ ಹರ ಕಾಲಕಂಠ ಕ । ಪಾಲಿ ಗುರು ಗುರುಪಾಲಿತಾ ನಖ ।
ಜಾಲಭವ ಭವಜಾಲಮೋಚನ ರುಚಿರ ಚೋರಸುಖದಾ ।
ವಾಲನಭ ನಭಪಾಲಪಿತ ನಿ । ರಾಲಸಖ ಸಖರಾಳಮುಖ ಜೀ ।
ವಾಳಿ ಕಳಕಳವಾಳಿದನೆ ಪಂಪಾವಿರೂಪಾಕ್ಷ ॥ (ಪ. ೧೦೦)

ಇಲ್ಲಿ ೨–೨ ಅಕ್ಷರಗಳ ಪದಘಟಕಗಳು ಅನುಲೋಮ–ವಿಲೋಮಗತಿಗಳಲ್ಲಿ ನಡೆದು ಪ್ರತ್ಯೇಕ ಅರ್ಥವನ್ನು ಕೊಡುತ್ತವೆ. ತ್ರಿವರ್ಣಯುತ ಅನುಲೋಮ ವಿಲೋಮವೆಂದಿರುವ ಒಂದು ಪದ್ಯವೂ ಈ ಕೃತಿಯಲ್ಲಿರುವಂತಿದೆ.

೨. ಗೋಮೂತ್ರಿಕೆ

ಪೊನ್ನಕವಿಯ (ಸು. ೯೫೦) 'ಶಾಂತಿಪುರಾಣ'ದಲ್ಲಿ ''ಗೋಮೂತ್ರಮಂಡಲಮುಮಾಕಾಶಂ ಪೇಜವಿತಿಯೆಂಬ ವಿಧಿಗಳೊಳ್ ಬಂದು ನೆಲೆಗಿಡಿಸಲುಂ ಪೊಲಗಿಡಿಸಲುಂ ಬಲ್ಲೆನ್'' ಎಂಬ (೩–೫೩ವ).

ಸಾಹಸೋಕ್ತಿಯೊಂದರಲ್ಲಿ ಗತಿಚಿತ್ರದ ಸೂಚನೆಯುಂಟೆಂದು ತಿಳಿಯುವುದು ಕಷ್ಟವಾದರೂ, ಶಾಂತಿನಾಥನ (೧೦೬೮) 'ಸುಕುಮಾರಚರಿತೆ'ಯೊಳಗಿನ ''ಆ ಪಂಡಿತಂ ಕನ್ನಗಳ್ಳನಂತೆ ಬಳಪಮಂ ತೆಗೆದು ಕಬ್ಬಿಗನಂತೆ ಗೋಮೂತ್ರಕವೃತ್ತಾಳಂಕೃತನಾಗಿ'' ಎಂಬುದಾಗಿ ಬರುವ ಈಚಿನ ಒಂದು ಉಲ್ಲೇಖ (೩-೬೫.) ನಮ್ಮ ಕಾವ್ಯಸಾಹಿತ್ಯದಲ್ಲಿಯ ಅತಿ ಹಳೆಯ ಉಲ್ಲೇಖವೆನ್ನಬಹುದು. 'ಕುಮಾರವ್ಯಾಸಭಾರತ'ದಲ್ಲಿ ಭಟಸಾಹಸವನ್ನು ವರ್ಣಿಸುವ ಗದಾಪರ್ವದ ಒಂದು ಸನ್ನಿವೇಶದಲ್ಲಿ, ''ಬಿಡುವ ಬಿಡಿಸುವ ಪರರ ಘಾಯದ ತಡೆವ ಗೋಮೂತ್ರಕದ ಚಿತ್ರದ ಝಡಪದವಧಾನದ ವಿಧಾನದ....'' ಎಂಬ ಒಂದು ಪದ್ಯಭಾಗವಿದ್ದು (೬-೨೪), ಗತಿಚಿತ್ರ ಕವಿಯ ಲಕ್ಷ್ಯದಲ್ಲಿರುವುದು ಬಹುಮಟ್ಟಿಗೆ ಸಂಭಾವ್ಯವೆಂದು ಹೇಳಬಹುದು.

ಗೋಮೂತ್ರಿಕೆಯ ನಿದರ್ಶನಗಳು ಸಹ ಕನ್ನಡ ಸಾಹಿತ್ಯದಲ್ಲಿ ವಿರಳವೇ. 'ಮದನ ತಿಲಕ'ದಿಂದಲೇ ಇದರ ಆರಂಭವೆನ್ನಬಹುದು. ಇಲ್ಲಿ ಈ ಗತಿಚಿತ್ರದ ಆರು ನಿದರ್ಶನಗಳಿದ್ದು, ಆರೂ ವಿವಿಧೋದ್ದೇಶದವಾಗಿರುವುದು ನಮಗೆ ನಿರುತ್ಸಾಹವನ್ನುಂಟುಮಾಡುತ್ತದೆ.[7] (i) ''ಅಂಗನ್ಯಪಾಯತಿ ತುಂಗಭುಜಂ ಕಲಿ....'' ಎಂಬ ಆರಂಭದ ವನಮಂಜರೀವೃತ್ತವೂ (೧-೧೫), (ii) ''ಕಲಿಯೆ ಸೊಬಗನೆ ಕರಂ ನಿ । ರ್ಮಲನೆ....'' ಎಂಬ ಅರ್ಧಕಂದವೂ (೧-೨೮) ಕವಿ ಕೊಟ್ಟಿರುವ ಸೂಚನೆಗಳಿಂದ ಗೋಮೂತ್ರಿಕದ ನಿದರ್ಶನಗಳಾಗಲೂ ಸಾಧ್ಯವಿದೆಯೆಂದು ತಿಳಿಯುವುದು; ಆದರೆ ಉದ್ಧಾರಕ್ರಮವನ್ನು ಪರಿಶೀಲಿಸಿದಾಗ, ಅಕ್ಷರಸಂಯೋಜನೆ ಅದಕ್ಕೆ ಒಪ್ಪುವಂತಿಲ್ಲವೆನ್ನಬೇಕಾಗಿದೆ. ೧-೨೮ರ ಕಂದ ಅಸಮಗ್ರವಾಗಿರುವುದರಿಂದ ರಚನೆ ಕೈಗೂಡುವುದು ಶಕ್ಯವೂ ಇಲ್ಲ.

(iii) ಆಜಿಜೈತ್ರ[ಂ] ಕರಂ ಧೀರಂ । ರಾಜಿತಂ ಚಂದ್ರಮೂರ್ಜಿತಂ ।
ವಾಜಿಗೋತ್ರಂ ಸ್ಥಿರಂ ಧೀರಂ । ಪೂಜಿತಂ ಚಂದ್ರಮೂರ್ಜಿತಂ ॥ (೧-೪೧)



ಗತಿ ೨೭

''ಚಂದ್ರರಾಜನು ಯುದ್ಧವಿಜಯಿಯೂ ಮಹಾಧೀರನೂ ಶೋಭಾವಹನೂ ಊರ್ಜಿತನೂ ಆದವನು; ಚಂದ್ರರಾಜನು ವಾಜಿಗೋತ್ರದವನೂ ಸ್ಥಿರನೂ ಧೀರನೂ ಪೂಜಿತನೂ ಊರ್ಜಿತನೂ ಆದವನು.'' ಇದು ಕವಿಯ ಆತ್ಮನಿವೇದನೆಯ ಭಾಗ. ರಚನೆ ಛಂದಸ್ಸುಗಳು ಸಮರ್ಪಕವಾಗಿವೆ.

(iv) ಕವಿರಾಜಸಮಾನಂ ತಾಂ ಕವಿರಾಜಸಮಾನಸಂ ।
ಕವಿರಾಜಸಮಾನಂ ತಾಂ ಕವಿರಾಜಸಮಾನಕಂ ॥ (೧-೪೩)



ಗತಿ ೨೮

ಕವಿಚರಿತೆಯ ಪಾಠ 'ಗ' ಪ್ರತಿಯ ಪಾಠವೇ ಆದರೂ ರಚನೆಗೆ ಹೊಂದುವುದಿಲ್ಲ; ಆದ್ದರಿಂದ 'ಗ' ಹಸ್ತಪ್ರತಿಯ ಸಹಾಯವನ್ನು ಪಡೆದು ಸ್ವತಂತ್ರವಾಗಿ ಪುನರ್ರಚಿಸಿದ ಪಾಠವನ್ನಿಲ್ಲಿ ಕೊಟ್ಟಿದೆ. (ಸೂಚನೆ ೧–೮೩ರ ಪದ್ಯಕ್ಕೆ ಅನ್ವಯಿಸುವುದೆಂಬುದಾಗಿ ಇಲ್ಲಿ ಗ್ರಹಿಸಿದೆ) : ''ತಾನು ಕವಿರಾಜಸಮಾನನು ; ಕವಿರಾಜನಿಗೆ ಸಮಾನವಾದ ಮನಸ್ಸುಳ್ಳವನು; ಕವಿರಾಜಸಮಾನನಾದ ತಾನು ಕವಿರಾಜ ಸಮಾನಕನು (?).'' ಇದೂ ಕವಿಯ ಆತ್ಮ ನಿವೇದನೆಯೇ. ಚಿತ್ರರಚನೆ ಛಂದಸ್ಸುಗಳು, ತಿದ್ದಿದ ಪಾಠವೇ ಕವಿಪಾಠವಿದ್ದುದು ನಿಜವಾಗಿದ್ದರೆ, ಸಮರ್ಪಕ ವಾಗಿವೆ ಎನ್ನಬೇಕು.

(v) ''ಹರಿಯುಂ ಹರಿಯುಂ ಹರಿಯುಂ....'' ಎಂಬ ಆರಂಭದ ಅಶುದ್ಧವಾದ ಕಂದವೊಂದು (೧೦–೨೪) ಹಾಗೂ (vi) ''ಮಾರಾ ಮಾನಿನಿ ಮಾರಾನಾ....'' ಎಂಬ ಆರಂಭದ ಅಶುದ್ಧವಾದ ಶ್ಲೋಕ ವೊಂದು (೧೦–೨೫) ಕವಿಯ ಸೂಚನೆಯಂತೆ ಗೋಮೂತ್ರಿಕೆಗೆ ಲಕ್ಷ್ಯಗಳೂ ಆಗಬಹುದೆಂದು ತಿಳಿಯುವುದು; ಆದರೆ ಉದ್ಧಾರಕ್ರಮವನ್ನು ಗಮನಿಸಿದಾಗ, ಅಕ್ಷರಸಂಯೋಜನೆ ಅದನ್ನು ಸಮರ್ಥಿಸುವುದಿಲ್ಲ. ಪಾಠದೋಷ ಗಳಿಂದ ಹೀಗಾಗಿರಬಹುದು.

ಷಡಕ್ಷರಿಯ 'ರಾಜಶೇಖರ ವಿಳಾಸ'ದಲ್ಲಿಯ ಒಂದು ಲಕ್ಷ್ಯ ಈ ರೀತಿಯಾಗಿದೆ :

ಕುವಲಯಕಧಿಪತಿಯಪ್ಪನೆ । ತವೆ ಲಕ್ಷಣಯುಕ್ತನಲ್ಲದಿರ್ದೊಡೆ ರಾಜಂ ।
ಕುವಲಯಕಧಿಪತಿಯಪ್ಪನೆ । ತವೆ ಲಕ್ಷಣಯುಕ್ತನಲ್ಲದಿರ್ದೊಡೆ ರಾಜಂ ॥ (೧೨–೬೫)

''ಪೂರ್ಣ ಲಕ್ಷಣಯುಕ್ತನಲ್ಲದೆ ಇದ್ದರೆ ಚಂದ್ರನು ಕನ್ನೈದಿಲೆಗಳಿಗೆ ಒಡೆಯನಾಗುತ್ತಾನೆಯೇ? ಪೂರ್ಣ ಲಕ್ಷಣಯುಕ್ತನಲ್ಲದೆ ಇದ್ದರೆ ರಾಜನು ಭೂಮಂಡಲಕ್ಕೆ ಒಡೆಯನಾಗುತ್ತಾನೆಯೇ?''

ಈ ಕಂದಪದ್ಯದ ಛಂದಸ್ಸು ಚಿತ್ರರಚನೆಗಳು ನಿರ್ದುಷ್ಟವಾದವು. ಇದು ಸಮುದ್ಗವೆಂಬ ಯಮಕಭೇದಕ್ಕೆ ಲಕ್ಷ್ಯವೂ ಆಗಬಹುದಾಗಿದೆ. ಕುವಲಯ ಮತ್ತು ರಾಜ ಶಬ್ದಗಳಿಗಿರುವ ನಾನಾರ್ಥಗಳನ್ನು ಅವಲಂಬಿಸಿ ಕವಿ ಈ ಚಮತ್ಕಾರವನ್ನು ಕಲ್ಪಿಸಿದ್ದಾನೆ.

೩. ಅರ್ಧಭ್ರಮ

ಕನ್ನಡ ಸಾಹಿತ್ಯದಲ್ಲಿ ಅರ್ಧಭ್ರಮದಂತಹ ಸರಳ ಗತಿಚಿತ್ರದ, ಸಂಸ್ಕೃತ ಅಲಂಕಾರ ಶಾಸ್ತ್ರಗ್ರಂಥಗಳಲ್ಲಿ ಸಾಮಾನ್ಯವಾಗಿ ತಪ್ಪದೆ ನಿರೂಪಿತವಾಗಿರುವ ಚಿತ್ರಕಾವ್ಯದ ಒಂದು ಗತಿಚಿತ್ರಪ್ರಭೇದವಾಗಿರುವುದರ, ಒಂದೇ ಒಂದು ಲಕ್ಷ್ಯ ಸಹ ಗೋಚರಿಸದಿರುವುದು ಆಶ್ಚರ್ಯವನ್ನುಂಟುಮಾಡುತ್ತದೆ.

೪. ಸರ್ವತೋಭದ್ರ

ಶ್ರವಣಬೆಳ್ಗೊಳದ ಶಾಸನವೊಂದರಲ್ಲಿ (ಎಕ. ii, ೧೬೩/೧೩೩; ೯೮೨) ರಾಷ್ಟ್ರಕೂಟ ೪ನೆಯ ಇಂದ್ರ ರಾಜನ ಮರಣದ ಸಂಗತಿಯನ್ನು ಹೇಳುವುದು ಮುಖ್ಯ ಸಂಗತಿಯಾಗಿದ್ದರೂ, ಆ ದೊರೆಯ ಗುಣಸ್ತವನದ ಭಾಗವಾಗಿ ಆತನ 'ಕಂದುಕಾಗಮ'ದ ಕೌಶಲವನ್ನು ವಿಸ್ತಾರವಾಗಿ ನಿರೂಪಿಸಿರುವುದು ಕುತೂಹಲಕರವಾಗಿದೆ. ಹೀಗೆ ನಿರೂಪಿಸುವಾಗ ಒಂದು ಪಿರಿಯಕ್ಕರದಲ್ಲಿ (ಸಾಲು ೧೧೦–೧೬) ಆ ಕೌಶಲದ ವರ್ಣನೆ ಹೀಗೆ ಬಂದಿದೆ :

ನೆಗಟ್ದ ಮಂಡಳಮಾಳೆ ತ್ರಿಮಂಡಳ ಯಾಮಕಮಂಡಳಮರ್ಧಚಂದ್ರಮಾರ್ಗಂ
ಬಗೆವೊಡರಿದಪ್ಪ ಸರ್ವತೋಭದ್ರಮುದ್ಧವಟಿಂ ಚಕ್ರವ್ಯೂಹಂ ಬಲ್ಕೆಗಳಂ
ಪೊಗಟಿಸಲ್ತಕ್ಕ ಪೆಜಿವು ದುಷ್ಕರದೆಟಿಪಂಗಳನಶ್ರಮದಿನೆಟಿಯಲ್
ಜಗದೊಳೆಟಿವ ಬೆಡಂಗನೊರ್ವನೆ ಬಲ್ಲಂ....ನ್ನಾರಾಳಂ ಮಾನ್ತರಮೆ (?) ॥

ಇಲ್ಲಿ 'ಎಟಿವ ಬೆಡಂಗ'ನಾದ ಇಂದ್ರರಾಜನು ಮಂಡಳ, ತ್ರಿಮಂಡಳ, ಯಾಮಕಮಂಡಳ, ಅರ್ಧ ಚಂದ್ರಗಳೆಂಬ ಚಮತ್ಕಾರಗಳನ್ನು ಮಾತ್ರವೇ ಅಲ್ಲದೆ, ''ಅರ್ಗಂ ಬಗೆವೊಡರಿದಪ್ಪ ಸರ್ವತೋಭದ್ರಂ'', ಉದ್ಧವಟಿ,

ಗೋಮೂತ್ರಿಕೆ

('ರಾಜಶೇಖರವಿಳಾಸ', ೧೧-೭೫)



ಗತಿ ೨೯

ಚಕ್ರವ್ಯೂಹ, ಸಾಮರ್ಥ್ಯವನ್ನು ಹೊಗಳಿಸತಕ್ಕ ಇನ್ನೂ ಎಷ್ಟೋ 'ದುಷ್ಕರದೇಟಿಪ'ಗಳನ್ನೂ ಬಲ್ಲವನಾಗಿದ್ದನೆಂದು ವರ್ಣಿಸಿದೆ. 'ಸರ್ವತೋಭದ್ರ' ಮೂಲತಃ ಚಿತ್ರಕಾವ್ಯದ ಗತಿಚಿತ್ರದ ಒಂದು ಪ್ರಭೇದವೇ. ಇಲ್ಲಿ ಆ ಗತಿಚಿತ್ರದ ನಡೆಯನ್ನು ಆ ಕರ್ಣಾಟಕದ ಚಕ್ರವರ್ತಿ ಆ ಕಾಲದ, ಅದೊಂದು ರೀತಿಯ ಚೆಂಡಿನಾಟದ ಕೌಶಲದಲ್ಲಿ ತೋರಿಸುತ್ತಿದ್ದುದು ಮೇಲಿನ ಪದ್ಯದಿಂದ ತಿಳಿಯುತ್ತದೆ. ಅದರ ಸ್ವರೂಪವನ್ನು ಆ ಗತಿಚಿತ್ರದ ಉದ್ಧಾರಕ್ರಮವನ್ನು ಹಿಡಿದು ನಾವು ದೃಶ್ಯಗೊಳಿಸಿಕೊಳ್ಳುವುದು ಸಾಧ್ಯವಿದೆ ಎಂದು ತೋರುತ್ತದೆ.

ಸಂದರ್ಭ ಯಾವುದೆಂಬುದು ಸ್ಪಷ್ಟವಾಗದ, ಅಜ್ಞಾತಕರ್ತೃಕ ಕಾವ್ಯವೊಂದರಲ್ಲಿ ಬರುವ, ಇನ್ನೆರಡು ಪದ್ಯಗಳೂ ಮೇಲಿನ ಪದ್ಯದ ಹಾಗೆಯೇ ಇದ್ದು, ಮಲ್ಲಕವಿಯ 'ಕಾವ್ಯಸಾರ'ದಲ್ಲಿಯ ಆ ಪದ್ಯಗಳನ್ನು ಇಲ್ಲಿ ಉದ್ಧರಿಸಿಕೊಡಬಹುದಾಗಿದೆ (೮–೫೮೧, ೫೮೨) :

ವಿಲಸತ್ಕಂತುಕಮಂ ಪುಟಂ ನೆಗೆವವೋಲಾರ್ಪೊಯ್ದು ಸೆಂಡೆಯ್ತರಲ್
ನಲವಿಂದಂ ಪೊಜಗೆಯ್ಯೊಳಾಂತು ಮಗುಟ್ದಾರ್ಪಿಂ ಮಾಣದೋರಂತೆ ತಾ
ಳಲಯಂ ರಂಜಿಸೆ ಚಿತ್ರಬಂಧಗತಿಯೊಳ್ ಮೇಲ್ಮೆಟ್ಟಿನೊಳ್ ಪೊಯ್ದು ಕೋ
ಮಲೆ ಪುಷ್ಪಾ[ಸ್ತ್ರ] ನೆಗಟ್ದು ಮೂಡಿಕೆಗಳಿಂ ಪುಷ್ಪಾಸ್ತ್ರನಂ ಪೊಯ್ಯಳೇ ॥
ನಡೆಸೆಂಡಂ ಪೊಡೆಸೆಂಡನಾರ್ಪಿನೊಡೆಸೆಂಡಂ ಪಾರ್ವ ಸೆಂಡಂ ಕರಂ
ಪಡಿಸೆಂಡಂ ಪುಡಿಸೆಂಡನಿರ್ದೆಸೆಗಳೊಳ್ ಪೋಸೆಂಡನೂರ್ಧ್ವಕ್ಕೆ ಪೊ
ಯ್ವಡುಸೆಂಡಂ ಪೊಜಗಯ್ಯೊಳಪ್ಪಳಿಪ ಸೆಂಡಂ ಚಿತ್ರಬಂಧಂಗಳೊಳ್
ತಡೆದೊಪ್ಪಂಬಡೆದಾಡಿದಳ್ ವಿಟಜನಂ ಕೊಂಡಾಡಿ ಬೆಂಡಪ್ಪಿನಂ ॥

ಈ ಪದ್ಯಗಳಲ್ಲಿಯೂ ಕಂದುಕಾಗಮದ ಕೌಶಲವನ್ನು ಕುರಿತಿದೆ. ಇಲ್ಲಿ ಸರ್ವತೋಭದ್ರ ಮೊದಲಾದ ಯಾವುವಾದರೂ ಗತಿಗಳನ್ನು ಕುರಿತಿರುವುದು ದಿಟವಾದರೂ ಆ ಗತಿಗಳನ್ನು ಇಲ್ಲಿ ನಿರ್ದೇಶಿಸುವುದು ಕಷ್ಟ.

ಚಂದ್ರರಾಜನ 'ಮದನತಿಲಕ'ದಲ್ಲಿ ಸರ್ವತೋಭದ್ರದ ಲಕ್ಷ್ಯಗಳು ಸಹ, ಅರ್ಧಭ್ರಮದ ಲಕ್ಷ್ಯಗಳ ಹಾಗೆಯೇ ಗೋಚರಿಸುತ್ತಿಲ್ಲ. 'ಕಿಱಿಯ ಸರ್ವತೋಭದ್ರ'ವೆಂಬ ಹೆಸರಿನ ಒಂದು ವಿವಿಧೋದ್ದೇಶದ ಲಕ್ಷ್ಯವೇನೋ (೧೦–೮) ಉಂಟು. ಇದು ಈಗಾಗಲೇ ಗತಪ್ರತ್ಯಾಗತದ ಸಂದರ್ಭದಲ್ಲಿ ಗಮನಿಸಿರುವ ಪದ್ಯವೇ ಆಗಿದೆ. 'ಕುಸುಮಾಮನೋಹರಂ' ಎಂಬುದಾಗಿ ಪ್ರತಿಪಾದದಲ್ಲಿಯೂ ಆವೃತ್ತಿಯಾಗುವ ೪ ಪಾದಗಳ ಈ ವೃತ್ತ 'ಕಿಱಿಯ ಸರ್ವತೋಭದ್ರ'ವಾಗಿ ಹೇಗೆ ಉದ್ಧೃತವಾಗಬೇಕೋ ತಿಳಿಯದೆ ಇದೆ. 'ಸರ್ವತೋಭದ್ರ' ಕಿರಿಯದಾಗಿ ಹೇಗಿರಬಹುದು ಎನ್ನುವುದಕ್ಕೆ ನಿಯಮ ಎಲ್ಲಿಯೂ ನಿರೂಪಿತವಾಗಿಲ್ಲ. ಅಲ್ಲದೆ ಸರ್ವತೋಭದ್ರದ ರಚನೆಗೆ ಅಗತ್ಯವಾದ ಪ್ರಮಾಣದಲ್ಲಿ ಕೋಷ್ಠಗಳ ರಚನೆ ಹಾಗೂ ಪದ್ಯದ ಗತಪ್ರತ್ಯಾಗತದ ಲಕ್ಷಣ ಇಲ್ಲಿ ತೋರುವುದು ಸಾಧ್ಯವಿಲ್ಲ. ಈ ಕಾರಣಗಳಿಗಾಗಿ ಇಲ್ಲಿ ಈ ಲಕ್ಷ್ಯವನ್ನು ಉದ್ಧರಿಸಿ ತೋರಿಸಿಲ್ಲ. 'ಮಹಾಯಮಕ'ದ ಲಕ್ಷ್ಯವೆಂದು ಧಾರಾಳವಾಗಿ ಹೇಳಬಹುದು; ಆ ಬಗ್ಗೆ 'ಯಮಕ'ದ ಅಧ್ಯಾಯದಲ್ಲಿ ಈಗಾಗಲೇ ಗಮನಿಸಿದೆ.

ಅಡಿಟಿಪ್ಪಣಿಗಳು

1. 'ಕವಿರಾಜಮಾರ್ಗವಿವೇಕ', ಪು. ೨೪೧

2. 'ಕವಿರಾಜಮಾರ್ಗವಿವೇಕ', ಪು. ೨೪೧; ಟಿಪ್ಪಣಿಗಳು, 'ಕವಿರಾಜಮಾರ್ಗಂ', ಪು. ೨೩೯

3. ಈ ನ್ಯೂನತೆಯನ್ನು ಈಗಾಗಲೇ ಲಕ್ಷಿಸಿದೆ. ನೋಡಿ : 'ಎರಡನೆಯ ನಾಗವರ್ಮ', ಐಬಿಎಚ್., ಪ್ರಕಾಶನ, ಗಾಂಧಿನಗರ, ಬೆಂಗಳೂರು, ೧೯೭೩, ಪು. ೭೫

4. ಮದರಾಸು ಪರಿಷ್ಕರಣಕರ್ತರು ಗತಿಯನ್ನು ತಮ್ಮ ಪರಿಷ್ಕರಣದ ೭ನೆಯ ಪರಿಶಿಷ್ಟದಲ್ಲಿ ತೋರಿಸಿರುವರಾದರೂ ''ಈ ವೃತ್ತವು ಉದ್ಧಾರಕ್ಕೆ ಸ್ವಲ್ಪವೂ ಸರಿಬಾರದಿರುವುದರಿಂದಲೂ, ಸರ್ವತೋಭದ್ರ ವೃತ್ತದ ಪದ್ಯವೇ ಈ ಬಂಧಕ್ಕೆ ಸರಿಬರುವುದರಿಂದಲೂ ಅದನ್ನೇ 'ಅರ್ಧಭ್ರಮಣ'ಕ್ಕೆ ಉದ್ಧಾರಮಾಡಿ'' ತೋರಿಸಿದ್ದಾರೆ.

5. ಗತಿ ತೃಪ್ತಿಕರವಾಗಿ ಉದ್ಧಾರವಾಗುವುದು ಕಷ್ಟವೆಂಬುದನ್ನು ಈಗಾಗಲೇ ಗಮನಿಸಲಾಗಿದೆ. ನೋಡಿ : 'ಎರಡನೆಯ ನಾಗವರ್ಮ', ಪು. ೨೬

6. ಹರದಿಹಳ್ಳಿ ನಂಜಣಾರ್ಯನ 'ಏಕೋರಾಮೇಶ್ವರ ಪುರಾಣ'ದಲ್ಲಿ ''ಚಿಲುಪಾಲು ತವರಾಜವೆರಡಱ ಸುಯೋಗದಂ। ತಲಘು ಸಂಸ್ಕೃತ ವಿಭಕ್ತಿಗಳಾಂತದೊಳ್ ಚಾರು। ಲಲಿತ ಕರ್ನಾಟಕ ವಿಭಕ್ತಿ ಸಂಪರ್ಕಂಗಳೀ ದಿವ್ಯಕಲ್ಪಲತೆಯಂ'' (೧-೩೦) ಎಂಬ ಮಾತು ಬಂದಿರುವುದನ್ನಿಲ್ಲಿ ನೆನೆಯಬಹುದು. ಅಲ್ಲದೆ 'ಚೀರಮಕಾವ್ಯ'ದ ೯–೨೨ರ ನಿದರ್ಶನವನ್ನೂ ವಿಮರ್ಶಿಸುವುದು ಅಗತ್ಯವಿದೆ.

7. ಇಂತಹ ಚಿತ್ರವಿಶ್ರಗಳು ತೆಲುಗು ಭಾಷೆಯಲ್ಲಿಯೂ ಸಾಮಾನ್ಯ. ನೋಡಿ : 'ತೆಲುಗುಲೋ ಚಿತ್ರಕವಿತ್ವಮು', ಪು. ೪೩೦-೩೬

೮

ಬಂಧಚಿತ್ರ

ಆಕಾರ ಮತ್ತು ಬಂಧಚಿತ್ರಗಳ ಸಾಮಾನ್ಯಸ್ವರೂಪ

ಆಕಾರ ಮತ್ತು ಬಂಧಚಿತ್ರಗಳು, ಕವಿಗಿರುವ ಪದ್ಯಕಟ್ಟುವ ಅದ್ಭುತ ಶಕ್ತಿಯ ಪ್ರದರ್ಶಕಗಳಾಗಿವೆ. ಕಾವ್ಯದ ಸೀಮೆಯಲ್ಲಿ ಈ ರಚನೆಗಳು ಒಂದು ರೀತಿಯ ಸರ್ಕಸ್ಸಿನ ಚಾತುರ್ಯಪ್ರದರ್ಶನಗಳು. ರಸಕಾವ್ಯದ ಜೀವಾಳ ವೆನ್ನುವ ಕೆಲವು ಆಲಂಕಾರಿಕರ ಪ್ರಕಾರ ಚಿತ್ರಕಾವ್ಯಗಳು ಸೈಜಕಾವ್ಯದ ಮಟ್ಟದಿಂದ ಎಷ್ಟೋ ಕೆಳಗೆ ನಿಲ್ಲುವಂಥವು. ಏಕೆಂದರೆ ಅವು ರಸಾಭಿವ್ಯಂಜನೆಯಲ್ಲಿ ಅಡ್ಡಿಯುಂಟುಮಾಡುತ್ತವೆ ಎನ್ನುವುದು ಅವರ ಗ್ರಹಿಕೆ. ಅಲ್ಲದೆ ಅವು ಗ್ರಹಣಶಕ್ತಿಗೆ, ಯಮಕದ ಅಸಂಖ್ಯಮಾದರಿಗಳ ವಿಷಯ ಹೇಗೋ ಹಾಗೆಯೇ, ತುಂಬ ಆಯಾಸಕರವಾದವು. ಹೀಗಾಗಿ ಎಷ್ಟೋ ವಿದ್ವಾಂಸರು–ಪ್ರಾಚೀನರೂ ಆಧುನಿಕರೂ ಸೇರಿದಂತೆ ಈ ಜ್ಞಾನಶಾಖೆಯ ಬಗೆಗೆ ತಕ್ಕ ಪ್ರಾಶಸ್ತ್ಯ ಕೊಟ್ಟಿಲ್ಲ. ಆದರೆ ಅದನ್ನು ನಾವು ಲಕ್ಷಿಸಬೇಕಾಗಿಲ್ಲ. ಈ ಚಿತ್ರಕಾವ್ಯಗಳು ದೊರೆಯ ಪ್ರಸಾದವನ್ನು ಸಂಪಾದಿಸ ಲಾಗಲಿ, ಪಂಡಿತಮಂಡಲಿಯನ್ನು ಮೆಚ್ಚಿಸಲಾಗಲಿ, ಕವಿತ್ವಶಕ್ತಿಯ ಮೆರೆತಕ್ಕಾಗಿ ಮಾತ್ರವಲ್ಲ, ಬೇರೆ ಎಷ್ಟೋ ವಿಧಗಳಲ್ಲಿಯೂ ಉಪಯುಕ್ತಕರವಾದುವಾಗಿವೆ. ಉದಾಹರಣೆಗೆ, ಅವುಗಳ ಅಭ್ಯಾಸ ಪ್ರಾಚೀನ ಭಾರತೀಯ ಇತಿಹಾಸ ಸಂಸ್ಕೃತಿಗಳ ಅಭ್ಯಾಸಿಗೆ ಫಲಕಾರಿಯಾದುದು. ಅದು ಮಧ್ಯಕಾಲೀನ ಜನಜೀವನದ, ಕಾಲಮಾನದ ಭಾರತೀಯರ ಸ್ವಭಾವದ ಹಾಗೂ ಆ ಕಾಲದ ಸಾಮಾಜಿಕರಚನೆಯ, ಸ್ಥಿತಿಗತಿಗಳ ಬಗೆಗೆ ಕೆಲಮಟ್ಟಿಗೆ ಬೆಳಕು ಚೆಲ್ಲುತ್ತದೆ. ಅದು ಹಲವು ಯುದ್ಧೋಪಯೋಗಿ ಆಯುಧಗಳ, ಬಗೆಬಗೆಯ ನೇಗಿಲು, ಚಾಮರಗಳು ಇತ್ಯಾದಿಗಳ ಹೆಸರುಗಳನ್ನು, ಕೆಲವೊಮ್ಮೆ ಅವುಗಳ ಭಾಗಗಳ ಹೆಸರುಗಳನ್ನು ಸಹ, ತಿಳಿಸುತ್ತದೆ. ಈ ಅಧ್ಯಯನ, ಕೆಲವು ಸಂದರ್ಭಗಳಲ್ಲಿ ತಜ್ಞನಾದವನಿಗೆ ಅವುಗಳ ರಹಸ್ಯಗಳನ್ನು ಕಾಪಾಡಲು ಅನುವು ಮಾಡಿಕೊಡಬಹುದು. ಕೆಲವೊಮ್ಮೆ ನಿಜವಾದ ಕಾವ್ಯಕ್ಷೇತ್ರದೊಳಗೆ ಪ್ರವೇಶಿಸಲು ಇದು ಪ್ರಚೋದನೆಯನ್ನೂ ನೀಡಬಹುದು. ಮುಂದು ವರಿದು, ಇವುಗಳ ಅಭ್ಯಾಸ, ಇಂತಹ ಚಿತ್ರಗಳನ್ನು–ಬಳಕೆಯಲ್ಲಿರುವಂಥವನ್ನೂ ಹೊಸವನ್ನೂ–ರಚಿಸಲು ಅಪೇಕ್ಷಿ ಸುವವರಿಗೆ ಮಾದರಿಗಳನ್ನು ಒದಗಿಸಬಹುದು. ವಿಶೇಷವಾಗಿ, ಚಿತ್ರಕಾವ್ಯಗಳ ಅಭ್ಯಾಸ, ಗಣಿತಶಾಸ್ತ್ರದ ಸಮಸ್ಯೆ ಗಳು ಆಸಕ್ತಿಯುಳ್ಳ ಗಣಿತದ ಅಭ್ಯಾಸಿಗೆ ಹೇಗೆ ವಿನೋದದ ಸಾಧನೆಯಾಗಬಹುದೋ ಹಾಗೆಯೇ, ಮನೋ ರಂಜನೆಯ ಸಾಧನವಾಗಲೂ ಬಹುದು. ಇದರ ಜೊತೆಗೆ ಚಿತ್ರಕಾವ್ಯಗಳ ಉಗಮ ವಿಕಾಸಗಳಿಗೆ ಸಂಬಂಧಿಸಿದ ಹಾಗೆ, ಹೇಗೆ, ಏಕೆ, ಎಲ್ಲಿ, ಯಾವಾಗ ಎಂಬ ರೀತಿಯ ಪ್ರಶ್ನೆಗಳಿಗೆ ಇನ್ನೂ ಉತ್ತರ ಕೊಡಬೇಕಾಗಿರುವುದರಿಂದ ಈ ಅಧ್ಯಯನ ಹೊಸ ಸಂಶೋಧನಕ್ಷೇತ್ರವನ್ನು ತೆರೆಯುತ್ತದೆ. ''ಚಿತ್ರಕಾವ್ಯದ ಬೆಲೆ ಏನೇ ಇರಲಿ, ಭಾರತದಲ್ಲಿ ಹಿಂದೆ ಅದರ ರಚನೆಗಳು ನಡೆದಿವೆ; ಇಂದೂ ಕೆಲವರು ಈ ಬಗೆಯ ರಚನೆಗಳಲ್ಲಿ ಸಂತೋಷಿಸುತ್ತಾರೆ.''

ಭಾರತ ಇತರ ಹಲವು ದೃಷ್ಟಿಗಳಿಂದ ಹೇಗೋ ಹಾಗೆಯೇ ಪಾಂಡಿತ್ಯದೃಷ್ಟಿಯಿಂದಲೂ ವೈಶಿಷ್ಟ್ಯ ವುಳ್ಳುದು. ಬಂಧಚಿತ್ರಗಳ (letter diagrams)[1] ಪದ್ಯರಚನೆ ಉಗಮಗೊಂಡು ಬೆಳೆದದ್ದು ಇಲ್ಲಿಯೇ. ಆಧುನಿಕ ಕಾಲವೂ ಸೇರಿದಂತೆ ಪಾಶ್ಚಾತ್ಯ ಸಾಹಿತ್ಯದಲ್ಲಿ ಈ ಬಗೆಯ ರಚನೆಗಳು ಕಂಡುಬಂದಿಲ್ಲ ಎನ್ನುವುದು ಅಚ್ಚರಿಯನ್ನುಂಟುಮಾಡುವ ಸಂಗತಿ.[2] ಈ ಆಕಾರಚಿತ್ರಗಳ ಸಮಸ್ಯೆಗಳ ಬಗೆಗೆ, ಹಿಂದಣವರೇ ಆಗಲಿ, ಇಂದಿನವರೇ ಆಗಲಿ, ಭಾರತೀಯ ವಿದ್ವಾಂಸರು ತಕ್ಕ ಲಕ್ಷ್ಯವನ್ನು ಕೊಡದಿರುವುದು ಏಕೋ ಏನೋ ತಿಳಿಯದಾಗಿದೆ. ಯಾವ ಭಾಷೆಗಳಲ್ಲಿ ಪದಗಳು ಬರೆಯಲ್ಪಟ್ಟ ಹಾಗೆಯೇ ಓದುವುದು ಸಾಧ್ಯವಿದೆಯೊ, ಎಂದರೆ ಪ್ರತಿಯಕ್ಷರಕ್ಕೂ ಒಂದು ಗೊತ್ತಾದ ಉಚ್ಚಾರಣೆಯಿರುತ್ತದೆಯೊ, ಆ ಭಾಷೆಗಳಲ್ಲಿಯ ಪದ್ಯರಚನೆಯಿಂದ ಮಾತ್ರ ಬಂಧಚಿತ್ರಗಳು ರೂಪ ಗೊಳ್ಳುವುದು ಸಾಧ್ಯ. ಇದು ಹೀಗಿದ್ದರೆ ಇಂಗ್ಲಿಷ್ ಸೇರಿದಂತೆ ಅಂತಹ ಐರೋಪ್ಯ ಭಾಷೆಗಳು ಮೊದಲಾದವುಗಳಲ್ಲಿ ಈ ಬಗೆಯ ಕಾವ್ಯಪದ್ಧತಿ ಸಾಧ್ಯವಿಲ್ಲ ಎನ್ನಬಹುದು.

ಆಕಾರಚಿತ್ರಗಳೆಂದೂ ಬಂಧಚಿತ್ರಗಳೆಂದೂ ಭೋಜನು (ಸು. ೧೦೦೫–೫೪) ತನ್ನ 'ಸರಸ್ವತೀಕಂಠಾಭರಣ'ದಲ್ಲಿ ಎರಡು ರೀತಿಯಲ್ಲಿ ವಿಭಜಿಸಿ ಇವುಗಳಲ್ಲಿ ಕ್ರಮವಾಗಿ ೮–೮ ಬಗೆಗಳನ್ನು ಹೇಳಿರುವನಾದರೂ, ಈ ಗ್ರಂಥದ 'ರತ್ನದರ್ಪಣ' ವ್ಯಾಖ್ಯಾನದಲ್ಲಿ ವ್ಯಾಖ್ಯಾಕರ್ತೃ ರತ್ನೇಶ್ವರನು (ಸು. ೧೪ನೆಯ ಶ.) ''ಆಕಾರಃ ಪದ್ಮಾದ್ಯಾಕೃತ್ಯನುಕ್ರಮಣವತ್....ಬಂಧೋ ವಿವಿಡಿತಿ ಪ್ರಭೃತಿಃ'' ಎಂಬುದಾಗಿ ಅದನ್ನು ಸಮರ್ಥಿಸಿದ್ದರೂ, ಚಿತ್ರಕಾವ್ಯದ ಸ್ವರೂಪವನ್ನು ನಿರೂಪಿಸುವಾಗ ಈ ರೀತಿಯಾಗಿ ಲಾಕ್ಷಣಿಕರು ಪ್ರತ್ಯೇಕವಿಭಾಗಗಳನ್ನು ಮಾಡದೆ ಬಂಧಗಳೆಂದೇ ಈಯೆಲ್ಲವನ್ನೂ ತಿಳಿದು ವಿಚಾರಮಾಡಿರುವುದು ಕಾಣುತ್ತದೆ. ಪಾಣಿನಿಯ 'ಅಷ್ಟಾಧ್ಯಾಯಿ'ಯಲ್ಲಿ 'ಬಂಧೇ ಚ ವಿಭಾಷಾ' (೬–೩–೧೩) ಎಂಬುದಾಗಿ ಮಾತ್ರವಿದೆ.

'ಚಿತ್ರ'ದ ಸಾಮಾನ್ಯಲಕ್ಷಣವನ್ನು ರುದ್ರಟ

ಭಂಗ್ಯಂತರಕೃತತತ್ಕ್ರಮವರ್ಣನಿಮಿತ್ತಾನಿ ವಸ್ತುರೂಪಾಣಿ ।
ಸಾಙ್ಕಾನಿ ವಿಚಿತ್ರಾಣಿ ಚ ರಚ್ಯಂತೇ ಯತ್ರ ತಚ್ಚಿತ್ರಮ್ ॥ (೫–೧)

ಎಂಬುದಾಗಿಯೂ 'ಅಗ್ನಿಪುರಾಣ'ದಲ್ಲಿ ಅದನ್ನು

ಅನೇಕಧಾ ವೃತ್ತವರ್ಣವಿನ್ಯಾಸೈಃ ಶಿಲ್ಪಕಲ್ಪನಾ ॥
ತತ್ತತ್ಪ್ರಸಿದ್ಧವಸ್ತೂನಾಂ ಬಂಧ ಇತ್ಯಭಿಧೀಯತೇ ॥ (ಅ. ೩೪೩–೩೫, ೩೬)

ಎಂಬುದಾಗಿಯೂ ನಿರೂಪಿಸಿದ್ದು[3], ಇಲ್ಲಿ ಅಂತಹ ಅಂತರ್ವಿಭಾಗಗಳನ್ನು ಮಾಡಿಲ್ಲ ಎನ್ನುವುದನ್ನು ಗಮನಿಸಬೇಕು.

ಹೇಮಚಂದ್ರ (೧೦೮೮–೧೧೭೨) 'ಕಾವ್ಯಾನುಶಾಸನ'ದಲ್ಲಿ 'ಸ್ವರವ್ಯಂಜನಸ್ಥಾನಗತ್ಯಾಕಾರನಿಯಮಚ್ಯುತಗೂಢಾದಿ ಚಿತ್ರಮ್' ಎಂಬುದಾಗಿ ಒಂದು ಸಾಮಾನ್ಯಲಕ್ಷಣವನ್ನು 'ಚಿತ್ರ'ಕ್ಕೆ ತಿಳಿಸುವಾಗ (೫–೪) 'ಆಕಾರ' ಎಂದಿದ್ದರೂ ತನ್ನದೇ 'ಅಲಂಕಾರಚೂಡಾಮಣಿ' ವ್ಯಾಖ್ಯೆಯಲ್ಲಿ ''ಆಕಾರಃ ಖಡ್ಗ ಮುರಜ ಬಂಧಾದ್ಯಾಕೃತಿಃ'' ಎಂಬುದಾಗಿ ತಿಳಿಸುವಲ್ಲಿ (ಪ. ೪೬೭) ಆಕಾರ ಮತ್ತು ಬಂಧಗಳನ್ನು ಅಭಿನ್ನವಾಗಿಯೇ ತಿಳಿದಿರುವುದು ಕಾಣುತ್ತದೆ. 'ವಾಗ್ಭಟಾಲಂಕಾರ'ದಲ್ಲಿ (ಸು. ೧೧೨೫–೪೩) 'ಆಕಾರಚಿತ್ರ'ವೆಂದು ಷೋಡಶದಲಪದ್ಮಬಂಧವನ್ನು ಕರೆದಿದೆ (೪–೮).

ಇವನ್ನು ಗಮನಿಸಿ ಪ್ರಸ್ತುತ ವಿವೇಚನೆಯಲ್ಲಿಯೂ ಆಕಾರ ಮತ್ತು ಬಂಧಚಿತ್ರಗಳ ನಡುವೆ ವ್ಯತ್ಯಾಸ ಮಾಡದೆ ಎಲ್ಲವನ್ನೂ ಬಂಧಗಳೆಂದೇ ಸಾಮಾನ್ಯವಾಗಿ ಕರೆದಿದೆ.

ಇವುಗಳ ಸಾಮಾನ್ಯ ಸ್ವರೂಪವೇನು? ಇಂದ್ರಿಯಪ್ರಪಂಚಕ್ಕೆ ವಿಷಯವಾದ ಯಾವುದೇ ಪ್ರಾಣಿಪಕ್ಷಿಗಳನ್ನೂ ವಸ್ತುವಿಶೇಷಗಳನ್ನೂ ಋಜುಕುಟಿಲವೋ ವರ್ತುಲವೋ ಆದ ರೇಖೆಗಳಲ್ಲಿ ಆಕೃತಿಗೊಳಿಸಿ, ಆ ಆಕೃತಿಗಳಲ್ಲಿ ಗೊತ್ತಾದ ನಿಯಮಗಳನ್ನು ಅನುಸರಿಸಿ ರಚಿಸಿದ ಪದ್ಯದ ಅಕ್ಷರಗಳನ್ನು ತುಂಬುವುದು ಸಾಧ್ಯವಾದರೆ ಅವು ಬಂಧಚಿತ್ರಗಳೆನಿಸುವುವು. ಪದ್ಯದ ಪ್ರಮಾಣ ಆಕೃತಿಯ ಪ್ರಮಾಣಕ್ಕೆ ಅನುಗುಣವಾಗಿರಬೇಕಾಗುವುದರಿಂದ, ಕೆಲವೊಮ್ಮೆ ಒಂದು ಪದ್ಯದಿಂದಲೇ ಇದು ಸಾಧ್ಯವಾದರೆ, ಇನ್ನು ಕೆಲವು ಸಲ ಒಂದಕ್ಕಿಂತ ಹೆಚ್ಚಿನ ಪದ್ಯಗಳ ಸಹಾಯ ಬೇಕಾಗಬಹುದು. ಒಂದು ಪದ್ಯ ಒಂದು ಬಂಧವನ್ನು ರೂಪಿಸಲು ಶಕ್ತವಾಗುವುದು ಒಂದು ವಿಧ. ಒಂದೇ ಪದ್ಯ ಒಂದಕ್ಕಿಂತ ಹೆಚ್ಚಿನ ಬಂಧಗಳನ್ನು ರೂಪಿಸಲು ಶಕ್ತವಾಗಬಹುದು; ಯಮಕಾದಿ ಬೇರೆ ಶಬ್ದಾಲಂಕಾರಗಳಿಗೂ ಲಕ್ಷ್ಯವಾಗಬಹುದು. ಪದ್ಯಸಮುಚ್ಚಯ ಕೂಡಿ ಒಂದು ಅಥವಾ ಹಲವು ಬಂಧಗಳನ್ನು ರೂಪಿಸಬಹುದು.

ಬಂಧಚಿತ್ರಗಳನ್ನು ರೂಪಿಸುವ ಪದ್ಯರಚನೆಯಲ್ಲಿ ಬಂಧಗಳ ಅಳವಡಿಕೆಗೆ ಸಹಾಯವಾಗಬಲ್ಲ ಸೌಲಭ್ಯದೃಷ್ಟಿಯ ಕೆಲವು ನಿಯಮಗಳನ್ನು, ಲಕ್ಷಣಗ್ರಂಥಗಳಲ್ಲಿ ಉಕ್ತವಾಗಿರುವುವನ್ನು, ಇಲ್ಲಿ ಗಮನಿಸಬಹುದಾಗಿದೆ.

ಬಂಧೋಚಿತ ಪದ್ಯಗಳನ್ನು ಆಯಾ ಬಂಧಗಳಲ್ಲಿ ಅಳವಡಿಸುವಾಗ ಬ–ವ, ಡ–ಲ ಈ ಕೆಲವು ಅಕ್ಷರಗಳನ್ನು ಅಭೇದವಾಗಿ ತಿಳಿದು ವ್ಯವಹರಿಸಬಹುದು; ಹಾಗೆಯೇ ಅನುಸ್ವಾರ ವಿಸರ್ಗಗಳನ್ನು ಅಗತ್ಯಬಿದ್ದಾಗ ಗಣನೆಗೆ ತಾರದಿರಬಹುದು. ಈ ವಿಷಯದಲ್ಲಿ ರುದ್ರಟನ 'ಕಾವ್ಯಾಲಂಕಾರ'ದ ವ್ಯಾಖ್ಯಾಕಾರನಾದ ನಮಿಸಾಧು (ಸು. ೧೦೦೦) ಹೀಗೆ ಇದನ್ನು ಸ್ಪಷ್ಟಪಡಿಸಿದ್ದಾನೆ (ಉದಾಹರಣೆಗಳನ್ನು ನಾನು ಸಂಕ್ಷೇಪಿಸಿದ್ದೇನೆ) :

ಯಮಕಶ್ಲೇಷಚಿತ್ರೇಷು ಬವಕಾರಯೋರೌಷ್ಠ್ಯದಂತೌಷ್ಠ್ಯಯೋರಭೇದೋ ದೃಶ್ಯತೇ । (ನೃಪತೇರಪಶ್ಯದಬಲಂ ವನಮ್–ಅಪಶ್ಯದನಲಂಬನಮ್); ತಥಾ ನಕಾರ ಣಕಾರಯೋಶ್ಚ ನ ಭೇದಃ (ತುರಗಾಣಾಂ–ಭಂಗಹೇತುರಗಾನಾಮ್); ವಿಸರ್ಜನೀಯಭಾವಾಭಾವಯೋಶ್ಚ ನ ವಿಶೇಷಃ (ರಾಜವಂಶಾದಜಾಯಥಾಃ–ವೃಕಯೂಥಾದಜಾಯಥಾ); ತಥಾಂತ್ಯಯೋರ್ಮಕಾರ ನಕಾರಯೋಶ್ಚ ನ ಭೇದಃ (ಸಮೀರಸಮರಂಹಸಮ್- ಸಮರಂ ಹಸನ್); ತಥಾ ವ್ಯಂಜನಾತ್ಪರಸ್ಯೈಕಸ್ಯ ವ್ಯಂಜನಸ್ಯ ದ್ವಯೋರ್ವಾ ನ ವಿಶೇಷಃ (ಶುಕ್ಲೇ ಶುಕ್ಲೇ–ಶನಾಶಂ ದಿಶತಿ) (೪–೪)

ಯಮಕ ಶ್ಲೇಷಚಿತ್ರಗಳಲ್ಲಿ ಬ–ವ ಕಾರಗಳಲ್ಲಿ, ಓಷ್ಠ್ಯ–ದಂತೋಷ್ಠ್ಯಗಳಲ್ಲಿ, ನಕಾರ–ಣಕಾರಗಳಲ್ಲಿ, ವಿಸರ್ಗ–ವಿಸರ್ಗಾಭಾವಗಳಲ್ಲಿ, ಪದಾಂತ್ಯ ಮಕಾರ–ನಕಾರಗಳಲ್ಲಿ, ಸಂಯುಕ್ತವ್ಯಂಜನಗಳಲ್ಲಿ ಸೇರುವ ವ್ಯಂಜನ ಸಂಖ್ಯೆಯಲ್ಲಿ, ಅಭೇದವನ್ನು ಗಣಿಸಬಹುದು ಎಂಬುದು ಇದರ ಆಶಯ. ಈ ವಿವರಣೆ ಬಂಧಚಿತ್ರಗಳಿಗೂ ಅನ್ವಯಿಸುತ್ತದೆ ಎಂದು ತಿಳಿದರೆ ತಪ್ಪಾಗದು.

ವಾಗ್ಭಟನು (ಸು. ೧೧೨೫–೪೩) 'ವಾಗ್ಭಟಾಲಂಕಾರ'ದಲ್ಲಿ ಇದನ್ನು ಹೀಗೆ ತಿಳಿಸಿದ್ದಾನೆ:

ಯಮಕ ಶ್ಲೇಷ ಚಿತ್ರೇಷು ಬವಯೋರ್ಡಲಯೋರ್ನ ಭಿತ್ ।
ಸಾನುಸ್ವಾರವಿಸರ್ಗೌ ಚ ಚಿತ್ರಭಂಗಾಯ ಸಮ್ಮತಾ ॥ (೧–೨೦)

ಇಮ್ಮಡಿ ವಾಗ್ಭಟನ 'ಕಾವ್ಯಾನುಶಾಸನ'ದ 'ಅಲಂಕಾರ ತಿಲಕ' ವ್ಯಾಖ್ಯಾನದಲ್ಲಿ ''ಸಾನುಸ್ವಾರವಿಸರ್ಗೌ ಚಿತ್ರಭಂಗಾಯ'' ಎಂಬುದಾಗಿ ವಾಗ್ಭಟಾಲಂಕಾರಕಾರನ ಮಾತನ್ನೇ ಅನುವಾದಿಸಿದೆ (ಪು. ೧೪).

ಅನ್ಯ ಲಾಕ್ಷಣಿಕರ ಮತದಂತೆ ರ–ಲ, ಶ–ಷ ಗಳೂ ನ–ಣ ಗಳೂ ಅಭೇದವೆಂದು ಗ್ರಹಿಸಬಹುದಾಗಿದೆ:

ಯಮಕಾದೌ ಭವೇದೈಕ್ಯಂ ಡಲಯೋರಲಯೋರ್ಬವೋಃ ।
ಶಷಯೋರ್ನಣಯೋಃ ಚಾಂತೇ ಸವಿಸರ್ಗಾವಿಸರ್ಗಯೋಃ ॥
ಸಬಿಂದುಕಾಬಿಂದುಕಯೋಃ ಸ್ಯಾದಭೇದಪ್ರಕಲ್ಪನಮ್ ॥

ಕನ್ನಡದ ಲಾಕ್ಷಣಿಕನಾದ ನಾಗವರ್ಮನು (೧೦೪೨) ವಾಗ್ಭಟನಿಗೂ ಮೊದಲಲ್ಲಿಯೇ ಈ ವಿಷಯವನ್ನು ಕುರಿತಿದ್ದಾನೆ; ಇದನ್ನು ನಮಿಸಾಧುವಿನ ವ್ಯಾಖ್ಯಾನದಿಂದ ಪ್ರೇರಿತನಾಗಿ ಬರೆದಿರುವುದು ಸಂಭಾವ್ಯ.

ಬವಕಾರಂಗಳ್ ಪಹ ವ । ರ್ಣವೆರಡುಮವಿಭೇದದಿಂದೆ ಸಲ್ಗುಂ ಸಂಯೋ ।
ಗವಿಶಿಷ್ಟಮುಂ ಸ್ವರೂಪಮು । ಮವಿಕಲ್ಪದೊಳೊಂದಿ ನೆಗಟ್ಗುಮವುದುಷ್ಕರದೊಳ್ ॥ (೧೩೦)

ಇಲ್ಲಿ ಪ–ಹ ಎಂಬ ವರ್ಣಗಳ ಹಾಗೂ ಸಂಯುಕ್ತ–ಅಸಂಯುಕ್ತಾಕ್ಷರಗಳ ಅಭೇದತ್ವವನ್ನು ಅಧಿಕವಾಗಿ ಹೇಳಿರುವುದು ಕಂಡುಬರುತ್ತದೆ. ಪ-ಹ ಅಭೇದತ್ವವಂತೂ ಕನ್ನಡ ಭಾಷೆಗೆ ವಿಶಿಷ್ಟವಾದುದೆನ್ನುವುದು ವಿದಿತವೇ ಇದೆ. ಭಾಷೆಯ ಇತಿಹಾಸದ ದೃಷ್ಟಿಯಿಂದಲೂ ಇದು ಗಮನಾರ್ಹವಾದ ಅಂಶ.

ಅಲ್ಲಿಗೆ ಬಂಧಚಿತ್ರಗಳಲ್ಲಿ ಅಭೇದತ್ವದ ವರ್ಣಗಳಾಗಿ ಲಾಕ್ಷಣಿಕರು ಒಪ್ಪಿರುವಂಥವು ಎಂದರೆ: (೧) ಡ–ಲ (೨) ಪ–ಹ (೩) ಬ–ವ (೪) ರ–ಲ (೫) ಶ–ಷ (೬) ನ–ಣ (೭) ಸಬಿಂದುಕ–ಅಬಿಂದುಕ (೮) ಸವಿಸರ್ಗ–ಅವಿಸರ್ಗ (೯) ಸಂಯುಕ್ತ–ಅಸಂಯುಕ್ತ. ಡ–ಳ, ರ–ಳ, ಲ–ಳ ಇವೂ ಶ–ಷ–ಸ ಇವೂ ಮ–ವ ಇವೂ ಅಭಿನ್ನಗಳಾಗಿ ಗ್ರಾಹ್ಯವಾಗಬಹುದೆಂದು ತೋರುತ್ತದೆ. ಸಂಯುಕ್ತ–ಅಸಂಯುಕ್ತಾಕ್ಷರಗಳ ಅಭೇದತ್ವವು ಅರ್ಥವೈಪರೀತ್ಯವುಂಟುಮಾಡದಂತೆ ಹೇಗೆ ವ್ಯವಹಾರಗೊಳ್ಳುವುದೋ ತಿಳಿಯದು (ನಾಗವರ್ಮನ ಲಕ್ಷ್ಯಪದ್ಯದ ಅರ್ಥವೂ ಸ್ಪಷ್ಟವಿಲ್ಲ) ಅರ್ಥವೈಪರೀತ್ಯವಾಗದ ಹಾಗೆ ಪದಾಂಶಗಳನ್ನು ಬಿಮ್ಮೊಮ್ಮೆ ಸ್ವೀಕಾರಮಾಡಬಹುದೇನೋ?

ಬಂಧಚಿತ್ರವಾಗಬೇಕಾದರೆ ರಚನೆ ಪದ್ಯವಾಗಿರಬೇಕು. ಒಂದು ಬಂಧಕ್ಕೆ ಒಂದು ಪದ್ಯ ಸಾಕಾಗುತ್ತದೆ. ಖಡ್ಗಬಂಧಕ್ಕಾದರೆ ತಪ್ಪದೆ, ಅಷ್ಟಾರ ಚಕ್ರಕ್ಕಾದರೆ ಸಾಮಾನ್ಯವಾಗಿ, ಎರಡು ಪದ್ಯಗಳು ಬೇಕಾಗುತ್ತವೆ. ಸಂಸ್ಕೃತದಲ್ಲಿ ಮಾತ್ರಾಛಂದಸ್ಸಿನ ಯಾವುದೇ ಪದ್ಯದಿಂದ ಚಿತ್ರಬಂಧಗಳನ್ನು ರೂಪಿಸಲಾಗುವುದಿಲ್ಲ. ವರ್ಣವೃತ್ತಗಳಲ್ಲಿ ಕೂಡ, ಯಾವುದೇ ಅಥವಾ ಎಲ್ಲ ವೃತ್ತಗಳೂ ಎಲ್ಲ ವಿಧದ ಬಂಧಗಳಿಗೆ ಹೊಂದಿಯೇ ಹೊಂದುತ್ತವೆ ಎನ್ನುವಂತಿಲ್ಲ. ಗೋಮೂತ್ರಿಕಕ್ಕೆ, ಬಹುಶಃ ಚಾಮರಬಂಧಕ್ಕೆ ಕೂಡ, ಯಾವುದೇ ಛಂದಸ್ಸು ಆಗಬಹುದು.

ಷಡರ ಚಕ್ರಕ್ಕೆ ಛಂದಸ್ಸು ಶಾರ್ದೂಲವಿಕ್ರೀಡಿತವಾಗಿರಬೇಕು. ಹೆಚ್ಚಿನ ಬಂಧಗಳಿಗೆಲ್ಲ ಸಂಸ್ಕೃತ ಕವಿಗಳು ಬಳಸಿರುವ ಛಂದಸ್ಸು ಅನುಷ್ಟುಪ್–ಶ್ಲೋಕ.

ಜೀವಿಗಳ ಆಕೃತಿಯನ್ನು ರೂಪಿಸಲು ಶಕ್ತವಾದ ಪದ್ಯ ಅಥವಾ ಪದ್ಯಗಳು ಕಂಡುಬರುವುದು ವಿರಳ. ಎಲ್ಲೋ ಕೆಲವೊಮ್ಮೆ ಮಾತ್ರ ನಾಗ, ಅಶ್ವ, ಉಷ್ಟ್ರ, ಮಾನವಾಕೃತಿ (ಬೊಂಬೆ), ಮರ ಇವುಗಳಲ್ಲಿ ಒಂದನ್ನು ರೂಪಿಸುವ ಪದ್ಯಗಳು ಕಾಣಬಹುದು. ಇವುಗಳಲ್ಲಿ ಹೆಚ್ಚಿನವು ಈಚಿನ ಕಾಲದವು.

ಕೆಲವು ಬಂಧಗಳಿಗೆ ಒಂದಕ್ಕಿಂತ ಹೆಚ್ಚಿನ ವೈಚಿತ್ರ್ಯಗಳು ಸಾಧ್ಯ. ಉದಾಹರಣೆಗೆ, ಪದ್ಮದಲ್ಲಿ ದಳಗಳ ಸಂಖ್ಯೆಗೆ ಅನುಗುಣವಾಗಿ ಬೇರೆಬೇರೆ ಬಂಧಗಳು ಏರ್ಪಡುತ್ತವೆ; ಹಾಗೆಯೇ ಪದ್ಮದಲ್ಲಿಯೇ ಯಥಾರೂಪ ಮತ್ತು ವಿಪರೀತಕ್ರಮಗಳನ್ನು ಹಿಡಿದು ಭೇದಾಂತರಗಳು ಕಾಣಿಸಿಕೊಳ್ಳಬಹುದು. ಚಕ್ರಬಂಧದಲ್ಲಿಯೂ, ಅರಗಳ ಸಂಖ್ಯೆಗೆ ಅನುಗುಣವಾಗಿ ಬೇರೆ ಬೇರೆ ಬಂಧಗಳು ಏರ್ಪಡುತ್ತವೆ. ಕೆಲವು ಲಕ್ಷ್ಯಗಳಲ್ಲಿ ಕವಿಯ ಹೆಸರು ಇಲ್ಲವೆ ಕೃತಿಯ ಹೆಸರು ಇಲ್ಲವೆ ಕವಿ ಹಾಗೂ ಕೃತಿ ಎರಡೂ ಹೆಸರುಗಳು ಗರ್ಭೀಕೃತವಾಗಿರುವಂತೆ ಪದ್ಯರಚನೆಯಿರುತ್ತದೆ. ಖಡ್ಗ, ನಾಗ, ಸ್ವಸ್ತಿಕ, ಮುರಜಬಂಧಗಳಲ್ಲಿಯೂ ಹೀಗೆಯೇ ವೈಚಿತ್ರ್ಯ ಕಲ್ಪನೆಗಳುಂಟು.

ಅರ್ಥಾಲಂಕಾರನಿಷ್ಠವಾದ ಪದ್ಯರಚನೆಗಿಂತ ಬಂಧವಾಗಿ ರೂಪಗೊಳ್ಳುವ ಪದ್ಯರಚನೆ ಕ್ಲಿಷ್ಟತರವಾದುದು. ನಿರ್ದಿಷ್ಟ ಪದ್ಯರಚನೆ ಯಾವ ಬಂಧಕ್ಕೆ ಅಳವಡಬಲ್ಲುದು ಎನ್ನುವುದನ್ನು ತಿಳಿಯುವುದಂತೂ ತೀರ ಕಷ್ಟ.

ಬಂಧಚಿತ್ರಗಳಲ್ಲಿ ಹೆಚ್ಚಿನವುಗಳಲ್ಲಿ, ಆಯಾ ಬಂಧದ ಗೊತ್ತಾದ ಸ್ಥಾನಗಳನ್ನು ಹಿಡಿಯುವ ಅಕ್ಷರ ಅಥವಾ ಅಕ್ಷರಗಳು ಒಂದಕ್ಕಿಂತ ಹೆಚ್ಚು ಸಲ ಓದಬೇಕಾಗುವ ಹಾಗೆ ಪದ್ಯರಚನೆಯಿರುತ್ತದೆ. ಕೆಲವು ಬಂಧಗಳಲ್ಲಿ ಹೀಗೇಕೆ ಎಂಬುದನ್ನು ವಿವರಿಸುವುದು ಸಾಧ್ಯ; ಉಳಿದವುಗಳ ವಿಚಾರ ಶೋಧಿಸಬೇಕಾದ್ದು. ಇನ್ನೊಂದು ಸಮಸ್ಯೆಯೆಂದರೆ, ಆಯಾ ಬಂಧದಲ್ಲಿ ಆರಂಭ ಅಥವಾ ಪ್ರವೇಶದ ಸ್ಥಾನ ಇದೇ ಎಂದು ಗೊತ್ತುಮಾಡಿಕೊಂಡಿರುವುದಕ್ಕೆ ಆಧಾರವೇನು ಎನ್ನುವುದು. ಇದೂ ವಿಚಾರಾರ್ಹ.

ಬಂಧದ ಮನೆಗಳಲ್ಲಿ ಅಳವಟ್ಟ ಪದ್ಯದ ಅಕ್ಷರಗಳ ಗುಣಿತಗಳಲ್ಲಿ ವಿಘಟನೆ ಅಥವಾ ವಿಚ್ಛೇದಕ್ಕೆ ಅವಕಾಶವಿಲ್ಲ. ಅವುಗಳನ್ನು ಸರಿಯಾಗಿ ಹಂಚಿರುತ್ತದೆ. ಅವಗ್ರಹ ಹಾಗೂ ವಿರಾಮಚಿಹ್ನೆಗಳ ವಿಷಯದಲ್ಲಿಯೂ ಹೀಗೆಯೇ. ಅಕ್ಷರಗಳು ಸಾಧಾರಣವಾಗಿ ಬರೆಯಲ್ಪಡುವಂತೆ, ನೇರಸಾಲುಗಳಲ್ಲಿ ಬರೆಯಲ್ಪಡುವುದಿಲ್ಲ; ಪ್ರತಿಯಾಗಿ, ಅನೇಕ ಸಂದರ್ಭಗಳಲ್ಲಿ ಬಹುಸಾಲು ಅಕ್ಷರಗಳು ಒಂದರ ಕೆಳಗೆ ಒಂದರ ಹಾಗೆ, ಕೆಲವೊಮ್ಮೆ ವೃತ್ತದೊಳಗೆ ಒಂದರ ಮಗ್ಗುಲಲ್ಲಿ ಇನ್ನೊಂದರ ಹಾಗೆ, ಬರೆಯಲ್ಪಡುತ್ತವೆ.

ಬಂಧಚಿತ್ರಗಳ ರಚನೆಯಲ್ಲಿ ಒಂದು ಲಕ್ಷ್ಯ ಒಂದಕ್ಕಿಂತ ಹೆಚ್ಚಿನ ಬಂಧಚಿತ್ರಗಳನ್ನು ರೂಪಿಸುವ ಅಕ್ಷರಸಂಯೋಜನೆಯಿಂದ ಕೂಡಿರಬಹುದು. ಉದಾಹರಣೆಗೆ 'ಪ್ರಶ್ನೆ'ಗಳಿಗೆ ಕೊಡುವ 'ಉತ್ತರ'ದಿಂದ ಒಂದು ಪದ್ಮಬಂಧ ರಚಿತವಾಗಬಹುದು; ಗೋಮೂತ್ರಿಕೆಯ ಲಕ್ಷ್ಯ ಪದ್ಮ ಮತ್ತು ಮುರಜವಾಗಿಯೂ, ನಿರೋಷ್ಠ್ಯದ ಲಕ್ಷ್ಯವಾಗಿಯೂ ಇರಬಹುದು; ಹೀಗೆಯೇ ಒಂದು ಬಂಧಚಿತ್ರವನ್ನು, ಉದಾಹರಣೆಗೆ ಛತ್ರಬಂಧ ಮುಂತಾದುವನ್ನು, ಒಂದಕ್ಕಿಂತ ಹೆಚ್ಚು ಆಕಾರಗಳಲ್ಲಿ ಅಳವಡಿಸಿ ತೋರುವುದೂ ಶಕ್ಯ.

ಇನ್ನು ಕೆಲವು ಸಾಮಾನ್ಯ ಲಕ್ಷಣಗಳು : ೧. ಪ್ರಾಣಿಚಿತ್ರಗಳಲ್ಲಿ ತಲೆಯಿಂದ ಬಾಲದವರೆಗೆ ಪದ್ಯದ ಅಕ್ಷರಾನುಕ್ರಮಣಿ ನಡೆಯುತ್ತದೆ. ೨. ಪರ್ವತ, ರಥ ಮುಂತಾದವುಗಳಲ್ಲಿ ಶಿಖರಾಗ್ರದಿಂದ ಪದ್ಯ ತೊಡಗುತ್ತದೆ. ೩. ಹಾರಗಳಲ್ಲಿ ಎರಡು ತುದಿಗಳು ಪದ್ಯದ ಆದ್ಯಂತಗಳಾಗುತ್ತವೆ. ೪. ಹಲ, ಖಡ್ಗ ಮೊದಲಾದವುಗಳಲ್ಲಿ ಕೈ ಇಟ್ಟುಕೊಳ್ಳುವ 'ಸ್ಥಾನದಿಂದ ಪದ್ಯ ಮೊದಲಾಗುತ್ತದೆ. ೫. ಯಾವುದೇ ಆಕಾರಚಿತ್ರಭೇದವೇ ಇರಲಿ, ಅದಕ್ಕೆ ಅಕ್ಷರಾವೃತ್ತಿಸ್ಥಾನವಿರುತ್ತದೆ ; ಅಲ್ಲಿ ಒಂದೇ ಅಕ್ಷರ ಆವೃತ್ತಿಯಾಗುವುದು ಅವಶ್ಯ. ಆವೃತ್ತಿ ಎಷ್ಟು ಸಲ ಆಗುತ್ತದೆ ಎನ್ನುವುದು, ಬಂಧದ ನಿಯಮವನ್ನು ಅವಲಂಬಿಸಿರುತ್ತದೆ. ೬. ಕೆಲವು ಬಂಧಗಳಲ್ಲಿ ಕವಿ, ಕೃತಿ ಇಲ್ಲವೆ ಕೃತಿಪತಿಯ ಹೆಸರನ್ನು ಅಡಗಿಸಿಡುವುದು ಸಾಮಾನ್ಯ.[4]

ಪ್ರತಿಬಂಧಕ್ಕೂ ಲಕ್ಷಣ ದುರ್ಲಭ. ಹೆಚ್ಚಿನವುಗಳಿಗೆ ಲಕ್ಷ್ಯಗಳೇ ಲಕ್ಷಣಗಳೆಂದು ತಿಳಿಯಬೇಕು. ಕವಿಯ ಪಾಂಡಿತ್ಯ ಪರಿಶ್ರಮಗಳನ್ನು ಹಿಡಿದು, ಹೊಸಹೊಸ ಬಂಧಗಳು ಹುಟ್ಟುತ್ತಲೇ ಇರುತ್ತವೆ. ಕೆಲವು ಪ್ರಸಿದ್ಧ ಬಂಧಗಳಿಗೆ ಲಕ್ಷಣಕಾರರು ಲಕ್ಷಣನಿರ್ದೇಶನ ಮಾಡಿದ್ದಾರೆ. ಅವನ್ನು ಆಧಾರವಾಗಿ ಗ್ರಹಿಸಬಹುದು. ಕೆಲವು ಬಂಧಗಳಿಗೆ ಕೆಲಮಟ್ಟಿಗೆ ಅಸಮಗ್ರವಾಗಿ ಲಕ್ಷಣಗಳನ್ನು ಹೇಳಿರುತ್ತದೆ; ಅದನ್ನೇ ಆಧರಿಸಿ ಬಂಧವನ್ನು ರೂಪಿಸ ಬೇಕಾಗುತ್ತದೆ. ಇನ್ನು ಕೆಲವು ಸಲ ಯಾವುದೋ ನಿರ್ದಿಷ್ಟ ವೃತ್ತಕ್ಕೆ ಮಾತ್ರ ಬಂಧ ಸರಿಬರುವಂತಿರುತ್ತದೆ. ಬೇರೆ ಪದ್ಯಜಾತಿಗಳಿಗೆ ಆ ಬಂಧ ಹೊಂದುವುದಿಲ್ಲ. ಆಗ ಪೂರ್ವೋಕ್ತಲಕ್ಷಣವನ್ನು ಆಧರಿಸಿ ಕೊಂಚ ಊಹೆಯಿಂದ ಬಂಧವನ್ನು ರೂಪಿಸಬೇಕಾಗಿರುತ್ತದೆ. ಮತ್ತೆ ಕೆಲವು ಸಂದರ್ಭಗಳಲ್ಲಿ, ಕವಿಗಳ ಬಂಧಕವಿತ್ವವಿರುತ್ತದೆ, ಬಂಧಗಳಿರು ವುದಿಲ್ಲ; ಆಗ ಬಂಧಗಳನ್ನು ರೇಖಿಸಿ, ಬಂಧಸಾಧಾರಣಲಕ್ಷಣಗಳನ್ನು ಆಧಾರವಾಗಿಟ್ಟುಕೊಂಡು ಊಹೆಯ ಮೇಲೆ ಅಕ್ಷರಗಳನ್ನು ಅವುಗಳೊಳಗೆ ಅಳವಡಿಸಬೇಕಾಗುತ್ತದೆ. ಇದು ಕೊಂಚ ಕಷ್ಟದ ಕೆಲಸವೇ. ಇದಕ್ಕೆ ಒಂದು ಉದಾಹರಣೆಯನ್ನು ಇಲ್ಲಿ ಕೊಡಬಹುದು. ವೆಂಕಟರಮಣಯ್ಯನ 'ಗಯೋಪಾಖ್ಯಾನ' ಎಂಬ ಕನ್ನಡ ಕೃತಿಯಲ್ಲಿ ಮೂರು ನಾಗಬಂಧಗಳಿವೆ. ಇವುಗಳಲ್ಲಿ ಒಂದು ಸಾಮಾನ್ಯ ನಾಗಬಂಧವಾಗಿದ್ದು, ಕವಿಕೃತ ಚಂಪಕಮಾಲಾ ವೃತ್ತದ ಬಂಧಕವಿತ್ವ ಅಲ್ಲಿ ಅಳವಡುವುದಕ್ಕೆ ನಮಗೆ ಲಕ್ಷಣವೂ ಮಾದರಿಗಳೂ ಇರುವುದರಿಂದ ತೊಂದರೆಯಿಲ್ಲ. ಆದರೆ ಉಳಿದೆರಡು ಬಂಧಗಳಾದ ಸಪ್ತಾಶ್ವತ್ಥಪರ್ಣನಾಗಬಂಧ, ಬೃಂದಾವನನಾಗಬಂಧಗಳನ್ನು ಹೇಗೆ ರೂಪಿಸ ಬೇಕೆಂಬುದೇ ತಿಳಿಯದಿದೆ. ಬಂಧಕವಿತ್ವದ ಸೀಸಪದ್ಯಗಳನ್ನು ಅಳವಡಿಸಿದ ಮಾದರಿ ನಾಗಬಂಧಗಳು ನಮಗೆ ದೊರೆಯುತ್ತಿಲ್ಲ. ಪ್ರತಿಯೊಂದು ಬಂಧದಲ್ಲಿಯೂ ಪದ್ಯವು ನಿಯಮಾನುಸಾರವಾಗಿ ಲಿಖಿತವಾಗುವುದರಿಂದ, ಒಂದೊಂದಕ್ಕೂ ಪ್ರತ್ಯೇಕ ಲಕ್ಷಣ ಉಕ್ತವಾಗುವುದು ಅವಶ್ಯ. ಊಹೆ, ಛಂದೋವೈವಿಧ್ಯ, ನವಾವಿಷ್ಕಾರ ಇವುಗಳ ದೆಸೆಯಿಂದ ಒಂದೇ ಬಂಧದಲ್ಲಿ ಅಂತರ್ಭೇದಗಳು ಹುಟ್ಟಿಕೊಳ್ಳುವುದಕ್ಕೆ ಪದ್ಮ, ಚಕ್ರ, ನಾಗ, ಪುಷ್ಪ ಮಾಲೆ, ಖಡ್ಗ ಮೊದಲಾದ ಬಂಧಗಳನ್ನು ಗಮನಿಸಿದರೆ ಸಾಕಾಗುತ್ತದೆ.

ಸಂಸ್ಕೃತ ಅಲಂಕಾರಾದಿ ಗ್ರಂಥಗಳಲ್ಲಿ ಆಕಾರ ಬಂಧಚಿತ್ರಗಳು

ಆಕಾರ ಮತ್ತು ಬಂಧಚಿತ್ರಗಳ ಪದ್ಧತಿಯನ್ನು ಕುರಿತು ಸಂಸ್ಕೃತ ಅಲಂಕಾರ ಮತ್ತು ಅನ್ಯಲಕ್ಷಣ ಗ್ರಂಥಗಳಲ್ಲಿ ಬಂದಿರುವ ಉಲ್ಲೇಖಗಳನ್ನು ಮುಂದೆ ಸಮೀಕ್ಷಿಸಿದೆ.

ಪಾಣಿನಿಯ 'ಅಷ್ಟಾಧ್ಯಾಯಿ'ಯಲ್ಲಿ 'ಸಂಜ್ಞಾಯಾಮಗ್' (೩–೪–೪೨) ಮತ್ತು 'ಬಂಧೇ ಚ ವಿಭಾಷಾ' (೬–೩–೧೩) ಎಂಬ ಎರಡು ಸೂತ್ರಗಳನ್ನು ವ್ಯಾಖ್ಯಾನಿಸುತ್ತ 'ಕಾಶಿಕಾ' ವೃತ್ತಿಯ (ಸು. ೭ನೆಯ ಶ.) ಕರ್ತೃಗಳು ಜಯಾದಿತ್ಯ ಮತ್ತು ವಾಮನರು ಕ್ರೌಂಚ, ಮಯೂರಿಕಾ, ಅಟ್ಟಾಲಿಕಾ, ಹಸ್ತ, ಚಕ್ರ ಎಂಬ ಬಂಧಭೇದಗಳನ್ನು ಉಲ್ಲೇಖಿಸಿರುವರು. ಇದರಿಂದ, ಪಾಣಿನಿಯ ಕಾಲದಲ್ಲಿಯೇ (ಸು. ಕ್ರಿ.ಪೂ. ೭೦೦) ಕಾವ್ಯಗಳಲ್ಲಿ ಚಿತ್ರಬಂಧ ಗಳನ್ನು ಬಳಸುತ್ತಿದ್ದರೆಂದು ತಿಳಿಯಲವಕಾಶವಾಗುತ್ತದೆ. ಈಗ ತಿಳಿದ ಮಟ್ಟಿಗೆ ಕಾಶಿಕೆಯ ಉಲ್ಲೇಖವೇ ಅತಿ ಪ್ರಾಚೀನವಾದ್ದು. ವಾತ್ಸ್ಯಾಯನ ಕಾಮಸೂತ್ರಗಳ ವ್ಯಾಖ್ಯಾನಕಾರ ಯಶೋಧರನು (೮ನೆಯ ಶ.) ತನ್ನ 'ಜಯಮಂಗಲಾ' ವ್ಯಾಖ್ಯಾನದಲ್ಲಿ 'ಚಿತ್ರವಿಧಿ' ಎಂಬುದಕ್ಕೆ 'ವಿವಿಧವಾದ ಆಕೃತಿಗಳಲ್ಲಿ ಅಳವಡುವಂತೆ ಪದ್ಯಗಳನ್ನು ರಚಿಸುವುದು' ಎಂಬುದಾಗಿ (೪–೧೭) ಶಾಸ್ತ್ರಾಂತರದ ೬೪ ಕಲೆಗಳ ಪಟ್ಟಿಯೊಂದನ್ನು ಕೊಡುವಾಗ ತಿಳಿಸಿದ್ದಾನೆ.

ಮೊದಲ ಸಲ ಬಂಧಗಳ ವಿಶದವಾದ ನಿರೂಪಣೆ ಕಾಣಿಸಿಕೊಳ್ಳುವುದು ರುದ್ರಟಕೃತ (ಸು. ೮೫೦) 'ಕಾವ್ಯಾಲಂಕಾರ'ದಲ್ಲಿ. ಇದರ ಪಂಚಮಾಧ್ಯಾಯದಲ್ಲಿ ಖಡ್ಗ, ಮುಸಲ, ಧನು, ಶರ, ಶೂಲ, ಶಕ್ತಿ, ಹಲ, ಮುರಜ, ಪದ್ಮ, ಚಕ್ರ ಇವುಗಳ ಲಕ್ಷ್ಯಗಳನ್ನು (೫-೬~೧೩; ೫-೬~೧೯) ಒದಗಿಸಿದೆ. ಅಷ್ಟಬಂಧಸ್ಥ ಪದ್ಯಗಳ ಮಹಾಚಕ್ರ ಏಕತ್ರ ವಿನ್ಯಾಸಗೊಳ್ಳುವಂತಿರುವ ಒಂದು ಸಂಯೋಜನೆ ರುದ್ರಟನ ಅಪೂರ್ವಕೌಶಲವನ್ನು ತೋರಿಸುತ್ತದೆ. ನಮಿಸಾಧುವಿನ (೧೦೬೮) 'ಟಿಪ್ಪಣಕ' ಸಲಕ್ಷಣವಾಗಿ ಈ ಲಕ್ಷ್ಯಗಳನ್ನು ವಿವರಿಸುತ್ತದೆ.

ಭೋಜರಾಜನ (ಸು. ೧೦೦೫-೫೪) 'ಸರಸ್ವತೀಕಂಠಾಭರಣ' ಸಾಕಷ್ಟು ವಿಸ್ತಾರದಲ್ಲಿ ಆಕಾರ ಮತ್ತು ಬಂಧಚಿತ್ರಗಳೆಂಬ ವಿಭಾಗಗಳ ಕೆಳಗೆ ಬಂಧಗಳನ್ನು ವಿವರಿಸಿರುವ ಒಂದು ಗ್ರಂಥವಾಗಿದೆ. ಆಕಾರಚಿತ್ರಭೇದಗಳೆಂದು ಅಷ್ಟದಲಪದ್ಮ (೧), ಅಷ್ಟದಲ ಪದ್ಮ (೨), ಅಷ್ಟಪತ್ರ ಪದ್ಮ (೩), ಚತುಷ್ಪತ್ರ ಕಮಲ, ಷೋಡಶಪತ್ರಕಮಲ, ಕವಿನಾಮಾಂಕ ಅಷ್ಟಪತ್ರಕಮಲ, ನಾಮಾಂಕಚಕ್ರ, ದ್ವಿತೀಯ ಷಡರಚಕ್ರ ಎಂಬ ೮ ಬಗೆಗಳನ್ನೂ ಬಂಧಚಿತ್ರ ಭೇದಗಳೆಂದು ದ್ವಿಚತುಷ್ಕಚಕ್ರ, ದ್ವಿಶೃಂಗಾಟಕ, ವಿವಿಡಿತಚಕ್ರ, ಶರಯಂತ್ರ, ವ್ಯೋಮ, ಮುರಜ, ಏಕಾಕ್ಷರ ಮುರಜ, ಮುರಜಪ್ರಸ್ತಾರ ಎಂಬ ೮ ಬಗೆಗಳನ್ನೂ ಇಲ್ಲಿ ನಿರೂಪಣೆಮಾಡಲಾಗಿದೆ. ಈ ನಿರೂಪಣೆಯಲ್ಲಿ ಲಕ್ಷಣ ವಿವರಣೆಯ ಪದ್ಯಗಳೊಂದಿಗೆ ಲಕ್ಷ್ಯಪದ್ಯಗಳು ಸೇರಿರುವುದು ಮೆಚ್ಚತಕ್ಕುದಾಗಿದೆ.

'ಅಗ್ನಿಪುರಾಣ'ದಲ್ಲಿ, ಅದರ ೩೪೩ನೆಯ ಅಧ್ಯಾಯದಲ್ಲಿ ಚಿತ್ರದ ಸಾಮಾನ್ಯ ಲಕ್ಷಣದೊಂದಿಗೆ ಅಂಬುಜ, ಚಕ್ರ, ಚಕ್ರಾಬ್ಜಕ, ದಂಡ, ಮುರಜ ಎಂಬ ಐದು ಬಂಧಗಳು ಉಕ್ತವಾಗಿದ್ದು, ಚಿತ್ರವನ್ನು ರೂಪಿಸುವ ವಿಧಾನಗಳನ್ನು ತಿಳಿಸುವಾಗ ಅಂಬುಜದ ೩ ವಿಧಗಳನ್ನೂ ಚಕ್ರದ ೨ ವಿಧಗಳನ್ನೂ ಉಲ್ಲೇಖಮಾಡಿದೆ. ಇನ್ನೂ ಸ್ವಲ್ಪ ಮುಂದುವರಿದರೆ, ಇಲ್ಲಿ ಅಂಕುಶ, ಅತಿಪುತ್ರಿಕಾ, ಖಡ್ಗ, ಚತುರ್ಥ–ಶೃಂಗಾಟ, ತ್ರಿಶೃಂಗಾಟ, ದಂಭೋಲಿ, ದ್ವಿಶೃಂಗಾಟ, ನಾಗಪದ, ಪುಷ್ಕರಣಿ, ಬಾಣ, ಬಾಣಾಸನ, ಮುದ್ಗರ, ಮುಸಲ, ವ್ಯೋಮ, ಶಕ್ತಿ ಎಂಬ ೧೫ ಹೆಚ್ಚಿನ ಬಂಧಚಿತ್ರಗಳನ್ನು ಹೇಳಿರುವುದು ಕಾಣುತ್ತದೆ.

ಮಮ್ಮಟನ (ಸು. ೧೦೫೦–೧೧೦೦) 'ಕಾವ್ಯಪ್ರಕಾಶ'ದಲ್ಲಿ ''ತಚ್ಚಿತ್ರಂ ಯತ್ರ ವರ್ಣಾನಾಂ ಖಡ್ಗಾದ್ಯಾಕೃತಿಹೇತುತಾ'' ಎಂಬುದಾಗಿ (= ಎಲ್ಲಿ ಕತ್ತಿಯೇ ಮುಂತಾದ ಆಕೃತಿಯನ್ನು ಚಿತ್ರಿಸುವಂತಿರುವುದೋ, ಅದೇ ಚಿತ್ರ) ಸೂತ್ರಿಸಿ, ಖಡ್ಗ, ಮುರಜ ಮತ್ತು ಪದ್ಮಬಂಧಗಳಿಗೆ ಲಕ್ಷ್ಯಗಳನ್ನು ಒದಗಿಸಿದೆ (ಉಲ್ಲಾಸ ೯–ಪದ್ಯ ೮೫). ಈತನು ಆಕಾರ ಅಥವಾ ಬಂಧಚಿತ್ರವೇ ಚಿತ್ರಕಾವ್ಯದ ಪ್ರಮುಖವರ್ಗವಾಗಿ ಪರಿಗಣಿಸಿರುವುದು ಇದರಿಂದ ವಿದಿತವಾಗುತ್ತದೆ.

ಹೇಮಚಂದ್ರಕೃತ (೧೦೮೮–೧೧೭೨) 'ಕಾವ್ಯಾನುಶಾಸನ'ದಲ್ಲಿ ಸ್ವರವ್ಯಂಜನಾದಿ ಚಿತ್ರಗಳ ಶ್ರೇಣಿಯಲ್ಲಿ ಆಕಾರಚಿತ್ರಗಳನ್ನು ಸಹ ಉಲ್ಲೇಖಿಸಿ (೫–೪), ಆಕಾರಚಿತ್ರಗಳೆಂದರೆ ಖಡ್ಗ ಮುರಜ ಬಂಧಾದಿ ಆಕೃತಿಗಳೆಂದು ಆರಂಭದಲ್ಲಿಯೇ 'ಅಲಂಕಾರ ಚೂಡಾಮಣಿ' ವ್ಯಾಖ್ಯಾನಭಾಗದಲ್ಲಿ ತಿಳಿಸಿದೆ (ಪ. ೪೬೭). ಇಲ್ಲಿಯೇ ಮುಂದೆ ಮುಸಲ, ಧನುಸ್ಸು, ಬಾಣ, ಚಕ್ರ, ಪದ್ಮಾದಿಗಳೆಂಬವನ್ನು ಸೂಚಿಸಿದೆ (ಪ. ೪೬೯ರ ಮುಂದೆ). 'ವಿವೇಕ' ವ್ಯಾಖ್ಯೆಯಲ್ಲಿ ಹಲ, ಶಕ್ತಿ, ಸ್ಥೂಲ, ಸ್ವಸ್ತಿಕ, ನಾಗಪಾಶಾದಿಗಳನ್ನು ಅಧಿಕವಾಗಿ ಸೂಚಿಸಿದೆ. ಲಕ್ಷ್ಯಗಳು ಅನ್ಯ ಮೂಲದಿಂದ ಉದ್ಧೃತವಾದವು. ವಿವರಗಳು ಹೆಚ್ಚಾಗಿಲ್ಲ.

ವಾಗ್ಭಟನ (ಸು. ೧೧೨೫–೪೩) 'ವಾಗ್ಭಟಾಲಂಕಾರ'ದಲ್ಲಿ, ಅದರ ೪ನೆಯ ಪರಿಚ್ಛೇದದಲ್ಲಿ ಪದ್ಮ, ಛತ್ರ, ಚಾಮರ, ಸ್ವಸ್ತಿಕ, ಕಲಶ, ಹಲ ಮತ್ತು ಮುಸಲಗಳೆಂಬ ಬಂಧಗಳನ್ನು ಗುರುತಿಸಿದೆ. ಈ ಗ್ರಂಥಕ್ಕೆ ಜಿನವರ್ಧನ ಸೂರಿ, ಸಿಂಹದೇವಗಣಿ, ರಾಜಹಂಸ, ಸೋಮೋದಯ ಗಣಿ ಮೊದಲಾದವರ ವ್ಯಾಖ್ಯಾನಗಳಿವೆ.

ರಾಜಾನಕ ರುಯ್ಯಕನ (ಸು. ೧೧೩೫-೫೦) 'ಅಲಂಕಾರ ಸರ್ವಸ್ವ'ದಲ್ಲಿ ''ವರ್ಣಾನಾಂ ಖಡ್ಗಾದ್ಯಾಕೃತಿ ಹೇತುತ್ವೇ ಚಿತ್ರಮ್'' ಎಂದು (ಪು. ೩೦) ಚಿತ್ರಸಾಮಾನ್ಯದ ಲಕ್ಷಣವನ್ನು ಮಮ್ಮಟನಂತೆಯೇ ತಿಳಿಸಿದ್ದು, ''ಪೌನರುಕ್ತ್ಯ ಪ್ರಸ್ತಾವೇ ಸ್ಥಾನವಿಶೇಷಶ್ಲಿಷ್ಟ ಪೌನರುಕ್ತ್ಯಾತ್ಮಕಂ ಚಿತ್ರವಚನಮ್ । ಯದ್ಯಪಿ ಲಿಪ್ಯಕ್ಷರಾಣಾಂ ಖಡ್ಗಾದಿ ಸನ್ನಿವೇಶ ವಿಶಿಷ್ಟತ್ವಂ ತಥಾಪಿ ಶ್ರೋತ್ರಾಕಾಶಸಮವೇತ–ವರ್ಣಾತ್ಮಶಬ್ದಾಭೇದನ ತೇಷಾಂ ಲೋಕೇ ಪ್ರತೀತೇರ್ವಾಚಕ ಶಬ್ದಾಲಂಕಾರೋಽಯಮ್'' ಎಂಬುದಾಗಿ ಅದನ್ನು ವಿವರಿಸಿದೆ.

ನರೇಂದ್ರಪ್ರಭ ಸೂರಿಯ (೧೨೨೫) 'ಅಲಂಕಾರ ಮಹೋದಧಿ'ಯ ೭ನೆಯ ತರಂಗದಲ್ಲಿ ಅಷ್ಟದಳ ಕಮಲದ, ಅಮಲಚಂದ್ರಸೂರಿಯ 'ಕಾವ್ಯಕಲ್ಪಲತಾ'ದಲ್ಲಿ ಅಷ್ಟಾರಚಕ್ರದ, ವಾಗ್ಭಟನ (೧೩–೧೪ನೆಯ ಶ.) 'ಕಾವ್ಯಾನುಶಾಸನ'ದಲ್ಲಿ ತ್ರಿಶೂಲಬಂಧದ ನಿದರ್ಶನಗಳನ್ನು ಕೊಟ್ಟಿದೆ.

ಧರ್ಮದಾಸ ಸೂರಿಯ (ಸು. ೧೨೦೦) 'ವಿದಗ್ಧಮುಖಮಂಡನ'ದಲ್ಲಿ ಚಕ್ರ, ಪದ್ಮ (ಅಷ್ಟದಲ), ಕಾಕಪದಜಾತಿ, ಶೃಂಖಲಾ, ನಾಗಪಾಶ ಈ ಕೆಲವು ಬಂಧಚಿತ್ರಗಳನ್ನು ಬಳಸಿದೆ (ಪರಿಚ್ಛೇದ ೩).

ವಿಶ್ವನಾಥನು 'ಸಾಹಿತ್ಯ ದರ್ಪಣ' (ಸು. ೧೩೦೦–೫೪)ದಲ್ಲಿ ''ಪದ್ಮಾದ್ಯಾಕಾರ ಹೇತುತ್ವೇ ವರ್ಣಾನಾಂ ಚಿತ್ರಮುಚ್ಯತೇ'' (೧೦–೧೫) ಎಂದು 'ಚಿತ್ರ'ಲಕ್ಷಣವನ್ನು ಮಮ್ಮಟ ರುಯ್ಯಕರ ಹಾಗೆಯೇ ತಿಳಿಸಿ, ಪದ್ಮಬಂಧಕ್ಕೆ ಸ್ವಕೀಯ ಲಕ್ಷ್ಯವೊಂದನ್ನು ಒದಗಿಸಿದ್ದಾನೆ. ಅಲ್ಲಿಯೇ ಬಂಧದ ಸ್ವರೂಪವನ್ನೂ ವಿವರಿಸಿದ್ದಾನೆ. ಹೀಗೆಯೇ ಖಡ್ಗಬಂಧಾದಿಗಳನ್ನು ಸಹ ಪ್ರಯೋಗಿಸಬಹುದೆಂದು ಸೂಚಿಸಿ, ಇಂಥವು ಕಾವ್ಯದಲ್ಲಿ ಕಠಿನವೂ ನೀರಸವೂ ಆದ ಕಾರಣ ವಿಸ್ತರಿಸಲು ಹೋಗಿಲ್ಲ ಎಂದು ತಿಳಿಸಿ ವಿಶ್ವನಾಥ ಮುನ್ನಡೆದಿದ್ದಾನೆ.

ವಿದ್ಯಾನಾಥಕೃತವಾದ 'ಪ್ರತಾಪರುದ್ರ ಯಶೋಭೂಷಣ' (೧೪ನೆಯ ಶ.)ದಲ್ಲಿ ಮೇಲಿನಂತೆಯೇ, ''ಪದ್ಮಾದ್ಯಾಕಾರ ಹೇತುತ್ವೇ ವರ್ಣಾನಾಂ ಚಿತ್ರಮುಚ್ಯತೇ'' ಎಂದು 'ಚಿತ್ರ'ದ ಸಾಮಾನ್ಯಲಕ್ಷಣ ತಿಳಿಸಿ, ''ಆದಿ ಗ್ರಹಣಾಚ್ಚಕ್ರಬಂಧಾದಯಃ'' ಎಂದು ಸೇರಿಸಿ, ಲಕ್ಷ್ಯವಾಗಿ ಅಷ್ಟದಲ ಪದ್ಮ, ಚಕ್ರ (ಕವಿಕಾವ್ಯನಾಮಗರ್ಭಿತ), ಮತ್ತು ನಾಗಗಳನ್ನು ಕುರಿತುದು (ಪು. ೨೪೭–೫೩) ಕಾಣುತ್ತದೆ.

ಅಜಿತಸೇನನ (ಸು. ೧೪೨೦) 'ಅಲಂಕಾರ ಚಿಂತಾಮಣಿ' ದುಷ್ಕರಕಾವ್ಯದ ವೈವಿಧ್ಯಗಳಿಗೆ ಗಮನಾರ್ಹವಾದುದು. ಇಲ್ಲಿ ಕಮಲ, ಚಕ್ರ, ಛತ್ರ, ತಾಲವೃಂತ, ದರ್ಪಣ, ನಾಗಪಾಶ, ನಿಃಸಾಲ, ಪಟ್ಟ, ಪರಶು, ಬ್ರಹ್ಮದೀಪಕ, ಭೃಂಗಾರ, ಮುರಜ, ಯಾನ, ಶೃಂಖಲಾ ಮತ್ತು ಹಾರಗಳೆಂಬ ಬಂಧಗಳ ಸ್ವರೂಪವನ್ನು ವಿವರಿಸಿದೆ. ಕಮಲದಲ್ಲಿ ಅಷ್ಟದಲ ಮತ್ತು ಅಷ್ಟದಲ ವಿಪರೀತ, ಅಷ್ಟದಲ, ಷೋಡಶದಲ ಮತ್ತು ಷೋಡಶದಲ ವಿಪರೀತ ಎಂಬ ಪ್ರಭೇದಗಳಿವೆ. ಚಕ್ರದಲ್ಲಿ ೪ ಅರಗಳ ಮತ್ತು ೬ ಅರಗಳ ಪ್ರಭೇದಗಳಿವೆ. ಬ್ರಹ್ಮದೀಪಕದಲ್ಲಿ ಸಾಮಾನ್ಯ ಮತ್ತು ಗೂಢಗಳೆಂಬ ಬಗೆಗಳಿವೆ. ಮುರಜದಲ್ಲಿ ಸಾಮಾನ್ಯ, ಅನಂತರ ಪಾದ, ಇಷ್ಟಪಾದ, ಗೂಢತೃತೀಯ-ಚತುರ್ಥಾನ್ಯತರಾಕ್ಷರ-ದ್ವಯವಿರಚಿತ-ಯಮಕಾನಂತರ-ಪಾದ, ನಿರೋಷ್ಠ್ಯ-ಯಥೇಷ್ಟೈಕಾಕ್ಷರಾಂತರಿತ ಮತ್ತು ಗುಪ್ತಕ್ರಿಯಾ ಎಂಬ ೬ ವಿಧಗಳಿವೆ.

ಕವಿ ಕರ್ಣಪೂರನು (೧೬ ನೆಯ ಶ.) 'ಅಲಂಕಾರ ಕೌಸ್ತುಭ'ದಲ್ಲಿ ''ಚಿತ್ರಂ ನೀರಸಮೇವಾಹುರ್ಭಗವದ್ವಿಷಯಂ ಯದಿ '' ಎಂಬ ಉಲ್ಲೇಖವೊಂದರಲ್ಲಿ (೭-೨೧೪) 'ಚಿತ್ರ'ದ ಪೃಥಕ್ ನಿರ್ದೇಶನವನ್ನು ಮಾಡಿ, ಸರ್ವತೋಭದ್ರಚ್ಛತ್ರ, ಖಡ್ಗ, ಮುರಜ, ಪತಾಕಾ, ಗದಾ, ಪದ್ಮ, ಚಕ್ರ ಮತ್ತು ಶಾರ್ಙ್ಗ ಎಂಬ ೮ ಭೇದಗಳನ್ನು ಹೆಸರಿಸಿದ್ದಾನೆ.

ಈ ಮೇಲಿನ ನಿರೂಪಣೆಯಲ್ಲಿ ಕೆಲವು ಸಂಸ್ಕೃತ ಅಲಂಕಾರಗ್ರಂಥಗಳಲ್ಲಿ ಬಂಧಚಿತ್ರಗಳ ವಿಷಯಕ್ಕೆ ಸಂದಿರುವ ಸ್ಥಾನ ಮಹತ್ತ್ವಗಳು ಏನೆಂಬುದರ ಒಂದು ಸರಳ ಪರಿಚಯವನ್ನು ಕೊಟ್ಟಿದೆ. ಶಬ್ದಾಲಂಕಾರಗಳ ವಿವೇಚನೆಯ ಒಂದು ಭಾಗವಾಗಿ ಬಂದಿರುವ ಈ ನಿರೂಪಣೆ ಹೆಚ್ಚಿನ ಅಲಂಕಾರಗ್ರಂಥಗಳಲ್ಲಿ ಔಪಚಾರಿಕವಾದುದು, ಸಂಗ್ರಾಹಕವಾದುದು. ಈ ವಿಷಯದಲ್ಲಿ ರುದ್ರಟ ಮತ್ತು ಭೋಜರು ಮೊದಲಿಗರು, ಮುಖ್ಯರು. ರುದ್ರಟನೇ ಈ ಪದ್ಧತಿಯ ಪ್ರವರ್ತಕ ಎನ್ನುವಂತೆ ಸದ್ಯದಲ್ಲಿ ತೋರುತ್ತದೆ. ಈ ಬಂಧಚಿತ್ರಗಳಿಗೆ ಆಯಾ ಬಂಧಗಳನ್ನು ಹೇಗೆ ಸಿದ್ಧಪಡಿಸಬಹುದೆಂಬ ಸಾಮಾನ್ಯನಿಯಮಗಳನ್ನು ತಿಳಿಸಿರುವ ಗ್ರಂಥಗಳಲ್ಲಿ 'ಅಗ್ನಿಪುರಾಣ'ವೇ (ಅ. ೩೪೩) ಬಹುಶಃ ಅತಿಪ್ರಾಚೀನವಾದುದು; ಅಜಿತಸೇನನ 'ಅಲಂಕಾರಚಿಂತಾಮಣಿ'ಯೇ ಬಹುಶಃ ಸಮಗ್ರವಾದುದು. ವಿಶ್ವನಾಥನಂತಹ ಒಬ್ಬರಿಬ್ಬರಿಗೆ ವ್ಯಕ್ತವಾಗಿಯೇ ಈ ಬಗೆಯ ಕಾವ್ಯಪದ್ಧತಿಯಲ್ಲಿ ಅನಾದರವಿರುವುದು ಕಾಣುತ್ತದೆ. ಆದರೆ ಇಂತಹ ರಚನೆಗೆ ಕಾವ್ಯಗಳಲ್ಲಿ ಪ್ರಾತಿನಿಧಿಕವಾಗಿ ಸ್ವಲ್ಪವಾದರೂ ಅವಕಾಶವಿರಬೇಕೆಂದೇ ಎಲ್ಲ ಲಾಕ್ಷಣಿಕರೂ ಭಾವಿಸಿರುವುದು ಕಾಣುತ್ತದೆ.

ಕೆಲವು ಗತಿಚಿತ್ರಗಳನ್ನು ಒಳಕೊಂಡಹಾಗೆ ಬಂಧಗಳಲ್ಲಿ ಪ್ರಮುಖವಾದವನ್ನು, ಅವುಗಳ ಲಕ್ಷಣದೊಂದಿಗೆ ಪ್ರಾಯಃ ಮೊದಲ ಸಲ ಕ್ರೋಡೀಕರಿಸುವ 'ಅಗ್ನಿಪುರಾಣ'ದ (ಅಧ್ಯಾಯ ೩೪೩–ಶ್ಲೋಕ ೩೫–೬೫) ಭಾಗವನ್ನಿಲ್ಲಿ ಒಟ್ಟುನೋಟಕ್ಕಾಗಿ ಉದಾಹರಿಸಬಹುದು :

ಪ್ರಾತಿಲೋಮ್ಯಾನುಲೋಮ್ಯಂ ಚ ಶಬ್ದೇನಾರ್ಥೇನ ಜಾಯತೇ ।
ಅನೇಕಧಾ ವೃತ್ತವರ್ಣವಿನ್ಯಾಸೈಃ ಶಿಲ್ಪಕಲ್ಪನಾ ॥ ೩೫ ॥

ತತ್ತತ್ಪ್ರಸಿದ್ಧವಸ್ತೂನಾಂ ಬಂಧ ಇತ್ಯಭಿಧೀಯತೇ ।
ಗೋಮೂತ್ರಿಕಾಽರ್ಧಭ್ರಮಣೇ ಸರ್ವತೋಭದ್ರಮಂಬುಜಮ್ ॥ ೩೬ ॥

ಚಕ್ರಂ ಚಕ್ರಾಬ್ಜಕಂ ದಂಡೋ ಮುರಜಾಶ್ಚೇತಿ ಚಾಷ್ಟಧಾ ।
ಪ್ರತ್ಯರ್ಧಂ ಪ್ರತಿಪಾದಂ ಸ್ಯಾದೇಕಾಂತರ ಸಮಾಕ್ಷರಾ ॥ ೩೭ ॥

ದ್ವಿಧಾ ಗೋಮೂತ್ರಿಕಾಂ ಪೂರ್ವಾಮಾಹುರಶ್ವಪದಾಂ ಪರೇ ।
ಅಂತ್ಯಾಂ ಗೋಮೂತ್ರಿಕಾಂ ಧೇನುಂ ಜಾಲಬಂಧಂ ವದಂತಿ ಹಿ ॥ ೩೮ ॥

ಅರ್ಧಾಭ್ಯಾಮರ್ಧಪಾದೈಶ್ಚ ಕುರ್ಯಾದ್ ವಿನ್ಯಾಸಮೇತಯೋಃ ।
ನ್ಯಸ್ತಾನಾಮಿಹ ವರ್ಣಾನಾಮಧೋಽಧಃ ಕ್ರಮಭಾಗಿನಾಮ್ ॥ ೩೯ ॥

ಅಧೋಽಧಃ ಸ್ಥಿತವರ್ಣಾನಾಂ ಯಾವತ್ ತುರ್ಯಪದಂ ನಯೇತ್ ।
ತುರ್ಯಪಾದಾನ್ನಯೇದೂರ್ಧ್ವಂ ಪಾದಾರ್ಧಂ ಪ್ರಾತಿಲೋಮ್ಯತಃ ॥ ೪೦ ॥

ತದೇವ ಸರ್ವತೋಭದ್ರಂ ತ್ರಿವಿಧಂ ಸರಸೀರುಹಮ್ ।
ಚತುಷ್ಪತ್ರಂ ತತೋ ವಿಘ್ನಂ ಚತುಷ್ಪತ್ರೇ ಉಭೇ ಅಪಿ ॥ ೪೧ ॥

ಅಥ ಪ್ರಥಮಪಾದಸ್ಯ ಮೂರ್ಧನ್ಯಂ ತ್ರಿಪದಾಕ್ಷರಮ್ ।
ಸರ್ವೇಷಾಮೇವ ಪಾದಾನಾಮಂತೇ ತದುಪಜಾಯತೇ ॥ ೪೨ ॥

ಪ್ರಾಕ್‌ಪದಸ್ಯಾಂತಿಮಂ ಪ್ರತ್ಯಕ್ ಪಾದಾದೌ ಪ್ರಾತಿಲೋಮ್ಯತಃ ।
ಅಂತ್ಯಪಾದಾಂತಿಮಂ ಚಾದ್ಯಪಾದಾದಾವಕ್ಷರದ್ವಯಮ್ ॥ ೪೩ ॥

ಚತುಶ್ಛದೇ ಭವೇದಷ್ಟಚ್ಛದೇ ವರ್ಣತ್ರಯಂ ಪುನಃ ।
ಸ್ಯಾತ್ ಷೋಡಶಚ್ಛದೇ ತ್ವೇಕಾಂತರಂ ಚೇದೇಕಮಕ್ಷರಮ್ ॥ ೪೪ ॥

ಕರ್ಣಿಕಾಂ ತೋಲಯೇದೂರ್ಧ್ವಂ ಪತ್ರಾಕಾರಾಕ್ಷರಾವಲಿಮ್ ।
ಪ್ರವೇಶಯೇತ್ ಕರ್ಣಿಕಾಯಾಂ ಚತುಷ್ಪತ್ರ ಸರೋರುಹೇ ॥ ೪೫ ॥

ಕರ್ಣಿಕಾಯಾಂ ಲಿಖೇದೇಕಂ ದ್ವೇ ದ್ವೇ ದಿಕ್ಷು ವಿದಿಕ್ಷು ಚ ।
ಪ್ರವೇಶನಿರ್ಗಮೌ ದಿಕ್ಷು ಕುರ್ಯಾದಷ್ಟಚ್ಛದೇಽಂಬುಜೇ ॥ ೪೬ ॥

ವಿಷ್ವಗ್ ವಿಷಮವರ್ಣಾನಾಂ ತಾವತ್ ಪತ್ರಾವಲೀಜುಷಾಮ್ ।
ಮಧ್ಯೇ ಸಮಾಕ್ಷರನ್ಯಾಸಃ ಸರೋಜೇ ಷೋಡಶಚ್ಛದೇ ॥ ೪೭ ॥

ದ್ವಿಧಾ ಚಕ್ರಂ ಚತುರರಂ ಷಡರಂ ತತ್ರ ಚಾದಿಮಮ್ ।
ಪೂರ್ವಾರ್ಧೇ ಸದೃಶಾ ವರ್ಣಾಃ ಪಾದಪ್ರಥಮಪಂಚಮಾಃ ॥ ೪೮ ॥

ಅಯುಜೋಶ್ಚ ಯುಜಶ್ಚೈವ ತುರ್ಯಾವಷ್ಟಮಾವಪಿ ।
ತಸ್ಯೋಪಪಾದಪ್ರಾಕ್‌ಪ್ರತ್ಯಗರೇಷು ಚ ಯಥಾಕ್ರಮಮ್ ॥ ೪೯ ॥

ಸ್ಯಾತ್ ಪಾದಾರ್ಧಚತುಷ್ಕಂ ತು ನಾಭೌ ತಸ್ಯಾದ್ಯಮಕ್ಷರಮ್ ।
ಪಶ್ಚಿಮಾರಾವಧಿ ನಯೇನ್ನೇಮೌ ಶೇಷೇ ಪದದ್ವಯೀ ॥ ೫೦ ॥

ತೃತೀಯಂ ತುರ್ಯಪಾದಾಂತೇ ಪ್ರಥಮೌ ಸದೃಶಾವುಭೌ ।
ವರ್ಣೌ ಪಾದತ್ರಯಸ್ಯಾಪಿ ದಶಮಃ ಸದೃಶೋ ಯದಿ ॥ ೫೧ ॥

ಪ್ರಥಮೋ ಚರಮೋ ತಸ್ಯ ಷಡ್‌ವರ್ಣಾಃ ಪಶ್ಚಿಮೋ ಯದಿ ।
ಭವಂತಿ ದ್ವ್ಯಂತರಂ ತರ್ಹಿ ಬೃಹಚ್ಚಕ್ರಮುದಾಹೃತಮ್ ॥ ೫೨ ॥

ಸಮ್ಮುಖಾರದ್ವಯೇ ಪಾದಮೇಕೈಕಂ ಕ್ರಮಶೋ ಲಿಖೇತ್ ।
ನಾಭೌ ತು ವರ್ಣಂ ದಶಮಂ ನೇಮೌ ತುರ್ಯಪದಂ ನಯೇತ್ ॥ ೫೩ ॥

ಶ್ಲೋಕಸ್ಯಾದ್ಯಂತದಶಮಾಃ ಸಮಾ ಅದ್ಯಂತಿಮಾ ಯುಜೋಃ ।
ಆದೌ ವರ್ಣಾಃ ಸಮೌ ತುರ್ಯಪಂಚಮಾವಾದ್ಯತುರ್ಯಯೋಃ ॥ ೫೪ ॥

ದ್ವಿತೀಯ ಪ್ರಾತಿಲೋಮ್ಯೇನ ತೃತೀಯಂ ಜಾಯತೇ ಯದಿ ।
ಪದಂ ವಿದಧ್ಯಾತ್ ಪತ್ರಸ್ಯ ದಂಡಶ್ಚಕ್ರಾಬ್ಜಂ ಕೃತೇಃ ॥ ೫೫ ॥

ದ್ವಿತೀಯೌ ಪ್ರಾಗ್ದಲೇ ತುಲ್ಯೌ ಸಪ್ತಮೌ ಚ ತಥಾಽಪರೌ ।
ಸದೃಶಾವುತ್ತರದಲೌ ದ್ವಿತೀಯಾಭ್ಯಾಮಥಾರ್ಧಯೋಃ ॥ ೫೬ ॥

ದ್ವಿತೀಯ ಷಷ್ಠಾಃ ಸದೃಶಾಶ್ಚತುರ್ಥಪಂಚಮಾವಪಿ ।
ಆದ್ಯಂತಪಾದಯೋಸ್ತುಲ್ಯೌ ಪರಾರ್ಧಸಪ್ತಮಾವಪಿ ॥ ೫೭ ॥

ಸಮೌ ತುರ್ಯಂ ಪಂಚಮಂ ತು ಕ್ರಮೇಣ ವಿನಿಯೋಜಯೇತ್ ।
ತುರ್ಯೌ ಯೌಜ್ಯೇ ತು ತದ್ವಚ್ಚ ದಲಾಂತಾಃ ಕ್ರಮಪಾದಯೋಃ ॥ ೫೮ ॥

ಅರ್ಧಯೋರಂತಿಮಾದ್ಯೌ ತು ಮುರಜೇ ಸದೃಶಾವುಭೌ ।
ಪಾದಾರ್ಧಪತಿತೋ ವರ್ಣಃ ಪ್ರತಿಲೋಮ್ಯಾನುಲೋಮತಃ ॥ ೫೯ ॥

ಅಂತಿಮಂ ಪರಿಬಧ್ನೀಯಾದ್ ಯಾವತ್ ತುರ್ಯವಿಹಾದಿಮತ್ ।
ಪಾದಾ ತುರ್ಯಾದ್ಯದೇವಾಽಽದ್ಯಂ ನವಮಾತ್ ಷೋಡಶಾದಪಿ ॥ ೬೦ ॥

ಅಕ್ಷರಾತ್ ಪುಟಕೇ ಮಧ್ಯೇ ಮಧ್ಯೇಕ್ಷರಚತುಷ್ಟಯಮ್ ।
ಕೃತ್ವಾ ಕುರ್ಯಾದ್ ಯಥೈತಸ್ಯ ಮುರಜಾಕಾರತಾ ಭವೇತ್ ॥ ೬೧ ॥

ದ್ವಿತೀಯಂ ಚಕ್ರಂ ಶಾರ್ದೂಲವಿಕ್ರೀಡಿತಕಸಂಪದಮ್ ।
ಗೋಮೂತ್ರಿಕಾ ಸರ್ವವೃತ್ತೈರನ್ಯೇ ಬಂಧಾಸ್ತ್ವನುಷ್ಟುಭಾ ॥ ೬೨ ॥

ನಾಮಧೇಯಂ ಯದಿ ನ ಚೇದಮೀಷು ಕವಿಕಾವ್ಯಯೋಃ ।
ಮಿತ್ರಧೇಯಾನಿ ತುಷ್ಟ್ಯಂತಿ ನಾಮಿತ್ರಾಃ ಖಿದ್ಯತೇ ತಥಾ ॥ ೬೩ ॥

ಬಾಣಬಾಣಾಸನವ್ಯೋಮ ಖಡ್ಗ ಮುದ್ಗರಶಕ್ತಯಃ
ದ್ವಿಚತುರ್ಥತ್ರಿಶೃಂಗಾಟಾ ದಂಭೋಲಿಮುಸಲಾಂಕುಶಾಃ ॥ ೬೪ ॥

ಪದಂ ರಥಸ್ಯ ನಾಗಸ್ಯ ಪುಷ್ಕರಿಣ್ಯತಿಪುತ್ರಿಕಾ ।
ಏತೇ ಬಂಧಾಸ್ತಥಾ ಚಾನ್ಯೇ ಏವಂ ಜ್ಞೇಯಾಃ ಸ್ವಯಂ ಬುಧೈಃ ॥ ೬೫ ॥

ಸಂಸ್ಕೃತ ಸಾಹಿತ್ಯದಲ್ಲಿ ಆಕಾರ ಮತ್ತು ಬಂಧಚಿತ್ರಗಳು

ಜೈನ ಕವಿಗಳ ಸ್ತುತಿಸಾಹಿತ್ಯದಲ್ಲಿ ಹಾಗೂ ಇತರ ಸಾಹಿತ್ಯಕೃತಿಗಳಲ್ಲಿ ಆಕಾರಚಿತ್ರಗಳಿಗೂ ಬಂಧ ಚಿತ್ರಗಳಿಗೂ ಅಧಿಕವಾಗಿ ಪ್ರಾಶಸ್ತ್ಯ ದೊರೆತಿರುವುದನ್ನು ಕಾಣಬಹುದು. ಅದರ ಒಂದು ಸಂಕ್ಷಿಪ್ತ ಸಮೀಕ್ಷೆಯನ್ನು ಮುಂದೆ ಗಮನಿಸಬಹುದಾಗಿದೆ :

ನಂದಿಷೇಣನ (ಕ್ರಿ.ಶ. ೬ನೆಯ ಶ.ದ ಪೂರ್ವ) 'ಅಜಿಯ ಶಾಂತಿಥಯ'ದಲ್ಲಿ ಚತುಷ್ಪುಟ, ವಾಪಿಕಾ, ದೀಪಿಕಾ, ಮಂಗಲಕಲಶ, ಗುಚ್ಛ, ವೃಕ್ಷ, ಷಡ್ದಲಕಮಲ, ಅಷ್ಟದಲಕಮಲ ಈ ಬಂಧಗಳಲ್ಲಿ ಅಳವಡುವ ವಿವಿಧ ಹಾಗೂ ವಿರಳ ಛಂದಸ್ಸುಗಳ ೬ ಪದ್ಯಗಳಿವೆ (ಕ್ರಮವಾಗಿ : ಪ. ೩, ೪, ೪, ೪, ೧೬, ೧೭, ೨೧, ೩೪). ಬಳಿಕ ಸಮಂತಭದ್ರನ (ಸು. ೪೦೦) 'ಜಿನಶತಕ' (= ಸ್ತುತಿವಿದ್ಯಾ) ಎಂಬ ೧೧೬ ಪದ್ಯಗಳ ಒಂದು ರಚನೆಯಲ್ಲಿ ಮುರಜ ಬಂಧದ ಕೆಲವು ವೈಚಿತ್ರ್ಯಗಳು ದೊರೆಯುತ್ತವೆ; ಪ. ೪೮, ೬೪, ೬೬, ೧೦೦ 'ಅನಂತರಪಾದ'ದ, ಪ. ೮೯, ೯೧ 'ಯಥೈಕಾಕ್ಷರಾಂತರಿತ'ದ, ಪ. ೫೦ 'ಇಷ್ಟಪಾದ'ದ ಲಕ್ಷ್ಯಗಳಾಗಿವೆ. ಇಲ್ಲಿಯೇ ಪ. ೨೨–೨೪, ೨೬, ೫೩, ೫೪, ೧೧೧, ೧೧೨, ೧೧೬ ಚಕ್ರಬಂಧದ ಪದ್ಯಗಳು. ಪ. ೨೨–೨೪ರಲ್ಲಿ ಕೇಂದ್ರಸ್ಥಾನದ ಅಕ್ಷರವೂ ೪ ಮುಖ್ಯ ದಿಕ್ಕುಗಳ ಅಕ್ಷರವೂ ಸಮಾನ ಎನ್ನುವುದನ್ನು ಗಮನಿಸಬೇಕು. ವಸುನಂದಿಯ ವ್ಯಾಖ್ಯಾನ ಈ ಕೃತಿಯ ಬಂಧಗಳನ್ನು

ರೂಪಿಸುವಲ್ಲಿ ವಿಶೇಷವಾಗಿ ಸಹಾಯಕವಾಗಿದೆ. ದೇವನಂದಿಯ 'ಸಿದ್ಧಿಪ್ರಿಯಸ್ತೋತ್ರ'ದಲ್ಲಿ ಕೊನೆಯ ಪದ್ಯ ಷಡರಚಕ್ರಬಂಧ. ಜಿನವಲ್ಲಭ ಸೂರಿಯ ೪೦ ಪದ್ಯಗಳ ಚಿಕ್ಕ ಕೃತಿ 'ಧರ್ಮಶಿಕ್ಷಾಪ್ರಕರಣ'ದಲ್ಲಿ ಆದ್ಯಂತ ಪದ್ಯಗಳು ಚಕ್ರಬಂಧಗಳಾಗತಕ್ಕವು. ಇದೇ ಕರ್ತೃವಿನ 'ಸಂಘಪಟ್ಟಕ'ದಲ್ಲಿ ೩೮ನೆಯ ಪದ್ಯ ಚಕ್ರಬಂಧದಲ್ಲಿದೆ. ಅಲ್ಲದೆ ಇದೇ ಕರ್ತೃವಿನ 'ಪ್ರಶ್ನಶತ' ಎಂಬ 'ಪ್ರಶ್ನೋತ್ತರ' ಪ್ರಹೇಳಿಕೆಯ ಒಂದು ಪದ್ಯರಚನೆ ಬಂಧದ ದೃಷ್ಟಿಯಿಂದಲೂ ಉಲ್ಲೇಖಿಸತಕ್ಕುದಾಗಿದೆ. ಪ್ರಶ್ನೆಗಳಿಗೆ ದೊರೆಯುವ ಉತ್ತರಗಳಿಂದ ಕೆಲವು ಬಂಧಗಳನ್ನು ರೂಪಿಸಬಹುದಾಗಿದ್ದು, ಹೀಗೆ ಒಂದು ಪದ್ಯ ಎರಡು ವಿಧದ 'ಚಿತ್ರ'ಗಳಿಗೆ ಅವಕಾಶಮಾಡುವಂತಿರುವುದು ಕವಿಕೌಶಲದ ಮಿಗಿಲಾದ ಸಾಕ್ಷ್ಯವಾಗಿದೆ. ಇಲ್ಲಿ ಚತುರ್ದಲಕಮಲ (ಪ. ೨೬, ೧೪೫, ೧೪೭), ಅಷ್ಟದಲ ಕಮಲ (೧೪,೩೬), ಅಷ್ಟದಲ–ವಿಪರೀತ ಕಮಲ (೨೦, ೪೭, ೧೧೮), ದ್ವಾದಶದಲ ಕಮಲ (ಪ.೪೨), ಷೋಡಶದಲ–ವಿಪರೀತ ಕಮಲ (೫೮, ೫೯, ೭೭, ೭೮) ಎಂಬ ಪದ್ಮಬಂಧದ ೫ ವೈಚಿತ್ರ್ಯಗಳೂ, ಮಂಥಾನ (=ಕಡೆಗೋಲು)ದ ೨ ವೈಚಿತ್ರ್ಯಗಳೂ (ಪ. ೧೦, ೧೨, ೬೧, ೧೩೨, ೧೩೩, ೧೩೮, ೧೩೯, ೧೫೨ ; ಪ. ೩೨, ೬೯, ೭೪, ೧೪೩, ೧೫೪), ಶೃಂಖಲಾ (=ಸರಪಳಿ)ದ ೧ ವೈಚಿತ್ರ್ಯವೂ ಸೇರಿದಂತೆ ಒಟ್ಟು ೮ ಬಗೆಯ ಬಂಧಚಿತ್ರಗಳಿವೆ.

ಕಾಶ್ಮೀರದ ಕವಿ ಅವತಾರನ 'ಈಶ್ವರಶತಕ'ದಲ್ಲಿ ಪ್ರಾಯಃ ೪೮ನೆಯ ಪದ್ಯ ತೂಣಬಂಧ. ಹರಿಚಂದ್ರನ 'ಧರ್ಮಶರ್ಮಾಭ್ಯುದಯ'ದ ೧೯ನೆಯ ಸರ್ಗದಲ್ಲಿ ಪ. ೯೦, ೯೪ ಮುರಜ ; ಪ. ೯೮, ೯೯ ಷೋಡಶದಲ ಪದ್ಮ; ಪ. ೧೦೧–೧೦೨ ಸಂಯುಕ್ತವಾಗಿ ಅಷ್ಟಾರಚಕ್ರ ; ಪ. ೧೦೪ ಷಡರಚಕ್ರ. ಈ ಕೃತಿ ಪ್ರಾಚೀನ ಆಲಂಕಾರಿಕ ಮಹಾಕಾವ್ಯ ಮಾರ್ಗದ ಪ್ರಸಿದ್ಧ ಜೈನ ಮಹಾಕಾವ್ಯ. 'ಜಿನಪ್ರಭಸೂರಿಯ 'ವೀರಸ್ತವನ', (='ಚಿತ್ರಸ್ತವ') ದಲ್ಲಿ ಕಮಲ (ಅಷ್ಟದಲ ಮತ್ತು ಷೋಡಶದಲ), ಖಡ್ಗ, ಚಕ್ರ (ಷಡರ), ಚಾಮರ, ತ್ರಿಶೂಲ, ಧನುಸ್ಸು, ಪದ(?), ಬೀಜಪೂರ, ಮುರಜ, ಮುಸಲ, ಶಕ್ತಿ, ಶರ, ಹಲ ಮತ್ತು ಹಾರ ಎಂಬ ಬಂಧಗಳಲ್ಲಿ ಅಳವಡುವ ಪದ್ಯಗಳನ್ನು ಕಾಣಬಹುದಾಗಿದೆ. ಆಗಮಿಕಗಚ್ಛದ ಜಯತಿಲಕಸೂರಿಯ 'ಚತುರ್ಹಾರಾವಲೀಚಿತ್ರಸ್ತವ'ದಲ್ಲಿ ೪ ಚತುರ್ವಿಂಶತಿಕಾ (= ಹಾರಾವಲಿ)ಗಳಿದ್ದು, ಹಾರಗಳಿಗೆ ಅಳವಡುವಂತೆ ಇಲ್ಲಿ ಪದ್ಯರಚನೆಯಿದೆ. ಪ್ರತಿಯೊಂದು ಚತುರ್ವಿಂಶತಿಕಾದ ೧೩ನೆಯ ಪದ್ಯವೂ ಕ್ರಮವಾಗಿ ಚತುರ್ವಿಂಶತಿದಲ ಕಮಲ, ಸ್ವಸ್ತಿಕ, ವಜ್ರ ಮತ್ತು ಬಂಧುಕ–ಸ್ವಸ್ತಿಕದ ಲಕ್ಷ್ಯವಾಗುತ್ತದೆಯೆನ್ನುವುದು ಹೆಚ್ಚಿನ ವಿಶೇಷ. ಕುಲಮಂಡನಸೂರಿಯು (ವಿ.ಸಂ. ೧೪೧೭–೫೫) ೨೩ ಪದ್ಯಗಳ 'ಪಂಚಜಿನಹಾರಬಂಧಸ್ತವ'ವನ್ನೂ ೨೧ ಪದ್ಯಗಳ 'ವೀರಜಿನಸ್ತವನ'ವನ್ನೂ ರಚಿಸಿದ್ದು, ಎರಡನೆಯ ಕೃತಿಯಲ್ಲಿ ಕಮಲ (ಚತುರ್ದಲ), ಖಡ್ಗ, ಚಕ್ರ (ಷಡರ), ಚಾಮರ, ಛತ್ರ, ತ್ರಿಶೂಲ, ಧನುಷ್ಯ, ಪೂರ್ಣಕಲಶ, ಭಲ್ಲ, ಮುಸಲ, ವಜ್ರ, ಶಕ್ತಿ, ಶಂಖ, ಶರ, ಶೂಲ, ಶ್ರೀಕರಿ (ಗದೆ) ಮತ್ತು ಹಲ ಎಂಬ ೧೭ ಬಂಧಗಳನ್ನು ಬಳಸಿದೆ (ಕ್ರಮವಾಗಿ ಪ. ೧೬, ೯, ೧೦, ೧, ೬, ೧೨, ೧೮, ೧೪, ೮, ೨, ೧೯, ೧೧, ೪, ೧೭, ೩, ೫, ೭). ಪ. ೨, ೧೯ ಸಂಯುಕ್ತವಾಗಿ ಅಷ್ಟಾರಚಕ್ರವನ್ನು ರೂಪಿಸಬಲ್ಲುದು. ೨೩ ಪದ್ಯಗಳ 'ಪಂಚಜಿನಹಾರಬಂಧಸ್ತವ' ಐವರು ತೀರ್ಥಂಕರರ ಒಂದು ಸ್ತುತಿಪದ್ಯಗುಚ್ಛ; ಒಂದೊಂದು ಪದ್ಯವೂ ಒಂದೊಂದು ಹಾರಬಂಧ.

'ಸಹಸ್ರಾವಧಾನಿ' ಎಂದು ಖ್ಯಾತನಾಗಿದ್ದ ಮುನಿಸುಂದರ ಸೂರಿ ಹಲವು ಗ್ರಂಥಗಳ ಕರ್ತೃ. ಈತನ 'ತ್ರಿದಶತರಂಗಿಣಿ'ಯಲ್ಲಿ ಪ್ರಾಸಾದ, ಪದ್ಮ, ಚಕ್ರ ಇತ್ಯಾದಿ ಬಂಧಗಳಿವೆಯೆಂದು ಇವನ ಶಿಷ್ಯ ಹರ್ಷಭೂಷಣ ಗಣಿ (ವಿ.ಸಂ. ೧೪೮೦) ತಿಳಿಸಿದ್ದಾನೆ; ಆದರೆ ಮಹೋಪಾಧ್ಯಾಯ ಧರ್ಮಸಾಗರ ಗಣಿ ತನ್ನ 'ಗುರುಪರಿವಾಡಿ' (=ತಪಗಚ್ಛ ಪಟ್ಟಾವಳಿ)ಯ ವ್ಯಾಖ್ಯಾನದಲ್ಲಿ ಮುನಿಸುಂದರ ಸೂರಿ ೩೦೦ ಹೊಸಬಂಧಗಳನ್ನು ರಚಿಸಿದ್ದಾನೆಂದು ಹೇಳಿದ್ದಾನೆ (ಪ. ೧೬). ಆತ ಪ್ರಕಟವಾಗಿ ಹೇಳಿರುವುದು ಎಂದರೆ, ಅಶೋಕ, ಚಕ್ರ, ಪ್ರಾಸಾದ, ಭೇರಿ, ಅಷ್ಟಮಹಾಪ್ರಾತಿಹಾರ್ಯ, ಮುರಜ, ಸಮವಸರಣ, ಸರೋವರ ಮತ್ತು ಸಿಂಹಾಸನ (ಇವಲ್ಲದೆ ಈ ಸೂರಿ ಅರ್ಧಭ್ರಮ, ಕ್ರಿಯಾಗುಪ್ತಿ, ದ್ವ್ಯಕ್ಷರ, ಪಂಚವರ್ಗಪರಿಹಾರ, ಷಟ್‌ಕಾರಕ ಮತ್ತು ಸರ್ವತೋಭದ್ರ ಎಂಬ ಗತಿ, ಗೂಢ ಮತ್ತು ವರ್ಣಚಿತ್ರ ಭೇದಗಳಲ್ಲಿ ಕೆಲವನ್ನು ಸಹ ಬಳಸಿದ್ದಾನೆ). ಉಪಾಧ್ಯಾಯ ಜಯಸಾಗರ (ವಿ.ಸಂ. ೧೪೮೪) 'ವಿಜ್ಞಪ್ತಿತ್ರಿವೇಣಿ'ಯಲ್ಲಿ ಆಸನ, ಚಕ್ರ, ಚಾಮರ, ಛತ್ರ, ಪದ್ಮ (ಷೋಡಶದಲ–ವಿಪರೀತ), ಬೀಜ

ಪೂರ, ಸ್ವಸ್ತಿಕ ಮತ್ತು ಹಾರಗಳೆಂಬ ೮ ಬಂಧಗಳನ್ನು ಹೊರಡಿಸಬಹುದಾದ ಪದ್ಯಗಳನ್ನು ರಚಿಸಿದ್ದಾನೆ. ಉದಯ ಮಾಣಿಕ್ಯಗಣಿಯ 'ಚಂದ್ರಪ್ರಭಸ್ವಾಮಿ ಸ್ತವನ' ಎಂಬ ೧೦ ಪದ್ಯಗಳ ರಚನೆಯು ದರ್ಪಣ, ಭದ್ರಾಸನ, ಶರಾವ ಸಂಪುಟ, ಮತ್ಸ್ಯಯುಗಲ, ಕಲಶ, ಸ್ವಸ್ತಿಕ, ಶ್ರೀವತ್ಸ (ಕ್ರಮವಾಗಿ ಪ. ೧ ರಿಂದ ೭) ಮತ್ತು ನಂದ್ಯಾವರ್ತ (ಪ. ೮. ೯) ಎಂಬ ಅಷ್ಟಮಂಗಲಗಳಲ್ಲಿ ಪ್ರತಿಯೊಂದರ ಬಂಧವನ್ನೂ ಕ್ರಮವಾಗಿ ರೂಪಿಸಲು ಸಾಧ್ಯವಾಗುವಂಥ ೯ ಪದ್ಯಗಳನ್ನು ಒಳಕೊಂಡಿರುವುದರಿಂದ ವಿಶಿಷ್ಟ ರೀತಿಯದಾಗಿದೆ. ಜಿನಸೂರನ (ವಿ.ಸಂ. ೧೬ನೆಯ ಶ.) 'ಪ್ರಿಯಂಕರ ನೃಪ–ಕಥಾ'ದಲ್ಲಿ ಒಂದು ಸ್ವಸ್ತಿಕ, ಇನ್ನೊಂದು ಅಷ್ಟದಲ–ವಿಪರೀತ ಕಮಲ ಎಂಬ ಬಂಧಗಳಾಗಿವೆ (ಪು. ೯೨).

ಉದಯಧರ್ಮ ಗಣಿ, 'ಉಪದೇಶ ಮಾಲಾ'ದ ಪ. ೫೧ನ್ನು ವ್ಯಾಖ್ಯಾನಿಸುವಾಗ (ವಿ.ಸಂ. ೧೬೦೫), ಅದರಲ್ಲಿ ಒಂದು ನೂರು ಅರ್ಥಗಳು ಹೊರಡಬಹುದಾದನ್ನು ಸೂಚಿಸಿದ್ದಾನೆ. ಈ ಗಣಿ 'ಮಹಾವೀರಸ್ತವನ'ದ ಕರ್ತೃವಾಗಿರುವಂತೆಯೂ ತೋರುತ್ತದೆ. ಈ ಸ್ತವನದಲ್ಲಿ ೧೮ ಪದ್ಯಗಳಿದ್ದು, ಇವುಗಳಲ್ಲಿ ಒಂದು ದ್ವಾತ್ರಿಂಶದ್ದಲ ಪದ್ಮಬಂಧದ ನಿದರ್ಶನ. ಉದಯ ಧರ್ಮನೆಂಬ ಬೇರೊಬ್ಬ ಜೈನಯತಿಯ 'ಯುಗಾದಿಸ್ತವ' ಎಂಬ ೨೩ ಪದ್ಯಗಳ ರಚನೆಯಿದ್ದು, ಇದರ ಮೊದಲ ಪದ್ಯ ಒಂದು ಹಾರಬಂಧ ಎಂದು ತಿಳಿಯುತ್ತದೆ. ಹಲವು ಗ್ರಂಥಗಳ ಕರ್ತೃ ಸಮಯಸುಂದರಗಣಿ (ವಿ. ಸಂ. ೧೬೪೯) ರಚಿಸಿದ ಹಾರಬಂಧಸ್ತೋತ್ರದಲ್ಲಿ ೮ ಪದ್ಯಗಳಿದ್ದು, ಮೊದಲ ೩ ಪದ್ಯಗಳಿಂದ ಒಂದು ಹಾರವೂ ಬಳಿಕಣ ೩ ಪದ್ಯಗಳಿಂದ ಇನ್ನೊಂದು ಹಾರವೂ ನಿಷ್ಪನ್ನಗೊಳ್ಳುತ್ತವೆ. ಶ್ರೀವಲ್ಲಭನ (ವಿ.ಸಂ. ೧೬೫೪) 'ಅರನಾಥಸ್ತವ' ಸಹಸ್ರದಲ ಕಮಲದ ರಚನೆಯನ್ನು ಒದಗಿಸುತ್ತದೆ. ಹೇಮವಿಜಯಗಣಿ (ವಿ.ಸಂ.೧೬೮೧) ರಚಿಸಿದ 'ಜಿನಸ್ತವನಚತುರ್ವಿಂಶತಿಕಾ' ಎಂಬ ೨೪ ಲಘುಪ್ರಮಾಣ ಸ್ತುತಿಯಲ್ಲಿ ಪ್ರತಿಸ್ತುತಿಯೂ ೫ ಪದ್ಯಗಳ ಒಂದು ಗುಚ್ಛವಾಗಿದ್ದು, ಒಂದೊಂದೂ ಗುಚ್ಛದ ಮೊದಲ ೪ ಪದ್ಯಗಳಿಂದ ಒಂದೊಂದು ಷೋಡಶದಲ–ವಿಪರೀತ ಕಮಲ ನಿಷ್ಪನ್ನವಾಗುವುದು ಸಾಧ್ಯವಿದೆ; ಒಟ್ಟು ೨೪ ಕಮಲಗಳು ಹೀಗೆ ಹೊರಡುತ್ತವೆ.

ಲೋದ್ರವದ ಪಾರ್ಶ್ವನಾಥ ಬಸದಿ ವಿ.ಸಂ. ೧೬೭೫ರಲ್ಲಿ ನಿರ್ಮಿತವಾಗಿದ್ದು, ಇಲ್ಲಿ ಶತದಲ ಪದ್ಮ ಯಂತ್ರವನ್ನು ಕೆತ್ತಲಾಗಿದೆ. ಇದರ ಕವಿ ಸಹಜಕೀರ್ತಿ ವಾಚಕ. ಈತ 'ಲೋದ್ರಪುರ ಪಾರ್ಶ್ವನಾಥ ಪ್ರಶಸ್ತಿ' ಎಂಬ ೨೬ ಪದ್ಯಗಳ ರಚನೆಯನ್ನು (ವಿ.ಸಂ. ೧೬೮೩) ಮಾಡಿದ್ದಾನೆ. ಇದರ ಮೊದಲ ೨೫ ಪದ್ಯಗಳು ಶತದಲ ಪದ್ಮ–ವಿಪರೀತ ಬಂಧವಾಗಿ ರೂಪಗೊಳ್ಳುತ್ತವೆ. ವಿ.ಸಂ. ೧೬೯೯ ಎಂಬ ತೇದಿಯುಳ್ಳ 'ವಿಜ್ಞಪ್ತಿಪತ್ರ'ದ ಕರ್ತೃ ಉದಯವಿಜಯ. ಆತನ ಈ ರಚನೆಯಲ್ಲಿ ೩೭ ಮತ್ತು ೨೬ ಎಂಬುದಾಗಿ ಎರಡು ಗುಂಪುಗಳಾಗಿ ೬೩ ಬಂಧಗಳು ಹುಟ್ಟುವ ೩೧೭ ಪದ್ಯಗಳಿವೆ. ಅವು ಯಾವುವೆಂದರೆ : (i) ಮುಸಲ, ತ್ರಿಶೂಲ, ಶಂಖ, ಚಾಮರ, ಶ್ರೀಕರಿ, ಹಲ, ಭಲ್ಲ, ಧನುಷ್ಯ, ಖಡ್ಗ, ಶಕ್ತಿ, ಛತ್ರ, ರಥ, ಕಲಶ, ಶರ, ಮುದ್ಗರ, ವಜ್ರ, ಸ್ವಸ್ತಿಕ, ಪತಾಕಾ, ಚಕ್ರ (ಅಷ್ಟಾರ), ಕಮಲ (೨೮ ದಲಗಳು), ದರ್ಪಣ, ಶ್ರೀವತ್ಸ, ಸಿಂಹಾಸನ (ಚಂಪಕಮಂಡಿತ), ದರ್ಪಣ, ಮತ್ಸ್ಯಯುಗಲ, ಶ್ರೀವತ್ಸ, ಶರಾವ ಸಂಪುಟ, ನಂದ್ಯಾವರ್ತ, ಭದ್ರಾಸನ, ನಾಗಪಾಶ, ಸ್ವಸ್ತಿಕ (ಕಂಕಣಮಧ್ಯಸ್ಥಿತ), ಚಾಮರ. ಬೀಜಪೂರ, ಕಮಲ, ಧನುಷ್ಯ, ಸ್ಥಪತಿಕಾ, ಹಾರ. (ii) ಮುಸಲ, ತ್ರಿಶೂಲ, ಶಂಖ, ಶ್ರೀಕರಿ, ಛತ್ರ, ರಥ, ಕಲಶ, ಕಮಲ, ಶರ ಮುದ್ಗರ, ವಜ್ರ, ಸ್ವಸ್ತಿಕ, ಪತಾಕಾ, ಕಮಲ (೨೦ ದಲಗಳು). ನಾಗಪಾಶ, ಕಮಲ (೯೬ ದಲಗಳು), ಕಮಲ (೪೮ ದಲಗಳು), ಬೀಜಪೂರಾದಿ–ನವಕ.

ವಿನಯವಿಜಯ ಗಣಿಯ 'ಆನಂದಲೇಖಾ'ದಲ್ಲಿಯ 'ಚಿತ್ರಚಮತ್ಕಾರ'ವೆಂಬ ಪ್ರಥಮಾಧಿಕಾರದಲ್ಲಿ ಕಮಲ (ಚತುರ್ದಲ), ಖಡ್ಗ, ಚಕ್ರ (ಅಷ್ಟಾದಶಾರ), ಚಾಮರ, ಛತ್ರ, ತ್ರಿಶೂಲ, ಧನುಷ್ಯ, ಪೂರ್ಣಕಲಶ, ಭಲ್ಲ, ಮುಸಲ, ವಜ್ರ, ಶಕ್ತಿ, ಶಂಖ, ಶರ, ಶೂಲ, ಶ್ರೀಕರಿ, ಶ್ರೀವತ್ಸ, ಹಲ ಎಂಬ ೧೮ ಬಂಧಗಳಿಗೆ ಅಳವಡುವ ಪದ್ಯಗಳಿವೆ.

ಅಜಿತಸೇನನ 'ಅಲಂಕಾರ ಚಿಂತಾಮಣಿ'ಯ ಬಂಧಚಿತ್ರಗಳ ಬಗೆಗೆ ಹಿಂದೆಯೇ ಹೇಳಿದೆ. ಗುಣಭದ್ರ ಕೀರ್ತಿಯ 'ಚಿತ್ರಬಂಧಸ್ತವ' ಎಂಬ ಚತುರ್ವಿಂಶತಿ ತೀರ್ಥಂಕರ ಸ್ತುತಿಯನ್ನು ಮೇಧಾವಿಯೆಂಬವನು ಪರಿಷ್ಕರಿ

ಸಿದ್ದು, ಇದರಲ್ಲಿ ಕಮಲ (೮, ೧೬ ದಲಗಳು), ಕಲಶ, ಖಡ್ಗ, ಚಕ್ರ (೪ ಅರಗಳು), ಚಾಮರ, ಛತ್ರ, ತ್ರಿಶೂಲ, ಧನುಷ್ಯ, ನಾಲಿಕೇರ, ಬೀಜಪೂರ, ಭಲ್ಲ, ಮುರಜ, ಮುಸಲ, ರಥ, ವಜ್ರ, ಶಕ್ತಿ, ಶಂಖ, ಶರ, ಶ್ರೀಕರಿ, ಶ್ರೀವೃಕ್ಷ, ಸ್ವಸ್ತಿಕ ಮತ್ತು ಹಲ ಎಂಬ ಬಂಧಗಳಿಗೆ ಹೊಂದುವಂತಹ ಪದ್ಯಗಳನ್ನು ಬಳಸಿದೆ. ಸಾಗರಚಂದ್ರನೆಂಬವನ 'ಮಂತ್ರಾಧಿರಾಜಕಲ್ಪ'ದಲ್ಲಿ, ಅದರ ೪ನೆಯ ಪಟಲದಲ್ಲಿ ಅಷ್ಟದಲಪದ್ಮ, ಖಡ್ಗ, ಚಕ್ರ, ಛತ್ರ ಮತ್ತು ಮುರಜ ಬಂಧಗಳು ಬಂದಿವೆ. ಈ ಲೇಖಕರಲ್ಲಿ ಯಾರ ಕಾಲವೂ ನಿಶ್ಚಯವಿಲ್ಲ. ಅಜಿತಸೇನನು ಸು. ೧೪೨೦ರಲ್ಲಿದ್ದಿರಬಹುದೆಂದೂ ಮೇಧಾವಿ ವಿ.ಸಂ. ೧೫೪೧ರಲ್ಲಿದ್ದ 'ಧರ್ಮಸಂಗ್ರಹ ಶ್ರಾವಕಾಚಾರ'ದ ಕರ್ತೃವಿರಬಹುದೇ ವಿಚಾರಣೀಯವೆಂದೂ ಸಾಗರಚಂದ್ರನೆಂಬವನು ಕ್ರಿ.ಶ. ೧೧೩೫, ೧೧೯೦, ೧೪೦೦ರಲ್ಲಿದ್ದ ಅದೇ ಹೆಸರಿನ ಮೂವರಲ್ಲಿ ಒಬ್ಬನಾಗಿರಬೇಕೆಂದೂ ಊಹಿಸಲಾಗಿದೆ.[6]

ಜೈನ ವಿದ್ವತ್ಕವಿಗಳ ಈ ರಚನೆಗಳೆಲ್ಲ ಬಲುಮಟ್ಟಿಗೆ ಜಿನಸ್ತುತಿ ಪದ್ಯಗಳ ಮಾಲಿಕೆಗಳು. ಈ ಅಲ್ಪಾವಕಾಶದಲ್ಲಿಯೇ ಮೆರೆದಿರುವ ವೈಚಿತ್ರ್ಯಗಳು ವಿವಿಧವಾದವು, ಆಕರ್ಷಕವಾದವು. ದೇಶ ಭಾಷೆಗಳ ರಚನೆಗಳು ಪ್ರತ್ಯೇಕವಾಗಿ ಗುರುತಿಸತಕ್ಕುವಾಗಿವೆ.

ಈಗ ಜೈನೇತರ ಕವಿಗಳ, ಪ್ರಮುಖವಾಗಿ ವೈದಿಕ ಸಂಪ್ರದಾಯದ ಕವಿಗಳ, ಕೆಲವು ಕಾವ್ಯಗಳಲ್ಲಿ ಚಿತ್ರ ಬಂಧದ ಉಲ್ಲೇಖಗಳನ್ನು ನೋಡಬಹುದಾಗಿದೆ.

ಕುಮಾರದಾಸ (ಸು. ೫೨೦) ಕೃತವಾದ 'ಜಾನಕೀಹರಣ'ದಲ್ಲಿ ಶಬ್ದಾಲಂಕಾರವೈಚಿತ್ರ್ಯಗಳು ಸಾಕಷ್ಟು ಇದ್ದು, ಗೋಮೂತ್ರಿಕಾಮುರಜ, ಮುರಜ, ಜಾಲ ಮೊದಲಾದ ಬಂಧಗಳನ್ನು ಇಲ್ಲಿ ಬಳಸಿದೆ (೧೮–೩೭ರಿಂದ ೪೫). ಆದರೆ ಇಲ್ಲಿ ಬಂಧವೈಚಿತ್ರ್ಯಗಳಿಗಿಂತ ಯಮಕಗಳೂ ಗತಿವೈಚಿತ್ರ್ಯಗಳೇ ಸಂಖ್ಯೆಯಲ್ಲಿ ಹೆಚ್ಚು. ಒಂದೇ ಸರ್ಗದಲ್ಲಿ ಇವೆಲ್ಲ ಇಡಿಕಿರಿದಿವೆ. ಈ ದೃಷ್ಟಿಯಿಂದ ಕೆಲವು ವಿದ್ವಾಂಸರು ಭಾರವಿಗೂ ಮೊದಲು ಈತನನ್ನೇ ಈ ಬಗೆಯ ಕಾವ್ಯರಚನೆಗೆ ಆದ್ಯನೆಂದು ಗುರುತಿಸುತ್ತಾರೆ. ವಿದ್ವತ್ ಕವಿಗಳಲ್ಲಿ ಪ್ರಸಿದ್ಧನಾದ ಮಾಘನ (ಸು. ೭೦೦) 'ಶಿಶುಪಾಲವಧ'ದಲ್ಲಿ ಮುರಜದ (೧೯–೨೯) ಹಾಗೂ ಕವಿಕಾವ್ಯನಾಮಗರ್ಭಿತವಾದ ಚಕ್ರದ (೧೯–೧೨೦) ನಿದರ್ಶನಗಳಿವೆ. ಮಾಘನೊಂದಿಗೆ ಸ್ಪರ್ಧಿಸಲೆಂಬಂತೆ ಮಹಾಕಾವ್ಯ ರಚನೆಮಾಡಿದವರು ಶಿವಸ್ವಾಮಿ ಮತ್ತು ರತ್ನಾಕರರು. ಇವರು ಆನಂದವರ್ಧನನ ಸಮಕಾಲೀನರು; ಕಾಶ್ಮೀರದ ದೊರೆ ಅವಂತಿವರ್ಮನ ಪ್ರೋತ್ಸಾಹ ದೊರೆತು ಪ್ರಸಿದ್ಧರಾದವರು. ಇಬ್ಬರೂ ಕ್ರಿ.ಶ. ೯ನೆಯ ಶತಮಾನದಲ್ಲಿದ್ದವರು. ಶಿವಸ್ವಾಮಿಯ 'ಕಪ್ಫಿಣಾಭ್ಯುದಯ'ವೆಂಬ ಬೌದ್ಧ ಅವದಾನ ಕಥೆಯನ್ನು ವಸ್ತುವಾಗಿ ಉಳ್ಳ ಕೃತಿಯಲ್ಲಿ ಹಲವು ಚಿತ್ರಕಾವ್ಯ ಪ್ರಕಾರದ ಲಕ್ಷ್ಯಗಳಿದ್ದು, ಮುರಜ (೧೮–೫೯, ೬೧), ಕಾಂಚಿ (೧೮–೧೨೯, ೧೩೦), ಅಷ್ಟದಲಪದ್ಮ (೧೮–೭೪), ಕವಿಕಾವ್ಯನಾಮಗರ್ಭಿತಚಕ್ರ (೧೮–೧೪೭) ಈ ಬಂಧಗಳನ್ನು ಕಾಣಬಹುದಾಗಿದೆ. ರತ್ನಾಕರನ 'ಹರವಿಜಯ'ವಂತೂ ಒಂದು ರಾಕ್ಷಸ ಮಹಾಕಾವ್ಯ. ೫೦ ಸರ್ಗಗಳ ಈ ದೊಡ್ಡ ಗ್ರಂಥದಲ್ಲಿ ಬಹುಸಂಖ್ಯೆಯ ಚಿತ್ರಕಾವ್ಯಪ್ರಕಾರಗಳು ಬಳಕೆಯಾಗಿವೆ (ಸರ್ಗ ೪೩, ೪೬, ೪೮). ಅಪೂರ್ವವೂ ಸಂಕೀರ್ಣವೂ ಅತ್ಯಧಿಕ ಸಂಖ್ಯಾಕವೂ ಆದ ಬಂಧಗಳನ್ನು ಬಳಸಿದ ಸಂಸ್ಕೃತಕವಿಗಳಲ್ಲಿ ಇವನಿಗೆ ಅಗ್ರಸ್ಥಾನ ದೊರೆಯುತ್ತದೆನ್ನಬೇಕು. ಇಲ್ಲಿ ಮುರಜ, ಕಾಂಚಿ, ಶಕ್ತಿ, ಮುಸಲ, ಖಡ್ಗ, ಶೂಲ, ತೂಣಿ, ಶರ, ಮುರಜ ಸ್ವಸ್ತಿಕ ಶಕ್ತ್ಯಾದಿಗಳು, ಸಪ್ತದಶಾಕ್ಷರ ಪದ್ಮ, ಗೋಮೂತ್ರಿಕಾಜಾಲ, ಸಮುದ್ಗಯಮಕ ಕಾಂಚೀ ಗೋಮೂತ್ರಿಕಾ ಮುರಜಜಾಲ, ಷೋಡಶ ದಲಪದ್ಮ, ಗೋಮೂತ್ರಿಕಾಮುರಜ ಈ ಕೆಲವು ಬಂಧಗಳನ್ನು ಕವಿ ಬಳಸಿದ್ದಾನೆ (೪೩–೩೭, ೬೩, ೬೯, ೧೨೬, ೧೩೮, ೧೫೨, ೧೫೫, ೧೫೬, ೧೫೯–೬೦, ೨೩೨, ೨೭೬, ೩೦೦; ೪೬–೮೦; ೪೮–೭೪). ಧ್ವನಿಸಿದ್ಧಾಂತ ಪ್ರತಿಪಾದಕನಾದ ಆನಂದವರ್ಧನನ 'ದೇವೀಶತಕ'ದಲ್ಲಿ ಜಾಲ ಮತ್ತು ತೂಣಿಗಳೂ ಇತರ ಸಾಮಾನ್ಯಬಂಧಗಳೂ ಇವೆ. ಇಲ್ಲಿ ೩೨ ಅರಗಳ ಚಕ್ರವಿದ್ದು, ಅದರ ರಚನೆ ವಿಸ್ಮಯಕರವಾಗಿದೆ.

ವೇದಾಂತದೇಶಿಕರ (೧೨೬೮–೧೩೬೯) 'ಯಾದವಾಭ್ಯುದಯ'ದಲ್ಲಿ ಮುರಜ (೬–೧೦೩), ಕವಿಕಾವ್ಯನಾಮಗರ್ಭಿತಚಕ್ರ (೬–೧೦೪) ಇವೂ ಒಂದು ಅಷ್ಟದಲ ಪದ್ಮವೂ (೬–೧೦೫) ಮಾತ್ರ ಸ್ಥಾನಪಡೆದಿದ್ದರೆ, ಇದೇ

ಕರ್ತೃವಿನ 'ಪಾದುಕಾಸಹಸ್ರ'ದಲ್ಲಿ ದ್ವಿಚತುಷ್ಕ ಚಕ್ರ (೩, ೧೬), ಶರ (೧೩), ಗರುಡಗತಿ (೧೪), ದ್ವಿಶೃಂಗಾಟಕ ಚಕ್ರ (೧೫) ಚತುರರ ಚಕ್ರ (ಪ. ೧೭), ಅಷ್ಟದಳಪದ್ಮ (ಪ. ೧೭, ೩೦), ಷೋಡಶದಲಪದ್ಮ (೧೮), ಷಡರಚಕ್ರ (ಪ. ೩೧) ಅಷ್ಟಾರಚಕ್ರ (ಪ. ೩೨) ಈ ಕೆಲವು ಬಂಧಗಳು ಎಡೆಪಡೆದಿರುವುದು ಕಾಣುತ್ತದೆ. ತ್ರಿವಿಕ್ರಮ ಪಂಡಿತನ 'ಉಷಾಹರಣ'ದಲ್ಲಿ ಮುರಜ (೮-೨೫), ಕವಿಕಾವ್ಯನಾಮಗರ್ಭಿತಚಕ್ರ (೮-೭೫)ಗಳೂ ವಾದಿರಾಜರ (ಸು. ೧೫೭೦) 'ರುಕ್ಮಿಣೀಶ ವಿಜಯಕಾವ್ಯ'ದಲ್ಲಿ ಕವಿಕಾವ್ಯನಾಮಗರ್ಭಿತಗಳಾದ ಪದ್ಮ (೧೭-೭೦), ಚಕ್ರ (೧೯-೩೬)ಗಳೂ ನಾರಾಯಣ ಪಂಡಿತನ 'ಮಧ್ವವಿಜಯಕಾವ್ಯ'ದಲ್ಲಿ ಒಂದು ಕವಿಕಾವ್ಯನಾಮಗರ್ಭಿತಚಕ್ರವೂ (೧೦-೫೪) ಬಳಕೆಯಾಗಿವೆ.

ಬಂಧಪ್ರಚುರ ಕಾವ್ಯಗಳು ಇನ್ನೂ ಕೆಲವು ಕಂಡುಬರುತ್ತವೆ. ವೆಂಕಟಾಧ್ವರಿಯ (ಸು. ೧೭ನೆಯ ಶ. 'ಲಕ್ಷ್ಮೀಸಹಸ್ರನಾಮ'ದಲ್ಲಿ ಗವಾಕ್ಷ, ಗರುಡ ಇತ್ಯಾದಿ ಬಂಧಗಳೂ ಕೆಲವು ಗತಿಚಿತ್ರಗಳೂ ಕೃತಿಗೊಂಡಿವೆ. ಈತನ 'ಶ್ರೀನಿವಾಸಚಂಪು'ವಿನಲ್ಲಿಯೂ ಬಂಧಗಳುಂಟೆಂದು ಭಾವಿಸಲಾಗಿದೆ. ವೆಂಕಟೇಶ್ವರನ 'ಚಿತ್ರಬಂಧರಾಮಾಯಣ' ದಲ್ಲಿ ಕೌಶಲಪೂರ್ಣ ಬಂಧಗಳಾದ ಕಂಕಣ, ಛತ್ರ ಮುಂತಾದುವನ್ನು ಬಳಸಿದೆ. ನೃಸಿಂಹನ ಮಗ ವೆಂಕಟಾಚಾರ್ಯನ 'ಕಮಲಮಾಲಿಕಾಸ್ತೋತ್ರ', ಲಕ್ಷ್ಮಿಯ ಸ್ತುತಿರೂಪವಾದ್ದು, ಪದ್ಮಗಳ ಬಂಧ. ಕಠಿನವಾದ ಕಂಕಣಬಂಧದಲ್ಲಿ ರಚಿತವಾದದ್ದು, ಸಮಗ್ರ ರಾಮಾಯಣವನ್ನು ನಿರೂಪಿಸುವ 'ಕಂಕಣಬಂಧ ರಾಮಾಯಣ'. ಇದರ ಕರ್ತೃ ಕೃಷ್ಣಮೂರ್ತಿ, ೧೯ನೆಯ ಶ.ದ ಕವಿ. ಈ ಚಮತ್ಕಾರವನ್ನು ತನ್ನ ಇದೇ ಹೆಸರಿನ ಕಾವ್ಯದಲ್ಲಿ ಇನ್ನೂ ಸಂಕೀರ್ಣ ಗೊಳಿಸಿದ ಕವಿಯೆಂದರೆ ಕನಕಪರ್ತಿಯ ಚರ್ಲ ಭಾಷ್ಯಕಾರ ಶಾಸ್ತ್ರಿ. ಸಮಾಸಶಬ್ದಗಳನ್ನು ಸ್ಥಳಾಂತರಿಸುವುದರಿಂದ ಒಂದು ಪದ್ಯ ೧೨೫ ಪದ್ಯಗಳಾಗಿ ಏರ್ಪಡುವ ಸಂಯೋಜನೆಯಿದೆ ಇಲ್ಲಿ. ವೆಂಕಟೇಶನ 'ರಾಮಚಂದ್ರೋದಯ'ದಲ್ಲಿ (೧೬೩೫), ಅದರ ೨೬ನೆಯ ಸರ್ಗದಲ್ಲಿ ಇತರ ಬಂಧಗಳ ಜೊತೆಗೆ ಕಂಕಣಬಂಧವೂ ಉಂಟು. ಈ ಕವಿ ವೆಂಕಟಾಧ್ವರಿಯ ವಂಶದ ಶ್ರೀನಿವಾಸನೆಂಬವನ ಮಗ.

ನಮ್ಮ ಕಾಲದ ಸಂಸ್ಕೃತ ವಿದ್ವತ್ ಕವಿಗಳಲ್ಲಿ 'ಚಿತ್ರಕವಿಪಂಡಿತ' ರಾಮರೂಪ ಪಾಠಕರ ಸಾಧನೆ ಗಮನಾರ್ಹವಾದುದು. ಅವರ 'ಚಿತ್ರಕಾವ್ಯಕೌತುಕ' ಎಂಬ ಸ್ವತಂತ್ರಕೃತಿಯಲ್ಲಿ (೧೯೬೫)[7] ಮಾಂಗಲಿಕಬಂಧಗಳು, ಆಯುಧಬಂಧಗಳು, ವಿಷ್ಣ್ವಾಯುಧಬಂಧಗಳು, ಪ್ರಕೀರ್ಣಬಂಧಗಳು ಎಂಬ ೪ ಪ್ರಮುಖವಿಭಾಗಗಳನ್ನು ಮಾಡಿಕೊಂಡು, ಇವುಗಳಲ್ಲಿ ಕ್ರಮವಾಗಿ ೮, ೮, ೧೩ ಮತ್ತು ೨೬ ಬಂಧಚಿತ್ರಗಳನ್ನು ಮೂಲಪದ್ಯ, ಅದನ್ನು ಅಳವಡಿಸಿದ ಚಿತ್ರ, ಇವುಗಳೊಂದಿಗೆ ತೋರಿಸಿದೆ. ಅಲ್ಲದೆ ಪದ್ಯಗಳಿಗೆ ಸ್ವೋಪಜ್ಞಟೀಕೆಯಿದೆ; ಪದ್ಯದ ಹಿಂದೀ ಅನುವಾದವೂ ಇದೆ. ಮೇಲಾಗಿ 'ಸರಸ್ವತೀಕಂಠಾಭರಣ', 'ಚಿತ್ರಬಂಧಕಾವ್ಯ' ಮುಂತಾದ ಕೃತಿಗಳಲ್ಲಿ ಉಕ್ತವಾಗಿರುವ ಬಂಧ ಲಕ್ಷಣದ ಶ್ಲೋಕಗಳನ್ನೂ ಅವುಗಳ ಭಾಗಗಳನ್ನೂ ಬಂಧರಚನೆಯ ಪರಿಚಯಕ್ಕಾಗಿ ಉದ್ಧರಿಸಿದೆ. ಪಾಠಕರು ಪೂರ್ವಪರಿಚಿತವಾದ ಬಂಧಗಳ ಜೊತೆಗೆ, ಪರಿಚಿತವಲ್ಲದ ಹಲವಾರು ಬಂಧಗಳನ್ನೂ ಬಳಸಿದ್ದಾರೆ. ಪದ್ಮಬಂಧವೊಂದರಲ್ಲಿಯೇ ೯ ಬಗೆಗಳನ್ನು ಗುರುತಿಸಬಹುದಾಗಿದೆ.

ಬಂಧಗಳು ಅನುಕ್ರಮವಾಗಿ ಹೀಗಿವೆ: ೧. ಮಾಂಗಲಿಕಬಂಧಗಳು : ಶ್ರೀ, ಸರ್ವತೋಭದ್ರ, ಅರ್ಧಭ್ರಮಕ, ತಿಲಕ, ಮುರಜ, ಮುರಜಪ್ರಸ್ತಾರ (೧, ೨), ಏಕಾಕ್ಷರಮುರಜ ೨. ಆಯುಧಬಂಧಗಳು : ಖಡ್ಗ, ಮುಸಲ, ಧನುಸ್ಸು, ಶರ, ತ್ರಿಶೂಲ, ಶಕ್ತಿ, ಹಲ, ಮಹಾಚಕ್ರ. ೩. ವಿಷ್ಣ್ವಾಯುಧಬಂಧಗಳು : ಶಂಖ, ಪ್ರಥಮಶ್ಚಕ್ರ, ದ್ವಿತೀಯಶ್ಚಕ್ರ, ಗದಾ, ಪ್ರಥಮದಿಂದ ನವಮದವರೆಗೆ ಪದ್ಮಗಳು. ೪. ಪ್ರಕೀರ್ಣಬಂಧಗಳು : ಸರ್ವತೋಮುಖ, ಸರೋವರ, ಕೂಪ, ಉಲೂಖಲ, ಪ್ರೇಮಲತಾ, ಮಾಲಾ, ಪ್ರೇಮಮಾಲಾ, ವ್ಯೋಮ, ಸೂರ್ಯ, ಚಂದ್ರ, ಶಿವಿಕಾ, ದರ್ಪಣ, ಛತ್ರ, ಮೇರು, ವೃಕ್ಷ, ದ್ವಿಚತುಷ್ಕ, ದ್ವಿಶೃಂಗಾಟಕ, ವಿವಿಡಿತ, ಥಾಲ, ಶರಯಂತ್ರ, ತುರಂಗಪದ, ಕಮಂಡಲು, ಸುವರ್ಣಚತ್ವರ, ಗಜ, ನಂದಿ, ಫಣಿ.

ಹೀಗೆಯೇ ಕಾಶಿವಾಸಿಯಾದ ದುಃಖಭಂಜನಕವಿ, ರಘುವೀರಮಿಶ್ರ ಹಾಗೂ ಮಗಧವಾಸಿ ದಾಮೋದರ ಮಿಶ್ರಶಾಸ್ತ್ರಿ ಇವರು ಚಿತ್ರಬಂಧಗಳ ಲಕ್ಷಣ-ಲಕ್ಷ್ಯ ವಿವೇಚನೆಯಲ್ಲಿ ಶ್ರಮಿಸಿದ್ದಾರೆಂದು ತಿಳಿಯುತ್ತದೆ. ದಾಮೋದರ

ಮಿಶ್ರ ಶಾಸ್ತ್ರಿಗಳ 'ಚಿತ್ರಬಂಧಕಾವ್ಯ'ದಲ್ಲಿ ವಿರಳವಾಗಿರುವ ಹಲವು ಬಂಧಚಿತ್ರಗಳ ಲಕ್ಷಣವನ್ನು ಮೊದಲ ಸಲ ನಿರೂಪಿಸಿರುವಂತೆ ತೋರುತ್ತದೆ. ರಾಮರೂಪ ಪಾಠಕರು ತಮ್ಮ ಗ್ರಂಥದ ರಚನೆಯಲ್ಲಿ ಅದರ ಪ್ರಯೋಜನ ವನ್ನು ವಿಶೇಷವಾಗಿ ಪಡೆದುಕೊಂಡಿದ್ದಾರೆ.

ಈ ಘಟ್ಟದಲ್ಲಿ, ಪ್ರತ್ಯೇಕವಾಗಿ, ಅವಶ್ಯವಾಗಿ ಗುರುತಿಸಬೇಕಾದ ಒಂದು ಸಚಿತ್ರಕೃತಿ ಎಂದರೆ, ಆಕಾರ, ಬಂಧ ಮತ್ತು ಗತಿಚಿತ್ರಗಳಲ್ಲಿ ಕೆಲವನ್ನು ಬಣ್ಣದ ಚಿತ್ರಗಳಲ್ಲಿ ರೂಪಿಸಿದ 'ಬಂಧಮಾಲಿಕೆ' ಎಂಬುದು.[8] ಇದರ ಕರ್ತೃ ಅಣ್ಣಯ ದೇಶಿಕ ಎಂಬವನಿರುವಂತೆ ತೋರುತ್ತದೆ. ಇಲ್ಲಿಯ ಬಂಧಗಳು, ಗತಿಚಿತ್ರಗಳು ಅನುಕ್ರಮವಾಗಿ ಹೀಗಿವೆ : ೧ನೆಯ ಸಾಲು : ಆಂದೋಳಿಕಾ, ಅಶ್ವಗತಿ ಮುಕ್ತಾಹಾರ, ಚಾಮರ, ಶ್ವೇತಚ್ಛತ್ರ, ಮುಕ್ತಾಗುಚ್ಛ, ಬೃಂದಾವನ ಬಂಧೋದಯ ರಥ, ಶಾಙ್ರ್ಗಧನು. ೨ನೆಯ ಸಾಲು: ಪರಮಪದ, ಶೇಷ, ವಾಸುಕಿದ್ವಯ, ಶ್ರೀವೈಕುಂಠ, ಛತ್ರ. ೩ನೆಯ ಸಾಲು : ಪಂಚಾಕ್ಷರ ಅಷ್ಟದಲಪದ್ಮ, ಬ್ರಹ್ಮಮಂಡಲ. ೪ನೆಯ ಸಾಲು : ದ್ವಾದಶದಲ ಕಮಲ, ಪ್ರಕೃತಿಮಂಡಲ. ೫ನೆಯ ಸಾಲು : ಚಕ್ರ, ಅಷ್ಟದಲಪದ್ಮ, ಕೈವಲ್ಯಸ್ಥಾನಮಂಡಲ, ಪ್ರಕೃತಿಮಂಡಲ, ಅಷ್ಟದಲಪದ್ಮ, ಶಂಖ. ೬ನೆಯ ಸಾಲು : ಕೃಷ್ಣಸರ್ಪ, ಅಷ್ಟದಲ ಕುಮುದ, ಗೋಮೂತ್ರಿಕಾ, ಅಷ್ಟದಲ ಕುಮುದ, ಪಾರ್ಥಿವ ದ್ವೀಪ. ೭ನೆಯ ಸಾಲು: ದ್ವಿಶೃಂಗಾಟಕ, ಸುದರ್ಶನ ಚಕ್ರ, ಅಷ್ಟದಳಕಮಲ(೨), ಷಡರ ಚಕ್ರ, ಅಷ್ಟಾರಚಕ್ರ. ೮ನೆಯ ಸಾಲು : ವಿಶೃಂಗಾಟಕ, ದ್ವಿಚತುಷ್ಕಚಕ್ರ, ಗೋಮೂತ್ರಿಕಾ, ಗರುಡಗತಿ ಚಕ್ರ, ಚತುರಂಗ ತುರಂಗ, ಅಷ್ಟದಲ ಕಮಲ. ೯ನೆಯ ಸಾಲು : ಚತುರಸ್ರ ಚಕ್ರ, ಷೋಡಶದಲ ಪದ್ಮ, ಗೋಮೂತ್ರಿಕಾ. ೧೦ನೆಯ ಸಾಲು : ಅರ್ಧಭ್ರಮ, ಮುರಜ, ಗೋಮೂತ್ರಿಕಾ. ೧೧ನೆಯ ಸಾಲು : ಹಾರ, ನಿರಂತರ ಯಮಕ, ಸರ್ವತೋಭದ್ರ, ಯಮಕಸರ್ವತೋಭದ್ರ. ಇವುಗಳಲ್ಲಿ ಗತಿಚಿತ್ರಗಳನ್ನೂ ಯಮಕಗಳನ್ನೂ ತೆಗೆದರೆ ಒಟ್ಟು ೪೧ ಬಂಧಗಳಿವೆ. ಕೆಲವು ಒಂದೇ ಜಾತಿಯವು, ಇನ್ನು ಕೆಲವು ಭಿನ್ನಜಾತಿಯವು. ಅಂತೂ ವೈವಿಧ್ಯ ವುಂಟು. ಕೆಲವು 'ಚಿತ್ರ'ಗಳಿಗೆ ಮೂಲವಾದ ಪದ್ಯಗಳನ್ನು ಅಲ್ಲಲ್ಲಿಯೇ, ಮಗ್ಗುಲಲ್ಲಿಯೇ ಕೊಟ್ಟಿದೆ.

ಬಗೆಬಗೆಯ ಬಣ್ಣಗಳನ್ನು ಬಳಸಿ, ಬಣ್ಣದ ಚಿತ್ರಗಳು ಒಂದು ಪಟದಂತೆ ರೂಪಿಸಿರುವ ಈ 'ಬಂಧಮಾಲಿಕೆ' ಒಟ್ಟಾರೆ ನೋಡಿದಾಗ ಒಂದು ಅಪೂರ್ವ ವಾಸ್ತುವಿನ್ಯಾಸದ ಕಲಾಕೃತಿಯಾಗಿ ತೋರುವಂತೆ ಮಿಗಿಲಾದ ಕೌಶಲ ದಿಂದ ಸಂಯೋಜಿತವಾಗಿದೆ. ತೆಲುಗುಲಿಪಿಯಲ್ಲಿ ಮುದ್ರಿತವಾಗಿರುವ ಕೃತಿಯಿದು.

ಪೊತ್ತಪಿ ವೆಂಕಟರಮಣ ಕವಿಯ (೧೮ನೆಯ ಶ.) ತೆಲುಗು 'ಲಕ್ಷಣಶಿರೋಮಣಿ'ಯಲ್ಲಿ (೩-೪೨೭)[9] ಚಿತ್ರಕವಿತಾನಿರ್ದೇಶನವನ್ನು ಮಾಡುವಾಗ ವಿಪುಲವಾಗಿ ಆಕಾರ ಮತ್ತು ಬಂಧಚಿತ್ರಗಳನ್ನು ಹೆಸರಿಸಿದೆ. ಅವುಗಳೆಂದರೆ : ಶಂಖ, ಚಕ್ರ, ಗದಾ, ಖಡ್ಗ, ಶಾಙ್ರ್ಗ, ಛತ್ರ, ಚಾಮರ, ಯಕ್ಷಯಂತ್ರ, ಇನ್ನೊಂದು ಬಗೆಯ ಖಡ್ಗ, ಕಂಕಣ, ನಾಗ, ಪದ್ಮ, ಕಾಲಚಕ್ರ, ಹರಿ, ಮಹಾ (ಬಂಧ), ಹಲ, ಮಣಿ, ಪುಷ್ಪಮಾಲಿಕಾ, ಪುಷ್ಪಗುಚ್ಛ, ಪಂಚಾವರಣಚ್ಛತ್ರ, ರಥ, ಮಹಾಮೇರುಚ್ಛತ್ರ, ಕ್ಷುರಿಕಾ, ದಶಾವರಣಚಕ್ರ. ಇವಲ್ಲದೆ ಗರ್ಭಕವಿತ್ವ ಚಮತ್ಕಾರಮಿಶ್ರವಾದ ವೃತ್ತಕಂದ ಖಡ್ಗಗರ್ಭಿತ ಸೀಸ, ಖಡ್ಗಗರ್ಭಿತ ಸುಗಂಧಿವೃತ್ತ ಎಂಬವನ್ನೂ ತಿಳಿಸಿದೆ. ಆದರೆ ಲಕ್ಷ್ಯಲಕ್ಷಣಗಳನ್ನು ವಿಶದೀಕರಿಸಿದ ಚತುರ್ಥಾಶ್ವಾಸದ ಅಂತ್ಯಭಾಗ ಈಗ ಲಬ್ಧವಾದ ಗ್ರಂಥದಲ್ಲಿ ನಷ್ಟ ವಾಗಿದೆ. ಒಂದು ಪ್ರತಿಯಲ್ಲಿ ಮಾತ್ರ ಚಕ್ರ, ನಾಗ, ಪದ್ಮ, ಪುಷ್ಪಮಾಲಿಕಾ, ಗೋಮೂತ್ರಿಕ ಮತ್ತು ಛತ್ರ ಬಂಧಗಳು ಕಂಡುಬಂದಿವೆ.

ತೆಲುಗುಭಾಷೆಯ ಚಿತ್ರಬಂಧಗಳನ್ನು ಕ್ರೋಡೀಕರಿಸಿ, ಅಲ್ಲಿಯ ವಿದ್ವಾಂಸರು ಅವನ್ನು ಹೀಗೆ ಪಟ್ಟಿ ಮಾಡಿದ್ದಾರೆ[10] : ಶ್ರೀ, ಓಂ. ಸರ್ವತೋಭದ್ರ, ಅರ್ಧಭ್ರಮಕ, ಮುರಜ (ಮಾಂಗಳಿಕ ಬಂಧಗಳು), ಖಡ್ಗ, ಕ್ಷುರಿಕಾ, ಪಟ್ಟಿಸ, ಧನುಸ್, ಶರ, ತ್ರಿಶೂಲ, ಹಲ, ಕುಂತ, ನಾಗಪಾಶ, ಶಂಖ, ಚಕ್ರ, ಗದಾ, ಪದ್ಮ (ಆಯುಧಬಂಧಗಳು), ತ್ರಿದಳಚಂಪಕ, ಗುಚ್ಛ, ಪುಷ್ಪಮಾಲಿಕಾ, ಹಾರ, ಕಂಕಣ, ಛತ್ರ, ಚಾಮರ, ಗಂಧಪಾತ್ರ, ಪುಷ್ಪಪಾತ್ರ, ಆಂದೋಳಿಕಾ, ರಥ, ಪತಾಕಾ, ಸಿಂಹಾಸನ, ಧ್ವಜ, ಗಿರಿ, ಗೋಪುರ, ಪಂಜರ, ನಕ್ಷತ್ರ, ಚದುರಂಗ, ಗವಾಕ್ಷ, ವ್ಯಜನ, ಆಲವಟ್ಟ, ರಾಟಿ, ಪಾದುಕಾ, ವೀಣಾ, ಸ್ವರಕಲ್ಪಿತ ಡಿಂಡಿಮ, ನವರಂಗ, ಶಕಟ, ಲಿಂಗ, ಷೋಡಶದಳ

ಚಕ್ರ, ಶಕಟಚಕ್ರ, ದ್ವಿಶೃಂಗಾಟಕಚಕ್ರ, ದ್ವಿಚತುಷ್ಕಚಕ್ರ, ಗರುಡಗತಿಚಕ್ರ, ಕುಲಾಲಿಕಾಚಕ್ರ, ಪಂಚಶೃಂಗ ಚಕ್ರ, ನಾಗ, ಮತ್ಸ್ಯ, ಕೂರ್ಮ, ಗೌಳಿಕಾ, ಗೋಮೂತ್ರಿಕಾ, ವಲಯಭ್ರಮ (ಪ್ರಕೀರ್ಣಬಂಧಗಳು).

ತೆಲುಗು ಸಾಹಿತ್ಯದಲ್ಲಿ ಪ್ರಾಚೀನ ಮತ್ತು ಆಧುನಿಕ ಕವಿಗಳು ಬಂಧಕವಿತ್ವವನ್ನು ಮಾಡುವುದರಲ್ಲಿ ಸಾಕಷ್ಟು ಉತ್ಸಾಹವನ್ನು ತೋರಿಸಿದ್ದಾರೆ. ಉದಾಹರಣೆಗೆ, ಪುಷ್ಪಮಾಲಿಕಾಬಂಧವನ್ನು ಸುಮಾರು ೫೦ ಕೃತಿಗಳಲ್ಲಿ ಗಮನಿಸಬಹುದಾಗಿದೆ; ನಾಗಬಂಧವನ್ನು ಸಹ ಸುಮಾರು ಅದೇ ಸಂಖ್ಯೆಯ ಕೃತಿಗಳಲ್ಲಿ ಕಾಣಬಹುದು. ನಾಗಬಂಧಗಳಲ್ಲಿ ಕುಂಡಲಿ, ಕೃಷ್ಣಸರ್ಪ, ನಾಗದ್ವಯ, ಅಷ್ಟನಾಗ, ಅಷ್ಟಕೋಣ, ನವಕೋಣ ಎಂಬ ವೈಚಿತ್ರ್ಯಗಳೂ ಯಥೋಚಿತಗಳಾದ ಛಂದಸ್ಸಿನ ಅಳವಡಿಕೆಗಳೂ ಉಂಟು. ಇವುಗಳನ್ನು ಅಲ್ಲಿ 'ಲಕ್ಷಣಶಿರೋಮಣಿ', 'ಪ್ರಬಂಧಸಂಬಂಧ ಬಂಧನಿಬಂಧನ ಗ್ರಂಥಮು', 'ಚಿತ್ರಕವಿತ್ವದರ್ಪಣಮು', 'ಚಿತ್ರಮಂಜರಿ' ಮೊದಲಾದ ಗ್ರಂಥಗಳಲ್ಲಿ ವಿವರಿಸಿದೆ.[11]

ಕುತೂಹಲಕ್ಕಾಗಿ ಪರಿಶೀಲಿಸಿದರೆ ಕನ್ನಡನಾಡಿನ ಶಾಸನಗಳಲ್ಲಿಯೂ ಕೆತ್ತಿದ ಚಿತ್ರದ ಸಹಿತವಾಗಿ ಚಕ್ರಬಂಧದ ಕೆಲವು ಸಂಸ್ಕೃತ ನಿದರ್ಶನಗಳು ಅಲ್ಲೊಂದು ಇಲ್ಲೊಂದರಂತೆ ಕಂಡುಬರುತ್ತವೆ. ಉದಾಹರಣೆಗೆ, ಎಕ. vii, ಶಿಕಾರಿಪುರ, ೨೨೨, ೨೨೩ರಲ್ಲಿ ಎರಡು, ಎಕ. xiv, ಮಂ. ೬ರಲ್ಲಿ (೧೯೭೯ರ ಪರಿಷ್ಕರಣದ ಎಕ. vii, ಮದ್ದೂರು ೧೬) ಒಂದು ಹೀಗೆ ಚಕ್ರಬಂಧಗಳಿರುವುದನ್ನು ಗುರುತಿಸಬಹುದಾಗಿದೆ. ಪೂರ್ವೋಕ್ತ ಶಿಕಾರಿಪುರ ತಾಲ್ಲೂಕು ಬಂಡಳಿಕೆಯ ಶಾಸನಗಳಲ್ಲಿ ''ಯೀ ಶ್ಲೋಕವನು ಯೀ ಚಕ್ರಬಂಧದಲಿವೋದೂದು'' ಎಂದೂ(೨೨೨), ''ಚಕ್ರಬಂಧದಲಿ ಶ್ಲೋಕನನೋದೂದು'' ಎಂದೂ (೨೨೩) ಟಿಪ್ಪಣಿಗಳುಂಟು.

ಕನ್ನಡದಲ್ಲಿ ಬಂಧಚಿತ್ರಗಳು

'ಕವಿರಾಜಮಾರ್ಗ'ದಲ್ಲಿ, ಭಾಮಹದಂಡಿಗಳ ಅಲಂಕಾರಗ್ರಂಥಗಳನ್ನು ಅನುಸರಿಸಿದ್ದು ಕಾರಣವಾಗಿ, ಈಗ ನಮಗೆ ಪರಿಚಿತವಾಗಿರುವ ಶರ ಖಡ್ಗಾದಿ ಬಂಧಗಳ ವಿಚಾರವಿಲ್ಲ. ಆದರೆ ಆ ಮೂಲಗಳಲ್ಲಿಲ್ಲದ ಮುರಜ ಮತ್ತು ಚಕ್ರಬಂಧಗಳ ಸೂಚನೆ ಹಾಗೂ ಲಕ್ಷ್ಯಪದ್ಯಗಳಿರುವುದು (೨-೧೧೨, ೧೪೦, ೧೪೨) ಗಮನಾರ್ಹವಾಗಿದೆ. ಅನಂತರದಲ್ಲಿ, ನಾಗವರ್ಮಕೃತ 'ಕಾವ್ಯಾವಲೋಕನ'ದಲ್ಲಿ (೧೦೪೨), ಅದರ ಶಬ್ದಾಲಂಕಾರನಿರ್ಣಯ ಪ್ರಕರಣದಲ್ಲಿ ಶರ, ಶೂಲ, ಚಾಪ, ಚಕ್ರ, ಖಡ್ಗ, ಮುರಜ ಎಂಬ ೬ ಬಂಧಗಳು ಸೂಚಿತವಾಗಿವೆ (ಸೂ.೧೩೭). ಕ್ರಮವಾಗಿ ಅವುಗಳಿಗೆ ಅಲ್ಲಿ ಲಕ್ಷ್ಯಪದ್ಯಗಳನ್ನೂ ಕಾಣಬಹುದಾಗಿದೆ ಪ. (೫೭೧-೭೭). ಇವಕ್ಕೆಲ್ಲ ನಾಗವರ್ಮನಿಗೆ ರುದ್ರಟನ 'ಕಾವ್ಯಾಲಂಕಾರ'ವೇ ಮೂಲವೆಂದು ಹೇಳಬಹುದು. ಅನಂತರದ ಅಲಂಕಾರಗ್ರಂಥಗಳಲ್ಲಿ, 'ಉದಯಾದಿತ್ಯಾಲಂಕಾರ', 'ಮಾಧವಾಲಂಕಾರ', 'ಅಪ್ರತಿಮವೀರಚರಿತೆ' ಹಾಗೂ 'ಕನ್ನಡ ಕುವಲಯಾನಂದ' ಇವುಗಳಲ್ಲಿ ಬಂಧಗಳ ಯಾವ ಪ್ರಸ್ತಾವವೂ ಇಲ್ಲ. ಅಳಿಯ ಲಿಂಗರಾಜನ 'ನರಪತಿಚರಿತ'ದಲ್ಲಿ ಮಾತ್ರ ಹಾರ, ಷೋಡಶದಳ ಪದ್ಮ, ತ್ರಿಶೂಲ ಮತ್ತು ಷಡರ ಚಕ್ರಬಂಧದ ಲಕ್ಷ್ಯಗಳಿವೆ (ಪ್ರ. ೯~೧೧).

ಪ್ರಾಚೀನ ಕನ್ನಡಕವಿಗಳಲ್ಲಿ, ಪಂಪಾದ್ಯರಾದವರಲ್ಲಿ, ಬಂಧಗಳಿಗೆ ಅಳವಡುವ ಯಾವುವಾದರೂ ಪದ್ಯಗಳಿರುವಂತೆ ಈವರೆಗೆ ತಿಳಿದುಬಂದಿಲ್ಲ. ಚಂದ್ರರಾಜನ 'ಮದನತಿಲಕ'ದಲ್ಲಿ ಚಕ್ರ (೧-೧೪,೧೦-೨೫), ಮುರಜ (೧-೧೫, ೨೮, ೪೨; ೧೦-೮, ೨೪, ೨೫), ಪಣವ (೧-೪೧), ವಿಷಮಚಕ್ರ (೧-೪೨), ಮಕರವ್ಯೂಹ (೧೦-೨೫), ಶಂಖಾವರ್ತ (೧೦-೨೫) ಎಂಬ ಬಂಧಗಳನ್ನು ಕಾಣಬಹುದಾಗಿದೆ. ಇವುಗಳಲ್ಲಿ ೨-೩ನೆಯವು ಪ್ರಾಯಃ ಅಭಿನ್ನಗಳು; ೫-೬ನೆಯವು ಹೊಸವು. ಶಾಂತವೀರ ದೇಶಿಕನ (ಸು. ೧೬೫೦) 'ಶಿವಮಹತ್ವಸಾರ ಶಿಖಾಮಣಿ ಸಂಗ್ರಹ' ಎಂಬ ಶತಕದಲ್ಲಿ ಒಂದು ಚಂಪಕಮಾಲಾವೃತ್ತ ಮಾಲಾಬಂಧವಾಗುವಂತೆ ರಚಿತವಾಗಿದೆ.

ಕುಮುದೇಂದುವಿನ 'ಸಿರಿಭೂವಲಯ'ದ ರಚನೆ ಬಹುವಾಗಿ ಕುತೂಹಲಕರವಾಗಿದ್ದು, ನಾನಾ ಕಾರಣಗಳಿಗಾಗಿ ವಿದ್ವಾಂಸರ ಗಮನ ಸೆಳೆದಿರುವುದು ವಿದಿತವೇ ಇದೆ. ಈ ಗ್ರಂಥ ಬಂಧಚಿತ್ರಗಳ ದೃಷ್ಟಿಯಿಂದಲೂ ಗಮನಾರ್ಹವಾಗಿರುವಂತೆ ತೋರುತ್ತದೆ. ಈಗ ಪ್ರಕಟವಾಗಿರುವ ಗ್ರಂಥಭಾಗದ ಮುನ್ನುಡಿಯ 'ಭೂವಲಯದ

ಕಾವ್ಯಬಂಧಗಳು' ಎಂಬ ಉಪಶೀರ್ಷಿಕೆಯಲ್ಲಿ ಹೀಗೆ ಈ ಬಗ್ಗೆ ಬರೆಯಲಾಗಿದೆ : ''೭೧೮ ಭಾಷೆಗಳನ್ನು ಕನ್ನಡ ಕಾವ್ಯದಲ್ಲಿ ಅಳವಡಿಸಲು ಕೆಲವು ಬಂಧಗಳನ್ನು ಉಪಯೋಗಿಸಿರುತ್ತಾನೆ. ಈ ಗ್ರಂಥದ ಮೊದಲಿನಲ್ಲಿ ಮುದ್ರಿಸಿರುವ ಮೂಲಗ್ರಂಥದ ಹಾಳೆಯು ಶ್ರೇಣೀಬಂಧದಲ್ಲಿದೆ. ಈ ಬಂಧದಲ್ಲಿ ಬಂದಿರುವ ಕನ್ನಡ ಕಾವ್ಯದ ಮೊದಲ ಅಕ್ಷರಗಳನ್ನು ಮೇಲಿನಿಂದ ಕೆಳಕ್ಕೆ ಓದುತ್ತಾ ಹೋದರೆ ಅದು ಪ್ರಾಕೃತಕಾವ್ಯವಾಗುವುದು. ನಡುವಿನ ೨೭ರಲ್ಲಿ ಸಂಸ್ಕೃತಕಾವ್ಯವಾಗುವುದು. ಈ ರೀತಿಯಿಂದ ಬಂಧಗಳನ್ನು ಬೇರೆಬೇರೆ ರೀತಿಗಳಲ್ಲಿ ನೋಡುತ್ತಾ ಹೋದರೆ ವಿವಿಧಬಂಧಗಳಲ್ಲಿ ಬಹುವಿಧವಾದ ಭಾಷೆಗಳು ಬರುವುವೆಂದು ಕವಿಯು ಹೇಳುತ್ತಾನೆ. ಕವಿಯು ಬಂಧಗಳ ಹೆಸರನ್ನು ಹೀಗೆ ಹೇಳುತ್ತಾನೆ.

'ಚಕ್ರಬಂಧ, ಹಂಸಬಂಧ, ಪದ್ಮ, ಶುದ್ಧ, ನವಮಾಂಕಬಂಧ, ವರಪದ್ಮ, ಮಹಾಪದ್ಮ, ದ್ವೀಪ, ಸಾಗರ, ಪಲ್ಯ, ಅಂಬುಬಂಧಗಳು, ಸರಸ, ಶಲಾಕ, ಶ್ರೇಣಿ, ಅಂಕ, ಲೋಕ, ರೋಮಕೂಪ, ಕ್ರೌಂಚ, ಮಯೂರ, ಸೀಮಾತೀತಾದಿ ಬಂಧಗಳು, ಕಾಮನ ಪದಪದ್ಮ, ನಖ, ಚಕ್ರಬಂಧ, ಸೀಮಾತೀತದ ಲೆಕ್ಕಬಂಧ' ಇತ್ಯಾದಿ ಬಂಧಗಳಲ್ಲಿ ತನ್ನ ಕಾವ್ಯವನ್ನು ಕಟ್ಟಿದ್ದಾನೆ. ಕಾವ್ಯದ ಮುಂದಿನ ಭಾಗಗಳು 'ಅಂಕಬಂಧ'ದಿಂದ ಹೊರಬಂದ ಮೇಲೆ ಈ ಸಲುವಾಗಿ ವಿವರಣೆಗಳು ದೊರೆಯಬಹುದೆಂದು ಆಶಿಸುತ್ತೇವೆ.[12]

ಈಗ ಪ್ರಕಟವಾಗಿರುವಷ್ಟು ಭಾಗದಿಂದ (ಅ. ೧-೩೩) ಈ ಕವಿಪ್ರೋಕ್ತವಾದ ಬಂಧಗಳಿರುವ ಭಾಗವನ್ನಾಗಲಿ, ಅವುಗಳ ಮಾದರಿಗಳನ್ನಾಗಲಿ ಗುರುತಿಸುವುದು ಸಾಧ್ಯವಾಗಿಲ್ಲ. ಗ್ರಂಥಾದಿಯಲ್ಲಿ 'ಚಕ್ರಬಂಧದ ಕಟ್ಟಿನೊಳ್ ಕಟ್ಟಿದಾ ವಿಶ್ವಕಾವ್ಯ ಭೂವಲಯ' ಎಂಬ ಮಾತು ಬರುತ್ತದೆ (೧-೧೯). ಆಗ್ಗೆ ಇಡೀ ಗ್ರಂಥವೇ ಒಂದು ಅತ್ಯಂತ ವಿಸ್ಮಯಕಾರಿಯಾದ ಬಂಧಕಾವ್ಯವೆನಿಸುತ್ತದೆ; ಕನ್ನಡ ಭಾಷೆಯ ಅದ್ವಿತೀಯವಾದ ಹೆಮ್ಮೆಯ ಸಂಗತಿಯೂ ಆಗುತ್ತದೆ. ಈಗ ಹಂಸಾದಿ ಅನ್ಯಬಂಧಗಳ ಉಲ್ಲೇಖಗಳು ಗ್ರಂಥದ ಯಾವ ಭಾಗದಲ್ಲಿ ಬಂದಿವೆಯೆಂದು ತಿಳಿಯುವುದು, ಗ್ರಂಥ ಅಚ್ಚಾಗಿರುವ ರೀತಿಯಿಂದ ಶಕ್ಯವಾಗದೆ ಇದೆ. ಗ್ರಂಥಪರಿಚಯ ಭಾಗದಲ್ಲಿ, ೬ ಸಾಂಗತ್ಯಪದ್ಯಗಳು ೧ ಚಕ್ರದಲ್ಲಿ ಅಳವಡುವುವೆಂದೂ ೧೨೭೦ ಚಕ್ರಗಳನ್ನು ನಾನಾಬಂಧಗಳಲ್ಲಿ ಓದಿದರೆ ೫೯ ಅಧ್ಯಾಯಗಳ ೬೪೮೦೦ ಶ್ಲೋಕಗಳ ಮಂಗಳ ಪ್ರಾಭೃತವೆಂಬ ಮೊದಲನೆಯ ಖಂಡದ ಸಾಹಿತ್ಯ ಸೃಷ್ಟಿಯಾಗುವುದೆಂದೂ ತಿಳಿಸಿದೆ. ೧೨, ೧೯ ಮತ್ತು ೨೦ನೆಯ ಅಧ್ಯಾಯಗಳಿಂದ ಮುನ್ನಡೆದರೆ ಅಶ್ವಗತಿ, ನಾಗಬಂಧ, ಜೋಡಿನಾಗರ ಬಂಧಗಳ ಮೂಲಕ ಹೊಸ ಸಾಹಿತ್ಯಿಕ ರಚನೆಗಳು ಹುಟ್ಟುವುವೆಂಬುದಾಗಿಯೂ ಸೂಚಿಸಿದೆ. ಇವೆಲ್ಲದರ ವಿಶದೀಕರಣಕ್ಕೆ ಹೆಚ್ಚಿನ ಸಂಶೋಧನೆ ಅವಶ್ಯ.[13]

ಈಚೆಗೆ ವೆಂಕಟರಮಣಯ್ಯನವರ 'ಗಯೋಪಾಖ್ಯಾನ'ದಲ್ಲಿ ನಾಗಬಂಧ, ಸಪ್ತಾಶ್ವತ್ಥಪರ್ಣ ನಾಗಬಂಧ, ಬೃಂದಾವನ ನಾಗಬಂಧ ಎಂಬ ತ್ರಿವಿಧ ನಾಗಬಂಧಗಳೂ ಸಿದ್ಧಾಂತಿ ಶಿವಶಂಕರಶಾಸ್ತ್ರಿಗಳ 'ನಳೋಪಖ್ಯಾನ ಚಂಪೂ'ಕಾವ್ಯ (೧೮೯೭)ದಲ್ಲಿ ಒಂದು ಷಡರಚಕ್ರಬಂಧವೂ (೧–೨೪೭), ಪಂಡಿತ ಎಂ. ಚೆನ್ನಕೃಷ್ಣಯ್ಯನವರ 'ವ್ಯಾಸಂಗಾನಂದದಾಯಿನಿ'ಯಲ್ಲಿ (೧೯೨೭), ಆರಂಭದಲ್ಲಿ ಸೇರಿಸಿರುವ 'ಶ್ರೀರಜತೋತ್ಸವಾಭಿನಂದನ' ಪದ್ಯಮಾಲೆಯಲ್ಲಿ ಒಂದು ಷಡರಚಕ್ರಬಂಧವೂ (ಪ. ೧೩), ಟಿ. ಶ್ರೀನಿವಾಸರಂಗಾಚಾರ್ಯರ 'ಮೈಸೂರ್ ಮೆಯ್ಸಿರಿ ಅಥವಾ ಶ್ರೀನಾಲ್ವಡಿ ಕೃಷ್ಣರಾಜೇಂದ್ರಮಹಿಮೆ' ಎಂಬ ಚಂಪುವಿನಲ್ಲಿ (೧೯೩೩) ಷಡರಚಕ್ರ (೬–೨೧೯), ನಾಗಬಂಧ (೬–೨೨೦)ಗಳೂ ಬಳಕೆಯಾಗಿರುವುದನ್ನು ಗಮನಿಸಬಹುದು.

ಪ್ರಭೇದಗಳ ವಿಭಜನೆ

ಈ ವರೆಗೆ ಸಂಸ್ಕೃತ ಕನ್ನಡ ಲಕ್ಷಣ ಮತ್ತು ಸಾಹಿತ್ಯಗ್ರಂಥಗಳಲ್ಲಿ ಉಕ್ತವಾಗಿರುವ ಬಂಧಗಳು ಯಾವುವು ಎಂಬುದನ್ನು ಸಂಕ್ಷೇಪವಾಗಿ ಗಮನಿಸಲಾಯಿತು. ಇವು ಒಟ್ಟು ೬ ವಿಭಾಗಗಳಲ್ಲಿ ಅಡಕವಾಗಬಹುದು : (೧) ಆಲಂಕಾರ, ಮಂಗಲಚಿಹ್ನೆ ಮತ್ತು ಲಾಂಛನಗಳು (೨) ಆಯುಧಗಳು (೩) ವಾದ್ಯಗಳು (೪) ಸಸ್ಯವರ್ಗ (೫) ಸ್ಥಲ ಸನ್ನಿವೇಶಗಳ ವಾಸ್ತು (೬) ಸಂಕೀರ್ಣ.

೧. ಅಲಂಕಾರಾದಿಗಳು: ಅಶ್ವಗತಿ ಮುಕ್ತಾಹಾರ, ಅಷ್ಟಮಹಾಪ್ರಾತಿಹಾರ್ಯಗಳು, ಅಷ್ಟಮಂಗಲ (ಭದ್ರಾಸನ, ದರ್ಪಣ, ಶರಾವಸಂಪುಟ, ಮತ್ಸ್ಯಯುಗಲ, ಕಲಶ, ಸ್ವಸ್ತಿಕ, ಶ್ರೀವತ್ಸ, ನಂದ್ಯಾವರ್ತ), ಆಂದೋಳಿಕಾ, ಆಸನ, ಚಂಪಕಮಂಡಿತ, ಸಿಂಹಾಸನ, ಕಲಶ, ಪೂರ್ಣ–, ಮಂಗಲ–, ಭೃಂಗಾರ, ಕಾಂಚಿ, ಚಾಮರ, ಛತ್ರ, ತಾಲವೃಂತ (ಬೀಸಣಿಗೆ), ದೀಪಿಕಾ (ದೀಪಸ್ತಂಭ), ಧ್ವಜ/ ಪತಾಕಾ, ನಾಯಕಮಣಿ, ಮಾಲಾ, ಪ್ರೇಮಮಾಲಾ, ಬ್ರಹ್ಮದೀಪಕ, ಗೂಢ–, ಮುಕ್ತಾಗುಚ್ಛ, ಶ್ವೇತಚ್ಛತ್ರ, ಸ್ವಸ್ತಿಕ, ಕಂಕಣಮಧ್ಯಸ್ಥಿತ–, ಬಂಧೂಕ–, ಶೃಂಗಾರಿತ–, ಹಾರ.

೨. ಆಯುಧಗಳು: ಅಂಕುಶ,ಖಡ್ಗ, ಚಕ್ರ (೪, ೬, ೮, ೧೮, ೩೨ ಅರಗಳು), ಗರುಡಗತಿ–, ಚತುರಸ್ರ–, ದ್ವಿಚತುಷ್ಕ–, ದ್ವಿಶೃಂಗಾಟಕ–, ತ್ರಿಶೃಂಗಾಟಕ–, ಚತುರ್ಥಶೃಂಗಾಟಕ–, ಪಂಚಶೃಂಗಾಟಕ–, ಬೃಹದ್–, ಮಹಾ–, ವಿವಿಡಿತ–, ಸರ್ವತೋಭದ್ರ–, ಸುದರ್ಶನ–, ವಿಷಮ–, ಚಕ್ರಪ್ರಶ್ನ, ಜಾಲ (ಬಲೆ), ಥಾಲ, ತೂಣ/ತೂಣಿ (ಬತ್ತಳಿಕೆ),ತ್ರಿಶೂಲ/ಶೂಲ, ದಂಡ, ದಂಭೋಲಿ/ವಜ್ರ, ಧನುಷ್ಯ/ಬಾಣಾಸನ/ಶಾರ್ಙ್ಗಧನು, ನಾಗಪಾಶ, ಪರಶು, ಬಾಣ/ಶರ, ಭಲ್ಲ, ಮುದ್ಗರ, ಮುಸಲ, ಶಕ್ತಿ, ಶರಯಂತ್ರ, ಶ್ರೀಕರಿ (ಗದೆ?), ಹಲ.

೩. ವಾದ್ಯಗಳು: ನಿಸ್ಸಾಳ, ಪಣವ, ಮುರಜ/ಅನಂತರಪಾದ–, ಇಷ್ಟಪಾದ–, ಏಕಾಕ್ಷರ–, ಗುಪ್ತ ಕ್ರಿಯಾ–, ಗೂಢತೃತೀಯ ಚತುರ್ಥಾನ್ಯತರಾಕ್ಷರದ್ವಯ ಯಮಕಾನಂತರಪಾದ–, ನಿರೋಷ್ಠ್ಯಯಥೇಷ್ಟೈಕಾಕ್ಷ ರಾಂತರಿತ–, ಯಥೈಕಾಕ್ಷರಾಂತರಿತ–, ಭೇರಿ–, ಶಂಖ/ಶಂಖಾವರ್ತ.

೪. ಸಸ್ಯವರ್ಗ: ಅಂಬುಜ/ಕಮಲ/ಪದ್ಮ (೪, ೬, ೮, ೧೨, ೧೬, ೨೦, ೨೪, ೨೮, ೩೨, ೪೮, ೯೬, ೧೦೦, ೧೦೦೦ ದಳಗಳು; ವಿಪರೀತಕ್ರಮದಲ್ಲಿ ೮, ೧೨, ೧೬, ೨೦, ೧೦೦ ದಳಗಳು), ಅಶೋಕ, ಗುಚ್ಛ, ಚಕ್ರಾಬ್ಜಕ (ಚಕ್ರಾಕಾರದ ಪದ್ಮ), ನಾಳಿಕೇರ, ಪದ್ಮಪ್ರಶ್ನ, ಬೀಜಪೂರ (ಈಳೆ), ವೃಕ್ಷ, ಶ್ರೀವೃಕ್ಷ (ಬಿಲ್ವ?, ಅಶ್ವತ್ಥ ?).

೫. ಸ್ಥಲ ಸನ್ನಿವೇಶಗಳ ವಾಸ್ತು : ಅಟ್ಟಾಲಿಕಾ, ಕೂಪ, ಚೌಕ, ಪಟ್ಟ, ಪರ್ವತ, ಪುಷ್ಕರಿಣಿ/ವಾಪಿಕಾ/ ಸರೋವರ, ಪರಮಪದ, ಪ್ರಾಸಾದ, ಮಂಡಲ, ಕೈವಲ್ಯಸ್ಥಾನ–, ಪ್ರಕೃತಿ–, ಬ್ರಹ್ಮ–, ಮಕರವ್ಯೂಹ, ವ್ಯೋಮ, ಶ್ರೀವೈಕುಂಠ, ಸಮವಸರಣ, ಸರ್ವತೋಮುಖ, ಸುವರ್ಣಚತ್ವರ, ಸ್ಥಪತಿಕಾ, ಸ್ಥೂಲ (ಗೂಡಾರ), ಹೋಜ.

೬. ಸಂಕೀರ್ಣ: ಅತಿಪುತ್ರಿಕಾ (ದೊಡ್ಡಗೊಂಬೆ), ಉಲೂಖಲ (ಒರಳು), ಕಾಕಪದ, ಕ್ರೌಂಚ, ಚತುಷ್ಪಟ (ಕ್ರೀಡೆಗಾಗಿ ೪ ಮೂಲೆಗಳ ಬಟ್ಟೆಯ ತುಂಡು), ಕೃಷ್ಣಸರ್ಪ/ನಾಗ/ನಾಗಶಿಶು/ಫಣಿ/ಬೃಂದಾವನ ನಾಗ/ವಾಸುಕಿದ್ವಯ/ಶೇಷ/ಸಪ್ತಾಶ್ವತ್ಥಪರ್ಣನಾಗ, ಗಜ, ಚಂದ್ರ, ನಂದಿ, ನಾಗಪದ (ಹಾವಿನಗತಿ), ಪದ (?), ಪಂಚಾಕ್ಷರ, ಪಾರ್ಥಿವದ್ವಿಪ, ಬೃಂದಾವನ ಬಂಧೋದಯ, ಮಂಥಾನ (ಕಡೆಗೋಲು), ವಿಪರೀತ–, ಮಯೂರಿಕಾ, ಯಾನ/ಶಿವಿಕಾ (ಪಲ್ಲಕ್ಕಿ), ರಥ, ಶೃಂಖಲಾ (ಸರಪಳಿ), ಸೂರ್ಯ, ಹಸ್ತ.

ಈ ಪ್ರಭೇದಗಳಲ್ಲಿ ಕೆಲವನ್ನು ಮಾತ್ರ ಆಯ್ದುಕೊಂಡು, ಮುಂದೆ ಲಕ್ಷಣ ಹಾಗೂ ಲಕ್ಷ್ಯಗಳನ್ನು ಪರಿಶೀಲಿಸಲಾಗುತ್ತದೆ. ಹೀಗೆ ಮಾಡುವಾಗ ಪ್ರಾಚೀನವೂ ಪ್ರಸಿದ್ಧವೂ ಆದ ಸಂಸ್ಕೃತ ಅಲಂಕಾರಗ್ರಂಥಗಳನ್ನೂ ಸಾಹಿತ್ಯಗ್ರಂಥಗಳನ್ನೂ ಮಾತ್ರವೇ ಇಲ್ಲಿ ಗಮನಕ್ಕೆ ತೆಗೆದುಕೊಂಡಿದೆ. ಕನ್ನಡದ ಮಟ್ಟಿಗೆ ಲಭ್ಯವಿದ್ದ ಸಾಮಗ್ರಿಯನ್ನೆಲ್ಲ ಬಲುಮಟ್ಟಿಗೆ ಉಪಯೋಗಿಸಿಕೊಂಡಿದೆ.

ಅಲಂಕಾರ, ಮಂಗಲಚಿಹ್ನೆ ಮತ್ತು ಲಾಂಛನಗಳು

ಛತ್ರ(ಕೊಡೆ)

'ವಾಗ್ಭಟಾಲಂಕಾರ' (೧–೨೫) ಮತ್ತು 'ಅಲಂಕಾರಚಿಂತಾಮಣಿ' (೨–೮೪)ಗಳಲ್ಲಿ ಈ ಬಂಧದ ಪ್ರಸ್ತಾಪವಿದೆ. 'ವಾಗ್ಭಟಾಲಂಕಾರ'ದಲ್ಲಿ 'ಉದ್ಘಾಟಿತ ಛತ್ರ'ವೆಂದು (=ತೆರೆದ ಕೊಡೆ) ಹೆಸರಿಸಿ ಈ ಲಕ್ಷ್ಯಪದ್ಯ ಉದಾಹರಿಸಿದೆ:

ಪ್ರಚಂಡಬಲ ! ನಿಃ ಕಾಮ ! ಪ್ರಕಾಶಿತಮಹಾಗಮ !
ಭಾವತತ್ತ್ವನಿಧೇ ! ದೇವ ! ಭಾಲಮುತ್ರಾದ್ಭುತಾ ತವ ॥ (೧–೨೫)

(ಇದರಲ್ಲಿ 'ಭಾವ–ಬಲ' ಎಂಬವುಗಳಲ್ಲಿ 'ವ–ಬ'ಗಳ ನಡುವೆ ಅಭೇದವನ್ನು ಪರಿಗಣಿಸಬೇಕೆಂದು ಸಿಂಹದೇವಗಣಿ ಹೇಳಿದ್ದಾನೆ.)

ಇದನ್ನು ಹೀಗೆ ಪ್ರಸ್ತಾರಿಸಲಾಗುತ್ತದೆ: ಮೊದಲು ಛತ್ರದ 'ಪಟ್ಟಿಕಾ' ಭಾಗ (ತಳಭಾಗ); ಅಲ್ಲಿ ಮೊದಲ ೮ ಅಕ್ಷರಗಳು. ಉಳಿದ ೮ ಅಕ್ಷರಗಳು ಅರ್ಧವೃತ್ತಾಕಾರವಾಗಿ (ತುದಿಯನ್ನು ಬಿಟ್ಟು) ಛತ್ರದ ಮೇಲ್ಬದಿಯಲ್ಲಿ. ಅನಂತರ 'ದಂಡ'; ಇಲ್ಲಿ ಮೇಲಿನಿಂದ ಕೆಳಕ್ಕೆ ೩ನೆಯ ಮತ್ತು ೪ನೆಯ ಪಾದಗಳ ೮–೮ ಅಕ್ಷರಗಳು. ಇವುಗಳಲ್ಲಿ ಪ್ರ–ಭಾ, ಮ–ವ, ಬ–ಲ ಗಳು ದ್ವಿರಾವೃತ್ತಿಗೊಳ್ಳುತ್ತವೆ.



ಬಂಧ ೧

ಈ ಬಂಧಕ್ಕೆ ಹೊಂದುವ ಪದ್ಯದ ರಚನೆಯ ಕ್ರಮವನ್ನು ಹೀಗೆ ನಿರೂಪಿಸಬಹುದು : ಮೊದಲನೆಯದಾಗಿ ಇದು ಶ್ಲೋಕವಾಗಿರಬೇಕು. ಎರಡನೆಯದಾಗಿ ೧-೯, ೪-೧೮, ೫-೨೬, ೮-೧೬, ೧೭-೨೫, ೨೪-೩೨ ಈ ಸ್ಥಳ ಯುಗ್ಮಗಳಲ್ಲಿ ಒಂದೊಂದೇ ಅಕ್ಷರ ಬರಬೇಕು. ಇದನ್ನು ಹೀಗೆ ಕೂಡ ನಿರೂಪಿಸಬಹುದು : ('–' ಚಿಹ್ನೆ ಇರುವ ಜಾಗಗಳಲ್ಲಿ ಯಾವ ಅಕ್ಷರಗಳಾದರೂ ಬರಬಹುದು. ಕನ್ನಡದಲ್ಲಿ ಆದಿಪ್ರಾಸವನ್ನು ನಿಯತವೆಂದು ತಿಳಿಯು

ವುದಾದರೆ, ಪ್ರತಿಪಾದದ ಎರಡನೆಯ ಅಕ್ಷರದ ಸ್ಥಾನದಲ್ಲಿ ಕೂಡ ಸಮಾನವ್ಯಂಜನ ಬರಬೇಕಾಗುತ್ತದೆ. ಅಂತೆಯೇ ಅದರಲ್ಲಿ ರೂಪಸಾಮ್ಯವೂ ಇರಬೇಕಾಗುತ್ತದೆ.)

ಅಕ್ಷರ ಕ್ರಮ ಸಂಖ್ಯೆ	1	2	3	4	5	6	7	8
೧ನೆಯ ಪಾದ	A	–	–	B	C	–	–	D
೨ನೆಯ ಪಾದ	A	–	–	–	–	–	–	D
೩ನೆಯ ಪಾದ	E	B	–	–	–	–	–	F
೪ನೆಯ ಪಾದ	E	C	–	–	–	–	–	F

'ವಾಗ್ಭಟಾಲಂಕಾರ'ದ ಸಿಂಹದೇವಗಣಿಯ ವ್ಯಾಖ್ಯೆಯಲ್ಲಿ

ಭವಕಾನನ ಮತ್ತೇಭ ! ಭಗ್ನಮಾಯಾತಮಃಪ್ರಭ!
ವಿನಯಾತ್ ತ್ವಾಂ ಸ್ತುವೇ ವೀರ ! ವಿನತತ್ರಿದಶೇಶ್ವರ ! ॥

ಎಂಬ ಶ್ಲೋಕವೂ, ಅಜಿತಸೇನನ 'ಅಲಂಕಾರಚಿಂತಾಮಣಿ'ಯಲ್ಲಿ

ಶೀತಲಂ ವಿದಿತಾರ್ಥೌಘಂ ಶೀತೀಭೂತಂ ಸ್ತುಮೋಽನಘಂ
ಸುವಿದಾಂ ವರಮಾನನ್ದಸೂದಿತಾನಂಗದುರ್ಮದಂ ॥

ಎಂಬ ಶ್ಲೋಕವೂ ಇದ್ದು, ಇವು ಛತ್ರಬಂಧಕ್ಕೆ ಅಳವಡುತ್ತವೆ. ಕನ್ನಡ ಸಾಹಿತ್ಯದಲ್ಲಿ ಛತ್ರಬಂಧದ ನಿದರ್ಶನಗಳು ಗೋಚರಿಸುವಂತೆ ತೋರುವುದಿಲ್ಲ. 'ಛತ್ರ'ದಲ್ಲಿ ಭೇದಗಳಿದ್ದು ಛಂದೋನುಸಾರಿಯಾಗಿ ಇವುಗಳು ಏರ್ಪಡುತ್ತವೆ.

ಸಂಸ್ಕೃತ 'ಚಿತ್ರಬಂಧಕಾವ್ಯ'ದಲ್ಲಿ

ಅಶ್ವತಃ ಪರಿತೋ ಗಚ್ಛೇತ್ತತೋ ನೇಮಿದ್ವಯೇಽಪಿ ಚ
ಸ್ವೇಷ್ಟಂ ಕೋಷ್ಠೇಷು ವಿನ್ಯಸ್ಯ ಛತ್ರಬಂಧೇ ವಿದಾಂ ಪರಃ ॥ (ಪು. ೨೯)

ಎಂಬುದಾಗಿ ಲಕ್ಷಣಿಸಿದೆ. ಇದರ ಆಶಯ, ವಿದ್ವಾಂಸರು ತಮ್ಮ ಇಷ್ಟಾಕ್ಷರಗಳನ್ನು ಕೋಷ್ಠಗಳಲ್ಲಿ ವಿನ್ಯಾಸಗೊಳಿಸಿ, ಬಳಿಕ ಮೊದಲು ಅಶ್ವಗತಿಯಲ್ಲಿ ನಾಲ್ಕು ದಿಕ್ಕುಗಳಲ್ಲಿಯೂ ಸಾಗುವುದು, ಕೊನೆಗೆ ಎರಡೂ ನೇಮಿಗಳಲ್ಲಿ ಸಾಗುವುದು–ಎಂಬುದಾಗಿದ್ದು, ಈ ಛತ್ರಬಂಧದ ಸ್ವರೂಪ ನಾವು ಗಮನಿಸಿರುವುದಕ್ಕಿಂತ ಬೇರೆ ರೀತಿಯಲ್ಲಿದೆ. ಈ ಬಗೆಯ ಬಂಧಕ್ಕೆ 'ಚಿತ್ರಕಾವ್ಯಕೌತುಕ'ವನ್ನು (೪೨) ನೋಡಬಹುದು.

ತಾಲವೃಂತ (ಬೀಸಣಿಗೆ)

'ಅಲಂಕಾರಚಿಂತಾಮಣಿ'ಯಲ್ಲಿ ಈ ಬಂಧವನ್ನು ರೂಪಿಸುವ ವಿಧಾನವನ್ನು ಹೀಗೆ ಹೇಳಿದೆ:

ಚತುಷ್ಕಬಂಧಸಂಧೌ ತು ಭ್ರಾಮಯೇದಾದ್ಯವೃಂತಯೋಃ ।
ದ್ವೇ ಚೈಕಂ ವೃಂತಮಧ್ಯೇ ವಾ ತಾಲವೃಂತಪ್ರಬಂಧಕೇ ॥ (೨-೧೬೮)

ಬಹುಶಃ ಇದರ ಆಶಯವೆಂದರೆ : ತಾಲವೃಂತ ಬಂಧದಲ್ಲಿ ಚತುಷ್ಕಗಳು ಕೂಡುವ ಭಾಗದ ಮೊದಲ ಎರಡು ಪಟ್ಟಿಗಳಲ್ಲಿ (ವೃಂತಗಳಲ್ಲಿ) ಅಕ್ಷರಗಳು ಭ್ರಮಿಸುವಂತೆ ಮಾಡಬೇಕು; ಹಾಗೂ ಆ ಪಟ್ಟಿಗಳ ನಡುವೆ ಒಂದು ಅಕ್ಷರ ಭ್ರಮಿಸುವಂತೆಯೂ ಪಟ್ಟಿ ಮತ್ತು ದಂಡಗಳ ನಡುವೆ ಎರಡು ಅಕ್ಷರಗಳು ಸ್ಥಿರವಾಗಿರುವಂತೆಯೂ ಮಾಡಬೇಕು.

ಇಲ್ಲಿಯೇ ಲಕ್ಷ್ಯಪದ್ಯವನ್ನು ಹೀಗೆ ಕೊಟ್ಟಿದೆ:

ಜಿನ ತ್ವಯಿ ಜನಾ ಭಾಂತಿ ಸದಾ ಸತಿ ನುತಿಪ್ರಿಯಾಃ ।
ಶೀಲಜಾಲಮತಾಃ ಸರ್ವೇಽಶೋ ನಃ ಪಾಹಿ ಸದಾಽಮಲ ॥ (೨-೧೬೯)



ಬಂಧ ೨

ಅಕ್ಷರ ಕ್ರಮಸಂಖ್ಯೆ	1	2	3	4	5	6	7	8
೧ನೆಯ ಪಾದ	–	–	–	–	–	–	–	A
೨ನೆಯ ಪಾದ	B	C	B	A	–	A	–	–
೩ನೆಯ ಪಾದ	–	D	–	D	E	–	–	–
೪ನೆಯ ಪಾದ	–	–	–	–	B	C	E	D

ತೆಲುಗಿನ ರಾವುಕೊಂಡಲ ರಾಯುಡು ಕೃತ 'ಚಿತ್ರಕವಿತ್ವದರ್ಪಣ'ದಲ್ಲಿ ಎರಡು ಬಗೆಯ ವ್ಯಜನಗಳನ್ನು ತೋರಿಸಿದೆ. ಕನ್ನಡದಲ್ಲಿ ತಾಲವೃಂತದ ಲಕ್ಷ್ಯಪದ್ಯಗಳು ಎಲ್ಲಿಯೂ ಗೋಚರವಾಗುತ್ತಿಲ್ಲ.

ದರ್ಪಣಬಂಧ (ಕನ್ನಡಿ)

'ಅಲಂಕಾರಚಿಂತಾಮಣಿ'ಯಲ್ಲಿ ಈ ಬಂಧದ ಪ್ರಸ್ತಾಪವಿದೆ. ಅಲ್ಲಿರುವ ಇದರ ಲಕ್ಷ್ಯ ಲಕ್ಷಣ ಪದ್ಯಗಳು ಹೀಗಿವೆ :

ನಾಯಕಂ ನೌಮಿ ತತ್ತ್ವತಃ ಶ್ರೇಯಾಂಸಂ ಪೃತನಾಂ ತನಾವಮ್ ।
ನಾಽತನಾನಾತನಾನಾತ ಜಯತ್ಯಾಘೀಂ ತನಾವಿತ ॥ (೨-೧೬೫)

ಷಡ್ವಾರ ಪಾದಮಧ್ಯೇ ಚ ಸಂಧೌ ಚ ಭ್ರಾಮಯೇತ್ಕವಿಃ ।
ತಥೈಕಂ ತಸ್ಯ ಮಧ್ಯೇ ಚ ದರ್ಪಣಾಹ್ವಯ ಬಂಧಕೇ ॥ (೨-೧೬೫*)

ಪಾದಮಧ್ಯ, ಸಂಧಿ ಮತ್ತು ಮಧ್ಯದಲ್ಲಿ ಒಂದೇ ವರ್ಣವನ್ನು ಆರು ಬಾರಿ ಪುನರಾವರ್ತಿಸಲಾಗುತ್ತದೆ (ಅಂಕಿಗಳ ಅನುಕ್ರಮಣಿಯು ಅಕ್ಷರವಿನ್ಯಾಸವನ್ನು ಸೂಚಿಸುತ್ತದೆ).



ಬಂಧ ೩

ಇದರ ಬಂಧದ ಅಕ್ಷರವಿನ್ಯಾಸ:

ಅಕ್ಷರ ಕ್ರಮಸಂಖ್ಯೆ	1	2	3	4	5	6	7	8
೧ನೆಯ ಪಾದ	A	–	–	–	–	–	–	–
೨ನೆಯ ಪಾದ	–	–	–	–	B	A	B	A
೩ನೆಯ ಪಾದ	A	B	A	A	B	A	A	B
೪ನೆಯ ಪಾದ	–	–	–	–	–	–	–	B

ಹೀಗಲ್ಲದೆ, 'ಚಿತ್ರಬಂಧಕಾವ್ಯ'ದಲ್ಲಿ (ಪು. ೨೪)

ಶ್ಲೇಷೇ ಶ್ಲೇಷೇ ಪಠನ್ ಧೀರಸ್ತತ್ರೈವ ವಿರಮೇತ್ಪುನಃ ।
ಸುಧಿಯಾ ಸ್ವಧಿಯಾ ಪ್ರೋಕ್ತಾ ಬಂಧೋಽಯಂ ದರ್ಪಣಾಭಿಧಃ ॥

ಎಂದರೆ, ''ಪ್ರತಿ ಶ್ಲೇಷವನ್ನೂ ಪಠಿಸುತ್ತ ಪುನಃ ಅದರಲ್ಲಿಯೇ ವಿರಮಿಸುವುದಾಗಲಿ'' ಎಂದಿದೆ. ಇದು ನಾವು ಗಮನಿಸಿರುವುದಕ್ಕಿಂತ ಕೊಂಚ ಬೇರೆಯಾಗಿರುವಂತೆ ತೋರುತ್ತದೆ.

ಪಟ್ಟಬಂಧ (ಲೋಹದ ಹಲಗೆ)

'ಅಲಂಕಾರ ಚಿಂತಾಮಣಿ'ಯಲ್ಲಿ ಈ ಬಂಧದ ಪ್ರಸ್ತಾಪವಿದೆ (೨–೧೭೦). ಈ ಬಂಧದ ವಿನ್ಯಾಸವನ್ನು ಕುರಿತಂತೆ ಇದರಲ್ಲಿಯೇ ಹೀಗೆ ಹೇಳಿದೆ:

ಪಾದತ್ರಿತಯಮೂರ್ಧ್ವಾಧಃ ಕ್ರಮಾದಾಲಿಖ್ಯ ಚಾಂತಿಮಮ್ ।
ಪಾದಂ ಕೋಣಚತುಷ್ಕೇ ತು ಲೀನಂ ಕುರ್ವೀತ ಪಟ್ಟಕೇ ॥ (೨–೧೬೯)

ಇದರ ಪ್ರಕಾರ ಮೊದಲ ಮೂರು ಪಾದಗಳ ಅಕ್ಷರಗಳನ್ನು ಒಂದರ ನಂತರ ಮತ್ತೊಂದರಂತೆ ಮೇಲಿನಿಂದ ಕೆಳಕ್ಕೆ, ಕೆಳಗಿನಿಂದ ಮೇಲಕ್ಕೆ ಈ ಕ್ರಮದಲ್ಲಿ ಅಳವಡಿಸಬೇಕು; ನಾಲ್ಕನೆಯ ಪಾದವು ನಾಲ್ಕು ಕೋನಗಳಲ್ಲಿ ಲೀನವಾಗಬೇಕು. ಒಟ್ಟಾರೆ, ಇಲ್ಲಿ ಬಂಧದ ೧, ೪ನೆಯ ಅಕ್ಷರಗಳು ೩–೩ ಬಾರಿಯೂ, ೧೭ನೆಯ ಅಕ್ಷರ ಎರಡು ಬಾರಿಯೂ, ೨೪ನೆಯ ಅಕ್ಷರವು ನಾಲ್ಕು ಬಾರಿಯೂ ಪುನರಾವರ್ತಿತವಾಗುವುದನ್ನು ಗಮನಿಸಬಹುದು.

ಲಕ್ಷ್ಯಪದ್ಯ ಇದು :

ಧೀಶಂ ಕಾಂತಾಭಯಂ ದೇವಂ । ಯಸ್ಯಾನಂತಂ ಚ ನತ್ವಹಮ್ ।
ವಿಮಾನಾಕ್ಷ್ಯೇವಿ ಜಿತಾತಂಕಮ್ । ಕಾಂತಾಧೀತಾಕಧೀಕತಾ ॥ (೨–೧೬೮)

27, 30 / 1 ಧೀ	6 ಯಂ	7 ದೇ	12 ನ್ತಂ	13 ಚ	18 ನಾ	19 ಕ್ಷ್ಯೇ	24, 29 ಕಂ 31
2 ಶಂ	5 ಭ	8 ವಂ	11 ನ	14 ನ	17 ಮೊ	20 ಮಿ	23 ತಂ
3 ಕಾಂ 25	4 ತಾ	9 ಯ	10 ಸ್ಯಾ	15 ತ್ವ	16 ಹಂ	21 ಜಿ	22, 26 ತಾ 28, 32

ಬಂಧ ೪

ಮೇಲಿನ ಲಕ್ಷ್ಯಪದ್ಯಕ್ಕೆ ಹೊಂದುವ ಅಕ್ಷರವಿನ್ಯಾಸ ಸೂತ್ರವನ್ನು ಹೀಗೆ ನಿರೂಪಿಸಬಹುದು :

ಅಕ್ಷರ ಕ್ರಮಸಂಖ್ಯೆ	1	2	3	4	5	6	7	8
೧ನೆಯ ಪಾದ	A	–	B	–	–	–	–	–
೨ನೆಯ ಪಾದ	–	–	–	–	–	–	–	–
೩ನೆಯ ಪಾದ	–	–	–	–	–	C	–	D
೪ನೆಯ ಪಾದ	B	C	A	C	D	A	D	C

ಕನ್ನಡದಲ್ಲಿ ಈ ಬಂಧದ ಲಕ್ಷ್ಯಗಳಿಲ್ಲ.

ಬ್ರಹ್ಮದೀಪಕ (ಒಂದು ಬಗೆಯ ದೀಪ)

'ಅಲಂಕಾರ ಚಿಂತಾಮಣಿ'ಯಲ್ಲಿ ಈ ಬಂಧ ಉಕ್ತವಾಗಿದೆ. ಇದು 'ಗೂಢದೀಪಿಕಾ' ಭೇದ. ಅಲ್ಲಿ ಇದರ ಲಕ್ಷಣ ಲಕ್ಷ್ಯ ಪದ್ಯಗಳು :

ಆದಿಃ ಪಾದೋ ದ್ವಿತೀಯೋ ವಾ ತೃತೀಯೋ ವಾ ಚತುರ್ಥಕಃ ।
ನಿಗುಹ್ಯತೇ ಚತುರ್ಭೇದೇ ನಿಗೂಢಬ್ರಹ್ಮದೀಪಿಕೇ ॥ (೨–೧೮೨)
ಭೂವಿಪಾಮುರತುಷ್ಟ್ಯಂಗಮಾಶ್ರಿತೋ ಮುದಿತೋಽನಿಶಮ್ ।
ಅಸುಭೃತ್ತೀವ್ರಪೀಡಾತಃ ಪಾತು ಮಾಂ ಮುನಿಸುವ್ರತಃ ॥ (೨–೧೮೩)

'ಬ್ರಹ್ಮದೀಪಕ' ಬಂಧದ ಪದ್ಯದ ನಾಲ್ಕು ಪಾದಗಳಲ್ಲಿ ಯಾವುದಾದರೊಂದನ್ನು ನಿಗೂಢವಾಗಿಡಲಾಗುತ್ತದೆ. ಆದ್ದರಿಂದಲೇ 'ಗೂಢದೀಪಿಕಾ'. ಇಲ್ಲಿ ಚಿತ್ರದಲ್ಲಿ ನಾಲ್ಕನೆಯ ಪಾದ ಗೂಢವಾಗಿರುವುದನ್ನು ಗಮನಿಸಬೇಕು. ಎಂದರೆ ಎಲ್ಲ ದಳಗಳ ತುದಿಯ ಅಕ್ಷರಗಳನ್ನೂ ಗಮನಿಸಿದಲ್ಲಿ(೩, ೬, ೯, ೧೨, ೧೫, ೧೮, ೨೧, ೨೪)ಅಲ್ಲಿ ''ಪಾತು ಮಾಂ ಮುನಿಸುವ್ರತಃ'' ಎಂಬ ನಾಲ್ಕನೆಯ ಪಾದ ಅಡಗಿರುವುದು ಕಾಣಿಸುತ್ತದೆ. ಕನ್ನಡದಲ್ಲಿ ಲಕ್ಷ್ಯಗಳಿಲ್ಲ. ಗೂಢಚಿತ್ರ ಬಂಧಚಿತ್ರಗಳು ಬೆರೆತ ಚಿತ್ರಪುಷ್ಪವಿದು. ಕನ್ನಡದಲ್ಲಿ ಲಕ್ಷ್ಯಗಳಿಲ್ಲ.



ಬಂಧ ೫



ಬಂಧ ೬

೫ನೆಯ ಬಂಧಕ್ಕೆ (೪ನೆಯ ಪಾದ ಗೂಢ) ಹೊಂದುವ ಶ್ಲೋಕದ ವರ್ಣವಿನ್ಯಾಸ :

ಅಕ್ಷರ ಕ್ರಮಸಂಖ್ಯೆ	1	2	3	4	5	6	7	8
೧ನೆಯ ಪಾದ	–	–	A	–	–	B	–	–
೨ನೆಯ ಪಾದ	C	–	–	D	–	–	E	–
೩ನೆಯ ಪಾದ	–	F	–	–	G	–	–	H
೪ನೆಯ ಪಾದ	A	B	C	D	E	F	G	H

ಬ್ರಹ್ಮದೀಪಿಕಾ (ಒಂದು ಬಗೆಯ ದೀಪ)

'ಅಲಂಕಾರಚಿಂತಾಮಣಿ'ಯಲ್ಲಿ ಈ ಬಂಧ(ಬಂಧ ೬) ಉಕ್ತವಾಗಿದೆ: ಅಲ್ಲಿ ಇದರ ಲಕ್ಷಣ ಲಕ್ಷ್ಯಪದ್ಯಗಳು:

ಭ್ರಾಮ್ಯತಾಂ ತ್ರೀಣಿ ಚ ತ್ರೀಣಿ ದಲೇಷ್ವಷ್ಟಸು ಕರ್ಣಿಕಾಮ್ ।
ಏಕೇನೈವಾಷ್ಟಕೃತ್ವೋಽಪಿ ಪೂರಯೇದ್ಬ್ರಹ್ಮದೀಪಿಕೇ ॥ (೨–೧೩೨)

ವಿಜಿತ್ಯಾನನಮಂಭೋಜಂ ನಿತ್ಯೇ ಜನನವೈರಿಣಃ ।
ಕಕ್ಷಮಾನನಯಾಗಮ್ಯಂ ಸುಪಾರ್ಶ್ವಂ ನನ್ನಮಾಮಿ ತಮ್ ॥ (೧೩೩)

ಕರ್ಣಿಕೆಯಲ್ಲಿ ಒಂದೇ ಅಕ್ಷರವನ್ನು ೮ ಬಾರಿ ಪುನರಾವರ್ತಿಸಿ, ೮ ದಳಗಳಲ್ಲಿ ೩–೩ ಅಕ್ಷರಗಳನ್ನಿಡುವುದರಿಂದ ಈ ಬಂಧ ಸಿದ್ಧವಾಗುತ್ತದೆ. (ಅಕ್ಷರಗಳ ಅನುಕ್ರಮಣಿ ಬಂಧದಲ್ಲಿ ಅಕ್ಷರವಿನ್ಯಾಸವನ್ನು ಸ್ಪಷ್ಟಪಡಿಸುತ್ತದೆ.)

ಬಂಧಕ್ಕೆ ಹೊಂದುವ ಶ್ಲೋಕದ ವರ್ಣವಿನ್ಯಾಸ :

ಅಕ್ಷರ ಕ್ರಮಸಂಖ್ಯೆ	1	2	3	4	5	6	7	8
೧ನೆಯ ಪಾದ	–	–	–	A	A	–	–	–
೨ನೆಯ ಪಾದ	–	–	–	A	A	–	–	–
೩ನೆಯ ಪಾದ	–	–	–	A	A	–	–	–
೪ನೆಯ ಪಾದ	–	–	–	A	A	–	–	–

ಭೃಂಗಾರಬಂಧ (ಒಂದು ಬಗೆಯ ಕಲಶ)

'ಅಲಂಕಾರಚಿಂತಾಮಣಿ'ಯಲ್ಲಿ ಈ ಬಂಧದ ಪ್ರಸ್ತಾವವಿದೆ. ಅಲ್ಲಿರುವ ಇದರ ಲಕ್ಷಣ ಲಕ್ಷ್ಯಪದ್ಯಗಳು :

ದ್ವೇ ದ್ವೇ ಪಾದೇ ಚ ಕಂಠೇ ಚ ಗರ್ಭೇಽಷ್ಟೌ ವಿಲಿಖೇತ್ಕವಿಃ ।
ಪಾರ್ಶ್ವಯೋರಂತ್ಯಪಾದಂ ತು ಲಿಖೇತ್ ಭೃಂಗಾರಬಂಧಕೇ ॥ (೨–೧೮೦)

ಭಾಸತೇ ಹಂಸವಿದ್ಯೋತತದ್ಯೋಗತೇಜಸಾ ಸಭಾ ।
ಸಾಽಜ ತೇ ಗವಿ ಸಂಹಂತೇನೋಽತೋ ಮಲ್ಲಿರವೈನಸಾಮ್ ॥ (೨–೧೮೧)

ಪಾದ ಮತ್ತು ಕಂಠ ಭಾಗಗಳಲ್ಲಿ ೨–೨ ಅಕ್ಷರಗಳನ್ನೂ ಗರ್ಭದಲ್ಲಿ ೮ ಅಕ್ಷರಗಳನ್ನೂ ಪಾರ್ಶ್ವಗಳಲ್ಲಿ ಅಂತ್ಯಪಾದವನ್ನೂ ಬರೆಯಬೇಕು. (ಚಿತ್ರದಲ್ಲಿ ಅಂಕಿಗಳ ವಿನ್ಯಾಸವನ್ನು ಹಿಡಿದು ಸಾಗಿದಾಗ ಅಕ್ಷರವಿನ್ಯಾಸ ಅರ್ಥವಾಗುತ್ತದೆ.)

ಈ ಬಂಧಕ್ಕೆ ಹೊಂದುವ ಶ್ಲೋಕದ ವರ್ಣವಿನ್ಯಾಸ :

ಅಕ್ಷರ ಕ್ರಮಸಂಖ್ಯೆ	1	2	3	4	5	6	7	8
೧ನೆಯ ಪಾದ	A	B	C	D	E	F	G	H
೨ನೆಯ ಪಾದ	H	G	I	J	K	L	B	A
೩ನೆಯ ಪಾದ	L	K	J	I	F	E	D	C
೪ನೆಯ ಪಾದ	–	–	–	–	–	–	–	–



ಬಂಧ ೭

ಮಾಲಾಬಂಧ

ಬಂಧಚಿತ್ರಗಳೆಂಬುವಕ್ಕೆ ಒಪ್ಪುವ ಮಾಲಾಬಂಧಗಳು, ಬಿಡಿಹೂಗಳನ್ನು ಹಾರಗಳಾಗಿ ಕೂಡಿಸಿ ಕಟ್ಟುವ ಕೌಶಲಕ್ಕೆ ಅನುಗುಣವಾಗಿ ಹಲವು ತೆರನಾಗಿರುತ್ತವೆ. ಇವುಗಳಲ್ಲಿ ಮಾಲಾಬಂಧದ ಒಂದು ಬಗೆಯನ್ನು 'ಚಿತ್ರಬಂಧಕಾವ್ಯ'ದಲ್ಲಿ

ಮಧ್ಯತಃ ಪದಮೇಕಂತು ಗೋಮೂತ್ರ್ಯಾ ಪದತ್ರಯಂ
ಜಾನಂತು ಶೇಮುಷೀ ಪ್ರೇಕ್ಷ್ಯಾ ಮಾಲಾಬಂಧೇ ಹಿ ನೂತನೇ ॥ (ಪು. ೨೭)

ಎಂದರೆ, ''ಮಧ್ಯದಲ್ಲಿ ಒಂದು ಪಾದವೂ ಮೂರು ಪಾದಗಳೂ ಗೋಮೂತ್ರಿಕದ ಗತಿಯಲ್ಲಿ ಚಲಿಸುತ್ತದೆ'' ಎಂಬುದಾಗಿ ನಿರೂಪಿಸಿದೆ. ಇನ್ನೊಂದು ಬಗೆಯನ್ನು ಅಲ್ಲಿಯೇ

ಗೋಮೂತ್ರಿಕಾಕ್ರಮೇಣೈವ ಚತುಷ್ಪಾದಾಸ್ತು ಮಧ್ಯತಃ
ಭಿನ್ನಾರ್ಥವಾಚಕಾಃ ಶಬ್ದಾ ಮಾಲಾಬಂಧೇ ಹಿ ನೂತನೇ ॥ (ಪು. ೨೬)

ಎಂದರೆ, ''ನಾಲ್ಕು ಪಾದಗಳು ನಡುವೆಯಿದ್ದು, ಗೋಮೂತ್ರಿಕಾಕ್ರಮದಲ್ಲಿ ಭಿನ್ನಾರ್ಥವಾಚಕಗಳಾದ ಶಬ್ದಗಳು ಯೋಜಿತವಾಗುತ್ತವೆ'' ಎಂದು ತಿಳಿಸಿದೆ.

ಮಾಲಾಬಂಧಗಳು ಕೆಲಮಟ್ಟಿಗೆ ರತ್ನಗಳನ್ನು ಪವಣಿಸಿದ ಹಾರಬಂಧಗಳನ್ನು ಹೋಲುವುವಾಗಿದ್ದು ಅವನ್ನು ಒಂದು ದೃಷ್ಟಿಯಿಂದ ಸದೃಶಬಂಧಗಳಾಗಿಯೇ ತಿಳಿಯುವುದು ತಪ್ಪಾಗದು. ಆದಾಗ್ಯೂ ಅವನ್ನು ಪ್ರತ್ಯೇಕವಾಗಿಯೇ ಗಣಿಸಿದೆ. ಇಲ್ಲಿ ಲಭ್ಯವಿರುವ ಕನ್ನಡಲಕ್ಷ್ಯಗಳನ್ನೇ ಮುಂದೆ ನಿದರ್ಶನಗಳನ್ನಾಗಿ ತೋರಿಸಿದೆ.

ಕನ್ನಡಕ್ಕೆ ಸಂಬಂಧಿಸಿದಂತೆ ಶಾಂತವೀರದೇಶಿಕನ (ಸು.೧೬೫೦) 'ಶಿವಮಹತ್ವಸಾರಶಿಖಾಮಣಿ ಸಂಗ್ರಹ'ದಲ್ಲಿ ಚಂಪಕಮಾಲಾವೃತ್ತವಾಗಿ ಕಟ್ಟಿದ ಒಂದು 'ಪುಷ್ಪಮಾಲಿಕಾಬಂಧ'ವಿದೆ. ಅದರಲ್ಲಿ ೧೨ ಪುಷ್ಪಗಳಿದ್ದು ಲಕ್ಷ್ಯಪದ್ಯ ಹೀಗಿದೆ :

ನತನುತದಾತನಾಗಧರಧರ್ಮದಯಾಪರಧೀರಸಾರಶೋ
ಭಿತಹತಸೂತಕಾದಿಸುಭಸುದ್ಧಸುರಾಶ್ರಯಮಾಯಕಾಯವ
ರ್ಜಿತನೃತಭೀತಭೀಮಮುನಿಮುಖ್ಯಮುರಾಂತಕನೀಕಶೋಕನಂ
ದಿತಶತಶಾಂತವೀರನಿಜನಿತ್ಯನಿರಾಕರಮಾರಸೂರನೇ ॥

ಇದನ್ನು ಕೆಳಗೆ ತೋರಿಸಿರುವಂತೆ ಚಿತ್ರದಲ್ಲಿ ಅಳವಡಿಸಬಹುದು. (ಅಂಕಿಗಳ ಅನುಕ್ರಮಣಿ ಅಕ್ಷರ ವಿನ್ಯಾಸವನ್ನು ಸ್ಪಷ್ಟಪಡಿಸುತ್ತದೆ.)



ಬಂಧ ೮

ವಾಗ್ಭಟನ ಹಾರದ ಉದಾಹರಣೆಯಲ್ಲಿ, ಪ್ರತಿಹೂವಿನಲ್ಲೂ ಮೊದಲು ಕೇಂದ್ರದ ಸುತ್ತ ಒಂದು ಪ್ರದಕ್ಷಿಣೆ ಹಾಕಿ ಅನಂತರ ಕೇಂದ್ರದ ಮೂಲಕ ಹಾದುಹೋಗುತ್ತಿದ್ದರೆ, ಇಲ್ಲಿ ಪ್ರತಿದಳದಿಂದಲೂ ಕೇಂದ್ರಕ್ಕೆ ಹೋಗಿ ಹೋಗಿ ಬರಬೇಕಾಗುತ್ತದೆ. ಹೂಗಳನ್ನು ಮಾಲೆಯಾಗಿ ಕಟ್ಟುವ ಬಂಧವಿದು. ಹೂಕಟ್ಟಿನ ಹತ್ತಿರ ಒಂದೇ ಅಕ್ಷರವಿದ್ದು,



ಬಂಧ ೯

ಅದನ್ನು ಆವೃತ್ತಿಯಲ್ಲಿ ಮೂರು ಸಾರಿ ಓದಬೇಕಾಗುತ್ತದೆ. ಕಾವ್ಯಗಳಲ್ಲಿ ಆಭರಣಗಳ ವರ್ಣನಸಮಯದಲ್ಲಿ ಈ ಬಂಧವನ್ನು ಬಳಸುವುದು ಸಾಮಾನ್ಯ. ಇದಕ್ಕೆ ಪುಷ್ಪಗುಚ್ಛಬಂಧವೆಂದೂ ಹೆಸರು. ಛಂದಸ್ಸು ಯಾವುದೇ ಇದ್ದರೂ ರಚನಾವಿಧಾನ ಒಂದೇ. ಆದರೂ ಕವಿಗಳು ವಿಶೇಷವಾಗಿ ಬಳಸುವುದು ಚಂಪಕಮಾಲೆ, ಸ್ರಗ್ಧರೆಗಳನ್ನೇ. ತೆಲುಗುಕವಿಗಳಲ್ಲಿ ಈ ಬಂಧದ ರಚನೆಗಳು ವಿಪುಲವಾಗಿ ಕಂಡುಬರುತ್ತವೆ. "ಸಂಧಿ ನೊಕಕ್ಷರಂಬು ನಲು ಚಕ್ಕುಲು ಜತಿಕುಲ ನಾಲ್ಗು ವರ್ಣಮುಲ್ ಸಂಧಿಲುನಟ್ಲು...." ಎಂದು ಮುಂತಾಗಿ 'ಪ್ರಬಂಧ ಸಂಬಂಧ ಬಂಧ ನಿಬಂಧನ'ದಲ್ಲಿ ಉಕ್ತವಾಗಿದೆ. ಮಾಲಾಬಂಧಗಳಲ್ಲಿ ಶ್ಲೋಕ, ಮಾಲಿನೀವೃತ್ತ ಇವನ್ನು ಬಳಸಿದ ಲಕ್ಷ್ಯಗಳೂ ಇವೆ (ನೋಡಿ: 'ಚಿತ್ರಕಾವ್ಯ ಕೌತುಕಂ', ಪು. ೭೦–೭೩).

1	2	3	4	5	6	7	8	9	10	11	12	13	14	15	16	17	18	19	20	21
–	A	–	A	–	A	–	–	B	–	B	–	B	–	–	C	–	C	–	C	–
–	D	–	D	–	D	–	–	E	–	E	–	E	–	–	F	–	F	–	F	–
–	G	–	G	–	G	–	–	H	–	H	–	H	–	–	I	–	I	–	I	–
–	J	–	J	–	J	–	–	K	–	K	–	K	–	–	L	–	L	–	L	–

'ನರಪತಿಚರಿತ'ದಲ್ಲಿ ಕೂಡ ಸ್ರಗ್ಧರಾವೃತ್ತದಲ್ಲಿ ಕಟ್ಟಿದ ಒಂದು ಹಾರಬಂಧದ (ಬಂಧ ೯)ಉಲ್ಲೇಖವಿದ್ದು, ಲಕ್ಷ್ಯಪದ್ಯ ಹೀಗಿದೆ:

ನೀತಿಖ್ಯಾತಿಪ್ರತಿಷ್ಠಾದ್ಯುತಿಧೃತಿಕೃತಿತಾಚಾರಸಾರಳ್ಯರಮ್ಯಂ
ಚೇತೋಜಾತೋದ್ಗತೋಪಪ್ಲವನವಯುವತೀಪ್ರೇಮವಾಮುಕ್ರಮಜ್ಞಂ
ದ್ಯೂತಾಕೂತಾನುತಪ್ತೋಜ್ಝಿತಮತನುತರತ್ಯಾಗಭೋಗಪ್ರಗಲ್ಭಂ
ಶ್ರೌತಸ್ಮಾರ್ತವ್ರತಸ್ಥಂ ಮೆರೆ ದೊರೆ ಪೊರೆ ನೀಂ ವೀರಭೂರಕ್ಷಿರತ್ನಂ ॥ (೨–೧೬)

ಇದರ ಅಕ್ಷರವಿನ್ಯಾಸವು ಮೇಲಿನ ವಿನ್ಯಾಸಕ್ಕೆ ಸರಿಯಾಗಿ ಹೊಂದುತ್ತದೆ. ಆದ್ದರಿಂದ ಇದನ್ನು ಕೂಡ ಮೇಲಿನಂತೆಯೇ ಹಾರಕ್ಕೆ ಹೊಂದಿಸಬಹುದು. (ಅಂಕಿಗಳ ಅನುಕ್ರಮಣಿಯು ಮೇಲಿನ ಚಿತ್ರದಲ್ಲಿಯಂತೆಯೇ).

ಹಾರಬಂಧ

'ವಾಗ್ಭಟಾಲಂಕಾರ'ದಲ್ಲಿ ಹಾರಬಂಧದ ಉಲ್ಲೇಖವಿದ್ದು, ಅದರ ಲಕ್ಷ್ಯಪದ್ಯ :

ಚನ್ದ್ರೇಡಿತಂ ಚಟುಲಿತಸ್ವರಧೀತಸಾರ
ರತ್ನಾಸನಂ ರಭಸಕಲ್ಪಿತಶೋಕಶಾತಮ್
ಪಶ್ಯಾಮಿ ಪಾಪತಿಮಿರಕ್ಷಯಕಾರಕಾಯ
ಮಲ್ಪೇತರಾಮಲತಪಃ ಕಚಲೋಪಲೋಚಮ್ ॥ (೧–೭೪)

ಇದನ್ನು 'ಅಷ್ಟಮಣಿಹಾರ'ವೆಂದು ಕರೆಯಲಾಗಿದೆ. ಚಿತ್ರದಲ್ಲಿ ಅಂಕಿಗಳ ಅನುಕ್ರಮಣಿಯನ್ನು ಹಿಡಿದು ಸಾಗಿದಾಗ ಅಕ್ಷರವಿನ್ಯಾಸ ಅರ್ಥವಾಗುತ್ತದೆ. (ಡ-ಲ ಅಭೇದ : ಚಟುಲಿತ = ಚಟುಡಿತ; ಅಂತೆಯೇ ಅನುಸ್ವಾರವಿಸರ್ಗಗಳಲ್ಲಿ). ಇಲ್ಲಿ ಕೇಂದ್ರದ ಕೀಲಕ್ಷರದ ಆವೃತ್ತಿ ಒಂದೇ ಸಲ.

ಈ ಬಂಧಕ್ಕೆ ಹೊಂದುವ (೧೪ ಅಕ್ಷರಗಳು) ವರ್ಣವಿನ್ಯಾಸ :

ಅಕ್ಷರ ಕ್ರಮಸಂಖ್ಯೆ	1	2	3	4	5	6	7	8	9	10	11	12	13	14
೧ನೆಯ ಪಾದ	A	–	B	–	A	–	B	C	–	D	–	C	–	D
೨ನೆಯ ಪಾದ	E	–	F	–	E	–	F	G	–	H	–	G	–	H
೩ನೆಯ ಪಾದ	I	–	J	–	I	–	J	K	–	L	–	K	–	L
೪ನೆಯ ಪಾದ	M	–	N	–	M	–	N	O	–	P	–	O	–	P



ಬಂಧ ೧೦

ಈ ಹಾರಬಂಧದ ರಚನೆಯನ್ನು ನೂರು ವಿಧವಾಗಿ ತೋರಿಸುವುದು ಶಕ್ಯವೆಂದು ತೋರುತ್ತದೆ. ಇವುಗಳಲ್ಲಿ ಮೇಲಿನ ರಚನೆಗೆ ಸದೃಶವಾದ ಎರಡನ್ನು ಬಿಟ್ಟು ಇನ್ನೊಂದನ್ನು ಇಲ್ಲಿ ತೋರಿಸಬಹುದು :



ಬಂಧ ೧೧

'ಅಲಂಕಾರಚಿಂತಾಮಣಿ'ಯಲ್ಲಿ ಕೂಡ ಒಂದು ಹಾರಬಂಧದ ಉಲ್ಲೇಖವಿದ್ದು ಲಕ್ಷ್ಯಪದ್ಯ ಹೀಗಿದೆ :

ಚನ್ದ್ರಾತಪಂಚ ಸತತ ಪ್ರಭಪೂತಲಾಭ
ಭದ್ರಂ ದಯಾಸುಖದಮಙ್ಗಲಧಾಮಜಾಲಂ
ವನ್ದಾಮಹೇ ವರಮನಂತಜಯಾನಯಾಜಂ
ತ್ವಾಂ ವೀರದೇವ ಸುರಸಂಚಯಶಾಸಶಾಸ್ತ್ರಮ್ ॥ (೩–೧೮೫)

ವಾಗ್ಭಟೋಕ್ತರೀತಿಗೆ ಕೊನೆಯ ಸ್ವಲ್ಪಭಾಗ ಹೊಂದುತ್ತಿಲ್ಲ. ಬಂಧವೇನೋ ಇಲ್ಲಿಯೂ ಚತುರ್ದಶಾಕ್ಷರ ಪಾದಗಳದೇ.

'ಅಲಂಕಾರಚಿಂತಾಮಣಿ'ಯ ಅನುಬಂಧದಲ್ಲಿ ಕೊಟ್ಟಿರುವ ಇದರ ಚಿತ್ರ ಹೀಗಿದೆ :



ಬಂಧ ೧೨

೨. ಆಯುಧಗಳು

ಖಡ್ಗ (ಕತ್ತಿ)

ರುದ್ರಟನ 'ಕಾವ್ಯಾಲಂಕಾರ'ದಲ್ಲಿ ಈ ಬಂಧದ (೧೩) ಪ್ರಸ್ತಾಪವಿದೆ. ಅಲ್ಲಿರುವ ಇದರ ಲಕ್ಷ್ಯಪದ್ಯಗಳು :

> ಮಾರಾರಿಶಕ್ರರಾಮೇಭ ಮುಖೈರಾಸಾರರಂಹಸಾ ।
> ಸಾರಾರಬ್ಧಸ್ತವಾ ನಿತ್ಯಂ ತದರ್ತಿಹರಣಕ್ಷಮಾ ॥ ೬ ॥
>
> ಮಾತಾ ನತಾನಾಂ ಸಂಘಟ್ಟಃ । ಶ್ರಿಯಾಂ ಬಾಧಿತಸಂಭ್ರಮಾ ।
> ಮಾನ್ಯಾಽಥ ಸೀಮಾ ರಾಮಾಣಾಂ । ಶಂ ಮೇ ದಿಶ್ಯಾದುಮಾದಿಜಾ ॥ ೭ ॥

ಈ ಬಂಧದ ಸಂಬಂಧದಲ್ಲಿ ನಮಿಸಾಧುವಿನ ವಿವರಣೆ ಹೀಗಿದೆ: ''ಆದ್ಯಃ ಶ್ಲೋಕಃ ಫಲರೂಪೋಽಪರೋ ಮುಷ್ಟಿರೂಪಃ । 'ಸಾ' ಶಬ್ದಃ ಫಲಾನ್ತೇ ತ್ರೈಕ್ಷ್ಣ್ಯಕಾರೀ 'ದಿಜಾ' ಇತಿ ಮುಷ್ಟೇರುಪರಿ 'ಮಾ' ಶಬ್ದಾ ತತ್ರ ಸಾಧಾರಣಾ।''

ಇದರ ಪ್ರಕಾರ, ಆದಿಯ ಶ್ಲೋಕವನ್ನು 'ಫಲ'ದಲ್ಲಿಯೂ ಮುಂದಿನದನ್ನು 'ಮುಷ್ಟಿ'ಯಲ್ಲೂ ಅಳವಡಿಸಬೇಕು. 'ಫಲಾಂತ' ಅಥವಾ 'ಶಿಖೆ'ಯಲ್ಲಿ 'ಸಾ' ಬರುತ್ತದೆ. 'ಮುಷ್ಟಿ'ಯ ಮೇಲೆ ಎಂದರೆ 'ಮಸ್ತಕ'ದಲ್ಲಿ 'ದಿಜಾ' ಮತ್ತು 'ಕೀಲಕ' ಮಧ್ಯದಲ್ಲಿ 'ಮಾ' ಬರುತ್ತವೆ. (ಅಂಕಿಗಳ ಅನುಕ್ರಮಣಿಯು ಅಕ್ಷರವಿನ್ಯಾಸ ಕ್ರಮವನ್ನು ನಿರೂಪಿಸುತ್ತದೆ). ಇದನ್ನು ಹೀಗೆ ವಿವರಿಸಬಹುದು : 'ದ್ರಾಢಿಕಾ' ಮಧ್ಯದಿಂದ ಪ್ರಾರಂಭಿಸಿ 'ಫಲ'ದಲ್ಲಿ


ಜಾ
ಧಿ
ಶಂ ಸಾಂ ಮಾ ರಾ ಮಾ ದು ಶ್ಯಾ ದಿ ಮೇ
ಸೀ
ಥ
ನ್ಬಾ
ಟಃ ಫ ಸಂ ನಾಂ ತಾ ನ ತಾ ಮಾ ಭ್ರ ಸಂ ತ ಧಿ ಬಾ ಯಾಂ ಶ್ರಿ
ರಾ ರಿ ಶ ಕ್ರ ರಾ ಮೇ ಭ್ಯ ಮು ಖ್ಯೆ ರಾ ಸಾ ರ ರಂ ಡ
ಕ್ಯೊ ಣ ರ ಡ ತ್ರಿಕ್ ದ ತ ತ್ಯಂ ನಿ ಘಾ ಸ್ತ್ರೊ ಭ್ಥ ರ ರಾ
ಸ್ತಾ
ಮಸ್ತಕ
ಕೂಲಕ
ಗಂಡಿಕಾ
ದ್ರಾಧಿಕಾ
ಫಲ
ಶಿಖಾ

ಬಂಧ ೧೩

ಇಳಿದು, 'ಶಿಖೆ'ಯನ್ನು ಮುಟ್ಟಿ, ಮತ್ತೆ ಮೇಲೇರಿ ಹೊರಟ ಸ್ಥಳವನ್ನೇ ಸೇರಬೇಕು. ಅನಂತರ 'ದ್ರಾಢಿಕೆ'ಯಲ್ಲಿ ಎಡಗಡೆಗೆ ಹೊರಟು ಕೊನೆಮುಟ್ಟಿ ಅನಂತರ ಅದರ ಬಲತುದಿಯಿಂದ ಹೊರಟು ಮಧ್ಯಕ್ಕೆ ಸೇರಬೇಕು. ನಂತರ 'ಗಂಡಿಕಾ' ಭಾಗದಲ್ಲಿ ಮೇಲೇರಿ 'ಕೂಲಕ' ಮಧ್ಯವನ್ನು ಸೇರಬೇಕು. ಅನಂತರ 'ಕೂಲಕ'ದಲ್ಲಿ ಎಡತುದಿಯವರೆಗೂ ಹೋಗಿ ಮತ್ತೆ ಬಲತುದಿಯಿಂದ ಹೊರಟು ಮಧ್ಯಭಾಗವನ್ನು ಸೇರಿ ಅನಂತರ 'ಮಸ್ತಕ' ಭಾಗದಲ್ಲಿ ಮೇಲೇರಬೇಕು. ಇದರಲ್ಲಿ ಶಿಖಾಕ್ಷರ, ಕೂಲಕ ಮಧ್ಯಾಕ್ಷರಗಳು ಎರಡೆರಡು ಬಾರಿಯೂ, ದ್ರಾಢಿಕಾ ಮಧ್ಯಾಕ್ಷರವು ಐದು ಬಾರಿಯೂ ಪುನರಾವರ್ತಿತವಾಗುವುದನ್ನು ಗಮನಿಸಬೇಕು. ಖಡ್ಗಬಂಧದ ಅಂಗಭಾಗಗಳನ್ನು ಹೇಮಚಂದ್ರ ವಿವರವಾಗಿ ಹೆಸರಿಸಿದ್ದಾನೆ; ನಮಿಸಾಧು 'ಫಲ' ಮತ್ತು 'ಮುಷ್ಟಿ'ಗಳನ್ನು ಮಾತ್ರ ಹೆಸರಿಸಿದ್ದಾನೆ.

'ಚಿತ್ರಬಂಧಕಾವ್ಯಂ' ಲಕ್ಷಣಿಸುವುದು ಹೀಗೆ :

ಶ್ಲಿಷ್ಟೇಽಗ್ರತಃ ಪಾರ್ಶ್ವತೋಽಪಿ ತದೂರ್ಧ್ವೇ ಪಾರ್ಶ್ವೇ ತತಃ ಪುನಃ ।
ಶ್ಲಿಷ್ಟಾನ್ಮುಷ್ಟ್ಯಂತಭಾಗೇ ಪುನರಗ್ರೇ ತು ಮಧ್ಯತಃ ॥ (ಪು. ೪೦)

(ಅಗ್ರದ ಶ್ಲಿಷ್ಟದೊಳಗಿಂದ ಅಲಗಿನ ಪಕ್ಕದಲ್ಲಿ ಸಾಗುವುದು; ಮತ್ತೆ ಅಲಗಿನ ಇನ್ನೊಂದು ಪಕ್ಕದಿಂದ ಮೇಲಕ್ಕೆ ಸಾಗುವುದು. ಬಳಿಕ ಶ್ಲಿಷ್ಟದ ಉಭಯಪಾರ್ಶ್ವದಲ್ಲಿ ಚಲಿಸಿ, ಮುಷ್ಟಿಯ ಬಳಿಕಣಶ್ಲಿಷ್ಟದಿಂದ ಹೊರಟು (ಇಲ್ಲಿಯೂ ಉಭಯಪಾರ್ಶ್ವದಲ್ಲಿ ಚಲಿಸಬೇಕು) ತುದಿಗೆ ಏರಬೇಕು.

ಈ ಬಂಧಕ್ಕೆ ಹೊಂದುವ ಶ್ಲೋಕಗಳ ಅಕ್ಷರವಿನ್ಯಾಸವನ್ನು ಹೀಗೆ ನಿರೂಪಿಸಬಹುದು :

(1)

ಅಕ್ಷರ ಕ್ರಮಸಂಖ್ಯೆ	1	2	3	4	5	6	7	8
೧ನೆಯ ಪಾದ	A	–	–	–	–	–	–	–
೨ನೆಯ ಪಾದ	–	–	–	–	–	–	–	B
೩ನೆಯ ಪಾದ	B	–	–	–	–	–	–	–
೪ನೆಯ ಪಾದ	–	–	–	–	–	–	–	A

(2)

ಅಕ್ಷರ ಕ್ರಮಸಂಖ್ಯೆ	1	2	3	4	5	6	7	8
೧ನೆಯ ಪಾದ	A	–	–	–	–	–	–	–
೨ನೆಯ ಪಾದ	–	–	–	–	–	–	–	A
೩ನೆಯ ಪಾದ	A	–	–	–	C	–	–	–
೪ನೆಯ ಪಾದ	–	–	–	–	–	C	–	–

ನಾಗವರ್ಮನ 'ಕಾವ್ಯಾವಲೋಕನ'ದಲ್ಲಿ ಕೂಡ ಖಡ್ಗಬಂಧದ ಉಲ್ಲೇಖವಿದೆ. ಅಲ್ಲಿರುವ ಅದರ ಲಕ್ಷ್ಯಪದ್ಯಗಳು :

ಕಂಸಾಸುರಹರಂ ದೈತ್ಯಧ್ವಂಸಿ ಬಾಣಮದಾಪಹಂ ।
ಹಂಸಾಸನಸಮಾರಬ್ಧಶಂಸನಂ ನರಕಾಂತಕಂ ॥ ೫೭೫ ॥

ಕಂಜನಾಭಂ ಸುರದ್ರೋಹಿಭಂಜನಂ ಲೋಕಪಾಲಕಂ ।
ಕಂಜಾಕ್ಷಂ ಕಂಟಕಾಕಂಪಂ ಮುಂಜಕೇಶಿ ಧರಾಧರಂ ॥ ೫೭೬ ॥

ರುದ್ರಟನಲ್ಲಿರುವ ಖಡ್ಗಕ್ಕೂ ಇದಕ್ಕೂ 'ಗಂಡಿಕೆ'ಯಿಂದ ಮೇಲಿನ ಭಾಗದಲ್ಲಿ ಸ್ವಲ್ಪ ವ್ಯತ್ಯಾಸವಿದೆ. ಇದರ ವಿನ್ಯಾಸ ಹೀಗಾಗುತ್ತದೆ: 'ದ್ರಾಢಿಕಾ'ಮಧ್ಯದಿಂದ ಪ್ರಾರಂಭಿಸಿ, ಹಿಂದಿನ ಕ್ರಮದಲ್ಲಿಯೇ 'ಗಂಡಿಕೆ'ಯವರೆಗೆ ಬರಬೇಕು. 'ಗಂಡಿಕೆ'ಯಲ್ಲಿ ಇಲ್ಲಿ ಮೂರು ಅಕ್ಷರಗಳಿಗೆ ಬದಲು ಎರಡೇ ಅಕ್ಷರಗಳು ಬರುತ್ತವೆ. ಅದೇ ರೀತಿ 'ಕೂಲಕ'ದಲ್ಲಿ ೩ ಅಕ್ಷರಗಳು ಮಾತ್ರ ಬರುತ್ತವೆ. ಆದರೆ 'ಮಸ್ತಕ'ದಲ್ಲಿ ೯ ಅಕ್ಷರಗಳು ಬರುತ್ತವೆ. ಹಿಡಿಯ ಭಾಗದಲ್ಲಿ ಕುಶಲ ರೀತಿಯಿಂದ ಅಕ್ಷರಗಳನ್ನು ಕೂಡಿಸುವುದರ ಮೂಲಕ ಇನ್ನೂ ಹಲವು ಖಡ್ಗಭೇದಗಳು ಉಂಟಾಗುವ ಸಾಧ್ಯತೆಯಿದೆ.


ರಂ 64
ಧ 63
ರಾ 62
ಧ 61
ಶ್ರೀ 60
ಕೇ 59
ಜ 58
ಮುಂ 57
ಪಂ 56
ಟ 53 52 ಕಂ 55 ಕಾ 54
ತ್ಯಂ 51
ಜಾ 50
ಹಿ ದ್ರೋ ರ ಸು ಭಂ ನಾ ಜ 33 ಕಂ 48 ಲ ಪಾ ಕ ತೋ ನಂ ಜ ಭಂ
2 ಸಾ ತ 31
3 ಸು ಕಾಂ 30
4 ರ ರ 29
5 ಹ ನ 28
6 ರಂ ನಂ 27
7 ದ್ವೈ ಸ 26
8 ತ್ಯ ಶಂ 25
9 ಧ್ವಂ ಧ್ವಾ 24
10 ಸಿ ರ 23
11 ಬಾ ಮಾ 22
12 ಣ ಸ 21
13 ಮ ನ 20
14 ದಾ ನ 19
15 ಪ ಸಾ 18
16 ಹಂ 17

ಬಂಧ ೧೪

ಇಲ್ಲಿಯ ೨ನೆಯ ಶ್ಲೋಕದ ವಿನ್ಯಾಸವು ಹೀಗಾಗುತ್ತದೆ :

ಅಕ್ಷರ ಕ್ರಮಸಂಖ್ಯೆ	1	2	3	4	5	6	7	8
೧ನೆಯ ಪಾದ	A	–	–	–	–	–	–	–
೨ನೆಯ ಪಾದ	–	–	–	–	–	–	–	A
೩ನೆಯ ಪಾದ	A	–	–	C	–	–	C	–
೪ನೆಯ ಪಾದ	–	–	–	–	–	–	–	–

ಚಕ್ರಬಂಧಭೇದಗಳು–೧ : ದ್ವಿಶೃಂಗಾಟಕಚಕ್ರ

ಇದರಲ್ಲಿ ದ್ವಿಶೃಂಗಾಟಕ, ವಿವಿಡಿತ, ದ್ವಿಚತುಷ್ಕ, ಚತುರರ, ಷೋಡಶದಳ, ಗರುಡಗತಿ ಇತ್ಯಾದಿ ಪ್ರಭೇದಗಳಿವೆ. ಕೆಲವು ಅರರಹಿತ; ಕೆಲವು ಅರಸಹಿತ. 'ಸರಸ್ವತೀಕಂಠಾಭರಣ'ದಲ್ಲಿ ಇದರ ಉಲ್ಲೇಖವಿದೆ. ಅಲ್ಲಿರುವ ಇದರ ಲಕ್ಷ್ಯಪದ್ಯ ಇದು :

> ಕರಾಸಂಜವಶೇಶಂ ಖಗೌರವಸ್ಯ ಕಲಾರಸವ್ ।
> ಸಂಧಾಯ ವಲಯಾಂ ಶಂಕಾಮಗೌರೀಂ ಮೇ ವನಾತ್ಮಕ ॥ (೨–೩೧೩)

ಇದರ ವಿನ್ಯಾಸಕ್ರಮವನ್ನು ಅದರಲ್ಲಿ ಹೀಗೆ ನಿರೂಪಿಸಿದೆ :

> ಶೃಂಗಾದ್ಗ್ರಂಥಿಂ ಪುನಃಶೃಂಗಂ ಗ್ರಂಥಿಂ ಶೃಂಗಂ ವ್ರಜೇದಿತಿ ।
> ದ್ವಿಶೃಂಗಾಟಕಬಂಧೇಽಸ್ಮಿನ್ನೇಮಿಃ ಶೇಷಾಕ್ಷರೈರ್ಭವೇತ್ ॥

'ಪಾದುಕಾಸಹಸ್ರ'ದ 'ಚಿತ್ರಪದ್ಧತಿ'ಯಲ್ಲಿ

> ಪ್ರಕ್ರಾಂತಾಂತಂ ಲಿಖೇತ್ ವರ್ಣಾನ್ ಕ್ರಮಾದೇಕತ್ರಮಂಡಲೇ ।
> ಅನ್ಯತ್ರೈಕಾಂತರಂ ದ್ವ್ಯಾಚೇತ್ ದ್ವಿಶೃಂಗಾಟಕ ಉಚ್ಯತೇ ॥

ಎಂದು ಲಕ್ಷಣಿಸಿದೆ. ಇದರ ರಚನಾಕ್ರಮ ಕೊಂಚ ಭಿನ್ನವಾಗಿರುವಂತೆ ತೋರುತ್ತದೆ.



ಬಂಧ ೧೫

ಚಿತ್ರದಲ್ಲಿ ತೋರಿಸಿರುವಂತೆ ಒಂದು ವೃತ್ತದ ಒಳಗೆ ೨ ತ್ರಿಭುಜಗಳ ಒಂದು ಷಟ್‌ಶೃಂಗವನ್ನು ಅಳವಡಿಸಬೇಕು. ಅದರ ಮೇಲಿನ ಶೃಂಗದಿಂದ ಪ್ರಾರಂಭಿಸಿ ಚಕ್ರೀಯ ಕ್ರಮದಲ್ಲಿ ಮುಂದಿನ 'ಗ್ರಂಥಿ', ಅನಂತರ ಅದರ ಮುಂದಿನ 'ಶೃಂಗ'–ಈ ರೀತಿ ಸಾಗಬೇಕು. ಒಂದು ಸುತ್ತು ಆದ ನಂತರ ಉಳಿದ ಅಕ್ಷರಗಳನ್ನು 'ನೇಮಿ'ಯಲ್ಲಿ ಅಳವಡಿಸಬೇಕು. ಹೀಗೆ ಮಾಡುವಾಗ ೧ ಮತ್ತು ೨ನೆಯ 'ಶೃಂಗ'ಗಳ ಅಕ್ಷರಗಳು ಮಾತ್ರ ೩–೩ ಬಾರಿ ಪುನರಾವರ್ತಿತವಾಗುತ್ತವೆ. ಉಳಿದ ಶೃಂಗಾಕ್ಷರಗಳು ಎರಡೆರಡು ಬಾರಿ ಪುನರಾವರ್ತಿತವಾಗುತ್ತವೆ.

ಬಂಧದಲ್ಲಿ ನೇಮಿಯೊಳಗೆ ತೋರಿಸಿರುವ ಶೃಂಗಸ್ಥವಾದ ಅಕ್ಷರಗಳನ್ನು (ಕ, ಸಂ, ವ, ಶಂ, ಗೌ, ವ) ತ್ರಿಭುಜಗಳಲ್ಲಿ ೧, ೩, ೫, ೭, ೯, ೧೧ ಎಂಬ ಅಂಕಿಗಳೆಡೆಯೇ ತೋರಿಸಲೂಬಹುದು. 'ರಾಜಶೇಖರಸ್ಯ' ಎಂಬ ನಾಮಾಂಕವೂ ಇಲ್ಲಿ ಗರ್ಭಿತವಾಗಿದೆ.

ಈ ಬಂಧದ ಅಕ್ಷರವಿನ್ಯಾಸ :

ಅಕ್ಷರ ಕ್ರಮಸಂಖ್ಯೆ	1	2	3	4	5	6	7	8
೧ನೆಯ ಪಾದ	A	–	B	–	C	–	D	–
೨ನೆಯ ಪಾದ	E	–	F	–	A	–	–	B
೩ನೆಯ ಪಾದ	B	–	–	C	–	–	D	–
೪ನೆಯ ಪಾದ	–	E	–	–	F	–	–	A

ವಿವಿಡಿತಚಕ್ರ

'ಸರಸ್ವತೀಕಂಠಾಭರಣ'ದಲ್ಲಿ ಇದರ ಉಲ್ಲೇಖವಿದೆ. ಅಲ್ಲಿರುವ ಇದರ ಲಕ್ಷ್ಯಪದ್ಯ :

ಸಾ ಸತೀ ಜಯತಾದತ್ರ। ಸರಂತೀ ಯಮಿತಾತ್ರ ಸಾ
ಸಾರಂ ಪರಂ ಸ ಚ ಜಯೀ। ತಮಿತಾ ಸ್ಯಂದನೇನ ಸಾ ॥ ೨–೩೧೫ ॥

ಇದರ ವಿನ್ಯಾಸಕ್ರಮವನ್ನು ಅಲ್ಲಿಯೇ (ಹಾಗೂ 'ಚಿತ್ರಬಂಧಕಾವ್ಯ'ದಲ್ಲಿ) ಹೀಗೆ ನಿರೂಪಿಸಲಾಗಿದೆ :

ಶಿಖರಾದನ್ಯತರಸ್ಮಾತ್ ಪ್ರತಿಪರ್ವಂ ಭ್ರಮತಿ ರೇಖಯಾದ್ಯರ್ಧಮ್ ।
ನೇಮೌ ತದಿತರಮರ್ಧಂ ವಿವಿಡಿತಚಕ್ರಾಭಿಧೇ ಬಂಧೇ ॥



ಬಂಧ ೧೬

ನಕ್ಷತ್ರಾಕೃತಿಯ ಪಂಚಶೃಂಗಿಯೊಂದನ್ನು ರಚಿಸಿ ಅಗ್ರಶೃಂಗದಿಂದ ನಕ್ಷತ್ರರೇಖೆಯನ್ನು ಹಿಡಿದು ಶೃಂಗ ಮತ್ತು ಪರ್ವಸ್ಥಾನಗಳಲ್ಲಿ ಪೂರ್ವಾರ್ಧದ ಅಕ್ಷರಗಳನ್ನು ವರಸೆಯಾಗಿ ಅಳವಡಿಸುತ್ತ ಸಾಗಿದರೆ, ಪುನಃ ಅಗ್ರಶೃಂಗಕ್ಕೆ ಬಂದು ಮುಟ್ಟುತ್ತೇವೆ. ಬಳಿಕ ನೇಮಿಯಲ್ಲಿ ಉತ್ತರಾರ್ಧದ ಅಕ್ಷರಗಳು ವರಸೆಯಾಗಿ ಚಕ್ರೀಯ ಕ್ರಮದಲ್ಲಿ ಅಳವಡುತ್ತವೆ. ಅಗ್ರಶೃಂಗದ ಅಕ್ಷರ ನಾಲ್ಕು ಸಾರಿ ಆವೃತ್ತಿಗೊಳ್ಳುತ್ತದೆ.

ಬಂಧಕ್ಕೆ ಹೊಂದುವ ವರ್ಣ ವಿನ್ಯಾಸ :

ಅಕ್ಷರ ಕ್ರಮಸಂಖ್ಯೆ	1	2	3	4	5	6	7	8
೧ನೆಯ ಪಾದ	A	B	C	D	E	F	G	H
೨ನೆಯ ಪಾದ	B	I	C	E	J	F	H	A
೩ನೆಯ ಪಾದ	A	–	–	I	–	–	D	–
೪ನೆಯ ಪಾದ	–	J	–	–	G	–	–	A

ದ್ವಿಚತುಷ್ಕ ಚಕ್ರ

'ಸರಸ್ವತೀಕಂಠಾಭರಣ'ದಲ್ಲಿ ಇದರ ಉಲ್ಲೇಖವಿದೆ. ಅಲ್ಲಿರುವ ಇದರ ಲಕ್ಷ್ಯಪದ್ಯ :

ಜಯ ದೇವನರೇಂದ್ರಾದೇ ಲಂಬೋದರ ವಿನಾಯಕ
ಜಗದೇಧನ ಚಂದ್ರಾಭಾಲಂಛಿ ದನ್ತ ವಿಭಾಯತೇ ॥ ೨-೩೧೧ ॥

ಇದರ ವಿನ್ಯಾಸಕ್ರಮವನ್ನು ಅಲ್ಲಿಯೇ ಹೀಗೆ ನಿರೂಪಿಸಿದೆ :

ಇಹ ಶಿಖರಸಂಧಿಮಾಲಾಂ ಬಿಭೃಯಾದರ್ಧಂ ಸಮಾಶ್ರಿತೈರ್ವರ್ಣೈಃ ।
ದ್ವಿಚತುಷ್ಕಚಕ್ರಬಂಧೇ ನೇಮಿವಿಧೌ ಚಾಪರಂ ಭ್ರಮಯೇತ್ ॥

ಚಿತ್ರದಲ್ಲಿ ತೋರಿಸಿರುವಂತೆ ವೃತ್ತದೊಳಗೆ ೨ ಚತುಷ್ಕಗಳಿಂದಾದ ಅಷ್ಟಶೃಂಗಿಯೊಂದನ್ನು ಅಳವಡಿಸಿ ಅದರಲ್ಲಿ ಶಿಖರ–ಸಂಧಿ, ಶಿಖರ–ಸಂಧಿ ಈ ಕ್ರಮದಲ್ಲಿ ಪೂರ್ವಾರ್ಧದ ಅಕ್ಷರಗಳನ್ನು ಹೊಂದಿಸಬೇಕು, ಉಳಿದರ್ಧದ ಅಕ್ಷರಗಳನ್ನು ಸುತ್ತಣ ನೇಮಿಯಲ್ಲಿ ಹೊಂದಿಸಬೇಕು. ನೇಮಿಯಲ್ಲಿ ತೋರಿಸಿರುವಂತಲ್ಲದೆ, ಶಿಖರಸ್ಥಾನದ ಅಕ್ಷರಗಳನ್ನು (ಜ, ದೇ, ನ, ದ್ರಾ, ಲಂ, ದ, ವಿ, ಯ) ಚತುಷ್ಕಗಳ ಒಳಗೆ ೧, ೩, ೫, ೭, ೯, ೧೧, ೧೩, ೧೫ ಎಂಬ ಅಂಕಿಗಳೆಡೆಯೇ ತೋರಿಸಲೂಬಹುದು.

'ಪಾದುಕಾಸಹಸ್ರ'ದ 'ಚಿತ್ರಪದ್ಧತಿ' ಪ್ರಕರಣದಲ್ಲಿ ಒಂದು ಲಕ್ಷ್ಯಪದ್ಯದೊಂದಿಗೆ, ಅಡಿಟಿಪ್ಪಣಿಯಲ್ಲಿ

ಬಹಿರಂತರ್ಮಂಡಲಸ್ಥಂ ಅಷ್ಟಕೋಷ್ಠವಿಹಾರಿಯತ್ ।
ಕೋಣಾಷ್ಟಕಯುತಂ ತದ್ವತ್ ದ್ವಿಚತುಷ್ಕಂ ಚಕ್ರಮುಚ್ಯತೇ ॥

ತತ್ರಾಷ್ಟಯುಗ್ಮಾಕ್ಷರಶ್ಲಿಷ್ಟಾ ಯದಿ ಗೋಮೂತ್ರಿಕಾ ಭವೇತ್ ।
ಅನುಲೋಮ್ಯೇನ ರಚಿತಾ ದುಷ್ಕರೇಷ್ವಿಯಮುಚ್ಯತೇ ॥

ಎಂಬುದಾಗಿ ಲಕ್ಷಣವನ್ನು ಗುರುತಿಸಿದೆ (ಪು. ೪೧೪).

ಇದರ ವರ್ಣವಿನ್ಯಾಸ ಹೀಗಿರುತ್ತದೆ :

ಅಕ್ಷರ ಕ್ರಮಸಂಖ್ಯೆ	1	2	3	4	5	6	7	8
೧ನೆಯ ಪಾದ	A	–	B	–	C	–	D	–
೨ನೆಯ ಪಾದ	E	–	F	–	G	–	H	–
೩ನೆಯ ಪಾದ	A	–	B	–	C	–	D	–
೪ನೆಯ ಪಾದ	E	–	F	–	G	–	H	–



ಬಂಧ ೧೭

ಚತುರರಚಕ್ರ

ಈವರೆಗೆ ನೋಡಿದವು ಅರರಹಿತ ಚಕ್ರಗಳು. ಇನ್ನು ಅರಸಹಿತ ಚಕ್ರಗಳು. ಇನ್ನು ಅರಸಹಿತ ಚಕ್ರಗಳ ಬಗ್ಗೆ ನೋಡಬಹುದು. ಇವುಗಳಲ್ಲಿ ಚತುರರ ಚಕ್ರ, ಷಡರಚಕ್ರ ಮತ್ತು ಅಷ್ಟಾರಚಕ್ರ ಎಂಬ ಮೂರು ಬಗೆಗಳು ಮಾತ್ರ ಕಂಡುಬರುತ್ತವೆ. ಮೊದಲಿಗೆ ಚತುರರ ಚಕ್ರದ ಬಗ್ಗೆ ನೋಡಬಹುದು :

ಚತುರರ ಚಕ್ರಬಂಧವನ್ನು ಶಕಟಚಕ್ರ ಇಲ್ಲವೆ ಚತುರಸ್ರಚಕ್ರ ಎಂದಿರುವುದೂ ಉಂಟು. ಸಂಸ್ಕೃತ ತೆಲುಗುಗಳಲ್ಲಿ ಕೊಂಚ ಪ್ರಚುರವಾದ್ದು.

'ಅಲಂಕಾರಚಿಂತಾಮಣಿ'ಯಲ್ಲಿರುವ 'ಗೂಢಸ್ವೇಷ್ಟಪಾದಚಕ್ರ'ವು ಇಂತಹ ಚತುರರಬಂಧಕ್ಕೆ ಉದಾಹರಣೆಯಾಗಿದೆ. ಅಲ್ಲಿರುವ ಲಕ್ಷ್ಯಪದ್ಯ ಇದು :

> ವರ್ಣಭಾರ್‍ಯಾತಿನನಾಢ್ಯವವನಾಢ್ಯನನ್ತ ಸದಾರವ ।
> ವರದಾತಿನತಾರ್‍ಯಾವ ವರ್‍ಯಾತಾನ್ತಸಭಾರ್ಣವ ॥ (೨–೧೬೬)

ಅನ್ಯತ್ರ ಇದರ ಉಕ್ತಲಕ್ಷಣ :

> ಆದ್ಯಂತಾಃ ಸರ್ವಪಾದೇಷು ಸಮಾಃ ಪಾದಾಂತಿ ತಮತ್ರಯಂ ।
> ಅನ್ಯತ ಪ್ರಾತಿಲೋಮ್ಯಾಚ್ಚೇಚ್ಚಕ್ರಂ ಸ್ಯಾಚ್ಚತುರಸ್ರಕಂ ॥ (ಲಕ್ಷ್ಮೀಸಹಸ್ರಂ)

ಇದರಲ್ಲಿ ಇಷ್ಟಪಾದವು ಉಳಿದ ಮೂರರಲ್ಲಿ ಅಡಕವಾಗಿದೆ, ಅಂತೆಯೇ ಇಡೀ ಬಂಧವು ಚತುರರ ಚಕ್ರಬಂಧದಲ್ಲಿ ಅಳವಡುತ್ತದೆ. ಈ ಶ್ಲೋಕವನ್ನು ನಾಲ್ಕು ಪಾದಗಳಾಗಿ ತೆಗೆದುಕೊಳ್ಳಬೇಕು. ಪ್ರತಿಪಾದದ ಮೊದಲ ಅಕ್ಷರವನ್ನು ಕೇಂದ್ರದಲ್ಲಿ (ನಾಭಿಯಲ್ಲಿ) ಅಳವಡಿಸಬೇಕು. ಕೇಂದ್ರದಿಂದ ಅರದ ಮೂಲಕ ನೇಮಿಯ ಕಡೆಗೆ ಹೊರಟು ಸಂಧಿಸ್ಥಾನವನ್ನು ತಲಪಿ, ಬಲಕ್ಕೆ ತಿರುಗಿ ನೇಮಿಯ ಮೂಲಕವಾಗಿ ಮುಂದಿನ ಸ್ಥಾನವನ್ನು ತಲಪಿ, ಮತ್ತೆ ಅರದ ಮೂಲಕ ಕೇಂದ್ರವನ್ನು ಸೇರಬೇಕು. ಅನಂತರ ಮತ್ತೆ ಕೇಂದ್ರದಿಂದ ಎರಡನೆಯ ಅರದ ಮೂಲಕ ಸಾಗಬೇಕು. ಇದೇ ರೀತಿ ನಾಲ್ಕು ಅರಗಳ ಮೂಲಕವೂ. ಇದನ್ನು ಹೀಗೆ ಸಹ ಹೇಳಬಹುದು : ಮೊದಲ ಪಾದದ ಕೊನೆಯ ೩ ಅಕ್ಷರಗಳೂ ಎರಡನೆಯ ಪಾದದ ಮೊದಲ ೩ ಅಕ್ಷರಗಳೂ ಅನುಲೋಮ–ವಿಲೋಮಗತಿಯಲ್ಲಿರುತ್ತವೆ; ಉಳಿದೆರಡು ಪಾದಗಳಲ್ಲಿಯೂ ಹೀಗೆಯೇ. ನಾಲ್ಕು ಪಾದಗಳಲ್ಲಿಯೂ ಒಂದೇ ಸಮಾನಾಕ್ಷರವಿರುತ್ತದೆ. ಅಲ್ಲಿಂದ ಆರಂಭವಾಗಿ, ಅಲ್ಲಿಯೇ ಬಂಧ ಮುಗಿಯುತ್ತದೆ.



ಬಂಧ ೧೮

ಅಕ್ಷರ ಕ್ರಮಸಂಖ್ಯೆ	1	2	3	4	5	6	7	8
೧ನೆಯ ಪಾದ	A	B	C	–	–	D	E	A
೨ನೆಯ ಪಾದ	A	E	D	–	–	F	G	A
೩ನೆಯ ಪಾದ	A	G	F	–	–	H	I	A
೪ನೆಯ ಪಾದ	A	I	H	–	–	C	B	A

'ಕಾವ್ಯಾವಲೋಕನ'ದಲ್ಲಿ ಒಂದು ಚಕ್ರಬಂಧದ ಶ್ಲೋಕವಿದೆ. ಅದರಲ್ಲಿ ವಿನ್ಯಾಸಗೊಂಡಿರುವ ಆವೃತ್ತಿಯ ಅಕ್ಷರಗಳನ್ನು ಗಮನಿಸಿದಾಗ, ಅದು ಚತುರರ ಚಕ್ರಬಂಧವೇ ಆಗಿರಬೇಕೆಂದು ತಿಳಿಯುತ್ತದೆ. ಆ ಬಂಧ, ಶ್ಲೋಕ:



ಬಂಧ ೧೯



ಬಂಧ ೨೦

ತನ್ನ ಸಂತತಿ ಮುನ್ನೀತಂ । ತನ್ನೀತಂ ಮುನಿಸನ್ನುತಂ ।
ತನ್ನನುರ್ಕಿನೊಳಿನ್ನಾತಂ । ತನ್ನೊಳಿಂದಿನಿಸನ್ನತಂ ॥ (ಪ. ೫೭೪)

ಇದು ಹಿಂದೆ ನಾವು ಗಮನಿಸಿದ ಅಕ್ಷರವಿನ್ಯಾಸಕ್ಕೆ ಅಳವಡುವುದಿಲ್ಲವೆನ್ನುವುದು ಬಂಧವನ್ನು ರೂಪಿಸಿದಾಗ ತಿಳಿಯುತ್ತದೆ. ಇದನ್ನು ಇರುವಂತೆಯೆ ಅಳವಡಿಸಬೇಕಾದಲ್ಲಿ ಬಂಧ ೧೮ (ನೋಡಿ : ಪುಟ ೪೩೩)ರಲ್ಲಿ ತೋರಿಸಿರುವಂತೆ ಅಳವಡಿಸಬೇಕಾಗುತ್ತದೆ. ನಾಭಿ-ಅರ-ನೇಮಿಸಂಧಿ-ನೇಮಿ ಈ ಕ್ರಮದ ವಿನ್ಯಾಸ ಅಷ್ಟಾರ ಚಕ್ರಗಳಲ್ಲಿ ಕೂಡ ಕಾಣಿಸುವುದು ಈ ವಿಧಾನಕ್ಕೆ ಪೋಷಕವಾಗಿದೆ. ಇಂತಹ ವಿನ್ಯಾಸವು ಸರಿಯಿದ್ದಲ್ಲಿ, ಪ್ರತಿಪದ್ಯದ ಪ್ರಥಮಾಕ್ಷರ ಒಂದೇ ಇರುವ ೪ ಪಾದಗಳ ಯಾವ ಶ್ಲೋಕವನ್ನಾದರೂ ಇದಕ್ಕೆ ಹೊಂದಿಸಬಹುದು. (ಆದರಿಂದಾಗಿ ಮೂಲ ಸೂತ್ರದ ಕೋಷ್ಟಕವನ್ನು ಕೊಟ್ಟಿಲ್ಲ.)

ವಾಸ್ತವವಾಗಿ ನಾಗವರ್ಮನ ಪದ್ಯರಚನೆ ಮೂಲದಲ್ಲಿ ಚತುರರ ಚಕ್ರಬಂಧದ ಶಕಟಚಕ್ರ ಅಥವಾ ಕುಲಾಲಚಕ್ರಕ್ಕೆ ಅನುಗುಣವಾಗಿ ಇದ್ದಿರಬಹುದೋ ಏನೋ? ಪದ್ಯ ಈಗಿನ ಮಟ್ಟಿಗೆ ಅರ್ಥೈಸಲು ಕೊಂಚ ತೊಡಕಾಗಿಯೇ ಇದೆಯೆನ್ನುವುದರಿಂದ ಹೀಗೆ ಭಾವಿಸಲು ಅವಕಾಶವುಂಟು (ತೊಡಕು ಇರುವುದು ಬಹುಶಃ ಕೊನೆಯ ಪಾದದಲ್ಲಿ). ಶಕಟ ಅಥವಾ ಕುಲಾಲಚಕ್ರದಂತಹ ಬಂಧದಲ್ಲಿ ೧-೨, ೨-೩, ೩-೪ನೆಯ ಪಾದಗಳಲ್ಲಿ ಕ್ರಮವಾಗಿ ಕೊನೆಯ ಮತ್ತು ಮೊದಲ ೩-೩ ಅಕ್ಷರಗಳು ಅನುಲೋಮ-ವಿಲೋಮ ಕ್ರಮಗಳಲ್ಲಿ ಒಂದೇ ಆಗಿರುವುದು ಅವಶ್ಯ. ಅಲ್ಲದೆ ೧-೪ನೆಯ ಪಾದಗಳಲ್ಲಿ ಕ್ರಮವಾಗಿ ಮೊದಲನೆಯ ಹಾಗೂ ಕೊನೆಯ ೩-೩ ಅಕ್ಷರಗಳು ಅನುಲೋಮ-ವಿಲೋಮಕ್ರಮಗಳಲ್ಲಿ ಒಂದೇ ಆಗಿರುತ್ತವೆ. ಈ ಕೆಳಗೆ ರೂಪಿಸಿರುವ ೨ ಬಂಧಗಳಲ್ಲಿ, ೧೯ನೆಯದರಲ್ಲಿ ಅರಗಳಲ್ಲಿ ೨-೨ ಅಕ್ಷರಗಳೂ ೨೦ನೆಯದರಲ್ಲಿ ೩-೩ ಅಕ್ಷರಗಳೂ ಎಡೆಪಡೆದಿವೆ; ಹಾಗೆಯೇ ನೇಮಿಗಳಲ್ಲಿ ಕ್ರಮವಾಗಿ ೨೦ ಹಾಗೂ ೧೬ ಅಕ್ಷರಗಳು ಎಡೆಪಡೆದಿವೆ. ಎರಡರಲ್ಲಿಯೂ ನಾಭಿಯ ಅಕ್ಷರಕ್ಕೆ ೪ ಆವೃತ್ತಿಗಳು; ನಾಭಿಯ ಅಕ್ಷರಕ್ಕೆ ಹೊರತು ಯಾವುದೇ ಅಕ್ಷರಕ್ಕೆ ಆವೃತ್ತಿಯಿಲ್ಲ.

ಚಕ್ರಬಂಧಗಳು-೨ : ಷಡರಚಕ್ರ

ಬಂಧಚಿತ್ರಗಳಲ್ಲಿ ಚಕ್ರಬಂಧಗಳು ಪ್ರಸಿದ್ಧವಾದವು. ಅವುಗಳಲ್ಲಿಯೂ ಷಡರಚಕ್ರಬಂಧ ಹೆಚ್ಚು ಪ್ರಸಿದ್ಧವಾದುದು. ಷಡರ ಚಕ್ರಬಂಧವನ್ನು 'ಸರಸ್ವತೀಕಂಠಾಭರಣ'ದಲ್ಲಿ (೨-೧೧೬)

ಪುರಃ ಪುರೋ ಲಿಖೇತ್ಪಾದಾನತ್ರ ತ್ರೀನ್ ಷಡರೀಕೃತಾನ್ ।
ತುರ್ಯಂ ತು ಭ್ರಮಯೇನ್ನೇಮೌ ನಾಮಾಂಕಶ್ಚಕ್ರಸಂವಿಧಿಃ ॥

ಎಂಬುದಾಗಿಯೂ (ಮೊದಲ ಮೂರು ಪಾದಗಳನ್ನು ೬ ಅರಗಳಲ್ಲಿ ಹೊಂದಿಸಿ, ಕೊನೆಯದನ್ನು ನೇಮಿಯಲ್ಲಿ ಸುತ್ತಿಸಬೇಕು; ಹೀಗೆ ನಾಮಾಂಕನವುಳ್ಳ ಚಕ್ರ ರಚಿತವಾಗುತ್ತದೆ) 'ಪಾದುಕಾಸಹಸ್ರ'ದ 'ಚಿತ್ರಪದ್ಧತಿ'ಯಲ್ಲಿ (ಪ. ೩೧)

ಕೋಣಷಟ್ಕಸಮಾಕ್ರಾಂತಮಂಡಲೀ ನವಮಾತ್ಮಕೇ
ಚಕ್ರನೇಮೀತರಾಯಾಂ ತು ಮಂಡಲ್ಯಾಂ ಯತ್ರಕುತ್ರಚಿತ್
ಮಂಡಲೀಗತಿರಿತ್ಯೇವ ಯದ್ವಿವಕ್ಷಿತಮುಚ್ಯತೇ
ತುರ್ಯಪಾದಶ್ಚ ನೇಮಿಸ್ಥಃ ತನ್ಮಹಾಚಕ್ರಮುಚ್ಯತೇ ॥

ಎಂಬುದಾಗಿಯೂ (೬ ಅರಗಳು, ೯ ಸುತ್ತುಗಳಲ್ಲಿ ಮೊದಲ ಮೂರು ಪಾದಗಳೂ ೪ನೆಯದು ಚಕ್ರದ ಪಟ್ಟಿಯಲ್ಲಿಯೂ ಬರುವ ಹಾಗೆ ಮಂಡಲೀಗತಿಯಲ್ಲಿ ಅಕ್ಷರಗಳು ಅಳವಡುತ್ತವೆ) ನಿರೂಪಿಸಿದೆ. ತೆಲುಗಿನ 'ಕಾವ್ಯಾಲಂಕಾರ ಚೂಡಾಮಣಿ' (೬-೬೬) 'ಲಕ್ಷಣಸಾರಸಂಗ್ರಹಮು' (೩-೧೪೧, ೧೪೨), 'ನರಸಭೂಪಾಲೀಯಮು' (೪-೮೬) ಮತ್ತು 'ಅಪ್ಪಕವೀಯಮು' (೪-೫೮೫) ಇವುಗಳಲ್ಲಿ ಈ ಬಂಧದ ಲಕ್ಷಣವನ್ನು ಹೇಳಿದೆ.

ಯಾವುದಾದರೊಂದು ಅರ-ನೇಮಿ ಸಂಧಿಸ್ಥಾನವನ್ನು ಮೊದಲು ೧ನೆಯ ಅರದ ೧ನೆಯ ಸ್ಥಾನವೆಂದು ಗ್ರಹಿಸುವುದು. ಅಲ್ಲಿ ಮೊದಲ ಪಾದದ ಮೊದಲ ಅಕ್ಷರವನ್ನು ಬರೆಯಬೇಕು. ಅನಂತರದ ೮ ಅಕ್ಷರಗಳನ್ನು

ಅನುಕ್ರಮವಾಗಿ ಅದೇ ಅರದಲ್ಲಿ ಕೆಳಮುಖವಾಗಿ ಸಾಗಿ ಒಂದೊಂದಾಗಿ ಬರೆಯುವುದು. ೧ನೆಯ ಅಕ್ಷರವನ್ನು ನಾಭಿ ಅಥವಾ ಗರ್ಭ (ಗುಂಭ)ದಲ್ಲಿ ಬರೆದ ಮೇಲೆ, ಮೊದಲನೆಯ ಅರಕ್ಕೆ ಎದುರಾಗಿರುವ ಅರದಲ್ಲಿಯೇ ನೇರವಾಗಿ ಕೆಳಮುಖವಾಗಿ ಮುನ್ನಡೆದು, ಉಳಿದ ಅಕ್ಷರಗಳನ್ನು (೧೧ ರಿಂದ ೧೯) ಹಿಂದಿನಂತೆಯೇ ತುಂಬಬೇಕು. ಇದೇ ರೀತಿ ಮೊದಲನೆಯ ಅರದ ಬಲಪಕ್ಕದ ಅರನೇಮಿ ಸಂಧಿಸ್ಥಾನದಿಂದ ೨ನೆಯ ಪಾದವನ್ನೂ (೨೦ ರಿಂದ ೩೮ನೆಯ ಅಕ್ಷರದವರೆಗೆ), ಅದಕ್ಕೆ ಬಲಪಕ್ಕದ ಅರ-ನೇಮಿ ಸಂಧಿಸ್ಥಾನದಿಂದ ೩ನೆಯ ಪಾದವನ್ನೂ (೩೯ ರಿಂದ ೫೭ನೆಯ ಅಕ್ಷರದವರೆಗೆ) ನಡಸಬೇಕು. ೩ನೆಯ ಪಾದವು ೬ನೆಯ ಅರದ ಅರ-ನೇಮಿ ಸಂಧಿಸ್ಥಾನಕ್ಕೆ ಮುಗಿಯುತ್ತದೆ. ಮತ್ತೆ ಅಲ್ಲಿಂದಲೇ ೪ನೆಯ ಪಾದವು ಆರಂಭವಾಗಿ (೫೮ ರಿಂದ ೭೬ನೆಯ ಅಕ್ಷರದವರೆಗೆ) ನೇಮಿಯುದ್ದಕ್ಕೂ ಹರಡಿಕೊಳ್ಳುತ್ತದೆ; ಹಾಗೂ ಅಲ್ಲಿಗೇ (೫೮ನೆಯ ಅಕ್ಷರಸ್ಥಾನ) ಬಂದು ಮುಗಿಯುತ್ತದೆ. ಇದರಲ್ಲಿ ನಾಭಿಯ ಅಕ್ಷರ ೩ ಬಾರಿಯೂ ಅರ-ನೇಮಿ ಸಂಧಿಸ್ಥಾನಗಳ ಅಕ್ಷರಗಳು ೨–೨ ಬಾರಿಯೂ (೬ನೆಯ ಸಂಧಿಸ್ಥಾನದ ಅಕ್ಷರ ಮಾತ್ರ ೩ ಬಾರಿ) ಆವೃತ್ತಿಗೊಳ್ಳುತ್ತವೆ. ಪದ್ಯದ ೪ನೆಯ ಪಾದದಲ್ಲಿ ಮೊದಲ ೩ ಪಾದಗಳ ಆದ್ಯಂತಾಕ್ಷರಗಳು ಕ್ರಮವಾಗಿ ೪, ೭, ೧೦, ೧೩, ೧೬ ಮತ್ತು ೧೯ನೆಯ ಸ್ಥಾನಗಳಲ್ಲಿ ಆವೃತ್ತಿಗೊಂಡಿದ್ದು, ಬಂಧದಲ್ಲಿ ಇವು ಆರು ಅರಗಳ ಅರ-ನೇಮಿ ಸಂಧಿಸ್ಥಾನಗಳಲ್ಲಿ ಅಳವಟ್ಟಿರುತ್ತವೆ. ೩ನೆಯ ಪಾದದ ಅಂತ್ಯಾಕ್ಷರವೂ ೪ನೆಯ ಪಾದದ ಆದ್ಯಂತಾಕ್ಷರಗಳೂ ಒಂದೇ ಆಗಿರುತ್ತವೆ.

ಷಡರಚಕ್ರಬಂಧದ ಲಕ್ಷಣವನ್ನು ಚಾವಲಿ ರಾಮಸ್ವಾಮಿ ಶಾಸ್ತ್ರಿಗಳು ತಮ್ಮ 'ಕರ್ಣಾಟ ಛಂದೋಲಂಕಾರ ಸಾಹಿತ್ಯ ಲಕ್ಷಣ ಸಂಗ್ರಹವು' ಎಂಬುದರಲ್ಲಿ ಹೀಗೆ ನಿರೂಪಿಸಿದ್ದಾರೆ : ''ಷಡರವಾಗಿ ಚಕ್ರಾಕಾರವಂ ಬರೆದು ಪ್ರತ್ಯರದಲ್ಲಿಯೂ ೯ ಅಕ್ಷರಗಳನ್ನು ಬರೆದು ೩ ಪಾದಗಳಿಗೂ ೧ನೇ ಅಕ್ಷರ ಕರ್ಣಿಕೆಯಲ್ಲಿರುವ ಅಕ್ಷರವೊಂದೇ ಆಗುವಂತೆ ಮಾಡಿ ಮೊದಲಿನಿಂದ ತಮ್ಮ ತಮ್ಮ ನಾಲ್ಕನೇ ಅರಗಳಿಂದ ೩ ಪಾದಗಳ ನಾಲ್ಕನೇ ಅಕ್ಷರಗಳು ಸೇರುವಂತೆ ಕೂಡಿಸಿ ೬–೮ನೇ ಅಕ್ಷರಗಳು ಸರಿಯಾಗುವಂತೆ ೬ ಅರಗಳಲ್ಲಿಯೂ ಎರಡೆರಡು ಬಿಟ್ಟು ಎರಡೆರಡು ಸರಿಹೋಲುವಂತೆ ವಿನ್ಯಾಸಮಾಡಿದ ಪದ್ಯವು.''

ನೇಮಿ ಅಥವಾ ಪಟ್ಟಿಯನ್ನೂ ನಾಭಿ ಅಥವಾ ಗರ್ಭವನ್ನೂ ಬಿಟ್ಟರೆ ಒಟ್ಟು ೮ ಮಂಡಲಗಳು ಒಂದರೊಳಗೊಂದು ವ್ಯವಸ್ಥಿತವಾಗಿ ಹರಡಿಕೊಂಡು, ಅರ್ಧಪಾದಕ್ಕೆ ಒಂದು ರೇಕಿನಂತೆ ಮೂರು ಪಾದಗಳಿಗೆ ೬ ರೇಕುಗಳು ಆ ಮಂಡಲಗಳನ್ನು ಛೇದಿಸುವಂತಿರುತ್ತವೆ, ಇಲ್ಲಿ. ಇಂತಹ ಬಂಧಗಳಲ್ಲಿ ಕವಿಯ ಹಾಗೂ ಕೃತಿಯ ಹೆಸರನ್ನು ಹುದುಗಿಸುವ ಪದ್ಧತಿಯುಂಟು. ಉದಾಹರಣೆಗೆ, 'ಶಿಶುಪಾಲವಧ'ದ ಷಡರಚಕ್ರಬಂಧದಲ್ಲಿ ಮೊದಲನೆಯ ಅರದ ೨ನೆಯ ಅಕ್ಷರದಿಂದ ಪ್ರಾರಂಭಿಸಿ ಪ್ರತಿಯೊಂದೂ ಅರದ ೨ನೆಯ ಅಕ್ಷರವನ್ನು ಕ್ರಮವಾಗಿ ಕೂಡಿಸಿದಾಗ, ''ಮಾಘಕಾವ್ಯಮಿದಂ'' ಎಂಬ ಮಾತೂ, ೫ನೆಯ ಅಕ್ಷರವನ್ನು ಹೀಗೆಯೇ ಕೂಡಿಸಿದಾಗ ''ಶಿಶುಪಾಲವಧಃ'' ಎಂಬ ಮಾತೂ ಹೊರಡುತ್ತದೆ. ಕೆಲವು ಸಲ ಕವಿಯ ಇಲ್ಲವೆ ಕೃತಿಯ ಹೆಸರು ಮಾತ್ರ ಹುದುಗಿರಬಹುದಾಗಿದೆ. ''ಶುಭ್ರತರವಾಚಾ ಬದ್ಧಚಿತಿಚಕ್ರಂ ರಾಜಗುರುಣೇದಂ ಸಾದರಮವಾದಿ'' ಎಂಬಂತಹ (ಭೋಜನ 'ಸರಸ್ವತೀ ಕಂಠಾಭರಣ', ೨–೯೮) ವಿವರವನ್ನು ಇಲ್ಲಿ ನೆನೆಯಬಹುದಾಗಿದೆ. ಇವೇ ಕವಿನಾಮಾಂಕನ ಭಾಗಗಳು.

ಷಡರ ಚಕ್ರಬಂಧಗಳು ಸಂಸ್ಕೃತದಲ್ಲಿ 'ಶಿಶುಪಾಲವಧ', ಧರ್ಮಶರ್ಮಾಭ್ಯುದಯ', 'ಪಾದುಕಾಸಹಸ್ರ' ಮೊದಲಾದ ಕೃತಿಗಳಲ್ಲಿ, ಕನ್ನಡದಲ್ಲಿ 'ಕವಿರಾಜಮಾರ್ಗ', 'ಮದನತಿಲಕ', 'ನಳೋಪಾಖ್ಯಾನ ಚಂಪೂ', 'ಮೈಸೂರ್ ಮೆಯ್ಸಿರಿ' ಈ ಕೆಲವು ಕೃತಿಗಳಲ್ಲಿ ಕಂಡುಬರುತ್ತವೆ. ತೆಲುಗಿನಲ್ಲಿ ಸು. ೪೦ ಜನ ಕವಿಗಳು ಷಡರ ಚಕ್ರಬಂಧಗಳನ್ನು ರಚಿಸಿರುವರೆಂದು ತಿಳಿಯುವುದು. ಸಾಮಾನ್ಯವಾಗಿ ಈ ಬಂಧಕ್ಕೆ ಶಾರ್ದೂಲವಿಕ್ರೀಡಿತವನ್ನು ಬಳಸಲಾಗುತ್ತದೆ; ಆದರೆ ತೆಲುಗು ಕವಿಗಳು ವಿರಳವಾಗಿ ತರಳವೃತ್ತ ಚಂಪಕಮಾಲಾವೃತ್ತಗಳನ್ನೂ ಬಳಸಿರುವುದು ಕಾಣುತ್ತದೆ.

ಮೊದಲು ಮಾದರಿಯಾಗಿ, ಕ್ರಮವಾಗಿ 'ಶಿಶುಪಾಲವಧ' ಮತ್ತು 'ಸರಸ್ವತೀಕಂಠಾಭರಣ'ದ ಎರಡು ಚಕ್ರಬಂಧಕವಿತ್ವವನ್ನು ಉದ್ಧರಿಸಬಹುದು :

ಸತ್ವಂ ಮಾನವಿಶಿಷ್ಟಮಾಜಿರಭಸಾದಾಲಂಬ್ಯ ಭವ್ಯಃ ಪುರೋ
ಲಬ್ಧ್ವಾ ಘುಕ್ಷಯಶುದ್ಧಿರುದ್ಧರತರಶ್ರೀವತ್ಸಭೂಮಿರ್ಮುದಾ
ಮುಕ್ತ್ವಾ ಕಾಮಮುಪಾಸ್ತಭೀಃ ಪರಮೃಗವ್ಯಾಧಃ ಸನಾದಂ ಹರೇ
ರೇಕಾಗ್ರ್ಯೈಃ ಸಮಕಾಲಮಭ್ರಮುದಯೀರೋಪೈಸ್ತದಾ ತಸ್ತರೇ ॥ (೨–೨೯೬)

ಇಲ್ಲಿಯ ಅಕ್ಷರಾನುಕ್ರಮ ಹೇಗೆ ಬಂಧದಲ್ಲಿ ಅಳವಡುವುದೆಂದು ತಿಳಿಯಲು ಬಂಧ ೨೧ ನೋಡಿ.

ಶುದ್ಧಂ ಬದ್ಧಸುರಾಷ್ಟ್ರಸಾರವಿಷಮತ್ವಂ ರುಗ್ಣಯಾತಿಷ್ಠಿರ
ಭ್ರಷ್ಟೋದ್ಧರ್ಮರಜಃಪದಜ್ಞವಿ ಗವಾಕ್ಷೀಣೇನ ಚಂಚದ್ಭ್ರುವಾ
ತಥ್ಯಂ ಚಿಂತಿತಗುಪ್ತಿರಸ್ತವಿಧಿದಿಗ್ಭೇದನ್ನ ಚಕ್ರಂ ಶುಚಾ
ಚಾರೋಽಪ್ರಾಂಶುರದಭ್ರಮುಗ್ರತನು ಮೇ ರಮ್ಯೋ ಭವಾನೀ ರುಚಾ ॥ (೨–೨೯೮)

ಇಲ್ಲಿಯ ಅಕ್ಷರಾನುಕ್ರಮ ಹೇಗೆ ಬಂಧದಲ್ಲಿ ಅಳವಡುವುದೆಂದು ತಿಳಿಯಲು ಬಂಧ ೨೨ ನೋಡಿ. ಅರ–ನೇಮಿ ಸಂಧಿ ಸ್ಥಾನಗಳ ಅಕ್ಷರಗಳನ್ನು ಕೂಡಿಸುವುದರಿಂದ 'ಶುಭ್ರತರವಾಚಾ', ಅರಗಳ ೨ನೆಯ ಅಕ್ಷರಗಳಿಂದ 'ಬದ್ಧಚಿತಿ ಚಕ್ರಂ', ೫ನೆಯ ಅಕ್ಷರಗಳಿಂದ 'ರಾಜಗುರುಣೇದಂ', ೭ನೆಯ ಅಕ್ಷರಗಳಿಂದ 'ಸಾದರಮುವಾದಿ' ಎಂಬ ಮಾತುಗಳು ಹೊರಡುತ್ತವೆ.



ಬಂಧ ೨೧

ನಾಮಾಂಕನವಿರಲಿ ಇಲ್ಲದಿರಲಿ, ಈ ಬಂಧಕ್ಕೆ ಹೊಂದುವ ಪದ್ಯದ ಅಕ್ಷರಾನುಕ್ರಮದ ಮೂಲಸೂತ್ರ ಹೀಗಿರುತ್ತದೆ:

ಅಕ್ಷರ ಕ್ರಮಸಂಖ್ಯೆ	1	2	3	4	5	6	7	8	9	10	11	12	13	14	15	16	17	18	19
೧ನೆಯ ಪಾದ	A	–	–	–	–	–	–	–	–	B	–	–	–	–	–	–	–	–	C
೨ನೆಯ ಪಾದ	D	–	–	–	–	–	–	–	–	B	–	–	–	–	–	–	–	–	E
೩ನೆಯ ಪಾದ	F	–	–	–	–	–	–	–	–	B	–	–	–	–	–	–	–	–	G
೪ನೆಯ ಪಾದ	G	–	–	A	–	–	D	–	–	F	–	–	C	–	–	E	–	–	G



ಬಂಧ ೨೨

ಕನ್ನಡದಲ್ಲಿ ಷಡರಚಕ್ರಬಂಧಗಳು

೧. 'ಕವಿರಾಜಮಾರ್ಗ'

ಮೊದಲ ಲಕ್ಷ್ಯ ಕಾಣುವುದು 'ಕವಿರಾಜಮಾರ್ಗ'ದಲ್ಲಿ (೨–೧೪೦). ಪೂರ್ವೋಕ್ತ ಸಿದ್ಧಸೂತ್ರಕ್ಕೆ ಹೊಂದಿದರೂ, ಕವಿನಾಮಾಂಕನವಿಲ್ಲದೆ ಇರುವ ರಚನೆ ಇಲ್ಲಿಯದು. ಈ ಪದ್ಯದಲ್ಲಿ ಕವಿಯ ಹೆಸರು ಹುದುಗಿದೆ ಎಂಬುದಾಗಿ ಕೆಲವರು ಭಾವಿಸಿ, ಅದನ್ನು ಗುರುತಿಸುವ ಪ್ರಯತ್ನವನ್ನು ಮಾಡಿದ್ದಾರೆ. ಈ ಪ್ರಯತ್ನಗಳಲ್ಲಿ ಎಲ್ಲವನ್ನೂ ಸವಿವರವಾಗಿ ಇಲ್ಲಿ ವಿವರಿಸುವುದು ಶಕ್ಯವಿಲ್ಲ. 'ಕವಿರಾಜಮಾರ್ಗ'ದ ಮದರಾಸು ಪರಿಷ್ಕರಣದಲ್ಲಿ, ೭ನೆಯ ಪರಿಶಿಷ್ಟದಲ್ಲಿ ಬಂಧದ ಉದ್ಧಾರಕ್ರಮವನ್ನು ಬರೆದು, ''ಈ ಚಕ್ರಬಂಧದಲ್ಲಿ ಅರಗಳ ಒಂದು ಗೊತ್ತಾದ ಸ್ಥಾನದ ಅಕ್ಷರಗಳ ಸಂಯೋಜನದಿಂದ ಕವಿಕಾವ್ಯ ವಿಚಾರವು ತಿಳಿಯಬೇಕು....ಆದರೆ ಈ ಬಂಧದಲ್ಲಿ ಅಂತಹ ವಿಷಯವು ತಿಳಿಯುವಂತಿಲ್ಲ'' ಎಂಬುದಾಗಿ ಟಿಪ್ಪಣಿ ಬರೆದ ಮೇಲೆ ಈ ವಿಷಯ ವಿದ್ವಾಂಸರ ಕುತೂಹಲವನ್ನು ಕೆರಳಿಸಿದಂತೆ ತೋರುತ್ತದೆ. ಮುಳಿಯ ತಿಮ್ಮಪ್ಪಯ್ಯನವರು ತಮ್ಮ 'ಕವಿರಾಜಮಾರ್ಗ ವಿವೇಕ' ಎಂಬ ಗ್ರಂಥದಲ್ಲಿ (೧೯೪೮) ವಿಸ್ತಾರವಾಗಿ ಈ ವಿಷಯವನ್ನು ವಿವೇಚಿಸಿ, ಇಲ್ಲಿ ಕವಿಯ ಹೆಸರು 'ಜಯಾಬ್ಧಿ' ಎಂಬುದು ತಕ್ಕ ವಿಶೇಷಣಗಳೊಂದಿಗೆ ಹುದುಗಿದೆಯೆಂದು ವಿಚಾರಮಾಡಿದ್ದಾರೆ; ಅದರ ಸಮರ್ಥನೆಗಾಗಿ ಶ್ರಮಿಸಿದ್ದಾರೆ. ಅನಂತರದಲ್ಲಿ ರಂ.ಶ್ರೀ.ಮುಗಳಿ, ಕೆ. ವೆಂಕಟರಾಯಾಚಾರ್ಯ, ಎಂ.ವಿ. ಸೀತಾರಾಮಯ್ಯ, ಎಂ.ಎಂ. ಕಲಬುರ್ಗಿ, ಕೆ. ಕೃಷ್ಣಮೂರ್ತಿ, ಜಿ. ವೆಂಕಟಸುಬ್ಬಯ್ಯ, ಭೀಮರಾವ್ ಚಿಟಗುಪ್ಪಿ ಈ ಮುಂತಾದವರ ಚರ್ಚೆಗಳು ನಡೆದಿವೆ. ಈ ಚರ್ಚೆಗಳಲ್ಲಿ ಕೆ. ವೆಂಕಟರಾಯಾಚಾರ್ಯರು ಮುಳಿಯರ ಗ್ರಹಿಕೆಯನ್ನು ಮುಖ್ಯಾಂಶದಲ್ಲಿ ಪೂರ್ತಿಯಾಗಿ ಸಮ್ಮತಿಸಿದ್ದಾರೆ; ಉಳಿದವರು ಅದರಲ್ಲಿ ದೌರ್ಬಲ್ಯಗಳನ್ನು ಗುರುತಿಸಿ, ಅನಿಶ್ಚಯತೆಯ ನೆಲೆಯಲ್ಲಿ ನಿಂತಿದ್ದಾರೆ. ಈ ಅನಿಶ್ಚಯತೆಯಲ್ಲಿ ಆ ಗ್ರಹಿಕೆ ಅಸಂಭಾವ್ಯವೆಂಬ ದನಿಯೇ ವ್ಯಕ್ತಪಟ್ಟಿದೆ. ಈ ಸ್ಥಿತಿಯಲ್ಲಿ ನಮ್ಮ ನಿಲವೇನು?

ಕವಿರಾ.ದ ನಿರ್ದಿಷ್ಟಪದ್ಯಪಾಠದಲ್ಲಿ ಲಬ್ಧಸಾಮಗ್ರಿ ಸರ್ವರಿಗೂ ಸಮಾನವೇ ಆದರೂ, ಎಂ.ವಿ.ಸೀ. ಮತ್ತು ಕೃಷ್ಣಮೂರ್ತಿಗಳ ಪರಿಷ್ಕರಣಗಳು ಹೊರತಾಗಿ, ಉಳಿದವುಗಳಲ್ಲಿ ಪರಸ್ಪರ ವ್ಯತ್ಯಾಸಗಳನ್ನು ಕಾಣಬಹುದಾಗಿದೆ. ಈ ವ್ಯತ್ಯಾಸಗಳು ಪಾಠಸ್ಖಾಲಿತ್ಯಗಳ ಇತಿಮಿತಿಗಳಲ್ಲಿರುವಂಥವು. ಆದರೆ ಮುಳಿಯರಲ್ಲಿ ಮಾರ್ಪಾಟುಗಳು ಹೆಚ್ಚು. ಅವು ಗ್ರಂಥಸಂಪಾದನೆಯ ದೃಷ್ಟಿಯಿಂದ ಸಮರ್ಥನೆಗೆ ನಿಲುಕದವು. ಈ ಸ್ಥಿತಿಯಲ್ಲಿ ಪದ್ಯದ ಪಾಠನಿಷ್ಕರ್ಷೆ ಪ್ರಸ್ತುತವಾಗುತ್ತದೆ. ಆದರೆ ಅದು ಅಷ್ಟೇನೂ ಸುಲಭವಲ್ಲ. ನಾನು ನೋಡಿರುವ ಕನ್ನಡ ಅಧ್ಯಯನ ಸಂಸ್ಥೆಯ ಗ್ರಂಥಭಂಡಾರದ ೪ ಹಸ್ತಪ್ರತಿಗಳಲ್ಲಿಯೂ ಪದ್ಯಪಾಠ ಬಲುಮಟ್ಟಿಗೆ ಪ್ರಚಲಿತಪಾಠಕ್ಕೆ ಅನುಸಾರವಾಗಿಯೇ ಇದೆ. ಆದ್ದರಿಂದ ಪಾಠಕ್ ಅವರು ಕೊಟ್ಟಿರುವ ಪಾಠವನ್ನು ಅಲ್ಪ ಸಂಪಾದಕೀಯ ಸವರಣೆಗಳಿಂದ ಪದ್ಯಕ್ಕೆ ಹೀಗೆ ನಿರೂಪಿಸಬಹುದು :

> ಸಂತಂ ಬಾಳ್ವುದು ಮೀಱಿದಾ ನರಪನೊಳ್ ಸೌಜನ್ಯಲಕ್ಷ್ಮೀಮುದಾಂ
> ಥಂ ತನ್ನಿ[ಚ್ಛೆ]ಯ ಮೆಚ್ಚಿನಿಂ ಪರಗುಣೌದಾರ್ಯಾಭಿಮಾನಂಗಳಿಂ
> ಪಿಂತಂ ನೋಡದೆ ಪಾಟಿಗೆಟ್ಟ[ರಸ]ನಿಂ ಬಾಳ್ವಂತೆ [ಪೂಣ್ದು]ಯ್ಯನಾ
> [ನಾಂ]ತಂ ತಾಂ ಪಸತಂದನ[ರ್ಥಿ] [ಪಿರಿ]ಗುಂ ದಾನಂಗ[ಳಿಂ] ಭೂಪನಾ ॥

ಇದರ ಆಶಯ ಹೀಗೆ : ''ಸೌಜನ್ಯಾತಿಶಯದಿಂದ ಕೂಡಿದವನು, ಆ ದೊರೆಯೊಂದಿಗೆ ಮೀರಿ ನಡೆಯದೆ ತನ್ನ ಇಚ್ಛೆಗೆ ಅನುಸಾರವಾಗಿ, ಪರರ ಗುಣ ಉದಾರತೆ ಅಭಿಮಾನಗಳಿಗೆ ಪಾತ್ರನಾಗಿ ನೆಮ್ಮದಿಯಿಂದ ಬಾಳುವುದಾಗಲಿ. ಆತನ ಹಿಂದಿನದೇನನ್ನೂ ಗಣಿಸದೆ, ತನಗೆ ತಪ್ಪಿ ನಡೆದ ಆ ಅರಸನು ಇನ್ನು ಸರಿಯಾಗಿ ಬದುಕುವ ಹಾಗೆ ಭರವಸೆಯನ್ನು ಸಾರಿದ ಸ್ವಾಮಿಯನ್ನು ಈಗ ಪಡೆದವನಾದನು. ಆ ದೊರೆಯ ದಾನಗಳಿಂದ ದುರ್ಭಿಕ್ಷದಲ್ಲಿರುವವನ ಕಷ್ಟಗಳು ಚೆದುರಿಹೋಗುತ್ತವೆ.''

ಈ ಮೇಲಿನ ಪದ್ಯಪಾಠ ಅರ್ಥಗಳು ತೃಪ್ತಿಕರವೆಂದು ಹೇಳುವಂತಿಲ್ಲ. ಮುಖ್ಯವಾಗಿ ೩ನೆಯ ಪಾದದ ಕೊನೆಯಕ್ಷರದಿಂದ ಮುಂದಕ್ಕೆ ೪ನೆಯ ಪಾದದ ಪಾಠ ಇಡಿಯಾಗಿ ಬಂಧಲಕ್ಷಣಕ್ಕೆ ಕೂಡುವುದು ಬಹುಕಷ್ಟ. ಈಗಾಗಲೇ ಭಾವಿಸಿರುವಂತೆ ಅಲ್ಲಿ ಪಾಠ ಕೆಟ್ಟಿರುವುದು ಸಾಧ್ಯ. ೩ನೆಯ ಪಾದದ ಅಂತ್ಯಾಕ್ಷರ, ೪ನೆಯ ಪಾದದ ಆದ್ಯಂತಾಕ್ಷರಗಳು ಒಂದೇ ಆಗಿರುವುದು ಅಗತ್ಯ. ಹಾಗೆ ಬದಲಾಯಿಸಿಕೊಂಡರೂ, ಪೂರ್ವಸಿದ್ಧ ಸೂತ್ರದಂತೆ ಮೊದಲನೆಯ ಅರದ ಎಡ ಬಲಗಳ ನೇಮಿಸ್ಥಾನಗಳಲ್ಲಿ ೪ನೆಯ ಪಾದದ ಮೊದಲ ೬ ಅಕ್ಷರಗಳು ಸರಿಯಾಗಿ ಅಳವಡುವುದಿಲ್ಲ. ಶಾರ್ದೂಲವಿಕ್ರೀಡಿತ ವೃತ್ತವಾಗಿರುವ ಹಲವು ಸಂಸ್ಕೃತ ಲಕ್ಷ್ಯಗಳು ಷಡರಚಕ್ರಬಂಧಗಳಾಗಿಯೇ ರೂಪಗೊಳ್ಳುವುದರಿಂದ ಮಾಘ, ಭೋಜ ಮುಂತಾದವರು ಕಟ್ಟಿರುವಂತೆಯೇ ಕವಿರಾ.ದ ಪದ್ಯವೂ ಕಟ್ಟಿದ್ದಾಗಿರಬೇಕು ಎಂದು ಭಾವಿಸುವುದು ಸಹಜವೇ ಆಗಿದೆ. ಆದರೆ ಈ ವಿಷಯದಲ್ಲಿಯೂ ನಿಷ್ಕರ್ಷೆಯಾಗಿ ಹೇಳುವುದು ಕಷ್ಟವೇ. ಈಚೆಯ 'ಅಲಂಕಾರಚಿಂತಾಮಣಿ'ಯಲ್ಲಿ ಸಹ ಅಲ್ಲಿಯ ಚಕ್ರಬಂಧದ ಇದೇ ಭಾಗದಲ್ಲಿ ಸಮಸ್ಯೆಯಿರುತ್ತಿದ್ದು, ಬಂಧಲಕ್ಷಣ ಕೂಡುತ್ತಿಲ್ಲ. ಇದನ್ನು ಗಮನಿಸಿ ಎಚ್. ಆರ್. ಕಪಾಡಿಯಾ ಬೇರೆ ರೀತಿಯಲ್ಲಿ ಬಂಧವನ್ನು ನಡೆಸಿದ್ದಾರೆ. ''ಮಂಡನೇ । ಧೀರ ! ಸ್ಥಾಪಯ ಮಾಂ ಪುರೋ ಗುರುವರ ! ತ್ವಂ ವರ್ಧಮಾನೋರುಧೀ॥'' (೨-೧೮೭) ಎಂಬ ಆ ಭಾಗದಲ್ಲಿ ೩ನೆಯ ಪಾದದ ಅಂತ್ಯಾಕ್ಷರವೂ ೪ನೆಯದರ ಆದ್ಯಕ್ಷರವೂ ಒಂದೇ ಆಗಿಲ್ಲ. ಚಕ್ರದ ೬ ಅರಗಳ ಮೊದಲ ಸುತ್ತಿನ ಅಕ್ಷರಗಳು ೪ನೆಯ ಪಾದದ ಅಕ್ಷರಗಳೊಂದಿಗೆ ಸಮಾನವಾಗಿ ಕೂಡುತ್ತಿಲ್ಲ. ಕವಿರಾ.ದ ಬಂಧದಲ್ಲಿ ಕೆಲವಕ್ಷರಗಳು ಕೂಡುತ್ತವೆ. ಇದನ್ನು ಗಮನಿಸಿದಾಗ, ಕವಿರಾ.ದ ಬಂಧದಲ್ಲಿ ನಿಜವಾಗಿ ಇರುವುದು ಪಾಠಸಮಸ್ಯೆಯೇ ಹೊರತು, ಲಕ್ಷಣವಿಶೇಷದ ಭಿನ್ನತೆಯಲ್ಲ ಎಂದು ಹೇಳಬೇಕಾಗುತ್ತದೆ. ಈ ಕಾರಣದಿಂದಾಗಿ ನಾವು ಮಾಡಿರುವ ಉದ್ಧಾರಕ್ರಮ ನಿರ್ದುಷ್ಟವೆನ್ನುವಂತಿಲ್ಲ; ಅಸಾಂಪ್ರದಾಯಿಕ ಎಂದು ಹೇಳದೆ ವಿಧಿಯಿಲ್ಲ.

ಇನ್ನು ಕವಿನಾಮಾಂಕನದ ವಿಚಾರ. ೬ನೆಯ ಸುತ್ತಿನಲ್ಲಿರುವ 'ಜಯರ್ಾಟ್ಸಿಂ' ಎಂಬುದರಿಂದ 'ಜಯಾಟ್ಸಿಂ' (ದ್ವಿತ್ವವಿದ್ದಲ್ಲಿ ಅದ್ವಿತ್ವವಾಗಿ ಗ್ರಹಿಸಬಹುದು ಎಂಬ ಲಕ್ಷಣದಂತೆ) ಎಂಬ ರೂಪವನ್ನು

ಶ್ರೀವಿಜಯನ ಬೇರೊಂದು ನಾಮರೂಪವಾಗಿ ಗ್ರಹಿಸುವುದು ಮುಳಿಯರ ವಾದದಲ್ಲಿದೆ. ಆದರೆ ಈವರೆಗೆ ಗಮನಿಸಿರುವ ಸಂಸ್ಕೃತ ಕನ್ನಡಗಳ ಯಾವುದೇ ಚಕ್ರಬಂಧದ ಲಕ್ಷ್ಯದಲ್ಲಿ ಇಷ್ಟು ಅಸಮರ್ಪಕ, ಅಸಮಗ್ರರೂಪದಲ್ಲಿ ಕವಿಯ ಹೆಸರನ್ನು ಹುದುಗಿಸಿರುವುದು ಕಾಣದು. ಶಾರ್ದೂಲವಿಕ್ರೀಡಿತವೇ ಆಗಿರುವ ಕೆಲವು ಚಕ್ರಬಂಧಲಕ್ಷ್ಯಗಳಲ್ಲಿಯ ಈ ಪರಿಷ್ಕಾರವನ್ನು ಗಮನಿಸಬಹುದು: ೧. ''ಶಾಂತಿವರ್ಮಕೃತಂ ಜಿನಸ್ತುತಿಶತಂ'' (ಸಮಂತಭದ್ರನ 'ಜಿನಶತಕ'); ೨. ''ದೇವನಂದಿಕೃತಃ'' (ದೇವನಂದಿಯ 'ಸಿದ್ಧಿಪ್ರಿಯಸ್ತೋತ್ರ'); ೩. ''ಗಣಿಜಿನವಲ್ಲಭವಚನಮಿದಂ'' ''ಗಣಿಜಿನವಲ್ಲಭ ವಚನಮದಃ'' (ಜಿನವಲ್ಲಭಸೂರಿಯ 'ಧರ್ಮಶಿಕ್ಷಾ ಪ್ರಕರಣ', 'ಸಂಘಪಟ್ಟಕ'); ೪. ''ಮಾಘಕಾವ್ಯಮಿದಂ ಶಿಶುಪಾಲವಧಃ'' (ಮಾಘನ 'ಶಿಶುಪಾಲವಧ'); ೫. ''ಶುಭ್ರತರವಾಚಾ ಬದ್ಧಚಿತಿ ಚಕ್ರಂ, ರಾಜಗುರುಣೇದಂ ಸಾದರಮವಾದಿ'' (ಭೋಜನ 'ಸರಸ್ವತೀಕಂಠಾಭರಣ'); ೬. ''ಚಂದ್ರರಾಜಕೃತ ಚಕ್ರ ದ್ವಿತ್ರಮಿದು'' (ಚಂದ್ರರಾಜನ 'ಮದನತಿಲಕ'). ಇಂತಹ ರಚನೆ ಕವಿರಾ.ದಲ್ಲಿಲ್ಲ. ಅಲ್ಲದೆ ಕವಿಯ ಹೆಸರನ್ನಾಗಲಿ ಕೃತಿಯ ಹೆಸರನ್ನಾಗಲಿ ಹೇಳದ, ಶಾರ್ದೂಲವಿಕ್ರೀಡಿತದಲ್ಲಿಯೇ ಕಟ್ಟಿರುವ ಷಡರಚಕ್ರಬಂಧವೊಂದು ಸಮಂತಭದ್ರನ 'ಜಿನಶತಕ'ದಲ್ಲಿರುವುದರಿಂದ ಕವಿರಾ.ದ ಲಕ್ಷ್ಯಪದ್ಯವೂ ಹೀಗೆಯೇ ರಚಿತವಾಗಿರಲೂಬಹುದು. ಮೇಲುನೋಟದಲ್ಲಿಯೇ ತೋರುವಂತೆ ಪ್ರಸ್ತುತರಚನೆಯಲ್ಲಿ ಕವಿಯ ಇಲ್ಲವೆ ಕೃತಿಯ ಹೆಸರು ಹುದುಗಿದೆಯೆಂದು ಹೇಳುವುದಕ್ಕೆ ಅವಕಾಶವಿಲ್ಲ. ಕವಿರಾ.ದ ಲಕ್ಷ್ಯಪದ್ಯದ ಶುದ್ಧಪಾಠ ನಿಶ್ಚಯವಾದಾಗ ಈಯೆಲ್ಲ ಸಮಸ್ಯೆಗಳಿಗೂ ಪರಿಹಾರ ಸಾಧ್ಯ. 'ಕಾವ್ಯಾದರ್ಶ' ದಲ್ಲಿಲ್ಲದ ಈ ಬಂಧಚಿತ್ರದ ಪದ್ಯ ಬಲುಮಟ್ಟಿಗೆ ಪ್ರಕ್ಷಿಪ್ತವಾಗಿರುವ ಸಾಧ್ಯತೆಯೂ ಇಲ್ಲದಿಲ್ಲ.



ಬಂಧ ೨೩

೨. 'ಮದನತಿಲಕ'

ಮುಂದಿನ ಘಟ್ಟದಲ್ಲಿ ಚಂದ್ರರಾಜನ 'ಮದನತಿಲಕ'ದ ೩ ಚಕ್ರಬಂಧಗಳು (೧–೧೪, ೪೨; ೧೦–೨೫) ಪ್ರಸ್ತುತವಾಗುತ್ತವೆ. ೧–೪೨ರದು ಅರ್ಧಪಾದ ಗತಪ್ರತ್ಯಾಗತವೂ ಆಗಿರುವ ವಿಷಮಚಕ್ರಶ್ಲೋಕ; ೧೦–೨೫

ರದು ಗೋಮೂತ್ರಿಕೆ, ಮುರಜ, ಮಕರವ್ಯೂಹ, ಶಂಖಾವರ್ತಗಳೆಂಬ ಬಂಧಗಳಿಗೂ ಅಳವಡುವ ಚಕ್ರಬಂಧ. ಎರಡೂ ಅನುಷ್ಟುಪ್ ಶ್ಲೋಕಗಳೇ ಆಗಿದ್ದು, ಏರ್ಪಡಬಹುದಾದ್ದು ಬಹುಶಃ ಚತುರರ ಚಕ್ರಬಂಧವೇ ಇರಬೇಕು. ಆದರೆ ಆ ಬಂಧಕ್ಕೆ ಅನುವಾಗುವ ಅಕ್ಷರವಿನ್ಯಾಸ ಎರಡರಲ್ಲಿಯೂ ಇಲ್ಲದಿರುವುದು ಇಲ್ಲಿಯ ಕೊರತೆ. ಪಾಠಕ್ಲೇಶಗಳು ಎರಡರಲ್ಲಿಯೂ ಮಿಗಿಲಾಗಿದ್ದು, ಪದ್ಯಗಳ ಅರ್ಥವೇ ಸ್ಪಷ್ಟವಾಗುವುದಿಲ್ಲ. ಆದ್ದರಿಂದ ಅವನ್ನು ಉದ್ಧರಿಸಿ, ಬಂಧ ರಚಿಸುವ ಪ್ರಯತ್ನವನ್ನಿಲ್ಲಿ ಮಾಡಿಲ್ಲ.

ಇನ್ನು ೧-೧೪ರದು ಶಾರ್ದೂಲವಿಕ್ರೀಡಿತ. ಆದ್ದರಿಂದ ಷಡರಚಕ್ರವಾಗಿ ಅದನ್ನು ಉದ್ಧರಿಸುವುದು ಸಾಧ್ಯ. ಇಲ್ಲಿಯೂ ಪಾಠಸಮಸ್ಯೆಗಳಿವೆ. ಅವನ್ನು ಕೊಂಚಮಟ್ಟಿಗೆ ಪರಿಷ್ಕರಿಸಿ, ಹೀಗೆ ಪದ್ಯವನ್ನಿಡಬಹುದು:

ಗಜಾಗ್ರ ಚಂದ್ರಹಿಮಾಚಲಾಭಯಶ[ನ]ತ್ರಸ್ತೋಗ್ರರಾಜಪ್ರಭಂ
ಗಜೇಂದ್ರಸ್ಥಿರಶಕ್ರನಪ್ರಿಯತಮೋಮಿತ್ರಂ ದಿವಾಕೃತ್ಸ[ಮಂ]
[ತು]ಜಾಗ್ರರಾಜಿತಸದ್ವಿಪಂ ನಯವಿದಂ ದುರ್ಗಾಭ್ರ[ವಾ]ತದ್ರ[ವಂ]
ವಜಾಗ್ರ[ಧ್ರಾಂ]ಗಕಳಿಂಗಪಾರ್ಜತುಹಿನಾಭಂ ರೇಚಿಮಂತ್ರ್ಯುದ್ಭವಂ ॥

ಈ ಪದ್ಯದಲ್ಲಿ ಅರಗಳ ೨ನೆಯ ಮತ್ತು ೬ನೆಯ ಅಕ್ಷರಗಳನ್ನು ಕೂಡಿಸಿದರೆ, ''ಚಂದ್ರರಾಜಕೃತ ಚಕ್ರದ್ವಿತ್ರ(?) ಮಿದು'' ಎಂದಾಗುವುದು. ಈ ಪದ್ಯದ ಆಶಯ ಬಹುಶಃ ಹೀಗೆ: ''ರೇಚಿ ಮಂತ್ರಿಯು ಗಂಗೆ ಚಂದ್ರ ಹಿಮಗಿರಿಗಳ ಕಾಂತಿಯ ಕೀರ್ತಿಯುಳ್ಳವನು, ಧೈರ್ಯಶಾಲಿಯೂ ಉಗ್ರನೂ ಆದ ರಾಜನ ಪ್ರಭೆಯುಳ್ಳವನು, ಶಿವನಂತೆ ಸ್ಥಿರವಾದ ಮಹಿಮೆಯುಳ್ಳವನು, ಅನಿಷ್ಟರಾದವರಿಗೆ ವೈರಿ, ಸೂರ್ಯನಿಗೆ ಸಮಾನನು, ಎತ್ತರದಿಂದ ಶೋಭಿಸುವ ಆನೆಯಿಂದ ಕೂಡಿದವನು, ನಯಶಾಲಿ, ದುರ್ಗಗಳೆಂಬ ಮೋಡಗಳನ್ನು ಚೆದುರಿಸಲು ವಾಯುವಿನ ವೇಗವುಳ್ಳವನು, ವಂಗ ಆಂಧ್ರ ಅಂಗ ಕಳಿಂಗ ಪಾರ್ಜಗಳಿಗೆ ಚಂದ್ರನಂತೆ ಹಿತಕರನಾದವನು (?).''



ಬಂಧ ೨೪

೩. ಇತರ ಕೃತಿಗಳು

'ನರಪತಿಚರಿತ', 'ನಳೋಪಾಖ್ಯಾನ ಚಂಪೂ' ಮತ್ತು 'ವ್ಯಾಸಂಗಾನಂದದಾಯಿನಿ'ಯ ಪದ್ಯಗಳು ಕೂಡ ಕವಿನಾಮಾಂಕನವುಳ್ಳವಾಗಿದ್ದು, ಕ್ರಮವಾಗಿ ಹೀಗಿವೆ :

ಧನ್ಯಶ್ರೀಕರಚಿತ್ತನೇ ಕವಿಸಭಾಶಕ್ರದ್ರುವೇ ರಾತ್ರಿರಾ
ಜನ್ಯಾಲಿಂಗನತರ್ಷಿ ಕೀರ್ತಿವಿಶದಶ್ರೀಬಂಧುತೇಜಸ್ವಿಯೋ
ಜನ್ಯಾಗರ್ಹಿತಚರ್ಯ ಕೃಷ್ಣವಿಭುವೇ ಕ್ಷ್ಮಾಧರ್ಮವಂ ರಕ್ಷಿಸೈ
ಸೈನ್ಯಾಗಾಧವಿರಾಜಮಾನಜನರಂ ರಾಗಾಬ್ಧಿಯೋ ಮುನ್ನಿಸೈ ॥ ('ನರಪತಿಚರಿತ' ೨-೧೯)

ಇದರಲ್ಲಿ ಅರಗಳ ೨ನೆಯ ಮತ್ತು ೫ನೆಯ ಅಕ್ಷರಗಳ ಜೋಡಣೆಯಿಂದ ''ಶ್ರೀ ಲಿಂಗರಾಜರಚಿತ ಚಕ್ರಬಂಧ'' ಎಂಬುದು ಬರುತ್ತದೆ (ನೋಡಿ : ಬಂಧ ೨೫).

ನಿತ್ಯಶ್ರೀಗುಡು ಶಿಷ್ಟಪಾಲಿನಿ ತ್ರಿಲೋಕೀಕಲ್ಪಿಕೇ ಪಾರ್ವತೀ
ಸತ್ಯಾನನ್ದದೆ ವರ್ಯೆ ಶೂಲಿನಿ ಚಿದಾಕಾರೋಜ್ವಲಖ್ಯಾತೆ ಸಂ
ಪತ್ತ್ಯಾಲೋಕಿನಿ ಶಂಭುಕಾಮಿನಿ ಸತೀ ಭಕ್ತವ್ರಜಾನಂದಿನೀ
ನಿತ್ಯಾಸ್ಥಾನಿ ವಿಲಾಸಶಕ್ತಿಪಟಲೇ ತೀಕ್ಷ್ಣಾಂಶುಸಂಕಾಶಿನೀ ॥

('ನಳೋಪಾಖ್ಯಾನ ಚಂಪೂ' ೧-೨೪೭)

ಇದರಲ್ಲಿ ಅರಗಳ ೨ನೆಯ ಮತ್ತು ೫ನೆಯ ಅಕ್ಷರಗಳ ಜೋಡಣೆಯಿಂದ ''ಶ್ರೀ ನಲೋಪಾಖ್ಯಾನಂ ಶಿವಶಂಕರೋಕ್ತ(ಂ)'' ಎಂಬುದು ಬರುತ್ತದೆ (ನೋಡಿ : ಬಂಧ ೨೬).

ನಮ್ರಾಕಲ್ಪಕಚಂದ್ರಹಾಸಿವದನಾನುಷ್ಣಾಚ್ಛದೃಕ್ಕೇಕರಾ
ಕಮ್ರಾನ್ನತ್ಯಕನತ್ಸುವರ್ಣವಸುಪೂರ್ಣಾ ಕಲ್ಪಿಸೈ ಸತ್ಯಮಂ
ಸಮ್ರಾಡರ್ಚಿತ ಕೃಷ್ಣಭೂಮಿವರ ಮೇಧಾವಿಸ್ತುತಾ ವಿಶ್ರುತಾ
ತಾಮ್ರೋಷ್ಠೀ ನವಪಂಕಜಾಸ್ತ್ರಸರಸಾ ರಾಜತ್ಸುಮಂತ್ರಾಂಚಿತಾ ॥

('ವ್ಯಾಸಂಗಾನಂದದಾಯಿನೀ' ಪು. ೨)

ಇದರಲ್ಲಿ ಅರಗಳ ೩ನೆಯ ಮತ್ತು ೫ನೆಯ ಅಕ್ಷರಗಳ ಜೋಡಣೆಯಿಂದ ''ಕನ್ನಡಕ್ಕೇ ಸಪಿ ಚಂನಕೃಷ್ಣಾ ಕಪಿ'' ಎಂಬುದು ಬರುತ್ತದೆ (ನೋಡಿ : ಬಂಧ ೨೭). ಈ ಎಲ್ಲ ಪದ್ಯಗಳೂ ಮೇಲಿನ ಸೂತ್ರಕ್ಕೆ ಹೊಂದುತ್ತವೆ.

'ಮೈಸೂರ್ ಮೆಯ್ಸಿರಿ'ಯಲ್ಲಿ ಕವಿನಾಮಾಂಕನವಿಲ್ಲದ ಈ ಪದ್ಯವಿದೆ (ನೋಡಿ : ಬಂಧ ೨೮) :

ಬಲ್ಲೋಜರ್ಬಗೆಗುಂದದಂತನಿಬರಂ ನಾಡೋದು ಕೀೞಾಗದಂ
ತೆಲ್ಲಾ ಕಲ್ಪಿಯನೋವುತೊಲ್ದನಿತುನಾಡೊಳ್ಪಿಂ ಸೊಗಂಬಾಳ್ವವೋಲ್
ಪೊಲ್ಲೊಂದುಂ ನೆಲೆ ಸಿಲ್ಲದಂತಿನಿವೆಸಂಗೊಂಡಾಳ್ವ ಕೃಷ್ಣೇಂದ್ರ ಗೆಲ್
ಗೆಲ್ಲಂ ಕಾಂಬರುಮಂತೆ ಬಾೞಿಪೊಲವಿಂದಂ ನಿನ್ನವೋಲ್ ಪೋಲೆ ಗೆಲ್ ॥ (೬-೨೧೯)

ಚಕ್ರಬಂಧಭೇದಗಳು-೩ : ಅಷ್ಟಾರಚಕ್ರ

ಎಂಟು ಅರಗಳುಳ್ಳದ್ದು ಅಷ್ಟಾರಚಕ್ರಬಂಧ. ಇದನ್ನು ಮಹಾಚಕ್ರವೆಂದೂ ಕರೆಯುವುದುಂಟು. ಇದರ ಬಳಕೆ ಬಹಳ ವಿರಳ. ರುದ್ರಟನ 'ಕಾವ್ಯಾಲಂಕಾರ'ದಲ್ಲಿ ಇದರ ಉಲ್ಲೇಖವನ್ನು (೫-೬~೧೩) ಮೊದಲಿಗೆ ಕಾಣುತ್ತೇವೆ (ನೋಡಿ : ಬಂಧ ೨೯). ಅಲ್ಲಿಯ ಲಕ್ಷ್ಯಪದ್ಯಗಳು ಹೀಗಿವೆ :

ಮಾರಾರಿಶಕ್ರರಾಮೇಭಮುಖೈರಾಸಾರರಂಹಸಾ ।
ಸಾರಾರಬ್ಧಸ್ತವಾ ನಿತ್ಯಂ ತದರ್ತಿಹರಣಕ್ಷಮಾ ॥

ಮಾತಾ ನತಾನಾಂ ಸಂಘಟ್ಟಃ ಶ್ರಿಯಾಂ ಬಾಧಿತಸಂಭ್ರಮಾ ।
ಮಾನ್ಯಾಥ ಸೀಮಾ ರಾಮಾಣಾಂ ಶಂ ಮೇ ದಿಶ್ಯಾದುಮಾಽಽದಿಜಾ ॥



ಬಂಧ ೨೫



ಬಂಧ ೨೬



ಬಂಧ ೨೭



ಬಂಧ ೨೮

ಮಾಯಯಾ ವಿನಂ ಮಹಾಹಾನಾ ರಸಾಯಾತಂ ಲಸದ್ಭುಜಾ ।
ಜಾತಲೀಲಾಽಯಥಾಸಾರವಾಚಂ ಮಹಿಷಮಾನಧೀಃ ॥

ಮಾಮಭೀದಾ ಶರಣ್ಯಾ ಮುತ್ಸದ್ಯೆವಾರುಕ್ತ್ರದಾ ಚ ಧೀಃ ।
ಧೀರಾ ಪವಿತ್ರಾ ಸನ್ಮಾತ್ರಾಸಾತ್ ತ್ರಾಸಿಷ್ಠಾ ಮಾತರಾರವು ॥

ಮಾನನಾಪರುಷಂ ಲೋಕದೇವೀಂ ಸದ್ರಸ ಸನ್ನವು ।
ಮಾನಸಾ ಸಾದರಂ ಗತ್ವಾ ಸರ್ವದಾ ದಾಸ್ಯಮಂಗ ತಾಮ್ ।

ಮಾ ಮುಷೋ ರಾಜಸಂ ಸ್ವಾಸ್ಥಂ ಲ್ಲೋಕಕೂಟೇಶದೇವತಾಮ್ ।
ತಾಂ ಶಿವಾಽಽಶಿತಾಂ ಸಿದ್ಧ್ಯಾಧ್ಯಾಸಿತಾಂ ಹಿ ಸ್ತುತಾಂ ಸ್ತುಹಿ ॥

ಮಾಹಿಷಾಖ್ಯೇ ರಣೇಽನ್ಯಾ ನು ಸಾ ನು ನಾನೇಯಮತ್ರ ಹಿ ।
ಹಿಮಾತಂಕಾದಿಸಾಮ್ಯಂ ಚ ಕಂ ಕಂಪಿನಮುಪಪ್ಲುತಮ್ ॥

ಮಾತಙ್ಗಾನಙ್ಗವಿಧಿನಾಮುನಾ ಪಾದಂ ತಮುದ್ಧೃತವ್ ।
ತಙ್ಗಯಿತ್ವಾ ಶಿರಸ್ಯಸ್ಯ ನಿಪಾತ್ಯಾಹನ್ತಿ ರಂಹಸಾ ॥

ಈ ಎಂಟು ಶ್ಲೋಕಗಳನ್ನು ಒಟ್ಟಿಗೆ ಅಷ್ಟಾರಚಕ್ರವಾಗಿ ನಿರೂಪಿಸಿದೆ. ಇಲ್ಲಿ ಎಲ್ಲ ಶ್ಲೋಕಗಳ ಮೊದಲನೆಯ ಅಕ್ಷರವೂ ಒಂದೇ ಆಗಿರುವುದನ್ನು ಗಮನಿಸಬೇಕು. ಆದ್ದರಿಂದ ಅದನ್ನು ಬಂಧದಲ್ಲಿ ಕೇಂದ್ರಾಕ್ಷರವಾಗಿ 'ಗರ್ಭ' ದಲ್ಲಿ ಇಡಲಾಗುತ್ತದೆ. ಕೇಂದ್ರದಿಂದ ಪ್ರಾರಂಭಿಸಿ ಒಂದು ಅರದ ಮಾರ್ಗವಾಗಿ ಪರಿಧಿಯವರೆಗೆ ಸಾಗಬೇಕು; ಅಲ್ಲಿಗೆ ಅರ್ಧಶ್ಲೋಕ ಮುಗಿಯುತ್ತದೆ. ಪೂರ್ವಾರ್ಧದ ಕೊನೆಯ ಅಕ್ಷರ ಮತ್ತು ಉತ್ತರಾರ್ಧದ ಮೊದಲ ಅಕ್ಷರ ಎಲ್ಲ ಶ್ಲೋಕಗಳಲ್ಲೂ ಒಂದೇ ಆಗಿದೆ. ಆದ್ದರಿಂದ ಅದು ಅರ–ನೇಮಿ ಸಂಧಿಸ್ಥಾನದಲ್ಲಿ ಪುನರಾವರ್ತಿತವಾಗುತ್ತದೆ. ಅನಂತರ ಬಲಕ್ಕೆ ತಿರುಗಿ ಪರಿಧಿಯಲ್ಲಿ ಸಾಗಿ ಮುಂದಿನ ಸಂಧಿಸ್ಥಾನವನ್ನು ಸೇರಬೇಕು; ಅಲ್ಲಿಗೆ ಒಂದು ಶ್ಲೋಕ ಮುಗಿಯುತ್ತದೆ. ಅನಂತರ ಎರಡನೆಯ ಶ್ಲೋಕವನ್ನು ಮತ್ತೆ ಕೇಂದ್ರದಿಂದ ಪ್ರಾರಂಭಿಸಿ ಎರಡನೆಯ ನೇಮಿಯ ಮೂಲಕ ಸಾಗಿ ಬಲಕ್ಕೆ ತಿರುಗಿ ಪರಿಧಿಯಲ್ಲಿ ನಡೆದು ಮುಂದಿನ ಸಂಧಿಸ್ಥಾನದವರೆಗೆ ಹೊಂದಿಸಬೇಕು. ಇದೇ ರೀತಿ ಎಲ್ಲ ಶ್ಲೋಕಗಳನ್ನೂ ಅಳವಡಿಸಿದಾಗ ಅಷ್ಟಾರಚಕ್ರಬಂಧ ಸಿದ್ಧವಾಗುತ್ತದೆ. ಪ್ರತಿ ಸಂಧಿಸ್ಥಾನದಲ್ಲೂ ಬರುವ ಅಕ್ಷರ ಮೂರು ಮೂರು ಬಾರಿ ಪುನರಾವರ್ತಿತವಾಗುತ್ತದೆ. ಹಿಂದಿನ ಶ್ಲೋಕದ ಕೊನೆಯ ಅಕ್ಷರ ಮತ್ತು ಮುಂದಿನ ಶ್ಲೋಕದ ಪೂರ್ವಾರ್ಧದ ಕೊನೆಯ ಅಕ್ಷರ, ಉತ್ತರಾರ್ಧದ ಮೊದಲ ಅಕ್ಷರ ಈ ಮೂರೂ ಒಂದೇ ಆಗಿರುವುದನ್ನು ಈ ಶ್ಲೋಕಗಳಲ್ಲಿ ಗಮನಿಸಬೇಕು.

ಇದರಲ್ಲಿ ಕೇಂದ್ರದಿಂದ ೪ನೆಯ, ೮ನೆಯ, ೧೨ನೆಯ ಅಕ್ಷರಗಳನ್ನೂ ಸಂಧಿಸ್ಥಾನಗಳ ಅಕ್ಷರಗಳನ್ನೂ ಕೂಡಿಸಿದಾಗ, ''ಶತಾನಂದಾಪರಾಖ್ಯೇನ ಭಟ್ಟವಾಮುಕ ಸೂನುನಾ । ಸಾಧಿತಂ ರುದ್ರಟೇನೇದಂ ಸಾಮಾಜಾ ಧೀಮತಾಂ ಹಿತಂ॥'' ಎಂಬ ಕವಿಯ ಸಂಬಂಧದ ಶ್ಲೋಕ ದೊರೆಯುತ್ತದೆ. ಈ ಬಂಧಕವಿತ್ವದ ಒಂದು ವಿಶೇಷ ವೆಂದರೆ, ಪ. ೬–೭ರಿಂದ ಖಡ್ಗವೂ ೮ ರಿಂದ ಮುಸಲವೂ ೯ ರಿಂದ ಧನುವೂ ೧೦ ರಿಂದ ಶರವೂ ೧೧ ರಿಂದ ಶೂಲವೂ ೧೨ ರಿಂದ ಶಕ್ತಿಯೂ ೧೩ ರಿಂದ ಹಲವೂ ಪ್ರತ್ಯೇಕ ಬಂಧಚಿತ್ರಗಳಾಗಿ ಹೊರಡುವ ಸಾಧ್ಯತೆಯಿರುವುದು. ಗರ್ಭಕವಿತ್ವದ ಲಕ್ಷಣ ಬಂಧಕವಿತ್ವದಲ್ಲಿ ಕಾಣುವಂತಿರುವುದು ಈ ಲಾಕ್ಷಣಿಕನ ಅನನ್ಯಕೌಶಲವನ್ನು ಎತ್ತಿ ಹೇಳು ವುದಾಗಿದೆ. ರಾಮರೂಪ ಪಾಠಕರು ಈ ಬಂಧವನ್ನು ತಾವೂ ರಚಿಸಿ, ಅದರಲ್ಲಿ ಖಡ್ಗ, ಮುಸಲ, ಧನು, ಶರ, ತ್ರಿಶೂಲ, ಶಕ್ತಿ, ಹಲ ಈ ೭ ಬಂಧಗಳೂ ಹೊರಡುವುದೆಂದಿದ್ದಾರೆ (ನೋಡಿ : 'ಚಿತ್ರಕಾವ್ಯಕೌತುಕಂ', ಪು. ೩೨-೩೩). ವೇದುಲ ಸೂರ್ಯನಾರಾಯಣ ಅವರು ತೆಲುಗು 'ಲಕ್ಷ್ಮೀಸಹಸ್ರಂ' ರಚನೆಯಲ್ಲಿ ಶಾರ್ದೂಲವಿಕ್ರೀಡಿತದ ತಮ್ಮ ಈ ಬಗೆಯ ಬಂಧದಲ್ಲಿ ವಿದ್ಯುನ್ಮಾಲಾಪದ್ಯವೊಂದು ಅಡಗಿರುವಂತೆ ಮಾಡಿದ್ದಾರೆ.



ಬಂಧ ೨೯

'ಧರ್ಮಶರ್ಮಾಭ್ಯುದಯ'ದಲ್ಲಿ ಸಹ ಒಂದು ಅಷ್ಟಾರಚಕ್ರಬಂಧವಿದೆ (೧೯–೧೦೨). ಆದರೆ ಅದು ಇದರಷ್ಟು ದೊಡ್ಡದಲ್ಲ. ಅಲ್ಲದೆ ವಿನ್ಯಾಸಕ್ರಮದಲ್ಲಿ ವ್ಯತ್ಯಾಸವಿದೆ. ಅಲ್ಲಿಯ ಲಕ್ಷ್ಯಪದ್ಯಗಳು ಇವು :

ಆತಂಕಾರ್ತಿಹರಸ್ತಪದ್ಯುಮಣಿಸದ್ಭೂರಿಪ್ರಭಾಜಿದ್ವಸು
ದ್ರ್ಯಷ್ಟವ್ಯಂ ಹೃದಿ ಚಿಹ್ನರತ್ನಮಸಮಂ ಶೌಚಂ ಚ ಪೀನೋನ್ನತೇ
ದೇಹೇಽಧತ್ತ ಹಿತಂ ತ್ವಮುನ್ನಮಹೃದಿ ಕ್ಷುದ್ರೇಽಪ್ಯತೋಽದರ್ಶನೇ
ವಲ್ಗುರ್ಮದ್ರಮಹಸ್ಕ ರಮ್ಯಪರಂ ಕ್ಷೀಣಾವ್ಯಪಾಯಂ ಪದಮ್ ॥ ೧೯–೧೦೧ ॥

ದಂಭಲೋಭಭ್ರಮಾ ಅದಿರುದ್ಧಾ ಗುಣೈ । ದ್ರ್ಯಷ್ಟುಮಪ್ಯಕ್ಷಮಾದೇವ ವಕ್ತ್ರಂ ತವ ।
ವರ್ಜಯಿತ್ವಾ ಯುಯುಃ ಸುಶ್ರುತ ತ್ವಾಂ ತಥಾ । ತೇ ಭಜನ್ತೇ ಯಥಾ ನೇಶ ಭಕ್ತಾನಪಿ ॥

ಇಲ್ಲಿ ಕೇಂದ್ರದಿಂದ ಮೊದಲುಮಾಡುವ ಬದಲು ಷಡರಚಕ್ರಬಂಧದಲ್ಲಿಯಂತೆ ಪರಿಧಿಯಿಂದ ಕೇಂದ್ರದ ಕಡೆಗೆ ಹೊರಟು ಅದರ ಮೂಲಕ ಎದುರು ಪರಿಧಿಯ ಸಂಧಿಸ್ಥಾನವನ್ನು ಸೇರಬೇಕು. ಇದೇ ರೀತಿ ಎಂಟು ಅರಗಳೂ ತುಂಬಿದ ಮೇಲೆ ಕೊನೆಯ ಅರದ ಸಂಧಿಸ್ಥಾನದಿಂದ ಬಲಕ್ಕೆ ತಿರುಗಿ, ಪರಿಧಿಯ ಮೂಲಕ ಸಾಗಿ, ಒಂದು ಸುತ್ತು ಹಾಕಬೇಕು. ಎರಡನೆಯ ಸ್ರಗ್ವಿಣೀವೃತ್ತ ಪರಿಧಿಯಲ್ಲಿ ಅಳವಡುತ್ತದೆ.



ಬಂಧ ೩೦

ಈ ಪದ್ಯಗಳ ಅಕ್ಷರವಿನ್ಯಾಸದ ಸೂತ್ರ ಹೀಗಿರುತ್ತದೆ :

ಅಕ್ಷರ ಕ್ರಮಸಂಖ್ಯೆ	1	2	3	4	5	6	7	8	9	10	11	12	13	14	15	16	17	18	19
೧ನೆಯ ಪಾದ	A	–	–	–	–	–	–	–	–	B	–	–	–	–	–	–	–	–	C
೨ನೆಯ ಪಾದ	D	–	–	–	–	–	–	–	–	B	–	–	–	–	–	–	–	–	E
೩ನೆಯ ಪಾದ	F	–	–	–	–	–	–	–	–	B	–	–	–	–	–	–	–	–	G
೪ನೆಯ ಪಾದ	H	–	–	–	–	–	–	–	–	B	–	–	–	–	–	–	–	–	I

ಅಕ್ಷರ ಕ್ರಮಸಂಖ್ಯೆ	1	2	3	4	5	6	7	8	9	10	11	12
೧ನೆಯ ಪಾದ	I	–	–	–	–	–	A	–	–	–	–	–
೨ನೆಯ ಪಾದ	D	–	–	–	–	–	F	–	–	–	–	–
೩ನೆಯ ಪಾದ	H	–	–	–	–	–	C	–	–	–	–	–
೪ನೆಯ ಪಾದ	E	–	–	–	–	–	G	–	–	–	–	–

ಸಂಧಿಸ್ಥಾನದ ಅಕ್ಷರಗಳನ್ನೂ ಅರಗಳ ೨ನೆಯ, ೫ನೆಯ ಮತ್ತು ೭ನೆಯ ಅಕ್ಷರಗಳನ್ನೂ ಕೂಡಿಸಿದಾಗ ''ಆದ್ರ್ಯ ದೇವಸುತೇನೇದಂ ಕಾವ್ಯಂ ಧರ್ಮಜಿನೋದಯಂ । ರಚಿತಂ ಹರಿಚಂದ್ರೇಣ ಪರಮಂ ರಸಮಂದಿರಂ'' ಎಂಬುದು ಗರ್ಭಿತಶ್ಲೋಕ ರೂಪದಲ್ಲಿ ಲಭಿಸುತ್ತದೆ.

ಅಷ್ಟಾರಚಕ್ರಬಂಧದ ಮಾದರಿ ಶಾರ್ದೂಲದಲ್ಲಿಯೇ ರಚಿತವಾದ್ದು, 'ಪಾದುಕಾಸಹಸ್ರ'ದಲ್ಲಿಯೂ (ಚಿತ್ರಪದ್ಧತಿ ೩೨) ಉಂಟು.[14]

ಈಗಾಗಲೇ ಸೂಚಿಸಿರುವಂತೆ ಕರ್ನಾಟಕದ ಶಾಸನಗಳಲ್ಲಿ ಸಹ ಚಕ್ರಬಂಧದ ಲಕ್ಷ್ಯಗಳು ವಿರಳವಾಗಿ ಕಂಡುಬಂದಿವೆಯಷ್ಟೆ. ಆ ಸಂಬಂಧದ ಕವಿತ್ವವನ್ನೂ ಮಾದರಿಗೆ ಕೆಲವು ಬಂಧಗಳನ್ನೂ ಇಲ್ಲಿ ನಿದರ್ಶಿಸಬಹುದಾಗಿದೆ :

೧. ಶಿಕಾರಿಪುರ ತಾಲ್ಲೂಕು ಬಂದಳಿಕೆಯ ಬಸದಿಯೊಂದರ ಶಾಸನ (ಎಕ. vii, ೨೨೨-೨೩) ಮತ್ತು ಅಲ್ಲಿಯೇ (೨೨೪)

ಕಾಮದಾರ್ಹನ್ನು ತೀರೇಕಾಕಾರೇತೀಷ್ಟಾತ್ರಕಾಧಿಕಾ
ಕಾಧಿಕಾಸ್ತಿತಶೋರಾಕಾಕಾರಾತೋ ಬಂಧದಾಮಕಾ ॥

ಎಂಬ ಶ್ಲೋಕದ ಇನ್ನೊಂದು ಶಾಸನವೂ ಇದ್ದು, ಕ್ರಮವಾಗಿ ''ಯೀ ಶ್ಲೋಕವನು ಯೀ ಚಕ್ರಬಂಧದಲಿ ವೋದೂದು'' ಎಂದೂ ''ಚಕ್ರಬಂಧದಲಿ ಶ್ಲೋಕವನೋದೂದು'' ಎಂದೂ ಸೂಚನೆಯಿದೆ. ಬಂಧಗಳೂ ಉಂಟು. ೨೨೪ರ ರಚನೆಯಲ್ಲಿ 'ಕಾ' ಎಂಬ ಅಕ್ಷರ ನಾಭಿಯಲ್ಲಿ ೮ ಸಲ ಆವೃತ್ತಿಗೊಳ್ಳುತ್ತದೆ; ಅರಗಳ ಅಕ್ಷರಗಳು ದ್ವಿರಾವೃತ್ತಿಗೊಳ್ಳುತ್ತವೆ. ಶಕಟಚಕ್ರ ಇಲ್ಲವೆ ಕುಲಾಲಚಕ್ರ ಎಂದು ಕರೆಯುವ ಚತುರರ ಚಕ್ರವಿದು. ತೆಲುಗಿನ ಚಿಂತಲಪಲ್ಲಿ ಛಾಯಾಪತಿ ತನ್ನ 'ರಾಘವಾಭ್ಯುದಯ'ದಲ್ಲಿ ಶಕಟಚಕ್ರವೆಂದೂ ಮಂಡಪಾಕ ಪಾರ್ವತೀಶ್ವರ ಶಾಸ್ತ್ರಿ ತನ್ನ 'ಪ್ರಬಂಧ ಸಂಬಂಧ ಬಂಧ ನಿಬಂಧನಗ್ರಂಥ'ದಲ್ಲಿ ಕುಲಾಲಚಕ್ರವೆಂದೂ ಕರೆದಿದ್ದಾರೆ. ಸಂಸ್ಕೃತದಲ್ಲಿ 'ಲಕ್ಷ್ಮೀಸಹಸ್ರ', 'ಶಿವಪಾದಕಮಲಸಹಸ್ರ', 'ಪಾದುಕಾಸಹಸ್ರ'ಗಳಲ್ಲಿ ಲಕ್ಷ್ಯಗಳಿವೆ.



ಬಂಧ ೩೧

ಮೊದಲ ಪಾದದ ಕೊನೆಯ ೩ ಅಕ್ಷರಗಳೂ ೨ನೆಯದರ ಆರಂಭದ ೩ ಅಕ್ಷರಗಳೂ ಅನುಲೋಮ-ವಿಲೋಮಗಳಲ್ಲಿ ಒಂದೇ ಆಗಿರುತ್ತವೆ. ಹಾಗೆಯೇ ಉಳಿದ ಪಾದಗಳಲ್ಲಿ (೨-೩, ೩-೪). ೪ ಪಾದಗಳಲ್ಲಿಯೂ ಆದ್ಯಂತಗಳಲ್ಲಿ ಒಂದೇ ಅಕ್ಷರವಿರಬೇಕು. ಅದೇ ನಾಭಿಯ ಅಕ್ಷರ. ಅಲ್ಲಿಂದ ಆರಂಭವಾದ ಪದ್ಯ ಅಲ್ಲಿಗೇ ಬಂದು ಮುಗಿಯುತ್ತದೆ.

೨. ಅದೇ ಸ್ಥಳದ ಶಾಂತೀಶ್ವರ ಬಸದಿಯ ರಂಗಮಂಟಪದ ವಾಯುವ್ಯ ದಿಕ್ಕಿನ ಕಂಭದಲ್ಲಿ (೨೯) :

ಯತ್ಸಂಸೂಚನಪೂಜಿತಾಂಗಮಹಿತಾತಿಥ್ಯಂ ಸುರೈ ರಕ್ಷಿತಂ
ಯದ್ಭೂರಿಭ್ರಮಜೇನ ರಮ್ಯಮತುಳಾರಿಧ್ವಂಸನೇ ಚಿನ್ಮಯಂ
ಚಕ್ರಂ ವಿಶ್ರುತವಸ್ತುವೃತ್ತಮಸಜೇಯಂ ದೇವಜಾತಾನತೇ
ತೇನೇ ಜೀಯಮವಿಧೇಯಲೋಕಚಕಿತಾತಂಕವ್ಯಯಂ ತಜ್ಜ್ಞತೇ ॥

ಯೀ ಶ್ಲೋಕವನು ಚಕ್ರಬಂಧದಲ್ಲಿ ಓದಿಕೊಂಬುದು । ಕರ್ಣಿಕಾ ಮಧ್ಯ ಅಕ್ಷರದ ವಳಿಯುವ ಮೊದಲುಗೊಂಡು ನಾಲ್ಕನೆಯ ವಳಿಯದಲ್ಲಿ ಜಿನಸ್ತುತಿರಿಯಂ ಯೆಂಬ ಪ್ರಬಂಧದ ನಾಮವನೋದಿ ಕೊಂಬುದು ಯೆಂಟನೆಯ ವಳಿಯದಲ್ಲಿ। ಸೂರಿವಿರಚಿತಾಯೆಂದು ಕವಿನಾಮವನೋದಿ ಕೊಂಬುದು। ಯೀ ಪ್ರಕಾರದಲೆ ನಾಲ್ಕು ಚಕ್ರವನೂ ಓದಿಕೊಂಬುದು

ಇದು ಅಷ್ಟಾರಚಕ್ರಬಂಧದ ಲಕ್ಷ್ಯ. ಇದರ ಸ್ವರೂಪವನ್ನು ಹಿಂದೆಯೇ ಗಮನಿಸಿದೆ. ನೈರುತ್ಯ, ಈಶಾನ್ಯ ಮತ್ತು ಆಗ್ನೇಯ ಕಂಭಗಳಲ್ಲಿಯೂ ಒಂದೊಂದು ಅಷ್ಟಾರಚಕ್ರವಿದೆ.

ತ್ರಿಶೂಲಬಂಧ

ರುದ್ರಟನಲ್ಲಿ ಇದರ ಪ್ರಸ್ತಾಪವಿದೆ. ಅಲ್ಲಿಯ ಲಕ್ಷ್ಯಪದ್ಯ ಇಂತಿದೆ :

ಮಾ ಮಹೋ ರಾಜಸಂ ಸ್ವಾಸೂಂಲ್ಲೋಕಕೂಟೇಶದೇವತಾಮ್ ।
ತಾಂ ಶಿವಾವಾಶಿತಾಂ ಸಿದ್ಧ್ಯೈಧ್ಯಾಸಿತಾಂ ಹಿ ಸ್ತುತಾಂ ಸ್ತುಹಿ ॥ (೧೧)

ಇದರ ವಿನ್ಯಾಸವನ್ನು ಕುರಿತಂತೆ ನಮಿಸಾಧುವಿನ ವಿವರಣೆ ಹೀಗಿದೆ :

“ಪ್ರಥಮಮರ್ಧಂ ದಂಡಭಾಗೇ ದ್ವಿತೀಯಂ ತ್ವಾವರ್ತಪರಾವರ್ತೈಃ ಶಿಖಾಸು ।
ತತ್ರ ಸರ್ವಶಿಖಾಮೂಲೇ 'ತಾಂ' ಶಬ್ದೋ ವಾರಪಂಚಕಮುಚ್ಚಾರ್ಯತೇ ।
ಶಿಖಾಯಾಮೇಕಸ್ಯ 'ಶಿವಾ', ದ್ವಿತೀಯಾಯಾಂ 'ಸಿದ್ಧ್ಯೈ', ಮಧ್ಯಮಾಯಾಂ 'ಸ್ತುಹಿ' ।”

ಎಂದರೆ ದತ್ತಶ್ಲೋಕದ ಮೊದಲನೆಯ ಅರ್ಧವನ್ನು ದಂಡಭಾಗದಲ್ಲಿ ಹೊಂದಿಸಬೇಕು; ಉಳಿದರ್ಧವನ್ನು ಆವರ್ತ ಪರಾವರ್ತಗಳಿಂದ ಶಿಖೆಗಳಲ್ಲಿ ಅಳವಡಿಸಬೇಕು. ಸರ್ವಶಿಖಾಮೂಲದಲ್ಲಿ 'ತಾಂ' ಎಂಬುದು ಐದು ಬಾರಿ ಆವೃತ್ತಿಗೊಳ್ಳುತ್ತದೆ; ಮೊದಲನೆಯ ಶಿಖೆಯಲ್ಲಿ 'ಶಿವಾ' ಎಂಬುದೂ ಎರಡನೆಯದರಲ್ಲಿ 'ಸಿದ್ಧ್ಯೈ' ಎಂಬುದೂ ನಡುವಿನದರಲ್ಲಿ 'ಸ್ತುಹಿ' ಎಂಬುದೂ ಬರುತ್ತವೆ.

'ಚಿತ್ರಬಂಧಕಾವ್ಯ'ದಲ್ಲಿ ಇದರ ಲಕ್ಷಣ (ಪ್ರ. ३೭) :

ಮಧ್ಯೇಽಧಸ್ತಾದ್ದ್ವೇಪದೇ ಚ ಹ್ಯನುಲೋಮವಿಲೋಮತಃ ।
ಉಪರ್ಯಧೋ ಮಧ್ಯತೋಽಪಿ ಚೋರ್ಧ್ವಾರ್ಣನ್ಮಧ್ಯೇ ತ್ರಿಶೂಲಕೇ ॥

“‘ತ್ರಿಶೂಲಬಂಧದಲ್ಲಿ ಎರಡು ಪಾದಗಳು ಕೆಳಗಿನಿಂದ ಮಧ್ಯದವರೆಗೆ, ಮತ್ತೆ ಅನುಲೋಮ-ವಿಲೋಮಾನುಸಾರವಾಗಿ ಎರಡೂ ಪಕ್ಕಗಳಲ್ಲಿ ಮೇಲೆ-ಕೆಳಗೆ ಹಾಗೂ ಮಧ್ಯದಲ್ಲಿ ಎರಡು ಸಾರಿ ಕೆಳಗಿನಿಂದ ಮೇಲೆ ಅಕ್ಷರಗಳು ನಡೆಯುವುದಾಗಲಿ” ಎನ್ನುವುದು ಇಲ್ಲಿಯ ಆಶಯ.

ಈ ಬಂಧಕ್ಕೆ ಹೊಂದುವ ಶ್ಲೋಕದ ವರ್ಣವಿನ್ಯಾಸವನ್ನು ಹೀಗೆ ಸೂತ್ರೀಕರಿಸಬಹುದು :

ಅಕ್ಷರ ಕ್ರಮಸಂಖ್ಯೆ	1	2	3	4	5	6	7	8
೧ನೆಯ ಪಾದ	–	–	–	–	–	–	–	–
೨ನೆಯ ಪಾದ	–	–	–	–	–	–	–	A
೩ನೆಯ ಪಾದ	A	B	C	C	B	A	D	E
೪ನೆಯ ಪಾದ	E	D	A	F	G	A	G	F



ಬಂಧ ೩೨



ಬಂಧ ೩೩

ನಾಗವರ್ಮನ 'ಕಾವ್ಯಾವಲೋಕನ'ದಲ್ಲಿ ಶೂಲಬಂಧದ ಈ ಒಂದು ಪದ್ಯವಿದೆ. (೫೭೨) :

ವೀರಶ್ರೀಕಾಂತೆಯಂ ತಾಳೆ । ಚರಾಚರಜನಸ್ತುತಾ ।
ತಾರತಾತಾರತಾರೇಶ । ಶರೇತಾರಾಜಿತಾಜಿರಾ ॥

ಇಲ್ಲಿಯ ಅಕ್ಷರವಿನ್ಯಾಸ ಮೇಲಿನ ಸೂತ್ರಕ್ಕೆ ಸಂಪೂರ್ಣವಾಗಿ ಹೊಂದುತ್ತದೆ. ಹಾಗಾಗಿ ಇದನ್ನು ಕೂಡ ಮೇಲಿನಂತೆಯೇ, ಬಂಧ ೩೩ರಲ್ಲಿರುವಂತೆ ತ್ರಿಶೂಲರೂಪದಲ್ಲಿ ಬರೆಯಬಹುದು.

'ನರಪತಿಚರಿತ'ದಲ್ಲಿ ಕೂಡ ಒಂದು ತ್ರಿಶೂಲಬಂಧದ ಪದ್ಯವಿದೆ. ಆದರೆ ಅದು ರುದ್ರಟ, ನಾಗವರ್ಮರಲ್ಲಿಯಂತೆ ಶ್ಲೋಕವಾಗಿಲ್ಲ; ಒಂದು ಉತ್ಸಾಹ ವೃತ್ತವಾಗಿದೆ. (ಗಣಪವರಪು ವೆಂಕಟ ಕವಿಯ ತೆಲುಗುಕೃತಿಗಳಲ್ಲಿ ಪಂಚಚಾಮರ ವೃತ್ತ ಬಳಸಿದೆ). ಇದರಿಂದಾಗಿ ಆ ಕೃತಿಯಲ್ಲಿ ಪ್ರಕಟವಾಗಿರುವ ಬಂಧದ ವಿನ್ಯಾಸ ಕೂಡ ಭಿನ್ನವಾಗಿದೆ. ಅಲ್ಲಿಯ ಪದ್ಯ ಇದು :

ವಾರಿಜಾರಿಹಾರಿಕೀರ್ತಿಭಾರಕಾರಣಂ ರಸಾ
ಸಾರರಮ್ಯಕಾವ್ಯಬಂಧಕೋವಿದಂ ಕೃಪಾನಿಧೀ
ಧೀರಕೃಷ್ಣಭೂಪನಿತ್ತ ಬಾರನೇಕೆ ನಿಟ್ಟಿಸಾ
ಸಾರಸಾರಸಾಕ್ಷಿ ಪೇಳ್ವುದಲ್ಲವೇನೆ ನೀಂ ಸುಧೀ ॥ ೨-೧೮ ॥

ಬಂಧ ೩೪ರಲ್ಲಿ ಇದನ್ನು ಅಳವಡಿಸಿದೆ. (ಅಂಕಿಗಳ ಅನುಕ್ರಮಣಿಕೆಯು ವಿನ್ಯಾಸಕ್ರಮವನ್ನು ಸ್ಪಷ್ಟಪಡಿಸುತ್ತದೆ). ಈ ಬಂಧಕ್ಕೆ ಹೊಂದುವ ಇಂತಹ ಪದ್ಯದ ಅಕ್ಷರ ವಿನ್ಯಾಸ ಹೀಗಿರುತ್ತದೆ :

ಅಕ್ಷರ ಕ್ರಮಸಂಖ್ಯೆ	1	2	3	4	5	6	7	8	9	10	11	12	13	14	15
೧ನೆಯ ಪಾದ	–	A	–	A	–	A	–	–	–	–	–	–	–	–	B
೨ನೆಯ ಪಾದ	B	–	–	–	–	–	–	–	–	–	–	–	–	–	C
೩ನೆಯ ಪಾದ	C	–	–	–	–	–	–	–	–	–	–	–	–	–	B
೪ನೆಯ ಪಾದ	B	–	B	–	–	–	–	–	–	–	–	–	–	–	C

ಧನುರ್ಬಂಧ

ರುದ್ರಟ ಈ ಬಂಧದ ಬಗ್ಗೆ ಹೇಳಿದ್ದಾನೆ. ಆತ ಇದಕ್ಕೆ ಕೊಡುವ ಲಕ್ಷ್ಯಪದ್ಯ ಇದು :

ಮಾಮಭೀದಾ ಶರಣ್ಯಾ ಮುತ್ಸದ್ಯೈಪಾರುಕ್ಪ್ರದಾ ಚ ಧೀಃ ।
ಧೀರಾ ಪವಿತ್ರಾ ಸನ್ಮಾತ್ರಸಾತ್ ತ್ರಾಸೀಷ್ಟಾ ಮಾತರಾರಮ ॥ ೯ ॥

ಇದಕ್ಕೆ ನಮಿಸಾಧುವಿನ ವಿವರಣೆ ಹೀಗಿದೆ : ''ತತ್ರಾದ್ಯಮರ್ಧಂ ಕುಟಿಲಂ ವಂಶಭಾಗೇ ದ್ವಿತೀಯಂ ಗುಣಾಕಾರಂ 'ಮಾ' ಶಬ್ದೋಽಧಸ್ತನಕೋಟಿಪ್ರಾನ್ತೇ ತದುಪಾನ್ತೇ ಚ ಮಕಾರೋ ದ್ವಿರಾವೃತ್ತಿ, 'ಧೀ' ಶಬ್ದಶ್ಚ ಶಿಖಾರೂಪಃ''

ಇದರ ಪ್ರಕಾರ ಮೊದಲ ಅರ್ಧವು ವಕ್ರವಾದ ಬಿದಿರಿನ ಬಿಲ್ಲಿನ ಭಾಗದಲ್ಲೂ ಎರಡನೆಯ ಅರ್ಧವು ಹೆದೆಯ ಭಾಗದಲ್ಲೂ ಬರುತ್ತದೆ. ಮೊದಲ ಕೊಪ್ಪಿನಲ್ಲಿ 'ಮಾ', ಎರಡನೆಯ ಕೊಪ್ಪಿನಲ್ಲಿ 'ಧೀಃ' ಬರುತ್ತವೆ. 'ಮಾ'ದ ಮುಂದಿನ ಮಕಾರವು ದ್ವಿರಾವೃತ್ತಿ ಹೊಂದುತ್ತದೆ. ಬಿಲ್ಲಿನ ಕೆಳತುದಿ ಮತ್ತು ಅದರ ಹತ್ತಿರದಲ್ಲಿ ಒಂದೇ ಬಗೆಯ ಅಕ್ಷರವಿರುತ್ತದೆ. (ಬಿಲ್ಲಿನ ಮೇಲನ್ನು ಕೆಳಗೆಂದೂ ಕೆಳಗನ್ನು ಮೇಲೆಂದೂ ತಿಳಿಯಬೇಕು. ನೋಡಿ : ಬಂಧ ೩೫).

'ಚಿತ್ರಬಂಧಕಾವ್ಯ'ದಲ್ಲಿ ಇದರ ಲಕ್ಷಣವನ್ನು

ಅಧಸ್ತಾತ್ ಪರಿತೋಗಚ್ಛನ್ ದ್ವಿತೀಯೋ ವಿರಮೇತ್ ಪುನಃ ।
ಧನುರ್ಬಂಧೇ ಕ್ರಮಮಿಮಂ ಜಾನಸ್ತು ವಿದುಷಾಂ ವರಾಃ ॥

ಎಂಬುದಾಗಿ (ಪು. ೩೦) ತಿಳಿಸಿದೆ. ಇದರ ಆಶಯ : ''ಕೆಳಮುಖವಾಗಿ ಸುತ್ತಲೂ ಸಾಗುತ್ತ, ಪದ್ಯದ ಎರಡನೆಯ ಅಕ್ಷರಸ್ಥಾನದಲ್ಲಿ ನಿಲ್ಲಬೇಕು. ಅಯ್ಯಾ ವಿದ್ವದ್ವರ ಧನುರ್ಬಂಧದ ಈ ಕ್ರಮವನ್ನು ತಿಳಿಯುವುದಾಗಲಿ.'' ತೆಲುಗಿನ 'ಪ್ರಬಂಧ ಸಂಬಂಧ ಬಂಧ ನಿಬಂಧನ ಗ್ರಂಥಮು' ಎಂಬ ಲಕ್ಷಣಗ್ರಂಥದಲ್ಲಿಯೂ ಲಕ್ಷಣ ಉಕ್ತವಾಗಿದೆ. ಅಲ್ಲಮರಾಜು ರಾಮಕೃಷ್ಣ ಕವಿಯ 'ಕವಿಜನಚಂದ್ರೋದಯ'ದಲ್ಲಿ ಉತ್ಪಲಮಾಲೆಯಿಂದ, ರಾವುಕೊಂಡಲ ರಾಯುಡ 'ಚಿತ್ರಕವಿತ್ವ ದರ್ಪಣ'ದಲ್ಲಿ ಕಂದಪದ್ಯದಿಂದ, 'ಶಿವಕರ್ಣಾಮೃತಸ್ತೋತ್ರ'ದಲ್ಲಿ ಶ್ಲೋಕದಿಂದ, ಕಪಿಲವಾಯಿ ಲಿಂಗಮೂರ್ತಿಯ ಒಂದು ರಚನೆಯಲ್ಲಿ ತೇಟಗೀತಿಯಿಂದ ಧನುರ್ಬಂಧಗಳನ್ನು ರಚಿಸಿರುವುದು ನೋಡಿದರೆ, ಕವಿಗಳು ತಮ್ಮ ಅಗತ್ಯಕ್ಕೆ ಅನುಗುಣವಾಗಿ ಕೊಂಚ ಬದಲಾವಣೆಗಳನ್ನು ಮಾಡಿಕೊಳ್ಳಬಹುದೆಂದು ತೋರುತ್ತದೆ. ಧನುರ್ಬಂಧವು ಶಾರ್ಙ್ಗಬಂಧದಿಂದ ಅಭಿನ್ನವೆಂದು ಹೇಳಬಹುದು.



ಬಂಧ ೩೪



ಬಂಧ ೩೫



ಬಂಧ ೩೬

ಈ ಬಂಧಕ್ಕೆ ಹೊಂದುವ ಪದ್ಯದ ವರ್ಣವಿನ್ಯಾಸವನ್ನು ಹೀಗೆ ನಿರೂಪಿಸಬಹುದು :

ಅಕ್ಷರ ಕ್ರಮಸಂಖ್ಯೆ	1	2	3	4	5	6	7	8
೧ನೆಯ ಪಾದ	–	A	–	–	–	–	–	–
೨ನೆಯ ಪಾದ	–	–	–	–	–	–	–	B
೩ನೆಯ ಪಾದ	B	–	–	–	C	–	C	–
೪ನೆಯ ಪಾದ	C	–	–	–	–	–	–	A

ನಾಗವರ್ಮನ 'ಕಾವ್ಯಾವಲೋಕನ'ದಲ್ಲಿ ಒಂದು ಧನುರ್ಬಂಧವಿದೆ. ಅದರ ಲಕ್ಷ್ಯಪದ್ಯ ಇದು :

ಸಂಸಾರವಿಷಮವಾರಿಧಿ । ಸಂಸರ್ಪಣದುಃಖವೀಚಿಯೊಂದುಲ್ಲಾಸಂ ।
ಸಂಸಕ್ತಮಾಗದಂತು ಜಿ । ನಂ ಸುವ್ರತನಾಮನೆಮಗೆ ಕರುಣಿಸುಗಿನಿಸಂ ॥ ೫೭೩ ॥

ಮೊದಲನೆಯದಾಗಿ ಇದು ಕಂದಪದ್ಯ; ಮೇಲಿನಂತೆ ಶ್ಲೋಕವಲ್ಲ. ಎರಡನೆಯದಾಗಿ, ದ್ವಿತೀಯಾಕ್ಷರ ಮತ್ತು ೧–೪೫ರ ಸಾಮ್ಯದ ಅಂತ್ಯಾಕ್ಷರ ಇವೆರಡೂ ಒಂದೇ ಆಗಿಲ್ಲ. ಬಿಂದುವಿನ ಭಾವಾಭಾವವನ್ನು ಒಪ್ಪಿರುವರಲ್ಲದೆ, ಹ್ರಸ್ವ ದೀರ್ಘಸ್ವರಗಳ ಅಭೇದವನ್ನು ಯಾರೂ ಒಪ್ಪಿರುವಂತೆ ತೋರುವುದಿಲ್ಲ. ಹಾಗೆ ಒಪ್ಪಿದ್ದರೆ, ೨ನೆಯ ಅಕ್ಷರದ ಆವೃತ್ತಿಯನ್ನು ಬಂಧ ೩೫ರ ಹಾಗೆ ಒಪ್ಪಬಹುದಾಗಿತ್ತು. ಹಾಗಾಗಿ ಸ್ವಲ್ಪ ವ್ಯತ್ಯಾಸದೊಂದಿಗೆ ಧನುರ್ಬಂಧಕ್ಕೆ ಪದ್ಯವನ್ನು ಹೊಂದಿಸಬೇಕಾಗುತ್ತದೆ. (ಬಂಧದಲ್ಲಿ, ಅಂಕಿಗಳ ಅನುಕ್ರಮಣಿಯು ಬಂಧದ ಅಕ್ಷರಗಳ ವಿನ್ಯಾಸಕ್ರಮವನ್ನು ಸ್ಪಷ್ಟಪಡಿಸುತ್ತದೆ). ಇಂತಹ ವ್ಯತ್ಯಾಸಗಳು ಈ ಬಂಧದಲ್ಲಿ (ಬಂಧ ೩೬) ಉಂಟು.

ಪರಶುಬಂಧ

'ಅಲಂಕಾರ ಚಿಂತಾಮಣಿ'ಯಲ್ಲಿ ಈ ಬಂಧವಿದೆ. ಅಲ್ಲಿರುವ ಲಕ್ಷಣ ಲಕ್ಷ್ಯಪದ್ಯಗಳು ಇವು :

ಏಕಸಂಧೌ ತು ಷಡ್ವಾರಮೇಕಮೇಕಂ ದ್ವಿರಾನಯೇತ್ ।
ಶೃಂಗೇ ಶಿರಸಿ ಚ ಗ್ರೀವಾಂ ತ್ರಿಯುಕ್ತಾಂ ಪರಶೌ ಪಠೇತ್ ॥ (೨–೧೭೭)

ಸೋऽವ್ಯಾಚ್ಛಾಂತಿರ್ಜಿತ್ಯೈನಾ ನೋ ನೋನೋನಾ ಗಗನಾಂಗನಾಮ್ ।
ನಾತಮಾ ನಾऽऽತಮಾಂ ತಥ್ಯಾಂ ಸಭಾಂ ನತ್ವಾऽನ್ತಮಾತನಾಮ್ ॥ (೨–೧೭೮)

ಈ ಬಂಧದಲ್ಲಿ ಸಂಧಿಸ್ಥಾನದಲ್ಲಿ ಬರುವ ಒಂದು ಅಕ್ಷರವು ('ನಾ') ೬ ಬಾರಿ (ದಿಟವಾಗಿ ೭ ಬಾರಿ) ಆವರ್ತಿತವಾಗುತ್ತದೆ. ಶೃಂಗ, ಶಿರ ಮತ್ತು ಗ್ರೀವಾಭಾಗದಲ್ಲಿರುವ ಅಕ್ಷರಗಳು ಒಂದೊಂದೂ ೩ ಬಾರಿ ಆವರ್ತಿತವಾಗುತ್ತವೆ. ಇದಕ್ಕೆ ಹೊಂದುವ ಶ್ಲೋಕದ ಅಕ್ಷರವಿನ್ಯಾಸ ಹೀಗಿರಬೇಕು :

ಅಕ್ಷರ ಕ್ರಮಸಂಖ್ಯೆ	1	2	3	4	5	6	7	8
೧ನೆಯ ಪಾದ	–	–	–	–	–	–	A	B
೨ನೆಯ ಪಾದ	B	B	A	C	C	A	C	A
೩ನೆಯ ಪಾದ	A	D	E	A	D	E	F	–
೪ನೆಯ ಪಾದ	–	–	–	–	F	E	D	A

ಮುಸಲಬಂಧ

ರುದ್ರಟನ 'ಕಾವ್ಯಾಲಂಕಾರ'ದಲ್ಲಿ ಈ ಬಂಧದ ಪ್ರಸ್ತಾಪವಿದೆ (೫–೮). ಅಲ್ಲಿಯ ಲಕ್ಷ್ಯಪದ್ಯ ಇದು :

ಮಾಯಾವಿನಂ ಮಹಾಹಾಸಾ ರಸಾಯಾತಂ ಲಸದ್ಭುಜಾ ।
ಜಾತಲೀಲಾऽಯಥಾಸಾರವಾಚಂ ಮಹಿಷಮಾವಧೀಃ ॥ ೫–೮ ॥

ಇದಕ್ಕೆ ನಮಿಸಾಧುವಿನ ವಿವರಣೆ ಹೀಗಿದೆ :

ಮಧ್ಯೇ ತನು ಪಾರ್ಶ್ವಯೋಃ ಸ್ಥೂಲಮೇಕತ್ರಪ್ರಾನ್ತೇ ತೀಕ್ಷ್ಣಮ್ ।
ತತ್ರ ಮಧ್ಯೇ ವಾರಸಾ ಇತ್ಯಕ್ಷರತ್ರಯಂ ಸಾಧಾರಣಮನ್ತೇ 'ಜಾ' ಇತಿ ।

ಇದರ ಪ್ರಕಾರ ಮುಸಲದ ಮಧ್ಯಭಾಗ ಸಣ್ಣ, ಅದರ ಎರಡೂ ಪಾರ್ಶ್ವಗಳು ದಪ್ಪ; ಒಂದು ತುದಿಯಲ್ಲಿ ಮೊನೆ; ಮಧ್ಯದಲ್ಲಿ 'ವಾರಸಾ'; ಮೊನೆಯಲ್ಲಿ 'ಜಾ'. (ಉಳಿದವು ಚಿತ್ರದಲ್ಲಿ ತೋರಿಸಿದಂತೆ). ಇದು ಇದರ ವಿನ್ಯಾಸಕ್ರಮ.

'ಚಿತ್ರಬಂಧಕಾವ್ಯ'ದಲ್ಲಿ (ಪು. ೩೫) ಇದರ ಲಕ್ಷಣ ಹೀಗಿದೆ :

ಊರ್ಧ್ವಾದಧಸ್ತತಶ್ಚೋರ್ಧ್ವೇ ಹ್ಯನುಲೋಮವಿಲೋಮತಃ ।
ಮಧ್ಯವರ್ಣತ್ರಯಂ ಜ್ಞೇಯಂ ಬಂಧೇತ್ರ ಮುಸಲಾಭಿಧೇ ॥

''ಮುಸಲನೆಂಬ ಹೆಸರಿನ ಈ ಬಂಧದಲ್ಲಿ ಮೇಲಿನಿಂದ ಕೆಳಗೆ ಮತ್ತು ಕೆಳಗಿನಿಂದ ಮೇಲೆ ಅಕ್ಷರಗಳು ನಡೆಯುತ್ತವೆ. ಮಧ್ಯದಲ್ಲಿ ೩ ಅಕ್ಷರಗಳು ಅನುಲೋಮ--ವಿಲೋಮಕ್ರಮಗಳಲ್ಲಿ ನಡೆಯುವಾಗ ಒಂದೇ ಆಗಿರುತ್ತವೆ.'' ಇದು ಲಕ್ಷಣಶ್ಲೋಕದ ಆಶಯ. ಇದು ನಮಿಸಾಧುವಿನಲ್ಲಿ ದೊರೆಯದ ಲಕ್ಷಣ ಭಾಗವನ್ನು ಸ್ಪಷ್ಟಪಡಿಸುತ್ತದೆ.

ಮುಸಲಬಂಧಕ್ಕೆ ಹೊಂದುವ ಪದ್ಯದ ರಚನೆಯ ಕ್ರಮವನ್ನು ಹೀಗೆ ನಿರೂಪಿಸಬಹುದು : ಮೊದಲನೆಯದಾಗಿ ಇದು ಶ್ಲೋಕವಾಗಿರಬೇಕು. ಎರಡನೆಯದಾಗಿ ಇದರಲ್ಲಿ ೮–೨೫, ೯–೨೪, ೧೦–೨೩, ೧೬–೧೭ನೆಯ ಸ್ಥಾನಯುಗ್ಮಗಳಲ್ಲಿ ಒಂದೊಂದೇ ಅಕ್ಷರ ಬರಬೇಕು. ಇದನ್ನು ಹೀಗೆ ಕೂಡ ತೋರಿಸಬಹುದು :

ಅಕ್ಷರ ಕ್ರಮಸಂಖ್ಯೆ	1	2	3	4	5	6	7	8
೧ನೆಯ ಪಾದ	–	–	–	–	–	–	–	A
೨ನೆಯ ಪಾದ	B	C	–	–	–	–	–	D
೩ನೆಯ ಪಾದ	D	–	–	–	–	–	C	B
೪ನೆಯ ಪಾದ	A	–	–	–	–	–	–	–

ಶಕ್ತಿಬಂಧ

ರುದ್ರಟನ 'ಕಾವ್ಯಾಲಂಕಾರ'ದಲ್ಲಿ ಈ ಬಂಧದ ಪ್ರಸ್ತಾಪವಿದೆ (೫–೧೨). (''ಶಕ್ತಿಶ್ಚ ಶೂಲವಿಶೇಷಃ'' ಎಂಬುದು ಅಭಯದೇವ ಸೂರಿಯ ಮಾತು.)

ಮಾಹಿಷಾಖ್ಯೇ ರಣೇಽನ್ಯಾ ನು ಸಾ ನು ನಾನೇಯಮತ್ರ ಹಿ ।
ಹಿಮಾತರಿಕಾದಿಪಾಮುಂ ಚ ಕಂ ಕಂಪಿನಮುಪಪ್ಲುತಮ್ ॥ (೫–೧೨)

ನಮಿಸಾಧುವಿನ ವಿವರಣೆ ಹೀಗಿದೆ : ''ಅತ್ರ....ಶ್ಲೋಕೇನ ಮಧ್ಯತನ್ವೀ ತೀಕ್ಷ್ಣಪ್ರಾನ್ತಾಶಕ್ತಿರುತ್ಪದ್ಯತೇ। ತತ್ರ 'ಹಿಮಾತಂ' ಇತ್ಯಕ್ಷರತ್ರಯಂ ಮಧ್ಯೇ, 'ನುಸಾ' ಅಧಃ, 'ಕಂ' ಉಪರಿ । ತತ್ರ 'ಹಿ' ದ್ವಿರಾವೃತ್ತಿಃ, 'ಮಾತಂನುಕಂ' ಏತೇ ದ್ವಿರಾವೃತ್ತಯಃ ॥'' ಇದರ ಪ್ರಕಾರ, ಈ ಶ್ಲೋಕದಿಂದ, ಮಧ್ಯೆ ಸಣ್ಣಗೂ ತುದಿಯಲ್ಲಿ ಮೊನಚಾಗಿಯೂ ಇರುವ 'ಶಕ್ತಿ' ನಿರ್ಮಾಣವಾಗುತ್ತದೆ. ಅದರಲ್ಲಿ 'ಹಿಮಾತಂ' ಈ ಮೂರು ಅಕ್ಷರಗಳು ಮಧ್ಯೆ ಬರುತ್ತವೆ; 'ನುಸಾ' ಕೆಳಗೆ, 'ಕಂ' ಮೇಲೆ. 'ಹಿ' ಮೂರು ಬಾರಿ (ವ್ಯಾಖ್ಯಾನದಲ್ಲಿ ಎರಡುಬಾರಿ ಎಂದಿದೆ) ಆವೃತ್ತಿಗೊಳ್ಳುತ್ತದೆ; 'ಮಾ, ತಂ, ನು, ಕಂ' ಎರಡು ಬಾರಿ ಆವೃತ್ತಿ. ಇದು ಇದರ ವಿನ್ಯಾಸಕ್ರಮ.

'ಚಿತ್ರಬಂಧಕಾವ್ಯ'ದಲ್ಲಿ ಈ ಬಂಧದ ಲಕ್ಷಣವನ್ನು ಹೀಗೆ ಹೇಳಿದೆ (ಪು. ೩೮) :

ಮಧ್ಯತೋಽಧಸ್ತತೋ ಮಧ್ಯೇ ತತಶ್ಚೋಪರಿತೋ ಭ್ರಮನ್
ಪುನರ್ಮಧ್ಯೇ ಸಮಾಪ್ತಃ ಸ್ಯಾದ್ ಬಂಧೇಽತ್ರ ಶಕ್ತಿಸಂಜ್ಞಕೇ ॥

''ಶಕ್ತಿಬಂಧದಲ್ಲಿ ಮೊದಲು ಬಂಧದ ಮಧ್ಯದಿಂದ ಕೆಳಗೆ, ಮತ್ತೆ ಕೆಳಗಿನಿಂದ ಮಧ್ಯದವರೆಗೆ ಮೇಲಕ್ಕೆ ಸಾಗುವುದಾಗಲಿ; ಬಳಿಕ ಮಧ್ಯದಿಂದ ಮೇಲುಮುಖವಾಗಿ ಸುತ್ತುಹಾಕಿ ಮಧ್ಯದಲ್ಲಿಯೇ ಕೊನೆಯಾಗಲಿ'' ಎಂದು ಈ ಪದ್ಯದ ಆಶಯ.

ಶಕ್ತಿಬಂಧಕ್ಕೆ ಹೊಂದುವ ಪದ್ಯದ ರಚನೆಯ ಕ್ರಮವನ್ನು ಹೀಗೆ ನಿರೂಪಿಸಬಹುದು : ಮೊದಲನೆಯದಾಗಿ ಅದು ಶ್ಲೋಕವಾಗಿರಬೇಕು. ಎರಡನೆಯದಾಗಿ ೧–೧೮, ೨–೧೬–೧೭, ೮–೧೦, ೧೯–೩೨, ೨೫–೨೬ ಈ ಸ್ಥಾನಗಳಲ್ಲಿ ಒಂದೊಂದೇ ಅಕ್ಷರ ಬರಬೇಕು. ಇದನ್ನು ಹೀಗೆ ಕೂಡ ತೋರಿಸಬಹುದು :

ಅಕ್ಷರ / ಕ್ರಮಸಂಖ್ಯೆ	1	2	3	4	5	6	7	8
೧ನೆಯ ಪಾದ	A	B	–	–	–	–	–	C
೨ನೆಯ ಪಾದ	–	C	–	–	–	–	–	B
೩ನೆಯ ಪಾದ	B	A	D	–	–	–	–	–
೪ನೆಯ ಪಾದ	E	E	–	–	–	–	–	D



ಬಂಧ ೩೭



ಬಂಧ ೩೮



ಬಂಧ ೩೯

ಶರಬಂಧ

ರುದ್ರಟನ 'ಕಾವ್ಯಾಲಂಕಾರ'ದಲ್ಲಿ ಈ ಬಂಧದ ಪ್ರಸ್ತಾಪವಿದ್ದು, ಇದರ ಲಕ್ಷ್ಯಪದ್ಯವಿಂತಿದೆ :

ಮಾನನಾ ಪರುಷಂ ಲೋಕ । ದೇವೀಂ ಸದ್ರುಸ ಸನ್ನಮ ।
ಮನಸಾ ಸಾದರಂ ಗತ್ವಾ । ಸರ್ವದಾ ದಾಸ್ಯಮುಂಗತಾಮ್ ॥ (೫–೧೦)

ಇದಕ್ಕೆ ನಮಿಸಾಧುವಿನ ವಿವರಣೆ ಹೀಗಿದೆ: ''ಅತ್ರ ಪ್ರಥಮಪಾದೇನ ದಂಡಃ, ದ್ವಿತೀಯೇನ ಫಲಂ, ತೃತೀಯ ಚತುರ್ಥಾಭ್ಯಾಂ ವಾಜಾವಟನೀ ಚ.'' ಇದರ ಪ್ರಕಾರ ಪ್ರಥಮಪಾದದಿಂದ ಶರದಂಡ, ದ್ವಿತೀಯಪಾದದಿಂದ ಫಲ, ತೃತೀಯದಿಂದ ವಾಜ, ಚತುರ್ಥದಿಂದ ಅಟನಿ ಸಿದ್ಧವಾಗುತ್ತದೆ. ೪೦ನೆಯ ಬಂಧವು ಈ ವಿವರಣೆಗೆ ಸರಿಯಾಗಿ ಹೊಂದುತ್ತದೆ. ಇದೇ ಪದ್ಯವನ್ನು ಮತ್ತೆರಡು ರೀತಿಯ ಶರಗಳಲ್ಲಿ ಹೊಂದಿಸಬಹುದೆಂದು ಕಪಾಡಿಯಾ ಅವರು ತಿಳಿಸಿ, ಬಂಧ ೪೧ ಮತ್ತು ಬಂಧ ೪೨ನ್ನು ರೂಪಿಸಿದ್ದಾರೆ (ಜೆಬಿಯು. ೨೪–೨, ಪು. ೧೩೧). ಈ ಮೂರರ ಅಕ್ಷರ ವಿನ್ಯಾಸ ಸೂಚಿಸಿ ಸೂತ್ರಗಳನ್ನು ಮುಂದೆ ತೋರಿಸಿದೆ.



ಬಂಧ ೪೦



ಬಂಧ ೪೧



ಬಂಧ ೪೨

ಈ ಬಂಧದ ಲಕ್ಷಣವನ್ನು 'ಚಿತ್ರಬಂಧಕಾವ್ಯ'ದಲ್ಲಿ ಹೀಗೆ ಹೇಳಿದೆ (ಪು. ೩೧):

ಮಧ್ಯತೋ ಯುಗ್ಮಪಾರ್ಶ್ವೇಽಥಃ ಪುನಃ ಪಾರ್ಶ್ವದ್ವಯೋ ತಥಾ ।
ಅಥಶ್ಚೋಪರಿ ಮಧ್ಯಾಚ್ಚ ತತ್ರೈವ ವಿರಮೇತ್ ಸರನ್ ॥
ವಿದ್ವದ್ಭಿಶ್ಚಾವಧೇಯಂ ತು ಬಂಧೇಽತ್ರ ಬಾಣಸಂಜ್ಞಕೇ ॥

ಈ ಪದ್ಯದ ಆಶಯವೆಂದರೆ: ''ಮಧ್ಯಭಾಗದಿಂದ ಮೇಲುಭಾಗಕ್ಕೆ ಸಾಗಿ ಎರಡೂ ಪಕ್ಕಗಳಲ್ಲಿ ನಡೆಯುವುದು; ಮತ್ತೆ ಕೆಳಗಿನ ಎರಡೂ ಪಕ್ಕಗಳಲ್ಲಿ ಸಾಗಿ, ಪೂರ್ತಿ ಕೆಳನಡೆದು, ಮತ್ತೆ ಮೇಲೆ ಹೋಗಿ, ಅಡ್ಡವಾಗಿ ನಡೆದು ನಿಲ್ಲುವುದು. ವಿದ್ವಾಂಸರು ಹೀಗೆ ಶರಬಂಧವನ್ನು ತಿಳಿಯುವುದಾಗಬೇಕು.''

'ಪಾದುಕಾಸಹಸ್ರ'ದಲ್ಲಿ,

ಯತ್ರಾರ್ಧಯೋಃ ಚತುರ್ವರ್ಣಾ ಆದಾವಂತೇ ಪುನಸ್ತ್ರಯಃ ।
ಮಧ್ಯೇ ಶ್ಲಿಷ್ಟಾಃ ಚತುರ್ಯುಗ್ಮಾಃ ಶರಬಂಧೋಽಯಮುಚ್ಯತೇ ॥

ಎಂಬುದಾಗಿ ತಿಳಿಸಿದ್ದು, ''ಪ್ರತಿ ಅರ್ಧದ ಆದಿಯ ೪ ಅಕ್ಷರಗಳು ಮೊದಲಲ್ಲಿರುತ್ತವೆ; ಅಂತ್ಯದ ೩ ಅಕ್ಷರಗಳು ಕೊನೆಯಲ್ಲಿರುತ್ತವೆ. ನಡುವೆ ಶ್ಲಿಷ್ಟಾಕ್ಷರವೊಡಗೂಡಿದ ಪ್ರತಿಯರ್ಧದ ೨-೨ ಅಕ್ಷರಗಳ ೪ ಜೋಡಿಗಳು ಇರುತ್ತವೆ'' ಎಂದು ಇದರ ಆಶಯವಾಗಿದೆ. ಇದರ ಪ್ರಕಾರ ಹಿಡಿಯ ಭಾಗದಲ್ಲಿ ೪ ಅಕ್ಷರಗಳೂ ಮೊನೆಯ ಭಾಗದಲ್ಲಿ ೩ ಅಕ್ಷರಗಳೂ ವಿನ್ಯಾಸಗೊಂಡು ನಡುವೆ ಶ್ಲಿಷ್ಟಾಕ್ಷರ ಕೂಡಿದ ನಾಲ್ಕು ವರ್ಣಯುಗ್ಮಗಳು ಹೆಣೆದು ಕೊಂಡಿರುತ್ತವೆ. ಕೆಲವು ಸಂಸ್ಕೃತ ಹಾಗೂ ತೆಲುಗು ಗ್ರಂಥಗಳಲ್ಲಿ ಈ ಬಂಧವೈಚಿತ್ರ್ಯವುಂಟು. ಇದಕ್ಕೆ ತೆಲುಗಿನಲ್ಲಿ ಪ್ರಮಾಣಿ ಮತ್ತು ನಾರಾಚ ವೃತ್ತಗಳನ್ನು ಬಳಸಲಾಗುತ್ತದೆ. ಸಂಸ್ಕೃತದ 'ಪಾದುಕಾಸಹಸ್ರ'ದಲ್ಲಿ (ಚಿ. ಪ. ಪ. ೧೩) ಶರವನ್ನು ಶ್ಲೋಕದಲ್ಲಿ ರಚಿಸಿದ್ದರೂ ಬಂಧ ಮೇಲೆ ಹೇಳಿದ ರೀತಿಯದೇ. ಬಂಧದ ಸ್ವರೂಪ ವನ್ನು ಆಯಾ ಮೂಲಗಳನ್ನು ನೋಡಿ ತಿಳಿಯಬಹುದಾಗಿದೆ. ಅಕ್ಷರ ವಿನ್ಯಾಸ ಸೂತ್ರಗಳು (ಬಂಧ ೪೦-೪೧; ೪೨):

ಅಕ್ಷರ ಕ್ರಮಸಂಖ್ಯೆ	1	2	3	4	5	6	7	8
೧ನೆಯ ಪಾದ	–	–	–	–	–	–	–	–
೨ನೆಯ ಪಾದ	–	–	A	–	A	A	–	–
೩ನೆಯ ಪಾದ	–	–	B	B	–	–	–	–
೪ನೆಯ ಪಾದ	–	–	C	C	–	–	–	–

ಅಕ್ಷರ ಕ್ರಮಸಂಖ್ಯೆ	1	2	3	4	5	6	7	8
೧ನೆಯ ಪಾದ	–	–	–	–	–	–	–	–
೨ನೆಯ ಪಾದ	–	–	–	–	–	–	A	B
೩ನೆಯ ಪಾದ	B	A	–	–	–	–	–	–
೪ನೆಯ ಪಾದ	–	–	–	–	–	–	–	–

ನಾಗವರ್ಮನ 'ಕಾವ್ಯಾವಲೋಕನ'ದಲ್ಲಿ ಶರಬಂಧದ ಈ ಒಂದು ಪದ್ಯವಿದೆ:

ಸುಂದರಾಕಾರಸಂಪನ್ನ । ನೆಂದುಮಿಾ ನೃಪನಂದನಂ ।
ನಂದನಂ ಬುಧಕೀರಾಳಿ । ವೃಂದಕ್ಕೆ ಸಕಲತರ್ಕಕಂ (೫೭೧)

ಇದರ ಅಕ್ಷರವಿನ್ಯಾಸವು ಮೂರನೆಯ ಚಿತ್ರಕ್ಕೆ (ಬಂಧ ೪೩) ಮಾತ್ರ ಹೊಂದುತ್ತದೆ. ಅಂಕಿಗಳ ಅನುಕ್ರಮಣಿ ಹಿಡಿದು ಸಾಗಿದಾಗ ಅಕ್ಷರವಿನ್ಯಾಸ ಸ್ಪಷ್ಟಪಡುತ್ತದೆ.



ಬಂಧ ೪೩



ಬಂಧ ೪೪

೩. ವಾದ್ಯಗಳು

ನಿಸ್ಸಾಲಬಂಧ

'ಅಲಂಕಾರ ಚಿಂತಾಮಣಿ'ಯಲ್ಲಿ ಇದರ ಪ್ರಸ್ತಾವವಿದೆ. ಅಲ್ಲಿರುವ ಇದರ (ಬಂಧ ೪೪) ಲಕ್ಷಣ ಲಕ್ಷ್ಯ ಪದ್ಯಗಳು ಇಂತಿವೆ :

ಪ್ರತಿಯಂತ್ರಂ ಚತುಷ್ಕಂ ದ್ವೇದ್ವೇ ಚೋರ್ಧ್ವಾಧೋಽಂತರೇ ತಥಾ ।
ಮಧ್ಯೇಽಪ್ಯೇಕಂ ಲಿಖಿತ್ವೈವಂ ನಿಃಸಾಲಂ ಬಂಧಮುನ್ನಯೇತ್ । (೨–೧೭೧)

ಮಹಾನಂದ ದಯಾದಾನ । ನತರಾಜ ಜರಾಂತಕ ।
ಜನಾನಂದ ದಮಾಧಾರ । ರಕ್ಷ ಮಾಮಮಮಾಕ್ಷಕಮ್ । (೨–೧೭೨)

ನಾಲ್ಕು ಕೋನಗಳಲ್ಲಿ ಪ್ರತಿಯೊಂದರಲ್ಲೂ ಎರಡೆರಡು ಅಕ್ಷರಗಳನ್ನೂ ಮಧ್ಯದಲ್ಲಿ ಒಂದೊಂದು ಅಕ್ಷರವನ್ನೂ ಇಡುವುದರಿಂದ ನಿಸ್ಸಾಲಬಂಧವಾಗುತ್ತದೆ. ವಿಶದವಾಗಿ ಇದರ ಸ್ವರೂಪವೆಂದರೆ, ಕೆಳಗಿನ ಎಡಮೂಲೆಯಿಂದ ಪ್ರಾರಂಭಿಸಿ ಕರ್ಣದಿಶೆಯಲ್ಲಿ ಸಾಗಿ ಮೇಲಿನ ಬಲಮೂಲೆಯನ್ನು ಸೇರಬೇಕು. ಅನಂತರ ಅಲ್ಲಿಂದ

ಎಡಕ್ಕೆ ನೇರವಾಗಿ ಹೊರಟು ಮೇಲಿನ ಎಡಮೂಲೆಯನ್ನು ಸೇರಿ ಮತ್ತೆ ಬಲಮೂಲೆಗೆ ಹಿಂತಿರುಗಿ ಅರ್ಧಪದ್ಯಾಂತಾಕ್ಷರವನ್ನು ಊರ್ಧ್ವತ್ರಿಕೋನ ಮಧ್ಯೆ ಇಡಬೇಕು. ಅನಂತರ ಎಡಮೂಲೆಯಿಂದ ಕರ್ಣಮಾರ್ಗವಾಗಿ ಕೆಳ ಬಲ ಮೂಲೆಗೆ ಬರಬೇಕು. ಅಲ್ಲಿಂದ ಕೆಳ ಎಡಮೂಲೆಗೆ ಹೋಗಿ ಮತ್ತೆ ಕೆಳ ಬಲಮೂಲೆಗೆ ಹಿಂತಿರುಗಿ ಪರಾರ್ಧದ ಅರ್ಧಪದ್ಯಾಂತಾಕ್ಷರವನ್ನು ಇನ್ನೊಂದು ತ್ರಿಕೋನಮಧ್ಯೆ ಇಡಬೇಕು. ಹೀಗೆ ಮಾಡುವಾಗ ಮೂಲೆಯಲ್ಲಿ ಬರುವ ಅಕ್ಷರಗಳು ೨-೨ ಬಾರಿಯೂ ಕೇಂದ್ರಾಕ್ಷರವು ನಾಲ್ಕು ಬಾರಿಯೂ, ಮೇಲೆ ಕೆಳಗಿನ ಬಾಹುಗಳಲ್ಲಿ ಬರುವ ಮಧ್ಯದ ೨-೨ ಅಕ್ಷರಗಳು ಎರಡೆರಡು ಬಾರಿಯೂ ಪುನರಾವರ್ತಿತವಾಗುತ್ತವೆ. ಈ ಬಂಧದ ಶ್ಲೋಕದ ಅಕ್ಷರ ವಿನ್ಯಾಸವನ್ನು ಹೀಗೆ ನಿರೂಪಿಸಬಹುದು :

ಅಕ್ಷರ ಕ್ರಮಸಂಖ್ಯೆ	1	2	3	4	5	6	7	8
೧ನೆಯ ಪಾದ	A	–	–	B	B	–	–	C
೨ನೆಯ ಪಾದ	C	D	E	F	F	E	D	G
೩ನೆಯ ಪಾದ	F	–	–	B	B	–	–	H
೪ನೆಯ ಪಾದ	H	I	J	A	A	J	I	G

ಪಣವಬಂಧ

'ಮದನತಿಲಕ'ದಲ್ಲಿಯ ಪಣವಬಂಧವು (೧-೪೧) ಒಂದು ಶ್ಲೋಕವಾಗಿದ್ದು, ಅದು ಪರಿಚಿತವಾದ ಮುರಜ ಬಂಧದಿಂದ ಬೇರೆಯಿರುವಂತೆ ತೋರುತ್ತದೆ. ಅದರ ಸ್ವರೂಪ ಸ್ಪಷ್ಟವಾಗಬೇಕಾಗಿದೆ. "ಇದುವೆ ಮುರಜ[ಪ]ಣ[ವ]ಬಂಧಮುಂ ಗೋಮೂತ್ರಿಕೆ ಮೊದಲಾದ ಪಲವುಂ ಬಂಧಮುಂ ಜತ್ತಾರಟ್ಟಮೆಂಬೆರಡು ವೃತ್ತ[ಮು]ಮಕ್ಕುಂ" ಎಂಬ ಇನ್ನೊಂದು ಲಕ್ಷ್ಯದಲ್ಲಿಯೂ (೧-೪೩) ಇದೇ ತೆರನ ಸಮಸ್ಯೆಯಿದ್ದು, ಪದ್ಯಪಾಠ ಸ್ಪಷ್ಟವಿಲ್ಲವಾಗಿದೆ.

ಮುರಜಬಂಧ

ರುದ್ರಟನ 'ಕಾವ್ಯಾಲಂಕಾರ'ದಲ್ಲಿರುವ (ಇದನ್ನು ಮಮ್ಮಟನೂ ಉದ್ಧರಿಸಿದ್ದಾನೆ) ಮುರಜಬಂಧದ ಲಕ್ಷ್ಯಪದ್ಯ ಹೀಗಿದೆ :

ಸರಲಾಬಹಲಾರಮ್ಭ । ತರಲಾಲಿಬಲಾರವಾ ।
ವಾರಲಾಬಹಲಾಮನ್ದ । ಕರಲಾ ಬಹಲಾಮಲಾ ॥ ೫-೧೯ ॥

ಇದನ್ನು ಕೆಳಗೆ ತೋರಿಸಿರುವಂತೆ (ಬಂಧ ೪೫) ಚಿತ್ರದಲ್ಲಿ ಅಳವಡಿಸಬಹುದು.



ಬಂಧ ೪೫

ದತ್ತಶ್ಲೋಕವನ್ನು ೪ ಪಾದಗಳಾಗಿ ಬರೆಯಬೇಕು. ಅನಂತರ ೧ನೆಯ ಪಾದದ ೧ನೆಯ ಅಕ್ಷರದಿಂದ ಪ್ರಾರಂಭಿಸಿ, ೨ನೆಯ ಪಾದದ ೨ನೆಯ ಅಕ್ಷರ, ೩ನೆಯ ಪಾದದ ೩ನೆಯ ಅಕ್ಷರ, ೪ನೆಯ ಪಾದದ ೪-೫ನೆಯ ಅಕ್ಷರಗಳು, ೩ನೆಯ ಪಾದದ ೬ನೆಯ ಅಕ್ಷರ, ೨ನೆಯ ಪಾದದ ೭ನೆಯ ಅಕ್ಷರ, ೧ನೆಯ ಪಾದದ ೮ನೆಯ ಅಕ್ಷರ–

ಇವನ್ನು ಅನುಕ್ರಮವಾಗಿ ಕೂಡಿಸಬೇಕು. ಇದರಿಂದ ಮೊದಲ ಪಾದ ಲಭ್ಯವಾಗುತ್ತದೆ. ೪ನೆಯ ಪಾದದ ಮೊದಲ ಅಕ್ಷರದಿಂದ ಪ್ರಾರಂಭಿಸಿ ಇದಕ್ಕೆ ವಿರುದ್ಧ ದಿಕ್ಕಿನಲ್ಲಿ ಇದೇ ರೀತಿ ಸಾಗಿದಾಗ, ೪ನೆಯ ಪಾದ ಸಿದ್ಧವಾಗುತ್ತದೆ. ೨ನೆಯ ಪಾದದ ಮೊದಲ ಅಕ್ಷರದಿಂದ ಪ್ರಾರಂಭಿಸಿ ಮೊದಲ ಪಾದದ ೨-೩ನೆಯ ಅಕ್ಷರಗಳು, ೨ನೆಯ ಪಾದದ ೪-೫ನೆಯ ಅಕ್ಷರಗಳು, ಮೊದಲ ಪಾದದ ೬-೭ನೆಯ ಅಕ್ಷರಗಳು, ೨ನೆಯ ಪಾದದ ೮ನೆಯ ಅಕ್ಷರ ಹೀಗೆ ಕೂಡಿಸಿದಾಗ ೨ನೆಯ ಪಾದ ಲಭಿಸುತ್ತದೆ. ಇದೇ ಕ್ರಮದಲ್ಲಿ, ಆದರೆ ಇದಕ್ಕೆ ವಿರುದ್ಧ ದಿಕ್ಕಿನಲ್ಲಿ ೩ನೆಯ ಪಾದದ ಮೊದಲ ಅಕ್ಷರದಿಂದ ಪ್ರಾರಂಭಿಸಿ ಸಾಗಿದಾಗ ೩ನೆಯ ಪಾದ ಲಭಿಸುತ್ತದೆ.

ಇದರ ಅಕ್ಷರ ವಿನ್ಯಾಸ ಸೂತ್ರ ಇದು :

ಅಕ್ಷರ ಕ್ರಮಸಂಖ್ಯೆ	1	2	3	4	5	6	7	8
೧ನೆಯ ಪಾದ	A	B	C	D	E	F	G	H
೨ನೆಯ ಪಾದ	I	B	C	J	K	F	G	L
೩ನೆಯ ಪಾದ	M	B	C	D	E	F	N	O
೪ನೆಯ ಪಾದ	P	B	C	D	E	F	N	Q

'ಅಲಂಕಾರ ಚಿಂತಾಮಣಿ'ಯಲ್ಲಿ ಮುರಜಬಂಧದ ೫ ವೈಚಿತ್ರ್ಯಗಳನ್ನು ವಿವರಿಸಿದ್ದು, ಅದರಲ್ಲಿ ಮೊದಲನೆಯದಾದ ಮುರಜಸಾಮಾನ್ಯದ ಲಕ್ಷ್ಯಪದ್ಯವಿದು :

ಸ್ನಾತ ಸ್ವಮಲಗಂಭೀರಂ ಜಿನಾಮಿತಗುಣಾರ್ಣವಮ್ ।
ಪೂತಶ್ರೀಮಜ್ಜಗತ್ಸಾರಂ ಜನಾ ಯಾತ ಕ್ಷಣಾಚ್ಛಿವಮ್ ॥ (೨-೪೮)

ಇದರ ವಿನ್ಯಾಸ ಕ್ರಮವನ್ನು ಅಲ್ಲಿಯೇ ಹೀಗೆಂದಿದೆ :

ಪೂರ್ವಾರ್ಧಮೂರ್ಧ್ವಂ ಪಂಕ್ತೌ ತು ಲಿಖಿತ್ವಾಽರ್ಧಂ ಪರಂ ತ್ವತಃ ।
ಏಕಾಂತರಿತಮೂರ್ಧ್ವಾಧೋ ಮುರಜಂ ನಿಗದೇತ್ ಕವಿಃ ॥ (೨-೧೪೯)

ಪೂರ್ವಾರ್ಧಮೇಕಪಂಕ್ತ್ಯಾಕಾರೇಣ ವ್ಯವಸ್ಥಾಪ್ಯ ಪಶ್ಚಾದರ್ಧಮೇಕಪಂಕ್ತ್ಯಾಕಾರೇಣ ತಸ್ಯಾಧಃ ಕೃತ್ವಾ ಮುರಜಬಂಧೋ ನಿರೂಪಯಿತವ್ಯಃ । ಪ್ರಥಮಪಂಕ್ತೇಃ ಪ್ರಥಮಾಕ್ಷರಂ ದ್ವಿತೀಯಪಂಕ್ತೇರ್ದ್ವಿತೀಯಾಕ್ಷರೇಣ ಸಹ ದ್ವಿತೀಯಪಂಕ್ತೇಃ ಪ್ರಥಮಾಕ್ಷರಂ ಪ್ರಥಮಪಂಕ್ತೇರ್ದ್ವಿತೀಯಾಕ್ಷರೇಣ ಸಹ ಉಭಯಪಂಕ್ತ್ಯಕ್ಷರೇಷು ಸಂಯೋಜ್ಯಮಾಚರಮಾತ್ ॥

ಇದರ ಪ್ರಕಾರ, ದತ್ತಪದ್ಯದ ಪೂರ್ವಾರ್ಧವನ್ನು ಮೊದಲ ಪಂಕ್ತಿಯಾಗಿಯೂ ಉತ್ತರಾರ್ಧವನ್ನು ೨ನೆಯ ಪಂಕ್ತಿಯಾಗಿಯೂ ಬರೆಯಬೇಕು. ಅನಂತರ ಮೊದಲ ಪಂಕ್ತಿಯ ಮೊದಲ ಅಕ್ಷರ, ೨ನೆಯ ಪಂಕ್ತಿಯ ೨ನೆಯ ಅಕ್ಷರ, ಮೊದಲ ಪಂಕ್ತಿಯ ೩ನೆಯ ಅಕ್ಷರ, ೨ನೆಯ ಪಂಕ್ತಿಯ ೪ನೆಯ ಅಕ್ಷರ–ಈ ಕ್ರಮದಲ್ಲಿ ಸಾಗಬೇಕು. ಆಗ ಮೊದಲ ಪಾದವೇ ಬರುತ್ತದೆ. ಇದೇ ರೀತಿ, ೨ನೆಯ ಪಾದದ ಮೊದಲ ಅಕ್ಷರ, ಮೊದಲ ಪಾದದ ೨ನೆಯ ಅಕ್ಷರ, ೨ನೆಯ ಪಾದದ ೩ನೆಯ ಅಕ್ಷರ, ಮೊದಲ ಪಾದದ ೪ನೆಯ ಅಕ್ಷರ–ಈ ಕ್ರಮದಲ್ಲಿ ಸಾಗಬೇಕು. ಆಗ ಎರಡನೆಯ ಪಾದ ಸಿದ್ಧವಾಗುತ್ತದೆ. ಗೋಮೂತ್ರಿಕೆಗೂ ಇದಕ್ಕೂ ಅಭೇದವೇ ಉಂಟೆಂದು ಹೇಳಬಹುದು. ಆದರೆ ಮುರಜದ ಆಕಾರದಲ್ಲಿ ವಿನ್ಯಾಸಗೊಳ್ಳುವುದು ಸಾಧ್ಯವಿದೆಯೆಂಬುದರಿಂದ ಇದು ಮುರಜಬಂಧವೂ ಆಗಬಹುದು.



ಬಂಧ ೪೬

ಇದರ ಅಕ್ಷರವಿನ್ಯಾಸ :

ಅಕ್ಷರ ಕ್ರಮಸಂಖ್ಯೆ	1	2	3	4	5	6	7	8
೧ನೆಯ ಪಾದ	–	A	–	B	–	C	–	D
೨ನೆಯ ಪಾದ	–	E	–	F	–	G	–	H
೩ನೆಯ ಪಾದ	–	A	–	B	–	C	–	D
೪ನೆಯ ಪಾದ	–	E	–	F	–	G	–	H

೨. ಅನಂತರಪಾದಮುರಜ : ಇದರಲ್ಲಿ ಶ್ಲೋಕವನ್ನು ೪ ಪಾದಗಳನ್ನಾಗಿ ಗುಣಿಸಿ, ಪೂರ್ವಾರ್ಧದಲ್ಲಿ ಒಂದು ಯುಗ್ಮ, ಅಪರಾರ್ಧದಲ್ಲಿ ಒಂದು ಯುಗ್ಮ ಹೀಗೆ ಯೋಜಿಸಲಾಗುತ್ತದೆ :

ಅಭಿಷಿಕ್ತಃ ಸುರೈರ್ಲೋಕೈಃ । ತ್ರಿಭಿರ್ಭಕ್ತಿಪರೈರ್ನ ಕೈಃ ।
ವಾಸುಪೂಜ್ಯ ಮಯೀಶೇಶಂ । ತ್ವಂ ಸುಪೂಜ್ಯಃ ಕಯೀದೃಶಃ ॥ (೨–೧೫೦)



ಬಂಧ ೪೭

ಅಕ್ಷರವಿನ್ಯಾಸ ಸೂತ್ರ ಹೀಗೆ :

ಅಕ್ಷರ ಕ್ರಮಸಂಖ್ಯೆ	1	2	3	4	5	6	7	8
೧ನೆಯ ಪಾದ	–	A	–	B	–	C	–	D
೨ನೆಯ ಪಾದ	–	A	–	B	–	C	–	D
೩ನೆಯ ಪಾದ	–	E	–	F	–	G	–	H
೪ನೆಯ ಪಾದ	–	E	–	F	–	G	–	H

೩. ಇಷ್ಟಪಾದಮುರಜ : ಇದರಲ್ಲಿ ಕವಿ ತನ್ನ ಇಷ್ಟದಂತೆ ಪಾದಗಳನ್ನು ಆಯ್ಕೆಮಾಡಿಕೊಳ್ಳಬಹುದೆಂದು ತೋರುತ್ತದೆ. ಗೋಮೂತ್ರಿಕೆಯ ಲಕ್ಷಣವೇ ಉಳ್ಳದ್ದು.

ಕ್ರಮತಾಮಕ್ರಮಂ ಕ್ಷೇಮಂ ಧೀಮತಾಮರ್ಚ್ಯಮಶ್ರಮಮ್ ।
ಶ್ರೀಮದ್ವಿಮಲಮರ್ಚೇಽಹಂ ವಾಮಕಾಮಂ ನಮ ಕ್ಷಮಮ್ ॥ (೨–೧೫೧)



ಬಂಧ ೪೮

೪. ಯಮಕಾನಂತರಪಾದಮುರಜ : ಇದು ಗೂಢತೃತೀಯ–ಚತುರ್ಥಗಳಲ್ಲಿ ಯಾವುದಾದರೂ ೨ ಬೇರೆ ಅಕ್ಷರಗಳಿಂದ ಕೂಡಿ ರಚಿತವೆಂದು ಹೇಳಬಹುದು.

ತಮೋಽತ್ತು ಮಮತಾತೀತ । ಮಮೋತ್ತ್ರಮ ಮತಾಮೃತ ।
ತತಾಮಿತಮತೇ ತಾತ । ಮತಾತೀತಮೃತೇಽಮಿತ ॥ (೨–೧೫೨)



ಬಂಧ ೪೯

೫. ಗುಪ್ತಕ್ರಿಯಾ ಮುರಜ : ಇದರಲ್ಲಿ ತೃತೀಯ ಪಾದದಲ್ಲಿ ಕ್ರಿಯೆ ಗುಪ್ತವಾಗಿದೆ. ಗೂಢಚಿತ್ರ ಬೆರೆತ ಮುರಜವಿದು. ರಚನೆ ಹಿಂದಿನಂತೆಯೇ.

ದಿವ್ಯೈರ್ಧ್ವನಿಸಿತಚ್ಛತ್ರಚಾಮರೈರ್ದುಂದುಭಿಸ್ವನೈಃ ।
ದಿವ್ಯೈರ್ವಿನಿರ್ಮಿತಸ್ತೋತ್ರಶ್ರಮದರ್ದುರಿಭಿರ್ಜನೈಃ । (೨–೧೫೪)

'ಶಿಶುಪಾಲವಧ' (೧೯–೨೯)ದ ಮುರಜಬಂಧದ ಲಕ್ಷ್ಯಪದ್ಯವು ರುದ್ರಟ ಹೇಳುವ ರೀತಿಗೆ ಸಂಪೂರ್ಣವಾಗಿ ಹೊಂದುತ್ತದೆ. ಆ ಲಕ್ಷ್ಯಪದ್ಯ :

ಸಾಸೇನಾಗಮನಾರಂಭೇ । ರಸೇನಾಸೀದನಾರತಾ ।
ತಾರನಾದಜನಾಮತ್ತ । ಧೀರನಾಗಮನಾಮಯಾ ॥



ಬಂಧ ೫೦

ಈ ಲಕ್ಷ್ಯದ ಸ್ವರೂಪ : ಇಲ್ಲಿ ಮೊದಲಿಗೆ ಪರಸ್ಪರ ವಿರುದ್ಧ ಪಾರ್ಶ್ವಗಳಲ್ಲಿ ಕಟ್ಟಲಾಗಿರುವ ಎರಡು ಹುರಿಗಳಿವೆ. ಮೊದಲನೆಯದನ್ನು ಮೇಲ್ಭಾಗದಲ್ಲಿ ಎಡಭಾಗದ ಮೂಲೆಗೆ ಕಟ್ಟಿದ್ದು, ಅದು ಕೆಳಪಾರ್ಶ್ವದ ಮಧ್ಯಭಾಗದ ಮೂಲಕ ಹಾದು ಮೇಲ್ಭಾಗದಲ್ಲಿ ಬಲಭಾಗದ ಮೂಲೆಯನ್ನು ತಲುಪುತ್ತದೆ; ಎರಡನೆಯದು ಅದರ ಎದುರು ಪಾರ್ಶ್ವದಲ್ಲಿದ್ದು, ಅದನ್ನು ಕೆಳಭಾಗದಲ್ಲಿ ಎಡಗಡೆ ಮೂಲೆಯವರೆಗೂ ಇರುವಂತೆ ಕಟ್ಟಲಾಗಿದ್ದು, ಇದು ಮೇಲ್ಭಾಗವನ್ನು ಅರ್ಧಭಾಗವಾಗಿಸಿ, ತಳದಲ್ಲಿ ಬಲ ಮೂಲೆಯವರೆಗೂ ಬರುತ್ತದೆ. ಮೊದಲನೆಯದು ಶ್ಲೋಕದ ಪ್ರಥಮ ಪಾದವಾಗುತ್ತದೆ. ಎರಡನೆಯದರಲ್ಲಿ ನಾಲ್ಕನೆಯ ಪಾದದ ಅಕ್ಷರಗಳು ಇವೆ. ಇವು ಸೇರಿ ಮಧ್ಯದಲ್ಲಿ

ಆಯಾಕಾರವನ್ನು ರೂಪಿಸುತ್ತವೆ. ಮೇಲಿನ ಅರ್ಧದಿಂದಲೂ ಕೆಳಗಿನ ಅರ್ಧದಿಂದಲೂ ನಾ-ಗ-ಮ-ನಾ ದ ಅದೇ ಕ್ರಮದಲ್ಲಿ ಸಾಮಾನ್ಯ ಅಕ್ಷರಗಳಿರುತ್ತವೆ. ಎರಡು ಪಾರ್ಶ್ವಗಳಿಂದ ಎರಡು ಆಯಗಳಿರುತ್ತವೆ; ಬಹುಮಟ್ಟಿಗೆ ಸಮಾನವಿಸ್ತೀರ್ಣದವಾಗಿರುತ್ತವೆ; ಇವು ಹಿಂದೆ ಸೂಚಿಸಿದ ಆಯದ ಮಧ್ಯದಲ್ಲಿ ಕಲಾತ್ಮಕವಾಗಿ ಸಂಧಿಸುತ್ತವೆ. ಈ ಎರಡು ಆಯಗಳ ಪೈಕಿ ಎಡಭಾಗದಲ್ಲಿರುವುದು ಎರಡನೆಯ ಪಾದವನ್ನು ರೂಪಿಸಿದರೆ, ಬಲಭಾಗದಲ್ಲಿರುವುದು ಮೂರನೆಯ ಪಾದವನ್ನು ರೂಪಿಸುತ್ತದೆ. ಮೊದಲನೆಯದರಲ್ಲಿ ಅಕ್ಷರಗಳನ್ನು ಎಡಮೂಲೆಯಿಂದ ಆರಂಭಿಸಿ, ತಲಕೆಳಗಾಗಿ ಸರಿಸುಮಾರು ಅದೇ ಸ್ಥಳದಲ್ಲಿ ಇಡಲಾಗುವುದು; ಎರಡನೆಯದರಲ್ಲಿ ಬಲಮೂಲೆಯಿಂದ ಅಕ್ಷರಗಳನ್ನು ತಲಕೆಳಗಾಗಿ, ಸರಿಸುಮಾರು ಅದೇ ಸ್ಥಾನದ ಬಳಿ ಓದಲಾಗುವುದು.

ಈ ಮೂರು ಆಯಾಕಾರಗಳು ಛೇದಿಸಿದುದರಿಂದ ಹತ್ತು ಸಣ್ಣ ಆಯಗಳುಂಟಾಗುವುವು. ಇದರಲ್ಲಿ ಕ್ರಮವಾಗಿ ನಾಲ್ಕು ಅಕ್ಷರಗಳಿರುವುವಾದರೂ ಇವು ಯಾವ ಅರ್ಥವನ್ನೂ ನೀಡುವುದಿಲ್ಲ. ನಿಯತ ವ್ಯವಸ್ಥೆಗನುಗುಣವಾಗಿ, ಯಾವಾಗಲೂ ಅಕ್ಷರಗಳನ್ನು ಛೇದನೆಯ ನಂತರವೇ ಇರಿಸಲಾಗುವುದು. ಮೂಲೆಯಲ್ಲಿ ಅಂಥ ಯಾವುದೇ ಛೇದನೆಯುಂಟಾಗದಿದ್ದರೆ ಆಗ ಆ ಮೂಲೆಯ ಎರಡು ಬದಿಗಳಲ್ಲಿ ಎರಡು ಅಕ್ಷರಗಳನ್ನು ಇರಿಸಲಾಗುವುದು. ಇಲ್ಲಿನ ಗಮನಾರ್ಹ ಅಂಶವೆಂದರೆ ಮೃದಂಗಾಕಾರದ ನಾಲ್ಕು ಪಾರ್ಶ್ವಗಳಲ್ಲಿ ಹನ್ನೆರಡು ತ್ರಿಭುಜಗಳುಂಟಾಗುವುದಾಗಿದೆ; ಆಶ್ಚರ್ಯಕರವೆಂದರೆ, ಅಕ್ಷರ ಜೋಡಣೆ ನಿರ್ದಿಷ್ಟವೂ, ಕ್ರಮಬದ್ಧವೂ ಮತ್ತು ಕಲಾತ್ಮಕವೂ ಆಗಿದ್ದರೆ ಸಹಜವೆಂಬಂತೆ ಶ್ಲೋಕದ ನಾಲ್ಕು ಪಾದಗಳನ್ನೂ ಒಂದಾದ ಮೇಲೆ ಒಂದರಂತೆ ಓದಬಹುದಾಗುತ್ತದೆ.[15]

ಕಾವ್ಯ ಪ್ರಯುಕ್ತವಾದ ಮುರಜಬಂಧದಲ್ಲಿ ಹಲವು ಬಗೆಗಳಿವೆ. ಇವುಗಳಲ್ಲಿ ಕೆಲವನ್ನು ನೋಡಬಹುದು. ಸಮಂತಭದ್ರ ಅಥವಾ ಶಾಂತಿವರ್ಮನೆಂಬ ವಿಖ್ಯಾತ ದಿಗಂಬರ ಜೈನ ಕವಿಯ 'ಜಿನಶತಕ' (=ಸ್ತುತಿ ವಿದ್ಯಾ)ದಲ್ಲಿ ವಿಪುಲವಾಗಿ ಮುರಜಭೇದಗಳನ್ನು ಬಳಸಿದ್ದು ಪದ್ಯಗಳು ೧, ೨, ೬–೯, ೨೯–೩೫, ೩೯–೪೨, ೪೫, ೪೮–೫೦, ೫೮–೭೧, ೭೩–೭೮, ೮೦, ೮೨, ೮೯, ೯೧ ಮತ್ತು ೯೯–೧೦೫ ಮುರಜದ ಲಕ್ಷ್ಯಗಳಾಗಿವೆ. ಇವುಗಳಲ್ಲಿ ಪ. ೪೮, ೬೪, ೬೬, ಮತ್ತು ೧೦೦ ಅನಂತರಪಾದಮುರಜದ, ಪ. ೮೯, ೯೧ ಯಥೈಕಾಕ್ಷರಾಂತರಿತ ಮುರಜದ, ಪ. ೫೦ ಇಷ್ಟಪಾದ ಮುರಜದ ಲಕ್ಷ್ಯಗಳಾಗಿವೆ. ಇವುಗಳ ಲಕ್ಷಣದ ಬಗ್ಗೆ ಈಗಾಗಲೇ 'ಅಲಂಕಾರ ಚಿಂತಾಮಣಿ'ಕಾರನ ಉಲ್ಲೇಖಗಳನ್ನು ಗಮನಿಸಿದೆ. ಇಲ್ಲಿ ಎರಡು ಪ್ರಯೋಗಗಳನ್ನು ಪರಿಶೀಲಿಸಬಹುದು.

ಶ್ರೀಮಜ್ಜಿನಪದಾಭ್ಯಾಶಂ ಪ್ರತಿಪದ್ಯಾಗಸಾಂ ಜಯೇ ।
ಕಾಮಸ್ಥಾನಪ್ರದಾನೇಶಂ ಸ್ತುತಿವಿದ್ಯಾಂ ಪ್ರಸಾಧಯೇ ॥ ೧ ॥

ಅಭಿಷಿಕ್ತಃ ಸುರೈರ್ಲೋಕೈಸ್ತ್ರಿಭಿರ್ಭಕ್ತಃ ಪರೈರ್ನ ಕೈಃ ।
ವಾಸುಪೂಜ್ಯ! ಮಯೀಶೇಶಸ್ತ್ವಂ ಸುಪೂಜ್ಯಃ ಕಯೀದೃಶಃ ॥ ೪೪ ॥



ಬಂಧ ೫೧



ಬಂಧ ೫೨

ವಸುನಂದಿಯ ವ್ಯಾಖ್ಯಾನ ಅನುಸರಿಸಿ ಮೊದಲನೆಯ ಲಕ್ಷ್ಯಪದ್ಯದ (ಬಂಧ : ೫೧) ಒಂದು ವಿನ್ಯಾಸವನ್ನೂ ಹಾಗೆಯೇ ವಸುನಂದಿ ಹೇಳಿರದ ಇನ್ನೊಂದು ವಿನ್ಯಾಸವನ್ನೂ (ಬಂಧ ೫೨) ನೋಡಬಹುದು.

ಕನ್ನಡದಲ್ಲಿ ಮುರಜಬಂಧಗಳು

ಕನ್ನಡದಲ್ಲಿ ಮುರಜಬಂಧದ ಲಕ್ಷ್ಯ ಮೊದಲು ಕಣ್ಣಿಗೆ ಬೀಳುವುದು 'ಕವಿರಾಜಮಾರ್ಗ'ದಲ್ಲಿಯೇ (೨-೧೪೦). ದಂಡಿಯಲ್ಲಿ ಅನುಕ್ತವಾದ ಈ ಬಂಧ ಇಲ್ಲಿ ಬಂದಿರುವುದು ಒಂದು ವಿಶೇಷ. ಲಕ್ಷ್ಯಪದ್ಯ ಒಂದೊಂದು ಪರಿಷ್ಕರಣದಲ್ಲಿ ಒಂದೊಂದು ರೀತಿಯಾಗಿದ್ದು, ಅಭಿಪ್ರಾಯವಿಶದತೆಯುಂಟಾಗದೆ ಇದೆ.

ಮದರಾಸು ಪರಿಷ್ಕರಣದಲ್ಲಿ ತಿದ್ದುಪಡಿ ಸಹಿತವಾದ ಪಾಠವನ್ನು ಯೋಜಿಸಿಕೊಂಡು, ಅದರ ಉದ್ಧಾರ ಕ್ರಮವನ್ನು ತೋರಿಸಿದ್ದಾರೆ. ಈ ಬಂಧದಲ್ಲಿ ಪ್ರತಿ ಪಾದದಲ್ಲಿಯೂ ಕ್ರಮವಾಗಿ ೨, ೩, ೬ ಮತ್ತು ೭ನೆಯ ಅಕ್ಷರಗಳು ಒಂದೇ ಆಗಿರಬೇಕೆಂದು ಸೂಚಿಸಿದ್ದಾರೆ. ಇದೇನೂ ಅವಶ್ಯವಲ್ಲವೆಂದು ತೋರುತ್ತದೆ. ಆದರೆ ಅಕ್ಷರಗಳಲ್ಲಿ ೩, ೭ರಲ್ಲಿ ಮಾತ್ರ ಒಂದೇ ಆಗಿರಬೇಕು. ಪಾಠವೂ ಅರ್ಥವೂ ಇನ್ನೂ ಸಂದಿಗ್ಧವಾಗಿರುವುದರಿಂದ, ಬಂಧಲಕ್ಷಣವನ್ನು ಹಿಡಿದು ತಾತ್ಕಾಲಿಕವಾಗಿ ಪಾಠವನ್ನು ಹೀಗೆ ತಿದ್ದಬಹುದೆಂದು ತೋರುತ್ತದೆ (ಬಂಧ ೫೩). ಆದರೂ ಆಶಯ ಅಸ್ಫುಟವೇ.

ವರದಾರಪರಾದನ್ಯಂ ಪರದಾನಪರಾಡಮಂ
ನೆರದಾವದಿರಾದನ್ಯಂ ಪರದಾರಪರಾಡಮಂ ॥ (?)

೨-೪ನೆಯ ಪಾದಗಳು 'ಪರದಾನಾಪರಾಧಮಂ', 'ಪರದಾರಾಪರಾಧಮಂ' ಎಂದಿದ್ದರೂ ಇರಬಹುದು.



ಬಂಧ ೫೩

ಬಳಿಕ ಕನ್ನಡದಲ್ಲಿಯ ಲಕ್ಷಣಗ್ರಂಥಗಳಲ್ಲಿ ಮುರಜಬಂಧದ ಲಕ್ಷ್ಯ ಕಾಣುವುದು, 'ಕಾವ್ಯಾವಲೋಕನ'ದಲ್ಲಿ. ಇಲ್ಲಿಯ ಲಕ್ಷ್ಯ :

ಅಜಾತಶಂಖಂ ತಾನಾಪ್ತನಜಂಗಮನಸೂಯನಂ
ಗಜಾಂಕುಶಂ ಗತಾಪ್ರಾಪ್ತವಿಜಯಂ ಮಧುಸೂದನಂ ॥ (ಪ. ೫೬೭)



ಬಂಧ ೫೪

ಇದರ ರಚನೆ ಕವಿರಾ.ದ ರಚನೆಗಿಂತ ಭಿನ್ನ. ಇದು ಸಮಂತಭದ್ರನ (ಶಾಂತಿವರ್ಮ) 'ಸ್ತುತಿವಿದ್ಯಾ'ದ ಪದ್ಯ ೧೮ರ ರಚನೆಗೆ ಸದೃಶವಾದ್ದು. ಇಲ್ಲಿ ಸಮಾನಾಕ್ಷರಗಳ ಆವೃತ್ತಿಯೇನೂ ಇಲ್ಲ. ನಾಗವರ್ಮನು ''ಮುರಜಂ ಅರ್ಧ ಪ್ರಸ್ತಾರದಿಂ ಗೋಮೂತ್ರಿಕೆಯಕ್ಕುಂ'' ಎಂಬುದಾಗಿ ಸೂಚಿಸಿದ್ದಾನೆ. ೧-೩, ೨-೪ನೆಯ ಪಾದಗಳನ್ನು ಪ್ರತ್ಯೇಕವಾಗಿ ಓದಿಕೊಂಡಾಗ ಇದು ಮುಸವರಿಕೆಯಾಗುತ್ತದೆ. ಆಶಯಕ್ಕೂ ಬಲುಮಟ್ಟಿಗೆ ಭಂಗ ಬರುವುದಿಲ್ಲ.

'ಮದನತಿಲಕ'ದಲ್ಲಿ ೧-೧೫, ೨೮, ೪೩ ಮತ್ತು ೧೦-೮, ೨೪ರಲ್ಲಿ ಮುರಜದ ಲಕ್ಷ್ಯಗಳುಂಟೆಂದು ತಿಳಿಯುವುದು. 'ಪಣವಬಂಧಮುಂ' ಎಂದಿರುವ ೧-೪೧ರದು ಗೋಮೂತ್ರಿಕೆಯ ಲಕ್ಷ್ಯ. ಆದ್ದರಿಂದಲೇ ಇದು 'ಅಲಂಕಾರ ಚಿಂತಾಮಣಿ', 'ಸ್ತುತಿವಿದ್ಯಾ'ಗಳಲ್ಲಿ ಕಾಣುವ ಮುರಜಭೇದಕ್ಕೆ ಒಪ್ಪುತ್ತದೆ. ೨ ಸಾಲುಗಳಲ್ಲಿ ಪದ್ಯವನ್ನು ಬರೆದು ಮುರಜದಂತೆ ಆಕೃತಿಗೊಳಿಸಿದರೆ, ಅದು ಮುರಜಬಂಧವೇ ಸರಿ. ಪಣವವೆಂದರೆ ಮುರಜವೇ. ಆದರೆ ಚಂದ್ರರಾಜ ಈಯೆರಡರಲ್ಲಿಯೂ ಸ್ವಲ್ಪ ಭೇದವಿಟ್ಟಿರುವಂತಿದೆ. ಪೂರ್ವೋಕ್ತ ಲಕ್ಷ್ಯಗಳಲ್ಲಿ ೧-೧೫ ವನಮಂಜರೀವೃತ್ತವಾಗಿದ್ದು, ಇದು ಚಿತ್ರವೈವಿಧ್ಯದೊಳಗಿನದು; ೧-೨೮ರಲ್ಲಿ ಕಂದಪದ್ಯದ ಅರ್ಧ ಭಾಗ ಮಾತ್ರವಿದ್ದು, ಕವಿ ಇಲ್ಲಿ ''ಇದುವೆ ಗೋಮೂತ್ರಿಕೆಯುಂ ಮುರಜಬಂಧಮುಮಕ್ಕುಂ'' ಎಂಬುದಾಗಿ ಕೊಟ್ಟಿರುವ ಸೂಚನೆಗೆ ಸಾರ್ಥಕವಾಗುವಂತಹ ಅಕ್ಷರವಿನ್ಯಾಸ ತೋರುತ್ತಿಲ್ಲ. ೧-೪೩ರಲ್ಲಿ ಪಾಠದೋಷಗಳು ತುಂಬಿವೆ. ೧೦-೮ (ಬಿ) ಗ. ಪ್ರತಿಯಲ್ಲಿ ಮಾತ್ರವೇ ಇರುವ ಸಮಾನಪಾದಾವೃತ್ತಿಯ ಒಂದು ರಚನೆ; ವಿವಿಧ ಚಿತ್ರಬಂಧಗಳಿಗೆ ಅಳವಡುವುದಾಗಿ ಕವಿ ತಿಳಿಸಿರುವಂಥದು ಇದು. ೧೦-೨೪ರಲ್ಲಿ ಪಾಠದೋಷಗಳು ಮಿಗಿಲಾಗಿವೆ. ಹೀಗೆ ನಾನಾಕಾರಣಗಳಿಂದಾಗಿ ಈ ಪದ್ಯಗಳನ್ನು ಬಂಧಗಳಲ್ಲಿ ರೂಪಿಸಲು ಸಾಧ್ಯವಾಗದೆ ಇದೆ.

ತೆಲುಗಿನಲ್ಲಿ ಮರ್ದಲಬಂಧವೆಂಬ ಹೆಸರಿನಲ್ಲಿ ಹಲವರು ಈ ಬಂಧಚಿತ್ರಗಳನ್ನು ರಚಿಸಿದ್ದಾರೆ. ರಚನೆಗೆ ಮಾಣವಕ, ಚಿತ್ರಪದ, ವಿದ್ಯುನ್ಮಾಲಾ ಇತ್ಯಾದಿ ವೃತ್ತಗಳನ್ನು ಬಳಸಿರುವುದುಂಟು. ನನ್ನೆಚೋಡನ 'ಕುಮಾರ ಸಂಭವ' (೧೦-೮೫) ಮೊದಲಾದೆಡೆ ಇವುಗಳ ಬಳಕೆಯಿದೆ.

ಶರಯಂತ್ರಬಂಧ

'ಸರಸ್ವತೀಕಂಠಾಭರಣ'ದಲ್ಲಿ ಈ ಹೆಸರಿನ ಒಂದು ಬಂಧದ ಉಲ್ಲೇಖವಿದೆ. ಅದರ ಲಕ್ಷ್ಯಲಕ್ಷಣ ಪದ್ಯಗಳು ಇವು :

ನಮಸ್ತೇ ಜಗತಾಂ ನಾಥ । ಸದಾನವಕುಲಕ್ಷಯ ।
ನಮಸ್ತೇಽಜ ಸತಾಂ ನಾಥ । ಮುದಾಮವನ ಲಕ್ಷಯ ॥
ಚತುರ್ಷ್ವಪಿ ಚ ಪಾದೇಷು । ಪಂಕ್ತಿಶೋ ಲಿಖಿತೇಷ್ವಿಹ ।
ಆದೇರಾದೇಸ್ತುರಂಗಸ್ಯ । ಪಾದ್ಯೈಃ ಪಾದಃ ಸಮಾಪ್ಯತೇ ॥ (೨-೩೧೭, ೩೧೮)

೪ ಪಾದಗಳನ್ನು ಕ್ರಮವಾಗಿ ೪ ಸಾಲುಗಳಾಗಿ ಮೊದಲು ಬರೆಯಬೇಕು. ೧–೧೮–೩–೨೦–೫–೨೨–೭–೨೪ ಈ ಕ್ರಮದಿಂದ ಮೊದಲ ಪಾದ, ೯–೨೬–೧೧–೨೮–೧೩–೩೦–೧೫-೩೨ ಈ ಕ್ರಮದಿಂದ ಎರಡನೆಯ ಪಾದ, ೧೭–೨೬–೧೯–೪–೨೧–೬–೨೩–೮ ಈ ಕ್ರಮದಿಂದ ಮೂರನೆಯ ಪಾದ, ೨೫–೧೦–೨೭–೧೨–೨೯–೧೪-೩೧–೧೬ ಈ ಕ್ರಮದಿಂದ ನಾಲ್ಕನೆಯ ಪಾದ ಸಿದ್ಧವಾಗುತ್ತದೆ. ಎಂದರೆ, ಚತುರಂಗಗತಿಯಲ್ಲಿ ನಾವು ಕೊನೆಯ ಪಾದದವರೆಗೆ ಸಾಗಿದರೆ, ಕ್ರಮವಾಗಿ ಈಯೆಲ್ಲ ಪದ್ಯಪಾದಗಳನ್ನೂ ಇನ್ನೊಂದು ಸಲ ಪಡೆಯುತ್ತೇವೆ. ಮೊದಲೆರಡು ಪಾದಗಳಿಗೆ ಈ ನಡೆ ಕೆಳಮೊಗವಾಗಿಯೂ ಆಮೇಲಿನೆರಡು ಪಾದಗಳಿಗೆ ಮೇಲುಮೊಗವಾಗಿಯೂ ಇರುತ್ತದೆ. ಹೀಗೆ ಮಾಡುವಾಗ ಪ್ರತಿಪಾದದ ಮುಂದಿನ ಅಕ್ಷರಕ್ಕೆ ಬೇರೆಯ ಪಾದವನ್ನು ಪ್ರವೇಶಿಸಬೇಕು; ಪರ್ಯಾಯಾಕ್ಷರಕ್ಕೆ ಎತ್ತಿಕೊಂಡ ಪಾದಕ್ಕೆ ಮರಳಬೇಕು. ಮೊದಲ ಪಾದವಾಗಲು, ೩ನೆಯ ಪಾದದ ೨, ೪, ೬, ೮ನೆಯ ಅಕ್ಷರಗಳಿಗೂ ಎರಡನೆಯ ಪಾದವಾಗಲು ೪ನೆಯದರ ಅವೇ ಸ್ಥಾನಗಳಿಗೂ ಸಾಗಬೇಕು. ಹೀಗೆಯೇ ೩, ೪ನೆಯ ಪಾದಗಳಾಗಲು ಮೇಲುಮೊಗವಾಗಿ ೧, ೨ನೆಯ ಪಾದಗಳ ಸಮಾನಾಕ್ಷರಸ್ಥಾನಗಳಿಗೆ ಸಾಗಬೇಕಾಗುತ್ತದೆ.

ಹಾಗೆ ಮಾಡಿದಾಗ ಪ್ರತಿಪಾದದಲ್ಲಿಯೂ ಸಮಸ್ಥಾನಗಳಲ್ಲಿ ೨ ವರ್ಣಗಳು ಪುನರುಕ್ತಗೊಳ್ಳುವುದು ಸ್ಪಷ್ಟ. ಅಲ್ಲಿ ಮಾತ್ರವೇ ತುರಂಗಗತಿ ನಿಯತವಾಗಿರುವುದರಿಂದ, ತುರಂಗಗತಿಗಿಂತ ಇದು ಕೊಂಚ ಭಿನ್ನವಾದ್ದು. ಇದನ್ನು ಶರಬಂಧವಾಗಿಯೇ ವಿನ್ಯಾಸಗೊಳಿಸುವುದೂ ಶಕ್ಯ.

1 ನ	2 ಮ	3 ಸ್ತೋ	4 ಜ	5 ಗ	6 ತಾಂ	7 ಗಾ	8 ತ್ರ
9 ಸ	10 ದಾ	11 ನ	12 ವ	13 ಕು	14 ಲ	15 ಕ್ಷ	16 ಯ
17 ನ	18 ಮ	19 ಸ್ತೋ	20 ಜ	21 ಸು	22 ತಾಂ	23 ನಾ	24 ತ್ರ
25 ಮು	26 ದಾ	27 ಮ	28 ವ	29 ನ	30 ಲ	31 ಕ್ಷ	32 ಯ

ಬಂಧ ೫೫

ಹಲಬಂಧ

ರುದ್ರಟನ 'ಕಾವ್ಯಾಲಂಕಾರ'ದಲ್ಲಿ ಈ ಬಂಧದ ಪ್ರಸ್ತಾಪವಿದೆ (೫–೧೩). ಅಲ್ಲಿಯ ಲಕ್ಷ್ಯಪದ್ಯ ಇದು :

ಮಾತಙ್ಗನಙ್ಗವಿಧಿನಾಮುನಾ ಪಾದಂ ತಮುದ್ಯತಮ್ ।
ತಙ್ಗಯಿತ್ವಾ ಶಿರಸ್ಯಸ್ಯ ನಿಪಾತ್ಯಾಹನ್ತಿ ರಂಹಸಾ ॥ (೫–೧೩)

ಹೀಗೆಯೇ 'ಚಿತ್ರಬಂಧಕಾವ್ಯ' (ಪು. ೩೩)ದಲ್ಲಿ ಹೀಗೆ ಲಕ್ಷಣಿಸಿದೆ :

ಮೂಲಾತ್ ಸೀತಸ್ಯಾಗ್ರಭಾಗೇ ತತೋ ಮಧ್ಯೇ ತು ಲಗ್ನತಃ ।
ಊರ್ಧ್ವೇ ಯುಗ್ಮಾಟಪಾರ್ಶ್ವಾಭ್ಯಾಂ ಮಧ್ಯೇಽಂಕೇ ಹಿರಿಶಸ್ಯ ಚ ।
ಭಾಗೇ ಪರಿಸಮಾಪ್ತಿಃ ಸ್ಯಾದ್ ಬಂಧೇ ತ್ವತ್ರ ಹಲಾಭಿಧೇ ॥

ನಮಿಸಾಧುವಿನ ಪ್ರಕಾರ, ಕೇಂದ್ರಭಾಗದಲ್ಲಿ 'ತಂ', ಆದರ ಹಿಂದೆ 'ಮಾ', ಫಲದ (ಗುಳದ) ಮೊನೆಯಲ್ಲಿ 'ನಾಮು', ಗುಳದಲ್ಲಿ ಅನುಲೋಮವಿಲೋಮವಾಗಿ ಎರಡು ಶ್ರೇಣಿಗಳಲ್ಲಿ 'ಗಾನಙ್ಗವಿಧಿ ಪಾದಂ ತಮುದ್ಯ', ನೇಗಿಲಿನ ದಂಡಭಾಗದಲ್ಲಿ 'ಗಯಿತ್ವಾ ಶಿರಸ್ಯಸ್ಯ', ನೇಗಿಲಿನ ಮೇಲ್ಭಾಗದಲ್ಲಿ (ಕೈಪಿಡಿಯಲ್ಲಿ/ಹಿಡಿಕೆಯಲ್ಲಿ) 'ನಿಪಾತ್ಯಾ', ನೇಗಿಲಿನ ಮೇಲ್ಭಾಗದಲ್ಲಿ ಕೀಲುಶಲ್ಯಗಳ ಮಧ್ಯೆ 'ಹ', ಹಕಾರದ ಮೇಲೆ 'ನ್ತಿ', ಹಕಾರದ ಮುಂದೆ 'ರಂ', ಹಕಾರದ ಹಿಂದೆ 'ಸಾ'–ಇದು ವಿನ್ಯಾಸಕ್ರಮ.



ಬಂಧ ೫೬

ಹಲಬಂಧಕ್ಕೆ ಹೊಂದುವ ಪದ್ಯದ ರಚನೆಯ ಕ್ರಮವನ್ನು ಹೀಗೆ ನಿರೂಪಿಸಬಹುದು: ಮೊದಲನೆಯದಾಗಿ ಅದು ಶ್ಲೋಕವಾಗಿರಬೇಕು; ಎರಡನೆಯದಾಗಿ, ೧, ೧೬, ಮತ್ತು ೧೭ನೆಯ ಅಕ್ಷರಗಳ ಸ್ಥಾನದಲ್ಲಿ ಒಂದೇ ಅಕ್ಷರ ಬರಬೇಕು; ಅದೇ ರೀತಿ ೮-೧೦ ಮತ್ತು ೨೮-೩೧ರಲ್ಲಿ ಕೂಡ. ಇದನ್ನು ಹೀಗೆ ಕೂಡ ತೋರಿಸಬಹುದು ;

ಅಕ್ಷರ ಕ್ರಮಸಂಖ್ಯೆ	1	2	3	4	5	6	7	8
೧ನೆಯ ಪಾದ	–	A	–	–	–	–	–	B
೨ನೆಯ ಪಾದ	–	B	–	–	–	–	–	A
೩ನೆಯ ಪಾದ	A	–	–	–	–	–	–	–
೪ನೆಯ ಪಾದ	–	–	–	C	–	–	C	–

೪. ಸಸ್ಯವರ್ಗ

ಪದ್ಮಬಂಧಗಳು

ಬಂಧಗಳಲ್ಲಿ ಪದ್ಮಬಂಧದ ಆಕರ್ಷಣೆ ಮಿಗಿಲು. ಸಹಜವಾಗಿಯೇ, ರೇಖಾಸಾಮಂಜಸ್ಯವುಳ್ಳ ಈ ಕೋಮಲ ಪುಷ್ಪರಚನೆಯನ್ನು ಚಿತ್ರಕಾವ್ಯಪ್ರಿಯರು ಇಷ್ಟಪಡುತ್ತಾರೆ. ಇದರಲ್ಲಿ ಚತುರ್ದಲ, ಅಷ್ಟದಲ, ದ್ವಾದಶದಲ, ಷೋಡಶದಲ, ದ್ವಾತ್ರಿಂಶದ್ದಲ ಇತ್ಯಾದಿ ಭೇದಗಳುಂಟು. ದಳಗಳ ಸಂಖ್ಯೆಯನ್ನು ಹಿಡಿದು ಹೀಗೆಯೇ ಬಂಧಗಳಿಗೆ ಹೆಸರುಕೊಡಬಹುದು. ಊಹೆಯ ಬಲದಿಂದ ಹೊಸ ಮಾದರಿಗಳನ್ನು ರೂಪಿಸಿಕೊಳ್ಳುವಲ್ಲಿ ಕವಿಚಾತುರ್ಯವಿದೆ. ಒಂದೇ ಮಾದರಿಯನ್ನು ಸಹ ರೇಖಾವೈಚಿತ್ರ್ಯದಿಂದ ಬೇರೆಬೇರೆ ಎನ್ನುವಂತೆ ರಚಿಸಿ ತೋರಿಸಲೂ ಬಹುದು; ಅಕ್ಷರಗಳ ಅಳವಡಿಕೆಯಲ್ಲಿ ವಿಭಿನ್ನ ಕ್ರಮಗಳನ್ನು ಹೂಡಿ ಅಂತರ್ಭೇದಗಳನ್ನು ಕಲ್ಪಿಸಲೂ ಬಹುದು. ಉದಾಹರಣೆಗೆ, ಚಿತ್ರಕವಿಪಂಡಿತರಾದ ರಾಮರೂಪ ಪಾಠಕರು ಅಷ್ಟದಲ ಪದ್ಮಬಂಧದಲ್ಲಿ ರೂಪಿಸಿರುವ ವೈವಿಧ್ಯವನ್ನು ನೋಡಬಹುದು.

ಕರ್ಣಿಕೆಯಲ್ಲಿ ಒಂದು ಕೀಲಕ್ಷರವನ್ನಿಟ್ಟು, ಅದನ್ನು ದಳಗಳ ಅಕ್ಷರಗಳೊಂದಿಗೆ ಕೂಡಿಸಿಕೊಳ್ಳುತ್ತ ಪಾದಗಳನ್ನು ನಡಸುವುದೇ ಸಾಮಾನ್ಯವಾದ ವಿಧ. ಕರ್ಣಿಕೆಯಲ್ಲಿ ಅಕ್ಷರವಿಲ್ಲದೆಯೂ ಬಂಧವಿರಬಹುದು. ಅನುಲೋಮ ವಿಲೋಮಗಳಲ್ಲಿ ಪಾದಭಾಗಗಳು ನಡೆಯುವುದು ಒಂದು ತೆರನಾದರೆ, ಚಕ್ರಗತಿಯಲ್ಲಿ ಸಹಜವಾಚನಕ್ರಮದಲ್ಲಿ ನಡೆಯುವುದು ಇನ್ನೊಂದು ತೆರ. 'ಅಗ್ನಿಪುರಾಣ'ದಲ್ಲಿ ಕೆಲವು ಬಗೆಯ ಪದ್ಮಬಂಧಗಳ ಲಕ್ಷಣವನ್ನು ಒಟ್ಟಿಗೆ

ಹೇಳಿದೆ (ಅ. ೩೪೩–೪೧~೪೭). 'ಸರಸ್ವತೀಕಂಠಾಭರಣ', 'ಅಲಂಕಾರಚಿಂತಾಮಣಿ'ಗಳಲ್ಲಿ ಹಲವು ಅಂತಃ ಪ್ರಭೇದಗಳನ್ನು ನಿರೂಪಿಸಿದ್ದು, ಇವು ಕವಿಕೌಶಲಕ್ಕೆ ಅನುಸಾರವಾಗಿರುತ್ತವೆ. ಕವಿಕೌಶಲವನ್ನು ಅನುಸರಿಸಿ, ಪದ್ಮಬಂಧಗಳಲ್ಲಿ ಮುರಜ ಮತ್ತು ಚಕ್ರಬಂಧಗಳು, ಗತಿಚಿತ್ರದ ಗತಪ್ರತ್ಯಾಗತ ಮತ್ತು ಗೋಮೂತ್ರಿಕ, ಪ್ರಹೇಳಿಕೆಯ ಪ್ರಶ್ನೋತ್ತರ ಇತ್ಯಾದಿ ಚಿತ್ರಗಳು ಬೆರೆತಿದ್ದು, ಚಮತ್ಕಾರವನ್ನು ಹೆಚ್ಚಿಸಿರುವ ನಿದರ್ಶನಗಳೂ ಇವೆ. ಇದರೊಂದಿಗೆ ವೃತ್ತವೈವಿಧ್ಯವೂ ಸೇರುತ್ತದೆ. ಮಾಣವಕ, ಸ್ರಗ್ವಿಣಿ, ಉತ್ಸಾಹ, ಪಂಚಚಾಮರ, ಶ್ಲೋಕ, ಸ್ರಗ್ಧರೆ, ಮತ್ತೇಭವಿಕ್ರೀಡಿತ, ಚಂಪಕಮಾಲೆ, ಪ್ರಮಾಣಿ, ವಿದ್ಯುನ್ಮಾಲಾ, ವಸಂತತಿಲಕ, ಕಂದಪದ್ಯ, ಸೀಸಪದ್ಯ ಇವೆಲ್ಲ ಬಂಧರಚನೆಗೆ ಒದಗಿದ್ದು, ದಳಗಳಲ್ಲಿಯ ಅಕ್ಷರಸಂಖ್ಯೆ ಇದರಿಂದ ಹೆಚ್ಚು ಅಥವಾ ಕಡಿಮೆ ಯಾಗಿರುತ್ತದೆ. ತೆಲುಗು ಕವಿಗಳಲ್ಲಿ ಈ ಬಂಧದ ಪ್ರಚುರತೆಗೆ ಕೊರತೆಯಿಲ್ಲ. ಆದರೆ ಕನ್ನಡದಲ್ಲಿ 'ಕಾವ್ಯಾವಲೋಕನ', 'ನರಪತಿಚರಿತ'ಗಳಲ್ಲಿ ಪ್ರಸ್ತಾಪವಿರುವುದರ ಹೊರತು, ಪ್ರಾಚೀನಕಾವ್ಯಗಳಲ್ಲಿ ಕಾಣದಿರುವುದಕ್ಕೆ ಕಾರಣವೇನೋ ತಿಳಿಯದು. ಹೀಗಿದ್ದು ಸಹ, ಕರ್ಣಾಟಕದ ಸಂಸ್ಕೃತಕವಿಗಳ ರಚನೆಗಳಲ್ಲಿ, ಶಾಸನಗಳಲ್ಲಿ ಅಲ್ಲೊಂದು ಇಲ್ಲೊಂದು ಪದ್ಮಬಂಧದ ರಚನೆಯನ್ನು ನಾವು ಕಾಣುತ್ತಿರುವುದು ಸಮಾಧಾನದ ವಿಷಯ.

ಚತುರ್ದಲಪದ್ಮ

'ಸರಸ್ವತೀಕಂಠಾಭರಣ'ದಲ್ಲಿ ಈ ಬಂಧದ ಪ್ರಸ್ತಾಪವಿದೆ. ಅಲ್ಲಿರುವ ಇದರ ಲಕ್ಷ್ಯಪದ್ಯ ಇದು :

> ಸಾಸವಾತ್ಮಾಸುಮನಸಾ ಸಾ ನತಾ ಪೀವರೋರಸಾ ।
> ಸಾರಧಾನ್ಮೈತಿ ಸಹಸಾ ಸಾಹಸಾರ್ಥಸುವಾಸಸಾ ॥ ೨–೨೯೦ ॥

ಇದರ ವಿನ್ಯಾಸ ಕ್ರಮವನ್ನು ಅಲ್ಲಿಯೇ ಹೀಗೆ ನಿರೂಪಿಸಿದೆ:

> ಕರ್ಣಿಕಾತೋ ನಯೇದೂರ್ಧ್ವಂ ಪತ್ರಾಕಾರಾಕ್ಷರಾವಲೀಮ್ ।
> ಪ್ರವೇಶಯೇತ್ಕರ್ಣಿಕಾಯಾಂ ಪದ್ಮಮೇತಚ್ಚತುರ್ದಲಮ್ ॥

ಇದರ ಪ್ರಕಾರ ಕರ್ಣಿಕೆಯಿಂದ ಪ್ರಾರಂಭಿಸಿ ಮೇಲಕ್ಕೆ ಹೋಗಿ ಒಂದು ದಳದ ಆಕಾರವನ್ನು ನಿರ್ಮಿಸಿ, ಮತ್ತೆ ಕರ್ಣಿಕೆಗೆ ಸೇರಬೇಕು. ಇಲ್ಲಿಗೆ ಒಂದು ಪಾದದಿಂದ ಒಂದು ದಳ ನಿರ್ಮಾಣವಾಗುತ್ತದೆ. ಇದೇ ರೀತಿ ನಾಲ್ಕು ಪಾದಗಳಿಂದ ನಾಲ್ಕು ದಳಗಳು ಏರ್ಪಟ್ಟು, ಚತುರ್ದಲಪದ್ಮ ಸಿದ್ಧವಾಗುತ್ತದೆ. ಚತುರರ ಚಕ್ರಬಂಧದಲ್ಲಿ ಅರಗಳಲ್ಲೂ ಅಕ್ಷರಗಳು ಬಂದರೆ, ಇಲ್ಲಿ ಕೇಂದ್ರ ಮತ್ತು ಪರಿಧಿಗಳಲ್ಲಿ ಮಾತ್ರ ಅದು ಬರುವುದನ್ನು ಗಮನಿಸಬೇಕು.



ಬಂಧ ೫೭

ಇದರ ಅಕ್ಷರವಿನ್ಯಾಸ ಹೀಗೆ:

ಅಕ್ಷರ ಕ್ರಮಸಂಖ್ಯೆ	1	2	3	4	5	6	7	8
೧ನೆಯ ಪಾದ	A	B	–	–	–	–	C	A
೨ನೆಯ ಪಾದ	A	C	–	–	–	–	D	A
೩ನೆಯ ಪಾದ	A	D	–	–	–	–	E	A
೪ನೆಯ ಪಾದ	A	E	–	–	–	–	B	A

ರುದ್ರಟನ 'ಕಾವ್ಯಾಲಂಕಾರ' (೫–೨೧)ದಲ್ಲಿ ಒಂದು ಪದ್ಯವಿದೆ. ನಮಿಸಾಧುವಿಗಿಂತ ಹಿಂದಿನವರು ಅದನ್ನು ಅಷ್ಟದಲ ಪದ್ಮಕ್ಕೆ ಉದಾಹರಣೆಯಾಗಿ ಹೇಳಿದ್ದಾರೆ. ನಮಿಸಾಧು ಮಾತ್ರ

''ಇದಮಷ್ಟದಲಂ ಪದ್ಮಮಿತಿ ಪೂರ್ವೇ ಭಣನ್ತಿ, ತನ್ನ ಸಮ್ಯಗ್ಬುಧ್ಯತೇ। ಚತುರ್ದಲಂ ತು ಬುಧ್ಯತೇ। ಯಥಾ 'ಯಾ' ಶಬ್ದೋಽತ್ರ ಕರ್ಣಿಕಾ ಅಷ್ಟವಾರಾನ್ಪರಾವರ್ತ್ಯತೇ। ದಲಾನಿ ದ್ವಾದಶಾಕ್ಷರಾಣಿ। ತತ್ರ ಪಾರ್ಶ್ವವರ್ತಿನಶ್ಚತ್ವಾರಶ್ಚತ್ವಾರೋ ವರ್ಣಾ ದಲಸಂಧಿಗತತ್ವಾದ್ದ್ವಿರಾವರ್ತ್ಯನ್ತೇ॥''

ಎಂಬುದಾಗಿ ಹೇಳಿ ಅದನ್ನು ಚತುರ್ದಲಪದ್ಮವಾಗಿ ತೋರಿಸಿದ್ದಾನೆ. ಆ ಪದ್ಯ ಹೀಗಿದೆ:

ಯಾ ಪಾತ್ಯಪಾಯಪತಿತಾನವತಾರಿತಾಯಾ
ಯಾ ತಾರಿತಾಽವಪತಿ ವಾಗ್ ಭುವನಾನಿ ಮಾಯಾ
ಯಾಮಾನಿನಾ ವಪತು ಮೋ ವಸು ಸಾ ಸ್ವಗೇಯಾ
ಯಾಗೇ ಸ್ವಸಾಽಸುರರಿಪೋರ್ಜಯ ಪಾಽತ್ಯಪಾಯಾ ॥

ಚಿತ್ರದಲ್ಲಿ ಇದನ್ನು ಅಳವಡಿಸಿದೆ. ಕರ್ಣಿಕೆಯಿಂದ ಹೊರಟು ದಳದಲ್ಲಿ ಸುತ್ತಿ ಮತ್ತೆ ಕರ್ಣಿಕೆಗೆ ಹಿಂದಿರುಗುವ ಹಿಂದಿನ ವಿಧಾನವೇ ಇದ್ದರೂ, ಇಲ್ಲಿ ಅರಕ್ಷೇತ್ರವೆಂದು ಹೇಳಬಹುದಾದ ಕಡೆಗಳಲ್ಲಿ ಕೂಡ ಅಕ್ಷರಗಳು ಬರುವುದು ಗಮನಾರ್ಹ. ಈ ದೃಷ್ಟಿಯಿಂದ ಇದಕ್ಕೂ ಚತುರರಚಕ್ರಬಂಧಕ್ಕೂ ವ್ಯತ್ಯಾಸ ಕಾಣಿಸುವುದಿಲ್ಲ.



ಬಂಧ ೩೮

ಇದರ ಅಕ್ಷರವಿನ್ಯಾಸ ಹೀಗೆ :

ಅಕ್ಷರ ಕ್ರಮಸಂಖ್ಯೆ	1	2	3	4	5	6	7	8	9	10	11	12	13	14
೧ನೆಯ ಪಾದ	A	B	C	D	E	–	–	–	–	F	G	H	I	A
೨ನೆಯ ಪಾದ	A	I	H	G	F	–	–	–	–	J	K	L	M	A
೩ನೆಯ ಪಾದ	A	M	L	K	J	–	–	–	–	N	O	P	Q	A
೪ನೆಯ ಪಾದ	A	Q	P	O	N	–	–	–	–	E	D	C	B	A

೨. ಅಷ್ಟದಲಪದ್ಮ

'ಸರಸ್ವತೀಕಂಠಾಭರಣ'ದಲ್ಲಿ ನಾಲ್ಕು ಪ್ರಕಾರದ ಅಷ್ಟದಲಪದ್ಮಬಂಧಗಳನ್ನು ಹೇಳಿದೆ. ಅವುಗಳಲ್ಲಿ ಮೊದಲನೆಯದರ ಲಕ್ಷ್ಯಪದ್ಯ ಹೀಗಿದೆ :

ಯಾಶ್ರಿತಾ ಪಾವನತಯಾ ಯಾತನಚ್ಛಿದನೀಚಯಾ ।
ಯಾಚನೀಯಾ ಧಿಯಾ ಮಾಯಾ ಯಾಮಾಯಾಸಂಸ್ತುತಾ ಶ್ರಿಯಾ ॥ (೨-೨೮೪)

ಇದರ ವಿನ್ಯಾಸಕ್ರಮವನ್ನು ಅಲ್ಲಿ ಹೀಗೆ ವಿವರಿಸಿದೆ :

ಕರ್ಣಿಕಾಯಾಂ ನ್ಯಸೇದೇಕಂ ದ್ವೇ ದ್ವೇ ದಿಕ್ಷು ವಿದಿಕ್ಷು ಚ ।
ಪ್ರವೇಶನಿರ್ಗಮೌ ದಿಕ್ಷು ಕುರ್ಯಾದಷ್ಟದಲಾಂಬುಜೇ ॥

ಇದರ ಪ್ರಕಾರ ಕರ್ಣಿಕೆಯಲ್ಲಿ ಒಂದಕ್ಷರವಿಟ್ಟು ಪ್ರತಿಯೊಂದು ದಳದಲ್ಲೂ ಪ್ರವೇಶಿಸುವ, ನಿರ್ಗಮಿಸುವ ರೀತಿಯಲ್ಲಿ ಎರಡೆರಡು ಅಕ್ಷರಗಳನ್ನು ಇಡಬೇಕು. ಈ ವಿಧಾನವನ್ನು ೫೯ನೆಯ ಬಂಧದಲ್ಲಿರುವ ಅಂಕಿಗಳ ಅನುಕ್ರಮಣಿಯು ಸ್ಪಷ್ಟಪಡಿಸುತ್ತದೆ. 'ಕರ್ಣಾಟ ಛಂದೋಲಂಕಾರ ಸಾಹಿತ್ಯಲಕ್ಷಣ ಸಂಗ್ರಹವು' ಇದೇ ಬಂಧವನ್ನು ಕುರಿತು ಹೀಗೆ ನಿರೂಪಿಸುವುದು : ''ಪದ್ಮಬಂಧಲಕ್ಷಣ॥ ಪದ್ಮಾಕಾರವಂ ಬರೆದು ಕರ್ಣಿಕಾದಿಯಾಗಿ ಕ್ರಮದಿಂದ ದಿಕ್ಕುಗಳಲ್ಲಿಯೂ ವಿದಿಕ್ಕುಗಳಲ್ಲಿಯೂ ಅಕ್ಷರಗಳನ್ನು ಬರೆಯುವಲ್ಲಿ ಸಕರ್ಣಿಕೆಗಳಾಗಿ ದಿಕ್ಕುಗಳಲ್ಲಿಯೂ ಕರ್ಣಿಕೆಯಂ ಸೇರಿಸಿಕೊಳ್ಳದೇ ವಿದಿಕ್ಕುಗಳಲ್ಲಿಯೂ ಏಳೇಳು ವರ್ಣಗಳಂ ಬರೆಯುವಲ್ಲಿ ಮುಂದೆ ಹೊಕ್ಕು ಹೋಗಿಬರುವಾಗ ದಿಕ್ಕುಗಳಲ್ಲಿ ೧ಳ ವರ್ಣಗಳೇ ನಿಲ್ಲುವವು. ಅಂತರ ವ್ಯವಧಾನದಿಂದ ಪ್ರಥಮ ದಳದಲ್ಲಿಯೂ ಮಿಕ್ಕ ದಳಗಳಲ್ಲಿ ಅವ್ಯವಧಾನವಾಗಿಯೂ ಓದಿಕೊಳ್ಳಬೇಕು.''



ಬಂಧ ೫೯

ಆದರೆ ಇದೇ ಪದ್ಯವನ್ನು ಚತುರ್ದಲಪದ್ಮ ಮತ್ತು ಚತುರರ ಚಕ್ರವಾಗಿ ಕೂಡ ರೂಪಿಸಬಹುದೆಂಬುದನ್ನು ಗಮನಿಸಬೇಕು. (ಬಂಧ ೬೦, ೬೧ ನೋಡಿ.) ಆದ್ದರಿಂದ ಈ ಮೂರೂ ಬಂಧಗಳಿಗೆ ಈ ಪ್ರಕಾರಕ್ಕೆ ಸಂಬಂಧಿಸಿದಂತೆ ಇದೊಂದೇ ಅಕ್ಷರವಿನ್ಯಾಸ ಸೂತ್ರ :

ಅಕ್ಷರ ಕ್ರಮಸಂಖ್ಯೆ	1	2	3	4	5	6	7	8
೧ನೆಯ ಪಾದ	A	B	C	–	–	D	E	A
೨ನೆಯ ಪಾದ	A	E	D	–	–	F	G	A
೩ನೆಯ ಪಾದ	A	G	F	–	–	H	I	A
೪ನೆಯ ಪಾದ	A	I	H	–	–	C	B	A



ಬಂಧ ೬೦



ಬಂಧ ೬೧

ಇನ್ನು 'ಸರಸ್ವತೀಕಂಠಾಭರಣ'ದ ಎರಡನೆಯ ಪದ್ಯ. ಅದು ಹೀಗಿದೆ :

ಚರಸ್ಫಾರವರಕ್ಷಾರ ವರಕಾರಗರಜ್ವರ
ಚಲಸ್ಫಾಲವಲಕ್ಷಾಲವಲಕಾಲಗಲಜ್ವಲ ॥ ೨– ೨೮೬ ॥

ಇದರ ವಿನ್ಯಾಸಕ್ರಮವನ್ನು ಅಲ್ಲಿಯೇ ಹೀಗೆ ನಿರೂಪಿಸಿದೆ :

ಅಷ್ಟಧಾ ಕರ್ಣಿಕಾವರ್ಣಃ ಪತ್ರೇಷ್ವಷ್ಟೌ ತಥಾಪರೇ ।
ತೇಷಾಂ ಸಂಧಿಷು ಚಾಪ್ಯಷ್ಟಾವಷ್ಟಪತ್ರಸರೋರುಹೇ ॥

ಕರ್ಣಿಕೆಯ ವರ್ಣ ೮ ಬಾರಿ, ಪತ್ರಗಳಲ್ಲಿ ೮ ಅಕ್ಷರಗಳು ೨–೨ ಬಾರಿ, ಸಂಧಿಸ್ಥಾನಗಳಲ್ಲಿ ೮ ಅಕ್ಷರಗಳು ೧–೧ ಬಾರಿ ಬರುತ್ತವೆ. ಇದರ ಅಕ್ಷರವಿನ್ಯಾಸ :

ಅಕ್ಷರ ಕ್ರಮಸಂಖ್ಯೆ	1	2	3	4	5	6	7	8
೧ನೆಯ ಪಾದ	A	B	C	B	D	B	E	B
೨ನೆಯ ಪಾದ	F	B	G	B	H	B	I	B
೩ನೆಯ ಪಾದ	A	J	C	J	D	J	E	J
೪ನೆಯ ಪಾದ	F	J	G	J	H	J	I	J

ಪಾದಗಳಲ್ಲಿ ಸಮಸ್ಥಾನಗಳಲ್ಲಿ ಒಂದೇ ಅಕ್ಷರ ಬರುವಂತಹ ರಚನೆಯುಳ್ಳ ಗೋಮೂತ್ರಿಕೆ ಕೂಡ ಈ ಬಂಧಕ್ಕೆ ಹೊಂದುತ್ತದೆಯೆಂಬುದನ್ನೂ ಇದು ಗೋಮೂತ್ರಿಕೆ ಕೂಡ ಆಗುತ್ತದೆಯೆಂಬುದನ್ನೂ ಗಮನಿಸಬೇಕು. ಈ ಬಂಧವನ್ನು ಬಂಧ ೬೨ರಲ್ಲಿ ತೋರಿಸಿರುವಂತೆ ನಿರೂಪಿಸಲಾಗಿದೆ. ಆದರೆ ಅದು ಷೋಡಶದಳ ಪದ್ಮವಾಗಿರುವುದನ್ನು ಗಮನಿಸಬೇಕು. ಆದ್ದರಿಂದ ಇದನ್ನು ಬಂಧ ೬೩ರಲ್ಲಿ ಸೂಚಿಸಿರುವಂತೆ ನಿರೂಪಿಸುವುದು ಉಚಿತ.



ಬಂಧ ೬೨



ಬಂಧ ೬೩

ಮೂರನೆಯ ಪದ್ಯ ಈ ರೀತಿಯಿದೆ :

ನಶಶೀಶನವೇ ಭಾವೇ ನಮತ್ಕಾಮನತವ್ರತ ।
ನಮಾಮಿ ಮಾನನಮನ ನನು ತ್ವಾನುನಯಂ ನಯಮ್ ॥ ೩–೨೮೮ ॥

ಇದರ ವಿನ್ಯಾಸಕ್ರಮವನ್ನು ಅಲ್ಲಿಯೇ ಹೀಗೆ ಹೇಳಿದೆ :

ಪ್ರಾಕ್ಕರ್ಣಿಕಾಂ ಪುನಃ ಪರ್ಣಂ ಪರ್ಣಾಗ್ರಂ ಪರ್ಣಕರ್ಣಿಕೇ ।
ಪ್ರತಿಪರ್ಣಂ ವ್ರಜೇದ್ಧೀಮಾನಿಹ ತ್ವಷ್ಟದಲಾಮ್ಬುಜೇ ॥

ಕರ್ಣಿಕೆಯಿಂದ ಹೊರಟು ಪತ್ರದ ಮೂಲಕ ಪತ್ರಾಗ್ರವನ್ನು ತಲಪಿ ಮತ್ತೆ ಪತ್ರದ ಮೂಲಕ ಹೊರಟ ಜಾಗಕ್ಕೇ, ಎಂದರೆ ಕರ್ಣಿಕೆಗೇ ಬರಬೇಕು. ಇದರಿಂದ ಒಂದು ದಳ ಸಿದ್ಧವಾಗುತ್ತದೆ. ಇದೇ ರೀತಿ ೮ ದಳಗಳು. (ಬಂಧ ೬೪ ನೋಡಿ.)

ಈ ಬಂಧದ ಅಕ್ಷರವಿನ್ಯಾಸ ಸೂತ್ರ ಹೀಗಾಗುತ್ತದೆ :

ಅಕ್ಷರ ಕ್ರಮ ಸಂಖ್ಯೆ	1	2	3	4	5	6	7	8
೧ನೆಯ ಪಾದ	A	B	–	B	A	C	–	C
೨ನೆಯ ಪಾದ	A	D	–	D	A	E	–	E
೩ನೆಯ ಪಾದ	A	F	–	F	A	G	–	G
೪ನೆಯ ಪಾದ	A	H	–	H	A	I	–	I



ಬಂಧ ೬೪

ನಾಲ್ಕನೆಯದು ಕವಿನಾಮಾಂಕಾಷ್ಟಪತ್ರಬಂಧ. ಇದರ ಲಕ್ಷ್ಯಪದ್ಯ ಹೀಗಿದೆ :

ರಾತಾವದ್ಯಾಧಿರಾಜ್ಞಾ ವಿಸರರರಸವಿದ್ಯಾ ಜವಾಕ್ಷ್ಮಾಪಕಾರಾ
ರಾಕಾ ಪಕ್ಷ್ಮಾಭಶೇಷಾ ನಯನನನಯನಸ್ವಾಖಯಾ ಸ್ತವ್ಯಮಾರಾ
ರಾಮಾ ವ್ಯಸ್ತಸ್ಥಿರತ್ವಾ ತುಹಿನನನಹಿತುಃ ಶ್ರೀಃ ಕರಕ್ಷಾರಧಾರಾ
ರಾಧಾ ರಕ್ಷಾಸ್ತು ಮಹ್ಯಂ ಶಿವಮುಮುಮುವಶಿವ್ಯಾಲವಿದ್ಯಾವತಾರಾ ॥ (೨–೨೯೪)

ಇದರ ವಿವರಣೆಯ ಪದ್ಯ ಇದು :

ನಿವಿಷ್ಟಾಷ್ಟದಲನ್ಯಾಸಮಿದಂ ಪಾದಾರ್ಧಭಕ್ತಿಭಿಃ ।
ಅಸ್ಪೃಷ್ಟಕರ್ಣಿಕಂ ಕೋಣ್ಯೈಃ ಕವಿನಾಮಾಂಕಮಂಬುಜಮ್ ॥

ಪಾದಗಳನ್ನು ೨–೨ ಆಗಿ ಒಡೆದು ೧–೧ ಅರ್ಧದಿಂದಲೂ ಕರ್ಣಿಕೆ–ದಳ–ಶೃಂಗ–ದಳ–ಕರ್ಣಿಕೆಯ ಸಮಿಾಪ–ದಳ–ಶೃಂಗ–ದಳ–ಕರ್ಣಿಕೆ ಈ ಕ್ರಮದಲ್ಲಿ ಒಂದೊಂದು ದಳವನ್ನು ರೂಪಿಸಬೇಕು. ಹೀಗೆ ಮಾಡಿದಾಗ ಅಷ್ಟದಲ ಪದ್ಮ ಸಿದ್ಧವಾಗುತ್ತದೆ. ಶೃಂಗಗಳಲ್ಲಿರುವ ಅಕ್ಷರಗಳನ್ನು ಸೇರಿಸಿದಾಗ 'ರಾಜಶೇಖರ ಕಮಲ' ಎಂಬುದು ಲಭಿಸುತ್ತದೆ. ಇಲ್ಲಿ ಚಕ್ರಬಂಧದ ಕವಿನಾಮಾಂಕಪದ್ಧತಿಯನ್ನು ಅನುಸರಿಸುವಂತೆ ತೋರುತ್ತದೆ. ಇಂತಹ ಇನ್ನೂ ಕೆಲವು ನಿದರ್ಶನಗಳಿವೆ.

ಈ ಬಂಧದ ಅಕ್ಷರವಿನ್ಯಾಸಸೂತ್ರ ಹೀಗಿರುತ್ತದೆ :

1	2	3	4	5	6	7	8	9	10	11	12	13	14	15	16	17	18	19	20	21
A	B	C	D	–	–	–	E	F	G	G	G	F	E	–	–	–	H	I	J	A
A	J	I	H	–	–	–	K	L	M	M	M	L	K	–	–	–	N	O	P	A
A	P	O	N	–	–	–	Q	R	S	S	S	R	Q	–	–	–	T	U	V	A
A	V	U	T	–	–	–	W	X	Y	Y	Y	X	W	–	–	–	D	C	B	A



ಬಂಧ ೬೫

‘ಅಲಂಕಾರಚಿಂತಾಮಣಿ’ಯಲ್ಲಿರುವ ಒಂದು ಅಷ್ಟದಲಪದ್ಮಬಂಧದ ಶ್ಲೋಕಾರ್ಧವು ಈ ರೀತಿ ಇದೆ:

ಇಲಾಪಾಲಾ ಸುಲಾತೀಲಾ । ಕಾಲಾಮಾಲಾಕುಲಾವಿಲಾಮ್ ॥ ೧–೪೧ ॥

ಒಂದು ದಳದಿಂದ ಪ್ರಾರಂಭಿಸಿ ಕರ್ಣಿಕೆಗೆ ಹೋಗಬೇಕು; ಅನಂತರ ಪಕ್ಕದ ದಳದಿಂದ ಕರ್ಣಿಕೆಗೆ. ಇದೇ ರೀತಿ ೮ ದಳಗಳನ್ನೂ ಪೂರ್ಣಮಾಡಬೇಕು. ಇಲ್ಲಿ ಸಮಸ್ಥಾನಗಳ ಅಕ್ಷರಗಳೆಲ್ಲ ಒಂದೇ ಆಗಿರುತ್ತವೆ. ಇದು ‘ವಿಪರೀತ’ ಕ್ರಮದ ರಚನೆ. ವಿನ್ಯಾಸ:

– A – A – A – A – A – A – A – A



ಬಂಧ ೬೬

'ಅಲಂಕಾರಚಿಂತಾಮಣಿ'ಯಲ್ಲೇ ಇರುವ 'ಪದ್ಮಪ್ರಶ್ನಬಂಧ' ಕೂಡ ಒಂದು ಅಷ್ಟದಲಪದ್ಮಬಂಧ. ''ಅನಯೋಽಕುಪ್ಯಜಶಯುಃ ಅಕಕೇವೋಹೋನಷ್ಟ್ಯೋಭಿಯೋಮಾಯುಃ'' (ಪ್ರ. ೫೦, ಪಂ. ೫)-ಎಂಬುದು ಒಂದು ಪ್ರಶ್ನೆ. ಈ ಪ್ರಶ್ನೆ ಅಷ್ಟದಲಪದ್ಮದ ಆಕಾರದಲ್ಲಿ ಅಳವಡುವುದರಿಂದ ಇದಕ್ಕೆ 'ಪದ್ಮಪ್ರಶ್ನಬಂಧ'ವೆಂದು ಹೆಸರು. ಕರ್ಣಿಕೆಯಿಂದ ದಳಗಳ ಕಡೆಗೆ ಹೋಗಬೇಕಾದುದು ಇದರ ವಿನ್ಯಾಸಕ್ರಮ. ಅಂಕಿಗಳ ಅನುಕ್ರಮಣಿಯು ಇದನ್ನು ಸ್ಪಷ್ಟಪಡಿಸುತ್ತದೆ.



ಬಂಧ ೬೭

ಕಾವ್ಯೋದಾಹರಣೆಗೆ, ರಾಮಕೃಷ್ಣ ಶಾಸ್ತ್ರಿಯ 'ಭುವನಪ್ರದೀಪಿಕಾ' (೧೮೦೮) ಎಂಬ ಸಂಸ್ಕೃತಗ್ರಂಥ ದಲ್ಲಿಯ ಅಷ್ಟದಳಪದ್ಮಬಂಧ:

ಮಾಯಾಜ್ಞ್ಯಸ್ಯಾಟನಭ್ರೂಃ ಸಕಲಗುಣಸಮಾಸ್ತೀರಸಸ್ತೋಮದಾಮಾ
ಮಾದಾಮಸ್ತೋ ಸರಸ್ತೀಗುಣಗಣಮಹಿಮಾವ್ಯಾಸಶಸ್ತ್ರೀಯುತಾಮಾ
ಮಾತಾಯುಸ್ತ್ರೀ ಶಸವ್ಯಾಖಗಗಮನರಮಾಶ್ರೀಲಗರ್ಭಾಗಭಾಮಾ
ಮಾಭಾಗರ್ಭಾಗಳಶ್ರೀಃ ಸುಚರಿತಗರಿಮಾ ಭ್ರೂನಟಸ್ಯಾಜ್ಞ್ಯಯಾಮಾ ||

(ಪಟಲ ೬೭ ಮುಂದೆ; ಪು. ೧೧೮)

ಈ ಸ್ರಗ್ಧರಾವೃತ್ತದಲ್ಲಿ ಕೀಲಕ್ಷರ 'ಮಾ' (ಲಕ್ಷ್ಮೀಪರ ಶಬ್ದ). ಇದು ೧೨ ಸಲ ಆವೃತ್ತಿಗೊಳ್ಳುತ್ತದೆ. ಅಲ್ಲದೆ, ಒಂದು ಬಿಟ್ಟು ಒಂದರಂತೆ (೩, ೫, ೭, ೧) ದಳಗಳು ಅನುಲೋಮವಿಲೋಮಗಳಲ್ಲಿಯೂ ನಡೆಯುತ್ತವೆ.

'ಕಾವ್ಯಾವಲೋಕನ'ದಲ್ಲಿ ಒಂದು ಅಷ್ಟದಲಪದ್ಮಬಂಧದ ನಿದರ್ಶನವಿದೆ (ಪ. ೫೭೯). ಇಲ್ಲಿ ೧–೯ನೆಯ ಅಕ್ಷರಗಳ ನಡುವೆ ಮ–ವ ಅಭೇದವನ್ನು ಗ್ರಹಿಸಬೇಕು.

ಮಂದರಾಗಂ ಗುಣೋದ್ಧಾಮಂ ವಂದಿತಂ ಸದಯಾದಮಂ |
ಮಂದರಾದ್ರಿನಿಭಂ ಭೀಮಂ ಮಂದಿಯೊಳ್ ಪೇಟ್ದುಮಾಯಮಂ ||



ಬಂಧ ೬೮



ಬಂಧ ೬೯

ದ್ವಾದಶದಲಪದ್ಮ

೧೨ ದಲಗಳ ಪದ್ಮದ ರಚನೆಗೆ ಮುದ್ದೂರು ನರಸಿಂಹಸ್ವಾಮಿದೇವಾಲಯದ ಪ್ರವೇಶದ್ವಾರದಲ್ಲಿಯ ಚಿತ್ರಬಂಧದ ಕಲ್ಲು ಒಳಕೊಂಡಿರುವ (ಎಕ. VIII, ಮ.೧೬; ಪು.೨೬೩; ಸು. ೧೦–೧೧ನೆಯ ಶ.) ಶ್ಲೋಕಗಳು :

ತೇ ಮಹೇಂದ್ರ ರಮಾ ಭಾತೇ ತೇ ಭಾಮಾ ರಮತೇ ಮತೇ ।
ತೇ ಮತೇ ನಿರ್ಭಯಾ ಜಾತೇ ತೇ ಜಾಯಾ ಮಮ ಹೇ ಮತೇ ॥

ರಾಜತೇ ನಿರ್ಭಯಂ ಶ್ರೀರಾರಾಶ್ರೀಯಂ ಸ್ವಾತಿಭಾಸುರಾ ।
ರಾಸುಭಾ ವರ್ದ್ಧತೇ ಸುರಾ ರಾಶೂತೇ ತವ ತೇ ಜರಾ ॥

ಇವುಗಳಲ್ಲಿ, ಮೊದಲ ಶ್ಲೋಕದ 'ತೇ' ಎಂಬ ಅಕ್ಷರ ಕರ್ಣಿಕೆಯಲ್ಲಿದ್ದು, ಇದು ದಳಗಳೊಂದಿಗೆ ಸೇರಿ ೮ ಸಲ ಆವೃತ್ತಿಗೊಳ್ಳುತ್ತದೆ. ಹೀಗೆಯೇ ಎರಡನೆಯ ಶ್ಲೋಕದ 'ರಾ' ಎಂಬ ಅಕ್ಷರ ಸಹ.



ಬಂಧ ೭೦



ಬಂಧ ೭೧

ಷೋಡಶದಲಪದ್ಮ

'ಸರಸ್ವತೀಕಂಠಾಭರಣ'ವು ಇದನ್ನು ಉಲ್ಲೇಖಿಸುತ್ತದೆ. ಅಲ್ಲಿರುವ ಇದರ ಲಕ್ಷ್ಯಪದ್ಯ ಇದು :

ನಮಸ್ತೇ ಮಹಿಮಪ್ರೇಮ ನಮಸ್ಯಾಮತಿಮದ್ಧಮ ।
ಕ್ಷಾಮಸೋಮ ನಮತ್ತ್ರಾಮ ಧಾಮಭೀಮ ಸಮಕ್ಷಮ ॥ (೭–೨೪೨)

ಅಲ್ಲಿಯೇ ಇದರ ವಿನ್ಯಾಸದ ಬಗೆಗಿನ ಪದ್ಯ :

ಗೋಮೂತ್ರಿಕಾಕ್ರಮೇಣ ಸ್ಯುರ್ವರ್ಣಾಃ ಸರ್ವೇ ಸಮಾಃ ಸಮಾಃ ।
ಮಧ್ಯೇ ಮವರ್ಣವಿನ್ಯಾಸಾತ್ಪದ್ಮೋಽಯಂ ಷೋಡಶಚ್ಛದಃ ॥

ಎಂದರೆ ಇದು ಗೋಮೂತ್ರಿಕಾಬಂಧದಂತೆಯೇ ಇರುತ್ತದೆ; ಆದರೆ ಸಮಸ್ಥಾನಗಳಲ್ಲೆಲ್ಲ ಒಂದೇ ಅಕ್ಷರ ಬರುತ್ತದೆ. ಇಲ್ಲಿ 'ಮ' ಹಾಗೆ ಬಂದಿದ್ದು, ಅದು ಕರ್ಣಿಕೆಯನ್ನು ರೂಪಿಸುತ್ತದೆ. ಒಂದು ದಳದಿಂದ ಪ್ರಾರಂಭಿಸಿ ಕರ್ಣಿಕೆಗೆ ಬರಬೇಕು. ಅನಂತರ ಪಕ್ಕದ ದಳದಿಂದ ಮತ್ತೆ ಕರ್ಣಿಕೆಗೆ. ಇದೇ ರೀತಿ ೧೬ ದಳಗಳನ್ನೂ ತುಂಬಬೇಕು.

ಇದೇ ಆಶಯವನ್ನು 'ಪಾದುಕಾಸಹಸ್ರ'ದಲ್ಲಿ ಸಲಕ್ಷ್ಯವಾಗಿ

ಏಕ ಸರ್ವಂ ಯದಿ ಭವೇತ್ ಏಕಾಂತರಿತಮಕ್ಷರಂ ।
ತತ್ ಷೋಡಶದಲಂ ಪದ್ಮಂ ಶ್ಲಿಷ್ಟವರ್ಣಾಧಾರಕರ್ಣಿಕಂ ॥

ಎಂಬುದಾಗಿ ತಿಳಿಸಿದೆ.



ಬಂಧ ೭೨

ಇದರ ವಿನ್ಯಾಸಸೂತ್ರ :

ಅಕ್ಷರ ಕ್ರಮಸಂಖ್ಯೆ	1	2	3	4	5	6	7	8
೧ನೆಯ ಪಾದ	–	A	–	A	–	A	–	A
೨ನೆಯ ಪಾದ	–	A	–	A	–	A	–	A
೩ನೆಯ ಪಾದ	–	A	–	A	–	A	–	A
೪ನೆಯ ಪಾದ	–	A	–	A	–	A	–	A

'ಅಲಂಕಾರ ಚಿಂತಾಮಣಿ'ಯಲ್ಲಿರುವ ಲಕ್ಷ್ಯಪದ್ಯ ಇದು :

ಗಾನ್ಲನಂ ಚೈನಶ್ಚ ನಸ್ಸೀನ ಹಾನಹೀನ ಘನಜ್ಞಾನ
ಅನಂತಾನಶನ ಜ್ಞಾನಸ್ಥಾನಸ್ಥಾನತನಂದನ ॥ ೨-೧೫೪ ॥

ಮೇಲಿನ ಸೂತ್ರಕ್ಕೆ ಇದು ಸಂಪೂರ್ಣವಾಗಿ ಹೊಂದುತ್ತದೆ. ಇದು ಮಾತ್ರವಲ್ಲದೆ ನಿರೋಷ್ಠ್ಯ, ಯಥೇಷ್ಟ ಏಕಾಕ್ಷರಾಂತರಿತ ಮುರಜ, ಗೊ ಮೂತ್ರಿಕೆಗಳಿಗೆ ಕೂಡ ಇದು ಅಳವಡುತ್ತದೆ. ಬಂಧದ ರೀತಿ ಮೇಲಿನಂತೆಯೇ.

ಕನ್ನಡದ 'ನರಪತಿಚರಿತ'ದಲ್ಲಿರುವ ಶ್ಲೋಕ ಕೂಡ ಷೋಡಶದಲಪದ್ಮದ ಎಲ್ಲ ಲಕ್ಷಣಗಳನ್ನೂ ಹೊಂದಿದೆ. ಅಲ್ಲಿಯ ಪದ್ಯ ಇದು :

ನವಾನಘನಯಾನಲ್ಪಂ । ನವೀನವನಜಾನನಂ ।
ನವಾನರ್ಘ್ಯನದೀನರ್ಮ । ನವನರ್ಜುನಸಂನತಂ ॥ ೨-೧೭ ॥

ಹಿಂದಿನದಕ್ಕೂ ಇದಕ್ಕೂ ಇರುವ ವ್ಯತ್ಯಾಸವೆಂದರೆ ಸಮಸ್ಥಾನದ ಅಕ್ಷರಗಳ ಬದಲು ಇಲ್ಲಿ ವಿಷಮಸ್ಥಾನದ ಅಕ್ಷರಗಳು ಮಾತ್ರ ಒಂದೇ ಆಗಿರುವುದು. ಇದರಿಂದಾಗಿ ಇಲ್ಲಿ ಕರ್ಣಿಕೆಯಿಂದ ಪ್ರಾರಂಭಿಸಿ ದಳದ ಕಡೆಗೆ ಹೋಗಬೇಕಾಗುತ್ತದೆ.



ಬಂಧ ೭೩

೫. ಸ್ಥಲ ಸನ್ನಿವೇಶಗಳ ವಾಸ್ತು

ಸಂಸ್ಕೃತದಲ್ಲಿ ಸರೋಬಂಧ, ಕೂಪಬಂಧ, ವ್ಯೋಮಬಂಧ, ಸೂರ್ಯಬಂಧ, ಚಂದ್ರಬಂಧ ಕೆಲವು ಈ ಗುಂಪಿನ ಬಂಧಗಳಾಗಿ 'ಚಿತ್ರಬಂಧಕಾವ್ಯ', 'ಸರಸ್ವತೀಕಂಠಾಭರಣ'ಗಳಲ್ಲಿ ನಿರೂಪಿತವಾಗಿವೆ. ಲಕ್ಷಣ ಲಕ್ಷ್ಯಗಳುಂಟು. ಆದರೆ ಕನ್ನಡದಲ್ಲಿ ಇಂತಹವು ಅಷ್ಟಾಗಿ ಕಂಡುಬಂದಿಲ್ಲ. ಚಂದ್ರರಾಜನ 'ಮದನತಿಲಕ'ದಲ್ಲಿ

ಮಾರಾ ಮಾನಿನಿ ಮಾರಾಮಾ ರಾಜ ಮಾತ್ಯಕ್ರಮಾಜರಾ ।
ಮಾ ಮಾ ಮಾ ಶತ ಮಾ ಮಾ ಮಾ ಸತ್ವ ಸತ್ವತ್ವ ಸತ್ವನಿ ॥ (೧೦-೨೫)

ಎಂಬ ಶ್ಲೋಕವೊಂದಿದ್ದು, ''ಇದುವೆ ಗೋಮೂತ್ರಿಕೆಯುಂ ಮುರಜಬಂಧಮುಂ ಚಕ್ರಾಹ್ವಯಮುಂ ಮಕರವ್ಯೂಹಮುಂ ಶಂಖಾವರ್ತಮುಮಕ್ಕುಂ'' ಎಂಬುದಾಗಿ ಸೂಚನೆಯಿರುವುದನ್ನು ಇಲ್ಲಿ ನೆನೆಯಬಹುದಾಗಿದೆ. ಮಕರವ್ಯೂಹವೆಂಬುದು ಸನ್ನಿವೇಶದ್ಯೋತಕವಾದ ಬಂಧವಾಗಿರಬಹುದು. ಪಾಠಕ್ಲೇಶಗಳ ದೆಸೆಯಿಂದ ಪದ್ಯ ಅರ್ಥವಾಗುತ್ತಿಲ್ಲ. ಆದ್ದರಿಂದ ಸೂಚಿತವಾದ ಯಾವ ಬಂಧದಲ್ಲಿಯೂ ಈ ಪದ್ಯವನ್ನು ಹೊಂದಿಸಲು ಸಾಧ್ಯವಾಗುತ್ತಿಲ್ಲ.

ವ್ಯೋಮಬಂಧ

'ಸರಸ್ವತೀಕಂಠಾಭರಣ'ದಲ್ಲಿ ಈ ಬಂಧದ ಉಲ್ಲೇಖವಿದ್ದು, ಆ ಸಂಬಂಧದ ಪದ್ಯಗಳು ಇಂತಿವೆ :

ಕಮಲಾವಲಿಹಾರಿವಿಕಾಸವಿಶೇಷವಹಂ ಜನಕಾಂಕ
ನ ನಗಾಮಿಕರಂ ದಿವಿ ಸಾರಮನಾರಮಣಂ ಜರತಾಂ ನ
ತಮಸಾಂ ಬಲಹಾನಿ ವಿಲಾಸವಶೇನ ವರಂ ಜನಕಾಂತ
ನ ನಮಾಮಿ ಚಿರಂ ಸವಿತಾರಮನಾದಿಮಹಂ ಜಗತಾಂ ನ ॥

ಇದರ ರಚನಾಕ್ರಮವನ್ನು ಅಲ್ಲಿಯೇ ಹೀಗೆ ಹೇಳಿದೆ :

ಅಷ್ಟಾದಶಶಿಖರಚರೀಂ ಗೋಮೂತ್ರಿಕಯಾ ಚತುಷ್ಪದೀಂ ಪಶ್ಯೇತ್ ।
ಯತ್ರಾದ್ಯಂತ್ಯೈರ್ದ್ವ್ಯಷ್ಟಾಂ ಸ ಜ್ಞೇಯೋ ವ್ಯೋಮಬಂಧ ಇತಿ ॥

ಇದರ ಪ್ರಕಾರ ೧೮ ಶಿಖರ ಅಥವಾ ೧೯ ಕೋಷ್ಠಗಳುಳ್ಳ ಮೂರು ವೃತ್ತಗಳನ್ನು ಒಂದರೊಳಗೊಂದರಂತೆ ರಚಿಸಬೇಕು. ಯಾವುದಾದರೊಂದು ಕೋಷ್ಠದಿಂದ ಪ್ರಾರಂಭಿಸಿ ಗೋಮೂತ್ರಿಕೆಯ ಕ್ರಮದಲ್ಲಿ ಸಾಗಬೇಕು.



ಬಂಧ ೭೪

ಈ ಬಂಧದ ವರ್ಣವಿನ್ಯಾಸವನ್ನು ಹೀಗೆ ಸೂಚಿಸಬಹುದು :

ಅಕ್ಷರ ಕ್ರಮಸಂಖ್ಯೆ	1	2	3	4	5	6	7	8	9	10	11	12	13	14	15	16	17	18	19
೧ನೆಯ ಪಾದ	A	B	–	C	–	D	–	E	–	F	–	G	–	H	–	I	–	J	A
೨ನೆಯ ಪಾದ	K	L	–	M	–	N	–	O	–	P	–	Q	–	R	–	S	–	T	K
೩ನೆಯ ಪಾದ	U	B	–	C	–	D	–	E	–	F	–	G	–	H	–	I	–	J	U
೪ನೆಯ ಪಾದ	V	L	–	M	–	N	–	O	–	P	–	Q	–	R	–	S	–	T	V

೬. ಸಂಕೀರ್ಣ

ನಾಗಬಂಧಗಳು

ನಾಗಬಂಧದ ಸ್ವರೂಪವನ್ನು ಸಂಸ್ಕೃತದಲ್ಲಿ 'ಮಂದಾರಮರಂದಚಂಪೂ', 'ಪ್ರತಾಪರುದ್ರೀಯ', 'ಅಲಂಕಾರಚಿಂತಾಮಣಿ', 'ಸಾಹಿತ್ಯರತ್ನಾಕರ' ಈ ಕೆಲವು ಕೃತಿಗಳಲ್ಲಿ ಕಾಣಬಹುದಾಗಿದೆ. ಸಂಸ್ಕೃತ ಕನ್ನಡಗಳಲ್ಲಿ ತೋರುವುದಕ್ಕಿಂತ ತೆಲುಗು ಭಾಷೆಯಲ್ಲಿಯೇ ಇದರ ಪ್ರಚುರತೆ ಹೆಚ್ಚು. ಸಂಸ್ಕೃತದಲ್ಲಿ ಸ್ರಗ್ಧರೆಯನ್ನೂ ತೆಲುಗಿನಲ್ಲಿ ಇದರ ಜೊತೆಗೆ ಚಂಪಕಮಾಲೆಯನ್ನೂ ಬಳಸಿ ಬಂಧಕವಿತ್ವವನ್ನು ರಚಿಸಿರುವುದು ಕಾಣುತ್ತದೆ. ಕನ್ನಡದಲ್ಲಿ ಸಹ ಹೀಗೆಯೇ ಈ ಎರಡು ವೃತ್ತಗಳನ್ನು ಬಳಸಿದ್ದರೂ, ಸೀಸಪದ್ಯವನ್ನು ತೆಲುಗಿನಲ್ಲಿ ಹೇಗೋ ಹಾಗೆ ಇಲ್ಲಿಯೂ ಉಪಯೋಗಿಸಿಕೊಂಡಿರುವುದುಂಟು. ತೆಲುಗಿನ 'ಅಪ್ಪಕವೀಯಮು' ಮೊದಲಾದ ಲಕ್ಷಣಗ್ರಂಥಗಳಲ್ಲಿ ನಾಗಬಂಧಲಕ್ಷಣವನ್ನು ನಿರೂಪಿಸಿದೆ. ಇಲ್ಲಿ ನನ್ನೆಚೋಡನ 'ಕುಮಾರಸಂಭವ', ನಂದಿತಿಮ್ಮನನ 'ಪಾರಿಜಾತಾಪಹರಣ', ತೆನಾಲಿ ರಾಮಭದ್ರಕವಿಯ 'ಇಂದುಮತೀಪರಿಣಯ' ಇವು ಮೊದಲುಗೊಂಡು ಸು. ೩೬ ಮಂದಿ ಕವಿಗಳ ಕೃತಿಗಳಲ್ಲಿಯ ಲಕ್ಷ್ಯಗಳನ್ನು ಚಂಪಕಮಾಲೆಯ ನಾಗಬಂಧಗಳನ್ನಾಗಿ ಗುರುತಿಸಲಾಗಿದೆ. ಹೀಗೆಯೇ ಸ್ರಗ್ಧರೆ, ಮತ್ತೇಭವಿಕ್ರೀಡಿತ, ಉತ್ಪಲಮಾಲೆ, ಕಂದದ್ವಯ, ಸೀಸಪದ್ಯ ಈ ಪದ್ಯಜಾತಿಗಳನ್ನು ಬಳಸಿದ ನಾಗಬಂಧಗಳೂ ಉಂಟು. ಕುಂಡಲಿನಾಗ, ಕೃಷ್ಣಸರ್ಪ, ನಾಗದ್ವಯ, ಅಷ್ಟನಾಗ, ಅಷ್ಟಕೋಣಫಣಿ, ನವಕೋಣಫಣಿ ಇತ್ಯಾದಿ ಪ್ರಕಾರಗಳನ್ನೂ ಇಲ್ಲಿ ಕಾಣಬಹುದು. ಕನ್ನಡದಲ್ಲಿ ವೆಂಕಟರಮಣಯ್ಯನ 'ಗಯೋಪಾಖ್ಯಾನ'ದಲ್ಲಿ ೩ ನಾಗಬಂಧ ವೈಚಿತ್ರ್ಯಗಳುಂಟು. ಇವುಗಳಲ್ಲಿ ಒಂದರ ಮಾದರಿ (ಪ. ೪೫) ನಮಗೆ ಸ್ಪಷ್ಟ. ಇಲ್ಲಿ ಗರ್ಭಕವಿತ್ವ ಲಕ್ಷಣವೂ ಬೆರೆತಿದೆ. 'ಮೈಸೂರ ಮೆಯ್ಸಿರಿ'ಯಲ್ಲಿ ಸ್ರಗ್ಧರೆಯಲ್ಲಿ ಕಟ್ಟಿದ ಲಕ್ಷ್ಯವಿದೆ. ಈ ಎರಡು ಲಕ್ಷ್ಯಗಳೂ ಕುಂಡಲಿನಾಗಬಂಧಗಳಾಗಿ ಅಳವಡತಕ್ಕವಾಗಿವೆ.

ಇಲ್ಲಿಯೇ ನೆನೆಯಬಹುದಾದ ಒಂದು ಸಂಗತಿಯೆಂದರೆ : 'ವೀರಶೈವ ಮಾಹೇಶ್ವರಾಚಾರ ಸಂಗ್ರಹ'ದ ಸಂಬಂಧವುಳ್ಳುದೆಂದು ತೋರುವ 'ವೀರಶೈವಸಿದ್ಧಾಂತ ಉದ್ಧರಣೆಯ ಪಟಲಗಳು' ಎಂಬ ಬಣ್ಣದ ಚಿತ್ರಗಳ ಶ್ರೇಣಿಯಲ್ಲಿ (ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿಭಂಡಾರ, ಕೆಎ. ೩೧೩) ೨೩ನೆಯದಾದ ಒಂದು ಪಟ 'ಇದು ಸರ್ಪಬಂಧ' ಎಂಬ ವಿವರಣೆಯದಾಗಿದ್ದು, ಕುಂಡಲಿನಾಗಬಂಧದಲ್ಲಿ ಸಂಸ್ಕೃತ ಪದ್ಯವೊಂದನ್ನು ಅಳವಡಿಸಲಾಗಿದೆ. ಚಿತ್ರ ಕಲಾತ್ಮಕವಾಗಿದೆ.

ನಾಗಪಾಶ

'ಅಲಂಕಾರಚಿಂತಾಮಣಿ'ಯಲ್ಲಿ ಈ ಬಂಧದ ಪ್ರಸ್ತಾಪವಿದೆ. ಆ ಸಂಬಂಧದ ಪದ್ಯ ಮತ್ತು ವಿವರಣೆಯ ಭಾಗ ಹೀಗಿದೆ :

ನಾಗಾಕಾರಧರೇ ಬಂಧೇ ವರ್ಣಾಃ ಪಾಶ್ಯಾಃ ಕೃತಾಂತರಾಃ ।
ಪ್ರೋಕ್ತವಾಕ್ಯೋದ್ಭವಂ ಶ್ರುತ್ವಾ ನಾಗಪಾಶಂ ವಿದುಶ್ಚ ತತ್ ॥
ವಲ್ಲ್ಯಾಂ ಸಂಬುಧ್ಯತಾಂ ರಮ್ಯಃ ಕಸ್ತಾಪಹರಮುಚ್ಯತಾಮ್ ।
ಕೀದೃಕ್ ಮಿಥ್ಯಾರುಚಿಃ ಪುಂಭ್ಯೋ ವೇಶ್ಯಾವೀಥೀ ಚ ಕೀದೃಶೀ ॥ (೨–೧೧೪, ೧೧೫)

ಮೇಲಿನ ಭಾಗದಲ್ಲಿ ೧೧೫ನೆಯ ಶ್ಲೋಕವು ಒಂದು ಸಮಸ್ಯಾಪದ್ಯ. ಲತೆಯಲ್ಲಿ ರಮ್ಯವಾದುದನ್ನು ಏನೆಂದು ಕರೆಯುತ್ತಾರೆ? ತಾಪಹಾರಕವಾದುದನ್ನು ಏನೆಂದು ಕರೆಯುತ್ತಾರೆ? ಪುರುಷರ ಕಪಟರುಚಿಯು ಯಾವ ರೀತಿಯಿರುತ್ತದೆ? ವೇಶ್ಯಾವೀಥಿಯು ಹೇಗಿರುತ್ತದೆ? ಎಂಬೀ ನಾಲ್ಕು ಪ್ರಶ್ನೆಗಳು ಅದರಲ್ಲಿವೆ. ಅವಕ್ಕೆಲ್ಲ ಒಂದೇ ಸಾಲಿನಲ್ಲಿ ''ಪಲ್ಲವಕಮಹಿತಾ'' ಎಂಬುದು ಉತ್ತರವಾಗಿದೆ. ಲತೆಯಲ್ಲಿ ರಮ್ಯವಾದುದು ''ಪಲ್ಲವ''; ತಾಪಹಾರಕವಾದುದು ''ಕಂ'' (ನೀರು); ಪುರುಷರ ಕಪಟರುಚಿಯು ''ಅಹಿತಾ'' ಆಗಿರುತ್ತದೆ; ವೇಶ್ಯಾವೀಥಿಯು ''ಪಲ್ಲವಕೈಃ ಮಹಿತಾ'' ಎಂದರೆ ವಿಟರಿಂದ ಕೂಡಿರುತ್ತದೆ.

ಈ ಉತ್ತರವನ್ನು ಈ ನಾಗಪಾಶಬಂಧದಲ್ಲಿ ಕಾಣುತ್ತೇವೆ. ವ್ಯಾಖ್ಯೆಯಿಂದ ತಿಳಿಯುವಂತೆ ಈ ಬಂಧದ ರಚನಾ ವಿಧಾನ : ೨ ಊರ್ಧ್ವಮುಖೀಸರ್ಪಗಳ ಆಕೃತಿಯನ್ನು ನಾಲ್ಕು ರೇಖೆಗಳ ಸಹಾಯದಿಂದ ರೂಪಿಸಿ ಮುಖದಿಂದ ಬಾಲದವರೆಗೆ ಎಂಟು ಅಡ್ಡಗೆರೆಗಳನ್ನೆಳೆಯಬೇಕು. ಆದರಿಂದ ೨೧ ಕೋಷ್ಠಗಳು ಏರ್ಪಡುತ್ತವೆ. ಆಗ ಪ್ರತಿಪಂಕ್ತಿಯಲ್ಲೂ ಹೆಡೆಯಿಂದ ಬಾಲದವರೆಗೆ ''ಪಲ್ಲವಕಮಹಿತಾ'' ಎಂಬ ಏಳು ಅಕ್ಷರಗಳನ್ನಿಡಬೇಕು.

ಅನಂತರ ಮೊದಲ ಪಂಕ್ತಿಯ ಮೊದಲ ಕೋಷ್ಠದಿಂದ ಪ್ರಾರಂಭಿಸಿ, ಅಂತ್ಯದವರೆಗೆ, ಚದುರಂಗದ ಆಟದಲ್ಲಿಯ ಗಜಪದಚಾರಕ್ರಮದಂತೆ ಈ ವಾಕ್ಯವನ್ನು (ಪಲ್ಲವಕಮಹಿತಾ) ಓದಬೇಕು. ಮತ್ತೆ, ಮೂರನೆಯ ಪಾದದ ಮೊದಲ ಕೋಷ್ಠದಿಂದ ಪ್ರಾರಂಭಿಸಿ ಅದೇ ರೀತಿ ಓದಬೇಕು. ಅನಂತರ ಮಧ್ಯಮ ಪಂಕ್ತಿಯ ಪ್ರಥಮ ಕೋಷ್ಠದಿಂದ ಪ್ರಾರಂಭಿಸಿ ಅಥವಾ ದ್ವಿತೀಯ ಪಂಕ್ತಿಯಲ್ಲಿ ತ್ರಿರಾವೃತ್ತಿಯಿಂದ ಕ್ರಮಶಃ ಓದಬೇಕು. ಮೂರು ಭಾಗಗಳಲ್ಲಿ ಹರಡಿದ್ದರೂ ಏಕತಾರೂಪವಾದ ಈ ನಾಗಪಾಶವು ತ್ರಿಗುಣಿತವಾಗಬಲ್ಲುದು. ಈ ಉತ್ತರವು ಏಳು ಅಕ್ಷರಗಳಿಂದ ಆಗಿದೆ. ಸ್ವಬುದ್ಧಿಗನುಗುಣವಾಗಿ ಇದಕ್ಕಿಂತ ಹೆಚ್ಚು ಕಡಮೆ ಅಕ್ಷರಗಳಿಂದ ಕೂಡ ಉತ್ತರ ತಿಳಿಸಬಹುದು.



ಬಂಧ ೭೫

ನಾಗ

ಕನ್ನಡ 'ಗಯೋಪಾಖ್ಯಾನ'ದ ನಾಗಬಂಧದ ಮೂರು ವೈಚಿತ್ರ್ಯಗಳು ಹೀಗಿವೆ :

ಕಂದಗರ್ಭಿತಚಂಪಕಮಾಲಾವೃತ್ತ ನಾಗಬಂಧ :

ಸ್ಥಿರ ಸುವಿನೋದ ಶೂರ ಭವದೇವವರಸ್ತುತ ಮಾಧವೂಧವಾ
ಖರದಮನಾ ಸುಧೀರ ಖಲಕಾಲ ಮುದಪ್ರದ ಹಾರಧಾರಣಾ
ಹರಿ ಪವನಾಂಗಭೂರತಿದಯಾದವವರ್ಯ ಸುಧೀವಿನೋದದಾ
ಕ್ಷರ ವರದಾತತಾರಿವಧಸಾಧನಧರ್ಮಗ ರಾಮ ಭೂವರಾ ॥

ಸುವಿನೋದ ಶೂರ ಭವದೇ । ವವರಸ್ತುತ ಮಾಧವೂಧವಾ ಖರದಮನಾ ।
ಪವನಾಂಗ ಭೂರತಿದ ಯಾ । ದವವರ್ಯ ಸುಧೀವಿನೋದದಾಕ್ಷರವರದಾ ॥

ಸಪ್ತಾಶ್ವತ್ಥಪರ್ಣನಾಗಬಂಧ ಸೀಸಪದ್ಯ :

ಶ್ರೀಕರ ಜಗದೀಶ ಸೀತಾಮನೋಹರ ಪವಮಾನ ಭೂಪತೀವನವಿಹರಣ ।
ಸಕಲಜಗದ್ರಕ್ಷ ಶಮಲವಿನಾಶನಾಮ ವಿಬುಧನಾಯಕಮನುಜರೂಪ ।
ದಾನವಕುಲವನದಾವ ಲಕ್ಷ್ಮೀಪತಿ ತುಲಸೀದಳಗಣಹಾರ ಲಸಿತವರ ।
ದೋರ್ಲತ ತಪನಜಪಾಲಕ ಧರ್ಮರಕ್ಷಕ ಧನ್ಯನಂದಕ ಸಾಧನಧರ ॥

ರಾಮಕೋಮಲ ದೀಪ್ತ್ಯತುಲಾಮಲರಸ । ಸೀಮವಿಲಸತ್ಸುಮಂಗಳಶ್ರೀಕಲಾಪ ।
ವೈರಿಸಂಹರಚಣ ಮೋಹವಾರಣ ಹರಿ । ಕ್ಷುದ್ರಶೀಲ ಭಯದ ಮಂತ್ರಸುರ ಸುಖಕರ ॥

ಬೃಂದಾವನನಾಗಬಂಧ ಸೀಸಮಾಲಿಕೆ :

ಶ್ರೀಶಾ ಸುಭಾನು ಭಾಶಿವದೇವನತಪೂತಪದಯುಗ ಸಂಯುತಾಭವವಿದಾರಿ
ವೈರಿಹಾ ದಕ್ಷಿಣಾವರ್ತ ಕಂಜಸುಚಕ್ರನಂದಕಾದಿ ಸುಸಾಧನಾಂಚಿತಕರ
ದಂಡಿತಪರವಿನತಾರ್ತಜನಾವನಾಘನಮೌನವಾಕಾರಕಾಮ ರಘುಪ
ಗಜಪಾಚಲಾನಂದಕಾರಿ ಸುಭೂಧರಧರಧರಾಧರಧವಾಧಾಮಧಾಮ ॥

ಶ್ರೀದ ಶ್ರೀದ ಶಮದ ಶ್ರೀಪೂರ್ಣಕೋಯದಭೂರಿಭಾಯುತ ಭಯಹಾರಿ ಹಾರಿ
ಮಾರ ಮಾರ ವಿಹಗಚಾರಿ ಘನಸ್ಫುರಚ್ಛ್ರೀತಸುಂದರಕಳಾಚಿಂತ್ಯಶಕ್ತಿ ॥

ದಕ್ಷಪೂಜಿತೋದ್ಯದಸ್ತ್ರಾರಿಹಾರಿ ಗು । ಣಾಕರಾಘನಾಶನಾ ಸುನಾಸ ।
ರಮ್ಯ ಪದ್ಮನಾಭ ರಾಜಾನನಾ ನಮ್ಯ । ಭೋಗಿ ಭೋಗಿಭೋಗ ಭೋಗಶಾಯೀ ॥

(೧೦–೪೫—೪೯)

ಇವುಗಳಲ್ಲಿ ಮೊದಲನೆಯದಕ್ಕೆ ಮಾದರಿಯಿರುವುದರಿಂದ, ಅದನ್ನು ಈ ಮುಂದೆ 'ಬಂಧ'ವಾಗಿ ಉದ್ಧರಿಸಿದೆ. ಆದರೆ ಉಳಿದವುಗಳನ್ನು ಉದ್ಧರಿಸುವ ರೀತಿ ತಿಳಿಯುತ್ತಿಲ್ಲ. ತೆಲುಗಿನಲ್ಲಿ ಸಹ ಸೀಸನಾಗಬಂಧವುಂಟು. ಅಲ್ಲಿಯೂ ಮಾದರಿಯನ್ನು ಬಂಧವಾಗಿ ತೋರಿಸಿಲ್ಲವಾದ್ದರಿಂದ, ಹೆಚ್ಚಿನ ಪ್ರಯತ್ನ ಅವಶ್ಯವಾಗುತ್ತದೆ. ಮೇಲಾಗಿ ಕನ್ನಡದ ಲಕ್ಷ್ಯಗಳಲ್ಲಿ 'ಸಪ್ತಾಶ್ವತ್ಥಪರ್ಣ', 'ಬೃಂದಾವನ'ವೆಂಬ ವೈಚಿತ್ರ್ಯಗಳೂ ಸಮ್ಮಿಶ್ರಗೊಂಡಿರುವುದರಿಂದ ಬಂಧದ ಸ್ವರೂಪ ಸ್ಫುಟವಾಗುತ್ತಿಲ್ಲ.

ಕುಂಡಲಿನಾಗ

ಚಂಪಕಮಾಲೆಯಲ್ಲಿ ಕಟ್ಟಿರುವ ಗಯೋಪಾಖ್ಯಾನದ ೧೦–೪೫ರ ಕುಂಡಲಿನಾಗಬಂಧದ ಮಾದರಿಯನ್ನು ಹೀಗೆ ವಿವರಿಸಬಹುದು: ತೆಕ್ಕೆ ಹಾಕಿದ ಹಾವಿನ ಹೆಡೆ ಮತ್ತು ಬಾಲಗಳ ಎಡೆಗಳಲ್ಲಿ ೧–೧ ಅಕ್ಷರವೂ, ಪಕ್ಕ ಮತ್ತು ಕೆಳಗಿನ ೩ ಕುಂಡಲಿಗಳಲ್ಲಿ ೨–೨ರ ಹಾಗೆ ಅಕ್ಷರಗಳೂ ಇರಬೇಕು. ಕೆಲವರು ಹೆಡೆ ಮತ್ತು ಬಾಲಗಳ ಎಡೆಗಳಲ್ಲಿ ೨–೨ರ ಹಾಗೆ ಅಕ್ಷರಗಳನ್ನಿಟ್ಟು ಪಕ್ಕದ ತೆಕ್ಕೆಗಳಲ್ಲಿ ೧ ಅಕ್ಷರವನ್ನು ತಗ್ಗಿಸುತ್ತಾರೆ. ಆದರೆ ಕೆಳಗಿನ ತೆಕ್ಕೆಯಲ್ಲಿ

ಮಾತ್ರ ಮೊದಲಿನಂತೆಯೇ. ತೆಕ್ಕೆಯ ಸಂಧಿಸ್ಥಾನಗಳಲ್ಲಿ ೨೦ ಅಕ್ಷರಗಳು ದ್ವಿರಾವೃತ್ತಿಗೊಳ್ಳುವುದರಿಂದ ೮೪ ಅಕ್ಷರಗಳು ಬಂಧದ ೬೪ ಅಕ್ಷರಗಳಲ್ಲಿ ಅಡಗುತ್ತವೆ. ಪದ್ಯವು ಹೆಡೆಯಿಂದ ತೊಡಗಿ ತೆಕ್ಕೆಯ ದಾರಿಯನ್ನು ಹಿಡಿದು ಸಾಗಿ ಬಾಲದಲ್ಲಿ ಕೊನೆಗೊಳ್ಳುವುದು.

ಈ ಬಂಧದ ಸ್ವರೂಪವನ್ನು 'ಚಿತ್ರಬಂಧಕಾವ್ಯ'ದಲ್ಲಿ (ಪು. ೩೬)

ಪುಚ್ಛಾತ್ ಪರಿಸರನ್ ಗಚ್ಛೇದ್ ವ್ಯಾವೃತ್ತಿಂ ಶ್ಲಿಷ್ಟಸಂಜ್ಞಕೇ ।
ವಿರಮೇಚ್ಚ ಗಲೇ ಧೀರೋ ಬಂಧೇಽತ್ರ ಫಣಿಸಂಜ್ಞಕೇ ॥

ಎಂಬುದಾಗಿ ನಿರೂಪಿಸಿದೆ. ಹೆಣಿಗೆಯ ಸ್ಥಾನಗಳಲ್ಲಿ ಆವೃತ್ತಿ ಪಡೆಯುತ್ತ ಬಾಲದ ದಾರಿಯನ್ನು ಹಿಡಿದು ಹೊರಟರೆ ಕಂಠಸ್ಥಳದಲ್ಲಿ ವಿರಮಿಸುವುದು ಎಂಬುದಾಗಿ ಇಲ್ಲಿಯ ಆಶಯ. ಸಂಸ್ಕೃತದಲ್ಲಿ ಲಕ್ಷ್ಯಗಳಿದ್ದರೂ ಕನ್ನಡದ ಲಕ್ಷ್ಯಗಳನ್ನು ಮಾತ್ರವೇ ಮುಂದೆ ಗಮನಿಸಿದೆ.

ಚಾವಲಿ ರಾಮಸ್ವಾಮಿ ಶಾಸ್ತ್ರಿಗಳು ತಮ್ಮ 'ಕರ್ಣಾಟ ಛಂದೋಲಂಕಾರಸಾಹಿತ್ಯ ಲಕ್ಷಣಸಂಗ್ರಹವು' ಎಂಬ ಲಕ್ಷಣಗ್ರಂಥದಲ್ಲಿ ನಾಗಬಂಧದ ಲಕ್ಷಣವನ್ನು ಹೀಗೆ ನಿರೂಪಿಸಿದ್ದಾರೆ (೬-೬-೩) :

''ಎರಡು ರೇಖೆಗಳಿಂದ ಚತುರಶ್ರಗಳಾದ ೪ ಕೋಷ್ಠಗಳನ್ನು ಅವಿಚ್ಛಿನ್ನವಾಗಿ ಕಲ್ಪಿಸಿ ಎರಡು ರೇಖೆಗಳ ನಡುವೆ ಕೋಷ್ಠ ೧ಕ್ಕೆ ೮ ಮನೆಗಳನ್ನು ಮಾಡಿ ವಿದಿಕ್ಕುಗಳಲ್ಲಿ ರೇಖಾಗ್ರಗಳಿಂದ ಯಥಾಕ್ರಮವಾಗಿ ಕುಂಡಲೀ ಕರಣವಂಗೈದು ಮೂರು ದಿಕ್ಕುಗಳಲ್ಲಿಯೂ ಹೊರಗಣ ದಿಗ್ರೇಖಾಗ್ರಗಳನ್ನು ಅನ್ಯೋನ್ಯವಾಗಿ ಕೂಡಿಸಿ ಒಂದು ಕಡೆಯಲ್ಲಿ ಹೆಡೆಯೂ ಬಾಲದ ಕೊನೆಯೂ ಸೇರುವಂತೆ ಮಾಡಿ ಸಂದಂಶಸ್ಥಾನಗಳಲ್ಲಿ ೧೬ ಕೋಣ ಕೋಷ್ಠ ಗಳೊಳಗೆ ಅಕ್ಷರಗಳನ್ನು ಬರೆಯಬೇಕು. ಕೋಷ್ಠಕೋಣ ೧೬ ಸಂದಂಶ ೪ ಕಂಠ ೧ ಅಂತು ೨೧ ಯುಗ್ಮವರ್ಣ ಗಳಿಗೆ ಮಾತ್ರ ಆವೃತ್ತಿಯಿರಬೇಕು. ೪ ಪಾದಗಳಲ್ಲಿಯೂ ೧೨-೧೧-೯ನೇ ವರ್ಣಗಳು ನೈರುತ್ಯದಿಕ್ಕಿನಿಂದ ಅಪ್ರದಕ್ಷಿಣವಾಗಿಯೂ ಹೆಡೆಯಿಂದ ಕ್ರಮವಾಗಿಯೂ ಬರೆಯತಕ್ಕದ್ದು. ೩೦-೨೮-೨೬ ಈ ಅಕ್ಷರಗಳು ಆವೃತ್ತಿ ಗೊಂಡು ಗಳಸ್ಥಾನದಲ್ಲಿ ಸಮಾಪ್ತಿ ಹೊಂದಬೇಕು. ಹೀಗೆ ಕುಂಡಲಿತಾದಿ ಅಂಗಾಕ್ಷರೈಕ್ಯದಿಂದ ಹಿಡಿದು



ಬಂಧ ೭೬

ಓದುವುದು ಬಿಟ್ಟು ಓದುವುದು ಎಂಬ ಅನುಲೋಮ ವಿಲೋಮಗಳಿಂದ ರಚಿಸಿದರೆ ಫಣಿಬಂಧವೆನಿಸುವುದು. ಇನ್ನೂ ಹಲವು ಬಗೆಯುಂಟು.''

ಹೀಗೆ ತಿಳಿಸಿ, 'ಗಯೋಪಾಖ್ಯಾನ'ದ ಮೂರು ಲಕ್ಷ್ಯಗಳನ್ನು ಮುಂದೆ ಉದ್ಧರಿಸಿದೆ. ಇದರಲ್ಲಿ ಮೊದಲನೆಯ 'ಚಂಪಕಮಾಲಾವೃತ್ತನಾಗಬಂಧ'ವೊಂದು ಪೂರ್ವೋಕ್ತಲಕ್ಷಣಕ್ಕೆ ಹೊಂದುತ್ತದೆ (ಬಂಧ ೭೭). ಇದು ಕುಂಡಲಿನಾಗಬಂಧದ ಲಕ್ಷಣವೇ. ೪ ಮೂಲೆಗಳ ಚತುರಸ್ರಗಳಾದ ಮನೆಗಳನ್ನು ಕೋಷ್ಠಗಳೆಂದೂ ಒಂದರ ಮೇಲೊಂದು ಹಾಯುವ ಹಾವಿನ ಮೈ ಇಕ್ಕುಳದ ಆಕಾರ ಪಡೆಯುವುದನ್ನು ಸಂದಂಶವೆಂದೂ ಮೇಲೆ ಕರೆದಿದೆ. ಆವೃತ್ತಿಗೊಳ್ಳುವ ಅಕ್ಷರಗಳು ೨೦ ಮಾತ್ರವೇ; ಕಂಠದ ಅಕ್ಷರಕ್ಕೆ ಆವೃತ್ತಿಯಿರುವಂತೆ ತೋರುವುದಿಲ್ಲ

'ಮೈಸೂರ ಮೆಯ್ಸಿರಿ'ಯಲ್ಲಿ ಸ್ರಗ್ಧರೆಯ ನಾಗಬಂಧದ ಲಕ್ಷ್ಯಪದ್ಯ ಸಿಕ್ಕುತ್ತದೆ. ಅಲ್ಲಿಯೇ ಅದನ್ನು ಬಂಧರೂಪದಲ್ಲಿ ಅಳವಡಿಸಿಯೂ ಇದೆ.

ನೀಡುಂಮೆಯ್ ಸುಬ್ಬರಾಯಾ ನಿನಗೆ ತನಿಯನಿತ್ತೋದುವಾಲಕ್ಕುವೆಂದೇ
ಸಡ್ಡಂ ಬಿಟ್ಟೋಸುವೋಜರ್ಮ್ಮಸುರಿಡೆಯೆಡೆಯೊಳ್ ಬಾಗಿ ನಿಲ್ವರ್ ಗಡೆಂದುಂ
ಬೇಡುತ್ತಾಮೆಂಬುದಂ ನಂಬಿರೆ ವರವ ಕೊಡುತ್ತೋಜರಾ ರಾಯ ಬಾಟ್ಕೆ
ಗೆಡ್ಡಾಗಲ್ಕೊಲ್ಲಗೇಡುಂ ಬಗೆಬಗೆ ಬಿಸಮುಂ ದಂಡಿಸುಬ್ಬೇಡು ನೀಡುಂ ॥ ೨೨೦ ॥



ಬಂಧ ೭೭

ಮೇಲೆ ರಚಿಸಿರುವಂತಹ ಚಿತ್ರವನ್ನು ರಚಿಸಿ ಅದರಲ್ಲಿ ಅಂಕಿಗಳು ಸೂಚಿಸುವ ರೀತಿಯಲ್ಲಿ ಈ ಪದ್ಯದ ಅಕ್ಷರಗಳನ್ನು ಹೊಂದಿಸಬೇಕಾಗುತ್ತದೆ. ಇಲ್ಲಿ ಪಕ್ಕದ ಮತ್ತು ಕೆಳಗಿನ ಕುಂಡಲಿಗಳಲ್ಲಿ ೧–೧ ಅಕ್ಷರವಿದೆ. ಹೀಗಾಗಿ ೩ ಅಕ್ಷರಗಳು ತಗ್ಗಿವೆ. ಅವು ಹೆಡೆ ಮತ್ತು ಬಾಲಗಳಲ್ಲಿದ್ದು, ಜೊತೆಗೆ ಅಲ್ಲಿಯ ಸಂಧಿಸ್ಥಾನದ ಅಕ್ಷರ ದ್ವಿರಾವೃತ್ತಿಗೊಳ್ಳುತ್ತದೆ. ಸ್ರಗ್ಧರೆಯ ನಾಗಬಂಧದ ಸಾಮಾನ್ಯಲಕ್ಷಣವಿದು.

ಈ ಬಂಧಕ್ಕೆ ಹೊಂದುವ ಪದ್ಯದ ಅಕ್ಷರವಿನ್ಯಾಸ ಹೀಗಿರುತ್ತದೆ :

1	2	3	4	5	6	7	8	9	10	11	12	13	14	15	16	17	18	19	20	21
–	A	–	B	–	C	–	D	–	E	–	F	–	F	–	G	–	H	–	I	–
J	–	K	–	L	–	M	–	B	–	N	–	N	–	O	–	D	–	P	–	G
–	Q	–	I	–	R	–	K	–	S	–	S	–	T	–	M	–	C	–	O	–
E	–	P	–	H	–	Q	–	U	–	U	–	J	–	R	–	L	–	T	–	A

ಯಾನಬಂಧ

'ಅಲಂಕಾರ ಚಿಂತಾಮಣಿ'ಯಲ್ಲಿ ಇದರ ಪ್ರಸ್ತಾವವಿದೆ. ಅಲ್ಲಿ ಬರುವ ಇದರ ಲಕ್ಷಣ ಲಕ್ಷ್ಯಪದ್ಯಗಳು ಹೀಗಿವೆ :

ಶೃಂಗಾಗ್ರದ್ವ್ಯೂರ್ಧ್ವಭಾಗೇಷು ಚತುರಶ್ಚತುರೋ ಲಿಖೇತ್ ।
ಪ್ರವೇಶೇ ನಿರ್ಗಮೇ ಚಾಪಿ ಯಾನಬಂಧೇ ಪ್ರಿಯಾವಹೇ ॥ (೨–೧೭೩)

ಘನಸಾರತಿರಸ್ಕಾರೀ ಕಾಯಗಂಧಃ ಸುಧೀರಧೀಃ ।
ಧೀರಧೀಸುನುತೋಽವ್ಯಾನ್ನಃ ಸೋಽಚಿತಃ ಸುರಸಾನಘಃ ॥ (೨–೧೭೪)

ಈ ಬಂಧದಲ್ಲಿ ಅಕ್ಷರಗಳನ್ನು ಹೊಂದಿಸುವ ಕ್ರಮ ಹೀಗೆ : ಯಾನದ ಚಿತ್ರ ಬರೆದು, ಅದರ ಶಿಖರಾಗ್ರದ ಎರಡೂ ಕಿವಿಯಂತಹ ಪಾರ್ಶ್ವಗಳ ಊರ್ಧ್ವಭಾಗದಲ್ಲಿ ೪–೪ ಅಕ್ಷರಗಳನ್ನು ಬರೆದು ಪ್ರವೇಶ ಮತ್ತು ನಿರ್ಗಮ ಈ ೨ ಸಮಯಗಳಲ್ಲೂ ಅವನ್ನು ಪುನರಾವರ್ತಿಸಬೇಕು. ಚಿತ್ರದಲ್ಲಿರುವ ಅಂಕಿಗಳ ಅನುಕ್ರಮಣಿಯನ್ನು ಹಿಡಿದು ಸಾಗಿದಾಗ ಇದು ಸ್ಪಷ್ಟವಾಗುತ್ತದೆ.



ಬಂಧ ೭೮

ಈ ಬಂಧಕ್ಕೆ ಹೊಂದುವ ಶ್ಲೋಕದ ಅಕ್ಷರವಿನ್ಯಾಸ ಹೀಗಿರಬೇಕು :

ಅಕ್ಷರ ಕ್ರಮಸಂಖ್ಯೆ	1	2	3	4	5	6	7	8
೧ನೆಯ ಪಾದ	A	B	C	D	–	–	–	–
೨ನೆಯ ಪಾದ	–	–	–	–	E	F	G	H
೩ನೆಯ ಪಾದ	H	G	F	E	–	–	–	–
೪ನೆಯ ಪಾದ	–	–	–	–	D	C	B	A

"ವರ್ಣಗಳು ಪದ್ಮಾದ್ಯಾಕಾರಗಳಿಗೆ ಹೇತುಗಳಾಗುವಂತೆ ವಿನ್ಯಾಸಗೊಳಿಸಲ್ಪಟ್ಟರೆ ಚಿತ್ರಬಂಧವೆನಿಸುವುದು. ಅದು ಕವಿಬುದ್ಧಿವೈಚಿತ್ರ್ಯದಿಂದ ಅಷ್ಟದಳ ಪದ್ಮಬಂಧ, ಬೃಂದಾವನಬಂಧ, ರಥಬಂಧ ಇತ್ಯಾದಿ ಪ್ರಕಾರಗಳಿಂ ಪಲ ತೆರನಾಗಿರ್ಪವು" ಎಂದು ತಿಳಿಸಿರುವ 'ಕರ್ಣಾಟಛಂದೋಲಂಕಾರಸಾಹಿತ್ಯಲಕ್ಷಣ ಸಂಗ್ರಹವು' ಪದ್ಮಬಂಧ ಚಕ್ರಬಂಧ ನಾಗಬಂಧಗಳ ಸ್ವರೂಪವನ್ನು ವಿವರಿಸಿ, 'ಗಯೋಪಾಖ್ಯಾನ'ದ ನಾಗಬಂಧದ ಲಕ್ಷ್ಯಪದ್ಯಗಳನ್ನು ಉದಾಹರಿಸುವುದರಿಂದ ತೃಪ್ತವಾಗಿದೆ. ಬಂಧಗಳನ್ನು ಕೊಟ್ಟಿಲ್ಲ. ಮುರಜಬಂಧ, ವನಮಾಲಾಬಂಧಗಳನ್ನು ಹೀಗೆಯೇ ಹೆಸರಿಸಿದೆಯಲ್ಲದೆ, ವಿವರಗಳನ್ನು ಒದಗಿಸಿಲ್ಲ. ಕನ್ನಡದಲ್ಲಿ ಬಂಧಚಿತ್ರಗಳಿಗೆ ತಕ್ಕ ಪ್ರಾಶಸ್ತ್ಯವಿಲ್ಲದಿರುವುದು ಈ ಉಪೇಕ್ಷೆಯಿಂದಲೂ ತಿಳಿಯುತ್ತದೆ. ಸಂಸ್ಕೃತದಲ್ಲಿ ರುದ್ರಟನ ಕಾಲದಿಂದ ಬೆಳೆಯುತ್ತ ಹೋದ ಈ ಬಂಧ ಚಿತ್ರಗಳು ಅಂತರ್ಭೇದಗಳನ್ನು ಗಣಿಸದೆಯೇ ಸಂಖ್ಯೆಯಲ್ಲಿ ಸು. ೧೫೦೦ರ ಗಡಿಯನ್ನೂ ದಾಟುವುದು ಸಾಧ್ಯವಿದೆ ಯೆಂದು ಕಲಾನಾಥ ಝಾ ಭಾವಿಸಿದ್ದಾರೆ.[16] ಆದರಿಂದಾಗಿ ಈ ಆಕಾರಬಂಧಚಿತ್ರಗಳೇ ಅಧ್ಯಯನದ ವಿಷಯ ವಾಗಲು ಸಾಧ್ಯವಿದೆಯೆನ್ನಬಹುದು.

ಅಡಿಟಿಪ್ಪಣಿಗಳು

1. Emblematic Poetry ಎಂದೂ ಕರೆದಿರುವಂತೆ ತೋರುತ್ತದೆ ('ತೆಲುಗಲೋ ಚಿತ್ರಕವಿತ್ವಮು', ಪು. ೧೧೫)

2. ಪ್ರಾಚ್ಯಸಾಹಿತ್ಯದ ಪ್ರಭಾವದಿಂದ ಪಾಶ್ಚಾತ್ಯ ಭಾಷೆಗಳಲ್ಲಿ ಸಹ ಬಂಧಕವಿತ್ವವುಂಟೆಂದು ಕೆಲವರು ಭಾವಿಸಿದ್ದಾರೆ; ಕೊಡಲಿ, ನೈಟಿಂಗೇಲ್ ಹಕ್ಕಿಯ ಮೊಟ್ಟೆ, ಬಿಲ್ಲು, ಮಧುಪಾತ್ರೆ, ಶಿಲುಬೆ ಈ ಕೆಲವು ಆಕಾರಗಳಲ್ಲಿ ಪದ್ಯರಚನೆಯಾಗಿದೆಯೆಂದಿದ್ದಾರೆ (ಪೂರ್ವೋಕ್ತ, ಪು. ೧೧೪–೧೫). ಆದರೆ ಅಲ್ಲಿ ನಮ್ಮ ಬಂಧಕವಿತ್ವದ ಬಹುಮುಖ್ಯವಾದ ಅಕ್ಷರಭ್ರಮಣದ ಚಮತ್ಕಾರವಿರುವಂತೆ ತೋರದು.

3. ಇದನ್ನೂ ಹೋಲಿಸಿ; "ಚಿತ್ರಂ ತು ನಿಯಮನ್ಯಾಸೋ ವರ್ಣಾನಾಮೀಪ್ಸಿತಕ್ರಮಂ। ಸ್ವರವರ್ಣ ಗತಿ ಸ್ಥಾನ ಬಂಧಹಾರಾದಿ ಬಂಧನಾತ್॥" (ರಸಾರ್ಣವಾಲಂಕಾರ, ೩–೫೨).

4. 'ತೆಲುಗಲೋ ಚಿತ್ರಕವಿತ್ವಮು', ಪು. ೧೧೫–೧೬.

5. ಹೇಮಚಂದ್ರಾಧ್ಯರ ಉಲ್ಲೇಖಗಳು ಈಚೆಯ ಕಾಲದವು ಎಂಬುದರಿಂದಾಗಿ, ಅವುಗಳನ್ನು ಬಂಧಸಹಿತ ನಿದರ್ಶಿಸುವುದನ್ನು ಪ್ರಸ್ತುತ ವಿವೇಚನೆಯಲ್ಲಿ ಕೈಬಿಟ್ಟಿದೆ; ಆದರೆ ವಿಶೇಷಕಾರಣಕ್ಕಾಗಿ 'ಅಲಂಕಾರಚಿಂತಾಮಣಿ'ಯನ್ನು ಗ್ರಾಹ್ಯಮಾಡಿದೆ.

6. ಸಮೀಕ್ಷೆಗೆ ಮೂಲ: H. R. Kapadia, Illustrations of Letter-Diagrams, *JUB.*, (Arts), 23–2, pp. 60–91; 24–2, pp. 97–147.

7. ಇಲ್ಲಿಯ 'ಚಿತ್ರಕಾವ್ಯಮೀಮಾಂಸಾ' ಎಂಬ ಉಪೋದ್ಘಾತವನ್ನು ನೋಡಬಹುದು.

8. ಇದು ೧೮೬೩ರ ಏಪ್ರಿಲ್ ತಿಂಗಳಲ್ಲಿ ಮದರಾಸು ತಿರುವಟ್ಟೀಶ್ವರ ಪೇಟೆಯಲ್ಲಿ ಅನ್ನಯರಾಜು ಎಂಬವರು ರೂಪಿಸಿ, ಕುಶಲರತ್ನಾಕರ ಎಂಬ ಲಿತೋಗ್ರಾಫ್ ಪ್ರೆಸ್ಸಿನಲ್ಲಿ ಮುದ್ರಿತವಾಗಿದೆ. ಇದರ ಒಂದು ಪ್ರತಿ 'ಚಿತ್ರಬಂಧ ಪತ್ರಿಕಾ' ಎಂಬ ಹೆಸರಿನಲ್ಲಿ ಮೈಸೂರು ಪ್ರಾಚ್ಯಸಂಶೋಧನಾಲಯದ ಗ್ರಂಥಭಂಡಾರದಲ್ಲಿ ನಿಕ್ಷಿಪ್ತವಾಗಿದೆ (ಬಿ. ೬೫೬).

9. ಸಂ. ರಾವೂರಿ ದೊರೆಸಾಮಿ ಶರ್ಮ, ಆಂಧ್ರ ಪ್ರದೇಶ ಸಾಹಿತ್ಯ ಅಕಾಡೆಮಿ, ಹೈದರಾಬಾದು; ಪೀಠಿಕೆಯಲ್ಲಿ 'ಚಿತ್ರಕವಿತ್ವಮು' ಎಂಬ ಭಾಗವನ್ನು ನೋಡಬಹುದು (ಪು. ೧೩೫–೩೯).

10–11. 'ತೆಲುಗುಲೋ ಚಿತ್ರಕವಿತ್ವಮು', ಪು. ೧೧೬–೧೮; ಪು. ೨೧೩–೨೬೫.

12–13. 'ಸಿರಿಭೂವಲಯ', ಬೆಂಗಳೂರು, ೧೯೫೩, ಮುನ್ನುಡಿ, ಪು. ೧೩.

14. 'ಪಾದುಕಾಸಹಸ್ರ'ದ ಚಿತ್ರಪದ್ಧತಿಯಲ್ಲಿ (೧೪) ಗರುಡಗತಿಯೆಂಬ ಇನ್ನೊಂದು ಚಕ್ರಬಂಧಭೇದವಿದೆ. ಹೀಗೆಯೇ 'ಭುವನ ಪ್ರದೀಪಿಕೆ'ಯಲ್ಲಿ (೧೮೦೮) "ಸೇವಾರಾಜಿವಶಂ..." ಎಂದು ಮೊದಲಾಗುವ ಶಾರ್ದೂಲವಿಕ್ರೀಡಿತದ ರಚನೆ ದ್ವಾದಶಾರಚಕ್ರಬಂಧವಾಗಿದೆ (ಪು. ೧೧೯). ನೇಮಿಯಲ್ಲಿ "ಶ್ರೀಕೃಷ್ಣರಾಜ ಸಾರ್ವಭೌಮಮಮನತು" ಎಂದೂ (ಅಕ್ಷರಗಳು ಬಂಧಕವಿತ್ವದೊಳಗಿನದಲ್ಲ), ೨–೪ನೆಯ ವಲಯಗಳಲ್ಲಿ ಕ್ರಮವಾಗಿ "ಸುವಲಯ ಬಂಧಃ", "ಶಂಭುಸುತ ನುತಿಃ" ಎಂದೂ ಹೊರಡುವ ರಚನೆಯಿದೆ.

15–16. *Figurative Poetry in Sanskrit Literature*, p. 66–67; p. 61.

೬

ಒಟ್ಟುನೋಟ

ಒಟ್ಟುನೋಟ

ಕನ್ನಡ ಚಿತ್ರಕಾವ್ಯದ ಲಕ್ಷಣ ಇತಿಹಾಸಗಳನ್ನು ಸಂಸ್ಕೃತ ಚಿತ್ರಕಾವ್ಯದ ಲಕ್ಷಣ ಲಕ್ಷ್ಯಗಳ ಹಿನ್ನೆಲೆಯಲ್ಲಿ ಈ ವರೆಗೆ ಸಾಧ್ಯವಾದನುಟ್ಟಿಗೆ ಪರಿಶೀಲಿಸಿದ್ದಾಯಿತು. ಈ ಕ್ಷೇತ್ರದಲ್ಲಿ ಶ್ರಮಿಸಿದ ಕನ್ನಡ ಕವಿಗಳ ಶಕ್ತಿಯನ್ನೂ ದೌರ್ಬಲ್ಯಗಳನ್ನೂ ಅಲ್ಪಾವಕಾಶದಲ್ಲಿಯೇ ವಿಮರ್ಶಿಸಿದ್ದಾಯಿತು. ಈ ಪರಿಶೀಲನೆ ವಿಮರ್ಶೆಗಳು ಎಷ್ಟರಮಟ್ಟಿಗೆ ತೃಪ್ತಿಕರವಾಗಿವೆಯೆಂಬುದನ್ನು ಬಲ್ಲವರು ತಿಳಿಸಬೇಕು. ಅಧ್ಯಯನದಲ್ಲಿ ಈ ಕೆಲವು ತೊಡಕುಗಳು ಎದುರಿಸಬೇಕಾಗಿ ಬಂದವು : ೧. ಹಳೆಯ ಸಾಹಿತ್ಯದ ಕೆಲಭಾಗ ಇನ್ನೂ ಹಸ್ತಪ್ರತಿಗಳಲ್ಲಿಯೇ ಹುದುಗಿದ್ದು, ಈ ಹಸ್ತಪ್ರತಿಗಳು ಬೆಳಕು ಕಾಣಬೇಕಾಗಿವೆ. ೨. ಲಭ್ಯಸಾಹಿತ್ಯ ಭಾಗದಲ್ಲಿಯೇ ಚಿತ್ರಕಾವ್ಯದ ಮಾದರಿಗಳು ಇನ್ನೂ ಚೆನ್ನಾಗಿ ಶೋಧಿತವಾಗಿ, ಕ್ರೋಡೀಕೃತವಾಗಬೇಕಾಗಿವೆ. ೩. ಶೋಧಿತವೂ ಕ್ರೋಡೀಕೃತವೂ ಆದವುಗಳಲ್ಲಿ ಕಂಡುಬರುವ ಅರ್ಥಕ್ಲೇಶಗಳೂ ಪಾಠದೋಷಗಳೂ ಪರಿಹಾರಗೊಳ್ಳಬೇಕಾಗಿವೆ. ೪. ಸಂಸ್ಕೃತ ಹಾಗೂ ಅನ್ಯ ದ್ರಾವಿಡ ಭಾಷೆಗಳ ಮಾದರಿಗಳೊಂದಿಗೆ ಕನ್ನಡದ ಮಾದರಿಗಳನ್ನಿಟ್ಟು ವಿಶದವಾಗಿ ತುಲನೆಮಾಡಬೇಕಾಗಿದೆ.

ಈ ನಾಲ್ಕು ಅಂಶಗಳನ್ನೂ ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿ ಲಕ್ಷ್ಯದಲ್ಲಿರಿಸಿಕೊಂಡು, ಅವುಗಳ ಪರಿಹಾರಕ್ಕೆ ಯಥಾಮತಿಯಾಗಿ ಪ್ರಯತ್ನಿಸಿ, ಕೃತಿರಚನೆ ಮಾಡಿದೆ. ಉಳಿದಿರುವ ದೋಷಗಳನ್ನು ತಿದ್ದುವುದೂ ಕ್ಲೇಶಗಳನ್ನು ಬಿಡಿಸುವುದೂ ಮುಂದಿನ ಅಭ್ಯಾಸಿಗಳಿಗಿರುವ ಸಾಹಿತ್ಯಕಾರ್ಯ.

ಸಂಸ್ಕೃತದಲ್ಲಿ ಚಿತ್ರಕಾವ್ಯಪದ್ಧತಿಗೆ ದೊರೆತಿರುವ ಸ್ಥಾನಮಾನಗಳು ಗಮನಾರ್ಹವಾದವು. ಇದಕ್ಕೆ ಕಾರಣಗಳು ವಿದಿತವೇ ಇವೆ. ಲೌಕಿಕ ಸಂಸ್ಕೃತಯುಗದಲ್ಲಿ ಆಸ್ಥಾನಪೋಷಣೆಯ ಆಲಂಕಾರಿಕ ಮಹಾಕಾವ್ಯ ಮತ್ತು ಸದೃಶ ರಚನೆಗಳು ರಾಜಮಹಾರಾಜರಿಂದ ಮಾತ್ರವಲ್ಲದೆ ಪಂಡಿತ ಮಂಡಲಿಗಳಿಂದಲೂ ಆದರಿಸಲ್ಪಟ್ಟುವು. ಆರಂಭದ ಮಹಾಕವಿಗಳು ತಮ್ಮ ಕೃತಿಗಳಲ್ಲಿ ಸ್ವಲ್ಪ ಭಾಗವನ್ನು ಚಿತ್ರಭೇದಗಳಿಗೆ ಮೀಸಲು ಮಾಡುತ್ತಿದ್ದುದು, ಸ್ವತಂತ್ರವಾಗಿ ಚಿತ್ರಕಾವ್ಯಗಳನ್ನು ರಚಿಸಲು ಪ್ರೇರಣೆ ನೀಡಿತು. ಮುಂದೆ ಸ್ಪರ್ಧಾಬುದ್ಧಿಯಿಂದ ವೈಚಿತ್ರ್ಯಗಳು ಹೆಚ್ಚಿ, ಸಂಕೀರ್ಣವಾದ ಮಿಶ್ರಚಿತ್ರಗಳು ಸಹ ಹುಟ್ಟಿಕೊಂಡು, ಚಿತ್ರಕಾವ್ಯ ಪದ್ಧತಿ ಮುನ್ನೆಲೆಗೆ ಬಂದಿತು. ಅಶ್ವಘೋಷ ಕಾಳಿದಾಸರ ಕಾಲವನ್ನು ದಾಟುತ್ತಿದ್ದ ಹಾಗೆ ಭಾರವಿ ಭಟ್ಟಿ ಮೊದಲಾದವರು ವಸ್ತುನಿರ್ವಹಣೆ ವೈಚಿತ್ರ್ಯಸಾಧನೆಗಳಿಗೆ ಎಂದು, ವಿದ್ವತ್‌ಕವಿಖ್ಯಾತಿಗೆ ಎಂದು ಚಿತ್ರಕಾವ್ಯ ಪದ್ಧತಿಯನ್ನು ವಿಶೇಷವಾಗಿ ಮನ್ನಿಸ ತೊಡಗಿದರು. ಪ್ರಹೇಳಿಕೆಯ ಕೂಟಗಳು, ಸಮಸ್ಯೆಗಳು, ಸಂಖ್ಯಾತದಂತಹ ಒಂದೆರಡು ವಿಶಿಷ್ಟ ಮಾದರಿಗಳು ಮಹಾಭಾರತ, ಬುದ್ಧ ಚರಿತಗಳಂತಹ ಹಿಂದಿನ ರಚನೆಗಳಲ್ಲಿಯೇ ಕಂಡುಬರುತ್ತಿವೆಯಾದರೂ ವೃತ್ತ ಮತ್ತು ಚಿತ್ರವೈವಿಧ್ಯಗಳಿಂದ ಈ ಪ್ರಥೆ ಕವಿಗಳ, ಓದುಗರ ಗಮನ ಸೆಳೆಯುವಂತಾದುದು ಕುಮಾರದಾಸ, ಭಾರವಿ ಮೊದಲಾದ ಈಚಿನ ಕವಿಗಳ ಕೃತಿಗಳ ಮೂಲಕವೇ ಎನ್ನುವುದು ನಿಶ್ಚಯ. ಅನಂತರದಲ್ಲಿ ಯಮಕಕಾವ್ಯಗಳೂ ಸಂಧಾನಕಾವ್ಯಗಳೂ ಬಂಧಕಾವ್ಯಗಳೂ ಮೇಲಿಂದ ಮೇಲೆ ಬರತೊಡಗಿ ಈ ಕಾವ್ಯಪದ್ಧತಿಯ ಸಸಿ ಹೆಮ್ಮರವಾಗಿ ಹಬ್ಬಿತು. 'ಚಿತ್ರರತ್ನಾಕರ', 'ಚಿತ್ರಬಂಧರಾಮಾಯಣ', 'ಪ್ರಾಸಭಾರತ', 'ಪ್ರಶ್ನಶತಕ', 'ಯಮಕಭಾರತ', 'ಶ್ಲೇಷಚೂಡಾಮಣಿ', 'ಶ್ಲೇಷಚಿಂತಾಮಣಿ' ಇಂತಹ ಕೃತಿನಾಮಗಳಿಂದ ಅದು ಪಡೆದ ವ್ಯಾಪ್ತಿಯನ್ನು ಗುರುತಿಸಬಹುದು. ಮಾಘ, ಹರಿಚಂದ್ರ, ರತ್ನಾಕರ, ಶಿವಸ್ವಾಮಿ, ಮಂಖ, ಧನಂಜಯ, ಕವಿರಾಜ, ವೇದಾಂತ ದೇಶಿಕ, ವಾಸುದೇವ, ರಾಮಚಂದ್ರ, ಚಿದಂಬರ, ಮೇಘವಿಜಯಗಣಿ, ವೆಂಕಟಾಧ್ವರಿ, ಹರದತ್ತಸೂರಿ ಈ ಹಲವರ ಸಾಧನೆಗಳಿಂದ ಈಚೆಯ ಕಾಲದ ಸಂಸ್ಕೃತಕಾವ್ಯಪ್ರಪಂಚ ತುಂಬಿ ತುಳುಕಿದೆ; ವಿದ್ವತ್ ಕವಿಗಳ ವಿಜೃಂಭಣೆಯ ಯುಗವಾಗಿ ಪರಿಣಮಿಸಿದೆ.

ಹೀಗೆ ಲಕ್ಷ್ಯಕಾರರ ಕೃಷಿ ಫಲಕೊಡಲು ತೊಡಗಿದಾಗ ಸಹಜವಾಗಿಯೇ ಆಲಂಕಾರಶಾಸ್ತ್ರಜ್ಞರು ಅದನ್ನು ಲಕ್ಷಿಸಿ ಲಕ್ಷಣನಿರೂಪಣೆ ಮಾಡುವುದು ಅವಶ್ಯ ಕರ್ತವ್ಯವಾಯಿತು. ಭಾಮಹ, ದಂಡಿ, ರುದ್ರಟ,

ಭೋಜ, ಹೇಮಚಂದ್ರ, ಅಜಿತಸೇನ ಇವರು ಆ ಕೆಲಸವನ್ನು ಮಾಡಿದರು. ಇವರೊಂದಿಗೆ ಇನ್ನೂ ಕೆಲವರು ಸೇರಿಕೊಂಡರು. ಲಕ್ಷಣ-ಲಕ್ಷ್ಯಗಳ ನಿವೇದನೆಯಲ್ಲಿ ಕೆಲವರು ಉಪೇಕ್ಷೆ ತಿರಸ್ಕಾರಗಳನ್ನು ತೋರಿದರೆ, ಇನ್ನು ಕೆಲವರು ಆಸಕ್ತಿ ಅತ್ಯುತ್ಸಾಹಗಳನ್ನು ಮೆರೆದರು. ಇದರಿಂದ ದೃಷ್ಟಿಭೇದ ಸ್ಪಷ್ಟಪಡುವಂತಾಯಿತು. ರುದ್ರಟನು ಬಂಧಚಿತ್ರಗಳ ಲಕ್ಷಣವನ್ನು ವಿಶದಪಡಿಸಲು ಮೊದಲು ಕೈಕೊಂಡ ಪ್ರಯತ್ನವನ್ನು ಅನಂತರ ಭೋಜ ಹೇಮ ಚಂದ್ರ ಅಜಿತಸೇನರು ಕೈಗೆತ್ತಿಕೊಂಡು ಮುನ್ನಡೆಸಿದರು. ಪ್ರಯೋಗಶೀಲರಾದ ಕವಿಗಳು ವೈಚಿತ್ರ್ಯಗಳ ಸಾಧ್ಯತೆಯನ್ನು ಇನ್ನೂ ಹಿಗ್ಗಿಸಿದರು. ಯಮಕ ಮತ್ತು ಸಂಧಾನ ಕಾವ್ಯಗಳು ಸ್ವತಂತ್ರವಾಗಿಯೇ ಹುಟ್ಟಿಕೊಂಡುವು. ಭಾಮಹನ ಕಾಲಕ್ಕಾಗಲೇ ಚಿತ್ರಕಾವ್ಯದ ಒಂದೆರಡು ಪ್ರಕಾರಗಳು, ಬಹುಶಃ ಯಮಕ ಪ್ರಹೇಳಿಕೆಗಳು, ಹಿತಮಿತಗಳ ಎಲ್ಲೆಯನ್ನು ಮೀರಿ ಕಾವ್ಯದಲ್ಲಿ ಕಾಣಿಸಿಕೊಳ್ಳುತ್ತಿದ್ದಂತೆ ಅವನ ಮಾತಿನಿಂದಲೇ (೨-೧೯) ಧ್ವನಿತವಾಗುತ್ತದೆ. ಈ ಬಗೆಯ ಬೇಸರದ ಮಾತುಗಳನ್ನು ಇನ್ನೂ ಕೆಲವರು ಆಲಂಕಾರಿಕರೂ ಕವಿಗಳೂ ಆಗಿಂದಾಗ್ಗೆ ಆಡಿದ್ದಾರೆ. ನೀಲಕಂಠ ದೀಕ್ಷಿತನು ತನ್ನ 'ಶಿವಲೀಲಾರ್ಣವ'ದಲ್ಲಿ ಶಬ್ದಾಲಂಕಾರಗಳಲ್ಲಿಯೇ ಸಂತೋಷಪಡುವ ಕವಿಗಳನ್ನು ಅಲ್ಲಗಳೆದಿದ್ದಾನೆ (೧-೩೯) ಎಂಬುದನ್ನಿಲ್ಲಿ ನೆನೆಯಬಹುದು. ಇದು ಏನೇ ಇದ್ದರೂ ಕಾವ್ಯಪ್ರಭೇದಗಳಲ್ಲಿ ಚಿತ್ರಕಾವ್ಯ ಪ್ರಭೇದವನ್ನು ಧ್ವನಿವಾದಿಗಳೂ ರಸವಾದಿಗಳೂ ಪುರಸ್ಕರಿಸದೆ ಮೂರನೆಯ ದರ್ಜೆಗೆ ಅದನ್ನು ಇಳಿಸಿದ್ದರೂ, ಕವಿಜನದಲ್ಲಿ ಅದಕ್ಕೆ ಕೊಂಚಮಟ್ಟಿಗಾದರೂ ಮನ್ನಣೆ ದೊರೆಯದೆ ಇರಲಿಲ್ಲ. ರಾಜಾಶ್ರಯ, ಪಂಡಿತರ ಪ್ರೋತ್ಸಾಹ, ವಿದ್ವತ್ಪ್ರದರ್ಶನದ ಹುರುಡು, ಪ್ರಾಚೀನರನ್ನು ಮೀರಿಸುವ ಕಾಂಕ್ಷೆ, ಹೊಸತನ್ನು ಹೂಡುವ ಕುತೂಹಲ ಇವುಗಳ ಪ್ರೇರಣೆಗೆ ಒಳಗಾದ ಕವಿಗಳಿಗೆ ಇದು ಸಹಜವೇ. ಪೂರ್ವ ಕಾವ್ಯವ್ಯಾಸಂಗದಿಂದ ಪಂಡಿತರಾದವರು, ವಿದ್ವತ್ಕವಿಗಳಾಗಿ ಖ್ಯಾತಿಗಳಿಸಲು ಚಿತ್ರಕಾವ್ಯದ ಹಾದಿ ತಮ್ಮ ಪ್ರಯತ್ನಕ್ಕೆ ಎಟುಕಬಹುದೆಂದು ತೋರಿ ಪ್ರಯತ್ನಶೀಲರಾಗಿದ್ದರೆ, ಅದು ಸ್ವಾಭಾವಿಕವೇ ಆಗಿದೆ. ಸಂಸ್ಕೃತ ಭಾಷೆ ನಾನಾರ್ಥಗಳ ಶಬ್ದಕೋಶದಿಂದ ಸಂಪನ್ನವಾಗಿ, ಬಹುಮುಖ ಶಬ್ದರೂಪಗಳು ಸಮಾಸ ಸಂಘಟನೆಯ ಮೂಲಕ ಹೊರಡಿಸುವ ವಿವಿಧಾರ್ಥಚ್ಛಾಯೆಗಳಿಂದ ಸ್ನಿಗ್ಧವಾಗಿ, ಅವರಿಗೆ ಕೈವೊಕ್ಕ ನಿಧಿಯಾಗಿ ದೊರೆಯಿತು.

ಚಿತ್ರಕಾವ್ಯದ ಪ್ರಭೇದಗಳು ಸಹಜಕವಿತ್ವದ ಜಾತಿಗೆ ಸೇರಿದುವೇ ಅಲ್ಲವೇ ಎಂಬ ಪ್ರಶ್ನೆಯನ್ನೆತ್ತಿಕೊಂಡು ಪ್ರಾಚೀನರಾದ ಆಲಂಕಾರಿಕರೂ ಆಧುನಿಕರಾದ ವಿಮರ್ಶಕರೂ ಆಗಾಗ ವಿಚಾರಮಾಡಿರುವುದುಂಟು. ಈ ಬಗೆಯ ಕಾವ್ಯದಲ್ಲಿ ಸಾಮಾನ್ಯರಂಜನೆಯ, ಬೆರಗುಗೊಳಿಸುವ ಶಾಬ್ದಿಕ ಚಮತ್ಕಾರಗಳೇ ಪ್ರಧಾನವಾಗಿರುವುವೆಂದೂ ರಸಸ್ಯಂದಿಯೂ ಧ್ವನಿಸಂಪನ್ನವೂ ಆದ ಯಾವ ಗುಣವಿಶೇಷವೂ ಕಂಡುಬರುವುದಿಲ್ಲವೆಂದೂ ವಾದಿಸುವವರೇ ಹೆಚ್ಚು. ಆನಂದವರ್ಧನನು ''ನಿರಂಕುಶವಾಣಿಯುಳ್ಳ ಕವಿಗಳು ರಸಾದಿ ತತ್ಪರತೆಯನ್ನು ಹೊಂದದೆಯೇ ಕಾವ್ಯ ರಚನೆಗೆ ಹೊರಡುವುದನ್ನು ಕಂಡು ಈ ಚಿತ್ರವೆಂಬ ಪ್ರಭೇದವನ್ನು ಕಲ್ಪಿಸಬೇಕಾಯಿತು....'' ಎಂದು ಹೇಳುವಾಗ, ಚಿತ್ರಕಾವ್ಯಪದ್ಧತಿಯಲ್ಲಿ ರಸದ ಅಭಾವವುಂಟೆಂದು ಹೇಳಿದಂತೆಯೇ ಆಯಿತು. ಮಮ್ಮಟನು ಚಿತ್ರವನ್ನು ಗುಣಾಲಂಕಾರಯುಕ್ತವಾದುದು ಎಂದು ತಿಳಿಸಿದರೂ, ಸ್ಫುಟವಾದ ವ್ಯಂಗಾರ್ಥವಿಲ್ಲದುದು ಎಂಬ ಕಾರಣದಿಂದ ಅದನ್ನು ಕೆಳದರ್ಜೆಯ ಕಾವ್ಯವೆಂದು ಗುರುತಿಸಿದ್ದಾನೆ. ಅಪ್ಪಯ್ಯ ದೀಕ್ಷಿತನು ಚಿತ್ರವು ವ್ಯಂಗ್ಯವಿರಹಿತವಾದುದಾದರೂ ಚಾರುತ್ವವುಳ್ಳುದು ಎಂದಿದ್ದಾನೆ. ನಮಿಸಾಧು, ಕರ್ಣಪೂರ, ವಿದ್ಯಾಧರ, ವಿಶ್ವನಾಥ ಈ ಕೆಲವರು ಚಿತ್ರದಲ್ಲಿ ರಸದ ಅಭಾವವುಂಟೆಂದು ಹೇಳಿದರೂ, ಅದನ್ನು ಒಂದು ಕಾವ್ಯಪದ್ಧತಿಯನ್ನಾಗಿ ಒಪ್ಪಿ, ಅದಕ್ಕೆ ಸ್ಥಾನವನ್ನೂ ಪ್ರಯೋಜನವನ್ನೂ ತೋರಿಸುವ ಪ್ರಯತ್ನಮಾಡಿದ್ದಾರೆ. ರುದ್ರಟ 'ಕಾವ್ಯಾಲಂಕಾರ'ದ ವ್ಯಾಖ್ಯಾತೃವಾದ ನಮಿಸಾಧು, ಕವಿಯ ಶಕ್ತಿಪ್ರದರ್ಶನಕ್ಕೆ ಚಿತ್ರವು ಅವಕಾಶಮಾಡುವುದೆಂದೂ ದೇವತಾಸ್ತುತಿಯಲ್ಲಿ, ರಣವರ್ಣನೆಯಲ್ಲಿ, ಖಂಡಕಾವ್ಯಗಳಲ್ಲಿ ಬೇಕಾದರೆ ಅದು ಬರಬಹುದೆಂದೂ ಸೂಚಿಸಿದ್ದಾನೆ. ಭಗವದ್ವಿಷಯವಾಗಿದ್ದರೆ, ಕಬ್ಬಿನ ಗೆಣ್ಣನ್ನು ಅಗಿದರೆ ಹೇಗೋ ಹಾಗೆ, ಕೊಂಚ ರಸಕ್ಕೆ ಅವಕಾಶವುಂಟೆಂದು ಕರ್ಣಪೂರ ತಿಳಿಸಿದ್ದಾನೆ. ಭಾಮಹ ದಂಡಿ ವಾಮನರಂತಹವರೂ ರುದ್ರಟ ಭೋಜರಂತಹವರೂ ಚಿತ್ರಕಾವ್ಯಪದ್ಧತಿಯನ್ನು ಯಥೋಚಿತ ಪ್ರಮಾಣದಲ್ಲಿ ಪುರಸ್ಕರಿಸಿ, ಅದರ ಸ್ವರೂಪವನ್ನು ವಿಶದಪಡಿಸಿದ ಮೇಲೆ ಇತರರೂ ಆಗಿಂದಾಗ್ಗೆ ಅದನ್ನು

ಪ್ರಸ್ತಾವಿಸುವುದಕ್ಕೆ ಉತ್ತೇಜನ ದೊರೆತಂತಾಯಿತು. ಅವರೆದುರಿನಲ್ಲಿ ಈ ಪ್ರಕಾರದ ರಚನೆಗಳು ಸಮೃದ್ಧವಾಗಿ ಬರತೊಡಗಿದ್ದೂ ಇದಕ್ಕೆ ಪ್ರೋದ್ಬಲವಾಯಿತು. ಅರ್ಥಪ್ರಾಧಾನ್ಯವನ್ನು ಹಿಡಿದು ಧ್ವನಿಕಾವ್ಯ ಗುಣೀಭೂತ ವ್ಯಂಗ್ಯಕಾವ್ಯ ಚಿತ್ರಕಾವ್ಯವೆಂದು ವಿಭಜನೆಗೊಂಡುದು, ಚಿತ್ರಕಾವ್ಯವು ಶಬ್ದಚಿತ್ರ ಅರ್ಥಚಿತ್ರ ಉಭಯಚಿತ್ರಗಳೆಂದು ಪರಿಷ್ಕಾರಗೊಂಡುದು ಕಾಲಕ್ರಮದ ಬೆಳವಣಿಗೆಯ ಫಲವಾಗಿದೆ. ಜಗನ್ನಾಥ ಪಂಡಿತನು ಧ್ವನಿಕಾವ್ಯ, ಗುಣೀಭೂತವ್ಯಂಗ್ಯಕಾವ್ಯ, ಅರ್ಥ ಮತ್ತು ಶಬ್ದಚಿತ್ರಗಳು ಎಂದು ನಾಲ್ಕು ವಿಧಗಳನ್ನು ಗುರುತಿಸಿ, ಇವುಗಳಲ್ಲಿ ೩ನೆಯದರಲ್ಲಿ ಚಿತ್ರವನ್ನು ಸೇರಿಸಿರುವುದು ಈ ವಿಭಾಗಕ್ಕೆ ಗಮನಾರ್ಹವಾದ ಮುನ್ನಡೆಯಾಗಿದೆ.

ಕವಿಗಳಿಗೆ ರಸಸ್ಯಂದಿಯಾದ ಕಾವ್ಯರಚನೆಯೇ ಆದರ್ಶಪ್ರಾಯವಾದುದು, ನಿಜ. ಆದರೆ ವಿದ್ವತ್ ಕವಿಗೆ ಶಬ್ದಾರ್ಥಚಿತ್ರಗಳ ನಾನಾ ಚತುರೋಕ್ತಿಗಳೂ, ಕೆಲವಾದರೂ ಆಕಾರ ಬಂಧಚಿತ್ರಗಳೂ ಪ್ರಿಯವಾಗಿದ್ದುದಕ್ಕೆ ಸಾಕಾದಷ್ಟು ನಿದರ್ಶನಗಳಿವೆ. ಒಂದು ಕಾವ್ಯದಲ್ಲಿ ಭಾಗಶಃ ಗುಣೀಭೂತವ್ಯಂಗ್ಯಪ್ರಧಾನವಾದ ರಚನೆಗಳಿರುವಂತೆ, ಚಿತ್ರದ ಮಾದರಿಗಳೂ ಇರಬಹುದು. ಅವು ಕಾವ್ಯದಲ್ಲಿ ಅಲ್ಲಿ ಇಲ್ಲಿ ಚೆಲ್ಲವರಿದಿರಬಹುದು, ಇಲ್ಲವೆ ಒಂದೇ ಕಡೆ ದಟ್ಟೈಸಿರಬಹುದು. ಇವು ಆಯಾ ಕವಿಯ ಶಕ್ತಿ ಅಭಿರುಚಿಗಳಿಗೆ ಅನುಗುಣವಾಗಿ ಸಂಖ್ಯೆಯಲ್ಲಿ ಹೆಚ್ಚೋ ಕಡಿಮೆಯೋ, ಸ್ಥಾನವನ್ನಂತೂ ಪಡೆದಿರುತ್ತವೆ. ತಮ್ಮ ಪೂರ್ವಕಾವ್ಯಾಭ್ಯಾಸ, ಶಾಸ್ತ್ರಾಭ್ಯಾಸ, ಕೋಶಜ್ಞಾನ, ವಿವಿಧ ಭಾಷಾಜ್ಞಾನ, ಹೀಗೆ ವ್ಯುತ್ಪತ್ತಿಸಾಧಕಗಳಾದ ಪರಿಕರಗಳನ್ನು ಪ್ರದರ್ಶಿಸಲು, ಅವರು ರಂಗಸ್ಥಲಗಳೆಂಬಂತೆ ಈ ಕೃತಿಭಾಗಗಳನ್ನು ಸಂಭ್ರಮದಿಂದ ಬಳಸಿಕೊಳ್ಳುತ್ತಾರೆ. ಸಹೃದಯರಾದ, ಜೊತೆಗೆ ವ್ಯುತ್ಪತ್ತಿಯುಳ್ಳವರೂ ಆದ, ವಾಚಕರು ನಾನಾ ಕಾರಣಗಳಿಗಾಗಿ ಇವನ್ನು ಸ್ವಾಗತಿಸುತ್ತಾರೆ. ವಾಚಕರ ಬಳಗದಲ್ಲಿ ಈ ಗುಂಪಿನವರನ್ನು ಸಹ ಕವಿ ತನ್ನ ಲಕ್ಷ್ಯದಲ್ಲಿಟ್ಟುಕೊಂಡಿರುತ್ತಾನೆ. ಶಬ್ದಗಳ, ನಾದಗಳ ಹಾಗೂ ದೃಶ್ಯಗೊಳಿಸಿದ ಆಕೃತಿಗಳ ಮೂಲಕ ಕವಿ ಕಣ್ಣುಗಳನ್ನು ತಣಿಸುವುದು ಆತನ ದೃಕ್ಪಥದಲ್ಲಿರುತ್ತದೆ. ಆತನ ಆಯ್ಕೆಗೆ ಇನ್ನೂ ಒಂದು ಕಾರಣವುಂಟು. ಕವಿ ಎಷ್ಟೇ ಎಚ್ಚರ ವಹಿಸಿದರೂ ರಸಭಾವಾದಿಗಳ ಬುಗ್ಗೆ ಬತ್ತುವಂತಾಗಿ, ಆತನ ಧಾರಣಾಸ್ಥಿತಿ ಶಿಥಿಲಗೊಳ್ಳುತ್ತದೆ. ಆಗ್ಗೆ ಸಹೃದಯರ ಉತ್ಸಾಹ, ಚಮತ್ಕಾರ, ಆಕರ್ಷಣೆಗಳ ಸಲುವಾಗಿ ಕವಿ ಚಿತ್ರದ ಮಾದರಿಗಳನ್ನು ನೆಯ್ಯಲು ಮನಸ್ಸುಮಾಡುವುದೂ ಸಾಧ್ಯ. ಸೂಕ್ಷ್ಮವಾದ ಮನೋಧರ್ಮ, ಪ್ರಖರವಾದ ಕಲ್ಪನಾಶಕ್ತಿಗಳ ಮೂಲಕವೇ ಗ್ರಾಹ್ಯವಾಗಬೇಕಾದ ವ್ಯಂಗ್ಯದ ಆಶಯ ನಿರಂತರವಾಗಿ ಸ್ವಾದುವಾಗುವುದು ಬಹುಶಃ ಕಷ್ಟವೋ ಏನೋ? ಇಂತಹ ಸಂದರ್ಭಗಳ ನಿರ್ವಹಣೆ ಕವಿಗೆ ಸಹ ಸ್ವಲ್ಪ ಕ್ಲೇಶಕರವೇ ಇದ್ದೀತು. ಆಗ್ಗೆ ಚಿತ್ರದ ಮಾದರಿಗಳು ವಿರಾಮಸ್ಥಾನಗಳಾಗಿ ಒದಗುವುದು ಅಪೇಕ್ಷಣೀಯವೇ ಆಗಬಹುದು. ಇದರಿಂದ ಕಾವ್ಯಸೌಂದರ್ಯಕ್ಕೆ ಕೊರತೆಯಾಗದು; ವೈವಿಧ್ಯದ ಲಾಭವೇ ಉಂಟು. ಅಲ್ಲದೆ ಚಾರುತ್ವವಿದ್ದಲ್ಲಿ, ಅಸ್ಫುಟವಾದ ವ್ಯಂಗ್ಯವೂ ಶಕ್ಯವೇ.

ಚಿತ್ರಪದ್ಧತಿಯ ಪ್ರಕಾರಗಳ ಸ್ವರೂಪವನ್ನು ಸಂಕ್ಷೇಪವಾಗಿ ಹೀಗೆ ಕ್ರೋಡೀಕರಿಸಬಹುದು: ೧. ಸಮಾನಾಕ್ಷರಗಳನ್ನು ನಾದಗುಣ, ವಿಶಿಷ್ಟ ಪ್ರಯೋಜನ ಹಾಗೂ ಶಬ್ದಶಕ್ತಿ ಪ್ರದರ್ಶನಗಳಿಗಾಗಿ ಆವರ್ತಿಸುವುದು ಅನುಪ್ರಾಸಭೇದಗಳಿಗೆ ಎಡೆಮಾಡುವುದು. ೨. ಕುಶಲ ಪದಚ್ಛೇದಗಳ ಹಾಗೂ ಭಿನ್ನಾರ್ಥಕ ಪದಸಂಘಟನೆಗಳ ಮೂಲಕ ಅರ್ಥಾಂತರಗಳನ್ನು ಸುಳಿಯಿಸಿ ಚಮತ್ಕಾರವುಂಟುಮಾಡುವುದು ಯಮಕಭೇದಗಳ ಕಾರ್ಯ. ೩. ನಿಯಮಿತ ಸಂಖ್ಯೆಯ ಇಲ್ಲವೆ ನಿರ್ದಿಷ್ಟ ಅಕ್ಷರೋತ್ಪತ್ತಿ ಸ್ಥಾನದ ಅಕ್ಷರಗಳನ್ನು ಆಯ್ದುಕೊಂಡು ಅಥವಾ ವರ್ಣಮಾಲೆ ಕಾಗುಣಿತಗಳ ಪರಿಪಿಡಿಯನ್ನು ಹಿಡಿದು ಸಾರ್ಥಕವಾದ ಪದ್ಯರಚನೆಯನ್ನು ಮಾಡುವುದು ವರ್ಣಚಿತ್ರಗಳಲ್ಲಿ ಕಾಣುತ್ತದೆ. ೪. ಶಬ್ದಗಳಿಗಿರುವ ಹಲವರ್ಥಗಳನ್ನು ಆಶ್ರಯಿಸಿ ಎರಡು ಅಥವಾ ಎರಡಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಕಥೆ ಸನ್ನಿವೇಶಗಳು ದ್ಯೋತನವಾಗುವಂತೆ ಪದ್ಯರಚನೆ ಮಾಡುವುದು ಶ್ಲೇಷಚಿತ್ರಗಳಲ್ಲಿಯೂ ಸಂಧಾನ ಕಾವ್ಯಗಳಲ್ಲಿಯೂ ಅನೇಕಾರ್ಥವಾಚಿಗಳಲ್ಲಿಯೂ ಕಂಡುಬರುವ ಸಾಮಾನ್ಯ ಲಕ್ಷಣವಾಗಿದೆ. ೫. ಒಂದು ನಿರ್ದಿಷ್ಟ ಭಾಷೆಯಲ್ಲಿರುವ ಪದ್ಯ ಅಥವಾ ಗದ್ಯ - ಕುಶಲ ಪದಚ್ಛೇದಗಳ ಮೂಲಕವೋ ಅನುಲೋಮ ವಿಲೋಮ ವಾಚನಕ್ಕೆ ಸಮರ್ಥವಾಗುವುದರ ಮೂಲಕವೋ ಎರಡು ಅಥವಾ ಎರಡಕ್ಕಿಂತ ಹೆಚ್ಚು ಸಂಖ್ಯೆಯ

ಭಾಷೆಗಳ ರಚನೆಗಳಾಗಿ ತೋರುವುದು ಭಾಷಾಚಿತ್ರಗಳೆನಿಸುವುವು. ೬. ಪರಿಚಿತವೂ ಪ್ರಸಿದ್ಧವೂ ಆದ ಸಂಜ್ಞೆಗಳಾಗಿರುವ ಸಂವತ್ಸರಗಳು, ರಸಗಳು, ರಾಶಿಗಳು, ರಾಗಗಳು ಮೊದಲಾದುವನ್ನು ಬಳಸಿ ಪದ್ಯರಚನೆಮಾಡಿದಾಗ ಛಾಯೆಯಿಂದ ಆ ಸಂಜ್ಞೆಗಳ ಮೂಲಾರ್ಥವೂ ಸ್ಫುರಿಸುವಂತಿರುವುದು ಸಂಜ್ಞಾರ್ಥಾದಿ ಶ್ಲೇಷೆಯೆನಿಸುವುದು. ೭. ಒಂದು ದೀರ್ಘವಾದ ಪದ್ಯಜಾತಿಯ ಗರ್ಭದಲ್ಲಿ ಸಲಕ್ಷಣವಾದ ಒಂದೋ ಹಲವೋ ಚಿಕ್ಕ ಪದ್ಯಜಾತಿಗಳು ಸಹ ಹೊರಡುವಂತೆ ಇಲ್ಲವೆ ಒಂದು ಬಗೆಯ ಪದ್ಯಜಾತಿಯಿಂದ ಸಲಕ್ಷಣವಾದ, ಸಮಾನಜಾತೀಯಗಳಾದ ಬಹು ಪದ್ಯಗಳು ರೂಪುಗೊಳ್ಳುವಂತೆ ಪದ್ಯರಚನೆಮಾಡುವುದು ಗರ್ಭಕವಿತ್ವವೆಂದಾಗುವುದು. ಇದರಲ್ಲಿ ಅಕ್ಷರಗಳ ಇಲ್ಲವೆ ಶಬ್ದಗಳ ಛೇದ, ಸ್ಥಾನಾಂತರ ಇಲ್ಲವೆ ವಿಘಟನೆ ಮತ್ತು ಸಂಘಟನೆಗಳ ಕೌಶಲವನ್ನು ಕಾಣಬಹುದಾಗಿದೆ. ೮. ಅಡಗಿಸಿಟ್ಟ ಪದವನ್ನೋ ಪದಾಂಶವನ್ನೋ ಪಾದವನ್ನೋ ಪ್ರಯತ್ನದಿಂದ ಗುರುತಿಸುವ ಹಾಗೆ ಪದ್ಯರಚನೆಯಾಗಿದ್ದರೆ, ಅದು ಗೂಢಚಿತ್ರವೆನಿಸುವುದು. ಹೀಗೆ ಅಡಗಿಸಿಟ್ಟುದು ಪದ್ಯದೊಳಗಿನ ಕ್ರಿಯೆ, ಕಾರಕ, ಸಂಬಂಧ, ಪಾದ ಇಂತಹ ಯಾವುದಾದರೂ ಆಗಿರಬಹುದು ಇಲ್ಲವೆ ಪರಿಚಿತ ಹಾಗೂ ಪ್ರಸಿದ್ಧ ಸಂಜ್ಞೆಗಳಾದ ನಕ್ಷತ್ರ, ರಾಶಿ, ಸಂವತ್ಸರ ಇಂತಹವುಗಳ ನಾಮಾಂತರಗಳಾಗಿರಬಹುದು. ಅಲ್ಲದೆ, ವಾಕ್ಯಗಳ ಇಲ್ಲವೆ ವಾಕ್ಯಘಟಕಗಳ ಅಕ್ಷರಗಳನ್ನು ಕ್ರಮವಾಗಿ ಸಂಯೋಜಿಸಿಯೂ ಪದಸಂಕ್ಷಿಪ್ತಗಳಾದ ಅಕ್ಷರಗಳ ಮೂಲಕ ಪದಗಳನ್ನು ಊಹಿಸಿಯೂ ಗೂಢವಾದ್ದನ್ನು ತಿಳಿಯಬಹುದು. ೯. ಶಬ್ದಾರ್ಥಗಳೆರಡರ ಚಮತ್ಕಾರಗಳನ್ನೂ ಒಳಕೊಂಡ, ಸಾಂಕೇತಿಕ ಸ್ವರೂಪದ ಗೂಢೋಕ್ತಿಗಳಿಂದ ಇಲ್ಲವೆ ಪ್ರಶ್ನೆಗಳಿಂದ ಗರ್ಭಿತರಹಸ್ಯದಂತಿರುವ ವಿಶೇಷಾರ್ಥವನ್ನು, ಇಲ್ಲವೆ ಅರ್ಥಗಳ ಸರಣಿಯನ್ನು ಪಡೆಯುವುದು ಪ್ರಹೇಳಿಕೆಯ ಲಕ್ಷಣ. ಈ ಗೂಢೋಕ್ತಿ ಸಂಕೇತಶಬ್ದಗಳು, ಪ್ರಶ್ನೋತ್ತರಗಳು, ಸಮಸ್ಯೆಗಳು, ವಿರೋಧಾಭಾಸದ ವಾಕ್ಯಗಳು, ಚಾಟುಗಳು ಈ ಯಾವ ರೂಪಗಳಲ್ಲಿ ಬೇಕಾದರೂ ಇರಬಹುದು. ೧೦. ಪದ್ಯಪಾದಾಕ್ಷರಗಳ ನಡೆಯಲ್ಲಿ ಮೇಲೆ–ಕೆಳಗೆ, ಕೆಳಗೆ–ಮೇಲೆ, ಎಡ–ಬಲ, ಬಲ–ಎಡ, ಸುತ್ತು–ಬಳಸು ಎಂಬ ನಡೆಗಳು ಸಾಧ್ಯವಾಗುವುದು ಗತಿಚಿತ್ರ. ೧೧. ವಸ್ತುವಿಶೇಷದ ದೃಶ್ಯರೂಪವಾದ ಆಕಾರ ಇಲ್ಲವೆ ಬಂಧದ ಆವಶ್ಯಕತೆಗೆ ತಕ್ಕಂತೆ ಆಯ್ದುಕೊಂಡ ಪದ್ಯಜಾತಿಯಲ್ಲಿ, ನಿರ್ದಿಷ್ಟಾಕ್ಷರಗಳನ್ನೂ ಅವುಗಳ ಅನೇಕಾವೃತ್ತಿಗಳ ನಿರ್ದಿಷ್ಟಸ್ಥಾನಗಳನ್ನೂ ಗೊತ್ತುಪಡಿಸಿಕೊಂಡು, ಹಾಗೆ ಆವೃತ್ತಿಗೊಳಿಸಿದ ಅಕ್ಷರಗಳೊಂದಿಗೆ ಪೂರ್ಣವಾಗಿ ಪದ್ಯವನ್ನೋ ಪದ್ಯಗಳನ್ನೋ ರಚಿಸಿ, ಆಯಾ ಆಕಾರ ಇಲ್ಲವೆ ಬಂಧದೊಂದಿಗೆ ತೋರಿಸುವುದು ಬಂಧಚಿತ್ರವೆನಿಸುವುದು.

ಈ ಚಿತ್ರಕವಿತ್ವದ ವಿಶಿಷ್ಟಮಾದರಿಗಳು ಎಷ್ಟರಮಟ್ಟಿಗೆ ಪ್ರಯೋಜನಭೂತವಾದವು? ಕೃತಿಸಂದರ್ಭವನ್ನು ಪೋಷಿಸಲು ಸಹ ಅವು ಬರಬಹುದೆನ್ನುವುದನ್ನು ಮರೆಯುವಂತಿಲ್ಲ. ವರ್ಣಾವೃತ್ತಿ ನಾದಗುಣವನ್ನು ವರ್ಧಿಸಿ, ಉತ್ಕಟ ಇಲ್ಲವೆ ದಾರುಣ ಸನ್ನಿವೇಶಗಳ ತೀವ್ರತೆ ಸಾಂದ್ರತೆಗಳನ್ನು ಹೃದಯಕ್ಕೆ ಮುಟ್ಟಿಸಬಹುದು. ಆಲಂಕಾರಿಕರು ಗುರುತಿಸುವ ರೀತಿ, ಹಾಗೆಯೇ ಶಯ್ಯೆ ಪಾಕಗಳು ಇವುಗಳಲ್ಲಿ ವರ್ಣಾವೃತ್ತಿ ವರ್ಣಸಂಯೋಜನೆಗಳ ಪಾತ್ರವೇನೆನ್ನುವುದು ವಿದಿತವಿದೆ. ಸದೃಶ ವರ್ಣಗಳ ಸಂಯೋಜನಕೌಶಲದಿಂದ ಭಿನ್ನಾರ್ಥಕತ್ವವನ್ನು ಪಡೆದು ವ್ಯವಸ್ಥೆಗೊಳಿಸುವ ಯಮಕಪ್ರಭೇದಗಳು ಬುದ್ಧಿಗೆ ಮೀಟುಗೋಲಾಗಿ, ಕ್ಷಣಾರ್ಧದಲ್ಲಿ ಅರ್ಥಾಂತರವನ್ನು ತಂದು ಹೇಗೆ ಬೆರಗುಂಟುಮಾಡುವುದೆಂಬುದೂ ವಿದಿತವಿದೆ. ಹೀಗೆಯೇ ಗೂಢ ಮತ್ತು ಶ್ಲೇಷಚಿತ್ರಗಳು ಎಂತಹ ಬುದ್ಧಿವ್ಯಾಪಾರಗಳಾಗಿ ರಂಜಿಸುವುವೆಂಬುದನ್ನು ಶಾಸ್ತ್ರರಸಪ್ರಿಯರಿಗೆ ವಿವರಿಸಬೇಕಾಗಿಲ್ಲ. ಪ್ರಹೇಳಿಕೆಗಳ ವಿಷಯದಲ್ಲಿ ದಂಡಿಯೇ ಕ್ರೀಡಾಗೋಷ್ಠಿ ವಿನೋದಾದಿಗಳಲ್ಲಿ ಪ್ರಯೋಜನವುಂಟೆಂದು ತಿಳಿಸಿದ್ದಾನೆ. ನಮ್ಮ ಕಾವ್ಯಗಳಲ್ಲಿಯೇ ವೇಶ್ಯಾವಿಟ ಸಂವಾದದಲ್ಲಿ, ಗರ್ಭಿಣಿಯರಾದ ಸ್ತ್ರೀಯರ ಕಾಲಕ್ಷೇಪವರ್ಣನದಲ್ಲಿ, ಬುದ್ಧಿವಂತರ ಚಾಟೂಕ್ತಿಗಳಲ್ಲಿ ಇವುಗಳ ಪ್ರಯೋಗ ಕಾವ್ಯಸಂದರ್ಭೋಚಿತವಾಗಿಯೇ ಆಗಿರುವುದನ್ನು ನೋಡಬಹುದು. ಇಷ್ಟು ಮಾತ್ರವಲ್ಲ, ಗಾಢವಾದ ಆಧ್ಯಾತ್ಮಿಕಸ್ತರದ ಅಭಿವ್ಯಕ್ತಿಯಲ್ಲಿ ಅತ್ಯಂತ ಸ್ವಾರಸ್ಯವಾದ ರೀತಿಯಲ್ಲಿ ಇದು ಒದಗಿದೆ. ಆಕಾರ ಮತ್ತು ಬಂಧಚಿತ್ರಗಳಂತೂ ಶ್ರವ್ಯ ಮತ್ತು ದೃಶ್ಯಗಳನ್ನು ಒಗ್ಗೂಡಿಸುವ ಕುಶಲತಂತ್ರವಾಗಿದೆ. ಪೂಜ್ಯನನ್ನು ಸುಂದರವಾದ ಪುಷ್ಪಮಾಲೆಯಿಂದಲೋ ರತ್ನಹಾರದಿಂದಲೋ ಅಲಂಕರಿಸಿ ಗೌರವಿಸುವ ಅಪೇಕ್ಷೆಯುಳ್ಳ ಕವಿ, ಅಂತಹ ಗೌರವ

ವನ್ನು ಕಾಣಲು ಬಯಸುವ ವಾಚಕ, ಮಾಲಾಬಂಧದಿಂದಲೋ ಹಾರಬಂಧದಿಂದಲೋ ಅದನ್ನು ಸಾಧಿಸಬಹುದಾಗಿದೆ, ಕಾಣಬಹುದಾಗಿದೆ. ಪ್ರಕಾಶವರ್ಷನು ತನ್ನ 'ರಸಾರ್ಣವಾಲಂಕಾರ'ವೆಂಬ ಕೃತಿಯಲ್ಲಿ ''ಸರಸ್ವತೀ ದೇವಿಗೆ ಪ್ರಹೇಳಿಕೆಯೇ ಪದಕ, ಅನುಪ್ರಾಸವೇ ಕಂಚುಕ, ಯಮಕವೇ ಕ್ರೀಡಾಶಕುಂತ, ಗೂಢೋಕ್ತಿಯೇ ಕೇಳಿ ಕಂದುಕ'' ಎಂದು ಉಗ್ಗಡಿಸಿರುವುದನ್ನು (೩–೬೬) ಇಲ್ಲಿ ನೆನೆಯಬಹುದು. ಶಬ್ದಾಲಂಕಾರಗಳೆಲ್ಲವನ್ನೂ ಗದ್ಯ ಪದ್ಯಗಳೆರಡರಲ್ಲಿಯೂ ಸಂದರ್ಭಶೋಭೆಯಾಗುವಂತೆ ಔಚಿತ್ಯವರಿತು, ರಸಾನುಗುಣವಾಗಿ ಬಳಸಬೇಕೆಂದು ಈತನೇ ಹೇಳಿರುವುದನ್ನೂ ಗಮನಿಸಬಹುದಾಗಿದೆ.

ಈಚೆಗೆ ಕೆಲವರು ಚಿತ್ರಕಾವ್ಯದ ಸಮರ್ಥನೆಯನ್ನು ಕಾವ್ಯಮೀಮಾಂಸೆಯ ಹಿನ್ನೆಲೆಯಲ್ಲಿ ಬೇರೆ ರೀತಿಯಿಂದ ಮಾಡಲು ಯತ್ನಿಸಿರುವುದುಂಟು. ಈ ವಾದಸರಣಿ ಹೀಗೆ: 'ಚಿತ್ರ' ಶಬ್ದದ ಹಲವರ್ಥಗಳಲ್ಲಿ ನಮ್ಮ ಆಲಂಕಾರಿಕರು ಕಾವ್ಯಸಂದರ್ಭಕ್ಕೆ 'ವೈಚಿತ್ರ್ಯ' ಎಂಬರ್ಥವನ್ನು ಗ್ರಹಿಸಿದರು. ಅದನ್ನು ಶಬ್ದಚಿತ್ರ ಉಭಯಚಿತ್ರಗಳೆಂಬವಕ್ಕೆ ಅನ್ವಯಿಸಿದರು. ವಸ್ತುವಿನ ಬಿಂಬ (image) ಎಂಬರ್ಥ ಉಭಯಚಿತ್ರಗಳ ಹೊರತು ಎಲ್ಲಕ್ಕೂ ಅನ್ವಯಿಸುವಂತಹುದಾಗಿದೆ. ಒಂದೇ ಪದ್ಯದಲ್ಲಿ ಶಬ್ದ ಮತ್ತು ಅರ್ಥಗಳಿಗೆ ಸಂಬಂಧಿಸಿ ವಸ್ತುವಿನ ಬಿಂಬಗಳನ್ನು ಪಡೆಯುವುದು ಅಶಕ್ಯವೆನ್ನುವುದು ಇದರ ಕಾರಣ. ಅದಕ್ಕಾಗಿಯೇ ಅವರು ಎರಡೇ ಚಿತ್ರಭೇದಗಳನ್ನು ಒಪ್ಪುವಂತಾಯಿತು.

ಚಿತ್ರದ ಬಿಂಬಾರ್ಥವು ಧೂಲಿಚಿತ್ರ, ಭಾವಚಿತ್ರ ಎಂಬಂತಹ ರೂಢಿಗತ ಶಬ್ದಗಳಿಂದ ವಿದಿತ. ಚಿತ್ರಕಾವ್ಯದಲ್ಲಿ ಉಭಯಚಿತ್ರಗಳ ಅಲಂಕಾರಗಳನ್ನು ಕೂಡಿಸಿಕೊಳ್ಳಲು ವೈಚಿತ್ರ್ಯಾರ್ಥವನ್ನು ಅನಂತರದಲ್ಲಿ ತಂದುಕೊಂಡಿರಬೇಕು. ಈ ವಿಭಾಗದಲ್ಲಿ ಸೇರುವ ಪ್ರಹೇಳಿಕಾದಿಗಳು ಮೇಲ್ದರ್ಜೆಯ ಕಾವ್ಯವಾಗಲು ಅರ್ಹವಾಗಿಲ್ಲವೆಂಬುದು ನಿಜ. ಆದರೆ ಅರ್ಥಚಿತ್ರವೆಂದರೆ ಅರ್ಥದ ಬಿಂಬವೆಂದೇ. ಶಬ್ದಾಲಂಕಾರನಿಬದ್ಧಗಳಾದ ವಿವಿಧ ಬಂಧಗಳ ಮೂಲಕ ನಮಗೆ ಆಕೃತಿಗಳು ಸಿದ್ಧವಾಗುತ್ತವೆ.

ನಮ್ಮ ಬಹುತೇಕ ಆಲಂಕಾರಿಕರೆಲ್ಲ ಈ ಪದ್ಧತಿಯನ್ನು ಪ್ರಸ್ತಾವಿಸಿದ್ದಾರೆ; ಸಾಹಿತ್ಯದ ಲಕ್ಷ್ಯಭಾಗವನ್ನು ಅನೇಕರು ಅಭ್ಯಾಸಮಾಡಿಯೂ ಮೆಚ್ಚಿಯೂ ಇದ್ದಾರೆ. ಇಂದಿಗೂ ಇದು ಜೀವಂತವಾಗಿದೆ. ನಮ್ಮ ಖ್ಯಾತ ಕವಿಗಳು ಪ್ರಯೋಗಗಳನ್ನು ನಡಸಿದ್ದಾರೆ. ಕಾಳಿದಾಸನ ಯಮಕಗಳೂ ವ್ಯಾಸರ ಕೂಟಪ್ರಶ್ನೆಗಳೂ ಇಲ್ಲಿ ನೆನೆಯಬೇಕಾದವು. ಬಂಧಗಳ ಕಥೆಯಾದರೂ ಹೀಗೆಯೇ. ಇವೆಲ್ಲ ಕೀಳು ಸಾಮಗ್ರಿಯೆನ್ನಬಹುದೇ? ಹಾಗೆಂದು ನಿರರ್ಥಕವೇ? ಖಂಡಿತ ಅಲ್ಲ. ಶ್ರಮದಾಯಕವಾದ ಈ ಕವಿತ್ವಚಾತುರ್ಯದ ಪರಿಶ್ರಮ ಓದುಗರಲ್ಲಿ ಆಸಕ್ತಿ ಕುತೂಹಲಗಳನ್ನುಂಟು ಮಾಡುವುದಾಗಿತ್ತು.

ಕಾವ್ಯದಲ್ಲಿ ಶಾಬ್ದಿಕವೈಚಿತ್ರ್ಯವಷ್ಟೇ ಓದುಗನಲ್ಲಿ ಭಾವೋನ್ಮೇಷವನ್ನು ಮಾಡಿ, ಸ್ಪಂದಿಸುವಂತೆ ಮಾಡಿ ಹರ್ಷವನ್ನುಂಟುಮಾಡುವ ಮಾಧ್ಯಮವಲ್ಲ. ಕಾವ್ಯಸೌಂದರ್ಯದ ನಿರ್ಮಿತಿಗೆ, ಮೂಲಭೂತ ಮಾನವಲಕ್ಷಣವಾಗಿ ಬೆರಗು ಎಂಬುದೊಂದು ಇದ್ದೇ ಇದೆ. ರಸವಾದಿಗಳ ಪ್ರಕಾರವೂ ಕಾವ್ಯದಲ್ಲಿ ಆನಂದವನ್ನು ಉತ್ಪಾದಿಸುವುದು ಪ್ರಮುಖವಾಗಿ ಭಾವಗಳ ಉದ್ದೀಪನವೇ. ಹೀಗೆಂದ ಮಾತ್ರಕ್ಕೆ ಚಿತ್ರಪದ್ಧತಿಯಲ್ಲಿ ಧ್ವನಿಯಾಗಲಿ ಭಾವವಾಗಲಿ ಇಲ್ಲವೆನ್ನಲಾಗದು. ಬೆರಗು ಕುತೂಹಲಗಳನ್ನು ಉಂಟುಮಾಡುವ ಯಾವುದೋ ಅಂಶವೊಂದು ಕವಿತ್ವದಲ್ಲಿ ಇರುವುದನ್ನು ಪೂರ್ತಿ ಅಲ್ಲಗಳೆಯಲಾಗದು.

ಭಟ್ಟತೌತನು ವರ್ಣನವು ದರ್ಶನವನ್ನು ಬೆಳಗುವುದೆನ್ನುವನು. ಇದು ಚಿತ್ರಕಾವ್ಯಪದ್ಧತಿಯ ಅತಿ ಪ್ರಾಚೀನ ತಾತ್ತ್ವಿಕ ಬೀಜ. ವರ್ಣ್ಯವಿಷಯವನ್ನು ಯಾವ ಕವಿ ಕಣ್ಣಿಗೆ ಕಟ್ಟುವಂತೆ ಸಹೃದಯರಿಗೆ ಕಾಣಿಸ ಬಲ್ಲನೋ ಅವನೇ ಶ್ರೇಷ್ಠಕವಿ. ಪರಿಪೂರ್ಣವಾಗಿ ದೃಶ್ಯಮಾನವಾಗಿ ಮಾಡುವ ಕ್ರಿಯೆಯ ಮೂಲಕವೇ ಶಬ್ದಗಳ ನೇರವಾದ ಶಕ್ತಿ ಪೂರ್ತಿಯಾಗಿ ಹೊಮ್ಮುವುದು ಸಾಧ್ಯ; ಆ ಮೂಲಕ ಅರ್ಥಪ್ರಕಾಶನ ಸಾಧ್ಯ.

ಹೀಗೆ ವಿಮರ್ಶಿಸುತ್ತ ಹೋಗಿರುವ ಕಲಾನಾಥ ಝಾ ಅವರ ವಿಚಾರಸರಣಿ, ಕಾವ್ಯಮೀಮಾಂಸೆಯ ಕ್ಷೇತ್ರದ ಆಧುನಿಕ ವಿದ್ವಾಂಸರಿಗೆ ಎಷ್ಟರಮಟ್ಟಿಗೆ ತೃಪ್ತಿಕರವಾಗಿ ಕಾಣಬಹುದೆಂಬುದು ಇಲ್ಲಿಗೆ ಪ್ರಸ್ತುತವಲ್ಲ.

ಆದರೆ ಚಿತ್ರಕಾವ್ಯಕ್ಕೆ ಕಾವ್ಯಪ್ರಭೇದಗಳ ತಾರತಮ್ಯದಲ್ಲಿ ಗಣ್ಯವಾದ ಸ್ಥಾನವನ್ನು ದೊರಕಿಸಲು ಅವರು ಶ್ರಮಿಸಿರುವುದಂತೂ ಸ್ಪಷ್ಟ.

ಸಂಸ್ಕೃತ ಭಾಷೆಯ ಅಲಂಕಾರ ಶಾಸ್ತ್ರಗ್ರಂಥಗಳು ಲಕ್ಷಣವಿಮರ್ಶೆಯನ್ನೂ ಕಾವ್ಯಗ್ರಂಥಗಳು ಲಕ್ಷ್ಯಸಮೃದ್ಧಿಯನ್ನೂ ಒದಗಿಸಿರುವುದು, ಚಿತ್ರಕಾವ್ಯಪದ್ಧತಿಯ ಬೆಳೆವಣಿಗೆ ದ್ರಾವಿಡಭಾಷೆಗಳಲ್ಲಿ ಸಹ ಯಥೋಚಿತವಾದ ಪ್ರಮಾಣದಲ್ಲಿ ನಡೆಯಲು ಮಾರ್ಗದರ್ಶನ ಮಾಡಿದಂತಾಗಿದೆ. ತಮಿಳು ಭಾಷೆಯ 'ದಂಡ್ಯಲಂಕಾರ'ವೂ ಮಲಯಾಳದ 'ಭಾಷಾಭೂಷಣ'ವೂ ಚಿತ್ರಕಾವ್ಯದ ಕೆಲವು ಪ್ರಕಾರಗಳ ನಿರೂಪಣೆಯನ್ನು ಒಳಕೊಂಡಿವೆ. ಈ ಭಾಷೆಗಳ ಸಾಹಿತ್ಯಗ್ರಂಥಗಳಲ್ಲಿ ಇವುಗಳ ಪ್ರಚಾರ ಪ್ರಯೋಗಗಳು ಹೇಗೆ ಎನ್ನುವುದನ್ನು ಗುರುತಿಸುವುದು ನಮ್ಮ ವಿವೇಚನೆಗೆ ಹೊರತಾದುದು. ನಮ್ಮ ವಿವೇಚನೆಯಲ್ಲಿ ತೆಲುಗುಭಾಷೆಯ ಚಿತ್ರದ ಪ್ರಸ್ತಾಪ ಅಲ್ಲಲ್ಲಿ ಬಂದಿರುವುದರಿಂದ ಆ ಬಗ್ಗೆ ಕೆಲವು ಮಾತುಗಳನ್ನು ಹೇಳಬಹುದು.

ತೆಲುಗು ಸಾಹಿತ್ಯದಲ್ಲಿ ಚಿತ್ರದ ಮಾದರಿಗಳನ್ನು ಮೊದಲ ಸಲ ಕಾವ್ಯದೊಳಗೆ ಪ್ರವೇಶಮಾಡಿಸಿದವನೆಂದು ನನ್ನೆಚೋಡ ಕವಿಯನ್ನು ಗುರುತಿಸುವುದು ರೂಢಿ. ಈತನು ಸಂಸ್ಕೃತಕಾವ್ಯಗ್ರಂಥಗಳನ್ನು ಮಾತ್ರವೇ ಅಲ್ಲದೆ ಕನ್ನಡ ಲಕ್ಷಣಗ್ರಂಥಗಳನ್ನು ಸಹ ಪರಿಶೀಲಿಸಿ, ಅಲ್ಲಿಂದ ಚಿತ್ರಕವಿತಾರೀತಿಗಳನ್ನು ಸ್ವೀಕರಿಸಿರುವನೆಂಬ ಅಭಿಪ್ರಾಯವಿದೆ. ಮಲ್ಲಿಕಾರ್ಜುನ ಪಂಡಿತ, ಪಾಲ್ಕುರಿಕೆ ಸೋಮನಾಥರ ಅಕ್ಷರಾಂಕನ ಗದ್ಯಪದ್ಯಗಳ ವರ್ಣಚಿತ್ರಗಳ ಮೇಲೆಯೂ ಕನ್ನಡದ ಪ್ರಭಾವವುಂಟೆಂದು ಭಾವಿಸಿದೆ. ೧೩ ರಿಂದ ೧೫ನೆಯ ಶತಮಾನದ ಅಂತ್ಯದವರೆಗೆ ಸ್ವರಾದಿ ಚಿತ್ರಗಳನ್ನು ಬಹುವಾಗಿ ರಚಿಸಿದ ಕವಿಗಳು, ಪೆದ್ದಯ ತಿಕ್ಕನ ಮುಂತಾದವರು, ಈ ಪದ್ಧತಿಯ ಮೊದಲ ಘಟ್ಟವೆಂದು ಹೇಳುವ ಕಾಲದವರೆಂದು ತಿಳಿಯಲಾಗಿದೆ. ಈ ಅವಧಿಯಲ್ಲಿ ವರ್ಣ, ಗತಿ, ಗೂಢ, ಬಂಧ ಈ ವಿಭಾಗದ ಚಿತ್ರರಚನೆಗಳುಂಟು. ೧೬ನೆಯ ಶತಮಾನದ ವಿಜಯನಗರ ಕಾಲದ ಪ್ರಮುಖಕವಿಗಳು ಅಚ್ಚತೆಲುಗು ಕಾವ್ಯಗಳು, ಸಂಧಾನಕಾವ್ಯಗಳು ಮೊದಲಾದವನ್ನು ರಚಿಸಿದರು. ೧೭ನೆಯ ಶತಮಾನದಲ್ಲಿ ಮತ್ತೆ ಗೂಢ, ಸಂಧಾನ, ವರ್ಣ ಮುಂತಾದ ಚಿತ್ರಪ್ರಕಾರಗಳ ರಚನೆಗಳು ಮುಂದುವರಿದುವು. ಇವುಗಳಲ್ಲಿ ಗಣಪವರಪುವೆಂಕಟಕವಿಯ 'ಪ್ರಬಂಧರಾಜ ವೆಂಕಟೇಶ್ವರ ವಿಜಯ ವಿಲಾಸಮು' ಚಿತ್ರಕಾವ್ಯದ ಒಂದು ಅಪೂರ್ವಭಂಡಾರವೆನಿಸಿದೆ. ಇಲ್ಲಿಂದ ಮುಂದಿನ ಮೂರು ಶತಮಾನಗಳಲ್ಲಿ ಹುಟ್ಟಿದ ನೂರರ ಮೇಲ್ಪಟ್ಟು ಗ್ರಂಥಗಳು ಚಿತ್ರಕಾವ್ಯದ ನಾನಾ ಮಾದರಿಗಳನ್ನು ಒಳಕೊಂಡು ಈ ಪದ್ಧತಿಯ ಇತೋಪ್ಯತಿಶಯವಾದ ಬೆಳೆವಣಿಗೆಯನ್ನು ತೋರಿಸುತ್ತವೆ. ಕೆಲವು ಸ್ವತಂತ್ರ ಚಿತ್ರಕಾವ್ಯಕೃತಿಗಳೇ ಹುಟ್ಟಿವೆ. ಗರ್ಭಕವಿತ್ವದ ಸಮೃದ್ಧಿ ಈಯವಧಿಯ ಒಂದು ವಿಶೇಷ. ಇಲ್ಲಿಯವರೆಗೆ ಕಾವ್ಯಸಂದರ್ಭವನ್ನು ಹಿಡಿದು ಚಿತ್ರದ ಮಾದರಿಗಳು ಕಾಣಿಸಿಕೊಳ್ಳುತ್ತಿದ್ದುದು ರೂಢಿಯಾದರೆ, ಈಚೆಯ ಕಾಲದಲ್ಲಿ ಅದು ಒಂದು ಮೋಜು ಎನ್ನುವಂತಾಯಿತು. ಸಂಸ್ಥಾನಗಳು ಈ ಪದ್ಧತಿಯನ್ನು ಪೋಷಿಸಿದುವು; ಕವಿಗಳು ಇಷ್ಟಪಟ್ಟರು. ಇಂದಿಗೂ ಚಿತ್ರಕಾವ್ಯಪದ್ಧತಿ ತೆಲುಗುಸೀಮೆಯಲ್ಲಿ ಮನ್ನಣೆಯನ್ನು ಕಳೆದುಕೊಂಡಿಲ್ಲ.

ತೆಲುಗಿನ 'ಕಾವ್ಯಾಲಂಕಾರ ಚೂಡಾಮಣಿ', 'ಕಾವ್ಯಾಲಂಕಾರ ಸಂಗ್ರಹಮು', 'ಅಪ್ಪಕವೀಯಮು', 'ಲಕ್ಷಣಸಾರಸಂಗ್ರಹಮು', 'ಲಕ್ಷಣ ಶಿರೋಮಣಿ' ಇವು ಚಿತ್ರಕಾವ್ಯದ ಲಕ್ಷಣವಿಮರ್ಶೆಯನ್ನು ಒಳಕೊಂಡ ಲಕ್ಷಣಗ್ರಂಥಗಳಾಗಿವೆ. ಪೂರ್ವೋಕ್ತ ವೆಂಕಟಕವಿಯ ಗ್ರಂಥವೂ ಮಂಡಪಾಕ ಪಾರ್ವತೀಶ್ವರ ಶಾಸ್ತ್ರಿಯ 'ಪ್ರಬಂಧ ಸಂಬಂಧ ಬಂಧ ನಿಬಂಧನಗ್ರಂಥಮು' ಎಂಬ ಗ್ರಂಥವೂ ಚಿತ್ರಕಾವ್ಯದ ಅಭ್ಯಾಸಿಗಳಿಗೆ ನಿಧಿಪ್ರಾಯವಾದವಾಗಿವೆ. ಆಶು, ಮಧುರ, ಚಿತ್ರ, ವಿಸ್ತರಗಳೆಂಬ ಚತುರ್ವಿಧ ಕಾವ್ಯಗಳ ರಚನಾಪದ್ಧತಿ ತೆಲುಗು ಕಾವ್ಯಸಂಪ್ರದಾಯದಲ್ಲಿ ಎಂದಿನಿಂದಲೂ ಮಾನ್ಯವಾದುದು. ಆಶುಕವಿತ್ವವೂ ಚಿತ್ರದ ಮಾದರಿಗಳನ್ನು ಒಳಕೊಂಡದ್ದೇ. 'ಅವಧಾನ' ಪ್ರದರ್ಶನಗಳಲ್ಲಿ ಆಶುಕವಿತ್ವಶಕ್ತಿಯೇ ಮುಖ್ಯವಾದುದು. ಚಿತ್ರಪದ್ಧತಿಯ ಮನ್ನಣೆಗೆ ಇದು ಕೂಡ ಒಂದು ಮುಖ್ಯ ಕಾರಣವೆನ್ನಬಹುದು.

ಈಗ ಕನ್ನಡ ಚಿತ್ರಕಾವ್ಯದ ಬಗೆಗೆ ನೋಡೋಣ: ಕನ್ನಡ ಸಾಹಿತ್ಯದಲ್ಲಿ ಚಿತ್ರಕಾವ್ಯದ ಉಗಮ ವಿಕಾಸಗಳ ಚರಿತ್ರೆ ಸಂಸ್ಕೃತ ತೆಲುಗು ಭಾಷೆಗಳ ಸಾಹಿತ್ಯಗಳಲ್ಲಿ ಕಂಡುಬರುವ ಹಾಗೆ ಶ್ರೀಮಂತವೆಂದು ಹೇಳಲಾಗದಿದ್ದರೂ, ಇಲ್ಲಿ ಆ ಕಾವ್ಯಪದ್ಧತಿಯ ವ್ಯಾಪ್ತಿ, ವೈಶಾಲ್ಯಗಳಿಗೆ ಕೊರತೆಯೇನಿಲ್ಲ. ಪ್ರಾಚೀನರಾದ ಅಲಂಕಾರಶಾಸ್ತ್ರಜ್ಞರಲ್ಲಿ ಪ್ರಮುಖರೂ ಈಚೀನ ಕಾಲದ ಒಬ್ಬರಿಬ್ಬರೂ ಈ ಸಂಬಂಧವಾಗಿ ಗಮನ ಹರಿಸಿರುವುದುಂಟು. ಪ್ರಾಚೀನ ಅಲಂಕಾರಗ್ರಂಥಗಳಲ್ಲಿ 'ಕವಿರಾಜಮಾರ್ಗ', 'ಕಾವ್ಯಾವಲೋಕನ', 'ಮಾಧವಾಲಂಕಾರ', 'ನರಪತಿಚರಿತ'ಗಳಲ್ಲಿ ವಿಷಯ ವಿವೇಚನೆಗೆ ತಕ್ಕಮಟ್ಟಿನ ಪ್ರಾಶಸ್ತ್ಯ ಸಂದಿದೆ. ಉಳಿದವುಗಳಲ್ಲಿ ವಿವೇಚನೆ ಉದಾಸೀನಪಕ್ಷದ್ದು. ಆದರೆ ನಮ್ಮ ಮಟ್ಟಿಗೆ ಉಪಯೋಗವೇನೋ ಅಷ್ಟಿಷ್ಟು ಉಂಟು. ಹೊಸ ಕಾಲದ ರಚನೆಗಳಲ್ಲಿ 'ಕರ್ಣಾಟಕ ಚಂದ್ರಾಲೋಕ', 'ಕರ್ಣಾಟಛಂದೋಲಂಕಾರ ಸಾಹಿತ್ಯಲಕ್ಷಣ ಸಂಗ್ರಹವು' ಇವುಗಳಲ್ಲಿ ಸ್ವಲ್ಪ ಚಿತ್ರಕಾವ್ಯಪ್ರಸಕ್ತಿಯುಂಟು. ಕವಿರಾ. ಕಾವ್ಯಾವ.ಗಳು ಕನ್ನಡ ಭಾಷೆಯ ಚಿತ್ರಕಾವ್ಯಪದ್ಧತಿಗೆ ಆದ್ಯಗ್ರಂಥಗಳಾಗಿರುವುದು ಮಾತ್ರವೇ ಅಲ್ಲದೆ, ಬಹುಶಃ ಒಟ್ಟಾಗಿ ದ್ರಾವಿಡ ಭಾಷೆಗಳಿಗೇ ಇವು ಆದ್ಯಗ್ರಂಥಗಳಾಗಿರುವಂತೆ ತೋರುತ್ತದೆ. ಭಾಮಹ ದಂಡಿ ರುದ್ರಟರ ಮೇಲ್ಪಂಕ್ತಿಯಲ್ಲಿ ಕನ್ನಡದ ಈ ಆದ್ಯಗ್ರಂಥಗಳು ವಿಷಯವಿವೇಚನೆಮಾಡಿ ಕೃತಕೃತ್ಯವಾದುವು.

ಆರಂಭಕಾಲೀನ ಕನ್ನಡ ಕವಿಗಳು ಬಲುಮಟ್ಟಿಗೆ ಯಮಕಾನುಪ್ರಾಸಗಳ ಹೊರತು ಬೇರೆ ಚಿತ್ರಗಳ ಕಡೆಗೆ ಲಕ್ಷ್ಯ ಹರಿಸಲಿಲ್ಲ. ಪ್ರಹೇಳಿಕೆಯ ಲಕ್ಷ್ಯಗಳನ್ನಿತ್ತ ಪೊನ್ನನೇ ಈಗ ತಿಳಿದಮಟ್ಟಿಗೆ, ಒಂದರ್ಥದಲ್ಲಿ, ಮೊದಲನೆಯ ಕನ್ನಡ ಚಿತ್ರಕವಿ. ಆದರೂ ಮಾರ್ಗಸಾಹಿತ್ಯ ಚಿತ್ರದ ಮಾದರಿಗಳಿಗೆ ಮನ್ನಣೆಯ ಮಣೆಯನ್ನು ಹಾಕಲಿಲ್ಲವೆಂದು ಒಟ್ಟಾಗಿ ಭಾವಿಸುವುದು ತಪ್ಪಲ್ಲ. ಅನಂತರ ಕಾಲದಲ್ಲಿ ಸಹ ವರ್ಣಚಿತ್ರಗಳ ಹಾಗೂ ಪ್ರಹೇಳಿಕೆಗಳ ವಿಷಯದಲ್ಲಿ ಕೊಂಚಮಟ್ಟಿಗೆ ಸ್ವತಂತ್ರರಚನೆ ಹುಟ್ಟಿತಲ್ಲದೆ, ಸಂಸ್ಕೃತ ತೆಲುಗು ಭಾಷೆಗಳಲ್ಲಿ ಹುಟ್ಟಿದ ಹಾಗೆ ವಿವಿಧ ಚಿತ್ರಪ್ರಕಾರಗಳ ಸ್ವತಂತ್ರರಚನೆಗಳು ಹುಟ್ಟಲಿಲ್ಲ. ಪ್ರಚುರತೆಯ ದೃಷ್ಟಿಯಿಂದ, ನಡುಗನ್ನಡ ಸಾಹಿತ್ಯದಲ್ಲಿ ಚಿತ್ರದ ಕಡೆಗೆ ಗಮನವಿತ್ತ ಕವಿಗಳ ಸಂಖ್ಯೆ ಉಳಿದ ಸಾಹಿತ್ಯಾವಧಿಗಿಂತ ಹೆಚ್ಚು. ಕಾವ್ಯಾಂತರ್ಗತವಾದ ವರ್ಣ, ಗತಿ, ಗೂಢ ಮತ್ತು ಬಂಧಚಿತ್ರಗಳ ಕೆಲಕೆಲವು ಪ್ರಯೋಗಗಳು ಪರಿಶೀಲನಾರ್ಹವಾಗಿರುವಂತೆಯೇ ವಚನಕಾರರ ಬೆಡಗುಗಳೆಂಬ, ಹರಿದಾಸರ ಮುಂಡಿಗೆಗಳೆಂಬ ಪ್ರಹೇಳಿಕೆಗಳು ವಿಗಿಲಾಗಿ ಗಮನ ಸೆಳೆಯತಕ್ಕವಾಗಿವೆ. ಇವು ಕನ್ನಡದ ವೈಶಿಷ್ಟ್ಯವೆಂಬಂತೆ ಹಬ್ಬಿ ಪ್ರಭಾವ ಬೀರಿವೆ. ಪ್ರಹೇಳಿಕೆಗಳ ಇನ್ನೊಂದು ಬಗೆ ಪಾರಿಹಾರಿಕೆಯಂತೂ ನಡುಗನ್ನಡ ಸಾಹಿತ್ಯದಲ್ಲಿ ಅಲ್ಲಿ ಇಲ್ಲಿ ಗೊಂಚಲುಗೊಂಚಲಾಗಿ ಕಂಡುಬಂದಿದೆ. ಈ ಪ್ರಹೇಳಿಕೆಯ ಇತರ ವೈಚಿತ್ರ್ಯಗಳನ್ನು ಜನಪದ ಸಾಹಿತ್ಯದ ದೇಸಿ ಕವಿಗಳೂ ಸರ್ವಜ್ಞನೂ ಕನ್ನಡ ಸಂಸ್ಕೃತಿಯ ಭಾಗವೆನ್ನುವಂತೆ ಬೆಳಸಿದರು. ಗೂಢಾರ್ಥದ, ಒಗಟು, ವಾವೆಯ ಪದಗಳು ನಮ್ಮ ಕವಿಗಳ ಕೈಯಲ್ಲಿ ಸಹಜಸುಂದರವಾಗಿ ಅರಳಿ ಮಗಮಗಿಸಿವೆ.

ಕನ್ನಡ ಭಾಷೆಯ ಸರ್ವೋಚ್ಚ ಚಿತ್ರಕಾವ್ಯಕೃತಿಯಾದ 'ಮದನತಿಲಕ', ಈಗ ತಿಳಿದಮಟ್ಟಿಗೆ ತೆಲುಗು ಭಾಷೆಗಿಂತ ಪ್ರಾಚೀನವಾದ ಕೆಲವು ಚಿತ್ರದ ಮಾದರಿಗಳನ್ನು ಒಳಕೊಂಡಿದೆ. ಅನಂತರದಲ್ಲಿ ತೆಲುಗಿನಲ್ಲಿ ಪಕ್ವಸ್ಥಿತಿಗೇರಿದ ಗರ್ಭಕವಿತ್ವದ ಅತಿಪ್ರಾಚೀನ ಮಾದರಿಗಳು ದೊರೆಯುವುದು 'ಮದನತಿಲಕ'ದಲ್ಲಿ ಎಂಬುದು ನೆನಪಿಡಬೇಕಾದ ಸಂಗತಿ. ಕನ್ನಡ ನಾಡಿನಲ್ಲಿಯೂ ಆಶುಕವಿಗಳಿದ್ದು, ಅವಧಾನದ ಪ್ರದರ್ಶನಗಳು ನಡೆಯುತ್ತಿದ್ದಿರಬೇಕೆಂದು ತಿಳಿಯುವ ಕೆಲವು ಸಾಕ್ಷ್ಯಗಳು ಉಂಟು. ಇಂತಹವು ಹೆಚ್ಚಾಗಿ ವಿಜಯನಗರದ ಅರಸರ ಮತ್ತು ಮೈಸೂರೊಡೆಯರ ಕಾಲದಲ್ಲಿ ನಡೆಯುತ್ತಿದ್ದಿರಬೇಕು.

ವರ್ಣಚಿತ್ರಗಳಿಗಿಂತ ಯಮಕಾನುಪ್ರಾಸಗಳು ಕವಿಗಳ ರಚನೆಯಲ್ಲಿ ಸಹಜವಾದ ಓಘದಿಂದ ನಿರ್ಮಾಣವಾಗಿರತಕ್ಕವು. ಪ್ರಾಚೀನರಲ್ಲಿ ಇವು ಜಟಿಲಕುಟಿಲಗಳೆನಿಸದ ವಿರಳ ಪ್ರಯೋಗಗಳು; ಮಧ್ಯಕಾಲೀನರಲ್ಲಿ ಇವು ಕೃತಕಪಾಂಡಿತ್ಯದ, ಅತಿವ್ಯಾಮೋಹದ ಅಕಟವಿಕಟ ರಚನೆಗಳು. ಕನ್ನಡ ಲಾಕ್ಷಣಿಕರು ಇವುಗಳ ಲಕ್ಷಣವಿಮರ್ಶೆಯಲ್ಲಿ ಅತಿವಿಸ್ತಾರಕ್ಕೆ ಹೋಗದಿರುವುದು ಮಾತ್ರವೇ ಅಲ್ಲದೆ, ಲಕ್ಷ್ಯಗಳ ಪೂರೈಕೆಯಲ್ಲಿ ಹೆಚ್ಚಿನ ಸ್ವಾತಂತ್ರ್ಯವನ್ನೂ ಹೆಚ್ಚಿನ ಆಕರ್ಷಣೆಯನ್ನೂ ತಂದಿರುವ ಗುಣವನ್ನೂ ಮೆರೆದಿದ್ದಾರೆ. ಕವಿಗಳ ಪ್ರತಿಭೆ

ಪಾಂಡಿತ್ಯಗಳು ಏಕೀಭವಿಸುವುದನ್ನು ನಿರೀಕ್ಷಿಸುವ ಯಮಕವೈಚಿತ್ರ್ಯಗಳು ಹಿರಿಯ ಕನ್ನಡ ಕವಿಗಳ ಕೈಯಲ್ಲಿ, ಪಂಪ ನೇಮಿಚಂದ್ರ, ರುದ್ರಭಟ್ಟ ಮೊದಲಾದವರ ಕೈಯಲ್ಲಿ, ಸಹಜಸುಂದರವಾಗಿ ನಿರ್ಮಾಣಗೊಂಡಿವೆ.

ಕನ್ನಡ ಅಲಂಕಾರಗ್ರಂಥಗಳಲ್ಲಿ ವರ್ಣಚಿತ್ರ ಕುರಿತ ಸ್ವಲ್ಪವೇ ಆದ ಲಕ್ಷ್ಯಭಾಗ ಪಾಠದೋಷಗಳಿಂದ ವಿಕ್ಷಿಪ್ತಗೊಂಡಿರುವುದೇ ಹೆಚ್ಚು. ಸಾಹಿತ್ಯದ ಲಕ್ಷ್ಯಗಳೂ ಕಡಿಮೆಯೇ. ವರ್ಣಚಿತ್ರಗಳ ನಿಪ್ರಲಭೇದಗಳಲ್ಲಿ ಕನ್ನಡ ಕವಿಗಳು ಬಳಸಿರುವುದು ತೀರ ಸ್ವಲ್ಪ. ಸ್ತೋತ್ರಸಾಹಿತ್ಯದ ಅಕ್ಷರಮಾಲೆಯಲ್ಲಿ ಮೆಚ್ಚುವಂತಹ ಸ್ವಾರಸ್ಯ ವೇನಿಲ್ಲ. ಇದು ಕವಿಕೌಶಲದ ವೇದಿಕೆಯೂ ಅಲ್ಲ. ಸ್ಥಾನಚಿತ್ರಗಳು ದಿಟವಾಗಿ ಕವಿಕೌಶಲಸ್ಥಾನಚಿತ್ರಗಳೇ. ಆದರೆ ತೆಲುಗಿನಲ್ಲಿ ಹೇಗೋ ಹಾಗೆಯೇ ಕನ್ನಡದಲ್ಲಿ ಕೂಡ ನಿರೋಷ್ಠ್ಯದ ಲಕ್ಷ್ಯಗಳೇ ಹೆಚ್ಚು; ಉಳಿದವು ಕಡಿಮೆ. ಇವುಗಳ ಸ್ವರೂಪವನ್ನು ದಂಡಿ ಮೊದಲಾದವರು ನಿರೂಪಿಸಿದ್ದರೂ, ಸಂಸ್ಕೃತದಲ್ಲಿಯೇ ಪ್ರಯೋಗಗಳ ಬಾಹುಳ್ಯವಿಲ್ಲ. ಈ ವಿಭಾಗದಲ್ಲಿ ಸ್ವರಮಾಲೆ ಗುಣಿತಾಕ್ಷರಿಗಳು ಕನ್ನಡದಲ್ಲಿ ಮೆಚ್ಚುವಂತೆ ಬಳಕೆಯಾಗಿವೆ.

ಮುಂದಿನದು ಶ್ಲೇಷಚಿತ್ರ ಭಾಷಾಚಿತ್ರಗಳ ವಿಚಾರ. ಸಂಸ್ಕೃತದಲ್ಲಿ ಶ್ಲೇಷಚಿತ್ರದ ಗಣ್ಯಪ್ರಕಾರವಾದ ಸಂಧಾನಕಾವ್ಯಗಳು ತಕ್ಕ ವಿಸ್ತಾರ ವೈಭವಗಳೊಂದಿಗೆ ಕಂಡುಬರುತ್ತವೆ. ತೆಲುಗು ಆ ಮೇಲ್ಪಂಕ್ತಿಯಲ್ಲಿ ಮುನ್ನಡೆದಿದೆ. ಕನ್ನಡದಲ್ಲಿ ಸಂಧಾನಲಕ್ಷಣವುಳ್ಳ ರುದ್ರಭಟ್ಟ ಚೆನ್ನವೀರ ಜಂಗಮರಂತಹ ಒಬ್ಬರಿಬ್ಬರು ಕವಿಗಳ ಕೆಲವು ಪದ್ಯಗಳ ಹೊರತು ಒಂದೇ ಒಂದು ಸಂಧಾನಕಾವ್ಯ ರಚಿತವಾಗಿರುವಂತಿಲ್ಲ. ಇದೊಂದು ಲೋಪವೇ ಸರಿ. ಅನೇಕಾರ್ಥವಾಚಿಯ ಪ್ರಯೋಗವೂ ಕ್ವಚಿತ್ಕಾದುದು. ಭಾಷಾಚಿತ್ರಪ್ರಕಾರದಲ್ಲಿ ಶ್ರೀನಿವಾಸಕವಿಯ 'ಕೃಷ್ಣ ನೃಪಜಯೋತ್ಕರ್ಷ' ಒಂದು ವಿಸ್ತಾರವಾದ ಹಾಗೂ ಕುತೂಹಲಕರವಾದ ಉದ್ದಾಮರಚನೆ. ಮುಮ್ಮಡಿ ಕೃಷ್ಣರಾಜರ ಕಾಲದ ಸಾಹಿತ್ಯಪೋಷಣೆಯಲ್ಲಿ ಶ್ರೀನಿವಾಸ ಕವಿ, ರಾಮಕೃಷ್ಣಶಾಸ್ತ್ರಿ ಇಂತಹವರ ಮೂಲಕ ಚಿತ್ರ ಕಾವ್ಯಪದ್ಧತಿಗೆ ಸಲ್ಲುವ ಸ್ಥಾನ ಸಂದಂತಾಗಿದೆ. ಸಂಜ್ಞಾರ್ಥಾದಿಗಳ ಶ್ಲೇಷೆಯ ಭಾಗದಲ್ಲಿ ಕನ್ನಡ ಬಹುಶಃ ಇತರ ಭಾಷೆಗಳಿಗಿಂತ ಮುಂದಿರುವಂತಿದೆ. ತೀರ್ಥಂಕರರು, ಕವಿಗಳು, ಕೃತಿಗಳು, ರಸಗಳು, ಸಂವತ್ಸರಗಳು, ರಾಶಿಗಳು ಹೀಗೆ ಹಲವು ಸಂಜ್ಞೆಗಳನ್ನು ಕವಿಗಳು ನೈಪುಣ್ಯದಿಂದ ಬಳಸಿದ್ದಾರೆ.

ಗರ್ಭಕವಿತ್ವ ಸಂಸ್ಕೃತದಲ್ಲಿ ತೀರ ಕ್ವಚಿತ್ಕಾದುದು. ತೆಲುಗಿನಲ್ಲಿ ಅದರ ವಿಜೃಂಭಣೆ ಹೆಚ್ಚು. ಕನ್ನಡ ದಲ್ಲಿ ಚಂದ್ರರಾಜ, ಸಿದ್ಧನಂಜೇಶ, ವೆಂಕಟರಮಣಯ್ಯ ಈ ಕೆಲವರ ರಚನೆಗಳಲ್ಲಿ ಸ್ವಲ್ಪಮಟ್ಟಿಗೆ ಅದನ್ನು ಕಾಣ ಬಹುದು. ಆದರೆ ಅದು ವಿಶಿಷ್ಟ ಚಿತ್ರಸಂಪ್ರದಾಯವಾಗಿ ಇಲ್ಲಿ ಬೆಳೆಯಲಿಲ್ಲ.

ಸಂಸ್ಕೃತ ಭಾಷೆಯಲ್ಲಿ ಗೂಢಚಿತ್ರಗಳ ಲಕ್ಷಣವಿಮರ್ಶೆ, ಲಕ್ಷ್ಯಭಾಗಗಳಿಗೆ ಸಾಕಷ್ಟು ಅವಕಾಶ ದೊರೆತಿದೆ. 'ಸುಭಾಷಿತರತ್ನಭಾಂಡಾಗಾರ' ೧೬ ಬಗೆಯ ಗೂಢಗಳನ್ನು ಸಲಕ್ಷ್ಯವಾಗಿ ಗುರುತಿಸಿದೆ. ಶ್ರೀನಿವಾಸ ಕವಿ, ಚಾ. ರಾಮಶಾಸ್ತ್ರಿಗಳ ಮೂಲಕ ಈ ವಿಭಾಗಕ್ಕೆ ಮೈಸೂರಿನ ಕಾಣಿಕೆ ಸಂದಿದೆ. ಆದರೆ ಇದು ಸಂಸ್ಕೃತದಲ್ಲಿ. ಕನ್ನಡ ಆಲಂಕಾರಿಕರು ಕೆಲವು ಭೇದಗಳನ್ನು ಪರಿಚಯಿಸಿದ್ದಾರೆ. ಆದರೆ ಲಕ್ಷ್ಯಗಳ ಕೊರತೆಯುಂಟು. ಸಂಜ್ಞಾರ್ಥಾದಿಗಳ ಗೂಢಗಳ ಮೂಲಕ ಈ ಕೊರತೆಯನ್ನು ಕನ್ನಡ ಸಾಹಿತ್ಯ ತುಂಬಿಕೊಂಡಿದೆ.

ಪ್ರಹೇಳಿಕೆ ಚಿತ್ರಕಾವ್ಯಪ್ರಕಾರಗಳಲ್ಲಿ ಬಹು ಪ್ರಾಚೀನವೂ ಆಕರ್ಷಕವೂ ಆಢ್ಯವೂ ಆದ ಪ್ರಕಾರ ವೆಂಬುದು ನಿಶ್ಚಯ. ಸಂಸ್ಕೃತ ಭಾಷೆಯ ಲಕ್ಷಣಗ್ರಂಥಗಳಲ್ಲಿ ಇದರ ಪ್ರಭೇದಗಳ ಸಮೀಚೀನವಾದ ವಿಮರ್ಶೆ ಬಂದಿದೆ. ವಿಷ್ಣುಧರ್ಮೋತ್ತರ ಪುರಾಣವೂ ಇದನ್ನು ಪುರಸ್ಕರಿಸಿದೆ. ಕನ್ನಡ ಲಕ್ಷಣಗ್ರಂಥಗಳು ಸಂಸ್ಕೃತ ಮೂಲಗಳನ್ನು ಹೆಚ್ಚೇನೂ ಆಶ್ರಯಿಸದೆ, ಕನ್ನಡತನ ಎದ್ದು ತೋರುವಂತೆ ತಮ್ಮವೇ ಹಾದಿಗಳಲ್ಲಿ ಸಾಗಿರು ವುದನ್ನಿಲ್ಲಿ ಕಾಣಬಹುದು. ಕನ್ನಡ ಅಲಂಕಾರಗ್ರಂಥಗಳು ಮೆರೆದಿರುವ ಸ್ವೋಪಜ್ಞತೆಯನ್ನು ಇಂತಹ ಕಡೆ ಗಳಲ್ಲಿಯೇ ನಾವು ಕಾಣಬೇಕು. ಕವಿರಾ.ದ ಮೇಲ್ಪಂಕ್ತಿ ಕಾವ್ಯಾವ.ದಲ್ಲಿ ಅನುಸರಿಸಲ್ಪಟ್ಟಿರುವುದೂ ವಿದಿತ. ಉಳಿದ ಗ್ರಂಥಗಳಲ್ಲಿಯೂ ಸ್ವಲ್ಪಮಟ್ಟಿನ ಪ್ರಸ್ತಾಪವುಂಟು. 'ನರಪತಿಚರಿತ' ಒಂದು ಅಪವಾದ.

ಕನ್ನಡ ಭಾಷೆಯಲ್ಲಿ ಚದುರ್, ಜಾಣ್, ಬೆಡಂಗು, ಬೆಡಗು, ಪದಿರ್, ಮುಂಡಿಗೆ, ಪ್ರಹೇಳಿಕೆ, ಪೇಳಿಕೆ, ಹೇಳಿಕೆ, ಒಗಂಟು, ಒಗಟು ಇಂತಹ ಮಾತುಗಳು ಈ ಪ್ರಕಾರದ ಬೇರೆಬೇರೆ ರೂಪಗಳನ್ನೂ ಘಟ್ಟಗಳನ್ನೂ ತೋರಿಸುವ ಸಂಜ್ಞೆಗಳಾಗಿವೆ. ಬೆಡಗಿನ ವಚನಗಳೂ ಮುಂಡಿಗೆಯ ಪದಗಳೂ ಕ್ರಮವಾಗಿ ವಚನ ಮತ್ತು ದಾಸ ಸಾಹಿತ್ಯಗಳಲ್ಲಿ ಪ್ರಭಾವಶಾಲಿಯಾಗಿ ಬೆಳೆದು, ಆಯಾ ಸಾಹಿತ್ಯಭಾಗಕ್ಕೆ ತಂದುಕೊಟ್ಟ ವೈಶಿಷ್ಟ್ಯ ಮಹತ್ತ್ವಗಳು ಮನನೀಯವಾದವು. ಪ್ರಹೇಳಿಕೆ, ಪೇಳಿಕೆ, ಹೇಳಿಕೆಗಳು ಹಾಗೂ ಒಗಂಟು, ಒಗಟುಗಳು ಈ ವಿಶಿಷ್ಟ ಚಿತ್ರ ಪ್ರಕಾರದ ಪರ್ಯಾಯಶಬ್ದಗಳಾದರೆ, ಚದುರ್, ಜಾಣ್, ಪದಿರ್ ಇವು ಚತುರೋಕ್ತಿದ್ಯೋತಕವಾದ ಸಾಮಾನ್ಯ ಸಂಜ್ಞೆಗಳೆಂದು ತೋರುವುದು. ಈ ಸಂಜ್ಞೆಗಳೆಲ್ಲವೂ ಕನ್ನಡಿಗರ ಜನಜೀವನದಲ್ಲಿ ಒಗಟು ಬಹು ಹಿಂದಿನಿಂದಲೇ ಹಬ್ಬಿ ಹರಡಿಕೊಂಡಿರುವುದರ ಸಾಕ್ಷಿಗಳಾಗಿವೆ.

ಕನ್ನಡದ ಮಾರ್ಗಕವಿಗಳಲ್ಲಿ ಪ್ರಹೇಳಿಕೆಯ ಲಕ್ಷ್ಯಗಳು ತುಂಬ ವಿರಳವಾಗಿ ಮಾತ್ರ ಕಂಡುಬಂದಿವೆ. ದೇಶೀಯತೆಯ ಅಂಶಗಳು ಮಾರ್ಗಸಾಹಿತ್ಯದಲ್ಲಿ ಯಾವಾಗಲೂ ವಿರಳವೇ. ನಡುಗನ್ನಡದ ಕಾಲದಲ್ಲಿ ಶಾಂತ ಕವಿ, ರೇವಣಸಿದ್ಧ, ಬಸವ ಕವಿ ಮೊದಲಾದವರ ರಚನೆಗಳಲ್ಲಿ ತೆಕ್ಕೆತೆಕ್ಕೆಯಾಗಿ ಇವನ್ನು ಕಾಣಬಹುದು. ಕುತೂಹಲಕರವಾದವೆಂದರೆ ಬೆಡಗಿನ ವಚನಗಳು. ಬಹು ಮಂದಿ ವಚನಕಾರರು ಇಂತಹವನ್ನು ನುಡಿದಿದ್ದಾರೆ. ಸಿಂಗಳದ ಸಿದ್ಧಬಸವರಾಜನಂತಹ ಟೀಕಾಕಾರರ ಉಪಕಾರದಿಂದಾಗಿ ಇವುಗಳ ಆಶಯು ನಮಗೆ ತಿಳಿಯುವಂತಾಗಿದೆ. ಅವುಗಳ ಪ್ರಾಮಾಣ್ಯವನ್ನು ಸಿದ್ಧಪಡಿಸುವ ಶೋಧನೆಗಳು ಮಾತ್ರ ಮುಂದುವರಿಯಬೇಕಾಗಿವೆ. ಹೀಗೆಯೇ ಮುಂಡಿಗೆಯ ಪದಗಳನ್ನು ಕನಕದಾಸರೂ ಇತರ ಕೆಲವರು ಹರಿದಾಸರೂ ಹಾಡಿದ್ದಾರೆ. ಇವುಗಳ ಗೂಢವಾದ ಆಶಯವನ್ನು ಬಿಡಿಸಿ ವಿವರಿಸುವುದಕ್ಕೆ ನೆರವಾಗುವ ಪ್ರಾಚೀನ ವ್ಯಾಖ್ಯಾನಗಳಾವುವೂ ರಚಿತವಾಗಿರುವಂತೆ ತೋರುವುದಿಲ್ಲ. ಹೀಗಾಗಿ ಆಧುನಿಕರ ಪ್ರಯತ್ನಗಳು ಭಿನ್ನಾಭಿಪ್ರಾಯಗಳಿಗೆ ಎಡೆಮಾಡಿವೆ. ಹೆಚ್ಚು ಸರಸವೂ ಸಹಜವೂ ಆದ ರಚನೆಗಳೆಂದರೆ ಜನಪದ ಸಾಹಿತ್ಯದ ಹಾಗೂ ಸರ್ವಜ್ಞನ ತ್ರಿಪದಿಯ ಒಗಟುಗಳು. ಸಂಸ್ಕೃತದ ಕೆಲವೇ ಕನ್ನಡ ಲಕ್ಷ್ಯಗಳ ವಿಚಾರವಿರಲಿ, ಪಾರಿಹಾರಿಕೆಯ ಲಕ್ಷ್ಯಗಳನ್ನು ಕನ್ನಡ ಕವಿಗಳು ಬಹುವಾಗಿ ಆದರಿಸಿರುವುದು ಕಾಣುತ್ತದೆ. ಕಾವ್ಯದ ಹರವಿನಲ್ಲಿ ಚೆದರಿರುವ ಲಕ್ಷ್ಯಗಳೂ ಪ್ರತ್ಯೇಕ ಗ್ರಂಥಗಳಲ್ಲಿ ಬಂದವೂ ಬಹುಸಂಖ್ಯೆಯಲ್ಲಿವೆ. ದಾಸರಪದಗಳಲ್ಲಿಯವು ಓದುಗರ ಬುದ್ಧಿಗೆ ಸವಾಲುಗಳಾಗಿ, ಅವರ ಪುರಾಣೇತಿಹಾಸಗಳ ತಿಳಿವಳಿಕೆಗೆ ನಿಕಷಗಳಾಗಿವೆ. ಭಕ್ತಕವಿಗಳು ಈ ಬುದ್ಧಿವ್ಯಾಪಾರಪ್ರಧಾನವಾದ ರಚನೆಗಳನ್ನು ಒಂದು ಲೀಲೆಯೆಂಬಂತೆ ನಿರ್ವಹಿಸಿರುವುದಂತೂ ಕುತೂಹಲಕರ. 'ಕಂತಿ–ಪಂಪನ ಸಮಸ್ಯೆಗಳು', 'ವಾವೆಯ ಪದಗಳು', 'ರಾತ್ರಿಯ ನಲ್ಲನ ಪದ್ಯಗಳು', 'ಚಿತ್ರಶತಕದ ಸಾಂಗತ್ಯ', 'ಚೌಪದದ ಒಗಟುಗಳು' ಇವೆಲ್ಲ ಗಮನಾರ್ಹವಾದ ಪ್ರತ್ಯೇಕ ಪ್ರಹೇಲಿಕಾಗ್ರಂಥಗಳಾಗಿದ್ದು, ಈ ವಿಭಾಗದ ಸಮೃದ್ಧಿಯನ್ನು ತಕ್ಕಮಟ್ಟಿಗೆ ಇವು ತೋರಿಸುತ್ತವೆ. ಈ ರಚನೆಗಳ ಜೊತೆಗೆ ಸರ್ವಜ್ಞನ ತ್ರಿಪದಿಗಳ 'ಬೆಡಗಿನ ಪದ್ಧತಿ'ಯ ರಚನೆಗಳನ್ನೂ ಕೂಡಿಸಿಕೊಳ್ಳಬೇಕು.

ಪ್ರಹೇಳಿಕೆಯ ಒಂದು ದೊಡ್ಡ ಪ್ರಕಾರವಾಗಿರುವ ಪ್ರಶ್ನಗಳು, ಪ್ರಶ್ನೋತ್ತರಗಳು ಸಂಸ್ಕೃತಸಾಹಿತ್ಯದಲ್ಲಿ ವಿಸ್ತಾರವಾಗಿಯೇ ಲಕ್ಷಣವಿಮರ್ಶೆ ಪ್ರಯೋಗಬಾಹುಳ್ಯವುಳ್ಳವಾಗಿವೆ. ಕನ್ನಡದ ಅಲಂಕಾರಗ್ರಂಥಗಳಲ್ಲಿ ಕೊಂಚಮಟ್ಟಿನ ಪ್ರಸ್ತಾವವಿದ್ದರೂ ಇವಕ್ಕೆ ತಕ್ಕ ಸ್ಥಾನಮಾನಗಳು ಸಂದಂತೆ ತೋರುವುದಿಲ್ಲ. ಕನ್ನಡನಾಡಿನವರೇ ಆದ ಜಿನಸೇನಾಚಾರ್ಯರೂ ಉಭಯಭಾಷಾಕವಿಯಾದ ಷಡಕ್ಷರಿಯೂ ಸಂಸ್ಕೃತದ ಪ್ರಯೋಗಸಂಪತ್ತಿಗೆ ತಮ್ಮ ಕಾಣಿಕೆಯನ್ನು ಸಲ್ಲಿಸಿದ್ದಾರೆ. ಕನ್ನಡದಲ್ಲಿ ಕ್ಷೀಣವಾದ ಪ್ರಯತ್ನಗಳಷ್ಟೇ ಕಾಣುವುದು. ಸಮಸ್ಯಾಪೂರಣದ ಭಾಗವೂ ಅಷ್ಟೇ. 'ಕಂತಿ–ಪಂಪನ ಸಮಸ್ಯೆಗಳು' ಒಂದೇ ಎದ್ದು ತೋರುವ ಕೃತಿ.

ಗತಿಚಿತ್ರಗಳ ವಿಚಾರ ಹೇಗೆ? ಇವುಗಳು ಸಂಸ್ಕೃತ ಲಕ್ಷಣಗ್ರಂಥಗಳಲ್ಲಿಯೂ ಭಾರವಿ ಮಾಘ ಮೊದಲಾದವರ ಕಾವ್ಯಗ್ರಂಥಗಳಲ್ಲಿಯೂ ತಕ್ಕ ವಿಸ್ತಾರ ವೈಭವಗಳೊಂದಿಗೆ ನಿರೂಪಿತವಾಗಿವೆ. ಹಾಗೆ ನೋಡಿದರೆ ಗತಿಚಿತ್ರಗಳನ್ನು ಕೆಲಮಟ್ಟಿಗಾದರೂ ಬಳಸದ ಸಂಸ್ಕೃತ ವಿದ್ವತ್ಕವಿಯೇ ಇಲ್ಲ. ಕರ್ನಾಟಕದ ಕೆಲವು ಸಂಸ್ಕೃತ ಶಾಸನಗಳೂ ಅವನ್ನು ಒಳಕೊಂಡಿವೆ. ಕವಿರಾ., ಕಾವ್ಯಾವ.ಗಳಲ್ಲಿ ಪೂರ್ವಸೂರಿಗಳ ರಚನೆಗಳ ಮಾದರಿಗಳೂ

ಇವೆ, ಸ್ವಸಂಯೋಜನಗಳೂ ಇವೆ. 'ಅಪ್ರತಿಮವೀರಚರಿತ', 'ನರಪತಿಚರಿತ'ಗಳಲ್ಲಿ ಇವುಗಳ ಪ್ರಸ್ತಾವವೇ ಇಲ್ಲದಿರುವುದು ಆಶ್ಚರ್ಯಕರ. ಕನ್ನಡ ಸಾಹಿತ್ಯದಲ್ಲಿ ಲಕ್ಷ್ಯಗಳು ಅಲ್ಲೊಂದು ಇಲ್ಲೊಂದು ಮಾತ್ರವೇ. ಇವಾದರೂ ಕೆಲವು ಪ್ರಭೇದಗಳಿಗೇ ಸೀಮಿತ. ಚಂದ್ರರಾಜ, ಆಚಣ್ಣ, ಪದ್ಮಣಾಂಕ, ಷಡಕ್ಷರಿ ಇವರು ಗತಿಚಿತ್ರ ಭೇದಗಳನ್ನು ಬಳಸಿದ ಕವಿಗಳಲ್ಲಿ ಗಮನಾರ್ಹರು.

ಆಕಾರ ಮತ್ತು ಬಂಧಚಿತ್ರಗಳು ಚಿತ್ರಕಾವ್ಯದ ಒಂದು ಆಕರ್ಷಣೆ. ಸಂಸ್ಕೃತದಲ್ಲಿ ರುದ್ರಟ, ಭೋಜ, ಹೇಮಚಂದ್ರ, ಅಜಿತಸೇನ ಈ ಕೆಲವರೂ ಅಗ್ನಿಪುರಾಣಕರ್ತೃವೂ ಇವಕ್ಕೆ ವಿಸ್ತಾರವಾಗಿ ಸ್ಥಾನ ದೊರಕಿಸಿದ್ದಾರೆ. ಆ ಸಾಹಿತ್ಯದಲ್ಲಿ ೬ನೆಯ ಶತಮಾನದಿಂದ ಈಚೆಗೆ ಕುಮಾರದಾಸ, ಮಾಘ, ಶಿವಸ್ವಾಮಿ, ರತ್ನಾಕರ, ವೇದಾಂತ ದೇಶಿಕ ಮೊದಲಾದವರು ವೈವಿಧ್ಯಮಯ ಪ್ರಯೋಗಗಳನ್ನು ಮಾಡಿದ್ದಾರೆ. ಸ್ವತಂತ್ರ ಗ್ರಂಥಗಳಲ್ಲಿ 'ಚಿತ್ರಕಾವ್ಯ ಕೌತುಕ' ಗಣ್ಯವಾದ್ದು; 'ಚಿತ್ರಬಂಧಪತ್ರಿಕಾ'ದ (೧೮೭೨) ಕಲಾತ್ಮಕತೆಯೂ ನೆನೆಯಬೇಕಾದ್ದು. ಕನ್ನಡದಲ್ಲಿ ಕವಿರಾ., ಕಾವ್ಯಾವ.ಗಳಲ್ಲಿಯೂ ''ನರಪತಿಚರಿತ'ದಲ್ಲಿಯೂ ಆಯ್ದ ಕೆಲವು ಬಂಧಚಿತ್ರಗಳ ಪ್ರಸ್ತಾವವುಂಟು. ಸಾಹಿತ್ಯಗ್ರಂಥಗಳಲ್ಲಿ 'ಮದನತಿಲಕ'ದ ಬಂಧಗಳ ವೈವಿಧ್ಯ ಗಮನಾರ್ಹವಾದ್ದು. ಆದರೆ 'ಸಿರಿಭೂವಲಯ' ಇನ್ನೂ ಹೆಚ್ಚು ಗಮನಾರ್ಹವಾದ ಆಕರವಾಗಿರುವಂತೆ ತೋರುವುದು. ಇದರ ಪ್ರಕಟನೆ ಪೂರ್ಣಗೊಂಡು, ವಿವರಗಳು ಸಮಗ್ರವಾಗಿ ಶೋಧಿತವಾದಾಗ ಈ ವಿಭಾಗದ ದೊಡ್ಡ ಸಾಧನೆಯನ್ನು ಇಲ್ಲಿ ಕಾಣುವುದು ಸಾಧ್ಯವಾಗಬಹುದು. 'ಗಯೋಪಾಖ್ಯಾನ'ದಲ್ಲಿಯೂ ಹೊಸ ಬಂಧಗಳನ್ನು ಕಲ್ಪಿಸಿರುವುದು ಮೆಚ್ಚತಕ್ಕುದಾಗಿದೆ; ಆದರೆ ಅಳವಡಿಕೆ ಹೇಗೆಂಬುದನ್ನು ಇನ್ನೂ ಕಂಡುಕೊಳ್ಳಬೇಕಾಗಿದೆ. ಸಂಸ್ಕೃತ ಆಲಂಕಾರಿಕರ ಹಾಗೂ ಕವಿಗಳ ಪ್ರಯೋಗಗಳಿಗೆ ಸಂವಾದಿಯಾದವು ಮಾತ್ರವೇ ಅಲ್ಲದೆ, ಸ್ವತಂತ್ರವಾದ ನೂತನಬಂಧಗಳನ್ನು ಸಹ ಕನ್ನಡ ಕವಿಗಳು ಪ್ರಯೋಗಿಸಿರುವುದು ಅವರ ಶಕ್ತಿ ಕೌಶಲಗಳಿಗೆ ನಿದರ್ಶಕವಾಗಿದೆ.

ಒಟ್ಟಾಗಿ ನೋಡಿದರೆ, ಕನ್ನಡ ಚಿತ್ರಕಾವ್ಯಪದ್ಧತಿಯಲ್ಲಿ ಪ್ರಹೇಳಿಕೆಗಳದು ಅತ್ಯುಚ್ಚಸ್ಥಾನ; ಉಳಿದ ಪ್ರಕಾರಗಳದು ರುಚಿಭೇದಕ್ಕೆ ಅನುಸಾರವಾಗಿ ಗೌಣಸ್ಥಾನ. ಈ ಪದ್ಧತಿಗೆ ನಡುಗನ್ನಡದ ಕಾಲವೇ ಉಚ್ಛ್ರಾಯದ ಕಾಲ. ಕಾವ್ಯಪರಂಪರೆಯಲ್ಲಿ ಪ್ರೀತಿಯುಳ್ಳವರು ಈ ಪದ್ಧತಿಯ ಮಾದರಿಗಳನ್ನು ಗುರುತಿಸಿ ಮೆಚ್ಚುವುದಾಗಬೇಕು.

ಅನುಬಂಧಗಳು

೧/ಆಧಾರಸಾಹಿತ್ಯ ಸಂಗ್ರಹಸೂಚಿ

೧

ಅಲಂಕಾರ ಚಿಂತಾಮಣಿ : ಅಜಿತಸೇನ, ಸಂ. ಸಖಾರಾಮ ನೇಮಿಚಂದ ದೋಸಿ, ಜೈನೇಂದ್ರ ಮುದ್ರಣಾಲಯ, ಕೊಲ್ಲಾಪುರ, ೧೯೦೭.

ಕಾವ್ಯಾದರ್ಶ : ದಂಡಿ, ಸಂ. ರಂಗಾಚಾರ್ಯ ರಡ್ಡಿ ಶಾಸ್ತ್ರಿ, ಭಂಡಾರ್ಕರ್ ಓರಿಯೆಂಟಲ್ ರಿಸರ್ಚ್ ಇನ್ಸ್ಟಿಟ್ಯೂಟ್, ಪೂನಾ, ೧೯೩೮; ಸಂ. ಅನಂತಲಾಲ್ ಠಾಕೂರ್, ಉಪೇಂದ್ರ ಝಾ, ಮಿಥಿಲಾ ವಿದ್ಯಾಪೀಠ, ೧೯೫೭.

ಕಾವ್ಯಾಲಂಕಾರ : ರುದ್ರಟ, ಸಂ. ಪಂಡಿತ ದುರ್ಗಾಪ್ರಸಾದ, ಕಾಶೀನಾಥ ಪಾಂಡುರಂಗ ಪರಬ, ನಿರ್ಣಯ ಸಾಗರ ಪ್ರೆಸ್, ಮುಂಬಯಿ, ೧೮೮೬, ೧೯೨೮.

ವಾಗ್ಭಟಾಲಂಕಾರ : ವಾಗ್ಭಟ, ಸಂ. ಸತ್ಯವ್ರತಸಿಂಹ, ಚೌಖಂಭಾ ವಿದ್ಯಾಭವನ, ಚೌಕ್, ವಾರಣಾಸಿ-೧, ೧೯೫೭.

ಸರಸ್ವತೀ ಕಂಠಾಭರಣ : ಭೋಜದೇವ, ಸಂ. ಪಂಡಿತ ಕೇದಾರನಾಥ ಶರ್ಮ, ವಾಸುದೇವ ಲಕ್ಷ್ಮಣಶಾಸ್ತ್ರೀ ಪಣಶೀಕರ್, ನಿರ್ಣಯ ಸಾಗರ ಪ್ರೆಸ್, ಮುಂಬಯಿ, ೧೯೩೪.

೨

ಕಪ್ಫಿಣಾಭ್ಯುದಯ : ಶಿವಸ್ವಾಮಿ, ಸಂ. ಗೌರೀಶಂಕರ್, ಪಂಜಾಬ್ ವಿಶ್ವವಿದ್ಯಾನಿಲಯ, ಲಾಹೋರ್, ೧೯೩೭.

ಕಿರಾತಾರ್ಜುನೀಯ : ಭಾರವಿ, ಸಂ. ನಾರಾಯಣ ರಾಮ ಆಚಾರ್ಯ, ನಿರ್ಣಯ ಸಾಗರ ಪ್ರೆಸ್, ಮುಂಬಯಿ, ೧೯೫೪.

ಚಿತ್ರಕಾವ್ಯ ಕೌತುಕ : ಚಿತ್ರಕವಿಪಂಡಿತ ರಾಮರೂಪ ಪಾಠಕ್, ಮೋತೀಲಾಲ್ ಬನಾರಸೀದಾಸ್, ವಾರಣಾಸೀ, ೧೯೬೫.

ಧರ್ಮಶರ್ಮಾಭ್ಯುದಯ : ಹರಿಚಂದ್ರ, ಸಂ. ಪಂಡಿತ ದುರ್ಗಾಪ್ರಸಾದ, ಕಾಶೀನಾಥ ಪಾಂಡುರಂಗ ಪರಬ, ನಿರ್ಣಯ ಸಾಗರ ಪ್ರೆಸ್, ಮುಂಬಯಿ, ೧೮೮೮.

ನರನಾರಾಯಣಾನಂದ ಮಹಾಕಾವ್ಯ : ವಸ್ತುಪಾಲ, ಸಂ. ಸಿ. ಡಿ. ದಲಾಲ್, ಆರ್. ಅನಂತಕೃಷ್ಣ ಶಾಸ್ತ್ರಿ, ಸೆಂಟ್ರಲ್ ಲೈಬ್ರರಿ, ಬರೋಡಾ, ೧೯೧೬.

ಪಾದುಕಾಸಹಸ್ರ : ವೇದಾಂತ ದೇಶಿಕ, ಸಂ. ವಿದ್ವಾನ್ ಹ. ಗೋಪಾಲಾಚಾರ್ಯ, ವಾಣೀವಿಲಾಸ ಮೊಹಲ್ಲ, ಮೈಸೂರು, ೧೯೬೮.

ಮಹಾಪುರಾಣ : ಜಿನಸೇನ ಗುಣಭದ್ರಾಚಾರ್ಯರು, ಅನು. ಎ. ಶಾಂತಿರಾಜ ಶಾಸ್ತ್ರೀ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೧.

ರಾಘವ ನೈಷಧೀಯ : ಹರದತ್ತ ಸೂರಿ, ಕಾವ್ಯಮಾಲಾ-೫೭, ನಿರ್ಣಯ ಸಾಗರ ಪ್ರೆಸ್, ಮುಂಬಯಿ, ೧೮೯೬.

ರಾಘವ ಪಾಂಡವೀಯ : ಕವಿರಾಜ, ಕಾವ್ಯಮಾಲಾ-೬೨, ನಿರ್ಣಯಸಾಗರ ಪ್ರೆಸ್, ಮುಂಬಯಿ, ೧೮೯೭.

ರಾಘವ ಯಾದವೀಯ : ವೇಂಕಟಾಚಾರ್ಯ, ವಿದ್ಯಾತರಂಗಿಣೀ ಮುದ್ರಾಕ್ಷರ ಶಾಲಾ, ಮೈಸೂರು, ೧೮೯೦.

ಶಿವತತ್ತ್ವರತ್ನಾಕರ : ಕೆಳದಿ ಬಸವರಾಜ, ಸಂ. ಆರ್. ರಾಮಶಾಸ್ತ್ರೀ, ಪ್ರಾಚ್ಯವಿದ್ಯಾ ಸಂಶೋಧನಾಲಯ, ಮೈಸೂರು, ೧೯೬೯.

ಶಿಶುಪಾಲವಧ : ಮಾಘ, ಸಂ. ಪಂಡಿತ ದುರ್ಗಾಪ್ರಸಾದ, ನಿರ್ಣಯ ಸಾಗರ ಪ್ರೆಸ್, ಮುಂಬಯಿ-೨, ೧೯೫೭; ಸಂ. ಹರಗೋವಿಂದ ಶಾಸ್ತ್ರೀ, ಚೌಖಂಭಾ ವಿದ್ಯಾಭವನ, ವಾರಣಾಸೀ, ೧೯೫೫.

ಶ್ರೀಕೃಷ್ಣನೃಪಜಯೋತ್ಕರ್ಷ (ಭುವನಪ್ರದೀಪಿಕಾದಿ ಗ್ರಂಥಗಳೊಂದಿಗೆ) : ಶ್ರೀನಿವಾಸ ಕವಿಸಾರ್ವಭೌಮ, ಅರಮನೆಯ ಕಲ್ಲಚ್ಚಿನ ಮುದ್ರಣ, ೧೮೪೨.

ಶ್ರೀಶಂಕರ ಭಗವತ್ಪಾದಾಚಾರ್ಯಕೃತ ಪ್ರಶ್ನೋತ್ತರ ರತ್ನಮಾಲಿಕಾ : ಅನು. ವೈ. ಪ್ರಣತಾರ್ತಿಹರ ಶಾಸ್ತ್ರೀ, ಶೇಷಾದ್ರಿ ಪ್ರೆಸ್, ಮೈಸೂರು, ೧೯೬೨.

ಸೀತಾರಾವಣ ಸಂವಾದಝರೀ (ಭಾಗ ೧) : ಚಾಮರಾಜನಗರಂ ರಾಮಶಾಸ್ತ್ರೀ, ಗೌವರ್ನಮೆಂಟ್ ಬ್ರ್ಯಾಂಚ್ ಪ್ರೆಸ್, ಮೈಸೂರು, ೧೯೦೫.

ಸುಭಾಷಿತ ರತ್ನಭಾಂಡಾಗಾರ : ಸಂ. ನಾರಾಯಣ ರಾಮ ಆಚಾರ್ಯ, ನಿರ್ಣಯಸಾಗರ ಪ್ರೆಸ್, ಮುಂಬಯಿ, ೧೯೫೨.

ಹರವಿಜಯ : ರಾಜಾನಕ ರತ್ನಾಕರ, ಸಂ. ಪಂಡಿತ ದುರ್ಗಾಪ್ರಸಾದ, ಕಾಶೀನಾಥ ಪಾಂಡುರಂಗ ಪರಬ, ಚೌಖಂಭಾ ಸಂಸ್ಕೃತ ಸಂಸ್ಥಾನ, ವಾರಣಾಸೀ, ೧೯೮೨.

೩

ಆನಂದವರ್ಧನನ ಕಾವ್ಯಮೀಮಾಂಸೆ : ಡಾ. ಕೆ. ಕೃಷ್ಣಮೂರ್ತಿ, ಶಾರದಾ ಮಂದಿರ, ಮೈಸೂರು, ೧೯೬೯.

ಕನ್ನಡ ಔಚಿತ್ಯವಿಚಾರಚರ್ಚೆ : ಡಾ. ಕೆ. ಕೃಷ್ಣಮೂರ್ತಿ, ಶಾರದಾ ಮಂದಿರ, ಮೈಸೂರು, ೧೯೬೦.

ಕನ್ನಡ ಕಾವ್ಯಪ್ರಕಾಶ : ಡಾ. ಕೆ. ಕೃಷ್ಣಮೂರ್ತಿ, ಶಾರದಾ ಮಂದಿರ, ಮೈಸೂರು, ೧೯೭೩.

ಕನ್ನಡ ಕಾವ್ಯಮೀಮಾಂಸೆ : ಡಾ. ಕೆ. ಕೃಷ್ಣಮೂರ್ತಿ, ಶಾರದಾ ಮಂದಿರ, ಮೈಸೂರು, ೧೯೬೯.

ಕನ್ನಡ ಕಾವ್ಯಾಲಂಕಾರ ಮತ್ತು ಕನ್ನಡ ಕಾವ್ಯಾದರ್ಶ : ಡಾ. ಕೆ. ಕೃಷ್ಣಮೂರ್ತಿ, ಶಾರದಾಮಂದಿರ, ಮೈಸೂರು, ೧೯೭೫.

ಕನ್ನಡ ಕಾವ್ಯಾಲಂಕಾರ ಸೂತ್ರವೃತ್ತಿ : ಡಾ. ಕೆ. ಕೃಷ್ಣಮೂರ್ತಿ, ಶಾರದಾ ಮಂದಿರ, ಮೈಸೂರು, ೧೯೬೭.

ಕವಿಕಂಠಾಭರಣ : ಡಾ. ಕೆ. ಕೃಷ್ಣಮೂರ್ತಿ, ಶಾರದಾ ಮಂದಿರ, ಮೈಸೂರು, ೧೯೭೭.

ಕುವಲಯಾನಂದ : ಡಾ. ಟಿ. ಜಿ. ಸಿದ್ಧಪ್ಪಾರಾಧ್ಯ, ಲೇಖಕರು, ಚಾಮರಾಜ ಮೊಹಲ್ಲ, ಮೈಸೂರು, ೧೯೬೭.

ಸಾಹಿತ್ಯದರ್ಪಣ : ಡಾ. ಟಿ. ಜಿ. ಸಿದ್ಧಪ್ಪಾರಾಧ್ಯ, ಲೇಖಕರು, ಮೈಸೂರು, ೧೯೬೭.

೪

ಅಪ್ರತಿಮವೀರ ಚರಿತಂ : ತಿರುಮಲಾರ್ಯ, ಸಂ. ಎಸ್.ಜಿ. ನರಸಿಂಹಾಚಾರ್ಯ, ಮಂ.ಆ. ರಾಮಾನುಜಯ್ಯಂಗಾರ್ಯ, ಕರ್ಣಾಟಕ ಕಾವ್ಯಮಂಜರಿ, ಮೈಸೂರು, ೧೮೯೩.

ಉದಯಾದಿತ್ಯಾಲಂಕಾರಂ : ಉದಯಾದಿತ್ಯ, ಸಂ. ಎಸ್. ಜಿ. ನರಸಿಂಹಾಚಾರ್ಯ, ಮಂ. ಆ. ರಾಮಾನುಜಯ್ಯಂಗಾರ್ಯ, ಕರ್ಣಾಟಕ ಕಾವ್ಯಮಂಜರಿ, ಮೈಸೂರು, ೧೮೯೪; ಸಂ. ಎಂ. ವಿ. ಸೀತಾರಾಮಯ್ಯ, ಡಿ. ವಿ. ಕೆ. ಮೂರ್ತಿ, ಕೃಷ್ಣಮೂರ್ತಿಪುರಂ, ಮೈಸೂರು-೪, ೧೯೭೦.

ಕನ್ನಡ ಕುವಲಯಾನಂದ : ಜಾಯಗೌಂಡ, ಸಂ. ಶಿ. ಚೆ. ನಂದೀಮಠ, ಸಂಪಾದಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೩, ೧೯೭೦.

ಕರ್ಣಾಟಕ ಚಂದ್ರಾಲೋಕ : ಅಕ್ಕಲೇ ಲಕ್ಷ್ಮೀನರಸಿಂಹ ಶಾಸ್ತ್ರಿ, ಕರ್ಣಾಟಕ ಗ್ರಂಥಮಾಲೆ, ಸಂ. ೪೨, ಜಿ. ಟಿ. ಎ. ಪ್ರೆಸ್, ಮೈಸೂರು, ೧೯೦೫.

ಕರ್ಣಾಟ ಛಂದೋಲಂಕಾರ ಸಾಹಿತ್ಯಲಕ್ಷಣ ಸಂಗ್ರಹವು : ಚಾವಲಿ ರಾಮಸ್ವಾಮಿ ಶಾಸ್ತ್ರಿ, ಗ್ರಂಥರತ್ನಾಕರ ಮುದ್ರಾಕ್ಷರಶಾಲೆ, ಮದರಾಸು, ೧೮೮೫.

ಕವಿರಾಜಮಾರ್ಗಂ : ನೃಪತುಂಗ, ಸಂ. ಕೆ. ಬಿ. ಪಾಠಕ್, ಮೈಸೂರು ಗವರ್ನಮೆಂಟ್ ಪ್ರೆಸ್, ಬೆಂಗಳೂರು, ೧೮೯೮; ಸಂ. ಎ. ವೆಂಕಟರಾವ್, ಎಚ್. ಶೇಷ ಅಯ್ಯಂಗಾರ್, ಓರಿಯೆಂಟಲ್ ರಿಸರ್ಚ್

ಇನ್ಸ್ಟಿಟ್ಯೂಟ್, ಮದರಾಸು, ೧೯೩೦; ಮದರಾಸು ವಿಶ್ವವಿದ್ಯಾನಿಲಯ, ಮದರಾಸು, ೧೯೭೩; ಸಂ. ಎಂ. ವಿ. ಸೀತಾರಾಮಯ್ಯ, ಕರ್ಣಾಟಕ ಸಂಘ, ಸರಕಾರದ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜು, ಬೆಂಗಳೂರು, ೧೯೬೮; ಸಂ. ಕೆ. ಕೃಷ್ಣಮೂರ್ತಿ, ಐಬಿಎಚ್. ಪ್ರಕಾಶನ, ಗಾಂಧಿನಗರ, ಬೆಂಗಳೂರು, ೧೯೮೩.

ಕಾವ್ಯಾವಲೋಕನಂ : ನಾಗವರ್ಮ, ಸಂ. ಆರ್. ನರಸಿಂಹಾಚಾರ್ಯ, ಮೈಸೂರು ಗವರ್ನಮೆಂಟ್ ಸೆಂಟ್ರಲ್ ಪ್ರೆಸ್, ಬೆಂಗಳೂರು, ೧೯೦೩; ಸಂ. ಎಚ್. ಆರ್. ರಂಗಸ್ವಾಮಿ ಅಯ್ಯಂಗಾರ್, ಓರಿಯೆಂಟಲ್ ಲೈಬ್ರರಿ, ಮೈಸೂರು, ೧೯೩೯.

ನರಪತಿ ಚರಿತಂ : ಅಳಿಯ ಲಿಂಗರಾಜ, ಸಂ. ಜಯರಾಯಾಚಾರ್ಯ, ಕರ್ಣಾಟಕ ಗ್ರಂಥಮಾಲೆ, ಮೈಸೂರು, ೧೮೯೯.

ಮಾಧವಾಲಂಕಾರಂ : ಮಾಧವ, ಸಂ. ಎಚ್. ತಿಪ್ಪೇರುದ್ರ ಸ್ವಾಮಿ, ಗೀತಾ ಬುಕ್ ಹೌಸ್, ಮೈಸೂರು, ೧೯೭೮.

ರಸರತ್ನಾಕರಂ (ಮತ್ತು ಶಾರದಾವಿಲಾಸಂ) : ಸಾಳ್ವ, ಸಂ. ಎ. ವೆಂಕಟರಾವ್, ಎಚ್. ಶೇಷ ಅಯ್ಯಂಗಾರ್, ಮದರಾಸು ವಿಶ್ವವಿದ್ಯಾನಿಲಯ, ಮದರಾಸು, ೧೯೩೨, ೧೯೭೫.

ಅ

ಅಜಿತತೀರ್ಥಕರ ಪುರಾಣತಿಲಕಂ ; ರನ್ನ, ಸಂ. ಎಚ್. ದೇವೀರಪ್ಪ, ದೇ. ಜವರೇಗೌಡ, ಸನ್ಮತಿ ಗ್ರಂಥಮಾಲೆ, ಮೈಸೂರು, ೧೯೫೯.

ಅನಂತನಾಥ ಪುರಾಣಂ : ಜನ್ನ, ಸಂ. ಎಚ್. ದೇವೀರಪ್ಪ, ಎಂ. ಸಿ. ಪದ್ಮನಾಭಶರ್ಮ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೭೨.

ಅಭಿನವ ದಶಕುಮಾರಚರಿತೆ : ಚೌಂಡರಾಜ, ಸಂ. ಎಸ್. ಜಿ. ನರಸಿಂಹಾಚಾರ್, ಮಂ. ಆ. ರಾಮಾನುಜೈಯಂಗಾರ್, ಕರ್ಣಾಟಕ ಕಾವ್ಯಕಲಾನಿಧಿ, ಮೈಸೂರು, ೧೯೦೨.

ಆದಿಪುರಾಣಂ : ಪಂಪ, ಸಂ. ಕೆ. ಜಿ. ಕುಂದಣಗಾರ್, ಎ. ಪಿ. ಚೌಗುಲೆ, ಪ್ರ. ಎ. ಎ. ಚೌಗುಲೆ, ಬೆಳಗಾವಿ, ೧೯೫೩; ಸಂ. ಎಲ್. ಬಸವರಾಜು, ಗೀತಾ ಬುಕ್ ಹೌಸ್, ಮೈಸೂರು, ೧೯೭೬.

ಇಮ್ಮಡಿ ಮುರಿಗಾ ಗುರುಸಿದ್ಧ ಶಿವಯೋಗಿಯ ಕೃತಿಗಳು (ಸಂ. ೧), ಸಂ. ಎಸ್. ವಿದ್ಯಾಶಂಕರ, ಬೃಹನ್ಮಠ ಸಂಸ್ಥಾನ, ಚಿತ್ರದುರ್ಗ, ೧೯೭೮.

ಉದ್ಭಟದೇವ ಚರಿತೆ : ಬಸವಾಂಕ, ಸಂ. ಎನ್. ಬಸವಾರಾಧ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು–೧೮, ೧೯೫೭.

ಕಂಠೀರವ ನರಸರಾಜ ವಿಜಯ : ಗೋವಿಂದ ವೈದ್ಯ, ಸಂ: ಆರ್. ಶಾಮಶಾಸ್ತ್ರಿ, ಓರಿಯೆಂಟಲ್ ಲೈಬ್ರರಿ, ಮೈಸೂರು, ೧೯೨೬.

ಕನಕದಾಸರ ಒಗಟುಗಳು : ವೆಂಕಟ್ರಾಯ ಆನಂದ ಶೆಣೈ, ವಿನಾಯಕ ಜನರಲ್ ಸ್ಟೋರ್ಸ್, ಗೋವಂಡಿ ರೋಡ್, ಚೆಂಬೂರು, ಮುಂಬಯಿ–೭೧, ೧೯೬೫.

ಕಂತಿ–ಪಂಪನ ಸಮಸ್ಯೆಗಳು : ಸಂ. ಬಿ. ಪದ್ಮರಾಜ ಪಂಡಿತ, ಪ್ರ. ಲೇಖಕರು, ಶ್ರೀ ಭಾರತೀಭವನ ಪ್ರೆಸ್, ಸುಲ್ತಾನ್ ಪೇಟೆ, ಬೆಂಗಳೂರು, ೧೮೯೩; ಸಂ. ಪಂಡಿತ ಲೋಕನಾಥ ಶಾಸ್ತ್ರಿ, ಪ್ರ. ಲೇಖಕರು, ಮೂಡಬಿದರೆ, ೧೯೪೨; ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿಭಂಡಾರ, ಕೆ. ೯೧೭/೨ (ಪತ್ರಗಳು ೧–೫).

ಕಬ್ಬಿಗರ ಕಾವಂ : ಆಂಡಯ್ಯ, ಸಂ. ದೇ. ಜವರೇಗೌಡ, ಶಾರದಾಮಂದಿರ, ಮೈಸೂರು, ೧೯೬೯.

ಕರ್ಣಾಟಕ ಕಾದಂಬರಿ : ನಾಗವರ್ಮ, ಸಂ. ಎನ್. ಅನಂತರಂಗಾಚಾರ್, ಉಷಾ ಸಾಹಿತ್ಯ ಮಾಲೆ, ಮೈಸೂರು, ೧೯೭೩.

ಕರ್ಣಾಟಕ ಪಂಚತಂತ್ರಂ : ದುರ್ಗಸಿಂಹ, ಸಂ. ಎನ್. ಅನಂತರಂಗಾಚಾರ್, ಶಾರದಾ ಮಂದಿರ, ಮೈಸೂರು, ೧೯೭೩.

ಕರ್ಣಾಟಕ ಭಾರತ ಕಥಾಮಂಜರಿ : ಕುಮಾರವ್ಯಾಸ, ಸಂ. ಕುವೆಂಪು, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಮೈಸೂರು ಸಂಸ್ಥಾನದ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ, ಬೆಂಗಳೂರು, ೧೯೫೮.

ಕಲ್ಲೆ ಲಿಂಗೇಶ್ವರನ ಚಾರಿತ್ರ : ಬಸವಕವಿ ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ಹಸ್ತಪ್ರತಿ ಭಂಡಾರ, ಕೆಬಿ. ೫೧೧.

ಕಾವ್ಯಸಾರಂ : ಮಲ್ಲಕವಿ, ಸಂ. ಎನ್. ಅನಂತರಂಗಾಚಾರ್, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜ ಪೇಟೆ, ಬೆಂಗಳೂರು–೧೮, ೧೯೭೩.

ಕುಸುಮಾವಳೀ ಕಾವ್ಯಂ : ದೇವಕವಿ, ಸಂ. ಕಡಬದ ನಂಜುಂಡ ಶಾಸ್ತ್ರಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು-೧೮, ೧೯೭೩.

ಗಯೋಪಾಖ್ಯಾನ : ವೆಂಕಟರಮಣಯ್ಯ, ಪ್ರ. ಚಾವಲಿ ರಾಮಸ್ವಾಮಿ ಶಾಸ್ತ್ರಿ, ಉಮಾ ಮಹೇಶ್ವರ ಮುದ್ರಾಕ್ಷರ ಶಾಲೆ, ಮದರಾಸು, ೧೮೮೪.

ಚಂದ್ರಪ್ರಭ ಪುರಾಣಂ : ಅಗ್ಗಳ, ಸಂ. ಎಸ್. ಜಿ. ನರಸಿಂಹಾಚಾರ್, ಮಂ. ಆ. ರಾಮಾನುಜೈಯಂಗಾರ್, ಕರ್ಣಾಟಕ ಕಾವ್ಯಕಲಾನಿಧಿ, ಮೈಸೂರು, ೧೯೦೧.

ಚೇರಮ ಕಾವ್ಯ : ಚೇರಮಾಂಕ, ಸಂ. ಎನ್. ಬಸವಾರಾಧ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು–೧೮, ೧೯೫೬.

ಜಗನ್ನಾಥ ವಿಜಯಂ : ರುದ್ರಭಟ್ಟ, ಸಂ. ಆರ್. ಶಾಮಶಾಸ್ತ್ರಿ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೭೬.

ಜೈಮಿನಿ ಭಾರತ : ಲಕ್ಷ್ಮೀಶ, ಸಂ. ಕೆ. ನಂಜುಂಡ ಶಾಸ್ತ್ರಿ, ಎಚ್. ನಾಗಪ್ಪ, ಪ್ರ. ಟಿ. ಎನ್. ಶ್ರೀನಿವಾಸ ಶೆಟ್ಟಿ, ಶ್ರೀ ಸರಸ್ವತೀರತ್ನಾಕರ ಬುಕ್ಕುಡಿಪೋ, ಚಿಕ್ಕಪೇಟೆ, ಬೆಂಗಳೂರು, ೧೯೩೨.

ತೋಂಟದ ಸಿದ್ಧಲಿಂಗೇಶ್ವರನ ಬೆಡಗಿನ ವಚನದ ಟೀಕೆ : ಸೋಮಶೇಖರ ಶಿವಯೋಗಿ, ಸಂ. ಬಿ. ವಿ. ಶಿರೂರ, ವೀರಶೈವ ಅಧ್ಯಯನ ಸಂಸ್ಥೆ, ಡಂಬಳ, ಗದಗ, ೧೯೭೭.

ಧರ್ಮನಾಥ ಪುರಾಣಂ : ಬಾಹುಬಲಿ ಪಂಡಿತ, ಸಂ. ಎಸ್. ಬಸವಾರಾಧ್ಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೭೫.

ಧರ್ಮಪರೀಕ್ಷೆ : ವೃತ್ತವಿಲಾಸ, ಸಂ. ಕೆ. ರಾಘವೇಂದ್ರ ರಾವ್, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೮೩.

ಧರ್ಮಾಮೃತಂ : ನಯಸೇನ, ಸಂ. ಆರ್. ಶಾಮಶಾಸ್ತ್ರಿ, ಓರಿಯೆಂಟಲ್ ಲೈಬ್ರರಿ, ಮೈಸೂರು, ೧೯೨೬.

ನಂದಿಮಾಹಾತ್ಮ್ಯಂ : ಗೋವಿಂದ ಕವಿ, ಸಂ. ಎಸ್. ಜಿ. ನರಸಿಂಹಾಚಾರ್, ಮಂ. ಆ. ರಾಮಾನುಜಯ್ಯಂಗಾರ್, ಕರ್ಣಾಟಕ ಕಾವ್ಯಕಲಾನಿಧಿ, ಮೈಸೂರು, ೧೯೦೭; ಸಂ. ಜಿ. ಜಿ. ಮಂಜುನಾಥನ್, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೮೧.

ನಳಚಂಪು : ಚೌಂಡರಸ, ಸಂ. ಎಚ್. ಆರ್. ರಂಗಸ್ವಾಮಿ ಅಯ್ಯಂಗಾರ್, ಎಸ್. ಎನ್. ಕೃಷ್ಣಜೋಯಿಸ್, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೭೧.

ನಿರೀಕ್ಷೆ : ಪಿ. ಬಸವಣ್ಣ, ಪ್ರ. ಲೇಖಕರು, ತ್ರಿವೇಣಿ ಪ್ರಕಾಶನ, ಕೊಳ್ಳೇಗಾಲ, ೧೯೭೫.

ನೇಮಿನಾಥ ಪುರಾಣಂ : ನೇಮಿಚಂದ್ರ, ಸಂ. ಬಿ. ಎಸ್. ಸಣ್ಣಯ್ಯ, ಸಾಧನ ಸಾಹಿತ್ಯ ಮಂದಿರ, ಮೈಸೂರು, ೧೯೬೧.

ನೇಮಿನಾಥ ಪುರಾಣಂ : ಮಹಾಬಲ, ಸಂ. ಬಿ.ಎಸ್. ಸಣ್ಣಯ್ಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೭೭.

ಪಂಪಾ ವಿರೂಪಾಕ್ಷ ಶತಕ : ಹಿರಿಯೂರು ರಂಗ, ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿಭಂಡಾರ, ಕೆಬಿ. ೧೦.
ಪಾರ್ಶ್ವನಾಥ ಪುರಾಣಂ : ಪಾರ್ಶ್ವಪಂಡಿತ, ಸಂ. ಎಚ್. ಶೇಷ ಅಯ್ಯಂಗಾರ್, ಶ್ರೀವತ್ಸ ಪ್ರೆಸ್, ಮದರಾಸು, ೧೯೬೦.
ಪುಣ್ಯಾಸ್ರವ : ನಾಗರಾಜ, ಸಂ. ದೇ. ಜವರೇಗೌಡ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೭೭.
ಪುಷ್ಪದಂತ ಪುರಾಣಂ : ಗುಣವರ್ಮ, ಸಂ. ಎ. ವೆಂಕಟರಾವ್, ಎಚ್. ಶೇಷ ಅಯ್ಯಂಗಾರ್, ಮದರಾಸು ವಿಶ್ವವಿದ್ಯಾನಿಲಯ, ಮದರಾಸು, ೧೯೩೩.
ಪ್ರಭುದೇವರ ಪುರಾಣ : ಎಳಂದೂರು ಹರೀಶ್ವರ, ಸಂ. ಬುದ್ಧಯ್ಯ ಸ್ವಾಮಿ ಮ. ಪುರಾಣೀಕ, ಉಳವಿ ಬಸಪ್ಪನ ಗುಡ್ಡ, ಧಾರವಾಡ, ೧೯೪೦.
ಬರಕೋ ಪದಾ ಬರಕೋ (ಶಿಶುನಾಳ ಶರೀಫರ ಪದಗಳ ಸಂಗ್ರಹ), ಸಂ. ಡಾ. ಶಿವಾನಂದ ಗುಬ್ಬಣ್ಣವರ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೧.
ಬಸವರಾಜ ವಿಜಯ : ಷಡಕ್ಷರಿ, ಸಂ. ಆರ್. ಸಿ. ಹಿರೇಮಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೬೮; ಸಂ. ಪಂಡಿತ ಚನ್ನಪ್ಪ ಎರೇಸೀಮೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೨.
ಭರತೇಶ ವೈಭವ : ರತ್ನಾಕರವರ್ಣಿ, ಸಂ. ಜಿ. ಬ್ರಹ್ಮಪ್ಪ, ಹಂಪ ನಾಗರಾಜಯ್ಯ, ಸಿ. ಆರ್. ಕಮಲಮ್ಮ, ಪ್ರ. ಅತ್ತಿಮಬ್ಬೆ ಪ್ರಕಾಶನ, ಬೆಂಗಳೂರು-೪, ೧೯೬೭.
ಭಿಕ್ಷ : ಪಿ. ಬಸವಣ್ಣ, ನಿಜಗುಣನಿಲಯ, ಶ್ರೀ ಶಂಭುಲಿಂಗಕ್ಷೇತ್ರ, ಚಿಲುಕವಾಡಿ, ಕೊಳ್ಳೇಗಾಲ ತಾಲ್ಲೂಕು, ೧೯೮೧.
ಭಿಕ್ಷಾಟನ ಚರಿತೆ : ಗುರುಲಿಂಗ ವಿಭು, ಸಂ. ಮಂ. ಆ. ರಾಮಾನುಜಯ್ಯಂಗಾರ್ಯ, ಕರ್ಣಾಟಕ ಕಾವ್ಯಕಲಾನಿಧಿ, ಮೈಸೂರು, ೧೯೦೮.
ಮದನ ತಿಲಕಂ : ಚಂದ್ರರಾಜ, ಸಂ. ಆರ್. ಎಸ್. ಪಂಚಮುಖಿ, ಕನ್ನಡ ರಿಸರ್ಚ್ ಇನ್ಸ್ಟಿಟ್ಯೂಟ್, ಧಾರವಾಡ, ೧೯೫೩.
ಮದನ ಮೋಹಿನಿಯ ಕಥೆ : ಲಕ್ಷ್ಮಯ್ಯ, ಸಂ. ಬಿ. ಎಸ್. ಸಣ್ಣಯ್ಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೭೨.
ಮರುಳಸಿದ್ಧ ದೇವರ ಚರಿತ್ರೆ : ರೇವಣಸಿದ್ಧ, ಸಂ. ತರಳಬಾಳು ಶಿವಮೂರ್ತಿ, ತರಳಬಾಳು ಪ್ರಕಾಶನ, ಅಣ್ಣನ ಬಳಗ, ಸಿರಿಗೆರೆ, ಚಿತ್ರದುರ್ಗ ತಾಲ್ಲೂಕು, ೧೯೭೦.
ಮಲ್ಲಿನಾಥ ಪುರಾಣಂ : ನಾಗಚಂದ್ರ, ಸಂ. ಎಸ್. ಜಿ. ನರಸಿಂಹಾಚಾರ್, ಮಂ. ಆ. ರಾಮಾನುಜಯ್ಯಂಗಾರ್, ಕರ್ಣಾಟಕ ಕಾವ್ಯಮಂಜರಿ, ಮೈಸೂರು, ೧೮೯೫; ಸಂ. ಬಿ. ಬಿ. ಹೆಂಡಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೪.
ಮಾನೌಮಿಯ ಚೌಪದ: ಸಂ. ಎನ್. ಅನಂತರಂಗಾಚಾರ್, ಶಾರದಾಮಂದಿರ, ರಾಮಯ್ಯರ್ ರಸ್ತೆ, ಮೈಸೂರು-೪, ೧೯೭೦.
ಮಾರುತಿಭಕ್ತಿದರ್ಪಣ : ಆಸೂರಿ ಕೆ. ರಾಮಸ್ವಾಮಿ ಅಯ್ಯಂಗಾರ್, ಕಾವ್ಯಪ್ರಚಾರಮಂಡಲಿ, ಎಚ್. ೩೬, ಅಣ್ಣಯಪ್ಪ ಬ್ಲಾಕ್, ೧ನೆಯ ಅಡ್ಡರಸ್ತೆ, ಶೇಷಾದ್ರಿಪುರಂ, ಬೆಂಗಳೂರು-೨೦, ೧೯೭೯.
ಮೈಸೂರ್ ಮೆಯ್ಸಿರಿ ಅಥವಾ ಶ್ರೀ ನಾಲ್ವಡಿ ಕೃಷ್ಣರಾಜೇಂದ್ರ ಮಹಿಮೆ : ಟಿ. ಶ್ರೀನಿವಾಸರಂಗಾಚಾರ್ಯ, ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು, ೧೯೩೩.
ಯಶೋಧರ ಚರಿತೆ : ಜನ್ನ, ಸಂ. ಕ. ವೆಂ. ರಾಘವಾಚಾರ್, ಶಾರದಾಮಂದಿರ, ಮೈಸೂರು, ೧೯೬೯.
ರಾಜಶೇಖರ ವಿಳಾಸಂ : ಷಡಕ್ಷರಿ, ಅನು. ಸಂ. ಚನ್ನಪ್ಪ ಎರೇಸೀಮೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೬.

ರಾಮಚಂದ್ರ ಚರಿತ ಪುರಾಣಂ : ನಾಗಚಂದ್ರ, ಸಂ. ಕೆ. ವರದಾಚಾರ್ಯ ಮತ್ತು ಇತರರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೨೧.

ಲೀಲಾವತೀ ಪ್ರಬಂಧಂ : ನೇಮಿಚಂದ್ರ, ಸಂ. ಕೆ. ವೆಂಕಟರಾಮಪ್ಪ, ದೇ. ಜವರೇಗೌಡ, ಶಾರದಾಮಂದಿರ, ಮೈಸೂರು, ೧೯೬೬.

ವರ್ಧಮಾನ ಪುರಾಣಂ : ಆಚಣ್ಣ, ಸಂ. ಎಂ. ಮರಿಯಪ್ಪಭಟ್ಟ, ಎಂ. ಗೋವಿಂದರಾವ್, ಮದರಾಸು ವಿಶ್ವವಿದ್ಯಾನಿಲಯ, ಮದರಾಸು, ೧೯೫೩.

ವರ್ಧಮಾನ ಪುರಾಣಂ : ನಾಗವರ್ಮ, ಸಂ. ಬಿ. ಎಸ್. ಸಣ್ಣಯ್ಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೭೪.

ವಾವೆ ಮತ್ತು ಗಟ್ಟಿಪದಗಳು: ಸಂ. ಜಿ. ಜಿ. ಮಂಜುನಾಥನ್, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೮೬.

ವಿಕ್ರಮಾರ್ಜುನ ವಿಜಯಂ : ಪಂಪ, ಸಂ. ಬೆಳ್ಳಾವೆ ವೆಂಕಟನಾರಾಯಣಪ್ಪ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೩.

ವಿದುರ ನೀತಿ (ಕುಮಾರವ್ಯಾಸಭಾರತಾಂತರ್ಗತ) : ಅನು. ಎನ್. ರಂಗನಾಥ ಶರ್ಮ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು–೧೮, ೧೯೭೩.

ಶಬರಶಂಕರ ವಿಳಾಸಂ : ಷಡಕ್ಷರಿ, ಸಂ. ಶಿ. ಶಿ. ಬಸವನಾಳ, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ, ೧೯೩೯.

ಶಾಂತಿ ಪುರಾಣಂ : ಪೊನ್ನ, ಸಂ. ಎ. ವೆಂಕಟರಾವ್, ಎಚ್. ಶೇಷಯ್ಯಂಗಾರ್, ಪೀಪಲ್ಸ್ ಪ್ರಿಂಟಿಂಗ್ ಎಂಡ್ ಪಬ್ಲಿಷಿಂಗ್ ಹೌಸ್, ಮದರಾಸು, ೧೯೨೯; ಸಂ. ಹಂಪ. ನಾಗರಾಜಯ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೨.

ಶಾಸನಪದ್ಯಮಂಜರಿ : ಸಂ. ಆರ್. ನರಸಿಂಹಾಚಾರ್ಯ, ಪ್ರ. ಲೇಖಕರು, ಬೆಂಗಳೂರು, ೧೯೨೩.

ಶ್ರೀ ಕನಕದಾಸರ ಭಕ್ತಿಗೀತೆಗಳು: ಸಂ. ಕೃಷ್ಣಶರ್ಮಾ ಬೆಟಗೇರಿ, ಹುಚ್ಚರಾವ ಬೆಂಗೇರಿ, ಸಮಾಜ ಪುಸ್ತಕಾಲಯ, ಧಾರವಾಡ, ೧೯೬೫.

ಶ್ರೀಮನ್ಮಹಿಸೂರು ಕೃಷ್ಣರಾಜೇಂದ್ರವಿಲಾಸ ಕಾವ್ಯದೊಳ್ ಪಂಚವಿಂಶತಿತಮಾಶ್ವಾಸಂ ರಜತಮಹೋತ್ಸವ ವಿಜಯ ಕಥನಂ : ಸಿ. ಸಂಗಪ್ಪ ಉರುಫ್ ಸಂಗನಾಥ, ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು, ೧೯೨೮.

ಶ್ರೀರಾಮಪಟ್ಟಾಭಿಷೇಕಂ : ಮುದ್ದಣ, ಸಂ. ಮಂ. ಆ. ರಾಮಾನುಜೈಯಂಗಾರ್ಯ, ಕರ್ಣಾಟಕ ಕಾವ್ಯಕಲಾನಿಧಿ, ಮೈಸೂರು, ೧೯೨೪.

ಷಟ್ಸ್ಥಲವಲ್ಲಭ: ಚನ್ನವೀರ ಜಂಗಮದೇವ, ಸಂ. ಎಚ್. ದೇವೀರಪ್ಪ, ಚನ್ನಪ್ಪ ಎರೇಸೀಮೆ, ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಡಂಬಳ, ಗದಗ, ೧೯೮೦.

ಸಕಲಪುರಾತನರ ಬೆಡಗಿನ ವಚನಗಳು : ಸಿಂಗಳದ ಸಿದ್ಧಬಸವರಾಜ ದೇವ, ಸಂ. ಎಂ. ಎಸ್. ಸುಂಕಾಪುರ, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೮.

ಸತ್ಯೇಂದ್ರ ಚೋಳನ ಸಾಂಗತ್ಯ : ಶಾಂತಕವಿ, ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿಭಂಡಾರ, ಮೈಸೂರು, ಕೆ. ೫೮೯.

ಸರಜಾ ಹನುಮೇಂದ್ರ ಯಶೋವಿಲಾಸ : ಕೃಷ್ಣಶರ್ಮ, ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿಭಂಡಾರ, ಮೈಸೂರು, ಕೆಬಿ. ೫೩.

ಸೂಕ್ತಿಸುಧಾರ್ಣವಂ : ಮಲ್ಲಿಕಾರ್ಜುನ, ಸಂ. ಎನ್. ಅನಂತರಂಗಾಚಾರ್, ಓರಿಯೆಂಟಲ್ ರಿಸರ್ಚ್ ಇನ್ಸ್ಟಿಟ್ಯೂಟ್, ಮೈಸೂರು, ೧೯೪೭.

ಸೊಬಗಿನ ಸೋನೆ : ದೇಪರಾಜ, ಸಂ. ಬಿ. ಎಸ್. ಸಣ್ಣಯ್ಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೭೦.

ಹಮ್ಮೀರ ಕಾವ್ಯ (ರಾಜೇಂದ್ರ ವಿಜಯ) : ಮುರಿಗೆ ದೇಶಿಕೇಂದ್ರ, ಸಂ. ಎಂ. ಎಸ್. ಸುಂಕಾಪುರ, ಸುಕುಮಾರ ಗ್ರಂಥಮಾಲೆ, ಶಿವಯೋಗ ಮಂದಿರ, ಬಾದಾಮಿ, ೧೯೫೭.

ಹರಿವಂಶಾಭ್ಯುದಯಂ : ಬಂಧುವರ್ಮ, ಸಂ. ಬಿ. ಎಸ್. ಸಣ್ಣಯ್ಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೭೪.

ಹಾಲಾಸ್ಯಪುರಾಣಂ : ಇಮ್ಮಡಿ ಗುರುಸಿದ್ಧ, ಸಂ. ಜಿ. ಜಿ. ಮಂಜುನಾಥನ್, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೭೫.

ಜಟ್ಟಿಮತಂ : ಜಟ್ಟಿಕವಿ, ಸಂ. ಎಚ್. ಶೇಷ ಅಯ್ಯಂಗಾರ್, ಗವರ್ನಮೆಂಟ್ ಓರಿಯೆಂಟಲ್ ಮ್ಯಾನುಸ್ಕ್ರಿಪ್ಟ್ಸ ಲೈಬ್ರರಿ, ಮದರಾಸು, ೧೯೫೦.

೬.

ಎರಡನೆಯ ನಾಗವರ್ಮ : ಸಂ. ವಿ. ಸೀತಾರಾಮಯ್ಯ, ಐಬಿಎಚ್. ಪ್ರಕಾಶನ, ಗಾಂಧಿನಗರ, ಬೆಂಗಳೂರು–೯, ೧೯೭೩.

ಕನ್ನಡ ಕೈಪಿಡಿ (ಸಂ. ೧) : ಸಂಪಾದಿತ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೫೫.

ಕರ್ಣಾಟಕ ಕವಿಚರಿತೆ (ಸಂ. ೧,೨,೩) : ಆರ್. ನರಸಿಂಹಾಚಾರ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೬೧, ೧೯೭೩, ೧೯೭೪.

ಕರ್ಣಾಟಕ ಸಂಸ್ಕೃತಿ : ದೇವುಡು ನರಸಿಂಹಶಾಸ್ತ್ರಿ, ಬೆಂಗಳೂರು ಪ್ರೆಸ್, ಮೈಸೂರು ರೋಡ್, ಬೆಂಗಳೂರು, ೧೯೩೫.

ಕವಿರಾಜಮಾರ್ಗಪ್ರಶಸ್ತಿ : ಭೀಮರಾವ ಚಿಟಗುಪ್ಪಿ, ಮನ್ವಂತರ ಪ್ರಕಾಶನ, ಧಾರವಾಡ, ೧೯೭೨.

ಕವಿರಾಜಮಾರ್ಗವಿವೇಕ : ಮುಳಿಯ ತಿಮ್ಮಪ್ಪಯ್ಯ, ಸಂ. ಎಂ. ಕೇಶವಭಟ್ಟ, ಗೀತಾ ಬುಕ್ ಹೌಸ್, ನ್ಯೂ ಸ್ಟ್ಯಾಚ್ಯು ಸರ್ಕಲ್, ಮೈಸೂರು, ೧೯೭೩.

ಕವಿ ಲಕ್ಷ್ಮೀಶನ ಶಬ್ದಾಲಂಕಾರವೈಭವ : ರಾ. ನ. ಮಳಗಿ, ಸಾಹಿತ್ಯಭಂಡಾರ, ಹುಬ್ಬಳ್ಳಿ, ೧೯೬೦.

ನಮ್ಮ ಒಗಟುಗಳು : ರಾಮೇಗೌಡ, ಉಷಾ ಸಾಹಿತ್ಯಮಾಲೆ, ಮೈಸೂರು, ೧೯೭೦.

ನಮ್ಮ ನುಡಿ : ಮಾಸ್ತಿ ವೆಂಕಟೇಶ ಅಯ್ಯಂಗಾರ್, ಜೀವನ ಕಾರ್ಯಾಲಯ, ಬೆಂಗಳೂರು, ೧೯೬೦.

ಪಂಪಭಾರತ ದೀಪಿಕೆ : ಡಿ. ಎಲ್. ನರಸಿಂಹಾಚಾರ್, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೭೧.

ಭಾರತೀಯ ಕಾವ್ಯಮೀಮಾಂಸೆ : ತೀ. ನಂ. ಶ್ರೀಕಂಠಯ್ಯ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೩.

ಮಹಾತ್ಮ ಕನಕದಾಸ ಪ್ರಶಸ್ತಿ : ಸಂ ಸಿದ್ಧಯ್ಯ ಪುರಾಣಿಕ, ರಾಜ್ಯಸಮಿತಿ, ಶ್ರೀ ಕನಕದಾಸರ ನಾಲ್ಕನೆಯ ಶತಮಾನೋತ್ಸವ, ರವೀಂದ್ರ ಕಲಾಕ್ಷೇತ್ರ, ಬೆಂಗಳೂರು–೨, ೧೯೬೫.

ಶರಣರ ಅನುಭಾವ ಸಾಹಿತ್ಯ : ಎಚ್. ತಿಪ್ಪೇರುದ್ರ ಸ್ವಾಮಿ, ಪ್ರ. ಡಿ. ವಿ. ಕೆ. ಮೂರ್ತಿ, ಮೈಸೂರು ೧೯೭೮.

ಶಾಸ್ತ್ರಸಾಹಿತ್ಯ : ಎಂ. ವಿ. ಸೀತಾರಾಮಯ್ಯ, ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೫.

ಸಂಸ್ಕೃತಕಾವ್ಯ : ಕೆ. ಕೃಷ್ಣಮೂರ್ತಿ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೪.

೭

A History of the Samskrta Literature : V. Varadachari, Ram Narain Lal Beniprasad, Publishers and Booksellers, Allahabad–2, 1960.

Figurative Poetry in Sanskrit Literature : Kalanath Jha, Motilal Banarsidass, Delhi–7, 1975.

The Kalas : A. Venkatasubbiah, The Vasanta Press, Madras, 1911.

The Riddle in Indian Life, Lore and Literature : Durga Bhagwat, Popular Prakashan, Bombay, 1965.

ಅಪ್ಪಕವೀಯಮು : ಅಪ್ಪಕವಿ, ಸಂ. ಶ್ರೀರೇಕಮು ರಾಮಾನುಜ ಸೂರಿ, ಸೂರ್ಯಾಲೋಕ ಮುದ್ರಾಕ್ಷರಶಾಲ, ಮದರಾಸು, ೧೮೫೯.

ತೆಲುಗು ಛಂದೋವಿಕಾಸಮು : ಕೋವೆಲ ಸಂಪತ್ಕುಮಾರಾಚಾರ್ಯ, ಕುಲಪತಿ ಸಮಿತಿ, ವರಂಗಲ್ಲು, ೧೯೬೨.

ತೆಲುಗುಲೋ ಚಿತ್ರಕವಿತ್ವಮು : ಗಾದೆ ಧರ್ಮೇಶ್ವರ ರಾವು, ರಾಜ್ಯಲಕ್ಷ್ಮೀ ಪಬ್ಲಿಕೇಷನ್ಸ್, ಅಮರಾವತಿ, ಗುಂಟೂರು ಜಿಲ್ಲಾ, ೧೯೮೬.

ಲಕ್ಷಣ ಶಿರೋಮಣಿ : ಪೊತ್ತಪಿ ವೆಂಕಟರಮಣ ಕವಿ, ಸಂ. ರಾವೂರಿ ದೊರೆಸಾಮಿ ಶರ್ಮ, ಆಂಧ್ರಪ್ರದೇಶ್ ಸಾಹಿತ್ಯ ಅಕಾಡೆಮಿ, ಹೈದರಾಬಾದು ೪, ೧೯೭೯.

ಸಮಸ್ಯಾಪೂರಣ : ರಾವಿಪಾಟಿ ಲಕ್ಷ್ಮೀನಾರಾಯಣ, ನರಸರಾವು ಪೇಟ, ಗುಂಟೂರು ಜಿಲ್ಲಾ, ೧೯೬೭.

ಸರಸ್ವತೀಕಂಠಾಭರಣಮು : ಅನು. ಟಿ ಭಾಸ್ಕರರಾವು, ಆಂಧ್ರಪ್ರದೇಶ್ ಸಾಹಿತ್ಯ ಅಕಾಡೆಮಿ, ಹೈದರಾಬಾದು, ೧೯೮೨.

ಭಾಷಾಭೂಷಣಮ್ : ಎ. ಆರ್. ರಾಜರಾಜ ವರ್ಮ, ಸಾಹಿತ್ಯಪ್ರವರ್ತಕ ಕೋ–ಆಪರೇಟೀವ್ ಸೊಸೈಟಿ ಲಿ., ಕೊಟ್ಟಾಯಂ, ಕೇರಳ, ೧೯೮೨.

ಅ

ಅಜಿತಸೇನನ ಅಲಂಕಾರಚಿಂತಾಮಣಿ : ಕೆ. ಕೃಷ್ಣಮೂರ್ತಿ, 'ಉಪಾಯನ', ಬೆಂಗಳೂರು, ೧೯೬೬, ಪು. ೪೮–೫೮.

ಒಗಟು : ರಾಮೇಗೌಡ, 'ಜನಪದ ಸಾಹಿತ್ಯ ರೂಪಗಳು', ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್, ೧೯, ಜೆ.ಸಿ. ರೋಡ್, ಬೆಂಗಳೂರು–೨, ೧೯೭೮, ಪು. ೧೦೩–೩೪.

ಒಗಂಟುವೇಳ್ವ ಕವಿಯುಂ ಕವಿಯೋ : ಎಚ್. ದೇವೀರಪ್ಪ. 'ಸಂಶೋಧನ ಸಂಪುಟ', ಬೆಂಗಳೂರು, ೧೯೮೪, ಪು. ೨೪೯–೫೩.

ಕನ್ನಡ ಕಾವ್ಯಗಳಲ್ಲಿ ಒಗಟುಗಳು ಮತ್ತು ಪ್ರಹೇಳಿಕೆಗಳು : ಎಂ. ರಾಜಗೋಪಾಲಾಚಾರ್ಯ, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ೬೨–೧, ೨, ಜೂನ್–ಡಿಸೆಂಬರ್ ೧೯೭೭, ಪು. ೧೪೪–೫೮.

ಚಿತ್ರಕವಿತ್ವ : ಪಿ. ಬಸವಣ್ಣ, ಸಾಧನೆ, ೬–೨, ಏಪ್ರಿಲ್–ಜೂನ್ ೧೯೭೭ ಪು. ೧೨೩–೩೨.

ಚಿತ್ರಕಾವ್ಯ : ಕೆ. ಕೃಷ್ಣಮೂರ್ತಿ, 'ಕನ್ನಡ ವಿಶ್ವಕೋಶ' (ಸಂ.೨), ಮೈಸೂರು, ೧೯೭೪, ಪು. ೩೯೩–೯೫.

ದ್ವಿಸಂಧಾನಕಾವ್ಯ : ಎಸ್. ವಿ. ಶ್ರೀನಿವಾಸ ರಾಘವಾಚಾರ್, ಎಚ್. ಪಿ. ದೇವಕಿ, 'ಕನ್ನಡ ವಿಶ್ವಕೋಶ' (ಸಂ. ೯), ಮೈಸೂರು, ೧೯೭೭, ಪು. ೮೭೮–೭೯.

ಮಾಘಚರಿತ್ರವು : ವಾಗ್ಭೂಷಣ, ೧೬–೧೦, ೧೧, ೧೯೧೨, ಪು. ೧೭೩–೮೪, ೧೯೩–೯೪.

ಷಡಕ್ಷರದೇವನ ಉಭಯಭಾಷಾಪ್ರೌಢಿಮೆ : ಟಿ. ಕೇಶವ ಭಟ್ಟ, 'ಶಿವಕವಿ ಷಡಕ್ಷರಿ', ಪು. ೧೪೯–೨೦೧.

ಷಡಕ್ಷರದೇವ ಮಹಾಕವಿ ಬಳಸಿರುವ ಚಿತ್ರಕವಿತ್ವ : ಚನ್ನಪ್ಪ ಎರೇಸೀಮೆ, 'ಶಿವಕವಿ ಷಡಕ್ಷರಿ', ಪು. ೨೪೯–೩೧೦.

Dvyarthi and Tryarthi Kavyas in Sanskrit Literature : E. V. Vira Raghavacharya, *K. B. Pathak Commemoration Volume*, Poona, 1934, pp. 367–84.

Illustrations of Letter-Diagrams : Hiralal R. Kapadia, *Journal of the University of Bombay (Arts Numbers)* : Volume 23 (New Series)-Part 2, September 1954, pp. 60-91; Volume 24 (New Series)-Part 2, September 1955, pp. 97-147; Volume 25 (New Series)-Part 2, September 1956, pp. 82-113.

೨/ಸಂಸ್ಕೃತ ಸೂತ್ರಪದ್ಯಗಳ ಮತ್ತು ಲಕ್ಷ್ಯಪದ್ಯಗಳ ಅಕಾರಾದಿ

(ಅಂಕಿಗಳು ಪುಟಗಳನ್ನು ಸೂಚಿಸುತ್ತವೆ.)

ಸೂತ್ರಪದ್ಯಗಳ ಅಕಾರಾದಿ

ಅಕ್ಷರಾತ್ ಪುಟಕೇ	೪೦೩
ಅಥ ಪ್ರಥಮಪಾದಸ್ಯ	೪೦೨
ಅಧಸ್ತಾತ್ ಪರಿತೋ ಗಚ್ಛನ್	೪೫೦
ಅಧೋಽಧಃ ಸ್ಥಿತ	೪೦೨
ಅನೇಕಧಾ ವೃತ್ತವರ್ಣ	೩೯೬
ಅಂತಃಪ್ರಶ್ನ ಬಹಿಃಪ್ರಶ್ನ	೩೨೨
ಅಂತಿಮಂ ಪರಿಬಧ್ನೀಯಾದ್	೪೦೩
ಅನ್ಯಾರ್ಥತಾ ತಥೈವೋಕ್ತಾ	೨೪೨
ಅನ್ಯೋನ್ಯಂ ಪಶ್ಚಿಮಯೋಃ	೪೨
ಅಯುಜೋಶ್ಚಯುಜಶ್ಚೈವ	೪೦೨
ಅರ್ಧಂ ಪುನರಾವೃತ್ತಂ	೪೨
ಅರ್ಧಯೋರಂತಿಮಾದ್ಯೌ	೪೦೩
ಅರ್ಧಾಭ್ಯಾಮರ್ಧ	೪೦೨
ಅಶ್ವತಃ ಪರಿತೋ	೪೧೩
ಅಷ್ಟಧಾ ಕರ್ಣಿಕಾವರ್ಣಾಃ	೪೭೧
ಅಷ್ಟಾದಶಶಿಖರಚರೀಂ	೪೭೯
ಆದಿಃ ಪಾದೋ	೪೧೭
ಆದ್ಯಂತಾಃ ಸರ್ವಪಾದೇಷು	೪೩೨
ಆದ್ಯರ್ಧಾನ್ಯನ್ಯೋನ್ಯಂ	೪೩
ಆವೃತ್ತಂ ಪ್ರಥಮಾದೌ	೪೪
ಆವೃತ್ತಾನಿ ತು	೪೫
ಆವೃತ್ತಿಃ ಪ್ರಾತಿಲೋಮ್ಯೇನ	೩೫೬,೩೭೭
ಆಹುಃ ಸಮಾಗತಾಂ	೨೩೪
ಇಹ ಶಿಖರಸಂಧಿಮಾಲಾಂ	೪೩೧
ಉಕ್ತೇರ್ಥೇ ವೃತ್ತಬಂಧೇನ	೨೪೧
ಊರ್ಧ್ವಾದಧಸ್ತಾತಶ್ಚೋರ್ಧ್ವೇ	೪೫೪
ಏಕಚ್ಛನ್ನಾಶ್ರಿತಂ ವ್ಯಜ್ಯ	೨೪೦
ಏಕಸಂಧೌ ತು	೪೫೩
ಏಕಂ ಸರ್ವಂ ಯದಿ ಭವೇತ್	೪೭೭
ಏತದುದಾಹರಣಾನಾಂ	೪೩
ಕರ್ಣಿಕಾತೋ ನಯೇದೂರ್ಧ್ವಂ	೪೬೮
ಕರ್ಣಿಕಾಂ ತೋಲಯೇತ್	೪೦೦
ಕರ್ಣಿಕಾಯಾಂ ನ್ಯಸೇದೇಕಂ	೪೭
ಕರ್ಣಿಕಾಯಾಂ ಲಿಖೇತ್	೪೦೨೨
ಕಲ್ಪನಾ ಗೋಪಿತಾರ್ಥಾತ್ತು	೨೪೧
ಕಾವ್ಯಾನಪಿ ಯದೀಮಾನಿ	೨೨೯
ಕೋಣಷಟ್ಕ ಸಮಾಕ್ರಾಂತ	೪೩೪
ಕ್ರಮಾತ್ಪಾದಚತುಷ್ಕೇ	೩೬೦
ಕ್ರಿಯಾಕಾರಕ ಸಂಬಂಧೇ	೧೯೪
ಕ್ರೀಡಾಗೋಷ್ಠೀ	೨೩೦
ಗತಪ್ರತ್ಯಾಗತಂ	೧೨೦
ಗತಪ್ರತ್ಯಾಗತಂ ಗೂಢಚತುರ್ಥಂ	೩೭೪
ಗತಿರುಚ್ಚಾಪಚಾ	೩೫೧
ಗೋಮೂತ್ರಿಕಾ ಕ್ರಮೇಣ	೪೭೭
ಗೋಮೂತ್ರಿಕಾ ಕ್ರಮೇಣೈವ	೪೧೯
ಚಕ್ರಂ ಚಕ್ರಾಬ್ಜಕಂ	೪೦೨
ಚತುಷ್ಪದೇ ಭವೇತ್	೪೦೨
ಚತುಷ್ಕ ಬಂಧಸಂಧೌ	೪೧೩
ಚಿತ್ರಂ ತು ನಿಯಮನ್ಯಾಸೋ	೪೮೭
ತತ್ತತ್ತತ್ಸಿದ್ಧವಸ್ತೂನಾಂ	೪೦೨
ತತ್ರಾಪ್ಯಯುಗ್ಮಾಕ್ಷರ	೪೩೧
ತದೇವ ಸರ್ವತೋಭದ್ರ	೪೦೨
ತಸ್ಯಾಂ ಮಾತ್ರಾವಶಾತ್	೨೩೫
ತೃತೀಯಂ ತುರ್ಯಾ	೪೦೨
ದ್ವಿತೀಯಂ ಚಕ್ರಂ	೪೦೩
ದ್ವಿತೀಯ ಪ್ರಾತಿಲೋಮ್ಯೇನ	೪೦೩
ದ್ವಿತೀಯ ಷಷ್ಠಾಃ	೪೦೩
ದ್ವಿತೀಯೌ ಪ್ರಾಗ್ದಲೇ	೪೦೩

ದ್ವಿಧಾ ಗೋಮೂತ್ರಿಕಾಂ ೪೦೨
ದ್ವಿಧಾ ಚಕ್ರಂ ೪೦೨
ದ್ವೇದ್ವೇ ಪಾದೇ ೪೧೮
ದ್ವೈತೀಯಮನ್ಯಮರ್ಧಂ ೪೪
ನಷ್ಟಾಕ್ಷರಾ ತು ಕಥಿತಾ ೨೪೨
ನಾಗಾಕಾರಧರೇ ಬಂಧೇ ೪೮೦
ನಾನಾಧಾತ್ವರ್ಥ ೨೨೯
ನಾಮಧೇಯಂ ಯದಿ ೪೦೩
ನಾಸಿಕ್ಯ ಮಧ್ಯಾ ೨೩೭
ನಿಗೂಢಾರ್ಥಕ್ರಿಯಾ ೨೩೨
ನಿಭೃತಾ ನಿಭೃತಾನ್ಯಾರ್ಥಾ ೨೩೮
ನಿವಿಷ್ಟಾಷ್ಟದಲನ್ಯಾಸ ೪೭೩
ಪದಪಾದ ಸಮಸ್ತಾರ್ಧಗತ ೩೭೫
ಪದಂ ರಥಸ್ಯ ನಾಗಸ್ಯ ೪೦೩
ಪದಮೇಕಮಪಿ ೩೫೦
ಪರಿವೃತ್ತಿರ್ನಾಮ ೪೨
ಪರುಷಾ ಲಕ್ಷಣಾಸ್ತಿತ್ವ ೨೩೬
ಪಾದತ್ರಿತಯಮೂರ್ಧ್ವಾಧಃ ೪೧೬
ಪಾದಂ ದ್ವಿಧಾ ತ್ರಿಧಾ ೪೩
ಪಾದಸಮುದ್ಗಕ ಸಂಜ್ಞಂ ೪೫
ಪುಚ್ಛಾತ್ ಪರಿಸರನ್ ೪೮೩
ಪುರಃ ಪುರೋ ಲಿಖೇತ್ ೪೩೪
ಪೂರ್ವಾರ್ಧಮೂರ್ಧ್ವಂ ೪೬೦
ಪ್ರಕ್ರಾಂತಾಂತಂ ಲಿಖೇತ್ ೪೨೯
ಪ್ರತಿಯಂತ್ರಂ ಚತುಷ್ಕಂ ೪೫೮
ಪ್ರತ್ಯೇಕಂ ಪಶ್ಚಿಮ ೪೧
ಪ್ರಥಮತೃತೀಯಾದ್ಯರ್ಧೇ ೪೪
ಪ್ರಥಮ ತೃತೀಯಾಂತ್ಯಾರ್ಧೇ ೪೩
ಪ್ರಥಮಾದಿ ಪ್ರಥಮಾರ್ಧ್ಯೈಃ ೪೪
ಪ್ರಥಮೋ ಚರಮೋ ೪೦೨
ಪ್ರಶ್ನೋತ್ತರಾಂತರಾಭಿನ್ನ ೩೨೯
ಪ್ರಹೇಲಿಕಾ ಸಕೃತ್ಪ್ರಶ್ನಃ ೨೪೩
ಪ್ರಾಕ್ ಪದಸ್ಯಾಂತಿಮಂ ೪೦೨
ಪ್ರಾಕ್ಕರ್ಣಿಕಾಂ ಪುನಃ ಪರ್ಣಂ ೪೭೨
ಪ್ರಾತಿಲೋಮ್ಯಾನುಲೋಮ್ಯಂ ೪೦೨
ಬಹಿರಂತರ್ಮಂಡಲಸ್ಥಂ ೪೩೧
ಬಾಣಬಾಣಾಸನ ೪೦೩
ಭಂಗ್ಯಂತರಕೃತ ೩೯೬
ಭ್ರಾಮ್ಯತಾಂ ತ್ರೀಣಿ ೪೧೮
ಮಧ್ಯತಃ ಪದಮೇಕಂತು ೪೧೯
ಮಧ್ಯತೋಽಧಸ್ತತೋ ೪೫೪
ಮಧ್ಯತೋ ಯುಗ್ಮಪಾರ್ಶ್ವೇ ೪೫೭
ಮಧ್ಯತೋ ಯುಗ್ಮಪಾರ್ಶ್ವೇಧಃ ೪೫೭
ಮಧ್ಯಾನ್ಯರ್ಧಾರ್ಧಾನಿ ೪೫
ಮಧ್ಯೇ ತನುಪಾರ್ಶ್ವಯೋಃ ೪೫೪
ಮೂಲಾತ್ ಸೀತಸ್ಯಾಗ್ರಭಾಗೇ ೪೬೬
ಯತ್ರಾರ್ಧಯೋಃ ಚತುರ್ವರ್ಣಾ ೪೫೭
ಯತ್ರೈಕಾನ್ತರಿತಂ ೩೫೧
ಯಮಕಂ ಪಾದಪಾದಾರ್ಧ ೫೫
ಯಮಕಶ್ಲೇಷಚಿತ್ರೇಷು ೩೯೭
ಯಮಕಾದೌ ಭವೇದೈಕ್ಯಂ ೩೯೭
ಯಸ್ತು ಪರ್ಯನುಯೋಗಸ್ಯ ೩೨೨
ಯೋಗಮಾಲಾತ್ಮಕಂ ೨೩೯
ರೇಖಾಕ್ಷಿತಿಷು ವಿರಾಮ್ಯೈಃ ೧೬೪
ಲಸದ್ಬಿಂದುಭಿರಾಭಾಂತಿ ೨೪೫
ವಂಚಿತಾನ್ಯತ್ರರೂಢೇನ ೨೩೫
ವರ್ಣಭಾರ್ಯಾತಿನಂದ್ಯಾ ೪೩೨
ವಿಷ್ವಗ್ ವಿಷಮವರ್ಣಾನಾಂ ೪೦೨
ವ್ಯಕ್ತಿಕೃತ್ಯ ಕಮಪ್ಯರ್ಥಂ ೨೩೦
ವ್ಯಾಖ್ಯಾಗಮ್ಯಮಿದಂ ೨೨೯
ವ್ಯುತ್ಕ್ರಾಂತಾತಿವ್ಯವಹಿತ ೩೫೨
ಶಿಖರಾದನ್ಯತರಸ್ಮಾತ್ ೪೩೦
ಶೃಂಗಾಗ್ರದ್ವ್ಯರ್ಧ ೪೮೫
ಶೃಂಗಾದ್ಗ್ರಂಥಿಂ ೪೨೯
ಶ್ಲಿಷ್ಟೇಽಗ್ರತಃ ಪಾರ್ಶ್ವತೋಽಪಿ ೪೨೭
ಶ್ಲೇಷೇ ಶ್ಲೇಷೇ ೪೧೬
ಶ್ಲೋಕಸ್ಯಾದ್ಯಂತ ೪೦೩
ಷಡ್ವಾರಪಾದಮಧ್ಯೇ ೪೧೫
ಸಂಕೀರ್ಣಾ ನಾಮ ಸಾ ೨೪೦
ಸಂಖ್ಯಾತಾ ನಾಮ ಸಂಖ್ಯಾನಂ ೨೩೭
ಸಮಾನರೂಪಾ ೨೩೬
ಸಮಾನಶಬ್ದೋಪನ್ಯಸ್ತ ೨೩೮
ಸಮೌ ತುರ್ಯಂ ೪೦೩
ಸಮ್ಮುಖಾರದ್ವಯೇ ೪೦೨
ಸಮ್ಮೂಢಾ ನಾಮ ಯಾ ೩೯
ಸಾ ದ್ವಿಧಾರ್ಥೀ ೨೩೦
ಸಾ ನಾಮಾಂತರಿತಾ ೨೩೮
ಸಾ ಭವೇದುಭಯಚ್ಛನ್ನಾ ೨೪೦
ಸ್ಯಾತ್ ಪಾದಾರ್ಧ ೪೦೨

ಲಕ್ಷ್ಯಪದ್ಯಗಳ ಅಕಾರಾದಿ

ಅಗಾ ಗಾಂಗ ೧೧೮
ಅಗ್ರ್ಯಃ ಪ್ರತ್ಯಗ್ರ ೩೬೧
ಅತಲ್ಪಂ ನಿದ್ರಾಳೂ ೧೯೮
ಅತಿಃ ಅತಿಃ ೨೪೪
ಅತ್ರೋದ್ಯಾನೇ ಮಯಾ ೨೩೬
ಅಥಾಗ್ರೇ ಹಸತಾ ೧೧೯
ಅದ್ಯ ಮೇ ಸಫಲಾ ೨೪೪
ಅನಙ್ಗಲಙ್ಘನಾ ೧೧೭
ಅಂತರ್ವರ್ತ್ತೀಮಥಾಭ್ಯರ್ಣೇ ೨೩೨
ಅನ್ಯಥಾ ಭಾಸತೇ ೨೩೭

ಅಪಾದೋ ದೂರಗಾಮೀ ಚ ೨೪೫
ಅಪ್ಯಶಕ್ಯಂ ತ್ವಯಾ ೪೦
ಅಭಿನವಮದಲೇಖಾಲಾಲಿತಂ ೨೬
ಅಭಿಷಿಕ್ತಃ ಸುರೈರ್ಲೋಕೈಃ ೪೬೧, ೪೬೩
ಅಭೀಕಮತಿಕೇಸೇದ್ಧೇ ೩೭೯
ಅಮೀ ನೃಪಾ ದತ್ತ ೩೩
ಅಯಶೋಭಿದುರಾಲೋಕೇ ೫೪
ಅಲಿನೀಲಾಲಕ ೧೧೭
ಅವದ್ಯನ್ನತ್ರಿಣಃ ೫೨
ಅವಸಿತಂ ಹಸಿತಂ ೪೮
ಅಸಜ್ಜನವಚೋ ೪೦
ಅಸತಾಮಹಿತೋ ೪೬
ಅಸಮಸಮರಲೀಲಾ ೯೮
ಅಸ್ಥಿರ್ನಾಸ್ತಿ ೩೧೮
ಆತಂಕಾರ್ತಿಹರಸ್ತ್ವಪ ೪೪೫
ಆದೌ ರಾಜೇತ್ಯಧೀರಾಕ್ಷಿ ೨೩೮
ಆಪದಿ ವ್ಯಾಪೃತನಯಾ ೫೪
ಆಮ್ನಾಯನಾಮಾಹಾನ್ಯಾ ೧೩೫
ಆರುಹ್ಯಾಕ್ರೀಡಶೈಲಸ್ಯ ೩೫
ಆಸಾದಯತಿ ಯದ್ರೂಪಂ ೩೨೭
ಇತಿ ಶಾಸತಿ ಸೇನಾನ್ಯಾಂ ೧೧೯
ಇತೀಕ್ಷಿತಾ ಸುರೈಶ್ಚಕ್ರೇ ೩೫೯
ಇತ್ಥಂ ದುರ್ಧರದರ್ಪ ೧೭೯
ಇದಂ ಚ ಯೇನ ೪೨
ಇಲಾಪಾಲಾ ಸುಲಾತೀಲಾ ೪೭೪
ಇಹ ಮುಹುರ್ಮುದಿತೈ ೪೮
ಇಹ ರೇ ಬಹಲಾ ಲಾಸೇ ೩೬೪
ಉತ್ತಪ್ತಕಾಂಚನಾಭಾಸಂ ೨೪೪
ಉತ್ತುಂಗ ಮಾತಂಗ ೪೨
ಉದದಾವುದಧಾವಾಜ್ಞಾ ೨೪೪
ಉದಯಿ ತೇ ದಯಿತೇ ೪೭
ಉದಿತೈರನ್ಯಪುಷ್ಪಾನಾಂ ೩೬
ಉದ್ವೇಜಯತಿ ಭೂತಾನಿ ೪೧
ಉಪೋಢರಾಗಾಪ್ಯಬಲಾ ೩೮
ಉರುಗುಂ ದ್ಯುಗುರುಂ ೧೩೪
ಏಕಮೈಶ್ವರ್ಯ ೯೮
ಏಕಯಾ ದ್ವೌ ೨೬೩
ಏವಂ ಪ್ರಗುಣಪ್ರಹರಣ ೧೧೮
ಕಃ ಕೇದೃಜ್ಞ ೩೨೭
ಕಃ ಖಗೌಘಾಜ ೯೭
ಕಃ ಖೇಚರತಿ ೩೨೭
ಕಃ ಪಂಜರಮಧ್ಯಾಸ್ತೇ ೩೨೫
ಕಃ ಸಮುತ್ಸೃಜ್ಯತೇ ೩೨೬
ಕಜ್ಜಃ ಕಿಂ ಕೋಕ ೯೬
ಕಂಜನಾಭಂ ಸುರ ೪೨೭
ಕಂಜರಂ ಪುರಿತೇಂದ್ರಂ ಚ ೩೭೧
ಕಥಂ ತ್ವದುಪಲಂಭಾಶಾ ೪೩
ಕಂದರ್ಪಃ ಕಂಕಣಂ ೨೬೨
ಕಮಲಾವಲಿಹಾರಿ ೪೭೯
ಕಮಲಿನೀಮಲಿನೀ ೪೬
ಕಮಲಿನೀ ಸರಸಾ ೪೭
ಕಮಲೇಃ ಸಮಕೇಶಂ ತೇ ೩೬
ಕರಾಸಂಜವಶೇಶಂ ೪೨೯
ಕರೇಣ ತೇ ರಣೇಷ್ವಂತ ೩೫
ಕರೇಣುಃ ಪ್ರಸ್ಥಿತೋऽನೇಕೋ ೫೩
ಕರಣೇನ ಸಾಧ್ಯತೇ ಸರ್ವಂ ೩೪೩
ಕರೋತೀತಿತಾಮ್ರೋ ರಾಮಾಣಾಂ ೩೫
ಕರೋತಿ ಸಹಕಾರಸ್ಯ ೩೪
ಕಲಂಕಮುಕ್ತಂ ೩೮
ಕಲಾಪಿನಾಂ ಚಾರು ೩೮
ಕಸ್ಮಾದ್ ಭಯಮಿಹ ೩೩೫
ಕಾಕಃ ಶ್ರಯತೇ ೩೨೬
ಕಾಚಿದ್ ಬಾಲಾ ೨೬೪
ಕಾಸನಾಃ ಕಾನನೇ ೯೫
ಕಾನಿ ನಿಕೃತ್ತಾನಿ ೨೪೨
ಕಾಂತಾಯಾನುಗತಃ ೨೪೩
ಕಾಂತೋ ನಯನಾನಂದೀ ೨೫೩
ಕಾಮದಾರ್ಹಸ್ನುತೀರೇಕಾ ೪೪೭
ಕಾಲಕಾಲಗಲಕಾಲ ೩೭
ಕಾಲಂ ಕಾಲಮನಾಲಕ್ಷ್ಯ ೩೬
ಕಾಲಸ್ವರೂಪರೂಪಾಣಾಂ ೨೪೨
ಕಾಹಮಸ್ಮಿ ಗುಹಾ ೩೨೩
ಕಿಂ ಗಹನಂ ಸ್ತ್ರೀ ಚರಿತಂ ೩೩೫
ಕಿಂ ಜೀವಿತಮನವದ್ಯಂ ೩೩೪
ಕಿಂ ವಸಂತಸಮಯೇ ೩೨೪
ಕಿಮಾಹುಃ ಸರಲೋತ್ತುಂಗ ೩೨೫
ಕೀದೃಶಾ ಭೂಮಿಭಾಗೇನ ೩೨೪
ಕುಬ್ಜಾಮಾಸೇವಮಾನಸ್ಯ ೨೩೫
ಕುಲಂ ತಿಮಿಭಯಾದತ್ರ ೫೦
ಕೇನ ಕಃ ಸಹ ಸಂಭೂಯ ೪೨೦
ಕೇ ಮಧುರಾರಾವಾಃ ೩೨೫
ಕೋ ವಾ ದರಿದ್ರೋऽತಿ ೩೩೪
ಕೋ ಸೋ ಚೋಅಣಪಾಅ(ಪ್ರಾ.) ೩೨೪
ಕ್ರಮತಾಮಕ್ರಮಂ ಕ್ಷೇಮಂ ೪೬೧
ಕ್ವ ಕೀದೃಕ್ ಶಸ್ಯತೇ ೩೨೫
ಕ್ಷಿತಿವಿಜಿತಿಕ್ಷಿತಿವಿಹಿತಿ ೧೩೫
ಕ್ಷಿತಿಸ್ಥಿತಿಮಿತಿಕ್ಷಿಪ್ತಿ ೧೩೪
ಖಂಡಿತಾಶಂಸಯಾ ೪೭
ಖರಗರ ಕಾಲಿತಕಂಠಂ ೯೭
ಖಾತಯಃ ಕನಿ ಕಾಲೇ ೨೩೬
ಗಂಗಾಂಬುಧವಲಾಂಗಾಭೋ ೫೦
ಗಿರಾ ಸ್ಖಲಂತ್ಯಾ ೨೩೭

ಗ್ರೀಷ್ಮೇಣ ಮಹಿಮಾನೀತೋ	೪೪
ಗ್ಲಾನಂ ಚೈನಶ್ಚ	೪೭೮
ಘನಗಿರೀಂದ್ರ	೪೮
ಘನಸಾರತಿರಸ್ಕಾರೀ	೪೮೫
ಘನಾಘನಾಭಸ್ಯ	೪೭
ಘನಾಘನಾಭಿನೀಲಾನಾಂ	೪೫
ಘನಾಘ ನಾಯಂ	೪೬
ಚಕ್ರಂ ದಹತಾರಂ	೪೧
ಚಣ್ಡಪಟ್ಟಿಶಕುನ್ತಾಸಿ	೧೬೪
ಚತುರಂ ಚತುರಂಭೋಧಿ	೩೪
ಚನ್ದ್ರಾತಪಂ ಚ ಸತತ	೪೨೪
ಚನ್ದ್ರೇಡಿತಂ ಚಟುಲಿತ	೪೨೨
ಚಂದ್ರೋಚ್ಛಲಜ್ಜಲಂ	೯೮
ಚರಸ್ಫಾರವರಕ್ಷಾರ	೪೮೧
ಚಾರಚುಞ್ಚುಃ	೯೫
ಛಾಯೀ ಮೃಧೇ	೧೦೦
ಜಗತೀಶರಣೇ ಯುಕ್ತೋ	೧೬೧
ಜಗದಾತ್ಮ ಕೀರ್ತಿಶುಭ್ರಂ	೫೧
ಜಗೇ ಕಯಾಪಿ ಸೋತ್ಕಂಠಂ	೨೪೬
ಜಘಾನ ಕರಬಾಲೀಯು	೩೭೧
ಜಚೌಜೋಜಾಽ	೯೪
ಜಯತಾ ತ್ವನ್ಮುಖೇನಾಸ್ಮಾ	೩೫
ಜಯ ದೇವನರೇಂದ್ರಾದೇ	೪೩೧
ಜಹಾತಿ ಕೀದೃಶೀ	೧೬೪
ಜಹುರ್ಪಸಂತೇ	೫೦
ಜಿತಪ್ರಕೃಷ್ಟ ಕೇಶಾಖ್ಯೋ	೨೩೮
ಜಿನ ತ್ವಯಿ ಜನಾ	೪೧೩
ಜೀಯಾಜ್ಜಗಜ್ಜ್ಯೇಷ್ಠ	೧೧೭
ಜುಷ್ಟೇ ಮಂತ್ರಿಜನೇನ	೧೯೯
ಜ್ಯಾಯೋ ಯಶಶ್ಚ	೧೦೦
ತತ್ರ ಬಾಣಾಃ ಸುಪರುಷಃ	೫೪
ತತೋಽರುಣಪರಿಸ್ಪಂದ	೨೫
ತಥಾ ದಧಾನೋಽತನುತಾಂ	೧೨೦
ತದರ್ಥಕಾರೀ ಯತ್ರಾರ್ಥೋ	೨೪೧
ತದ್ಗಣಾ ದದ್ಯ ಶುರ್ಭೀಮಂ	೫೨
ತನುವಾರಭಸೋ ಭಾಸ್ವಾ	೩೬೭
ತಪನಗ್ರಸ್ತದಹನ	೧೩೬
ತಂ ಶ್ರಿಯಾ ಘನಯಾನಸ್ತ	೩೬೭
ತಮೋಽತ್ತು ಮಮತಾತೀತ	೪೬೨
ತರಲಾ ಕಲಿತಾಗಾಹಂ	೩೬೪
ತವ ಪ್ರಿಯಾ ಸಚ್ಚರಿತಾ	೩೭
ತವಾಂಬ ಕಿಂ	೩೨೬
ತವಾವವಾದಃ	೨೪೪
ತಾಪೇನೋಗ್ರೋಽಸ್ತು	೧೩೬
ತಾರೋತ್ಕಾರತರೀ	೯೫
ತುಲಯತಿ ಸ್ಮ ವಿಲೋಚನ	೪೭

ತೇನವ್ಯಾತೇನಿರೇ	೫೨
ತೇ ಮಹೇಂದ್ರ ರಮಾ ಭಾತೇ	೪೭೬
ತ್ವಮಂಬ ರೇಚಿತಂ	೩೫೨
ದಂಡೇ ಚುಂಬತಿ	೨೩೫
ದಂಭಲೋಭಭ್ರಮಾ	೪೪೫
ದಾದದೋದುದ್ದ	೯೬
ದಾಸ್ಯತಿ ದಾಸ್ಯತಿ	೫೦
ದಿವ್ಯೈರ್ಧ್ವನಿಸಿತಚ್ಛತ್ರ	೪೬೨
ದೀನಾದೂನವಿಷಾದೀನಾ	೪೬
ದುರ್ಜನಃ ಸತ್ಸಭಾಂ	೧೯೭
ದೂನಾಸ್ತೇಽರಿಬಲಾದೂನಾಂ	೫೨
ದೇವಾಕಾನಿನಿಕಾವಾದೇ	೩೬೬
ದೇವಾನಾಂ ನನ್ದನೋ	೯೪
ದ್ಯುವಿಯದ್ಗಾಮಿನೀ	೧೯೫
ದ್ರುತಂ ದ್ರುತಂ ವಹ್ನಿ	೪೭
ದ್ವಿಗುರಪಿ ಸದ್ವಂದ್ವೋಽಹಂ	೧೬೮
ಧರಾಧರಾಕಾರಧರಾ	೩೯
ಧೀಶಂ ಕಾಂತಾಭಯಂ	೪೧೬
ನಗಜಾ ನ ಗಜಾ	೪೯
ನತನುತದಾತ	೪೧೯
ನ ತೇ ಧೀರ್ಧೀರ	೩೩
ನತೋನ್ನತಭ್ರೂಗತಿ	೪೧
ನನಾಮಲೋಕೋ	೪೩
ನನು ಹೋ ಮಥನಾ	೫೩
ನನೋನನುನ್ನೋ	೯೬
ನ ಪ್ರಾಪ್ತಂ ವಿಷಮರಣಂ	೫೪
ನಮಂದಯಾವರ್ಜಿತ	೩೮
ನ ಮಯಾಗೋರಸಾಭಿಜ್ಞಂ	೧೯೪, ೨೩೪
ನಮಸ್ತೇ ಜಗತಾಂ ಗಾತ್ರ	೪೬೫
ನಮಸ್ತೇ ಮಹಿಮಪ್ರೇಮ	೪೭೭
ನಮ್ರಾಕಲ್ಪಕ ಚಂದ್ರಹಾಸಿ	೪೪೧
ನಯನಾನನ್ದ ಜನನೇ	೧೧೬
ನಯಾನಯಾಲೋಚನ	೩೭
ನರಾ ಜಿತಾ ಮಾನನಯಾ	೩೮
ನಶಶೀನವೇ ಭಾಗೇ	೪೭೨
ನ ಶ್ರದ್ಧಧೇ ವಾಚಮಲಜ್ಜ	೩೯
ನ ಸ್ಪೃಶತ್ಯಾಯುಧಂ	೨೪೦
ನಾದಿನೋಽಮದನಾ	೪೦, ೩೫೬
ನಾನಾಕಾರೇಣ	೪೧
ನಾನ್ಯಾಽಜಾವವಜಾನಾನಾ	೫೩, ೩೬೭
ನಾಭೇರಭಿಮತೋ	೨೪೫
ನಾಮಾಕ್ಷರಾಣಾಂ	೧೧೮
ನಾಯಕಂ ನೌಮಿ	೪೧೫
ನಾರೀಣಾಮಲಸಂ ನಾಭಿ	೪೩
ನಾಸುರೋಽಯಂ ನ ವಾ	೩೬೭
ನಾ ಸ್ಥೇಯಃ ಸತ್ವಯಾ	೩೮

ನಿಗೃಹ್ಯ ನೇತ್ರೇ ಕರ್ಷಂತಿ ೩೪
ನಿಜದೋರದನೋದೀರ್ಣ ೩೭೦
ನಿಧ್ವನಜ್ಜವಹಾರೀಭಾ ೩೬೪
ನಿಪೀಡನಾದಿವ ೯೮
ನಿಶಿತಾಸಿರತೋऽಭೀಕೋ ೫೩, ೩೬೪, ೩೬೭
ನೀತಿಖ್ಯಾತಿ ಪ್ರತಿಷ್ಠಾ ೪೨೨
ನೂನಂನುನ್ನಾನಿ ೯೬
ನೃಪೇಣ ಕನ್ಯಾಂ ೧೫೫
ಪದಾತಿರಥನಾಗಾಶ್ವ ೩೪
ಪಯೋಧರಭರಾಕ್ರಾಂತಾ ೨೪೩
ಪರಂಪರಾಯಾ ಬಲ ೩೯
ಪರಂ ಫಲಪ್ರದಂ ೯೮
ಪರಾಗತರುರಾಜೀವ ೩೫
ಪರ್ಯಾಯೇಣಾನ್ಯೇಷಾ ೪೧
ಪಶ್ಯಂತಿ ಪಥಿಕಾಃ ೪೩
ಪಾತು ವೋ ಭಗವಾನ್ ವಿಷ್ಣುಃ ೩೬
ಪಾನೀಯಂ ಪಾತುಮಿಚ್ಛಾಮಿ ೧೯೫
ಪಾಂಥಾರಿ ದ್ವಿಷದಂಗನಾ ೨೪೬
ಪಾಪ್ಮಾಪಹಾರೀ ೧೧೬
ಪಿಬತಸ್ತೇ ಶರಾವೇಣ ೧೯೪
ಪಿಬತೋತವಾರಿವಾಸ್ಯಾಂ ೧೯೩
ಪುಷ್ಪನ್ವಿಲಾಸಂ ನಾರೀಣಾಂ ೪೪
ಪ್ರಚಂಡಬಲ ನಿಃಕಾಮ ೪೧೨
ಪ್ರತ್ಯಂಕಮಂಕುರಿತ ೨೧೧
ಪ್ರಭಾವತೋ ನಾಮ ೩೯
ಪ್ರವೃತ್ತೇ ವಿಕಸದ್ಧ್ವಾನಂ ೩೬೯
ಪ್ರಾಪ್ಯ ಭೀಮಮಸೌ ೫೩
ಬಾಲಕೈರ್ಯಸ್ಸೋಪಿ ೨೧೧
ಬಾಲಾ ಲಲಿತತೀವ್ರಸ್ವ ೩೬೦
ಬಾಲಾ ಸುಕಾಲಬಾಲಾ ೩೬೦, ೩೬೫
ಬಿಭರ್ತಿ ಭೂಮೇರ್ವಲಯಂ ೩೮
ಬ್ರಹ್ಮಾಣೀ ಕಾ ಜನೇಷ್ಟಂ ೩೩೧
ಭದ್ರ ಮಾಣವಕಾಖ್ಯಾಹಿ ೩೨೩
ಭರಂ ಯಾಮಮಯಾ ೩೭೧
ಭವಕಾನನಮತ್ತೇಭ ೪೧೩
ಭವಾದೃಶಾ ನಾಥ ೩೭
ಭಾಸತೇ ನುತ ಕಾಮೇಶ ೩೭೩
ಭಾಸತೇ ಹಂಸವಿದ್ಯೋತ ೪೧೮
ಭಾಸುರಾಸಿಃ ೯೯
ಭೀತಾಭೀತಾ ೪೫
ಭೀಮಾಸ್ತ್ರರಾಜಿನಸ್ತಸ್ಯ ೫೪
ಭೂಮಿಪಾಮರ ೪೧೭
ಭೂರಿಭಿರ್ಭಾರಿ ೯೫
ಭೂರಿಭೂತಿಂ ೧೧೬
ಭ್ರಮರದ್ರುಮಪುಷ್ಪಾಣಿ ೪೦
ಮತಾಂಧುನಾನಾ ೩೭
ಮದನದಾರುಣ ೪೮
ಮದನೋ ಮದಿರಾಕ್ಷೀಣಾಂ ೩೫೭
ಮಧುರಂ ಮಧುರಂಭೋಜ ೩೪
ಮಧುರೇಣ ದೃಶಾಂ ಮಾನ ೩೫
ಮಧ್ಯೇऽಧಸ್ತಾದ್ದ್ವೇಪದೇ ೪೪೮
ಮನೋಭವ ತವಾನೀಕಂ ೩೫೩, ೩೫೭
ಮಮ ಮಾನಸ ೩೭೪
ಮಯಾ ಮಯಾಲಂಬ್ಯ ೩೭
ಮಹಾನಂದ ದಯಾದಾನ ೪೫೮
ಮಹೀಶೂರಪುರೀಂ ಭವತಃ ೧೯೮
ಮಾತಜ್ಞಾನಜ್ಞವಿಧಿ ೪೪೪, ೪೬೬
ಮಾತಾನತಾನಾಂ ೪೨೫, ೪೪೧
ಮಾನನಾ ಪರುಷಂ ಲೋಕ ೪೪೪, ೪೫೬
ಮಾನಿನೀ ಮಾ ನಿನೀಷುಸ್ತೇ ೩೫
ಮಾನೇನ ಮಾನೇನ ಸಖಿ ೩೪
ಮಾಮಭೀದಾ ಶರಣ್ಯಾ ೪೪೪, ೪೫೦
ಮಾಮಾಕಾರಯತೇ ೫೧
ಮಾ ಮುಷೋ ರಾಜಸಂ ೪೪೪, ೪೪೮
ಮಾಯಾಜ್ಞ್ಯಸ್ಯಾಟನಭ್ರೂಃ ೪೭೫
ಮಾಯಾವಿನಂ ಮಹಾಹಾವಾ ೪೪೪, ೪೫೩
ಮಾರಸಾರ ಸಮಾಕಾರ ೩೬೯
ಮಾರಾರಿಶಕ್ರ ೪೨೫
ಮಾರಾರಿಶಕ್ರ ರಾಮೇಭ ೪೪೧
ಮಾ ವಿಹಾಸಿಷ್ಟ ೫೨
ಮಾಹಿಂಪಾಖ್ಯೇ ರಣೇऽನ್ಯಾ ೪೪೪, ೪೫೪
ಮುದಾರತಾಡೀ ೪೧
ಮುದಾ ರತಾಸೌ ೪೨
ಮುದಾ ರಮಣಮನ್ವೀತ ೩೬
ಮುದಾ ಸೇನಾಮುದಾಸೇನಾ ೪೫
ಮೂರ್ಧ್ನಾನಂ ದುಧುವುಸ್ತತ್ರ ೧೧೮
ಮೇಘನಾದೇನ ಹಂಸಾನಾಂ ೩೪
ಯಾತ್ತ್ವಯಾ ಶಾತ್ರವಂ ೪೫
ಯತ್ನಂಸೂಚನ ಪೂಜಿತಾಂಗ ೪೪೮
ಯತ್ನಂಸೂಚಿತಕಂ ೩೭೪
ಯತ್ನಂಸೂಚಿತ ವಸ್ತು ೩೭೪
ಯಥಾ ಯಥಾ ೫೦
ಯದಿ ದೇವರೇಣ ಭಣಿತಾ ೧೯೫
ಯುದ್ಧ್ಯೋವಿಸ್ಮಯವಾಸ್ತು ೩೭೩
ಯಶಶ್ಚ ದೇ ದಿಕ್ಷು ೩೮
ಯಸ್ಯಾಹುರತಿಗಂಭೀರ ೪೮
ಯಾತುರಾಜಿದಭಾಭಾರಂ ೧೫೬
ಯಾತ್ರಯಾ ಘನಭೋ ೧೫೬
ಯಾನಮಾನಯಮಾರಾವಿ ೪೦, ೩೫೬
ಯಾ ಪಾತ್ಯಪಾಯಪತಿತಾ ೪೬೯
ಯಾಮತಾಶ ಕೃತಾಯಾಸಾ ೪೦, ೩೫೬
ಯಾಮ ಯಾಮತ್ರಯಾಧೀನಾಂ ೩೬

ಯಾ ಮಾನೀತಾನೀತಾ ೪೬
ಯಾಶ್ರಿತಾ ಪಾವನತಯಾ ೪೭೦
ಯಾಸಾಂ ಚಿತ್ರೇ ೪೫
ಯಾ ಹತಾರಿಗಣಾ ೧೯೭
ಯುಧ್ಯಧ್ವಂ ಮಾಸ್ಮ ೯೯
ಯೇ ನಾನಾಧೀನಾವಾ ೩೬೧
ಯೋ ನಾಜ್ಯಮಾಸಾದ್ಯ ೪೨
ರಣೇನ ಸಾಧ್ಯತೇ ಸರ್ವಂ ೩೪೩
ರಮಣೀ ರಮಣೀಯಾ ಮೇ ೩೫
ರವೇಣ ಭೌಮೋ ೩೭
ರಸಾಸಾರ ರಸಾಸಾರ ೪೫
ರಸಾ ಸಾರರಸಾ ಸಾರ ೩೬೩
ರಾಗಿತಾಜಿವರಾ ೩೬೯
ರಾಜತೇ ನಿರ್ಭಯಂ ೪೭೬
ರಾಜಿತೈರಾಜಿತೈಕ್ಷ್ಣೈ್ಯೇನ ೩೪
ರಾಜೀವೋಪಮ ೩೫೨
ರಾತಾವದ್ಯಾಧಿರಾಜ್ಯಾ ೪೭೩
ರಾಮೋ ರಿಪುಃ ೫೩
ರಾಮೋಽಭಿರಾಮಃ ೧೫೫
ರಾಮೋ ವಾಚ್ಯತಿ ೧೯೯
ರೇ ರೇ ರೋರು ೯೩
ರೈರೋಽರೀರೋ ೯೪
ಲಸದ್ಬಿಂಬುಭಿರಾಭಾಂತಿ ೨೫೩
ಲೀಲಾಸ್ಮಿತೇನ ಶುಚಿನಾ ೩೭
ಲೋಲಾಲೋಲಂ ೯೭
ವಟವೃಕ್ಷಃ ಪುರೋಯಂ ೨೪೫
ವನೇಽವನೇ ವನಸದಾಂ ೫೨
ವರಾಹೇಣೋದ್ಧೃತಾ ಯಾಸೌ ೩೫
ವಲ್ಲ್ಯಾಂ ಸಂಬುಧ್ಯತಾಂ ೪೮೦
ವಸನ್ನರೋಗೋಽತ್ರ ೫೦
ವಸುಪರಾಸು ಪರಾಸು ೪೦
ವಾರಣಾಽಗಗಭೀರಾ ೫೪, ೩೬೪
ವಾರಣೋ ವಾ ರಣೋದ್ದಾಮೋ ೩೪
ವಾಹನಾಜನಿ ಮಾನಾಸೇ ೫೩, ೩೬೪
ವಿಕಾಶಮೀಯುರ್ಜಗತೀಶ ೫೨
ವಿಜಿತಾನ್ನಭವದ್ವೇಷಿ ೨೩೯
ವಿಜಿತ್ಯಾನನಮಂಭೋಜಂ ೪೧೮
ವಿದಗ್ಧಃ ಸರಸೋ ೨೪೩
ವಿದಿತೇ ದಿವಿ ಕೇಽನೀಕೇ ೩೬೫
ವಿನಾಯಕೇನ ಭವತಾ ೩೯
ವಿನಾಯಮೇನೋ ೪೨
ವಿಯದ್ವಿಯದ್ವೃಷ್ಟಿ ೪೮
ವಿರಾಟನಗರೇ ರಾಜನ್ ೧೯೬
ವಿಲುಲಿತಾಲಕಸಂಹತಿ ೪೭
ವಿವಿಧಧವವನಾ ೪೧, ೪೯
ವಿಶದಾ ವಿಶದಾಮತ್ತ ೩೪
ವಿಷಮಂ ವಿಷಮನ್ವೇತಿ ೩೪
ವಿಷಾದೀ ಭೈಕ್ಷ್ಯಮಶ್ನಾತಿ ೧೯೭
ವಿಹಗಾಃ ಕದಂಬ ೪೮
ವೀನಾಂ ವೃಂದಂ ೪೯
ವೃಕ್ಷಾಗ್ರವಾಸೀ ನತು ೨೪೬
ವೃತ್ತಾಂತಗೋಪಿಕಾಂತಾಯಾ ೨೩೬
ವೇತ್ರಾಶಾಕಕುಜೇ ೫೨, ೩೬೭
ವೇದಾಪನ್ನೇ ಸ ಶಕ್ಲೇ ೩೫೭
ವೈಧೈರೈನ್ಯೈರೈ ೧೩೪
ವ್ಯಾಲಾವಲೀವಿಲಯ ೯೯
ಶಯನೀಯೇ ಪರಾವೃತ್ಯ ೨೩೯
ಶರವರ್ಷೀ ಮಹಾನಾದಃ ೧೯೭
ಶರ್ವರೀಶ್ವರಯಶಾಃ ೯೯
ಶಲಭಾ ಇವ ೧೧೭
ಶಾಂತೇ ಭೂತತಭೂತೇಶಾಂ ೩೬೭
ಶೀತಲಂ ವಿದಿತಃರ್ಥಾಗಂ ೪೧೩
ಶುದ್ಧಂ ಬದ್ಧಸುರಾಸ್ಥಿಸಾರ ೪೩೬
ಶುಭದಶರಥವೀರ ೧೭೬
ಶ್ರೀದೀಪ್ತೀ ಹ್ರೀಕೀರ್ತೀ ೧೩೫
ಶ್ರೀದುರ್ಗದತ್ತವಂಶ್ಯಃ ೧೭೯
ಶ್ರೀಮಜ್ಜಿನಪದಾಭ್ಯಾಶಂ ೪೬೩
ಶ್ರೀಮಾನಮಾನಮರವರ್ತ್ಮ ೩೭
ಶ್ರೀವೀತವೀರಾಗತ ೩೭೪
ಸಂಸಾರವಿಷಮವಾರಿಧಿ ೪೫೩
ಸಕಲಾಪೋಲ್ಲಸನಯಾ ೩೫
ಸಕಾರನಾನಾರಕಾಸ ೩೬೯
ಸಂಗರಾನಿಯಮಾದೇವ ೩೭೪
ಸತ್ವಂ ಮಾನ ವಿಶಿಷ್ಟಂ ೪೩೬
ಸ ತ್ವಾರಂ ಭರತೋಽವಶ್ಯಂ ೪೩
ಸದೈವ ಸಂಪನ್ನವಪೂ ೫೪
ಸಂತಾಪ ಸೀತಾನಲ ೧೬
ಸಂತೋಽವತ ಬತ ೪೬
ಸನ್ನಾರೀಭರಣೋಮಾಯ ೪೧
ಸನ್ನಾಹಿತೋ ಮಾನ ೩೯
ಸಪದಿ ಕೃತಪದಸ್ತ್ವ ೪೦
ಸಭಾಜನಂ ಸಮಾನೀಯ ೪೪
ಸಭಾಜನೇನೋಪರಿ ೪೨
ಸಭಾಸಮಾನಾಸಹಸಾ ೫೦
ಸಭಾಸು ರಾಜನ್ನಸುರಾ ೩೬
ಸಭಾ ಸುರಾಣಾಮಬಲಾ ೩೮
ಸಮಜಂ ಘಾತುಕಂ ೩೨೫
ಸಮಂ ಸ ಸೈನ್ಯೇನ ೪೮
ಸಮರಣಮಹಿತೋ ೩೫೭
ಸಮಸ್ತಭುವನವ್ಯಾಪಿ ೪೪
ಸಮಾನಯಾಸಮಾನಯಾ ೩೯
ಸಂಬೋಧ್ಯಸೇ ಕಥಂ ೩೨೬

ಸಂಭೃತೋ ಕೃತ ೩೬೦
ಸರಣೇ ಸರಣೇನ ೪೬
ಸರತ್ಸ್ರಾರಾತಿ ೯೭
ಸರಮಣಹಿಮಂತೋಯ ೩೫೭
ಸರಲಾಬಹಲಾರಮ್ಬ ೪೫೯
ಸರಸಾಯಾರಿವೀರಾಲಿ ೩೬೨
ಸ ವಾಜಿಸಿಂಧುರ ೩೬೦
ಸವಿಸರಾಸುರ ೯೫
ಸಶ್ರೀಮಾನಮ್ಯದುರ್ನಿಸರ್ಗ ೧೭೯
ಸಸತ್ವರತಿದೇ ನಿತ್ಯಂ ೩೬೫
ಸಸತ್ತ್ವಶಾಲೀ ೧೬೨
ಸ ಸಾಧುಸಂಧೋ ೯೯
ಸಸಾರ ಸಾಕಂ ೪೫
ಸ ಸಾಸಿಃ ಸಾಸುಸೂಃ ೯೪
ಸಹಯಾ ಸಗಜಾ ೨೪೦
ಸಾದರಂ ಯುಧ್ಯಮಾನಾಪಿ ೫೩
ಸಾ ದಿನಾಮಯುಮಾಯಾಮಾ ೩೫೬
ಸಾಧುಃ ಸಂಸಾರಾದ್ ೩೩
ಸಾಧುನಾ ಸಾಧುನಾ ತೇನ ೩೩
ಸಾ ಮುಮಾರಿಧಮನೀ ೯೭
ಸಾಮಾಯಾಮಾ ೩೫೫, ೩೫೭
ಸಾರಯಂತಮುರಸಾ ೩೭
ಸಾಲಂ ಸಾಲಂಬಲಿಕಾ ೩೬
ಸಾ ಸತೀ ಜಯತಾದತ್ರ ೪೩೦
ಸಾಸಮಾತ್ವಾ ಸುಮನಸಾ ೪೬೦
ಸಾಸೇನಾಗಮನಾರಮ್ಭೇ ೪೬೨
ಸಾ ಸ್ಯಾತ್ ಪ್ರಮುಷಿತಾ ೨೩೬
ಸಿತಾಸಿತಾಕ್ಷೀಂ ೩೩
ಸೀಮಾಸೀಮಾನಭೂಮಿಃ ೪೭
ಸುಖಕರ ಧರ್ಮನಿದೇಶೀ ೧೬೩
ಸುದೃಶೋ ರಸ ೪೦
ಸುಭದ್ರಾಂಕ ಉಪಾಯಂಸ್ತ ೩೨೩
ಸುರಾಃ ಸುರಾಲಯೋ ೨೩೭
ಸುರಾಜಿತಹ್ರಿಯೋ ಯೂನಾಂ ೩೬
ಸೂರಿಃ ಸುರಾ ೯೫
ಸೇನಾವೇನಾಂ ಸಪತ್ನಸ್ಯ ೧೧೮
ಸೇನಾ ರುರುಧಿರೇತೇನ ೧೯೭
ಸೇನಾ ಲೀಲೀಲೀನಾ ೩೫೯
ಸೋಽವ್ಯಾಚ್ಛಾಂತಿರ್ಜಿತ್ಯೈನಾ ೪೫೩
ಸ್ತನಜಘನಭರಾಭಿರಾಮ ೧೯೪
ಸ್ಮರಾಸಲೋ ಮಾನವಿವರ್ಧಿತೋ ೩೯
ಸ್ಯಂದನಾ ನೋ ೫೨
ಸ್ವಯಮೇವ ಗಲನ್ಮಾನ ೩೫
ಸ್ವಸ್ಥಃ ಶ್ರೈಲೇ ೪೯
ಸ್ಥಾಣುರ್ಭವಾನ್ ೨೪೬
ಸ್ನಾತಸ್ವಮಲಗಂಭೀರಂ ೪೬೦
ಸ್ಥಿರಾಯತೇ ಯತೇಂದ್ರಿಯೋ ೩೬
ಸ್ಫುರತ್ಕುಣ್ಡಲರತ್ನೌಘ ೧೧೬
ಹತಾಖಿಲಬಲಸ್ತೇನ ೧೧೮
ಹನ್ತ ಹನ್ತರರಾತೀನಾಂ ೪೦
ಹೃತದ್ರವ್ಯಂ ಜನಂ ೨೩೮

೩/ಕನ್ನಡ ಸೂತ್ರಪದ್ಯಗಳ ಮತ್ತು ಲಕ್ಷ್ಯಪದ್ಯಗಳ ಅಕಾರಾದಿ

(ಅಂಕಿಗಳು ಪುಟಗಳನ್ನು ಸೂಚಿಸುತ್ತವೆ.)

ಸೂತ್ರಪದ್ಯಗಳ ಅಕಾರಾದಿ

ಅತಿಶಯ ವರ್ಣಕ್ರಮಂ ೨೨೨
ಅದಱಿಂ ಪರಮಾಗಮ ೨೨೨
ಆವ ಪದದಾದ್ಯಕ್ಷರಂಗಳು ೩೩೩
ಎರಡರ್ಥದಿನೆಸೆವೊಂದಕ್ಷರಾಳಿ ೬೫
ಎರಡರ್ಥಂಗಳೆ ೩೭೯
ಕಥೆ ಕಬ್ಬಂಗಳ ೨೩೨
ನುಸುಳೊರ್ನುಡಿ ೨೪೭
ಪದವರ್ಣವ್ಯಾವೃತ್ತಿ ೫೭
ಪರಿವೃತ್ತಂ ಸಂದಷ್ಟಂ ೬೨
ಪ್ರಕಟಿಸಿದೆನಿದಂ ೭೧
ಪ್ರತಿಲೋಮತೆಯಿಂದಕ್ಷರ ೩೭೭
ಬವಕಾರಂಗಳ್ ೬೪, ೩೯೭
ಭಾವಿಸಿ ನೋಡೆ ೩೩೦
ಭಾವೆಯುಂ ನುಸುಳುಂ ೨೪೭
ಯಮಕ ಪ್ರಹೇಳಿಕಾದಿಗಳ್ ೬೫, ೨೫೯
ಲೋಕವೈದಿಕ ಸಾಮ್ಯಕ ೫೬

ಶಾನಸ್ತಂಭವು ಅಂತರ್ಲಾಪಿ ೩೩೦
ಸಂದ ಗತಪ್ರತ್ಯಾಗತಂ ೩೮೩
ಸಂದ ಸರ್ವಗತಂ ೬೧

ಲಕ್ಷ್ಯಪದ್ಯಗಳ ಅಕಾರಾದಿ

ಅಕ್ಕರವೋದುವಂತೆ ಕುಱುಪಾದುದು ೨೬
ಅಂಗಜಕಾಲಾಂಧಕಹರ ೧೩೨
ಅಂಗ ತೆಳ್ಳಗೆ ಆಗಿ ೨೬೮
ಅಂಗನೃಪಾಯತಿ ತುಂಗಭುಜಂ ೧೭೯, ೧೮೦, ೧೮೧
ಅಂಗವಿಲ್ಲದನ ೨೯೮
ಅಜನ ಕುವರನಾತ್ಮಜನ ೩೦೧
ಅಜಾತಶಂಖಂ ತಾನಾಪ್ತಂ ೩೭೮, ೪೬೫
ಅಜೇಯಂ ಪೋಲ್ಕುಮಾ ೫೬
ಅಂಚೆ ಹಂಸೆಯುದಲ್ಲ ೩೨೧
ಅಡರಿ ತೊಡರ್ಪಿನೊಳಿರ್ಪಂ ೨೬೦
ಅಡವಿ ಬಯಲಾಗೆ ೭೮
ಅಡವಿಯಲಿ ಹುಟ್ಟಿದುದು ೨೭೮
ಅತಿವಿಕಾರಿಣಿ ಕ್ರೋಧಿ ೧೭೪
ಅತ್ತತ್ತು ಬೇಸಱಿಸುತಿದೆ ೨೨೩
ಅತ್ತೆಯು ಬೈಗುಳ ಮಾತಿಂ ೩೪೧
ಅನಘನನಪ್ರಮೇಯ ೧೪೩
ಅನುಸಿಂಚತ್ಸಲ್ಲಕೀ ೮೮
ಅಂಧಕನನುಜನ ೩೦೬
ಅಮಮ ಕರಿಮುಖಜನಕ ೧೦೮
ಅಮಳ್ಗಳ್ ನಯವಿಕ್ರಮಗುಣ ೫೯
ಅಂಬರದೊಳಾಡುವುದು ೩೧೮
ಅರೆಮನೆಗಲ್ಲು ಸೂಳೆಮನೆಗಲ್ಲು ೮೪
ಅರಸಿಯ ದಿವ್ಯಸೇವಾದರ ೨೦೦
ಅರಳಿದ ಪುಷ್ಪದಂತೆ ೨೬೩
ಅರಿಕಾಮಧ್ವಂಸಿ ೧೫೭
ಅರೆವ ಕಲ್ಲಿನ ಮೇಲೆ ೨೮೦, ೩೧೮
ಅರೋಗತಾಶ್ರೀ ೭೬
ಅಱಿಕಲ್ಲೊಡೆಂದೇ ೭೫
ಅಲಗಿನ ಮನೆಯಲ್ಲಿ ೨೬೯
ಅಸುಹೃತ್ಸೇನೆಗೆ ೨೧೦
ಅಳವಳಿಸಂ ಬೆಬ್ಬಳಿಸಂ ೨೮
ಅಳಿಯಂದದೆ ಕುಂತಲಮಂ ೭೩
ಅಳಿಯಳಕದ ಗಜಗಮನೇ ೨೬೩
ಆ ಗಿರಿಯ ನಿತಂಬಂ ೬೫
ಆಜಿಚೈತ್ರಂ. ಕರಂ ೩೮೭
ಆತನಲ್ಲದನಂ ೨೦೩
ಆದಿರುದ್ರಗಣಾದಿಪರ್ವಂ ೧೭೧
ಆ ನೆಗಟ್ದ ನಿಳಿಂಪ ೮೨
ಆರಡಿಯ ವಾಹನನ ೩೦೨
ಆರೆರೆಯರಿಳೆಯೊಳಾಶಾ ೧೦೪
ಆರೈದು ನೋಳ್ಪೊಡೀ ೬೭
ಆಲೋಚಂ ಸಾಲದೆ ೫೮
ಆವನಾವುಕತ್ಸಕ್ಷುಚಯಂ ೨೫೨
ಆವುದು ಬಾಗಿದುದುಂ ೨೫೪
ಇಂಗಿತಶಿಕ್ಷಿತನಿಂದುಯಶಂ ೧೮೨
ಇಟ್ಟೆಡೆಗೆ ತಾಗುವುದು ೩೧೪
ಇದು ಪುಣ್ಯ ಇದು ಪಾಪ ೧೪೨
ಇನನಿಲ್ಲವಿಂದು ಬಾರಂ ೨೨೩
ಇನಿತಾಯಾಸಂಗೆಯ್ಯಲ್ ೧೨೬
ಇಂದಿರೆಯ ಕಾಂತ ೬೭
ಇಂದು ನೋಡಿದು ೨೫೩
ಇಂದು ಪಡೆದವನಾ ೨೯೩
ಇನ್ನು ಬಲ್ಲರೆ ಕಾಯಿ ೩೧೭
ಇನ್ನೇಕೆ ದೋರನೋಲಗ ೩೪೨
ಇಂ ಪೇಟದೆ ನಿಲೆ ೮೬
ಇರದೆಯ್ದಿ ಸಂತೃಪ್ತ ೨೧೬
ಇರುಳೊಳ್ ಕಾಣುವ ೨೯೫
ಇಷುಪ್ರಾಯಂ ಗೇಯಂ ೨೭
ಈ ಧರೆಯ ಪೆಂಡಿರುದ್ಧ ೬೦
ಈ ನವೀನ ಸಿತಾಂಭೋಜ ೨೪೮
ಈ ನುಡಿಯೀ ಬಗೆ ೧೪೨
ಈರೈದನೊಡಮೆಟ್ಟಿ ೨೮೬
ಉತ್ತಮನುಚಿತಜ್ಞ ೧೪೨
ಉತ್ತರೆಯ ತಾಯ ೨೯೫
ಉಪದಾತ್ತನುತೋನ್ನತಮಂ ೬೦
ಉಮೆಗೆ ಮಹೀಜೆಗೆ ೨೫೭
ಉರಗೇಂದ್ರನಳಿಯನ ೨೯೫
ಉರಚರನ ಮಗಳ ೨೯೫
ಉರಿಬಂದು ಬೇಲಿಯನು ೨೭೮
ಉರಿಯ ಮೊನೆಯ ೨೭೩
ಉರಿಯಾತ ನಿಂತ ೨೭೦
ಉರುತರ ಸಿತಕೀರ್ತಿ ೩೭೯
ಉರುವ ನಾಮವು ೨೬೬
ಊದುವ ತಣ್ಣೆಲರಿಂದಂ ೬೯
ಊರ್ಜಿತ ತೇಜ ೧೪೨
ಋತು ಸುತ ವೈರಿಯ ೩೦೦
ಎಂಟು ಬಳ್ಳದ ನಾಮ ೩೧೬
ಎಂಟು ಮಂದಿ ಹೆಂಡರಿಗೆ ೩೧೪
ಎತ್ತಿದುದೊಂದು ೧೫೯
ಎತ್ತಿ ಬಹ ಸತ್ತಿಗೆಯ ೩೮
ಎಂದೆಂದು ಇಂಥ ೨೭೬
ಎರಡು ಪಕ್ಕದ ಪಕ್ಷಿ ೨೬೫
ಎರಡೈದು ಸ್ಯಂದನದವನ ೩೦೦
ಎಲೆ ಕಂತಿ ನೀನು ೧೨೫
ಎಲೆಯೇಕೆಲೆಗೇ ೧೪೦
ಎಲ್ಲಕ್ಕೂ ಮೊದಲು ೨೬೬

ಎಳೆಯ ಕಪ್ಪಿನ ಬಾಲೆ	೨೬೮	ಕರಧೃತಶರ	೧೮೫
ಏಣನಯನೆ ಏಣಭೋಜ	೩೦೫	ಕರಮೆ ಚರಿತಾರ್ಥಂ	೧೮೩
ಏಣ್ಣುಗ್ಗಟ್ಟುಂದಳದ	೩೩೬	ಕರವುಂಟು ಕಾಲಿಲ್ಲ	೩೧೭
ಏತಱಿದಱಿಯೆಂ	೧೨೭	ಕರಿಣೀಶೃಂಗಾರಂ	೧೭೦
ಏನನೇನಂ ಮಹಾಘೋರಂ	೨೦೨	ಕರಿನುತಚರಣ	೧೮೬
ಏನಿದೆತ್ತಣ ಬಯಕೆ	೨೮೭	ಕರಿಪಂ ಸುಭಕ್ತಿ	೧೮೮, ೧೮೯
ಏಳು ವರುಷದ	೨೧೦	ಕರಿಯ ಕಂಬಳಿ	೨೬೯
ಐದನೆಯ ತಿಂಗಳಲಿ	೨೮೭	ಕರಿಯುರಗ	೩೪೨
ಒಗೆತನದೊಳು ಸುಖವಿಲ್ಲ	೨೮೮	ಕರಿವದನನ ಪೆತ್ತ	೨೯೭
ಒಡಲಿಂಗೆಯುಸುರುಂಟೆ	೩೨೧	ಕರಿವೈರಿ ಖಟ್ವಾಂಗಿ	೧೦೬
ಒಂದನೆಡೆಗೆಯ್ದೆರಡು	೨೮೫	ಕರಿಹರಿಸರ್ಪ	೩೨೨
ಒಂದಱಲ್ಲಿ ಬಂದು	೨೭೪	ಕರುಣಂ ಚಕ್ರಕ್ಕೆ	೧೭೧
ಒಂದಱಿಂದೆರಡಹುದನಱಿ	೨೮೪	ಕರುಣಾರಸವರುಣಾಲಯ	೨೬
ಒಂದು ಗೞಿಗೆಯೊಳೆ	೨೫೫	ಕರುಣೆ ಕಾಮಿತದ	೧೪೬
ಒಂದು ಮರ ಹನ್ನೆರಡು	೩೧೭	ಕರೆತಾರೆ ಕಾಮಿನಿ	೩೦೪
ಒಂದು ಮರ ಹುಟ್ಟಿ	೨೮೭, ೩೧೭	ಕಱಿಕಱಿಗುಂದಿದಂ	೭೮
ಒಳನಾಱು ಹೊರನಾಱು	೩೧೩	ಕಲಿ ಕೊಂಕಲ್ಕೇಕಕ್ಕಂ	೧೦೫
ಓರೊರ್ವರ್ ಸೆಣಸಿ	೬೩	ಕಲಿ ತುಂಗಭುಜಂ	೧೮೧
ಓಲೆದೋರೆಪೊಳೆವೋರೆಲೆ	೧೪೨	ಕಲಿಯಂಗನೃಪಾಯತಿ	೧೮೧
ಓವೋವೊಲ್ವೋ	೧೪೧	ಕಲಿಯಿಂಗಿತಶಿಕ್ಷಿತ	೧೮೦
ಕಂಸಾಸುರಹರಂ	೪೨೭	ಕಲಿ ರಾವಣ ಸತಿಯ	೩೩೩
ಕಚ್ಚಿದರೆ ಕೆಚ್ಚುವುದು	೨೭೮	ಕಲಿ ಶಿಕ್ಷಿತನಿಂದುಯಶಂ	೧೮೧
ಕಡಲ ದಾಂಟಿದನ	೨೯೩	ಕಲಿ ಸಲೆ ಬಲಿ ಕಲಿ	೧೮೧
ಕಡಲೇನೆಸೆದುದೊ	೭೩	ಕಲ್ಲರಳಿ ಹೂವಾಗಿ	೨೭೯
ಕಡುಗಲಿ ಸೆಣಸುವ	೨೧೦	ಕಲ್ಲೊಳಗೆ ಹುಟ್ಟುವುದು	೨೬೪
ಕಡುಚೆಲುವಿಂ ರವಿ	೩೪೧	ಕವನವಂ ರಚಿಪರ್	೩೯೩
ಕಡೆಕಪ್ಪು ನಡುಬಿಳಿದು	೩೧೭, ೨೬೯	ಕವಿತಾಶ್ರೀಗೆ ಜನಾರ್ದನಂ	೧೬೯
ಕಡೆದೊಡೆಯಲ್	೩೧೦	ಕವಿ ನಿರ್ವಾಣಂಗೆ	೮೪
ಕಡೆದೊಡೆಯಲ್ಬುವಿ	೩೩೪	ಕವಿರಾಜಸಮಾನಂ ತಾಂ	೪೮೭
ಕಡೆ ಬಿಳಿದು ನಡು ಕಪ್ಪು	೩೧೭	ಕಸವರಮೆಂಬುದು ನೆಱಿ	೮೭
ಕಂಡೊಡನಾಡಿದಕ್ಕರಿಗಂ	೮೫	ಕಸ್ತೂರಿಗಿಡ ಹುಟ್ಟಿ	೩೧೪
ಕಣ್ಣಿಂದ ಕೇಳ್ವವಗುಂಬ	೨೯೮	ಕಳಭ ಕಾಳಾಹಿ	೧೪೫
ಕನಕ ಕನತ್ತನುತನು	೧೦೩	ಕೞಿಪಂ ತಂದು	೫೫
ಕಂತಿಯೆ ಚಿತ್ರಗ್ರಂಥದ	೨೦೩	ಕಾಕರ ಕಿನಿಸು	೧೪೮
ಕಂದದ ಕುಂದದ	೮೦	ಕಾಗೆಯ ರಿಪುವಿನ	೨೯೫
ಕಂದಂ ಕವಿಕೋಕಿಲ	೨೫	ಕಾಂತಾರದೊಳು ಮನೆ	೨೬೯
ಕನ್ನಡ ಸುಜಾಣ	೩೧೩	ಕಾಯುವೆ ಮೂರು	೮೫, ೨೮೬
ಕಮಲದಳನಯನ	೧೪೫	ಕಾರ ಮುಗಿಲ್ಗಳ	೬೭
ಕಮಲನ ಕಮಲಂ	೮೭	ಕಾಲಕಾಲಾಕಾಲ	೮೯
ಕಮಲಭವಮದಮರ್ದಿ..	೧೪೭	ಕಾಲಹರ ಹರ	೩೮೬
ಕಮಲಾಕರನೆಯ್ದಲೊಡಂ	೮೮	ಕಾಲಾರಿ ಕಾಕಾರಿನಮಿತ	೧೪೭
ಕಮಲಾಕ್ಷ ತನುಜೆಯಂ	೩೦೮	ಕಾಲಾಱು ತಲೆ ಮೂರು	೨೮೬
ಕಮಲೆಯ ಚಾರುತ್ವದ	೩೧೦	ಕಾಲಿಲ್ಲ ಕೊಂಬುಂಟು	೩೧೮
ಕಮಲೇಶ ಕಮಲಾಕ್ಷ	೧೧೩	ಕಾಲಿಲ್ಲದೇ ಹರಿಗು	೨೭೯
ಕಂಬವೆರಡಱ ಮೇಲೆ	೩೧೪	ಕಾಲುಂಟು ನಡೆಯದುದು	೩೧೮
ಕಯ್ಯುಂಟು ಕಾಲಿಲ್ಲ	೩೧೮	ಕಾಟ್ಟುರಮಾಗೆ ಕಾವ್ಯರಸಂ	೨೩೧

ಕಿಡಿಪಂ ಬಾರಗೇ ೧೨೦
ಕುಡಿ ಕುಡಿನೀರಂ ೭೮
ಕುದುರೆಯು ನರಿ ಕೊಂದು ೨೭೨
ಕುಂದಿನಿಂದೆಚ್ಚನದು ೩೮೫
ಕುರುಪತಿ ತಂಗಿಯು ೩೦೧
ಕುಲಜನಭಿಮಾನಿ ೨೫೬
ಕುವನಶುಚಿಪವನ ೧೧೧
ಕುವಲಯಕಧಿಪತಿಯಪ್ಪನೆ ೮೪, ೩೮೮
ಕುವಲೇಶ ಸರ್ವದೋತ್ಸವ ೨೧೬
ಕುಶಜಸಖದಶನ ೧೨೯
ಕುಸುಮಾ ಮನೋಹರಂ ೮೫, ೩೮೪
ಕೂರಂ ಕೂರಂಬುದೊಟ್ಟಂ ೭೨
ಕೃತಿಪತಿ ಚಿಕದೇವೇಂದ್ರಂ ೨೬
ಕೆಟ್ಟ ಮನುಜರು ೨೬೭
ಕೆಟ್ಟ ಮೋರೆಯ ೨೬೫
ಕೆಲದೊಳ್ ಪುಳಿಂದಿಯಿರೆ ೮೧
ಕೆಸರೊಳು ಹುಟ್ಟುವುದು ೨೬೮
ಕೆಳಗೊರೆವ ಕೇಳ್ವಿಗಳ ೩೧೧.
ಕೇಳಂ ಕೇಳಂ ೮೨
ಕೊಂಕಣಚಕ್ರವರ್ತಿ ಜಯಕೇಶಿ ೮೭
ಕೊಂಕೊಳಲೆ ಕೊಳಲೆ ೮೧
ಕೋಡಗನ ಕೋಳಿ ನುಂಗಿತೆ ೨೭೭
ಕೋಡಗವು ಕುದುರೆಯಲಿ ೨೮೦
ಖಗತತಿ ಸಾರೆ ಶಾಕಿನಿಯರಾರೆ ೨೫
ಖಗರಾಡ್ವ್ಯಾನನೆ ೧೩೨
ಖರಕಿರಣನ ತನಯುನ ೧೨೪
ಖರಹರ ಖಗಪತಿಗಮನ ೧೧೩
ಖರಹಾ ಕರಧೃತಶರ ೧೮೫
ಗಜ್ಞಾಚಂದ್ರಹಿಮಾಚಲಾಭ ೪೪೦
ಗಣಾವರ ಗಾನಪ್ರಿಯು ೧೪೪
ಗಂಡನೊಬ್ಬನಿಗಿರ್ಪರಿಬ್ಬರು ೨೬೮
ಗಂಡೆಸುತನದಿಂದ ಖಾಂಡವ ೨೯೮
ಗತಗದ ನತನರ ೧೩೦
ಗರಗರನೆ ತಿರುಗುವುದು ೩೧೩
ಗರಧರ ಧರಗರ ೧೩೦
ಗರುಡಗಮನ ಗಜರಕ್ಷ ೧೧೩
ಗಾರಾಗಿ ಗುರುಗುಟ್ಟಿ ೧೪೮
ಗಿಡಕೆ ಮನೆಯು ಕಟ್ಟಿ ೨೬೭
ಗಿಣಿ ಗಿಡುಗ ೩೧೪
ಗುರು ಕರ್ಣಾಶ್ರಾವ್ಯಂ ೧೭೨
ಗುರುಕೃಪಾಸುಧೆಯಣಿಸಿ ೨೧೬
ಗುರುಗಳು ಊರಿಂದ ೨೬೬
ಗುರುಜನಕಂ ಕವೀಂದ್ರಜನಕಂ ೮೪
ಗೋಕ್ಕೆ ಚಾಂದ್ರೋಗಾನಿಂ ೨೧೩
ಗೋಪತಿಸುತನ ೨೯
ಘನದ ಕರಗಿದುದ ೮೬
ಘನರಥಧನದ ೧೩೦
ಘನರಸಶಯನ ೧೩೭
ಘನವರ್ಣ ಘನರಿಪು ೧೧೩
ಘನಸ್ತನಿತಮುಂ ೨೦೨
ಘನ ಹರಿ ಭಾನುಜಾಪ್ತ ೧೯೭
ಙಮುಙಣಾದಿ ಶಬ್ದಾಂಕ ೧೧೩
ಚಕ್ರಾಸಿಗದಾಕಾರ್ಮುಕ ೮೪
ಚಂಚಲಾಯತನೇತ್ರೆ ೨೧೫
ಚಂಡಾಳಿಪತಿಯ ಮನಂ ೨೬೦
ಚತುರಾಸ್ಯಂಗಂ ೧೧೩
ಚತುರ್ಮುಖನ ತಾಯಿಗೆ ೨೯೯
ಚಂದ್ರನ ತಂಗಿಯು ೨೯೮
ಚಪಲ ಚಂಚಲ ೧೧೧
ಚರಣನತಶರಣ ೧೦೩
ಚರಿಸದಿರಿ ನೀವೆಂದು ೨೨೩
ಚರ್ಚಿಲ್ ಶಶಿಶಿಶುವಂ ೨೫
ಚಳಿಯು ಮಗಳ ೨೯೩
ಚಾಪದೊಳಹುದೊಂದು ೩೦೦
ಚಾರಿವರಿದು ಚಿಂತಿಸಿ ೧೪೮
ಚಾರುವಾದಿತ್ಯಾಶ್ರಿತನ ೧೭೫
ಚಾರೂರುರೂದ್ಧ ೬೨
ಚೋಳಕುಲವಿಲಯಕಾಳಂ ೮೨
ಛತ್ರತ್ರಯಂಯುತ ೧೧೩
ಜಡಿವ ಶೂಲದ ೨೬೪
ಜಡೆ ಚಂಚತ್ಕಂಥೆ ೧೨೭
ಜಡೆಯಿಡುಕುಚಿಕೆ ೨೮
ಜನವಿನುತನನಘನನುಪಮ ೨೫
ಜಯ ಚತುರ್ಮುಖಜನಕ ೧೪೫
ಜಯ ಚರಾಚರರಕ್ಷ ೧೨೯, ೧೩೨
ಜಯಜಯ ಕಾಲಕಾಲ ೮೮
ಜಯಜಯ ಜಿನೇಂದ್ರ ೧೧೩
ಜಯಜಯ ಶ್ರೀಕೃಷ್ಣ ೨೧೬
ಜಯ ಜಾಯಾಶರಣಂ ೮೩
ಜಲದಾಗಮದಿಂ ಚಿತ್ತಸ್ಖಲಿತಂ ೩೭೮
ಜಲಧಿಶಯನ ನಯನಾಂಘ್ರಿ ೧೩೨
ಜವಗನ ಸಖನ ೨೯೯
ಜಾತಿಗೆ ಪುಷ್ಪಜಾತಿಗಳ ೮೮
ಜಾರರಿಗೆ ಭಯ ೧೭೧
ಜಾರಿ ಜಿನುಗಿ ಜೀವಿಸಿ ೧೪೮
ಜಿನನಂ ನಮ್ರ ಸುರಾಸುರೇಂದ್ರ ೭೯
ಜೀವನ ಜೀವನಮುಂ ೭೫
ಜ್ಯೋತಿಯುಂದದಿ ಬೆಳಗಿ ೨೧೭
ಜ್ಯೋತಿಯಿಲ್ಲದ ಮನೆ ೨೭೦
ಝಷ ಕುಲಿಶಾಂಕಿತ ೧೧೩
ಞಾನಮಯ ಸಿಂಹಪೀಠ ೧೧೩
ಟಾಕಿನ ಜಟಿಟೀಕ ೧೪೮

ಡಾಕಿನಿಯಡಿವೊಕ್ಕೋಕಜ	೧೪೮
ಣಪರಪರ್ವರ್ಣಾಕ್ಕಳಿಪಲ್	೧೧೩
ತಂಗಿಯ ಮಗನ	೨೯೬
ತನಗಂ ಯೋಗಂಧರಂಗಂ	೨೭
ತನುಪರನರಹದಿ ನರಪತಿ	೩೮೫
ತನುವಂ ಮನ್ಮಥ	೧೭೩
ತನ್ನಧರಂ ಮನೋರಮೆಯ	೧೨೫
ತನ್ನ ಸಂತತಿ ಮುನ್ನೀಶಂ	೪೩೪
ತರಣಿಯ ಮಗನ	೨೯೮
ತರುವುರದನ ತಂದೆ	೨೯೨
ತಱಿಸಂದಿಸೆ ಕರಿಘಟೆಯಂ	೫೮
ತಱುಬಿ ಮಹಿಶೂರವರ್	೭೫
ತಳಮಳಗುತ್ತುಂ	೨೫೫
ತಳಿರ್ವನೆಗಳ್ ನೀಹಾರಂ	೭೨
ತಾನಂದೆಚ್ಚನಿಟ್ಟ	೭೦
ತಾಮರಸಮುಖಿಯ	೮೬
ತಾಯ ತಲೆಯ	೨೯೬
ತಾರವೀವೀರತಾಸಾರ	೩೭೭
ತಾರಾ ಜಾನಕಿಯುಂ ಪೋಗಿ	೫೫
ತಾರಾ ತಾರಾಧಿಪಂ	೬೬
ತಾರಾತಾರಾಮಳಿನ	೬೩
ತಾರಾ ಮಾರನೆ ನೀರಂ	೩೭೭
ತಾವರೆಯ ನಾಳದ	೨೭೩
ತಾಳದೊಳೆಸೆವಳಿಯಂ	೨೬೨
ತಾಳೆಂಬುದು	೩೨೧
ತಿಂದು ಕಪೀನಫಲಂಗಳ	೫೮
ತಿರಿಯುದಲೆ ಯಾವುದನು	೨೧೭
ತಿರಿವುದದೊಂದು ಚಕ್ರದೊಳೆ	೨೪೯
ತಿರಿವುದು ಬೈಕಂಗೊಳ್ಳದು	೨೪೯
ತಿಳಿಗೊಳನಂ ಪೂಗೊಳನನದಂ	೫೭
ತುಂಗಭುಜಂ ಕಲಿ	೧೮೦
ತೊಳತೊಳಗೆ ಶಿಶಿರಕರನ್	೨೬೦
ತೋರದ ರದಪತ್ರದ	೭೨
ತ್ರಾಸಿನೊಳಗೆ ಇಡೆ	೨೬೭
ತ್ರಿಜಗದಭಿಷ್ಟುತಂ	೨೭
ದಕ್ಷಪೂಜಿತೋದ್ಯದಸ್ತ್ರಾರಿ	೪೮೨
ದಂಡಿತಾರಾತಿ	೨೫೧
ದನುನಂದನನಿನನಂದನ	೧೦೫
ದರ್ಪದಿಂ ಕುಜನರಂ	೨೧೫
ದಾನನಂದನಂ ಮಾನಾ	೧೦೪
ದಾನವಚಕ್ರೇಶನಂ	೭೦
ದಾರಾತ್ಮಜಸಮೇತ	೨೧೬
ದಾರು ದಾರುಣನಂ	೫೫
ದಿಟ್ಟಿಯಿಂ ಕೇಳ್ವನ	೨೯೩
ದಿವಿಜರಿಗೆಱಿಯನು	೧೨೯, ೧೬೦
ದೀನಾದೀನಾನಾದಿನಾದಿ	೩೮೨
ದುಂದುಭಿಗಭೀರನಿನದಂ	೮೦
ದೂರುಂ ದೂರ್ಕುಂ	೧೪೦
ದೇಗುಲವೆ ತಾನಾದ	೨೧೬
ದೇಶಂಗಳಱಿಯೆ	೨೦೬
ದ್ರಾವಕಂ ವಿನತಾತ್ಮ	೨೧೫
ಧನ್ಯಶ್ರೀಕರಚಿತ್ತನೇ	೪೪೧
ಧರಣಿಗೆ ನಿನ್ನ ಮಂತ್ರಮೆ	೧೨೮
ಧರಣಿಧರಶರಾಸಾ	೧೩೨
ಧರಣಿಯ ಕಂಠ	೧೨೬
ಧರಣೀನಾಯಕ ಕೇಳ್	೧೨೬
ಧರಣೀವರ ಸುಖಕರ	೧೮೬
ಧರಧರಶರಕರ	೧೩೦
ಧವಳಗಜೇಂದ್ರಮುಂ	೨೭
ಧಾವಂ ಧಾವಂದಿಗಂ	೭೨
ಧುರದಲ್ಲಿ ಸಾಹಸ್ರ	೩೩೦
ಧುರದೊಳಗಿಂದ್ರಸುತನೆನಲ್	೧೮೨, ೧೮೩, ೧೮೪
ನಕ್ಷತ್ರಮಂಟಪದೊಳೊರ್ವ	೨೦೬
ನಗಹರಪುತ್ರ ಮಾತುಳ	೩೦೨
ನಡುವಿಗೆ ಮದ್ದಳೆ	೨೬೪
ನಡು ಸಿಂಹ ಧನು ಪುರ್ಬು	೧೭೫
ನಡೆಸೆಂಡಂ ಪೊಡೆಸೆಂಡಂ	೩೯೦
ನತಸುರಕಿನ್ನರ	೩೪೦
ನನ್ದನ ನನ್ದನ	೧೦೫
ನಂದನ ನಂದನ ನಂದನ	೧೦೨
ನನ್ನನೇನಾನುಂ	೧೦೬
ನನ್ನನ್ನನೆನ್ನನೇನೇ	೧೦೩
ನನ್ನೊಳಗ ನಾ ತಿಳಕೊಂಡೆ	೨೭೭
ನಮುಚಿಸೂದನನಿಂಗೆ	೨೧೫
ನಯಯುಕ್ತಕ್ರಮವಿಕ್ರಮಂ	೮೩
ನರದಾನಪರೊನೆಂನೆ	೩೮೧
ನರದಾರಪರಾನೋನೇ	೩೮೧
ನರನಾಯಕನಂ	೧೨೧
ನಲಿನಲಿದು ಪುಲಿಯ	೭೮
ನವಲಕ್ಕಂ ಕಟಕದೊಳ್	೬೪
ನವಾನಘನ್ಯಯಾನಲ್ಪಂ	೪೭೮
ನಾಗಧರನ ಪೆತ್ತಳ	೨೯೭
ನಾಗಮೆ ನಾಗದಂತಿರೆ	೮೭
ನಾದಭೇದನನಾದಾನಾ	೩೭೫
ನಾನಮಾನಮಸೇನಾಸೇ	೩೭೬
ನಾನಾ ಮುನಿಪಾವನಮಂ	೭೨
ನಾನಾಶಶಮೃಗಧರನುಂ	೬೦
ನಾರಿಯ ಮೈಬಣ್ಣ	೨೬೭
ನಾರಿಯ ಮೈಸೀಳಿ	೨೬೬
ನಾಸಿಕದುಂಬನ	೨೯೩
ನಿತ್ಯಶ್ರೀಗುಡು	೪೪೧
ನಿಂದಾನಂದದದೊಂದೂನಂ	೧೦೧

ನಿನ್ನನ್ನಂ ನಿನ್ನನ್ನೆಂ	೧೦೬
ನಿನ್ನ ವಾಕ್ಯಾರ್ಥವೆಂಬೊಂದು	೬೨
ನಿನ್ನಿನೇನಿನ್ನನಾನನ್ನ	೧೦೨
ನಿನ್ನಿಂ ನಿನ್ನನೆನೇ	೧೦೨
ನಿನ್ನೆನ್ನಂ ನನನಾನೇನ	೧೦೩
ನಿನ್ನೆ ನೀನೇ	೧೦೬
ನಿರುಪಮ ಸೇನಾಶರಣಂ	೭೬
ನೀಡುಂಮೆಯ್ ಸುಬ್ಬರಾಯಾ	೪೮೪
ನೀನಾನು ನಿನ್ನನಾನೆಂ	೧೦೨
ನೀನೊಲಿಯದ ನಿಮಿಷವೆ	೧೭೩
ನೀರದಪ್ರಭಯಾಮಿನೀ	೧೮೬, ೧೮೭
ನೀರದಪ್ರಭ ಹಾರಶೋಭಿತ	೧೮೭
ನೀರಂ ನೋಡಲ್ಕೆಂದು	೭೦
ನೀರುಂಡು ಬೆಳೆವುದು	೨೬೫
ನುತಿಗೆಯ್ದಂ ನುತ	೮೧
ನೂತನ ಸಂಗತ	೮೨
ನೆಗಳ್ವಂಭೋರುಹಮಿತ್ರಂ	೭೧
ನೆಗಟ್ದ ಮಂಡಳಮಾಳೆ	೩೮೮
ನೆಗಟ್ದ ಮಹಾಲಯು	೮೦
ನೆಗಱ ಯುತಿಸ್ಥಿತಿ	೧೨೧
ನೆಟ್ಟನೆ ತಾಂ ಸವಿಯೊಳ್	೨೫೦
ನೆಂಟರನು ಹಿಡಿದು	೩೧೬
ನೆತ್ತಿಯಲಿ ಉಂಬುವುದು	೨೭೯
ನೆಯ್ದಲೆಸಱವಱ	೫೯
ನೆಱನೆಱ ಚೂರ್ಣಮಾದ	೭೮
ನೆಱ ಬಂದೀ ಮಧುವೆನ್ನಂ	೮೭
ನೆಲನಚ್ಚರಿಯಂ	೭೫
ನೆಲನಿದು ನೆಲನಂ	೨೧೦
ನೆಲೆಯ ಕೆರೆಗೆ	೧೪೦
ನೋಡಿದ ಮೇಲವರ್	೨೩೩
ನ್ಯಾಯಂ ಮಂತ್ರಿಗಳುಕ್ತಿ	೮೦
ಪಡುವಳ್ ಕೀಱಲೊಳೆಮ್ಮ	೨೨೪
ಪಡೆವನ್ನಂ ಪಕ್ವಬಿಂಬ	೮೮
ಪತ್ತು ತಲೆಯುವನ	೩೦೦
ಪದವಿಡುವಂಬೆಗಂಡ	೮೧
ಪನ್ನಗಕನ್ಯೆಯೊರ್ವಳ್	೬೦
ಪರನಾರಿಗೆ ವಾಯುಜ	೧೮೩, ೧೮೪
ಪರಮಗುರು ಪುಟ್ಟಿದಂದಿನ	೭೮
ಪರಮಪುರುಷ ನೀ	೨೦೯
ಪರಮಂ ಸ್ವಬಾಂಧವ	೧೮೮
ಪರಹೃದಯಪ್ರವೀಣತೆಯಂ	೨೩೩
ಪರಿಕಿಪುದೊಂದಱಿಂದೆರಡಂ	೨೮೩
ಪರಿಜನ ಫಳವತ್	೨೧೨
ಪರಿದು ರಾವುತಪಾಡೊಳಿದಿರ್ಚಿ	೮೭
ಪರಿವರ್ಜಿತದೋಷನಂ	೨೦೧
ಪಳುಕಿಂದೆ ಸಮೆದ	೭೮
ಪಾಡಲ್ ಭ್ರಮರಚಯಂ	೬೯
ಪಾಡುತ್ತುಂ ಭೃಂಗಿ	೬೮
ಪಾತಾಳಕಿಳಿಯುವುದು	೨೮೦
ಪಾರಾವಾರಧೀರಂ	೩೭೯
ಪಾಹಿ ನಾರಾಯಣನೆ	೨೦೭
ಪಿಂಗಿದುದಿಲ್ಲಿನ್ನುಂ	೬೪
ಪಿರಿದುಂ ನೀನೊಲವಿಂದೆ	೭೯
ಪೀನಂ ಕಾಡುಮದಕ್ಕೇಂ	೩೭೫
ಪುಡಿಬೂದಿ ತಿಂಬುತ್ತ	೨೬೮
ಪುತ್ತದೊಳಗಣ ದೀರ್ಘ	೩೦೧
ಪುರಕಾಲ ಮನ್ಮಥಹರಂ	೧೨೨
ಪುರುಪುಣ್ಯಂ ವಿಮಳೋರುಕೀರ್ತಿ	೧೬೮
ಪುರುಷನಾಳುವ ಸ್ತ್ರೀಯು	೨೬೮
ಪೆಱನಾವಂ ಧರಾಚಕ್ರಕ್ಕೆ	೩೨೭
ಪೊಡೆಪೊಡೆದುಂ	೩೧೦
ಪೊಸತೊಂದಂ ತೀವಿ	೨೬೩
ಫಲಸಾರಸನಮಂತೆ	೫೮
ಪ್ರಕಟ ಕಪಟನಾಟಕನಂ	೭೫
ಪ್ರಾಕೃತಾಸ್ತ್ರನಿಕರಂ	೭೯
ಪ್ರಿಯನಾದನತ್ಯವಶ್ಯಂ	೭೯
ಪ್ರೇಮಿಸುವನಾರು	೩೧೧
ಬಗೆಗಳವೆಂದಿದಂ	೮೮
ಬಗೆಬಗೆ ಗಿಡಗಳ	೩೪೧
ಬಂದಂ ಬಂದಂದಶೋಕಧ್ವಜ	೬೭
ಬಂದಂ ಮಜ್ಜೀವಿತಾಧೀಶ್ವರನೆನುತೆ	೭೧
ಬಂದಿಹೆನು ನಾನೊಮ್ಮೆ	೨೭೯
ಬನ್ನಿಯೆಂಬುದು	೩೨೧
ಬಲನ ಕೊಂದವನಾರು	೩೩೨
ಬಲನಂ ಬಲನಂ	೬೮
ಬಲವಾದ ಶೇಷನಂ	೩೪೪
ಬಲ್ಲವರು ಪೇಳಿರ್ಪೆ	೩೩೫
ಬಲ್ಲವರೆನುತಲಿ	೩೦೯
ಬಲ್ಲಿದ ಬಾಣನ	೧೪೪
ಬಲ್ಲೋಜಬರ್ಗೆ	೪೪೧
ಬಳಸಿ ಸುಱದಾಡಿ	೨೮
ಬಾ ಪೋಪಂ ಪೋಪಮೆಂಬಾ	೧೩೩
ಬಾಯಗಲವಾಗಿ	೩೨೦
ಬಾಯಿ ಅಗಲವಾಗಿ	೩೨೦
ಬಾರದ ಭವವಿಲ್ಲ	೧೧೩
ಬಾಳಂ ಕೊಂಡೆಯ್ದಿ	೭೯
ಬಾಳೆಯನಱಸುವೆನೆಂದಾ	೬೯
ಬಿಡದೆಯೊರ್ವನ	೨೬೪
ಬಿದಿಯಿಂದಮೊ ಮೇಣ್	೩೨೯
ಬಿಂದಿಗೆಯೊಳು ತಾನು	೨೬೭
ಬುಧನಿಧಿ ವಿವೇಕನಿಧಿ	೮೪
ಬೇಡಂ ಬೇಡಂ ಮೃಗೀಲೋಚನೆ	೬೮

ಬೇಳ್ಪಗ್ರೀವಂ ಸುಧಾ	೬೬
ಭಾವೆ ತೋರೆಲೆ	೩೦೭
ಭೂನಾರೀವಕ್ಷಸ್ಥಳ	೧೬೦
ಭೂಮಿ ಕುಶ ಪಾವಕಾಕಾಶ	೧೨೩
ಭೂಮಿಪ ವಿಹಂಗವಾಹ	೧೨೪
ಭೂರಿ ಮಹಿಶೂರ	೩೨೯
ಭೂವಲ್ಲಿ ರಣದಲಿ	೧೬೫
ಭ್ರಮರದ್ಭ್ರಮರಂ	೬೭
ಭ್ರಮರಸಮಾಕುಲ	೭೩
ಮಗಳೆ ಮನೋಜ್ಞಮಾತೆ	೧೪೫
ಮಗುವಳುತಿರಲ್ಕಾಗಿ	೩೧೧
ಮಗುಟ್ಟುಂ ಮಗುಟ್ಟುಂ	೭೯
ಮತ್ತಮಯೂರಗರ್ಜನೆಗೆ	೮೦
ಮತ್ತಾ ಗಜಪತಿ	೩೪೨
ಮತ್ತಾ ದೀರ್ಘಾಂಗಂ	೧೬೦
ಮತ್ತಾಳಿ ಕೇಳೀವನದಲ್ಲಿ	೭೪
ಮದನಂದನನುಂ	೧೦೦
ಮದನಮದಧರ	೧೩೯
ಮನಸಿಜನನೆ ರತಿಯನೆ	೨೬೨
ಮನುರಮ್ಯವಂಶ್ಯ	೧೮೭
ಮನೆಮನೆಯೊಳ್	೮೦
ಮನೆಯ ಗಂಡನ	೨೬೬
ಮನೆಯ ದೆಸೆಯ ನಾನಾವಸ್ತು	೨೭
ಮನೆಯ ಮಗನು	೨೬೬
ಮನೆ ಸಲೆ ಹೇವಿಳಂಬಿ	೧೭೨
ಮನೋವಚನ ಕಾಯವೃತ್ತಿ	೨೭
ಮಂತಣಕಂ ಚದುರರ್	೫೯
ಮಂದರಾಗಂ ಗುಣೋದ್ದಾಮಂ	೪೭೫
ಮರಣದೇವತೆಯಾರು	೩೩೬
ಮರ ನುಂಗುವ ಪಕ್ಷಿ	೨೭೬
ಮಲಗಲು ನಿದ್ರೆಯು	೩೪೧
ಮಲರೆ ತಮದೊಡ್ಡು	೫೯
ಮಲವಿನಾಶಂ	೨೧೫
ಮಲ್ಲಿಗೆ ಹುಳಿಯುಕ್ಕು	೨೮೦
ಮಲ್ಲೀವನಂ ಕಾಮಿನಿ	೭೪
ಮಸೃಣಂ ಪ್ರಸನ್ನತರಂ	೨೩೧
ಮಳಿಗೆಗಳಲಿ ಬೇಗ	೨೬೬
ಮಾಣಿಕದಂತೊಪ್ಪಿದನೀ	೫೮
ಮಾತಂ ಮೆಚ್ಚಿವವನಲ್ಲೀ	೬೯
ಮಾತಾಡ್ ಮಾತಾಡ್ ಮಲ್ಲಿಗೆ	೩೨.೨
ಮಾನಾಯತಾಮಳಾಕಾರಾ	೩೮೨
ಮಾನಿನಿ ಮುನ್ನಮಾಂ	೧೦೧
ಮಾರಂ ಮಾರಂ	೮೨
ಮಾರಹರನಂಶ	೨೧೫
ಮಾರಾ ಮಾನಿನಿ ಮಾರಾಮಾ	೪೭೮
ಮಾರಾಮಾರಾಮ	೮೨
ಮಾರುತೀ ಪರಮೋದಾರ	೧೨೧
ಮಾಲತೀಮಾಧವೀಯಾಸ್ವಿತದೆ	೧೬೯
ಮಿಗಿಲೆನಿಪೋಪಳ	೩೪೧
ಮಿಗೆ ಮಾಧವಗೆ	೨೧೫
ಮುಖಮಂಟಪದೊಳ್	೩೪೦
ಮುಂಗೈಯೊಳಾಡುವುದು	೨೭೮
ಮುಟ್ಟಲು ಸೊಡ್ಡನು	೨೬೯
ಮುತ್ತಂ ಮುತ್ತಂಚೆಯಂ	೬೮
ಮುತ್ತು ಮೊಲೆಯ	೨೭೪
ಮುನಿಸಂ ಮನ್ಮಥಯುದ್ಧದೊಳ್	೨೧೨
ಮುಂದಲೆಯ ಹಿಡಿದೆಳೆದು	೨೮
ಮುನ್ನಂ ತನ್ನಂ ತಾನೆ	೩೭೫
ಮೂಗಿನಲಿ ಬೆರಳಿಟ್ಟು	೨೩೩
ಮೂಡಲ್ ಮೂಡಲ್	೬೮
ಮೊಗ್ಗಾಗಿ ಅರಳುವುದು ಪುಷ್ಪ	೩೧೯
ಮೊಗ್ಗಾಗಿ ಅರಳುವುದು. ಪೂ	೩೧೯
ಮೊದಲೊಳೆ ವಿಕಾರಿ	೨೫೮
ಮೊನೆಯೊಳ್ಪಾಯ್ದು	೨೦೫
ಮೊಲೆಯ ಮುಟ್ಟಲು	೨೬೯
ಮೊಳೆಯೊಳ್ಕಾಯ್ದು	೨೦೫
ಯತಿಗಣಾಶ್ರಯಮೆನಿಸಿ	೨೧೫
ಯತಿನುತ ಯಾಗವಿಭಸ್ಮನೆ	೧೪೪
ಯಮಮದನಮದಶಮನ	೧೩೯
ಯಾಮಿನೀಚರನೀಚ	೧೮೭
ಯುತಕಮಳಂ ಗತಕಮಳಂ	೮೮
ರಂಗಾಗಿ ಕುಸುಮ	೨೬೬
ರಜತಾಖ್ಯ ಸುಮಹೋತ್ಸವ	೨೧೬
ರಣದೊಳರಾತಿವಾರಣ	೨೮
ರತಿಹೀನಂ ಪೆಟವಂ	೧೮೨
ರಮಣೀಯ ಗುಣಮಾಲ	೨೧೫
ರಯುಗತನಯರಥ	೧೩೧
ರಸವತ್ಸುಕಾವ್ಯ	೨೧೬
ರಾಗಂ ಪುಟ್ಟಿತ್ತು	೭೦
ರಾಗಮಣಿರುಚಿ	೨೧೫
ರಾಗಮೆ ದೊರೆಕೊಳಿಕುಂ	೭೯
ರಾಜಕಳಾಲಂಕಾರಂ	೧೬೨
ರಾಮಕೋಮಲ	೪೮೨
ರಾಯ ಕೇಳಾಗ	೮೨
ರಾವಣನ ಶಿರವ	೨೯೫
ರಾಶಿಮಧ್ಯಳೆ	೨೦೭
ರೀತಿರೀತಿಯ	೨೧೫
ರೂಪುಂ ಸೊಬಗುಮಣ್ಮುಂ	೧೨೧
ಲಟಪಟ ನಾ	೨೭೬
ಲಲನೆಯ ಕನ್ನವುರದ	೨೪೮
ಲಲನೆಯಿವಳ್	೭೩
ಲವಲೀಲವಂಗ	೨೬೨

ಲಸಿತಭಸಿತವ ಪೂಸಿ ೨೧೬
ವಕುಳಂ ಸಪರಿಮಳ ೮೮
ವದನಂ ಚಂದ್ರಪ್ರಭಂ ೧೬೮
ವದನ ಷಮಧ್ಯದ ೩೩೧
ವನದೊಳಗೆ ಪುಟ್ಟಿ ೩೪೧
ವನದೊಳನಾರತಂ ೭೮
ವನಮಂ ರಚಿಪರ್ ೩೪೩
ವನರಾಶಿಯೊಳಗೆ ೮೪
ವರಕಂಠಸಕ್ತಮುಕ್ತಾ ೨೬
ವರ ಕಿವಿ ನಾಲ್ಕು ೨೮೬
ವರುಣನ ಕುಂತದುತ್ಕರದ ೨೦೮
ವರದಂ ಸತೀ ನಿನಗೆ ೧೮೮, ೧೮೯
ವರದಾರ ಪರಾದನ್ಯಂ ೪೬೪
ವರವರದಕರ ೧೩೮
ವರವಾರನಾರಿಯೊಳ್ ೫೬
ವರವಿತನುನಿರಭೀಗ ೩೮೬
ವರಶಾತಕುಂಭ ೮೧
ವರಸುಖಕರ ಹರಿ ೧೮೬
ವರಸುತನು ಸುತ ೩೮೬
ವರೆಗೆ ಗಿರಿಜಾತ್ಮಭವಂ ೧೮೩
ವಸುಧಾ ವಸುಧಾರೆಗಳಿಂ ೬೭
ವಸುಮತಿರಾಜಿತಂ ೮೫
ವಾದಿ ಸಮನಾಂತ ೩೩೧
ವಾರಿಜನೇತ್ರೆ ಭೃಂಗ ೨೬೩
ವಾರಿಜಾರಿಹಾರಿ ಕೀರ್ತಿ ೪೫೦
ವಾರಿ ವಾರಿಯೊಳಾದಾನಂ ೫೬
ವಿಕಸಿತ ಪುಷ್ಪದಂತರಳಿ ೨೬೨
ವಿಗಳಿತ ರಾಗನಾವೊಂ ೨೫೭
ವಿಧಿಯ ರಾಣಿಯ ೩೦೧
ವಿಲಸಿತ್ಕಂತುಕಮಂ ೩೯೦
ವೀತಿಹೋತ್ರನ ವಾಯು ೧೫೯
ವೀರಶ್ರೀಕಾಂತೆಯುಂ ೪೪೯
ವೃಂದಾವನದೊಳ್ ನಗೆಯುಂ ೬೭
ವೇದಪುರುಷನ ಸುತನ ೩೦೦
ಶಕ್ರಾರಿ ನಿರ್ಜರ ೧೨೮
ಶತದಶಕಶಯನ ೧೩೮
ಶಮನಶಮನ ೧೩೭
ಶಂಭು ಮೊದಲು ೨೬೫
ಶರಣ ಶರಣ್ಯ ೧೩೦
ಶರಣಂ ಶ್ರೀ ಚಿಕದೇವ ೨೬
ಶರವಣಜ ಜನಕ ೧೦೯, ೧೮೪, ೧೮೫
ಶರವ ತಾ ಶಂಕರಿಯೆ ೩೩೬
ಶಿಕ್ಷಿತನಿಂದುಯಶಂ ೧೮೦, ೧೮೧
ಶಿಕ್ಷಿತಂ ಕಲಿಯಿಂಗಿತಂ ೧೮೦
ಶಿರದಲ್ಲಿ ದಾನಿಯನಿರಿಸಿ ೨೬೮
ಶಿವನ ವೈರಿಯ ೨೯೬
ಶಿವಮಯಕಾಯ ೧೨೩
ಶಿವಮಹೇಶಶಶಾಂಕ ೧೨೪
ಶಿಶುಗಳಾಹರದಂತೆ ೨೦೮
ಶೀತಕರಶೇಖರ ೧೩೦
ಶ್ರೀಕರ ಜಗದೀಶ ೪೮೨
ಶ್ರೀದ ಶ್ರೀದ ಶಮದ ೪೮೨
ಶ್ರೀಮದಚಲಾತ್ಮಜಾನನ ೨೧೫
ಶ್ರೀಮನ್ಮಹೀಶೂರಭೂಮಿ ೨೧೫
ಶ್ರೀಮುಖಾಬ್ಧದೊಳಿದು ೧೭೪
ಶ್ರೀರಾಮಾಧಾಮನಾಮಂ ೩೮೧
ಶ್ರೀಶಾ ಸುಭಾನು ೪೮೨
ಶ್ರುತಕೀರ್ತಿತ್ರೈವಿದ್ಯ ೩೮೪
ಶ್ರೇಯಂ ಶ್ರೇಯಂ ೬೩
ಸಂವತ್ಸರನ ಚೆಲ್ವ ೨೦೭
ಸಂವತ್ಸರಾವೇಶಿಯಾದ ೨೦೬
ಸಂಗಗುಣಂ ತುಂಗಭುಜಂ ೧೮೨
ಸಂಗರ ಕೇಸರಿ ೧೮೦
ಸಣ್ಣದಾಗಿರುವುದು ೨೬೯
ಸತ್ತಿಗೆಯನೆತ್ತುವಳು ೨೬೮
ಸಂತತರಥಾಂಗತತಿಗತಿ ೧೨೬
ಸಂತಂ ಬಾಟ್ವುದು ೪೩೮
ಸಂಧಿಸಿ ಮೂಜಾಕಾಶದ ೨೫೯
ಸನ್ನಿದಮೆನೆ ತಾಂ ೨೦೯
ಸಬಳಿಕೆಯಿಂ ಪಾಟಿಯನೊಕ್ಕು ೬೨
ಸಮಲಾವಣ್ಯ ಪ್ರಸರದ ೮೭
ಸಂಮತಂ ಪಂಚವಿಂಶಂ ೨೧೬
ಸರಭಸದೆ ಕಾಲಯಮ ೫೮
ಸರಂ ಸರಂ ಕಂತುವ ೬೧
ಸರಸಗೌರೀಪ್ರೀತ ೧೪೬
ಸರಸನನರಸನೆಂಬುದು ೩೨೧
ಸರಸಾ ಕರಿನುತ ೧೮೬
ಸರಸಿಜನೇತ್ರೆಯುಂ ೧೨೭
ಸರಳವೃತ್ತಂ ಕಲಾಸ್ಫೂರ್ತಿ ೨೧೨
ಸರಿತ್ಸ್ರೋತೋರಮ್ಯಂ ೮೧
ಸಲೆ ಕಮಲಾನನಂ ೨೦೪
ಸಲೆ ಸಮಲಾನನಂ ೨೦೪
ಸವನಂ ಸವನಂ ೭೯
ಸವಿಹಿತಮಪ್ಪ ೨೪೭
ಸಾಧಕಗೆ ತೋರಿಸಿದೆ ೧೭೦
ಸಾರನವರತ ೨೦೩
ಸಾರಸಾರಸನಾದಾಮ ೫೬
ಸಾಲ ಸಾಲಂಗಳಿಂ ೨೭
ಸಾಹಸಾ ಮದಯಾಹಾಸ ೩೮೪
ಸಿತಕರ ಶತಕರ ೧೨೩
ಸೀತಾಪತಿ ರಘುನಾಥ ೩೦೬
ಸೀತಾರಾಮ ಸಮೀಪಸ್ಥಂ ೨೫೬

ಸೀಮಂತಿನಿ ಪಣ್ಡೆಱೆಯಲ್ಕೆ ೭೩
ಸೀಮಂತಿನಿಯರೊಳಾರತಿ ೩೩೩
ಸುತ್ತು ಬಟುವಾಗಿ ೩೧೪
ಸುದತಿಯರ ತೊಡೆಗೆನ್ನ ೨೬೫
ಸುಂದರಾಕಾರಸಂಪನ್ನ ೪೫೭
ಸುರತತೀಶ್ವರನಂಗ ೮೦
ಸುರತರು ಚಿರಮತಿ ೭೩
ಸುರನರನಾಗಾಧೀಶ್ವರ ೧೨೫
ಸುರನಿಕರವರಮುಕುಟ ೧೧೦
ಸುರಪತಿ ಸೋಲ್ತುನರ್ಕ ೧೫೮
ಸುರಭಿತರ ಪ್ರಮೋದ ೮೧
ಸುರಯಿಂಯ ಮುಗುಳ್ಗಳೊಳ್ ೧೦೭
ಸುರರಮಣೀ ರಮಣೀಯ ೬೧
ಸುರರರಿಖರಶರಭರ ೧೦೮
ಸುರಸಮುದಯಪತಿ ೧೮೬
ಸುವಿನೋದ ಶೂರ ೧೮೮, ೪೮೨
ಸೂರಿಸಾರಸರಸಾರಾ ೧೦೨
ಸೊಗಯಿಸುಗುಮಿಂದ್ರನೀಲ ೨೫೨
ಸೋಮನ ಧರಿಸಿ ೨೬೫
ಸೌಜನ್ಯಜನ್ಯಕೀರ್ತಿಯೆ ೨೬
ಸ್ಮರಕಲಾಚತುರಂ ೭೬
ಸ್ಮರಶರಪಿತನ ೨೯೪
ಸ್ವನವದುರುಶರ ೧೮೬. ೧೮೭
ಸ್ಥಿರನೇ ಸದ್ಗುಣಿಯೇ ೮೪
ಸ್ಥಿರ ಸುವಿನೋದ ಶೂರ ೧೮೮, ೪೮೨
ಹತ್ತುತಲೆ ಕೆಂಪು ೨೮೦
ಹತ್ತೆರಡನೆಯ ತಾರೆ ೩೦೨
ಹದಿನಾಱು ಮನೆಯ ೩೧೪
ಹದಿನೆಂಟು ತಿಂಗಳು ೨೬೭
ಹಂತಿಗೊರಲವನನೇಳಿಸೆ ೨೯
ಹನ್ನೊಂದು ವರ್ಷದಾತನ ೩೦೭
ಹನ್ನೊಂದು ಹನ್ನೆರಡು ೩೧೪
ಹರಹಾಸಧವಳ ೧೩೯
ಹರಿಣಾಂಕ ಕುಲಾಬ್ಧಿ ೭೬
ಹರಿದಾಂತಂ ಬಲಂಬೆರ್ಚೆ ೬೪
ಹರಿ ಪನ್ನಗಾರಿ ೧೮೮
ಹರಿ ಪರಮಂ ೧೮೮
ಹರಿಪಂ ನಗಾರಿ ೧೮೯
ಹರಿವಾಹನನ ತಾಯ ೨೯೭
ಹರಿಸುತನನುಜನ ೩೦೦
ಹರಿಹರ ಹರಿಹರಿಸಖ ೧೧೦
ಹರೆಯದ ಜಾಯಾಕಾಂತರ್ ೧೨೭
ಹಲ್ಲುಂಟು ಮೃಗವಲ್ಲ ೨೭೯
ಹಸಮೇ ಜಂಗಮ ೨೧೩
ಹಾರಂ ವಕ್ಷೋಜದೊಳ್ ೭೦
ಹಾರಿ ಸಿಂಹಾಸನಾಧಾರ ೨೧೬
ಹಾರುವ ಕೇರಿಯ ೨೬೪
ಹಾರೌಚಿತ್ಯ ನಿವೇದಕಾಖಿಲ ೧೯
ಹುಟ್ಟುತಲೆ ಹಸುರುಂಟು ೩೧೩, ೩೧೯
ಹುಟ್ಟುತಲೆ ಹುಡುಗಿ ೩೧೪
ಹುಟ್ಟುಬಂಚೆಯ ಮಗನೊಬ್ಬ ೨೭೪
ಹುಡುಗನ ಪೆತ್ತವಳ ೨೬೭
ಹುಲ್ಲು ಮನೆಯೊಳಾಗ ೨೬೮
ಹೆಱೆದುಂಬಿನಿಂದೆ ೧೭೧
ಹೇಮಾಂಬುಜವನದಿಂ ೬೯
ಹೊರಗೆ ಸೀಗೆಯ ೨೬೭
ಹೊಸ ಪರಿಯೋ ರಂಗ ೩೦೩
ಹೊಳ್ಪಿಸಿ ಗೋಡೆಯ ೩೪೦
ಱಾಂತಂಬರಂ ಬುಧರ್ ೧೧೨

ತೆಲುಗು ಲಕ್ಷ್ಯಪದ್ಯಗಳು

ಗಾಂಗೇಯ ಕೌಶೇಯ ೧೭೬
ನರಹರಿ ಕೇಶವಾ ೧೭೮
ಭವಬಂಧನಮುಲ ೧೭೮
ವನಜನಾಭ ರಮಾಧವ ೧೭೮
ಸುಜ್ಞಾನಯೋಗ ೧೭೮
ಹರಿಕೇಶವಾ ೧೭೮

೪/ವ್ಯಕ್ತಿನಾಮ ಸೂಚಿ

(ಅಂಕಿಗಳು ಪುಟಗಳನ್ನು ಸೂಚಿಸುತ್ತವೆ.)

ಅಕ್ಕಲೇ ಲಕ್ಷ್ಮೀನರಸಿಂಹಶಾಸ್ತ್ರಿ ೧೦೨, ೧೦೩
ಅಗ್ಗಳ ೧೭೦, ೨೧೨
ಅಜಿತಸೇನ ೫, ೬, ೧೬೩, ೪೦೧, ೪೦೫, ೪೧೩, ೩೫೧, ೪೯೨, ೫೦೦

ಅಣ್ಣಯ ದೇಶಿಕ ೪೦೮
ಅದೃಶ್ಯಕವಿ ೨೩೧
ಅನಂತರಂಗಾಚಾರ್ಯ ಎನ್. ೩೧೩
ಅನ್ನಯರಾಜು ೪೮೭
ಅಪ್ಪಯ್ಯದೀಕ್ಷಿತ ೪, ೫, ೧೧, ೩೦, ೪೯೨
ಅಭಿನವಗುಪ್ತ ೩೧, ೧೨೫
ಅಭಿನವವಾದಿ ವಿದ್ಯಾನಂದ ೮೦, ೮೧
ಅಮೋಘವರ್ಷ ೩೩೪
ಅರಿಶಾಣಘಾಲ ವೆಂಕಟಾಚಾರ್ಯ ೧೫೫
ಅರ್ಜಿವಿನ ಮಾರಿತಂದೆ ೨೭೩
ಅಲ್ಲಮರಾಜು ರಾಮಕೃಷ್ಣಕವಿ ೪೫೦
ಅವತಾರಕವಿ ೪೮೪
ಅಶ್ವಘೋಷ ೮, ೪೯೧
ಅಳಿಯ ಲಿಂಗರಾಜ ೧೧, ೨೬೦
ಆಚಣ್ಣ ೭೮, ೮೨, ೮೫, ೮೮, ೧೦೫, ೩೮೫, ೫೦೦
ಆನಂದತೀರ್ಥ ೫೧
ಆನಂದವರ್ಧನ ೩, ೫, ೬, ೨೩, ೩೦, ೪೦೬, ೪೯೨
ಆಫ್ರೆಕ್ಟ್ ೨೨೭
ಆಶುಕವಿ ಕೃಷ್ಣಶರ್ಮ ೩೦೦, ೩೩೬
ಆಸೂರಿ ಕೆ. ರಾಮಸ್ವಾಮಿ ಅಯ್ಯಂಗಾರ್ ೩೦೮
ಇಮ್ಮಡಿ ಗುರುಸಿದ್ಧ ೮೯, ೧೩೦
ಇಮ್ಮಡಿ ಮುರಿಗಾ ಗುರುಸಿದ್ಧ ೧೬, ೧೦೬, ೧೦೭, ೧೩೯
ಇಮ್ಮಡಿ ಹರಿಹರ ೨೧೨
ಉದಯಧರ್ಮ ೪೦೫
ಉದಯಧರ್ಮ ಗಣಿ ೪೦೫
ಉದಯಮಾಣಿಕ್ಯ ಗಣಿ ೪೦೫
ಉದಯವಿಜಯ ೪೦೫
ಉದಯಾದಿತ್ಯ ೬೫
ಉದ್ಭಟ ೫, ೨೩, ೨೪, ೩೦
ಉಪಾಧ್ಯಾಯ ಜಯಸಾಗರ ೪೦೪
ಎಳಂದೂರು ಹರೀಶ್ವರ ೧೨, ೧೬, ೨೫, ೧೩೮, ೨೦೭
ಕನಕದಾಸ ೧೩, ೨೦೯, ೨೭೫, ೨೭೬, ೩೦೨, ೩೦೩, ೩೩೫, ೪೯೯
ಕಪಾಡಿಯಾ ಎಚ್. ಆರ್. ೪೩೮, ೪೫೬
ಕಪಿಲವಾಯಿ ಲಿಂಗಮೂರ್ತಿ ೪೫೦
ಕರ್ಣಪಾರ್ಯ ೭೮, ೭೯
ಕರ್ಣಪೂರ ೪, ೪೦೧, ೪೯೨
ಕಲಾನಾಥ ಝಾ ೬, ೨೭೦, ೪೯೫
ಕವಿಕಾಮ ೧೭, ೧೨೫
ಕವಿಚರಿತೆಕಾರರು ೨೯೨, ೨೯೪, ೩೧೨
ಕವಿ ರತ್ನಾಕರ ೧೭೮
ಕವಿರಾಜ ೮, ೧೫೩, ೧೫೫, ೪೯೧
ಕಾಳಿದಾಸ ೮, ೩೩೨, ೪೯೧
ಕಿಟ್ಟೆಲ್ ೨೨೭, ೨೨೮
ಕೀಥ್ ಎ. ಬಿ. ೩೫೦
ಕುಂತಕ ೨೩
ಕುಮಾರದಾಸ ೮, ೧೧೮, ೪೦೬, ೪೯೧, ೫೦೦
ಕುಮಾರವ್ಯಾಸ ೩೦೦
ಕುಮುದೇಂದು ೪೦೯
ಕುಲಮಂಡನ ಸೂರಿ ೪೦೪
ಕೃಷ ಕವಿ ೧೯೩, ೩೨೧
ಕೃಷ್ಣದೇವರಾಯ ೧೯
ಕೃಷ್ಣಮೂರ್ತಿ ಕೆ. ೨೨೯, ೪೩೭
ಕೃಷ್ಣಶರ್ಮ ೧೯
ಕೇಶವಮಿಶ್ರ ೫
ಕೇಶಿರಾಜ ೨೧೦
ಕ್ಷೇಮೇಂದ್ರ ೯೮, ೧೬೮
ಗಜಾಂಕುಶ ೧೬೯
ಗಣವರಪು ವೆಂಕಟಕವಿ ೪೯೬
ಗುಣಭದ್ರಕೀರ್ತಿ ೪೦೫
ಗುಣವರ್ಮ (೨) ೭೭, ೮೫
ಗುಬ್ಬಿಯ ಮಲ್ಲಣಾರ್ಯ ೧೭೪
ಗುರುಲಿಂಗವಿಭು ೧೫, ೧೭೧, ೧೭೫, ೨೦೬
ಗೋಪಾಲದಾಸರ ತಮ್ಮಂದಿರು ೨೮೭
ಗೋವಿಂದಕವಿ ೧೫, ೧೪೫, ೧೭೪
ಗೋವಿಂದ ವೈದ್ಯ ೨೯೬
ಚಂದ್ರ ೧೬೯
ಚಂದ್ರರಾಜ ೧೨, ೧೫, ೧೭, ೧೦೦, ೧೦೪, ೧೨೨, ೧೨೪, ೧೩೩, ೧೩೭, ೧೩೯, ೧೪೧, ೧೭೯, ೩೯೦, ೪೦೯, ೪೩೯, ೪೭೮, ೪೯೮, ೫೦೦
ಚನ್ನವೀರ ಜಂಗಮದೇವ ೮೭, ೧೦೭, ೧೨೯, ೧೫೮, ೪೯೮
ಚರ್ಲ ಭಾಷ್ಯಕಾರಶಾಸ್ತ್ರಿ ೪೦೭
ಚಾಮರಾಜನಗರದ ರಾಮಶಾಸ್ತ್ರಿ ೧೫೪, ೧೯೮, ೪೯೮
ಚಾಲುಕ್ಯ ಸೋಮದೇವ ೧೫೩
ಚಾವಲಿ ರಾಮಸ್ವಾಮಿಶಾಸ್ತ್ರಿ ೪೩೫, ೪೮೩
ಚಿಕುಪಾಧ್ಯಾಯ ೧೯, ೧೧೨, ೧೧೪, ೧೪೧, ೧೪೮, ೩೨೧
ಚಿಕ್ಕದೇವರಾಜ ಒಡೆಯರು ೧೯, ೭೫
ಚಿತ್ರಕವಿ ೧೫೪
ಚಿತ್ರಾಂಗದ ೭
ಚಿದಂಬರ ೧೫೪, ೪೯೧
ಚಿದಂಬರಕವಿ ೧೫೫, ೧೫೬
ಚಿದಾನಂದ ಮೂರ್ತಿ ಎಂ. ೨೨೫
ಚಿಂತನಪಲ್ಲಿ ಛಾಯಾಪತಿ ೪೪೭
ಚೆನ್ನಕೃಷ್ಣಯ್ಯ ಎಂ. ೨೧೫, ೪೧೦
ಚೆನ್ನವೀರದೇಶಿಕ ೧೬೧
ಚೇರಮಾಂಕ ೧೬, ೨೫, ೨೧೦
ಚೌಂಡರಸ ೧೧೯, ೧೨೫—೧೨೮, ೧೩೩
ಜಗದ್ದಳ ಸೋಮನಾಥ ೧೭
ಜಗನ್ನಾಥ ಪಂಡಿತ ೪೯೩
ಜನ್ನ ೧೫, ೧೮, ೮೫, ೧೬೯, ೨೦೯
ಜಯಕೀರ್ತಿ ೧೧೦
ಜಯಕೇಶಿನೃಪಾಲ ೧೦

ಜಯತಿಲಕಸೂರಿ ೪೦೪
ಜಯದೇವ ೪, ೨೩, ೨೧೧
ಜಯರಾಯಾಚಾರ್ಯ ೨೦೪
ಜಯಸಿಂಹ ೧೭
ಜಯಾದಿತ್ಯ ೩೯೯
ಚಾಯೇಂದ್ರ ೧೧, ೧೬, ೧೦೮. ೩೩೦
ಜಿನಪ್ರಭಸೂರಿ ೪೦೪
ಜಿನವಲ್ಲಭಸೂರಿ ೪೦೪
ಜಿನಸೂರ ೪೦೫
ಜಿನಸೇನ ೨೩೨, . ೪೫, ೨೫೩
ಜಿನಸೇನಾಚಾರ್ಯ ೮, ೧೭, ೩೨೪, ೪೯೯
ಟರ್ನರ್ ೨೨೮
ತಿಕ್ಕನ ೪೯೬
ತಿರುಮಲಾರ್ಯ ೧೦, ೨೪, ೭೪, ೭೬, ೮೭, ೨೬೦, ೩೨೯, ೩೩೮
ತೆನಾಲಿ ರಾಮಭದ್ರಕವಿ ೪೮೦
ತ್ರಿವಿಕ್ರಮ ಪಂಡಿತ ೪೦೭
ತ್ರಿವಿಕ್ರಮ ಭಟ್ಟ ೧೧
ದಂಡಿ ೫, ೮, ೧೦. ೧೧, ೨೩, ೨೪, ೨೯, ೩೦, ೩೩, ೩೭, ೫೦, ೫೪, ೫೭, ೬೬, ೯೩, ೯೭, ೧೦೦, ೧೧೪, ೧೧೯, ೧೨೬, ೧೨೭, ೧೩೪, ೧೩೬, ೧೩೭, ೧೫೩, ೧೯೫, ೨೩೦, ೨೩೪, ೨೮೦, ೨೯೧, ೩೫೬, ೩೫೮, ೩೭೭, ೩೮೬, ೪೯೧, ೪೯೨, ೪೯೭
ದಾಮೋದರ ಮಿಶ್ರ ೪೦೭
ದುಃಖಭಂಜನ ಕವಿ ೪೦೭
ದುರ್ಗಸಿಂಹ ೭೯, ೧೫೩
ದುರ್ಗಾ ಭಾಗವತ್ ೨೨೭, ೨೨೯
ದೇಪರಾಜ ೩೩೮
ದೇವಚಂದ್ರ ೧೧೨, ೩೪೨
ದೇವನಂದಿ ೪೦೪
ದೊಡ್ಡಕೃಷ್ಣರಾಜ ಒಡೆಯರು ೩೧೩
ಧನಂಜಯ ೧೫೩, ೪೯೧
ಧರ್ಮಘೋಷ ಯತಿ ೫೧
ಧರ್ಮದಾಸ ಸೂರಿ ೨೨೮, ೪೦೧
ಧರ್ಮಸಾಗರ ಗಣಿ ೪೦೪
ನಂಜುಂಡಯ್ಯ ೩೧೩
ನಂಜುಂಡಶಾಸ್ತ್ರಿ ಕೆ. ೧೪೫
ನಂದಿ ತಿಮ್ಮನ ೪೮೦
ನಂದಿಷೇಣ ೪೦೩
ನನ್ನೆಚೋಡ ೧೭, ೧೭೬, ೪೮೦, ೪೯೬
ನಮಿಸಾಧು ೪, ೫, ೪೪, ೨೪೨, ೩೫೯, ೩೯೬, ೩೯೯, ೪೨೫, ೪೨೭, ೪೪೮, ೪೫೦, ೪೫೪, ೪೫೬, ೪೯೨
ನರಸಿಂಹಾಚಾರ್ಯ ಆರ್. ೨೫೦, ೨೫೫, ೩೭೭
ನರೇಂದ್ರಪ್ರಭ ಸೂರಿ ೬, ೪೦೦
ನಾಗಚಂದ್ರ ೧೩, ೧೧೨, ೧೫೩, ೨೬೨, ೩೩೯, ೩೪೦, ೩೮೪
ನಾಗಪ್ಪ ಎಚ್. ೧೪೫
ನಾಗವರ್ಮ ೧೦, ೨೪, ೫೭, ೬೧, ೬೪, ೮೦, ೮೫, ೧೬೧, ೧೬೮, ೨೦೦, ೨೧೦, ೨೩೧, ೨೩೨, ೨೪೭, ೩೨೮, ೩೯೭, ೪೨೭. ೪೪೯, ೪೫೩.
ನಾರಾಯಣ ಪಂಡಿತ ೪೦೭
ನಾಲ್ವಡಿ ಕೃಷ್ಣರಾಜ ಒಡೆಯರು ೧೬
ನಿಜಗುಣ ಶಿವಯೋಗಿ ೧೭೦, ೧೭೩
ನೀತಿವರ್ಮ ೫೧, ೧೫೪
ನೀಲಕಂಠದೀಕ್ಷಿತ ೫೨, ೪೯೨
ನೀಲಕಂಠಾಚಾರ್ಯ ೧೧೦
ನೂರೊಂದ ೨೮೬, ೨೯೨, ೨೯೭
ನೃಪತುಂಗ ೧೩
ನೇಮಿಚಂದ್ರ ೮೦, ೮೫, ೮೭, ೮೮, ೧೬೮, ೧೬೯, ೨೪೮, ೪೯೮
ಪತಂಜಲಿ ೧೭೦
ಪದ್ಮಣಾಂಕ ೧೦೭, ೧೩೭, ೧೬೯, ೨೧೨, ೨೯೯, ೩೮೫, ೫೦೦
ಪದ್ಮರಸ ೨೩೧
ಪಂಪ ೧೫, ೮೦, ೮೫, ೧೫೭, ೪೯೮
ಪರಮದೇವ ೧೧೨
ಪರಾಶರಭಟ್ಟ ೫೧
ಪಾಂಚಾಳ ಗಂಗ ೨೮೫
ಪಾಣಿನಿ ೩೯೬, ೩೯೯
ಪಾಯಣ್ಣ ವ್ರತಿ ೧೭೫
ಪಾರಿಶ ೧೩, ೧೧೨
ಪಾರ್ಶ್ವಪಂಡಿತ ೨೩೧
ಪಾಲ್ಕುರಿಕೆ ಸೋಮನಾಥ ೪೯೬
ಪುರಂದರದಾಸ ೨೨೫, ೩೦೨, ೩೦೩
ಪುಷ್ಪದಂತ ೧೬೯
ಪೆದ್ದನ ೧೭೭
ಪೆದ್ದಯ ೪೯೬
ಪೆಮ್ಮಸೆಟ್ಟಿ ೧೬, ೨೫
ಪೊತ್ತಪಿ ವೆಂಕಟರಮಣಕವಿ ೧೯, ೧೭೭, ೪೦೮
ಪೊನ್ನ ೧೨, ೧೫, ೮೫, ೧೧೨, ೨೩೨, ೨೬೧, ೩೮೩, ೩೮೬, ೪೯೭
ಪ್ರಕಾಶವರ್ಷ ೪೯೫
ಪ್ರಚೇತಾಯನ ೭
ಪ್ರವರಸೇನ ೫೨
ಪ್ರಸನ್ನ ವೆಂಕಟದಾಸ ೨೨೫, ೩೦೨, ೩೦೭
ಪ್ರಾಣೇಶದಾಸ ೨೦೭
ಬಂಧುವರ್ಮ ೧೫, ೮೫
ಬಲ್ಲಾಲ ೨೬೪
ಬಸವ ೨೩೧
ಬಸವಕವಿ ೧೧೧, ೨೬೯, ೩೦೦, ೪೯೯
ಬಸವಣ್ಣ ಪಿ. ೧೬, ೧೦೬, ೧೨೨, ೧೩೨, ೧೪೬, ೧೪೭, ೧೭೦, ೨೧೬, ೩೧೧, ೩೩೩, ೩೩೬, ೩೪೩

ಬಸವಾಂಕ ೨೫, ೧೦೭, ೧೩೭
ಬಹುರೂಪಿ ಚೌಡಯ್ಯ ೨೭೪
ಬಾಹುಬಲಿ ಪಂಡಿತ ೧೫, ೭೮, ೮೫, ೩೨
ಬಿಬ್ಬಿ ಬಾಚಯ್ಯ ೨೭೩
ಭಟ್ಟ ತೌತ ೪೯೫
ಭಟ್ಟಾಕಳಂಕ ೨೧೩
ಭಟ್ಟಿ ೮, ೧೧, ೪೯೧
ಭರತ ೬, ೩೨, ೭೭
ಭರತ ದಂಡನಾಯಕ ೮೩
ಭವಭೂತಿ ೧೭೦
ಭಾಗಣ್ಣದಾಸ ೨೨೫, ೨೮೮
ಭಾನುದತ್ತ ೪
ಭಾಮಹ ೫, ೧೦, ೨೩, ೨೪, ೨೯, ೪೮, ೫೪, ೫೫, ೫೬, ೬೧, ೬೫, ೭೪, ೭೫, ೭೭, ೮೭, ೨೨೯, ೪೯೧, ೪೯೨, ೪೯೭
ಭಾರವಿ ೮, ೧೧, ೫೨, ೯೩, ೯೪, ೧೧೮, ೧೧೯, ೧೬೧, ೧೯೫, ೩೬೬, ೩೬೭, ೪೯೧, ೪೯೬
ಭಾಸ ೮
ಭೀಮಕವಿ ೧೭೧, ೧೭೨
ಭೀಮರಾವ್ ಚಿಟಗುಪ್ಪಿ ೪೩೭
ಭೋಜ ೫, ೬, ೨೩, ೩೦, ೩೧, ೪೮, ೪೯, ೫೦, ೯೩, ೯೬, ೯೮, ೧೦೩, ೧೦೭, ೧೧೫, ೧೧೮, ೧೩೬, ೧೩೭, ೧೫೩, ೨೪೨, ೩೨೨, ೩೯೬, ೪೦೦, ೪೯೨, ೫೦೦
ಭೋಜದೇವ ೭, ೪೭, ೧೩೪, ೧೯೪, ೨೩೦, ೨೪೩, ೩೫೧, ೩೬೩
ಮಂಖ ೪೯೧
ಮಂಗರಾಜ ೨೨೭
ಮಂಡಪಾಕ ಪಾರ್ವತೀಶ್ವರ ಶಾಸ್ತ್ರಿ ೪೪೭, ೪೯೬
ಮಧುರ ೧೫, ೨೭೩, ೩೨೮
ಮಧುವಯ್ಯ ೨೭೨
ಮನಸಿಜ ೧೬೯
ಮಮ್ಮಟ ೪, ೬, ೭, ೨೩, ೨೪, ೩೦, ೪೦೦, ೪೯೨
ಮಲ್ಲ ೭೯, ೮೮
ಮಲ್ಲಕವಿ ೨೬೨, ೩೯೦
ಮಲ್ಲಿಕಾರ್ಜುನ ೧೭೨
ಮಲ್ಲಿಕಾರ್ಜುನ ಪಂಡಿತ ೪೯೬
ಮಲ್ಲಿನಾಥ ೯೫, ೯೮, ೧೧೮, ೧೬೨, ೧೯೫
ಮಹಲಿಂಗಸ್ವಾಮಿ ೨೮೬
ಮಹಾಬಲ ೧೮
ಮಾಕ್ಡೊನೆಲ್ ೨೨೭
ಮಾಘ ೮, ೧೧, ೫೨, ೫೩, ೯೩, ೯೪, ೧೧೮, ೪೦೬, ೪೯೧, ೪೯೯, ೫೦೦
ಮಾಧವ ೬೬, ೭೧, ೧೦೨
ಮಾಧವಾಂಕ ೭೪
ಮಾನಾಂಕ ೫೦
ಮುಖಬೋಳು ಸಿದ್ಧರಾಮ ೧೬, ೧೦೯
ಮುಗಳಿ ರಂ. ಶ್ರೀ. ೪೩೭
ಮುದ್ದಣ ೨೧೫, ೨೮೫
ಮುನಿಸುಂದರ ಸೂರಿ ೪೦೪
ಮುಮ್ಮಡಿ ಕೃಷ್ಣರಾಜ ಒಡೆಯರು ೧೨, ೧೯, ೧೬೪, ೧೯೮
ಮುರಿಗಾ ಗುರುಸಿದ್ಧ ೧೨೩, ೧೪೬
ಮುರಿಗೆ ದೇಶಿಕೇಂದ್ರ ೧೫, ೧೬೨, ೨೧೩
ಮುಳಿಯ ತಿಮ್ಮಪ್ಪಯ್ಯ ೧೫೭, ೨೦೧, ೨೦೨, ೨೪೮, ೨೫೦, ೨೫೪, ೨೫೯, ೩೨೭, ೩೨೮, ೪೩೭
ಮೇಘವಿಜಯಗಣಿ ೪೯೧
ಮೇಧಾವಿ ೪೦೫
ಮೈಸೂರು ಸೀತಾರಾಮಶಾಸ್ತ್ರಿ ೧೫೪
ಮೋನಿಯರ್ ವಿಲಿಯಂಸ್ ೨೨೬, ೨೨೮
ಯಶೋಧರ ೯, ೩೯೯
ರಘುವೀರ ಮಿಶ್ರ ೪೦೭
ರತ್ನಶ್ರೀಜ್ಞಾನ ೩೬, ೯೪, ೯೫, ೧೧೫, ೧೧೭, ೧೧೮, ೧೯೫, ೨೨೯
ರತ್ನಾಕರ ೮, ೧೧, ೧೮, ೯೪, ೯೮, ೧೧೮, ೧೨೦, ೧೬೧, ೧೬೩, ೪೦೬, ೪೯೧, ೫೦೦
ರತ್ನೇಶ್ವರ ೩೯೬
ರನ್ನ ೧೫, ೮೫, ೧೬೯
ರಾಘವಾಂಕ ೨೫
ರಾಜಶೇಖರ ೭, ೫೪, ೨೨೮
ರಾಜಾನಕ ರುಯ್ಯಕ ೪೦೦
ರಾಮಕೃಷ್ಣಶಾಸ್ತ್ರಿ ೪೭೫, ೪೯೮
ರಾಮಚಂದ್ರ ೧೫೪, ೪೯೧
ರಾಮಭದ್ರ ೧೫೪
ರಾಮರಾಜಭೂಷಣ ೧೯
ರಾಮರೂಪ ಪಾಠಕ ೪೦೭
ರಾಮಸಿಂಹ ೯೬, ೧೧೫
ರಾವಿಪಾಟಿ ಲಕ್ಷ್ಮೀನಾರಾಯಣ ೩೩೭
ರಾವುಕೊಂಡಲ ರಾಯುಡು ೪೧೪, ೪೫೦
ರಾಪೂರಿ ದೊರೆಸಾಮಿ ಶರ್ಮ ೪೮೭
ರುದ್ರಟ ೪–೬, ೧೦, ೨೪, ೩೦, ೩೧, ೪೧, ೪೯, ೫೦, ೫೬, ೭೬, ೮೪, ೮೭, ೧೩೬, ೧೯೩, ೨೦೦, ೨೨೪, ೨೪೨, ೨೫೩, ೩೫೭, ೩೫೯, ೩೯೬, ೩೯೯, ೪೨೫, ೪೪೮, ೪೫೦, ೪೫೩, ೪೫೪, ೪೫೬, ೪೮೬, ೪೯೧, ೪೯೨, ೪೯೭, ೫೦೦
ರುದ್ರಭಟ್ಟ ೮೫, ೮೬, ೧೫೭, ೪೯೭-೮
ರುಯ್ಯಕ ೪, ೫, ೨೩
ರೇಚನೃಪ ೧೭
ರೇವಣಸಿದ್ಧ ೨೬೫, ೨೯೮, ೪೯೯
ಲಕ್ಷ್ಮಕವಿ ೧೭೦
ಲಕ್ಷ್ಮಣ (ಲಕ್ಷ್ಮೀಧರ) ೧೭೩
ಲಕ್ಷ್ಮಯ್ಯ ಕವಿ ೨೯೬
ಲಕ್ಷ್ಮೀಶ ೨೫, ೧೧೧, ೧೪೪
ಲಿಂಗರಾಜ ೭೫, ೭೬, ೪೮೧
ವಸುಪಾಲ ೯೭, ೯೯

ವಾಗ್ಭಟ ೨೪, ೫೦, ೩೯೭, ೪೦೦
ವಾತ್ಸ್ಯಾಯನ ೯, ೨೩೪, ೩೯೯
ವಾದಿರಾಜ ೪೦೭
ವಾಮನ ೫, ೨೪, ೨೯, ೪೦, ೩೯೯, ೪೯೨
ವಾಸುದೇವ ೫೧, ೪೯೧
ವಿದ್ಯಾಧರ ೪, ೬, ೯, ೩೧, ೪೯೨
ವಿದ್ಯಾನಾಥ ೫, ೪೦೧
ವಿದ್ಯಾಮಾಧವ ೧೫೩
ವಿನಯವಿಜಯ ಗಣಿ ೪೦೫
ವಿರಹಾಂಕ ೫೨
ವಿಶ್ವನಾಥ ೪, ೬, ೨೩, ೩೧, ೪೦೧, ೪೯೨
ವೀರರಾಘವ ೧೫೪
ವೆಂಕಟ (೧) ೧೫೫
ವೆಂಕಟ ಕವಿ ೧೨
ವೆಂಕಟರಮಣಯ್ಯ ೧೭೪, ೧೮೫, ೩೯೯, ೪೧೦, ೪೮೦, ೪೯೮
ವೆಂಕಟರಾಯಾಚಾರ್ಯ ಕೆ. ೪೩೭
ವೆಂಕಟಸುಬ್ಬಯ್ಯ ಜಿ. ೪೩೭
ವೆಂಕಟಾಚಾರ್ಯ ೧೫೪, ೪೦೭
ವೆಂಕಟಾಧ್ವರಿ ೧೫೪, ೪೦೭, ೪೯೧
ವೆಂಕಟೇಶ ೪೦೭
ವೆಂಕಟೇಶ್ವರ ೧೭೯, ೪೦೭
ವೆಂಕಾಮಾತ್ಯ ೧೯
ವೇದಾಂತ ದೇಶಿಕ ೧೫೪, ೪೦೬, ೪೯೧, ೫೦೦
ವೇದುಲ ಸೂರ್ಯನಾರಾಯಣ ೪೪೪
ಶಂಕರ ೩೩೪
ಶಾಂತಕವಿ ೨೬೪, ೪೯೯
ಶಾಂತನಿರಂಜನ ೨೦೮, ೨೮೬, ೨೯೭
ಶಾಂತವೀರದೇಶಿಕ ೪೦೯, ೪೧೯
ಶಾಂತೇಶ ೨೫, ೧೨೯, ೧೩೧
ಶಿವಪ್ರಸಾದ ೧೫೪
ಶಿವಸ್ವಾಮಿ ೮, ೧೧, ೯೯, ೧೬೩, ೪೦೬, ೪೯೧, ೫೦೦
ಶಿಶುನಾಳ ಶರೀಫ ೨೭೬
ಶೇಷ ೭
ಶೋಭನ ಮುನಿ ೫೧
ಶೋಭಾಕರ ಮಿತ್ರ ೬
ಶ್ರೀಕಂಠಯ್ಯ ತೀ. ನಂ. ೧೨೯
ಶ್ರೀಕಂಠ ಶಾಸ್ತ್ರಿ ಎಸ್. ೧೩೨
ಶ್ರೀಧರಸ್ವಾಮಿ ೯
ಶ್ರೀನಿವಾಸ ೧೫೪
ಶ್ರೀನಿವಾಸ ಕವಿ ೧೨, ೧೯, ೧೬೪, ೧೯೮, ೪೯೮
ಶ್ರೀನಿವಾಸ ರಂಗಾಚಾರ್ಯ ಟಿ. ೧೬, ೪೧೦
ಶ್ರೀವತ್ಸಾಂಕ ೫೧
ಶ್ರೀವಲ್ಲಭ ೪೦೫
ಶ್ರೀವಿಜಯ ೧೬೯
ಶ್ರೀಹರ್ಷ ೮, ೧೧, ೧೫೪, ೧೭೦
ಶ್ರುತಕೀರ್ತಿ ತ್ರೈವಿದ್ಯ ೧೨, ೧೫೩
ಷಡಕ್ಷರಿ ೧೬, ೨೫, ೭೭, ೧೨೩, ೧೩೦, ೧೪೫, ೧೭೨, ೨೦೮, ೩೩೦, ೩೪೩, ೩೮೮, ೪೯೯, ೫೦೦
ಸಂಧ್ಯಾಕರ ನಂದಿ ೧೫೩
ಸಮಂತಭದ್ರ ೪೦೩
ಸಮಯಸುಂದರ ಗಣಿ ೪೦೫
ಸರ್ವಜ್ಞ ೨೭೭, ೨೭೮, ೨೮೧, ೨೮೨, ೩೧೬
ಸಹಜಕೀರ್ತಿವಾಚಕ ೪೦೫
ಸಾಗರಚಂದ್ರ ೧೫೪, ೪೦೬
ಸಾಳ್ವ ೧೦
ಸಿಂಹದೇವ ಗಣಿ ೪೧೩
ಸಿಂಗಳದ ಬಸವರಾಜ ದೇವ ೧೨
ಸಿಂಗಳದ ಸಿದ್ಧಬಸವರಾಜ ೨೭೩, ೩೭೪, ೪೯೯
ಸಿದ್ಧನಂಜೇಶ ೧೦೭, ೧೦೯, ೧೭೪, ೪೯೮
ಸೀತಾರಾಮಯ್ಯ ಎಂ. ವಿ. ೨೦೧, ೨೪೮, ೨೪೯, ೨೫೧, ೨೫೪, ೨೫೭, ೨೫೯, ೩೨೭, ೪೩೭
ಸುಂಕದ ಬಂಕಣ್ಣ ೨೭೪
ಸುಬಂಧು ೧೧
ಸೂರ್ಯನಾರಾಯಣ ೧೫೪
ಸೆಜ್ಜೆವಳ್ಳ ಪದ್ಮನಾಭ ೧೬೯
ಸೋಮಕುಂಜರ ೧೫೪
ಸೋಮತಿಲಕ ೫೧
ಸೋಮನಾಥ ಪಂಡಿತ ೨೭೫
ಸೋಮಪ್ರಭ ೧೫೫
ಸೋಮಪ್ರಭಾಚಾರ್ಯ ೧೫೪
ಸೋಮಶೇಖರ ಶಿವಯೋಗಿ ೧೫೪
ಸೋಸಲೆ ರೇವಣಾಚಾರ್ಯ ೧೦ , ೧೧೦
ಹರದತ್ತ ಸೂರಿ ೧೫೪, ೧೫೫, ೪೯೧
ಹರಿಚಂದ್ರ ೮, ೯೪, ೯೫, ೧೧೮, ೪೦೪
ಹರಿಹರ ೮, ೨೫, ೧೧೨
ಹಿರಿಯೂರು ರಂಗ ೩೮೬
ಹೇಮಚಂದ್ರ ೫–೭, ೨೩, ೨೪, ೫೨, ೧೩೬, ೧೫೪, ೩೯೬, ೪೦೦, ೪೯೨, ೫೦೦
ಹೇಮವಿಜಯ ಗಣಿ ೪೦೫
ಹೊಯ್ಸಳ ವೀರಬಲ್ಲಾಳ ೧೫೭

೫/ಕೃತಿನಾಮ ಸೂಚಿ

(ಅಂಕಿಗಳು ಪುಟಗಳನ್ನು ಸೂಚಿಸುತ್ತವೆ.)

ಅಕ್ಷರಮಾಲಿಕಾ ಸಾಂಗತ್ಯ ೧೧೨, ೧೧೩, ೧೪೧, ೧೪೮
ಅಕ್ಷರಮಾಲಿಕೆ ೧೧೨
ಅಗ್ನಿಪುರಾಣ ೬, ೮, ೯, ೩೫೯, ೩೬೦, ೪೦೦, ೪೦೧
ಅಚ್ಯುತಲೀಲಾ ೫೧
ಅಜಿತಪುರಾಣ ೧೮, ೨೮, ೮೩, ೮೮
ಅಜಿಯಶಾಂತಿಥಯ ೪೦೩
ಅನಂತನಾಥ ಪುರಾಣ ೧೮, ೮೦, ೮೨, ೨೦೯
ಅಪ್ಪಕವೀಯ ೬, ೧೮, ೧೭೬, ೧೭೮, ೪೩೪, ೪೮೦, ೪೯೬
ಅಪ್ರತಿಮವೀರಚರಿತ ೧೦, ೨೫, ೨೬, ೭೪, ೨೬೦, ೩೨೯, ೩೭೮, ೪೦೯, ೫೦೦
ಅಬ್ಬಲೂರ ಚರಿತೆ ೨೦೮, ೨೮೬, ೨೯೭
ಅಭಿಧಾನ ರತ್ನಮಾಲಾ ೨೨೬
ಅಭಿಧಾನರಾಜೇಂದ್ರಕೋಶ ೨೨೮
ಅಭಿಧಾನ ವಸ್ತುಕೋಶ ೨೩೧
ಅಭಿನವ ದಶಕುಮಾರ ಚರಿತೆ ೧೨೫, ೧೨೬, ೨೩೩
ಅಭಿನವಾಭಿಧಾನ ೨೨೭, ೨೩೧
ಅಮರಕೋಶ ೨೨೬
ಅರನಾಥಸ್ತವ ೪೦೫
ಅರ್ಧನೇಮಿ ಪುರಾಣ ೧೦೭, ೧೭೯
ಅಲಂಕಾರ ಕೌಸ್ತುಭ ೪೦೧
ಅಲಂಕಾರ ಚಿಂತಾಮಣಿ ೬, ೧೬೩, ೩೨೫, ೩೨೭, ೩೫೧, ೩೫೨, ೪೦೧, ೪೦೫, ೪೧೧, ೪೧೩, ೪೧೫, ೪೧೬, ೪೧೮, ೪೨೪, ೪೩೮, ೪೫೩, ೪೫೪, ೪೭೫, ೪೭೮, ೪೮೦, ೪೮೫ ೪೮೭
ಅಲಂಕಾರ ಚೂಡಾಮಣಿ ೩೫೯, ೩೯೬
ಅಲಂಕಾರ ಮಣಿದರ್ಪಣ ೬, ೧೯
ಅಲಂಕಾರ ಮಹೋದಧಿ ೬, ೪೦೦
ಅಲಂಕಾರ ರತ್ನಾಕರ ೬
ಅಲಂಕಾರ ಶೇಖರ ೩, ೪
ಅಲಂಕಾರ ಸರ್ವಸ್ವ ೫, ೪೦೦
ಅಷ್ಟಾಧ್ಯಾಯಿ ೩೯೬, ೩೯೯
ಆದಿಪುರಾಣ ೮೨, ೮೬, ೮೭
ಆನಂದಕಾವ್ಯ ೧೫೩
ಆನಂದಲೇಖಾ ೪೦೫
ಆರಾಧ್ಯಚಾರಿತ್ರ ೧೧೦
ಇಂದುಮತೀ ಪರಿಣಯ ೪೮೦
ಈಶ್ವರಶತಕ ೪೦೪
ಉಅಪಿಸ ಮಾಲಾ ೪೦೫
ಉತ್ತರ ಕರ್ನಾಟಕದ ಒಡಪುಗಳು ೧೪
ಉದಯಾದಿತ್ಯಾಲಂಕಾರ ೧೦, ೬೫, ೨೫೯, ೪೦೯
ಉದ್ಭಟದೇವ ಚರಿತೆ ೧೦೭, ೧೩೭
ಉಪನಿಷತ್ತು ೮
ಉಪಾಹರಣ ೪೦
ಋಗ್ವೇದ ೮
ಏಕಾವಲಿ ೩, ೪, ೯
ಐಂದ್ರ ವ್ಯಾಕರಣ ೧೭೦
ಒಗಟೆಯ ಚೌಪದ ೧೩, ೩೧೫
ಒಗಟೆಯ ಪದಗಳು ೧೩
ಓಗಟೆಯ ಪದ ೩೧೨
ಕಂಕಣಬಂಧ ರಾಮಾಯಣ ೪೦೭
ಕಂಠೀರವ ನರಸರಾಜ ವಿಜಯ ೨೯೬, ೨೯೭
ಕನಕದಾಸರ ಮುಂಡಿಗೆಗಳು ೨೨೫
ಕಂತಿ ಪಂಪನ ಸಮಸ್ಯೆಗಳು ೧೩, ೧೨೫, ೨೦೩, ೩೧೦, ೩೩೭, ೩೩೮, ೩೪೨, ೪೯೯
ಕನ್ನಡ ಕುವಲಯಾನಂದ ೧೧, ೧೦೮, ೩೩೦, ೪೦೯
ಕನ್ನಡ ಕೈಪಿಡಿ ೧೦೫
ಕಪ್ಪಿಣಾಭ್ಯುದಯ ೯೪, ೯೮, ೯೯, ೧೬೨, ೧೬೩, ೧೯೬, ೧೯೭, ೩೭೨, ೪೦೬
ಕಮಲಮಾಲಿಕಾಸ್ತೋತ್ರ ೪೦೭
ಕರ್ಣಾಟಕ ಕಲ್ಯಾಣಕಾರಕ ೧೭
ಕರ್ಣಾಟಕ ಕವಿಚರಿತೆ ೧೩, ೧೨೬, ೧೪೧, ೧೬೫, ೧೮೦, ೨೯೦
ಕರ್ಣಾಟಕ ಕಾದಂಬರಿ ೭೯
ಕರ್ಣಾಟಕ ಚಂದ್ರಾಲೋಕ ೧೦೨, ೧೦೩, ೪೯೭
ಕರ್ಣಾಟಕ ಪಂಚತಂತ್ರ ೭೯, ೧೫೩
ಕರ್ಣಾಟಕ ವಾಣೀವಿಲಾಸ ೧೪
ಕರ್ಣಾಟ ಛಂದೋಲಂಕಾರಸಾಹಿತ್ಯ ಲಕ್ಷಣಸಂಗ್ರಹವು ೪೩೫, ೪೮೩, ೪೮೬, ೪೯೭
ಕರ್ಣಾಟಭಾರತ ಕಥಾಮಂಜರಿ ೩೦೦
ಕಲ್ಲೆ ಲಿಂಗೇಶ್ವರಚಾರಿತ್ರ ೨೩೧, ೨೬೯, ೩೦೦
ಕವಿಕಂಠಾಭರಣ ೯೮
ಕವಿಜನಚಂದ್ರೋದಯ ೪೫೦
ಕವಿರಾಜಮಾರ್ಗ ೯, ೧೦, ೧೪, ೧೭, ೧೮, ೨೪, ೨೫, ೫೪, ೮೭, ೧೦೦, ೧೦೧, ೧೨೦, ೧೨೧, ೧೩೬, ೨೦೦, ೨೦೨, ೨೨೨, ೨೨೮, ೨೪೬. ೨೪೯–೫೨, ೨೫೪, ೨೫೫, ೨೫೭, ೩೨೭, ೩೨೮, ೩೭೪, ೩೭೬, ೩೭೮, ೩೮೧, ೩೮೨, ೪೦೯, ೪೩೫, ೪೩೭, ೪೯೭–೫೦೦
ಕವಿರಾಜಮಾರ್ಗ ವಿವೇಕ ೨೪೯, ೪೩೭
ಕಾಮಸೂತ್ರ ೯, ೨೩೪, ೩೯೯
ಕಾವ್ಯಪ್ರಕಾಶ ೪, ೫, ೨೫, ೪೦೦
ಕಾವ್ಯಮೀಮಾಂಸಾ ೭, ೫೪
ಕಾವ್ಯವಿಲಾಸ ೬

ಕಾವ್ಯಸಾರ ೭೯, ೮೦, ೮೮, ೧೭೧, ೨೬೨, ೩೯೦
ಕಾವ್ಯಾದರ್ಶ ೩೦, ೩೩, ೪೮, ೪೯, ೫೫, ೫೬, ೫೯, ೬೧, ೬೬, ೬೮, ೭೦, ೭೧, ೭೩, ೭೪, ೯೩, ೯೫, ೯೭, ೧೦೦, ೧೦೨, ೧೩೬, ೧೯೫, ೨೩೪, ೨೪೪, ೨೫೯, ೨೬೦, ೨೯೧, ೩೫೪, ೩೫೬, ೩೭೬, ೩೭೭, ೩೭೯, ೪೩೯
ಕಾವ್ಯಾನುಶಾಸನ ೬, ೭, ೫೨, ೩೬೦, ೩೯೬, ೪೦೦
ಕಾವ್ಯಾಲಂಕಾರ ೪, ೫, ೩೦, ೪೧, ೪೮, ೪೯, ೫೫, ೫೬, ೬೧, ೭೪, ೭೬, ೧೩೬, ೧೯೩, ೨೨೪, ೨೪೨, ೨೫೩, ೩೫೭, ೩೫೯, ೩೯೬, ೩೯೯, ೪೨೫, ೪೪೧, ೪೫೩, ೪೫೪, ೪೫೬, ೪೯೨
ಕಾವ್ಯಾಲಂಕಾರ ಚೂಡಾಮಣಿ ೧೭೬, ೪೩೪, ೪೯೬
ಕಾವ್ಯಾಲಂಕಾರ ಸಂಗ್ರಹಮು ೪೯೬
ಕಾವ್ಯಾಲಂಕಾರ ಸೂತ್ರವೃತ್ತಿ ೨೯
ಕಾವ್ಯಾವಲೋಕನ ೧೦, ೧೪, ೨೫, ೫೪, ೫೭, ೬೨, ೭೮, ೮೪, ೧೦೦, ೧೦೧, ೧೨೦, ೧೨೧, ೧೩೬, ೨೦೦, ೨೦೧, ೨೦೩, ೨೨೩, ೨೨೮, ೨೩೧, ೨೪೬, ೨೪೮, ೨೪೯, ೨೫೧, ೨೫೩, ೨೫೫, ೨೫೬, ೨೫೯, ೩೨೮, ೩೨೯, ೩೭೬, ೩೭೭, ೩೮೧, ೩೮೩, ೪೦೯, ೪೨೭, ೪೩೩, ೪೪೯, ೪೫೩, ೪೭ , ೪೯೭, ೫೦೦
ಕಿರಾತಾರ್ಜುನೀಯ ೫೨, ೯೪, ೯೫, ೯೬, ೧೧೯, ೧೬೧, ೧೬೨, ೩೬೬, ೩೬೭
ಕೀಚಕವಧ ೫೧, ೧೫೪
ಕುಮಾರಪಾಲ ಚರಿತ ೧೫೪
ಕುಮಾರವ್ಯಾಸಭಾರತ ೨೮, ೨೩೩, ೩೩೮
ಕುಮಾರಸಂಭವ ೧೭, ೧೭೬, ೪೮೦
ಕುವಲಯಾನಂದ ೧೧
ಕುಸುಮಾವಳಿ ೮೪
ಕೃಷ್ಣನೃಪಜಯೋತ್ಕರ್ಷ ೧೨
ಕೈವಲ್ಯಪದ್ಧತಿ ೧೭೦, ೧೭೩
ಕ್ರಿಯಾಗೋಪನ ರಾಮಾಯಣ ೧೯೩
ಗಂಗಾವತರಣ ೫೨
ಗದಾಯುದ್ಧ ೨೭, ೨೮, ೨೧೦
ಗಯೋಪಾಖ್ಯಾನ ೧೨೪, ೧೩೨, ೧೭೪, ೧೮೫, ೧೮೯, ೩೯೯, ೪೧೦, ೪೮೦, ೪೮೨, ೪೮೪, ೫೦೦
ಗಿರಿಜಾಕಲ್ಯಾಣ ೮೧
ಗುರುಪರಿವಾಡಿ ೪೦೪
ಗುರುಭಕ್ತಾಂಡಾರ ಚರಿತೆ ೧೨, ೧೬
ಗುರುರಾಜ ಚಾರಿತ್ರ ೩೦೧
ಚತುರ್ವಿಂಶತಿಕಾ ೫೧
ಚತುರ್‌ಹಾರಾವಲೀಚಿತ್ರಸ್ತವ ೪೦೪
ಚಂದ್ರಕಲಾವಿಲಾಸ ೧೯೩
ಚಂದ್ರಪ್ರಭಪುರಾಣ ೮೮, ೧೭೦, ೨೧೨
ಚಂದ್ರಪ್ರಭಸ್ವಾಮಿಸ್ತವನ ೪೦೫
ಚಂದ್ರಾಲೋಕ ೬, ೨೧೧
ಚಾಂದ್ರ ವ್ಯಾಕರಣ ೧೭೦
ಚಿಕದೇವರಾಜವಿಜಯ ೮೭
ಚಿಕ್ಕಮಗಳೂರು ಶಾಸನ ೩೨೮
ಚಿತ್ರಕವಿತ್ವದರ್ಪಣ ೪೧೯, ೪೧೪, ೪೫೦
ಚಿತ್ರಕಾವ್ಯಕೌತುಕ ೪೦೭, ೪೪೪, ೫೦೦
ಚಿತ್ರಬಂಧಕಾವ್ಯ ೪೦೭, ೪೧೯, ೪೨೭, ೪೪೮, ೪೫೦, ೪೫೪, ೪೭೮, ೪೮೩
ಚಿತ್ರಬಂಧಪತ್ರಿಕಾ ೪೮೭, ೫೦೦
ಚಿತ್ರಬಂಧರಾಮಾಯಣ ೪೦೭, ೪೯೧
ಚಿತ್ರಭಾರತ ೧೫, ೧೬
ಚಿತ್ರಮಂಜರಿ ೪೦೯
ಚಿತ್ರಮೀಮಾಂಸಾ ೪
ಚಿತ್ರರತ್ನಾಕರ ೧೫೪, ೪೯೧
ಚಿತ್ರಶತಕಸಾಂಗತ್ಯ ೩೨೦, ೪೯೯
ಚೆನ್ನಬಸವಪುರಾಣ ೩೧೧
ಚೆನ್ನರಾಮನ ಸಾಂಗತ್ಯ ೨೮೫
ಚೇರಮಕಾವ್ಯ ೧೦೮, ೨೧೦
ಚೌಪದದ ಒಗಟುಗಳು ೨೮೬, ೩೧ , ೪೯೦
ಚೌಪದದ ಒಗಟೆ ೩೧೨
ಛಂದಃಶೇಖರ ೨೨೮
ಛಂದೋಂಬುಧಿ ೧೬೧
ಜಗನ್ನಾಥ ವಿಜಯ ೮೩, ೮೬, ೧೫೭
ಜಯಮಂಗಲಾ ೯, ೩೯೯
ಜಾನಕೀಹರಣ ೧೯೬, ೪೦೬
ಜಿನಶತಕ ೪೦೩
ಜಿನಸ್ತವನಚತುರ್ವಿಂಶತಿಕಾ ೪೦೫
ಜಿನಾಕ್ಷರಮಾಲೆ ೧೨, ೧೧೨
ಜೈಮಿನಿಭಾರತ ೨೭, ೨೯, ೮೧, ೮೨, ೮೯, ೧೧೧, ೧೪೪
ತತ್ತ್ವಸಾರ ೨೮೮
ತೆಲುಗುಲೋ ಚಿತ್ರಕವಿತ್ವಮು ೪೮೭
ತೋಂಟದ ಸಿದ್ಧೇಶ್ವರ ಪುರಾಣ ೧೨೯, ೧೩೧
ತ್ರಿದಶತರಂಗಿಣಿ ೪೦೪
ತ್ರಿಪುರದಹನ ೫೧
ದಂಡ್ಯಳಂಕಾರ ೪೯೬
ದಶಕುಮಾರಚರಿತೆ ೧೧೮, ೧೧೯, ೧೨೬
ದಿವ್ಯಸೂರಿಚರಿತೆ ೨೩೩
ದೇವೀಶತಕ ೪೦೬
ಧರ್ಮನಾಥ ಪುರಾಣ ೭೮, ೧೬೯, ೨೩೨, ೩೨೮
ಧರ್ಮಶರ್ಮಾಭ್ಯುದಯ ೯೪, ೯೫, ೧೧೮, ೧೯೫, ೧೯೭, ೪೦೪, ೪೩೫, ೪೪೫
ಧರ್ಮಶಿಕ್ಷಾ ಪ್ರಕರಣ ೪೦೪
ಧರ್ಮಾಮೃತ ೭೮, ೩೨೮
ಧ್ವನ್ಯಾಲೋಕ ೩, ೪, ೧೭೦, ೨೨೪
ನಂದಿಮಾಹಾತ್ಮ್ಯ ೧೫, ೧೪೫, ೧೭೪
ನರನಾರಾಯಣಾನಂದಕಾವ್ಯ ೯೭–೯೯, ೧೧೮, ೧೩೬, ೩೭೨
ನರಪತಿಚರಿತ ೧೧, ೨೫, ೨೬, ೭೫, ೨೬೦, ೩೭೮, ೪೦೯, ೪೨೨, ೪೪೧, ೪೫೦, ೪೭೮, ೪೯೭–೮, ೫೦೦
ನರಸಭೂಪಾಲೀಯ ೧೯, ೪೩೪

ನಲಹರಿಶ್ಚಂದ್ರೀಯ ೧೫೪
ನಲೋದಯ ೫೧
ನಳಚಂಪು ೭೮
ನಳೋಪಾಖ್ಯಾನ ಚಂಪೂ ೪೧೦, ೪೩೫, ೪೪೧
ನಾಟ್ಯಶಾಸ್ತ್ರ ೩೧, ೩೨
ನಾಯಧಮ್ಮಕಹಾ ೯
ನಾರಾಯಣಾಕ್ಷರಮಾಲಿಕಾಸ್ತೋತ್ರ ೧೧೨
ನಿರೀಕ್ಷೆ ೧೧೬, ೧೨೨, ೧೩೨, ೧೪೬, ೩೧೧, ೩೩೩, ೩೩೬, ೩೪೩
ನೇಮಿನಾಥ ಪುರಾಣ ೧೮, ೭೮, ೭೯, ೮೦, ೮೮
ನೈಷಧೀಯ ಚರಿತ ೧೫೪
ಪಂಚಜಿನಹಾರಬಂಧಸ್ತವ ೪೦೪
ಪಂಚಾಶಿಕೆ ೧೨೪, ೧೩೧, ೧೩೯
ಪದ್ಮರಾಜ ಪುರಾಣ ೧೦೭, ೧೨೮, ೧೩೭, ೧೭೯, ೨೧೨, ೨೯೯, ೩೦೯, ೩೮೫
ಪಂಪಭಾರತ ೧೫೭, ೨೮೩, ೩೨೮
ಪಂಪಭಾರತ ದೀಪಿಕೆ ೨೮೪
ಪಂಪರಾಮಾಯಣ ೨೮, ೨೬೨, ೩೮೪
ಪಂಪಾ ವಿರೂಪಾಕ್ಷ ಶತಕ ೩೮೬
ಪರಮಾರ್ಥ ಪ್ರಕಾಶಿಕೆ ೧೭೦
ಪಾದುಕಾಸಹಸ್ರ ೧೫೪, ೪೨೯, ೪೩೧, ೪೩೪, ೪೩೫, ೪೪೭, ೪೭೭, ೪೮೭
ಪಾರಿಜಾತಾಪಹರಣ ೪೮೦
ಪಾರ್ವತೀರುಕ್ಮಿಣೀಯ ೧೫೩
ಪಾರ್ಶ್ವನಾಥ ಪುರಾಣ ೨೩೧
ಪುಷ್ಪದಂತ ಪುರಾಣ ೭೮, ೭೯, ೮೨, ೮೪
ಪೂರ್ವಪುರಾಣ ೧೭
ಪ್ರತಾಪರುದ್ರ ಯಶೋಭೂಷಣ ೪೦೧
ಪ್ರತಾಪರುದ್ರೀಯ ೬, ೪೮೦
ಪ್ರಬಂಧರಾಜ ವೆಂಕಟೇಶ್ವರವಿಜಯ ವಿಲಾಸಮು ೪೯೬
ಪ್ರಬಂಧಸಂಬಂಧ ಬಂಧನಿಬಂಧನ ಗ್ರಂಥಮು ೪೦೯, ೪೪೭, ೪೯೬
ಪ್ರಭುದೇವರ ಪುರಾಣ ೧೨, ೧೬, ೧೩೮, ೨೦೭
ಪ್ರಶ್ನಶತಕ ೪೯೧
ಪ್ರಶ್ನೋತ್ತರ ಚಿಂತಾಮಣಿ ೧೩
ಪ್ರಶ್ನೋತ್ತರ ರತ್ನಮಾಲಿಕಾ ೧೩, ೩೩೪
ಪ್ರಸನ್ನ ರಾಘವ ೨೧೧
ಪ್ರಹೇಳಿಕಾರ್ಥ ಪ್ರದೀಪಿಕೆ ೨೯೭
ಪ್ರಾಸಭಾರತ ೧೫೪, ೪೯೧
ಪ್ರಾಸರತ್ನಾಕರ ೧೨
ಪ್ರಿಯಂಕರ ನೃಪಕಥಾ ೪೦೫
ಪ್ರೌಢರಾಯನ ಕಾವ್ಯ ೨೩
ಬಂದಳಿಕೆಯ ಶಾಸನಗಳು ೪೦೯, ೪೪೭
ಬಂಧಮಾಲಿಕೆ ೪೦೮
ಬಸವಪುರಾಣ ೧೭೧
ಬಾಲರಾಮನ ಸಾಂಗತ್ಯ ೨೮೬
ಬುದ್ಧಚರಿತ ೪೯೧
ಬೃಂದಾವನ ೫೧
ಭಟ್ಟಿಕಾವ್ಯ ೨೨೯
ಭರತೇಶ ವೈಭವ ೧೮
ಭಾಗವತ ೧೧, ೩೦೩, ೩೦೯
ಭಾಗವತ ಟೀಕೆ ೯
ಭಾರತ ೩೦೩
ಭಾವಾರ್ಥ ಶತಕ ೧೩, ೨೯೨, ೩೧೨
ಭಾಷಾಭೂಷಣ ೪೯೬
ಭಿಕ್ಷ ೧೪೭, ೧೭೦, ೨೧೬
ಭಿಕ್ಷಾಟನ ಚರಿತೆ ೧೫, ೧೭೧, ೧೭೫, ೨೦೬, ೨೨೩, ೩೦೧
ಭುವನಪ್ರದೀಪಿಕಾ ೪೭೫, ೪೮೭
ಭೋಜ ಪ್ರಬಂಧ ೨೬೪, ೩೩೭
ಮಣ್ಣೇಶ್ವರ ಕಾವ್ಯದ ನಾಂದ್ಯ ೧೪, ೨೯೨, ೨೯೮
ಮದನತಿಲಕ ೧೨, ೧೫, ೧೭, ೮೨, ೮೫, ೧೦೪, ೧೦೫, ೧೨೨, ೧೨೪, ೧೩೩, ೧೩೭, ೧೩೯, ೧೪೧, ೧೭೯, ೩೮೪, ೩೯೦, ೪೦೯, ೪೩೫, ೪೩೯, ೪೭೮, ೪೯೭, ೫೦೦
ಮದನಮೋಹಿನಿಯ ಕಥೆ ೨೯೬
ಮಧ್ವವಿಜಯ ಕಾವ್ಯ ೪೦೭
ಮಂತ್ರಾಧಿರಾಜಕಲ್ಪ ೧೫೪, ೪೦೬
ಮಂದಾರಮರಂದ ಚಂಪೂ ೪೮೦
ಮರುಳಸಿದ್ಧದೇವರ ಚರಿತ್ರೆ ೨೬೫, ೨೯೮
ಮಹಾಪುರಾಣ ೨೩೨, ೨೪೫, ೨೫೩, ೩೨೪
ಮಹಾಭಾರತ ೧೧, ೩೦೯, ೪೯೧
ಮಹಾವೀರಸ್ತವನ ೪೦೫
ಮಹಿಮ್ನಸ್ತವ ಟೀಕೆ ೧೦೭, ೧೧೦
ಮಾಧವಾಲಂಕಾರ ೬೬, ೧೦೦–೧೦೩, ೧೨೧, ೧೩೬, ೨೭೦, ೩೭೭, ೩೭೯, ೩೮೨, ೩೮೩, ೪೦೯, ೪೯೭
ಮಾನೋಮಿಯ ಚೌಪದ ೧೩, ೩೧೨, ೩೧೩
ಮಾರುತಿ ಭಕ್ತಿದರ್ಪಣ ೩೦೮
ಮಾಲತೀಮಾಧವ ೧೭೦
ಮುಡಿಗೆಯ ಅಷ್ಟಕ ೨೨೫
ಮುಂಡಿಗೆಯ ಕೀರ್ತನೆಗಳು ೨೭೫
ಮುನಿಸುವ್ರತ ಚರಿತೆ ೨೯೩
ಮೋಘಾಭ್ಯುದಯ ೫೧
ಮೈಸೂರ್ ಮೆಯ್ಸಿರಿ ೧೭, ೪೧೦, ೪೩೫, ೪೪೧, ೪೮೦, ೪೮೪
ಯಮಕ ಭಾರತ ೫೧, ೪೯೧
ಯಮಕ ಸ್ತುತಿ ೫೧
ಯಾದವ ಪಾಂಡವೀಯ ೧೫೫
ಯಾದವ ರಾಘವ ಪಾಂಡವೀಯ ೧೫೬
ಯಾದವ ರಾಘವೀಯ ೧೫೪
ಯಾದವಾಭ್ಯುದಯ ೩೭೨, ೪೦೬
ಯುಗಾದಿಸ್ತವ ೪೦೫
ಯುಧಿಷ್ಠಿರ ವಿಜಯ ೫೧

ಯೋಗಭಾಷ್ಯ ೧೭೦
ರಘುವಂಶ ೩೩೨
ರತ್ನದರ್ಪಣ ೩೯೬
ರಮಾಭ್ಯುದಯ ೧೯
ರಸಾರ್ಣವಾಲಂಕಾರ ೪೮೭, ೪೯೫
ರಸಿಕರಂಜನ ೧೫೮
ರಾಕ್ಷಸಕಾವ್ಯ ೫೧
ರಾಘವನೈಷಧೀಯ ೧೫೪, ೧೫೫
ರಾಘವಪಾಂಡವೀಯ ೧೨, ೧೫೩, ೧೫೫, ೩೫೦, ೩೮೪
ರಾಘವ ಯಾದವೀಯ ೧೫೫
ರಾಘವಾಂಕ ಚಾರಿತ್ರ ೧೦೭, ೧೦೯, ೧೮೪, ೩೦೧, ೩೩೮
ರಾಘವಾಭ್ಯುದಯ ೪೪೭
ರಾಜಶೇಖರ ವಿಳಾಸ ೮೧, ೮೪, ೧೪೫, ೨೦೮, ೨೨೫, ೨೨೭, ೩೩೦, ೩೪೩, ೩೮೮
ರಾಜಾವಳೀ ಕಥೆ ೧೧೨, ೩೪೨
ರಾಜೇಂದ್ರವಿಜಯ ೧೫, ೮೮, ೧೬೨, ೨೧೩
ರಾತ್ರಿಯ ನಲ್ಲನ ಪದ್ಯಗಳು ೧೪, ೨೯೪, ೩೦೯, ೪೯೯
ರಾಮಕೃಷ್ಣ ವಿಲೋಮಕಾವ್ಯ ೧೫೪
ರಾಮಚಂದ್ರೋದಯ ೪೦೭
ರಾಮಚರಿತ ೧೫೩
ರಾಮಜಯ ೧೩, ೧೧೨
ರಾಮಾಯಣ ೧೯, ೧೨೧
ರಾಮಾಯಣ ಸಂಗ್ರಹ ೧೭೧
ರಾಮಾಷ್ಟಪ್ರಾಸ ೧೫೪
ರುಕ್ಮಾಂಗದ ಚರಿತ್ರೆ ೧೭೧
ರುಕ್ಮಿಣೀಶವಿಜಯಕಾವ್ಯ ೪೦೭
ಲಕ್ಷಣ ದೀಪಿಕೆ ೧೯
ಲಕ್ಷಣ ಶಿರೋಮಣಿ ೧೭೬, ೧೭೭, ೪೦೮, ೪೦೯, ೪೯೬
ಲಕ್ಷಣಸಾರಸಂಗ್ರಹ ೧೭೭, ೧೯೭, ೪೩೪, ೪೯೬
ಲಕ್ಷ್ಮೀಸಹಸ್ರ ೪೪೪, ೪೪೭
ಲಕ್ಷ್ಮೀಸಹಸ್ರನಾಮ ೪೦೭
ಲಿಂಗಪುರಾಣ ೩೦೯
ಲೀಲಾವತೀ ಪ್ರಬಂಧ ೨೭, ೭೯, ೮೦, ೮೩, ೮೭, ೮೮, ೧೬೮, ೨೪೮
ಲೆಕ್ಕದ ಚೌಪದ ೧೩, ೩೧೨
ಲೋದ್ರಪುರ ಪಾರ್ಶ್ವನಾಥ ಪ್ರಶಸ್ತಿ ೪೦೫
ವಡ್ಡಾರಾಧನೆ ೨೨೩
ವರ್ಧಮಾನ ಪುರಾಣ ೨೭, ೭೮, ೮೦, ೮೨, ೮೮, ೧೦೫, ೧೬೮, ೨೩೨, ೩೮೫
ವಾಗಟೆಯ ಪದ ೧೩
ವಾಗ್ಭಟಾಲಂಕಾರ ೬, ೫೦, ೩೯೬, ೪೦೦, ೪೧೧, ೪೧೩, ೪೨೨
ವಾಗ್ಭೂಷಣ ೨೯೪
ವಾಚಸ್ಪತ್ಯ ೨೨೮
ವಾವೆ ಮತ್ತು ಗಟ್ಟಿ ಪದಗಳು ೩೦೧
ವಾವೆಯ ಪದ ೧೪, ೪೯೯
ವಿಜ್ಞಪ್ತಿ ತ್ರಿವೇಣಿ ೪೦೪
ವಿಜ್ಞಪ್ತಿ ಪತ್ರ ೪೦೫
ವಿದಗ್ಧಮುಖಮಂಡನ ೨೨೮, ೪೦೧
ವಿಶೇಷಣ ರಾಮಾಯಣ ೧೫೪
ವಿಷ್ಣುಧರ್ಮೋತ್ತರಪುರಾಣ ೬, ೨೩೦, ೨೩೪, ೨೩೫, ೨೪೧, ೪೯೮
ವಿಷ್ಣುಪುರಾಣ ೩೦೩, ೩೦೯
ವೀರಜಿನಸ್ತವನ ೪೦೪
ವೀರಶೈವಮಾಹೇಶ್ವರಾಚಾರ ಸಂಗ್ರಹ ೪೮೦
ವೀರಸ್ತವನ ೪೦೪
ವೃತ್ತಜಾತಿ ಸಮುಚ್ಚಯ ೫೨
ವೃಷಭೇಂದ್ರವಿಜಯ ೮೮, ೧೨೩, ೧೩೦, ೧೭೨
ವೈಕುಂಠಸ್ತವ ೫೧
ವ್ಯಾಸಂಗಾನಂದದಾಯಿನಿ ೨೧೫, ೪೧೦, ೪೪೧
ವ್ಯಾಸಭಾರತ ೨೮೩
ಶತಾರ್ಥೀಕಾವ್ಯ ೧೫೫
ಶಬ್ದಕಲ್ಪದ್ರುಮ ೨೨೬
ಶಬ್ದಮಣಿದರ್ಪಣ ೨೧೦
ಶಬ್ದಸ್ಮೃತಿ ೨೧೦
ಶಬ್ದಾನುಶಾಸನ ೧೧೩
ಶಾಂತಿಪುರಾಣ ೧೫, ೨೭, ೮೫, ೨೨೨, ೨೩೨, ೨೬೧, ೩೮೬
ಶಾರದಾವಿಲಾಸ ೧೦, ೮೭
ಶಾಸನ ಪದ್ಯಮಂಜರಿ ೨೭, ೩೨, ೮೪
ಶಿಕಾರಿಪುರದ ಶಾಸನ ೩೭೩
ಶಿವಕರ್ಣಾಮೃತ ಸ್ತೋತ್ರ ೪೫೦
ಶಿವತತ್ತ್ವರತ್ನಾಕರ ೬
ಶಿವಪಾದಕಮಲಸಹಸ್ರ ೪೪೭
ಶಿವಪುರಾಣ ೩೦೯
ಶಿವಮಹತ್ವಸಾರಶಿಖಾಮಣಿ ಸಂಗ್ರಹ ೪೦೯, ೪೧೯
ಶಿವಲಿಂಗಷಟ್ಪದಿ ೮೯, ೧೦೬, ೧೦೭, ೧೨೩, ೧೩೧, ೧೩೯, ೧೪೬
ಶಿವಲೀಲಾರ್ಣವ ೪೯೨
ಶಿವಾಕ್ಷರಮಾಲೆ ೧೧೨
ಶಿಶುಪಾಲವಧ ೫೩, ೯೪, ೯೫, ೯೬, ೯೮, ೧೧೮, ೧೯೫, ೧೯೬, ೪೦೬, ೪೩೫
ಶೃಂಗಾರ ನೈಷಧ ೧೭೦
ಶೃಂಗಾರ ಪ್ರಕಾಶ ೬, ೧೫೩
ಶೃಂಗಾರ ರತ್ನಾಕರ ೧೭
ಶೃಂಗಾರ ವೈರಾಗ್ಯ ತರಂಗಿಣಿ ೧೫೪
ಶೌರಿಕಥೋದಯ ೫೧
ಶ್ರವಣಬೆಳ್ಗೊಳದ ಶಾಸನ ೩೮೮
ಶ್ರೀಕಂಠೇಶ್ವರ ಶತಕ ೧೩೨
ಶ್ರೀಕೃಷ್ಣರಾಜಪ್ರಭವೋದಯ ೧೯೮
ಶ್ರೀ ನಾಲ್ವಡಿ ಕೃಷ್ಣರಾಜೇಂದ್ರ ಮಹಿಮೆ ೧೬
ಶ್ರೀನಿವಾಸ ಚಂಪೂ ೪೦೭

ಶ್ರೀರಾಮಪಟ್ಟಾಭಿಷೇಕ ೨೧೫, ೨೮೫
ಶ್ರೀಶಯಮಕಶತಕ ೫೧
ಶ್ಲೇಷಚಂಪೂ ರಾಮಾಯಣ ೧೫೪
ಶ್ಲೇಷಚಿಂತಾಮಣಿ ೧೫೪, ೪೯೧
ಶ್ಲೇಷ ಚೂಡಾಮಣಿ ೧೫೪, ೪೯೧
ಶ್ಲೇಷಯಮಕಕಾವ್ಯ ೫೧
ಶ್ಲೇಷೋಲ್ಲಾಸ ೧೫೪
ಷಟ್ಸ್ಥಲ ತಿಲಕ ೧೦೯
ಷಟ್ಸ್ಥಲವಲ್ಲಭ ೮೭, ೧೦೭, ೧೨೯, ೧೫೮
ಸತ್ಯೇಂದ್ರಚೋಳನ ಸಾಂಗತ್ಯ ೨೬೪
ಸಮಸ್ಯಾಪೂರಣ ೩೩೭
ಸಮ್ಯಕ್ತ್ವಕೌಮುದಿ ೧೭೫
ಸರಜಾ ಹನುಮೇಂದ್ರ ಚರಿತೆ ೧೯
ಸರಜಾ ಹನುಮೇಂದ್ರ ಯಶೋವಿಲಾಸ ೩೦೦, ೩೨೧, ೩೩೬
ಸರಸ್ವತೀಕಂಠಾಭರಣ ೩, ೬, ೩೦, ೪೭, ೫೦, ೯೩, ೯೪, ೯೫, ೯೭, ೧೦೩, ೧೦೭, ೧೩೩, ೧೬೩, ೧೯೪, ೨೪೩, ೩೨೨, ೩೨೪, ೩೨೯, ೩೬೩, ೩೯೬, ೪೦೦, ೪೦೭, ೪೨೯–೩೧, ೪೩೪, ೪೩೫, ೪೭೭, ೪೭೮, ೪೭೯
ಸರ್ವಜ್ಞನ ಒಗಟುಗಳು ೨೮೧
ಸರ್ವಜ್ಞನ ತ್ರಿಪದಿಗಳ ಒಗಟುಗಳು ೩೧೬
ಸಾನಂದ ಚರಿತೆ ೨೩೧
ಸಾಹಿತ್ಯದರ್ಪಣ ೬, ೪೦೧
ಸಾಹಿತ್ಯರತ್ನಾಕರ ೪೮೦
ಸಿಂಗಳದ ಸಿದ್ಧಬಸವರಾಜನ ಟೀಕು ೨೭೨
ಸಿಂಗಿರಾಜ ಪುರಾಣ ೨೨೫
ಸಿದ್ಧಲಿಂಗಕಾವ್ಯ ೧೧೧
ಸಿದ್ಧಿಪ್ರಿಯಸ್ತೋತ್ರ ೪೦೪
ಸಿರಿಭೂವಲಯ ೪೮೯, ೪೮೭, ೫೦೦
ಸೀತಾರಾವಣ ಸಂವಾದಝುರೀ ೧೫೪, ೧೯೮
ಸುಕುಮಾರ ಚರಿತ ೮೨
ಸುಂದರಬಾಹುಸ್ತವ ೫೧
ಸುಭಾಷಿತರತ್ನ ಭಾಂಡಾಗಾರ ೧೯೬, ೨೪೪, ೨೪೫, ೩೩೭, ೪೯೮
ಸುರತೋತ್ಸವ ೧೫೪
ಸುರಭಿ ೧೪
ಸೂಕ್ತಿಸುಧಾರ್ಣವ ೧೭೧, ೧೭೨, ೧೮೨, ೨೩೧
ಸೇತುಬಂಧ ೫೨
ಸೊಬಗಿನ ಸೋನೆ ೩೩೮
ಸೌಂದರಕಾವ್ಯ ೨೮೬, ೨೯೮
ಸೌಂದರ ಚಾರಿತ್ರ ೨೯೨, ೨೯೭
ಹಂಪೆಯ ಶಾಸನ ೧೭೩
ಹಮ್ಮೀರಕಾವ್ಯ ೧೫, ೩೦೧
ಹರವಿಜಯ ೯೪, ೯೫, ೯೮, ೧೨೦, ೧೬೧, ೧೬೨, ೧೭೮, ೧೯೬, ೧೯೭, ೩೭೨, ೪೦೬
ಹರಿಶ್ಚಂದ್ರಕಾವ್ಯ ೨೮
ಹರ್ಯಕ್ಷರಮಾಲೆ ೧೧೨
ಹಾರಬಂಧ ಸ್ತೋತ್ರ ೪೦೫
ಹಾಲಾಸ್ಯ ಪುರಾಣ ೧೩೦
ಹಿತಬೋಧಿನಿ ೧೪, ೨೪೬
ಹೆಬ್ಬಟದ ಶಾಸನ ೩೭೨

೬/ವಿಶಿಷ್ಟಪದ ಸೂಚಿ

(ಅಂಕಿಗಳು ಪುಟಗಳನ್ನು ಸೂಚಿಸುತ್ತವೆ.)

ಅಕ್ಷರಮಾಲೆ ೧೩, ೪೯೮
ಅನುಪ್ರಾಸ ೨೩, ೪೯೩, ೪೯೫
  ಉಪನಾಗರಿಕೆ ೨೫
  ಛೇಕ ೨೪, ೨೫, ೨೬
  ಪಾದ ೨೬
  ಮಧುರಾ ೨೫
  ಲಾಟ ೨೪, ೨೬, ೨೭
  ವರ್ಣ ೨೫, ೨೮
  ವೃತ್ತಿ ೨೪, ೨೫, ೨೬, ೨೮
ಅನುಲೋಮ ವಿಲೋಮಕಾವ್ಯ ೧೫೫
ಅಂತ್ಯಾಕ್ಷರಿ ೩೪೪
ಅವಧಾನ ೪೯೬
ಅಷ್ಟಾವಧಾನ ೧೨
ಆಕೀರ್ಣಮಂತ್ರ ೩೪೪
ಆಭಾಣಕ ೩೩೭
ಆಶುಕವಿ ೪೯೭
ಇಮೇಜ್ ಪೊಯೆಟ್ರಿ ೬
ಏಕಸ್ಥಾನಚಿತ್ರ ೧೧೫, ೧೧೭
  ಕಂಠ್ಯ ೧೧೫
ಒಗಟು ೧೪, ೪೯೯
  ಜನಪದ ಸಾಹಿತ್ಯದಲ್ಲಿ ೩೧೬, ೩೨೦, ೩೩೨, ೪೯೯
  ಸರ್ವಜ್ಞನ ತ್ರಿಪದಿಗಳಲ್ಲಿ ೨೭೭–೮೩, ೪೯೯

- ಒಗಂಟು ೨೩೦, ೪೯೯
- ಒಡಪು ೨೩೧
- ಓಕಾರಾಂತ ಪದ್ಯ ೧೪೦
- ಕಂದ
  - ಅಕಾರಾಂತ ೧೪೦
  - ಕಿರ್ಗೊತ್ತು ೧೪೦
  - ಚತುರ್ವಿಧ ೧೭೮
  - ಚೌಪದಿಕಾಗರ್ಭ ೧೮೨
  - ದಂಡಕಗರ್ಭ ೧೮೨
  - ದ್ವಿಪದಿಕಾ ಗೀತಿಕಾ ಪಂಚವಿಧಾಕ್ಷರ ಗರ್ಭ ೧೮೨
  - ಷಟ್ಕಂದ ಗರ್ಭಿತ ೧೮೫
- ಕಲ್ಪಿತ ಕಲ್ಪವಲ್ಲಿ ೧೭೮
- ಕವಿಕಲ್ಪಿತ ಕಲ್ಪವಲ್ಲರಿ ೧೨
- ಕಾವ್ಯಕ್ರಿಯಾ ೩೪೪
- ಕಾವ್ಯದೇವಾಯತನ ೩೪೪
- ಕಾವ್ಯಸಮಸ್ಯಾಪೂರಣ ೩೩೭
- ಕೂಟ ೧೯೩
- ಕೂಟಪ್ರಶ್ನ ೪೯೫
- ಕೂಟಶ್ಲೋಕ ೧೩
- ಖಂಡಕಾವ್ಯ ೪೯೨
- ಗತಪ್ರತ್ಯಾಗತ ೩೬೪
  - ಅಕ್ಷರಗತ ೩೬೪
  - ಅರ್ಥಾನುಗತ ೩೬೫
  - ಭಾಷಾಂತರಗತ ೧೬೩, ೩೬೪
  - ಶ್ಲೋಕಾಂತರ ೩೬೪
- ಗತಪ್ರತ್ಯಾಗತ ಕಾವ್ಯ ೧೨
- ಗತಿಚಿತ್ರ ೭, ೩೬೭, ೪೯೯, ೫೦೦
  - ಅರ್ಧಭ್ರಮ ೮–೧೦, ೩೫೩, ೩೫೭, ೩೬೨, ೩೬೫, ೩೮೧, ೩೮೮
  - ಗಜಪದ ೮, ೧೦, ೪೮೧
  - ಗತಪ್ರತ್ಯಾಗತ ೭, ೯, ೧೦, ೩೪೭, ೩೫೬, ೩೫೭, ೩೬೪, ೩೬೭, ೩೭೪, ೩೮೩
  - ಗೋಮೂತ್ರಿಕಾ ೮–೧೦, ೩೫೧, ೩೫೭, ೩೬೭, ೩೭೮, ೩೮೬, ೪೭೭, ೪೭೮, ೪೭೯
  - ತುರಂಗಪದ ೮, ೧೦, ೩೬೫,
  - ರಥಪದ ೮, ೧೦
  - ಸರ್ವತೋಭದ್ರ ೮–೧೦, ೩೫೪, ೩೫೭, ೩೬೩, ೩೬೭, ೩೮೨, ೩೮೮
- ಗರ್ಭಕವಿತ್ವ ೧೨, ೧೭, ೧೭೬, ೪೯೪, ೪೯೭–೮
  - ಉತ್ಥಾರ್ಯಾ ೧೭೮
  - ಕಂದಗರ್ಭಿತ ಚಂಪಕಮಾಲಾವೃತ್ತ ೧೮೮
  - ಕಂದಗೀತಗರ್ಭ ಚಂಪಕಮಾಲಾವೃತ್ತ ೧೭೮
  - ಕಂದಾಷ್ಟಕಗರ್ಭಿತ ಚಂಪಕಮಾಲಾವೃತ್ತ ೧೮೮
  - ಚತುರಶೀತಿವೃತ್ತಭೇದಗರ್ಭ ವನಮಂಜರೀವೃತ್ತ ೧೭೯
  - ಚತುಶ್ಚಿತ್ರಗರ್ಭ ೧೭೯
  - ಪದ್ಯನವಕಗರ್ಭಿತಸೀಸ ೧೮೬
  - ಸಪ್ತವಿಧ ಷಟ್ಪದೀಗರ್ಭ ವಾರ್ಧಕ ೧೮೪
- ಗುಣಿತಾಕ್ಷರ ಪದಂಗಳು ೧೪೬
- ಗುಣಿತಾಕ್ಷರಿ ೧೪೨
  - ಏಕಪದ್ಯೈಕ ೧೪೩
  - ಬಹುಪದ್ಯ ಸಮಸ್ತ ೧೪೮
  - ಬಹುಪದ್ಯಸಮಸ್ತಗುಣಿತಾಕ್ಷರೀಮಾಲೆ ೧೪೯
  - ಬಹುಪದ್ಯೈಕ ೧೪೭
- ಗುಣೀಭೂತವ್ಯಂಗ್ಯಕಾವ್ಯ ೪೯೩
- ಗುಪ್ತಚಿತ್ರ
  - ಕಾರಕ ೧೯೪, ೧೯೬, ೨೦೨
  - ಕ್ರಿಯಾ ೧೭, ೧೯೪, ೧೯೬, ೨೦೦, ೨೦೩
  - ಕ್ರಿಯಾಕಾರಕ ೧೦
  - ಗೋಪಿತಕ್ರಿಯೆ ೯
- ಗೂಢಚಿತ್ರ ೧೯೩, ೪೯೪, ೪೯೮
  - ಅನ್ವಯ ೨೦೯
  - ಅಭಿಪ್ರಾಯ ೧೯೫, ೨೦೪
  - ಗೂಢಾರ್ಥ ಶ್ಲೋಕ ೧೯೭
  - ಚತುರ್ಥಪಾದ ೯, ೧೦, ೧೯೭
  - ಪದವಾಕ್ಯಾದಿ ೨೦೧
  - ಪಾದ ೧೯೫, ೨೦೨
  - ಪಾದತ್ರಯ ೧೯೭
  - ವಸ್ತು ೧೯೫, ೨೦೮
  - ಸಂಜ್ಞಾರ್ಥಾದಿ ೨೦೫
  - ಸಮಾಸ ೧೯೭
  - ಸಂಬಂಧ ೧೯೪
- ಗೂಢಲೇಖನ ೮
- ಚಕ್ರವಾಳಗದ್ಯ ೮೩
- ಚತುಃಸ್ಥಾನ ಚಿತ್ರ ೧೧೫, ೧೧೬, ೧೨೨
  - ಅತಾಲವ್ಯ (ನಿಸ್ತಾಲವ್ಯ) ೯, ೧೦, ೧೧೬, ೧೧೮, ೧೨೦, ೧೨೨
  - ನಿರೋಷ್ಠ್ಯ ೯, ೧೦, ೧೧೬, ೧೧೯, ೧೨೧, ೧೨೪, ೪೭೮
  - ನಿರ್ದಂತ್ಯ (ಅದಂತ್ಯ) ೧೧೬, ೧೧೮, ೧೨೦
  - ನಿರ್ಮೂರ್ಧನ್ಯ (ಅಮೂರ್ಧನ್ಯ) ೧೧೬, ೧೧೮, ೧೨೦, ೧೨೩
  - ನಿಷ್ಕಂಠ್ಯ ೧೧೬, ೧೨೦
- ಚತುರ್ವಿಧ ಕವಿತ್ವ ೧೨, ೧೫, ೧೯, ೪೯೬
  - ಆಶು ೧೨, ೧೫, ೧೯, ೪೯೬
  - ಚಿತ್ರ ೧, ೪೯೬
  - ಮಧುರ ೧೫, ೪೯೬
  - ವಿಸ್ತರ ೧೫, ೪೯೬
- ಚತ್ತಾಣ ೧೮
- ಚದುರ್ ೨೨೧, ೪೯೯
- ಚಿತ್ರ ೩–೫, ೧೮೨, ೪೯೨, ೪೯೫
  - ಅರ್ಥ ೩, ೪೯೩, ೪೯೫
  - ಅಕಾರ ೭, ೮, ೧೮೮, ೩೮೫, ೩೯೬, ೪೯೩, ೫೦೦

ಉಭಯ ೩, ೪೯೩, ೪೯೫
ಏಕಸ್ಥಾನ ೧೦೭
ಗತಿ ೭, ೩೮೩, ೪೯೪, ೪೯೬–೭
ಗುಪ್ತ ೯
ಗೂಢ ೭, ೧೯೩, ೪೯೬–೭
ಚ್ಯುತ ೭, ೯, ೨೦೭
ಪದ್ಯ ೩
ಬಂಧ ೭, ೩೯೫, ೪೯೩, ೪೯೬–೭, ೫೦೦
ಭಾಷಾ ೧೨, ೧೬೩, ೪೯೩–೪, ೪೯೮
ರಸ ೬
ವರ್ಣ ೭, ೪೯೩, ೪೯೬–೭
ವ್ಯಂಜನ ೭, ೧೦೭, ೧೦೮
ಶಬ್ದ ೩, ೪೯೩, ೪೯೫
ಶ್ಲೇಷ ೧೫೩, ೪೯೩
ಸಾಮಾನ್ಯ ಉಭಯ ೩೪೪
ಸ್ಥಾನ ೭, ೧೧೪, ೧೨೨, ೪೯೮
ಸ್ವರ ೭, ೧೩೩, ೧೩೬
ಚಿತ್ರಕವಿ ೪೯೭
ಚಿತ್ರಕವಿತ್ವ ೧೨೨
ಚಿತ್ರಕಾವ್ಯ ೩, ೫, ೮, ೯, ೧೮, ೧೫೪, ೪೯೨–೩, ೪೯೫–೭
ಚಿತ್ರಬಂಧ ೪೧೩, ೪೧೬, ೪೮೬
ಚಿತ್ರಾಯತನ ೧೮
ಚಿತ್ರಾಲಂಕಾರ ೧೦೩
ಚ್ಯುತಚಿತ್ರ
ಅಕ್ಷರ ೧೦, ೨೪೩
ದತ್ತ ೯, ೧೦, ೧೯೮, ೨೪೩, ೨೫೬
ದ್ವ್ಯಕ್ಷರ ೧೭
ಬಿಂದು ೧೦, ೧೭, ೨೪೭, ೨೫೨
ಮಾತ್ರಾ ೧೭
ಜತ್ತರಟ್ಟ ೧೨೫
ಜಾಣ್ ೨೨೧, ೪೯೯
ತಲಕಟ್ಟಿನ ಪದ ೧೩೧
ತವರ್ಗಬಂಧ ೧೨೦
ತ್ರಿಸ್ಥಾನ ಚಿತ್ರ ೧೦೭
ನಿರೋಷ್ಠ್ಯದಂತ್ಯ ೧೦೭
ನಿರೋಷ್ಠ್ಯಮೂರ್ಧನ್ಯ ೧೦೭
ದುರ್ವಾಚಕಯೋಗ ೩೪೪
ದುಷ್ಕರಕಾವ್ಯ ೧೦
ದ್ವಿಸ್ಥಾನಚಿತ್ರ ೧೦೭, ೧೨೦
ದಂತ್ಯಕಂಠ್ಯ ೧೦೭
ದ್ವ್ಯಕ್ಷರಾದಿಕ ೯
ಧ್ವನಿಕಾವ್ಯ ೪೯೩
ಧ್ವನಿವಾದಿ ೪೯೨
ನಿರುತ್ತರ ೯
ನಿರೋಷ್ಠ್ಯಪದ ೧೩೧
ನಿರೋಷ್ಠ್ಯಕಾವ್ಯ ೧೨
ನಿರ್ದಂತಕಾವ್ಯ ೧೨
ಪಂಚ ಪಾಷಾಣ ೧೫೭
ಪದಿರ್ ೨೨೨, ೨೨೪, ೪೯೯
ಪಹೇಲಿಯಂ ೯
ಪುನರುಕ್ತಾಭಾಸ ೭
ಪುಷ್ಕರ ೧೦
ಪ್ರತಿಮಾಲಾ ೯, ೩೪೪
ಪ್ರತೀಕ ೩
ಪ್ರಶ್ನ ೩೨೨, ೪೯೯
ಉತ್ತರ ೩೨೪, ೩೩೧
ಜಾತಿ ೩೨೪
ಪೃಷ್ಟ ೩೨೪
ಪ್ರಶ್ನೋತ್ತರ ೭, ೧೧, ೧೭, ೩೩೦, ೩೩೪, ೪೯೪, ೪೯೯
ಪ್ರಹೇಳಿಕಾ (ಕೆ) ೭–೯, ೧೯೩, ೨೨೧, ೨೨೫, ೨೮೦, ೪೯೨, ೪೯೪–೫, ೪೯೭–೯
ಅಕ್ಷರಮುಷ್ಟಿಕಾ ಕಥನ ೯, ೨೪೪
ಅರ್ಥ ೨೪೪
ಅಸ್ಪಷ್ಟಾಕ್ಷರ ೧೦
ಅಸ್ಪಷ್ಟಾರ್ಥ ೧೦, ೨೫೦
ಉಭಯಚ್ಛನ್ನಾ ೨೪೦
ಉಟಿವು ೧೦, ೨೫೮
ಏಕಚ್ಛನ್ನಾ ೨೪೦
ಒನರ್ಡಿ ೧೦, ೨೫೪
ಕುಸುರಿಯ ನುಡಿ ೧೦, ೩೨೮
ನಷ್ಟಾಕ್ಷರಾ ೨೪೨
ನಾಮಾಂತರಿತಾ ೧೦, ೨೩೮, ೨೫೮, ೩೧೦
ನಿಭೃತಾ ೨೩೮
ನುಸುಳ್ ೧೦, ೨೪೯, ೩೧೦
ಪರಿಹಾಸಿಕಾ ೨೪೧
ಪರುಷಾ ೨೩೬
ಪಾರಿಹಾರಿಕಿ (ಯೋಗಮಾಲಾ) ೧೪, ೨೩೯, ೨೯೦, ೪೯೭, ೪೯೯
ಪ್ರಕಲ್ಪಿತಾ ೨೩೭
ಪ್ರಮುಷಿತಾ ೨೩೬
ಬಿಂದುಮತಿ ೨೪೪
ಭಾವೆ (ಭಾಮೆ) ೧೦, ೨೪೭
ಲೇಶಾ ೨೪೨
ವಂಚಿತಾ ೨೩೫
ವರ್ಣಚ್ಯುತಕ (ಅಕ್ಷರಚ್ಯುತಕ) ೨೫೫
ವರ್ಣಭ್ರಷ್ಟಾ ೨೪೨
ವರ್ಣವ್ಯತ್ಯಯ ೧೦, ೨೫೨
ವೃತ್ತಬಂಧನಿದರ್ಶಿತಾ ೨೪೧
ವ್ಯಭಿಚಾರಿಣಿ ೨೪೧
ವ್ಯುತ್ಕ್ರಾಂತಾ ೨೩೫
ಸಂಕೀರ್ಣಾ ೨೪೧
ಸಂಖ್ಯಾತಾ ೨೩೭, ೨೮೩, ೪೯೯

ಬಂಧಗಳು

ುಸ್ತಕ (ಸಮಂತಿ) ೧೦, ೨೫೭
ವಾಗತಾ ೨೩೪
ಮಾನರೂಪಾ ೨೩೬
ಮಾನಶಬ್ದಾ ೨೩೮
ಮೂರ್ಧಾ ೨೩೯
ಳಿಕೆಯ ಪರ್ಯಾಯಶಬ್ದರೂಪಗಳು ೨೨೬–೨೩೩, ೪೯೯
ಕಾವ್ಯ ೧೧, ೪೯೧
ಚಿತ್ರ ೩೯೫–೪೧೦, ೪೯೪
ಅಲಂಕಾರಾದಿಗಳು ೪೧೧–೨೫
ಆಯುಧಗಳು ೪೨೫–೫೮
ವಾದ್ಯಗಳು ೪೫೮–೬೭
ಸಂಕೀರ್ಣ ೪೮೦–೪೫
ಸ್ಯವರ್ಗ ೪೬೭–೭೮
ಸ್ಥಲ ಸನ್ನಿವೇಶಗಳ ವಾಸ್ತು ೪೭೮–೭೯
ಧಚಿತ್ರ (ಅಲಂಕಾರಾದಿಗಳು) ೩೯೯–೪೧೧
ಅಶ್ವಗತಿ ಮುಕ್ತಾಹಾರ
ಅಷ್ಟಮಹಾಪ್ರಾತಿಹಾರ್ಯಗಳು
ಅಷ್ಟಮಂಗಲ
ಆಂದೋಳಿಕಾ
ಆಸನ/ಚಂಪಕಮಂಡಿತ/ಸಿಂಹ
ಕಲಶ/ಪೂರ್ಣ/ಭೃಂಗಾರ/ಮಂಗಲ
ಕಾಂಚಿ
ಗೂಢದೀಪಕ
ಚಾಮರ
ಛತ್ರ ೪೧೧
ತಾಲವೃಂತ ೪೧೩
ದರ್ಪಣ ೪೧೫
ದೀಪಿಕಾ (ದೀಪಸ್ತಂಭ)
ಧ್ವಜ (ಪತಾಕಾ)
ನಾಯಕಮಣಿ
ಪಟ್ಟಬಂಧ ೪೧೬
ಬ್ರಹ್ಮದೀಪಕ ೪೧೭
ಬ್ರಹ್ಮದೀಪಿಕಾ ೪೧೮
ಮಾಲಾ ೪೧೯/ಪ್ರೇಮ/ವನ ೪೮೬
ಮುಕ್ತಾಗುಚ್ಛ
ಶ್ವೇತಚ್ಛತ್ರ
ಸ್ವಸ್ತಿಕ/ಕಂಕಣಮಧ್ಯಸ್ಥಿತ/ ಬಂಧೂಕ/ಶೃಂಗಾರಿತ
ಹಾರ ೧೧, ೪೨೨
ಬಂಧಚಿತ್ರ (ಆಯುಧಗಳು) ೩೯೯–೪೧೧
ಅಂಕುಶ
ಖಡ್ಗ (ಅಸಿ) ೧೦, ೪೨೫
ಚಕ್ರ ೮–೧೧, ೪೭೮, ೪೮೬/ಅಷ್ಟಾರ ೪೪೧/ಗರುಡಗತಿ ೪೮೭/ಚತುರರ ೪೩೨/ಚತುರ್ಥಶೃಂಗಾಟಕ/ತ್ರಿಶೃಂಗಾಟಕ/ದ್ವಿಚತುರಸ್ರ/ದ್ವಿಚತುಷ್ಕ ೪೩೧/ದ್ವಿಶೃಂಗಾಟಕ ೪೨೯/ಪಂಚಶೃಂಗಾಟಕ/ಬೃಹದ್/ಮಹಾ/ವಿವಿಡಿತ ೪೩೦/ವಿಷಮ/ಷಡರ ೪೩೪, ೪೩೭/ಸರ್ವತೋಭದ್ರ/ಸುದರ್ಶನ
ಚಕ್ರಪ್ರಶ್ನ
ಜಾಲ
ಢಾಲ (ತೂಣ, ತೂಣಿ)
ತ್ರಿಶೂಲ (ಶೂಲ) ೧೦, ೧೧, ೪೪೮
ದಂಡ
ದಂಭೋಲಿ (ವಜ್ರ)
ಧನುಷ್ಯ (ಬಾಣಾಸನ, ಶಾರ್ಙ್ಗಧನು, ಚಾಪ) ೧೦, ೪೫೦
ನಾಗಪಾಶ
ಪರಶು ೪೫೩
ಬಾಣ (ಶರ) ೧೦, ೪೫೬
ಭಲ್ಲ
ಮುದ್ಗರ
ಮುಸಲ ೪೫೩
ಶಕ್ತಿ ೪೫೪
ಶರಯಂತ್ರ ೮, ೪೬೫
ಶ್ರೀಕರಿ
ಹಲ ೩೯೮, ೪೬೬
ಬಂಧಚಿತ್ರ (ವಾದ್ಯಗಳು)
ನಿಸ್ಸಾಳ ೪೫೮
ಪಣವ ೪೫೯
ಮುರಜ ೯, ೧೦, ೪೫೯, ೪೬೪, ೪೭೮, ೪೮೬/ಅನಂತರಪಾದ ೪೬೧/ಇಷ್ಟಪಾದ ೪೬೧/ಏಕಾಕ್ಷರ/ಗುಪ್ತಕ್ರಿಯಾ ೪೬೨/ನಿರೋಷ್ಠ್ಯಯಥೇಷ್ಟೈಕಾಕ್ಷರಾಂತರಿತ ೪೭೮/ಯಥೈಕಾಕ್ಷರಾಂತರಿತ/ಯಮಕಾನಂತರಪಾದ ೪೬೨
ಶಂಖ/ಶಂಖಾವರ್ತ ೪೭೮
ಬಂಧಚಿತ್ರ (ಸಂಕೀರ್ಣ) ೩೯೯–೪೧೧
ಅತಿಪುತ್ರಿಕಾ
ಉಲೂಖಲ
ಕಾಕಪದ
ಕ್ರೌಂಚ
ಚತುಷ್ಪುಟ
ಗಜ
ಚಂದ್ರ ೪೭೮
ನಂದಿ
ನಾಗ ೪೮ /ಕುಂಡಲಿನಾಗ ೪೮೨/ಕೃಷ್ಣಸರ್ಪ/ನಾಗಶಿಶು/ಫಣಿ (ಅಷ್ಟ, ನವಕೋಣ) ೪೮೦/ಬೃಂದಾವನನಾಗ ೪೮೨/ವಾಸುಕಿದ್ವಯ/ಶೇಷ/ಸಪ್ತಾಶ್ವತ್ಥಪರ್ಣನಾಗ ೪೮೨/ ಸರ್ಪ ೪೮೦
ನಾಗಪದ
ನಾಗಪಾಶ ೪೮೦
ಪಂಚಾಕ್ಷರ
ಪದ
ಪಾರ್ಥಿವದ್ವಿಪ
ಬೃಂದಾವನ ಬಂಧೋದಯ ೪೮೬
ಮಂಥಾನ/ವಿಪರೀತ
ಮಯೂರಿಕಾ

  - ಯಾನ(ಶಿವಿಕಾ) ೪೮೫
  - ರಥ ೩೯೮, ೪೮೬
  - ಶೃಂಖಲಾ
  - ಸೂರ್ಯ ೪೭೮
  - ಹಸ್ತ
- ಬಂಧಚಿತ್ರ (ಸಸ್ಯವರ್ಗ) ೩೯೯–೪೧೧
  - ಅಶೋಕ
  - ಗುಚ್ಛ
  - ಚಕ್ರಾಬ್ಜಕ
  - ನಾಳಿಕೇರ
  - ಪದ್ಮ (ಕಮಲ) ೪೬೭, ೪೭೩, ೪೭೪, ೪೭೫, ೪೭೭, ೪೭೮, ೪೮೬/ಅಷ್ಟದಲ ೪೭೦/ಚತುರ್ದಲ ೪೬೮/ ದ್ವಾದಶದಲ ೪೭೬
  - ಪದ್ಮಪ್ರಶ್ನ
  - ಬೀಜಪೂರ
  - ವೃಕ್ಷ
  - ಶ್ರೀವೃಕ್ಷ
- ಬಂಧಚಿತ್ರ (ಸ್ಥಲ ಸನ್ನಿವೇಶಗಳ ವಾಸ್ತು) ೩೯೯–೪೧೧
  - ಅಟ್ಟಾಲಿಕಾ
  - ಕೂಪ ೪೭೮
  - ಚೌಕ
  - ಪಟ್ಟಿ
  - ಪರಮಪದ
  - ಪರ್ವತ ೩೯೮
  - ಪುಷ್ಕರಿಣಿ (ವಾಪಿಕಾ, ಸರೋವರ) ೪೭೮
  - ಪ್ರಾಸಾದ
  - ಮಕರವ್ಯೂಹ ೪೭೮
  - ಮಂಡಲ/ಕೈವಲ್ಯಸ್ಥಾನ/ಪ್ರಕೃತಿ/ಬ್ರಹ್ಮ
  - ವ್ಯೋಮ ೮, ೪೭೮, ೪೭೯
  - ಶ್ರೀವೈಕುಂಠ
  - ಸಮವಸರಣ
  - ಸರ್ವತೋಮುಖ
  - ಸುವರ್ಣಚತ್ವರ
  - ಸ್ಥಪತಿಕಾ
  - ಸ್ಥೂಲ
  - ಹೋಜ
- ಬೆಡಗಿನ ಪದ್ಧತಿ ೩೧೨, ೪೯೯
- ಬೆಡಗಿನ ವಚನ ೧೩, ೨೨೬, ೨೭೦, ೪೯೯
- ಬೆಡಂಗು (ಬೆಡಗು) ೨೨೧, ೪೯೭, ೪೯೯
- ಬ್ರಹ್ಮೋದ್ಯ ೮, ೧೩
- ಮಾತೃಕಾಮಾಲೆ ೧೧೧
- ಮಾನಸೀ ೯, ೨೪೪
- ಮುಂಡಿಗೆ ೧೩, ೨೨೫, ೨೯೧, ೨೯೯, ೪೯೭, ೪೯೯
- ಮುಂಡಿಗೆಯ ಕೀರ್ತನೆಗಳು ೨೭೫
- ಮ್ಲೇಚ್ಛಿತ ವಿಕಲ್ಪ ೯, ೩೪೪
- ಯಮಕ ೯, ೨೯, ೬೬, ೪೯೨–೫
  - ಅಂತಾದಿಕ ೪೩
  - ಅರ್ಧ (ಶ್ಲೋಕ) ಪ್ರತಿಲೋಮ ೪೦
  - ಅವ್ಯಪೇತ ವ್ಯಪೇತಾತ್ಮ ೩೬
  - ಅಸಂಯುತ ೩೦
  - ಆದಿ ೩೩
  - ಆದ್ಯಂತ ೪೪
  - ಆಮ್ರೇಡಿತ ೩೨
  - ಆವಲಿ ೩೩
  - ಏಕದೇಶಜ ೩೦, ೪೩
  - ಕಾಂಚೀ ೩೨
  - ಚಕ್ರವಾಲ ೩೨
  - ಚತುರ್ವ್ಯವಸಿತ ೩೨
  - ಚೂರ್ಣ ೩೦, ೩೯
  - ದುಷ್ಕರ ೩೩, ೩೬
  - ಪದಗತ ೩೦
  - ಪರಿವರ್ತಕ ೨೯, ೩೦
  - ಪಾದಗತ ೩೦
  - ಪಾದ ಪ್ರತಿಲೋಮ ೪೦
  - ಪಾದಾದಿ ೩೨
  - ಪಾದಾದಿ ಅವ್ಯಪೇತ ೩೪
  - ಪಾದಾದಿ ವ್ಯಪೇತ ೩೫
  - ಪಾದಾಂತ ೩೨
  - ಪ್ರತಿಲೋಮ ೩೯
  - ಮಧ್ಯಾಂತ ೩೩
  - ಮಹಾ ೩೯
  - ಮಾಲಾ ೩೨
  - ವರ್ಣಗತ ೩೦
  - ವಿಕ್ರಾಂತ ೩೨
  - ವಿಜಾತೀಯ ಪಾದಾದಿ ವ್ಯಪೇತ ೩೬
  - ವ್ಯವಹಿತ ೫೮
  - ಶೃಂಖಲಾ ೨೯
  - ಶ್ಲೋಕ ಪ್ರತಿಲೋಮ ೪೦
  - ಶ್ಲೋಕಾಭ್ಯಾಸ ೩೯
  - ಸಂಯುತ ೩೦
  - ಸಜಾತೀಯ ವ್ಯಪೇತಪಾದಾದಿ ೩೬
  - ಸಂದಷ್ಟ(ಕ) ೩೨, ೩೩, ೩೮, ೩೯
  - ಸಮಸ್ತಪಾದಜ ೩೦, ೩೩, ೪೧
  - ಸಮುದ್ಗ(ಕ) ೩೨, ೩೩, ೩೮
- ಯಮಕಕಾವ್ಯ ೧೧, ೪೯೧, ೪೯೨
- ರಸವಾದಿ ೪೯೨, ೪೯೫
- 'ರಾಜಶೇಖರ ಕಮಲ' ೪೭೩
- ವಕ್ರೋಕ್ತಿ ೫, ೭
- ವಡಬು ೨೩
- ವರ್ಣಚಿತ್ರ ೯೭, ೪೯೮
  - ಅತ್ರಿವರ್ಗ ೯೯
  - ಅಂತಸ್ಥಾಕ್ಷರ ೯೯

ಅಪಂಚವರ್ಗ ೯೯
ಅಪುನರುಕ್ತಾಕ್ಷರ ೧೦೦
ಅಸಂಯೋಗ ೯೭, ೧೦೭
ಛಂದೋಕ್ಷರವ್ಯಂಜನ ೯೭
ತಾಲವ್ಯಪ್ರಾಯ ೧೦೦
ದಶವ್ಯಂಜನಬಂಧ ೯೯
ಮುರಜಾಕ್ಷರ ವ್ಯಂಜನ ೯೭
ಷಡ್ಜಾದಿ ಸ್ವರವ್ಯಂಜನ ೯೭
ಸಪ್ತವ್ಯಂಜನ ಬಂಧ ೯೮
ವಾವೆಯು ಪದಗಳು ೪೯೭
ವಿದ್ಯಾಗೋಷ್ಠಿ ೩೪೪
ವಿಭಕ್ತಿಪರಿಣಾಮ ೨೦೯
ವಿಲೋಮಕಾವ್ಯ ೧೫೪
ವಿಲೋಮಚಿತ್ರ ೧೨
ವ್ಯಂಜನಚಿತ್ರ ೯೩, ೯೭, ೧೦೪
ಏಕಾಕ್ಷರ (ರಿ) ೧೧, ೯೬, ೧೦೨, ೧೦೬
ಕ್ರಮವಿಪರ್ಯಸ್ತಪರಿಮಿತವ್ಯಂಜನ ೯೮, ೧೧೧
ಕ್ರಮಸ್ಥ ಸರ್ವವ್ಯಂಜನ ೯೭, ೧೦೬, ೧೧೧
ಚತುರಕ್ಷರ (ರಿ) ೯೩, ೧೦೦
ತ್ರ್ಯಕ್ಷರ (ರಿ) ೧೦೦, ೧೦೪
ತ್ರ್ಯಕ್ಷರಪದ್ಯ ೧೦೫
ದ್ವ್ಯಕ್ಷರ (ರಿ) ೧೦, ೯೫, ೧೦೧, ೧೦೫
ಮುಕ್ತಾಕ್ಷರಗ್ರಸ್ತ ೧೦೮
ವ್ಯಂಜನಮಾಲೆ ೧೧೧
ಸರ್ವಲಘು ೧೦೯, ೧೩೧
ಶಬ್ದಾಲಂಕಾರ ೪೯೨, ೪೯೫
ಶ್ಲೇಷಕಾವ್ಯ ೧೭
ಶ್ಲೇಷಚಿತ್ರ ೧೫೩, ೪೯೩–೪, ೪೯೮
ಅನೇಕಾರ್ಥವಾಚಿ ೧೬೧–೨, ೪೯೩, ೪೯೮
ಅರ್ಥತ್ರಯವಾಚಿ ೧೬೨
ಚತುರ್ವಿಧಾರ್ಥ ೧೬೨
ಭಾಷಾಚಿತ್ರ ೧೬೩
ವಾಗ್ದ್ವಯಶ್ಲೇಷೆ ೧೬೪
ಸಂಜ್ಞಾರ್ಥಾದಿ ೧೬೭, ೪೯೪
ಶ್ಲೇಷೆ ೭
ಸಂಯೋಜನೆ
ಕವಿನಾಮ ೧೬೯
ಕೃತಿನಾಮ ೧೬೯
ನವರಸಾಖ್ಯಾ ೧೭೦
ಭಾರತಪರ್ವನಾಮ ವ್ಯಕ್ತಿನಾಮ ೧೭೧
ರಾಶಿನಾಮ ೧೭೫
ವಾಸರನಾಮ ೧೭೫
ಸಂವತ್ಸರಾಖ್ಯಾ ೧೭೨
ಸಂಧಾನಕಾವ್ಯ ೧೧, ೧೨, ೪೯೧-೩, ೪೯೬, ೪೯೮
ತ್ರಿಸಂಧಾನ ೧೫೩
ದ್ವಿಸಂಧಾನ ೧೫೩-೫
ನಿರೋಷ್ಠ್ಯದ್ವಿಸಂಧಾನ ೧೨೯
ಸಮಸ್ಯಾ ೯
ಸಮಸ್ಯಾಪದ್ಯ ೪೮೦
ಸಮಸ್ಯಾಪೂರಣ ೩೩೭, ೪೯೯
ಸಮಸ್ಯಾಪೂರ್ತಿ ೩೩೭
ಸಮಸ್ಯೆ ೩೩೬, ೪೯೪
ಸಂಪಾತ್ಯ ೯, ೩೪೪
ಸರಸ್ವತೀಭವನ ೩೪೪
ಸಹಸ್ರಾವಧಾನಿ ೪೦೪
ಸ್ವರಚಿತ್ರ ೧೩೩
ಆಪಾಸ್ತಸಮಸ್ತ ೧೩೬
ಚತುಃಸ್ವರಗಳಲ್ಲಿ ದೀರ್ಘ ೧೩೫
ದೀರ್ಘದ್ವಿ– ೧೩೫
ದೀರ್ಘೈಕ ೧೩೪
ದ್ವಿಸವರ್ಣ ೧೪೧
ಪ್ರತಿವ್ಯಂಜನವಿನ್ಯಸ್ತ ೧೩೬
ಸ್ವರಮಾಲೆ ೧೪೧
ಹ್ರಸ್ವತ್ರಿ– ೧೩೫
ಹ್ರಸ್ವದ್ವಿ– ೧೩೪
ಹ್ರಸ್ವೈಕ ೧೩೪, ೧೩೬, ೧೩೭

೭/ಗ್ರಂಥೋಪಯುಕ್ತ ಸಂಕ್ಷಿಪ್ತ ಸೂಚಿ

ಅಂಜಚ.	ಅಂಜನಾಚರಿತೆ
ಅನಂಪು.	ಅನಂತನಾಥ ಪುರಾಣಂ
ಅರ್ಧನೇ.	ಅರ್ಧನೇಮಿ ಪುರಾಣಂ
ಆದಿಪು.	ಆದಿಪುರಾಣಂ
ಉದ್ಭದೇ.	ಉದ್ಭಟದೇವ ಚರಿತೆ
ಉದ್ಯೋಸಾ.	ಉದ್ಯೋಗಸಾರಂ
ಎಕ.	ಎಪಿಗ್ರಾಫಿಯ ಕರ್ನಾಟಿಕ
ಕಕಚ.	ಕರ್ಣಾಟಕ ಕವಿಚರಿತೆ

ಕಬ್ಬಿಕಾ.	ಕಬ್ಬಿಗರ ಕಾವಂ
ಕಬ್ಬಿಕೈ.	ಕಬ್ಬಿಗರ ಕೈಪಿಡಿ
ಕಂನವಿ.	ಕಂಠೀರವ ನರಸರಾಜವಿಜಯ
ಕವಿಕಂ.	ಕವಿಕಂಠಹಾರಂ
ಕವಿರಾ.	ಕವಿರಾಜಮಾರ್ಗಂ
ಕವಿವಿ.	ಕವಿರಾಜಮಾರ್ಗ ವಿವೇಕ
ಕಶಬ್ದ.	ಕರ್ಣಾಟಕ ಶಬ್ದಸಾರಂ
ಕಾವ್ಯಾದ.	ಕಾವ್ಯಾದರ್ಶ
ಕಾವ್ಯಾಲಂ.	ಕಾವ್ಯಾಲಂಕಾರ
ಕಾವ್ಯಾವ.	ಕಾವ್ಯಾವಲೋಕನಂ
ಕುವ್ಯಾಸ.	ಕುಮಾರವ್ಯಾಸಭಾರತ (ಸಭಾಪರ್ವ)
ಗದಾಯು.	ಗದಾಯುದ್ಧಂ
ಗಿರಿಕ.	ಗಿರಿಜಾಕಲ್ಯಾಣಂ
ಗುರುಚಾ.	ಗುರುರಾಜ ಚಾರಿತ್ರ
ಚಂದ್ರಪು.	ಚಂದ್ರಪ್ರಭ ಪುರಾಣಂ
ಚಂದ್ರಸಾ.	ಚಂದ್ರಪ್ರಭ ಸಾಂಗತ್ಯ
ಚಿಕವಿ.	ಚಿಕದೇವರಾಜ ವಿಜಯಂ
ಚೆಬಪು.	ಚೆನ್ನಬಸವಪುರಾಣ
ಛಂದೋಂಬು.	ಛಂದೋಂಬುಧಿ
ಜಗವಿ.	ಜಗನ್ನಾಥ ವಿಜಯಂ
ಜೈಮಿಭಾ.	ಜೈಮಿನಿ ಭಾರತ
ತುರಂಗ.	ತುರಂಗ ಭಾರತ
ನಾಟ್ಯಶಾ.	ನಾಟ್ಯಶಾಸ್ತ್ರ
ನಾವರ್ಧ.	ನಾಗವರ್ಮನ ವರ್ಧಮಾನ ಪುರಾಣಂ
ಪಂಚತಂ.	ಕರ್ಣಾಟಕ ಪಂಚತಂತ್ರಂ
ಪದ್ಮರಾ.	ಪದ್ಮರಾಜ ಪುರಾಣ
ಪಂಪಭಾ.	ಪಂಪಭಾರತಂ
ಪಂಪರಾ.	ಪಂಪರಾಮಾಯಣಂ
ಪಾರ್ಶ್ವಪು.	ಪಾರ್ಶ್ವನಾಥ ಪುರಾಣಂ
ಪುಷ್ಪಪು.	ಪುಷ್ಪದಂತ ಪುರಾಣಂ
ಪ್ರೌಢರಾ.	ಪ್ರೌಢರಾಯನ ಕಾವ್ಯ
ಬಸಪು.	ಬಸವ ಪುರಾಣ
ಬಸವ.	ಬಸವಣ್ಣನವರ ವಚನಗಳು
ಬಾಧಪು.	ಬಾಹುಬಲಿಯ ಧರ್ಮನಾಥ ಪುರಾಣಂ
ಭರಚ.	ಭರತೇಶ್ವರ ಚರಿತೆ (ಭರತೇಶ ವೈಭವ)
ಭಿಕ್ಷಾಚ.	ಭಿಕ್ಷಾಟನ ಚರಿತೆ
ಮಂಗನಿ.	ಅಭಿನವಾಭಿಧಾನಂ (ಮಂಗರಾಜ ನಿಘಂಟು)
ಮದತಿ.	ಮದನತಿಲಕಂ
ಮಲ್ಲಿಪು.	ಮಲ್ಲಿನಾಥ ಪುರಾಣಂ
ಮೈಆರಿ.	ಮೈಸೂರ್ ಆರ್ಕಿಯೊಲಾಜಿಕಲ್ ರಿಪೋರ್ಟ್
ರಾಘಚಾ.	ರಾಘವಾಂಕ ಚಾರಿತ್ರ
ರಾಜಶೇ.	ರಾಜಶೇಖರ ವಿಳಾಸಂ
ರು. ಕಾವ್ಯಾಲಂ.	ರುದ್ರಟನ ಕಾವ್ಯಾಲಂಕಾರ
ಲೋಕೋಪ.	ಲೋಕೋಪಕಾರಂ
ವಡ್ಡಾ ನಾ.	ವಡ್ಡಾರಾಧನೆ
ವಿಷ್ಣುಧ.	ವಿಷ್ಣುಧರ್ಮೋತ್ತರ ಪುರಾಣ
ಶಬ್ದಾನು.	ಕರ್ಣಾಟಕ ಶಬ್ದಾನುಶಾಸನಂ
ಶಾಂತಿಪು.	ಶಾಂತಿಪುರಾಣಂ
ಸಾಳ್ವಭಾ.	ಸಾಳ್ವಭಾರತ
ಸುಕುಮಾ.	ಸುಕುಮಾರ ಚರಿತ
ಸುರಭಾ.	ಸುಭಾಷಿತ ರತ್ನಭಾಂಡಾಗಾರ
ಸೂಕ್ತಿಸು.	ಸೂಕ್ತಿಸುಧಾರ್ಣವಂ
ಸೌಇಇ.	ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಷನ್ಸ್
ಹಚಕಾ.	ಹರಿಶ್ಚಂದ್ರ ಕಾವ್ಯ
JUB.	Journal of the University of Bombay

ಕೆ.ಸಂ. ೨೫೮೬೩—೬೦೦ ಪ್ರತಿಗಳು—ಎಂ.ಯು.ಪಿ.ಎಂ.—೧೮-೨-೮೭

ICAGO

k-
e
RY